ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಕ್ರ.ಸಂ. 20264 ದಿನಾಂಕ 3.1.8.92

ಒಂಭತ್ತನೆಯ ವಿಧಾನಸಭೆಯ ಏಳನೆಯ ಅಧಿವೇಶನ
Seventh Session of the Ninth Legislative Assembly

ಸಂಪುಟ ೪ - (ಕ್ರಮಾಂಕ ೫)
Volume IV — (No. 5)

(೧೨ನೇ ಮಾರ್ಚಿ ೧೯೯೨ ರಿಂದ ೧೩ನೇ ಮಾರ್ಚಿ ೧೯೯೨ ಮತ್ತು
೧೬ನೇ ಮಾರ್ಚಿ ೧೯೯೨ ರಿಂದ ೧೮ನೇ ಮಾರ್ಚಿ ೧೯೯೨)
(12th March 1992 to 13th March 1992 and
16th March 1992 to 18th March1992)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Karnataka Legislature Secretariat, Bangalore

ವಿಷಯ ಸೂಚಿ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

ಸಂಪುಟ ೪ - (ಕ್ರಮಾಂಕ ೫)

ದಿನಾಂಕ ೧೨ನೇ ಮಾರ್ಚ್ ೧೯೯೨ ರಿಂದ ೧೩ನೇ ಮಾರ್ಚ್ ೧೯೯೨ ರವರೆಗೆ ಮತ್ತು ೧೬ನೇ ಮಾರ್ಚ್ ೧೯೯೨ ರಿಂದ ೧೮ನೇ ಮಾರ್ಚ್ ೧೯೯೨ ರವರೆಗೆ

ಗುರುವಾರ, ೧೨ನೇ ಮಾರ್ಚ್ ೧೯೯೨

ಫಾಲ್ಗುಣ ೨೨, ಶಕ ೧೯೧೩

		ಪುಟ ಸಂಖ್ಯೆ
1.	ಸಂತಾಪ ಸೂಚಕ ನಿರ್ಣಯ	1
2.	ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು	1-37
3.	ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು	37-41
4.	ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	41-70
5.	ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ	
	ವಿಷಯ :-	
	1) ಮುಳವಾಡ ಏತ ನೀರಾವರಿ ಯೋಜನೆ ಜಾರಿಗಾಗಿ ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹದಲ್ಲಿ ಶಾಸಕರನ್ನು ಬಲವಂತವಾಗಿ ಹಿಡಿದಿಟ್ಟಿರುವುದು.	70-73
	2) ಬಿ.ಜೆ.ಪಿ. ಕಾರ್ಯಕರ್ತರು ಶಾಸಕರಾದ ಶ್ರೀ ಕೆ. ಕುಶಾಲ ಅವರ ಮೇಲೆ ಹಲ್ಲೆ ನಡೆಸಿರುವುದು.	73-76
6.	ಗಮನ ಸೆಳೆಯುವ ಸೂಚನೆ :	
	ವಿಷಯ :-	
	1) ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರ ಆಡಳಿತ ಮಂಡಳಿಗಳಿಗೆ ಪ್ರಾಥಮಿಕ ಶಾಲೆಗಳು. ಪ್ರೌಢಶಾಲೆಗಳು ಮತ್ತು ಕಿರಿಯ ಕಾಲೇಜುಗಳನ್ನು ನಡೆಸುವುದಕ್ಕೆ ಸರ್ಕಾರದಿಂದ ಅನುಮತಿ ನೀಡುವುದು.	77-82
7.	ನಿಯಮ 334 ಮೇರೆಗೆ	
	ವಿಷಯ :-	
	1) ಇಂದಿರಾ ಆವಾಸ್ ಯೋಜನೆಯ ದುರುಪಯೋಗ	
	2) ಹಾಸನ ನಗರದಲ್ಲಿ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆಯಡಿಯಲ್ಲಿ ಕಟ್ಟಿಸಿರುವ ಮಳಿಗೆಗಳನ್ನು ಬಾಡಿಗೆಗೆ ಕೊಡುವ ವಿಚಾರ	82-83

		ಪುಟ ಸಂಖ್ಯೆ
	3) ಸೇಡಂ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.	83-84
	4) ಪುತ್ತೂರು ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ	84
8.	ಶಾಸನ ರಚನಾ ಕಾರ್ಯಕಲಾಪಗಳು (ವಿಧೇಯಕಗಳನ್ನು ಮಂಡಿಸುವುದು) (1992ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕ)	85
9.	ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ	85-89
10.	1992-93ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ	89-138
11.	ಅನುಬಂಧ	139-140

ಶುಕ್ರವಾರ, ೧೩ನೇ ಮಾರ್ಚ್ ೧೯೯೨

ಫಾಲ್ಗುಣ ೨೩, ಶಕ ೧೯೧೩

1.	ವರದಿಯನ್ನೊಪ್ಪಿಸುವುದು	141
2.	ವಿತ್ತೀಯ ಕಾರ್ಯಕಲಾಪಗಳು 1992-93ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದುವರೆದದ್ದು)	141-186
3.	ಸಭೆಯನ್ನು ಬಹಿಷ್ಕರಿಸಿದ ಜನತಾದಳದವರನ್ನು ಮತ್ತೆ ಸಭೆಯಲ್ಲಿ ಭಾಗವಹಿಸಲು ಮನವಿ	186-187
4.	ಆಯವ್ಯಯದ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ	187-259
5.	ಪ್ರಕಟಣೆ	260-264

ಸೋಮವಾರ, ೧೬ನೇ ಮಾರ್ಚ್ ೧೯೯೨

ಫಾಲ್ಗುಣ ೨೬, ಶಕ ೧೯೧೩

1.	ನಿಲುವಳಿ ಸೂಚನೆಗೆ ಕೋರಿಕೆ	265-269
2.	ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು	269-293
3.	ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು	

		ಪುಟ ಸಂಖ್ಯೆ
4.	ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	293-338
5.	ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ ವಿಷಯ :- ನಾಗರಹೊಳೆ ಅಭಯಾರಣ್ಯದಲ್ಲಿ ಬೆಂಕಿ ಬಿದ್ದಿರುವ ಬಗ್ಗೆ.	338-339
6.	ನಿಯಮ 334ರ ಮೇರೆಗೆ ವಿಷಯ :-	
1)	ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು. ನಿಟ್ಟೂರಿಗೆ ಆರಕ್ಷಕ ಠಾಣೆಯನ್ನು ಮಂಜೂರು ಮಾಡುವುದು	339-340
2)	ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟಲ್‌ಗಳ ವಿದ್ಯಾರ್ಥಿಗಳಿಗೆ ಹಸಿರು ಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವುದು.	340
3)	ಮಳವಳ್ಳಿ ಟೌನ್ ಬಸ್ ನಿಲ್ದಾಣ ಕಟ್ಟಡ ಕೆಲಸವನ್ನು ಜರೂರಾಗಿ ಪ್ರಾರಂಭಿಸುವುದು	341
4)	ಅರಣ್ಯ ಶಾಸ್ತ್ರ ಪದವೀಧರರಿಗೆ ಉದ್ಯೋಗವನ್ನು ಕಲ್ಪಿಸುವುದು	341
7)	ಪ್ರಕಟಣೆ	342
8)	ಸದನದ ಕಾರ್ಯ ಕಲಾಪಗಳಲ್ಲಿ ವಿರೋಧ ಪಕ್ಷದವರು ಭಾಗವಹಿಸಲು ಮನವಿ	342-343
9)	ವಿತ್ತೀಯ ಕಾರ್ಯಕಲಾಪಗಳು 1992-93ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಜಿಲ್ಲಾ ಡಳಿತ, ಭೂ ಕಂದಾಯ ಇತ್ಯಾದಿ. ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ; ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ, ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ)	343-419
10)	ಪ್ರಕಟಣೆ	419-420

ಮಂಗಳವಾರ, ೧೭ನೇ ಮಾರ್ಚಿ ೧೯೯೨

ಫಾಲ್ಗುಣ ೨೭, ಶಕ ೧೯೧೩

		ಪುಟ ಸಂಖ್ಯೆ
1.	ವಿತ್ತೀಯ ಕಾರ್ಯಕಲಾಪಗಳು :	
	1992-93ನೇ ಸಾಲಿಗೆ ಸಂಬಂಧಿಸಿದ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು (ಜಿಲ್ಲಾಡಳಿತ, ಭೂ ಕಂದಾಯ ಇತ್ಯಾದಿ, ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ. ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ, ಮತೀಯ ಮತ್ತು ಧರ್ಮದಾಯಸಂಸ್ಥೆಗಳು ಇತ್ಯಾದಿ)	421-471 471-485
2.	ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು	485-515
3.	ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು	515-531
4.	ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	531-574
5.	ನಿಲುವಳಿ ಸೂಚನೆ ಪ್ರಸ್ತಾವಕ್ಕೆ (ಅನುಮತಿ ಕೋರಿಕೆ) ವಿಷಯ :-	
	1) ಮಂಡ್ಯ ಜಿಲ್ಲೆಯಲ್ಲಿ ರೈತರು ಬೆಳೆದ ಕಬ್ಬನ್ನು ಮೈ ಶುಗರ್ ಕಂಪನಿ ತೆಗೆದುಕೊಳ್ಳದೆ ಇರುವುದು.	574-576
	2) ದೇವನಹಳ್ಳಿ ಕ್ಷೇತ್ರದ ಬಳಿ ಎರಡು ಟೆಂಪೋಗಳು ಮುಖಾಮುಖಿ ಡಿಕ್ಕಿಯಾಗಿ 16ಜನ ಸ್ಥಳದಲ್ಲೇ ಮೃತಪಟ್ಟಿರುವ ಬಗ್ಗೆ	576-577
6.	ನಿಯಮ 334 ಮೇರೆಗೆ ವಿಷಯ :-	
	1) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ ನ್ಯಾಯ ಬೆಲೆ ಅಂಗಡಿ ನಂ. 36ಕ್ಕೆ ಮತ್ತೆ ಡೀಲರ್ ಶಿಪ್ ಕೊಟ್ಟಿರುವ ವಿಚಾರ.	578
	2) ಬೆಂಗಳೂರು ನಗರದ ಗಾಂಧೀನಗರದ ಕ್ಷೇತ್ರದಲ್ಲಿರುವ ಪೋಲೀಸ್ ವಸತಿ ಗೃಹಗಳ ಕಾಲೋನಿಗೆ ನಾಗರೀಕ ಸೌಲಭ್ಯ	578-579

		ಪುಟ ಸಂಖ್ಯೆ
	3) ಮಂಗಳೂರು ತಾಲ್ಲೂಕು ಉಳ್ಳಾಲವನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ	579
	4) ಹಾಸನ ಕ್ಷೇತ್ರದ ಕಟ್ಟಾಯ ಹಾಗೂ ಶಾಂತಿ ಗ್ರಾಮದ ಹೋಬಳಿಗಳಿಗೆ ಏತ ನೀರಾವರಿ ಯೋಜನೆ	579-580
	5) ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ 10 ಹಾಸಿಗೆಗಳ ಆಸ್ಪತ್ರೆಯ ಕಟ್ಟಡದ ಕಾಮಗಾರಿ.	580-581
7.	ಅರ್ಜಿಗಳನ್ನು ಒಪ್ಪಿಸುವುದು	581
8.	ವಿತ್ತೀಯ ಕಾರ್ಯಕಲಾಪಗಳು 1992-93ನೇ ಸಾಲಿನ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ (ರಾಜ್ಯದ ಅಬಕಾರಿ, ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು, ಜೈಲು ಇತ್ಯಾದಿ)	581-630

ಬುಧವಾರ, ೧೮ನೇ ಮಾರ್ಚಿ ೧೯೯೨
ಫಾಲ್ಗುಣ ೨೮, ಶಕ ೧೯೧೩

1.	ನಿಲವಳಿ ಸೂಚನೆಗೆ ಅನುಮತಿ ಕೋರಿಕೆ ವಿಷಯ : ಮಂಡ್ಯ ಜಿಲ್ಲೆಯ ರೈತರಿಗೆ ನೀರು ಬಿಡುವ ಬಗ್ಗೆ	631-633
2.	ವಿತ್ತೀಯ ಕಾರ್ಯಕಲಾಪಗಳು ರಾಜ್ಯದ ಅಬಕಾರಿ, ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು, ಜೈಲುಗಳು ಇತ್ಯಾದಿ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಮಂತ್ರಿಗಳಿಂದ ಉತ್ತರ	633-687
3.	ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು	687-706
4.	ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು	687-706
5.	ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	706-745
6.	ಮಂತ್ರಿಗಳಿಂದ ಹೇಳಿಕೆ ವಿಷಯ : ನಾಗರಹೊಳೆ ಬೆಂಕಿ ಅಪಘಾತದ ಬಗ್ಗೆ	745-747
7.	ನಿಯಮ 334ರ ಮೇರೆಗೆ ವಿಷಯ :- 1) ಪ್ರವೇಶ ತೆರಿಗೆಯ ಬಗ್ಗೆ	747-748

		ಪುಟ ಸಂಖ್ಯೆ
2)	ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಗೆ ಶಾಲಾ ಮಕ್ಕಳಿಗಾಗಿ ಬಸ್ಸನ್ನು ಓಡಿಸುವ ಬಗ್ಗೆ	748-750
3)	ಮಂಗಳೂರು ಸಿಟಿಬಸ್‌ಗಳ ವೇಗ ನಿಯಂತ್ರಿಸುವ ಬಗ್ಗೆ	750-752
4)	ಪುತ್ತೂರು ತಾಲ್ಲೂಕು ಕಡಬಾ ವಿದ್ಯುತ್ ಸಬ್‌ಸ್ಟೇಷನ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ	752
5)	ಮೂಡಬಿದ್ರೆಯಲ್ಲಿ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು ಪೂರ್ತಿಗೊಳಿಸುವ ಬಗ್ಗೆ	752-753
8.	ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ ಹಾಸನ ಕ್ಷೇತ್ರದಲ್ಲಿ ನೀರಾವರಿ ಕಾಮಗಾರಿ ಬಗ್ಗೆ ಅಧಿಕಾರಿಗಳು ಅಸಡ್ಡೆ ತೋರುತ್ತಿರುವುದರ ಬಗ್ಗೆ	753-760
9.	ವಿತ್ತೀಯ ಕಾರ್ಯಕಲಾಪಗಳು	
	1992-93ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ	760
	(ಲೇಖನ ಸಾಮಗ್ರಿ, ಮತ್ತು ಮುದ್ರಣ, ಉಚ್ಚ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಸೆಕೆಂಡರಿ ಶಿಕ್ಷಣ, ರಾಜ್ಯ ವಿಧಾನಮಂಡಲ, ನ್ಯಾಯ ಪರಿಪಾಲನೆ)	760-832

ಕರ್ನಾಟಕ ವಿಧಾನಸಭೆ

ಗುರುವಾರ 12ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆ

ಉಪಾಧ್ಯಕ್ಷರು :‌ ಮಾಜಿ ಶಾಸಕ ಶ್ರೀ ಹೆಚ್.ಬಿ. ಚಲುವಯ್ಯನವರು ಮಾರ್ಚ್ 10 ರಂದು ನಿಧನರಾದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ ಚಲುವಯ್ಯನವರು 1983ರಲ್ಲಿ 7ನೇ ವಿಧಾನಸಭೆಗೆ ಹೆಗ್ಗಡದೇವನಕೋಟೆ ಕ್ಷೇತ್ರದಿಂದ ಆಯ್ಕೆಯಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ತಾಲ್ಲೂಕಿನ ಹಿರಿಯ ಕಾಂಗ್ರೆ ಮುಖಂಡರಾಗಿದ್ದ ಶ್ರೀಯುತರು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅದರಲ್ಲೂ ಕೃಷಿ ಮತ್ತು ಸಹಕಾರ ಕ್ಷೇತ್ರದ ಪ್ರಗತಿಗಾಗಿ ಅವಿರತವಾಗಿ ಶ್ರಮಿಸಿರುತ್ತಾರೆ.

ನಿಧನ ಹೊಂದಿದ ಈ ಮಹನೀಯರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು)

ಉಪಾಧ್ಯಕ್ಷರು : ಮೃತ ಸದಸ್ಯರ ಕುಟುಂಬದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನಿವೇಶನಗಳ ವಿತರಣೆ

241 (1658) ಶ್ರೀ ಕೆ. ಲಕಣ್ಣ (ರಾಜಾಜಿನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಬಿದರಹಳ್ಳಿ ಹೋಬಳಿ ಯರ್ರಪ್ಪನಹಳ್ಳಿ ಗ್ರಾಮದ ಸರ್ವೆ ನಂ. 21 ರಲ್ಲಿ ಸರ್ಕಾರಿ 'ಡಿ' ಗ್ರೂಪ್ ನೌಕರರ ಗೃಹ ನಿರ್ಮಾಣ ಸಂಘದವರಿಂದ ನಿವೇಶನಗಳನ್ನು ವಿಂಗಡಿಸಲು ಬೆಂಗಳೂರು ಜಿಲ್ಲಾಧಿಕಾರಿಗಳು ಅನುಮತಿ ನೀಡಿರುವುದು ನಿಜವೆ?

ಆ) ಅನುಮತಿ ನೀಡಿದ್ದರೆ ಯಾವ ವರ್ಷದಲ್ಲಿ ನೀಡಲಾಗಿದೆ ಮತ್ತು ಎಷ್ಟು ಎಕರೆಗೆ ನೀಡಲಾಗಿದೆ?

ಇ) ಈ ಲೇಔಟ್ ಕೆಲಸವನ್ನು ಯಾರಿಗೆ ವಹಿಸಲಾಗಿದೆ?

ಈ) ಈ ದಿಸೆಯಲ್ಲಿ ಡೆವಲಪ್‌ಮೆಂಟ್ ಚಾರ್ಜನ್ನು ಕಟ್ಟಿಸಿಕೊಳ್ಳಲಾಗಿದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ, ಬಿದರಹಳ್ಳಿ ಹೋಬಳಿ, ಯರ್ರಪ್ಪನ ಹಳ್ಳಿ ಗ್ರಾಮದ ಸರ್ವೆ ನಂ. 21ರಲ್ಲಿ ನಿವೇಶನಗಳನ್ನು ಮಾಡುವುದಕ್ಕೆ ಅನುಮತಿಯನ್ನು ಕೊಡಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಇಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ಅಲ್ಲಿ ಸುಮಾರು 220 ಎಕರೆಯಷ್ಟು ಜಮೀನಿನಲ್ಲಿ ನಿವೇಶನಗಳನ್ನು ಮಾಡುತ್ತಿದ್ದಾರೆ. ಸುಮಾರು 3800 ಸೈಟುಗಳನ್ನು ವಿಂಗಡಿಸಿ ಅಲ್ಲಿ ಸರ್ಕಾರಿ ನೌಕರರ 'ಡಿ' ಗ್ರೂಪ್ ಎಂದು ನಾಮಫಲಕ ಹಾಕಿ ಲೇಔಟ್ ಮಾಡುತ್ತಿದ್ದಾರೆ. ಅದಕ್ಕೆ ಅನುಮತಿಯನ್ನು ಯಾರು ಕೊಟ್ಟಿದ್ದಾರೆ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೂ ಅದು ಸೇರುವುದಿಲ್ಲ. ಅದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಈ 'ಡಿ' ಗ್ರೂಪ್ ನೌಕರರಿಗೆ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಕಾನೂನಿನ ಅಡಿಯಲ್ಲಿ ಪರ್ಮಿಶನ್ ಕೊಟ್ಟಿದ್ದಾರೆಯೇ ಎಂದು ಕೇಳಿದ್ದಾರೆ. ಅವರಿಗೆ ನಾವು ಲ್ಯಾಂಡ್ ಅಕ್ವಿಜಿಶನ್ ಮಾಡಿ ಕೊಟ್ಟಿಲ್ಲ. ಏಕೆಂದರೆ, ಯಾವುದಾದರೂ ಒಂದು ಲೇಔಟ್ ಫಾರಂ ಮಾಡಬೇಕಾದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪರ್ಮಿಶನ್ ತೆಗೆದುಕೊಂಡು ಅವರು ಲೇಔಟ್ ಫಾರಂ ಮಾಡಬೇಕಾಗುತ್ತದೆ. ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಮಗೆ ಪರ್ಮಿಶನ್ ಕೊಟ್ಟ ಮೇಲೆ ಇಂತಹವರಿಗೆ ಇಂತಹ ಸೊಸೈಟಿಗೆ ಲ್ಯಾಂಡ್ ಅಕ್ವಿಜಿಶನ್ ಮಾಡಬಹುದೆಂದು ಹೇಳಿ ಅವರು ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಕೊಟ್ಟಮೇಲೆ ಡೆಪ್ಯುಟಿ ಕಮಿಷನರ್‌ರವರು 4(1) ನೋಟೀಫಿಕೇಶನ್ ಇಷ್ಯು ಮಾಡುತ್ತಾರೆ. ಇಲ್ಲಿ ಅಂತಹುದು ಯಾವುದೂ ಕೂಡ ನಮಗೆ ಬಂದಿಲ್ಲ, ಮತ್ತು ಡೆಪ್ಯುಟಿ ಕಮಿಷನರ್‌ರವರು ಆ ನೋಟೀಫಿಕೇಶನ್ ಇಷ್ಯು ಕೂಡ ಮಾಡಲಿಲ್ಲ. ಈಗ ಏನಾದರೂ ಲೇಔಟ್ ಫಾರಂ ಮಾಡುತ್ತಿದ್ದರೆ ಇಟ್ ಮಸ್ಟ್ ಬಿ ಇಲ್‌ಲೀಗಲ್, ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವದರು ಕ್ರಮ ತೆಗೆದುಕೊಂಡು ಅದನ್ನು ನಿಲ್ಲಿಸಬೇಕು. ಅಥವಾ ಅದು ಕಾರ್ಪೊರೇಷನ್ ಸೀಮಿತದಲ್ಲಿದ್ದರೆ ಕಾರ್ಪೊರೇಷನ್‌ದವರು ನಿಲ್ಲಿಸಬೇಕು.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ, ಅದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೂ ಸೇರುವುದಿಲ್ಲ. ಬೆಂಗಳೂರು ನಗರದಿಂದ ಸುಮಾರು 30 ಕಿಲೋಮೀಟರ್ ಆಚೆ ಇದೆ. ಗ್ರೀನ್‌ಬೆಲ್ಟ್ ಸಹ ಇದೆ. ಈಗ ತಾವು ಅಲ್ಲಿ ಹೋಗಿ ನೋಡಬೇಕು. 50 ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಸೈಟುಗಳನ್ನು ಮಾಡಿದ್ದಾರೆ. ಇದಕ್ಕೆ ಯಾರ ಬೆಂಬಲವಿದೆ ಎಂಬುದನ್ನು ತಾವು

ಪರಿಶೀಲನೆ ಮಾಡಬೇಕಾಗುತ್ತದೆ. ಅದನ್ನು ತಾವು ಎನ್‌ಕ್ವಾಯರಿ ಮಾಡಬೇಕು. ಅಲ್ಲಿನ ಹಳ್ಳಿಯ ನಿವಾಸಿಗಳು ದೂರುಗಳನ್ನು ಕೊಟ್ಟಿದ್ದಾರೆ. ಕಂದಾಯ ಸಚಿವರಿಗೆ. ಸಹಕಾರ ಸಚಿವರಿಗೆ. ಕೃಷಿ ಸಚಿವರಿಗೆ ದೂರು ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈಗಾಗಲೆ ಅಲ್ಲಿ ಸೈಟುಗಳನ್ನು ವಿಂಗಡಿಸಿ ಮಾರುತ್ತಿದ್ದಾರೆ. ಮಾರುವುದರಲ್ಲಿಯೂ ಸಹ 12 ಸಾವಿರ ರೂಪಾಯಿಗಳಿಗೆ ರಸೀತಿ ಕೊಡುತ್ತಾರೆ. 10 ಸಾವಿರ ರೂಪಾಯಿಗಳಿಗೆ ರಸೀತಿ ಇಲ್ಲ. 22 ಸಾವಿರ ರೂಪಾಯಿಗಳಿಗೆ ಒಂದು ನಿವೇಶನದಂತೆ ಮಾರಾಟ ಮಾಡುತ್ತಿದ್ದಾರೆ. ಬೆಂಗಳೂರಿನಿಂದ 30 ಕಿಲೋಮೀಟರ್ ದೂರದಲ್ಲಿರತಕ್ಕ ಈ ಜಾಗದಲ್ಲಿ ಅನಧಿಕೃತವಾಗಿ ನಿವೇಶನಗಳನ್ನು ಮಾಡತಕ್ಕ ಇಂತಹ ಸೊಸೈಟಿಗಳ ಬಗ್ಗೆ ಗುತ್ತಿಗೆದಾರರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ರೀತಿಯಾಗಿ ಅನೇಕ ಬಡಾವಣೆಗಳಲ್ಲಿ ಆದರೆ ಸರ್ಕಾರಕ್ಕೆ ಕೊಡಬೇಕಾದ ಏನೊಂದು ಅಭಿವೃದ್ಧಿ ಶುಲ್ಕವಿದೆ ಅದು ಇಲ್ಲದಂತಾಗುತ್ತದೆ. ಯಾವುದೇ ರೀತಿಯ ಅನುಮತಿ ಇಲ್ಲದೆ ಮಾಡತಕ್ಕವರಿಗೆ ತೀವ್ರವಾದ ದಂಡನೆಯನ್ನು ವಿಧಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರಾದ ಲಕ್ಕಣ್ಣನವರು ಅರ್ಥಮಾಡಿಕೊಳ್ಳಬೇಕು. ಅವರು ನಿವೇಶನ ಮಾಡತಕ್ಕ ಜಾಗ 30 ಕಿಲೋಮೀಟರ್ ದೂರದಲ್ಲಿದ್ದರೆ ಅದು ಯಾವ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ. ಯಾವ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಅಥವಾ ಟೌನ್ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂದು ನೋಡಿ ಯಾವ ವ್ಯಾಪ್ತಿಯಲ್ಲಿ ಬರುತ್ತದೆ ಅವರು ಅದಕ್ಕೆ ನೋ-ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟು ಲೇಔಟ್ ಫಾರಂ ಮಾಡುವುದಕ್ಕೆ ಅವರು ಪರ್ಮಿಶನ್ ಕೊಡಬೇಕಾಗುತ್ತದೆ. ಲ್ಯಾಂಡ್ ಅಕ್ವಿಜಿಶನ್ ನಾವು ಮಾಡಿ ಕೊಡಲಿಲ್ಲ. ಆ ರೆಕಾರ್ಡ್ಸ್ ನಮ್ಮಲ್ಲಿಲ್ಲ ಮತ್ತು ಜಿಲ್ಲಾಧಿಕಾರಿಗಳು ಗ್ರೀನ್‌ಬೆಲ್ಟ್ ಏರಿಯಾದಲ್ಲಿ ಬರುತ್ತದೆಂದು ಹೇಳಿ 4(1) ನೋಟಿಫಿಕೇಶನ್ ಇಷ್ಯು ಮಾಡಿಲ್ಲ. ಅವರು ಸರ್ಕಾರಿ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಲೇಔಟ್ ಫಾರಂ ಮಾಡುತ್ತಿದ್ದಾರೆ. ಈ ತರಹ ಸೈಟುಗಳನ್ನು ಮಾಡುತ್ತಿದ್ದಾರೆಂದು ಇವತ್ತು ಮೊದಲನೆಯ ಸಲ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತರುತ್ತಿದ್ದಾರೆ. ಇದುವರೆಗೆ ತಾವು ನನಗೆ ಬರೆದು ಕೊಡಲಿಲ್ಲ. ಅವರು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಬಹುಶಃ ತಾವು ನನಗೆ ಹೇಳಿದ್ದರೆ ತಕ್ಷಣ ನಾನು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಹೇಳಿ ಅದನ್ನು ಎನ್‌ಕ್ವಾಯರಿ ಮಾಡಿಸುತ್ತೇನೆ. ಅದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡೆಪ್ಯುಟಿ ಕಮಿಷನರ್‌ರವರಿಗೆ ಬಂದರೆ ಅವರಿಗೂ ಕೂಡ ಹೇಳಿ ಸರ್ಕಾರಿ ಜಮೀನನ್ನು ಎನ್‌ಕ್ರೋಚ್ ಮಾಡಿದ್ದರೆ. ತಕ್ಷಣ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಅವರಿಗೆ ಆದೇಶ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ. ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದು ಯಾವುದೂ ಕೂಡ ಅಕ್ವೈರ್ ಆಗಿಲ್ಲ. ಆದ್ದರಿಂದ ಯಾವುದೇ ಪ್ರಶ್ನೆ ಉದ್ಭವಿಸುದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ನೀವು ಯಾವುದೇ ಒಂದು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಅಥವಾ ಯಾವುದಕ್ಕೋ ಒಂದು ನೋಟಿಫಿಕೇಶನ್ ಇಶ್ಯು ಮಾಡಿ ಆ ಜಮೀನಿನ ಬಗ್ಗೆ ನೀವು ದುಡ್ಡನ್ನು ಕಟ್ಟಿಸಿಕೊಂಡು ಇನ್ನೂ ಕೂಡ ಪೊಸಿಶನ್ ಕೊಡದೇ ಇರುವ ಸಂದರ್ಭದಲ್ಲಿ, ಅದರ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದಂಥ ಸಂದರ್ಭದಲ್ಲಿ ಅದು ಅನ್‌ಸ್ಟಾರ್ಡ್ ಆಗಿ ಬಂದಿದೆ. ಜಯನಗರ ಹೌಸಿಂಗ್ ಸೊಸೈಟಿ ಬಗ್ಗೆ ಕೇಳಿದಾಗ ಅದು ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ತೀರ್ಮಾನಕ್ಕೆ ಇದೆ ಎನ್ನತಕ್ಕಂಥ ಮಾತನ್ನು ಕೂಡ ತಾವು ಹೇಳಿದ್ದೀರಿ. ಅದು

ಏನು ತೀರ್ಮಾನವಾಗಿದೆ? ತೀರ್ಮಾನವಾಗಿದೆಯೋ ಇಲ್ಲವೋ? ಆಗಿಲ್ಲದಿದ್ದರೆ ಏಕೆ ಆಗಿಲ್ಲ? ಯಾವಾಗ ಆಗುತ್ತದೆ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಆದರೂ ಕೂಡ ಒಂದು ಹೇಳುವುದಾದರೆ ಅದು ಕ್ಯಾಬಿನೇಟ್ ಸಬ್‌ಕಮಿಟಿಯಲ್ಲಿ ಇದ್ದ ಕಾರಣ. ಏಕೆಂದರೆ ಎಲ್ಲ ಸೊಸೈಟಿಗಳ ಬಗ್ಗೆ ಈಗಾಗಲೆ ಫೈನಲ್‌ನೋಟಿಫಿಕೇಶನ್ ಅವಾರ್ಡ್ ಆಗಿ ಪೊಸಿಶನ್ ಸ್ಟೇಜ್‌ನಲ್ಲಿದೆ. ಹಿಂದೆ ಈ ಸದನದಲ್ಲಿ ಸಾಕಷ್ಟು ಗಲಾಟೆ ಆಯಿತಲ್ಲ? ಇದನ್ನು ಇಲ್ಲೀಗಲ್ ಆಗಿ ಕೊಡುತ್ತಿದ್ದಾರೆ, ಈ ರೀತಿ ಮಾಡುತ್ತಿದ್ದಾರೆ ಎಂದೆಲ್ಲ ಬಂದಾಗ. ಅದಕ್ಕೆ ಕ್ಯಾಬಿನೇಟ್ ಸಬ್‌ಕಮಿಟಿಯವರು ಕೂಲಂಕುಷವಾಗಿ ವಿಚಾರ ಮಾಡಿ. ಎಲ್ಲೆಲ್ಲಿ ಯಾರ್ಯಾರಿಗೆ ಕೊಡಬಹುದು ಮತ್ತು ಯಾವ್ಯಾವ ಸೊಸೈಟಿಗಳು ಜೆನ್ಯೂನ್ ಇದೆ. ಮೆಂಬರ್‌ಶಿಪ್ ಜೆನ್ಯೂನ್ ಇದೆ. ಅದನ್ನು ವೆರಿಫೈ ಮಾಡಿ ಕೊಡಬೇಕು ಎನ್ನತಕ್ಕಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕ್ಯಾಬಿನೇಟ್ ಸಬ್‌ಕಮಿಟಿ ಮಾಡಿದ್ದಾರೆ. ಆದಷ್ಟು ಬೇಗ ಈ ಕ್ಯಾಬಿನೇಟ್ ಸಬ್ ಕಮಿಟಿ ತೀರ್ಮಾನ ಕೈಗೊಳ್ಳಬಹುದು ಎಂದು ನನಗೆ ಆಸೆ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಹಿಂದೆ ಕೂಡ ಒಂದು ಸಮಿತಿಯನ್ನು ನೇಮಿಸಿ....

ಉಪಾಧ್ಯಕ್ಷಿಣಿಯವರು : ನೀವು ಕೇಳಿದ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಅಕ್ವಿಸಿಶನ್‌ಗೆ ಸಂಬಂಧಪಟ್ಟ ಹಾಗೆ ಇವರು ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿದೆ ಎಂದು ಹೇಳಿದ್ದಾರೆ. ಎಲ್ಲ ಸಂದರ್ಭದಲ್ಲೂ ಕ್ಯಾಬಿನೇಟ್ ಸಬ್‌ಕಮಿಟಿಯಲ್ಲಿದೆ ಎನ್ನುವ ಉತ್ತರವನ್ನು ಹೇಳಿದರೆ ಇದನ್ನು ತೀರ್ಮಾನ ಮಾಡುವುದು ಯಾವಾಗ? ಈಗಾಗಲೇ ಒಂದು ಸಮಿತಿಯನ್ನು ಮಾಡಿದ್ದು. ಜೆನಿಯನ್ ಮತ್ತು ಜೆನಿಯನ್ ಅಲ್ಲ ಎನ್ನತಕ್ಕದ್ದು ಈಗಾಗಲೇ ತೀರ್ಮಾನವಾಗಿರುವ ಸಂದರ್ಭದಲ್ಲಿ ಇನ್ನೂ ಏತಕ್ಕೋಸ್ಕರ ವಿಳಂಬ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕ್ಯಾಬಿನೇಟ್ ಸಬ್ ಕಮಿಟಿ ಬೇಗ ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಕೋಟ್ಯಾಂತರ ರೂಪಾಯಿ ತೆಗೆದುಕೊಂಡಿದ್ದರೂ ಕೂಡ ಆಲ್ಟರ್‌ನೇಟೀವ್ ಜಾಗ ಕೊಡುವುದಕ್ಕೆ ನಿಮ್ಮಿಂದ ಆಗಲಿಲ್ಲ. ದುಡ್ಡು ಕೊಟ್ಟಿರುವುದನ್ನು ಬಡ್ಡಿ ಸಮೇತ ವಾಪಾಸ್ಸು ಕೊಡುತ್ತೀರಾ? ಒಂದೂವರೆ ಕೋಟಿ ರೂಪಾಯಿ ದುಡ್ಡು ಕಟ್ಟಿಸಿಕೊಂಡು ಹತ್ತು ವರ್ಷ ಆಯಿತು. ಇದುವರೆಗೆ ಬಡ್ಡಿ ಕೊಟ್ಟಿದ್ದೀರಾ? ಅಥವಾ ಇದರ ಬಗ್ಗೆ ವಿಚಾರ ಮಾಡಿದ್ದೀರಾ? ಸಬ್‌ಕಮಿಟಿಯಲ್ಲಿದೆ ಎಂಬ ಒಂದೆ ಕಾರಣಕ್ಕೋಸ್ಕರ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಬ್ ಕಮಿಟಿಯಲ್ಲಿದ್ದ ಕಾರಣ ನಾನು ಸಡನ್ ಆಗಿ ತೀರ್ಮಾನ ತೆಗೆದುಕೊಂಡು ನಾಳೆಯೇ ಮಾಡಿಸಿಕೊಡುತ್ತೇನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳಿದೆ. ಸಬ್ ಕಮಿಟಿ ತೀರ್ಮಾನ ತೆಗೆದುಕೊಳ್ಳುತ್ತದೆ. ಏಕೆಂದರೆ, ಸಹಾಯ ಮಾಡಬೇಕೆಂಬ ದೃಷ್ಟಿಯಿಂದಲೇ ಸಬ್ ಕಮಿಟಿಯನ್ನು ಮಾಡಿದ್ದು. ಕೊಡಬಾರದು ಎನ್ನುವ ದೃಷ್ಟಿಯಿಂದ ಅಲ್ಲ. ಆದರೆ ಇದನ್ನು ಮಾಡುವಾಗ ಸ್ವಲ್ಪ ವೆರಿಫಿಕೇಶನ್ ಅಂತೂ ಮಾಡಲೇಬೇಕಲ್ಲ?

ಈ ದೃಷ್ಟಿಯಿಂದ ಪ್ರೋ ಅಂಡ್ ಕಾಸ್ ನೋಡಿಕೊಂಡೇ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಜಯನಗರ ಸೊಸೈಟಿ ಬಗ್ಗೆ ಈಗಾಗಲೆ ನನ್ನ ಗಮನಕ್ಕೆ ಬಂದಿದೆ. ಮಾನ್ಯ ಅನೇಕ ಸದಸ್ಯರು ಕೂಡ ನನ್ನ ಹತ್ತಿರ ಬಂದು ಅಕ್ವಿಸಿಶನ್ ಮಾಡುವಾಗ ಅನೇಕ ಜಮೀನುಗಳನ್ನು ಬೇರೆಯವರು ಎನ್‌ಕ್ರೋಚ್ ಮಾಡಿಕೊಂಡಿದ್ದಾರೆ, ನಾವು ದುಡ್ಡು ಕೊಟ್ಟು ಕುಳಿತಿದ್ದೇವೆ ಎಂದು ಹೇಳಿದ್ದಾರೆ. ನಾನು ಕೂಡ ಅದರ ಮೇಲೆ ಸಾಕಷ್ಟು ಸಲ ಚರ್ಚೆ ಮಾಡಿದ್ದೇನೆ. ಆದರೆ ಒಂದು ಪ್ರಶ್ನೆ ಏನು ಬಂದಿದೆ ಎಂದರೆ, ಕ್ಯಾಬಿನೇಟ್ ಮುಂದೆ ಇದ್ದಾಗ ನಾನು ನೇರವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಕ್ಯಾಬಿನೇಟ್ ಬಹಳ ಬೇಗನೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಉಪಾಧ್ಯಕ್ಷಿಣಿಯವರು : ಶ್ರೀ ಚಿಕ್ಕಮಾದುರವರೇ, ನಿಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ. ಇದನ್ನು ಮುಂದೆ ತೆಗೆದುಕೊಳ್ಳೋಣ.

ಸುವರ್ಣಾವತಿ ನದಿ ದಂಡೆಯ ಒತ್ತುವರಿಯ ವಿಸ್ತೀರ್ಣ

244 (1397) ಶ್ರೀ ಕೆ. ಸಿದ್ದಯ್ಯ (ಸಂತೇಮರಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಚಾಮರಾಜನಗರ ಸುವರ್ಣಾವತಿ ನದಿ ಪಾತ್ರದಲ್ಲಿ ಅನಧಿಕೃತ ಸಾಗುವಳಿಯಲ್ಲಿರುವ ವಿಸ್ತೀರ್ಣವೆಷ್ಟು?

ಬಿ) ಈ ಪೈಕಿ ಸಕ್ರಮಗೊಳಿಸಿದ ವಿಸ್ತೀರ್ಣವೆಷ್ಟು ಮತ್ತು ಯಾವಾಗ?

ಸಿ) ಮಹಾಪೂರವನ್ನು ತಡೆಯಲು ನದಿಯಿಂದ ಹೊರಗೆ ಬಿಡುವ ಬಾಗಿಲುಗಳ ಅಗಲವೆಷ್ಟು?

ಡಿ) ಇತ್ತೀಚಿನ ನದಿಯ ಮಹಾಪೂರದಿಂದ ಆದ ಹಾನಿಯೆಷ್ಟು?

ಇ) ಮಹಾಪೂರಕವು ಮತ್ತೆ ಮರುಕಳಿಸದಂತೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಎ) ನದೀ ಪಾತ್ರದಲ್ಲಿ ಯಾವುದೆ ಅನಧಿಕೃತ ಸಾಗುವಳಿ ನಡೆದಿರುವುದಿಲ್ಲ.

ಬಿ) ಉದ್ಭವಿಸುವುದಿಲ್ಲ.

ಸಿ) ಬಾಗಿಲುಗಳ ಅಗಲ 10 ಅಡಿ, ಅಥವಾ ಮೂರು ಮೀಟರು.

ಡಿ) ಹಾನಿಯಿಂದಾದ ಅಂದಾಜು ನಷ್ಟ ರೂ. 10.40 ಲಕ್ಷ ರೂ.ಗಳು ಅಣೆಕಟ್ಟೆಗೆ ಸಂಬಂಧಿಸಿದಂತೆ

161.349	ಲಕ್ಷ ರೂ.ಗಳು ಬೆಳೆಗೆ
57.090	ಲಕ್ಷ ರೂ.ಗಳು ಮನೆಗಳಿಗೆ ಪ್ರವಾಹ ಹಾಗೂ ಅಧಿಕ ಮಳೆ
82.950	ಲಕ್ಷ ರೂ.ಗಳು ಪಬ್ಲಿಕ್ ಪ್ರಾಪರ್ಟಿ
ಒಟ್ಟು 311.789	ಲಕ್ಷ

ಇ) ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದ ಇಲಾಖೆಗೆ ತಿಳಿಸಲಾಗುವುದು.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಸಚಿವರು ಸುವರ್ಣಾವತಿ ನದೀ ಪಾತ್ರದಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿಲ್ಲವೆಂದು ಹೇಳಿದ್ದಾರೆ. ಹಿಂದೆ ಒಬ್ಬ ಸ್ಪೆಶಲ್ ಅಸಿಸ್ಟೆಂಟ್ ಕಮಿಷನರ್ ಅವರನ್ನು ಎನ್‌ಕ್ರೋಚ್‌ಮೆಂಟ್ ಬಗ್ಗೆ ನೇಮಕ ಮಾಡಿ ಅದನ್ನು ರೆಗ್ಯುಲರೈಸ್ ಮಾಡಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಮ್ಮಲ್ಲಿ ಇರತಕ್ಕಂಥ ಮಾಹಿತಿ ಪ್ರಕಾರ ಹೇಳಿದ್ದೇನೆ. ಜಿಲ್ಲಾಧಿಕಾರಿಯವರಿಂದ The extent of encroachment of Suvarnavathi River Bed in Chamarajanagar ಅಂದರೆ There is no encroachment ಎಂದು ಮಾಹಿತಿ ಬಂದಿದೆ. ಮಾನ್ಯ ಸದಸ್ಯರು ಹಿಂದೆ ಎನ್‌ಕ್ರೋಚ್‌ಮೆಂಟ್ ಆಗಿತ್ತು. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಹೇಳುತ್ತಿದ್ದಾರೆ. ಅವರು ಹೇಳಿದ ಮೇಲೆ ಪುನಃ ಇದನ್ನು ವೆರಿಫಿಕೇಷನ್ ಮಾಡಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ : ಇದನ್ನು ವೆರಿಫಿಕೇಷನ್ ಮಾಡಿಸಿ ಮತ್ತು ರಿವರ್ ಬೆಡ್. ನದಿ ಹರಿದುಕೊಂಡು ಹೋಗುತ್ತದೆ. ಇದು ಬಹಳ ಎನ್‌ಕ್ರೋಚ್ ಆಗಿ. ಬಹಳ ಕಿರಿದಾದ ದೆಸೆಯಿಂದ ಪ್ರವಾಹ ಬಂದು, ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಈ ನಷ್ಟ ಆಗುವುದರ ಜೊತೆಗೆ, ಬಡ ಜನಗಳಿಗೆ ವಿಪರೀತ ತೊಂದರೆಯಾಗುತ್ತಿದೆ. ಜಮೀನು ಎನ್‌ಕ್ರೋಚ್ ಮಾಡಿರುವ ಅನುಕೂಲಸ್ಥರಿಗೆ ಯಾವ ವಿಧವಾದ ತೊಂದರೆ ಆಗಿಲ್ಲ. ಆದರೆ ಬಡವರಿಗೆ ತೊಂದರೆ ಆಗಿದೆ. ಈ ತೊಂದರೆ ಮುಂದೆಯೂ ಆಗತಕ್ಕಂಥ ಸಂದರ್ಭ ಇರುವುದರಿಂದ, ತಾವು ನೋಡಿಸುತ್ತೇನೆಂದು ಹೇಳುತ್ತೀರಲ್ಲ. ಇದನ್ನು ನೋಡಿ ಎನ್‌ಕ್ರೋಚ್‌ಮೆಂಟ್ ಎಷ್ಟಾಗುತ್ತದೆ. ಅದನ್ನು ಎವಿಕ್ಟ್ ಮಾಡುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಕಾನೂನಿಗೆ ತಿದ್ದುಪಡಿ ತಂದಿದ್ದೇವೆ. ರೆವಿನ್ಯೂ ಆಕ್ಟ್ ಕೆಳಗೆ ಯಾರು 14ನೆ ಎಪ್ರಿಲ್ 1990ಕ್ಕೆ ಹಿಂದೆ ಮೂರು ವರ್ಷ ಒಂದೆ ಸಮನೆ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ, ಅಂತಹ ಬಡವರಿಗೆ ಎರಡು ಹೆಕ್ಟೇರ್‌ರವರೆಗೆ ರೆಗ್ಯುಲರೈಸ್ ಮಾಡಬೇಕು ಎಂದು ಕಾನೂನು ಮಾಡಿದೆ. ಮತ್ತು ಯಾರು ಹಣವಂತರು ಇದ್ದಾರೆ. ಅವರು ಇನ್‌ಕಮ್ ಲಿಮಿಟ್‌ನಲ್ಲಿ ಅಥವಾ ಏರಿಯಾ ಲಿಮಿಟ್‌ನಲ್ಲಿ ಬರುವುದಿಲ್ಲ. ಅಂತಹವರನ್ನು ಎವಿಕ್ಟ್ ಮಾಡಬಹುದು. ಉಳಿದಂತಹವರಿಗೆ ಕಾನೂನಿನ ಸಹಾಯ ಕೊಡಬೇಕಾಗುತ್ತದೆ. ಆದರೆ ತೊಂದರೆ ಆಗಿದ್ದರೆ, ಸ್ಪೆಸಿಫಿಕ್ ಆಗಿ ತಾವು ಹೇಳಿ. ಏಕೆಂದರೆ, ನಾನೂ ಕೂಡ ಸ್ವತಃ ಚಾಮರಾಜನಗರಕ್ಕೆ ಹೋಗಿದ್ದೆ. ಸುವರ್ಣಾವತಿ ನದಿ ಅಕ್ಕಪಕ್ಕದಲ್ಲಿ ಡ್ಯಾಮೇಜ್ ಆಗಿರುವುದನ್ನು ನೋಡಿಕೊಂಡು ಬಂದಿದ್ದೇನೆ. ಮತ್ತು ಸರ್ಕಾರದ ವತಿಯಿಂದ ಸಾಧ್ಯವಾದಷ್ಟು ಪರಿಹಾರ ಕೊಟ್ಟಿದೆ. ಕಾನೂನು ಪ್ರಕಾರ ಎಷ್ಟು ಪರಿಹಾರ ಕೊಡಬೇಕೋ ಅದನ್ನು ಕೊಟ್ಟಿದೆ. ಮತ್ತು ಕೆಲವು ಬಿದ್ದುಹೋದ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಆಶ್ರಯ ಯೋಜನೆಯ ಕೆಳಗೆ ಮಾಡುತ್ತಿದೆ. ಮಾನ್ಯಮುಖ್ಯ ಮಂತ್ರಿಗಳು ಈಗಾಗಲೇ ಸುಮಾರು 15 ಕೋಟಿ ರೂಪಾಯಿಗಳನ್ನು ಸ್ಪೆಷಲ್ ಆಗಿ ಬಿಡುಗಡೆ ಮಾಡಿದ್ದಾರೆ. ಮೈಸೂರು, ಕೋಲಾರ, ತುಮಕೂರು. ಬೆಂಗಳೂರು ರೂರಲ್ ಮತ್ತು ಮಂಡ್ಯ, ಈ 5-6 ಜಿಲ್ಲೆಗಳಲ್ಲಿ ಮಳೆ ಬಿದ್ದು ಹಾನಿಯಾಗಿರುವುದಕ್ಕೆ ಸ್ಪೆಷಲ್ ಸ್ಕೀಮ್‌ನಲ್ಲಿ ತೆಗೆದುಕೊಂಡು ಸುಮಾರು 45 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಕೆ. ಸಿದ್ದಯ್ಯ : ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವುದನ್ನು ರೆಗ್ಯುಲರೈಸ್ ಮಾಡುವಂಥ ಆರ್ಡಿನರಿ ಕೇಸಸ್ ಬೇರೆ. ಈ ನದಿ ಪಾತ್ರವನ್ನೇ ಎನ್‌ಕ್ರೋಚ್‌ಮೆಂಟ್ ಮಾಡಿರುವುದರಿಂದ

ಸಾರ್ವಜನಿಕರಿಗೆ, ಬಡಜನರಿಗೆ ಆಗುತ್ತಿರತಕ್ಕ ತೊಂದರೆಯನ್ನು ನಾನು ಕೇಳುತ್ತಿದ್ದೇನೆ. ಬೇರೆ ಎನ್‌ಕ್ರೋಚ್‌ಮೆಂಟ್ ಬಗ್ಗೆ ತಾವು ವ್ಯವಸಾಯ ಮಾಡುವ ಉದ್ದೇಶಕ್ಕೆ ಮಾಡುವುದಾದರೆ ಮಾಡಿ. ಈ ಎನ್‌ಕ್ರೋಚ್‌ಮೆಂಟ್ ದೆಸೆಯಿಂದ ಬಡವರಿಗೆ ಆಗುತ್ತಿರತಕ್ಕ ಅನಾಹುತ, ಅದರ ಜೊತೆಗೆ ಸರ್ಕಾರದ ಹಣ ಖರ್ಚಾಗುತ್ತಿದೆ. ಅನುಕೂಲ ಹೊಂದಿರುವವರೇ ಈ ಎನ್‌ಕ್ರೋಚ್‌ಮೆಂಟ್ ಮಾಡಿರತಕ್ಕ ಜನ. ಬಹಳ ತೊಂದರೆ, ಮತ್ತು ಕಷ್ಟ-ನಷ್ಟಗಳನ್ನು ಅನುಭವಿಸುವವರು ಬಡವರು. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು, ನದಿ ಪಾತ್ರ ಅಗಲವಾಗುವುದಕ್ಕೆ ಏನು ಮಾಡಬೇಕು. ಎನ್‌ಕ್ರೋಚ್‌ಮೆಂಟ್ ಜಾಸ್ತಿ ಇರುವವರನ್ನು-ಎವಿಕ್ಟ್ ಮಾಡಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಕೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನದಿ ಪಕ್ಕದಲ್ಲಿ ಬಡವರು ಅಥವಾ ಬೇರೆಯವರು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡು, ಮಳೆಗಾಲದಲ್ಲಿ ಏನು ತೊಂದರೆ ಪಡುತ್ತಿದ್ದಾರೆ, ಅಂತಹವರಿಗೆ ಪದೇ ಪದೇ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ, ಎನ್‌ಕ್ರೋಚ್‌ಮೆಂಟನ್ನು ಎವಿಕ್ಷನ್ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಒಳ್ಳೆಯ ಸಲಹೆ ಇದೆ, ಇದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಯವರ ಜೊತೆಯಲ್ಲಿ ಮಾತನಾಡಿ, ಎಲ್ಲೆಲ್ಲಿ ಅನಾಹುತಕ್ಕೆ ಒಳಗಾಗುತ್ತಿದೆ ಅಂತಹ ಕಡೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ನೀಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಒತ್ತುವರಿ ಜಮೀನನ್ನು ಖಾಯಂ ಮಾಡಬೇಕಾದರೆ, ಟಿ.ಟಿ. ಹಾಕುತ್ತಾರೆ, ಕೆಲವು ಕಡೆ ಒಂದು ಎಕರೆಗೆ. ಒಂದು ವರ್ಷಕ್ಕೆ 50 ರೂಪಾಯಿಯಿಂದ ಹಿಡಿದು ....

ಉಪಾಧ್ಯಕ್ಷರು : ಇದು ಸುವರ್ಣಾವತಿ ನದಿ ದಂಡೆಯಲ್ಲಿ ಆಗುತ್ತಿರುವ ಒತ್ತುವರಿ ವಿಷಯ...

ಶ್ರೀ ಕೆ.ಹೆಚ್. ಹನುಮೇಗೌಡ : ಎಲ್ಲಾದರೂ ಆಗಲಿ ಈ ಟಿ.ಟಿ. ಮಿನಿಮಮ್ ಹಾಕುವ ಹಾಗೆ ಮಾನ್ಯ ಮಂತ್ರಿಗಳು ಹೇಳಬೇಕು. 400-500 ರೂಪಾಯಿಗಳ ಟಿ.ಟಿ. ಹಾಕಿದರೆ. ಇದು 4-5 ವರ್ಷಕ್ಕೆ ಒಂದು ಎಕರೆಗೆ 4 ಸಾವಿರ, 5 ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗಿ ಬರುತ್ತದೆ. ಒತ್ತುವರಿ ಮಾಡಿರುವವರೆಲ್ಲರೂ ಬಡವರು, ನಿರ್ಗತಿಕರೇ ಆಗಿರುತ್ತಾರೆ. ಆದುದರಿಂದ, ಕಡಿಮೆ ಟಿ.ಟಿ. ಹಾಕಿ ಮಂಜೂರ್ಮಾಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕಳುಹಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ. ಮಹದೇವ್ : ರಾಜ್ಯದಲ್ಲಿ ನದಿ ಪಾತ್ರಗಳಿವೆ. ಯಾವ ಯಾವ ದೊಡ್ಡ ನದಿಗಳಿಗೆ ಅಥವಾ ಸಣ್ಣ ನದಿಗಳಿವೆ, ಈ ನದಿಗಳ ಪಾತ್ರದಲ್ಲಿ ಒತ್ತುವರಿಯಾಗಿದೆ. ಈ ಒತ್ತುವರಿಯಾದ ಪರಿಣಾಮ ಏನಾಗಿದೆಯೆಂದರೆ ಬಹುಶಃ ಕೆಲವು ನದಿಗಳ ಪಾತ್ರಗಳು ಪಟ್ಟಣದ ದಡದಲ್ಲಿವೆ, ಕೆಲವು ದೂರ ಇವೆ. ಪ್ರವಾಹ ಬಂದಾಗ ಫಸಲು ನಷ್ಟವಾಗುವ ಸಂಭವ ಇದೆ. ಆದುದರಿಂದ ಸಮಗ್ರ ರಾಜ್ಯಕ್ಕೆ ಅನ್ವಯಿಸುವಂಥ ಒಂದು ಆಜ್ಞೆಯನ್ನು ಸರ್ಕಾರ ಮಾಡಲಿಕ್ಕೆ ಇಚ್ಛೆ ಪಡುತ್ತದೆಯೇ? ಇದನ್ನು ಕೂಡಲೇ ಜಾರಿಗೆ ತಂದರೆ, ಪ್ರವಾಹವನ್ನು ತಡೆಯಬಹುದು, ನದಿ ಪಾತ್ರವೂ ಅಗಲವಾಗುತ್ತದೆ ಮತ್ತು ನದಿ ಸುಗಮವಾಗಿ ಹರಿದು ಹೋಗುವುದಕ್ಕೆ ಅನುಕೂಲವಾಗುತ್ತದೆ ಮತ್ತು ಎನ್‌ಕ್ರೋಚ್‌ಮೆಂಟ್‌ನ್ನೂ ಬಿಡಿಸಿದ ಹಾಗೆ ಆಗುತ್ತದೆ. ಇಲ್ಲದೆ ಹೋದರೆ, ಕಾಯಿದೆ, ಕಾಯಿದೆಯಾಗಿಯೇ ಉಳಿದುಕೊಂಡು, ನದಿ ಪಾತ್ರದ ಎನ್‌ಕ್ರೋಚ್‌ಮೆಂಟನ್ನು ಬಿಡಿಸುವುದಕ್ಕಾಗುವುದಿಲ್ಲ, ಈ ಪರಿಸ್ಥಿತಿಯಾಗುತ್ತದೆ. ಆದುದರಿಂದ

ಸರ್ಕಾರದವರು ಇದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ತರುವುದಕ್ಕೆ ಏಕೆ ಪ್ರಯತ್ನ ಮಾಡಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀ ಮಹದೇವ್ ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇನೆ.

ವಿವಿಧ ಮಾದರಿಯ ಮೀನುಗಾರಿಕಾ ಬೋಟುಗಳ ಸಂಖ್ಯೆ

245 (1236) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮಲ್ಪೆ, ಗಂಗೊಳ್ಳಿ ಮೀನುಗಾರಿಕೆ ಬಂದರುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಾದರಿಯ ಮೀನುಗಾರಿಕಾ ಬೋಟುಗಳೆಷ್ಟು? (ಮಾದರಿ ಸಹಿತ ಅಂಕಿ ಸಂಖ್ಯೆ ವಿವರ ನೀಡುವುದು)?

ಆ) ಕರ್ನಾಟಕ ಕರಾವಳಿಯಲ್ಲಿ ಅತಿ ಹೆಚ್ಚು ಮೀನುಗಾರಿಕಾ ಬೋಟುಗಳನ್ನು ಹೊಂದಿದ ಗಂಗೊಳ್ಳಿ ಬಂದರನ್ನು ಕಡೆಗಣಿಸಲು ಕಾರಣಗಳೇನು?

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು. ಮಲ್ಪೆ ಮತ್ತು ಗಂಗೊಳ್ಳಿ ಮೀನುಗಾರಿಕೆ ಬಂದರುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಾದರಿಯ ಮೀನುಗಾರಿಕಾ ಬೋಟುಗಳ ಸಂಖ್ಯೆ ಈ ಕೆಳಕಂಡಂತಿದೆ.

ಸ್ಥಳ	ಪರ್ಸೀನರ್	ಟ್ರಾಲರ್ಸ್	ಗಿಲ್‌ನೇಟ್	ಲಾಂಗ್ ಲೈನರ್ಸ್	ಇತರೆ ಯಾಂತ್ರಿಕೃತ ದೋಣಿ ಗಳು	ನಾಡ ದೋಣಿ ಗಳು	ಒಟ್ಟು
	1	2	3	4	5	6	7
ಮಂಗಳೂರು	91	354	67	6	72	830	1420
ಮಲ್ಪೆ	52	475	62	-	-	1848	2437
ಗಂಗೊಳ್ಳಿ	78	154	35	20	102	132	521

ಆ) ರಾಜ್ಯದ ಕರಾವಳಿಯಲ್ಲಿ ಅತಿ ಹೆಚ್ಚು ದೋಣಿಗಳನ್ನು ಗಂಗೊಳ್ಳಿಯು ಹೊಂದಿರುವುದಿಲ್ಲ. ಹಾಗೂ ಗಂಗೊಳ್ಳಿ ಮೀನುಗಾರಿಕಾ ಬಂದರನ್ನು ಕಡೆಗಣಿಸಲಾಗಿಲ್ಲ. ಈ ಬಂದರನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಇಲ್ಲಿ ಸ್ಥಳ ಪರಿಶೀಲನೆ ಹಾಗೂ ಸವಿಸ್ತಾರವಾದ ಸರ್ವೆ ನಡೆಸಿ ವರದಿ ನೀಡುವಂತೆ ನಿರ್ದೇಶಕರು, ಕೇಂದ್ರ ಕರಾವಳಿ ತಾಂತ್ರಿಕ ಮೀನುಗಾರಿಕೆ ಸಂಸ್ಥೆ, ಬೆಂಗಳೂರು, ಇವರನು ಕೋರಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವಂತಹ ಉತ್ತರ ನೋಡಿದರೆ ಇದು ಸತ್ಯಕ್ಕೆ ದೂರವಾದಂಥ ಉತ್ತರ ಎಂಬ ವಿಚಾರವನ್ನು ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಏತಕ್ಕೆಂದರೆ, ಎರಡು ತಿಂಗಳ ಹಿಂದೆ ನಡೆದಂಥ ಒಂದು ಸಮಿತಿ ಸಭೆಯಲ್ಲಿ ನಮ್ಮ ಕಾನೂನು ಸಚಿವರೂ ಸಹ ಇದ್ದರು. ಆ ಸಂದರ್ಭದಲ್ಲಿ ಗಂಗೊಳ್ಳಿಯಲ್ಲಿ ಹೆಚ್ಚಿನ ಮೀನುಗಾರಿಕಾ ದೋಣಿಗಳು ಇವೆ ಎನ್ನುವ ವಿಚಾರವನ್ನು ಅಧಿಕಾರಿಗಳು ಒಪ್ಪಿಕೊಂಡಿದ್ದರು. ಆದರೆ ಇವತ್ತು ಕೊಟ್ಟಂಥ ಉತ್ತರದಲ್ಲಿ ರಾಜ್ಯದ ಕರಾವಳಿಯಲ್ಲಿ ಅತಿ ಹೆಚ್ಚು ದೋಣಿಗಳನ್ನು ಗಂಗೊಳ್ಳಿಯು ಹೊಂದಿರುವುದಿಲ್ಲ ಹಾಗೂ ಗಂಗೊಳ್ಳಿ ಮೀನುಗಾರಿಕಾ ಬಂದರನ್ನು ಕಡೆಗಣಿಸಲಾಗಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯ ಏನು ಎಂದು ಕೇಳುತ್ತೇನೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟರು ಹೇಳುವುದು ಸರಿ. ಎರಡು ತಿಂಗಳ ಹಿಂದೆ ನಡೆದ ಸಭೆಯಲ್ಲಿ ನಮ್ಮ ಅಧಿಕಾರಿಗಳೂ ಒಪ್ಪಿಕೊಂಡಿದ್ದು ದಿಟ. ಆದರೆ ದೋಣಿಗಳು ಮೈಗ್ರೇಷನ್ ಆಗುತ್ತಿರುತ್ತವೆ. ಇವತ್ತಿನ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಕಡಿಮೆ ದೋಣಿಗಳು ಇದೆ. ಎರಡು ತಿಂಗಳ ಹಿಂದೆ ಜಾಸ್ತಿ ಇತ್ತು, ಇವತ್ತು ಕಡಿಮೆ ಇದೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮೈಗ್ರೇಷನ್ ಆಗುವುದಕ್ಕೆ ಕಾರಣ ಏನು ಎಂದರೆ, ಸರಿಯಾದ ವ್ಯವಸ್ಥೆ ಒಂದು ಕಡೆ ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಒಂದು ಕಡೆಯಿಂದ, ಅನುಕೂಲತೆಗಳು ಎಲ್ಲಿ ಹೆಚ್ಚಿದೆ ಆ ಕಡೆಗೆ ದೋಣಿಗಳು ಮೈಗ್ರೇಷನ್ ಆಗುವುದು ಸ್ವಾಭಾವಿಕ. ಅದನ್ನು ಏತಕ್ಕೆ ಸರಿಪಡಿಸಲಿಲ್ಲ ಎಂದು ಕೇಳುತ್ತೇನೆ. ಈ ಬಂದರನ್ನು ಏತಕ್ಕೆ ಕಡೆಗಣಿಸಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ನೀವು ಇನ್‌ಡೈರೆಕ್ಟ್ ಆಗಿ ಒಪ್ಪಿಗೆ ಕೊಟ್ಟಿದ್ದೀರಿ. ಏತಕ್ಕೆಂದರೆ, ಮೈಗ್ರೇಷನ್ ಆಗಿದೆ, ಆದ್ದರಿಂದ ಮೀನುಗಾರಿಕಾ ದೋಣಿಗಳ ಸಂಖ್ಯೆ ಕಡಿಮೆ ಆಗಿದೆ ಎಂಬ ಉತ್ತರವನ್ನು ಕೊಟ್ಟಿದ್ದೀರಿ. ಆದುದರಿಂದ ಸರಿಯಾದ ಉತ್ತರವನ್ನು ನಾನು ತಮ್ಮಿಂದ ನಿರೀಕ್ಷೆ ಮಾಡುತ್ತೇನೆ. ಗಂಗೊಳ್ಳಿ ಮೀನುಗಾರಿಕಾ ಬಂದರನ್ನು ಏತಕ್ಕೆ ಕಡೆಗಣಿಸಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ತಾವು ಒಂದು ಸಾರಿ ಅಲ್ಲಿಗೆ ಭೇಟಿಕೊಟ್ಟಂಥ ಸಂದರ್ಭದಲ್ಲಿ ಅಲ್ಲಿಗೆ ತುರ್ತಾಗಿ ಮೂರರಿಂದ ಐದು ಲಕ್ಷ ರೂಪಾಯಿಗಳ ಒಂದು ಮೀನುಗಾರಿಕಾ ಜೆಟ್ಟಿ ಅವಶ್ಯಕತೆ ಇದೆ ಎಂದು ತಮ್ಮ ಗಮನಕ್ಕೆ ತಂದಿದ್ದೆವು. ತಾವೂ ಸಹ ಆಶ್ವಾಸನೆ ಕೊಟ್ಟಿದ್ದಿರಿ. ಆದರೆ ಅದಕ್ಕೆ ಸರಿಯಾದಂಥ ಪ್ರತಿಕ್ರಿಯೆ ಏನೂ ಬಂದಿಲ್ಲ. ಆದುದರಿಂದ ತಾವು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಒತ್ತಾಯ ಮಾಡಿ ಆದಷ್ಟು ಬೇಗ ಇದನ್ನು ಮಾಡಿಸುವ ಪ್ರಯತ್ನ ಮಾಡುತ್ತೀರಾ?

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಗಂಗೊಳ್ಳಿ ಬಂದರನ್ನು ನೆಗ್ಲೆಕ್ಟ್ ಮಾಡಲಾಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಾವು ಯಾವ ಬಂದರನ್ನೂ, ಯಾವ ಕರಾವಳಿ ಪ್ರದೇಶವನ್ನೂ ನೆಗ್ಲೆಕ್ಟ್ ಮಾಡಿಲ್ಲ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿದ ಹಾಗೆ, ಎರಡು, ಮೂರು ತಿಂಗಳ ಹಿಂದೆ ಹೋದಾಗ ಒಂದು ಜೆಟ್ಟಿ ಇತ್ತು, ಅದನ್ನು ಸರಿ ಮಾಡಿಕೊಡುತ್ತೇವೆ ಎಂದು ಹೇಳುವುದನ್ನು ಒಪ್ಪಿದ್ದೇನೆ. ಆದರ ಬಗ್ಗೆ ನಾವು ನಮ್ಮ ಎಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದಾಗ ಇದಕ್ಕೆ ಹಣ ಜಾಸ್ತಿಯಾಗುತ್ತದೆ ಎಂದು ಹೇಳಿದರು.

ಅಲ್ಲಿ ಫಿಷ್ ಲ್ಯಾಂಪ್ ಸೆಂಟರ್ ಕಟ್ಟಬೇಕೆಂಬ ಅಭಿಪ್ರಾಯ ಇರುವುದರಿಂದ, ನಾವು ಇದರ ಬಗ್ಗೆ ಸರ್ವೆ ಮಾಡುತ್ತಿರುವುದರಿಂದ ಇದನ್ನು ಎಂಟನೇ ಫೈವ್ ಇಯರ್ ಪ್ಲಾನ್‌ನಲ್ಲಿ ಸೇರಿಸುತ್ತೇವೆ.

ಈ ಬ್ರಿಜ್ ಅಥವಾ ಜೆಟ್ಟಿ ಕಟ್ಟಬೇಕೆಂದು ಅವರು ಹೇಳಿದ್ದು. ಇದು ಕಡಿಮೆ ದರದಲ್ಲಿ ಆಗುವುದಾದರೆ ನಾವು ಗ್ಯಾರಂಟಿಯಾಗಿ ಅದನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಈಗ ಗಂಗೊಳ್ಳಿ ಬಂದರನ್ನು ಕಡೆಗಣಿಸಿಲ್ಲ ಎಂಬ ಉತ್ತರವನ್ನು ಮಾನ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಮಾನ್ಯ ಬೆಳ್ಳಿಯಪ್ಪನವರು ಮಂತ್ರಿಗಳಾದ ಮೇಲೆ ಇದನ್ನು ಕಡೆಗಣಿಸಿದ್ದಾರೆ ಎಂಬ ವಾದವನ್ನು ನಾನು ಮಾಡುತ್ತಿಲ್ಲ. ಅವರು ಏತಕ್ಕೆ ಇದನ್ನು ತಮ್ಮ ಮೈಮೇಲೆ ಹಾಕಿಕೊಳ್ಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಅಂತೂ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನೋಡಿದಾಗ. ಮಂಗಳೂರು, ಮಲ್ಪೆ ಬಂದರುಗಳನ್ನು ನೋಡಿದಾಗ, ಮಂಗಳೂರು ಮತ್ತು ಮಲ್ಪೆ ಬಂದರುಗಳಿಗಿಂತ ಜಾಸ್ತಿ ಗಂಗೊಳ್ಳಿ ಬಂದರನ್ನು ಕಡೆಗಣಿಸಲಾಗಿದೆ ಎಂಬ ವಾದವನ್ನು ನಾನು ಮಾಡುತ್ತಿದ್ದೇನೆ. ಇದರ ತೀರ್ಮಾನ ಮಾನ್ಯ ಸಚಿವರಿಗೇ ಬಿಟ್ಟದ್ದು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳು ಸುಮಾರು ಹನ್ನೊಂದು ಕೋಟಿ ರೂಪಾಯಿಗಳನ್ನು ಮೀನುಗಾರಿಕೆ ಇಲಾಖೆಗೆ ಜಾಸ್ತಿಯಾಗಿ ಕೊಟ್ಟಿದ್ದಾರೆ. ಇದರಿಂದ ಇದನ್ನು ನಿಜವಾಗಿಯೂ, ಖಂಡಿತವಾಗಿಯೂ ಕೆಲವು ಕೆಲಸಗಳನ್ನು ನಾವು ನಿರ್ಲಕ್ಷಿಸಿಲ್ಲ ಎನ್ನುವುದು ವೇದ್ಯವಾಗುತ್ತದೆ. ಆದರೂ ಕೂಡ ಸನ್ಮಾನ್ಯ ಶಾಸಕರು ಕೇಳುವ ಹಾಗೆ ಅವರ ಗಂಗೊಳ್ಳಿ ಕ್ಷೇತ್ರದಲ್ಲಿ ಏನೇನು ಕೆಲಸಗಳು ಬೇಕು ಅದನ್ನು ಮಾಡುವುದಕ್ಕೆ ಆದಷ್ಟೂ ಪ್ರಯತ್ನಪಟ್ಟು ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಚಾರ.

ಉಪಾಧ್ಯಕ್ಷರು : ಆದಷ್ಟೂ ನಾನು ಮಾಡಿಕೊಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಪ್ರಶ್ನೆ. ನವ ಮಂಗಳೂರು ಬಂದರು ಸ್ಥಾಪನೆಯಾಗುವ ಸಂದರ್ಭದಲ್ಲಿ ಅಲ್ಲಿ ನಿರ್ವಸಿತರಾದ ಮೀನುಗಾರರಿಗೋಸ್ಕರ ಒಂದು ಫಿಷರೀಸ್ ಜೆಟ್ಟಿಯನ್ನು ನವ ಮಂಗಳೂರು ಪ್ರದೇಶದಲ್ಲಿಯೇ ಮಾಡಿಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ದುರಾದೃಷ್ಟವಶಾತ್. ಇಷ್ಟರವರೆಗೆ ಯಾವುದೆ ಫಿಷರೀಸ್ ಜೆಟ್ಟಿ ನವ ಮಂಗಳೂರು ಬಂದರು ಪ್ರದೇಶದಲ್ಲಿ ಆಗಲಿಲ್ಲ. ಇದು ಒಂದನೇಯದು. ಎರಡನೇಯದು ಮೀನುಗಾರರಿಗೆ ಬೇಕಾದ ಇತರ ಸೌಕರ್ಯಗಳನ್ನು ಸಾಧ್ಯವಾದಷ್ಟೂ ಒದಗಿಸುತ್ತೀರಾ? ಅಳಿವೆ ಬಾಗಿಲಿನಲ್ಲಿ ಡ್ರೆಡ್ಜಿಂಗ್ ಆಗದೆ ಕಳೆದ ವರ್ಷ ಹಲವಾರು ಮೀನುಗಾರರ ಜೀವ ನಾಶವಾಗಿದೆ, ಬೋಟ್‌ಗಳು ಸಮುದ್ರದ ಪಾಲಾಗಿವೆ. ಈ ಬಗ್ಗೆ ಮಾನ್ಯ ಸಚಿವರು, ಸರಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಈ ಒಂದು ವಿಷಯವನ್ನು ಶಾಸಕರು ಏನು ಹೇಳಿದರು, ನವ ಮಂಗಳೂರು ಜಟ್ಟಿ ಕಟ್ಟುವುದು, ಫಿಷ್‌ಲ್ಯಾಂಡ್ ಕಟ್ಟುವುದನ್ನು ಮೊನ್ನೆತಾನೆ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಸರ್ವೆಗೆ ಕಳುಹಿಸಿ ನಾವು ಅದರ ರಿಪೋರ್ಟ್ ತರಿಸುತ್ತೇವೆ. ಮತ್ತೆ ಡ್ರೆಜ್ಜರ್ ಮಾಡುವ ವಿಷಯದಲ್ಲಿ ಅನೇಕ ಸಲ ನಾನು ಹೇಳಿದ್ದೇನೆ. ಆದಷ್ಟು ಮಟ್ಟಿಗೆ ಡ್ರೆಜ್ಜರ್ ಮಾಡಿ ಈ ಕರಾವಳಿ ಪ್ರದೇಶದಲ್ಲಿ ಬೋಟ್ಸ್‌ಗೆ ಏನು ತೊಂದರೆ ಇದೆ ಅದನ್ನು ನಿವಾರಣೆ ಮಾಡಲು ಪ್ರಯತ್ನಪಡುತ್ತಿದ್ದೇನೆ. ಮತ್ತೆ ಇನ್ನೂ ಹಲವಾರು ಕೆಲಸಗಳು ಕರಾವಳಿ ಪ್ರದೇಶದಲ್ಲಿ ಆಗಬೇಕಾಗಿದೆ.

ನವ ಮಂಗಳೂರು ಬಂದರಿನ ಗಂಗೊಳ್ಳಿಯಲ್ಲಿ ಅಥವಾ ನಾರ್ತ್ ಕೆನರಾದಲ್ಲಿ, ಸೌತ್ ಕೆನರಾದಲ್ಲಿ ಮಾಡಬೇಕಾಗಿದೆ. ಈಗಾಗಲೇ ನಾವು 3-4 ಸೆಂಟರ್ಸ್‌ನ್ನು ಸೂಚಿಸಿದ್ದೇವೆ. ಮಿನಿ ಫಿಶರೀಸ್ ಹಾರ್ಬರ್ಸ್ ಮಾಡಬೇಕೆಂದು ಸೂಚಿಸಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಆದಷ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತರಿ ಜಮೀನು ಬೆಳೆಗಳ ನಾಶ

246 (1402) ಶ್ರೀ ಕೆ. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ವೆ ನಂ. 41 ಮತ್ತು 56 ರಲ್ಲಿ ಒಟ್ಟು ಎಷ್ಟು ಎಕರೆ ತರಿ ಜಮಾನಿನ ಫಸಲು ಪ್ರತಿ ವರ್ಷ ನಾಶವಾಗುತ್ತದೆ; ಕಾರಣವೇನು?

ಆ) ಅರ್ಜಿದಾರರಿಗೆ ಸರ್ಕಾರದ ಅತಿವೃಷ್ಟಿ ಪರಿಹಾರ ಧನವನ್ನು ನೀಡಿದೆಯೇ? ಹಾಗಿದ್ದರೆ ಯಾವ ಯಾವ ವರ್ಷ ಎಷ್ಟೆಷ್ಟು ಹಣವನ್ನು ನೀಡಲಾಗಿದೆ ತಿಳಿಸಿ.

ಇ) ಅರ್ಜಿದಾರರು ಸರ್ಕಾರಕ್ಕೆ ಬರೆದ ಅರ್ಜಿಯ ಮೇಲೆ ತೆಗೆದುಕೊಂಡ ಸರ್ಕಾರದ ಕ್ರಮವೇನು; ಇನ್ನು ಮುಂದೆ ಸದರಿ ಜಮಾನಿನ ಫಸಲು ಹಾಳಾಗದಂತೆ ಸರ್ಕಾರ ಶೀಘ್ರವಾಗಿ ಸೂಕ್ತ ಕ್ರಮವನ್ನು ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಅತಿವೃಷ್ಟಿಯಿಂದ, ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ವೆ ನಂ. 41 ಮತ್ತು 56ರಲ್ಲಿ ತರಿ ಜಮಾನಿನ ಫಸಲು ನಾಶವಾದ ಬಗ್ಗೆ ವಿವರಗಳು ಈ ಕೆಳಕಾಣಿಸಿದಂತೆ ಇರುತ್ತದೆ.

ವರ್ಷ	ಸರ್ವೆ ನಂ. 41	ಸರ್ವೆ ನಂ. 56
1989	ಇಲ್ಲ	0.20 ಎಕರೆ
1991	ಇಲ್ಲ	2.05 ಎಕರೆ

ಇನ್ನುಳಿದ ವರ್ಷಗಳಲ್ಲಿ ಬೆಳೆ ಹಾನಿ ಆಗಿಲ್ಲ.

ಆ) ಹೌದು.

ಈ ಕೆಳಕಾಣಿಸಿದಂತೆ ಅರ್ಜಿದಾರರಾದ ಶ್ರೀ ವೀರನಾಯ್ಕ ಬಿನ್ ಮೋಟನಾಯ್ಕ ರವರಿಗೆ ಪರಿಹಾರ ಧನ ನೀಡಲಾಗಿದೆ.

1989	ರೂ. 500 ಪರಿಹಾರ ನೀಡಿದೆ.
1991	ರೂ. 250 ಪರಿಹಾರ ನೀಡಿದೆ.

ಇ) ಅರ್ಜಿದಾರರಿಗೆ 1989ನೇ ಸಾಲಿನಲ್ಲಿ ರೂ. 500 ಮತ್ತು 1991ನೇ ಸಾಲಿನಲ್ಲಿ ರೂ. 250.00 ಪರಿಹಾರವನ್ನು ಮಂಜೂರು ಮಾಡಿದೆ. ಸದ್ರಿ ವಿಷಯದ ಬಗ್ಗೆ ಭೂಸಾರ ಸಂರಕ್ಷಣೆ ಇಲಾಖೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಒಬ್ಬ ಹರಿಜನ ವ್ಯಕ್ತಿಯ ಸುಮಾರು ಎರಡುವರೆ ಎಕರೆ ಜಮೀನಿನಲ್ಲಿ ನೀರು ನಿಂತು ತೊಂದರೆಯಾಗಿದೆ. ಅದಕ್ಕೆ 1989ನೇ ಇಸವಿಯಲ್ಲಿ 500 ರೂಪಾಯಿಗಳನ್ನು ಮತ್ತು 1991ರಲ್ಲಿ 250 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೀರಿ. ಇದು ಬಹಳ ಕಡಿಮೆ ಆಗಿದೆ. ಇದನ್ನು ಜಾಸ್ತಿ ಮಾಡಬೇಕೆ ಎನ್ನುವುದು ಒಂದು. ಇನ್ನು ಎರಡನೆಯದು, ಕಾಮಗಾರಿ ಮಾಡುವ ದೃಷ್ಟಿಯಿಂದ ತಹಶೀಲ್ದಾರ್‌ರವರು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ದಿನಾಂಕ 16-8-90ರಲ್ಲಿ ತಮ್ಮ ಪತ್ರದ ಸಂಖ್ಯೆ : ಸಿಆರ್ : 71 / 90-91 ರಲ್ಲಿ ಅಲ್ಲಿ ಕಾಮಗಾರಿ ಕೆಲಸ ಅವಶ್ಯಕತೆ ಇದೆ. ಮಾಡಬೇಕು ಎಂದು ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಇನ್ನೂ ಏನೂ ಕಾರ್ಯಕ್ರಮ ಕೈಗೊಂಡಿಲ್ಲ. ಕಾಮಗಾರಿ ಕೆಲಸ ಮಾಡುವುದಕ್ಕೆ ಸರ್ಕಾರ ಗಮನ ಕೊಡುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕೊಟ್ಟಂಥ ಪರಿಹಾರ ಕಡಿಮೆ ಇದೆ ಎನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ನಮ್ಮ ಕಾನೂನಿನ ಅಡಿಯಲ್ಲಿ ಒಂದು ಹೆಕ್ಟೇರಿಗೆ 200 ರೂಪಾಯಿಗಳು ಕೊಡಬೇಕೆಂದು ಇದೆ. ಈ ಬಗ್ಗೆ ಅನೇಕ ಸಲ ವಾದ ಆಗಿರುವುದು ತಮಗೆಲ್ಲ ಗೊತ್ತಿದೆ. ಹೆಚ್ಚು ಕೊಡಬೇಕೆಂದು ಇದೆ. ಆದರೂ ಕೂಡ ನಾವು ರಾಜ್ಯ ಸರ್ಕಾರದವರು 100 ರೂಪಾಯಿಗಳನ್ನು ಹೆಚ್ಚು ಮಾಡಿ ಕೊಟ್ಟಿದ್ದೇವೆ. 200 ರೂಪಾಯಿ ಇದ್ದರೆ 300 ರೂಪಾಯಿಗಳನ್ನು ಮಾಡಿ ಕೊಟ್ಟಿದ್ದೇವೆ. ಇದು ಕೂಡ ಕಡಿಮೆ ಇದೆ. ಇನ್ನು ಕಾಮಗಾರಿ ಬಗ್ಗೆ ಹೇಳಿದ್ದಾರೆ. ನಾನು ಸಂಬಂಧಪಟ್ಟ ಸಾಯಿಲ್ ಕನ್‌ಜರ್‌ವೇಷನ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಅದನ್ನು ಮಾಡಿಸತಕ್ಕಂಥ ವ್ಯವಸ್ಥೆ ಮಾಡಿಸುತ್ತೇನೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಅನಧಿಕೃತ ಸಾಗುವಳಿ

250 (1403) ಶ್ರೀ ಬಿ. ಹೆಚ್. ಯಂಕಾನಾಯ್ಕು (ಹರಪನಹಳ್ಳಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕಾದಿರಿಸಲಾದ ಅರಣ್ಯ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹರಪನಹಳ್ಳಿಯಲ್ಲಿ ಕಾದಿರಿಸಲಾದ ಅರಣ್ಯ ಭೂಮಿಯ ಸರ್ವೆ ನಂ. 3 (ಎ) ಕಂಚೀಕೆರೆ ಮತ್ತು ಜತ್ತಿನಕಟ್ಟೆ ವಲಯದಲ್ಲೂ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಹಾಗಿದ್ದಲ್ಲಿ, ಕ್ರಮವಾಗಿ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಈ.ಟಿ. ಶಂಬುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಹರಪನಹಳ್ಳಿ ತಾಲ್ಲೂಕು ಕಂಚೀಕೆರೆ ಗ್ರಾಮ ಸರ್ವೆ ನಂ. 3(ಎ) ಜತ್ತಿನಕಟ್ಟೆ ಕಾದಿಟ್ಟ ಅರಣ್ಯದಲ್ಲಿನ ಅಕ್ರಮ ಸಾಗುವಳಿದಾರರ ಮೇಲೆ ಕೇಸು ದಾಖಲೆ ಮಾಡಿಕೊಂಡು

ಜಿಎಮ್‌ಎಫ್‌ಸಿ, ಹರಪನಹಳ್ಳಿ ಅತಿಕ್ರಮಿಸಲ್ಪಟ್ಟ ಭೂಮಿಯನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಇ) 27-4-1978ರ ನಂತರ ಅತಿಕ್ರಮಣ ಮಾಡಿರುವುದರಿಂದ ಅತಿಕ್ರಮಿಸಲ್ಪಟ್ಟ ಭೂಮಿಯನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಸಕ್ರಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್ : ಮಾನ್ಯ ಅಧ್ಯಕ್ಷರೇ ಉತ್ತರ ಒದಗಿಸಿದ್ದಾರೆ. ಆದರೆ ಅವರ ಉತ್ತರದಲ್ಲಿ ಹರಪನಹಳ್ಳಿ ತಾಲ್ಲೂಕು ಕಂಚೀಕೆರೆ ಗ್ರಾಮದಲ್ಲಿ ಮತ್ತು ಜತ್ತಿನಕಟ್ಟೆಯಲ್ಲಿ ಸುಮಾರು 8-10 ವರ್ಷಗಳಿಂದ ಸಾಗು ಮಾಡುತ್ತಿದ್ದಾರೆ. ಸಾಗುವಳಿ ಮಾಡಿರುವ ಜಮೀನಿನ ಮೇಲೆ ತಾವು ಹರಪನಹಳ್ಳಿ ಕೋರ್ಟಿನಲ್ಲಿ ಫಿರ್ಯಾದು ದಾಖಲು ಮಾಡಿದ್ದೇವೆಂದು ಕೊಟ್ಟಿದ್ದೀರಿ. ತಾವು ಎಷ್ಟು ಜನರ ಮೇಲೆ ಕೋರ್ಟಿನಲ್ಲಿ ದಾಖಲು ಮಾಡಿದ್ದೀರಿ; ಎಷ್ಟು ಎಕರೆ ಜಮೀನನ್ನು ಬಿಡಿಸುತ್ತೀರ? ಸಾಮಾನ್ಯವಾಗಿ ಸಾವಿರಾರು ಜನ ರೈತರು 4-5 ಎಕರೆ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಕಳೆದ 5-6 ವರ್ಷಗಳಿಂದ ಬೆಳೆ ಬೆಳೆಯುತ್ತಿದ್ದಾರೆ. ಆದ್ದರಿಂದ ಅತಿಕ್ರಮಣ ಸಾಗುವಳಿ ಯಾರ‍್ಯಾರು ದಿನಾಂಕ 27-4-78 ರಿಂದ ಈಚೆಗೆ ಮಾಡಿದ್ದಾರೋ ಅವರ ಜಮೀನನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ ಎಂದು ಹೇಳಿದ್ದಾರೆ. ಎಷ್ಟು ಎಕರೆ ಜಮೀನನ್ನು ಎಷ್ಟು ಜನರಿಂದ ಬಿಡಿಸಿ ಕೇಸ್ ಹಾಕಿದ್ದೀರಿ? ಮತ್ತೆ ಹರಿಜನ ಗಿರಿಜನ ಹಾಗೂ ಲಂಬಾಣಿ ತಾಂಡ ಹಾಗೂ ಹಿಂದುಳಿದ ಜನ ಫಾರೆಸ್ಟ್‌ನಲ್ಲಿ ಸುಮಾರು ವರ್ಷಗಳಿಂದ ಏನು ಸಾಗುವಳಿ ಮಾಡಿದ್ದಾರೆ ಅವರನ್ನು ತಾವು ಯಾವ ರೀತಿ ಬಿಡಿಸುತ್ತೀರಿ? ಅಥವಾ ಅವರಿಗೆ ಸಾಗುವಳಿ ಪಟ್ಟಾ ಕೊಡುತ್ತೀರಾ?

ಶ್ರೀ ಈ.ಟಿ. ಶಂಭುನಾಥ್ : ಮಾನ್ಯ, ಅಧ್ಯಕ್ಷರೆ, ಅವರು ಸಾಗುವಳಿ ಮಾಡುತ್ತಿರುವುದು ಕೇವಲ 5-6 ವರ್ಷಗಳಿಂದ. 1978ರ ಹಿಂದೆ ಸಾಗುವಳಿ ಮಾಡಿದವರನ್ನು ಮಾತ್ರ ನಾವು ರೆಗ್ಯುಲರೈಜ್ ಮಾಡುತ್ತೇವೆಯೇ ಹೊರತು, ಆಮೇಲೆ ಮಾಡಿರತಕ್ಕಂಥ ಎಲ್ಲಾ ಜಮೀನನ್ನು ನಾವು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಈಗ ಅಲ್ಲಿ ಯಾರನ್ನೂ ಸಾಗುವಳಿ ಮಾಡಲಿಕ್ಕೆ ಬಿಡುತ್ತಾ ಇಲ್ಲ. ಅವರನ್ನೆಲ್ಲ ತಪ್ಪಿಸಿದ್ದೇವೆ. ಆ ಭೂಮಿ ಈಗ ಅರಣ್ಯ ಇಲಾಖೆಯ ಸ್ವಾಧೀನದಲ್ಲಿ ಇದೆ. ನಾವು ಅಲ್ಲಿ ಗಿಡ ನೆಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಯಂಕಾನಾಯಕ್ : ಗಿಡ ಇನ್ನೂ ನೆಡಿಸಿಲ್ಲ, ನೀವು ಸ್ವಾಧೀನಕ್ಕೆ ತೆಗೆದುಕೊಳ್ಳಲಾರಿರಿ. ನಾನು ಅಲ್ಲೇ ಪಕ್ಕದಲ್ಲಿ ಇದ್ದೇನೆ, ಕಂಚೀಕೆರೆ ಫಾರೆಸ್ಟ್ ಪಕ್ಕ ಇದ್ದೇನೆ. ಸುಮಾರು ವರ್ಷದಿಂದ ಮಾಡುತ್ತಿದ್ದಾರೆ. ಅದನ್ನು ತೆಗೆಸಿ ಅಥವಾ ಬಿಡಿಸಿ, ಇಲ್ಲವೇ ಅವರಿಗೆ ಪಟ್ಟಾ ಕೊಡುವ ವ್ಯವಸ್ಥೆ ಮಾಡಿ. ಅದು ಕಾದಿಟ್ಟ ಅರಣ್ಯ, ರಿಸರ್ವ್ ಫಾರೆಸ್ಟ್. ನೀವು ಏನು ಹೇಳಿದ್ದೀರೆಂದರೆ ಕೇಂದ್ರ ಸರ್ಕಾರದಿಂದ ಸಹಾಯ ತೆಗೆದುಕೊಂಡು ರೆಕಮೆಂಡ್ ಮಾಡಿ ಕಳುಹಿಸುತ್ತೇವೆಂದು ಹೇಳಿದ್ದೀರಿ. ಅದು ರಿಸರ್ವ್ ಫಾರೆಸ್ಟ್. ಸುಮಾರು 3400 ಎಕರೆ ಅರಣ್ಯ ಪ್ರದೇಶ ಅಲ್ಲಿ ಇದೆ. ಆದಷ್ಟು ಅಲ್ಲಿ ಸಾಗುವಳಿ ಮಾಡುವುದಕ್ಕೆ ಪ್ರಯತ್ನ ಮಾಡಿಕೊಡಿ.

ಶ್ರೀ ಈ.ಟಿ. ಶಂಭುನಾಥ್ : 1965ರ ಹಿಂದೆ 91.6 ಎಕರೆ ಮಾತ್ರ ಸಾಗುವಳಿ ಮಾಡುತ್ತಿದ್ದಾರೆ. ಅದನ್ನು ರೆಗ್ಯುಲರೈಸ್ ಮಾಡುತ್ತೇವೆ. ಇನ್ನು ಉಳಿದಿದ್ದು, ಇತ್ತೀಚೆಗೆ ಅವರು

ಮಾಡುತ್ತಿದ್ದವರನ್ನು ನಾವು ಬಿಡಿಸಿದ್ದೇವೆ. ಹಿಂದೆ ಮಾಡುತ್ತಿದ್ದವರಿಗೆ ಮಾತ್ರ ರೆಕಮೆಂಡ್ ಮಾಡಿ ಕಳುಹಿಸಿದ್ದೇವೆ.

ಶ್ರೀ ಬಿ.ಹೆಚ್. ಯಂಕಾನಾಯಕ್ : ಮಾಡುತ್ತಿರುವವರನ್ನು ಬಿಡಿಸಿ, ಇಲ್ಲವೆ ಅವರಿಗೆ ಪಟ್ಟಾ ಕೊಡಿಸಿ ಎರಡರೊಳಗೆ ಒಂದು ಮಾಡಿ.

ಶ್ರೀ ಈ.ಟಿ. ಶಂಭುನಾಥ್ : ಹಾಗೆ ಕೊಡಿಸುವುದಕ್ಕೆ ಬರುವುದಿಲ್ಲ. ಏಕೆಂದರೆ, 1965ರಿಂದ ಮಾಡಿರುವವರಿಗೆ ಮಾತ್ರ ಪಟ್ಟಾ ಕೊಡಿಸಲಿಕ್ಕೆ ಬರುತ್ತದೆ. ಇತ್ತೀಚೆಗೆ ಐದಾರು ವರ್ಷದಿಂದ ಮಾಡುತ್ತಿರುವವರಿಗೆ ನಾವು ಪಟ್ಟಾ ಕೊಡುವುದಕ್ಕೆ ಬರುವುದಿಲ್ಲ. ಅವರನ್ನು ಬಿಡಿಸಿ ನಾವು ಅರಣ್ಯವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಸನ್ಮಾನ್ಯ ಮಂತ್ರಿಗಳು ಹೇಳಿದರು, 1965 ರಿಂದ ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿರುವವರಿಗೆ ಮಾತ್ರ ಪಟ್ಟಾ ಕೊಡಲಿಕ್ಕೆ ಬರುತ್ತದೆ ಎಂದು ಹೇಳಿದ್ದಾರೆ. ಇದನ್ನು ಯಾವ ಆಧಾರದಲ್ಲಿ ಕೊಡುತ್ತಿದ್ದಾರೆ. ಈ ಹಿಂದೆ 1965ರ ಪೂರ್ವ ಅಥವಾ 1965ರಲ್ಲಿ ಅಕ್ರಮಣ ಮಾಡಿಕೊಂಡವರಿಗೆ ಅರಣ್ಯ ಇಲಾಖೆ ಭೂಮಿಯನ್ನು ಎಷ್ಟು ಜನಕ್ಕೆ ತಾವು ಪಟ್ಟಾ ಕೊಟ್ಟಿದ್ದೀರಿ?

ಶ್ರೀ ಈ.ಟಿ. ಶಂಭುನಾಥ್ : 1965ರಲ್ಲಿ ಈ ಭಾಗದಲ್ಲಿ ಮಾಡಿದವರು ಇದ್ದಾರೆ. ಆದರೆ ನಮ್ಮ ಸರ್ಕಾರದ ಪ್ರಕಾರ 1978ರ ಹಿಂದೆ ಸಾಗುವಳಿ ಮಾಡತಕ್ಕವರನ್ನು ರೆಗ್ಯುಲರೈಸ್ ಮಾಡುತ್ತಿದ್ದೇವೆಂದು ಹೇಳಿ ಅದನ್ನೆಲ್ಲಾ ಲಿಸ್ಟ್ ರೆಡಿ ಮಾಡಿ ಕ್ಯಾಬಿನೆಟ್ ಅಪ್ರೂವ್ ಮಾಡಿಕೊಂಡು ಈಗ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಕೇಂದ್ರದಿಂದ ಅಪ್ರೂವ್ ಆಗಿ ಬಂದ ಕೂಡಲೇ ಅವರಿಗೆ ಪಟ್ಟಾ ಕೊಡುತ್ತೇವೆ. ಆದರೆ ಇತ್ತೀಚೆಗೆ ಮಾಡಿರತಕ್ಕಂಥವರಿಗೆ ಆಸ್ಪದ ಕೊಡುವುದಿಲ್ಲ. ಅದನ್ನು ಅರಣ್ಯಕ್ಕೆ ಸ್ವಾಧೀನಕ್ಕೆ ತೆಗೆದುಕೊಂಡು ಅರಣ್ಯ ಬೆಳೆಸಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷಣಿಯವರೆ, ಸನ್ಮಾನ್ಯ ಸಚಿವರು ಉತ್ತರ ಕೊಡುವಂಥ ಸಂದರ್ಭದಲ್ಲಿ ರಿಸರ್ವ್ ಫಾರೆಸ್ಟ್ ಬಗ್ಗೆ ಪ್ರಸ್ತಾಪ ಮಾಡಿರತಕ್ಕಂಥದ್ದು ಇದೆ. ರಿಸರ್ವ್ ಫಾರೆಸ್ಟ್ ಅನ್ನು ಕೊಡತಕ್ಕಂಥ ಅಧಿಕಾರ ನಿಮಗೆ ಇದೆಯೇ? ಇದ್ದರೆ ಆದೇಶ ಏನು? ಆ ಆರ್ಡರ್ ಪ್ರಕಾರ ನೀವು ಪಟ್ಟಾ ಕೊಡುವುದಕ್ಕೆ ಸಾಧ್ಯವೇ ಎನ್ನತಕ್ಕಂಥಾದ್ದನ್ನು ಸಭೆಗೆ ತಿಳಿಸಬೇಕು. ಇದು 4 ಕೋಟಿ ಜನರಿಗೆ ಇದು ಗೊತ್ತಾಗಬೇಕು. ಏಕೆಂದರೆ, ಅದರ ಬಗ್ಗೆ ಸ್ವಲ್ಪ ಜಿಜ್ಞಾಸೆ ಇದೆ. ಮತ್ತೆ ಇದರ ಬಗ್ಗೆ ನೀವು ಒಂದು ಮಾತನ್ನು ಹೇಳಿದ್ದೀರಿ. ಕಮಿಟಿಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆ ಕಮಿಟಿಯನ್ನು ಯಾವಾಗ ಮಾಡುತ್ತೀರಿ? ಹೇಗೆ ಮಾಡುತ್ತೀರಿ? ಅದರ ಕಾರ್ಯವ್ಯಾಪ್ತಿ ಏನು? ನಿಮಗೆ ಕೊಡುವುದಕ್ಕೆ ಅಧಿಕಾರ ಇದೆಯೇ? ದಯಮಾಡಿ ತಿಳಿಸಿ.

ಶ್ರೀ ಈ.ಟಿ. ಶಂಭುನಾಥ್ : ಸರ್ಕಾರದ ತೀರ್ಮಾನದ ಪ್ರಕಾರ 1978ರ ಹಿಂದೆ ಸಾಗುವಳಿ ಮಾಡಿದವರಿಗೆ ಕೊಡಬೇಕು ಎನ್ನುವಂಥ ಉದ್ದೇಶದಿಂದ ಒಂದು ನಿರ್ಧಾರ ಮಾಡಿದೆ. ಅದನ್ನು ನಮಗೆ ಕೊಡುವುದಕ್ಕೆ ಹಕ್ಕಿಲ್ಲ: ಅದನ್ನು ರೆಕಮೆಂಡ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಕೇಂದ್ರ ಸರ್ಕಾರ ಅಪ್ರೂವ್ ಮಾಡಿ ಕಳುಹಿಸಿದಾಗ ನಮಗೆ ಪಟ್ಟಾ ಕೊಡಲಿಕ್ಕೆ ಬರುತ್ತದೆ. ಈಗ ನಾವು ಲಿಸ್ಟ್ ಮಾಡಿ ಕಳುಹಿಸಿದ್ದೇವೆ. ಅಂದರೆ ನಮ್ಮಲ್ಲಿ ಹೇಗೆಂದರೆ, ನಮ್ಮಲ್ಲಿ ರೆಕಾರ್ಡ್ ಇರಬೇಕು. ಎಲ್ಲಾದರೂ 1978ರ ಹಿಂದೆ ಇವರು ಎನ್‌ಕ್ರೋಚ್ ಮಾಡಿದ್ದರೆಂದು ಅರಣ್ಯ ಇಲಾಖೆಯವರು ಕೇಸ್ ಫೈಲ್

ಮಾಡಿದ್ದರೆ ಮಾತ್ರ ನಾವು ಮಾಡುತ್ತೇವೆ. ಕೆಲವು problematic cases ಇವೆ. ಅಂದರೆ ನಾವು 1978 ರಿಂದ ಸಾಗುವಳಿ ಮಾಡುತ್ತಿದ್ದೇವೆಂದು ಕೆಲವರು ಹೇಳುತ್ತಾರೆ. ಆದರೆ ನಮ್ಮಲ್ಲಿ ರೆಕಾರ್ಡ್ ಇರುವುದಿಲ್ಲ. ಅಂಥಾ ಕೇಸ್ ನಿರ್ಧಾರ ಮಾಡಲಿಕ್ಕೆ ಒಂದು ಕಮಿಟಿ ಮಾಡಿ ಅದರಲ್ಲಿ ಎಂ.ಎಲ್.ಎ.. ಯವರು ಸದಸ್ಯರಾಗಿರುತ್ತಾರೆ, ಇನ್ನೂ ಒಬ್ಬರು ಖಾಸಗಿಯವರನ್ನು ಸದಸ್ಯರಾಗಿ ಮಾಡಿ ಆ ಕಮಿಟಿ ಮುಖಾಂತರ ನಿರ್ಧಾರ ಮಾಡಿದ ಮೇಲೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷಿಣಿಯವರೆ, ಸನ್ಮಾನ್ಯ ಸಚಿವರು ಊಹೆ ಮಾಡಿ ಉತ್ತರ ಕೊಡತಕ್ಕಂಥಾದ್ದು ಬೇಡ. When it is forest land, the question of releasing land from the forest lies with the Government of India. How can you presume and tell we will issue pattas? ರಿಲೀಸ್ ಮಾಡಿಸುತ್ತೇವೆಂದು ಹೇಳಿ ಪಟ್ಟಾ ಕೊಡುತ್ತೇವೆಂದು ಏಕೆ ಹೇಳುತ್ತೀರಿ?

Shri E.T. Shambunath: I have not told that we will issue pattas. We will regularise encroachment by getting Central Government opinion.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದೇ ವಿನಃ ...

ಶ್ರೀ ಈ.ಟಿ. ಶಂಭುನಾಥ್ : ಕಳುಹಿಸುತ್ತೇವೆ ಎಂದೆ ಹೇಳಿರುವುದು.

ಶ್ರೀ ಟಿ.ಬಿ. ಜಯಚಂದ್ರ : ಅಷ್ಟನ್ನು ಹೇಳಿಬಿಟ್ಟರೆ ಸಾಕಾಗುತ್ತದೆ. ನೀನು ಪಟ್ಟಾ ಕೊಡುತ್ತೇವೆಂದರೆ. ಹಳ್ಳಿಗಳಲ್ಲಿ ಪಟ್ಟಾ ಕೊಡಿ, ಪಟ್ಟಾ ಕೊಡಿ ಎನ್ನುತ್ತಾರೆ.

ಶ್ರೀ ಈ.ಟಿ. ಶಂಭುನಾಥ್ : ನೀವು ಕಳುಹಿಸಿಕೊಡಿ, ನೀವು ರೆಕಮೆಂಡ್ ಕಳುಹಿಸಿಕೊಟ್ಟರೆ ನಾವು ಒಪ್ಪಿ ಪರ್ಮಿಷನ್ ಕೊಡುತ್ತೇವೆ ಎಂದು ಅವರು ನಮಗೆ ಡೈರಕ್ಷನ್ ಕೊಟ್ಟಿದ್ದಾರೆ. ಅದಕ್ಕಾಗಿ ನಾವು ಕಳುಹಿಸುತ್ತಿದ್ದೇವೆ. ಈಗ ಕಮಿಟಿ ಮಾಡುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಅಧ್ಯಕ್ಷರೆ, ರಿಸರ್ವ್ ಪಾರೆಸ್ಟ್‌ನಲ್ಲಿ ಜಮೀನು ಏನಾದರೂ ಒತ್ತುವರಿ ಮಾಡಿದ್ದರೆ ಇಷ್ಟು ವರ್ಷಕ್ಕೆ ಮುಂಚೆ ಮಾಡಿದವರಿಗೆ ಮಾತ್ರ ಪರ್ಮಿಷನ್ ಕೊಡುತ್ತೇವೆ, ಪಟ್ಟಾ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ 15 ವರ್ಷದ ಹಿಂದೆ ಕೆಲವು ಗೋಮಾಳಗಳಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಗಿಡ ನೆಡುವುದಕ್ಕೆಂದು ಊರಿನವರೇ ವಾಲೆಂಟರಿಯಾಗಿ ಬಿಟ್ಟು ಕೊಟ್ಟರು. ಅದು ರಿಸರ್ವ ಫಾರೆಸ್ಟ್‌ಗೆ ಸೇರಿಲ್ಲ. ಅಂಥಾ ಗೋಮಾಳದಲ್ಲಿ ಇವರು ಗಿಡವನ್ನು ಕೆಲವು ನೆಟ್ಟರು ಕೆಲವು ಹೋಗಿವೆ. ಅಂಥಾ ಪ್ರದೇಶದಲ್ಲಿ ಕೆಲವು ರೈತರು ಹೋಗಿ ಗಿಡ ನೆಟ್ಟಿಲ್ಲವೆಂದು ಹೇಳಿ ಒತ್ತುವರಿ ಮಾಡಿದ್ದಾರೆ. ಅಂಥಾ ಒತ್ತುವರಿ ಮಾಡಿರುವುದು 3 ವರ್ಷ ಆಗಿರಬಹುದು, 4 ವರ್ಷ ಆಗಿರಬಹುದು, 5 ವರ್ಷ ಆಗಿರಬಹುದು. ಆ ರೀತಿ ಒತ್ತುವರಿ ಮಾಡಿರತಕ್ಕಂಥ ರೈತರಿಗೆ ನೀವು ಪಟ್ಟಾ ಕೊಡುತ್ತೀರಾ ಎಂದು ದಯಮಾಡಿ ತಿಳಿಸಿ ಸ್ವಾಮಿ.

ಶ್ರೀ ಈ.ಟಿ. ಶಂಭುನಾಥ್ : ಗೋಮಾಳಗಳು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟದ್ದು ಅಲ್ಲ. ಸೋಶಿಯಲ್ ಫಾರೆಸ್ಟ್ರಿಯಲ್ಲಿ ಅದನ್ನು ತೆಗೆದುಕೊಂಡು ಅಲ್ಲಿ ಮರಗಳನ್ನು ಬೆಳೆದು ಅಲ್ಲಿರತಕ್ಕಂಥ ಮಂಡಳಿಗಳಿಗೆ ವಹಿಸಿಕೊಡುತ್ತಿದ್ದರು. ಅವುಗಳನ್ನು ಕಾಪಾಡತಕ್ಕಂಥದ್ದು ಅವರ ಕರ್ತವ್ಯ. ಅವರು ಅದನ್ನು ಕಾಪಾಡಲಿಲ್ಲವೆಂದರೆ, ಆ ಗೋಮಾಳ ಲ್ಯಾಂಡ್ ಅಥವಾ ಸಿ ಅಂಡ್ ಡಿ ಲ್ಯಾಂಡ್‌ಗಳ ಪಟ್ಟಾ ಕೊಡುವ ವಿಚಾರ ರೆವಿನ್ಯೂ ಸಚಿವರಿಗೆ ಸಂಬಂಧಪಟ್ಟದ್ದು ನನಗೆ ಸಂಬಂಧಪಡುವುದಿಲ್ಲ.

ಶ್ರೀ ಬಿ. ಶಿವರಾಮು : 1978ನೇ ಇಸವಿಗಿಂತ ಹಿಂದೆ ಭೂಮಿಯನ್ನು ಸಾಗುವಳಿ ಮಾಡಿದ್ದರೆ ಮಾತ್ರ ನಾವು ಪಟ್ಟಾ ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ ಅಥವಾ ಕೇಂದ್ರ ಸರಕಾರದವರಿಗೆ ಶಿಫಾರಸ್ಸು ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈಗ 1978ಕ್ಕಿಂತ ಮುಂಚೆ ಅವರು ಉಳುಮೆ ಮಾಡಿದ್ದಾರೋ ಇಲ್ಲವೋ ಎನ್ನತಕ್ಕಂಥಾದ್ದನ್ನು ಇವರು ಹೇಗೆ ಕನ್‌ಫರ್ಮ್ ಮಾಡುತ್ತಾರೆ? ಕೇಸ್ ಹಾಕಿದ್ದರೆ ಯಾವುದಾದರೂ ದಾಖಲೆ ಇದ್ದರೆ ಎಂದು ಮಾತ್ರ ಹೇಳಿದರು. ಈಗ ಅಲ್ಲಿನ ಎಲ್ಲರೂ ಅರಣ್ಯ ಇಲಾಖೆಯವರ ಜೊತೆಗೆ ಜಗಳ ಮಾಡಿಕೊಂಡು, ಕೇಸ್ ಮಾಡಿಕೊಂಡು, ಮಾಡಿರತಕ್ಕಂಥಾ ನಿದರ್ಶನಗಳು ಬಹಳ ಕಡಿಮೆ ಇದೆ. ನಮ್ಮಲ್ಲಿ ಯರಗುಂದ ಫಾರೆಸ್ಟ್‌ನಲ್ಲಿ ಸುತ್ತುಮುತ್ತಲಿನ ಹಳ್ಳಿಯ ಜನರು 2000 ಎಕರೆಯನ್ನು 20 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇಲ್ಲಿಯವರೆಗೆ ಅಂಥವರು ಕೇಸ್ ಹಾಕಿಕೊಂಡು ಹೋಗತಕ್ಕಂಥದ್ದು ಬಹಳ ಕಡಿಮೆ ಇದೆ. ಈ ವಿಚಾರದ ಬಗ್ಗೆ ಹಿಂದೆ ರೈತ ಸಂಘದವರು ಹೋರಾಟ ಮಾಡಿದ್ದಾರೆ. ತಾವುಗಳು ಈ ಸದನದಲ್ಲಿ ಒಂದು ಉತ್ತರವನ್ನು ಕೊಟ್ಟ ಮೇಲೆ ಅದು ಪತ್ರಿಕೆಗಳಲ್ಲಿ ಬಂದೇ ಬರುತ್ತದೆ. ಆಗ ಸಂಬಂಧಪಟ್ಟ ರೈತರುಗಳು ನಮ್ಮ ಹತ್ತಿರ ಬಂದು ಪತ್ರಿಕೆಯಲ್ಲಿ ಹೀಗೆ ಬಂದಿದೆ ನಾವು ಕೂಡ 20 ವರ್ಷಗಳಿಂದ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿದ್ದೇವೆ, ನಮಗೂ ದಾಖಲೆ ಕೊಡಿ ಎಂದು ಕೇಳುತ್ತಾರೆ. ಆಗ ಇವರು ದಾಖಲೆ ಇಲ್ಲ ಅಂದರೆ ಅವರುಗಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಳ್ಳುವುದು ಹೇಗೆ? ತಾವುಗಳು ಅವರಿಗೆ ಮಂಜೂರು ಮಾಡಲು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಈ.ಟಿ. ಶಂಭುನಾಥ್ : 1978ನೇ ಸಾಲಿಗಿಂತ ಹಿಂದೆ ಎನ್‌ಕ್ರೋಚ್ ಮಾಡಿರತಕ್ಕಂಥಾದ್ದರ ರಿಕಾರ್ಡ್ಸ್ ನಮ್ಮಲ್ಲಿ ಇದೆ. ಕೆಲವನ್ನು ನಿರ್ಧಾರ ಮಾಡುವುದಕ್ಕಾಗಿಯೇ ನಾವು ಸಮಿತಿಯನ್ನು ಮಾಡಿರುವುದು. ಆ ಸಮಿತಿಯಲ್ಲಿ ಶಾಸಕರು, ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಮುಂತಾಗಿ ಇರುತ್ತಾರೆ. ಅಲ್ಲಿ ನೀವು ಅದನ್ನು ನಿರ್ಧಾರ ಮಾಡಿ ಲೋಕಲ್ ಆಧಾರದ ಮೇಲೆ ಇಂಥವರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಎಂದು ಸಾಬೀತುಪಡಿಸಿ ನೀವು ಸದರಿ ರಿಕಾರ್ಡ್ಸ್‌ನ್ನು ಡೆವಲಪ್ ಮಾಡಿ ಕಳುಹಿಸಿದರೆ ನಾವು ಅದನ್ನು ಕೇಂದ್ರ ಸರಕಾರದವರಿಗೆ ರೆಕಮೆಂಡ್ ಮಾಡಿ ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಅಕ್ರಮ ಭೂಮಿಯನ್ನು ಸಕ್ರಮ ಮಾಡುವುದು ಯಾರು?

ಉಪಾಧ್ಯಕ್ಷಿಣಿಯವರು : ತಾವುಗಳು ಬೇರೆ ಪ್ರಶ್ನೆಯನ್ನು ಕೇಳಿ.

ಮಧುಗಿರಿ ತಾಲ್ಲೂಕು ಕಸಬಾ ಹೋಬಳಿಯಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯ ವಿಸ್ತೀರ್ಣ

251 (1324) ಶ್ರೀ ಜಿ.ಎಸ್. ಶಿವನಂದಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕಸಬಾ ಹೋಬಳಿ ಚಿನಕವಜ್ರದ ಸರ್ವೆ ನಂ. 71 ಮತ್ತು 73ರಲ್ಲಿ ಲಭ್ಯವಿರುವ ಸಾಗುವಳಿ ಯೋಗ್ಯ ಭೂಮಿ ಎಷ್ಟು;

ಆ) ಈ ಸರ್ವೆ ನಂಬರ್‌ಗಳಲ್ಲಿ ಬಗರ್ ಹುಕುಂ (ಒತ್ತುವರಿ) ಸಾಗುವಳಿ ಮಾಡಿರುವುದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ದೊಡ್ಡ ಹಿಡುವಳಿದಾರರು ಎಷ್ಟು ಜನ; (ಹೆಸರು ಮತ್ತು ವಿಸ್ತೀರ್ಣ ಸಹಿತ) ದೊಡ್ಡ ಹಿಡುಳಿದಾರರಿಗೆ ಸಕ್ರಮಗೊಳಿಸುವಲ್ಲಿ ಸರ್ಕಾರ ಯಾವ ನಿಯಮಗಳನ್ನು ಅನುಸರಿಸುವುದು;

ಇ) ಬಗರ್‌ಹುಕುಂ ಸಾಗುವಳಿ ಮಾಡಿರುವ ರೈತರಲ್ಲಿ ದಂಡ ಪಡೆದು ಪಹಣಿ ಬರೆಯದೆ ಇರುವ ರೈತರಿಗೆ ಅನ್ಯಾಯವಾಗದಂತೆ ಸರ್ಕಾರ ಯಾವ ರೀತಿ ಸಕ್ರಮಗೊಳಿಸಲು ಯೋಜಿಸಿದೆ; ಈ ಲೋಪವನ್ನು ಸರಿಪಡಿಸಲಾಗುವುದೆ;

ಈ) ಸ.ನಂ. 71ರಲ್ಲಿ ಹಂಗಾಮಿಯಾಗಿ ಮಂಜೂರಾಗಿರುವ ಜಮೀನು ಎಷ್ಟು; ಈ ಪೈಕಿ ಖಾಯಂಗೊಳಿಸಲಾದ ಜಮೀನು ಎಷ್ಟು; (ಹೆಸರು ಮತ್ತು ವಿಸ್ತೀರ್ಣ ಸಹಿತ)

ಉ) ಮಂಜೂರಾದ ಜಮೀನಿನ ದಾಖಲೆಗಳು ದುರಸ್ತಿಯಾಗದೆ ಕಣ್ಮರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ದರಖಾಸ್ತಿನಲ್ಲಿ ಮಂಜೂರಾದ ಜಮೀನುಗಳನ್ನು ದುರಸ್ತಿಪಡಿಸಲು ಮತ್ತು ಕಣ್ಮರೆಯಾದ ದಾಖಲೆ ತಯಾರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಸರ್ವೆ ನಂ. 71ರಲ್ಲಿ - 140 ಎಕರೆ 33 ಗುಂಟೆಗಳು

ಸರ್ವೆ ನಂ. 73ರಲ್ಲಿ - 91 ಎಕರೆ 38 ಗುಂಟೆಗಳು

ಆ) ಸರ್ವೆ ನಂ. 71ರಲ್ಲಿ :

ಪರಿಶಿಷ್ಟ ಜಾತಿ

		ಎ. ಗುಂ.
1.	ಶ್ರೀ ಗುರುಮೂರ್ತಿ ಬಿನ್ ಹನುನಂತಪ್ಪ	2.00
2.	ಶ್ರೀ ಮುನಿವೆಂಕಟಪ್ಪ ಬಿನ್ ಮರಿಯಪ್ಪ	3.00
3.	ಶ್ರೀ ತಾತಪ್ಪ ಬಿನ್ ಮುದ್ದಪ್ಪ	1.00
4.	ಶ್ರೀ ಅಂಜನಪ್ಪ ಬಿನ್ ಅಕ್ಕಲಪ್ಪ	1.00
	ಒಟ್ಟು	7.00

ಪರಿಶಿಷ್ಟ ವರ್ಗ

		ಎ. ಗುಂ.
1.	ಶ್ರೀ ಕುಂಟನಾಗಯ್ಯ ಬಿನ್ ನಾಗಯ್ಯ	2.00
2.	ಶ್ರೀ ನಂಜಪ್ಪ ಬಿನ್ ಉಗ್ರಪ್ಪ	1.00
3.	ಶ್ರೀ ನರಸಿಂಹಯ್ಯ ಬಿನ್ ನಂಜಪ್ಪ	1.00
4.	ಶ್ರೀಮತಿ ಈರನಾಗಮ್ಮ ಕೋಂ ಬಸಪ್ಪ	1.20
5.	ಶ್ರೀ ರಾಮಯ್ಯ ಬಿನ್ ಪುಟ್ಟಮ್ಮ	2.00
6.	ಶ್ರೀ ನಾಗರಾಜ್	1.00
7.	ಶ್ರೀ ಬೊಮ್ಮಣ್ಣ ಬಿನ್ ಕುಂಟನಾಗಯ್ಯ	1.00
8.	ಶ್ರೀ ವೆಂಕಟಸ್ವಾಮಿ ಬಿನ್ ನಾಗಯ್ಯ	1.00
9.	ಶ್ರೀಮತಿ ರಂಗಮ್ಮ ಕೋಂ ಗಿರಿಯಪ್ಪ	1.00

10.	ಶ್ರೀ ಕೃಷ್ಣಪ್ಪ ಬಿನ್ ತಿಮ್ಮಯ್ಯ	1.00
11.	ಶ್ರೀಮತಿ ರಂಗಮ್ಮ ಕೋಂ ನರಸಿಂಹಯ್ಯ	1.00
	ಒಟ್ಟು	13.20

ಸರ್ವೆ ನಂ. 73 ಪರಿಶಿಷ್ಟ ಜಾತಿ - ಇಲ್ಲ

ಪರಿಶಿಷ್ಟ ಪಂಗಡ - ಇಲ್ಲ

ದೊಡ್ಡ ಹಿಡುವಳಿದಾರರು - ಇಲ್ಲ

ಎರಡು ಹೆಕ್ಟೇರ್‌ಗಳಿಗಿಂತ, ಹೆಚ್ಚಿನ ಕೃಷಿ ಜಮೀನು ಹೊಂದಿರುವ ರೈತರುಗಳಿಗೆ ಅನಧಿಕೃತ ಸಾಗುವಳಿಯ ಜಮೀನನ್ನು ಸಕ್ರಮಣೀಕರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಇ) ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ರೈತರಲ್ಲಿ ಸಾಗುವಳಿ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲವೆಂದು ಕಂಡುಬಂದಲ್ಲಿ ಇಂತಹ ಪ್ರಕರಣಗಳನ್ನು ತಾಲ್ಲೂಕು ಮಟ್ಟದ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳು ಈ ಬಗ್ಗೆ ವಿಚಾರಣೆ ನಡೆಸಿ ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸುವ ಇತ್ತೀಚಿನ ನಿಯಮದಡಿಯಲ್ಲಿ ಸಮಿತಿಗಳು ಸೂಕ್ತನಿರ್ಧಾರವನ್ನು ಕೈಗೊಳ್ಳುವುವು.

ಈ) 20 ಜನರ ಪರವಾಗಿ 77 ಎಕರೆ ಹಂಗಾಮಿಯಾಗಿ ಮಂಜೂರಾಗಿದ್ದು ಅದರಲ್ಲಿ 20 ಎಕರೆಗಳನ್ನು ಖಾಯಂಗೊಳಿಸಲಾಗಿದೆ. ವಿವರಗಳನ್ನು ಲಗತ್ತಿಸಿದೆ.

ಉ) ಯಾವುದೇ ದಾಖಲೆಗಳು ಕಣ್ಮರೆಯಾಗಿರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಹಂಗಾಮಿಯಾಗಿ ಮಂಜೂರಾಗಿರುವ ಜಮೀನಿನ ವಿವರಗಳು

ಕ್ರಮ ಸಂಖ್ಯೆ	ಮಂಜೂರಿದಾರರ ಹೆಸರು	ಹಂಗಾಮಿಯಾಗಿ ಮಂಜೂರಿಯಾದ ವಿಸ್ತೀರ್ಣ	ವಜಾಕರಿಸಲಾದ ವಿಸ್ತೀರ್ಣ	ಖಾಯಂಗೊಳಿಸಲಾದ ವಿಸ್ತೀರ್ಣ
1)	ನಾಗಣ್ಣ	6.00	6.00	-
2)	ಚಿಕ್ಕೀರಪ್ಪ	3.00	3.00	-
3)	ಈರಣ್ಣ	3.00	3.00	-
4)	ಕೆಂಪಣ್ಣ	3.00	3.00	-
5)	ಈರಮಾಸಯ್ಯ	3.00	3.00	-

6)	ಚಿಕ್ಕಮ್ಮ	3.00	3.00	-
7)	ಚಿಕ್ಕಮ್ಮ	3.00	3.00	-
8)	ದಾಸಪ್ಪ	4.00	4.00	-
9)	ವೆಂಕಟೇಗೌಡ	4.00	4.00	-
10)	ರಾಮಕೃಷ್ಣರಾವ್	4.00	4.00	-
11)	ಪುಟ್ಟಕ್ಕಾಮಯ್ಯ	4.00	4.00	-
12)	ನರಸಿಂಹಯ್ಯ	4.00	4.00	-
13)	ಚಿಕ್ಕಮ್ಮ	4.00	4.00	-
14)	ಗುಮ್ಮಣ್ಣ	5.00	1.00	4.00
15)	ತಿಪ್ಪಣ್ಣ	4.00	-	4.00
16)	ಲಕ್ಷ್ಮಕ್ಕ	4.00	4.00	-
17)	ಕರಿಯಪ್ಪ	4.00	-	4.00
18)	ತಿಮ್ಮಯ್ಯ	4.00	4.00	-
19)	ರಾಮನಬೋವಿ	4.00	-	4.00
20)	ಹನುಮಯ್ಯ	4.00	-	4.00
	ಜುಂಲಾ	77.00	57.00	20.00

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ಇದರಲ್ಲಿ ತಪ್ಪಿದೆ ಎಂದು ನಾನು ಭಾವಿಸಿದ್ದೇನೆ. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕಸಬಾ ಹೋಬಳಿ ಚಿನಕ ವಜ್ರದ ಸರ್ವೆ ನಂ. 71 ಮತ್ತು 73 ರಲ್ಲಿ ಜಮೀನನ್ನು ರೆಗ್ಯುಲರ್ ದರ್ಖಾಸ್ತು ಮೂಲಕ ಕೊಟ್ಟಿದ್ದಾರೆಯೇ ಅಥವಾ ಜಿಎಂಎಫ್‌ನಲ್ಲಿ ಕೊಟ್ಟಿದ್ದಾರೆಯೇ ಅಥವಾ ಇನ್ನಾವುದೇ ಆದೇಶದ ಮೂಲಕ ಕೊಟ್ಟಿದ್ದಾರೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು. ಏಕೆಂದರೆ ಸರ್ವೆ ನಂಬರ್ 71ರಲ್ಲಿ ಕೆಲವು ಜನರಿಗೆ ಅಂದರೆ ಸುಮಾರು 20 ಜನರಿಗೆ ಜಮೀನು ಮಂಜೂರು ಮಾಡಿದೆ. ಮಂಜೂರು ಮಾಡಿರುವ ಜಮೀನನ್ನು ಖಾಯಂ ಮಾಡಲಾಗಿದೆ ಎಂದು ಉತ್ತರದಲ್ಲಿದೆ. ಯಾವ ಕಾನೂನು ಪ್ರಕಾರ ಅದನ್ನು ಮಾಡಿದ್ದಾರೆ? ಅನ್‌ಆಥರೈಸ್ಡ್ ಕಲ್ಟಿವೇಶನ್ ಎಂದೇ ಅಥವಾ ರೆಗ್ಯುಲರ್ ದರಖಾಸ್ತು ಮೂಲಕ ಕೊಟ್ಟಿದ್ದಾರೋ ಅಥವಾ ಬೇರೆ ಯಾವುದಾದರೂ ಆದೇಶದ ಮೇರೆಗೆ ಈ ಜಮೀನು ಮಂಜೂರು ಮಾಡಿದ್ದೀರಾ ಎಂದು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಹತ್ತಿರ ಇರತಕ್ಕಂಥ ಮಾಹಿತಿಗಳ ಪ್ರಕಾರ ಹಂಗಾಮಿಯಾಗಿ ಮಂಜೂರಾಗಿರುವ ವಿಸ್ತೀರ್ಣ ಇದೆ. ಇಲ್ಲಿರತಕ್ಕಂಥ ಪ್ರಕಾರ ಯಾವುದೂ ಸ್ಪಷ್ಟವಿಲ್ಲ. ಬೇಕಾದರೆ ನಾನು ಸೂಕ್ತ ಉತ್ತರವನ್ನು ತರಿಸಿ ತಮಗೆ ಒದಗಿಸಿಕೊಡುತ್ತೇನೆ. ಆ ಮಂಜೂರಾತಿಯು ಯಾವ ಪ್ರಕಾರವಾಗಿ ಆಗಿದೆ ಇದನ್ನು ಲ್ಯಾಂಡ್‌ಗ್ರಾಂಟ್‌ರೂಲ್ಸ್ ಪ್ರಕಾರ

ಮಾಡಿದ್ದಾರೋ ಅಥವಾ ರೆಗ್ಯುಲರೈಸೆಷನ್‌ನಲ್ಲಿ ಬಂದಿದೆಯೋ ಅಥವಾ ಮಾರ್ಕೆಟ್‌ವ್ಯಾಲ್ಯೂ ಪ್ರಕಾರ ಕೊಟ್ಟಿದ್ದಾರೋ, ಯಾವ ಪ್ರಕಾರ ಮಾಡಿದ್ದಾರೋ ಎಂಬ ಮಾಹಿತಿಯನ್ನು ತಮಗೆ ಒದಗಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ನನಗೆ ಗೊತ್ತಿರುವ ಪ್ರಕಾರ, ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಕಳೆದು ಹೋಗಿವೆ. ತಾವುಗಳು ಕಳೆದು ಹೋಗಿಲ್ಲ ಎಂದು ಹೇಳಿದ್ದೀರಿ. ಈ ಪ್ರಶ್ನೆಗೆ ನೇರವಾದಂಥ ಉತ್ತರ ಬಂದರೆ ನಮಗೆ ನೇರವಾದಂಥ ಉತ್ತರವೂ ಸಿಗುತ್ತದೆ, ಇಲ್ಲವಾದಲ್ಲಿ ಇಲ್ಲ. ಈ ದಿಸೆಯಲ್ಲಿ 3-4 ಜನರಿಗೆ ಯಾರಿಗೆ ಜಮೀನು ಮಂಜೂರು ಆಗಿದೆಯೋ ಅವರಿಗೆ ಅದನ್ನು ಖಾಯಂಗೊಳಿಸಿ ಕೊಡಿ ಮತ್ತು ದುರಸ್ತಿ ಮಾಡಿಕೊಡಿ ಎಂದು ಕೇಳಿದರೆ ಈ ರಿಕಾರ್ಡ್ಸ್ ಕಳೆದು ಹೋಗಿದೆ ಎಂದು ರೆವಿನ್ಯೂ ಇಲಾಖೆಯವರಿಂದ ಉತ್ತರ ಬಂದಿದೆ. ಈಗ ಮಾನ್ಯ ಮಂತ್ರಿಗಳು ರಿಕಾರ್ಡ್ಸ್ ಕಳೆದು ಹೋಗಿಲ್ಲ ಕಣ್ಮರೆಯಾಗಿಲ್ಲ ಎಂದು ಉತ್ತರ ಕೊಡುತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಸರಿಯಾದ ವರದಿಯಲ್ಲ. ಈ ಸರ್ವೆ ನಂ. 71 ರಲ್ಲಿ ಅನಾಹುತವಾಗಿದೆ ಎನ್ನುವುದನ್ನು ಹೇಳುತ್ತೇನೆ. ಗ್ರೊಮೋರ್ ಪುಡ್ ಸ್ಕೀಂನಲ್ಲಿ ಈ ಜಮೀನನ್ನು ಕೊಟ್ಟಿರುವುದು. ನನ್ನ ಹತ್ತಿರ ಇರತಕ್ಕಂಥ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಜಮೀನನ್ನು ಕೊಡುವಾಗ ಪಿಡಬ್ಲ್ಯುಡಿ ಇಲಾಖೆಯವರು ಒಪಿನಿಯನ್ ಕೇಳುತ್ತಾರೆ. ಅವರು ಬ್ಲಾಕ್ ನಂ. 1 ರಿಂದ 27 ಕೊಡಬಾರದು ಇದು ರಿಸರ್ವ್ ಇಡಬೇಕೆಂದು ಹೇಳುತ್ತಾರೆ, ಆಮೇಲೆ ಫಾರೆಸ್ಟ್‌ಗಾಗಿ 110 ಗಜ ರಿಜರ್ವ್ ಮಾಡಬೇಕೆಂದು ಹೇಳುತ್ತಿದ್ದಾರೆ. ಇದೆಲ್ಲ ಗಾಳಿಗೆ ತೂರಿ ಡೆಪ್ಯೂಟಿ ಕಮಿಷನರು ಈ ಜಮೀನು ಕೊಡುವುದು ಬೇಡ ಎಂದು ಹೇಳುತ್ತಾರೆ. ಏಕೆಂದರೆ, ಇವರಲ್ಲಿ ಚಿಲಕವಜ್ರದ ಚೋಳೇನಹಳ್ಳಿ ಕೆರೆಗೆ ಹೋಗುವ ಪೀದನಹಳ್ಳ ಇದೆ. ಕೊಡುವುದು ಸರಿ ಇಲ್ಲ ಎಂದು ಹೇಳುತ್ತಾರೆ. ಇವತ್ತೇನಾಗಿದೆ ಎಂದರೆ ಈ ಜಮೀನನ್ನು ಮಂಜೂರು ಮಾಡಿಬಿಟ್ಟಿದ್ದೇವೆ, ಗ್ರೊಮೋರ್ ಫುಡ್ ಸ್ಕೀಮ್‌ನಲ್ಲಿ 5 ವರ್ಷಕ್ಕೆ ಮಂಜೂರು ಮಾಡಿದೆ. ಆಧಾರದ ಮೇಲೆ ಕನ್‌ಫರ್ಮ್ ಮಾಡುವಾಗ ಡಿ.ಸಿ. ಯವರಿಗೆ ಎಸಿಯವರು ಕೇಳುತ್ತಾರೆ. ಡಿಸಿಯವರು ಇದನ್ನು ಕೊಡಬಾರದು, ಪಿಡಬ್ಲ್ಯುಡಿ ಒಪಿನಿಯನ್ ತೆಗೆದುಕೊಂಡು ಕೊಡಬಾರದು ಎಂದು ಹೇಳುತ್ತಾರೆ. ಇದು ಕೊಟ್ಟು ದುರಸ್ತಿಗೆ ಹೋದಾಗ ಸರ್ವೆ ಇಲಾಖೆಯವರು ವಾಪಸ್ ಕಳುಹಿಸುತ್ತಾರೆ. ಆದರೆ ಕೆಲವರಿಗೆ ದುರಸ್ತಿ ಮಾಡಿಬಿಡುತ್ತಾರೆ. ತಾಲ್ಲೂಕು ಆಫೀಸಿನಲ್ಲಿ ಯಾರನ್ನೂ ಕೇಳಲಿಲ್ಲ ಹೇಳಲಿಲ್ಲ, ಲಂಚ ತೆಗೆದುಕೊಂಡೋ ಏನೋ ದೇವರಿಗೆ ಗೊತ್ತು. ಈಗ ಆ ರೆಕಾರ್ಡ್ಸ್ ಪತ್ತೆ ಇಲ್ಲ, ನಿಮಗೆ ಕೊಟ್ಟಿರುವ ಮಾಹಿತಿ ಪ್ರತಿಯೊಂದೂ ಸುಳ್ಳಿದೆ. ಆದ್ದರಿಂದ ಎಂಟೈರ್ ರೆಕಾರ್ಡ್ಸ್ ತರಿಸಿ ನಮ್ಮ ಹತ್ತಿರ ತೋರಿಸುವುದಾದರೆ ನಾನು ಈ ಪ್ರಶ್ನೆಯನ್ನು ಮುಂದುವರಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಬಳಿ ಇರುವ ಮಾಹಿತಿಯನ್ನು ಕೊಟ್ಟಿದ್ದೇನೆ, ಅದು ತಪ್ಪಿದೆ ಎಂದು ಅವರ ಭಾವನೆ ಇದ್ದರೆ ಸರಿಯಾದ ಮಾಹಿತಿ ತರಿಸುವುದಕ್ಕೆ ಅವರೇನಾದರೂ ಮಾಹಿತಿ ಕೊಟ್ಟರೆ ಅಥವಾ ಏನಾದರೂ ದಾಖಲೆಗಳನ್ನು ಕೊಟ್ಟರೆ ಪುನಃ ಇದರ ಬಗ್ಗೆ ನಾನು ಎನ್‌ಕ್ವಯರಿ ಮಾಡಿಸಿ ಸರಿಯಾದ ಮಾಹಿತಿ ಅವರಿಗೆ ಒದಗಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಅಲ್ಲ, ದಾಖಲೆ ಕೊಡಬೇಕಾದವರು ನಾನೋ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೋ, ರೆಕಾರ್ಡ್ಸ್ ಇರುವುದು ಅವರ ಹತ್ತಿರ, ನನ್ನ ಹತ್ತಿರ ಇರುತ್ತದೆಯೇ? ನಾನು ಪ್ರಶ್ನೆ ಕೇಳಿದ್ದೇನೆ. ರೆಕಾರ್ಡ್ಸ್ ಯಾವರೀತಿ ಮಂಜೂರು ಮಾಡಿದ್ದೀರಿ ಎಂದು ಕೇಳಿದರೆ ಮಂಜೂರು ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವ ಕಾನೂನಿನಂತೆ ಮಾಡಿದ್ದಾರೆ

ಎನ್ನುವುದಕ್ಕೆ ಅವರ ಹತ್ತಿರ ದಾಖಲೆ ಇಲ್ಲದ ಮೇಲೆ ಅವರ ಬಳಿ ದಾಖಲೆ ಇಲ್ಲವೆಂದು ಅರ್ಥವಾಗುತ್ತದಲ್ಲ. ಇದನ್ನು ಅವರು ತರಿಸಿಕೊಡಬೇಕು. ಇದಕ್ಕೆ ಸಂಬಂಧಪಟ್ಟ ಕೆಲವು ದಾಖಲೆಗಳನ್ನು ನಾನು ನಿಮಗೆ ಕೊಡಿಸಿಕೊಡುತ್ತಿದ್ದೇನೆ. ಅದರ ಆಧಾರದ ಮೇಲೆ ಪೂರ್ಣವಾಗಿರತಕ್ಕ ರೆಕಾರ್ಡ್ಸ್ ನೀವು ತರಿಸಿ ಸಭೆಯ ಮುಂದೆಯಾದರೂ ಇಡಿ ಅಥವಾ ನಿಮ್ಮ ಆಫೀಸಿಗೆ ತರಿಸಿ ನಮ್ಮನ್ನು ಕರೆಸಿ ಈ ಎರಡರಲ್ಲಿ ಯಾವುದಾದರೂ ಒಂದನ್ನು ಮಾಡಬೇಕಾಗುತ್ತದೆ. ಇದರಲ್ಲಿ ಬಹಳ ಅವ್ಯವಹಾರ ನಡೆದಿದೆ, ಕೆರೆ ಹಾಳಾಗಿ ಹೋಗುತ್ತಾ ಇದೆ. ಕೆರೆಯನ್ನು ಎರಡು ಸಲ ಹೊಡೆದು ಹಾಕಿದ್ದಾರೆ. ಎರಡು ಸಲ ಐದ್ಯೆದು ಹತ್ತತ್ತು ಲಕ್ಷ ರೂಪಾಯಿಗಳಲ್ಲಿ ಕೆರೆಯನ್ನು ಕಟ್ಟಿಸಿಕೊಟ್ಟು ಹತ್ತು ವರ್ಷದಿಂದ ಎರಡು ಸಲ ಕೆರೆ ಒಡೆದುಹೋಗಿದೆ. ಇದಕ್ಕೆ ಯಾರು ಜವಾಬ್ದಾರರು? ಇವರ ಹತ್ತಿರ ಸರಿಯಾದ ರೆಕಾರ್ಡ್ಸ್ ಇಲ್ಲ. ದಯಮಾಡಿ ಇದಕ್ಕೆ ಸಂಬಂಧಿಸಿದ ರೆಕಾರ್ಡ್ಸ್‌ನ್ನು ಯಾವಾಗ ತರಿಸುತ್ತೀರಿ ಎನ್ನುವುದನ್ನು ಸಭೆಗೆ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಉತ್ತರ ಅಂತೂ ಒದಗಿಸಿದ್ದೇನೆ. ಅದರಿಂದ ಅವರಿಗೆ ಸಮಾಧಾನ ಇಲ್ಲ. ಬಹುಶಃ ಇದರ ಹಿಂದೆಯೂ ಕೂಡ ನನಗೆ ಒಂದು ಕಾಗದ ಬರೆದುಕೊಟ್ಟಿದ್ದರು. ಅದನ್ನು ಎನ್‌ಕ್ವಯರಿ ಮಾಡುವುದಕ್ಕೆ ನಾನು ಡಿಸಿಯವರಿಗೆ ಕಳಿಸಿದ್ದೇನೆ. ಆದರೆ ಆ ಎನ್‌ಕ್ವಯರಿ ರಿಪೋರ್ಟ್ ಆಧಾರದ ಮೇಲೆ ಅಥವಾ ಅವರು ಕೊಟ್ಟಿರುವ ಮಾಹಿತಿ ತೃಪ್ತಿಕರವಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕಾಗಿ ಸಂಬಂಧಪಟ್ಟ ಶಾಸಕರಾದ ಡಾ।। ಪರಮೇಶ್ವರ ರವರನ್ನೂ ಮತ್ತು ಇವರನ್ನೂ ಕೂಡ ಕರೆಸಿ. ರೆಕಾರ್ಡ್ಸ್ ತರಿಸಿ, ಅವರ ಸಮಕ್ಷಮದಲ್ಲಿ ಏನಿದೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಜಮೀನುಗಳನ್ನು ಸರ್ವೆ ಮಾಡಿ ಟಿಪ್ಪಣಿ ಕಾಪಿಗಳನ್ನು ನೀಡುವ ಬಗ್ಗೆ.

252 (1470) ಶ್ರೀ ಚೌಡಾರೆಡ್ಡಿ (ಚಿಂತಾಮಣಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಲ ಭೂಮಾಪನ ಕಾರ್ಯವನ್ನು 1982 ರಲ್ಲಿ ಕೈಗೊಂಡು ದಾಖಲಾತಿಗಳನ್ನು ತಯಾರಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ, ದಾಖಲಾತಿಗಳು ಹಳೆಯದಾಗಿದ್ದು, ಅವುಗಳ ಬಳಕೆಯಿಂದ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಮೂಲ ದಾಖಲಾತಿಗಳು ಇಲ್ಲದಿದ್ದಲ್ಲಿ ಸರ್ವೆ ನಂಬರುಗಳ ಟಿಪ್ಪಣಿ ಕಾಪಿಯನ್ನು ನೀಡಲು ಮತ್ತು ಜಮೀನುಗಳ ಅಳತೆ ಕಾರ್ಯ ಮಾಡಲು ಸಾಧ್ಯವಾಗದೇ ಇರುವುದು ನಿಜವೇ?

ಈ) ಸರ್ಕಾರವು ಮರು-ಭೂಮಾಪನ ಕಾರ್ಯವನ್ನು ಕೈಗೊಂಡು ಹೊಸ ದಾಖಲೆಗಳನ್ನು ತಯಾರಿಸಿ ಜನರು ಭೂದಾಖಲಾತಿಗಳನ್ನು ಪಡೆದು ಅವರ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲಾ.

ಆ) ಹೌದು.

ಇ) ಹೌದು.

ಈ) ಮರು-ಭೂಮಾಪನಾ ಕಾರ್ಯವನ್ನು ಸರ್ಕಾರ ಕೈಗೊಳ್ಳಬೇಕೆಂಬ ಉದ್ದೇಶವಿದ್ದರೂ, ಸಧ್ಯದ ಆರ್ಥಿಕ ಮತ್ತು ಸಿಬ್ಬಂದಿಯ ಕೊರತೆಯಿಂದ ಸಾಧ್ಯವಾಗಲಾರದು.

ಶ್ರೀ ಚೌಡಾರೆಡ್ಡಿ : ಮಾನ್ಯ ಅಧ್ಯಕ್ಷಿಣಿಯವರೇ, ಮೊದಲನೇ ಪ್ರಶ್ನೆಯಲ್ಲಿ ಮೂಲ ಭೂಮಾಪನ ಕಾರ್ಯವನ್ನು 1982 ರಲ್ಲಿ ಕೈಗೊಂಡು ದಾಖಲಾತಿಗಳನ್ನು ತಯಾರಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಮೂಲ ಭೂಮಾಪನವನ್ನು 1982 ರಲ್ಲಿಯೂ ಮಾಡಿಲ್ಲ. 1882 ರಲ್ಲಿ ಮಾಡಿದ್ದಾರೆ. ತಾವು ಹಿರಿಯರು ಎಲ್ಲ ಗೊತ್ತಿರುವವರು 1882 ಎಂದು ಹಾಕಬೇಕಾಗಿತ್ತು. ಇನ್ನೊಂದು ನೂರು ವರ್ಷದ ಮೇಲ್ಪಟ್ಟು ಮೂಲ ಭೂಮಾಪನ ಮಾಡಿದ್ದಾರೆ. ಇವತ್ತು ಮಂತ್ರಿಗಳು ಏನಾದರೂ ಸರ್ವೆ ಆಫೀಸಿಗೆ ಹೋಗಿದ್ದರೆ ಏನಾದರೂ ದಾಖಲೆಗಳು ಬೇಕಾದರೆ ಟಿಪ್ಪಣಿ ಮುಂತಾದುವು ಎಲ್ಲಿ ನೋಡಿದರೂ ಗಲಾಟೆಗಳಾಗಿ ಉಳಿದವರೆಲ್ಲ ಉತ್ತುಕೊಂಡು ಬಿಡ್ತಾರೆ, ಅಣ್ಣತಮ್ಮಂದಿರ ಗಲಾಟೆಗಳಾಗಿ ಸತ್ತು ಹೋಗುತ್ತಾ ಇದ್ದಾರೆ, ಅಂಥಾದ್ದರಲ್ಲಿ ಸಚಿವರು ನಿಜವಾಗೂ ಭೂಮಾಪನ ಆಫೀಸನ್ನು ನೋಡಿದರೆ ಈ ದಾಖಲೆಗಳು ಏನಾಗಿದೆ ಎಂದು ಗೊತ್ತಾಗುತ್ತದೆ. ಉತ್ತರದಲ್ಲಿ ಇವರು ದುಡ್ಡಿಲ್ಲ, ಆರ್ಥಿಕ ಪರಿಸ್ಥಿತಿಯಿಂದ ಸರ್ವೆ ಮಾಡಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಎಷ್ಟು ವರ್ಷಕ್ಕೆ ತಾವು ಸರ್ವೆ ಮಾಡಿಸುತ್ತೀರಿ ಮತ್ತು ಏನು ಕಾನೂನಿದೆ ಎನ್ನುವುದನ್ನು ಸ್ವಲ್ಪ ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಪಟ್ಟಿ ನನ್ನ ಹತ್ತಿರ ಇದೆ. ಅವರು ಕೇಳಿರುವುದು ಹೀಗಿದೆ : 'Weather it is a fact that the original land survey was conducted in 1982?' ಬೇಕಾದರೆ ಇದನ್ನು ನಾನು ಅಧ್ಯಕ್ಷರಿಗೇ ಕಳುಹಿಸುತ್ತೇನೆ. ಬೈ ಮಿಸ್ಟೇಕ್ ಆಗಿರಬಹುದು. ಅದನ್ನು ತಾವು ನಮಗೆ ಹೇಳಬೇಡಿ. ತಾವು ಅನುಭವಸ್ಥರು, ಏತಕ್ಕೆ ಹೀಗೆ ಮಾಡಿದ್ದೀರಿ ಎಂದು ಹೇಳಿದಿರಿ, ಅದಕ್ಕೆ ನಾನು ಹೇಳಿದ್ದೇನೆ. ಅದಕ್ಕಾಗಿ ಮಿಸ್ಟೇಕ್ ಏನೋ ಆಗಿರಬಹುದು. ನೀವು ಏನು ಪ್ರಶ್ನೆಯನ್ನು ಕಳುಹಿಸಿದ್ದೀರಿ. ಅದೇ ರೀತಿಯಾಗಿ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅದು ಇರಲಿ ಬಿಡಿ. ಎರಡನೆಯದು ಅವರು ಹೇಳುವುದರಲ್ಲಿ ಅರ್ಥ ಇದೆ. ಇದು ಏನಾಗಿದೆ ಎಂದರೆ, ಪ್ರತಿ 30 ವರ್ಷಗಳಿಗೆ ಒಮ್ಮೆ ರೀಸರ್ವೆಯನ್ನು ಮಾಡಬೇಕು ಎನ್ನತಕ್ಕಂಥದ್ದು ನಮ್ಮ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ, ಕಾನೂನಿನ ಪ್ರಕಾರ ಇದೆ. ಆದರೆ ಮೂವತ್ತು ವರ್ಷಗಳಿಗೊಮ್ಮೆ ಯಾರೂ ಕೂಡಾ ಇದುವರೆಗೂ ಮಾಡಿಲ್ಲ. ಸುಮಾರು 120 ವರ್ಷಗಳಾಯಿತು. ಇಲ್ಲಿಯವರೆಗೆ ರೀ-ಸರ್ವೆ ಆಗಿಲ್ಲ. ಈಗ ಮೊನ್ನೆ ಮಾತ್ರ ಕೊಡಗು ಜಿಲ್ಲೆಗೆ ಮಾತ್ರ ರೀ-ಸರ್ವೆಯನ್ನು ಮಾಡಬೇಕು ಎಂದು ತೆಗೆದುಕೊಂಡರು. ಆದರೆ ಸ್ಟಾಫ್ ಕೊರತೆಯಿಂದ ಆ ಕೆಲಸವೂ ಕೂಡ ನಿಧಾನವಾಗಿ ನಡೆದಿದೆ. ಸುಮಾರು ಹತ್ತು ವರ್ಷಗಳಿಂದ ಹಾಗೆಯೇ ನಿಧಾನವಾಗಿ ನಡೆದಿದೆ. ಅದಕ್ಕೆ ಅವರು ಹೇಳುವುದರಲ್ಲಿ ಅರ್ಥವಿದೆ. ಅನೇಕ ಕಡೆ ಟಿಪ್ಪಣಿಗಳು ಇಲ್ಲ, ಮ್ಯಾಪ್ಸ್ ಇಲ್ಲ. ಸರ್ವೆಯನ್ನು ಮಾಡುವುದಕ್ಕೆ ನಕ್ಷೆಯನ್ನು ತೆಗೆದುಕೊಂಡು ಹೋಗಬೇಕಾದರೂ ಕೂಡ ತೊಂದರೆ ಇದೆ. ಮತ್ತೆ ಬೇಸಿಕ್ ಆಗಿ ಹಳ್ಳಿಗಳಲ್ಲಿ ಜಗಳ ಆಗತಕ್ಕಂಥದ್ದು ಬೌಂಡ್ರಿ ಡಿಸ್ಪ್ಯೂಟ್ ಬಗ್ಗೆ ನಡೆಯುತ್ತದೆ. ಅನೇಕ ಕ್ರಿಮಿನಲ್ ಕೇಸ್‌ಗಳು ಇದರ ಬಗ್ಗೆಯೇ ಆಗುತ್ತವೆ. ಇದನ್ನು ಅರ್ಥಮಾಡಿಕೊಂಡು ಕೇಂದ್ರ ಸರ್ಕಾರದವರು ಕೂಡಾ 14ನೇ ತಾರೀಖಿನ ದಿವಸ ಒಂದು ಸಭೆಯನ್ನು ಕರೆದಿದ್ದಾರೆ. ಮಾನ್ಯ ನಮ್ಮ ಪ್ರಧಾನ ಮಂತ್ರಿಗಳೇ ಇದಕ್ಕೆ

ಇನಿಸಿಯೇಟೀವ್ ತೆಗೆದುಕೊಂಡು ಲ್ಯಾಂಡ್‌ರೆಕಾರ್ಡ್ಸ್‌ನ್ನು ಯಾವ ರೀತಿಯಾಗಿ ನಾವು ಮಾಡ್ರನೈಜ್ ಮಾಡಬೇಕು, ಯಾವ ರೀತಿಯಾಗಿ ಅದನ್ನು ಮೆಯಿನ್‌ಟೈನ್ ಮಾಡಬೇಕು, ಇದನ್ನೇನಾದರೂ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ ಮಾಡಬೇಕೇ, ಏನು ಮಾಡಬೇಕು ಎನ್ನತಕ್ಕಂಥದ್ದವರ ಬಗ್ಗೆ ಮೀಟಿಂಗ್ ಕರೆದಿದ್ದಾರೆ. 14ನೇ ತಾರೀಖಿನ ದಿವಸ ನಾನು ಕೂಡಾ ಹೋಗುತ್ತಿದ್ದೇನೆ. ನಾಡಿದ್ದು ಮೀಟಿಂಗನ್ನು ಕರೆದಿದ್ದಾರೆ. ಮತ್ತು ಇದಕ್ಕಾಗಿ ಕಂಪ್ಯೂಟರೈಸ್ಡ್ ಮಾಡಿ ಮೈಕ್ರೋ ಫಿಲಂನ್ನು ಕೂಡಾ ಮಾಡಬೇಕು. ಮತ್ತು ಲೇಟೆಸ್ಟ್ ಪ್ರಿಂಟಿಂಗ್ ಮೆಷಿನ್ಸ್ ಕೂಡಾ ತಂದು ನಕ್ಷೆಗಳನ್ನು ತಯಾರು ಮಾಡಬೇಕು ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಆದರೆ ರೀ-ಸರ್ವೆಗೆ ಏನು ಆಗುತ್ತದೆ, ಕನಿಷ್ಟ ಒಂದು ಜಿಲ್ಲೆಯಲ್ಲಿ ರೀ-ಸರ್ವೆಯನ್ನು ಮಾಡಬೇಕು ಎಂದು ಹೇಳಿದರೆ ಐದಾರು ವರ್ಷಗಳಾದರೋ ಬೇಕು. ಅಂದರೆ ಕಂಟಿನ್ಯೂಯೆಸ್ ಫುಲ್ ಸ್ಟಾಫ್ ಇದ್ದರೆ ಮಾತ್ರ ಸಾಧ್ಯವಾಗುತ್ತದೆ. ಮತ್ತು 20 ಡಿಸ್ಟ್ರಿಕ್ಟ್‌ಗಳಲ್ಲಿ ಸರ್ವೆಯನ್ನು ಮಾಡಬೇಕಾದರೆ 200 ಕೋಟಿ ರೂಪಾಯಿ ಬೇಕಾಗುತ್ತದೆ. ಇದಕ್ಕೆ ಒಂದು ಸ್ಟಾಫ್‌ನ ಕೊರತೆ, ಹಣದ ಕೊರತೆ ಇದ್ದ ಕಾರಣ, ಈ ಕೆಲಸ ಬಹಳ ನಿಧಾನವಾಗಿದೆ. ಇದು ಬಹಳ ಮಹತ್ವವಾದುದು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಕೇಂದ್ರ ಸರ್ಕಾರದವರು ಕೂಡ ಆಸಕ್ತಿಯನ್ನು ವಹಿಸಿದ್ದಾರೆ. ನಾವು ಕೂಡ ಅವರ ಮುಂದೆ ಒಂದು ಪ್ರಪೋಸಲ್ಸ್‌ನ್ನು ಇಡುತ್ತಿದ್ದೇವೆ. ಐದು ವರ್ಷದಲ್ಲಿಯಾದರೂ ಕೂಡ ಇದನ್ನು ಮಾಡತಕ್ಕಂಥದ್ದರ ಬಗ್ಗೆ ಪ್ರಪೋಸಲ್ಸ್‌ನ್ನು ಇಡುತ್ತಿದ್ದೇವೆ. ಇದನ್ನು ಹಂತ ಹಂತವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಒಂದೊಂದು ಜಿಲ್ಲೆಯಲ್ಲಿಯಾದರೂ ಕೇಂದ್ರ ಸರ್ಕಾರದವರು 50 ಪರ್‌ಸೆಂಟ್, ನಾವು ಒಂದು 50 ಪರ್‌ಸೆಂಟ್ ಹಣ ಕೊಟ್ಟು ಕನಿಷ್ಟ ಪಕ್ಷ ಒಂದೊಂದು ಜಿಲ್ಲೆಗಾದರೂ ಮಾಡಿಕೊಂಡು ಹೋಗೋಣ ಎನ್ನತಕ್ಕಂಥ ಸಲಹೆಯನ್ನು ನಾನು ಕೂಡ ಕೊಡುತ್ತಿದ್ದೇನೆ. ಅದಕ್ಕೆ ತಾವು ಕೊಟ್ಟಂಥ ಸಲಹೆ ಒಳ್ಳೆಯದು ಇದೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನವನ್ನು ಹರಿಸುತ್ತಿದೆ.

ಶ್ರೀ ಚೌಡಾರೆಡ್ಡಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ದಯವಿಟ್ಟು ಸರ್ವೆ ಆಫೀಸನ್ನು ನೋಡಿ ರೆಕಾರ್ಡ್ಸ್ ಇಟ್ಟುಕೊಳ್ಳುವುದಕ್ಕೆ ಜಾಗ ಇಲ್ಲ. ಒಂದರ ಮೇಲೆ ಒಂದೊಂದನ್ನು ಹಾಕಿ ಪುಡಿಪುಡಿಯಾಗುತ್ತಿದೆ. ಪೀಠೋಪಕರಣಗಳನ್ನು ಕೂಡ ಕೊಟ್ಟಿಲ್ಲ. ದಯವಿಟ್ಟು 2-3 ಸರ್ವೆ ಆಫೀಸ್‌ಗಳನ್ನು ತಾವು ಖುದ್ದಾಗಿ ನೋಡಬೇಕು ಎಂದು ತಮ್ಮ ಮುಖಾಂತರ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಚೌಡಾರೆಡ್ಡಿಯವರಿಗೆ ಸ್ಪೆಷಲ್ ಆಗಿ ಒಂದು ಮಿನಿ ವಿಧಾನಸೌಧವನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಅದರ ಕನ್‌ಸ್ಟ್ರಕ್ಷನ್ ಪೂರ್ತಿಯಾದ ಮೇಲೆ ಒಂದು ಭಾಗದಲ್ಲಿ ಇದು ಷಿಫ್ಟ್ ಆಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಚೌಡಾರೆಡ್ಡಿಯವರ ಕ್ಷೇತ್ರದಲ್ಲಿಯೇ ಅಲ್ಲ. ಎಲ್ಲಾ ಕ್ಷೇತ್ರದಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಇದೆ. ನೀವು ನಮಗೂ ಮಿನಿ ವಿಧಾನಸೌಧವನ್ನು ಕೊಡುವುದಾದರೆ ಅಡ್ಡಿ ಇಲ್ಲ.

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಸುಮಾರು 11 ವರ್ಷಗಳಿಂದ ಕೊಡಗಿನಲ್ಲಿ ರೀ-ಸರ್ವೆಯನ್ನು ಮಾಡುತ್ತಿದ್ದಾರೆ. ಅದು ಬರೀ ಇಷ್ಟರವರೆಗೆ ಆಗಿರತಕ್ಕಂಥದ್ದು ಎಂದರೆ ಸೋಮವಾರಪೇಟೆ ತಾಲ್ಲೂಕು ಒಂದು ಮಾತ್ರ. ಇಷ್ಟಕ್ಕೆ 15 ಕೋಟಿ ರೂಪಾಯಿ

ಖರ್ಚಾಗಿದೆ. ಒಂದು ತಾಲ್ಲೂಕನ್ನು ಮಾಡುವುದಕ್ಕೆ 11 ವರ್ಷಕ್ಕೆ ಅಷ್ಟು ಖರ್ಚಾಗಿದೆ. ನಮ್ಮ ಇನ್ನು ಎರಡು ತಾಲ್ಲೂಕುಗಳನ್ನು ಮಾಡುವುದಕ್ಕೆ ಇನ್ನು 25 ವರ್ಷ ಬೇಕಾಗಬಹುದು. ಆಗ 40 ಕೋಟಿ ರೂಪಾಯಿ ಬೇಕಾಗುತ್ತದೆ. ಅಲ್ಲದೇ ಈ ರೀ-ಸರ್ವೆಯ ಅಗತ್ಯ ಇದೆಯೇ? ಇಷ್ಟರಲ್ಲಿಯೇ ಎಷ್ಟೋ ಹಣವನ್ನು ಖರ್ಚು ಮಾಡಿ ರೀ-ಸರ್ವೆಯನ್ನು ಮಾಡಿದರೂ ಸಹಾ ಸೆಟ್ಲ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕೆಲವು ಜನರು ಎನ್‌ಕ್ರೋಚ್ ಮಾಡಿದ್ದಾರೆ. ಅವರಿಗೆ ಪ್ರೊಸೆಷನನ್ನು ಕೊಡುವುದಕ್ಕೆ ಏನಾದರೂ ಸಾಧ್ಯವಾಗುತ್ತದೆಯೇ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೀ ಸರ್ವೆ ಮಾಡತಕ್ಕ ಆವಶ್ಯಕತೆ ಇದೆಯೆಂದು ತಿಳಿದು ನಾವು ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಚೌಡಾರೆಡ್ಡಿಯವರು ರೀ ಸರ್ವೆ ಮಾಡಬೇಕು ಅನೇಕ ಕಡೆ ತೊಂದರೆ ಇದೆ ಎಂದು ಹೇಳಿದ್ದಾರೆ. ಗೌರ್ನಮೆಂಟ್ ಆಫ್ ಇಂಡಿಯಾದ ಪಾಲಿಸಿ ಕೂಡ ಇದೆ. ನಮ್ಮ ಆಕ್ಟ್‌ನಲ್ಲೇ ಪ್ರಾವಿಜನ್ ಇದೆ. ತಾವು ಅಡ್ವೋಕೇಟ್ ಆಗಿದ್ದೀರಿ ತಮಗೂ ಕೂಡ ಗೊತ್ತಿದೆ. every thirty years we must have resurvey. But, unfortunately, ಫೈನಾನ್ಸಿಯಲ್ ಪೊಜಿಷನ್, ಮತ್ತು ಸ್ಟಾಫ್ ಇರಲಾರದ್ದಕ್ಕೆ ಈ ರೀತಿ ತೊಂದರೆ ಇದೆ. ಅದು ಹಂತಹಂತವಾಗಿ ಪೂರ್ತಿಯಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಅತಿ ಕೆಟ್ಟು ಹೋಗಿ ಹಾಳಾಗಿ ಹೋಗಿರತಕ್ಕ ಇಲಾಖೆ ಎಂದರೆ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಪೋಡಣೆಗೆ ಅಪ್ಲೈ ಮಾಡಿ 1-2 ವರ್ಷವಾದರೂ ಅದು ಆಗುತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ವ್ಯಾಜ್ಯಗಳು ಹಾಗೆಯೇ ಮುಂದುವರಿದುಕೊಂಡು ಹೋಗುತ್ತಿದೆ. ದಾಖಲೆಗಳೆಲ್ಲಾ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ. ಜಮೀನುಗಳ ಅಳತೆಗಳನ್ನು ದಾಖಲಾತಿ ಸಿಗದೆ ಇರುವುದರಿಂದ ಮಾಡಲಿಕ್ಕೆ ಆಗುತ್ತಿಲ್ಲ ಎಂದು ಅವರು ಹೇಳಿದ್ದಾರೆ. ಹೀಗಿರುವಂತಹ ಸಂದರ್ಭದಲ್ಲಿ ಎಷ್ಟು ದಿವಸಗಳಲ್ಲಿ ಮೂಲ ದಾಖಲೆಗಳನ್ನು ಸರಿಪಡಿಸುತ್ತಾರೆ ಹಾಗೂ ಪೋಡಣೆಯನ್ನು ಮಾಡಿಸಿಕೊಂಡುತ್ತಾರೆಂದು ನಾನು ಕೇಳುತ್ತೇನೆ. ಏಕೆಂದರೆ ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಇಷ್ಟು ದಿವಸದಲ್ಲಿ ಮಾಡಿಸಿಕೊಡುತ್ತೇವೆಂದು ಕರಾರುವಕ್ಕಾಗಿ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 100 ವರ್ಷಗಳಿಂದಲೂ ರೀ ಸರ್ವೆ ಆಗದೆ ಇರುವುದನ್ನು ಇವತ್ತೇ ಮಾಡಿಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. 1345 ಸರ್ವೇಯರ್ಸ್ ವೇಕೆನ್ಸಿಗಳು ಇವೆ. ಅದನ್ನು ತಕ್ಷಣ ಭರ್ತಿ ಮಾಡಲು ಸ್ಪೆಷಲ್ಸ್ ರೂಲ್ಸ್ ಅನ್ನು ಮಾಡಿದ್ದೇವೆ. ಅದು ಕ್ಯಾಬಿನೆಟ್ ಮುಂದೆ ನಾಳೆ-ನಾಡಿದ್ದು ಬರುತ್ತದೆ. ಸ್ಪೆಷಲ್ ರೂಲ್ಸ್ ಅಪ್ರೂವಲ್ ಆದ ಮೇಲೆ 1345 ವೇಕೆನ್ಸಿಯನ್ನು ಭರ್ತಿ ಮಾಡಿದರೆ ಸಾಕಷ್ಟು ನಮ್ಮ ಸಮಸ್ಯೆ ಬಗೆಹರಿಯುತ್ತದೆ. ರೀಪ್ರಿಂಟ್ ಮಾಡಿ ಮತ್ತು ಮೈಕ್ರೋ ಫಿಲಂ ಮಾಡುವುದಕ್ಕೆ ನಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಏನು ಸಲಹೆಯನ್ನು ಕೊಡುತ್ತಾರೆ ಅದನ್ನು ನೋಡಿಕೊಂಡು, ಅವರು ಯಾವ ರೀತಿಯಾಗಿ ಫೈನಾನ್ಸ್ ಮಾಡುತ್ತಾರೆ. ಮತ್ತು ನಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ನೋಡಿ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದು ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಮಂಜುನಾಥ್ ಸಿ. ಕೂನ್ನೂರ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಭೂ ದಾಖಲೆಗಳ ಆಫೀಸಿನಲ್ಲಿ ಅಜುಬಾಜುನಲ್ಲಿರತಕ್ಕ ಜಮೀನಿನವರು ಇಬ್ಬರು ಒಪ್ಪಿಗೆಯಿಂದ ಕೊಟ್ಟಂತಹ

ಅರ್ಜಿಗಳನ್ನು 4-5 ವರ್ಷವಾದರೂ ಭೂ ಮಾಪನವನ್ನು ಮಾಡದೇ ಇರುವುದನ್ನು ನಾವು. ಇವತ್ತು ನೋಡುತ್ತಿದ್ದೇವೆ. ಇದರಿಂತ ರೈತರಿಗೆ ಬಹಳ ತೊಂದರೆಯಾಗಿದೆ. ಇದರ ಅಳತೆಗೆ ಮಾಡಲಿಕ್ಕೆ ತಗಲುವ ಮೊಜಣಿಯ ಫೀಜನ್ನು ರೈತರೂ ತುಂಬಿದರೂ ಕೂಡ ಆ ಖಾತೆ ಸಿಬ್ಬಂದಿಯವರು ಒಂದು ಇವತ್ತು ಅಳತೆಯನ್ನು ಮಾಡುತ್ತಿಲ್ಲ. ಆದುದರಿಂದ ಅಂತಹ ಕೇಸ್‌ಗಳಲ್ಲಿ ಇವತ್ತು ಪರ್ಯಾಯ ವ್ಯವಸ್ಥೆ ಮಾಡಿ, ಕೂಡಲೇ ಸಿಬ್ಬಂದಿಯನ್ನು ಒದಗಿಸಬೇಕು. ಈ ರೀತಿಯಾಗಿ ಅಲ್ಲಿ ಭ್ರಷ್ಟಾಚಾರಕ್ಕೆ ಎಡೆಯನ್ನು ಮಾಡಿಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ನಿಲುವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಇದನ್ನು ನಾವು ಅರ್ಥಮಾಡಿಕೊಂಡೇ ಹೊಸದಾಗಿ ಒಂದು ಸಾವಿರ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದ್ದೇವೆ. ವೇಕೆನ್ಸಿ ಇರತಕ್ಕದ್ದು 345 ಮಾತ್ರ. ಆದರೂ ಈ ತೊಂದರೆಯನ್ನು ನೋಡಿಕೊಂಡು fragmentation, ಎನ್‌ಕ್ರೋಚ್‌ಮೆಂಟ್. ಲ್ಯಾಂಡ್ ರೀಫಾರ್ಮ್ಸ್‌ನಲ್ಲಿ ಕೊಟ್ಟಂತಹ ಜಮೀನು ಇವುಗಳನ್ನೆಲ್ಲಾ ನೋಡಿಕೊಂಡು ಕೆಲಸ ಹೆಚ್ಚಾಗಿದೆ ಎಂದು ತಿಳಿದುಕೊಂಡು ಇವತ್ತು ನಾವು ಒಂದು ಸಾವಿರ ಪೋಸ್ಟನ್ನು ಕ್ರಿಯೇಟ್ ಮಾಡಿಕೊಂಡು ಅದನ್ನು ಭರ್ತಿ ಮಾಡಬೇಕೆನ್ನತಕ್ಕ ದೃಷ್ಟಿಯಿಂದಲೇ ಈ ಸ್ಪೆಷಲ್ ರೂಲ್ಸ್ ಮಾಡಿದ್ದೇವೆ. ಅದು ಕೂಡ ಅಪ್ರೂವಲ್ ಆಗುತ್ತದೆ. ತಕ್ಷಣ ನಾವು ಭರ್ತಿ ಮಾಡಿ ಸರಿಪಡಿಸತಕ್ಕ ವ್ಯವಸ್ಥೆ ಮಾಡುತ್ತೇವೆ.

ದೇವಸ್ಥಾನಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯಕ್ಕೆ ನೀಡಿದ ಹಣದ ಮೊತ್ತ

ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ 1991-92ನೇ ಸಾಲಿಗಾಗಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಯಾವ ಯಾವ ಜಿಲ್ಲೆಗಳಲ್ಲಿ ದೇವಸ್ಥಾನಗಳ ನಿರ್ಮಾಣ, ದುರಸ್ತಿ ಹಾಗೂ ಕಲ್ಯಾಣ ಮಂಟಪ ಇವುಗಳ ದುರಸ್ತಿ ಇತ್ಯಾದಿಗಳಿಗಾಗಿ ನೀಡಿರುವ ಹಣವೆಷ್ಟು?

ಆ) ಗುಲ್ಬರ್ಗಾ ಜಿಲ್ಲೆಯ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಹಣ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) ;

ಇ) ಈ ಕೆಲಸಗಳು ಯಾವ ಹಂತದಲ್ಲಿ ಇವೆ ಹಾಗೂ ಒಂದು ವೇಳೆ ಪೂರ್ತಿಯಾಗದಿದ್ದರೆ ಅವುಗಳನ್ನು ಪೂರ್ಣಗೊಳಿಸಲು ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿದೆಯೇ?

ಈ) ಮಾಡಿದ್ದರೆ ಆ ದೇವಸ್ಥಾನಗಳು ಯಾವುದು?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

ಅ) ದುರಸ್ತಿ ಮತ್ತು ಜೀರ್ಣೋದ್ಧಾರಕ್ಕೆ ರೂ. 31.00 ಲಕ್ಷಗಳನ್ನು ಹಾಗೂ ಕಲ್ಯಾಣ ಮಂಟಪ ಮತ್ತು ದೇವಸ್ಥಾನಗಳ ನಿರ್ಮಾಣದ ಸಲುವಾಗಿ ರೂ. 43.05 ಲಕ್ಷಗಳನ್ನು 1991-92ನೇ ಸಾಲಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ನೀಡಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಎನ್ನುವ ಮಾಹಿತಿಗಳು ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಸರ್ಕಾರದಿಂದ ಈಗಾಗಲೇ ಮಂಜೂರು ಮಾಡಿರುವ ಹಣವನ್ನು ಬಳಸಿಕೊಂಡು ಅದಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ದೇವಸ್ಥಾನ / ಸಂಸ್ಥೆಗಳವರು ನೀಡಬೇಕಾಗುತ್ತದೆ. ಅದೂ ಅಲ್ಲದೆ ಸರ್ಕಾರದಿಂದ ನೀಡಿರುವ ನಿರ್ದೇಶನದಂತೆ ಶೇಕಡಾ 50 ರಷ್ಟು ಹಣವನ್ನು ದೇವಸ್ಥಾನದ ನಿಧಿಯಿಂದಾಗಲೀ ಇಲ್ಲವೇ ಸಾರ್ವಜನಿಕ ವಂತಿಕೆಯಿಂದಾಗಲೀ ಭರಿಸಬೇಕಾಗುತ್ತದೆ. ಈ ಮೇಲಿನ ಷರತ್ತುಗಳನ್ನು ಪೂರೈಸಿದ ನಂತರ ಸರ್ಕಾರಕ್ಕೆ ಅನುಧಾನಕ್ಕಾಗಿ ಮನವಿ ಸಲ್ಲಿಸಿದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಸರ್ಕಾರೀ ಆದೇಶದ ಸಂ. ಕಂಇ 150:ಮುಭೂಅ 90, ದಿನಾಂಕ 31-10-1991

ತಾಲ್ಲೂಕ್	ಸಂಸ್ಥೆಯ ಹೆಸರು	ಮಂಜೂರಾದ ಮೊಬಲಗು
ಸುರಪುರ ತಾ.	ಶ್ರೀ ಶರಣ ಗೋಳೇಶ್ವರ ದೇವಸ್ಥಾನ ಸೂಗೂರು, ಸುರಪುರ ತಾಲ್ಲೂಕ್	10,000-00
	ಶ್ರೀ ದ್ಯಾಮಪ್ಪ ದೇವಸ್ಥಾನ, ಯಮನೂರು ಸುರಪುರ ತಾಲ್ಲೂಕ್	15,000-00
	ಶ್ರೀ ಉಚ್ಚಪಿಡ್ಡಯ್ಯ ದೇವಸ್ಥಾನ, ಮಾನಗುಂಡಾಲ ಗ್ರಾಮ ಸುರಪುರ ತಾಲ್ಲೂಕ್	10,000-00
	ಶ್ರೀ ನೀಲಕಂಠರಾಯ ದೇವಸ್ಥಾನ, ನೀಲಕಂಠ ಗಟ್ಟಿ ಗ್ರಾಮ ಸುರಪುರ ತಾಲ್ಲೂಕ್	10,000-00
	ಶ್ರೀ ನೀಲಕಂಠರಾಯ ದೇವಸ್ಥಾನ, ನೀಲಕಂಠ ಗಟ್ಟಿ ಗ್ರಾಮ ಸುರಪುರ ತಾಲ್ಲೂಕ್	10,000-00
		55,000-00
ಯಾದಗಿರಿ ತಾ.	ಶ್ರೀ ಹನುಮಾನ್ ದೇವಸ್ಥಾನ, ರಾಣಿಗುರದಿ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಚಂದ್ರಕೆ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ್ ದೇವರ ಗುಡಿ, ಮುನಗಲ್ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ್ ದೇವಸ್ಥಾನ, ಹೂರುಂಚಾ ಗ್ರಾಮ ಯಾದಗಿರಿ ತಾಲ್ಲೂಕ್	10,000-00

	ಶ್ರೀ ಹನುಮಾನ ದೇವಸ್ಥಾನ, ಕ್ಯಾಸಪ್ಪನಹಳ್ಳಿ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಸೂರೇಶ್ವರ ದೇವಸ್ಥಾನ, ವನಗೇರ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಕಟ್ಟಿಗೆ ಸಹಪುರ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಬಾಚಾರ್ ಗ್ರಾಮ	10,000-00
	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ಕೋಟಿ ರಾಮಲಿಂಗೇಶ್ವರ ಮಠ, ಯಾದಗಿರಿ ತಾಲ್ಲೂಕ್	10,000-00
		90,000-00
ಜೇವರ್ಗಿ ತಾ.	ಶ್ರೀ ದ್ಯಾಮವ್ವ ದೇವಿ ದೇವಸ್ಥಾನ, ನರಬೋಳಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಬಡಗೇರಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಹನುಮಾನ ಮಂದಿರ, ಗೌನಹಳ್ಳಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಯಲ್ಲಮ್ಮ ದೇವಸ್ಥಾನ, ಕೊಲ್ಲೂರು ಗ್ರಾಮ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಜೇರಲಿಂಗೇಶ್ವರ ದೇವಸ್ಥಾನ, ಕೊಂಡಗೂಳಿ ಗ್ರಾಮ ಜೇವರ್ಗಿ ತಾಲ್ಲೂಕ್	10,000-00
		50,000-00
ಗುಲ್ಬರ್ಗಾ ತಾ.	ಶ್ರೀ ರೇವಣಸಿದ್ದೇಶ್ವರ ಮಠ, ಬ್ರಹ್ಮಪುರ, ಗುಲ್ಬರ್ಗಾ	10,000-00
		10,000-00
ಆಳಂದ ತಾ.	ಶ್ರೀ ಶರಣಬಸವೇಶ್ವರ ದೇವಸ್ಥಾನ, ದಂಗಾಪುರ ಆಳಂದ ತಾಲ್ಲೂಕ್	25,000-00
		25,000-00
ಚಿತ್ತಾಪುರ ತಾ.	ಶ್ರೀ ಶಿವಯೋಗೀಶ್ವರ ದೇವಸ್ಥಾನ, ದೇವನತೇಗನೂರು ಗ್ರಾಮ, ಚಿತ್ತಾಪುರ ತಾಲ್ಲೂಕ್	10,000-00
		10,000-00
ಶಹಪುರ ತಾ.	ಶ್ರೀ ದಂಡಗುಂಡ ಬಸವಣ್ಣ ದೇವಸ್ಥಾನ ಗೋಗಿಪೇಠ, ಶಹಪುರ ತಾಲ್ಲೂಕ್	10,000-00
		10,000-00

ಸರ್ಕಾರಿ ಆದೇಶದ ಸಂಖ್ಯೆ : ಕಂಇ 168 ಮುಭೂಅ 91, ದಿನಾಂಕ 31-10-1991

ಕ್ರಮ ಸಂಖ್ಯೆ	ತಾಲ್ಲೂಕು	ಸಂಸ್ಥೆಯ ಹೆಸರು	ಮಂಜೂರಾದ ಮೊಬಲಗು
	ಚಿಂಚೋಳಿ ತಾಲ್ಲೂಕು		
1)		ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸರಸಾಂಬ ಗ್ರಾಮ, ಚಿಂಚೋಳಿ ತಾಲ್ಲೂಕು	25,000-00
2)		ಶ್ರೀ ರೇವಣಸಿದ್ದೇಶ್ವರ ದೇವಾಲಯ ರಥಕಲ್ ಗ್ರಾಮ, ಚಿಂಚೋಳಿ ತಾಲ್ಲೂಕು	25,000-00
			50,000-00
	ಯಾದಗಿರಿ ತಾಲ್ಲೂಕು		
1)		ಶ್ರೀ ವಾಲ್ಮೀಕಿ ದೇವಸ್ಥಾನ, ಯಾದಗಿರಿ ನಗರ	50,000-00
2)		ಶ್ರೀ ಡಿಗ್ವಿದೇಶ್ವರ ದೇವಸ್ಥಾನ, ಕನ್ನಗೇರ ಯಾದಗಿರಿ ತಾಲ್ಲೂಕು	20,000-00
			70,000-00
	ಸುರಪುರ ತಾಲ್ಲೂಕು		
1)		ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಸುರಪುರ ತಾಲ್ಲೂಕು	50,000-00
2)		ಶ್ರೀ ಹುಲಿಗಮ್ಮ ದೇವಸ್ಥಾನ, ಶೆಟ್ಟಿ ಮೊಹಲ್ಲ ಸುರಪುರ ತಾಲ್ಲೂಕು	15,000-00
			65,000-00
	ಆಳಂದ ತಾಲ್ಲೂಕು		
1)		ಶ್ರೀ ಅಜಾತ್ ಮಹಾರಾಜ ಮಂದಿರ ಬೆಣ್ಣೆ ಶಿರೂರು ಗ್ರಾಮ, ಆಳಂದ ತಾಲ್ಲೂಕು	10,000-00
			10,000-00
	ಶಹಪುರ ತಾಲ್ಲೂಕು		
1)		ಶ್ರೀ ಹನುಮಾನ್ ದೇವಸ್ಥಾನ ಭೂಮಿ ಕಾಡಂಗೇರಾ, ಶಹಪುರ ತಾಲ್ಲೂಕು	20,000-00
			20,000-00

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ 'ಅ' ಎಂಬ ಪ್ರಶ್ನೆಗೆ ಉತ್ತರ ಈ ರೀತಿ ಇದೆ. ಕರ್ನಾಟಕ ರಾಜ್ಯದ ದೇವಸ್ಥಾನಗಳ ದುರಸ್ತಿ ಜೀರ್ಣೋದ್ಧಾರಕ್ಕೆ ರೂಪಾಯಿ 31 ಲಕ್ಷ ಮತ್ತು 43 ಲಕ್ಷ 1991-92ರ ಸಾಲಿಗೆ ಧಾರ್ಮಿಕ ದತ್ತಿ ಇಲಾಖೆಯವರು ನೀಡಿದ್ದಾರೆ. ಇದರಿಂದ ಪ್ರತಿ ಜಿಲ್ಲೆಗೆ ಸುಮಾರು 4 ಲಕ್ಷ ರೂಪಾಯಿ ಬಂದಂತಾಗುತ್ತದೆ. ಆದರೆ ಗುಲ್ಬರ್ಗ ಜಿಲ್ಲೆಗೆ ಕೇವಲ 2.5 ಲಕ್ಷ ರೂಪಾಯಿಯನ್ನು ಅನುದಾನವನ್ನು ನೀಡಿದ್ದು ಏಕೆ? ಮುಂದಾದರೂ ಸಹ ಹೈದರಾಬಾದ್ ಕರ್ನಾಟಕವಾದ ಹಿಂದುಳಿದ ಪ್ರದೇಶವನ್ನು ಕಡೆಗಣಿಸಬಾರದೆಂದು ತಮ್ಮ ಮುಖಾಂತರ ಮಂತ್ರಿಯವರನ್ನು ವಿನಂತಿಸುತ್ತೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, 1991-92ರ ಸಾಲಿನಲ್ಲಿ ಜೀರ್ಣೋದ್ಧಾರಕ್ಕಾಗಿ 31 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 43 ಲಕ್ಷ ರೂಪಾಯಿಯನ್ನು ಈಗಾಗಲೇ ಅನುದಾನವನ್ನಾಗಿ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಗುಲ್ಬರ್ಗ ಜಿಲ್ಲೆಗೆ ಜೀರ್ಣೋದ್ಧಾರಕ್ಕಾಗಿ 2.5 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 2.15 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಲಾಗಿದೆ. ಬೇಡಿಕೆ ಬಂದರೆ ಮತ್ತು ಪ್ರಸ್ತಾವನೆಯನ್ನು ಪರಿಗಣಿಸಿ ತದನಂತರ ಮತ್ತೊಂದು ಸಾರಿ ಅನುದಾನದ ಪಟ್ಟಿಯನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಉಪಾಧ್ಯಕ್ಷಣಿಯವರೆ, 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆಯ ದೇವಸ್ಥಾನಗಳ ರಿಪೇರಿ, ಜೀರ್ಣೋದ್ಧಾರಕ್ಕಾಗಿ ನೀಡಿರುವ ಹಣದಲ್ಲಿ ತಾಲ್ಲೂಕುವಾರು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ಸೇಡಂ ತಾಲ್ಲೂಕನ್ನು ಕಡೆಗಣಿಸಲಾಗಿದೆ. ಸೇಡಂ ತಾಲ್ಲೂಕಿಗೆ ಹಣವನ್ನು ನೀಡಿಲ್ಲ. ಮತ್ತು ನಾನು 1991-92ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿರುವ ಪುರಾತನ ಹಾಗೂ ಪ್ರಖ್ಯಾತ ದೇವಸ್ಥಾನಗಳಿಗೆ ಜೀರ್ಣೋದ್ಧಾರ ಹಣವನ್ನು ನೀಡಲು ಕೋರಿದ್ದೆ. ಆದರೆ ಏತಕ್ಕೆ ಇನ್ನು ಹಣವನ್ನು ನೀಡಿಲ್ಲ?

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, ಶಾಸಕರಿಂದ, ಗ್ರಾಮಸ್ಥರಿಂದ ಮತ್ತು ಸಾರ್ವಜನಿಕರಿಂದ ಬಂದಂಥ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುದಾನ ನೀಡಲಾಗುತ್ತಿದೆ. ಅದೇ ರೀತಿ ಗುಲ್ಬರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳಿಗೆ ನೀಡಿದ್ದೇವೆ. ಮತ್ತು ಸೇಡಂ ತಾಲ್ಲೂಕಿಗೆ ಅಚಾತುರ್ಯವಾಗಿ ಹಣ ಹೋದ ಪಟ್ಟಿಯಲ್ಲಿಲ್ಲದಿದ್ದರೆ, ನಂತರ ಹಣವನ್ನು ಬಿಡುಗಡೆ ಮಾಡತಕ್ಕಂಥಾದ್ದರ ಬಗ್ಗೆ ಅವರ ಕೋರಿಕೆಯನ್ನು ಮನ್ನಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಯೋಜನೆಯಡಿಯಲ್ಲಿ ಈ ಒಂದು ಪ್ರೋಗ್ರಾಂ ಬಳಸಬಾರದೆಂದು ಕ್ಷೇತ್ರವಾರು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ.

ವಾರಣಾಸಿ ಛತ್ರದ ನಿರ್ವಹಣೆ

254 (1594) ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ವಾರಣಾಸಿಯ ಛತ್ರದಲ್ಲಿ ಯಾತ್ರಿಕರಿಗೆ ತಂಗುವ ವ್ಯವಸ್ಥೆ ಸರಿಯಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಛತ್ರದ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆ ತಯಾರಿಸಿದೆಯೇ?

ಇ) ರಾಜ್ಯ ಸರ್ಕಾರಕ್ಕೆ ವಾರಣಾಸಿಯಲ್ಲಿ ಉತ್ತಮ ಸ್ಥಳ ದೊರಕಿದ್ದರೂ ಈ ತನಕ ಈ ಜಾಗದಲ್ಲಿ ಉತ್ತಮ ವ್ಯವಸ್ಥೆ ಮಾಡದಿರಲು ಕಾರಣವೇನು?

ಈ) ಇಲ್ಲಿ ಉತ್ತಮ ವ್ಯವಸ್ಥೆ ಮಾಡಿದರೆ ಕರ್ನಾಟಕದ ಜನರಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚಲು ಸಾಧ್ಯವಿಲ್ಲವೇ?

ಶ್ರೀ ರಾಜಾ ಅಮರೇಶ ನಾಯಕ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಈ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಯೋಜಿಸಲಾಗಿದೆ.

1) ಬೋರ್‌ವೆಲ್ ತೋಡಿಸುವುದು.

2) ರಾಜ್ಯ ಛತ್ರದ ದುರಸ್ತಿ.

3) ಹೆಚ್ಚುವರಿ ಕೊಠಡಿಗಳನ್ನು ಒದಗಿಸುವುದು.

ಇ) ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ರೂ. 25.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಈಗ ಛತ್ರದ ನಿಧಿಯಲ್ಲಿ ಹಣದ ಕೊರತೆಯಿರುವುದರಿಂದ ಈ ವ್ಯವಸ್ಥೆ ಮಾಡಲು ತಡವಾಗಿರುತ್ತದೆ.

ಈ) ಹೌದು.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಒಂದನೇ ಪ್ರಶ್ನೆ ಏನೆಂದರೆ, ವಾರಣಾಸಿಯ ಛತ್ರದಲ್ಲಿ ಯಾತ್ರಿಕರಿಗೆ ತಂಗುವ ವ್ಯವಸ್ಥೆ ಸರಿಯಿಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದಕ್ಕೆ ಉತ್ತರ 'ಹೌದು' ಎಂದು ಕೊಟ್ಟಿದ್ದಾರೆ. ಈ ಛತ್ರದ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆ ತಯಾರಿಸಿದೆಯೇ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಈ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಯೋಜಿಸಲಾಗಿದೆಯೆಂದು ಹೇಳಿದ್ದಾರೆ.

1) ಬೋರ್‌ವೆಲ್ ತೋಡಿಸುವುದು.

2) ರಾಜ್ಯ ಛತ್ರದ ದುರಸ್ತಿ ಮತ್ತು

3) ಹೆಚ್ಚುವರಿ ಕೊಠಡಿಗಳನ್ನು ಒದಗಿಸುವುದು.

ಹಿಂದುಗಳ ಅತ್ಯಂತ ಪವಿತ್ರ ಕ್ಷೇತ್ರವಾದ 'ಕಾಶಿ'ಗೆ ಹೋದಾಗ ನಮ್ಮ ಕರ್ನಾಟಕಕ್ಕೆ ಬಹಳ ಉತ್ತಮವಾದಂಥ ಆಯಕಟ್ಟಿನ ಸ್ಥಳದಲ್ಲಿ ಛತ್ರದ ಸ್ಥಳ ಒದಗಿದೆ; ಆದರೆ, ಆ ಬೋರ್‌ವೆಲ್ ಸರಿಯಿಲ್ಲದೆ ಅಲ್ಲಿ ಹೋದವರಿಗೆ ಸ್ನಾನದ ತೊಂದರೆಯಿಂದಾಗಿ ಗಂಗೆಯಲ್ಲಿ ಮಿಾಯುವಂಥ ಪರಿಸ್ಥಿತಿ ಬಂದೊದಗಿದೆ. ಅಲ್ಲದೆ, ಛತ್ರ ಬಹಳಷ್ಟು ಕೆಟ್ಟ ಸ್ಥಿತಿಯಲ್ಲಿದೆ. ಅಲ್ಲಿಗೆ ಹೋದವರಿಗೆ ತಂಗುವುದಕ್ಕೆ ಅನುಕೂಲವಾಗಿರುವುದಿಲ್ಲ. ಹೆಚ್ಚುವರಿ ಕೊಠಡಿಗಳನ್ನು ಮಾಡಿಸುವಂಥ ಯೋಜನೆಗೆ ಶಂಕುಸ್ಥಾಪನೆ ಹಾಕಿದಂತಹ ಹಲಗೆ ಮಾತ್ರ ಕಾಣಿಸುತ್ತಿದೆ. ಮೇಲುವಾರಿ ಕಟ್ಟಡ ಇನ್ನೂ ಸಹ ತಲೆ ಎತ್ತಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಆ ಬಗ್ಗೆ ಸರ್ಕಾರದವರು ಯಾವುದಾದರೂ ಖಾತೆಯಲ್ಲಿ ಹಣವನ್ನು ಇಟ್ಟಂತೆ ನನಗೆ ಕಾಣಿಸುವುದಿಲ್ಲ. ಆದುದರಿಂದ, ಈ ಕೆಲಸ ತ್ವರಿತ ಗತಿಯಲ್ಲಿ ಆಗಬೇಕಾಗಿದೆ. ನೆರೆ ರಾಜ್ಯಗಳಲ್ಲಿ

ಕರ್ನಾಟಕದ ಛತ್ರ, ಉತ್ತಮ ಸ್ಥಿತಿಯಲ್ಲಿದ್ದರೂ ಕಾಶಿಯಲ್ಲಿರುವಂಥ ಅತ್ಯುತ್ತಮ ಸ್ಥಳದಲ್ಲಿರುವ ಛತ್ರವನ್ನು ಕಡೆಗಣಿಸಿದ ಹಾಗೆ ಕಾಣುತ್ತದೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಎಂಬುದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಬಯಸುತ್ತೇವೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಶಾಸಕ ಮಿತ್ರರು ಹೇಳಿದಂತೆ ಅಲ್ಲಿ ಸೌಲಭ್ಯ ಕುಂಠಿತವಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಈ ದಿಸೆಯಲ್ಲಿ ಆ ಕ್ಷೇತ್ರಕ್ಕೆ ಬರತಕ್ಕಂಥ ಪ್ರವಾಸಿಗರಿಗೆ, ಯಾತ್ರಾರ್ಥಿಗಳಿಗೆ ಉತ್ತಮವಾದಂಥ ಒಂದು ಸೌಲಭ್ಯವನ್ನು ನೀಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹಣಕಾಸಿನ ತೊಂದರೆಯಿಂದ ಈ ಕಾರ್ಯ ಕುಂಠಿತಗೊಂಡಿದೆ. ಮುಂದಿನ ವರ್ಷಗಳಲ್ಲಿ ಆ ಒಂದು ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಡುತ್ತೇವೆಂದು ಹೇಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಮಂತ್ರಿಗಳು ಮುಂದಿನ ವರ್ಷಗಳಲ್ಲಿ ಮಾಡಿಕೊಂಡುತ್ತೇವೆಂದು ಹೇಳಿದರು. ಆದರೆ, ಈ ವರ್ಷದ ಬಜೆಟ್‌ನಲ್ಲಿ ಯಾವುದೂ ಕಾಣಿಸುವುದಿಲ್ಲ. ಈ ಸೌಲಭ್ಯ ಅತ್ಯಾವಶ್ಯಕವಾಗಿದೆ. ಅಲ್ಲಿರತಕ್ಕ ಬೋರ್‌ವೆಲ್ ಸರಿಯಾಗಿ ಉಪಯೋಗವಾಗುವುದಿಲ್ಲ, ಆದ್ದರಿಂದ, ಅದನ್ನು ಸರಿಪಡಿಸಬೇಕು. ನಮ್ಮಂಥವರು ಹೋದರೆ ಆ ಕೋಣೆಯಲ್ಲಿ ವಾಸ ಮಾಡಲಿಕ್ಕೂ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಆದುದರಿಂದ, ತಾವೆ ಒಂದು ಸಲ ವಾರಣಾಸಿಗೆ ಹೋಗಿ, ಒಂದು ದಿವಸ ಅಲ್ಲಿರುವ ಛತ್ರದಲ್ಲಿ ತಂಗಿದ್ದು, ಕಾಶಿಯಲ್ಲಿರುವ ನಮ್ಮ ಛತ್ರಕ್ಕೆ ಮೋಕ್ಷ ಕೊಡುವಂಥ ಕೆಲಸವನ್ನು ತಮ್ಮ ಕಾಲದಲ್ಲಾದರೂ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೇ ಅಲ್ಲಿರತಕ್ಕ ಕಟ್ಟಡದ ದುರಸ್ತಿಯ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ ಮತ್ತು ಅವರು ನೀರಿನ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ಹಣವನ್ನು ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಹಾಕಿಸಿ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಉಪಾಧ್ಯಕ್ಷಿಣಿಯವರು : ಶ್ರೀ ಕೆ.ಹೆಚ್. ಕುರುಡಗಿಯವರ 256 (1584) ನೇ ಪ್ರಶ್ನೆಗೆ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ., ಅದನ್ನು ಮುಂದೆ ತೆಗೆದುಕೊಳ್ಳೋಣ.

ಬಂಗಾರಪ್ಪ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ

257 (1425) ಶ್ರೀ ಬಸವರಾಜ ಪಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯ ಬಗ್ಗೆ ಬಂಗಾರಪ್ಪ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇಚ್ಛೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಅದನ್ನು ಅನುಷ್ಠಾನಗೊಳಿಸಲಾಗುವುದು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಬಂಗಾರಪ್ಪ ಸಮಿತಿಯು ತಾತ್ಕಾಲಿಕವಾಗಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಸೂಚಿಸುವ ವಿಧಾನವನ್ನು ಶಿಫಾರಸ್ಸು ಮಾಡಿತ್ತು.

ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರದ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಕೇಳುವ ಮಾಹಿತಿಯನ್ನು ಪ್ರತಿ ವರ್ಷವೂ ತಪ್ಪದೆ ರಾಜ್ಯ ಸರ್ಕಾರವು ಒದಗಿಸುತ್ತಿದೆ. ಕೇಂದ್ರ ಸರ್ಕಾರವು ಅಂತಿಮವಾಗಿ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ರಾಜ್ಯ ಸರ್ಕಾರಗಳ ಶಿಫಾರಸ್ಸಿನ ಆಧಾರದ ಮೇಲೆ ಬೆಲೆಯನ್ನು ನಿರ್ಧಾರ ಮಾಡುವುದು.

ಆ) ಮೇಲ್ಕಂಡ ಕಾರಣದಿಂದಾಗಿ ಉದ್ಭವಿಸುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ (ಶ್ರೀ ಬಸವರಾಜ ರಾಯರೆಡ್ಡಿಯವರ ಪರವಾಗಿ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಬಂಗಾರಪ್ಪನವರ ಸಮಿತಿ ವರದಿಯನ್ನು ಯಾವಾಗ ಕೊಟ್ಟಿತು ಎಂದು ಉತ್ತರದಲ್ಲಿ ತಿಳಿಸಿಲ್ಲ. ಈ ಸಮಿತಿ ಯಾವಾಗ ತನ್ನ ವರದಿಯನ್ನು ಕೊಟ್ಟಿದೆ? ವರದಿಯಲ್ಲಿರುವ ವಿವರಣೆಗಳು ಏನು? ಸಮಿತಿಯು ಕೊಟ್ಟಿರತಕ್ಕ ವರದಿಯನ್ನೆಲ್ಲ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದೀರಲ್ಲ ಆ ಶಿಫಾರಸ್ಸುಗಳಲ್ಲಿ ಬಂಗಾರಪ್ಪನವರು ಸಮಿತಿಯವರು ಕೊಟ್ಟಿರತಕ್ಕ ಶಿಫಾರಸ್ಸು ಸೇರಿದೆಯೆ?

ಶ್ರೀಮಾನ್ ಬಂಗಾರಪ್ಪನವರು ರೈತರ ಹಿತಚಿಂತನೆಯನ್ನು ಮಾಡುತ್ತಾರೆಂದು 1982 ರಲ್ಲಿ ಶ್ರೀಮಾನ್ ಗುಂಡೂರಾವ್‌ರವರ ಸರ್ಕಾರ ಆಡಳಿತದಲ್ಲಿದ್ದಾಗ ಶ್ರೀ ಬಂಗಾರಪ್ಪನವರ ಮುಖಂಡತ್ವದಲ್ಲಿ ಈ ಸಮಿತಿಯನ್ನು ಮಾಡಿದರು. ಈ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರಕ್ಕೆ ಇರತಕ್ಕ ಅಡಚಣೆ ಏನು?

ಶ್ರೀ ಎನ್. ಚಿಕ್ಕೇಗೌಡ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಬಂಗಾರಪ್ಪನವರ ಸಮಿತಿಯ ಶಿಫಾರಸ್ಸುಗಳು ಒಂದು ತಾತ್ಕಾಲಿಕವಾದ ವರದಿಯಾಗಿದೆ. ಅದು ಅಂತಿಮವಾದ ವರದಿಯಲ್ಲ. ನಾನು ನಿನ್ನೆ ವಿಧಾನ ಪರಿಷತ್ತಿನಲ್ಲಿ ಇದೇ ಪ್ರಶ್ನೆಯ ಬಗ್ಗೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಹೇಳಿದ್ದೇನೆ. ಬಂಗಾರಪ್ಪನವರ ಸಮಿತಿಯು ತಾತ್ಕಾಲಿಕವಾಗಿ ಅನೇಕ ಶಿಫಾರಸ್ಸುಗಳನ್ನು ಮಾಡಿತ್ತು. ಆ ಶಿಫಾರಸ್ಸುಗಳ ಪೈಕಿ ಕೃಷಿ ಉತ್ಪನ್ನಗಳಿಗೆ ಬೆಲೆಯನ್ನು ನಿಗದಿ ಮಾಡತಕ್ಕ ವಿಚಾರವೂ ಸಹ ಇತ್ತು. ರಾಜ್ಯ ಸರ್ಕಾರದವರ ಪ್ರಕಾರ ಉತ್ಪನ್ನದ ವೆಚ್ಚ ಮತ್ತು ಅದರಿಂದ ಎಷ್ಟು ಲಾಭ ಬರುತ್ತದೆ ಅಥವಾ ಎಷ್ಟು ನಷ್ಟವಾಗುತ್ತದೆ ಎನ್ನತಕ್ಕ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರದವರು ಕೃಷಿ ಉತ್ಪನ್ನಗಳ ಬೆಲೆಯನ್ನು ನಿಗದಿ ಮಾಡುತ್ತಾರೆ. ಕೃಷಿ ಉತ್ಪನ್ನದ ಬೆಲೆಯನ್ನು ನಿಗದಿ ಮಾಡುವುದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದಕ್ಕೆ ಅಧಿಕಾರವಿಲ್ಲ. ನನ್ನ ಬಳಿ ಕಡತ ಇಲ್ಲದಿದ್ದರೂ ಕೂಡ ಇದನ್ನು ಹೇಳುತ್ತಿದ್ದೇನೆ. 1980ರಲ್ಲಿ ಬಂಗಾರಪ್ಪನವರ ಸಮಿತಿಯನ್ನು ರಚನೆ ಮಾಡಲಾಯಿತು. ಈ ಸಮಿತಿಯು ರಚನೆಯಾದ ಮೇಲೆ 1980ನೇ ಆಕ್ಟೋಬರ್ ತಿಂಗಳಿನಲ್ಲಿ ಈ ಸಮಿತಿಯನ್ನು ರದ್ದು ಮಾಡಲಾಯಿತೆಂದು ನೆನ್ನೆ ದಿನ ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ನನಗೆ ನೆನಪಿರುವ ಪ್ರಕಾರ ಇದು ಅಂತಿಮ ತೀರ್ಮಾನವಾಗಿಲ್ಲ. ತಾತ್ಕಾಲಿಕವಾದ ತೀರ್ಮಾನವಾಗಿದೆಯೆಂದು ಈ ಸದನದ ಮೂಲಕ, ತಮ್ಮ ಮೂಲಕ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೆ. ತಾತ್ಕಾಲಿಕವಾದ ವರದಿಯನ್ನೇ ಅನುಷ್ಠಾನಕ್ಕೆ ತರಲು ಏನು ತೊಂದರೆ ಇದೆ? ಸರ್ಕಾರವು ಒಂದು ಸಮಿತಿಯನ್ನು ಮಾಡಿ ಅದರಿಂದ ವರದಿಯನ್ನು ಕೇಳಿತ್ತು. ಆ ಸಮಿತಿ ತಾತ್ಕಾಲಿಕವಾದ ವರದಿಯನ್ನು ಕೊಟ್ಟ ಮೇಲೂ ಕೂಡ ಅದನ್ನು ಅನುಷ್ಠಾನಕ್ಕೆ ತರಲು ಏನು ತೊಂದರೆ ಇದೆ?

ಶ್ರೀ ಎ. ರುಕ್ಮಯ್ಯ ಪೂಜಾರಿ : ತಾತ್ಕಾಲಿಕವಾಗಿ ಕೊಟ್ಟಿರತಕ್ಕ ವರದಿಗೆ ಸರ್ಕಾರದ ಒಪ್ಪಿಗೆ ಇದೆ ತಾನೆ?

(ಉತ್ತರ ಇಲ್ಲ)

Sri Qumurul Islam : This is a very vital issue relating to farmers. A Committee was formed in the year 1980 when Sri R. Gundu Rao was the Chief Minister. You have said that the interim report has been submitted, but till today the final report has not come. We want to know the reasons for delay in finalising the report? How long it will take when such an important issue of giving support price to the formers is involved. Why the State Government is shifting the responsibility to the Central Government? The stand of the State Government is not clear. Now, fortunately, Mr. Bangarappa himself is the Chief Minister of this State. I want to know whether your Chief Minister or your Government is fully in favour of giving this support price by the State Government itself instead of shifting the responsibility to the Central Government?

ಶ್ರೀ ಎನ್. ಚಿಕ್ಕೇಗೌಡ : ಈಗ ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಇಂಗ್ಲೀಷ್‌ನಲ್ಲಿಯೆ ಉತ್ತರವನ್ನು ಕೊಡುತ್ತೇನೆ. ಅದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಇದು ಬಹಳ ಪ್ರಮುಖವಾದಂಥ ಪ್ರಶ್ನೆ. The Bangarappa Committee was formed in 1980 somewhere between July and August. The same committee was abolished in October, 1980. An interim report was submitted by that Committee and most of the recommendations made are implemented by Hon'ble Chief Minister Sri S. Bangarappa. He has implemented many of the suggestions made in that report.

Sri Qumurul Islam : What are those recommendations?

Sri N. Chikke Gowda : If you ask a separate question, then I will give you what are the recommendations made by that committee. But as you have put it rightly, the Hon'ble Chief Minister, Sri S. Bangarappa himself has implemented several recommendations made by that committee. I will be prepared to answer as to what are the recommendations which have been implemented by this Government if you ask a seperate question. Fixing of support Price is the responsibility of the Government of India. It is not the State Government which fixes the support price for a particular crop. Let me make it clear. This is because several states are involved in it. And also several crops. Some of the crops which are grown in Karnataka are also grown in other states. The Central Government is authorised. ಮಾನ್ಯ ಸದಸ್ಯರಾದ ಶಿವರಾಮೇಗೌಡರು ಕೇಳಿದಂತಹ ಪ್ರಶ್ನೆಗೆ ಬಂಗಾರಪ್ಪನವರ

ಸಮಿತಿ ಅನೇಕ ಶಿಫಾರಸ್ಸುಗಳನ್ನು ಏನು ಮಾಡಿತ್ತು, ಇವತ್ತು ಅವರೇ ಮುಖ್ಯಮಂತ್ರಿಗಳೂ ವಿತ್ತ ಮಂತ್ರಿಗಳೂ ಆಗಿರುವುದರಿಂದ ಅವರು ಮಾಡಿದಂತಹ ಅನೇಕ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಿದ್ದಾರೆ. ಮತ್ತು ಇನ್ನೂ ಕಾರ್ಯಗತ ಆಗದಿರುವುದನ್ನು ಸರ್ಕಾರದವರು ಪರಿಶೀಲಿಸಿ ಮಂತ್ರಿಮಂಡಲದ ಗಮನಕ್ಕೂ ತರುವ ಬಗ್ಗೆ ನಾವು ಬಹಳ ಕಾತುರರಾಗಿದ್ದೇವೆ. ರೈತರ ಬಗ್ಗೆ ಏನೇನು ಸವಲತ್ತುಗಳನ್ನು ಕೊಡಬೇಕೋ ಅದನ್ನು ಕೊಡುತ್ತೇವೆ. ಇವತ್ತು 10 ಹೆಚ್.ಪಿ. ಗೆ ವಿದ್ಯುಚ್ಛಕ್ತಿಯನ್ನು ಪುಕ್ಕಟೆಯಾಗಿ ಒದಗಿಸಬೇಕೆಂಬ ಒಂದು ದಿಟ್ಟ ನಿರ್ಣಯ ತೆಗೆದುಕೊಂಡಿದ್ದೇವೆ. ಇಡೀ ಕರ್ನಾಟಕದಲ್ಲಿ ಅದನ್ನು ಸ್ವಾಗತಿಸುತ್ತಿದ್ದಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಕರೆಂಟ್ ಇಲ್ಲ, ಪಂಪುಸೆಟ್ಟುಗಳು ವರ್ಕ್ ಆಗುತ್ತಾ ಇಲ್ಲ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ : ರೈತರಿಗೆ ಬಹಳಷ್ಟು ಅನುಕೂಲಗಳನ್ನು ಮಾಡುತ್ತಿದ್ದೇವೆ. ಬಜೆಟ್ ಬುಕ್ ಓದಿದರೆ ನಿಮಗೆ ಗೊತ್ತಾಗುತ್ತದೆ. "ಕೆರೆ ಕಲ್ಯಾಣ", "ಹನಿ ತನೆ" ಇವೆಲ್ಲಾ ರೈತರಿಗೆ ಬಹಳ ಅನುಕೂಲವಾಗುವಂಥ ಕಾರ್ಯಕ್ರಮಗಳು. ಮಾನ್ಯ ಮುಖ್ಯಮಂತ್ರಿಗಳು, ಉತ್ತರ ಕೊಡುತ್ತಾರೆ. ಬಜೆಟ್‌ನಲ್ಲೂ ಒದಗಿಸಿದ್ದಾರೆ. ಆದ್ದರಿಂದ ಇದಕ್ಕಿಂತಲೂ ಹೆಚ್ಚಾಗಿ ಏನಾದರೂ ಕೊಡಬೇಕು ಅಂದರೆ ನಮ್ಮ ಈ ಸದನದ ಅಭಿಪ್ರಾಯವನ್ನು ನಮ್ಮ ಮಂತ್ರಿಮಂಡಲದಲ್ಲಿ ಚರ್ಚಿಸಿ, ಮತ್ತು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನು ಹೆಚ್ಚಿನ ಅನುಕೂಲವನ್ನು ರೈತರಿಗೆ ಮಾಡಿಕೊಡುವುದರಲ್ಲಿ ನಾವು ಒಂದು ಸ್ವಲ್ಪವೂ ಹೆದರದೆ ಮಾಡುತ್ತೇವೆ ಎಂದು ನಾನು ಈ ಸದನಕ್ಕೆ ತಿಳಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಶ್ರೀಯುತ ಪೆರಿಕಲ್ ಎಂ. ಮಲ್ಲಪ್ಪನವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ತರಕಾರಿಗಳಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸುವುದು.

259 (1238) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿ ಸರಿಯಾದ ಬೆಲೆಗಳು ದೊರೆಯದೆ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರೈತರಿಗೆ ಒಳ್ಳೆ ಬೆಲೆ ಸಿಗುವಂತೆ ಮಾಡಲು ಸರ್ಕಾರದವರ ಮುಂದೆ ಯೋಜನೆ ಏನಾದರೂ ಇದೆಯೆ?

ಇ) ಅಂತಹ ಯೋಜನೆಯ ವಿವರಗಳೇನು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿನ ಮುಕ್ತ ಮಾರುಕಟ್ಟೆ ಮತ್ತು ಹಾಪ್‌ಕಾಮ್ಸ್‌ನಲ್ಲಿ ಸರಿಯಾದ ಬೆಲೆಗಳು ದೊರೆಯುತ್ತಿವೆ. ಆದರೂ ಸ್ವಲ್ಪ ಮಟ್ಟಿಗೆ ರೈತರು ಹೊರ ರಾಜ್ಯಗಳಿಗೂ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈಗ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಮೂಲಕ ಹಾಪ್‌ಕಾಮ್ಸ್ ಸಂಘದ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೊಳಿಸಿ ರೈತರಿಂದ ಹೆಚ್ಚು ಹೆಚ್ಚು ತರಕಾರಿಗಳನ್ನು ಕೊಳ್ಳಲು ಏರ್ಪಾಡು ಮಾಡುವ ಯೋಜನೆ ಇದೆ.

ಇ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 4ನೇ ಪ್ರಾಜೆಕ್ಟ್‌ಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಮಂಡಳಿಯ ಅನುಮತಿ ನಿರೀಕ್ಷಿಸಲಾಗಿದೆ. ಸದರಿ ಯೋಜನೆಯಡಿ 65 ಸಂಗ್ರಹಣಾ ಕೇಂದ್ರಗಳನ್ನು, 13 ಕೇಂದ್ರ ಉಗ್ರಾಣಗಳನ್ನು 130 ಮಾರಾಟ ಮಳಿಗೆಗಳನ್ನು ತೆರೆಯಲು ಹಾಗೂ 42 ಸಾಗಾಣಿಕೆ ವಾಹನಗಳನ್ನು ಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಒಟ್ಟು ಅಂದಾಜು ವೆಚ್ಚ 1241.906 ಲಕ್ಷ ರೂ.ಗಳು.

ಶ್ರೀ ಎಂ.ವಿ. ವೆಂಕಟಪ್ಪ : ಸಭಾಧ್ಯಕ್ಷಿಣಿಯವರೆ, ಮಂತ್ರಿಗಳು ಉತ್ತರದಲ್ಲಿ 12 ಕೋಟಿ 41 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ವೇರಿಯಸ್ ಪ್ರೋಗ್ರಾಂಸ್‌ಗೆ ಅಂದರೆ 65 ಪ್ರಕ್ಯೂರ್‌ಮೆಂಟ್ ಸೆಂಟರ್ಸ್ ಮುಂತಾದುವನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಪ್ರಕ್ಯೂರ್‌ಮೆಂಟ್ ಸೆಂಟರ್ಸ್ ಮತ್ತು ಸೆಂಟ್ರಲ್ ಗೋಡೌನ್ಸ್ ರೀಟೇಲ್ ಔಟ್‌ಲೆಟ್ಸ್ ಕಟ್ಟಿಸುವುದು, ಯಾವ ಯಾವ ಜಿಲ್ಲೆಗಳ ವ್ಯಾಪ್ತಿಗೆ ಬರುತ್ತವೆ?

ಶ್ರೀ ಎಂ.ಎನ್. ಆತ್ಮಾನಂದ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಯೋಜನೆ ಎನ್.ಸಿ.ಡಿ.ಸಿ. ಯ 4ನೇ ಪ್ರಾಜೆಕ್ಟ್‌ಗೆ ಸೇರತಕ್ಕದ್ದು. ಪ್ರಸ್ತುತ ನಾವು ಇರತಕ್ಕಂಥದ್ದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 3ನೇ ಪ್ರಾಜೆಕ್ಟ್‌ನಲ್ಲಿ, ಈಗ 6 ಜಿಲ್ಲೆಗಳಿಗೆ ಈ ಒಂದು ಪ್ರಾಜೆಕ್ಟ್ ಸೀಮಿತವಾಗಿದೆ. ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ದಕ್ಷಿಣ ಕನ್ನಡ ಮತ್ತು ಮೈಸೂರು. ಇನ್ನು ಉಳಿದ 13 ಜಿಲ್ಲೆಗಳಿಗೆ ಈ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 4ನೇ ಪ್ರಾಜೆಕ್ಟ್‌ನಲ್ಲಿ 12.41 ಕೋಟಿ ರೂಪಾಯಿಗಳ ಒಂದು ವೆಚ್ಚದಲ್ಲಿ ಇದನ್ನು ವಿಸ್ತರಿಸಲಾಗುತ್ತದೆ. ನಮ್ಮ ಸರ್ಕಾರ ಇದಕ್ಕೆ ತಾತ್ವಿಕವಾಗಿ ಅನುಮೋದನೆಯನ್ನು ನೀಡಿದ್ದು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಒಂದು ಒಪ್ಪಿಗೆಯನ್ನು ನಾವು ನಿರೀಕ್ಷಿಸುತ್ತಾ ಇದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಕೋಲಾರ ಜಿಲ್ಲೆಯಲ್ಲಿ ಕಾವೇರಿ ನದಿಯಾಗಲಿ, ತುಂಗಭದ್ರ ನದಿಯಾಗಲಿ ಇಲ್ಲ. ನಿಮ್ಮ ಜಿಲ್ಲೆಯಲ್ಲಾದರೂ ಕಾವೇರಿ ನದಿ ಇದೆ, ವಿಶ್ವೇಶ್ವರಯ್ಯ ನಾಲೆ ಇದೆ. ನಮಗೆ ಇರುವುದೇ ಮಿಲ್ಕ್, ಸಿಲ್ಕು, ವೆಜಿಟೇಬಲ್ಸ್. ಈ ಮೂರು ಬೆಂಗಳೂರಿಗೆ ಬಂದರೆ ನೀವೆಲ್ಲ ಉಳಿಯುತ್ತೀರಿ. ಇಲ್ಲದಿದ್ದರೆ ನೀವೆಲ್ಲಾ ಉಳಿಯುವುದಿಲ್ಲ. ಸಿಲ್ಕು ಬರಬೇಕು, ಮಿಲ್ಕ್ ಬರಬೇಕು, ವೆಜಿಟೇಬಲ್ಸ್ ಬರಬೇಕು. ಜೊತೆಗೆ ನಮ್ಮ ಜಿಲ್ಲೆಯಲ್ಲಿ ಸುಮಾರು 25 ಕೋಟಿ ರೂಪಾಯಿ ಬೆಲೆ ಆಗುವಷ್ಟು ವೆಜಿಟೇಬಲ್ಸ್ ಬೆಳೆಯುತ್ತಾರೆ. ಅದರಲ್ಲಿ ನಮ್ಮ ತಾಲ್ಲೂಕಿನಲ್ಲಿ ಸುಮಾರು 5 ಕೋಟಿಯಷ್ಟು ಅಂದರೆ, ಐದನೇ ಒಂದು ಭಾಗದಷ್ಟು ಬೆಳೆಯುತ್ತಾರೆ. ಇಲ್ಲಿ ಬೆಂಗಳೂರಿನಲ್ಲಿ ಅದಕ್ಕೆ ಸರಿಯಾದ ಬೆಲೆ ಸಿಕ್ಕದೆ ಟೋಮಾಟೊ ಮುಂತಾದವು ವಿಜಯವಾಡ, ಕಲ್ಕತ್ತ, ಮದರಾಸು ನಗರಗಳಿಗೆ ಹೋಗುತ್ತಾ ಇದೆ. ಇಲ್ಲಿ ನಮಗೆ ಹೆಚ್ಚಾಗಿ ಬೆಲೆ ಕೊಡುವುದಕ್ಕೆ ನೀವು ಇನ್ನು ಹೆಚ್ಚು ಹೆಚ್ಚಾಗಿ ಸೆಂಟರ್ಸ್ ಮಾಡಬೇಕು. ಒಂದು ವೇಳೆ ಈ ಪ್ರಾಜೆಕ್ಟ್ ಸ್ಯಾಂಕ್ಷನ್ ಆಗದೇ ಇದ್ದರೆ ಏನು ಮಾಡುತ್ತೀರಿ? ಎನ್.ಸಿ.ಡಿ.ಸಿ. ಪ್ರಾಜೆಕ್ಟ್ ನಮಗೆ ಬರಲಿಲ್ಲ ಎಂದು ಇಟ್ಟುಕೊಳ್ಳೋಣ. ಆಗ ನಮ್ಮ ರಾಜ್ಯ ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಎಂ.ಎಸ್. ಆತ್ಮಾನಂದ : ಲಾಲ್‌ಬಾಗ್‌ನಲ್ಲಿರತಕ್ಕ ತೋಟದ ಬೆಳೆಗಾರರ ಸಹಕಾರ ಸಂಘದ ಶಕ್ತಿ ಎಂದರೆ ಪ್ರತಿದಿನ ಸುಮಾರು 100 ಟನ್‌ನಷ್ಟು ತರಕಾರಿಯನ್ನು ತೆಗೆದುಕೊಳ್ಳುವಂತಹ ವಹಿವಾಟನ್ನು ನಡೆಸುತ್ತಿದೆ. 3ನೇ ಯೋಜನೆಯ ವ್ಯಾಪ್ತಿಯಲ್ಲಿ ಕೋಲಾರ ಜಿಲ್ಲೆ ಬಂದಿರುವುದರಿಂದ ಅಲ್ಲಿ 8 ವಿತರಣಾ ಮಳಿಗೆಗಳನ್ನು ಪ್ರಾರಂಭಮಾಡಿ ಅವು ಕೆಲಸ ಮಾಡುತ್ತಿವೆ. ತಾ. 9-3-92 ರಂದು ಸುಮಾರು 5 ವಿತರಣಾ ಮಳಿಗೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಇನ್ನೂ 7 ವಿತರಣಾ ಮಳಿಗೆಗಳನ್ನು ಹಾಗೂ 3 ಸಂಗ್ರಹಣಾ ಕೇಂದ್ರಗಳನ್ನು ಕೋಲಾರ ಜಿಲ್ಲೆಯಲ್ಲಿ ತೆರೆಯಬೇಕೆಂದು ಆಶಯವಿದೆ. ಈ ತರಕಾರಿಗೆ ಅವಶ್ಯವಿದ್ದ ಕಡೆಯಲ್ಲಿ ಸಂಗ್ರಹಣಾ ಕೇಂದ್ರ ಅಥವಾ ವಿತರಣಾ ಮಳಿಗೆಗಳನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟರೆ ಅದನ್ನು ಪರಿಶೀಲಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಈಗಾಗಲೆ ಮಾನ್ಯ ಮಂತ್ರಿಗಳು ತಿಳಿಸಿರುವಂತೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ 4ನೇ ಹಂತದ ಪ್ರಾಜೆಕ್ಟ್‌ನ್ನು ಮಂಜೂರು ಮಾಡಿದ್ದೇವೆಂದು ತಿಳಿದುಬಂದಿದೆ. ಆದರೆ 3ನೇ ಹಂತದ ಪ್ರಾಜೆಕ್ಟ್ ಯಾವಾಗ ಮುಗಿಯುತ್ತದೆ ಎಂದು ತಿಳಿಸಿಲ್ಲ. ಈಗಾಗಲೇ ಆಯ್ಕೆಯಾಗಿರತಕ್ಕ ಸಂಗ್ರಹಣಾ ಕೇಂದ್ರ ಮತ್ತು ವಿತರಣಾ ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಚಿಕ್ಕಬಳ್ಳಾಪುರ ತಾಲ್ಲೂಕು ಆಲೂಗಡ್ಡೆ, ಈರುಳ್ಳಿ ಮತ್ತು ದ್ರಾಕ್ಷಿ ಬೆಳೆಗೆ ಬಹಳ ಹೆಸರುವಾಸಿಯಾಗಿದೆ. ಆದುದರಿಂದ ಈ ತಾಲ್ಲೂಕಿನಲ್ಲಿ ಸಂಗ್ರಹಣಾ ಕೇಂದ್ರಗಳನ್ನು ತೆರೆಯಲು ಸರ್ಕಾರ ಯೋಚಿಸುತ್ತದೆಯೆ?

ಶ್ರೀ ಎಂ.ಎಸ್ ಆತ್ಮಾನಂದ : ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ 3ನೇ ಹಂತದ ಯೋಜನೆ ಜೂನ್ 1992ಕ್ಕೆ ಮುಗಿಯಬೇಕಾಗಿದೆ. ಮಾನ್ಯ ಸದಸ್ಯರು ಏನು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ, ಅದರ ಪ್ರಕಾರ ಅವರ ಊರಿನಲ್ಲಿ ಸಂಗ್ರಹಣಾ ಕೇಂದ್ರವನ್ನು ತೆರೆಯುವುದು ಅವಶ್ಯಕವಿದ್ದರೆ ಅದನ್ನು ಪರಿಶೀಲಿಸಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ರಫಿ ಅಹ್ಮದ್ : ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತುಮಕೂರು, ಕೋಲಾರ, ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಕ್ಯೂರ್‌ಮೆಂಟ್ ಸೆಂಟರ್‌ಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಇದರ ಪ್ರಕಾರ ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ತಿಳಿಸಬೇಕು. ತುಮಕೂರಿನ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಒಂದು ಕೋಲ್ಡ್ ಸ್ಟೋರೇಜ್‌ನ್ನು ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಅಲ್ಲಿ ಈರುಳ್ಳಿ ಮತ್ತು ಪೊಟ್ಯಾಟೊ ಹೆಚ್ಚು ಬೆಳೆಯುತ್ತಿರುವುದರಿಂದ ಅಲ್ಲಿಗೆ ಕೋಲ್ಡ್ ಸ್ಟೋರೇಜ್‌ನ ಅವಶ್ಯಕತೆ ಬಹಳ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಸಂಗ್ರಹಣಾ ಕೇಂದ್ರವನ್ನು ತೆರೆಯತಕ್ಕ ಸಂದರ್ಭ ಯಾವುದರ ಮೇಲೆ ಅವಲಂಬಿಸುತ್ತದೆಂದರೆ ನಾವು ಕೊಂಡ ತರಕಾರಿಗಳಿಗೆ ಸೂಕ್ತ ಮಾರುಕಟ್ಟೆಯನ್ನು ಹುಡುಕಬೇಕಾದ ಒದಗಿಸಬೇಕಾದ ಅವಶ್ಯಕತೆ ಇರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ತುಮಕೂರಿನಲ್ಲಿ ಈಗಾಗಲೇ ಈ ಯೋಜನೆಯನ್ನು, ಸೌಲಭ್ಯವನ್ನು ಹಂತಹಂತವಾಗಿ ವಿಸ್ತರಿಸಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಕೋಲಾರ ಜಿಲ್ಲೆಯಲ್ಲಿ ಟೊಮ್ಯಾಟೋ ಬಹಳ ಹೆಚ್ಚಿಗೆ ಬೆಳೆದು ಅದನ್ನು ಕೇಳುವವರಿಲ್ಲದೆ, ಕೊಂಡುಕೊಳ್ಳುವವರಿಲ್ಲದೆ ಅದನ್ನೆಲ್ಲಾ ಚರಂಡಿಗೆ ಸುರಿದು

ರೈತರು ಸರ್ವನಾಶವಾದರು ಎಂದು ಪತ್ರಿಕೆಗಳಲ್ಲಿ ನಾವೆಲ್ಲರೂ ಓದಿದ್ದೇವೆ. ಆ ರೀತಿ ಸರ್ವನಾಶ ಆದಂಥ ರೈತರಿಗೆ ಮಾರ್ಕೆಟ್ ವ್ಯವಸ್ಥೆಯನ್ನು ಏನು ಮಾಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ಎಂ.ಎಸ್. ಆತ್ಮಾನಂದ : ಈಗಾಗಲೇ ನಾನು ಮಾನ್ಯ ಸಭೆಗೆ ತಿಳಿಸಿದ್ದೇನೆ. ನಮ್ಮ ಶಕ್ತಿ ಇರುವಷ್ಟು ವಹಿವಾಟನ್ನು ನಾವು ನಡೆಸುತ್ತಿದ್ದೇವೆ. ಬೆಂಗಳೂರಿನ ತೋಟದ ಬೆಳೆಗಾರರ ಸಹಕಾರ ಸಂಘದವರಾಗಲಿ ಅಥವಾ ಬೇರೆ ಜಿಲ್ಲೆಗಳಾಗಲಿ ಆದಷ್ಟೂ ರೈತರ ನೆರವಿಗೆ ನಾವು ಬರುತ್ತೇವೆಂದು ಹೇಳಬಯಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆ

1010 (1656) ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆ ವ್ಯವಸ್ಥೆಗಾಗಿ ನಾಲ್ಕೂವರೆ ಕೋಟಿ ರೂ.ವೆಚ್ಚದ ರಾಷ್ಟ್ರೀಯ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರ ನೆರವಿನ ಹಾಲಿನ ಡೈರಿ ಯೋಜನೆಯೊಂದನ್ನು ಹಿಂದಿನ ಸರಕಾರದ ಅವಧಿಯಲ್ಲಿ ಮಂಜೂರು ಮಾಡಲಾಗಿದ್ದು ಈ ಬಗ್ಗೆ ಏನು ಕ್ರಮ ಕೈಗೊಂಡಿಲ್ಲವೆಂದೂ ಹೇಳಲಾಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಪುನಶ್ಚೇತನ ನೀಡುವ ಕ್ರಮ ಕೈಗೊಳ್ಳಲಾಗುವುದೇ ಹಾಗೂ ನಗರದ ನಾಗರೀಕರ ಹಿತದೃಷ್ಟಿಯಿಂದ ಸರಕಾರವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವ

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಸರ್ವೇಯರ್ಸ್ ಹುದ್ದೆಗಳ ಭರ್ತಿ.

248 (1685) ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಗೆ ಮಂಜೂರಾಗಿರುವ ಸರ್ವೇಯರ್ ಹುದ್ದೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) ಇದರ ಪೈಕಿ ಈಗ ಇರುವ ಸರ್ವೇಯರ್‌ಗಳ ಸಂಖ್ಯೆ ಎಷ್ಟು?

ಇ) ಜಿಲ್ಲೆಯಲ್ಲಿ ಎಷ್ಟು ಸರ್ವೇಯರ್‌ಗಳ ಕೊರತೆಯಿದೆ?

ಈ) ಈಗ ಕೊರತೆ ಇರುವ ಸರ್ವೇಯರ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಪ್ರಥಮ ದರ್ಜೆ ಭೂಮಾಪಕರ ಹುದ್ದೆಗಳು 17

ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು 131

ಒಟ್ಟು 148

ಸರ್ವೆ ಕಛೇರಿಗಳು ಪ್ರತಿ ತಾಲ್ಲೂಕಿನಲ್ಲಿ ಇರದೇ ಕಂದಾಯ ಉಪ-ವಿಭಾಗಕ್ಕೊಂದು ಇರುತ್ತವೆ. ಧಾರವಾಡ ಜಿಲ್ಲೆಯ ಈ ಉಪ ವಿಭಾಗಗಳ ಕಛೇರಿಗಳಿಗೆ ಮಂಜೂರಾದ ಹುದ್ದೆಗಳು ಕೆಳಗಿನಂತಿರುತ್ತವೆ :

1)	ಧಾರವಾಡ ಉಪ-ವಿಭಾಗ	43
2)	ಗದಗ್ ಉಪ-ವಿಭಾಗ	35
3)	ಹಾವೇರಿ ಉಪ-ವಿಭಾಗ	41
4)	ಸವಣೂರು ಉಪ-ವಿಭಾಗ	29
	ಒಟ್ಟು	148

ಆ) ಪ್ರಥಮ ದರ್ಜೆ ಭೂಮಾಪಕರು 17

ಎರಡನೇ ದರ್ಜೆ ಭೂಮಾಪಕರು 98

ಒಟ್ಟು 115

ಇ) 33 ಎರಡನೇ ದರ್ಜೆ ಭೂ-ಮಾಪಕರುಗಳು ಮಾತ್ರ.

ಈ) ಖಾಲಿ ಇರುವ ಎರಡನೇ ದರ್ಜೆ ಭೂಮಾಪಕರುಗಳ ಹುದ್ದೆಗಳನ್ನು ನೇರ-ನೇಮಕಾತಿ ಮೂಲಕ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಧಾನಸಭಾ ಸದಸ್ಯರಾದ ಶ್ರೀ ದಿವಟರ ಮಲ್ಲಿಕಾರ್ಜುನ ಬಸಪ್ಪ-ಇವರು ಮಂಡಿಸಿರುವ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ - 1239ಕ್ಕೆ ಉತ್ತರಗಳು

ಅ) ರಾಜ್ಯದಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶಗಳಿಗೆ 1991-92ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ಜಿಲ್ಲಾವಾರು ವಿವರ ನೀಡುವುದು);

ಆ) ರಾಯಚೂರು ಜಿಲ್ಲೆಗೆ ನೀಡಿರುವ ಅನುದಾನವೆಷ್ಟು ಹಾಗೂ ಕೈಗೊಂಡ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಒಟ್ಟು 4,641.50 ಲಕ್ಷ ರೂಪಾಯಿಗಳು.

ಅತೀವೃಷ್ಟಿ, ಬರ ಪರಿಹಾರ ಹಾಗೂ ಆಕಸ್ಮಿಕ ಅಗ್ನಿ ಪರಿಹಾರ ಕಾರ್ಯಕ್ರಮಗಳಿಗಾಗಿ 4,641.50 ಲಕ್ಷ ರೂ.ಗಳನ್ನು ಈ ಕೆಳಕಂಡಂತೆ ಸರ್ಕಾರವು ಬಿಡುಗಡೆ ಮಾಡಿದೆ.

(ಲಕ್ಷ ರೂ.ಗಳಲ್ಲಿ)

ಜಿಲ್ಲೆಯ ಹೆಸರು	ಆಕಸ್ಮಿಕ ಅಗ್ನಿ ಪರಿಹಾರ	ಅತೀವೃಷ್ಟಿ ಪರಿಹಾರ	ಬರ ಪರಿಹಾರ	ಒಟ್ಟು
1. ಬೆಂಗಳೂರು (ನಗರ)	2.00	240.00	41.50	283.50
2. ಬೆಂಗಳೂರು (ಗ್ರಾ)	2.00	250.00	35.00	287.00
3. ಕೋಲಾರ	2.00	365.00	54.50	421.50
4. ತುಮಕೂರು	2.00	365.00	28.50	395.50
5. ಚಿತ್ರದುರ್ಗ	7.00	55.00	46.00	108.00
6. ಶಿವಮೊಗ್ಗ	2.00	175.00	21.50	198.50
7. ಮೈಸೂರು	2.00	200.00	42.50	244.50
8. ಮಂಡ್ಯ	2.00	135.00	37.50	164.50
9. ಚಿಕ್ಕಮಗಳೂರು	2.00	171.00	32.00	205.00
10. ಹಾಸನ	2.00	135.00	33.50	170.50
11. ಕೊಡಗು	1.00	75.00	11.00	87.00
12. ದಕ್ಷಿಣ ಕನ್ನಡ	1.00	115.00	28.00	144.00
13. ಗುಲ್ಬರ್ಗಾ	2.00	167.00	263.50	432.50
14. ಬೀದರ್	2.00	50.00	170.00	222.00
15. ರಾಯಚೂರು	2.00	100.00	144.50	246.50
16. ಬಳ್ಳಾರಿ	2.00	80.00	117.50	199.50
17. ಬೆಳಗಾಂ	2.00	112.00	72.20	186.20
18. ಬಿಜಾಪುರ	2.00	82.00	163.00	247.00
19. ಧಾರವಾಡ	5.00	142.50	71.30	218.80
20. ಉತ್ತರ ಕನ್ನಡ	1.00	110.00	30.50	141.50
21. ವಿಭಾಗಾಧಿಕಾರಿಗಳು	13.00	-	-	13.00
22. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	-	25.00	-	25.00
ಒಟ್ಟು	**58.00**	**3139.50**	**1444.00**	**4641.50**

ಆ) ಅತೀವೃಷ್ಟಿ ಬರ ಪರಿಹಾರ ಸೇರಿದಂತೆ ಒಟ್ಟು 246.50 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಅತೀವೃಷ್ಟಿಯಿಂದ ಹಾನಿಗೀಡಾದ ಸಾರ್ವಜನಿಕ ಆಸ್ತಿ-ಪಾಸ್ತಿ ದುರಸ್ತಿ ಜಾನುವಾರು ಹಾನಿ, ಬೆಳೆ ಹಾನಿ, ಮರಣಹೊಂದಿದವರ ವಾರಸುದಾರರಿಗೆ ಪರಿಹಾರ ನೀಡುವ ಸಲುವಾಗಿ ಬಿಡುಗಡೆ ಮಾಡಿದ ಹಣದ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

	ತಾಲ್ಲೂಕಿನ ಹೆಸರು	ಲಕ್ಷ ರೂ.ಗಳಲ್ಲಿ
1.	ರಾಯಚೂರು	9.34
2.	ಮಾನ್ವಿ	3.73
3.	ದೇವದುರ್ಗ	5.68
4.	ಲಿಂಗಸೂಗೂರು	9.84
5.	ಸಿಂಧನೂರು	4.98
6.	ಕುಷ್ಟಗಿ	4.30
7.	ಕೊಪ್ಪಳ	3.05
8.	ಗಂಗಾವತಿ	13.10
9.	ಯಲಬುರ್ಗ	6.87
10.	ಅಭಿಯಂತರರು, ಲೋಕೋಪಯೋಗಿ ಇಲಾಖೆ	10.00

ಅದಲ್ಲದೆ. ಈ ಕೆಳಕಂಡಂತೆ ಹಣವನ್ನು ಹಾನಿಗೀಡಾದ ಸಾರ್ವಜನಿಕ ಆಸ್ತಿ-ಪಾಸ್ತಿಗಳ ದುರಸ್ಥಿಗಾಗಿ ವಿತರಿಸಲಾಗಿದೆ :

1.	ಸಹಾಯಕ ಆಯುಕ್ತರು, ಕೊಪ್ಪಳ	3.00 ಲಕ್ಷ
2.	ಸಹಾಯಕ ಆಯುಕ್ತರು, ರಾಯಚೂರು	3.00 ಲಕ್ಷ
3.	ಸಹಾಯಕ ಆಯುಕ್ತರು, ಲಿಂಗಸೂಗೂರು	3.00 ಲಕ್ಷ
4.	ರಾಯಚೂರು ಜಿಲ್ಲೆಯ ನಗರ ಸಭೆಗಳಿಗೆ	6.25 ಲಕ್ಷ

ಶ್ರೀಕ್ಷೇತ್ರ ಸೋಗಾಲದಲ್ಲಿ ಹಣ್ಣು ಮತ್ತು ಔಷಧ ಗಿಡಗಳನ್ನು ನೆಡುವುದು.

260 (1589) ಶ್ರೀ ಶಿವಾನಂದ್ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಪೈಕಿ ಶ್ರೀಕ್ಷೇತ್ರ ಸೊಗಾಲದಲ್ಲಿ ಅರಣ್ಯ ಬೆಳೆಸಲು ಸಾಕಷ್ಟು ಸ್ಥಳವಿದ್ದು ಅಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಲು ಹಾಗೂ ಔಷಧ ಗಿಡಗಳನ್ನು ಬೆಳೆಸಲು ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ ;

ಆ) ಹಾಗಿದ್ದಲ್ಲಿ, ಅಲ್ಲಿ ಹಣ್ಣಿನ ಗಿಡಗಳನ್ನು ಹಾಗೂ ಔಷದ ಗಿಡಗಳನ್ನು ಬೆಳೆಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಅತೀಕ್ರಮಣ ತಪ್ಪಿಸುವ ಸಲುವಾಗಿ ಶ್ರೀಕ್ಷೇತ್ರ ಸೊಗಲದಲ್ಲಿ ಅರಣ್ಯ ಭೂಮಿ ಕಾಪಾಡಲು ತಂತಿಯ ಬೇಲಿಯನ್ನು ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಕ್ಷೇತ್ರದ ಸದರಿ ಭೂಮಿಯು ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ಇಲ್ಲದಿರುವುದರಿಂದ ಈ ಇಲಾಖೆಯ ವತಿಯಿಂದ ಬೇಲಿ ಹಾಕುವ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ. ತಾ : 12-3-92ರಂದು ಲಿಖಿತಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 27 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ : 1322, 1673. 1323, 1367, 1424, 1427. 1588, 92. 91, 1716. 1585 ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 16 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ವಿವಿಧ ಬಾಬುಗಳಲ್ಲಿ ಖರ್ಚು ಮಾಡಿದ ಹಣ

985 (1235) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 1990-91 ಹಾಗೂ 1991-92ನೇ ಸಾಲಿನಿಂದ ಇಲ್ಲಿಯವರೆಗೆ ಅರಣ್ಯ ಇಲಾಖೆಯವರು ವಿವಿಧ ಬಾಬುಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು;

ಆ) 1990-91ನೇ ಸಾಲಿನಲ್ಲಿ ಈ ಅರಣ್ಯದಿಂದ ಬಂದಿರುವ ಆದಾಯವೆಷ್ಟು?

ಇ) 1990-91ನೇ ಹಾಗೂ 1991-92ನೇ ಸಾಲಿನಲ್ಲಿ ಅರಣ್ಯ ಇಲಾಖೆಯವರು ಮಾಡಿರುವ ಒಟ್ಟು ನರ್ಸರಿಗಳೆಷ್ಟು;

ಈ) 1990-91ನೇ ಸಾಲಿನಲ್ಲಿ ಯಾವ ಅರಣ್ಯಗಳಲ್ಲಿ ಯಾವ ಯಾವ ಸರ್ವೆ ನಂಬರುಗಳಲ್ಲಿ ಸಸಿಗಳನ್ನು ನೆಡಲಾಗಿದೆ;

ಉ) ಈಗ ಅವು ಯಾವ ಹಂತದಲ್ಲಿ ಬೆಳೆದಿದೇ?

ಊ) ವಿವಿಧ ನರ್ಸರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಹಾಗೂ ಪುರುಷ ಕೂಲಿಕಾರರ ಸಂಖ್ಯೆ ಎಷ್ಟು: ಅವರ ಹೆಸರುಗಳೇನು ಹಾಗೂ ಅವರಿಗೆ ಕೊಡುವ ದಿನಗೂಲಿ ಎಷ್ಟು?

ಋ) ಈ ಭಾಗದ ಪರಿವೀಕ್ಷಕರು (ಪ್ರೇರಕರು) ಎಷ್ಟು ಮಂದಿ ಇದ್ದಾರೆ? ಅವರ ಕೇಂದ್ರ ಸ್ಥಳಗಳು ಯಾವುವು. ಅವರಿಗೆ ನೀಡುವ ಸಂಭಾವನೆ ಎಷ್ಟು, ಅವರುಗಳ ಹೆಸರೇನು?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) 1990-91 ಹಾಗೂ 1991-92ನೇ ಸಾಲಿನಿಂದ (1992 ಜನವರಿ) ಇಲ್ಲಿಯವರೆಗೆ ವಿವಿಧ ಯೋಜನೆಗಳಡಿಯಲ್ಲಿ ಖರ್ಚು ಮಾಡಿರುವ ಹಣದ ವಿವರ ಅನುಬಂಧದಲ್ಲಿ ವಿವರಿಸಲಾಗಿದೆ.

ಆ) 1990-91ನೇ ಸಾಲಿನಲ್ಲಿ ಆದಾಯ ಬರುವ ಸಾಧ್ಯತೇ ಇಲ್ಲ. 1991ನೇ ಸಾಲಿನಲ್ಲಿ ಈ ನೆಡುತೋಪುಗಳಿಂದ ಆದಾಯ ನಿರೀಕ್ಷಿಸಬಹುದು.

ಇ) 1990-91ನೇ ಸಾಲಿನಲ್ಲಿ 4 ಇಲಾಖಾ ನರ್ಸರಿಗಳು ಮತ್ತು 4 ವಿಕೇಂದ್ರಿಕೃತ ನರ್ಸರಿಗಳು ಮಾಡಲ್ಪಟ್ಟಿವೆ. 1991-92ನೇ ಸಾಲಿನಲ್ಲಿ 3 ಸಸ್ಯ ಕ್ಷೇತ್ರಗಳು ಮಾಡಲ್ಪಟ್ಟಿವೆ.

ಈ) 1990-91ನೇ ಸಾಲಿನಲ್ಲಿ ಈ ಕೆಳಕಂಡ ಸರ್ಕಾರಿ ಭೂಮಿಯ ಸರ್ವೆ ನಂಬರುಗಳಲ್ಲಿ ಸಸಿಗಳನ್ನು ನೆಟ್ಟಿದ್ದಾರೆ-

1)	ಕೂಡ್ಲ ಬ್ಲಾಕ್ ಸರ್ವೆ ನಂ.	721
2)	ಕೂಡ್ಲ ಬ್ಲಾಕ್ ಸ.ನಂ.	722
3)	ಕಿಸ್ಕಾಪುರ ಸ.ನಂ.	67
4)	ಕಾನಾಗಡ್ಡಾ ಬ್ಲಾಕ್ ಸ.ನಂ. (ಬ್ಲಾಕ್ 1,2,3)	281

ಖಾಸಗಿಯವರ ಜಮೀನಿನಲ್ಲಿ ಇಲಾಖಾ ನರ್ಸರಿಗಳಿಂದ ಸಸಿಗಳನ್ನು ತೆಗೆದುಕೊಂಡು ಹಲವಾರು ಕಡೆ ಜಮೀನಿನ ಮಾಲೀಕರು ಸಸಿಗಳನ್ನು ನೆಟ್ಟಿರುತ್ತಾರೆ.

ಉ) ಇಲಾಖಾ ವತಿಯಿಂದ ನಿರ್ಮಿಸಿರುವ ನೆಡುತೋಪುಗಳು ಸಮರ್ಪಕವಾಗಿ ಬೆಳೆಯುತ್ತಿವೆ. ಶೇಕಡಾ 90 ರಿಂದ 95 ರವರೆಗೆ ಬದುಕಿ ಉಳಿದುಕೊಂಡು ಸಸಿಗಳು ಬೆಳೆಯುತ್ತಿವೆ.

ಊ) ಈಗ ಹಾಲಿ ಇಲಾಖಾ ನರ್ಸರಿಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಹಾಗೂ ಪುರುಷ ಕೂಲಿಕಾರ ಸಂಖ್ಯೆ ಕ್ರಮವಾಗಿ 6 ಮತ್ತು 1 ಇದ್ದು ಅವರ ಹೆಸರುಗಳು :

1) ಶ್ರೀಮತಿ ಮಾಣಿಕಮ್ಮ
2) ಶ್ರೀಮತಿ ಹುಸೇನಬಿ
3) ಶ್ರೀಮತಿ ಮೊಗಲಮ್ಮ
4) ಶ್ರೀಮತಿ ಅನಂತಮ್ಮ
5) ಶ್ರೀಮತಿ ಭೀಮವ್ವ
6) ಶ್ರೀಮತಿ ಸುಶೀಲಮ್ಮ
7) ಶ್ರೀ ನರಸಪ್ಪ

ಅವರಿಗೆ ಕೊಡುವ ದಿನಗೂಲಿ, ಡಿಪಿಎಪಿ ಯೋಜನೆಯಡಿಯಲ್ಲಿ ದಿನಕ್ಕೆ ರೂ. 16-00 ಮತ್ತು ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಡಿಯಲಿ ದಿನಕ್ಕೆ ರೂ. 18.20.

ಋ) ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಪ್ರೇರಕರು ಇರುವುದಿಲ್ಲ.

ಅನುಬಂಧ

	ವಿಶ್ವಬ್ಯಾಂಕ್		ಡಿಪಿಎಪಿ(ಕೆ)		ಜೆ.ಆರ್.ವೈ.		ಉರುವಲು ಕಟ್ಟಿಗೆ ಯೋಜನೆ		ಎಸ್‌ಸಿಪಿ	
	90-91	91-92	90-91	91-92	90-91	91-92	90-91	91-92	90-91	91-92
1. ಸಿಬ್ಬಂದಿ ವೇತನ	0.340	0.179	-	-	-	-	-	-	-	-
2. ನೆಲನು ತೋಪು ಪೋಷಣೆ	0.415	0.344	1.172	1.388	0.864	0.420	0.334	-	-	-
3. ನೆಡು ತೋಪು ಬೆಳೆಸುವುದು	0.622	0.695	0.968	0.723	-	0.207	0.270	-	-	0.013
4. ಸಸ್ಯ ಕ್ಷೇತ್ರ ಪೋಷಣೆ ಮತ್ತು ಬೆಳೆಸುವುದು	0.503	0.499	0.734	0.31	-	-	-	-	-	-
5. ಮುಂಗಡ (ತಗ್ಗು) ಕೆಲಸ	0.489	-	0.894	0.301	0.906	-	-	-	0.035	-
6. ಮಡಿಗಳಲ್ಲಿ ಸಸಿಗಳನ್ನು ಬೆಳೆಸುವುದು	0.127	0.024	0.076	0.026	-	-	-	-	-	-
7. ವಾಹನ ಖರ್ಚು	0.086	0.029	-	-	-	-	-	-	-	-
8. ಕಛೇರಿ ಖರ್ಚು	0.006	0.004	-	-	-	-	-	-	-	-
ಒಟ್ಟು	2.588	1.774	3.844	2.748	1.77	0.627	0.604	-	0.035	0.013

ದೊಡ್ಡೇರಿ ಹೋಬಳಿಯಲ್ಲಿ ಹರಿಜನರಿಗೆ ಖಾತೆ ಪಹಣಿ ಮಾಡುವ ಬಗ್ಗೆ.

989 (1325) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಕೊಟಗಾರ್ಲಹಳ್ಳಿ ರಿ.ಸ.ನಂ. 264 ರಲ್ಲಿ ಎಸ್‌ಪಿಎಲ್:ಎನ್‌ಡಿಎಂಜಿಆರ್:32:72-73. ದಿನಾಂಕ 30.12.1972 ರಂತೆ 3 ಜನರಿಗೆ ತಲಾ 4 ಎಕರೆ ಜಮೀನು ಮಂಜೂರಾತಿ ಪತ್ರ ನೀಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಯಾರು ಯಾರಿಗೆ ನೀಡಲಾಗಿದೆ. ಮಂಜೂರಾತಿ ಪಡೆದವರು ಸರ್ಕಾರಕ್ಕೆ ಖಾತೆ ಪಹಣಿ ಬಗ್ಗೆ ಅರ್ಜಿ ಸಲ್ಲಿಸುತ್ತಿರುವುದು ನಿಜವಲ್ಲವೆ;

ಇ) ಇವರುಗಳಿಗೆ ಖಾತೆ ಪಹಣಿ ನೀಡದೇ ಇರುವುದಕ್ಕೆ ಕಾರಣವೇನು?

ಈ) ಈಗಲಾದರೂ ಇವರಿಗೆ ಖಾತೆ ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ಹೌದು : ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಕೊಟಗಾರ್ಲಹಳ್ಳಿ ಗ್ರಾಮದ ರಿ.ಸ.ನಂ. 264ರಲ್ಲಿ 3 ಜನರಿಗೆ ತಲಾ 4-00 ಎಕರೆಯಂತೆ ಜಮಾನು ಮಂಜೂರಾತಿ ನೀಡಿರುವುದು ನಿಜವಾಗಿರುತ್ತದೆ.

ಆ) ಈ ಕೆಳಕಂಡ 3 ಜನರಿಗೆ ಮಂಜೂರಾತಿ ನೀಡಿದೆ :-

1)	ಶ್ರೀ ಹನುಮಂತಪ್ಪ ಬಿನ್ ಟಿ. ನಾಗಪ್ಪ	4.00 ಎಕರೆಗಳು
2)	ಶ್ರೀ ಮುದ್ದಪ್ಪ ಬಿನ್ ದೊಡ್ಡಹನುಮಂತ್ರಪ್ಪ	4.00 ಎಕರೆಗಳು
3)	ಶ್ರೀ ಹನುಮಂತಪ್ಪ ಬಿನ್ ನಾಗಪ್ಪ	4.00 ಎಕರೆಗಳು

ಹೌದು; ಮಂಜೂರಿದಾರರು ಖಾತೆ ಮತ್ತು ಪಹಣಿಗಳಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಇ) ಮಂಜೂರಿದಾರರಿಗೆ ಖಾತೆ ಮತ್ತು ಪಹಣಿಗಳನ್ನು ನೀಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈ) ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಇದು ಉದ್ಭವಿಸುವುದಿಲ್ಲ.

ಆರಾಧನಾ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆಗೆ ಖರ್ಚು ಮಾಡಿದ ಹಣ

991 (1683) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

1. "ಆರಾಧನಾ" ಯೋಜನೆಗೆ ಶಿವಮೊಗ್ಗ ಜಿಲ್ಲೆಗೆ ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?
2. ಈ ಹಣ ಜಿಲ್ಲೆಯಲ್ಲಿ ಈಗ ಉಪಯೋಗವಾಗಿದೇಯೆ? (ತಾಲ್ಲೂಕುವಾರು ವಿವರ ನೀಡುವುದು)
3. 1992-93ಕ್ಕೆ ಶಿವಮೊಗ್ಗ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ರಾಜಾ ಅಮರೇಶ ನಾಯಕ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

1. ರೂ. 22,74,850-00
2. ಹೌದು.

ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ತಾಲ್ಲೂಕು	ಅರ್ಜಿಗಳ ಸಂಖ್ಯೆ	ಹಂಚಿಕೆ ಮಾಡಿದ ಮೊತ್ತ	
1.	ಸೊರಬ	52	ರೂ. 1,82,000-00	89,265-00
2.	ಶಿವಮೊಗ್ಗ	16	ರೂ. 1,50,000-00	89,265-00
3.	ಭದ್ರಾವತಿ	9	ರೂ. 1,50,000-00	89,265-00
4.	ಹೊನ್ನಾಳಿ	7	ರೂ. 1,50,000-00	89,265-00
5.	ತೀರ್ಥಹಳ್ಳಿ	50	ರೂ. 1,50,000-00	89,265-00
6.	ಚೆನ್ನಗಿರಿ	8	ರೂ. 1,50,000-00	89,265-00
7.	ಸಾಗರ	1	ರೂ. 1,50,000-00	89,265-00
8.	ಶಿಕಾರಿಪುರ	33	ರೂ. 1,50,000-00	89,265-00
9.	ಹೊಸನಗರ	2	ರೂ. 1,50,000-00	89,265-00
		178	ಒಟ್ಟು ರೂ. 22,74,850-00	

3. ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಅಳವಡಿಸಿದ ಜಮೀನಿನ ವಿಸ್ತೀರ್ಣ

993-(1426) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1985 ರಿಂದ 1992ರ ವರೆಗೆ ಸಾಮಾಜಿಕ ಅರಣ್ಯದಡಿಯಲ್ಲಿ ಬರುವ ಒಟ್ಟು ಕ್ಷೇತ್ರ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಇದಕ್ಕಾಗಿ ತಗುಲಿದ ವೆಚ್ಚವೆಷ್ಟು?

ಇ) ಈ ಸಾಮಾಜಿಕ ಅರಣ್ಯ ಯೋಜನೆಯನ್ನು ಜಾರಿಗೊಳಿಸಲು ಬೇಕಾಗಿರುವ ಹಣದ ಮೂಲ ಯಾವುದು?

ಶ್ರೀ ಈ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು) :

ಅ) 31,765 ಹೆಕ್ಟೇರ್ (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ)

ಆ) ರೂ. 1189.36 ಲಕ್ಷಗಳು

ಇ) ವಿಶ್ವಬ್ಯಾಂಕ್ ಹಾಗೂ ಯುನೈಟೆಡ್ ಕಿಂಗ್‌ಡಂನ ಓ.ಡಿ.ಎ.

ANNEXURE-A

Sl. No.	Name of the District	Total Extent (in ha. from 1985 to Jan. 92)
1.	Bangalore (Rural)	1471
2.	Bangalore (Urban)	454
3.	Tumkur	2831.5
4.	Kolar	2362.5
5.	Mysore	1613.4
6.	Mandya	1048
7.	Hassan	2024
8.	Dakshina Kannada	255.5
9.	Kodagu	216
10.	Belgaum	2403.5
11.	Dharwad	2018.5
12.	Shimoga	1292.5
13.	Chickmagalur	1065
14.	Gulbarga	1638.45
15.	Bijapur	2218.5
16.	Bidar	1304.2
17.	Bellary	1472.5
18.	Raichur	2349
19.	Chitradurga	2649.2
20.	Uttara Kannada	1078.22
	Total	**31765.47**

ರಾಜ್ಯದ ಭೂಕಂದಾಯ

995 (1428) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಒಟ್ಟು ಭೂಕಂದಾಯವೆಷ್ಟು?

ಆ) ಸರ್ಕಾರವು ಭೂ ಕಂದಾಯವನ್ನು ಖಾಯಂ ಆಗಿ ಮನ್ನಾ ಮಾಡುವುದೇ?

ಇ) ಹಾಗಾದರೆ ಮನ್ನಾ ಮಾಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ರಾಜ್ಯದ ಒಟ್ಟು ಭೂ ಕಂದಾಯವು ವರ್ಷಕ್ಕೆ ರೂ. 9.75 ಕೋಟಿಗಳು ಇರುತ್ತದೆ.

ಆ) ಇಲ್ಲಾ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಹಾಗೂ ಪಶು ಆಸ್ಪತ್ರೆಗಳಲ್ಲಿರುವ ಹುದ್ದೆಗಳ ಭರ್ತಿ

996 (1429) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಹಾಗೂ ಆಸ್ಪತ್ರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ವಿವಿಧ ವರ್ಗದ ಹುದ್ದೆಗಳು ಎಷ್ಟು ಖಾಲಿ ಇದೆ;

ಇ) ಹಾಗಿದ್ದಲ್ಲಿ ಇದನ್ನು ತುಂಬಲು ತೆಗೆದುಕೊಂಡಿರುವ ಕ್ರಮವೇನು; ಯಾವಾಗ ತುಂಬಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು) :

ಅ) 1143 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ದರ್ಜೆ 'ಎ' 17

ದರ್ಜೆ 'ಬಿ' 80

ದರ್ಜೆ 'ಸಿ' 963

ದರ್ಜೆ 'ಡಿ' 695

ಇ) ದರ್ಜೆ 'ಎ' : ಇಲಾಖಾ ಬಡ್ತಿ ಸಮಿತಿಯು ಖಾಲಿ ಇರುವ ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ.

ದರ್ಜೆ 'ಬಿ' : 50 ಪಶುವೈದ್ಯ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಲೋಕ ಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ಇನ್ನುಳಿದ 30 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಾವಳಿ ಮೇರೆಗೆ ತುಂಬಲು ಕಾದಿರಿಸಲಾಗಿದೆ.

ದರ್ಜೆ 'ಸಿ' : ಇತರೆ ಇಲಾಖೆಯಲ್ಲಿ ಎರವಲು ಸೇವೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರನ್ನು ವಾಪಸ್ಸು ಪಡೆದು ಖಾಲಿ ಇರುವ ಜಾಗಗಳಲ್ಲಿ ತುಂಬಲಾಗುತ್ತಿದೆ. ಅಲ್ಲದೆ ಅನುಕಂಪಾರ್ಥದ ಆಧಾರದ ಮೇಲೆ ಸಹ ನೇಮಕ ಮಾಡಲಾಗುತ್ತಿದೆ.

ಇಲಾಖಾ ನೇಮಕಾತಿ ಸಮಿತಿಯ ಮುಖಾಂತರ ತರಬೇತಿ ಹೊಂದಿದ ಪಶುವೈದ್ಯ ಪರೀಕ್ಷಕರು ಮತ್ತು ಪಶುವೈದ್ಯ ಸಹಾಯಕರನ್ನು ಖಾಲಿ ಹುದ್ದೆಗೆ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ದರ್ಜೆ 'ಡಿ' : ಅನುಕಂಪಾರ್ಥ ಆಧಾರದ ಮೇಲೆ, ದಿನಗೂಲಿ ನೌಕರರಿಂದ ಹಾಗೂ ಮಾಸಿಕ ವೇತನ ಸಿಬ್ಬಂದಿಗಳನ್ನು ಈ ಖಾಲಿ ಹುದ್ದೆಗಳಲ್ಲಿ ತುಂಬಲಾಗುವುದು.

ಈ ಮೇಲ್ಕಂಡ ಎಲ್ಲಾ ದರ್ಜೆಯ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1429ಕ್ಕೆ ಅನುಬಂಧ

ಕ್ರ.ಸಂ.	ಜಿಲ್ಲೆ	ಪಶು ಆಸ್ಪತ್ರೆ	ಪ್ರಾಥಮಿಕ ಪಶುಚಿಕಿತ್ಸಾಲಯ
1)	ಬೆಂಗಳೂರು ನಗರ	7	14
2)	ಬೆಂಗಳೂರು ಗ್ರಾಮಾಂತರ	8	37
3)	ಚಿತ್ರದುರ್ಗ	9	63
4)	ಕೋಲಾರ	13	48
5)	ತುಮಕೂರು	10	58
6)	ಶಿವಮೊಗ್ಗ	9	68
7)	ಮೈಸೂರು	13	69
8)	ಹಾಸನ	8	53
9)	ಚಿಕ್ಕಮಗಳೂರು	7	36
10)	ದಕ್ಷಿಣ ಕನ್ನಡ	9	66
11)	ಕೊಡಗು	5	17
12)	ಮಂಡ್ಯ	7	26
13)	ಗುಲ್ಬರ್ಗಾ	10	73
14)	ಬಳ್ಳಾರಿ	8	39
15)	ಬೀದರ್	5	18
16)	ರಾಯಚೂರು	9	35
17)	ಬೆಳಗಾಂ	11	74
18)	ಬಿಜಾಪುರ	11	59
19)	ಧಾರವಾಡ	18	64
20)	ಉತ್ತರ ಕನ್ನಡ	10	39
	ಒಟ್ಟು	187	956

ಹುಣಸೂರು ತಾಲ್ಲೂಕಿನಲ್ಲಿ ಹೊಸದಾಗಿ ಎರಡು ಹೋಬಳಿಗಳನ್ನು ರಚಿಸುವ ಬಗ್ಗೆ

997 (1489) ಶ್ರೀ ಚಿಕ್ಕಮಾದು (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ 2:3ನೇ ಭಾಗ ಅರಣ್ಯ ಪ್ರದೇಶವಾಗಿದ್ದು, ಈಗ ಸಾಗುವಳಿಗೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರತ್ನಪುರ ಮತ್ತು ಚಿಲಕುಂದ ಗ್ರಾಮಗಳ ಕೇಂದ್ರ ಸ್ಥಾನದೊಂದಿಗೆ ಈಗಿರುವ 4 ಹೋಬಳಿಗಳ ಜೊತೆಗೆ ಇನ್ನೆರಡು ಹೋಬಳಿಗಳನ್ನು ಹೊಸದಾಗಿ ರಚಿಸುವ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೇ?

ಇ) ಹಾಗಿದ್ದಲ್ಲಿ. ಪ್ರಸ್ತಾವನೆ ಯಾವ ಹಂತದಲ್ಲಿದೆ. ತಾಲ್ಲೂಕಿನ ಜನತೆಯ ಹಿತದೃಷ್ಟಿಯಿಂದ ಯಾವಾಗ ಹೊಸದಾಗಿ ಎರಡು ಹೋಬಳಿಗಳನ್ನು ರಚಿಸಲಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲಾ.

ಆ) ಇಲ್ಲಾ.

ಇ) ಉದ್ಭವಿಸುವುದಿಲ್ಲ.

ಸಂಗೊಳ್ಳಿ ಗ್ರಾಮದಲ್ಲಿ ಶೂರ ಸಂಗೊಳ್ಳಿ ರಾಯಣ್ಣ ಗಾರ್ಡನ್ ಹತ್ತಿರ ಹೂದೋಟ.

999 (1590) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಗೊಳ್ಳಿ ರಾಯಣ್ಣನ ಮೂರ್ತಿಯ ಸುತ್ತಲೂ ಹೂದೋಟವನ್ನು ಮಾಡಲು ಸರ್ಕಾರದವರು ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಯಾವ ಯಾವ ಕ್ರಮ ಕೈಗೊಂಡಿರುವರು?

ಆ) ಈ ರಾಯಣ್ಣನ ಮೂರ್ತಿಯ ಸುತ್ತಲೂ ಹೂದೋಟ ಮಾಡುವುದು ಅತಿ ಅವಶ್ಯವಿದ್ದು ಕೂಡಲೇ ಹೂದೋಟ ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಸಂಗೊಳ್ಳಿ ಗ್ರಾಮದಲ್ಲಿನ ಶೂರ ಸಂಗೊಳ್ಳಿ ರಾಯಣ್ಣನ ಪ್ರತಿಮೆಯ ಹತ್ತಿರ ಸುತ್ತಲೂ ಇರುವ ಜಾಗವು ತೋಟಗಾರಿಕೆ ಇಲಾಖೆಗೆ ಸೇರಿರುವುದಿಲ್ಲ. ಈ ಬಗ್ಗೆ ಸ್ಥಳೀಯ ಸಂಸ್ಥೆಯು ಕ್ರಮಕೈಗೊಂಡಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದು.

ಆ) ಮೇಲಿನಂತೆ.

Air Pollution due to Burning of Dead Bodies in Harishchandra Ghat

1003 (1657) Sri K. Lakkanna (Rajajinagar) : Hon'ble Minister for Science & Technology and Ecology & Environment be pleased to state?

a) Whether the Government is aware that the air is polluted and foul smell permeates the area due to burning of dead bodies is Harichandra ghat Crematorium.

b) Is so, the steps taken by the Government to central air pollution and foul smell which is caused due to burning of dead bodies in Harichandraghat, Crematorium.

Sri B. Basavalingappa (Minister for Science & Technology and Ecology & Environment) :

a) Yes.

b) In view of the complaints from the local people, the Karnataka State Pollution Control Board has asked the Commissioner, Bangalore City Corporation vide letter dated : 26-6-90 to provide proper air pollution control equipments like scrubber and chimney of minimum 10 metre height to the Harichndraghat Crematorium at Srirampuram. He was also reminded on 22-3-91 by the Karnataka State Pollution Control Board.

Since there was no reply from the Commissioner, a Show cause Notice was issued under section 21 of Air (Prevention & Control of Pollution) Act, 1981 and under section 25/26 of the Water (Prevention and Control of Pollution) Act 1974 for initiating legal action. The reply to the Show Cause Notice is still awaited.

ಪಶು ಚಿಕಿತ್ಸಾಲಯಗಳ ಬಗ್ಗೆ

1004 (1675) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91 ಮತ್ತು 1991-92ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಪಶುಚಿಕಿತ್ಸಾಲಯಗಳನ್ನು ತೆರೆಯಲಾಗಿದೆ ಹಾಗೂ ಅವುಗಳು ಯಾವುವು ;

ಆ) 1990-91ನೇ ಸಾಲಿನಲ್ಲಿ ಮಂಜೂರಾದ ಧಾರವಾಡ ಜಿಲ್ಲೆಯ ಪಶುಚಿಕಿತ್ಸಾಲಯಗಳಿಗೆ ವೈದ್ಯರನ್ನು ನೇಮಕಾತಿ ಮಾಡಲಾಗಿದೆಯೇ?

ಇ) ಇಲ್ಲವಾದರೆ ಇನ್ನು ಎಷ್ಟು ಅವಧಿಯಲ್ಲಿ ವೈದ್ಯರ ನೇಮಕಾತಿ ಮಾಡಿ ಪಶುಚಿಕಿತ್ಸಾಲಯ ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವಾ ಸಚಿವರು) :

	1990-91	1991-92
ಅ) 1) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	200	225
2) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಉನ್ನತೀಕರಣ	61	80

(ಮಾಹಿತಿಯನ್ನು ಲಗತ್ತಿಸಲಾಗಿದೆ)

ಕರ್ನಾಟಕ ರಾಜ್ಯ ಪತ್ರಾಗಾರ, ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು, ದಿನಾಂಕ

ಆ) ಹೌದು.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ 1990-91ನೇ ಸಾಲಿನಲ್ಲಿ ಸರ್ಕಾರಿ ಆದೇಶದ ಸಂಖ್ಯೆ: ಎಹೆಚ್‌ಎಫ್‌ಎಫ್: 63: ವಿಎಹೆಚ್: 91 ದಿನಾಂಕ 22-3-91 ಮತ್ತು ಎಹೆಚ್‌ಎಫ್‌ಎಫ್: 63 : ವಿಎಹೆಚ್ : 90 ದಿನಾಂಕ 4-7-91ರಲ್ಲಿ ಮಂಜೂರಾದ : ಉನ್ನತೀಕರಿಸಲಾದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಜಿಲ್ಲಾವಾರು ಮಾಹಿತಿ :

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಪ್ರಾರಂಭ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಉನ್ನತೀಕರಣ	ಷರಾ
1	2	3	4	5	6
1)	ಬೆಂಗಳೂರು ನಗರ	ಬೆಂಗಳೂರು ಉತ್ತರ	ಕಮಲಾನಗರ	ಶಿವಕೋಟೆ	
			ಕೊಡಿಗೆಹಳ್ಳಿ	ಹೆಸರಘಟ್ಟ	
			ಅರಕೆರೆ		
		ಬೆಂಗಳೂರು ದಕ್ಷಿಣ	ಕೆ. ನಾರಾಯಣಪುರ	ಪುತ್ತೂರು	
			ಅಗದೂರು		
			ಗರುಡಾಚಾರ್ ಪಾಳ್ಯ		
		ಆನೇಕಲ್	ಶಿವನಹಳ್ಳಿ		
2)	ಬೆಂಗಳೂರು ಗ್ರಾಮಾಂತರ	ಮಾಗಡಿ	ಹುಲ್ಲೇನಹಳ್ಳಿ	ವಿ.ಜಿ. ದೊಡ್ಡಿ	
		ದೊಡ್ಡಬಳ್ಳಾಪುರ	ಇಸ್ತೂರು		
			ಸಾಸಲು		
		ದೇವನಹಳ್ಳಿ	ಕೊಯಿರ		
		ಕನಕಪುರ	ಬಿಜ್ಜಹಳ್ಳಿ		
			ದೊಡ್ಡಆಲಹಳಿ		
			ದೊಡ್ಡಮರಳವಾಡಿ		
		ಹೊಸಕೋಟೆ	ಬೇಗೂರು	ಜಡಿಗೇನಹಳ್ಳಿ	
		ಚನ್ನಪಟ್ಟಣ	ಅಳಸಂದ್ರ		
		ರಾಮನಗರ	-	ಲಕ್ಷ್ಮೀಪುರ	
3)	ಶಿವಮೊಗ್ಗ	ಸೊರಬ	ತವನಂದಿ		
			ಗುಡವಿ		
			ಇಂಡಿಹಳ್ಳಿ		
			ಹರೀಶಿ		
		ಚನ್ನಗಿರಿ	ಕೆರೆಬಿಳಚಿ		
			ಗೊಪ್ಪೇನಹಳ್ಳಿ		
			ಚನ್ನೇಶ್ವರಪುರ		
			ಜೋಳದಾಳು		

1	2	3	4	5	6
		ಶಿಕಾರಿಪುರ	ಸುರುಗೇಹಳ್ಳಿ		
			ಹಾರೋಗೊಪ್ಪ		
		ಭದ್ರಾವತಿ	ಅರೆಬಿಳಚಿ		
			ಅರಳೀಹಳ್ಳಿ		
		ಚನ್ನಗಿರಿ	ಕತ್ತಲಗೆರೆ		
		ಹೊನ್ನಾಳಿ	ಕುಂಬಳೂರು		
			ಚಟ್ಟನಹಳ್ಳಿ		
			ಕೆಂಚಿಕೊಪ್ಪ		
		ಹೊಸನಗರ	ಕೆ.ಬಿ. ಸರ್ಕಲ್		
		ಸಾಗರ	ಮರಡಿಹಳ್ಳಿ		
		ತೀರ್ಥಹಳ್ಳಿ	-	ಯಡೂರು	
				ಮೇಗರವಳ್ಳಿ	
				ನಾಲೂರು	
4)	ಚಿತ್ರದುರ್ಗ	ದಾವಣಗೆರೆ	ಅಗಸನಕಟ್ಟೆ		
			ಗಂಗನಕಟ್ಟೆ		
			ಕುಂದವಾಡ		
			ಅರಸಾಪುರ		
			ಕುಕ್ಕುವಾಡ		
		ಚಿತ್ರದುರ್ಗ	ಚಿಕ್ಕೇನಹಳ್ಳಿ		
			ಕುರುಬರಹಳ್ಳಿ		
			ಬಹದ್ದೂರ್ ಘಟ್ಟ		
		ಹಿರಿಯೂರು	ದಿಲ್ಲದಕೆರೆ		
			ಖಂಡೇನಹಳ್ಳಿ		
		ಚಳ್ಳಕೆರೆ	ಓಬಳಿಪುರ		
		ಜಗಳೂರು	ಹೊಸಕೆರೆ		
5)	ಕೋಲಾರ	ಬಾಗೇಪಲ್ಲಿ	ಮಿಟ್ಟೇಮರಿ		
		ಶಿಡ್ಲಘಟ್ಟ	ಮಳ್ಳೂರು		
			ಇ. ತಿಮ್ಮಸಂದ್ರ		
			ಪಲಿಚರ್ಲು		
		ಚಿಂತಾಮಣಿ	ಕೈವಾರ		
		ಶ್ರೀನಿವಾಸಪುರ	ಅಡ್ಡಗಲ್		
		ಮುಳುಬಾಗಿಲು	ಮಲ್ಲನಾಯ್ಕನಹಳ್ಳಿ		
6)	ತುಮಕೂರು	ತುರುವೆಕೆರೆ	ಅಂಚಿಹಳ್ಳಿ		
		ಚಿಕ್ಕನಾಯಕನಹಳ್ಳಿ	ಗೋಬಿಹಳ್ಳಿ	ಹಂದನಕೆರೆ	
			ದಬ್ಬಕುಂಟೆ		
			ಬರಗೂರು		
		ತುಮಕೂರು	ಊರುಕೆರೆ	ಬೆಳ್ಳಾವಿ	
				ಹೊನ್ನುಡಿಕೆ	
		ಮಧುಗಿರಿ	ರಬ್ಬೆಘಟ್ಟ	ಐ.ಡಿ. ಹಳ್ಳಿ	
			ಕೈಮರ		

1	2	3	4	5	6
		ತಿಪಟೂರು	ಹಾಲುಕುರಿಕೆ	ಹೊನ್ನವಳ್ಳಿ	
		ಶಿರಾ	ಹುಯ್ಯಲುಮೊರೆ	ವೆಟ್ರನಾಯಕನಹಳ್ಳಿ	
		ಕುಣಿಗಲ್	ಕೊಡವತ್ತಿ	ತವರೆಕೆರೆ	
				ಉಜ್ಜನಿ	
		ಕೊರಟಗತ್ತಿ	ಅರಸಾಪುರ	ಕೊಳಾಲ	
		ಪಾವಗಡ	-	ರಂಗದಹಳ್ಳಿ	
7)	ಹಾಸನ	ಚನ್ನರಾಯಪಟ್ಟಣ	ನವಿಲೆ		
			ಕೊತ್ತನಘಟ್ಟ		
		ಅರಸಿಕೆರೆ	ಕರಗುಂದ	ದೊಡ್ಡಮೇಟಿಕುರ್ಕಿ	
			ಬ್ಯಾಡರಹಳ್ಳಿ		
			ಗೊಲ್ಲರಹಟ್ಟಿ		
			ಹಾರನಹಳ್ಳಿ		
			ಬಾಗೇವಾಳು		
		ಹಾಸನ	ಮಳಗೂಡು		
			ಕಂಚನಹಳ್ಳಿ		
			ಅಂಕಾಪುರ		
		ಹೊಳೆನರಸೀಪುರ	ಮಳಲಿ	ಹರಿಹರಪುರ	
			ದೊಡ್ಡಹಳ್ಳಿ		
			ಕುಂದೂರುಮಠ		
			ಅಗ್ರಹಾರಗೇಟ್		
		ಬೇಲೂರು	-	ಅರೇಹಳ್ಳಿ	
8)	ದಕ್ಷಿಣ ಕನ್ನಡ	ಉಡುಪಿ	ವರದೂರು		
			ಸಾಯಬರಕಟ್ಟೆ		
			ಸಾಸ್ತಾನ		
		ಕಾರ್ಕಳ	ಅಜೆಕಾರ್		
			ವಳ್ಳಿ		
		ಮಂಗಳೂರು	ದಾಮಂಬೂರು		
		ಸೂಳ್ಯ	ಕೊಲ್ಲಂಮೊಗಾರ		
			ಅರಂತೋಡು		
		ಪುತ್ತೂರು	ಶಿರಾಡಿ		
			ಬೆಳಂದೂರು		
			ನರಿಮೊಗರು		
		ಕುಂದಾಪುರ	ಅಮಾವಾಸಬೈಲು		
			ಹಳ್ಳಿಹೊಳೆ		
			ಅಂಪಾರು		
		ಬೆಳ್ತಂಗಡಿ	ಕಿಲ್ಲೂರು		
			ಕೊಕ್ಕಡ		
9)	ಉತ್ತರ ಕನ್ನಡ	ಸೂಪ	ಕುಂಬಾರವಾಡ		
		ಶಿರ್ಶಿ	ಮಾಳಂಚಿ		
			ದೇವನಹಳ್ಳಿ		

1	2	3	4	5	6
10)	ಬಿಜಾಪುರ	ಇಂಡಿ	ಸಾತಲಗಾಂವ್	ತಾಂಬಾ	
			ಇಂಚಿಗೇರಿಮಠ		
			ಮಸಲಿ		
			ಅರಖೇಡ್		
		ಬೀಳಗಿ	ದನ್ನೂರು		
			ಚಿಕ್ಕಾಲಗುಂಡಿ	ಕುಂದರಗಿ	
		ಸಿಂಧಗಿ	ಬಳಗನೂರು		
		ಜಮಖಂಡಿ	ಹಿಪ್ಪರಗಿ		
		ಹುನಗುಂದ	ಬೆಳಗಣಿ		
			ಜಂಜಲದಿನ್ನಿ		
		ಮುಧೋಳ	ಹುಲಗಲಿ		
		ಬಸವನಬಾಗೇವಾಡಿ	ಮುಳವಾಡ	ಮನಗೋಳಿ	
		ಬಾದಾಮಿ	ಅನವಾಳ	ಬೇಲೂರು ಜಾಲಹಾಳ	
11)	ಬೆಳಗಾಂ	ಚಿಕ್ಕೋಡಿ	ಕಾಗೇನೂಲು		
			ಚೀನಾಡಿ		
			ನೇಜ (ಶಿರಗಾಂವ್ ಮಂಡಲ)		
			ಕಾರದಗ		
		ರಾಮದುರ್ಗ	ಮುದೇನೂರು		
		ಖಾನಾಪುರ	ಕಣಕುಂಬಿ		
		ರಾಯಬಾಗ್	ಹಂದಿಕುಂದ		
		ಗೋಕಾಕ್	ದುರಗುಂಡಿ	ಕೌಜಲಗಿ	
			ಅವರಾದಿ		
			ಸಿಂದಿಕುರಬೇಟಿ		
		ಅಥಣಿ	ಶಂಕರಹಟ್ಟಿ		
		ಬೆಳಗಾಂ	ಬೆಳಗುಂದಿ		
		ಸೌಂದತ್ತಿ	ಸತ್ತಿಗೆರೆ	ಯಕ್ಕುಂಡಿ	
			ಕಗದಾಳ		
		ಬೈಲಹೊಂಗಳ	ನಾಗನೂರು		
			ಚಿಕ್ಕಬಾಗೇವಾಡಿ		
		ಬೆಳಗಾಂ ಉಪನಗರ	ಅನಗೋಳ		
		ಹುಕ್ಕೇರಿ	-	ಪಶ್ಚಾಪುರ	
12)	ಬೀದರ್	ಬಾಲ್ಕಿ	ಚಿಂಚೋಳಿ		
		ಔರದ್	ಬೆಳಕೋಣಿಚೌದ್ರಿ		
13)	ಗುಲ್ಬರ್ಗಾ	ಚಿಕಾಪುರ	ಹೋಣಗಾಂ		
			ಮುಗಳನಾಗಾವಿ		
			ಕದದರ್ಾಳ		
			ಕೊಡೆದೂತ		
		ಜೇವರ್ಗಿ	ಬೆಳುಂದಗಿ		
			ಬಿರಿಯಾಳ		
		ಚಿಂಚೋಳಿ	ಐನೋಳಿ		

1	2	3	4	5	6
		ಯಾದಗಿರಿ	ಅರಕೆರೆ		
			ಇದ್ಲೂರು		
			ಕೊಟಗೇರ್-ಬಿ		
		ಸುರಪುರ	ಅಗತೀರ್ಥ		
		ಅಫಜಲ್‌ಪುರ	ಬೈರಮದಗಿ		
			ಬಿಡದಾಳ್		
14)	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ಹಂಪಾಪಟ್ಟಣ		
			ಮಾಲ್ವಿ		
		ಸಂಡೂರು	ತೋರಣಗಲ್ಲು		
			ಅಂತಾಪುರ		
		ಬಳ್ಳಾರಿ	ಸಿಡಗನಮೋಳ		
			ಎಮ್ಮಿಗನೂರು		
		ಕೂಡ್ಲಗಿ	ಕೋಲಹಳ್ಳಿ	ಉಜ್ಜೈನಿ	
		ಸಿರಿಗುಪ್ಪ	ಕರೂರು		
		ಹೂವಿನಹಡಗಲಿ	ಹೊಳಗುಂದಿ	ಮಾಗಳ	
			ಕತ್ತೆಬೆನ್ನೂರು	ಹಿರೇಹಡಗಲಿ	
		ಹರಪನಹಳ್ಳಿ	-	ಕೆಲಗಿ	
15)	ರಾಯಚೂರು	ಲಿಂಗಸೂಗುರು	ಮೆಟ್ಟೂರು		
		ಕುಷ್ಟಗಿ	ನಿಲೋಗಲ		
			ಕೊರಡಗೇರಾ		
		ಯಲ್‌ಬುರ್ಗಾ	ಬೇವೂರು		
			ಚಿಕ್ಕಮ್ಯಾಗೇರಿ		
		ರಾಯಚೂರು	ಮರ್ಚಟಹಾಳ್		
		ಮಾನ್ವಿ	ಪಂಚರಕಿ		
16)	ಧಾರವಾಡ	ನವಲಗುಂದ	ಕಡಹಾಳ್		
		ರೋಣ	ಯಾವಗಲ್	ಹೊಳೀಆಲೂರು	
		ಶಿಗ್ಗಾಂವ್	ಕಡಕೋಳ		
		ಸವಣೂರು	ಹುರಳೀಕುಪ್ಪೆ		
		ಶಿರಹಟ್ಟಿ	ಬಾಳೀಹೊಸೂರು		
		ಹಾನಗಲ್	ಆಡೂರು		
		ಬ್ಯಾಡಗಿ	ಚಿಕ್ಕಬಾಸೂರು	ಮೊಟೇಬೆನ್ನೂರು	
			ಕಲ್ಲದೇವರು		
		ಹುಬ್ಬಳ್ಳಿ	ಸೂಳ್ಳ		
		ರಾಣೆಬೆನ್ನೂರು	ಮಿಡ್ಲೇರಿ		
		ಮುಂಡರಗಿ	-	ಡಂಬಳ	
		ಧಾರವಾಡ	-	ಅಳ್ನಾವರ	
17)	ಚಿಕ್ಕಮಗಳೂರು	ಚಿಕ್ಕಮಗಳೂರು	ಸಿಂದಿಗೆರೆ	ಹಳಸಾಪುರ	
				ಜೇನುಗದ್ದೆ	
		ಮೂಡಿಗೆರೆ	ದಾರದಹಳ್ಳಿ		
			ಹಿರೇಬೈಲು		

1	2	3	4	5	6
			ದೇವರುಂದ		
			ಸಂಸೆ		
		ನರಸಿಂಹರಾಜಪುರ	ಬಿಳ್ಳೂರು		
		ಕಡೂರು	ಹೊನ್ನೇನಹಳ್ಳಿ	ಯಗಟಿ	
		ಕೊಪ್ಪ	ನಾರ್ವೆ		
			ನಿಲವಾಗಿಲು		
		ತರಿಕೆರೆ	ಬೆಟ್ಟನಹಳ್ಳಿ		
		ಶೃಂಗೇರಿ	-	ಬೇಗಾರು	
18)	ಕೊಡಗು	ಸೋಮವಾರಪೇಟೆ	ಮಾಲಬಿ	-	
19)	ಮಂಡ್ಯ	ಮಂಡ್ಯ	ಕ್ಯಾಂತಂಗೆರೆ	ದುದ್ದ	
			ಶ್ರೀನಿವಾಸಪುರ		
			ಮಂಗಲ		
		ನಾಗಮಂಗಲ	ಕೆಳಗೆರೆ	ಹೊಣಕೆರೆ	
		ಮದ್ದೂರು	ಹೊನ್ನಲಗೆರೆ	ಚಂದಾಪುರ	
				ಎಡಗನಹಳ್ಳಿ	
				ಕೆಸ್ತೂರು	
				ಮಾದರಹಳ್ಳಿ	
		ಮಳವಳ್ಳಿ	ದಳವಾಯಿಕೋಡಿಹಳ್ಳಿ	ಅಗಸನಪುರ	
			ನೆಲ್ಲೂರು		
			ನೆಟ್‌ಕಲ್		
			ಬಿ.ಜಿ. ಪುರ		
		ಶ್ರೀರಂಗಪಟ್ಟಣ	-	ಮಹದೇವಪುರ	
		ಪಾಂಡವಪುರ	-	ಬನ್ನಂಗಾಡಿ	
		ಕೃಷ್ಣರಾಜಪೇಟೆ		ಬೂಕನಕೆರೆ	
20)	ಮೈಸೂರು	ಗುಂಡ್ಲುಪೇಟೆ	ಚಿಕ್ಕನಹಳ್ಳಿ		
			ಶಿವಪುರ		
		ಪಿರಿಯಾಪಟ್ಟಣ	ಕಿತ್ತೂರು		
			ಸಂಗರಶೆಟ್ಟಿಹಳ್ಳಿ		
		ಕೊಳ್ಳೇಗಾಲ	ಒಡೆಯರಪಾಳ್ಯ	ಕೌದಳ್ಳಿ	
		ಟಿ. ನರಸೀಪುರ	ಸೀರೋಳ್ಳಿ		
		ಹೆಚ್.ಡಿ. ಕೋಟೆ	ಬೀರೂರ್	ಬೀಚನಹಳ್ಳಿ	
		ಕೆ.ಆರ್. ನಗರ	ಗಂಡನಹಳ್ಳಿ		
		ಹುಣಸೂರು	ಜೋಳನಹಳ್ಳಿ		
		ನಂಜನಗೂಡು	ತಾಂಡವಪುರ	ಹುರಾ	
		ಚಾಮರಾಜನಗರ	ಹೊಂಗನೂರು	ಹರವೆ	
		ಮೈಸೂರು	ಇಲವಾಲ	ಕೀಳನಪುರ	

ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಹೆಚ್‌ಎಫ್‌ಎಫ್:399 ಎ.ಎ.ಹೆಚ್ 91
ದಿನಾಂಕ 19-2-92 ರಲ್ಲಿ ಮಂಜೂರಾದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಮಂಜೂರಾದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	ಉನ್ನತೀಕರಿಸಬೇಕಾದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	ಷರಾ
1	2	3	4	5	6
1)	ಬೆಂಗಳೂರು ನಗರ	ಬೆಂಗಳೂರು ದಕ್ಷಿಣ	ಕಾಡುಸೊಣ್ಣಪ್ಪನಹಳ್ಳಿ		
2)	ಬೆಂಗಳೂರು ಗ್ರಾಮಾಂತರ	ಚನ್ನಪಟ್ಟಣ	ಕೊರಟಿ		
			ಎಲೆತೋಟದಹಳ್ಳಿ		
			ತಗಚಗೆರೆ		
		ರಾಮನಗರ	ಅಂಕನಹಳ್ಳಿ		
		ನೆಲಮಂಗಲ	ಅರೆಬೊಮ್ಮನಹಳ್ಳಿ		
		ದೇವನಹಳ್ಳಿ	ಜಾಲಿಗೆ		
3)	ತುಮಕೂರು	ತುರುವೆಕೆರೆ	ಮಾಚೇನಹಳ್ಳಿ		
		ಶಿರಾ	ಕುಂದಾಲಮ್ಮ ದೇವಸ್ಥಾನ		
		ಶಿರಾ (ವಿಧಾನ ಸಭಾ ಕ್ಷೇತ್ರ)	ದ್ವಾರನಕುಂಟೆ		
		ಬೆಳ್ಳಾವಿ -"-	ಜೋಳೂರು		
		ಕೊರಟಗೆರೆ	ಎಳಚಗೆರೆ		
		ಚಿಕ್ಕನಾಯಕನಹಳ್ಳಿ	ಜಯಚಾಮರಾಜಪುರ		
		ಪಾವಗಡ	ಪಳವಳಿ		
		ಗುಬ್ಬಿ	ಡಿ ರಾಂಪುರ		
		ತಿಪಟೂರು (ವಿ.ಸ. ಕ್ಷೇತ್ರ)	ಹೊಂಗಲಕ್ಷ್ಮಿ		
		ತಿಪಟೂರು	ಗುರುಗದಹಳ್ಳಿ		
		ಕುಣಿಗಲ್	ಚಿಕ್ಕನಾರಂಗಿ		
4)	ಶಿವಮೊಗ್ಗ	ಚನ್ನಗಿರಿ	ಕೊರಟಗೆರೆ		
		ಭದ್ರಾವತಿ	ಅರಳಿಕೊಪ್ಪ		
		ಹೊನ್ನಾಳಿ	ಗೋಪಗೊಂಡನಹಳ್ಳಿ		
		ಸಾಗರ	ಶಿರವಂತೆ		
		ಸೊರಬ	ಇಂಡಿಹಳ್ಳಿ		
		ಶಿಕಾರಿಪುರ	ತಾಳಗುಂದ		
			ಹಾರೋಗೊಪ್ಪ		
		ಶಿವಮೊಗ್ಗ	ಮುಂಡಗದ್ದೆ		
5)	ಚಿತ್ರದುರ್ಗ	ಚಿತ್ರದುರ್ಗ	ಚಿಕ್ಕಗೊಂಡನಹಳ್ಳಿ		
			ಗೊಡಬನಾಳ		
		ಹೊಳಲ್ಕೆರೆ	ವಿಶ್ವನಾಥನಹಳ್ಳಿ		
		ದಾವಣಗೆರೆ	ಹುಚ್ಚವನಹಳ್ಳಿ		
		ಹಿರಿಯೂರು	ಸೂರಗೊಂಡನಹಳ್ಳಿ		

1	2	3	4	5	6
		ಮೊಳಕಾಲ್ಮೂರು	ಬೈರಾಪುರ		
		ಹೊಸದುರ್ಗ	ದೇವಿಗಲ್		
		ಹರಿಹರ	ಕೊಕ್ಕನೂರು		
		ಭರಮಸಾಗರ	ಅಳಗವಾಡಿ		
6)	ಕೋಲಾರ	ಮಾಲೂರು	ಬೆಳ್ಳಾವಿ		
		ಬಂಗಾರುಪೇಟೆ	ದೊಡ್ಡಚನ್ನಹಳ್ಳಿ		
		ಗೌರಿಬಿದನೂರು	ವಿದುರಾಶ್ವತ್ಥ		
		ಚಿಂತಾಮಣಿ	ಇರಗಂಪಲ್ಲಿ		
		ಮುಳಬಾಗಿಲು	ಉತ್ತನೂರು		
7)	ಧಾರವಾಡ	ರಾಣಿಬೆನ್ನೂರು	ಮಡ್ಲೇರಿ		
		ಮುಂಡರಗಿ	ಪಾಪನಾಶಿ		
		ಧಾರವಾಡ ಗ್ರಾಮಾಂತರ	ಕೆಲಗೇರಿ		
		ಕುಂದಗೋಳ	ಕೂಬಿಹಾಳ		
		ಶಿಗ್ಗಾಂವ್	ಕುಂದೂರು		
		ಹಾನಗಲ್	ಚಿಕ್ಕಾಂಶಿ ಹೊಸೂರ		
		ಬ್ಯಾಡಗಿ	ಮಾಸಣಗಿ		
		ಹಾವೇರಿ	ಹಳೇಕಿತ್ತೂರು		
		ನರಗುಂದ	ಜಗಾಪುರ		
		ಹಾವೇರಿ	ಕೊಣನತುಂಬಿ		
		ಶಿರಹಟ್ಟಿ (ವಿ.ಸ. ಕ್ಷೇತ್ರ)	ನನ್ನಿಬನ್ನಿಕುಪ್ಪೆ		
		ಹಿರೇಕೆರೂರು	ನಾಗವಂದ		
		ಕಲಘಟಗಿ (ವಿ.ಸ. ಕ್ಷೇತ್ರ)	ಸೊರಸೆಣ್ಣಕೊಪ್ಪ		
8)	ಬೆಳಗಾಂ	ಬೈಲಹೊಂಗಲ್	ಮೂಗುಬಸವಗ್ರಾಮ ಉಡಕೇರಿ		
		ಅಥಣಿ	ಕೊಕಟನೂರು		
		ಪರಸಘಟ್ಟ (ವಿ.ಸ. ಕ್ಷೇತ್ರ)	ಇಂಚಲ		
		ಸದಲಗಾ (ವಿ.ಸ. ಕ್ಷೇತ್ರ)	ಮಂಜರಿ		
		ಕಿತ್ತೂರು (ವಿ.ಸ. ಕ್ಷೇತ್ರ)	ದೇವರಶೀಗನಹಳ್ಳಿ		
		ಅರಬಾವಿ (ವಿ.ಸ. ಕ್ಷೇತ್ರ)	ಮಳವಂತಿ		
		ಖಾನಾಪುರ	ಗುಲಗನುಂಜಿ		
		ಬೆಳಗಾಂ	ಉಜಗಾಂವ್		
		ಗೋಕಾಕ್	ನಂದಗಾವ್		
		ಹುಕ್ಕೇರಿ	ಬಡಕುಂದ್ರಿ		
		ಚಿಕ್ಕೋಡಿ	ವಡ್ರಾಳ		
			ಹತ್ತರವಾಟ		
			ಯಡೂರ		
		ರಾಯಬಾಗ್	ಮೊರಬ		
		ಅರಬಾವಿ (ವಿ.ಸ. ಕ್ಷೇತ್ರ)	ಬಳೋಬಾಳ		
		ಕಾಗವಾಡ -"-	ತಂಗಡಿ		
		ಸವದತ್ತಿ	ಚಿಕ್ಕೊಪ್ಪ		
		ಹುಕ್ಕೇರಿ	ಕುರಣಿ		

1	2	3	4	5	6
9)	ಉತ್ತರ ಕನ್ನಡ	ಶಿರಸಿ	ಬಿನ್ನಕೊಪ್ಪ		
		ಹೊನ್ನಾವರ	ಕುದ್ರಿಗ		
		ಹಳಿಯಾಳ	ಕಾವಲವಾಡ		
10)	ಬಿಜಾಪುರ	ಬೀಳಗಿ (ವಿ.ಸ. ಕ್ಷೇತ್ರ)	ಹರೆಕಲ್		
			ಚಿಕ್ಕಹಂಟಿನಾಳ		
		ಮುಧೋಳ	ಒಂಟಿಗೋಡಿ		
			ಇಂಗಳಗಯಡಹಳ್ಳಿ		
		ಬಾದಾಮಿ	ಐಹೊಳೆ		
			ಹಲಕುರ್ಕಿ		
		ಹುನಗುಂದ	ಚಿತ್ತರಗಿ		
			ಕೌಜಗನೂರು		
		ಮುದ್ದೇಬಿಹಾಳ್	ರಕ್ಕಸಗಿ		
			ಸೋಮನಾಳ		
		ಹೂವಿನಹಿಪ್ಪರಗಿ	ಇಂಗಳಗೇರಿ		
		ಬಿಜಾಪುರ	ಕಗ್ಗೋಡು		
		ಬಳ್ಳೊಳ್ಳಿ (ವಿ.ಸ. ಕ್ಷೇತ್ರ)	ಲಚ್ಯಾಣ		
		ಸಿಂದಗಿ (-"-)	ದೇವರನಾವದರ್		
			ಕೊಂಡಗೂಳಿ		
		ತಿಕೋಟಾ (-"-)	ಹೊನಟ್ಟಿ		
		ಜಮಖಂಡಿ (-"-)	ಸಾವಲಗಿ		
		ಇಂಡಿ	ಝಳಕಿ		
11)	ಮೈಸೂರು	ಹನೂರು (ವಿ.ಸ.ಕ್ಷೇತ್ರ)	ಮಾರ್ಟಳ್ಳಿ		
		ಟಿ. ನರಸೀಪುರ	ತುರುಗನೂರು		
		ಗುಂಡ್ಲುಪೇಟೆ	ಕಗ್ಗಳಹುಂಡಿ		
		ಪಿರಿಯಾಪಟ್ಟಣ	ಪಿಂಚವಳ್ಳಿ		
		ನಂಜನಗೂಡು	ಹೆಡಿಯಾಳ		
12)	ಕೊಡಗು	ಸೋಮವಾರಪೇಟೆ	ವೋತನೂರು		
			7ನೇ ಹೊಸಕೋಟೆ		
		ಮಡಿಕೇರಿ	ಮರಗೋಡು		
13)	ದಕ್ಷಿಣ ಕನ್ನಡ	ಪುತ್ತೂರು	ಅರಿಯಡ್ಕ ಗ್ರಾಮದ		
			ಕಾಡಿಬಾರ್ ಸ್ಥಳದಲ್ಲಿ		
		ವಿಟ್ಲ	ಕಲ್ಲಡ್ಕ		
		ಬಂಟವಾಳ	ಕೊವಟ್ಟಕಾವಳ		
			ವಡೂರವಗ್ಗ		
		ಮೂಡಬಿದ್ರಿ	ಕೆಮ್ರಾಲ್		
		ಕಾರ್ಕಳ	ಬೆಳುವಾಯಿ		
14)	ಚಿಕ್ಕಮಗಳೂರು	ಶೃಂಗೇರಿ	ನೆಮ್ಮಾರು		
		ಕೊಪ್ಪ	ನೇರಲೆಗೆರೆ		
		ಮೂಡಿಗೆರೆ (ವಿ.ಸ. ಕ್ಷೇತ್ರ)	ಮಾಚಗೊಂಡನಹಳ್ಳಿ		
		ಬೀರೂರು (-"-)	ಬಾಣೂರು		

1	2	3	4	5	6
		ಬೀರೂರು	ಹುಲಿಕೆರೆ		
		ಕಡೂರು	ಎಂ. ಮಲ್ಲಾಪುರ		
15)	ಹಾಸನ	ಬೇಲೂರು	ಗಂಗೂರ		
		ಗಂಡಸಿ (ವಿ.ಸ.ಕ್ಷೇತ್ರ)	ಕೆಂಕೆರೆ		
			ಯಡವನಹಳ್ಳಿ		
		ಅರಕಲಗೂಡು	ಬೆಳವಾಡ		
			ಹುಲಿಕಲ್		
		ಆಲೂರು	ಚಿನ್ನಹಳ್ಳಿ		
		ಹೊಳೆನರಸೀಪುರ	ಅತ್ತಿಚೌಡೇನಹಳ್ಳಿ		
16)	ಮಂಡ್ಯ	ನಾಗಮಂಗಲ	ಬೋಗಾದಿ		
		ಮದ್ದೂರು	ಹಬ್ಬರಳು		
			ಯರಗನಹಳ್ಳಿ		
		ಮಳವಳ್ಳಿ	ಹುಸ್ಕೂರು		
		ಶ್ರೀರಂಗಪಟ್ಟಣ	ಬಲ್ಲೇನಹಳ್ಳಿ		
		ಮಂಡ್ಯ	ಸಾತನೂರು		
		ಕೆರೆಗೂಡು	ಬಿ. ಹೊಸೂರು		
		ಕೆ.ಆರ್. ಪೇಟೆ	ಮಾದಾಪುರ		
17)	ಗುಲ್ಬರ್ಗಾ	ಆಳಂದ	ಕ್ವಾಲಗಾ		
		ಅಫಜಲ್‌ಪುರ	ಅತನೂರು		
		ಚಿತ್ತಾಪುರ	ಕಲ್ಬುರ್ತಿ		
			ಸಾಕನೂರು		
		ಸೇಡಂ	ವಾಡೆವಳ್ಳಿ		
		ಯಾಡ್ಗೀರ್	ಗೋಣಾಳ		
		ಜೇವರ್ಗಿ	ಕಲ್ಲೂಕರೆ		
			ಗಂಭಾರ		
		ಗುರುಮಿಟ್‌ಕಲ್	ಹೊನಿಗೇರಾ		
		(ವಿ.ಸ. ಕ್ಷೇತ್ರ)	ಗಣಪುರ		
		ಚಿಂಚೋಳಿ	ಚಂಗಟಾ		
			ಕರೋಳ್ಳಿ		
18)	ರಾಯಚೂರು	ಮಾನ್ವಿ	ತೋರಣದಿನ್ನಿ		
			ಚಿಕ್ಕಲವರದಿ		
		ಯಲಬುರ್ಗಾ	ಮುದೋಳ		
			ಬಿನ್ನೋಳ		
		ರಾಯಚೂರು	ಯಾವಲದಿನ್ನಿ		
		ಸಿಂಧನೂರು	ದಡಸಗೂರ		
		ಗಂಗಾವತಿ	ಮನಕೇರಾ		
		ಕೊಪ್ಪಳ	ಮುರಾಪಳ್ಳಿ		
		ಲಿಂಗಸಗೂರು	ಅನ್ವರಿ		
		ಹೊಸಪೇಟೆ	ಗುಂತಗೋಳ		
			ಕಮಲಾಪುರ		

1	2	3	4	5	6
19)	ಬಳ್ಳಾರಿ	ಬಳ್ಳಾರಿ	ಹೊಣಗನ ಕೇಹಾಳ		
		ಬಳ್ಳಾರಿ (ವಿ.ಸ. ಕ್ಷೇತ್ರ)	ಕಟ್ಟಗೆರೆ		
		ಸಂಡೂರು	ಬುಜುಂಗನಗರ		
		ಕೂಡ್ಲಿಗಿ	ನರಸಿಂಹನಹರಿ		
		ಹಡಗಲಿ	ಹ್ಯಾರದಾ		
		ಕೂಡ್ಲೂರು (ವಿ.ಸ.)	ಸೂಲ್ದಹಳ್ಳಿ		
		ಹೊಸಪೇಟೆ	ಮರಿಯಮ್ಮನಹಳ್ಳಿ		
20)	ಬೀದರ್	ಬೀದರ್	ಮಂದರನಹಳ್ಳಿ		
			ಗಾದಗಿ		
			ಲಾದ		
		ಬಾಲ್ಕಿ	ಕೋಣಮೋಳಕುಂಬಿ		
			ಮೊರಂಬಿ		
		ಔರಾದ್	ಕೊಡಂಗಾವ್		
			ನೋನಾಳ್		
		ಹುಮ್ನಾಬಾದ್	ಕೋಡಂಬಲೆ		
			ಮುತ್ತಂಗಿ		
		ಬಸವಕಲ್ಯಾಣ	ಹಿರೇನಾಗಾಂವ		
		ಅಂಕೋಲ	ಹಳವಳ್ಳಿಗ್ರಾಮ (ರಾಮನಗುಳಿಬಾಗ್)		

ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್‌ಎಫ್ 399 ವಿಎಹೆಚ್ 91 ದಿನಾಂಕ 10-3-1992ರ

ಅನುಬಂಧ-1

ಕ್ರ.ಸಂ.	ಸ್ಥಳ	ತಾಲ್ಲೂಕು	ಜಿಲ್ಲೆ
1	2	3	4
1)	ಸತ್ಯನಾರಾಯಣ ದೇವಸ್ಥಾನ ಜಯರಾಜನಗರ (ಮೆಟಲ್ ಲ್ಯಾಂಪ್ ಫ್ಯಾಕ್ಟರಿ ಎದುರು) ಬೆಂಗಳೂರು	ಬೆಂಗಳೂರು ನಗರ	ಬೆಂಗಳೂರು ನಗರ
2)	ಬ್ಯಾಟರಾಯನಪುರ, ಮೈಸೂರು ರಸ್ತೆ	ಬೆಂಗಳೂರು ನಗರ	ಬೆಂಗಳೂರು ನಗರ
3)	ಮಹಾಲಕ್ಷ್ಮಿಪುರ (ರಾಜಾಜಿನಗರ)	ಬೆಂಗಳೂರು ನಗರ	ಬೆಂಗಳೂರು ನಗರ
4)	ಹುಣಸನಹಳ್ಳಿ	ಕನಕಪುರ	ಬೆಂಗಳೂರು ಗ್ರಾ.
5)	ಚಕ್ಕಲೂರು	ಚನ್ನಪಟ್ಟಣ	ಬೆಂಗಳೂರು ಗ್ರಾ.
6)	ಹಾಡೋನಹಳ್ಳಿ	ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾ.
7)	ಮಾದಪ್ಪನಹಳ್ಳಿ ಹೆಸರಘಟ್ಟ ಹೋಬಳಿ	ಬೆಂಗಳೂರು ಉತ್ತರ	ಬೆಂಗಳೂರು
8)	ಬಿ. ಕೋಡಿಹಳ್ಳಿ	ಗುಬ್ಬಿ	ತುಮಕೂರು
9)	ಪಾಂಡೋಮಟ್ಟಿ	ಹೊಳೆಹೊನ್ನೂರು ವಿ.ಸ.	ಶಿವಮೊಗ್ಗ
10)	ದಡಮ್‌ಘಟ್ಟ	ಭದ್ರಾವತಿ	ಶಿವಮೊಗ್ಗ
11)	ಸಂಪೇಕಟ್ಟೆ	ಹೊಸನಗರ	ಶಿವಮೊಗ್ಗ
12)	ಕಾನಗೋಡು	ತೀರ್ಥಹಳ್ಳಿ	ಶಿವಮೊಗ್ಗ
13)	ಎಡಜಗಳೆಮನೆ	ಸಾಗರ	ಶಿವಮೊಗ್ಗ
14)	ಈಸೂರು	ಶಿಕಾರಿಪುರ	ಶಿವಮೊಗ್ಗ
15)	ಕೊನಬೇವು	ಚಿತ್ರದುರ್ಗ	ಚಿತ್ರದುರ್ಗ
16)	ಜರಿಕಟ್ಟೆ	ದಾವಣಗೆರೆ	ಚಿತ್ರದುರ್ಗ
17)	ರಂಗೇನಹಳ್ಳಿ	ಹಿರಿಯೂರು	ಚಿತ್ರದುರ್ಗ
18)	ಕ್ಯಾಸಾಪುರ	ಚಿತ್ರದುರ್ಗ	ಚಿತ್ರದುರ್ಗ
19)	ಕಂದಗಲ್ಲು	ದಾವಣಗೆರೆ	ಚಿತ್ರದುರ್ಗ
20)	ಜಾಜೂರು	ಚಳ್ಳಕೆರೆ	ಚಿತ್ರದುರ್ಗ
21)	ಸಾದಲಿ	ಶಿಡ್ಲಘಟ್ಟ	ಕೋಲಾರ
22)	ನಂಬಿಹಳ್ಳಿ	ಶ್ರೀನಿವಾಸಪುರ	ಕೋಲಾರ
23)	ಬೀಜಗನಹಳ್ಳಿ	ಗುಡಿಬಂಡೆ	ಕೋಲಾರ
24)	ಮಾವಿನತೋಪು	ಹಿರೇಕೆರೂರು	ಧಾರವಾಡ
25)	ಎಪಿಎಂಸಿ ಯಾರ್ಡ್	ಧಾರವಾಡ	ಧಾರವಾಡ
26)	ಗೊಡಚಿ	ರಾಮದುರ್ಗ	ಬೆಳಗಾಂ
27)	ಬಡ್ಡಿಕೇರಿ (ಚೌಡಳ್ಳಿ ಮಂಡಲ)	ಮುಂಡಗೋಡು	ಉತ್ತರ ಕನ್ನಡ
28)	ಹಿರೇಓತಗೇರಿ	ಹುನಗುಂದ	ಬಿಜಾಪುರ

1	2	3	4
29)	ಇಟ್ಟಿಗೆಗೂಡು	ಮೈಸೂರು ನಗರ	ಮೈಸೂರು
30)	ಕೆದಮಲ್ಲೂರು	ವೀರಾಜಪೇಟೆ	ಕೊಡಗು
31)	ಬಿಜಗೋಳಿ	ಕಾರ್ಕಳ ವಿ.ಸ.	ದಕ್ಷಿಣ ಕನ್ನಡ
32)	ಬೈಲೂರು	ಕಾರ್ಕಳ ವಿ.ಸ.	ದಕ್ಷಿಣ ಕನ್ನಡ
33)	ಕೆಂಜೂರು	ಸೂರತ್ಕಲ್	ದಕ್ಷಿಣ ಕನ್ನಡ
34)	ರಂಗೇನಹಳ್ಳಿ	ಹೊಳೆನರಸೀಪುರ	ಹಾಸನ
35)	ಬಿದರಕ್ಕ	ಹೊಳೆನರಸೀಪುರ	ಹಾಸನ
36)	ಉದಯಪುರ	ಚನ್ನರಾಯಪಟ್ಟಣ	ಹಾಸನ
37)	ಕೊಳಗೆರೆ	ಮದ್ದೂರು	ಮಂಡ್ಯ
38)	ತಳಬಿಡಿ	ಶಹಾಪುರ	ಗುಲ್ಬರ್ಗಾ
39)	ದಂಗಾಪುರ	ಆಳಂದ	ಗುಲ್ಬರ್ಗಾ
40)	ನೀಲೂರು	ಅಫ್‌ಜಲ್‌ಪುರ	ಗುಲ್ಬರ್ಗಾ
41)	ಚೌಡಾಪುರ	ಅಫ್‌ಜಲ್‌ಪುರ	ಗುಲ್ಬರ್ಗಾ
42)	ಅರಕೆರಾ (ಬಿ)	ಗುರುಮಿಟ್ಕಲ್ ವಿ.ಸ.	ಗುಲ್ಬರ್ಗಾ
43)	ಮಲ್ಲಾರ್	ಗುರುಮಿಟ್ಕಲ್ ವಿ.ಸ.	ಗುಲ್ಬರ್ಗಾ
44)	ಚಿಕ್ಕಡಂಕಣಕಲ್	ಗಂಗಾವತಿ	ರಾಯಚೂರು
45)	ಹುಳಿಯಾಡ	ಕನಕಗಿರಿ	ರಾಯಚೂರು
46)	ಸುಂದಾಳ್	ಔರಾದ್	ಬೀದರ್
47)	ಸಂಗೊಳಗಿ	ಬೀದರ್	ಬೀದರ್
48)	ಸಿರಸಿ (ಔರಾದ್)	ಬೀದರ್	ಬೀದರ್
49)	ಮದರಗಿ	ಹುಮ್ನಾಬಾದ್	ಬೀದರ್
50)	ಇಟಗಾ	ಹುಮ್ನಾಬಾದ್	ಬೀದರ್
51)	ಕಣಜಿ	ಭಾಲ್ಕಿ	ಬೀದರ್
52)	ಸೇಡೋಲ್	ಹುಮ್ನಾಬಾದ್	ಬೀದರ್
53)	ಕಲ್ಲೂರು	ಹುಮ್ನಾಬಾದ್	ಬೀದರ್
54)	ಉಲತಿಕೊಪ್ಪ	ಸೊರಬ	ಶಿವಮೊಗ್ಗ

ಸರ್ಕಾರಿ ಆದೇಶ ಸಂಖ್ಯೆ : ಎಹೆಚ್‌ಎಫ್‌ಎಫ್ 399 ವಿಎಹೆಚ್ 91 ದಿನಾಂಕ 10-3-1992ರ

ಅನುಬಂಧ-2

ಕ್ರ.ಸಂ.	ಸ್ಥಳ	ತಾಲ್ಲೂಕು	ಜಿಲ್ಲೆ
1	2	3	4
1)	ಬಿಟ್ಟಅಲಸೂರು	ಬೆಂಗಳೂರು ಉತ್ತರ	ಬೆಂಗಳೂರು
2)	ದೊಡ್ಡಮರಳವಾಡಿ	ಕನಕಪುರ	ಬೆಂಗಳೂರು ಗ್ರಾ.
3)	ವೆಂಕಟರಾಯನದೊಡ್ಡಿ	ಸಾತನೂರು ವಿ.ಸ.	ಬೆಂಗಳೂರು ಗ್ರಾ.
4)	ಗೊಡ್ಲುಮುದ್ದೇನಹಳ್ಳಿ	ದೇವನಹಳ್ಳಿ	ಬೆಂಗಳೂರು ಗ್ರಾ.
5)	ಊರುಕೆರೆ	ತುಮಕೂರು ತಾ.	ತುಮಕೂರು
6)	ಕುಂಸಿ	ಹೊಸನಗರ ವಿ.ಸ.	ಶಿವಮೊಗ್ಗ
7)	ಮಲ್ಲಿಗೇನಹಳ್ಳಿ	ಹೊನ್ನಾಳಿ	ಶಿವಮೊಗ್ಗ
8)	ಬೇಲೂರು	ಹೊನ್ನಾಳಿ	ಶಿವಮೊಗ್ಗ
9)	ಅರಗ	ತೀರ್ಥಹಳ್ಳಿ	ಶಿವಮೊಗ್ಗ
10)	ಮೇಲಿನಹನಸವಾಡಿ	ಶಿವಮೊಗ್ಗ	ಶಿವಮೊಗ್ಗ
11)	ಬೆಳಘಟ್ಟ		ಚಿತ್ರದುರ್ಗ
12)	ಹದಡಿ	ದಾವಣಗೆರೆ	ಚಿತ್ರದುರ್ಗ
13)	ಭೀಮನಸಮುದ್ರ	ಚಿತ್ರದುರ್ಗ	ಚಿತ್ರದುರ್ಗ
14)	ಯರಬಳ್ಳಿ	ಹಿರಿಯೂರು	ಚಿತ್ರದುರ್ಗ
15)	ಮಂಡಕಲ್ಲು	ಚಿಕ್ಕಬಳ್ಳಾಪುರ	ಕೋಲಾರ
16)	ಹೊಸೂರು	ಗೌರಿಬಿದನೂರು	ಕೋಲಾರ
17)	ವಡಗೂರು	ಕೋಲಾರ	ಕೋಲಾರ
18)	ಗೌನಪಲ್ಲಿ	ಶ್ರೀನಿವಾಸಪುರ	ಕೋಲಾರ
19)	ಜಂಗಮಕೋಟೆ	ಶಿಡ್ಲಘಟ್ಟ	ಕೋಲಾರ
20)	ಗುಡಗೂರು	ರಾಣಿಬೆನ್ನೂರು	ಧಾರವಾಡ
21)	ಬಿಟಗೇರಿ	ಗದಗ	ಧಾರವಾಡ
22)	ಹಾವನೂರ	ಹಾವೇರಿ	ಧಾರವಾಡ
23)	ಕಬ್ಬೂರ	ಹಾವೇರಿ	ಧಾರವಾಡ
24)	ಮೇದೂರ	ಹಿರೇಕೆರೂರು	ಧಾರವಾಡ
25)	ಮೋಟೆಬೆನ್ನೂರು	ಬ್ಯಾಡಗಿ	ಧಾರವಾಡ
26)	ಯರಗಟ್ಟಿ	ಸವದತ್ತಿ	ಬೆಳಗಾಂ
27)	ಅಂಕಲಗಿ	ಗೋಕಾಕ್	ಬೆಳಗಾಂ
28)	ಕೊಣ್ಣೂರ	ಗೋಕಾಕ್	ಬೆಳಗಾಂ
29)	ಯಕ್ಸಂಬಾ	ಚಿಕ್ಕೋಡಿ	ಬೆಳಗಾಂ
30)	ಕುಳಗೋಡು	ಅರೆಬಾವಿ ವಿ.ಸ. ಕ್ಷೇತ್ರ	ಬೆಳಗಾಂ
31)	ಸುಣಧೋಳಿ	ಅರಭಾವಿ ವಿ.ಸ. ಕ್ಷೇತ್ರ	ಬೆಳಗಾಂ
32)	ಗೋರಗಾಂವ್	ಚಿಕ್ಕೋಡಿ	ಬೆಳಗಾಂ
33)	ಕಿರುವತ್ತಿ	ಎಲ್ಲಾಪುರ	ಕಾರವಾರ
34)	ವಾನಳ್ಳಿ	ಶಿರಸಿ	ಕಾರವಾರ
35)	ಕುಡಗಿ	ಬಸವನಬಾಗೇವಾಡಿ	ಬಿಜಾಪುರ
36)	ಕರಡಿ ಕಂದಗಲ್	ಹುನಗುಂದ	ಬಿಜಾಪುರ
37)	ಮಹಾಲಿಂಗಪುರ	ಮುದೋಳ	ಬಿಜಾಪುರ

1	2	3	4
38)	ಹುಲ್ಲಹಳ್ಳಿ	ನಂಜನಗೂಡು	ಮೈಸೂರು
39)	ಚಟ್ಟಳ್ಳಿ	ಸೋಮವಾರಪೇಟೆ	ಕೊಡಗು
40)	ವಾರಾಣಿ	ಮಡಿಕೇರಿ	ಕೊಡಗು
41)	ಅಲೂರು-ಸಿದ್ದಾಪುರ	ಸೋಮವಾರಪೇಟೆ	ಕೊಡಗು
42)	ಕೆರೆಗೋಡು	ಹೊಳೆನರಸೀಪುರ	ಹಾಸನ
43)	ಬಾಗೇವಾಳು	ಅರಸೀಕೆರೆ	ಹಾಸನ
44)	ಸೋಮನಹಳ್ಳಿ	ಕೆ.ಆರ್. ಪೇಟೆ	ಮಂಡ್ಯ
45)	ಕ್ಯಾತುಂಗೆರೆ	ಮಂಡ್ಯ	ಮಂಡ್ಯ
46)	ಬಲ್ಲೇನಹಳ್ಳಿ	ಶ್ರೀರಂಗಪಟ್ಟಣ	ಮಂಡ್ಯ
47)	ಸ್ಟೇಷನ್ ಗಾಣಗಾಪುರ	ಅಫ್‌ಜಲ್‌ಪುರ	ಗುಲ್ಬರ್ಗಾ
48)	ಪೋತಕಪಲ್ಲಿ	ಸೇಡಂ	ಗುಲ್ಬರ್ಗಾ
49)	ಜಿಡಗಾ	ಆಳಂದ	ಗುಲ್ಬರ್ಗಾ
50)	ಕೂಡ್ಲಿ	ಚಿಂಚೋಳಿ	ಗುಲ್ಬರ್ಗಾ
51)	ನಿಡಗುಂದ	ಚಿಂಚೋಳಿ	ಗುಲ್ಬರ್ಗಾ
52)	ಕೆಂಭಾವಿ	ಶಹಾಪುರ	ಗುಲ್ಬರ್ಗಾ
53)	ಹತ್ತಿಕುಣಿ	ಯಾದಗೀರ್	ಗುಲ್ಬರ್ಗಾ
54)	ಚಂದರ್ಕಿ	ಯಾದಗೀರ್	ಗುಲ್ಬರ್ಗಾ
55)	ಮಾಡ್ಯಾಳ	ಆಳಂದ	ಗುಲ್ಬರ್ಗಾ
56)	ಬ್ಯಾಗವಾಡ	ಮಾನ್ವಿ	ರಾಯಚೂರು
57)	ಹಿರೇಸಿಂಧೋಗಿ	ಕೊಪ್ಪಳ	ರಾಯಚೂರು
58)	ತುರ್ವಿಹಾಳ್	ಸಿಂಧನೂರು	ರಾಯಚೂರು
59)	ತಡಕಲ್	ಯಲ್ಬುರ್ಗಾ	ರಾಯಚೂರು
60)	ಹಾಲಿಹಾಳ ಕ್ಯಾಂಪ್	ಸಿಂಧನೂರು	ರಾಯಚೂರು
61)	ಮನ್ನಳ್ಳಿ	ಬೀದರ್	ಬೀದರ್
62)	ಬಗದಲ್	ಬೀದರ್	ಬೀದರ್
63)	ಜನವಾಡ	ಬೀದರ್	ಬೀದರ್
64)	ಕಮಠಾಣ	ಬೀದರ್	ಬೀದರ್
65)	ಭಾಟುಂಬ್ರಾ	ಭಾಲ್ಕಿ	ಬೀದರ್
66)	ಧನ್ನೂರ	ಭಾಲ್ಕಿ	ಬೀದರ್
67)	ದಾಡಗಿ	ಭಾಲ್ಕಿ	ಬೀದರ್
68)	ಸಂತಪೂರ	ಔರಾದ್	ಬೀದರ್
69)	ರಾಜೇಶ್ವರ	ಬಸವಕಲ್ಯಾಣ	ಬೀದರ್
70)	ಮಂಠಾಳ	ಬಸವಕಲ್ಯಾಣ	ಬೀದರ್
71)	ಘಾಟಬೋರಾಳ	ಹುಮ್ನಾಬಾದ್	ಬೀದರ್
72)	ಹಳ್ಳಿಖೇಡ್ (ಬಿ)	ಹುಮ್ನಾಬಾದ್	ಬೀದರ್
73)	ರಂಜೋಳಖೇಣ	ಹುಮ್ನಾಬಾದ್	ಬೀದರ್
74)	ಕುಂಕನಾಡು	ಕಡೂರು	ಚಿಕ್ಕಮಗಳೂರು
75)	ಸಿಡಘಟ್ಟ	ಬೀರೂರು ವಿ.ಸ.ಕ್ಷೇತ್ರ	ಚಿಕ್ಕಮಗಳೂರು
76)	ಮರಿಯಮ್ಮನಹಳ್ಳಿ	ಹೊಸಪೇಟೆ	ಬಳ್ಳಾರಿ
77)	ಕಮ್ಮತ್ತಹಳ್ಳಿ	ಹರಪ್ಪನಹಳ್ಳಿ	ಬಳ್ಳಾರಿ
78)	ಮೋರಗೇರಿ	ಬಳ್ಳಾರಿ	ಬಳ್ಳಾರಿ
79)	ಡಣಾಪುರ	ಬಳ್ಳಾರಿ	ಬಳ್ಳಾರಿ

ಭೂಸುಧಾರಣಾ ಕಾನೂನಿನ್ವಯ ಹೆಚ್ಚುವರಿ ಜಮಿನಿನ ಘೋಷಣೆ ಹಾಗೂ ಹಂಚಿಕೆ

1005 (1677) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂ ಸುಧಾರಣಾ ಕಾನೂನಿನ್ವಯ ಫಾರಂ ನಂ. 7 ಮತ್ತು 11 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಈವರೆಗೂ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ? ಹಾಗೂ ಇನ್ನೂ ಎಷ್ಟು ಪ್ರಕರಣಗಳು ಭೂ ನ್ಯಾಯ ಮಂಡಲಿಗಳ ಮುಂದೆ ಬಾಕಿ ಇವೆ?

ಇ) ಉಚ್ಚ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ಎಷ್ಟು ದಿವಸಗಳಿಂದ ಬಾಕಿ ಇವೆ? (ಅವುಗಳ ವಿವರಗಳನ್ನು ಒದಗಿಸುವುದು)

ಈ) ಫಾರಂ ನಂ. 11ರ ಪ್ರಕಾರ ಎಷ್ಟು ಭೂ ಮಾಲೀಕರು ಎಷ್ಟು ಎಕರೆಗಳು ಜಮಿನು ಹೆಚ್ಚು ಇವೆ ಎಂದು ಘೋಷಿಸಿದ್ದಾರೆ?

ಉ) ಆ ಭೂಮಿಯನ್ನು ಯಾರ್‍ಯಾರಿಗೆ ಹಂಚಲಾಗಿದೆ?

ಊ) ಭೂಸುಧಾರಣೆ ಕಾನೂನಿನನ್ವಯ ಹೆಚ್ಚುವರಿ ಭೂ ಮಾಲೀಕರು ಫಾರಂ ನಂ. 11ನ್ನು ಸಲ್ಲಿಸದೇ ಇರುವವರ ಬಗ್ಗೆ ಈವರೆಗೆ ಧಾರವಾಡ ಜಿಲ್ಲೆಯಲ್ಲಿ ಯಾವುದಾದರೂ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಫಾರಂ ನಂ. 7 ರಲ್ಲಿ 66733
ಫಾರಂ ನಂ. 11 ರಲ್ಲಿ 16971

ಆ)

	ಇತ್ಯರ್ಥವಾಗಿರುವ ಪ್ರಕರಣಗಳು	ಬಾಕಿ
ಫಾರಂ ನಂ. 7 ರಲ್ಲಿ	66731	2
ಫಾರಂ ನಂ. 11 ರಲ್ಲಿ	16950	21

ಇ) ಉಚ್ಚ ನ್ಯಾಯಾಲಯದಲ್ಲಿ ಈ ಕೆಳಕಂಡ ಪ್ರಕರಣ ಬಾಕಿ ಇವೆ.

			ಫಾರಂ 7	ಫಾರಂ 11
1)	1979	21	15	6
2)	1980	36	11	25
3)	1981	06	04	02
4)	1982	56	35	21
5)	1987	04	04	00
6)	1988	09	07	02
7)	1990	130	126	04
8)	1991	677	670	07
		939	872	67

ಈ) ಹೆಚ್ಚುವರಿ ಜಮೀನು ಘೋಷಿಸಿದ ಪ್ರಕರಣಗಳು 717, ಹೆಚ್ಚುವರಿ ಎಂದು ಘೋಷಿಸಿದ ಕ್ಷೇತ್ರ 21244.1 ಎಕರೆ.

ಉ) ಹೆಚ್ಚುವರಿ ಎಂದು ನಿರ್ಧರಿಸಿದ ಕ್ಷೇತ್ರದ ಪೈಕಿ ಈ ಕೆಳಗಿನಂತೆ ವಿತರಿಸಲಾಗಿದೆ.

		ಸಂಖ್ಯೆ	ಕ್ಷೇತ್ರ. (ಎಕರೆಗಳು)
1)	ಪರಿಶಿಷ್ಟ ಜಾತಿ	1327	5164-09
2)	ಪರಿಶಿಷ್ಟ ಜನಾಂಗ	29	76-15
3)	ಇತರರು	1073	4412-10
4)	ಕಲಂ 77(3) ರಂತೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ್ದು	18	1747-22
5)	ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಲ್ಲಿ ಒಳಗಾಗಿರುವ ಕ್ಷೇತ್ರ	-	9903.37
	ಒಟ್ಟು	2447	21244-13

ಊ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

1006 (1678) ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೇಯೆ?

ಆ) ಹಾಗಾದರೆ, ಈವರೆವಿಗೆ ಪರಿವರ್ತಿಸಿರುವ ತಾಂಡಗಳ ಸಂಖ್ಯೆ ಎಷ್ಟು?

ಇ) ಈ ಉದ್ದೇಶಕ್ಕಾಗಿ ನಿಗಧಿಪಡಿಸಿರುವ ಹೆಚ್ಚುವರಿ ಮೊತ್ತ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಇಲ್ಲ. ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿವರ್ತನೆಗೆ ಹಣ ನಿಗಧಿಪಡಿಸುವ ಅಗತ್ಯವಿಲ್ಲ.

ನಾಡ ತಹಶೀಲ್ದಾರರೂ, ಗ್ರಾಮಲೆಕ್ಕಿಗರು ಹಾಗೂ ಕಂದಾಯ ನಿರೀಕ್ಷಕರು ಕೇಂದ್ರ ಸ್ಥಳದಲ್ಲಿ ಇಲ್ಲದಿರುವುದು.

1007 (1679) ಶ್ರೀ ಬಾಬುರಾವ್ ಚವಾಣ (ಶಹಬಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಡ ಕಛೇರಿ ತಹಸೀಲ್ದಾರರು ಹಾಗೂ ಗ್ರಾಮಲೆಕ್ಕಿಗರು ಹಾಗೂ ಕಂದಾಯ ನಿರೀಕ್ಷಕರು ತಮ್ಮ ಕೇಂದ್ರ ಸ್ಥಳದಲ್ಲಿ ಇರದಿರಲು ಕಾರಣಗಳೇನು?

ಆ) ಕೇಂದ್ರ ಸ್ಥಳದಲ್ಲೇ ಇರುವ ಹಾಗೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಯಾವುದೇ ಕಾರಣಗಳಿರುವುದಿಲ್ಲ. ಸರ್ಕಾರಿ ಸುತ್ತೋಲೆ ದಿನಾಂಕ 25-4-86 ರಲ್ಲಿ ನಿಯುಕ್ತಿಸಿರುವ ಕೇಂದ್ರ ಸ್ಥಾನದಲ್ಲೇ ವಾಸ ಮಾಡುವಂತೆ ಸಂಬಂಧಿಸಿದ ನೌಕರರಿಗೆ ಸೂಕ್ತ ನಿರ್ದೇಶನ ನೀಡಿದೆ.

ಆ) ವಸತಿ ಗೃಹ ಲಭ್ಯವಿಲ್ಲದ ಜಿಲ್ಲೆಗಳಲ್ಲಿ 1992-93ನೇ ಸಾಲಿನಲ್ಲಿ ಪ್ರತಿ ಜಿಲ್ಲೆಗೆ 100 ಗ್ರಾಮಲೆಕ್ಕಿಗ ವಸತಿ ಗೃಹ ನಿರ್ಮಿಸುವ ವಿಚಾರ ಸರ್ಕಾರವು ಪರಿಶೀಲಿಸುತ್ತಿದೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ಮತಕ್ಷೇತ್ರದಲ್ಲಿಯ ಹ್ಯಾಮ್‌ಲೆಟ್ ಗ್ರಾಮಗಳು ಹಾಗೂ ಲಂಬಾಣಿ ತಂಡಗಳನ್ನು ಪ್ರತ್ಯೇಕ ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ.

1008 (1681) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿರುವ ಹ್ಯಾಮ್‌ಲೆಟ್ ಗ್ರಾಮಗಳು ಹಾಗೂ ಲಂಬಾಣಿ ತಾಂಡಾಗಳ ಸಂಖ್ಯೆ ಎಷ್ಟು?

ಆ) ಸರ್ಕಾರದ ಯೋಜನೆಯ ಪ್ರಕಾರ ಇವುಗಳನ್ನು ಪ್ರತ್ಯೇಕವಾದ ಕಂದಾಯ ಗ್ರಾಮಗಳೆಂದು ಯಾವಾಗ ಘೋಷಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 1) ಲಂಬಾಣಿ ತಾಂಡಗಳು 27

2) ಹ್ಯಾಮ್‌ಲೆಟ್‌ಗಳು 7

ಆ) ಅರ್ಹ ತಾಂಡಗಳು / ಹ್ಯಾಮ್‌ಲೆಟ್‌ಗಳ ಬಗ್ಗೆ ಪ್ರಕಟಣೆಯನ್ನು ಇಷ್ಟರಲ್ಲೇ ಹೊರಡಿಸಲು ಸರ್ಕಾರವು ಪರಿಶೀಲಿಸುತ್ತಿದೆ.

ಔರದಾ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

1009 (1687) ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಕರ ಬರಗಾಲದಿಂದಾಗಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಔರಾದ್ ತಾಲ್ಲೂಕಿನ ಒಟ್ಟು 149 ಹಳ್ಳಿಗಳ ಪೈಕಿ ಎಷ್ಟು ಹಳ್ಳಿಗಳಲ್ಲಿ ಬರಪರಿಸ್ಥಿತಿ, ಕುಡಿಯುವ ನೀರಿನ ಸಮಸ್ಯೆ ಇರುವುದು.

ಇ) ಬರಪೀಡಿತ ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಈ) ಸರ್ಕಾರವು ಔರಾದ್ ತಾಲ್ಲೂಕಿನಲ್ಲಿ ಬರಪರಿಹಾರ ಕಾಮಗಾರಿಗಳನ್ನು ಕೈಗೊಂಡಿದೆಯೇ?

ಉ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಹೌದು.

ಆ) ಔರಾದ್ ತಾಲ್ಲೂಕಿನ 51 ಹಳ್ಳಿಗಳನ್ನು ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳೆಂದು ಗುರುತಿಸಿದೆ.

ಇ) 39 ಕೊಳವೆ ಬಾವಿಗಳಿಗೆ ಮಂಜೂರಾತಿ ನೀಡಿದ್ದು ಇವುಗಳ ಪೈಕಿ 29 ಕೊಳವೆ ಬಾವಿಗಳನ್ನು ಈಗಾಗಲೇ ಕೊರೆಯಲಾಗಿದೆ. 8 ತೆರೆದ ಬಾವಿಗಳ ಆಳವನ್ನು ಹೆಚ್ಚಿಸುವ ಕಾರ್ಯ ಪ್ರಗತಿಯಲ್ಲಿದೆ. 13 ಕಿರು ನೀರು ಸರಬಾರಜು ಯೋಜನೆಗಳನ್ನು ಕೈಗೊಂಡಿದ್ದು 4 ಯೋಜನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಔರಾದ್ ತಾಲ್ಲೂಕಿನಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ರೂ. 25.10 ಲಕ್ಷಗಳನ್ನು ಮಂಜೂರು ಮಾಡಿದೆ.

ಈ) ಹೌದು

ಉ) ಉದ್ಯೋಗ ಸೃಜನೆಗಾಗಿ ಪರಹರಿಹಾರ ಕಾರ್ಯಕ್ರಮದಡಿ ಕೈಗೊಂಡಿರುವ 4 ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ :

1)	ಮಲೆಗಾಂವ್ ಹಳ್ಳಿಯಲ್ಲಿನ ಪರ್ಕೊಲೇಷನ್ ಟ್ಯಾಂಕ್‌ಗೆ	ರೂ. 2.00 ಲಕ್ಷ
2)	ವಡಗಾಂವ ಹಳ್ಳಿ ಗೊಕಟ್ಟಾ ದುರಸ್ತಿಗೆ	ರೂ. 2.65 ಲಕ್ಷ
3)	ಚಿಂಟಕಿ ಗ್ರಾಮದಲ್ಲಿ ನಾಲಾಬಂದ್-1 ನಿರ್ಮಾಣಕ್ಕೆ	ರೂ. 1.80 ಲಕ್ಷ
4)	ಚಿಂಟಕಿ ಗ್ರಾಮದ ತಾಂಡಾ ನಾಲಾ ಬಂದ್-2 ನಿರ್ಮಾಣಕ್ಕೆ	ರೂ. 1.80 ಲಕ್ಷ
	ಒಟ್ಟು	**ರೂ. 8.26 ಲಕ್ಷ**

ಉಪಾಧ್ಯಕ್ಷಿಣಿಯವರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಮುಳವಾಡ ಏತ ನೀರಾವರಿ ಯೋಜನೆ ಜಾರಿಗಾಗಿ ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹದಲ್ಲಿ ಶಾಸಕರನ್ನು ಬಲವಂತವಾಗಿ ಹಿಡಿದಿಟ್ಟಿರುವ ಬಗ್ಗೆ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೆ .....

(ಗೊಂದಲ)

ಉಪಾಧ್ಯಕ್ಷಿಣಿಯವರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಹಾದೇವ್ : ಶಾಸಕರಿಗೇ ರಕ್ಷಣೆ ಇಲ್ಲ ಎಂದು ಮಾನ್ಯ ಸದಸ್ಯರು ಇಲ್ಲಿ ಮನವಿಯನ್ನು ಕೊಡುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಗಮನ ಸೆಳೆಯುವ ಸೂಚನೆ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ. ಮಹಾದೇವ್: ಇದು ಬಹಳ ಪ್ರಮುಖವಾದ ವಿಚಾರ. ಇದಕ್ಕೆ ಅವಕಾಶವನ್ನು ಕೊಡದೆ ಇನ್ನು ಯಾವುದಕ್ಕೆ ಅವಕಾಶ ಕೊಡುತ್ತೀರಿ?

(ಗೊಂದಲ)

ಶ್ರೀ ಎಂ. ಮಹದೇವ್: ಮಾನ್ಯ ಉಪಧ್ಯಕ್ಷಿಣಿಯವರೇ, ಇದು ಒಬ್ಬ ಶಾಸಕರ ರಕ್ಷಣೆಯ ಪ್ರಶ್ನೆ. ಮಾನ್ಯ ಶಾಸಕರು ರಕ್ಷಣೆಯನ್ನು ಕೇಳುತ್ತಿದ್ದಾರೆ. ಆದ್ದರಿಂದ ಇದು ಒಂದು ಬಹಳ ಪ್ರಾಮುಖ್ಯವಾದ ವಿಚಾರವಾಗಿರುತ್ತದೆ. ಸ್ಥಳೀಯ ಪೋಲೀಸರಿಂದ ಅವರಿಗೆ ಹೆರಾಸ್‌ಮೆಂಟ್ ಆಗಿದೆ. ಆದ್ದರಿಂದ ಅವರು ಆ ವಿಷಯವನ್ನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತಂದು ರಕ್ಷಣೆಯನ್ನು ಕೋರುತ್ತಿದ್ದಾರೆ. ದಯವಿಟ್ಟು ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

ಉಪಾಧ್ಯಕ್ಷಿಣಿಯವರು : ಈಗ ಶ್ರೀಯುತ ಐನಾಪುರ್‌ರವರು ಮಾತನಾಡಲಿ.

† ಶ್ರೀ ಮನೋಹರ್ ಐನಾಪುರ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮುಳವಾಡ ಏತ ನೀರಾವರಿ ಕಾರ್ಯ ತೀವ್ರ ಗತಿಯಲ್ಲಿ ಪ್ರಾರಂಭ ಆಗಬೇಕು. ಅದಕ್ಕೆ ಸಾಕಷ್ಟು ಹಣವನ್ನು ಸರ್ಕಾರದವರು ಬಿಡುಗಡೆ ಮಾಡಬೇಕೆಂದು ಅಲ್ಲಿ ಅಭಿವೃದ್ಧಿ ಹೋರಾಟ ಸಮಿತಿ ಮಾಡಿ ಅಲ್ಲಿಯ ಸ್ವಾತಂತ್ರಯೋಧರು, ಮಠಾಧಿಪತಿಗಳು, ಮತ್ತು ಮಹಿಳೆಯರು ಸುಮಾರು ಒಂದು ತಿಂಗಳಿಂದ ಆಮರಣ ಉಪವಾಸ ಕೈಗೊಂಡಿದ್ದಾರೆ. ಅದನ್ನು ತಿಳಿದ ನಾನು ತಮಗೆ ಸಾಂತ್ವನ ಹೇಳಲು ಹೋದಾಗ ಆಮರಣ ಉಪವಾಸವನ್ನು ದಯವಿಟ್ಟು ಅಂತ್ಯಗೊಳಿಸಿ, ನಾನು ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ನೀರಾವರಿ ಸಚಿವರನ್ನು ಬೇಟಿಮಾಡಿ ಸರ್ಕಾರವನ್ನು ಒತ್ತಾಯಿಸಿ ಆದಷ್ಟು ಮುಳವಾಡ

ಏತನೀರಾವರಿ ಕಾರ್ಯವನ್ನು ಚುರುಕುಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ತಿಳಿಸುತ್ತಿರುವಂತೆಯೇ ನನ್ನನ್ನು ಅವರು ಕನಿಷ್ಟ 24 ಗಂಟೆಗಳ ಕಾಲ ಅವರ ಜೊತೆಯಲ್ಲಿಯೇ ಉಪವಾಸ ಸತ್ಯಾಗ್ರಹ ಮಾಡಬೇಕೆಂದು ಬಲವಂತವಾಗಿ ಸಾವಿರಾರು ಜನಸಮೂಹದ ಮುಂದೆ ನನ್ನನ್ನೂ ಕುಳಿಸಿಕೊಂಡರು. ಅದಾದನಂತಹ ನಾನು ಸಾಯಂಕಾಲ 24 ಗಂಟೆಗಳ ಕಾಲ ಅವರ ಜೊತೆಯಲ್ಲಿ ಕಳೆದ ನಂತರ ಹೇಗೋ ಕಷ್ಟಪಟ್ಟು ನಾನು ಇಲ್ಲಿಗೆ ಬಂದಿದ್ದೇನೆ. ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೋಸ್ಕರವಾಗಿ ಬಂದು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಸರ್ಕಾರ ಯಾವ ರೀತಿಯಾದ ರಕ್ಷಣೆ ನನಗೆ ನೀಡುತ್ತದೆನ್ನುವುದು ಒಂದು, ಆಮೇಲೆ ಈ ರೀತಿಯಾಗಿ ಇತರ ಶಾಸಕರಿಗೂ ಆಗಬಾರದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಮೂರನೆಯದಾಗಿ ಮುಳವಾಡ ಏತ ನೀರಾವರಿಯ ಬಗ್ಗೆ ಮಾನ್ಯ ನೀರಾವರಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆನ್ನುವುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸಚಿವರು ಉತ್ತರ ಕೊಡಲಿ, ಅವರು ಉತ್ತರ ಕೊಡುವುದಕ್ಕೆ ಮುಂಚೆ ನಾನು ಹೇಳಿಬಿಡುತ್ತೇನೆ. ಸುಮಾರು ಒಂದು ತಿಂಗಳಿಂದ ಅವರು ಹೋರಾಟ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಅವರು ಉತ್ತರವನ್ನು ಕೊಟ್ಟ ಮೇಲೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ನಿನ್ನೆ ಶ್ರೀಮಾನ್ ಐನಾಪುರ್‌ರವರು ಕೇಳಿದ ಪ್ರಶ್ನೆಗೆ ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ. ಈಗ ನಾನು ಇಲ್ಲಿಂದ ಬಿಜಾಪುರಕ್ಕೆ ಹೋಗುತ್ತಿದ್ದೇನೆ. ಸದನದಲ್ಲಿ ನನ್ನ ಎರಡು ವಿಷಯಗಳು ಇರುವುದರಿಂದ ಅಲ್ಲಿಯವರೆಗೆ ನಾನು ನಿಲ್ಲಬೇಕಾಗಿದೆ. ಆ ದೃಷ್ಟಿಯಿಂದ ಮಾನ್ಯ ಐನಾಪುರ್‌ರವರು ಏನು ಹೇಳಿದ್ದಾರೆ, ಅಲ್ಲಿ ಏನು ತೊಂದರೆ ಇದೆ, ಆ ತೊಂದರೆಯನ್ನು ನಿವಾರಣೆ ಮಾಡಲಿಕ್ಕೆ ಸರ್ವ ರೀತಿಯಲ್ಲೂ ಸರ್ಕಾರ ಪ್ರಯತ್ನ ಮಾಡುತ್ತದೆ. ಅದರ ಬಗ್ಗೆ ಯಾವ ವಿಧವಾದ ಆಲೋಚನೆಯೂ ಮಾನ್ಯ ಐನಾಪೂರ್‌ರವರಿಗೆ ಬೇಡವೆಂದು ವಿನಂತಿಸಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಒಬ್ಬೊಬ್ಬರೇ ಮಾತನಾಡಿ.

ಶ್ರೀ ಎಂ. ಮಹದೇವ್ : ನಿವಾರಣೆ ಮಾಡುವುದು ಪ್ರಾಮುಖ್ಯತೆಯಲ್ಲ. ಒಬ್ಬ ಶಾಸಕರಿಗೆ ಹ್ಯುಮಲಿಏಷನ್ ಆಗಿದೆ. ಅವರು ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದಾರೆ. ಹ್ಯುಮಿಲಿಏಷನ್ ಮಾಡುವಂಥ ಪರಿಸ್ಥಿತಿಯಲ್ಲಿ ಒಬ್ಬ ಶಾಸಕರನ್ನು ನಡೆಸಿಕೊಂಡರೆ, ಜನಸಾಮಾನ್ಯರ ಗತಿ ಏನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಶಾಸಕರಾಗಿ ಅವರು ಸಾಂತ್ವನ ಮಾಡಲಿಕ್ಕೆ ಅಲ್ಲಿಗೆ ಹೋಗಿರಬಹುದು. ಶಾಸಕರು ಹೋದಾಗ ಅವರನ್ನು ನಡೆಸಿಕೊಂಡ ರೀತಿನೀತಿ ಸರಿಯಲ್ಲವೆಂದು ನನಗೂ ಕೂಡ ಅನಿಸುತ್ತದೆ. ಏತಕ್ಕೆಂದರೆ, ಅವರನ್ನು ಅಲ್ಲಿ ಬಂದಿಖಾನೆಯಲ್ಲಿ ಇಟ್ಟುಕೊಂಡು ತೊಂದರೆ ಮಾಡಿರುವುದು, ಮಾನಸಿಕವಾಗಿ ಅವರನ್ನು ತೊಂದರೆಗೆ ಒಳಪಡಿಸಿದುದು ಸರಿಯಲ್ಲ. ಆದರೂ ಕೂಡ ಮಾನ್ಯ ಶಾಸಕರು ಇಲ್ಲಿ ಬಂದಿದ್ದಾರೆ. ಅವರಿಗೆ

ಏನಾದರೂ ತೊಂದರೆಯಾಗಿದ್ದರೆ ಅವರು ಹೇಳಲಿ. ಏತಕ್ಕೆಂದರೆ ಅವರದೇ ಆದ ಕ್ಷೇತ್ರದಲ್ಲಿ ಏನಾದರು ತೊಂದರೆ ಇರಬಹುದೆಂದು ಅವರು ಮನವರಿಕೆ ಮಾಡಿಕೊಡಲು ಹೋಗಿರಬಹುದು. ಸಾರ್ವಜನಿಕವಾಗಿ ಆಯ್ಕೆಯಾಗಿ ಬಂದಂಥ ಪ್ರತಿನಿಧಿಗಳು ಒಂದೊಂದು ಸಲ ಹೋಗಿ ಮನವರಿಕೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಅವರು ಹೋಗಿರಬಹುದು. ಅವರಿಗೆ ಮಾನಸಿಕವಾಗಿ ತೊಂದರೆಯಾಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಯೋಗ್ಯವಾದ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅನೇಕ ದಿನಗಳಿಂದ ಮಠಾಧಿಪತಿಗಳು ಅವರ ಸಮಸ್ಯೆ ತೆಗೆದುಕೊಂಡು ರೈತರ ಪರವಾಗಿ ಹೋರಾಟ ಮಾಡಿಕೊಂಡು ಅಮರಣಾಂತ ಉಪವಾಸ ಕುಳಿತಿದ್ದಾರೆ. ನಮ್ಮ ಶಾಸಕರು ಒಬ್ಬರದೇ ಸಮಸ್ಯೆ ಅಲ್ಲ. ಎಲ್ಲಾ ಗ್ರಾಮಗಳಲ್ಲಿ ಈ ರೀತಿ ಕುಳಿತಾಗ ಸರ್ಕಾರ ಕಣ್ಮುಚ್ಚಿಕೊಂಡು ಕುಳಿತುಕೊಂಡರೆ ರಾಜ್ಯ ಸರ್ಕಾರ ಬದುಕಿದೆಯೊ, ಸತ್ತಿದೆಯೊ ಎಂಬ ಪ್ರಶ್ನೆ ಬರುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರದ ಆ ಕಡೆ ಗಮನ ಕೊಡದಿದ್ದರೆ ಶಾಸಕರಿಗೆ ತೊಂದರೆಯಾಗುತ್ತದೆ. ನಾಳೆ ದಿವಸ ಮಂತ್ರಿಗಳು ಹೋದಾಗಲೂ ಕಾಲು ಹಿಡಿದು ಜಗ್ಗುತ್ತಾರ. ಅಮರಣಾಂತ ಉಪವಾಸ ಕುಳಿತಾಗ ಸರ್ಕಾರ ಅದನ್ನು ಗಮನಿಸದೆ ಈ ರೀತಿ ಕುಳಿತರೆ ಸರ್ಕಾರಕ್ಕೆ ಕಣ್ಣು ಇದೆಯೇ, ಕಿವಿ ಇದೆಯೇ ಎಂದು ಕೇಳಬೇಕಾಗುತ್ತದೆ. ಶಾಸಕರಿಗೆ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯ. ಇದು ಬರೀ ಶಾಸಕರಿಗೆ ಮಾಡಿರುವುದು ಅಲ್ಲ. ನಾಳೆ ದಿವಸ ಮಂತ್ರಿಗಳು ಹೋದರೆ ನಿಮ್ಮನ್ನೂ ಬಿಡುವುದಿಲ್ಲವೆಂದು ಹೇಳುವ ಪರಿಸ್ಥಿತಿ ಬರುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ನಾನು ಎರಡು ದಿನಗಳಲ್ಲಿ ಬಳ್ಳಾರಿಗೆ ಹೋಗಿ ಬಂದಿದ್ದೇನೆ. ಅಲ್ಲಿರತಕ್ಕ ತೊಂದರೆಯನ್ನು ನೋಡಿಕೊಂಡು ಬಂದಿದ್ದೇನೆ. ಭದ್ರಾಗೆ ಕೂಡ ಹೋಗಿಬಂದಿದ್ದೇನೆ. ಇವತ್ತು ನಾನು ಬಿಜಾಪುರಕ್ಕೆ ಹೋಗುತ್ತಿದ್ದೇನೆ. ಸರ್ಕಾರಕ್ಕೆ ಎಲ್ಲಾ ಪಾರ್ಟು ಇದೆ. ಕಣ್ಣು ಇದೆ, ಕಿವಿ ಇದೆ, ಎಲ್ಲಾ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಉಪವಾಸ ಕುಳಿತು ಎಷ್ಟು ದಿವಸ ಆಯಿತು ? ಮಂತ್ರಿಗಳು ಹೋಗಿ ಮಾತನಾಡಿಸಿದ್ದಾರೆಯೆ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ನೀವು ಹೇಳಿದ್ದನ್ನು ನಾನು ಸಮಾಧಾನದಿಂದ ಕೇಳಿದ್ದೇನೆ. ನಾನು ಹೇಳುವವರೆಗೆ ನೀವು ಕೇಳದಿದ್ದರೆ ಹೇಗೆ?

ಉಪಾಧ್ಯಕ್ಷಿಣಿಯವರು : ಅವರು ಉತ್ತರ ಕೊಡಲಿ, ದಯವಿಟ್ಟು ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಇವತ್ತು ಎರಡು ಗಂಟೆಗೆ ಹೋಗುತ್ತಿದ್ದೇನೆ. ನಿನ್ನೆ ಫೋನ್‌ನಲ್ಲಿ ಕೂಡ ಸ್ವಾಮಿಜಿಯವರೊಡನೆ ಮಾತನಾಡಿದ್ದೇನೆ. ಅವರಿಗೆ ಏನು ತೊಂದರೆ ಇದೆ ಎಂದು ಕೇಳಿಕೊಂಡು ಬರುತ್ತೇನೆ. ಅಲ್ಲೇ ಅವಕಾಶವಿದ್ದರೆ ಬಗೆಹರಿಸುತ್ತೇನೆ. ಒಂದೇ ಸಾರಿ 187 ಕೋಟಿ ರೂಪಾಯಿಗಳನ್ನು ಕೊಡಿ ಎಂದರೆ ಯಾವ ಸರ್ಕಾರಕ್ಕೆ ತಾನೇ ಕೊಡುವುದಕ್ಕಾಗುತ್ತದೆ. ಈ ಬಗ್ಗೆ ರಾಜಕೀಯ ಮಾಡುವುದು ಬೇಡ. ಇದುವರೆಗೆ ಇದ್ದ ಸರ್ಕಾರ ಒಂದು ಪೈಸೆ ಬಿಡುಗಡೆ

ಮಾಡಲಿಲ್ಲ. ನಾವು ಒಂದು ಕೋಟಿ 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಹೆಚ್ಚಿಗೆ ಬೇಕಾದ ಹಣವನ್ನು ಬಿಡುಗಡೆ ಮಾಡುತ್ತೇವೆ. ಈ ಯೋಜನೆ ಬಗ್ಗೆ ಆ ಭಾಗದ ಶಾಸಕರು ಹಲವಾರು ಬಾರಿ ನಮ್ಮ ಗಮನಕ್ಕೆ ತಂದಿದ್ದಾರೆ. ಆ ಯೋಜನೆ ಆಗಬೇಕೆಂಬುದು ಸರ್ಕಾರದ ಮನಸ್ಸಿನಲ್ಲಿ ಕೂಡ ಇದೆ. ಮಾನ್ಯ ಈಶ್ವರಪ್ಪನವರು ಸರ್ಕಾರಕ್ಕೆ ಕಣ್ಣು, ಕಿವಿ, ಕಾಲು ಇದೆಯೇ ಎನ್ನುತ್ತಿದ್ದಾರೆ. ಸರ್ಕಾರಕ್ಕೆ ಕಣ್ಣು ಇದೆ, ಕಿವಿಯೂ ಇದೆ, ಎಲ್ಲಾ ಇದೆ. ಸುಮ್ಮನೆ ಇವರು ಅಲ್ಲಿ ಹೋಗಿ ನೋಡದೆ ಪದೇ ಪದೇ ಪತ್ರಿಕೆಯಲ್ಲಿ ನೋಡಿಕೊಂಡು ಹೇಳಿಕೆ ಕೊಡುವುದಕ್ಕೆ ಹೋಗುವುದು ಬೇಡ ಎಂದು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆಂದು ಹೇಳಿದ್ದಾರೆ. ಈಗ ನೀವು ಇಷ್ಟು ಜನ ಒಟ್ಟಿಗೆ ನಿಂತುಕೊಂಡು ಮಾತನಾಡಿದರೆ ಯಾರಿಗೆ ತಾನೇ ಏನು ಕೇಳುತ್ತದೆ? ದಯವಿಟ್ಟು ಒಬ್ಬೊಬ್ಬರು ಮಾತನಾಡಿದರೆ ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರ ರಾಜ್ಯದ ರೈತರನ್ನು ಕಡೆಗಣಿಸಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಆ ಕ್ಷೇತ್ರದ ಮಾನ್ಯ ಸದಸ್ಯರೇ ಇಲ್ಲಿದ್ದಾರೆ. ಅವರು ವಿಚಾರವನ್ನು ಪೂರಾ ಸಭೆಯ ಮುಂದಿಟ್ಟಿದ್ದಾರೆ. ಅದಕ್ಕೆ ಸೂಕ್ತವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮತ್ತೆ ತಾವು ಅದನ್ನೇ ಹೇಳಿಕೊಂಡು ಮುಂದುವರಿಸುವುದು ಸರಿಯಲ್ಲ. ಈಗ ನಾನು ನಿಂತಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಶ್ರೀ ಕ್ವಮರಲ್ ಇಸ್ಲಾಂ ಅವರು ಮಾತನಾಡುವುದು.

Sri Qumarul Islam : Yesterday, I had raised one issue regarding KEB SC/ ST Welfare Association strike at Gulbarga.

(Interruptions)

ಶ್ರೀ ಆರ್.ಎನ್. ನಾಯಕ್ : ಈ ಶಾಸಕರಿಗೆ ಈ ತರಹ ತೊಂದರೆ ಕೊಟ್ಟರೆ ಅದಕ್ಕೇನಾದರೂ ಪರಿಹಾರ ಕೊಡಬೇಕು.

ಉಪಾಧ್ಯಕ್ಷರು : ಆ ಸಬ್ಜೆಕ್ಟ್ ಆಯಿತು. ಬೇರೆ ವಿಷಯಕ್ಕೆ ಹೋಗಿದ್ದೇನೆ.

ಬಿ.ಜೆ.ಪಿ. ಕಾರ್ಯಕರ್ತರು ಶಾಸಕರಾದ ಶ್ರೀ ಕೆ. ಕಶಾಲ ಅವರ ಮೇಲೆ ಹಲ್ಲೆ ಮಾಡಿರುವ ಬಗ್ಗೆ.

† ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಈ ಸದನದ ಗಮನ ಸೆಳೆದಿದ್ದಾರೆ. ನಿನ್ನೆ ಕುಶಾಲ ಎಂಬ ಶಾಸಕರಿಗೆ ಬಿ.ಜೆ.ಪಿ. ಕಾರ್ಯಕರ್ತರು ಅವರ ಕ್ಷೇತ್ರದಲ್ಲಿ ಅವರನ್ನು ಹಿಡಿದುಕೊಂಡು ಹಲ್ಲೆ ಮಾಡಿದ್ದಾರೆ. ನಮಗೆ ರಕ್ಷಣೆ ಕೊಡಬೇಕು. ಐನಾಪುರ್ ಅವರನ್ನು ಮಠಾಧಿಪತಿಗಳು ಹಿಡಿದುಕೊಂಡು ಗಲಾಟೆ ಮಾಡಿದರು ಎಂಬುದಕ್ಕೆ ಈಶ್ವರಪ್ಪನವರು ಇಷ್ಟೊಂದು ಜೋರು ಮಾಡುತ್ತಿದ್ದಾರೆ. ಇವರ ಕಾರ್ಯಕರ್ತರು ಶಾಸಕರನ್ನು ಹಿಡಿದುಕೊಂಡು ಈ ರೀತಿ ಮಾಡಿರುವುದಕ್ಕೆ ಏನು ಹೇಳುತ್ತಾರೆ ಎಂಬುದನ್ನು ದಯವಿಟ್ಟು ಹೇಳಬೇಕು.

ಉಪಾಧ್ಯಕ್ಷರು : ನಿನ್ನೆ ದಿವಸ ಈ ವಿಷಯ ಪ್ರಸ್ತಾಪಕ್ಕೆ ಬಂದಿದೆ: ಅದರ ಬಗ್ಗೆ ಹೇಳಿದ್ದಾರೆ. ನಿನ್ನೆ ವಿಷಯ ಈಗ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ನ್ಯಾಷನಲ್ ಪಾರ್ಟಿ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಉತ್ತರ ಕೊಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನಿನ್ನೆ ದಿವಸ ವಿಷಯ ಪ್ರಸ್ತಾಪವಾಗಿದೆ. ಅದಕ್ಕೆ ಉತ್ತರ ಕೂಡ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದನ್ನು ರೆಕಾರ್ಡ್‌ನಿಂದ ತೆಗೆಸಿ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ರೆಕಾರ್ಡ್‌ಗೆ ಹೋದರೆ ಏನಾಗುತ್ತದೆ?

ಉಪಾಧ್ಯಕ್ಷರು : ಜೀರೊ ಅವರ್‌ನಲ್ಲಿ ಇಲ್ಲಿ ತಾವು ಯಾವುದಾದರೂ ವಿಷಯ ಎತ್ತಬೇಕಾದರೆ ನನಗೆ ಬರೆದುಕೊಡಬೇಕು ಮತ್ತು ಆ ವಿಷಯದಲ್ಲಿ ಒಂದು ಹೇಳಬೇಕು. ಈ ವಿಷಯ ನನ್ನ ಮುಂದೆ ಯಾವುದನ್ನೂ ಹೇಳಿಲ್ಲ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಈಗ ಗಮನ ಸೆಳೆಯುವ ಸೂಚನೆ. ಶ್ರೀ ಡಿ. ಹಲಗೇಗೌಡರು...

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಶಾಸಕರಿಗೆ ತೊಂದರೆಯಾಗಿದೆ. ಆ ವಿಷಯ ಮಾತನಾಡಿ ...

ಉಪಾಧ್ಯಕ್ಷರು : ಆ ವಿಷಯ ಮಂತ್ರಿಗಳು ಹೇಳಿದ್ದಾರೆ. ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಕಮರುಲ್ ಇಸ್ಲಾಂ : ಡೆಪ್ಯುಟಿ ಸ್ಪೀಕರ್ ಅವರು ಪರ್ಮಿಷನ್ ಕೊಟ್ಟಿದ್ದಾರೆ. ಅದರ ಸಲುವಾಗಿ I am on my legs. ಏತಕ್ಕೆ ಇಷ್ಟು ಜೋರಾಗಿ ಮಾತನಾಡುತ್ತೀರಿ ನೀವು?

ಉಪಾಧ್ಯಕ್ಷರು : ದಯವಿಟ್ಟು ನೀವೆಲ್ಲ ಕುಳಿತುಕೊಳ್ಳಿ. ಶ್ರೀ ಐನಾಪುರ್ ಅವರು ಎತ್ತಿದ ವಿಷಯದ ಬಗ್ಗೆ ಈಗಾಗಲೇ ಅವರು ಸಾಕಷ್ಟು ಹೇಳಿದ್ದಾರೆ. ಮಂತ್ರಿಗಳು ಕೂಡ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ. ಸ್ವಾಮಿರಾವ್ : ಇವತ್ತು ಅವರಿಗೆ ಮಾಡಿದ್ದಾರೆ. ನಾಳೆ ಯಾರಿಗೆ ಮಾಡುತ್ತಾರೋ ಗೊತ್ತಿಲ್ಲ. ನಿಮಗೆ ಮಾಡಬಹುದು. ಬಿ.ಜೆ.ಪಿ. ಕಾರ್ಯಕರ್ತರ ಹಾವಳಿ ಜಾಸ್ತಿಯಾಗಿದೆ. ಪದೇಪದೇ ಜಾಸ್ತಿಯಾಗುತ್ತಿದೆ. ಅದರ ಬಗ್ಗೆ ...

ಉಪಾಧ್ಯಕ್ಷರು : ಸ್ವಾಮಿರಾವ್, ತಾವು ಕುಳಿತುಕೊಳ್ಳಬೇಕು. ರಕ್ಷಣೆ ಬಗ್ಗೆ ಮಂತ್ರಿಗಳು ಹೇಳಿದ್ದಾರೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ಸ್ವಾಮಿರಾವ್ : ಇಲ್ಲ- ಈ ವಿಷಯದಲ್ಲಿ ಹೇಳಿಲ್ಲ.

ಉಪಾಧ್ಯಕ್ಷರು : ಉಪವಾಸ ಸತ್ಯಾಗ್ರಹ ನಡೆಯುವ ಕಡೆ ಹೋಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಅದನ್ನು ಸಹ ಹೇಳಿದ್ದಾರೆ. ಮತ್ತೆ ಆ ವಿಷಯದಲ್ಲಿ ಪ್ರಸ್ತಾಪ ಬೇಡ. ಮುಂದೆ ಹೋಗೋಣ.

Sri Qumarul Islam : Yesterday, I had raised one issue, regarding KEB SC/ST Association strike. They are on hunger strike because the Executive Engineer has said something.

ಶ್ರೀ ಕೆ.ಬಿ. ಕೋಳೀವಾಡ್ : ತಾವು ಇಲ್ಲಿ ಸ್ವಲ್ಪ ಕೇಳಬೇಕು.

ಶ್ರೀ ಆರ್.ಎನ್. ನಾಯಕ್ : ಯಾರು ತೊಂದರೆ ಕೊಟ್ಟರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನಾದರೂ ಹೇಳುತ್ತೀರ?

† ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಶೂನ್ಯ ವೇಳೆಯಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಮನೋಹರ ಐನಾಪುರ್ ಅವರು ಮತ್ತು ಅನೇಕ ಸದಸ್ಯರು ಇವತ್ತು ಬಹಳ ಪ್ರಾಮುಖ್ಯವಾದ ವಿಚಾರ ಎತ್ತಿದ್ದಾರೆ. ಅದೇನೆಂದರೆ, ಅವರ ಕ್ಷೇತ್ರದಲ್ಲಿ ಯಾವಾಗಲೂ ಕೂಡ ಸಾರ್ವಜನಿಕರ ದೂರುಗಳನ್ನು ಕೇಳತಕ್ಕ ಒಂದು ಕರ್ತವ್ಯ ಶಾಸಕರಿಗೆ ಇದೆ. ಶಾಸಕರು ಸಾರ್ವಜನಿಕ ದೂರನ್ನು ಕೇಳಲು ಅಥವಾ ಸಾರ್ವಜನಿಕ ಸಭೆಗೆ ಹೋದಾಗ ಅವರಿಗೆ ಪೂರ್ತಿ ರಕ್ಷಣೆ ಇರಬೇಕಾಗುತ್ತದೆ. ಇದು ಒಂದು ಭಾಗ ಇನ್ನು ಎರಡನೇ ಭಾಗ ಏನಂದರೆ ಯಾವಾಗಲೂ ಕೂಡ ಸಮಸ್ಯೆಗಳು ಇರುತ್ತವೆ. ಆದರೆ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ವಿಧಾನಗಳು ಇರುತ್ತವೆ. ಆದರೆ ಒಬ್ಬ ಶಾಸಕರನ್ನು ಬಲೋದ್ಬಂಧನದಲ್ಲಿ ಇಟ್ಟು ಒಂದು ರೀತಿಯ ಬಲ ಪ್ರಯೋಗ ಮಾಡತಕ್ಕದ್ದು, ಬಂಧನದಲ್ಲಿ ಇಡತಕ್ಕ ಒಂದು ಪ್ರವೃತ್ತಿ ಏನು ಇದೆ ಅದು ಕರ್ನಾಟಕದ ಸಂಸ್ಕೃತಿಗೆ ಅನುಗುಣವಾದ ಪ್ರವೃತ್ತಿ ಅಲ್ಲ. ಇದು ಪಂಜಾಬ್‌ನಲ್ಲಿ ಅಥವಾ ಮತ್ತೊಂದು ಕಡೆ ನಡೆಯಬಹುದು. ಇಂತಹದ್ದು ಸಣ್ಣದರಲ್ಲೇ ಪ್ರಾರಂಭ ಆದಾಗ ಅದನ್ನು ಬೆಳೆಯುವುದಕ್ಕೆ ಬಿಡಬಾರದು. ಯಾವ ಪಕ್ಷದ ಸದಸ್ಯರೇ ಆಗಿರಲಿ ಅವರಿಗೆ ಈ ರೀತಿ ಆದಲ್ಲಿ ಅವರು ಕೆಲಸ ಮಾಡುವುದು ಕಷ್ಟವಾಗುತ್ತದೆ. ಶಾಸಕರು ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಇನ್ನು ಯಾವ ಧೈರ್ಯದಲ್ಲಿ ಹೋಗುವುದು? ಇದು ಮೂಲಭೂತ ಪ್ರಶ್ನೆ ಆಗಿರುವುದರಿಂದ ಅನೇಕ ಸದಸ್ಯರು ಎದ್ದು ನಿಂತು ಕಳಕಳಿಯಿಂದ ಈ ವಿಚಾರವನ್ನು ಎತ್ತಿದ್ದಾರೆ. ನಾನು ಸರ್ಕಾರದ ಪರವಾಗಿ ಹೇಳುವುದೇನೆಂದರೆ, ಸನ್ಮಾನ್ಯ ಭಾರಿ ನೀರಾವರಿ ಸಚಿವರು ಇವತ್ತು ಆ ಪ್ರದೇಶಕ್ಕೆ ಎರಡು ಉದ್ದೇಶದಿಂದ ಹೋಗುತ್ತಾರೆ. ಒಂದೇ ಉದ್ದೇಶದಿಂದ ಎಂದು ತಾವು ತಿಳಿಯಬಾರದು. ಒಂದನೇ ಉದ್ದೇಶವೇನೆಂದರೆ ಏನು ಅಲ್ಲಿ ಬಲೋದ್ಬಂಧನದಲ್ಲಿ ಇಟ್ಟುಕೊಂಡಿದ್ದರು. ಅದಕ್ಕೆ ಯಾರು ಕಾರಣಕರ್ತರು, ಯಾರು ತಪ್ಪಿತಸ್ಥರು ಇದ್ದಾರೆಂದು ಖುದ್ದು ಪರಿಶೀಲನೆ ಮಾಡುತ್ತಾರೆ. ಎರಡನೆಯ ಉದ್ದೇಶವೇನೆಂದರೆ ಅಲ್ಲಿಯ ಜನರದ್ದು ಸಮಸ್ಯೆ ಏನು ಇದೆ, ಅದನ್ನು ತಿಳಿದು ಸರ್ಕಾರ ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡಿವೆ ಹಾಗೂ ಇನ್ನು ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬಹುದೆಂದು ನೋಡುವುದು ಇದೆ. ತಮಗೆ ಗೊತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದ್ದು 1989 ರಲ್ಲಿ ಈ ಮುಳವಾಡ ಏತ ನೀರಾವರಿ ಯೋಜನೆಯ ಶಂಕುಸ್ಥಾಪನೆ ಆಗಿದ್ದು 1985ರಲ್ಲಿ. 1985ರಲ್ಲಿ ಮುಳುವಾಡಿನಲ್ಲಿ ಶಂಕುಸ್ಥಾಪನೆ ಆಗಿದ್ದರೂ 1989 ರವರೆಗೆ ಅಂದರೆ 4 ವರ್ಷಗಳ ಕಾಲ ಯಾರೂ ಸತ್ಯಾಗ್ರಹ ಮಾಡುವುದಕ್ಕೆ ಹೋಗಿಲ್ಲ. ಈಗ ನಾವು ಅದಕ್ಕೆ ಆಡಳಿತ ಮಂಜೂರಾತಿ ಕೊಟ್ಟು, ಹಣ ಕೊಟ್ಟು ಕೆಲಸ ಪ್ರಾರಂಭ ಮಾಡಿದ್ದೇವೆ. ಈಗ ಕೆಲಸಕ್ಕೆ ಸ್ವಲ್ಪ ಜಾಸ್ತಿ ಹಣ ಖರ್ಚು ಮಾಡಬೇಕೆಂಬುದಷ್ಟೇ ಇರುವುದು. ಅದಕ್ಕೂ ನಾವು ಸಿದ್ಧರಿದ್ದೇವೆ. ಈ ಬಜೆಟ್‌ನಲ್ಲಿ ನಾವು ಹಣವನ್ನು ಒದಗಿಸಿದ್ದೇವೆ. ಶಂಕುಸ್ಥಾಪನೆ ಆದಮೇಲೆ 4 ವರ್ಷಗಳ ಕಾಲ ಆ ಊರಿನವರು ಏನು ನಿದ್ದೆ ಮಾಡುತ್ತಿದ್ದರೇ? ಮಾನ್ಯ ಮನೋಹರ ಐನಾಪುರ್ ಅವರು ಶಾಸಕರಾಗಿ ಬಂದಮೇಲೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ಅದಕ್ಕೆ ಆ ಊರಿನವರು ಅವರಿಗೆ ಹೂಮಾಲೆ ಹಾಕಬೇಕಾಗಿತ್ತು. ಆದರೆ ಈ ರೀತಿ ವರ್ತನೆ ಮಾಡತಕ್ಕದ್ದು ಯಾರಿಗೂ

ಸರಿಯಲ್ಲ. ಅದಕ್ಕೆ We condemn that kind of action. All of us should join. ಇಂತಹ ಪ್ರವೃತ್ತಿ ಇನ್ನು ಮುಂದೆ ಕರ್ನಾಟಕ ರಾಜ್ಯದಲ್ಲಿ ನಡೆಯದ ಹಾಗೆ ಸರ್ಕಾರ ಕೂಡಾ ಕಟ್ಟುನಿಟ್ಟಿನ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ನಾವೂ ಕೂಡ ಇಂತಹ ಪ್ರವೃತ್ತಿಗಳಿಗೆ ಯಾವುದೇ ರೀತಿಯಿಂದ ಒಂದು ಪ್ರೋತ್ಸಾಹ ಅಥವಾ ಯಾವುದೇ ರೀತಿಯ ಉತ್ತೇಜನವನ್ನು ಕೊಡದ ರೀತಿಯಲ್ಲಿ ನೋಡಬೇಕಾಗುತ್ತದೆ. ಇಲ್ಲದಿದ್ದರೆ ಸಾರ್ವಜನಿಕ ಪ್ರತಿನಿಧಿಗಳಿಗೆ ಮಹತ್ವವಾಗಲಿ ಅಥವಾ ಸಾರ್ವಜನಿಕ ಪ್ರತಿನಿಧಿಗಳು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. This is a fit case to be referred to the privilege Committee. ಮಾನ್ಯ ಸದಸ್ಯರ ಹಕ್ಕುಭಾದ್ಯತೆಗಳ ಇಂಪ್ರಿಂಜ್‌ಮೆಂಟ್ ಏನು ಆಗಿದೆ, ಅದೂ ಕೂಡ ಸದನ ನಡೆಯುತ್ತಿರುವ ಸಮಯದಲ್ಲಿ ಆಗಿರುವುದರಿಂದ ಅವರ ಹಕ್ಕುಭಾಧ್ಯತೆಗಳಿಗೆ ತೊಂದರೆ ಆಗಿದೆ. It is a fit case to be referred to the privileges Committee. Whatever decision the Privilege Committee takes, let it be placed before this House.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕಿಣಿಯವರೇ, ಹೇಗೂ ಮಾನ್ಯ ಸಚಿವರು ಅಲ್ಲಿಗೆ ಹೋಗುತ್ತಿದ್ದಾರೆ. ಅವರು ಅಲ್ಲಿಗೆ ಹೋಗಿಬರಲಿ. ಆಮೇಲೆ ಮಾನ್ಯ ಸದಸ್ಯರು ಏನು ಸೂಚನೆ ಇಟ್ಟಿದ್ದಾರೆ ಅದರ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಆರ್. ದಯಾನಂದ ರಾವ್ : ಸದನ ನಡೆಯುವ ಸಮಯದಲ್ಲಿ ಈ ರೀತಿ ಅವರು ಬಂಧನದಲ್ಲಿ ಇಡಬಾರದಿತ್ತು. ಇದು ಅವರ ಹಕ್ಕಿನ ಪ್ರಶ್ನೆ ಆಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಸಚಿವರು ಹೋಗಿಬಂದಮೇಲೆ ನೋಡೋಣವೆಂದು ಈಗಾಗಲೇ ಹೇಳಿದ್ದಾರೆ.

Sri Qamarul Islam : Yesterday, Hon'ble Minister for Power stated that he will make a statement regarding an issue raised by me. The issue is that an Executive Engineer has said to an employee, who belongs to SC/ST as "Holeya". Not only that he has beaten him and the strike is going on in the whole of Gulbarga city. The Hon'ble Minister assured the House that he will make a statement. I request him through the Chair to kindly make a statement.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ : ಅದರ ಡೀಟೈಲ್ಸ್ ಇನ್ನು ನನಗೆ ಬಂದಿಲ್ಲ. ನಿನ್ನೆ ವಿತ್‌ಡ್ರಾ ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಅವರು ಏನು ಮಾಡಿದ್ದಾರೆನ್ನುವುದು ಗೊತ್ತಿಲ್ಲ. ಇದರ ಬಗ್ಗೆ ಹೇಳಿಕೆಯನ್ನು ನಾನು ಆಮೇಲೆ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರ ಆಡಳಿತ ಮಂಡಳಿಗಳಿಗೆ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಕಿರಿಯ ಕಾಲೇಜುಗಳನ್ನು ನಡೆಸುವುದಕ್ಕೆ ಸರ್ಕಾರದಿಂದ ಅನುಮತಿ.

ಶ್ರೀ ಮನೋಹರ್ ಐನಾಪುರ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರ ಆಡಳಿತ ಮಂಡಳಿಗಳಿಗೆ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಕಿರಿಯ ಕಾಲೇಜುಗಳನ್ನು ನಡೆಸುವುದಕ್ಕೆ ಸರ್ಕಾರದಿಂದ ಅನುಮತಿ ನೀಡುವ ಬಗ್ಗೆ ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೇ ಈ ಕೆಳಕಂಡ ಹೇಳಿಕೆಯನ್ನು ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವ್ಯವಸ್ಥಾಪಕ ಮಂಡಳಿಗಳಿಗೆ ಸೇರಿದ ವಿದ್ಯಾಸಂಸ್ಥೆಗಳ ವಿವರ ಈ ರೀತಿ ಇದೆ :

ಪ್ರಾಥಮಿಕ ಶಾಲೆಗಳು	718
ಪ್ರೌಢಶಾಲೆಗಳು	355
ಸಂಯುಕ್ತ ಕಿರಿಯ ಕಾಲೇಜುಗಳು	15

ರಾಜ್ಯದಲ್ಲಿ ಒಟ್ಟು 4779 ಖಾಸಗಿ ಪ್ರಾಥಮಿಕ ಶಾಲೆಗಳಿದ್ದು ಇದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು - 718.

ರಾಜ್ಯದಲ್ಲಿ 708 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಪ್ರೌಢ ಶಾಲೆಗಳಿದ್ದು, ಇವುಗಳಲ್ಲಿ 355 ಅನುದಾನಕ್ಕೆ ಒಳಪಟ್ಟಿರುತ್ತವೆ. ಇನ್ನು 85 ಶಾಲೆಗಳು ಅನುದಾನಕ್ಕೆ ಒಳಪಡಬೇಕಿರುತ್ತದೆ. ಮತ್ತು 268 ಶಾಲೆಗಳು ಶಾಶ್ವತ ಅನುದಾನರಹಿತ ಸಂಸ್ಥೆಗಳು.

ರಾಜ್ಯದಲ್ಲಿ 606 ಖಾಸಗಿ ಪರಿಶಿಷ್ಟ ಜಾತಿ / ಸಂಯುಕ್ತ ಪದವಿಪೂರ್ವ ಕಾಲೇಜುಗಳಿದ್ದು ಇವುಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಡಗಳ ಆಡಳಿತ ಮಂಡಳಿಯವರು ನಡೆಸುತ್ತಿರುವ ಸಂಯುಕ್ತ ಪದವಿಪೂರ್ವ ಕಿರಿಯ ಕಾಲೇಜುಗಳು - 57.

ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳು ನಡೆಸುವ ಶಾಲೆಗಳು ಸರ್ಕಾರದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ 1984-85ರ ವರೆವಿಗೆ ಪ್ರಾರಂಭಿಸಲಾದ ಶಾಲೆಗಳಿಗೆ ಐದು ವರ್ಷ ಪೂರೈಸಿದ ನಂತರವೂ ಹಾಗೂ 1985-86ರ ನಂತರ ಪ್ರಾರಂಭಿಸಿದ ಶಾಲೆಗಳಿಗೆ ಏಳು ವರ್ಷಗಳ ನಂತರವೂ ಅನುದಾನಕ್ಕೆ ಒಳಪಡಿಸಲಾಗುತ್ತಿದೆ.

ಅನುದಾನ ಸಂಹಿತೆ ನಿಯಮಗಳನ್ನು ಪಾಲಿಸಿರುವ ಹಾಗೂ ಜಿಲ್ಲಾ ಉಪ ನಿರ್ದೇಶಕರುಗಳಿಂದ ಶಿಫಾರ್ಸಿನಿಂದ ಬಂದಂತಹ ಪ್ರಸ್ತಾಪನೆಗಳನ್ನು ಸರ್ಕಾರದ ಮಟ್ಟದಲ್ಲಿ ಅನುದಾನಕ್ಕೆ ಒಳಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಯವರು ನಡೆಸುತ್ತಿರುವ ಸಂಯುಕ್ತ ಕಿರಿಯ ಕಾಲೇಜುಗಳು - 57. ಇವುಗಳ ಪೈಕಿ 15 ಅನುದಾನಕ್ಕೆ ಒಳಪಟ್ಟಿದ್ದು 40 ಕಿರಿಯ ಕಾಲೇಜುಗಳ ಶಾಶ್ವತ ಅನುದಾನ ರಹಿತವಾಗಿ ಮಂಜೂರಾಗಿರುತ್ತವೆ. ಉಳಿದ 2 ಸಂಯುಕ್ತ ಕಿರಿಯ ಕಾಲೇಜುಗಳು ಅನುದಾನ ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಈಗಾಗಲೇ ಆಯವ್ಯಯದ ಕೊರತೆಯಿಂದಾಗಿ ಕೆಲವು ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸದೇ ಇರುವುದರಿಂದ ಹಾಗೂ ಆಡಳಿತ ಮಂಡಲಿಯವರು ತಾವಾಗಿಯೇ ಸ್ವತಃ ಅನುದಾನರಹಿತವಾಗಿ ನಡೆಸುವುದಾಗಿ ಕೋರಿಕೆ ಬಂದದ್ದರಿಂದ ಶಾಶ್ವತ ಅನುದಾನರಹಿತವಾಗಿ ಮಂಜೂರಾತಿ ನೀಡಿದೆ.

† ಶ್ರೀ ಮನೋಹರ್ ಐನಾಪುರ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಸರ್ಕಾರಿ ಆದೇಶದ ಪ್ರಕಾರ ಇಡಿ 155 ಎಜಿಸಿ 74 ದಿನಾಂಕ 6-6-1977 ಮತ್ತು ಇಡಿ 72 ಇಯು 83 ದಿನಾಂಕ 5-1-1984 ಈ ಆದೇಶಗಳಲ್ಲಿ ಕೆಲವೊಂದು ಷರತ್ತುಗಳನ್ನು ಹಾಕಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳವರು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಪ್ರಥಮ ವರ್ಷದಿಂದಲೇ ಸರ್ಕಾರಿ ಅನುಧಾನವನ್ನು ಕೊಡಬೇಕೆಂದು ಒಂದು ಸರ್ಕಾರಿ ಆದೇಶವಿದೆ. ಆದರೂ ಇತ್ತೀಚೆಗೆ ಈ ಸರ್ಕಾರಿ ಆದೇಶಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಶಾಶ್ವತ ಅನುದಾನರಹಿತವೆಂದು ಸರ್ಕಾರ ಪ್ರಾಥಮಿಕ ಶಾಲೆಗಳನ್ನು, ಪ್ರೌಢಶಾಲೆಗಳನ್ನು ಹಾಗೂ ಕಿರಿಯ ಕಾಲೇಜುಗಳನ್ನು ಮಾನ್ಯತೆ ಮಾಡುತ್ತಿದೆ. ನನ್ನ ಪ್ರಶ್ನೆ ಇಷ್ಟೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಂಸ್ಥೆಗಳು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಪ್ರಥಮ ವರ್ಷದಿಂದಲೇ ಅನುದಾನ ಪಡೆಯಲಿಕ್ಕೆ ಅರ್ಹರಿದ್ದರೂ ಗ್ರಾಂಟ್ ಇನ್ ಏಡ್ ಕೋಡನ್ನು ಅಮೆಂಡ್ ಮಾಡದೆ ಅಥವಾ ಸರ್ಕಾರಿ ಆದೇಶ ಯಾವುದು ಎಕ್ಸಿಸ್ಟೆನ್ಸ್‌ನಲ್ಲಿ ಇದೆ ಅದನ್ನು ವಿತ್‌ಡ್ರಾ ಮಾಡಲಾರದೆ ಈ ತರಹ ಆದೇಶ ನೀಡಿರುವುದು ಸರಿಯೆ? ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳವರು ನಡೆಸುತ್ತಿರುವ ಶಾಲಾ ಕಾಲೇಜುಗಳನ್ನು ಯಾವ ರೀತಿ ನಡೆಸಬೇಕು? ಆಮೇಲೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ರೀತಿ ಹೇಳಿದ್ದಾರೆ "ಈಗಾಗಲೇ ಆಯವ್ಯಯದ ಕೊರತೆಯಿಂದಾಗಿ ಕೆಲವು ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸದೇ ಇರುವುದರಿಂದ ಹಾಗೂ ಆಡಳಿತ ಮಂಡಳಿಯವರು ತಾವಾಗಿಯೇ ಸ್ವತಃ ಅನುದಾನರಹಿತವಾಗಿ ನಡೆಸುವುದಾಗಿ ಕೋರಿಕೆ ಬಂದದ್ದರಿಂದ ಶಾಶ್ವತ ಅನುದಾನ ರಹಿತವಾಗಿ ಮಂಜೂರಾತಿ ನೀಡಿದೆ" ಎಂದು ಹೇಳಿದ್ದಾರೆ. ಈ ಕೋರಿಕೆ ಬಂದಿರುವುದು ಸಂಘಸಂಸ್ಥೆಗಳಿಂದ ಅಲ್ಲ. ಇಲಾಖೆಯವರು ಒತ್ತಾಯಪೂರ್ವಕವಾಗಿ ಹತ್ತು ರೂಪಾಯಿ ಸ್ಟಾಂಪ್ ಪೇಪರ್‌ನಲ್ಲಿ ಬಾಂಡ್ ಬರೆದುಕೊಟ್ಟರೇನೇ ನಾವು ಪರ್ಮಿಷನ್ ಕೊಡುತ್ತೇವೆ ಎಂದು ಹೇಳಿದ ನಂತರ ಅವರು ಬರೆದುಕೊಟ್ಟಿದ್ದಾರೆ.

ಉಪಾಧ್ಯಕ್ಷರು : ಏನಾದರೂ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಮನೋಹರ್ ಐನಾಪುರ್ : ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ಎಕ್ಸಿಸ್ಟಿಂಗ್ ಆರ್ಡರ್ ಪ್ರಕಾರ ಕೊಡಲೇಬೇಕಾಗುತ್ತದೆ. ಅದಕ್ಕೆ ಸಮರ್ಪಕವಾದ ಉತ್ತರವನ್ನು ಮಾನ್ಯ ಸಚಿವರಿಂದ ಅಪೇಕ್ಷಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಈ ರೀತಿಯಾಗಿ ಅನುದಾನ ರಹಿತವಾಗಿ ಪರಿಶಿಷ್ಟ ವರ್ಗ ಮತ್ತು ಪಂಗಡಕ್ಕೆ ಶಿಕ್ಷಣ ಸಂಸ್ಥೆಗಳನ್ನು ಕೊಡುವುದು ನಮ್ಮ ಸರ್ಕಾರಕ್ಕೂ ಕೂಡ ಅದು ಹಿತಕರವಾದಂಥ ಒಂದು ವಿಚಾರ ಅಲ್ಲ. ಆದರೆ ಏನಾಗಿದೆ ಎಂದರೆ, 1987-88 ರಿಂದ

ಈ ಅನುದಾನರಹಿತವಾಗಿ ಕೊಡತಕ್ಕಂಥ ಒಂದು ಆದೇಶವನ್ನು ಸರ್ಕಾರ ಕೊಡುತ್ತಲೇ ಇದೆ. ಇದಕ್ಕೆ ಏನು ಕಾರಣ ಏನೆಂದರೆ, ಆಯಾಯ ವರ್ಷ ನಾವು ಇಂತಿಷ್ಟೇ ಸಂಪನ್ಮೂಲವನ್ನು ಅನುದಾನಕ್ಕೆ ಒಳಪಡಿಸಬೇಕು ಎಂದು ಬಜೆಟ್‌ನಲ್ಲಿ ಹಣ ಇಡುತ್ತೇವೆ. ಅದು ಎಷ್ಟು ಹಣ ಇದೆ, ಸಂಪನ್ಮೂಲಕ್ಕೆ ಸರಿಯಾಗಿ ಸಂಸ್ಥೆಗಳನ್ನು ಕೊಟ್ಟರೆ ಅದು ಏನಾಗುತ್ತದೆ ಎಂದರೆ, ಅಪಾರವಾದಂಥ ಬೇಡಿಕೆಗಳು ಅದು ಪ್ರೌಢಶಾಲೆ ಪ್ರಾರಂಭ ಮಾಡುವುದಕ್ಕೆ, ಪ್ರಥಮದರ್ಜೆ ಕಾಲೇಜು ಪ್ರಾರಂಭ ಮಾಡುವುದಕ್ಕೆ ಪದವಿಪೂರ್ವ ಕಾಲೇಜು, ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಪರಿಶಿಷ್ಟ ವರ್ಗ ಮತ್ತು ಪಂಗಡಗಳಿಂದ ಅರ್ಜಿಗಳು ಬಂದಿರುತ್ತವೆ. ಆ ಅರ್ಜಿಗಳನ್ನೆಲ್ಲ ತಿರಸ್ಕಾರ ಮಾಡಬೇಕಾಗುತ್ತದೆ. ಹಿಂದೆ ಎಲ್ಲ ಹೀಗೆ ಆಗುತ್ತಿರಲಿಲ್ಲ. ಹಿಂದೆ ಏನು ಸಂಸ್ಥೆಗಳು ಬರುತ್ತಿದ್ದವು ಮತ್ತು ಆಯಾಯ ವರ್ಷ ಎಷ್ಟು ಅನುದಾನಕ್ಕೆ ಒಳಪಡಿಸುವುದಕ್ಕೆ ಎಷ್ಟು ಸಂಪನ್ಮೂಲ ಇದೆ ಅದಕ್ಕೆ ಹೊಂದಿಕೊಂಡು ಅಂತಹ ಸಂಸ್ಥೆಗಳನ್ನು ಮಾಡುತ್ತಿದ್ದರು. ಈಗ ಬೇಡಿಕೆಗಳು ಅಪಾರವಾಗಿ ಬಂದಾಗ ಸರ್ಕಾರಕ್ಕೆ ಇರತಕ್ಕದ್ದು ಎರಡು ಆಪ್‌ಶನ್ಸ್. ಒಂದು ಅಪಾರವಾದಂಥ ಅರ್ಜಿಗಳನ್ನು ತಿರಸ್ಕಾರ ಮಾಡತಕ್ಕದ್ದು ಅಥವಾ ಅನುದಾನರಹಿತವಾಗಿ ಮಂಜೂರು ಮಾಡತಕ್ಕದ್ದು. 1987-88 ರಿಂದ ಇದು ನಡೆದುಕೊಂಡು ಬಂದಿದೆ. ಇದನ್ನು ತಪ್ಪಿಸಬೇಕೆಂದು ಹೇಳತಕ್ಕ ತಮ್ಮ ಆಶಯ ಸರಿ ಇದೆ. ಅದಕ್ಕಾಗಿ ನಾವು ಏನು ಮಾಡುತ್ತಿದ್ದೇವೆ ಎಂದರೆ, ಡಾ।। ನಾಗರಾಜ್, ಮಾಜಿ ಕುಲಪತಿ, ಗುಲ್ಬರ್ಗ ಅವರ ಅಧ್ಯಕ್ಷತೆಯಲ್ಲಿ ಮಣಿಕಟ್ಟಿ, ಕೆ.ಎಂ. ಕೋಟಿ ಇವರು ಸದಸ್ಯರನ್ನು ಒಳಗೊಂಡ, ಶ್ರೀಮತಿ ಶಾರದಮ್ಮ, ಸೆಕೆಂಡರಿ ಬೋರ್ಡ್ ಅಧ್ಯಕ್ಷರು, ಅವರನ್ನು ಕಾರ್ಯದರ್ಶಿಯನ್ನಾಗಿ ಮಾಡಿ ಒಂದು ಸಮಿತಿಯನ್ನು ಮಾಡಿದ್ದೇವೆ. ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುವುದಕ್ಕೆ ಸಾಧ್ಯವಿದೆ ಎಂದು ಸಲಹೆ ನೀಡಲು ಇದನ್ನು ಮಾಡಿದ್ದೇವೆ. ಮತ್ತು ಕೆಲವು ಕಡೆಗಳಿಂದ ನಮಗೆ ದೂರುಗಳು ಬಂದಿವೆ. ಏನೆಂದರೆ, ಎಸ್‌ಸಿ / ಎಸ್‌ಟಿ ಅವರ ಹೆಸರಿನಲ್ಲಿ ಬೇರೆಯವರು ಸಂಸ್ಥೆಗಳನ್ನು ನಡೆಸಿಕೊಂಡು ಅನುದಾನ ತೆಗೆದುಕೊಂಡು ಸಾಕಷ್ಟು ಅನ್ಯಾಯ ಈ ವರ್ಗದವರಿಗೆ ಆಗಿದೆಯೆಂದು ವರದಿ ಬಂದಿದ್ದು ಇದನ್ನು ಸರಿಪಡಿಸಬೇಕೆಂದು ಈಗಾಗಲೇ ಸಮಿತಿಯನ್ನು ಮಾಡಿದ್ದೇವೆ. ಅನುದಾನಕ್ಕೆ ಯಾವ ರೀತಿ ಒಳಪಡಿಸಬೇಕು ಎನ್ನುವುದೂ ಇದೆ. ಈಗ ತಾವೆಲ್ಲ ಹೇಳಿದರೆ, ಇಲ್ಲ ಅನುದಾನ ಕೊಡಲಿಕ್ಕೆ ಆಗದಿದ್ದರೆ ಸಂಸ್ಥೆಗಳಿಗೆ ಅನುಮತಿ ಕೊಡಬೇಡಿ ಎಂದರೆ ಬರುವ ವರ್ಷದಿಂದ ಕೊಡುವುದು ಬೇಡ; ಆದರೆ ಏನಾಗುತ್ತದೆ ಎಂದರೆ, ಅನುದಾನರಹಿತವಾದರೂ ಕೊಡಿ ಎಂದು ಬಲವಂತ ಯಾರನ್ನೂ ಮಾಡುವುದಿಲ್ಲ. ಅನುದಾನ ರಹಿತವಾಗಿ ಕೊಡು ಎಂದು ಹೇಳಿದರೆ ಆಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಆಗುವುದಿಲ್ಲ ಎಂದು ಹೇಳಬೇಕು ಎಂದು ತಮ್ಮೆಲ್ಲರ ಆಶಯ ಇದ್ದರೆ I don't mind; I can reject all the applications ಇಲ್ಲ, ಕೊಡಬೇಕು ಎಂದರೆ, ನಮ್ಮ ಬಜೆಟ್‌ನಲ್ಲಿ ಅನುದಾನ ಎಷ್ಟು ಇದೆ, ಅಷ್ಟೇ ಸಂಸ್ಥೆಗಳಿಗೆ ಕೊಡಬಹುದೇ ಹೊರತು ವಿಶೇಷವಾದ ಸಂಖ್ಯೆಯಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಪರಿಸ್ಥಿತಿ ಈ ರೀತಿ ಇದೆ.

ಡಾ।। ಜಿ. ಪರಮೇಶ್ವರ್ : ಮಾನ್ಯ ಉಪಾಧ್ಯಕ್ಷರೇ, ನಮ್ಮದೂ ಒಂದು ದೊಡ್ಡ ಜವಾಬ್ದಾರಿ ಇದೆ. ಸರ್ಕಾರದ್ದು ಬಹಳ ದೊಡ್ಡ ಜವಾಬ್ದಾರಿ ಎಂದರೆ ಶಿಕ್ಷಣವನ್ನು ಎಲ್ಲರಿಗೂ ಕೊಡತಕ್ಕಂಥ ವಿಚಾರ. ಅದು ಪರಿಶಿಷ್ಟ ಜಾತಿ ಇರಬಹುದು, ಪರಿಶಿಷ್ಟ ಜನಾಂಗದವರಿಗೆ ಇರಬಹುದು ಅಥವಾ ಯಾರಿಗೇ ಇರಬಹುದು. ಆದರೆ 1971-72ರಲ್ಲಿ ಅದಕ್ಕೆ ಮುಂಚೆ ಸರ್ಕಾರ ಒಂದು ಕಾನೂನು ಮಾಡಿದೆ. ಪರಿಶಿಷ್ಟ ಜಾತಿ, ಜನಾಂಗದವರು ಯಾರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಾರೆ, ಅವರೇ ನಡೆಸಿದರೆ 50 ಪರ್ಸೆಂಟ್ ಆ ಜನಾಂಗಕ್ಕೆ ಒಂದು ಸ್ಪೆಸಿಫಿಕೇಶನ್ ಇಟ್ಟುಕೊಂಡು, ಅವರಿಗೆ ಒಂದು

ಶಾಲೆಯನ್ನು ನಡೆಸಿದರೆ ಬಹುಶಃ ಅವರಲ್ಲಿ ಎಲ್ಲರೂ ಸಹ ವಿದ್ಯಾವಂತರಾಗಬಹುದು ಎನ್ನುವ ಹಿನ್ನಲೆಯಲ್ಲಿ ಇದನ್ನು ಮಾಡಿದ್ದಾರೆ. ಆದರೆ ಇವತ್ತಿನ ದಿವಸ ಯಾವುದೇ ಕಾರಣ ಇಲ್ಲದೆ, ಹಣಕಾಸಿನ ತೊಂದರೆ ಇದೆಯೆಂದು ಹೇಳಿಕೊಂಡು ಏಕಾಏಕಿಯಾಗಿ ಆ ಶಾಲೆಗಳಿಗೆ ಅನುದಾನ ರಹಿತವಾಗಿ ಮಾಡಿಬಿಟ್ಟರೆ ಬಹಳ ತೊಂದರೆಯಾಗುತ್ತದೆ. The very purpose is defeated. ಆದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ, ಅಂತಹ ಶಾಲೆಗಳು ಇವತ್ತಿನ ದಿವಸ ಬಹಳ ಕಡಿಮೆ ಇವೆ. ಯಾರು ಪರಿಶಿಷ್ಟ ಜಾತಿ, ಜನಾಂಗದವರು ನಡೆಸುತ್ತಿದ್ದಾರೆ ಈ ಸಂಯುಕ್ತ ಕಿರಿಯ ಕಾಲೇಜುಗಳು 57ರಲ್ಲಿ ಬರೇ 15 ಅನುದಾನಕ್ಕೆ ಒಳಗಾದಂಥ ಶಾಲೆಗಳು ಇವೆ.

ಅದಕ್ಕಾಗಿ ಈ ಒಂದು ಕ್ರಮವನ್ನು ತೆಗೆದುಕೊಂಡಿರುವುದು ಸರಿಯಲ್ಲ. ಅವರಿಗೆ ಮತ್ತೆ ಮೊದಲನೇ ವರ್ಷದಿಂದಲೇ ಅನುದಾನ ಕೊಡಬೇಕೆಂದು ಮಂತ್ರಿಯವರಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಈ ವಿಚಾರದಲ್ಲಿ ಸಂಬಂಧಪಟ್ಟ ಶಾಸಕರ ಅಭಿಪ್ರಾಯವನ್ನು ಕೇಳುವುದಕ್ಕಾಗಿ ಸಭೆಯನ್ನು ಕರೆಯುತ್ತೇನೆ. ತಾವು ಏನು ಹೇಳುತ್ತೀರಿ, ಅದರಂತೆ ಮಾಡೋಣ. ಬರುವ ವರ್ಷ ಬಜೆಟ್‌ನಲ್ಲಿ ಇಂತಿಷ್ಟು ಹಣ ಎಂದು ಇದೆ. ಅದರಲ್ಲಿ ಇಷ್ಟು ಎಂದು ಅನುದಾನಕ್ಕೆ ಮಾಡೋಣ, ಉಳಿದುದನ್ನು ತಿರಸ್ಕಾರ ಮಾಡಬೇಕೆಂದು ತಾವೆಲ್ಲರೂ ಒಪ್ಪಿದರೆ, ಅದರಂತೆ ನಾನು ಮಾಡುತ್ತೇನೆ. I will call a meeting of all the legislators belonging to Scheduled Castes and Scheduled Tribes and we will take a suitable decision.

ಶ್ರೀ ಬಾಬುರಾವ್ ಚವಾಣ್ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ತಾನೆ ಮಾನ್ಯ ಮನೋಹರ ಐನಾಪುರ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ಹೇಳಿದ್ದಾರೆ. ನಾನು ಹೇಳತಕ್ಕಂಥ ಮುಖ್ಯ ಪ್ರಶ್ನೆ ಏನೆಂದರೆ, ಒಬ್ಬ ಬಲಿಷ್ಟವಾದ ಮನುಷ್ಯನನ್ನು, ಒಬ್ಬ ಅಶಕ್ತ ಮನುಷ್ಯನಿಗೆ ಹೋಲಿಕೆ ಮಾಡಿ, ರನ್ನಿಂಗ್ ಮಾಡಿ ಎಂದು ಹೇಳಿದರೆ ಅವನು ಹೇಗೆ ರನ್ನಿಂಗ್‌ನಲ್ಲಿ ಫಸ್ಟ್ ಬರುತ್ತಾರೆ ಎಂದು ತಾವು ಹೇಳುತ್ತೀರಾ? ಅಶಕ್ತ ಇರತಕ್ಕಂಥ ಒಬ್ಬ ಮನುಷ್ಯ, ಒಬ್ಬ ಸ್ಟ್ರಾಂಗ್ ಇರತಕ್ಕ ಮನುಷ್ಯನ ಜೊತೆ ರನ್ನಿಂಗ್‌ನಲ್ಲಿ ತಾವು ರೇಸ್ ಮಾಡಿ ಓಡಿಸಿದರೆ ಹಿಂದೆ ಬೀಳುತ್ತಾನೆಯೇ ಹೊರತು ಮುಂದೆ ಬರುವುದಕ್ಕೆ ಸಾಧ್ಯವೇ ಇಲ್ಲ, ಹರಿಜನ ಗಿರಿಜನ ಸಮುದಾಯಕ್ಕೆ ಸೇರಿದ ಆಡಳಿತ ಮಂಡಳಿಯವರು ಶಾಲೆ ನಡೆಸುತ್ತಾರೆ, ಅದು ಆರ್ಥಿಕವಾಗಿ ಹಿಂದುಳಿದಿರತಕ್ಕ ಸಮುದಾಯ. ಇವರಿಗೆ ಆರ್ಥಿಕ ಪರಿಸ್ಥಿತಿ ಸರಿ ಇರುವುದಿಲ್ಲ, ಇವರಿಗೆ ಮೊದಲೇ ವಿದ್ಯೆ ಇರುವುದಿಲ್ಲ. ಸರ್ಕಾರದ ನೀತಿ ಏನೆಂದರೆ, ಈ ಜನರಿಗೆ ವಿದ್ಯೆ ಸಿಗಲಿ, ವಿದ್ಯೆಯಲ್ಲಿ ಮುಂದೆ ಬರಲಿ, ಅವರು ಶಾಣೆಯರಾಗಲಿ ಎಂಬುದೇ ಆಗಿದೆ. ಈ ವರ್ಗವು ಕೆಳದರ್ಜೆಯಲ್ಲಿರತಕ್ಕ ಸಮಾಜ. ಮೇಲ್ದರ್ಜೆಗೆ ಬರಲಿ ಶಿಕ್ಷಣ ಇರಲಿ ಎಂಬ ಸರ್ಕಾರಕ್ಕೆ ನೀತಿಯಿಂದ ಗ್ರ್ಯಾಂಟ್ ಇನ್ ಏಡ್ ಕೋಡ್‌ನಲ್ಲಿ ಒಂದು ಸ್ಪೆಸಿಫಿಕ್ ರೂಲ್ಸ್ ಮಾಡಿ, ಹರಿಜನ ಸಮಾಜವನ್ನು ಮೇಲೆ ಎತ್ತತಕ್ಕ ದೃಷ್ಟಿಯಿಂದ ಮಾಡಿದಂಥ ಈ ಕಾಯಿದೆ. ಇದರಲ್ಲಿ ತಾವು, ಜನರಲ್ ಸಂಸ್ಥೆಗಳಿಗೂ ಮತ್ತು ಹರಿಜನ ಗಿರಿಜನ ಸಂಸ್ಥೆಗಳಿಗೂ ಎರಡು ಸಂಸ್ಥೆಗಳಿಗೂ ಒಂದೇ ರೂಲ್ಸ್ ಮಾಡಿದರೆ, ಇದು ಯಾವ ತರದ? ಇದು ನಾನು ಹೇಳುತ್ತಿರತಕ್ಕಂಥ ಮಾತು, ಇದುವರೆಗೂ ಗ್ರ್ಯಾಂಟ್ ಕೊಡುತ್ತಿದ್ದಿರಿ. ಬೇರೆಯವರಿಗೂ ಗ್ರ್ಯಾಂಟ್ ಕೊಡುತ್ತಿಲ್ಲ, ಹರಿಜನ ಗಿರಿಜನ ಸಮುದಾಯಕ್ಕೂ ಗ್ರ್ಯಾಂಟ್ ಕೊಡುತ್ತಾ ಇಲ್ಲ. ನನ್ನ ಸ್ಪಷ್ಟ ಮನವಿ ಏನೆಂದರೆ, ಹರಿಜನ ಗಿರಿಜನ ಆಡಳಿತ ಮಂಡಲಿಯವರು ಎಷ್ಟು ಶಾಲೆಗಳನ್ನು ನಡೆಸುತ್ತಿದ್ದಾರೆ, ಅವರಿಗೆ ಪ್ರಾರಂಭದ ವರ್ಷದಿಂದಲೇ ತಾವು

ಗ್ರಾಂಟ್ ಕೊಡಬೇಕು. ಜನರಲ್ ಮ್ಯಾನೇಜ್‌ಮೆಂಟ್‌ಗೂ ಇವರಿಗೂ ಒಂದೇ ರೀತಿಯ ಟ್ರೀಟ್‌ಮೆಂಟ್ ಕೊಡಬಾರದು. ಇದು ಒಂದನೆಯದು. ಎರಡನೆಯದು, ಹರಿಜನ ಗಿರಿಜನರ ಹೆಸರಿನ ಮೇಲೆ ಬೇರೆ ಬಹಳ ಜನರು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ತಮ್ಮ ಅಕ್ಕಪಕ್ಕ ಇರತಕ್ಕಂಥ ಜನ, ತಮ್ಮ ಮನೆಯಲ್ಲಿ ದುಡಿಯತಕ್ಕ ಆಳುವಮಕ್ಕಳ ಹೆಸರಿನಲ್ಲಿ, ಮತ್ತು ಅಂಗೂಟ ಶಾಪ್‌ನಿಂದ ಹೆಬ್ಬೆಟ್ಟು ಒತ್ತಿಸಿಕೊಂಡು ಬರುತ್ತಾರೆ. ಮೇಲೆ ಮಾತ್ರ ಹರಿಜನ ಗಿರಿಜನರ ಹೆಸರು ಇರುತ್ತದೆ...

ಉಪಾಧ್ಯಕ್ಷರು : ಇದರ ಮೇಲೆ ತಾವು ಭಾಷಣ ಮಾಡುವುದಿಲ್ಲ. ಏನಾದರೂ ಕ್ಲಾರಿಫಿಕೇಷನ್ ಕೇಳಿದರೆ ಉತ್ತರ ಕೊಡುತ್ತಾರೆ.

ಶ್ರೀ ಬಾಬುರಾವ್ ಚವಾಣ್ : ಸರ್ಕಾರದವರು ಪರಿಶೀಲಿಸಿ ಇಂತಹ ಸಂಸ್ಥೆಗಳನ್ನು ತೆಗೆದುಹಾಕಬೇಕು. ಯಾವುದೇ ಹರಿಜನ, ಗಿರಿಜನರ ಹೆಸರಿನ ಮೇಲೆ ಬೇರೆಯವರು ನಡೆಸುತ್ತಿದ್ದರೆ, ಇದನ್ನು ದಯಮಾಡಿ ನೋಡಬೇಕು. ಇವತ್ತು ಇಲ್ಲೀಗಲ್ ಶಾಲೆಗಳು ಬಹಳಷ್ಟು ನಡೆಯುತ್ತಿವೆ. ಅದು ಫಾರ್ವರ್ಡ್ ಕಮ್ಯೂನಿಟಿ ಇರಬಹುದು ಅಥವಾ ಹರಿಜನ ಗಿರಿಜನ ಜನಾಂಗ ಇರಬಹುದು. ಇದನ್ನು ಪರಿಗಣನೆಗೆ ತೆಗೆದುಕೊಂಡು, ಇಂತಹ ಶಾಲೆಗಳನ್ನು ತೆಗೆದು ಹಾಕಿ ನ್ಯಾಯವಾಗಿರತಕ್ಕ ಶಾಲೆಗಳನ್ನು ನಡೆಸಬೇಕು. ಆಮೇಲೆ ಹರಿಜನ ಗಿರಿಜನರ ಸಂಸ್ಥೆಗಳಿಗೆ ಕೊಡತಕ್ಕ ಅನುದಾನದ ಪ್ರೊಸೀಜರ್ ಏನಿದೆ, ಅದು ಸರಿಯಿಲ್ಲ. ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಿದ್ದೇನೆ. ಈ ಹರಿಜನ ಗಿರಿಜನ ಸಮುದಾಯ ಆಡಳಿತ ಮಂಡಳಿಯವರು ಮೊದಲೇ ಶಾಲೆಗಳನ್ನು ಬಹಳ ಕಷ್ಟದಿಂದ ನಡೆಸುತ್ತಾರೆ. ಇವರು ಪರ್ಮಿಷನ್ ತೆಗೆದುಕೊಂಡ ನಂತರ ಎ.ಇ.ಒ. ಆಫೀಸಿಗೆ ಹೋಗಬೇಕು, ಪ್ರಪೋಸಲ್ ಸಬ್‌ಮಿಟ್ ಮಾಡಬೇಕು, ಅಲ್ಲಿಂದ ಫಾರ್ವರ್ಡ್ ಆಗಿ ಡಿ.ಡಿ.ಪಿ.ಐ. ಆಫೀಸಿಗೆ ಕೊಡಬೇಕು.

ಉಪಾಧ್ಯಕ್ಷರು : ನೀವು ಪ್ರಶ್ನೆ ಕೇಳದೇ ಭಾಷಣ ಮಾಡುತ್ತಿದ್ದೀರಿ. ಗಮನಸೆಳೆಯುವ ಸೂಚನೆ ಎಂದರೆ, ಕ್ಲಾರಿಫಿಕೇಷನ್ ಕೇಳಿದರೆ, ಅದಕ್ಕೆ ಉತ್ತರ ಕೊಡುತ್ತಾರೆ. ನೀವು ಬಜೆಟ್ ಡಿಮ್ಯಾಂಡ್ಸ್ ಬಂದಾಗ ವಿವರವಾಗಿ ಮಾತನಾಡಿ.

ಶ್ರೀ ಬಾಬುರಾವ್ ಚವಾಣ್ : ನಾನು ಅನುದಾನಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆ. ಡಿ.ಡಿ.ಪಿ.ಐ. ಆಫೀಸಿನಿಂದ ಜೆ.ಡಿ. ಆಫೀಸಿಗೆ ಹೋಗಬೇಕು, ಜೆ.ಡಿ. ಆಫೀಸಿನಿಂದ ಪ್ರೈಮರಿ ಎಜುಕೇಷನ್ ಡೈರೆಕ್ಟರ್‌ರವರಿಗೆ ಬರಬೇಕು, ಅನಂತರ ಸಿ.ಪಿ.ಐ. ರವರಿಗೆ ಬರಬೇಕು. ಸಿ.ಪಿ.ಐ. ನಿಂದ ಎಜುಕೇಷನ್ ಸೆಕ್ರೆಟರಿಯವರಿಗೆ ಬರಬೇಕು. ಅಲ್ಲಿಂದ ಮಾನ್ಯ ಮಂತ್ರಿಗಳ ಟೇಬಲ್ಲಿಗೆ ಬರುವ ಹೊತ್ತಿಗೆ, ಮಾನ್ಯ ಮಂತ್ರಿಗಳು ಪ್ರವಾಸ ಹೋಗಿರುತ್ತಾರೆ. ಆದ್ದರಿಂದ, ಹರಿಜನ ಗಿರಿಜನ ಸಮುದಾಯಕ್ಕೆ ಏನು ಗ್ರಾಂಟ್ ಕೊಡುತ್ತೀರಿ, ಅದನ್ನು ಅಲ್ಲಿಯೇ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಬಾಡಿಗೆ ಕಟ್ಟಡ ಮತ್ತು ಪೀಠೋಪಕರಣಗಳನ್ನೂ ಸರ್ಕಾರದಿಂದಲೇ ಕೊಡಬೇಕೆಂದು ಕಳಕಳಿಯ ಮನವಿಯಿಂದ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಏನು ಶಂಕೆಯನ್ನು, ಕಳವಳವನ್ನು ವ್ಯಕ್ತಪಡಿಸಿದ್ದಾರೆ, ಆ ಸಹಮತ ನನಗೂ ಇದೆ. ಆ ಸಹಮತ ಇದ್ದುದರಿಂದಲೇ ಡಾ।। ನಾಗರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಲಾಗಿದೆ. ಹಾಲಿ ಇರತಕ್ಕಂಥ ವ್ಯವಸ್ಥೆ ಏನಿದೆ, ಇದು ನಮ್ಮ ಸರ್ಕಾರ ಮಾಡಿರತಕ್ಕಂಥಾದ್ದಲ್ಲ. ಅನುದಾನರಹಿತವಾಗಿ ಕೊಡಬೇಕೆಂದು ನಮ್ಮ

ಸರ್ಕಾರ ಮಾಡಿದ್ದಲ್ಲ. 1987-88 ರಿಂದ ಇದು ನಡೆದುಕೊಂಡು ಬಂದಿದೆ. ಇದು ಸರಿ ಇಲ್ಲವೆಂಬ ಭಾವನೆಯಿಂದಲೇ ಈ ಸಮಿತಿಯನ್ನು ಮಾಡಿದ್ದೇವೆ. ಸಮಿತಿಯ ವರದಿಯನ್ನು ಆದಷ್ಟು ಜಾಗ್ರತೆಯಾಗಿ ತರಿಸಿ, ಇದಕ್ಕೆ ಒಂದು ವ್ಯವಸ್ಥಿತವಾದ ಸ್ವರೂಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮ 334ರ ಮೇರೆಗೆ

1. ಇಂದಿರಾ ಅವಾಸ್ ಯೋಜನೆಯ ದುರುಪಯೋಗ

ಶ್ರೀ ಚೌಡಾರೆಡ್ಡಿ (ಚಿಂತಾಮಣಿ) : ಮಾನ್ಯ ಅಧ್ಯಕ್ಷರೇ, ಚಿಂತಾಮಣಿ ತಾಲೋಕು ಕೋಟಗಲ್ ಮಂಡಲ್ ಪಂಚಾಯಿತಿ ವ್ಯಾಪ್ತಿಗೆ ಬರುವ ಶೆಟ್ಟಿಹಳ್ಳಿ ಗ್ರಾಮದಲ್ಲಿ ಶ್ರೀಮತಿ ಪನ್ನಕ್ಕ ಕೋಂ ಬಜ್ಜಪ್ಪರವರಿಗೆ ಇಂದಿರಾ ಅವಾಸ್ ಯೋಜನೆಯಲ್ಲಿ ವಾಸಕ್ಕೆ ಸರಕಾರದಿಂದ ಮನೆಕಟ್ಟಿಕೊಟ್ಟಿರುತ್ತಾರೆ ಮತ್ತು ಶ್ರೀಮತಿ ವೆಂಕಟಲಕ್ಷ್ಮಮ್ಮ ಕೋಂ ವೆಂಕಟರಮಣಪ್ಪರವರಿಗೂ ಹುಡ್ಕೊ ಯೋಜನೆಯಡಿಯಲ್ಲಿ ವಾಸಕ್ಕೆ ಮನೆ ಕಟ್ಟಿಸಿಕೊಟ್ಟಿರುತ್ತಾರೆ. ಮೇಲ್ಕಂಡ ಫಲಾನುಭವಿಗಳು ಸದರಿ ಎರಡು ಮನೆಗಳನ್ನು ಅದೇ ಗ್ರಾಮದ ಶ್ರೀ ನಾರಾಯಣಪ್ಪ ಬಿನ್ ರಾಮಣ್ಣರವರಿಗೆ ತಾ. 1.6.91 ರಲ್ಲಿ ಕ್ರಯ ಮಾಡಿರುತ್ತಾರೆ. ಇದರ ಬಗ್ಗೆ ನನ್ನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ನಂ. 2290ಕ್ಕೆ ಉತ್ತರವಾಗಿ

"It is reported by the Block Development Officer, Chintamani that these two persons are not living in the houses they have constructed with the assistance provided to them. He has also reported that he has no knowledge of the sale of the houses."

ಎಂಬಂತೆ ಲಿಖಿತ ಉತ್ತರ ಕೊಟ್ಟಿರುತ್ತಾರೆ. ದಿನಾಂಕ 12-1-92 ರಲ್ಲಿ

"Shri, K. Ranganathan Director (RWS & H) E.O., Deputy Secretary to Government, Rural Development & Panchayat Raj Department, Government of Karnataka, M.S. Building, Bangalore.

ರವರಿಗೆ ಪತ್ರ ಬರೆದು ನೀವು ಕೊಟ್ಟಿರುವ ಮಾಹಿತಿ ಸತ್ಯಕ್ಕೆ ದೂರವಾಗಿದೆ, ಈ ಮನೆಗಳನ್ನು ಪರಭಾರೆ ಮಾಡಿರುತ್ತಾರೆ. ಕಾನೂನು ರೀತ್ಯಾ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪತ್ರ ಬರೆದರೂ ಉತ್ತರ ಸಹ ದೊರಕುತ್ತಿಲ್ಲ. ಈ ತರಹದ ಸರಕಾರದ ಯೋಜನೆಗಳ ದುರುಪಯೋಗಪಡಿಸಿಕೊಳ್ಳುವುದರಿಂದ ಸರಕಾರದ ಹಣ ದುರುಪಯೋಗವಾಗಿರುವ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ರೆವಿನ್ಯೂ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಸೂಚನೆಯನ್ನು ಕಳುಹಿಸಿದಾಗ ಇದು ರೂರಲ್ ಡೆವೆಲಪ್‌ಮೆಂಟ್ ಮಿನಿಸ್ಟರ್‌ಗೆ ಬರುತ್ತಿತ್ತು. ಈಗ ಈ ರೂರಲ್ ಹೌಸಿಂಗ್ ವಿಷಯವನ್ನು, ರೂರಲ್ ಡೆವೆಲಪ್‌ಮೆಂಟ್ ಮಿನಿಸ್ಟರ್‌ರವರಿಂದ ವಿಥ್‌ಡ್ರಾ ಮಾಡಿ, ಹೌಸಿಂಗ್ ಮಿನಿಸ್ಟರ್‌ರವರಿಗೆ ಕೊಟ್ಟಿದ್ದಾರೆ. ಅವರ ಗಮನಕ್ಕೆ ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

2. ಹಾಸನ ನಗರದಲ್ಲಿ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆ ಅಡಿಯಲ್ಲಿ ಕಟ್ಟಿಸಿರುವ ಮಳಿಗೆಗಳನ್ನು ಬಾಡಿಗೆಗೆ ಕೊಡುವ ವಿಚಾರ

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆಯಿಂದ ಹಾಸನದ ಹಳೇ ಬಸ್ ಸ್ಟ್ಯಾಂಡ್‌ನಲ್ಲಿ ಮಳಿಗೆಗಳನ್ನು ಕಟ್ಟಿಸುತ್ತಿದ್ದಾರೆ. ಈ ಮಳಿಗೆಗಳನ್ನು ಸ್ಥಳೀಯ ಪೇಪರುಗಳಲ್ಲಿ ಜಾಹೀರಾತು ಕೊಟ್ಟು ಟೆಂಡರ್ ಮುಖಾಂತರ ಬಾಡಿಗೆಗೆ ಕೊಟ್ಟರೆ ಹೆಚ್ಚು ಈ ವಿಚಾರದಲ್ಲಿ ನಿಯಮಾವಳಿಯಂತೆ ಅಂಗಡಿಗಳನ್ನು ಸ್ಥಳೀಯ ಪೇಪರ್‌ಗಳಲ್ಲಿ ಟೆಂಡರ್ ಪ್ರಕಟಿಸಿ ಹೆಚ್ಚು ಬಿಡ್‌ದಾರರಿಗೆ ಅಂಗಡಿಗಳನ್ನು ಬಾಡಿಗೆಗೆ ಕೊಡುವಂತೆ ಹಾಸನ ಮುನಿಸಿಪಾಲಿಟಿಯವರಿಗೆ ಆದೇಶ ಕೊಡುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ನೆಹರೂ ರೋಜ್‌ಗಾರ್ ಯೋಜನೆಯಡಿಯಲ್ಲಿ ಹಾಸನ ನಗರಸಭೆಯು 18,10,500 ರೂಪಾಯಿಗಳ ವೆಚ್ಚದಲ್ಲಿ 18 ಅಂಗಡಿಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಈ ಕಟ್ಟಡವು ನಿರ್ಮಾಣದ ಹಂತದಲ್ಲಿದ್ದು ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳ ಕಾಲಾವಕಾಶ ಬೇಕಾಗಿದೆ. ಈ ಕಟ್ಟಡವು ಪೂರ್ಣಗೊಂಡನಂತರ ಹಾಸನ ನಗರಸಭೆಯು ಈ ಅಂಗಡಿಗಳನ್ನು ಹಂಚಿಕೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಳ್ಳಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಕೇಳಿದ್ದು ಟೆಂಡರ್ ಕರೆದು ಕೊಡಿರಿ ಎಂದು ಬಾಡಿಗೆಗೆ ಕೊಡುವುದು ನನಗೂ ಗೊತ್ತು.

ಉಪಾಧ್ಯಕ್ಷರು ; ಇದರ ಮೇಲೆ ತಾವು ಉಪ ಪ್ರಶ್ನೆ ಹಾಕುವಹಾಗೆ ಇಲ್ಲ. ಇದು ಒಂದು ಸ್ಟೇಟ್‌ಮೆಂಟ್ ಅಷ್ಟೆ.

3. ಸೇಡಂ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಶಾಸಕರ ಅಭಿಪ್ರಾಯದ ಮೇರೆಗೆ 1989-91ನೇ ಸಾಲಿನಲ್ಲಿ 12 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಟೆಂಡರ್ ಸಹ ಕರೆಯಲಾಗಿತ್ತು. ಆದರೆ ನನ್ನ ಕ್ಷೇತ್ರ ಸೇಡಂನಲ್ಲಿ, ಮುಧೋಳ್ ಅಪ್ರೋಚ್ ರೋಡ್ ಪೋಲೀಸ್ ಸ್ಟೇಷನ್‌ವರೆಗೆ ಮಳಖೇಡ್-ಚಿತಾಪುರ ರೋಡ್, ರಾಜಶ್ರೀ-ಕ್ರಾಸ್‌ವರೆಗೆ, ಹಾಗೂ ಸೇಡಂ ಕ್ಷೇತ್ರದ ಚಿತಾಪುರ ತಾಲೋಕಿನ ಸಾತನೂರು-ದಂದ್ರಕ್ಕಿ ರೋಡಿನ ಮೇಲೆ ಮತ್ತು ಸಾತನೂರ್-ಲಾಡ್ಲಪುರ್ ರೋಡಿನ ಮೇಲೆ ಹಳ್ಳಳ್ಳಿವರೆಗೆ ಕಾಮಗಾರಿಗಳನ್ನು ತೆಗೆದುಕೊಂಡು ಹಣ ಇಲ್ಲದ್ದಕ್ಕಾಗಿ ಗುತ್ತೇದಾರರು ಕೆಲಸ ಮಾಡಿಲ್ಲವೆಂದು ಹೇಳುತ್ತಿರುವುದು ನಿಜವೇ? ಎರಡು ವರ್ಷಗಳಾದರೂ ಈ ಕಾಮಗಾರಿಗಳನ್ನು ಪೂರ್ತಿ ಮಾಡಲಿಲ್ಲವೇಕೆ? ಈ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, 1990-91ನೇ ಸಾಲಿನಲ್ಲಿ ರಾಜ್ಯದ ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ, 12 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಡಿ ತೆಗೆದುಕೊಂಡಿದ್ದ ಕಾಮಗಾರಿಗಳನ್ನು 1991-92ನೇ ಸಾಲಿನಲ್ಲಿಯೂ ಮುಂದುವರಿಸಲಾಯಿತು. ಈ ಸಾಲಿಗೆ ಇದಕ್ಕೆ ಹೆಚ್ಚುವರಿಯಾಗಿ ಒಟ್ಟು 10 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಈ ಕಾರ್ಯಕ್ರಮಕ್ಕೆ ಹಣದ ಅಡಚಣೆ ಆಗುವುದಿಲ್ಲ.

ಈ ಕಾರ್ಯಕ್ರಮದಡಿಯಲ್ಲಿ ಸೇಡಂ ಮತ ಕ್ಷೇತ್ರದಲ್ಲಿಯೂ ಸಹ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿಕೊಟ್ಟಿದೆ. ಗುತ್ತಿಗೆದಾರರು ಕೆಲವು ರಸ್ತೆಗಳ ಮೇಲೆ ಸ್ವಲ್ಪ ಜಲ್ಲಿ ಸಂಗ್ರಹಣೆ ಮಾಡಿದ್ದು ಕಾಮಗಾರಿಗಳನ್ನು ನಿಧಾನ ಮಾಡಿದ್ದಾರೆ. ಇವರಿಗೆ ನೋಟೀಸ್‌ಗಳನ್ನು ನೀಡಿದ್ದು ಕಾಮಗಾರಿಗಳನ್ನು ಶೀಘ್ರ ಮುಗಿಸುವಂತೆ ತಿಳುವಳಿಕೆ ನೀಡಲಾಗಿದೆ.

ಈ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

4. ಪುತ್ತೂರು ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸುವುದು.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಸುಳ್ಯ ವಿಧಾನ ಸಭಾ ಕ್ಷೇತ್ರದ, ಪುತ್ತೂರು ತಾಲ್ಲೂಕಿನ ಕಸಬ ಕಂದಾ ಹೋಬಳಿಯ ಬಿಳಿನೆಲೆ ಕೈತುಂಬ ಎಂಬಲ್ಲಿ ನೀರಾವರಿ ಇಲಾಖೆಯಿಂದ ಬಂಟ್ರ-ಕೈಕಂಬ, ಬಿಳಿನೆಲೆ, ಆತೂರು, ಕೋಡಿಂಬಳ್ ಎಂಬ ಕಂದಾಯ ಗ್ರಾಮಗಳ ಸುಮಾರು 250 ಕುಟುಂಬಗಳ ರೈತರಿಗೆ 2000 ಎಕರೆ ಜಮೀನು ಕೃಷಿ, ನೀರಾವರಿಗೆ ಅನುಕೂಲವಾಗುವಂತಹ ಕೃಷಿ ನೀರಾವರಿ ಯೋಜನೆ ಕೈಕೊಳ್ಳುವಂತೆ, 1989-90ನೇ ಸಾಲಿನಲ್ಲಿ ಪ್ರಸ್ತಾವನೆ ನಿಲ್ಲಿಸಲಾಗಿತ್ತು.

ಆದರೆ, ಈ ನೀರಾವರಿ ಯೋಜನೆ, ಮಂಜೂರಾತಿಯು ಈತನಕ ಆಗಿರುವುದಿಲ್ಲ.

ಆದುದರಿಂದ ಸದರಿ ಯೋಜನೆ ಯಾವ ಹಂತದಲ್ಲಿದೆ? ಮತ್ತು ಸರಕಾರ ಈ ವರ್ಷ ಮಂಜೂರಾತಿ ನೀಡಲು ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಪುತ್ತೂರು ತಾಲ್ಲೂಕಿನ ಕಡಬಾ, ಕಡಿವೈಲು ಮತ್ತು ಕುಟ್ಟಿಪಾಡಿ ಹತ್ತಿರ ಏತ ನೀರಾವರಿ ಯೋಜನೆಗೆ 121 ಲಕ್ಷ ರೂಪಾಯಿಗಳ ಪ್ರಾಥಮಿಕ ತನಿಖಾ ವರದಿಯನ್ನು ತಯಾರು ಮಾಡಲಾಗಿದೆ. ಈ ಏತ ನೀರಾವರಿ ಯೋಜನೆಯಿಂದ 524 ಹೆಕ್ಟೇರ್ ಅರೆ ನೀರಾವರಿ ಬೆಳೆಗಳನ್ನು ಖಾರೀಫ್ ಮತ್ತು ರಾಬಿ ಅವಧಿಯಲ್ಲಿ ಬೆಳೆಯಲು ಉದ್ದೇಶಿಸಲಾಗಿದೆ. ನೀರಿನ ದರ ಪ್ರತಿ ಹೆಕ್ಟೇರ್ ಪ್ರತಿ ಬೆಳೆಗೆ 3064 ರೂಪಾಯಿಗಳು ಆಗುತ್ತಿದ್ದು, ಇದು ಆರ್ಥಿಕವಾಗಿ ಶಕ್ಯವೆಂದು ಕಂಡು ಬರುತ್ತದೆ. ದಿನಾಂಕ 30-01-92ರಲ್ಲಿ ಈ ಯೋಜನೆಗೆ ಕುಮಾರಧಾರ ನದಿಯಿಂದ 20.50 ಕ್ಯೂಸೆಕ್ಸ್ ನೀರು ಎತ್ತುವ ಸರ್ಕಾರ ಪರವಾನಗಿ ನೀಡಲಾಗಿದೆ. ಕಾಂಟೂರು ಹಾಗೂ ಕಮಾಂಡ್ ಏರಿಯಾ ಸರ್ವೆಗಳನ್ನು ತೆಗೆದುಕೊಂಡು ಯೋಜನಾ ವರದಿಯನ್ನು ತಯಾರಿಸಿ ಆರ್ಥಿಕ ನೆರವು ಪಡೆಯಲು ಆದಷ್ಟು ಶೀಘ್ರವಾಗಿ ನಬಾರ್ಡ್‌ಗೆ ಕಳುಹಿಸಲಾಗುವುದು.

ಶಾಸನ ರಚನಾ ಕಾರ್ಯಕಲಾಪಗಳು

1992ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, 1992ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 1992ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ 1992ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಈಗ ಸಭೆಯನ್ನು ಮುಂದೂಡಿ ಮತ್ತೆ ಮಧ್ಯಾಹ್ನ 2-30 ಗಂಟೆಗೆ ಸಮಾವೇಳಗೊಳ್ಳುವುದು.

(ಸಭೆಯು ಪುನಃ 3-05 ಗಂಟೆಗೆ ಸಮಾವೇಶಗೊಂಡಿತು)

ಉಪಾಧ್ಯಕ್ಷಿಣಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು

ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ

† ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ವಿರೋಧ ಪಕ್ಷದವರು ಸಭೆಗೆ ಬರಬೇಕೆಂದು ಅನೇಕ ದಿನಗಳಿಂದಲೂ ಕೇಳುತ್ತಿದ್ದೇವೆ. ಈ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ. ವಿರೋಧ ಪಕ್ಷವನ್ನು ಪೂರ್ಣ ತಾತ್ಸಾರ ಮಾಡಿಬಿಟ್ಟು, ಪೂರ್ಣ ಸದನವನ್ನು ಇದೇ ರೀತಿ ಮುಂದುವರಿಸಬೇಕೆಂದು ತೀರ್ಮಾನವಾಗಿದೆಯೇ? ಅಥವಾ ವಿರೋಧ ಪಕ್ಷಗಳನ್ನು ಹತ್ತಿಕ್ಕಬೇಕೆಂದು ಏನಾದರೂ ನಡೆದಿದೆಯೇ? ಏಕೆಂದರೆ ಬಜೆಟ್ ಲೀಕೇಜ್ ಆದಾಗಿನಿಂದಲೂ ನಾವು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡುತ್ತಿರೋ ಬಿಡುತ್ತೀರೋ ನಮಗೆ ಅರ್ಥವಾಗುತ್ತಿಲ್ಲ. ವಿರೋಧ ಪಕ್ಷ ಇದೇ ರೀತಿ ಇರಬೇಕೆಂದು ಸರ್ಕಾರ ತೀರ್ಮಾನ ಮಾಡಿದೇಯೇ? ವಿರೋಧ ಪಕ್ಷ ಇಲ್ಲದೇ ಒಂದು ರೀತಿಯ ಸರ್ವಾಧಿಕಾರದಲ್ಲೇ ಸರ್ಕಾರ ನಡೇಯಬೇಕೆಂದು ಮಂತ್ರಿಮಂಡಲದವರು ತೀರ್ಮಾನ ಮಾಡಿದ್ದಾರೆಯೇ ಏನೆಂದು ಬಹಿರಂಗವಾಗಿ ಹೇಳಿದರೆ ಇಡೀ ಕರ್ನಾಟಕ ರಾಜ್ಯದ ಜನಕ್ಕೂ ಅರ್ಥವಾಗುತ್ತದೆ. ಭಾರತೀಯ ಜನತಾ

ಪಕ್ಷ ಮುಸ್ಲಿಂ ಲೀಗ್ ಪಕ್ಷದವರು ಬಂದಿದ್ದೇವೆ; ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಕೂಡ ಬಂದಿದ್ದಾರೆ. ಮಾನ್ಯ ಸಭಾಧ್ಯಕ್ಷರ ಮನವಿಯ ಪ್ರಕಾರ ಅವರು ಕುಳಿತುಕೊಂಡು ಚರ್ಚೆ ಮಾಡಿರತಕ್ಕ ಸಂದರ್ಭದಲ್ಲಿ ನಮ್ಮ ಕಂಡೀಷನ್‌ಗಳನ್ನು ಅವರು ಒಪ್ಪದೇ ಇರತಕ್ಕ ಸಂದರ್ಭದಲ್ಲಿ ನಾವೆಲ್ಲ ಬಂದು ಕುಳಿತಿದ್ದೇವೆ. ಇನ್ನು ಕೆಲವು ವಿರೋಧ ಪಕ್ಷದ ಸದಸ್ಯರಿಗೆ ಇದರಿಂದ ಸಮಾಧಾನವಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳಾಗಲಿ, ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲಿ ಅವರನ್ನು ಕರೆಸಿ ಮಾತನಾಡಿದರೆ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದು ಬಿಟ್ಟು ವಿರೋಧಪಕ್ಷದವರು ಹೋಗಿದ್ದಾರೆ, ಇದು ಒಳ್ಳೆಯದು, ಸರ್ಕಾರ ಮಾಡುತ್ತಿರುವ ಭ್ರಷ್ಟಾಚಾರ ಬಯಲಿಗೆ ಬರುವುದು ತಪ್ಪುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದ್ದರೆ ಅದೇ ರೀತಿ ಮುಂದುವರಿದುಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದೀರೋ ಏನೋ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಇದರ ಬಗ್ಗೆ ನಾವು ಅನೇಕ ಸಲ ಪ್ರಯತ್ನ ಮಾಡಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಕೂಡ ಅಧ್ಯಕ್ಷರವರ ಕೊಠಡಿಯಲ್ಲಿ ಕುಳಿತು ವಿರೋಧ ಪಕ್ಷದವರ ಜೊತೆಯಲ್ಲಿಯೂ ಚರ್ಚೆ ಮಾಡಿದ್ದಾರೆ. ಇದರ ಹಿಂದೆ ನಾನು ಮಾನ್ಯ ಧರ್ಮಸಿಂಗ್ ಮತ್ತು ಶಿಕ್ಷಣ ಮತ್ತು ಸಂಸದೀಯ ಸಚಿವರಾದಂತಹ ಮಾನ್ಯ ವೀರಪ್ಪ ಮೊಯಿಲಿಯವರು ಕೂಡ ಅಧ್ಯಕ್ಷರ ಮನೆಯಲ್ಲಿ ವಿರೋಧಪಕ್ಷದವರ ನಾಯಕರ ಜೊತೆಯಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡಿ ಅವರ ಅನಿಸಿಕೆಗಳು ಏನಿತ್ತೋ ಅವುಗಳನ್ನೆಲ್ಲ ಸಂಪೂರ್ಣವಾಗಿ ಕೇಳಿಕೊಂಡು ಸರ್ಕಾರ ಕೆಲವು ಹಂತದಲ್ಲಿ ಅವರನ್ನು ಅಪೀಲ್ ಮಾಡಿ ನೀವು ಬರಬೇಕು, ಇದರಲ್ಲಿ ಪಾರ್ಟಿಸಿಪೇಟ್ ಮಾಡಬೇಕು. ನಿಮ್ಮನ್ನು ಬಿಟ್ಟು ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದವರು ಇರಲೇಬೇಕು ಎನ್ನುವುದು ನಮ್ಮದೂ ಕೂಡ ಧ್ಯೇಯ ಇದೆ. ಮುಖ್ಯಮಂತ್ರಿಗಳು ಅದೇ ನಂಬಿಕೆಯ ಮೇಲೆ ಈ ಸದನದ ಮುಖಾಂತರ ಸುಮಾರು ಸಲ ಅಪೀಲು ಮಾಡಿದ್ದಾರೆ. ಅದು ಅಲ್ಲದೆ ಶ್ರೀಮಾನ್ ವೀರಪ್ಪ ಮೊಯಿಲಿಯವರು ಕೂಡ ಅಪೀಲ್ ಮಾಡಿದ್ದಾರೆ. ಆ ಸದನದಲ್ಲಿರತಕ್ಕ ಮಾನ್ಯ ನರಸಿಂಹಮೂರ್ತಿಯವರು ಅಪೀಲ್ ಮಾಡಿದ್ದಾರೆ. ಹೀಗೆ ಒಂದು ಸಲ ಅಲ್ಲ ಕಂಟಿನ್ಯೂ ಆಗಿ 4-5 ದಿವಸ ಅಪೀಲ್ ಮಾಡಿದರೂ ಕೂಡ, ಇವತ್ತು ವಿರೋಧಪಕ್ಷದವರು ತಮ್ಮದೇ ಆದಂತಹ ಒಂದಾದ ಮೇಲೊಂದು ಯಾವುದಾದರೂ ಕಾರಣಗಳನ್ನು ಮುಂದಿಟ್ಟು ನಾವು ಪಾರ್ಟಿಸಿಪೇಟ್ ಮಾಡಬಾರದೆಂದು ಹಠ ಹಿಡಿದರೆ ಸರ್ಕಾರಕ್ಕೆ ಏನು ಮಾಡುವುದಕ್ಕಾಗುತ್ತದೆ.

ಪ್ರಜಾಪ್ರಭುತ್ವದ ನೀತಿ, ನಿಯಮದ ಪ್ರಕಾರ ಯಾವ ಯಾವ ಅಸ್ತ್ರಗಳನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ, ಅವೆಲ್ಲವನ್ನೂ ಕೂಡ ಉಪಯೋಗಿಸಿಕೊಂಡಿರಿ. ಪ್ರಥಮವಾಗಿ, ಬಜೆಟ್ ಕಾಪಿ ಸಿಕ್ಕಿದೆ, ಇದು ಸರಿಯಲ್ಲವೆಂದು ನೀವು ಧರಣಿ ಮಾಡಿದಿರಿ. ಆದರೆ, ಸ್ಪೀಕರ್‌ರವರು ಇದು ಲೀಕ್‌ಔಟ್ ಆಗಿಲ್ಲ, ಅಲೀಜ್ಡ್ ಲೀಕ್‌ಔಟ್ ಆಗಿದೆ, ಎಂದು ನಿರ್ಣಯ ಕೊಟ್ಟರು ಅಲ್ಲದೆ, ಇದರಲ್ಲಿ ಯಾವುದೇ ರೀತಿಯ ಸತ್ಯಾಂಶ ಇಲ್ಲವೆಂದು ಆ ದಿವಸವೇ ಮಾನ್ಯ ಮುಖ್ಯಮಂತ್ರಿಯವರಿಗೆ ಬಜೆಟ್ ಅನ್ನು ಮಂಡನೆ ಮಾಡುವುದಕ್ಕೆ ಸಮ್ಮತಿ ಕೊಟ್ಟರು. ಆ ಇಶ್ಯೂ ಅಲ್ಲಿಗೆ ಮುಗಿಯಬೇಕಾಗಿತ್ತು.

ಶ್ರೀ ಕೆ.ಎಸ್. ಈಶ್ವರಪ್ಪ : ಬಜೆಟ್ ಲೀಕ್-ಔಟ್ ಆಗಿಲ್ಲವೆಂದು ಸಭಾಧ್ಯಕ್ಷರು ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದನ್ನು ಸ್ವಲ್ಪ ಕೇಳಿ. ಅದರ ಬಗ್ಗೆ ನಿಮ್ಮ ವಿಶ್ವಾಸವಿರಬಹುದು; ಆದರೆ, ನನ್ನ ವಿಶ್ವಾಸ ಏನಿದೆಯೆಂದರೆ, ಬಜೆಟ್ ಕಾಪಿ ಲೀಕ್-ಔಟ್ ಆಗಿಲ್ಲ, ಏನೂ ಆಗಿಲ್ಲ. ಬಜೆಟ್ ಮಂಡನೆ ಮಾಡುವುದಕ್ಕಿಂತ 15 ನಿಮಿಷಗಳ ಮುಂಚೆ ಬಜೆಟ್ ಕಾಪಿ ಯಾರ

ಕೈಯಲ್ಲೂ ಸಿಕ್ಕಿತು. ಅದನ್ನು ತಂದು ತೋರಿಸಿದರು. That is a different issue. ಅದರಬಗ್ಗೆ ನೀವು ಧರಣಿ ಮಾಡಿದಿರಿ. ಆ ದಿವಸ ಸದನದ ಸಮಯವನ್ನು ಸಂಪೂರ್ಣವಾಗಿ ವ್ಯರ್ಥ ಮಾಡಿದಿರಿ. ಹಠಾತ್ತಾಗಿ ಒಂದು ರೆಸಲ್ಯೂಶನ್ ತಂದಿರಿ. ರೆಸಲ್ಯೂಶನ್ ಮೇಲೆ ಡಿಸ್‌ಕಷನ್ ಆಗುವುದಲ್ಲದೆ. ವೋಟಿಂಗ್ ಮಾಡಬೇಕೆಂದು ಇನ್‌ಸಿಸ್ಟ್ ಮಾಡಿದಿರ. ವೋಟಿಂಗ್ ಸಹಾ ಆಯಿತು. ಅದನ್ನು ತಳ್ಳಿಹಾಕಿದರು. ಮಜಾರಿಟಿ ನಿಮ್ಮ ಕಡೆ ಫೇವರ್ ಆಗಿರಲಿಲ್ಲ. ರೆಸಲ್ಯೂಶನ್ ಬಿದ್ದು ಹೋಯಿತು. ಪ್ರಜಾಪ್ರಭುತ್ವದ ನೀತಿ ಪ್ರಕಾರ ಒಂದು ಸಲ ರೆಸಲ್ಯೂಶನ್ ಬಿದ್ದು ಹೋದ ನಂತರ ನಾವು ಪುನಃ ಬಹಿಷ್ಕಾರ ಮಾಡುತ್ತೇವೆಂದು ಹೇಳುವುದಕ್ಕೆ ನಿಮಗೆ ಯಾವ ನೈತಿಕ ಹಕ್ಕಿದೆ? ಎಲ್ಲಾ ಅಸ್ತ್ರಗಳನ್ನು ಉಪಯೋಗಿಸಿಕೊಂಡಿರಿ. ಧರಣಿ ಮಾಡಿದಿರಿ, ರೆಸಲ್ಯೂಶನ್ ಅನ್ನು ತಂದಿರಿ, ಆ ರೆಸಲ್ಯೂಶನ್ ಬಿದ್ದು ಹೋಯಿತು. ಇಷ್ಟೆಲ್ಲಾ ಆದರೂ ಕೂಡ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಏನಾದರೂ ಕೂಡ ಚಿಂತೆ ಇಲ್ಲ. ಅವರನ್ನು ಬಿಟ್ಟು ಸದನ ನಡೆಸತಕ್ಕಂಥಾದ್ದು ಸರಿಯಲ್ಲವೆಂದು ಪುನಃ ನಿಮ್ಮ ಮಾತಿಗೆ ಮನ್ನಣೆ ಕೊಟ್ಟು ಗೌರವ ಕೊಟ್ಟು ಸ್ಪೀಕರ್‌ರವರ ಛೇಂಬರಿನಲ್ಲಿ ಪುನಃ ಮೀಟಿಂಗ್ ಮಾಡಿದರೆ ಷರತ್ತುಗಳ ಮೇಲೆ ಷರತ್ತುಗಳನ್ನು ಹಾಕಿ, ನಾವು ಹೇಳಿದಂತೆ ಕೇಳಬೇಕೆಂದರೆ ಮತ್ತೆ ಪ್ರಜಾಪ್ರಭುತ್ವ ಏಕೆ ಬೇಕು? ನೀವು ಡಿಕ್ಟೇಟರ್‌ಶಿಪ್ ಮಾಡುತ್ತಿದ್ದೀರೆಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ನಾವು ಹೇಳಿದಂತೆ ಕೇಳಬೇಕು ಎನ್ನತಕ್ಕಂಥ ನೀತಿಯನ್ನು ವಿರೋಧ ಪಕ್ಷದವರು-ನೀವು ತಾಳಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲರನ್ನು ಸೇರಿಸಿಕೊಂಡು ಹೇಳಬೇಡಿ. ನಾವು ಇಲ್ಲಿಗೆ ಸುಮ್ಮನೆ ಬಂದಿದ್ದೇವೆ. ಯಾರು ಬಂದಿಲ್ಲವೋ ಅವರನ್ನು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಬಂದಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮುಸ್ಲಿಂ ಲೀಗ್‌ನವರು ಬಂದಿದ್ದಾರೆ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಬಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ತಾವೇ ಹೇಳಿ, ಪ್ರಜಾಪ್ರಭುತ್ವದ ನೀತಿ-ನಿಯಮದ ಪ್ರಕಾರ ನಿಮ್ಮ ಎಲ್ಲಾ ಅಸ್ತ್ರಗಳನ್ನು ಉಪಯೋಗ ಮಾಡಿಕೊಂಡ ನಂತರ, ಅದನ್ನು ತಳ್ಳಿಹಾಕಿದ ನಂತರ ನೀವು ಸದನಕ್ಕೆ ಬರಬೇಕಾದ್ದು ನ್ಯಾಯವಲ್ಲವೆ. ನೀವು ಸದನಕ್ಕೆ ಬಂದು ಸಮಯ ಕೇಳಿ. ಇಂತಹುದು ಸರಿಯಿಲ್ಲವೆಂದು ಹೇಳಿ ಅಥವಾ ಬೇರೆ ವಿಧಿ ನಿಯಮದ ಪ್ರಕಾರ ನೀವು ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿರುತ್ತದೆ, ರಿಪೋರ್ಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ನಿಮ್ಮಲ್ಲಿರತಕ್ಕಂಥ ಯಾವುದಾದರೂ ಅಸ್ತ್ರಗಳನ್ನು ಪ್ರಜಾಪ್ರಭುತ್ವದ ನೀತಿ-ನಿಯಮದ ಪ್ರಕಾರ ಮತ್ತು ರೂಲ್ಸ್ ಆಫ್ ಪ್ರೊಸಿಜರ್ ಏನಿದೆ, ಆ ಪ್ರೊಸೀಜರ್ ರೂಲ್ಸ್ ಪ್ರಕಾರ ಯಾವ ರೀತಿಯಲ್ಲಾದರೂ ಚರ್ಚೆ ಮಾಡತಕ್ಕಂಥ ಒಂದು ಅವಕಾಶ ನಿಮಗಿದೆ. ಆ ಅವಕಾಶವನ್ನು ನೀವು ಕಳೆದುಕೊಂಡು ಒಂದರ ಮೇಲೊಂದು ಯಾರಾದರೂ ಒಬ್ಬ ಹೊಸ ಸದಸ್ಯರು ಒಂದು ಸಲಹೆ ಕೊಟ್ಟರೆ. ಆ ಸಲಹೆ ಮೇರೆಗೆ ಮತ್ತೊಂದು ಇಶ್ಯೂ ರೇಸ್ ಮಾಡುತ್ತೀರಿ. ಇವೊತ್ತು ತಾವು ಬಂದಿದ್ದೀರಿ. ನಿನ್ನೆಯೂ ಕೂಡ ಬಂದಿರಿ. ಮೇಲ್ಮನೆಯಲ್ಲೂ ಕೂಡ ಬಿಜೆಪಿಯವರು ಬಂದಿದ್ದಾರೆ. ಪ್ರಾರಂಭದಿಂದ ಮುಸ್ಲಿಂ ಲೀಗ್‌ನವರು ಇದ್ದಾರೆ. ಎಂ.ಇ.ಎಸ್. ಸದಸ್ಯರು ಬಂದಿದ್ದಾರೆ. ಇವರೆಲ್ಲರೂ ಬಂದ ನಂತರ ಅವರಿಗೂ ಕೂಡ ಮನವರಿಕೆಯಾಗಿದೆ. ಇದರಲ್ಲಿ ಭಾಗವಹಿಸಬೇಕೆನ್ನುವ ಭಾವನೆಯಿಂದ ತಾವು ಬಂದಿದ್ದೀರಿ. ಆದರೆ, ಅವರಿಗೆ ಏನು ತಾಪತ್ರಯವಾಗಿದೆ? ಏನು ತೊಂದರೆಯಾಗಿದೆ? ಈ

ಸದನದಲ್ಲಿ ನಿಮಗಿದ್ದ ಉನ್ನತ ಹಕ್ಕನ್ನು ಉಪಯೋಗಿಸಿಕೊಂಡಿದ್ದೀರಿ. ಬಜೆಟ್ ಕಾಪಿ ಲೀಕ್-ಔಟ್ ಆಗಿದೆಯೋ ಇಲ್ಲವೋ ಎನ್ನತಕ್ಕಂಥಾದ್ದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು ಮತ್ತು ರೆಸಲ್ಯೂಶನ್ ಅನ್ನು ಪಾಸ್ ಮಾಡಬೇಕೆಂದು ನೀವು ಡಿಮ್ಯಾಂಡ್ ಮಾಡಿದಿರಿ. ಆ ಡಿಮ್ಯಾಂಡ್ ಅನ್ನು ತಳ್ಳಿಹಾಕಿದ ನಂತರ ಪುನಃ ಅದನ್ನು ಇನ್‌ಸಿಸ್ಟ್ ಮಾಡಿ ಕೇಳುವುದಕ್ಕೆ ನಿಮಗೆ ಯಾವ ನೈತಿಕ ಹಕ್ಕಿದೆ? ಅದಕ್ಕಾಗಿ ನಾವು ಅಪೀಲ್ ಮಾಡಿಲ್ಲ ಎನ್ನುವಂತಿಲ್ಲ. ನಾನು ಇವೊತ್ತು ಪುನಃ ಮುಖ್ಯಮಂತ್ರಿಗಳ ಪರವಾಗಿ ಅಪೀಲ್ ಮಾಡುತ್ತಿದ್ದೇನೆ. ಅವರು ಸದನಕ್ಕೆ ಬಂದು ಚರ್ಚೆಯಲ್ಲಿ ಭಾಗವಹಿಸಿ, ಪ್ರತಿಯೊಂದು ಡಿಮ್ಯಾಂಡ್ ಮೇಲೆ ಮಾತನಾಡಲಿ. ಸಲಹೆಗಳನ್ನು ಕೊಡಲಿ, ನಾವು ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ಸದಾ ಸಿದ್ಧರಿದ್ದೇವೆ. ಅದಕ್ಕೆ ಉತ್ತರ ಕೂಡ ಕೊಡುತ್ತೇವೆ. ಏನೋ ಬಯಲಿಗೆ ಬರುತ್ತದೆ. ಹೊರಗಡೆ ಬರುತ್ತದೆ ಎಂದು ನೀವು ಹೇಳಿದಿರಿ. ನೀವು ಯಾವುದೇ ಚಾರ್ಜಸ್ ಮಾಡಿ, ಅದಕ್ಕೆ ಸಮರ್ಥವಾದ ಉತ್ತರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ನೀವು ಏನು ತರುತ್ತೀರೋ ತನ್ನಿರಿ. ನಾವು ಕೇಳುವುದಕ್ಕೆ ಇಲ್ಲಿ ಕುಳಿತಿರುವುದು. ನಿಮ್ಮನ್ನು ಹೊರಗಡೆ ಹಾಕಿ ನಾವು ಸುಮ್ಮನೆ ಇಲ್ಲಿ ಪಾಸ್ ಮಾಡಿಕೊಂಡು ಹೋಗಬೇಕೆಂದು ಇಲ್ಲಿ ಕುಳಿತಿಲ್ಲ. ಅವರು ಸಹ ಹಿಂದೆ ಅಧಿಕಾರದಲ್ಲಿದ್ದಾಗ ಮಾಡಿದ್ದಾರೆ. ಆ ರೀತಿ ನಾವು ಮಾಡುವ ಹಾಗಿಲ್ಲ. ನಾವು ಇನ್ನೊಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.. ದೇವರು ಅವರಿಗೆ ಸ್ವಲ್ಪ ಬುದ್ಧಿ ಕೊಡಲಿ, ಬೇಗನೆ ಅವರು ಸದನದೊಳಗೆ ಬಂದು ಡಿಮ್ಯಾಂಡ್‌ನಲ್ಲಿ ಭಾಗವಹಿಸಲಿ. ದೇಶದ ಹಿತದ ಬಗ್ಗೆ, ಜನತೆಯ ಹಿತದ ಬಗ್ಗೆ ಮತ್ತು ಪ್ರಜಾಪ್ರಭುತ್ವದ ತತ್ವಗಳನ್ನು ಎತ್ತಿ ಹಿಡಿಯಬೇಕೆನ್ನುವಂತಹ ಒಂದು ನಂಬಿಕೆ ಅವರಿಗೆ ಇದ್ದರೆ ಪುನಃ ಅವರು ಬರಲೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ದೇವರು ಯಾರಿಗೆ ಬುದ್ಧಿ ಕೊಡಬೇಕು ಎನ್ನುವ ಪ್ರಶ್ನೆ ಬಂದಿದೆ.

ಉಪಾಧ್ಯಕ್ಷಿಣಿಯವರು : ಎಲ್ಲರಿಗೂ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವು ನಿರ್ಣಯ ತಂದಿರತಕ್ಕದ್ದು ಹೌದು, ಬಹುಮತವನ್ನು ಹೊಂದಿರತಕ್ಕ ಕಾಂಗ್ರೆಸ್ ಸರ್ಕಾರಕ್ಕೆ ಹೆಚ್ಚಿನ ದೈತ್ಯಾಕಾರದ ಶಕ್ತಿ ಬಂದುಬಿಟ್ಟಿದೆ. ಆದ್ದರಿಂದ ದೈತ್ಯ ರೂಪದಲ್ಲಿಯೇ ವರ್ತನೆ ಮಾಡುತ್ತಿದೆ ಎನ್ನುವುದರಲ್ಲಿ ಏನೂ ಅನುಮಾನವಿಲ್ಲ. ವಿರೋಧ ಪಕ್ಷದವರಾದ ನಾವು ಏನೇನು ಪ್ರಯತ್ನಗಳನ್ನು ಮಾಡಬೇಕೊ ಅವನ್ನೆಲ್ಲ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ನಾವು ಮೆಜಾರಿಟಿ ಇದ್ದೇವೆಂದು ಮೆಜಾರಿಟಿ ವ್ಯೂ ಪ್ರಕಾರ ಬಂತು ಎಂದು ತಿಳಿದುಕೊಳ್ಳಿ. ನೀವು ಪ್ರಜಾಪ್ರಭುತ್ವದಲ್ಲಿ ಅದನ್ನು ಒಪ್ಪಿಗೆ ಮಾಡಿಕೊಳ್ಳಬೇಕೊ ಇಲ್ಲವೊ?

(ಗೊಂದಲ)

ಉಪಾಧ್ಯಕ್ಷಿಣಿಯವರು : ನಾವು 4-5 ದಿವಸದಿಂದ ಸರ್ಕಾರದ ಕಡೆಯಿಂದ, ಛೇರ್ ಕಡೆಯಿಂದ ಅವರನ್ನು ಪದೇ ಪದೇ ರಿಕ್ವೆಸ್ಟ್ ಮಾಡುತ್ತಿದ್ದೇವೆ. ಅವರುಗಳು ಬಂದು ಈ ಸಭೆಯಲ್ಲಿ ಭಾಗವಹಿಸಬೇಕು, ಇಲ್ಲಿ ಅವರು ಬಂದು ಏನು ಹೇಳಬೇಕಾಗಿದೆಯೊ ಅದನ್ನು ಹೇಳಲಿ ಪ್ರತಿ ದಿನವೂ ನಾವು ಅವರನ್ನು ರಿಕ್ವೆಸ್ಟ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವು ಕೂಡ ಅವರನ್ನು ಮನವಿ ಮಾಡಿಕೊಳ್ಳುತ್ತೇವೆ. ನಮ್ಮ ಪಕ್ಷದವರೂ ಕೂಡ ಒಳಗೆ ಬರಬೇಕೆಂದು ತಾವು ಮನವಿ ಮಾಡಿಕೊಳ್ಳುತ್ತಿದ್ದಿರಿ, ಅದರಲ್ಲಿ ಅನುಮಾನವಿಲ್ಲ. ಇಷ್ಟೊಂದು ಜಿದ್ದು, ಪ್ರತಿಷ್ಠೆ ಸರ್ಕಾರಕ್ಕೂ ಕೂಡ ಆಗಿದೆ. ಒಂದು ರೀತಿಯಲ್ಲಿ ಜನತಾದಳ ಮತ್ತು ನಮ್ಮ ಇತರ ಸ್ನೇಹಿತರಿಗೂ ಕೂಡ ಪ್ರತಿಷ್ಠೆ ಆಗಿದೆ. ಈ ಪ್ರತಿಷ್ಠೆಗಳನ್ನು ಬಿಟ್ಟು ಇಬ್ಬರೂ ಕೂಡ ಹೊಂದಾಣಿಕೆ ಮಾಡಿಕೊಂಡರೆ ಮಾತ್ರ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷ ಮತ್ತು ಸರ್ಕಾರ ಇರಲು ಸಾಧ್ಯವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಐದು ದಿವಸಗಳಿಂದ ಈ ಸಭೆಯ ಕಾಲವನ್ನು ಇದಕ್ಕಾಗಿಯೆ ನಾವು ಮುಂದೂಡುತ್ತಾ, ಮುಂದೂಡುತ್ತಾ ಬಂದಿದ್ದೇವೆ. ಇನ್ನು ಎಷ್ಟು ದಿನ ಹೀಗೆ ಮಾಡಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲವೊಂದು ಅಂದರೆ 3-4 ಷರತ್ತುಗಳನ್ನು ಹಾಕಿದ್ದಾರೆಂದು ನಾನು ಕೇಳಿದ್ದೇನೆ. ಆ ಷರತ್ತುಗಳೇನು ಮೈಮೇಲೆ ಬೀಳತಕ್ಕದ್ದಲ್ಲ. 5-6 ದಿನ ಕಳೆದು ಹೋಗಿದೆ, ಸಮಯ ಕಡಿಮೆ ಇದೆ. ಆದುದರಿಂದ ಲೇಖಾನುದಾನವನ್ನು ತೆಗೆದುಕೊಂಡು ಸ್ವಲ್ಪ ಎಕ್ಸ್‌ಟೆಂಟ್ ಮಾಡಿ ಎಂದು ಕೇಳುತ್ತಿದ್ದಾರೆ. ಇದರಲ್ಲಿ ಏನು ತಪ್ಪಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಿಮ್ಮ ರೆಸಲ್ಯೂಶನ್ನೇ ಬಿದ್ದು ಹೋದಮೇಲೆ ಷರತ್ತುಗಳು ಎಲ್ಲಿಂದ ಬರುತ್ತದೆ? ಆದರೂ ಕೂಡ ನಿಮ್ಮ ಮಾತಿಗೆ ಬೆಲೆಯನ್ನು ಕೊಟ್ಟು ನಾವು ಮಾತನಾಡಿದ್ದೇವೆ. ನೀವು ಆ ಇಶ್ಯೂ ಮೇಲೆ ಹೋಗಿದ್ದರೆ ಹೇಳಿ? ನೀವು ಆತ್ಮಸಾಕ್ಷಿಯಾಗಿ ಹೇಳಿ. ನೀವು ಈ ಓಟ್-ಆನ್-ಅಕೌಂಟ್ ಇಶ್ಯು ಮೇಲೆ ಬಾಯ್‌ಕಟ್ ಮಾಡಿದ್ದೀರಿ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಉಪಾಧ್ಯಕ್ಷಿಣಿಯವರೆ, ನಾವು ಆತ್ಮಸಾಕ್ಷಿಯಾಗಿಯೇ ಇಲ್ಲಿ ಬಂದು ಕುಳಿತುಬಿಟ್ಟಿದ್ದೇವೆ. ಆ ಪ್ರಶ್ನೆಯಿಲ್ಲ. ಪ್ರತಿಷ್ಠೆ ಆಗಬಾರದೆಂದು ನನ್ನ ಅಪೇಕ್ಷೆ. ಒಂದು ಕಡೆ ಸರ್ಕಾರ ಪ್ರತಿಷ್ಠೆಯನ್ನು ಮಾಡಿಕೊಂಡಿದೆ. ಇನ್ನೊಂದು ಕಡೆ ಕೆಲವು ವಿರೋಧ ಪಕ್ಷಗಳು ಪ್ರತಿಷ್ಠೆಯನ್ನು ಮಾಡಿಕೊಂಡಿವೆ. ಇದನ್ನು ಇಡೀ ಕರ್ನಾಟಕ ರಾಜ್ಯದ ಜನರು ಏನಾಗುತ್ತದೆಂದು ನೋಡುತ್ತಿದ್ದಾರೆ. ಅದಕ್ಕೋಸ್ಕರ ಸರ್ಕಾರದವರಲ್ಲಿ ಮತ್ತು ವಿರೋಧ ಪಕ್ಷದವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇಬ್ಬರೂ ಕೂಡ ಪ್ರತಿಷ್ಠೆಯನ್ನು ಬಿಟ್ಟು ಒಂದು ರೀತಿಯಲ್ಲಿ ಮಾತುಕತೆಗೆ ಬಂದು ಸೌಹಾರ್ದದಿಂದ ಮುಗಿಸಬೇಕೆಂದು ನನ್ನ ಆಸೆ ಇದೆ. ದಯಮಾಡಿ ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಲಿ ಎಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

FINANCIAL BUSINESS

General discussion on the Budget for the year 1992-93

† Sri Qumarul Islam (Gulbarga) : Madam Deputy Speaker, you have permitted me to start the Discussion on the General Budget. The Hon'ble Chief Minister who is also the Finance Minister is not here. Anyhow other three Ministers are here because I want to begin my speech with a 'shayre' from a poetry- 2 stanzas I think this 'shayre' is very well fitted for the situation.

(Sri G.S. Shivananjappa : Chairman in the Chair)

ತೂಫಾನ್ ಕರ್ ರಹಾಹೆ ಮೇರೆ ಝುಮ್ ಕಾ ತವಾಫ್ ದುನಿಯಾ ಸಮಜ್‌ರಹಾಅಹೆ, ಕಸ್ತಿ ಬವರ್ ಮೆ, Tofan means storm in the sea - Azam-means the determination and the will power. The storm in the sea has come due to a leakage-wehter it is alleged leakage or leakage which I don't want to go in the storm has come in the sea and the people, and some of the Opposition Leaders are thinking that the boat which is on the sea is fixed in storm. Now, the future will show whether the determination and will power which the Chief Minister is having; whether he can come out of the storm successfully or not.

(Sri G. S. Shivananiappa: (Chairman in the Chair)

Because still things are going on with this poetry now I will come to the discussion.

Sri K.V. Ravindranath Babu : There cannot be a leak in the ocean.

Sri Qamarul Islam (Urdu) : This Budget is a deficit budget. The deficiency is little less when compared to last year. Last year the deficit was Rs. 83 crores and this budget is having deficit of Rs. 81 and add crores. This year also there is an heavy burden of taxation on many items. Even some of the items which are used by the common man are being brought under the pruview of taxation. For example bread. When this Budget was announced I went to the market because we are having 'roza' (fasting on account of Ramzan) and I was told that the cost of the bread has increased by 25 to 30 paise per bread. There are certain items where the taxes are increased and those items are also used by the common man. Agarbatti, kitchen utensils, stationery, envelops and also some spices like jari, methi and seeds of papaya, all these things are costlier now. Certain class of people have been brought into the purview of professional tax. For marriage halls and Kalyana Mantapas the Profession tax fixed is Rs. 2,500/-. In that there is no mention about the Kalyana Mantapas and marriage halls situated in rural areas and Cities. In Cities these halls are well equipped and they charge upto Rs. 5000 per day. There are some marriage halls for which they have made air-conditioning. Whereas in cities like Gulbarga, Raichur and in some taluks head-quarters there is shortage of Marriage halls and Kalyana Mantapas and their rent fixed is only Rs. 200 to 300. But, the professional tax levied is one and the same throughout the State. I would like to suggest to the Government that atleast kindly exempt levying of Profession Tax to the Marriage halls and Kalyana Mantapas existing upto Taluks headquarters. In District Head-quarters for Marriage Halls and Kalyana Mantaps you kindly reduce the Professional tax to Rs. 500/-. There should be justification in it. I will be very happy if the Hon'ble Chief Minister remove it for all categories. This is one of the suggestions I am making.

Now, I turn to page 24 of the Budget. There is a heading 'Planning and Budgeting-Government's philosophy' I would like to quote.

"I believe that the State's Annual Plan and Budgets must be used as instruments of achieving social justice and economic advancement of the lower starts of the Society. This is possible provided sufficient financial outlays are made on the basic infrastructural facilities required by the common people particularly in the rural areas. The most important and immediate needs of the people are drinking water, housing, agriculture development, irrigation, power, education, roads and communications and employment generation ..."

Further it was stated :

It is indeed a matter of regret that the plan investments in our State has been either stagnent or has in fact declined over the years as is evident from the following figures.

STATE PLAN INVESTMENT IN KARNATAKA

Plan	Karnataka's approved outlay	Percentage share in outlay of all 22 states plans
		(Rs. in Crores)
Fifth Plan (1974-79)	998	5.5
Annual Plan (1979-80)	299	5.2
Sixth Plan (1980-85)	2,265	4.8
Seventh Plan (1985-90)	3,575	4.4

That means it is a fact that over the years the annual plan outlay was not only stagnated and declining but it was also further stated.

"The average annual growth of the State's economy was only 5.25% during the Seventh Five Year Plan period, lower than the all India average of 5.6%.

So, this Government is determined and it is said.

"Para 35 - It is therefore, very obvious that the State Government has to make strenuous efforts to increase the State Plan investments substantially for the overall development of the State."

The Strategy and the philosophy adopted by this Government for this year is that there should be a strenous effort made for the annual plan investment so that there will be an overall development of the State. For this purpose they have given a comparison in the other block on page 28. I would like to quote the same.

Rs. in crores

Year	Plan outlay	% growth over previous year
1985-86	651	-
1986-87	765	17.51
1987-88	870	13.72
1988-89	900	0.03
1989-90	1040	15.55
1990-91	1145	10.09
1991-92	1558	36.06

That means annual plan for the current year is Rs. 1558 crores which registers an increase of 36% over the plan outlay of Rs. 1145 crores for the year 1990-91.

There is also a mention about the performance of implementation of plan schemes during the current year. And also a number of popular schemes have been taken up by this Government and there is also an excercise for mobilising additional resources. Some more crores of rupees are going to be collected in due course. Keeping all these things in view, with all fairness I will put a question to the Government in this House through you madam, when it is said that there should be an overall development of the State, I believe and everybody knows that this State is having a number of regions, there is Malnad region, there is Bombay-Karnataka region, there is Hyderabad-Karnataka region, there is old Mysore region etc., etc. There is history for it. I don't want to go deep into it. This we all know. Fortunately, or unfortunately, the area from where I come, belong to Hyderabad-Karnataka area, which is a most backward region of this State. The backwardness is not in one or two items. We are backward educationally because if we compare the number of Educational institutions existing in this region it is very much less than the other regions. Even in the field of irrigation, roads, communications we are having less facilities when compared to other regions of the State. The P.H.C.s are also less. We are also backward as far as irrigated area is concerned. There is backwardness in the case of major and medium irrigation facilities, lift irrigation projects. No doubt this has been realised because this was the demand of the people of that area for so many years. This Government has realised that no region should be kept backward. It should be brought on par with the other regions of the State. For that, the Government has brought a bill in the last Session to form the Hyderabad-Karnataka Development Board and Malnad Development Board. 4-5 months have

been passed, the board is not functioning. A High Power Committee is there and the Government has given Rs. 50 crores last year. The priorities were also fixed to spend Rs. 50 crores. But, that High Power Committee met about 2-3 times in the whole of the year. In this Budget under border area development head about Rs. 115 crores were given. Out of that Rs. 65 crores has been earmarked for the Hyderabad-Karnataka area Development and Rs. 35 crores for the Development of Malnad area and Rs. 15 crores for the development of border district areas. Of course, this Rs. 65 crores is really more than which was given last year. I must thank them for that. But, our need and our requirment is more. We require minimum Rs. 100 crores. This is the demand of the people of that area irrespective of political parties which we belong to. Rs. 100 crores must be given for us continuously for 10 years over and above the regular allotment given in the regular budget. It was assured many times and now I have got every right to put this question through you madam in this House because we have seen the plan outlay and the investment. There is an increase of 36%. We are happy that lot of excercise was made by this Government and strenous efforts have been made to increase the investment in the plan and the amount was raised to Rs. 2,154.84 crores and also there is an additional resource mobilisation. As a result of all these things the deficit position in the budget has been lessened when compared to 1950. Additional taxes have been levied. Keeping in view this as background I have got every right to demand the Government that proportion of amount has not come to our region as share to the development of Hyderabad-Karnataka region. Our region is a very backward region and no doubt that the Government has increased the grant by Rs. 15 crores, but if you compare the rise in the Budget, is it not justifiable to demand Rs. 100 crores, to have at least proportionate money? Madam, even now there is time. I would like to give a constructive suggestion here. Even though our area is backward god has given some gift in our area. We have got valuable limestone quarries. There are quite a large number of cement factories. Added to that we are supplying Shahabad stones to almost all the districts of the State and elsewhere. This stone is available in Bellary, Gulbarga and other adjoining districts of our region. The revenue in this regard comes to the maximum extent from our region. Especially from these 2 districts i.e., Bellary and Gulbarga. But, what is the extent of return we are getting? Whether the return given to this area and to our people is really justifiable? Whether the demand for more money is not justificable?. Even now there is time. You have got the planning of additional resource mobilisation. There are a number of cement factories in this area and the owners of these factories are ready to contribute 25 paise per bag of cement as additional revenue but the only condition that they put is, this additional revenue is to be credited into the separate account. If there is a Board let it be credited to the Hyderabad-Karnataka area Development Board and this money has to be utilised for the development of that area. The condition of the roads of that area is very worse. The road is the only mode of transportation

for lorries because these factories have to carry cement to different parts throught lorries only and that too by road. They are ready to contribute for the development of roads. Why not the Government think of utilising this money nor the development of roads of that area? When they brought so many items under the purview of entry tax why not the Government think of tapping additional resource by way putting entry tax of 25 paise per bag and develop these roads?

Lot of money will come from this source. so that money can be kept under a separate head created under the Hyderabad-Karnataka Board and that can be utilised only for the development of the roads, bridges, culverts and other civil amenities, Sir, I am sorry to note the attitude of our officers because whatever schemes you have, they had to be implemented by your executive. The officers have the calibre and definitely your planning and your afforst will be successful and the fruits can reach to the people of the State. I will bring one example. There is an A.C.C. cement factory. There is an agreement between the factory and the Government. When the factory was established the Government has given them the mining lease, Government has given them the land and there is a concession in the income tax also. The factory will have to spend some money for the development of that area surrounding about twenty kilometers. The roads, bridges, culverts and for other civil amenities coming within 20 Kilometers, the factory will have to spend the amount. But there is no check from the Government side. No officer is bothered about eventhough it has been brought to the notice in different forums and even the reviews. Even in the joint select committee meetings of the granite. I have tried my level best. But at the same time what this factory people are doing. They have their own compus. They are spending money but that money is not spent properly for the proper and correct purposes. They are spending only within their vicinity of their factory and getting all the concessions like income tax. Through you I would like to bring it to the notice of the Government that the Government should take a serious note of it and check these things and see that the money is properly spent. Officers concerned and Ministers should go through the agreement and if the money is not being spent by the factory owners, for proper purpose and for the development of the roads, bridges, culverts etc. they should see that it is properly spent.

ಚೇರ್ಮನ್ : ಮಾನ್ಯ ಖರ್ಗೆಯವರು ಪವರ್‌ಫುಲ್ ಮತ್ತು ಏಬಲ್ ಮಿನಿಸ್ಟರ್ ಇದ್ದಾರೆ. 20 ಪಾಯಿಂಟ್ ಪ್ರೋಗ್ರಾಂ ಮೀಟಿಂಗ್‌ನಲ್ಲಿ ನೀವು ಅವರಿಗೆ ಇದನ್ನೆಲ್ಲಾ ಹೇಳಲಿಲ್ಲವೇ?

ಶ್ರೀ ಕುಮುರುಲ್ ಇಸ್ಲಾಮ್ : ಇದು 20 ಪಾಯಿಂಟ್ ಪ್ರೋಗ್ರಾಮ್‌ನಲ್ಲಿ ಇಲ್ಲ ಸಾರ್. This is a separate agreement.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅಲ್ಲಿಯ 20 ಪಾಯಿಂಟ್ ಪ್ರೋಗ್ರಾಮ್ ರಿವ್ಯೂ ಮಾಡುವುದಿಲ್ಲ. ಏಕೆಂದರೆ ನನಗೆ ಬೇರೆ ಕಡೆ ಹಾಕಿದ್ದಾರೆ. ಈಗ ಇನ್ನೊಂದು ವಿಷಯ. ತಮ್ಮ ಗಮನಕ್ಕೆ ತರುತ್ತೇನೆ. ಅದು ಅಗ್ರಿಮೆಂಟ್‌ನಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ರಾಜೇಶ್ವರಿ ಫ್ಯಾಕ್ಟರಿ ಮತ್ತು

ಪ್ರಾಪರ್ ಸೇಡಮ್‌ನಲ್ಲಿ ಇರುವ 2 ಫ್ಯಾಕ್ಟರಿಗಳಿಗೆ ಲ್ಯಾಂಡ್ ಕೊಡಿಸಬೇಕಾದರೆ ನಾನೇ ಪ್ರಯತ್ನ ಪಟ್ಟಿದ್ದೇನೆ. ಈಗಲಾದರೂ ಲೋಕ್ ಅದಾಲತ್ ಇದೆ. ಆಗ ಲೋಕ್ ಅದಾಲತ್ ಕೂಡ ಇರಲಿಲ್ಲ. ನಾನೇ ಆಗ ಎರಡು ಫ್ಯಾಕ್ಟರಿಗಳಿಗೆ ಲ್ಯಾಂಡ್ ಕೊಡಬೇಕಾದರೆ ಕನ್ಸೆಂಟ್ ಮೇಲೆ ನಾನೇ ಕರೆಯಿಸಿ ನನ್ನ ಛೇಂಬರ್ಸ್‌ನಲ್ಲೇ ಫಿಕ್ಸ್ ಮಾಡಿ. ಇದನ್ನು ನೆಗೋಷಿಯೇಷನ್ಸ್ ಮಾಡಿ ಮಾಡಿದ್ದೇನೆ. ಅವರನ್ನು ಒಂದು ಕಡೆ ಕೂಡಿಸಿ. ರೈತರನ್ನು ಒಂದು ಕಡೆ ಕೂಡಿಸಿ. ಫ್ಯಾಕ್ಟರಿ ಓನರ್ಸನ್ನು ಒಂದು ಕಡೆ ಕೂರಿಸಿ. ಅವರು ಏನು ರೇಟ್ ಹೇಳುತ್ತಾರೋ ಅದನ್ನು ನೀವು ಕೊಡಿಸಿದರೆ 24 ಗಂಟೆಗಳಲ್ಲಿ ನಿಮಗೆ ಲ್ಯಾಂಡ್ ಕೊಡಿಸುತ್ತೇನೆ ಎಂದು ಹೇಳಿ ಆ ಡಿಸ್ಪ್ಯೂಟನ್ನು ಸಾಲ್ವ್ ಮಾಡಿ ಅವರು ಹೇಳಿದ ರೇಟ್ ಕೊಡಿಸಿ ಮತ್ತು ಯಾರದ್ದು 10 ಎಕರೆ ಡ್ರೈ ಲ್ಯಾಂಡ್ ಇದೆ ಅಂಥಹವರಿಗೆ ಒಂದು ಎಂಪ್ಲಾಯ್‌ಮೆಂಟ್‌ನ್ನು ಅವರು ಕೊಡಬೇಕು. 20 ಎಕರೆ ಭೂಮಿಯನ್ನು ಕಳೆದುಕೊಂಡಂತಹವರಿಗೆ ಎರಡು ಉದ್ಯೋಗ ಕೊಡಬೇಕು. ಕೆಲವರು ಬಡವರು ಇದ್ದರೆ ಅಂತಹವರು ಐದು ಎಕರೆ ಭೂಮಿಯನ್ನು ಕಳೆದುಕೊಂಡಿದ್ದರೂ ಅಂತಹವರಿಗೂ ಉದ್ಯೋಗ ಕೊಡಬೇಕು ಎನ್ನುವ ಕಂಡೀಷನ್ಸ್ ಹಾಕಿ ಅದರ ಪ್ರಕಾರ ಅಗ್ರಿಮೆಂಟ್ ಮಾಡಿ ಬಹುಶಃ ಇತಿಹಾಸದಲ್ಲೇ ಆ ಎರಡು ಫ್ಯಾಕ್ಟರಿಗಳು ಮೂರು ತಿಂಗಳುಗಳಲ್ಲಿ ಎಲ್ಲ ಪ್ರೊಸೀಜರ್‌ಗಳನ್ನು ಕಂಪ್ಲೀಟ್ ಮಾಡಿ ಹ್ಯಾಂಡ್‌ಓವರ್ ಮಾಡಿದ್ದು ಒಂದು. ಮಾನ್ಯ ಸದಸ್ಯರು ಈಗ ಹೊಸದಾಗಿ ಏನು ಹೇಳುತ್ತಿದ್ದಾರೆ. 20 ಕಿಲೋಮೀಟರ್ ಒಳಗೆ ಎಲ್ಲವನ್ನು ಅಭಿವೃದ್ಧಿಪಡಿಸುವುದು ರಸ್ತೆ ಸೇತುವೆ ಮಾಡುವುದು. ಆಸ್ಪತ್ರೆಗಳನ್ನು ಕಟ್ಟಿಸುವುದು. ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟಿಸುವುದು ಇದೆಲ್ಲ ಅಗ್ರಿಮೆಂಟ್ ಇದೆಯೆಂದು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿಲ್ಲ. ಬಹುಶಃ ನಿಮ್ಮಲ್ಲಿ ಒಂದು ಬಿರ್ಲಾ ಫ್ಯಾಕ್ಟರಿ ಇದೆ. ಅಲ್ಲೂ ಕೂಡ ಈ ಪದ್ಧತಿ ಇದೆಯೋ ಏನೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ಟಾಟಾ ಫ್ಯಾಕ್ಟರಿಯಿದೆ. ಬಿರ್ಲಾ ಫ್ಯಾಕ್ಟರಿ ಇದೆ. ಇನ್ನು ಅನೇಕ ಜನರದ್ದು ಇದೆ. ಜೊತೆಗೆ ಗೌರ್ನಮೆಂಟ್ ಆಫ್ ಇಂಡಿಯಾದ್ದು ಇದೆ. ವಿತ್ ಇನ್ ದಿ ವಿಸಿನಿಟಿ ಆಫ್ 20 ಕಿಲೋಮೀಟರ್ ಡೆವಲಪ್‌ಮೆಂಟ್ ಮಾಡುವ ಬಗ್ಗೆ ಅಗ್ರಿಮೆಂಟ್ ಇರುವುದು ನನಗೆ ಗೊತ್ತಿಲ್ಲ. ಬಹುಶಃ ಅವರು ನನ್ನ ನೋಟೀಸ್‌ಗೆ ತಂದರೆ ಅದರ ಬಗ್ಗೆ ನಾನು ಒಂದು ಮೀಟಿಂಗ್ ಕರೆಸಿ ಇದು ಆಗದಿದ್ದರೆ ಏತಕ್ಕೆ ಆಗಿಲ್ಲವೆಂದು ಡೆಫಿನೆಟ್ಲಿ ಕೇಳುತ್ತೇನೆ. ಅವರ ಹತ್ತಿರ ಅಗ್ರಿಮೆಂಟ್ ಇದ್ದರೆ ಸರಿ. ಅದು ಇಲ್ಲದಿದ್ದರೂ ನಾನೇ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ ತರಿಸಿಕೊಂಡು ಈ ರೀತಿ ಏನಾದರೂ ಅಗ್ರಿಮೆಂಟ್ ಇದೆಯೇ ಎಂದು ಅವರನ್ನು ಕೇಳೋಣ.

Sri Qamarul Islam : The demands are already therewith the Mining Department and also with the Industries Department. Hon'ble Minister may kindly go through it. They are spending within their vicinity. They should spend the amount for the works within 20 kms, that is my intention. Now I will speek about the implementation position of the programmes in our area. Last year about 50 crores were given for the Hyderabad-Karnataka Area and certain priorities were fixed. M.L.As were called and a meeting was fixed to discuss about drinking water, roads, and educational institutions. There 21 roads list I have given. There was a sanction by the Finance Department. Out of 21 roads, tenders were not called for 5 to 6 roads and for other roads hardly just ten days back another tenders were finalised and about a month back the other tenders were finalised. When the Hon'ble Minister for Planning and the Hon'ble Minister for P.W.D. had come with folded hands said don't call the MLAs only to give the information on the

paper. We are not here to give information on the paper. Whatever money that is being spent, it is to be spent properly as per the priorities fixed for the items. Your officers take one year only to finalise the tenders, how should I believe that such popular schemes which have been brought will be implemented and fulfilled. This is the position. When I mention this to officers, not all the officers because there are honest and good officers also. But at the same time there are certain officers, Who are very powerful that no Government or no Chief Minister can shift them. In my constituency there is one officer who is Working there for the last 28 years. In the P.W.D., there is one officer not a big officer, but he is of the Manager level. I do not want to mention his name. For the past 28 years, he is in only one city. Whether Mr. Dharam Singh becomes the Minister, whether Mr. Mallikarjuna Kharge becomes the Minister or whether Mr. Veerendra Patil becomes the Chief Minister or whether any other man became the Chief Minister, there is no use at all.

ಚೇರ್ಮನ್ : ಒಳ್ಳೆ ಆಫೀಸರ್ ಇರಬೇಕು.

ಶ್ರೀ ಕಮರುಲ್ ಇಸ್ಲಾಂ : ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀ ಕಮರುಲ್ ಇಸ್ಲಾಂ ಅವರು ಮುಖ್ಯಮಂತ್ರಿ ಅಥವಾ ಮಂತ್ರಿ ಆಗುವವರೆಗೆ ಅಲ್ಲಿ ಏನೂ ಆಗುವುದಿಲ್ಲ.

ಶ್ರೀ ಕಮರುಲ್ ಇಸ್ಲಾಂ : ನಾನು ಕಂಪ್ಲೈಂಟ್ ಮಾಡಿದ್ದೇನೆ. ಸರ್ಕಾರದ ಗಮನಕ್ಕೆ ಕೂಡ ತಂದಿದ್ದೇನೆ. ಆದರೆ ಇನ್ನೂ ಏನೂ ಆಗಲಿಲ್ಲ. ಅವರು ಅಷ್ಟು ಪವರ್‌ಫುಲ್ ಇದ್ದಾರೆ.

He is so powerful. I want to draw the attention of this House to the fact that we should not take this matter so lightly. We should not take these officers very lightly. They should be punished. There is one saying in Urdu. (Hon'ble Member referred to an "Urdu" proverb in Urdu) That means 'One bad fish will spoil the whole pond.' I am utilising this forum because it has come to my neck. I want the Government to take action in this regard. In this regard, I am quoting an example, regarding the tenders. There is no problem for the Government to call for the tenders from their side. There is financial concurrence for these works.

Take for example, if the last date for receipt of tenders is fixed as 10th, it will hardly take two or three days for the Executive Engineers to finalise these tenders as to who has quoted the lowest tender and will put the name of the lowest bidders on the Notice Board. They will do it in just three days. But at the same time, it will take more time to issue the Work order. It will be two months or one month. In my constituency, under the Hyderabad-Karnataka Development Board works, in the Legislative Assembly segment, they have taken two and half months only to sign. What is the intention of such officers? The intention is, they have to be approached. What for? My friends in the Opposition always, criticise about corruption. In this House, I am afraid to use the word corruption. Because, the building in which we are sitting here, there is a sign Board stating that "the

work of the Government is the work of the God." That means, "Government's work is God's work". I think now a days, whatever corruption is there, we should not call it as corruption, it is a "Dakshine" because it is the God's work that we are doing. This is the meantality of the officers. The position is changed and corruption has been regularised in some of the Departments and in some of the Sections. It has to be rectified. If this Government wants to implement their popular schemes, and if the Hon'ble Chief Minister who has come out with a determination with so many incentives and plans really wants to achieve the results, there should be an action and there should be an end to this corruption which is wide existing in some of the Sections, some of the Departments and officers.

I am coming from an area which is called on Urban area and in this State there are rural area with bigger area. It has been mentioned in the beginning of this Budget Speech that particular attention has been given for the development of the rural people of this State. About 1/3 rd of the total strength of this august House, that means 66 put of 224, represents Urban areas and 2/3 of the total strength are representing the rural areas. There were Municipalities in the year 1990 in Gulbarga, Belgaum and Mangalore. I am thankful to the Hon'ble Home Minister who is present here because he has converted these Municipalities into Corporations in the year 1980. A criterion was fixed and the criterion was at the population of the concerned Corporation limit should be more than two lakhs and the revenue should be more than one crore. Keeping this criterion in view these Municipalities of Gulbarga, Belgaum and Mangalore have been converted into Corporation and a big sign board has come. We are very happy because we are representing the urban area. I want to draw your kind attention to the fact that in the begining of the Budget Speech it has been stated that particular attention has been given for the development of the rural area. I will put a question, as to why should there be any discrimination between the urban poor and the rural poor? A poor person is after all a poor person, whether he resides in the city or in the rural area. there are green-cards for the poor people of the villages, but there are no green cards and no compensation for the poor people in the urban area. Why this discrimination?

In my constituency, when people say that there is a Government Order, our Deputy Director, Food and Civil Supplies says, "Qamarul, there is no Government Order for the poor people of your Consituency. There is only informal rationing and the Green Card is only for the rural areas" The first duty of the Government is to see that there is no discrimination. Therefore, I putforth my demand before this Government that the Government should take immediate steps to remove this discrimination between poor people of the urban areas and the rural areas and the green cards should be made available for the poor people of the Urban areas.

Sir, We are aware that some City Municipalities were converted into Corporations. There is a mension regarding the Entry Tax and there is increase in the number of areas. The area was enlarged for the Entry Tax and it was said that it was done for the Additional Resource Mobilisation. O.K. there was a proposal and in fact there was unanimous demand in the Mayors' conference about four to five years back that since these Civic Bodies or the Municipalities and Corporations are the elected bodies, they are independent. In the Mayors' conference, there was demand that Octroi should be re-introduced. There was a proposal before this Government and the Government was convinced some days back. People of the urban area, particularly from the Town Municipalities and Corporation were very happy for the re-introduction of Octroi. But there were lot of Memoranda and representations received by the Chamber of Commerce and the business Community and there was a second thought by the Government and the Government thought that in principle they should not re-introduce Octroi. O.K. It is left to the Government and it is the duty of the Government whether to introduce Octroi or not. It is the policy of the Government. But at the same time, I want to bring to the notice of the Government through you, thatafter the abolotion of Octroi, compensation is to be given to the Municipalities and corporations out of the entry Tax collected on different items. But from the last ten years, only once or twice there was some increase in that compensation amount and this is the only amount which they can utilise and spend on the development of the Corporations and Municipalities for providing civic amenties to the people residing in the respective Corporation and Municipal areas. The very important vital point is that injustice is done to us in the urban areas. The sphere of the Entry tax has been enlarged. Till last year the Government was getting Entry Tax and it was to be distributed proportionaltely, in whatever formula they have got, to the different Corporations and Municipalities and now more amount will come under that head to the Government. The Justice should have been done and there should have been increase in the compensation shares to the different Municipalities and Corporations. But that increase is not there and there is no mention in the whole of the Budget. Is it not an injustice done to the Municipalities and corporations? the intention earlier was that the Corporations should be made self-sufficient. I demand that compensation given to the Municipalities and the corporations-whatever may be the compensation, should be increased, when they have enlarged the area of Entry Tax, at the same time, when the Gulberga. Belgaum and Mangalore Municipalities were converted into Coporations, the Government should have given certain adhoc amount to develop those towns and cities, why should I blame this Government only? from the last ten years, no government thought of giving any adhoc amount to the newly converted Corporations and even this government has not given. Both the Hon'ble Ministers from Gulbarga are here. If you come to Gulbarga, there is only one P.W.D. road right from station to Ganj, which has got a small link to Iwan-shahi Guest House.

That is a beautiful road. By seeing that road in Gulbarga, My constituency, which is the heart of Hydrebad-Karnataka, one's heart beats. Blood will be circulated to the whole body and our mind will also start working after the blood reaches the mind properly. But in my constituency, which is the Divisional Headquarters or the District Headquarters, except one road of extention area, all other areas whether it is Basaveshwar nagar or Khaja colony, or any other colony, are worst than the rural areas. Atleast in some of the rural areas, some road formation is there. But in our extention of Gulbarga and many other extentions there is no formation of roads. I can even swear because I have to represent the facts. God has given me this opportunity and I have to utilise this opportunity to speak in details so that my speech should touch the heart of the Hon'ble Chief Minster who is sitting here. The extension areas of Gulbarga have become slums and there is no formation of roads , there are no lights and there is no water facility. Is it not a fact? Let the Hon'ble Ministers coming from our area say that there will be no water for the people of Gulbarga area this year by the end of April. By then, the reservoir which is called the Bhosa tank will be dries up. Government report is there and nobody can deny it. From the last 6 to 7 years,i.e.. from 1987, when the Bheema scheme was sanctioned for the drinking water, it was assured that the work will be taken up on war-footing. It is the fundamental reponsibility of any Goverment to provide atleast drinking water to the people of the state. With that spirit, it was said, that Bheema scheme will be implemented.

Target were fixed for the completion of the Bheena scheme and the target was 1989. then the target was revised for 1990-91. As the target is increasing the buget estimate for the scheme is also increasing. It was increased. Initially it was Rs. 12.5 crores. It was increased to Rs.15 crores. Recently about 5 to 6 days back when I put the question the Hon'ble Minister said that now the scheme requires Rs. 17 crores for its completion. Again from our Hon. Ministers, in the press conferences, the assuarances were given that you will get water within 3 months and we will see that there will not be a problem of the money and all efforts will be made. Sir, I am demanding only water for the people of my constituency. I am not demanding anything more. I want to put a question through you Sir, will this Government assure that at least this year the people of my constituency will get the water. How to get water after the end of April and in the month of May? It is the hottest district. The temperature will be highest in the whole of the state. Imagine we are also human beings. How our people will live without the water? They have to get water from the borewells. some borewells have been provided. when there will be a tension, again our Hon. Minister will go and he will say 'O.K. another 100 or 50 borewells will be drilled.' People will have only a mental satisfaction with the assurance. But, we don't want mental satisfaction. We want that your assurances should be implemented. we want water from the Bheema river. Our people are waiting for the last 10 years to drink the

water of that river. But, I have seen that the pipelines are still there. Whenever situation arises like Gulbarga bundh or other bundhs, the Officers will take the Hon. Ministers concered and say ' Sir, the work is going on, on war footing.' You can imagine if it is on war footing. If this is the meaning of the word ' War footing', sir, don't use that word ' war footing'. Let it be continued without using the 'war footing'. There is a limit for giving assurances and that limit has gone. Sir, for this basic need, what we want? It is the primary duty of the Corporations to see that the civic amenities and all is to be provided for the people. But, as a representative and MLA who is also representing the area of the corporation it is my primary duty to see that the corporation should get ad hoc amount from the Government. Because, if the money will not go and money is not given to the corporation, how the civic amenities will be provided to the people of that area? It is the duty of the MLA and I wanted to see that I must do justice to my duty and I have done justice. I think now that I have already demanded through you Sir, that when there is an additional resource mobilisation and when there is an area under the Entry Tax and the money which is getting under that head is increased into crores of rupees, and from the last 10 years no money in an ad hoc form was given to the Corporations of the Gulbarga or Mangalore or Belgaum, To remove the discrimination between the poor of the urban and poor of the rural areas, I think I have a right to demand through you Sir, that there should be an ad hoc grant to the Corporations of Gulbarga, Belgaum and Mangalore. Sir, Gubarga Corporation is not having single lorry of its own. Gulbarga Corporation is not having a single tractor of its own. Gulburga Corporation is not having a single timber of its own. Gulbarga Corporation is not having a single road roller of its own. The total amount is about Rs. 2 and odd crores and the distribution of the salary is about Rs. 2 crores. As far as the collection of the amount is concerned, even though the Muslim League was a ruling party, no doubt with the support of the congress, the prize was given, because we have collected 90% tax from the people of that area. But, we are not able to provide them the civic amenities with whatever effofts we have made to collect the tax. As a reward about Rs. 10 Lakhs were given as the first and the best administrator. As a leader of the Muslim League, I can say it with proud that the award of Rs. 10 lakhs was given. But, even them our party and with your alliance in the Corporation, We have failed to give the basic need to the people of the urban area and the people who are living in the extension areas of Gulbarga our lenghty speech here is because 2/3 MLA s who are representing the rural areas must feel people in 1/3 urban areas , there are also poor peole. They want also the green card. There are slums and they are facing the same problem of water which you have mentioned. They are also facing the problem of power. They are also facing so many problems. So, with all this, I just put the demand before

ಕರ್ನಾಟಕ ವಿಧಾನ ಮಂಡಲ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಪ್ರ.ಸಂ.............ದಿನಾಂಕ..............
20,646

the Government, through you, that there should be an ad hoc grant to be given to the Corporations of Gulbarga, Belgaum and Mangalore, Now, I will just come to some other points.

MR. CHAIRMAN : You have taken 1 1/2 hours.

SRI QUMURUL ISLAM: Sir, now on the Budget speech of 1990 I have given a suggestion to the Hon Chief Minister Sri Veerendra Patil, who was the Chief Minister, regarding wakfs. I know that my friend Sri Shivarame Gowda will not speak on wakfs. Your priority are so many other things. If you speak, I am very, very happy.

MR. CHAIRMAN : He can. He has got the capacity.

SRI QUMURUL ISLAM : When I was speaking on the Budget of 1990, I have given a suggestion to the govenment that we have got a Minister like Sri Azeez Sait. Sri Azeez Sait, as far as wakfs is concerned, I must appreciate his works whatever he did in Karnataka, he brought the name of Karnataka in wakfs to the limelight of the whole of the country. About 6 or 7 years back a scheme was introduced because there are crores of wakfs properties. It has to develop so that we can use the income of those properties. We can use that money for the development of the minorities. So, there was a scheme as the central Wakf Council an initial amount of Rs. 5 crores as Revolving Fund. I gave a suggestion in the year 1990 when I was participating on the General Budget. At the time I said why not there should be any scheme of the Karnataka Wakfs Council with an initial capital of Rs. 1 crore. I welcome at least after 2 years when I spoke in 1990 that such a similar scheme should be brought up with an intial fund of Rs. 1 crore to the Wakfs Development Council for developing Wakfs property, to give the loan and this loan will be repaid and again give it to the other institutions. It has been brought here and this has been introduced, and this Government is having a Minster like Sri Azeez Sait. So, I hope it will be implemented. I welcome, I will not shy. At least one of my suggestions which was given two years ago has been thought of by the Government. At the same time, I must congratulate the Govenment. I will just welcome. Wakfs Foundation is the creation of this Government. I think in the whole of the country, Karnataka gives about Rs 25 lakhs initial amount for the creation of the Wakfs Foundation for the women and their development - educational and economical, which has been introduced in this Budget. I welcome it. At the same time I welcome the grant given to the Wakfs Board. I think it is Rs 1.5 crores and compared to the previous years ....

MR. CHAIRMAN: Kindly conclude.

SRI QUMURUL ISLAM: In the Business Advisory Committee, I was assured on behalf of the Government and on behalf of Chief Minister that there is no limit to the discussion and they are ready to sit for 24 hours. This was the assurance. Kindly bear with me.

MR. CHAIRMAN : Kindly conlude within 10 or 15 minutes.

SRI QUMURUL ISLAM: The Wakfs amount which has been granted is Rs 1.5 crores and it is really the maximum which has been given compared to the last year. But, Sir, I am not satisfied with the functioning of this Wakfs Boards. I am not satisfied with the Wakfs Board which is now fuctioning. I will speak on this, when the Wakfs Demand comes. But , one question again is the question of discrimination. I want to draw the attention of the Hon. Minister and my member friends in this House that under the Relegious Institutions, - under that head there are physically handicapped pension, old - age pension, widow pension and so many pensions are there. There was a demand that the poojaries of the mandirs should also given a pension. There was demand of the Imams and Mousams. It is fact that in 1990 before the previous Govenment both the demands were there. But , the santion was given to the pensions of the poojaries. But, the sanction was not given for the pension of the Imans and Mousams . Kindly go through it. Is it not a discrimination? Are we not discriminating between the poojaries and the Inams. I just put a demand through you, in this House, that once the pension has been granted to the poojaries it should be given to the Peshmams of the Mosque which is not having an income and the Mousams of the Mosque. I hope that there should not be any discrimination in this and this Government will definitely see that the pensions will also be given to the Mousams and the Peshmams of the Mosques. Sir , there are SC/ST hostels. There are backward community hostels. Here in Karnataka there is Backward Development Corporation, there is a SC/ST Development Corporaion, In the hostels, if we see the strengths of the minorities , it is very, very negligiable. My friend Sri Sadat Ali Khan had also put a question about 3 days back and the Hon. Minister said he was giving data. If we see the data , there are so many reasons for that. But, I am just putting this demand before the Government through you Sir, that in every district of this state there should be at least one minorities hostel for the minority students; because the students are the future of our country. If you want there should be an overall development , as it has been said and for which extraneous efforts have been made, then my demand is really justified to see that there should be a minority hostel in each district of the state.

MR. CHAIRMAN : How long will you take? There are 12 members to speak .

SRI QUMURUL ISLAM: About 5 minutes, on some other demands I will speak . Lastly. I will come to the schemes. I really appreciate Akshaya Scheme, Vishwa scheme is there. Akshaya and all other schemes are there. But, My only apprehension is regarding implementation. Again I am saying Sir, you have discriminated the urban area. Because of the 2/3 MLAs even this popular scheme, when you thought of taking , you have started with rural areas only. After 3 months you have though of urban people. Now, you have issued orders. You have made all MLAs of the Urban areas as Chairman. But, you know there is lot of difficulty in getting the land in the urban areas.

The criteria fixed to purchase the land cannot be the same in urban areas. There should be a relaxation in the criteria and higher amount has to be given to the Chairman of the Task Force Committees of the urban areas. At least I am hopeful and I have been assured in this House by the Hon. Minister for Housing and Urban Development. When Hon. Member Sri Eshwarappa demanded that exemption given to the Bangalore city regarding the green - belt, should also be given to Shimoga and other cities, at that time, very intelligently the Hon'ble Minister said, "I cannot give blanket grant to all the cities, it may be misused for other purposes, but if you bring specific cases it can be considered." Then, I also raised and I was assured. I am just bringing this point because I am also facing the same problem of green - belt in my area. So, with the assurance that, under the Ashraya Scheme there will not be any discrimination between the peopole of Gulbarga and the people of Shimoga and other cities, full support is there for this Scheme.

ಶ್ರೀ ಎ. ರುಕ್ಮಯ್ಯ ಪೂಜಾರಿ : ಹುಡ್ಕೋ ಯೋಜನೆಯಲ್ಲಿ ಕಟ್ಟಿದಂತಹ ಎಲ್ಲಾ ಮನೆಗಳು ಅರ್ಧಕ್ಕೆ ನಿಂತುಹೋಗಿದೆ. ಒಂದೊಂದು ತಾಲ್ಲೂಕಿಗೆ ಸುಮಾರು 14-15 ಲಕ್ಷ ರೂಪಾಯಿ ಬಾಕಿ ಕೊಡಬೇಕಾಗಿದೆ. ನೀವು ಅದನ್ನು ಪೂರ್ತಿ ಮಾಡದೆ ಇದನ್ನು ಪ್ರಾರಂಭ ಮಾಡಿದರೆ ಬಹುಶಃ ನಾವು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವುದು ಕಷ್ಟವಾಗಬಹುದು. ಅದರ ಬಗ್ಗೆ ತಾವು ಗಮನ ಕೊಡುವುದು ತುಂಬಾ ಅಗತ್ಯ ಇದೆ.

Sri Qumurul Islam : I have gone through the budget speach. The Hon'ble Chief Minister, who is also the Finance Minister, has tried to justify the money which has been alloted for populist schemes. Only certain doubts regarding implementation are there, but with a great will and with the help of the Housing Board Chairman this scheme has been initiated. We are with you, we are for those schemes. You have mentioned as a Government philosophy in the budget that " there should be overall development of the state" Sir, after few years we are entering into the 21st century . Let us, as whole state, enter the 21st century as a developed state. Don't enter with certain regions as developed and certain regions as undeveloped. Do justification for all. If you remove the discrimination

which I have pointed out, I hope, the people of our backward areas and urban areas will definitely get justice. With these few words I conclude my speach. Thank you very much.

† ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕ ರಾಜ್ಯದ ಆಯವ್ಯಯ ಬಜೆಟ್ ಮಂಡನೆಯಾಗಿದೆ. ಯಾವುದೇ ಬಜೆಟ್‌ನ ಉದ್ದೇಶ ಆ ಪ್ರದೇಶದ ಆ ಪ್ರಾಂತ್ಯದ ಸರ್ವಾಂಗೀಣ ಅಭಿವೃದ್ಧಿ ಆಗಬೇಕು, ಅಲ್ಲಿನ ಜನರಿಗೆ ಆರ್ಥಿಕವಾಗಿ ಸಮಾನತೆ ಸಿಗಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಬಜೆಟ್ ಮಂಡನೆಯಾಗುತ್ತದೆ. ಉದ್ದೇಶ ಅಂತೂ ಒಳ್ಳೆಯದು ಇರುತ್ತದೆ. ಆದರೆ ಅದರ ಅನುಷ್ಠಾನದಲ್ಲಿ ಅನೇಕ ತೊಂದರೆಗಳು ಅಥವಾ ಇಂಪ್ಲಿಮೆಂಟಿಂಗ್ ಅಥಾರಿಟಿಗಳು ಏನು ಕಾರ್ಯಕ್ರಮ ಮಾಡಬೇಕೊ ಅದು ಸರಿಯಾಗಿ ಮಾಡುತ್ತಾ ಇಲ್ಲ. ಅದರ ಸಲುವಾಗಿ ನಾವು ಇಲ್ಲಿಯವರೆಗೆ ಅನೇಕ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಹಣ ಖರ್ಚಾದರೂ ಕೂಡ ಅದರ ಪರಿಣಾಮ ನಮಗೆ ಎಷ್ಟು ಸಿಗಬೇಕೋ ಅದರ ಫಲ ನಮಗೆ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತಾ ಇಲ್ಲ.

ಕರ್ನಾಟಕ ಸರ್ಕಾರದವರು ಪಾಪ್ಯುಲರ್ ಸ್ಕೀಮ್ಸ್‌ನ್ನು ಹಾಕಿಕೊಂಡು, ಸಾಮಾನ್ಯ ಜನರಿಗೆ ನೆಮ್ಮದಿ ಸಿಗಬೇಕು ಎನ್ನತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡು ಅದರ ಅಡಿಯಲ್ಲಿ ವಿಶ್ವ ಎನ್ನತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ವಿಶ್ವ ಕಾರ್ಯಕ್ರಮ ಪ್ರಾರಂಭವಾದ ಕೂಡಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕಾರ್ಯಕ್ರಮ ಪೂರ್ಣಗೊಳ್ಳಬೇಕಾದರೆ 700 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎಂದು ಹೇಳಿದರು. ಆದರೆ ಸಧ್ಯಕ್ಕೆ ಅವರು ಈಗ 10 ಕೋಟಿಯನ್ನು ಕೊಟ್ಟಿದ್ದಾರೆ. ಅಂದರೆ ಈ ವರ್ಷಕ್ಕೆ ಇಟ್ಟಿರತಕ್ಕದ್ದು 10 ಕೋಟಿ ರೂಪಾಯಿಗಳು. ಬಹುಶಃ ಇವರೆ ಮುಖ್ಯಮಂತ್ರಿಯಾಗಿದ್ದರೆ ಪರವಾಗಿಲ್ಲ. ಆದರೆ 5 ವರ್ಷಗಳ ನಂತರ ಬೇರೆಯವರು ಬರಬಹುದು? ನಾವು ಈಗಾಗಲೆ ಈ ವರ್ಷವನ್ನು ಮುಗಿಸಿದ್ದೇವೆ. ಇನ್ನು ಎರಡು ವರ್ಷ ಮಾತ್ರ ಉಳಿದಿದೆ. ಆ ಎರಡು ವರ್ಷದಲ್ಲಿ ಪ್ರತಿವರ್ಷ 10 ಕೋಟಿಯಂತೆ ಇಟ್ಟುಕೊಂಡರೆ 20 ಕೋಟಿಯಾಗುತ್ತದೆ. 700 ಕೋಟಿ ರೂಪಾಯಿಗಳ ವೆಚ್ಚವಿದ್ದಂಥ ಒಂದು ಯೋಜನೆಗೆ ವರ್ಷವರ್ಷಕ್ಕೆ ಬರೆ 10 ಕೋಟಿ ರೂಪಾಯಿಗಳನ್ನು ಕೊಟ್ಟರೆ ಈ ಯೋಜನೆ ಎಷ್ಟು ವರ್ಷದಲ್ಲಿ ಮುಗಿಯಬೇಕು? ಎಷ್ಟು ವರ್ಷದಲ್ಲಿ ಜನರಿಗೆ ಅದರ ಫಲ ಸಿಗಬೇಕು ಎನ್ನತಕ್ಕದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಒಂದು ಕಾರ್ಯಕ್ರಮದ ಬಗ್ಗೆ ಜನರಿಗೆ ಬರೆ ಒಂದು ಜಾಹೀರಾತನ್ನು ಮಾಡಿ, ನಾವು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದರೆ ಅಷ್ಟಕ್ಕೆ ಅದರ ಉದ್ದೇಶ ಪೂರ್ಣವಾಗುವುದಿಲ್ಲ. ಒಳ್ಳೆಯ ಕಾರ್ಯಕ್ರಮವಿದ್ದರೂ ಕೂಡ ಅದು ಸಮಗ್ರವಾಗಿ ಅನುಷ್ಠಾನಕ್ಕೆ ತರಬೇಕು. ಏಕೆಂದರೆ, ಮುಂದೆ ಯಾರೋ ಮುಖ್ಯಮಂತ್ರಿಗಳು ಬರುತ್ತಾರೆ. ಅವರ ಪ್ಲಾನ್ ಯಾವುದೋ ಇರುತ್ತದೆ. ಅವರಲ್ಲಿ ಯಾವ ಪಾಪ್ಯುಲರ್ ಯೋಜನೆ ಇರುತ್ತದೆ ಎನ್ನತಕ್ಕದ್ದು ಬಹುಶಃ ನಮಗೆ ಇವತ್ತು ಹೇಳಲಾಗುವುದಿಲ್ಲ. ಏಕೆಂದರೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಸರ್ಕಾರವಿದ್ದಾಗ ಏನು ಯೋಜನೆಗಳಿತ್ತು ಅದರಲ್ಲಿ ಕೆಲವು ಯೋಜನೆಗಳನ್ನು ಕೈಬಿಟ್ಟು ಬಂಗಾರಪ್ಪನವರು ಮುಖ್ಯಮಂತ್ರಿಯಾದಾಗ ಹೊಸ ಯೋಜನೆಗಳು ಪ್ರಾರಂಭವಾಗಿದೆ. ಈ ರೀತಿ ಪ್ರತಿಯೊಂದು ಮುಖ್ಯಮಂತ್ರಿಗಳು ಬಂದಾಗಲೂ ಸಹ ಒಂದೊಂದು ಯೋಜನೆಯಾದಾಗ ಏನು ಒಂದು ಕಾರ್ಯಕ್ರಮವಾಗಬೇಕೋ ಆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಆ ರೀತಿಯಾದರೆ ಬಹುಶಃ ನಮ್ಮ ಜನತೆಗೆ ನಾವು ದ್ರೋಹವನ್ನು ಬಗೆದಂತಾಗಬಹುದೆಂದು ನನ್ನ ಅನಿಸಿಕೆ. ಈಗಾಗಲೇ ವಿಶ್ವ ಯೋಜನೆಯಡಿಯಲ್ಲಿ ಅನೇಕ ಗ್ರಾಮಾಂತರ

ಪ್ರದೇಶದಲ್ಲಿ ಏನು ಒಂದು ಕೈಗಾರಿಕೆ ಇದೆ ಅದಕ್ಕೆ ಒಂದು ಚಾಲನೆ ಸಿಗಬೇಕು, ಆ ಕೈಗಾರಿಕೆ ಉಳಿಯಬೇಕು ಎಂದು ಏನು ಘನ ಉದ್ದೇಶ ಸರ್ಕಾರಕ್ಕಿದೆ ಇದರಲ್ಲಿ ನಾನು ಸಂಶಯವನ್ನು ವ್ಯಕ್ತ ಮಾಡುತ್ತಿಲ್ಲ. ಸಧ್ಯಕ್ಕೆ ಹಳ್ಳಿಯಲ್ಲಿ ಏನು ಪರಿಸ್ಥಿತಿ ಇದೆ ಎಂದರೆ, ಯಾರು ಸಾಮಾನ್ಯವಾಗಿ ಬಡಗಿ, ಕಮ್ಮಾರ, ಕುಂಬಾರ-ಇಂಥ ಏನು ಕಲೆಗಾರರು ಇದ್ದರೋ, ಕೈಗಾರಿಕೆಯನ್ನು ಮಾಡತಕ್ಕ ವ್ಯಕ್ತಿಗಳೇನು ಇದ್ದರೋ ಅವರನ್ನು ಹಳ್ಳಿಯಲ್ಲಿ ಹುಡುಕಲು ಹೋದರೆ ಅವರು ಸಿಗುವುದಿಲ್ಲ. ಅವರ ಪರಿಸ್ಥಿತಿ ಹೀಗಾಗಿದೆ. ಅವರ ಆರ್ಥಿಕ ಮಟ್ಟ ಇಷ್ಟು ಕೆಳಗೆ ಹೋಗಿದೆ, ಇವರು ಜೀವನವನ್ನು ಹೇಗೆ ನಡೆಸಬೇಕು ಎನ್ನತಕ್ಕ ಪರಿಸ್ಥಿತಿ ಬಂದಿದೆ. ಅವರು ತಮ್ಮ ಕಸಬನ್ನು ಬಿಟ್ಟು ಬಂದು ಮತ್ತೆ ಯಾವುದೋ ಉದ್ಯೋಗವನ್ನು ಹುಡುಕುಕೊಂಡು, ನೌಕರಿಯನ್ನು, ಚಾಕರಿಯನ್ನು ಹುಡುಕಿಕೊಂಡು ಹೋಗಿ ಒರಿಜಿನಲ್ ಕಸಬನ್ನು ಬಿಟ್ಟು ಬೇರೆ ಉದ್ಯೋಗವನ್ನು ಅವಲಂಬಿಸಿದ್ದಾರೆ. ಅಂತಹವರಿಗೆ ನಾವು ಈ ವಿಶ್ವ ಯೋಜನೆಯಲ್ಲಿ ರಕ್ಷಣೆಯನ್ನು ಕೊಡಲು ಆಗುತ್ತದೇಯೆ? ಬಹುಶಃ ನಮ್ಮ ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡತಕ್ಕ ವ್ಯಕ್ತಿ, ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದಾಗ ಮಾತ್ರ ಅವರಿಗೆ ಸುರಕ್ಷೆ ಮಾಡಲು ನಮ್ಮಿಂದ ಸಾಧ್ಯವಾಗುತ್ತದೆಂದು ನನ್ನ ಅನಿಸಿಕೆ. ಬಜೆಟ್‌ನಲ್ಲಿ ಅದಕ್ಕೆ ಕೊಟ್ಟಂತ ಹಣ ಕಡಿಮೆ ಇದೆ. ಇದನ್ನು ಬರೆ ಬಜೆಟ್‌ನಲ್ಲಿ ಹೇಳಿದರೆ, ಬರೆ ಪ್ರಚಾರ ಮಾಡುವುದಕ್ಕೋಸ್ಕರ ಕಾರ್ಯಕ್ರಮವನ್ನು ಮಾಡುವುದಾದರೆ ಬಹುಶಃ ಆ ವಿಷಯವನ್ನು ಸರ್ಕಾರಕ್ಕೆ ಬಿಡುತ್ತೇನೆ. ನಿಜವಾಗಿಯೂ ಕಾರ್ಯಕ್ರಮ ಆಗಬೇಕಾದರೆ ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸಲೇಬೇಕಾಗುತ್ತದೆ. ಈಗಾಗಲೇ ಅಕ್ಷಯ ಎನ್ನತಕ್ಕ ಪಾಪ್ಯುಲರ್ ಪ್ರೋಗ್ರಾಮ್‌ನ್ನು ತೆಗೆದುಕೊಂಡಿದ್ದಾರೆ. ಬಡವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿಲ್ಲ. drop out ಆಗುತ್ತಿದ್ದಾರೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ, ಈ ಅಕ್ಷಯ ಯೋಜನೆಯಲ್ಲಿ ಪ್ರತಿ ದಿನ ಒಂದು ರೂಪಾಯಿಯನ್ನು ಶಾಲೆಗೆ ಬರತಕ್ಕ ವಿದ್ಯಾರ್ಥಿಗೆ ಕೊಡತಕ್ಕ ಒಂದು ಕೆಲಸವಿದೆ. ಈಗಾಗಲೆ ಬ್ಯಾಂಕಿನವರು ಸ್ಪಷ್ಟವಾಗಿ ನಾವು ಈ ಕೆಲಸವನ್ನು ಮಾಡುವುದಿಲ್ಲವೆಂದು ಹೇಳಿದ್ದಾರೆ. ಏಕೆಂದರೆ, ನಮಗೆ ಸಾಕಷ್ಟು ಸ್ಟಾಫ್ ಇಲ್ಲ. ಅದರ ಅಕೌಂಟನ್ನು ಮೈನ್‌ಟೇನ್ ಮಾಡಲು ನಮಗೆ ಸಾಧ್ಯವಿಲ್ಲ ಎಂದು ಅವರು ಸರ್ಕಾರಕ್ಕೆ ಸಹಕಾರವನ್ನು ಕೊಡುತ್ತಿಲ್ಲವೆಂದ ಮೇಲೂ ಕೂಡ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ಸರಿಯಾದ ರೀತಿಯಲ್ಲಿ ಸಹಕಾರವಿಲ್ಲದಿದ್ದರೆ ಬಹುಶಃ ಕಾರ್ಯಕ್ರಮಕ್ಕೆ ಅರ್ಥ ಬರುವುದಿಲ್ಲ. ಆ ಕಾರ್ಯಕ್ರಮ ನಿಜವಾಗಿಯೂ ಕೇವಲ ಪುಸ್ತಕದಲ್ಲಿಯೇ ಇರುತ್ತದೆಂದು ನನ್ನ ಅನಿಸಿಕೆ. ಇನ್ನು ಆಶ್ರಯ ಯೋಜನೆಯ ಅಡಿಯಲ್ಲಿ ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಖಮರುಲ್ ಇಸ್ಲಾಮ್‌ರವರು ಹೇಳಿದಂತೆ ಸೈಟುಗಳನ್ನು ಕೊಡಬೇಕೆಂದು ಇದೆ. ಗ್ರಾಮಾಂತರ ಪ್ರದೇಶದಲ್ಲಿ ಸೈಟಿನ ಅಂಥ ತೊಂದರೆ ಏನೂ ಇಲ್ಲ. ಆದರೆ ನಿಜವಾಗಿ ಅರ್ಬನ್ ಏರಿಯ ಎಂದು ಏನು ಇದೆ ಅಲ್ಲಿ ಗ್ರೀನ್‌ಬೆಲ್ಟ್, ಮತ್ತೊಂದು, ಮತ್ತೊಂದು ಎಂದು ಅನೇಕ ಕಂಡೀಷನ್‌ಗಳು ಇದ್ದ ಕಾರಣ ಅಲ್ಲಿ ಸಧ್ಯಕ್ಕೆ ಜಾಗವಿಲ್ಲ. ಈ ಜಾಗವಿಲ್ಲದ ಕಾರಣದಿಂದ ಆಶ್ರಯ ಯೋಜನೆಯನ್ನು ಯಶಸ್ವಿಯಾಗಿ ನಡೆಸಬೇಕೆಂದು ಏನು ಸರ್ಕಾರದ ಉದ್ದೇಶವಿದೆ ಆದರೆ ಇವೆಲ್ಲ ತೊಡಕಿದ್ದ ಕಾರಣ ಆ ಯೋಜನೆಯನ್ನು ಕೂಡ ಅಷ್ಟೊಂದು ಸರಿಯಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗುವುದಿಲ್ಲ. ಈ ಎಲ್ಲಾ ಪಾಪ್ಯುಲರ್ ಪ್ರೋಗ್ರಾಮ್‌ಗಳ ಪರಿಸ್ಥಿತಿ ಏನಾಗಿದೆ ಎಂದರೆ, ಬರೆ ಹೇಳಿಕೊಳ್ಳುವುದಷ್ಟೆ ಆದರೆ ಕಾರ್ಯಕ್ರಮ ಮಾತ್ರ ಆಗುವಂತಿಲ್ಲ, ಅದರ ಲಾಭ ಜನರಿಗೆ ಸಿಗುವಂತಿಲ್ಲ. ಹೀಗಾದರೆ ಕರ್ನಾಟಕ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕೆಂದು ಎಂದಾಗ ಹೇಗೆ ಸಾಧ್ಯವಾಗುತ್ತದೆ? ಅದು ತಮಗೆ ಬಿಟ್ಟಿದ್ದು. ಈಗಾಗಲೆ ಒಕ್ಕಲಿಗರ ಅಭಿವೃದ್ಧಿಯ ಸಲುವಾಗಿ ಯೋಜನೆಯನ್ನು ಮಾಡುತ್ತೇವೆಂದು ಬಜೆಟಿನಲ್ಲಿ ತೋರಿಸಿದ್ದಾರೆ. ಸಾಲ

ಮನ್ನಾ ಎಂದ ಕೂಡಲೆ ಬಿ.ಜೆ.ಪಿ. ಯವರದು ಇದೇ ಗೋಳು ಎಂದು ಹೇಳಬಹುದು. ಆದರೆ ಇದರಲ್ಲಿ ನಮ್ಮ ನಾಯಕರ ಹಾಗೆ ನೀವು ದ್ರೋಹ ಬಗೆದಿದ್ದೀರಿ ಎನ್ನುವಂಥ ಶಬ್ದವನ್ನು ಉಪಯೋಗ ಮಾಡುವಂತಿಲ್ಲ. ನಿಜವಾಗಿಯೂ ನಮ್ಮ ಮುಖ್ಯಮಂತ್ರಿಗಳು ಹೋದ ಸಾರಿಯ ಬಜೆಟಿನಲ್ಲಿ 10 ಸಾವಿರವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದರು. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಸಾಲ ಮನ್ನಾ ಆಗಲಿಲ್ಲ. ಅದಕ್ಕೆ ಏನೇನೋ ಕಂಡೀಷನ್‌ಗಳನ್ನು ಹಾಕಿದ್ದಾರೆ. ನಮ್ಮ ಭಾಗದ ಹಣವನ್ನು ನಾವು ಕೊಟ್ಟಿದ್ದೇವೆ, ಕೇಂದ್ರ ಸರ್ಕಾರದ ಹಣದ ಭಾಗ ಬರಬೇಕು ಎಂದು ಹೇಳುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಕೇಂದ್ರದಲ್ಲಿರುವುದು ನಿಮ್ಮದೇ ಸರ್ಕಾರ, ನೀವು ಅವರ ಪಾಲಿನಿಂದ ಬರತಕ್ಕ ಹಣವನ್ನು ವಸೂಲಿ ಮಾಡಲು ಒತ್ತಾಯವನ್ನು ತಂದು ಈ ಕೆಲಸ ಮಾಡಿದರೆ ಬಹುಶಃ ಎಲ್ಲಾ ಸೊಸೈಟಿಗಳು, ಸಂಘಸಂಸ್ಥೆಗಳು ಮತ್ತು ಬ್ಯಾಂಕುಗಳು ಜೀವಂತವಿರುತ್ತವೆ. ಅದರ ಕಡೆಗೆ ನೀವು ವಿಶೇಷವಾದ ಗಮನವನ್ನು ಹರಿಸಿ. ಏಕೆಂದರೆ ಈಗ ಏನು ಪರಿಸ್ಥಿತಿ ಆಗಿದೆ ಎಂದರೆ. ಯಾರದು 10 ಸಾವಿರದೊಳಗೆ ಸಾಲವಿರುತ್ತದೆ ಆ ರೈತರು ನಮ್ಮ ಸಾಲ ಹೇಗೋ ಮನ್ನಾ ಆಗುತ್ತದೆ, ನಾವು ಏನನ್ನೂ ಕಟ್ಟಬೇಕಾಗಿಲ್ಲವೆಂದು ಅವರುಗಳು ಮೂರು ವರ್ಷಗಳಿಂದ ಹಾಗೆಯೇ ಕುಳಿತುಬಿಟ್ಟಿದ್ದಾರೆ. ಅವರ ಕೆಲಸಕಾರ್ಯಗಳು ಹಾಗೆಯೇ ಸ್ಥಗಿತವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಮನಸ್ಸು ಮಾಡಿ ಈ ಸಾಲವನ್ನು ಮನ್ನಾ ಮಾಡುವ ಕಡೆಗೆ ವಿಶೇಷವಾದ ಗಮನವನ್ನು ಹರಿಸಬೇಕು. ಬಹುಶಃ ನಿಜವಾಗಿಯೂ ಇದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ತಮಗೆಲ್ಲರಿಗೂ ಸಹ ಮನವರಿಕೆಯಾಗಿದೆ. ಆದರೆ ಬಿ.ಜೆ.ಪಿ. ಯವರು ಈ ಒಂದು ಡಿಮ್ಯಾಂಡ್ ಇಟ್ಟಿದ್ದಾರೆಂದು ಅದನ್ನು ಮಾಡುವುದಿಲ್ಲವೇನೊ ಎಂಬ ಸಂಶಯ ನಮಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಉಪಾಧ್ಯಕ್ಷಿಣಿಯವರೆ, ಅವರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ. ಅವರು ಸ್ವಲ್ಪ ರಿಕವರಿಯನ್ನು ಜಾಸ್ತಿ ಮಾಡಿ ಸರಿಯಾಗಿ ರಿಕವರಿಯನ್ನು ಮಾಡಿದರೆ ನಿಮ್ಮ ಬ್ಯಾಂಕ್ ರೈತರಿಗೆ ಸಾಲವನ್ನು ಕೊಡಲು ಎಲಿಜಿಬಲ್ ಆಗುತ್ತದೆ. ಇವತ್ತು ಎಲ್ಲಾ ನಾವೇನು 10 ಹೆಚ್.ಪಿ. ಯವರೆಗೆ ಎಲೆಕ್ಟ್ರಿಸಿಟಿ ಚಾರ್ಜಸ್‌ನ್ನು ಎಗ್ಸಮ್ಟ್ ಮಾಡಿದ್ದೇವೆ, ಈ ಸದನದಲ್ಲಿ ಯಾರಿಗಾದರೂ ಮ್ಯಾಗ್ಸಿಮಮ್ ಬೆನಿಫಿಟ್ ಆದರೆ ಅದು ಮಾನ್ಯ ನಾರಾಯಣರಾವ್ ಮನಹಳ್ಳಿರವರಿಗೆ ಆಗಿರುತ್ತದೆ.

ಶ್ರೀ ನಾರಾಯಣರಾವ್ ಮನಹಳ್ಳಿ : ನಾನು ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷನಾಗಿರುವುದರಿಂದ ಕಳಕಳಿಯಿಂದ ಹೇಳುತ್ತಿದ್ದೇನೆ. ಈಗಾಗಲೇ ನಾನು ಸ್ವತಃ ರಿಕವರಿಯನ್ನು ಮಾಡುತ್ತಿದ್ದೇನೆ. ಆದರೆ ಇದು ಮನ್ನಾ ಆಗಬೇಕೆಂದು ಕೆಲವರು ಏನು ಸುಮ್ಮನಿದ್ದಾರೆ ಅಂಥವರಿಂದ ನಮಗೆ ದುಡ್ಡು ಬರಬೇಕು. ಈಗ ನಮ್ಮ ಬ್ಯಾಂಕ್‌ಗೆ ಸುಮಾರು 1.50 ಕೋಟಿ ರೂಪಾಯಿಗಳು ನಿಮ್ಮ ಸರ್ಕಾರದಿಂದ ಬರಬೇಕಾಗಿದೆ. ಇದು ಬರದೇ ಇರುವುದರಿಂದ ನಮ್ಮ ರಿಕವರಿಗೆ ಹೊಡೆತ ಬೀಳುತ್ತಿದೆ. ಆದುದರಿಂದ ನೀವು ಏನು ಹೇಳಿದಿರಿ ಅದರಂತೆ ನಡೆದುಕೊಳ್ಳುತ್ತೀರೆಂದು ನಮಗೆ ನಂಬಿಕೆ ಇದೆ. ನುಡಿದಂತೆ ನಡೆದವರು ದೇವರ ಸಮಾನ ಎಂದು ಒಂದು ಗಾದೆಯ ಮಾತು ಇದೆ. ತಾವು ಅದರಂತೆ ಮಾಡುತ್ತೀರೆಂದು ನನಗೆ ಪೂರ್ಣ ನಂಬಿಕೆ ಇದೆ. ಈಗ ಒಕ್ಕಲಿಗರ ಬೆಳೆ ಅಭಿವೃದ್ಧಿಗಾಗಿ ನೀವು ಕೊಡುತ್ತಿರುವ ಅನೇಕ ಸೌಲಭ್ಯಗಳಲ್ಲಿ ವಿದ್ಯುಚ್ಛಕ್ತಿ ಬಹಳ ಮುಖ್ಯವಾದುದು. ಆದರೆ ಇದಕ್ಕೆ ಬಹಳ ತೊಂದರೆ ಇದೆ. ಈಗಾಗಲೇ 60 ಸಾವಿರ ಪಂಪ್‌ಸೆಟ್ಟುಗಳಿಗೆ ನೀವು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದೀರಿ. ನೀವು ಒಳ್ಳೆಯ ದೊಡ್ಡ ಸಾಧನೆಯನ್ನೇ ಮಾಡಿದ್ದೀರಿ. ಇದನ್ನು ನಾನು ವಿರೋಧ

ಮಾಡುತ್ತಿಲ್ಲ. ಆದರೆ ಪರಿಸ್ಥಿತಿ ಏನಾಗಿದೆಯೆಂದರೆ, ಅದರಲ್ಲೂ ಮುಖ್ಯವಾಗಿ ಟೇಲ್ ಎಂಡ್‌ನಲ್ಲಿರತಕ್ಕ ನಮ್ಮ ಬೀದರ್ ಜಿಲ್ಲೆಯವರಿಗೆ ವಿದ್ಯುಚ್ಛಕ್ತಿ ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆಂಬುದನ್ನು ಹೇಳುವುದಕ್ಕಾಗುತ್ತಿಲ್ಲ. ಅಂಥ ಒಂದು ಪರಿಸ್ಥಿತಿ ಇದೆ. 2000 ಇಸವಿಯೊಳಗೆ ವಿದ್ಯುಚ್ಛಕ್ತಿ ಬೇಡಿಕೆ ಏನಿದೆ ಅದನ್ನು ಪೂರೈಸಬೇಕಾದರೆ ಸುಮಾರು 15 ಸಾವಿರ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಈ ಹಿಂದೆ ನಮ್ಮಲ್ಲಿ ವಿದ್ಯುಚ್ಛಕ್ತಿ ಬಹಳ ಹೆಚ್ಚಾಗಿತ್ತು ಎಂದು ಹೇಳುತ್ತಿದ್ದರು. ಆದರೆ ಇವತ್ತು ನಮ್ಮ ವಿದ್ಯುಚ್ಛಕ್ತಿ ಸರಬರಾಜಿನ ವ್ಯವಸ್ಥೆ ಬಹಳ ಕಡಿಮೆ ಇದೆ. ಇವತ್ತು ನಮ್ಮ ಆಂಧ್ರಪ್ರದೇಶದಿಂದ ಮಹಾರಾಷ್ಟ್ರದಿಂದ ವಿದ್ಯುಚ್ಛಕ್ತಿಯನ್ನು ತರಿಸಿಕೊಂಡರೂ ಕೂಡ ನಮಗೆ ಸರಿಯಾಗಿ ವಿದ್ಯುತ್ ಸಿಕ್ಕುತ್ತಿಲ್ಲ. ಅಲ್ಲದೆ ನಮ್ಮ ಬೇಡಿಕೆಗಳೂ ಕೂಡ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿವೆ. ಇನ್ನು 8-9 ವರ್ಷದೊಳಗೆ ನಮ್ಮ ಎಲ್ಲ ಪವರ್ ಪ್ರಾಜೆಕ್ಟ್‌ಗಳನ್ನೂ ಪೂರ್ತಿಗೊಳಿಸಬೇಕಾದರೆ ನಾನು ಈಗಾಗಲೇ ಹೇಳಿದಂತೆ ಕನಿಷ್ಟ 15,000 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇಂಥ ಪರಿಸ್ಥಿತಿಯಲ್ಲಿ ಈ ಬಜೆಟ್‌ನಲ್ಲಿ ನಮ್ಮ ಸರ್ಕಾರ ಇದರ ಕಡೆ ವಿಶೇಷವಾದ ಗಮನವನ್ನು ಹರಿಸಿಲ್ಲವೆಂದು ನನಗನ್ನಿಸುತ್ತಿದೆ. ಇದಕ್ಕೆ ಹೆಚ್ಚಿನ ಹಣವನ್ನೊದಗಿಸಿಲ್ಲ ಎಂದರೆ, ರೈತರು ಬೆಳೆಯನ್ನು ಬೆಳೆಯುವುದಕ್ಕೆ ನೀವು ಯಾವ ರೀತಿ ಸಹಾಯ ಮಾಡುತ್ತೀರಿ, ಇದು ಎಷ್ಟರಮಟ್ಟಿಗೆ ಕಾಂಟ್ರವರ್ಸಿಯಲ್ ಆಗುತ್ತದೆಂಬುದನ್ನು ತಮ್ಮ ಮೂಲಕ ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇವತ್ತು ಎಷ್ಟು ಭೂಮಿ ನೀರಾವರಿಯಾಗುತ್ತದೆ. ಅದರಲ್ಲಿ ಮೂರನೇ ಒಂದು ಭಾಗ ನೀರಾವರಿ ಕೇವಲ ವಿದ್ಯುಚ್ಛಕ್ತಿಯನ್ನೇ ಅವಲಂಬಿಸಿದೆ. ಈ ವಿದ್ಯುಚ್ಛಕ್ತಿ ಇಲ್ಲದೇ ಹೋದರೆ ನಮ್ಮ ರೈತರಿಗೆ ನೀರಾವರಿಯನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈಗ ರೈತರ ಪರಿಸ್ಥಿತಿ ಬಹಳ ಕ್ಲಿಷ್ಟವಾಗಿದೆ. ಈಗ ಪವರ್‌ನ್ನು ಜನರೇಟ್ ಮಾಡುವ ಬಗ್ಗೆ ನಾವು ಖಾಸಗಿಯವರನ್ನು ಆಹ್ವಾನ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ತಾವು ಇಷ್ಟೆಲ್ಲಾ ಆಹ್ವಾನ ಮಾಡಿದರೂ ಕೂಡ ಕಳೆದ 1 ವರ್ಷದಲ್ಲಿ ಮುಂದೆ ಬಂದಿರುವವರು ಕೇವಲ ಇಬ್ಬರು ಮಾತ್ರ. ಅವರು ಕೇವಲ 18 ಮೆಗಾವ್ಯಾಟ್ಸ್‌ನ್ನು ಮಾತ್ರ ಉತ್ಪಾದನೆ ಮಾಡುತ್ತಾರೆಂದು ತಿಳಿದುಬಂದಿದೆ. ಆದರೆ ಈ ಕಾರ್ಯಕ್ರಮದ ಅನುಷ್ಠಾನದಲ್ಲೂ ಕೂಡ ಬಹಳಷ್ಟು ತೊಂದರೆಗಳಿವೆ.

ಇನ್ನು ಎರಡನೆಯದಾಗಿ. ನೀರಾವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ತಾವು ಒಂದು ಪಾಪ್ಯುಲರ್ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಅದೇನೆಂದರೆ, ಕೆರೆ ಕಲ್ಯಾಣ ಎಂದು. ನಾನು ತಮಗೆ ಹೇಳುವುದಾದರೆ, ನಮ್ಮಲ್ಲಿ 36 ಸಾವಿರ ಕೆರೆಗಳಿವೆ. ಅವುಗಳ ಜೀರ್ಣೋದ್ಧಾರಕ್ಕೆ ನೀವು ಇಟ್ಟಿರತಕ್ಕದ್ದು ಕೇವಲ 6 ಕೋಟಿ ರೂಪಾಯಿ ಮಾತ್ರ. ಇದು ಏನೇನೂ ಸಾಲದು. ಏಕೆಂದರೆ ನಮ್ಮಲ್ಲಿರತಕ್ಕ ಕೆರೆಗಳು ಸುಮಾರು 300 ವರ್ಷಗಳಿಗಿಂತ ಹಿಂದಿನ ಕೆರೆಗಳು. ಅವುಗಳಲ್ಲಿ ಬಹಳಷ್ಟು ಹೂಳು ತುಂಬಿದೆ. ಅದನ್ನು ತೆಗೆಸುವುದಕ್ಕೆ ನೀವು ಇಷ್ಟು ಕಡಿಮೆ ಹಣವನ್ನಿಟ್ಟು ಇದರಿಂದ ಈ ಕೆರೆಗಳ ಕಲ್ಯಾಣ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇದರಿಂದ ನಿಜವಾಗಿಯೂ ನಿಮ್ಮ ಗುರಿ ಸಾಧನೆಯಾಗುವುದಿಲ್ಲ. ಆದುದರಿಂದ ಈ ಕಾರ್ಯಕ್ಕೆ ಅಗತ್ಯವಾದ ಹಣವನ್ನು ಒದಗಿಸಿ ಈ ಕೆಲಸವನ್ನು ಪೂರ್ತಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾವೇರಿ ಬಗ್ಗೆ ಇಲ್ಲಿ ಬಹಳಷ್ಟು ಚರ್ಚೆಯಾಗಿದೆ. ಇದಕ್ಕೆ ಎಷ್ಟು ಹಣವನ್ನು ಇಡಬೇಕಾಗುತ್ತದೆಂಬುದನ್ನು ನಾನು ಈಗ ಅಂಕಿಅಂಶಗಳ ಮುಖಾಂತರ ಹೇಳುವುದಕ್ಕಾಗುವುದಿಲ್ಲ. ನಾನು ಕಳೆದ 2 ತಿಂಗಳ ಹಿಂದೆ ಕೃಷ್ಣಾ ಬೇಸಿನ್‌ಗೆ ಅಂದರೆ ನಾರಾಯಣಪುರ ಡ್ಯಾಂ ವಿಭಾಗಕ್ಕೆ

ಹೋಗಿದ್ದಾಗ ಅಲ್ಲಿ ನಡೆಯುತ್ತಿದ್ದ ಕೆಲಸವನ್ನು ನೋಡಿದೆ. ಅದೇ ರೀತಿಯಲ್ಲಿ ಆ ಕೆಲಸ ಮುಂದುವರಿದರೆ ಇನ್ನು 50-100 ವರ್ಷಗಳಾದರೂ ಕೂಡ ಆ ಪ್ರಾಜೆಕ್ಟ್‌ನ್ನು ಪೂರ್ತಿಗೊಳಿಸುವುದಕ್ಕಾಗುವುದಿಲ್ಲ. ಏಕೆಂದರೆ, ಅಲ್ಲಿ ನಡೆಯುತ್ತಿದ್ದ ಕೆಲಸದ ಗತಿ, ಆ ಜನರನ್ನು ನೋಡಿದಾಗ ಬಹುಶಃ ನಮ್ಮ ಈ ಜೀವಮಾನದಲ್ಲಿ ಈ ಪ್ರಾಜೆಕ್ಟ್ ಪೂರ್ಣವಾಗುವುದನ್ನು ನೋಡುತ್ತೇವೋ, ಇಲ್ಲವೋ ಎಂಬ ಸಂಶಯ ಬಂತು. ಇಂಥ ಅನೇಕ ಸಮಸ್ಯೆಗಳನ್ನು ತಾವು ಮುಂದಿಟ್ಟುಕೊಂಡು ನಾವು ಒಕ್ಕಲಿಗರಿಗೆ ಸಹಾಯ ಮಾಡುತ್ತೇವೆಂದು ಹೇಳುವುದಾದರೆ ನಿಜಕ್ಕೂ ಇದು ಅಪಹಾಸ್ಯದ ವಿಷಯವಾಗುತ್ತದೆಂದು ನನ್ನ ಅನಿಸಿಕೆ. ಆಮೇಲೆ ಈ ಸರ್ಕಾರದ ಮತ್ತೊಂದು ಮುಖ್ಯ ಉದ್ದೇಶವೇನೆಂದರೆ, ನಾವು ಪ್ರತಿಯೊಬ್ಬರಿಗೂ ಕುಡಿಯುವ ನೀರಿನ ಸವಲತ್ತು ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಈಗಾಗಲೇ ಬಹುಶಃ ಕರ್ನಾಟಕದ ಎಲ್ಲ ಭಾಗಕ್ಕಿಂತಲೂ ನಮ್ಮ ಬೀದರ್ ಜಿಲ್ಲೆಯ ಪರಿಸ್ಥಿತಿ ಅತ್ಯಂತ ಕೆಟ್ಟದಿದೆ. ಬಹಳ ಬರಗಾಲ ಪರಿಸ್ಥಿತಿ ಇದೆ, ಇದು ಎಲ್ಲರಿಗೂ ಅರ್ಥವಾಗಿದೆ. ಇದರ ಬಗ್ಗೆ ಬಹಳಷ್ಟು ಚರ್ಚೆಯೂ ಕೂಡ ಆಗಿದೆ. ಆದರೆ ಸರ್ಕಾರದವರು ನೀರನ್ನು ಪೂರೈಸಬೇಕೆಂದು ಹೇಳಿ ಅನೇಕ ಬೋರ್‌ವೆಲ್‌ಗಳನ್ನು ತೆಗೆಸುತ್ತಿದ್ದಾರೆ. ಆದರೆ ಇದರ ಪರಿಸ್ಥಿತಿ ಏನಾಗಿದೆ ಎಂದರೆ, ಬೋರ್‌ವೆಲ್‌ಗಳ ಮೇಲೆ-ಬೋರ್‌ವೆಲ್‌ಗಳನ್ನು ತೆಗೆಸುತ್ತಿರುವುದರಿಂದ ಮತ್ತೆ ಹೊಸ ಬೋರ್‌ವೆಲ್‌ಗಳನ್ನು ಕೊರೆದಾಗ ಹಳೆಯ ಬೋರ್‌ವೆಲ್‌ಗಳ ನೀರು ಬರಿದಾಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇದು ಸುಮಾರಾಗಿ ಜನತಾ ಸರ್ಕಾರ ಇದ್ದಾಗಿನಿಂದ ಹಿಡಿದು ಈ ಬೋರ್‌ವೆಲ್ ಕಾರ್ಯಕ್ರಮ ನಡೆದಿದೆ. ನಮ್ಮಲ್ಲಿ ಅಂದರೆ ಇಡೀ ಕರ್ನಾಟಕದಲ್ಲಿ 20 ಸಾವಿರ ಚಿಲ್ಲರೆ ಹಳ್ಳಿಗಳಿವೆ. ಇದರಲ್ಲಿ ನಾವು 12 ಸಾವಿರ ಊರುಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದೇವೆಂದು ಜನತಾ ಸರ್ಕಾರ ಬಂದಾಗ ಅವರು ಹೇಳಿದರು. ಆಮೇಲೆ ಇವರು ಅಂದರೆ ಕಾಂಗ್ರೆಸ್ ಸರ್ಕಾರ ಬಂದ ನಂತರ ಹೋದ ಬಜೆಟ್‌ನಲ್ಲಿ 5001 ಮತ್ತು 500 ಈ ರೀತಿ 9,500 ಬೋರ್‌ವೆಲ್‌ಗಳ ಸಲುವಾಗಿ ನಾವು ಹಣವನ್ನು ಒದಗಿಸಿದ್ದೇವೆಂದು ಹೇಳಿದರು. ಹಾಗೆ ನಾವು ನೋಡಿದಾಗ ಬಹುಶಃ ಎಲ್ಲ ಊರುಗಳಿಗೆ ನೀರನ್ನು ಕೊಟ್ಟಂತಾಗಿರುತ್ತದೆಂದು ಅನಿಸಿತು. ಆದರೆ ಪರಿಸ್ಥಿತಿ ಏನಿದೆ ಎಂದರೆ, ಮೊದಲು ಎಲ್ಲಿ ಬೋರ್‌ವೆಲ್ ಆಗಿತ್ತೋ ಆ ಬೋರ್‌ವೆಲ್‌ಗಳಲ್ಲಿ ನೀರೇ ಇಲ್ಲ. ಅಲ್ಲಿ ನೀರು ಸಿಗುವಂಥ ಪರಿಸ್ಥಿತಿಯೇ ಇಲ್ಲ. ಅಂದಮೇಲೆ ಬಹುಶಃ ಒಂದೊಂದು ಊರಿಗೆ ನೀರನ್ನು ಕೊಡಬೇಕೆಂದರೆ ಆ ಒಂದು ಊರಿನಿಂದ 2 ಕಿಲೋಮಿಾಟರ್, 5 ಕಿಲೋಮಿಾಟರ್, 10 ಕಿಲೋಮಿಾಟರ್ ದೂರ ಹೋದಾಗ ಮಾತ್ರ ಆ ನೀರಿನ ಪಾಯಿಂಟ್ ಸಿಗುವಂಥ ಸಾಧ್ಯತೆ ಇದೆ. ಆ ನೀರಿನ ಪಾಯಿಂಟ್‌ನ್ನು ಹುಡುಕಿ ಅಲ್ಲಿಂದ ಪೈಪ್ ಲೈನ್ ಹಾಕಿ ನೀರು ಕೊಡಬೇಕೆಂದರೆ ಅದಕ್ಕೆ ಹಣ ಹೆಚ್ಚುಬೇಕು. ಆದರೆ ಇವರು ಇಟ್ಟಂಥ ಹಣ ಯಾವುದಕ್ಕೂ ಸಾಲದು. ಏತಕ್ಕೆಂದರೆ, ಈಗ ಅನೇಕ ಬೋರ್‌ವೆಲ್‌ಗಳು ಫೇಲ್ ಆಗುತ್ತಿದೆ ಎಂಬುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆ. ಹಳೆಯ ಬೋರ್‌ವೆಲ್‌ಗಳು ಒಣಗುತ್ತಿವೆ. ಹೊಸ ಬೋರ್‌ವೆಲ್‌ಗಳ ನೀರಿನ ಮಟ್ಟ ಮತ್ತೆ ತಳಕ್ಕೆ ಹೋಗುತ್ತಿದೆ. ಅದಕ್ಕಾಗಿ ಒಂದು ಪರ್ಮನೆಂಟ್ ಸೋರ್ಸಸ್ ಅಂದರೆ ಕೆರೆ, ಜಲಾಶಯ ಮತ್ತೊಂದು ಇಂಥಾದ್ದನ್ನು ಹುಡುಕಿ ವ್ಯವಸ್ಥೆಯನ್ನು ಮಾಡಬೇಕು. ಆಗ ಮಾತ್ರ ಸ್ವಲ್ಪಮಟ್ಟಿಗೆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಬಜೆಟ್‌ನಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಈ ಬಜೆಟ್‌ನಲ್ಲಿ ಒದಗಿಸಿರುವ ಹಣ ಬಹಳಷ್ಟು ಕಡಿಮೆ ಇದೆ. ಅದಕ್ಕೆ ಕುಡಿಯುವ ನೀರಿನ ಸಲುವಾಗಿ ತಾವು ಹೆಚ್ಚು ಹಣವನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈಗಾಗಲೇ 5 ಪರ್ಸೆಂಟ್ ತೆರಿಗೆಯನ್ನು 103 ವಸ್ತುಗಳಿಗೆ ಹಾಕಿರುತ್ತೀರಿ. ಇದರಿಂದ ಎಷ್ಟು ಲಾಭವಾಗುತ್ತದೆಂಬುದನ್ನು ಈ ಬಜೆಟ್‌ನಲ್ಲಿ

ಹೇಳಿದ್ದೀರಿ. ಇಂತಿಂಥ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದ್ದೇವೆಂದು ಹೇಳಿ ಪಟ್ಟಿಯನ್ನೂ ಸಹ ಮಾಡಿದ್ದೀರಿ, ನಿಜವಾಗಿಯೂ ಈ ವಸ್ತುಗಳನ್ನು ಉಪಯೋಗ ಮಾಡುವವರು ಸಾಮಾನ್ಯ ಜನ, ಬಡ ಜನ. ಶೇಕಡ 5 ರಷ್ಟು ತೆರಿಗೆ ಹಾಕುತ್ತೇವೆಂದ ಮೇಲೆ ಇದು ಯಾವ ಯಾವ ವಸ್ತುಗಳ ಮೇಲೆ ಎಷ್ಟು ಎಂಬುದನ್ನು ನಿಗದಿಪಡಿಸಿಲ್ಲ. ಬಹುಶಃ ಇದರಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿದೆ ಎಂದು ನನಗೆ ಸಂಶಯ ಬರುತ್ತಿದೆ. ಏತಕ್ಕೆಂದರೆ ಯಾವ ಕಾರ್ಖಾನೆಯಲ್ಲಿ ಯಾವ ವಸ್ತು ತಯಾರಾಗುತ್ತದೆ ಆ ಮಾಲಿಕ ಬಂದು ಕಾಲನ್ನು ಕಟ್ಟಿಕೊಂಡು ಹೇಳಿಕೊಳ್ಳಬಹುದು. ಇಂಥ ವಸ್ತುಗಳ ಮೇಲೆ ನೀವು ಹೆಚ್ಚು ತೆರಿಗೆಯನ್ನು ಹಾಕಬೇಡಿ, ಇದರಲ್ಲಿ ನಿಮಗೆ ಇಷ್ಟು ಎಂದು ನಾವು ಕೊಡುತ್ತೇವೆ ಎಂದು ಹೇಳುವಂಥ ಸಂಚು ಇದೆಯೇನೋ ಎಂಬ ಸಂಶಯ ನನಗೆ ಬರುತ್ತಿದೆ. ಅದರ ಸಲುವಾಗಿ ಪ್ರವೇಶ ತೆರಿಗೆ ವಿಷಯದಲ್ಲಿ ಸವಿಸ್ತಾರವಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳುವಾಗ ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನ್ಯಾಚ್ಯುರಲ್ ಕೆಲಾಮೆಟೀಸ್ ಬಗ್ಗೆ ಹೇಳುವುದಾದರೆ, ಮಳೆ ಹೆಚ್ಚಾಗಿ ಅಥವಾ ಬರಗಾಲ ಬಂದು ಅನೇಕವಾಗಿ ಹಾನಿಗೊಳಗಾದುದನ್ನು ನಮ್ಮ ಕರ್ನಾಟಕದಲ್ಲಿ ನಾವು ಕಾಣುತ್ತಿದ್ದೇವೆ. ಕರ್ನಾಟಕದಲ್ಲಿ ಈ ಭಾಗಕ್ಕೆ ವಿಪರೀತ ಮಳೆಯಾಗಿ ಬಹಳ ಜನರಿಗೆ ಹಾನಿಯಾಗಿದೆ. ಆದರೆ ನಮ್ಮ ಭಾಗದಲ್ಲಿ ಬರಗಾಲ ಬಂದು ಜನರಿಗೆ ಹಾನಿಯಾಗಿದೆ. ಆದರೆ ಹೋದ ವರ್ಷ ಎಂದರೆ 1991-92 ರಲ್ಲಿ ಅತಿ ಮಳೆಯಾಗಿ ನಮ್ಮಲ್ಲಿಯ ಬಂಪಳ್ಳಿ ಮತ್ತು ಸಾಂಗ್ಲಿ ಎಂಬ ಎರಡು ಊರುಗಳಿಗೆ ಬಹಳಷ್ಟು ಹಾನಿಯಾಗಿದೆ. ಅಲ್ಲಿಗೆ ಮಾನ್ಯ ಕಂದಾಯ ಮಂತ್ರಿಗಳು ಬಂದಿದ್ದರು. ಆಗ ಇನ್ನೂ ಶ್ರೀ ಬಸವರಾಜ್, ಹುಮ್ನಾಬಾದ್‌ರವರು ಮಂತ್ರಿಯಾಗಿರಲಿಲ್ಲ. ಆಗ ಇವರು ಬಂದು ಅಲ್ಲಿನ ಜನರಿಗೆ ಆಶ್ವಾಸನೆ ಕೊಟ್ಟರು. ನಿಮಗೆ ಪರಿಹಾರ ಕೊಡುತ್ತೇವೆಂದು ಹೇಳಿದರು. ಬಂಪಳ್ಳಿ ಊರನ್ನು ಸ್ಥಳಾಂತರಿಸಲು ಜಾಗ ಕೊಡುತ್ತೇವೆಂದು ಅವರು ಒಪ್ಪಿಕೊಂಡಿದ್ದರು. ಆದರೆ ಇಲ್ಲಿಯವರೆಗೆ ಆ ಊರು ಅಲ್ಲೇ ಇದೆ. ಇದುವರೆಗೆ ಅದನ್ನು ಲಿಫ್ಟ್ ಮಾಡಿಲ್ಲ. ಅಲ್ಲಿನ ಜನರಿಗೆ ಯಾವುದೇ ಪರಿಹಾರ ಸಿಗಲಿಲ್ಲ. ನ್ಯಾಚ್ಯುರಲ್ ಕೆಲಾಮಿಟೀಸ್‌ಗೆ ಒಳಗಾಗಿದ್ದ ಜನರಿಗೆ ಪರಿಹಾರ ಸಿಗಬೇಕೆಂದು ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಹೇಳಿದರು. ನಂತರ ಅವರು ಹೋಗಿಬಿಟ್ಟರು. ಜನರಿಗೆ ಇದುವರೆಗೆ ಪರಿಹಾರ ಸಿಗಲಿಲ್ಲ. ಅದೇ ರೀತಿ ನಮ್ಮಲ್ಲಿ ಒಂದು ಥಿಯೇಟರ್‌ನಲ್ಲಿ ಬಾಂಬ್ ಎಕ್ಸ್‌ಪ್ಲೋಜನ್ ಆಗಿ 6 ಜನ ಸತ್ತರು. ಅದರ ಸಲುವಾಗಿ ಪರಿಹಾರ ಕೊಡಬೇಕಾಗಿತ್ತು. ಪರಿಹಾರ ಕೊಡುವ ಬಗ್ಗೆ ಘೋಷಣೆ ಆಯಿತು. ಆದರೆ ಪರಿಹಾರ ಕೊಡಲಿಲ್ಲ. ಆದರೆ ಇಲ್ಲಿ ಪರಿಹಾರದ ಸಲುವಾಗಿ ಹಣ ಇಟ್ಟಿದ್ದಾರೆ. ಆದರೆ ಅವರೇ ಹೇಳುತ್ತಿದ್ದಾರೆ. ನಮಗೆ ಪ್ರತಿ ವರ್ಷ 150 ಕೋಟಿ ರೂಪಾಯಿ ಪರಿಹಾರ ಧನ ಬೇಕು ಎಂದು ಹೇಳುತ್ತಿದ್ದಾರೆ. ಆದರೆ ಅವರು ಬಡ್ಜೆಟ್ಟಿನಲ್ಲಿ ಇಟ್ಟದ್ದು ಬರೀ 50 ಕೋಟಿ ರೂಪಾಯಿ. ಸರ್ಕಾರ ಏನು ಘೋಷಣೆ ಮಾಡುತ್ತದೆ ಅದನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ನನ್ನ ಮನವಿ ಇದೆ. ಸಹಕಾರ ಕ್ಷೇತ್ರದಲ್ಲಿ ಸೊಸೈಟಿಗಳು ಸರಿಯಾಗಿ ನಡೆಯಬೇಕು. ರೈತರಿಗೆ ಸರಿಯಾದ ಸವಲತ್ತು ಸಿಗಬೇಕೆಂದು 5 ಪರ್ಸೆಂಟ್ ಇನ್‌ಸೆಂಟೀವ್ ಎಂದು ಡಿಕ್ಲೇರ್ ಮಾಡಿದರು. ಯಾರು ತಾವು ತೆಗೆದುಕೊಂಡ ಸಾಲವನ್ನು ಮಾರ್ಚ್ 30 ರೊಳಗೆ ಮರು ಪಾವತಿ ಮಾಡುತ್ತಾರೋ ಅಂಥವರಿಗೆ 5 ಪರ್ಸೆಂಟ್ ಇನ್‌ಸೆಂಟೀವ್‌ನ್ನು, ಸಾಲ ಹಿಂದುರಿಗಿಸಿದ ಹತ್ತು ದಿನಗಳಲ್ಲಿ ಚೆಕ್ ಮೂಲಕ ಅವರ ಮನೆಗೆ ತಲುಪಿಸುತ್ತೇವೆಂದು ಸರ್ಕಾರ ಘೋಷಣೆ ಮಾಡಿತು. ಆ ಘೋಷಣೆ ಪ್ರಕಾರ ಸಾಲ ವಸೂಲಿ ನಡೆಯುತ್ತಿದೆ. ಜನರು ಸಾಲವನ್ನು ಹಿಂದುರಿಗಿಸುತ್ತಿದ್ದಾರೆ. ಆದರೆ ಇಲ್ಲಿಯವರೆಗೆ, ಅವರು ಕೊಟ್ಟು 2 ತಿಂಗಳಾದರೂ ಒಂದು ಪೈಸೆ ಅವರಿಗೆ ಸಿಗಲಿಲ್ಲ. ಅವರ ಮನೆಗೆ ಚೆಕ್ ಹೋಗುವುದು ಇನ್ನೂ

ದೂರದ ಮಾತು. ಅಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್ ಏನಿದ್ದಾರೆ ಅವರು ಈ ಕೆಲಸ ಮಾಡಬೇಕು. ಅವರು, ನಮಗೆ ದುಡ್ಡು ಇನ್ನೂ ಬಂದಿಲ್ಲ. ನಾವು ಇನ್‌ಸೆಂಟೀವ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ ಹೇಳುವುದು ಒಂದು. ನಡೆಯುವುದು ಒಂದು ಆಗಿದೆ. ಈ ಸರ್ಕಾರ ಈ ಬಗೆ ಸರಿಯಾಗಿಲ್ಲ. ಬರೀ ಬಾಯಲ್ಲಿ ಬಡ್ಜೆಟ್ ಪ್ರಗತಿಪರ ಇದೆ. ನಾವು ಸರ್ವತೋಮುಖ ಅಭಿವೃದ್ಧಿ ಮಾಡುತ್ತೇವೆ. ಜನ ಕಲ್ಯಾಣ ಮಾಡುತ್ತೇವೆಂದು ಹೇಳಿಕೊಂಡು, ಈ ಬಡ್ಜೆಟ್ಟನಲ್ಲಿ ಪ್ರತ್ಯಕ್ಷವಾಗಿ ಅದರ ಅನುಷ್ಠಾನ ಇಲ್ಲದಿದ್ದರೆ ಬಹುಶಃ ಆ ಬಡ್ಜೆಟ್ ಉಪಯೋಗ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸರ್ಕಾರದಲ್ಲಿ ಬೇರೆ ಬೇರೆ ಕಡೆ ಫೋಲಾಗುವಂತ ಕಾರ್ಯಕ್ರಮಗಳು ಇವೆ.

ಶ್ರೀ ಎಂ. ಮಹದೇವ್ : 5 ಗಂಟೆ ಮೇಲೆ ಮಾತನಾಡಬಾರದೆಂದು ನಿರ್ಧಾರ ಮಾಡಿರುವುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಚೇರ್ಮನ್ : ಅಂಥದ್ದೇನೂ ಇಲ್ಲವಲ್ಲ.

ಶ್ರೀ ನಾರಾಯಣ ರಾವ್ ಮನಹಳ್ಳಿ : ಅವರು 5 ಗಂಟೆಗೆ ಹೋಗಬೇಕೆಂದರೆ ನಾನು ಇಲ್ಲಿಗೆ ಮುಗಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಹದೇವ್ ಅವರು 5 ಗಂಟೆಗೆ ಮುಗಿಸಬೇಕೆಂಬ ವಿಚಾರವನ್ನು ತಮ್ಮ ಮುಂದಿಟ್ಟಿದ್ದಾರೆ. ಅದಕ್ಕೆ ತಮ್ಮನ್ನು ಕೇಳುತ್ತೇನೆ. ಎಷ್ಟು ಗಂಟೆಗೆ ಮುಗಿಸುತ್ತೀರಿ ಎಂದು. ನಾನು ಬೇಕಾದರೆ ಇವತ್ತು ಪ್ರಾರಂಭ ಮಾಡಿ ನಾಳೆ ಮುಂದುವರಿಸುತ್ತೇನೆ.

ಚೇರ್ಮನ್ : ಆರು ಗಂಟೆಯವರೆಗೆ ಕೂರೋಣ; ಮಾತನಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ. ನಾವು ಸಹ ಬಹಳ ವರ್ಷಗಳಿಂದ ಬಡ್ಜೆಟ್ಟನ್ನು ನೋಡುತ್ತಾ ಬಂದಿದ್ದೇವೆ. ಸುಮಾರು 6-7 ಜನ ಮಾನ್ಯ ಮಂತ್ರಿಗಳು ಈ ರಾಜ್ಯವನ್ನು ಆಳಿದಂಥ ಸಂದರ್ಭದಲ್ಲಿ ಅವರು ಮಂಡಿಸಿರತಕ್ಕ ಬಡ್ಜೆಟ್ಟನ್ನು ಪ್ರತಿ ವರ್ಷ ಅವಲೋಕನ ಮಾಡುತ್ತಾ ಬಂದಿದ್ದೇವೆ. ದೀನದಲಿತರ ಬಂಧು, ಹಿಂದುಳಿದ ಜನಾಂಗದ ಬಂಧು ಎಂದು ಹೇಳಿದಂಥ ಶ್ರೀ ದೇವರಾಜ ಅರಸು ಅವರ ಬಜೆಟ್ಟನ್ನು ಸಹಿತ ನಾವು ಕಂಡೆವು. ಈ ರಾಜ್ಯಕ್ಕೆ ಹೊಸ ಆಂದೋಳನ ಮಾಡುತ್ತೇನೆ ಎಂದು ಹೇಳಿದಂಥ ರಾಮಕೃಷ್ಣ ಹೆಗೆಡೆಯವರ ಬಜೆಟ್ಟನ್ನೂ ನೋಡಿದ್ದೇವೆ. ಇವತ್ತು ರೈತಾಪಿ ವರ್ಗಕ್ಕೆ, ಇವತ್ತು ರೈತರ ಏಳಿಗೆಗೆ, ರೈತರ ಉದ್ಧಾರಕ್ಕೆ, ರೈತರ ಕಲ್ಯಾಣಕ್ಕೋಸ್ಕರ ಇವತ್ತು ಯಾವುದಾದರೂ ಒಂದು ಬಜೆಟ್ ಕಳೆದ 20 ವರ್ಷಗಳಿಂದ ತಯಾರಾಗಿದೆ ಎಂದರೆ ಅದು ಈ ಬಜೆಟ್. ಈ ಮಾತನ್ನು ಮಾನ್ಯ ಬಂಗಾರಪ್ಪನವರ ಮುಖಸ್ತುತಿಗೆ ಹೇಳತಕ್ಕದ್ದಲ್ಲ. ಇವತ್ತು ಈ ಪುಸ್ತಕ ನೋಡಿದರೆ ಅರ್ಥವಾಗುತ್ತದೆ. ನನಗನ್ನಿಸುತ್ತದೆ, ವಿರೋಧಪಕ್ಷದ ನಾಯಕರುಗಳು ಇಲ್ಲಿ ಏತಕ್ಕೆ ಗೈರುಹಾಜರಾಗಿದ್ದಾರೆ ಎಂದರೆ ಅವರಿಗೆ ಇದರೊಳಗೆ ಹೇಳುವುದಕ್ಕೆ ಏನೂ ಇಲ್ಲ. ಇದರೊಳಗೆ ವಾದ ಮಾಡುವುದಕ್ಕೆ ಅವರಿಗೆ ಏನೂ ಇಲ್ಲ. ಇದಕ್ಕೋಸ್ಕರವೇ ಒಂದು ಕುಂಟುನೆಪ ಹಾಕಿಕೊಂಡು ಇವತ್ತು ಈ ಒಂದು ಬಹಿಷ್ಕಾರ ಹಾಕಿದ್ದಾರೆ ಎಂದರೆ ತಪ್ಪೇನೂ ಇಲ್ಲ. ಆದ್ದರಿಂದ ಈ ರಾಜ್ಯದ ರೈತರ ಪರವಾಗಿ ಈ ರಾಜ್ಯದ ಗ್ರಾಮಾಂತರ ಪ್ರದೇಶದ ಜನತೆ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಾ, ಈ ಒಂದು ಬಜೆಟ್ಟನ್ನು ಮಂಡಿಸಿರತಕ್ಕದ್ದನ್ನು ಬೆಂಬಲಿಸಿ ಮಾತನಾಡುತ್ತೇನೆ. ಕಳೆದ ಆರೇಳು ದಿನಗಳಿಂದ ಇಲ್ಲಿ ಒಂದು ಆಟ ನಡೆದಿದೆ. ಬಜೆಟ್ ಅನ್ನು ಅವತ್ತು ಅವರು ಓದುವುದಕ್ಕೆ ಬಂದಂಥ ಸಂದರ್ಭದಲ್ಲಿ ಅಧ್ಯಕ್ಷ ಪೀಠದಲ್ಲಿ ಅಧ್ಯಕ್ಷರು ಇದ್ದರು. ತಾವು ಬಜೆಟ್ ಮಂಡಿಸಿ ಎಂದು

ಹೇಳಿದ ಸಂದರ್ಭದಲ್ಲಿ ಬಜೆಟ್ಟನ್ನು ಓದುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಎದ್ದಾಗ ನಮ್ಮ ಪಕ್ಷದವರೇ ಆಗಿರತಕ್ಕ ಸನ್ಮಾನ್ಯ ರಂಗನಾಥ್ ಅವರು ಬಜೆಟ್ ಬಯಲಾಗಿದೆ. ಬಜೆಟ್ಟನ್ನು ಇಲ್ಲಿ ಮಂಡಿಸಬೇಕಾದ ಅಗತ್ಯ ಇಲ್ಲ ಎಂದು ಹೇಳಿದ ಮಾತನ್ನು ನಾವು ಈ ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಳ್ಳಬೇಕಾಗಿದೆ. ಅದಾಯಿತು. ಮುಖ್ಯಮಂತ್ರಿಗಳು ಬಜೆಟ್ ಬಗ್ಗೆ ಮೊನ್ನೆ ಹೇಳಿದರು. ಮಾನ್ಯ ಅಧ್ಯಕ್ಷರೇ. ತಮಗೆ ಗೊತ್ತಿದೆ. ಯಾವುದೇ ಒಂದು ಕಾಲದಲ್ಲಿ ಬಜೆಟ್ ಆಗಬೇಕಾದರೆ. ಸಾಯಂಕಾಲ ಅಧಿವೇಶನದಲ್ಲಿ ಬಜೆಟ್ ಮಂಡಿಸುತ್ತಾ ಇದ್ದರೆ. ಅವತ್ತು 2 ಘಂಟೆ ಒಳಗೆ ರಾಜ್ಯದಲ್ಲಿ ಈ ಒಂದು ಪದಾರ್ಥಗಳ ಬೆಲೆಗಳೆಲ್ಲ ಬಹಳಷ್ಟು ಏರುಪೇರಾಗುತ್ತವೆ. ಉದಾಹರಣೆಗೆ ಪೆಟ್ರೋಲ್ ಬಂಕ್‌ಗಳಲ್ಲಿ ನೋಡಿದರೆ ಅವತ್ತು ಪೆಟ್ರೋಲ್ ಇಲ್ಲ ಎಂದು ಹೇಳುತ್ತಾರೆ. ನಾಳೆ ಬಜೆಟ್‌ನಲ್ಲಿ ರೇಟ್ ಜಾಸ್ತಿಯಾಗುತ್ತದೆ ಎಂದು ಹೇಳುತ್ತಾರೆ. ಇದು ಕೇವಲ ಅರ್ಧ ಗಂಟೆ. ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಈ ರಾಜ್ಯದ ಜನತೆಗೆ ಗೊತ್ತಿರತಕ್ಕ ವಿಚಾರ. ಈ ರಾಷ್ಟ್ರದ ಜನತೆಗೆ ಗೊತ್ತಿರತಕ್ಕ ವಿಚಾರ. ಬಜೆಟ್ ಕರ್ನಾಟಕ ವಿಧಾನಸಭೆಯಲ್ಲಿ ಲೀಕ್ ಆಗಿಲ್ಲ. ಸಿಬ್ಬಂದಿ ತರತಕ್ಕ ಸಂದರ್ಭದಲ್ಲಿ ಕಿತ್ತುಕೊಂಡು ಬಂದು ಈ ಪುಸ್ತಕವನ್ನು ಪಿತೂರಿ ಮಾಡಿ ಕೊಟ್ಟು. ಇದನ್ನು ದುರ್ಬಳಕೆ ಮಾಡಿಕೊಂಡು ವಿರೋಧಪಕ್ಷದವರು ಇವತ್ತು ಬಹಿಷ್ಕಾರ ಮಾಡಿರತಕ್ಕದ್ದು. ಈ ರಾಜ್ಯದ ದುರ್ದೈವ ಅಲ್ಲದೆ ಮತ್ತೇನೂ ಇಲ್ಲ ಎಂದು ನಾನಾದರೂ ಭಾವನೆ ಮಾಡಿಕೊಳ್ಳುತ್ತೇನೆ. ಏತಕ್ಕೆ ಈ ಮಾತು ಹೇಳುತ್ತೇನೆಂದರೆ. ಆಯಿತು. ಬಜೆಟ್ ಲೀಕ್ ಆಗಿದೆ. ಬಂಗಾರಪ್ಪ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ನಿರ್ಣಾಯ ಮಂಡಿಸಿದರು. ಏನಾಯಿತು ನಿರ್ಣಾಯ? ತಾವು ಅದನ್ನು ಮತಕ್ಕೆ ಹಾಕಿದಿರಿ. ನಿರ್ಣಾಯ ಬಿದ್ದುಹೋಯಿತು. ಈ ಸದನಕ್ಕೆ ತಾವು ಬಹಳ ಮುಖ್ಯರು. ಈ ಸದನ ನೀವು ಹೇಳಿದಹಾಗೆ ನಡೆಯಬೇಕು. ಈ ಸದನದಲ್ಲಿ ನಿಮ್ಮ ನಿಯಮಾವಳಿಗೆ. ನಿಮ್ಮ ಕಟ್ಟುನಿಟ್ಟಿಗೆ ಯಾರೂ ದೊಡ್ಡವರಲ್ಲ. ಇದನ್ನು ಹಿಂದಿನಿಂದ ಎಷ್ಟು ಜನ ಅಧ್ಯಕ್ಷರು ಆಳಿಹೋದರೋ. ಎಷ್ಟು ಜನ ಮುಖ್ಯಮಂತ್ರಿಗಳು ಬಂದು ಹೋದರೋ. ಎಷ್ಟು ಜನ ಮಂತ್ರಿ ಮಹೋದಯರು ಬಂದು ಹೋದರೋ ಅವರೆಲ್ಲರೂ ಸಹ ನೋಡಿಕೊಂಡು ಬಂದಿದ್ದಾರೆ. ಈ ಸದನದ ಅಧಿಪತ್ಯ ನಿಮಗಲ್ಲದೆ ಇನ್ಯಾರಿಗೂ ಇಲ್ಲ. ನೀವು ಹೇಳಿದ್ದೆ? ಈ ಸದನದಲ್ಲಿ ಆಗತಕ್ಕದ್ದು. ನೀವು ತೀರ್ಪು ಕೊಟ್ಟಿದ್ದೀರಿ. ಬಜೆಟ್ ಲೀಕ್ ಆಗಿಲ್ಲ ಎಂದು. ಆ ನಿರ್ಣಾಯ ಬಿದ್ದು ಹೋದಮೇಲೆ ಯಾವುದೋ ಒಂದು ಸಂದರ್ಭದಲ್ಲಿ ಬಜೆಟ್ಟನ್ನು ಇನಿಷಿಯೇಟ್ ಮಾಡಬೇಕಾಗಿರತಕ್ಕದ್ದು. ಆಯವ್ಯಯ ಪತ್ರದ ಮೇಲೆ ಚರ್ಚೆ ಪ್ರಾರಂಭ ಆಗಬೇಕಾಗಿರತಕ್ಕದ್ದು ಸಂಪ್ರದಾಯ. ಇದು ಕಾನೂನಲ್ಲ. ವಿರೋಧಪಕ್ಷದ ನಾಯಕರೇ ಪ್ರಾರಂಭ ಮಾಡಬೇಕಾಗಿರುವುದು ಸಂಪ್ರದಾಯ. ಆ ಸಂಪ್ರದಾಯ ಎಲ್ಲಿ ಮುರಿದುಬಿತ್ತು? ತಾವು ರೆಗ್ಯುಲರಾಗಿ ಈಗ ಕರೆಯುತ್ತೀರಿ. ಶಿವರಾಮೇಗೌಡ ಮಾತನಾಡಬೇಕಾಗಿತ್ತು ಎಂದು ಕರೆಯುತ್ತೀರಿ. ಶಿವರಾಮೇಗೌಡ ಇಲ್ಲದೇ ಇದ್ದಾಗ ಸದನ ಹಾಗೇ ನಿಲ್ಲಿಸುವುದಕ್ಕಾಗುತ್ತದೇಯೇ? ಯಾರನ್ನಾದರೂ ಇನ್ನೊಬ್ಬರನ್ನು ಕರೆಯುತ್ತೀರಿ. ಅದೇ ರೀತಿ ವಿರೋಧಪಕ್ಷದ ನಾಯಕರು ಇಲ್ಲದೇ ಇರತಕ್ಕ ಸಂದರ್ಭದಲ್ಲಿ ನಮ್ಮ ಮಾನ್ಯ ಹಿರಿಯ ಸದಸ್ಯರಾಗಿರತಕ್ಕ ಇದಿನಬ್ಬ ಅವರನ್ನು ಕರೆದರು. ಇದಿನಬ್ಬ ಅವರಿಗೆ. ನಮ್ಮ ಕಾಂಗ್ರೆಸ್‌ನಲ್ಲಿ ಗೆದ್ದಿರತಕ್ಕವರಿಗೆ. ಆಳುವ ಪಕ್ಷದಲ್ಲಿ ಇರತಕ್ಕವರಿಗೆ ಬಜೆಟ್ ಮೇಲೆ ಪ್ರಥಮವಾಗಿ ಮಾತನಾಡತಕ್ಕ ಹಕ್ಕೇ ಇಲ್ಲ ಎನ್ನತಕ್ಕ ವಾದವನ್ನು ನಾವು ಯಾರೂ ಒಪ್ಪುವುದಕ್ಕೆ ತಯಾರಿಲ್ಲ. ಆದರೂ ಸಹಿತ ....

ಶ್ರೀ ನಾರಾಯಣರಾವ್ ಮನಹಳ್ಳಿ : ಹಕ್ಕಿದೆ. ಆದರೆ ಪರಂಪರೆ ಪ್ರಕಾರ ...

ಶ್ರೀ ಎಲ್.ಆರ್. ಶಿವರಾಮೇಗೌಡ : ಪರಂಪರೆ ಅನಿವಾರ್ಯ ಆಯಿತು. ಅದಾದಮೇಲೆ ಬಂದು ಮತ್ತೆ ಇನಿಷಿಯೇಟ್ ಮಾಡಬಹುದಾಗಿತ್ತು.

ಶ್ರೀ ನಾರಾಯಣರಾವ್ ಮನಹಳ್ಳಿ : ಅದೊಂದು ಪದ್ಧತಿ ಇದೆ. ಪದ್ಧತಿ ಪ್ರಕಾರ, ಸಂಪ್ರದಾಯದ ಪ್ರಕಾರ ವಿರೋಧಪಕ್ಷದವರು ಇನಿಷಿಯೇಟ್ ಮಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಈ ಒಂದು ಸಂದರ್ಭದಲ್ಲಿ ಬಿ.ಜೆ.ಪಿ. ಸ್ನೇಹಿತರಿಗೆ ಒಂದು ಮಾತು ಹೇಳುತ್ತೇನೆ. ಅಧ್ಯಕ್ಷರೇ, ತಮ್ಮಲ್ಲಿ ಒಂದು ವಿನಂತಿ ಮಾಡುತ್ತೇನೆ. ಬಿ.ಜೆ.ಪಿ. ಸದಸ್ಯರಲ್ಲಿ ಒಂದು ವಿನಂತಿ ಮಾಡುತ್ತೇನೆ. ಸ್ವಾಮಿ, ನಾವೆಲ್ಲಾ ಹೊರಗೆ ಇದ್ದೆವು. ನಾವು ಈ ವಿಧಾನ ಸಭೆಗೆ ಆರಿಸಿ ಬಂದಿರಲಿಲ್ಲ. ಕಳೆದ ಅಧಿವೇಶನದಲ್ಲಿ ಅಂದರೆ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ 66 ಜನ ಶಾಸಕರಿದ್ದರು ಸ್ವಾಮಿ. ಒಂದು ತಿಂಗಳ ಕಾಲ 66 ಜನರನ್ನು ಹೊರಗೆ ಹಾಕಿದರು. ನಮ್ಮನ್ನು ಏತಕ್ಕೆ ಹೊರಗೆ ಹಾಕಿದ್ದೀರಿ ನೀವು, ಒಳಗೆ ತೆಗೆದುಕೊಳ್ಳಿ ಎಂದು ನಮ್ಮ ಅಂದಿನ ವಿರೋಧಪಕ್ಷದಲ್ಲಿರತಕ್ಕವರು ಧರಣಿ ಮಾಡಿದರು.

ಶ್ರೀ ಬಿ.ಎಂ. ಇದಿನಬ್ಬ : 66 ಜನರನ್ನೂ ಕೂಡ ಆಗ ಎತ್ತುಕೊಂಡು ಹೋಗಿ ಹೊರಗೆ ಹಾಕಿದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಬಸವಲಿಂಗಪ್ಪನವರು ನಮ್ಮನ್ನು ಎಲ್ಲಾ ಹೊರಗೆ ಹಾಕಿದರು ಕಣಯ್ಯ ಎಂದು ಹೇಳಿ ನಗುತ್ತಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಸಂಪ್ರದಾಯವನ್ನು ಹೇಳಿಕೊಡುತ್ತಾರಲ್ಲ, ಅವತ್ತು ಮೂರು ಕಾಲೇ ಇತ್ತು ಆ ಸರ್ಕಾರಕ್ಕೆ.

ಚೇರ್ಮನ್ : ಕೆಲವು ಸಲ ಸಂಪ್ರದಾಯ ಬದಲಾವಣೆ ಆಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ನಮ್ಮ ವಿರೋಧ ಪಕ್ಷದ ಮುಖಂಡರು ಸಂಪ್ರದಾಯವನ್ನು ಹೇಳಿಕೊಡುತ್ತಾರೆ. ಈ ದಿನ ಸಂಪ್ರದಾಯ ಹೇಳತಕ್ಕ ಪಕ್ಷ ಆವತ್ತು ಆಡಳಿತ ನಡೆಸುತ್ತಿದ್ದಾಗ ಆ ಸರ್ಕಾರಕ್ಕೆ ಇದ್ದದ್ದು 3 ಕಾಲುಗಳು. ಒಂದು ಇವರದ್ದು (ಬಿಜೆಪಿ ಪಕ್ಷದ ಕಡೆ ಕೈ ತೋರಿಸಿದರು).

ಶ್ರೀ ನಾರಾಯಣರಾವ್ ಮನಹಳ್ಳಿ : ಆಗ ನಾವು ಇದ್ದಿಲ್ಲ,

ಶ್ರೀ ಆರ್.ಎನ್. ನಾಯಕ್ : ಕಡೆಗೆ ಆ ಕಾಲು ನಮ್ಮದೇ ಕೇಂದ್ರದಲ್ಲೂ ಸರ್ಕಾರ ಹೊರಟುಹೋಯಿತು. ಆ ಕಾಲು ಬಹಳ ವಿಚಿತ್ರವಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಇದಿನಬ್ಬನವರನ್ನು ಆವತ್ತು ಚರ್ಚೆಗೆ ಆಹ್ವಾನಿಸಿದರು. ಅವರೂ ಕೂಡ ಈ ಸದನದ ಗೌರವಾನ್ವಿತ ಸದಸ್ಯರಾಗಿದ್ದಾರೆ. ನಮ್ಮೆಲ್ಲರಿಗಿಂತಲೂ ಹೆಚ್ಚಿನ ವಿಚಾರವನ್ನು ಅವರು ತಿಳಿದುಕೊಂಡಿದ್ದಾರೆ. ಅನುಭವಶಾಲಿಗಳಾಗಿದ್ದಾರೆ. ಈ ಸದನದಲ್ಲಿ ಅವರ ಬಗ್ಗೆ ಹೆಚ್ಚಿನ ಗೌರವ ಇದೆ. ಅವರು ಮಾತನಾಡಿದ್ದಾರೆ. ಅವರು ಮಾತನಾಡಿದರು ಎನ್ನುವ ಒಂದೇ ಒಂದು ಕುಂಟು ನೆಪವೊಡ್ಡಿದ್ದಾರೆ. ಇವತ್ತು ಜನರು ನೋಡುತ್ತಿದ್ದಾರೆ. ಆಳುವ ಪಕ್ಷಕ್ಕೆ ಅಷ್ಟೇ ಅಲ್ಲ, ಕೇಳುವ ಪಕ್ಷಕ್ಕೂ ಇವತ್ತು ಹಕ್ಕು ಇದೆ. ಇವತ್ತು ಸರ್ಕಾರ ನಡೆಸತಕ್ಕ ಸಂದರ್ಭದಲ್ಲಿ ನಾನಾ ತಪ್ಪುಗಳು ಆಗುತ್ತವೆ. ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಟ್ರಾನ್ಸ್‌ಕ್ಷನ್ಸ್ ಮಾಡುವ ಸರ್ಕಾರಕ್ಕೆ ಒಂದೂ ತಪ್ಪು ಇಲ್ಲದಹಾಗೆ ನಡೆಯುವ ಹಾಗೆ ಇಲ್ಲ. ನಾವು ಪರಂಪರೆಯನ್ನು

ನೋಡಿದ್ದೇವೆ. ಇತಿಹಾಸ ನೋಡಿದ್ದೇವೆ. ಸ್ವತಂತ್ರ ಬಂದ 40 ವರ್ಷಗಳಲ್ಲಿ ಯಾವ ಯಾವ ಸರ್ಕಾರ ಹೇಗೆ ಹೇಗೆ ಆಡಳಿತ ನಡೆಸಿವೆಯೆಂದು ನೋಡಿದ್ದೇವೆ. ಕೆಂಗಲ್ ಹನುಮಂತಯ್ಯನವರ, ದೇವರಾಜ ಅರಸ್‌ರವರ, ಹೆಗಡೆಯವರ, ವೀರೇಂದ್ರ ಪಾಟೀಲರ ಅಧಿಕಾರಾವಧಿಯಲ್ಲಿ ನಡೆಸಿಕೊಂಡು ಬಂದಿದ್ದನ್ನು ನೋಡಿದ್ದೇವೆ. ಎಲ್ಲ ಸರ್ಕಾರಗಳಲ್ಲೂ ತಪ್ಪು ನಡೆದಿದೆ. ಆಗ ವಿರೋಧಪಕ್ಷದವರು ಎಚ್ಚರಿಸಿದ್ದಾರೆ. ಒಂದು ನಿರಂತರಹವಾದಂತಹ ಕೆಲಸ ಮಾಡದೇ ಇವತ್ತು ಆಯವ್ಯಯ ಪತ್ರದ ಮೇಲೆ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳಿ ಹೊರಕ್ಕೆ ಹೋಗಿರತಕ್ಕದ್ದು, ಇದಕ್ಕಿಂತಾ ನಾಚಿಕೆಗೇಡು ವಿರೋಧ ಪಕ್ಷದವರಿಗೆ ಮತ್ತೊಂದು ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಅವರಿಗೆ ಜವಾಬ್ದಾರಿ ಇಲ್ಲ. ಜವಾಬ್ದಾರಿ ಇದ್ದಿದ್ದರೆ ಅವರು ಬರುತ್ತಿದ್ದರು. ನಾನು ಶುಕ್ರವಾರದ ದಿವಸ ಮಾನ್ಯ ಮುಖ್ಯಮಂತ್ರಿಯವರನ್ನು ವಿನಂತಿ ಮಾಡಿಕೊಂಡೆ. ಆಯವ್ಯಯ ಚರ್ಚೆಯಲ್ಲಿ ವಿರೋಧ ಪಕ್ಷದವರು ಭಾಗವಹಿಸುವುದು ಅತ್ಯಗತ್ಯ; ವಿರೋಧಪಕ್ಷಗಳವರನ್ನು ಕರೆಸಿ; ವಿರೋಧ ಪಕ್ಷ ಇಲ್ಲದೇ ಚರ್ಚೆ ಮಾಡುವುದು ಬೇಡ ಎಂದು ಹೇಳಿದಾಗ ಸರ್ಕಾರ ಒಂದು ತೀರ್ಮಾನಕ್ಕೆ ಬಂತು. ನಿಜ, ಈ ಸಂಪ್ರದಾಯವನ್ನು ನಾವು ಮುರಿಯುವುದು ಬೇಡ ಎಂದು ಹೇಳಿ ಅಧ್ಯಕ್ಷರ ಮೂಲಕ ವಿನಂತಿ ಮಾಡಿದರು. ಚರ್ಚೆಗೆ ಬನ್ನಿ ಎಂದು ಹೇಳಿದರು. ಏನು ತೊಂದರೆಯಾಗಿದೆ ಎಂದು ಬಂದು ಮಾತನಾಡಿ ಎಂದು ಹೇಳಿದರು. ಶುಕ್ರವಾರ ಸಭೆ ಮುಂದೆ ಹೋಯಿತು. ಶನಿವಾರವೂ ಅವರು ಬರಲಿಲ್ಲ. ಸೋಮವಾರ, ಮಂಗಳವಾರ, ಬುಧವಾರ ಮುಂದೆ ಹೋಯಿತು. ಈ ಸದನ ಒಂದು ದಿವಸ ನಡೆಯಬೇಕಾಗಿದ್ದರೆ ಬಡ ಬೋರೇಗೌಡನ ಹಣ ಕನಿಷ್ಟ ಪಕ್ಷ 25 ಲಕ್ಷ ರೂಪಾಯಿ ಖರ್ಚು ಆಗುತ್ತದೆ. ಈ ಐದು ದಿವಸ ಎಷ್ಟು ಹಣ ಖರ್ಚು ಆಯಿತು? ಬರೀ ಇವರಿಗೋಸ್ಕರ, ಈ ಮಕ್ಕಳಾಟಕ್ಕೋಸ್ಕರ ಸದನ ನಡೆಯದೆ ಬಿಟ್ಟರಲ್ಲ ಇವರಿಗೆ ಜನ ಬುದ್ಧಿ ಕಲಿಸದೇ ಬಿಡುವುದಿಲ್ಲ. ಹೊರಗಡೆ ಹೋಗಿ ನಾವು ಪ್ರಚಾರ ಮಾಡುತ್ತೇವೆ ಎಂದು ಇವತ್ತು ಹೇಳುತ್ತಾರಂತೆ. ನಾನು ಕೇಳುತ್ತೇನೆ, ನೀವು ಏನು ಪ್ರಚಾರ ಮಾಡುತ್ತೀರಿ? ನಿಮಗೆ ಹಕ್ಕು ಏನಿದೆ? ಇಲ್ಲಿ ಅವರು ಕುಳಿತು ಬಡ್ಜೆಟ್ ಬಗ್ಗೆ ಮಾತನಾಡಿ ನೀರಾವರಿಗೆ ಬಗ್ಗೆ, ಮತ್ತಿತರ ವಿಚಾರಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಇವತ್ತು ದೇವೇಗೌಡರು ಈ ಸದನದಲ್ಲಿ ಇಲ್ಲ. ದೇವೇಗೌಡರು ಪಾರ್ಲಿಮೆಂಟ್‌ನಲ್ಲಿ ಇದ್ದಾರೆ. ಅವರು ಇದೇ ಸದನದಲ್ಲಿ ಕುಳಿತು ಹೇಳಿದರು. ರಾಮಕೃಷ್ಣ ಹೆಗಡೆಯವರೇ, ನೀವು ಏನಾದರೂ 300 ಕೋಟಿ ರೂಪಾಯಿ ನೀರಾವರಿಗೆ ಕೊಡದೇ ಇದ್ದರೆ ಈ ನಿಮಿಷದಲ್ಲಿ ನಾನು ಈ ಸದನದಲ್ಲಿ ಇರುವುದಿಲ್ಲ, ರಾಜೀನಾಮೆ ಕೊಟ್ಟು ಹೊರಹೋಗುತ್ತೇನೆ ಎಂದು ಹೇಳಿದರು. ಇವತ್ತು ನಾನು ಬಂಗಾರಪ್ಪನವರನ್ನು ಕೇಳುತ್ತೇನೆ. ತಾವು 400 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಟ್ಟಿದ್ದೀರಿ. ನಾವು ನಿಮ್ಮನ್ನು ಅಭಿನಂದನೆ ಮಾಡಬಾರದೇ? ನಾನು ಒಬ್ಬ ರೈತನ ಮಗನಾಗಿ, ಕಾವೇರಿ ಬೇಸಿನ್‌ನಿಂದ ಬಂದಿರುವವನಾಗಿ ಕೇಳುತ್ತೇನೆ. ಯಾರ ಕಾಲದಲ್ಲಿ ನೀರಾವರಿಗೆ 400 ಕೋಟಿ ರೂಪಾಯಿ ಕೊಟ್ಟರು? 300 ಕೋಟಿ ರೂಪಾಯಿ ಕೊಡಿ ಸ್ವಾಮಿ ನಿಮಗೆ ಕೈಮುಗಿಯುತ್ತೇನೆ ಎಂದು ಹೇಳಿದರು. ಆಮೇಲೆ ಅವರು ರಾಜೀನಾಮೆ ಕೊಡುವುದಕ್ಕೂ ಹೋಗಲಿಲ್ಲ. ಮಂತ್ರಿಪದವಿ ಬಿಟ್ಟು ಆಚೇನೂ ಹೋಗಲಿಲ್ಲ, ಈಚೇನೂ ಹೋಗಲಿಲ್ಲ. ಒಳಕ್ಕೇ ಸೇರಿಕೊಂಡು ಕಾಲ ತಳ್ಳಿದರು. ಇವತ್ತು 400 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತು ಕಾವೇರಿ ಕಟ್ಟಿಕೊಂಡು ಉರಿಯುತ್ತಾ ಇದೆ. ಇಂತಹ ಸಂದರ್ಭದಲ್ಲಿ 400 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಟ್ಟಿರತಕ್ಕದ್ದು ಸ್ವಾಗತಾರ್ಹ. ಇವತ್ತು ನಾವೆಲ್ಲರೂ ಸಹ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ವಿರೋಧ

ಪಕ್ಷದವರಿಗೆ ಬಹಳ ಜವಾಬ್ದಾರಿ ಇದೆ. ಆಳುವ ಪಕ್ಷಕ್ಕಿಂತಲೂ ವಿರೋಧ ಪಕ್ಷದವರಿಗೆ ಎಲ್ಲಿ ಸರ್ಕಾರ ತಪ್ಪು ಹೆಜ್ಜೆ ಇಡುತ್ತದೆ ಎಂದು ಚುಚ್ಚಿ ಸರಿಪಡಿಸತಕ್ಕ ಬಹಳ ಪ್ರಮುಖ ಜವಾಬ್ದಾರಿ ಇವತ್ತು ವಿರೋಧ ಪಕ್ಷದವರಿಗೆ ಇದೆ. ಇದೆಲ್ಲವನ್ನೂ ಗಾಳಿಗೆ ತೂರಿ ದೊಂಬರಾಟ ಆಡಿಕೊಂಡು ಆಚೆ ನಿಂತಿದ್ದೀರಿ. ಒಂದು ಮಾತನ್ನು ಈ ಸಂದರ್ಭದಲ್ಲಿ ಸದನದ ಮೂಲಕ ಅವರಿಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಕೇವಲ ಒಂದು ಸೀಟ್ ಕಡಿಮೆ ಇದ್ದರೆ ಇವರಿಗೆ ವಿರೋಧ ಪಕ್ಷದ ಮಾನ್ಯತೆ ಇಲ್ಲ. ಇವರ 7 ವರ್ಷಗಳ ದುರಾಡಳಿತವನ್ನು ನೋಡಿದ ಜನರು ಇವರನ್ನು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳತಕ್ಕ ಮಾನ್ಯತೆಯೇ ಇಲ್ಲದ ಹಾಗೆ ಇವತ್ತು ಅವರನ್ನು ವಜಾ ಮಾಡಿದರು. ನಿಮಗೆ ಅಷ್ಟು ಕೊಟ್ಟಾಗಲೂ ಸಹ ಬುದ್ಧಿ ಕಲಿತುಕೊಳ್ಳದಿದ್ದರೆ ಕಷ್ಟವಾಗುತ್ತದೇನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದುವರೆಗೆ ನಾನು ಪೀಠಿಕೆ ಹಾಕಿದೆ. ಇನ್ನು ಮುಂದೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಶುರು ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಎಂಟರಿ ಟ್ಯಾಕ್ಸನ್ನು 5 ಪರ್ಸೆಂಟ್ ಹಾಕಿದ್ದಾರೆ. ಎಂಟರಿ ಟ್ಯಾಕ್ಸ್ 5 ಪರ್ಸೆಂಟ್ ಹಾಕಿದ ಮೇಲೆ ಹೊರಗಡೆ ಇರತಕ್ಕ ಎಲ್ಲ ಮಾರ್ಕೆಟ್‌ಗಳನ್ನು ನಾನು ನೋಡಿದ್ದೇನೆ. ಎಲ್ಲಾ ವರ್ತಕರು, ಎಲ್ಲ ವರ್ಗದ ಜನರಲ್ಲಿ 5 ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಜಾಸ್ತಿಯಾಯಿತು ಎನ್ನುವ ವಾದವಿದೆ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಇಡೀ ಭಾರತ ದೇಶದಲ್ಲಿಯೇ ಅತಿ ಹೆಚ್ಚಿನ ಟ್ಯಾಕ್ಸನ್ನು ಕೊಡತಕ್ಕ ರಾಜ್ಯವೆಂದರೆ ಅದು ನಮ್ಮ ರಾಜ್ಯ. ಇದು ನಿನ್ನೆ ಮೊನ್ನೆ ಎರಡು ವರ್ಷಗಳಿಂದ ಬಂದಿರುವುದಲ್ಲ, ಕಳೆದ ಹತ್ತಾರು ವರ್ಷಗಳಿಂದ ಹಾಕಿರತಕ್ಕ ಟ್ಯಾಕ್ಸಿನ ಹೊರೆಯಿಂದ ಅತಿ ಹೆಚ್ಚು ಟ್ಯಾಕ್ಸನ್ನು ಕೊಡತಕ್ಕದ್ದು ನಮ್ಮ ರಾಜ್ಯವಾಗಿದೆ. ಅದಕ್ಕೆ ಇವತ್ತು ಸುಮಾರು 130 ಕೋಟಿ ರೂಪಾಯಿಗಳ ಎಂಟರಿ ಟ್ಯಾಕ್ಸನ್ನು ಹಾಕಿರುವುದನ್ನು ದಯಮಾಡಿ 3 ಪರ್ಸೆಂಟ್‌ಗೆ ಇಳಿಸಿ. ಎಂಟರಿ ಟ್ಯಾಕ್ಸ್ ಹಾಕದಿದ್ದರೆ ಆಗುವುದಿಲ್ಲ. ಆದರೆ ಈಗ ಹಾಕಿರತಕ್ಕ 5 ಪರ್ಸೆಂಟ್ ಟ್ಯಾಕ್ಸ್‌ನ್ನು 3 ಪರ್ಸೆಂಟ್ ಇಳಿಸುವುದಕ್ಕೆ ಮಾನ್ಯ ಕಂದಾಯ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಶಿಫಾರಸು ಮಾಡಬೇಕು. ಇಲ್ಲದೇ ಹೋದರೆ ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ, ನೋವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ಬರತಕ್ಕ ದುಡ್ಡನ್ನು ಮುನಿಸಿಪಾಲಿಟಿಗಳಿಗೆ ಕೊಡಬೇಕೆಂದು ಇದೆ. ಕಳೆದ ಆರೇಳು ವರ್ಷಗಳಿಂದ ಮುನಿಸಿಪಾಲಿಟಿಗಳಲ್ಲಿ ಕಸ ಗುಡಿಸುವುದಕ್ಕೆ ದುಡ್ಡು ಇಲ್ಲ. ಕಸ ಗುಡಿಸುವುದು ಅಲ್ಲ, ಕಸ ಗುಡಿಸುವ ಪೊರಕೆ ತೆಗೆದುಕೊಳ್ಳಲಿಕ್ಕೆ ದುಡ್ಡೆ ಇಲ್ಲ. ಮುನಿಸಿಪಾಲಿಟಿಗಳ ಗತಿ ಈ ಮಟ್ಟಕ್ಕೆ ಬಂದಿದೆ. ಎಂಟರಿ ಟ್ಯಾಕ್ಸ್ ಅನ್ನು ಮುನಿಸಿಪಾಲಿಟಿಗಳ ಮತ್ತು ನಗರಸಭೆಗಳಿಗೆ ಕೊಡತಕ್ಕ ಉದ್ದೇಶದಿಂದ ಹಾಕಲಾಗಿದೆ. ಆ ಹಣವನ್ನು ಮುನಿಸಿಪಾಲಿಟಿಗಳಿಗೆ ಮೀಸಲಿಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. 5 ಪರ್ಸೆಂಟ್ ಇರುವುದನ್ನು 3 ಪರ್ಸೆಂಟ್ ಇಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯೋಜನಾ ಗಾತ್ರವನ್ನು ಜಾಸ್ತಿ ಮಾಡಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ರಾಜ್ಯದ ಜನತೆಗೆ ಇದೊಂದು ಕೊಡುಗೆಯೆಂದು ಹೇಳಿದರೆ ತಪ್ಪಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ 1040 ಕೋಟಿ ರೂಪಾಯಿ ಯೋಜನಾ ಗಾತ್ರವನ್ನು ನಿಗದಿ ಮಾಡಿದ್ದರು. ಕೇವಲ 650 ಕೋಟಿ ರೂಪಾಯಿ ಖರ್ಚು ಮಾಡಿದರು. ಇವತ್ತು ನಮ್ಮ ಸರ್ಕಾರದವರು ಅದಕ್ಕೆ 1558 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದಕ್ಕೆ ಮೊಬಲೈಸ್ ಮಾಡಿಕೊಂಡು ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಇದಕ್ಕೆ ಒಂದು ನಿರಂತರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಇವತ್ತು 36 ಪರ್ಸೆಂಟ್ ಯೋಜನಾ ಗಾತ್ರ ಜಾಸ್ತಿಯಾಗಿದೆ.

ಇದನ್ನು ನಾವು ಯೋಜನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಪ್ರಗತಿ ಏಷ್ಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಕಾವೇರಿಯ ಬಗ್ಗೆ ಹೇಳಬೇಕೆಂದರೆ, ಕಾವೇರಿ ಯೋಜನೆಗಾಗಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕ ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಕಾವೇರಿ ಯೋಜನೆಗೆ ಕಳೆದ ವರ್ಷ 136 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಕಳೆದ ವರ್ಷ 136 ಕೋಟಿ ರೂಪಾಯಿ ಕೊಟ್ಟಿದ್ದರಲ್ಲಿ ಜನವರಿಯವರೆಗೆ ಖರ್ಚಾಗಿರುವುದು ಕೇವಲ 89ಕೋಟಿ. 89 ಕೋಟಿ ರೂಪಾಯಿ ಅದಕ್ಕೆ ಆದರೆ 26 ಕೋಟಿ ರೂಪಾಯಿ ಅರಿಯರ್ಸ್ ಅಂದರೆ ಹಳೆಯ ಬಿಲ್ಲುಗಳಿಗೆ ಹೋಯಿತು. 14 ಕೋಟಿ ರೂಪಾಯಿ ಸಂಬಳಕ್ಕೆ ಹೋಯಿತು. ಹೀಗೆ 40 ಕೋಟಿ ರೂಪಾಯಿ ಖರ್ಚಾಯಿತು. ಇನ್ನು ಉಳಿದ 49 ಕೋಟಿ ರೂಪಾಯಿ ಖರ್ಚಾಗಿದೆ. ಇವತ್ತು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿ ಇಂಜನಿಯರ್‌ಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಂದು ನಿಮಗೆ ಗೊತ್ತಿದೆ. ಎಲ್ಲಿಯಾದರೂ ಭ್ರಷ್ಟರು ಹೆಚ್ಚಾಗಿ ಇದ್ದಾರೆಂದರೆ ಅದು ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ. ಅಲ್ಲಿ ಬಹಳ ಖದೀಮರು ಇದ್ದಾರೆ. ಅದರೊಳಗೆ ಎರಡನೆಯ ಮಾತು ಇಲ್ಲ. ಅವರಲ್ಲಿ ಕೆಲವರು ಒಳ್ಳೆಯವರೂ ಇರಬಹುದು. ಅವರ ಬಗ್ಗೆ ನಿಗಾವಹಿಸಬೇಕು. ಮಾನ್ಯ ದೊಡ್ಡ ನೀರಾವರಿ ಸಚಿವರು ಸದನದಲ್ಲಿ ಇಲ್ಲ. ಅವರಿಗೆ ಅದರ ಬಗ್ಗೆ ಅನುಭವವಿದೆ. ಇವತ್ತು ಅವರು ನೀರಾವರಿಯ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಿ ಒಂದು ಸ್ಥಿಮಿತಕ್ಕೆ ಬರಬೇಕು. 136 ಕೋಟಿ ರೂಪಾಯಿ ಹಣವನ್ನು ಇಟ್ಟು ಕೇವಲ 25 ಕೋಟಿ ರೂಪಾಯಿ ಖರ್ಚು ಮಾಡಿದರೆ ಹೇಗೆ? ಈ ಬಗ್ಗೆ ಹಿಂದಿನ ಲೋಕೋಪಯೋಗಿ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಹೀಗೆ ಹಣವನ್ನು ಖರ್ಚು ಮಾಡಿದರೆ ಶೇಕಡ 50 ರಷ್ಟು ಹಣ ಖರ್ಚಾಗುವುದಿಲ್ಲ, ಕೊನೆಯ ಪಕ್ಷ ನಮಗೆ 50 ಪರ್ಸೆಂಟ್ ಕೊಟ್ಟುಬಿಡಿ, ನಿಮಗೆ ಕೈಮುಗಿಯುತ್ತೇವೆ, ಇಂಜನಿಯರ್‌ಗಳೆ, ಕಂಟ್ರಾಕ್ಟರುಗಳೆ ಎಂದು ಕೇಳಿರುವ ಮಾತು ನಮಗೆ ಗೊತ್ತಿದೆ. ಐವತ್ತಕ್ಕೆ ಸ್ಟಿಕ್ ಆನ್ ಆಗಿ, 25 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಕಾವೇರಿ ಹತ್ತಿಕೊಂಡು ಉರಿಯುತ್ತಿರುವ ಈ ವರ್ಷದಲ್ಲಿ ನೀವು ಅದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತಿಂಗಳಿಗೆ ಇಷ್ಟು ಹಣವೆಂದು ನಿಗದಿ ಮಾಡಬೇಕು. ಯಾವ ಇಂಜನಿಯರ್ ಸರಿಯಾಗಿ ಹಣವನ್ನು ಖರ್ಚು ಮಾಡುವುದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಖರ್ಚು ಮಾಡಬೇಕಾದರೆ ಡ್ರಾ ಮಾಡಿ ಹಣ ತೆಗೆದುಕೊಳ್ಳುವುದಲ್ಲ, ಕೆಲಸವಾಗಬೇಕು. ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಆ ಕೆಲಸ ನಿಮ್ಮಿಂದ ಆಗಬೇಕು. ನೀರಾವರಿಗಾಗಿ ಮಾನ್ಯ ಬಂಗಾರಪ್ಪನವರು ಏನು ಆಸೆಯಿಟ್ಟು 200 ಕೋಟಿ ಕೊಟ್ಟಿದ್ದಾರೊ ಅದು ಫಲಪ್ರದವಾಗಬೇಕು; ಆಗ ಮಾತ್ರ ಪ್ರಯೋಜನವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆನ್‌ಗೋಯಿಂಗ್ ಪ್ರಾಜೆಕ್ಟ್ಸ್ ಕೆಲಸ ಬೇಗ ಮುಗಿಸಬೇಕು. ಇಲ್ಲದೇ ಹೋದರೆ ಆಗುವುದಿಲ್ಲ. ಉದಾಹರಣೆಗೆ ಹೇಮಾವತಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇತ್ತೀಚೆಗೆ ಅಲ್ಲಿಗೆ ಒಬ್ಬ ಒಳ್ಳೆಯ ಚೀಫ್ ಇಂಜನಿಯರ್ ಬಂದಿದ್ದಾರೆ. ಅವರ ಹೆಸರು ರತ್ನಾ ನಾಯಕ್. ಅವರು ಬಹಳ ದಕ್ಷರು ಇದ್ದಾರೆ, ಬಹಳ ಚೆನ್ನಾಗಿ ಕೆಲಸ ಮಾಡಿ, ಸ್ವತಃ ಅವರೇ ಹೋಗಿ ನೋಡಿ ಬಂದು ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ಕೈಕೆಳಗೆ ಇರತಕ್ಕಂಥ ಸಿಬ್ಬಂದಿಯವರು ಮಾತ್ರ ಬಹಳ ಕೆಟ್ಟುಹೋಗಿದ್ದಾರೆ. ಇವರ ಬಗ್ಗೆ ನಿಗಾ ವಹಿಸದೇ ಹೋದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಒಂದು ಟೈಮ್‌ಬಾಂಡ್ ಪ್ರೋಗ್ರಾಮ್ ಹಾಕಿಕೊಂಡು ಈ ಹೇಮಾವತಿ ಯೋಜನೆಯನ್ನು ಇಷ್ಟು ದಿವಸಗಳಲ್ಲಿ ಮುಗಿಸಬೇಕು ಎಂದು ಹೇಳಿ. ನಾಗಮಂಗಲ ತಾಲ್ಲೂಕಿನಲ್ಲಿ 29 ಸಾವಿರ ಎಕರೆ ನೀರಾವರಿಗೆ ಜುಲೈ ತಿಂಗಳಲ್ಲಿ ನೀರು ಕೊಡುತ್ತೇವೆ ಎಂದು

ಸರ್ಕಾರ ಹೇಳಿದೆ. ನಾನು ಕೇಳುತ್ತೇನೆ. ನಿಮ್ಮ ಟೈಮ್‌ಬೌಂಡ್ ಕಾರ್ಯಕ್ರಮ ಪ್ರಕಾರ ಜುಲೈ ತಿಂಗಳಲ್ಲಿ ನೀವು ನೀರು ಕೊಡಬೇಕು. ಇಲ್ಲದಿದ್ದರೆ ಜನ ನಿಮ್ಮನ್ನು ಕ್ಷಮಿಸುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸುಮಾರು ಎರಡು ವರ್ಷಗಳಿಂದ ಬೆಟ್ಟಂಗೆರೆ ಕೆನಲ್ ಬಗ್ಗೆ ಲೋಕಾಯುಕ್ತದ ತನಿಖೆಯಲ್ಲಿದೆ ಎಂದು ಬಿದ್ದು ಹೋಗಿತ್ತು. ಅದನ್ನು ತರಿಸಿದರೆ ಒಳ್ಳೆಯದು. ಅಲ್ಲಿ ಬರೇ ಒಂದು ತಿಂಗಳ ಕೆಲಸ ಇದೆ. ಅದನ್ನು ಪೂರ್ಣ ಮಾಡಿದರೆ ನಾಗಮಂಗಲ ತಾಲ್ಲೂಕಿನಲ್ಲಿ ಶೀಘ್ರವಾಗಿ 29 ಸಾವಿರ ಎಕರೆಗೆ ನೀರಾವರಿ ಜುಲೈ ತಿಂಗಳಲ್ಲಿ ಆಗುತ್ತದೆ. ಇವತ್ತು ತಾವು ಒಂದು ಟೈಮ್‌ಬೌಂಡ್ ಪ್ರೋಗ್ರಾಮ್ ಹಾಕಿಕೊಂಡು ಪ್ರತಿ ಪ್ರಾಜೆಕ್ಟ್‌ಗೆ ಇಷ್ಟಿಷ್ಟು ಹಣ, ಇಷ್ಟಿಷ್ಟು ಎಲ್.ಓ.ಸಿ. ಎಂದು ನಿಗದಿ ಮಾಡಿ ಪ್ರತಿ ಇಂಜಿನಿಯರ್‌ಗೆ ಇಷ್ಟಿಷ್ಟು ಜವಾಬ್ದಾರಿ ಎಂದು ಕೊಡದೇ ಹೋದರೆ ನಿಜಕ್ಕೂ ನೀವು 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಬರೀ ಪುಸ್ತಕದಲ್ಲಿ, ಬಜೆಟ್‌ನಲ್ಲಿ 200 ಕೋಟಿ ಇರುತ್ತದೆ. ಅದರಿಂದ ಏನೂ ಆಗುವುದಿಲ್ಲ. 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಷ್ಟು ನಮ್ಮಲ್ಲಿ ಸಿಬ್ಬಂದಿ ಇದ್ದಾರೆ. ಇಂಜಿನಿಯರುಗಳು ಜಾಸ್ತಿ ಇದ್ದಾರೆ. ಅವರ ಮೇಲೆ ಕಡಿವಾಣ ಹಾಕಿ ನೀವು ಕೆಲಸ ತೆಗೆದುಕೊಳ್ಳಬೇಕು. ಇವತ್ತು ಏನಾಗಿದೆ ಎಂದರೆ, ಇಂಜಿನಿಯರ್‌ಗಳದ್ದು ಒಂದು ವರ್ಗ ಇದೆ. ಬಿ.ಡಿ.ಎ. ನಲ್ಲಿ ಬಹಳ ಸಂಪದ್ಭರಿತವಾದ ಜಾಗಗಳು ಇವೆ. ಸನ್ಮಾನ್ಯ ಅಶ್ವತ್ಥರೆಡ್ಡಿಯವರು ದಯವಿಟ್ಟು ಕೇಳಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಬೆಂಗಳೂರಿನಲ್ಲಿ ಕೆಲವು ಇಂಜಿನಿಯರ್‌ಗಳು ಇದ್ದಾರೆ. 15 ವರ್ಷಗಳಿಂದ ಅವರು ಬೆಂಗಳೂರಿನಲ್ಲಿ ಮನೆಯನ್ನು ಬಿಡಲೇ ಇಲ್ಲ. ಬಿ.ಡಿ.ಎ. ನಲ್ಲಿ ಎರಡೂವರೆ ವರ್ಷ ಇರುತ್ತಾರೆ. ಅದರ ನಂತರ ತಮ್ಮನ್ನು ಬದಲಾವಣೆ ಮಾಡುತ್ತಾರೆ ಎಂದು ಅವರಿಗೆ ಗೊತ್ತು. ಅದಕ್ಕೆ ತಾವಾಗಿಯೇ ಕಾರ್ಪೊರೇಷನ್‌ಗೆ ಬದಲಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಅಲ್ಲಿ ಮತ್ತೆ ಮೂರು ವರ್ಷ ಇರುತ್ತಾರೆ. ಪುನಃ ಅವರಾಗಿಯೇ ಬದಲಾವಣೆ ಮಾಡಿಸಿಕೊಂಡು ನ್ಯಾಷನಲ್ ಹೈವೇಗೆ ಬರುತ್ತಾರೆ. ನೆಲಮಂಗಲ ಹೊಸೂರು ಕಡೆಗೆ ನೋಡಿಕೊಂಡು ಬರುತ್ತಾರೆ. ಪುನಃ ಬೆಂಗಳೂರಿನ ಸುತ್ತಮುತ್ತ ಸುತ್ತಾಡುತ್ತಾರೆಯೇ ವಿನಹ, ಬೆಂಗಳೂರು ಬಿಟ್ಟು ಆಚೆಗೆ ಹೋಗುವುದಿಲ್ಲ. ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಯಾರು ಇರಿಗೇಶನ್‌ನಲ್ಲಿ ಪರಿಣಿತರಿರುತ್ತಾರೆ, ಅಂಥವರದ್ದು ಒಂದು ಟೀಮ್ ಮಾಡಿ. ಅವರನ್ನು ತೆಗೆದುಕೊಂಡು ಹೋಗಿ ಇರಿಗೇಶನ್ ಡಿಪಾರ್ಟ್‌ಮೆಂಟ್‌ಗೆ ಹಾಕಿ. ಈ ಖದೀಮರನ್ನು ಸ್ವಲ್ಪ ಬಲಿಹಾಕಿ. ಶ್ರೀ ಅಶ್ವತ್ಥರೆಡ್ಡಿಯವರ ಕಾಲದಲ್ಲಿ ಖದೀಮರನ್ನು ಬಲಿ ಹಾಕದೆ ಇದ್ದರೆ, ಇನ್ನು ಯಾರ ಕಾಲದಲ್ಲಿ ಆಗುತ್ತದೆ ಹೇಳಿ? ದಯವಿಟ್ಟು ಇವರ ಮೇಲೆ ಕಡಿವಾಣ ಹಾಕಿ. ವರ್ಷವೆಲ್ಲ ಟ್ರಾನ್ಸ್‌ಫರ್ಸ್ ನಡೆಯುತ್ತದೆ. ಇದು ನಿರಂತರವಾಗಿ ಕಳೆದ ನಲ್ವತ್ತು ವರ್ಷಗಳಿಂದ ಸತತವಾಗಿ ಶ್ರೀ ರಾಜೂಗೌಡರ ಕಾಲದಿಂದ, ನಿಮ್ಮ ಕಾಲದಿಂದ ನಮ್ಮ ಕಾಲದವರೆಗೆ ನೋಡುತ್ತಿದ್ದೇನೆ. ನಿರಂತರವಾಗಿ ಟ್ರಾನ್ಸ್‌ಫರ್‌ಗಳು ವರ್ಷವೆಲ್ಲ ಆಗುತ್ತದೆ. ಇದಕ್ಕೆ ರೆಗ್ಯುಲರ್ ಆಗಿ ಒಂದು ಪ್ರೋಗ್ರಾಮ್ ಫಿಕ್ಸ್ ಮಾಡಿ ಈ ಟ್ರಾನ್ಸ್‌ಫರ್ಸ್‌ಗೆ ಒಂದು ಹೊಸ ಪಾಲಿಸಿಯನ್ನು ಮಾಡದೇ ಹೋದರೆ ಯಾವ ಅಧಿಕಾರಿಗಳೂ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಒಂದು ಹೊಸ ಪಾಲಿಸಿ ಮಾಡಿ ಮೂರು ವರ್ಷ ಆದ ಮೇಲೆ ಯಾರೂ ಆ ಜಾಗದಲ್ಲಿ ಇರಬಾರದು. ಈ ತೀರ್ಮಾನಕ್ಕೆ ಬಂದು ಹೊಸ ಪಾಲಿಸಿಯನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಪ್ರೊಬೆಶನರಿ ಎ.ಇ.ಇ. ಗಳ ನೇರ ನೇಮಕಾತಿ ನಡೆಯುತ್ತಿತ್ತು. ಇದು ಎಲ್ಲಿ ಎಂದು ನನಗೊತ್ತಿಲ್ಲ. ಐದು ಲಕ್ಷ ರೂಪಾಯಿ ಲಂಚ ತೆಗೆದುಕೊಂಡು ನೇರವಾಗಿ ನೇಮಕಾತಿ ನಡೆಯುತ್ತಿತ್ತು. ಪ್ರಮೋಷನ್ ಇಲ್ಲ, ಎಂಥಾದ್ದೂ ಇಲ್ಲ.

ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಇದಕ್ಕೆ ಕಡಿವಾಣ ಹಾಕಿದ್ದಾರೆ; ಸ್ಟೇ ಮಾಡಿದ್ದಾರೆ. ನಾನು ವಿನಂತಿ ಮಾಡುವುದೇನೆಂದರೆ, ಈ ನೇರ ನೇಮಕಾತಿ ರದ್ದಾಗಬೇಕು.

(ಮಾನ್ಯ ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇದಕ್ಕೆ ಅವಕಾಶ ಕೊಡಕೂಡದು, ಇದು ಬದಲಾವಣೆಯಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುಕೊಳ್ಳುತ್ತೇನೆ. ಹಿಂದೆ ಶ್ರೀ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಾವು ನೋಡಿದ್ದೇವೆ. 5 ಹೆಚ್.ಪಿ. ಕರೆಂಟ್‌ಗೆ 90 ರೂಪಾಯಿ ಎಂದು ಫಿಕ್ಸ್ ಮಾಡಿದ್ದರು. ಆಗ ಇಡೀ ರೈತ ಸಮುದಾಯವೇ ಮುಖ್ಯಮಂತ್ರಿಗಳು ರೈತರ ಪರವಾಗಿ ಇದ್ದಾರೆ ಎಂದು ಘೋಷಣೆ ಕೂಗಿದರು. ಇವತ್ತು ನಾನು ಹೇಳುತ್ತೇನೆ, ಮುಖ್ಯಮಂತ್ರಿಗಳು 10 ಎಚ್.ಪಿ. ವರೆಗೆ ಇದನ್ನು ಮಾಡಬೇಕು. ಶ್ರೀ ಬಂಗಾರಪ್ಪನವರು ಅಧಿಕಾರ ವಹಿಸಿಕೊಂಡಾಗ ಈ ರಾಜ್ಯದಲ್ಲಿ ಸುಮಾರು 75 ಸಾವಿರ ಜನ ರೈತರು ಪಂಪುಸೆಟ್ಟುಗಳಿಗೆ ಅರ್ಜಿ ಹಾಕಿಕೊಂಡು ಸರ್ವಿಸ್ ಕೊಡಬೇಕೆಂದು ಕೋರಿ ಕಾದುಕೊಂಡಿದ್ದರು. ತಮಗೆಲ್ಲ ಗೊತ್ತಿದೆ, ನಾವೆಲ್ಲ ಮುಖ್ಯಮಂತ್ರಿಗಳ ಛೇಂಬರ್‌ನಲ್ಲಿ ಕುಳಿತು ಸ್ವಾಮಿ ತಾವು ಹೊಸದಾಗಿ ನಿಲುವನ್ನು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಆಗುವುದಿಲ್ಲ, ನಾಲ್ಕಾರು ವರ್ಷಗಳಿಂದ ರೈತರು ಬಾವಿ ಸಾಲ ತೆಗೆದುಕೊಂಡು ಬಾವಿತೋಡಿಸಿ ಪಂಪುಸೆಟ್ಟು ತಂದಿಟ್ಟುಕೊಂಡು ಕರೆಂಟ್ ಇಲ್ಲದೆ ಇರತಕ್ಕದ್ದು ವಿಪರ್ಯಾಸವಾಗಿದೆ. ದಯವಿಟ್ಟು ನೀವು ಕರೆಂಟ್ ಕೊಡಬೇಕೆಂದು ನಾವೆಲ್ಲರೂ ಕೇಳಿಕೊಂಡಿದ್ದೆವು.. ಅವತ್ತು ಒಂದು ತೀರ್ಮಾನ ತೆಗೆದುಕೊಂಡರು. ಇಡೀ ರಾಜ್ಯದಲ್ಲಿರತಕ್ಕ ರೈತರ ಪಂಪುಸೆಟ್ಟುಗಳ ಪೈಕಿ ಕೊನೆಯ ಪಕ್ಷ ಈ ವರ್ಷ 75 ಸಾವಿರ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಬೇಕೆಂಬ ತೀರ್ಮಾನ ತೆಗೆದುಕೊಂಡರು. ಆ ತೀರ್ಮಾನದ ಪ್ರಕಾರ, ಇವತ್ತು ಕರೆಂಟ್ ಕೊಟ್ಟುಕೊಂಡು ಬರುತ್ತಿದ್ದಾರೆ. ಇವತ್ತು 10 ಹೆಚ್.ಪಿ. ವರೆಗೆ ಕರೆಂಟ್ ಚಾರ್ಜ್ ಮನ್ನಾ ಮಾಡಿರುವುದರಿಂದ, ಸರ್ಕಾರಕ್ಕೆ 21 ಕೋಟಿ ರೂಪಾಯಿಗಳ ಹೊರೆ ಬೀಳುತ್ತದೆ. ಇವತ್ತು ಈ 21 ಕೋಟಿ ರೂಪಾಯಿಗಳ ಹೊರೆ ಬಿದ್ದರೂ ಪರವಾಯಿಲ್ಲ, ರೈತರಿಗೆ ...

ಶ್ರೀ ಎ. ರುಕ್ಮಯ್ಯ ಪೂಜಾರಿ : ಇವತ್ತು 10 ಹೆಚ್.ಪಿ. ವರೆಗೆ ಮನ್ನಾ ಮಾಡಿರುವುದು ರೈತರಿಗೆ ಮುಖ್ಯವಲ್ಲ. ಕೊಡುವಂಥ ಕರೆಂಟನ್ನು ಸರಿಯಾಗಿ ಕೊಟ್ಟು, ಅವು ರನ್ ಆಗುವಂಥ ವ್ಯವಸ್ಥೆ ಮಾಡಿದರೆ ಮಾತ್ರ, ಅದರಿಂದ ಲಾಭವಾಗುತ್ತದೆಯೇ ಹೊರತು, ಸಂಪರ್ಕ ಕೊಟ್ಟು ಪಂಪ್ ರನ್ ಆಗದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕರೆಂಟ್ ಕೊಟ್ಟು ಪಂಪ್ ರನ್ ಆಗುವಂಥ ವ್ಯವಸ್ಥೆ ಮಾಡಿಕೊಡಿ. ಆಗ ರೈತರಿಗೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಆರ್.ಎನ್. ನಾಯಕ್ : ನೀವು ಮೊಸರಿನಲ್ಲಿ ಕಲ್ಲು ಹುಡುಕುತ್ತೀರಿ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಹುಡುಕಿದ ಹಾಗೆ, ನೀವು ಮೊಸರಿನಲ್ಲಿ ಕಲ್ಲು ಹುಡುಕಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಬರೇ ಕಲ್ಲೇ ಇದೆ, ಅದರಲ್ಲಿ ಮೊಸರು ಹಾಕುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಇಲ್ಲಿ ಎಲ್ಲಾ ಕಲ್ಲೇ, ಇದರಲ್ಲಿ ಸ್ವಲ್ಪ ಮೊಸರು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ವಿದ್ಯುಚ್ಛಕ್ತಿ ವಿಚಾರ ಬಂದಾಗ ನಾನು ಮಾನ್ಯ ರುಕ್ಮಯ್ಯ ಪೂಜಾರಿ ಅವರ ಗಮನವನ್ನು ಸೆಳೆಯುತ್ತೇನೆ.

ಈಗ್ಗೆ 8 ವರ್ಷಗಳಿಂದ ವಿದ್ಯುಚ್ಛಕ್ತಿ ಏನಿತ್ತು, ಏನಾಯಿತು, ಈ ರಾಜ್ಯದಲ್ಲಿ ಯಾವ ಯಾವ ಮುಖ್ಯಮಂತ್ರಿಗಳು, ವಿದ್ಯುಚ್ಛಕ್ತಿ ಬಗ್ಗೆ ಎಷ್ಟೆಷ್ಟು ಹಣವನ್ನು ಒದಗಿಸಿದ್ದರು, ಎಷ್ಟೆಷ್ಟು ರೂಪಾಯಿಗಳನ್ನು ಖರ್ಚು ಮಾಡಿದ್ದರು ಎನ್ನುವುದರ ಬಗ್ಗೆ ನಾನು ಬೆಳಕು ಚೆಲ್ಲುತ್ತೇನೆ. ತಾವು ಸ್ವಲ್ಪ ದಯಮಾಡಿ ಕುಳಿತುಕೊಳ್ಳಬೇಕು. ನೀವು ಇದ್ದರೆ ಚೆಂದ. ಇವತ್ತು ಮಾನ್ಯ ರುಕ್ಮಯ್ಯ ಪೂಜಾರಿ ಅವರು ನೀವು ಏನು ಕರೆಂಟ್ ಕೊಡುತ್ತೀರಿ ಅದನ್ನು ಸರಿಯಾಗಿ ಕೊಡಿ, ಸರಿಯಾದ ಕರೆಂಟನ್ನು ಕೊಡದೇ ಹೋದರೆ ಏನು ಮಾಡುವುದು ಎಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕರೆಂಟ್ ಉತ್ಪಾದನೆ ಎಷ್ಟಾಗುತ್ತದೆ, ಡಿಮ್ಯಾಂಡ್ ಎಷ್ಟಿದೆ ಎನ್ನುವುದರ ಮೇಲೆ ಇದು ಅವಲಂಬನೆಯಾಗುತ್ತದೆ, ನಿಜ. ಇದನ್ನು ಸರಿಪಡಿಸುವುದಕ್ಕೆ ಸಾಕಷ್ಟು ಅವಕಾಶಗಳಿವೆ, ಇದನ್ನು ಸರಿಪಡಿಸಬೇಕಾಗುತ್ತದೆ. ಇವತ್ತು 21 ಕೋಟಿ ರೂಪಾಯಿಗಳ ಹೊರೆ ಈ ರಾಜ್ಯ ಸರ್ಕಾರದ ಮೇಲೆ ಬೀಳುತ್ತಿದೆ. ರೈತರ ಪಂಪ್‌ಸೆಟ್ಟುಗಳಿಗೆ ಮನ್ನಾ ಮಾಡಿರುವುದರಿಂದ ರಾಜ್ಯ ಸರ್ಕಾರದ ಮೇಲೆ 21 ಕೋಟಿ ರೂಪಾಯಿಗಳ ಹೊರೆ ಬೀಳುತ್ತದೆ. ಈ ರೀತಿ 21 ಕೋಟಿ ರೂಪಾಯಿಗಳ ಹೊರೆ ಬಿದ್ದರೂ ಪರವಾಯಿಲ್ಲ, ಇವತ್ತು ರೈತ ಸಮುದಾಯ ಸಂತೋಷವಾಗಿದ್ದಾರೆ. ಈ ಸರ್ಕಾರದ ನಮ್ಮ ಪರವಾಗಿದೆ, ರೈತರ ಪರವಾಗಿದೆ ಎನ್ನತಕ್ಕಂಥ ಘೋಷಣೆಗಳನ್ನು ಕೂಗುವ ಮಟ್ಟಕ್ಕೆ ಇವತ್ತು ರೈತ ಹೋಗಿದ್ದಾನೆ. ಇವತ್ತು ರೈತ ಸಂತೋಷವಾಗಿರುವುದಕ್ಕೆ ಇದೇ ಕಾರಣವೇ ಹೊರತು ಬೇರೆ ಏನೂ ಅಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸ್ವಾಮಿ, ನಾನು ಹೇಳುತ್ತೇನೆ, ಮಾನ್ಯ ಬಿ.ಎಲ್. ಪಾಟೀಲರು ಈ ರಾಜ್ಯದ ರೆವಿನ್ಯೂ ಮಂತ್ರಿಗಳಾಗಿದ್ದರು, ಅವರ ಕಾಲದಿಂದ ಕೇಳಿಕೊಂಡು ಬಂದಿದ್ದೇವೆ. ರೈತರಿಗೆ ಪಾಸ್‌ಬುಕ್ ಕೊಡಿ, ನಮ್ಮ ಜುಟ್ಟನ್ನು ಅಧಿಕಾರಿಗಳ ಕೈಗೆ ಕೊಡುವುದಕ್ಕಾಗುವುದಿಲ್ಲ, ರೈತನ ಹಣೆಬರಹ ಇರತಕ್ಕಂಥ ಪಾಸ್‌ಬುಕ್ ಕೊಡಿ ಎಂದು ಕೇಳಿದೆವು. ಕಳೆದ 25-30 ವರ್ಷಗಳಿಂದ ಇದನ್ನು ಏಕೆ ಕೊಡಲಿಲ್ಲ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೆವಿನ್ಯೂ ಮಂತ್ರಿಗಳಾದ ಮೇಲೆಯೇ ಈ ಪಾಸ್‌ಬುಕ್ ಕೊಡತಕ್ಕ ಕಾಲ ಬಂದಿದೆಯೇ ಮುಂಚೆ ಏಕೆ ಕೊಟ್ಟಿರಲಿಲ್ಲ ಎನ್ನತಕ್ಕ ಪ್ರಶ್ನೆಯನ್ನು ಈ ಸದನದ ಮೂಲಕ ಅವರಿಗೆ ಕೇಳುತ್ತೇನೆ....

ಶ್ರೀ ಆರ್.ಎನ್. ನಾಯಕ್ : ಆಗ ಇನ್ನೂ ಪ್ರಿಂಟ್ ಆಗುತ್ತಿರಲಿಲ್ಲ, ಇಲ್ಲದಿದ್ದರೆ ಕೊಟ್ಟಿರುವವರು...

ಶ್ರೀ ಎಲ್.ಆರ್. ಶಿವರಾಮೇಗೌಡ : ಬಗರ್ ಹುಕುಂ ಜಮೀನು ಸಾಗುವಳಿ ಮಾಡತಕ್ಕ ವಿಚಾರ. ಈಗ್ಗೆ ಒಂದು ವರ್ಷದ ಮುಂಚೆ ನಾವು ಹಳ್ಳಿಗಳಿಗೆ ಹೋದರೆ, ನಮಗೆ ಯಾರೂ ಮರ್ಯಾದೆ ಕೊಡುತ್ತಿರಲಿಲ್ಲ, ನಿಮ್ಮ ಸರ್ಕಾರದಲ್ಲಿ ಏನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳುತ್ತಿದ್ದರು. ಇವತ್ತು ಎಂ.ಎಲ್.ಎ.ಗಳು ಊರುಗಳಿಗೆ ಹೋದರೆ ಹಾರ ಹಾಕಿ ಕರೆಯುತ್ತಾರೆ. ನಿಮ್ಮ ಸರ್ಕಾರ ರೈತರ ಪರವಾಗಿ ಎಂತೆಂತಹ ಒಳ್ಳೆಯ ಕಾರ್ಯಕ್ರಮ ಮಾಡಿದೆ ಬನ್ನಿ ಎಂದು ಕರೆಯುತ್ತಾರೆ. ಈ ಪರಿಸ್ಥಿತಿಯನ್ನು ನಾವು ಇಂದು ನೋಡುತ್ತಿದ್ದೇವೆ. ಈ ಬಗರ್‌ಹುಕುಂ ಸಾಗುವಳಿ ಮಾಡುವುದು ಯಾವ ಕಾಲದಿಂದ ಅಂದರೆ, ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಂತ್ರಿಗಳಾದಾಗಿನಿಂದಲೂ ಕೇಳಿದ್ದೇವೆ. ನಮ್ಮ ಜಮೀನು, ಬಗರ್‌ಹುಕುಂ ಜಮೀನು ಮಾಡಿಕೊಡಿ, ಒತ್ತುವರಿ ಮಾಡಿರುವುದನ್ನು ನಮಗೆ ಸಕ್ರಮ ಮಾಡಿಕೊಡಿ ಎಂದು ಕೇಳಿದಾಗ ಕ್ಯಾರೇ ಎನ್ನಲಿಲ್ಲ. ಇವತ್ತು ಆ ಫಲವನ್ನು ಅನುಭವಿಸುವುದಕ್ಕೆ ನಮಗೆ ಅವಕಾಶ ಸಿಕ್ಕಿದೆ. ನಾನು ಕೇಳುತ್ತೇನೆ, ಎಷ್ಟು ಜನ ಮುಖ್ಯಮಂತ್ರಿಗಳು ಬಂದರು, ಎಷ್ಟು ಜನ ಮುಖ್ಯಮಂತ್ರಿಗಳು ಹೋದರು. ಇವತ್ತು ಬಿ.ಎ., ಬಿ.ಕಾಂ., ಬಿ.ಎಸ್‌ಸಿ. ಮಾಡಿಕೊಂಡು,

ನಗರದಲ್ಲಿರತಕ್ಕಂಥ ಹೋಟೆಲುಗಳಲ್ಲಿ ಲೋಟ ತೊಳೆಯತಕ್ಕ ಕೆಲಸವನ್ನು ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಎಲ್ಲಿ ನೋಡಿದರೂ ಕೆಲಸ ಇಲ್ಲ, ಮೈಸೂರು ಸಾಬೂನು ಕಾರ್ಖಾನೆಯಲ್ಲಿ ಕೆಲಸ ಇಲ್ಲ, ಮೈಸೂರು ಮಿನರಲ್ಸ್‌ನಲ್ಲಿ ನೋಡಿದರೆ ಕೆಲಸ ಇಲ್ಲ, ಮೈಸೂರು ಲ್ಯಾಂಪ್ಸ್ ಕಾರ್ಖಾನೆಯಲ್ಲಿ ಕೆಲಸ ಇಲ್ಲ. ಮೈಸೂರು ವಿಕ್ರಾಂತ್ ಫ್ಯಾಕ್ಟರಿಯಲ್ಲಿ ಕೆಲಸ ಇಲ್ಲ. ಇವತ್ತು ಲಕ್ಷೋಪಲಕ್ಷ ಜನ ಬೀದಿ ಪಾಲಾಗಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಬಿ.ಎ., ಬಿ.ಕಾಮ್ ಮಾಡಿಕೊಂಡು ಕೆಲಸವಿಲ್ಲದೆ ಇದ್ದಾರೆ. ನಮ್ಮ ಸರ್ಕಾರ ಹೇಳುತ್ತದೆ, ಉಚಿತ ಶಿಕ್ಷಣ ವ್ಯವಸ್ಥೆ ಮಾಡುತ್ತೇವೆ ಎಂದು. ನನ್ನ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷದಿಂದ ಒಬ್ಬ ಕೆಮಿಸ್ಟ್ರಿ ಲಕ್ಚರರ್ ಇಲ್ಲ. ನಾನು ಮಾನ್ಯ ಮಂತ್ರಿಗಳನ್ನು ಕೇಳಿದಾಗ, ಅವರ ತಮ್ಮ ಅಸಹಾಯಕತೆಯನ್ನು ತೋರಿಕೊಳ್ಳುತ್ತಾರೆ. ಎಲ್ಲಾ ಟೀಚರ್‌ಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ, ಈ ರೀತಿ ತೆಗೆದುಕೊಂಡ ತಕ್ಷಣ ಕೊಡುತ್ತೇವೆಂದು ಹೇಳುತ್ತಾರೆ! ಕಳೆದ 8-10 ವರ್ಷಗಳಿಂದ ಟೀಚರ್‌ಗಳನ್ನು ತೆಗೆದುಕೊಳ್ಳದೇ ಇದ್ದುದೇ ನಮಗೆ ಹೊಡೆತ ಬಿದ್ದಿಗೆ ಎಂದು ಮಾನ್ಯ ವೀರಪ್ಪ ಮೊಯಿಲಿಯವರು ಹೇಳುತ್ತಾರೆ. ಇವತ್ತು, ಇಂತಹ ಸಂದರ್ಭವನ್ನು ನಾವು ನೋಡುತ್ತಿದ್ದೇವೆ.

ಇವತ್ತು ಮ್ಯಾಥ್‌ಮ್ಯಾಟಿಕ್ಸ್ ಲೆಕ್ಚರರ್ ಇಲ್ಲದೆ ಓದಿರತಕ್ಕಂಥ ಒಬ್ಬ ಹುಡುಗ, ಇಂಗ್ಲೀಷ್ ಲೆಕ್ಚರರ್ ಇಲ್ಲದೆ ಓದಿರತಕ್ಕಂಥ ಗ್ರಾಮಾಂತರ ಪ್ರದೇಶದ ಹುಡುಗ ಇವತ್ತು ಕೆಲಸ ಇಲ್ಲದೆ ಬೀದಿ ಭಿಕಾರಿಯಾಗಿದ್ದಾನೆ. ಇವರಿಗೆ ಕೆಲಸ ಕೊಡಿ ಎಂದರೆ ನೀವು ಎಲ್ಲಿಂದ ಕೊಡುತ್ತೀರಿ? ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ...

ಶ್ರೀ ಆರ್.ಎನ್. ನಾಯಕ್ : ಹಿಂದೆ ಏನಾಯಿತು ಎಂದರೆ ರೋಸ್ಟರ್ ಸಿಸ್ಟಮ್ ಪ್ರಕಾರ ಎಸ್.ಸಿ., ಎಸ್.ಟಿ. ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಅಭ್ಯರ್ಥಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ಅವರು ಹೆಚ್ಚು ಪ್ರಚಾರ ಕೊಟ್ಟರು. ಒಂದು, ಎರಡು ಮತ್ತು ಮೂರನೇ ರ್‍ಯಾಂಕ್ ಬಂದವರಿಗೆಲ್ಲ ಕೆಲಸ ಕೊಟ್ಟು ಬಿಡುತ್ತೇವೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಹೊಸದಾಗಿ ಮುಖ್ಯಮಂತ್ರಿಗಳಾಗಿ ಬಂದಾಗ ಹೇಳಿದರು. ಆಮೇಲೆ ಇವರೇ ಕೆಲವರನ್ನು ಹೈಕೋರ್ಟಿಗೆ ಕಳುಹಿಸಿಕೊಟ್ಟರು, ಅವರು ಹೈಕೋರ್ಟಿನಲ್ಲಿ ಕೇಸ್ ಹಾಕಿದರು. ಆಮೇಲೆ ಅದು ತೀರ್ಮಾನ ಆಗಲಿಲ್ಲ. ಬ್ಯಾಕ್‌ವರ್ಡ್ ಕ್ಲಾಸಸ್, ಎಸ್.ಸಿ., ಎಸ್.ಟಿ. ಇವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಇವರು ಅಪಾಯಿಂಟ್‌ಮೆಂಟ್ ಮಾಡಲಿಲ್ಲ, ಟೀಚರ್ಸ್ ಅಪಾಯಿಂಟ್‌ಮೆಂಟೂ ಮಾಡಲಿಲ್ಲ, ಅದನ್ನು ನೀವು ತೆಗೆಸಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಕಳೆದ ಅಧಿವೇಶನದಲ್ಲಿ ಇದೇ ಸರಕಾರ ಹೇಳಿದೆ, ಅಂಬೇಡ್ಕರ್ ಜನ್ಮ ಶತಾಬ್ಧಿ ವರ್ಷದಲ್ಲಿ ಖಾಲಿ ಇರುವ ಎಲ್ಲಾ ಹರಿಜನ ಗಿರಿಜನರ ಹುದ್ದೆಗಳನ್ನೂ ಭರ್ತಿ ಮಾಡುತ್ತೇವೆ ಎಂದು ಹೇಳಿದ್ದರು. ಇವತ್ತಿನವರೆಗೆ ಮಾಡಲಿಲ್ಲ. ನೀವೇ ಇಲ್ಲಿ ಹೇಳಲಿಲ್ಲವೇ? ನೀವು ಏತಕ್ಕೆ ಇದನ್ನು ಮಾಡಲಿಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ಏನು ಟೀಚರ್ಸ್ ರೆಕ್ರೂಟ್‌ಮೆಂಟ್ ಆಗಿದೆ. ಅದರಲ್ಲಿ ಬ್ಯಾಕ್‌ಲಾಗ್ ಎಲ್ಲಾ ಫಿಲಪ್ ಮಾಡಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಒಂದು ವರ್ಷ ಆಯಿತು. ನೀವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಕಾನಮಿ ಆರ್ಡರ್ ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ರಿಲ್ಯಾಕ್ಸ್ ಆಗಿದೆ ಎಲ್ಲಾ ಇಲಾಖೆಗಳಲ್ಲಿ ಬ್ಯಾಂಕ್‌ಲಾಗ್ ಫಿಲಪ್ ಮಾಡಿಯೇ ಮುಂದಕ್ಕೆ ಹೋಗಬೇಕೆಂಬುದು ಸರಕಾರದ ನಿರ್ಣಯ. ಮತ್ತು ಅದರ ಪ್ರಕಾರ ಇವತ್ತಿನ ದಿವಸ ಎಲ್ಲಾ ಇಲಾಖೆಗಳಲ್ಲೂ ಮಾಡುತ್ತಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ಎಲ್ಲಾ ಮನೆಗೆ ಒಂದು ಉದ್ಯೋಗ ಕೊಡುತ್ತೇವೆ ಎಂದು ಹೇಳಿದರು. ಜನರು ಒಂದೊಂದು ಮನೆಗೆ ಒಂದು ಸರಕಾರಿ ನೌಕರಿ ಎಂದು ಕಲ್ಪನೆ ಮಾಡಿಕೊಂಡು ಬಂದರು. ಇವತ್ತು ವಿರೋಧ ಪಕ್ಷದ ನಾಯಕರು ಹಾಗೂ ಅವರ ಸಂಗಡಿಗರು ಏತಕ್ಕೆ ಇಲ್ಲಿ ಇಲ್ಲ ಎಂದರೆ ಇದೆಲ್ಲಾ ಕೇಳುತ್ತಾರೆ ಎಂದೇ ಅವರು ಇಲ್ಲ, ಇದನ್ನು ಕೇಳಿಸಿಕೊಳ್ಳುವುದಕ್ಕೆ ಆಗದೇ ಅವರು ಹೊರಗೆ ಉಳಿದಿದ್ದಾರೆ. ಶಿವರಾಮೇಗೌಡರು ಇದನ್ನು ಕೇಳುತ್ತಾರೆ ಎಂದೇ ಇವತ್ತು ಒಬ್ಬರೂ ಬಂದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ 1983ನೇ ಇಸವಿಯಿಂದ ಬಂದ್ಥಂಥ ಸರಕಾರ, 89ನೇ ಇಸವಿಯವರೆಗೆ ನಡೆಸಿದಂಥ ಆಡಳಿತ, ಪರಮಾಧಿಕಾರ, ಇವತ್ತು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಇವತ್ತು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳತಕ್ಕಂಥ ಹಕ್ಕೂ ಇಲ್ಲದಿರತಕ್ಕಂಥ ಮಟ್ಟಕ್ಕೆ ಹೋಗಿದ್ದಾರೆ. ಒಬ್ಬ ಟೀಚರ್‌ನ್ನೂ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಅಧ್ಯಕ್ಷರೇ ನಿಮ್ಮ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಹೇಳಿ ಯಾವುದೇ ಒಂದು ಕ್ಷೇತ್ರಕ್ಕೆ ಹೋದರೆ, ಸ್ವಾಮಿ, ನಮ್ಮ ಊರಿಗೆ ಮೇಷ್ಟ್ರು ಇಲ್ಲ ಎಂದು ಹೇಳುತ್ತಿದ್ದರು. ನಾಲ್ಕುನೂರು ಜನ ವಿದ್ಯಾರ್ಥಿಗಳು ಇರುವ ಕಡೆ ಒಬ್ಬ ಮೇಷ್ಟ್ರು ಇದ್ದಾರೆ, 5 ಜನ ಉಪಾಧ್ಯಾಯರು ಇರುವ ಕಡೆ ಒಬ್ಬರು ಇದ್ದಾರೆ ಎಂದು ಹೇಳುತ್ತಿದ್ದರು. ನಮ್ಮ ಸರಕಾರ ಬಂದ ಮೇಲೆ ಹನ್ನೊಂದು ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿತು ಎಂಬುದನ್ನು ಮಾನ್ಯ ರುಕ್ಮಯ್ಯ ಪೂಜಾರಿಯವರು ಮರೆಯಬಾರದು. ಹನ್ನೊಂದು ಸಾವಿರ ಜನರನ್ನು ನಮ್ಮ ಸರಕಾರ ಬಂದಮೇಲೆ ನೇಮಕ ಮಾಡಿತು. ಅದಕ್ಕಿಂತ ಮುಂಚೆ ಆಗಿರಲಿಲ್ಲ. ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳೆಲ್ಲವನ್ನೂ ಸಹಿತ ಹಂತಹಂತವಾಗಿ, ನಮ್ಮ ಮಾನ್ಯ ಖರ್ಗೆಯವರು ಹೇಳಿದಹಾಗೆ, ಕಾನೂನಿನ ಚೌಕಟ್ಟಿನೊಳಗೆ ತುಂಬತಕ್ಕಂಥ ಕೆಲಸ ಮಾಡುತ್ತಿದ್ದೇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ವೈದ್ಯರನ್ನು ನೇಮಕ ಮಾಡಿರಲಿಲ್ಲ. ನಾನು ಇದರ ಬಗ್ಗೆ ಇವತ್ತು ಒಂದು ಮಾತು ಹೇಳಬೇಕಾಗುತ್ತದೆ. ಈ ಸದನದಲ್ಲಿ ನನ್ನ ತಾಲೋಕಿನಲ್ಲಿ ನಮ್ಮ ಮುಖಂಡರಾಗಿರತಕ್ಕಂಥ ಮಾನ್ಯ ಹೆಚ್.ಟಿ. ಕೃಷ್ಣಪ್ಪ ಎನ್ನುವವರು, ನಮ್ಮ ಹಿರಿಯರು ಈ ಸದನದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದರು. ಅವರು ಆರೋಗ್ಯ ಮಂತ್ರಿಗಳಾಗಿದ್ದಾಂಥ ಕಾಲದಲ್ಲಿ ನನ್ನ ತಾಲೋಕಿನ ಮೂರು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇರಲಿಲ್ಲ. ಅದೇ ಆರೋಗ್ಯ ಮಂತ್ರಿಗಳನ್ನು ನಮ್ಮ ತಾಲೋಕು ಕೇಂದ್ರದಲ್ಲಿ ಘೆರಾವೋ ಮಾಡಿದಾಗ ಅವರು ಡಾಕ್ಟರ್ಸ್ ಇಲ್ಲ, ಕೊಡುವುದಕ್ಕೆ ಆಗುವುದಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ತೋರಿಕೊಂಡರು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಯಾವುದೇ ಒಂದು ಜಾಗವನ್ನೂ ಸಹಿತ ಪಾಪರ್ ಮಾಡಿ ಇನ್ನು ಎರಡು ವರ್ಷ ಇವರಿಗೆ ಅವಕಾಶ ಕೊಟ್ಟಿದ್ದರೆ ವಿಧಾನಸೌಧವನ್ನೂ ಬೇರೆಯವರಿಗೆ ವ್ಯಾಪಾರ ಮಾಡಿ ಹೊರಟು ಹೋಗುತ್ತಿದ್ದರು. ಇದರಲ್ಲಿ ಯಾವುದೇ ತಾರತಮ್ಯ ಇರಲಿಲ್ಲ. ಆದುದರಿಂದ ಇವತ್ತು ಇವರು ಬಜೆಟ್ ಮೇಲೆ ಯಾವುದೇ ಮಾತನಾಡುವುದಕ್ಕೆ ಶಕ್ತಿ ಇಲ್ಲದೆ ಕುಳಿತಿದ್ದಾರೆ ಎಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ.

ಶ್ರೀ ಆರ್.ಎನ್. ನಾಯಕ್ : ಏನಪ್ಪ ಶ್ರೀರಿ ಶಿವರಾಮೇಗೌಡರೆ. ಬಿ.ಜೆ.ಪಿ. ಯವರು ಇದನ್ನೆಲ್ಲಾ ಹೇಳಬೇಕಾಗಿತ್ತು. ಹೇಳಲಿಲ್ಲ. ಇವರು ಒಂದೆರಡು ವರ್ಷ ಸಪೋರ್ಟ್ ಮಾಡಿಕೊಂಡು ಹೋದರು. ಆಮೇಲೆ ಒಂದೆರಡು ಮೂರು ವರ್ಷ ಹಾಗೂ ಹೀಗೂ ಸ್ವಲ್ಪ ಸಪೋರ್ಟ್ ಇದ್ದಹಾಗೆ. ಇಲ್ಲದ ಹಾಗೆ ಅವರು ಮಾತನಾಡಿ ಮಾತನಾಡಿ ಈಗ ಬಂದಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಬಿ.ಜೆ.ಪಿ. ಕಾರ್ಯಕ್ರಮ ಏನಾಗಿದೆ ಎಂದರೆ. ರಾಮ ಹಳಬ ಆಗಿ ಹೋದ. ಈಗ ಅವರು ಹೊಸ ದೇವರನ್ನು ಹುಡುಕುತ್ತಿದ್ದಾರೆ. ಚೌಡೇಶ್ವರಿನೋ. ಮಾರಮ್ಮನನ್ನೋ ಹುಡುಕುತ್ತಿದ್ದಾರೆ. ಅವರಿಗೆ ಯಾವುದೂ ಸಿಕ್ಕಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ : ಇನ್ನು ಶಿವರಾಮನಿಗೇ ಹುಡುಕುತ್ತಿದ್ದೇವೆ. ಅಯೋಧ್ಯಾ ರಾಮ ಮುಗಿದು ಹೋದ. ಈಗ ಕಾಲಿ ಶಿವರಾಮನಿಗೇ ಹುಡುಕುತ್ತಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ. ಸರಕಾರ ತಪ್ಪು ಮಾಡಿದರೂ ನಾನು ಹೇಳುತ್ತೇನೆ. ನಾನು ಸ್ವತಂತ್ರವಾಗಿ ಗೆದ್ದಿರುವವನು. ಇವರು ಯಾರ ಹಾಗೂ ನಾನು ಬಾವುಟದ ಮೇಲೆ ಗೆದ್ದಿಲ್ಲ. ಸ್ವತಂತ್ರ್ಯವಾಗಿ ನನ್ನ ತಾಲ್ಲೋಕಿನ ಜನ ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸ್ವತಂತ್ರವಾಗಿ ಗೆದ್ದು ಈಗ ಇವರ ಹತ್ತಿರ ಸೇರಿಕೊಳ್ಳುತ್ತಿದ್ದೀರಿ. ಇವರಿಗೆ ಸಪೋರ್ಟ್ ಮಾಡುತ್ತಿದ್ದೀರಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ನೋ ನೋ: ದಯವಿಟ್ಟು ಆ ಮಾತನ್ನು ಈ ಸದನದಲ್ಲಿ ವಾಪಸ್ ತೆಗೆದುಕೊಳ್ಳಬೇಕು. ನಾನು ಸಪೋರ್ಟ್ ಕೊಡುತ್ತಿದ್ದರೂ ಕೂಡ ಸರಕಾರ ತಪ್ಪು ಮಾಡಿದರೆ ನಾನು ಇಲ್ಲಿ ಕೇಳುತ್ತೇನೆ. ಇಲ್ಲಿ ತಪ್ಪು ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ. ಮುಂದೆ ಕೇಳಿ. ಕೆಲವು ವಿಚಾರ ಇದೆ. ಸರಕಾರಕ್ಕೆ ಹೇಳತಕ್ಕಂಥಾದ್ದು ಹೇಳುತ್ತೇನೆ.

ಉಪಾಧ್ಯಕ್ಷರು : ಹೇಳಿರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ. ಈ ಸರ್ಕಾರ ತಪ್ಪು ಮಾಡಿದರೆ. ಈಗ ಒಂದು ಸರ್ಕಾರ ಅಂದ ಮೇಲೆ ತಪ್ಪು ಮಾಡದೆ ಇರುವುದಿಲ್ಲ. ಎಚ್ಚರಿಕೆ ಮಾಡೋಣ. ಈ ಸಂದರ್ಭದಲ್ಲಿ ನೀವು ತಪ್ಪು ಮಾಡಿದ್ದೀರಿ. ಸರ್ಕಾರದವರೇ. ಮಲ್ಲಿಕಾರ್ಜುನ ಖರ್ಗೆಯವರೇ. ನಿಮ್ಮ ಸರ್ಕಾರ ಇಂತಹ ಕಡೆ ಇಂತಹ ತಪ್ಪು ಮಾಡಿದೆ ಎಂದು ಬೆರಳು ಮಾಡಿ ತೋರಿಸೋಣ. ತಪ್ಪಿದ್ದರೆ ಅವರು ತಿದ್ದುಕೊಳ್ಳಲಿ. ಯಾವ ಸರ್ಕಾರ ಎಡವಿಲ್ಲ. ಈ ಸಂಸದೀಯ. ಈ ಒಂದು ನಮ್ಮ ವ್ಯವಸ್ಥೆಯಲ್ಲಿ ಯಾವ ಸರ್ಕಾರ ತಪ್ಪು ಮಾಡುವುದಕ್ಕೆ ಅವಕಾಶ ಇಲ್ಲ. ಸಹಜವಾಗಿ ಆಗುತ್ತದೆ. ಆದರೆ ಅದನ್ನು ಎಚ್ಚರಿಸಿದಾಗ ತಿದ್ದಿಕೊಳ್ಳುವುದಕ್ಕೆ ಅವಕಾಶ ಇದೆ. ಈ ಒಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರ ತಪ್ಪು ಮಾಡಿದೆ. ಒಂದು ಎರಡು-ಮೂರು ವಿಚಾರಗಳಲ್ಲಿ ತಪ್ಪು ಮಾಡಿರಬಹುದು. ಆದರೆ ನೂರಾರು ಒಳ್ಳೆಯ ವಿಚಾರಗಳನ್ನು ಮರೆತುಬಿಡುತ್ತೀರಾ ಅದಕ್ಕೆ. ಇವತ್ತು 40 ವರ್ಷಗಳಿಂದ ಈ ರಾಜ್ಯವನ್ನು ಆಳಿದರೂ ಅವರ್ಯಾರಿಗೂ ಒಂದು ರೇಷ್ಮೆ ಕಾಲೇಜು ತೆಗೆಯಬೇಕೆಂದು ಮನಸ್ಸಿಗೆ ಬರಲಿಲ್ಲವೇ? ಕೃಷಿ ಕಾಲೇಜು ತೆಗೆಯಬೇಕೆಂದು ಮನಸ್ಸಿಗೆ ಬರಲಿಲ್ಲವೇ? ಅರಣ್ಯ ಕಾಲೇಜು ತೆಗೆಯಬೇಕೆಂದು ಮನಸ್ಸಿಗೆ ಬರಲಿಲ್ಲವೇ? ತೋಟಗಾರಿಕಾ ಕಾಲೇಜು ತೆಗೆಯಬೇಕೆಂದು ಮನಸ್ಸಿಗೆ ಬರಲಿಲ್ಲವೇ? ಈ ಸರ್ಕಾರ ಬಂದ ಮೇಲೆ ಕೊಡಗಿನಲ್ಲಿ ಅರಣ್ಯ ಕಾಲೇಜು. ಕೋಲಾರದಲ್ಲಿ ರೇಷ್ಮೆ ಕಾಲೇಜು. ಮಂಡ್ಯದಲ್ಲಿ ಕೃಷಿ

ಕಾಲೇಜು. ಮೂಡಿಗೆರೆಯಲ್ಲಿ ತೋಟಗಾರಿಕಾ ಕಾಲೇಜುಗಳನ್ನು ತೆಗೆದಿದೆ. ಇದು ಹೆಮ್ಮೆಗೆ ಹೇಳತಕ್ಕಂಥ ವಿಚಾರ ಅಲ್ಲ. ಸಂತೋಷಕ್ಕೆ ಹೇಳತಕ್ಕಂಥ ವಿಚಾರ. ನಾನು ಬಿ.ಜೆ.ಪಿ. ಸದಸ್ಯರನ್ನು ಕೇಳುತ್ತೇನೆ. ಎರಡೂವರೆ ವರ್ಷಗಳ ಕಾಲ ಜನತಾ ಪಕ್ಷದ ಸರ್ಕಾರಕ್ಕೆ ನೀವು ಸಪೋರ್ಟ್ ಮಾಡಿದಿರಲ್ಲಾ ಆಗ ಎಲ್ಲಿಗೆ ಹೋಗಿತ್ತು ಆ ನಿಮ್ಮ ವ್ಯವಸ್ಥೆ. ಈ ಸರ್ಕಾರವನ್ನು ಕೇಳಬೇಕಾಗಿದ್ದರೆ ತಪ್ಪಿದ್ದರೆ ನೇರವಾಗಿ ಹೇಳೋಣ. ಸ್ವಾಮಿ. ನೀವು ಇಂತಿಂತ ಹಂತದಲ್ಲಿ ತಪ್ಪು ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ನೇರವಾಗಿ ಹೇಳಬೇಕಾಗುತ್ತದೆ. ಅದರಲ್ಲಿ ಎರಡು ಮಾತಿಲ್ಲ. ಎಲ್ಲಿ ತಪ್ಪು ಮಾಡಿದ್ದಾರೋ ಅಲ್ಲಿ ಹೇಳಿ. ನೀವು ಅದು ಬಿಟ್ಟು. ತಪ್ಪು ಮಾಡದಿದ್ದರೂ ತಪ್ಪು ಮಾಡಿದ್ದೀರಿ ನೀವು ಎಂದು ಗೂಬೆ ಕೂರಿಸತಕ್ಕಂಥಾದ್ದನ್ನು ಯಾರೂ ಸಹಿಸತಕ್ಕಂಥಾದ್ದಲ್ಲ. ಈ ರಾಜ್ಯದ ಜನ ಸಹಿಸುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆಗ ಮುಖ್ಯಮಂತ್ರಿಗಳಾದ ದೇವರಾಜ ಅರಸುರವರನ್ನು ದೀನದಲಿತರ ಉದ್ಧಾರಕರು ಹಿಂದೆ ಎಂದೂ ಇರಲಿಲ್ಲ ಎಂದು ಹೇಳಿದರು. ಅವರ ಮನಸ್ಸಿನಲ್ಲಿ ಈ ವಿಚಾರ ಬರಲಿಲ್ಲವೇ? ಇವತ್ತು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು ಮುಖ್ಯಮಂತ್ರಿಗಳಾಗಿರುವ ಹೊತ್ತಿಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಇದು ಬೇಕು ಎಂದು ತೆಗೆದರು. ಇವತ್ತು ರೇಷ್ಮೆ ಕಾಲೇಜು ತೆಗೆದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥವರು ಉದ್ಧಾರವಾಗುತ್ತಾರೆ. ಅರಣ್ಯ ಕಾಲೇಜು ತೆಗೆದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥವರು ಉದ್ಧಾರವಾಗುತ್ತಾರೆ. ಆ ಮಕ್ಕಳಿಗೆ ಉತ್ತೇಜನ ಕೊಡಬಹುದು ಎನ್ನತಕ್ಕಂಥ ದೃಷ್ಟಿಯಲ್ಲಿ ತೋಟಗಾರಿಕಾ ಕಾಲೇಜು ತೆಗೆದರೆ ತೋಟಗಾರಿಕೆಯಲ್ಲಿ ಚೆನ್ನಾಗಿ ಬೆಳೆಯುವಂತಹ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ ಎಂದು ಗ್ರಾಮಾಂತರ ಪ್ರದೇಶದಿಂದ ಅವರು ಬಂದಿರುವ ಹೊತ್ತಿಗೆ ಅವರ ಮನಸ್ಸಿಗೆ ಇದು ಬಂದು ಈ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ನಾನು ಕೇಳುತ್ತೇನೆ. ಕಳೆದ 30-40 ವರ್ಷಗಳಿಂದ ಎಲ್ಲಿ ಹೋಗಿತ್ತು ಈ ನಿಮ್ಮ ವ್ಯವಸ್ಥೆ. ಏತಕ್ಕೆ ನೀವು ಮಾಡಿರಲಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಕೇಳುತ್ತೇನೆ. ನಾನು ಒತ್ತಾಯ ಮಾಡಿದರೆ ನೀವು ಹೇಳುವುದಕ್ಕೆ ಏನಾದರೂ ಉತ್ತರ ಇದೆಯೇ ನಾನು ಕೇಳುತ್ತೇನೆ. ಇವತ್ತು ಇಷ್ಟೆಲ್ಲ ಮಾಡಿದರೂ ಸಹ ...

ಶ್ರೀ ಎ. ರುಕ್ಮಯ್ಯ ಪೂಜಾರಿ : ನಮ್ಮನ್ನು ಕೇಳುವ ಅವಶ್ಯಕತೆ ಇಲ್ಲ. 1947 ರಿಂದ 83ರವರೆಗೂ ಯಾರು ಅಧಿಕಾರ ಮಾಡಿದರು. ನಾವ್ಯಾರು ಅಧಿಕಾರ ಮಾಡಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತು ನಾನು ಒಂದು ಮಾತು ಹೇಳುತ್ತೇನೆ. ರಾಜ್ಯದ ಜನರು ಇವರಿಗೂ ಎರಡು ವರ್ಷ ಅವಕಾಶ ಕೊಟ್ಟು ನೋಡಬೇಕು. ಆಗಲೇ ಗೊತ್ತಾಗುವುದು. ರಾಜ್ಯದ ಜನಗಳಿಗೆ. ಜನತಾ ಸರ್ಕಾರದವರು 1983 ರಿಂದ 89ರವರೆಗೂ ಸುಮಾರು ಹರಾಜು ಹಾಕಿದ್ದಾರೆ. ಇವರಿಗೆ ಕೊಟ್ಟರೆ ಪೂರ್ಣ ಹರಾಜು ಹಾಕುತ್ತಾರೆ. ನಿಮ್ಮ ಪಕ್ಷದ ಸರ್ಕಾರಗಳು ಆಡಳಿತ ನಡೆಸಿರತಕ್ಕಂಥ ಗುಜರಾತು. ಮಧ್ಯಪ್ರದೇಶಗಳಲ್ಲಿ ಏನಾಗಿದೆ ? ಇವತ್ತು ನಡೆಯುತ್ತಿರತಕ್ಕಂಥ ಉತ್ತರ ಪ್ರದೇಶದಲ್ಲಿ ಏನಾಗಿದೆ? ಉತ್ತರ ಪ್ರದೇಶದಲ್ಲಿ ಕಲ್ಯಾಣ್ ಸಿಂಗ್‌ರವರು ಹೋಗಲಿ ಅವರಿಗೆ ಠೇವಣಿ ಬರುವುದಿಲ್ಲ. ಒಂದು ಗಾಳಿ ಇತ್ತು ಶ್ರೀರಾಮನ ಹೆಸರನ್ನು ಹೇಳಿಕೊಂಡು 1991ರಲ್ಲಿ ಬರುವುದಕ್ಕೆ ಒಂದು ಅವಕಾಶ ಇತ್ತು. ಜನರು ಈಗ ಸ್ವಲ್ಪ ಹುಷಾರಾಗಿದ್ದಾರೆ. ಇನ್ನು ನೀವು ನಿಮ್ಮ ಜೀವನದಲ್ಲಿ ಮುಂದಕ್ಕೆ ಬರುವುದಕ್ಕಾಗುವುದಿಲ್ಲ ಎನ್ನುವುದನ್ನು ಜ್ಞಾಪಕ ಇಟ್ಟುಕೊಳ್ಳಿ. ಇವತ್ತು ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ. ನನಗೆ ಹೆಮ್ಮೆ ಇದೆ. ಯಾವುದೇ ಸರ್ಕಾರ ತಪ್ಪು ಮಾಡಿದರೆ ನೇರವಾಗಿ

ಹೇಳತಕ್ಕಂಥ ಹಕ್ಕು ಇದೆ. ಇವತ್ತು ಯಾರೇ ಒಬ್ಬರು. ಎಷ್ಟೇ ದಿವಸ ಅಧಿಕಾರ ಮಾಡಿದರೂ ಹನಿ ತನೆ ಎನ್ನತಕ್ಕಂಥಾದ್ದು ಇವತ್ತು ವಾಟರ್ ಟೇಬಲ್ ಎಲ್ಲಾ ಕಡೆ ಕೆಳಗೆ ಹೋಗುತ್ತಿದೆ; ಮಳೆ ಕಡಿಮೆಯಾಗುತ್ತಿದೆ. ಮಳೆ ಇಲ್ಲದೆ ರೈತರು ಕಂಗಾಲಾಗುತ್ತಿದ್ದಾರೆ. ರೈತ ಇವತ್ತು ಪ್ರಕೃತಿಯ ವಿಕೋಪಕ್ಕೆ ಸಿಕ್ಕಿದ್ದಾನೆ. ಇಂತಹ ಸಂದರ್ಭದಲ್ಲಿ ನೀವು ವೈಜ್ಞಾನಿಕವಾಗಿರತಕ್ಕಂಥ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದೆ ಹೋದರೆ ಏನೂ ಗೊತ್ತಾಗುವುದಿಲ್ಲ. ಭೂಮಿಯಲ್ಲಿ ಕೆಲಸ ಮಾಡಿ ಅನುಭವ ಇರತಕ್ಕಂಥವರು ಮುಖ್ಯಮಂತ್ರಿ ಆಗಿದ್ದರಿಂದ ಇದೆಲ್ಲಾ ಅವರ ತಲೆಗೆ ಬಂದಿರತಕ್ಕಂಥಾದ್ದು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಒಂದು ತೆಂಗಿನ ಮರ ಬೆಳೆಯಬೇಕಾದರೆ ಅದಕ್ಕೆ ಎಷ್ಟು ನೀರು ಬೇಕು. ನೀರು ಹಾಕುವುದಕ್ಕೆ ಇವತ್ತು ನೀರು ಇದೆಯೇ? ಇಲ್ಲದಿದ್ದರೆ ವೈಜ್ಞಾನಿಕವಾದ ವಿಧಾನವನ್ನು ನಾವು ಅಳವಡಿಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಅವರ ತಲೆಗೆ ಬಂದಿದ್ದರಿಂದ ಈ ಕಾರ್ಯಕ್ರಮಗಳನ್ನು ತಂದಿರತಕ್ಕಂಥಾದ್ದು. ಹನಿ ತನೆ ಕಾರ್ಯಕ್ರಮ ಇದೆ. ಇವತ್ತು ಕೇವಲ ತುಂತುರು ನೀರಾವರಿ ವ್ಯವಸ್ಥೆಗೆ 1992-93ರಲ್ಲಿ 5 ಕೋಟಿ ರೂಪಾಯಿಗಳು ಇಟ್ಟಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಣಕಾಸಿನ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ತುಂತರು ಹನಿ ನೀರಾವರಿಗೆ ನೀವು ಹೆಚ್ಚು ಒತ್ತು ಕೊಡಬೇಕು. ಜಾಸ್ತಿ ಒತ್ತು ಕೊಡಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಒಳ್ಳೆಯದಾಗಬೇಕಾದರೆ ಇಂತಹ ಕಾರ್ಯಕ್ರಮಗಳಿಗೆ ನೀವು ಒತ್ತು ಕೊಡಬೇಕು. ಇನ್ನು ಕೆರೆ ಕಲ್ಯಾಣ ಹೊಸದಾಗಿ ಈ ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ವ್ಯವಸ್ಥೆ ಜಾರಿಗೆ ತಂದರು. ಒಂದು ಕೆರೆಗೆ ಒಂದು ಹಿಡಿ ಮಣ್ಣು ಹಾಕಿಲ್ಲ. ಇವತ್ತು ಬೋರ್‌ವೆಲ್‌ಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಬೋರ್‌ವೆಲ್‌ಗಳನ್ನು 200 ಅಡಿ ತೆಗೆದರೂ ಒಂದು ಹನಿ ನೀರು ಸಿಗುತ್ತಿಲ್ಲ. ಎಲ್ಲ ಕೆರೆಗಳಲ್ಲಿ ಸಿಲ್ಟ್ ತುಂಬಿಕೊಂಡು ಇವತ್ತು ಒಂದು ಕೆರೆಯಲ್ಲೂ ಸಹ ನೀರು ನಿಲ್ಲುತ್ತಾ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 36 ಸಾವಿರ ಕೆರೆಗಳಿವೆ. ನನಗೆ ಸರಿಯಾದ ಮಾಹಿತಿ ಇಲ್ಲ. ಈ 36 ಸಾವಿರ ಕೆರೆಗಳಿಂದ ಇವತ್ತು ಲಕ್ಷೋಪಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ.

ಬರೀ ನೀರಾವರಿಯಲ್ಲ. ಕೆರೆಯಲ್ಲಿ ನೀರು ನಿಂತರೆ ಆ ಭಾಗದಲ್ಲಿ, ಕೆಳಗಡೆ ಇರತಕ್ಕಂಥ ಭೂಮಿಯಲ್ಲಿ ಹೆಚ್ಚು ನೀರು ಓಡಾಡುತ್ತದೆ. ಹೀಗೆ ಕೆರೆ ನೀರು ಓಡಾಡಿದಾಗ ಕುಡಿಯುವ ನೀರಿಗೆ ಅಭಾವ ಕಡಿಮೆಯಾಗುತ್ತದೆ. ಕೃಷಿಗೆ ಬಹಳ ಪ್ರಯೋಜನವಾಗುತ್ತದೆ.ಕೆರೆಗಳ ಬಗ್ಗೆ ಯಾರೂ ಯೋಚನೆ ಮಾಡಿರಲಿಲ್ಲ. ಕಳೆದ 1983ನೇ ಇಸವಿಯಿಂದ ಅವರು 7 ವರ್ಷಗಳ ಆಳಿದಂಥ ಸರ್ಕಾರ ಒಂದು ದಿವಸ ಕೂಡ ಇದರ ಬಗ್ಗೆ ಚಿಂತನೆ ಮಾಡಿರಲಿಲ್ಲ. ಇವತ್ತು ನಾವು ಯಾವುದಾದರೂ ಹಳ್ಳಿಗೆ ಹೋದರೆ. ಏನು ಸ್ವಾಮಿ ಈ ಕೆರೆಗೆ ಒಂದು ಹಿಡಿ ಮಣ್ಣು ಹಾಕ್ಸಿರಿ ಎಂದು ಹೇಳಿದರೆ ಒಂದು ಪೈಸೆ ಕೊಡಲಿಕ್ಕೆ ಯಾವುದೇ ಬಾಬತ್ತಿನಲ್ಲಿ ದುಡ್ಡಿನ ವ್ಯವಸ್ಥೆ ಇರಲಿಲ್ಲ. ಇವತ್ತು ಆ ಒಂದು ವ್ಯವಸ್ಥೆಗೆ ಸುಮಾರು 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಒಂದು ಹತ್ತು ಕೋಟಿ ಹೆಚ್ಚು ಹಣವನ್ನು ನೀರಾವರಿ ಇಲಾಖೆಗೆ, ಕೆರೆಗಳಿಗೆ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇವತ್ತು ಕೆರೆ ಕಲ್ಯಾಣದಿಂದ 7 ಲಕ್ಷ ಎಕರೆ ಭೂಮಿಗೆ ನೀರಾವರಿಯಾಗುತ್ತದೆ. ಈ ಸಂದರ್ಭದಲ್ಲಿ ಸಣ್ಣ ಕೆರೆಗಳಲ್ಲಿ ಶಿಲ್ಟ್ ತೆಗೆಯುವುದಕ್ಕೆ. ಸಣ್ಣ ಕೆರೆಗಳಿಂದ ನೀರು ಹೋಗತಕ್ಕಂಥ ಚಾನಲ್‌ಗಳಲ್ಲಿ ಶಿಲ್ಟ್ ತೆಗೆಯುವುದಕ್ಕೆ ನೀವು ಹೆಚ್ಚು ಹಣವನ್ನು ಒದಗಿಸಬೇಕು. ಈಗ ಕೊಟ್ಟಿರತಕ್ಕಂಥ ಚಾನಲ್‌ಗಳಲ್ಲಿ ಶಿಲ್ಟ್ ತೆಗೆಯುವುದಕ್ಕೆ ನೀವು ಹೆಚ್ಚು ಹಣವನ್ನು ಒದಗಿಸಬೇಕು. ಈಗ ಕೊಟ್ಟಿರುವುದು ಸಾಕಾಗುವುದಿಲ್ಲ. ಇನ್ನೂ ಸ್ವಲ್ಪ ಜಾಸ್ತಿ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಸ್ವಾಮಿ. ತೋಟಗಾರಿಕೆ (ಹಾಪ್‌ಕಾಮ್ಸ್) ಬಗ್ಗೆ

ಹೇಳುವುದಾದರೆ, 5 ಕೋಟಿ 17 ಲಕ್ಷ ರೂಪಾಯಿ ಇತ್ತು. ಈ ವರ್ಷ 10 ಕೋಟಿ ಕೊಟ್ಟಿದ್ದಾರೆ. ನಾನು ಕೇಳುತ್ತೇನೆ, ನಮ್ಮ ತಾಲ್ಲೂಕಿನಲ್ಲಿ ಕೋಸು, ಟೊಮೇಟೋ, ಬದನೆಕಾಯಿ ಮುಂತಾದುವನ್ನು ಬೆಳೆದಂಥ ರೈತರು ಇವತ್ತು ಊಟಿಯಲ್ಲಿ ಇರತಕ್ಕಂಥ ತಮಿಳುನಾಡಿಗೆ ಹೋಗಿ ನಮ್ಮ ಜುಟ್ಟು ಕೊಡುತ್ತಿದ್ದಾರೆ. ಇವತ್ತು ಇದನ್ನು ಅರಿತು ಹೋದ ವರ್ಷ ಕೇವಲ ಆಚೆ ವರ್ಷ 5 ಕೋಟಿ ಇಟ್ಟಿದ್ದರು. ಈ ವರ್ಷ 10 ಕೋಟಿ ರೂಪಾಯಿ ಇಟ್ಟು ನಮ್ಮ ತೋಟಗಾರಿಕೆಗೆ ಸಪೋರ್ಟ್ ಮಾಡಿದ್ದಾರೆ. ಆದ್ದರಿಂದ ರಾಜ್ಯದ ತೋಟಗಾರಿಕೆ ರೈತರ ಪರವಾಗಿ ನಾನು ಈ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಇನ್ನು ವಿದ್ಯುಚ್ಛಕ್ತಿಗಾಗಿ 90-91ನೇ ಇಸವಿಯಲ್ಲಿ 270ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. 1991-92ರಲ್ಲಿ 373 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. 1992-93ರಲ್ಲಿ ಅಂದರೆ ಈ ವರ್ಷದಲ್ಲಿ 495 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅಧ್ಯಕ್ಷರೆ ನಾನು ಕೇಳುತ್ತೇನೆ. ಕಳೆದ 9-10 ವರ್ಷಗಳಿಂದ ಒಂದು ಯೂನಿಟ್ ವಿದ್ಯುತ್‌ನ್ನು ತಯಾರು ಮಾಡದೇ ಇವತ್ತು ಕಗ್ಗತ್ತಲೆಯಲ್ಲಿ ನಮ್ಮ ರಾಜ್ಯ ಇರಬೇಕಾಗಿದ್ದರೆ ಯಾರು 7 ವರ್ಷ ದುರಾಡಳಿತ ನಡೆಸಿದರೋ ಅವರು ಕಾರಣಕರ್ತರೇ ಹೊರತು ಇನ್ಯಾರೂ ಅಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ನಮ್ಮ ಬಿ.ಜೆ.ಪಿ. ಸದಸ್ಯರು ಹೇಳುತ್ತಿದ್ದರು. ನೀವು ಬರೀ ಕರೆಂಟ್ ಕೊಟ್ಟಿಬಿಟ್ರೆ ಅಲ್ರಿ ಸರಿಯಾದ ಕರೆಂಟ್ ಕೊಡಬೇಕು ಎಂದು ಹೇಳುತ್ತಿದ್ದರು. ನಾನು ಕೇಳುತ್ತೇನೆ. ಎಲ್ಲಿಂದ ತರುವುದು ಕರೆಂಟನ್ನು? 70 ಸಾವಿರ ಜನ ರೈತರು ನಮ್ಮ ಪಂಪುಸೆಟ್ಟುಗಳಿಗೆ ಕರೆಂಟ್ ಇಲ್ಲವೆಂದು ಕಂಗಾಲಾಗಿ ಕುಳಿತಿದ್ದ ಸಂದರ್ಭದಲ್ಲಿ ರೈತರ ಪರವಾಗಿ ಕಣ್ಣು ಬಿಟ್ಟು ಈ ಸರ್ಕಾರ 70 ಸಾವಿರ ಜನ ರೈತರಿಗೆ ಇವತ್ತು ಕರೆಂಟ್ ಕೊಟ್ಟಿದ್ದಕ್ಕೋಸ್ಕರ ಕರೆಂಟ್ ಶಾರ್ಟೇಜ್ ಆಗಿರುವುದು. ಆದ್ದರಿಂದ ಹಂತ ಹಂತವಾಗಿ ಕರೆಂಟ್ ಉತ್ಪಾದನೆ ಮಾಡತಕ್ಕಂಥಾದ್ದಕ್ಕೆ ಹೋಗಬೇಕಾಗುತ್ತದೆ. ಆದರೆ. ನಾನು ಈ ಹಂತದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಡಿಮ್ಯಾಂಡ್ ಇರತಕ್ಕಂಥಾದ್ದು ಮೂರುವರೆ ಸಾವಿರ ಮೆಗಾವಾಟ್. ತಯಾರು ಆಗತಕ್ಕಂಥಾದ್ದು ಎರಡೂವರೆ ಸಾವಿರ ಮೆಗಾವಾಟ್. ಇನ್ನು ಒಂದು ಸಾವಿರ ಮೆಗಾವಾಟ್ ಶಾರ್ಟೇಜ್ ಇದೆ. ವಿದ್ಯುತ್‌ನ್ನು ಹೆಚ್ಚು ಉತ್ಪತ್ತಿ ಮಾಡಬೇಕು ಎನ್ನತಕ್ಕಂಥ ನಮ್ಮ ಸರ್ಕಾರದ ಧ್ಯೇಯ ಏನು ಇದೆ ಅದು ಇದೆಲ್ಲವೂ ಆಗಬೇಕಾದರೆ. ಸಾವಿರ ಮೆಗಾವಾಟ್ ಹೆಚ್ಚು ಉತ್ಪಾದನೆಯಾಗಬೇಕಾದರೆ ಇನ್ನೂ ಒಂದು-ಒಂದೂವರೆ-ಎರಡು ವರ್ಷ ಹಿಡಿಯುತ್ತದೆ. ಅದಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ. ಈ ಒಂದು ವಿದ್ಯುತ್ ಉತ್ಪಾದನೆಗೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಎಸ್.ಜಿ. ರಾಮಚಂದ್ರನ್‌ರವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿ ವರದಿ ಕೊಟ್ಟಿದೆ. ಆ ಕಮಿಟಿಯ ವರದಿಯನ್ನು ಸರ್ಕಾರ ಜಾರಿಗೆ ತರಬೇಕು. ನಾನು ವಿದ್ಯುತ್ ಇಲಾಖೆಯವರು ಕೇಳಿದಾಗ ರಾಮಚಂದ್ರನ್‌ರವರ ವರದಿಯ ಸ್ವಲ್ಪ ಭಾಗವನ್ನು ಮಾತ್ರ ನಾವು ಅಲವಡಿಸಿಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದರು. ಅದರಲ್ಲಿರತಕ್ಕಂಥ ಎಲ್ಲಾ ಪೂರ್ಣ ಮಾಹಿತಿಗಳನ್ನು ತಾವು ಅಳವಡಿಸಿಕೊಂಡು ವಿದ್ಯುಚ್ಛಕ್ತಿ ತಯಾರು ಮಾಡಿ ವಿತರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎರಡು ವರ್ಷಗಳಿಗಿಂತ ಮುಂಚೆ ಕೇವಲ 35 ಸಾವಿರ ಪಂಪುಸೆಟ್ಟುಗಳಿಗೆ ಈ ರಾಜ್ಯದಲ್ಲಿ ಕರೆಂಟ್ ಕೊಡುತ್ತಿದ್ದರು. ನಮ್ಮ ಸರ್ಕಾರ ಬಂದ ಮೇಲೆ ಕಳೆದ ವರ್ಷದಲ್ಲಿ 70 ಸಾವಿರ ಮತ್ತು ಈ ವರ್ಷ ಈಗಾಗಲೇ 62 ಸಾವಿರ ಮುಗಿದಿದೆ. 75 ಸಾವಿರ ಮಾಡುತ್ತೇವೆ ಎನ್ನತಕ್ಕಂಥ ಇಲಾಖೆಯ ಗುರಿ ಇದೆ. ಆದ್ದರಿಂದ ರೈತರಿಗೆ ನಾನು ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ತಮಿಳುನಾಡಿನ ಯಾರೋ ಒಬ್ಬರು ಸ್ನೇಹಿತರು ಬಂದಿದ್ದರು. ತಮಿಳುನಾಡಿನಲ್ಲಿ ಒಬ್ಬ ವಿದ್ಯುಚ್ಛಕ್ತಿಗೆ ಅರ್ಜಿ ಹಾಕಿದರೆ 8 ವರ್ಷ

ಬೇಕಂತೆ. 8 ವರ್ಷ, 9 ವರ್ಷ ಆದ ಮೇಲೆ ಸೀನಿಯಾರಿಟಿ ಮೇಲೆ ಅವರಿಗೆ ವಿದ್ಯುಚ್ಛಕ್ತಿ ಕೊಡತಕ್ಕಂಥ ವ್ಯವಸ್ಥೆ ಇದೆ. ಆಂಧ್ರಪ್ರದೇಶದ ಕಡಪ ಎನ್ನತಕ್ಕಂಥ ಒಂದು ಊರಿನಲ್ಲಿ ಒಂದು ವರ್ಷದಲ್ಲಿಲ್ಲಾ 83 ಐ.ಪಿ. ಸೆಟ್ಟುಗಳಿಗೆ ಕರೆಂಟ್ ಕೊಟ್ಟಿದ್ದಾರೆ. ರಾಜ್ಯದಲ್ಲಿನ 70 ಸಾವಿರ ಜನ ರೈತರುಗಳಿಗೆ ವಿದ್ಯುಚ್ಛಕ್ತಿಯನ್ನು ನಮ್ಮ ಸರಕಾರದವರು ಕೊಟ್ಟಿದ್ದಾರಲ್ಲ ಅದನ್ನು ಅಭಿನಂದನೆ ಮಾಡಲು ನಿಮ್ಮಿಂದ ಆಗುವುದಿಲ್ಲವೆ ಎಂದು ನಾನು ಬಿಜೆಪಿಯವರನ್ನು ಮತ್ತು ವಿರೋಧ ಪಕ್ಷದ ಮಿತ್ರರನ್ನು ಕೇಳಬಯಸುತ್ತೇನೆ. ಆದರೆ ಒಂದು ವಿಚಾರವನ್ನು ಮಾನ್ಯ ಇಂಧನ ಇಲಾಖೆಯ ಮಂತ್ರಿಯವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತು ಇಲಾಖೆಯವರು ಮಾಡಲೇಬೇಕಾಗಿ ಕೇಳುವುದೇನೆಂದರೆ. ಟ್ರಾನ್ಸ್‌ಮಿಶನ್ ಲಾಸ್ ನಮ್ಮಲ್ಲಿ 1989-90ರಲ್ಲಿ 19.6 ಪರ್‌ಸೆಂಟ್ ಇತ್ತು, 1990-91ರಲ್ಲಿ ಅದು 19.3 ಪರ್‌ಸೆಂಟ್ ಇತ್ತು, 1991-92 ಇದು 19.48ಕ್ಕೆ ಹೋಗಿದೆ. ದಯವಿಟ್ಟು ನಮ್ಮಲ್ಲಿ ಇಷ್ಟೊಂದು ವಿದ್ಯುಚ್ಛಕ್ತಿಯು ಕಡಿಮೆ ಇರತಕ್ಕಂಥ ಸಂದರ್ಭದಲ್ಲಿ ಇಲಾಖೆಯವರು ಇದರ ಮೇಲೆ ಒಂದು ಒಳ್ಳೆಯ ಕಂಟ್ರೋಲ್‌ನ್ನು ಹೊಂದಿರಬೇಕಾಗುತ್ತದೆ. ನಿನ್ನೆ ಕೂಡ ನಾವು ಸದನದಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಸಚಿವರಿಗೆ ಹೇಳಿದ್ದೇವೆ. ಈ ಬಗ್ಗೆ ಸೂಕ್ತ ನಿಯಂತ್ರಣವನ್ನು ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಟ್ರಾನ್ಸ್‌ಮಿಶನ್ ಲಾಸ್‌ನ್ನು ಕಡಿಮೆ ಮಾಡಿ ವಿದ್ಯುಚ್ಛಕ್ತಿ ಉತ್ಪನ್ನವನ್ನು ಜಾಸ್ತಿ ಮಾಡಿ ಎಂದು ಹೇಳಿದ್ದೇವೆ. ಆವೊತ್ತು ಮಾನ್ಯ ರಾಜಶೇಖರಮೂರ್ತಿಯವರು ಹಣಕಾಸಿನ ಸಚಿವರಾಗಿದ್ದರು. ಆಗ ಕೆಲವು ಮಿತ್ರರು ಅವರು ಆರ್ಥಿಕ ಸಚಿವರಾಗಿದ್ದಾಗ ರಾಜ್ಯದಲ್ಲಿ ಆರ್ಥಿಕ ಸ್ಥಿತಿಯು ತುಂಬಾ ಚೆನ್ನಾಗಿ ಇತ್ತು ಎಂದು ಹೇಳಿದ್ದರು. ಆವೊತ್ತು ಎಕ್ಸೈಸ್‌ನ ಬಾಕಿ ಹಣವು 555 ಕೋಟಿ ರೂಪಾಯಿಗಳು ಇತ್ತು. ಅದೇ ಜನರು ಈ ಸರಕಾರದವರು ಹೆಂಡದ ದೊರೆಗಳಿಗೆ ಮಾರಾಟ ಮಾಡಿಕೊಂಡಿದ್ದಾರೆ ಎಂದರು. ನಮ್ಮ ಸರಕಾರ ಬಂದ ಮೇಲೆ 555 ಕೋಟಿ ಬಾಕಿ ಏನು ನಿಗದಿ ಇತ್ತು, ಅದರಲ್ಲಿ 550 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಆದರೂ ಕೂಡ ವಿರೋಧ ಪಕ್ಷದವರು ಏಕೆ ಈ ಹಣೆಪಟ್ಟಿಯನ್ನು ಕಟ್ಟುತ್ತಾರೋ ಎಂಬುದು ನನಗೆ ಗೊತ್ತಾಗುವುದಿಲ್ಲ. ಇದರಲ್ಲಿ ನೀವು ರಾಜಕೀಯವನ್ನು ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಜನರು ನಿಮ್ಮನ್ನು ಖಂಡಿತಾ ಒಪ್ಪುವುದಿಲ್ಲ ಎನ್ನತಕ್ಕಂಥ ಮಾತುಗಳನ್ನು ಮಾನ್ಯ ವಿರೋಧಿ ಮುಖಂಡರುಗಳಿಗೆ ನಾನು ಹೇಳಬಯಸುತ್ತೇನೆ. ಈ ವರ್ಷವೂ ಕೂಡ 573 ಕೋಟಿ ರೂಪಾಯಿಗಳನ್ನು ಆ ಬಾಬಿನಿಂದ ನಿರೀಕ್ಷೆ ಮಾಡಿದ್ದಾರೆ. ಈ ಕುರಿತು ಸರಕಾರದವರು ನಡೆದು ಬಂದಿರುವುದನ್ನು ನೋಡಿದರೆ ಅಷ್ಟೂ ಕೂಡ ವಸೂಲು ಆಗುತ್ತದೆ ಎಂದು ಹೇಳಬೇಕಾಗುತ್ತದೆ.

ಇನ್ನು ಲೋಕಾಯುಕ್ತದ ಬಗ್ಗೆ ಹೇಳಬೇಕೆಂದರೆ, ಈ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ಅಲ್ಲಿ ಹಾಗೆ ಮಾಡಿದರು, ಹೀಗೆ ಮಾಡಿದರು, ಅಧಿಕಾರಿಗಳನ್ನು ಹಿಡಿದು ಹಾಕಿದರು, ತಿರುಗಿ 'ಬಿ' ರಿಪೋರ್ಟ್ ಹಾಕಿದರು ಎಂದು ಮುಂತಾಗಿ ಹೇಳಿದರು. ಇವೊತ್ತು ಆಳುವ ಪಕ್ಷದಲ್ಲಿರುವವರು ಆಗ ನಮ್ಮ ರಾಜ್ಯಕ್ಕೆ ಲೋಕಾಯುಕ್ತ ಬೇಡ ಎಂದು ಹೇಳಿದ್ದರು. ಇದನ್ನು ಮಾಡಿದವರು ಯಾರು? ಯಾವ ಉದ್ದೇಶ ಇದರಲ್ಲಿ ಇತ್ತು? ಯಾರು ಶ್ರೀಮತಿ ಇಂದಿರಾಗಾಂಧೀಜಿಯವರ ವಿರುದ್ಧ ತೀರ್ಮಾನವೊಂದನ್ನು ಕೊಟ್ಟರು, ಅಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ ಇದ್ದವರನ್ನು ಇಲ್ಲಿಯ ಮುಖಂಡರುಗಳು ಇಲ್ಲಿಗೆ ಕರೆಸಿಕೊಂಡು ಬಂದು ಇಲ್ಲಿ ಲೋಕಾಯುಕ್ತದಲ್ಲಿ ಕೂರಿಸಿದರು. ಮಾನ್ಯ ರಾಮಕೃಷ್ಣ ಹೆಗಡೆಯವರೇ ನಿವೃತ್ತ ಅಲಾಹಾಬಾದ್‌ನ ನ್ಯಾಯಧೀಶರನ್ನು ಇಲ್ಲಿಗೆ ತಂದವರು. ಕಾಂಗ್ರೆಸ್‌ನವರ ಮೇಲೆ ಚಾಟಿ ಹಾರಿಸುವುದಕ್ಕೆ ಅವರನ್ನು ಇಲ್ಲಿಗೆ ತಂದರು. ಆದರೆ ಅದೇ ವ್ಯವಸ್ಥೆಯನ್ನು ಅವರೇ ಇವೊತ್ತು ಬೈಯುತ್ತಾ ಇದ್ದಾರೆ. ಲೋಕಾಯುಕ್ತದಿಂದ ನ್ಯಾಯ ಸಿಕ್ಕುವುದಿಲ್ಲ.

ಅದನ್ನು ಅಬಾಲಿಷ್ ಮಾಡಿ ಎಂದು ನಾನು ಒತ್ತಾಯ ಮಾಡುತ್ತೇನೆ. ಇವೊತ್ತು ಅದರ ವೆಚ್ಚಕ್ಕಾಗಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಹಿಂದೆ ನಮ್ಮಲ್ಲಿ ವಿಜಿಲೆನ್ಸ್ ಎಂದು ಇತ್ತು. ಅದು ಇದೇ ಕೆಲಸವನ್ನು ಚೆನ್ನಾಗಿ ಮಾಡುತ್ತಾ ಇತ್ತು. ಆಗ ಸ್ವಲ್ಪ ಬಿಗಿ ಇತ್ತು. ಆಗಿನ ಪರಿಸ್ಥಿತಿಯ ಬಗ್ಗೆ ಉದಾಹರಿಸುವುದಾದರೆ, ಏಸಿಟಿಓ ಒಬ್ಬನು ಚೆಕ್‌ಪೋಸ್ಟ್‌ನಲ್ಲಿ ಒಂದು ಸಾವಿರ ರೂಪಾಯಿ ಲಂಚ ತೆಗೆದುಕೊಂಡಿದ್ದಾನೆ ಎಂದು ಸರಕಾರದವರು ಅವನನ್ನು ಮನೆಗೆ ಕಳುಹಿಸಿದ್ದಾರೆ. ಲೋಕಾಯುಕ್ತದವರು ಅಂಥವರನ್ನು ಹಿಡಿದು ಕೊಡುತ್ತಾರೆ. ಆದರೆ ಅದೇ ಕೋಟಿಗಟ್ಟಲೆ ಕೊಳ್ಳೆ ಹೊಡೆಯುವವರನ್ನು, ದೊಡ್ಡ ದೊಡ್ಡ ಅಧಿಕಾರಿಗಳನ್ನು ಲೋಕಾಯುಕ್ತದವರು ಮಾತನಾಡಿಸಲಿಕ್ಕೇ ಹೋಗುವುದಿಲ್ಲ. ಹೀಗೆ ಲೋಕಾಯುಕ್ತದಿಂದ ಸರ್ಕಾರಕ್ಕೆ ಯಾವುದೇ ತರಹದ ಗೌರವವು ಬರುವುದಿಲ್ಲ. ಆದ್ದರಿಂದ ಲೋಕಾಯುಕ್ತವನ್ನು ಅಬಾಲಿಶ್ ಮಾಡಿ, ಹೊಸ ವ್ಯವಸ್ಥೆಯನ್ನು, ವಿಜಿಲೆನ್ಸ್ ಪದ್ಧತಿಯನ್ನು ತರುವಂಥ ಕೆಲಸವನ್ನು ಮಾಡಬೇಕೆಂದು ಸರಕಾರದವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಜಿಲ್ಲಾಪರಿಷತ್‌ನ ವ್ಯವಸ್ಥೆಯ ಬಗ್ಗೆ ಹೇಳಬೇಕೆಂದಿದ್ದೇನೆ. ನಾನು ಕೂಡ ಜಿಲ್ಲಾ ಪರಿಷತ್ ಸದಸ್ಯನಾಗಿ 3-4 ವರ್ಷಗಳ ಕಾಲ ಕೆಲಸ ಮಾಡಿ ಅನುಭವ ಹೊಂದಿದ್ದೇನೆ. ನಿಜವಾಗಿಯೂ ಈ ವ್ಯವಸ್ಥೆಗಳು ಬಂದ ಮೇಲೆ ಏನಾಯಿತು? ಮಾನ್ಯ ನಜೀರ್‌ಸಾಬ್‌ರವರು ಈ ಬಗ್ಗೆ ಮೊದಲೇ ಹೇಳಿದ್ದರು, ಇದೊಂದು ಟೆಸ್ಟ್‌ಡೋಸ್ ಇದ್ದ ಹಾಗೆ ಮಾಡಿನೋಡುತ್ತೇವೆ, ಮುಂದೆ ಏನಾಗಬಹುದು ಎಂದು ನೋಡುತ್ತೇವೆ ಎಂದು ಹೇಳಿದ್ದರು. ಜಿಲ್ಲಾಪರಿಷತ್ ಮತ್ತು ಮಂಡಳ ಪಂಚಾಯತ್‌ಗಳ ಕಾಯಿದೆಗಳನ್ನು ರಾಜ್ಯದಲ್ಲಿ ತಂದು ಹಳ್ಳಿಗಳ ಉದ್ಧಾರ ಮಾಡುತ್ತೇವೆ ಎಂದು ಭಾಷಣ ಮಾಡಿದ್ದೇ ಮಾಡಿದ್ದು. ಆದರೆ ಈಗ ಏನಾಗಿದೆ ಸ್ವಾಮಿ? ಹಳ್ಳಿಗಳ ಕಡೆಗಳಲ್ಲಿ ಇದ್ದ ಶಾಂತಿ ಸಮಾಧಾನವು ಕೆಟ್ಟು ಹೋಗಿದೆ. ಎಲ್ಲರೂ ಕೋರ್ಟ್ ಬಾಗಿಲು ಹತ್ತತಕ್ಕಂಥ, ಪೋಲೀಸ್ ಸ್ಟೇಷನ್‌ಗೆ ಅಲೆಯತಕ್ಕಂಥ ಪರಿಸ್ಥಿತಿಗೆ ಬಂದು ಬಿಟ್ಟಿದೆ. ಅವೊತ್ತು ಅವರದೇ ಪಕ್ಷದವರು ಕೆಲವರು ಈ ವ್ಯವಸ್ಥೆಯನ್ನು ತರುವುದು ಬೇಡ ಎಂದು ಹೇಳಿದ್ದರು. ಆಗ ನಜೀರ್‌ಸಾಬ್‌ರವರು ಈ ರಾಜ್ಯದಲ್ಲಿ 55 ಸಾವಿರ ಜನ ಕಾರ್ಯಕರ್ತರನ್ನು ತಯಾರು ಮಾಡುತ್ತೇನೆ, ನಮ್ಮ ಪಕ್ಷದ ಚಿಹ್ನೆಯ ಮೇಲೆ ಚುನಾವಣೆಯಲ್ಲಿ ಗೆಲ್ಲುತ್ತೇವೆ. ಎಂದು ಹೇಳಿದ್ದರು. ಆದರೆ ಇವೊತ್ತು ಏನಾಗಿದೆ? ಈ ವ್ಯವಸ್ಥೆ ಬಂದ ಮೇಲೆ ಹಳ್ಳಿಯ ಕಡೆಗಳಲ್ಲಿ ನೆಂಟಸ್ತನ ಮಾಡುವುದು, ಕೊಡುವುದು, ತೆಗೆದುಕೊಳ್ಳುವುದು ಎಲ್ಲವೂ ನಿಂತಿದೆ, ಎಲ್ಲಾ ಒಳ್ಳೆಯ ವ್ಯವಹಾರಗಳೂ ಕೆಟ್ಟು ಹೋಗಿವೆ. ನಮ್ಮ ಸರಕಾರ ಬಂದ ಮೇಲೆ ಈ ಒಂದು ಕಾಯಿದೆಯಿಂದ ಗ್ರಾಮಾಂತರ ಪ್ರದೇಶಗಳ ಉದ್ಧಾರವಾಗುವುದಿಲ್ಲ, ಎಂಬುದನ್ನು ಅರ್ಥಮಾಡಿಕೊಂಡಿದ್ದಾರೆ. ಈ ಕಾಯಿದೆಯನ್ನು ತಂದ ಸರಕಾರವನ್ನು ಜನರು ಕಿತ್ತುಹಾಕತಕ್ಕಂಥ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಶ್ರೀ ಆರ್.ಎನ್. ನಾಯಕ್ : ಆ ಕೆಲಸನ್ನು ಸರಕಾರದವರು ಮಾಡಿಲ್ಲ. ಜನರು ಮಾಡಿದ್ದಾರೆ. ಇದನ್ನು ಮಾಡಿದವರು ತಮ್ಮ ಅವಧಿ ಮುಗಿದ ಮೇಲೆ ತನ್ನಿಂದ ತಾನೆ ಹೋಗಿದ್ದಾರೆ. ಅವರು ಜಿಲ್ಲಾಪರಿಷತ್ ಕಾಯಿದೆಯನ್ನು ತರದಿದ್ದರೆ ನಾವು ಇಷ್ಟು ಸಂಖ್ಯೆಯದಲ್ಲಿ ಬರುತ್ತಿರಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಅಂಥ ಒಂದು ಸಮಗ್ರ ಕಾನೂನನ್ನು ತಂದು ಗ್ರಾಮಾಂತರ ಪ್ರದೇಶವನ್ನು ಉದ್ಧಾರ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಈಗ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನಾವು ಗೆಲ್ಲಬೇಕಾದರೆ, ಅವರು 24ಕ್ಕೆ ಇಳಿಯಬೇಕಾಗಿದ್ದರೆ ಇದಕ್ಕೆ

ನಿಜವಾಗಿಯೂ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್ ಕಾಯಿದೆಯೇ ಕಾರಣವೆ ಎಂದು ಅವರು ಅರ್ಥ ಮಾಡಿಕೊಳ್ಳಬೇಕು. ಇಂಥ ಒಂದು ಕಾಯಿದೆಯನ್ನು ತಂದು ಇಡೀ ಹಳ್ಳಿಪ್ರದೇಶದ ಜನರು ಕಿತ್ತಾಡುವಂತೆ ಯಾರು ಮಾಡಿದ್ದರೋ ಅವರಿಗೆ ಬುದ್ಧಿಯನ್ನು ಕಲಿಸತಕ್ಕಂಥ ಕೆಲಸವನ್ನು ಜನರು ಮಾಡಿದ್ದಾರೆ. ಈ ಕಾಯಿದೆ ತಂದವರನ್ನು ಇಂದು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವಂತೆ ಮಾಡಿದ್ದಾರೆ. ಇವೊತ್ತು ನಿಜವಾಗಿಯೂ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಂದ ಗ್ರಾಮಾಂತರ ಪ್ರದೇಶದ ಉದ್ಧಾರವಾಗುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗಿದೆ. ಇವೊತ್ತು ಸಹಿತ ಅಡ್ಮಿನಿಸ್ಟ್ರೇಟರ್‌ಗಳನ್ನು ಏನು ನೇಮಕ ಮಾಡಿದ್ದೀರಿ, ಅದು ದೀರ್ಘಕಾಲಕ್ಕೆ ಸರಿಯಾಗಿರುವುದಿಲ್ಲ. ಅವರು ಅಧಿಕಾರದಲ್ಲಿ ಮುಂದುವರಿದರೆ ಅದರಿಂದ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಈ ಕಾಯಿದೆಗೆ ಸಮಗ್ರ ತಿದ್ದುಪಡಿ ತಂದು ಚುನಾವಣೆ ಮಾಡಬೇಕು. ಹಿಂದೆ ಇದ್ದ ತಾಲ್ಲೂಕು ಬೋರ್ಡ್. ವಿಲೇಜ್ ಪಂಚಾಯತ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಲೋಕೋಪಯೋಗಿ ಸಚಿವರು ಈಗ ಉಪಸ್ಥಿತರಿದ್ದಾರೆ. ಅಂತೆಯೇ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳಿಗೆ ಜಿಲ್ಲಾ ಪರಿಷತ್‌ನವರು ಒಂದು ಹಿಡಿ ಮಣ್ಣನ್ನು ಕೂಡ ಹಾಕದಿರುವ ಕಾರಣ ಜನರು ನಮ್ಮನ್ನು ಬೈಯುತ್ತಾ ಇದ್ದಾರೆ. ಆದ್ದರಿಂದ ಈ ಕೆಲಸವನ್ನು ಮಾಡಲು ಜಿಲ್ಲಾ ಪರಿಷತ್‌ನ ಹಿಡಿತದಿಂದ ತಪ್ಪಿಸಿ ಪಿಡಬ್ಲ್ಯುಡಿಯವರು ಮಾಡುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರತಕ್ಕಂಥ ಎಲ್ಲ ರಸ್ತೆಗಳನ್ನು ರಾಜ್ಯ ಸರಕಾರದ ಮೂಲಕ ಮಾಡಿಸಿದರೆ ಮಾತ್ರ ಅವುಗಳು ಒಳ್ಳೆಯ ಸ್ಥಿತಿಯಲ್ಲಿರಲು ಅನುಕೂಲವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಸರಕಾರದವರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ನಮ್ಮ ಸರಕಾರವು ಬಂದ ಮೇಲೆ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆಶ್ರಯ, ಅಕ್ಷಯ, ಮತ್ತು ವಿಶ್ವ ಮುಂತಾದ ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ವಿಶ್ವ ಕಾರ್ಯಕ್ರಮದ ಮೂಲಕ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಮಾಡಿದ್ದಾರೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳು ಮುಂದೆ ಬಾರದಿರುವುದಕ್ಕೆ ಮುಖ್ಯ ಕಾರಣ ಅಂದರೆ ಅವುಗಳಿಗೆ ಸಮರ್ಪಕ ರೀತಿಯಲ್ಲಿ ಬಂಡವಾಳ, ಸಹಾಯಧನ ಮತ್ತು ವಿದ್ಯುತ್ ಸರಬರಾಜು ಇಲ್ಲದಿರುವುದು. ಸ್ವಾತಂತ್ರ್ಯಾನಂತರ ಗ್ರಾಮಾಂತರಗಳಲ್ಲಿ ಕೈಗಾರಿಕೆಗಳು ಮುಂದುವರಿಯದೇ ಇರಲು ಕಾರಣ ಅಂದರೆ, ಸರಿಯಾದ ಮಾರುಕಟ್ಟೆ ಮತ್ತು ಕಚ್ಚಾ ಮಾಲು ಇಲ್ಲದಿರುದಕ್ಕೆ ಇವೊತ್ತು 50 ಸಾವಿರ ಕೈಗಾರಿಕೆಗಳಲ್ಲಿ 30 ಸಾವಿರ ಕೈಗಾರಿಕೆಗಳು ರೋಗಪೀಡಿತವಾಗಿವೆ. ಇದಕ್ಕೆ ಸೂಕ್ತ ಮಾರುಕಟ್ಟೆ ಇಲ್ಲದಿರುವುದು ಮತ್ತು ವಿದ್ಯುತ್‌ನ ಸರಬರಾಜು ಸರಿಯಾಗಿ ಇಲ್ಲದಿರುವುದು ಕಾರಣವಾಗಿದೆ. ಇದನ್ನೆಲ್ಲಾ ಸರಿಪಡಿಸಿ ಕೈಗಾರಿಕೆಗಳಿಗೆ ಯೋಗ್ಯ ಉತ್ತೇಜನವನ್ನು ಕೊಡಲು ವಿಶ್ವ ಯೋಜನೆಯು ಈಗ ಜಾರಿಯಲ್ಲಿ ಬಂದಿದೆ. ಈ ಕಾರ್ಯಕ್ರಮದ ಉದ್ಘಾಟನೆಗೆ ಬಂದ ನಮ್ಮ ಮಾನ್ಯ ಪ್ರಧಾನಿಯವರು ತಮ್ಮ ಭಾಷಣದಲ್ಲಿ ರಾಷ್ಟ್ರದ ಯಾವುದೇ ಭಾಗದಲ್ಲಿ ಇಂಥ ಕಾರ್ಯಕ್ರಮವನ್ನು ಜಾರಿಗೆ ತಂದಿಲ್ಲ, ನಿಮ್ಮ ರಾಜ್ಯ ಈ ಕಾರ್ಯಕ್ರಮವನ್ನು ಮಾಡಿದೆ. ಇದಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಇದು ಯಾವ ರೀತಿ ಆಗುತ್ತಿದೆ ಎಂದು ನೋಡಿ ಈ ಯೋಜನೆಯು ಸಫಲವಾದಲ್ಲಿ ಇದನ್ನು ಇತರ ರಾಜ್ಯಗಳಿಗೆ ಕೂಡ ವಿಸ್ತರಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇವತ್ತು ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀಮತಿ ಇಂದಿರಾಗಾಂಧಿಯವರು ಕುಟುಂಬ ಯೋಜನೆಯನ್ನು ತಂದರು. ಅವರು ಕುಟುಂಬ ಯೋಜನೆಯನ್ನು ತಂದಾಗ ಬಹಳ ಜನ ನಕ್ಕರು. ಅಪಹಾಸ್ಯ ಮಾಡಿದರು. ಏನು ಅಮ್ಮನಿಗೆ ಹುಚ್ಚೇ? ಕುಟುಂಬ ಯೋಜನೆಯನ್ನು ಏತಕ್ಕೆ ತಂದರು? ಎಂದು ಕೇಳಿದರು. 16-17 ವರ್ಷಗಳು ಕಳೆದ ಮೇಲೆ ಕುಟುಂಬ ಯೋಜನೆಗೆ ಈ ರಾಷ್ಟ್ರದ ಜನ ಮಾರುಹೋದರು. ಇವತ್ತು ರಾಜ್ಯದ. ರಾಷ್ಟ್ರದ ಯಾವುದೇ ಭಾಗದ ಜನ ಕುಟುಂಬ ಯೋಜನೆಗೆ ಅಳವಡಿಸಿಕೊಳ್ಳದೇ ಇರತಕ್ಕಂಥವರು ಬಹಳ ಕಡಿಮೆಯಾಗಿದ್ದಾರೆ. ಏತಕ್ಕೆ? 18-20 ವರ್ಷಗಳ ಕಾಲ ಈ ಒಂದು ಕಾರ್ಯಕ್ರಮ ಸತತವಾಗಿ ನಡೆಸುತ್ತಲೇ ಬಂದರು. 'ವಿಶ್ವ' ಕಾರ್ಯಕ್ರಮ ಹುಟ್ಟಿ ಇನ್ನೂ ಮೂರು ತಿಂಗಳು ಕೂಡ ಆಗಿಲ್ಲ. ಒಂದು ಮಗು ಹುಟ್ಟಿ ಕಾಲು ಹಾಕಿ. ಅಪ್ಪಾ ಎನ್ನಬೇಕಾದರೆ ಎರಡು ವರ್ಷಗಳು ತೆಗೆದುಕೊಳ್ಳುತ್ತದೆ. 'ವಿಶ್ವ' ಕಾರ್ಯಕ್ರಮ ಬೋಗಸ್, 'ವಿಶ್ವ' ಕಾರ್ಯಕ್ರಮ ಏನೂ ನಡೆಯುವುದಿಲ್ಲ ಎನ್ನತಕ್ಕಂಥ ಪ್ರಚಾರವನ್ನು ಮಾಡಿದರೆ ಆ ಕಾರ್ಯಕ್ರಮ ಹೇಗೆ ಯಶಸ್ವಿಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ. ಅಲ್ಲಿಯೂ ಸಹ ಹೆಚ್ಚು ಕಡಿಮೆ ತಪ್ಪುನೆಪ್ಪುಗಳು ಇರಬಹುದು. ವಿಶ್ವ ಕಾರ್ಯಕ್ರಮದಲ್ಲಿ ನಡೆದಿರತಕ್ಕಂಥದ್ದು ಸರಿ ಎಂದು ನಾನು ಹೇಳುವುದಿಲ್ಲ. ವಿಶ್ವ ಕಾರ್ಯಕ್ರಮದಲ್ಲಿ ನಡೆದಿರತಕ್ಕಂಥದ್ದು ಸರಿ ಎಂದು ನಾನು ಹೇಳುವುದಿಲ್ಲ. ವಿಶ್ವ ಕಾರ್ಯಕ್ರಮದಲ್ಲಿ ತಪ್ಪು ನೆಪ್ಪುಗಳು ಇದೆ. ಅದನ್ನು ಎಲ್ಲಿ ತಪ್ಪಾಗಿದೆ, ಅಲ್ಲಿ ಹೇಳಿ. ಅಲ್ಲಿ ತಿದ್ದಿಕೊಂಡು ಆ ಒಂದು ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇವತ್ತು ವಿಶ್ವ ಕಾರ್ಯಕ್ರಮ ಎಂಥ ಬೃಹತ್ ಕಾರ್ಯಕ್ರಮ ಎಂದು ಹೇಳಿದರೆ ನಿಜವಾಗಿಯೂ ಸಹ ಬಹಳ ಜನ ಮುಖಂಡರುಗಳಿಗೆ ಅದು ಯಾವ ರೀತಿ ಅರ್ಥವಾಗುತ್ತದೋ ಗೊತ್ತಿಲ್ಲ. ಸ್ವತಃ ಕೈಗಾರಿಕೆ ಮಾಡಿರತಕ್ಕಂಥ ನನಗೆ ಅದರ ಅನುಭವವಾಗಿದೆ. ಇವತ್ತು ಬಹಳ ಜನ ಕೇಳುತ್ತಾರೆ. ನನಗೆ ಕೇವಲ ಮೂವತ್ತಾರು ವರ್ಷ ವಯಸ್ಸು. ನನ್ನ ತಲೆ ಸಂಪೂರ್ಣವಾಗಿ ಇವತ್ತು ಬೆಳ್ಳಗಾಗಿದೆ. ಏತಕ್ಕೆ? ಒಂದು ಕೈಗಾರಿಕೆಯನ್ನು ಮಾಡಿ ಈ ರೀತಿ ಆಗಿದೆ. ಒಂದು ಕೈಗಾರಿಕೆ ಮಾಡಿದರೆ ಎರಡನೆಯ ಹೆಂಡತಿಯನ್ನು ಮದುವೆಯಾದಂತಾಗುತ್ತದೆ. ನಾವು ಮಾಡಿದಂಥ ಮಾಲನ್ನು ತೆಗೆದುಕೊಳ್ಳುವವರು ಯಾರೂ ಇಲ್ಲ. ಇವತ್ತು ನಮ್ಮ ಫಾಕ್ಟರಿಗೆ ಬೇಕಾಗಿರತಕ್ಕಂಥ ಕಚ್ಚಾ ಮಾಲು ಕೂಡ ಸಿಗುವುದಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಬರಬೇಕು ಎಂದು ಹೇಳಿದರೆ ಅದು ಯಾವ ರೀತಿ ಬರಬೇಕು ಎಂದು ನನಗಂತೂ ಗೊತ್ತಿಲ್ಲ. ಈ ವಿಶ್ವ ಕಾರ್ಯಕ್ರಮದ ವಿರುದ್ಧ ಭಾಷಣವನ್ನು ಮಾಡುವವರಿಗೆ ನಾನು ಇಲ್ಲಿ ವಿನಂತಿ ಮಾಡುತ್ತೇನೆ. ಸರ್ಕಾರದ ವತಿಯಿಂದ ದುಡ್ಡು ಹೋದರೂ ಪರವಾಗಿಲ್ಲ. ಕೆ.ಎಸ್.ಎಫ್.ಸಿ. ಯಿಂದ ಸಾಲವನ್ನು ಕೊಡಿಸಿ ಒಂದೊಂದು ಕೈಗಾರಿಕೆಯನ್ನು ಮಾಡಿಸಿಕೊಡಬೇಕು. ಅವರು ಇಂಡಸ್ಟ್ರಿಯನ್ನು ಹೇಗೆ ನಡೆಸುತ್ತಾರೆಂದು ನೋಡಬೇಕು. ಇವತ್ತು ಕೈಗಾರಿಕೆಯನ್ನು ನಡೆಸಬೇಕಾದರೆ ಅದರ ಕಷ್ಟ ನನಗೆ ಗೊತ್ತಿದೆ. ಅದನ್ನು ನಡೆಸಿದಂಥವರಿಗೆ ಗೊತ್ತಿದೆ. ಅದಕ್ಕಾಗಿ ನಾನು ಈ ವಿಶ್ವ ಎನ್ನತಕ್ಕಂಥ ಒಂದು ಬೃಹತ್ ಕಾರ್ಯಕ್ರಮ ಚೆನ್ನಾಗಿ, ಯಶಸ್ವಿಯಾಗಿ ನಡೆಯಬೇಕಾಗಿದ್ದರೆ ಹಲವಾರು ವರ್ಷಗಳೇ ಬೇಕು. ಅದಕ್ಕೆ ಮಾರುಕಟ್ಟೆ ಸರಿಯಾಗಿ, ವ್ಯವಸ್ಥಿತವಾಗಿ ಸಿಗಬೇಕು. ಆಮೇಲೆ ವಿಶ್ವ ಕಾರ್ಯಕ್ರಮ ಯಶಸ್ವಿಯಾಯಿತು ಎಂದು ಹೇಳಬಹುದು. ಮೊದಲು ಶ್ರೀಮತಿ ಇಂದಿರಾಗಾಂಧಿಯವರ ಕಾರ್ಯಕ್ರಮವನ್ನು ಅಪಹಾಸ್ಯ ಮಾಡಿದ ಹಾಗೆ ಇವತ್ತು ಬಂಗಾರಪ್ಪನವರ ವಿಶ್ವ ಕಾರ್ಯಕ್ರಮ ಏನೂ ಪ್ರಯೋಜನ ಇಲ್ಲ ಎಂದು ಹೇಳಿ ಇವತ್ತು ತಮಟೆಯನ್ನು ಹೊಡೆದುಕೊಂಡು ಸಾರಿದರೆ ಇದರಿಂದ ಪ್ರಯೋಜನವಾಗುವುದಿಲ್ಲ. ಇವತ್ತು ಜನರು ಅರ್ಥ ಮಾಡಿಕೊಳ್ಳುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರಿಗೆ ವಿಶ್ವ ಕಾರ್ಯಕ್ರಮ ಎಷ್ಟರಮಟ್ಟಿನ ಜೀವದಾನವಾಗಿದೆ, ವರದಾನವಾಗಿದೆ

ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅದಲ್ಲದೇ 'ಆಶ್ರಯ' ಎನ್ನತಕ್ಕಂಥ ಕಾರ್ಯಕ್ರಮವಿದೆ. ಸುಮಾರು ನಾಲ್ಕು ಲಕ್ಷ ಜನರಿಗೆ ಇವತ್ತು ನಿವೇಶನವನ್ನು ಕೊಟ್ಟಿದ್ದೇವೆ. ಒಂದು ಸೈಟನ್ನು ಕೊಡಬೇಕಾಗಿದ್ದರೆ ಮಂಡಲ ಪಂಚಾಯಿತಿಯಲ್ಲಿ ಇವರು ಅಧಿಕಾರದಲ್ಲಿ ಇದ್ದರಲ್ಲಾ ಪುಣ್ಯಾತ್ಮರು, ನಮ್ಮ ರುಕ್ಮಯ್ಯ ಪೂಜಾರಿ ಕಡೆಯವರು, ಅವರು ಜನಿವಾರವನ್ನು ನೋಡುತ್ತಿದ್ದರು. ಇವನು ಯಾವ ಪಾರ್ಟಿಯವನು ಎಂದು ನೋಡುತ್ತಿದ್ದರು. ಅದನ್ನು ಅವರು ಹುಡುಕುತ್ತಿದ್ದರು. ಇವನು ಯಾವ ಪಾರ್ಟಿಗೆ ವೋಟನ್ನು ಕೊಟ್ಟಿದ್ದಾನೆ, ಯಾವ ಪಕ್ಷಕ್ಕೆ ವೋಟನ್ನು ಕೊಟ್ಟಿದ್ದಾನೆ. ಇವನಿಗೆ ಸೈಟನ್ನು ಕೊಡಬಹುದೇ? ಇಲ್ಲವೇ? ಎನ್ನತಕ್ಕಂಥದ್ದನ್ನು ನೋಡುತ್ತಿದ್ದರು. ಈ ಸರ್ಕಾರ ಬಂದ ಮೇಲೆ ನೀನು ಯಾವ ಪಾರ್ಟಿಗಾದರೂ ವೋಟನ್ನು ಕೊಟ್ಟರು ನಿನಗೆ ನಿವೇಶನ ಕೊಡುತ್ತೇನೆ ಎಂದು ಹೇಳಿದ್ದೇವೆ. ಈ ರಾಜ್ಯದಲ್ಲಿ ಯಾರಿಗೆ ನಿವೇಶನ ಇಲ್ಲವೋ ಅವರಿಗೆ ನಿವೇಶನವನ್ನು ನಾವು ಕೊಡುತ್ತೇವೆ. ಈ ಒಂದು ಸ್ಕೀಮ್ ಬಂದ ಮೇಲೆ ಇವತ್ತು ನಾವು ಮರ್ಯಾದೆಯಿಂದ ಹಳ್ಳಿಗಳ ಕಡೆಯಲ್ಲಿ ತಿರುಗಾಡಬಹುದಾಗಿದೆ. ನನಗೆ ಸ್ವತಃ ಅನುಭವವಾಗಿದೆ. ಜನರು ಮೊದಲು ಕೇಳುತ್ತಿದ್ದರು. ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ವ್ಯವಸ್ಥೆ ಬಂದಮೇಲೆ ಏನ್ರೀ ನಿಮ್ಮ ಕಾರ್ಯಕ್ರಮ. ಎಂ.ಎಲ್.ಎ. ಗಳಿಗೆ ಒಂದು ಲೈಟು ಹಾಕಿಸುವುದಕ್ಕೆ ಯೋಗ್ಯತೆ ಇಲ್ಲ. ಒಂದು ಸೈಟನ್ನು ಕೊಡತಕ್ಕಂಥ ಕಾರ್ಯಕ್ರಮ ನಿಮ್ಮ ಹತ್ತಿರ ಇಲ್ಲ. ಮಂಡಲ ಪಂಚಾಯಿತಿಯ ಹತ್ತಿರ ಹೋಗಬೇಕು, ಅವರು, ನೀವು ಯಾವ ಪಾರ್ಟಿಗೆ ವೋಟನ್ನು ಕೊಟ್ಟಿದ್ದೀರಿ ಎಂದು ನೋಡುತ್ತಾರೆ. ಈ ಪರಿಸ್ಥಿತಿಯಲ್ಲಿ ನಮ್ಮ ಕತೆ ಹೇಗೆ ಎಂದು ಜನ ನಮ್ಮನ್ನು ಪ್ರಶ್ನೆ ಮಾಡುತ್ತಿದ್ದರು. ನಮಗೆ ಅರ್ಥವಾಗುತ್ತದೆ. ಇವತ್ತು 'ಆಶ್ರಯ'. 'ಅಕ್ಷಯ', 'ವಿಶ್ವ' ಸ್ಕೀಮುಗಳು ಬಂದ ಮೇಲೆ ಇವುಗಳನ್ನು ಹೆಚ್ಚು ವ್ಯವಸ್ಥಿತವಾಗಿ ತೆಗೆದುಕೊಳ್ಳಬೇಕಾಗಿದೆ; ನಡೆಯಬೇಕಾಗಿದೆ. ಇವುಗಳಿಗೆ ಇನ್ನೂ ಸಮಯವನ್ನು ಕೊಡಬೇಕಾಗಿದೆ. ಇವುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಾಂತಿಕಾರಕ ಹೊಸ ವ್ಯವಸ್ಥೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 'ಆಶ್ರಯ' ಎನ್ನತಕ್ಕಂಥ ಸ್ಕೀಮು ಬಂದಮೇಲೆ ನಿಜವಾಗಿಯೂ ನನ್ನ ಕ್ಷೇತ್ರದಲ್ಲಿ ಜನ ಮಾತ್ರ ಬಹಳ ಸಂತೋಷವಾಗಿದ್ದಾರೆ. 5500 ಸೈಟುಗಳನ್ನು ಹಂಚಿದ್ದೇವೆ. 25 ಲಕ್ಷ ರೂಪಾಯಿ ದುಡ್ಡು ಕೊಟ್ಟು ಇವತ್ತು ಸೈಟುಗಳನ್ನು ಪರ್ಚೇಸ್ ಮಾಡಿ ಜನರಿಗೆ ಕೊಟ್ಟಿದ್ದೇವೆ. ಮಾನ್ಯ ವಿರೋಧ ಪಕ್ಷದ ಮುಖಂಡರು ಹೇಳುತ್ತಿದ್ದರು, ನನ್ನ ಕ್ಷೇತ್ರದಲ್ಲಿ ಒಂದು ಕಡೆಯಲ್ಲೂ ಕೊಟ್ಟಿಲ್ಲ ಎಂದು ಹೇಳುತ್ತಿದ್ದರು. ಆಮೇಲೆ ಕೇಳಿದರೆ ಇನ್ನೇನು ಹೇಳುವುದು ವಿರೋಧ ಪಕ್ಷದ ನಾಯಕನಾಗಿ ಆ ರೀತಿ ಹೇಳದೆ ಇನ್ನೇನು ಮಾಡುವುದು? ಎಂದು ಹೇಳಿದರು. ರಾಜಕೀಯ ಮಾಡತಕ್ಕಂಥದ್ದು ಇಲ್ಲಿ ಅಲ್ಲ. ಸರ್ಕಾರ ಸರಿಯಾಗಿ ಮಾಡಿದ್ದರೆ ಸರಿಯಾಗಿ ಮಾಡಿದೆ ಎಂದು ಹೇಳಬೇಕು. ತಪ್ಪಾಗಿ ಮಾಡಿದ್ದರೆ ನೀವು ಇಂಥದ್ದು ತಪ್ಪು ಮಾಡಿದ್ದೀರಿ ತಿದ್ದಿಕೊಳ್ಳಿ ಎಂದು ಹೇಳಬಹುದು. ಈ ರೀತಿ ಹೇಳದಿದ್ದರೆ ಸರಿಯಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಅಕ್ಷಯ ಎನ್ನತಕ್ಕಂಥ ಕಾರ್ಯಕ್ರಮ ಇದೆ. ಹೊರ ರಾಜ್ಯದವರ ಜೊತೆಯಲ್ಲಿ ನಮಗೆ ಸಂಬಂಧ ಇದೆ. ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿ ಬಂದ ಮೇಲೆ ಈ ಒಂದು ಸ್ಕೀಮ್‌ನ್ನು ತಂದು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಮಕ್ಕಳ ಸಾಕ್ಷರತಾ ಆಂದೋಲನದಲ್ಲಿ ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಒಂದು ಕಡೆ ಚಂದ್ರಲೋಕಕ್ಕೆ ಹೋಗಬೇಕು ಎನ್ನತಕ್ಕಂಥ ಯೋಚನೆ ನಮ್ಮ ದೇಶದಲ್ಲಿ ಇರತಕ್ಕಂಥ ಸಂದರ್ಭದಲ್ಲಿ ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಒಂದು ವರ್ಗವೇ ಅವಿದ್ಯಾವಂತರಾಗಿ ಕುರುಡಿನಿಂದ ಕೂಡಿರತಕ್ಕಂಥದ್ದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕು ಎನ್ನತಕ್ಕಂಥ ಚಿಂತನೆ ಇದೆ. ತಮಿಳುನಾಡಿನಲ್ಲಿ ಇರುವ ಹಾಗೆ ಊಟವನ್ನು ಕೊಡುವ ವ್ಯವಸ್ಥೆ ಮಾಡಬೇಕೇ,

ಮಹಾರಾಷ್ಟ್ರದಲ್ಲಿ ಇರುವ ಹಾಗೆ ವ್ಯವಸ್ಥೆಯನ್ನು ಮಾಡಬೇಕೇ ಎನ್ನುವುದು ಈ ಸರ್ಕಾರದ ಚಿಂತನೆಯಾಗಿತ್ತು. ಆಮೇಲೆ ಎಲ್ಲರೂ ಕುಳಿತು ಚರ್ಚೆಮಾಡಿ ಮಗುವಿಗೆ ಒಂದು ರೂಪಾಯಿಯನ್ನು ಕೊಟ್ಟರೆ ಅದರ ಆಸೆಗಾದರೂ ಮಗು ಶಾಲೆಗೆ ಬಂದು ಹೋಗುತ್ತಾರೆ. ಆ ದುಡ್ಡು ಅವರ ತಾಯಿಯ ಕೈಗೆ ತಲುಪಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಕ್ಷಯ ಯೋಜನೆಯ ಮೂಲಕ ಮಕ್ಕಳಿಗೆ ಒಂದು ರೂಪಾಯಿಯನ್ನು ಕೊಡುವುದಕ್ಕೆ ನಮ್ಮದೇನೂ ವಿರೋಧ ಇಲ್ಲ. ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆ ಎಂದು ಭಾಗ ಮಾಡಿ, ಸರ್ಕಾರೀ ಶಾಲೆಗೆ ಹೋಗತಕ್ಕಂಥ ಮಕ್ಕಳಿಗೆ ಮಾತ್ರ ಕೊಡುತ್ತಾರೆ. ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೂ ಕೊಡಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ದೊಡ್ಡದು ಮಾಡಿ ಹೇಳುತ್ತಿಲ್ಲ. ಇರುವುದನ್ನು ಹೇಳುತ್ತಿದ್ದೇನೆ. ನಾನೇಕೆ ದೊಡ್ಡದು ಮಾಡುವುದಕ್ಕೆ ಹೋಗಲಿ. ಇದಕ್ಕೆ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ, ದೊಡ್ಡದು ಮಾಡಬೇಡವೇ? ಏನು 2 ಲಕ್ಷ ಕೊಟ್ಟಿದ್ದಾರಾ? 20 ಕೋಟಿ ರೂಪಾಯಿ ಅಕ್ಷಯ ಯೋಜನೆಗೆ ಇದುವರೆಗೂ ಬಿಡುಗಡೆಯಾಗಿರತಕ್ಕ ಹಣ. ಇವತ್ತು ಅಕ್ಷಯ ಯೋಜನೆ ಬಹಳ ಕ್ರಾಂತಿಕಾರಕವಾಗಿರತಕ್ಕ ಯೋಜನೆಯಾಗಿದೆ. ಈ ಯೋಜನೆ ನಿಜಕ್ಕೂ ಹೆಚ್ಚಿನ ರೀತಿಯಲ್ಲಿ ಮುಂದುವರಿಯಬೇಕು. ಬ್ರಾಂಚ್ ಸ್ಕೂಲ್‌ಗಳಿಗೆ ವಿದ್ಯಾಮಂತ್ರಿಗಳು ಈ ಕಾರ್ಯಕ್ರಮವನ್ನು ಕೊಟ್ಟಿಲ್ಲ. ಸ್ಕೂಲ್‌ಗಳಿಗೆ ಕೊಡುತ್ತಾರೆ. ಎ.ಇ.ಓ ಲಿಮಿಟ್‌ನಲ್ಲಿ ಬ್ರಾಂಚ್ ಸ್ಕೂಲ್‌ಗಳೆಂದು ಮಾಡಿರುತ್ತಾರೆ. ಯಾವುದಾದರೂ ಒಂದು ಊರಿನಲ್ಲಿ ತಾತ್ಕಾಲಿಕವಾಗಿ ಶಾಲೆ ಆಗಬೇಕೆಂದರೆ ಅಂತಹ ಊರಿಗೆ ಬ್ರಾಂಚ್ ಸ್ಕೂಲ್ ಎಂದು ಕೊಡುತ್ತಾರೆ. ಬಹಳ ಸ್ಕೂಲ್‌ಗಳಿಗೆ ಈ ಕಾರ್ಯಕ್ರಮ ಅನ್ವಯಿಸುವುದಿಲ್ಲ. ಮಾನ್ಯ ವಿದ್ಯಾಮಂತ್ರಿಗಳಿಗೆ ನಾನು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಬ್ರಾಂಚ್ ಸ್ಕೂಲ್‌ಗಳಿಗೂ ಸಹಿತ ಇದನ್ನು ಅನ್ವಯಿಸತಕ್ಕ ರೀತಿ ಮಾಡಬೇಕು. ಆಗ ಈ ಆಶ್ರಯ ಸ್ಕೀಮ್ ಯಶಸ್ವಿಯಾಗುತ್ತದೆ. ಇವತ್ತು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಒಳ್ಳೆಯದ್ದನ್ನು ಮಾಡುತ್ತೇವೆಂದು ಏನು ಹೇಳಿದ್ದೀರೋ ಅದಕ್ಕೆ ಅವಕಾಶವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನು ಆರಾಧನಾ ಸ್ಕೀಮ್ ಬಗ್ಗೆ ಹೇಳುತ್ತೇನೆ. ನಾನು ಚುನಾವಣೆಗೆ ನಿಂತಾಗ ನಮ್ಮ ಕ್ಷೇತ್ರದ ಒಡ್ಡರ ಕಾಲೋನಿಗೆ ಹೋಗಿದ್ದೆ. ಅಲ್ಲಿ ಸುಮಾರು 100 ಮನೆಗಳು ಇವೆ. ಅಲ್ಲಿಗೆ ನಾನು ಹೋದಾಗ ಅಲ್ಲಿ ಮುಖಂಡರುಗಳೆಲ್ಲರೂ ನನ್ನನ್ನು ಸರ್ಕಾರದಿಂದ ಎಲ್ಲಾ ಸೌಲಭ್ಯವನ್ನು ಕೊಡುತ್ತೀರಿ; ಆದರೆ ಬೆಳಿಗ್ಗೆ ಎದ್ದರೆ ಇಲ್ಲಿ ಕೈ ಮುಗಿಯುವುದಕ್ಕೆ ಒಂದು ಗುರಿ ಇಲ್ಲ, ಯಾವುದಾದರೂ ದೇವರನ್ನು ಇಟ್ಟುಕೊಳ್ಳುವುದಕ್ಕೆ ಚಿಕ್ಕದಾಗಿ ಒಂದು ದೇವರ ಗುಡಿಯನ್ನು ಮಾಡಿಸಿಕೊಡಿ ಎಂದು ನನ್ನನ್ನು ಕೇಳಿದರು. ಈ ಆರಾಧನಾ ಸ್ಕೀಮ್ ಬರುವವರೆಗೂ ನಮ್ಮ ಹತ್ತಿರ ಈ ಗುಡಿ ಯೋಜನೆ ಇರಲಿಲ್ಲ. ಇವತ್ತು ಅಂತರ ಊರುಗಳಿಗೆ ಅಂತಹ ಕಾಲೋನಿಗಳಿಗೆ ಈ ಆರಾಧನಾ ಸ್ಕೀಮ್‌ನಿಂದ ಪ್ರಯೋಜನವಾಗುತ್ತಿದೆ. ಈ ಆರಾಧನಾ ಸ್ಕೀಮ್ ಅನ್ನು ಬರೀ ಎಸ್.ಸಿ. / ಎಸ್.ಟಿ ಕಾಲೋನಿಗೆ ಅಲ್ಲ, ಕಾಲೋನಿಗಳು ಎಲ್ಲೆಲ್ಲಿ ಇವೆ ಅಲ್ಲೆಲ್ಲ ಈ ದೇವಸ್ಥಾನಗಳನ್ನು ನಿರ್ಮಾಣ ಮಾಡಲಿಕ್ಕೆ ತಾವು ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಹಿಂದುಳಿದ ಪ್ರದೇಶಗಳಲ್ಲಿ ಕೊಡಿ ಎಂದು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಹಿಂದುಳಿದ ಕಾಲೋನಿಗಳಲ್ಲಿ ಅವರು ಎಸ್.ಸಿ ಆಗಿರಲಿ, ಎಸ್.ಟಿ ಆಗಿರಲಿ ಅಥವಾ ಯಾವುದೇ ಜನಾಂಗವಾಗಿರಲಿ, ಹಿಂದುಳಿದ ಕಾಲೋನಿಗಳಿಗೆ ಈ

ಕಾರ್ಯಕ್ರಮವನ್ನು ವಿಸ್ತರಿಸಬೇಕು. ಇದು ಒಂದು ಒಳ್ಳೆಯ ಕಾರ್ಯಕ್ರಮ ಎಂದು ನಾನು ಹೇಳುತ್ತೇನೆ. ಇವತ್ತು ಸಿನಿಮಾ ಸಬ್ಸಿಡಿಯನ್ನು 3 ಲಕ್ಷ ರೂಪಾಯಿಯೆಂದು ಘೋಷಣೆ ಮಾಡಿದ್ದೀರಿ. ಇವತ್ತು ಒಂದು ಕನ್ನಡ ಸಿನಿಮಾವನ್ನು ತೆಗೆಯಬೇಕಾದರೆ 60-70 ಲಕ್ಷ ರೂಪಾಯಿ ಬೇಕಾಗುತ್ತದೆ. ಇವತ್ತು ಸಿನಿಮಾದಲ್ಲಿ ತಾಂತ್ರಿಕ ವರ್ಗದವರು ಅದಕ್ಕೆ ಸಹಾಯ ಮಾಡುವವರು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ಕನ್ನಡ ಸಿನಿಮಾಕ್ಕೆ ಕೊಡತಕ್ಕಸಬ್ಸಿಡಿಯನ್ನು 3 ಲಕ್ಷ ಇರುವುದನ್ನು 5 ಲಕ್ಷಕ್ಕೆ ಏರಿಸಬೇಕು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದೇ ರಾಜ್ಯದಲ್ಲಿ 555 ಥೇಟರುಗಳು ಇವೆ. 500 ಟೂರಿಂಗ್ ಟಾಕೀಸ್‌ಗಳಿವೆ. ಯಾವ ಸಿನಿಮಾ ಟಾಕೀಸ್‌ಗಳಿಗೆ ಹೋದರೂ ತಿಗಣೆಗಳ ಕಾಟ ಜಾಸ್ತಿಯಾಗಿದೆ. ಸಿನಿಮಾ ಥಿಯೇಟರಿನವರು ಹಣವನ್ನು ತೆಗೆದುಕೊಳ್ಳುತ್ತಾರೆ. ಯಾರೂ ಕ್ಲೀನ್ ಮಾಡುವುದಿಲ್ಲ. ಅದಕ್ಕಾಗಿ ಸರ್ಕಾರ ಒಂದು ಹೊಸ ಪಾಲಿಸಿಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಸರ್ವೀಸ್ ಚಾರ್ಜ್ ಎಂದು ಅವರಿಗೆ ಬಂದ ಹಣದಲ್ಲಿ ಶೇಕಡ 5 ಅಥವಾ 10 ರಷ್ಟು ಹಣವನ್ನು ಖರ್ಚು ಮಾಡಿ ಸಿನಿಮಾ ಥಿಯೇಟರುಗಳನ್ನು ಮತ್ತು ಟಾಕೀಸ್‌ಗಳನ್ನು ಚೊಕ್ಕಟವಾಗಿ ಇಡತಕ್ಕ ಕೆಲಸ ಆಗಬೇಕು. ಯಾರೋ ಒಬ್ಬ ಬಡ ಬೋರೇಗೌಡ ಮನರಂಜನೆಗಾಗಿ ಸಿನಿಮಾವನ್ನು ನೋಡುವುದಕ್ಕೆ ಹೋದರೆ ಅವರು ತಿಗಣೆಯಿಂದ ಕಡಿಸಿಕೊಂಡು ಬರತಕ್ಕದ್ದು ಬೇಡ.

ಉಪಾಧ್ಯಕ್ಷಣಿಯವರು : ಈಗ ಆರು ಗಂಟೆಯಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ಒಂದು ಟಿಕೆಟ್ಟಿನಲ್ಲಿ ಮೂರು ಜನರು ಸಿನಿಮಾಗೆ ಹೋಗುತ್ತಾರೆ. ಇವತ್ತು ಟ್ಯಾಕ್ಸ್ ಸಿಸ್ಟಮ್ ಟಿಕೆಟ್ ಸಿಸ್ಟಮ್ ಇದೆಯೆಲ್ಲಾ, ಇದನ್ನು ಬದಲಾವಣೆ ಮಾಡಬೇಕು. ಒಂದು ಷೋಗೆ ಇಷ್ಟು ಅಥವಾ ತಿಂಗಳಿಗೆ ಇಷ್ಟು ಎಂದು ನಿಗದಿ ಮಾಡಬೇಕು. ಚಲನಚಿತ್ರ ಮಂದಿರಗಳ ಬಗ್ಗೆ ಒಂದು ಹೊಸ ಪಾಲಿಸಿ ಮಾಡಿ. ಟ್ಯಾಕ್ಸೇಶನ್ ಸಿಸ್ಟಮ್ ಅನ್ನು ಬದಲಾವಣೆ ಮಾಡಬೇಕು. ಆಗ ಈ ಚಲನಚಿತ್ರದ ಮನೋರಂಜನೆ ಬಡ ಬೋರೇಗೌಡನಿಗೆ ಸರಿಯಾಗಿ ತಲುಪುತ್ತದೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಲಾಟರಿ ವಿಷಯವಾಗಿ ಹೇಳಬೇಕೆಂದರೆ, ಈ ಲಾಟರಿ ಸಿಸ್ಟಮ್ ಯಾವುದೋ ಕಾಲದಲ್ಲಿ ಬಂತು. ಈ ಲಾಟರಿ ಸಿಸ್ಟಮ್ ಅನ್ನು ಅಬಾಲಿಷ್ ಮಾಡಬೇಕು. ನಾನು ಲಾಟರಿ ಸಿಸ್ಟಮ್ ಅನ್ನು ತೆಗೆದುಹಾಕಬೇಕೆಂದು ಹೇಳಿದಾಗ ಮಾನ್ಯ ಮಂತ್ರಿಗಳು ಏತಕ್ಕೋ ಅತ್ತ ಕಡೆ ಹೊರಟು ಹೋದರು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಲಾಟರಿ ಬಡ ಬೋರೇಗೌಡನಿಗೆ ಒಡೆಯುವುದಿಲ್ಲ. ಕುದುರೆ ಜೂಜು ಮತ್ತು ಲಾಟರಿ ಎರಡು ಒಂದಾಗಿದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು ಸದನ ಮುಗಿಸಿಕೊಂಡು ಹೋಗುವಾಗ ನೋಡುತ್ತಿರುತ್ತೀರಿ. ಈ ಕುದುರೆ ಜೂಜು ಯಾವುದಾದರ ಬಡವನಿಗೆ ಒಡೆದಿರುವುದನ್ನು ನೋಡಿದ್ದೀರಾ? ಎಲ್ಲರೂ ಸಹ ತಮ್ಮಲ್ಲಿರುವ ದುಡ್ಡೆಲ್ಲವನ್ನೂ ಒಮ್ಮೆಲೆ ಕಳೆದುಕೊಂಡು ಕಡೆಗೆ ಅವನ ಹೆಂಡತಿ ಹೊಟ್ಟೆಗೆ ಅನ್ನ ಹಾಕುವುದಕ್ಕೂ ಸಾಧ್ಯವಾಗುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ (ರಾಜ್ಯ ಲಾಟರಿ ಮತ್ತು ಸಣ್ಣ ಉಳಿತಾಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವು ಸರ್ಕಾರಕ್ಕೆ ಆದಾಯ ಬರಲೆಂದು ಲಾಟರಿ ಟಿಕೇಟ್ ಅನ್ನು ಮಾರಾಟ ಮಾಡುತ್ತಿಲ್ಲ. ನಮ್ಮ ರಾಜ್ಯದ ಹಣ ಒಂದು ವರ್ಷಕ್ಕೆ ಸುಮಾರು 40 ಕೋಟಿ ರೂಪಾಯಿಯಿಂದ 50 ಕೋಟಿ ರೂಪಾಯಿಗಳವರೆಗೆ ಬೇರೆ ರಾಜ್ಯದವರು ನಮ್ಮ ರಾಜ್ಯದಲ್ಲಿ ಟಿಕೇಟ್

ಮಾರಿ ಸಂಪಾದನೆ ಮಾಡುತ್ತಿದ್ದಾರೆ. ನಾವು ಮಾಡಿರತಕ್ಕಂಥಾದ್ದು ಏನೆಂದರೆ; ನಮ್ಮ ರಾಜ್ಯದ ಹಣ ನಮ್ಮಲ್ಲೇ ಉಳಿಯಲಿ, ಅದೃಷ್ಟವಂತರು ನಮ್ಮ ರಾಜ್ಯದಲ್ಲಿ ಬರಲಿ. ಇವೊತ್ತಿನ ದಿವಸ ಒಂದೆರಡು ರಾಜ್ಯಗಳನ್ನು ಬಿಟ್ಟರೆ ಬೇರೆ ಕಡೆ ಈ ಲಾಟರಿ ಮೋಸದ ರೂಪದಲ್ಲಿ ನಡೆಯುತ್ತಿದೆ. ನಾವೇ ಓಪನ್ ಆಗಿ ಎಲ್ಲರನ್ನೂ ಕರೆಸಿ ನಂಬರ್‌ಗಳನ್ನು ಎತ್ತಿಸುತ್ತಿದ್ದೇವೆ. ನಾವು ಸಿಂಗಲ್ ಡಿಜಿಟ್ ಲಾಟರಿಯೆಂದು 'ಮಟಕಾ' ಎನ್ನತಕ್ಕಂಥ ದೃಷ್ಟಿಯಿಂದ ಪ್ರಾರಂಭ ಮಾಡಿದಾಗ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ನಮ್ಮ ಕರ್ನಾಟಕ ರಾಜ್ಯದ ಹಣ ಬೇರೆ ಕಡೆ ಹೋಗುತ್ತಿದ್ದು, ನಮಗೆ ಅದರಿಂದ ಲಾಭ ಬರುತ್ತಿಲ್ಲ. ನಮಗೆ ಸಿಗತಕ್ಕಂಥಾದ್ದು ಕೇವಲ ಒಂದೂವರೆ ಪರ್ಸೆಂಟ್. ಎಂಭತ್ತಾರುವರೆ ಪರ್ಸೆಂಟ್ ಬಹುಮಾನ ಇಟ್ಟು ನಮ್ಮ ರಾಜ್ಯದ ಅದೃಷ್ಟವಂತರನ್ನು ಗುರ್ತಿಸಿ, ಲಕ್ಷಾಂತರ ಜನರಿಗೆ ಇವೊತ್ತು ಬಹುಮಾನ ಕೊಡುತ್ತಿದ್ದೇವೆ. ಆದುದರಿಂದ, ನಮ್ಮ ದೇಶದ ಆದಾಯವನ್ನು ತುಂಬುವುದಕ್ಕೋಸ್ಕರ ನಾವು ಲಾಟರಿ ಮಾರಾಟ ಮಾಡುತ್ತಿಲ್ಲ. ನಮ್ಮ ದೇಶದ ಹಣ ಬೇರೆ ಕಡೆ ಹೋಗದಂತೆ ತಡೆಯಬೇಕೆನ್ನುವಂತಹ ಉದ್ದೇಶದಿಂದ ಮಾಡಿದ್ದೇವೆಯೇ ವಿನಃ ಬೇರೆ ಯಾವುದೇ ತರಹದ ಲಾಭ ತರುವಂಥ ಉದ್ದೇಶದಿಂದಲ್ಲ. ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ ಕಾನೂನು ಮಾಡಿ. ಬೇರೆ ರಾಜ್ಯದವರು ನಮ್ಮ ರಾಜ್ಯದಲ್ಲಿ ಲಾಟರಿಯನ್ನು ಮಾರಕೂಡದೆಂದು ಕಾನೂನು ಮಾಡಲಿ, ಆಗ ನಾವು ನಿಲ್ಲಿಸುತ್ತೇವೆ. ಇಲ್ಲದಿದ್ದರೆ, ನಮ್ಮ ದೇಶದ ಹಣವನ್ನು ಕೊಳ್ಳೆ ಹೊಡೆದುಕೊಂಡು ಹೋಗುತ್ತಾರೆ, ಅದಕ್ಕೆ ನೀವೇ ಆಸ್ಪದ ಕೊಟ್ಟಂತಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು ಹೇಳಿರತಕ್ಕಂಥ ಮಾತನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಕುದುರೆ ಜೂಜು ಮತ್ತು ಲಾಟರಿಯಲ್ಲಿ ಎಷ್ಟು ಜನರಿಗೆ ಬಂದಿದೆ? ನಿಮ್ಮ ಕ್ಷೇತ್ರದಲ್ಲಿ ಯಾರಾದರೂ ಒಬ್ಬ 'ನನಗೆ ಲಾಟರಿ ಒಡೆಯಿತು ಅಮ್ಮನವರೆ' ಎಂದು ಹೇಳಿದ್ದನ್ನು ನೋಡಿದ್ದೀರಾ? ಒಡೆದಿದೆಯೇ? ಲಾಟರಿ ಒಡೆದಿದ್ದರೆ ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಯಾವೊಬ್ಬರಿಗೂ ಕುದುರೆ ಜೂಜು ಒಡೆಯಲಿಲ್ಲ. ಲಾಟರಿಯೂ ಒಡೆಯಲಿಲ್ಲ.

ಉಪಾಧ್ಯಕ್ಷಿಣಿಯವರು : ನಿಮ್ಮ ಕ್ಷೇತ್ರದವರಿಗೆ ಅದೃಷ್ಟವಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಪದೇ ಪದೇ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರು ಹೇಳಿದಂತೆ, ಬೇರೆ ರಾಜ್ಯದಿಂದ ಬಂದು ನಮ್ಮ ರಾಜ್ಯದಲ್ಲಿ ಮಾರಾಟ ಮಾಡತಕ್ಕಂಥ ಲಾಟರಿ ಟಿಕೇಟ್ ಅನ್ನು ನಿಲ್ಲಿಸಿ. ಇದಕ್ಕೆಲ್ಲಾ ಬೇರೆ ವ್ಯವಸ್ಥೆ ಮಾಡಿ. ಇದರಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಿದೆ. ನಿಮಗೆ ಹೇಳಬೇಕೆಂದರೆ, ನಾವು ಬೆಂಗಳೂರಿನ ಆನಂದ್‌ರಾವ್ ಸರ್ಕಲ್ ಮತ್ತು ಕೆ.ಆರ್. ಸರ್ಕಲ್ ಬಳಿ ಹೋದರೆ ಲಾಟರಿ ಮಾರುವವನು ಕಾರನ್ನು ಮುಂದಕ್ಕೆ ಹೋಗಲು ಬಿಡದೆ 'ಲಾಟರಿ ತೆಗೆದುಕೊಳ್ಳಿ' ಎಂದು ಮುಖಕ್ಕೆ ತಿವಿಯುತ್ತಾನೆ. ಅದಕ್ಕೋಸ್ಕರ ಈಗಿರುವ ಸಿಸ್ಟಮ್ ಅನ್ನು ಬದಲಾವಣೆ ಮಾಡಿ. ಬೇರೆ ರಾಜ್ಯಗಳ ಲಾಟರಿ ಟಿಕೇಟ್ ಅನ್ನು ಮಾರಾಟ ಮಾಡುವುದನ್ನು ಕ್ಲೋಸ್ ಮಾಡಿ. ಇದಕ್ಕೆ ಸರ್ಕಾರ ಒಂದು ಕಾನೂನನ್ನು ಮಾಡಲಿ. ಏಕೆಂದರೆ, ಇವೊತ್ತು ಬೇರೆ ರಾಜ್ಯದ ಅಂದರೆ ಸಿಕ್ಕಿಂ ರಾಜ್ಯ ಲಾಟರಿ ಎಂದು ಹೇಳುತ್ತಾರೆ. ಅದರ ಬಹುಮಾನ ಒಂದು ಕೋಟಿ ರೂಪಾಯಿಗಳೆಂದು ಪ್ರಚಾರ ನಡೆಯುತ್ತದೆ. 15 ರೂಪಾಯಿಗಳನ್ನು ಕೊಟ್ಟು ಒಂದು ಟಿಕೇಟ್ ತೆಗೆದುಕೊಂಡರೆ ತಪ್ಪು ಮಾಡಿ ಒಡೆದುಕೊಂಡು ಬಂದು ಮಾರಾಟ ಮಾಡಲು ಇವೊತ್ತು ಅವಕಾಶ ಇದೆ. ಧನಲಕ್ಷ್ಮಿ ಲಾಟರಿ ಎಂದು ಬರುತ್ತದೆ, ಅದು ಎಲ್ಲಿ

ಒಡೆಯುತ್ತದೆ? ನನಗನ್ನಿಸುತ್ತದೆ. ನೀವು ಹೇಳಿದಂತೆ ರಾಜ್ಯ ಸರ್ಕಾರದ ನಮ್ಮ ಲಾಟರಿ ಒಡೆದಿರಬಹುದು. ಇಲ್ಲವೆಂದಲ್ಲ. ಏಕೆಂದರೆ. ನಮ್ಮ ರಾಜ್ಯ ಲಾಟರಿ ಒಡೆದಾಗ. ನಮ್ಮ ಜನರು ಇಲ್ಲಿರತಕ್ಕಂಥ ಸಂದರ್ಭದಲ್ಲಿ ನೋಡಿರಲೂಬಹುದು. ಆದರೆ. ಬೇರೆ ರಾಜ್ಯದ ಒಂದು ಲಾಟರಿ ಬಹುಮಾನ ಯಾರಿಗೂ ಬಂದಿರುವ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಏನೆಂದರೆ. ಬೇರೆ ರಾಜ್ಯದ ಲಾಟರಿ ಟಿಕೇಟ್ ಅನ್ನು ನಮ್ಮ ರಾಜ್ಯದಲ್ಲಿ ಮಾರಾಟ ಮಾಡುವುದನ್ನು ನಿಷೇಧಿಸಿ. ಆಗ ಈ ಒಂದು ಭ್ರಷ್ಟಾಚಾರ ನಡೆಯುವುದು ತಪ್ಪುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದಲ್ಲದೆ. ಇನ್ನೊಂದು ವಿಷಯದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಿರುವ ಸರ್ಕಾರಿ ನೌಕರರ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು 58 ರಿಂದ 55 ವರ್ಷಗಳಿಗೆ ಇಳಿಸಬೇಕೆಂಬುದನ್ನು ನನ್ನ ವೈಯಕ್ತಿಕ ಸಲಹೆ. ಏಕೆಂದರೆ. ಲಕ್ಷೋಪಲಕ್ಷ ಜನರು ಇವೊತ್ತಿನ ದಿವಸ ಉದ್ಯೋಗವಿಲ್ಲದೆ ಬೀದಿಪಾಲಾಗಿದ್ದಾರೆ. ಇಲ್ಲಿನ ಆಫೀಸುಗಳಲ್ಲಿ ತಾವು ನೋಡಬೇಕು. 40 ವರ್ಷಗಳಾದ ಮೇಲೆ ಯಾವ ಅಧಿಕಾರಿಗಳಿಗೂ ಕೂಡ ಕೆಲಸವನ್ನು ಮಾಡಲು ಆಸಕ್ತಿ ಇರುವುದಿಲ್ಲ. ಇದು ಅಧಿಕಾರಿಗಳಿಗೆ ಸಂಬಳದ ಕಾಲವಲ್ಲ. ಗಿಂಬಳದ ಕಾಲವಾಗಿದೆ. ನೀವು ಕೊಡತಕ್ಕ ಸಂಬಳ ಅವರಿಗೆ ಎರಡು ದಿನಕ್ಕೆ ಎಟುಕುವುದಿಲ್ಲ. ಪ್ರಪಂಚದ ಯಾವ ಮೂಲೆಗೆ ಹೋದರೂ ಸಹ ನಮ್ಮ ರಾಷ್ಟ್ರದಲ್ಲಿರತಕ್ಕ ಈ ಒಂದು ವ್ಯವಸ್ಥೆ ಅಲ್ಲಿ ಇಲ್ಲ. ನಮ್ಮ ರಾಷ್ಟ್ರದಲ್ಲಿ ಅಧಿಕಾರಿಗಳನ್ನು ಅಳಿಮಯ್ಯಂದಿರಂತೆ ನೋಡಿಕೊಳ್ಳುತ್ತಾರೆ. 45. 50. 55 ವರ್ಷಗಳರೆಗೆ . ಕುಳಿತುಕೊಂಡು ತಿನ್ನುತ್ತಾರೆ. ಅದು ಆದ ಮೇಲೆ ಪಿಂಚಿಣಿಯನ್ನು ತೆಗೆದುಕೊಳ್ಳುತ್ತಾರೆ. ಈ ಒಂದು ವ್ಯವಸ್ಥೆ ತಪ್ಪಬೇಕು. ತಮಗೂ ತಿಳಿದಿದೆ. ತಾವು ಕೂಡ ಹೊರ ರಾಷ್ಟ್ರಗಳಿಗೆ ಹೋಗಿದ್ದೀರಿ. ಅಲ್ಲಿ 15. 20 ವರ್ಷ ಕಾಂಟ್ರಾಕ್ಟ್ ಕ್ಯಾರೇಜ್ ಇರುತ್ತದೆ. ಅಷ್ಟನ್ನು ಮಾಡಿ ಅಲ್ಲಿನ ನೌಕರರಿಗೆ ನೀವು ಭಂಗ ಮಾಡಿ ಹೋಗಿ ಎಂದು ಹೇಳುತ್ತಾರೆ. ಇದರಿಂದ ಕೆಲಸ ಮಾಡುವವರಿಗೆ ಹುರುಪು ಇರುತ್ತದೆ. ಇಲ್ಲಿ ಏನಾಗಿದೆಯೆಂದರೆ. 55 ವರ್ಷಗಳಲ್ಲಿ ಎಲ್ಲಿ ದುಡ್ಡು ಚೆನ್ನಾಗಿ ಬರುತ್ತದೆಂದು ಅಧಿಕಾರಿಗಳಿಗೆ ಗೊತ್ತಿದೆ. ನೌಕರರಿಗೆ ಗೊತ್ತಿರುತ್ತದೆ. ಇವತ್ತು ಯಾವ್ಯಾವ ಅಧಿಕಾರಿಗಳು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ ಎನ್ನುವುದರ ಬಗ್ಗೆ ಸಮಗ್ರವಾಗಿ ತನಿಖೆಯಾಗಲಿ. ಇದು ಹೇಳತೀರದಂಥ ಅವ್ಯವಸ್ಥೆಯಾಗಿದೆ. ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಳ್ಳಲು. ಇದನ್ನು ಕಂಟ್ರೋಲ್ ಮಾಡಬೇಕೆಂದು ನಮ್ಮ ಮುಖ್ಯಮಂತ್ರಿಗಳಿಗೆ ಹುಮ್ಮಸ್ಸಿದೆ. ಆಸೆ ಇದೆ. ಇದನ್ನು ಮಾಡಿದರೆ ಏನು ಇವತ್ತು ರೈತರಿಂದ ಬೇಷ್ ಬಂಗಾರಪ್ಪ ಎಂದು ಹೆಸರನ್ನು ತೆಗೆದುಕೊಂಡಿದ್ದಾರೋ ಅದೇ ರೀತಿಯಲ್ಲಿ ಸಾರ್ವಜನಿಕರ ಪರವಾಗಿ ಹೆಸರನ್ನು ತೆಗೆದುಕೊಳ್ಳಲು ಅವಕಾಶವಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಉಪಾಧ್ಯಕ್ಷಣಿಯವರೆ. ಚುನಾವಣೆಗೆ ಸ್ಪರ್ಧಿಸಲು 50 ವರ್ಷವೆಂದು ಮಿತಿಯನ್ನು ಹಾಕುವುದು ಒಳ್ಳೆಯದು. ಕೇವಲ ಅಧಿಕಾರಿಗಳಿಗಿಂತಲೂ ರಾಜಕಾರಣಿಗಳಿಗೂ ಅದನ್ನೇ ಮಾಡಿದರೆ ಒಳ್ಳೆಯದು. ಇದನ್ನು ಮಾನ್ಯ ಶಿವರಾಮೇಗೌಡರು ಒಪ್ಪುತ್ತಾರೆಯೇ?

ಉಪಾಧ್ಯಕ್ಷಣಿಯವರು : ರಾಜಕಾರಣಿಗಳಿಗೂ ರಿಟೈರ್‌ಮೆಂಟ್ ಏಜನ್ನು ನಿಗದಿ ಮಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀಮಾನ್ ಈಶ್ವರಪ್ಪನವರು ಹೇಳಿದ ಮಾತನ್ನು ನಾನು ನೂರಕ್ಕೆ ನೂರರಷ್ಟು ಒಪ್ಪಿಕೊಳ್ಳುತ್ತೇನೆ. ರಾಜಕಾರಣಿಗಳಿಗೂ ಕೂಡ ಏಜನ್ನು ನಿಗದಿ ಮಾಡಬೇಕು. ಏಕೆಂದರೆ. ಅವರಿಗೆ 50 ವರ್ಷವಾಗಿದೆ. ಅವರು ಇದನ್ನು ಮುಂದೆ ಚುನಾವಣೆಗೆ ನಿಲ್ಲುವಂತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಇನ್ನೂ ಕೂಡ 40 ವರ್ಷದಲ್ಲಿದ್ದೇನೆ. ನನಗೆ ಇನ್ನು 50 ವರ್ಷವಾಗಿಲ್ಲ. ನೀವು ಹಾಗೆ ಕಾಣಬಹುದು?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತು ಬಡವರು ಪರವಾಗಿರತಕ್ಕ ರೈತ ಸಮುದಾಯದ ಪರವಾಗಿರತಕ್ಕ ಕಳೆದ 40 ವರ್ಷಗಳಿಂದ ಸತತವಾಗಿ ನೋಡಿಕೊಂಡು ಬಂದಂಥ ಬಜೆಟನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ರೈತ ಸಮುದಾಯದ ಪರವಾಗಿ ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ರೈತರ ಪರವಾಗಿ ಸಲ್ಲಿಸಿ. ರೈತರ ಪರವಾಗಿರತಕ್ಕ ಯೋಜನೆಗಳನ್ನು ಹೀಗೆಯೇ ಕಾರ್ಯಗತವಾಗಲು ಭಗವಂತನು ಒಳ್ಳೆಯದನ್ನು ಮಾಡಲಿ ಎಂದು ಹೇಳಿ ಅದಕ್ಕಾಗಿ ಭಗವಂತನ್ನು ಪ್ರಾರ್ಥಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

ಉಪಾಧ್ಯಕ್ಷಿಣಿಯವರು : ಈಗ ಸದನವು ಮೇಲೆದ್ದು ಪುನಃ ನಾಳೆ ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಳ್ಳುತ್ತದೆ.

ಸದನವು 6-08 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 13-3-1992ರ ಶುಕ್ರವಾರ ಬೆಳಿಗ್ಗೆ 9-30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು.

---

† (ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕ 1992

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 6)

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ 1978 (1979ರ ಕರ್ನಾಟಕ ಅಧಿನಿಯಮ 2)ನ್ನು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿತುವುದರಿಂದ ;

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. ಚಿಕ್ಕ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು.

2. 5ನೇ ಪ್ರಕರಣದ ತಿದ್ದುಪಡಿ .- ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 (1979ರ ಕರ್ನಾಟಕ ಅಧಿನಿಯಮ 2) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ)ರ.

(i) (1)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕುದು. ಎಂದರೆ :-

"(1ಎ) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಚಾರಣೆಯ ತರುವಾಯ, ಮಂಜೂರಾದ ಯಾವುದೇ ಭೂಮಿಯ ವರ್ಗಾವಣೆಯು ಅಕೃತ ಮತ್ತು ಶೂನ್ಯವಲ್ಲವೆಂದು ಅಸಿಸ್ಟೆಂಟ್ ಕಮಿಷನರಿಗೆ ಮನದಟ್ಟಾದರೆ, ಅವರು, ತದನುಸಾರವಾಗಿ ಆದೇಶವನ್ನು ಹೊರಡಿಸಬಹುದು.

(ii) (2)ನೇ ಉಪ-ಪ್ರಕರಣದಲ್ಲಿ "(1)ನೇ ಉಪ-ಪ್ರಕರಣದಲ್ಲಿ ಎಂಬ ಪದಗಳು, ಆವರಣಗಳು ಮತ್ತು ಅಂಕಿಗೆ, "(1) ಮತ್ತು (1ಎ) ಉಪ-ಪ್ರಕರಣಗಳಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕುದು.

3. 5ಎ ಪ್ರಕರಣದ ತಿದ್ದುಪಡಿ :- ಮೂಲ ಅಧಿನಿಯಮದ 5ಎ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕುದು, ಎಂದರೆ :-

"(1ಎ) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ಅಧಿನಿಯಮ, 1992ರ ಪ್ರಾರಂಭದ ತರುವಾಯ, ಅಸಿಸ್ಟೆಂಟ್ ಕಮಿಷನರು, 5ನೇ ಪ್ರಕರಣದ (1ಎ) ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಆದೇಶವು ತನಗೆ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಅಧಿಕಾರ ವ್ಯಾಪ್ತಿಯುಳ್ಳ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಬಹುದು.

ಪರಂತು, ಡೆಪ್ಯುಟಿ ಕಮಿಷನರು, (1ಎ) ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯ ತರುವಾಯ, ಅಂಥ ಆದೇಶದ ವಿರುದ್ಧ ಹೂಡಲಾದ ಅಪೀಲನ್ನು, ಆ ಅವಧಿಯೊಳಗೆ ಅಪೀಲನ್ನು ಹೂಡದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ತನಗೆ ಮನದಟ್ಟಾದರೆ, ಅದನ್ನು ಅಂಗೀಕರಿಸಬಹುದು :

ಮತ್ತು ಪರಂತು, ಡೆಪ್ಯುಟಿ ಕಮಿಷನರು ಅಂಥ ಪ್ರಾರಂಭದ ದಿನಾಂಕಕ್ಕೆ ಮುಂಚೆ ಮಂಜೂರಾದ ಯಾವುದೇ ಭೂಮಿಯ ವರ್ಗಾವಣೆಯನ್ನು ಅಕೃತ ಮತ್ತು ಶೂನ್ಯವಲ್ಲವೆಂದು ತೀರ್ಮಾನಿಸುವ ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದ ವಿರುದ್ಧದ ಅಪೀಲನ್ನು ಸದರಿ ದಿನಾಂಕದಂದು, ಅಂಥ ಆದೇಶದ ವಿರುದ್ಧ ಹೂಡಲಾದ ರಿಟ್ ಅರ್ಜಿ ಅಥವಾ ಅಂಥ ರಿಟ್ ಅರ್ಜಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಹೂಡಲಾದ ಅಪೀಲು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇದ್ದರೆ, ಅಂಗೀಕರಿಸಬಹುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978, 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಸಿಸ್ಟೆಂಟ್ ಕಮಿಷನರು, ವರ್ಗಾವಣೆಯು ಅಕೃತ ಮತ್ತು ಶೂನ್ಯವಲ್ಲವೆಂದು ಅಭಿಪ್ರಾಯಪಟ್ಟರೆ, ಮಂಜೂರಾದ ಭೂಮಿಯ ಮಂಜೂರಾತಿಯನ್ನು ಪಡೆದವನು, ಅಸಿಸ್ಟೆಂಟ್ ಕಮಿಷನರ್ ಆದೇಶದ ವಿರುದ್ಧ ಡೆಪ್ಯೂಟಿ ಕಮಿಷನರಿಗೆ ಅಪೀಲು ಹೂಡಲು ಉಪಬಂಧ ಕಲ್ಪಿಸುವುದಿಲ್ಲ.

ಹಾಗೆ ಮಂಜೂರಾತಿ ಪಡೆದವನಿಗೆ ಉಂಟಾಗುವ ತೊಂದರೆಯನ್ನು ನಿವಾರಿಸುವ ಮತ್ತು ವೆಚ್ಚದ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಅಸಿಸ್ಟೆಂಟ್ ಕಮಿಷನರು ಮಾಡಿದ ಅಂಥ ಆದೇಶದ ವಿರುದ್ಧ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಲು ಉಪಬಂಧ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ವಿಧೇಯಕ

ಮಲ್ಲಿಕಾರ್ಜುನ ಎಂ. ಖರ್ಗೆ
ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್‌ರಾಜ್ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ.

10

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತುತ ಪ್ರಸ್ತಾವಿಕ ತಿದ್ದುಪಡಿಯಿಂದಾಗಿ ಸರ್ಕಾರಕ್ಕೆ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಅನುಬಂಧ

(ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978, (1979ರ ಕರ್ನಾಟಕ ಅಧಿನಿಯಮ 2)ರ ಉದ್ಧೃತ ಭಾಗ

* * *

5. ನೀಡಿದ ಭೂಮಿಗಳನ್ನು ಪುನರ್ವಶ ಮಾಡಿಕೊಳ್ಳುವುದು ಮತ್ತು ಹಕ್ಕುಳ್ಳವನಿಗೆ ವಾಪಸ್ಸು ಮಾಡುವುದು :- (1) ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯಿಂದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅಥವಾ ಯಾವೊಬ್ಬ ವ್ಯಕ್ತಿಯು ಲಿಖಿತದಲ್ಲಿ ಕೊಟ್ಟ ಮಾಹಿತಿಯ ಮೇಲೆ ಅಥಾ ತಾವಾಗಿಯೇ ಮತ್ತು ತಾವು ಉಚಿತವೆಂದು ಭಾವಿಸುವ ಅಂಥ ವಿಚಾರಣೆಯ ತರುವಾಯ ನೀಡಲಾದ ಯಾವುದೇ ಭೂಮಿಯ ವರ್ಗಾವಣೆಯು 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಕೃತ ಮತ್ತು ಶೂನ್ಯವೆಂದು ಅಸಿಸ್ಟೆಂಟ್ ಕಮಿಷನರಿಗೆ ಮನದಟ್ಟಾದಲ್ಲಿ, ಅವರು,-

(ಎ) ಅದರ ಸ್ವಾಧೀನತೆಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಒಕ್ಕಲೆಬ್ಬಿಸಿದ ತರುವಾಯ, ಆದೇಶದ ಮೂಲಕ, ಅಂಥ ಭೂಮಿಯ ಸ್ವಾಧೀನತೆಯನ್ನು ತೆಗೆದುಕೊಳ್ಳಬಹುದು.

ಪರಂತು, ಬಾಧಿತ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಯಥೋಚಿತ ಅವಕಾಶವನ್ನು ಕೊಟ್ಟ ಹೊರತು ಯಾವುದೇ ಅಂಥ ಆದೇಶವನ್ನು ಹೊರಡಿಸತಕ್ಕುದಲ್ಲ.

(ಬಿ) ಅಂಥ ಭೂಮಿಯು ಮೊದಲು ಮಂಜೂರಾದವನಿಗೆ ಅಥವಾ ಅವನ ಕಾನೂನು ಸಮ್ಮತ ವಾರಸುದಾರನಿಗೆ ಅದನ್ನು ವಾಪಸು ಕೊಡಬಹುದು. ಹಾಗೆ ಮಂಜೂರಾದವನಿಗೆ ಅಥವಾ ಕಾನೂನು ಸಮ್ಮತ ವಾರಸುದಾರನಿಗೆ ವಾಪಸು ಕೊಡುವುದು ಕಾರ್ಯಸಾಧ್ಯವಲ್ಲದಿದ್ದಲ್ಲಿ, ಅಂಥ ಭೂಮಿಯು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗಿದೆಯೆಂದು ಭಾವಿಸತಕ್ಕದು. ಸರ್ಕಾರವು ಅಂಥ ಭೂಮಿಯನ್ನು, ಭೂಮಿಯನ್ನು ಮಂಜೂರು ಮಾಡುವುದಕ್ಕೆ ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಯಾವೊಬ್ಬ ವ್ಯಕ್ತಿಗೆ ಮಂಜೂರು ಮಾಡಬಹುದು.

(2) 5ಎ ಪ್ರಕರಣದ ಅಡಿಯಲ್ಲಿ ಡೆಪ್ಯುಟಿ ಕಮಿಷನರು ಹೊರಡಿಸಿದ ಆದೇಶಗಳಿಗೊಳಪಟ್ಟು (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಆದೇಶವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಅಸಿಸ್ಟೆಂಟ್ ಕಮಿಷನರು ಕೈಗೊಂಡ ಅಥವಾ ಕೈಗೊಳ್ಳಲಿರುವ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವೂ ನಿರ್ಬಂಧಕಾಜ್ಞೆಯನ್ನು ನೀಡತಕ್ಕುದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ, ಮಂಜೂರಾದ ಯಾವುದೇ ಭೂಮಿಯು, ಮೊದಲು ಭೂಮಿಯನ್ನು ಪಡೆದವನಲ್ಲದ ಅಥವಾ ಅವನ ಕಾನೂನು ಸಮ್ಮತ ವಾರಸುದಾರನಲ್ಲದ ಒಬ್ಬ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ, ಅದಕ್ಕೆ ವಿರುದ್ಧವಾದುದು ರುಜುವಾತಾಗುವವರೆಗೆ ಅವನು, **4ನೇ**

ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಕೃತ ಮತ್ತು ಶೂನ್ಯವಾಗಿರುವ ವರ್ಗಾವಣೆಯ ಮೂಲಕ ಭೂಮಿಯನ್ನು ಆರ್ಜಿಸಿದ್ದಾನೆಂದು ಪೂರ್ವಭಾವನೆ ಮಾಡತಕ್ಕುದು.

"5ಎ. ಡೆಪ್ಯುಟಿ ಕಮಿಷನರಿಗೆ ಅಪೀಲು : (1) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ಅಧಿನಿಯಮ. 1984ರ ಪ್ರಾರಂಭದ ತರುವಾಯ, 5ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಅಡಿಯಲ್ಲಿ ಭೂಮಿಯ ಸ್ವಾಧೀನತೆಯನ್ನು ತೆಗೆದುಕೊಳ್ಳಲು ಅಥವಾ ಸದರಿ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಭೂಮಿಯನ್ನು ವಾಪಸು ಕೊಡಲು ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶವು ತನಗೆ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ. ಅಧಿಕಾರ ವ್ಯಾಪ್ತಿಯುಳ್ಳ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಬಹುದು;

ಪರಂತು. ಡೆಪ್ಯುಟಿ ಕಮಿಷನರು. (1)ನೇ ಉಪ-ಪ್ರಕರಮದಲ್ಲಿ ಉಲ್ಲೇಖಿಸಲಾದ ಅವಧಿಯ ತರುವಾಯ ಅಂಥ ಆದೇಶದ ವಿರುದ್ಧ ಹೂಡಲಾದ ಅಪೀಲನ್ನು, ಆ ಅವಧಿಯೊಳಗೆ ಅಪೀಲನ್ನು ಹೂಡದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ತನಗೆ ಮನದಟ್ಟಾದರೆ, ಅದನ್ನು ಅಂಗೀಕರಿಸಬಹುದು :

ಮತ್ತು ಪರಂತು, ಡೆಪ್ಯುಟಿ ಕಮಿಷನರು. ಅಂಥ ಪ್ರಾರಂಭದ ದಿನಾಂಕಕ್ಕೆ ಮುಂಚೆ ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದ ವಿರುದ್ಧದ ಅಪೀಲನ್ನು. ಸದರಿ ದಿನಾಂಕದಂದು, ಅಂಥ ಆದೇಶದ ವಿರುದ್ಧ ಹೂಡಲಾದ ರಿಟ್ ಅರ್ಜಿ ಅಥವಾ ಅಂಥ ರಿಟ್ ಅರ್ಜಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಹೂಡಲಾದ ಅಪೀಲು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇದ್ದರೆ. ಅಂಗೀಕರಿಸಬಹುದು.

(2) ಡೆಪ್ಯುಟಿ ಕಮಿಷನರು. ಅಪೀಲನ್ನು ನಿಯಮಿಸಲಾದ ರೀತಿಯಲ್ಲಿ ಇತ್ಯರ್ಥಗೊಳಿಸತಕ್ಕುದು ಮತ್ತು ಅವರು ಹೊರಡಿಸಲಾದ ಆದೇಶವು ಅಂತಿಮವಾಗಿರತಕ್ಕುದು.

* * *

ಕರ್ನಾಟಕ ವಿಧಾನಸಭೆ

ಶುಕ್ರವಾರ, ೧೩ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.45 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದ್ದರು.

ವರದಿಯನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : (ಉಪಾಧ್ಯಕ್ಷರು) ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 3ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ :

ಶ್ರೀ ಜಿ. ಎಸ್. ಆಚಾರ್ : ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 3ನೇ ವರದಿಯನ್ನು ಒಪ್ಪಬಹುದೆಂದು ನಾನು ಸೂಚಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1992-93 ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದುವರೆದದ್ದು)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷಿಣಿಯವವರೆ, ಬಜೆಟ್ ಮೇಲೆ ಮಾತಾನಾಡಬೇಕೆಂದು ತಾವು ನನ್ನನ್ನು ಕರೆದಿದ್ದೀರಿ. ಕರ್ನಾಟಕ ರಾಜ್ಯವಲ್ಲದೆ ಇಡೀ ಭಾರತದೇಶದಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿರುವ ಈ ಸಂದರ್ಭದಲ್ಲಿ ಬಜೆಟ್ ಬಗ್ಗೆ ಮಾತಾನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿದೆ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಈ ಬಜೆಟ್‌ನ್ನು ಕರೆಯುತ್ತಾರೆ. ಈ ಬಜೆಟ್ ಯಾವ ಸಂದರ್ಭದಲ್ಲಿ ಮಂಡನೆಯಾಗಬೇಕಾಗಿತ್ತು ಆಗ ಆಗದೇ, ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಮಂಡನೆ ಮಾಡುವುದಕ್ಕೆ ಮೊದಲೇ ಇದು ಬಹಿರಂಗವಾಗಿರುವುದು ಸುಸ್ಪಷ್ಟ. ಇದು ಲೀಕೇಜ್ ಬಜೆಟ್‌ಯೆಂದು ಇಡೀ ಜನ ಸಮುದಾಯ ಮಾತಾನಾಡಿಕೊಳ್ಳುತ್ತಿದ್ದಾರೆ ಅದನ್ನು ನಾವು ಕಾಣುತ್ತಿದ್ದೇವೆ. ಈ ಬಜೆಟ್‌ನಲ್ಲಿ ಸ್ವಚ್ಛತೆಯಿಲ್ಲ ಮಲೀನತೆ ತುಂಬಿದೆ ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾರೆ. ಇದೊಂದು ಪೀಸ್ ಆಫ್ ಪೇಪರ್ ಎಂದು ಇದು ಕಸದ ಬುಟ್ಟಿಗೆ ಹಾಕುವಂತಹ ಬಜೆಟ್‌ಯೆಂದು ಮಾತಾನಾಡತಕ್ಕ ಸಂದರ್ಭದಲ್ಲಿ ನಾವು ಇವತ್ತು ಇದ್ದೇವೆ. ಇದನ್ನು ಸ್ಕ್ರಾಪ್ ಆಫ್ ಅಂತ ಕಸದ ಬುಟ್ಟಿಗೆ ಹಾಕುವಂಥ ಬಜೆಟ್ ಎಂದು ಎಲ್ಲರೂ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಇವತ್ತು ಇದ್ದೇವೆ. ವಿಧಾನಸಭೆಯ ಒಳಗಡೆಯೇ ಈ ರೀತಿ ಬಜೆಟ್ ಬಗ್ಗೆ ಸ್ಪಷ್ಟವಾಗಿ ನಮ್ಮ ಸಭಾಧ್ಯಕ್ಷರು ಇದಕ್ಕೆ ಒಂದು ತನಿಖೆ ಮಾಡುವಂಥ ಪ್ರಯತ್ನ ತಾವು ಮಾಡುತ್ತೇವೆ. ಎಂದು ಈಗಾಗಲೇ ಭರವಸೆ ಕೊಟ್ಟಿದ್ದಾರೆ. ಒಂದು ರೀತಿಯ ಕುಖ್ಯಾತಿ ಪಡೆದಂಥ ಬಜೆಟ್ ಇವತ್ತು ಹೊರಗೆ ಬಂದಿರುವುದು ನಮ್ಮ ಕರ್ನಾಟಕ ರಾಜ್ಯಕ್ಕೇ ಅವಮಾನ. ಇದು ಇಡೀ ಸರ್ಕಾರ ಒಂದು ರೀತಿಯಲ್ಲಿ ತಲೆತಗ್ಗಿಸುವಂಥ ಪರಿಸ್ಥಿತಿಯ ನಿರ್ಮಾಣ ಆಗಿದೆ. ಇದಕ್ಕೇ ಈ ಕಾಂಗ್ರೆಸ್ ಸರ್ಕಾರವೇ

ಪೂರ್ಣ ಹೊಣೆಯಾಗಿದ್ದು, ಇದು ಇಡೀ ರಾಜ್ಯದ ಜನತೆಯ ಮಾನ, ಮರ್ಯಾದೆಯನ್ನು ಕಳೆದಂಥ ಬಜೆಟ್ ಎಂದು ನಾನು ಹೇಳುತ್ತಾ, ಈ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಒಂದು ರೀತಿಯ ಭಯ ಕೂಡ ಆಗುತ್ತದೆ. ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ಸಾಮಾನ್ಯ ಜನ ಯೋಚನೆ ಮಾಡುತ್ತಿದ್ದರು. ಸರ್ಕಾರ ಅನೇಕ ಯೋಜನೆಗಳನ್ನು ತಂದಿದೆ, ಈ ಬಜೆಟ್‌ನಿಂದ ನಮಗೆ ಲಾಭ ಆಗಬಹುದೋ ಏನೋ ಎಂದು.. ಈ ಯೋಜನೆಗಳ ಮುಖಾಂತರ ಅನೇಕರಿಗೆ ಲಾಭ ಆಗಲಿಕ್ಕಿಲ್ಲ. ಕೆಲವರಿಗೆ ಮಾತ್ರ ಆಶ್ರಯ ಯೋಜನೆ ಮುಖಾಂತರ ಮನೆ ಸಿಗಬಹುದು ಎಂದು ಕನಸು ಕಾಣತಕ್ಕಂಥ ಸಂದರ್ಭದಲ್ಲಿ ಸಣ್ಣ ಪುಟ್ಟ ರೈತರಾಗಲೀ, ಕಾರ್ಮಿಕರಾಗಲೀ, ಮಧ್ಯಮವರ್ಗದ ಜನರಾಗಲೀ, ಕೂಲಿ ಕಾರ್ಮಿಕರಾಗಲೀ, ಗುಮಾಸ್ತರು, ಬ್ಯಾಂಕ್ ಅಧಿಕಾರಿಗಳು, ಬ್ಯಾಂಕ್‌ನೌಕರರು ಎಲ್ಲರೂ ಈ ಬಜೆಟ್ ಬರುತ್ತಿದ್ದ ಹಾಗೆ ಅನೇಕ ಸಮಸ್ಯೆಗಳು ಪರಿಹಾರ ಆಗಬಹುದು ಎಂದು ಕನಸು ಕಾಣುತ್ತಿದ್ದರು. ನಾವು ಕೂಡ ಮನೆ ಕಟ್ಟಬಹುದು ಎಂದು ಕನಸು ಅವರು ಕಾಣುತ್ತಿದ್ದರು. ಹೀಗೇ ಮನೆ ಕಟ್ಟಬಹುದು ಎಂದು ಕನಸು ಕಂಡಂಥ ವ್ಯಕ್ತಿ, ಯಾವರೀತಿ ಯೋಚನೆ ಮಾಡಿದ ಎಂದರೆ, ಶಿವಮೊಗ್ಗದಲ್ಲಿ ಒಬ್ಬ ಸಾಮಾನ್ಯ ನಾಗರೀಕ ಮಂಜಣ್ಣ ಎನ್ನುವನೊಬ್ಬ ಮನೆ ಕಟ್ಟಬೇಕೆಂದು ಯೋಚನೆ ಮಾಡಿದ. ಮಂಜಣ್ಣ ಹೇಳಿದ ಈ ಬಜೆಟ್ ಮಂಡನೆ ಮಾಡುತ್ತಿದ್ದ ಹಾಗೆಯೇ ಅನೇಕ ಸಾಮಗ್ರಿಗಳ ಬೆಲೆ ಕಡಿಮೆ ಆಗಬಹುದು. ಆದರೆ ಬಜೆಟ್ ಮಂಡನೆ ಆಗುತ್ತಿದ್ದ ಹಾಗೆಯೇ ಅತನ ಪ್ರತಿಕ್ರಿಯೆ ಏನು ಎಂದರೆ, ಮೊದಲು ನಾನು ಸೈಟು ಕೊಂಡುಕೊಳ್ಳಬೇಕು. ಸೈಟನ್ನು ಕೊಂಡುಕೊಳ್ಳಬೇಕೆಂದು ಹೊರಟರೆ ಸ್ಟ್ಯಾಂಪ್‌ಡ್ಯೂಟಿ ಜಾಸ್ತಿಯಾಯಿತು. ಅದರೂ ಚಿಂತೆ ಇಲ್ಲ ಅಂತ ಆತ ಖರೀದಿ ಮಾಡಿದ ನಂತರ ಫೌಂಡೇಶನ್ ಹಾಕಬೇಕೆಂದು ಹೊರಟರೆ ಸಿಮೆಂಟು ರೇಟ್ ಜಾಸ್ತಿಯಾಯಿತು. ಕೊನೆಗೂ ಫೌಂಡೇಶನ್ ಅಂತ ಹಾಕಿಯಾಯಿತು. ಅದಾದ ನಂತರ ಇಟ್ಟಿಗೆ ರೇಟು ಜಾಸ್ತಿ. ಕೊನೆಗೆ ಗೋಡೆ ಎದ್ದಮೇಲೆ ಬಾಗಿಲು ಕಿಟಕಿ ಈ ರೀತಿಯ ಮರದ ಸಾಮಗ್ರಿಗಳನ್ನು ಜೋಡಿಸಿಕೊಳ್ಳಬೇಕೆಂದು ಹೊರಟರೆ ಎಲ್ಲದರ ಬೆಲೆ ಕೂಡ ಜಾಸ್ತಿ. ಕಬ್ಬಿಣ, ಗ್ರಿಲ್ ಪ್ರತಿಯೊಂದಕ್ಕೂ ರೇಟ್ ಜಾಸ್ತಿ. ಹಾಗೂ ಹೀಗೂ ಒಂದು ರೂಫ್‌ಲೆವೆಲ್‌ಗೆ ಬಂದಮೇಲೆ ಮೇಲೆ ಹೆಂಚು ಹಾಕೋಣ ಎಂದರೆ ಹೆಂಚಿಗೆ ರೇಟು ಜಾಸ್ತಿ. ಫ್ಲೋರಿಂಗ್‌ಗೆ ಮೊಸ್ಯಾಕ್ ಟೈಲ್ಸ್‌ಗೆ ರೇಟ್ ಜಾಸ್ತಿ. ಈ ರೀತಿ ಆಶ್ರಯ ಯೋಜನೆಯಲ್ಲಿ ಮನೆ ಕೊಡಬೇಕೆಂದು ಶ್ರೀ ಬಂಗಾರಪ್ಪನವರ ಯೋಜನೆಗೆ ಏನು ಹೆಸರು ಇಡಬಹುದು ಎಂದು ಮಂಜಣ್ಣ ಯೋಚನೆ ಮಾಡುತ್ತಾನೆ. ಕೊನೆಗೆ ಅತ ಇದು 'ಮಂಡೆ ಬೋಳಿಸಿ ಮನೆಕಟ್ಟಿ' ಯೋಜನೆ ಅಂತ ಹೆಸರು ಕೊಟ್ಟಿದ್ದಾನೆ.

ಶ್ರೀ ಆರ್. ಎನ್. ನಾಯಕ್ :- ಸ್ವಾಮಿಗಳ ನೆನಪಾಯಿತೇನು? ಮಂಡೆ ಬೋಳಿಸುವವರು ಸ್ವಾಮಿಗಳು ಅವರ ನೆನಪಾಯಿತೇ ?

ಶ್ರೀ ಕೆ. ಎಸ್. ಈಶ್ವರಪ್ಪ :- ಈ ರೀತಿ ಮನೆಕಟ್ಟುವ ವಿಚಾರದಲ್ಲಿ ಸೈಟ್‌ನಿಂದ ಹಿಡಿದು ಕಬ್ಬಿಣ. ಸಿಮೆಂಟ್, ಹೆಂಚು, ಇಟ್ಟಿಗೆ, ಮರ ಯಾವುದರಲ್ಲಾದರೂ, ಒಂದಕ್ಕಾದರೂ ಕನ್ಸೇಶನ್ ತೋರಿಸಿದ್ದಾರೆ ಎಂದು ಆಡಳಿತ ಪಕ್ಷದ ಶಾಸಕರು ಧೈರ್ಯವಾಗಿ ಪ್ರಮಾಣಿಕವಾಗಿ ಹೇಳಿಬಿಟ್ಟರೆ ನಾನು ಕ್ಷಮೆ ಕೇಳುತ್ತೇನೆ. ಇದರಲ್ಲಿ ರಾಜಕೀಯ ಮಾಡುವ ಅವಶ್ಯಕತೆ ಇಲ್ಲ. ನಾನು ಹೇಳುತ್ತಿರುವುದು ಏನೆಂದರೆ ಸಾಮಾನ್ಯ ಜನರು ಮನೆ ಕಟ್ಟುವುದಕ್ಕೆ ಇವರು ಅವರ ತಲೆ ಬೋಳಿಸಿ ಅವರಿಗೆ ಅನ್ಯಾಯ ಮಾಡಿ ಈ ಒಂದು ಕೆಲಸ ಮಾಡಿದ್ದಾರೆ ಈ ಬಜೆಟ್‌ನಲ್ಲಿ. ಅದಕ್ಕೋಸ್ಕರ ಹೇಳಿದೆ ಇದು ಮಂಡೆಬೋಳಿಸಿ ಮನೆ ಕಟ್ಟುವ ಯೋಜನೆ ಅಂತ. ಪಾಪ, ಮನೆಯ ಯಜಮಾನ ಹಾಗೂ ಹೀಗೂ

ಸಾಲಸೋಲ ಮಾಡಿಕೊಂಡು ಮನೆಕಟ್ಟಿ ಆಯಿತು. ಗಂಡ ಏನೋ ಸಾಲಸೋಲ ಮಾಡಿದ. ಹೆಣ್ಣುಮಗಳು ಏನು ಮಾಡಬೇಕು? ಮಾರ್ಕೆಟ್ಟಿಗೆ ಹೋಗಿ ಪಾತ್ರ ಪಗಡ ಹೊಂದಿಸಿಕೊಳ್ಳಬೇಕೆಂದರೆ ಅಲ್ಯೂಮಿನಿಯಂ ಪಾತ್ರೆ, ಹಿತ್ತಾಳೆ ಪಾತ್ರೆ, ಕಂಚಿನ ಪಾತ್ರೆ ಎಲ್ಲದಕ್ಕೂ ಕೂಡ ಟ್ಯಾಕ್ಸ್ ಹಾಕಿಬಿಟ್ಟರು. ಇದಕ್ಕೆ ಏನಾದರೂ ಸರ್ಕಾರ ಎಂದು ಕರೆಯುತ್ತಾರೆಯೆ? ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಬಜೆಟ್ ಎಂದು ಅನೇಕರು ಪಾಪ, ವರ್ಣನೆ ಮಾಡಿದ್ದಾರೆ. ರಸ್ತೆಗೆ ಹೋಗಿ ಹೆಣ್ಣುಮಕ್ಕಳನ್ನು ಕೇಳಲಿ, ಈ ಬಜೆಟ್‌ನಿಂದ ಸಮಾಧಾನ ಆಗುತ್ತದೆಯೇ ಎಂದು. ಅವರು ಈ ಸರ್ಕಾರದ ಬಗ್ಗೆ, ಬಂಗಾರಪ್ಪನವರ ಬಗ್ಗೆ,ಈ ಶಾಸಕರುಗಳ ಬಗ್ಗೆ ಥೀ, ಥೂ ಎನ್ನುವಂಥ ಪರಿಸ್ಥಿತಿ ಈ ಬಜೆಟ್ ಮುಖಾಂತರ ಬಂದಿದೆ. ಇಂತಹ ಪರಿಸ್ಥಿತಿ ಬಂದಿದೆ.

ಶ್ರೀ ಕೆ. ಎಸ್. ಈಶ್ವರಪ್ಪ :- ನಾನು ಮಾತನಾಡಬೇಕಾದರೆ ಈ ರೀತಿ ಅಡ್ಡಿ ಬಂದರೆ ನಾನು ಕುಳಿತುಕೊಳ್ಳುತ್ತೇನೆ. ಏನು ಪರಿಸ್ಥಿತಿ ಬಂದಿದೆ, ಈ ಸರ್ಕಾರ ಜನ ಸಾಮಾನ್ಯರಿಗೆ ಯಾವರೀತಿ ದ್ರೋಹ ಮಾಡಿದೆ ಎನ್ನುವ ಬಗ್ಗೆ ನಾನು ಕೆಲವು ವಿಚಾರಗಳನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಮಾನ್ಯ ಸದಸ್ಯರು.........

(ಗೊಂದಲ)

ನಾನು ಮಾತಾನಾಡಬೇಕಾದರೆ ಈ ರೀತಿ ಮಧ್ಯೆ ಬಂದರೆ, ನಾನು ಕುಳಿತುಕೊಳ್ಳುತ್ತೇನೆ. ನಾನು ಮಾತಾನಾಡುವುದಿಲ್ಲ. ಈ ಸರ್ಕಾರ,ಜನಸಾಮಾನ್ಯರಿಗೆ ಯಾವರೀತಿ ದ್ರೋಹ ಮಾಡಿದೆ ಎನ್ನುವುದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಾನು ಹೇಳುವುದರಲ್ಲಿ ತಪ್ಪಿದೆ ಎಂದು ಹೇಳಿದರೆ ಒಪ್ಪುತ್ತೇನೆ. ಹಿರಿಯ ಸಚಿವರು ತಾವು ಹೇಳಿ, ಖಂಡಿತ ನಾನು ಕ್ಷಮೆ ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈಶ್ವರಪ್ಪನವರು ಬಜೆಟ್ ಭಾಷಣದ ಮೇಲೆ, ಅದರ ಜನಪರ ಕಾರ್ಯಗಳ ಬಗ್ಗೆ, ಜನಾಭಿಪ್ರಾಯವನ್ನು ಸಂಗ್ರಹಿಸಿ, ಈ ಸದನಕ್ಕೆ ಒಪ್ಪಿಸುತ್ತಿದ್ದಾರೆ. ಬೀದಿಯಲ್ಲಿ ಹೋಗತಕ್ಕ ಹೆಣ್ಣು ಮಕ್ಕಳೂ ಕೂಡ ಈ ಕಾರ್ಯಕ್ರಮವನ್ನು, ಶಾಸಕರನ್ನು, ಥೀ, ಥೂ, ಎಂದು ಕರೆಯುತ್ತಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಕಾರ್ಯಕ್ರಮದಲ್ಲಿ ದೋಷ ಇದ್ದರೆ, ಅಥವಾ ಕಾರ್ಯಕ್ರಮ ಜನತೆಗೆ ಹಿಡಿಸದೇ ಇದ್ದರೆ, ಕಾರ್ಯಕ್ರಮಗಳು ಜನಪ್ರಿಯವಾಗುವುದಿಲ್ಲ. ಅದರ ಫಲಿತಾಂಶ ಯಾವಾಗ ಗೊತ್ತಾಗುತ್ತದೆ. ಪಕ್ಷಗಳ ಚುನಾವಣೆ ನಡೆದಾಗ, ಶ್ರೀಸಾಮಾನ್ಯ ಅಥವಾ ದಾರಿಯಲ್ಲಿ ಹೋಗತಕ್ಕ ಹೆಂಗಸು, ಯಾರಿಗೆ ಓಟು ಕೊಡುತ್ತಾರೋ, ಅವರ ಪರ ಇದ್ದಾರೆ ಎನ್ನುವುದು ಖಾತ್ರಿಯಾಗುತ್ತಿದೆ. ಇತ್ತೀಚೆಗೆ ಹಲವಾರು ಚುನಾವಣೆಗಳನ್ನು ನೋಡಿದ್ದಾರೆ, ಉಪ ಚುನಾವಣೆಗಳನ್ನು ನೋಡಿದ್ದಾರೆ. ಶ್ರೀಸಾಮಾನ್ಯ ಕಾಂಗ್ರೆಸ್ ಸರ್ಕಾರ ಮತ್ತು ಕಾಂಗ್ರೆಸ್‌ಪಕ್ಷದ ಶಾಸಕರ ಪರ ಇದ್ದಾರೆ ಎನ್ನುವುದನ್ನು ಸಾಬೀತು ಮಾಡಿದ್ದಾರೆ. ಹಾಗಿದ್ದರೂ ಕೂಡ, ಅದು ಅವರ ಅಭಿಪ್ರಾಯ ಎಂದು ತಮ್ಮದೇ ಆದಂಥ ಧಾಟಿಯಲ್ಲಿ ಶಾಸಕರನ್ನು, ಸರ್ಕಾರವನ್ನು ಚೀ, ಥೂ ಎಂದು ಕರೆಯುತ್ತಾರೆ ಎನ್ನತಕ್ಕ ಭಾಷೆ ಬಹುಶಃ ಆರೋಗ್ಯಕರ ಅಲ್ಲವೆಂದು ನನ್ನ ವೈಯಕ್ತಿಕ ಭಾವನೆ ಅವರು ಹೇಳುವುದಕ್ಕೆ ಅಧಿಕಾರ ಇದೆ, ಸರ್ಕಾರವನ್ನುಟೀಕೆ ಮಾಡುವುದಕ್ಕೆ, ತಪ್ಪನ್ನು ಕಂಡುಹಿಡಿಯುವುದಕ್ಕೆ ಅಥವಾ ಉತ್ತಮ ಮಾರ್ಗದರ್ಶನ ತೋರಿಸುವುದಕ್ಕೆ, ಅವರು ಸರ್ವಸ್ವತಂತ್ರರು ಇದ್ದಾರೆ. ಅವರ ಸಲಹೆ ನಮಗೆ ಬೇಕಾಗುತ್ತದೆ, ಅವರು ಅದನ್ನು ಹೇಳುವುದು ಬಿಟ್ಟು, ಚಿ, ಥೂ, ಎಂದು ಟೀಕೆ ಮಾಡಿಕೊಂಡು ಹೋಗುತ್ತಾರೆಂದು ಹೇಳಿದರೆ, ಬಹುಶಃ ರುಚಿಕರವಲ್ಲವೆಂದು ನನ್ನ ವೈಯಕ್ತಿಕ ಭಾವನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಕಾಂಗ್ರೆಸ್‌ಗೆ ಮತ ಕೊಟ್ಟಿರುವವರೆಲ್ಲರೂ ಕೂಡ ಈ ಬಜೆಟ್ ಬಗ್ಗೆ....

ಉಪಾಧ್ಯಕ್ಷರು : ಬಜೆಟ್ ಬಗ್ಗೆ ಅವರು ಹೇಳಲಿಲ್ಲ....

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ : ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆ ಹಾಕಿದ್ದಾರೆ..

(ಗೊಂದಲ)

ಶ್ರೀ ಎಂ. ಮಹದೇವ್ : ನೀವು ಬಹಳ ಸುಸಂಸ್ಕೃತರು, ಭಾರತೀಯ ಜನತಾ ಪಾರ್ಟಿ ಎಂದರೆ, ಒಳ್ಳೆಯ ಸಂಸ್ಕೃತ ಜನ ಎಂದು ನಿಮ್ಮ ಪಕ್ಷದವರು ತಿಳಿದುಕೊಂಡಿದ್ದಾರೆ, ಇದು ನಿಮ್ಮ ಜನಗಳ ಕಲ್ಪನೆ ಇರಬಹುದು. ಆದರೆ, ಪದ ಬಳಕೆಯಲ್ಲಿ ನೀವು ಒಳ್ಳೆಯ ಸಂಸ್ಕೃತ ಪದವನ್ನು ಪ್ರಜಾಪ್ರಭುತ್ವದ ಲೆಕ್ಕಾಚಾರದಲ್ಲಿ, ಇತಿಮಿತಿಯೊಳಗೆ ಉಪಯೋಗಿಸಿದರೆ ಒಳ್ಳೆಯದು. ಚೀ, ಥೂ, ಎಂದು ಹೇಳಿದರೆ ಬಹಳ ಕಡಿಮೆ ದರ್ಜೆಯಾಗುತ್ತದೆ. ನಾನು ಹೇಳುತ್ತೇನೆ. ಚಿರಂಜೀವಿಯಾದಂಥ, ತೂಕವಾದಂಥ ಕಾಂಗ್ರೆಸ್ ಸರ್ಕಾರವನ್ನು ಜನ ಆರಿಸಿ, ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ಎಂದು ನಾವು ತಿಳಿದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಟೀಕೆ ಮಾಡುವುದರ ಬಗ್ಗೆ ಏನೂ ಇಲ್ಲ, ಆದರೆ, ಪದಗಳನ್ನು ಉಪಯೋಗಿಸುವಲ್ಲಿ ತಾವು ಸ್ವಲ್ಪ ನೋಡಬೇಕು. ಇನ್ನು ತಾವು ಮುಂದುವರಿಸಿ .....

ಶ್ರೀ ಕೆ.ಎಸ್. ಈಶ್ವರಪ್ಪ : ಜನಸಾಮಾನ್ಯರು ಬಳಸುವಂಥ ಎಲ್ಲಾ ಪದಗಳನ್ನೂ ಇಲ್ಲಿ ಬಳಸಿದರೆ, ವಿಧಾನ ಸಭೆಯಲ್ಲಿ ನಾನು ಕೂಡ ತಲೆತಗ್ಗಿಸಬೇಕು, ಅಂತಹ ಪದಗಳು ಇವೆ. ಅವರು ಏನು ಪದ ಬಳಸಿದ್ದಾರೆ, ಅದಕ್ಕಿಂತ ಕಡಿಮೆ ಪದವನ್ನು ನಾನು ಬಳಸಿದ್ದೇನೆ. ಮಾನ್ಯ ಸಚಿವರು ಹೇಳಿದರು, ತುಂಬಾ ಸಂತೋಷ, ಅವರು ಹೇಳಿದ್ದುದು ಸರಿ. ಯಾವುದೇ ಒಂದು ಪಕ್ಷದ ವಿಚಾರವನ್ನು, ಅದು ಸರಿಯೋ ತಪ್ಪೋ, ಎಂದು ತೂಕ ಮಾಡುವಂಥ ಅಳತೆಗೋಲು ಚುನಾವಣೆ, ನಾನು ಅದನ್ನು ಒಪ್ಪುತ್ತೇನೆ. ನೀವು ಹೇಳಿದ್ದನ್ನು ತುಂಬಾ ಒಪ್ಪುತ್ತೇನೆ. ಚುನಾವಣೆ ಸಂದರ್ಭದಲ್ಲಿ ಯಾವ ಪಕ್ಷಗಳ ಸ್ಥಿತಿ ಏನಾಗಿದೆ ಎಂಬುದು ಗೊತ್ತಿದೆ. 1989ನೇ ಇಸವಿಯಲ್ಲಿ, 2.6 ಪರ್ಸೆಂಟ್ ಭಾರತೀಯ ಜನತಾ ಪಾರ್ಟಿ ಇತ್ತು, ಇಡೀ ಕರ್ನಾಟಕ ರಾಜ್ಯದ ಜನ ಓಟು ಕೊಟ್ಟಿದ್ದರು, 1990ನೇ ಇಸವಿಯಲ್ಲಿ 31.6 ಪರ್ಸೆಂಟ್ ಆಯಿತು. ಇದು ಜಗತ್ತಿನಲ್ಲಿಯೇ ವಿಶೇಷ ಜಗಿತ.....

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಪ್ರಭು ಶ್ರೀರಾಮಚಂದ್ರರ ದಯೆ ನಿಮ್ಮ ಮೇಲೆ ಬಿದ್ದಿದೆ ಎಂದೂ, ಈ ರಾಜ್ಯದ ರೈತರ ಪರವಾಗಿ ಹೋರಾಟ ಮಾಡುತ್ತಿದ್ದೀರಿ, ಮಾನ್ಯ ಯಡಿಯೂರಪ್ಪನವರು ರೈತರ ಬಗ್ಗೆ ಕೂಗಾಡುತ್ತಿದ್ದಾರೆ. ಅದಕ್ಕಾಗಿ ಮಾತ್ರ ನಿಮಗೆ ಓಟು ಬಂದಿದೆ ಎಂದು ಹೇಳುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 1990ನೇ ಇಸವಿಗೆ ಮುಂಚೆ, ಈ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಪಾರ್ಲಿಮೆಂಟ್ ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲುತ್ತದೆ, ಬಿ.ಜೆ.ಪಿ. ಧೂಳೀಪಟವಾಗುತ್ತದೆಂದು ಆಗ ಹೇಳಿದ್ದರು. ತಮ್ಮ ಗಮನಕ್ಕೂ ಬಂದಿರಬಹುದು, ಇದಾದ ನಂತರ, ಮತ್ತೆ ಏನೋ ನೀರಿನ ಮೇಲೆ ಗುಳ್ಳೆ ಬಂದಹಾಗೆ 4 ಸ್ಥಾನ ಬಂದಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. 1991ನೇ ಇಸವಿಯಲ್ಲಿ ಮತ್ತೆ ಮರು ಚುನಾವಣೆಯಾಯಿತು. 31.6 ಪರ್ಸೆಂಟ್‌ನಿಂದ 33.8 ಪರ್ಸೆಂಟ್‌ಗೆ, ಬಿ.ಜೆ.ಪಿ.ಗೆ ಮತದಾರರು ಓಟು ಕೊಟ್ಟಿದ್ದಾರೆ.

ಇದರ ಅರ್ಥ ಕರ್ನಾಟಕ ರಾಜ್ಯದ ಜನ ನೀವು ಮಾಡುತ್ತಿರುವುದು ಅನ್ಯಾಯ ಎಂದು ಒಪ್ಪಿಕೊಂಡು ಬಿ.ಜೆ.ಪಿ.ಯನ್ನು ಬೆಂಬಲಿಸುತ್ತಿದ್ದಾರೆ, ಇದು ಇದರ ಗುರುತು.ನಾನು ಇಲ್ಲಿಂದ ಮುಂದಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಈಗ ಅವರು ಮಾತನ್ನಾಡಲಿ, ಅವರು ಈಲ್ಡ್ ಆಗಿಲ್ಲ.....

(ಗೊಂದಲ)

ಉಪಾಧ್ಯಕ್ಷರು : ಈಗ 11 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಇದೆ.

(ಗೊಂದಲ)

ಉಪಾಧ್ಯಕ್ಷರು: 11 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಪ್ರಾರಂಭ ಮಾಡಬೇಕು, ಈಶ್ವರಪ್ಪನವರೇ ನೀವು ಈಲ್ಡ್ ಆಗಬೇಡಿ, ಮಹದೇವ್ ಅವರೇ, ಅವರು ಮಾತನಾಡುವುದಕ್ಕೆ ದಯವಿಟ್ಟು ಸಹಕಾರ ಕೊಡಿರಿ.

ಶ್ರೀ ಎಂ. ಮಹದೇವ್ : ಈಗ ರಾಮನ ಪಟ್ಟಾಬಿಷೇಕ ಆಗಿ ಹೋಯಿತು ಉಳಿದಿರುವುದು ಕಾಡಿಗೆ ಹೋಗುವುದು ಒಂದೇ.

ಶ್ರೀ ಕೆ. ಎಸ್. ಈಶ್ವರಪ್ಪ : ಅಲ್ಲ, ಇನ್ನು ಉಳಿದಿರುವುದು ರಾಮನ ಬಾಣ, ಇನ್ನು ಅದನ್ನು ಬಿಡುತ್ತೇವೆ, ನೀವು ಏನೂ ಅನುಮಾನ ಇಟ್ಟುಕೊಳ್ಳಬೇಡಿ, ರಾವಣ ಸಂಹಾರ ಉಳಿದಿದೆ ಅದನ್ನು ಮಾಡುತ್ತೇವೆ, ಯೋಚನೆ ಮಾಡಬೇಡಿ.

(ಗೊಂದಲ)

ಶ್ರೀ ಎಂ. ಮಹದೇವ್ : ಅದು ಚುನಾವಣೆ ಬಂದಾಗ ಈಗ ಬಜೆಟ್ ಮೇಲೆ ಭಾಷಣ ಮಾಡಿರಿ.

ಉಪಾಧ್ಯಕ್ಷರು : ರುಕ್ಮಯ್ಯ ಪೂಜಾರಿಯವರೇ, ಬೇಡ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ರುಕ್ಮಯ್ಯ ಪೂಜಾರಿ :- ರಾಮ ಬಿ.ಜೆ.ಪಿ.ಗೆ ಮಾತ್ರ ಸೀಮಿತ ಅಲ್ಲ. ನಿಮಗೂ ಸೀಮಿತ ಅದನ್ನು ನೀವು ಒಪ್ಪಿಕೊಳ್ಳಿ.

ಶ್ರೀ ಎಂ. ಮಹದೇವ್ : ಆಗ ರಾಮ ಇದ್ದ, ಈಗ ಅವನ ಪೋಟೋ ಇಟ್ಟುಕೊಂಡು ಹೋಗುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇವರು ಮಾಡಿರುವ ಪಾಪವನ್ನು ರಾಮನಾಮವನ್ನು ಪಾರಾಯಣ ಮಾಡಿ ಕಳೆದುಕೊಳ್ಳಲಿ ಎಂದು ನನ್ನ ಅಪೇಕ್ಷೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ :- ಇನ್ನು ಮನೆ ಯಜಮಾನರುಗಳು ಬಜೆಟ್‌ನ್ನು ನೋಡಿ ಸಾಲ ಸೋಲ ಮಾಡಿ ಮನೆ ಮಾಡಿದರು. ಮನೆ ಹೆಣ್ಣು ಮಕ್ಕಳು ಪಾತ್ರೆ ಪಗಡಿ ತಂದರು. ಪ್ರತಿನಿತ್ಯ ಊಟನಾದರೂ ಮಾಡಬೇಕಲ್ಲ. ಈ ಬಜೆಟ್‌ನಲ್ಲಿ ಯಾಯಾವುದರ ಮೇಲೆ ತೆರಿಗೆ ಜಾಸ್ತಿ ಮಾಡಿರುತ್ತಾರೆ. ಎಂದರೆ, ಸಾಂಬಾರ ಪದಾರ್ಥಗಳು, ಜೀರಿಗೆ, ಮೆಂತ್ಯ ಗಸಗಸೆ, ಅರಿಶಿನ ಲವಂಗ, ಚಕ್ಕೆ, ಕೊತ್ತುಂಬರಿ, ಹುಣಸೆ ಹಣ್ಣು, ಎಲ್ಲದರ ಮೇಲೆ ತೆರಿಗೆ ಹಾಕಿದ್ದಾರೆ. ಮಾನ್ಯ ಸಭಾಧ್ಯಕ್ಷರೇ,

ಗ್ರಾಮಾಂತರ ಪ್ರದೇಶ ಒಂದೇ ಅಲ್ಲ ನಗರ ಪ್ರದೇಶ ಒಂದೇ ಅಲ್ಲ ಎಲ್ಲಾ ಕಡೆ ಸಾಮಾನ್ಯ ಜನರು ಒಂದು ತುತ್ತು ಊಟ ಮಾಡುವುದಕ್ಕೆ ಈ ಬಜೆಟ್ ಪ್ರೇರಣೆ ಕೊಡುತ್ತಿಲ್ಲ. ಕೊನೆಗೆ ಅಡಿಗೆ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ತಿಳಿದುಕೊಂಡು ಪೇಟೆಗೆ ಹೋಗಿ ಬ್ರೆಡ್ ತೆಗೆದುಕೊಂಡು ಬರೋಣಾ ಎಂದರೆ, ಬ್ರೆಡ್ ರೇಟ್ ಕೂಡ ಜಾಸ್ತಿ. ಇದು ಇವತ್ತಿನ ಪರಿಸ್ಥಿತಿ ಇದೆ. ಈ ಒಂದು ಬಜೆಟ್ ಬಗ್ಗೆ ಜನ ಸಾಮಾನ್ಯರು ಇನ್ನೇನು ಹೇಳುತ್ತಾರೆ? ಥೀ. ಥೂ. ಎಂದು ಹೇಳುತ್ತಿದ್ದಾರೆ ಎಂದರೆ ತಪ್ಪು ಎಂದು ಹೇಳುತ್ತಾರೆ, ಏನು ಪದ ಬಳಸುತ್ತಿದ್ದಾರೆ ಎಂಬುದನ್ನು ನಿಮಗೇ ಬಿಡುತ್ತೇನೆ, ನೀವೇ ತೀರ್ಮಾನ ಮಾಡಿಕೊಳ್ಳಿ. ಸಾಮಾನ್ಯಜನರು ಉಪಯೋಗಿಸುವ ಸೈಕಲ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ, ಕೂಲಿಕಾರ್ಮಿಕರು ಬಳಸತಕ್ಕಂಥ ಮೂರು ಚಕ್ರದ ಸೈಕಲ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಸರ್ಕಾರದ ಮಟ್ಟದ ಬಗ್ಗೆ ಮಾತನಾಡಬೇಕಾದರೆ ಆಶ್ಚರ್ಯವಾಗುತ್ತದೆ. ನಗರ ಪ್ರದೇಶದ ಹೆಣ್ಣು ಮಕ್ಕಳು ಏನು ಹೆಸರು ಇಟ್ಟಿರುತ್ತಾರೆ ಎಂದು ತಿಳಿದರೆ ಆಶ್ಚರ್ಯವಾಗುತ್ತದೆ, ಪಾತ್ರೆ ಪಗಡಿ ಜಾಸ್ತಿ, ಸಾಮಾನುಗಳ ಬೆಲೆ ಜಾಸ್ತಿ, ಏತಕ್ಕೆಂದರೆ ಸರಕಾದವರು ಪ್ರತಿಯೊಂದಕ್ಕೂ ಒಳ್ಳೊಳ್ಳೆಯ ಹೆಸರುಗಳನ್ನು ಇಟ್ಟಿದ್ದಾರೆ. ವಿಶ್ವ, ಶುಶ್ರೂಷಾ, ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಈ ಬಂಗಾರಪ್ಪನವರ ಬಜೆಟ್‌ಗೆ ಕಣ್ಣೀರಿನ ಕಣ್ಮಣಿ ಎಂದು ಇಟ್ಟಿದ್ದಾರೆ. ಈ ಯೋಜನೆಯ ಹೆಸರು ಇದು, ಪಾತ್ರೆ ಸಾಮಾನುಗಳ ಬೆಲೆ ಜಾಸ್ತಿ, ಅಡಿಗೆ ಸಾಮಾನುಗಳ ಬೆಲೆ ಜಾಸ್ತಿ ಮಂಡೆ ಬೋಳಿಸುವುದಕ್ಕೆ ಮನೆ ಕಟ್ಟಿಸುವ ಯೋಜನೆ ಆದಮೇಲೆ ಈ ಯೋಜನೆಗೆ ಕಣ್ಣೀರಿನ ಕಣ್ಮಣಿ ಎಂದು ಇಟ್ಟಿದ್ದಾರೆ.

(ಸನ್ಮಾನ್ಯ ಜಿ. ಎಸ್. ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ವೃತ್ತಿ ತೆರಿಗೆ, ಇದನ್ನು ನೋಡುತ್ತಾ ಹೋದರೆ, ಸಾಮಾನ್ಯ ಜನರು ಯಾರೂ ವೃತ್ತಿ ಮಾಡಬಾರದು ಎನಿಸಿಬಿಟ್ಟಿದೆ. ನಮ್ಮ ರಾಜ್ಯಸರಕಾರಕ್ಕೆ ಸ್ವಾಭಾವಿಕವಾಗಿ ಇರಬೇಕಾದುದು ಕೇವಲ ಅಬಕಾರಿ ದರಗಳ ಮೇಲೆ ಮಾತ್ರ ಪ್ರೀತಿ. ಅದು ಸ್ಪಷ್ಟವಾಗಿ ಇದೆ. ಕಳೆದ ಬಾರಿ 555 ಕೋಟಿ ರೂಪಾಯಿಗಳು ಅಬಕಾರಿಯಿಂದ ಲಾಭ ಬರುತ್ತಿತ್ತು. ಈ ಬಾರಿ ಎಷ್ಟು ಬರುತ್ತದೆ ಎಂದರೆ ಈ ವರ್ಷದ ಬಜೆಟ್ ಪ್ರಕಾರ 573 ಕೋಟಿ, ಇಡೀ ವರ್ಷ ಅಬಕಾರಿ ಮುಖಾಂತರ ಬರತಕ್ಕಂಥ ಹಣ ಕೇವಲ ಹದಿನೆಂಟು ಕೋಟಿ ರೂಪಾಯಿಗಳು. ಇದನ್ನು ಗುರುತಿಸಬೇಕು. ಇಲ್ಲಿ ಅನೇಕ ಡಾಕ್ಟರ್‌ಗಳಿಗೆ ಬೆಳಗಿನಿಂದ ಸಾಯಂಕಾಲದವರೆಗೆ ಬೋಣಿಗೆ ಆಗಿರುವುದಿಲ್ಲ, ಒಂದು ರೂಪಾಯಿ ಬಂದಿರುವುದಿಲ್ಲ, ಗಿರಾಕಿಗಳು ಬಂದಿರುವುದಿಲ್ಲ, ಅಂತಹ ವೈದ್ಯರ ಮೇಲೆ ವೃತ್ತಿ ತೆರಿಗೆ ಸಿಕ್ಕಾಬಟ್ಟೆ ಹಾಕಿದ್ದಾರೆ, ಬೋಣಿಗೆಯೇ ಆಗಿರುವುದಿಲ್ಲ. ಅವರು ಎಲ್ಲಿಂದ ದುಡ್ಡು ಕೊಡಬೇಕು. ಇನ್ನು ಮಕ್ಕಳ ಮದುವೆ ಮಾಡುವುದಕ್ಕೆ ಕಲ್ಯಾಣ ಮಂದಿರಗಳು ಸಿಗುವುದು ಕಷ್ಟ. ಕಲ್ಯಾಣ ಮಂದಿರಗಳ ಮೇಲೆ ಸಿಕ್ಕಾಬಟ್ಟೆ ಟ್ಯಾಕ್ಸ್ ಹಾಕಿದ್ದಾರೆ. ಈ ರೀತಿ ಮಾಡಿಕೊಂಡು ಒಟ್ಟಾರೆ. ಜನಸಾಮಾನ್ಯರು ಈ ಯೋಜನೆಯಿಂದ ಬದುಕಬಾರದು ಅಬಕಾರಿ ಮುಖಾಂತರ ಸುರಾಪಾನ ಯೋಜನೆ ಜಾರಿಗೆ ತಂದಿದ್ದಾರೆ, ಕೇವಲ 18 ಕೋಟಿ ಮಾತ್ರ ಇದರ ಮುಖಾಂತರ ಸರಕಾರಕ್ಕೆ ಲಾಭ ಬರುತ್ತದೆ.

ಕರ್ನಾಟಕ ರಾಜ್ಯದ ಜನತೆಗೆ ನಾವು ದೊಡ್ಡ ಸಾಧನೆ ಮಾಡುತ್ತೇವೆ ನಿಮಗೆ ಬಂಗಾರ ಕೊಡುತ್ತೇವೆ. ಬೆಳ್ಳಿ ಕೊಡುತ್ತೇವೆಂದು ಆಸೆ ತೋರಿಸಿದರು. ಈ ಮಕ್ಕಳಿಗೆ ಅವರು ಹಠ ಮಾಡಿದಾಗ ಆ ಮನೆಯ ಯಜಮಾನರು ಹೇಳುತ್ತಾರೆ ನೋಡಪ್ಪ ನಿನಗೆ ಆ ಚಂದಮಾಮ ಹಿಡಿದು ಕೊಡುತ್ತೇನೆ, ಆ ಚಂದಮಾಮನನ್ನು ಹಿಡಿದುಕೊಡುತ್ತೇನೆ ಸುಮ್ಮನೆ ಇರಪ್ಪ ಅಂತ ಹೇಳುತ್ತಾರೆ. ಆ ರೀತಿ ತಾವು ಮಾಡಿದ್ದೀರಿ. ಈ ವಿಶ್ವ ಯೋಜನೆ ಮುಖಾಂತರ 700 ಕೋಟಿ ರೂಪಾಯಿಗಳ ಹಣ ವಿನಿಯೋಗ

ಮಾಡುತ್ತೇವೆಂದು ಹೇಳಿದರು. ಈ ಯೋಜನೆ ತಂದಿರುವುದಕೋಸ್ಕರ ನಾನು ನಮ್ಮ ಕರ್ನಾಟಕ ರಾಜ್ಯದ ಯುವಕರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದರೆ ಕೇವಲ ಘೋಷಣೆಯಲ್ಲೇ ಅದು ಏತಕ್ಕೆ ಉಳಿಯಬೇಕು? 700 ಕೋಟಿ ರೂಪಾಯಿಗಳ ಹಣ ಬಜೆಟ್‌ನಲ್ಲಿ ತೋರಿಸಿ, ಬಿಡುಗಡೆ ಮಾಡಿದ್ದುದು ಕೇವಲ 10 ಕೋಟಿ ರೂಪಾಯಿಗಳು ಮಾತ್ರ. 700 ಕೋಟಿ ರೂಪಾಯಿಗಳ ಯೋಜನೆಗೆ 10 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿ ಬಾಕಿ ಹಣವನ್ನು ಖರ್ಚುಮಾಡಲು ಇನ್ನು ಎಷ್ಟು ವರ್ಷ ಬೇಕು? ಅಲ್ಲಿಯವರೆಗೂ ಈ ಸರ್ಕಾರ ಇರುತ್ತದೆಯೇ? ಎನ್ನುವುದು ನನ್ನ ಪ್ರಶ್ನೆ. ಸುಮ್ಮನೆ ಬಾಯಿಗೆ ಬಂದ ಹಾಗೆ ಘೋಷಣೆ ಮಾಡುವುದು. ಇನ್ನು ಅಕ್ಷಯ ಯೋಜನೆ ಮುಖಾಂತರ ಕಳೆದ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ ರಾಜ್ಯದ ಜನತೆಗೆ ಶಾಲಾ ಮಕ್ಕಳಿಗೋಸ್ಕರ ನಾವು ಒಂದು ಹೊತ್ತಿನ ಊಟ ಕೊಡುತ್ತೇವೆಂದು ಹೇಳಿದರು. ಯಾರೂ ಹೇಳಿರಲಿಲ್ಲ. ನಮಗೆ ಒಂದು ಹೊತ್ತು ಊಟ ಕೊಡಿ ಎಂದು ಇವರೇ ಘೋಷಣೆ ಮಾಡಿದರು. ಊಟ ಕೊಡುತ್ತೇವೆ ಅಂತ. ಏತಕ್ಕೂ ಇದ್ದಕ್ಕಿದ್ದಂತೆ ಜ್ಞಾನೋದಯ ಆಗಿ ಊಟ ಕೊಡುವುದಕ್ಕಾಗುವುದಿಲ್ಲ ಅಂತ ಹೇಳಿ ಊಟ ಕ್ಯಾನ್ಸಲ್ ಮಾಡಿದರು. ಆಮೇಲೆ ಮೊಟ್ಟೆ ಕೊಡುತ್ತೇವೆಂದು ಹೇಳಿದರು. ಒಂದು ಯೋಜನೆ ತಯಾರು ಮಾಡಬೇಕಾದರೆ ಸ್ವಲ್ಪ ಜವಾಬ್ದಾರಿಯಿಂದ ಮಾಡಿನಂತರ ಸರ್ಕಾರ ಬಜೆಟ್ ಮಂಡನೆ ಮಾಡಬೇಕು, ಊಟ ಕೊಡಲಿಲ್ಲ ಮೊಟ್ಟೆ ಕೊಡುತ್ತೇವೆಂದು ಹೇಳಿ, ಏತಕ್ಕೆ ಕೊಡಲಿಲ್ಲವೋ ಗೊತ್ತಾಗಲಿಲ್ಲ. ಅನೇಕರು ವಿರೋಧ ಮಾಡಿದರೋ ಅಥವಾ ಸರ್ಕಾರದ ಹತ್ತಿರ ದುಡ್ಡು ಇದೆಯೋ ಇಲ್ಲವೋ ಗೊತ್ತಿಲ್ಲ. ಮೊಟ್ಟೆ ಕೊಡುವುದನ್ನು ಕೈ ಬಿಟ್ಟರು. ಒಂದು ರೂಪಾಯಿ ಕೊಡುತ್ತೇವೆಂದು ಹೇಳಿದರು. ಅದು ಆ ಒಂದು ರೂಪಾಯಿ ಅಪ್ಪನ ಕೈಯಲ್ಲಿ ಕೊಡುವುದಿಲ್ಲವಂತೆ ಅಮ್ಮನ ಕೈಗೆ ಕೊಡುತ್ತೇವೆಂದು ಹೇಳಿದರು. ಒಂದು ರೂಪಾಯಿ ಎಷ್ಟು ಮಕ್ಕಳಿಗೆ ಬಂದಿದೆ ಹೇಳಿ. ಮಾನ್ಯ ಅಧ್ಯಕ್ಷರೇ ನಿಮ್ಮ ಕ್ಷೇತ್ರದಲ್ಲಿ ಒಂದು ರೂಪಾಯಿ ಬಂದಿದೆಯೇ? ನನ್ನ ಕ್ಷೇತ್ರದಲ್ಲಿ ಒಂದು ರೂಪಾಯಿ ಬಂದಿಲ್ಲ ಏತಕ್ಕೆ ಮೂಗಿಗೆ ತುಪ್ಪ ಹಚ್ಚತಕ್ಕಂಥ ವ್ಯವಹಾರ ಮಾಡುತ್ತೀರಿ. ಮೊಣಕೈಗೆ ಬೆಣ್ಣೆ ಹಚ್ಚಿ ನೆಕ್ಕು ನೆಕ್ಕು ಎಂದು ಹೇಳುವಂಥ ವ್ಯವಹಾರಗಳನ್ನು ಬಜೆಟ್ ಮುಖಾಂತರ ಅವರು ಮಂಡನೆ ಮಾಡಿದ್ದಾರೆ. ಈ ಯೋಜನೆ ಕೇವಲ ಒಂದು ರೀತಿಯ ಭ್ರಮೆ ಹುಟ್ಟಿಸತಕ್ಕಂಥ ನಾಟಕ ಮಾಡತಕ್ಕಂಥ ಬಜೆಟ್ ಯೋಜನೆಗಳು ಈ ವಿಶ್ವಯೋಜನೆ ಮುಖಾಂತರ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಈ ವಿಶ್ವ ಕಾರ್ಯಕ್ರಮದಲ್ಲಿ ಶಿವಮೊಗ್ಗದಲ್ಲಿಯೂ ಕೂಡ ನಾನು ಆ ಕ್ಷೇತ್ರದ ಶಾಸಕನಾಗಿ ಒಂದು ಉದ್ಘಾಟನಾ ಸಮಾರಂಭಕ್ಕೆ ಹೋಗಿದ್ದೆ. ಅಲ್ಲಿ ಯಾರಿಗೆ ಕೊಟ್ಟರೆಂದರೆ ಕೆ. ಎಸ್. ಎಫ್. ಸಿ. ಯವರು ಯಾವತ್ತೋ ತೀರ್ಮಾನ ಮಾಡಿದ್ದರು. ಲೋನ್ ಕೊಡಬೇಕೆಂದು. ಈ ವಿಶ್ವ ಯೋಜನೆಯೇ ಗೊತ್ತಿಲ್ಲ ಅವರಿಗೆ ಈ ಯೋಜನೆ ಮಾಡುವ ಮೊದಲೇ ಅವರು ತೀರ್ಮಾನ ಮಾಡಿದ್ದರು. ಪ್ರತಿ ವರ್ಷ ಕೆ.ಎಸ್.ಎಫ್.ಸಿ.ಯವರು ಲೋನ್ ಕೊಡುತ್ತಾರೆ, ಇವರು ಇದ್ದಕ್ಕಿದ್ದ ಹಾಗೆ ನನ್ನನ್ನು ಕರೆದುಕೊಂಡು ಹೋಗಿ ಲೋನ್ ಕೊಡಿಸಿದರು. ಅದೂ ನನ್ನ ಕೈಯಲ್ಲಿ ಕೊಡಿಸಿದರು. ಯಾರಿಗೆ ಕೊಡಿಸಿದರು ಎಂದು ಹೇಳಿದರೆ, ಶಿವಮೊಗ್ಗ ನಗರಸಭೆಯ ಒಬ್ಬ ಸದಸ್ಯರಾದ ಪ್ರಕಾಶ್ ಎನ್ನುವವರಿಗೆ ಕೆ. ಎಸ್. ಎಫ್. ಸಿ. ಯವರು ಲಾರಿ ಕೊಂಡುಕೊಳ್ಳಲು ಮೊದಲೇ ಲೋನ್ ಸ್ಯಾಂಕ್ಷನ್ ಮಾಡಿದರು. ಆ ಲಾರಿ ಚೆಕ್ ಅನ್ನು ವಿಶ್ವ ಯೋಜನೆ ಮುಖಾಂತರ ನನ್ನಂಥ ಒಬ್ಬ ಶಾಸಕರ ಕೈಯಲ್ಲಿ ಕೊಡಿಸಿದ್ದಾರೆ. ಇದೇನು ಎಂದು ನನಗೆ ಅರ್ಥವಾಗಲಿಲ್ಲ.

ಚೇರ್ಮನ್ : ಅಲ್ಲೇ ತಾವು ಪ್ರೊಟೆಸ್ಟ್ ಮಾಡಬೇಕಾಗಿತ್ತು.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಚೆಕ್ ಕೊಟ್ಟು ಅದ ಮೇಲೆ ಸಾಯಂಕಾಲ ಗೊತ್ತಾಯಿತು. ಇವರು ಎಂಥ ಇಂಡಸ್ಟ್ರೀಗೆ ಕೊಟ್ಟಿದ್ದಾರೆಂದು. ನಂತರ ಅವನನ್ನು ಏನಪ್ಪ ನೀನು ಏನು ಇಂಡಸ್ಟ್ರಿ ಮಾಡುತ್ತೀಯ? ಯಾವ ಗ್ರಾಮದಲ್ಲಿ ಮಾಡುತ್ತೀಯಾ? ಏನು ವಸ್ತುಗಳನ್ನು ತಯಾರು ಮಾಡುತ್ತೀಯಾ, ಯಾವ ಫಾರಿನ್‌ಗೆ ಕಳುಹಿಸಿಕೊಡುತ್ತೀಯಾ, ಅದಕ್ಕೆ ಬೇಡಿಕೆ ಜಾಸ್ತಿ ಇದೆಯೆ, ನಿನ್ನ ದುಡ್ಡು ವಾಪಸ್ಸು ಬರುತ್ತದೆಯೇ ಹೇಗೆ ಎಂದು ಕೇಳಿದರೆ ಅಗ ಅತ ಇಲ್ಲ ಸ್ವಾಮಿ ನಾನು ಕಾಂಗ್ರೆಸ್ ಕೌನ್ಸಿಲರ್, ಲಾರಿ ತೆಗೆದುಕೊಳ್ಳುತ್ತೇನೆಂದು ಹೇಳಿದ. ಇದು ಯಾರೋ ಮಾಡುವುದಕ್ಕೆ ಯಾರೋ ಮಾಡುವ ಕೆಲಸ. ಏತಕ್ಕೆ ಸ್ವಾಮಿ ಈ ನಾಟಕ. ಕೆ.ಎಸ್.ಎಫ್.ಸಿ.ಯವರು ಲೋನ್ ಕೊಟ್ಟಿ ಕೊಡುತ್ತಾರೆ, ಜನರು ತೆಗೆದುಕೊಳ್ಳುತ್ತಾರೆ, ಆದರಲ್ಲಿ ಇವರದ್ದೇನು ಬೇಳೆಕಾಳು. ಅದಕೋಸ್ಕರ ನಾನು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಿಮ್ಮ ಕೈಯಲ್ಲಿ ಶಾಕತ್ತು ಇರುವುದನ್ನು ಮಾತ್ರ ಮಾಡಿ. ಯಾರೋ ಮಾಡುವುದಕ್ಕೆ ನಿಮ್ಮ ಹೆಸರು ಹೇಳಿಕೊಳ್ಳುವುದು ಬೇಡ. ಅದಕ್ಕೆ ಕನ್ನಡದಲ್ಲಿ ಒಂದು ಗಾದೆ ಇದೆ. ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟುಪಡುವುದಿಲ್ಲ. ಸಭೆಯಲ್ಲಿ ಹೇಳುವುದು ಬೇಡ ಎಂದು ಅನಿಸುತ್ತದೆ. ನಾನು ವಿಧಾನಸಭೆಯ ಮಟ್ಟ ಬಿಟ್ಟು ಹೋಗಬಾರದು ಎಂದು ನನ್ನ ಆಸೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ನೀವು ಹಸಿರು ಕನ್ನಡಕ ಹಾಕಿಕೊಂಡು ಈ ಬಜೆಟ್ ಓದಿದ್ದೀರಿ ಎಂದು ಕಾಣಿಸುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಕನ್ನಡಕವನ್ನೇ ಹಾಕುವುದಿಲ್ಲ. ಇನ್ನು ಈ ಆಶ್ರಯ ಯೋಜನೆಯನ್ನು ಒಬ್ಬ ಬಿ.ಜೆ.ಪಿ ಶಾಸಕನಾಗಿ ನಾನು ಸ್ವಾಗತ ಮಾಡುತ್ತೇನೆ. ತುಂಬಾ ಒಳ್ಳೆಯ ಯೋಜನೆ. ಇದರಲ್ಲಿ ಅನುಮಾನ ಇಲ್ಲ. ಆದರೆ ಇದರಲ್ಲಿ ನಡೆದಿರತಕ್ಕಂಥ ಅವ್ಯವಹಾರ ಭ್ರಷ್ಟಚಾರವನ್ನು ದಯಮಾಡಿ ಸರ್ಕಾರ ಗಮನಿಸುತ್ತದೆಂದು ನನ್ನ ಆಸೆ. ನಮ್ಮ ಕ್ಷೇತ್ರದಲ್ಲಿ ನಾವು ಸಾವಿರಾರು ಸೈಟುಗಳನ್ನು ಹಂಚಿಕೆ ಮಾಡಿದ್ದೇವೆ. ನಮ್ಮಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಂಚಿಕೆ ಮಾಡಿದ್ದೇವೆ. ನೀವು ಸಹ ಹಂಚಿಕೆ ಮಾಡಿರಬಹುದು. ಎಷ್ಟು ಅವ್ಯವಹಾರ ನಡೆಯುತ್ತಿದೆ ಎಂದು ಹೇಳುವುದಕ್ಕೆ ಅಸಾಧ್ಯ. ಈಗ ವಿಲೇಜ್ ಪಂಚಾಯತ್ ಅಧಿಕಾರಿಗಳು ತಾಲ್ಲೂಕು ಅಫೀಸ್ ಅಧಿಕಾರಿಗಳು ಅನೇಕರು ಗ್ರಾಮಾಂತರ ಪ್ರದೇಶಗಳಲ್ಲಿ ನಾವೇ ಸೈಟ್ ಕೊಡುತ್ತೇವೆಂದು ಹೇಳಿ ಈ ಬಡವರು ಒಟ್ಟಿಗೆ ನೂರು ರೂಪಾಯಿ ನೋಟು ನೋಡಿರುವುದಿಲ್ಲ ಅವರಿಂದ 15 ರೂಪಾಯಿ 20 ರೂಪಾಯಿ 50 ರೂಪಾಯಿ 100 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ.

ಚೇರ್ಮನ್ : ಆ ಕಮಿಟಿಯಲ್ಲಿ ನೀವೇ ಚೇರ್ಮನ್ ಅಲ್ಲವೇ?

ಶ್ರೀ ಕೆ. ಎಸ್. ಈಶ್ವರಪ್ಪ : ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಇಡೀ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂದು ನಾನು ನಿಮ್ಮಗಮನಕ್ಕೆ ತರುತ್ತೇನೆ. ತಪ್ಪಿದ್ದರೆ ತಿದ್ದಿಕೊಳ್ಳುತ್ತೀರಿ ಎನ್ನುವ ಆಸೆ. ಅದಕ್ಕೆ ನೀವು ಟೀಕೆ ಮಾಡಬೇಕು ವಿರೋಧ ಪಕ್ಷದವರು ಮಾತನಾಡಬಾರದು ಎಂದು ಅದರೆ ನನ್ನದೇನು ಅಭ್ಯಂತರ ಇಲ್ಲ. ನೀವು ಎಷ್ಟೇ ಕೂಗಿದರೂ ನಾನು ಬಗ್ಗುವುದಿಲ್ಲ.

ನಾವು ಇರುವುದು 4 ಜನ. ನೀವು ಇಷ್ಟೊಂದು ಜನ ಇರಬಹುದು. ನನಗೆ ದೇವರು ಗಂಟಲು ಕೊಟ್ಟಿದ್ದಾನೆ. ನಾನು ಹೇಳುವುದಕ್ಕೆ ಶಕ್ತಿ ಇದೆ. ನಿಮ್ಮ ಗಂಟಲಿಗೆ ಹೆದರಿಕೊಂಡುಕುಳಿತು ಕೊಳ್ಳುವುದಕ್ಕೆ ಅಲ್ಲ ನಾನು ಬಂದಿರುವುದು. ಏನು ಅನ್ಯಾಯ ನಡೆಯುತ್ತಿದೆ ಅದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ನನಗೆ ಹಕ್ಕು ಇದೆ. ಅದನ್ನು ನಾನು ಉಪಯೋಗಿಸುತ್ತೇನೆ. ಅದರಲ್ಲಿ ಯಾರೂ ಹತ್ತಿಕ್ಕುವಂಥ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿಲ್ಲ. ಆದಕ್ಕೆ ನಾನು ಬಗ್ಗುವವನೂ ಅಲ್ಲ. ನಗರ ಪ್ರವೇಶದಲ್ಲಿ ಸೈಟು ಹಂಚತಕ್ಕಂಥ ಸರ್ಕಾರದ ಯೋಜನೆ ಇದೆ. ಒಂದು ಕಾನೂನು ತಂದು ಇಟ್ಟುಬಿಟ್ಟರು. ಗ್ರೀನ್‌ಬೆಲ್ಟ್ ಇರುವ ಜಾಗದಲ್ಲಿ ಹಂಚಕೂಡದೆಂದು, ನಗರ ಪ್ರದೇಶಕ್ಕೆ ಬರದೆ ಗ್ರೀನ್‌ಬೆಲ್ಟ್ ಗ್ರಾಮಾಂತರ ಪ್ರದೇಶಕ್ಕೆ ಬರುತ್ತದೆಯೇನು ? ನೀವೇ ಹೇಳಿ ನೋಡೋಣ. ಬೆಂಗಳೂರಿಗೆ ಮಾತ್ರ ಗ್ರೀನ್ ಬೆಲ್ಟ್ ಪ್ರಶ್ನೆ ಬರುವುದಿಲ್ಲವಂತೆ. ಇನ್ನೆಲ್ಲಾ ನಗರ ಪ್ರದೇಶಕ್ಕೆ ಗ್ರೀನ್‌ಬೆಲ್ಟ್ ಬರುತ್ತದಂತೆ. ಏಕೆ ಸ್ವಾಮಿ ಈ ತಾರತಮ್ಯ? ಬೆಂಗಳೂರಿನಲ್ಲಿರುವ ಬಡವರು ಬೇರೆ, ಶಿವಮೊಗ್ಗದಲ್ಲಿರುವ ಬಡವರು ಬೇರೆಯೇ ಬೆಂಗಳೂರು ನಗರದಲ್ಲಿರುವವರು ಕಾಂಗ್ರೆಸ್‌ನವರಿಗೆ ವೋಟು ಕೊಟ್ಟಿದ್ದಾರೆ., ಶಿವಮೊಗ್ಗದವರು ಬಿ.ಜೆ.ಪಿ.ಗೆ. ವೋಟ್ ಕೊಟ್ಟಿದ್ದಾರೆ ಎಂದು ಗ್ರೀನ್ ಬೇಲ್ಟ್ ತಂದಿದ್ದೀರಾ ? ಏಕೆ ಈ ರಾಜಕೀಯ? ಒಂದೊಂದು ಪ್ರದೇಶಕ್ಕೆ ಒಂದೊಂದು ತರಹ : ಒಬ್ಬೊಬ್ಬ ಬಡವನಲ್ಲಿಯೂ ಬೇಧ ಮಾಡಿ ಅವರೆಲ್ಲರನ್ನೂ ಒಡೆದು ಚೂರ ಚೂರು ಮಾಡತಕ್ಕಂಥ ಪ್ರಯತ್ನ ಏಕೆ? ನಾನು ಅದಕ್ಕೋಸ್ಕರ ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ ರೀತಿ ಬಡವರನ್ನು ಒಡೆಯುವಂಥ ಪ್ರಯತ್ನವನ್ನು ತಾವು ಮಾಡಬೇಡಿ. ಎಲ್ಲಾ ಬಡವರಿಗೂ ಕೂಡ ಕಾನೂನು ತೆಗೆದುಕೊಂಡುಬನ್ನಿ. ಈಗ ಏನು ಗ್ರೀನ್ ಬೆಲ್ಟ್ ಪ್ರಶ್ನೆ ಇದೆ ಅದನ್ನು ಕಿತ್ತೆಸೆಯಿರಿ ಎಲ್ಲಾ ಬಡವರಿಗೂ ಒಂದು ಅವಕಾಶ ಮಾಡಿಕೊಡಿ. ಎಲ್ಲೆಲ್ಲಿ ಸೈಟ್ ಇದೆಯೋ ಅದನ್ನು ಒಂದು ಕಮಿಟಿ ಸೆಲೆಕ್ಟ್ ಮಾಡುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಿ. ಇನ್ನು ಕರ್ನಾಟಕ ರಾಜ್ಯದ ರೈತರ ಸಾಲದ ಬಗ್ಗೆ, ಕಳೆದ ಬಾರಿ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಬಜೆಟ್‌ನ 91-92 ಭಾಷಣದ 8-9ನೇ ಪುಟದಲ್ಲಿ ಇದೆ, 8ನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸಹಕಾರ ವಲಯದಲ್ಲಿ 10 ಸಾವಿರ ರೂಪಾಯಿವರೆಗಿನ ಕೃಷಿ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ ಎಂಬುದನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಕಳೆದ 91-92ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದ ಒಂದು ವರದಿ. ಈ ಪ್ರತಿಯನ್ನು ಕೂಡಾ ತಮಗೆ ಕಳುಹಿಸಿಕೊಡುತ್ತಿದ್ದೇನೆ.

(ಪ್ರತಿಯನ್ನು ಕಳುಹಿಸಿಕೊಟ್ಟರು)

ಈ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ವೀರೇಂದ್ರಪಾಟೀಲರು ಏನು ಹೇಳಿದ್ದರು? ಈ ರಾಜ್ಯದ ರೈತರ ಸಾಲ ಮನ್ನಾ ಆಗುವ ಯೋಜನೆ ತರಬೇಕೆಂದು ಹೇಳಿದ್ದರು. ಅವರು ಮುಖ್ಯ ಮಂತ್ರಿಯಾದ ತಕ್ಷಣ ಬಜೆಟ್ ತಂದರು. ತುಂಬಾ ಸಂತೋಷವಾಯಿತು. ಆದರೆ ಇವತ್ತಿನವರೆಗೂ ಈ ರೈತರ ಸಾಲವನ್ನು ಮನ್ನಾ ಮಾಡಿದ್ದೀರಾ ? ನಾನು ಏಕೆ ಈ ಪ್ರಶ್ನೆಯನ್ನು ಹೆಳುವುದಕ್ಕೆ ಇಷ್ಟಪಡುತ್ತೇನೆಂದರೆ. ಕೇವಲ ನಾಟಕ ಮಾತ್ರ ಮಾಡುತ್ತಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು. ಅದಾದ ನಂತರ ಪಾರ್ಲಿಮೆಂಟ್ ಚುನಾವಣೆ ಬಂತು, ಈಗಿನ ಮುಖ್ಯ ಮಂತ್ರಿಗಳು, ಎಲ್ಲಾ ಕಡೆ, ಹೇಳಿದರು ಈಗಾಗಲೇ ಬೇಕಾದಂಥ ಹಣವನ್ನು ಇಷ್ಟು ಕೋಟಿ ಇಟ್ಟುಬಿಟ್ಟದ್ದೇವೆ ಎಂದು. ಪಾರ್ಲಿಮೆಂಟ್ ಚುನಾವಣೆ ಗೆದ್ದಾಯಿತು. ಮತ್ತೆ. ಮರೆತರು. ಮತ್ತೆ ಅಧಿವೇಶನ ಪ್ರಾರಂಭ ಮಾಡಿದೆವು, ರೈತರ ಸಾಲ ಮನ್ನಾ ಆಗಲಿಲ್ಲ. ಏನು ಮಾಡಬೇಕು? ನಮಗೆ ಕಣ್ಣು ಒರೆಸುವ ರೂಪದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪ್ರಧಾನ ಮಂತ್ರಿಗಳ ಹತ್ತಿರ

ಸರ್ವ ಪಕ್ಷ ನಿಯೋಗ ತೆಗೆದುಕೊಂಡು ಹೋದರು. ಎಂದರೆ ಇವರ ಮನಸ್ಸಿನಲ್ಲೂ ಆಸೆ ಇದೆ ಎಂದು ನನಗನ್ನಿಸುತ್ತದೆ. ಅದನ್ನು ಏಕೆ ಕಾರ್ಯಗತಗೊಳಿಸಲಿಲ್ಲ:? ಮೊನ್ನೆ ಸಹಕಾರ ಸಚಿವರು ಹೇಳುತ್ತಾರೆ. ರೈತರ ಸಾಲ ಮನ್ನಾ ಮುಗಿದ ಕಥೆ. ಸನ್ಮಾನ್ಯ ಅಧ್ಯಕ್ಷರೆ, ನಿಮ್ಮ ಮುಖಾಂತರ ಈ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ರೈತರ ಸಾಲ ಮನ್ನಾ ಮುಗಿದ ಕಥೆ ಅಲ್ಲ. ಈ ರಾಜ್ಯದ ರೈತರ ಸಾಲ ಮನ್ನಾ ಮಾಡದಿದ್ದರೆ ನಿಮ್ಮ ಕಥೆ ಮುಗಿಯುತ್ತದೆ. ನೀವು ಸಾಲ ಮನ್ನಾ ಮಾಡಲಿಲ್ಲವೆಂದರೆ ರಾಜ್ಯದ ಜನ ನಿಮ್ಮನ್ನು ಕಿತ್ತುಹಾಕುತ್ತಾರೆ. ಈ ಸರ್ಕಾರವನ್ನು ಕಿತ್ತುಹಾಕಿ ಮುಂದಿನ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ತರುತ್ತಾರೆ. ಆವಾಗ ನಾವು ಸಾಲ ಮನ್ನಾ ಮಾಡುತ್ತೇವೆ. ಅದರಲ್ಲಿ ಅನುಮಾನವೇ ಇಲ್ಲ.

ಶ್ರೀ ಡಿ. ಎ. ಚಿನ್ನಪ್ಪ : ಪಾಯಿಂಟ್ ಆಫ್ ಆರ್ಡರ್

ಉಪಾಧ್ಯಕ್ಷರು : ಚಿನ್ನಪ್ಪನವರೇ ಅವರು ಮಾತನಾಡಲಿ ಬಿಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ಕೇವಲ ಘೋಷಣೆ ಮಾತ್ರ ಮಾಡಬೇಡಿ. 91-92ರಲ್ಲಿ ಹೇಳಿದ್ದೀರಿ. ಆದರೆ 92-93ರಲ್ಲಿ ಅದರ ಬಗ್ಗೆ ಚಕಾರ ಎತ್ತಿಲ್ಲ. ರಾಜ್ಯದ ರೈತರ ಸಾಲ ಮನ್ನಾ ಮಾಡುತ್ತೇವೆ ಎಂಬುದು ನಿಮ್ಮ ಗಮನಕ್ಕೆ ಬಂದೇ ಇಲ್ಲ. ಒಂದೇ ಒಂದು ಪದ ರೈತರ ಸಾಲ ಮನ್ನಾ ಬಗ್ಗೆ ಹೇಳಿಲ್ಲ. ಏತಕ್ಕೆ ಈ ದ್ವಂಧ್ವ ನೀತಿ ? ಚುನಾವಣೆಯಲ್ಲಿ ವೋಟು ತೆಗೆದುಕೊಳ್ಳುವುದಕ್ಕೆ ಮುಂಚೆ ಒಂದು ತರಹ. ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ರಾಜ್ಯದ ರೈತರಿಗೆ ದ್ರೋಹ ಮಾಡುವಂಥ ಕೆಲಸ ಮಾಡಿದ್ದೀರಿ. ಇಡೀ ಕರ್ನಾಟಕ ರಾಜ್ಯದ ರೈತ ತೀರ್ಮಾನ ಮಾಡಿದ್ದಾನೆ. ನೀವು ಸಾಲ ಮನ್ನಾ ಮಾಡಿದ್ದೀರೋ ಬಿಟ್ಟಿದ್ದೀರೋ ಗೋತ್ತಿಲ್ಲ ಅವನಂತೂ ತೀರ್ಮಾನ ಮಾಡಿದ್ದಾನೆ. ನನ್ನ ಸಾಲ ಮನ್ನಾ ಆಗಿದೆಯೆಂದು. ನೀವು ಎಷ್ಟು ನೋಟೀಸ್ ಕೊಡಲಿ. ಎಷ್ಟು ಕೂಗಿದರೂ ಸಂಬಂಧ ಇಲ್ಲವೆಂದು ಅವನಿರುತ್ತಾನೆ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಕೇವಲ ಘೋಷಣೆ, ನಾಟಕ ಮಾಡುವುಂಥ ಪ್ರಯತ್ನಗಳನ್ನು ಮಾಡಬೇಡಿ.

ಎಲ್ಲರಿಗೂ ಕೂಡ ಏನೇನೋ ಆಶ್ವಾಸನೆಗಳನ್ನು ಕೋಡುತ್ತೀರಿ.

ಉಪಾಧ್ಯಕ್ಷಿಣಿಯವರು : ದಯವಿಟ್ಟು ತಾವು ಮುಗಿಸಿ. ಇನ್ನು ಮುಖ್ಯಮಂತ್ರಿಗಳು 11 ಗಂಟೆಗೆ ತಮ್ಮ ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಿನ್ನೆ ಬಿ.ಎ.ಸಿ.ಯಲ್ಲಿ ನನಗೆ ಒಂದು ಗಂಟೆಯ ಕಾಲಾವಕಾಶ ಕೊಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದವರು ಇವೂತ್ತು ಅಲ್ಲಿ ಹೊರಗೆ ಕುಳಿತಿದ್ದಾರೆ...

ಉಪಾಧ್ಯಕ್ಷಿಣಿಯವರು : ತಾವುಗಳು ಸ್ವಲ್ಪ ಸಮಾಧಾನದಿಂದ ಮಾತನಾಡಿ. ಇನ್ನೂ ಬಹಳ ಜನರು ಮಾತನಾಡುವವರಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ: ಈ ಬಜೆಟ್‌ನ್ನು ನೆನೆಸಿಕೊಂಡರೆ ನಮಗೆ ಗಾಬರಿಯಾಗುತ್ತದೆ. ವಿರೋಧ ಪಕ್ಷದವರು ಹೊರಗೆ ಹೋಗಿದ್ದಾರೆ. ಅನೇಕ ಶಾಸಕರು ಪೋಲೀಸ್ ಸ್ಟೇಷನ್ ಕಂಡಂಥ ಒಂದು ವಿಚಿತ್ರಕರವಾದಂಥ ಪರಿಸ್ಥಿತಿಯು ಬಂದಿದೆ. ಕಾಂಗ್ರೆಸ್ ಪಕ್ಷವು ಚೂರು ಚೂರು ಆಗಿದೆ. ಅದನ್ನು ರಂಗನಾಥ್‌ರವರು ಒಂದು ಸ್ಥಿತಿಗೆ ತಂದಿದ್ದಾರೆ. ಈ ಬಜೆಟ್ ಇಡೀ ದೇಶದಲ್ಲಿ ಇಡೀ ವಿಶ್ವದಲ್ಲಿ ಒಂದು ರೀತಿಯ ಪ್ರಾಮುಖ್ಯತೆಯನ್ನು ಪಡೆದಿದೆ. ಇದರ ಬಗ್ಗೆ ಮಾತನಾಡಲು ನನಗೆ

ತಾವುಗಳು ಅವಕಾಶವನ್ನು ಮಾಡಿಕೊಡಬೇಕು. ಈಗ ಬಿಟ್ಟರೆಮತ್ತೆ ಯಾವಾಗ ನಮಗೆ ಅವಕಾಶ ಮಾಡಿಕೊಡುತ್ತೀರಿ ?

ಉಪಾಧ್ಯಕ್ಷಿಣಿಯವರು : ನಿಮಗೆ ಅವಕಾಶ ಕೊಟ್ಟಿದ್ದಾಗಿದೆ, ಬೇಗನೆ ಮುಗಿಸಿ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ ; ಈ ರಾಜ್ಯದಲ್ಲಿ ಹಿಂದೂ - ಮುಸಲ್ಮಾನರಲ್ಲಿ ಒಂದು ರೀತಿಯ ಭೇದಬಾವವನ್ನು ತರುವಂಥ ಕೆಲಸವನ್ನು ಈ ಸರಕಾರದವರು ಮಾಡುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್ :ಅದನ್ನು ಕೂಡ ಬಜೆಟ್‌ನಲ್ಲಿ ಹೇಳಿದ್ದಾರೆಯೇ ? ಹೇಳಿಲ್ಲವಲ್ಲ? ಮುಸಲ್ಮಾನ ಬಂದುಗಳನ್ನು ಮೆಚ್ಚಿಸಲು ಈ ಮಾತುಗಳೇ?

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಲ್ಪ ಕಾಲ ಕಾದು ನೋಡಿ, ನಾವು ಮತ್ತು ಅವರು ಒಂದೇ ಆಗಿದ್ದೇವೆ. ನಿಮ್ಮನ್ನು ಮಾತ್ರ ದೂರ ಕಳುಹಿಸುತ್ತೇವೆ. ಹೆದರ ಬೇಕಾಗಿಲ್ಲ, ನೋಡಿ. ಈ ದೇಶದಲ್ಲಿ ಹಿಂದೂ ಮುಸಲ್ಮಾನರು ಒಂದಾಗುವ ಕಾಲ ಹತ್ತಿರ ಬಂದಿದೆ. ಈ ಕಾಂಗ್ರೆಸ್‌ನವರು ಕಿತ್ತಾಡುತ್ತಾ ಇದ್ದಾರೆ. ನಿಮ್ಮ ಮಾತುಗಳು ಅವರಿಗೆ ಸಾಕಾಗಿ ಹೋಗಿದೆ. ಇದನ್ನು ಮತ್ತೆ ಮುಂದುವರಿಸಬೇಡಿ. ನೀವು ಮುಸಲ್ಮಾನರಿಗಾಗಿ ಏನು ಮಾಡಿದ್ದೀರಿ? ಅವರ ಮಕ್ಕಳು ಶಾಲೆಗೆ ಹೋಗಲು ಆಗದೇ ಪುಟ್‌ಪಾಥ್‌ಗಳಲ್ಲಿ ಬಿದ್ದಿರುತ್ತಾರೆ. ಅಲ್ಲಿ ಇಲ್ಲಿ ಹಣ್ಣುಹಂಪಲು ಮಾರಿಕೊಂಡು ಜೀವನ ಮಾಡುತ್ತಿದ್ದಾರೆ. ಸೈಕಲ್‌ಶಾಪ್ ಒಂದನ್ನು ಬೇರೆ ಉದ್ಯೋಗ ಅವರಿಗಿಲ್ಲ. ಒಬ್ಬ ವಿದ್ಯಾವಂತರೂ ಅವರಲ್ಲಿ ಇಲ್ಲ. ಇವೊತ್ತು ಅವರ ಆರ್ಥಿಕ ಪರಿಸ್ಥಿತಿಯು ಸರಿಯಾಗಿಲ್ಲದ ಕಾರಣ ಅವರು ಸ್ಮಗಲರ್ಸ್ ಆಗುತ್ತಾ ಇದ್ದಾರೆ. ಇದಕ್ಕೆಕಾಂಗ್ರೆಸ್ ಸರಕಾರವೇ ಕಾರಣ. ಅದನ್ನು ಬಿಟ್ಟು ದೊಡ್ಡ ದೊಡ್ಡ ಮಾತುಗಳಗನ್ನು ಏಕೆ ಆಡುತ್ತೀರಿ ? ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ವಕ್ಫ್‌ಬೋರ್ಡ್‌ನವರಿಗೆ 1990-91ಕ್ಕೆ 260 ಲಕ್ಷರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ, ಅವರಲ್ಲಿ ಏನೂ ತಪ್ಪಿಲ್ಲ. ಅದಕ್ಕಿಂತ ಮುಂಚೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 1990-91ರಲ್ಲಿ 60 ಲಕ್ಷ ಬಿಡುಗಡೆ ಮಾಡಿದರು. 1991-92ರಲ್ಲಿ 200 ಲಕ್ಷ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದೂ ಕೂಡ ಸಂತೋಷದ ವಿಚಾರವೇ ಆಗಿದೆ. ಇನ್ನೂ ಹೆಚ್ಚಿಗೆ ನೀವು ಕೊಟ್ಟರೂ ನಮಗೆ ಅಡ್ಡಿ ಇಲ್ಲ. ಆದರೆ ಮುಸಲ್ಮಾರನ್ನು ತೃಪ್ತಿಮಾಡುವುದಕ್ಕೋಸ್ಕರವಾಗಿ ಹಿಂದೂಗಳಿಗೆ ತಾರತಮ್ಯ ಮಾಡಲು ಪ್ರಯತ್ನವನ್ನು ಏತಕ್ಕಾಗಿ ಮಾಡುತ್ತೀರಿ? ಯಾವ ರೀತಿಯಲ್ಲಿ ಕರ್ನಾಟಕ ವಕ್ಫ್ ಪರಿಷತ್‌ನ್ನು ಮಾಡಿದ್ದೀರೋ ಅದೇ ರೀತಿಯಲ್ಲಿ ಹಿಂದೂಗಳ ಅಭಿವೃದ್ಧಿಗೂ ಪರಿಷತ್‌ನ್ನು ಮಾಡಿಕೊಡಿ. ಅದಕ್ಕೂ ಕೂಡ ಸಾಕಷ್ಟು ಹಣವನ್ನು ಕೊಡಿ.....

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಈಶ್ವರಪ್ಪನವರು ತಮ್ಮ ಭಾಷಣದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದ್ದು ಅದನ್ನು ಕೊಡುವುದಿದ್ದರೆ ಕೊಡಿ ಅದೇ ರೀತಿಯಲ್ಲಿ ಹಿಂದೂಗಳಿಗೂ ಕೊಡಿ ಎಂದು ಹೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ತಾವುಗಳು ಹೀಗೆ ಸದನವನ್ನು ತಪ್ಪು ದಾರಿಗೆ ತರಬೇಡಿ. ನಾನು ಹೇಳಿದ್ದುದು ಏನೆಂದರೆ ನೀವು ಮುಸಲ್ಮಾನರ ಅಭಿವೃದ್ಧಿಗೆ ಜಾಸ್ತಿ ಬೇಕಾದರೂ ಕೊಡಿ ನಮ್ಮ ಅಭ್ಯಂತರವಿಲ್ಲ ಜೊತೆಗೆ ವಕ್ಫ್‌ಬೋರ್ಡ್‌ಗೆ ಯಾವ ರೀತಿಯಲ್ಲಿ ಕೊಟ್ಟಿದ್ದೀರೋ ಅದೇ ರೀತಿಯಲ್ಲಿ ಹಿಂದೂ ಪರಿಷತ್‌ನ್ನು ಕೂಡಮಾಡಿ ಅದಕ್ಕೂ ಹಣ ಕೊಡಿ ಎಂದು ಹೇಳಿದ್ದೇನೆ.

ಶ್ರೀ ಬಿ.ಎಂ. ಇದಿನಬ್ಬ : ಈಶ್ವರಪ್ಪನವರಿಗೆ ಪ್ರತಿಯೊಂದು ಭಾಷಣದಲ್ಲಿಯೂ ಮುಸಲ್ಮಾನರನ್ನು ಎತ್ತಿ ಹಿಡಿದು ಮಾತನಾಡದಿದ್ದರೆ ಸಮಾಧಾನವೇ ಆಗುವುದಿಲ್ಲ.....

ಶ್ರೀ ಕೆ. ಎಸ್. ಈಶ್ವರಪ್ಪ : ಪ್ರಮಾಣಿಕವಾಗಿ ಈ ರಾಜ್ಯದಲ್ಲಿ, ಈ ದೇಶದಲ್ಲಿ ಏನು ನಡೆಯುತ್ತದೆ. ಇದನ್ನು ಮಾತ್ರ ನಾನು ಹೇಳುತ್ತಾ ಇದ್ದೇನೆ. ಈ ರೀತಿಯಲ್ಲಿ ಮುಸಲ್ಮಾನರ ಓಟಿಗಾಗಿ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಿರುವುದನ್ನು ಅರ್ಥಮಾಡಿಕೊಳ್ಳಬೇಕು. ಇದರ ಮೂಲಕ ಅವರ ಮೂಗಿಗೆ ತುಪ್ಪ ಹಚ್ಚಿ ಬಿಡುವ ಕೆಲಸವನ್ನು ಮಾಡುತ್ತಾ ಇದ್ದಾರೆ. ಇದನ್ನು ಬಿಡಬೇಕು. ನಿಜವಾದ ರೀತಿಯಲ್ಲಿ ಅವರಿಗೆ ಉಪಯೋಗವಾಗುವ ರೀತಿಯಲ್ಲಿ ಸಹಾಯ ಮಾಡಬೇಕು. ಯಾವರೀತಿಯಲ್ಲಿ ಮುಸಲ್ಮಾನರ ಅಭಿವೃದ್ಧಿಗಾಗಿ ಬೋರ್ಡ್‌ಗಳನ್ನು ಪರಿಷತ್‌ಗಳನ್ನು ಮಾಡುತ್ತೀರಿ ಅದೇ ರೀತಿಯಲ್ಲಿ ಕ್ರಿಶ್ಚಿಯನ್‌ರಿಗೂ ಮಾಡಿ, ಹಿಂದುಗಳಿಗೂ ಮಾಡಿ. ಆಗ ಮಾತ್ರ ನಿಮ್ಮ ಜಾತ್ಯಾತೀತತೆಯು ಅರ್ಥವಾಗುತ್ತದೆ. ನೀವು ಚುನಾವಣೆಯ ಸಂದರ್ಭಗಳಲ್ಲಿ ಘೋಷಣೆ ಮಾಡಿಕೊಂಡು ಹೇಳುತ್ತೀರಿ ಇದರ ಅರ್ಥ ಏನಾಗುತ್ತದೆ? ಆದ್ದರಿಂದ ಇದನ್ನು ಬಿಟ್ಟು ಕೇವಲ ನಾಟಕ ಏನು ಮಾಡುತ್ತಿದ್ದೀರಿ? ಯಾರಾದರೂ ಒಬ್ಬ ಮುಸಲ್ಮಾನರನ್ನು ಅಧ್ಯಕ್ಷರನ್ನಾಗಿಯೋ, ಮಂತ್ರಿಯಾಗಿಯೋ ಮಾಡುವುದು ಇತ್ಯಾದಿಯಿಂದ ಅವರು ಉದ್ಧಾರವಾಗುತ್ತದೆಯೇ, ಸುಧಾರಣೆಯಾಗುತ್ತದೆಯೇ? ಎಲ್ಲರನ್ನೂ ತಾವುಗಳು ಸಮಾನವಾಗಿ ನೋಡಬೇಕು. ಎಲ್ಲರಿಗೂ ಅವರ ಜೀವನ ಸುಧಾರಿಸಲು ಅವಕಾಶ ಮಾಡಿಕೊಡಿ, ಅದನ್ನು ಬಿಟ್ಟು ಹೀಗೆ ನಾಟಕವಾಡುವುದು ತಪ್ಪು ಎಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇನ್ನು ಈ ರಾಜ್ಯದ ಯುವಕರ ಬಗ್ಗೆ ಈ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು ಬೃಹದಾಕಾರವಾಗಿದೆ ಎನ್ನುವುದು. ಗೊತ್ತಿದೆ. 18ವರೆ ಲಕ್ಷ ಯುವಕರು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿದ್ದಾರೆ. 1985ರಲ್ಲಿ ಸರ್ಕಾರ ಉದ್ಯೋಗದ ಮೇಲಿನ ನಿರ್ಬಂಧ ತೆಗೆದಿದೆ. 56 ಸಾವಿರ ಬಡ್ಜೆಟ್‌ಗೇ ಪೋಸ್ಟ್ಸ್ ವೇಕೆಂಟ್ ಇದೆ. ಆದರೆ ಇವತ್ತಿಗೂ ಅವನ್ನು ತುಂಬುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ. ಇದಕ್ಕೆ ಏನು ಯೋಜನೆ ನಿಮ್ಮದು? ಈ ಯುವಕರು ನಿದ್ದೆ ಮಾಡಿಕೊಂಡೇ ಇರಬೇಕು ಎಂದು ನಿರುದ್ಯೋಗಿ ಕುಂಭಕರ್ಣ ಎನ್ನುವ ಒಂದು ಯೋಜನೆ ಇಟ್ಟಿದ್ದಾರೆ. ಯುವಕರಿಗೆ ಉದ್ಯೋಗದ ಪ್ರಶ್ನೆಯೇ ಇಲ್ಲ, ನಿರುದ್ಯೋಗಿ ಕುಂಭಕರ್ಣ ಎಂದು ಇದರ ಹೆಸರು, ಒಂದು ರೂಪಾಯಿ ಇಲ್ಲ ಇದಕ್ಕೆ ಈ ರೀತಿ ಅನೇಕ ಯೋಜನೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಕೈಗಾರಿಕಾ ಬೆಳವಣಿಗೆ ಮಾಡುತ್ತೇವೆ ಅಂತ ಹೇಳ್ತಿದ್ದಾರೆ. ಒಬ್ಬ ಸಣ್ಣ ಕೈಗಾರಿಕೋದ್ಯಮಿ ಪ್ರಾವಿಜನಲ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ತಗೊಳ್ಳುವುದರಿಂದ ಹಿಡಿದು ಪರ್ಮನೆಂಟ್ ರಿಜಿಸ್ಟ್ರೇಶನ್ ತೆಗೆದುಕೊಳ್ಳಬೇಕಾದರೆ ಈ ಎಲ್ಲಾ ಇಲಾಖೆಗಳಿಗೆ ಅಲೆದು ಅಲೆದು ಅವನ ಕೈಯಲ್ಲಿರುವ ಹಣವೂ ಖರ್ಚಾಗುತ್ತದೆ. ಕಾಲಿನ ಚಪ್ಪಲಿಯೂ ಕೂಡ ಸವೆದು ಹೋಗುತ್ತದೆ. ಅವನು ಇಂಡಸ್ಟ್ರಿ ಪ್ರಾರಂಭ ಮಾಡುವುದಕ್ಕೆ ಆಗುವುದೇ ಇಲ್ಲ. ಲೈಸೆನ್ಸ್ ತೆಗೆದುಕೊಳ್ಳುವುದರಲ್ಲೇ ಸಾಕಷ್ಟು ಸಮಯ ಹೊರಟು ಹೋಗುತ್ತದೆ. ಪ್ರತಿಯೊಂದು ಆಫೀಸಿಗೆ ಹೋಗಬೇಕು, ಆಫೀಸಿನ ಎಲ್ಲರ ಬಾಯಿಗೂ ಹಾಕಬೇಕು, ಸಮಯ ಕೊಡಬೇಕು, ಗಂಟೆಗಟ್ಟಲೆ ಹೊರಗೆ ನಿಂತ್ಕೊಳ್ಳಬೇಕು. ಸಣ್ಣ ಕೈಗಾರಿಕೆ ಪ್ರಾರಂಭಿಸುವ ಯುವಕರಿಗೆ ಏಕಕಿಂಡಿ ಯೋಜನೆ ಎಂದು ಒಂದು ಹೆಸರು ಮಾತ್ರ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಯೋಜನೆ ಮಾಡುವುದರಲ್ಲಿ ನಿಸ್ಸೀಮರು ಆ ಏಕಕಿಂಡಿ ಯೋಜನೆಗೆ ಬೆಂಕಿ ಹಾಕಿದ್ದಾರೆ, ಸಂಬಂಧವೇ ಇಲ್ಲ ನಾನು ಒಂದು ಸಣ್ಣ ಕೈಗಾರಿಕೆ ಪ್ರಾರಂಭ ಮಾಡಿದೆ, ಎಷ್ಟು ಕಷ್ಟಪಟ್ಟು ಆ ಇಂಡಸ್ಟ್ರಿ ನಡೆಸುತ್ತಿದ್ದೇನೆ ನನಗೆ ಗೊತ್ತಿದೆ. ಸರ್ಕಾರ ಅರ್ಥಮಾಡಿಕೊಳ್ಳಬೇಕು, ಪ್ರತಿಯೊಂದು ಲೈಸೆನ್ಸ್‌ಗೂ ಕೂಡ ಅಲ್ಲಿ ಹೋಗುಬಾ,

ಕರ್ನಾಟಕ ರಾಜ್ಯ ವಿಧಾನ...,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಕ್ರಮಸಂಖ್ಯೆ..............ದಿನಾಂಕ..........

ಪೋಲೀಸ್ ಸ್ಟೇಷನ್‌ಗೆ ಹೋಗಿಬಿಟ್ಟುಬಾ, ಎಲೆಕ್ಟ್ರಿಸಿಟಿ ಇಲಾಖೆಗೆ ಹೋಗಿ ಬಾ, ಹೋಗಿ ... ಸಾಕಾಗುತ್ತದೆ. ಆ ಮೆಶಿನರಿಗಳನ್ನು ತಂದು ಕೂರಿಸಿ ಫಟಿಂಗ್ ಮಾಡಿಕೊಂಡು ಎಲ್ಲಾ ಆದಮೇಲಿ ಕರೆಂಟ್ ಇಲ್ಲ ಅಂದುಬಿಡುತ್ತಾರೆ. ಕರೆಂಟೇ ಇಲ್ಲ. ಬಿಲ್ಡಿಂಗ್ ಬಂದಿದೆ, ಮಿಶಿನರಿ ಆಗಿದೆ ಅವರು ಏನು ಮಾಡಬೇಕೂ ಎಂದು ಸರ್ಕಾರಕ್ಕೆ ಸಲಹೆ ಕೊಡು ಅಂತಿದ್ದಾರೆ, ಕೊಡ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಇಂಡಸ್ಟ್ರಿ ಹಾಕಿ ಎಷ್ಟು ಸುಟ್ಟುಕೊಂಡಿದಾರೋ ಅದರ ಎರಡರಷ್ಟು ಕೈಸುಟ್ಟುಕೊಂಡಿದ್ದೇವೆ ನಾವು, ಅದಕ್ಕೆ ಏನು ಮಾಡಬೇಕೋ ನೂತನವಾದ ಸಲಹೆ ಕೊಡಿ. ನಾನು ಏತಕ್ಕೆ ಈ ಮಾತು ಹೇಳ್ತಿದೀನಿ ಅಂದರೆ ಅಧಿಕಾರಿಗಳ ಮಾತೇ ಸಚಿವರಿಗೆ ವೇದವಾಕ್ಯ. ಇಂದು ಕೈಗಾರಿಕೆ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ನಿನ್ನೆ ನಾನು ಹೇಳಿದೆ, ತಾವು ಇದಿರೋ ಇಲ್ಲವೋ, ನಾವು ಜೀವನದಲ್ಲಿ ಒಂದು ಹೆಂಡ್ತಿ ಮದುವೆಯಾಗೋದು ಕಷ್ಟ, ಎರಡು ಹೆಂಡ್ತಿ ಮದುವೆಯಾದರೆ ಏನು ಅನುಭವ ಆಗುತ್ತದೋ ಒಂದು ಇಂಡಸ್ಟ್ರಿ ಮಾಡಿದರೆ ಅಷ್ಟೇ ಅನುಭವವಾಗುತ್ತದೆ. ಕರ್ನಾಟಕದಲ್ಲಿ, ಎರಡನೇ ಹೆಂಡ್ತಿ ಕಟ್ಟಿಕೊಂಡ ಹಾಗೇ ಆಗಿದೆ ಇಂಡಸ್ಟ್ರಿ ಶುರು ಮಾಡೋದು, ಬರೋದರಂಗಿಲ್ಲ, ಬಿಟ್ಟರೆ ಬಾಯಿ ಬಡ್ಕೊಳ್ಳೋದಂಗಿಲ್ಲ, ತಮಿಳುನಾಡಿಗೆ ನಮ್ಮ ಅಧಿಕಾರಿಗಳನ್ನು ಕಳಿಸಲಿ, ಅಲ್ಲಿ ಯಾವುದೇ ಜಿಲ್ಲಾ ಕೇಂದ್ರಕ್ಕೆ ಹೋಗಲಿ, ಬೆಂಗಳೂರು ನಗರಕ್ಕೆ ಬಂದಂಗಾಗುತ್ತದೆ. ಇಂಡಸ್ಟ್ರಿ. ಉದಾಹರಣೆಗೆ ಶಿವಕಾಶಿ ಎಂಬಲ್ಲಿಂದ ಇಡೀ ಇಂಡಿಯಾಕ್ಕೆ ಬೆಂಕಿಪಟ್ಟಣ ಹೋಗುತ್ತದೆ. ಕ್ಯಾಲೆಂಡರ್ಸ್ ಶಿವಕಾಶಿಯಿಂದ ಹೋಗುತ್ತದೆ. ಈಶ್ವರಪ್ಪನವರು ಹೇಳೋದರಲ್ಲಿ ಸತ್ಯ ಇದೆ. ಅವರು ಒಳ್ಳೆಯ ಸಲಹೆ ಕೊಡುತ್ತಿದ್ದಾರೆ. ಕೈಗಾರಿಕೆ ಮೇಲೆ, ಸರ್ಕಾರವೂ ಕಣ್ಣುತೆರೆಯಲಿ ಅಂತ.

ಶ್ರೀ ಕೆ. ಎಸ್. ಈಶ್ವರಪ್ಪ : ಟೀಕೆ ಮಾಡದಿದ್ದರೆ ಹೇಗೆ? ನೀವು ಮಾಡುತ್ತೀರೋ ಅನ್ಯಾಯ ಅನುಭವಸುತ್ತಾ ಇರೋದನ್ನು ಹೇಳಿದರೆ ಮತ್ತೇನು ಮಾಡುವುದು ಸ್ವಾಮಿ? ಟೀಕೆ ಅಂದರೆ ಏಕೆ ಹೆದರಿಕೊಳ್ಳಬೇಕು, ನಾವು ಮನನೊಂದು ಇಂಡಸ್ಟ್ರಿ ನಡೆಸುತ್ತಿರುವವರು ಎಷ್ಟು ಕಷ್ಟಪಡ್ತಿದೀವಿ ಎಂದು ನಮಗೆ ಗೊತ್ತಿದೆ, ಶಾಸಕರಿಗೆ ಹೀಗಾದರೆ ಇಡೀ ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಪ್ರಾರಂಭ ಮಾಡಬೇಕೆನ್ನುವ ಯುವಕರದು ನಾಯಿಪಾಡು, ದಯಮಾಡಿ ಅರ್ಥಮಾಡಿಕೋಬೇಕು. ಅವರು ವಿಚಿತ್ರ ಸ್ಥಿತಿಯಲ್ಲಿದ್ದಾರೆ ಕೆ.ಎಸ್.ಎಫ್‌ಯಿಂದ ಲೋನ್ ತಗೊಂಡು ಆಗಿರುತ್ತದೆ, ಬಿಲ್ಡಿಂಗ್‌ಕಟ್ಟಾಗಿರುತ್ತದೆ ಮೆಶಿನರಿ ಎಲ್ಲಾ ಬಂದಿರುತ್ತದೆ, ಕರೆಂಟಿಲ್ಲ, ಏನು ಮಾಡಬೇಕು? ನೇಣುಹಾಕಿಕೊಂಡು ಸಾಯೋ ಸ್ಥಿತಿ. ಕೆ.ಎಸ್.ಎಫ್.ಸಿ. ನೋಟಿಸ್ ಬರುತ್ತದೆ. ಕೆ.ಎಸ್.ಎಫ್.ಸಿ ತಪ್ಪು ಮಾಡುತ್ತದೆ ಎಂದು ನಾನು ಹೇಳುವುದಿಲ್ಲ. ಲೋನ್ ಕೊಟ್ಟಿರುತ್ತಾರೆ ಅದನ್ನು ವಸೂಲು ಮಾಡುವುದು ತಪ್ಪು ಅಂತ ಹೇಳುವುದಿಲ್ಲ. ಆದರೆ ಸರ್ಕಾರ ಏನು ಮಾಡಬೇಕೆನ್ನುವುದು ನನ್ನ ಪ್ರಶ್ನೆ. ಯಾವಾಗ ಕರೆಂಟ್ ಬರುತ್ತದೋ ಗೊತ್ತಿರುವುದಿಲ್ಲ. ಏಕಕಿಂಡಿ ಮೂಲಕ ತೀರ್ಮಾನ ಮಾಡುವುದಿಲ್ಲ ಒಂದು ಇಂಡಸ್ಟ್ರಿ ಪ್ರಾರಂಭವಾಗುವ ತನಕ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ವಹಿಸಿಕೊಳ್ಳಬೇಕು ಇಲ್ಲವೆಂದರೆ ಸಣ್ಣಕೈಗಾರಿಕೋದ್ಯಮಿಗಳು ಬದುಕುವ ಸ್ಥಿತಿಯಲ್ಲಿರುವುದಿಲ್ಲ, ಇದರ ಬಗ್ಗೆ ನೀವು ಪ್ರಯತ್ನಮಾಡಬೇಕು. ಇಡೀ ರಾಜ್ಯದ ಯುವಕರಿಗೆ ಉದ್ಯೋಗ ಕೊಡುವುದಷ್ಟು ಶಕ್ತಿ ದೇವರು ನಿಮಗೆ ಕೊಟ್ಟಿಲ್ಲ. ಯುವಕರು ಅವರೇ ಹುಡುಕಿಕೊಂಡುಹೋಗ್ತಾರೆ, ಬ್ಯಾಂಕಿಗೋ ಕೆ.ಎಸ್.ಎಫ್.ಸಿಗೂ ಸ್ವಂತದ್ದೋ ಸಾಲತಂದೋ ಇಂಡಸ್ಟ್ರಿ ಮಾಡ್ತಾರೆ, ಅವರು ಸ್ವಂತ ಶ್ರಮಹಾಕಿ ಇಂಡಸ್ಟ್ರಿ ಮಾಡ್ತಾರೆ, ಸ್ವಾಭಾವಿಕವಾಗಿ ಮೇಲೆ ಬರುತ್ತಾರೆ. ನೀವು ವಿಶ್ವ ಅಂತೆ ನಾಟಕ ಮಾಡ್ತಿದ್ದೀರಲ್ಲ, ಅವೆಲ್ಲ

ತಪ್ಪಿಹೋಗುತ್ತದೆ. ಈ ದಿಕ್ಕಿನಲ್ಲಿ ಪ್ರಯತ್ನಮಾಡಿ ಸಣ್ಣ ಕೈಗಾರಿಕೆ ಪ್ರಾರಂಭಿಸೋಕೆ ಎಲ್ಲಾ ಬೆಂಬಲ ಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : ಏತಕ್ಕೆ ಈ ಮಾತು ಹೇಳುತ್ತೇವೆ ಅಂದರೆ ವಿಶ್ವ ಬಗ್ಗೆ ನಿನ್ನೆ ಹೇಳಿದೆ. ಇಂದಿರಾಗಾಂಧಿಯವರು ಫ್ಯಾಮಿಲಿ ಪ್ಲಾನಿಂಗ್ ತಂದಾಗ ಅಪಹಾಸ್ಯ ಮಾಡಿದರು ದೇಶದ ರಾಜ್ಯದ ಜನ. ಇವತ್ತು 20 ವರ್ಷವಾದ ಮೇಲೆ ಅದಕ್ಕೆ ಇದೇ ರಾಜ್ಯದ ಜನ ಮಾರುಹೋದರು, ಹಾಗೆಯೇ ವಿಶ್ವ ಯೋಜನೆಗೆ ಕೇವಲ 4 ತಿಂಗಳಾಗಿದೆ, ಈಗಲೇ ಅದರ ಕತ್ತು ಹಿಸುಕುವ ಕೆಲಸ ಮಾಡಬೇಡಿ, ಸ್ವಲ್ಪ ಅದಕ್ಕೆ ಅವಕಾಶ ಕೊಡಿ, ಚೆನ್ನಾಗಿ ಇರುವ ಯೋಜನೆ ಅದು.

ಶ್ರೀ ಕೆ. ಎಸ್. ಈಶ್ವರಪ್ಪ : ವಿಶ್ವ ಯೋಜನೆಗೆ ಬಗ್ಗೆ ಹೇಳುವಾಗ ಶಿವರಾಮೇಗೌಡರು ಇರಲಿಲ್ಲ ಹೊರಗಡೆ ಹೋಗಿದ್ದರು, ವಿಶ್ವ ಯೋಜನೆಯ ಹೆಸರಿನಲ್ಲಿ ಒಂದು ಲಾರಿ ಕೊಟ್ಟರು, ನಿಮಗೆ ಗೊತ್ತಿಲ್ಲ, ಲಾರಿಗೂ ವಿಶ್ವ ಯೋಜನೆಗೂ ಏನು ಸಂಬಂಧ ಹೇಳಿ? ಇದರಲ್ಲಿ ಏಕೆ ರಾಜಕೀಯ? ಇದು ರಾಮ ಶಿವ - ರಾಮೇಶ್ವರದಾಗೆ ಇದು ಇರಬಹುದೇ? ಇನ್ನು ಶಿವಮೊಗ್ಗ ಕ್ಷೇತ್ರದ ಬಗ್ಗೆ ಮುಖ್ಯಮಂತ್ರಿಗಳು ಒಳ್ಳೆಯ ಕೆಲಸ ಮಾಡಬೇಕೆಂಬ ಅಪೇಕ್ಷೆ ಅವರದು ಎಂದು ನೋಡಿದೀನಿ ನಾನೂ. ಶಿವಮೊಗ್ಗ ಭದ್ರಾವತಿ ಕಾರ್ಪೊರೇಷನ್ ಮಾಡಬೇಕೂ ಎಂದು ತೀರ್ಮಾನ ಏನೋ ಮಾಡಿದ್ದಾರೆ. ಹಾಗೆ ಮಾಡುವಾಗ ಯೋಜನೆ ಹಾಕಿಕೊಂಡು ಮಾಡಲಾಗುವುದೆಂದು ಹೇಳಿದ್ದಾರೆ. ಈಗಾಗಲೇ ಶಿವಮೊಗ್ಗ ಮತ್ತು ಭದ್ರಾವತಿಯಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ., ಜನರು ಪ್ರಜಾಪ್ರಭುತ್ವದ ಮೂಲಕ 5 ವರ್ಷಕ್ಕೆ ಅವರಿಗೆ ವೋಟ್ ಕೊಟ್ಟು ಅಧಿಕಾರ ಕೊಟ್ಟಿದ್ದಾರೆ, ಇವರೇನಾದರೂ ಕಾರ್ಪೊರೇಷನ್ ಮಾಡಬೇಕೆನ್ನುವ ಹೆಸರಿನಲ್ಲಿ ರಾಜಕೀಯ ಮಾಡಿ ಅವರ ಸದಸ್ಯತ್ವವನ್ನು ಮೊಟಕುಮಾಡಿದರೆ, ಅಥವಾ ಅವರ ಮೆಂಬರ್‌ಶಿಪನ್ನು ಅಬಾಲಿಷ್ ಮಾಡಿದರೆ ಇಡೀ ಶಿವಮೊಗ್ಗ ಜಿಲ್ಲೆ ಎದ್ದುಕೂರುತ್ತದೆ ಸರ್ಕಾರದ ವಿರುದ್ಧ ಎಂದು ಹೇಳಲು ಬಯಸುತ್ತೇನೆ. ನೀವು ಕಾರ್ಪೊರೇಷನ್ ಮಾಡಲು ಏನು ಬೇಕೋ ಎಲ್ಲಾ ತಯಾರು ಮಾಡಿಕೊಂಡು ಡಿವಿಜನ್ ಬೈಫರ್ಕೇಟ್ ಮಾಡಿ, ವೋಟರ್ಸ್ ಲಿಸ್ಟ್ ತಯಾರು ಮಾಡಿ ಇನ್ನು ಐದು ವರ್ಷದ ನಂತರ ಚುನಾವಣಾ ಸಂದರ್ಭ ಬಂದಾಗ ಅದಕ್ಕೆ ಬೇಕಾದ್ದೆಲ್ಲ ತಯಾರು ಮಾಡಿಕೊಂಡು ಆಗ ಕಾರ್ಪೊರೇಷನ್ ತನ್ನಿ, ಇವತ್ತು ಮುಖ್ಯಮಂತ್ರಿಗಳಿಗೆ ಬೇಡವಾದ ಶಿವಮೊಗ್ಗ ಭದ್ರಾವತಿ ನಗರಸಭೆ, ಕಾಂಗ್ರೆಸ್ ವರ್ಷಕ್ಕೆ ಬೇಡವಾದ ನಗರ ಸಭೆಗಳಿವೆ ಎನ್ನುವ ಹೆಸರಲ್ಲಿ ಕಾರ್ಪೊರೇಷನ್ ಮೊಟಕುಗೊಳಿಸುವ ರಾಜಕೀಯ ಮಾಡಬಾರದು ಅಂತ ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಮತ್ತೆ ಅಭಿವೃದ್ಧಿಪಡಿಸಬೇಕೆಂಬ ಆಸೆಯಿಂದ ಮಾಡ್ತಿದ್ದೇನೆ ಎಂದು ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳಿದ್ದಾರೆ. 90-91, 91-92ರಲ್ಲಿ ಇವತ್ತಿನತನಕ ಶಿವಮೊಗ್ಗ ನಗರಸಭೆಗೆ ವಿಶೇಷ ಅಭಿವೃದ್ಧಿ ಅನುದಾನ ಒಂದು ಪೈಸೆ ಬಿಡುಗಡೆ ಮಾಡಿಲ್ಲ. ಏಕೆ ಮಾಡಿಲ್ಲ ಸ್ವಾಮಿ? ಅಲ್ಲಿಂದ ಪ್ರವೇಶ ತೆರಿಗೆಗಳನ್ನು ಬೇಕಾದಷ್ಟು ತಗೊಂಡಿದ್ದಾರೆ. ವಿಶೇಷ ಅಭಿವೃದ್ಧಿ ಅನುದಾನ ಮಾತ್ರ ಒಂದು ಪೈಸೆ ಬಿಡುಗಡೆ ಮಾಡಿಲ್ಲ. ಏಕೆ ಶಿವಮೊಗ್ಗದಲ್ಲಿ ಬಿ.ಜೆ.ಪಿ. ಅಧಿಕಾರಿಲ್ಲಿರುವುದು ನಿಮಗೆ ಇಷ್ಟವಿಲ್ಲವೇ? ನಿಮ್ಮನ್ನೇ ಗೆಲ್ಲಿಸಬೇಕೇ? ಈ ರೀತಿ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ನಗರಸಭೆ ಪುರಸಭೆ ಕಾರ್ಪೊರೇಷನ್‌ಗಳಿಗೂ ಕೂಡ ಪಕ್ಷಭೇದ ಮರೆತು ಸರ್ಕಾರ ಇಡೀಸಮಾಜದ ಹಿತದೃಷ್ಟಿಯಿಂದ ಅನುದಾನವನ್ನು ಯಾವುದೇ ಒಂದು ತಾರತಮ್ಯ ಮಾಡದೇ ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಲು ನಾನೂ ಬಯಸುತ್ತೇನೆ. ಇನ್ನು ಪ್ರವೇಶತೆರಿಗೆ, ಇದರ ಸಂಗ್ರಹ ಈಗಾಗಲೇ ಮಾಡುತ್ತಿದ್ದಾರೆ. ಸರಿಯಾದ ಸಮಯಕ್ಕೆ ಆಯಾ ನಗರಸಭೆಗೆ ಹೋಗುತ್ತಾರೋ ಇಲ್ಲ. ನಾನು ಹೇಳುವುದು ಪ್ರವೇಶ ತೆರಿಗೆ ಸಂಗ್ರಹ ಮಾಡಿದ್ದರಲ್ಲಿ 5 ಪರ್ಸೆಂಟೋ 10 ಪರ್ಸೆಂಟೋ ಏನು ನೀವು ಸಂಗ್ರಹದ ಶುಲ್ಕ ಇದೆ

ಮುರಿದುಕೊಂಡು ಉಳಿದದ್ದನ್ನು ಆಯಾ ನಗರಸಭೆಗಳಿಗೆ ಆಯಾ ತಿಂಗಳಲ್ಲೇ ಕಳಿಸಿಕೊಡಿ. ವಿಧಾನಸಭೆ ಪ್ರಾರಂಭವಾಗಿರುವಾಗ ಬಜೆಟ್ ಮಂಡನೆ ಮಾಡುವುದಕ್ಕೆ ಮೂರು ದಿನ ಮುಂಚೆ ನಾನೊಂದು ಪ್ರಶ್ನೆ ಕಳಿಸಿದ್ದೆ, ಈ ರಾಜ್ಯದಲ್ಲಿ ಆಕ್ಟ್ರಾಯ್‌ಯನ್ನು ಜಾರಿಗೆ ತರುತ್ತೀರಾ ಎಂದು ಮತ್ತು ಅದರ ಬಗ್ಗೆ ಇರುವ ಸಮಸ್ಯೆಗಳನ್ನು ಪರಿಹರಿಸಲು ನೀವೇನು ಮಾಡ್ತೀರಾ ಅಂತ? ನಗರಾಭಿವೃದ್ಧಿ ಸಚಿವರು ಉತ್ತರ ಕೊಟ್ಟಿದ್ದರು, ಕರ್ನಾಟಕದಲ್ಲಿ ಆಕ್ಟ್ರಾಯ್ ಜಾರಿಗೆ ತರುತ್ತೇವೆ. ಯಾವತ್ತು, ಬಜೆಟ್ ಇನ್ನೆರಡು ದಿವಸ ಇರಬೇಕಾದರೆ. ಆ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತೇವೆ. ಏಕೆ ಈ ರೀತಿ ಸುಳ್ಳು ಆಶ್ವಾಸನೆ ಕೊಡ್ತೀರಿ. ಎರಡು ದಿವಸ ಬಜೆಟ್ ಮಂಡನೆಗಿಂತ ಮುಂದೆ ಆಕ್ಟ್ರಾಯ್ ತರುತ್ತೇವೆ ಎಂದು ಇಡೀ ರಾಜ್ಯದಲ್ಲಿ ಗೊಂದಲ ಉಂಟುಮಾಡಿ ಬಿಟ್ಟಿರಿ. ಎಲ್ಲಾ ಸಂಘ ಸಂಸ್ಥೆಗಳೂ ಚರ್ಚೆ ಮಾಡುವ ಸ್ಥಿತಿ ತಂದಿಟ್ಟು ಬಿಟ್ಟಿರಿ. ಆಕ್ಟ್ರಾಯ್ ಬೇಕು ಅಂದವರಾರು? ಬೇಡ ಅಂದಾವರಾರು? ಗೊಂದಲ ಉಂಟು ಮಾಡಿ ಕೊನೆಗೆ ಈ ಪ್ರವೇಶ ತೆರಿಗೆ ತಂದಿದೀರಿ. ಆಕ್ಟ್ರಾಯ್‌ಯನ್ನು ಜಾರಿಗೆ ತರದೇ ಇದ್ದುದಕ್ಕಾಗಿ ರಾಜ್ಯದ ಜನತೆ ಪರವಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ.

ಆಕ್ಟ್ರಾಯ್‌ಯನ್ನು ಜಾರಿಗೆ ತಂದಿದ್ದರೆ ಕರ್ನಾಟಕ ರಾಜ್ಯದಲ್ಲಿ, ಭಾರತೀಯ ಜನತಾ ಪಕ್ಷದವರು ಉಗ್ರ ಹೋರಾಟವನ್ನು ಮಾಡುತ್ತೇವೆಂದು ಹೇಳಿದ್ದೆವು. ಸುದೈವದಿಂದ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಆಕ್ಟ್ರಾಯ್‌ಯನ್ನು ಜಾರಿಗೆ ತಂದಿಲ್ಲ ಅದಕ್ಕೋಸ್ಕರ ನಾನು ಸಂತೋಷಪಡುತ್ತೇನೆ. ಆ ಪ್ರವೇಶ ತೆರಿಗೆಯ ಸಂಗ್ರಹ ಶುಲ್ಕವನ್ನು ಮುರಿದುಕೊಂಡು ಆಯಾ ತಿಂಗಳೇ ಹಣವನ್ನು ದೊರಕಿಸಿಕೊಳ್ಳುವುದಕ್ಕೆ. ಪ್ರಯತ್ನ ಮಾಡಿದರೆ ನಗರಸಭೆ. ಪುರಸಭೆಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮಾನ್ಯ ಕುವೆಂಪುರವರ ಹೆಸರಿನಲ್ಲಿ ಶಿವಮೊಗ್ಗದಲ್ಲಿ ಒಂದು ರಂಗಮಂದಿರ ನಿರ್ಮಾಣವಾಗುತ್ತದೆ. ಅದು ಈಗ ಒಂದು ರೀತಿಯ ಅಸ್ಥಿಪಂಜರರೂಪದಲ್ಲಿ ನಿಂತುಹೋಗಿದೆ. ಕೆಳಗಡೆ ಫೌಂಡೇಷನ್ ಬಿಟ್ಟರೆ ಅಲ್ಲೊಂದು ಇಲ್ಲೊಂದು ಕಂಬಗಳನ್ನು ಬಿಟ್ಟರೆ ಇನ್ನೇನೂ ಇಲ್ಲ. ಇದು 6-7 ವರ್ಷಗಳಿಂದಲೂ ಹಾಗೆಯೇ ಬಿದ್ದಿದೆ. ಅದಕ್ಕಾಗಿ ಈಗ ಒಟ್ಟು 30 ಲಕ್ಷ ರೂಪಾಯಿವರೆಗೂ ಖರ್ಚಾಗಿದೆ. ಸರ್ಕಾರದಿಂದ ಅದಕ್ಕೆ ಕೇವಲ 10 ಲಕ್ಷ ರೂಪಾಯಿ ಮಾತ್ರ ದುಡ್ಡು ಬಂದಿದೆ. ಇನ್ನು 20 ಲಕ್ಷ ರೂಪಾಯಿಯನ್ನು ನಾವು ಶಿವಮೊಗ್ಗದವರೇ ವಿನಿಯೋಗಮಾಡಿದ್ದೇವೆ. ನ್ಯಾಯವಾಗಿ ಸರ್ಕಾರದಿಂದ ಬರಬೇಕಾದ ಗ್ರ್ಯಾಂಟ್ ಬಂದಿಲ್ಲ. ಇನ್ನು ಹೆಚ್ಚಿನ ಗ್ರ್ಯಾಂಟ್ ಏನು ಬರಬೇಕೋ ಅದನ್ನು ಕೊಡಿ ಎಂದು ಕೇಳಿದಾಗ, ಖಂಡಿತ ಕುವೆಂಪು ರಂಗಮಂದಿರವನ್ನು ನಿರ್ಮಾಣಮಾಡುವುದಕ್ಕೆ ಹಣಕಾಸನ್ನು ಕೊಡುತ್ತೇವೆಂದು ಲೋಕೋಪಯೋಗಿ ಸಚಿವರು ಹೇಳಿದ್ದರು. ಈ ಬಜೆಟ್‌ನಲ್ಲಿ ಅದಕ್ಕೆ ಪ್ರವಿಜನ್ ಮಾಡಿ ಇಟ್ಟು ಕೊಂಡಿಲ್ಲ. ಇನ್ನು 50-60 ಲಕ್ಷ ರೂಪಾಯಿ ಹಣ ಇದಕ್ಕೆ ಬೇಕು. ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿ ಅವರು ಜೀವಂತವಾಗಿರುವಾಗಲೇ ಅವರ ಕೈಯಲ್ಲಿ ಈ ರಂಗಮಂದಿರವನ್ನು ಉದ್ಘಾಟನೆಯನ್ನು ಮಾಡಿಸಬೇಕೆಂದು ಶಿವಮೊಗ್ಗ ನಗರದ ಜನತೆಗೆ ಆಸೆ ಇದೆ. ಈ ದಿಕ್ಕಿನಲ್ಲಿ ಸರ್ಕಾರದಲ್ಲಿ ಪ್ರಯತ್ನಮಾಡಿ ಅದಕ್ಕೆ ಹಣ ಬಿಡುಗಡೆ ಮಾಡಿ ತಕ್ಷಣ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೃಷ್ಣ ಮತ್ತು ಕಾವೇರಿ ಯೋಜನೆಗಳ ಬಗ್ಗೆ ರಾಜ್ಯಸರ್ಕಾರ ಬಜೆಟ್‌ನಲ್ಲಿ ಹೇಳಿಕೊಂಡಿದೆ. ಈ ಬಚಾವತ್ ಅವಾರ್ಡ್ ಪ್ರಕಾರ 2000 ಇಸವಿಯೊಳಗೆ ಕರ್ನಾಟಕ ಆಂಧ್ರ, ತಮಿಳುನಾಡು ಮೂರು ರಾಜ್ಯದವರು ಏನು ನೀರನ್ನು ಬಳಸಿಕೊಳ್ಳಬೇಕೋ ಅದರಲ್ಲಿ ಉಳಿದಂತಹ ನೀರನ್ನು 2000 ಇಸವಿಯ ನಂತರ ನಾವು ಬಳಸಿಕೊಳ್ಳಬೇಕು ತಮಿಳುನಾಡು ಮತ್ತು ಆಂಧ್ರದವರು ಅವರು ಬೇಕಾದಷ್ಟು ನೀರನ್ನು ಆಗಲೇ ಬಳಸಿಕೊಂಡಿದ್ದಾರೆ. 2000 ಇಸವಿಗೆ ಬಳಸಿಕೊಳ್ಳಬೇಕಾದಂತಹ ನೀರನ್ನು 1992ರಲ್ಲಿಯೇ ಬಳಸಿಕೊಂಡು ಮುಗಿಸಿಬಿಟ್ಟಿದ್ದಾರೆ. ನಮ್ಮ ರಾಜ್ಯ ಸರ್ಕಾರ ಶೇಕಡ 11

ರಷ್ಟು ಮಾತ್ರ ಕೆಲಸ ಮಾಡಿದೆ. ಇನ್ನು 2000 ಇಸವಿಯೊಳಗೆ ಉಳಿದಿದ್ದನ್ನು ಮಾಡುವುದಕ್ಕೆ ಇವರ ಕೈಯಲ್ಲಿ ಸಾಧ್ಯವೇ? ಇಲ್ಲಿ ಏನು ಕೆಲಸವಾಗಿದೆ ಎಂದು ನಮ್ಮ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಗುಂಪೇ ಹೋಗಿ ನೋಡಿದೆ. ದೊಡ್ಡ ದೊಡ್ಡ ಐ.ಬಿಗಳನ್ನು ಕಟ್ಟಿದ್ದಾರೆ. ಏನು ಕೆಲಸಗಳು ಆಗಬೇಕೋ ಆ ಕೆಲಸಗಳು ಆಗಿಲ್ಲ. ನೀರಾವರಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿತ್ತೋ ಇವತ್ತಿನವರೆಗೂ ಬಿಡುಗಡೆ ಮಾಡಿಲ್ಲ. ಐಶಾರಾಮ ಜೀವನ ಸಾಗಿಸಲು ಅಧಿಕಾರಿಗಳಿಗೆ ಮಂತ್ರಿಗಳಿಗೆ ಹಣ ಪೂರ್ಣವಾಗಿ ವಿನಿಯೋಗವಾಗಿದೆ. ಅದಕ್ಕೋಸ್ಕರ ಈ ಪರಿಸ್ಥಿತಿ ಬಂದಿದೆ. 2000 ಇಸವಿಯೊಳಗೆ ಈ ಎರಡೂ ಯೋಜನೆಗಳು ಕಾರ್ಯಗತವಾಗಬೇಕಾಗಿದರೆ ಎಂಟು ಸಾವಿರ ಕೋಟಿ ರೂಪಾಯಿ ಹಣಬೇಕು, ಇನ್ನು ಎಂಟು ವರ್ಷ ಇದೆ. ಒಂದೊಂದು ವರ್ಷಕ್ಕೆ ಕನಿಷ್ಠ ಒಂದೊಂದು ಸಾವಿರ ಕೋಟಿ ರೂಪಾಯಿ. ಹಣವನ್ನು ತೆಗೆದಿಡಬೇಕು. ಆಗ ಮಾತ್ರ ಈ ಎರಡೂ ಯೋಜನೆಗಳು ಯಶಸ್ವಿಯಾಗುತ್ತದೆ. ಇವರು ಹೇಳಿದ ಹಾಗೆ 300-400 ಕೋಟಿಯಷ್ಟು ಬಿಡುಗಡೆ ಮಾಡಿದರೆ ಈ ರಾಜ್ಯದ ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅದಕ್ಕೋಸ್ಕರ ಈ ಕೃಷ್ಣ ಮತ್ತು ಕಾವೇರಿಗೆ ಕನಿಷ್ಟ ಒಂದೊಂದು ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಮಾಡುವುದಕ್ಕೆ ಇಷ್ಟಪಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಸರ್ಕಾರದ ಯೋಜನೆ ಏನು ಇದೆ ಆ ಪ್ರಕಾರ ನಮ್ಮ ಮುಖ್ಯಮಂತ್ರಿಗಳು ಮತ್ತು ಸಚಿವರು ಮಾಡುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಆ ಹಣವನ್ನು ಎಲ್ಲಿಂದ ತರಬೇಕೆಂದು ಹೇಳುತ್ತೇನೆ. ಈ ವಿಧಾನ ಸಭೆಯಲ್ಲಿ ಎಷ್ಟು ಕೂಗಿದರೂ ಕೂಡ ಈ ಸರ್ಕಾರಕ್ಕೆ ಅರ್ಥವಾಗುವಿದಿಲ್ಲ. ಅದಕ್ಕೋಸ್ಕರ ಉಳಿದ ಶಾಸಕರುಗಳು. ಸರ್ಕಾರವನ್ನು ಕಣ್ಣು ತಪ್ಪಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದ ಜನತೆಗೆ ತಿಳಿಸಿ ಈ ವಿಧಾನ ಸಭೆಗೆ ಬಹಿಷ್ಕಾರ ಹಾಕಿ ನಮ್ಮ ಯಡಿಯೂರಪ್ಪನವರು ಜಾಥಾ ಹೊರಟಿರುವುದು ನಿಮಗೆ ಗೊತ್ತಿದೆ. ಅವರ ಬೇಡಿಕೆ ಇಷ್ಟೇ, ಈ ಸರ್ಕಾರ ಬರೀ ಬಾಯಿಯಲ್ಲಿ ಹೇಳಿದರೆ ಕೇಳುವುದಿಲ್ಲ. 25ನೇ ತಾರೀಖು ಕನಿಷ್ಠ 5 ಲಕ್ಷ ಜನ ಈ ಸರ್ಕಾರದ ಕಣ್ಣನ್ನು ತೆಗಿಸಬೇಕೆಂದು ಸೇರುತ್ತೇವೆ. ಯಾವ ಯಾವ ರೀತಿಯಲ್ಲಿ ಹಣ ತರಬೇಕೆನ್ನುವುದಕ್ಕೆ ನಮ್ಮ ಬೇಡಿಕೆ ನಮ್ಮ ಬೇಡಿಕೆ ಕೂಡ ಇದೆ. ಯಾವ ರೀತಿ ಮಾಡಬೇಕೆಂದು ಸಹ ತಿಳಿಸುತ್ತಿದ್ದೇವೆ. ನಮ್ಮ ಬೇಡಿಕೆ ಇಷ್ಟೇ ಈ ರೈತ, ನೇಕಾರ, ಕೃಷಿಕಾರ್ಮಿಕ, ಮೀನುಗಾರರ 10 ಸಾವಿರವರೆಗಿನ ಸಾಲ ಮನ್ನಾ ಆಗಬೇಕು. ಬಲತ್ಕಾರದ ಸಾಲ ವಸೂಲಾತಿ ಜಪ್ತಿಯಾಗುತ್ತಿರುವುದನ್ನು ಪ್ರತಿಭಟಿಸಬೇಕು. ಕೃಷ್ಣ, ಕಾವೇರಿ, ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ 1000 ಕೋಟಿ ರೂಪಾಯಿ ಮೀಸಲಿಡಬೇಕು. ತುಂಗಾ ಮತ್ತು ಭದ್ರಾ ಮೇಲ್ದಂಡೆ ಯೋಜನೆಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು.

ವೈಸ್ ಚೇರ್ಮನ್ : ದಯವಿಟ್ಟು ಆ ಪಾಂಫ್ಲೆಟ್ ಓದಬಾರದು.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಪಾಂಫ್ಲೆಟ್ ಓದುತ್ತಿಲ್ಲ. ಆ ಯೋಜನೆಯ ಕೆಲಸವಾಗಬೇಕೆಂದು ನನಗೆ ಆಸೆ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಎಷ್ಟು ಮಾಡಬೇಕೋ ಅಷ್ಟು ಮುಖ್ಯ. ದಯವಿಟ್ಟು ನಮಗೂ ಅವಕಾಶ ಕೊಡಬೇಕಾಗುತ್ತದೆ. ಸದಸ್ಯರು ಈಲ್ಡ್ ಆಗಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ. ಈ ರಾಜ್ಯದಲ್ಲಿ ಕಳೆದ 40 ವರ್ಷಗಳಿಂದ ಸರ್ಕಾರ ನೋಡುತ್ತಿದ್ದೇವೆ. ಯಾವ್ಯಾವ ನೀರಾವರಿ ಯೋಜನೆಗಳಿಗೆ ಯಾವ್ಯಾವ ಮುಖ್ಯಮಂತ್ರಿಗಳು ಎಷ್ಟು ಹಣವನ್ನು ಇಟ್ಟಿದ್ದಾರೆ ಎನ್ನತಕ್ಕಂಥಾದ್ದೂ ಸಹ ರೆಕಾರ್ಡ್‌ನಲ್ಲಿದೆ. ಈಗಿನ ಮುಖ್ಯಮಂತ್ರಿಗಳು ಎಲ್ಲರಿಗಿಂತಲೂ

ಮಿಗಿಲಾಗಿ 400 ಕೋಟಿ ರೂಪಾಯಿಗಳನ್ನು ಇಟ್ಟಮೇಲೆ ನಿಜವಾಗಿಯೂ ರೈತಾಪಿ ವರ್ಗ ಇವರನ್ನು ಅಭಿನಂದಿಸಬೇಕು. ಕಾವೇರಿ ಮತ್ತು ಕೃಷ್ಣ ಜಲಾಶಯದ ಯೋಜನೆಗಳು ಬರತಕ್ಕಂಥಾದ್ದನ್ನು ನಾವು ಸ್ವಾಗತ ಮಾಡುತ್ತಿದ್ದೇವೆ. ಆದರೆ ಇವರು ಪ್ರಚಾರ ತೆಗೆದುಕೊಳ್ಳುವುದಕ್ಕೆ ಹೋದರೆ ಇದಕ್ಕೆ ಅವಕಾಶ ಕೊಡುವುದಕ್ಕಾಗುತ್ತದೆಯೇ? ಶ್ರೀ ಯಡಿಯೂರಪ್ಪನವರು ಪ್ರಚಾರಕ್ಕೆ ಹೋಗಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಡಿಯೂರಪ್ಪನವರು ಏತಕ್ಕೆ ಪ್ರಚಾರಕ್ಕೆ ಹೋಗಿದ್ದಾರೆ ಎನ್ನುವುದನ್ನು ಈ ರಾಜ್ಯದ ಜನತೆ ತೀರ್ಮಾನ ಮಾಡುತ್ತಿದ್ದಾರೆ. 28ನೇ ತಾರೀಖು ಏತಕ್ಕೆ ಪ್ರಚಾರಕ್ಕೆ ಹೋಗಿದ್ದಾರೆನ್ನುವುದು ಈ ರಾಜ್ಯದ ಜನತೆಗೆ ಬಂದು ಹೇಳುತ್ತಾರೆ, ಸರ್ಕಾರಕ್ಕೆ ಧಿಕ್ಕಾರ ಹಾಕುತ್ತಾರೆ. ಯಡಿಯೂರಪ್ಪನವರು ಏತಕ್ಕೆ ಹೋಗಿದ್ದಾರೆ? ಎಲ್ಲಿಂದ ಹಣ ತರಬೇಕು ? ಎನ್ನುವ ವಿಚಾರವನ್ನು ಶ್ರೀ ಶಿವರಾಮೇಗೌಡರಿಗೆ ಹೇಳಿದರು.

ವೈಸ್ ಚೇರ್ಮನ್ : ಶ್ರೀ ಈಶ್ವರಪ್ಪನವರೆ, ನೀವು ಶಿವರಾಮೇಗೌಡರಿಗೆ ಈಲ್ಡ್ ಆಗಬಾರದು. ನೀವು ಅವರಿಗೆ ಉತ್ತರ ಕೊಡಬಾರದು; ನಿಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಕೆ. ಎಸ್. ಈಶ್ವರಪ್ಪ : ಶಿವರಾಮೇಗೌಡರು ಪ್ರಶ್ನೆ ಕೇಳಿದರೆ ಇಡೀ ರಾಜ್ಯದ ಜನತೆಗೆ ಈ ಪ್ರಶ್ನೆ ಗೋತ್ತಾಗುತ್ತದೆ. ಉತ್ತರ ಕೊಟ್ಟರೆ ನಮಗೂ ಅರ್ಥವಾಗುತ್ತದೆ. ಇಲ್ಲವೆಂದರೆ, ಅದು ಭಾಷಣ ಮಾಡುಕೊಂಡು ಹೋಗುವ ಹಾಗೆ ಆಗುತ್ತದೆ. ಅವರು ಕೇಳುತ್ತಿರುವುದು ಸರಿ, ನಾನು ಉತ್ತರ ಕೊಡುತ್ತಿರುವುದು ಸರಿ. ನಾವು ಕಳೆದ ವಿಧಾನಸಭೆ ಚುನಾವಣೆಗಿಂತ ಮುಂಚೆ ಸ್ಪಷ್ಟವಾಗಿ ಹೇಳಿದ್ದೆವು. ಈ ರಾಜ್ಯದ ರೈತರ ಸಾಲ ಮನ್ನಾ ಹೇಗೆ ಮಾಡಬೇಕು? ಕೃಷ್ಣ, ಕಾವೇರಿ ಯೋಜನೆಗಳಿಗೆ ಹಣವನ್ನು ಎಲ್ಲಿಂದ ತರಬೇಕು? ಎಂದು ಹೇಳಿದ್ದೆವು. ಅಬ್ಕಾರಿ ತೆರಿಗೆಯಿಂದ ಪ್ರತಿ ದಿನ ಒಂದು ಕೋಟಿ ರೂಪಾಯಿ ಸೋರಿ ಹೋಗುತ್ತಿದೆ ಎನ್ನುವುದಕ್ಕೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಸೋರಿ ಹೋಗುತ್ತಿದ್ದುದ್ದನ್ನು ತಡೆಹಿಡಿದು ಸತ್ಯವೆಂದು ತೋರಿಸಿದ್ದಾರೆ, ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾದ ನಂತರ ಅವರು ಮಾಡಿದ ಮೊದಲ ಕಾರ್ಯವೆಂದರೆ ಅಬ್ಕಾರಿ ತೆರಿಗೆಗಳನ್ನು ಬಿಗಿ ಮಾಡಿದರು. ಇಡೀ ರಾಜ್ಯದಲ್ಲಿ ಸಾಕಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬಂತು. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಬರುತ್ತಿದ್ದಂತೆ ಆ ಹಣವೆಲ್ಲಾ ಮತ್ತೆ ವಾಪಸ್ಸು ಹೋಯಿತು. ಹೆಂಡದ ದೊರೆಗಳಿಗೆ ಪುರಸ್ಕಾರ ಸಿಕ್ಕಿತು, ಈ ರಾಜ್ಯದ ರೈತರಿಗೆ ತಿರಸ್ಕಾರವಾಯಿತು. ಅಲ್ಲಿಂದ ಮುಂದೆಯೂ ನಾವು ಹೇಳುತ್ತಾ ಬಂದಿದ್ದೇವೆ. ನಿಮಗೆ ಪ್ರಾಮಾಣಿಕವಾಗಿ ರಾಜ್ಯದ ರೈತರಿಗೆ ಸಾಲ ಮನ್ನಾ ಮಾಡಬೇಕೆಂಬ ಆಸೆ ಇದ್ದರೆ, ಕೃಷ್ಣಾಮತ್ತು ಕಾವೇರಿ ಯೋಜನೇಗಳಿಗೆ 1000 ಕೋಟಿ ರೂಪಾಯಿಗಳ ಹಣ ಬಿಡುಗಡೆಮಾಡಬೇಕೆಂದು ತೀರ್ಮಾನ ಮಾಡಿ. ಮತ್ತು ಅಬ್ಕಾರಿ ತೆರಿಗೆ ಏನು ಸೋರಿ ಹೋಗುತ್ತಿದೆ, ಅದನ್ನು ಬಿಗಿ ಮಾಡಿ, ಒಂದೊಂದು ದಿನಕ್ಕೆ 1 ಕೋಟಿ ರೂಪಾಯಿ ಆದಾಯ ಬರುತ್ತಿದೆ. ವರ್ಷಕ್ಕೆ 365 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಐದು ವರ್ಷಗಳಿಗೆ ಎಷ್ಟಾಗುತ್ತದೆ? ರೈತರ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತದೆ. ಈ ದಿಶೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದಕ್ಕೆ ಇಚ್ಛಪಡುತ್ತೇನೆ. ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿಲ್ಲ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಾಮಪ್ಪ : ಬಳ್ಳಾರಿ ಈಶ್ವರಪ್ಪನವರು ಬಳ್ಳಾರಿ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಮ್ಮ ತಂದೆ-ತಾಯಿಗಳು ಬಳ್ಳಾರಿಯವರು. ನಾನು ಹುಟ್ಟಿ, ಬೆಳೆದದ್ದು ಶಿವಮೊಗ್ಗದಲ್ಲಿ. ಅವರಿಗ ಏನು ಆಸೆ ಇದೆಯೆಂದರೆ, ಬಳ್ಳಾರಿಯವರು ಇಷ್ಟು ಚೆನ್ನಾಗಿ ಮಾತನಾಡುತ್ತಾರೆಂದು ಸಮಾಧಾನಪಟ್ಟು, ಕೊಳ್ಳುತ್ತಿದ್ದಾರೆ. ಹೀಗಾದರೂ ಅವರಿಗೆ ತೃಪ್ತಿಯಾಗಲೆಂದು ನನ್ನ ಆಸೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಅಲ್ಲದೆ ಇಡೀ ದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ರಾಜೀವಗಾಂಧಿಯವರು ಹೇಳಿದ್ದುದು ನಿಮಗೆ ಗೊತ್ತಿದೆ. ಇವೊತ್ತಿನ ದಿವಸ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಸ್ಥಿತಿ ನೋಡಿದರೆ ನಮಗೆ ಗಾಬರಿಯಾಗುತ್ತದೆ. ಮಂಡಲ ಪಂಚಾಯಿತಿಗಳನ್ನು ಕಿತ್ತು ಎಸೆದುಬಿಟ್ಟಿದ್ದಾರೆ. ಅಲ್ಲಿ ಎಲ್ಲವೂ ಸರಿಯಾಗಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅಲ್ಲಿ ಅನೇಕ ಭ್ರಷ್ಟಾಚಾರ, ಅವ್ಯವಹಾರಗಳು ಆಗುತ್ತಿದ್ದು, ಅದನ್ನು ಹೇಗೆ ಸರಿ ಮಾಡಬೇಕೆಂಬುದರ ಬಗ್ಗೆ ನೀವು ಯೋಚನೆ ಮಾಡಬೇಕು. ಮಗು ಅಳುತ್ತದೆಂದು ಮಗುವಿನ ಕುತ್ತಿಗೆ ಕುಯ್ಯುವುದಲ್ಲ. ಮಗು ಏತಕ್ಕೆ ಅಳುತ್ತದೆ? ಮಗುವಿನ ತಪ್ಪು ಏನಿದೆ, ಅದನ್ನು ತಿದ್ದುವಂಥ ಪ್ರಯತ್ನ ಮಾಡಬೇಕು. ಅದನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು. ಆಗ ಮಾತ್ರ ಮಗುವಿನ ಸರ್ವಾಂಗೀಣ ಬೆಳವಣಿಗೆಯಾಗುತ್ತದೆ. ಆದರೆ, ಸರ್ಕಾರ ಏನು ಮಾಡಿತೆಂದರೆ, ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಅನ್ಯಾಯವಾಗುತ್ತಿದೆ. ಎಂದು ತಿಳಿದುಕೊಂಡು ಅದರ ಕತ್ತು ಹಿಸುಕಿಬಿಟ್ಟಿದೆ.

ವೈಸ್ ಚೇರ್ಮನ್ : ಅವರು ವಜಾ ಮಾಡಲಿಲ್ಲ. ಐದು ವರ್ಷ ಪಿರಿಯಡ್ ಪೂರೈಸಿದೆ.....

ಶ್ರೀ ಕೆ. ಎಸ್. ಈಶ್ವರಪ್ಪ : ಪಿರಿಯಡ್ ಮುಗಿದರೆ ಏನು ಮಾಡುತ್ತಾರೆ ಸ್ವಾಮಿ? ಜೀವ ಕೊಡಬಹುದು ತಾನೆ. ಜೀವ ಕೊಡುವುದು ಅಂದರೆ ಸಾಯಿಸುವುದು. ಎರಡು ಒಂದೇ ತಾನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಸದನದಲ್ಲಿ ತಿದ್ದುಪಡಿ ಮಾಡುವುದಕ್ಕೋಸ್ಕರ ಚರ್ಚೆ ಮುಂದಕ್ಕೆ ಹೋಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಸರ್ಕಾರ 1989ರಲ್ಲಿ ಅಧಿಕಾರಕ್ಕೆ ಬಂತು ಅವೊತ್ತಿನಿಂದ ಇವೊತ್ತಿನವರೆವಿಗೂ ಮಲಗಿಕೊಂಡಿದ್ದೀರಾ? ಏತಕ್ಕೆ ತಿದ್ದುಪಡಿ ತರಲಿಲ್ಲ? ನಾಟಕ ಮಾಡುತ್ತಿದ್ದೀರಾ?

(ಗೊಂದಲ)

ಸಮಯ ಮುಗಿದಿದೆಯಂತೆ, ಸಮಯ, ಇದನ್ನು ಕೊನೆಯಲ್ಲಿ ಹೇಳಬೇಕೆ? 1989ರಿಂದ 1992ರವರೆಗೆ 2-3 ವರ್ಷಗಳಾಯಿತು ನಿಮ್ಮದೇ ಸರ್ಕಾರವಿದೆ ನೀವು ತಿದ್ದುಪಡಿತರಲು ಪ್ರಯತ್ನ ಮಾಡಿದ್ದೀರ? ಅದನ್ನು ತಂದಿಲ್ಲ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಸಮಯ ಮುಗಿದು ಹೋಗಿದೆ ಅದಕ್ಕೆ ತಿದ್ದುಪಡಿಯನ್ನು ತರಬೇಕು ಎಂದು ಹೇಳುತ್ತಿದ್ದೀರಿ ಚುನಾವಣೆ ಮಾಡುವವರೆಗೆ ರಾಜ್ಯದ ಬೊಕ್ಕಸ ಖಾಲಿಯಾಗುತ್ತದೆ ಅಧಿಕಾರಿಗಳು ಜೇಬನ್ನು ಭರ್ತಿ ಮಾಡಕೊಳ್ಳುತ್ತಾರೆ, ನಿಮಗೆ, ಶಾಸಕರಿಗೆ ಮತ್ತು ಮಂತ್ರಿಗಳಿಗೆ ತಂದು ತಂದು ಕೊಡುತ್ತಾರೆ ಇದಕ್ಕೋಸ್ಕರ ಇವತ್ತು ಚುನಾವಣೆಯನ್ನು ಮಾಡಿತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು : ನಿಮಗೆ ಎಷ್ಟು ಕೊಡುತ್ತಾರೆ ?

ಶ್ರೀ ಕೆ.ಎಸ್. ಈಶ್ವರಪ್ಪ : ಜನತಂತ್ರವನ್ನು ಉಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ನಾಟಕವಾಡದೆ ತಕ್ಷಣ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಯನ್ನು ಮಾಡಿ.

ತಿದ್ದುಪಡಿಯನ್ನೇನಾದರೂ. ತರಬೇಕಾದರೆ ಆಮೇಲೆ ತನ್ನಿ. ಚುನಾವಣೆ ಬೇಡ ನಮಗೆ ಎಂದು ನಾಟಕವನ್ನು ಮಾಡಿಕೊಂಡು ತಿದ್ದುಪಡಿಯನ್ನು ಮಾಡಬೇಕೆಂದು ಹೇಳಿಕೊಂಡು ಈ ರೀತಿ ಚುನಾವಣೆಯನ್ನು ಮುಂದುವರೆಸಿ ಆಡಳಿತಾಧಿಕಾರಿಗಳನ್ನು ಬಿಡುತ್ತೀರಾ? ಆಡಳಿತಾಧಿಕಾರಿಗಳು ಆಡಳಿತವನ್ನು ನಡೆಸಬೇಕೆ? ಪ್ರತಿದಿನ ಕೋಟ್ಯಾಂತರ ರೂಪಾಯಿಗಳಷ್ಟು ಹಣದ ವ್ಯಯವಾಗುತ್ತಿದೆ ಇದಕ್ಕೆ ಯಾರು ಜವಾಬ್ದಾರರು?

ಡಾ।। ಎನ್.ಬಿ.ನಂಜಪ್ಪ : ಉಪಾಧ್ಯಕ್ಷರೆ, ಈಶ್ವರಪ್ಪನವರ ಧಾಟಿಯನ್ನು ನೋಡಿದರೆ ಸಿನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ: ಎನ್ನುವಂತಿದೆ.

ಶ್ರೀ ಟಿ.ಎಂ.ಮಂಜುನಾಥ್ : ಉಪಾಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾ ಕೆಲವು ಆರೋಪಗಳನ್ನು ಮಾಡಿದ್ದಾರೆ. ಅದು ಕದತದಲ್ಲಿದೆ. ಅವರು ಜಿಲ್ಲಾ ಪರಿಷತ್ ಅಧಿಕಾರಗಳು ಶಾಸಕರಿಗೆ ಹಣವನ್ನು ತಂದು ಕೊಡತಕ್ಕ ಬಗ್ಗೆ ಆರೋಪವನ್ನು ಮಾಡಿದ್ದಾರೆ. ಈ ಶಾಸನಸಭೆಯಲ್ಲಿರತಕ್ಕ ಸದಸ್ಯರ ಬಗ್ಗೆ ಅವರು ಹೇಳ ಬೇಕಾದರೆ ದಯಮಾಡಿ ಸಂಬಂಧಿಸಿದವರ ಹೆಸರು ಹೇಳಿದರೆ ಅನುಕೂಲವಾಗುತ್ತದೆ. ಸುಮ್ಮನೆ ಒಟ್ಟಾರೆಯಾಗಿ ಹೇಳುವುದು ಸರಿಯಲ್ಲ.

(ಗೊಂದಲ)

ಒಬ್ಬ ಸದಸ್ಯರು : ಉಪಾಧ್ಯಕ್ಷರೇ, ಈಶ್ವರಪ್ಪನವರು ಅವರನ್ನು ಸೇರಿಸಿಕೊಂಡು ಹೇಳಿದ್ದಾರೆಯೇ? ಅವರನ್ನು ದೂರತಾಗಿ ಹೇಳಿದ್ದಾರೆಯೇ? ಅಥವಾ ಅವರನ್ನು ಸೇರಿಸಿಕೊಂಡು ಹೇಳಿದ್ದಾರೋ ಅದನ್ನು ಅವರು ಸ್ಪಷ್ಟಪಡಿಸಬೇಕು.

ಶ್ರೀ ಟಿ.ಎಂ. ಮಂಜುನಾಥ್ : ಉಪಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ಬರಬೇಕು ಒಳ್ಳೆಯ ಆರೋಗ್ಯವಾಗಿರತಕ್ಕ ಒಂದು ಮಾತನ್ನು ಈ ಸಭೆಯಲ್ಲಿ ಹೇಳಬೇಕು, ಅವರುಗಳ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು, ಸಲಹೆಗಳನ್ನು ವ್ಯಕ್ತಪಡಿಸಬೇಕು ಎನ್ನತಕ್ಕ ಒಂದು ಉದ್ದೇಶದ ಫಲವಾಗಿ ಅವರಿಗೆ ನಾವು ಇವತ್ತು ಮಾತನಾಡಲು ಅವಕಾಶವನ್ನು ಮಾಡುಕೊಟ್ಟು ಅವರು ಬಹಳ ಸಂತೋಷದಿಂದ ಎಲ್ಲಿಗೆ ಬಂದಿದ್ದಾರೆ ಅದಕ್ಕೆ ನಾನು ಅವರನ್ನು ಸ್ವಾಗತಿಸುತ್ತೇನೆ. ಆದರೆ ಬಿ.ಜೆ.ಪಿ.ಯವರು ತಾವು ವಿಚಾರವಂತಿಕೆಯೊಳಗೆ ಬಹಳ ಬುದ್ಧಿವಂತರಾಗಿದ್ದೀರಿ. ನಮಗೆ ನೀವು ಚುನಾವಣೆಯನ್ನು ಮೊದಲೆ ಏಕೆ ಮಾಡಲಿಲ್ಲವೆಂದು ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ನಮಗೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿ ಎಷ್ಟರಮಟ್ಟಿಗಿದೆ, ಎಷ್ಟರಮಟ್ಟಿಗೆ ಅದು ಕೆಲಸ ಮಾಡುತ್ತದೆ ಎನ್ನತಕ್ಕದ್ದು ಗೊತ್ತಿರಲಿಲ್ಲ. ನಾವು ಅದರ ಪ್ರಯೋಗದ ಮಟ್ಟದಲ್ಲಿದ್ದಾಗ ಅಲ್ಲಿರತಕ್ಕ ನ್ಯೂನತೆಗಳನ್ನು ಕಂಡಿಹಿಡಿಯಬೇಕಾದರೆ ಕೆಲವಾರು ವರ್ಷಗಳು ಬೇಕಾಗುತ್ತದೆ. ನೀವು ಇದ್ದರು ಬೇಕಾಗುತ್ತದೆ, ನಾವಿದ್ದರೂ ಬೇಕಾಗುತ್ತದೆ. ಅದುದರಿಂದ ಮಾತನಾಡತಕ್ಕ ಧಾಟಿ ಎಲ್ಲೋ ವೇದಿಕೆಯ ಮೇಲೆ ಮಾತನಾಡಿದಂತೆ ಇರಬಾರದು ಅದು ಪ್ರಚಾರದ ಭಾಷಣವಾಗುತ್ತದೆ. ತಾವು ಮಾತನಾಡತಕ್ಕದನ್ನು ಇಡೀ ಕರ್ನಾಟಕದ ಜನತೆ ಕುಳಿತು ಕೇಳಬೇಕು ತಾವು ಒಳ್ಳೆಯ ಸಲಹೆಗಳನ್ನು ಕೊಡಿ. ಸುಮ್ಮನೆ ಜೀವವನ್ನು ಹಿಸುಕಿಬಿಟ್ಟರು, ಕತ್ತು ಹಿಸುಕಿಬಿಟ್ಟರು ಎಂದು ಹೇಳುವುದು ಸರಿಯಲ್ಲ. ಯಾರ ಕತ್ತನ್ನು ಯಾರು ಹಿಸುಕುತ್ತಾರೆ ಯಾರು ಜೀವವನ್ನು ಕೊಡುತ್ತಾರೆ ಅದನ್ನು ಮುಂದೆ ನೋಡೋಣ. ನಾವು ನೀವು ಮಾತನಾಡತಕ್ಕ ವೇದಿಕೆ ಬೇರೆ? ಆದರೆ ಈ ಸದನಕ್ಕೆ ತಾವು ಕೊಡಬೇಕಾಗಿರತಕ್ಕ ಗೌರವವನ್ನುಕೊಡಬೇಕು. ರಾಷ್ಟ್ರ ಮಟ್ಟದಲ್ಲಿ ಬಹಳ ಒಳ್ಳೆಯ ಭವಿಷ್ಯವನ್ನು ಹೊಂದಿರತಕ್ಕ ಪಕ್ಷ

ನಿಮ್ಮದು ಆದುದರಿಂದ ಅದಕ್ಕೆ ಹೆಚ್ಚಿನ ಜವಾಬ್ದಾರಿ ಇದೆ, ತಾವು ಏನು ಸಲಹೆಗಳನ್ನು ಕೊಡುತ್ತೀರಿ ಅದನ್ನು ನಮ್ಮ ನಾಯಕರು, ತಮ್ಮ ಸರ್ಕಾರ ಕೇಳಿ ತಮ್ಮ ಸಲಹೆಗಳನ್ನು ನಿಜವಾಗಿಯೂ ಪುರಸ್ಕಾರ ಮಾಡುತೇವೆ. ಎನ್ನತಕ್ಕ ಮಾತನ್ನು ಉಪಾಧ್ಯಕ್ಷರ ಮೂಲಕ ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಉಪಾಧ್ಯಕ್ಷರೆ, ಈ ರೀತಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಗಳನ್ನು ಮಾಡುವುದಕ್ಕಿಂತ ಮೊದಲು ಅಧಿಕಾರಿಗಳ ಕೈಯಲ್ಲಿ ರಾಜ್ಯವನ್ನು ಕೊಟ್ಟು ಆಡಳಿತವನ್ನು ನಡೆಸತಕ್ಕ ಒಂದು ಸಮಸ್ಯೆ ಬಂದಿರುವುದರಿಂದ ಎಷ್ಟು ಭ್ರಷ್ಟಾಚಾರವಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತ ಈ ಒಂದು ಚುನಾವಣೆಯನ್ನು ತಕ್ಷಣ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕಳೆದ ಅಧಿವೇಶನದ ಸಂದರ್ಭದಲ್ಲಿ ಬಿ. ಆರ್. ಪ್ರಾಜೇಕ್ಟ್‌ನಲ್ಲಿ ಭದ್ರ ಬಲದಂಡೆ ಒಡೆದು ಹೋಯಿತು ಎಂಬ ಅಂಶವನ್ನು ನಾನು ಹಿಂದೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಆಗ ಸನ್ಮಾನ್ಯ ಭಾರಿ ನೀರಾವರಿ ಸಚಿವರು ಹೇಳಿದರು ಏನು ಆಗಿಲ್ಲ ನಾನು ಹೆಲಿಕ್ಯಾಪ್ಟರ್ ತೆಗೆದುಕೊಂಡು ಹೋಗುತ್ತಾ ಇದ್ದೇನೆ, ಇನ್ನು 2 ತಿಂಗಳಲ್ಲಿ ನೀರು ಕೊಡುತ್ತೇನೆ, ಏನು ಚಿಂತೆ ಮಾಡಬೇಡಿ ಎಂದು ಹೇಳಿದ್ದರು. ಅವತ್ತಿನಿಂದ ಇವತ್ತಿನವರೆಗೂ ಕೂಡ ಸುಮಾರು 25 ಕೋಟಿ ರೂಪಾಯಿಗಳ ಬೆಳೆ ನಾಶವಾಗಿದೆ. ಆ ಭಾಗದ ಜನ ಭೀಕಾರಿಗಳಾಗತಕ್ಕ ಸ್ಥಿತಿಗೆ ಬಂದಿದ್ದಾರೆ. ಇವತ್ತಿನ ತನಕ ಏನು ಮಾಡಬೇಕು, ಏನು ಬಿಡಬೇಕು ಎನ್ನುವುದು ನಮಗೆ ಗೊತ್ತಿಲ್ಲ. ಜನ ಕೇಳುತ್ತಿರುವುದು ನೀರು, ಯಾವತ್ತು ನೀರು ಕೊಡುತ್ತೀರಿ ಈ ಬಗ್ಗೆ ಸಮರೋಪಾದಿಯಲ್ಲಿ ಕೆಲಸ ಆಗಬೇಕು ಎಂದು ಹೇಳುತ್ತೇನೆ. ವಿಧಾನಸಭೆಯಿಂದ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿಬಿಟ್ಟು ನೋಡಿಕೊಂಡು ಬರುತ್ತೇನೆ ಎಂದರೆ, ನೀರು ಸಿಗುವುದಿಲ್ಲ. ಜನಕ್ಕೆ ನೀರು ಕೊಡಬೇಕು ಎನ್ನುವ ಕಳಕಳಿ ನಿಮ್ಮಲ್ಲಿ ಇರಬೇಕು. ಆಗ ಮಾತ್ರ ಜನಕ್ಕೆ ನೀರು ಸಿಗುತ್ತದೆ. ಅದಕ್ಕೋಸ್ಕರ ಈ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಕ್ಷಣ ಆ ಜನಗಳಿಗೆ ನೀರು ಕೊಡುವ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡಬೇಕು ಎಂಬ ಯೋಜನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಜ್ಯದ ರೈತರ ಸಾಲ ಮನ್ನಾ ಮಾಡುವಂಥ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೆ, ಸರ್ಕಾರದ ಒಂದು ದೃಷ್ಟಿಯಲ್ಲಿ ರಾಜ್ಯದ ರೈತರ ಸಾಲ ಮನ್ನಾ ಆಗಿಲ್ಲ. ಆದರೆ, ರೈತರ ದೃಷ್ಟಿಯಲ್ಲಿ ಸಾಲ ಮನ್ನಾ ಆಗಿದೆ. ಈ ಶಾಸನಸಭೆ ನಡೆಸುವುದಕ್ಕಿಂತ ಮುಂಚೆ ಇದ್ದಕ್ಕಿದಂತೆ ಒಂದು ಗೆಜೆಟ್ ನೋಟಿಫಿಕೇಷನ್ ಬಂದಿರುವುದು ತಮ್ಮ ಗಮನಕ್ಕೂ ಬಂದಿರಬಹುದು. ಈ ಗೆಜೆಟ್ ನೋಟಿಫೀಕೇಷನ್ ಒಂದು ವಾರ ಆದ ಮೇಲೆ ನಮಗೆ ಸಿಕ್ಕಿತು. ಎಲ್ಲಿ ಅಬ್ಜೆಕ್ಷನ್ ಹಾಕುವುದಕ್ಕೂ ಕೂಡ ಅವಕಾಶ ಸಿಗಲಿಲ್ಲ. ಇನ್ನೂ ಈ ರಾಜ್ಯದ ಹೆಂಡದ ದೊರೆಗಳ ಅಸಲು ಬಾಕಿ ಬಡ್ಡಿ ಮನ್ನಾ ಆಗಿರುವುದರಿಂದ 81 ಕೋಟಿ ರೂಪಾಯಿಗಳು ಈ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವಂಥದ್ದು ತಪ್ಪಿದೆ. ಏತಕ್ಕಾಗಿ ಈ ಹೆಂಡದ ದೊರೆಗಳ ಬಗ್ಗೆ ಈ ಸರ್ಕಾರಕ್ಕೆ ಇಷ್ಟೊಂದು ಆಸಕ್ತಿಯೋ ಗೊತ್ತಿಲ್ಲ. ಅವರು ತುಂಬಾ ಬಡತನದಲ್ಲಿದ್ದಾರೋ, ಪಾಪ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿಯ ಒಂದೊತ್ತಿನ ಗಂಜಿ ಅವರಿಗೆ ಇಲ್ಲವೋ, ಊಟಕ್ಕೆ ತಿಂಡಿಗೆ ಅವರಿಗೆ ಹಣ ಇಲ್ಲವೋ, ಅದಕ್ಕೋಸ್ಕರ ಈ ಹೆಂಡದ ದೊರೆಗಳಿಗೆ ಸಾಲ ಬಡ್ಡಿ ಮನ್ನಾ ಮಾಡಬೇಕು ಎಂದು ಹೊರಟಿರುವರೋ ಏನೋ ನನಗೆ ಗೊತ್ತಿಲ್ಲ. ತಮ್ಮ ಮುಖಾಂತರ ಈ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಕೇವಲ ಹೆಂಡದ ದೊರೆಗಳಿಗೆ ಪುರಸ್ಕಾರ ಕೊಡುವುದಾದರೆ, ರೈತರನ್ನು

ತಿರಸ್ಕಾರ ಮಾಡುವುದಾದರ ನೀವು ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ ಎಂಬ ಅಂಶವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್‌ಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕು. ಏಕೆಂದರೆ. ಈ ಬಜೆಟ್ ಬೇಕಾದ ವಿಚಾರವನ್ನು ಎಲ್ಲಾ ವಿರೋಧ ಪಕ್ಷಗಳು ಪ್ರತಿಭಟನೆ ಮಾಡಿದ್ದವು. ಧರಣಿ ಮಾಡಿದವು. ಬಹಿಷ್ಕಾರ ಮಾಡಿದವು. ಇದೆಲ್ಲಾ ಆದಮೇಲೆ. ಸನ್ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ. ಸರ್ಕಾರ ಮತ್ತು ವಿರೋಧಪಕ್ಷಗಳ ನಾಯಕರ ಮಾತುಕತೆ ಆಯಿತು. ಅದರಲ್ಲೂ ಸರ್ಕಾರ ಸಮಿತಿ ರಚಿಸಲು ಆಶ್ವಾಸನೆ ಕೊಟ್ಟಿದೆ ಇದು ಒಂದು. ಸನ್ಮಾನ್ಯ ಸಭಾಧ್ಯಕ್ಷರು ಅಥವಾ ಸಭಾಧ್ಯಕ್ಷಣಿಯವರ ನೇತೃತ್ವದಲ್ಲಿ ಸದನದ ಸಮಿತಿ ಮಾಡಬೇಕಾಗಿದೆ. ಎರಡನೆಯದು ವಿರೋಧಪಕ್ಷಗಳ ಹಕ್ಕನ್ನು ಮೊಟಕು ಮಾಡಿ ಆಡಳಿತ ಪಕ್ಷದ ಶಾಸಕರೇ ಬಜೆಟ್ ಮೇಲೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದುದು. ಪ್ರಜಾಪ್ರಭುತ್ವಕ್ಕೆ ಒಂದು ಕೊಡಲಿ ಪೆಟ್ಟು. ಇದು ತಪ್ಪೆಂದು ಇದರ ಬಗ್ಗೆ ವಿಷಾದ ವ್ಯಕ್ತ ಪಡಿಸುತ್ತೇನೆಂದು ಈ ಒಂದು ಸಭೆಯಲ್ಲಿ ಈಗಾಗಲೆ ಹೇಳದಾಗಿದೆ. ಆ ಬಗ್ಗೆ ಆಶ್ವಾಸನೆ ಕೂಡ ಕೊಟ್ಟಿದ್ದಾರೆ. ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದಂಥ ಮಾತುಕತೆಯನ್ನು ನಂಬಿ ಅದಕ್ಕೆ ಇವರು ಸ್ಪಂದಿಸುತ್ತಾರೆ. ಎಂಬ ನಂಬಿಕೆಯಿಂದ ಇಲ್ಲಿ ಭಾರತೀಯ ಜನತಾ ಪಕ್ಷದವರು ಬಂದು ಭಾಗವಹಿಸಿದ್ದೇವೆ. ಕರ್ನಾಟಕ ರಾಜ್ಯದ ಜನತೆಯ ಹಣ ಪೋಲಾಗಬಾರದು ಎಂಬ ದೃಷ್ಟಿಯಿಂದ. ವಿಧಾನಸಭೆಯಲ್ಲಿ ಇದ್ದು ತಪ್ಪುನೆಪ್ಪುಗಳನ್ನು ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ಉದ್ದೇಶದಿಂದ ನಾವು ಒಳಗಡೆ ಬಂದು ಕುಳಿತಿದ್ದೇವೆ. ಆದರೆ, ನಾವು ಒಳಗಡೆ ಬಂದು ಕುಳಿತು ಇಷ್ಟು ಕಾಲವಾದರೂ ಸರ್ಕಾರವಾಗಲಿ. ಮುಖ್ಯಮಂತ್ರಿಯವರಾಗಲಿ. ಈವರೆಗೂ ಕೂಡ ಸದನ ಸಮಿತಿ ನೇಮಕ ಮಾಡಿಲ್ಲ. ಮತ್ತೆ ಇದರ ಬಗ್ಗೆ ಏನು ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡುವುದು ಬಿಟ್ಟು. ಆಡಳಿತ ಪಕ್ಷದ ನಾಯಕರಿಗೆ ಏನು ಅವಕಾಶ ಕೊಟ್ಟಿದ್ದೀರಿ ಅದರ ಬಗ್ಗೆ ಬೇಷರತ್ ಕ್ಷಮೆ ಕೇಳುತ್ತೇವೆಂದು ಹೇಳಿದ್ದಿರಿ. ಈ ಎರಡು ವಿಚಾರಗಳ ಬಗ್ಗೆ ಇನ್ನೂ ಕೂಡ ತಮ್ಮ ಆಶ್ವಾಸನೆಯನ್ನು ಈಡೇರಿಸಿಲ್ಲ. ನಾನು ಅದಕ್ಕೋಸ್ಕರ ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ. ಸರ್ಕಾರಕ್ಕೆ ಈ ಸದನದಲ್ಲಿ ಕೇಳಿಕೊಳ್ಳುವುದು ಇಷ್ಟೆ. ಸರ್ಕಾರ ಉತ್ತರ ಕೊಡುವುದಕ್ಕೆ ಮುಂದೆ ಸದನದ ಸಮಿತಿ ಘೋಷಣೆ ಮಾಡಬೇಕು. ಮತ್ತೆ ಬೇಷರತ್ ಕ್ಷಮೆ ಕೇಳಬೇಕು ಎಂದು ಸನ್ಮಾನ್ಯ ಸಭಾಧ್ಯಕ್ಷರ ಮುಖಾಂತರ ಕೇಳುತ್ತೇನೆ. ಆಶ್ವಾಸನೆ ಕೊಟ್ಟಿರುವ ಪ್ರಕಾರ ಅವರು ಕ್ಷಮೆ ಕೇಳಿ ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಡೀ ಕರ್ನಾಟಕ ರಾಜ್ಯದ ಜನತೆ ನಮ್ಮ ವಿಧಾನಸಭೆಯಲ್ಲಿ ಏನು ಆಗುತ್ತದೆ. ಸರ್ಕಾರ ಏನು ಆಶ್ವಾಸನೆ ಕೊತ್ತಿದೆ ಎಂದು ನೋಡುತ್ತಿದ್ದಾರೆ. ಆಶ್ವಾಸನೆ ಇಲ್ಲದಿದ್ದರೆ. ಮತ್ತೊಮ್ಮೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದು ತಿಳಿದು ನಮ್ಮ ಮುಂದಿನ ಹೋರಾಟಕ್ಕೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎನ್.ನಾಯಕ್(ಭಟ್ಕಳ್) : ಮಾನ್ಯ ಅಧ್ಯಕ್ಷರೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರದ ಸಂಪೂರ್ಣ ಅಂಶಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ಹೇಳಬಯಸುತ್ತೇನೆ.

ನಾನು ಇದುವರೆಗೆ ಸುಮಾರು 9 ಆಯವ್ಯಯ ಪತ್ರಗಳನ್ನು ಈ ಸದನದಲ್ಲಿ ಮಂಡಿಸಿರುವುದನ್ನು ನೋಡಿದ್ದೇನೆ. ಅವುಗಳನ್ನೆಲ್ಲಾ ಓದಿ ನೋಡಿದ್ದೇನೆ . ಅದೇ ರೀತಿ ಇವತ್ತು 1992-93ನೆ ಸಾಲಿಗೆ ಮಂಡಿಸಿರತಕ್ಕ ಈ ಆಯವ್ಯಯ ಪತ್ರವನ್ನು ಕೂಡ ಓದಿ ನೋಡಿದ್ದೇನೆ. ಹಿಂದಿನ ಬಜೆಟ್ ಪುಸ್ತಕಗಳಲ್ಲಿನ ಅಂಶಗಳಿಗೂ ಈಗಿನ ಈ ಆಯವ್ಯಯ ಪಟ್ಟಿಯಲ್ಲಿರುವ ಅಂಶಗಳಿಗೂ ಹೋಲಿಸಿ

ಅತ್ಯುತ್ತಮ ಆಯವ್ಯಯ ಪತ್ರ ಎಂದು ನಾನು ಪ್ರತಿಪಾದನೆ ಮಾಡಬಯಸುತ್ತೇನೆ. ಈ ಬಜೆಟ್ ಪುಸ್ತಕವನ್ನು ಓದಿದಾಗ ನಮಗೆ ತಿಳಿದುಬರತಕ್ಕ ಅಂಶಗಳೆಂದರೆ, ಪ್ರಾರಂಭದಲ್ಲಿ ಕೆಲವು ಕಲ್ಯಾಣ ಯೋಜನೆಗಳ ಬಗ್ಗೆ ಇಲ್ಲಿ ವಿವರಣೆಗಳನ್ನು ನೀಡಲಾಗಿದೆ. ಅದರ ನಂತರ ರೈತರ ಅಭಿವೃದ್ಧಿಗಾಗಿ ಈ ಸರ್ಕಾರ ಮಾಡಬಹುದಾದ ಕಾರ್ಯಕ್ರಮಗಳ ಬಗ್ಗೆಯೂ ಕೂಡ ಇಲ್ಲಿ ವಿವರಣೆಗಳನ್ನು ಕೊಡಲಾಗಿದೆ. ಅದರ ನಂತರ ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿರುವ ಬಗ್ಗೆ ಮತ್ತೆ ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಿರುವ ಬಗ್ಗೆ ಕೂಡ ವಿವರಗಳನ್ನು ಕೊಡಲಾಗಿದೆ. ಇದನ್ನು ಸಂಪೂರ್ಣವಾಗಿ ಅವಲೋಕಿಸಿ ನೋಡಿದರೆ ಗ್ರಾಮಾಂತರ ಪ್ರದೇಶದ ಸುಧಾರಣೆಗೆ ಈ ಸರ್ಕಾರ ಏನು ಮಾಡಿದೆ ಎಂಬುದು ಕಾಣಿಸುತ್ತಿದೆ. ಇಲ್ಲಿ ಪ್ರಮುಖವಾಗಿ ನೀರಾವರಿ ಬಾಬಿಗೆ ಹಿಂದೆಂದೂ ತೆಗೆದಿಡದೇ ಇದ್ದಷ್ಟು ಹಣವನ್ನು ಈ ಸಾರಿ ತೆಗೆದಿಟ್ಟಿದೆ. ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಹಣವನ್ನು ತೆಗೆದಿಟ್ಟಿದೆ. ರೈತರ ಅಭಿವೃದ್ಧಿಗೆ ಹೆಚ್ಚಿನ ಲಕ್ಷ್ಯಕೊಟ್ಟಿದೆ, ಹಾಗೂ ಕೆಲವು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಕೂಡ ಮೊದಲಿಗಿಂತ ಹೆಚ್ಚಿನ ಹಣವನ್ನು ಇಟ್ಟಿದೆ. ಇದ್ದನ್ನೆಲ್ಲಾ ನೋಡಿದರೆ ಇದು ಒಂದು ಸಮಾಜವಾದಿ ಬಜೆಟ್ ಆಗಿದೆ ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನಿಸಿಕೆಗೆ ತಕ್ಕಂತೆ, ಈ ಬಜೆಟ್ ಮೂಲಕ ರಾಜ್ಯದ ಜನತೆಯ ಅನಿಸಿಕೆಗಳಿಗೆ ಸ್ಪಂದಿಸಿದ್ದಾರೆನ್ನತಕ್ಕದ್ದು ಇಲ್ಲಿ ಗೊತ್ತಾಗುತ್ತದೆ. ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ವಿಶ್ವ ಕಾರ್ಯಕ್ರಮ, ಆಶ್ರಯ ಕಾರ್ಯಕ್ರಮ. ಅಕ್ಷಯ ಕಾರ್ಯಕ್ರಮ. ಆರಾಧನಾ ಕಾರ್ಯಕ್ರಮ ಮೊದಲಾದ ಕಾರ್ಯಕ್ರಮಗಳ ಬಗ್ಗೆ ಇಲ್ಲಿ ವಿವರಣೆಗಳನ್ನೂ ಕೂಡ ಕೊಟ್ಟಿದ್ದಾರೆ. ಆ ಕಾರ್ಯಕ್ರಮಗಳು ಇವತ್ತು ನಡೆಯುತ್ತಿವೆ. ಆರಾಧನಾ ಕಾರ್ಯಕ್ರಮಕ್ಕೆ ತೆಗೆದಿಟ್ಟತಕ್ಕ ಹಣ ಇಲ್ಲಿ ಸ್ವಲ್ಪ ಕಡಿಮೆ ಎಂದು ನನಗನಿಸುತ್ತದೆ. ಆದರೆ ಆರಾಧನಾ ಕಾರ್ಯಕ್ರಮದ ಅವಶ್ಯಕತೆ ಎಷ್ಟಿದೆ ಈ ದೇಶದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕೇವಲ ದೇಶದ ಜನರ ಆರ್ಥಿಕ ಮಟ್ಟವನ್ನು ಎತ್ತರಿಸಿದರೆ ಮಾತ್ರ ಅವನು ಗೌರವದಿಂದ ಬಾಳುವುದಕ್ಕೆ ಸಾಧ್ಯವಿಲ್ಲ. ಈ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳನ್ನೂ ಕೂಡ ಎತ್ತರಿಸಿಬೇಕಾಗುತ್ತದೆ. ಆಗ ಮಾತ್ರ ಯಾರೇ ಒಬ್ಬ ವ್ಯಕ್ತಿಗೆ ಸಮಾಜದಲ್ಲಿ ಸಿಕ್ಕಬೇಕಾದ ಗೌರವ ಸಿಕ್ಕುತ್ತದೆ. ಇಲ್ಲದಿದ್ದರೆ ಸಿಕ್ಕುವುದಿಲ್ಲ. ಧಾರ್ಮಿಕ ವ್ಯವಸ್ಥೆಯ ಪರಿಸ್ಥಿತಿಯನ್ನು ಹಿಂದುಳಿದ ವರ್ಗದವರ, ನಿಮ್ನವರ್ಗದವರ ಧಾರ್ಮಿಕ ಪರಿಸ್ಥಿತಿಯನ್ನು ಎತ್ತರಿಸುವುದಕ್ಕೆ ಈ ಆರಾಧನಾ ಕಾರ್ಯಕ್ರಮ ಒತ್ತು ನೀಡಿದೆ ಎನಿಸುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ವಿಚಾರ ನೆನಪಾಗುತ್ತದೆ. 1983ರಲ್ಲಿ ನಾನು ಪ್ರಥಮವಾಗಿ ಚುನಾವಣೆ ಸ್ಪರ್ಧಿಸಿದ್ದಾಗ ನನ್ನ ಕ್ಷೇತ್ರದ ಒಂದು ದೇವಸ್ಥಾನಕ್ಕೆ ನನ್ನ ಅಭಿಮಾನಿಗಳು ಪೂಜೆಗೋಸ್ಕರ ಕರೆದುಕೊಂಡು ಹೋದರು. ಈ ದೇವಸ್ಥಾನ ನಮ್ಮ ಮಾನ್ಯ ಮಿತ್ರರಾದ ದೇಶಪಾಂಡೆಯವರ ಸಮಾಜಕ್ಕೆ ಸೇರಿದಂಥಾದ್ದು.

ನನ್ನನ್ನು ಅಕಸ್ಮಾತ್ತಾಗಿ ನಮ್ಮ ಜನರು ಅಲ್ಲಿಗೆ ಕರೆದುಕೊಂಡು ಹೋದರು. ನನ್ನ ಬರುವಿಕೆ ಅಲ್ಲಿಯ ದೇವಸ್ಥಾನದ ಪೂಜಾರಿಗಳಿಗೆ ಮತ್ತು ವ್ಯವಸ್ಥಾಪಕರಿಗೆ ಅದು ಸರಿ ಆಗಿ ಕಾಣಲಿಲ್ಲ. ಆದ್ದರಿಂದ ಅವರು ಬೆಳಿಗ್ಗೆ 11.00 ಗಂಟೆಗೆ ದೇವಸ್ಥಾನದ ಬಾಗಿಲನ್ನು ಹಾಕಿಕೊಂಡು ಹೊರಟು ಹೋಗಿದ್ದರು. ನಾನು ಬರುತ್ತೇನೆಂಬ ವಿಷಯ ತಿಳಿದು ದೇವಸ್ಥಾನದ ಬಾಗಿಲನ್ನು ಜಡಿದು ಪೂಜಾರಿಗಳು ಮನೆಗೆ ಹೋಗಿಬಿಟ್ಟಿದ್ದರು. ನಾನು ಇನ್ನು ಏನು ಉಪಾಯವಿಲ್ಲದೆ ಗಲಾಟೆ ಮಾಡಿಕೊಳ್ಳಲಿಲ್ಲ, ಏತಕ್ಕೆಂದರೆ ಚುನಾವಣೆಗೆ ನಿಂತಿದ್ದೆ. ಗದ್ದಲ ಮಾಡಿಕೊಳ್ಳಲಿಕ್ಕೆ ಹೋಗಲಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ನನ್ನ ಬೆಂಬಲಿಗರು ತೆಗೆದುಕೊಂಡು ಹೋಗಿದ್ದ ಹಣ್ಣು ಕಾಯಿ ವಗೈರೆ ಎಲ್ಲವನ್ನೂ ದೇವಸ್ಥಾನದ ಎದಿರುಗೆ ಇಟ್ಟು ನಾವು ಹಿಂದಕ್ಕೆ ಬರಬೇಕಾಯಿತು. ಇದು ಏತಕ್ಕೆ

ಆಯಿತು ಎನ್ನುವುದನ್ನು ತಿಳಿದುಕೊಳ್ಳುವುದಾದರೆ ನಾನು ಒಬ್ಬ ಹಿಂದುಳಿದ ವರ್ಗದವನು. ನಾನು ಶೂದ್ರ, ಈ ಕಾರಣಕ್ಕಾಗಿ ಬ್ರಾಹ್ಮಣರ ದೇವಸ್ಥಾನಕ್ಕೆ ನಾವು ಪೂಜೆಯನ್ನು ಕೊಡಬಾರದು. ಅಲ್ಲಿ ನನ್ನ ಪ್ರವೇಶವಾಗಬಾರದು ಎನ್ನುವ ಕಾರಣದಿಂದ ಈ ರೀತಿ ಆಯಿತು. ಆ ಕಾಲದಲ್ಲಿ ಅಂದರೆ 1983ನೇ ಇಸವಿಯಲ್ಲಿದೇವಸ್ಥಾನಕ್ಕೆ ಪ್ರವೇಶ ಆಗಬಾರದೆಂದು ಬಾಗಿಲನ್ನು ಹಾಕಿದರು. ಇದು ಸತ್ಯಸಂಗತಿ. ಆನಂತರ 2-3 ವರ್ಷಗಳಾದ ಮೇಲೆ ಶ್ರೀಮಾನ್ ದೇಶಪಾಂಡೆಯವರು ಅವರು ಮಂತ್ರಿಗಳಾದುದರಿಂದ ಅವರಿಗೋಸ್ಕರವಾಗಿ ಒಂದು ಪೂಜೆ ಪುನಸ್ಕಾರವನ್ನು ಇಟ್ಟುಕೊಂಡಿದ್ದರು. ನಾನು ಆ ಕ್ಷೇತದಲ್ಲಿದ್ದುದರಿಂದ ಆ ಸಮಾರಂಭಕ್ಕೆ ಕರೆದರು. ಆಗ ನಾನು ಜೊತೆಯಲ್ಲಿ ಹೋದಾಗ ನನ್ನನ್ನು ಮಾನ್ಯ ದೇಶಪಾಂಡೆಯವರು ದೇವಸ್ಥಾನಕ್ಕೆ ಕರೆದರು. ಆಗ ನಾನು ಬರುವುದಿಲ್ಲ ನಿಮ್ಮ ದೇವಸ್ಥಾನಕ್ಕೆ ಎಂದು ಹೇಳಿದೆ. ನಿಮ್ಮಂಥ ಜಾತಿವಾದಿಗಳ ದೇವಸ್ಥಾನಕ್ಕೆ ನಾನು ಬರುವುದಿಲ್ಲ, ಅಲ್ಲೀನಾದರೂ ನಾನು ಬಂದರೆ ನಾನು ಅಪವಿತ್ರನಾಗುತ್ತೇನೆಯೇ ಹೊರತು ನನಗೆ ಬೇರೆಯವರಿಂದ ಏನು ತೊಂದರೆಯಾಗುವುದಿಲ್ಲ ಆದ್ದರಿಂದ ನಿಮ್ಮಂಥವರ ದೇವಸ್ಥಾನಕ್ಕೆ ನಾನು ಬರುವುದಿಲ್ಲವೆಂದು ಹೇಳಿದೆ. ಆಗ ನನ್ನನ್ನು ಸಮಾಧಾನಮಾಡಿ ಅವರು ಕರೆದುಕೊಂಡು ಹೋದರು. ಇದು ಕೇವಲ ಹುಟ್ಟಿನ ಒಂದು ಆಧಾರದ ಮೇಲೆ, ಶೂದ್ರ ಎನ್ನುವ ಕಾರಣಕ್ಕಾಗಿ ನನ್ನಂಥವನಿಗೆ ದೇವಸ್ಥಾನಕ್ಕೆ ಪ್ರವೇಶ ಕೊಡದೇ ಹೋದರೆ ಈ ಸಮಾಜದಲ್ಲಿ ಸಾಮಾನ್ಯ ಹಿಂದುಳಿದವನಿಗಾಗಲಿ, ಹರಿಜನರಿಗಾಗಲಿ, ಮುಂದೆ ಬಂದ ಹಿಂದುಗಳ ದೇವಸ್ಥಾನಕ್ಕೆಎಲ್ಲಿ ಪ್ರವೇಶವನ್ನು ಕೊಡುತ್ತಾರೆ. ಇವತ್ತಿಗೂ ಸಹ ಸಿಗುತ್ತಿಲ್ಲ. ಈ ಕಾರಣಕ್ಕಾಗಿ ಚಿಕ್ಕದಾದರೂ ಚೊಕ್ಕದಾದಂಥ ಒಂದು ದೇವಸ್ಥಾನವನ್ನು ಹಿಂದುಳಿದವರ ಮತ್ತು ಹರಿಜನಗಿರಿಜನರ ಕಾಲೋನಿಯಲ್ಲಿ ನಿರ್ಮಾಣ ಆದರೆ. ಧಾರ್ಮಿಕ ಶಕ್ತಿ ಈ ಜನರಿಗೆ ಬರುತ್ತದೆ ಎನ್ನುವ ಕಾರಣದಿಂದ ಆರಾಧನ ಯೋಜನೆಯನ್ನು ಇಡಲಾಗಿದೆ. ಆದರೆ ದುಡ್ಡು ಮಾತ್ರ ಬಹಳ ಕಡಿಮೆ ಇದೆ. ನಿಜಕ್ಕೂ ಒಂದು ಕಾಲ ಇತ್ತು. ದೇವರಿಂದ ಏನಾಗುತ್ತದೆಂದು ಹೇಳುವಂಥ ಕಾಲ. ಕಷ್ಟಬಂದಾಗ ಬೇರೆ ಬೇರೆಯವರ ಒತ್ತಡಕ್ಕೆ ಒಳಗಾಗಿ ದೇವಸ್ಥಾನಕ್ಕೆ ಪೂಜೆಗೆ ಹೋಗಬೇಕಾಗುತ್ತಿತ್ತು. ಆದರೆ ನಾವು ಹೋದಾಗ ದೇವಸ್ಥಾನ ಬಾಗಿಲನ್ನು ಹಾಕಿರುತ್ತಾರೆ. ಇಂಥ ಸಂದರ್ಭಕ್ಕಾಗಿಯೆ ನಮಗೆ ಒಂದು ದೇವಸ್ಥಾನ ಬೇಕು ಪೂಜೇ ಮಾಡಬೇಕೆಂದು ಹೇಳಿ 'ಆರಾಧನ' ಎನ್ನುವಂಥ ಒಂದು ಯೋಜನೆಯನ್ನು ಮಾಡಲಾಗಿದೆ. ಈ ಯೋಜನೆಗೆ ನನ್ನ ಸಂಪೂರ್ಣವಾದ ಸ್ವಾಗತವನ್ನು ಬಯಸುತ್ತೇನೆ.

ಇನ್ನು ಆಶ್ರಯ ಯೋಜನೆ, ಮಾನ್ಯ ಸಭಾಧ್ಯಕ್ಷಣಿಯವರೆ ತಮಗೆ ಗೊತ್ತಿರಬಹುದು ತಮ್ಮ ಕ್ಷೇತ್ರಕ್ಕೆ ಹೋಗಿ ನೋಡಿದರೆ ಅಥವಾ ಬೇರೆ ಕ್ಷೇತ್ರಕ್ಕೆ ಹೋಗಿ ನೋಡಿದರೆ ಇವತ್ತು ಹತ್ತಾರು ಅರ್ಜಿಗಳು ಒಂದು ದಿವಸಕ್ಕೆ ಬರುತ್ತಿದೆ. ಆಶ್ರಯ ಯೋಜನೆಯಲ್ಲಿ ನನಗೆ ಒಂದು ಮನೆ ಕೊಡಿ, ನನಗೆ ಒಂದು ಸೈಟು ಕೊಡಿ, ಒಂದು ಗುಂಟೆ ಜಾಗಕೊಡಿ ಎಂದು ಕೇಳುತ್ತಾರೆ. ನನಗೆ ಗೊತ್ತಿರಲೇ ಇಲ್ಲ, ನನ್ನ ಕ್ಷೇತ್ರದಲ್ಲಿಯೇ ಇಷ್ಟೆಲ್ಲಾ ಜನರಿಗೆ ಮನೆಯ ಯೋಜನೆಯೇ ಇರಲಿಲ್ಲವೇ ಎಂದು. ಈ ರಾಜ್ಯದ ಇಷ್ಟೆಲ್ಲಾ ಜನರಿಗೆ ಮನೆ ನಿವೇಶನಗಳು ಇರಲಿಲ್ಲವೇ ಎಂದು ಬಹಳ ಅಶ್ಚರ್ಯ ಪಡುವಂಥ ಪರಿಸ್ಥಿತಿ ನಮಗೆಲ್ಲ ಇವತ್ತು ಒದಗಿಬಂದಿದೆ. ಜೊತೆಗೆ ನಮಗೆಲ್ಲರಿಗೂ 246 ಜನ ಶಾಸಕರಿಗೂ ಒಂದು ರೀತಿಯಲ್ಲಿ ಕೆಲಸ ಬಂದಿತ್ತು. ಈ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಶಾಸಕರು ಬೆಂಗಳೂರಿಗೂ ಬರುವುದಕ್ಕೆ ಪುರಸೊತ್ತು ಇಲ್ಲದಂತಾಗಿರುತ್ತದೆ. ನಾವು ನಮ್ಮ ಕ್ಷೇತ್ರಗಳಲ್ಲಿಯೇ ಇದ್ದು ಕೆಲಸಮಾಡುವಂಥ ಸಂದರ್ಭ ಒದಗಿಬಂದಿದೆ. ಇದು ಒಂದು ಅತ್ಯುತ್ತಮ ಯೋಜನೆಯಾಗಿದೆ. ನಾನು 6-7ವರ್ಷಗಳಿಂದ ಈ ಶಾಸನಸಭೆಯಲ್ಲಿ ಇದ್ದೇನೆ. ಎಷ್ಟು ಮನೆಗಳನ್ನು ಹಿಂದಿನ ಸರ್ಕಾರ

ಕೊಟ್ಟಿದೆ. ಅದರಿಂದ ಎಷ್ಟು ಜನರಿಗೆ ಅನುಕೂಲವಾಗಿದೆ, ಈ ಹುಡ್ಕೋ ಯೋಜನೆ ಬಂದು ಕೊಡುತ್ತೇವೆ ಕೊಡುತ್ತೇವೆಂದು ಹೇಳಿ ಎಷ್ಟು ಕೊಟ್ಟಿದ್ದಾರೆ ಅದೆಲ್ಲವನ್ನು ಪರಿಶೀಲಿಸಿ ನೋಡಿದರೆ ಇಂಥ ಮನೆಗಳು ಎಷ್ಟೋ ಪೂರ್ಣವಾಗಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ : ಹಿಂದೆ ಕೊಟ್ಟಿರುವುದಕ್ಕೆ ಈಗ ನಾವು 30-40 ಲಕ್ಷ ರೂಪಾಯಿಗಳವರೆಗೆ ಹಣವನ್ನು ಕೊಡಬೇಕಾಗಿದೆ.

ಶ್ರೀ ಆರ್. ಎನ್. ನಾಯಕ್ : ಹಿಂದಿನ ಸರ್ಕಾರದವರು ಉಳಿಸಿಕೊಂಡಿರುವ ಬಾಕಿಯನ್ನು ತೀರಿಸುವುದಕ್ಕೆ ಈಗ ಪ್ರಾಬ್ಲಮ್ ಆಗಿದೆ. ಅವರು ಕೊಟ್ಟಿರುವ ಮನೆಗಳಿಗೆ ಹಣವನ್ನು ಪೂರೈಸದೆ ಇವತ್ತು ನಾವು ಕೊಡಬೇಕಾದ ಸಂದರ್ಭ ಬಂದಿದೆ. ಅದನ್ನೆಲ್ಲ ಈಗ ಮಾತನಾಡುತ್ತಾರೆ. ಅದನ್ನು ಕೈಗೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕಾಗಿ ಇವತ್ತು ಅವರು ಬಹಿಷ್ಕಾರ ಹಾಕಿ ಹೋಗಿದ್ದಾರೆ.

ಇದೇ ರೀತಿಯಾಗಿ ಅಕ್ಷಯ. ವಿಶ್ವ ಮುಂತಾದ ಎಷ್ಟೋ ಯೋಜನೆಗಳು ನಮ್ಮಲ್ಲಿ ನಡೆಯುತ್ತಿವೆ. ಹಲವಾರು ಟೀಕೆ ಟಿಪ್ಪಣಿಗಳು ಈ ಯೋಜನೆಗಳ ಬಗ್ಗೆ ಬಂದಿವೆ. ಎಷ್ಟೇ ಟೀಕೆ ಟಿಪ್ಪಣಿಗಳು ಬಂದರೂ ಈ ಯೋಜನೆಗಳನ್ನು ಸರ್ಕಾರ ಮುಂದುವರಿಸುವುದಕ್ಕೆ ಆಲೋಚನೆ ಮಾಡಿದೆ. ಆ ಬಗ್ಗೆ ನಾವು ಸ್ವಾಗತಿಸಲೇಬೇಕಾಗುತ್ತದೆ. ಇಲ್ಲಿ ಈ ಯೋಜನೆಗಳಿಂದ ಸರ್ಕಾರದ ಗುಣಮಟ್ಟ, ಜನಪ್ರಿಯತೆ ಜಾಸ್ತಿಯಾಗಿದೆ ಎಂಬ ಕಾರಣಕ್ಕಾಗಿ ಮತ್ತು ಈ ಜನಪ್ರಿಯತೆ ಹೀಗೆಯೇ ಮುಂದುವರಿದರೆ ತಮಗೆ ಬಹಳ ತೊಂದರೆ ಆಗಬಹುದೆಂಬ ಕಾರಣಕ್ಕಾಗಿ ವಿರೋಧ-ಪಕ್ಷಗಳು ಇವತ್ತು ಈ ಸದನವನ್ನು ಬಹಿಷ್ಕರಿಸಿವೆ. ಈಶ್ವರಪ್ಪನವರು ಸಭೆಗೆ ಬರುತ್ತಿದ್ದಾರೆ. ನಾನು ಆರಾಧನಾ ಯೋಜನೆ ಬಗ್ಗೆ ಹೇಳಬೇಕಾದರೆ ಅವರು ಇರಲಿಲ್ಲ. ನಿಮ್ಮಂಥ ಬಿಜೆಪಿ.ಯವರು ನೋಡಿಕೊಳ್ಳುವ ದೇವಸ್ಥಾನಕ್ಕೆ ನಾನು ಹೋಗಿದ್ದೆ. ಕೇವಲ ಶೂದ್ರ ಎಂಬ ಕಾರಣಕ್ಕಾಗಿ ನನಗೆ ಪ್ರವೇಶ ಕೊಡಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ಯಾರು ಪ್ರವೇಶ ಕೊಡಲಿಲ್ಲ ಅವನು ಶೂದ್ರ. ನೀವು ಖಂಡಿತ ಶೂದ್ರರಲ್ಲ. ಅದು ನಮ್ಮ ಬಿಜೆಪಿ. ಅಭಿಪ್ರಾಯ ಯಾರು ದೇವಸ್ಥಾನದೊಳಗೆ ಬಿಡುವುದಿಲ್ಲವೋ ಅವರು ಶೂದ್ರರೇ ಹೊರತು ನೀವು ಶೂದ್ರರಲ್ಲ ಎಂಬುದನ್ನು ದಯವಿಟ್ಟು ತಿಳಿದುಕೊಳ್ಳಿ. ಇದು ಬಿಜೆಪಿ ಅಭಿಪ್ರಾಯ.

ಶ್ರೀ ಆರ್.ಎನ್. ನಾಯಕ್ : ನೀವು ಜಮಪ್ರಿಯತೆ ಗಳಿಸುವುದಕ್ಕೋಸ್ಕರ ಏನಾದರೂ ಅಭಿಪ್ರಾಯ ಕೊಡುತ್ತಾ ಹೋಗಬೇಡಿ. ನೀವು ಏನು ಅಭಿಪ್ರಾಯ ಕೊಟ್ಟರೂ ಅದಕ್ಕೆ ನಿಮ್ಮ ಬೆಂಬಲಿಗರು ಸ್ಪಂದಿಸಬೇಕು.

ಉಪಾಧ್ಯಕ್ಷಿಣಿಯವರು : ನೀವು ಬಡ್ಜೆಟ್ ಬಗ್ಗೆ ಮಾತನಾಡುವುದು ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ದೇಶದಲ್ಲಿ ಭಾರತೀಯ ಜನತಾ ಪಕ್ಷದ ಬೆಂಬಲಿಗರಿದ್ದಾರೆ. ಈಗಾಗಲೇ 4 ರಾಜ್ಯಗಳಲ್ಲಿ ಬಿಜೆಪಿ., ಅಧಿಕಾರಕ್ಕೆ ಬಂದಿದೆ. ಕೇಂದ್ರದಲ್ಲಿ ಎಲ್ಲಿ ಬಂದೀತೋ ಎಂದು ಭಯ ಇವರಿಗೆ, ರಾತ್ರಿ ಹಗಲು ಇವರ ಮನಸ್ಸಿನಲ್ಲಿ ಬಿಜೆಪಿ., ಬರುತ್ತಿದೆ. ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್ : ಭಯ ಬಹಳವಾಗಿದೆ. ಏತಕ್ಕೆಂದರೆ ನೀವು ಪಂಜಾಬಿನಲ್ಲಿ ಸ್ಪರ್ಧೆ ಮಾಡಿ ಎಷ್ಟು ಸೀಟು ಗೆದ್ದಿರಿ ಎಂಬುದು ಗೊತ್ತಿದೆ. ಬಾಂಬೆಯಲ್ಲಿ ಕಾರ್ಪೊರೇಷನ್ ಎಲೆಕ್ಷನ್ ಆಯಿತು, ಆಗ ಎಷ್ಟು ಸೀಟು ಗೆದ್ದಿರಿ? ಎಲ್ಲಿ ಹೋದ ನಿಮ್ಮ ರಾಮ. ಅಲ್ಲಿ ಎಲ್ಲಿಯೂ ಇಲ್ಲ. ನಿಮ್ಮ ರಾಮನನ್ನು ಅವರು ಮಾತನಾಡಿಸಲಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ರಾಮ ನಮ್ಮ ಬಿಜೆಪಿಗೇನು ಅಡ್ಡಿ ಬರುತ್ತಿಲ್ಲ. ರಾಮ ನಮ್ಮ ಆರಾಧ್ಯ ದೈವ. ರಾಮನಿಗೆ ಏಕೆ ಸಂಬಂಧ ತರುತ್ತೀರಿ? ರಾಮನಿಗೂ ಚುನಾವಣೆಗೂ ಸಂಬಂಧ ಇಲ್ಲವೆಂದು ಚುನಾವಣೆಯಲ್ಲಿ ತೋರಿಸಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ರಾಮನನ್ನು ಹರಾಜು ಹಾಕುವುದರ ಜೊತೆಗೆ ಮಾರಮ್ಮನನ್ನು ಕಟ್ಟಿಕೊಂಡು ಹೋಗಿಯಾರು ....

ಶ್ರೀ ಕೆ.ಎಸ್.ಈಶ್ವರಪ್ಪ : 25 ರಂದು ರಾಜ್ಯದ ರೈತರು ಬರುತ್ತಿದ್ದಾರೆ ನಿಮ್ಮನ್ನು ಮಾರಮ್ಮ ಬಡಿದಹಾಗೆ ಬಡಿದಾರು ಹುಷಾರು.

ಶ್ರೀ ಆರ್.ಎನ್.ನಾಯಕ್ : ಹಾಗಾದರೆ ಆ ದಿವಸ ನಾವು ಇರುವದು ಬೇಡವೆ? ಹುಷಾರಾಗಿರಿ ಅಂದರೆ ಅರ್ಥವೇನು?

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಮಾತನಾಡುತ್ತಿರುವ ಧಾಟಿ ನೋಡಿದರೆ ಹುಷಾರಾಗಿಲ್ಲ ಅನ್ನಿಸುತ್ತದೆ. ಅದಕ್ಕೆ ಆರೋಗ್ಯವಾಗಿ ಇರಿ ಎಂದು ಹೇಳಿದೆ.

ಶ್ರೀ ಆರ್.ಎನ್.ನಾಯಕ್ : ಕಲ್ಲಿನ ದೇವರು ಬರುತ್ತದೆಂದು ಮೈ-ಕೈಗೆಲ್ಲ ಹೆಲ್ಮೆಟ್ ಹಾಕಿಕೊಳ್ಳಬೇಕೆ?

ಉಪಾಧ್ಯಕ್ಷಿಣಿಯವರು : ದಯವಿಟ್ಟು ಬೇಗ ಮುಗಿಸಬೇಕು, ಇನ್ನೂ 4-5 ಜನರು ಮಾತನಾಡಬೇಕು.

ಶ್ರೀ ಆರ್.ಎನ್.ನಾಯಕ್ : ಹುಷಾರಾಗಿರಿ ಅಂದರೆ ಬಿಜೆಪಿ. ಕಾರ್ಯಕರ್ತರು ಬರುತ್ತಾರೆ, ಕಲ್ಲು ಹೊಡೆಯುತ್ತಾರೆ, ತಲೆ ಒಡೆಯದಂತೆ ಹೆಲ್ಮೆಟ್ ಹಾಕಿಕೊಳ್ಳಬೇಕೆ ?

(ಮಾನ್ಯ ಸದಸ್ಯರೊಬ್ಬರು ಮಧ್ಯೆ ಮಾತನಾಡಿದರು)

ಉಪಾಧ್ಯಕ್ಷಿಣಿಯವರು : ಈಗ ಅವರು ಮಾತನಾಡುತ್ತಿದ್ದಾರೆ. ಈ ರೀತಿ ಮಧ್ಯೆ ಮಾತನಾಡಿದರೆ ನಿಮ್ಮದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಇವತ್ತಿನ ದಿವಸ ಜನರು ಬೋರ್‌ವೆಲ್ ಹಾಕಿಸಿ ಕರೆಂಟ್ ಇಲ್ಲದೆ ಒದ್ದಾಡುತ್ತಿದ್ದಾರೆ.

ಶ್ರೀ ಆರ್.ಎನ್. ನಾಯಕ್ : ರೈತರ ಅಭಿವೃದ್ಧಿ ಯೋಜನೆಗಳನ್ನು ಬಡ್ಜೆಟ್ಟಿನಲ್ಲಿ ತೋರಿಸಲಾಗಿದೆ: ಹತ್ತು ಅಶ್ವಶಕ್ತಿ ಪಂಪುಸೆಟ್ಟುಗಳಿಗೆ ತಗಲತಕ್ಕ ವೆಚ್ಚವನ್ನು ಸರ್ಕಾರ ಮನ್ನಾ ಮಾಡಿದೆ. ಅದನ್ನು ಸರ್ಕಾರವೇ ತುಂಬಿಕೊಳ್ಳುವುದಕ್ಕೆ ತಯಾರಿದೆ. ಭೂ ಗುಣ ಯೋಜನೆ ಎಂದು ಇನ್ನೊಂದು. ಕೃಷಿ ಉಪಕರಣಗಳನ್ನು ಸುಧಾರಿಸುವ ಬಗ್ಗೆ ಯೋಜನೆ, ಹನಿತೆನೆ ಎಂಬ ಯೋಜನೆ. ಕೃಷಿ ಪ್ರಶಸ್ತಿ ಅಂದರೆ ಸುಧಾರಿತ ಪದ್ಧತಿಯಿಂದ ಬೆಳೆ ಬೆಳೆಯುವ ರೈತರಿಗೆ ಪ್ರಶಸ್ತಿ ಕೊಡುವ ಯೋಜನೆ. ಹೀಗೆ ಹಲವಾರು ಯೋಜನೆಗಳನ್ನು ಇಲ್ಲಿ ತೋರಿಸಲಾಗಿದೆ. ಈಶ್ವರಪ್ಪನವರು ಮಾತನಾಡುವಾಗ ಬರೀ ಸಾಲ ಮನ್ನಾ ಮಾಡಲಿಲ್ಲ. ಎಂದು ದೊಡ್ಡ ಧ್ವನಿ ತೆಗೆದು ಹೇಳಿದರು. ಸಾಲ ಮನ್ನಾ ಮಾಡದಿದ್ದರೆ ನಿಮ್ಮ ಗತಿ ಏನಾಗುತ್ತವೆ ಎಂದರು. ನಂಬರ್-1 ಕುರ್ಚಿಗೆ ಮುಂದಿನ ಸಾರಿ ನಾವು ಬಂದು ಕೂರುತ್ತೇವೆಂದು ಹೇಳಿದರು. ಅಯ್ಯೋ ದೇವರೆ. ನಿಮಗೆ ಏನಾಗಬೇಕಾಗಿತ್ತು? ಸಾಲ ಮನ್ನಾ ಮಾಡಿ ಎಂದು ಹೇಳಿ. ಅದು ನಾವೂ ಸಹ ಒಪ್ಪುತ್ತೇವೆ. ಸಾಲ ಮನ್ನಾ ಮಾಡಬಾರದು ಎಂದು ನಾವು ಏನೂ ಹೇಳುವವರಲ್ಲ. ಸಾಲ ಮನ್ನಾ ಆದರೆ ನಮಗೂ ಒಳ್ಳೆಯದು. ಸಂತೋಷವೇ.

(ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಬೇರೊಬ್ಬರ ಸ್ಥಾನದಲ್ಲಿ ಕುಳಿತು ಸ್ವಿಚ್ ಹಾಕದೆ ಏನೋ ಮಾತನಾಡಿದರು.)

Madam Deputy Speaker : Mr. Eswarappa, you can not speak from there.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ರೈತರ ಪರವಾಗಿಯೂ ಇಲ್ಲ. ಅವರಿಗೆ ಸಾಲ ಮನ್ನಾ ಆಗಬೇಕಾಗಿಯೂ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾಯಕರೇ, 1991-92ರಲ್ಲಿ 10 ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆಂದು ಮೆನ್‌ಷನ್ ಮಾಡಿದ್ದೀರಿ. 1992-93ರಲ್ಲಿ ಅದರ ಚಕಾರ ಇಲ್ಲ. ಏನು ಹೇಳುತ್ತೀರಿ ಇದಕ್ಕೆ? ಅದು ಬರೀ ನಾಟಕ ಅಲ್ಲವೆ? ಇದು ಮೂಗಿಗೆ ತುಪ್ಪ ಹಚ್ಚಿದಹಾಗೆ ಅಲ್ಲವೆ? ಮಾಡುತ್ತೇವೆಂದು ಆಗ ಹೇಳಿದಿರಿ. ನಂತರ ಸುದ್ದಿ ಇಲ್ಲ. ಅಬ್ಕಾರಿ ದೊರೆಗಳಿಗೆ, ಕಂಟ್ರಾಕ್ಟರುಗಳಿಗೆ ಮನ್ನಾ ಮಾಡಿಬಿಟ್ಟರಿ. ಕೋಟಿಗಟ್ಟಲೆ ಹಣ ಮಾಡಿಬಿಟ್ಟರಿ.

ಶ್ರೀ ಆರ್.ಎನ್. ನಾಯಕ್ : ಅವರಿಗೆ ಗೊತ್ತಿರುವುದು, ನಾಟಕ, ಕುತ್ತಿಗೆ ಹಿಸುಕುವುದು, ಭಾಷೆ. ಬೇರೆ ಭಾಷೆಯೇ ಬರುವುದಿಲ್ಲವೆ? ಮತ್ತೆ ಸಾಲ ಮನ್ನಾ, ಮತ್ತೆ ರಾಮ. ಈ ನಾಲ್ಕು ಶಬ್ದಗಳಿಗೆ ಒಂದಕ್ಕೊಂದು ಯಾವುದೂ ಸಂಬಂಧ ಇಲ್ಲ. ರಾಮನಿಗೂ ಮತ್ತು ಕುತ್ತಿಗೆ ಹಿಸುಕುವುದಕ್ಕೂ ಏನಾದರೂ ಸಂಬಂಧ ಇದೆಯೇ ನಿಮಗೆ ಬರುವುದೇ ನಾಲ್ಕು ಶಬ್ದ. ಕುತ್ತಿಗೆ ಹಿಸುಕುತ್ತೀರಿ, ಸಾಲ ಮನ್ನಾ ಮಾಡಬೇಕು, ರಾಮ ಒಂದಕ್ಕೊಂದು ಸಂಬಂಧ, ತಾಳ, ತಂತಿ ಏನಾದರೂ ಇದೆಯೆ?

ಶ್ರೀ ಕೆ.ಎಸ್.ಈಶ್ವರಪ್ಪ : ಅಬ್ಕಾರಿ ಕಂಟ್ರಾಕರ್ ಬಗ್ಗೆಯೂ ಹೇಳುತ್ತಿದ್ದೇವೆ. ಅಬ್ಕಾರಿ ಕಂಟ್ರಾಕ್ಟರ್ ಬಿಟ್ಟಿಲ್ಲ ನಾವು.

ಶ್ರೀ ಆರ್.ಎನ್.ನಾಯಕ್ : ಅಧ್ಯಕ್ಷರೆ, ನಾನು ಏತಕ್ಕೆ ಹೇಳಿದೆ ಎಂದರೆ ಕೃಷಿ ಅಭಿವೃದ್ಧಿಯಾಗುವುದಕ್ಕೆ, ಆಹಾರಧಾನ್ಯ ಬೆಳೆಸುವುದನ್ನು ಜಾಸ್ತಿ ಮಾಡುವುದಕ್ಕೆ ಏನು ಸವಲತ್ತುಗಳನ್ನು ನಾವು ರೈತರಿಗೆ ಕೊಡುತ್ತಿದ್ದೇವೆ. ಇದರ ಬಗ್ಗೆ ಒಂದು ಒಳ್ಳೆಯ ಮಾತು, ಈ ರೀತಿ ಕೊಟ್ಟಿದ್ದಾರೆ ಎಂದು ಒಳ್ಳೆಯ ಮಾತನ್ನೂ ಸಹ ನೀವು ಬಿ.ಜೆ.ಪಿ.ಯವರು ಹೇಳದೆ ಇದ್ದರೆ ನೀವು ಎಂಥ ಸಂಸ್ಕೃತಿಯವರು? ಒಳ್ಳೆಯದನ್ನು ನೋಡಿ ಸಂತೋಷಪಡುವುದಕ್ಕೆ ನಿಮಗೆ ಆಗಲೇಹೋದರೆ ನಿಮ್ಮ ದೃಷ್ಟಿಯನ್ನು ಸ್ವಲ್ಪ ಬದಲಿಸಿಕೊಳ್ಳಿ. ನೀವು ಬದಲಿಸಿಕೊಳ್ಳದೇ ಹೋದರೆ ನೀವು ಆ ಕುರ್ಚಿ ಮೇಲೆ ಹೋಗುವುದಕ್ಕೆ ಬಹಳ ತೊಂದರೆ ಇದೆ. ಸುಲಭವಾಗಿ ನಂಬರ್-1 ಕುರ್ಚಿ ಬರುತ್ತದೆಂದು ನೀವು ತಿಳಿದು ಕೊಳ್ಳಬೇಡಿ, ನಂಬರ್-1 ಕುರ್ಚಿಗೆ ಬರಬೇಕಾದರೆ 25 ವರ್ಷದ ಹೋರಾಟ ಇದೆ ಅದಕ್ಕೆ. ಬಡವರ ಪರವಾಗಿ 25 ವರ್ಷದ ಸತತ ಪ್ರಯತ್ನ, ಹೋರಾಟ, ಬಡವರ ಪರವಾದ ಕೆಲಸ, ದುರ್ಬಲ ವರ್ಗದ ಪರವಾಗಿ ಕೆಲಸ, ನಿಮ್ನವರ್ಗದವರ ಬಗ್ಗೆ ಒಂದು ಕಳಕಳಿ ಇದೆಲ್ಲಾ ಇರುವುದರಿಂದ 25 ವರ್ಷದ ಪ್ರಯತ್ನದಿಂದ ನಂಬರ್-1 ಕುರ್ಚಿ ಬಂದಿದೆ. ಆದ್ದರಿಂದ ಅಸೆಂಬ್ಲಿ ಬಿಟ್ಟು ದೇಶ ಸುತ್ತುತ್ತೇವೆ, ನಾನು ಅಲ್ಲಿ ಬಡವರ ಉದ್ಧಾರ ಮಾಡುತ್ತೇನೆ, ಸಾಲ ಮನ್ನಾ ಮಾಡಿಸುತ್ತೇನೆ, ಕಲ್ಲು ತರುತ್ತೇನೆ ಎಂದರೆ ಆ ನಂಬರ್-1 ಕುರ್ಚಿ ಬರುವುದಿಲ್ಲ. ಸ್ವಲ್ಪ ಯಡಿಯೂರಪ್ಪನವರಿಗೆ ನೀವು ಕಿವಿಮಾತು ಹೇಳಬೇಕು. ಹೇಳದೇ ಹೋದರೆ ನೀವು ಇಲ್ಲಿ ಕುಳಿತುಕೊಂಡು ಪ್ರಯೋಜನವಾಗುವುದಿಲ್ಲ. ಇಷ್ಟೆಲ್ಲಾ ಯೋಜನೆಯನ್ನು ನಮ್ಮ ಸರ್ಕಾರ ರೈತರ ಅಭಿವೃದ್ಧಿಗೆ ಹಾಕಿಕೊಂಡಿದೆ ಎಂದು ನಾನು ಈಗಾಗಲೇ ಹೇಳಿದೆ. ಈಶ್ವರಪ್ಪನವರು ಸಾಲ ಮನ್ನಾ ಮಾಡಬೇಕು ಎಂದು ಹೇಳಿದರು. ಅದೂ ನಿಧಾನವಾಗಿ ಹೇಳುವುದಿಲ್ಲ. ಸಿಕ್ಕಾಪಟ್ಟೆ ಸ್ಪೀಡ್. ಈ ದೇಶದಲ್ಲಿ ನಾಲ್ಕೈದು ರಾಜ್ಯಗಳಲ್ಲಿ ನಿಮ್ಮ ಬಿ.ಜೆ.ಪಿ. ಆಡಳಿತ ಇದೆಯಲ್ಲ ನೀವು ಅಲ್ಲಿ ಎಷ್ಟು ಸಾಲ ಮನ್ನಾ ಮಾಡಿದ್ದೀರಿ? ಸಾಲ ಮನ್ನಾ ಆಗಿದೆ ಅಸೆಂಬ್ಲಿಯಲ್ಲಿ ಹೇಳಿದರು, ಮೊನ್ನೆ ಕೃಷಿ ಮಂತ್ರಿಗಳು ವರದಿ ತರಿಸಿ ಹೇಳಿದರು ಎಲ್ಲೂ ಸಾಲ ಮನ್ನಾ ಆಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ವಿಚಾರದಲ್ಲಿ ಗೊಂದಲ, ಮಾಡಿದ್ದಾರೆ. ನಾನು ಹೇಳುವುದಿಷ್ಟೆ. ಮಧ್ಯಪ್ರದೇಶದಲ್ಲಿ ರೈತರ ಸಾಲ ಮನ್ನಾ ಆಗಿದೆ ಎಂಬ ವಿಚಾರದ ಬಗ್ಗೆ ಮತ್ತೆ ಮತ್ತೆ ರಾಜ್ಯದಲ್ಲಿ ಚರ್ಚೆ ಬರುತ್ತಿದ್ದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಧ್ಯಪ್ರದೇಶದಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ ರಾಜ್ಯದ ರೈತರ ಸಾಲ ಮನ್ನಾ ಮಾಡಿದ್ದೇವೆ. ಅದರ ಬಗ್ಗೆ ಆರ್ಡರ್ ಕಾಪಿ ಕೂಡ ಸನ್ಮಾನ್ಯಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇವೆ, ಇಲ್ಲ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿ ಅದಕ್ಕೆ ಒಂದು ಸಮಿತಿ ಮಾಡಿದರೆ ನಾನು ನನ್ನ ವಿಧಾನಸಭೆಯ ಸದಸ್ಯತ್ವವನ್ನು ಪಣ ಇಡುವುದಕ್ಕೆ ತಯಾರಿದ್ದೇನೆ. ತಾವು ತಯಾರಿದ್ದೀರಾ? ನಾನು ಇನ್ನೇನೂ ಹೇಳುವುದಿಲ್ಲ. ಏತಕ್ಕೆ ಹೇಳುತ್ತೇನೆ ಅಂದರೆ ಇಲ್ಲ ಇಲ್ಲ ಎಂದು 100 ಸಾರಿ ಸುಳ್ಳು ಹೇಳಿದರೆ ಅದು ಸತ್ಯವಾಗುತ್ತದೆಂದು ಅಂದುಕೊಳ್ಳಬೇಡಿ. ನಾನು ಹೇಳುವುದಿಷ್ಟೆ. ಮಧ್ಯಪ್ರದೇಶದ ಸರ್ಕಾರ ಭಾರತೀಯ ಜನತಾ ಪಕ್ಷದ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿದೆ. ಇದರ ಬಗ್ಗೆ ನಾನು ನನ್ನ ವಿಧಾನಸಭಾ ಸದಸ್ಯತ್ವವನ್ನು ಪಣ ಇಡುವುದಕ್ಕೆ ತಯಾರಿದ್ದೇನೆ. ನೀವು ಪಣ ಇಡುವುದಕ್ಕೆ ತಯಾರಿದ್ದೀರಾ? ಇಷ್ಟು ಹೇಳಿ. ಸುಮ್ಮನೆ ಘಾಡಿಲ್ಲ ಮಾಡಿಲ್ಲ ಎಂದು ಇಲ್ಲಿ ಕೂಗುವುದು, ಹೊರಗಡೆ ಕೂಗುವುದು. ಜನ ನಂಬುತ್ತಾರೆ. ಅಂದು ಕೊಂಡಿದ್ದೀರಾ?

ಶ್ರೀ ಆರ್.ಎನ್. ನಾಯಕ್ : 10 ವರ್ಷಗಳ ಅನುಭವ ಇದೆ. ಸಣ್ಣ ಸಣ್ಣ ವಿಚಾರಕ್ಕೆ ಬಹಳ ಜನ ಸದನದ ಒಳಗಡೆ ಬರಲಿಲ್ಲ. ನಾನು ಪಣ ಕೊಡುತ್ತೇನೆ, ರಾಜನಾಮೆ ಕೊಡುತ್ತೇನೆ ಎಂದು ಕೈ ಎತ್ತಿ ಕಿತ್ತಾಡಿದವರು ಬಹಳ ಜನ ಬರಲಿಲ್ಲ ಇಲ್ಲಿ. ಸಣ್ಣ ಸಣ್ಣ ವಿಚಾರಕ್ಕೆ ಈ ಗೌರವ ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೆ ಹೋಗಬೇಡಿ. ನೀವು ಇರಬೇಕು ಇಲ್ಲಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ನೀವು ಹೇಳಿರಲಿಲ್ಲ ಹಿಂದೆ ಕೂಡ ಮಾತು ಕೊಟ್ಟಿವುದಕ್ಕೆ ಎಂದು. ಸ್ವೀಕಾರ ಮಾಡಿ ನೋಡೋಣ.

ಶ್ರೀ ಆರ್.ಎನ್. ನಾಯಕ್ : ಏನು ಸ್ವೀಕಾರ ಮಾಡುವುದು? ನಾನು ರಾಜೀನಾಮೆ ಕೊಡುವುದಕ್ಕೆ ತಯಾರಿಲ್ಲ. ಎಷ್ಟೋ ವಿಚಾರ ಮಂಡನೆ ಮಾಡಬೇಕಾದುದಿದೆ. ಹೇಳಬೇಕಾದ್ದಿದೆ.

ಉಪಾಧ್ಯಕ್ಷರು : ಈಗ ತಾವು ಅವರ ಹತ್ತಿರ ಮಾತನಾಡಬೇಡಿ.

ಶ್ರೀ ಆರ್.ಎನ್. ನಾಯಕ್ : ಈಗ ರೈತರ ಉದ್ಧಾರದ ಪ್ರಶ್ನೆ ಬಂದಕೊಡಲೆ ಸನ್ಮಾನ್ಯ ಯಡಿಯೂರಪ್ಪನವರು ಬಹಳ ಎತ್ತರವಾದ ಧ್ವನಿಯಲ್ಲಿ ನಾವು ರೈತರ ಉದ್ಧಾರ ಮಾಡುತ್ತೇನೆ, ತಮ್ಮ ಪಕ್ಷ ರೈತರ ಉದ್ಧಾರಕ್ಕೆ ಪಣ ತೊಟ್ಟಿದೆ, ಅದು ನಮ್ಮ ಕಾಂಟ್ರಾಕ್ಟ್ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅದರ ನಂತರ ರೈತ ಸಂಘಕ್ಕೆ ನಾಯಕರುಗಳು ನಾವೇ ಎಂದು ಹೇಳುತ್ತಿದ್ದಾರೆ. ಅವರು ರೈತರ ಉದ್ಧಾರ ಮಾಡುವ ಸಂಪೂರ್ಣ ಕಾಂಟ್ರಾಕ್ಟನ್ನು ನಾವೇ ಪಡೆದಿದ್ದೇವೆ, ಈ ದೇಶದಲ್ಲಿ ಮತ್ತೆ ಯಾರೂ ಇಲ್ಲ, ಈ ದೇಶದಲ್ಲಿ ರೈತರ ಚಿಂತನೆ ಬಗ್ಗೆ ಕಳಕಳಿ ಯಾರಿಗೂ ಇಲ್ಲಿ, ತಾವೇ ರೈತರ ಪರವಾಗಿ ಇದುವವರು ಎಂದು ಹೇಳುತ್ತಾರೆ. ಹಸಿರು ಟವೆಲ್ ಹಾಕಿರುವ ನಾವೇ ರೈತರ ಲೀಡರ್ ಎಂದು ಹೇಳುತ್ತಿದ್ದಾರೆ. ಇವತ್ತು ರಾಜ್ಯದ ರೈತ ಬದುಕಬೇಕಾದರೆ ಬೆವರು ಸುರಿಸಬೇಕು. ಅವನು ಅಲ್ಲಿ ದುಡಿಯಬೇಕು. ಬೆವರು ಸುರಿಸಿದರೆ ರೈತ ಬದುಕುತ್ತಾನೆ. ನಾಲಿಗೆ ಬಲದಿಂದ ರೈತರ ನಾಯಕರು ಬದುಕುತ್ತಾರೆ. ಅದನ್ನು ಇವತ್ತು ರೈತ ಅರ್ಥಮಾಡಿಕೊಳ್ಳಬೇಕು. ಇವತ್ತು ನಾಲಿಗೆ ಬಲದಿಂದ ರೈತ ನಾಯಕರು ರೈತರ ಬಗ್ಗೆ ಹೇಳುತ್ತಾರೆ. ಮಾತನಾಡಿ, ಮಾತನಾಡಿ, ಅದು ಪ್ರಾಕ್ಟೀಸ್ ಆಗಿದೆ. ನಾಲಿಗೆ ಪ್ರಾಕ್ಟೀಸ್‌ನಿಂದ ಅವರು ಬದುಕುವುದಕ್ಕೆ ಪ್ರಯತ್ನ ಮಾಡಿದರೆ ರೈತ

ಬೆವರು ಸುರಿಸಿ ತನ್ನ ಜೀವನಕ್ಕೆ ಬೇಕಾದ್ದನ್ನು ಉತ್ಪಾದನೆ ಮಾಡಿಕೊಳ್ಳ ಬೇಕಾಗುತ್ತದೆ. ಬೆವರು ಸುರಿಸುವ ರೈತರಿಗೆ ಸೌಕರ್ಯಗಳನ್ನು ಕೊಡಬೇಕಾಗುತ್ತದೆ. ರೈತನಿಗೆ ಒದಗಿಸುವ ಕರೆಂಟ್, ಒದಗಿಸುವ ನೀರಿನಲ್ಲಿ, ಒದಗಿಸುವ ಉಪಕರಣಗಳಲ್ಲಿ ಬೇರೆ ಬೇರೆ ರೀತಿಯ ಪ್ರಾಶಸ್ತ್ಯವನ್ನು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ನಾವು ಇದನ್ನು ಬಾಯಿಂದ ಹೇಳುತ್ತಾ ಇಲ್ಲ. ಅವರಿಗೆ ಏನು ಕೊಡಬೇಕು ಎಂದು ನಾವು ಬಡ್ಜೆಟ್‌ನಲ್ಲಿ ಮಂಡನೆ ಮಾಡಿ ಹೇಳಿದ್ದೇವೆ. ನೀರಾವರಿ, ವಿದ್ಯುತ್‌ಬಗ್ಗೆ ನಾನು ಹೇಳಬೇಕಾಗುತ್ತದೆ. ವಿದ್ಯುತ್ ಬಗ್ಗೆ ಹೇಳುವಾಗ ರಾಜ್ಯದಲ್ಲಿ ಹಲವಾರು ಸಣ್ಣ ಪುಟ್ಟ ಹಳ್ಳ, ಹೊಳೆಗಳ ಮೂಲಕ ಹರಿದುಹೋಗುವ ನೀರಿನ ಮೂಲಕ ನಾವು ವಿದ್ಯುತ್ ಉತ್ಪಾದನೆ ಮಾಡಬೇಕಾಗಿದೆ. ಈ ಬಗ್ಗೆ ಬಡ್ಜೆಜ್‌ನಲ್ಲಿ ಮಂಡನೆ ಸಹಾ ಆಗಿದೆ. ಅದಕ್ಕೆ ಹಣವನ್ನು ಸಹಾ ತೊಡಗಿಸಿಟ್ಟಿದ್ದೇವೆ. ಇದನ್ನು ಸ್ವಾಗತ ಮಾಡಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇಡ್ತಿ ಜಲವಿದ್ಯುತ್ ಯೋಜನೆ ಕೆಲಸ ಪ್ರಾರಂಭ ಮಾಡಬೇಕೆಂಬುದನ್ನು ಕೆಲವು ಸಲ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಹೇಳಿದ್ದಾರೆ. ಆದರೆ ಅದನ್ನು ಮಾಡಬಾರದು, ಎನ್ನುವ ವರ್ಗ ಖಾಯಂ ಆಗಿ ಹೇಳುತ್ತಲೇ ಇದೆ. ಆಯಿತು ಹಾಗಾದರೆ ವಿದ್ಯುತ್ ಉತ್ಪಾದನೇ ಜಾಸ್ತಿಯಾಗದೇ ಈ ರಾಜ್ಯದಲ್ಲಿ ನಮಗೆ ಸಾಕಷ್ಟು ವಿದ್ಯುತ್ ಕೊಡಿ ಎಂದು ರೈತರು, ಕೈಗಾರಿಕೆಗಳು, ಈ ಮನೆಯವರು ಕೇಳಿದರೆ ಎಲ್ಲಿ ಉತ್ಪಾದನೆ ಮಾಡಬೇಕು? ಉತ್ಪಾದನೆ ಕಡಿಮೆ ಇದ್ದು, ಸಾಕಷ್ಟು ವಿದ್ಯುತ್ ಕೊಡಿ ಎಂದರೆ ನಾವು ಎಲ್ಲಿಂದ ತರುವುದು? ಹೊರ ರಾಜ್ಯದವರು ಎಷ್ಟು ಕೊಡುವುದಕ್ಕೆ ಸಾಧ್ಯವಿದೆ? ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆ ಕಾರಣದಿಂದ ರಾಜ್ಯದಲ್ಲಿ ಎಲ್ಲೆಲ್ಲಿ ಜಲ ವಿದ್ಯುತ್ ಯೋಜನೆಗಳನ್ನು ಮಾಡಲು ಸಾಧ್ಯವಿದೆಯೋ ಅಲ್ಲಲ್ಲಾ ಮಾಡಲೇಬೇಕಾಗುತ್ತದೆ. ಅದಕ್ಕೆ ಪ್ರಯತ್ನ ಮಾಡದೇ ಹೋದರೆ ಈಗ ಎಷ್ಟು ಕಠಿಣ ಪರಿಸ್ಥಿತಿ ವಿದ್ಯುತ್ ಕ್ಷೇತ್ರದಲ್ಲಿ ಇದೆ ಅದು ಹಲವಾರು ವರ್ಷ ಮುಂದುವರಿಯುತ್ತಲೇ ಹೋಗುತ್ತದೆ. ಆದ್ದರಿಂದ ಯಾರು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವು ವಿದ್ಯುತ್ ಯೋಜನೆಗಳು ಆಗುವುದು ಬೇಡವೆಂದು ತಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅವರಿಗೆ ವಿನಂತಿ ಮಾಡುತ್ತೇವೆ. ಇವತ್ತು ಏನಾದರೂ ತೊಂದರೆ ತೊಡಕುಗಳು ಇದ್ದರೆ, ಮುಳುಗಡೆ ಆಗುವುದು ಇದ್ದರೆ ಅದಕ್ಕೆ ತಕ್ಕ ಪರಿಹಾರವನ್ನು ಸರ್ಕಾರದಿಂದ ಪಡೆದು ವಿದ್ಯುತ್ ಯೋಜನೆಗಳನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಹಾಗೆ ಮಾಡದೇ ಇದ್ದರೆ ಸಾಧ್ಯವೇ ಇಲ್ಲಿ ರೈತ ಬದುಕಬೇಕಂದರೆ ಅವನಿಗೆ ವಿದ್ಯುತ್ ಬೇಕು. ಅವನ ಪಂಪುಸೆಟ್ಟಿಗೆ ವಿದ್ಯುತ್ ಸಿಕ್ಕರೆ ತಾನೇ ಅವನು ಉತ್ಪಾದನೆ ಹೆಚ್ಚು ಮಾಡುವುದು. ಬೇಡ್ತಿ ಯೋಜನೆ, ಅಘನಾಶಿನಿ ಯೋಜನೆಗಳನ್ನು ಪ್ರಾರಂಭ ಮಾಡಲು ಹೊರಟಾಗ ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳಿದರೆ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ನೀಗುವುದಕ್ಕೆ ಆಗುವುದಿಲ್ಲ ಎನ್ನುವ ಸತ್ಯವನ್ನು ಅರಿಯಬೇಕಾಗುತ್ತದೆ. ಬೆಂಗಳೂರಿನಲ್ಲಿ ಒಂದು ಬೇಡ್ತಿ ಯೋಜನೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಅಥವಾ ತುಮಕೂರಿಗೆ ಹೋಗಿ ಅಲ್ಲಿ ಅಘನಾಸಿನಿಯಂತಹ ಯೋಜನೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಯಾವ ಯೋಜನೆಗೆ ಎಲ್ಲಿ ಅಂತಹ ಒಂದು ವ್ಯವಸ್ಥೆ, ಅನುಕೂಲ ಇರುತ್ತದೆಯೋ ಅದನ್ನು ನೋಡಿ ನಾವು ಯೋಜನೆಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆದಕಾರಣ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಏನೇನು ವಿದ್ಯುತ್ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಅಲ್ಲಿಗೆ ಪ್ರತಿ ವರ್ಷ ಹಣವನ್ನು ಜಾಸ್ತಿ ಖರ್ಚು ಮಾಡಿ ವಿದ್ಯುತ್ ಯೋಜನೆಗಳನ್ನು ಪ್ರಾರಂಭ ಮಾಡಿ, ಹೆಚ್ಚಿನ ಒಂದು ವಿದ್ಯುತ್ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಏನೇನೂ ಆಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇಲ್ಲಿ ನೀರಾವರಿಯ ಬಗ್ಗೆ ಈಗ ಹೇಳಿದರು.

ನೀರಾವರಿಗೆ ಹಿಂದೆ ಯಾವಾಗಲೂ ಇಷ್ಟು ಹಣ ತೆಗೆದು ಇಟ್ಟಿಲ್ಲ. ಇಷ್ಟು ಹಣವನ್ನು ಸರ್ಕಾರ ತೆಗೆದು ಇಟ್ಟಿದೆ. ನನಗೆ ತಿಳಿದು ಬಂದ ಮಾಹಿತಿ ಪ್ರಕಾರ ಸುಮಾರು 549 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನೀರಾವರಿಗೆ ತೆಗೆದು ಇಡಲಾಗಿದೆಯೆಂದು ಇಲ್ಲಿ ಬರೆಯಲಾಗಿದೆ. ಅದನ್ನು ನಾವು ಸ್ವಾಗತಿಸಬೇಕಾಗಿದೆ. ಹಾಗೆಯೇ ಕೆರೆಗಳ ದುರಸ್ತಿಗಾಗಿ 5 ಕೋಟಿ ರೂಪಾಯಿಗಳನ್ನು ತೆಗೆದು ಇಡಲಾಗಿದೆ. ಇದಕ್ಕೆ ಇನ್ನೂ ಹೆಚ್ಚು ಹಣ ಕೊಟ್ಟಿದ್ದರೆ ಒಳ್ಳೆಯದಿತ್ತು. ಏಕೆಂದರೆ ಸಂಪನ್ಮೂಲಗಳನ್ನು ನಾವು ಕ್ರೋಢೀಕರಿಸದ ಹೊರತು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕೆರೆಗಳ ದುರಸ್ತಿಯಾಗಬೇಕಾಗಿದೆ. ಅದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕು. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ತೆಗೆದು ಇಡಬೇಕಾಗಿದ್ದು ಅವಶ್ಯಕತೆಯಿದೆ.

ಇನ್ನು ಮೀನುಗಾರಿಕೆಯ ಬಗ್ಗೆ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಇಲ್ಲಿ ಕಡೆಗಣಿಸಿಲ್ಲ. ನಮ್ಮಲ್ಲಿ ಉಪ್ಪು ನೀರು ಜಾಸ್ತಿ. ಸಮುದ್ರದೊಳಗಿರುವ ಉಪ್ಪು ನೀರು ಭರ್ತಿಯಾಗಿ ಕೆರೆಗಳಿಗೆ ನುಗ್ಗಿ ಬಂದು ಅದು ಹೊಲಗದ್ದೆಗಳಲ್ಲಿ ಸೇರಿ ಆ ಭೂಮಿಯನ್ನು ಕ್ಷಾರ ಭೂಮಿಯನ್ನಾಗಿ ಪರಿವರ್ತನೆ ಮಾಡುವುದು ಅಷ್ಟೇ ಅಲ್ಲ, ಸಮುದ್ರದ ನೀರು ಬಂದು ಹೋದ ಜಾಗಗಳಲ್ಲಿ ಯಾವುದೇ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಅಲ್ಲಿ ಬೇರೆ ಕೃಷಿ ಮಾಡುವುದಕ್ಕೆ ಆಗುವುದಿಲ್ಲ. ಬೇರೆ ಬೆಳೆಯನ್ನು ಬೆಳೆಯುವುದಕ್ಕೆ ಕಾನೂನಿನ ಅಡೆತಡೆಯಿದೆ. ಆ ಕಾರಣಕ್ಕೆ ಅಲ್ಲಿ ಫ್ರಾನ್ಸ್ (ಸೀಗಡಿ) ಮೀನು ಬೆಳೆಸುವುದಕ್ಕೆ ಕಾನೂನು ತಿದ್ದುಪಡಿ ಮಾಡಿ ಅಲ್ಲಿ ಹೆಚ್ಚಿನ ಪುರಸ್ಕಾರ ಕೊಡಬೇಕೆನ್ನುವ ಬಗ್ಗೆಯೂ ಸಹ ಇಲ್ಲಿ ತೋರಿಸಲಾಗಿದೆ. ಅದನ್ನು ಸಹ ನಾನು ಸ್ವಾಗತಿಸುತ್ತೇನೆ.

ಇನ್ನು ಆಡಳಿತ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ತರುವುದಕ್ಕೆ ಇಲ್ಲಿ ಪ್ರಯತ್ನ ಮಾಡಲಾಗಿದೆ. ವಿಭಾಗಾಧಿಕಾರಿಗಳ ಹುದ್ದೆ ರದ್ದತಿಯೆಂದು ತೋರಿಸಿದ್ದಾರೆ. ಇದು ಪ್ರಾಮುಖ್ಯವಾದ ಕೆಲಸ. ಏಕೆಂದರೆ ಸಾಕಷ್ಟು ಹಣ ಈ ಅಧಿಕಾರಿಗಳ ಸಂಬಳಕ್ಕೆ ಅಧಿಕಾರಿಗಳ ಮನೆ ಅವರ ಖರ್ಚುವೆಚ್ಚ ಮತ್ತು ಅವರ ವಾಹನ ಸೌಕರ್ಯಗಳಿಗೆ ಸಾಕಷ್ಟು ಹಣ ಖರ್ಚು ಆಗುತ್ತಾ ಹೋಗಿದೆ. ಈ ವಿಭಾಗಾಧಿಕಾರಿಗಳ ಹುದ್ದೆ ಅಥವಾ ಇನ್ನು ಕೆಲವು ಹುದ್ದೆಗಳನ್ನು ರದ್ದುಪಡಿಸಿ ಬೇರೆ ವ್ಯವಸ್ಥೆ ಮಾಡುವುದರಿಂದ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಇಂತಹ ಉಳಿತಾಯದಿಂದ ಜನತೆಗೆ ಅನುಕೂಲವಾಗುತ್ತದೆ. ಇದೂ ಸಹ ಸ್ವಾಗತಾರ್ಹ ವ್ಯವಸ್ಥೆಯೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬಜೆಟ್ ವಿಚಾರದಲ್ಲಿ ಹೇಳುವುದಾದರೆ, ಸಾಕಷ್ಟು ನಾವು ಮಾತನಾಡಬಹುದು. ರೈತರಿಗೆ ಸವಲತ್ತುಗಳನ್ನು ಕೊಡುವ ಬಗ್ಗೆ ನಾನು ಪುನಃ ಮಾತನಾಡುವುದಾದರೆ, ಭೂ ಗುಣಯೋಜನೆ ಇದೆ. ನಮ್ಮಲ್ಲಿ ಏನಾಗಿದೆ ಅಂದರೆ ಭೂಮಿಯ ಗುಣಮಟ್ಟವನ್ನು ಅಳೆಯದೆ ಯಾವ ಜಮೀನು, ಯಾವ ಭೂಮಿಗೆ, ಯಾವ ಗೊಬ್ಬರ ಬಯಸುತ್ತದೆ ಯಾವ ಸಾರಜನಕ ಅಂಶಗಳನ್ನು ಬಯಸುತ್ತದೆ ಎನ್ನುವುದು ಗೊತ್ತಿಲ್ಲದೆ ರೈತ ಸಾಗುವಳಿ ಮಾಡುವುದರಿಂದ, ಬಹಳ ತೊಂದರೆಯಾಗಿದೆ. ಅದಕ್ಕಾಗಿ ಭೂ ಗುಣ ಯೋಜನೆ ಮಾಡಿ ಅಲ್ಲಿ ಭೂಮಿಯ ಮಣ್ಣನ್ನು ಪರೀಕ್ಷೆ ಮಾಡಿಸಿ ರೈತನಿಗೆ ಸಲಹೆ ಕೊಟ್ಟು ಯಾವ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಮತ್ತು ಯಾವ ಗೊಬ್ಬರ ಹಾಕಿ ಬೆಳೆಯನ್ನು ಬೆಳೆಸುವುದರಿಂದ ಹೆಚ್ಚಿನ ಬೆಳೆ ಬರುತ್ತದೆನ್ನುವ ಒಂದು ಫಾರ್ಮುಲವನ್ನು ರೈತನಿಗೆ ತೋರಿಸುವ ಸಲುವಾಗಿ ಭೂಗುಣ ಯೋಜನೆ ಮಾಡಿದ್ದಾರೆ. ಇದಕ್ಕಾಗಿ ಇಟ್ಟ ಹಣ ಕಡಿಮೆಯಿದ್ದರೂ ಸಹ ಇದು ಪ್ರಥಮ ಪ್ರಯತ್ನವಾಗಿದೆ. ಇದು ಬಹಳ ಒಳ್ಳೆಯ ಪ್ರಯೋಜನವಾಗತಕ್ಕ ಯೋಜನೆ ಆದ್ದರಿಂದ ಇದೂ ಕೂಡ ಸ್ವಾಗತಿಸಬೇಕಾದ ವಿಚಾರವಾಗಿದೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಬೇಗ ಮುಗಿಸಬೇಕು. ಇನ್ನೂ ಮೂರ್ನಾಲ್ಕು ಜನರು ಮಾತನಾಡುವವರು ಇದ್ದಾರೆ...

ಶ್ರೀ ಆರ್.ಎನ್. ನಾಯಕ್ : ನಾನು ಬೇಗ ಮುಗಿಸುತ್ತೇನೆ. ನೀವು ಈಗಲೇ ಮುಗಿಸಿ ಬಿಡಿ ಅಂದರೆ ಮುಗಿಸುತ್ತೇನೆ. ಅದೇ ಈಶ್ವರಪ್ಪನವರ ಸುದ್ದಿಗೆ ನಾನು ಹೋಗದಿದ್ದರೆ ಇನ್ನೂ ಬೇಗ ಮುಗಿಯುತ್ತದೆ. ಇನ್ನು ಹನಿ ತೆನೆ ಯೋಜನೆ. ಇದು ಬಹಳ ಅತ್ಯುತ್ತಮವಾದ ಯೋಜನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಡಿಕೆ, ತೆಂಗು ಬೆಳೆಗಳಿಗೆ ಮಾರ್ಚಿ ತಿಂಗಳಿನಲ್ಲಿ ನೀರಿಗೆ ಬಹಳ ತೊಂದರೆಯಿರುತ್ತದೆ. ಮಳೆಗಾಲ ಜೂನ್ ತಿಂಗಳು. ಆಗ ಮಳೆ ಬರುತ್ತದೆ. ಅಲ್ಲಿಯವರೆಗೆ ಈ ಬೆಳೆಗಳಿಗೆ ನೀರಿನ ಅಭಾವ ಕಂಡುಬರುತ್ತದೆ. ಬೆಳೆ ಪ್ರಾರಂಭವಾಗುವಾಗ ನೀರಿನ ಕೊರತೆಯಿರುತ್ತದೆ. ನೀರು ಕಡಿಮೆಯಾದ್ದರಿಂದ ಅಡಿಕೆ ಮತ್ತು ತೆಂಗಿನ ಎಳೆಗಾಯಿಗಳು ಬಿದ್ದು ಹೋಗುವ ಸಂದರ್ಭ ಎದೆ. ಆ ಮರಗಳಿಗೆ ನೀರನ್ನು ವ್ಯವಸ್ಥಿತವಾಗಿ ಕೊಟ್ಟಲ್ಲಿ, ಸರಿಯಾದ ರೀತಿಯಲ್ಲಿ ನೀರು ಪೂರೈಕೆಯಾದಲ್ಲಿ ಆ ಬೆಳೆಗಳನ್ನು ಹೆಚ್ಚಿಗೆ ಬೆಳೆಯುವ ಸಾಧ್ಯತೆಯಿದೆ. ಈ ಹನಿತೆನೆ ಏನಿದೆ, ಬಹುಶಃ ಅದು ಎಲ್ಲಿ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಚಿಕ್ಕ ನೀರಾವರಿ ಯೋಜನೆಗಳು ಅಥವಾ ಬಾವಿಯಿಂದ ಅಥವಾ ಬೋರ್‌ವೆಲ್‌ನಿಂದ ನಾವೇನು ನೀರನ್ನು ಪಡೆದು ಬೆಳೆ ಬೆಳೆಯುತ್ತೇವೆ, ಅಂತಹವರಿಗೆ ಇದು ಬಹಳ ಅತ್ಯುತ್ತಮವಾದ ಯೋಜನೆ, ಈ ಕಾರಣಕ್ಕಾಗಿ ಈ ಯೋಜನೆಯನ್ನೂ ಸಹ ಸ್ವಾಗತಿಸಬೇಕಾಗುತ್ತದೆ. ಇನ್ನು 'ಕೃಷಿ ಪ್ರಶಸ್ತಿ'ಯನ್ನು ಸಹ ಇಲ್ಲಿ ತೋರಿಸಿದ್ದಾರೆ. ರೈತರಿಗೆ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸಿ ಆ ಸ್ಪರ್ಧೆಯಿಂದ ಹೆಚ್ಚಿನ ಬೆಳೆ. ಹೆಚ್ಚಿನ ಸಂಪತ್ತನ್ನು ರಾಜ್ಯಕ್ಕೆ ದೊರಕಿಸಿಕೊಡುವ ಒಂದು ಸನ್ನಾಹ ಇದೆ. ಇದು ಒಂದು ಅತ್ಯುತ್ತಮವಾದ ವ್ಯವಸ್ಥೆ. ರೈತ ಇಲ್ಲಿ ಸ್ಪರ್ಧೆಗಿಳಿದು ಹೆಚ್ಚಿಗೆ ಬೆಳೆ ಬೆಳೆದುಕೊಂಡು ತಾನು ಅಭಿವೃದ್ಧಿಯಾಗುವುದರ ಜೊತೆಗೆ ರಾಜ್ಯದ ಅಭಿವೃದ್ಧಿಯನ್ನೂ ಮಾಡುವಂಥ ವ್ಯವಸ್ಥಿತ ಯೋಜನೆ ಇದು. ಇಷ್ಟೆಲ್ಲ ಇದ್ದು, ಕೇವಲ ಸಾಲ ಮನ್ನಾ ಮಾಡಿದರೆ, ಹತ್ತು ಸಾವಿರ ರೂಪಾಯಿ ಸಾಲ ಮನ್ನಾ ಮಾಡಿಬಿಟ್ಟರೆ ರೈತ ಆಮೇಲೆ ಬಹಳ ಶ್ರೀಮಂತನಾಗುತ್ತಾನೆಯೇ. ಅವನು ಆಮೇಲೆ ಸಾಲ ಮಾಡುವುದೇ ಇಲ್ಲವೇ ಮತ್ತು ಇಷ್ಟು ಮಾಡಿ ಮುಗಿಸಿಬಿಟ್ಟರೆ ರೈತರಿಂದ ಓಟು ಬಂದು ನಿಮ್ಮ ಬಿ.ಜೆ.ಪಿ. ಪೆಟ್ಟಿಗೆಯೊಳಗೆ ಬಿದ್ದು, ನಾವು ಇಲ್ಲಿ ನಂಬರ್ ಒನ್ ಕುರ್ಚಿಗೆ ತೊಂದರೆ ಇಲ್ಲದೆ ಬಂದುಬಿಡುತ್ತೇವೆ, ಆದ್ದರಿಂದ ನಾವು ರಾಜ್ಯದ ಪ್ರವಾಸ ಕೈಗೊಂಡಿದ್ದೇವೆ ಎಂದು ಮಾನ್ಯ ಯಡಿಯೂರಪ್ಪನವರು ಹೋಗಿದ್ದಾರೆ ಎಂದು ಈಗ ಶ್ರೀ ಈಶ್ವರಪ್ಪನವರು ಹೇಳಿದರು. ಈಗ ಅಸೆಂಬ್ಲಿ ನಡೆಯುತ್ತಿದೆ. ದಯಮಾಡಿ, ಈಗ ನಮ್ಮ ಸ್ನೇಹಿತರು ಹೇಳಲಿ...

ಶ್ರೀ ಎ. ರುಕ್ಮಯ್ಯ ಪೂಜಾರಿ : ನೀವು ಬಿ.ಜೆ.ಪಿ. ಬಗ್ಗೆ ಮಾತನಾಡುತ್ತಿದ್ದೀರೋ ಅಥವಾ ಬಜೆಟ್ ಮೇಲೆ ಮಾತನಾಡುತ್ತಿದ್ದೀರೊ?

ಶ್ರೀ ಎಂ. ರಾಮಪ್ಪ : ನೀವು ಯಾವಾಗಲೂ ಮಾತನಾಡುವವರು ಸಾಲ ಮನ್ನಾಮಾಡುವ ವಿಚಾರ ಹೇಳುವಾಗ ಆ ಮಾತನ್ನು ಏಕೆ ಹೇಳಲಿಲ್ಲ?

ಶ್ರೀ ಆರ್.ಎನ್. ನಾಯಕ್ : ನೀವು ಟೀಕೆ ಮಾಡಿದ್ದರಿಂದ, ನಾವೇನೂ ಇಲ್ಲಿ ಟೀಕಾತೀತರಲ್ಲ. ಯಾರೂ ಈ ಟೀಕೆಗೆ ಹೊರತಾಗಿಲ್ಲ. ಈಗ ನನಗೆ ಒಂದು ಸಂತೋಷ ಇದೆ. ಕೊನೆಯಪಕ್ಷ ನೀವು ಮೂರು ಜನರಾದರೂ ಇಲ್ಲಿ ಕುಳಿತುಕೊಂಡಿದ್ದೀರಿ. ಇಲ್ಲದಿದ್ದರೆ ನಾವು ಯಾರ ಜೊತೆ

ಮಾತನಾಡಬೇಕು? ಅಧ್ಯಕ್ಷರು ನಾವು ಮಾತನಾಡಿದರೆ ಇಷ್ಟಪಡುವುದಿಲ್ಲ. ಬೇಗ ಮುಗಿಸಿ ಎಂದು ಹೇಳುತ್ತಾರೆ. ನೀವು ಇರುವ ಸಲುವಾಗಿ ಸ್ವಲ್ಪವಾದರೂ ಇಷ್ಟವಾಯಿತು. ಇವತ್ತು ಅವರು ಇದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಅದು ಅವರಿಗೆ ಅರ್ಥವಾಗುವುದಿಲ್ಲ. ನಾವು ಸಹ ಹಿಂದೆ ವಿರೋಧಪಕ್ಷದಲ್ಲಿದ್ದಾಗ ಬಹಳಷ್ಟು ಸರ್ಕಾರಕ್ಕೆ ಟೀಕೆ ಮಾಡಿದ್ದೇವೆ. ಮುಖ್ಯ ಮಂತ್ರಿಗಳನ್ನೂ ಟೀಕೆ ಮಾಡಿದ್ದೇವೆ. ಆದರೆ ನಮ್ಮ ಮುಖ್ಯಮಂತ್ರಿಗಳು ಮಂಡಿಸಿದಂಥ ಈ ಬಜೆಟ್ ಅತ್ಯುತ್ತಮ ಬಜೆಟ್. ಅದರಲ್ಲಿ ತಮಗೆ ಟೀಕೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಆ ಕಾರಣಕ್ಕೆ ಇವರು ಪಲಾಯನವಾದ ರೀತಿ ನಾವು ಎಂದೂ ಮಾಡಿಲ್ಲ. ನಾವು ಬಜೆಟ್ ಪುಸ್ತಕವನ್ನು ನಾಲ್ಕು ಸಲ ಓದಿ ಅದರಲ್ಲಿ ಏನೇನು ಮಿಸ್ಟೇಕ್ಸ್ ಇದೆ, ಅದರಿಂದ ಏನೇನು ತೊಂದರೆ ಇದೆ, ಜನರಿಗೆ ಅನುಕೂಲವಾಗುವಂಥ ಸುಧಾರಣೆಗಳನ್ನು ಮಾಡಿ ಅಂತ ಶ್ರೀ ರಾಮಕೃಷ್ಣ ಹೆಗಡೆ ಅವರ ಸರ್ಕಾರಕ್ಕೆ ಆ ಕಾಲದಲ್ಲಿ ನಾವು ಹೇಳಿದ್ದೇವೆ. ನಾವು 66 ಜನ ಇದ್ದೆವು. ನಮ್ಮನ್ನೂ ಮೂರು-ನಾಲ್ಕು ಜನ ಎತ್ತಿ ಆ ಕಡೆಗೆ ಹಾಕಿದ್ದರು. ಶ್ರೀ ರಾಮಪ್ಪನವರಂಥ ದೊಡ್ಡ ಶರೀರದವರನ್ನೂ ಬಹಳ ಕಷ್ಟಪಟ್ಟು ಆ ಕಾಲದಲ್ಲಿ ಹೊತ್ತಿದ್ದಾರೆ. ಅದಕ್ಕಾಗಿ ನಾವೇನೂ ಸಂತೋಷಪಟ್ಟುಕೊಡಿಲ್ಲ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಇರುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಪಲಾಯನ ಮಾಡಿಲ್ಲ.

ಉಪಾಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಆರ್.ಎನ್. ನಾಯಕ್ : ಎರಡು ನಿಮಿಷ. ಬಜೆಟ್ ಲೀಕ್ ಆಯಿತು ಎಂದು ಹೇಳಿದರು. ನೀವು ಬಜೆಟ್ ಸೋರಿಹೋಗಿದೆ ಎಂದು ಹೇಳಿ ಏನೆಲ್ಲಾ ಮಾಡಿದಿರಿ? ಮುಖ್ಯ ಮಂತ್ರಿಗಳಿಗೆ ಬಜೆಟ್ ಓದುವುದಕ್ಕೂ ಕೊಡದೆ ಧರಣಿ ಸತ್ಯಾಗ್ರಹ ಮಾಡಿದಿರಿ, ಕಿರುಚಾಡಿದಿರಿ. ತದನಂತರ ಒಂದು ಮೋಶನ್ ಮೂವ್ ಮಾಡಿದಿರಿ. ಅದರಲ್ಲಿ ಸೋತು ಸುಣ್ಣ ಆದಿರಿ. ನಿಮಗೆ ಆಲೋಚನೆ ಇದ್ದದ್ದು ಏನೆಂದರೆ, ಮೋಶನ್ ಮೂವ್ ಮಾಡಿದಾಗ ಈ ಕಡೆ ಕುಳಿತು ಬಜೆಟ್ ಪ್ರತಿಯನ್ನು ಏನು ತಂದಿದ್ದರು, ಅವರು ಸಹಾಯ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದಿರಿ. ಆದರೆ ಹಾಗೆ ತಿಳಿದುಕೊಂಡು ಮೋಶನ್ ತಂದು ಸೋತು ಸುಣ್ಣವಾದಿರಿ. ಮರುದಿನ ನೀವು ನಾಪತ್ತೆಯಾಗಿಬಿಟ್ಟಿರಿ. ನೀವು ಏಕೆ ಬರಲಿಲ್ಲವೆಂದು ಕೇಳುವುದಕ್ಕೆ ನಾವು ಬರಬೇಕು. ಇದು ಬಹಳ ಆಶ್ಚರ್ಯಕರ. ನಿಮ್ಮ ಜವಾಬ್ದಾರಿ ನಿಮಗೆ ಇಲ್ಲವೆ? ನಾವೂ ವಿರೋಧಪಕ್ಷದಲ್ಲಿ ಆರೇಳು ವರ್ಷ ಕಾಲ ಕುಳಿತುಕೊಂಡಿದ್ದೆವು. ನಾವು ಎಂದಾದರೂ ಹೀಗೆ ಪಲಾಯನ ಮಾಡಿ ಓಡಿಹೋಗಿದ್ದೀವಾ? ಇಲ್ಲ. ನಮ್ಮನ್ನು ಹೊತ್ತು ಹಾಕಿದ್ದರೂ ತಿರುಗಿ ಬಂದಿದ್ದೆವು. ನಮಗೆ ಆರೇಳು ದಿವಸ ಇಲ್ಲಿ ನಮ್ಮ ಸದಸ್ಯತ್ವವನ್ನು ಕ್ಯಾನ್ಸಲ್ ಮಾಡಿಬಿಟ್ಟರೂ, ನಾವು ಬೇಜಾರು ಮಾಡಿಕೊಳ್ಳಲಿಲ್ಲ. ಆದರೆ ಕೆಲವು ಜನ ವಿರೋಧಪಕ್ಷದಲ್ಲಿದ್ದವರಿಗೆ ಸಿಂಧ್ಯ, ದೇಶಪಾಂಡೆ ಅವರಿಗೆ ಏನಾಗಿತ್ತು ಎಂದರೆ ಅವರು ಬಂದು ಬಂದು ಮಂತ್ರಿಗಳಾಗಿ ಇಲ್ಲಿ ಕುಳಿತುಕೊಂಡುಬಿಟ್ಟರು. ಅವರು ವಿರೋಧಪಕ್ಷದಲ್ಲಿದ್ದು ಜನರ ಕಷ್ಟಸುಖ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಅವರು ಎಂದೂ ಮಾಡಿದವರೇ ಅಲ್ಲ. ಆದ್ದರಿಂದ ಆ ಆಳ್ವಿಕೆ ಏನು ಅವರ ತಲೆಯಲ್ಲಿ ಹೊಕ್ಕಿಕೊಂಡಿತ್ತು ಅದು ಹಾಗೆಯೇ ಇವತ್ತು ಉಳಿದುಕೊಂಡುಬಿಟ್ಟಿದೆ. ಮಂತ್ರಿಗಳಾಗಿದ್ದರೆ ನಾವು ಅಲ್ಲಿ ಕುಳಿತುಕೊಂಡಿರುತ್ತಿದ್ದವು ಎನ್ನುವ ಭಾವನೆ ಇದೆ.

ಅವರು ಬೆದರಿ, ಈ ಅತ್ಯುತ್ತಮ ಬಜೆಟನ್ನು ಟೀಕೆ ಮಾಡುವ ಶಕ್ತಿ ಇಲ್ಲದೇ, ಓಡಿಹೋಗಿದ್ದಾರೆ ಎಂದು ನನ್ನ ಆಪಾದನೆ ಇದೆ. ಇನ್ನು ಲೀಕ್ ಆಯಿತು ಎಂದು ಹೇಳಿದರು, ಇದು ರದ್ದಿ ಕಾಗದ ಎಂದು ಹೇಳಿದರು. ಇದು ನಾಲಿಗೆಯ ಸರ್ಕಸ್ ರದ್ದಿ ಕಾಗದ ಎಂದು ಯಾರು ಹೇಳಿದರು ಎಂಬುದು ತಮಗೂ

ಗೊತ್ತಿಥೆ. ರದ್ದಿ ಕಾಗದ ಎಂದು ಹೇಳಿದರೆ, ಅದು ನಾಲಿಗೆಯು ಸರ್ಕಲ್. ಪ್ರತಿಯೊಂದು ಕಾಗದವೂ ಓದಿದ ಮೇಲೆ ಅದು ರದ್ದಿಯೇ ಆಗುತ್ತದೆ. ಯಾವ ಕಾಗದ ರದ್ದಿ ಆಗುವುದಿಲ್ಲ? ಪೆಟ್ಟಿಗೆಯಲ್ಲಿ ಯಾರಿಗೂ ಕಾಣಿಸದಿದ್ದರೆ ಅದು ಡಾಕ್ಯುಮೆಂಟ್ ಆಗಿರುತ್ತದೆ, ಇಲ್ಲದೇ ಹೋದರೆ ಸಾಮಾನ್ಯ ಜ್ಞಾನ ಎಲ್ಲರಿಗೂ ಗೊತ್ತಿದೆ, ಅದು ರದ್ದಿಯಾಗಿರುತ್ತದೆ. ಬಜೆಟನ್ನು ಒಂದು ಸಲ ತಮ್ಮ ಮುಂದೆ ಇಟ್ಟಮೇಲೆ ಅದು ಚರ್ಚೆಯಾಗಬೇಕು, ಇದು ಒಂದು ಗೌರವದ ವಿಚಾರ. ಅದು ಬಿಟ್ಟು ಇದು ರದ್ದಿ ಕಾಗದ, ನಾವು ಚರ್ಚೆಗೆ ಬರುವುದಿಲ್ಲವೆಂದು ಹೇಳಿದರೆ, ಹಾಗಾದರೆ, ನೀವು ಯಾವ ಚರ್ಚೆಗೆ ಇಲ್ಲಿ ಬರುತ್ತೀರಿ. ರೈತಸಂಘದ ನಾಯಕರು ಹೇಳಿದರು, ಕೆಲವರು ಹೇಳಿದರು ಬಜೆಟ್ ಲೀಕ್ ಆಗಿದೆ, ಈ ಪುಸ್ತಕ ಲೀಕ್ ಆಗಿದೆ, ಅವರಿಗೆ ಸೋರು ಎನ್ನುವ ಶಬ್ದದ ಅರ್ಥವೇ ಆಗಲಿಲ್ಲ. ಬಹಳ ಜನ, ಹಳೆಯ ಸದಸ್ಯರಿಗೂ ಈ ಸೋರುವಿಕೆ ಎನ್ನುವುದು ಅರ್ಥವಾಗದಿದ್ದರೆ, ಬಹುಶಃ ನಮಗೆ ಇಲ್ಲಿ ಅರ್ಥವಾಗಲಿಲ್ಲವೋ ಅಥವಾ ಅವರಿಗೆ ಅರ್ಥವಾಗಲಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಸೋರು ಎಂದರೆ ಏನು? ಕೆರೆ ಸೋರಿತು ಎಂದು ಹೇಳಿದರೆ, ಕೆರೆಯಿಂದ ಸ್ವಲ್ಪ ನೀರು ಆಚೆ ಹೋಯಿತು ಎಂದು ಅರ್ಥ. ಅಥವಾ ಪಾತ್ರೆ ಸೋರಿತು ಎಂದು ಹೇಳಿದರೆ, ಪಾತ್ರೆಯಲ್ಲಿ ಇದ್ದ ನೀರು ಸ್ವಲ್ಪ ಆಚೆ ಹೋಯಿತು ಎಂದು, ಇದು ಸೋರು ಅಥವಾ ಲೀಕ್ ಎಂದು ಅರ್ಥ. ಈ ಪುಸ್ತಕದ ಯಾವುದಾದರೂ ಒಂದೆರಡು ಅಂಶ ಮೊದಲೇ ಹೊರಗಡೆ ಹೋಗಿದ್ದರೆ, ಅದು ಲೀಕ್ ಆಯಿತು ಎಂದು ಅರ್ಥ. ಆದರೆ, ಪುಸ್ತಕವೇ ಲೀಕ್ ಆಯಿತು ಎಂದು ಹೇಳಿದರೆ, ಅದರ ಅರ್ಥ ಲೀಕ್ ಆಗುವುದಿಲ್ಲ. ಪುಸ್ತಕ ಲೀಕ್ ಆಗಲಿಲ್ಲ, ಸೋರು ಅಥವಾ ಲೀಕ್ ಎನ್ನುವ ಅರ್ಥ ಗೊತ್ತಿಲ್ಲದ ಜಾಣರು, ಸದನದಲ್ಲಿ ಬಜೆಟ್ ಲೀಕ್ ಆಗಿದೆ ಎಂದು ಹೇಳಿದರೆ, ಅದು ಬಜೆಟ್ ಲೀಕ್ ಆಗಲಿಲ್ಲ. ಇದು ಅತ್ಯುತ್ತಮ ಬಜೆಟ್. ಬಜೆಟ್ ಮೇಲಿರುವ ಪ್ರತಿಯೊಂದು ಅಂಶಗಳನ್ನು ಶಾಸಕರೆಲ್ಲರೂ ಸ್ವಾಗತಿಸುತ್ತಾಗೆ. ಅಷ್ಟೇ ಅಲ್ಲ, ರಾಜ್ಯದ ಜನತೆಗೆ, ವಿಶೇಷವಾಗಿ ಬಡ ವರ್ಗದವರು, ಹಿಂದುಳಿದವರು, ರೈತರು ಮತ್ತು ಗ್ರಾಮೀಣ ಭಾಗದ ಜನರು ಇದಕ್ಕೆ ಸಂಪೂರ್ಣವಾಗಿ ಸ್ವಾಗತ ನೀಡಿದ್ದಾರೆ. ವಿಶೇಷವಾಗಿ ಈಗಾಗಲೇ ಪೇಪರಿನಲ್ಲಿಯೂ ಬಂದಿದೆ. ರೈತರು ಈ ರೀತಿ ದೊರಕಿದ ಸವಲತ್ತುಗಳನ್ನು ನೋಡಿ, ಪಟಾಕಿ ಹಾರಿಸಿ, ತಮ್ಮ ಸಂತೋಷವನ್ನು ವ್ಯಕ್ತಮಾಡಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಅತ್ಯುತ್ತಮ ಬಜೆಟ್ ಮಂಡಿಸಿದಂಥ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಾ, ಇದು ರಾಜ್ಯದ ಜನತೆಗೆ ಹಿತ ತರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SMT. DAMAYANTHI BOREGOWDA (Srirangapatna) : Madam Deputy Speaker, I am glad that our brethren from BJP, MES and Muslim League are participating. I welcome the Budget estimates for 1992-93. The frustrated, and disappointed unemployed youth are increasing day by day and employment generation schemes are a must for today. The flood relief given is not at all sufficient. The fertile lands were eroded in most of the places in my area and the meagre assistance did not help them much. among the five schemes of Vishwa, Akshaya, Ashraya, Sushrush, and Aradhana, Ashraya is the best one. It is a great boon to the houseless people and I wish that the Government to expedites the Scheme. Vishwa Minister is here. Vishwa is an improved scheme of TRYSEM.. the trainees of TRYSEM scheme were left in the lurch. There was no follow-up and they were not organised to form the societies and continue their craft or industries. Even the school uniforms under the Vidya vikas Yojana were not given

to this TRYSEM trainees but commercial organisations were given orders. It is heartening that Vishwa provides marketing of the products made by our TRYSEM trainees and voluntary organisations to be marketed through Vishwa sales centres. The construction of house under Ashraya scheme should be good. We have seen some of the houses constructed by the Housing Board collapsed and we have seen the pictures also, in the newspapers. Akshaya scheme, of course they have to open thousands of a accounts in the banks and the bankers expressed their inability to open so many accounts. We should consider alternative arrangements for that scheme. Otherwise it will be very difficult. Post offices can come to our help to some extent.

Shushrusha - we are not able to find doctors for our rural hospitals. It is very unfortunate that even in the 20th century when we spend crores and crores of rupees on medical education, our rural people do not have the facility of minimum help. At least mobile vans with a team of doctors should be made to work in the rural areas. Plan investment in our State has not improved. On the contrary it has decresed. Resource mobilisation is really good. Power tariff concession upto 10 HP capacity to our farmers is a great relief. But vagaries of power supply affects them very much. some times motors are burnt and farmers have to spend thousands of rupees on that. Though soil testing facility is there since so many years, our farmers were not using them. Now they will be done intensively and I welcome sericulture college to Kolar, forest college to Coorg, Agriculture college to Mandya and Horticulture college to Mudigere. At least now the Government is giving colleges to the District Headquarters. Drip irrigation is the need of the day. We can neither increase the land nor the water, either surface or ground water. So, we can save a lot water by this drip irrigation and we have to make use of the best available lands. It is better subsidise sprinkler system of irrigation. This will improve water management. For the first time, progressive farmers will be given so many prizes. Artists and Journalist were getting sites, prizes, pensions etc. But now farmers are getting recognition. It is a very good sign and I welcome all these schemes. The unorganised agricultural labourers are given Shrama Kalyana nidhi. HOPCOMS should open more and more procurement centre. Large potential in the horticulture should be explored. Sometimes the growers sell the products for a throw away prices or allow their cattle to graze them when the prices fall below fifty paise per kg. In our places we have seen when the prices of tomato fall below 50 paise per kg farmers do not bother to take vegetable to the market. They just allow their cattle to graze them. so, horticulture has a great role to play in the farmer's life. Cold storage facilities should be provided wherever possible. Irrigation should be given top priority. Out of 55 lakh hectares of irrigable land, only 24.4 lakh hectares are irrigated. I am glad sufficient fund are provided for Cauvery basin projects and Krishna Projects. Lift irrigation helps to make better use of water, but due to power cut they are not functioning well. Often when the ryot has to reap his

harvest, the power cut is there and the lift irrigation does not work at all. They are 36,605 tanks in our state. Not only the tanks but even the canals are full of silt and weeds. Unless they are removed, no storage of water is possible in those places. Crores of rupees are due to the Karnataka Electricity Board. They should collect it and improve the power supply. Small hydel projects will increase power supply. There was an order to cut the power supply to KR Sagar; due to the LTTE threat and the importance of the place, our Asst.Executive Engineer did not cut the power supply. They should collect it and improve the power supply. Agriculture, irrigation and electricity are like Trimurthy - Shiva, Vishnu and Brahma to our lands. They should be given top priority. The population in our villages and towns increases immensely. We have to augment the supply of drinking water in tune with galloping increase in population. Much is said about Forest Department, but felling of trees is going on continuously. Our ancestors were planting trees without any expectation, just for the sake of future generations, but now we are not preserving what they have planted. In addition to the gobar gas plant, solar cookers, solar heaters should be subsidised. Fire wood should be replaces by non- conventional sources of energy. We are bestowed with a plenty of solar energy. Increasing the fish ponds will increse the income of the agricultural land owners. Andra has progressed very well. fishing is more profitable than agriculture. We need not invest much or toil much. Burial ground is very important. Rich land owners burry their dead body in their own lands, but the poor cannot. In my area, in one of the villages they had to bury the dead body in the road, because there was no other place to burn the body. It should be one of the programmes and I am glad the government has taken it seroiusly that every village should have burial ground. We should send our dead with all respect. Karnataka Women's Development Corporation have not made much progress. Social Welfare Hostels' students should be taught some crafts and we should have more and more hostels. The uncertainity of Karnataka State Social Welfare Board - the Hon.Minister for Social Welfare may take a note of it, should be cleared and the Board should help the voluntary organisations all over the state. We should see that all the Districts are represented in the newly constituted Board. The state Government and the Central Social Welfare Board have to nominate the members in equal numbers. We should provide social securities to the coolies, rag pickers, richshow pullers etc. I have seen our Bharath Seva Dal running night shelters in Mysore. Our Social Welfare Board was giving grants to the Bharath Seva Dal to run night shelter and these poor people they were having safe and sound sleep in the shelters. It is a very good idea and I hope the Government will give attention to it. sometimes the management is responsible for the creation of too many labour unions. They always try to crush good and strong labour unions and bring up a week union which will dance to their tunes. In my own area, the Mandya National Paper Mills is doing that. They have incurred losses and they have no money to pay salary.

They are taking unnecessary actions and they are harassing good workers of the strong union. Some of the managements deliberately incur losses and are responsible for their sale to private sector. The finances of our cooperative banks are far below our expectations, and they are facing a crisis. the package for weavers will help that community. Once Kodiyal and Melkote were very good and famous weaving centres. Now the weavers have migrated to Bangalore and other places to eke out their livelihood. We should provide them facilities there itself. Otherwise Bangalore is growing like a monster and housing and other problems are acute in Bangalore. Like Kittur Development Project, we should have a Srirangapatna Development Project in memory of the great Tiger of Mysore, Tippu Sultan, who was a terror to the British. What have we done to the development of Srirangapatna? So far nothing has done.

MADAM DEPUTY SPEAKER: The Minister concerned is sitting beside you.

SMT. DAMAYANTHI BORE GOWDA: Sometimes, he gives half of his portfolios to some other Minister. This is the sorry state of affairs. What have we done to this glorious capital of Karnataka? Cattle were grazing in the places where the great hero Tippu Sultan's body was found. Now there is a small enclosure. That is all. Nothing more and nothing less. He fought the British his whole life and he pledged his sons with the British for the sale of the country. The soil of Srirangapatna is enriched by the blood of the great warrior Tippu Sultan. Should we not improve the tourist potential of the island Srirangapatna. Inspite of my repeated requests, right from 1972, nothing is done for that. During the regime of Yadavas and Tippu Sultan the number of houses in Srirangapatna exceeded by one lakh. As a mark of which a temple is built there. Even now you can see the temple madam. Now it is a deserted tourist town though the number of tourists of Srirangapatna is the highest in the State, it gets a step-motherly treatment; inspite of my so many letters, nothing is done to improve the tourist facilities. They have been able to build riverside cottages, which are useful only for rich motorists. Ordinary people can not stay there and walk two or three kilometres to the temple. It is not only the tourist place but a sacred place to Hindus, Muslims, Jains and Christians etc. The swinging bridge which was wonderful and was built by a French Engineer is now in ruins. Our youth clubs have no finance. some of our clubs were getting prizes at the District and State level. Now they are dormant. Youth force is mighty force which should be harnessed for the State Welfare. Thousands of Ekalavyas are languishing in our villages. They do not have even a pair of shoes nor sports wear. Now we should increase budget allotment to the youth Services Department and see these youth clubs are revitalised and active. For the safety and security and tourist importance, KRS Development Authority should be formed like the proposed Jog Development Authority. There was a threat of LTTE and our Minister for Major and Minor

Irrigation took so much of pains and arranged for the security arrangements. Even during the famous Dasara celebrations, KRS was not opened to tourists. Coming to the economy measures, I have some more suggestions. Providing small bungalows to the Ministers and Judges. Each department of Government is spending a lot on rent for its offices and the people find it very difficult to locate them. Some are in Banashankari some are in Banaswadi and some are at the end of the Jayanagar like that. It is very difficult to find those offices. Big bungalows like Balabrooie may be given to Government offices. Smaller bungalows may be built in the compound of Balabrooie for our Ministers. Central jail may be shifted and that may be provided to many of the offices. So many offices can get located there. The jail need not be in the heart of Bangalore. It was okay when some decades back it was there. Now that can be easily shifted. Of course, shifting race course may create problems. But shifting jail does not take much time, and all offices can be located there.

So many offices can be located there. Now it is very difficult for us to locate offices in Bangalore, specially for people coming from rural areas it is very difficult to locate them. Fixed T.A. may be given to officers of non-executive posts. The expenditure on cars, drivers will be saved. Officers meeting should not be ficed during the office hours. It is with very great difficulty we go to the offices and we are told that the officers are in the meeting etc. They are not available to legislators, let alone to the public. Aluminium vessels which are used by the poor may be exempted from the levy of sales tax. The proposal to reintroduce octroi is dropped and I thank the Government for that. It is a great relief, actually it was abolished in 1979 and it was decided in the Joint Select Committee in which I was also a Member. I had written to the Chief Minister not to reintroduce the octroi and if at all they introduce, it should be discussed at the C.L.P. meeting. Some of these suggestions will really save money and a lot of energy also. With these words, I thank you for giving me this opportunity.

† ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, 1992-93ರ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನಾನು ಇಲ್ಲಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪಂಚದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳ ವರ್ಷ ಇದು. ಪ್ರಪಂಚದ ಅನೇಕ ದೇಶಗಳಲ್ಲಿ ರಷ್ಯಾದಲ್ಲಿ ಪ್ರಾರಂಭವಾದ ಪೆರಿಸ್ಟ್ರೋಯಿಕಾ ಮತ್ತು ಗ್ಲಾಸ್‌ನಾಸ್ಟ್ ಆಧಾರದ ಮೇಲೆ ಬೇರೆ ಬೇರೆ ಬದಲಾವಣೆಗಳನ್ನು ನಾವು ಕಂಡಿದ್ದೇವೆ. ಅದೇ ರೀತಿಯಲ್ಲಿ ಭಾರತದಲ್ಲಿ ಕೂಡ ಬದಲಾವಣೆಗಳು ಆಗಿವೆ. ಅದಕ್ಕನುಗುಣವಾಗಿ ಸಾರ್ವಜನಿಕ ವಲಯದಲ್ಲಿಯೂ ಖಾಸಗಿ ವಲಯದಲ್ಲಿಯೂ ಹೊಂದಾಣಿಕೆಯಾಗಿ ಪ್ರಗತಿ ಸಾಧಿಸಬೇಕೆಂಬ ಒಂದು ದಿಟ್ಟ ನಿರ್ಧಾರವನ್ನು ಭಾರತದೇಶದ ಬಜೆಟ್ ಹಾಗೂ ಕರ್ನಾಟಕ ರಾಜ್ಯದ ಬಜೆಟ್‌ನಲ್ಲಿಯೂ ಕೂಡ ನಾವುಗಳು ನೋಡುತ್ತಾ ಇದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಮಂಡಿಸಿದಂಥ ಮುಂಗಡ ಪತ್ರ ಯಾವುದಿದೆ ಇದು ರಾಜ್ಯದ ಸಮಗ್ರ ಮತ್ತು ಸಂಪೂರ್ಣವಾದಂಥ ಅಭಿವೃದ್ಧಿಯ ತಳಹದಿಯ ಆಧಾರದ ಮೇಲೆ ಪ್ರಾರಂಭವಾಗತಕ್ಕಂಥ

ಶುಭಲಕ್ಷಣಗಳು ಕಾಣುತ್ತಾ ಇವೆ. ಯಾವುದೇ ಬಜೆಟ್‌ನಲ್ಲಿ ಒಂದು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ ಸಂಪೂರ್ಣವಾದಂಥ ಸಾಧನೆಯನ್ನು ನಾವು ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಕಾಲದಲ್ಲಿಯೂ ಎಲ್ಲಾ ವರ್ಗಗಳಿಗೂ ಸರಿಯಾಗುವಂಥ ಒಂದು ಆಯವ್ಯಯ ಪತ್ರವನ್ನು ಯಾರೂ ತಂದಿಲ್ಲ. ಆದರೂ ಕೂಡ ಒಂದು ಉತ್ತಮವಾದಂಥ ಪರಿಕಲ್ಪನೆಯ ಆಧಾರದ ಮೇಲೆ ರಾಜ್ಯದ ಪ್ರಗತಿಯನ್ನು ಸಂಯೋಜಿಸುವಂಥ ಉತ್ತಮವಾದಂಥ ಬಜೆಟ್ ಇದು ಎಂದು ನಾನು ಹೇಳಲು ಇಚ್ಛಿಸುತ್ತೇನೆ. ಆದರೆ ಇದಕ್ಕೂ ಕೂಡ ಹಸಿರು ಕನ್ನಡಕವನ್ನುಹಾಕಿಕೊಂಡು ಇದರಲ್ಲಿ ದೋಷವನ್ನು ಹುಡುಕಿ ಹೇಳುವವರು ಇದ್ದಾರೆ. ಅದಕ್ಕಾಗಿ ನಾವುಗಳು ಆಕ್ಷೇಪವನ್ನು ಮಾಡಬೇಕಾಗಿಲ್ಲ. ಅದು ಅವರ ಅಭ್ಯಾಸ ಎಂದು ಸುಮ್ಮನಿರಬಹುದು. ದುರಾದೃಷ್ಟ ಏನೆಂದರೆ, ಇಂಥ ಒಂದು ಉತ್ತಮವಾದಂಥ ಬಜೆಟ್‌ನ ಮೇಲೆ ಏನೂ ಹೇಳುವುದಕ್ಕೆ ಆಗುವುದಿಲ್ಲವಲ್ಲ, ಅಷ್ಟೊಂದು ಒಳ್ಳೆಯ ವಿಷಯಗಳು ಇದರಲ್ಲಿ ಇದ್ದಾವೆ, ಆದ್ದರಿಂದ ಏನು ಮಾಡುವುದು ಎಂದು ಯೋಚಿಸಿ ಹೊರಗೆ ಉಳಿದುಕೊಳ್ಳಲು ಇಚ್ಛಿಸುವವರು ಬಹಳ ಮಂದಿ ಇದ್ದಾರೆ. ಅದಕ್ಕಾಗಿಯೂ ನಾವು ಬೇಸರ ಪಡಬೇಕಾಗಿಲ್ಲ. ಈ ಬಜೆಟ್‌ನಲ್ಲಿ ಅನೇಕ ಹೊಸ ವಿಚಾರಗಳು ಹೊಸ ವಿಷಯಗಳು ಅಡಕವಾಗಿವೆ. ಆಶ್ರಯ, ಅಕ್ಷಯ, ಶುಶ್ರೂಶಾ, ವಿಶ್ವ, ಆರಾಧನಾ ಮುಂತಾದ ಯೋಜನೆಗಳು ಏನಿವೆ ಅವುಗಳನ್ನು ಮುಂದುವರಿಸಿಕೊಂಡು ಹೋಗುವ ಜೊತೆಗೆ ಭೂ ಸುಧಾರಣೆಗೆ ಅನೇಕ ಕಾನೂನುಗಳನ್ನು ತಂದುದರ ಜೊತೆಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ವಸತಿ, ಶಿಕ್ಷಣ, ವಿದ್ಯುತ್‌ಚ್ಛಕ್ತಿ, ರಸ್ತೆ, ಸೇತುವೆ, ಕೃಷಿ, ಮೀನುಗಾರಿಕೆ, ಮುಂತಾದ ರಂಗಗಳಿಗೆ ಈ ಹೊಸ ಯೋಜನೆಗಳ ಮೂಲಕ ಹೊಸದೊಂದು ಆಯಾಮವನ್ನು ದೊರಕಿಸಿಕೊಂಡು ಮುನ್ನಡೆಯಲು ಕಾರ್ಯಕ್ರಮ ರೂಪಿಸಲಾಗಿದೆ. ಹೆಚ್ಚುವರಿ ಎಂದು ಕಾಣುವ ಅನಾವಶ್ಯಕ ಹುದ್ದೆಗಳ ರದ್ದಿಯಾತಿಯೊಂದಿಗೆ ರಾಜ್ಯದ ಹಣಕಾಸಿನ ವ್ಯವಸ್ಥೆಯನ್ನು ಕೂಡ ಉತ್ತಮ ಪಡಿಸುವ ಯೋಜನೆಗಳು, ಸಮಾಜದ ದುರ್ಬಲರಿಗೆ ಉಚಿತ ಕನ್ನಡಕ ನೀಡುವಂಥ ನೇತ್ರ ಯೋಜನೆ. ಆಟೋ ಚಾಲಕರು ಗೂಡಂಗಡಿಯವರು, ದೋಬಿಗಳು, ಹಣ್ಣು ಹಂಪಲು ಮಾರಾಟಗಾರರು, ಮುಂತಾದ ದುರ್ಬಲರಿಗೆ ಇಷ್ಟರವರೆಗೆ ಯಾರೂ ಕೂಡ ಮಾಡದೇ ಇರತಕ್ಕಂಥ ಸಾಮೂಹಿಕ ವಿಮಾ ಯೋಜನೆಯನ್ನು ಮಾಡಿದ್ದಾರೆ. ಬೀದಿಭಾಗ್ಯ, ಯೋಜನೆಯೂ ಕೂಡ ಒಂದು ಒಳ್ಳೆಯ ಕಾರ್ಯಕ್ರಮ. ಅದೇ ರೀತಿಯಲ್ಲಿ ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ ಕಾಯಿದೆಗಳಿಗೆ ತಿದ್ದುಪಡಿ, ಸಹಕಾರಿ ಕಾನೂನಿಗೆ ತಿದ್ದುಪಡಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಇದ್ದಹಾಗೆ ಮಲೆನಾಡು ಅಭಿವೃದ್ಧಿ ಮಂಡಳಿಯ ರಚನೆ ಮಾಡಿ ಇದಕ್ಕೆ ನೆರವನ್ನು ಒದಗಿಸುವುದು ಮುಂತಾದ ಬಹಳ ಉತ್ತಮವಾದ ಯೋಜನೆಗಳು ಇವೆ.

ಗಡಿಪ್ರದೇಶದ ಅಭಿವೃದ್ಧಿ ಕಾರ್ಯಕ್ರಮ, ಕನ್ನಡದ ಅಭಿವೃದ್ಧಿಗಾಗಿ ಬೃಹತ್ ಕಾರ್ಯಕ್ರಮಗಳು, ಕರ್ನಾಟಕ ದರ್ಶನ ಸಂಸ್ಥೆ, ಕನ್ನಡದ ಪ್ರಸಿದ್ಧ ಸಾಹಿತ್ಯಕೃತಿಗಳ ಪ್ರಕಟಣೆ, ದಲಿತ ಕಲಾ ವಿಶ್ವವಿದ್ಯಾಲಯ, ಸಾಂಸ್ಕೃತಿಕ ಉತ್ಸವಗಳು, ಸಾಹಿತ್ಯ ಕ್ಷೇತ್ರದ ಖ್ಯಾತ ದಿಗ್ಗಜಗಳ ಕೃತಿಗಳ ಸಂಶೋಧನೆಗಾಗಿ ಟ್ರಸ್ಟ್ ರಚನೆ, ಉತ್ತಮ ನಾಟಕಕ್ಕೆ ಗುಬ್ಬೀವೀರಣ್ಣ ಪ್ರಶಸ್ತಿ, ಗ್ರಾಮೀಣ ನಾಟಕ ತಂಡಗಳಿಗೆ ನೆರವು, ಗ್ರಾಮೀಣ ಯುವಕರಿಗೆ ಕ್ರೀಡಾ ಯೋಜನೆ, ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ಯೋಜನೆ, ಪ್ರವಾಸೋದ್ಯಮದ ಬೆಳವಣಿಗೆ ಇತ್ಯಾದಿ ಎಲ್ಲಾ ಉತ್ಕೃಷ್ಟವಾದ ಕಾರ್ಯಕ್ರಮಗಳಿದ್ದು ಇದು ಅತ್ಯಂತ ದೂರದರ್ಶಿತವಾದ ಯೋಜನೆಯನ್ನು ಹೊಂದಿದೆ ಎಂದು ಹೇಳಲಿಕ್ಕೆ ಯಾವುದೇ ಸಂಶಯ ಇಲ್ಲ. ಈ ರೀತಿಯ ಪರಿಕಲ್ಪನೆಯ ಉತ್ಕೃಷ್ಟ ಬಜೆಟ್ ಇಡೀ ಕರ್ನಾಟಕ ರಾಜ್ಯವನ್ನು ಒಂದು ವರ್ಷದಲ್ಲೇ

ಅಭಿವೃದ್ಧಿಪಡಿಸುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಲಿಲ್ಲ. ಆದರೆ ಸಮಗ್ರವಾದ ಸಂಪೂರ್ಣ ಅಭಿವೃದ್ಧಿ ಕಡೆಗೆ ಒಂದು ಸುಯೋಜಿತ ಬೆಳವಣಿಗೆ ಹಾಕಿಕೊಳ್ಳುವ ಪರಿಕಲ್ಪನೆ ಉಂಟಾಗಿದೆ ಈ ಬಜೆಟ್‌ನಲ್ಲಿ. ಕೆಲವು ಲೋಪದೋಷಗಳಿರುತ್ತವೆ ಸಹಜವಾಗಿ. ಮಾನ್ಯ ಮುಖ್ಯಮಂತ್ರಿಗಳು ಕೆಲವು ಸಂದರ್ಭಗಳಲ್ಲಿ ಹೇಳಿದರು, ಟೀಕೆ ಮಾಡುವಾಗ ನಮ್ಮ ಪಕ್ಷದವರೂ ನ್ಯಾಯವಾಗಿ ವಿಷಯಗಳನ್ನು ಎತ್ತಿ ಹೇಳಿದರೆ ಯಾರೂ ಆಕ್ಷೇಪ ಮಾಡುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆ ರೀತಿಯಾಗಿ ನಾನು ಕೆಲವು ವಿಚಾರಣೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಪ್ರತಿವರ್ಷ ನಮ್ಮ ರಾಜ್ಯದಲ್ಲಿ ಪ್ರವಾಹ ಮತ್ತು ಅಭಾವ ಉಂಟಾಗುತ್ತದೆ. ಇವುಗಳ ಕಾಮಗಾರಿಗೆ ನಾವು ಯೋಜುವಲಿ ಏನು ಮಾಡುತ್ತಿದ್ದೇವೆ ಎಂದರೆ ಪ್ರತಿವರ್ಷ ವಿಜ್ಞಾಪನಾಪತ್ರವನ್ನು ಕೇಂದ್ರಕ್ಕೆ ಕಳುಹಿಸುವುದು, ಕೇಂದ್ರಕ್ಕೆ ಹಣಕಾಸು ನೆರವುಕೊಡಿ ಅಂತ ಮೊರೆ ಇರುವಂಥದ್ದು ಆಮೇಲೆ ಅಷ್ಟೋ ಇಷ್ಟೋ ಹಣ ಬರವಂಥದ್ದು, ರಾಜ್ಯದ ಸಂಪನ್ಮೂಲಗಳಲ್ಲಿ ಒಂದಿಷ್ಟು ತೆಗೆದಿರಿಸುವಂಥದ್ದು, ಇದರ ಬದಲು ಪ್ರತಿವರ್ಷ ಇದು ಬರುವ ಆಪತ್ತು. ಇದು ಎಲ್ಲಿ ಬರುತ್ತದೆ ಎಂಬ ಬಗ್ಗೆ ಒಂದು ಮುನ್ನೋಟವನ್ನು ಇಟ್ಟುಕೊಂಡು ಇದರ ನಷ್ಟದ ಸಂಪೂರ್ಣ ಮೊತ್ತವನ್ನು ಭರಿಸಲು ಕೇಂದ್ರ ಮುಂದಾಗಬೇಕು, ಈ ಬಗ್ಗೆ ಎಲ್ಲಾ ರಾಜ್ಯಗಳೂ ಸೇರಿ ಕೇಂದ್ರದ ಮೇಲೆ ಒಂಗು ಒತ್ತದ ಹೇರುವಂತಹ ಆವಶ್ಯಕತೆ ಇದೆ ಅಂತ ನಾನು ಹೇಳಲಿಕ್ಕೆ ಬಯಸುತ್ತೇನೆ. ಆಶ್ರಯ ಯೋಜನೆ ಈ ವರ್ಷ 514 ಕೋಟಿ ವೆಚ್ಚದಲ್ಲಿ 2 ಲಕ್ಷದ 60 ಸಾವಿರ ಮನೆಗಳನ್ನು ರಚಿಸುವಂತಹ ಅತ್ಯಂತ ತ್ವರಿತ ನಿರ್ಮಾಣದ ಒಂದು ಕಾರ್ಯಕ್ರಮವಾಗಿದೆ. ಅದನ್ನು ನಾನು ಸ್ವಾಗತಿಸುವುದರ ಜತೆಗೆ ಇನ್ನಿತರ ಮಧ್ಯಮ ವರ್ಗದ ಮನೆಗಳನ್ನು ಕಟ್ಟಿಸುವ ಯೋಜನೆಗಳನ್ನೂ ಕೂಡ ನಮ್ಮಲ್ಲಿ ಮುಂದಾಗಬೇಕು.

ಇದಕ್ಕೆ ಬೇಕಾದ ಸಹಕಾರವನ್ನು ಕೊಡಬೇಕು. ಸಹಕಾರಿ ರಂಗದಲ್ಲಿ ಕರ್ನಾಟಕ ರಾಜ್ಯ ವಸತಿ ಮಹಾಮಂಡಲಿ ಅಂಥ ಬಂದಿದೆ. ಅದರ ಮೂಲಕ ಸಾಲ ಪಡೆಯುವ ಸಂದರ್ಭದಲ್ಲಿ ಇಂದು ನೋಂದಣಿ ಶುಲ್ಕವನ್ನು ಕಡಿಮೆ ಅಥವಾ ರದ್ದು ಮಾಡುವಂತಹ ಅಗತ್ಯತೆ ಇದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಒಂದು ಲಕ್ಷ ರೂ. ಸಾಲ ತೆಗೆದುಕೊಂಡರೆ 10 ಸಾವಿರ ರೂ.ಗಳನ್ನು ನೋಂದಣಿ ಶುಲ್ಕವಾಗಿ ಕೊಡಬೇಕಾದ ಅಗತ್ಯತೆ ಇದೆ. ಆದ್ದರಿಂದ ಯಾವನೇ ಒಬ್ಬ ಆ ಭೂಮಿಯನ್ನು ಒಂದು ಸಲ ಖರೀದಿಗೆ ಪಡೆದುಕೊಂಡಾಗ ಮಾತ್ರ ನೋಂದಣಿ ಶುಲ್ಕವನ್ನು ಕೊಡಬೇಕೆಂಬ ವಿಧಿ ಇರಬೇಕು. ಆಮೇಲೆ ಪಿಎಲ್‌ಡಿ ಬ್ಯಾಂಕಿಗಾಗಲಿ, ಹೌಸಿಂಗ್ ಫೆಡರೇಶನ್‌ಗಾಗಲಿ ಅವನ ಕಷ್ಟಕ್ಕಾಗಿ ಸಾಲಕ್ಕೆ ಹೋದಾಗ ಪ್ರತಿಸಲವೂ ನೋಂದಣಿ ಶುಲ್ಕ ಕೊಡುವ ವಿಧಾನ ಯಾವುದಿದೆ ಅದನ್ನು ತೆಗೆಯಬೇಕು. ಇದನ್ನು ಮಾಡಿದಾಗ ಅತ್ಯಂತ ಸಮಂಜಸವಾಗುತ್ತದೆ, ಇನ್ನೊಂದು ಸಲ ಭೂಮಿ ಮಾಡುವಾಗ ಬೇಕಾದರೆ ನೋಂದಣಿ ಶುಲ್ಕ ತೆಗೆದುಕೊಳ್ಳಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಇಷ್ಟು ಒಳ್ಳೆಯ ಸೂಚನೆ ಕೊಡುತ್ತಾ ಇದ್ದೀರಿ. ಅದನ್ನು ಯಾರೂ ಬರೆದುಕೊಳ್ಳುತ್ತಾ ಇಲ್ಲವಲ್ಲ?

ಶ್ರೀ ಜಿ.ಎಸ್. ಆಚಾರ್ : ಒಬ್ಬ ಸಚಿವರಿದ್ದಾರೆ, ಹಣಕಾಸಿನ ಇಲಾಖೆಯ ಅಧಿಕಾರಿಗಳಿದ್ದಾರೆ, ದಾಖಲೆಗಳ ಮೇಲೆ ಏನು ಪರಿಣಾಮವಾಗುತ್ತದೆ. ಮಂತ್ರಿಗಳು ಕುಳಿತು ಏನು ಪರಿಣಾಮವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ನಿಮಗೂ ಗೊತ್ತು, ನಮಗೂ ಗೊತ್ತು. ಆದ್ದರಿಂದ ದಾಖಲೆಗಳ ಆಧಾರದ ಮೇಲೆ ಕೆಲಸಗಳು ಆಗುತ್ತದೆ. ಆಗುವುದಿದ್ದರೆ ಆಗುತ್ತದೆಂದು ನಾವೂ ಭಾವಿಸೋಣ, ನೀವೂ ಭಾವಿಸಿಕೊಳ್ಳಿ. ಅಕ್ಷಯ ಯೋಜನೆಯಲ್ಲಿ ಚಿಕ್ಕಮಕ್ಕಳನ್ನು ಜೀತಕ್ಕೆ ಹಾಕುವಂತಹ ಪದ್ಧತಿಯನ್ನು

ಪಡೆಯಬೇಕು, ಪ್ಲಾಟ್‌ಗಳನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಈ ಯೋಜನೆ ಬಂದದ್ದು. ಇದರ ಜೊತೆಗೆ ನಮ್ಮ ಎಲ್ಲಾ ಪ್ರಾಥಮಿಕ ಶಾಲೆಗಳ ಹಂತದಲ್ಲಿ ಹೊಸ ಶಾಲೆಗಳನ್ನು ಮಂಜೂರು ಮಾಡುವುದರ ಜೊತೆಗೆ ಅಧ್ಯಾಪಕರನ್ನು ಬೇಕಾದಷ್ಟು ನೇಮಕ ಮಾಡುವಂಥ ಅಗತ್ಯತೆ ಇದೆ. ಕಟ್ಟಡಗಳನ್ನು ಕಟ್ಟಿಸುವಂಥ ಅಗತ್ಯತೆ ಇದೆ. ಇದನ್ನು ಮಾಡಿಸುವಂಥದ್ದು ತೀರಾ ಅಗತ್ಯವಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ 'ಆರಾಧನಾ' ಕಾರ್ಯಕ್ರಮದಲ್ಲಿ ಹರಿಜನ ಗಿರಿಜನರು ಮತ್ತು ಲಂಬಾಣಿಗಳ ತಾಂಡಾಗಳಿಗೆ ಸೀಮಿತವಾಗಿದ್ದು ಹಿಂದುಳಿದ ವರ್ಗದವರ ಆರಾಧನಾ ಸ್ಥಳಗಳಿಗೂ ನೆರವನ್ನು ಕೊಡುವಂಥ ವಿಚಾರ ವಿಸ್ತಾರವಾಗಬೇಕು. 'ಶುಶ್ರೂಷಾ' ಕಾರ್ಯಕ್ರಮದಲ್ಲಿ ಈಗ ಇರುವಂಥ ಪರೀಕ್ಷಾ ಶಿಬಿರಗಳ ಜೊತೆಗೆ ಒಂದೊಂದು ತಾಲ್ಲೂಕಿಗೆ ಒಂದೊಂದು ಸಂಚಾರಿ ವಾಹನಗಳನ್ನು ಒದಗಿಸಿಕೊಡಬೇಕು. ಒಂಗೊಂದು ತಾಲ್ಲೂಕಿನಲ್ಲಿ 8-10 ಆಸ್ಪತ್ರೆಗಳಿರುತ್ತವೆ. ಪ್ರೈಮರಿ ಹೆಲ್ತ್ ಸೆಂಟರ್, ಹೆಲ್ತ್ ಯೂನಿಟ್ ಇತ್ಯಾದಿ. ಅವರು ಒಂದೊಂದು ವಾರ ಒಬ್ಬೊಬ್ಬರು ಡಾಕ್ಟರ್ ಎಲ್ಲಿ ಆಸ್ಪತ್ರೆ ಸೌಕರ್ಯ ಇಲ್ಲವೋ ಆ ಮಂಡಳಿಗಳಿಗೆ ಹೋಗಿ ಆಸ್ಪತ್ರೆಗಳಲ್ಲಿ ರೆಗ್ಯುಲರ್ ಆಸ್ಪತ್ರೆಗಳ ಕಾರ್ಯಕ್ರಮಗಳನ್ನು ಕೂಡ ಮಾಡುವಂಥ ಒಂದು ಕಾರ್ಯಕ್ರಮವನ್ನು ವಿಸ್ತರಿಸಬೇಕು. ಇದು ಒಂದು ಉತ್ತಮವಾದ ಕಾರ್ಯಕ್ರಮ ಆಗಬಹುದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ 'ವಿಶ್ವ' ಯೋಜನೆಯಲ್ಲಿ ಯಾರು ಎಷ್ಟು ಟೀಕೆ ಬೇಕಾದರೂ ಮಾಡಲಿ, ಮುಂದಿನ ವರ್ಷ ಹಾಕಿಕೊಂಡ ಒಂದು ಯೋಜನೆ ಬಹಳ ಆದರ್ಶಮಯವಾದುದು. ಕೇವಲ ಪೆನ್ಷನ್‌ಗಳನ್ನು ಮಾತ್ರ ಪಡೆಯುತ್ತಿದ್ದ ವಿಧವೆಯರು, ಅಂಗವಿಕಲರಿಗೆ ಈ ಯೋಜನೆಯನ್ವಯ ವಿಶೇಷ ನೆರವನ್ನು ನೀಡುವಂಥ ಒಂದು ವಿಸ್ತಾರವಾದ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅದಕ್ಕನುಗುಣವಾಗಿ ನಮ್ಮ ಕೈಗಾರಿಕಾಭಿವೃದ್ಧಿಯಲ್ಲಿ ಜಪಾನಿಸ್ಟ್ ಎಲೆಕ್ಟ್ರಾನಿಕ್ಸ್ ನಗರವನ್ನು ಸ್ಥಾಪನೆ ಮಾಡುವಂಥ ಒಂದು ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ ಇತ್ಯಾದಿಯನ್ನು ಮಾಡುವಂಥದ್ದು ಇದೆಲ್ಲಾ ಅತ್ಯುತ್ತಮ ಒಂದು ಯೋಜನೆಯಾಗಿದೆ. ಭೂಸುಧಾರಣಾ ಕಾರ್ಯಕ್ರಮದ ಪ್ರಕಾರ ಅಪಲೇಟ್ ಟ್ರಿಬ್ಯೂನಲ್ ಎಂದು ಯಾವುದು ಇದೆ, ಅದು ಕಳೆದ ವರ್ಷ ವಜಾ ಆಗಿದೆ. ಇದರ ಪರಿಣಾಮವಾಗಿ ದಾವೆಗಳು ನೇರವಾಗಿ ಲ್ಯಾಂಡ್ ಟ್ರಿಬ್ಯೂನಲ್‌ಗೆ ಹೋಗುತ್ತಿಲ್ಲ. ಅದಕ್ಕೆ ಒಂದು ಅರ್ಜಿಯನ್ನು ಹಾಕಿ ಅದರ ಆಧಾರದಮೇಲೆ ಬರಬೇಕು. ಆದುದರಿಂದ ನೇರವಾಗಿ ಅಪಲೇಟ್ ಟ್ರಿಬ್ಯೂನಲ್‌ನಿಂದ ಎಲ್ಲಾ ದಾವೆಗಳು ಲ್ಯಾಂಡ್ ಟ್ರಿಬ್ಯೂನಲ್ ಹೋಗುವ ಹಾಗೆ ಒಂದು ತಿದ್ದುಪಡಿಯನ್ನು ತರಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಕ್ರಮಣಗಳ ಸಕ್ರಮೀಕರಣ ಆಗುವಂಥ ಮಸೂದೆ ನಮ್ಮಲ್ಲಿ ಬಂದಿದ್ದರೂ ಸಹಾ ಅದಕ್ಕೆ ಅಳತೆಯಾಗಬೇಕು. ಭೂಮಿ ಅಳತೆಯಾಗುವುದಕ್ಕೆ ಸರ್ವೇಯರ್ಸ್ ಇಲ್ಲ, ಪ್ರತಿ ತಾಲ್ಲೂಕಿನಲ್ಲಿಯೂ ಇದೇ ರೀತಿಯಾಗಿದೆ. ಇದಕ್ಕೆ ವಿಶೇಷವಾಗಿ ಸರ್ವೇಯರ್ಸ್‌ಗಳನ್ನು ನೇಮಕ ಮಾಡುವಂಥ ಅವಶ್ಯಕತೆ ಇದೆ. ಕೆಲವೊಂದು ತಾಲ್ಲೂಕಿನಲ್ಲಿ. ನನ್ನ ತಾಲ್ಲೂಕಿನಲ್ಲಿ ಇತ್ತೀಚೆಗೆ ನನಗೆ ಗೊತ್ತಾಯಿತು, ಅಕ್ರಮಣಗಳ ಸಕ್ರಮೀಕರಣ ಆಗಬೇಕು ಎಂದು ಹೇಳಿ ಅರ್ಜಿಯನ್ನು ಕೊಟ್ಟಿದ್ದಾರೆ. ಏತನ್ಮಧ್ಯೆ ಕೆಲವು ಅಧಿಕಾರಿಗಳು ಟಿಟಿ ಫಾನಲ್ ಮಾಡುತ್ತಿದ್ದಾರೆ. ಯಾರು ಭೂಮಿಯನ್ನು ಅಕ್ರಮಣ ಮಾಡಿಕೊಂಡಿದ್ದಾರೆ ಎನ್ನುವುದನ್ನು ತೀರ್ಮಾನಮಾಡುವುದಕ್ಕೆ ಒಂದು ಸಮಿತಿ ಇದೆ. ಇದರ ಮಧ್ಯೆ ಟಿಟಿಯನ್ನು ಫೈನಲ್ ಮಾಡಿಕೊಂಡು ಯಾರಿಗೋ ಭೂಮಿಯನ್ನು ಕೊಡುವಂಥ ಒಂದು ಕಾರ್ಯಕ್ರಮ ಆಗಬಾರದು. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಸರ್ಕಾರದ ಮಟ್ಟದಲ್ಲಿ ಇದನ್ನು ಈ ರೀತಿ ಮಧ್ಯದಲ್ಲಿ ಕಮಿಟಿಗೆ, ಸಮಿತಿಯ ಒಂದು ಕಲ್ಪನೆಗೆ ವಿರೋಧವಾಗುವಂಥ ಒಂದು ಕಾರ್ಯಕ್ರಮ ಕೂಡ ಆಗಬಾರದು. ಇದರ ಜೊತೆಗೆ ದಕ್ಷಿಣ ಕನ್ನಡದಲ್ಲಿ

ಇರುವಂಥ ಕುಂಕಿ ಭೂಮಿ, ಫಾರೆಸ್ಟ್ ಪರಂಬೋಕು, ರೋಡ್ ಪರಂಬೋಕು, ರಿವರ್ ಪರಂಬೋಕು, ಇದನ್ನು ಕೆಲವರು ಬಡವರು, ಭೂಹೀನ ರೈತರುಗಳು ಅಕ್ರಮಣ ಮಾಡಿಕೊಂಡಿದ್ದಾರೆ, ಇದೂ ಕೂಡ ಹಕ್ಕನ್ನು ಕೊಡುವಂಥ ಒಂದು ಕಾರ್‍ಯಕ್ರಮವಾಗಬೇಕು. ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಾಗ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕಷ್ಟು ನೀರು ಹರಿದು ಬಂದು ಸಮುದ್ರಕ್ಕೆ ಹೋಗುತ್ತಿದೆ. ಪಶ್ಚಿಮ ಘಟ್ಟದಿಂದ ಈ ಹೊಳೆಗಳಿಗೆ ಮಧ್ಯೆ ಮಧ್ಯೆ ಪ್ರದೇಶದಲ್ಲಿ ಒಂದೊಂದು ಕಡೆ ಅಣೆಕಟ್ಟುಗಳನ್ನು ಕಟ್ಟುವುದರಿಂದಾಗಿ ಮತ್ತು ಒಂದು ನದಿಯನ್ನು ಇನ್ನೊಂದು ನದಿಗೆ ಬಹಳ ಸುಲಭವಾಗಿ ಜೋಡಿಸತಕ್ಕಂಥ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಇದರಿಂದ ನೀರಾವರಿ ವ್ಯವಸ್ಥೆ ಮಾಡಬಹುದು. ಎರಡೂ ಜಿಲ್ಲೆಗಳಿಗೆ ಸಾಕಷ್ಟು ನೀರಾವರಿ ವ್ಯವಸ್ಥೆಯನ್ನು, ಸಾಕಷ್ಟು ಜಲಸಾರಿಗೆ ವ್ಯವಸ್ಥೆ, ಮೂರನೆಯದಾಗಿ ಕುಡಿಯುವ ನೀರನ್ನು ಪೂರೈಸುವಂಥ ಒಂದು ವ್ಯವಸ್ಥೆ. ಕುಡಿಯುವ ನೀರಿಗಾಗಿ ಇವತ್ತು ಬೋರ್‌ವೆಲ್‌ಗಳನ್ನು ತೋಡಿ ಲಕ್ಷಗಟ್ಟಲೆ ರೂಪಾಯಿಗಳು ಖರ್ಚಾಗುತ್ತಿದೆ. ಆದರೂ ಸಮರ್ಪಕವಾಗಿ ನೀರು ಸಿಗುತ್ತಿಲ್ಲ. ಅದರ ಬದಲಿಗೆ ನಿಪುಲವಾಗಿ ದೊರಕುವಂಥ ನೀರನ್ನು ಉಪಯೋಗಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಅಲ್ಲಿ ಇರುವ ಈಗ ಯಾವುದಕ್ಕೆ ನಾವು ಹಣವನ್ನು ಇಡುತ್ತಿದ್ದೇವೆ, ಅದೇ ಹಣದಲ್ಲಿ ಸ್ವಲ್ಪ ಹೆಚ್ಚಾಗಿ ಬೇಕಾಗಬಹುದು. ಅದನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಕೃಷಿ ಅಭಿವೃದ್ಧಿಗಾಗಿ ಕೃಷಿ ಉಪಕರಣಗಳ ಕಾರ್ಖಾನೆಯನ್ನು ಮಾಡುವಂಥದ್ದು, ವಿಶಿಷ್ಟ ಸಾಧನೆಗೆ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿದಂಥ ರೈತರಿಗೆ ಕೃಷಿ ಪ್ರಶಸ್ತಿಯನ್ನು ಕೊಡುವಂಥದ್ದು ಇದೆಲ್ಲಾ ಉತ್ತಮವಾದ ಯೋಜನೆಗಳು, ಅನೇಕ ಕೃಷಿ ಮತ್ತು ತೋಟಗಾರಿಕೆ, ಅರಣ್ಯ ಕಾಲೇಜುಗಳನ್ನು ಮಾಡುವಂಥ ವಿಚಾರಗಳು ಇವತ್ತು ನಮ್ಮ ಆಯವ್ಯಯ ಪತ್ರದಲ್ಲಿ ಬಂದಿದೆ. ನಾವು ಹಿಂದೆ ದಕ್ಷಿಣ ಕನ್ನಡದ ಶಾಸಕರುಗಳು ಒತ್ತಾಯವನ್ನು ಮಾಡಿದ್ದೆವು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಭೂ ವಿಧಾನ, ಹವಾಗುಣ, ಮಳೆ ಇತ್ಯಾದಿ ರಾಜ್ಯದ ಬೇರೆ ಕಡೆಗಿಂತ ಇಲ್ಲಿ ವ್ಯತ್ಯಾಸ ಇದೆ. ಇಲ್ಲಿ ಕೆಲವು ಸಂಶೋಧನೆಗಳು ಆಗಬೇಕು. ಮುಖ್ಯವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡದ ತೋಟಗಾರಿಕಾ ಬೆಳೆಗಳನ್ನು ಕುರಿತು ಬೇರೆ ಕಡೆ ಯಾವುದೇ ಸಂಶೋಧನೆಯನ್ನು ಮಾಡಿದರೂ ಕೂಡ ಇಲ್ಲಿ ಅದು ಆಗುವುದಿಲ್ಲ. ಆದ್ದರಿಂದ ಒಂಗು ತೋಟಗಾರಿಕೆ ಕಾಲೇಜನ್ನು ಈ ಕರಾವಳಿ ಪ್ರದೇಶದಲ್ಲಿ ಮಾಡಬೇಕೆನ್ನುವಂತಹ ಬೇಡಿಕೆಯನ್ನು ಕಳೆದ ವರ್ಷವೇ ಇಟ್ಟಿದ್ದೆವು. ಆದ್ದರಿಂದ ಮುಂದಿನವರ್ಷವಾದರೂ ನೆನಪಿನಲ್ಲಿಟ್ಟುಕೊಂಡು ಸರ್ಕಾರದವರು ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. 10 ಹಾರ್ಸ್ ಪವರ್‌ವರೆವಿಗೂ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತನ್ನು ಉಚಿತವಾಗಿ ನೀಡುವ ಬಗ್ಗೆ ಮಾನ್ಯ ನಾಯಕ್‌ರವರು ಈಗಾಗಲೇ ಹೇಳಿದ್ದಾರೆ. ಇದು ಯಾವ ದಿವಸ ಘೋಷಣೆಯಾಯಿತು, ಅವತ್ತು ರೈತರೆಲ್ಲರೂ ಸಂತೋಷವಾಗಿ ಪಟಾಕಿಯನ್ನು ಹೊಡೆದು ಬಹಳ ಸಂತೋಷವನ್ನು ಪಟ್ಟಿದ್ದಾರೆ. ಅದನ್ನು ನಾವು ಮೆಚ್ಚಿಕೊಳ್ಳಬೇಕು. ಅದರ ಜೊತೆಗೆ ವಿದ್ಯುತ್‌ಗೆ ಯಾವುದೇ ತಡೆ ಇಲ್ಲದೆ ಸರಾಗವಾಗಿ ಸಿಗುವ ಹಾಗೆ ಆಗಬೇಕು. 10 ಹಾರ್ಸ್‌ಪವರ್‌ವರೆಗೂ ವಿದ್ಯುತ್‌ಗೆ ಹಣವನ್ನು ಕೊಡುವುದು ಬೇಡ. ಆದರೆ ವಿದ್ಯುತ್ ಪೂರೈಕೆ ಇಲ್ಲ. ಹೀಗಾದರೆ ಬಹಳ ಅಭಾಸವಾಗುತ್ತದೆ. ಆದ್ದರಿಂದ ವಿದ್ಯುತ್ ತೊಂದರೆಯಿಂದ ವೋಲ್ಟೇಜ್ ಡ್ರಾಪ್ ಆಗುವುದು, ಮೋಟಾರುಗಳು ಸುಟ್ಟುಹೋಗುವುದು ಈ ತೊಂದರೆ ಇಲ್ಲದ ಹಾಗೆ ಮಾಡಬೇಕು. ಪಶ್ಚಿಮಘಟ್ಟದಿಂದ ಹರಿದು ಹೋಗುವಂಥ ಎಲ್ಲಾ ನದಿಗಳಲ್ಲಿಯೂ ಜಲಪಾತಗಳು ಇದ್ದಾವೆ. ಇದರಿಂದ ಮಿನಿ ಮತ್ತು ಮೈಕ್ರೊ ವಿದ್ಯುತ್ ಉತ್ಪಾದನಾ ಘಟಕಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಇದರ ಬಗ್ಗೆ ಸಂಶೋಧನೆಯೂ ನಡೆಯುತ್ತಿದೆ. ಇದರ ಬಗ್ಗೆ ಆದಷ್ಟು ಬೇಗ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಶರಾವತಿ,

ವರಾಹಿ ಯೋಜನೆಗಳಲ್ಲಿ ಎಲ್ಲಾ ಜನರೇಟರುಗಳು ಎಲ್ಲಾ ಕಾಲದಲ್ಲಿಯೂ ಕೆಲಸ ಮಾಡುವ ಹಾಗೆ ಮಾಡಬೇಕು. ನಾನು ಅಲ್ಲಿ ಹೋಗಿ ನೋಡಿದಾಗ ಅನೇಕ ಜನರೇಟರುಗಳು ಬಹಳ ಕಾಲದಿಂದಲೂ ಕೆಲಸವನ್ನು ಮಾಡದೆ ಸ್ಥಗಿತಗೊಂಡಿದ್ದು ಇವೆ. ಇದು ಸರಿಯಾಗಿ ಆಗುವ ಹಾಗೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ನೀರಾವರಿಯ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ವರ್ಷಗಳ ಹಿಂದೆ ಸ್ಥಾಪಿತವಾದ ತೂಬು ಅಣೆಕಟ್ಟೆಗಳು. ವೆಂಟಡ್‌ಡ್ಯಾಂಗಳು, ಹಾಗೂ ಉಪ್ಪುನೀರು ತಡೆಗಟ್ಟುವ ಡ್ಯಾಮ್‌ಗಳು ನೂರಾರು ಹಾಳಾಗಿಹೋಗಿವೆ. ಇದನ್ನು ಸರಿಯಾಗಿ ದುರಸ್ತಿ ಮಾಡುತ್ತಿಲ್ಲ. ಇದಕ್ಕೆ ಹಲಗೆಯನ್ನು ಹಾಕುತ್ತಿಲ್ಲ. ಇದಕ್ಕೆ ಒಂದು ವ್ಯವಸ್ಥೆ ಆಗಬೇಕು. ದಕ್ಷಿಣ ಕನ್ನಡ ಜಿಲ್ಲೆ ಮೈನರ್ ಇರಿಗೇಷನ್ ವಿಭಾಗದಲ್ಲಿ ಸಂಪೂರ್ಣವಾಗಿ ಅಲಕ್ಷಿಸಲ್ಪಟ್ಟಿವೆ. ಇದಕ್ಕಾಗಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ಕೃಷ್ಣ ಮತ್ತು ಕಾವೇರಿ ಯೋಜನೆಗಳಿಗೆ ಬೇಡಿಕೆ ಇದ್ದಹಾಗೆ ಹಾಗೂ ಅದನ್ನು ಸಂಪೂರ್ಣಗೊಳಿಸಬೇಕೆಂಬ ಕಾರ್ಯಕ್ರಮ ಇದ್ದಹಾಗೆ. ತುಂಗಾ ಮತ್ತು ಭದ್ರಾ ಯೋಜನೆಗಳನ್ನು ಬಲಪಡಿಸುವ ಕಾರ್ಯಕ್ರಮ ಸಂಪೂರ್ಣಗೊಳಿಸಬೇಕು. 1981 ರಲ್ಲಿಯೇ ಫೌಂಡೇಶನ್ ಹಾಕಿದಂತಹ ವಾರಾಹಿ ಯೋಜನೆಗೆ ಮಾನ್ಯ ನೀರಾವರಿ ಸಚಿವರು ಬರುತ್ತೇವೆಂದು 2-3 ತಿಂಗಳಿನಿಂದಲೂ ಹೇಳುತ್ತಿದ್ದಾರೆ. ಅವರು ಇದುವರೆಗೂ ಬಂದಿಲ್ಲ. ಒಂದೇ ದಿವಸ ಅಂದಿನ ಮುಖ್ಯಮಂತ್ರಿಯವರು ವರಾಹಿ ಯೋಜನೆಯೂ ಶಂಕು ಸ್ಥಾಪನೆಯನ್ನು ಮಾಡಿದರು. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೂ ಶಂಕುಸ್ಥಾಪನೆಯನ್ನು ಮಾಡಿದ್ದರು. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದಂತಹ ಸಕ್ಕರೆ ಕಾರ್ಖಾನೆ ರೈತರ ಕಾಮಧೇನುವಾಗಬೇಕಾದಂತಹ ಸಕ್ಕರೆ ಕಾರ್ಖಾನೆ ಇವತ್ತು ಒಣಗುತ್ತಿದೆ. 38 ಸಾವಿರ ಎಕರೆಗೆ ಜಮೀನಿಗೆ ನೀರು ಬರುವಂತಹ ಈ ವಾರಾಹಿ ಯೋಜನೆಯನ್ನು ಕೂಡಲೆ ಕೈಗೆತ್ತಿಕೊಳ್ಳಬೇಕು. ಅಲ್ಲಿ ಪ್ರತ್ಯೇಕವಾಗಿ ಅರಣ್ಯ ಬೆಳೆಸುವಂತಹ ಕಾಮಗಾರಿ ನಡೆದಿದೆ. ಇದರಿಂದ ಏನೂ ತೊಂದರೆಯಾಗುವುದಿಲ್ಲ. ಕೇಂದ್ರಕ್ಕೆ ಪ್ರಪೋಸಲ್ ಕಳುಹಿಸುವುದು ಮಾತ್ರ ಬಾಕಿ ಇದೆ. ಅದನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಮೀನುಗಾರಿಕೆ ವಿಚಾರದಲ್ಲಿ. ನನ್ನ ಕ್ಷೇತ್ರದಲ್ಲಿರುವ ಹಿರೂರು ಎಂಬಲ್ಲಿ ಒಂದು ಚಿಕ್ಕ ಬಂದರು ಇದೆ. ಅಲ್ಲಿ ಫಿಷರಿಸ್‌ಹ್ಯಾಮ್‌ಲೆಟ್. ಮಾಡುವುದಕ್ಕೆ 10 ವರ್ಷಗಳ ಹಿಂದೆ ಬೇರೆ ಬೇರೆ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿ ಖರ್ಚಾಗಿದೆ. ಅಲ್ಲಿ ಸಣ್ಣ ಬ್ರೇಕ್‌ವಾಟರ್ ಹಾಕಿದ್ದರಿಂದ ಮೀನುಗಾರಿಕೆಯ ಸಣ್ಣ ಯಾಂತ್ರಿಕ ದೋಣಿಗಳು ಬರಲಿಕ್ಕೆ ಸಾಧ್ಯವಾಗುತ್ತವೆ. ಅನೇಕ ಭಾರಿ ಹೇಳಿದರೂ ಈ ಕೆಲಸಗಳು ಆಗಿಲ್ಲ. ಇನ್ನು ಮುಂದಾದರೂ ಈ ಕೆಲಸಗಳನ್ನು ಮಾಡಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ಎರಡು ತಿದ್ದುಪಡಿಗಳು ಸರ್ಕಾರದ ಮುಂದಿವೆ. ಒಂದು ಸಹಕಾರ ಕಾನೂನಿಗೆ ತಿದ್ದುಪಡಿ; ಇನ್ನೊಂದು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತ್ ಕಾನೂನಿಗೆ ತಿದ್ದುಪಡಿ. ಸಹಕಾರ ಕಾನೂನಿಗೆ ತಿದ್ದುಪಡಿ ಆದಷ್ಟು ಬೇಗ ಆಗಬೇಕು. ಅನೇಕ ಕಮಿಟಿಗಳು ಆಗಿದೆ. ಅವುಗಳ ವರದಿಗಳು ಬಂದಿವೆ. ಆದರೂ ಏತಕ್ಕೆ ಇದು ಆಗುತ್ತಿಲ್ಲ ಎಂದು ನನಗೆ ಗೊತ್ತಾಗುತ್ತಿಲ್ಲ. ಸಹಕಾರ ಸಂಸ್ಥೆಗಳ ಸಮಗ್ರ ಪುನಶ್ಚೇತನ ಇವತ್ತು ಆಗುವಂತಹದ್ದು ಅಗತ್ಯ ಇದೆ. ಅವ್ಯವಹಾರಗಳು ಆದಲ್ಲಿ ಅದಕ್ಕೆ ಕ್ರಮ ತೆಗೆದುಕೊಳ್ಳಲು ಯಾವುದೇ ಮಾರ್ಗವಿಲ್ಲ. ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರ ಇದೆ. ಹಸ್ತಕ್ಷೇಪ ನಡೆಯುವಂತಹ ವ್ಯವಸ್ಥೆ ಇದೆ. ಪ್ರತಿಯೊಂದಕ್ಕೂ ಡೈರೆಕ್ಷನ್ ಬರುತ್ತಿದೆ. ಕೋಟಿಗಟ್ಟಲೆ ರೂಪಾಯಿ ಅವ್ಯವಹಾರ ಆದಂತಹ ಸಂದರ್ಭದಲ್ಲಿ ಅದನ್ನು ಹದ್ದುಬಸ್ತಿನಲ್ಲಿಡಲು ಹಾಗೂಸರಿಯಾಗಿ ವಸೂಲಿ ಮಾಡಲು ಬೇಕಾದಂತಹ ವ್ಯವಸ್ಥೆಗಳು ಇಲ್ಲ. ಕಾನೂನಿಗೆ ತಿದ್ದುಪಡಿಯಾಗುವಂತಹ

ಸಂದರ್ಭದಲ್ಲಿ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸುವುದು ಅಗತ್ಯ ಇದೆ. ಇವತ್ತು ಅಶಾಸ್ತ್ರೀಯವಾದ ಆಡಿಟ್ ಶುಲ್ಕ ನಮ್ಮ ರಾಜ್ಯದಲ್ಲಿ ಇದೆ. ಕೇವಲ 1-2 ದಿವಸಗಳಲ್ಲಿ ಒಂದು ಸಂಸ್ಥೆಯ ಆಡಿಟ್ ಮಾಡಿ 50 ಸಾವಿರ. 1 ಲಕ್ಷ ಲೆವಿ ಮಾಡುವಂತಹ ಒಂದು ವಿಧಾನ ಇದೆ. ಇದರ ವಿವರಣೆಗೆ ನಾನು ಹೋಗುವುದಿಲ್ಲ. ವಿವರಣೆಗಳಿಗೆ ಹೋದರೆ ಅರ್ಧ ಗಂಟೆ ಸಮಯ ಬೇಕಾಗುತ್ತದೆ. ಆದುದರಿಂದ. ಅಶಾಸ್ತ್ರೀಯವಾದ ಆಡಿಟ್ ಶುಲ್ಕವನ್ನು ಸಹಕಾರಿ ಸಂಸ್ಥೆಗಳ ಮೇಲೆ ಹಾಕುಂಥ ವಿಧಾನ ತಪ್ಪಬೇಕು. ಬಡ್ಡಿ ದರ ರಿಯಾಯಿತಿ ಬದಲಿಗೆ ಪ್ರೋತ್ಸಾಹಧನವನ್ನು ಕೊಡುವುದಕ್ಕೆ ಸರ್ಕಾರ ಮಾಡಿದೆ. ಇದು ದಿನಾಂಕ 30-3-1992ಕ್ಕೆ ಮುಗಿಯುತ್ತದೆ. ಇದನ್ನು ಈ ವರ್ಷ ಎರಡು ತಿಂಗಳು ಎಕ್ಸ್‌ಟೆಂಡ್ ಮಾಡಬೇಕು ಮತ್ತು ಇದು ಪ್ರತಿ ವರ್ಷ ಸಿಗುವಂಥ ಒಂದು ವ್ಯವಸ್ಥೆಯಾಗಬೇಕು. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಪರ್ಯಾಲೋಚಿಸಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ನಮ್ಮ ಮಿತ್ರರ ಕ್ಷೇತ್ರದಲ್ಲಿರುವಂತಾದ್ದು ನಷ್ಟದಲ್ಲಿ ನಡೆಯುತ್ತಿದೆ. ಇದಕ್ಕೆ ಬೇಕಾದ ವರಾಹಿ ನೀರು. ಎರಡನೆಯದಾಗಿ. ನಾವು ಸರ್ಕಾರದ ಹತ್ತಿರ ಹಣಕಾಸಿನ ನೆರವು ಕೊಡಿ ಎಂದು ಬೇಡಿಕೊಂಡಿದ್ದೇವೆ. ಹಣಕಾಸಿನ ಇಲಾಖೆ ಮುಂದೆ ಆ ಪತ್ರ ಇದೆ. ಅದನ್ನು ಆದಷ್ಟು ಬೇಗ ಮಂಜೂರು ಮಾಡಬೇಕು. ರೈತರು ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳಬೇಕೆಂದು ಕಂಕಣಬದ್ಧರಾಗಿದ್ದಾರೆ. ಎರಡನೆಯದಾಗಿ. ಒಂದು ವೇಳೆ ತಮಗೆ ಸಹಕಾರಿ ರಂಗದಲ್ಲಿ ನಡೆಸುವುದಕ್ಕಾಗುವುದಿಲ್ಲ. ಖಾಸಗಿಯವರಿಗೆ ಕೊಡುವಂಥ ವ್ಯವಸ್ಥೆಯಿದ್ದರೆ ಅದನ್ನಾದರೂ ಮಾಡಿ. ಈ ರೀತಿ ಕಾರ್ಖಾನೆ ಅಭಿವೃದ್ಧಿ ಮಾಡಬಾರದು. ಅದಕ್ಕೆ ನೆರವನ್ನು ಕೊಡಬಾರದು ಎನ್ನುವ ನೆನೆಗುದಿಗೆ ಬಿದ್ದಂಥ ಒಂದು ವ್ಯವಸ್ಥೆಯಾಗಬಾರದು. ತಾವು ಬೇರೆ ಕಡೆಯಲ್ಲಿ ವ್ಯವಸ್ಥೆ ಮಾಡುತ್ತೀರಿ. ನಗರ ಸಾರಿಗೆಯನ್ನು ಖಾಸಗಿಯವರಿಗೆ ಕೊಡುವಂಥಾದ್ದು. ಅದಕ್ಕಾಗಿ If you want to do like that you take a decision... ಖಾಸಗಿಯವರಿಗೆ ಕೊಡುತ್ತೇವೆ ಅಥವಾ ಸಹಕಾರಿ ರಂಗದಲ್ಲಿ ಇಡುತ್ತೇವೆ. ಸಮಗ್ರವಾಗಿ ಇದನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುವ ಒಂದು ತೀರ್ಮಾನವಾಗಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಚಿವರುಗಳು ಇದರಲ್ಲಿ ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಅವರು ಇನ್ನೂ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಿ, ಇದು ತಮ್ಮ ಕಾಲದಲ್ಲಿಯೇ ಆಗಲಿ ಎನ್ನುವುದನ್ನು ಮಾಡಿ ತೋರಿಸಬೇಕೆಂದು ನಾನು ಹೇಳಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕೋ-ಆಪರೇಟಿವ್ ಫೆಡರೇಷನ್ ಇದೆ. ಸಮಗ್ರವಾದ ಸಹಕಾರಿ ರಂಗದ ಒಂದು ತಾಯಿ ಸಂಸ್ಥೆ ಇದ್ದರೂ ಸಹ ಅದರಲ್ಲಿ ಬೋರ್ಡ್ ಇಲ್ಲವೆಂದು ಒಂದೆರಡು ವರ್ಷಗಳ ಹಿಂದೆ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದರು. ನಾಲ್ಕೈದು ಜನ ಪದನಿಮಿತ್ತರಾಗಿ ಬೇರೆ ಬೇರೆ ಫೆಡರೇಶನ್ನಿನ ಅಧ್ಯಕ್ಷರುಗಳು ಅದರ ಡೈರೆಕ್ಟರ್ಸ್, 8 ಜನ ಅಧಿಕಾರಿಗಳು ನಾಮಿನೇಶನ್ ಮಾಡಿದರು ಕೋರಂ ಆಗಲಿ ಎಂದು. ಆದರೆ. ಸರ್ಕಾರ ತನ್ನ ಒಂದು ಕಾನೂನು ಅಥವಾ ಒಂದು ನೋಟಿಫಿಕೇಶನ್ ಪ್ರಕಾರ ಈ ಅಧಿಕಾರಿಗಳಿಗೆ ಮೀಟಿಂಗ್ ಅಟೆಂಡ್ ಆಗಬೇಕಾದರೆ ಬರದು ತಿಳಿಸಬೇಕೆಂದರು. ಅಲ್ಲಿ ಅಧ್ಯಕ್ಷರ ಚುನಾವಣೆಯಾಗಬೇಕಾದರೆ ಅವರು ತಿಳಿಸಲಿಲ್ಲ ಎನ್ನುವ ಕಾರಣದಿಂದ ಅಧ್ಯಕ್ಷರ ಚುನಾವಣೆಯಾಗಲಿಲ್ಲ. ಆ ಒಂದು ಬೋರ್ಡನ್ನು ಸೂಪರ್‌ಸೀಡ್ ಮಾಡಿಬಿಟ್ಟರು. ಇದು ಒಂದು ಕಡೆಯಾದರೆ ಇನ್ನೊಂದು ಕಡೆಯಲ್ಲಿ ಯಾವುದೇ ರೀತಿಯ ನಿರ್ವಹಣೆ ಇಲ್ಲದೆ ಅಧ್ಯಕ್ಷರ ಚುನಾವಣೆಯಲ್ಲಿ ಅಧಿಕಾರಿಗಳು ಭಾಗವಹಿಸುವಂಥಾದ್ದು ಇದೆ. ಮೂಲಭೂತವಾದ ತಾಯಿ ಸಂಸ್ಥೆಗೆ ಒಂದ ಲಗಾಮು ಮಾಡದಂಥ ಕಾನೂನನ್ನು ಬೇರೆ ಸಂಸ್ಥೆಗ ಏಕೆ ಮಾಡುತ್ತೀರಿ? ಇಲ್ಲಿ ಒಂದು ರೀತಿ ಸಹಕಾರಿ ಸಂಸ್ಥೆಗಳಕುರಿತು ಸಮಗ್ರವಾಗಿ ಚಿಂತನೆ ಆಗುತ್ತಿಲ್ಲ. ಯಾವ ಸಂಸ್ಥೆಗಳು ಸರಿಯಾಗಿ ನಡೆಯುತ್ತಿವೆ ಅವನ್ನು ಕುರಿತು

ಯೋಚನೆ ನಡೆಯುತ್ತಿಲ್ಲ ಎನ್ನುವುದನ್ನು ಹೇಳುವುದಕ್ಕೆ ಬೇಸರವಾಗುತ್ತದೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ವ್ಯವಸ್ಥೆಯನ್ನು ಆಡಳಿತಾಧಿಕಾರಿಗಳ ಕೈಗೆ ಕೊಟ್ಟ ವಿಚಾರವಾಗಿ ಬಹಳ ಟೀಕೆ ಮಾಡಿದರು. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಮೂಲಭೂತ ಅವಶ್ಯಕತೆ ಯಾವುದು ಇದೆ. ಸಮಗ್ರವಾಗಿ ಸಾರ್ವಜನಿಕವಾದ ಜನರ ಕೈಗೆ ಅಧಿಕಾರ ಕೊಡುವಂಥ ನೀತಿಯನ್ನು ಬದಲಾಯಿಸುವುದಕ್ಕೆ ಯಾರ ವಿರೋಧವೂ ಇಲ್ಲ. ಆದರೆ. ಹಿಂದೆ ಮಾನ್ಯ ನಜೀರ್‌ಸಾಬ್‌ರವರು ಇದ್ದಾಗ ಈ ವ್ಯವಸ್ಥೆಯಲ್ಲಿ, ಯಾವಾಗ ತೊಂದರೆ ಉಂಟಾಗುವುದೋ. ಆಗ ಅದನ್ನು ನೋಡಿಕೊಂಡು ನಾವು ತಿದ್ದುಪಡಿ ತರುತ್ತೇವೆ ಎನ್ನುವ ವಿಚಾರವನ್ನು ಹೇಳಿದರು. ಅನುಭವದ ಆಧಾರದ ಮೇಲೆ ತಿದ್ದುಪಡಿ ಆಗಬೇಕಾಗುತ್ತದೆ. ಅದನ್ನು ಆದಷ್ಟು ಬೇಗ ತಂದು ಈ ಕೆಲಸವನ್ನು ಮುಂದುವರಿಸಬೇಕು. ಈಗ ಜಿಲ್ಲಾ ಪರಿಷತ್ ಇಲ್ಲದೆ ಇರುವದರಿಂದ, ಸಭೆ ನಡೆಯದೆ ಇರುವುದರಿಂದ ಪ್ರತಿ ತಿಂಗಳು ಕೆ.ಡಿ.ಪಿ. ಸಭೆ ಯಾವುದು ನಡೆಯುತ್ತದೆ. ಅದಕ್ಕೆ ಶಾಸಕರನ್ನು ಕರೆದು, ಶಾಸಕರು ಆ ಸಭೆಯಲ್ಲಿ ತಮ್ಮ ಸಲಹೆಯನ್ನು ಕೊಡುವ ಹಾಗೆ ಮಾಡಬೇಕು. ಅಲ್ಲದೆ. ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಎ.ಪಿ.ಎಂ.ಸಿ. ಚುನಾವಣೆ ಕುರಿತು ಹೇಳಬೇಕಾಗಿದೆ. ಅದರ ಚುನಾವಣೆ ಆಗಲೇ ಇಲ್ಲ. ಅದಕ್ಕೆ ಏನೂ ತೊಂದರೆಯಿಲ್ಲ. ಚುನಾವಣೆ ಏತಕ್ಕೆ ಮಾಡುವುದಿಲ್ಲವೋ ಗೊತ್ತಿಲ್ಲ. ಈ ಮಳೆಗಾಲ ಪ್ರಾರಂಭವಾಗುವುದರೊಂದಿಗೆ ಎಪಿಎಂಸಿ ಚುನಾವಣೆಯಾಗಲಿ. ದಕ್ಷಿಣ ಕನ್ನಡದಲ್ಲಿರುವ ಒಂದು ಎಪಿಎಂಸಿಯನ್ನು ಬೈಫರ್‌ಕೇಟ್ ಮಾಡಿ ಹೆಚ್ಚು ಮಾಡುವಂಥಾದ್ದಕ್ಕೆ ಅದು ಆಗಿಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಕೆಲವೊಂದು ವಿಚಾರಗಳ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ಅದು ಅನುಷ್ಠಾನಕ್ಕೆ ಬರುವುದಕ್ಕೆ ಬಹಳ ವಿಳಂಬವಾಗುತ್ತದೆ. ಉದಾಹರಣೆಗೆ ಬೈಂದೂರ್‌ನಲ್ಲಿ ಒಂದು ಪುರಸಭೆ ಇದೆ. ಬೈಂದೂರು ಪುರಸಭೆ ಎನ್ನುವಂಥಾದ್ದು ಶೇಕಡ 90 ಭಾಗ ರಿಸರ್ವ್ಡ್ ಫಾರೆಸ್ಟ್ ಇರುವಂಥ ಜಾಗ. ರಿಸರ್ವ್ ಫಾರೆಸ್ಟ್ ಇದೆ. ಎಸ್.ಸಿ./ಎಸ್.ಟಿ. ನವರು ಇದ್ದಾರೆ. ಇದು ಪುರಸಭೆಯಲ್ಲ. ಇದನ್ನು ಮಂಡಲ ಪಂಚಾಯಿತಯನ್ನಾಗಿ ಮಾಡಬೇಕೆಂದು ಸರ್ಕಾರ ಒಪ್ಪಿಕೊಂಡು ಅದಕ್ಕೆ ಆಬ್ಜೆಕ್ಷನ್ ಕಾಲ್‌ಫಾರ್ ಮಾಡಿದರು. ಅದನ್ನು ಯಾರೂ ಕೂಡ ಆಕ್ಷೇಪಿಸಲಿಲ್ಲ. ಎಲ್ಲವರು ಕೂಡ ಒಪ್ಪಿದರು. ಆ ಒಪ್ಪಿಗೆ ಸರ್ಕಾರಕ್ಕೆ ಬಂತು. ಅದೇ ರೀತಿ ಸಮೀಕರಣ ಎನ್ನುವ ಪುರಸಭೆ ಇದರ ಬಗ್ಗೆ ಕೂಡ ಸರ್ಕಾರಕ್ಕೆ ವಿಚಾರ ಬಂತು. ಅದು ಬಂದು ಒಂದು ಒಂದೂವರೆ ವರ್ಷವಾಗಿದೆ. ಅದು ಮಾನ್ಯ ಬಸವಲಿಂಗಪ್ಪನವರು ಸಚಿವರಾಗಿದ್ದಾಗಲೆ ಬಂದಿತ್ತು. ಆದರೆ ನೋಟೀಫೈ ಆಗುವುದರಲ್ಲಿ ಏಕೋ ವಿಳಂಬವಾಗಿತ್ತು. ನಾನು ಕೇಳುವುದೇನೆಂದರೆ ಸರ್ಕಾರವೇ ಇಂಥ ಒಂದು ಪ್ರಪೋಸಲ್‌ನ್ನು ಕಳುಹಿಸಿ ಇದನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಘೋಷಣೆಯನ್ನು ಮಾಡಲಿಕ್ಕೆ, ನಾವು ಶಾಸಕರು ಹಸ್ತಕ್ಷೇಪ ಮಾಡುವುದು ಏಕೆ? ಅದು ಆಟೋಮ್ಯಾಟಿಕಲಿ ಆಗಬೇಕು. ಅದು ಒಂದು ವರ್ಷದಿಂದ ಆಗುತ್ತಿಲ್ಲ. ಆಮೇಲೆ ಬೈಂದೂರು ಪುರಸಭೆ ಎನ್ನತಕ್ಕದ್ದು ಮಂಡಲ ಪಂಚಾಯಿತಿಯಾಗಬೇಕು. It is there. ಸುಮ್ಮನೆ ಬಿದ್ದಿದೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇದರ ಕೆಲಸಗಳು ಒಂದೊಂದಾಗಿ ಆಗಿಬಿಟ್ಟರೆ ಒಳ್ಳೆಯ ರೀತಿಯಲ್ಲಿ ಕೆಲಸವಾಗುತ್ತದೆ. ಇದು ಸಮಂಜಸವಾಗಿ ಆಗತಕ್ಕ ಕೆಲಸವಾಗಿದೆ. ಬೈಂದೂರಿನಲ್ಲಿ ನೀರಿನ ಸೋರ್ಸ್ ಸರಿಯಾಗಿಲ್ಲ. ಸರ್ಕಾರದವರು ಬೋರ್‌ವೆಲ್ ತೋಡಿದರು, ಬೇರೆ ಒಂದು ಬಾವಿಯನ್ನು ಮಾಡಿದರು. ಆದರೂ ಕೂಡ ತೊಂದರೆ ಇದೆ. ನಾವು ಒಳ್ಳೆಯ ನೀರಿನ ರಿಸೋರ್ಸ್‌ನ್ನು ಅಲ್ಲಿ ತೋರಿಸಿದ್ದೇವೆ. ಅದನ್ನು ನೋಡುತ್ತೇವೆಂದು ಹೇಳಿದ ವ್ಯಕ್ತಿಗಳು ಇಲ್ಲಿಯವರೆಗೂ ಕೂಡ ಬಂದು ನೋಡಿಲ್ಲ. ಇನ್ನು ಕೊಲ್ಲೂರು ದೇವಸ್ಥಾನದಲ್ಲಿ ಯಾರೊ ಇಬ್ಬರು ತೊಂದರೆ ಮಾಡಿದರೆಂದು ಹೇಳಿ ಇಡೀ ಆಡಳಿತ

ಮಂಡಳಿ ಮೇಲೆ ಆರೋಪವನ್ನು ಮಾಡಿ ಅವರನ್ನು ಸೂಪರ್ ಸೀಡ್ ಮಾಡಿ ಇಟ್ಟಿದ್ದಾರೆ. ಇಲ್ಲಿ ವಿಶ್ವಾಸಭರಿತವಾದ ಒಂದು ಆಡಳಿತ ಮಂಡಳಿ ಇರಬೇಕಾಗಿದೆ ಇದನ್ನು ನಾವು ಮಂತ್ರಿಗಳ ಹತ್ತಿರವೂ ಸಹ ಹೇಳಿದ್ದೇವೆ.

ಇನ್ನು ಹಸಿ ನೀರಾವರಿಯ ಬಗ್ಗೆ : ಇದು ಕೆಲವು ವರ್ಷಗಳಿಂದಿತ್ತು. ಇದಕ್ಕೆ ಸಬ್ಸಿಡಿ ರಿಲೀಸ್ ಆಗಬೇಕು. ಸಮರ್ಪಕವಾಗಿ ಸಬ್ಸಿಡಿ ರಿಲೀಸ್ ಆಗುವುದರ ಬದಲು ಯಾವುದ್ಯಾವುದೊ ಕೆಲವು ಕಂಪನಿಯವರು ಹೋಗಿ ಅವರು ತಮ್ಮ ಕಡೆ ಸಬ್ಸಿಡಿ ಬೇಗ ರಿಲೀಸ್ ಆಗುವಂತೆ ಮಾಡುತ್ತಿದ್ದಾರೆ. ಇಂಥ ಕೆಲವು ಪ್ರಕರಣಗಳ ಬಗ್ಗೆ ನಾನು ಬಿಡಿಸಿ ಹೇಳಬಯಸುವುದಿಲ್ಲ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇದನ್ನು ಸರಿಯಾಗಿ ಮಾಡಬೇಕು.

ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ತೀರ್ಮಾನವಾಗಿದೆ. ನಾವು ಅದಕ್ಕೆ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ಆದರೆ ಅದು ಯಾವ ರೀತಿ ಇರಬೇಕೆಂದು ಇನ್ನು ರಚನೆಯಾಗಿಲ್ಲ. ಕಳೆದ ಬಜೆಟಿನಲ್ಲಿ ಇದರ ಬಗ್ಗೆ ಘೋಷಣೆಯಾಯಿತು. ಮತ್ತು ಇದರ ರಚನೆಗಾಗಿ 10 ಕೋಟಿ ರೂಪಾಯಿಗಳನ್ನೂ ಸಹ ನೀಡಲಾಯಿತು. ಈ ವರ್ಷದಲ್ಲಿ 10-30 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಈ 10 ಕೋಟಿ ರೂಪಾಯಿಗಳೂ ಸಹ ಖರ್ಚಾಗಲಿಲ್ಲ. ಆದುದರಿಂದ ಈ ಮಲೆನಾಡು ಮಂಡಳಿಯನ್ನು ಹೇಗೆ ರಚನೆ ಮಾಡಬೇಕು. ಅದರ ಸ್ಥೂಲ ರೂಪರೇಷೆಗಳೇನು. ಅದು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂಬ ಬಗ್ಗೆ ಮೊದಲೆ ಯೋಚಿಸಿರಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಡಿ.ಸಿ. ಯವರು ಒಂದು ರೀತಿಯ ಆದೇಶವನ್ನು ಕೊಟ್ಟರೆ. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಗಳು ಮತ್ತೊಂದು ರೀತಿಯಲ್ಲಿ ಆದೇಶವನ್ನು ಕಳಿಸುತ್ತಾರೆ. ಈ ರೀತಿಯ ಪ್ರಪೋಸಲ್‌ಗಳನ್ನು ಕಳಿಸಬೇಕಾದರೆ. ಅದನ್ನು ಯಾರು. ಯಾರಿಗೆ ಕಳಿಸಬೇಕು. ಏಕೆ ಕಳಿಸಬೇಕು ಎಂಬ ಬಗ್ಗೆ ಕುರಿತು ನಮ್ಮ ಶಾಸಕರನು ಕೇಳಿ ಮಾಡಬೇಕಾಗಿದೆ. ಇದುವರೆಗೂ ಕೂಡ ಶಾಸಕರ ಸಭೆಯನ್ನು ಕರೆದಿಲ್ಲ. ಆದುದರಿಂದ ಬರುವ ಏಪ್ರಿಲ್-ಮೇ ತಿಂಗಳಿನಲ್ಲಿ ಕೂಡಲೆ ಮಲೆನಾಡು ಅಭಿವೃದ್ಧಿ ಮಂಡಳಿಯು ಕಾರ್ಯರೂಪಕ್ಕೆ ಬರುವಂತೆ ಸಮಗ್ರವಾಗಿ ತೀರ್ಮಾನ ಮಾಡಿ ಯೋಜನೆಯನ್ನು ರೂಪಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಗಡಿಪ್ರದೇಶದ ಅಭಿವೃದ್ಧಿಗಾಗಿ ಸ್ವಲ್ಪ ಹಣವನ್ನು ಮೀಸಲಾಗಿಟ್ಟಿದ್ದಾರೆ. ಈ ಗಡಿ ಅಭಿವೃದ್ಧಿಯನ್ನು ತೆಗೆದುಕೊಳ್ಳುವಾಗ. ಬೇರೆ ಬೇರೆ ರಾಜ್ಯಗಳ ಗಡಿಗಳಿದ್ದಾಗೆಯೆ ಸಾಗರವು ಕೂಡ ಒಂದು ಗಡಿ. ಕೆಲವು ಜಿಲ್ಲೆಗಳಲ್ಲಿ ಒಂದು ಬದಿಯಲ್ಲಿ ಸಾಗರವಿರುತ್ತದೆ. ಸಾಗರವು ಕೂಡ ಒಂದು ಗಡಿ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ಅಭಿವೃದ್ಧಿಗಾಗಿ ಸಮಗ್ರವಾದ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯ : ಸಾಗರದ ಆಚೆ ಯಾವ ಜಿಲ್ಲೆ ಅಥವಾ ರಾಜ್ಯವಿದೆ? ಗಡಿ ಅಭಿವೃದ್ಧಿ ಎಂದರೆ: ಬೇರೆ ರಾಜ್ಯಗಳಿಗೆ ಅಂಟಿಕೊಂಡಿರುವ ಗಡಿಗಳನ್ನು ಕೂಡ ಅಭಿವೃದ್ಧಿ ಮಾಡಿದ್ದಾರೆ. ಗಡಿಯ ಆಚೆ ಬೇರ ರಾಷ್ಟ್ರ ಇದೆಯೊ? ರಾಜ್ಯ ಇದೆಯೊ? ಅಥವಾ ಜಿಲ್ಲೆ ಇದೆಯೊ?

ಶ್ರೀ ಜಿ.ಎಸ್. ಆಚಾರ್ : ಇನ್ನು ಟ್ಯಾಕ್ಸೇಷನ್ ವಿಚಾರದಲ್ಲಿದ್ದಂಥ ಸೂಚನೆಗಳೇನು ಇದೆ ಅದರ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಟ್ಟು ನನ್ನ ಭಾಷಣವನ್ನು ಮುಕ್ತಾಯಗೊಳಿಸಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ವಾಣಿಜ್ಯ. ಕೈಗಾರಿಕಾ ಮಂಡಳಿಗಳ. ಶಾಸಕರ ಒತ್ತಾಯವನ್ನು ಅನಲಕ್ಷಿಸಿ ಆಕ್ಟ್ರಾಯ್ ಹಾಕಬಾರದು ಎನ್ನತಕ್ಕಂಥ ತೀರ್ಮಾನ ಮಾಡಿದ್ದಾರೆ. ಇದು ಜನತೆಯ

ಒತ್ತಡಕ್ಕೆ ಮಣಿದಂಥ ತೀರ್ಮಾನ. ಜನರಿಗೆ ಬೇಕಾದಂಥ ಕಾರ್ಯಕ್ರಮ ಯಾವುದೆ ಇದೆ ಅದನ್ನು ಕೊಡಲು ಅವರು ಸೂಕ್ತಬದ್ಧರಾಗಿದ್ದಾರೆ. ಮಾರಾಟ ತೆರಿಗೆಯನ್ನು ವಿನಾಯಿತಿ ಮಾಡತಕ್ಕಂಥ ಸಂದರ್ಭದಲ್ಲಿ ಭತ್ತ. ಅಕ್ಕಿ. ಮೀನು. ಎಳನೀರು. ಬಿತ್ತನೆ ಬೀಜ. ಕಡಿಮೆ ಬೆಲೆಯ ಜಮಖಾನ. ಕನ್ನಡಕ. ಇದಕ್ಕೆಲ್ಲ ಮಾರಾಟ ತೆರಿಗೆ ವಿನಾಯಿತಿ ಮಾಡಿರುವುದನ್ನು ಯಾರೂ ಇವತ್ತು ಟೀಕೆ ಮಾಡುತ್ತಿದ್ದಾರೆ. ಇದನ್ನು ಲಕ್ಷಿಸುತ್ತಾ ಇಲ್ಲ ಎಂದು ಹೇಳುವುದಕ್ಕೆ ಬೇಸರ ಆಗುತ್ತದೆ. ಆದರೆ 10 ಹೆಚ್.ಪಿ. ಗಿಂತ ಕಡಿಮೆ ಇರುವ ಐ.ಪಿ. ಸೆಟ್ಟುಗಳಿಗೆ. ಬಿಡಿ ಭಾಗಗಳಿಗೆ ಮಾರಾಟ ತೆರಿಗೆ ಇಳಿಸಿದ್ದುದು. ನೀರಾವರಿ. ಪ್ಲಾಸ್ಟಿಕ್ ಪೈಪುಗಳಿಗೆ. ಟ್ರಾಕ್ಟರ್. ಪವರ್ ಟಿಲ್ಲರ್ ಭಾಗಗಳಿಗೆ. ಕೊಡೆಗಳಿಗೆ ಸ್ಪ್ರಿಂಕ್ಲರ್ ಹನಿ ನೀರಾವರಿ ಸಲಕರಣೆಗಳಿಗೆ. ಫರ್ಟಿಲೈಸರ್‌ಗಳಿಗೆ ಇಳಿಸಿದ್ದುದು ಇವೆಲ್ಲಾ ಶ್ಲಾಘನೀಯವಾದುದು. ಮಾರಾಟ ತೆರಿಗೆ ಕೊಡುವಂಥದರಲ್ಲಿ ಬಸ್ ಮತ್ತು ಕಾಂಟ್ರಾಕ್ಟ್ ಕ್ಯಾರೇಜ್‌ನಲ್ಲಿ ಸ್ವಲ್ಪ ತೆರಿಗೆ ಇಳಿಸಿದಂಥದ್ದು ಪ್ರಯಾಣಿಕರಿಗೆ ಅಧಿಕ ಹೊರೆ ಬರುವಂಥ ಸಂದರ್ಭ ಇದೆ. ಇದನ್ನು ಕುರಿತು ಮರು ಪರಿಶೀಲನೆ ಮಾಡಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ. ಹಾಗೆಯೇ ವಿವಿಧ ಮದ್ಯಗಳ ಮೇಲೆ ಶುಲ್ಕವನ್ನು ಹೆಚ್ಚಿಸಲಾಗಿದೆ. ಅದಕ್ಕಾಗಿ ಆಕ್ಷೇಪ ಹೇಳುವುದಿಲ್ಲ. ಹಳ್ಳಿ ಪಟ್ಟಣ ಎಂಬ ತಾರತಮ್ಯ ಇಲ್ಲದೆ. ವೈನ್‌ಷಾಪ್‌ಗಳ ಮೇಲೆ ಶುಲ್ಕವನ್ನು ವಿಧಿಸತಕ್ಕಂಥದ್ದು ಸರಿಯಲ್ಲ. ಟೌನ್‌ಗಳಲ್ಲಿ ವಿಪರೀತ ವ್ಯಾಪಾರ ಆಗುತ್ತದೆ. ಆದರೆ. ಹಳ್ಳಿಗಳಲ್ಲಿ ವ್ಯಾಪಾರ ಕಡಿಮೆಯಾಗುತ್ತಿದೆ. ಇದರಿಂದ ಹಳ್ಳಿಯ ಜನರಿಗೆ ಬಹಳ ಕಷ್ಟವಾಗುತ್ತದೆ. ಅದೇ ರೀತಿ ಬೆಂಗಳೂರು ಅಥವಾ ಸಣ್ಣ ಪಟ್ಟಣಗಳು ಮತ್ತು ಹಳ್ಳಿ ಈ ರೀತಿಯ ತಾರತಮ್ಯ ಕೆಲವು ವ್ಯತ್ಯಾಸಗಳನ್ನು ಇಟ್ಟುಕೊಳ್ಳುವುದು ಅವಶ್ಯ ಇದೆ. ಉದಾಹರಣೆಗೆ ವೃತ್ತಿ ತೆರಿಗೆ ಹೊರುವುದರಲ್ಲಿ ಭೂಮಿ ಅಭಿವೃದ್ಧಿ ಮಾಡುವ ಸಂಸ್ಥೆಗಳು. ಕಂಪ್ಯೂಟರ್ ಸಂಸ್ಥೆಗಳು. ಕಲ್ಯಾಣ ಮಂಟಪಗಳು. ಅವು ಬೆಂಗಳೂರಿನಲ್ಲಿ ಇರಲಿ. ಕುಂದಾಪುರದಲ್ಲಿ ಇರಲಿ ಎಲ್ಲರಿಗೂ 2 1/2 ಸಾವಿರ ರೂಪಾಯಿ ಕೊಡಬೇಕು. ಇದರ ಬಗ್ಗೆ ಒಂದೇ ಯಾರ್ಡ್‌ಸ್ಟಿಕ್ ಇಡುವಂತಾದ್ದು ಸರಿಯಲ್ಲ. ಬೇರೆ ಬೇರೆ ಮಾಡಬೇಕು. ವೈದ್ಯಕೀಯ ವೃತ್ತಿಯಲ್ಲಿ ಇದ್ದವರಿಗೆ ಹಾಗೆಯೇ ಇದೆ. ಇನ್ನು ಕೆಲವು ವಿಚಾರಗಳಲ್ಲಿ ನಗರ ಪಾಲಿಕೆಯಿಂದ ಹಿಡಿದು ಗ್ರಾಮಾಂತರ ಪ್ರದೇಶಗಳವರೆಗೂ. ಒಂದೇ ರೀತಿಯ ಶುಲ್ಕವನ್ನು ವಿಧಿಸುದ್ದುದು ಸರಿಯಲ್ಲ. ಬೇರೆ ಬೇರೆ ರೀತಿಯ ಶುಲ್ಕವನ್ನು ಹಾಕಬೇಕು ಎಂದು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ ಸೂಚನೆ ಕೊಟ್ಟಿದ್ದಂತಹ ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟ್‌ಗಳಿಗೂ ಸಹ ಇದೇ ರೀತಿಯಾಗಿ ಇತ್ತು. ಬೆಂಗಳೂರು ನಗರದಿಂದ ಹಿಡಿದ ಹಳ್ಳಿಯವರೆಗೂ ವ್ಯತ್ಯಾಸ ಇದೆ. ಅದೇ ರೀತಿ ಇದನ್ನು ಪರಿಶೀಲನೆ ಮಾಡಬೇಕು. ರೈಸ್ ಮಿಲ್‌ಗಳಿಗೆ. ರೈಸ್ ಮಿಲ್‌ಗಳು ಎಂದು ಹೇಳಿದಾಗ ಈ ದೊಡ್ಡ ದೊಡ್ಡ ಪ್ಲಾಂಟ್‌ಗಳನ್ನು ನಾವು ತಲೆಯಲ್ಲಿ ಇಟ್ಟುಕೊಳ್ಳುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5-10 ಹೆಚ್.ಪಿ. ವರೆಗೆ ಒಂದು ಸಣ್ಣ ಹಲ್ಲರ್‌ಗಳು ಇವೆ. ಅವರಿಗೆ ರಿಜಿಸ್ಟ್ರೇಷನ್ ಮಾಡಬೇಕು ಎಂದು ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಇದೆ. ಇದರಿಂದಾಗಿ ಅವರು ಏನು ಮಾಡಬೇಕಾಗುತ್ತದೆ ಎಂದರೆ ಪ್ರತಿ ತಿಂಗಳು ರಿಟರ್ನ್ಸ್ ಕಳುಹಿಸಬೇಕಾಗುತ್ತದೆ. ಅವರು ವ್ಯಾಪಾರ ಮಾಡುವುದಿಲ್ಲ. ಆದರೆ ರೈತರು ಸ್ವಂತ ಭತ್ತವನ್ನು ಹಲ್ ಮಾಡುತ್ತಾರೆ ಅಥವಾ ಬಾಡಿಗೆಯ ಮೇಲೆ ಕೂಡ ಮಾಡುತ್ತಾರೆ. ಪ್ಲಾಂಟ್‌ಗಳಿಗೆ ವಿಧಿಸುವಂತಹ ಶುಲ್ಕವನ್ನು ಇವುಗಳಿಗೆ ವಿಧಿಸಬಾರದು ಎಂದು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಯಾವ ಬಜೆಟ್ ಇದೆ. ಇದು ಕರ್ನಾಟಕ ರಾಜ್ಯದ ಸಂಪೂರ್ಣ ಅಭಿವೃದ್ಧಿಯ ದೃಷ್ಟಿಯಿಂದ ಸಮಗ್ರವಾದ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಉತ್ಕೃಷ್ಟ ಪರಿಕಲ್ಪನೆಯ ಆಧಾರದ ಮೇಲೆ ಮಂಡಿಸಿದಂತಹ ಬಜೆಟ್ ಆಗಿದ್ದು. ಇದನ್ನು ಹಾರ್ಧಿಕವಾಗಿ ಸ್ವಾಗತಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ. ನಮಸ್ಕಾರ.

L. A. - V.i. 4. 13

ಉಪ ಸಭಾಧ್ಯಕ್ಷಿಣಿಯವರು : ಈಗ ಮಾನ್ಯ ಮುಖ್ಯಮಂತ್ರಿಗಳು.

ಸಭೆಯನ್ನು ಬಹಿಷ್ಕರಿಸಿದ ಜನತಾದಳದವರನ್ನು ಮತ್ತೆ ಸಭೆಯಲ್ಲಿ ಭಾಗವಹಿಸಲು ಮನವಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ ಒಂದು ನಿಮಿಷ. ಈ ಬಜೆಟ್ ಲೀಕಾದ ಬಗ್ಗೆ ಮತ್ತು ಬಜೆಟ್ ಮೇಲೆ ಚರ್ಚೆಯನ್ನು ಆಡಳಿತ ಪಾರ್ಟಿಯವರು ಇನಿಷಿಯೇಟ್ ಮಾಡಿದ ಬಗ್ಗೆ ನಾವೆಲ್ಲರೂ ಪ್ರತಿಭಟನೆ ಮಾಡಿ. ನಾವು ಮತ್ತು ಜನತಾ ದಳದವರು ಮೊನ್ನೆಯಿಂದ ಬಹಿಷ್ಕಾರ ಮಾಡಿದ್ದೆವು. ಈಗ ನಾವು ಬಹಿಷ್ಕಾರವನ್ನು ವಾಪಸ್ಸು ಪಡೆದಿದ್ದೇವೆ. ಈ ಬಹಿಷ್ಕಾರನ್ನು ಏತಕ್ಕೆ ವಾಪಸ್ಸು ಪಡೆದಿದ್ದೇವೆ ಎಂದರೆ. ಮೊನ್ನೆ ದಿನ ಸ್ಪೀಕರ್ ಮನೆಯಲ್ಲಿ ಸರ್ಕಾರದ ಕಡೆಯಿಂದ ಸಂಬಂಧಪಟ್ಟ ಮಂತ್ರಿಗಳ ಮತ್ತು ನಾವೆಲ್ಲಾ ವಿರೋಧ ಪಾರ್ಟಿಯ ಸದಸ್ಯರು ಸೇರಿಕೊಂಡು ಚರ್ಚೆ ಮಾಡಿದ್ದೆವು. ಈ ಬಜೆಟ್ ಲೀಕಾದ ಬಗ್ಗೆ ಸದನದಸಮಿತಿ ಮಾಡುವುದು ಮತ್ತು ಯಾರು ಆಡಳಿತ ಪಾರ್ಟಿಯಿಂದ ಇನಿಷಿಯೇಟ್ ಮಾಡಿದ್ದಾರೆ ಅದರ ಬಗ್ಗೆ ನೀವು ಸದನದಲ್ಲಿ ತಪ್ಪು ಒಪ್ಪಿಕೊಂಡು ಪುನಃ ವಿರೋದ ಪಾರ್ಟಿಯ ನಾಯಕರಿಗೆ ಇದರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು ಎಂದು ಅಲ್ಲಿ ತೀರ್ಮಾನವಾಗಿದೆ. ಆ ಒಂದು ತೀರ್ಮಾನದ ಆಧಾರದ ಮೇಲೆ ನಾವು ಬಹಿಷ್ಕಾರವನ್ನು ವಾಪಸ್ಸು ತೆಗೆದುಕೊಂಡು ಈ ಬಜೆಟ್ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಈಗ ಸನ್ಮಾನ್ಯ ಬಂಗಾರಪ್ಪನವರು ಇದರ ಬಗ್ಗೆ ಉತ್ತರ ಕೊಡುವ ಮೊದಲು ನಾವು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ಸರ್ಕಾರದವರು ಕೊಟ್ಟಂಥ ಭರವಸೆ ಏನಾಗಿದೆಯೋ ಗೊತ್ತಿಲ್ಲ. ಉತ್ತರಕೊಡುವ ಮೊದಲು ಸದನದ ಸಮಿತಿ ಮತ್ತು ಏನು ಕ್ಷಮೆ ಕೇಳುವಂಥ ಮಾತಾಗಿತ್ತು. ಅದರ ಬಗ್ಗೆ ಉತ್ತರ ಕೊಡಬೇಕಾಗಿದೆ. ವಿರೋಧಪಕ್ಷದ ನಾಯಕರು ಇಲ್ಲಿ ಬಂದಿಲ್ಲ. ಇದರ ಬಗ್ಗೆ ಕೂಡ ತಾವು ಏನು ಪ್ರಯತ್ನ ಪಟ್ಟಿದ್ದೀರಿ. ಅವರನ್ನು ಕೂಡ ಈ ಸದನಕ್ಕೆ ಬರುವುದಕ್ಕೆ ಏನು ಪ್ರಯತ್ನವಾಗಿದೆ. ಇದರ ಬಗ್ಗೆ ಕೂಡ ತಾವು ಉತ್ತರ ಕೊಡುವ ಮೊದಲು ನಮಗೆ ತಿಳಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

MR. QUMURUL ISLAM (Gulbarga) : Madam, in the chamber of the Hon'ble Speaker, I was also invited, there two things were raised. One was which we have already raised in the House and requested regarding the House Committee to be formed to enquire of the budget. Regarding vote on account, there was no mention in the meeting of the Speaker. But when the other Party Leaders were invited and these other two issues have come, where our BJP leader was also there. So, after that we have agreed to disagree. This is the situation, and even after that, from my Party, from BJP, they have come and have requested. We wanted to know in this House from the Hon'ble Chief Minister, is there any improvement from their side because you have seen the CLP decision also. But after all, even if they have taken any decision, there can be a rethought, if at all there is any improvement from the Janatha Dal and the Samajwadi Janatha Party who are boycotting. So I want to know from you is there any improvement in their stand is there any opportunities in the larger interest of the people, for the larger interest of democracy, we are mentioning. Is there any improvement from the opposition side for conciliation or anything or whether the Government is also thinking to have a second thought over their decision?

MR. MODAGEKAR DESAI (Bagewadi) : Sir, I want an assurance from the Ho'ble Chief Minister whether he is going to appoint one Committee to find the leakage in budget. I hope he has given an assurance in the Chamber of Speaker, as well as the in the Business Advisory Committee, I hope that he will

invite the other side of the apposition i.e. MES people or the BJP people to the Committee. If it is done it will be better in the public interest as well as our own interest. I hope you will give assurance like that and just now as Mr. Qumural Islam told, the opposition is waiting and they are making the dharna outside. If there is any progress, it is better to inform us also because, if progress is there, they will come and join with us in the House. Thank you.

ಶ್ರೀ ಕೆ.ಎಸ್. ಈಶ್ವರಪ್ಪ : ಈ 3 ಜನ ಮಾನ್ಯ ವಿರೋಧ ಪಕ್ಷದವರು ಏನು ಸ್ಪಷ್ಟವಾಗಿ ಕೇಳಿದ್ದಾರೆ ಅದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಸರ್ಕಾರ ಕೊಟ್ಟಂಥ ಆಶ್ವಾಸನೆಯ ಪ್ರಕಾರ, ಮಾತಿನ ಪ್ರಕಾರ ನಡೆದುಕೊಳ್ಳುತ್ತದೆಂಬ ನಂಬಿಕೆಯಿಂದ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಸರ್ಕಾರ ಮಾಡಿದಂಥ ತಪ್ಪುಗಳನ್ನು ತಿಳಿಸಬೇಕೆಂಬ ಉದ್ದೇಶದಿಂದ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಈ ದೃಷ್ಟಿಯಿಂದ ಬಜೆಟ್ ಬಗ್ಗೆ ಮಾತನಾಡುವುದಕ್ಕಿಂತ ಮುಂಚಿತವಾಗಿ ತಾವು ಹೇಳಬೇಕು. ಮಾತನಾಡಿದ ಮೇಲೆ ನಾವು ಹೇಳುತ್ತೇವೆಂದರೆ ಅದಕ್ಕೆ ಅರ್ಥವಿಲ್ಲ. ದಯವಿಟ್ಟು ಸ್ಪಷ್ಟವಾಗಿ ಒಂದು ಸಮಿತಿಯನ್ನು ನೇಮಕ ಮಾಡಿ ಘೋಷಣೆ ಮಾಡಿ. ನಿಮ್ಮ ವಿಷಾದವನ್ನು ವ್ಯಕ್ತಪಡಿಸಿ ಅನಂತರ ತಾವು ತಮ್ಮ ಭಾಷಣವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಯವ್ಯಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರ ಕಳಕಳಿ ಇವತ್ತಿನದೇನೂ ಅಲ್ಲ. ತಮ್ಮ ಕಳಕಳಿಯನ್ನು ನಾನು ಅರ್ಥಮಾಡಿಕೊಂಡೇ ಮಾತನಾಡುತ್ತಿದ್ದೇವೆ. ಅವತ್ತಿನಿಂದ ಇವತ್ತಿನವರೆಗೂ ನಿಮ್ಮ ಕಳಕಳಿಯ ಒಂದು ಭಾಗವಾಗಿ ನಾನು ಮಾತನಾಡುತ್ತಿದ್ದೇನೆ. ತಮಗೆ ಗೊತ್ತಿರುವಂತೆ ಕೆಲವು ಸಾರಿ ಮಾತುಕತೆ ನಡೆಯುವ ಸಂದರ್ಭದಲ್ಲಿ ಗಿವ್ ಅಂಡ್ ಟೇಕ್ ಪಾಲಿಸಿಯನ್ನು ಅನುಸರಿಸಬೇಕೆಂಬುದು ನಿರ್ವಿವಾದ. ಸಂಸದೀಯ ವ್ಯವಹಾರಗಳಲ್ಲಿ ಇಂತಾದ್ದು ಅನಿವಾರ್ಯ ಎಂದಲ್ಲದಿದ್ದರೂ ಕೂಡ ಅದು ಬೆಳವಣಿಗೆಯಾಗಿರುತ್ತದೆ. ಅದನ್ನು ಸರಿಪಡಿಸಿಕೊಂಡು ಹೋಗಬೇಕು. ಆದರೆ ಒಂದೇ ಒಂದು ವಿಚಾರ ಎಂದರೆ ಯಾವ ಒಂದು ಸಿದ್ಧಾಂತಕ್ಕೆ ನಾವು ಗಂಟುಬೀಳುತ್ತೇವೋ ಆ ಸಿದ್ಧಾಂತವನ್ನೇ ನೀವು ಬದಲಾವಣೆ ಮಾಡಿಕೊಂಡು ಹೋಗಿ ಎಂದರೆ ಅದು ಹೇಗೆ ಸಾಧ್ಯ. ಅದು ಯಾವುದೇ ಸಿದ್ಧಾಂತ ಆಗಿರಬಹುದು. ಅದು ಬಹಳ ಕಷ್ಟವಾಗುತ್ತದೆ. ನಾವು ಮೊದಲೇ ಹೇಳಿದ್ದೇವೆ. ಬಿ.ಎ.ಸಿ. ಯಲ್ಲಿ ಮೊದಲೇ ತೀರ್ಮಾನವಾಗಿದೆ. ಮಾನ್ಯ ಸಭಾಧ್ಯಕ್ಷಣಿಯವರೇ ಓಟ್ ಆನ್ ಅಕೌಂಟ್ ತಾವು ತೆಗೆದುಕೊಳ್ಳುವುದಿಲ್ಲವೆನ್ನುವ ಮಾತನ್ನು ಹೇಳಿದಾಗ ತಮ್ಮ ಪಕ್ಷದ ಮಾನ್ಯ ಸದಸ್ಯರೇ ಹೇಳಿರುತ್ತಾರೆ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದು ಒಳ್ಳೆಯದಲ್ಲವೆಂದು ನಿನ್ನೆ ಆ ಸದನದಲ್ಲಿ ಕೂಡ ಭಾಷಣ ಮಾಡಿದ್ದಾರೆ. ಮಾನ್ಯ ರಾಮಚಂದ್ರಗೌಡರು ಮತ್ತಿತರರು ಎಲ್ಲಾ ಹೇಳಿದ್ದಾರೆ. ಎಲ್ಲರೂ ಮೆಚ್ಚಿದ್ದಾರೆ. ಓಟ್ ಆನ್ ಅಕೌಂಟ್ ಹಿಂದಿನ ಸಾರಿ ತೆಗೆದುಕೊಂಡಾಗ ತಾವೇ ಖಂಡಿಸಿದ್ದಾರೆ. ಆಗ ಅವರೇ ಹೇಳಿದ್ದಾರೆ. ಅದೆಲ್ಲಾ ರೆಕಾರ್ಡ್‌ನಲ್ಲಿದೆ. ಬೇಕಾದರೆ ತೆಗೆದು ತಾವು ಓದಿ ನೋಡಿ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದಲ್ಲ. ನೀವು ಅದನ್ನು ಸ್ಕ್ರಾಪ್ ಮಾಡಬೇಕೆಂದು ಹೇಳಿರುವುದನ್ನು ಅವರೇ ಹೇಳಿ, ಈಗ ಹೇಳುತ್ತಿದ್ದಾರೆ. ಓಟ್‌ಆನ್ ಅಕೌಂಟ್ ತೆಗೆದುಕೊಳ್ಳಿ ಎಂದು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ಬೇರೆ ಏನು ಕಾರಣ. ಯಾವಾಗ ಎನ್ನತಕ್ಕಂಥದ್ದಕ್ಕೆ ಕಾರಣಕ್ಕೆ ಅನಂತರ ಬರುತ್ತೇನೆ. ಏತಕ್ಕೆಂದರೆ ನಾನು ಏತಕ್ಕೆ ಬಿಟ್ಟಿದೇನೆ ಎನ್ನತಕ್ಕಂಥ ವಿಚಾರವನ್ನು ಕೂಡ ಹೇಳುತ್ತೇನೆ. ಬಿ.ಎ.ಸಿ.ಯಲ್ಲಿಯೂ ಕೂಡ ಈ ವಿಚಾರವನ್ನು ಹೇಳಿದ್ದೇನೆ. ಅಂತಿಮವಾಗಿ ಒಪ್ಪಿಕೊಂಡಿರುತ್ತಾರೆ. ಈ ಸದನದಲ್ಲಿಯೂ ಕೂಡ ನಾನು ಹೇಳಿದ್ದೇನೆ. ಇಷ್ಟೆಲ್ಲಾ ಆದ ಮೇಲೆ ಕೂಡ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದು ಏತಕ್ಕೆಂದರೆ ಅವರ ಭಾಷಣಕ್ಕೆ ಕಾಲ ಹೆಚ್ಚಾಗಿ ಬೇಕಾಗುತ್ತದೆ ಎನ್ನತಕ್ಕಂಥದ್ದನ್ನು

ಬಿಟ್ಟರೆ ಇನ್ನೇನೂ ಕಾರಣ ಕಾಣುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ, ಭಾಷಣಕ್ಕಾಗಿ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ಗ್ರೌಂಡ್ಸ್ ಕಾನ್‌ಸ್ಟಿಟ್ಯೂಷನಲ್‌ನಲ್ಲಿ ಎಲ್ಲಿದೆ ಎಂದು ನಾನು ಕೇಳುತ್ತಿದ್ದೇನೆ. ದಯವಿಟ್ಟು ತಾವು ವಿಚಾರ ಮಾಡಿ. ಭಾಷಣಕ್ಕೆ ಕಾಲ ಹೆಚ್ಚು ಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಅದಕ್ಕೆ ಮೊನ್ನೆ ನಡೆದ ಬಿ.ಎ.ಸಿ. ಯಲ್ಲಿ ಕೂಡ ಹೇಳಿದ್ದೇನೆ. ನಿಮಗೆ ಎಷ್ಟು ಟೈಮ್ ಬೇಕು ಹೇಗೆ ಬೇಕು ನೀವೇ ಮಾತನಾಡಿ. ಸೆಷನ್ಸ್ ರಾತ್ರಿಯೆಲ್ಲ ಕುಳಿತುಕೊಳ್ಳೋಣವೆಂದೂ ಕೂಡ ಹೇಳಿದ್ದೇನೆ. ಹಿಂದೆ ಎಲ್ಲಾ ರಾತ್ರಿ 10-11-12 ಗಂಟೆಗಳ ವರೆಗೆ ಕುಳಿತುಕೊಂಡು. ಅವರ ಸರ್ಕಾರ ಇದ್ದಾಗಲೇ. ಅಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿಯೇ ನಾವೇ ಕುಳಿತುಕೊಂಡು ಮಾಡಿ ಮುಗಿಸಿ ಕೊಟ್ಟಿರತಕ್ಕಂಥ ಜನ ನಾವು ಇಲ್ಲಿಯೇ ಇದ್ದೇವೆ. Willingly they are there and we are here. ಹಾಗಂದಾಕ್ಷಣಕ್ಕೆ ಇವತ್ತು ಹಿಂದಿನದನ್ನೆಲ್ಲ ಮರೆತುಬಿಡುವುದು. ಈಗ ಈ ರೀತಿ ಮಾಡಿ. ನಮ್ಮ ಭಾಷಣಕ್ಕೆ ಅವಕಾಶ ಮಾಡಿಕೊಡಿ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳಿ ಎಂದು ಹೇಳಿದರೆ ... I am sorry, I cannot compromise as far as my principle is concerned. ನಮಗೆ ವ್ಯತ್ಯಾಸ ಬರುವುದು ಪ್ರಿನ್ಸಿಪಲ್ ವಿಚಾರದಲ್ಲಿ. ಈಗ ತಾವು ಪಕ್ಷದ ಒಂದು ಪ್ರಿನ್ಸಿಪಲ್ ಒಂದು ಸಿದ್ಧಾಂತ ಇಟ್ಟುಕೊಂಡಿರುತ್ತೀರಿ. ತಾವು ಅದನ್ನು ಬಿಟ್ಟು ಕಾಂಪ್ರಮೈಸ್ ಮಾಡಲಿಕ್ಕೆ ಬನ್ನಿ ಎಂದರೆ ಹೇಗೆ ಸಾಧ್ಯವಾಗುತ್ತದೆ. ಅದನ್ನು ಬಲಿಕೊಟ್ಟು ಬರುವುದಕ್ಕಾಗುತ್ತದೆಯೇ. ಅದರಿಂದ ನಮ್ಮದು ಕೂಡ ಅಷ್ಟೇ ಕಷ್ಟವಾಗುತ್ತದೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ನಾನು ಹಣಕಾಸಿನ ಮಂತ್ರಿಯಾಗಿಯೂ ಇದ್ದೇನೆ. ಮತ್ತೆ ಮುಖ್ಯಮಂತ್ರಿಯಾಗಿಯೂ ಇದ್ದೇನೆ. ಆದರೆ ಬರೀ ಮುಖ್ಯಮಂತ್ರಿಯಾಗಿ ಮಾತನಾಡುತ್ತಿಲ್ಲ. ಫೈನಾನ್ಸ್ ಮಿನಿಸ್ಟರ್ ಆಗಿ ಮಾತನಾಡುತ್ತಿದ್ದೇನೆ. ಇವತ್ತು ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ಏನು ಕಾರಣವಿಲ್ಲವೆಂದು ಹೇಳಿದ ಮೇಲೆ ಇಲ್ಲ ಇಲ್ಲ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳಬೇಕೆಂದು ಹೇಳಿದರೆ Under what provision, under what provision of the constitution. Let me be satisfied. If you are satisfied of is O.K. ಇವತ್ತು ಏನು ಬೆಳವಣಿಗೆಯಾಗಿದೆ. ಎಂದರೆ ಬೆಳವಣಿಗೆ ಮಾಡಿಕೊಂಡು 4-5-6 ದಿವಸಗಳಿಂದ ಕಾದು ಕುಳಿತುಕೊಂಡರೆ ಅದಕ್ಕೆ ಏನು ಸಂಪೂರ್ಣವಾದ ಸ್ಟಾಂಡ್ ಎಂದು ನನಗೆ ಏನೂ ಅರ್ಥವಾಗುತ್ತಿಲ್ಲ. ನಮ್ಮ ಪಕ್ಷದ ಒಳಗೆ ತೀರ್ಮಾನ ಏನಿದೆ ಓಟ್ ಆನ್ ಅಕೌಂಟ್ ಸರ್ಕಾರ ತೆಗೆದುಕೊಳ್ಳದಿದ್ದರೆ our decision of boycotting this Assembly proceedings is irrevocable. ಎನ್ನುವ ಮಾತನ್ನು ಅವರೇ ಹೇಳಿದ್ದಾರೆ. Then, what they all say I cannot understand. ನಾನು ಅದಕ್ಕೆ ಹೇಳುವುದು ಅವರ ತೀರ್ಮಾನ ರಿವೋಕಬಲ್ ಎನ್ನತಕ್ಕಂಥ ಭಾವನೆಗೆ ಬಂದಿದ್ದರೆ ಮಾನ್ಯ ರುಕ್ಮಯ್ಯಪೂಜಾರಿಯವರೇ, ನಾನು ಹೇಳುವುದನ್ನು ಕೂಡ ತಾವು ವಿಚಾರ ಮಾಡಬೇಕಾಗುತ್ತದೆ. ಅಲ್ಲಿ ಕಂಡೀಷನ್ ಹಾಕಿಬಿಡುವುದು. ಇಲ್ಲಿ ಬಂದು ಈ ರೀತಿ ಮಾತನಾಡತಕ್ಕಂಥದ್ದು. ಅದಕ್ಕೆ ನಾನು ಹೇಳುವುದು ಅವರು ಬಂದು ಭಾಗವಹಿಸಬೇಕು. ಅವರನ್ನು ದೂರ ಇಡಬೇಕೆನ್ನುವ ಆಸೆ ನಮಗೆ ಇಲ್ಲ. ರಾಜ್ಯದ ಜನತೆಯು ಅವರದನ್ನು ಕೂಡ ವಿಚಾರ ಮಾಡಲಿ. ನಮ್ಮದನ್ನೂ ಕೂಡ ವಿಚಾರ ಮಾಡಲಿ. ಈಗಲೂ ಕೂಡ ಅವರನ್ನು ದಯವಿಟ್ಟು ಬನ್ನಿ ಎಂದು ವಿನಂತಿ ಮಾಡಿಕೊಳ್ಳುತ್ತೇವೆ. ಇವತ್ತು ಏನಾದರೂ ಇಂಪ್ರೂವ್‌ಮೆಂಟ್ ಆಯಿತೆ ಎನ್ನುವ ವಿಚಾರ ತಾವು ಕೇಳಿದ್ದೀರಿ. ಮಾನ್ಯ ಕಮರೂಲ್ ಇಸ್ಲಾಮ್‌ರವರು ಕೇಳಿದ್ದಾರೆ. ನಾನು ಹೇಳುತ್ತೇನೆ ಏನೂ ಇಂಪ್ರೂವ್‌ಮೆಂಟ್ ಕಂಡಿಲ್ಲ. ಅವರು ಪತ್ರಿಕೆಯಲ್ಲಿ ಕೊಟ್ಟಿರುವ ಹೇಳಿಕೆಯನ್ನು ತಾವು ಓದಿದ್ದೀರಿ. ಬೆಳಿಗ್ಗೆ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಒಪ್ಪುವುದಾದರೆ ಮಾತ್ರ ದಯವಿಟ್ಟು ಓದಿ ನೋಡಿ. ಹೇಗೆ ಸ್ವಾಮಿ ಒಪ್ಪುವುದಕ್ಕೆ ಆಗುತ್ತದೆ. ನಮ್ಮ ನೀತಿಯನ್ನು ಬಲಿಕೊಟ್ಟು ಕ್ಷಮಿಸಿ ಈ ವಿಚಾರದಲ್ಲಿ ಮಾತ್ರ ಸಾಧ್ಯವಾಗಲಾರದು. ಬೇರೆ ವಿಚಾರ, ತಾವು ಸಮಿತಿಯ ಬಗ್ಗೆ ಹೇಳಿರುತ್ತೀರಿ. ಮಾನ್ಯ ರುಕ್ಮಯ್ಯ ಪೂಜಾರಿಯವರು ಹೇಳಿದ್ದಾರೆ, ಮಾನ್ಯ ಎಂ.ಇ.ಎಸ್. ಸದಸ್ಯರು ಹೇಳಿದ್ದಾರೆ ....

There is a way to handle all these things.

ಅದು ಯಾವಾಗ ಸಾಧ್ಯ? ಈ ಕಂಡೀಷನ್ ಮತ್ತೊಂದು ಬಿಟ್ಟುಕೊಟ್ಟು ಸದನಕ್ಕೆ ಬಂದು. ಸದನದ ಸಮತಿ ಮಾಡಿ ಮತ್ತೊಂದು ಹೇಳಿರತಕ್ಕಂಥ ನಿಜ, ನಾನು ಹೇಳುತ್ತೇನೆ. ಹೇಳಿರತಕ್ಕಂಥ ಮಾತನ್ನು ಅಲ್ಲಗಳೆಯುವುದಿಲ್ಲ. ಆ ಹೌಸ್‌ನಲ್ಲಿಯೂ ಕೂಡ ಹೇಳಿದ್ದೇನೆ. ಗೌವರ್ನರ್ ಅಡ್ರಸ್ ಮೇಲೆ ಉತ್ತರ ಕೊಡಬೇಕಾದರೆ ಹೇಳಿದ್ದೇನೆ. ನಾವು ಹರಿಬರಿ ಮಾಡಿ ಮುಗಿಸಿಕೊಂಡು ಹೋಗಬೇಕೆನ್ನುವ ವಿಚಾರ ಇಟ್ಟುಕೊಂಡು ನಾನು ಮಾತನಾಡುತ್ತಿಲ್ಲ. It is not at all my point.

ಸದನದ ಸಮಿತಿ ಮಾಡಬೇಕು, ಬಿಡಬೇಕೆನ್ನುವ ವಿಚಾರದಲ್ಲಿ, ಈ ವಿಚಾರ ಚರ್ಚೆಗೆ ಬಂದಂಥ ಕಾಲದಲ್ಲಿ ನಾನು ಏನು ಹೇಳಿದ್ದೇನೆಂದರೆ ನೀವು ಈ ವಿಚಾರವನ್ನು ಬಿಡಿ. ಆಮೇಲೆ ಗೀವ್ ಅಂಡ್ ಟೇಕ್ ಪಾಲಿಸಿ ಮಾಡಿಕೊಂಡು ಹೋಗಲಿಕ್ಕೆ ಬರುತ್ತದೆನ್ನುವ ಮಾತನ್ನು ಹೇಳಿದರೂ ಕೂಡ. ಇಲ್ಲ ಇಲ್ಲ. ಹೀಗೆಯೇ ಆಗಬೇಕು ಹಾಗೆಯೇ ಆಗಬೇಕೆಂದರೆ ಬಹಳ ಕಷ್ಟವಾಗುತ್ತದೆ.

I have kept that matter open still.

ಈಗಲೂ ಕೂಡ ಈ ವಿಚಾರದಲ್ಲಿ ನಾವು ಓಪನ್ ಮೈಂಡ್‌ನಿಂದ ಒಪ್ಪಿಕೊಂಡಿದ್ದೇವೆ. I have not closed. But, regarding vote on account, there is no compromise. ಇದನ್ನು ತಾವು ಅಪ್ರಿಷಿಯೇಟ್ ಮಾಡುತ್ತೀರೆಂದು ತಿಳಿಯುತ್ತೇನೆ. ಹೌಸ್ ಕಮಿಟಿ ಮತ್ತೊಂದು ಬಂದಾಗ. ...

ಶ್ರೀ ಕೆ.ಎಸ್. ಈಶ್ವರಪ್ಪ : ತಮ್ಮ ಹತ್ತಿರ ನಾವು ಸರ್ಕಾರದ ಬಗ್ಗೆ, ಬಡ್ಜೆಟ್ ಬಗ್ಗೆ ಚರ್ಚೆ ಆಗಬೇಕು. ಸರ್ಕಾರ ಮಾಡುತ್ತಿರುವ ಭ್ರಷ್ಟಾಚಾರವನ್ನು ಜನತೆಗೆ ತಿಳಿಸಬೇಕೆಂದು ಹೇಳಿದ್ದೇವೆ. ಮಾನ್ಯ ಸಭಾಧ್ಯಕ್ಷರ ಮನೆಯಲ್ಲಿ ಸಭೆ ಸೇರಿದಾಗ ಸರ್ಕಾರ ಮಾತು ಕೊಟ್ಟ ಪ್ರಕಾರ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಓಟ್ ಆನ್ ಅಕೌಂಟ್ ಬಗ್ಗೆಯೂ ನಮ್ಮ ಒತ್ತಾಯ ಇತ್ತು. ಆದರೆ ಇಷ್ಟು ಬಿಗಿಯಾದ ಸಂದರ್ಭದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ನೀವು 185 ಜನರಿದ್ದೀರಿ. ಇನ್ನು ನಾವು ಏನು ಮಾಡಬಹುದು? ಎರಡು ಕಂಡೀಷನ್‌ಗಳು ಸ್ಪಷ್ಟವಾಗಿ ಸಭಾಧ್ಯಕ್ಷರ ಮನೆಯಲ್ಲಿ ಮಾತುಕತೆ ನಡೆದಾಗ ಸರ್ಕಾರದ ಕಡೆಯಿಂದ ಆಶ್ವಾಸನೆ ಕೊಡಲಾಗಿತ್ತು. ಒಂದು ಸದನದ ಸಮಿತಿ ಮಾಡಬೇಕೆಂಬುದು ಮತ್ತೊಂದು ವಿರೋಧ ಪಕ್ಷದವರ ಹಕ್ಕಿಗೆ ಚ್ಯುತಿ ಉಂಟು ಮಾಡಿ ಆಡಳಿತ ಪಕ್ಷದ ಸದಸ್ಯರು ಮಾತನಾಡಿದ್ದು, ಇದರ ಬಗ್ಗೆ ವಿಷಾದ ವ್ಯಕ್ತಪಡಿಸಬೇಕು ಎಂಬುದು. ಎರಡು ಆಶ್ವಾಸನೆಗಳನ್ನು ನೀವೇ ಕೊಟ್ಟಿದ್ದೀರಿ. ಸದನದ ಸಮಿತಿ ಮಾಡುತ್ತೇವೆ, ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಹೇಳಿದ್ದೀರಿ.

ಶ್ರೀ ವಸಂತ ವಿ. ಸಾಲಿಯಾನ : ಯಾವುದಕ್ಕೋಸ್ಕರ?

ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದಕ್ಕೆ ಅಂದರೆ ಬಡ್ಜೆಟ್ ಬಗ್ಗೆ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಮೊದಲ ಹಕ್ಕು ಇದೆ. ಆ ಹಕ್ಕನ್ನು ಮೊಟಕುಗೊಳಿಸಿ ಆಡಳಿತ ಪಕ್ಷದ ಶಾಸಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದು ತಪ್ಪು. ಸಭಾಧ್ಯಕ್ಷರ ಮನೆಯಲ್ಲಿ ನಡೆದಂಥ ಮಾತುಕತೆಯಲ್ಲಿ ಸ್ಪಷ್ಟವಾಗಿ ಸರ್ಕಾರ ಆಶ್ವಾಸನೆ ಕೊಟ್ಟ ಮೇರೆಗೆ, ಅದನ್ನು ನಂಬಿ ನಾವು ಇಲ್ಲಿ ಬಂದು ಕುಳಿತೆವು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರ ಗ್ರಹಿಕೆ ಸರಿಯಲ್ಲ. ಸ್ಪೀಕರ್ ಮನೆಯಲ್ಲಿ ಮೀಟಿಂಗ್ ನಡೆದಾಗ ನಾನು ದೆಹಲಿಗೆ ಹೋಗಿದ್ದೆ. ಸ್ಪೀಕರ್ ಮನೆಯಲ್ಲಿ ಆ ರೀತಿ ಮಾತುಕತೆ ಆಗಿಲ್ಲ. ಯಾರೂ ಮಾತು ಆ ರೀತಿ ಕೊಟ್ಟಿಲ್ಲ. ವಿಷಾದ ವ್ಯಕ್ತಪಡಿಸಬೇಕೆಂದು ಹೇಳುತ್ತಿದ್ದೀರಲ್ಲ ಆ ರೀತಿ ಇಲ್ಲ. ಬಹುಶಃ ಮೊನ್ನೆ ಎಂದು ಕಾಣುತ್ತದೆ. ಬಿ.ಎ.ಸಿ. ಮೀಟಿಂಗ್‌ನಲ್ಲಿ ತಾವು ತಮ್ಮ ಪಕ್ಷದ ವತಿಯಿಂದ ಯಾರಿದ್ದಿರಿ ಎಂದು ಗೊತ್ತಿಲ್ಲ. ಪೂಜಾರಿಯವರು ಇದ್ದರೆಂದು ಭಾವನೆ. ಸ್ಪೀಕರ್ ಅವರು ಹೇಳಿದರು. ಬಡ್ಜೆಟ್ ಮೇಲೆ ಜನರಲ್ ಡಿಸ್ಕಷನ್ ಅನ್ನು ವಿರೋಧ ಪಕ್ಷದ ನಾಯಕರೇ ಇನಿಷಿಯೇಟ್ ಮಾಡಬೇಕೆಂದು ಯಾವ ರೂಲ್‌ನಲ್ಲಿಯೂ ಕೂಡ ಇಲ್ಲ. ಅದು ಅವರ ಹಕ್ಕೇನೂ ಇಲ್ಲ. ಅದು

ಜಸ್ಟ್ ಕನ್‌ವೆನ್‌ಷನ್ ಅಷ್ಟೆ. ನಾವು ಕೂಡ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೇವೆ. ನಾವು ಮಾಡಿದಂಥ ಕಾಲದಲ್ಲಿ ಯಾವಾಗಲೂ ಸದನ ಒಪ್ಪಿ ವಿರೋಧ ಪಕ್ಷದ ನಾಯಕರೇ ಭಾಷಣ ಪ್ರಾರಂಭ ಮಾಡತಕ್ಕದ್ದು ಸಹಜವಾಗಿ ಬಂದಿರತಕ್ಕದ್ದು. ಇಲ್ಲಿ ಏನಾಗಿದೆ ಎಂದರೆ ಬಾಯ್‌ಕಾಟ್ ಮಾಡುತ್ತೇವೆಂದು ಏನೂ ಹೇಳಲಿಲ್ಲ. ಸದನದಲ್ಲಿ ಅವರೂ ಕುಳಿತಿದ್ದರು... I was bust ನಾನು ಇದರ ಬಗ್ಗೆ ಹತ್ತು ಸಾರಿ ಹೇಳಿದ್ದೇನೆ. ನನಗೆ ಕೌನ್ಸಿಲ್‌ನಲ್ಲಿ ಕ್ವೆಶ್ಚನ್ ಇತ್ತು. Leader of the Opposition Mr. Nanaiah was also present with me, soonafter the question hour, in the chambers of the Chairman of the Legislative Council, he is an eye witness ನಾನು ಅಲ್ಲಿ ಕುಳಿತಾಗ ಕ್ವೆಶ್ಚನ್ ಅವರ್ ಆದಮೇಲೆ ಏನು ನಡೆಯುತ್ತಿದೆ ಅಸೆಂಬ್ಲಿಯಲ್ಲಿ. ಚಂದ್ರೇಗೌಡರು ಭಾಷಣ ಪ್ರಾರಂಭಿಸಿರಬಹುದೆಂದು ಭಾವಿಸಿ ಟಿ.ವಿ. ಯಲ್ಲಿ ವೀಕ್ಷಿಸಿದಾಗ ಇದಿನಬ್ಬನವರು ಮಾತನಾಡುತ್ತಿದ್ದರು. ಬಹುಶಃ ನಿಯಮ 334ರ ಮೇಲೆ ಅಥವಾ ಶೂನ್ಯ ವೇಳೆಯಲ್ಲಿ ಅವರು ಏನೋ ಪ್ರಸ್ತಾಪಿಸುತ್ತಿರಬಹುದೆಂದು ನಾನು ತಿಳಿದುಕೊಂಡೆ. ಅದು ಶ್ರೀ ನಾಣಯ್ಯನವರಿಗೆ ಕೂಡ ಗೊತ್ತಿದೆ. You please have personal talk with him, he will tell you everything. ಮೇಲ್ಮನೆಯ ಸಭಾಪತಿಯವರು ಕೂಡ ಇದನ್ನು ಗಮನಿಸಿದ್ದಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ತಾವು ಹೇಳಿದ್ದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಆದರೆ ಎರಡು ವಿಚಾರಗಳ ಬಗ್ಗೆ ತೀರ್ಮಾನವಾಗಿದೆ. ಸ್ಪೀಕರ್ ಅವರ ಮನೆಯಲ್ಲಿ ಸರ್ಕಾರದ ಕಡೆಯಿಂದ ಗೃಹ ಸಚಿವರಾದ ಶ್ರೀ ಧರ್ಮಸಿಂಗರು, ಶ್ರೀ ವೀರಪ್ಪ ಮೊಯಿಲಿಯವರು, ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ವಿರೋಧ ಪಕ್ಷದ ಕಡೆಯಿಂದ ತಾವು ಹಾಜರಿದ್ದ ಸಂದರ್ಭದಲ್ಲಿ ತೀರ್ಮಾನವಾಗಿದೆ. ಸದನದ ಸಮಿತಿ ಮಾಡತಕ್ಕದ್ದು ಮತ್ತು ವಿಷಾದ ವ್ಯಕ್ತಪಡಿಸತಕ್ಕದ್ದು ಈ ಎರಡು ವಿಚಾರಗಳ ಬಗ್ಗೆ ತೀರ್ಮಾನವಾದ ಆಧಾರದ ಮೇಲೆ ನಾವು ಬಹಿಷ್ಕಾರವನ್ನು ವಾಪಸ್ಸು ಪಡೆದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದೇವೆ. ಮೊನ್ನೆ ಸೇರಿದಂಥ ಸಭೆಯಲ್ಲಿ ಸದನದ ಸಮಿತಿ ಮಾಡುವ ಬಗ್ಗೆ ಒಪ್ಪಿಕೊಂಡು ವಿಷಾದ ವ್ಯಕ್ತಪಡಿಸುತ್ತೇವೆಂದು ಹೇಳಿದಿರಿ. ಈ ದೃಷ್ಟಿಯಿಂದ ತಾವು ಇದರ ಬಗ್ಗೆ ತಿಳುವಳಿಕೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ : ರುಕ್ಮಯ್ಯ ಪೂಜಾರಿಗಳೇ. ತಮ್ಮ ಗಮನಕ್ಕೆ ತರತಕ್ಕ ಒಂದು ವಿಚಾರ ಸದನದ ಸಮಿತಿ ಮಾಡಬೇಕೆಂಬ ವಿಚಾರದಲ್ಲಿ ಏನು ಎನ್ನತಕ್ಕದ್ದು ಮಾತುಕತೆ ಆಗಿದ್ದು ನಿಜ. I am not denying it ಅದಾಗುವುದಕ್ಕೆ ಪ್ರೀಕಂಡೀಷನ್ಸ್ ಮತ್ತೊಂದು ಇವೆಲ್ಲಾ ತೆಗೆಯಬೇಕು ಅವರು. ಅವರು ತೆಗೆಯುವುದಕ್ಕೆ ರೆಡಿಯಾಗಿಲ್ಲ. ಇವತ್ತಿಗೂ ಕೂಡ ಜನತಾ ದಳದ ಮಿತ್ರರಿಗೆ ನಾನು ಹೇಳತಕ್ಕ ಮಾತು. ನಿಮ್ಮ ಬಗ್ಗೆ ಅಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾತುಕತೆಗೆ ಅವರು ತಪ್ಪಿದರು ಎಂದು ನೀವೂ ತಪ್ಪುತ್ತೀರಾ ಹಾಗಾದರೆ?

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ, ನಾನು ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮದು ಇನ್ನೇನೂ ಪ್ರಶ್ನೆ ಇಲ್ಲ. ನಿಮ್ಮನ್ನು ನಂಬಿ ನಾವು ಇಲ್ಲಿ ಬಂದು ಕುಳಿತೆವು. ನಮ್ಮ ಮಾತನ್ನು ಕೇಳುವುದಕ್ಕೆ ನೀವು ರೆಡಿ ಇಲ್ಲ ಎಂದರೆ ನಾವೇನು ಮಾಡುವುದಕ್ಕಾಗುತ್ತದೆ?

SRI S. BANGARAPPA : Why don't you sit for a minute? ಆಮೇಲೆ ಸದನ ಸಮಿತಿ ವಿಚಾರದಲ್ಲಿ ನಾನು ಈಗಲೂ ಕೂಡ ಹೇಳಿದ್ದೇನೆ. That matter is kept open. ಆದರೆ ಏನು ವಿಚಾರ ಎಂದು ಹೇಳುವುದಕ್ಕಾದರೂ ಅವರು ಸದನಕ್ಕೆ ಬರಬೇಕಲ್ಲ ಸ್ವಾಮಿ. ಸದನಕ್ಕೆ ಬರಲಿ. ಅವರು ಹೇಳಲಿ. ನಾವು ಅವರು ಸೇರಿ ಕುಳಿತುಕೊಂಡು ಸಮಿತಿ ವಿಚಾರದಲ್ಲಿ ಏನು ಮಾಡಬೇಕು

ಎಂಬುದನ್ನು ಮಾತನಾಡಿಕೊಳ್ಳೋಣ. ಅದರ ಅರ್ಥ I have not closed the doors so far as constituting the House Committee is concerned. That does not mean that we have accepted because ಅವರು ಪ್ರೀಕಂಡೀಷನ್ಸ್ ತೆಗೆಯುವುದಕ್ಕೆ ವಿಚಾರ ಇದೆ. This is number one. ಎರಡನೆಯದು ಅವರು ಭಾಷಣ ಏತಕ್ಕೆ ಮಾಡಲಿಲ್ಲ ಎಂಬುದಕ್ಕೆ ವಿಷಾದ. I am sorry ಮೊನ್ನೆ ಬಿ.ಎ.ಸಿ. ಯಲ್ಲಿ ನಡೆದಂಥ ಸಂದರ್ಭದಲ್ಲಿ ಸ್ಪೀಕರ್ ಎಸ್.ಎಂ. ಕೃಷ್ಣ ಅವರು ಏನು ಹೇಳಿದರು? "No, Government has not committed any mistake" ಯಾವುದೇ ತಪ್ಪು ಮಾಡಿಲ್ಲ ಸರ್ಕಾರ ಎಂದು ಓಪನ್ನಾಗಿ ಮೀಟಿಂಗ್‌ನಲ್ಲಿ ತಮ್ಮೆದುರಿಗೇ ಹೇಳಿದ್ದಾರೆ. ಏತಕ್ಕೆ ಗೊತ್ತಾ?

ಶ್ರೀ ಎ. ರುಕ್ಮಯ್ಯ ಪೂಜಾರಿ : ಆದರೂ ಕೂಡ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಯಾವುದಕ್ಕೆ?

ಶ್ರೀ ಎ. ರುಕ್ಮಯ್ಯ ಪೂಜಾರಿ : ಸರ್ಕಾರದ ಕಡೆಯಿಂದ ತಪ್ಪಾಗಿಲ್ಲ ಎಂದರೂ ತಾವು ಹೇಳಿದ್ದೀರಿ.

Sri S. Bangarappa : You are completely mistaken. You are completely mistaken.

ಅವರದು ತಪ್ಪಾಗಿಲ್ಲ ಎಂದು ನಾವು ಮಾಡುವುದಿಲ್ಲ ಅದು. ಸ್ಪೀಕರ್ ಅವರು ಭಾಷಣಕ್ಕೆ ಯಾರನ್ನು ಕರೆಯಬೇಕು. ನಾವು ಹೋಗಿ ಕರೆಯುವುದಿಲ್ಲ ಬನ್ನಿ ಚಂದ್ರೇಗೌಡರೆ. ನೀವು ಕುಳಿತುಕೊಂಡು ಭಾಷಣ ಮಾಡಿರಿ ಎಂದು. ನಾನು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ರೂಲ್ಸ್‌ನಲ್ಲಿ ತಮಗೆ ಗೊತ್ತಿರುವ ಹಾಗೆ ಸ್ಪೀಕರ್ ಅವರು ಹೇಳಬೇಕು. ಯಾರನ್ನು ಕರೆಯಬೇಕು ಎಂದು. ನೋಡಿದ್ದಾರೆ. ಕರೆಯುವುದಕ್ಕೆ ಅವರು ಪ್ರಯತ್ನ ಮಾಡಿಯೇ ಮಾಡಿದ್ದಾರೆ. ಅವರು ಇಲ್ಲ. ಇಲ್ಲದೇ ಇದ್ದಾಗ ಏನು ಮಾಡಬೇಕು? ಇವತ್ತು ವಿರೋಧಪಕ್ಷದ ನಾಯಕರಿಗೆ ಎಷ್ಟು ಹಕ್ಕಿರುತ್ತದೆ. ನಿಮಗೂ ಅಷ್ಟೇ ಹಕ್ಕಿದೆ ಇಲ್ಲಿ ಸ್ಪೆಷಲ್ ರೈಟ್ಸ್ ಎನ್ನತಕ್ಕದ್ದು ಏನೂ ಇಲ್ಲ. ನಾವೆಲ್ಲಾ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೇವೆ. ನಾವೇನೂ ಸ್ಪೆಷಲ್ ರೈಟ್ಸ್‌ನಿಂದ ಹೋಗಿ ಭಾಷಣ ಮಾಡಿಲ್ಲ. ಆರ್ಡಿನರಿ ಮೆಂಬರ್ಸ್‌ಗೆ ಏನು ಹಕ್ಕಿರುತ್ತದೆ. ಅದೇ ಹಕ್ಕನ್ನು ಪ್ರಯೋಗ ಮಾಡಿ ಮಾಡುತ್ತೇವೆ. ಲೀಡರ್ ಆಫ್ ದಿ ಅಪೊಸಿಷನ್ ಅಂದರೆ ಏನು? ನಮ್ಮ ನಮ್ಮ ವ್ಯವಸ್ಥೆಗೆ ಮಾಡಿಕೊಂಡಿರುವ ವಿಚಾರ. For your information, this Assembly does not recognise the very existence of political parties. ಇಲ್ಲಿ ಏನು ರೆಕಗ್ನೈಸ್ ಮಾಡುತ್ತದೆಂದರೆ It is only the right of individual membership ಇಷ್ಟೇ ನೋಡುವುದು. ಪಾರ್ಟಿ ಸಂಗಡಕ್ಕೋಸ್ಕರ, ನಾವು ಮಾಡಿಕೊಂಡಿರುವ ವ್ಯವಸ್ಥೆ ಇದು. This House does not recognise, even in Parliament also ಅಲ್ಲೂ ಕೂಡ ಬರುವುದಿಲ್ಲ. ನಾವು ವಿಷಾದ ವ್ಯಕ್ತಪಡಿಸುವುದಕ್ಕೆ ನಾವೇನು ತಪ್ಪು ಮಾಡಿದ್ದೇವೆ? ಸುಮ್ಮನೆ ಸುಮ್ಮನೆ ತೆಗೆದುಕೊಂಡು ಹೋಗಿ ಪ್ರತಿಯೊಂದಕ್ಕೂ ವಿಷಾದ ವ್ಯಕ್ತಪಡಿಸಿ ಎಂದು ಹೇಳುವುದು ಸರಿಯೇ? ಅವರು ವಿರೋಧಪಕ್ಷದ ನಾಯಕರಾಗಿ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. There I agree ಅದಕ್ಕಾಗಿ ಅವರನ್ನೇನೂ ವಿಷಾದ ವ್ಯಕ್ತಪಡಿಸಿ ಎಂದು ನಾವೇನೂ ಹೇಳಲಿಲ್ಲ. ನಾವು ಯಾರಾದರೂ ಇಲ್ಲಿ ಕುಳಿತುಕೊಂಡಿದ್ದರೆ ಸ್ವಲ್ಪ ತಾಳಿ. ಭಾಷಣ ಮಾಡುವುದು ಬೇಡ. ವಿರೋಧಪಕ್ಷದ ನಾಯಕರನ್ನು ಕರಿಯಿಸಿ ಎಂದು ನಾವು ಅಂದುಬಿಡುತ್ತಿದ್ದವು. To be franks with you ಅವರು ಇಲ್ಲಿ ಇಲ್ಲ. ಎಂಥದ್ದು ಇಲ್ಲ. ಅವರು

ಹಕ್ಕನ್ನು ಕಳೆದುಕೊಳ್ಳುವುದು. ಎಲ್ಲಾ ಕಳೆದುಕೊಳ್ಳುವುದು. ವಿರೋಧಪಕ್ಷದ ನಾಯಕರ ಹಕ್ಕು ಹೋಗಿದೆ. ಆದ್ದರಿಂದ ಓಟ್ ಆನ್ ಅಕೌಂಟ್ ತೆಗೆದುಕೊಳ್ಳಿ ಎಂದರೆ I am sorry, we are not at the mercy of this kind of argument ನಾವು ಫ್ಲ್ಯಾಟಾಗಿ ಈ ವಿಚಾರವನ್ನು ಹೇಳಬೇಕಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಮಾತುಕತೆ ಮುರಿದಿದ್ದಾರೆ. ಅದಕ್ಕೋಸ್ಕರ ನಾವೂ ಮಾಡುತ್ತೇವೆ ಎಂದರೆ. ಅವರು ಮುರಿದಿದ್ದಾರೆ ಎಂದು ನೀವೂ ಮುರಿದರೆ ಖಂಡಿತ ಇದು ಸಭೆಗೆ ಶೋಭೆ ತರುವುದಿಲ್ಲ. ಸ್ಪಷ್ಟವಾಗಿ ಸಮಿತಿ ಮಾಡುತ್ತೇವೆ ಎಂದು ಒಪ್ಪಿಕೊಳ್ಳಲಾಗಿತ್ತು. ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಒಪ್ಪಿಕೊಂಡಿತ್ತು. ಇವತ್ತು ಸರ್ಕಾರ ಮಾತು ಕದಿಯುತ್ತಿದೆ. ಇದು ನಿಜಕ್ಕೂ ಒಳ್ಳೆಯದಲ್ಲ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಏನು ಸಭೆಯಲ್ಲಿ. ....

ಶ್ರೀ ಎಸ್. ಬಂಗಾರಪ್ಪ : ನೀವು ಏನು ಮಾಡುತ್ತೀರಿ ಎಂದು ನನಗೆ ಗೊತ್ತು. ಪ್ರತಿಭಟನೆ ಮಾಡಿ ಮುಂದೆ ಏನು ಮಾಡಬೇಕು ಎಂದು.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಹಿಂದೆ ಏನು ಮಾಡಿದ್ದೀರೋ ಅದನ್ನೇ ನಾವು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ : ಅದು ನನಗೆ ಗೊತ್ತು.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಹಿಂಗೆ ಇದೇ ತಾನೆ ಮಾಡಿದ್ದುದು?

ಶ್ರೀ ಎಸ್. ಬಂಗಾರಪ್ಪ : ಕೌನ್ಸಿಲ್‌ನಲ್ಲಿ ನಿಮ್ಮವರು ಮಾಡಿದ್ದಾರೆ ಎಂದು ಗೊತ್ತಾಯಿತು. ಈಗ ತಾವು ಪ್ರತಿಭಟನೆ ಮಾಡಿ ಎಂದ ತಕ್ಷಣ ಫಿಲ್ ಅಪ್ ದಿ ಬ್ಲ್ಯಾಂಕ್ಸ್ ಅದು.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಮುಖ್ಯಮಂತ್ರಿಯಾಗುವುದಕ್ಕಿಂತ ಮುಂಚೆ ಇದನ್ನೇ ಮಾಡಿದ್ದುದು. ನಾವು ಮುಖ್ಯಮಂತ್ರಿ ಆಗುವತನಕವೂ ಇದನ್ನೇ ಮಾಡುವುದು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸೂಸೈಡ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದ ಸರ್ಕಾರದ ಮಧ್ಯೆ ಸನ್ಮಾನ್ಯ ಸಭಾಧ್ಯಕ್ಷರ ಮನೆಯಲ್ಲಿ ನಡೆದ ಮಾತುಕತೆಯನ್ನು ಮುರಿದಿದ್ದಾರೆ. ಇದನ್ನು ಪ್ರತಿಭಟನೆ ಮಾಡಿ ಕರ್ನಾಟಕ ರಾಜ್ಯದ ಜನತೆಗೆ ತಿಳಿಸುವುದಕ್ಕೋಸ್ಕರ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

SRI QAMARUL ISLAM : I was also one of the Members but the Hon'ble Chief Minister was not there in the Speaker's House. Minister for Home, Minister for Revemue and Minister for Education were present. It was not decided there, but it was accepted in principle there. I want to make it clear because my friends are going out and there should not be any confusion in this regard because I was a party. I was accepted in principle. I am one of the parties who has raised that this matter should be enquired on Friday and Saturday. They said on behalf of the Chief Minister, in principle they agree. The only condition is that they should come and also participate in the Debate. The second matter which you have clarified, for that also, it was very clearly said that it is in no way, the fault of the Government. The Hon'ble Speaker or the Hon'ble Deputy Speaker was there,

he was called and the matter was there. Even then, we requested that some exercise is to be made so that the dignity of the Leader of the Opposition should be maintained and some way has to be sorted out. That was discussed. What my friends from B.J.P. tried to express that a decision was taken in the house of the Hon'ble Speaker is not correct. So, I am not boycotting.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷಿಣಿಯವರೇ. ಮಾನ್ಯ ಸದಸ್ಯರಾದ ಕುಮರುಲ್ ಇಸ್ಲಾಮ್ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಾನು ದೆಹಲಿಯಲ್ಲಿ ಇದ್ದಂಥ ಕಾಲದಲ್ಲಿ ನನ್ನ ಮಾನ್ಯ ಸಚಿವ ಮಿತ್ರರು ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಚರ್ಚೆಯಾದಾಗ ಹೇಳಿರತಕ್ಕದ್ದು ಏನು? ಮುಖ್ಯಮಂತ್ರಿಗಳು ದೆಹಲಿಯಿಂದ ಬಂದ ಮೇಲೆ ಅವರ ಮುಂದೆ ವಿಚಾರ ಇಡುತ್ತೇವೆ. ತಾವು ಏನು ಪ್ರಪೋಸಲ್ ಇಟ್ಟಿದ್ದೀರೋ ಅದನ್ನು ಕನ್ಸಿಡರ್ ಮಾಡಿ ಎಂದು ಹೇಳುತ್ತೇವೆ ಎಂದಿದ್ದಾರೆ. ಅನಂತರ ಬಿ.ಎ.ಸಿ. ಮೀಟಿಂಗ್‌ನಲ್ಲೂ ಸಹ ಮಾನ್ಯ ಅಧ್ಯಕ್ಷರಾದ ಎಸ್.ಎಂ. ಕೃಷ್ಣ ಅವರು ಕೂಡ ಹೇಳಿದ್ದಾರೆ. it is not the fault of the Government . ಎನ್ನತಕ್ಕ ಒಂದು ಮಾತನ್ನು ಓಪನ್ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಅಲ್ಲಿ ನಮ್ಮ ಬಿಜೆಪಿ ಸ್ನೇಹಿತರೂ ಕೂಡ ಇದ್ದರು. ಇಷ್ಟು ಇದ್ದರೂ ಕೂಡ ನೀವು ಒಪ್ಪಿಕೊಂಡಿದ್ದೀರಿ, ನೀವು ಒಪ್ಪಿಕೊಂಡಿದ್ದೀರಿ ಎಂದುಕೊಂಡರೆ ಹೇಗೆ? ಅದಕ್ಕೆ ನಾನು ಹೇಳಿದೆ. ಇದು ತಲೇ ಮೇಲೆ ಕಿರೀಟ ಇಟ್ಟುಕೊಂಡು ನಾನೇ ರಾಜ ಎಂದು ಹೇಳಿದ ಹಾಗೆ ಆಗುತ್ತದೆ. ಬೇರೆ ಯಾರೇ ವಂದಿಮಾಗದರು ಬಹುಪರಾಕ್ ಎಂದು ಹೇಳುವುದಕ್ಕೆ ಇಲ್ಲದಿದ್ದರೆ ರಾಜ ಆಗಿಬರುವುದಕ್ಕಾಗುವುದಿಲ್ಲ. ಕೋಟೆ, ಕೊತ್ತಲು, ಕುದುರೆ, ಒಂಟೆ, ಸವಾರಿ ಎಲ್ಲಾ ಬೇಕಾಗುತ್ತದೆ ಅದಕ್ಕೆ ಇವತ್ತು ಇಲ್ಲ ಎಂದು ಅಲ್ಲ. ಇದು ಏನೂ ಇಲ್ಲ. ಇವರು ಈಗ ಮಾಡತಕ್ಕದ್ದು ರಾಜಕೀಯವಾಗಿ ಮಾಡುತ್ತಿದ್ದಾರೆಂದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. I am sorry, They are also now exposed. ನೀವು ಏನೂ ಮಾಡುವುದಕ್ಕೆ ಆಗುವುದಿಲ್ಲ. I cannot help for this kind of approach. So far as the House Committee is concerned, ಹೌಸ್ ಕಮಿಟಿ ವಿಚಾರದಲ್ಲಿ we have kept the matter open. ಆ ಬಗ್ಗೆ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದವರು, ಬಿಜೆಪಿ ಮಿತ್ರರು let them come back to the House. ಅವರು ಬರಲಿ. ಬಂದು ಸದನದಲ್ಲಿ ಹೇಳಲಿ. ಹೇಳಿದ ಮೇಲೆ ಮಾತುಕತೆ ಮಾಡಿ ಮುಂದುವರಿಯುವುದಕ್ಕೆ ಬರುತ್ತದೆ. ನಾವು ಬಾಯ್‌ಕಾಟ್ ಮಾಡುತ್ತೇವೆ, ನಾವು ಹೇಳಿದ ಕಂಡೀಷನ್ ಒಪ್ಪಬೇಕು ಎಂದರೆ. ದಯವಿಟ್ಟು ಕ್ಷಮಿಸಬೇಕು. ಈ ರೀತಿ ಷರತ್ತಿಗೆ ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವರು ಷರತ್ತು ಹಾಕತಕ್ಕದ್ದು ನ್ಯಾಯಸಮ್ಮತ ಆಗಿಲ್ಲ ಎಂದು ಹೇಳುತ್ತೇನೆ. ನನಗೆ ವಿರೋಧಪಕ್ಷದ ನಾಯಕರ ಬಗ್ಗೆ ಗೌರವ ಇದೆ. ನನಗೆ ಎಲ್ಲಾ ಸದಸ್ಯರ ಬಗ್ಗೆ ಗೌರವ ಇದೆ. ಆದರೆ ಮಾತುಕತೆ, ಸಂಧಾನದ ಮೂಲಕ ಯಾವ ರೀತಿ ಹೋಗಬೇಕು ಎನ್ನುವ ವಿಚಾರದಲ್ಲಿ the pre-conditions are too much on the part of the Opposition. ಈ ವಿಚಾರದಲ್ಲಿ ಮಾತ್ರ ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಆ ವಿಚಾರವನ್ನು ಮುಗಿಸುತ್ತೇನೆ. ಇನ್ನು ಮಾನ್ಯ ಸಭಾಧ್ಯಕ್ಷಿಣಿಯವರೇ. 1992-93ರ ಆಯವ್ಯಯ ಪತ್ರ ಈ ಸದನದಲ್ಲಿ ಒಪ್ಪಿಕೊಂಡಾಗ ಮಂಡನೆ ಮಂಡನೆ ಆಗಿದೆ. ಕರ್ನಾಟಕ ರಾಜ್ಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿ ಮತ್ತು ಇದಕ್ಕೆ ಹಿನ್ನೆಲೆ, ಇವೆಲ್ಲವನ್ನೂ ಕೂಡ ಮತ್ತೊಮ್ಮೆ ಅವಲೋಕನ ಮಾಡತಕ್ಕ ಕಾಲದ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ಬಂದಿದೆ ಎಂದು ನಾನು ಭಾವಿಸುತ್ತೇನೆ. ನಾನು ಯಾವುದಾದರೂ ಒಂದು ಮಾತನ್ನು ಇಲ್ಲಿ ಹೇಳಿದರೆ ಹೊಗಳಿಕೆ ನನಗೆ ಬೇಕಾಗಿಲ್ಲ. ವಾಸ್ತವಾಂಶದ

ಆಧಾರದ ಮೇಲೆ ಅಥವಾ ವಸ್ತುಸ್ಥಿತಿ ಆಧಾರದ ಮೇಲೆ ರಾಜ್ಯದಲ್ಲಿರುವ ಕಷ್ಟ ಮತ್ತು ಕ್ಲಿಷ್ಟ ಪರಿಸ್ಥಿತಿ ಅದರ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಸರ್ಕಾರ ರೂಢಿಸಿಕೊಂಡಿರುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಮತ್ತು ರಾಜ್ಯದ ಆರ್ಥಿಕ ಅಭಿವೃದ್ಧಿ ಮತ್ತು ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳು ಮತ್ತು ರೈತ ಸಮುದಾಯ, ಇವುಗಳನ್ನು ಒಳಗೊಂಡಿರತಕ್ಕ ಒಂದು ನೈಜ ಚಿತ್ರದ ಹಿನ್ನೆಲೆಯಲ್ಲಿ ನಾವು ಇವತ್ತು ಅವಲೋಕನ ಮಾಡತಕ್ಕ ಸಂದರ್ಭ ಇವತ್ತು ಇದೆ. ಅವೊಂದು ಪರಿಸ್ಥಿತಿಯಲ್ಲಿ ನಾವೆಲ್ಲಾ ಇದ್ದೇವೆ. ಆಯುವ್ಯಯಪತ್ರ ಮಂಡನೆ ಮಾಡತಕ್ಕದ್ದು ರಾಜ್ಯಾಂಗಬದ್ಧವಾಗಿರತಕ್ಕ ಒಂದು ಕಾರ್ಯಕ್ರಮ. ಈ ಸಂದರ್ಭದಲ್ಲಿ ನಾನು ನಿರೀಕ್ಷೆ ಮಾಡಿದ್ದೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಮಿತ್ರರು ಸದನದಲ್ಲಿದ್ದು ಚರ್ಚೆಯಲ್ಲಿ ಸಕ್ರೀಯ ಪಾತ್ರವನ್ನು ವಹಿಸಿ ರಾಜ್ಯದ ಆರ್ಥಿಕ ಪರಿಸ್ಥಿತಿಯಮೇಲೆ ಅವರ ಟೀಕೆ ಟಿಪ್ಪಣಿಗಳ ಹಿನ್ನೆಲೆಯಲ್ಲಿ ಹಲವಾರು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲತಕ್ಕ ಸಂದರ್ಭ ಅವರಿಗೆ ಇದೆ. ಇವತ್ತು ಟೀಕೆ ಟಿಪ್ಪಣಿಗಳ ಜೊತೆಗೆ ಅವರ ಮಾತುಕತೆಗಳು ಸ್ಪಷ್ಟವಾಗಿ ಬಂದಾಗ, ಆ ಟೀಕೆ ಟಿಪ್ಪಣಿ ಆರೋಗ್ಯಕರ ಟೀಕೆ ಟಿಪ್ಪಣಿ ಎಂದು ಕಂಡುಬಂದಂಥ ಕಾಲದಲ್ಲಿ, ನಮ್ಮ ಹೃದಯಾಂತರಾಳದಿಂದ ಅವುಗಳನ್ನು ಸುಸ್ವಾಗತ ಮಾಡತಕ್ಕ ವಿಚಾರದ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಅದನ್ನು ನಾನು ಸ್ವಾಗತ ಮಾಡುವುದಕ್ಕೆ ಸಿದ್ದನಿದ್ದೇನೆ. ಕಳೆದ ವರ್ಷ ಅವರು ಮಾತನಾಡಿದ್ದರು. 1991-92ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡನೆ ಮಾಡಿದಂತಹ ಕಾಲದಲ್ಲಿ ಅವರು ಮಾತನಾಡಿದ್ದರು. ಅವರಿಗೆ ತಿಳಿದಿರತಕ್ಕ ಅಂಕಿಅಂಶಗಳ ಪ್ರಕಾರ ಅವರು ಮಾತನಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದ್ದರು. ಈ ವರ್ಷ ಕೂಡ ಅದೇ ರೀತಿಯಲ್ಲಿ ಪ್ರಾರಂಭ ಮಾಡುತ್ತಾರೆಂದು ನಾನು ತಿಳಿದಿದ್ದೆ. ಅವರ ಆ ಕಾರ್ಯಕ್ಕೆ ಚ್ಯುತಿ ತಂದುಕೊಂಡಿದ್ದಾರೆಂದು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ಅದರ ಅವಶ್ಯಕತೆಯಿಲ್ಲ. ಯಾವುದೇ ಒಂದು ಸ್ಥಾನಮಾನದಲ್ಲಿದ್ದಾಗ ಅಂತಹ ವ್ಯಕ್ತಿ ಕಾರ್ಯ ಚ್ಯುತಿ ಮಾಡಬೇಕೇ ಬಿಡಬೇಕೇ ಎನ್ನುವುದನ್ನು ಅವರಿಗೆ ಬಿಡುತ್ತೇನೆ. ರಾಜ್ಯದ ಜನತೆ ಇದೆ. ಅದನ್ನು ನೋಡುತ್ತಾರೆ. ರಾಜ್ಯದ ಜನತೆ ಅದನ್ನು ನೋಡಿ ತುಲನೆ ಮಾಡಿ ಸೋಡಿ ತೀರ್ಪನ್ನು ಅಂತಿಮವಾಗಿ ಅವೇ ಕೊಡಲಿ. ಅದು ಅವರಿಗ ಬಿಟ್ಟಿರತಕ್ಕ ವಿಚಾರ. ಆದರೆ ನಾನು ಈ ಸಂದರ್ಭದಲ್ಲಿ ಈ ಚರ್ಚೆಯ ಕಾಲದಲ್ಲಿ ಭಾಗವಹಿಸಿರತಕ್ಕ ವಿರೋಧ ಪಕ್ಷಗಳಾದ ಮಹಾರಾಷ್ಟ್ರ ಏಕೀಕರಣ ಸಮಿತಿ, ಭಾರತೀಯ ಜನತಾ ಪಾರ್ಟಿ ಅವರು ಈಗ ಹೊರಗಡೆ ಹೋಗಿದ್ದಾರೆ. ಅವರು ಈಗ ಹೊರಗಡೆ ಹೋಗಿರಬಹುದು ಅವರು ಬಜೆಟ್‌ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮುಸ್ಲೀಂಲೀಗ್ ಇತ್ಯಾದಿ ಪಕ್ಷಗಳ ಮಿತ್ರರು ಭಾಗವಹಿಸಿದ್ದಾರೆ. ಸಂಪೂರ್ಣವಾಗಿ ವಿರೋಧಪಕ್ಷಗಳೆಲ್ಲ ಬಹಿಷ್ಕಾರ ಹಾಕಿಲ್ಲ. ಯಾರ್‍ಯಾರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ಕೂಡ ಟೀಕೆ ಟಿಪ್ಪಣಿಗಳನ್ನು ಮಾಡಿದ್ದೀರಿ. ಸರ್ಕಾರದ ಕಾರ್ಯಕ್ರಮಗಳು ಸರಿ, ಸರಿಯಲ್ಲ ಎನ್ನತಕ್ಕ ಮಾತಿನ ಬೆಸುಗೆ ನಿಮ್ಮ ಮಾತಿನ ಧಾಟಿ ಅಥವಾ ವೇಗದಿಂದ ಸ್ಪಷ್ಟವಾಗಿ ಒಡಮೂಡಿ ಬಂದಿರತಕ್ಕದ್ದು ಇದೆ. ಇದನ್ನು ತಮ್ಮ ಭಾಷಣಗಳನ್ನು ನಾನು ಸಂಪೂರ್ಣವಾಗಿ ಓದಿ ತಿಳಿದಿದ್ದೇನೆ. ನಾನು ಪ್ರತಿಯೊಬ್ಬರದನ್ನು ಓದಿದ್ದೇನೆ. ನಾನು ಅದನ್ನು ನೋಡಿದ ಮೇಲೆ ಇವತ್ತು ಜನತಾ ದಳದ ಮಿತ್ರರು ಮಾತನಾಡತಕ್ಕ ಧಾಟಿಯಲ್ಲಿಯೇ ತಾವೂ ಮಾತನಾಡಿದ್ದೀರಿ. ಅದರಲ್ಲಿ ನನಗೆ ಏನೂ ವ್ಯತ್ಯಾಸ ಕಂಡಿಲ್ಲ. ಆರೋಗ್ಯಕರವಾದ ಟೀಕೆ ಟಿಪ್ಪಣಿಗಳು ಅವರಿಂದ ಬಂದರೆ ಯಾವ ರೀತಿಯಾಗಿ ಸ್ವಾಗತ ಮಾಡುತ್ತೇವೆ ಅದೇ ರೀತಿಯಲ್ಲಿ ನಿಮ್ಮಿಂದ ಬಂದರೆ ಸ್ವಾಗತ ಮಾಡುತ್ತೇನೆ. ನಾವು ಅಧಿಕಾರದಲ್ಲಿದ್ದ ಕಾಲದಲ್ಲಿ ಕೆಲವೊಮ್ಮೆ ನಮಗೆ ಗೊತ್ತಿಲ್ಲದೆ ತಪ್ಪುಗಳು ನಡೆಯುತ್ತವೆ, ಆ ಸಾಧ್ಯತೆ ಇರುತ್ತದೆ. ಆ ತಪ್ಪುಗಳನ್ನು

ಒಪ್ಪಿ ಮುಂದಕ್ಕೆ ಹೋಗತಕ್ಕದ್ದು ನಮ್ಮ ಧರ್ಮ. ಅವುಗಳನ್ನು ಸರಿಪಡಿಸತಕ್ಕ ವಿಚಾರ ಮೂಲಭೂತವಾಗಿರಬೇಕು. ಆ ನಂಬಿಕೆ ನಮಗೆ ಅಪಾರವಾಗಿದೆ. ಅದನ್ನು ತೆಗೆದುಕೊಂಡು ಮುಂದಕ್ಕೆ ಹೋಗತಕ್ಕ ವಿಚಾರ ಇಟ್ಟು ಈ ಮಾತನ್ನು ಆಡುತ್ತಿದ್ದೇನೆ. ಆದರೆ ಟೀಕೆ ಟಿಪ್ಪಣಿ ಇವತ್ತು ಅಂಕಿಅಂಶಗಳ ಆಧಾರದ ಮೇಲೆ ಇನ್ನೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಬಂದಿದ್ದರೆ ನನಗೆ ಇನ್ನು ಉತ್ತರ ಕೊಡುವುದಕ್ಕೆ ಶಕ್ತಿ ಜಾಸ್ತಿ ಬರುತ್ತದೆಂದು ನನ್ನ ಭಾವನೆ. ಆದರೂ ಕೂಡ ಇವತ್ತು ತಾವು ಅಂಕಿಅಂಶಗಳನ್ನು ಹೇಳಲಿ ಬಿಡಲಿ ನನ್ನ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ರಾಜ್ಯದ ಹಣಕಾಸಿನ ಮಂತ್ರಿಯಾಗಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕನ ಮಾಡತಕ್ಕ ಕಾಲದಲ್ಲಿ ಹಿಂದಿನ ಕೆಲವು ವರ್ಷಗಳ ಅಂಕಿಅಂಶಗಳನ್ನು ಈ ಆರ್ಥಿಕ ವರ್ಷ 1991-92 ಅದು ಕೂಡ ಮುಕ್ತಾಯವಾಗುತ್ತದೆ: ಇದನ್ನು ಕೂಡ ಒಳಗೊಂಡಂತೆ ಹಲವಾರು ವಿಚಾರಗಳನ್ನು ವಿವರವಾಗಿ ಇಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನನ್ನ ಉತ್ತರ ಕೊಡತಕ್ಕ ಕಾಲದಲ್ಲಿ ನಾನು ಮಾಡುತ್ತಿದ್ದೇನೆ. ಮಾತನಾಡತಕ್ಕ ಕಾಲದಲ್ಲಿ ಯಾವುದೇ ಸದಸ್ಯರು ಮಾತನಾಡಿರಬಹುದು.

ಅಂಕಿಅಂಶಗಳನ್ನು ರೂಢಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಅದು ಆ ಕಡೆ ಕುಳಿತು ಮಾತನಾಡುವವರು ಇರಬಹುದು. ಈ ಕಡೆ ಕುಳಿತು ಮಾತನಾಡುವವರು ಇರಬಹುದು. ಇದು ಸಂಪೂರ್ಣ ಸಾಮಗ್ರಿಗಳನ್ನು ಅಂಕಿಅಂಶಗಳ ಆಧಾರದ ಮೇಲೆ ಸಜ್ಜುಗೊಳಿಸಿ ಮಾತನಾಡತಕ್ಕದ್ದು ಬಹಳ ಕಷ್ಟ. ನಾನು ಕೂಡ ವಿರೋಧ ಪಕ್ಷದಲ್ಲಿ ಹಲವಾರು ವರ್ಷಗಳನ್ನು ಕಳೆದಿದ್ದೇನೆ. ಈ ಎಲ್ಲಾ ಸಿದ್ಧತೆಗಳನ್ನು ಮಾಡಿ ಅಂಕಿಸಂಖ್ಯೆಗಳ ಆಧಾರಸಹಿತವಾಗಿ, ಅಚ್ಚುಕಟ್ಟಾಗಿರತಕ್ಕಂಥ ಭಾಷಣ ಮಾಡತಕ್ಕದ್ದು ಅಷ್ಟು ಸುಲಭ ಅಲ್ಲ. ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಅವರು ಇರಬಹುದು. ಈ ಕಡೆ ಕುಳಿತಿರತಕ್ಕಂಥ ಯಾರೇ ಇರಬಹುದು. ಈ ತೊಂದರೆ ಇದೆ. ಇಷ್ಟಾದರೂ ಕೂಡ ಅಂಕಿಅಂಶಗಳ ಸಹಿತ ಮಾತನಾಡತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನ ತಾವು ಮಾಡಿದ್ದಕ್ಕೆ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ ಹಲವಾರು ವಿಚಾರಗಳಲ್ಲಿ, ಸರ್ಕಾರದ ಆಡಳಿತದಲ್ಲಿ ಬರತಕ್ಕಂಥ ಲೋಪದೋಷಗಳು. ಅದು ಸರಿಯಾಗಬೇಕು ಎನ್ನತಕ್ಕದ್ದು, ಕಟು ಟೀಕೆ ಅಥವಾ ಸಹಜವಾಗಿ ಒಡಮೂಡಿ ಬರತಕ್ಕಂಥ ಸಲಹೆಗಳು. ಅವುಗಳ ಜೊತೆಯಲ್ಲಿ ವಿಚಾರ ಇಟ್ಟಿದ್ದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಇವತ್ತು ಅವರು ಇಲ್ಲ. ನಮ್ಮ ಪಕ್ಷದ ಮಿತ್ರರೂ ಕೂಡ ಇದು ಒಳ್ಳೆಯದಲ್ಲ. ಸರಿ ಆಗಬೇಕಿತ್ತು ಎಂಬ ಮಾತನ್ನು ಹೇಳಿದ್ದಾರೆ. ಇವತ್ತು ಪಕ್ಷದ ಚೌಕಟ್ಟಿನಲ್ಲಿ ಟೀಕೆ ಮಾಡುವುದಕ್ಕೆ ಬರುವುದಿಲ್ಲ ಎಂದು ಅವರು ಹೇಳಬಹುದು. ಆದರೆ ತಮ್ಮ ಸಲಹೆಯನ್ನು ಸರ್ಕಾರ ಟೀಕೆ ಎಂಬ ದೃಷ್ಟಿಯಲ್ಲಿ ತೆಗೆದುಕೊಂಡು ನಾನು ಮುಂದೆ ಹೋಗುತ್ತೇನೆ. ಸಲಹೆ ಸಕಾರಣಗಳ ಆಧಾರದ ಮೇಲೆ ಬಂದಾಗ ಆ ಸಲಹೆಯನ್ನು ಟೀಕೆ ಎಂಬ ದೃಷ್ಟಿಯಿಂದ ತೆಗೆದುಕೊಂಡು ನಾನು ಮುಂದೆ ಹೋಗುತ್ತೇನೆ. ಅದರಲ್ಲಿ ತಪ್ಪೇನೂ ಇಲ್ಲ. ಇಲ್ಲಿ ಮಾನ್ಯ ಸದಸ್ಯರು ಯಾರ್ಯಾರು ಭಾಷಣ ಮಾಡಿದ್ದಾರೆ ಎಂದರೆ ಶ್ರೀಮಾನ್ ಬಿ.ಎಂ. ಇದಿನಬ್ಬನವರು, ಡಾ|| ಸಂಜಪ್ಪನವರು ಮಾತನಾಡಿದ್ದಾರೆ. ಶ್ರೀ ವಿನಯಕುಮಾರ್ ಸೊರಕೆ, ಶ್ರೀ ಸೋಮಪ್ಪ ಸುವರ್ಣ, ಕಮರುಲ್ ಇಸ್ಲಾಂ, ಕೆ.ಎಸ್. ಈಶ್ವರಪ್ಪ, ಆರ್.ಎನ್. ನಾಯಕ್, ಶ್ರೀಮತಿ ದಮಯಂತಿ ಬೋರೇಗೌಡ, ಶ್ರೀ ಜಿ.ಎಸ್. ಆಚಾರ್‌ರವರು ಇತ್ಯಾದಿ ಇತ್ಯಾದಿ ಮಾನ್ಯ ಮಿತ್ರರೆಲ್ಲ ಮಾತನಾಡಿದ್ದಾರೆ. ಹಲವಾರು ಗಂಟೆಗಳ ಕಾಲ ಚರ್ಚೆ ಬಹಳ ವಿವರವಾಗಿ ನಡೆದಿದೆ. ಏನು ವಿರೋಧಪಕ್ಷದವರು ಇದ್ದಿದ್ದರೆ ಎಷ್ಟು ಚರ್ಚೆ ಆಗುತ್ತಿತ್ತು. ಅಷ್ಟೇ ಚರ್ಚೆ ಈಗಾಗಲೇ ನಡೆದಿದೆ. ಇದರ ಬಗ್ಗೆ ಅನುಮಾನ ಬೇಕಾಗಿಲ್ಲ.

ಕಾಲ ಇನ್ನೂ ಸ್ವಲ್ಪ ಜಾಸ್ತಿ ಕಳೆದಿದ್ದರೆ ಚೆನ್ನಾಗಿ ಇತ್ತು. ಆದರೆ ಬಹಿಷ್ಕಾರದ ಹಿನ್ನಲೆಯಲ್ಲಿ. ರಾಜಿ ಮಾತುಕತೆಯ ಹೆಸರಿನಲ್ಲಿ ಸಾಕಷ್ಟು ಕಾಲ ಅಪವ್ಯಯವಾಗಿ ಹೋಗಿಬಿಟ್ಟಿದೆ. ನನಗೆ ಇದೇ ದುಃಖ. ಈ ಸದನದಲ್ಲಿ ನಾವು ಕುಳಿತು ಮಾತನಾಡತಕ್ಕಂಥ ಕಾಲದಲ್ಲಿ ನಾವು ಯಾವಾಗಲೂ ಕಾಲ ವ್ಯಯವಾಗದ ಹಾಗೆ ನೋಡಿಕೊಳ್ಳತಕ್ಕಂಥ ಕರ್ತವ್ಯ ನಿರ್ವಹಣೆಯನ್ನು ತಾವೇನು ಮಾಡುತ್ತಿದ್ದೀರ, ಅದಕ್ಕೆ ಸಂಪೂರ್ಣ ಸಹಕಾರವನ್ನು ಎಲ್ಲಾ ಪಕ್ಷಗಳ ವತಿಯಿಂದ ಕೊಡಬೇಕಾಗುತ್ತದೆ. ಅದನ್ನು ನಾವು ನಿಮಗೆ ಕೊಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ನಾಲ್ಕೈದು ದಿವಸಗಳ ಕಾಲ ಹೆಚ್ಚಾಗಿ ಚರ್ಚೆ ನಡೆಯದೆ ಕಾಲ ವ್ಯಯವಾಗಿರುವುದಕ್ಕೆ ನಾನು ರಾಜ್ಯದಜನತೆಯ ಕ್ಷಮೆ ಕೇಳುತ್ತೇನೆ. ಇದಕ್ಕೆ ಯಾರು ಕಾರಣ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅದನ್ನು ನಾನು ಜನತೆಯ ತೀರ್ಪಿಗೆ ಬಿಡುತ್ತೇನೆ. ತಪ್ಪು ಸರ್ಕಾರದ್ದು ಇದ್ದರೆ ಸರ್ಕಾರದ ತಪ್ಪು ಎಂದು ಹೇಳಲಿ. ವಿರೋಧ ಪಕ್ಷದವರ ತಪ್ಪು ಎಂದರೆ ಜನ ವಿರೋಧಪಕ್ಷದ ತಪ್ಪು ಎಂದು ಹೇಳಲಿ. ಆದರೆ ಸರ್ಕಾರದ ವತಿಯಿಂದ ಯಾವುದೇ ತಪ್ಪು ನಾವು ಮಾಡಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಇವತ್ತು ಎಷ್ಟು ಸಾಧ್ಯವೋ ಅಷ್ಟು ರಬ್ಬರ್ ಹೀಚಿದ ಹಾಗೆ ಹೀಚಿದ್ದೇವೆ. ರಾಜಿ ಮಾತುಕತೆ ಬಗ್ಗೆ. ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನಗೆ ಸಾಧ್ಯವಿಲ್ಲ. ಇಷ್ಟು ಮಾತನ್ನು ಪೂರ್ವಪೀಠಿಕೆಯಾಗಿ ನಾನು ಆಡಿ, ಈ ರಾಜ್ಯಪಾಲರ ಭಾಷಣ ಏನಿದೆ. ಅದು ನೀತಿ ನಿರೂಪಣೆ ಮಾಡತಕ್ಕಂಥ ಭಾಷಣ. ನಾವು ಯಾವಾಗಲೂ ಬಜೆಟ್‌ನಲ್ಲಿ ಬಹಳ ವಿವರವಾಗಿ ಹೋಗುತ್ತೇವೆ. ನೀತಿ ನಿರೂಪಣೆ ಮಾಡತಕ್ಕಂಥ ಕಾಲದಲ್ಲಿ ಕೂಡ ಆದ್ಯತಾ ವಲಯಗಳಿಗೆ ಸಂಪೂರ್ಣವಾಗಿ ನಾವು ನಮ್ಮದೇ ಆದಂಥ ವ್ಯಾಖ್ಯಾನ ಮತ್ತು ವಾಸ್ತವಾಂಶಗಳ ಹಿನ್ನಲೆಯಲ್ಲಿ ಸಾಕಷ್ಟು ಸ್ಥಾನವನ್ನು ಕೊಟ್ಟಿದ್ದೇವೆ. ಬಜೆಟ್ ಓದಿದಾಗ ನಮಗೆ ಅದು ಪ್ರತಿಬಿಂಬಿತವಾಗಬೇಕು. ಯಾವ ನೀತಿಯನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿರುತ್ತೇವೆ, ಆ ಒಂದು ನೀತಿ ಇಲ್ಲಿ ಬಜೆಟ್‌ನಲ್ಲಿ ಯಾವಾಗಲೂ ಪ್ರತಿಬಿಂಬಿತವಾದಾಗ ಮಾತ್ರ ಆರ್ಥಿಕ ವಿಚಾರದ ಹಿನ್ನಲೆಯಲ್ಲಿ, ಶಕ್ತಿ ಕೊಟ್ಟಾಗ ಮಾತ್ರ ಅದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನೀತಿ ಒಂದು ಕಡೆ ಆಗುತ್ತದೆ, ಇಲ್ಲಿ ಕಾರ್ಯಕ್ರಮ ಮತ್ತೊಂದು ಕಡೆ ಆಗಿ ಅದು ಸೊರಗಿ ಸತ್ತು ಹೋಗುತ್ತದೆ. ಇವತ್ತು ಯಾವ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನೀತಿ ನಿರೂಪಣೆ ಮಾಡತಕ್ಕಂಥ ಕಾಲದಲ್ಲಿ ರಾಜ್ಯಪಾಲರ ಬಾಯಲ್ಲಿ ಇಡೀ ಬಜೆಟ್ ಭಾಷಣ ಓದಿದಾಗ ಎಲ್ಲಿಯಾದರೂ ಸಣ್ಣಪುಟ್ಟ ತಪ್ಪುಗಳು ಇರಬಹುದು. ಅದಕ್ಕೆ ಚಿಕ್ಕ ಮಾರ್ಜಿನ್ ಬಿಡೋಣ. ದೊಡ್ಡ ಮಾರ್ಜಿನ ಅವಶ್ಯಕತೆ ನನಗೆ ಇಲ್ಲ. ನಾನು ಸಂಪೂರ್ಣವಾಗಿ ಎಚ್ಚರವಹಿಸಿ ಬಜೆಟ್ ಪ್ರಿಪೇರ್ ಮಾಡಿದ್ದೇನೆ. ಯಾವುದೇ ವಿಚಾರ ಬಿಡಬಾರದೆಂಬ ದೃಷ್ಟಿಯಿಂದ ಎಚ್ಚರ ವಹಿಸಿದ್ದೇನೆ. ನಾನು ವಿವರಗಳಿಗೆ ಅನಂತರ ಬರುತ್ತೇನೆ. ಆದರೆ. ಎಲ್ಲಿಯಾದರೂ ಬಿಟ್ಟುಹೋಗಿದ್ದರೆ, ನಮಗೆ ಇನ್ನೂ ಡಿಮ್ಯಾಂಡ್ಸ್ ಬರುತ್ತವೆ, ಅಪ್ರೋಪ್ರಿಯೇಷನ್ ಬಿಲ್ ಬರುತ್ತದೆ. ಅದಕ್ಕಿಂತ ಮೊದಲು ಸರಿಪಡಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ದಯಮಾಡಿ ಆ ಕಡೆ, ಈ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇವತ್ತು ಪ್ರಾಮುಖ್ಯವಾಗಿ, ನಾನು ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಪ್ಲಾನ್ ಸೈಜ್ ಬಹಳ ಮುಖ್ಯ. Plan size is very very important one. I am not a student of economics. Not at all. I have not studied economics at all, for your kind information. ಆದರೆ, ನಾವು ಆರ್ಥಿಕ ಪರಿಸ್ಥಿತಿಯ ತೊಳಲಾಟದಲ್ಲಿ ಹುಟ್ಟಿ ಬಂದಿರತಕ್ಕಂಥವರು. ನಾನು ಯಾವುದೇ ವಿಚಾರ ಕೂಡ ಮಾಡಿಲ್ಲ. ಯಾವುದೇ ಥಿಂಕ್ ಟ್ಯಾಂಕ್ ಕೂಡ ಇಟ್ಟುಕೊಂಡಿಲ್ಲ. ಯಾವ ಥಿಂಕೂ ಇಲ್ಲ,

ಟ್ಯಾಂಕೂ ಇಲ್ಲ. ಥಿಂಕ್ ಟ್ಯಾಂಕ್ ಕಾಲದಲ್ಲಿ ಏನಾಗಿದೆ ಎನ್ನುವುದಕ್ಕೆ ನಾನು ಬರುತ್ತೇನೆ. ವಿರೋಧಪಕ್ಷದ ಮಿತ್ರರು ಇದ್ದರೆ ಚೆನ್ನಾಗಿತ್ತು. ಥಿಂಕ್ ಟ್ಯಾಂಕ್ ಕಾಲದಲ್ಲಿ. ಅದು ವಾರ್ಷಿಕ ಗಾತ್ರ. ಯೋಜನಾ ಗಾತ್ರ ಎಷ್ಟಿರಬೇಕಾಗಿತ್ತು. ರೆವಿನ್ಯೂ ಕಲೆಕ್ಷನ್ ಹೇಗೆ ಬರಬೇಕಾಗಿತ್ತು. ಎಕ್ಸ್‌ಪೆಂಡೀಚರ್ ಹೇಗೆ ಹೋಗಬೇಕಾಗಿತ್ತು. ಕಾರ್ಯಕ್ರಮಗಳಿಗೆ ಯಾವುದಕ್ಕೆ ಒತ್ತನ್ನು ಕೊಡಬೇಕಾಗಿತ್ತು ಎಂಬುದನ್ನು ನೋಡಬೇಕು. ಒಂದು ವೇಳೆ ಥಿಂಕ್ ಟ್ಯಾಂಕ್ ಉಪಯೋಗವಾಗಿದ್ದರೆ. ಇದರಿಂದ ಬಂದುಬಿಡಬೇಕಾಗಿತ್ತು. ಥಿಂಕ್ ಟ್ಯಾಂಕ್ ಕಾಲದಲ್ಲಿ ಏನೇನು ಆಗಿದೆ. ನಾನು ಆ ಥಿಂಕ್ ಟ್ಯಾಂಕನ್ನು ದೂರ ಇಟ್ಟಿದ್ದರಿಂದ ಏನು ಮರ್ಯಾದೆಯನ್ನು ಗಳಿಸಿದ್ದೇವೆ. ಆ ವಿಚಾರವನ್ನು ತಮ್ಮ ಅನುಮತಿ ಪಡೆದು ಈ ಸದನದ ಮುಂದೆ ಇಡುತ್ತಿದ್ದೇನೆ. ಈಗ ನಾವು ವಿಚಾರ ಮಾಡೋಣ. ಈ ಬಜೆಟ್ ಭಾಷಣವನ್ನು ಏನು ಇಟ್ಟಿದ್ದೇವೆ. ಇದು ಈ ಸಾರಿ ಸ್ವಲ್ಪ ದಪ್ಪ ಇದೆ. ದೊಡ್ಡದು ಇದೆ. ಕಾರಣ ಏನೆಂದರೆ. ದೊಡ್ಡದು ಎಂದ ತಕ್ಷಣ ಜಾಸ್ತಿ ಕಾರ್ಯಕ್ರಮ. ಚಿಕ್ಕದು ಎಂದ ತಕ್ಷಣ ಕಾರ್ಯಕ್ರಮ ಇಲ್ಲ ಎಂದಲ್ಲ. ತಾವು ಬಜೆಟ್ ಭಾಷಣವನ್ನು ವರ್ಬ್ಯಾಟಿಮ್ ಓದಿದ್ದೀರೆಂದು ನನ್ನ ಭಾವನೆ. ಪ್ರತಿಯೊಂದು ಪದಕ್ಕೂ ನಾನು ಒತ್ತುಕೊಟ್ಟಿದ್ದೇನೆ; ಅರ್ಥ ಕೊಟ್ಟಿದ್ದೇನೆ. ಸಾಕಷ್ಟು ಕಾಲ ನಾವು ಹಗಲು ಜನರ ಮಧ್ಯೆ ಇರತಕ್ಕಂಥ. ರಾಜಕೀಯದಲ್ಲಿರತಕ್ಕಂಥ. ನಾನಾಗಲೀ ನೀವಾಗಲೀ ಈ ಸ್ಥಾನದಲ್ಲಿರತಕ್ಕಂಥ ಯಾರೇ ಇರಬಹುದು. ಈ ಒಂದು ಪರಿಸ್ಥಿತಿಯಲ್ಲಿ ಕಾರ್ಯಕ್ರಮಗಳನ್ನು ಏನು ರೂಪಿಸಿದ್ದೇವೆ. ಈ ಕಾರ್ಯಕ್ರಮಗಳಿಗೆ, ನಾವು ಸಾಕಷ್ಟು ತೊಂದರೆಯನ್ನು ಅನುಭವಿಸಿ. ಅದರ ಹಿನ್ನೆಲೆಯಲ್ಲಿ ಹಣವನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಒಂದು ವೇಳೆ ಬಿಟ್ಟುಹೋಗಿದ್ದರೆ. ಮತ್ತೆ ಸರಿಪಡಿಸುವಂಥ ಜಾಗವನ್ನು ಇಟ್ಟುಕೊಂಡೇ ಮುಂದಕ್ಕೆ ಹೋಗಿದ್ದೇವೆ. ಈಗ. ನಾನು ಮೊದಲನೆಯದಾಗಿ. ಯೋಜನಾ ಗಾತ್ರ. ಬಹಳ ಮುಖ್ಯವಾಗಿರತಕ್ಕಂಥಾದ್ದು. ಇದರಲ್ಲಿ ಎರಡು ವಿಚಾರಗಳನ್ನು ಗಮನಿಸಬೇಕು. ಯೋಜನಾ ಗಾತ್ರ ಎಂದರೆ. ನಾನು ಇಲ್ಲಿ ಪಾಠ ಹೇಳಿಕೊಡುವುದಕ್ಕೆ ನಿಂತಿಲ್ಲ. ಆದರೆ. ಪೂರ್ವ ತಿಳುವಳಿಕೆ ಇಲ್ಲದಿದ್ದರೆ ಮುಂದೆ ಏನೂ ಅರ್ಥವಾಗುವುದಿಲ್ಲ. ವಾರ್ಷಿಕ ಪ್ಲಾನ್ ಸೈಜ್. ನಾನು ಪಂಚವಾರ್ಷಿಕ ಪ್ಲಾನ್ ಸೈಜ್‌ಗೂ ಅನಂತರ ಬರುತ್ತೇನೆ. ಅದು 5. 6 ಅಥವಾ 7 ಏನೇ ಇರಲಿ. Of course the 8th Plan is yet to commence. ಇನ್ನೂ ಪ್ಲಾನಿಂಗ್ ಕಮಿಷನರ್ ಫೈನಲೈಸ್ ಮಾಡಿಲ್ಲ. ಮೊದಲು ವಾರ್ಷಿಕ ಪ್ಲಾನ್ ಸೈಜ್ ತೆಗೆದುಕೊಳ್ಳುತ್ತೇನೆ. ವಾರ್ಷಿಕ ಯೋಜನಾ ಗಾತ್ರ ಎಂದರೆ. ಉದಾಹರಣೆಗೆ. ಒಂದು ಸಾವಿರ ಕೋಟಿ ರೂಪಾಯಿ ಇಟ್ಟರೆ. ಅದಕ್ಕನುಗುಣವಾಗಿ. ನಮಗೆ ಕಾರ್ಯಕ್ರಮಗಳು. ನೀರಾವರಿ. ವಿದ್ಯುಚ್ಛಕ್ತಿ ಉತ್ಪಾದನೆ ಅನಂತರ ಜನಸಾಮಾನ್ಯರಿಗೆ ಕಾರ್ಯಕ್ರಮಗಳು ಇತ್ಯಾದಿ. ಇತ್ಯಾದಿ ಹಾಕಿಕೊಂಡು. ನಾವು ಮುಂದಕ್ಕೆ ಹೊರಟು ಹೋಗುತ್ತೇವೆ. ಗಾತ್ರ ಕಡಿಮೆ ಆದರೆ. ನಿಮ್ಮ ಕಾರ್ಯಕ್ರಮಗಳಲ್ಲಿ. downward trend ಯಾವಾಗಲೂ ತೆಗೆದುಕೊಳ್ಳುತ್ತೀರಿ. ಹಿಂದಕ್ಕೆ ಹೊರಟು ಹೋಗುತ್ತೇವೆ. ಆ ರೀತಿ ನಾವು ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆಲ್ ರೈಟ್ ಒಂದು ವರ್ಷದ ಯೋಜನಾ ಗಾತ್ರ.-ಪ್ಲಾನ್ ಸೈಜ್-ಒಂದು ಸಾವಿರ ಕೋಟಿ ಎಂದು ಇಟ್ಟುಕೊಳ್ಳೋಣ. ನೀವು ಬರೀ ಗಾತ್ರ ಹೆಚ್ಚಾಗಿ ಇಟ್ಟುಕೊಂಡರೂ ಅದರಿಂದ ಉಪಯೋಗವಾಗುವುದಿಲ್ಲ. ಇದರ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕು ಇದಕ್ಕೆ ತಕ್ಕಹಾಗೆ ರಿಸೋರ್ಸಸ್ ಮೊಬಿಲೈಸ್ ಮಾಡದಿದ್ದರೆ ಅಂದರೆ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡದಿದ್ದರೆ ಪ್ಲಾನ್ ಸೈಜ್ ದೊಡ್ಡದು ಇಟ್ಟುಕೊಂಡರೂ ಡೆಫಿಸಿಟ್ ಜಾಸ್ತಿಯಾಗುತ್ತದೆ. That leads to inflationary trends, ಇದೆಲ್ಲಾ ತೊಂದರೆ ಬರುತ್ತದೆ. ಆದುದರಿಂದ ಬಹಳ ಎಚ್ಚರಿಕೆ ವಹಿಸಬೇಕು. ಪ್ಲಾನ್ ಸೈಜ್ ಮಾಡಬೇಕಾದರೂ. ನನ್ನ ಕಾಲಿಗೆ ಎಷ್ಟು ಶಕ್ತಿ ಇದೆ. ನಾನು ಎಷ್ಟು ಉದ್ದ ಕಾಲು ಚಾಚಬಹುದು ಎಂಬುದನ್ನು ನೋಡಿ ನಮ್ಮ

ಹಾಸಿಗೆಯ ಉದ್ದಕ್ಕೆ ಮಾಡಿಕೊಳ್ಳಬೇಕು. ಇಲ್ಲ ಇಲ್ಲ, ನನ್ನ ಕಾಲು ಸೈಜ್ ಇರುವುದು ಮೂರು ಅಡಿ. ಹಾಸಿಗೆ ಮಾತ್ರ 19 ಅಡಿ ಅಂದರೆ. ನೀವು ಎಷ್ಟು ಹೇಳಿದರೂ 19 ಅಡಿ ಅಲ್ಲ, 10 ಅಡಿಗೂ ಹೋಗುವುದಿಲ್ಲ. ಕಾಲು ಎಷ್ಟು ಉದ್ದ ಹೀಜುತ್ತದೋ ಅಷ್ಟು ನೋಡಿಕೊಳ್ಳಿ. ಆದಷ್ಟೂ ಸೆಟೆದು ನೋಡೋಣ, ಅಷ್ಟು ಉದ್ದಕ್ಕೆ ಹಾಸಿಗೆ ಹಾಕಿ ಅಲ್ಲಿಗೇ ನಿಲ್ಲಿಸುವುದು ಬಹಳ ಒಳ್ಳೆಯದು. That is how I look at the things. ಈಗ ನಮ್ಮ ಕಾಲದಲ್ಲಿ ಭಾರೀ ಸಾಧನೆಯಾಗಿದೆ ಎಂಬ ಮಾತನ್ನು ನಾನು ಆಡುವುದಿಲ್ಲ. ನಾವು ಯಾವುದೇ ಸಂದರ್ಭ ಇದ್ದರೂ ಕೂಡ ಪ್ಲಾನ್ ಸೈಜ್ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಮೊದಲು 5ನೇ ಪ್ಲಾನ್ ಸೈಜ್ ತೆಗೆದುಕೊಳ್ಳುತ್ತೇನೆ. ರಾಜ್ಯದ ಪರಿಸ್ಥಿತಿ ಏನೇನಾಗಿದೆ ಎಂದು ನಾನು ಒಟ್ಟಾರೆ ಹೇಳುತ್ತೇನೆ. ಹಣದ ಪ್ರಮಾಣವನ್ನೂ ನಾನು ತಮ್ಮ ಗಮಕ್ಕೆ ತರುತ್ತೇನೆ. ಕಾಗದ ಪೆನ್ ಕೈಗೆ ತೆಗೆದುಕೊಂಡರೆ ಅನುಕೂಲ. 5ನೇ ಪ್ಲಾನ್ 1974 ರಿಂದ 79. ಈ ಪಂಚವಾರ್ಷಿಕ ಯೋಜನೆಯಲ್ಲಿ ಟೋಟಲ್ ಇನ್‌ವೆಸ್ಟ್‌ಮೆಂಟ್ ಇನ್ ಕರ್ನಾಟಕ ಎಷ್ಟು ಎಂದರೆ, 5ನೇ ಪ್ಲಾನ್ ಸೈಜ್ ಟೋಟಲ್ 998 ಕೋಟಿ. ಅಲ್ಲಿಗೆ ಒಂದು ಸಾವಿರ ಕೋಟಿ ರೂಪಾಯಿ ಎಂದು ಇಟ್ಟುಕೊಳ್ಳೋಣ. Percentage of share in outlay of all States' Plan, 5.5 ಪರ್‌ಸೆಂಟ್ ಬರುತ್ತದೆ. ಅನ್ಯುಯಲ್ ಪ್ಲಾನ್ 79-80. ಏತಕ್ಕೆಂದರೆ ಅಲ್ಲಿ 6ನೇ ಪ್ಲಾನ್ ಸ್ಟಾರ್ಟ್ ಆಗಲಿಲ್ಲ. ಒಂದು ವರ್ಷ ಗ್ಯಾಪ್ ಬಂದಿದೆ. 299.52 ಕೋಟಿ. ಗ್ರೋತ್ ರೇಟ್ ಇದೆ. ಇನ್ನು 6ನೇ ಯೋಜನೆ 80 ರಿಂದ 85 ರವರೆಗೆ ಐದು ವರ್ಷ. 2265 ಕೋಟಿ ರೂಪಾಯಿಗಳು. ಟೋಟಲ್ 5 ವರ್ಷಕ್ಕೆ ಅಷ್ಟು. ಅದರಲ್ಲಿ ಪರ್‌ಸೆಂಟೇಜ್ ಆಫ್ ಗ್ರೋಥ್ ಎಷ್ಟಾಗುತ್ತದೆ ಎಂದರೆ 4.8 ಪರ್‌ಸೆಂಟ್ ಇದೆ. 7ನೇ ಯೋಜನೆ. ಮೊನ್ನೆ 90ನೇ ಇಸವಿಗೆ ಮುಗಿದಿದೆ. ಇದರ ಅವಧಿ 5 ವರ್ಷ ಇನ್‌ವೆಸ್ಟ್‌ಮೆಂಟ್ 3575 ಕೋಟಿ ರೂಪಾಯಿಗಳು. ಗ್ರೋಥ್ ರೇಟ್ ಎಷ್ಟು ಆಲ್ ಇಂಡಿಯಾ ಲೆವೆಲ್‌ನಲ್ಲಿ ಎಂದರೆ 4.4 ಪರ್‌ಸೆಂಟ್. 90ಕ್ಕೆ ಸೆವೆನ್ತ್‌ಪ್ಲಾನ್ ಮುಗಿದಿದೆ. 8ನೇ ಯೋಜನೆ ಸ್ಟಾರ್ಟ್ ಆಗಲಿಲ್ಲ. ಏತಕ್ಕೆ ಗೊತ್ತು. ವಿ.ಪಿ. ಸಿಂಗ್‌ರ ಸರಕಾರ ಇತ್ತು ಅಸ್ಥಿರ ಸರಕಾರ. ಬಿದ್ದುಹೋಯಿತು. ಚಂದ್ರಶೇಖರ್‌ರವರ ಸರಕಾರ ಬಂತು, ಅಸ್ಥಿರ ಸರಕಾರ ಬಿದ್ದು ಹೋಯಿತು. ಈಗ ನರಸಿಂಹರಾವ್‌ಜೀಯವರ ಸಮರ್ಥ ನಾಯಕತ್ವದ ನಮ್ಮ ಸರಕಾರ ಬಂದಿದೆ. 8ನೇ ಯೋಜನೆಯ ಪ್ರಾರಂಭಕ್ಕೆ ಸಂಪೂರ್ಣ ಸಿದ್ಧತೆ ನಡೆದಿದೆ. ಇದರ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಟೈಮ್ ಹಿಡಿಯುವುದರಿಂದ ನಮಗೆ ಅನ್ಯುಯಲ್ ಪ್ಲಾನ್ ವಾರ್ಷಿಕ ಯೋಜನೆ ಮಾತ್ರ ಫಿಕ್ಸ್ ಮಾಡಿರುತ್ತಾರೆ. 92-93ಕ್ಕೆ ಮಾಡಿರುತ್ತಾರೆ. 8ನೇ ಯೋಜನೆಯ ಸಿದ್ಧತೆ ಕೂಡ ನಡೆಯುತ್ತಿದೆ. ನಾನು ಮೊನ್ನೆ ದೆಹಲಿಗೆ ಹೋಗಿ ಬಂದಿರುತ್ತೇನೆ. ಬರುವ ಹಿಂದಿನ ದಿವಸ ನಾನು I met the Deputy Chairman of the Planning Commission again. ನನ್ನ ಕರ್ತವ್ಯ, ಎಂದೂ ಕೂಡಾ ಇದರಿಂದ ವಿಮುಖರಾಗಬಾರದು. ಹಾಗೆ ಭೇಟಿ ಮಾಡಿದಂಥ ಕಾಲದಲ್ಲಿ ಸಂಪೂರ್ಣವಾಗಿ ಸ್ಪೀಡ್ ಅಪ್ ಮಾಡುತ್ತಿದ್ದಾರೆ. They want to start this Eighth Plan. ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕೆಂದು ನನಗೆ ಜವಾಬ್ದಾರಿ ವಹಿಸಿದ್ದಾರೆ. ನಾನು ಪ್ರಣಾಬ್ ಮುಖರ್ಜಿಯವರನ್ನು ನೋಡಿದಂಥ ಕಾಲದಲ್ಲಿ ನಮ್ಮ ಬಗ್ಗೆ ಒಂದು ಹೊಗಳಿಕೆಯ ಒಂದೆರಡು ಮಾತನ್ನೂ ಆಡಿದ್ದಾರೆ. ನಾನು ಅದನ್ನು ಬಜೆಟ್ ಭಾಷಣದಲ್ಲಿ ಕೂಡಾ ಹೇಳಿದ್ದೇನೆ. ಪ್ಲಾನಿಂಗ್ ಕಮಿಷನ್‌ನವರು ಸುಮ್ಮ ಸುಮ್ಮನೆ ಹೊಗಳಿ ಬಿಡುವುದಿಲ್ಲ. ಅವರೇನೂ ದಡ್ಡರಲ್ಲ ಹೊಗಳುವುದಕ್ಕೆ. ಅದಕ್ಕೆ ಎರಡು ಮೂರು ಅರ್ಹತೆಗಳು ಇದೆ. ಒಂದು ಪ್ಲಾನ್ ಸೈಜ್ ಏನಿರುತ್ತದೆ. ಅದರ ಪ್ರಕಾರ ರಿಸೋರ್ಸಸ್ ಮೊಬಿಲೈಸೇಷನ್ ಏನಿದೆ. ಶಕ್ತಿ ಏನಿದೆ, ಏನು ಮಾಡಿರುತ್ತಾರೆ. ಎಕ್ಸೈಸ್ ಇರಬಹುದು, ಮೋಟಾರ್ ವೆಹಿಕಲ್ಸ್ ಇರಬಹುದು, ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಇರಬಹುದು.

ಕಮರ್ಷಿಯಲ್ ಟ್ಯಾಕ್ಸ್‌ಸ್ ಇರಬಹುದು. ನೀವು ಹಣ ಚೆನ್ನಾಗಿ ಮೊಬಿಲೈಸ್ ಮಾಡಲಿಲ್ಲ ಎಂದರೆ ಅದು ಫೇಲ್ ಆಗುತ್ತದೆ. ಕಿತ್ತುಕೊಂಡು ಹೊರಟುಹೋಗುತ್ತದೆ. Another area is fiscal management. ಹಣವನ್ನು ಅನಾಯಾಸವಾಗಿ ಖರ್ಚು ಮಾಡುವುದನ್ನು ಕಡಿಮೆ ಮಾಡುವುದು ಎಂದರೆ ಹಣಕಾಸಿನ ನಿರ್ವಹಣೆ fiscal or financial management ಹೇಗೆ ಮಾಡುತ್ತೀರಿ ಎಂಬುದು. ಮೂರನೇಯದು the third is poorer section of the society. ಸಮಾಜದಲ್ಲಿರತಕ್ಕಂಥ ಬಡವರ್ಗ ಏನಿದೆ ಆ ವರ್ಗದ/ಕಾರ್ಯಕ್ರಮಗಳಿಗೆ ಏನು ಮಾಡಿರುತ್ತೀರಿ ಎಂಬುದು. These are the three areas mainly that are looked into by the Planning Commission always.

ನನಗೆ ಗೊತ್ತಿರುವ ಹಾಗೆ 1990-91ನೇ ಅನ್ಯುಯಲ್ ಪ್ಲಾನ್ ಗಾತ್ರ 1145 ಕೋಟಿ. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡದ್ದು ಅಕ್ಟೋಬರ್ 17, 1990. ತಮಗೆ ಗೊತ್ತಿರುವ ಹಾಗೆ ಅಂದರೆ ಅದೇ ವರ್ಷ ಆರ್ಥಿಕ ವರ್ಷ / ವೀರೇಂದ್ರ ಪಾಟೀಲ್‌ಜೀಯವರು ಇದ್ದಂಥ ಕಾಲ. ಅಲ್ಲಿ ಅವರೂ ಕೂಡ ಚೆನ್ನಾಗಿ ನಿರ್ವಹಣೆ ಮಾಡಿರುತ್ತಾರೆ.

ನಾನು ಈ ಹಿಂದೆ ಈ ಸದನದಲ್ಲಿ ಹೇಳಿದ್ದೇನೆ. 1145 ಕೋಟಿ ರೂಪಾಯಿಗಳು 1990-91ರ ಆರ್ಥಿಕ ವರ್ಷ ಅದು. ಗ್ರೋತ್ ರೇಟ್ ಪರ್ಸೆಂಟ್‌ವೈಜ್ 5.0 ಇದೆ. ಅಮೇಲೆ 1991-92 ಪಕ್ಕಾ ನಾನು ಹಣಕಾಸಿನ ಮಂತ್ರಿಯಾಗಿ ನಿರ್ವಹಣೆ ಮಾಡಿರತಕ್ಕಂಥ ಕಾಲ. 1991-92ರಲ್ಲಿ 1558 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. ಗ್ರೋತ್ ರೇಟ್ 5.8 ಕ್ಕೆ ಮೇಲಕ್ಕೆ ಹೊರಟು ಹೋಗಿದೆ. ಆಮೇಲೆ 1992-93 ದಲ್ಲಿ ಏನಿದೆ This is the remarks made by the Planning Commission. ಅವರೆಷ್ಟು ಮಾಡಿದ್ದರು? 1915 ಕೋಟಿ ರೂಪಾಯಿಗಳು ಮಾನ್ಯ ಅಧ್ಯಕ್ಷರೇ ಫಿಕ್ಸ್ ಮಾಡಿ ಕೊಟ್ಟರು. ನಮಗೆ. ನಾನು ಅಲ್ಲಿಂದ ಬಂದು ಮೇಲೆ I had a second look at the Plan Size of Karnataka State. ನೋಡಿದಾಗ ಇನ್ನು ಕೆಲವು ಏರಿಯಾಗಳು ಇದ್ದವು. ನಾವು ಅವನ್ನೆಲ್ಲಾ ಸೇರಿಸಿ ಮಾಡಿದಾಗ ಈಗ 2159 ಕೋಟಿ ರೂಪಾಯಿಗಳು ಆಗಿದೆ. That is the Plan size of 92-93. Growth Rate is unheard of 7.1%. ಹಿಂದೆ ಎಂದೂ ಕೂಡಾ ಇರಲಿಲ್ಲ. ಮುಂದಿನ ತಿಂಗಳು ಒಂದನೆಯ ತಾರೀಖಿಗೆ ಎಪ್ರಿಲ್‌ನಲ್ಲಿ ಪ್ರಾರಂಭವಾಗುತ್ತದೆ. ನಾನು ಹಿಂದೆ ಎಷ್ಟಿತ್ತು ಎನ್ನುವುದನ್ನು ಕೂಡ ಹೇಳುತ್ತೇನೆ. ತಕ್ಷಣ ಜಂಪ್ ಇದೆ ಇದರಲ್ಲಿ. ಇನ್ನು ಮುಂದೆ ಬರುತ್ತೇನೆ. Actual achievement for 90-91 is Rs. 1457 crores 27% increase. 1457 ಕೋಟಿ ರೂಪಾಯಿಗಳು. 27 ಪರ್ಸೆಂಟ್ ಇನ್‌ಕ್ರೀಜ್ ಆಗಿದೆ. ಆಮೇಲೆ ಇದರಲ್ಲಿ The size of the annual plan in Karnataka is as follows. ಅನ್ಯುಯಲ್ ಪ್ಲಾನ್ ವಾರ್ಷಿಕ ಯೋಜನೆ ಬಗ್ಗೆ ಹೇಳುತ್ತೇನೆ. ಥಿಂಕ್ ಟ್ಯಾಂಕ್ ಬಗ್ಗೆ ಅವರ ಕಾಲದಲ್ಲಿ ಏನಾಯಿತು ಅಂತ ನಾನು ನಿಮಗೆ ಹೇಳುತ್ತೇನೆ. ಆ ಥಿಂಕ್ ಟ್ಯಾಂಕ್ ಕಾಲದಲ್ಲಿ ಏನೇನು ಆಗಿದೆ ಆರ್ಥಿಕ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಏನಾಗಿತ್ತು ಎನ್ನುವ ಚಿತ್ರ ಕೊಡುತ್ತೇನೆ. ಅವರದ್ದೇ ಚಿತ್ರ ಅಂಕಿಸಂಖ್ಯೆಗಳು ಅವರ ಕಾಲದ್ದೇ. ನಾನೇನು ಹೊಸದಾಗಿ ಟೈಪ್ ಮಾಡಿಸಿಕೊಂಡು ಬಂದಿಲ್ಲ. ಅವರೇ ಪ್ರಿಂಟ್ ಮಾಡಿಸಿ ಹಂಚಿಕೊಂಡಿದ್ದಾರೆ. ಅದು ಭಾರಿ ಚೆನ್ನಾಗಿದೆ. ದಯವಿಟ್ಟು ಇದರ ಬಗ್ಗೆ ತಾವು ಗಮನ ಕೊಡಬೇಕು. 1984-85 when Mr. Ramakrishna Hegde was the Chief Minister. He took over as Chief Minister in 1983. 1984-85 ರಲ್ಲಿ 650.28 ಕೋಟಿ ರೂಪಾಯಿಗಳು ಆದಾಗ. ದಯಮಾಡಿ ಗುರುತು ಹಾಕಿಕೊಳ್ಳಿ 1984-85ರಲ್ಲಿ ಅನ್ಯುಯಲ್ ಪ್ಲಾನ್ ಯೋಜನಾ ಗಾತ್ರ ಒಂದು ವರ್ಷದ್ದು 650

ಕೋಟಿ 28 ಲಕ್ಷ ರೂಪಾಯಿಗಳು. ಗ್ರೋತ್ ರೇಟ್ ಎಷ್ಟಿದೆ ಗೊತ್ತೇ? ಗ್ರೋತ್ ರೇಟ್ 650 ಕೋಟಿ ರೂಪಾಯಿಗಳು ಇದ್ದಿದ್ದರಿಂದ 0.001 ಪರ್ಸೆಂಟ್ ಇದೆ. Shameful on the part of that Government. ಅದು ಹೇಗೆ ಬಿಟ್ಟರೋ ನನಗೆ ಅರ್ಥವಾಗುತ್ತಿಲ್ಲ. 0.001 ಪರ್ಸೆಂಟ್ ಎಂದು ಹೇಳಿದ್ದಾರೆ. ಹಾಗಾದರೆ ಇದಕ್ಕೆ ಒಂದು ಗೌರ್ನಮೆಂಟ್ ಏತಕ್ಕೆ ಇರಬೇಕು? ಆಮೇಲೆ ಅದು 1984 ರಲ್ಲಿ ಥಿಂಕ್ ಟ್ಯಾಂಕ್ ಆಗಿದ್ದುದು. ಅದಕ್ಕೆ ನಾನು ಹೇಳಿದ್ದುದು ಅವರು ಸಭೆಯಲ್ಲಿ ಇದ್ದಿದ್ದರೆ ಚೆಂದ ಇರುತ್ತಿತ್ತು. ಏಕೆಂದರೆ 1984ರಲ್ಲಿ ಥಿಂಕ್ ಟ್ಯಾಂಕ್ ಮಾಡಿದರು. ಒಂದು ಸಮಿತಿ ಮಾಡಿ ಅವರಿಗೆ ಏನೇ ವ್ಯವಸ್ಥೆ ಕೊಟ್ಟರು? ಕಾರು ಕೊಟ್ಟು ಎಲ್ಲಾ ಮಾಡಿದ್ದರು ಥಿಂಕ್ ಟ್ಯಾಂಕ್‌ನವರು ವಿಧಾನ ಸೌಧದಲ್ಲಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಬಹಳ ದಾರಿ ತೋರಿಸತಕ್ಕಂಥ ದಾರಿ ದೀವಿಗೆ ಆಗತಕ್ಕಂಥ ಜವಾಬ್ದಾರಿಯುತವಾದದ್ದು ಎನ್ನತಕ್ಕಂಥ ಮಾತನ್ನು ಆಡಿದರಲ್ಲಾ ಈ ಜಾಗದಿಂದಲೇ ಆಗಿದ್ದಂತಹ ಮುಖ್ಯಮಂತ್ರಿಗಳು. ನಾನು ಇಲ್ಲಿ ವೈಯುಕ್ತಿಕವಾಗಿ ಮಾತನಾಡುತ್ತಿಲ್ಲ. ಅವರನ್ನು ಅಂದು ಹಾಡಿ ಹೊಗಳಿದರು. ನಾನು ಇರುವ ಅಂಕಿಸಂಖ್ಯೆಗಳನ್ನು ಕೊಡುತ್ತಿದ್ದೇನೆ. ನನಗೆ ಬೇರೆ ಯಾವುದೂ ಬೇಕಾಗಿಲ್ಲ. ನನಗೆ ರಾಜಕೀಯ ಬೇಕಾಗಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ವಿಚಾರದಲ್ಲಿ ಜನಸಾಮಾನ್ಯರ ಹಿತದೃಷ್ಟಿ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿ ಬೆಳವಣಿಗೆ ಹಿನ್ನೆಲೆಯಲ್ಲಿ ಇವತ್ತು ನಾನು ಮಾತನಾಡುತ್ತಿದ್ದೇನೆ. ಥಿಂಕ್ ಟ್ಯಾಂಕ್ ಕಾಲದಲ್ಲಿ it has taken a downward trend instead of having upward trend. ಮೇಲಕ್ಕೆ ಹೋಗುವ ಬದಲು ಕೆಳಗಡೆ ಡೈ ಹೊಡೆದಿದೆ. ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಮೇಲೆ 1985-86ರಲ್ಲಿ ಏನಾಗಿದೆ 1984-85ರಲ್ಲಿ 650.28 ಕೋಟಿ ರೂಪಾಯಿಗಳು ಅಂದರೆ 1985-86ರಲ್ಲಿ ಮುಂದಿನ ಪ್ಲಾನ್ ಸೈಜ್ ನೋಡಿದರೆ 651 ಕೋಟಿ ರೂಪಾಯಿಗಳು. ಅದು ಹಿಂದಿನ ವರ್ಷದ್ದು 650.28 ಕೋಟಿ ರೂಪಾಯಿಗಳು ಇತ್ತು. ಮುಂದಿನ ವರ್ಷದು 651 ಕೋಟಿ ರೂಪಾಯಿಗಳಾಯಿತು. ಅಂದರೆ ಒಂದು ಕೋಟಿ ರೂಪಾಯಿಗಳಲ್ಲಿ 28 ಲಕ್ಷ ರೂಪಾಯಿ ಕಳೆದರೆ 72 ಲಕ್ಷ ರೂಪಾಯಿಗಳು ಮಾತ್ರ. ಅದಕ್ಕೆ ಪ್ಲಾನ್ ಸೈಜ್ ಜಾಸ್ತಿ ಇದ್ದರೆ ಗ್ರೋತ್ ರೇಟ್ ಜಾಸ್ತಿ ಇರುತ್ತದೆ. Shameful! ಬರುವ ವರ್ಷ ಇವರು 72 ಲಕ್ಷ ರೂಪಾಯಿಗಳು ಮಾತ್ರ. ಅದರಲ್ಲಿ ಯಾವ ದೊಡ್ಡ ಸಾಧನೆ ಮಾಡಿದ್ದಾರೆ? ಯಾರಿಗೆ ಸಾಧ್ಯವಾಗುತ್ತದೆ. Better I bow my head before the people of Karnataka and then say I have failed in my duty. ನಾನು ಸೋತಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ. ಇವೆಲ್ಲಾ ಅಂಕಿ ಅಂಶ. ಅವರದೇ ಅಂಕಿ ಅಂಶ ನನ್ನದಲ್ಲ. ಇಲ್ಲಿ ಗ್ರೋತ್. ಪರ್ಸೆಂಟೇಜ್‌ವೈಸ್ ಗ್ರೋತ್ over the ಪ್ರೀವಿಯಸ್ ಇಯರ್‌ಎಂದರೆ ನಿಲ್. ಎಲ್ಲಿದೆ? 72 ಲಕ್ಷಕ್ಕೆ ಯಾವ ಗ್ರೋತ್ ರೇಟ್? ಆಮೇಲೆ 86-87....

SRI QUMURUL ISLAM : It seems because of this reason the people have rejected them.

SRI S. BANGARAPPA :- Perhaps that may be one of the reason. ಆಮೇಲೆ ಇಲ್ಲಿ ನೋಡಿ. 86-87. 765 ಕೋಟಿ ರೂಪಾಯಿ. 651 ರಿಂದ 765ಕ್ಕೆ ಅಂದರೆ 17.51 ಗ್ರೋತ್ ರೇಟ್ ಇದೆ. 37-88. 870 ಕೋಟಿ ರೂಪಾಯಿ. 13.72 ಪರ್ಸೆಂಟ್ ಇದೆ. 88-89. 900 ಕೋಟಿ 3.544 ಇದೆ. ಮತ್ತೆ ಕೆಳಗಡೆ ಹೊಡೆದಿದೆ ಅಲ್ಲಿ. 89-90 ಅಂದರೆ 89 ರಲ್ಲಿ ನಮ್ಮ ಎಲೆಕ್ಷನ್ ಆಯಿತು. ನಮ್ಮ ಸರ್ಕಾರ ಬರುವ ಕಾಲ. ವೀರೇಂದ್ರಪಾಟೀಲ್‌ಜೀಯವರು ಮುಖ್ಯ ಮಂತ್ರಿಯಾಗತಕ್ಕಂಥ ಕಾಲ. 89-90ರಲ್ಲಿ 1040 ಕೋಟಿ. ಪರ್ಸೆಂಟೇಜ್‌ವೈಸ್ 15.55 ಎಂದರೆ ಒಂದೇ ಸಾರಿ ಪ್ಲಾನ್ ಸೈಸ್ ವೀರೇಂದ್ರಪಾಟೀಲ್‌ಜಿಯವರ ಕಾಲದಲ್ಲಿ ಮೇಲಕ್ಕೆ ಏರಿದೆ. ಇಲ್ಲಿ, 3.44 ಇದ್ದದ್ದು

ಕರ್ನಾಟಕ ರಾಜ್ಯ ...
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು

15.55ಕ್ಕೆ ಹೋಗಿದೆ. 90-91ರಲ್ಲಿ 1145 ಕೋಟಿ ಪರ್ಸೆಂಟೇಜ್ ವೈಸ್ 10.09. ಆಮೇಲೆ ಮುಂದಿನದು ನೋಡಿ. ಇದೇ ಇರುವುದು. I have a right to quote this as a Finance Minister. ನನಗೆ ಹೊಗಳಿಕೆ ಬೇಡ. ಯೋಜನಾ ಆಯೋಗದ ಅಂಕಿ ಅಂಶ. ಯಾವುದು ಕೂಡ ಹುಸಿ ಹುಳ್ಳಿನ ಅವಶ್ಯಕತೆ ಇಲ್ಲಿ ಏನಿಲ್ಲ. 91-92 ಅಂದರೆ. when I presented my last budget after approaching the Planning Commission, 1558 ಕೋಟಿಗೆ ನಾವು ಏರಿಸಿದ್ದೇವೆ. ಗ್ರೋತ್ 36.06 ಪರ್ಸೆಂಟ್. 10 ರಿಂದ 36 ಪರ್ಸೆಂಟ್‌ಗೆ ಹೊರಟುಹೋಗಿದ್ದೇವೆ. ಅದರ ಅರ್ಥ? ರಿಸೋರ್ಸ್ ಮೊಬಲೈಸೇಷನ್, ಕಮರ್ಷಿಯಲ್ taxes, ಎಕ್ಸೈಸ್ ಇತ್ಯಾದಿ ಇತ್ಯಾದಿ ಬಗ್ಗೆ ನಾವು ಗಮನಕೊಟ್ಟು ಪ್ಲಾನ್ ವೈಸ್ ಮ್ಯಾಚ್ ಮಾಡುವುದಕ್ಕಾಗಿ ನಮ್ಮ ಸಂಪನ್ಮೂಲಗಳನ್ನು ತೆಗೆದುಕೊಂಡು ಹೋಗತಕ್ಕಂಥಾದ್ದನ್ನು ಇಟ್ಟುಕೊಂಡೇ ನಾವು ಕೆಲಸ ಮಾಡಿದ್ದೇವೆ. ಆಮೇಲೆ 92-93. still more beautiful. ಯಾವುದು? ಮುಂದಿನ ವರ್ಷದ್ದು. ಈಗಾಗಲೇ 13ನೇ ತಾರೀಖು. ಏಳು ಒಂದು ಹತ್ತು 17 ದಿವಸ ಉಳಿದುಕೊಂಡಿದೆ. ಮುಂದಿನ ವರ್ಷ ಸ್ಟಾರ್ಟ್ ಆಗುವುದಕ್ಕೆ. ಏಪ್ರಿಲ್ ಫಸ್ಟ್. 1915 ಕೋಟಿ ಪ್ಲಾನಿಂಗ್ ಕಮಿಷನ್ ಫಿಕ್ಸ್ ಮಾಡಿದ್ದರೂ ಕೂಡ 2159 ಕೋಟಿಗೆ ಪ್ಲಾನ್ ಸೈಸ್ ಫಿಕ್ಸ್ ಮಾಡಿಕೊಂಡು ಅಪ್ರೂವಲ್ ಆಯಿತು. ಅಲ್ಲಿ ಪರ್ಸೆಂಟೇಜ್ ವೈಸ್ ಕಳೆದಸಾರಿಗೆ ಹೋಲಿಸಿದರೆ. ಕಳೆದ ಸಾರಿಗೆ 36.06. ಈ ಸಾರಿ 38.58 ಸ್ವಾಮಿ. ಇನ್ನೇನು ಬೇಕು? ನನಗಂತೂ ಅರ್ಥವಾಗುತ್ತಿಲ್ಲ. Fiscal ಮ್ಯಾನೇಜ್‌ಮೆಂಟ್. ರಿಸೋರ್ಸ್ ಮೊಬಲೈಸೇಷನ್. ಇದು ಚೆನ್ನಾಗಿದೆಯೆಂದು ಹೇಳುವುದಕ್ಕೋಸ್ಕರ ಈ ಅಂಕಿ ಅಂಶಗಳನ್ನು ನಿಮ್ಮ ಮುಂದಿಟ್ಟಿದ್ದೇನೆ. ನಾನು ಇದಕ್ಕಿಂಥ ಹೆಚ್ಚಿಗೆ ಕೋಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಿದ್ದರೆ ಅದು ಭಾರಿ ಮಜಾ ಇರುತ್ತಿತ್ತು. ಚೆನ್ನಾಗಿತ್ತಲ್ಲ. ಮಜಾ ಇತ್ತು. ಆಲ್‌ರೈಟ್. ಇವತ್ತು ಇಷ್ಟು ನಾವು ಇಟ್ಟುಕೊಂಡಿರತಕ್ಕಂಥ ಸಂದರ್ಭದಲ್ಲಿ. ನಾನು ಒಂದೇ ಒಂದು ಮಾತು ಹೇಳುವುದು. ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಆಡುತ್ತಾರೆ. ವೋಟ್ ಆನ್ ಅಕೌಂಟ್ ಯಾವಾಗ ತೆಗೆದುಕೊಳ್ಳಬೇಕು ಸ್ವಾಮಿ? Yes, there is a provision under the Constitution. Vote on Account ಯಾವಾಗ ತೆಗೆದುಕೊಳ್ಳುತ್ತಾರೆಂದರೆ. ಭಾರಿ ನ್ಯಾಚುರಲ್ ಕೆಲಾಮಿಟಿ. ಮತ್ತೊಂದು ಏನೋ ಆಗಿಬಿಟ್ಟಿತು ಎಂದರೆ. unforeseen reasons which are beyond the control of the government. that is number one. ಅದು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಮಾನ್ಯ ಸಭಾಧ್ಯಕ್ಷರೆ. ಈ ಚುನಾವಣೆಯಾಗುತ್ತದೆ. ಚುನಾವಣೆಯಾದ ತಕ್ಷಣ ಹೊಸ ಪಕ್ಷ ಇರುತ್ತದೆ. ಅದರ ನೀತಿ ಬೇರೆ. ಮತ್ತೊಂದು ಪಕ್ಷ ಸೋತು ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದುಬಿಡ್ತು. ಹಾಗೆ ಬಂದಂಥ ಕಾಲದಲ್ಲಿ ಆ ಪಕ್ಷದ ನೀತಿ ರೂಪುರೇಖೆಗಳು ಬೇರೆ ಬೇರೆ ಇರುತ್ತದೆ. ಅದಕ್ಕೆ ಟೈಮ್ ಬೇಕಾಗುತ್ತದೆ. ಬಜೆಟ್ ತಯಾರು ಮಾಡುವುದಕ್ಕೆ ಟೈಮ್ ಬೇಕಾಗುತ್ತದೆ. ಆ ಕಾಲದಲ್ಲಿ ಏನು ಮಾಡುತ್ತಾರೆ? ಬಜೆಟ್ ಇಟ್ಟುಕೊಳ್ಳುತ್ತಾರೆ. ಸಧ್ಯಕ್ಕೆ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಾರೆ. ಮುಂದಕ್ಕೆ ಹೊರಟುಹೋಗುತ್ತಾರೆ. ಅದೂ ಕೂಡ ಒಂದು. ಮತ್ತೊಂದು ಸಂದರ್ಭ. ಕೇರ್ ಟೇಕರ್ ಗೌರ್ನಮೆಂಟ್ ಇದ್ದಾಗ. ಒಂದೊಂದು ಸಾರಿ. ಕೇರ್ ಟೇಕರ್ ಗೌರ್ನಮೆಂಟ್ ಬಂದಿದೆ. ಆ ಕಾಲದಲ್ಲಿ ಫುಲ್ ಬಜೆಟ್ ಇಡುವುದಕ್ಕೆ ಬರುವುದಿಲ್ಲ. ನೀತಿ ರೂಪುರೇಖೆ ಏನೂ ಮಾಡುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲೂ ಕೂಡ ನಾವು ವೋಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿಗೆ ಹೋಗುತ್ತೇವೆ. ಆಮೇಲೆ ಎಲೆಕ್ಷನ್ ಅನೌನ್ಸ್ ಮಾಡಿದರೂ ಕೂಡ ಆ ಟೈಮ್‌ನಲ್ಲಿ ಒಂದು

ಗೌರ್ನಮೆಂಟ್ ಇದ್ದರೆ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕಂಥ ಒಂದು ಪರಿಸ್ಥಿತಿ ಕೂಡ ಅದರಲ್ಲಿ ಬರುತ್ತದೆ. ಇಂಥ ಸಂದರ್ಭದಲ್ಲಿ ಮಾತ್ರ ಇರಬೇಕೇ ವಿನಃ ಬೇರೆ ಟೈಮ್‌ನಲ್ಲಿ ಅಲ್ಲ.

ನಾನು ಹೇಳಿದೆ. ಕಳೆದ 10-13 ವರ್ಷಗಳಿಂದ ವೋಟ್ ಆನ್ ಅಕೌಂಟ್ ತಗೊಳ್ತಾ ಬರ್ತಾ ಇದ್ದಾರೆ. ನಾನೂ ಕೂಡ ಹೋದವರ್ಷ ತಗೊಂಡುಬಿಟ್ಟೆ. ಏಕೆಂದರೆ certain matters were not at all decided by the Planning Commission and Government of India. ಎನ್‌ಡಿಸಿ ಮೀಟಿಂಗಾಗಿರಲಿಲ್ಲ. .ವಿ.ಪಿ. ಸಿಂಗ್‌ರ ಕಾಲದಲ್ಲಿ ಎನ್‌ಡಿಸಿ ಮೀಟಿಂಗ್ ಫಿಕ್ಸ್ ಆಗಿದೆ. ಅಲ್ಲಿ ಕೇಳಿದ್ದೆವು. ನಾವು ಒಪ್ಪಿಗೆ ಕೊಡುವ ಕಾಲ. ಆದರೆ ಅಲ್ಲಿ ಅವರ ಗವರ್ನಮೆಂಟ್ ಬಿದ್ದು ಹೋಗಿಬಿಡ್ತು. ಎನ್‌ಡಿಸಿ ಮೀಟಿಂಗ್ ಆಗಲೇ ಇಲ್ಲ. ಮುಂದಕ್ಕೆ ಹೊರಟುಹೋಗಿಬಿಡ್ತು. So many matters were pending without any disposal, without any decision on such matters. ಈ ಸಾರಿ ಏನಾಯಿತು? ನಮ್ಮ ನರಸಿಂಹರಾವ್‌ಜಿಯವರು ಬಂದ ಮೇಲೆ ಕ್ವಿಕ್ಕಾಗಿ ಆಕ್ಷನ್ ತೆಗೆದುಕೊಂಡರು. the Planning Commission should immediately hold discussions with all the State Governments. ಎಂಬ ತೀರ್ಮಾನ ಮಾಡಿದರು. ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆ ಏನಿದೆ ಅದನ್ನೂ ಕೂಡ ಮಾಡಲಿಲ್ಲ. and so many matters were disposed of, decisions were taken. ನಾವೀಗ ಹೇಳಿಬಿಡಬಹುದು. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್ಸ್ ಇವೆ ಎಂದು ಇಟ್ಟುಕೊಳ್ಳೋಣ ಹಿಂದೆಯೆಲ್ಲ ಏನಿತ್ತು. ನಾವು ಇಷ್ಟು ಕೊಡುತ್ತೇನೆ. ನೀವೆಲ್ಲ ಮಾಡಿ. ಇಷ್ಟು ಹಣ ನಾವು ಕಟ್ತೇವೆ. ಉಳಿದದ್ದು ನೀವು ಹಾಕಿ. ಇವೆಲ್ಲ ಈಗಿಲ್ಲ. ಸೆಂಟ್‌ಪರ್ಸೆಂಟ್ money they are going to give to all the state governments including Karnataka. Externally aided projects like ಯುಕೆಪಿ ಇದೆ. ಹಣವನ್ನು ನೂರು ರೂ. ಸಾಲ ತಗೊಂಡರೆ ನಮಗೆ 60-70 ರೂ. ಕೊಡುವುದು ಉಳಿದ 30 ರೂ ಅವರು ಇಟ್ಟುಕೊಂಡು ಬಿಡ್ತಿದ್ದರು. ನಾವೆಲ್ಲ ರಾಜ್ಯದವರೂ irrespective of political parties, ಸೇರಿ ಬಿಜೆಪಿ ಸರ್ಕಾರಗಳಿವೆ. ಜನತಾದಳ ಸರ್ಕಾರಗಳಿವೆ. ಕಾಂಗ್ರೆಸ್ ಸರ್ಕಾರಗಳಿವೆ. ಎಡಿಎಂಕೆ ಸರ್ಕಾರ ಇದೆ. ಅಲ್ಲೆಲ್ಲ ನಾವು ಏನು ಹೇಳಿದ್ದೇವೆ. ನೀವು ಹಣ ಇಟ್ಟುಕೊಳ್ಳೋಕೆ ಏನು ಕಾರಣ ಬರ್ತದೆ? ನಾವು ಎಕ್ಸ್‌ಟರ್ನಲ್ ಹೆಡ್‌ನಿಂದ ಸಾಲ ತಗೊಂಡರೆ ನಮ್ಮ ಹೊಣೆಗಾರಿಕೆ. ನಾವು ಸಾಲ ತೀರಿಸಬೇಕು. ಇಲ್ಲಿ unnecessarily you are poking your nose and holding back certain percentage of money. Out of the hundred rupees that we take as loan from the foreign financing institutions the Prime Minister openly said, "Please don't touch" all the hundred rupees will be diverted to the State Govenments" ಅಂತ ಅಂದುಬಿಟ್ಟರು. Wonderful decision he has taken. Hats off to him. I must heartily thank him not only on behalf of our government, but also on behalf of all the State governments in the entire country .

Sri P.V. Narasimha Raoji has taken this bold decision of giving his consent for all the Rs. 100 that we take as loan. A beautiful decision. Then, Gadgil formula, There are so many criteria. ನಾನು ಡಿಟೈಲ್ಸ್‌ಗೆ ಹೋಗುವುದಿಲ್ಲ. ನಾನು ಪ್ಲಾನಿಂಗ್ ಕಮಿಷನ್ ಹತ್ತಿರ ಮಾತಾಡುವ ಕಾಲದಲ್ಲಿ ಇಂದು ಗಾಡ್ಗೀಲ್ ಫಾರ್ಮುಲಾ ಮಾಡಬೇಕೆಂದರೆ ಒಂದು ರಾಜ್ಯಕ್ಕೆ ಉಪಯೋಗವಾಗುತ್ತದೆ. ರಿಪೇರಿ ಮಾಡಿದರೆ ಮತ್ತೊಂದು ರಾಜ್ಯಕ್ಕೆ ತೊಂದರೆಯಾಗಿಬಿಡುತ್ತದೆ. ಕೆಸರಿನಲ್ಲಿರೋ ಕಂಬ ಇದ್ದಂಗೆ. ಆ ಕಡೇನೂ ಹೊರಳ್ತಿರ್ತದೆ. ಈ ಕಡೇನೂ ಹೊರಳ್ತಿರ್ತದೆ. ಬಹಳ ಕಷ್ಟ. ನಾವು ಏನು ಹೇಳಿದೆವು ಅಂದರೆ ರಿಸೋರ್ಸ್ ಮೊಬಿಲೈಜೇಶನ್ ನಾವು ಚೆನ್ನಾಗಿ ಮಾಡಿದೆವು ಅಂದರೆ ನಮಗೆ ಆಕ್ಚುಯಲ್ ಅಲಾಟ್‌ಮೆಂಟ್ ಕಡಿಮೆ

ಮಾಡುತ್ತಾ ಇದ್ದರು. ನಾವು ಹೇಳಿದೆವು ಹಾಗಾದರೆ ನಾವ್ಯಾಕೆ ಕಲೆಕ್ಟ್ ಮಾಡಬೇಕು. ನಾವು ಮಾಡೋದಿಲ್ಲ ಹೋಗಿ ಎಂದು ನಾನು ಇದನ್ನು ಎನ್‌ಡಿಸಿ ಮೀಟಿಂಗ್. ಪ್ಲಾನಿಂಗ್ ಕಮಿಷನ್ ಮುಂದೆ ಹೇಳಿದೆ. ಅವರು ಒಪ್ಪಿಕೊಂಡರು. ಯಾರು ಚೆನ್ನಾಗಿ ಪರ್‌ಫಾರ್ಮ್ ಕೊಡ್ತಾರೆ ಅವರ ಇಂಟರೆಸ್ಟ್ ನಾವು ಕಾಯುತ್ತೇವೆ. ಅಂತ ಮಾಡಿಕೊಂಡು ಬಹಳ ಚೆನ್ನಾಗಿ ಈ ಸಾರಿ ತೀರ್ಮಾನ ಮಾಡಿದ್ದಾರೆ. ಆ ಗಾಡ್ಗೀಲ್ ಫಾರ್ಮುಲಾ ಏನು ವೇರಿಯೇಶನ್ ಮಾಡಿದರೂ ಕೂಡ our State's interests will never be harmed. ಅಂಥ ತೀರ್ಮಾನ ಇವರು ಮಾಡಿದ್ದಾರೆ. ಇನ್ನೇನು ಉಳಿಯುತ್ತದೆ? New subjects that we have reiased like raising Irrigation Bonds or Power Bonds, something like that. ಏಕೆಂದರೆ ನಮಗೆ ಹಣದ ಕೊರತೆ ಇದೆ. We have got two major basins. Cauvery and Krishna apart from Godavari which is a small one. ಅದು ಬಿಟ್ಟರೆ. ಉಳಿದ ongoing projects- ಗೆ ನಮಗೆ ಹಣ ಬೇಕು. ನಮ್ಮ share of water ಅನ್ನು ಆದಷ್ಟು ಮುಂಚೆ ಉಪಯೋಗ ಮಾಡಬೇಕು. Projects including on-going projects, ಹೊಸ ಪ್ರಾಜೆಕ್ಟ್‌ಗಳನ್ನು ಕೂಡ ತೆಗೆದುಕೊಳ್ಳಬೇಕು. ಆನ್‌ಗೋಯಿಂಗ್ ಪ್ರಾಜೆಕ್ಟ್ ಮುಗಿಸಬೇಕು.

ಹಣ ಇನ್ನೂ ಜಾಸ್ತಿಬೇಕಾಗಿರುವ ಸಂದರ್ಭದಲ್ಲಿ ನಮಗೇ ಬಾಂಡ್ಸ್ ರೈಸ್ ಮಾಡಲು ಪರ್ಮಿಷನ್ ಕೊಟ್ಟುಬಿಡಿ ಅಂತ ನಾವೊಬ್ಬರೇ ಅಲ್ಲ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಕೇಳಿದ್ದಾರೆ. ಏಕೆಂದರೆ ಹಣದ ಕೊರತೆ ಎಲ್ಲಾ ಕಡೆಗೂ ಇದೆ. ಕೇಳಿದರೆ ಅವರು ಏನು ಹೇಳಿದರು. ರೇಟ್ ಆಫ್ ಇಂಟರೆಸ್ಟ್ ಎಲ್ಲ ವಿಚಾರ ಮಾಡಿ ಹೇಳ್ತೀನಿ ಅಂದರು. that is the only ma..er, I think, still undecided by the Planning Commission or Government of India. ಉಳಿದಿರುವುದು ಯಾವುದೂ ಬಾಕಿ ಇಲ್ಲ. ಇದರರ್ಥ ನಾನು ಏಕೆ ಹೇಳ್ತೇನೆ ಅಂದರೆ ಎಲ್ಲವೂ ಕೂಡ ಆನ್ ಅಕೌಂಟ್ ತೀರ್ಮಾನ ಮಾಡಿಬಿಟ್ಟಿದ್ದಾರೆ. ಅಂದಮೇಲೆ ಇವತ್ತು ಬಜೆಟನ್ನು ಇಟ್ಟಾಗ ನಾವು ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಬೇಕು ನನಗರ್ಥವಾಗಿಲ್ಲ. Moreover, ವೋಟ್ ಆನ್ ಅಕೌಂಟ್‌ನಿಂದ ದೊಡ್ಡ ಪಟ್ಟೇನು ಬೀಳುತ್ತದೆ ಅಂದರೆ. ಇವತ್ತು finanfial commitments from 1st april to next March ಎಂಡ್‌ವರೆಗೂ ಹೊರಟುಹೋಗುತ್ತದೆ ಅದು. ನಾವೇನು ಮಾಡ್ತೇವಿ ಬಜೆಟ್ ಇಟ್ಟುಬಿಡ್ತೀವಿ. ವೋಟ್ for 3 months, six months - ವರೆಗೂ ನಾವು ತಗೊಂಡಿರೋದು ಕೆಲಸ ಮಾಡ್ತೀವಿ. ಕಳೆದ ವರ್ಷ. ನಾವು ವಿಚಾರ ಮಾಡಿ. ಬಜೆಟ್ ಯಾವಾಗ ಪಾಸ್ ಮಾಡಿದೀರಿ ಸ್ವಾಮಿ ತಮಗೆ ಗೊತ್ತಿರುವ ಹಾಗೆ in the month of September. ಸೆಪ್ಟೆಂಬರ್‌ನಲ್ಲಿ ಬಜೆಟ್ ಪಾಸ್ ಮಾಡಿದ್ದೇವೆ. ಈ ವರ್ಷ ಇದೇ ತಿಂಗಳಲ್ಲಿ ಪಾಸ್ ಮಾಡುತ್ತಾ ಇದ್ದೇವೆ. ಫುಲ್ ಬಜೆಟ್ ಪಾಸ್ ಮಾಡುತ್ತಾ ಇದ್ದೇವೆ. Otherwise ನಾವು ಏನು ಮಾಡ್ತೀವಿ ಇಲ್ಲ ಬಜೆಟ್ ಪಾಸಾಗಿಲ್ಲ. ಮುಂದೆ ಮಾಡೋಣ ಅಂತ ನಾವನ್ನುವುದು. ನೀವು ಒಂದು ಲೆಟರ್ ಕೊಡ್ತಾ ಇರೋದು. ಯಾವ ಪಕ್ಷದ ಸದಸ್ಯರೇ ಇರಬಹುದು. ಅವರೂ ಇವರೂ ಅಂತ ಏನೂ ಇಲ್ಲ. ಇಲ್ಲಿ. ಬಜೆಟ್ ಆಗಲಿ ಅಂತ. ಏಕೆಂದರೆ ಕ್ಲಿಯರ್‌ಕಟ್ ಪಿಕ್ಚರ್ ನಮಗೇನೂ ಗೊತ್ತಾಗೋಲ್ಲ. ಅಭಿವೃದ್ಧಿ ಕಾರ್ಯಗಳು ಬಹಳ ಕುಂಠಿತವಾಗೋದು ಈ vote on account ತಗೊಳ್ಳೋದರಿಂದ that is one of the reasons. Better we discourage that habit of taking vote on account each year. Unforeseen. ಅಂತಹ ಕಾರಣ ಬಂದಾಗ ಬೇಕಾದರೆ ಮಾಡಿಕೊಳ್ಳೋಣ. ಅದುಬಿಟ್ಟು ವೋಟ್ ಆನ್ ಅಕೌಂಟ್ ಅಂತ ಅಂದರೆ. is it a mandatory provision under the

Constitution? I cannot understand this. ಅದಕ್ಕಾಗಿಯೇ ನಾನು ಯೋಚನೆ ಮಾಡಿದೆ, to facilitate hon. members of both the Houses and Members of Parliament to whichever party one may belcng, ನಿಮ್ಮ ಅನುಕೂಲ. ಸರ್ಕಾರದ ಮತ್ತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಈ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಬಾರದು. ಫುಲ್ ಬಜೆಟ್‌ಗೆ ಹೋಗೋಣ. ಆಫ್ಟರ್ 12. 13 ವರ್ಷ ಏನೋ ಆಗಿರಬೇಕು. let me break that ಎಂದು ಸರ್ಕಾರದ ಮಟ್ಟದಲ್ಲಿ ನಾವೆಲ್ಲಾ ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ಏನೂ ಕಾರಣ ಇಲ್ಲ. ಫುಲ್ ಬಜೆಟ್ ಮಾಡಿಕೊಳ್ಳುವುದಕ್ಕೆ ನಾವು ರೆಡಿ ಇದ್ದೇನೆ. ಅಂತ ಅಸೆಂಬ್ಲಿ ಪ್ರಾರಂಭ ಮಾಡಿದೆವು. ನೀವು ವೋಟ್ ಆನ್ ಅಕೌಂಟ್ ತಗೊಳ್ಳಿ ನಮಗೆ ಭಾಷಣ ಮಾಡಬೇಕು ಅಂದರೆ ಸ್ವಾಮಿ ಇದೆಲ್ಲಿಂದ ಸಾಧ್ಯ? ಈ ಕಾರಣ ತಮ್ಮ ಮುಂದಿಟ್ಟಿದ್ದೇನೆ. ವಿಚಾರ ಮಾಡಿ ನೋಡಿ. ಏಕೆಂದರೆ ಬಜೆಟ್ ಅಪ್ರೂವ್ ಕೊಡುವವರು ತಾವು ಬೇಕಾದರೆ ಕಿತ್ತು ಬಿಸಾಕಿ, that is different thing. There are variety of reasons on which one can claim that, better take vote on account. But here except posing only one question that is we have not got sufficient time to address this august House, I am very sorry, I see no reason at all. I see nc provision in the entire Constitution. I cannot go against the provisions of the Constitution. ನಾನು ಅದಕ್ಕಾಗಿ ಹೇಳಿದೆ ಈ ವಿಚಾರದಲ್ಲಿ ಮಾತ್ರ ಬಿಗಿ. ನಾವು ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಕಾಂಪ್ರಮೈಸ್ ಮಾಡೋಕಾಗೋದಿಲ್ಲ. ಭಾಷಣಕ್ಕೋಸ್ಕರ ವೋಟ್ ಆನ್ ಅಕೌಂಟ್ ತಗೋಳೋದು ಕಾರಣವಲ್ಲ. Even otherwise also. ಇನ್ನು ಬಜೆಟ್ ಸೈಜ್‌ಗೆ ಸಂಬಂಧಪಟ್ಟಂತೆ this is the reply by the Chief Minister on the budget proposals. Total receipts of the Government for the year 1992-93 both revenue and capital is expected to the Rs. 6952.69 crores as against the current year receipt of Rs. 5933.75 crore. ಅಂದರೆ ಇದು ಮಾರ್ಚ್. ಇನ್ನೂ ಕಮರ್ಶಿಯಲ್ ಟ್ಯಾಕ್ಸ್‌ನಲ್ಲಿ ಬರಬೇಕಾಗಿದೆ. after 20th of this month ಹೆವಿ ರಿಟರ್ನ್ಸ್ ಬರುತ್ತದೆ. ನಮ್ಮ ಆಫೀಸರ್‌ಗೆ ಹೇಳಿದೀನಿ. I agree there is little leakage. ನಾನು ಇಲ್ಲ ಎಂದು ಹೇಳುವುದಿಲ್ಲ ಆದರೆ as far as plugging this leakage is concerned, I think, we have achieved lot of things. ಇನ್ನೂ ಮಾಡುವುದು ಬಹಳ ಇದೆ. ನಾವು ಇನ್ನೂ ಚೆನ್ನಾಗಿ ಮಾಡಿಬಿಟ್ಟರೆ ಒಳ್ಳೆಯ ರೀತಿ ರೆವಿನ್ಯೂ ತೋರಿಸಬಹುದು ಎಂದು ಅನುಭವದ ಮೇಲೆ ನಾನು ಹೇಳುವ ಮಾತು. 5933 ಕೋಟಿ 91-92 ಗಿದ್ದಂತೆ ಮುಂದಿನ ವರ್ಷಕ್ಕೆ 6900 ಕೋಟಿ ಎಂದರೆ ಆಮೇಲೆ you see the growth rate. The total expenditure is expected to be Rs. 7220 crore during 1992-93. Growth rate all sections ಇರುವುದರಿಂದ ಅಲ್ಲಿ 1200 ಕೋಟಿ ಜಾಸ್ತಿಯಾಗುತ್ತದೆ. ಹೇಗೆ ಜಾಸ್ತಿಯಾಗುತ್ತದೆ. ಇರಿಗೇಷನ್‌ಗೆ ಜಾಸ್ತಿ ಇಟ್ಟಿದ್ದೇವೆ, ಪವರ್‌ಗೆ ಜಾಸ್ತಿ ಇಟ್ಟಿದ್ದೇವೆ. ದುರ್ಬಲವರ್ಗಕ್ಕೆ ಜಾಸ್ತಿ ಇಟ್ಟಿದ್ದೇವೆ. ಮೈನಾರಿಟೀಸ್‌ಗೆ ಜಾಸ್ತಿ ಇಟ್ಟಿದ್ದೇವೆ. ಇಷ್ಟಾದರೂ 1200 ಕೋಟಿಯನ್ನು ಜಾಸ್ತಿ ಖರ್ಚು ಮಾಡುತ್ತಿದ್ದೇವೆ. This is not going to be a small money. Plan schemes comes to Rs. 2,158.84 crores for the year 1992-93 as aginst Rs. 1,558 crores for the current year i.e., 1991-92. This registers an increase of 38.6%. It is not a small thing. ಏಕೆಂದರೆ ಪ್ಲಾನ್ ಸ್ಕೀಮ್ಸ್. ನಿಮ್ಮ ಪ್ಲಾನ್ ಸರಿ ಮಾಡಬೇಕು. ನಿಮ್ಮ ಪ್ಲಾನೇ ಚಿಕ್ಕದಾಗಿಬಿಟ್ಟರೆ ಸಾಧನೆ ಮಾಡುವುದು ಎಲ್ಲಿ ಬರುತ್ತದೆ? ಇರಿಗೇಷನ್ ಪವರ್ ಜನರೇಷನ್

ಮೆಯಿನ್ ಇರತಕ್ಕಂಥದ್ದು ಅಗ್ರಿಕಲ್ಚರ್ ಸೆಕ್ಟಾರ್‌ಗೆ ಸಂಬಂಧಪಟ್ಟಿರುತ್ತದೆ. ನಮ್ಮ ಗ್ರೋಥ್ ರೇಟ್ 38.6 ಪರ್‌ಸೆಂಟ್. ಆಮೇಲೆ, the plan outlay for the year 1991-92 is Rs. 1558 crore. This has registered an increase of 36% over the plan outlay of Rs. 1145 crore for the year 1990-91.

ನಾನು ಈಗಾಗಲೇ ಅದರ ಬಗ್ಗೆ ತಮ್ಮ ಮುಂದೆ ಹೇಳಿಬಿಟ್ಟಿದ್ದೇನೆ. ಆ ವಿಚಾರವನ್ನು ನಾನು ಇಟ್ಟಿದ್ದೇನೆ. ಅನಂತರ fiscal management ಬಗ್ಗೆ ನಿಮಗೆ ಹೇಳಿದೆ. ಇಂಪಾರ್‌ಟೆಂಟ್ ಥಿಂಗ್ ಬಜೆಟ್‌ದು. ಇವತ್ತು ಅವರು ಹೇಳಿದರು. ಯಾವ ರೀತಿ ಯಾಗಿರತಕ್ಕಂಥ ನೀವು ಬಜೆಟ್‌ನ್ನು ನಾವು ಹೇಗೆ ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ಅವರು ಬರೆದರು. ಪ್ಲಾನಿಂಗ್ ಕಮಿಷನ್ ಅವರು ನಮಗೆ ಲೆಟರ್‌ನ್ನು ಬರೆದರು. ಪೇಜ್ ನಂಬರ್ 24 ರಲ್ಲಿ ಇದೆ. ಅವರೇ ಬರೆದಿರತಕ್ಕಂಥ ಮಾತು. ಒಂದು ವೇಳೆ ಅವರ ಕಾಲದಲ್ಲಿ ಚೆನ್ನಾಗಿ ಮಾಡಿದ್ದರೆ ಅವರಿಗೂ ಬರೆಯಬೇಕಾಗಿತ್ತು. ಅವರ ಕಾಲದಲ್ಲಿ ಏನಾದರೂ ಈ ರೀತಿಯಾಗಿ ಮಾಡಿದ್ದರೆ ಮೋಹನ್ ಧಾರಿಯಾ ಅವರು ಇದ್ದಾಗಲೇ. ಮತ್ತೊಬ್ಬರು ಇದ್ದಾಗಲೂ ಮಾಡಿದ್ದರೆ ಅವರ ಕಾಲದಲ್ಲಿ ಅವರಿಗೂ ಪತ್ರವನ್ನು ಬರೆಯುತ್ತಾರೆ. ಹಾಗೆ ಏನಾದರೂ ಮಾಡಿದ್ದರೆ ಬರೆಯುತ್ತಿದ್ದರು. Actually, ಲೆಟರ್ಸ್‌ನ್ನು ಅವರೇ ಬರೆದಿದ್ದಾರೆ. ಅವರು ಬರೆಯುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ. ಪ್ಲಾನಿಂಗ್‌ನಲ್ಲಿ ಚರ್ಚೆ ಮತ್ತೊಂದು ಮಾಡಿದ ಮೇಲೆ ನಮ್ಮ ಫ್ಯಾಕ್ಟ್ ಅಂಡ್ ಫಿಗರ್ಸ್. ಅಚೀವ್‌ಮೆಂಟ್ ಮತ್ತೊಂದು ಎಲ್ಲಾ ನೋಡಿ ಅವರು ಬರೆದಿದ್ದಾರೆ. ಆಕ್ಚುಯಲ್ ಆಗಿ 'ಆಶ್ರಯ' ಯೋಜನೆ ಬಂದಾಗ ನಾನು ಹೇಳುತ್ತೇನೆ. ಸೈಟುಗಳನ್ನು ಬಡವರಿಗೆ ಕೊಡುವುದು ಇದೆಯಲ್ಲಾ, ಇದರ ಬಗ್ಗೆ ಒಂದು ಮಾತನ್ನು ಹೇಳಿದರು. Planning Commission member were very much vocal and unanimous. ಇದನ್ನು ಹೇಗೆ ಮಾಡಿದಿರಿ? ನಾಲ್ಕು ಲಕ್ಷ ಸೈಟುಗಳನ್ನು ಹೇಗೆ ಕೊಟ್ಟಿರಿ? "This is unheard of in any of the State's history in the whole of the country". ಎನ್ನತಕ್ಕಂಥ ಮಾತನ್ನು ಆಡಿದರು. ನಾನು ಹೇಳಿದೆ, ಇನ್ನೊಂದು ನಾಲ್ಕು ಲಕ್ಷ ಕೊಡುವುದು ಇದೆ ಎಂದು. ಸುಮಾರು ಎಂಟು ಲಕ್ಷಕ್ಕೆ ಇದು ಹೋಗುತ್ತದೆ ಎಂದು ಹೇಳಿದೆ. ಇದು ಛಲದ ಪ್ರಶ್ನೆ. We must achieve it. We have a target, we have to achieve it. ಕಡುಬಡವರು ನಮಗೆ ಈ ದೇಶದಲ್ಲಿ ಬರೀ ವೋಟನ್ನು ಕೊಡುವುದಕ್ಕಲ್ಲ ಅವರು ಇರುವುದು. I am sorry, so long as I sit here, so long as you sit here, I think, we are duty bound to go to the aid of those poor people. ಸಮಾಜದಲ್ಲಿರತಕ್ಕಂಥ ಸಾಮಾನ್ಯರು ಇವತ್ತು ಅವರಿಗೆ ವಿದ್ಯೆ ಇಲ್ಲ. ಅವರಲ್ಲಿ 50-58 ಪರ್‌ಸೆಂಟ್ ವಿದ್ಯೆ ಇಲ್ಲ. When we got our independence the total percentage of literacy was 17% or 18%.

ಈಗ ಎಷ್ಟಕ್ಕೆ ಹೋಗಿ ನಿಂತಿದೆ ಎಂದರೆ 48-49ಕ್ಕೆ ಹೋಗಿ ನಿಂತಿದೆ. ನಮ್ಮ ಹಣೆಬರಹ ಇನ್ನು ಅರ್ಧ ಹೋದರೂ ಅರ್ಧ ಜನ್ ರಾಮಪ್ಪನ ಎಡಗೈ ಹೆಬ್ಬೆಟ್ಟಿನ ಗುರುತಿಗೆ ನಿಂಗಪ್ಪನ ಬರಹ ಎಂದು ಬರೆಯುತ್ತಾರೆ. ನಾವು ಇನ್ನೂ ಕಾಯುತ್ತಿದ್ದೇವೆ. ಘನತೆ. ಗೌರವ. ಮಾನ. ಮರ್ಯಾದೆ ಎಲ್ಲಾ ಸಂಪೂರ್ಣವಾಗಿ ಬಿಟ್ಟು ಹೋಗಿದ್ದೇವೆ. ಆಶ್ರಯ ಯೋಜನೆ ಬಂದಾಗ ಅದರ ಉದ್ದೇಶವೇನು? ಒಂದೇ ಇರುವುದು. ಕರ್ನಾಟಕ ರಾಜ್ಯದ ಜನತೆಗೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಬಜೆಟ್. ಬೇರೆ I don't want to cross my limits or boundary of our State though we can it for the whole country. ಎನ್.ಡಿ.ಸಿ. ಮೀಟಿಂಗ್‌ನಲ್ಲಿ ಕೂಡ ಹೇಳಿದ್ದೇನೆ. As

far as population growth is concerned. ನಾಳೆ ಅದು ಎಕ್ಸ್‌ಪ್ಲೋಡ್ ಆಗುತ್ತದೆ. ಸಮಸ್ಯೆಗಳಿಗೆ ಮೂಲ. ದೊಡ್ಡ ರೋಗ ಅದು. ಬಹಳ ಜನರಿಗೆ ಪದೇ ಪದೇ ಅದಕ್ಕೆ ನಾನು ಭಾಷಣವನ್ನು ಮಾಡಬೇಕಾದರೂ ಹೇಳುತ್ತಿದ್ದೇನೆ. ತಾವು ಕೂಡ ಹೇಳುತ್ತೀರಿ. ಜನಸಂಖ್ಯಾ ಬೆಳವಣಿಗೆಯನ್ನು ನಿಲ್ಲಿಸಬೇಕು. ಇದು ಬರೀ ಸರ್ಕಾರ ನಿಮಗೆ ಸೈಟನ್ನು ಕೊಡುತ್ತಾ ಹೋದರೆ ಬರುವುದಿಲ್ಲ. It is an impossible thing. ಬಂಗಾರಪ್ಪನವರಂಥ ನೂರು ಜನ ಮುಖ್ಯಮಂತ್ರಿಗಳನ್ನು ತಂದು ಇಟ್ಟುಕೊಂಡರೂ ಬರುವುದಿಲ್ಲ. We may sit here for few months or few years. That is not the point. ಮುಂದೆ ಬರತಕ್ಕಂಥವರ ಪರಿಸ್ಥಿತಿ ಏನಾಗುತ್ತದೆ? ಮುಂದಿನ ಪೀಳಿಗೆಗೆ ಅನಾಹುತವಾಗತಕ್ಕಂಥ ಪರಿಸ್ಥಿತಿಯನ್ನು ಅವರ ತಲೆಯ ಮೇಲೆ ಇಟ್ಟು ಶಾಪಗ್ರಸ್ಥರಾಗಿ ಇಟ್ಟು ನಾವು ಸಾಯುತ್ತೇವೆ. ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.ಇದರಂಥ ಅನ್ಯಾಯ ಇನ್ನಾವುದೂ ಇಲ್ಲ. ಮೊದಲು ಪಾಪ್ಯುಲೇಷನ್ ಗ್ರೋಥ್ ರೇಟ್ ಏನು ಇದೆ, ಅದನ್ನು we should bring it down. ನಿಜ ಹೇಳಬೇಕೆಂದರೆ ನಾವು ಎನ್.ಡಿ.ಸಿ. ಮೀಟಿಂಗ್‌ನಲ್ಲಿ ಇದ್ದಂಥ ಕಾಲದಲ್ಲಿ ಅಥವಾ ಪ್ಲಾನಿಂಗ್ ಕಮಿಷನ್‌ನಲ್ಲಿ ಇದ್ದಂಥ ಕಾಲದಲ್ಲಿ we have said it. ಕರ್ನಾಟಕದಲ್ಲಿ we have achieved.In fact we have been commended for that also. ಗ್ರೋಥ್ ರೇಟ್‌ನ್ನು ನಾವು ಕಡಿಮೆ ಮಾಡತಕ್ಕಂಥ ಪ್ರಯತ್ನದಲ್ಲಿ ನಮಗೆ ಸರ್ಟಿಫಿಕೇಟ್ ಸಿಕ್ಕಿದೆ. ಆದರೆ ಸಮಾಧಾನ ಮಾತ್ರ ನಮಗೆ ಇನ್ನೂ ಆಗಿಲ್ಲ. ಇನ್ನು ಸಮಾಧಾನ ಆಗಬೇಕು. ಏಕೆಂದರೆ ನಮ್ಮಲ್ಲಿ ಕಡಿಮೆ ಇದೆ ಎಂದು ತಿಳಿದು ಬೇರೆ ಬೇರೆ ಜನ ಇಲ್ಲಿ ಬಂದು ನೆಲೆಸುತ್ತಾರೆ. ಅಥವಾ ನಮ್ಮವರು ಮತ್ತೊಂದು ಕಡೆ ಹೋಗಿ ನೆಲೆಸುತ್ತಾರೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಈ ದೇಶ ಉಳಿಯಬೇಕೆಂದರೆ population growth rate ಎಷ್ಟು ಬೇಕು ಅಷ್ಟು ಬೇಕು. ಪರದೇಶದಲ್ಲಿರುವುದನ್ನು ನಾವು ಓದಿ ತಿಳಿದುಕೊಂಡಿದ್ದೇವೆ. ಅವರು ಅಲ್ಲಿ ಏನು ಮಾಡುತ್ತಾರೆಂದರೆ, ನಮ್ಮಲ್ಲಿರತಕ್ಕ ಭೂಮಿ ಇಷ್ಟು, ಜಾಗ ಇಷ್ಟು, ನೌಕರಿ ಇಷ್ಟು ಇದೆ ಎಂದು ಲೆಕ್ಕಾಚಾರ ಮಾಡಿ ಮುಂದಿನ 10 ವರ್ಷಗಳಲ್ಲಿ ಇಷ್ಟು ಜನ ಹುಟ್ಟಬೇಕು, ಇಷ್ಟು ಪರ್ಸೆಂಟೇಜ್ ಬೆಳೆಯಲೇಬೇಕು ಎಂದು ಮಾಡುತ್ತಾರೆ. ಉಳಿದಿದ್ದನ್ನು ಅಲ್ಲಿ ಬೆಳೆಯುವುದಕ್ಕೆ ಬಿಡುವುದಿಲ್ಲ. ಬೆಳೆದರೆ ಸರ್ಕಾರ ಕಟ್ ಮಾಡುತ್ತದೆ. ನಮ್ಮಲ್ಲಿ ಹಾಗಾಗುವುದಿಲ್ಲ. ಆ ಬೆಳವಣಿಗೆಯನ್ನು ನೋಡಿದರೆ ನಮ್ಮ ನರನಾಡಿಗಳೆಲ್ಲವೂ ಕಟ್ ಆಗುತ್ತದೆ. ಯಾರಿಗೂ ಬುಡ ಇಲ್ಲ, ತುದಿ ಇಲ್ಲ. ಮಕ್ಕಳು ಏತಕ್ಕೆ ಹುಟ್ಟುತ್ತಾರೆಂದು ಕೇಳಿದರೆ ಸ್ವಾಮಿ ದೇವರು ಕೊಟ್ಟ ಎಂದು ಹೇಳುತ್ತಾರೆ. ದೇವರು ಮಕ್ಕಳನ್ನು ಕೊಟ್ಟುಬಿಟ್ಟನಂತೆ. ದೇವರು ಮಕ್ಕಳನ್ನು ಕೊಟ್ಟರೆ ನನಗೆ ಏಕೆ ಕೊಡುತ್ತೀಯ ಅಂದರೆ. ಇನ್ನು ಯಾರ ಹತ್ತಿರ ಅವನು ಹೋಗಬೇಕು ಅನ್ನುತ್ತಾನೆ. ಇದಕ್ಕಾಗಿ ಮಾನ್ಯ ಶಿವಣ್ಣನವರು ಯಾವುದೂ ತೊಂದರೆ ಬೇಡ, ಮಕ್ಕಳು ಜಾಸ್ತಿಯಾಗಿ ಹುಟ್ಟಿದ್ದವೂ ಎಂದು ಯಾರು ಬೈಸಿಕೊಳ್ಳುತ್ತಾರೆ. ಅದಕ್ಕೆ ಮದುವೆಯಾಗುವುದೇ ಬೇಡ ಎಂದು ತೀರ್ಮಾನ ಮಾಡಿರಬಹುದು.

ಶ್ರೀಮತಿ ಮೋಟಮ್ಮ : ಮಾನ್ಯ ಶಿವಣ್ಣನವರು ಫ್ಯಾಮಿಲಿ ಪ್ಲಾನಿಂಗ್‌ಗೆ ನ್ಯಾಷನಲ್ ಕಾಂಟ್ರಿಬ್ಯೂಷನ್ ಅಂದೆ. ...

ಶ್ರೀ ಎಸ್. ಬಂಗಾರಪ್ಪ : ಈಗ ನಾನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಒಂದು ಸಲಹೆಯನ್ನು ಇಟ್ಟೆ. ಅದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚಿಂತನೆ ಮಾಡೋಣ. Cutting across all political parties. ಧರ್ಮ, ರಿಲಿಜಿಯನ್ಸ್ ಬೇಕು. ಏಕೆಂದರೆ ದೇಶ ಉಳಿಯಬೇಕಲ್ಲ. ಯಾವ ರಿಲಿಜಿಯನ್ ಬರುವುದಿಲ್ಲ, ಯಾವ political ಪಾರ್ಟಿಸ್ ಬರುವುದಿಲ್ಲ.

ಮುಂದೆ ಮಕ್ಕಳನ್ನು ಹುಟ್ಟಿಸುವುದಕ್ಕೆ ನಮಗೂ ಗೊತ್ತಿದೆ ನಿಮಗೂ ಗೊತ್ತಿದೆ. ಅದು ಎಲ್ಲವನ್ನೂ ತಳ್ಳಿ ಮೂರು ನಾಲ್ಕು ಹಾಕಿ ಹೋಗುತ್ತದೆ. if we don't do that basic duty to which we are all committed to have. ನಾನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಹೇಳಿದ್ದೇನೆ. ಎಲ್ಲಾ ಪಕ್ಷಗಳು ಒಪ್ಪೋಣ, ಎಲ್ಲರೂ ಸೇರಿ ಧರ್ಮ, ಪಕ್ಷಗಳನ್ನು ನೋಡದೇ ನಾವೆಲ್ಲಾ ಒಪ್ಪಿಗೋತೆವೆ. operation ಮಾಡಿಸಿಕೊಳ್ಳುವವರ ಸಂಖ್ಯೆ ದೇಶದ ತುಂಬ ಜಾಸ್ತಿಯಾಗಬೇಕು. ಇದ್ದವರನ್ನು ಕ್ಯಾನ್ಸಲ್ ಮಾಡುವುದಕ್ಕೆ ಬರುವುದಿಲ್ಲ. ಆದರೆ ಹೊಸದಾಗಿ ಹುಟ್ಟದ ಹಾಗೆ ಮೊದಲು ನೋಡಿಕೊಳ್ಳಬೇಕಲ್ಲ. ಒಂದು ಅಥವಾ ಎರಡು ಮಕ್ಕಳ ಮೇಲೆ ಹೋಗಬಾರದು. ಅದನ್ನು ನೀವು ಮಾಡಿ ಎಂದು ನಾನು ಸಲಹೆಯನ್ನು ಕೊಟ್ಟೆ. ಸಲಹೆಯನ್ನು ಕೊಟ್ಟಿದ್ದಲ್ಲಾ ಎಲ್ಲಿ ನಡೆಯುತ್ತವೆ. ಆ ರೀತಿ ನಾನು ನನ್ನ ವಿಚಾರಧಾರೆಯನ್ನು ನಮ್ಮ ರಾಜ್ಯದ ಪರವಾಗಿ ಎತ್ತಿದೆ. 1992-93ರ ವಾರ್ಷಿಕ ಯೋಜನೆಯನ್ನು ಅಂತಿಮಗೊಳಿಸುವಾಗ ಯೋಜನಾ ಆಯೋಗದೊಂದಿಗೆ ಚರ್ಚಿಸುವ ಸಮಯದಲ್ಲಿ ಯೋಜನಾ ಆಯೋಗವು ಈ ಮುಂದಿನಂತೆ ತಿಳಿಸಿತು.

"ಕರ್ನಾಟಕ ರಾಜ್ಯ ಸಂಪನ್ಮೂಲ ಸಂಗ್ರಹಣೆ ಪ್ರಯತ್ನಗಳು ಹಾಗೂ ರಾಜ್ಯದಾದಾಯ ನಿರ್ವಹಣೆಯನ್ನು ಯೋಜನಾ ಆಯೋಗವು ಶ್ಲಾಘಿಸುತ್ತದೆ.

ಇದು ನಾನು ಹೇಳಿದ್ದಲ್ಲ ಅವರು ಬರೆದಿದ್ದುದು. ಸಂಪನ್ಮೂಲ ಸಂಗ್ರಹಣೆ ಅಂದರೆ, resource mobilisation. ರಾಜ್ಯದಾಯ ನಿರ್ವಹಣೆ ಎಂದರೆ fiscal management. ಈ ವಿಚಾರದಲ್ಲಿ ಯೋಜನಾ ಆಯೋಗವು ನಮ್ಮನ್ನು ಶ್ಲಾಘಿಸುತ್ತದೆ.

"ದುರ್ಬಲ ವರ್ಗದವರಿಗೆ ಮನೆ ನಿವೇಶನಗಳನ್ನು ಒದಗಿಸುವ ಹಾಗೂ ಸಾಕ್ಷರತೆಯನ್ನು ಹಾಗೂ ಜನಸಂಖ್ಯಾ ನಿಯಂತ್ರಣ ಯೋಜನೆಯನ್ನು ಜಾರಿಗೊಳಿಸುವ ರಾಜ್ಯ ಸರ್ಕಾರದ ಯೋಜನೆಗಳೂ ಸಹ ಸ್ವಾಗತಾರ್ಹವಾಗಿವೆ"

ನಮ್ಮ ಪ್ರಾಮಾಣಿಕ ಪ್ರಯತ್ನ ಇವರ ಸರ್ಟಿಫಿಕೇಟ್‌ನಿಂದಲೂ ಗೊತ್ತಾಗುತ್ತದೆ.

ಈ ಬಗ್ಗೆ ಯೋಜನಾ ಆಯೋಗದ ಉಪಾಧ್ಯಕ್ಷರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ (ಎಆರ್‌ಎಂ) ಮತ್ತು ವಿದೇಶ ನೆರವು ಪಡೆದ ಯೋಜನೆಗಳಿಗೆ ಕೇಂದ್ರದ ನೆರವನ್ನು ಹೆಚ್ಚಾಗಿ ಬಳಸಿಕೊಂಡಿರುವುದಕ್ಕೆ ಸಂಬಂಧಪಟ್ಟಂತೆ ನೀವು ನೀಡಿನ ಅಂಕಿಅಂಶಗಳ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ. ಭಾರತದ ಅರ್ಥವ್ಯವಸ್ಥೆಯ ವಿಕಸನ ಶಕ್ತಿ, ನಮ್ಮ ಜನರ ನವನಿರ್ಮಾಣ ಶಕ್ತಿ ಹಾಗೂ ನಮ್ಮ ಕ್ರಿಯಾಶೀಲ ನೇತೃತ್ವ. ಇವು ಮೂರು ಕೂಡಿಕೊಂಡಲ್ಲಿ ಎಂಟನೇ ಪಂಚವಾರ್ಷಿಕ ಯೋಜನಾವದಿಯಲ್ಲಿ ನೀವು ಗಣನೀಯ ಗುರಿಯನ್ನು ಸಾಧಿಸಬಲ್ಲಿರಿ ಎಂಬುದರಲ್ಲಿ ನನಗೆ ಸಂದೇಹವಿಲ್ಲ.

ಅವರು ಆಡಿರತಕ್ಕ ಮಾತನ್ನು ನಾನು ಉದಾಹರಣೆಯಾಗಿ ಇಟ್ಟಿದ್ದೇನೆ. ಇದು ಹೊಗಳಿಕೆ ಹೆಗ್ಗಳಿಕೆ ತಲೆಯಮೇಲೆ ಕಿರೀಟ ಎನ್ನುವ ದೃಷ್ಟಿಯಲ್ಲಿ ನಾನು ಮಾತನಾಡಿಲ್ಲ. I take it as a big impetus or a fillip for our national thinking as to how best we can formulate our programmes in consonance with the plan size and howbest we can execute them having in view the total ultimate economic growth of the State, ಅನ್ನತಕ್ಕ ವಿಚಾರದಲ್ಲಿ

ನಾವು ಹೇಗೆ ಮಾಡಬಹುದೆಂಬುದನ್ನು ಗಮನದಲ್ಲಿಟ್ಟುಕೊಂಡು ಮುಂದಕ್ಕೆ ಹೋಗಬೇಕು. ನಾನು ರಾಜ್ಯಾದಾಯ ನಿರ್ವಹಣೆಯನ್ನು ಮಾಡತಕ್ಕ ವಿಚಾರದಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದು ಬಹಳ ಒಳ್ಳೆಯದು. ನಾನು ಮುಖ್ಯ ಮಂತ್ರಿಯಾದ ನಂತರ ಒಂದೂ ರೂಪಾಯಿಯನ್ನು ಕರ್ನಾಟಕ ರಾಜ್ಯಕ್ಕೆ ರಿಸರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್‌ನ ಸಾಲ ತಂದಿಲ್ಲ. Not even a single rupee over Draft I have taken from the Reserve Bank of India. ಬೇಕಾದರೆ ನಾನು ನಿಮಗೆ ಅಂಕಿ-ಅಂಶ ಕೊಡುತ್ತೇನೆ. ಏಕೆಂದರೆ, ನೀವು ಮ್ಯಾನೇಜ್‌ಮೆಂಟ್ ಚೆನ್ನಾಗಿ ಮಾಡಿದಿರಿ you can avoid taking overdraft from the Reserve Bank either for 10 days or 15 days, one month. ಅದು ರಿಸೋರ್ಸ್ ಮೊಬಿಲೈಜೇಶನ್ ಚೆನ್ನಾಗಿ ಇದ್ದಾಗ ಮಾತ್ರ ಸಾಧ್ಯ, ಇಲ್ಲದಿದ್ದರೆ ಸಾಧ್ಯವಾಗವುದಿಲ್ಲ. ಯಾರೂ ಎಷ್ಟು ಪ್ರಯತ್ನಪಟ್ಟರೂ ಕೂಡ ಬರುವುದಿಲ್ಲ. ನಾನು ಓವರ್ ಡ್ರಾಫ್ಟ್ ವಿಚಾರಕ್ಕೆ ಬರುತ್ತೇನೆ. ಪೊಜಿಶನ್ ಹೀಗಿದೆ : 1991-92 is the only year ಏಕೆಂದರೆ, ಮುಖ್ಯಮಂತ್ರಿಯಾಗಿ ಸಿಕ್ಕಿರತಕ್ಕಂಥಾದ್ದು ನನಗೇ ಒಂದೇ ವರ್ಷ. ಹೋದ ವರ್ಷ ಅಕ್ಟೋಬರ್ ತಿಂಗಳಲ್ಲಿ ನಾನು ಮುಖ್ಯಮಂತ್ರಿಯಾದಾಗ ಇಡೀ ವರ್ಷದ ಆರ್ಥಿಕ ವಿಚಾರ ನನ್ನ ಕಂಟ್ರೋಲಿಗೆ ಬಂದಿರಲಿಲ್ಲ. ಏಕೆಂದರೆ ಅಕ್ಟೋಬರ್ ತಿಂಗಳಿನಲ್ಲಿ ನಾನು ಜವಾಬ್ದಾರಿ ತೆಗೆದುಕೊಂಡಿದ್ದು ರಿಸೋರ್ಸ್‌ನ್ನು ಇಮ್ಮಿಡಿಯೆಟ್ ಆಗಿ ಜಂಪ್ ಕೊಡಿಸಿದ್ದೇನೆ. ಹಣದ ಕಲೆಕ್ಷನ್ ಸರ್ಕಾರದ ಖಜಾನೆಗೆ ಬರಬೇಕು. 1991-92 is the only year in which we have not got into overdraft situation. We have paid salaries, bills, etc. ನಾನು ಒಂದೇ ಒಂದು ಕೇಳುವುದು. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವಾಗ ಚೆನ್ನಾಗಿ ಆಗುತ್ತದೆಂದು ನಿಮಗೆ ಗೊತ್ತಾಗುತ್ತದೆಂದರೆ, ಓವರ್ ಡ್ರಾಫ್ಟ್ ಅನ್ನು ಮುಟ್ಟದೆ ಇದ್ದಾಗ. Salary of the Government Servants. ನಾವು ಸಂಬಳ ಕೊಟ್ಟಿಲ್ಲ ಎಂದು ಒಂದೂ ಕಂಪ್ಲೆಂಟ್ ಬಂದಿಲ್ಲ. ಅನಂತರ ಗೌವರ್ನಮೆಂಟ್ ಬಿಲ್ಸ್ ಏನಿದೆ, ಕಂಟ್ರಾಕ್ಟರ್ ಮತ್ತೊಂದು ಕೊಡತಕ್ಕಂಥಾದ್ದು ಕಂಪ್ಲೆಂಟ್ ಇಲ್ಲ. ಇಲ್ಲದಿದ್ದರೆ, ಪ್ರೊಸೀಜರ್ ಪ್ರಕಾರ ಮತ್ತೊಂದು ಕೊಡಬೇಕೇ, ಎನ್‌ಕ್ವೈರಿ ಬಿದ್ದುಹೋಗಿರಬಹುದು, ಅದು ಇದ್ದೇ ಇರುತ್ತದೆ. ಆದರೆ, ಬಿಲ್ಸ್ ಕೊಟ್ಟ ನಂತರ ಪೇಮೆಂಟ್ಸ್ ಬಂದಿಲ್ಲ. ಎಂದು ಯಾರೊಬ್ಬರೂ ನಮಗೆ ಹಣ ಕೊಟ್ಟಿಲ್ಲವೆಂದು ಕೋರ್ಟ್‌ನಲ್ಲಿ ಕೇಸ್ ಹಾಕಿಲ್ಲ. ಸಂಬಳದ ಬಗ್ಗೆ ಯಾರಿಂದಲೂ ದೂರು ಬಂದಿಲ್ಲ. On the other hand, ರಾಮಕೃಷ್ಣ ಹೆಗಡೆಯವರ ಜನತಾ ದಳ ಸರ್ಕಾರ ಇದ್ದಾಗ ಚೆಕ್ಸ್ ನಂಬರ್‌ಗಳನ್ನು ನಾವು ವಿರೋಧಪಕ್ಷದಲ್ಲಿದ್ದಾಗ ಕೋಟ್ ಮಾಡಿದ್ದೇವೆ. ಮೂಟೆ ಇರುತ್ತದಲ್ಲ, ಈ ಮೂಟೆ ತುಂಬುವಷ್ಟು ಚೆಕ್ಸ್ ಡಿಸ್-ಹಾನರ್ ಆಗಿದೆ, ಬೌನ್ಸ್ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಆ ಕಾಲದಲ್ಲಿ ಹೇಳಿದೆ. ಆದರೆ ನಮ್ಮ ಕಾಲದಲ್ಲಿ ಯಾವುದೂ ಆ ಮಟ್ಟಕ್ಕೆ ಮುಟ್ಟಿಲ್ಲ. ಈ ರೀತಿ ಒಂದೂ ಆಗಿಲ್ಲ. ಓವರ್ ಡ್ರಾಫ್ಟ್‌ನ ಒಂದು ಪೈಸೆಯನ್ನೂ ಕೂಡ ಮುಟ್ಟಿಲ್ಲ. ಇದಕ್ಕೆ ನಾನು ನಿಮಗೆ details of overdrafts taken in the last few years ಕೊಡುತ್ತೇನೆ. 1985-86ರಲ್ಲಿ ರಿಸರ್ವ್ ಬ್ಯಾಂಕ್‌ನಿಂದ ಎರಡು ಸಾರಿ ತೆಗೆದುಕೊಂಡಿದ್ದಾರೆ. ಆಗ ಜನತಾ ದಳ ಸರ್ಕಾರ ಇದ್ದಂಥ ಕಾಲ. 568.84 ಕೋಟಿ ರೂಪಾಯಿಗಳು, ಅಂದರೆ 569 ಕೋಟಿ ರೂಪಾಯಿಗಳ ಸಾಲ ತೆಗೆದುಕೊಂಡಿದ್ದಾರೆ. 1986-87ರಲ್ಲಿ 10 ಸಲ ತೆಗೆದುಕೊಂಡಿದ್ದಾರೆ. ಒಟ್ಟು ಮೊತ್ತ 104.68 ಕೋಟಿ ರೂಪಾಯಿಗಳು. 1987-88ರಲ್ಲಿ 8 ಸಲ ತೆಗೆದುಕೊಂಡಿದ್ದಾರೆ. ಒಟ್ಟು ಮೊತ್ತ 128 ಚಿಲ್ಲರೆ ಕೋಟಿ ರೂಪಾಯಿ. 1988-89ರಲ್ಲಿ 5 ಸಲ ತೆಗೆದುಕೊಂಡಿದ್ದಾರೆ. ಒಟ್ಟು ಮೊತ್ತ 97 ಚಿಲ್ಲರೆ ಕೋಟಿ ರೂಪಾಯಿಗಳು. 1989-90ರಲ್ಲಿ 4 ಸಲ 88 crores. 1990-91

ರಲ್ಲಿ only upto May ಏಕೆಂದರೆ. ಅವರು ಬಿಟ್ಟುಹೋಗಿರತಕ್ಕ ಪರಿಸ್ಥಿತಿಯನ್ನು ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಅನುಭವಿಸಿದರು. ಶ್ರೀಮಾನ್ ವೀರೇಂದ್ರ ಪಾಟೀಲ್‌ಜಿಯವರು 4 ಸಲ ಒಟ್ಟಿ 35 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅವರು ಬಿಟ್ಟುಹೋಗಿರತಕ್ಕಂಥ ಕೆಟ್ಟ ಆರ್ಥಿಕ ಪರಿಸ್ಥಿತಿಯನ್ನು ವೀರೇಂದ್ರ ಪಾಟೀಲ್‌ಜಿಯವರು ಎದುರಿಸಬೇಕಾಗಿತ್ತು. ನಮ್ಮ ಪಕ್ಷದ ಸರ್ಕಾರ ಆ ಸಂದರ್ಭದಲ್ಲಿ ಎದುರಿಸಬೇಕಾಯಿತು. After May, 1991 5 ಪೈಸೆಯನ್ನು ಕೂಡ ಮುಟ್ಟಿಲ್ಲ. ಇವೊತ್ತಿಗೂ ರಿಸರ್ವ್ ಬ್ಯಾಂಕ್‌ಗೂ ನನಗೂ ಯಾವುದೇ ಸಂಬಂಧವಿಲ್ಲ. ನನಗೆ ಬೇಕಾಗಿಲ್ಲ. ನನ್ನ ಹತ್ತಿರ ಡೇಟ್-ವೈಸ್ ಇದೆ. ಯಾವ ಡೇಟ್‌ನಿಂದ ಯಾವ ಡೇಟ್‌ಗೆ ತೆಗೆದುಕೊಂಡಿದ್ದಾರೆ ಎಂಬುದುರ ಬಗ್ಗೆ ನನ್ನ ಹತ್ತಿರ ಒಂದು ದೊಡ್ಡ ಚರಿತ್ರೆ ಇದೆ. ಇವರು ಇಷ್ಟೆಲ್ಲಾ ಮಾತನಾಡುತ್ತಾರಲ್ಲಾ! ನಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಿ ಹೋಯಿತು. ಮತ್ತೊಂದು ಹೋಯಿತು ಎಂದು ಭಾಷಣ ಮಾಡುತ್ತಾರೆ. ನಾವು ಕಿರಾಣಿ ಅಂಗಡಿಗೆ ಹೋಗಿ ಸಾಲ ತಂದಿಲ್ಲ. ತೊಗರಿಬೇಳೆ. ಕಾಫಿ ಬೀಜ. ಟೀ ಬೀಜ ತಂದು ನಾನು ಮನೆ ನಡೆಸುತ್ತಿಲ್ಲ. ನಮಗೆ ಅದರ ಅವಶ್ಯಕತೆ ಇಲ್ಲ. ನಾವು ಯಾವ ರೀತಿ ನಿರ್ವಹಣೆ ಮಾಡುತ್ತೇವೆ. ನಮ್ಮ ಆದಾಯ ಮತ್ತೊಂದು ನಮ್ಮ ಕುಟುಂಬಕ್ಕೆ ಅಥವಾ ನಮ್ಮ ಸರ್ಕಾರಕ್ಕೆ ಬರತಕ್ಕಂಥ ವಿಚಾರದಲ್ಲಿ ನಾನು ಚೆನ್ನಾಗಿ ನಿರ್ವಹಣೆ ಮಾಡಿದ್ದರಿಂದ ಈ ಕಿರಾಣಿ ಅಂಗಡಿ. ಬಟ್ಟೆ ಅಂಗಡಿ ಮತ್ತೊಂದು ಸಾಲ ಮಾಡತಕ್ಕಂಥ ಅವಶ್ಯಕತೆ ಕಂಡುಬರಲಿಲ್ಲ. ಎಲ್ಲಿಯಾದರೂ ಅಂತಹ ವಿಚಾರ ಬಂದರೆ ಬೇಕಾದರೆ ಇದೋ ಅಂತಹ ಸಂದರ್ಭ ಬಂದಾಗ ರಾಜ್ಯದ ಜನತೆಯ ಮುಂದೆ ಇಡೋಣ. ನೋಡಪ್ಪ. ಇಂತಹ ಪರಿಸ್ಥಿತಿ ಬಂದಿದೆ. ಅನ್‌ಫೋರ್ಸೀನ್ ಎಕ್ಸ್‌ಪೆಂಡಿಚರ್ ನಮಗೆ ಬಂದುಬಿಟ್ಟಿದೆ. We have to go to the Reserve Bank. ಅದನ್ನು 1985-86 ಮತ್ತು 1986-87 ಎರಡು ಸಾರಿ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ನಾನು ಈಗಾಗಲೆ ಪೂರ್ತಿ ಹೇಳಿದ್ದೇನೆ. ಆದುದರಿಂದ ನಾನು ಮತ್ತೆ ಅದರ ವಿವರಣೆಗಳಿಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. Resource mobilisation ವಿಚಾರದಲ್ಲಿ Commercial tax, State excise, Motor Vehicles tax, Stamp duty. These are the 4 areas where major part of revenue comes. ಈ ನಾಲ್ಕು ಮೂಲಗಳಿಂದಲೇ ನಮಗೆ ಹೆಚ್ಚಾಗಿ ಬರುವುದು. ಇವೆಲ್ಲವುಗಳನ್ನು ಸೇರಿಸಿ ಎಷ್ಟೆಷ್ಟು ಹಣ ಬರುತ್ತದೆ ಎಂಬ ಬಗ್ಗೆ ನಾನು percentage-wise ಸಹ ಕೊಡುವುದಕ್ಕೆ ತಯಾರಾಗಿದ್ದೇನೆ. ಅದನ್ನು ಅವರು ನೋಡಿಕೊಳ್ಳಬಹುದು. 1986-87ರಲ್ಲಿ 1140 ಕೋಟಿ ಅಂದರೆ 11.82 ಪರ್‌ಸೆಂಟ್. 1987-88ರಲ್ಲಿ 1359 ಅಂದರೆ 19.24 ಪರ್‌ಸೆಂಟ್. 1988-89ರಲ್ಲಿ 1635 ಕೋಟಿ. ಅಂದರೆ 20.30 ಪರ್‌ಸೆಂಟ್ Percentage of growth over previous years collection ಇದೆ, ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. 1989-90ರಲ್ಲಿ 1835 ಕೋಟಿ 73 ಲಕ್ಷ ಅಂದರೆ 12.22 ಪರ್‌ಸೆಂಟ್. 1990-91. ನಮ್ಮ ಸರ್ಕಾರ ಬಂದಂಥ ಕಾಲದಲ್ಲಿ 2250.39 ಕೋಟಿ ಅಂದರೆ 22.59 ಪರ್‌ಸೆಂಟ್. 1991-92. ನಾನು ಹಣಕಾಸಿನ ಸಚಿವನಾಗಿದ್ದ ಕಾಲದಲ್ಲಿ 2955 ಕೋಟಿ ಏರಿಕೆ 31.31 ಪರ್‌ಸೆಂಟ್ ಕಲೆಕ್ಷನ್ ಎಷ್ಟು? ಕಳೆದ ವರ್ಷ ಅವರು ನಮ್ಮ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿದಂಥ ಕಾಲದಲ್ಲಿ ಏನು; ಹೆಂಡದ ದೊರೆಗಳಿಗೆ ಹೋಗುತ್ತಿದೆ; ಎಲ್ಲಾ ಹಣವು ಹೋಗುತ್ತಿದೆ; ಕಮರ್ಶಿಯಲ್ ಟ್ಯಾಕ್ಸ್ ಹೋಗುತ್ತಿದೆ; ಎಕ್ಸ್‌ಸ್ ಹೋಗುತ್ತಿದೆ; ಎಲ್ಲಾವು ಸಹ ಹೋಗುತ್ತಿದೆ ಎಂದು ಅವರು ಹೇಳಿದರು. ಆ ರೀತಿ ಆಗಿಲ್ಲವೆಂದು ನಾನು ಅಂಶಗಳನ್ನು ಕೊಟ್ಟು ಹೇಳಿದೆ. ಆ ಸಂದರ್ಭದಲ್ಲಿ ನಾನು ಶ್ರೀಮಾನ್ ಡಿ.ಬಿ. ಚಂದ್ರೇಗೌಡರಿಗೆ ನಿಮ್ಮ ಅಂಕಿಅಂಶಗಳು ಇಲ್ಲಿವೆ ನೋಡಿ ಎಂದು ಹೇಳಿದ್ದೆ. ಇದರ ಬಗ್ಗೆ ನಾನು ಆಗಲೇ ಉತ್ತರವನ್ನು ಕೊಟ್ಟಿದ್ದೇನೆ.

ಆದುದರಿಂದ ಅದರ ವಿವರಣೆಗಳಿಗೆ ನಾನು ಹೋಗುವುದಿಲ್ಲ. I am on record as far as these matters are concerned. 1991-92ರಲ್ಲಿ 2955 ಅಂದರೆ ಸುಮಾರು 3000 ಕೋಟಿಯವರೆಗೂ ನಾವು ಹೋಗಿದ್ದೇವೆ. ಏರಿಕೆಯು 31.31 ಪರ್‌ಸೆಂಟ್. 1992-93ರಲ್ಲಿ 3600 ಕೋಟಿ. ಏರಿಕೆ 22.92 ಪರ್‌ಸೆಂಟ್ ನಾನು ಹೊಗಳಿಕೆ ಮಾತನಾಡಲಿಲ್ಲ. ಅದನ್ನು ಅಂಕಿಅಂಶಗಳ ಸಹಿತವಾಗಿ ಇಟ್ಟಿದ್ದೇನೆ. ಮುಂದಿನ ವರ್ಷದ. ಅಂದರೆ 1992-93ರಲ್ಲಿ 22.91 ಪರ್‌ಸೆಂಟ್‌ಗೆ ಇದ್ದರೂ ಕೂಡ ಗ್ರೋಥ್ ರೇಟ್ jump is 31.31%. ಅದು ಅಷ್ಟಕ್ಕೆ ನಿಲ್ಲುತ್ತದೆಂದು ಹೇಳಬೇಡಿ. ಏಕೆಂದರೆ ಕಮರ್ಶಿಯಲ್ ಟ್ಯಾಕ್ಸ್‌ನ ಒಂದು ಉದಾಹರಣೆಯನ್ನು ಕೊಡುತ್ತೇನೆ. As far as revenue collections are concerned-Commercial Taxes-What is the proposed revenue for the current year 1991-92? 1991-92ರ ಹೋದ ವರ್ಷದ್ದು ಬಜೆಟ್ ನೋಡಿ. 1805 ಕೋಟಿ ಎಂದು ತೋರಿಸಿದ್ದೇವೆ. ಈ ತಿಂಗಳು ಮುಗಿಯಬೇಕು. ಮುಂದಿನ ತಿಂಗಳು ನಾನು ನಿಮಗೆ ಅಂಕಿಅಂಶಗಳನ್ನು ಕೊಡುತ್ತೇನೆ. ಅದರಲ್ಲಿ 1805 ಕೋಟಿ ಕಮರ್ಶಿಯಲ್ ಟ್ಯಾಕ್ಸ್‌ನಿಂದ ಬರುತ್ತದೆಂದು ನಾನು ಹೇಳಿದರೂ ಕೂಡ I am likely to cross Rs. 2000 crores. 2000 ಕೋಟಿಯನ್ನು I am on the right to track now. ಅಧಿಕಾರಿಗಳು ಹೇಳಿದ್ದಾರೆ. ಅವರನ್ನು ಕರೆಯಿಸಿದ್ದೇನೆ. not only the Head of the Finance Department Even Commercial Taxes Commissioner and even their office bearers of the Association. I must say that our officers have done a commendable job. ನಿಜವಾಗಿಯೂ ಬಹಳ ಒಳ್ಳೆಯ ರೀತಿಯಲ್ಲಿ ಅವರು ಕೆಲಸ ಮಾಡಿದ್ದಾರೆ. ನಾನು ಏನು 1800 ಕೋಟಿ ಮಾಡಬೇಕೆಂದು ಬಜೆಟ್‌ನಲ್ಲಿ ತೋರಿಸಿದ್ದನೋ ಅದಕ್ಕಿಂತ ಜಾಸ್ತಿ ಅಂದರೆ 2000 ಕೋಟಿಯನ್ನು ಮಾಡತಕ್ಕ ಶಕ್ತಿ ನಮ್ಮ ಕರ್ನಾಟಕ ರಾಜ್ಯದ ಅಧಿಕಾರಿಗಳಿಗಿದೆ. I must thank them and commend them for the best collection. ಇಷ್ಟಾದರೂ ಕೂಡ ಸೋರಿಕೆ. ಮತ್ತೊಂದು ಎಂಬ ಬಗ್ಗೆ ಅವರು ಹೇಳುತ್ತಾರೆ. ಆ ರೀತಿ ಇರಬಹುದು? ಎಲ್ಲಾ ಅಧಿಕಾರಿಗಳು ಹೈಕ್ಲಾಸ್ ಎಂದು ನಾನು ಹೇಳುತ್ತಿಲ್ಲ. ಅದರಲ್ಲಿ ಕೆಟ್ಟ ಅಧಿಕಾರಿಗಳು ಇರುತ್ತಾರೆ. ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಾವು ಒಳ್ಳೆಯ ಅಧಿಕಾರಿಗಳಿಗೆ ಬೆಂಬಲವನ್ನು ಕೊಟ್ಟು ಚೆನ್ನಾಗಿ ಕೆಲಸವನ್ನು ಮಾಡಿಕೊಂಡು ಹೋಗುವಂತೆ ಮಾಡಿ ಕೆಟ್ಟ ಅಧಿಕಾರಿಗಳನ್ನು ಬಲಿಹಾಕೋಣ. ಇನ್ನು ಮೇಲೆ ಇದರ ಬಗ್ಗೆ ಕ್ರಮ ಪ್ರಾರಂಭವಾಗುತ್ತದೆ. ಇನ್ನು ಮೇಲೆ ಯಾವ್ಯಾವ ಅಧಿಕಾರಿಗಳು ಯಾವ್ಯಾವ ಇಲಾಖೆಗಳಲ್ಲಿ ಈ ರೀತಿಯ ಹಣಕ್ಕೆ. ಮತ್ತೊಂದಕ್ಕೆ ಗಮನ ಕೊಡುತ್ತಾರೋ ಅವರನ್ನು ಮುಂದುವರಿಸುವುದಿಲ್ಲ. ಅಡ್ಮಿನಿಸ್ಟ್ರೇಷನ್ ಸೈಡ್‌ನಲ್ಲಿ ಇನ್ನು ಮೇಲೆ ಹೀಗೇ ಇರುತ್ತದೆಂದು ದಯಮಾಡಿ ಕರ್ನಾಟಕ ರಾಜ್ಯದ ಜನರು ತಿಳಿದುಕೊಳ್ಳಬಾರದು. We are going to take suitable and strict action against those erring officers belonging to any department of the Government.

Procedural matters, anti-corruption bureau, vigilence commission, Lokayuktha. All these things have been experienced. trial and error methods. ಇವತ್ತು ನಮ್ಮಲ್ಲಿ ಲಂಚಗುಳಿತನ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಇದ್ದಿದ್ದರಲ್ಲೂ ನಾವು ಕಲೆಕ್ಷನ್‌ಗೆ ಹೆಚ್ಚು ಗಮನಕೊಟ್ಟಿದ್ದೇವೆ. ಆ ಏರಿಯಾಗಳನ್ನು ನಾವು ಟಚ್ ಮಾಡಬೇಕಾದುದು ಇದೆ. ಮುಂದೆ ಪಂಚಸೂತ್ರ ಬಿಲ್ ಜಾರಿಗೆ ಬರಲಿ. ಈಗ ಈ ಬಿಲ್ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದಿದೆ. ಅದು ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಪಂಚಸೂತ್ರ ಬಿಲ್ ಬಂದರೆ

ನಮಗೆ ಅನುಕೂಲವಾಗುತ್ತದೆ. ಆದರೆ ಇದರಿಂದ ಕರಪ್ಷನ್‌ನ್ನು ನಿಲ್ಲಿಸುತ್ತೇವೆಂದು ಅಲ್ಲ. ಅದು ಆಫೀಸಿನಲ್ಲಿ ಪ್ರೊಸೀಜರಲ್ ಮ್ಯಾಟರ್‌ನ್ನು ಸಿಂಪ್ಲಿಫೈ ಮಾಡುತ್ತದೆ. ತಮಗೆಲ್ಲಾ ಗೊತ್ತಿರುವಂತೆ ಕರಪ್ಷನ್‌ನ್ನು ನಿಲ್ಲಿಸುವುದಕ್ಕೆ ಆ್ಯಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್ ಇತ್ತು. ಅದು ಉಪಯೋಗವಿಲ್ಲ ಎಂದು ಹೇಳಿದ್ದಾಯಿತು. ಅನಂತರ ವಿಜಿಲೆನ್ಸ್‌ಕಮಿಷನ್ ಎಂದು ಮಾಡಿದೆವು. ಅದೂ ಕೂಡ ಉಪಯೋಗವಿಲ್ಲವೆಂದು ಹೇಳಿದ್ದಾಯಿತು. ಈಗ ಲೋಕಾಯುಕ್ತ ಎಂದು ಮಾಡುದ್ದೇವೆ. ಇದರ ಬಗ್ಗೆ ಕೂಡ ನಮಗೆ ಅನುಮಾನಗಳು ಇದ್ದೇಇವೆ. ಮುಂದೆ ನಾವು ಏನು ಮಾಡಬೇಕೆಂಬ ವಿಚಾರದಲ್ಲಿ ಅನಂತರ ಯೋಚನೆ ಮಾಡೋಣ. ಆ ಏರಿಯವನ್ನು ನಾವು ಟಚ್ ಮಾಡುತ್ತೇವೆ. ಮತ್ತು ಬಹಳ ಸೀರಿಯಸ್ ಆಗಿ ಹೋಗುತ್ತೇವೆ. ಆ ಏರಿಯಾಗಳನ್ನು ಟಚ್ ಮಾಡುವುದರಲ್ಲಿ ಬಹಳ ತಡವಾಗಿರುವುದರಿಂದ ನಾನು ಈ ಕರ್ನಾಟಕ ರಾಜ್ಯದಜನತೆಯ ಕ್ಷಮೆಯನ್ನು ಕೇಳುತ್ತೇನೆ. ಇವತ್ತು ಜನಸಾಮಾನ್ಯರ ತೊಂದರೆ ಏನಿದೆ ಎಂಬುದು ನನಗೆ ಗೊತ್ತಿದೆ. 1991-92ರಲ್ಲಿ 31.31 ಪರ್ಸೆಂಟ್ ಗ್ರೋತ್ ಆಗಿದೆ. Total revenue collection of all the 4 sectors.. 92-93ಕ್ಕೆ 3011.94 ಕೋಟಿ ಅಂದರೆ 3012 ಕೋಟಿ ರೂ. ಆಗಬಹುದು. 22.23 ಪರ್ಸೆಂಟ್ ಎಂದು ಇಟ್ಟುಕೊಂಡರೂ ಕೂಡ ಇದರಲ್ಲಿ ನಾನು ಜಂಪ್ ಮಾಡಿಸುತ್ತೇನೆ. ಇದು ನನಗೆ ಗೊತ್ತಿದೆ. ನಮ್ಮ ಕಲೆಕ್ಷನ್ 1800 ಕೋಟಿ ಎಂದು ಹೇಳಿದ್ದುದು ಈ ವರ್ಷ 200 ಕೋಟಿಗೆ ಹೋಗಿದೆ. ಇದೇ ರೀತಿ ಕಮರ್ಷಿಯಲ್ ಟ್ಯಾಕ್ಸಸ್ ಬಗ್ಗೆಯೂ ಕೂಡ. ಇದರಲ್ಲಿ 2300 ಕೋಟಿ ಏನು ತೋರಿಸಿದ್ದೇನೆ. ಇದನ್ನು ಮೊದಲು 1805 ಕೋಟಿ ರೂ. ಎಂದು ಈ ವರ್ಷಕ್ಕೆ ತೋರಿಸಿದ್ದೆ. 92-93ರಲ್ಲಿ ಇದನ್ನು 2300 ಕೋಟಿ ಎಂದು ತೋರಿಸಿದ್ದೇನೆ. I will never step at it. I know we have got to bestow not only to cross that but to go beyond that. ಇದನ್ನು ಮಾಡುವುದಕ್ಕೆ ನಮಗೆ ಸಾಧ್ಯತೆ ಇದೆ ಎಂಬುದನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡಿದ್ದೇನೆ. ಇದು ಕೇವಲ ಕಮರ್ಷಿಯಲ್ ಟ್ಯಾಕ್ಸಸ್ ಕಲೆಕ್ಷನ್ ಮಾತ್ರ. ನಾನು ಆಗಲೇ ಹೇಳಿದ್ದುದು ಟೋಟಲ್. ಕಮರ್ಷಿಯಲ್ ಟ್ಯಾಕ್ಸಸ್. ಎಕ್ಸೈಸ್. ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್. ಮತ್ತು ಮೋಟಾರ್ ವೆಹಿಕಲ್ಸ್ ಎಲ್ಲಾ ಸೇರಿ. ಕಮರ್ಸಿಯಲ್ ಟ್ಯಾಕ್ಸ್‌ಸ್‌ಸ ಪರ್ಸೆಂಟೇಜ್ ಎಷ್ಟಿದೆ ಎಂಬುದನ್ನು ತಮಗೆ ಹೇಳುತ್ತೇನೆ. ಇದು ಕೋಟಿ ರೂಪಾಯಿಗಳಲ್ಲಿದೆ. ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅಂದರೆ 1986-87ರಲ್ಲಿ 737.53 ಕೋಟಿ. ಪರ್ಸೆಂಟೇಜ್ 8.0. 1987-88ರಲ್ಲಿ 891.87 ಕೋಟಿ ರೂ. ಗ್ರೋತ್ ರೇಟ್ 20.93 ಪರ್ಸೆಂಟ್. 1988-89ರಲ್ಲಿ 1114 ಕೋಟಿ ರೂ. ಇದರ ಗ್ರೋತ್ ರೇಟ್ 24 ಪರ್ಸೆಂಟ್. 1989-90ರಲ್ಲಿ ಇದು ಸ್ವಲ್ಪ ಬಿದ್ದುಹೋಗಿದೆ. 1223 ಕೋಟಿ ರೂ. ಅಂದರೆ ಇದರ ಗ್ರೋತ್ ರೇಟ್ 24 ಪರ್ಸೆಂಟ್ ಇದ್ದುದು 9.83 ಪರ್ಸೆಂಟ್‌ಗೆ ಇಳಿದಿದೆ. ಇಲ್ಲಿ ಇದು ಬಿದ್ದು ಹೋಗಿದೆ. 1990-91ರಲ್ಲಿ 1483 ಕೋಟಿ ರೂ. ಇದು 21 ಪರ್ಸೆಂಟ್ ಇದೆ. 1991-92ರಲ್ಲಿ ಅಂದರೆ ನಮ್ಮ ಕಾಲದಲ್ಲಿ-ಅಂದರೆ ಕಳೆದ ವರ್ಷದಲ್ಲಿ 200 ಕೋಟಿಗೆ ಹೋಗಿದೆ. ಅಂದರೆ ಇದೇ ಮಾರ್ಚಿ ತಿಂಗಳ ಕೊನೆಯವರೆಗೆ 34.77 ಪರ್ಸೆಂಟ್‌ಗೆ ಜಂಪ್ ಮಾಡಿದೆ. ಇದಕ್ಕಿಂತ ಇನ್ನು ಏನು ಹೆಚ್ಚಿಗೆ ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. 1992-93ಕ್ಕೆ 2492 ಕೋಟಿ ರೂ. ಇದು ಅಡಿಷನ್ ರಿಸೋರ್ಸಸ್ ಮೊಬಿಲೈಸೇಷನ್‌ನ್ನೂ ಕೂಡ ಒಳಗೊಂಡಿದೆ. ಇದು 24.65 ಪರ್ಸೆಂಟ್ ಆದರೂ ಕೂಡ ಇದನ್ನೂ ಕ್ರಾಸ್ ಮಾಡಿ ನಾವು ಇನ್ನೂ ಮುಂದಕ್ಕೆ ಹೋಗುತ್ತೇವೆ.

State Excise-ಇನ್ನು ಮಾನ್ಯ ವಿರೋಧಪಕ್ಷದವರು ಮಾತನಾಡುವಾಗ ಇವರು ಹೆಂಡದ ದೊರೆಗಳು ಎಂದು ಭಾಷಣ ಮಾಡಿದರು. ಅವರ ಕಾಲದಲ್ಲಿ ಎಷ್ಟಿತ್ತು. ಈಗ ನಮ್ಮ ಕಾಲದಲ್ಲಿ ಎಷ್ಟಿದೆ ಎಂಬುದನ್ನು ಅಂಕಿಸಂಖ್ಯೆಗಳ ಸಹಿತ ಇಡುತ್ತಿದ್ದೇನೆ. ಕೋರ್ಟ್ ಪ್ರೊಸೀಡಿಂಗ್ಸ್‌ನಲ್ಲಿ ಇದ್ದುದನ್ನು ಹೇಳುವುದಾದರೆ ಏಕ ಕಂತಿನಲ್ಲಿ ಹಣವನ್ನು ಕಟ್ಟಿದರೆ ಬಡ್ಡಿಯನ್ನು ಬಿಡುತ್ತೇವೆಂದು ಹೇಳಿದ್ದರು. ನಮಗೆ 60 ಕೋಟಿ ರೂ. ಅಸಲು ಬರಬೇಕಾಗಿದೆ. ಕೆಲವು ಕೇಸುಗಳು ಹೈಕೋರ್ಟಿನಲ್ಲಿವೆ. ಇನ್ನು ಕೆಲವು ಸುಪ್ರೀಂ ಕೋರ್ಟಿನಲ್ಲಿವೆ. ಈ ಕೇಸನ್ನು ನಾವು ಗೆದ್ದರೆ ಅಸಲು 60 ಕೋಟಿ ರೂ. ಮತ್ತು ಬಡ್ಡಿ 30 ಕೋಟಿ ರೂ. ಒಟ್ಟು 90 ಕೋಟಿ ರೂ. ನಮ್ಮ ಸರ್ಕಾರಕ್ಕೆ ಬರುತ್ತದೆ. ಆರ್ಗ್ಯೂಮೆಂಟ್ ಮಾಡಬೇಕಾದರೆ ಹೈಕೋರ್ಟ್‌ನವರು ಒಂದು ಸಲಹೆಯನ್ನು ಮಾಡಿದ್ದಾರೆ. ಇದನ್ನು ನಾವು ಮಾಡಿದ್ದಲ್ಲ. ಇವರ ಪಕ್ಷದ ಸರ್ಕಾರ ಇದ್ದಾಗ ಇನಾಂದಾರ್‌ರವರು ಎಕ್ಸೈಸ್ ಮಂತ್ರಿಗಳಾಗಿದ್ದರು. 1988ರಲ್ಲಿ ಇವರು ಮೀಟಿಂಗ್‌ನ್ನು ಮಾಡಿದ್ದಾರೆ.ಇದು ನಮ್ಮ ಕಾಲದಲ್ಲಿ ಆಗಿರುವುದಿಲ್ಲ. ಅವರ ಕಾಲದಲ್ಲೇ ಪ್ರಾರಂಭವಾಗಿದೆ. ನಾನು ಅದನ್ನೆಲ್ಲಾ ಓದಿ ಹೇಳಿದಾಗ ಮಾನ್ಯ ಜೀವರಾಜ ಆಳ್ವರವರೇ ಇದನ್ನು ಬದಲಾವಣೆ ಮಾಡಿ ಎಂದು ಹೇಳಿದರು. ನೀವು ಬದಲಾವಣೆ ಮಾಡಿಕೊಳ್ಳಬಹುದೆಂದು ಹೇಳಿದರು. ಆ ಕೇಸುಗಳು ಏನೆಂದರೆ, ನಮಗೆ ಅರ್‍ಯಾಕ್‌ನ್ನು ಸರಿಯಾಗಿ ಸಪ್ಲೈ ಮಾಡಿಲ್ಲ. ಇನ್ನೂ ಮುಂತಾದ ಬೇರೆ ಬೇರೆ ಗ್ರೌಂಡ್ಸ್ ಮೇಲೆ ಕಂಟ್ರಾಕ್ಟರ್‌ಗಳು ಹೈಕೋರ್ಟಿಗೆ ಕೇಸು ಹಾಕಿದ್ದಾರೆ. ಅಲ್ಲಿ ಕೇಸುಗಳನ್ನು ಗೆಲ್ಲತಕ್ಕ ಛಾನ್ಸ್ ಯಾವ ರೀತಿ ಇದೆ ಎಂದರೆ 50:50 ಪರ್ಸೆಂಟ್ ಇದೆ. ನಾವಾದರೂ ಗೆಲ್ಲಬಹುದು. ಅವರಾದರೂ ಗೆಲ್ಲಬಹುದು. ನಮ್ಮ ಕಡೆಯಾದರೆ ನಮ್ಮ ಕಡೆ ಬರುತ್ತದೆ ಅವರು ಕಡೆಯಾದರೆ ಅವರ ಕಡೆಗೆ ಕಿತ್ತುಕೊಂಡು ಹೋಗುತ್ತದೆ. ನಾವು 60 ಕೋಟಿ ಇಂದ 100 ಕೋಟಿಯವರೆಗೆ ನಾಮ ಹಾಕಿಕೊಂಡು ಮನೆಗೆ ಬರಬೇಕಾಗುತ್ತದೆ. ಅದಕ್ಕೆ ಏನಾದರೂ ಮಾಡಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ನಿಮಗೆ ಸಿಕ್ಕಿದರೆ ತೆಗೆದುಕೊಂಡು ಬಿಡಿ ಎಂದು ಎಕ್ಸೈಸ್ ಪಾರ್ಟಿಯಿಂದ 7 ವರ್ಷ ತಡೆಹಿಡಿದಿದ್ದರು. ಅಡ್ವೋಕೇಟ್ ಜನರಲ್‌ರವರಿಂದ ಲೆಟರ್‌ಬಂದಿದೆ. ಅವರ ಸರ್ಕಾರ ಇದ್ದಾಗ ನಡೆದದ್ದು. ನಮ್ಮ ಸರ್ಕಾರ ಇದ್ದಾಗ ಅಲ್ಲ. ಲೆಟರ್‌ಬಂದ ಮೇಲೆ ಮೀಟಿಂಗ್ ಮಾಡಿದ್ದೇವೆ. ಎಲ್ಲಾ ಮಾಡಿದ್ದೇವೆ. ಅದಕ್ಕೆ ನಾವು ಏನು ಮಾಡಿದವು ಅವರೇನಾದರೂ ಏಕಗಂಟಿನಲ್ಲಿ ಹಣವನ್ನು ಕೊಟ್ಟುಬಿಟ್ಟರೆ 60 ಕೋಟಿ ರೂಪಾಯಿ ಬರುತ್ತದಲ್ಲವೆಂದು. ಹೇಳಿ ಬಜೆಟ್‌ಗೆ ನಾನು ರೆಡಿಯಾಗುತ್ತಿದ್ದೆ. 60 ಕೋಟಿ ರೂಪಾಯಿಗಳಲ್ಲಿ ಬಡವರಿಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದೆಂದು. ನಾನು ವಿಚಾರ ಮಾಡಿದರೆ ಹೆಂಡದ ದೊರೆಗಳು ಇವರೆಲ್ಲರೂ ಒಟ್ಟಾಗಿಬಿಟ್ಟಿದ್ದಾರೆಂದು ಭಾಷಣವನ್ನು ಸ್ಟಾರ್ಟ್ ಮಾಡಿಬಿಟ್ಟರು. ಇವರ ಕಾಲದಲ್ಲಿಯೇ ಸ್ಟಾರ್ಟ್‌ಮಾಡಿ ಇವರೇ ಭಾಷಣವನ್ನು ಮಾಡುತ್ತಿದ್ದಾರೆ. ನಾನು ಹೇಳಿದ್ದೇನೆಂದರೆ ಏಕ ಗಂಟಿನಲ್ಲಿ ಹಣವನ್ನು ಕೊಡಿ ಎಂದು. ಕೊಡಲಿಲ್ಲವೆಂದರೆ ಇಲ್ಲ. ಇವತ್ತು ಹೇಳಿದ್ದುದು ಅದೇ. ಆವತ್ತು ಹೇಳಿದ್ದು ಅದೇ. ಆದರೆ ಇವರು ಹೇಳುತ್ತಾರೆ. ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು; ಶಾಮೀಲಾಗಿದ್ದರೆ ಅವರು ಹಣವನ್ನು ಕೊಟ್ಟು ಬಿಡಬೇಕಾಗಿತ್ತಲ್ಲ. ಇವತ್ತಿನವರೆಗೆ ಯಾರು ಹೆಂಡದ ದೊರೆಗಳು ಸರ್ಕಾರಕ್ಕೆ ಐದು ಪೈಸೆಯನ್ನು ಕಟ್ಟಿಲ್ಲ. ಅವರು ಕೇಸ್ ಗೆದ್ದುಕೊಳ್ಳುತ್ತೇವೆಂದು ಹೈಕೋರ್ಟಿನಲ್ಲಿ. ಸುಪ್ರೀಮ್ ಕೋರ್ಟಿನಲ್ಲಿ ಎಂದು ಧೈರ್ಯದಿಂದ ಮಾತನಾಡುತ್ತಿದ್ದಾರೆ. 60 ಕೋಟಿ ರೂಪಾಯಿಗಳನ್ನು ನಾವು ಕಿತ್ತುಕೊಳ್ಳೋಣವೆಂದು ಬುದ್ಧಿವಂತಿಕೆ ಮಾಡಿದರೆ. ಇವರು ಭಾಷಣ ಮಾಡಿ ಮನಸ್ಸಿಗೆ ಬಂದಹಾಗೆ ಹೇಳಿಕೊಳ್ಳುತ್ತಿದ್ದಾರೆ. ಹಾಳಾಗಿ ಹೋಗಲಿ ಅವರಿಗೆ ಬಿಟ್ಟುಬಿಡಿ. ನನಗೇನಂತೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎಕ್ಸೈಸ್ ಕಲೆಕ್ಷನ್. 1986-87 ಅವರ ಕಾಲದ್ದು 206 ಕೋಟಿ ಚಿಲ್ಲರೆ.

9.64 ಪರ್ಸೆಂಟ್. ಗ್ರೋತ್ ಓವರ್ ಪ್ರಿವಿಯಸ್ ಇಯರ್ ಕಲೆಕ್ಷನ್ ಪರ್ಸೆಂಟೇಜ್ ವೈಸ್ 1987-88ಕ್ಕೆ 243 ಕೋಟಿ. 17.86 ಪರ್ಸೆಂಟ್. 1988-89, 256.53. ಗ್ರೋತ್ ರೇಟ್ ಏಕದಂ ಕಡಿಮೆ ಕೆಳಗಡೆಗೆ 17 ಪರ್ಸೆಂಟ್ ಸಮ್‌ಥಿಂಗ್ ನಿಂದ ಬರೀ 5.28 ಕ್ಕ ಬಂದಿದೆ. ಏತಕ್ಕೆ ಕಡಿಮೆಯಾಯಿತು? ಅವರ ಕಾಲದಲ್ಲಿ 5.28. 1989-90. 327.69. 1990-91ಕ್ಕೆ 31.18 ಇದು ಅಬ್‌ನಾರ್ಮಲ್ ಗ್ರೋತ್ ಎಂದು. ಏತಕ್ಕೆಂದರೆ ಅನ್‌ಹೆಲ್ತಿ ಕಾಂಪಿಟೇಷನ್ ಆಗಿಹೋಯಿತು. ಇದನ್ನು ಬೇರೆಯದಕ್ಕೆ ಹೋಲಿಸಬಾರದು. ಇದು ಮಾತ್ರ ಹೂಚ್ ಟ್ರಾಜಿಡಿ ಆಗುತ್ತದೆ. ಅದು ಇದು ಮಾರಾಟ ಮಾಡುವುದು. ಆರೋಗ್ಯಕ್ಕೆ ಪೆಟ್ಟು ಬೀಳತಕ್ಕ ವಿಚಾರವಾದ್ದರಿಂದ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಈ ಅರೆಕೆ ವಿಚಾರದಲ್ಲಿ ಮಾತ್ರ. ಏತಕ್ಕೆಂದರೆ ಹಿಂದೆ ದೇಸಾಯಿ ಕಮಿಷನ್ ರಿಪೋರ್ಟ್‌ನಲ್ಲಿದೆ. ಬರೀ ಹಣವನ್ನು ಮಾಡುವುದಕ್ಕೋಸ್ಕರವೇ ಈ ಇಲಾಖೆ ಇದೆ ಎಂದು ತಿಳಿದುಕೊಂಡರೆ ಬಹಳ ತಪ್ಪು. ಕಮರ್ಷಿಯಲ್ ಟ್ಯಾಕ್ಸ್ ಆದರೆ ಅದು ವ್ಯತ್ಯಾಸವಾಗಬಹುದು. ಅದು ಹಾಗಲ್ಲ. ಸಾರಾಯಿ ಕೊಡತಕ್ಕಂಥ ವಿಚಾರವಿರುವುದರಿಂದ ಬರೀ ಹಣ ಮಾಡುವುದು ಮತ್ತೊಂದು ನೋಡಿಕೊಂಡು ಹೋಗ ಬಾರದೆನ್ನತಕ್ಕಂಥ ವಿಚಾರವಾದ್ದರಿಂದ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆಂದು ಮಾನ್ಯ ದೇಸಾಯಿಯವರ ಕಮಿಷನ್ ರಿಪೋರ್ಟ್‌ನಲ್ಲಿ ವರದಿ ಇದೆ. ನಾವು ಅದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. 1991-92. 530 ಕೋಟಿ. 23.34 ಪರ್ಸೆಂಟ್. 1992-93 ಮುಂದಿನ ವರ್ಷಕ್ಕೆ 12.74 ಇಟ್ಟಿದ್ದೇವೆ. ಇದು ಜಾಸ್ತಿಯಾಗಬೇಕು. ಆದರೆ ಹೂಚ್ ಟ್ರಾಜಿಡಿ ಮತ್ತೊಂದರಿಂದ ಜನ ಸಾಯುವುದನ್ನು ನೋಡಿ ಅನ್‌ಹೆಲ್ತಿಗೆ ಹೋಗಬಾರದು. ಎಷ್ಟು ಬೇಕೋ ಅಷ್ಟು ಇರಬೇಕು ಎನ್ನತಕ್ಕಂಥ ವಿಚಾರವನ್ನು ನಾನು ಕಳೆದವರ್ಷವೇ ಹೇಳಿದ್ದೇನೆ. ಏತಕ್ಕೆ ನಾನು ನಿಲ್ಲಿಸಿದ್ದೇನೆ ಎನ್ನುವ ಬಗ್ಗೆ 1990-91ರ ಬಜೆಟ್ ತೆಗೆದು ನೋಡಿ ಟೋಟಲ್ ರೆವಿನ್ಯೂ ಬಜೆಟ್ ಎಕ್ಸ್‌ಪೆಕ್ಟೆಡ್ 555 ಕೋಟಿ. 1991-92ಕ್ಕೆ ನಾನು 555 ಕೋಟಿ ಇದು ಜಸ್ಟಿಫೈ ಮಾಡಿದೆ. ಏತಕ್ಕೆಂದರೆ ಜನರ ಆರೋಗ್ಯ ದೃಷ್ಟಿಯಿಂದ ನಾವು ಹಣದ ಆಸೆಗೆ ಹೋಗಬಾರದು ಎನ್ನುವ ಮಾತನ್ನು ಹೇಳಿದೆ. ಆದ್ದರಿಂದ ಇಲ್ಲಿ ರೆವಿನ್ಯೂ ನೋಡಿದರೆ ಅವರ ಕಾಲದಲ್ಲಿ ಏತಕ್ಕೆ ಡೌನ್‌ವರ್ಡ್ ಟ್ರೆಂಡ್ ತೆಗೆದುಕೊಂಡಿತು ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಮತ್ತೆ ಮೋಟಾರ್ ವಹಿಕಲ್ಸ್ ಕಲೆಕ್ಷನ್. 1987-88. 2.89. 1988-89ಕ್ಕೆ 158 ಕೋಟಿ. 13.94. 1989-90. 0.06 ಹೊರಟುಹೋಗಿಬಿಟ್ಟಿದೆ. ಅವರ ಕಾಲದಲ್ಲಿಯೇ ಮೈನಸ್ 0.06. 1990-91ಕ್ಕೆ 192.43 ಕೋಟಿ. ಪರ್ಸೆಂಟೇಜ್ 21.83. ಈಗ 1991-92 ಕರೆಂಟ್ ಇಯರ್‌ಗೆ 215 ಕೋಟಿ 11.73. 1992-93ಕ್ಕೆ ಪ್ರೊಪೋಸ್ಡ್ ಪರ್ಸೆಂಟೇಜ್ ಮುಂದಿನ ವರ್ಷಕ್ಕೆ 14.76. ಇನ್ನು ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್. ಪ್ರತಿಯೊಂದನ್ನು ಜಸ್ಟಿಫೈ ಮಾಡುತ್ತಿದ್ದೇನೆ. ಓವರ್‌ಆಲ್ ರೆವಿನ್ಯೂ ಎಷ್ಟು ಬಂದಿದೆ ಎಂದರೆ ಆ ವಿವರ ಈ ಪ್ರಕಾರ ಇದೆ :

ವರ್ಷ	ಕೋಟಿ ರೂ.ಗಳು	ಶೇಕಡಾವಾರು
1986-87	61.32	19.48
1987-88	85	39.40
1988-89	107	25.20
1989-90	126	18.12
1990-91	144	14.06
1991-92		45.55

1992-93ಕ್ಕೆ 30.95 ಪರ್ಸೆಂಟ್ ಗುರಿ ಇಟ್ಟುಕೊಂಡಿದ್ದೇವೆ. ಅದು ಇನ್ನೂ ಮುಂದೆ ಹೋಗಬಹುದು. ನಾವು ಫಿಸ್ಕಲ್ ಮ್ಯಾನೇಜ್‌ಮೆಂಟ್ ಕಡೆ ಸ್ವಲ್ಪ ಗಮನ ಕೊಡಬೇಕಾಗಿದೆ. ಹಣ ಎಷ್ಟು ಕಲೆಕ್ಟ್ ಮಾಡುತ್ತೇವೆ ಎಂಬುದನ್ನು ನೋಡಬೇಕು ಮತ್ತು ಅನ್‌ನೆಸಸರಿಯಾಗಿ ಖರ್ಚು ಮಾಡುವುದನ್ನು ನಿಲ್ಲಿಸಬೇಕು. ಕಲೆಕ್ಷನ್ ಗ್ರೋತ್ ರೇಟ್ ಪರ್ಸೆಂಟೇಜ್ ಜಾಸ್ತಿ ಕಲೆಕ್ಟ್ ಮಾಡುವುದಕ್ಕೆ ಹೆಲ್ಪ್ ಆಗುತ್ತದೆ. ಇಲ್ಲದಿದ್ದರೆ ಹಣ ಹೊರಟು ಹೋಗುತ್ತದೆ. ತಮಗೆ ಗೊತ್ತಿರುವ ಹಾಗೆ ಮಿತವ್ಯಯದ ಬಗ್ಗೆ ನಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇವೆ. ಅದಕ್ಕಾಗಿ ಕ್ಯಾಬಿನೆಟ್ ಸಭೆ ಕಮಿಟಿಯನ್ನು ಮಾಡಿ 15 ದಿನಗಳಲ್ಲಿ ವರದಿ ಕೊಡಬೇಕೆಂದು ಹೇಳಿದೆವು. ಶ್ರೀ ನರಸಿಂಹರಾವ್ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ಮುಖ್ಯ ಮಂತ್ರಿಗಳ ಮೀಟಿಂಗ್ ಮಾಡಿದ ಕಾಲದಲ್ಲಿ ಕೂಡ ಈ ಸಲಹೆಯನ್ನು ಮಾಡಿದ್ದೇವೆ. ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಸಚಿವರ ವೇತನದಲ್ಲಿ ಶೇಕಡ 10ರಷ್ಟು ಕಡಿತ ಮಾಡಿಕೊಳ್ಳಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಮಾನ್ಯ ಶಾಸಕರಿಗೂ ಪತ್ರ ಬಂದಿರಬಹುದು. ತಾವು ಮಾಡಿ ಎಂದು ವಿನಂತಿ ಮಾಡಿದ್ದೇವೆ. ಮಾಡುವುದು ಬಿಡುವುದು ನಿಮಗೆ ಬಿಟ್ಟಿದುದು. ನನಗೆ ನೂರೆಂಟು ಇಲಾಖೆಗಳ ಇರುತ್ತವೆ. ಗೊತ್ತಾಗುವುದಿಲ್ಲ. ಈಗ ನನಗೆ ಒಂದು ಇಲಾಖೆಯ ವಿಚಾರ ನನ್ನ ಗಮನಕ್ಕೆ ಬಂದಿದೆ. ಈಗ ಆ ವಿವರ ಹೇಳುವುದಿಲ್ಲ. ತೀರ್ಮಾನ ಆದಮೇಲೆ ಹೇಳುವುದು. ಏಕೆಂದರೆ ಈಗ ಹೇಳಿದ ತಕ್ಷಣ ಪತ್ರಿಕೆಗೆ ಹೊರಟು ಹೋಗುತ್ತದೆ. ಆದ್ದರಿಂದ ನಾನು ಹುಷಾರಾಗಿರಬೇಕು. ಅದಕ್ಕೋಸ್ಕರ ನಾನು ಬಾಯಿ ಬಿಡುವುದಿಲ್ಲ. ಆದರೆ ತಿಂಗಳಿಗೆ 6-8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಕೆಲಸ ಮಾತ್ರ ಮೂರು ರೂಪಾಯಿನದು ಇಲ್ಲ. ಆ ಫೈಲು ರೆಡಿ ಮಾಡಿಕೊಂಡು ತರುವುದಕ್ಕೆ ಹೇಳಿದ್ದೇನೆ. ಅದು ಯಾವುದು ಎಂದು ಈಗ ಹೇಳುವುದಿಲ್ಲ. ಅದು ಬಂದಮೇಲೆ ಸದನದ ಮುಂದಿಡುತ್ತೇನೆ. ಮತ್ತು ತೀರ್ಮಾನ ಮಾಡಿ ಒಂದು ವಾರದಲ್ಲಿ ಹೇಳುತ್ತೇನೆ. ಅವರು ಕಾರು. ಬಂಗಲೆ ಇಟ್ಟುಕೊಂಡು ಆರಾಮವಾಗಿ ಮಜಾ ಮಾಡಿಕೊಳ್ಳುತ್ತಾ ಇರುವುದು. ಇವತ್ತಿನ ದಿವಸ ಅನೇಕ ಕಡೆಗಳಲ್ಲಿ ಈ ರೀತಿ ಇದೆ. ಅದಕ್ಕಾಗಿ ಸರ್ಕಾರದವರು ತೀರ್ಮಾನ ಮಾಡಿದ್ದೇವೆ. ಡಿವಿಜನಲ್ ಕಮಿಷನರ್ ಆಫೀಸ್. ಅಸಿಸ್ಟೆಂಟ್ ಕಮಿಷನರ್ ಆಫೀಸ್, ಜಾಯಿಂಟ್ ಡೈರೆಕ್ಟರ್ಸ್. ಜಾಯಿಂಟ್ ಕಮಿಷನರ್ಸ್ ಆಫೀಸ್ ಎಂದು ಹೀಗೆ 28 ಇವೆ. ಲೋಕೋಪಯೋಗಿ ಇಲಾಖೆ ಎಂದರೆ ಅಲ್ಲಿ ಮುಖ್ಯ ಇಂಜಿನಿಯರ್‌ಗಳು ಎಷ್ಟು ಜನ ಇರಬೇಕು? ಶ್ರೀ ದೇವರಾಜ ಅರಸು ಅವರ ಕಾಲದಲ್ಲಿ ನಾನು ಲೋಕೋಪಯೋಗಿ ಸಚಿವನಾಗಿದ್ದಾಗ ಇದ್ದ ಚೀಫ್ ಇಂಜಿನಿಯರ್‌ಗಳ ಅಂಕಿಸಂಖ್ಯೆಗೂ ಈಗ ಇರತಕ್ಕ ಅಂಕಿಸಂಖ್ಯೆಗೂ ಹೋಲಿಸಿ ನೋಡಿದರೆ ಹುಚ್ಚು ಹಿಡಿಯುತ್ತದೆ. ಏತಕ್ಕೆ ಅಷ್ಟು ಜನರನ್ನು ನೇಮಕ ಮಾಡಿದ್ದಾರೆಂದು ಗೊತ್ತಾಗುತ್ತಿಲ್ಲ. ಈಗ ನಾವು ಅದಕ್ಕೆಲ್ಲ ಕತ್ತರಿ ಪ್ರಯೋಗ ಮಾಡುವುದಕ್ಕೆ ಹೊರಟಿದ್ದೇವೆ; ಮಾಡುತ್ತೇವೆ. ನಾವು ಇದೇ ರೀತಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಜಯಚಂದ್ರ ಅವರೆ ಕೇಳಿ. ಒಂದು ಸಾರಿ ಚೀಫ್ ಇಂಜಿನಿಯರ್ ಆದಮೇಲೆ ನೀವು ಏನೂ ಮಾಡುವುದಕ್ಕೆ ಬರುವುದಿಲ್ಲ. ಉದಾಹರಣೆಗೆ ಡಿವಿಜನಲ್ ಕಮಿಷನರ್ ಆಫೀಸ್ ವಜಾ ಮಾಡಿದೆವು ಅನ್ನಬಹುದು. ಆದರೆ ಅಲ್ಲಿನ ಅಧಿಕಾರಿಗಳು, ಕ್ಲರ್ಕ್ಸ್. ಪೀವನ್ಸ್ ಇವರನ್ನು ವಜಾ ಮಾಡುವುದಕ್ಕೆ ಬರುವುದಿಲ್ಲ. ಅವರನ್ನು ಬೇರೆ ಬೇರೆ ಕಡೆ ಕಳುಹಿಸಬೇಕಾಗುತ್ತದೆ. ಆದರೆ ಕಾರು, ಬಿಲ್ಡಿಂಗ್ ಬಾಡಿಗೆ ಇತ್ಯಾದಿ ಖರ್ಚನ್ನು ಉಳಿಸಿಕೊಂಡು ಹೋದರೆ ಎಷ್ಟೋ ಕೋಟಿ ರೂಪಾಯಿ ಹಣ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಒಂದು ವರ್ಷಕ್ಕೆ. ಇದನ್ನು ನಾವು ವಿಚಾರ ಮಾಡಿದ್ದೇವೆ. ಆಮೇಲೆ -

a) Winding up or merger or privatisation of several State Public Enterprises Corporations and Boards which are making losses and are not serving any useful public purposes.

b) To merge certain Directorates of the Government whose activities and roles are identical.

c) To identify superfluous posts at the apex and senior levels in the Departments of Personnel & Administrative Reforms, Police, Reforms, Police, Forest, Public Works and Irrigation and abolish such posts. Divisional Commissioners and other divisional level posts will also be abolished.

ಇವನ್ನೆಲ್ಲ ನಾವು ಬಿಸಾಕಿದರೆ ಒಳ್ಳೆಯದು. ಭಾರ ಸ್ವಲ್ಪ ಮೇಲೆ ಹೋದರೆ ಸಾಕಾಗಿದೆ. ಕತ್ತಿಗೆ ಹೊರುವುದಕ್ಕೆ ಶಕ್ತಿ ಎಷ್ಟಿದೆಯೋ ಅಷ್ಟು ಭಾರ ಇದ್ದರೆ ಸಾಕು. ತೀರಾ ತಲೆ ಮೇಲೆ ಹಾಕುವುದು ಬೇಡ. ಇದು ದೊಡ್ಡ ಅನ್ಯಾಯ. Then, stoppage of ex-gratia payments by loss making State Public, Sector Enterprises, cuts to the extent of five percent in staff components, ten percent in Office expenditure and twenty percent in fuel consumption by all Departments of the State Government.

ಮೊನ್ನೆ ನಾನು ದೆಹಲಿಯಲ್ಲಿದ್ದಾಗ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಒಳ್ಳೆಯ ಕೆಲಸ ಮಾಡಿದರು. ಅವರು ಮಾರಿಷಸ್‌ಗೆ ಹೋಗಬೇಕಾಗಿತ್ತು. ಹೋಗಬೇಕಾದರೆ ಅವರು ಏನು ಮಾಡಿದರು? ನಾವು ಯಾವಾಗಲೂ ಟೆಕ್ನಿಕಲ್ ಏರಿಯಾಗೆ ಹೋಗುತ್ತೇವೆ ಅವರನ್ನು ಬೀಳ್ಕೊಡುವುದಕ್ಕೆ. ಅವರು ಏನು ಈ ಸಾರಿ ಮಾಡಿದ್ದಾರೆ ಎಂದರೆ ಹೊಸದಾಗಿ ಒಂದು ವಿನೂತನ ಕೆಲಸ ಮಾಡಿದ್ದಾರೆ. ನೂರಾರು ಕಾರುಗಳು ಬರುತ್ತದೆ ಅಲ್ಲಿ: ಪೆಟ್ರೋಲ್ ಎಷ್ಟು ಖರ್ಚಾಗುತ್ತದೆ? ಅದಕ್ಕೆ ಏನು ಮಾಡಿದರು? ಅವರ ಮನೆ ಹತ್ತಿರ ಒಂದು ಫೀಲ್ಡ್ ಆರಿಸಿಬಿಟ್ಟಿದ್ದಾರೆ. ನಮಗೆಲ್ಲಾ ಪಾಸ್ ಕಳುಹಿಸಿಕೊಟ್ಟರು ಕರ್ನಾಟಕ ಭವನಕ್ಕೆ. ತಾವು ದಯವಿಟ್ಟು ಅಲ್ಲಿಗೆ ಬರಬೇಕು ಎಂದು ಹೇಳಿದರು. ಮೀಟಿಂಗ್‌ಗೆ ಹೋದಾಗಲೂ ಹೇಳಿದ್ದರು. ನಮ್ಮ ಕರ್ನಾಟಕ ಭವನದಿಂದ ಹಾರ್ಡ್‌ಲಿ ಎರಡು ನಿಮಿಷದಲ್ಲಿ ಹೋಗುವ ಜಾಗ ಅದು. ಅದೇ ಏರ್‌ಪೋರ್ಟ್ ಹತ್ತಿರ ಟೆಕ್ನಿಕಲ್ ಏರಿಯಾಗೆ ಹೋಗಬೇಕಾದರೆ ಎಷ್ಟು ಲೀಟರ್ಸ್ ಬೇಕು ನಮಗೆ. ಖರ್ಚೆಷ್ಟು? ಅದರ ಬದಲು ಅಲ್ಲಿ ಬಂದರು. ನಮಸ್ಕಾರ ಅಂದರು. ಆಮೇಲೆ ಒಂದೇ ಕಾರ್. ಅವರ ಸ್ಟಾಫ್ ಮಾತ್ರ ಏರ್‌ಪೋರ್ಟ್‌ಗೆ ಹೋದರು. ಆವತ್ತು ಒಂದು ದಿವಸ ಅನೇಕ ಸಾವಿರಾರು ರೂಪಾಯಿ ಹಣ ಉಳಿಸಿದ್ದೇವೆ. ನಾವೆಲ್ಲರೂ ಸೇರಿ. the best idea of our respected Prime Minister. ಹೀಗೆ ನಾವು ಮಾಡಿಕೊಂಡು ಹೋಗುವ ವಿಚಾರ ಕೂಡ ಇವೆ. ಆಮೇಲೆ to merge B.M.R.D.A. With B.D.A., to restrict frequent trips of field officers to State and district headquarters, to abolish sub-divisional level offices, Assistant Commisioners will be trips to Delhi by various officials ಈ ರೀತಿ ಇರತಕ್ಕದ್ದನ್ನು ವಿಚಾರ ಮಾಡಿದ್ದೇವೆ. ಇನ್ನೂ ಬೇಕಾದಷ್ಟು ಬರುತ್ತದೆ. ಪಟ್ಟಿ ಇದೆ. ನಾನು ಎಲ್ಲವನ್ನೂ ಓದುವುದಕ್ಕೆ ಹೋಗುತ್ತಿಲ್ಲ. ಆಮೇಲೆ ಇಷ್ಟಾದಮೇಲೆ ನಾನು ಈಗ ಬಹಳ ಪ್ರಾಮುಖ್ಯವಾದ ಒಂದು ವಿಚಾರಕ್ಕೆ ಬರುತ್ತಿದ್ದೇನೆ. ನಾವು ಇಷ್ಟು ಮಾಡಿದರೂ ಕೂಡ ಡಿಫಿಸಿಟ್

ಬಜೆಟ್ ಬರುತ್ತದೆ. ಯಾವಾಗಲೂ ಬಜೆಟ್ ಮಾಡಬೇಕಾದರೆ ಡಿಫಿಸಿಟ್ ಹೆಚ್ಚು ಇಲ್ಲದಹಾಗೆ ನಾವು ನೋಡಿಕೊಳ್ಳಬೇಕು. ರಿಸೋರ್ಸ್ ಮೊಬಲೈಸೇಷನ್ ಮತ್ತೊಂದು ಮಾಡಿಕೊಂಡು ಗಮನ ಕೊಟ್ಟು ನೋಡಿಕೊಳ್ಳಬೇಕು. ಅಂದರೆ ಅಡಿಷನಲ್ ರಿಸೋರ್ಸ್ ಮೊಬಲೈಸೇಷನ್ ಮಾಡಬೇಕು. ಕರ್ನಾಟಕದಲ್ಲಿ ಓವರ್ ಆಲ್ ಬಜೆಟ್ ಡಿಫಿಸಿಟ್ ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಆಯಿತು ಎಂಬ ಬಗ್ಗೆ ತಮ್ಮ ಮುಂದೆ ಅಂಕಿಅಂಶ ಸಹಿತ ಇಡುತ್ತಿದ್ದೇವೆ. ಅದು ಕೋಟಿಗಳಲ್ಲಿ ಇದೆ. ಆಮೇಲೆ ಪರ್ಸೆಂಟೇಜ್ ಸ್ಟೇಟ್ ಪ್ಲಾನ್‌ನಲ್ಲಿ ಎಷ್ಟಿದೆ ಎಂದು ಇದೆ. 1983-84ರಲ್ಲಿ 575 ಕೋಟಿ. ಅಂದರೆ ರಾಮಕೃಷ್ಣ ಹೆಗಡೆಯವರು ಮೊಟ್ಟಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಕಾಲ ಅದು. ಡಿಫಿಸಿಟ್ 160.74 ಕೋಟಿ. ಪರ್ಸೆಂಟೇಜ್‌ವೈಸ್ ಸ್ಟೇಟ್ ಪ್ಲಾನ್ ಡಿಫಿಸಿಟ್ 27.95 ಪರ್ಸೆಂಟ್. 1984-85ರಲ್ಲಿ ಸ್ಟೇಟ್ ಪ್ಲಾನ್ 650.28 ಕೋಟಿ; ಡಿಫಿಸಿಟ್ 182.61 ಕೋಟಿ. ಪರ್ಸೆಂಟೇಜ್ 28.08 ಪರ್ಸೆಂಟ್. 1985-86ರಲ್ಲಿ ಸ್ಟೇಟ್ ಪ್ಲಾನ್ 651ಕೋಟಿ; ಡಿಫಿಸಿಟ್ 73.86 ಕೋಟಿ. ಡಿಫಿಸಿಟ್ ಪರ್ಸೆಂಟೇಜ್ 11.35 ಪರ್ಸೆಂಟ್. 1986-87ರಲ್ಲಿ ಸ್ಟೇಟ್ ಪ್ಲಾನ್ 765 ಕೋಟಿ; ಡಿಫಿಸಿಟ್ 38.89 ಕೋಟಿ; ಪರ್ಸೆಂಟೇಜ್ 5.08 ಪರ್ಸೆಂಟ್. 1987-88ರಲ್ಲಿ ಸ್ಟೇಟ್ ಪ್ಲಾನ್ 870 ಕೋಟಿ; ಡಿಫಿಸಿಟ್ 147.95 ಕೋಟಿ; ಡಿಫಿಸಿಟ್ ಪರ್ಸೆಂಟೇಜ್ 17.01 ಪರ್ಸೆಂಟ್. 1988-89ರಲ್ಲಿ ಸ್ಟೇಟ್ ಪ್ಲಾನ್ 900 ಕೋಟಿ; ಡಿಫಿಸಿಟ್ 327.83 ಕೋಟಿ; ಡಿಫಿಸಿಟ್ ಪರ್ಸೆಂಟೇಜ್ 36.43 ಪರ್ಸೆಂಟ್. 1989-90ರಲ್ಲಿ ಸ್ಟೇಟ್ ಪ್ಲಾನ್ 1040 ಕೋಟಿ; ಆಗ ಡಿಫಿಸಿಟ್ ಪರ್ಸೆಂಟೇಜ್ 167.83 ಕೋಟಿ. ಡಿಫಿಸಿಟ್ ಪರ್ಸೆಂಟೇಜ್ 16.14 ಪರ್ಸೆಂಟ್. 1990-91 ಅಂದರೆ ನಮ್ಮ ಸರ್ಕಾರ ಬಂದಾಗ ಶುರು ಆಗಿರತಕ್ಕದ್ದು ಸ್ಟೇಟ್ ಪ್ಲಾನ್ 1145 ಕೋಟಿ ಇದೆ. ದಯವಿಟ್ಟು ತಾವು ಗಮನಿಸಬೇಕು ಇಲ್ಲಿ. ಡಿಫಿಸಿಟ್ ಪರ್ಸೆಂಟೇಜ್ 4.95 ಪರ್ಸೆಂಟ್ ಇದೆ. 1990-91ರಲ್ಲಿ ಶ್ರೀ ರಾಜಶೇಖರಮೂರ್ತಿ ಅವರು ಫೈನಾನ್ಸ್ ಮಿನಿಸ್ಟರ್ ಆಗಿದ್ದ ಕಾಲ ಅದು. ಬಹಳ ಚೆನ್ನಾಗಿದೆ. 1991-92 ಎಂದರೆ ಇದೇ ವರ್ಷ ಸ್ಟೇಟ್ ಪ್ಲಾನ್ ಸೈಜ್ 1558 ಕೋಟಿ ಇದೆ. ಡಿಫಿಸಿಟ್ 53.06 ಕೋಟಿ. ಕಳೆದ ಸಾರಿ ನಾನು ಬಜೆಟ್ ಇಟ್ಟಾಗ. ಡಿಫಿಸಿಟ್ ಪರ್ಸೆಂಟೇಜ್ ಬರೀ 3.41 ಪರ್ಸೆಂಟ್ ಅಷ್ಟೇ. 1992-93ಕ್ಕೆ. ಮುಂದಿನ ವರ್ಷಕ್ಕೆ 2158.84 ಕೋಟಿ ರೂಪಾಯಿ ಪ್ಲಾನ್ ಸೈಜ್. ಈ ವರ್ಷದ್ದು ಡಿಫಿಸಿಟ್ ಕೇವಲ 81.75 ಕೋಟಿ ರೂಪಾಯಿ. ಇದು ಪರ್ಸೆಂಟೇಜ್ ವೈಸ್ 3.79 ಮಾತ್ರ. ಇದು ಏನು ತೋರಿಸುತ್ತದೆ ಎಂದರೆ. ಡಿಪಿಸಿಟ್ 81 ಕೋಟಿ ಎಂದು ನಿಮಗೆ ಕಂಡರೂ ಪ್ಲಾನ್ ಸೈಜ್ ನೋಡಬೇಕು. ಎರಡು ಸಾವಿರದ ಒಂದು ನೂರು ಕೋಟಿಯಲ್ಲಿ ಈ 81 ಕೋಟಿ ಎನ್ನುವುದು ರಾಕ್ಷಸನ ಬಾಯಿಗೆ ಒಂದು ತೊಟ್ಟು ಹನಿ ಬಿದ್ದಹಾಗೆ. ಇದು 3.79 ಪರ್ಸೆಂಟ್ ಏಕೆ ಬರುತ್ತದೆ ಎಂದರೆ ಪ್ಲಾನ್ ಸೈಸ್ ದೊಡ್ಡದು ಇದೆ. ಆದ್ದರಿಂದ 81 ಕೋಟಿ ದೊಡ್ಡದು ಅಲ್ಲ. that means we are capable of managing that one, margin is very very low. We are capable of managing this. ಇದು ಡಿಫಿಸಿಟ್ ನಾನು ನಮ್ಮ ಮುಂದೆ ಇಟ್ಟಿರತಕ್ಕದ್ದು. ನಾನು ಇಷ್ಟು ವಿಚಾರಗಳನ್ನು ಅಂಕಿಅಂಶಗಳ ಸಹಿತ ಇಟ್ಟೆ. ಜನತಾದಳದವರ ಸರ್ಕಾರ ಇದ್ದಾಗ ಹಾಗೂ ನಮ್ಮ ಕಾಲದಲ್ಲಿ ಏನೇನು ಮಾಡಿದ್ದೇವೆ ಎಂಬುದನ್ನು ಈಗ ಇಟ್ಟಿದ್ದು ಆಯಿತು. ಇಲ್ಲಿ ಸೆಕ್ಟಾರ್‌ವೈಸ್ ಹಣಕಾಸಿನ ಪ್ಲಾನ್ ಸೈಜನ್ನು ತಮ್ಮ ಮುಂದೆ ಇಟ್ಟೆ. ಪಂಚವಾರ್ಷಿಕ ಯೋಜನೆ ಮತ್ತು ವಾರ್ಷಿಕ ಯೋಜನಾ ಗಾತ್ರ ಇಟ್ಟಿದ್ದೇನೆ. ಎರಡೆಯದಾಗಿ ಫಿಸಿಕಲ್ ಮೇನೇಜ್‌ಮೆಂಟ್ ಇಟ್ಟಿದ್ದೇನೆ. ರೆವಿನ್ಯೂ ಕಲೆಕ್ಷನ್ ಕೂಡ ಇಟ್ಟಿದ್ದೇನೆ. ಸ್ಪಷ್ಟವಾಗಿ ಅಂಕಿಅಂಶಗಳ ಸಹಿತ ಇಟ್ಟಿದ್ದೇನೆ. ಯಾರೇ ಇದನ್ನು ಸರಿಯಿಲ್ಲ ಎನ್ನುವುದಾದರೆ ನಾನು ಅವರ ಕೈಗೇ ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ಅವರು ಓದಿಕೊಳ್ಳಲಿ. ನನ್ನದೇನೂ ಅಬ್ಜೆಕ್ಷನ್

ಇಲ್ಲ. 1991-92ರ ವರೆಗೆ ಎಂದರೆ ಮಾರ್ಚ್ ಅಂತ್ಯದವರೆಗೆ ಓಲ್ಡ್ ಸ್ಕೀಮ್ಸ್ ಇಟ್ಟಿದ್ದೇನೆ. ಉದಾಹರಣೆಗೆ 5 ಮೇಜರ್ ಸ್ಕೀಮ್ಸ್ ಇಟ್ಟಿದ್ದೇನೆ. ಜನಸಾಮಾನ್ಯರು. ಬಡವರು ಮತ್ತೊಬ್ಬರಿಗೆ ಬೇಕಾದ 'ವಿಶ್ವ' ಮುಂತಾದ ಕಾರ್ಯಕ್ರಮಗಳು. finalisation of schemes like Vishwa etc. which were announced last year and even mentioned during 1992-93. ನಾವು ಕಳೆದ ವರ್ಷ ಕೊಟ್ಟಿರತಕ್ಕ ಸ್ಕೀಮ್‌ಗಳು ಯಾವುವು ಎಂದರೆ. 'ವಿಶ್ವ'. ಆಶ್ರಯ. ಅಕ್ಷಯ. ಆರಾಧನ. ಶುಶ್ರೂಷ ಮುಂತಾದವು. ಈ ಕಾರ್ಯಕ್ರಮಗಳನ್ನು ಅಲ್ಲಿಯೇ ಮುಟ್ಟಿ ಅಲ್ಲೇ ಬಿಡುವುದಿಲ್ಲ. ಒಂದು ಸಾರಿ ಹಿಡಿದರೆ ಜಿಗಣೆ ಹಿಡಿದಹಾಗೆ ಹಿಡಿಯುತ್ತೇವೆ. ಇವತ್ತು ಜಾರಿಗೆ ತರತಕ್ಕ ಸಮಯದಲ್ಲಿ ಕೆಲವು ಸಾರಿ ಲೇಟ್ ಆಗಿರಬಹುದು. ಅಥವಾ ಅಲಾಟ್‌ಮೆಂಟ್‌ನಲ್ಲಿ ಕಡಿಮೆ ಆಗಿರಬಹುದು. ಆದರೆ ಕೆಲವು ವಿಷಯಗಳಲ್ಲಿ ನಾವು ಫಸ್ಟ್‌ಕ್ಲಾಸ್ ಆಗಿ ಮುಂದೆ ಹೋಗಿದ್ದೇವೆ. ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಈಗ Government has implemented the schemes with all its seriousness. ನಾವು ಮಾಡಿದ್ದೇವೆ. ಮತ್ತೆ ಈ ಸ್ಕೀಮ್‌ಗಳ ಬಗ್ಗೆ ವಿವರಣೆ ಕೊಡುತ್ತಾ ನಾನು ಮುಂದೆ ಸಾಗುತ್ತೇನೆ. ಹಣವನ್ನು ಯಾವ ರೀತಿ ಇಡುತ್ತೇವೆ ಎಂಬುದನ್ನು ತಮಗೆ ಮುಂದೆ ವಿವರಿಸುತ್ತೇನೆ. ವಿಶ್ವ ಕಾರ್ಯಕ್ರಮ. ನಾನು ಹೇಳುತ್ತೇನೆ. ನನ್ನ 20-25 ವರ್ಷಗಳ ರಾಜಕೀಯ ಜೀವನದ ವಿಚಾರಧಾರೆಯಿಂದ ಹುಟ್ಟಿ ಬಂದಿರತಕ್ಕದ್ದೇ ಈ ವಿಶ್ವ ಕಾರ್ಯಕ್ರಮ. ಜನಸಾಮಾನ್ಯರಿಗೆ ಆಸ್ತಿ ಇಲ್ಲ. ಮನೆಮಠ ಇಲ್ಲದ ವರ್ಗ. ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳು. ಬೆಳಿಗ್ಗೆ ಎದ್ದರೆ ಕೂಲಿಗೆ ಹೋಗಬೇಕು. ನಾವು ಮಿನಿಮಮ್ ವೇಜಸ್ ಆಕ್ಟ್ ಮಾಡಿದ್ದೇವೆ. ಇದು ಎಷ್ಟು ಜಾರಿಗೆ ಬರುತ್ತಾ ಇದೆ. ಕಡು ಬಡವರು. ಮಕ್ಕಳು ಮರಿಗಳು ಅನ್ನಕ್ಕೋಸ್ಕರ ಅಲೆದಾಡತಕ್ಕ ಪರಿಸ್ಥಿತಿಯನ್ನು ನೋಡಿದ್ದೇವೆ. ಅವರಿಗೋಸ್ಕರ ಈ ಕಾರ್ಯಕ್ರಮವನ್ನು ಮಾಡಿದ್ದೇವೆ. ಅದಕ್ಕೆ ಏನು ಮಾಡಬೇಕು? Manpower that is available, we must try to make use of it. We must make use of this one. ಮ್ಯಾನ್ ಪವರ್‌ನ್ನು ಚೆನ್ನಾಗಿ ಉಪಯೋಗ ಮಾಡಬೇಕು. ಅದಕ್ಕೆ ಏನು ಮಾಡಬೇಕು? ಅವರಿಗೆ ಕೆಲಸ ಕೊಡಬೇಕು. ಎಂಪ್ಲಾಯ್‌ಮೆಂಟ್ ಎಂದರೆ ಬರೀ ಅನ್ನ ಬಾಯಿಗೆ ಹಾಕುವುದು ಅಲ್ಲ. ಅನ್ನ ತಿಂದರೆ we must give something to the society and country. It is not a small thing. Employment and production oriented programmes. ಉದ್ಯೋಗ ಮತ್ತು ಉತ್ಪಾದನಾಧಾರಿತ ಕಾರ್ಯಕ್ರಮವೇ 'ವಿಶ್ವ'. ಈ ಕಾರ್ಯಕ್ರಮಕ್ಕೆ ಎಷ್ಟು ಕೋಟಿ ಕೊಟ್ಟಿದ್ದೇವೆ? ಈಗ ಅದರ ರೂಪರೇಷೆ ಬಗ್ಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಅದು ತಮಗೆ ಗೊತ್ತಿರತಕ್ಕ ವಿಚಾರ. ಈ ಕಾರ್ಯಕ್ರಮಗಳನ್ನು ಪ್ರೀತಿ ವಿಶ್ವಾಸದಿಂದ ಪ್ರಾರಂಭ ಮಾಡಿದ್ದೇವೆ. ಇವು ಭಾರಿ ಜನಪ್ರಿಯತೆ ಗಳಿಸಿವೆ ಎಂದೂ ನಾನು ಕರೆದುಕೊಳ್ಳುವುದಕ್ಕೆ ಹೋಗುವುದಿಲ್ಲ. 1991-92ರಲ್ಲಿ ನಾವು ಬಜೆಟ್ ಅಲೋಕೇಷನ್ ಬರೀ 10 ಕೋಟಿ ರೂ. ಇಟ್ಟಿದ್ದೇನೆ. ಏಕೆಂದರೆ ಟ್ರಯಲ್ ಅಂಡ್ ಎರರ್ ಮೆಥಡ್ ಕೊಡಬೇಕೆಂದು. ಬರೀ ಒಂದು ಟೆಸ್ಟ್ ಡೋಸ್ ಕೊಟ್ಟಿದ್ದು. ಏಕೆಂದರೆ ಅದು ಫೇಲ್ ಏನಾದರೂ ಆದರೆ ನಾವು ಹಣವನ್ನು ಕಳೆದುಕೊಳ್ಳುವುದು ಬೇಡ. ಏಕೆಂದರೆ ಇದು ತೆರಿಗೆದಾರರ ಹಣ. It is a tax payer's money. ಫೇಲಾದರೆ ಹಣವನ್ನು ಹಾಳು ಮಾಡಿಕೊಳ್ಳುವುದು ಬೇಡವೆನ್ನುವ ದೃಷ್ಟಿಯಿಂದ ಬರೀ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ತಾವು 1991-92ನೇ ಸಾಲಿನ ಲೆಕ್ಕಪತ್ರಗಳನ್ನು ನೋಡಿ 10 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 2 ಕೋಟಿ ರೂಪಾಯಿ ಟರ್ನ್‌ಓವರ್ ನಾವು ಮಾಡಿದ್ದೇವೆ. ಈಗಾಗಲೇ Am I correct ? ನಾವು ಮಾಡಿದ್ದೇವೆ. ಆಮೇಲೆ ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೀಮ್‌ಗಳು ಟ್ರೈಸಂ ಇತ್ಯಾದಿ ಎಲ್ಲಾ ಇವೆ. ಅವರ ಹಣವನ್ನು

ಕೂಡ ನಾವು ಉಪಯೋಗ ಮಾಡಿದ್ದೇವೆ. ಹಳೆಯ ವರ್ಕ್ಸ್‌ಗಳಿಗೆ ನಾವು ಹಣವನ್ನು ಉಪಯೋಗ ಮಾಡಿದ್ದೇವೆ. ನಾವು ಇಲ್ಲಿ ತಮ್ಮ ಗಮನಕ್ಕೆ ತರತಕ್ಕದ್ದು. ಮುಂದಿನ ವರ್ಷ ಹಾಗಲ್ಲ. ನಾನು ಹೇಳಿದ್ದೆ ಮೊದಲು. ಈ ವರ್ಷ ಬಜೆಟ್‌ನಲ್ಲಿ 560 ಕೋಟಿ ಇಟ್ಟು 5 ವರ್ಷಗಳ ಕಾಲದಲ್ಲಿ 5 ಲಕ್ಷ ಜನರಿಗೆ ಉದ್ಯೋಗ ಕೊಡುತ್ತೇವೆನ್ನುವ ಮಾತನ್ನು ಆಡಿದ್ದೇವೆ. You may just refer to that point. I thought overthat matter ನಾನು ಯೋಚನೆ ಮಾಡಿದೆ. ಐದು ವರ್ಷ ಅಂದರೆ ನಾವೇನೂ ಮಾಡಿದಹಾಗೆ ಆಗುವುದಿಲ್ಲ ಎಂದು ನನ್ನ ಪ್ರಶ್ನೆಗೆ ನಾನೇ ಉತ್ತರ ಹುಡುಕಿಕೊಂಡೆ. ಐದು ವರ್ಷ ಅಂದರೆ ಮುಂದಿನ ಎರಡು ವರ್ಷಗಳಲ್ಲಿ ಎಲೆಕ್ಷನ್ ಬರುತ್ತದೆ. ಎಲೆಕ್ಷನ್ ಎರಡು-ಮೂರು ವರ್ಷಗಳಲ್ಲಿ ಬರುತ್ತದೆ. ಐದು ವರ್ಷಗಳಲ್ಲಿ ಬರೀ ಮೂರು ವರ್ಷಗಳಲ್ಲಿ. ಕೆಲವು ಮಾಡುತ್ತೇವೆ ಇನ್ನು ಎರಡು ವರ್ಷ ಮತ್ತೆ ಉಳಿಯುತ್ತದೆ ಮುಂದೆ ಬರುವ ಸರ್ಕಾರ ಯಾವ ಪಕ್ಷದ್ದು ಬರುತ್ತದೆಯೋ ನಮಗೇನು ಗೊತ್ತು? ಕಾಂಗ್ರೆಸ್ ಪಕ್ಷ ಮತ್ತೊಂದು ಪಕ್ಷ ಅಧಿಕಾರಕ್ಕೆ ಬರುತ್ತದೆ. ಮಾನ್ಯ ಜುಟ್ಟಿಲ್‌ರವರು ಏನೋ ಇದೆ ಬರುತ್ತದೆಂದು ತೋರಿಸುತ್ತಿದ್ದಾರೆ. ಆದರೆ ನಾವು ಹೇಗೆ ಹೇಳುವುದಕ್ಕಾಗುತ್ತದೆ? ಅದು ಜನರಿಗೆ ಬಿಟ್ಟಿರತಕ್ಕ ವಿಚಾರ. ಆದರೆ ಒಂದೇ ಒಂದು ಮುಂದೆ. ಈವೊಂದು ವಿಚಾರಧಾರೆಯ ಬಗ್ಗೆ ನಂಬಿಕೆ ಇರತಕ್ಕ ಪಕ್ಷದ ಕೈಯಲ್ಲಿ ಅಧಿಕಾರ ಬಂದರೆ ನಮ್ಮ ಪಕ್ಷ ಇರಬಹುದು ಅಥವಾ ಮತ್ತೊಂದು ಪಕ್ಷ ಇರಬಹುದು. ಇದನ್ನು ಬೆಳೆಸೋಣ ಮಾಡೋಣ. ಜನರಿಗೆ ಉದ್ಯೋಗ ಕೊಡೋಣ. ಉತ್ಪಾದನೆ ಮಾಡೋಣ ಜನ ಇದರ ಕಡೆಗೆ ಗಮನಹರಿಸಿದರೆ ಬಹಳ ಒಳ್ಳೆಯದು. ನಾನು ಯೋಚನೆ ಮಾಡಿದೆ. ಮುಂದೆ ಬರುವ ಸರ್ಕಾರದ ಕೈಯಲ್ಲಿ ಇದನ್ನು ಬಿಡುವುದು ಬೇಡವೆಂದು. ಅದು ಒಳ್ಳೆಯದಲ್ಲವೆಂದು ನಾನು ಯೋಚನೆ ಮಾಡಿದೆ. ಸರ್ಕಾರದವರು ಯೋಚನೆ ಮಾಡಿ We have now brought it down to the period of three years instead of five years. We have already announced it. ಇದಕ್ಕೆ 560 ಕೋಟಿ ರೂಪಾಯಿ ಎಂದು ನಾವು ಅಂದಾಜು ಮಾಡಿದ್ದೇವೆ. ವರ್ಷಕ್ಕೆ ಅಷ್ಟು ಹಣವನ್ನು ನಾವು ಕೊಡುತ್ತೇವೆ. I am coming out with all the true figures. 10 ಕೋಟಿ ರೂಪಾಯಿ ನಾವು ಈ ವರ್ಷ ಇಟ್ಟರೆ. ಮುಂದಿನ ಏಪ್ರಿಲ್‌ನಿಂದ ಇದು ಶುರುವಾಗುತ್ತದೆ. ಐದು ವರ್ಷಗಳಿಗೆ 560 ಕೋಟಿಯೆಂದು ನಾವು ಹೇಳಿದ್ದೇವೆ. ಮೂರು ವರ್ಷಕ್ಕೆ 560 ಕೋಟಿ ಎಂದು ತಾವು ತಿಳಿದುಕೊಳ್ಳುವುದು ಬೇಡ ಏತಕ್ಕೆ ಗೊತ್ತೆ. ಮುಂದಿನ ವರ್ಷದಲ್ಲಿ ನಾವು 475 ಕೋಟಿ ರೂಪಾಯಿಗಳನ್ನು ವಿಶ್ವ ಕಾರ್ಯಕ್ರಮಕ್ಕೆ ಕೊಡುತ್ತಿದ್ದೇವೆ. ಬಜೆಟ್‌ನಲ್ಲಿ ನಾವು 75 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದೇವೆ. ಇದು ಇನ್ಸಿಟ್ಯೂಟ್ ಆಫ್ ಫೈನಾನ್ಸ್ ಅದೆಲ್ಲ ಬರುತ್ತದೆ. ಅದನ್ನೆಲ್ಲ ತಾವು ಲೆಕ್ಕ ಹಾಕಿಕೊಳ್ಳಬೇಕು. 475 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆ. ಏಕೆಂದರೆ ಇದರಿಂದ ನಮಗೆ ಸಕ್ಸಸ್ ಸಿಕ್ಕಿದೆ. ಈಗಾಗಲೇ ಒಂದು ಟೀಂ ಸಿಂಗಾಪುರಕ್ಕೆ ಹೋಗಿ ಬಂದಿದೆ. ಮಾನ್ಯ ಸಚಿವರಾದ ನಜೀರ್ ಅಹ್ಮದ್‌ರವರು ಹೋಗಿ ಬಂದಿದ್ದಾರೆ. ಇನ್ನೂ ಸ್ವಲ್ಪ ಅವರನ್ನು ಕಳುಹಿಸಬೇಕು. ಅವರು ಒಬ್ಬರೇ ಅಲ್ಲ. ಕೆಲವು ಅಧಿಕಾರಿಗಳು ಪರಿಣಿತರು ಇದ್ದಾರೆ ಅಂತಹವರು ಎರಡು ಮೂರು ಜನ ಇದ್ದಾರೆ ಅವರು ಐ ಎ ಎಸ್. ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ ಮೂರು ಜನರು ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನ ಸೆಕ್ರೆಟರಿಯವರು ಅವರನ್ನು ಕಳುಹಿಸುತ್ತೇನೆ.

ಶ್ರೀ ಆರ್. ದಯಾನಂದ ರಾವ್: ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ವರ್ಷಕ್ಕೆ 475 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಹೌದು. ಒಂದು ವರ್ಷಕ್ಕೆ ಅಂದರೆ 1992-93 ಅದು ಮುಂದಿನ ಏಪ್ರಿಲ್‌ನಿಂದ ಪ್ರಾರಂಭವಾಗುತ್ತದೆ. 1992ಕ್ಕೆ 475 ಕೋಟಿ ರೂಪಾಯಿ ಅಂದರೆ ಅದು 1992-93ನೇ ವರ್ಷಕ್ಕೆ ಆಗುತ್ತದೆ. 1993-94ಕ್ಕೆ ಅದೇ ರೀತಿ ಹೋಗುತ್ತೇವೆ. 1994-95ಕ್ಕೆ ಅದೇ ರೀತಿ ಹೋಗುತ್ತೇವೆ. ಅಲ್ಲಿಗೆ ಆವರೇಜ್ 500 ಕೋಟಿ ರೂಪಾಯಿ ಎಂದು ಇಟ್ಟುಕೊಂಡರೆ 1500 ಕೋಟಿ ರೂಪಾಯಿಗಳನ್ನು ವಿಶ್ವ ಕಾರ್ಯಕ್ರಮಕ್ಕೆ ನಾವು ತೊಡಗಿಸುತ್ತಿದ್ದೇವೆ. It is not a small thing. It is an unique programme in the whole of the country.

ಮಾನ್ಯ ಪ್ರಧಾನಮಂತ್ರಿಗಳಾದ ಪಿ.ವಿ. ನರಸಿಂಹರಾವ್‌ಜೀಯವರು ಒಂದು ವಿಶ್ವ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಎಕ್ಸಿಬಿಷನ್ ಇಲ್ಲಿ ಮಾಡಿದ್ದೆವು. ಅದು ಬಾಂಕ್ವೆಟ್ ಹಾಲ್‌ನ ಮುಂದಿನ ಭಾಗದಲ್ಲಿ ಏರ್ಪಡಿಸಲಾಗಿತ್ತು. ಈಗ ತಾವು ಸಣ್ಣ ಕೈಗಾರಿಕಾ ಮಂತ್ರಿಗಳು ಮತ್ತೊಂದು ಎಕ್ಸಿಬಿಷನ್ ಮಾಡುವುದಕ್ಕೆ ಅಧಿವೇಶನ ಮುಗಿಯುವುದರೊಳಗೆ ಸಾಧ್ಯವಾಗುತ್ತದೇನೋ ವಿಚಾರ ಮಾಡಿ. ಬಸವಭವನದಲ್ಲಿ ಒಂದು ವಾರ ಎಕ್ಸಿಬಿಷನ್ ನಡೆಯಿತು. ಎಕ್ಸಿಬಿಷನ್ ಕಮ್ ಸೇಲ್ ಒಂದು ವಾರ ನಡೆಯಿತು. We have made complete profit. ಅಲ್ಲಿಗೆ ಬಂದ ಜನಗಳು ತಮ್ಮ ಅಭಿಪ್ರಾಯ ಬರೆಯುವುದಕ್ಕೆ ಒಂದು ಬುಕ್ ಇಟ್ಟಿದ್ದರು. ಒಂದೆರಡು ವಿಚಾರದಲ್ಲಿ ಕೆಲವರು ರೇಟ್ ಜಾಸ್ತಿಯಾಯಿತು ಎಂದು ಹೇಳಿದರು. But they have express A-1 opinion. "This is the best programme. Please go ahead" ಸರ್ಕಾರಕ್ಕೆ ಆಶೀರ್ವಾದವನ್ನು ಜನ ಮಾಡಿದ್ದಾರೆ. ಆಶೀರ್ವಾದ ಮಾಡಿದ್ದರೆ ಯಾವ ಬಡ ವರ್ಗ ಇವತ್ತು ಹೊಟ್ಟೆಗೆ ಅನ್ನವಿಲ್ಲದೆ ಪರಿತಪಿಸುತ್ತಿದ್ದಾರೆ ಆ ವರ್ಗದವರು ಇದರಿಂದ ಉಪಯೋಗ ಪಡೆದುಕೊಂಡು ಅವರು ಗೌರವದಿಂದ ಜೀವನ ಮಾಡಬೇಕು. ಅದೇ ವರ್ಗ ಸಮಾಜಕ್ಕೆ ಒಂದು ಕೊಡುಗೆಯನ್ನು ನೀಡಬೇಕು. ಅವರು ಸಮಾಜದಲ್ಲಿ ಯಾರ ಸೊತ್ತಾಗಿಯೂ ಬದುಕಬಾರದು. He must be a poor man. But it does not mean that he must bend his head before a rich man. I cannot understand, how we can make this?

ಬಾರಿ ಆಸ್ತಿ ಕೊಟ್ಟರೆ 'ಬಿಗ್' ಅಲ್ಲ. ನಾನು ಹೇಳತಕ್ಕದ್ದು ಅವನಿಗೆ ನಾಳೆ ಬೆಳಕು ಹರಿದರೆ. ಉದ್ಯೋಗ ಸಿಕ್ಕಿ ದುಡಿಮೆ ಮಾಡತಕ್ಕಂಥ ವಿಚಾರಕ್ಕೆ ಹೋದರೆ. he will become big. ಒಂದು ಹೊಸ ಕಾನೂನು ತರತಕ್ಕ ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ಕಾನೂನು ಬರೆಯುತ್ತಿದ್ದಾರೆ. ಹಿಂದೆಯೂ ಕೂಡ ನಾನು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೆ. ದಯವಿಟ್ಟು ಓದಿ ನೋಡಬೇಕು. ಯಾವ ವಿಚಾರ? ಒಂದು ವೇಳೆ ಒಬ್ಬ 'ವಿಶ್ವ' ಸ್ಕೀಮ್‌ನಲ್ಲಿ 50 ರೂಪಾಯಿ ದುಡಿಯುತ್ತಾನೆ. ಅದನ್ನು ಒಂದೇ ದಿವಸಕ್ಕೇ ಅವನ ಕೈಗೆ ಕೊಡುವುದಿಲ್ಲ. ಅದು ಅವನದ್ದೇ ಹಣ ಆದರೂ ಅವನ ಕೈಗೆ 30-35 ರೂಪಾಯಿ ಕೊಡುತ್ತೇವೆ. ಇನ್ನು 15 ರೂಪಾಯಿ ಎಲ್ಲಿ ಹೋಗುತ್ತದೆ? ಇದಕ್ಕೊಂದು ಕಾನೂನನ್ನು ತರುತ್ತಿದ್ದೇವೆ. ಆ ಹಣ ಎಲ್ಲಿಗೆ ಹೋಗುತ್ತದೆ ಎಂದರೆ ಅವನ ಅಕೌಂಟ್‌ಗೆ ಬ್ಯಾಂಕಿಗೆ ಹೋಗಿ ಬೀಳುತ್ತದೆ ಆದರೆ ಕಾನೂನು ನಾವು ಏನು ಮಾಡುತ್ತೇವೆ ಎಂದರೆ ಆ 15 ರೂಪಾಯಿ ಇರತಕ್ಕದ್ದು ಆ ಊರಿನ ರೋಡು. ಕುಡಿಯುವ ನೀರಿನ ಬಾವಿ. ಸ್ಕೂಲ್ ಕಟ್ಟಡ ಮತ್ತ ಅವನಿಗೆ ಕಟ್ಟತಕ್ಕಂಥ ಮನೆಗಳು ಹೀಗ ಯಾವುದೇ ಇರಬಹುದು. ಅವನ ಆರೋಗ್ಯ ವಿಚಾರ ಇರಬಹುದು. ಮಕ್ಕಳ ಮದುವೆ. ಮುಂಜಿ ಇರಬಹುದು. ಅವನ ಹಣ ಡ್ರಾ ಮಾಡುವುದಕ್ಕೆ ಕೆಲವು ಪರ್ಸೆಂಟೇಜ್ ಕಟ್ ಮಾಡುವುದಕ್ಕೆ ನಾವು ಕಾನೂನು ಮಾಡುತ್ತಿದ್ದೇವೆ. ಇದು ಏನಾಗುತ್ತದೆ? there will be our individual involvement in the deelopmental activities of the area or the village where he is living. ದೊಡ್ಡವರು ಏನು ಮಾಡುತ್ತಾರೆ ಎಂದರೆ ನೀನು ಐದು ಪೈಸೆ ಟ್ಯಾಕ್ಸ್ ಕಟ್ಟಿಲ್ಲ. ಮತ್ತೆ

ಮಾತಾಡುವುದಕ್ಕೆ ಬರುತ್ತೀಯಾ ಎನ್ನುತ್ತಾರೆ. ಅವನು ಪಾಪ ಬಾಲ ಮುದುರಿಕೊಂಡು ಹಿಂದಕ್ಕೆ ಹೊರಟು ಹೋಗುತ್ತಾನೆ. ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ ಏಕೆಂದರೆ ಆಸ್ತಿ ಇದ್ದವರೇ ಟ್ಯಾಕ್ಸ್ ಕೊಡುತ್ತಾರೆ ಎಂದು. ಹೀಗೆ ತಿಳಿಯತಕ್ಕದ್ದು ಮೂರ್ಖತನದ ಪರಮಾವಧಿ. ಈ ದೇಶದಲ್ಲಿ ಕೂಲಿ ಮಾಡುವವರೂ ಕೂಡ ಟ್ಯಾಕ್ಸ್‌ಕೊಡುತ್ತಿದ್ದಾರೆ. ಏಕೆಂದರೆ ಮೈಮೇಲೆ ಹಾಕಿಕೊಳ್ಳತಕ್ಕಂಥ ಬಟ್ಟೆ ಮೇಲಾಗಲೀ ತಿನ್ನುವ ಸಾಮಾನುಗಳ ಮೇಲಾಗಲೀ. ಟೀ. ಕಾಫಿ. ಬೀಡಿ. ಸಿಗರೇಟು ಮೇಲೆ ಎಲ್ಲಾ ಟ್ಯಾಕ್ಸ್ ಇದೆ. is he not paying tax to the State Government? ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ. ಎಲ್ಲರೂ ಟ್ಯಾಕ್ಸ್ ಕೊಡುತ್ತಾರೆ. ಹೆಚ್ಚೆಂದರೆ ಆಸ್ತಿ ಇರುವವರು ಲ್ಯಾಂಡ್ ರೆವಿನ್ಯೂ ಕಟ್ಟಬಹುದು. ಹೌಸ್ ಟ್ಯಾಕ್ಸ್ ಕೊಡಬಹುದು. ಇದು ಬಿಟ್ಟು ಬೇರೆ ಯಾವ ಸ್ಪೆಶಲ್ ಟ್ಯಾಕ್ಸ್ ಕಟ್ಟುತ್ತಾರೆ ಅವರು? I am posing this question as to why he is called a weak person of the Society? I cannot understand. ಆದ್ದರಿಂದ ಅವರು ಟ್ಯಾಕ್ಸ್ ಅವಾಯ್ಡ್ ಮಾಡುವುದು ಸಹ ನಿಜ. ಪಾಪ. ಇವನಿಗೆ ವಿದ್ಯಾಭ್ಯಾಸ ಕೂಡ ಇರುವುದಿಲ್ಲ. ಏನೂ ಗೊತ್ತಾಗುವುದಿಲ್ಲ. ಆದ್ದರಿಂದ ಈ 'ವಿಶ್ವ' ಕಾರ್ಯಕ್ರಮದಲ್ಲಿ ಅವನನ್ನು ದುಡಿಮೆಗೆ ಹಚ್ಚಿ ಅದೇ ಸಮಯಕ್ಕೆ ಅವನಿಂದ ಹಣ ಕೊಡಿಸಬೇಕು. ಅವನು ತಾನು ದುಡಿದು ಕೊಡುತ್ತಾನೆ. "I do not want any favour. But I earn it, I give some part of my earnings to the society through the Government." ಎಂತಹ ಹಕ್ಕು ಇರುತ್ತದೆ. ಎಂತಹ ಶಕ್ತಿ ಬರುತ್ತದೆ ಅವನಿಗೆ? ಈ ಒಂದು ನೀತಿಯನ್ನು ಇಟ್ಟುಕೊಂಡು ಇದನ್ನು ವಿಚಾರ ಮಾಡಿದ್ದೇವೆ. 'ವಿಶ್ವ' ಕಾರ್ಯಕ್ರಮದಲ್ಲಿ ಈಗಾಗಲೇ ಪರದೇಶಗಳಿಂದ ಆರ್ಡರ್ಸ್ ನಮಗೆ ಬಂದಿವೆ. ಡಿಮ್ಯಾಂಡ್ ವಿಷಯ ಬಂದಾಗ ಶ್ರೀ ನಜೀರ್ ಅವರು ಇದಕ್ಕೆ ಉತ್ತರ ಕೊಡುತ್ತಾರೆ. ಆ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. ಈಗಾಗಲೇ ನಮಗೆ ಸಿಂಗಾಪೂರ್‌ನಿಂದ ದೊಡ್ಡ ಆಫೀಸಿಗೆ ಅಗ್ರಿಮೆಂಟ್ ಆಗಿದೆಯೆಂದು ಕಾಣುತ್ತದೆ. ಅಲ್ಲಿ ಶೋರೂಮ್ ಆಗುತ್ತಿದ್ದು ಅವರೇ ಬಂದುಬಿಟ್ಟು ಹೋಗಿದ್ದಾರೆ. ಅವರು ಹೇಳುತ್ತಾರೆ ನಾವು ಡಿಸೈನ್ ಕೊಡುತ್ತೇವೆ. ನೀವು ಮಾಡಿ ಎಂದು. ನಮ್ಮವರು ಈ ಕೈಕೆಲಸದಲ್ಲಿಮತ್ತೊಂದರಲ್ಲಿ ಎ ಒನ್. ಅಂತಹ ಜಕಣಾಚಾರಿ ಅಂಥವರು ಆ ಕಾಲದಲ್ಲಿ ಬೇಳೂರು. ಹಳೇಬೀಡುಗಳಲ್ಲಿ ದೇವಸ್ಥಾನಗಳನ್ನು ಕಟ್ಟಿರತಕ್ಕಂಥವರು. ಚಿತ್ರಕಲೆ ಬಿಡಿಸಿದಂಥವರು. ಇವರಿಗೆ ಇಂತಹ ಸಾಮಾನುಗಳನ್ನು ಮಾಡುವುದಕ್ಕೆ ಬರುವುದಿಲ್ಲವೆ? ಕಲೆಯೆನ್ನುವುದು ನಮ್ಮವರ ರಕ್ತದಲ್ಲಿದೆ. ಈ ಕಲೆ ಅವರಲ್ಲಿ ಮೈಗೂಡಿಕೊಂಡು ಬಂದಿದೆ. Let us draw it and make use of it. ಅದನ್ನು ಉಪಯೋಗ ಮಾಡಿಕೊಳ್ಳಬೇಕೆನ್ನುವುದು ನಮ್ಮ ಆಸೆ. ಅದೇ ನಮ್ಮೆಲ್ಲರದ್ದೂ ಆಸೆ. ಇದೇ ಕರ್ನಾಟಕ ರಾಜ್ಯದ ಆಸೆ. ಇದರಲ್ಲಿ ನಮ್ಮ ಆರ್ಥಿಕಾಭಿವೃದ್ಧಿ ಇದೆ. ಅದೂ ಕೂಡ ಇದರಲ್ಲಿ ಅಡಗಿದೆ ಎಂಬುದನ್ನು ಯಾವುದೇ ಅನುಮಾನ ಇಲ್ಲದೆ ತಮ್ಮ ಮುಂದಿಡುತ್ತಿದ್ದೇನೆ. ಇನ್ನು ವಿಶ್ವವನ್ನು 10 ಕೋಟಿಯಿಂದ 475 ಕೋಟಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ಏತಕ್ಕಾಗಿ? ಒಂದು ವರ್ಷದಲ್ಲಿ ಒಂದು ಸಾವಿರ ವರ್ಕ್‌ಶೆಡ್ಸ್ ಎಲ್ಲಾ ಕ್ಷೇತ್ರದಲ್ಲಿ ಬರುತ್ತದೆ. ಮುಂದಿನ ವರ್ಷ ಇನ್ನೂ ಒಂದು ಸಾವಿರ ಆಗುತ್ತದೆ. ಅದರ ಮುಂದಿನವರ್ಷ ಮತ್ತೊಂದು ಸಾವಿರ. ಆಮೇಲೆ ಅದಕ್ಕೆ ಸಬ್‌ಸೆಂಟರ್ಸ್ ಅವೆಲ್ಲ ಬರುತ್ತವೆ. ಅದನ್ನು ನಾವು ಮಾಡುತ್ತೇವೆ. ಇದರಲ್ಲಿ ಟೆಂಡರ್ಸ್ ಪಂಚರ್ಸ್ ಏನೂ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿಬಿಟ್ಟಿದ್ದೇನೆ. We have purchased vehicles. ಲಾರಿಗಳು ರೋಡ್‌ನಲ್ಲಿ ಹೋಗಬೇಕಾದರೆ 'ವಿಶ್ವ' ಎಂದು ಬೋರ್ಡ್ ಅದಕ್ಕೆ ಇರಬೇಕು. ನನಗಂತೂ ಬಹಳ ಹುಚ್ಚು ಇದೆ. ಏಕೆಂದರೆ ಇಂತಹ ಸಾಮಾನುಗಳ ಮೇಲೆ 'ವಿಶ್ವ' ಎಂದು ಬರೆಯಬೇಕು. ಈಗ ಅಮುಲ್. ಬೆಣ್ಣೆ ಇದೆ. ಗುಜರಾತಿನಲ್ಲಿ ಅವರು ಗುಜರಾತ್‌ನಲ್ಲಿ ಆನಂದ ಮಿಲ್ಕ್

ಲಿಮಿಟೆಡ್‌ಅಂತ ಹೆಸರು ಇಟ್ಟುಕೊಂಡಿದ್ದಾರೆ. ಎಂತಹ ಹೆಸರು ಗಳಿಸಿದೆ ಅದು? ಅವರು ಎಕ್ಸಪೋರ್ಟ್ ಮಾಡುತ್ತಿದ್ದಾರೆ. ಏರೋಪ್ಲೇನ್‌ಗಳಲ್ಲಿ ಹೋದರೂ ಅದು ಸಿಗುತ್ತದೆ. ಇದನ್ನು ನೋಡಿದಾಗ ನಮಗೆ ಏಕೆ ಆಗುವುದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯ. ಮಹಾತ್ಮಾಗಾಂಧಿಯವರನ್ನು ನಾವು ನೆನೆಸಿಕೊಳ್ಳಬೇಕು. ಇವೆಲ್ಲಾ ಕೂಡ ರೂರಲ್ ಕಾಟೇಜ್ ಇಂಡಸ್ಟ್ರೀಸ್.

ಗ್ರಾಮೀಣ ಅಭಿವೃದ್ಧಿ ಬಗ್ಗೆ ವಿಚಾರ ಮಾಡಬೇಕೆಂದರೆ. ಉದ್ಯೋಗ ಕೊಟ್ಟು ಉತ್ಪಾದನೆಗೆ ನಾವು ಗಮನಹರಿಸಬೇಕು. ಏಕೆಂದರೆ ನಮ್ಮ ಜನರ ಆರ್ಥಿಕ ಅಭಿವೃದ್ಧಿ ಆಗಬೇಕು. There lies our economic growth of the society. Tap it and make use of it, unorganised youth who are without any job. ಇದನ್ನು ನಾವು ಮಾಡಬೇಕು. ನಾವು ಈ ರೀತಿ ಮಾಡದೇ ಹೋದರೆ. ಸುಮ್ಮನೆ ನಾವು ಎಷ್ಟು ಬೊಂಬಡ ಹೊಡೆದುಕೊಂಡರೂ ಅದು ಬರುವುದಿಲ್ಲ. ಇದು ನನಗೆ ಗೊತ್ತಿದೆ. ಅದರಿಂದ ಉಪಯೋಗವಾಗುವುದಿಲ್ಲ. ಇರಿಗೇಷನ್. ಪವರ್ ಜನರೇಷನ್. ಡ್ಯಾಮ್ ಕಟ್ಟುತ್ತೇವೆ. ಚಾನಲ್ ಮಾಡುತ್ತೇವೆ. ನೀವು ಎಷ್ಟು ಪ್ರಯತ್ನ ಮಾಡಿದರೂ ಕೂಡ. yes, that is also a big area. 1/3 of the total state including tapping of minor irrigation like underground water ಅಂಡರ್‌ಗ್ರೌಂಡ್ ವಾಟರ್ ತೆಗೆದುಕೊಂಡರೂ ಕೂಡ ಮೂರನೇ ಒಂದು ಭಾಗಕ್ಕೆ ಮಾತ್ರ ಅಕೌಂಟ್ ಮಾಡುತ್ತೇವೆ. 2/3 you will have to depend upon the sky water. ಮೇಲುಗಡೆ ನೋಡಬೇಕು. ಉದ್ಯೋಗ ಮಾಡಬೇಕು. That is why dryland development cultivation, water shed. ಜಲಾನಯನ ಅಭಿವೃದ್ಧಿ ಯೋಜನೆಗಳು. ನಿಮ್ಮ ಕನಕಪುರ ತಾಲ್ಲೂಕು ಮತ್ತೊಂದು ಕವರ್ ಆಗುತ್ತದೆ. ಆಮೇಲೆ. We are in the process and we will provide the money. Karnataka, we are not only pioneers but also leaders as far as watershed programmes are conerned. We are the leaders pioneers. ಲಾಲ್‌ಬಾಗ್ ಹತ್ತಿರ ಮೊನ್ನೆ ಒಂದು ಫಂಕ್ಷನ್ ಉದ್ಘಾಟನೆ ಮಾಡಿದೆ. ನಾನು ಮತ್ತು ನಮ್ಮ ಚಿಕ್ಕೇಗೌಡರು ಹೋಗಿದ್ದೆವು. ಅವರೆಲ್ಲರೂ ಹೇಳುತ್ತಿದ್ದರು. There may be little mistakes. ನಾವು ಹಾಗೆಯೇ ಬಿಡಬಾರದು. ಒಂದು ಕಾಲದಲ್ಲಿ ಭತ್ತ ಬೆಳೆಯುವುದಕ್ಕೆ ನಾವೇ ಹೆಸರುವಾಸಿಯಾಗಿದ್ದೆವು. ನಾವು ಭಾರಿ ಭತ್ತ ಬೆಳೆದು. ತಮಿಳುನಾಡಿಗೆ ಹೊರಟು ಹೋಗುತ್ತಿತ್ತು. ಆಂಧ್ರಕ್ಕೆ ಹೊರಟು ಹೋಗುತ್ತಿತ್ತು. ಈಗ ಪಂಜಾಬಿನವರು ಹಿಡಿದುಕೊಂಡು ಕುಳಿತಿದ್ದಾರೆ. ಸಂತೋಷದ ವಿಚಾರ. ನಿಜವಾಗಿಯೂ ಪಂಜಾಬಿನ ಜನ ಕಷ್ಟಪಟ್ಟು ದುಡಿಯುವವರು. Actually Punjabis are very hard working people. Handsome, Now of course as far as sun-flower is concerned we are still the Leaders in Karnataka. ಸೋಯಾಬಿನ್‌ಗೆ ಮಧ್ಯಪ್ರದೇಶ ಇದೆ. ಗ್ರೌಂಡ್‌ನಟ್‌ಗೆ ಗುಜರಾತ್ ಇದೆ. Of course groundnut we come second in the whole country for groundnut. That is why ಈ ಸಾರಿ ನಾವು ಏನು ಮಾಡಿದ್ದೇವೆ ಎಂದರೆ. ಆಯಿಲ್ ಸೀಡ್ಸ್ ರೀಸರ್ಚ್ ಸ್ಟೇಷನ್ ಮಾಡಬೇಕೆಂದು ಹಣವನ್ನು ಇಟ್ಟಿದ್ದೇವೆ. ಧಾರವಾಡದ ಹನುಮನಮಟ್ಟಿಯಲ್ಲಿ. ಅಲ್ಲಿ ಗಾಂಧಿ ಕೇಂದ್ರ ಎಂದು ಇದೆ. ಇಲ್ಲಿ ಇನಫ್ರಾಸ್ಟ್ರಕ್ಚರ್ ಇದೆ. ಇಲ್ಲಿಗೆ ಆಯಿಲ್ ರೀಸರ್ಚ್ ಸ್ಟೇಷನ್ ಮಾಡಬೇಕೆಂದು ಕೊಟ್ಟಿದ್ದೇವೆ. ತೊಗರಿಬೇಳೆ ರೀಸರ್ಚ್‌ಗೆ ಗುಲ್ಬರ್ಗಾಕ್ಕೆ ಕೊಟ್ಟಿದ್ದೇವೆ. ರೈತರ ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್‌ಗೆ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ. ನಾನು ವ್ಯವಸಾಯ ಸಚಿವನಾಗಿದ್ದೆ. ಆಗ ಒಂದು ಆರ್ಡರ್ ಮಾಡಿದೆ, Census of agricultural implements. ಮಳೆ ಬೀಳುತ್ತದೆ, ಮಳೆ ಬಿದ್ದಾಗ. ಎಷ್ಟು ಜನ ರೈತರ ಹತ್ತಿರ ನೇಗಿಲು, ಎತ್ತಿನ ಗಾಡಿಗಳು, ಎತ್ತುಗಳು, ಗೊಬ್ಬರ ಇಟ್ಟುಕೊಂಡಿರುತ್ತಾರೆ,

ಇವೆಲ್ಲವನ್ನೂ ನೀವು ಟೋಟಲ್ ಮಾಡಿ. ಒಬ್ಬ ಹೋಗಿ. ವ್ಯವಸಾಯ ಮಾಡಿಕೊಳ್ಳುವವರೆಗೆ. ಇನ್ನೊಬ್ಬ ಕಾಯುತ್ತಿರಬೇಕು. ಅಷ್ಟು ಹೊತ್ತಿನವರೆಗೂ ಹದ. ಇವನಿಗಾಗಿ ಕಾಯುತ್ತಿರುತ್ತದೆಯೇ? ನಂತರ ಮಳೆ ಹೊರಟುಹೋಗುತ್ತದೆ. ಆಮೇಲೆ ಕಣ್‌ಕಟ್ ಬಿಡುತ್ತಾನೆ. ಬೀಜ ಹಾಕುವುದಕ್ಕೆ ಹೋಗುತ್ತಾನೆ. ಅವು ಸರಿಯಾಗಿ ಹುಟ್ಟುವುದಿಲ್ಲ. ಬೆಳೆಯುವುದಿಲ್ಲ. ಮನುಷ್ಯನ ಸೆನ್ಸಸ್ ಎಷ್ಟೋ ಅಷ್ಟೇನೆ ಕೋಳಿ. ಎಮ್ಮೆ. ಕುರಿ. ಗೊಬ್ಬರ. they all account for your agricultural activities and account for implements. ಇದಕ್ಕೆ ಅಕೌಂಟ್ ಮಾಡುತ್ತೇವೆ. ಇಂಪ್ಲಿಮೆಂಟ್ಸ್ ಬಹಳ ಮುಖ್ಯ ಎನ್ನುವುದನ್ನು ಎಲ್ಲರೂ ಯೋಚಿಸಬೇಕು. ನಾವು ಈಗ ಸೆನ್ಸಸ್‌ನ್ನು ತರಿಸಿದ್ದೇವೆ. ನಮ್ಮ ಹತ್ತಿರ ರೆಡಿ ಇದೆ. ಎಲ್ಲವೂ ಪೂರ್ಣವಾಗಿದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ತಾವು ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಬಗ್ಗೆ ಹೇಳಿದಿರಿ. ಹಾಸನದಲ್ಲಿ ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ. ಸುಮಾರು 1936 ರಿಂದಲೇ ಪ್ರಾರಂಭವಾಗಿದೆ. ಈಗ ಅವನ್ನು ಕಿಮ್ಕೋಗೆ ಎಂದು ಮಾಡಿದ್ದಾರೆ. ಅಲ್ಲಿ ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ತಯಾರಾಗುತ್ತಾ ಇಲ್ಲ. ಇದನ್ನು ರಿವೈವ್ ಮಾಡುವುದಕ್ಕೆ ಮತ್ತು ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ನೀವು ನನ್ನ ಬಜೆಟ್ ಸ್ಪೀಚ್ ಓದಿದಹಾಗೆ ಕಾಣಲಿಲ್ಲ. ದಯವಿಟ್ಟು ಓದಿ ನೋಡಿ. ನಾವು ಏನು ಮಾಡಿದ್ದೇವೆಂದರೆ. ಹಾಸನದಲ್ಲಿ ಕಿಮ್ಕೊ ಫಾಕ್ಟರಿ ಏನು ಬಾಗಿಲು ಮುಚ್ಚಿಕೊಂಡು ಕುಳಿತಿದೆ, ಅದನ್ನು ಈಗ ಪುನರಾರಂಭ ಮಾಡುತ್ತೇವೆ. ನಾವು ಇದಕ್ಕೆ ಹಣ ಪ್ರೊವೈಡ್ ಮಾಡಿದ್ದೇವೆ. ನಾನು ನಿಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ. Not only that, another Implements Factory at Haveri in Dharwad District and another at Gulbarga. ಈ ಮೂರು ಮಾಡುತ್ತಿದ್ದೇವೆ. ಕಿಮ್ಕೋಗೆ ಕೂಡ ಶಕ್ತಿ ತುಂಬಿ. ಇದೇ ವರ್ಷ ಪ್ರಾರಂಭ ಮಾಡುತ್ತೇವೆ. ಏಕೆಂದರೆ. ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಸಲಕರಣೆಗಳಾದ ನೇಗಿಲು. ಇತ್ಯಾದಿ ರೆಡಿ ಮಾಡಿಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಹಿಂದೆ ಮಲೆನಾಡಿನಲ್ಲಿ ಮರಗಳನ್ನು ತಂದು ನೇಗಿಲು ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದರು. ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹಾಗೆ ಮಾಡುವುದಕ್ಕೆ ಬಿಡುವ ಹಾಗಿಲ್ಲ. ಏಕೆಂದರೆ, ಕಳ್ಳತನ ಆಗುವುದರಿಂದ ಇದನ್ನು ಸ್ಟಾಪ್ ಮಾಡಿದ್ದಾರೆ. ಗೋಬರ್ ಗ್ಯಾಸ್ ಪ್ಲಾಂಟ್‌ಗೆ ಎಷ್ಟು ಹಣ ಕೊಟ್ಟಿದ್ದೇವೆ ಎಂಬುದಕ್ಕೆ ಮುಂದೆ ಬರುತ್ತೇನೆ. ಕಾಡು ಉಳಿಸಬೇಕಾದರೆ ಗೋಬರ್ ಗ್ಯಾಸ್ ಪ್ಲಾಂಟ್ ಬಗ್ಗೆ ಗಮನ ಕೊಡಬೇಕು. ನೂರಾರು ಎತ್ತಿನ ಗಾಡಿಗಳು ಸೌದೆ. ತುಂಬಿಕೊಂಡು. ಬಯಲು ಸೀಮೆಯ ಕಡೆಗೆ ನನ್ನ ತಾಲೋಕಿನ ಮುಖಾಂತರ ಹೋಗುತ್ತವೆ. ಹೀಗಾದರೆ ಕಾಡು ಹೇಗೆ ಉಳಿಯುತ್ತದೆ. ಏನಾದರೂ ಮಾಡಿ ಇದರ ಬಗ್ಗೆ ಗಮನ ಕೊಡಬೇಕೆಂಬ ದೃಷ್ಟಿಯಿಂದ ಮಾಡಿರುತ್ತೇವೆ.

ಶ್ರೀ ಅಲ್ಲಂ ವೀರಭದ್ರಪ್ಪ : ಇದೇ ರೀತಿ ರೀಸರ್ಚ್ ಸೆಂಟರ್ಸ್ ಮಾಡುವ ಕಾಲಕ್ಕೆ ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕಾಟನ್‌ಗೆ ಒಂದು ರೀಸರ್ಚ್ ಸೆಂಟರ್ ಮಾಡಬೇಕು. ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ದೇಶದಲ್ಲಿ ಬೆಳೆಯುವ ಕಾಟನ್ ಪ್ರೊಡಕ್ಷನ್ ಏನಿದೆ ಅದರ ಒನ್‌ಥರ್ಡ್ ಇಲ್ಲೇ ಆಗುತ್ತದೆ. ಆದುದರಿಂದ ಕಾಟನ್‌ಗೆ ಬೇಕಾದಂಥ ಇಂಪ್ಲಿಮೆಂಟ್ಸ್ ಇತ್ಯಾದಿಗಳನ್ನು ತಯಾರಿಸುವ ಬಗ್ಗೆ ಹಾಗೂ ರೀಸರ್ಚ್ ಮಾಡುವ ಬಗ್ಗೆ ರೀಸರ್ಚ್ ಸೆಂಟರ್ ಮಾಡಿದರೆ ಅನುಕೂಲವಾಗುತ್ತದೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಕಳೆದ ಎರಡು ವರ್ಷಗಳ ಹಿಂದೆ ಕಾಟನ್‌ಗೆ ಬಹಳ ರೋಗ ಬಂದು ಬಹಳಷ್ಟು ಬೆಳೆ ನಷ್ಟವಾಗಿ ಹೋಯಿತು. ಆದ ಕಾರಣ ಅಲ್ಲಿ ಒಂದು ರೀಸರ್ಚ್ ಸೆಂಟರ್‌ನ್ನು, ತೊಗರಿ ಬೇಳೆಗೆ ಗುಲ್ಬರ್ಗದಲ್ಲಿ ಮಾಡಿದಹಾಗೆ. ಇಲ್ಲೂ ಮಾಡಿದರೆ ಬಹಳ ಚೆನ್ನಾಗಿರುತ್ತದೆ ಎಂದು ಸಲಹೆ ಕೊಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಒಬ್ಬ ಮಹಾನೀಯರನ್ನು ಈ ಸಂದರ್ಭದಲ್ಲಿ ನಾನು ನೆನಸಿಕೊಳ್ಳಬೇಕು. ಮಿಸ್ಟರ್ ಕಾತರಕಿ ಎಂದು ಅವರ ಹೆಸರು. ಅವರು ಡಿ.ಸಿ.ಎಚ್. ಮತ್ತು ವರಲಕ್ಷ್ಮಿ ಇವೆರಡು ತಳಿಗಳನ್ನೂ ಕಂಡು ಹಿಡಿದಿರತಕ್ಕಂಥವರು. ಐ ಮಸ್ಟ್ ಥ್ಯಾಂಕ್ ಹಿಮ್. ಅವರು ನಮ್ಮ ಧಾರವಾಡ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಕೆಲಸ ಮಾಡಿರತಕ್ಕಂಥವರು. ಅವರನ್ನು ರಾಜ್ಯಮಟ್ಟದ ಸಮಿತಿಗೆ ಕೂಡ ಹಾಕಿಕೊಂಡಿದ್ದೇವೆ. ನೋಡೋಣ. ಇದರ ಬಗ್ಗೆ ಅವರ ಅಭಿಪ್ರಾಯ ತೆಗೆದುಕೊಳ್ಳೋಣ. He is an expert in that. He is a scientist in cotton species. It is a good suggestion. ನಾವು ಇದನ್ನು ಗುಡ್ ಸಜೆಷನ್ ಅಲ್ಲ ಎಂದು ಹೇಳುವುದಿಲ್ಲ. ಅದರ ಬಗ್ಗೆ ರೀಸರ್ಚ್ ಮಾಡುವುದು ಮತ್ತೊಂದು ಏನು ವಿಚಾರ ಇದ್ದರೂ ಏನು ಮಾಡಬೇಕೆಂದು ಇದೆ ಅದನ್ನು ಮಾಡುತ್ತೇವೆ. ಗೌರ್ನಮೆಂಟ್ ಇದನ್ನು ತಳ್ಳಿ ಹಾಕುವುದಿಲ್ಲ. It is not my intention. ಇದರ ಬಗ್ಗೆ ಏನು ಮಾಡಬೇಕೆಂದು ವಿಚಾರ ಮಾಡೋಣ.

ಶ್ರೀ ಗೋವಿಂದಪ್ಪ ಜುಟ್ಟಲ್ : ತಮಗೆ ಗೊತ್ತಿದೆ, ಕುಂದಗೋಳ್ ದೇಶಕ್ಕೇ ಒಳ್ಳೆಯ ಮೆಣಸಿನ ಕಾಯಿಯನ್ನು ಕೊಡತಕ್ಕಂಥ ಕ್ಷೇತ್ರ. ಇದಕ್ಕೂ ಒಂದು ರೀಸರ್ಚ್ ಸೆಂಟರ್ ಮಾಡಬೇಕು. ಚಿಲ್ಲೀಸ್ ಬೋರ್ಡ್‌ನ್ನಾದರೂ ಮಾಡಬೇಕು. ತಮಗೆ ಗೊತ್ತಿದೆ, ಕುಂದಗೋಳ್ ಮೆಣಸಿನಕಾಯಿ ದೇಶಕ್ಕೇ ಪ್ರಸಿದ್ಧವಾಗಿದೆ. ಮೊನ್ನೆ ನಾನು ಇದರ ಬಗ್ಗೆ ಕೇಳಿದ್ದೆ. ಚಿಲ್ಲೀಸ್ ಬೋರ್ಡ್ ಎಂಬುದನ್ನು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಈಗ ಮೆಣಸಿನಕಾಯಿ ಘಾಟು ಜಾಸ್ತಿ ಆಗಿದೆ. ಕುಂದಗೋಳ್ ಮೆಣಸಿನಕಾಯಿ ಘಾಟು ಈಗ ಜಾಸ್ತಿಯಾಗಿದೆ. ಹಿಂದೆ ಬ್ಯಾಡಗಿ ಮೆಣಸಿನಕಾಯಿ ಮಾರ್ಕೆಟ್ ಜೋರಾಗಿತ್ತು. ಈಗಲೂ ಇದೆ ಎಂದು ಕಾಣುತ್ತದೆ, ಬ್ಯಾಡಗಿ ನಮ್ಮ ಲಮಾಣಿಯವರ ಕ್ಷೇತ್ರ ಅದು...

ಶ್ರೀ ಕರಿಯಣ್ಣ : ಮುಖ್ಯಮಂತ್ರಿಗಳ ಉತ್ತರ ಚೆನ್ನಾಗಿದೆ. ಅದು ಮುಗಿಯಲಿ ಮಧ್ಯೆ ಡಿಸ್ಟರ್ಬ್ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ : ಮಧ್ಯೆ ಮಧ್ಯೆ ಊಟಕ್ಕೆ ಉಪ್ಪಿನಕಾಯಿ ಇದ್ದ ಹಾಗೆ ಇರಬೇಕು. ಆದರೆ ಈಗ ಮೆಣಸಿನಕಾಯಿ ಬಂದುಬಿಡ್ತು. ಇದು ಸ್ವಲ್ಪ ತಾಪತ್ರಯ.

ಈ ಸಂದರ್ಭದಲ್ಲಿ ವಿಶ್ವ ಕಾರ್ಯಕ್ರಮದ ಅಡಿಯಲ್ಲಿ ಒಂದು ಸಾವಿರ ವರ್ಕಿಂಗ್ ಷೆಡ್ ಪ್ರತಿ ವರ್ಷ ನಾವು ಮಾಡುತ್ತಾ ಮಾಡುತ್ತಾ ಹೋಗುತ್ತೇವೆ. ಇನ್ನು ಮೂರು ವರ್ಷ ಟೈಮ್‌ನಲ್ಲಿ 5 ಲಕ್ಷ ಜನರಿಗೆ ಉದ್ಯೋಗ ಕೊಡತಕ್ಕಂಥ ಗುರಿ ಇದೆ. ಸಾಧ್ಯವಾದಷ್ಟೂ ಇನ್ನೂ ಹೆಚ್ಚು ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. The total overall turnover at the fag end of the 3 years perhaps more than 2000 crores. More than 2000 crores turnover ಇದರ ಬಗ್ಗೆ ಒಂದು ಟೀಮ್‌ನ್ನು ಕಳುಹಿಸಿಕೊಡುತ್ತೇವೆ. ಯೂರೋಪಿಯನ್ ಕಂಟ್ರೀಸ್ ಮಿಡಲ್ ಈಸ್ಟ್ ಕಂಟ್ರೀಸ್‌ಗೆ ಹೋಗಿ ಬರುತ್ತಾರೆ. ಹೋಗಿ ಬರಬೇಕೆಂದು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಒಳ್ಳೆಯ ಎಕ್ಸ್‌ಪರ್ಟ್ ಆಫೀಸರ್ಸ್ ಇದ್ದಾರೆ. those who are very much trained in that. ಎರಡು ಮೂರು ಜನ ಆಫೀಸರ್ಸ್ ಇದ್ದಾರೆ. a one Officers.

ಶ್ರೀ ಬಿ. ಶಿವರಾಮು : ಫಾರಿನ್‌ಗೆ ಹೋಗಿ ಬಂದಮೇಲೆ ಬೇರೆ ಕಡೆಗೆ ವರ್ಗ ಮಾಡಿಬಿಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ತಾವು ಹೇಳಿದ್ದುದು ಸರಿ ಅದೇ ಮಿಸ್ಟೇಕ್ I agree.

SRI R. DAYANANDA RAO : Some MLAs also should be included in that delegation.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯಾನಂದರಾವ್ ಅವರನ್ನು ಕಳುಹಿಸಿಬಿಟ್ಟರೆ ಎಲ್ಲಾ ಹ್ಯೋಲ್ಡಹಾಗೆ ಆಯಿತು.

ಶ್ರೀ ಎಸ್. ಬಂಗಾರಪ್ಪ : ಇವರನ್ನು ಫ್ರಾನ್ಸ್ ಕಡೆಗೆ ಕಳುಹಿಸುವುದು ಒಳ್ಳೆಯದೇನೋ ಎನಿಸುತ್ತದೆ. ಪರವಾಗಿಲ್ಲ ಯಾವ ಕಡೆಗೆ ಬೇಕಾದರೂ ಕಳುಹಿಸಿ ಎಂದರೆ ಪರಿಶೀಲನೆ ಮಾಡೋಣ.

ಈ ಸಂದರ್ಭದಲ್ಲಿ ಇಷ್ಟು ವಿಚಾರ ಹೇಳುತ್ತೇನೆ. ಇನ್ನು 'ವಿಶ್ವ' ಕಾರ್ಯಕ್ರಮದ ಬಗ್ಗೆ ವಿವರಗಳನ್ನು ಇಲಾಖೆಯ ಮೇಲಿನ ಚರ್ಚೆ ಬಂದಾಗ ಮಾನ್ಯ ಸಚಿವರು ಕೊಡುತ್ತಾರೆ. ಒಳ್ಳೆಯ ಮಾನವೀಯತೆಯಿಂದ. ಹೃದಯಾಂತರಾಳದಿಂದ, ಜನಸಾಮಾನ್ಯರ ಹಾಗೂ ರಾಜ್ಯದ ಅಭಿವೃದ್ಧಿಯ ಬಗ್ಗೆ ಗಮನ ಇಟ್ಟು ಇದನ್ನು ಮಾಡುತ್ತಿದ್ದೇವೆ. ವಿದೇಶಿ ವಿನಿಮಯ I have given very very strict instructions to our officers. Training programme is very very important plus quality control.

ನಮ್ಮ ಸಚಿವ ಮಿತ್ರರೂ ಕೂಡ ಬಹಳ ಸೀರಿಯಸ್ ಆಗಿದ್ದಾರೆ. ಟ್ರೈನಿಂಗ್ ಪ್ರೋಗ್ರಾಂ ಅದು ವೆರೀ ವೆರೀ ಇಂಪಾರ್ಟೆಂಟ್. ಕ್ವಾಲಿಟಿ ಕಂಟ್ರೋಲ್ ಬಗ್ಗೆ ನಾನು ಹೇಳುತ್ತೇನೆ. 2:3 ಗ್ರೇಸ್ ಮಾಡಿಟ್ಟುಕೊಳ್ಳುವುದು. ಇವತ್ತು ಬೆಸ್ಟ್ ಎಕ್ಸ್‌ಪೋರ್ಟ್ ಓರಿಯಂಟೆಡ್ ಕ್ವಾಲಿಟಿ ಇರತಕ್ಕಂಥಾದ್ದು. ನಮ್ಮ ದೊಮ್ಯಾಸ್ಟಿಕ್ ಕನ್‌ಜಮ್‌ಷನ್‌ಗೆ ವರಸ್ಟ್ ಕ್ವಾಲಿಟಿ ಇದ್ದಾಗ don't send that to the market, you destroy that. ಕಳುಹಿಸಬೇಡಿ. ಏಕೆಂದರೆ 'ವಿಶ್ವ'ದ ಮಾನ ಮರ್ಯಾದೆ ಎಲ್ಲಾ ಕಿತ್ತುಕೊಂಡು ಹೊರಟು ಹೋಗಿಬಿಡುತ್ತದೆ. ಅದರ ಬದಲು ಅದನ್ನು ಸುಟ್ಟು ಹಾಕಬೇಕೆಂದು ನಾನು ಹೇಳಿದ್ದೇನೆ. ನಾನು ಹೇಳತಕ್ಕದು ಮೊದಲು ಹೆಸರು ತೆಗೆದುಕೊಳ್ಳೋಣ. ಹೆಸರು ಬಂದರೆ ಕ್ವಾಲಿಟಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಆಗಲೇ ನಮಗೆ ಗೊತ್ತಾಗುತ್ತದೆ. ಒಂದು 4-5 ಕೋಟಿ ರೂಪಾಯಿಗಳು ಮಾಲು ಡೆಸ್ಟ್ರಾಯ್ ಆದರೆ ಏನೂ ಆಗುವುದಿಲ್ಲ. ಮುಂದೆ ನೂರಾರು ಕೋಟಿ ರೂಪಾಯಿಗಳ ವರಮಾನ ನಮಗೆ ಬರುತ್ತದೆ. ಒಳ್ಳೆಯ ಕ್ವಾಲಿಟ ಬರುತ್ತದೆ. ಈಗ ನೋಡಿ ಸೌತ್ ಕೋರಿಯಾ ಕೆನಡಾದಲ್ಲಿ ನನಗೆ ಗೊತ್ತಿಲ್ಲ. ನಾನು ಯಾವ ಪರದೇಶಕ್ಕೂ ಹೋಗಿಲ್ಲ. ಯಾರೋ ಹೇಳಿದ್ದುದು. ನಾನು ಒಂದು ಆರ್ಟಿಕಲ್ ಯು.ಸಿ. ಮ್ಯಾಗ್ಜಿನ್‌ನಲ್ಲಿ ಓದಿದ್ದೇನೆ. ಅದರಲ್ಲಿ ತಯಾರಾಗುವ ಕಾರುಗಳು ಬಹಳ ಫೇಮಸ್. ಒಂದು ಕಾರು ದಾರಿಯಲ್ಲಿ ಕೆಟ್ಟು ಎರಡು ದಿವಸ ನಿಂತಿತ್ತು. ಎಷ್ಟು ರಿಪೇರಿ ಮಾಡಿದರೂ ಸ್ಟಾರ್ಟ್ ಆಗಲಿಲ್ಲ. ಕೆಟ್ಟು ನಿಂತಿತು. ಆದರ ಹೆಸರು ನನಗೆ ಗೊತ್ತಿಲ್ಲ. ಸೌತ್ ಕೋರಿಯಾ ಕಾರು. ಅದರ ಹೆಸರು ಕುಯಾಂಡಿ ಅಂತೆ. ಅದು ಅವರ ದೇಶದ ಕೋರಿಯನ್ ನೇಮ್ ಇರಬೇಕು. ಅದು ರಿಪೇರಿ ಆಗಲಿಲ್ಲ. ಕಂಪ್ಲೇಂಟ್ ಮಾಡಿದರು. ಕಂಪನಿಯವರು ಬಂದು ರಿಪೇರಿ ಮಾಡಿದರೂ ರಿಪೇರಿ ಆಗಲಿಲ್ಲ. ಕಂಪೆನಿ ಮರ್ಯಾದೆ ಹೋಗುತ್ತದೆ ಎಂದು ಹೇಳಿ ನೆಕ್ಸ್ಟ್ ಡೇ ಬ್ರ್ಯಾಂಡ್ ನ್ಯೂ ಕಾರನ್ನು ಷೋ ರೂಮ್‌ನಿಂದ ತರಿಸಿ ಆ ಓನರ್‌ಗೆ ಕೊಟ್ಟು ಕಳುಹಿಸಿ ಮೊದಲು ಕೆಟ್ಟ ಈ ಕಾರನ್ನು ಲಾರಿಗೆ ಏರಿಸಿ ಕಣ್ಣಿಗೆ ಕಾಣದಂತೆ ತೆಗೆದುಕೊಂಡು ಹೋದರು. ಅದಕ್ಕೆ

ಅವರು ಕ್ವಾಲಿಟಿ ಬಗ್ಗೆ ಅಷ್ಟು ಗಮನ ಕೊಟ್ಟಿದ್ದಾರೆ. ಒಳ್ಳೆಯ ಕಂಪನಿ ಎನ್ನುವುದು That goes a long way.

ಕಾರು ಕೆಟ್ಟು ಹೋದರು ಕೂಡ ಹೊಸ ಕಾರು ಕೊಟ್ಟಿದ್ದಾರೆ. ಇದನ್ನು ನಾವು ಗಮನಿಸಬೇಕು. ಈ ರೀತಿ ಕ್ವಾಲಿಟಿ ಬಗ್ಗೆ ಹೆಚ್ಚಿನ ಗಮನ ಕೊಡತಕ್ಕಂಥಾದ್ದನ್ನು ನಾವು ವಿಚಾರ ಮಾಡಬೇಕು. ನಾನು ಒಂದೇ ಒಂದು ಮಾತನ್ನು ನಮ್ಮ ಅಫೀಸರ್ಸ್‌ಗೆ ಹೇಳುತ್ತೇನೆ. ಏಕೆಂದರೆ ನಾನು ಈ ವಿಷಯದಲ್ಲಿ ಬಹಳ ಸೀರಿಯಸ್ ಆಗಿದ್ದೇನೆ. ನಾವು ಹಣ ತೆಗೆದುಕೊಂಡು ಬಂದು ಇಲ್ಲಿ ಹಾಕಿ ಅದೂ ಟ್ಯಾಕ್ಸ್ ಪೇಯರ್ಸ್ ಮನಿ ತೆಗೆದುಕೊಂಡು ಬಂದು ಇಲ್ಲಿ ಹಾಕಿದ್ದೇವೆ. ಇದರಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಮಾತ್ರ ಒಬ್ಬೊಬ್ಬ ಅಫೀಸರ್‌ನ್ನು ಬಲಿ ಹಾಕುವುದಂತೂ ನಿಜ. ನಾನು ಬಹಳ ಸೀರಿಯಸ್ ಆಗಿದ್ದೇನೆ. ಈ ವಿಚಾರದಲ್ಲಿ ಮಾತ್ರ. ಹಾಳು ಮಾಡತಕ್ಕಂಥವರ ಕೈಯಲ್ಲಿ ನಾವು ಇದನ್ನು ಕೊಡುವುದಕ್ಕಾಗುವುದಿಲ್ಲ. ಮುಂದೆ ಯಾವುದೇ ಸರ್ಕಾರ ಬಂದರೂ ಕೂಡ ಅದಕ್ಕೆ ನಾನು ಈಗಲೇ ಹೇಳುತ್ತಿದ್ದೇನೆ. ನೀವು ಇದನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ. ದಯವಿಟ್ಟು ತಾವು ಬಹಳ ಸೀರಿಯಸ್ ಆಗಿ ಹೋಗಬೇಕು. ನೀವು ಈ ಕಾರ್ಯಕ್ರಮವನ್ನು ತೆಗೆದುಕೊಂಡು ಮುಂದಕ್ಕೆ ಹೊರಟು ಹೋಗಬೇಕು. After all, it is a commitment on our part. No compromises on our commitment.

ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗಗಳ ಬಗ್ಗೆ ಇರತಕ್ಕಂಥ ವಿಚಾರ ಇದು. ಅವರೂ ಕೂಡ ಈ ದೇಶ ಕಟ್ಟುವುದಕ್ಕೆ ಆರ್ಥಿಕ ಅಭಿವೃದ್ಧಿಗೆ ಕೊಡುವ ಕಾಂಟ್ರಿಬ್ಯೂಶನ್ ಇದು. ಇದು ಸಣ್ಣ ವಿಚಾರ ಅಲ್ಲ. ಇದರಲ್ಲಿ ತತ್ವ ಅಡಗಿದೆ. ಮಾನ ಮರ್ಯಾದೆ ಘನತೆ. ಗೌರವ ಸಂಪೂರ್ಣವಾಗಿ ಅಡಗಿದೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನೊಂದು 'ಆಶ್ರಯ' ಸ್ಕೀಮ್. ಇದನ್ನು ತಂದಾಗ ನಕ್ಕು ನಕ್ಕು ಭಾಷಣ ಮಾಡಿದರು. ಆಶ್ರಯ ಸ್ಕೀಮ್ ಬಗ್ಗೆ. ಅವರು ಹೇಳಿದರು ಹೇಗೆ ಇದನ್ನು ನೀವು ಪತ್ತೇ ಹಚ್ಚಿದಿರಿ. ಈಗ ನಮಗೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಿರಗಾಡುವುದಕ್ಕೆ ಸ್ವಲ್ಪ ಘನತೆ ಗೌರವ ಬಂದಿದೆ. ನಾವು ಸೈಟ್ ಕೊಡುತ್ತಿದ್ದೇವೆ. ಫ್ರೀ ಸೈಟ್. 20 × 30 ಇದ್ದದ್ದು ಈಗ 30 × 40 ಮಾಡಿದ್ದೇವೆ. ಫಾರ್ ರೂರಲ್ ಏರಿಯಾಗಳಲ್ಲಿ ಫ್ರೀ ಮಾಡಿದ್ದೇವೆ. ಸರ್ಕಾರ ಜಮೀನು ಕೊಳ್ಳಲು 4-5 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿದೆ. ಖಾಸಗೀ ಜಮೀನುಗಳನ್ನು ಪರ್ಚೇಸ್ ಮಾಡಲು. ನಾವು ಯಾರ ಹತ್ತಿರವೂ 5 ಪೈಸೆ ಹಣ ತೆಗೆದುಕೊಳ್ಳುವುದಿಲ್ಲ. ನಮಗೆ ಬಡವರ ಹಣ ಬೇಕಾಗಿಲ್ಲ. ಅದು ಆಗದೆ ಇರುವ ವಿಚಾರ.

ಶ್ರೀ ಹೆಚ್.ಎಂ. ರೇವಣ್ಣ : ಈಗ ಟೌನ್‌ಗಳಲ್ಲಿ ಇರತಕ್ಕಂಥ ಆಶ್ರಯ ಸ್ಕೀಮ್‌ನಲ್ಲಿ ಸ್ವಲ್ಪ ಮಟ್ಟಿಗೇ ಹಣ ಕಲೆಕ್ಟ್ ಮಾಡಬೇಕೆಂದು ಇದೆ. ಅದನ್ನು ತಪ್ಪಿಸಬೇಕು.

ಶ್ರೀ ಎಸ್. ಬಂಗಾರಪ್ಪ: ಇದು ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಇಲ್ಲ. ಪಟ್ಟಣ ಪ್ರದೇಶಗಳಲ್ಲಿ ಏನಾಗಿದೆ ಅಂದರೆ ಲ್ಯಾಂಡ್ ಕಾಸ್ಟ್ ಸ್ವಲ್ಪ ಜಾಸ್ತಿ ಇದೆ. ನಮ್ಮ ಕಡೆ ಮತ್ತು ನಗರ ಪ್ರದೇಶಗಳಲ್ಲಿ ಜಮೀನು ಬೆಲೆ ಸಿಕ್ಕಾಪಟ್ಟೆ ಜಾಸ್ತಿ ಇದೆ. ಅಷ್ಟಾದರೂ ಕೂಡ ನಾವು ವಿಚಾರ ಮಾರುವುದಾದರೆ ನಿಜವಾಗಿಯೂ ಇವತ್ತು ಬೆಂಗಳೂರು ನಗರದಲ್ಲಿ ಈ ಹೌಸಿಂಗ್ ಬೋರ್ಡ್ ಕೋ-ಆಪರೇಟೀವ್ ಸೊಸೈಟಿಗಳು ಬಿ.ಡಿ.ಎ. ನಿಜವಾಗಿಯೂ ಸಾಕಾಗಿದೆ. ಕ್ಯಾಬಿನೇಟ್ ಸಬ್ ಕಮಿಟಿ ರಿಪೋರ್ಟ್ ಬಂದಿದೆ. ಮುಂದೆ ಏನು ಮಾಡಬೇಕೆಂದು ನಾನು ಈಗಲೇ ಹೇಳುವುದಿಲ್ಲ. ಅದೇ ರೀತಿ ಆದರೆ ಮಾತ್ರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾನು ಹೇಳುತ್ತೇನೆ ಈ ಒಂದು ದೊಡ್ಡ hanging sword-it will fall on so many heads. ಆಗಲೇಬೇಕು.

ಇಲ್ಲದಿದ್ದರೆ ಬಡವರ ಕೆಲಸ ಎಂದೂ ಬಿಡುವುದಕ್ಕಾಗುವುದಿಲ್ಲ. ಏನೋ ಪಾಪ ಬಡವರು ಹಣ ತೆಗೆದುಕೊಂಡು ಹೋಗಿ. ಏನೋ ಮನೆಯಲ್ಲಿ ಇದ್ದದ್ದನ್ನು ಮಾರಾಟ ಮಾಡಿ ಮತ್ತೊಂದು ಮಾಡಿ ಸೊಸೈಟಿಗಳಲ್ಲಿ ಸದಸ್ಯರಾದವರ ಗತಿ ಏನು? ಎನ್ನತಕ್ಕಂಥಾದ್ದನ್ನು ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇಲ್ಲದಿದ್ದರೆ ನಿಜವಾಗಿಯೂ ತಡೆದುಕೊಳ್ಳತಕ್ಕಂಥ ವಿಚಾರ ಅಲ್ಲ. ಅಲ್ಲಿ ಆಗಿರತಕ್ಕಂಥ ಅನ್ಯಾಯಗಳನ್ನು ನೋಡಿದರೆ ನಾನು ಎಲ್ಲವೂ ಅಂತ ಹೇಳುವುದಿಲ್ಲ ಕೆಲವು ಕಡೆ ಕೆಲವು ಜನರು ಖದೀಮರು ಸೇರಿಕೊಂಡು ಆಟ ಆಡಿಬಿಟ್ಟಿರುತ್ತಾರೆ. ಅದು ಏನೇ ಇರಲಿ 'ಆಶ್ರಯ' ಸ್ಕೀಮ್‌ನಲ್ಲಿ 4 ಲಕ್ಷ ಫ್ರೀ ಸೈಟ್‌ಗಳನ್ನು ನಾವು ಕೊಟ್ಟಿದ್ದೇವೆ. ಇನ್ನು 4 ಲಕ್ಷ ಕೊಡತಕ್ಕಂಥ ಕಾರ್ಯಕ್ರಮ ಮುಂದುವರಿಯುತ್ತದೆ. ನಿಲ್ಲಿಸುವುದಿಲ್ಲ ಇದು 1992-93ನೇ ಸಾಲಿಗೂ ಮುಂದುವರಿಯುತ್ತದೆ ಆಮೇಲೆ ಮನೆಗಳು 2 ಲಕ್ಷ 80 ಸಾವಿರ ಮನೆಗಳು ಕೊಡುತ್ತೇವೆ. 60 ಸಾವಿರ ಮನೆಗಳು ಅರ್ಬನ್ ಏರಿಯಾದಲ್ಲಿ 2 ಲಕ್ಷ ಮನೆಗಳು ಹಳ್ಳಿಗಳಿಗೆ ಇನ್ನು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಜನ್ಮಶತಾಬ್ಧಿ ಸಂದರ್ಭದಲ್ಲಿ ಹಂಚಕ್ಕಂಥ 25 ಸಾವಿರ ಮನೆಗಳು ಕೂಡ ಇದರಲ್ಲಿ ನಾವು ಸೇರಿಸಿದೇವೆ. ಇದರಲ್ಲಿ ಒಟ್ಟು 500 ಸಾವಿರ ಕೋಟಿ ರೂಪಾಯಿಗಳ ಹಣ ಖರ್ಚು ಮಾಡುತ್ತಿದ್ದೇವೆ. I must thank Mr. Kagodu Thimmappa, who is the Chairman of the Housing Board, which is the nodal agency for the Government. ನಾನು ಎಲ್ಲಾ ತೆಗೆದುಕೊಂಡು ಹೋಗಿ ಅವರಿಗೆ ವಹಿಸಿದ್ದೇನೆ. ಟೆಂಡರ್ಸ್ ಕರೆದು, ಓಪನ್ ಆಗಿ ಕರೆದು ಪೂರ್ತಿ ಒಂದೊಂದು ಜಿಲ್ಲೆಗೆ ವಹಿಸಿದ್ದಾರೆ. Construction of Houses ನಾವು ಮಾಡುತ್ತೇವೆ. ಇದು ಈಗಾಗಲೇ ಲೇಟ್ ಆಯಿತು. ನಾನು ರಾಜ್ಯದ ಬಡ ಜನತೆಯ ಕ್ಷಮೆ ಕೇಳುತ್ತೇನೆ. ತಡವಾಗಿದೆ. ಏಕೆಂದರೆ. ಟೆಕ್ನಾಲಜಿಯನ್ನೇ ಬೇರೆ ಮಾಡಿದ್ದೇವೆ. pre-fabricated material ಉಪಯೋಗ ಮಾಡುವುದು, ಮೊನ್ನೆ ಪ್ರಧಾನ ಮಂತ್ರಿಯವರನ್ನು ಕಂಡಾಗ ನಾನು ಅವರಿಗೆ thanks ಹೇಳಿದೆ. ಒಂದು ವಿಚಾರದಲ್ಲಿ, pre fabricated materials ಮೇಲೆ ಇರತಕ್ಕಂಥ ಟ್ಯಾಕ್ಸ್ ತೆಗೆದುಹಾಕಿದ್ದಾರೆ. that accounts for the lower cost also. ಆದರೆ ಮನಮೋಹನ ಸಿಂಗ್ ಅವರನ್ನೂ ಕೂಡ ನಾನು ನಿನ್ನೆ ಅಲ್ಲ ಮೊನ್ನೆ ಬೆಳಿಗ್ಗೆ ಭೇಟಿ ಆದಾಗ. ಕೂಡಾ ಇದೇ ಮಾತನ್ನು ಹೇಳಿದೆ. ಇದು ಬಹಳ ಉಪಯೋಗವಾಗಿದೆ. ಏಕೆಂದರೆ cost of the house will come down. at least to some extend ನಮಗೆ ಎಷ್ಟೋ ಅನುಕೂಲವಾಗುತ್ತದೆ ಅನ್ನತಕ್ಕಂಥಾದ್ದು. ನಾವು ಇಲ್ಲಿ ಹೊಸ pre fabricated materials ಉಪಯೋಗ ಮಾಡಬೇಕು ಅನ್ನತಕ್ಕಂಥ ದೃಷ್ಟಿಯಿಂದ ಮಾಡಿದ್ದರಿಂದ ನಾವು ಮನೆಗಳನ್ನು start ಮಾಡುವುದು ಲೇಟ್ ಆಯಿತು. ಏಕೆಂದರೆ, technology approve ಮಾಡಬೇಕು. ಟೆಂಡರ್ಸ್‌ನ್ನು ಕರೆಯಬೇಕು. ಈಗ ಜಿಲ್ಲೆ ಜಿಲ್ಲೆಗೆ ವಹಿಸಿಬಿಟ್ಟಿದ್ದೇವೆ. ಈಗ work ಆಗಿದೆ. ಒಂದು ಸಾವಿರ ಮನೆಗಳು ಒಂದೊಂದು ಕ್ಷೇತ್ರಕ್ಕೆ ಹಾಕಿದ್ದೇವೆ. ಮೊದಲು ತಾಲ್ಲೂಕು ಎಂದು ಇತ್ತು. ಕೆಲವು ಕ್ಷೇತ್ರದಲ್ಲಿ ಎರಡೆರಡು ತಾಲ್ಲೂಕು ಇವೆ. ಅದನ್ನು ಚೇಂಜ್ ಮಾಡೋಣ. ಯಾರು ಬಹಿಷ್ಕಾರ ಹಾಕಿದ್ದಾರೋ. ನನಗೆ ಗೊತ್ತಿದೆ ಅಲ್ಲಿಯೂ ಕೂಡ ಕಡು ಬಡವರಿದ್ದಾರೆ. ಅದೂ ಕೂಡ ಕಡು ಬಡ ವರ್ಗ. ವೋಟ್ ಕೊಡುವುದು ಯಾವ ಪಕ್ಷಕ್ಕೆ ಯಾರಿಗೆ ಎಂಬುದು ಅದು ಜನತೆಗೆ ಬಿಟ್ಟಿರತಕ್ಕಂಥ ವಿಚಾರ. ಅದು ಅವರ ಹಕ್ಕು. ಆ ಹಕ್ಕನ್ನು ದಮನ ಮಾಡುವುದಕ್ಕೋಸ್ಕರ ನಾನು ರಾಜಕೀಯ ದುರುಪಯೋಗ ಮಾಡುವುದಕ್ಕೆ ತಯಾರಿಲ್ಲ. ನಮ್ಮ ಪಕ್ಷ ಮುಂದಿನ ಚುನಾವಣೆಯಲ್ಲಿ ಸೋತರೂ ಚಿಂತೆ ಇಲ್ಲ. ಹಕ್ಕು ಬಾಧ್ಯತೆ ಪ್ರಶ್ನೆ ಬಂದಾಗ ನಾವು ಏನು ತಿಳಿಯುತ್ತೇವೆ ಅದನ್ನು ತಿಳಿದೇ ಮುಂದೆ ಹೊರಟು ಹೋಗೋಣ. ಇದೇ ಕಾಂಗ್ರೆಸ್ ಪಕ್ಷದ ನೀತಿ. ಇದು ಕಾಂಗ್ರೆಸ್ ಸರ್ಕಾರದ ನೀತಿ.

ಇದಕ್ಕೆ ಅನುಗುಣವಾಗಿ ಬಂದಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಈ ವರ್ಷಕ್ಕೆ ಮಾನ್ಯ ಸಭಾಧ್ಯಕ್ಷರೆ. 'ಆಶ್ರಯ' ಸ್ಕೀಮ್ ಮುಂದುವರಿಯುತ್ತದೆ. 2 ಲಕ್ಷದ 60 ಸಾವಿರ ಮನೆಗಳನ್ನು ಮಾಡಬೇಕೆಂದು ಇದ್ದೇವೆ. ಮುಂದಿನ ಏಪ್ರಿಲ್‌ನಿಂದ 2 ಲಕ್ಷ 40 ಸಾವಿರ ಮನೆಗಳನ್ನು ಇಡುತ್ತೇವೆ. ಬಜೆಟ್‌ನ್ನು ತಾವು ದಯವಿಟ್ಟು ಓದಿ ನೋಡಿ. ಮತ್ತೆ ನಾವು 500 ಕೋಟಿ ರೂಪಾಯಿ ಹಣವನ್ನು ಜೋಡಿಸಬೇಕು. ಈಗ ತಿಮ್ಮಪ್ಪನವರು ಡೆಲ್ಲಿಗೆ ಹೋಗಿ, National Housing Bank ಜೊತೆ ಮಾತುಕತೆ ಮಾಡಿದ್ದಾರೆ. ಮೊನ್ನೆ ಪ್ರಧಾನಿಯವರು ಕೂಡಾ ಆದೇಶ ಕೊಡಿಸುತ್ತಿದ್ದಾರೆ. ಅವರು ಬೊಂಬಾಯಿಗೆ ಹೋಗಿ ಬಂದಿದ್ದಾರೆ. ನಬಾರ್ಡ್ ಹತ್ತಿರ ಮಾತನಾಡುತ್ತಿದ್ದಾರೆ. ಆ ಕೆಲಸವನ್ನು ಸಂಪೂರ್ಣ ಆರ್ಗನೈಸ್ ಮಾಡುತ್ತಾನೇ ಇದ್ದಾರೆ. ನಾವು ಹೇಗೆ ಬಜೆಟ್‌ಗೆ Institutional finance ಕೊಡುತ್ತೇವೆಯೋ ಹಾಗೆ ಈ Corporations ಎಲ್ಲಾ ಕೂಡ ನಾವು ಉಪಯೋಗ ಮಾಡಿಕೊಳ್ಳಬೇಕು ಅನ್ನುವ ದೃಷ್ಟಿಯಿಂದ ಮಾಡುತ್ತೇವೆ. ನಿಮಗೆ ಅನುಮಾನ ಬೇಕಾಗಿಲ್ಲ. ಈ ಕಾರ್ಯಕ್ರಮ ಬಡ ವರ್ಗದ ಪರವಾಗಿ ಮುಂದುವರಿಯುತ್ತದೆ. ಸೈಟ್ ಕೊಡುವುದು. ಮತ್ತೆ ಮನೆ ಕೊಡುವುದು. 5 ಲಕ್ಷ ಮನೆಗಳನ್ನು ಒಂದೇ ಸಾರಿ ಕೊಡುವುದಕ್ಕೆ ಯಾರಿಗೂ ಕೂಡ ಬರುವುದಿಲ್ಲ. ನಾವು ಪ್ರತಿ ವರ್ಷ 2 ಲಕ್ಷ ಚಿಲ್ಲರೆ ಮನೆಗಳನ್ನು ಕೊಡುತ್ತೇವೆ. ಯಾರ್‍ಯಾರು ಕೊಟ್ಟಿರಲಿಲ್ಲ. ನಾನು ಹೇಳುತ್ತೇನೆ. ಇವರ ಸರ್ಕಾರ ಇತ್ತಲ್ಲಾ? ಎಷ್ಟೆಷ್ಟು ಸ್ವಾಮಿ ಮನೆ ಕಟ್ಟಿದ್ದುದು? ಅವರು? 2 ಮನೆ. 3 ಮನೆ. ಒಂದೂ ಕಾಲು ಮನೆ. 3 ಮುಕ್ಕಾಲು ಮನೆ. ಅವೂ ಕಡ ಆಗಲಿಲ್ಲ. ನಾನು ಹೊಗಳಿಕೆಗೆ ಅಲ್ಲ.

ಶ್ರೀ ಆರ್. ದಯಾನಂದ ರಾವ್ : ಕೆಲವು ಮನೆಗಳು ಬಿದ್ದೇ ಹೋಗಿವೆ.

ಶ್ರೀ ಎಸ್. ಬಂಗಾರಪ್ಪ : ಆಮೇಲೆ. ಪಟ್ಟಣ ನಗರ ಪ್ರದೇಶಗಳಲ್ಲಿ. ಸರ್ಕಾರಿ ಜಾಗದಲ್ಲಿ. ಕಾರ್ಪೋರೇಷನ್ ಜಾಗದಲ್ಲಿ ಯಾರು ಯಾರು ಬಡವರು ಮನೆ ಕಟ್ಟಿಕೊಂಡು 40-50 ವರ್ಷದಿಂದ ಇದ್ದಾರೋ ಅವರಿಗೆಲ್ಲಾ ಹಕ್ಕು ಪತ್ರ ಕೊಟ್ಟಿದ್ದೇವೆ. ಬಾಕಿ ಇರತಕ್ಕಂಥ ಹಕ್ಕು ಪತ್ರ ಕೂಡ ಕೊಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ಆದೇಶ ಕೂಡ ನಾವು ಕೊಟ್ಟಿದ್ದೇವೆ. ಏಕೆಂದರೆ. ಅವರನ್ನು ಬಿಡಿಸುವ ಪ್ರಶ್ನೆ ಬರುವುದಿಲ್ಲ. ಅದು ಸರ್ಕಾರಿ ಜಾಗ. ಅವರಿಗೇ ಕೊಟ್ಟುಬಿಡೋಣ. ತಕ್ಷಣ ಮನೆಗಳನ್ನು ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಜನರ ಕ್ಷಮೆ ಕೇಳಿ, ನಾವು ಎರಡೂವರೆ ಲಕ್ಷದಂಥ ಕೊಡುತ್ತಾ ಹೋಗುತ್ತೇವೆ. ಜನ ಅವರನ್ನು ಸ್ವಾಗತ ಮಾಡುತ್ತಾರೆ. ಇನ್ನು ಅಕ್ಷಯ ಕಾರ್ಯಕ್ರಮ. ಮಧ್ಯಾಹ್ನದ ಊಟ ಕೊಡಬೇಕೆಂದು ಅಂದೆವು. ನಾಳೆ ಕೆಟ್ಟ ಹೆಸರು ಬರುತ್ತದೆಂದು ಹೇಳಿ. ಆ ವಿವರಕ್ಕೆ ನಾನು ಹೋಗುವುದಿಲ್ಲ. ತೊಗರಿ ಬೇಳೆ ಕೊಳ್ಳುವುದಕ್ಕೆ. ಸೌದೆ ಕೊಳ್ಳುವುದಕ್ಕೆ ಮೇಸ್ಟ್ರುಗಳು ಹೋಗುವುದು ಒಳ್ಳೆಯದಲ್ಲವೆಂದು. ತಮಿಳುನಾಡಿನದನ್ನು ನೋಡಿ ಮತ್ತೆ ನನಗೆ ಹೆದರಿಕೆ ಬಂದುಬಿಡ್ತು ಮಾನ್ಯ ಅಧ್ಯಕ್ಷಿಣಿಯವರೆ. ಅದನ್ನು ಬಿಟ್ಟು ಒಂದು ರೂಪಾಯಿ incentive ಕೊಡಬೇಕು. one of fourth standard ಯಾರು ಹೋಗುತ್ತಾರೆ. ಈ ಲಿಮಿಟ್ ಒಳಗೆ ಇರತಕ್ಕಂಥವರು. ಅವರಿಗೆ ನಾವು ಈ ಹಣ ಕೊಡಬೇಕೆಂದು ಮಾಡಿದ್ದೇವೆ. ಒಟ್ಟು 30 ಲಕ್ಷ ಮಕ್ಕಳ ಮೇಲೆ ಒಟ್ಟು. ನಲವತ್ತೇಳೂವರೆ ಕೋಟಿ ಇದೇ ಮಾರ್ಚ್ ಒಳಗೆ ನಾವು ಖರ್ಚು ಮಾಡಬೇಕೆಂದು ಮಾಡಿದ್ದೇವೆ. ನೀವು ಬಜೆಟ್ ಮಾಡಿದರೆ ಗೊತ್ತಾಗುತ್ತದೆ. 91-92 ಈ ವರ್ಷದ್ದು. ಈಗ ಇದ್ದದ್ದಲ್ಲ, ಅದು ಈಗ ನಾವು ಬಜೆಟ್ ಇಟ್ಟಿದ್ದು 92-93ಕ್ಕೆ ಬರುತ್ತದೆ. 20 ಕೋಟಿ ರೂಪಾಯಿ ಇಟ್ಟಿದ್ದು, ಮತ್ತೆ ಇಪ್ಪತ್ತೇಳೂವರೆ ಕೋಟಿ ರೂಪಾಯಿ ನಾವು ರೆಡಿ ಮಾಡಿ ಇಟ್ಟಿದ್ದೆವು. ನಮ್ಮ ಸಮಾಜದಲ್ಲಿ

ಮಕ್ಕಳು child labour ಮತ್ತೊಂದು ನೋಡುವುದಕ್ಕಾಗುವುದಿಲ್ಲ. ಇದು ಯಾರಿಗೂ ಮರ್ಯಾದೆ ತರುವುದಿಲ್ಲ. ಅದರಲ್ಲೂ ಕೂಡ lower strata of people ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗಗಳು ಏನು ಇದ್ದಾವೆ. ಅವರಿಗೆ ಮೊದಲು ರಕ್ಷಣೆ ಕೊಡತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ. ಸಂವಿಧಾನಬದ್ಧವಾಗಿರತಕ್ಕಂಥಾದ್ದು. It is under the directive principles of the State Policy. ಈ ಪ್ರಕಾರ ಇರತಕ್ಕಂಥ ಈ ಕಾರ್ಯಕ್ರಮ ಬಿಟ್ಟರೆ, ನಾವು ಈ ದೇಶದ ಜನರಿಗೆ ಬಡಬಗ್ಗರಿಗೆ ಅನ್ಯಾಯ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮರೆಯಬಾರದು. ಅದಕ್ಕೋಸ್ಕರ ನಾವು 'ಅಕ್ಷಯ' ಕಾರ್ಯಕ್ರಮ ವಿಚಾರ ಮಾಡಿ ಒಂದು ರೂಪಾಯಿ ಕೊಡಬೇಕೆಂದು ಮಾಡಿದೆವು. ಆದರೆ ನಮ್ಮ ದುರಾದೃಷ್ಟ, ಈ ಬ್ಯಾಂಕ್‌ನವರು ಜಗಳ ತೆಗೆದರು. ಅವರಿಗೆ ಅರಾಮು ಇರಬೇಕು. ಆ ಬ್ಯಾಂಕ್‌ನವರಿಗೆ ಏನೇನೂ ತೊಂದರೆಯಾಗಬಾರದು. ಅವರು ಕೈ ಕಟ್ಟಿಕೊಳ್ಳಬೇಕು. ಸಾಲಕ್ಕಾಗಿ ಬೇಕಾದರೆ ರೆಕಾರ್ಡ್ಸ್ ಬ್ಯುಲ್ ಅಪ್ ಮಾಡುತ್ತಾರೆ. ಇವರು ಡಿಪಾಸಿಟ್‌ಗೆ ವಿಧಾನ ಸೌಧದ ಬಾಗಿಲು ಕಾಯುತ್ತಾರೆ. ಅಥವಾ ಮತ್ತೊಂದು ಮಾಡುತ್ತಾರೆ. ನಾನು ಈ ಬಗ್ಗೆ 2-3 ಮೀಟಿಂಗ್ ಮಾಡಿದ್ದೇನೆ. ಬಡಜನರಿಗಾಗಿ ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡುವುದು ಕಷ್ಟ ಎಂದು ಅವರು ಹೇಳುತ್ತಾರೆ. ಏಕೆಂದರೆ ಸಂಬಂಧಪಟ್ಟವರಿಗೆ ಚೆಕ್‌ಗಳ ಮೂಲಕ ಹಣ ಕೊಡಬೇಕೆಂದು ನಾವು ಹೇಳಿದ್ದೇವೆ. ಅದು ಅವರಿಗೆ ಕಷ್ಟವಾಗಿರಬೇಕು. ಆದರೆ ಬ್ಯಾಂಕ್‌ನವರು ಬ್ಯಾಂಕ್‌ಗಳಲ್ಲಿ 5-10 ರೂಪಾಯಿಗಳನ್ನು ಇಟ್ಟು ಬ್ಯಾಂಕ್‌ನಲ್ಲಿ ವ್ಯವಹಾರ ಮಾಡುವುದನ್ನು ಕಲಿಯಿರಿ ಎಂದು ಹೇಳುತ್ತಾರೆ. 5-10 ರೂಪಾಯಿಗಳಷ್ಟು ಇಟ್ಟರೂ ಕೂಡ ನಾವು ಖಾತೆಯನ್ನು ಪ್ರಾರಂಭ ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಾರೆ. ನಾವು ನಲವತ್ತೇಳುವರೆ ಕೋಟಿ ರೂಪಾಯಿಗಳ ಚೆಕ್ ತೆಗೆದುಕೊಳ್ಳಿ, ನಿಮ್ಮ ಬ್ಯಾಂಕ್‌ನ್ನು ಚೆನ್ನಾಗಿ ಬೆಳೆಸಿ ಎಂದು ಹೇಳಿದರೆ ಇದು ಆಗುವುದಿಲ್ಲ ನಮಗೆ ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಅವರಿಗೆ ಕೈ ನೋವು ಆಗಬಾರದು. ಅದಕ್ಕಾಗಿ ನಾನು ಕೃಷ್ಣದಲ್ಲಿ ಮೊನ್ನೆ ನಡೆದ ಮೀಟಿಂಗ್‌ನಲ್ಲಿ ಹೇಳಿದ್ದೇನೆ. 'Don't be under the impression, that you can do and undo things. As far as nationalised banks are concerned, it is our own property. It is not your pappa's property here. ಯಾರೂ ಕೂಡ ಇದನ್ನು ಮಾನ್ಯತೆ ಮಾಡುವುದಕ್ಕೆ ಆಗುವುದಿಲ್ಲ. ಸರಕಾರವು ಜನಸಾಮಾನ್ಯರಿಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಾಗ ಬ್ಯಾಂಕ್‌ನವರು ಸಹಕಾರ ಕೊಡುವುದಿಲ್ಲ ಎಂದರೆ ಇವೊತ್ತು ನಮ್ಮ ಬ್ಯಾಂಕ್‌ಗಳನ್ನು ಹೇಗೆ ತೆಗೆದುಕೊಂಡು ಹೋಗಬೇಕೆಂಬ ಬಗ್ಗೆ ಒಂದು ಸಲಹೆ ಕೂಡ ಬಂದಿದೆ. ನಮ್ಮ ಡಿಪಾಸಿಟ್ ಎಷ್ಟು ಇದೆ ಅದನ್ನು ತೆಗೆದುಬಿಡುತ್ತೇವೆ. ನಮಗೆ ಈ ಬ್ಯಾಂಕ್‌ಗಳ ಸುದ್ದಿಯೇ ಬೇಡ. ಮೊನ್ನೆ ಪ್ರಧಾನಿಯವರಿಗೂ ಕೂಡ ಈ ಬಗ್ಗೆ ಪತ್ರವನ್ನು ಬರೆದಿದ್ದೇವೆ. ಅಂತೆಯೇ ಇನ್ನೂ ಬಹಳ ದಾರಿಗಳು ಇದ್ದಾವೆ. ಆ ವಿವರಗಳಿಗೆ ನಾವು ಈಗ ಹೋಗುವುದು ಬೇಡ. ಪ್ರಧಾನಿಯವರಿಗೆ ಮತ್ತು ಅರ್ಥಮಂತ್ರಿಯವರಿಗೆ ಪತ್ರವನ್ನು ಬರೆದಿದ್ದೇನೆ.

ಶ್ರೀ ಕೆ. ಹರ್ಷಕುಮಾರಗೌಡ : ಕರ್ನಾಟಕದಲ್ಲಿ ಬ್ಯಾಂಕ್‌ಗಳವರು ಸಾಲ ಕೂಡ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸಾಲ ಕೊಡದಿದ್ದರೆ ಬಿಡಲಿ. ಸಾಲಗಾರರಾಗಿ ಜಾಸ್ತಿ ಇರುವುದು ಬೇಡ. ನಾನು ಈ ಮಾತುಗಳನ್ನು ಪ್ರಚಾರಕ್ಕಾಗಿ ಮಾತಾಡುತ್ತಿಲ್ಲ. ನಾನು ಹೇಳತಕ್ಕಂಥದ್ದು, ಇಷ್ಟೇ ನಾವು ನಲವತ್ತೇಳುವರೆ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದರೂ ಅವರು ತಯಾರಾಗಿಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕ್‌ನವರು ಮುಂದೆ ಬಂದು ಒಪ್ಪಿದ್ದಾರೆಂದು ಮಾನ್ಯ ಮೊಯ್ಲಿಯವರು ಹೇಳಿದರು, ಅದೇ ರೀತಿಯಲ್ಲಿ ಕೋಲಾರದಲ್ಲಿ ಅಪೆಕ್ಸ್ ಬ್ಯಾಂಕ್‌ನವರು ಡಿಸಿಸಿ

ಬ್ಯಾಂಕ್‌ನ ಮೂಲಕ ಮಾಡುತ್ತಾರೆಂದು ಹೇಳಿದ್ದಾರೆ. ಹಾಗೆ ನಮ್ಮ ಡಿಪಾಸಿಟ್‌ನ್ನು ಅಪೆಕ್ಸ್ ಬ್ಯಾಂಕ್‌ನವರಿಗೆ ಕೊಟ್ಟು ಕಾರ್ಯಕ್ರಮ ಮಾಡುವುದು ಎಷ್ಟೋ ವಾಸಿ ಎಂದು ಕಾಣುತ್ತದೆ. ಅದು ಅಭಿಪ್ರಾಯವಾಗಿದ್ದು ಇನ್ನೂ ಅಂತಿಮವಾಗಿ ಆ ಬಗ್ಗೆ ತೀರ್ಮಾನವನ್ನು ಮಾಡಿಲ್ಲ.

Sri K.C. Modgekar Desai : For getting 'Akshaya' form one man has to spend nearly Rs. 25/-. How you are going to lessen it? It has to be given free of charges. Even for that the concerned persons has to spend nearly Rs. 25/- from the Mamledar's Office.

Sri S. Bangarappa : We have actually discussed those aspects. ನಾವು ಏನು ಮಾಡಿದ್ದೇವೆ ಅಂದರೆ, ಬ್ಯಾಂಕ್‌ಗೆ ಹೋಗುವುದು, ಬರುವುದು ಇತ್ಯಾದಿ ಬರೀ ಖರ್ಚಾಗುತ್ತದೆ. better one learns the habit of going to the banks and opening of accounts and get the process started by saving some money for himself, whether it is Rs. 5/ - or 10/- or Rs. 50/- or Rs. 100/- ಇದರ ಮೂಲಕ ಹಣವನ್ನು ಉಳಿಸುವುದಕ್ಕೆ ಜನರು ಕಲಿಯುತ್ತಾರೆ. ಇದರಿಂದ ಉಪಯೋಗವಾಗುತ್ತದೆ. ಎಂಬ ದೃಷ್ಟಿಯಿಂದ ಮಾಡಿದ್ದೇವೆ. It is not the question of saving a little time. Yes, I agree. ನಾವು ಏನು ಮಾಡಿದ್ದೇವೆ ಅಂದರೆ ಮೂರು ತಿಂಗಳಿಗೊಮ್ಮೆ ಎಂಬುದನ್ನು ಎರಡು ತಿಂಗಳಿಗೊಮ್ಮೆ ಎಂದು ಏನು ಮಾಡಿದ್ದೇವೆ. ಚೆಕ್ ಆಪರೇಶನ್ ಇತ್ಯಾದಿ ತಮಗೆ ಕಷ್ಟವಾಗುತ್ತದೆ ಎಂದು ಅವರ ಅಭಿಪ್ರಾಯ. ಅವರೂ ಕೂಡ ಮೊನ್ನೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ 6 ತಿಂಗಳಿಗೊಮ್ಮೆ ಚೆಕ್ ಆಪರೇಶನ್ ಮಾಡುತ್ತೇವೆ ಎಂದಿದ್ದಾರೆ. ಹಾಗಾದರೆ ಇವರನ್ನು ಕೇಳಿ ಮಕ್ಕಳು ಹುಟ್ಟಬೇಕಾಗುತ್ತದೆಯೇ? ಈ ದೇಶದಲ್ಲಿ ನಾವು ಇವರನ್ನು ಕೇಳಿ ಮಕ್ಕಳನ್ನು ಸ್ಕೂಲ್‌ಗೆ ಕಳುಹಿಸುವುದಕ್ಕೆ ಆಗುತ್ತದೆಯೇ? ಅದಕ್ಕಾಗಿ ನಾನು ಹೇಳಿದ್ದುದು "ಹೋಗಯ್ಯ ಬದನೇಕಾಯಿ. ಆಗುವುದು ಆಗುತ್ತದೆ. ಹೋಗುವುದು ಹೋಗುತ್ತದೆ. ನೀವಲ್ಲದಿದ್ದರೆ ಬೇರೆ ನೋಡಬೇಕಾಗುತ್ತದೆ ಬೇರೆ ಯಾವುದಾದರೂ ವಿಚಾರ ಮಾಡುತ್ತೇವೆ ಎಂದು ಹೇಳಿದ್ದೇವೆ. There must be some limits for all these things. ನಮ್ಮ ಅಕ್ಷಯ ಕಾರ್ಯಕ್ರಮವು ಮುಂದುವರಿಯುತ್ತದೆ. 20 ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ಗೆ ಇಟ್ಟು ಅದನ್ನು 47.5 ಕೋಟಿಗೆ ಏರಿಸಿದ್ದೇವೆ. ಮುಂದಿನ ವರ್ಷ ಅದೇ 1992-93ಕ್ಕೆ 90 ಕೋಟಿಗಳನ್ನು ಇಟ್ಟಿದ್ದೇವೆ. ಮತ್ತೊಂದು 10-20 ಕೋಟಿ ಆದರೂ ಕೂಡ ನಾವು ಇದನ್ನು ಬಿಡುವುದಿಲ್ಲ. ಬೇಕಾದರೆ ಇನ್ನೂ 10-20 ಕೋಟಿ ರೂಪಾಯಿಗಳನ್ನು ಕೊಡೋಣ. ಈ ಕಾರ್ಯಕ್ರಮವನ್ನು ಚೆನ್ನಾಗಿ ಮುನ್ನಡಿಸಿಕೊಂಡು ಹೋಗುತ್ತೇವೆ. We should not forget this. ದೊಡ್ಡ ದೊಡ್ಡ ದೇವರುಗಳನ್ನು ನೋಡಿಕೊಳ್ಳುವುದಕ್ಕೆ ಮುಜರಾಯಿ, ವಕ್ಫ್‌ಬೋರ್ಡ್ ಮುಂತಾಗಿ ಇವೆ. ಆದರೆ ಸಣ್ಣ ದೇವರುಗಳನ್ನು ಯಾರು ನೋಡುವುದು? ಕಾಳಮ್ಮ, ಮಾರಮ್ಮ, ಚೌಡಮ್ಮ, ಯಲ್ಲಮ್ಮ, ಹುಲಗಮ್ಮ, ಭರಮಮ್ಮ, ದುರ್ಗಮ್ಮ ಮುಂತಾಗಿ ಸಣ್ಣ ಸಣ್ಣ ದೇವರುಗಳಿಗೆ ಈ ಕಾರ್ಯಕ್ರಮದ ಮೂಲಕ ದೇವಸ್ಥಾನಗಳನ್ನು ಕಟ್ಟಿಸಬೇಕು.

ಯಾವಾಗಲೋ ಗುಡಿಸಲು ಹಾಕಿರುತ್ತಾರೆ. ಬಿದ್ದು ಹೋಗಿರುತ್ತವೆ. ಯಾರೂ ನೋಡುವವರಿರುವುದಿಲ್ಲ ಆದ್ದರಿಂದ ದೇವಸ್ಥಾನ ಇರಬೇಕು ಇಲ್ಲ, ಕ್ಯಾನ್ಸಲಾಗಬೇಕು. ಎರಡರ ಪೈಕಿ ಒಂದಾಗಬೇಕು. ನೀವು ದೇವರನ್ನು ಹೇಗೆ ಕ್ಯಾನ್ಸಲ್ ಮಾಡ್ತಿರೀ. ಹೇಗೆ ರದ್ದು ಮಾಡೋಕೆ ಬರ್‍ತದೆ? ಆದ್ದರಿಂದ ಅವುಗಳಿಗೆ ಒಂದು ವ್ಯವಸ್ಥಿತವಾದ ಮನೆ ಕಟ್ಟಿಕೊಡಬೇಕು. ನಮ್ಮ ಸಮಾಜದಲ್ಲಿ ನಂಬಿಕೆ.

ಧರ್ಮ, ಅವರವರದು ಅವರಿಗೆ ಹೆಚ್ಚು. ಯಾವುದೇ ಜಾತಿಯವರದು, ನನಗೆ ಸಂಬಂಧ ಇಲ್ಲ. ಎಲ್ಲಾ ಧರ್ಮಗಳು ಮತಗಳು ನಂಬಿಕೆಗಳು ಇವೆಲ್ಲಾ, ನಾವು ಗೌರವ ಕೊಟ್ಟಿದ್ದೇವೆ. That is what our constituion says. ಅದರ ಪ್ರಕಾರ ಮನೆ ಕಟ್ಟುತ್ತಾ ಹೋಗೋಣ. 1 ಕೋಟಿ ರೂ. 91-92ಕ್ಕೆ ಪ್ರೊವೈಡ್ ಮಾಡಿದ್ದೇನೆ. ಆಮೇಲೆ ಅಪ್ರೋಪ್ರಿಯೇಶನ್ ಬಿಲ್ ಬಂದಾಗ ಹೇಳಿದ ಹಣ ಸಾಕಾಗಲ್ಲ ಅಂದರು ಒಂದೊಂದು ತಾಲೂಕಿನಲ್ಲಿ 25 ದೇವಸ್ಥಾನವಾದರೂ ಟಚ್ ಮಾಡೋಣ ಅಂದರು. 4 ಕೋಟಿ ರೂ. ಜಾಸ್ತಿ ಮಾಡಿದೆ. 5 ಕೋಟಿ ಈ ವರ್ಷಕ್ಕೆ ಕೊಟ್ಟಿದ್ದೇವೆ. ಇನ್ನೂ 1 ಕೋಟಿ ಬಾಕಿ ಇದೆ. ಮಾರ್ಚಿಗೆ ರಿಲೀಸ್ ಮಾಡೋಕೆ ಹೇಳಿಬಿಟ್ಟಿದ್ದೇನೆ. ಏಕೆಂದರೆ ಲ್ಯಾಪ್ಸ್ ಆಗೋದು ಬೇಡ ಎಂದು ಮುಂದಿನ ವರ್ಷ ನೋಡಿ, ಮತ್ತೆ 5 ಕೋಟಿ ಜಾಸ್ತಿ ಇಟ್ಟಿದ್ದೇನೆ. ನಾವು ಬಿಡೋದಿಲ್ಲ ಅದನ್ನು. ದೇವರುಗಳನ್ನು ಇನ್ನು ಬೆನ್ನು ಹತ್ತಿಕೊಂಡೇ ಇದ್ದೇವೆ. ಅವರ ಮನೆ ಕಟ್ಟೋ ವಿಚಾರ. ಬಡವರ ಕೇರಿಗೆ ಹೋದಾಗ ನಿಮಗೆ ಅರ್ಜಿ ಕೊಡ್ತಾರೆ, ಸ್ವಾಮಿ ದೇವಸ್ಥಾನ ಕಟ್ಟಬೇಕು ಅಂತ. ನೀವು ಎಲ್ಲಿಂದ ತಂದು ಕಟ್ಟಿಸಬೇಕು? ಶಾಸಕರಿಗೂ ಕೂಡ ಅದು ಬಹಳ ಕಷ್ಟ, ಆ ದೃಷ್ಟಿಯಿಂದ 5 ಕೋಟಿ ರೂ. ಎತ್ತಿಟ್ಟಿದ್ದೇವೆ. 'ಶುಶ್ರೂಷ' ಕಾರ್ಯಕ್ರಮ. ಅದು ಸ್ವಲ್ಪ ವ್ಯತ್ಯಾಸ ಇದ್ದರೂ ನಿಜವಾಗೂ ನನಗೆ ಇದು ಇಷ್ಟು ಒಳ್ಳೆಯ ಹೆಸರು ತರುತ್ತದೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಕಡುಬಡವರು ದೊಡ್ಡ ದೊಡ್ಡ ಕ್ಯಾನ್ಸರ್. ಟಿಬಿ. ಹಾರ್ಟ್ ಇಂಥ ಖಾಯಿಲೆಗಳಿಗೆ ಇದು ತುಳಿತಕ್ಕೆ ಸಿಕ್ಕಿರುವ ವರ್ಗಗಳಿಗೆ ದೀನದಲಿತರಿಗೆ, ಸಂಬಂಧಪಟ್ಟಿರುವ ಕಾರ್ಯಕ್ರಮ. ಇವತ್ತು ಡ್ಯಾಮ್ ಕಟ್ಟಿ ಚಾನೆಲ್ ಎಳೆಯೋದು ಎಷ್ಟು ಮುಖ್ಯಾನೋ. ಅಷ್ಟೇ ಮುಖ್ಯವಾದದ್ದು ಇದು. ಏನು ಮಾಡ್ತೀರಿ ಇವರನ್ನು? ಅದಕ್ಕೋಸ್ಕರ ಶುಶ್ರೂಷ ಅಂತ ಇಟ್ಟಿದ್ದೇವೆ. ಈಗಾಗಲೇ ಶುಶ್ರೂಷ ಕಾರ್ಡ್‌ಗಳು ಬಂದುಬಿಟ್ಟಿವೆ, ಆದರೆ ಇನ್ನೂ ಸ್ವಲ್ಪ ರಿಪೇರಿ ಮಾಡೋದಿದೆ ಅಂತ ನನ್ನ ಭಾವನೆ. ಅಷ್ಟೊಂದು ಸಮಾಧಾನ ನನಗೆ ಆಗಿಲ್ಲ. ಇನ್ನೊಂದು ಸಲ ಮೀಟಿಂಗ್ ಕರೆದು ಅವರನ್ನು ಆಸ್ಪತ್ರೆಗೆ ತಂದು. ಆ ಖರ್ಚು ನೋಡಿಕೊಳ್ಳೋದು. ಮಾಡ್ತಿದೇವೆ. ಆದರೆ ಅದನ್ನೆಲ್ಲ ಯಾವ ರೀತಿ ಮಾಡಬೇಕೂಂತ ಎಂದು ಕೂತುಕೊಂಡು ಅಗ್ರಿಕಲ್ಚರ್ ಸೆಕ್ಟಾರ್, ನಾನು ಒಂದೇ ಮಾತನ್ನು ತಮ್ಮ ಗಮನಕ್ಕೆ ತರಬೇಕು. The entire economy of this country hinges upon the agriculture economy. ಕೃಷಿ ಆರ್ಥಿಕ ವ್ಯವಸ್ಥೆ ಮುರಿದುಬಿದ್ದುಬಿಟ್ಟರೆ ಇಂಡಸ್ಟ್ರಿಯಲ್ ಎಕಾನಮಿ ಎಲ್ಲಾ. ನೀವು ಎಷ್ಟೇ ಬೊಂಬಡ ಹೊಡೆದುಕೊಂಡರೂ ರಿಪೇರಿಯಾಗುವುದಕ್ಕೆ ಬರೋದಿಲ್ಲ. 75-80 ಪರ್ಸೆಂಟ್ ನಾವೆಲ್ಲಾ ಕೃಷಿಕರು, ಇದೇ ಹೋಗಿಬಿಟ್ಟರೆ ನಿಮ್ಮ ಎಂಟೈರ್ ಎಕಾನಮಿ ಕುಸಿದು ಮುರಿದು ಬಿದ್ದುಬೋಗುತ್ತದೆ. ಇದು ಎಕ್ಸ್‌ಪರ್ಟ್ ಹೇಳಿದ್ದಲ್ಲ, ನಮ್ಮ ನಿಮ್ಮೆಲ್ಲರ ಅನುಭವ. ಇವತ್ತು ನಾವು ಕೃಷಿಕರಿಗೆ ಧೈರ್ಯ ಕೊಡಬೇಕು. ಕಬ್ಬು ಬೆಳೆಗಾರರಿಗೆ ಪರ್ಚೇಸ್ ಟ್ಯಾಕ್ಸ್ ತೆಗೆದು ಹಾಕುವುದನ್ನು ಬಜೆಟಿನಲ್ಲಿ ಹೇಳಿಬಿಟ್ಟಿದ್ದೇನೆ. ಮಂಡ್ಯ ಜಿಲ್ಲೆ, ಮೈಸೂರು, ಬೆಳಗಾಂ ಇತ್ಯಾದಿ ಭಾಗಗಳಲ್ಲಿ ಕಬ್ಬು ಬೆಳೆಯುತ್ತಾರೆ. ಗೋವಾ ಚೀಫ್ ಮಿನಿಸ್ಟರ್ ನಾನೂ ಮಾತುಕತೆಯಾಡುವ ಸಂದರ್ಭದಲ್ಲಿ ಅಲ್ಲಿ ಅವರದು ಒಂದೇ ಒಂದು ಶುಗರ್‌ಫ್ಯಾಕ್ಟರಿ ಇದೆ, ಪಾಪ ಅವರದು ಸಣ್ಣರಾಜ್ಯ. ನಮಗೆ ಅನುಕೂಲ ಮಾಡಿಕೊಡಬೇಕು, ಇಲ್ಲದಿದ್ದರೆ ಶುಗರ್‌ಫ್ಯಾಕ್ಟರಿ ಉಳಿಯೋದಿಲ್ಲ ಅಂದರು. ಪರ್ಚೇಸ್ ಟ್ಯಾಕ್ಸ್ ಬಿಟ್ಟು ಮಾಡಿದಿವಿ ಅವರಿಗೆ, ಈಗಾಗಲೇ ಎರಡು ಕೋಟಿ ರೂ. ಲಾಭ ಮಾಡಿದೆಯೆಂತೆ. ನನಗೆ ಬಹಳ ಸಂತೋಷವಾಯಿತು. ಇಂದು ಬೆಳಗಾಂ ಜಿಲ್ಲೆ ಮಂಡ್ಯ ಮತ್ತು ಮೈಸೂರು ಜಿಲ್ಲೆ ಮಿತ್ರರೆಲ್ಲಾ ಬಂದು ಹೇಳಿದರು ಈ ಪರ್ಚೇಸ್ ಟ್ಯಾಕ್ಸ್ ತೆಗೆಯದೇ ಇದ್ದರೆ ಹೆಚ್ಚುವರಿ ಶುಗರ್‌ಕೇನ್ ಮುಂದೆ ಹೋಗೋದಿಲ್ಲ, ನಾಳೆ ಅವರವರ ಭೂಮಿಯಲ್ಲಿ ಸುಟ್ಟು ಹಾಕಿಬಿಡಬೇಕಾಗುತ್ತದೆ ಅಂತ. ಯಾರಿಗಿದು ಕಷ್ಟ? ಬರೀ ರೈತರಿಗಷ್ಟೇ ಅಲ್ಲ. ಇಡೀ ರಾಜ್ಯಕ್ಕೆ,

ರಾಷ್ಟ್ರಕ್ಕೇ ನಷ್ಟ. ನಾವದನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕು. ರೈತರು ಸುಸ್ತಾದರೆ ಈ ದೇಶ ಎಂದೂ ಬೆಳೆಯಲ್ಲ. ಇದು ಸ್ಪಷ್ಟವಾಗಿ ನಾವೆಲ್ಲಾ ತೀರ್ಮಾನ ಮಾಡಿಟ್ಟಿರುವ ವಿಚಾರ. ಅದಕ್ಕಾಗಿ ಪರ್ಚೇಸ್ ಟ್ಯಾಕ್ಸ್ ನಾವೆಲ್ಲ ತೆಗೆದುಹಾಕಿದ್ದೇವೆ. ಕಳೆದ ಸಾರಿ ಪಂಪ್‌ಸೆಟ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪಂಪ್‌ಸೆಟ್ಸ್ ಇವೆ. ನಮಗೆ ವೋಲ್ಟೇಜ್ ಡ್ರಾಪಾಗೋದು ಮೋಟರ್ ಸುಟ್ಟುಹೋಗೋದು ಇದರ ಬಗ್ಗೆ ಪ್ರತ್ಯೇಕ ಚರ್ಚೆ ಮಾಡೋದು ಒಳ್ಳೆಯದು. ಈ ಸದನದಲ್ಲಿ. ನಾನು ಬೇಡ ಅಂತ ಮುಚ್ಚಿಡುವುದೇನೂ ಅಲ್ಲ, ತಾವು ಪ್ರಶ್ನೇನೂ ಕಳಿಸಿಕೊಟ್ಟಿದ್ದೀರಿ. ಈಗ ಕೆವಿ ಲೈನ್ ಜಾಸ್ತಿಹಾಕಬೇಕು, ಟ್ರಾನ್ಸ್‌ಫಾರ್ಮರ್ ಜಾಸ್ತಿ ಮಾಡಬೇಕು. ಸುಮಾರು 200 ಚಿಲ್ಲರೆ ಕೋಟಿ ರೂ ಶಕ್ತಿ ಕೆಇಬಿಗೆ ತುಂಬಿದ್ದೇವೆ. ಜನತಾ ದಳದವರು ಅಧಿಕಾರ ಬಿಟ್ಟುಕೊಟ್ಟಾಗ 65 ಕೋಟಿ ರೂ. ಸಾಲ ಇತ್ತು. ಯಾವ್ಯಾವುದು. ಪಂಚಾಯಿತಿ ಸ್ಟ್ರೀಟ್‌ಲೈಟ್ ಬಿಲ್ ಕಟ್ಟಿಲ್ಲ, ಮುನಿಸಿಪಾಲಿಟಿ ಬಿಲ್ ಕಟ್ಟಿಲ್ಲ. ಬಾಕಿ ಇರೋದು 65 ಕೋಟಿ ರೂ. ಸಾಲ ಇವರು ಮಾಡಿದ್ದುದು. ಇವರು ಕಟ್ಟಲೇ ಇಲ್ಲ ಕೊನೆಗೆ. ನಾವು 65 ಕೋಟಿ ಕೆಇಬಿಗೆ ಕಟ್ಟಿ ಬಾಕಿ ತೀರಿಸಿದ್ದೇವೆ.

ಇದೆಲ್ಲಾ ಹೊಣೆಗಾರಿಕೆ ಯಾರ ಮೇಲೆ ? ಅದಲ್ಲದೆ ಮತ್ತೆ ಬೇರೆ ಬೇರೆ ಕಡೆಯಿಂದಲೂ ಕೂಡ ನಾವೆಲ್ಲಾ ಜವಾಬ್ದಾರಿಯನ್ನು ವಹಿಸಿದ್ದೇವೆ. ಬೇರೆ ಬೇರೆ ಕಡೆಯಿಂದ ಹಣ ನಮಗೆ ಇನ್ನು ಎಲ್ಲೆಲ್ಲಿ ಸಿಗುತ್ತದೆ ತೆಗೆದುಕೊಳ್ಳಿ ಎಂದು ಹೇಳಿ ಅದಕ್ಕೆ ಗೌರ್ನಮೆಂಟ್ ಗ್ಯಾರಂಟಿಯನ್ನು ಕೂಡ ಕೊಟ್ಟಿದ್ದೇವೆ. ಕೆ.ಇ.ಬಿ.ಗೆ ನೀವು ಎಷ್ಟು ಶಕ್ತಿಯನ್ನು ಕೊಡುತ್ತೀರೋ ಅಷ್ಟೂ ಒಳ್ಳೆಯದು. ಟ್ರಾನ್ಸ್‌ಮಿಷನ್ ಲಾಸ್ ವಿಚಾರದಲ್ಲಿ ಕೂಡ ಈಗಾಗಲೇ ನ್ಯಾಷನಲ್ ಲೆವೆಲ್‌ಗೆ ಕಡಿಮೆ ಮಾಡಿರುವುದರಿಂದ ನಮಗೆ ಪ್ರೈಸ್ ಕೂಡ ಕೆ.ಇ.ಬಿ.ಗೆ ಸಿಕ್ಕದೆ. ಹಿಂದಿನ ಕೆಇಬಿ ಅಲ್ಲ. ಈಗಾಗಲೇ ಕೆ.ಇ.ಬಿ. ಬಹಳ ಒಳ್ಳೆಯ ರೀತಿಯಲ್ಲಿ ಹೋಗುತ್ತಿದೆ. There might be certain lapse.. ಆದರೆ ಇರತಕ್ಕಂಥ ಪರಿಸ್ಥಿತಿಯಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡತಕ್ಕಂಥ. ಧೈರ್ಯದ ಕೆಲಸವನ್ನೂ ಕೂಡ ಅವರು ಮಾಡುತ್ತಿದ್ದಾರೆ. ಅವರು ಇನ್ನೂ ಕೂಡ ಮಾಡಬೇಕು. ನಾವು ಇನ್ನೂ ಆದಕ್ಕೆ ಹೆಚ್ಚು ಶಕ್ತಿಯನ್ನು ತುಂಬಬೇಕಾಗುತ್ತದೆ. ಇನ್ನೂ ಮಾಡತಕ್ಕಂಥದ್ದು ಇದೆ. ಇದನ್ನು ಅವರೂ ಕೂಡ ಒಪ್ಪುತ್ತಾರೆ. ಏಕೆಂದರೆ ನಾವು ಇಲ್ಲಿ ಈ ಭಾಷಣವನ್ನು ಮಾಡುತ್ತಿರುತ್ತೇವೆ. ಅಲ್ಲಿ ಬೋರ್‌ವೆಲ್‌ನ್ನು ಹೊಡೆಯುತ್ತಿರುತ್ತಾರೆ. That will be additional burden on the existing lines... ಏನಾಗುತ್ತದೆ ಇವೆಲ್ಲಾ ಕನೆಕ್ಷನನ್ನು ಕೊಡುವುದರಿಂದ ವೋಲ್ಟೇಜ್ ಡ್ರಾಪ್ ಆಗುವುದಕ್ಕೆ ಕಾರಣವಾಗಿದೆ ನಿಮಗೆ ಗೊತ್ತಿದೆ. During my period as Chief Minister.. ಎನರ್ಜೈಸ್ಡ್ ಪಂಪ್‌ಸೆಟ್ ನಾನು 60 ಸಾವಿರಕ್ಕೆ ಏರಿಸಿ 72 ಸಾವಿರ ಮಾಡಿದ್ದೇವೆ. ಈ ವರ್ಷ ಮತ್ತೆ 60 ಸಾವಿರ ಕ್ರಾಸ್ ಮಾಡಿಸಿದ್ದೇನೆ. 60-70 ಸಾವಿರ ನಾವು ಈ ರೀತಿ ಬೋರ್‌ವೆಲ್‌ನ್ನು ತೆಗೆಸುತ್ತಾ ಹೋದರೆ ಅದೇ ಲೈನ್ ಮೇಲೆ ಇವತ್ತು ಬಂದು ಪ್ರೆಷರ್ ಬೀಳುತ್ತಿದೆ. ಅದರಿಂದಾಗಿ ತೊಂದರೆ ಬರುತ್ತಿದೆ. ಅದಕ್ಕಾಗಿ ನಾವು ವರ್ಲ್ಡ್ ಬ್ಯಾಂಕ್ ಏಡ್. ಎಕ್ಸ್‌ಟರ್ನಲ್ ಏಡ್‌ನಲ್ಲಿ ತೆಗೆದುಕೊಂಡು ಕೆ.ಇ.ಬಿ.ಗೆ ಸಾಲವನ್ನು ಕೊಡಿಸಿ ಅಥವಾ ಎಲ್.ಐ.ಸಿ. ಯಿಂದ ತೆಗೆದುಕೊಂಡು ನಾವು ಸರಿಯಾಗಿ ದೊಡ್ಡಪ್ರಮಾಣದಲ್ಲಿ ಹೋಗಬೇಕು ಎಂದು ಮಾಡಿದ್ದೇವೆ. ಜೊತೆಗೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಕೂಡ ನಾವು ಹೆಚ್ಚಿನ ಗಮನವನ್ನು ಕೊಡತಕ್ಕಂಥದ್ದು. ಇದರಲ್ಲಿ ಅಡಗಿದೆ. ತಾವು ಬಜೆಟ್ ಅಲೋಕೇಷನ್‌ನ್ನು ನೋಡಿದರೆ ಗೊತ್ತಾಗುತ್ತದೆ. ನಾವು ವಿದ್ಯುಚ್ಛಕ್ತಿ ಉತ್ಪಾದನೆಗೆ ಎಷ್ಟು ಹಣವನ್ನು ಇಟ್ಟಿದ್ದೇವೆ ಈ ವರ್ಷ. ಹಿಂದಿನ ವರ್ಷ ಎಷ್ಟಿತ್ತು? ಮುಂದಿನ ವರ್ಷ ಎಷ್ಟಿದೆ ಎನ್ನತಕ್ಕಂಥ ಮಾತನ್ನು ಕೊನೆಯಲ್ಲಿ ಹೇಳುತ್ತೇನೆ. ಈಗ ಪವರ್ ಟ್ಯಾರಿಫ್

ಆಫ್ ಐ.ಪಿ. ಸೆಟ್ಸ್ ಕಳೆದ ಸಾರಿ 90 ರೂಪಾಯಿಗೆ ನಿಂತು ಹೋದದ್ದು 50 ರೂಪಾಯಿಗೆ ಅದನ್ನು ತಂದೆವು. ಅದು 5 ಹೆಚ್.ಪಿ. ಕೆಳಗಡೆ ಇರತಕ್ಕಂಥದ್ದು. 130 ರೂಪಾಯಿ ಇದ್ದದ್ದನ್ನು ಐದು ಹೆಚ್.ಪಿ. ಯಿಂದ 10 ಹೆಚ್.ಪಿ. ವರೆಗೆ. 130 ಪರ್ ಹೆಚ್.ಪಿ. ಇದ್ದದ್ದನ್ನು ನಾವು 60 ರೂಪಾಯಿಗೆ ತಂದೆವು. ನಾವು ಅನೌನ್ಸ್ ಮಾಡಿದ್ದೇವೆ. ಈ ವರ್ಷ ಏನು ಮಾಡಿದ್ದೇವೆ ಎಂದರೆ ಅಪ್‌ಟು 10 ಹೆಚ್.ಪಿ. ವರೆಗೆ ಫ್ರೀ ಮಾಡಿದ್ದೇವೆ. ಮುಂದಿನ ತಿಂಗಳು ಒಂದನೇ ತಾರೀಖಿನಿಂದ ಇದು ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಜಾರಿಗೆ ಬರುತ್ತದೆ. ನನಗೆ ಬಹಳ ಸಂತೋಷವಾಯಿತು. ರೈತರೆಲ್ಲಾ ಪಟಾಕಿಯನ್ನು ಹೊಡೆದಿದ್ದಾರೆ ಎಂದು ಹೇಳಿದರು. ಆದರೆ ಧೈರ್ಯದ ತೀರ್ಮಾನವನ್ನು ನಾವು ಮಾಡಿದ್ದೇವೆ. ನಮಗೆ 20-25 ಕೋಟಿ ರೂಪಾಯಿಗಳ ನಷ್ಟವಾಗಬಹುದು ಎಂದು ಅಂದಾಜು ಇದ್ದರೂ ಕೂಡ ರೈತನ ಕೈ ವೀಕ್ ಆದರೆ ನಮ್ಮ ಅಗ್ರಿಕಲ್ಚರ್ ಏಕಾನಮಿ ಅಷ್ಟೇ ವೀಕ್ ಆಗಿ ಸತ್ತು ಹೋಗುತ್ತದೆ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. It is not the question of losing 25 crores. It is the question of gaining ultimately through production 250 crores. ಉದಾಹರಣೆಗೆ ನಾನು ಹೇಳುವುದು. ಇದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ಆದರೆ ನಾವು ಧೈರ್ಯ ಮಾಡಿ ಮಾಡಿದ್ದೇವೆ. ಇದರಿಂದ 20 ಕೋಟಿ 40 ಲಕ್ಷ ರೂಪಾಯಿಗಳನ್ನು ನಾವು ಲಾಸ್ ಮಾಡಿಕೊಳ್ಳುತ್ತೇವೆ. ಇದು ಲಾಸೇನೂ ಅಲ್ಲ. ಆದರಿಂದ ನಮಗೆ ಉಪಯೋಗ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಭೂಗುಣ ಸ್ಕೀಮ್ ಅನ್ನು ನಾವು ಈಗಾಗಲೇ ಮಾಡಿದ್ದೇವೆ. ಸಾಯಿಲ್ ಟೆಸ್ಟಿಂಗ್. ನಾವು ಏನು ಮಾಡುತ್ತೇವೆ, ಜಮೀನು ಶೇಂಗಾ ಬೆಳೆಯುತ್ತದೆಯೋ, ಭತ್ತ ಬೆಳೆಯುತ್ತದೆಯೋ. ಪೊಟಾಸಿಯಂ ಜಾಸ್ತಿಯೋ. ಕ್ಯಾಲ್ಸಿಯಂ ಕಡಿಮೆಯೋ ಇದನ್ನು ಒಬ್ಬರೂ ನೋಡುವ ಹಾಗೆಯೇ ಇಲ್ಲ. ಇದಕ್ಕೆ ಏನು ಮಾಡಿದ್ದೇವೆ ಎಂದರೆ ಸಂಪೂರ್ಣವಾಗಿ ಇಡೀ ಒಂದು ವರ್ಷದಲ್ಲಿ ಹೊಸದಾಗಿ ಲ್ಯಾಬೋರೇಟರಿಯನ್ನು ಮಾಡುವುದಕ್ಕೆ ಹೋಗಿಲ್ಲ. ಹೊಸದಾಗಿ ಜನರನ್ನು ನೌಕರಿಗೆ ಸೇರಿಸಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿದ್ದವರೇ ಇದರ ಬಗ್ಗೆ ಚಿಕ್ಕೇಗೌಡರು ನಾವೆಲ್ಲಾ ಮಾತನಾಡಿದ್ದೇವೆ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಅವರವರ ಏರಿಯಾದಲ್ಲಿ ವ್ಯಾನನ್ನು ತೆಗೆದುಕೊಂಡು ಹೋಗಬೇಕು. ಒಂದೊಂದು ಕಡೆಗೆ ಅವರುಗಳು ಹೋಗಬೇಕು. ಪ್ರತಿಯೊಬ್ಬರಿಗೂ ನಾವು ಒಂದೊಂದು ಕಾರ್ಡನ್ನು ಕೊಡುತ್ತಿದ್ದೇವೆ. ಭೂಮಿ ನಂಬರು, ಸರ್ವೆ ನಂಬರು, ಮತ್ತೊಂದು ಎಲ್ಲಾ ವಿವರವನ್ನು ಹಾಕಿ ಕೊಡುತ್ತೇವೆ. ಬ್ಲಾಕ್ ಕಾಟನ್ ಸಾಯಿಲ್ ಇರಬಹುದು, ಮತ್ತೊಂದು ಇರಬಹುದು. ಇಂಥದ್ದು ನಿಮ್ಮಲ್ಲಿ ಕಡಿಮೆ ಇದೆ. ಮತ್ತೆ ಇಂಥದ್ದು ಜಾಸ್ತಿ ಇದೆ, ಇಂಥದ್ದನ್ನು ನಿಮ್ಮ ಮಣ್ಣಿಗೆ ಸೇರಿಸಬೇಕು. ಇದನ್ನು ವಿಜ್ಞಾನಿಗಳೆಲ್ಲಾ ಮಾಡಿ, ಮಣ್ಣು ತಪಾಸಣೆಯನ್ನು ಮಾಡಿ ಅವರಿಗೆ ಒಂದು ಕಾರ್ಡನ್ನು ಕೊಡುತ್ತಾರೆ. ಇನ್ನುಳಿದ ವಿಚಾರದ ಬಗ್ಗೆ ಅವನೇ ಮಾಡಿಕೊಳ್ಳಬೇಕು. ಏಕೆಂದರೆ ಅವರಿಗೆ ಎಜುಕೇಷನ್ ಇಲ್ಲ. ಅಗ್ರಿಕಲ್ಚರ್ ಬಗ್ಗೆ ಎಜುಕೇಷನ್ ಸಿಗುತ್ತಿಲ್ಲ. ಇದಕ್ಕೆ ನಮ್ಮ ಅಗ್ರಿಕಲ್ಚರ್ ಸಚಿವರು ಏನು ಇದ್ದಾರೆ, ಮಾನ್ಯ ಚಿಕ್ಕೇಗೌಡರು ಅವರ ಇಲಾಖೆಯ ಮುಖಾಂತರ ಇದನ್ನು ನೋಡಿಕೊಳ್ಳುತ್ತಾರೆ. ಒಂದು ವರ್ಷದ್ದು ಮಾಡುತ್ತಿದ್ದೇವೆ, ಒಂದು ಕೋಟಿ ರೂಪಾಯಿ ಹಣವನ್ನು ನಾವು ಇದಕ್ಕೆ ತೆಗೆದಿಟ್ಟಿದ್ದೇವೆ. ಬರೀ ಸಾಯಿಲ್ ಟೆಸ್ಟಿಂಗ್ ಗೋಸ್ಕರವಾಗಿ. ಏಕೆಂದರೆ ಇನ್‌ಫ್ರಾಸ್ಟ್ರಕ್ಚರನ್ನು ಕ್ರಿಯೇಟ್ ಮಾಡಬೇಕು. ನಾವು ಸುಮ್ಮನೆ ಹೋಗಿ ಹೋಗಿ ಪ್ರೊಡಕ್ಟಿವಿಟಿ ಬೇಕು ಎಂದು ಹೇಳಿದರೆ ಎಲ್ಲಿಂದ ಬರುತ್ತದೆ? ಪ್ರೊಡಕ್ಷನ್ ತಾನೆ ಎಲ್ಲಿಂದ ಬರುತ್ತದೆ? ಪ್ರೊಡಕ್ಟಿವಿಟಿ ಅಂಡ್ ಪ್ರೊಡಕ್ಷನ್ ನಿಮಗೆ ಬೇಕೋ, ಇದಕ್ಕೆ ನೀವು ಗಮನವನ್ನು ಕೊಡಿ. ಇನ್‌ಫ್ರಾಸ್ಟ್ರಕ್ಚರನ್ನು ನಾವು ಕ್ರಿಯೇಟ್ ಮಾಡಬೇಕು. ಅಗ್ರಿಕಲ್ಚರ್ ಇಂಪ್ಲಿಮೆಂಟ್ ಬಗ್ಗೆ ತಾವು ಕೇಳಿದ್ದೀರಿ. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಗುಲ್ಬರ್ಗ ಅಂಡ್ ಹಾವೇರಿಯಲ್ಲಿ

ಯೂನಿವರ್ಸಿಟಿಯನ್ನು ನಾವು ಮಾಡಿದ್ದೇವೆ. ಮತ್ತೊಂದು ಮಾಡುವುದಕ್ಕೆ ನಾವು ರೆಡಿ ಇದ್ದೇವೆ. ಇದಕ್ಕಾಗಿ ನಾವು ಒಂದು ಕೋಟಿ ರೂಪಾಯಿ ಹಣವನ್ನು ತೆಗೆದಿಟ್ಟಿದ್ದೇವೆ. Pulses and Oilseeds ರೀಸರ್ಚ್ ಸೆಂಟರ್ಸ್ ಎಂದು ಹೇಳಿದ್ದೇವೆ. ಅದರಲ್ಲಿ ಒಂದು ಗುಲ್ಬರ್ಗದಲ್ಲಿ ಮಾಡಬೇಕು. ಅಲ್ಲಿ ತೊಗರಿಯನ್ನು ಬೆಳೆಯುವುದರ ಬಗ್ಗೆ ಮಾಡಿದ್ದೇವೆ. ಆಯಿಲ್ ಬಗ್ಗೆ ಹನುಮನಮಟ್ಟಿ. ಅದು ಧಾರವಾಡ ಡಿಸ್ಟ್ರಿಕ್ಟ್‌ದು. ನಾನು ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. We have set apart 15 lakhs. ಸಿರಿಕಲ್ಚರ್ ಕಾಲೇಜ್ ಅಟ್ ಕೋಲಾರ್ ಇದಕ್ಕೆ ಎರಡು ಕೋಟಿ ರೂಪಾಯಿ ಹಣವನ್ನು ಈ ಬಜೆಟ್‌ನಲ್ಲಿ ಅಲೋಕೇಷನ್ ಮಾಡಿಬಿಟ್ಟಿದ್ದೇವೆ. ನಾವು ಈ ವರ್ಷವೇ ಶುರು ಮಾಡುತ್ತೇವೆ. Sericulture College at Kolar and then Horticulture University. ಎಲ್ಲಿ ಮಾಡಬೇಕೆಂದು ಫಾರಮ್ ನೋಡಿ ತೀರ್ಮಾನ ಮಾಡುತ್ತೇವೆ. ಹನಿತೆನೆ ಎಂಬ ಸ್ಕೀಮ್ ಅನ್ನು ಮಾಡಿದ್ದೇವೆ. ಅದಕ್ಕೆ ಹೆಸರನ್ನು ಇಟ್ಟಿದ್ದೇವೆ. ನೀವು ಹೆಸರುಗಳನ್ನೆಲ್ಲ ಪಟ್ಟಿ ಮಾಡಿಬಿಡಬೇಕು. ಭೂಗುಣ ಸ್ಕೀಮ್ ಅಂಥ ಬಂದುಬಿಟ್ಟಿತು. ಕೆಲವರಿಗೆ ಬಹಳ ಕನ್‌ಫ್ಯೂಜ್ ಆಗುತ್ತದೆ. ನೀವು ಬಾಯಿಪಾಠವನ್ನು ಮಾಡಿ ಬಿಡಬೇಕಾಗುತ್ತದೆ. ಹೃದಯ ಇಟ್ಟುಕೊಂಡು ಕಾನ್‌ಸೆಂಟ್ರೇಟ್ ಮಾಡಿದರೆ ಆಟೋಮ್ಯಾಟಿಕ್ ಆಗಿ ಬಂದುಬಿಡುತ್ತದೆ. ಇಲ್ಲಿ ಹನಿತೆನೆ ಎಂಬ ಹೆಸರನ್ನು ಇಟ್ಟಿದ್ದೇವೆ. ಹನಿ ಎಂದರೆ ಡ್ರಿಪ್. ತೆನೆ ಎಂದರೆ ಕ್ರಾಪ್ ಅದು ಪ್ರಾಸಬದ್ಧವಾಗಿದೆ ಎಂದು ಹನಿತೆನೆ ಯೋಜನೆಯೆಂದು ಇಟ್ಟಿದ್ದೇನೆ. ಡ್ರಿಪ್ ಅಂಡ್ ಸ್ಪ್ರಿಂಕ್ಲರ್ ಇರಿಗೇಷನ್ ಏಕೆಂದರೆ ಮಳೆ ಎಲ್ಲಿ ಕಡಿಮೆ ಬೀಳುತ್ತದೆ. ನೀರು ಕಡಿಮೆಯಾಗುತ್ತದೆ ಅಂಥ ಕಡೆ ಈ ಯೋಜನೆ ಮಾಡಬೇಕು. ಅದಕ್ಕಾಗಿ ಒಂದು ಕೋಟಿ ರೂಪಾಯಿಯನ್ನು ನಾವು ತೆಗೆದಿಟ್ಟಿದ್ದೇವೆ. ರೈತರಿಗೆ ಯಾವ ರೀತಿ ಸಹಾಯ ಮಾಡಬೇಕೋ ಆ ರೀತಿ ಮಾಡುವುದಕ್ಕೆ ನಾವು ಇಟ್ಟಿದ್ದೇವೆ. Cash Awards to farmers ಕೃಷಿ ಪ್ರಶಸ್ತಿ Cash Awards to outstanding farmers at District and State level. ಇವತ್ತು ರಾಷ್ಟ್ರಮಟ್ಟದಲ್ಲಿದೆ. ಇವತ್ತು ರಾಜ್ಯ ಮಟ್ಟದಲ್ಲಿ ಎಲ್ಲಿದೆ ತಮಗೆಲ್ಲ ಗೊತ್ತಿರುವ ಹಾಗೆ ಎಲ್ಲಿದೆ? ತಾಲ್ಲೂಕ್ ಮಟ್ಟದಲ್ಲಿ ಮೊದಲನೆಯ ಬಹುಮಾನ 25 ಸಾವಿರ. ಎರಡನೆಯ ಬಹುಮಾನ 10 ಸಾವಿರ. ಮೂರನೆಯ ಬಹುಮಾನ 5 ಸಾವಿರ ಮಾಡಿದ್ದೇವೆ. ಜಿಲ್ಲಾವಾರು ಮೊದಲನೆಯ ಬಹುಮಾನ 50 ಸಾವಿರ. ಎರಡನೆಯ ಬಹುಮಾನ 25 ಸಾವಿರ. ಮೂರನೆಯ ಬಹುಮಾನ 10 ಸಾವಿರ ರೂಪಾಯಿ ಮಾಡಿದ್ದೇವೆ. ಪ್ರತಿವರ್ಷ ಸ್ಟೇಟ್ ಲೆವೆಲ್ ಮೊದಲನೆಯ ಬಹುಮಾನ 1 ಲಕ್ಷ. ಎರಡನೆಯ ಬಹುಮಾ 50 ಸಾವಿರ. ಮೂರನೆಯ ಬಹುಮಾನ 25 ಸಾವಿರ ರೂಪಾಯಿ ಪ್ರತಿವರ್ಷ ಕೊಡುವಂತೆ ಮಾಡಿದ್ದೇವೆ. ಇದಕ್ಕಾಗಿ 85 ಲಕ್ಷ ರೂಪಾಯಿ ಆಗುತ್ತದೆ. ನಾವು ಇನ್ನೂ 15 ಲಕ್ಷ ರೂಪಾಯಿ ಜಾಸ್ತಿ ಇಟ್ಟಿದ್ದೇವೆ. ಒಟ್ಟು 1 ಕೋಟಿ ರೂಪಾಯಿಯನ್ನು ಇದಕ್ಕಾಗಿ ಇಟ್ಟಿದ್ದೇವೆ.

ಶ್ರಮ ಕಲ್ಯಾಣ ನಿಧಿ - highly unorganised Sector, ಇದೆ. ನಮ್ಮ ದೇಶದಲ್ಲಿ ಭೂಮಿಯ ಮಾಲೀಕನೇ ಬೆಳೆದು ಕೊಡುತ್ತಾನೆಂಬ ಭಾವನೆ ಇದೆ. ಅದು ತಪ್ಪು ಕಲ್ಪನೆ. ಕೃಷಿ ಕಾರ್ಮಿಕನು ಇಲ್ಲದೆ ಇದ್ದರೆ ನಮ್ಮ ದೇಶದ ಪರಿಸ್ಥಿತಿಯಲ್ಲಿ ಭೂಮಿ ಮಾಲೀಕ ಏನೂ ಮಾಡುವುದಕ್ಕಾಗುವುದಿಲ್ಲ. Therefore the owner and the gricultural labourer-they are part and parcel of the whole system. They share the responsibility to provide something in respect of productivity and production. Then for the first time in the whole country.-Group Insurance Scheme. ಕೃಷಿ ಕಾರ್ಮಿಕರು ಯಾರಿದ್ದಾರೆ ಅವರು ಸತ್ತರೆ ಹಣ ಬರುತ್ತದೆ. ಮಕ್ಕಳಿಗೆ ಖಾಯಿಲೆ ಬಂದರೆ ಮಕ್ಕಳ ವಿದ್ಯೆಗಾಗಿ 5 ಕೋಟಿ ರೂಪಾಯಿ ಹಣವನ್ನು ನಾವು ತೆಗೆದಿಟ್ಟಿದ್ದೇವೆ. ಆ

ವರ್ಗದ ಜನರಿಗೆ ನಮ್ಮ ಹೃದಯ ಮಿಡಿದಿದೆ. ಇದರಿಂದ ನಾವು ಎಲ್ಲರಿಗೂ ಅನುಕೂಲ ಮಾಡುತ್ತೇವೆಂದು ನಾನು ಹೇಳಲಾರೆ. ಶಕ್ತಿಮೀರಿ ಪ್ರಾರಂಭ ಮಾಡೋಣ. ಇನ್ನು ಕೆರೆ ಕಲ್ಯಾಣ ಎಂಬ ಯೋಜನೆ ಇದೆ. ಇದಕ್ಕೂ ಕೂಡ ನಾವು ಹಣವನ್ನು ಇಟ್ಟಿದ್ದೇವೆ.

ಶ್ರೀ ಎಂ. ಮಹದೇವ್ : ನೀವು ಏನೇನೊ ಸ್ಕೀಮ್‌ಗಳನ್ನು ಹಾಕಿಕೊಂಡಿದ್ದೀರಿ. ನದಿ ಕಲ್ಯಾಣ ಮಾಡಿದರೆ ಕಬಿನಿ ನದಿ ಕಲ್ಯಾಣ....

ಶ್ರೀ ಎಸ್. ಬಂಗಾರಪ್ಪ : ಅದು ಬರುತ್ತದೆ.

ಶ್ರೀ ಎಂ.ಮಹದೇವ್ : ನಿಮಗೂ ಬಹಳ ತೊಂದರೆಯಾಗಿದೆ. ಒಂದು ಕಲ್ಯಾಣ ಮಾಡಿದರು ಎಂದರೆ ಬಡಜನರಿಗೆ ಅನುಕೂಲವಾಗುತ್ತದೆಂದು ನಾನು ಹೇಳಿದ್ದುದು ಅಷ್ಟೆ.

ಶ್ರೀ ಎಸ್. ಬಂಗಾರಪ್ಪ : ನಾನು ಏನು ತಿಳಿದಿಕೊಂಡೇ ಅಂದರೆ ಅಲ್ಲಿ ನದಿ ಕಲ್ಯಾಣ ಅಂದರೆ. ಬಹಳ ಆಳ ಇರುತ್ತದೆ. ಅಲ್ಲಿಗೆ ಹೋದವರು ಹಿಂದಕ್ಕೆ ಬರಬೇಕಲ್ಲ. ಕಲ್ಯಾಣ ಮಾಡಿ ಕ್ಲೋಸ್ ಮಾಡುವುದು ಅಂತ ನಾನು ತಿಳಿದುಕೊಂಡೆ.

ಶ್ರೀ ಎಂ. ಮಹದೇವ್: ಆಮೇಲೆ ಅಲ್ಲಿ ಕಲ್ಯಾಣ ಮಾಡಿಬಿಡಬೇಕಾಗುತ್ತದೆ.

SRI S. BANGARAPPA : On the lighter side ನಾನು ಸುಮ್ಮನೆ ಹೇಳಿದ್ದುದು ಅಷ್ಟೆ.

ಮುಂದಿನ ಆರ್ಥಿಕ ವರ್ಷದಲ್ಲಿ 50 ಕೋಟಿ. 75 ಕೋಟಿ. 100 ಕೋಟಿ ರೂಪಾಯಿಗಳವರೆಗೂ ಹೋಗುತ್ತೇವೆ. ಬೇರೆ ಬೇರೆ ಹೆಲ್ಪ್ ಅನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನಂತರ ಸೋಶಿಯಲ್ ವೆಲ್‌ಫೇರ್ ಸ್ಕೀಮ್ಸ್. ನಾನು ಮಾನ್ಯ ಸದಸ್ಯರಾದ ಮನೋಹರ್ ತಹಶೀಲ್ದಾರರನ್ನು ಸ್ವಲ್ಪ ಅಭಿನಂದಿಸಬೇಕು. ಅವರು ಮತ್ತು ಬೇರೆ ಸ್ನೇಹಿತರು ಒಂದು ಸಲ ನಮ್ಮ ಮನೆಗೆ ಬಂದಾಗ I think a month or a ago. ಸರ್ಕಾರ ಒಂದು ಕೆಲಸ ಮಾಡಬೇಕು. ಏನೆಂದರೆ. ಊರಿನ ಹೊರಗಡೆ ಇರತಕ್ಕಂಥ ಹರಿಜನ ಕೇರಿಗಳು. ಲಂಬಾಣಿ ತಾಂಡಾಗಳು ಮತ್ತೊಂದಕ್ಕೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಅದಕ್ಕೇನಾದರೂ ಮಾಡಿ ಟೈಂ ಬೌಂಡ್ ಪ್ರೋಗ್ರಾಂ ಹಾಕಬೇಕು ಎನ್ನತಕ್ಕಂಥ ಅಭಿಪ್ರಾಯ ಕೊಟ್ಟರು. ಆ ವಿಚಾರ ನನ್ನ ಮನಸ್ಸಿಗೆ ಬಂದು ಇಮಿಡಿಯೆಟ್ ಆಗಿ ಸ್ಟ್ರೈಕ್ ಆಯಿತು. ಅವೊತ್ತಿನಿಂದಲೇ ನಾನು ವಿಚಾರ ಮಾಡಿದೆ. ಅದಕ್ಕೆ ಏನು ಮಾಡಿದ್ದೇವೆಂದರೆ. it is an integrated programme. ಲೈಟ್. ರಸ್ತೆ. ಎಲೆಕ್ಟ್ರಿಸಿಟಿ. ಡ್ರಿಂಕಿಂಗ್‌ವಾಟರ್. ಮನೆ ಸೈಟ್. ಮನೆ. ಶಿಕ್ಷಣ. ಏಕೆಂದರೆ. ನಾವು ಮನೆ ಕಟ್ಟಿಕೊಂಡು ಕುಳಿತರೆ. ಅವರು ಎಲ್ಲಿಗೆ ಹೋಗಬೇಕು? 'ವಿಶ್ವ' ಕೊಟ್ಟು ಉದ್ಯೋಗ ಕೊಡಬೇಕು. ಅದು ಇಂಟಿಗ್ರೇಟೆಡ್ ಪ್ರೋಗ್ರಾಂ ಆಗುತ್ತದೆ. ಅದಕ್ಕೆ ನಾವು 'ಸಮಗ್ರ ವಿಕಾಸ' ಎಂದು ಹೆಸರಿಟ್ಟಿದ್ದೇವೆ. ಇದಕ್ಕೆ ನಾವು ಹಣವನ್ನು ಕ್ವಾಂಟಿಫೈ ಮಾಡಿಲ್ಲ. ಏಕೆಂದರೆ. ಕೆಲವು ಕಡೆಗೆ ರಸ್ತೆ ಇದೆ, ಕುಡಿಯುವ ನೀರಿನ ಸೌಕರ್ಯವಿದೆ ಆದರೂ ಒಂದೇ ಒಂದು ವರ್ಷದಲ್ಲಿ ಖರ್ಚು ಮಾಡಲಿಕ್ಕೆ ಬಾಕಿ ಇರತಕ್ಕಂಥಾದ್ದು ಒಟ್ಟಿಗೆ ಕೊಟ್ಟು ಮುಗಿಸಿಬಿಡಬೇಕು. It is a time bound programme..... ಎಷ್ಟಾದರೂ ಖರ್ಚು ಮಾಡಲಿಕ್ಕೆ ನಾವು ಹಣ ಒದಗಿಸಿಕೊಡುತ್ತೇವೆ. ಹಣ ಎಷ್ಟೆಂದು ಕ್ವಾಂಟಿಫೈ ಮಾಡುವುದಕ್ಕೆ ಈಗಾಗಲೇ ಆರ್ಡರ್ ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಅದರ ಕೆಲಸವನ್ನು ಯಾವ ಇಲಾಖೆ ಮುಖಾಂತರ ಮಾಡಿಸುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಆ ಕಾರ್ಯಕ್ರಮವನ್ನು ಸೋಶಿಯಲ್ ವೆಲ್‌ಫೇರ್ ಇಲಾಖೆ ತೆಗೆದುಕೊಳ್ಳಬಹುದೆಂದು ನನ್ನ ಅನಿಸಿಕೆ.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ಲಂಬಾಣಿ ತಾಂಡಾಗೆ ಏನೋ ಅನುಕೂಲವಾಯಿತು. ಅಂದರೆ. ....

ಶ್ರೀಮತಿ ಮೋಟಮ್ಮ : ಹರಿಜನವಾಡ ಮತ್ತು ಗಿರಿಜನವಾಡ ಎರಡನ್ನೂ ಸೇರಿಸಬೇಕು.

ಶ್ರೀ ಎಸ್. ಬಂಗಾರಪ್ಪ : ನಾಯಕರು ಎದ್ದು ನಿಂತಿದ್ದಾರೆ. ನಾವೇನೂ ಮಾಡುವುದಕ್ಕಾಗುವುದಿಲ್ಲ. ಅವರು ನಮಗೆ ನಾಯಕರು. ಏಕೆಂದರೆ, ಅವರನ್ನು ನಾವು ನಾಯಕರನ್ನಾಗಿ ಮಾಡುತ್ತೇವೆಂದು. ಅವರ ಅಪ್ಪನವರು ಮೊದಲೇ ಅವರಿಗೆ ನಾಯಕರೆಂದು ಹೆಸರಿಟ್ಟು ಕಳುಹಿಸಿಬಿಟ್ಟಿದ್ದಾರೆ. ಈಗ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ. ಅವರು ನಮ್ಮನ್ನು ನಾಯಕರೆಂದು ಕೂಗಿದರೂ ಸಹ. ನಮ್ಮ ನಾಯಕತ್ವ ಇರಬಹುದು, ಕಿತ್ತುಕೊಂಡು ಹೋಗಬಹುದು. ಆದರೆ, ಅವರು ಮಾತ್ರ ಹೋಗುವ ಹಾಗಿಲ್ಲ.

ಶ್ರೀ ಎನ್.ಜಿ. ನಾಯಕ್ : ನಾವು ರಾಜ್ಯದಿಂದ ಹೋಗುವವರೆಗೆ ನಾಯಕರು. ರಾಜ್ಯದಿಂದ ಹೋದ ನಂತರ ನಾಯಕರಲ್ಲ.

ಶ್ರೀಮತಿ ಮೋಟಮ್ಮ : ಮಾನ್ಯ ಉಪಾಧ್ಯಕ್ಷಿಣಿಯವರೆ. ಹರಿಜನವಾಡ ಮತ್ತು ಗಿರಿಜನವಾಡವನ್ನು ಈ ಒಂದು ಯೋಜನೆಯಲ್ಲಿ ಸೇರಿಸಲಿಕ್ಕೆ ಸಾಧ್ಯವಿದೇ? ಏಕೆಂದರೆ. ಹೇಗೆ ಲಂಬಾಣಿ ತಾಂಡಾಗಳು ಊರಿನಿಂದ ಹೊರಗಡೆ ಇವೆಯೋ. ಅದೇ ರೀತಿ ಹರಿಜನ ವಾಡ ಮತ್ತು ಗಿರಿಜನ ವಾಡಗಳು ಊರಿನಿಂದ ಹೊರಗಡೆ ಇವೆ.

ಶ್ರೀ ಎಸ್. ಬಂಗಾರಪ್ಪ : ಅದರ ಬಗ್ಗೆ ನಾನು ಹೇಳಿದೆ. ನೀವು ಅದನ್ನು ಕೇಳಿಸಿಕೊಳ್ಳಲಿಲ್ಲ. ನೀವು ಪಕ್ಕದಲ್ಲಿರುವ ಸದಸ್ಯರ ಜೊತೆ ಮಾತನಾಡುತ್ತಿದ್ದೀರ. ಅದೇ ತೊಂದರೆ ಬಂದಿರುವುದು. ನೀವು ಸದಸ್ಯರಾದ ಮಲ್ಲಾಜಮ್ಮನವರ ಹತ್ತಿರ ಮಾತನಾಡುತ್ತಿದ್ದೀರಿ. ನಾನು ನೋಡುತ್ತಿದ್ದೆ.

ಶ್ರೀ ಎ.ವಿ. ಉಮಾಪತಿ : ಗೊಲ್ಲರ ಹಟ್ಟಿಯೂ ಅದೇ ಸ್ಥಿತಿಯಲ್ಲಿದೆ. ಅಲ್ಲಿ ಪ್ರಸೂತಿ ಗೃಹ ಕಟ್ಟಿಸತಕ್ಕಂಥ ವ್ಯವಸ್ಥೆ ಆಗಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ : ಶ್ರೀ ಉಮಾಪತಿಯವರೆ. ನಾನು ಏನು ಹೇಳುತ್ತಿದ್ದೆನೆಂದರೆ. ಹರಿಜನ ಕೇರಿಗಳು. ಲಂಬಾಣಿ ತಾಂಡಾಗಳು. ಗೊಲ್ಲರ ಹಟ್ಟಿಗಳು ಇತ್ಯಾದಿಗಳನ್ನು ಏನು ಪಟ್ಟಿ ಮಾಡಿ ಹೇಳಿದೆ. ಅವೆಲ್ಲವುಗಳು ಸೇರಿಕೊಂಡು ಬರುತ್ತವೆ. ಈಗ ಕಡು ಬಡವರನ್ನು ಏಕೆ ಬಿಡಬೇಕು? ಅಲ್ಲಿ ಹಕ್ಕಿ-ಪಿಕ್ಕಿ ಜನರಿದ್ದಾರೆ. ಕುಂದಗೋಳ ತಾಲ್ಲೂಕಿನಲ್ಲಿ ಸಿಗುತ್ತಾರೆ ಮತ್ತು ಚೆನ್ನಗಿರಿ ತಾಲ್ಲೂಕಿನಲ್ಲಿದ್ದಾರೆ. ಆದುದರಿಂದ. ಇಂತಹ ವರ್ಗಗಳ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಅದಕ್ಕಾಗಿ ಹಣವನ್ನು ಕ್ವಾಂಟಿಫೈ ಮಾಡಿಲ್ಲ. ಎಷ್ಟು ಹಣ ಎನ್ನತಕ್ಕಂಥ ವಿಚಾರವನ್ನು ಅನಂತರ ಹೇಳುತ್ತೇನೆ. ನಾನು ಇನ್ನೊಂದು ವಿಚಾರವನ್ನು ಹೇಳುವುದನ್ನು ಮರೆತುಬಿಟ್ಟೆ. ಸಹಕಾರ ವಲಯದ ರೈತರ ಸಾಲದ ಬಗ್ಗೆ.

ಶ್ರೀ ಕರಿಯಣ್ಣ : ಹರಿಜನ-ಗಿರಿಜನ ಮತ್ತು ಲಂಬಾಣಿ ತಾಂಡಾದವರಿಗೆ. ಇವರೆಲ್ಲರಿಗೂ ಇಂಪ್ಲಿಮೆಂಟೇಶನ್ ಮಾಡುವುದು ಇದೆಯಲ್ಲಾ. ಅದು ಸರಿಯಾಗಿ ಆಗುತ್ತಿಲ್ಲ. ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ: ಮಂತ್ರಿಗಳು ಅದರ ಬಗ್ಗೆ ಕೇಳುವುದಿಲ್ಲ. ಎಲ್ಲಾ ಬೇರೆ ಬೇರೆ ಇಲಾಖೆಗೆ ಹೋಗಿದೆಯೆಂದು ಹೇಳುತ್ತಾರೆ. ಯಾರಿಗೆ ಯಾವುದು ಎಂದು ತಾವು ಹೇಳದೆಹೋದರೆ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಅದನ್ನು ಯಾವ ಇಲಾಖೆಯ ಮುಖಾಂತರವಾದರು ಕೂಡ ಇಂಪ್ಲಿಮೆಂಟ್ ಮಾಡಬಹುದು. ತಾವು ಹೇಳಿದಂತೆ ಮಾಡುವುದು, ದೊಡ್ಡ ವಿಚಾರವಲ್ಲ. There should be a programme for them. ಇರಬೇಕು. ಇನ್ನು ರೈತರ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ. ರೈತರ ಸಾಲದ ಬಗ್ಗೆ ಯಾವಾಗ ನೋಡಿದರು ಸಹ ಭಾಷಣ ಮಾಡುತ್ತೀರಿ ಎಂದು ಹೇಳುತ್ತಿರುತ್ತಾರೆ. ಸಾಲದ ಬಗ್ಗೆ. ಅಂದರೆ ಎಲ್ಲಾ ವರ್ಗದ ಸಾಲದ ಬಗ್ಗೆ ಅಲ್ಲ, ಹತ್ತು ಸಾವಿರದವರೆಗಿನ ಸಾಲದ ಬಗ್ಗೆ ಮಾತ್ರ ಒಂದು ನಿರ್ಧಿಷ್ಟವಾದ ಟೈಮ್‌ನ್ನು ಹಾಕಿ ಯೋಜನೆಯನ್ನು ಮಾಡಿ ಶ್ರೀಮಾನ್ ವಿ.ಪಿ. ಸಿಂಗ್‌ರವರು was the Prime Minister. ಆಗಿದ್ದಾಗ ಮಾಡಿ ಕಳಿಸಿದರು. ಈಗ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ಅದನ್ನು ನಾವುಗಳು ಒಪ್ಪಿಕೊಂಡೆವು. ಕೇಂದ್ರದವರು 50 ಪರ್‌ಸೆಂಟನ್ನು ವಹಿಸಿಕೊಳ್ಳಬೇಕು. ನಾವು 50 ಪಂಪ್‌ಸೆಟ್‌ನ್ನು ವಹಿಸಿಕೊಳ್ಳುತ್ತೇವೆಂದು ಒಪ್ಪಿಕೊಂಡೆವು. ಅದರ ವಿವರಣೆಗೆ ನಾನು ಹೋಗುವುದಿಲ್ಲ. They did so when they presented their budget in Parliament. They made a provision of. ಒಂದು ಸಾವಿರ ಕೋಟಿಗಳನ್ನು ಇಡಲು ಪ್ರಪೋಸಲ್ ಮಾಡಿದ್ದಾರೆ. ಆದರೆ in respect of nationalised Banks. ಸಾಲದ ಬಗ್ಗೆ ಪ್ರಶ್ನೆ ಮಾಡಲಿಲ್ಲ. ತಾವು ಬಜೆಟನ್ನು ಓದಿದರೆ ಅದು ಗೊತ್ತಾಗುತ್ತದೆ. ಆದರೆ ಏನಾಯಿತೆಂದರೆ. ಆ ಸ್ಕೀಮನ್ನು ಮಾಡಿದರೂ ಕೂಡ ಒಬ್ಬರಿಗೂ ಕೂಡ ನಬಾರ್ಡ್‌ಗೆ ಹಣವನ್ನು ಕಟ್ಟಿಕೊಂಡು ಹೋಗಬೇಕಾಗಿದ್ದಂಥ ಕೆಲಸ ಮಾಡಲಾಗಲಿಲ್ಲ. ನಾನು ಇವತ್ತು ನ್ಯಾಷನಲ್ ಬ್ಯಾಂಕ್‌ಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ. Co-operative Sector. ಉದಾಹರಣೆಗೆ ತೆಗೆದುಕೊಳ್ಳೋಣ. ನಾನು ಶೇಕಡ 50 ಪರ್‌ಸೆಂಟ್ ಅಂದರೆ 68-70 ಕೋಟಿ. ಹೆಚ್ಚುಕಡಿಮ 70 ಕೋಟಿ ರೂಪಾಯಿಗಳನ್ನು ಕಟ್ಟುತ್ತೇವೆ. ಉಳಿದುದನ್ನು ಅವರು ಕಟ್ಟಬೇಕೆಂದು ನಾವು ಹೇಳಿದವು. Even now that is our stand. ... ನಾವು ಇದನ್ನು ಎಷ್ಟು ಸಲ ಹೇಳಬೇಕೋ ನನಗೆ ಗೊತ್ತಾಗುವುದಿಲ್ಲ. ನಾವು 50 ಪರ್‌ಸೆಂಟ್‌ನ್ನು ಕಟ್ಟಲು ತಯಾರಾಗಿದ್ದೇವೆ. ಕರ್ನಾಟಕ ರಾಜ್ಯದ ರೈತರ ಪರವಾಗಿ ನಾವು ಮೊದಲನೆಯ ಕಂತಾದ 12 ಕೋಟಿ ರೂಪಾಯಿಗಳನ್ನು ಈಗಾಗಲೇ ನಬಾರ್ಡ್‌ಗೆ ಕಟ್ಟಿದ್ದೇವೆ. ಹಿಂದಿನ ವರ್ಷದ ಬಜೆಟನ್ನು ನೋಡಿದರೆ ಇದು ಗೊತ್ತಾಗುತ್ತದೆ. ಈ ವರ್ಷವು ಕೂಡ ನಾವು ಕೊಡಲು ತಯಾರಾಗಿದ್ದೇವೆ. ಆದರೆ ಕೇಂದ್ರ ಸರ್ಕಾರದವರು ಕಟ್ಟುತ್ತಾರೆಯೇ ಎಂದು ನಮಗೆ ಪ್ರಶ್ನೆ? ಅವರು ಕಂತಿನ ಹಣವನ್ನು ಕಟ್ಟುತ್ತಿಲ್ಲ. ವಿ.ಪಿ. ಸಿಂಗ್ ಮತ್ತು ಶ್ರೀಮಾನ್ ಚಂದ್ರಶೇಖರ್ ರವರ ಸರ್ಕಾರವಿದ್ದಾಗ ಕೇಂದ್ರ ಸರ್ಕಾರದವರು ಈ ಸ್ಕೀಮನ್ನು ಮಾಡಿದರು. ದೇಶಕ್ಕೆ ಹೇಳಿದರು. ಈಗ ನಾವು ಕೇಂದ್ರ ಸರ್ಕಾರಕ್ಕೆ ನಿಮ್ಮ ಪಾಲಿನ ಹಣವನ್ನು ಕೂಡ ಉಳಿದಿರತಕ್ಕ ಹಣವನ್ನು ನಾನು ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಉಪಾಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ : 1990ನೇ ಇಸವಿಯಲ್ಲಿ 10 ಸಾವಿರದೊಳಪಟ್ಟಿರತಕ್ಕ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದರು. ಎಂದಿನ ಸಾಲವನ್ನು ಮನ್ನಾ ಮಾಡುತ್ತೀರೆಂದರೆ? 1986ನೇ ಇಸವಿಯ ಅಕ್ಟೋಬರ್ ತಿಂಗಳಿನಿಂದ ಹಿಂದಕ್ಕಿದ್ದ ಸಾಲವನ್ನು ವಜಾ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ಕಳೆದ 2-3 ವರ್ಷದಲ್ಲಿ ಯಾರು ಬಡವರು ಇದ್ದಾರೆ. ಆತ್ಮ ಗೌರವಕ್ಕೆ ಇರತಕ್ಕವರು ಸಮಾಜಕ್ಕೆ ಅಂಜಿಕೊಂಡು ಹಣವನ್ನು ಕಟ್ಟಿಕೊಂಡು ಬಂದರೋ ಅವರ್ಯಾರಿಗೂ ಕೂಡ ಸಾಲ ಮನ್ನಾ ಆಗಲಿಲ್ಲ. ಆದರೆ, ಡಿಫಾಲ್ಟರ್ಸ್ ಆಗಿ, ಮೋಸ ಮಾಡಿಕೊಂಡು ಸರ್ಕಾರಕ್ಕೆ ಹಣವನ್ನು ಕಟ್ಟದೆ ಯಾರು ಬಂದರೋ ಅವರಿಗೆ ಮಾತ್ರ ಇದರ ಬೆನಿಫಿಟ್ ಸಿಕ್ಕಿತು. ರೈತರು, ರೈತರು ಎಂದು ಹೇಳಿ ಯಾರು ಪ್ರಾಮಾಣಿಕವಾಗಿ

ಕಂತುಗಳನ್ನು ಕಟ್ಟಿಕೊಂಡು ಬಂದರೋ ಅವರಿಗೆ ಇದರ ಬೆನಿಫಿಟ್ ಸಿಗಲಿಲ್ಲ. ಇದು ನ್ಯಾಯವೆ? ಇದನ್ನು ನೀವು ಒಪ್ಪಿಕೊಳ್ಳುತ್ತೀರೆ?

ಶ್ರೀ ಎಸ್. ಬಂಗಾರಪ್ಪ : ನೀವು ಹೇಳುವುದನ್ನೂ ನಾನು ಒಪ್ಪುತ್ತೇನೆ. ಏಕೆಂದರೆ. ಕೆಲವರು ಹಣವನ್ನು ಕೊಟ್ಟರು, ಮತ್ತೆ ಕೆಲವು ಖದೀಮರು. ಶಕ್ತಿ ಇರತಕ್ಕವರು ಹಣವನ್ನು ಕೊಡದೆ ಇದನ್ನು ಉಪಯೋಗಮಾಡಿಕೊಂಡು. ಕೆಲವರು ಪ್ರಾಮಾಣಿಕವಾಗಿ ಕಂತನ್ನು ಕೊಟ್ಟವರಿಗೆ ಇದು ಉಪಯೋಗವಾಗಲಿಲ್ಲವೆನ್ನತಕ್ಕದನ್ನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಏಕೆಂದರೆ ನಾವು ಹಣವನ್ನು ಕೊಡುವುದು, ತೆಗೆದುಕೊಳ್ಳುವುದು. ಮತ್ತೊಂದರಲ್ಲಿ ಷರತ್ತುಗಳನ್ನು ಹಾಕಿರುವುದರಿಂದ ಅನೇಕರಿಗೆ ಅದು ಉಪಯೋಗವಾಗಲಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ನ್ಯಾಷನಲ್ ಲೆವೆಲ್‌ನಲ್ಲಿನ ಆರ್ಡರ್‌ನಲ್ಲಿ ನಾವು ಕಾಣುತ್ತೇವೆ. ನಾವು ಅಣೆವಾರಿ ಮತ್ತೊಂದು ತೆಗೆದುಹಾಕಿಬಿಟ್ಟರೆ ಉಳಿದಿರತಕ್ಕ ಜನರಿಗೆ ಅನುಕೂಲವಾಗುತ್ತದೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದೆವು. ಎಲ್ಲಾ ವಿರೋಧಪಕ್ಷದವರು ಕಾವೇರಿಯ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಹೋಗಬೇಕೆಂದಾಗ ನಾನೇ ಈ ಸಾಲದ ಬಗ್ಗೆ ಕೂಡ ಹೋಗಬೇಕೆಂದು ಅವರಿಗೆ ಸಲಹೆಯನ್ನು ಮಾಡಿದೆ. ನಾವು ಅದನ್ನು ಈಗಾಗಲೆ ಹೋಗಿ ಕೊಟ್ಟಿದ್ದೇವೆ. ನಾವು ಎಲ್ಲವನ್ನು ಕೊಟ್ಟಮೇಲು ಕೂಡ. ನೀವು ಸಾಲವನ್ನು ಮಂಜೂರು ಮಾಡಿಲ್ಲವೆಂದು ಹೇಳಿದರೂ ಕೂಡ ಅವರು ಗಮನಿಸುತ್ತಿಲ್ಲ. ಶ್ರೀಮಾನ್ ಯಡಿಯೂರಪ್ಪನವರೂ, ಅವರೇನು ರೈತರಿಗಾಗಿಯೇ ಹುಟ್ಟಿರುವರೇನೋ ಎನ್ನುವಂತೆ ಭಾಷಣ ಮಾಡಿದರು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀಮಾನ್ ಯಡಿಯೂರಪ್ಪನವರಿಗೆ ಸಾಲ ಮನ್ನಾ ಆಗಬೇಕಾಗಿಲ್ಲ, ಬಿ.ಜೆ.ಪಿ. ಯವರು ಇದರ ಜೊತೆ ಹೋರಾಟ ಮಾಡುತ್ತಾರೆಂದು ಪ್ರಚಾರ ಆಗಬೇಕಾಗಿದೆ. ಅದಕ್ಕೋಸ್ಕರ ಅವರು ಹಾಗೆ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಮಧ್ಯಪ್ರದೇಶದ ಒಂದು ಆ್ಯಕ್ಟ್ ಏನು ಇದೆ ಅದನ್ನು ನಾವು ತರಿಸಬೇಕೆಂದಿದ್ದೇವೆ. ಇನ್ನೊಂದೆರಡು ಆಕ್ಟ್ ನಮ್ಮ ಹತ್ತಿರವಿದೆ. ಬಿ.ಜೆ.ಪಿ. ಯವರಲ್ಲಿ ಈ ರೀತಿಯ ಸಾಲ ಮನ್ನಾ ಮಾಡಬೇಕಾದ ನೀತಿ ಇದ್ದರೆ. ಅವರ ಸರ್ಕಾರವಿರುವ ನಾಲ್ಕು ರಾಜ್ಯಗಳಾದ ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಏನು ಮಾಡಿದ್ದಾರೆ? ಮಧ್ಯಪ್ರದೇಶದಲ್ಲಿಯೂ ಕೂಡ ಆ ರೀತಿ ಮಾಡಿಲ್ಲ. ನೀವು ಅದರ ಆರ್ಡರ್‌ನ್ನು ಕೊಡಿ ಎಂದು ಕೇಳಿದರೆ, ಇಲ್ಲಾ, ನೀವೇ ತರಿಸಿಕೊಳ್ಳಿ ಎಂದು ಹೇಳುತ್ತಾರೆ. ನಾವು ಮಧ್ಯಪ್ರದೇಶದವರನ್ನು ಕೇಳಿದಾಗ, ಅವರು ನಮ್ಮ ಹತ್ತಿರ ಆ ರೀತಿಯಾದ ಆರ್ಡರ್ ಇಲ್ಲವೆಂದು ಹೇಳಿದರು. ನೀವು ಅದನ್ನು ತರಿಸಿಕೊಡಿ ಎಂದರೆ ಅವರು ನಮಗೆ ಒಂದು ಪತ್ರವನ್ನು ಬರೆದಿದ್ದಾರೆ. ನಾನು ಹತ್ತು ಸಾರಿ ಇಲ್ಲಿ ಹೇಳಿದ್ದೇನೆ. ನೀವೇ ತರಿಸಿಕೊಡಿ ಎಂದಾಗ ಅವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಈಶ್ವರಪ್ಪನವರು ಮಾತನಾಡುವಾಗ ಒಂದು ಆರ್ಡರನ್ನು ನಾನೇ ಇಲ್ಲಿಗೆ ತಂದುಕೊಟ್ಟಿದ್ದೇನೆ ಮತ್ತು ನೀವು ರಾಜೀನಾಮೆಯನ್ನು ಕೊಡಿ ಎಂದು ಕೇಳಿದರು.

ಶ್ರೀ ಎಸ್. ಬಂಗಾರಪ್ಪ : ಅವರು ಆರ್ಡರ್ ಕೊಟ್ಟಿಲ್ಲ. ಅದರ ಬದಲು ಬಿ.ಜೆ.ಪಿ. ಎಂದು ಇರತಕ್ಕ ಹೂವಿನ ಗುರ್ತು ಇರತಕ್ಕ ಪಕ್ಷದ ಒಂದು ಲೆಟರ್‌ಹೆಡ್‌ನಲ್ಲಿ ನಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಅವರು ಆರ್ಡರ್ ಕೊಟ್ಟಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಆರ್ಡರ್ ಕೊಟ್ಟಿಲ್ಲ. ಮಾನ್ಯ ನಂಜುಂಡಸ್ವಾಮಿಯವರು ತರಿಸಿದ್ದಾರೆ. ಮಧ್ಯ ಪ್ರದೇಶದಲ್ಲಿ ಯಾವುದೇ ಸಾಲವನ್ನೂ ಮನ್ನಾ ಮಾಡಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ನಂಜುಂಡಸ್ವಾಮಿಯವರು ಅವತ್ತೇ ಇವರು ಹೇಳಿರುವುದೆಲ್ಲಾ ಹಸಿ ಸುಳ್ಳು. ಅಲ್ಲಿ ಯಾವುದೇ ಆರ್ಡರನ್ನೂ ಮಾಡಿಲ್ಲವೆಂದು ಹೇಳಿದ್ದಾರೆ. ನಾನು ಹೇಳುತ್ತಿದ್ದೇನೆ ಅವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಮಧ್ಯಪ್ರದೇಶ ಸರ್ಕಾರದಲ್ಲಿ ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಎಂದು. ಆ ರೀತಿ ನಾವೂ ಕೂಡ ಬರೆಯಬಹುದು. ಹಾಗಾದರೆ ಈ ಸರ್ಕಾರದಲ್ಲಿ ಒಂದು ಅನ್ಯಾಯ ಮಾಡಿದ್ದಾರೆಂದು ಬರೆದರೆ ಅದು ಅನ್ಯಾಯವೆಂದು ಹೇಳುತ್ತೀರಾ? ಮನಸ್ಸಿಗೆ ಬಂದಂತೆ ಸುಳ್ಳು ಹೇಳುವುದು ಬೇಡ. ನಾನು ಹೇಳುತ್ತೇನೆ. ಇವರೆಲ್ಲಾ ನನಗೆ ಗೊತ್ತು. ಇವರು ಹಳೆಯ ಜನಸಂಘದವರು. ನಾನು ಅವರ ಎದುರಿಗೆ ಹೇಳಿದ್ದೇನೆ. ಬಿ.ಜೆ.ಪಿ. ಯವರು ಜನರನ್ನು ಕಟ್ಟಿಕೊಂಡು ಈ ದೇಶದ ರಾಜಕಾರಣದಲ್ಲಿ ಪಾರ್ಟಿ ಕಟ್ಟುವುದಕ್ಕೆ ಹೋಗಿದ್ದಾರೆಂದು ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತ್ತಿದ್ದಾಗಲೇ ನಾನು ಹೇಳಿದ್ದೇನೆ. ಅದಾದಮೇಲೆ ಈಗ ನಾವು ರೈತರ ಸೆಕ್ಟಾರ್ ಬಿಟ್ಟುಬಿಟ್ಟಿದ್ದೇವೆ, ಇವರನ್ನು ಏನಾದರೂ ಮಾಡೋಣ ಎಂದು ಸಾಲ ಸಾಲ ಎಂದು ಸಾಲವನ್ನು ಬಿಡಿಸುವುದಕ್ಕೋಸ್ಕರವೇ ಇವರು ಹುಟ್ಟಿದ್ದಾರೋ. ಏನೋ ಎನ್ನತಕ್ಕ ರೀತಿಯಲ್ಲಿ ಇವರು ಮಾತನಾಡುತ್ತಿದ್ದಾರೆ. ನಾನು ತಮಗೆ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ರೈತರೂ ಸಾಲಗಾರರಲ್ಲ. ಕೆಲವು ಜನರು ಇರಬಹುದು. ಯಾರಿಗೆ ಅದರ ಪ್ರತಿಫಲ ಸಿಕ್ಕಿಲ್ಲ ಅವರು ಉಳಿದುಕೊಂಡಿರಬಹುದು. ಆದುದರಿಂದ ಸಾಲದ ವಿಚಾರಗಳಲ್ಲಿ ನಾನು ಇಷ್ಟುಮಾತ್ರ ಹೇಳಬಯಸುತ್ತೇನೆ. ಕಮಿಟ್‌ಮೆಂಟ್ ಏನಿದೆ ಅದು ಕಮಿಟ್‌ಮೆಂಟು. ನಾವು ಒಂದು ಕಂತನ್ನು ಕಟ್ಟಿದ್ದೇವೆ. ಎರಡನೇ ಕಂತನ್ನೂ ಕೂಡ ಕಟ್ಟುವುದಕ್ಕೆ ನಾವು ಪ್ರೊವಿಷನ್ ಮಾಡಿ ಇಟ್ಟುಕೊಂಡಿದ್ದೇವೆ ಹಣವನ್ನು ಕಟ್ಟುವುದಕ್ಕೆ ನಾವು ಸಿದ್ಧವಾಗಿದ್ದೇವೆ. The moment the next instalment is paid to the NABARD by the Government of India they will give fresh loans. ಅದನ್ನು ಯಾವಾಗ ತರುತ್ತಾರೆ ಆಗ ನಾವು ಕಟ್ಟುವುದಕ್ಕೆ ತಯಾರಿದ್ದೇವೆ. ನಾವು ಈ ಮಾತನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. We are for the poor farmers. We are for waiving of loans in respect of that sector of farmers who have taken loan from the co-operative societies.

ನಾನು ಇದಕ್ಕಿಂತ ಹೆಚ್ಚಿಗೆ ಹೇಳಿದರೆ ಉಪಯೋಗವಾಗುವುದಿಲ್ಲ. ಇದು ಹಳೆಯ ವಿಚಾರವಾಯಿತು. ಇನ್ನುಮುಂದೆ ನಾನು ಹೇಳಬೇಕಾಗುತ್ತದೆ. ಅವರು ಮನಸ್ಸಿಗೆ ಬಂದಂತೆ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದಾರೆ. ಸಾಲ ತೆಗೆದುಕೊಳ್ಳುವುದು, ಅನಂತರ ವಜಾಮಾಡಿ ವಜಾಮಾಡಿ ಎಂದು ಕೂಗಿಕೊಳ್ಳುವುದು. ಏನೋ ಬರಗಾಲ ಮತ್ತೊಂದು ಬಂದಾಗ ನಾವು ಅದನ್ನು ಒಪ್ಪಿಕೊಳ್ಳೋಣ. ಆರಾಮವಾಗಿರುವವರೂ ಕೂಡ ಸಾಲವನ್ನು ತೆಗೆದುಕೊಂಡು ಅನಂತರ ಅದನ್ನು ವಜಾ ಮಾಡಿ ಎಂದು ಕೇಳುವುದು ಸರಿಯಲ್ಲ. ಎಷ್ಟೋ ಸೊಸೈಟಿಗಳನ್ನು ಇವರು ಮುಳುಗಿಸಿಬಿಟ್ಟಿದ್ದಾರೆ. ಆ ಸೊಸೈಟಿಯಲ್ಲಿ ಅಣ್ಣ, ತಮ್ಮ. ಹೀಗೆ ಅವರ ಮನೆಯವರೇ ಎಲ್ಲರೂ ಡೈರೆಕ್ಟರ್‌ಗಳಾಗಿ,

ಸದಸ್ಯರಾಗಿದ್ದುಕೊಂಡು ಬೇರೆಯವರು ಯಾರೂ ಅಲ್ಲಿಗೆ ಹೋಗುವುದಕ್ಕೆ ಅವಕಾಶವೇ ಇಲ್ಲದಂತೆ ಮಾಡಿ ಅವರೇ ಆ ಸೊಸೈಟಿಯನ್ನು ಮುಳುಗಿಸಿ ನಮ್ಮ ಸಾಲ. ನಮ್ಮ ಸಾಲ ಎಂದು ಕೂಗಿಕೊಳ್ಳುವುದು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನನಗೆ ಒಂದು ಮಾತು ನೆನಪಾಗುತ್ತದೆ. ಸಂತೆಯಲ್ಲಿ ಯಾರೋ ಇಬ್ಬರು ಎರಡು ಅಂಗಡಿಗಳನ್ನು ಇಟ್ಟುಕೊಂಡಿದ್ದರಂತೆ. ಒಬ್ಬ ತೆಂಗಿನಕಾಯಿ ಮಾರುವವನು. ಇನ್ನೊಬ್ಬ ಬೆಲ್ಲವನ್ನು ಮಾರುವವನು. ಒಂದು ದಿನ ಭಾರಿ ಮಳೆ ಬಂದು ಬೆಲ್ಲವೆಲ್ಲಾ ಕರಗುವುದಕ್ಕೆ ಪ್ರಾರಂಭವಾಯಿತು. ಆಗ ಬೆಲ್ಲದವನು ಅಯ್ಯೋ ನನ್ನ ಬೆಲ್ಲ ಹಾಳಾಗುತ್ತಿದೆ. ಕರಗುತ್ತಿದೆ ಎಂದು ಗೋಳಾಡತೊಡಗಿದ. ಪಕ್ಕದಲ್ಲೇ ಇದ್ದ ತೆಂಗಿನಕಾಯಿ ಮಾರುವವನು ಅವನೂ ಕೂಡ ಅಯ್ಯೋ ನನ್ನ ತೆಂಗಿನಕಾಯಿ ನೆನೆದುಹೋಯಿತು ಎಂದು ಅಳುವುದಕ್ಕೆ ಶುರು ಮಾಡಿದನಂತೆ. ತೆಂಗಿನಕಾಯಿ ಎಲ್ಲಾದರೂ ಕರಗಿ ಹೋಗುತ್ತದೆಯೆ? ನಿಜವಾಗಿ ಯಾರಿಗೆ ಅನ್ಯಾಯವಾಗುತ್ತಿದೆ, ಯಾರಿಗೆ ನಷ್ಟವಾಗುತ್ತಿದೆ ಎಂಬುದನ್ನು ನೀವೇ ಹೇಳಿ. ತೆಂಗಿನಕಾಯಿಯ ಅಂಗಡಿಯನ್ನು ಇಟ್ಟಿರುವಂಥ ರೈತ ಕೂಡ ಇವರ ಖದೀಮನೇ. ರೈತರ ಸಾಲ ಮನ್ನಾ ಆಗಬೇಕು. ಮನ್ನಾ ಆಗಬೇಕೆಂದು ರಾಜಕೀಯ ಮಾಡುವುದಕ್ಕೆ ಹೋದರೆ ಯಾರೂ ಕೂಡ ಒಪ್ಪುವುದಿಲ್ಲ. ಹಣ ಕೊಡದೇ ಇರುವವರಿಂದ ಸೊಸೈಟಿಗೆ ರೀ ಫೈನಾನ್ಸ್ ಆಗುತ್ತಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಕೋ-ಆಪರೇಟಿವ್ ಮೂವ್‌ಮೆಂಟ್ ಬಹಳ ದೊಡ್ಡದು. ಇದು ನನಗೆ ಚೆನ್ನಾಗಿ ಗೊತ್ತಿದೆ. ಇತ್ತೀಚೆಗೆ ಹಳೆಯ ಮೈಸೂರು ರಾಜ್ಯದಲ್ಲಿ ಬೆಳೆಯುತ್ತಾ ಬಂತು. ಅದಕ್ಕೆ ನಾವು ಬೆಂಬಲ ಕೊಡಬೇಕಾದರೆ ಸಾಲವನ್ನು ಕಟ್ಟಬೇಕಾದವರು ಕಟ್ಟಬೇಕು.

ಶ್ರೀ ಆರ್.ಎನ್. ನಾಯಕ್ : 25ನೇ ತಾರೀಖು 5 ಲಕ್ಷ ಜನರನ್ನು ಕರೆದುಕೊಂಡು ಬರುತ್ತೇವೆ ಹುಷಾರ್ ಎಂದು ಅವರು ಹೇಳಿ ಹೋಗಿದ್ದಾರೆ.

ಶ್ರೀ ಡಿ. ಹಲಗೇಗೌಡ : ಈ ಸಂಘಸಂಸ್ಥೆಗಳನ್ನು ಬೀದಿಗೆ ಬಿಟ್ಟು ಅವು ಮುಂದಕ್ಕೆ ಬಾರದಂತೆ ಮಾಡಿ ರೈತರಿಗೆ ಅನಾನುಕೂಲವಾಗಲೆಂಬ ಉದ್ದೇಶದಿಂದ ಈ ರೀತಿ ಮಾಡಿದ್ದಾರೋ ಏನೋ ಎಂದು ಅನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ : ಇದ್ದರೂ ಇರಬಹುದು. ಸಮಗ್ರ ವಿಕಾಸದ ಬಗ್ಗೆ ನಾನು ಹೇಳಿದೆ. ರುದ್ರಭೂಮಿ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಮೊನ್ನೆ ಬೆಂಗಳೂರು ಉತ್ತರ ತಾಲ್ಲೂಕು ಚೋಳಪ್ಪನ ಹಳ್ಳಿಯಲ್ಲಿ ಒಂದು ಹರಿಜನರ 10 ವರ್ಷದ ಮಗು ಸತ್ತುಹೋಗಿತ್ತು. ಇದೇ ರೀತಿ ತುಮಕೂರು ಜಿಲ್ಲೆಯದೂ ಕೂಡ ನನ್ನ ಗಮನಕ್ಕೆ ಬಂದಿದೆ. ನಾನು ತಕ್ಷಣ ಪೋಲೀಸರನ್ನು ಕಳುಹಿಸಿ ಆ ಮಗುವನ್ನು ಎಲ್ಲಿ ಹೂಳಬೇಕು ಎಂಬ ಸಮಸ್ಯೆಯನ್ನು ಬಗೆಹರಿಸಿದೆ. ಈ ದೇಶದಲ್ಲಿ ಬಡವರು ಎಂದರೆ ಪುಕ್ಕಟೆ ಸಿಕ್ಕಿಬಿಟ್ಟಿದ್ದಾರೆಯೆ? ಅವರಿಗೆ ಯಾವುದೇ ಹಕ್ಕೂ ಇಲ್ಲವೆ? ಮನುಷ್ಯ ಹುಟ್ಟುತ್ತಾನೆ. ಸಾಯುತ್ತಾನೆ. ಅವನನ್ನು ಗೌರವಯುತವಾಗಿ ಹೂಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಈ ಸರ್ಕಾರ ಏತಕ್ಕೆ ಇರಬೇಕು? ಈ ಸಮಾಜ ಏತಕ್ಕೆ ಇರಬೇಕು? ಇದು ನನಗೆ ಏನೇನೂ ಅರ್ಥವಾಗುತ್ತಿಲ್ಲ. ನಿಜವಾಗಿ ಹೇಳುವುದಾದರೆ ನಾನು ಅಂಥ ಬಡವರ ಕ್ಷಮೆಯನ್ನು ಕೇಳುತ್ತೇನೆ. ಈ ವ್ಯವಸ್ಥೆಯನ್ನು ಮಾಡುವುದರಲ್ಲಿ ನಾನು ಬಹಳ ತಡಮಾಡಿರುವುದಕ್ಕಾಗಿ ಅವರಲ್ಲಿ ಕ್ಷಮೆಯಾಚನೆ ಮಾಡುತ್ತೇನೆ. ಇದು ಕೇವಲ ನನ್ನೊಬ್ಬನದಲ್ಲ. ಹಿಂದಿನ ಯಾವುದೇ ಸರ್ಕಾರ ಇರಬಹುದು. ಇಂಥ ತಪ್ಪು ಮಾಡಿರುವಾಗ ಬಡವರ ಕ್ಷಮೆಯಾಚನೆ ಮಾಡಬೇಕು. ಇದು ಬಹಳ ದೊಡ್ಡ ತಪ್ಪು. ದೊಡ್ಡ ಅಪರಾಧ. ಬಡವರು ಗುಡಿಸಲು ಕಟ್ಟಿಕೊಳ್ಳುವುದಕ್ಕೆ ಹೋದಾಗ ಬೇರೆಯವರು ಬಂದು ಈ ಜಾಗವನ್ನು

ಹಿಡಿದುಕೊಳ್ಳುವುದು. ಸತ್ತಾಗ ಅವರನ್ನು ಎಲ್ಲಿ ಹಾಕಬೇಕೆಂದು ಗೊತ್ತಾಗದೆ ತೆಗೆದುಕೊಂಡು ಹೋಗಿ ಎಲ್ಲೋ ಬಿಸಾಕಿ ಬರತಕ್ಕದ್ದು ನಡೆಯುತ್ತಿದೆ. ಇದನ್ನು ನಾವು ನೋಡುತ್ತಿದ್ದೇವೆ. ಸಮಾಜ. ಪ್ರಜಾಪ್ರಭುತ್ವ ಎಂದು ದೊಡ್ಡ ದೊಡ್ಡ ಭಾಷಣಗಳನ್ನು ನಾವು ಗಂಟೆಗಟ್ಟಲೆ ಮಾಡುತ್ತೇವೆ. ನಿಜಕ್ಕೂ ಇದು ನಾಚಿಕೆಗೇಡಿನ ವಿಚಾರ.

ರೈತರ ಭೂಮಿಗೋಸ್ಕರ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಏತಕ್ಕೆಂದರೆ ಲ್ಯಾಂಡ್ ಅಕ್ವಿಜಿಸನ್ ಆಗಬೇಕಿರುತ್ತದೆ. ಈ ಅಸೆಟ್ಸ್ ಏನಿದೆ ಅದು ಮ್ಯೂಚುಯಲ್ ಕನ್‌ಸೆಂಟ್‌ನಿಂದ ಯಾವ ರೀತಿ ಭೂಮಿಯನ್ನು ತೆಗೆದುಕೊಂಡೆವೋ ಅದೇ ರೀತಿಯಲ್ಲಿ ಹೋಗಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಬರಿಯಲ್‌ಗ್ರೌಂಡ್‌ಗೋಸ್ಕರವೇ ಯಾವುದೇ ಜಾತಿಯವರು ಇರಬಹುದು. ಯಾವುದೇ ವರ್ಗದವರು ಇರಬಹುದು. ನಾವು ಇಟ್ಟಿರುವ ಹಣ ಕಡಿಮೆ ಬಂದರೆ ಮತ್ತೆ ಹಣವನ್ನು ಕೊಡುವುದಕ್ಕೆ ಸರ್ಕಾರದವರು ಸಿದ್ದರಾಗಿದ್ದೇವೆ. ನಾವು ಕಡುಬಡವರ್ಗದವರ ಸಹಾಯಕ್ಕೆ ಹೋಗಿ ನಿಲ್ಲೋಣ. ತಾವು ಹೇಳಿದಿರಿ ಅವತ್ತು ಸ್ಮಶಾನ ಅಂದರೆ ಪೂರ್ತಿ ನಮ್ಮನ್ನೆಲ್ಲ ಹೂಳುವುದಕ್ಕೆ. ಸುಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ವ್ಯಂಗವಾಗಿ ಮಾತನಾಡಿದಿರಿ. ಚೋಳಪ್ಪನ ಹಳ್ಳಿಯಲ್ಲಿ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಆವತ್ತು ಭಾನುವಾರನೋ ಏನೋ ಒಂದು ರಜದ ದಿವಸ ಒಂದು ಹರಿಜನರ ಮಗು ಸತ್ತಿರುವುದನ್ನು ಪೋಲೀಸ್ ಕಮಿಷನರನ್ನು ಕಳುಹಿಸಿ ಅದನ್ನು ಕ್ರಿಮಿನಲ್ ಮಾಡಿಸಬೇಕಾಯಿತು. ಜಿಜ್ಞಾಸೆಯ ಕಾರಣ ಎರಡು ದಿವಸ ಆ ಹೆಣವನ್ನು ದಫನ್ ಮಾಡದೆ ಹಾಗೆಯೇ ಇಟ್ಟುಕೊಂಡಿದ್ದರು. ಅದು ಒಂದು ತಲೆತಗ್ಗಿಸತಕ್ಕಂಥ ವಿಚಾರ ಎಂದರೆ ಇಷ್ಟು ಹೃದಯ ಹುರಿದುಹೋಗತಕ್ಕಂಥ ವಿಚಾರ. ಆ ಸತ್ತಮಗುವನ್ನು ಅದರ ತಂದೆತಾಯಿಗಳು ದಫನ್ ಮಾಡಲು ಸಾಧ್ಯವಾಗದೆ ಎಷ್ಟು ಒದ್ದಾಡಿದ್ದಾರೆಂದರೆ ಹೇಳಲಾಗದು. ಅವರ ಜಾಗದಲ್ಲಿ ನಾವು ನೀವು ಇದ್ದರೆ ತಿಳಿಯುತ್ತಿತ್ತು. ಅದಕ್ಕೂ ಲಿಮಿಟ್ ಇರಬೇಕು. There should be some limit for all these things.

ಈಗ ಒಂದು ಕೋಟಿ ಇಟ್ಟಿರುವುದು ಕಡಿಮೆ ಬಂದರೆ ಮತ್ತಷ್ಟು ಹಣವನ್ನು ಕೊಡೋಣ. ಆ ಜನ ಧೈರ್ಯದಿಂದ ಇರಲಿ. ನಮ್ಮ ಸರ್ಕಾರ ಅವರ ಪರವಾಗಿ ಇದೆ. ಅಧಿಕಾರಕ್ಕೆ ಬರುತ್ತೇವೆ. ಕಿತ್ತುಕೊಂಡು ಹೋಗುತ್ತೇವೆ. ಅದಕ್ಕೆ ನಾವು ಯೋಚನೆ ಮಾಡುವುದಿಲ್ಲ. ನಾವು ರೈತರಿಗೆ ಈ ವರ್ಗದವರಿಗೋಸ್ಕರ ಇರುತ್ತೇವೆನ್ನುವ ಗ್ಯಾರಂಟಿ ಮಾಡಿಕೊಂಡು ಮುಂದಿನ ಹೆಜ್ಜೆ ಇಡೋಣ. ತಪ್ಪಿದ್ದರೆ ಸರಿಪಡಿಸಿಕೊಂಡು ಹೋಗೋಣ. ತಪ್ಪಿದರೆ ಕ್ಷಣೆ ಕೇಳೋಣ. ಇದರ ಬಗ್ಗೆ ಯಾರಿಗೂ ಚಿಂತನೆ ಇಲ್ಲ. ಅಫೀಶಿಯಲ್ ಕಮಿಟ್‌ಮೆಂಟ್ ಇಲ್ಲ. ಆಚರಣೆಯಲ್ಲಿಲ್ಲ. ಅನುಸ್ಠಾನದಲ್ಲಿಲ್ಲವೆಂದರೆ ಹೇಗೆ ಬರುತ್ತದೆ ಇದೆಲ್ಲ. ಇದನ್ನು ಒಂದು ಪ್ರಮುಖವಾಗಿ ಇಟ್ಟುಕೊಂಡು ಪ್ರಾಮಾಣಿಕವಾಗಿ ಮಾಡತಕ್ಕಂಥ ಪ್ರಯತ್ನ. ಆದರೆ ಫಲಿತಾಂಶಕ್ಕಾಗಿ ಈ ವರ್ಷ ನೋಡಿಕೊಂಡು ಮುಂದಿನ ವರ್ಷಕ್ಕೆ ಹೋಗೋಣ.

ಶ್ರೀ ಎಂ. ಸಿದ್ದಮಾದಯ್ಯ : ಮಾನ್ಯ ಅಧ್ಯಕ್ಷರೇ ನಮ್ಮ ಚಾಮರಾಜನಗರ ತಾಲ್ಲೂಕ್‌ನಲ್ಲಿ ಅರತಿವಾಡಿ ಎಂದು ಹಳ್ಳಿಯಿದೆ. ಆ ಹಳ್ಳಿಯಲ್ಲಿ ಒಂದು ಸ್ಮಶಾನವಿದ್ದು ನೂರಾರು ವರ್ಷಗಳಿಂದ ಅಲ್ಲಿ ಹರಿಜನರು ಹೆಣವನ್ನು ಊಳುತ್ತಿದ್ದರು. ಅದು ಸ್ಮಶಾನಭೂಮಿ. ಅದನ್ನು ಅಕ್ರಮವಾಗಿ ಸ್ವಾಧೀನ ಮಾಡಿಕೊಂಡು ತೆಂಗಿನ ಗಿಡಗಳನ್ನು ಹಾಕಿದ್ದಾರೆ. ನಾನು ಅದರ ಬಗ್ಗೆ ಸರ್ಕಾರಕ್ಕೆ ಬರೆದು ಅದನ್ನು ಖಿಲ್ಲಾ ಮಾಡಿಸಿದ್ದೆನು. ಅದರ ಬಗ್ಗೆ ಸರ್ಕಾರದಿಂದ ಆರ್ಡರ್ಸ್ ಕೂಡ ಆಗಿದೆ. ಸಬ್‌ಸೀಕ್ವೆಂಟ್ ಆಗಿ

ಅದಕ್ಕೆ ಯಾರೋ ಒಬ್ಬ ಮಂತ್ರಿಗಳು ಸ್ಟೆ ತಂದಿದ್ದಾರೆ. ಇದರ ದೆಸೆಯಿಂದಾಗಿ ಸತ್ತ ಹೆಣವನ್ನು ಮೂರು ದಿವಸ ಇಟ್ಟುಕೊಂಡಿದ್ದರು. ಅಲ್ಲಿಯ ಡೆಪ್ಯುಟಿ ಕಮಿಷನರು ಮೂರು ಮೈಲಿ ದೂರದಲ್ಲಿ ತೆಗೆದುಕೊಂಡು ಹೋಗಿ ಹೂಳುವುದಾಗಿ ಹೇಳಿದ್ದರು. ಅದರ ಬಗ್ಗೆ ಆರ್ಡರ್ ಕೂಡ ಆಗಿದೆ. ಆ ಜಾಗವನ್ನು ಖಿಲ್ಲಾ ಮಾಡಿಸಬೇಕು. ಹೆಣ ಹೂಳುವುದಕ್ಕಾದರೂ ಜಾಗ ಮಾಡಿಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರ ನೋವಿನ ಮಾತು ಅರ್ಥವಾಯಿತು. ಸಂಪೂರ್ಣವಾಗಿ ಸರ್ಕಾರ ಅವರ ಇಂಗಿತವನ್ನು ಗ್ರಹಿಸಿದೆ. ನನಗೆ ಗೊತ್ತು ಕೆಲವು ಜನರು ಪ್ರಭಾವಿಯುತರು ಅಧಿಕಾರಿಗಳನ್ನು ಒಳಗಡೆ ಹಾಕಿಕೊಂಡು ರೆಕಾರ್ಡ್ ಚೇಂಜ್‌ಮಾಡಿಕೊಳ್ಳುವುದು. ಇದೆಲ್ಲಾ ನಡೆದಿರತಕ್ಕಂಥ ಘಟನೆಗಳು. ಅನೇಕ ವರ್ಷಗಳಿಂದ ಅನೇಕ ಕಡೆಗಳಲ್ಲಿ ನಡೆದಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಅದು ತಪ್ಪಬೇಕು. ಕಾನೂನು ಪ್ರಕಾರ ಹೋದ ತಕ್ಷಣವೇ ಕೋರ್ಟಿನಿಂದ ಸ್ಟೇ ತಂದುಬಿಡುತ್ತಾರೆ. ಇದು ನಮಗೆ ಒಂದು ದೊಡ್ಡ ಗೋಳಾಗಿದೆ.

ಶ್ರೀ ಎಂ. ಸಿದ್ದಮಾದಯ್ಯ : ಗೌವರ್ನಮೆಂಟ್ ಖಿಲ್ಲಾ ಮಾಡಬೇಕೆಂದು ಆರ್ಡರ್ ಕೊಟ್ಟಿದೆ. ಎರಡನೇ ಆರ್ಡರ್ ಇನ್ನೊಬ್ಬ ಮಿನಿಸ್ಟರ್ ಬಂದರೆ ಅದರ ಬಗ್ಗೆ ಸ್ಟೇಮಾಡಿಸಿದ್ದಾರೆ. ಹೆಣ ಹೂಳುವುದಕ್ಕೆ ಜಾಗವೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಯಾವಾಗ ಕೊಟ್ಟಿರುವುದು?

ಶ್ರೀ ಎಂ. ಸಿದ್ದಮಾದಯ್ಯ : ನಂಜನಗೂಡು ಸಬ್‌ಡಿವಿಜನ್ ಆಫೀಸ್‌ನಲ್ಲಿ ಎರಡಕ್ಕೂ ಆರ್ಡರ್ಸ್ ತೆಗೆದುಕೊಂಡಿರುತ್ತಾರೆ. ನಾನು ಅದಕ್ಕೆ ಬರೆದಿದ್ದಕ್ಕೆ ಖಿಲ್ಲಮಾಡಿಸಿ ಸರ್ಕಾರ ಆರ್ಡರ್ಸ್ ಕಳಿಹಿಸಿದ್ದಾರೆ. ಅದರ ಮಧ್ಯೆ ಸಬ್‌ಸೀಕ್ವೆಂಟಾಗಿ ಶಾಸಕರೊಬ್ಬರು ಬರೆದು ಅದಕ್ಕೆ ಸ್ಟೇ ತಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಈಗ ಒಂದು ಕೆಲಸ ಮಾಡಿ. ಅದನ್ನು ಯಾವಾಗ ಯಾವ ಮಿನಿಸ್ಟರ್ ಮಾಡಿದರು ಎನ್ನತಕ್ಕಂಥ ವಿಚಾರ. ಅವರಿಗೆ ಏನು ಕಾರಣವಿತ್ತೋ ನನಗೆ ಗೊತ್ತಾಗುವುದಿಲ್ಲ. ಏತಕ್ಕೆಂದರೆ ಕೆಲವು ಸಲ ವಾಸ್ತವಾಂಶ ದೂರ ಇಟ್ಟು ಬೇರೆ ವಿಚಾರಕ್ಕೂ ಕೂಡ ಹೇಳಿದ್ದರೂ ಹೇಳಿರಬಹುದು, ಅದು ಹೇಗೆ ಗೊತ್ತಾಗುತ್ತದೆ. ಮಾನ್ಯ ಕಂದಾಯ ಸಚಿವರು ಆಗಲ್ಲ್ಯ ಮಾಡತಕ್ಕಂಥವರಲ್ಲ. ನನಗೂ ಗೊತ್ತಿದೆ. ನಾನು ಅದನ್ನು ಸರಿಪಡಿಸುವುದಕ್ಕೆ ದಯವಿಟ್ಟು ದಾಖಲೆ ತೆಗೆದುಕೊಂಡು ನನ್ನ ಹತ್ತಿರಬನ್ನಿ. ಕಾನೂನು ಪ್ರಕಾರ ವಿಚಾರ ಮಾಡೋಣ.

ಶ್ರೀಮತಿ ಮೋಟಮ್ಮ : ಸ್ಮಶಾನ ಭೂಮಿಯನ್ನು ಆಕ್ರಮವಾಗಿ ವಶಪಡಿಸಿಕೊಂಡವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಪನಿಷ್‌ಮೆಂಟ್ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ : ಎಸ್‌ಸಿ / ಎಸ್‌ಟಿ ಕಮಿಟಿ. ಇರಿಗೇಷನ್ ಫೆಸಿಲಿಟೀಸ್. ಡ್ರಿಂಕಿಂಗ್ ವಾಟರ್ ಫೆಸಿಲಿಟೀಸ್, ಬೋರ್‌ವೆಲ್ ಫೆಸಿಲಿಟೀಸ್ ಇರಿಗೇಷನ್‌ವೆಲ್ಸ್ ಇದಕ್ಕಾಗಿ ನಾವು 6 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. Incentives to voluntary organisations involved in the construction of backwardclasses and SC/STs hostels.

ಎಸ್‌ಸಿ / ಎಸ್‌ಟಿ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್‌ಗಾಗಿ 20 ಲಕ್ಷ ಇಟ್ಟಿದ್ದೇವೆ. ನೇತ್ರಯೋಜನೆ, ಇವತ್ತು ಬಡವರ ಕಣ್ಣನ್ನು ರಿಪೇರಿ ಮಾಡತಕ್ಕಂಥದ್ದು ಅದಕ್ಕೆ 25 ಲಕ್ಷ ಇಟ್ಟಿದ್ದೇವೆ. ಬಡವರಿಗೆ

ಉಚಿತವಾಗಿ ಕನ್ನಡಕಗಳನ್ನು ಕೊಡತಕ್ಕಂಥದ್ದು. ಏಕೆಂದರೆ ಕಣ್ಣು ಕಾಣಿಸುವುದಿಲ್ಲ. ಹಳ್ಳಿಯ ಜನರ ಗೋಳು ನೋಡುವುದಕ್ಕಾಗುವುದಿಲ್ಲ. ಆ ಯೋಜನೆಗೆ 20-25 ಲಕ್ಷ ರೂಪಾಯಿಗಳನ್ನು ಕೊಡೋಣ. ಇದು ನೇತ್ರ ಯೋಜನೆ. ಯಾರಿಗೆ ಕಣ್ಣು ಕಾಣಿಸುವುದಿಲ್ಲ, ಕೋಲು ಹಿಡಿದುಕೊಂಡು ಬರುತ್ತಿರುತ್ತಾರೆ. ಅಂಥವರಿಗೆ ಈ ಯೋಜನೆ ಪ್ರಕಾರ ಹಣ ಮಂಜೂರ್ಮಾಡಿಕೊಂಡು ಸಹಾಯ ಮಾಡುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಆ ಪ್ರಕಾರ ಈ ನೇತ್ರ ಯೋಜನೆಯನ್ನು ಹಾಕಿದ್ದೇವೆ. ಇನ್ನೊಂದು ಹರ್ಷಕುಮಾರ ಗೌಡರೆ, ಬೀದಿ ಭಾಗ್ಯ ಎಂದು ನಾವು ಅದಕ್ಕೆ ಹೆಸರಿಟ್ಟಿದ್ದೇವೆ. ಬೀದಿಯಲ್ಲಿರತಕ್ಕ ಮಕ್ಕಳು, ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ, ಹಮಾಲಿಗಳು, ತಲೆಮೇಲೆ ಸಾಮಾನು ಹೊರುವವರು, ತರಕಾರಿ ಮಾರುವವರು, ಗಾಡಿ ತಳ್ಳಿಕೊಂಡು ಹೋಗಿ ವ್ಯಾಪಾರ ಮಾಡುವವರು ಇವರಿಗೆಲ್ಲ ಈ ಬೀದಿ ಭಾಗ್ಯ ಮಾಡಬೇಕೆಂದು ಒಂದು ಕೋಟಿ ರೂಪಾಯಿ ಇಟ್ಟಿದ್ದೇವೆ. ಇದು 5 ಲಕ್ಷ ಜನರನ್ನು ಕವರ್ ಮಾಡುತ್ತದೆ. ಇದಕ್ಕೆ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದಲೂ ನೆರವು ತೆಗೆದುಕೊಳ್ಳುತ್ತೇವೆ. ಇನ್ನು ನಾವು ಯಾವು ಯಾವುದಕ್ಕೆ ಹಣಕಾಸು ಎಷ್ಟು ಇಟ್ಟಿದ್ದೇವೆ ಎಂಬುದು ಮುಖ್ಯ. ಸಮಾಜ ಕಲ್ಯಾಣ ಇಲಾಖೆಗೆ ಈ ವರ್ಷಕ್ಕೆ ನಾವು 107 ಕೋಟಿ 5 ಲಕ್ಷ ರೂಪಾಯಿಗಳನ್ನು ಮಾರ್ಚ್ ಕೊನೆಯೊಳಗೆ ಖರ್ಚು ಮಾಡಬೇಕೆಂದು ಇಟ್ಟಿದ್ದರೆ ಮುಂದಿನ ವರ್ಷ ಅದನ್ನು 245 ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ. ಆಮೇಲೆ ಡಾ।। ಅಂಬೇಡ್ಕರ ಅವರ ಬರ್ತ್ ಸೆಂಟಿನರಿ ಸೆಲಬರೇಷನ್‌ಗೆ 15.97 ಕೋಟಿ ರೂಪಾಯಿ ಇಟ್ಟಿದ್ದೇವೆ. programme outlay-SC/ST Development Corporation allocation of funds-150 crores to cover 50,000 beneficiaries in 1992-93 as against 130 crores to cover 44,8000 beneficiaries in 1991-92. 44 ಸಾವಿರ ಜನ ಇದ್ದುದನ್ನು 50 ಸಾವಿರ ಜನರಿಗೆ ಏರಿಸಿ, ಹಣ ಕೂಡ ಜಾಸ್ತಿ ಇಟ್ಟಿದ್ದೇವೆ. Karnataka State Backward Class Development Corporation five crores outlay to cover 4000 beneficiariesin 1992-93. ಈ ವರ್ಷ 4 ಕೋಟಿ. 3600 ಜನರಿಗೆ ಕವರ್ ಮಾಡುವ ಸಲುವಾಗಿ 4 ರಿಂದ 5 ಕೋಟಿ ರೂಪಾಯಿಗೆ ಜಾಸ್ತಿ ಮಾಡಿದ್ದೇವೆ. ಇದರಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಇತ್ಯಾದಿ ಮೈನಾರಿಟೀಸ್ ಕವರ್ ಆಗುತ್ತಾರೆ. Karnataka State Wakf Council with revolving fund of initial capital of 60 lakhs on the lines of Central Wakf Council.

SRI QUAMARUI ISLAM : I have suggested.

SRI S. BANGARAPPA : Establishment of Karnataka State Wakf Foundation for Women Development ಎಂದು ಮುಸ್ಲಿಂ ಹೆಣ್ಣುಮಕ್ಕಳಿಗಾಗಿ ಮತ್ತೊಂದು ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದೇವೆ. in the field of education, self-employment and improvement of working conditions in home and cottage industries. ಬೇರೆ ಬೇರೆ ಸಂಸ್ಥೆಗಳಿಂದಲೂ ಹಣಕಾಸಿನ ನೆರವು ತೆಗೆದುಕೊಂಡು ಈ ಯೋಜನೆಗಳಿಗೆ ಕೊಡುತ್ತ ಹಣವನ್ನು ಜಾಸ್ತಿ ಮಾಡುತ್ತಾ ಹೋಗುತ್ತೇವೆ. ಕರ್ನಾಟಕ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಹಳ ಮುಖ್ಯ. 1991-92ರಲ್ಲಿ ಎರಡು ಸಾವಿರ ಜನರಿಗೆ 2.4 ಕೋಟಿ ರೂಪಾಯಿಗಳನ್ನು ಇದರಲ್ಲಿ ಇಟ್ಟಿವು. ಈ ವರ್ಷ 8 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಹೀಗೆ 2 ರಿಂದ 8 ಕೋಟಿಗೆ ಏರಿಸಿದ್ದೇವೆ. ಇದರಲ್ಲಿ 4 ಸಾವಿರ ಬೆನಿಫಿಷರೀಸ್ ಅನ್ನು ಜಾಸ್ತಿ ಮಾಡಬೇಕೆಂದು ಇಟ್ಟಿದ್ದೇವೆ. ವರ್ಕಿಂಗ್ ವುಮೆನ್ಸ್ ಹಾಸ್ಟೆಲ್‌ಗಳ ಬಗ್ಗೆ ಬಹಳ ಜನ ಕಂಪ್ಲೆಂಟ್ ಮಾಡಿದ್ದಾರೆ. ಈಗ

ನಾವು 25 ಲಕ್ಷ ರೂಪಾಯಿ ಹಣ ಇಟ್ಟಿದ್ದೇವೆ. ಇದಕ್ಕೆ ಬಾಕಿ ಹಣ 75-80 ಪರ್ಸೆಂಟ್ ಅನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಶಿವಮೊಗ್ಗದಲ್ಲಿ ಹಾಸ್ಟೆಲ್ ಮಾಡಬೇಕೆಂದು ಹೊನ್ನಾಳಿ ಗಂಗಮ್ಮನವರು ಹೇಳುತ್ತಿದ್ದರು.

ಶ್ರೀಮತಿ ಮೋಟಮ್ಮ : ನಾವು 50 ಪರ್ಸೆಂಟ್ ಹೆಣ್ಣು ಮಕ್ಕಳಿದ್ದೇವೆ. ವರ್ಕಿಂಗ್ ವುಮೆನ್ಸ್ ಹಾಸ್ಟೆಲಿಗೆ 25 ಲಕ್ಷ ರೂಪಾಯಿ ಇಟ್ಟಿರುವುದು ಏನೇನೂ ಸಾಲದು. ಕೊನೆಯ ಪಕ್ಷ ಒಂದು ಕೋಟಿ ರೂಪಾಯಿ ಕೊಟ್ಟರೆ ಎಲ್ಲಾ ಜಿಲ್ಲೆಗಳಲ್ಲಿ ವರ್ಕಿಂಗ್ ವುಮೆನ್ ಹಾಸ್ಟೆಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳು ಅಂದರೆ, ಇಷ್ಟು ಕಡಿಮೆ ದುಡ್ಡು ಕೊಟ್ಟು ಅಳತೆ ಮಾಡಿದರೆ ಕಡಿಮೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ನೀವು ಏತಕ್ಕೆ ನನ್ನ ಭಾಷಣವನ್ನು ಪೂರ್ತಿ ಫಾಲೋ ಮಾಡುವುದಿಲ್ಲ? 25 ಲಕ್ಷ ರೂಪಾಯಿ ನಾವು ಇಟ್ಟರೆ ಅದಕ್ಕೆ 75-80 ಪರ್ಸೆಂಟ್ ಭಾರತ ಸರ್ಕಾರದಿಂದ ಹಣ ಬರುತ್ತದೆ. ಕಾನೂನು ಹಾಗಿದೆ, ಸ್ವಲ್ಪ ತಾಳಿ.

ಶ್ರೀಮತಿ ಮೋಟಮ್ಮ : ನಮ್ಮ ಸ್ಟೇಟ್‌ನವರು ಒಂದು ಕೋಟಿ ರೂಪಾಯಿ ಇಟ್ಟರೆ ಅವರು ಇನ್ನೂ ಸ್ವಲ್ಪ ಜಾಸ್ತಿ ಕೊಡುತ್ತಾರೆ ಆಗ.

ಶ್ರೀ ಎಸ್. ಬಂಗಾರಪ್ಪ : ಸುಮ್ಮನಿರಿ. ಎಷ್ಟು ಹಾಸ್ಟೆಲ್ ಎಂದು ಲೆಕ್ಕ ಇರುತ್ತದೆ.

ಶ್ರೀಮತಿ ಮೋಟಮ್ಮ : ಹೆಣ್ಣುಮಕ್ಕಳ ವಿಷಯ ಏನಾಗುತ್ತದೆಂದರೆ ಬರೀ ಘೋಷಣೆ ಮೂಲಕ ಹೆಣ್ಣುಮಕ್ಕಳ ಶೋಷಣೆಯಾಗುತ್ತಿದೆ. ಹೆಣ್ಣುಮಕ್ಕಳಿಗೆ ಎಲ್ಲಾ ಪ್ರೋಗ್ರಾಂಸ್ ಘೋಷಣೆಗಳ ಮೂಲಕ ಶೋಷಣೆಯಾಗುತ್ತಿದೆ. ಹಾಗೆ ಆಗಬಾರದು ಎಂದು ನನ್ನ ಇಂಟೆನ್‌ಷನ್ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಭಾಷಣ ಕಡಿಮೆ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ಜಾಸ್ತಿ ಮಾಡಬೇಡಿ. ಈಗ ಅವರು 50 ಪರ್ಸೆಂಟ್ ಇದ್ದಾರೆ. 80 ಪರ್ಸೆಂಟ್ ಆದರೆ ಆಮೇಲೆ ಪರಿಸ್ಥಿತಿ ಏನು?

ಶ್ರೀ ಕರಿಯಣ್ಣ : ಮೋಟಮ್ಮನವರು ನಮ್ಮನ್ನು ಅಳತೆ ಮಾಡಿದರು ಎಂದು ಹೇಳಿದರು. ಮೋಟಮ್ಮನವರು ತಿಳಿದುಕೊಳ್ಳಬೇಕು. ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಬಗ್ಗೆ. ಅದಕ್ಕೆ ಥ್ಯಾಂಕ್ಸ್ ಹೇಳಬೇಕು ಅವರು. ಅದು ಬಿಟ್ಟು ಬೇರೇನೋ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಒಂದು ವೇಳೆ 25 ಲಕ್ಷ ನಾವು ಕೊಟ್ಟರೆ 75 ಲಕ್ಷ ಅವರು ಕೊಟ್ಟು ಒಟ್ಟು 1 ಕೋಟಿ ಆಗುತ್ತದೆ. ನಾಳೆ ಹಣ ಕಡಿಮೆಯಾದರೆ ಇನ್ನು ಎಷ್ಟು ಬೇಕೋ ಆ ಹಣ ಕೊಡುತ್ತೇವೆ. ಪ್ರಾರಂಭ ಮಾಡುವುದಕ್ಕಾಗಿ ಆ ರೀತಿ ನಾವು ಮಾಡುತ್ತೇವೆ. ಆಮೇಲೆ ವುಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್. 1991-92ಕ್ಕೆ 5.74 ಕೋಟಿ ರೂಪಾಯಿ ಇಟ್ಟೆ. ನಮ್ಮದೇ ಪ್ರೈಯೆಸ್ಟ್ ಆಗ. ಈ ವರ್ಷ 7 ಕೋಟಿ ರೂಪಾಯಿಗೆ ನಾವು ಏರಿಸಿದ್ದೇವೆ ಅದನ್ನು. ಅನಂತರ ಇಷ್ಟು ಹೇಳುತ್ತಾ ಪವರ್ ಮತ್ತು ಇರಿಗೇಷನ್ ಬಗ್ಗೆ ಹೇಳುತ್ತೇನೆ. 1991-92 to KEB special additional allocation 89 crores. 89 ಕೋಟಿ ಮಾಡಿದ್ದೇವೆ. allocation for power sector increased to 495 crores as against 373 crores in 1991-92. ಈ ವರ್ಷಕ್ಕೆ 376 ಕೋಟಿ ಕೊಟ್ಟಿದೆ. ಪವರ್ ವಿಚಾರದಲ್ಲಿ ನಾನು ಹೇಳುವುದು ಪ್ರಾಜೆಕ್ಟ್ ಕಟ್ಟುವುದು ಮತ್ತೊಂದು ಎಲ್ಲಾ

ಸೇರಿ. 373 ಕೋಟಿ ಇದ್ದರೆ ಈಗ 490 ರಿಂದ 500 ಕೋಟಿಗೆ ತೆಗೆದುಕೊಂಡಿದ್ದೇವೆ. 1992-93ಕ್ಕೆ to KEB to meet the target of energisation of 60,00 pump sets. ಅದನ್ನು ಈಗಾಗಲೇ ಹೇಳಿದ್ದೇನೆ. total outlay increased to 549 crores. This is very very important.

1991-92ಕ್ಕೆ 383.13 ಕೋಟಿ ಇತ್ತು. 383 ಕೋಟಿ ಇದ್ದರೂ ಈ ವರ್ಷ ಮಾರ್ಚಿ ಅಂತ್ಯದೊಳಗೆ ನಾವು ಅದನ್ನು 549-550 ಕೋಟಿಗೆ ಏರಿಸಿದ್ದೇವೆ. ಪರ್ಸೆಂಟೇಜ್‌ವೈಸ್ ಇನ್‌ಕ್ರೀಸ್ ಎಷ್ಟಿದೆ ಎಂದರೆ 43.51 ಪರ್ಸೆಂಟ್ ಇದೆ. ಒಂದೇ ಸಾರಿ ಬಿಗ್ ಜಂಪ್ ಕೊಟ್ಟಿದ್ದೇವೆ. ಆ ಕಾಲದಲ್ಲಿ ದೇವೇಗೌಡರು ಹೇಳುತ್ತಿದ್ದರು, ನೋಡಿ, ಇಡೀ ಇರಿಗೇಷನ್‌ಗೆ 300 ಕೋಟಿ ರೂಪಾಯಿ ಕೊಡದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ ಎಂದು. ಅದರ ಬಗ್ಗೆ ಈಗ ರಾಜಕೀಯ ಬೇಡ. ಅವರು ಅಷ್ಟು ಒತ್ತಡ ಮಾಡುತ್ತಿದ್ದರು. ನಾವು 550 ಕೋಟಿಗೆ ತೆಗೆದುಕೊಂಡಿದ್ದೇವೆ. ನೀವು ಅದರಲ್ಲಿ ಕಾಸ್ಟ್ ಎಸ್ಕಲೇಷನ್ ಸ್ವಲ್ಪ ಮಾರ್ಜಿನ್ ಕೊಡಿ. ಅಷ್ಟಾದರೂ 25-30 ಪರ್ಸೆಂಟ್ ಜಂಪ್ ಸಿಗುತ್ತದೆ. ಅದನ್ನು ಡಿಡಕ್ಟ್ ಮಾಡಿದರೂ ಕೂಡ. ಟೋಟಲ್ 43.51 ಪರ್ಸೆಂಟ್ ಜಂಪ್ ಸಿಕ್ಕಿದೆ. ಕಾವೇರಿ ಬೇಸಿನ್ ಅಲೋಕೇಷನ್ ಎಷ್ಟಿದೆ? 136 ಕೋಟಿ, 130 ಕೋಟಿ ಇಟ್ಟಿದ್ದು 6 ಕೋಟಿ ಜಾಸ್ತಿಯಾಗಿದೆ. 1991-92ಕ್ಕೆ 136 ಕೋಟಿ ಇದ್ದದ್ದು 200 ಕೋಟಿಗೆ ಒಂದೇ ಸಾರಿ ಜಂಪ್ ಕೊಟ್ಟಿದ್ದೇವೆ. ಇಲ್ಲಿ ಜಾಸ್ತಿ ಮಾಡಿದ್ದೇವೆ. ಆಮೇಲೆ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್. ಕೃಷ್ಣಾ ಬೇಸಿನ್‌ಗೆ ದಾಮೋದರ ವ್ಯಾಲಿ ಅಥಾರಿಟಿ ಟೈಪ್ ಒಂದು ಅಥಾರಿಟಿ ಮಾಡಬೇಕೆಂದು ಮಾಡಿದ್ದೇವೆ. ಆ ಲಿಫ್ಟ್ ಇರಿಗೇಷನ್ ಅಲ್ಲಿ ಮರ್ಜ್ ಮಾಡುತ್ತೇವೆ. ಇದನ್ನು ನೋಡಿಕೊಂಡು ಕಾವೇರಿ ಬೇಸಿನ್ ಲಿಫ್ಟ್ ಇರಿಗೇಷನ್ ಹಾಗೇ ಸಪರೇಟಾಗಿ ಇರುತ್ತೇವೆ. ಇದನ್ನು ಇಟ್ಟು ಲಿಫ್ಟ್ ಇರಿಗೇಷನ್‌ಗೆ ಜಾಸ್ತಿ ಹಣ ಕೊಡುತ್ತೇವೆ. ಈಗಾಗಲೇ ಹೇಳಿದ್ದೇನೆ. Minor irrigation we may go beyond 100 crores.

ಆದ್ದರಿಂದ ಲಿಫ್ಟ್ ಇರಿಗೇಷನ್ ನಾವು ಇಟ್ಟುಕೊಳ್ಳೋಣ. ಉಪಯೋಗವಾಗದೇ ಇದ್ದರೆ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಳ್ಳೋಣ. ಆಮೇಲೆ ನೋಡೋಣ. ಸಧ್ಯದಲ್ಲಿ ಅದು ಇಟ್ಟುಕೊಳ್ಳೋಣ ಎಂದು ಅದನ್ನು ಹಾಗೇ ಇಡಲಾಗಿದೆ. ಇಷ್ಟು ವಿಷಯಗಳು ಈಗ. ಇನ್ನು ಕೊನೆಯದಾಗಿ, ಕೊನೆಯದಲ್ಲ ಲಾಸ್ಟ್ ಬಟ್ ಒನ್. ಡ್ರಿಂಕಿಂಗ್ ವಾಟರ್‌ಗೆ ಬಜೆಟ್ ಅಲೋಕೇಷನ್ 1991-92ರಲ್ಲಿ 76.57 ಕೋಟಿ ಇದ್ದುದನ್ನು 1992-93ಕ್ಕೆ 110 ಕೋಟಿ ನಾವು ಇಟ್ಟಿದ್ದೇವೆ. 76 ಕೋಟಿ ಎಲ್ಲಿ. 110 ಕೋಟಿ ಎಲ್ಲಿ? 44% increase for drinking water, during 1991-92 Government provided additional allocation of 18.55 crores. ಎಚ್.ಯು.ಡಿಯ ಮಿನಿಸ್ಟರ್ ಇಲ್ಲೇ ಇದ್ದಾರೆ. ಹಣ ಜಾಸ್ತಿ ಬೇಕು ಎಂದು ಹೇಳಿದರು, ನಾವು ಸಹಕಾರ ಕೊಡುತ್ತಾ ಕೊಡುತ್ತಾ ಹೋದೆವು. ಏಕೆಂದರೆ ನಮಗೂ ಸ್ವಲ್ಪ ರೆವಿನ್ಯೂ ಜಾಸ್ತಿ ಬರುತ್ತಿತ್ತು. statewise survey of drinking water facility to be completed by April 1991-92 ಈಗ ಸರ್ವೆ ನಡೆಯುತ್ತಿದೆ ಎಲ್ಲಿ ಬಾಕಿ ಇದೆ, ಏನಿದೆ ನಾವು ಹೇಗೆ ಮಾಡಬೇಕು ಎಂದು ಮಾಸ್ಟರ್ ಪ್ಲಾನ್ ತಯಾರು ಮಾಡಿಕೊಳ್ಳುವ ದೃಷ್ಟಿಯಿಂದ. government obtained sanctions of aids from western financial institutions such as world bank, Danida etc. et the extent of 179.82 crores covering 2120 villages.

ಇಲ್ಲಿ ಬರತಕ್ಕದ್ದು. ಆಮೇಲೆ ಸ್ಪೆಷಲ್ ಏರಿಯಾ ಪ್ರೋಗ್ರಾಮ್ ಲೈಕ್ ಹೈದಾರಾಬಾದ್ ಕರ್ನಾಟಕ ಏರಿಯಾ ಪ್ರೋಗ್ರಾಮ್. ವೀರೇಂದ್ರ ಪಾಟೀಲ್‌ಜೀ ಅವರು 40 ಕೋಟಿ ರೂ.

ಕೊಟ್ಟಿದ್ದಾರೆ. ಮತ್ತೆ 10 ಕೋಟಿ ರೂಪಾಯಿ ಕೊಟ್ಟರು. ಈ ಸಾರಿ 65 ಕೋಟಿ ಕೊಟ್ಟಿದ್ದೇವೆ. They are very much happy. ಆದುದರಿಂದ ಅದನ್ನು ಬಿಡುಗಡೆ ಮಾಡುತ್ತಿದ್ದೇವೆ. ಒಬ್ಬರು ಛೇರ್ಮನ್ ಮಾಡಬೇಕು. ಸೆಷನ್ ಆದಮೇಲೆ ಒಂದು ವಾರದೊಳಗೆ ನಾವು ಅಪಾಯಿಂಟ್ ಮಾಡುತ್ತೇವೆ. ಇನ್ನು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಅದು ಕೂಡ ಆಗಿದೆ. ಅದಕ್ಕೆ ಈ ವರ್ಷ ಬಡ್ಜೆಟ್‌ನಲ್ಲಿ 10 ಕೋಟಿ ರೂಪಾಯಿ ಇಟ್ಟಿದ್ದೇವೆ. ಮುಂದಿನ ವರ್ಷ 35 ಕೋಟಿ ಇಟ್ಟಿದ್ದೇವೆ. 10 ಕೋಟಿ ಸೇರಿಸಿ ಬೋರ್ಡ್ ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಇದನ್ನು ಖರ್ಚುಮಾಡದೇ ಇದ್ದರೂ ನಿಮ್ಮ ಕೈಗೆ ಸಿಗುತ್ತದೆ. ಈ 35 ಹಾಗೂ 10 ಕೋಟಿಗಳನ್ನು ಒಟ್ಟು ಮಾಡಿದರೆ 45 ಕೋಟಿ ರೂಪಾಯಿಗಳಿಗೆ ಹೋಗುತ್ತದೆ. ಇನ್ನು ಶಿವಮೊಗ್ಗ. ಭದ್ರಾವತಿ ಕಾರ್ಪೊರೇಷನ್‌ದು ಉಳಿದಿದೆ. ಇಷ್ಟನ್ನೆಲ್ಲಾ ನಾವು ಮಾಡಿದ್ದೇವೆ. ಆಮೇಲೆ ಕ್ರೀಡೆಗಳ ಯೋಜನೆ. ನಾವು ಯಾವುದನ್ನೂ ಇದರಲ್ಲಿ ಬಿಡುವುದಿಲ್ಲ.

ಶ್ರೀ ಎ.ಬಿ. ಜಕನೂರ್ : ಬಾಂಬೆ-ಕರ್ನಾಟಕದ ಒಂದು ಬೋರ್ಡ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಇನ್ನು ಇರಿಗೇಷನ್ ವಿಚಾರದಲ್ಲಿ ಹೇಳುವುದಾದರೆ ಮುಳವಾಡ ಲಿಫ್ಟ್ ಇರಿಗೇಷನ್ ಸ್ಕೀಮ್ ಇದ್ದು ಅದು ಯು.ಕೆ.ಪಿ.ಯ ಮುಖ್ಯ ಕೆಲಸಗಳ ಕೆಳಗೆ ಬರುತ್ತದೆ. ಈ ಬಗ್ಗೆ ನಾನು 5 ಕೋಟಿ ರೂ.ಗಳನ್ನು ಕಳೆದ ಸದನದಲ್ಲೇ ಅನೌನ್ಸ್ ಮಾಡಿದ್ದೇನೆ. ಹಣವನ್ನೂ ರಿಲೀಸ್ ಮಾಡಿದ್ದೇನೆ. ವರ್ಕ್ ಈಗಾಗಲೇ ತೆಗೆದುಕೊಂಡಿದ್ದೇನೆ. ಈ ಯೋಜನೆ ಬಗ್ಗೆ ಬಿಜಾಪುರ ಜಿಲ್ಲೆಯ ಜನರು ಸತ್ಯಾಗ್ರಹ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದೇ ರೀತಿ ಹಿಪ್ಪರಗಿ ಬ್ಯಾರೇಜ್ ಕೂಡ ಅದಕ್ಕೂ ಕೂಡ ಹಣ ರಿಲೀಸ್ ಮಾಡಿದ್ದೇನೆ. ಆ ಕೆಲಸ ಪ್ರಾರಂಭ ಮಾಡಿದ್ದೇವೆ. ಇನ್ನು ಭದ್ರಾ ಪ್ರಾಜೆಕ್ಟ್‌ದು. ಛಾನಲ್ ಕೆಲಸ ನಾವು ಪ್ರಾರಂಭ ಮಾಡಿದ್ದೇವೆ. ಅಲ್ಲಿ ಛಾನಲ್. ಒಡೆದಿದ್ದು ಅಚ್ಚುಕಟ್ಟುದಾರರಿಗೆ ಅನ್ಯಾಯವಾಗಿದೆ ಎನ್ನುವ ವಿಚಾರ ಗೊತ್ತಿದೆ. ಅಲ್ಲಿ ಮಾಡಿರತಕ್ಕ ಛಾನಲ್ ವರ್ಕ್ ಫೌಂಡೇಷನ್ ಕೆಲಸ ಸರಿಯಿಲ್ಲ. ಈಗ ನಾವು ಅದನ್ನು ಬಿಟ್ಟು ಸ್ಯಾಡಲ್-4 ಏನಿದೆ ಅಲ್ಲಿಂದ ಪ್ರಾರಂಭ ಮಾಡಿ ಮುಂದಿನ ಛಾನಲ್‌ಗೆ ಕನೆಕ್ಷನ್ ಕೊಡಬೇಕೆಂದು ಮಾಡಿದ್ದೇವೆ. ಸಚಿವ ಮಲ್ಲಾರಿಗೌಡರು ಅಲ್ಲಿಗೆ ಪದೇಪದೇ ಹೋಗಿ ಬಂದಿದ್ದಾರೆ. ನಿಗಧಿತ ವೇಳೆಯಲ್ಲಿ ಅಲ್ಲಿ ಕೆಲಸ ಮುಗಿಯಬೇಕೆಂದು ಕೆಲಸಕಾರ್ಯ ಹಾಕಿಕೊಂಡು ಕೆಲಸ ಪ್ರಗತಿಯಲ್ಲಿ ಇದೆ. ಹಣ ಎಷ್ಟೇ ಖರ್ಚು ಆದರೂ ಕೆಲಸ ಆಗಬೇಕು. ಭದ್ರಾ ಅಚ್ಚುಕಟ್ಟುದಾರರಿಗೆ ಈ ವರ್ಷ ತೊಂದರೆ ಆಗುತ್ತದೆ. ಮುಂದಿನ ಬೆಳೆ ಹೊತ್ತಿಗೆ ನಾವು ನೀರನ್ನು ಕೊಡಬೇಕೆಂದು ಆಸೆ ಇಟ್ಟು ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಸ್.ಜಿ. ನಾಯಕ್ : ಹಣ ಖರ್ಚಾದರೂ ಪರ್ವಾಯಿಲ್ಲ. ಕೆಲಸ ಮಾಡಿಸುತ್ತೇನೆ ಎಂದು ಹೇಳುತ್ತಿದ್ದೀರಿ. ಅಪ್ಪರ್ ಭದ್ರಾ ಛಾನಲ್ ಕೆಳಗೆ ಬರುವ ಜನ ನಾವು ಬಡವರು ಇದ್ದೇವೆ. ಈ ಕೆಲಸವನ್ನು ದಯವಿಟ್ಟು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಬಹಳ ಒಳ್ಳೆಯ ಪ್ರಶ್ನೆ. ಉತ್ತರ ಕೊಟ್ಟಮೇಲೆ ಆರಾಮವಾಗಿ ಈ ಬಗ್ಗೆ ಕುಳಿತು ಮಾತನಾಡೋಣ ಇನ್ನು ಮುಳವಾಡ ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಬಹಳ ಹಣ ಬೇಕಾಗುತ್ತದೆ. ಇವತ್ತು 5 ಕೋಟಿ ರೂಪಾಯಿ ಪ್ರಾವಿಷನ್ ಮಾಡಿದ್ದೇವೆ. ಈ ವರ್ಷ ಕೂಡ Out of the total allocation, ಏನಿದೆ ಅದರಲ್ಲಿ ಮಾಡೋಣ. ಇನ್ನು ಇಲ್ಲಿರತಕ್ಕ ವಿಚಾರಗಳು ಇಷ್ಟೇ. we are going to force Hipparagi Barrage, Mulawada Lift Irrigation and Mahadai Diversion Scheme. But Malaprabha. ಈ ಅಪ್ಪರ್ ತುಂಗ ನಾವು ಏನು ಮಾಡಿದ್ದೇವೆ?

ಸುಮಾರು 200 ಕೋಟಿ ರೂಪಾಯಿಯ ಈ ಯೋಜನೆಯನ್ನು ಎಲೆಕ್ಷನ್‌ಗೋಸ್ಕರ ಮಾಡಿದ್ದೇವೆಂದು ಕೆಲವರು ಹೇಳಿದರು. That is going to irrigate about 2 lakhs and odd acres mainly in Dharwar district, ಹೊನ್ನಾಳಿ ತಾಲ್ಲೂಕಿನಲ್ಲಿ 20 ಸಾವಿರ ಎಕರೆ ಬರುತ್ತದೆ. ಹಾಗೆಯೇ ಶಿವಮೊಗ್ಗ ತಾಲ್ಲೂಕಿನಲ್ಲಿ 7-8 ಸಾವಿರ ಎಕರೆ ಬರುತ್ತದೆ. ಹಿರೇಕೆರೂರಿನಲ್ಲಿ 24 ಸಾವಿರ ಎಕರೆ ಬರುತ್ತದೆ. ಮೂರು ಮೂರು ಚಿಲ್ಲರೆ ಶಿಕಾರಿಪುರ ತಾಲ್ಲೂಕಿನ ಒಂದು ಕಡೇ ಹಳ್ಳಿಯಲ್ಲೂ ಬರುತ್ತದೆ. ಆಮೇಲೆ ಹಾವೇರಿ ತಾಲ್ಲೂಕಿನಲ್ಲಿ ಸುಮಾರು 70-80 ಸಾವಿರ ಎಕರೆ ಮತ್ತು ರಾಣೆಬೆನ್ನೂರು ತಾಲ್ಲೂಕಿನಲ್ಲಿ 1 ಲಕ್ಷ 10 ಸಾವಿರ ಎಕರೆ ಬರುತ್ತದೆ. ಒಟ್ಟು ಎರಡೂವರೆ ಲಕ್ಷ ಎಕರೆಯ ಅಪ್ಪರ್ ತುಂಗಾ ಪ್ರಾಜೆಕ್ಟ್ ಇದು.

ಕ್ರಸ್ಟ್ ಗೇಟನ್ನು ಪರ್‌ಪೆಕ್ಟ್ ಆಗಿ ಹಾಕಿ ಮಾಡಿಕೊಂಡು ಹೋಗುತ್ತೇವೆ. ಮುಳುಗಡೆಯಾಗುತ್ತದೆಂದು ತೀರ್ಥಹಳ್ಳಿಯ ತಾಲ್ಲೂಕು ಜನ ಏನು ಯೋಚನೆ ಮಾಡುವುದು ಬೇಡ. ನಾನು ಅವರಿಗೆ ಹೇಳಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ ತೊಂದರೆಯೇನೂ ಇಲ್ಲ. ಕ್ರಸ್ಟ್ ಗೇಟನ್ನು ಪರ್‌ಫೆಕ್ಟಾಗಿ ಹಾಕಿಕೊಂಡು ಮುಂದೆ ತೆಗೆದುಕೊಂಡು ಹೋಗುತ್ತಿದ್ದೇವೆ. ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರ ಕ್ಷೇತ್ರ ಮತ್ತು ಇತರೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿದ್ದೇವೆ. ಮಾನ್ಯ ಸದಸ್ಯರಾದ ಕರಿಯಣ್ಣನವರ ಕ್ಷೇತ್ರದಲ್ಲಿ ಬಂದೀಚಾನಲ್ ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ವರ್ಕ್ ಮುಗಿದಿರಬೇಕು. ಅರ್ಧ ಮುಗಿದಿದೆಯೇಂದು ಮಾನ್ಯ ಕರಿಯಣ್ಣನವರು ಹೇಳುತ್ತಿದ್ದಾರೆ. ಉಳಿದ ಅರ್ಧ ವರ್ಕ್ ನಡೆಯುತ್ತಾ ಇದೆ. ಇರಿಗೇಷನ್ ವರ್ಕ್ಸ್‌ಗಳನ್ನು ನಾವು ನಿಲ್ಲಿಸುವುದಿಲ್ಲ. ಆ ಕೆಲಸ ಆಗುತ್ತಿರಬೇಕು. ಮುಳವಾಡ. ಹಿಪ್ಪರಗಿ ಮತ್ತು ಮಹದಾಯಿ ಇವುಗಳು ಗ್ರೈವರ್ಷನ್ ಸ್ಕೀಮ್‌ಗಳು. ಆಮೇಲೆ ಅಪ್ಪರ್ ತುಂಗಾ, these four projects will be forced to the World Bank. ಈಗಾಗಲೇ ವರ್ಲ್ಡ್‌ಬ್ಯಾಂಕಿನವರು ಒಪ್ಪಿಕೊಂಡಿದ್ದಾರೆ. ಒಂದು ರೌಂಡ್ ಮಾತುಕತೆಯಾಗಿದೆ. ಮುಳವಾಡದಲ್ಲಿ ನಿಲಗುಂದ ಸ್ವಾಮಿಗಳು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಸತ್ಯಾಗ್ರಹ ಮಾಡುವವರು ಯಾರೇ ಇರಬಹುದು. ಅದರ ಬಗ್ಗೆ ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಅಲ್ಲಿ ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರನ್ನು ಕಳುಹಿಸಿಕೊಟ್ಟಿದ್ದೇನೆ. ಅವರ ಜೊತೆಯಲ್ಲಿ ಶಾಸಕ ಮಿತ್ರರು ಇಬ್ಬರು ಹೋಗಿದ್ದಾರೆ. ನೀರಾವರಿ ಮಂತ್ರಿಗಳಾದ ಮಲ್ಲಾರಿಗೌಡ ಪಾಟೀಲ್‌ರವರು ಹೋಗಿದ್ದಾರೆ. ಸತ್ಯಾಗ್ರಹ ಏನಿದೆ ಅದನ್ನು ಮಾಡಿದರೆ ಬರುವುದಿಲ್ಲ ಇವು. ಅವರು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ನಾವು 5 ಕೋಟಿ ರೂಪಾಯಿ ಕೊಟ್ಟಿದ್ದು ಏಕೆ? ವರ್ಕ್ಸ್ ಕಮೆನ್ಸ್ ಮಾಡಬೇಕೆಂದು ಕೊಟ್ಟಿದ್ದೇವೆ. ವರ್ಲ್ಡ್‌ಬ್ಯಾಂಕಿನವರಿಂದ ಓಕೆ ಮಾಡಿಸಿಕೊಂಡರೆ, ಓಕೆ ಮಾಡಿಸಿಕೊಳ್ಳಬೇಕಾದರೆ ವರ್ಕ್ಸ್ ಕಂಟಿನ್ಯೂ ಮಾಡುತ್ತಾ ಹೋಗಬೇಕು. ನಮಗೆ ನೂರು ಕೋಟಿ ಕೊಡಿ ಅಂದರೆ ಅದಕ್ಕಾಗಿ ಸತ್ಯಾಗ್ರಹ ಮಾಡಿದರೆ ನಾವು ಎಲ್ಲಿಂದ ತಂದು ಕೊಡಬೇಕು? ಆ ದೃಷ್ಟಿಯಿಂದ ನಾನು ಸ್ವಲ್ಪ ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ. I want to be on record. ನಾವು ರೈತರ ಪರವಾಗಿದ್ದೇವೆ. ಮುಳವಾಡವಿರಬಹುದು. ಹಿಪ್ಪರಗಿ ಇರಬಹುದ, ಮಹದಾಯಿ ಇರಬಹುದು, ಯಾವುದೇ ಇರಬಹುದು. ಯಾವುದೇ ಅನುಮಾನ ಬೇಕಾಗಿಲ್ಲ. ವರ್ಲ್ಡ್ ಬ್ಯಾಂಕಿನವರು ಕೂಡ ಒಪ್ಪಬೇಕು. ಹಣ ಜಾಸ್ತಿ ಬಂದಾಗ ದೊಡ್ಡ ಪ್ರಮಾಣದಲ್ಲಿ ತೆಗೆದುಕೊಂಡು ಹೋಗುತ್ತೇವೆ. ಈಗ ಸಣ್ಣ ಪ್ರಮಾಣದಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆ. ಹಣವನ್ನು ರಿಲೀಸ್ ಮಾಡಿದ್ದೇವೆ. ಆದರೆ ಅವರು ಸತ್ಯಾಗ್ರಹವನ್ನು ಏನು ಮಾಡುತ್ತಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ।। ಆರ್.ಬಿ. ಚೌಧರಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮುಳವಾಡ ಲಿಫ್ಟ್ ಇರಿಗೇಷನ್ ಸ್ಕೀಮ್ ಒಂದು ದೊಡ್ಡ ಯೋಜನೆ ಆದುದರಿಂದ 5 ಕೋಟಿ ರೂಪಾಯಿ ಏನೇನೂ ಸಾಲದು ಅದಕ್ಕಾಗಿ ಹೆಚ್ಚು ಹಣವನ್ನು ಬಿಡುಗಡೆ ಮಾಡಿದರೆ ಒಳ್ಳೆಯದೆಂದು ನನಗನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರಾದ ಡಾ।। ಚೌಧರಿಯವರೇ. ತಾವು ಸ್ವಲ್ಪ ತಿಳಿದುಕೊಳ್ಳಬೇಕು. 100 ಕೋಟಿ ಚಿಲ್ಲರೆ ಅಂದರೆ ಅದು 200 ಕೋಟಿಯಾಗುತ್ತದೋ 175 ಕೋಟಿಯಾಗುತ್ತದೋ ಅದು ನಮಗೆ ಗೊತ್ತಾಗುವುದಿಲ್ಲ. ಈಗ ನಾವು 1991-92ಕ್ಕೆ 5 ಕೋಟಿ ರೂಪಾಯಿ ಕೊಟ್ಟು ವರ್ಕ್ಸ್ ಶುರು ಮಾಡಿದ್ದೇವೆ.

ಡಾ।। ಆರ್.ಬಿ. ಚೌಧರಿ : 100 ಕೋಟಿ ಎಂದು ಹೇಳುವುದಿಲ್ಲ. ಈಗೇನು ಕೊಟ್ಟಿದ್ದೀರಿ ಅದಕ್ಕಿಂತ ಇನ್ನು ಸ್ವಲ್ಪ ಹೆಚ್ಚಿಗೆ ಮಾಡಿದರೆ ಒಳ್ಳೆಯದಾಗುತ್ತದೆ. ನೂರು ಕೋಟಿ ಬಹಳ ಆಗುತ್ತದೆ ಅಷ್ಟು ನಮಗೆ ಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ. 5 ಕೋಟಿ ರೂಪಾಯಿಯನ್ನು 1991-92ಕ್ಕೆ ನಾವು ಬಿಡುಗಡೆ ಮಾಡಿದ್ದೇವೆ. ಈ ವರ್ಷ ವರ್ಕ್ಸ್ ಶುರು ಮಾಡಬೇಕು. ವರ್ಲ್ಡ್‌ಬ್ಯಾಂಕಿನವರು ವರ್ಕ್ಸ್ ಶುರು ಮಾಡಿಯೆಂದು ಹೇಳಿದ್ದಾರೆ. ಮಾಡಿದ್ದೇವೆ. Work starts about with all our earnest desire. ಅದು ವರ್ಲ್ಡ್‌ಬ್ಯಾಂಕಿಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಈಗ ಮುಂದಿನ ವರ್ಷ 1992-93ಕ್ಕೆ 5 ಕೋಟಿ ರೂಪಾಯಿ ಅಲ್ಲ. ಮತ್ತೊಂದು 10 ಕೋಟಿಯಾದರೂ ನಾನು ಕೊಡುತ್ತೇನೆ. ನಿಮಗೇನೂ ಅನುಮಾನ ಬೇಡ. ಆದರೆ ವರ್ಲ್ಡ್ ಬ್ಯಾಂಕಿನವರ ಏಡ್ ಸಿಗದಿದ್ದರೆ ಒಂದೇ ಸಾರಿ ಮುಗಿಸುವುದಕ್ಕೆ ಆಗುವುದಿಲ್ಲ. We will have to utilise our share of water by the end of this century according to the Bachawat Award. ಅದಕ್ಕಾಗಿ ನಾನು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಅರ್ಜೆಂಟ್ ತೆಗೆದುಕೊಂಡು ಮಾಡೋಣವೆಂದು ಹಣ ಕೂಡ ರಿಲೀಸ್ ಮಾಡಿಕೊಡುತ್ತೇವೆ.

ಇನ್ನು ಸ್ಪೋರ್ಟ್ಸ್ ವಿಚಾರದಲ್ಲಿ Scheme for training rural youth ಯೂತ್ ಸ್ಪೋರ್ಟ್ಸ್‌ಗೋಸ್ಕರ. ಏಕೆಂದರೆ ಈ ಸದನದಲ್ಲಿ ಸ್ಪೋರ್ಟ್ಸ್‌ಮನ್‌ಗಳೇ ತುಂಬಾ ಇದ್ದಾರೆ. ಮಾನ್ಯ ಅಶ್ವತ್ಥರೆಡ್ಡಿಯವರು ಸ್ಪೋರ್ಟ್ಸ್‌ಮನ್.ಬಸವರಾಜ ಪಾಟೀಲ್ ಸ್ಪೋರ್ಟ್ಸ್‌ಮನ್. ರಾಮಪ್ಪನವರು ಸ್ಪೋರ್ಟ್ಸ್‌ಮನ್ ನಾನು ಇನ್ನು ಯಾರ್‍ಯಾರು ಇದ್ದಾರೆಂದು ಹುಡುಕುತ್ತಿದ್ದೇನೆ. ಧರ್ಮಸಿಂಗ್‌ರವರು ಸ್ಪೋರ್ಟ್ಸ್‌ಮನ್. ಈಗ ಅವರ ಸೈಜ್ ನೋಡಿದರೆ ಗೊತ್ತಾಗುವುದಿಲ್ಲವೇ ಈಗ ಸೈಜ್ ಬಹಳ ಕಡಿಮೆ ಮಾಡಿದ್ದಾರೆಂದು ಹೇಳಬಹುದು. ಇನ್ನು ಯಾರ್‍ಯಾರು ಇದ್ದಾರೆಂದರೆ ಗುರುದೇವ್‌ರವರು ಸ್ಪೋರ್ಟ್ಸ್‌ಮನ್. ಹರ್ಷಕುಮಾರಗೌಡ ಅವರೇನು ಸಣ್ಣ ಸ್ಪೋರ್ಟ್ಸ್‌ಮನ್ ಅಲ್ಲ ಅವರು ಪರವಾಗಿಲ್ಲ. ನಾವು ಕಂಪಲ್ಸರಿಯಾಗಿ ಮಾಡಬೇಕಾಗುತ್ತದೆ. ನಿಮಗೆ ಎಲ್ಲಾ ಕೋಚ್ ಹಾಕಿ ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋದಾಗ ಅಲ್ಲಿ ಟ್ರೈನಿಂಗ್ ತೆಗೆದುಕೊಳ್ಳಬೇಕಾಗುತ್ತದೆ. ಬೇರೆ ದಾರಿ ನಿಮಗೆ ಉಳಿದಿಲ್ಲ. ಯುವಕರು ಏನಿದ್ದಾರೆ ಅವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಫೆಸಿಲಿಟೀಸ್ ಇಲ್ಲ. ಅದಕ್ಕೋಸ್ಕರ ನಾವು ಕನ್‌ಸಾಲಿಡೇಟೆಡ್ ಪೇ 1500 ರೂಪಾಯಿ ಕೊಟ್ಟು ಒಬ್ಬರು ಕೋಚ್ ನೇಮಕ ಮಾಡಿ ತರಬೇತಿ ಕೊಡುವುದಕ್ಕೋಸ್ಕರ 31 ಲಕ್ಷದ 50 ಸಾವಿರ ರೂಪಾಯಿಗಳನ್ನು ನಾವು ತೆಗೆದು ಇಟ್ಟಿದ್ದೇವೆ. Let us start this first. ಅದನ್ನು ಯಾರೂ ಕೂಡ ಮಾಡಿರಲಿಲ್ಲ. ನಾವು ಅಂತಹ ವಿಚಾರ ಮಾಡಿದ್ದೇವೆ. Construction of integrated multi-purpose indoor stadium of international standards, ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹದ್ದು ಒಂದೂ ಇಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಹಳ್ಳಿ ಊರುಗಳಲ್ಲಿ ಆಟದ ಮೈದಾನಕ್ಕೆ ಜಾಗ ಇಟ್ಟಿಲ್ಲ. ಅಲ್ಲಿ ಮನೆಗಳು ಬಂದು ಜಾಗ ಇಲ್ಲ. ಅದಕ್ಕೆ ಏನಾದರೂ ಕಡ್ಡಾಯವಾಗಿ ಜಾಗ ಇಡುವಂತೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಸ್ಪೋರ್ಟ್ಸ್ ಡಿಮ್ಯಾಂಡ್ ಬಂದಾಗ ಮಾನ್ಯ ಸಚಿವರು ಅದರ ಬಗ್ಗೆ ಹೇಳುತ್ತಾರೆ. ನಾನು ಒಂದು ಪಾಲಿಸಿಯಾಗಿ ಇಟ್ಟುಕೊಂಡು ಬಜೆಟ್ ಅಲೋಕೇಷನ್‌ನ್ನು ನಿಮಗೆ ಕೊಡುತ್ತಿದ್ದೇನೆ. ಒಂದು ವೇಳೆ ಕಡಿಮೆ ಬಿದ್ದರೆ ನಾವು ಮತ್ತಷ್ಟು ಹಣ ಕೊಡುವುದಕ್ಕೆ ರೆಡಿ ಇದ್ದೇವೆ. ನಮ್ಮ ರೆವಿನ್ಯೂ ಕಲೆಕ್ಷನ್ ಚೆನ್ನಾಗಿ ಇರುವುದರಿಂದ ಧೈರ್ಯವಾಗಿ ಮುಂದೆ ಹೋಗೋಣ. ಆಮೇಲೆ construction of integrated multi-purpose indoor stadium of international standard ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಇದಕ್ಕೆ ಎಲ್.ಆರ್.ಡಿ.ಇ. ಹತ್ತಿರ ನಮಗೆ ಜಾಗ ಸಿಕ್ಕಿದೆ. ಕ್ಷಮಿಸಿ. ಇದು ಸ್ಟೇಡಿಯಮ್‌ಗೆ. ಕಂಠೀರವ ಸ್ಟೇಡಿಯಂ ಹತ್ತಿರ ನಾವು ತೆಗೆದುಕೊಂಡು ಹೋಗುತ್ತೇವೆ. ಇಲ್ಲಿ ಒಂದು International Convention Hall ಮಾಡಬೇಕೆಂದು. of international standard ಅಂತ ಹೇಳಿ ಪರದೇಶಗಳಿಂದ ಇದಕ್ಕೆ ಬೇಕಾದ ಸಾಮಾನುಗಳನ್ನು ತರಿಸುತ್ತಿದ್ದೇವೆ. ಇದನ್ನೆಲ್ಲಾ ಮಾಡಬೇಕೆಂಬ ವಿಚಾರ ಕೂಡ ಇಟ್ಟುಕೊಂಡಿದ್ದೇವೆ. ಕರ್ನಾಟಕ ಸ್ಪೋರ್ಟ್ಸ್ ಕೌನ್ಸಿಲ್‌ಗೆ 1991-92ಕ್ಕೆ ಬರೇ 29 ಲಕ್ಷ ರೂಪಾಯಿ ಇತ್ತು. ಈ ಸಾರಿಗೆ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ನನಗೆ ತುಂಬಾ ಸಂತೋಷ. ಶ್ರೀ ಪ್ರಕಾಶ್ ಪಡುಕೋಣೆ ಅವರನ್ನು ಒತ್ತಾಯ ಮಾಡಿ ಇದರ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅವರೆಲ್ಲಾ ನ್ಯಾಶನಲ್, ಇಂಟರ್‌ನ್ಯಾಷನಲ್‌ಸ್ಟ್ಯಾಂಡರ್ಡ್‌ನವರು. ಆದರೆ. ಬಹಳ ಅಭಿಮಾನದಿಂದ ಒಪ್ಪಿಕೊಂಡಿದ್ದಾರೆ. ಶೆಟಲ್ ಬ್ಯಾಡಮಿಂಟನ್ ಅನ್ನು ನಾವು ಅವರು ಸೇರಿಕೊಂಡು ಆಡುತ್ತಿರುತ್ತೇವೆ. ಅವರು ಫಾರ್ಮರ್ ಆಲ್ ಇಂಗ್ಲೆಂಡ್ ಚಾಂಪಿಯನ್. ನಾವು ನೀವು ಎಲ್ಲಾ ಸ್ನಾಪುಟ್ಟ ಚಾಂಪಿಯನ್‌ಗಳು. ಅಂತೂ ಈ ರೀತಿ ಮಾಡಿಕೊಂಡು. ....

ಶ್ರೀ ಆರ್. ದಯಾನಂದರಾವ್ : ಲೆಜಿಸ್ಲೇಟರ್ಸ್‌ಗೆ ಒಂದು ಸ್ಟೇಡಿಯಂ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಇರುವ ಸ್ಟೇಡಿಯಂನಲ್ಲಿ ಬೆಳಿಗ್ಗೆ ಚೆನ್ನಾಗಿ ಓಡಿಕೊಂಡು ಬನ್ನಿ. ಆಮೇಲೆ ರೂರಲ್ ಸ್ಟೇಡಿಯಮ್‌ಗಳಿಗೆ 150 ಲಕ್ಷ ರೂಪಾಯಿ ಇಟ್ಟಿದ್ದೇವೆ. ಮತ್ತೊಂದು ಏನು ಮಾಡಿದ್ದೇವೆ ಎಂದರೆ. ಏಕಲವ್ಯ ಅವಾರ್ಡ್ ಅಂತ ಇಟ್ಟಿದ್ದೇವೆ. ಇಲ್ಲಿಯವರೆಗೆ ಅದು ಇರಲಿಲ್ಲ. ಅದು State level annual awards for outstanding sports persons ಗೆ. ಇದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮಹಾಭಾರತದಲ್ಲಿ ಬರುವ ಏಕಲವ್ಯನ ಹೆಸರನ್ನು ಇದಕ್ಕೆ ಇಟ್ಟಿದ್ದೇವೆ. ಅರ್ಜುನನಿಗೆ ದ್ರೋಣಾಚಾರ್ಯರು ಹೇಳಿಕೊಡುತ್ತಿದ್ದುದನ್ನು ಕದ್ದು ನೋಡಿ ಬೇಡರ ಹುಡುಗ ಕಲಿತುಕೊಂಡ. ಅದಕ್ಕೆ 'ಏಕಲವ್ಯ' ಅವಾರ್ಡ್ ಅಂತ ಇಟ್ಟಿದ್ದೇವೆ. ಟೂರಿಸಂ ಜೋಗ್ ಡೆವಲಪ್‌ಮೆಂಟ್ ಅಥಾರಿಟಿಗೆ ಒಂದು ಕೋಟಿ ಇಟ್ಟಿದ್ದೇವೆ. ಮುಂದಿನ ವರ್ಷವೂ ಇದೇ ರೀತಿ ಕೊಡುತ್ತೇವೆ. ಈಗಾಗಲೇ ಬೇರೆ ಬೇರೆ ಪ್ರೈವೇಟ್ ಏಜೆನ್ಸಿಯವರು ಬಂದಿದ್ದಾರೆ. ಅದನ್ನು ಉಪಯೋಗ ಮಾಡಬೇಕು. ನಾವು ವರ್ಕ್ ಸ್ಟಾರ್ಟ್ ಮಾಡುತ್ತೇವೆ. ಆಮೇಲೆ International Airport at Bangalore. ಮಾಡುವ ಬಗ್ಗೆ ಈಗಾಗಲೇ ಜಾಗದ ಪರೀಕ್ಷೆ ನಡೆಯುತ್ತಿದೆ. ಅದಾದಮೇಲೆ ನಮ್ಮ ವಿಶ್ವ ಪ್ರೋಗ್ರಾಮ್ ಮತ್ತೊಂದು ಬೆಳೆಯುವುದಕ್ಕೆ ಅನುಕೂಲವಾಗುತ್ತದೆಯೆಂಬ ಮಾತನ್ನು ಹೇಳುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಟೂರಿಸಂಗೆ ಶ್ರೀರಂಗಪಟ್ಟಣ ಡೆವಲಪ್‌ಮೆಂಟ್ ಅಥಾರಿಟಿ ಎಂದು ಒಂದು ಮಾಡಿ.

ಶ್ರೀ ಎಸ್. ಬಂಗಾರಪ್ಪ : ಜೋಗ್ ಟೂರಿಸಂಗೆ ಒಂದು ಕೋಟಿ ರೂಪಾಯಿ ಕೊಟ್ಟಿರುವುದು. ಬೇರೆಯದಕ್ಕೆ ಬಜೆಟ್ ಅಲೋಕೇಷನ್ ಕ್ವಾಂಟಿಟಿಫೈ ಮಾಡುವುದಕ್ಕೆ ಹೇಳಿದ್ದು ಅದನ್ನು ಡಿಪಾರ್ಟ್‌ಮೆಂಟ್ ವಿಷಯ ಬಂದಾಗ ಸ್ಪೆಲ್‌ಔಟ್ ಮಾಡುತ್ತೇವೆ. ಆಮೇಲೆ Karnataka Forest Environment Project with an outlay of Rs. 84 crores. ಮಾಡುಕೊಂಡಿದ್ದೇವೆ. ಕೊಡಗಿನಲ್ಲಿ Forest College at Kodagu ಇಲ್ಲಿ ಚಿನ್ನಪ್ಪ, ಬೆಳ್ಳಿಯಪ್ಪ, ಸುಮಾ ವಸಂತ ಅವರುಗಳು ಇದ್ದಾರೆ. ಅದಕ್ಕೆ ಎರಡು ಎಕರೆ ಮತ್ತು ಸ್ವಲ್ಪ ಹಣವನ್ನು ತೆಗೆದಿಟ್ಟಿದ್ದೇವೆ. ಈ ವರ್ಷ ಸ್ಟಾರ್ಟ್ ಮಾಡುತ್ತೇವೆ. ಆಮೇಲೆ 2 crores for distribution of seedlings-13 crores seedlings. 13 ಕೋಟಿ ಸೀಡಲಿಂಗ್ ನಾವು ಇಟ್ಟಿದ್ದೇವೆ. 1991-92ರಲ್ಲಿ ಇದಕ್ಕೆ 80 ಕೋಟಿ ಮಾತ್ರ ಇತ್ತು. ಇದು ಗಿಡಗಳನ್ನು ಬೆಳೆಸಬೇಕು ಎನ್ನತಕ್ಕಂಥ ವಿಚಾರ.

ಶ್ರೀ ಎ. ಸಗೀರ್ ಅಹಮದ್ : ಕರ್ನಾಟಕ ರಾಜ್ಯಕ್ಕೆ ಒಂದು ಉತ್ತಮವಾದ ಭದ್ರಾ ವೈಲ್ಡ್ ಲೈಫ್ ಸೆಂಕ್ಚುರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವಂಥಾದ್ದು. ಅದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕಿತ್ತು.

ಶ್ರೀ ಎಸ್. ಬಂಗಾರಪ್ಪ : ಇದರ ಬಗ್ಗೆ ಡಿಮ್ಯಾಂಡ್ ಬಂದಾಗ ಹೇಳಿಸುತ್ತೇನೆ. ಅದನ್ನು ಆವಾಗ ಇಡಿ. ನೀವು ಅವಾಗ ಮಾತನಾಡಬೇಕು. ಇದಲ್ಲದೆ ಫಾರೆಸ್ಟ್ ಉಳಿಸುವುದಕ್ಕೆ ಒಂದು 'ಅನಿಲ' ಎನ್ನುವ ಹೆಸರಿನಲ್ಲಿ ಯೋಜನೆಯನ್ನು ಹೊಸದಾಗಿ ತಯಾರು ಮಾಡಿದ್ದೇವೆ. ಇದು ಗೋಬರ್ ಗ್ಯಾಸ್ ಪ್ಲಾಂಟ್ಸ್. ಇವತ್ತು ಅರಣ್ಯ ಕಡಿದು ಕಡಿದು ಹಾಳಾಗಿ ಹೋಗುತ್ತಿದೆ. ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಇವೆಯಲ್ಲ, ಅದರದ್ದು ಸಬ್ಸಿಡಿ ಇದೆ. ನಾವು 1991-92ಕ್ಕೆ 4.65 ಕೋಟಿ ಇಟ್ಟಿದ್ದೆವು. ಈ ಸಾರಿ 8 ಕೋಟಿ ತೆಗೆದಿಟ್ಟಿದ್ದೇವೆ. ಇದರ ಉದ್ದೇಶ ಏನೆಂದರೆ ಫಾರೆಸ್ಟನ್ನು ಉಳಿಸಿಕೊಳ್ಳಬೇಕು ಎನ್ನತಕ್ಕದ್ದು. ಅದರ ಹೆಸರೇ 'ಅನಿಲ' ಎಂದು.

"ಅನಿಲ" ಎಂದು ಹೆಸರು ಇಟ್ಟಿದ್ದೇವೆ. ತಾವು ಹೆಸರನ್ನು ನೆನಪಿಟ್ಟುಕೊಳ್ಳಬೇಕು. ಹೇಗೆ ಬೇಕೋ ಹಾಗೆ ಭಾಷಣ ಮಾಡುವಹಾಗಿಲ್ಲ. ಆಮೇಲೆ ಮೀನುಗಾರಿಕೆ ಬಗ್ಗೆ. ಮಾನ್ಯ ಬೆಳ್ಳಿಯಪ್ಪನವರ ಖಾತೆ ಮತ್ತು ಸೌತ್ ಕೆನರಾ ಭಾಗದ ಬಹಳ ಜನ ಮಿತ್ರರು ಹೇಳಿದ್ದಾರೆ. Aquaculture on par with agriculture ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. Leasing policy to lease brackish water land to scheduled castes and scheduled tribes to be brought under prawn farming. Fishing rights in major reservoir and irrigation tanks to be auctioned. ಇನ್ನು Allocation for fisheries increased. ಈ ಸಾರಿ 19 ಕೋಟಿ 46 ಲಕ್ಷ ರೂಪಾಯಿ. ಹತ್ತಿರ, ಹತ್ತಿರ 20 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಮೀನುಗಾರಿಕೆಗೆ ಕಳೆದ ಸಾರಿ 8 ಕೋಟಿ ರೂಪಾಯಿ ಮಾತ್ರ ಇಟ್ಟಿದ್ದವು. ಈ ಸಾರಿ ಆ 8 ಕೋಟಿಯಿಂದ 20 ಕೋಟಿಗೆ ತೆಗೆದುಕೊಂಡು ಹೋಗಿದ್ದೇವೆ, ಅಂದರೆ 12 ಕೋಟಿಯನ್ನು ಜಾಸ್ತಿ ಮಾಡಿದ್ದೇವೆ. ಅಂದರೆ, ಅವರಿಗೆ ಬೇಕಾದ ಪರ್ಷಿಯನ್ ದೋಣಿ, ಬಲೆಗಳು ಇತ್ಯಾದಿ ಇತ್ಯಾದಿಗಳ ಖರ್ಚು ಇದರಲ್ಲಿ ಬರುತ್ತದೆ. ಇನ್ನು ಕನ್ನಡ ಸಂಸ್ಕೃತಿ ಬಗ್ಗೆ "ಕರ್ನಾಟಕ ದರ್ಶನ ಸಂಸ್ಥೆ" ಎಂದು ಮಾಡಿ, ಬೆಂಗಳೂರು ಯೂನಿವರ್ಸಿಟಿ ಹತ್ತಿರ 50 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿಗೆ ಒಬ್ಬ ವ್ಯಕ್ತಿ ಹೋದರೆ, ಅವರಿಗೆ ಇಡೀ

ಕರ್ನಾಟಕದ ದರ್ಶನ ಸಿಗಬೇಕು. ಎಲ್ಲಾ ವಿವರಗಳೂ ಸಿಗಬೇಕು. It is a unique programme. ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮತ್ತೆ ಬೇಕಾದರೆ, ಕೊಡೋಣ ಎನ್ನತಕ್ಕಂಥ ಉದ್ದೇಶ ಇಟ್ಟಿದ್ದೇವೆ. ಕನ್ನಡ ಬುಕ್ ಡೆವಲಪ್‌ಮೆಂಟ್ ಅಥಾರಿಟಿಗೆ 25 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. University fine arts and culture ಲಲಿತ ಕಲೆಗಳು. ಮೈಸೂರಿನಲ್ಲಿ ಕಾವ್ಯ ಎಂದು ಇದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆ, ಬಿಲ್ಡಿಂಗ್ ಇದೆ, ಜಾಗ ಇದೆ, ಎಲ್ಲವೂ ರೆಡಿ ಇರುವುದರಿಂದ, ಖರ್ಚು ಹೆಚ್ಚು ಬರುವುದಿಲ್ಲವೆಂದು ಹೇಳಿ, ಇದಕ್ಕೆ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಈ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡಬೇಕು, ಅಲ್ಲಿ ರೀಸರ್ಚ್ ಇರಬೇಕೆಂಬ/ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಇಲ್ಲಿ ಏನಾಗಿದೆ ಎಂದು ಹೇಳಿದರೆ, ಕಡೆಯಲ್ಲಿರತಕ್ಕಂಥವರಿಗೆ ಜಾನಪದ ಕಲೆ. ಮತ್ತೊಂದು ಕಲೆ ಯಾವುದೋ ಒಬ್ಬ ವ್ಯಕ್ತಿಯ ಹತ್ತಿರ ಇರುತ್ತದೆ. ಅವರು ಸತ್ತರೆ, ಅವರ ಜೊತೆಯಲ್ಲಿ ಈ ಕಲೆಯೂ ಸತ್ತು ಹೋಗುತ್ತದೆ. ಇದನ್ನು ಏನಾದರೂ ಮಾಡಿ ಉಳಿಸಬೇಕೆಂಬ ದೃಷ್ಟಿಯಿಂದ. ಇದಕ್ಕೆ ಬರೀ ಅಕಾಡೆಮಿ ಮಾಡಿದರೆ ಆಗುವುದಿಲ್ಲವೆಂದು, ಇದಕ್ಕೆ ಯೂನಿವರ್ಸಿಟಿ ಇರಬೇಕು. ರೀಸರ್ಚ್ ಇರಬೇಕು ಮತ್ತು ಗ್ರೋತ್‌ಗೆ ಅವಕಾಶ ಇರುವುದಕ್ಕೆ ಯೂನಿವರ್ಸಿಟಿ ಮಾಡಬೇಕೆಂದು ಮಾಡಿದ್ದೇವೆ. ದೇಶದಲ್ಲಿ ಈ ರೀತಿ ಯಾರಾದರೂ ಮಾಡಿದ್ದಾರೋ ಇಲ್ಲವೋ ನನಗಂತೂ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ, I think we are going to the first. Our University will be the first of its type in the whole country. ಆಮೇಲೆ ಕಿತ್ತೂರು ಡೆವಲಪ್‌ಮೆಂಟ್ ಪ್ರಾಜೆಕ್ಟ್, ಕಿತ್ತೂರು ರಾಣಿ ಚನ್ನಮ್ಮ ಧೀಮಂತ ಮಹಿಳೆ, ಬ್ರಿಟೀಷರ ವಿರುದ್ಧ ಹೋರಾಟ ಮಾಡಿ, ಅಪ್ರತಿಮ ಸಾಹಸ ಪ್ರದರ್ಶನ ಮಾಡಿರತಕ್ಕಂಥ ವೀರ ಮಹಿಳೆ. ಇದಕ್ಕೆ ಅನೇಕ ಕಾರ್ಯಕ್ರಮ ಮಾಡಿದ್ದೇವೆ. ಇದಕ್ಕೆ ಕಮಿಟಿ ಆಗಿದೆ, ಆ ಕಮಿಟಿಗೆ ನಾನೇ ಅಧ್ಯಕ್ಷ, ನಾನೇ ಅಧ್ಯಕ್ಷ, ನಾನೂ ಕೂಡ ಅಲ್ಲಿ ಹೋಗಿ ಬಂದಿದ್ದೇನೆ ಈಗ್ಗೆ 2 ತಿಂಗಳ ಹಿಂದೆ ಸಮಿತಿ ಸಭೆಯನ್ನೂ ಮಾಡಿ ಬಂದಿದ್ದೇನೆ. ಅಲ್ಲಿ ಭಾರಿ ಜನ, ಸುಮಾರು 70-75 ಸಾವಿರ ಜನ ಸೇರಿತ್ತು. ಇದಕ್ಕಾಗಿ ಎಂದಲ್ಲ, ಬೇರೆ ಬೇರೆ ವಿಚಾರ ಕೂಡ ಎಂದು ಹೇಳಿದ್ದೇನೆ. ಇದಕ್ಕೆ 6 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ. ರೋಡ್‌ವರ್ಕ್ ಪ್ರಾರಂಭವಾಗಿದೆ. ನಾವು ಒಂದುಸಾರಿ ಕಾರ್ಯಕ್ರಮ ಹಾಕಿದಮೇಲೆ ಬಿಡುವ ಹಾಗಿಲ್ಲ. ಒಂದು ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಮಾಡಿಕೊಂಡು ಬಂದಿದ್ದೇವೆ. ಇನ್ನು ಉಳಿದಿರತಕ್ಕಂಥ ಹಣವನ್ನೂ ಕೊಡುತ್ತಾ ಹೋಗುತ್ತೇವೆ. ಇದು ಬ್ರಿಟೀಷರ ವಿರುದ್ಧ ಹೋರಾಟ ಮಾಡಿರತಕ್ಕಂಥ ಕಿತ್ತೂರು ರಾಣಿ ಚೆನ್ನಮ್ಮನವರಿಗೆ ಕೊಡತಕ್ಕ ಗೌರವ. ನಾವು ಟಿಪ್ಪೂಸುಲ್ತಾನ್ ಅವರಿಗೆ ಯಾವ ರೀತಿಯ ಗೌರವ ಕೊಡುತ್ತೇವೆಯೋ ಅದೇ ರೀತಿಯ ಗೌರವವನ್ನು ಇಲ್ಲಿಯೂ ಕೊಡುತ್ತಿದ್ದೇವೆ. ಇದರಲ್ಲಿ ಆದಷ್ಟು ಲೈಟ್ ಅಂಡ್ ಸೌಂಡ್ ವ್ಯವಸ್ಥೆಯನ್ನೂ ಮಾಡುತ್ತೇವೆ. ದೆಹಲಿಯ ಕೆಂಪುಕೋಟೆಯಲ್ಲಿ ಮೊಗಲ್ ಚಕ್ರವರ್ತಿ ಬಗ್ಗೆ ಯಾವ ರೀತಿ ಮಾಡಿದ್ದಾರೆಯೋ ಅದೇ ರೀತಿ ಮಾಡಬೇಕೆಂದು ರೀಸರ್ಚ್ ಮಾಡಿ, ಕೆಲಸ ಪ್ರಾರಂಭ ಮಾಡಲಾಗಿದೆ. ಇದಕ್ಕೆ ಒಟ್ಟು 6 ಕೋಟಿ ಹಣವನ್ನು. ...

ಶ್ರೀಮತಿ ದಮಯಂತಿ ಬೋರೇಗೌಡ : ಕಿತ್ತೂರು ರಾಣಿ ಚನ್ನಮ್ಮ ಪ್ರಾಜೆಕ್ಟ್ ತರಹ ಶ್ರೀರಂಗಪಟ್ಟಣದಲ್ಲೂ ಒಂದು ಪ್ರಾಜೆಕ್ಟ್ ಮಾಡಬೇಕು. ಅಲ್ಲಿ ಏನೇನೂ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ನಾನು ಇದರ ಬಗ್ಗೆ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ಲೈಟ್ ಅಂಡ್ ಸೌಂಡ್ ಷೋ ಅಡಿಯಾಗಿ ಮಾಡೋಣ. ಏಕೆಂದರೆ, he was a great warrior who

fought against the British regime, British rule and British Army. Thank you very much ತಾವು ನೆನಪು ಮಾಡಿರುವುದಕ್ಕಾಗಿ ವಂದನೆಗಳು. ಆಮೇಲೆ, cultural effects at ಚಿತ್ರದುರ್ಗ, ಪಟ್ಟದಕಲ್ಲು, ಸವರಪುರ, ಹಂಪೆ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಕೂಡ, ಮಾನ್ಯ ಶಿವಮೂರ್ತಿಯವರ ಇಲಾಖೆ ಮುಖಾಂತರ ಕಾರ್ಯಕ್ರಮ ಹಾಕುತ್ತೇವೆ. ಪಟ್ಟದಕಲ್ಲು ಇತ್ಯಾದಿಗಳಲ್ಲಿ ಬಹಳ ಒಳ್ಳೆಯ ರೀತಿಯ ಕಲೆ ಇದೆ ಎಂಬುದನ್ನು ಭಾರಿ ಜನ ಸೇರಿ ನೋಡಿದ್ದಾರೆ ಮತ್ತು ಮೆಚ್ಚುಗೆಯನ್ನೂ ವ್ಯಕ್ತಮಾಡಿದ್ದಾರೆ. ಈ ಕಾರ್ಯಕ್ರಮಕ್ಕೆ ಮುಂದಿನ ವರ್ಷ ಜಾಸ್ತಿ ಮಾಡುತ್ತಾ ಹೋಗುತ್ತೇವೆ, ಬಜೆಟ್ ಪ್ರಾವಿಷನ್ ಕೂಡ ಜಾಸ್ತಿಯಾಗುತ್ತಾ ಹೋಗುತ್ತದೆ. Formation of a Trust and Foundation to develop the birth place of ಬೇಂದ್ರೆ, ಕುವೆಂಪು, ಪು.ತಿ. ನರಸಿಂಹಾಚಾರ್-ಎಲ್ಲಾ ಸೇರಿ 70 ಲಕ್ಷ ಹಣವನ್ನು ಇಟ್ಟಿದ್ದೇವೆ. ಗುಬ್ಬಿ ವೀರಣ್ಣ ಆನ್ಯುಯಲ್ ಅವಾರ್ಡ್ for overall ಇದಕ್ಕಾಗಿ ಒಂದು ಲಕ್ಷ ರೂಪಾಯಿ ಪ್ರೈಸ್ ಇಟ್ಟು, ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಹೊಸದಾಗಿ ಇಂಟ್ರಡ್ಯೂಸ್ ಮಾಡಿರುತ್ತೇವೆ. Apart from ಪುಟ್ಟಣ್ಣ ಕಣಗಾಲ್; ಇದು ನಿರ್ದೇಶಕರಿಗೆ ಇರಬೇಕೋ ಏನು ಎಂದು ಜಗಳ ತೆಗೆದುಕೊಂಡು ಕುಳಿತುಕೊಂಡಿದ್ದರು. ನಾನೇ ಹೋಗಿ ರಿಪೇರಿ ಮಾಡಿದೆ. ಅದನ್ನು ನಿರ್ದೇಶಕರಿಗೇ ಕೊಡಿ, ಇದನ್ನು ಬೆಸ್ಟ್ ಆಕ್ಟರ್ ಮತ್ತೊಂದು ಯಾವ ಯಾವುದಕ್ಕಾದರೂ ಕೊಟ್ಟುಕೊಳ್ಳಲಿ, ಒಟ್ಟು ಒಂದು ಲಕ್ಷ ರೂಪಾಯಿ ಇಟ್ಟು ಮತ್ತೊಂದು ಅವಾರ್ಡ್ ನಾವು ಇಂಡ್ರಡ್ಯೂಸ್ ಮಾಡಿರುತ್ತೇವೆ. ಆಮೇಲೆ Single Window Agency for giving permission for cinema shooting within the State. ಅಲ್ಲಿ ಏನಾಗಿದೆ, ಲಂಚ ಜಾಸ್ತಿ ಮತ್ತೊಂದು ಜಾಸ್ತಿ ತಿರುಗಿ ತಿರುಗಿ ಸಾಕಾಗಿ ಹೋಗುತ್ತದೆ ಎಂದರು. Single ವಿಂಡೋ ಏಜೆನ್ಸಿ ಒಂದು ಕಡೆ ಹಣ ಕಟ್ಟಿ ಬಿಟ್ಟು ಅವರಿಗೆ ಪರ್ಮಿಷನ್ ಸಿಕ್ಕಿದರೆ ಸಾಕು, 28 ಕಡೆ ಹೋಗುವಹಾಗೆ ಇಲ್ಲ. ಅದೇ ರೀತಿ ಡ್ರಾಮಾ ಕಂಪೆನಿಗಳ ಬಗ್ಗೆ ಕೂಡಾ ನಾವು ವಿಚಾರ ಮಾಡಿದ್ದೇವೆ. ಅದಕ್ಕಾಗಿ 25 ಲಕ್ಷ ರೂಪಾಯಿ ತೆಗೆದಿಟ್ಟಿದ್ದೇವೆ. ಇನ್ನು ಕೊನೇ ಒಂದು ಸಬ್ಜೆಕ್ಟ್ ಮಾತನಾಡಿ ನನ್ನ ಮಾತನ್ನು ಮುಗಿಸಬಹುದೆಂದು ನನ್ನ ಅನಿಸಿಕೆ. ಮಾನ್ಯ ಸಭಾಧ್ಯಕ್ಷಣಿಯವರೇ, ಎಂಟ್ರಿ ಟ್ಯಾಕ್ಸ್, ಇದು ಬಹಳ ದೊಡ್ಡ ವಿಚಾರ ಅಲ್ಲ. ಸ್ಥಳೀಯ ಸಂಸ್ಥೆಗಳು ಹಣ ಇಲ್ಲದೆ ಕೊರಗಿ ಕೊರಗಿ ನಶಿಸಿ ಹೋಗತಕ್ಕಂಥ ಕಾಲ. ಆಕ್ಟ್ರಾಯ್ ತರಬೇಕೆಂದರೆ ವಿರೋಧ ಬಂತು. 1979 ರಲ್ಲಿ ಆಕ್ಟ್ರಾಯ್ ತೆಗೆದುಹಾಕಿದರು. ಆದರೆ ಮಹಾರಾಷ್ಟ್ರದವರು ಮತ್ತೊಂದು ರಾಜ್ಯದವರು ತೆಗೆದು ಹಾಕಲಿಲ್ಲ. ಅವರು ಹಾಗೇ ಇಟ್ಟುಕೊಂಡುಬಿಟ್ಟರು. ಇಲ್ಲಿ ನೋಡಿದರೆ ಹಣ ಇಲ್ಲ. ಈಗಿರತಕ್ಕಂಥಾದ್ದು 7-8 ಐಟಮ್ಸ್ ಮೇಲೆ ಮಾತ್ರ ಎಂಟ್ರಿ ಟ್ಯಾಕ್ಸ್ ನಾವು ಇಟ್ಟುಕೊಂಡಿದ್ದೇವೆ. ನಮಗೆ ಇದರಿಂದ ಎಷ್ಟು ಹಣ ಬರುತ್ತದೆ ಎಂದರೆ 89-90ರಲ್ಲಿ 56.91 ಕೋಟಿ ಎಂದರೆ 57 ಕೋಟಿ ಬಂದಿದೆ. 90-91 ರಲ್ಲಿ 71 ಕೋಟಿ ಬಂದಿದೆ. 91-92 ಅಂದರೆ ಈ ವರ್ಷ 72 ಕೋಟಿ ಬಂದಿದೆ. ಯಾವ ಮೂಲೆಗೆ ಆಗಬೇಕು? ಕುಡಿಯುವ ನೀರು ಏನು? ಮನೆ ಏನು? ಸೈಟ್ ಏನು? ರೋಡ್ಸ್ ಏನು? ಲೈಟ್ಸ್ ಏನು? ಒಂದೊಂದಕ್ಕೂ ಒಂದೊಂದು ಮೂಲೆಗೂ ಸಾಕಾಗುವುದಿಲ್ಲ. ಅವರು ಹಣ ಇಲ್ಲ ಎಂದು ಬಂದು ಕೇಳುತ್ತಾ ಬಾಗಿಲಲ್ಲಿ ನಿಂತುಕೊಳ್ಳುವುದು. ಇದೆಲ್ಲಾ ಉಪಯೋಗ ಇಲ್ಲ, ಅದಕ್ಕೆ ನಾವು ಏನು ಮಾಡುತ್ತಿದ್ದೇವೆ ಎಂದರೆ at one point of time we took a decision to re-introduce the system of octroi because we were left with no alternative but to re-introduce again the same thing. ನಮ್ಮ ಲಕ್‌ಗೆ ಏನಾಯಿತು ಎಂದರೆ, ಬಿಸಿನೆಸ್ ಕ್ಲಾಸ್‌ನವರು ಆಕ್ಟ್ರಾಯ್ ಬೇಡ ಎಂದು ವಿರೋಧ ಮಾಡುತ್ತಿದ್ದರು. ಹಾಗೆ ಹೀಗೆ ಎಂದು ಹೇಳುತ್ತಿದ್ದರು, ಫಾರ್ ಎಗೆನೆಸ್ಟ್ ಎರಡೂ ಇತ್ತು, ಇಲ್ಲ

ಎಂದು ನಾನು ಹೇಳುವುದಿಲ್ಲ. ಎಂಟ್ರಿ ಟ್ಯಾಕ್ಸ್ ಆಕ್ಟ್‌ಪ್ರಕಾರ 103 ಐಟಮ್ಸ್ ಮೇಲೆ ಎಂಟ್ರಿ ಟ್ಯಾಕ್ಸ್ ಹಾಕಬೇಕೆಂದು ಹಿಂದೆನೇ ಮಾಡಿ ಜನತಾ ಸರಕಾರ ಇದ್ದಾಗ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದರು, ಅದು ಅಲ್ಲೇ ಬಿದ್ದಿತ್ತು, ನಮ್ಮ ಲಕ್‌ಗೆ ಅದನ್ನು ಕೇಂದ್ರದವರು ಮೊನ್ನೆ ಮೊನ್ನೆ ಅಪ್ರೂವ್ ಮಾಡಿ ಕಳುಹಿಸಿಕೊಟ್ಟರು. ಅದು ಬಂದುಬಿಟ್ಟಿದೆ. ಅದಕ್ಕಾಗಿ ಬಜೆಟ್ ಭಾಷಣದಲ್ಲಿ ಅದನ್ನು ಹಾಕುವುದಕ್ಕೆ ಸಾಧ್ಯವಾಯಿತು. ಈಗ ಸುಮಾರು 103 ಐಟಮ್ಸ್ ಮೇಲೆ ಅಪ್ರೂವ್ ಆಗಿ ಬಂದಿದೆ. ಭಾಷಣ ಮಾಡಬೇಕಾದರೆ ಮಾನ್ಯ ಸದಸ್ಯರು ಹೇಳಿದರು, ನೀವು ಎಲ್ಲಾ 103 ಮೇಲೂ ಹಾಕುತ್ತೀರಾ ಎಂದು. ಅಪ್ ಟು ಫೈವ್ ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ನಾವು ಈ ಗೂಡ್ಸ್ ಮೇಲೆ ಹಾಕಿಕೊಳ್ಳಬಹುದು. ಈಗಿರತಕ್ಕಂಥಾದ್ದು ಕೆಲವು ಎರಡು ಪರ್ಸೆಂಟ್ ಇದೆ, ಕೆಲವಕ್ಕೆ ಒಂದು ಪರ್ಸೆಂಟ್ ಇದೆ, Textiles, sugar, tobacco, industrial machines, accessories, industrial gases other than LPG, petroleum products, packaging materials, raw materials, imports used in manufacture of intermediate or finished products, ಒಟ್ಟು ಎಂಟು ಐಟಂಸ್ ಈಗಿರತಕ್ಕಂಥಾದ್ದು Entry tax is now collected at the rate of 2% on all the above commodities except levy sugar which is taxed at 1%. ಲೆವಿ ಶುಗರ್ ಬಂದರೆ ಒಂದು ಪರ್ಸೆಂಟ್ ಇದೆ, ಉಳಿದುದು ಎರಡು ಪರ್ಸೆಂಟ್ ಮೇಲೆ ಹಾಕಿಲ್ಲ; ಈಗಿನದು. ಮುಂದೆ 103 ಐಟಮ್ಸ್ ಏನು ಇದ್ದಾವಲ್ಲ. ಅದರ ಮೇಲೆ ಎಷ್ಟು ಹಾಕಬಹುದು ಎಂಬುದು ಮತ್ತು ಯಾವ ಯಾವ ಐಟಮ್ ಮೇಲೆ ಹಾಕಬಹುದು ಎಂಬುದು. ಎಲ್ಲಾ 103 ಐಟಮ್ ಮೇಲೂ ನೀವು ಜಾರಿಗೆ ಕೊಡುತ್ತೀರಾ ಎಂದು ಕೇಳಿದರು. ನಾನು ಈ ಸದನದ ಮುಖಾಂತರ ಒಂದು ಆಶ್ವಾಸನೆ ಕೊಡುತ್ತೇನೆ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥಾದ್ದು ಲಾಸ್ಟ್ ಪಾಯಿಂಟ್, ಎಂಟ್ರಿಟ್ಯಾಕ್ಸ್ ಆನ್ ಗೂಡ್ಸ್, ಈಗ ಅತೀ ಬಡವರು, ಕಡುಬಡವರು ಮತ್ತೊಂದು ಉದ್ಯೋಗ ಮಾಡತಕ್ಕಂಥ ವಸ್ತುಗಳು ಏನಿದ್ದಾವೆ, ಅವರ ಮೇಲೆ ಟ್ಯಾಕ್ಸ್ ಹಾಕಿ ನಾವು ಬರ್ಡನ್ ಮಾಡುವುದಕ್ಕೆ ತಯಾರಾಗಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾದಿಂದ ಅಪ್ರೂವ್ ಆಗಿ ಬಂದಿದೆ ಹಾಕೋಣ ಎಂದು ಹೇಳಿ, ತೆಗೆದುಕೊಂಡು ಹೋಗಿ ಬಡವರು ಉಪಯೋಗ ಮಾಡತಕ್ಕಂಥ ವಸ್ತುಗಳು ಏನಿದ್ದಾವೆ ಆ ವಸ್ತುಗಳ ಮೇಲೆ ಹಾಕತಕ್ಕಂಥ ಆಸೆ ಸರಕಾರಕ್ಕೆ ಇಲ್ಲ. ಜೊತೆಗೆ ಸಿಕಾಬಟ್ಟೆ ತೆಗೆದುಕೊಂಡು ಹೋಗಿ ಅಪ್ ಟು ಫೈವ್ ಪರ್ಸೆಂಟ್ ಹಾಕಬೇಕೆಂದು ನಾನು ಹೇಳುವುದಿಲ್ಲ.

ಬಡವರು ಉಪಯೋಗ ಮಾಡತಕ್ಕಂಥ ವಸ್ತುಗಳು ಏನಿದ್ದಾವೆ ಅವುಗಳ ಮೇಲೆ ಹಾಕಬೇಕು ಎನ್ನತಕ್ಕಂಥ ಆಸೆ ಸರ್ಕಾರಕ್ಕೆ ಇಲ್ಲ. ಜೊತೆಗೆ ಸಿಕ್ಕಾಪಟ್ಟೆ ತೆಗೆದುಕೊಂಡು ಹೋಗಿ ಅಫ್ ಟು 5 ಪರ್ಸೆಂಟ್ ಹಾಕಬೇಕೆಂದೇನೂ ನಾನು ಹೇಳುವುದಿಲ್ಲ. ನಾನು ಇಷ್ಟು ಮಾತ್ರ ಹೇಳಬಲ್ಲೆ. ಜನರು ಎಷ್ಟು ಟ್ಯಾಕ್ಸನ್ನು ತಡೆದುಕೊಳ್ಳಬಲ್ಲರು ಎನ್ನತಕ್ಕಂಥಾದ್ದು ಕೂಡ ನನಗೆಲ್ಲಾ ಗೊತ್ತಿದೆ. Because our Karnataka is one of the heavily taxed States in the whole of the country. ನಾವು ತೆಗೆದುಕೊಂಡು ಮತ್ತೆ ಅಡಿಷನಲ್ ಟ್ಯಾಕ್ಸ್ ಹಾಕುವುದರಲ್ಲಿ ಏನೂ ಕೂಡ ಅರ್ಥವಿಲ್ಲ. That is why we have notlevied more tax. ಕೆಲವರು ಹೇಳುತ್ತಿದ್ದರು. ಬ್ರೆಡ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಮತ್ತೊಂದರ ಮೇಲೆ ಹಾಕಿದ್ದೀರಿ. ಟೈಲ್ಸ್ ಮೇಲೆ ಹಾಕಿದ್ದೀರಿ ಎಂದು ಭಾಷಣ ಮಾಡಿದ್ದಾರೆ. ಅದು ಬರಲಿ ಬಂದಾಗ ನಾನು ಮಾತನಾಡುತ್ತೇನೆ. ಉದಾಹರಣೆಗೆ ಟೈಲ್ಸ್ ಎಂದ ತಕ್ಷಣ ಆ ಪದದ ಅರ್ಥ ನಮಸೆಮೋನೆ ಬರುತ್ತದೆ. ಮಂಗಳೂರು ಹೆಂಚಿನ ಮನೆ ಅದನ್ನು ಎಲ್ಲಾ ಜನಸಾಮಾನ್ಯರು ಉಪಯೋಗ ಮಾಡುತ್ತಾರೆ. ನಾವು ಅದರ ಮೇಲೆ ಟ್ಯಾಕ್ಸ್ ಹಾಕಬೇಕೆಂದು ಅದರ

ಅರ್ಥವಲ್ಲ. ಟೈಲ್ಸ್ ಅಂದರೆ ನಮ್ಮ ಶರಾಮಿಕ್, ಸೋಗಲ್ ಹಾಕುತ್ತಾರೆ. ನೆಲಕ್ಕೆ ಹಾಕುತ್ತಾರೆ. ಆಮೇಲೆ ಮೇಲೆ ಹಾಕುತ್ತಾರೆ. ವೇಸ್ಟ್ ಟೈಲ್ಸ್ ಇತ್ಯಾದಿ ಅದಕ್ಕೆ ನಾನು ಹೇಳುವುದು ಟೈಲ್ಸ್ ಮೇಲೆ ಹಾಕಿದ್ದಾರೆ. ಅಂದರೆ ಬಡವರ ಮೇಲೆ ಹಾಕಿದ್ದೀರಿ ಎಂದು ಭಾಷಣ ಮಾಡಿದ್ದೇ ಮಾಡಿದ್ದು. ಬಡವರ ಮೇಲೆ ಟ್ಯಾಕ್ಸ್ ಹಾಕುವಷ್ಟು ದಡ್ಡರು ನಾವಲ್ಲ. ಬಡವರು ಉಪಯೋಗ ಮಾಡತಕ್ಕಂಥ ಹೆಂಚಿನ ಮೇಲೆ ನಾವು ತೆರಿಗೆಯನ್ನು ಹಾಕುವುದಿಲ್ಲ. ಯಾರು ಶಕ್ತಿವಂತರು ಇದ್ದಾರೆ ಬರೀ ಟೈಲ್ಸ್ ಉಪಯೋಗ ಮಾಡುತ್ತಾರೆ ನಾವು ಇದನ್ನು ಸೇಲ್ಸ್ ಟ್ಯಾಕ್ಸ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡತಕ್ಕಂಥ ಕಾಲ ತಮ್ಮ ಮುಂದೆ ಬರುತ್ತದೆ. ಇದೇ ಸದನದಲ್ಲಿ ಬರುತ್ತದೆ ಈಗಲೇ ಈ ಅಧಿವೇಶನದಲ್ಲೇ ನಾವು ಸ್ಪೆಸಿಫೈ ಮಾಡಿ ಹಾಕುತ್ತೇವೆ. ಅದರಲ್ಲಿದ್ದರೆ ಬರುತ್ತದೆ ಇಲ್ಲದಿದ್ದರೆ ಇಲ್ಲ. ಅದೇ ರೀತಿಯಾಗಿ ನಾವು ಬ್ರೆಡ್ ಮೇಲೂ ಕೂಡ ಅಷ್ಟೆ. ನಾವು ಕೆಲವು ಬ್ರೆಡ್ ಬ್ರ್ಯಾಂಡೆಡ್ ಬ್ರೆಡ್ಸ್ ಅಂತ ನಾವು ಹಾಕಿದ್ದೇವೆ. ಬ್ರೆಡ್ ಅಂದ ತಕ್ಷಣ ಐಯ್ಯಂಗಾರಿ ಬ್ರೆಡ್ ಅಂತ ಅಲ್ಲ. ಸರಿಯಾಗಿ ತಿಳಿದುಕೊಳ್ಳುವುದಿಲ್ಲ ಎಂತಾದ್ದೂ ಇಲ್ಲ, ನೀಲಗಿರೀಸ್ ಬ್ರೆಡ್ ಬ್ರಿಗೇಡ್ ರೋಡ್ ನೀಲಗಿರಿ ಅಂತ ಅಂಗಡಿಗೆ ಬ್ರಿಗೇಡ್ ರಸ್ತೆಯಲ್ಲಿರುವುದು ಅಂತಹ ಅಂಗಡಿಗೆ ಯಾರೂ ಕಡುಬಡವರು ಹೋಗಿ ಅಲ್ಲಿ ಬ್ರೆಡ್ ಕೊಳ್ಳುವುದಿಲ್ಲ. ಇಲ್ಲಿ ಭಾಷಣ ಮಾಡಿದ್ದಾರೆ ಇವರೆಲ್ಲಾ. ನೀಲಗಿರಿ ಅಂಗಡಿಗೆ ಹೋಗತಕ್ಕಂಥವರು, ಅಲ್ಲಿ ಹೈ ರೇಟ್ ಬೇರೆ ಕ್ವಾಲಿಟಿ ಇತ್ಯಾದಿ ನೋಡಿ ಹಣ ಜಾಸ್ತಿ ಕೊಡುವವರು ಅಲ್ಲಿ ನೀಲಗಿರಿ ನೀಲಗಿರಿ ಬ್ರೆಡ್ ಕೊಳ್ಳುತ್ತಾರೆಯೇ ವಿನಃ ಅದು ಐಯ್ಯಂಗಾರಿ ಬೇಕರಿಯಲ್ಲಿ ಬ್ರೆಡ್ ಕೊಳ್ಳುವವರು ನೀಲಗಿರೀಸ್ ಕಡೆ ಮುಖ ಕೂಡ ಹಾಕುವುದಿಲ್ಲ. ಅದಕ್ಕೆ ಹೈ ರೇಟ್ ಇವೆಲ್ಲಾ ಹೈ ಕ್ವಾಲಿಟಿ. ಇರುತ್ತದೆ ಅಲ್ಲಿಗೆ ಸೋ ಕಾಲ್ಡ್ ಜನ. ಪಾಸ್ಟ್ ಲೋಕ್ವಾಲಿಟಿ ಜನ ಅಲ್ಲಿಗೆ ಹೋಗುತ್ತಾರೆ. ನಾನು ನೋಡಿದ್ದೇನೆ. ನಾನು ಮುಖ್ಯಮಂತ್ರಿಯಾಗುವುದಕ್ಕಿಂತ ಮುಂಚಿತವಾಗಿ ಮುಖ್ಯಮಂತ್ರಿಯಾದ ಮೇಲೆ ಅಲ್ಲ. ಅದಕ್ಕಾಗಿ ನಾನು ಹೇಳುವುದು ಬೇರೆ ಆಸ್ಪತ್ರೆಗಳ ಬ್ರೆಡ್ ಮತ್ತೊಂದು ನಾವು ಸಪ್ಲೈ ಮಾಡತಕ್ಕಂಥ ಬ್ರೆಡ್ ಜನಸಾಮಾನ್ಯರು ಉಪಯೋಗ ಮಾಡತಕ್ಕಂಥ ಬ್ರೆಡ್ ಮತ್ತೊಂದರ ಮೇಲೆ ನಾವು ತೆರಿಗೆ ಹಾಕುವುದಿಲ್ಲ. ಅದರ ಬಗ್ಗೆ ತಮಗೆ ಅನುಮಾನ ಬೇಕಾಗಿಲ್ಲ. ಈಗ ಟ್ಯಾಕ್ಸೇಶನ್ ಪ್ರೊಪೋಜಲ್ ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ತರುವುದಾದರೆ ನಾವು ರಿಯಾಯಿತಿ ಏನೇನು ಕೊಡುತ್ತಿದ್ದೇವೆ ಎನ್ನತಕ್ಕಂಥಾದ್ದು. Abolition of sales Tax on paddy and rice. ಬಡವರು ಉಪಯೋಗ ಮಾಡುವುದಕ್ಕೆ ನಾವು ಸೇಲ್ಸ್ ಟ್ಯಾಕ್ಸ್ ಬಿಟ್ಟಿದ್ದೇವೆ. ಆಮೇಲೆ Organic manure, sowing seeds or cereals, parts and accessories of sprayers, dusters, tender coconuts etc., ಏಕೆಂದರೆ ಆಸ್ಪತ್ರೆಗಳಿಗೆ ಕೂಡ ಎಳನೀರು ತೆಗೆದುಕೊಂಡು ಹೋಗುತ್ತಾರೆ. ಅದು ನೆನಪು ಬಂದು ಅದನ್ನು ತೆಗೆದು ಹಾಕಬೇಕೆಂದು ಹೇಳಿ ನಾವು ತೆಗೆದು ಹಾಕಿದ್ದೇವೆ. ಏಕೆಂದರೆ ಬಡವರು ಪ್ರಯಾಣ ಮಾಡುವಾಗ ತೆಗೆದುಕೊಂಡು ಹೋಗುತ್ತಾರೆ ಆಗ ಅವರಿಗೆ ಮತ್ತಷ್ಟು ಬೆಲೆ ಆಗುತ್ತದೆ ಎನ್ನುವ ದೃಷ್ಟಿಯಿಂದ Sales tax reduction proposed on cattle feeds, poultry feeds, pesticides, pumpsets, plastic pipes and fittings used for water supply and irrigation. ಇದಷ್ಟು ಕೂಡ ರಿಡಕ್ಷನ್, ಎಷ್ಟು ಏನು ಅನ್ನತಕ್ಕಂಥಾದ್ದನ್ನು ನಾವು ಅಮೆಂಡ್‌ಮೆಂಟ್ ತಂದಂತಹ ಸಂದರ್ಭದಲ್ಲಿ ನಾವು ಸಂಪೂರ್ಣವಾಗಿ ತಮ್ಮ ಗಮನಕ್ಕೆ ಇವೆಲ್ಲಾ ತರುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕಾಯರ್ ಪ್ರಾಡಕ್ಟ್ಸ್ ಮೇಲೆ ಟ್ಯಾಕ್ಸ್ ಹಾಕುವುದು ಬೇಡ ಸಾರ್.

ಶ್ರೀ ಎಸ್. ಬಂಗಾರಪ್ಪ : ಆಮೇಲೆ ನಾನು ತಮ್ಮ ಗಮನಕ್ಕೆ ತರುವುದಾದರೆ ಈ ವಿಶ್ವ ಪ್ರಾಡಕ್ಟ್ಸ್ ಇದ್ದಾವಲ್ಲ, ನೀವು ನೆನಪು ಮಾಡಿ ಕೊಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್. ಏಕೆಂದರೆ ಎಲ್ಲವನ್ನು ನೆನಪಿಟ್ಟುಕೊಳ್ಳುವುದಕ್ಕಾಗುವುದಿಲ್ಲ. We are all human beings. We have got our own limitations some times. ಇದನ್ನು ನಾವು ವಿಚಾರ ಮಾಡಲೇಬೇಕು. We to popularise 'Vishwa' Programme because it has got a component of giving employment to unemployed plus production. That is the added component, big component. ಅದಕ್ಕೆ ಏನು ಮಾಡಬೇಕು? ವಿಶ್ವ ಪ್ರಾಡಕ್ಟ್ಸ್ ಏನಿದ್ದಾವೆ ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಮತ್ತೊಂದು ಹಾಕಬಾರದು ಎನ್ನತಕ್ಕಂಥ ಥಿಂಕಿಂಗ್ ಸರ್ಕಾರದಲ್ಲಿ ಇದೆ. That includes your coir products also. ಅದಕ್ಕಾಗಿಯೇ ನಾನು ಹೇಳುವುದು ತಾವು ಇದನ್ನೆಲ್ಲಾ ಈಗ ವಿಚಾರ ಮಾಡುವುದು ಬೇಡ. 'Vishwa' products has got a special treatment by the Government keeping in view the larger interest of the poorer lot of the society for the oppressed and the suppressed classes to whom we have got this idea of giving employment plus extracting production from them. That is all the point.

ಮಾನ್ಯ ಸಭಾಧ್ಯಕ್ಷಿಣಿಯವರೆ, ಬಹಳ ಅಭಿಮಾನದಿಂದ, ಪ್ರೀತಿ ವಿಶ್ವಾಸದಿಂದ ಮಾನ್ಯ ಸದಸ್ಯರು ನನಗೆ, ಸಹಕಾರ ಕೊಟ್ಟಿದ್ದರೆ ವಿರೋಧ ಪಕ್ಷದ ಮಿತ್ರರು ಇದ್ದರೆ ಬಹಳ ಚೆನ್ನಾಗಿತ್ತು. ನಾನು ಅಂಕಿ ಅಂಶಗಳನ್ನು ಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಎಲ್ಲಾದರೂ ವ್ಯತ್ಯಾಸವಿದ್ದರೆ ತಿದ್ದಿಕೊಳ್ಳುವುದಕ್ಕೆ ನಾನು ತಯಾರಾಗಿದ್ದೇನೆ. ಹೇಳಿದ್ದರಲ್ಲಿ ವ್ಯತ್ಯಾಸ ನನ್ನದೇನೂ ಇಲ್ಲ. I am completely satisfied. We are all human beings. ಆದರೂ ಕೂಡ if I have committed any mistake somewhere, I stand rectified. ಅದರ ಬಗ್ಗೆ ಏನೂ ಯೋಚನೆ ಬೇಕಾಗಿಲ್ಲ. ಆದರೆ, ನನಗೆ ಗೊತ್ತಿರುವ ಹಾಗೆ ಏನೂ ತಪ್ಪು ಮಾಡಿಲ್ಲ. ನಾನು, ಇರತಕ್ಕಂಥ ವಿಚಾರವನ್ನು ಸಂಪೂರ್ಣವಾಗಿ ಸದನದ ಮುಂದೆ ಇಟ್ಟಿದ್ದೇನೆ. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ, ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ inflationary measures ಕಡಿಮೆ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ, ಸಮಾಜದ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗವನ್ನು ಮೇಲಕ್ಕೆ ಎತ್ತತಕ್ಕಂಥ ವಿಚಾರವನ್ನು ಗಮನದಲ್ಲಿಟ್ಟು ಹರಿಜನ ಗಿರಿಜನರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ಎಲ್ಲಾ ಜಾತಿ ಕೋಮುಗಳಲ್ಲಿರತಕ್ಕಂಥ ಕಡುಬಡವರು, ಎಲ್ಲಾ ಜಾತಿಯಲ್ಲೂ ಇದ್ದಾರೆ, you cannot forget that section. There is poor poor class in each and every so-called upper castes. ಅವರನ್ನು ಮರೆಯುವುದಕ್ಕಾಗುವುದಿಲ್ಲ. ಆ ವಿಚಾರಧಾರೆಯ ಮೇಲೆ ನಾನು ನಿಂತಿದ್ದೇನೆ ಎನ್ನತಕ್ಕಂಥ ಭಾವನೆ ಇದೆ. ಪ್ರೀತಿ, ವಿಶ್ವಾಸದಿಂದ ಪ್ರಾಮಾಣಿಕವಾಗಿ ನನ್ನ ಅಭಿಪ್ರಾಯಗಳನ್ನು ಇಟ್ಟಿದ್ದೇನೆ. ಇಷ್ಟಿದ್ದರೂ ಕೂಡ ಇನ್ನೂ ಅನೇಕ ವಿಚಾರಗಳು ಉಳಿಯುತ್ತವೆ. ಮತ್ತೆ ಮುಂದಿನ ವರ್ಷದ ಆರ್ಥಿಕ ವರ್ಷಕ್ಕೆ ಇಟ್ಟುಕೊಳ್ಳೋಣ. ಈ ವರ್ಷ ಮತ್ತೆ ಹೋಗತಕ್ಕಂಥ ವಿಚಾರವನ್ನು ನಾವು ಇಡೋಣವೆಂದು ಹೇಳಿ, ಕರ್ನಾಟಕ ರಾಜ್ಯದ ಜನತೆಗೆ ನಾವು ತಮ್ಮ ಮುಖಾಂತರ ಅವರಿಗೆ ವಿನಂತಿ ಮಾಡುತ್ತೇನೆ. ಪ್ರಾಮಾಣಿಕವಾಗಿರತಕ್ಕಂಥ ಪ್ರಯತ್ನದ ಹಿನ್ನೆಲೆಯಲ್ಲಿ ಈ ಬಜೆಟ್‌ನ ಈ ಆಯವ್ಯಯ ಪತ್ರವನ್ನು, ಮಂಡನೆಗಾಗಿ, ಕರ್ನಾಟಕ ಜನತೆಯ ಒಪ್ಪಿಗೆಗಾಗಿ ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಏಕೆಂದರೆ ನಾವೆಲ್ಲರೂ ಅವರ ಪ್ರತಿನಿಧಿಗಳು. ತಮ್ಮ ಮುಂದೆ ಇಟ್ಟಿದ್ದೇನೆ. ತಾವು ಒಪ್ಪಿಗೆ ಕೊಡುವುದರಿಂದ ಕರ್ನಾಟಕ ಜನತೆಯ ಒಪ್ಪಿಗೆಯನ್ನು ನಾನು ಪಡೆಯುತ್ತಿದ್ದೇನೆ, ಈ ಸಂದರ್ಭದಲ್ಲಿ ನಾವೆಲ್ಲರೂ ಸೇರಿ

ಪಡೆಯುತ್ತಿದ್ದೇವೆ. ನಮ್ಮ ಕಾರ್ಯಕ್ರಮಗಳನ್ನು ಶ್ರದ್ಧಾಪೂರ್ವಕವಾಗಿ ನಾವು ಮಾಡಬೇಕೆನ್ನತಕ್ಕಂಥ ದೃಷ್ಟಿಯಿಂದ ನಾವು ವಿಚಾರವನ್ನು ಮಾಡಿದ್ದೇವೆ. ನಾವು ಎಲ್ಲಿಲ್ಲೋ ಹೋಗಿ ಕಬ್ಬಿಣದ ಅಂಗಡಿಯಲ್ಲಿ ಕಡಲೆ ಹುಡುಕುವುದನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಮಗೆ ಎಲ್ಲಾ ಗೊತ್ತಿದೆ. ಮತ್ತು ಹಾದಿಯಲ್ಲಿ ಹೋಗುವ ಮಾರಿಯನ್ನು ತೆಗೆದುಕೊಂಡು ಬಂದು ಮನೆ ಹೊಕ್ಕಿಕೊಂಡು ಹೋಗಿ ತಲೆ ನೋವು ಹಚ್ಚಿಕೊಳ್ಳತಕ್ಕಂಥ ಕೆಲಸ ನಾವು ಮಾಡುವುದಕ್ಕೆ ಹೋಗಿಲ್ಲ. ಆದಷ್ಟು ಒಳ್ಳೆಯ ಕೆಲಸವನ್ನು ನಾವು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಡಿ.ಬಿ. ಚಂದ್ರೇಗೌಡರು, ಉಳಿದಿರತಕ್ಕಂಥ ಮಿತ್ರರು, ಬಿ.ಜೆ.ಪಿ. ಮಿತ್ರರು, ಮತ್ತೊಬ್ಬರು ಯಾರು ಯಾರೂ ಇಲ್ಲ. ನಾನು ವಿನಂತಿ ಮಾಡುವುದು ಇಷ್ಟೇ, ಅವರು ಭಾಷಣ ಮಾಡಿ ಏನೋ ಹೇಳಬಹುದು. ನಮ್ಮ ಬಜೆಟ್‌ನ್ನು ಓದಲಿ ಅವರು. ಕಾರ್ಯಕ್ರಮ ನೋಡಲಿ. ಅವರ ಮನಸ್ಸು ಏನು ಹೇಳುತ್ತದೆ ಎನ್ನತಕ್ಕಂಥಾದ್ದನ್ನು ಜನ ಸಾಮಾನ್ಯರ ದೃಷ್ಟಿಯಿಂದ ಯಾವ ರೀತಿ ಮನಸ್ಸಿಗೆ ಮಿಡಿದೀತು ಎನ್ನತಕ್ಕಂಥದ್ದನ್ನು ವಿಚಾರ ಮಾಡಿದಾಗ ಅನಂತರ ಅವರು ನಮಗೆ ಹೇಳುವುದು ಬೇಕಾಗಿಲ್ಲ. ಆ ಪ್ರಶ್ನೆಗೆ ಉತ್ತರ ಅವರೇ ಹುಡುಕುಕೊಳ್ಳಲಿ ಅನ್ನತಕ್ಕಂಥ ಮಾತನ್ನು ನಾನು ಅವರ ಮುಂದಿಡುತ್ತೇನೆ. ಇಷ್ಟು ಮಾತ್ರ ನಾನು ಇಟ್ಟು. ನಾನು ಕರ್ನಾಟಕ ರಾಜ್ಯದ ಜನತೆಯ ಒಪ್ಪಿಗೆಗೋಸ್ಕರ ಏನು ಬಜೆಟ್ ಮಂಡನೆ ಮಾಡಿದ್ದೇನೆ? ತಾವು ಎಲ್ಲಾ ಒಪ್ಪಿಗೆಯನ್ನು ಕೊಡಬೇಕು. ಮುಂದೆ ಆಯಾ ಇಲಾಖೆ ಬೇಡಿಕೆಗಳು ಬರುತ್ತವೆ. ಅದಕ್ಕೆಲ್ಲಾ ಒಪ್ಪಿಗೆ ಕೊಟ್ಟು ಮತ್ತು ಅಪ್ರೋಪ್ರಿಯೇಷನ್ ಬಿಲ್ ಬರುತ್ತದೆ ಅದಕ್ಕೆ ಒಪ್ಪಿಗೆ ಕೊಡಬೇಕು. ಬಜೆಟ್ ಪಾಸ್ ಮಾಡಿ ಆರ್ಥಿಕಾಭಿವೃದ್ಧಿಗೆ ನಾವು ಎಲ್ಲಾ ಗಮನ ಕೊಟ್ಟು ಮುಂದಕ್ಕೆ ಹೋಗೋಣ ಎನ್ನತಕ್ಕಂಥ ಮಾತನಾಡಿ. ಸತತವಾಗಿ ಸುಮಾರು 4 ಗಂಟೇ ಕಾಲ ನಾನು ವಿಚಾರವನ್ನು ಇಟ್ಟಿದ್ದೇನೆ. ನಾನು ಪ್ರಾಮಾಣಿಕವಾಗಿ ಹಣಕಾಸು ಸಚಿವನಾಗಿ ಇಟ್ಟಿದ್ದೇನೆ. ಕರ್ನಾಟಕ ರಾಜ್ಯದ ಪ್ಲಾನ್ ಸೈಸ್ ಇರಬಹುದು, ರೆವಿನ್ಯೂ ಕಲೆಕ್ಷನ್ ಇರಬಹುದು, ಎಕ್ಸಪೆಂಡೀಚರ್ ಇರಬಹುದು, ಸಮಾಜದಲ್ಲಿರತಕ್ಕಂಥ ಜನಸಾಮಾನ್ಯರ ಸಮಸ್ಯೆಗಳು ಇರಬಹುದು. ಅವುಗಳಿಗೆ ಶ್ರದ್ಧಾಪೂರ್ವಕವಾಗಿ ಗಮನ ಕೊಟ್ಟು ಮುಂದಕ್ಕೆ ಹೋಗುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ತಮ್ಮ ಮುಖಾಂತರ ಮಾನ್ಯ ಅಧ್ಯಕ್ಷಿಣಿಯವರೆ, ಸದನದ ಮುಖಾಂತರ ಮಾನ್ಯ ಸದಸ್ಯ ಮಿತ್ರರುಗಳಿಗೆ. ಕರ್ನಾಟಕ ರಾಜ್ಯದ ಜನತೆಗೆ ಈ ಮಾತನ್ನು ಕೊಟ್ಟು ನಾನು ತಮಗೆ ವಂದಿಸಿ, ಇಷ್ಟು ಹೊತ್ತಿನವರೆಗೆ ಸಾವಧಾನದಿಂದ ತಾವು ಕೇಳಿದ್ದೀರಿ, ತಮ್ಮ ಮುಖಾಂತರ ಎಲ್ಲರಿಗೂ ಅಭಿನಂದಿಸಿ, ಕರ್ನಾಟಕ ರಾಜ್ಯದ ಜನತೆಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

SRI QUAMARUL ISLAM : I have only a few points for clarification. It is a fact that the annual plan outlay increased is 36% and a lot of efforts have been made by way of additional resource mobilisation and also while making speech I thanked for the increase of Rs. 15 crores for Hyderabad-Karnataka Development from the last year's Rs. 50 crores. At the same time I suggested 25 paise per cement bag is to be levied and a separate account is to be credited for the Development of Hyderabad-Karnataka, because we need a minimum of Rs. 100 crores for continuous 10 years just to see that the Hyderabad-Karnataka region should come on par with other regions. Because you have said it is all for the overall development of the State. Keeping that principle in mind, I have given a suggestion which the Government should consider collecting 25 paise per cement bag and creating a separate account head and deposit that amount.

Secondly there is no difference between the poor of the urban and poor of the rural areas. Rural poor are getting green card and facilities. But what is the fault of the urban poor. They are also poor. Why that facility has not been given to the urban poor under poor under Green Card. Green card should also be given to the poor of the urban areas. At the same time I have also given a suggestion that when you have given hostels for all communities, you should also give minimum one hostel in each district for minorities. At least to start with one hostel in each division should be opened. Regarding Profession Tax, you have fixed Rs. 2500 to Kalyana Mantapas and the marriage Halls. There are air-conditioned Marriage Halls. At the taluk level, Marriage Halls are very few. They can get only 200 or 300 rupees. This limit of Rs. 2500 profession tax should not be there for Marriage Halls in the taluk or district levels. You should categorise like Bangalore and other cities. At least it should be reduced for taluk levels and district level Kalyana Mantapas. These are the suggestions.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಪತ್ರವನ್ನು ಸಭೆಯ ಮುಂದೆ ಮಂಡಿಸಿ ಅವರ ಭಾಷಣದಲ್ಲಿ ಅಕ್ಷರಶಃ ಸಮರ್ಥನೆಯನ್ನು ಕೂಡ ಮಾಡಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ನಾನು ಅವರನ್ನು ಪತ್ರಿಕೆಗಳಲ್ಲಿ ಬಂದಂತೆ ಅವರ ರಾಜಕೀಯ ಜೀವನದ ಅಂದರೆ ಸತತವಾಗಿ 25 ವರ್ಷಗಳ ಕಾಲ ಶಾಸಕರಾಗಿ ನಡೆದುಕೊಂಡು ಬಂದ ಅವರ ಬೆಳ್ಳಿ ಹಬ್ಬದ ಆಚರಣೆಯನ್ನು ಕೂಡ ಆಚರಿಸುತ್ತಿದ್ದಾರೆ ಎಂದು ತಿಳಿದು ನಾವುಗಳು ಈ ಸದನದ ಮೂಲಕ ಅವರಿಗೆ ಮೆಚ್ಚುಗೆಯನ್ನು ಕೂಡ ಸೂಚಿಸಬೇಕಾಗುತ್ತದೆ. ಮಾನ್ಯರು ಹಳ್ಳಿಯಲ್ಲಿ ಹುಟ್ಟಿ, ಹಳ್ಳಿಯಲ್ಲಿ ಬೆಳೆದುಕೊಂಡು ಬಂದವರಾದ ಕಾರಣ ಹಳ್ಳಿಗಳ ಜನಜೀವನದ ಬಗ್ಗೆ ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಮತ್ತು ಕರ್ನಾಟಕ ರಾಜ್ಯದ ಜನತೆಗೆ ತುಂಬಾ ಒಳ್ಳೆಯ ಬಜೆಟನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತಾ ಈ ಬಜೆಟ್ ಚರ್ಚೆಯನ್ನು ಬಹುಶಃ ಕೇಳತಕ್ಕಂಥ ಒಂದು ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಕೊಟ್ಟಂಥ ಅಂಕಿಅಂಶಗಳನ್ನು ನೋಡಿ ಅವರು ಹೊರಗೆ ಉಳಿದಿರಬೇಕೆಂದು ಅನ್ನಿಸುತ್ತದೆ. ಅಂಥ ಒಂದು ಪ್ರಗತಿಪರವಾದಂಥ ಬಜೆಟ್ ಇದಾಗಿದೆ. ಕಾಂಗ್ರೆಸ್ ಸರಕಾರ ಬಂದಂಥ ಸಂದರ್ಭದಲ್ಲಿ ಅದರ ಸಮರ್ಥನೆಯನ್ನು ಮಾಡಿಕೊಳ್ಳುವಲ್ಲಿ ಅವರು ಅಸಮರ್ಥರಾಗಿದ್ದಾರೆ ಅದಕ್ಕಾಗಿಯೇ ಅವರು ಹೊರಗೆ ಉಳಿದುಕೊಂಡಿದ್ದಾರೆ ಎಂದು ಹೇಳಬಯಸುತ್ತೇನೆ. ಒಂದು ಮುಖ್ಯವಾದ ಮಾತನ್ನು ಹೇಳಬಯಸುತ್ತೇನೆ. ಹಿಂದೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ abolition of Boards and Corporation, abolition of unwanted posts ಅದನ್ನು ಹಿಂದೆ ಪ್ರಸ್ತಾಪ ಮಾಡಿದ್ದರೂ ಆ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅದಕ್ಕೋಸ್ಕರವಾಗಿ ಒತ್ತಾಯಪೂರ್ವಕವಾಗಿ ನೀವು ಒಂದು ನಿಗದಿತ ಸಮಯದ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಮಾಡಿದರೆ ಮಾತ್ರ ಅದು ಜನತೆಗೆ ಗೊತ್ತಾಗುತ್ತದೆ. ಮತ್ತು ನಿಮಗೆ ಒಂದು ಪಾಲಿಟಿಕಲ್ ವಿಲ್‌ಪವರ್ ಇದೆ ಎಂಬುದು ಗೊತ್ತಾಗುತ್ತದೆ. ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ ಎಂಬುದನ್ನು ಹೇಳ ಬಯಸುತ್ತೇನೆ. ಆ ಒಂದು ಸಾಧನೆಯ ಮಟ್ಟಕ್ಕೆ ನೀವು ಹೋಗ-ಬೇಕು, ಆ ವಿಚಾರವನ್ನು ನಿರ್ಧಿಷ್ಟವಾಗಿ ನೀವು ಹೇಳಿದರೆ ತಮ್ಮ ಆಡಳಿತದ ಬಗ್ಗೆ ಹೆಚ್ಚಿನ ಒಂದು ಘನತೆ ಗೌರವಗಳು ಕೂಡ ಬರುತ್ತವೆ ಎಂದು ಹೇಳಿ ಈ ಬಗ್ಗೆ ತಮ್ಮ ಉತ್ತರವನ್ನು ಅಪೇಕ್ಷಿಸುತ್ತೇನೆ.

ಶ್ರೀ ಕೆ. ಹರ್ಷಕುಮಾರ್‌ಗೌಡ : ಮಾನ್ಯ ಮುಖ್ಯಮಂತ್ರಿಯವರು ಮುಂಗಡ ಪತ್ರದ ಉತ್ತರವನ್ನು ಕೊಡುವಾಗ ಇಡೀ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ. ನಿಖರವಾದಂಥ. ಅತ್ಯಂತ ಪ್ರಬುದ್ಧವಾದಂಥ. ವೈಚಾರಿಕಪೂರಿತವಾದಂಥ ಮಾತುಗಳನ್ನು ಆಡಿದ್ದಾರೆ. ನಾಲ್ಕು ಗಂಟೆಗಳ ಕಾಲ ಅವರಿಂದ ಯುವಶಾಸಕರುಗಳಾದ ನಾವು ತಿಳಿದುಕೊಂಡಿದ್ದೇವೆ. ಬಜೆಟ್ ಬಗ್ಗೆ. ಯೋಜನೆಯ ಗಾತ್ರ ಮತ್ತು ಗುರಿಯ ಬಗ್ಗೆ ಉಳಿತಾಯದ ಬಗ್ಗೆ. ಜೊತೆಗೆ ಬಡವರ ಬಗ್ಗೆ ನಿಜವಾದ ಬಡವರ ಬಂಧುವಾದ ಶ್ರೀ ಬಂಗಾರಪ್ಪನವರು ಬಡವರ ಬಗ್ಗೆ ಕಾಳಜಿ ಇರುವುದನ್ನು ನಿಜವಾಗಿಯೂ ತೋರಿಸಿಕೊಟ್ಟಿದ್ದಾರೆ.

ಇದು ಅತ್ಯಂತ ಸ್ವಾಗತಾರ್ಹ ಜತೆಗೆ ಮೈಸೂರು ನಗರದ ಶಾಸಕನಾಗಿ ಮೈಸೂರು ಜಿಲ್ಲೆಗೆ ಲಲಿತ ಕಲಾ ವಿಶ್ವವಿದ್ಯಾಲಯವನ್ನು ಕೊಡುಗೆ ಮಾಡಿದ್ದಾರೆ. ಅದನ್ನು ಸ್ವಾಗತ ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಇತಿಹಾಸ ಪರಂಪರೆಯಿರುವ ನಗರ. ಅದಕ್ಕೆ ಅತ್ಯಂತ ಕಾಳಜಿ ಇರುವ ನಾಟಕ, ಸಂಗೀತದ ಬಗ್ಗೆ ಅಭಿರುಚಿ ಇಟ್ಟುಕೊಟ್ಟಿರುವ ಸಾಹಿತ್ಯ ಕ್ಷೇತ್ರದಲ್ಲಿ ಅಭಿಮಾನ ಇಟ್ಟುಕೊಂಡಿರುವ ಮುಖ್ಯಮಂತ್ರಿಗಳು ಮೈಸೂರು ನಗರದ ಜನತೆಯ ಪರವಾಗಿ ಅಭಿನಂದಿಸುತ್ತೇನೆ. ಅವರ ಯಾವ ವಿಚಾರಧಾರೆಗಳಿವೆ ಅವುಗಳ ಮೂಲಕ ಕರ್ನಾಟಕದ ಬಡವರ ಸರ್ವಾಂಗೀಣ ಅಭಿವೃದ್ಧಿಯಾಗಲಿ ಅವರು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅವು ಕಾರ್ಯಗತ ಆಗಲಿ ಆ ದಿಸೆಯಲ್ಲಿ ದೇವರು ಅವರಿಗೆ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಡಾ|| ಆರ್.ವಿ. ಚೌಧುರಿ : ಅಧ್ಯಕ್ಷಿಣಿಯವರೇ. ಮುಖ್ಯಮಂತ್ರಿಗಳು ಬಜೆಟಿನ ಬಗ್ಗೆ ಏನು ಹೇಳಿದರು ಇದು ನಿಜವಾಗೂ ಒಳ್ಳೆಯ ಬಜೆಟ್ ಹಾಗೂ ಬಡವರ ಪರವಾದ ಬಜೆಟ್ ಅಂದರೆ ಗ್ರಾಮೀಣ ಬಡವರಿಗೆ ಬಹಳ ಉಪಯುಕ್ತವಾದ ಬಜೆಟ್ ಇದೇ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಬಯಸುತ್ತೇನೆ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ ಆಯಿತು. ಮಲೆನಾಡು ಬೋರ್ಡಾಯಿತು ಅನಂತರ ನಮ್ಮ ಜಿಲ್ಲೆ ಬಗ್ಗೆ ಏನೇನೂ ಹೇಳಲಿಲ್ಲ. ಬಿಜಾಪುರ ಜಿಲ್ಲೆ ತಲೆತಲಾಂತರದಿಂದ ಬರಗಾಲಕ್ಕೆ ತುತ್ತಾದ ಜಿಲ್ಲೆ. ನಮ್ಮ ಜಿಲ್ಲೆಯ ಬಗ್ಗೆ ಏನೇನೂ ಇದರಲ್ಲಿ ಹೇಳಿಲ್ಲ. ಹಿಂದಕ್ಕೆ ಬ್ರಿಟಿಷರು ಇದ್ದಾಗ ಅಂಟಿಫೆಮಿನ್ ಬಂಗಲೊ ಎಂದು ಮಾಡಿ ಬರಗಾಲ ನಿವಾರಣೆಗಾಗಿ ಪ್ರಯತ್ನ ಮಾಡಿದ್ದಾರೆ. ಆದರೆ ದುರ್ದೈವದಿಂದ ಈ ಸಲ ಬಿಜಾಪುರದ ಸಲುವಾಗಿ ಬಜೆಟ್‌ನಲ್ಲಿ ಏನೇನೂ ಮಾಡಿಲ್ಲ. ಆದ್ದರಿಂದ ಜಗತ್‌ಪ್ರಸಿದ್ಧವಾದ ಗೋಳಗುಂಬಜ್ ಇದೆ ಇಲ್ಲಿ. ಕಿತ್ತೂರಿನಲ್ಲಿ ಹೇಗೆ ಸೌಂಡ್ ಎನ್ ಮ್ಯೂಸಿಕ್ ಮಾಡಿದ್ದಾರೆ ಅದೇ ತರಹ ಇಲ್ಲಿ ಮಾಡಬೇಕು. ಪ್ರವಾಸಿಗರ ಸಂಖ್ಯೆ ಬಹಳ ಇದೆ ಮತ್ತು ಫಾರಿನ್ ಎಕ್ಸ್‌ಚೇಂಜ್ ಬಹಳ ಬರುತ್ತಾ ಇದೆ. ಫಾರಿನ್ ಪ್ರವಾಸಿಗರು ಕೂಡ ಬರುತ್ತಾ ಇದ್ದಾರೆ. ಆದ್ದರಿಂದ ಬಿಜಾಪುರದ ಬಗ್ಗೆ ತಾವು ಕಾಳಜಿ ತಗೋಬೇಕು ಮತ್ತು ಮುಳವಾಡ ಏತ ನೀರಾವರಿ ಬಗ್ಗೆ ಹೆಚ್ಚಿನ ಹಣ ಬಿಡುಗಡೆ ಮಾಡ್ತೀವಿ ಅಂತ ಆಗಲೇ ಭರವಸೆ ಕೊಟ್ಟಿದ್ದಾರೆ ಆದರಂತೆ ಇನ್ನೊಮ್ಮೆ ನಮ್ಮ ಜಿಲ್ಲೆ ಬಗ್ಗೆ ಹೇಳಿಕೆ ಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ರಾಮಸ್ವಾಮಿ : ಸಭಾಧ್ಯಕ್ಷಿಣಿಯವರೇ. ಈಗ ಆಶ್ರಯ ಯೋಜನೆ ಬಹಳ ಬೃಹದಾಕಾರವಾಗಿ ಪ್ರತಿ ಕ್ಷೇತ್ರದಲ್ಲೂ ನಗರ ಸಭೆಗಳನ್ನು ಬಿಟ್ಟು 1000 ಮನೆಗಳನ್ನು ಕಟ್ಟಿಸಿಕೊಡ್ತಾಯಿದೀರಿ. ದಾರಿಯಲ್ಲಿ ಹೋಗುವಾಗ ಜನತಾ ಮನೆಗಳನ್ನು ಕಟ್ಟಿರೋದನ್ನು ನೋಡ್ತಿವಿ.

ಕಂಟ್ರಾಕ್ಟ್‌ದಾರರು ಕಟ್ಟಿ ಬಿಲ್ ತಗೊಂಡುಹೋಗಿದಾರೆ. ಬಡವರು ಪಾಪ ಒಕ್ಕಲಾಗೋದರಲ್ಲಿ ಆ ಮನೆಗಳು ಬಿದ್ದುಹೋಗಿದೆ. ಅಂತಹ ಅನೇಕ ಮನೆಗಳನ್ನು ದಾರಿಯಲ್ಲಿ ನಾವು ನೋಡಬಹುದು. ಜನತಾ ಮನೆ ಕಟ್ಟಿದ್ದುದು ಕೂಲಿಕಾರರಿಗೆ. ಕೃಷಿಕಾರ್ಮಿಕರಿಗೆ. ಅವರಿಗೆ ಉದ್ಯೋಗ ಒದಗಿಸಿಕೊಟ್ಟಂತಾಗುತ್ತದೆ. ಯಾರು ಅವರ ಮನೆ ಅವರೇ ಕಟ್ಟಿಕೊತಾರೆ. ಅವರೇ ಕಟ್ಟಿಕೊಳ್ಳೋಕೆ ಅವಕಾಶ ಮಾಡಿಕೊಡಬಾರದು? ಆಗ ಅವರೇ ಚೆನ್ನಾಗಿ ಕಟ್ಟಿಕೊಳ್ತಾರೆ. ಶಾಶ್ವತವಾಗಿ ಉಳಿದುಕೊಂಡು ಅದೊಂದು ಅಸೆಟ್ ಆಗುತ್ತದೆ. ಏಕೆಂದರೆ ಅನೇಕ ಜನತಾ ಮನೆಗಳನ್ನು ನೋಡಿದೀರಿ ನಾವು. ಕಂಟ್ರಾಕ್ಟರ್ ಕಟ್ಟಿಬಿಡ್ತಾನೆ ಲಾಭದ ಸಲುವಾಗಿ ಆಮೇಲೆ ಬಿಲ್ ತಗೊಂದುಹೋಗ್ತಾನೆ. ಆಮೇಲೆ ಮೂರ್ನಾಲ್ಕು ವರ್ಷಕ್ಕೇ ಬಿದ್ದುಹೋಗ್ತವೆ. ಅಂತಹ ಅನೇಕ ಮನೆಗಳನ್ನು ನಾವು ನೋಡಿದೇವೆ. ಏಕೆಂದರೆ ಬಿದ್ದುಹೋದಮೇಲೆ ಮತ್ತೆ ಜನತಾ ಮನೆ ಕೊಡಿ ಅಂತ ಕೇಳ್ತಾರೆ. ಅವರು ಅವರ ಮನೇನ ಕಟ್ಟಿಕೊಂಡರೆ ಚೆನ್ನಾಗಿ ಕಟ್ಟಿಕೊಳ್ತಾರೆ. ಇದನ್ನು ಏಕೆ ಸರ್ಕಾರ ಆಲೋಚನೆ ಮಾಡಬಾರದು ಎಂದು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ರಾಮಸ್ವಾಮಿಯವರು ಮನೆ ಕಟ್ಟುವ ವಿಚಾರದಲ್ಲಿ. ಹಿಂದೆ ಕೂಡ ಒಂದು ಸ್ಕೀಮ್ ಇತ್ತು. ಅವರೇ ಅಷ್ಟು ಹಣ ಕೊಟ್ಟು ಅವರೇ ಕಟ್ಟಬೇಕೂಂತ ಅದು ಬಗೆಹರಿಯದೆ ಎಲ್ಲಾ ಹಾಳಾಗಿರೋದು ನಿಮಗೆ ಗೊತ್ತು. ಅದಕ್ಕಾಗಿ ನಾವು ಏನು ಮಾಡಿದೆವು ಅಂದರೆ ಎಲ್ಲಾ ಅಭಿಪ್ರಾಯ ಬಂದ ಮೇಲೆ ಆಶ್ರಯ ಸ್ಕೀಮಿನಲ್ಲಿ ಪ್ರಿಫ್ಯಾಬ್ರಿಕೇಟೆಡ್ ಮೆಟಿರಿಯಲ್ ಉಪಯೋಗ ಮಾಡಿ ಬೇಗ ಬೇಗ ಕಟ್ಟಿಸಿಕೊಡಬೇಕು. ಅಂತ ಯೋಚನೆ ಮಾಡಿದೀವಿ. I agree with your suggestion as a matter of principle. ಆದರೆ ನಮ್ಮ ಜನ they are not upto the mark ಎಂದು ನನಗನ್ನಿಸುತ್ತದೆ. ಅನೇಕ ಕಡೆಗಳಲ್ಲಿ ಮನೆ ಕಟ್ಟಿರತಕ್ಕಂಥದ್ದು ಅವೆಲ್ಲಾ ಹೆಚ್ಚು ಕಡಿಮೆಯಾಗಿ ಮನೆಗಳೂ ಕೂಡಾ ಹಾಲಾಗಿ ಹೋಗಿದೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದೇನೆ. ಅದರಲ್ಲಿ ಬೇರೆ ಉದ್ದೇಶ ಏನೂ ಇಲ್ಲ. ಆಮೇಲೆ ಮಾನ್ಯ ಸದಸ್ಯರುಗಳಾದ ಕಮರುಲ್ ಇಸ್ಲಾಂರವರು ಆನ್ಯುಯಲ್ ಪ್ಲಾನ್ ಮತ್ತೊಂದರ ಬಗ್ಗೆ ಹೇಳಿದ್ದಾರೆ. ಹೆಚ್.ಕೆ.ಪಿ.ಪಿ. ಬಗ್ಗೆಯೂ ಹೇಳಿದ್ದಾರೆ. ನನಗೆ ಗೊತ್ತಿದೆ. ಪ್ರಾವಿಷನ್ ಕೂಡ ಜಾಸ್ತಿ ಮಾಡಿದ್ದೇನೆ. ಕಡಿಮೆ ಬಿದ್ದರೆ ಮತ್ತೂ ಕೂಡ ಒದಗಿಸುತ್ತೇನೆ ಎನ್ನತಕ್ಕಂಥ ಮಾತನ್ನು ಕೂಡ ನಿಮ್ಮ ಹಾಗೆ ಅವರು ಇನ್ನೇನು ಸರ್ಕಾರದ ಬಗ್ಗೆ ಭಾಷಣವನ್ನುಮಾಡುವುದಕ್ಕೆ ಬರುವುದಿಲ್ಲ ಎಂದು ಇಲ್ಲಿಯೇ ಕುಳಿತಿದ್ದಾರೆ. ಆದೇ ರೀತಿ ಮಾನ್ಯ ಸದಸ್ಯರು ಬಹಳ ಜನ ಇದ್ದಾರೆ. ನಾವು ಇದಕ್ಕೆ ಹಣವನ್ನು ಜಾಸ್ತಿ ಇಟ್ಟಿದ್ದೇವೆ. ಗ್ರೀನ್ ಕಾರ್ಡ್ಸ್‌ಗಳನ್ನು ಕೊಡುವುದರ ಬಗ್ಗೆ ಅರ್ಬನ್ ಪೂರ್‌ದು ತಾವು ಹೇಳಿದ್ದೀರಿ. Actually we are thinking of it. The details will come when the Food & Civil Supplies Department is taken up for discussion here.

ಆಮೇಲೆ ಈ ಮುಸ್ಲಿಂ ಹಾಸ್ಟೆಲ್‌ಗಳ ಬಗ್ಗೆ ಜಿಲ್ಲೆಗೆ ಒಂದೊಂದು ಹೇಳಿದ್ದೀರಿ. ಅದು ಮಾತ್ರ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡ್ ಮತ್ತೊಂದು ಬಂದಾಗ ಆ ವಿಚಾರವನ್ನು ತೆಗೆದುಕೊಳ್ಳೋಣ. ಆಮೇಲೆ ಮಾನ್ಯ ಜಯಚಂದ್ರ ಅವರು ಈ ಬೋರ್ಡ್ಸ್ ಅಂಡ್ ಕಾರ್ಪೊರೇಷನ್ಸ್‌ಗಳು ಏನು ಇದೆ, ಅದನ್ನು ಅಬಾಲಿಷ್ ಮಾಡತಕ್ಕಂಥ ಮಾತನ್ನು ಅಂಡ್ ಕಾರ್ಪೊರೇಷನ್ಸ್‌ಗಳು ಏನು ಇದೆ, ಅದನ್ನು ಅಬಾಲಿಷ್ ಮಾಡತಕ್ಕಂಥ ಮಾತನ್ನು ಮಾನ್ಯ ವೀರೇಂದ್ರ ಪಾಟೀಲರು ಹೇಳಿದ್ದರು ಎಂದು ಹೇಳಿದರು. ನಾನು ಅದನ್ನು ಹೇಳಿದ್ದೇನಲ್ಲಾ. ಅದು ಬಜೆಟ್‌ನಲ್ಲಿ ಇದೆಯೆಲ್ಲಾ, austerity measures ಏನು ಇದೆಯಲ್ಲಾ. ಅದರಲ್ಲಿ ಇದೂ ಒಂದು ಪಾಯಿಂಟ್. ಅದನ್ನು ಮರ್ಜ್ ಮಾಡುವುದು, ಅಬಾಲಿಷ್ ಮಾಡುವುದು ಆ ಪಾಯಿಂಟ್‌ನ್ನು ಕೂಡ ಇಟ್ಟುಕೊಂಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಹೇಳಿದ್ದೀರಿ. ಅದು ಕಾರ್ಯಗತವಾಗಿಲ್ಲ. ಅದಕ್ಕೋಸ್ಕರ ಕೇಳಿದೆ. ಯಾವಾಗ ಮಾಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಈಗ ಮಾಡುತ್ತೇವೆ. ಆ ಲಿಸ್ಟ್‌ನಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಾಗಿ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿದ್ದೇವೆ. ಆಮೇಲೆ ಮನಮುಟ್ಟುವ ಬಜೆಟ್ ಎಂದು ತಾವೆಲ್ಲಾ ಹೇಳಿದ್ದೀರಿ. ಅದಕ್ಕೇನೂ ಉತ್ತರ ಕೊಡುವ ಅವಶ್ಯಕತೆ ಇದೆ. ನಿಮ್ಮ ಮಾನ ಮುಟ್ಟಿಬಿಟ್ಟರೆ ನಿಮ್ಮ ಸಂತೋಷದಲ್ಲಿ ನಾನೂ ಕೂಡ ಬಾಗಿ.

ಶ್ರೀ ಟಿ.ಬಿ. ಜಯಚಂದ್ರ : ನೀವು ಹೇಳಿರುವುದನ್ನು ಶಿರಸಾ ಪಾಲಿಸಿದರೆ ನೀವು ಬಂಗಾರಪ್ಪನವರು ಅಲ್ಲ. ಈ ರಾಜ್ಯದಲ್ಲಿ ಬಂಗಾರದ ಮನುಷ್ಯರಾಗುತ್ತೀರಿ.

ಶ್ರೀ ಎಸ್. ಬಂಗಾರಪ್ಪ : ಆಮೇಲೆ ಮಾನ್ಯ ಹರ್ಷಕುಮಾರ್‌ಗೌಡ ಅವರು ನಮಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಅವರು ಭಾಷಣವನ್ನು ಮಾಡಿದ್ದಾರೆ. ಅದು ಕ್ಲಾರಿಫಿಕೇಷನ್ ಅಲ್ಲ. ಅವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಪ್ರತಿಯಾಗಿ ನಿಮಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ ಅಷ್ಟೆ. ಆಮೇಲೆ ಮುಳುವಾಡ ಲಿಫ್ಟ್ ಇರಿಗೇಷನ್ ಸ್ಕೀಮ್ ಬಗ್ಗೆ ಡಾ: ಚೌಧುರಿಯವರು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಮತ್ತೆ ಹೇಳುವ ಅವಶ್ಯಕತೆ ಇಲ್ಲ. Government is very very serious on that and we have taken up the work and we will go ahead. ಅದಕ್ಕೆ ನಾವು ಅವರಿಗೆ ಅಪೀಲು ಮಾಡಿದ್ದೇವೆ. ಅವರೆಲ್ಲರೂ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಕೆಲಸವನ್ನು ತೆಗೆದುಕೊಳ್ಳೋಣ ಎನ್ನತಕ್ಕಂಥದ್ದನ್ನು ಕೂಡ ನಾವು ಈಗಾಗಲೇ ಹೇಲಿ ಆಗಿದೆ. ಟೂರಿಸಂ ಬಗ್ಗೆಯೂ ತಾವು ಹೇಳಿದ್ದೀರಿ. Yes, as far as Bijapur district is concerned ಅನೇಕ ವಿಚಾರಗಳು ಅಲ್ಲಿ ಇವೆ. ಇದರ ಬಗ್ಗೆ ಡಿಪಾರ್ಟ್‌ಮೆಂಟ್ ಡಿಸ್‌ಕಷನ್ ಬಂದಾಗ ಅವೆಲ್ಲವನ್ನೂ ತೆಗೆದುಕೊಳ್ಳೋಣ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಫ್ರೀಡಂ ಫೈಟರ್ಸ್ ಬಗ್ಗೆ ನಮ್ಮ ಮಾನ್ಯ ಅನಂತಕೃಷ್ಣ ಅವರು ಕೆಲವು ವಿಚಾರಗಳನ್ನು ಬರೆದು ಕಳುಹಿಸಿದ್ದಾರೆ. ಅವರ ಪೆನ್ಸನ್‌ನ್ನು ಜಾಸ್ತಿ ಮಾಡಬೇಕು. ಬಸ್‌ನಲ್ಲಿ ಫ್ರೀ ಪಾಸ್‌ನ್ನು ಮಾಡಬೇಕು. ಕೆಲವು ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಇದೆ ಎಂದು ಹೇಳಿದ್ದಾರೆ. ಡಿಮ್ಯಾಂಡ್ ಬಂದಾಗ ಅದನ್ನು ತೆಗೆದುಕೊಳ್ಳೋಣ. ಅದು ಏನಾಯಿತು ಎಂದರೆ ಕೆ.ಎಸ್.ಆರ್.ಟಿ.ಸಿ. ಹೆವಿ ಲಾಸಸ್‌ನಲ್ಲಿ ಇರುವುದರಿಂದ 70-80 ಕೋಟಿ ರೂಪಾಯಿ ಎಷ್ಟೋ ವರ್ಷಕ್ಕೆ ಖರ್ಚಾಗುತ್ತಿದೆ ಎಂದು ಬಂತು. ಆ ರೀತಿ ಬಂದ ಮೇಲೆ ಬೇಡ ಎಂದು ಹೇಳಿ ಅದನ್ನು ಕೈಬಿಟ್ಟರು ಅಷ್ಟೆ. ನೋಡೋಣ. ಡಿಮ್ಯಾಂಡ್ ಬಂದಾಗ ಅದನ್ನು ತೆಗೆದುಕೊಳ್ಳೋಣ. ಇಷ್ಟನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷಿಣಿಯವರು : ದಿನಾಂಕ 12ನೇ ಮಾರ್ಚ್. 1992 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ದಿನಾಂಕ 16ನೇ ಮಾರ್ಚ್ 1992 ರಿಂದ ದಿನಾಂಕ 31ನೇ ಮಾರ್ಚ್ 1992ರ ವರೆಗೆ ಈ ಕೆಳಕಂಡಂತೆ ವಿತ್ತೀಯ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿದೆಯೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಬಯಸುತ್ತೇನೆ.

1992-93ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವ ಕಾರ್ಯಕಲಾಪಗಳು.

ದಿನಾಂಕ	ಅಭಿಯಾಚನೆ ಕ್ರಮಾಂಕ	ಬೇಡಿಕೆಯ ಹೆಸರು	ಸಂಬಂಧಪಟ್ಟ ಮಂತ್ರಿಗಳು
ಸೋಮವಾರ 16-3-1992	40	ಜಿಲ್ಲಾ ದಳಿತ	ಕಂದಾಯ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು
	48	ಭೂ ಕಂದಾಯ ಇತ್ಯಾದಿ	- " -
	49	ಮುದ್ರಾಂಕ (ಸ್ಟಾಂಪ್‌ಗಳು) ಮತ್ತು ನೊಂದಣಿ	- " -
	50	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	- " -
	55	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ	- " -
	56	ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ	- " -
	51	ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ	ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳು
ಮಂಗಳವಾರ 17-3-1992	23	ರಾಜ್ಯದ ಅಬಕಾರಿ	ಗೃಹ ಮತ್ತು ಅಬಕಾರಿ ಮಂತ್ರಿಗಳು
	25	ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು	- " -
	26	ಜೈಲು ಇತ್ಯಾದಿ	ಬಂದೀಖಾನೆ ಮತ್ತು ಗೃಹರಕ್ಷಕ ರಾಜ್ಯ ಮಂತ್ರಿಗಳು
ಬುಧವಾರ 18-3-1992	09	ಲೇಖನ ಸಾಮಗ್ರಿ ಮತ್ತು ಮುದ್ರಣ	ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು
	10	ಉಚ್ಚ ಶಿಕ್ಷಣ	- " -
	13	ಪ್ರಾಥಮಿಕ ಶಿಕ್ಷಣ	- " -
	14	ಸೆಕೆಂಡರಿ ಶಿಕ್ಷಣ	- " -
	35	ರಾಜ್ಯ ವಿಧಾನ ಮಂಡಲ	- " -
	36	ನ್ಯಾಯಪರಿಪಾಲನೆ	ಕಾನೂನು ಮಂತ್ರಿಗಳು

1	2	3	4
ಗುರುವಾರ 19-3-1992	01	ವ್ಯವಸಾಯ (ತೋಟಗಾರಿಕೆ ಹೊರತು)	ಕೃಷಿ ಮಂತ್ರಿಗಳು
	02	ತೋಟಗಾರಿಕೆ	ತೋಟಗಾರಿಕೆ ರಾಜ್ಯ ಮಂತ್ರಿಗಳು
	03	ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ	ಪಶುಸಂಗೋಪನಾ ರಾಜ್ಯ ಮಂತ್ರಿಗಳು
	04	ಮೀನುಗಾರಿಕೆ	ಮೀನುಗಾರಿಕೆ, ಬಂದರು ಮತ್ತು ಜಲಸಾರಿಗೆ ರಾಜ್ಯ ಮಂತ್ರಿಗಳು
	46	ರೇವು ಮತ್ತು ಜಲಸಾರಿಗೆ ಸೇವೆಗಳು	- " -
	22	ಅರಣ್ಯ	ಅರಣ್ಯ ರಾಜ್ಯ ಮಂತ್ರಿಗಳು
ಶುಕ್ರವಾರ 20-3-1992	53	ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)	ಸಹಕಾರ ರಾಜ್ಯ ಮಂತ್ರಿಗಳು
	54	ಕ್ರಮಪಡಿಸಿದ ಮಾರುಕಟ್ಟೆಗಳು	- " -
	58	ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದ ಕಲ್ಯಾಣ	ಸಮಾಜ ಕಲ್ಯಾಣ ಮಂತ್ರಿಗಳು
	59	ಮಹಿಳಾ ಮತ್ತು ಮಕ್ಕಳ ಕಲ್ಯಾಣ	- " -
	57	ಕಾರ್ಮಿಕ ಮತ್ತು ಉದ್ಯೋಗ	ಕಾರ್ಮಿಕ ರಾಜ್ಯ ಮಂತ್ರಿಗಳು
ಶನಿವಾರ 21-3-1992	30	ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)	ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು
	31	ನಗರಾಭಿವೃದ್ಧಿ ಇತ್ಯಾದಿ	- " -
	32	ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ	- " - - " -
	21	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು
	27	ವಾರ್ತಾ ಮತ್ತು ಪ್ರವಾಸೋದ್ಯಮ	ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು
	11	ಯುವಜನ ಸೇವೆ	ಯುವಜನ ಸೇವೆ ರಾಜ್ಯ ಮಂತ್ರಿಗಳು
	12	ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ	- " -
ಸೋಮವಾರ 23-3-1992	05	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)	ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು
	06	ಗಣಿಗಳು ಮತ್ತು ಭೂವಿಜ್ಞಾನ	ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು
	07	ಚಿಕ್ಕ ಪುಟ್ಟ ಉದ್ಯಮಗಳು	ಸಣ್ಣ ಪ್ರಮಾಣದ ಕೈಗಾರಿಕೆಗಳ ರಾಜ್ಯ ಮಂತ್ರಿಗಳು

1	2	3	4
	08	ರೇಷ್ಮೆ ವ್ಯವಸಾಯ	ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು
	60	ವಿಜ್ಞಾನ ಮತ್ತು ಯಂತ್ರಕಲೆ	ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿಗಳು
ಮಂಗಳವಾರ 24-3-1992	28	ರಸ್ತೆ ಸಾರಿಗೆ	ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಮಂತ್ರಿಗಳು
ಮಂಗಳವಾರ 24-3-1992	24	ವಾಹನ ತೆರಿಗೆ	- " -
-	52	ವಕ್ಫ್	- " -
	29	ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು
ಬುಧವಾರ 25-3-1992	43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ಲೋಕೋಪಯೋಗಿ ಮಂತ್ರಿಗಳು
	44	ಕಟ್ಟಡಗಳು	- " -
	45	ರಸ್ತೆಗಳು ಮತ್ತು ಸೇತುವೆಗಳು	- " -
	47	ವಿದ್ಯುಚ್ಛಕ್ತಿ ಯೋಜನೆಗಳು	ಇಂಧನ ರಾಜ್ಯ ಮಂತ್ರಿಗಳು
	33	ಸಣ್ಣ ನೀರಾವರಿ	ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು
	34	ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು	ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು
ಗುರುವಾರ 26-3-1992	15	ವರಮಾನ ತೆರಿಗೆ, ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳು	ಮುಖ್ಯ ಮಂತ್ರಿಗಳು
ಶುಕ್ರವಾರ ಮತ್ತು 27-3-1992	16	ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ	- " -
	17	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	- " -
	18	ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು	- " -
	20	ಇತರ ವಿವಿಧ ಸೇವೆಗಳು	- " -
	37	ಚುನಾವಣೆಗಳು	- " -
	38	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	- " -
	39	ಸಚಿವಾಲಯ	- " -
	41	ಸಾಮಾನ್ಯ ಆಡಳಿತ ಇತ್ಯಾದಿ	- " -
	42	ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ	ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು

1	2	3	4
	19	ಸಣ್ಣ ಉಳಿತಾಯಗಳು, ರಾಜ್ಯ ಲಾಟರಿ ಮತ್ತು ವಿಮೆಗಳಿಗೆ	ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ ರಾಜ್ಯ ಮಂತ್ರಿಗಳು
		ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು	
ಶನಿವಾರ 28-3-1992		ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳು (ತಿದ್ದುಪಡಿ) ವಿಧೇಯಕ, 1992, ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.	
ಭಾನುವಾರ 29-3-1992		ರಜಾ ದಿನ	
ಸೋಮವಾರ 30-3-1992 ಮತ್ತು ಮಂಗಳವಾರ 31-3-1992		ಶಾಸನ ರಚನೆ	

ಈಗ ಸಭೆಯು ಮುಕ್ತಾಯಗೊಂಡು ಮತ್ತೆ ಪುನಃ ಸೋಮವಾರ ದಿನಾಂಕ 16-3-92 ರಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಾಯಂಕಾಲ 4-23ಕ್ಕೆ ಮುಗಿದು ದಿನಾಂಕ 16-3-92ರಂದು ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು).

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

BLANK PAGE

ಕರ್ನಾಟಕ ವಿಧಾನಸಭೆ

ಸೋಮವಾರ 16ನೆ ಮಾರ್ಚಿ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-30 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ)ಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರಗಳು.....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ. ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ವಚನ ಭಂಗ ಮಾಡಿದ್ದಾರೆ....

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ ಆಮೇಲೆ ನಾನು ನಿಮಗೆ ಅವಕಾಶ ಮಾಡಿ ಕೊಡುತ್ತೇನೆ....

(ಗೊಂದಲ)ತ್ತೀ

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರಶ್ನೋತ್ತರ ಬೇಡ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ. ಮಾನ್ಯ ಮುಖ್ಯಮಂತ್ರಿಗಳು ವಚನ ಭಂಗ ಮಾಡಿದ್ದಾರೆ.....

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ....

(ಗೊಂದಲ)

ಉಪಾಧ್ಯಕ್ಷರು : ತಾವು ನನ್ನ ಅನುಮತಿ ಪಡೆದು ಮಾತನಾಡಬೇಕು. ನಾನು ತಮಗೆ ಅನುಮತಿ ಕೊಟ್ಟಿಲ್ಲ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯಮುಖ್ಯಮಂತ್ರಿಗಳು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದ್ದರು....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ವಚನ ಭಂಗ ಮಾಡಿರುವುದರಿಂದ ಅದು ತನಿಖೆ ಆಗಬೇಕು ...

ಉಪಾಧ್ಯಕ್ಷರು : ನಾನು ನಿಮಗೆ ಅನುಮತಿ ಕೊಟ್ಟಿಲ್ಲ, ನೀವು ಏನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

(ಉಪಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಉಪಾಧ್ಯಕ್ಷರು : ನಾನು ನಿಮಗೆ ಪರ್ಮಿಶನ್ ಕೊಟ್ಟಿಲ್ಲ. ಪ್ರಶ್ನೋತ್ತರ ವೇಳೆ ಮುಗಿಯಲಿ. ಮೊದಲು ಆಫಿಷಿಯಲ್ ಬಿಜಿನೆಸ್ ಮುಗಿಯಲಿ. ಶ್ರೀ ಎಸ್.ಜಿ. ನಾಯಕ್‌ರವರೆ ತಾವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಈಶ್ವರಪ್ಪನವರು ಮಾತನಾಡಿದ್ದುದು ರೆಕಾರ್ಡ್‌ಗೆ ಹೋಗಿದೆಯೇ?

ಉಪಾಧ್ಯಕ್ಷರು : ನಾನು ಅವರಿಗೆ ಅನುಮತಿ ಕೊಟ್ಟಿಲ್ಲ. ಅದು ಯಾವುದೂ ರೆಕಾರ್ಡ್‌ಗೆ ಹೋಗಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ.

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ. ಆಮೇಲೆ ನಾನು ನಿಮಗೆ ಅವಕಾಶ ಮಾಡಿ ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಇಲ್ಲಿ ಲಿಸ್ಟ್ ಆಫ್ ಬಿಸ್‌ನೆಸ್ ಏನು ಹಾಕಿದ್ದೇವೆ, ಅದರ ಪ್ರಕಾರ ಹೋಗೋಣ. ನೀವು ಏನಾದರೂ ಹೇಳುವುದಿದ್ದರೆ ಆಮೇಲೆ ತಮಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಈಗ ನಾನು ಕ್ವೊಶ್ಚನ್ ಅವರ್ ಪ್ರಾರಂಭ ಮಾಡಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಏನಾದರೂ ಹೇಳಬೇಕಾದರೆ ಆಮೇಲೆ ಹೇಳಿ. ಕ್ವೊಶ್ಚನ್ ಅವರ್. ಕಾಲಿಂಗ್ ಅಟೆನ್‌ಷನ್ ಆದ ಮೇಲೆ ಜೀರೋ ಅವರ್‌ನಲ್ಲಿ ಹೇಳಬೇಕಾದರೆ ಹೇಳಿ. ಪ್ರಾರಂಭದಲ್ಲೇ ಹೀಗೆ ಮಾಡುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಎಸ್.ಜಿ. ನಾಯಕ್‌ರವರೇ ಸಪ್ಲಿಮೆಂಟರಿ ಹಾಕಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪೆಸಿಫಿಕ್ ಗ್ರಿವೆನ್ಸ್‌ಸ್ ಇದ್ದರೆ ಅದಕ್ಕೆ ಸ್ಪೆಸಿಫಿಕ್ ಫಾರಂ ಇದೆ. ಅದರ ಪ್ರಕಾರ ರೈಸ್ ಮಾಡಬಹುದು.

ಉಪಾಧ್ಯಕ್ಷರು : ಎಲ್ಲದಕ್ಕೂ ಒಂದು ನೀತಿ ನಿಯಮ ಇದೆ.

(ಗೊಂದಲ)

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ

ಶ್ರೀ ಕೆ.ಎಸ್. ಈಶ್ವರಪ್ಪ : ಶಾಸನ ಸಭೆ ನಡೆಸುವುದಕ್ಕೆ ದಿನಕ್ಕೆ 25 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ಮುಚ್ಚಿಬಿಡಿ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮೆಂಬರ್ಸ್ ಎಲ್ಲಿದ್ದಾರೆ? ನಿಮ್ಮ ಮುಖಂಡರು ಎಲ್ಲಿದ್ದಾರೆ? ಅವರನ್ನು ಕರೆಸಿ ನಿಮಗೇ ಆಸಕ್ತಿ ಇಲ್ಲ. ಇನ್ನೊಬ್ಬರಿಗೆ ಹೇಳುತ್ತೀರಿ.

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಈಗ ನಾವು ಏನು ಅಜೆಂಡಾ ಹಾಕಿರುತ್ತೇವೆಯೋ ಅದರ ಪ್ರಕಾರ ಹೋಗಬೇಕಾಗುತ್ತದೆ. ನೀವು ಮಾತನಾಡಬೇಕಾದರೆ ನಾನು ಆಮೇಲೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದರೂ ಸಹಾ ತಾವು ಅದನ್ನು ಪಾಲಿಸುತ್ತಿಲ್ಲ. ದಯವಿಟ್ಟು ಸಹಕಾರ ಕೊಡಿ. ನಾನು ಛೇರ್‌ನಲ್ಲಿ ಕುಳಿತು ಸಭೆಯನ್ನು ನಡೆಸಲಿಕ್ಕೆ ತಾವು ಸಹಕಾರ ಕೊಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ, ಈಗ ಎಸ್.ಜಿ. ನಾಯಕರೇ ಸಪ್ಲಿಮೆಂಟರಿ ಹಾಕಿರಿ.

(ಗೊಂದಲ)

ಉಪಾಧ್ಯಕ್ಷರು : ಈಶ್ವರಪ್ಪನವರೆ. ನೀವು ನಮಗೆ ಸಹಕಾರ ಕೊಡದಿದ್ದರೆ. I here to take the last course ದಯವಿಟ್ಟು ನೀವು ಸಹಕಾರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ತಾವು ಹೀಗೆ ಮಾತನಾಡುವುದು ಸರಿಯಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರಕಾರವೇ ಹೀಗೆ ನಡೆದುಕೊಳ್ಳುತ್ತಾ ಇದೆ. ಹಾಗಾದರೆ ನಾವುಗಳು ಹೇಗೆ ನಡೆದುಕೊಳ್ಳಬೇಕೆಂದು ಹೇಳಿ. ಇಲ್ಲಿ ವಿರೋಧ ಪಕ್ಷದವರಿಗೆ ಬೆಲೆ ಇಲ್ಲ, ಜನತೆಗೆ ಬೆಲೆ ಇಲ್ಲ, ಇಂಥ ಒಂದು ಸರಕಾರವನ್ನು ಸರಕಾರ ಎಂದು ಕರೆಯುವುದಾದರೂ ಹೇಗೆ? ಇಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಿಗೂ ಬೆಲೆ ಇಲ್ಲ......

ಉಪಾಧ್ಯಕ್ಷರು : ತಮಗೆ ಮುಂದೆ ಮಾತನಾಡಲು ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ಕಾಲದಲ್ಲಿ ತಾವು ಮಾತನಾಡುವುದು ಸರಿಯಲ್ಲ.......

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸಭೆಯಲ್ಲಿ ಶಾಸಕರು ಇದ್ದಾರೆಯೇ?

ಉಪಾಧ್ಯಕ್ಷರು : ಈ ಸಭೆ ನಡೆಸಲು ಬೇಕಾದಷ್ಟು ಕೋರಂ ಇದೆ. ನಾವು ಈ ಕಲಾಪಗಳಂತೆ ಪ್ರಶ್ನೋತ್ತರಗಳನ್ನು ಪ್ರಾರಂಭ ಮಾಡಿದ್ದೇವೆ.

(ಗೊಂದಲ)

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಸಭಾಧ್ಯಕ್ಷಿಣಿಯವರೇ. ಸದನದಲ್ಲಿ ಪ್ರಶ್ನೋತ್ತರ ವೇಳೆ ಪ್ರತಿಯೊಬ್ಬ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದೆ. ಪ್ರಶ್ನೆಗಳನ್ನು ಕೇಳುವುದು ಸದಸ್ಯರುಗಳ ಹಕ್ಕಿಗೆ ಸಂಬಂಧಪಟ್ಟದ್ದು. ಇಲ್ಲಿರುವ ಪ್ರತಿಯೊಬ್ಬ ಸದಸ್ಯರಿಗೂ ಆ ಒಂದು ಹಕ್ಕು ಇದೆ. ಪ್ರತಿಯೊಬ್ಬರೂ ಈ ಸಭೆಗೆ ಅಧೀನರೇ ಹೊರತು. ಸಭೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಬಾರದು. ಈ ಸಭೆಗಿಂತ ಯಾರೂ ದೊಡ್ಡವರು ಇಲ್ಲ. ಇಂಥ ಪ್ರಶ್ನೋತ್ತರ ಕಾಲದಲ್ಲಿ ಹೀಗೆ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ವ್ಯಕ್ತಿ ಈ ವಿಚಾರದಲ್ಲಿ ಹಸ್ತಕ್ಷೇಪಮಾಡುವುದಾದರೆ ಅದನ್ನು ತಾವು ಖಂಡನೆ ಮಾಡಬೇಕಾಗುತ್ತದೆ. ಅವರು ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಸದಸ್ಯರ ಹಕ್ಕನ್ನು ಕಿತ್ತುಕೊಂಡ ಹಾಗೆ ಆಗುತ್ತದೆ. ಇದು ಸಲ್ಲದು ಇಂತಹ ಒಂದು ಬ್ಯಾಡ್‌ಪ್ರಿಸಿಡೆಂಟ್ ನಮ್ಮ ಸಭೆಯಲ್ಲಿ ಆಗಬಾರದು ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಎನ್.ಜಿ. ನಾಯಕ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ.....

ಶ್ರೀ ಕೆ.ಎಸ್. ಈಶ್ವರಪ್ಪ : 1991-92ನೇ ಸಾಲಿನ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರೂ ಕೂಡ ಮಾಡಿಲ್ಲ. ಇದು ಸರಕಾರವೇ ಅಲ್ಲ....

(ಗೊಂದಲ)

ಉಪಾಧ್ಯಕ್ಷರು : ತಾವು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.....

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ. ತಾವು ಈಗಾಗಲೇ ಮಾನ್ಯ ಈಶ್ವರಪ್ಪನವರಿಗೆ ಬಹಳ ಸೂಕ್ತವಾಗಿ ಹೇಳಿದ್ದೀರಿ. ನಾನು ನಿಮಗೆ ಅವಕಾಶ ಕೊಡುತ್ತೇನೆ. ಅವಕಾಶವನ್ನು ಕೊಟ್ಟಾಗ ಮಾತನಾಡಿ ಈಗ ಪ್ರಶ್ನೋತ್ತರ ಕಾಲ ಪ್ರಶ್ನೆಗಳನ್ನು ಹಾಕಿದ್ದಾರೆ. ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನೀವು ಇದಕ್ಕೆ ಧಕ್ಕೆ ತರಬೇಡಿ. ಸಹಕಾರ ಕೊಡಿ ಎಂದು ಹೇಳಿದ್ದೀರಿ. ತಾವುಗಳು ಸಹಕಾರ ಕೇಳಿದ್ದು ಸರಿಯಾಗಿದೆ. ಆದರೆ ಅವರ ನಡವಳಿಕೆಯು ಸಹನೆಗೆ ಮಿತಿಮೀರಿ ಹೋಗುತ್ತಾ ಇದೆ. ಮಾನ್ಯ ಪುಟ್ಟಸ್ವಾಮಿಗೌಡರು ಹೇಳಿದ ಹಾಗೆ ಮಾನ್ಯ ಸದಸ್ಯರು ಈ ಸಭೆಗೆ ಅಧೀನರಾಗಿ ಇರುತ್ತಾರೋ ಇಲ್ಲವೇ ಸಭೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಾರೋ ಎಂಬುದು ಬೇಕು. ಈ ಬಗ್ಗೆ ಅವರ ನೀತಿ ಏನು ಎಂದು ತಿಳಿದುಕೊಳ್ಳಬೇಕು. ಅವರು ಸಭೆಗೆ ಗೌರವ ಕೊಟ್ಟು ತಾವು ಗೌರವವನ್ನು ಸಂಪಾದಿಸಿಕೊಳ್ಳಬೇಕು. ಈ ಸದನಕ್ಕೆ ಅಗೌರವ ಮಾಡಿ. ಸಭೆಯ ಸದಸ್ಯರಿಗೆ ಅಗೌರವಮಾಡಿ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ಅಗೌರವ ಮಾಡಿ ಇನ್ನೂ ಹಠಮಾರಿತನವನ್ನು ಮಾಡುತ್ತಾರೆ ಅಂದರೆ. ನಮ್ಮ ಸಹನೆಯೂ ಮಿತಿಮೀರಿ ಹೋಗುತ್ತಾ ಇದೆ. ತಾವು ಸಭೆಯ ನಿಯಮಾವಳಿಗಳ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದೊಂದೇ ಬಾಕಿ ಇರುವುದು ಎಂದು ನಾನು ಭಾವಿಸಿದ್ದೇನೆ. ಆದಕ್ಕೆ ಮಾನ್ಯ ಸದಸ್ಯರು ಅವಕಾಶ ಮಾಡಿಕೊಡಬಾರದು ಎಂದು ಕೂಡ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದಂಥ ವಿಚಾರಗಳ ಪ್ರಕಾರ ಸರಕಾರದವರು ನಡೆದುಕೊಂಡಿಲ್ಲ. ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ. ಇದು ಸರಕಾರವೇ ಅಲ್ಲ....

(ಗೊಂದಲ)

ಉಪಾಧ್ಯಕ್ಷರು : ಈಗ ಸಭೆ ನಡೆಸುವುದಕ್ಕೆ ತಾವು ಸಹಕಾರ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮಾನ್ಯ ಸಚಿವರು ಹೇಳಿದ ಹಾಗೆ. ಪ್ರಶ್ನೋತ್ತರ ವೇಳೆಯು ಬಹಳ ಮುಖ್ಯವಾದ ಕಾಲ ಇದು ಇಡೀ ರಾಜ್ಯದ ಪ್ರಶ್ನೆ. ಪ್ರತಿಯೊಬ್ಬ ಶಾಸಕರೂ ತಮ್ಮ ತಮ್ಮ ಕ್ಷೇತ್ರದ ವಿಷಯಗಳ ಬಗ್ಗೆ. ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಗೆ ತರುತ್ತಾರೆ. ತಾವುಗಳು ಅದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅಫಿಷಿಯಲ್ ಬಿಸಿನೆಸ್ ಆದಮೇಲೆ ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆಂದು ಮತ್ತೊಮ್ಮೆ ಹೇಳಲಿಕ್ಕೆ ಇಚ್ಚೆ ಪಡುತ್ತೇನೆ. ದಯವಿಟ್ಟು ತಾವು ಸಹಕಾರ ಕೊಡಬೇಕು. ಹೀಗೆ ಮಾತನಾಡುವುದು ಸರಿಯಲ್ಲ.... ಈಗ ನಾನು ಎನ್.ಜಿ. ನಾಯಕ್‌ರನ್ನು ಕರೆದಿದ್ದೇನೆ. ಅವರು ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹೀಗೆ ಅವರು ಪ್ರಶ್ನೆಗಳಿಗೆ ಉತ್ತರ ಕೊಟ್ಟರೂ ಅದಕ್ಕೆ ಬೆಲೆ ಇದೆಯೇ? ಸರಕಾರದವರು ಕೊಟ್ಟ ಆಶ್ವಾಸನೆಗಳು ಈಡೇರುತ್ತಾ ಇವೆಯೇ?

ಉಪಾಧ್ಯಕ್ಷರು : ರೂಲ್ 330ರ ಪ್ರಕಾರ ತಾವು ನನಗೆ ಸಹಕಾರ ಕೊಡಿ ಎಂದು ಕೇಳುತ್ತಾ ಇದ್ದೇನೆ. ಆದರೂ ತಾವುಗಳು ನನಗೆ ಇಲ್ಲಿ ಕಾರ್ಯಕಲಾಪಗಳನ್ನು ನಡೆಸಲು ಅಡ್ಡಿ ಬರುತ್ತಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ಸದನದಿಂದ ವಿತ್‌ಡ್ರಾ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಮಾತಿಗೆ ನಾನು ಗೌರವ ಕೊಡುತ್ತೇನೆ. ಆದರೆ ಈ ಸರ್ಕಾರ ಸಭಾಧ್ಯಕ್ಷರ ಮಾತಿಗೆ ಗೌರವ ಕೊಟ್ಟಿಲ್ಲ. ವಚನಭಂಗ ಮಾಡಿದೆ. ಸಾಲ ಮನ್ನಾ ಮಾಡಿಲ್ಲ.

MADAM DEPUTY SPEAKER : I want you to withdraw from the House ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಯಿತು. ಅಧ್ಯಕ್ಷಿಣಿಯವರೆ. ನಿಮ್ಮ ಮಾತಿಗೆ ಗೌರವ ಕೊಟ್ಟು ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ. ಈ ರಾಜ್ಯದ ಯುವಜನರಿಗೆ ಉದ್ಯೋಗ ಕೊಡಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಗ್ರಾನೈಟ್‌ನಲ್ಲಿ ಅನ್ಯಾಯವಾಗಿದೆಯೆಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ.

ಉಪಾಧ್ಯಕ್ಷಿಣಿಯವರು : ನೀವು ಅಡ್ಡಿಮಾಡುತ್ತಿದ್ದೀರಿ. ನೀವು ಈ ರೀತಿ ಮಾಡಬಾರದು. I want you to withdraw from the House.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಅಧಿವೇಶನಕ್ಕೇ ಪೂರ್ಣ ಬಹಿಷ್ಕಾರ ಹಾಕುತ್ತೇವೆ.

ಉಪಾಧ್ಯಕ್ಷಿಣಿಯವರು : ಅವರು ಹೋಗುವಾಗ ಮಾತನಾಡಿದ್ದು ಏನೂ ರೆಕಾರ್ಡಿಗೆ ಹೋಗಲಿಕ್ಕೆ ಸಾಧ್ಯವಿಲ್ಲ.

(ಶ್ರೀ ಈಶ್ವರಪ್ಪನವರು ಸಭೆಯಿಂದ ನಿರ್ಗಮಿಸಿದರು)

ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳು

282 (1749) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ರಲ್ಲಿ ಆಚರಿಸಲಾಗುವ ಭಾರತವನ್ನು ಸಂದರ್ಶನ ವರ್ಷದಲ್ಲಿ ಪ್ರವಾಸಿಗರನ್ನು ಅಪೇಕ್ಷಿಸಲು (ಆಕರ್ಷಿಸಲು) ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಸರ್ಕಾರವು ಈ ಕಾರ್ಯಕ್ರಮಕ್ಕಾಗಿ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸಿದೆ;

ಇ) ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಸರ್ಕಾರ ಹಣವನ್ನೇನಾದರೂ ನೀಡಿದೆಯೇ;

ಈ) ಮೊಳಕಾಲ್ಮೂರು ಕ್ಷೇತ್ರದ ನಾಯ್ಕನಹಳ್ಳಿ ತಿಪ್ಪೇರುದ್ರಸ್ವಾಮಿಯ ಮತ್ತು ಹೊಸ ಗುಡ್ಡದ ಒಂದೇ ಬಂಡೆಯಲ್ಲಿ ಕೊರೆದಿರುವ ಶಿವಲಿಂಗ ದೇವಸ್ಥಾನಗಳನ್ನು ಪ್ರವಾಸಿ ತಾಣದಲ್ಲಿ ಸೇರಿಸಲಾಗುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) 1) 1991ರ ಭಾರತ ಸಂದರ್ಶನ ವರ್ಷದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು.

1) ಮಡಕೇರಿ - ವಸಂತೋತ್ಸವ
2) ಪಟ್ಟದಕಲ್ಲು - ಬಿಜಾಪುರ ಉತ್ಸವ
3) ಮೈಸೂರು - ದಸರಾ ಉತ್ಸವ
4) ಚಿತ್ರದುರ್ಗ ಉತ್ಸವ
5) ಕರಾವಳಿ ಉತ್ಸವ

2) ರಾಜ್ಯದಲ್ಲಿ ಜಲಕ್ರೀಡೆ ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆ ವಿವಿಧ ಮಾದರಿಯ ದೋಣಿಗಳನ್ನು ಟೆಂಟ್‌ಗಳನ್ನು ಖರೀದಿಸಿ ಕೆಎಸ್‌ಟಿಡಿಸಿ, ಜಂಗಲ್ ಲಾಡ್ಜ್‌ಸ್ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಸಂಸ್ಥೆಗಳಿಗೆ ವಿತರಿಸಲಾಯಿತು.

3) ಕೇಂದ್ರ ನೆರವಿನೊಂದಿಗೆ ಕರ್ನಾಟಕದ ಬಗ್ಗೆ ಕಿರು ಹೊತ್ತಿಗೆಗಳನ್ನು ಮುದ್ರಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ರಾಜ್ಯ ಸರ್ಕಾರವು ಈ ಕಾರ್ಯಕ್ರಮಕ್ಕಾಗಿ ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿರುವುದಿಲ್ಲ.

ಇ) ಹೌದು.

ಈ) ನಾಯ್ಕನಹಟ್ಟಿ ಮತ್ತು ಹೊಸ ಗುಡ್ಡ ಕ್ಷೇತ್ರಗಳನ್ನು ಈ ಇಲಾಖೆಯ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ನಾಯ್ಕನಹಟ್ಟಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು 3 ಎಕರೆ ಜಮೀನನ್ನು ಪ್ರವಾಸೋದ್ಯಮ ಇಲಾಖೆಯ ವಶಕ್ಕೆ ಈಗಾಗಲೇ ತೆಗೆದುಕೊಳ್ಳಲಾಗಿದೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯಸಚಿವರು ಈ ವಿಷಯದಲ್ಲಿ . 5 ಕಡೆ ಜಾಗಗಳನ್ನು ಗುರ್ತಿಸಿದ್ದಾರೆ. ಆದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿರುವ ಒಂದು ದೇವಸ್ಥಾನ ಇದೆ. ಅದನ್ನು ದಕ್ಷಿಣ ಕಾಶಿ ಅನ್ನುತ್ತಾರೆ. ಆದ್ದರಿಂದ ಅಲ್ಲಿ ಒಂದು ಪ್ರವಾಸಿಮಂದಿರವನ್ನು ಕಟ್ಟುವುದು ಏನಾದರೂ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕೆ. ಶಿವಮೂರ್ತಿ : ಮಾನ್ಯ ನಾಯಕರು ತಮ್ಮ ಮೊಳಕಾಲ್ಮೂರು ಕ್ಷೇತ್ರದಲ್ಲಿರುವ ಒಂದು ದೇವಸ್ಥಾನ ಹಾಗೂ ನಾಯಕನಹಟ್ಟಿ ದೇವಸ್ಥಾನವನ್ನು ಪ್ರವಾಸಿ ಕೇಂದ್ರವಾಗಿ ಗುರ್ತಿಸಬೇಕೆಂದು ಕೇಳಿಕೊಂಡಿದ್ದಾರೆ ನಾವು ಈಗಾಗಲೇ ಇದನ್ನು ಪ್ರವಾಸಿಗರ ಪಟ್ಟಿಯಲ್ಲಿ ಸೇರಿಸಿದ್ದೇವೆ.

ಶ್ರೀ ಎನ್.ಜಿ. ನಾಯಿಕ್ : ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿರುವ ದೇವಸ್ಥಾನ ಇದೆ. ಅಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಅದು ಬಹಳ ಪ್ರಸಿದ್ಧವಾದದ್ದು. ಅದನ್ನೇನಾದರೂ ಪ್ರವಾಸಿಮಂದಿರಗಳ ಪಟ್ಟಿಯಲ್ಲಿ ಸೇರಿಸಲು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕೆ. ಶಿವಮೂರ್ತಿ : ಅದನ್ನು ಟೂರಿಸ್ಟ್‌ಸೆಂಟರ್ ಮಾಡಲು ಪಟ್ಟಿಯಲ್ಲಿ ಸೇರಿಸಿಕೊಂಡಿದ್ದೇವೆ. ಅದನ್ನು ಡೆವಲಪ್ ಮಾಡುವ ದೃಷ್ಟಿಯಿಂದ ನಾಯಕನಹಟ್ಟಿ ತಿಪ್ಪೇರುದ್ರ ಮಠದ ವ್ಯಾಪ್ತಿಗೆ ಬರುವ ಮೂರೆಕರೆ ಜಮೀನನ್ನು ಟೂರಿಸ್ಟ್ ಇಲಾಖೆಗೆ ವಹಿಸಿಕೊಟ್ಟಿದ್ದಾರೆ. ಆ ಸಮಿತಿಯವರೂ ಬಂದು ನನ್ನನ್ನು ಭೇಟಿಯಾಗಿದ್ದರು.

ಶ್ರೀ ಎನ್.ಜಿ. ನಾಯಕ್ : ನಾನು ಬೇರೆ ಕ್ವೆಶ್ಚನ್ ಕೇಳುತ್ತಾ ಇರುವುದು ಈ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರದಿಂದ ಈ ಸಾಲಿಗೆ ಎಷ್ಟು ಹಣ ಬಂದಿದೆ.

ಶ್ರೀ ಕೆ. ಶಿವಮೂರ್ತಿ : ಚಳ್ಳಕೆರೆ ಕ್ಷೇತ್ರದ ಬಗ್ಗೆ ಕೇಳಿದ್ದಾರೆ. ಈ ವರ್ಷದ ಏಪ್ರಿಲ್‌ನಲ್ಲಿ ಟೂರಿಸ್ಟ್‌ಗೆ ಫೆಸಿಲಿಟಿ ಕೊಡುವುದಕ್ಕಾಗಿ ಏನಾದರೂ ಕಾರ್ಯಕ್ರಮ ಹಾಕಲು ಪರಿಶೀಲನೆ ಮಾಡುತ್ತೇವೆ. ನಾಯಕನಹಟ್ಟಿ ಜಾತ್ರೆ ಬರುತ್ತದೆ. ನಾವೂ ನಾಯಕರು ಇಬ್ಬರೂ ಒಟ್ಟಿಗೆ ಹೋಗಿ ನೋಡಿಬಂದು ಯಾವ ರೀತಿ ಯೋಜನೆ ತಯಾರಿಸಿಕೊಡಬಹುದು. ಕೇಂದ್ರಸರ್ಕಾರ ರಾಜ್ಯಸರ್ಕಾರ ಹಣ ಒದಗಿಸಬಹುದೇ ಎಂದು ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಸಚಿವರು ನಾಗನಕಟ್ಟೆ ವಿಚಾರ ಹೇಳುತ್ತಿದ್ದಾರೆಯೇ ವಿನಃ ನಾನು ಕೇಳಿದ ಪ್ರಶ್ನೆಗೆ ಜವಾಬು ಕೊಡುತ್ತಿಲ್ಲ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿಸಿದ ದೇವಸ್ಥಾನವಿದೆ. ಅದನ್ನು ದಕ್ಷಿಣ ಕಾಶಿ ಎನ್ನುತ್ತಾರೆ. ಅದನ್ನು ಅವರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗ ಅವರ ಗಮನಕ್ಕೆ ತರುತ್ತಿದ್ದೇನೆ. ಮುಂದೆಯಾದರೂ ಅದನ್ನು ಪ್ರವಾಸಿಕೇಂದ್ರವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ: ದ್ವಾಪರ ಯುಗದಲ್ಲಿ ಕಟ್ಟಿತೆನ್ನಲಾದ ಶಿವಲಿಂಗ ದೇವಸ್ಥಾನವಂತೆ ಅದು. ಒಂದೇ ಕಲ್ಲಿನಲ್ಲಿ ಕೆತ್ತನೆಯಾದದ್ದು ಬಹಳ ಚೆನ್ನಾಗಿದೆ ಎಂದು ಕೇಳಿದ್ದೇನೆ.

ಉಪಾಧ್ಯಕ್ಷರು : ನೀವು ಇನ್ನೂ ನೋಡಿಲ್ಲ.

ಶ್ರೀ ಕೆ. ಶಿವಮೂರ್ತಿ : ನಾವು ಮತ್ತು ನಾಯಕರು ಒಟ್ಟಿಗೆ ಹೋಗಿ ಅದನ್ನು ನೋಡಿಕೊಂಡು ಬರುತ್ತೇವೆ. ನಾನು ನೋಡಿಲ್ಲ. ಆದರೆ ಹೇಳಿರತಕ್ಕಂಥದ್ದನ್ನು ಕೇಳಿದ್ದೇನೆ. ಅದು ನಮ್ಮ ಜಿಲ್ಲೆಯಲ್ಲಿ ಬರತಕ್ಕಂಥದ್ದು. ಬಹಳ ಸುಂದರವಾಗಿ ಕೆತ್ತಿದ್ದಾರೆ. ಅದನ್ನು ದ್ವಾಪರ ಯುಗದಲ್ಲಿ ಕಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದೇನೋ ನನಗೆ ಗೊತ್ತಿಲ್ಲ. ನೋಡುವುದಕ್ಕೆ ಬಹಳ ಚೆನ್ನಾಗಿದೆ.

ಅದನ್ನು ಪ್ರವಾಸಿಗರ ಒಂದು ಜಾಗ ಎಂದು ಮಾಡಬೇಕು ಎಂದು ನಮ್ಮ ಮಾನ್ಯ ಸದಸ್ಯರಾದ ನಾಯಕರ ಕಳಕಳಿ ಏನು ಇದೆಯೋ. ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅಲ್ಲಿ ಬಂದು ಏನು ಫೆಸಿಲಿಟೀಸನ್ನು ಕೊಡಬೇಕೋ ಮುಂದೆ ಏಪ್ರಿಲ್‌ನಲ್ಲಿ ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ. ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿಲ್ಲ. 'ಹೌದು' ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಷ್ಟು ಹಣ ಬಂದಿದೆ? ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಅದನ್ನು ತಿಳಿಸಿ.

ಶ್ರೀ ಕೆ. ಶಿವಮೂರ್ತಿ : ಈಗ ಅವರು ಆ ಪ್ರಶ್ನೆಯನ್ನು ಹಾಕಿಲ್ಲ. ಈಗ ನಾಯಕನಟ್ಟಿ ಮತ್ತೆ ಶಿವಲಿಂಗ ದೇವಸ್ಥಾನದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಯಾವುದೇ ಯೋಜನೆಯನ್ನು ಕಳುಹಿಸಿಲ್ಲ. ರಾಜ್ಯ ಸರ್ಕಾರ ಕಳುಹಿಸಿಲ್ಲ. ಆದರೆ ಜಮೀನನ್ನು ಕೊಡಿ ಎಂದು ಕೇಳಿದ್ದಾರೆ. ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಈಗ ನಾವು ಅದರ ಅಂದಾಜನ್ನು ತಯಾರುಮಾಡಿ ಕಳುಹಿಸಿಕೊಡಬೆಕಾಗುತ್ತದೆ. ಅದರ ಅಂದಾಜನ್ನು ತಯಾರುಮಾಡಿದಮೇಲೆ ಎಷ್ಟು ಹಣವನ್ನು ಕೊಡಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಸರಿಯಾಗಿ ನನಗೆ ಉತ್ತರ ಬಂದಿಲ್ಲ. ನಾನು ಕೇಳುತ್ತಿರುವುದು ಏನೆಂದರೆ. ಈಗ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ : ಈಗ ನಾಯಕರು ಯಾವ ಪ್ರಶ್ನೆಯನ್ನು ಕೇಳುತ್ತಿದ್ದಾರೆಂದು ನನಗೆ ಅರ್ಥವಾಗಿಲ್ಲ.

ಉಪಾಧ್ಯಕ್ಷರು : ಕೇಂದ್ರ ಸರ್ಕಾರದಿಂದ ತಮಗೆ ಟೂರಿಸಂಗಾಗಿ ಎಷ್ಟು ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ : ಯಾವ ಯೋಜನೆ ಅಡಿಯಲ್ಲಿ ಯಾವ ಹಣವನ್ನು ಕೇಳುತ್ತಿದ್ದಾರೆ ಎಂದು ನನಗ ಅರ್ಥವಾಗಿಲ್ಲ. ಏಕೆಂದರೆ ಅವರ ಮೊದಲನೆ ಪ್ರಶ್ನೆಗೆ 'ಭಾರತವನ್ನು ಸಂದರ್ಶಿಸಿ ವರ್ಷದಲ್ಲಿ' ತಾವು ಏನು ಕಾರ್ಯಕ್ರಮವನ್ನು ಹಮ್ಮಿ ಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ. ಆದರೆ ಮೊಳಕಾಲ್ಮೂರು ಕ್ಷೇತ್ರದ ಬಗ್ಗೆ ಕೇಳುತ್ತಿದ್ದಾರೆ. ಅದರ ಬಗ್ಗೆ ಯಾವ ಕೇಂದ್ರ ಸರ್ಕಾರವೂ ಹಣವನ್ನು ಕೊಟ್ಟಿಲ್ಲ. ಯಾವ ರಾಜ್ಯ ಸರ್ಕಾರವೂ ಹಣವನ್ನು ಕೊಟ್ಟಿಲ್ಲ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಐದು ಉತ್ಸವಗಳನ್ನು ಮಾಡಿದ್ದಾರೆ. ಆ ಉತ್ಸವಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ನಾಯಕರ ಎಲ್ಲಾ ಪ್ರಶ್ನೆಗಳು ಏನೇನು ಇದೆ. ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಶಿವಶೇಖರಪ್ಪಗೌಡರೇ. ತಮ್ಮ 283 (1747)ನೇ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಒಂದು ವಾರ ಟೈಮ್ ಬೇಕು ಎಂದು ಮಂತ್ರಿಗಳು ಕೇಳಿದ್ದಾರೆ. ಮುಂದಿನ ವಾರದಲ್ಲಿ ಅದನ್ನು ತೆಗೆದುಕೊಳ್ಳೋಣ.

ಉಪಾಧ್ಯಕ್ಷರು : ಮಾನ್ಯ ಮುನಿಸ್ವಾಮಿಯವರೇ. ತಾವು 284 (1714)ನೇ ಪ್ರಶ್ನೆಯನ್ನು ಪಿ.ಡಬ್ಲ್ಯೂ.ಡಿ. ಮಿನಿಸ್ಟರಿಗೆ ಹಾಕಿರುವುದು ಎಂದು ಕಾಣುತ್ತದೆ. ಇದು ಸೋಷಿಯಲ್ ವೇಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿರುವಂಥದ್ದು. ಆ ಪ್ರಶ್ನೆಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಉತ್ತರ ಬಂದಮೇಲೆ ಅದನ್ನು ತೆಗೆದುಕೊಳ್ಳೋಣ.

ತುಂಗಾ ಮೇಲ್ದಂಡೆ ಯೋಜನೆ

285 (1751) ಶ್ರೀ ಕೆ.ಬಿ. ಕೋಳಿವಾಡ್ (ರಾಣಿಬೆನ್ನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಾ ಮೆಲ್ದಂಡೆ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ಅಡಿಗಲ್ಲನ್ನು ಹಾಕಿದ ನಂತರ ಇದುವರೆವಿಗೂ ಯಾವ ಯಾವ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ :

ಆ) ಸದರಿ ಯೋಜನೆಗೆ ಕೇಂದ್ರ ಸಕಾರದ ಮನ್ನಣೆ ದೊರಕಿದೆಯೇ :

ಇ) ಈ ಸದರಿ ಯೋಜನೆಗೆ ವಿಶ್ವ ಬ್ಯಾಂಕ್‌ನ ನೆರವನ್ನು ಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಮಲ್ಲಿರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ) ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ತುಂಗಾ ಮೇಲ್ದಂಡೆ ಯೋಜನೆಯ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಒಪ್ಪಿಗೆಗಾಗಿ ಮಾರ್ಚ್ 1991ರಲ್ಲಿ ಕಳುಹಿಸಲಾಗಿತ್ತು. ಸದರಿ ಆಯೋಗವು ಕೇಳಿರುವ ಹಲವು ತಾಂತ್ರಿಕ ವಿಚಾರಗಳ ಬಗ್ಗೆ ವಿವರಗಳನ್ನು ಮಾರ್ಚ್ 1992ರಲ್ಲಿ ಕಳುಹಿಸಿಕೊಡಲಾಗಿದೆ. ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸುವ ಸಲುವಾಗಿ. ಹೊಸದಾಗಿ ಒಂದು ವಿಭಾಗ ಮತ್ತು ಮೂರು ಉಪ-ವಿಭಾಗದ ಕಛೇರಿಗಳನ್ನು ಆಗಸ್ಟ್ 1991ರಲ್ಲಿ ತೆರೆಯಲಾಗಿದೆ. ಇದಲ್ಲದೆ. ಶಿವಮೊಗ್ಗ ಪಟ್ಟಣವನ್ನು ಕೇಂದ್ರ ಕಾರ್ಯಸ್ಥಾನವನ್ನಾಗಿ ಮಾಡಿ ಒಂದು ಮುಖ್ಯ ಇಂಜನಿಯರ್ ಅವರ ವಲಯವನ್ನು ಸಹ ಸೃಜಿಸಿರುವ ಸರ್ಕಾರಿ ಆದೇಶವನ್ನು ಮಾರ್ಚ್ 92ರಲ್ಲಿ ಹೊರಡಿಸಲಾಗಿದೆ.

ಆ) ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲ.

ಇ) ಈ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ದೊರೆತ ನಂತರ ಈ ವಿಚಾರವನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಈ ತುಂಗಾ ಮೇಲ್ದಂಡೆ ಯೋಜನೆಗೆ ಸೆಂಟ್ರಲ್ ವಾಟರ್ ಕಮಿಷನರ್‌ರವರು ಕೆಲವೊಂದು ವಿವರಣೆಯನ್ನು ಕೇಳಿ ರಾಜ್ಯಸರ್ಕಾರಕ್ಕೆ ಕಳುಹಿಸಿದ್ದರು. ರಾಜ್ಯಸರ್ಕಾರದವರು ಆ ವಿವರಣೆಗೆ ಉತ್ತರವನ್ನು ಎಷ್ಟು ಅವಧಿಯಲ್ಲಿ ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಇದು ಒಂದು. ಎರಡನೇಯದು. ಅಪ್ಪರ್‌ತುಂಗಾ ಯೋಜನೆ 350 ರಿಂದ 400 ಕೋಟಿ ರೂಪಾಯಿಗಳ ಯೋಜನೆ. ಈ ವರ್ಷದ ಆಯವ್ಯಯದಲ್ಲಿ ಆದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ ಮತ್ತು ಎರಡು ಸಾವಿರ ಇಸವಿಯೊಳಗಾಗಿ ಇದನ್ನು ಪೂರ್ತಿಗೊಳಿಸಲು ಯಾವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ ಎನ್ನತಕ್ಕಂಥದ್ದನ್ನು ತಾವು

ಹೇಳಬೇಕು. ಮತ್ತು ಕೇಂದ್ರ ಸರ್ಕಾರದ ಮನ್ನಣೆಯನ್ನು ಪಡೆಯದ ಹೊರತು ಈ ಯೋಜನೆಯನ್ನು ಜಾಗತಿಕ ಬ್ಯಾಂಕ್‌ನಿಂದ ಹಣದ ನೆರವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದೀರಿ. ಎಷ್ಟು ಅವಧಿಯಲ್ಲಿ ಕೇಂದ್ರ ಸರ್ಕಾರದ ಮನ್ನಣೆಯನ್ನು ಪಡೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಇದೇ ವರ್ಷದಲ್ಲಿ ಈ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಅದನ್ನು ಆದಷ್ಟು ಶೀಘ್ರವಾಗಿ. ಕೇಂದ್ರಸರ್ಕಾರದಿಂದ ಒಪ್ಪಿಗೆ ಪಡೆದು ಸಾರ್ವಜನಿಕ ಹಿತದೃಷ್ಟಿಯಿಂದ. ರೈತರ ಹಿತದೃಷ್ಟಿಯಿಂದ ಸುಮಾರು ನಾಲ್ಕೈದು ಭಾಗಗಳಿಗೆ ಇದರಿಂದ ಬಹಳ ಉಪಯೋಗವಾಗತಕ್ಕಂಥ ಒಂದು ಯೋಜನೆ. ಆ ದೃಷ್ಟಿಯಿಂದ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಕೋಳಿವಾಡ್‌ರವರಿಗೆ ಇದು ಗೊತ್ತಿದೆ. ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ತೆಗೆದುಕೊಳ್ಳದೇ ನಾವು ಯಾವುದೇ ಕಾರ್ಯಕ್ರಮವನ್ನು ಇದರಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದಷ್ಟು ಇದರ ಬಗ್ಗೆ ತ್ವರಿತವಾಗಿ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದು. ಅವರು ಪೂರ್ವಭಾವಿಯಾಗಿ ಭೂಸಮೀಕ್ಷೆಯನ್ನು ಮಾಡಬೇಕಾಗುತ್ತದೆ. ಆ ಸಮೀಕ್ಷೆಗಾಗಿ ಈಗಾಗಲೇ ಸುಮಾರು 75 ಲಕ್ಷ ರೂಪಾಯಿಗಳನ್ನು ನಾವು ತುಂಬಿದ್ದೇವೆ.

ಇದನ್ನು 2000 ಇಸವಿಯೊಳಗೆ ಪೂರ್ಣ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ ಎಂಬ ಅಭಿಪ್ರಾಯವನ್ನು ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ.

ಶ್ರೀ ಕೆ.ಜಿ. ಕೋಳಿವಾಡ್ : ನನಗೆ ನೇರವಾಗಿ ಉತ್ತರ ಸಿಗಲಿಲ್ಲ. ಮೊದಲನೆಯದಾಗಿ ಕೇಂದ್ರ ಸರ್ಕಾರದ ವಾಟರ್ ಕಮೀಷನರ್‌ರವರು ಕೇಳಿದಂತಹ ವಿವರಣೆಗೆ ಉತ್ತರವನ್ನು ಕೊಡಲಿಕ್ಕೆ ರಾಜ್ಯ ಸರ್ಕಾರ ಎಷ್ಟು ವೇಳೆಯನ್ನು ತೆಗೆದುಕೊಂಡಿದೆ. ಎರಡನೆಯದಾಗಿ ಈ ವರ್ಷದ ಆಯವ್ಯಯದಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿದೆ ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ 1991ರಲ್ಲಿ ಈ ಯೋಜನೆಗೆ ನಾವು ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. 1992ರಲ್ಲಿ ಈ ಯೋಜನೆಯ ಅನುಮತಿಗಾಗಿ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಕೊಟ್ಟಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ಅಷ್ಟು ಹಣವನ್ನು ಒದಗಿಸುತ್ತೇವೆನ್ನುವ ಅಭಿಪ್ರಾಯವನ್ನು ವ್ಯಕ್ತಮಾಡುತ್ತೇವೆ.

ಶ್ರೀ ಮಂಜುನಾಥ್ ಸಿ. ಕನ್ನೂರ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ತುಂಗಾ ಮೇಲ್ದಂಡೆ ಯೋಜನೆ ಬಹಳ ಪ್ರಾಮುಖ್ಯವಾಗಿದ್ದು ಇದು ಬಹಳ ದಿವಸಗಳಿಂದ ನೆಲಗುದಿಗೆ ಬಿದ್ದಂತಹ ವಿಚಾರವಾಗಿದೆ. 2000 ಇಸವಿಯೊಳಗಾಗಿ ಬಚಾವತ್ ಅವಾರ್ಡ್ ಪ್ರಕಾರ ನೀರಿನ ಹಕ್ಕನ್ನು ನಾವು ಉಪಯೋಗ ಮಾಡಿಕೊಳ್ಳುವುದರಿಂದ ಈಗಾಗಲೇ ಹೇಳಿದಂತೆ ಸುಮಾರು ಮೂರುವರೆಯಿಂದ ನಾಲ್ಕು ನೂರು ಕೋಟಿ ರೂಪಾಯಿಗಳನ್ನು ನಾವು ಈ ಯೋಜನೆಗೆ ಖರ್ಚುಮಾಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೆ ತುಂಗಾ ಮೇಲ್ದಂಡೆ ಯೋಜನೆಯ ಶಂಕು ಸ್ಥಾಪನೆಯನ್ನು ಮಾಡಿ ಬಂದಿದ್ದಾರೆ. ಆ ಸಮಯದಲ್ಲಿ ಕೇಂದ್ರ ಸರ್ಕಾರದ ಪರವಾನಗಿ ಇಲ್ಲದೆ ಇದ್ದರೂ ಕೂಡ ಇದನ್ನು ಮಾಡಲಿಕ್ಕೆ ಬರುತ್ತದೆ. ಮತ್ತು ನಾವು ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಸಹ ನಮ್ಮ ಧಾರವಾಡ ಜಿಲ್ಲೆಯ ರೈತರಿಗೆ ಕೊಟ್ಟಿದ್ದಾರೆ. ಆ ಕಾರಣದಿಂದ ಆದಷ್ಟು ತ್ವರಿತವಾಗಿ ಈ

ಯೋಜನೆಯನ್ನು ಮಂಜೂರು ಮಾಡಬೇಕು. ಇದಕ್ಕೆ ಹೆಚ್ಚು ಹಣವನ್ನು ಆಯವ್ಯಯದಲ್ಲಿ ಇಡಬೇಕು ಎನ್ನತಕ್ಕ ಮಾತನ್ನು ತಮ್ಮ ಮುಖೇನ ಮಾನ್ಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಈ ಯೋಜನೆಯನ್ನು ಪ್ರಾರಂಭ ಮಾಡುವ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ 5 ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಬಿಡುಗಡೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಆ ಯೋಜನೆಗಳಿಗೆ ಅವಶ್ಯಕತೆ ಏನಿದೆ ಅದನ್ನು ನಾವು ಮಾಡಿಕೊಡುತ್ತೇವೆ. ಹಣಕಾಸಿನ ತೊಂದರೆ ಏನಿಲ್ಲ. ಆದರೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದು ಅದನ್ನು ಜಾತಿಕ ಬ್ಯಾಂಕಿಂಗೆ ಕೊಡುವಂತಹ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅದು ಮಾನ್ಯ ಕೋಳಿವಾಡ್‌ರವರಿಗೂ ಗೊತ್ತು ಮತ್ತು ಮಾನ್ಯ ಕುನ್ನೂರ್ ಅವರಿಗೂ ಗೊತ್ತಿದೆ. ಆ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಪೂರ್ಣಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇವೆ. ಏಕೆಂದರೆ. 400 ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಅದು ನನಗೂ ಕೂಡ ಗೊತ್ತಿದೆ. ಆ ದೃಷ್ಟಿಯಿಂದ ವಿವರವಾದಂತಹ ವರದಿಯನ್ನು ತರಿಸಿಕೊಂಡು ಮತ್ತೊಂದು ಸಲ ವಿವರವಾದಂತಹ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ನಾನು ಏತಕ್ಕೆ ಪುನಃ ಪುನಃ ಪ್ರಶ್ನೆಯನ್ನು ಕೇಳುತ್ತೇನೆ ಎಂದರೆ. ಕೇಂದ್ರ ಸರ್ಕಾರದ ವಿವರಣೆಗೆ ಉತ್ತರ ಕೊಡಲಿಕ್ಕೆ ರಾಜ್ಯ ಸರ್ಕಾರದ ಅಧಿಕಾರಿಗಳು 10 ತಿಂಗಳು ತೆಗೆದುಕೊಂಡಿದ್ದಾರೆ. ಈ ಯೋಜನೆಯನ್ನು ತ್ವರಿತಗತಿಯಲ್ಲಿ ಕಾರ್ಯರೂಪಕ್ಕೆ ಅಧಿಕಾರಿಗಳಿಗೆ ಮನಸ್ಸು ಇಲ್ಲವೇನೋ ಎನ್ನುವಂತಹ ಸಂಶಯ ಬರುತ್ತಿದೆ. ಈ ಅಧಿಕಾರಿಗಳಿಗೆ ವಿವರಣೆಯನ್ನು ಕೊಡಲಿಕ್ಕೆ 10 ತಿಂಗಳು ಏತಕ್ಕೆ ಬೇಕಾಗಿತ್ತು? ಮತ್ತು ಈ ವರ್ಷದ ಬಜೆಟ್‌ನಲ್ಲಿ ಕೇವಲ 2.5 ಕೋಟಿ ರೂಪಾಯಿಗಳನ್ನು ತಾವು ಇಟ್ಟಿದ್ದೀರಿ. 400 ಕೋಟಿ ರೂಪಾಯಿಗಳ ಯೋಜನೆಗೆ 2.5 ಕೋಟಿ ರೂಪಾಯಿಗಳು ಸಾಕಾಗುತ್ತದೆಯೇ? ಇಷ್ಟು ಹಣವನ್ನು ಇಟ್ಟರೆ 2000 ಇಸವಿಯೊಳಗೆ ಯೋಜನೆಯನ್ನು ಪೂರ್ಣಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ಬಗ್ಗೆ ವಿವರಣೆಯನ್ನು ಕೊಡಬೇಕು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ನಾನು ಈಗಾಗಲೆ ಹೇಳಿದ್ದೇನೆ. ಅದನ್ನು ನಾವು ವರ್ಲ್ಡ್ ಬ್ಯಾಂಕಿಗೆ ಪ್ರೋನ್ ಮಾಡತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇನೆ. ಈಗ ಪ್ರಾರಂಭದ ವಿಷಯದಲ್ಲಿ ಅದಕ್ಕೆ ಏನು ಹಣಕಾಸಿನ ವ್ಯವಸ್ಥೆ ಬೇಕು. ಆ ಹಣಕಾಸಿನ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಅದು ಅಲ್ಲದೆ ಮಾನ್ಯ ಕೋಳಿವಾಡ್‌ರವರು ಹೇಳಿದ ಪ್ರಕಾರ. ಟೆಕ್ನಿಕಲ್ ಕಮಿಟಿಯಿಂದ ಇನ್ನೂ ಕೆಲವು ಮಾಹಿತಿಗಳನ್ನು ಪಡೆದುಕೊಂಡು ಅದನ್ನು ಆದಷ್ಟು ಶೀಘ್ರವಾಗಿ ಸರ್ಕಾರಕ್ಕೆ ಕಳುಹಿಸಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಪ್ರವಾಸಿ ಸ್ಥಳಗಳ ಅಭಿವೃದ್ಧಿ

287 (1755) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳಿಗೆ ಅಭಿವೃದ್ಧಿ ಪಡಿಸಲು ಗುರುತಿಸಿರುವ ಸ್ಥಳಗಳಾವುವು ;

ಆ) ಇದಕ್ಕಾಗಿ ಮೀಸಲಾಗಿಟ್ಟಿರುವ ಹಣವೆಷ್ಟು ; ಇಲ್ಲಿಯವರೆಗೆ ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು ; ಯಾವ ಯೋಜನೆಯನ್ವಯ ಇದನ್ನು ಕೈಗೊಳ್ಳಲಾಗಿದೆ ;

ಇ) ಈ ಅಭಿವೃದ್ಧಿ ಕಾರ್ಯಕ್ರಗಳ ಸಮರ್ಪಕ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ರಚಿಸಲಾಗಿದೆಯೇ. ಇಲ್ಲದಿದ್ದಲ್ಲಿ ಒಂದು ಸಮನ್ವಯ ಸಮಿತಿ ರಚಿಸುವುದು ಸೂಕ್ತವಲ್ಲವೇ ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರವು ಈ ಕೆಳಕಂಡ ಸ್ಥಳಗಳನ್ನು ಗುರುತಿಸಿದೆ.

1) ಬಾಬಾಬುಡನಗಿರಿ
2) ಶೃಂಗೇರಿ
3) ಭಧ್ರಾ ಜಲಾಶಯ
4) ಕೆಮ್ಮಣ್ಣುಗುಂಡಿ
5) ಅಮೃತಪುರ
6) ಬೆಳವಾಡಿ
7) ಹಿರೇಮಗಳೂರು
8) ಕಳಸ
9) ಮುತ್ತೋಡಿ ಅರಣ್ಯಧಾಮ
10) ಅಯ್ಯನಕೆರೆ
11) ಅಂಗಡಿ
12) ಬಲ್ಲಾಳರಾಯನದುರ್ಗ
13) ಮುಳ್ಳಯ್ಯನಗಿರಿ

ಆ) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ 1) ಶೃಂಗೇರಿ 2) ಚಿಕ್ಕಮಗಳೂರು 3) ಬಾಬಾಬುಡನಗಿರಿ ಹಾಗೂ ಕೆಮ್ಮಣ್ಣುಗುಂಡಿಗಳ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಲಾಗಿದೆ. ಕೇಂದ್ರ ಸರ್ಕಾರವು ಒಟ್ಟು ರೂ. 63.01 ಲಕ್ಷ ಮಂಜೂರಾತಿ ನೀಡಲಾಗಿದ್ದು ಇದುವರೆಗೆ ರೂ.23.50 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ರೂ. 23.50 ಲಕ್ಷದಲ್ಲಿ ರೂ. 12.00 ಲಕ್ಷ ಬಿಡುಗಡೆ ಮಾಡಿರುತ್ತದೆ. ಇದರಲ್ಲಿಯೂ 8.18 ಲಕ್ಷ ಖರ್ಚಾಗುತ್ತದೆ.

ಇ) ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ರಚಿಸಿರುವುದಿಲ್ಲ. ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಟೂರಿಸಂ ಸೆಂಟರನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಕಡೆ ಗುರ್ತಿಸಿದ್ದೀರೆಂದು ಕೇಳಿದ್ದಕ್ಕೆ 13 ಕಡೆ ಗುರ್ತಿಸಿದ್ದೇವೆಂದು ಹೇಳಿದ್ದಾರೆ. ಜೊತೆಗೆ ಇದಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂದು ನಾನು ಕೇಳಿದ್ದಕ್ಕೆ. ಅವರು 12 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ ಅದರಲ್ಲಿ 8 ಲಕ್ಷ 18 ಸಾವಿರ ರೂಪಾಯಿಗಳಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅನೇಕ ಟೂರಿಸಂ ಸೆಂಟರ್‌ಗಳು ಇರುವಂತಹ ಕಡೆ ಅಭಿವೃದ್ಧಿ ಆಗಿರುವುದಂಥದ್ದು ನಮಗೂ ಗೊತ್ತಿರುವ ವಿಚಾರ ಹಾಗೂ ಸರ್ಕಾರದ

ಗಮನಕ್ಕೂ ಬಂದಿರುವಂಥ ವಿಚಾರ. ಆದರೆ ಇಡೀ ಕರ್ನಾಟಕ ರಾಜ್ಯಕ್ಕೆ ಹೆಸರುವಾಸಿಯಾದಂತಹ 480 ಅಡಿ ಎತ್ತರದಲ್ಲಿರುವ ಮುಳ್ಳಯ್ಯನಗಿರಿ ಅಭಿವೃದ್ಧಿಯ ಬಗ್ಗೆ ಬಹುಶಃ ಸರ್ಕಾರದವರು ಇಲ್ಲಿಯವರೆಗೂ ಒಂದು ರೂಪಾಯಿಯನ್ನೂ ಸಹ ಖರ್ಚು ಮಾಡಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಅದರಲ್ಲಿ ಇನ್ನೊಂದು ಕೇಂದ್ರ ಎಂದರೆ ಬಾಬಾಬುಡನ್‌ಗಿರಿ ಹಾಗೂ ದತ್ತಾತ್ರೇಯ ಪೀಠ ಇಲ್ಲಿ ದೇವಾಲಯಗಳು ಇರುವಂತಹದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಟೂರಿಸ್ಟ್ ಸೆಂಟರ್ ಎಂದು ಸೇರಿಸಿಕೊಂಡಿದ್ದಾರೆ. ಅಲ್ಲೂ ಒಂದು ರೂಪಾಯಿಯಷ್ಟೂ ಸಹ ಅಭಿವೃದ್ಧಿ ಕೆಲಸವಾಗಿರುವುದಿಲ್ಲ.

ಇವತ್ತಿನ ದಿವಸ ಎರಡೂ ಕಡೆಯೂ ಸಹ ಜಾತ್ರೆ ನಡೆಯುವಂತಹ ಒಂದು ಸಮಯವಿದೆ. ನಾಳೆ ಮತ್ತು ನಾಡಿದ್ದರಲ್ಲಿ ಎರಡು ಕಡೆ ಜಾತ್ರ ನಡೆಯುತ್ತದೆ. ಈ ಜಾತ್ರೆ ಸಮಯದಲ್ಲಿ ಕುಡಿಯುವ ನೀರಿನ ಸವಲತ್ತು ಅಥವಾ ನಾಗರೀಕ ಸವಲತ್ತುಗಳು ಏನು ಅಗತ್ಯಕಾ ಗಿ ದೊರೆಯಬೇಕಾಗಿತ್ತೋ ಅಂತಹ ಸವಲತ್ತುಗಳು ಇಲ್ಲಿ ಬಂದಂತಹ ಭಕ್ತಾಧಿಗಳಿಗೆ ದೊರೆಯುತ್ತಿಲ್ಲ. ಆದುದರಿಂದ ಸರ್ಕಾರವು ಇದಕ್ಕಾಗಿ ಇಷ್ಟು ವರ್ಷಗಳಾದರೂ ಸಹ ಏತಕ್ಕಾಗಿ ಯಾವುದೇ ಒಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿಲ್ಲ ಮತ್ತು ಕೇಂದ್ರ ಸರ್ಕಾರದವರು 63 ಲಕ್ಷದ ಒಂದು ಸಾವಿರ ರೂಪಾಯಿಗಳಿಗೆ ಒಪ್ಪಿಗೆ ಕೊಟ್ಟು ಅನುಮತಿ ಕೊಟ್ಟಿದ್ದರೂ ಸಹಾ ಅದರಲ್ಲಿ 23 ಲಕ್ಷದ 50 ಸಾವಿರ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಕೇವಲ 8 ಲಕ್ಷ 15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವುದನ್ನು ನೋಡಿದರೆ ಬಹುಶಃ ಇದರಿಂದ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ಅನ್ನಿಸುತ್ತದೆ. ಆದರೆ ಈ 23 ಲಕ್ಷದಲ್ಲಿ ಕೇವಲ 12 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ. ಉಳಿದಂತಹ ಹಣವನ್ನು ಯಾವ ಯಾವ ಕೇಂದ್ರಗಳಿಗೆ ಬಿಡುಗಡೆ ಮಾಡುತ್ತೀರಿ? ಈಗ ಅಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆ ನಡೆಯುತ್ತಿರುವ ಕಡೆ ಅಭಿವೃದ್ಧಿಪಡಿಸುವುದಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತೀರಿ? ಇದನ್ನು ದಯವಿಟ್ಟು ಮಂತ್ರಿಗಳು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷಿಣಿಯವರೇ. ಚಿಕ್ಕಮಗಳೂರು ಜಿಲ್ಲೆಯಲ್ಲಿ 13 ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದು ನಾವು ಗುರ್ತಿಸಿದ್ದೇವೆ. ಇದರಲ್ಲಿ ಶೃಂಗೇರಿಯಲ್ಲಿ ಉಪಹಾರ ಮತ್ತು ವಸತಿ ಗೃಹನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದವರು ಹಣ ಕೊಟ್ಟಿದ್ದಾರೆ. ಚಿಕ್ಕಮಗಳೂರು ರೋಡ್ ಸೈಡ್ ಫೆಸಿಲಿಟೀಸ್. ಹೆದ್ದಾರಿ ಸೌಲಭ್ಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದವರು ಹಣ ಕೊಟ್ಟಿದ್ದಾರೆ. ಬಾಬಾಬುಡನ್‌ಗಿರಿಯಲ್ಲಿ ಒಂದು ಪ್ರವಾಸಿ ಸಂಕೀರ್ಣ ನಿರ್ಮಾಣಕ್ಕೋಸ್ಕರ ಹಣ ಕೊಟ್ಟಿದ್ದಾರೆ. ಕೆಮ್ಮಣ್ಣುಗುಂಡಿಯಲ್ಲಿ ಪ್ರವಾಸಿ ಕುಟೀರ ಕಟ್ಟಬೇಕೆಂದು ಹಣ ಕೊಟ್ಟಿದ್ದಾರೆ. ಒಟ್ಟು ನಮ್ಮ ರಾಜ್ಯದ ವತಿಯಿಂದ ಈ ಚಿಕ್ಕಮಗಳೂರು ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳ ಅಂದಾಜನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಿದ್ದೇವೆ. ಕೇಂದ್ರ ಸರ್ಕಾರದವರು ಎಷ್ಟು ಹಣ ಕೊಡುತ್ತಾರೋ. ಅವರು 80ರಷ್ಟು ಹಣ ಕೊಟ್ಟರೆ ನಾವು ಅದಕ್ಕೆ ಮ್ಯಾಚಿಂಗ್‌ಗೇ 20ರಷ್ಟು ಹಣ ಹಾಕಿ ಖರ್ಚುಮಾಡಬೇಕಾಗುತ್ತದೆ. ಮತ್ತು ಎಸ್ಕಲೇಷನ್ ಕಾಸ್ಟ್ ನಾವು ಖರ್ಚುಮಾಡಬೇಕಾಗುತ್ತದೆ. ನಾವು ಒಂದು ಕೋಟಿ ರೂಪಾಯಿಗಳನ್ನು ಕಳುಹಿಸಿದ್ದರೆ ಅವರು 63 ಲಕ್ಷಕ್ಕೆ ಒಪ್ಪಿಕೊಂಡಿದ್ದಾರೆ. ಈ ರೀತಿ ಒಪ್ಪಿಕೊಂಡಿರುವುದರಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿರತಕ್ಕಂಥದ್ದು 23 ಲಕ್ಷ 50 ಸಾವಿರ ಇದರಲ್ಲಿ ನಾವು ಕಾಮಗಾರಿ ಕೆಲಸ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ 12 ಲಕ್ಷ ಬಿಡಗಡೆ

ಮಾಡಿದ್ದೇವೆ. ಇದರಲ್ಲಿ 8.18 ಲಕ್ಷ ಖರ್ಚಾಗಿದೆ. ಇನ್ನು ಉಳಿದಿರತಕ್ಕಂತಹ ಹಣವನ್ನು ಈ ತಿಂಗಳ ಕೊನೆಗೆ ಬಿಡುಗಡೆ ಮಾಡುತ್ತೇವೆ. ಮಾನ್ಯಸದಸ್ಯರ ಕಳಕಳಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ.

ಬೇರೆ ಬೇರೆ ಏಜೆನ್ಸಿ ಕರೆದು ಅಂದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ರವರು ಮತ್ತು ಪಿ.ಡಬ್ಲ್ಯೂ.ಡಿ ಡಿಪಾರ್ಟ್‌ಮೆಂಟಿರವರನ್ನು ರಿಕ್ವೆಸ್ಟ್ ಮಾಡಿಕೊಂಡು ಈ ಕೆಲಸವನ್ನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ನೀರಿನ ಸೌಲಭ್ಯವಿಲ್ಲವೆಂಬ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಜಾತ್ರೆಯಾಗುವ ಈ ಸಲ ನೀರನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಮುಂದಿನ ಸಲ ಮಾಡಿ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಹಾಗೆಯೇ ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು. ಮುಳ್ಳಯ್ಯನಗಿರಿ ಎನ್ನುವಂಥಾದ್ದಕ್ಕೆ ಈಗಾಗಲೇ ಅಲ್ಲಿ ಚಿಕ್ಕಮಗಳೂರು ತಾಲ್ಲೂಕಿನ ಹಿರೇಕಲ್ಲು ಎನ್ನುವ ಗ್ರಾಮದಲ್ಲಿ ಸರ್ವೆ ನಂ.33ರಲ್ಲಿ 5 ಎಕರೆ ಜಮೀನನ್ನು ಈ ಟ್ಯೂರಿಸಂ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದಾರೆ. ಆ ಯೋಜನೆ ಸರ್ಕಾರಕ್ಕೆ ಬಂದಮೇಲೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ. ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳೆಂದು 13 ಸ್ಥಳಗಳನ್ನು ಗುರ್ತಿಸಿದ್ದಾರೆ. ಆದರೆ ನನಗನ್ನಿಸುತ್ತದೆ. ಮೂಡಿಗೆರೆ ತಾಲ್ಲೂಕಿನ ಅಂಗಡಿ ದೇವಸ್ಥಾನ ಹೊಯ್ಸಳರ ಮೂಲ ಸ್ಥಳ. ಐತಿಹಾಸಿಕವಾಗಿಬಹಳ ಮುಖ್ಯವಾದ ಸ್ಥಳ ಇದು. ಇದನ್ನು ಏಕೆ ಅಧಿಕಾರಿಗಳು ಗುರ್ತಿಸಲಿಲ್ಲ ? ಇದರ ಬಗ್ಗೆ ನಾನು ಹಿಂದೆಯೇ ಪ್ರಶ್ನೆ ಹಾಕಿ ಈ ವರ್ಷ ಪ್ರವಾಸಿ ವರ್ಷ ಹೌದೇ ? ಈ ವರ್ಷದಲ್ಲಿ ಈ ಸ್ಥಳಗಳನ್ನು ನೀವು ಏಕೆ ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬಾರದು ಎಂದು ಒಂದು ಪ್ರಶ್ನೆ ಹಾಕಿದ್ದೆ. ಹೊಯ್ಸಳರ ಮೂಲ ಸ್ಥಳವಾದ ಮೂಡಿಗೆರೆ ತಾಲ್ಲೂಕಿನ ಅಂಗಡಿ ವಾಸಂತಿಕದೇವಿ ಟೆಂಪಲ್ ಬೇರೆ ಇದೆ. ಅದು ಹಿಂದೆ ಹುಲಿಯನ್ನು ಕೊಂದ ಸ್ಥಳ. ಹುಲಿಯನ್ನು ಕೊಂದಮೇಲೆ ಹೊಯ್ಸಳರ ಒಂದು ಇತಿಹಾಸ ಸ್ಥಾಪನೆಯಾಗಿದೆ. ಇಂತಹ ಒಂದು ಸ್ಥಳವನ್ನು ಗುರ್ತಿಸಬೇಕೆಂದು ನಾನು ಹಿಂದೆ ಕೇಳಿಕೊಂಡಿದ್ದೆ. ಅದನ್ನು ಗುರ್ತಿಸಲಿಲ್ಲ. ಈಗಲಾದರೂ ಅದನ್ನು ಸೇರಿಸಿಕೊಳ್ಳುತ್ತೀರಾ ? ಅದೂ ಸೇರಿದರೆ ಈಗ ನಮ್ಮಲ್ಲಿ 14 ಸ್ಥಳಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕಾಗುತ್ತದೆ. ಇವತ್ತು 63 ಲಕ್ಷ ರೂಪಾಯಿಗಳಿಗೆ ನಮಗೆ ಮಂಜೂರಾತಿ ದೊರೆತಿದೆಯೆಂದು ಹೇಳಿದ್ದಾರೆ. ಅದರಲ್ಲಿ 23 ಲಕ್ಷ ಬಿಡುಗಡೆ ಮಾಡಿದ್ದೇವೆ. ಅದರಲ್ಲಿ 12 ಲಕ್ಷ ಕೊಟ್ಟಿದ್ದು. ಅದರಲ್ಲಿ 8ಲಕ್ಷ ಖರ್ಚಾಗಿದೆಯೆಂದು ಹೇಳಿದ್ದಾರೆ. ಇಡೀ ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಅದಕ್ಕೂ ಜಾಸ್ತಿಬೇಕಾಗುತ್ತದೆ. ಆದರೆ ಇಡೀ ರಾಜ್ಯದಲ್ಲಿ ಪ್ರವಾಸಿ ಕೇಂದ್ರಗಳು ಸಾಕಷ್ಟಿವೆ. ಈಗ ಒಂದು ಕೋಟಿ ರೂಪಾಯಿಯೇ ಈ ವರ್ಷದ ಬಜೆಟ್‌ನಲ್ಲಿ ಏನು ಇಟ್ಟಿದ್ದಾರೆ. ಅದರಿಂದ ಈ ಸ್ಥಳಗಳನ್ನು ಅಭಿರವೃದ್ಧಿಪಡಿಸುವುದಕ್ಕೆ ಆಗುತ್ತದೆಯೆ ಹೇಗೆ. ಇದಕ್ಕೆ ತಾವು ಏನು ಪ್ರಯತ್ನ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ. ಶ್ರೀಮತಿ ಮೋಟಮ್ಮನವರು ಅಂಗಡಿಯಲ್ಲಿ ವಾಸಂತಿಕಾದೇವಿ ದೇವಸ್ಥಾನ ಹೊಯ್ಸಳರ ಕಾಲದಿಂದ ಇರುವುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದು ಹೊಯ್ಸಳರ ಮೂಲ ಸ್ಥಳ. ಆದರ ಬಗ್ಗೆ ರಿಪೋರ್ಟ್‌ನ್ನು ತರಿಸಿಕೊಂಡು ನಾವು ಅದನ್ನು ಟ್ಯೂರಿಸಂ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಾಗೆಯೇ ಹೊಯ್ಸಳರ

ಒಂದು ಉತ್ಸವವನ್ನು ಮುಂದಿನ ವರ್ಷದಿಂದ ಮಾಡಬೇಕೆಂಬ ಒಂದು ಯೋಜನೆ ಸರ್ಕಾರಕ್ಕೆ ಇದೆ. ನಾವು ಈಗಾಗಲೇ ಹೊಸದಾಗಿ ಕೆಲವು ಉತ್ಸವವನ್ನು ಮಾಡಿದ್ದೇವೆ. ಪಟ್ಟದಕಲ್ಲು ಉತ್ಸವವನ್ನು ಮಾಡಿದ್ದೇವೆ. ಹಂಪೆ ಉತ್ಸವವನ್ನು ಈ ವರ್ಷದಲ್ಲಿ ಮಾಡಿದ್ದೇವೆ. ಅದರಲ್ಲಿ ಚಿತ್ರದುರ್ಗ ಉತ್ಸವವನ್ನು ಮಾಡದ್ದೇವೆ. ಕರಾವಳಿ ಉತ್ಸವವನ್ನು ಮಾಡಿದ್ದೇವೆ. ಪಟ್ಟದಕಲ್ಲು ಉತ್ಸವವನ್ನು ಮಾಡಿದ್ದೇವೆ. ಹಂಪೆ ಉತ್ಸವವನ್ನು ಏಪ್ರಿಲ್ 15-16-17ರಂದು ಮಾಡಬೇಕೆಂದು ಒಂದು ದಿನಾಂಕವನ್ನು ಇಟ್ಟುಕೊಂಡಿದ್ದೇವೆ.

ಈ ರೀತಿ ಹಲವಾರು ಉತ್ಸವಗಳನ್ನು ಮಾಡಿ ಅಲ್ಲಿಯ ಚರಿತ್ರೆ. ಸಂಗೀತ. ಸಾಹಿತ್ಯ ಮತ್ತು ಕರಕುಶಲತೆಯ ಬಗ್ಗೆ ಎತ್ತಿತೋರಿಸಬೇಕು. ಯುವ ಶಕ್ತಿಯನ್ನು ಇಂಥ ಉತ್ಸವಗಳ ಮೂಲಕ ಗುರುತಿಸಬೇಕು ಎನ್ನತಕ್ಕ ಯೋಜನೆಯನ್ನು ನಾವು ಇಟ್ಟು ಕೊಂಡಿದ್ದೇವೆ. ಈಗ ಶ್ರೀಮತಿ ಮೋಟಮ್ಮನವರು ಈ ಒಂದು ಯೋಜನೆಗೆ ಇಷ್ಟು ಕಡಿಮೆ ಹಣವನ್ನು ಇಟ್ಟಿದ್ದೀರಲ್ಲ ಇದರಿಂದ ಪ್ರವಾಸಿಕೇಂದ್ರದ ಅಭಿವೃದ್ಧಿಯನ್ನು ಮಾಡಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಿದರು. ಅವರು ಹೇಳಿರತಕ್ಕದ್ದು ಸತ್ಯವಾಗಿದೆ. ನಾವು ಅದನ್ನು ಅಲ್ಲಗಳೆಯುವುದಿಲ್ಲ. ನಾವು ಮುಖ್ಯಮಂತ್ರಿಗಳಿಗೆ ಈ ಪ್ರವಾಸೋಧ್ಯಮದ ಸಲುವಾಗಿ ಜಾಸ್ತಿ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅವರು ಸಹ ಜಾಸ್ತಿ ಮಹತ್ವವನ್ನು ಪ್ರವಾಸೋದ್ಯಮಕ್ಕೆ ಕೊಡುವುದಾಗಿ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರ ಇದಕ್ಕೆ ಎಷ್ಟರ ಮಟ್ಟಿನ ಆಧ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟನ್ನು ಅವರು ಕೊಟ್ಟಿದ್ದಾರೆ. ಆದರೂ ಸಹ ಅವರ ಬೇಡಿಕೆ ಏನು ಇದೆಯೋ ಅಥವಾ ಅವುಗಳನ್ನು ಗುರುತಿಸಿ ಅಭಿವೃದ್ಧಿ ಮಾಡಿ ಅನುಕೂಲಗಳನ್ನು ಮಾಡುವುದರಲ್ಲಿ ನಾವು ಅಷ್ಟು ತ್ವರಿತವಾಗಿ ಹೋಗಿಲ್ಲ. ನಾವು ಒಂದು ಅಭಿವೃದ್ಧಿ ಮಾಸ್ಟರ್ ಪ್ಲಾನ್ ಮಾಡಿ ಇಡೀ ಪ್ರವಾಸೋಧ್ಯಮವನ್ನು ಅಭಿವೃದ್ಧಿಮಾಡಬೇಕೆಂದು ಕೇಂದ್ರ ಸರ್ಕಾರದ ಮೂಲಕ. ಬೇರೆ ದೇಶದವರ ಸಹಾಯವನ್ನು ಕೇಳಿದ್ದೇವೆ. ಅದು ನಮಗೆ ಬರೀ ಮರೀಚಿಕೆಯಾಗಿಯೇ ಉಳಿದಿದೆ. ಅಂತೂ ಅದು ಏನಾದರೂ ಬಂದರೆ ನಾವು ಸಮಗ್ರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರವಾಸೋಧ್ಯಮವನ್ನು ಅಭಿವೃದ್ಧಿ ಮಾಡಬಹುದೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಈಗ ಸರ್ಕಾರದಲ್ಲಿ ಉಳಿದಿರತಕ್ಕ ಹಣದಲ್ಲಿ ಮೊದಲನೆಯ ಆಧ್ಯತೆಯ ಮೇರೆಗೆ ಮುಳ್ಳಯನಗಿರಿ ಮತ್ತು ಬಾಬಾಬುಡನ್‌ಗಿರಿಯನ್ನು ಈ ವರ್ಷದಲ್ಲಿಯೇ ಅಭಿವೃದ್ಧಿ ಪಡಿಸಲು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷಿಣಿಯವರೆ. ಕೇಂದ್ರ ಸರ್ಕಾರದವರು ಬಾಬಾಬುಡನ್‌ಗಿರಿಯ ಅಭಿವೃದ್ಧಿ ಬಗ್ಗೆ 3ಲಕ್ಷದ 20 ಸಾವಿರ ರೂಪಾಯಿಗಳನ್ನು ಮಂಜೂರಾತಿ ಕೊಟ್ಟಿದ್ದಾರೆ. ಇದರಲ್ಲಿ ಆರೂವರೆ ಲಕ್ಷ ರೂಪಾಯಿಗಳನ್ನು ಮಾರ್ಚ್ ಕೊನೆಗೆ ನಾವು ಬಿಡುಗಡೆ ಮಾಡುತ್ತೇವೆ. ಆಗ ಬಾಬಾಬುಡನ್‌ಗಿರಿಯಲ್ಲಿ ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಇನ್ನು ಮುಳ್ಳಯನಗಿರಿ ಎಂದು ಏನು ಹೇಳಿದ್ದಾರೆ. ಅಲ್ಲಿನ ಜಮೀನನ್ನು ನಾವು ಸ್ವಾಧೀನಪಡಿಸಿಕೊಂಡಿದ್ದೇವೆ. ಅದರ ನಕ್ಷೆಯನ್ನು ಅಂದಾಜನ್ನು ತರಿಸಿಕೊಂಡು ಯಾವರೀತಿ ಲಭ್ಯತೆಯ ಮೇಲೆ ಹಣವನ್ನು ಅಳವಡಿಸಬಹುದು,

ಯಾವ ರೀತಿ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಈ ವರ್ಷ ಸರ್ಕಾರ ಯೋಜನೆಯನ್ನು ಮಾಡುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 13 ಪ್ರವಾಸಿ ಕೇಂದ್ರಗಳನ್ನು ಗುರುತು ಮಾಡಿದ್ದಾರೆ. ಅಲ್ಲಿ ರಂಭಾಪುರಿ ಪೀಠವಿದೆ ಅದು ಪಂಚ ಪೀಠಗಳಲ್ಲಿ ಮೊದಲನೆಯ ಪೀಠವಿದೆ. ಆ ಸ್ಥಳಕ್ಕೆ ನಮ್ಮ ರಾಜ್ಯದ ಮತ್ತು ಹೊರ ರಾಜ್ಯದಿಂದ ಕೂಡ ಅನೇಕ ಪ್ರವಾಸಿಗರು ಹೋಗುವುದುಂಟು. ಇದೆ ತಿಂಗಳ 6ನೇ ತಾರೀಖಿನ ದಿವಸದಂದು ನೂತನ ಜಗದ್ಗುರುಗಳ ಪಟ್ಟಾಭಿಷೇಕವಾದಾಗ ಅಲ್ಲಿಗೆ ನಮ್ಮ ರಾಜ್ಯದ ಮತ್ತು ಇತರ ರಾಜ್ಯಗಳಿಂದ ಜನರು ಬಂದಿದ್ದಾಗ ಅಲ್ಲಿ ಅವರಿಗೆ ಇಳಿದುಕೊಳ್ಳಲು ಬಹಳ ತೊಂದರೆಯಾದಂಥ ಸನ್ನಿವೇಶವನ್ನು ನಾವು ಕಂಡಿದ್ದೇವೆ. ಆ ಕಾರಣದಿಂದ ಆ ಒಂದು ಯಾತ್ರಾ ಸ್ಥಳವನ್ನು ಕೂಡ ಪ್ರವಾಸಿ ಕೇಂದ್ರಗಳ ಒಂದು ಯಾದಿಯಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಅಲ್ಲಿ ಜಿಲ್ಲಾಮಟ್ಟದಲ್ಲಿ ಒಂದು ಸಮನ್ವಯ ಸಮಿತಿಯನ್ನು ರಚನೆ ಮಾಡಬೇಕೆಂದು ಈಗಾಗಲೆ ನಮ್ಮ ಶಾಸಕ ಬಂಧು ಶ್ರೀಮಾನ್ ಸಗೀರ್ ಅಹಮದ್‌ರವರು ಕೇಳಿದ್ದಾರೆ. ಆ ಪ್ರಕಾರ ಇವತ್ತು ನಮ್ಮ ಧಾರವಾಡ ಜಿಲ್ಲೆಯಲ್ಲಿಯೂ ಕೂಡ ಪ್ರವಾಸಿ ಅಭಿವೃದ್ಧಿ ಕೇಂದ್ರಗಳನ್ನು ಗುರುತಿಸಿಲ್ಲ. ನನ್ನ ಮತಕ್ಷೇತ್ರದಲ್ಲಿರತಕ್ಕ ಕನಕದಾಸರು ಜನ್ಮವಿತ್ತ 'ಬಾಡ' ಮತ್ತು ಶಿಶುನಾಳ ಷರೀಫರು ಇದ್ದಂಥ ಸ್ಥಳಗಳ ಬಗ್ಗೆ ನಾನು ಕಳೆದ ಒಂದು ವರ್ಷದಿಂದ ಮನವಿಗಳನ್ನು ಸಲ್ಲಿಸಿದ್ದರೂ ಕೂಡ ಅವುಗಳನ್ನು ಗುರುತಿಸಿರುವುದಿಲ್ಲ. ಆ ಕಾರಣದಿಂದ ಆ ಸ್ಥಳಗಳನ್ನು ಕೂಡ ಪ್ರವಾಸಿ ಅಭಿವೃದ್ಧಿ ಕೇಂದ್ರಗಳನ್ನಾಗಿ ಗುರುತಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೆ, ನಮ್ಮ ರಾಜ್ಯದಲ್ಲಿ ಇನ್ನೂರಕ್ಕಿಂತ ಜಾಸ್ತಿ ಪ್ರವಾಸಿ ಕೇಂದ್ರಗಳನ್ನು ನಮ್ಮ ಇಲಾಖೆಯವತಿಯಿಂದ ಗುರುತಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಆ ಎರಡು ಸ್ಥಳಗಳಾದ ಶಿಶುನಾಳ ಷರೀಫ್‌ರ ಮತ್ತು ಕನಕದಾಸರ ಸ್ಥಳಗಳನ್ನು ಸೇರಿಸುವ ಬಗ್ಗೆ ವರದಿಯನ್ನು ತರಿಸಿಕೊಂಡು ಅದನ್ನು ಪಟ್ಟಿಯಲ್ಲಿ ಸೇರಿಸಲು ಪ್ರಯತ್ನಿಸುತ್ತೇವೆ. ಇದರ ಜೊತೆಯಲ್ಲಿ ಬಾಳೆಹೊನ್ನೂರಿನ ಹತ್ತಿರವಿರುವ ರಂಭಾಪುರಿಯನ್ನು ಸಹ ಮಾಡುತ್ತೇವೆ. ಶ್ರೀಮಾನ್ ವೀರಭದ್ರಪ್ಪನವರೆ. ನಾವು ಇನ್ನೂರು ಜಾಗಗಳನ್ನು ಗುರುತಿಸಿದ್ದೇವೆ. ಇನ್ನೂ ಕೂಡ ಇಂಥ ಜಾಗಗಳನ್ನು ಗುರುತಿಸುವುದರಲ್ಲಿದ್ದೇವೆ. ಪ್ರಶ್ನೆ ಬಂದರೆ ಅದಕ್ಕೆ ಅನುಕೂಲಗಳನ್ನು ಕೊಡಬೇಕು ಅಲ್ಲಿಗೆ ಬರತಕ್ಕ ಯಾತ್ರಾರ್ಥಿಗಳಿಗೆ ಕುಡಿಯುವ ನೀರು, ಅವರುಗಳು ಉಳಿದುಕೊಳ್ಳಲು ವಸತಿ - ಇವುಗಳೆಲ್ಲವನ್ನು ಒದಗಿಸಿಕೊಡಬೇಕಾಗುತ್ತದೆ. ಇದನ್ನು ಮಾಡಲು ಹಣಬೇಕಾಗುತ್ತದೆ. ನಮಗೆ ಈಗ ಹಣದ ಕೊರತೆ ಇದೆ. ಹಣದ ಲಭ್ಯತೆಯ ಆಧಾರದ ಮೇಲೆ ನಾವು ಪ್ರಯಾರಿಟಿಯನ್ನು ಕೋರುತ್ತೇವೆ. ಸೆಂಟ್ರಲ್ ಸೆಕ್ಟಾರ್ ಮತ್ತು ಸ್ಟೇಟ್ ಸೆಕ್ಟಾರ್‌ಗಳ ಆಧಾರದ ಮೇಲೆ ನಾವು ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಕನ್ನಡ ಸಂಘಗಳಿಗೆ ಆರ್ಥಿಕ ನೆರವು

295 (1653) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಯುವಜನ ಸೇವಾ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ನೋಂದಾಯಿಸಿದ ಹಾಗೂ ನೋಂದಾಯಿಸದೆ ಇರುವ ಕನ್ನಡ ಸಂಘಗಳು ಎಷ್ಟಿದೆ ಎಂಬುದನ್ನು ಸರ್ಕಾರ ಗುರುತಿಸಿದೆಯೇ :

ಆ) ಹಾಗಿದಲ್ಲಿ ಅಂತಹ ಸಂಘಗಳ ಸಂಖ್ಯೆ ಎಷ್ಟು :

ಇ) ಬೇಂಗಳೂರಿನಲ್ಲಿ ಇರುವ ಅಂತಹ ಸಂಘಗಳ ಸಂಖ್ಯೆ ಎಷ್ಟು :

ಈ) ಕನ್ನಡ ಅಭಿವೃದ್ಧಿಗಾಗಿ ಇಂತಹ ಕನ್ನಡ ಸಂಘಗಳಿಗೆ ಧನಸಹಾಯ ನೀಡಲು ಉದ್ದೇಶಿಸಿದೆಯೇ ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವಿದಿಲ್ಲ.

ಈ) ಇಲ್ಲ

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ. ಮಂತ್ರಿ ಮಹೋದಯರು ನನ್ನ ಒಂದನೇ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟಿದ್ದಾರೆ. ರಾಜ್ಯದಲ್ಲಿ ಎಷ್ಟು ಕನ್ನಡ ಸಂಘಗಳು ನೊಂದಾಯಿತವಾಗಿವೆ ಮತ್ತು ನೊಂದಾಯಿತವಾಗದೇ ಇರುವ ಕನ್ನಡ ಸಂಘಗಳು ಎಷ್ಟು ಎಂದು ಕೇಳಿದ್ದಕ್ಕೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಎರಡನೆಯದಾಗಿ ಬೆಂಗಳೂರಿನಲ್ಲಿ ಎಷ್ಟು ಸಂಘಗಳು ಇವೆಯೆಂದು ಕೇಳಿದ್ದಕ್ಕೆ ಅದಕ್ಕೂ ಸಹ ಗೊತ್ತಿಲ್ಲವೆಂದು ಹೇಳಿದ್ದಾರೆ. ಕನ್ನಡದ ಅಭಿವೃದ್ಧಿಗಾಗಿ ಇಂತಹ ಕನ್ನಡ ಧನಸಹಾಯ ನೀಡಲು ಉದ್ದೇಶಿಸಲಾಗಿದೆಯೇ ಎಂಬ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಈ ರೀತಿ ಬರೀ ಹೌದು. ಇಲ್ಲ ಎಂದು ಹೇಳುತ್ತಿದ್ದಾರೆ. ಒಂದು ಕನ್ನಡ ಸಂಸ್ಕೃತಿ ಇಲಾಖೆ ಎಂದು ಇದ್ದು ಅದಕ್ಕೆ ಒಬ್ಬ ಡೈರೆಕ್ಟರ್. ಡೆಪ್ಯುಟಿ ಡೈರೆಕ್ಟರ್ . ಅಸಿಸ್ಟೆಂಟ್ ಡೈರೆಕ್ಟರ್. ನೂರಾರು ಜನ ಅಧಿಕಾರಿಗಳಿದ್ದು. ಅದಕ್ಕೆ ಒಂದು ಬಿಲ್ಡಿಂಗ್ ಇದ್ದು ಇಷ್ಟೊಂದು ಸಿಬ್ಬಂದಿಯನ್ನು ಇಟ್ಟುಕೊಂಡು ಕರ್ನಾಟಕ ರಾಜ್ಯವನ್ನು ನಮ್ಮ ಬಂಗಾರದ ನಾಡು ಎಂದು ಹೇಳುತ್ತಾರೆ. ಕನ್ನಡವನ್ನು ಬೆಳೆಸಬೇಕೆಂದು ಹೇಳುತ್ತಾರೆ. ಸುಗಂಧದ ನಾಡು ಎಂದು ಹೇಳುತ್ತಾರೆ. ಕನ್ನಡವನ್ನು ಬೆಳೆಸುವುದಕ್ಕೆ ಸಂಘಗಳು ಎಷ್ಟಿವೆಯೆಂದರೆ ಅದನ್ನು ಹೇಳುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದು 44 ವರ್ಷ ಆದಮೇಲೂ ಸಹ ನಮ್ಮ ಕನ್ನಡ ರಾಜ್ಯದಲ್ಲಿ ಎಷ್ಟು ಕನ್ನಡ ಸಂಘಗಳಿವೆಯೆಂದು ಅವರಿಗೇ ಗೊತ್ತಿಲ್ಲವೆನ್ನುತ್ತಾರೆ. ಈ ರೀತಿ ಉತ್ತರ ಕೊಡುವುದು ಈ ಸಭೆಗೆ ಚೆನ್ನಾಗಿ ಕಾಣುವುದಿಲ್ಲ. ಆದರೂ ಮಂತ್ರಿಗಳು ಈ ಸಭೆಯಲ್ಲಿ ಹೇಳಬೇಕು. ಏನಾದರೂ ಕನ್ನಡ ಸಂಘಗಳನ್ನು ಅಭಿವೃದ್ಧಿ ಮಾಡುತ್ತೀರಾ ಎಂದರೆ ಇವರು ಇಲ್ಲ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಕನ್ನಡ ಸಂಘಗಳಿವೆಯೆಂದರೆ ಅದು ಗೊತ್ತಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ವಿವರಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ರಮೇಶ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ. ಮಾನ್ಯ ಮಿತ್ರರಾದಂತಹ ಮಲ್ಲಪ್ಪನವರು ಕೇಳಿರತಕ್ಕಂತಹ ಪ್ರಶ್ನೆ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಳಿಲ್ಲ. ಅವರು ರಾಜ್ಯದಲ್ಲಿ ನೋಂದಾಯಿಸಿದ ಹಾಗೂ ನೋಂದಾಯಿಸದೇ ಇರುವ ಕನ್ನಡ ಸಂಘಗಳು ಎಷ್ಟು ಇವೆ ಎಂಬುದನ್ನು ಸರ್ಕಾರ ಗುರ್ತಿಸಿದೆಯೇ ಎಂದು ಕೇಳಿದ್ದಾರೆ. ನೋಂದಾವಣೆ ನನ್ನ ಇಲಾಖೆಗೆ ಬರುವುದಿಲ್ಲ. ಅದು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟಿಗೆ ಬರುತ್ತದೆ. ಇದು ಅವರಲ್ಲಿ ಕೇಳಬೇಕಾದಂತಹ ಪ್ರಶ್ನೆ ಆದರೂ ಶಾಸಕರು ಕೆಳಿರತಕ್ಕಂಥಹ ಪ್ರಶ್ನೆಗೆ ಉತ್ತರವಾಗಿ ಹೇಳಬೇಕಾಗಿದೆ. ಮಾನ್ಯ ಶಾಸಕರಾದಂತಹ ಮಾನ್ಯ ಮಿತ್ರರಾದಂತಹ ಮಲ್ಲಪ್ಪನವರು ಹೇಳಿದ ಹಾಗೆ ಕನ್ನಡ ಸಂಘಸಂಸ್ಥೆಗಳು ನಮ್ಮ ಇಲಾಖೆಗೆ ಬಂದು ಸರ್ಕಾರದಿಂದ ಇಂತಹ ಕನ್ನಡ ಅಭಿವೃದ್ಧಿ ಮಾಡಬೇಕೆಂದರೆ ಆ ವಿಚಾರದಲ್ಲಿ ನಾವು ಯಾವತ್ತೂ ಹಿಂದೆ ಹೋಗಿಲ್ಲ. ನಾವು ಮಾಡಿಕೊಂಡು ಬಂದಿದ್ದೇವೆ. ಆದರೂ ರಿಜಿಸ್ಟರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್‌ಗೆ ಕೇಳಿರತಕ್ಕಂತಹ ಪ್ರಶ್ನೆಯನ್ನು ನನ್ನನ್ನು ಕೇಳಿದರೆ ನಾನು ಎಲ್ಲಿಂದ ಉತ್ತರ ಕೊಡುವುದಕ್ಕೆ ಸಾಧ್ಯ ? ಅವರು ಉತ್ತರ ಕೊಡಲೇಬೇಕೆಂದು ಹೇಳುತ್ತಿದ್ದಾರೆ. ಕನ್ನಡ ಅಭಿವೃದ್ಧಿ ಬಗ್ಗೆ ತಮಗೆ ಅಭಿಮಾನ ಅಕ್ಕರೆ ಎಷ್ಟಿದೆಯೋ. ಅಷ್ಟೇ ಅಭಿಮಾನ ಅಕ್ಕರೆ ನನಗೂ ಇದೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ನಾನು ಮಾನ್ಯಮಂತ್ರಿ ಮಹೋದಯರ ಅಭಿಮಾನ ಕೇಳಲಿಲ್ಲ. ಅವರಿಗೆ ಬಹಳ ಅಭಿಮಾನವಿದೆಯೆಂದು ನನಗೂ ಗೊತ್ತಿದೆ. ನಾನು ಕೇಳುತ್ತಿರುವುದು ಏನೆಂದರೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಸಂಘಗಳು ಎಷ್ಟು ಇವೆ ? ಪ್ರಜಾಪ್ರಭುತ್ವ ಬಂದು 44 ವರ್ಷಗಳಾದ ಮೇಲೂ ಸಹ ರಾಜ್ಯದಲ್ಲಿ ಕನ್ನಡ ಸಂಘಗಳು ಎಷ್ಟು ಇವೆ ಎಂದು ಗುರ್ತಿಸಿದ್ದೀರಿ ಎಂದು ಕೇಳಿದ್ದಕ್ಕೆ ನಾವು ಗುರ್ತಿಸಿಲ್ಲ. ಅದನ್ನು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್‌ನೊಳಗೆ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತಿದ್ದೀರಿ.

ಉಪಾಧ್ಯಕ್ಷರು : ಆ ಅಂಕಿಅಂಶ ಆ ಡಿಪಾರ್ಟ್‌ಮೆಂಟಿನಲ್ಲಿ ಇರುತ್ತದೆಂದು ಅವರು ಹೇಳಿದರು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಈ ಕನ್ನಡ ಕಲ್ಚರ್ ಡಿಪಾರ್ಟ್‌ಮೆಂಟ್ ಮಾಡುತ್ತಿರುವುದು ಏನು? ನಮ್ಮ ರಾಜಧಾನಿಯಲ್ಲಿ ಎಷ್ಟು ಸಂಘಗಳು ಇವೆಯೆಂದರೆ ಗೊತ್ತಿಲ್ಲವೆಂದು ಹೇಳುತ್ತಾರೆ. ಇನ್ನು ಕನ್ನಡ ಡಿಪಾರ್ಟ್‌ಮೆಂಟ್ ಮಾಡುತ್ತಿರುವುದು ಏನು? ಇತರ ಅಭಿವೃದ್ಧಿಯನ್ನು ಯಾವ ರೀತಿ ಮಾಡುತ್ತಾರೆ? ಕನ್ನಡ ಸಂಘಗಳಿಗೆ ಸರ್ಕಾರದವರು ಧನಸಹಾಯ ಕೊಟ್ಟು. ಬೇರೆ ಪ್ರೋತ್ಸಾಹ ಕೊಡದೇ ಹೋದರೆ ಸರ್ಕಾರದವರು ಕನ್ನಡ ಅಂಡ್ ಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಇವರು ಮಾಡುವುದು ಏನು? ಎಂದು ನಾನು ಕೇಳುತ್ತಿರುವುದು. ಅದನ್ನು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಿಕೊಳ್ಳುತ್ತಾರೆಂದರೆ ಯಾವುದೇ ಅಸೋಸಿಯೆಷನ್ ಆಗಲಿ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್‌ಸೊಸೈಟಿಯನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಅಲ್ಲಿಯೇ ಮಾಡಿಕೊಳ್ಳಬೇಕು. ಆದರೆ ಆ ಡಿಪಾರ್ಟ್‌ಮೆಂಟಿನಲ್ಲಿ ಮಾಹಿತಿಗಳನ್ನು ತರಿಸಿಕೊಂಡು ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಇಟ್ಟುಕೊಳ್ಳದೆ ನನಗೆ ಗೊತ್ತಿಲ್ಲವೆಂದರೆ ಹೇಗೆ ?

ಶ್ರೀ ಎಸ್ ರಮೇಶ್ : ಮಾನ್ಯ ಮಲ್ಲಪ್ಪನವರು ಕೇಳತಕ್ಕಂತಹ ಪ್ರಶ್ನೆ ರಾಜ್ಯದಲ್ಲಿ ಮೊಟ್ಟ ಮೊದಲನೆಯದಾಗಿ ನಮ್ಮ ಇಲಾಖೆಗೆ ಬಂದಿರತಕ್ಕಂಥದ್ದು ರಿಜಿಸ್ಟರ್ ಆಫ್ ಕೋ-ಆಪರೇಟಿವ್ ಸೊಸೈಟಿಸ್‌ನವರು ಮಾಡತಕ್ಕಂತಹ ಕೆಲಸವನ್ನು ನಾವು ಕನ್ನಡ ಕಲ್ಚರ್ ಕಮಿಷನರ್ ಹೇಳುವುದಕ್ಕೆ

ಬರುವುದಿಲ್ಲ. ಆದರೂ ಕನ್ನಡ ಅಭಿವೃದ್ಧಿ ಬಗ್ಗೆ ಎಷ್ಟು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ನಾವು ನಮ್ಮ ಇಲಾಖೆಯಿಂದ ಏನು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆಂದು ಮುಕ್ಕೋಟಿ ಕನ್ನಡ ಜನತೆಗೆ ಇವತ್ತು ಗೊತ್ತಾಗಿದೆ. ಯಾವತ್ತೂ ಆಗದೆ ಇರತಕ್ಕಂತಹ ಕೆಲಸವನ್ನು ನಾವು ಈ ಸಲ ಮಾಡಿದ್ದೇವೆ. ಆದರೆ ತಾವು ಇವತ್ತು ಏನು ಹೇಳಿದ್ದೀರಿ ಆ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಆದರೂ ನನಗೆ ಸೇರದೆ ಇದ್ದರೂ ಸಹ ನಾನು ಕನ್ನಡ ಕಲ್ಚರ್ ಕಮೀಷನರ್‌ಗೆ ಈಗಾಗಲೇ ಆದೇಶ ನೀಡಿ 48 ಗಂಟೆ ಕಾಲದೊಳಗೆ ಆ ಲಿಸ್ಟನ್ನು ತರಿಸಿಕೊಡಿ ಎಂದು ಹೇಳುತ್ತೇನೆ. ಆದರೆ ತಾವು ಪ್ರಶ್ನೆ ಕೇಳತಕ್ಕಂತಹ ಸಂದರ್ಭದಲ್ಲಿ ಇಲಾಖೆಗೆ ಸೇರಿರುವಂತಹ ಪ್ರಶ್ನೆಯನ್ನು ಕೇಳಿದರೆ ನನಗೂ ಸಹಾಯ ಮಾಡಿದ ಹಾಗೆ ಆಗುತ್ತದೆ. ತಮಗೂ ಉತ್ತರ ಹೇಳುವುದಕ್ಕೆ ಸರಿಹೋಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ತಾವು ಕನ್ನಡ ಸಂಘಗಳಿಗೆ ಧನ ಸಹಾಯ ಕೊಡುತ್ತೀರಿ. ತಾವು ಕೋಟ್ಯಾಂತರ ರೂಪಾಯಿಗಳನ್ನು ತಮ್ಮ ಡಿಪಾರ್ಟ್‌ಮೆಂಟಿನಿಂದ ಖರ್ಚು ಮಾಡುತ್ತಿದ್ದೀರಿ. ಬಹಳಷ್ಟು ಪ್ರೋತ್ಸಾಹ ಕೊಡುತ್ತಿದ್ದೀರಿ. ಆದರೆ ಈ ಸಂಘಗಳಿಗೂ ಕೊಟ್ಟರೆ ಒಳ್ಳೆಯದು. ರೀಡಿಂಗ್ ರೂಮ್‌ಗಳು. ಕನ್ನಡ ಲೈಬ್ರರಿ. ಕನ್ನಡ ರಾಜ್ಯೋತ್ಸವ ಇಂತಹವುಗಳನ್ನೆಲ್ಲ ಕನ್ನಡ ಸಂಘಗಳೇ ಮಾಡುತ್ತಾ ಇರುವುದು. ಬೇರೆ ಯಾರೂ ಮಾಡುತ್ತಾ ಇಲ್ಲ. ಅದಕ್ಕೋಸ್ಕರ ಈ ಸಂಘಗಳಿಗೆ ಏನಾದರೂ ತಾವು ಧನಸಹಾಯವನ್ನು ಇನ್ನು ಮುಂದಕ್ಕಾದರೂ ಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ರಮೇಶ್ : ಮಾನ್ಯ ಶಾಸಕ ಮಿತ್ರರು ಮಾತನಾಡುತ್ತಾ. ರಾಜ್ಯೋತ್ಸವ ಸಂದರ್ಭದಲ್ಲಿ ಎನ್ನತಕ್ಕಂಥ ಮಾತನ್ನು ಹೇಳಿದರು. ಕೆಲವು ಸಂಘಗಳು ನವೆಂಬರ್‌ಗೆ ಬರುತ್ತವೆ. ಡಿಸೆಂಬರ್‌ಗೆ ಹೋಗುತ್ತವೆ. ಅದು ರಿಜಿಸ್ಟರ್ ಆಫ್ ಕೋ-ಆಪರೇಟೀವ್ ಸೊಸೈಟಿಗೆ ಗೊತ್ತಿರುವುದು. ಅದು ನನ್ನ ಗಮನಕ್ಕೆ ಬರುವುದಿಲ್ಲ. ಆದರೆ ನಮ್ಮ ನಾಡು. ನುಡಿ. ಸಂಸ್ಕೃತಿ. ಭಾಷೆಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಈ ಇಲಾಖೆ ಇರತಕ್ಕಂಥದ್ದು. ನಮ್ಮ ಗಮನಕ್ಕೆ ಬಂದದ್ದನ್ನು ನಮ್ಮ ಶಕ್ತಿ ಮೀರಿ ನಾವು ಮಾಡಿಕೊಂಡು ಬಂದಿದ್ದೇವೆ. ಅಪ್ಪಿತಪ್ಪಿ ಏನಾದರೂ ಒಂದೆರಡು ತಮ್ಮ ಗಮನಕ್ಕೆ ಬಂದಿದ್ದು. ತಾವು ಸಲಹೆ ಮಾಡಿದರೆ ಅದನ್ನು ಪರಿಶೀಲಿಸಿ ಸಹಾಯ ಮಾಡತಕ್ಕಂಥ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ. ಈ ಕನ್ನಡ ಅಭಿವೃದ್ಧಿಗಾಗಿ ಕೇರಳ. ಬೆಳಗಾಂ ಮೊದಲಾದ ಗಡಿ ಪ್ರದೇಶದ ಕನ್ನಡ ಸಂಘಗಳು ಮತ್ತು ಇನ್ನಿತರ ಒಳ್ಳೆಯ ರೀತಿಯಲ್ಲಿ ಕನ್ನಡದ ಕೆಲಸ ಮಾಡತಕ್ಕಂಥ ಜನರು ಸಹಾಯ ಮಾಡಬೇಕು ಎಂದು ತಮಗೆ ನಿವೇದನೆ ಮಾಡಿಕೊಂಡರೆ ಇನ್ನು ಮುಂದೆ ತಾವು ಸಹಾಯ ಮಾಡುತ್ತೀರ ಸ್ವಾಮಿ.

ಶ್ರೀ ಎಸ್. ರಮೇಶ್ : ಹಿರಿಯ ಸದಸ್ಯರಾದಂತಹ ಇದಿನಬ್ಬರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈಗಾಗಲೇ. ನನ್ನ ಇಲಾಖೆಯ ವತಿಯಿಂದ ಹೊರನಾಡು ಕನ್ನಡಿಗರನ್ನು ಗುರುತಿಸಿ. ಮೊಟ್ಟ ಮೊದಲನೆಯ ಬಾರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡುವುದು ಅಲ್ಲದೆ. ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಅನೇಕರಿಗೆ ಸಹಾಯವನ್ನು ನಾವು ಮಾಡಿದ್ದೇವೆ. ಇನ್ನೂ ಮಾಡುವುದಕ್ಕೆ ನಮ್ಮ ಇಲಾಖೆಗೆ ಇಷ್ಟವಿದೆ. ತಮ್ಮ ಗಮನಕ್ಕೆ ಬಂದಿದ್ದೇ ಆದರೆ ಅದನ್ನು ಸಲಹೆ ಮಾಡಿದರೆ. ಕೂಡಲೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷಿಣಿಯವರೆ. ಮಾನ್ಯ ಪೆರಿಕಲ್ ಮಲ್ಲಪ್ಪನವರು ಕನ್ನಡ ಸಂಘಗಳ ಬಗ್ಗೆ ಕೇಳಿದಾಗ ಮಾನ್ಯ ಮಂತ್ರಿಗಳು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟಿಗೆ ಗೊತ್ತಿರುತ್ತದೆ ನಮಗೆ ಗೊತ್ತಿರುವುದಿಲ್ಲ ಎಂದು ಹೇಳಿದರು. ಆದರೆ ಕೆಲವು ಸಂಘಗಳು ನಮಗೆ ಸಹಾಯ ಮಾಡಿ ಎಂದು ಮಂತ್ರಿಗಳ ಹತ್ತಿರ ಅಥವಾ ಸರ್ಕಾರಕ್ಕೆ ಅರ್ಜಿ ಕೊಡುತ್ತಾರೆ. ಇವರು ರಿಜಿಸ್ಟ್ರಾರ್ದ ಸಂಘಗಳಿಗೆ ಸಹಾಯ ಮಾಡುತ್ತಾರೋ ಇಲ್ಲ ಇವೊತ್ತು ಹುಟ್ಟಿ ನಾಳೆ ಸಾಯುವ ಸಂಘಗಳಿಗೆ ಸಹಾಯ ಮಾಡುತ್ತಾರೋ ಯಾವ ಆಧಾರದ ಮೇಲೆ ಇವರು ಕೊಡುತ್ತಾರೆ ? ಆ ಒಂದು ಕಾರಣದಿಂದಲಾದರೂ ಅವರು ತರಿಸಿ ಕೊಳ್ಳಬೇಕಾಗುತ್ತದೆ. ಯಾವ ಯಾವ ಸೊಸೈಟಿಗಳು ನೋಂದಾವಣಿಯಾಗಿವೆ ಎನ್ನುವುದನ್ನು ತರಿಸಿಕೊಳ್ಳಬೇಕಾಗುತ್ತದೆ. ಇವರು ಸುಮ್ಮನೆ ಅಲ್ಲಿ ಕೇಳಬೇಕು. ಇಲ್ಲಿ ಇದಕ್ಕೆ ಉತ್ತರ ಸಿಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರದಿಂದ ಹಣ ಕೊಡಬೇಕಾದರೂ. ಸಂಘವನ್ನು ಉದ್ಧಾರ ಮಾಡಲಿಕ್ಕೆ ಅಥವಾ ಸಂಘವನ್ನು ಬೆಳೆಸಲಿಕ್ಕೆ. ಯಾವ ಆಧಾರ ಇದೆ. ಪ್ರೋತ್ಸಾಹ ಕೊಡಬೇಕಾದರೆ ಯಾವ ಆಧಾರದ ಮೇಲೆ ಕೊಡುತ್ತಾರೆ. ಇವತ್ತು ನನ್ನದು ಒಂದು ಸಂಘ ಇರುತ್ತದೆ. ನಾಳೆ ಇರುವುದಿಲ್ಲ ಎಂದು ಬಹಳ ಸುಲಭವಾಗಿ ಉತ್ತರ ಕೊಟ್ಟಿದ್ದಾರೆ. ಇವರು ಸರ್ಕಾರದ ಹಣವನ್ನು ಹೇಗೆ ಖರ್ಚು ಮಾಡುತ್ತಾರೆ ಇದಕ್ಕೆ ಏನಾದರೂ ಒಂದು ಅಳತೆಗೋಲು ಇಟ್ಟುಕೊಂಡಿದ್ದಾರೆಯೇ ? ಇಟ್ಟುಕೊಂಡಿದ್ದರೆ ಯಾವ ಅಳತೆಗೋಲು ಇಟ್ಟುಕೊಂಡಿದ್ದಾರೆಂದು ತಿಳಿಸಬೇಕು.

ಶ್ರೀ ಎಸ್. ರಮೇಶ್ : ನಾನು ಉತ್ತರ ಹೇಳತಕ್ಕಂಥ ಸಂದರ್ಭದಲ್ಲಿ ಮಾನ್ಯ ಪೆರಿಕಲ್ ಮಲ್ಲಪ್ಪನವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳಿದೆ. ಆದರೆ. ತಾವು ಏನು ಪ್ರಶ್ನೆ ಕೇಳುತ್ತಿದ್ದೀರಿ. ಅದನ್ನು ಗುರುತಿಸತಕ್ಕಂಥಾದ್ದು ಹೇಗೆ ಎಂದು ಕೇಳುತ್ತಿದ್ದೀರಿ. ಅದಕ್ಕೆ ನಾವು ಜಿಲ್ಲಾವಾರು ಅಧಿಕಾರಿಗಳನ್ನು ಇಟ್ಟಿದ್ದೇವೆ. ಈಗ ಮಾನ್ಯ ಶಿವನಂಜಪ್ಪನವರಿಂದ ಬೇಡಿಕೆಗಳು ಎಷ್ಟೋ ಸಾರಿ ಬರುತ್ತವೆ. ನಾವು ಅದನ್ನು ಕೂಡಲೇ ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿಗಳಿಗೆ ಕಳುಹಿಸಿ ಈ ಸಂಘ ಇದೆಯೋ ಏನೋ ನೋಡಿ. ಸಂಘ ಕಾರ್ಯಕ್ರಮ ಮಾಡುತ್ತಾ ಇದೆಯೋ ನೋಡಿ ಎಂದು ಹೇಳಿ ತಾವು ಕೇಳುವುದಕ್ಕಿಂತ ಜಾಸ್ತಿ ಕೊಡಬೇಕಾದರೂ ಎಷ್ಟೋ ಸಲ ನಾವು ಕೊಟ್ಟಿದ್ದೇವೆ. ಅದು ನಮ್ಮ ಗಮನಕ್ಕೆ ಬಂದಿದೆ. ಈ ಕನ್ನಡ ಅಭಿವೃದ್ಧಿ ಕೆಲಸಗಳಲ್ಲಿ ಸಂಘ ನೊಂದಾಯಿತ ಪ್ರಶ್ನೆ ಅಲ್ಲ. ಸರ್ಕಾರದ ವತಿಯಿಂದ ಹಣ ಪಡೆದುಕೊಂಡು ಸರಿಯಾದ ಕಾರ್ಯಕ್ರಮಗಳಿಗೆ ವಿನಿಯೋಗ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆ ನಮ್ಮ ಮುಂದಿರತಕ್ಕಂಥದ್ದು. ಆದರೆ. ಸಂಘಗಳ ನೋಂದಾವಣೆ ಪ್ರಶ್ನೆಯನ್ನು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್‌ರವರಿಗೆ ಹೇಳಬೇಕೆ ಏನು ಅದನ್ನೂ ನೀವೆ ಹೇಳಿ ಅಂದರೆ ಮಾನ್ಯ ಸಭಾಧ್ಯಕ್ಷಿಣಿಯವರೆ ನಾನು ಹೇಗೆ ಹೇಳುವುದಕ್ಕೆ ಆಗುತ್ತದೆ. ಕನ್ನಡ ಅಭಿವೃದ್ಧಿಗೆ ಯಾರೇ ಸರ್ಕಾರದ ಬಾಗಿಲನ್ನು ತಟ್ಟಿದರೂ ಇವೊತ್ತಿನವರೆಗೂ ಇಲ್ಲ ಎಂದಿಲ್ಲ. ಈಗಾಗಲೇ ತಮಗೆ ಗೊತ್ತಿದೆ. ಅನೇಕ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಹಮ್ಮಿಕೊಂಡಿದ್ದಾರೆ. ಇದುವರೆಗೂ ನಾವು ಕೊಟ್ಟಿರುವುದನ್ನು ಹೇಳಬೇಕಾದರೆ ಅದಕ್ಕೆ ಬೇರೆ ಪ್ರಶ್ನೆ ಕೇಳಬೇಕಾಗುತ್ತದೆ. ಬೇರೆ ಪ್ರಶ್ನೆ ಕೇಳಿದರೆ ಯಾರ್ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೇವೆ ಎಂಬುದನ್ನು ನಗರವಾರು ಜಿಲ್ಲಾವಾರು ಕೊಡುವುದಕ್ಕೂ ನಾವು ಸಿದ್ಧವಾಗಿದ್ದೇವೆ.

ಹರಿಹರ ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಗಳು

296 (1894) ಶ್ರೀ ವೈ. ನಾಗಪ್ಪ (ಹರಿಹರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಯಾವ ಯಾವ ವರ್ಷಗಳಿಂದ ಇವುಗಳಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಿದೆ ಪ್ರತಿಯೊಂದು ನೀರಾವರಿಗೆ ಒಳಪಟ್ಟ ಕ್ಷೇತ್ರಕ್ಕೆ ವಿನಿಯೋಗಿಸಲಾಗಿರುವ ಹಣವೆಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಚಿತ್ರದುರ್ಗ ಜಿಲ್ಲೆಯ ಹರಿಪರ ತಾಲ್ಲೂಕಿನಲ್ಲಿ 9 ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಈ ಯೋಜನೆಗಳ ನಿರ್ಮಾಣದ ಹಾಗೂ ನೀರಾವರಿ ಸೌಲಭ್ಯ ಒದಗಿಸಲಾದ ವರ್ಷ ಮತ್ತು ಇವುಗಳಿಗೆ ವಿನಿಯೋಗಿಸಲಾಗಿರುವ ಹಣದ ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಏತ ನೀರಾವರಿ ಯೋಜನೆಗಳ ಹೆಸರು	ಪೂರ್ಣಗೊಂಡ ಹಾಗೂ ನೀರಾವರಿ ಸೌಲಭ್ಯ ಒದಗಿಸಿದ ವರ್ಷ	ವಿನಿಯೋಗಿಸಿದ ಹಣ (ಲಕ್ಷ ರೂ.ಗಳಲ್ಲಿ)
1.	ಚಿಕ್ಕ ಬಿದರೆ	1:1969	1.43
2.	ಬೈರನಪಾದ	2:1974	3.67
3.	ಉಕ್ಕಡಗಾತ್ರಿ	2:1975	2.71
4.	ರಾಧನಹಳ್ಳಿ	2:1975	3.60
5.	ಯಕ್ಕೆಗೊಂಡಿ	12:1975	4.48
6.	ಹರಗನಹಳ್ಳಿ ಹಲಸಬಾಳು	8:1976	11.20
7.	ಹನಗಬಾಡಿ	11:1978	1.35
8.	ನಂದಿಗುಡಿ	11:1978	2.47
9.	ತಿಮ್ಮಲಾಪುರ	1:1984	4.35

ಡಾ।। ವೈ. ನಾಗಪ್ಪ : ಸನ್ಮಾನ್ಯ ಅಧ್ಯಕ್ಷರೇ. ಈ ಒಂದು ಏತ ನೀರಾವರಿಯನ್ನು ನಮ್ಮ ಹರಿಹರ ತಾಲ್ಲೂಕಿನಲ್ಲಿ 1969ನೇ ಇಸವಿಯಿಂದ ಹಿಡಿದು 74. 75. 76. 78 ಮತ್ತು 1984ನ ಇಸವಿಯವರೆಗೂ ಮಾಡಿದ್ದಾರೆ. ಇದಕ್ಕೆ ಅವರು ಖರ್ಚುಮಾಡಿರುವುದು ಬರೀ 35 ಲಕ್ಷ ರೂಪಾಯಿಗಳು ಮಾತ್ರ. ನಮ್ಮ ಸರ್ಕಾರ ಹೇಳುತ್ತದೆ. ಈ ಒಂದು ನೀರಾವರಿಗೆ ನಾವು ಆದ್ಯತೆ ಕೊಟ್ಟು. ನಮ್ಮ ರಾಜ್ಯದಲ್ಲಿ ರತಕ್ಕಂಥ ರೈತರಿಗೆ ನಾವು ಸಹಾಯ ಮಾಡಿ ಅವರ ಕಷ್ಟಗಳನ್ನು ನಿವಾರಣೆಮಾಡಬೇಕು ಎಂದು ಪದೇ ಪದೇ ನಾವು ಹೇಳಿಕೆಯನ್ನು ಕೊಡುತ್ತೇವೆ ನಮ್ಮ ಸರ್ಕಾರವೂ ಹೇಳುತ್ತಾ ಇದೆ. ಆದರೆ.

ಇವತ್ತು ನನ್ನ ತಾಲ್ಲೂಕಿನಲ್ಲಿ ಯಾವ ಒಂದು ಲಿಫ್ಟ್ ಇರಿಗೇಷನ್ ಕೆಲಸ ಮಾಡುತ್ತಾ ಇಲ್ಲ. ಈ ಅಧಿಕಾರಿಗಳು ಅಂದರೆ ಸೆಕ್ಷನ್ ಆಫಿಸರ್ಸ್ ಆಗಲಿ ಇಂಜಿನಿಯರ್ಸ್ ಆಗಲಿ ಇವೊತ್ತು ಸ್ಪಾಟ್‌ಗೆ ಹೋಗುವುದಿಲ್ಲ. ಅಲ್ಲಿ ಏನು ತೊಂದರೆ ಇದೆ. ಏಕೆ ಕೆಲಸ ಮಾಡುತ್ತಾ ಇಲ್ಲ ಎನ್ನುವುದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಈ ಒಂದು ಲಿಫ್ಟ್ ಇರಿಗೆಷನ್‌ಗೆ ಅಳವಡಿಸತಕ್ಕಂಥ ಪಂಪುಸೆಟ್ಟುಗಳು ಮತ್ತು ಮೋಟಾರ್‌ಗಳು ಮುಂತಾದುವನ್ನು ಒಂದು ಕಳಪೆ ದರ್ಜೆಯ ಕಂಪನಿಯಿಂದ ತಂದು ಅವನ್ನು ಅಳವಡಿಸಿದ್ದಾರೆ. ಅವು ಯಾವುವೂ ಕೆಲಸ ಮಾಡುತ್ತಾ ಇಲ್ಲ. ನನ್ನ ತಾಲ್ಲೂಕಿನಲ್ಲಿ ಸುಮಾರು 5-6 ಸಾವಿರ ಎಕರೆ ಈ ಅಚ್ಚು ಕಟ್ಟಿಗೆ ಬರುತ್ತದೆ. ಈ ಲಿಫ್ಟ್ ಇರಿಗೇಷನ್‌ಗೆ ವ್ಯಾಪ್ತಿಗೆ ಬರುತ್ತದೆ. ಈಗ ನೀರು ಹಾಯಿಸುತ್ತಿರುವುದು ಬರೀ ಐದುನೂರು ಎಕರೆಗೆ.

ಈ ಇಲಾಖೆ ನಮಗೇತಕ್ಕೆ ಬೇಕು? ಇದು ಸರಿಯಾದ ರೀತಿಯಲ್ಲಿ ತನ್ನ ಕೆಲಸವನ್ನು ಮಾಡದೇ ಇದ್ದರೆ ಈ ಇಲಾಖೆಯನ್ನು ಪ್ರತ್ಯೇಕವಾಗಿ ಇಡಬೇಕೆಂಬ ಇಚ್ಛೆ ನಮಗೆ ಇಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಈ ಇಲಾಖೆಯನ್ನು ಪ್ರತ್ಯೇಕವಾಗಿ ಇಡುವುದಕ್ಕೇ ಬದಲಾಗಿ ಮೇಜರ್ ಇರಿಗೆಷನ್ ಡಿಪಾರ್ಟ್‌ಮೆಂಟ್‌ಗೆ ಮರ್ಜ್ ಮಾಡತಕ್ಕುದು ಸೂಕ್ತ. ನಾವು ಹೋಗಿ ಕೇಳಿದರೆ. ಸರ್ಕಾರದಿಂದ ನಮಗೆ ಸಾಕಷ್ಟು ಹಣ ಬರುತ್ತಿಲ್ಲ. ಆದುದರಿಂದ ನಾವು ಯಾವ ಕೆಲಸವನ್ನೂ ಮಾಡುವುದಕ್ಕಾಗುತ್ತಿಲ್ಲ ಎಂದು ನಿಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಇಲ್ಲ ತಾವು ನೋಡಿದರೆ ನಾವು ಸಾಕಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದ್ದರಿಂದ ಇದರ ಬಗ್ಗೆ ನಮಗೆ ಸರಿಯಾದ ಮತ್ತು ಸಮರ್ಪಕವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಉಪಾಧ್ಯಕ್ಷಿಣಿಯವರೆ. ನಾನು ಮಾನ್ಯ ನಾಗಪ್ಪನವರ ತಾಲ್ಲೂಕಿಗೆ ಹೋಗಿದ್ದೆ. ಹರಿಹರ ತಾಲ್ಲೂಕಿನಲ್ಲಿ ನೂರಕ್ಕೆ 95 ಪರ್ಸೆಂಟ್ ಇರಿಗೇಷನ್ ಆಗಿದೆ. ಆದರೂ ಅವರು ಹೇಳತಕ್ಕದ್ದುದಲ್ಲ ಸ್ವಲ್ಪ ಭಾಗ ನಿಜವಿದೆ. ಹಳೇ ಪಂಪ್‌ಸೇಟ್ಟುಗಳು ಹಾಳಾಗಿವೆ. ಅವುಗಳನ್ನು ರಿಪೇರಿ ಮಾಡಿಲ್ಲ. ಈಗ ಅವುಗಳನ್ನು ರಿಪೇರಿ ಮಾಡಿಸಲು ಕ್ರಮ ತೆಗದು ಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ 6 ಸಾವಿರ ಎಕರೆಗೆ ನೀರಾವರಿ ಆಗುವಂಥ ಪ್ರಯತ್ನವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಇದಕ್ಕಾಗಿ ನಾವು ಸಾಕಷ್ಟು ಹಣವನ್ನು ಬಜೆಟ್‌ನಲ್ಲಿಟ್ಟಿದ್ದೇವೆ ಎಂದು ಹೇಳಬಯಸುತ್ತೇನೆ.

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ತಾಲ್ಲೂಕಿನಲ್ಲಿ 95 ಪರ್ಸೆಂಟ್ ನೀರಾವರಿ ಆಗಿಲ್ಲ. ಸುಮಾರು 75 ಪರ್ಸೆಂಟ್ ನೀರಾವರಿಯಾಗಿದೆ. ಇನ್ನೂ 25 ಪರ್ಸೆಂಟ್ ಜಮೀನು ಮೈನರ್ ಇರಿಗೇಶನ್ ಮೇಲೆ ಅವಲಂಬಿಸಿದೆ. ತಾವೂ ಕೂಡ ಆ ಪ್ರದೇಶದಿಂದ ಬಂದಿದ್ದೀರಿ. ಭದ್ರಾ ಬಲದಂಡೆ ನಾಲೆ ಬಿದ್ದ ಮೇಲೆ ರೈತರು ಬಹಳಷ್ಟು ಕಷ್ಟಕ್ಕೆ ಒಳಗಾಗಿದ್ದಾರೆ. ಕಳೆದ 6 ತಿಂಗಳಲ್ಲಿ ಸುಮಾರು 400 ಕೋಟಿ ರೂಪಾಯಿಗಳಷ್ಟು ನಷ್ಟ ಈ ರೈತರಿಗಾಗಿದೆ. ನಾವು ಅಲ್ಲಿ ಖರ್ಚು ಮಾಡತಕ್ಕದ್ದು ಕೇವಲ 7-8 ಕೋಟಿ ರೂಪಾಯಿಗಳು ಮಾತ್ರ. ಇದು ಕೇವಲ ನನ್ನ ತಾಲ್ಲೂಕು ಒಂದೇ ಅಲ್ಲ. ನಮ್ಮ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಇದೆ. ಅದನ್ನೆಲ್ಲ ಸರಿಪಡಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದರ ಬಗ್ಗೆ ನಾವು ಈಗಾಗಲೆ ಕ್ರಮ ತೆಗೆದುಕೊಂಡಿದ್ದೇವೆ. ಹಳೇ ಪಂಪ್‌ಸೆಟ್ಟುಗಳು ಕೆಲಸಮಾಡುತ್ತಿಲ್ಲ. ಸುಮಾರು 50-60

ಪರ್ಸೆಂಟ್‌ನಷ್ಟು ಅವುಗಳ ಸಾಮರ್ಥ್ಯ ಕಡಿಮೆಯಾಗಿದೆ. ಅವುಗಳನ್ನು ಹಂತಹಂತವಾಗಿ ರೀಪ್ಲೇಸ್ ಮಾಡತಕ್ಕ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಮಾಗೋಡು ಏತನೀರಾವರಿ ಯೋಜನೆ ಸಿದ್ಧವಾಗಿದೆ. ಇದು ಬೈರನಪಾದ ಏತ ನೀರಾವರಿ ಯೋಜನೆಯ ಅಚ್ಚುಕಟ್ಟಿನಲ್ಲಿ ಬರುವುದರಿಂದ ಈ ಬೈರನಪಾದ ಏತ ನೀರಾವರಿ ಯೋಜನೆಯಡಿ ಚಾನಲನ್ನು ರಿಪೇರಿ ಮಾಡಿಸಿ ಇನ್ನೂ ಹೆಚ್ಚಿನ ನೀರನ್ನು ರೈತರಿಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಇದರ ಜೊತೆಗೆ ದೇವರ ಕೆರೆ ಮತ್ತು ಕುಣಿ ಬೆಣ್ಣೆಕೆರೆ ಎನ್ನತಕ್ಕ ಏತ ನೀರಾವರಿ ಯೋಜನೆಗಳನ್ನೂ ಕೂಡ ನಾವು ಮಾಡುತ್ತೇವೆ. ಇದು ಪ್ರಿಲಿಮಿನರಿ ಇನ್ವೆಸ್ಟಿಗೇಶನ್ ರಿಪೋರ್ಟಿನಲ್ಲಿದೆ ಇದನ್ನೂ ಕೂಡ ನಾವು ತೆಗೆದುಕೊಂಡು ಅವುಗಳ ಕೆಲಸವನ್ನು ಆದಷ್ಟು ಬೇಗ ಪೂರ್ತಿ ಮಾಡಿಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ತಮ್ಮ ಮುಂದಿಡಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ : ಸಹಕಾರಿ ತತ್ವದ ಆಧಾರದಮೇಲೆ ಕೆಲಸಮಾಡುತ್ತಿರುವ ಏತ ನೀರಾವರಿ ಯೋಜನೆಗಳ ಸಂಘದ ಆಂತರಿಕ ಗಲಾಟೆಗಳಿಂದ ಮತ್ತು ಹಣಕಾಸಿನ ವ್ಯವಸ್ಥೆ ಇಲ್ಲದೇ ಇರುವುದರಿಂದ ಇಂಥವು ಡೀಫಂಕ್ಟ್ ಆಗಿವೆ. ಆದುದರಿಂದ ಸಹಕಾರೀ ತತ್ವದ ಆಧಾರಮೇಲಿರತಕ್ಕ ಏತ ನೀರಾವರಿ ಯೋಜನೆಗಳನ್ನು ಸರ್ಕಾರವೇ ವಹಿಸಿಕೊಂಡು ರೈತರಿಗೆ ಸಹಾಯ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ? ಹಾಗೇನಾದರೂ ಇದ್ದರೆ ಅದರ ಪಾಲಿಸಿಯ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಉಪಾಧ್ಯಕ್ಷಿಣಿಯವರೆ. ಮಾನ್ಯ ಸದಸ್ಯರು ಹೇಳಿದಂತೆ ಅನೇಕ ಸಹಕಾರಿ ಸಂಘಗಳ ಏತ ನೀರಾವರಿ ಯೋಜನೆಗಳು ಕೆಲಸಮಾಡುತ್ತಿಲ್ಲ. ಅವರು ಹೇಳಿದಂತೆ ಇದರಲ್ಲಿ ರಾಜಕೀಯ ಒಂದು ಏತ ನೀರಾವರಿ ಯೋಜನೆಗಳು ನಿಂತುಹೋಗಿವೆ. ಈ ರೀತಿ ನಿಂತಿರತಕ್ಕ ಏತ ನೀರಾವರಿ ಯೋಜನೆಗಳ ಬಗ್ಗೆ ಕೂಡ ಗಮನಹರಿಸಿ ಅವುಗಳನ್ನು ಸರ್ಕಾರವೇ ವಹಿಸಿಕೊಂಡು ಸರಿಪಡಿಸುವುದಕ್ಕೆ ಮತ್ತು ಮುಂದೆ ನಡೆಸಿಕೊಂಡು ಹೋಗುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತುಕತೆ ನಡೆಸಿದ್ದೇವೆ. ಇದನ್ನೂ ಕೂಡ ಶೀಘ್ರವಾಗಿ ನಾವು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ವೈ. ನಾಗಪ್ಪ : ಈ ವರ್ಷದ ಆಯವ್ಯಯದಲ್ಲಿ ಏತ ನೀರಾವರಿ ಯೋಜನೆಗಳಿಗೆ ಕೊಟ್ಟಿರತಕ್ಕ ಹಣ ಬಹಳ ಕಡಿಮೆ ಇದೆ. ಈ ಬಜೆಟಿನಲ್ಲಿ ಕೊಟ್ಟಿರತಕ್ಕ ಹಣ ಕೇವಲ ಅಧಿಕಾರಿಗಳ ವೇತನಕ್ಕೇ ಹೋಗುತ್ತದೆ. ಇದರಿಂದ ಯಾವುದೇ ನೀರಾವರಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ. ಈ ಬಾಬಿಗೆ ಹೆಚ್ಚಿನ ಹಣವನ್ನು ಬಜೆಟಿನಲ್ಲಿ ಒದಗಿಸುವುದರ ಮೂಲಕ ಇದನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಹೋಗುವುದಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ನಾಗಪ್ಪನವರಿಗೂ ವಿಚಾರ ಗೊತ್ತಿರಬಹುದು. ಏತನೀರಾವರಿಯಲ್ಲಿ ಎರಡು ಭಾಗ ಇದೆ. ಮೊದಲನೆಯದು ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟ ಏತ ನೀರಾವರಿ ಯೋಜನೆಗಳು ಇದನ್ನು ಸರ್ಕಾರವೇ ವಹಿಸಿಕೊಂಡು ಕೆಲಸಮಾಡತಕ್ಕದ್ದು. ಮತ್ತು ಈಗ ಹೊಸದಾಗಿ ಬಂದಿರತಕ್ಕ ಕಾವೇರಿ ಮತ್ತು ಕೃಷ್ಣ ಇರಿಗೇಷನ್ ವ್ಯಾಪ್ತಿಗೆ ಬರತಕ್ಕ ಏತ ನೀರಾವರಿ ಯೋಜನೆಗಳು ಬೇರೆ ಇವೆ.

ಈ ಕಾರಣದಿಂದ ಏತನೀರಾವರಿ ಕಾರ್ಪೋರೇಷನ್‌ನಲ್ಲಿರತಕ್ಕಂಥದ್ದು ಈ ಬಜೆಟ್‌ನಲ್ಲಿ ಬರುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಬರತಕ್ಕಂಥ ಏತ ನೀರಾವರಿ ಮಾತ್ರ ಈ ಬಜೆಟ್‌ನಲ್ಲಿ ಬರುತ್ತದೆ. ಅದಕ್ಕೆ ಒಂದು ಸಪರೇಟ್ ಬಜೆಟ್ ಇದೆ. ಅದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಸಹಿತ ಕೊಡುತ್ತೇವೆಂದು ಪಿ.ಎಲ್.ಡಿ. ಬ್ಯಾಂಕ್. ಮತ್ತು ಪಿ.ಸಿ.ಎಲ್.ಡಿ. ಬ್ಯಾಂಕ್‌ನವರು ಒಪ್ಪಿಕೊಂಡಿರುತ್ತಾರೆ. ಜನರಲ್ ಮ್ಯಾನೇಜರ್ ಬಂದು ನಮ್ಮ ಎಂ.ಡಿ. ಜೊತೆಯಲ್ಲಿ ಮತ್ತು ನಮ್ಮ ಜೊತೆಯಲ್ಲಿ ಡಿಸ್‌ಕಸ್ ಮಾಡಿ ಎಷ್ಟು ಹಣಬೇಕಾದರೂ ಕೊಡುತ್ತೇವೆನ್ನತಕ್ಕ ಮಾತನ್ನು ಈಗಾಗಲೇ ಹೇಳಿದ್ದಾರೆ. ಸುಮಾರು ಆರು ವರ್ಷಗಳಿಂದ ಸುಮ್ಮನೆ ಇದ್ದಂಥ ಏತ ನೀರಾವರಿಗಳನ್ನು ನಾವು ಜಾಲನೆ ಮಾಡುತ್ತಿದ್ದೇವೆ. ಇವತ್ತು ಕಾವೇರಿ ಬೇಸಿನ್‌ನಲ್ಲಿ ಸುಮಾರು 20 ಲಿಫ್ಟ್ ಇರಿಗೇಷನ್‌ಗಳನ್ನು ಕೈಗೊಳ್ಳುತ್ತಿದ್ದೇವೆ. ಸುಮಾರು ಹತ್ತುಕೋಟಿಗೂ ಮೀರಿದಂಥ ಒಂದು ಅಂದಾಜನ್ನು ಈಗಾಗಲೇ ನಬಾರ್ಡ್‌ನವರು ಪಾಸ್‌ಮಾಡಿದ್ದು. ಇವತ್ತು ಆ ಕೆಲಸಗಳು ಪ್ರಾರಂಭ ಮಾಡತಕ್ಕಂಥ ಸ್ಥಿತಿಯಲ್ಲಿವೆ. ಆದ್ದರಿಂದ ಈ ಒಂದು ಅಸೆಂಬ್ಲಿ ಅಧಿವೇಶನ ಮುಗಿದ ಕೂಡಲೇ ಅಡಿಗಲ್ಲು ಹಾಕಿಸುವ ಕಾರ್ಯಕ್ರಮವಿದೆ. ಕೃಷ್ಣಾ ಮತ್ತು ಕಾವೇರಿ ಬೇಸಿನ್ ಯೋಜನೆಯಲ್ಲಿ ಸುಮಾರು 20 ಯೋಜನೆಗಳನ್ನು 10 ಕೋಟಿ ರೂಪಾಯಿಗಳಿಗೂ ಮಿಕ್ಕಿ ವೆಚ್ಚಮಾಡತಕ್ಕಂಥ ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ. ಈ ಯೋಜನೆಗೆ ತಾವು ಅಡಿಗಲ್ಲು ಹಾಕಬೇಕೆಂದು ಈಗಾಗಲೇ ನಾವು ಮಾನ್ಯಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಅವರು ಅದಕ್ಕೆ ಒಪ್ಪಿ ಹಣವನ್ನು ಸಹಿತ ಬಿಡುಗಡೆ ಮಾಡುತ್ತೇವೆಂದು ಹೇಳಿರುತ್ತಾರೆ. ಅದನ್ನು ಕೂಡ ಚುರುಕುಗೊಳಿಸುತ್ತಿದ್ದೇವೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ನಾಗಪ್ಪನವರು ಹೇಳಿದಂಥ ಕಾರ್ಯಕ್ರಮ ಏನಿವೆ ಅದನ್ನು ಸಹಿತ ಕೈಗೊಳ್ಳಲು ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀಮತಿ ಮೋಟಮ್ಮನವರೆ ತಮ್ಮ ಪ್ರಶ್ನೆಯನ್ನು ಹೆಚ್.ಯು.ಡಿ.ಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀಮತಿ ಮೋಟಮ್ಮ : ಮಾನ್ಯ ಉಪಾಧ್ಯಕ್ಷಿಣಿಯವರೇ. ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿರುತ್ತದೆ.

ಉಪಾಧ್ಯಕ್ಷರು : ಇದು ಯುವಜನಸೇವಾ ರಾಜ್ಯಮಂತ್ರಿಗಳಿಗೆ ಬರುವುದಿಲ್ಲ. ಆದ್ದರಿಂದ ಹೆಚ್.ಯು.ಡಿ.ಗೆ ಟ್ರಾನ್ಸ್‌ಫರ್ ಮಾಡಲಾಗಿದೆ.

ಶ್ರೀಮತಿ ಮೋಟಮ್ಮ : ಹೆಚ್.ಯು.ಡಿ. ಬಂದಾಗ ಅದನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಶ್ರೀಯುತ ಬಿ.ಎಂ. ಇದನಬ್ಬನವರೆ ತಮ್ಮ ಪ್ರಶ್ನೆಗೆ 15 ದಿವಸ ಟೈಮ್ ಕೇಳಿದ್ದಾರೆ. ಆದ್ದರಿಂದ ಆ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ಬೆಂಗಳೂರು - ಮೈಸೂರು ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದು

289 (1497) ಶ್ರೀ ಚಿಕ್ಕಮಾದು (ಹುಣಸೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು - ಮೈಸೂರು ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯ ಉದ್ದ :

ಆ) ಈ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಭಾರತ ಸರ್ಕಾರದಲ್ಲಿ (10-15 ವರ್ಷಗಳಿಂದ ಬಾಕಿ ಇರುವುದು ನಿಜವೇ;

ಇ) ಹಾಗಿದ್ದಲ್ಲಿ ರಾಜ್ಯ ಹದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಸರ್ಕಾರವು ಮಾಡಿದ ಪ್ರಯತ್ನಗಳೇನು?

ಶ್ರೀ ಜಿ. ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) 385 ಕಿಲೋ ಮೀಟರುಗಳು

ಆ) ಹೌದು

ಇ) ರಾಜ್ಯ ಸರ್ಕಾರವು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಸತತವಾಗಿ ಒತ್ತಾಯಿಸುತ್ತಿದೆ. ಇತ್ತೀಚಿಗೆ ಅಂದರೆ ಡಿಸೆಂಬರ್ 91ರಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಕೇಂದ್ರ ಸರ್ಕಾರದ ಭೂಸಾರಿಗೆ ಸಚಿವರೊಡನೆ ಈ ವಿಷಯವಾಗಿ ಚರ್ಚಿಸಿರುತ್ತಾರೆ. ಕೇಂದ್ರ ಸಚಿವರು 8ನೇ ಪಂಚವಾರ್ಷಿಕ ಯೋಜನೆಯ ಪ್ರಸ್ತಾವನೆಗಳ ಬಗ್ಗೆ ನಿರ್ಧಾರವಾದ ನಂತರ ಪರಿಶೀಲಿಸಲಾಗುವುದು ಎಂದು ತಿಳಿಸಿರುತ್ತಾರೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಂ.ಎಂ.ಪಿ. ಯೋಜನೆ.

290 (1363) ಶ್ರೀ ಗಂಗಾಧರ ಗೌಡ (ಬೆಳ್ತಂಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಂ.ಎಂ.ಪಿ. ಯೋಜನೆಯಲ್ಲಿ ಮಂಜೂರಾದ ರಸ್ತೆಗಳೆಷ್ಟು:

ಆ) ಈ ರಸ್ತೆಗಳು ದುರಸ್ತಿಗಳಿಲ್ಲದೆ ಸಂಪೂರ್ಣ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆ ದುರಸ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ) ಎಂ.ಎಂ.ಪಿ.ರಸ್ತೆ ರಚನೆ ಮಾಡಿ ಸೇತುವೆ ರಚನೆ ಮಾಡದೇ ಇರುವುದರಿಂದ ಹಳ್ಳಿ ಪ್ರದೇಶದ ಜನರಿಗೆ ಮಳೆಗಾಲದಲ್ಲಿ ಆಗುವ ತೊಂದರೆಗಳನ್ನು ಸರ್ಕಾರ ಯಾವ ರೀತಿಯಲ್ಲಿ ಸರಿಪಡಿಸುವುದು?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 11 ಕಾಮಗಾರಿಗಳು ಕನಿಷ್ಠ ಅವಶ್ಯಕತೆ ಯೋಜನೆ (ಎಂ.ಎನ್.ಪಿ)ಯಲ್ಲಿ ಮಂಜೂರಾಗಿರುತ್ತದೆ.

ಆ) ಈ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತವೆ. ಜಿಲ್ಲಾ ಪರಿಷತ್ತಿನಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಈ ರಸ್ತೆಗಳನ್ನು ಆದಷ್ಟು ಸುಸ್ಥಿತಿಯಲ್ಲಿಡಲಾಗುತ್ತಿದೆ.

ಈ) ಸೇತುವೆ ರಚನೆಯನ್ನು ಸೇತು ಬಂಧನ, ಹಳ್ಳಿ ಹೆದ್ದಾರಿ ಮುಂತಾದ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ.

ಸಂಬಾಪುರ ಗ್ರಾಮದ ಯುವಕ ಮಂಡಲದ ಕಟ್ಟಡ ಅಪೂರ್ಣವಾಗಿರುವುದು.

291 (1612) ಶ್ರೀ ಕೆ.ಎಚ್.ಕುರುಡಗಿ (ಮುಂಡರಗಿ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಸಂಬಾಪುರ ಗ್ರಾಮದಲ್ಲಿ ಯುವಕ ಮಂಡಲ ಕಟ್ಟಡವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿರುವುದು;

ಇ) ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಕ ಮಂಡಲ ಅರ್ದಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು

ಆ) ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಯುವಕ ಸಂಘದವರು ಕೂಡ ಸಕ್ರೀಯವಾಗಿ ವಂತಿಕೆ ಹಾಕಿ ಕಟ್ಟಡದ ನಿರ್ಮಾಣದ ಕಾರ್ಯವನ್ನು ಪೂರ್ಣಹಂತಕ್ಕೆ ತಂದಿರುತ್ತಾರೆ.

ಇ) ಕಟ್ಟಡ ನಿರ್ಮಾಣ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೀದರ್ ನಗರವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ

292 (1908) ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್) : ಮಾನ್ಯ ವಾರ್ತಾ. ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರವು ಒಂದು ಐತಿಹಾಸಿಕ ಮತ್ತು ಪ್ರವಾಸಿ ಸ್ಥಳವೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ನಗರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾಪವಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) ಹೌದು

ಆ) 1991-92ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬೀದರ್‌ನಲ್ಲಿರುವ ಮಹಮದ್ ಗವಾನ್ ಮದರಸಕ್ಕೆ ಹೊನಲು ಬೆಳಕನ್ನು ಅಳವಡಿಸುವ ಯೋಜನೆಗೆ ಆದ್ಯತೆ

ನೀಡಿರುತ್ತದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಮೆ: ಮೈಸೂರು ಲ್ಯಾಂಪ್ಸ್ ಲಿ.. ರವರು ರೂ. 5.45 ಲಕ್ಷಕ್ಕೆ ಸಲ್ಲಿಸಿದ ನಕ್ಷೆ ಹಾಗೂ ಅಂದಾಜನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ.

ಸೂಳೆಕೋಟೆ ಸೇತುವೆ ನಿರ್ಮಾಣ

293(1664) ಶ್ರೀ ಕೆ.ಎನ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟೆ ಸೇತುವೆ ನಿರ್ಮಾಣಕ್ಕೆ ಅಂದಾಜು ಮಾಡಿರುವ ಹಣ ಎಷ್ಟು ಹಾಗೂ ಈವರೆವಿಗೂ ಎಷ್ಟು ಹಣ ಖರ್ಚಾಗಿರುತ್ತದೆ;

ಆ) ಇದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುತ್ತದೆ;

ಇ) ಈ ಸೇತುವೆ ಕೆಲಸವನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಜಿ.ಹೆಚ್.ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿ ಅಂದಾಜು ವೆಚ್ಚ 42.00 ಲಕ್ಷ ರೂ.ಗಳಾಗಿರುತ್ತದೆ. ಇದುವರೆವಿಗೂ 20.57 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಆ) 31.00 ಲಕ್ಷರೂ.ಗಳು ಬೇಕಾಗುತ್ತದೆ.

ಇ) ಅನುದಾನದ ಲಭ್ಯತೆಯ ಮೇಲೆ ಸುಮಾರು 2 ವರ್ಷಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಕಡಲು ಕೊರೆತಕ್ಕೆ ಮಾಸ್ಟರ್ ಪ್ಲಾನ್

294 (1615) ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡಲು ಕೊರೆತಕ್ಕೆ ಸಂಬಂಧಿಸಿದಂತೆ ರಾಜ್ಯದ 320ಕಿ.ಮೀ. ಕರಾವಳಿಯ ಉದ್ದಕ್ಕೆ ಏನಾದರೂ ಮಾಸ್ಟರ್ ಪ್ಲಾನು ರಚಿಸಲಾಗಿದೆಯೇ :

ಆ) ರಚಿಸಲಾಗಿದ್ದಲ್ಲಿ ಅದನ್ನು ಕೇಂದ್ರಕ್ಕೆ ಮಂಜೂರಾತಿ ಹಾಗೂ ಅನುದಾನಕ್ಕಾಗಿ ಯಾವಾಗ ಕಳುಹಿಸಲಾಗಿದೆ ;

ಇ) ಕೇಂದ್ರದಿಂದ ಈ ಉದ್ದೇಶಕ್ಕೆ ಈವರೆಗೆ ಎಷ್ಟು ಅನುದಾನ ಬಂದಿರುತ್ತದೆ ;

ಈ) ಬಂದಿರುವ ಹಣದ ಉಪಯೋಗಆಗಿದೆಯೇ ;

ಉ) ಕೇಂದ್ರದ ಸಹಾಯದ ಹೊರತಾಗಿ ರಾಜ್ಯದೊಡನೆ ಈ ಬಗ್ಗೆ ಏನಾದರೂ ಯೋಜನೆಗಳಿವೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಹೌದು. ರಾಜ್ಯದ ಸುಮಾರು 300 ಕಿ.ಮೀ. ಉದ್ದದ ಕರಾವಳಿ ತೀರದಲ್ಲಿ ಸುಮಾರು 73 ಕಿ.ಮೀ.ಗಳಷ್ಟು ಉದ್ದದ ಪ್ರದೇಶವು ತೀವ್ರ ಸಮುದ್ರ ಕೊರೆತದ ಪ್ರದೇಶವೆಂದು ಗುರುತಿಸಲಾಗಿದ್ದು. ಈ ಜಾಗದಲ್ಲಿ ತಡೆ ಗೋಡೆ ರಚಿಸಲು ರೂ.145 ಕೋಟಿಗಳ ಒಂದು ಮಾಸ್ಟರ್ ಪ್ಲಾನ್ ರಚಿಸಲಾಗಿದೆ.

ಆ) ಈ ಮಾಸ್ಟರ್ ಪ್ಲಾನನ್ನು ಅನುಮೋದನೆ ಹಾಗೂ ಅರ್ಥಿಕ ನೆರವಿಗಾಗಿ ಕೇಂದ್ರ ಜಲ ಆಯೋಗಕ್ಕೆ ದಿನಾಂಕ 9-8-1989ರಲ್ಲಿ ಸಲ್ಲಿಸಲಾಗಿದೆ.

ಇ) ಯಾವ ಅನುದಾನವೂ ಬಂದಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಇವೆ.

ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳು

297 (1698) ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಕ್ರೀಡಾ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಆ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಸ್ಟೇಡಿಯಂಗಳನ್ನು ಮಂಜೂರು ಮಾಡಲಾಗಿದೆ ;

ಇ) ಇದಕ್ಕೆ ತಗುಲಿದ ವೆಚ್ಚವೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಬೀದರ್ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ, ಕಾರ್ಯವು ಪ್ರಗತಿಯಲ್ಲಿದೆ. ಬೀದರ್ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಕ್ರೀಡಾ ಅಭಿವೃದ್ಧಿಗಾಗಿ ಪುಟಬಾಲ್ ಮತ್ತು ಹಾಕಿ ತರಬೇತುದಾರರನ್ನು ನೇಮಿಸಲಾಗಿದೆ. ಮತ್ತು ಬೀದರ್‌ನಲ್ಲಿ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ನಡೆಸಲಾಗಿದೆ.ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ. ಮಹಿಳಾ ಮತ್ತು ದಸರಾ ಕ್ರೀಡಾಕೂಟವನ್ನು ನಡೆಸಲಾಗಿದೆ.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯ ಆಶ್ರಯದಲ್ಲಿ ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಯೋಜಿಸಲಾಗಿದೆ.

ಇ) ಪ್ರತಿ ತಾಲ್ಲೂಕು ಕ್ರೀಡಾಂಗಣದ ಅಂದಾಜು ವೆಚ್ಚ ರೂ. 15.75ಲಕ್ಷಗಳು.

ಕುವೆಂಪು ರಂಗಮಂದಿರಕ್ಕೆ ಬಿಡುಗಡೆಯಾದ ಹಣ

298 (1713) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಅರ್ಧಕ್ಕೆ ನಿಂತಿರುವ ಕುವೆಂಪು ರಂಗಮಂದಿರಕ್ಕೆ ಇದುವರೆವಿಗೂ ಸರ್ಕಾರವು ಬಿಡುಗಡೆ ಮಾಡಿರುವ ಹಣವೆಷ್ಟು;

ಆ) ಇದರಲ್ಲಿ ಸಾರ್ವಜನಿಕರ ಹಣವೆಷ್ಟು ಹಾಗೂ ಸರ್ಕಾರದ ಸಹಾಯಧನ ಎಷ್ಟು;

ಇ) ಈ ರಂಗಮಂದಿರವನ್ನು ಪೂರ್ಣಗೊಳಿಸಲು ಇನ್ನುಎಷ್ಟು ಹಣ ಬೇಕಾಗುತ್ತದೆ ಹಾಗೂ ಸರ್ಕಾರ ಯಾವಾಗ ಹಣ ಬಿಡುಗಡೆ ಮಾಡುತ್ತದೆ ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) 29-2-1992ರ ವರೆಗೆ ಬಿಡುಗಡೆ ಮಾಡಿದ ಒಟ್ಟು ರೂ.15.93 ಲಕ್ಷ ರೂಪಾಯಿಗಳು.

ಆ) ಸರ್ಕಾರದ ಹಣ 15.93 ಲಕ್ಷ ರೂ.ಗಳು ಶಿವಮೊಗ್ಗ ನಗರ ಸಭೆಯಿಂದ 5.00 ಲಕ್ಷ ರೂ. ಗಳು.

ಇ) 1991-92ರ ದರಪಟ್ಟಿ ಪ್ರಕಾರ 85.00 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಸರ್ಕಾರದ ವತಿಯಿಂದ ನೀಡಬೇಕಾದ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ ಲಿಖಿತಮೂಲಕ ಉತ್ತರಿಸುವ 13-3-1992ರ 14 ಪ್ರಶ್ನೆಗಳು ಹಾಗೂ 32 ಪ್ರಶ್ನೆಗಳು 16-3-1992ರ ಲಿಕಿತಮೂಲಕ ಉತ್ತರಿಸುವ 52 ಪ್ರಶ್ನೆಗಳನ್ನು ಸದನದ ಮುಂದಿಡುತ್ತೇನೆ.

ಗ್ರಾಮೀಣ ತಾಂತ್ರಿಕ ಸೇವೆ ಇಲಾಖೆಯ ರಚನೆ

1067 (1454) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಗ್ರಾಮೀಣಾಭಿವೃದ್ಧಿ. ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಜನರ ಬೇಡಿಕೆಗಳನ್ನು ಪೂರೈಸಲು ಸರ್ಕಾರದ ವತಿಯಿಂದ ಗ್ರಾಮೀಣ ತಾಂತ್ರಿಕ ಸೇವೆ ಇಲಾಖೆಯನ್ನು ರಚಿಸುವ ಬಗ್ಗೆ ಯಾವುದಾದೂ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ.ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು) :

ಅ) ಹೌದು. ಈ ವಿಷಯವು ಸರ್ಕಾರದಿಂದ ಪರಿಶೀಲಿಸಲ್ಪಡುತ್ತಿದೆ.

ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳು

1069 (1456) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) ಮಾನ್ಯ ಗ್ರಾಮೀಣಾಭಿವೃದ್ಧಿ. ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡಿಯುವ ನೀರಿನ ಉದ್ದೇಶದಡಿಯಲ್ಲಿ ಸರ್ಕಾರವು ನಾರುಹುಣ್ಣು. ಕ್ಲೋರಿನ್ ಹೆಚ್ಚಿನ ಕಬ್ಬಿಣಾಂಶ. ರಸಾಯನಿಕ ಅಂಶಗಳು ಕಠಿಣಾತ್ಮಕ ಹಳ್ಳಿಗಳು ನೀರಿನ ಸಮಸ್ಯೆ ಇರುವ ಹಳ್ಳಿಗಳು ಇತ್ಯಾದಿ ಕಾರಣದಿಂದ ಸಮಸ್ಯಾತ್ಮಕ ಹಳ್ಳಿಗಳನ್ನುಗುರಿತಿಸಲಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ. ಪಂಚಾಯತ್‌ರಾಜ್ ಹಾಗೂ ಕಂದಾಯ ಸಚಿವರು) :

ಅ) ಹೌದು.

ಮಿನಿಮಿಷನ್ ಯೋಜನೆಯಡಿಯಲ್ಲಿ 1987-88 ರ ಸಾಲಿನಲ್ಲಿ ಕೆಳಕಂಡ ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸಿದೆ.

ಕ್ರ ಸಂ.	ಜಿಲ್ಲೆ	ಕಠಿಣಾತ್ಮಕ ಹಳ್ಳಿಗಳು	ಸವಳು ನೀರಿನ ಹಳ್ಳಿಗಳು	ಹೆಚ್ಚಿನ ಫ್ಲೋರೈಡ್ ಅಂಶ ಇರುವ ಹಳ್ಳಗಳು	ನಾರುಹುಣ್ಣು ರೋಗಕ್ಕೆ ಈಡಾದ ಹಳ್ಳಿಗಳು	ಒಟ್ಟು
1	ಗುಲ್ಬರ್ಗಾ	115	110	25	108	358
2	ಧಾರವಾಡ	111	167	44	27	349
3	ರಾಯಚೂರು	51	121	43	-	215
	ಒಟ್ಟು	277	398	112	135	922

ಸಬ್ ಮಿಷನ್ ಯೋಜನೆಯಡಿಯಲ್ಲಿ (ನಾರುಹುಣ್ಣು ನಿರ್ಮೂಲನಾ ಕಾರ್ಯಕ್ರಮ ಈ ಕೆಳಕಂಡ ಹಳ್ಳಿಗಳನ್ನು ನಾರುಹುಣ್ಣು ರೋಗಕ್ಕೆ ಈಡಾದ ಹಳ್ಳಿಗಳೆಂದು 1.1.91ರಲ್ಲಿ ಗುರುತಿಸಲಾಗಿದೆ.

1)	ಧಾರವಾಡ	1
2)	ಬಿಜಾಪುರ	14
3)	ಗುಲ್ಬರ್ಗಾ	90
4)	ಬೀದರ್	2
5)	ರಾಯಚೂರು	52
	ಒಟ್ಟು	159

ಆ) ಕಠಿಣಾತ್ಮಕ ಹಳ್ಳಿಗಳು. ಸವಳು ನೀರಿನ ಹಳ್ಳಿಗಳು :- ಈ ಹಳ್ಳಿಗಳಿಗೆ ಎಲ್ಲಾ ಕಾಲದಲ್ಲೂ ಶುದ್ಧವಾದ ಕುಡಿಯುವ ನೀರಿನ ಹೊಸ ಜಲಮೂಲವನ್ನು ಸ್ಥಾಪಿಸಲಾಗುತ್ತಿದೆ. ಅಂತ ಜಲಮೂಲವನ್ನು ಕಂಡುಹಿಡಿಯಲು ಭಾರತ ಸರ್ಕಾರದ ಕೇಂದ್ರ ಅಂತರ್ಜಲ ಮಂಡಳಿಯ ವತಿಯಿಂದ ಸೇವೆ ಹಾಗೂ ಸಲಹೆಗಳನ್ನು ಪಡೆಯಲಾಗುತ್ತಿದೆ.

ನೀರಿನಲ್ಲಿ ಹೆಚ್ಚಿನ ಫ್ಲೋರೈಡ್‌ಅಂಶ ಇರುವ ಹಳ್ಳಿಗಳು :-

ಈ ಗುರುತಿಸಲಾದ ಹಳ್ಳಿಗಳಿಗೆ ಬದಲಿ ಜಲಮೂಲವನ್ನು ಸ್ಥಾಪಿಸಲಾಗಿದೆ. ಬದಲಿ ಜಲಮೂಲವನ್ನು ಸ್ಥಾಪಿಸಲಾಗದ ಹಳ್ಳಿಗಳಿಗೆ ಡಿಪ್ಲೋರಿಡೇಷನ್ ಪ್ಲಾಂಟ್‌ಗಳನ್ನು ತೆಗೆದುಕೊಳ್ಳಲಾಗಿದೆ.

ನಾರು ಹುಣ್ಣಿಗೆ ಈಡಾದ ಹಳ್ಳಿಗಳು :-

ನಾರು ಹುಣ್ಣಿನ ರೋಗಕ್ಕೆ ಈಡಾದ ಹಳ್ಳಿಗಳಿಗೆ ಸುರಕ್ಷಿತ ನೀರನ್ನು ಒದಗಿಸಿ ರೋಗರಹಿತ ಮೆಟ್ಟಿಲು ಬಾವಿಗಳನ್ನು (ಕಲ್ಯಾಣಿ) ಸೇದುವ ಬಾವಿಗಳಾಗಿ ಪರಿವರ್ತಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಅಯವ್ಯಯ ಅನುದಾನ

1070 (1457) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೆ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಆಯವ್ಯಯ ಅನುದಾನವೆಷ್ಟು; (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ಹಣವನ್ನು ಯಾವ ರೀತಿ ಬಿಡುಗಡೆ ಮಾಡಲಾಗಿದೆ ; (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಇ) ಅನುದಾನವನ್ನು ಉಪಯೋಗಿಸಿರದ ಬಗ್ಗೆ ಕಾರಣಗಳೇನು?

ಶ್ರೀ ಜಿ.ಹೆಚ್.ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಜಿಲ್ಲಾವಾರು ಅನುದಾನ ನಿಗದಿ ಪಡಿಸುವುದಿಲ್ಲ. 1991-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿರ್ದೇಶನ ಮತ್ತು ಆಡಳಿತ ಯಂತ್ರ ಮತ್ತು ಸಾಮಗ್ರಿ ಕಾಮಗಾರಿಗಳು. ಹಾಗೂ ಇತರೇ ವೆಚ್ಚಗಳಿಗೆ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ ಕಟ್ಟಡಗಳ ಶೀರ್ಷಿಕೆಯಲ್ಲಿ 54.33 ಕೋಟಿ ರೂ.ಗಳನ್ನು ರಸ್ತೆ ಮತ್ತು ಸೇತುವೆಗಳ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ 56.97 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಲೋಕೋಪಯೋಗಿ ಇಲಾಖೆ ವಿಭಾಗದ ಕಾಮಗಾರಿಗಳಿಗೆ ನೀಡಿರುವ ಅನುದಾನ ಹಾಗೂ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಭಂದದಲ್ಲಿ ಕೊಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಪೂರ್ಣವಾಗಿ ಉಪಯೋಗಿಸಲಾಗುತ್ತದೆ. ಅದುದರಿಂದ ಅನುದಾನವನ್ನು ಉಪಯೋಗಿಸಿಲ್ಲದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE TO UNSTARRED LAQ *1457

(Rs. in Lakhs)

Sl. No.	Districts	1991-92 Budget grants PLAN & NONPLAN	
		Grants allocated for Buildings, Roads & Bridges	Funds released to Buildings, Roads & Bridges to end of Jan.92
	A. General Budget		
1.	Dharwad	626.11	484.75
2.	Uttara Kannad	433.39	342.66
3.	Belagaum	529.77	437.71
4.	Bijapur	483.13	305.41
5.	Gulbarga	482.34	317.04
6.	Bidar	171.52	153.91
7.	Bellary	366.54	351.55
8.	Raichur	365.96	291.33
9.	Bangalore	1410.27	1051.73
10.	Tumkur	325.13	189.56
11.	Kolar	278.17	277.06
12.	Mysore	441.36	342.71
13.	Mandya	365.62	258.75
14.	Shimoga	550.93	272.59
15.	Chitradurga	373.68	210.17
16.	Hassan	287.15	189.11
17.	Chickmagalur	407.33	158.17
18.	Dakshna Kannada	314.29	142.46
19.	Kodagu	182.00	83.74
	B. Hyderabad Karnataka Area Develop. Programme Roads		
1.	Bidar	135.00	
2.	Gulbarga	525.00	771.65
3.	Raichur	265.00	
4.	Bellary	200.00	

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಮೀಸಲಾತಿಯ ಪದ್ಧತಿ ಅನುಷ್ಠಾನ

1072 (1900) ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ದರ್ಜೆ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸಲಾಗುತ್ತಿದೆಯೆ ;

2) ಈ ಇಲಾಖೆಯಲ್ಲಿ ಮೀಸಲಾತಿ ಪದ್ಧಿತಿಯನ್ನು ಅನುಷ್ಠಾನಕ್ಕೆ ತರಲಾಗಿದೆಯೆ ;

3) ಇಲಾಖೆಯ 'ಬಿ' ಮತ್ತು 'ಎ' ಶ್ರೇಣಿಗಳಿಗೆ ಬಡ್ತಿ ನೀಡುವಾಗ ದರ್ಜೆ ಮತ್ತು ನೇಮಕಾತಿ ನಿಯಮಗಳನ್ವಯ ಅನುಪಾತ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೆ ; (ವಿವರಗಳನ್ನು ನೀಡುವುದು)

4) ಹಾಗಿದ್ದಲ್ಲಿ, 1982ನೇ ಸಾಲಿನಿಂದ 1991ನೇ ಸಾಲಿನವರೆಗೆ ಯಾವ್ಯಾವ ಅವಧಿಯಲ್ಲಿ ಯಾರ್ಯಾರಿಗೆ 'ಬಿ' ಶ್ರೇಣಿಯಿಂದ 'ಎ' ಶ್ರೇಣಿಗೆ 'ಎ' ಶ್ರೇಣಿಯಿಂದ ಉನ್ನತ ವೇತನ ಶ್ರೇಣಿಗೆ ಬಡ್ತಿ ನೀಡಲಾಗಿದೆ ; (ಸೇವಾ ಮುಂಬಡ್ತಿಯಿಂದ ಬಂದವರು ಹಾಗೂ ನೇರ ನೇಮಕಾತಿಯಿಂದ ಬಂದವರ ಪೂರ್ಣವಿವರಗಳನ್ನು ಒದಗಿಸುವುದು)

ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1) ಅನುಸರಿಸಲಾಗುತ್ತಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ನಕಲನ್ನು ಸದನದ ಮುಂದೆ ಮಂಡಿಸಿದೆ.

2) ತರಲಾಗಿದೆ.

3) ಅನುಸರಿಸಲಾಗುತ್ತಿದೆ.

4) ವಿವರಗಳನ್ನು ಅನುಬಂಧ - 1 ರಲ್ಲಿ ನೀಡಿದೆ.

ಅನುಬಂಧ - 1

ಕ್ರಮ ಸಂಖ್ಯೆ	1982ರಿಂದ 1991 ರವರೆಗೆ 'ಬಿ' ಶ್ರೇಣಿಯಿಂದ 'ಎ' ಶ್ರೇಣಿಗೆ ಬಡ್ತಿ	1982 ರಿಂದ 1991 ರವರೆಗೆ 'ಎ' ಶ್ರೇಣಿಯಿಂದ ಉನ್ನತ ಶ್ರೇಣಿಗೆ ಬಡ್ತಿ
	1982	
1.	ಎಂ.ಕೆ. ಮಲ್ಲಿಕಾರ್ಜುನ	ಎಂ. ಕರಿಯಪ್ಪ
2.	ಅಪ್ಪಾರಾವ್ ಅಕ್ಕೋಣಿ	ಎಸ್.ಎಸ್. ಖಾನಾಪುರೆ
3.	ಎಸ್. ಹೆಚ್. ರಾಜನ್	ಟಿ.ಎಂ.ಶಿರೂರ್
4.	ಪರಶುರಾಮಯ್ಯ	ಎ. ಬ್ರಿಟೊ
5.	ಬಿ.ಎಸ್. ನಂಜುಂಡಯ್ಯ	ಆರ್.ಆರ್. ಬಳ್ಳಾರಿ
6.	ಹೆಚ್.ಡಿ ಕೈಲಾಸ್ ಕುಮಾರ್ (ಪರಿಶಿಷ್ಟ ಜಾತಿ)	ಎಂ.ವಿ.ಸಾಲಿಮಠ
	1984	
7.	ಟಿ.ಹೆಚ್. ಸಿದ್ಧರಾಮಯ್ಯ	ಪಿ.ನಾಗಾಚಾರ್
8.	ಪಿ.ಎಸ್.ಪಾಟೀಲ್	ಕೆ.ಎಂ. ಬಸವಯ್ಯ
9.	ಎ.ಸಿ.ಚಂದ್ರಪ್ಪ	ಕೆ. ವಿಜಯಕುಮಾರ್
		ಎಂ.ಕೆ. ಮಲ್ಲಿಕಾರ್ಜುನ
	1991	ಅಪ್ಪಾರಾವ್ ಲಕ್ಕೋಣಿ
10.	ಕೆ.ಎಸ್. ಬೇವಿನ ಮರದ	ಎಸ್.ಹೆಚ್.ರಾಜನ್
11.	ಆರ್.ಕೆ.ಶಿವರಾಮ	ಪರಶುರಾಮಯ್ಯ
12.	ಬಿ.ಎಂ.ಚಂದ್ರಶೇಖರಯ್ಯ	ಬಿ.ಎನ್.ನಂಜುಂಡಯ್ಯ
13.	ಎಂ.ಜಿ.ಕೆಳಗಡೆ (ಪರಿಶಿಷ್ಟ ಜಾತಿ)	ಟಿ.ಹೆಚ್.ಸಿದ್ದರಾಮಯ್ಯ
14.	ಡಿ.ರಾಮಾನಾಯಕ್ (ಪರಿಶಿಷ್ಟ ಜಾತಿ)	ಹೆಚ್.ಡಿ.ಕೈಲಾಸ್‌ನಾಯಕ್ (ಪರಿಶಿಷ್ಟ ಜಾತಿ)
15.	ಎಸ್. ಆರ್. ಪುಟ್ಟಸ್ವಾಮಿ	ಎನ್.ಕೆ. ದಾಸಪ್ಪ
		ಕೆ.ವಿ. ಗುರುಪ್ರಸಾದ್
	ನೇರ ನೇಮಕಾತಿಯಿಂದ ಗ್ರೂಪ್ 'ಎ' ಕಿರಿಯ ಶ್ರೇಣಿಗೆ ನೇಮಕಗೊಂಡವರು :	(ನೇರ ನೇಮಕಾತಿಗೆ ನಿಯಮಗಳಲ್ಲಿ ಅವಕಾಶ ಇಲ್ಲ)
	1987	
1.	ಜಯತೀರ್ಥಜೋಷಿ, ಸಂಗೀತ ನಾಟಕ ಅಧಿಕಾರಿ.	
	1990	
2.	ಎನ್. ಆರ್. ವಿಶುಕುಮಾರ್	
3.	ಎಂ. ರವಿಕುಮಾರ್	

ಲೋಕೋಪಯೋಗಿ ರಸ್ತೆಗಳ ಕುರಿತು

1074 (1247) ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ರಸ್ತೆಗಳಾಗಿ ಮೇಲ್ದರ್ಜೆಗೇರಿಸಲಾಯ್ತು ? (ಕ್ಷೇತ್ರವಾರು ಕಿ.ಮೀ. ರಸ್ತೆ ಸಹಿತ ವಿವರ ನೀಡುವುದು)

ಶ್ರೀ ಅಶ್ವಥ್ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) 287 ಕಿ.ಮೀ. ಜಿಲ್ಲಾ ಪರಿಷತ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವಶಕ್ಕೆ ತೆಗೆದುಕೊಳ್ಳಲಾಗಿದೆ. (ವಿವರಗಳು ಈ ಕೆಳಕಂಡತಿದೆ)

ಕ್ರಮ ಸಂಖ್ಯೆ	ವಿಧಾನ ಸಭಾ ಕ್ಷೇತ್ರದ ಹೆಸರು	ರಸ್ತೆಗಳ ಹೆಸರು	ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)	ಏರಿಸಲಾಗಿರುವ ದರ್ಜೆ
1.	ಉಳ್ಳಾಲ	1. ಕೋಟೆಕಾರ್ ಪಾತೂರು ರಸ್ತೆ	16.30	ಮುಖ್ಯ ಜಿಲ್ಲಾ ರಸ್ತೆ
		2. ನರಿಂಗಾಣಿ ತಾಡುಗೋಳಿ ರಸ್ತೆ	2.30	ಮುಖ್ಯ ಜಿಲ್ಲಾ ರಸ್ತೆ
2.	ವಿಟ್ಲ	1. ಪಾಣಿಮಂಗಳೂರು ಪಾತೂರು ರಸ್ತೆ	15.20	ಮುಖ್ಯ ಜಿಲ್ಲಾ ರಸ್ತೆ
		2. ವಿಠಲ ಸಾಲೆತ್ತೂರು ರಸ್ತೆ	10.60	ಮುಖ್ಯ ಜಿಲ್ಲಾ ರಸ್ತೆ
3.	ಪುತ್ತೂರು	1. ಹಂಟ್ಯಾರ್ ಬೆಟ್ಟಂಪಾಡಿ ರಸ್ತೆ	16.80	ಮುಖ್ಯ ಜಿಲ್ಲಾ ರಸ್ತೆ
		2. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	8:00	ರಾಜ್ಯ ಹೆದ್ದಾರಿ
4.	ಸುಳ್ಯ	1. ಬೆಳ್ಳಾರೆ ಬೆಂಗಮಲೆ ಪ್ಯೆಚಾರ್‌ರಸ್ತೆ	11.00	ಮುಖ್ಯ ಜಿಲ್ಲಾ ರಸ್ತೆ
		2. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	14.60	ರಾಜ್ಯಹೆದ್ದಾರಿ
5.	ಉಡುಪಿ	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	6.70	ರಾಜ್ಯಹೆದ್ದಾರಿ
6.	ಕಾಪು	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	8.00	ರಾಜ್ಯಹೆದ್ದಾರಿ
		2. ಕಟ್ಟಪಾಡಿ ಶಿರ್ವ ರಸ್ತೆ	12.00	ಮುಖ್ಯ ಜಿಲ್ಲಾ ರಸ್ತೆ
		3. ನಂದಿಕೂರು ಶಿರ್ವ ರಸ್ತೆ	10.20	ಮುಖ್ಯ ಜಿಲ್ಲಾ ರಸ್ತೆ
7.	ಬ್ರಹ್ಮಾವರ	1. ಕೋಟಗೋಳಿಯಂಗಡಿ ರಸ್ತೆ	10.20	ಮುಖ್ಯ ಜಿಲ್ಲಾ ರಸ್ತೆ
		2. ಬ್ರಹ್ಮಾವರ ಜನ್ನಾಡಿ ರಸ್ತೆ	9.70	ಮುಖ್ಯ ಜಿಲ್ಲಾ ರಸ್ತೆ
		3. ಕಲ್ಯಾಣಪುರ ಕುಕ್ಕಿಹಳ್ಳಿ ಪೆರ್ಡೂರು ರಸ್ತೆ	18.80	ಮುಖ್ಯ ಜಿಲ್ಲಾ ರಸ್ತೆ
8.	ಕಾರ್ಕಳ	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	21.00	ರಾಜ್ಯ ಹೆದ್ದಾರಿ

9.	ಬೆಳ್ತಂಗಡಿ	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	25.00	ರಾಜ್ಯ ಹೆದ್ದಾರಿ
		2. ಬೆಳ್ತಂಗಡಿ ಕಿಲ್ಲೂರು ರಸ್ತೆ	16.00	ಮುಖ್ಯ ಜಿಲ್ಲಾ ರಸ್ತೆ
		3. ವೇಣೂರು ಅಂದಿಂಜಿ ನಾರಾವಿ ರಸ್ತೆ	15.50	ಮುಖ್ಯ ಜಿಲ್ಲಾ ರಸ್ತೆ
10.	ಕುಂದಾಪುರ	1. ಬ್ರಹ್ಮಾವರ ಜನ್ನಾಡಿ ರಸ್ತೆ	9.70	ಮುಖ್ಯ ಜಿಲ್ಲಾ ರಸ್ತೆ
		2. ಹಾಲಾಡಿ ಅಮಾಸ್‌ಬೈಲು ರಸ್ತೆ	13.00	ಮುಖ್ಯ ಜಿಲ್ಲಾ ರಸ್ತೆ
		3. ಕೋಟಗೋಳಿಯಂಗಡಿ ರಸ್ತೆ	16.40	ಮುಖ್ಯ ಜಿಲ್ಲಾ ರಸ್ತೆ

ಒಟ್ಟು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ 203.70 ಕಿ.ಮೀ.
ಒಟ್ಟು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ 83.30 ಕಿ.ಮೀ.
ಒಟ್ಟು 287.00 ಕಿ.ಮೀ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗಳಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ.

1075 (1451) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಆಡಳಿತಾಧಿಕಾರಿಯವರಿಗೆ ಸಲಹೆ ಸೂಚನೆ ಕೊಡಲು ಸದಸ್ಯರ ನಾಮ ನಿರ್ದೇಶನ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ;

ಇ) ಹಾಗಿಲ್ಲದಿದ್ದಲ್ಲಿ ಇವುಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಆ) ಪರಿಶೀಲಿಸಲಾಗುವುದು.

ಇ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಕಾಯ್ದೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಮುಳಬಾಗಿಲು ತಾಲ್ಲೂಕಿನ ನಾಚಾಂಕಳ್ಳಿ ಫೀಡರ್ ಚಾನಲ್ ಬಗ್ಗೆ :

1077 (1662) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ದುಗ್ಗಸಂದ್ರ ಮತ್ತು ಬೈರಕೂರ್ ಹೋಬಳಿಗಳಲ್ಲಿ ಬರುವ ಅನೇಕ ಹಳ್ಳಿಗಳಿಗೆ ಅನುಕೂಲವಾಗುವಂತೆ ನಾಚಂಕಳ್ಳಿ ಫೀಡರ್ ಚಾನಲ್ ತೆಗೆಯಬೇಕೆಂದು ಅಲ್ಲಿಯ ಜನತೆಯ ಬೇಡಿಕೆ ಇದೆಯೇ ;

ಆ) ಹಾಗಿದ್ದಲ್ಲಿ ಒಟ್ಟು ಎಷ್ಟು ಹಳ್ಳಿಗಳಿಗೆ ಅನುಕೂಲವಾಗುತ್ತದೆ ಮತ್ತು ಹಳ್ಳಿಗಳ ಹೆಸರುಗಳೇನು ;

ಇ) ಆದರಿಂದ ಅಂದಾಜು ಎಷ್ಟು ಎಕರೆ ಖುಷ್ಕಿ, ಬಾಗಾಯತ್ತು. ತರಿ ಜಮೀನಿಗೆ ನೀರು ಹಾಯಿಸಬಹುದು :

ಈ) ಸದರಿ ಕಾಲುವೆಯನ್ನು ತೋಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;

ಉ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು ;

ಊ) ಈ ವರ್ಷದ ಬಡ್ಜೆಟ್ ಹಣ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇದೆ.

ಆ) ಒಟ್ಟು 9 ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಆ ಹಳ್ಳಿಗಳಿಗೆ - ಹೆಸರು ಕೆಳಗಿನಂತಿದೆ.

1) ಕಲ್ಲರಸನಹಳ್ಳಿ
2) ಕೋಡಿಹಳ್ಳಿ
3) ವಡ್ಡರಳ್ಳಿ
4) ಕಂಬದಿನ್ನೆ
5) ರಾಜೇನಹಳ್ಳಿ
6) ಗುಂಡ್ಲಹಳ್ಳಿ
7) ಕಾಡೇನಹಳ್ಳಿ
8) ಮುಷ್ಟೂರು
9) ಬ್ಯಾಟನೂರು

ಇ) ಹಾಲಿ ಇರುವ ಸುಮಾರು 852 ಎಕರೆ ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯವನ್ನು ಉತ್ತಮಪಡಿಸಬಹುದು

ಈ) ಸದರಿ ಪ್ರಸ್ತಾವನೆಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕಾರ್ಯಸಾಧುವಾಗದ ಕಾರಣ ಇದನ್ನು ಕೈಬಿಡಲಾಗಿದೆ.

ಉ) ಪ್ರಾಥಮಿಕ ಅನ್ವೇಷಣ ವರದಿ ಪ್ರಕಾರ ಈ ಯೋಜನೆಯ ಅಂದಾಜು ವೆಚ್ಚ 136.00 ಲಕ್ಷಗಳು

ಊ) (ಈ)ಗೆ ನೀಡಿರುವ ಉತ್ತರದಂತೆ ಅನ್ವಯಿಸುವುದಿಲ್ಲ.

ಜಿಲ್ಲಾ ಪರಿಷತ್ತು ಮತ್ತು ಮಂಡಲದ ಚುನಾವಣೆಗಳು.

1079 (1249) ಶ್ರೀ ಎಂ.ವಿ ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇತ್ತೀಚಿಗೆ ಅವಧಿ. ಮುಗಿದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳನ್ನು ಯಾವಾಗ ಮಾಡಲು ನಿರ್ಧರಿಸಿದ್ದಾರೆ ;

ಆ) ಹಾಗೆ ಮಾಡುವ ಮುನ್ನ 1991ನೆ ಇಸವಿಯ ಜನಗಣತಿ ಆಧಾರದ ಮೇಲೆ ಸ್ಥಳಗಳನ್ನು ಕಾದಿರಿಸಲು ಕ್ರಮಕೈಗೊಳ್ಳಲಾಗುವುದೇ ;

ಇ) ಲೋಕಸಭೆಯಲ್ಲಿ ಮಂಡಿಸಲಾಗಿರುವ 72ನೇ ಪಂಚಾಯ್ತಿ ರಾಜ್ಯದ ರಾಜ್ಯಾಂಗ ತಿದ್ದುಪಡಿಯಲ್ಲಿ ಅಡಕವಾಗಿರುವ ವಿಷಯಗಳನ್ನು ರಾಜ್ಯದಲ್ಲಿ ಅನುಮೋದನೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ ;

ಈ) ಈಗ ಹಾಲಿ ಇರುವ ರಾಜ್ಯದ ಜಿಲ್ಲಾ ಪರಿಷತ್ ಮಂಡಲ ಪಂಚಾಯ್ತಿ ಕಾಯಿದೆಗೂ 72ನೇ ರಾಜ್ಯಾಂಗ ಪಂಚಾಯ್ತಿ ರಾಜ್ಯದತಿದ್ದುಪಡಿಗೂ ಇರುವ ಮುಖ್ಯವಾದ ವ್ಯತ್ಯಾಸಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂ. ಪಂಚಾಯ್ತಿಗಳ ಕಾರ್ಯ ನಿರ್ವಹಣೆ ಅವುಗಳ ಸಾಮರ್ಥ್ಯ ಹಾಗೂ ನ್ಯೂನತೆಗಳನ್ನು ಹೊರತಂದಿದೆ. ಹೀಗೆ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಲು ಮತ್ತು 72ನೇ ಸಂವಿಧಾನ ತಿದ್ದುಡಿಯ ವಿಧೇಯಕದ ಹಿನ್ನೆಲೆಯಲ್ಲಿ ಸರ್ಕಾರವು ಈಗಿರುವ ಪಂಚಾತ್ ರಾಜ್ ಕಾಯಿದೆಗೆ ಒಂದು ಸಮಗ್ರ ತಿದ್ದುಪಡಿಯ ಮಸೂದೆಯು ಜಾರಿಗೆ ಬಂದನಂತರ ಅದನ್ನು ಬೇಗನೆ ಚುನಾವಣೆ ನಡೆಸಲಾಗುವುದು.

ಆ) ಹೊಸ ಕಾಯಿದೆಯ ಉಪಬಂಧಗಳನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೌದು

ಈ) ಅನುಭಂದದಲ್ಲಿ ಕೊಡಲಾಗಿದೆ.

ANNEXURE

Statement indicating the important area of difference between the existing Zilla Parishad Act and the 72nd Constitution (Amendment) Bill 1991

Sl. No.	Areas	Provision in the Existing Act	Provisions in the 72nd Amendment Bill
1	2	3	4
1.	Panchayat Raj Bodies	There shall be a Mandal Panchayat (M.P) Taluk Panchayat Samithi (TPS) and a Zilla Parishad (ZP) in each district. (Sec.4.135 and 138)	There shall be Panchayat at village Level Legislature of the State may by law, provide for the Constitution of Panchayats at the Intermediate Level or the District Level or both. (Art. 243 B(1) and (2))
2.	Constitution (a) Village Level	All the seats in a panchayat at the Village level (MP) shall be filled by persons directly elected from territorial constituencies (Sec. 135)	Members at village Level and Intermediate level, If any, Shall be elected from Territorial constituencies (Art. 243 c(2)
	(b) Intermediate Level	Taluk Panchayat at Samithi is a representative body(Sec.135)	
	(c) District Level	Members elected from the territorial constituencies (Sec. 140)	Seats at Dist. Level, if any, shall be filled by election in such manner as may be decided by Legislature (Art. 243 c(3).
3.	Representation	(A) Provides for representation of: i) MLAs and MLCs ii) Members of Zilla Parishads of the area. iii) Pradhans of Mandal panchayats iv) President TAPCMS v) President PLDB vi) Five members from SC/ST/BC and women Co-operated in the Taluk panchayat Samithi (Sec. 135)	(A) Provides for representation of Chairpersons of panchayat at the village level in the panchayat at the Intermediate level. If any, or in the panchayats at the district level and The Chairpersons of the Panchayats at intermediate level if any in the Panchayats at the District level if any.
		(B) Provides for representation of: i) President DCC Bank Co-operated member ii) MLAs, MLCs, and MPs, in the Zilla Parshad (Sect. 139)	(B) MLAs and MPs in intermediate and district level panchayats. (Art 243 C(4)

1	2	3	4
4.	voting Rights	Legislators and M.Ps have the voting right at the district level body (sec. 139 (3) (a)	Only elected member have voting rights 243. C. (5) (8)
5.	Chairpersons	At village and Dist. Level from among the members elected from Territorial Constutencies and MLAs at Taluk Level (sec. 43, 135, 165)	The Chairpersons of-(i) A. Panchayat at the Village level or intermediate level, if any shall be chosen by Direct election; and (ii) A panchayat at the Dist. Level, if any, shall be chosen by election in such manner as may be decided by the Legislature (Art. 243 C(7)
6.	Motion of No Cofidence in the Pradhan or Upapradhan of MP. the Adhyaksha or Upa-adhyaksha of Zp.	By Two-thirds majority of the total number of members of Village and district level bodies (sec. 47(9), 167(3)	No Indication.
7.	Reservation of seats.	i) 25% for women. ii) 2 members from Backward classess to be nominated by Z.P. No member from these classes is elected to the M.P. iii) In case of SCs and STs in the same proportion to the Total No. of elected members in a MP/ZP as the population of the SC & STs in Mandal or District bears to the total population of the area : Provided not less than 18% of the total No. of seats in the Mandal panchayat/Zilla Parishad. (Sec.5, 142 and 143)	i) Not less than one-third for women, (Art.243 D(3) ii) The No. of seats reserved for SC & ST shall bear the proportion to the total No. of seats to be filled by direct election as the population of SC or ST in that Panchayat area bears to the total population of that area (Art 243 D(i)
8.	Reservation of Chairpersons	No reservation	Reservation for women & SC/STs in the same proportion as far seats for members. State Legilature may provide for reservation to Backward classes (Art. 243 D(4) (5) (6)

1	2	3	4
9.	Duration	The member of a Mandal panchayat/ Zilla Parishad shall hold office for a term of five years from the date of publication of their names under sec.3(9) and 159 respectively. (Sec. 30,40,160 and 161)	Every panchayat shall continue for five years from the date of appointed for its 1st. posting and no longer and the exeration of the said period of five years shall operate as a dissolution or 4hq4 pqnd qyq4 (Art.243 E(i).
10.	Power to Impose Taxes	Every M.P. shall levy tax upon buildings, vehicles, bus stands, markets entertainments etc. (sec.116) Zilla parishads are not empowered to levy taxes.	The Legislature of the state may by law, authorise, a Panchayat to levy, collect and appropriate taxes, tolls, duties and fees (Art243 H(a)
11.	Finance Commission.	i) Finance Commission to make recommendation to the Govt. as to the pattern of assiatance and the principles which should govern the grants-in-aid from Govt. to the Zilla parishads and from Zilla parishads to Mandal panchayats.	i) Finance Commission to review the financial position of the panchayats and to make recommendation to the Governor as to the principles which should govern the distribution between the state and the panchayats of the net proceeds of the taxes, duties, tolls, and fees, leviable by the state and the allocation between the panchayats at all levels of their respective shares of such proceeds; and the determination of the taxes, tools, and fees which may be assigned to the panchayats.
		ii) The recommendation of the Finance Commission shall be accepted by the government with such modifications as are deemed necessary with effect from such date as is notified in the official Gazette.	ii) The Governor shall cause every recommendation made by the commission together with an explanatory memoradum as to the action taken there on to be laid before the Legislature of the state.

ಮುಳಬಾಗಿಲು ಮೋಟೆಲ್ ಪ್ರಾರಂಭ ಮಾಡುವ ಬಗ್ಗೆ

1080 (1250) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ಟೌನಿನಲ್ಲಿ ಪ್ರವಾಸಿಗಳಿಗೆ ಅನುಕೂಲವಾಗಲು ಕಟ್ಟಿರುವ ಮೋಟೆಲ್‌ಗೆ ತಗಲಿರುವ ವೆಚ್ಚವೆಷ್ಟು ;

ಆ) ಸದರಿ ಮೋಟೆಲ್‌ನ್ನು ನಿರ್ಮಿಸಿ ಸುಮಾರು ಎರಡು ವರ್ಷವಾದರೂ ಇನ್ನೂ ಪ್ರಾರಂಭ ಮಾಡಲು ಕಾರಣವೇನು ;

ಇ) ಮೋಟೆಲ್‌ನಲ್ಲಿರುವ ಸೌಲಭ್ಯಗಳೇನು ;

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) ರೂ. 27.06 ಲಕ್ಷ

ಆ) ಈ ಸೌಲಭ್ಯದ ನಿರ್ಮಾಣವು ಪೂರ್ಣಗೊಂಡು ಆಗಸ್ಟ್ 1991 ರಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿರ್ವಹಣೆಗಾಗಿ ವಹಿಸಿಕೊಡಲಾಗಿದೆ. ಈ ಸೌಲಭ್ಯವನ್ನು ರೂ. 9.50 ಲಕ್ಷ ವೆಚ್ಚದಲ್ಲಿ ಸಜ್ಜುಗೊಳಿಸಲು ಫೆಬ್ರವರಿ 92ರಲ್ಲಿ ಮಂಜೂರಾತಿ ನೀಡಲಾಗಿದೆ. ಈ ಸೌಲಭ್ಯವನ್ನು ಸಜ್ಜುಗೊಳಿಸಿದ ಕೂಡಲೆ ಪ್ರಾರಂಭಿಸಲಾಗುವುದು.

ಇ) ಈ ಮೋಟೆಲ್‌ನಲ್ಲಿ ಒಟ್ಟು 12 ಕೊಠಡಿಗಳು ಅಡಿಗೆ ಕೋಣೆ, ಭೋಜನ ಶಾಲೆ, ಶೌಚಾಲಯ ಸೌಲಭ್ಯಗಳಿರುತ್ತವೆ.

ನೆಲಮಂಗಲ ಕ್ಷೇತ್ರದಲ್ಲಿ ಯುವಜನ ಸಂಸ್ಥೆಗಳ ಸಂಖ್ಯೆ

1084 (1400) ಶ್ರೀ ಅಂಜನ ಮೂರ್ತಿ (ನೆಲಮಂಗಲ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ನೆಲಮಂಗಲ ಮತ ಕ್ಷೇತ್ರದಲ್ಲಿ ಯುವಜನ ಸೇವೆಗೆ ಸೇರಿದ ಎಷ್ಟು ಸಂಸ್ಥೆಗಳಿವೆ; (ಹೋಬಳಿ ಗ್ರಾಮ ಹಾಗೂ ಪೂರ್ಣ ವಿಳಾಸಗಳ ಮಾಹಿತಿ ನೀಡುವುದು.)

2) ಅವುಗಳ ಉತ್ತಮ ಕಾರ್ಯ ಚಟುವಟಿಕೆಗಳಿಗೆ 1990-91 ರಲ್ಲಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ (ಪೂರ್ಣ ಮಾಹಿತಿ ನೀಡುವುದು) (ಮಹಿಳೆಯು ಹಾಗೂ ಯುವಕರಿಗೆ ಸೇರಿದ ಸಂಸ್ಥೆಗಳ ಹೆಸರುಗಳ ವಿವರ ನೀಡುವುದು.)

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

1. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸೇರಿದ ಯಾವುದೇ ಸಂಸ್ಥೆಗಳು ಇರುವುದಿಲ್ಲ.

2. ಉದ್ಭವಿಸುವುದಿಲ್ಲ.

ಶಿವಗಂಗೆಯನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಲು ಕೈಗೊಂಡ ಕ್ರಮ

1085 (1461) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1990-91ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕು. ಸೋಂಪುರ ಹೋಬಳಿಗೆ ಸೇರಿದ ಶಿವಗಂಗೆಯನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ಮದುರೆ ಹೋಬಳಿ ಕನಸವಾಡಿಯಲ್ಲಿರುವ ಶ್ರೀ ಶನಿಮಹಾತ್ಮ ದೇವಸ್ಥಾನವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಬೇಕೆಂದು ಮನವಿ ಬಂದಿರುವುದು ನಿಜವೇ ?

2) ಹಾಗಿದ್ದಲ್ಲಿ ಸರಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1) ಹೌದು

2) ಶಿವಗಂಗೆ ಕ್ಷೇತ್ರ ಹಾಗೂ ಕನಸವಾಡಿಯನ್ನು ಪ್ರೇಕ್ಷಣಿಯ ಸ್ಥಳವೆಂದು ಸರ್ಕಾರ ಗುರುತಿಸಿದೆ.

ಪ್ರವಾಸೋದ್ಯಮ ಇಲಾಖೆಗೆ ಒದಗಿಸಲಾಗುವ ಅನುದಾನದ ಅವಲಂಬನೆ ಮೇಲೆ ಪ್ರೇಕ್ಷಣೀಯ ಸ್ಥಳಗಳಲ್ಲಿ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ಯಾದಗಿರಿ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆಗೊಳಗಾಗಿರುವ ಹಳ್ಳಿಗಳು.

1089 (1866) ಶ್ರೀ ಎ. ಬಿ. ಮಲಕರೆಡ್ಡಿ (ಯಾದಗಿರಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಯಾದಗಿರಿ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳು ಕುಡಿಯುವ ನೀರಿನ ಅಭಾವ ಹೊಂದಿದೆ?

2) ಹಾಗಿದ್ದಲ್ಲಿ ಕುಡಿಯುವ ನೀರಿನ ಅಭಾವ ನೀಗಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) 9 ಹಳ್ಳಿಗಳು : ಜನವಸತಿಗಳು

2) ಹೆಚ್ಚುವರಿ ಕೊಳವೆ ಬಾವಿಗಳನ್ನು ಬರಪೀಡಿತ ಗ್ರಾಮಗಳಲ್ಲಿ : ಜನವಸತಿಗಳಲ್ಲಿ ಕೊರೆಯಲು ಬರಪರಿಹಾರದ ಕಾರ್ಯಕ್ರಮದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

ಮೇಹುಂಡಿ ಹಳ್ಳದ ಪ್ರವಾಹದಿಂದ ರಸ್ತೆ ಸಂಚಾರ ಬಂದ್.

1090 (1613) ಶ್ರೀ ಕೆ. ಹೆಚ್ . ಕುರಡಗಿ (ಮುಂಡರಗಿ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಮೇಹಂಡಿ ಗ್ರಾಮದ ಹಳ್ಳ ತುಂಬಿ ಹರಿಯುವುದರಿಂದ ಗದಗ ಮತ್ತು ಮುಂಡರಗಿಯ ಸಂಪರ್ಕ ಇಲ್ಲದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ;

ಇ) ಮುಂಡರಗಿಯಿಂದ ಅಮ್ಮಿಗಿ ರಸ್ತೆ ಪೂರ್ಣ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ;

ಉ) ಜಿಲ್ಲಾ ಪರಿಷತ್ತಿನ ರಸ್ತೆಗಳು ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಳ್ಳುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ;

ಊ) ಇದ್ದಲ್ಲಿ ಪ್ರತಿ ತಾಲ್ಲೂಕಿನಿಂದ ಕನಿಷ್ಟ ಐದು ನೂರು ಕಿ.ಮೀ. ತೆಗೆದುಕೊಳ್ಳುವ ವಿಚಾರವಿದೆಯೇ ?

ಶ್ರೀ ಜಿ.ಹೆಚ್. ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಈ ತೊಂದರೆಯನ್ನು ನಿವಾರಿಸಲು ಸೇತುವೆಯ ಅಗತ್ಯ ಇದೆ. ಇದನ್ನು ಆಯವ್ಯಯದಲ್ಲಿ ಸೇರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಇ) ಬಂದಿದೆ

ಈ) ಈ ರಸ್ತೆಯ 3 ಕಿ. ಮೀ.ಗಳ ಸುಧಾರಣೆಯನ್ನು 1990-91 ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ನೀಡಲಾದ 12 ಲಕ್ಷ ರೂ.ಗಳ ಅನುದಾನದಲ್ಲಿ ತೆಗೆದುಕೊಳ್ಳಲಾಗಿದೆ. ಉಳಿದ ರಸ್ತೆಯನ್ನು ಹಂತ ಹಂತವಾಗಿ ಯೋಜನೇತರ ಕಾಮಗಾರಿಗಳಲ್ಲಿ ಅನುದಾನಕ್ಕನುಗುಣವಾಗಿ ಸುಧಾರಣೆ ಮಾಡಲಾಗುವುದು.

ಉ) ಇದೆ

ಊ) ಇಲ್ಲ, ಆದರೆ ಪ್ರತಿ ವಿಧಾನ ಸಭಾ ಕ್ಷೇತ್ರದಿಂದ ಕನಿಷ್ಠ 50 ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಲು ಸರ್ಕಾರ ಅನುಮತಿ ನೀಡಲಾಗಿದೆ.

ಬೆಂಗಳೂರಿನಲ್ಲಿ ಹೊಸ ಅಧುನಿಕ ವಿಮಾನ ನಿಲ್ದಾಣ

1091 (1654) ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಲ್ಲಿ ಹೊಸ ಅಧುನಿಕ ವಿಮಾನ ನಿಲ್ದಾಣಕ್ಕಾಗಿ ಬದಲಿ ಸ್ಥಳವನ್ನು ಗುರುತಿಸಲು ಕೇಂದ್ರ ಸರ್ಕಾರದಿಂದ ರಚಿಸಲಾದ ಸಮಿತಿಯು ಬೆಂಗಳೂರಿಗೆ ಭೇಟಿ ನೀಡಿತ್ತೆ ;

ಆ) ಹಾಗಿದ್ದಲ್ಲಿ ಬದಲಿ ಸ್ಥಳವನ್ನು ಎಲ್ಲಿ ಗುರುತಿಸಲಾಗಿದೆ ;

ಇ) ಇದಕ್ಕಾಗಿ ಬೇಕಾಗಿರುವ ಭೂಮಿ ಎಷ್ಟು?

ಈ) ಬೇಕಾಗಿರುವ ಭೂಮಿಯನ್ನು ರಾಜ್ಯ ಸರ್ಕಾರವು ಮುಫತ್ತಾಗಿ ನೀಡಲು ಒಪ್ಪಿದೆಯೆ?

ಶ್ರೀ ಜಿ.ಹೆಚ್.ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಹೌದು

ಆ) ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಸಮಿತಿಯ ವರದಿಯನ್ನು ಅವಲಂಬಿಸಿರುತ್ತದೆ.

ಈ) ಈ ಪ್ರಶ್ನೆಯು ಸಧ್ಯಕ್ಕೆ ಉದ್ಭವಿಸಿಲ್ಲ.

ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು

1093 (1695) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಾಲ ಪೀಡಿತ ಪ್ರದೇಶವಾದ ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ವರ್ಷದಲ್ಲಿ ಸಣ್ಣ ನೀರಾವರಿ ಇಲಾಖೆಯವರು ತೆಗೆದುಕೊಳ್ಳಲಾದ ಕಾಮಗಾರಿಗಳೆಷ್ಟು; ಅವು ಯಾವುವು ; (ತಾಲ್ಲೂಕು ವಿವರ ನೀಡುವುದು)

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 1991-92ನೇ ಸಾಲಿನಲ್ಲಿ ಸಣ್ಣ ನೀರಾವರಿ ವಲಯದಲ್ಲಿ 6 ಕಾಮಗಾರಿಗಳನ್ನು ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ 14 ಕಾಮಗಾರಿಗಳನ್ನು ಕೈಗೊಂಡಿದೆ. (ತಾಲ್ಲೂಕುವಾರು ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳ ಪಟ್ಟಿ

ಸಣ್ಣ ನೀರಾವರಿ ವಲಯ (ಲಕ್ಷ ರೂ. ಗಳಲ್ಲಿ)

ತಾಲ್ಲೂಕು		ಕಾಮಗಾರಿಗಳ ಕೆಲಸ	ಅಂದಾಜು ವೆಚ್ಚ
ಔರಾದ್	1)	ತೇಗಾಂಪುರ ಹೊಸಕೆರೆ	110.00
-"-	2)	ಒಡೆದು ಹೋದ ಎಕಾಂಬ ಕೆರೆಯ ದುರಸ್ತಿ	20.00
ಬೀದರ್	3)	ಅಲಿಂಬರ್ ಹೊಸಕೆರೆ	22.00
-"-	4)	ಮಾರ್ಕಲ್ ಕೆರೆಯ ಒಡೆದುಹೋದ ದುರಸ್ತಿ	10.00
-"-	5)	ಒಡೆದು ಹೋದ ಜನವಾಡ (ಪಶ್ಚಿಮ) ಕೆರೆಯ ದುರಸ್ತಿ	30.00
-"-	6)	ಚಿಂಪಲ್ಲಿ ಗ್ರಾಮವನ್ನು ಸ್ಥಳಾಂತರಿಸುವುದು	30.00

ಜಿಲ್ಲಾ ಪರಿಷತ್ : ಬೀದರ್			
ಔರಾದ್	1)	ನಂದಿನಾಗುರದ ಬಳಿ ಹೊಸಕೆರೆ	20.00
-"-	2)	ನಾಗಾನಪಲ್ಲಿ ಬಳಿ ಹೊಸಕೆರೆ	12.00
-"-	3)	ಬೆಳ್ಳೂರು ಬಳಿ ಏತ ನೀರಾವರಿ ಯೋಜನೆ	8.00
ಬೀದರ್	4)	ಹೊಕರಾನ "ಬಿ" ಬಳಿ ಹೊಸಕೆರೆ	13.35
-"-	5)	ಕಂಗನಾಕೋಟೆ ಬಳಿ ಹೊಸಕೆರೆ	20.266
-"-	6)	ಜಮಿಸ್ತಾನಪುರದ ಬಳಿ ಹೊಸಕೆರೆ	19.87
ಹುಮ್ನಾಬಾದ್	7)	ಫತ್ಮಾಪುರದ ಬಳಿ ಹೊಸಕೆರೆ	17.54
-"-	8)	ಮೊಕ್ಬಾ ಕೆರೆಯ ದುರಸ್ತಿ	6.60
ಬಾಲ್ಕಿ	9)	ಕಳಸದಾಳ್ ಬಳಿ ಹೊಸಕೆರೆ	10.00
-"-	10)	ಜೋಯ್‌ಗಾನ್ ಬಳಿ ಹೊಸಕೆರೆ	15.86
ಬಸವಕಲ್ಯಾಣ	11)	ಅಲ್‌ಗೂಡ್ ಬಳಿ ಹೊಸಕೆರೆ	49.30
-"-	12)	ಹೊನ್ನಾಳಿ ಬಳಿಯ ಹೊಸಕೆರೆ	26.00
-"-	13)	ಸಿರಿಗಾಪುರದ ಬಳಿಯ ಹೊಸಕೆರೆ	18.39
-"-	14)	ಮಿರ್ಕಾಲ್ ಗ್ರಾಮದ ಬಳಿ ಹೊಸಕೆರೆ	15.00

ಜಿಲ್ಲಾ ಪರಿಷತ್‌ಗಳ ಚುನಾವಣೆ ಮುಂದೂಡಿಕೆಗೆ ಕಾರಣ

1095 (1697) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿಗಳ ಚುನಾವಣೆಗಳನ್ನು ಮುಂದೂಡಲು ಕಾರಣವೇನು ;

ಆ) ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಕಾರ್ಯ ನಿರ್ವಹಣೆಯು ಅವುಗಳ ಸಾಮರ್ಥ್ಯ ಹಾಗೂ ನ್ಯೂನತೆಗಳನ್ನು ಹೊರತಂದಿದೆ. ಹೀಗೆ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಲು ಮತ್ತು 72ನೇ ಸಂವಿಧಾನ ತಿದ್ದುಪಡಿಯ ವಿಧೇಯಕದ ಹಿನ್ನೆಯಲ್ಲಿ ಸರ್ಕಾರವು ಈಗಿರುವ ಪಂ.ರಾಜ್ ಕಾಯಿದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರಲು ಉದ್ದೇಶಿಸಿದೆ. ಉದ್ದೇಶಿತ ಸಮಗ್ರ ತಿದ್ದುಪಡಿ ಮಸೂದೆಯು ಜಾರಿಗೆ ಬಂದನಂತರ ಹೊಸ ಕಾಯಿದೆಯ ಉಪಬಂಧಗಳನ್ನು ಅನುಸರಿಸಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕ್ಷೇತ್ರ ವಿಂಗಡಣೆಯನ್ನು ಪುನರ್ ನಿಗಧಿಗೊಳಿಸಲಾಗುವುದು ನಂತರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಆದಷ್ಟು ಬೇಗನೇ ಚುನಾವಣೆಗಳನ್ನು ನಡೆಸಲಾಗುವುದು.

ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾಧಿಕಾರ ರಚನೆ

1096 (1699) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರಾಧಿಕಾರವನ್ನು ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಇದ್ದರೆ ಯಾವಾಗ ರಚಿಸಲಾಗುವುದು ಮತ್ತು ಇದರ ಉದ್ದೇಶವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಕೃಷ್ಣಾ ನದಿ ಕೊಳ್ಳದಲ್ಲಿರುವ ಎಲ್ಲಾ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಸ್ವಾಯತ್ತ ಪ್ರಾಧಿಕಾರ ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಎಲ್ಲ ಯೋಜನೆಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸುವ ಹಿನ್ನಲೆಯಲ್ಲಿ, ಹಾಗೂ 2000 ಇಸವಿ ಒಳಗಡೆ ನೀರಿನ ಸಂಪೂರ್ಣ ಉಪಯೋಗ ಮಾಡುವ ಹಿನ್ನೆಲೆಯಲ್ಲಿ ಪ್ರಾದಿಕಾರವನ್ನು ರಚಿಸುವ ವಿಷಯವು ಪರಿಶೀಲನೆಯಲ್ಲಿದ್ದು, ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು.

ಮುಂಡಗೋಡು ತಾಲ್ಲೂಕಿನಲ್ಲಿರುವ ಗ್ರಾಮಗಳಿಗೆ ಕಾಲುವೆ ಮೂಲಕ ನೀರಾವರಿ

1097 (1700) ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮುಂಡಗೋಡ ತಾಲ್ಲೂಕಿನಲ್ಲಿರುವ ಅತ್ತಿವೇರಿ ಪ್ರಾಜೆಕ್ಟ್‌ನಿಂದ ಕಲಘಟಗಿ ತಾಲ್ಲೂಕಿನ ಚಿಮ್ಮಿಗಟ್ಟಿಹಾಗೂ ನೆಲ್ಲಿ ಹರವಿ ಗ್ರಾಮದ ಜಮೀನುಗಳಿಗೆ ಕಾಲುವೆ ಮೂಲಕ ನೀರಾವರಿ ಮಾಡುವ ಯೋಜನೆ ಸರ್ಕಾರದ ಮುಂದೆ ಇರುವುದು ನಿಜವಲ್ಲವೆ;

2) ಹಾಗಿದ್ದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಇನ್ನು ಎಷ್ಟು ಕಾಲಾವಕಾಶದ ಅಗತ್ಯವಿದೆ. ಇದಕ್ಕಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

3) ಈ ಸೌಲಭ್ಯದ ನಂತರ ಮೇಲ್ಕಂಡ ಎರಡೂ ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ?

4) ರೈತರ ಹಿತದೃಷ್ಟಿಯಿಂದ ಆದಷ್ಟು ಬೇಗ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

1) ಮುಂಡಗೋಡ ತಾಲೂಕಿನ ಅತ್ತಿವೇರಿ ಕೆರೆ ಯೋಜನೆಯಿಂದ ಕಲಘಟಗಿ ತಾಲೂಕು ಪೈಕಿ ನಲ್ಲಿಹರವಿ ಗ್ರಾಮದ ಜಮಿನುಗಳಿಗೆ ಮಾತ್ರ ನೀರಾವರಿ ಮಾಡುವ ಯೋಜನೆ ಇರುತ್ತದೆ. ಬೊಮ್ಮಗಟ್ಟಿ ಗ್ರಾಮದ ಜಮಿನು ಎತ್ತರ ಪ್ರದೇಶವಾಗಿದ್ದು, ನೀರಾವರಿ ಸೌಲಭ್ಯ ಒದಗಿಸಲು ತಾಂತ್ರಿಕವಾಗಿ ಸಾಧ್ಯವಿಲ್ಲ.

2) ಅತ್ತಿವೇರಿ ಕೆರೆಯ ಯೋಜನೆಯ ಕೆಲಸವು ಪೂರ್ತಿಗೊಂಡಿರುತ್ತದೆ. ಈಗ ಕಾಲುವೆಯ ಲೈನಿಂಗ್ ಕೆಲಸವು ಪ್ರಗತಿಯಲ್ಲಿರುತ್ತದೆ. ಈ ಕೆಲಸಗಳಿಗಾಗಿ 1991-92ನೇ ಸಾಲಿನಲ್ಲಿ 1.5 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಲಾಗಿದ್ದು, 1992ನೇ ಮಾರ್ಚ್ ಅಂತ್ಯದಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

3) ಕಲಘಟಗಿ ತಾಲೂಕಿನ ನೆಲ್ಲಿಹರವಿ ಗ್ರಾಮದ ಸುಮಾರು 358 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವಿರುತ್ತದೆ. ಬೊಮ್ಮಿಗಟ್ಟಿ ಗ್ರಾಮಕ್ಕೆ ಈ ಯೋಜನೆಯಲ್ಲಿ ಒಳಪಟ್ಟಿಲ್ಲ.

4) ಈಗಾಗಲೇ ಈ ಯೋಜನೆಯಿಂದ ನೀರಾವರಿ ಸೌಲಭ್ಯ ಕಾರ್ಯಗೊಳಿಸಲಾಗಿದೆ. ಹಾಗೂ ಕಾಲುವೆ ಕೆಲಸಗಳು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕಲಘಟಗಿ ತಾಲ್ಲೂಕು ಪಶ್ಚಿಮ ಘಟ್ಟಗಳ ಯೋಜನೆಯಲ್ಲಿ ಸೇರ್ಪಡೆ

1098 (1701) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕನ್ನು ಪಶ್ಚಿಮ ಘಟ್ಟ ಯೋಜನೆಯಲ್ಲಿ ಸೇರ್ಪಡೆ ಮಾಡುವುದಾಗಿ ಸರ್ಕಾರ ಈ ಹಿಂದೆ ಭರವಸೆ ನೀಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಕಲಘಟಗಿ ತಾಲ್ಲೂಕನ್ನು ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಲಾಗಿದೆಯೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು;

ಈ) ಯಾವಾಗ ಸೇರ್ಪಡೆ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕಲಘಟಗಿ ತಾಲ್ಲೂಕನ್ನು ಸೇರಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ.

ಆ) ಇನ್ನೂ ಇಲ್ಲ.

ಇ) ಹೆಚ್ಚುವರಿ 18 ತಾಲ್ಲೂಕುಗಳನ್ನು (ಕಲಘಟಗಿ ತಾಲ್ಲೂಕು ಸೇರಿ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೆ ಸೇರಿಸುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ 1984ರಲ್ಲಿ ಕಳುಹಿಸಲಾಗಿದ್ದು ಇದುವರೆಗೂ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರಕಿರುವುದಿಲ್ಲ.

ಈ) ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಾಗ ಇದನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಸೇರ್ಪಡೆ ಮಾಡಲಾಗುವುದು.

Construction of Bandara at Belavanthara Village

1100 (1703) SRI P.C. SIDDANAGOWDAR (Kalaghatagi) : will the Minister of State for Minor Irrigation be pleased to state?

a) Is it true that the work of construction of Bandara at Belavanthara Village in Kalaghatagi Taluk is approved by the Zilla parishad;

b) If so, what is the stage of work?

SRI. K.S. MALLIKARJUNAPRASANNA (Minister of state for Minor Irrigation) :

a) This work is included in the 20% Jewhar Rojgar Yojane action plan of 1991-92 with a provision of Rs. 1 lakh during the current year. The estimate has not been sanctioned.

b) The work has not been started as the estimate has not been sanctioned since 1/3rd of the estimated cost of Rs. 8.00 lakhs is not available during the current year.

ಆಲೂರು ಕೆರೆಯ ಏರುಕಟ್ಟೆ ಕುಸಿದಿರುವುದರಿಂದ ಹಾನಿ

1101 (1704) ಶ್ರೀ ಬಸವಂತರೆಡ್ಡಿ ಪೊತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಮತಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಲ್ಲೂರು (ಬಿ) ಕೆರೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿರುವ ಏರು (ಕಟ್ಟೆ) ಕುಸಿದು ಹೋಗಿ ಅಪಾಯ ಹಂತದಲ್ಲಿದ್ದು ಹಾಗೂ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಆ) ಈ ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರದವರು ಒಂದು ವರದಿಯನ್ನು ಸಲ್ಲಿಸಲು ದಿನಾಂಕ 30-8-90ರಲ್ಲಿ ಸಮಿತಿಯನ್ನು ರಚಿಸಿರುವುದು ನಿಜವಲ್ಲವೇ;

ಇ) ಈ ಸಮಿತಿ ವರದಿ ಸಲ್ಲಿಸಿದ್ದು ಇದರಲ್ಲಿ ತಾಂತ್ರಿಕ ಮಂಜೂರಾತಿ ದೊರೆತು ಆಡಳಿತಾತ್ಮಕವಾಗಿ ಮಂಜೂರಾತಿ ದೊರೆತಿದೆಯಾದರೂ ಸಹ ಈ ಕಾಮಗಾರಿಯನ್ನು ಪ್ರಾರಂಭ ಮಾಡಲು ವಿಳಂಬ ಮಾಡಿರುವುದೇಕೆ;

ಈ) ಇಲ್ಲಿಯವರೆಗೆ ಈ ಕೆರೆಗೆ ಖರ್ಚಾಗಿರುವ ಹಣ ಎಷ್ಟು;

ಉ) ಸಕಾಲದಲ್ಲಿ ಪೂರ್ತಿಗೊಳಿಸದಿದ್ದರೆ ಮಳೆಗಾಲದಲ್ಲಿ ಒಡೆದುಹೋಗಿ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂ. ಹಣ ನಷ್ಟವಾಗುವುದಿಲ್ಲವೆ;

ಊ) ಈಗಲಾದರೂ ಈ ಬೇಸಿಗೆ ಕಾಲದಲ್ಲಿ ಕುಸಿದುಹೋಗಿರುವ ಏರು (ಕಟ್ಟೆ) ನಿರ್ಮಾಣ ಮಾಡಿ ರೈತರು ಬೆಳೆಗಳನ್ನು ಬೆಳೆಯಲು ಅನುವು ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ನಿಜ.

ಇ) ಸಮಿತಿಯ ವರದಿ ಪರಿಶೀಲನೆಯಲ್ಲಿದೆ. ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ರೂ. 129.363 ಲಕ್ಷ.

ಉ) ಹೌದು.

ಊ) ಬೇಸಿಗೆಯಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಕಿಷ್ಟಾ ಬಸಿಯುವ ಕೆರೆಯಿಂದ ಕೋಡಿಯಲ್ಲಿ ನೀರು ಹೋಗದೆ ಬೆಳೆ ನಾಶ

1102 (1705) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಿಷ್ಟಾಪುರ ಬಸಿಯುವ ಕೆರೆ ನಿರ್ಮಾಣ ಮಾಡಿ ಇದರ ಕೋಡಿ (ವೇಸ್ಟಿಯರ್)ಯಲ್ಲಿ ನೀರು ಹೋಗದೆ ಬೆಳೆದ ಬೆಳೆ ನೀರಿನ ಪ್ರವಾಹದಿಂದ ಕೊಚ್ಚಿಕೊಂಡು ಹೋಗಿ ನಾಲ್ಕು-ಐದು ವರ್ಷಗಳಿಂದ ಭೂಮಿ ಬೀಳು ಬಿದ್ದು ರೈತರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನೀರನ ಪ್ರವಾಹದಿಂದ ಪಕ್ಕದಲ್ಲಿ ಒಡೆದು ಹೋಗಿರುವ ಕೆರೆಯ ಏರಿ (ಬಂದ್) ಸಹ ಕೊಚ್ಚಿಕೊಂಡು ಹೋಗಿ ಇದರ ಕೆಳಗಿನ ಭೂಮಿ ಅಪಾಯ ಹಂತದಲ್ಲಿರುವುದು ನಿಜವೇ;

ಇ) ಬಸಿಯುವ ಕೆರೆಗಳನ್ನು ನಿರ್ಮಾಣ ಮಾಡುವುದು ನೀರನ್ನು ಕಾಪಾಡುವುದಕ್ಕಲ್ಲವೇ;

ಈ) ಈ ಬಸಿಯುವ ಕೆರೆ ನಿರ್ಮಾಣ ಮಾಡಿ ರೈತರ ಭೂಮಿಯನ್ನು ಹಾಳು ಮಾಡಿದ್ದೇಕೆ; ಇದರಿಂದ ರೈತರಿಗೆ ಹಾನಿ ಹಾಗೂ ಸರ್ಕಾರಕ್ಕೆ ಹಣ ನಷ್ಟವಲ್ಲವೇ?

ಉ) ಈ ಕೆರೆಯಿಂದ ನಷ್ಟವಾದ ಭೂ ಮಾಲೀಕರಿಗೆ ಪರಿಹಾರ ಹಣ ಕೊಡುವುದು ಯಾವಾಗ?

ಊ) ಈ ಬಸಿಯುವ ಕೆರೆಯನ್ನು ತಾಂತ್ರಿಕವಾಗಿ ಸರಿಪಡಿಸುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪ್ರಶ್ನಿತ ಖಾಸಗಿ ವ್ಯವಸಾಯ ಜಮೀನು ಸದರಿ ಕೆರೆಯ ಜಲಾವೃತ ಪ್ರದೇಶದ ಪಕ್ಕದಲ್ಲಿದ್ದು ಕೆಳಮಟ್ಟದ ಸ್ವಲ್ಪ ಭಾಗ ಕೆಲವು ಸಮಯ ಮಾತ್ರ ಮುಳುಗಡೆಯಾಗುತ್ತದೆ. ಅಲ್ಲದೆ ಹಳ್ಳದಲ್ಲಿ ಅತೀಯಾದ ಮಹಾಪೂರ ಬಂದಾಗ ಮಾತ್ರ ಹೆಚ್ಚು ಭಾಗ ತಾತ್ಕಾಲಿಕವಾಗಿ ಜಲಾವೃತವಾಗುತ್ತದೆ. ಈ ರೀತಿ 1990ನೇ ಸಾಲಿನಲ್ಲಿ ಒಮ್ಮೆ ಮಾತ್ರ ಸಂಭವಿಸಿದ್ದು ಇದರಿಂದ ಯಾವುದೇ ವ್ಯವಸಾಯದ ಜಮೀನು ಕೊಚ್ಚಿಕೊಂಡು ಹೋಗಿರುವ ಪ್ರಮೇಯ ಇರುವುದಿಲ್ಲ. ಆದಾಗ್ಯೂ ಈ ತೊಂದರೆಯನ್ನು ನಿವಾರಿಸಲು ಒಂದು ರಕ್ಷಣಾ ಒಡ್ಡು ನಿರ್ಮಿಸಿ ಸದರಿ ಜಮೀನನ್ನು ನೆರೆಯಿಂದ ರಕ್ಷಿಸಬಹುದಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಮೇಲೆ ವಿವರಿಸಿದಂತೆ ಅತಿಯಾದ ಮಹಾಪೂರದಿಂದ ಸದರಿ ಜಮೀನಿಗೆ ನೆರೆಯ ಪ್ರವಾಹ ತಗ್ಗಿಸಲು ತಾತ್ಕಾಲಿಕವಾಗಿ ಕೆರೆಯ ಸ್ವಲ್ಪ ಭಾಗವನ್ನು ಕೆಳಮಟ್ಟಕ್ಕೆ ಇಳಿಸಲಾಗಿದ್ದು ಹೆಚ್ಚಿನ ನೀರನ್ನು ಮುಖ್ಯ ನಾಲಾಕ್ಕೆ ಸೇರುವಂತೆ ಮಾಡಲಾಗಿದೆ. ಈ ಉಪ ಕ್ರಮದಿಂದ ಕೆಳಗಿನ ಖಾಸಗಿ ಜಮೀನುಗಳಿಗೆ ಅಪಾಯ ಇರುವುದಿಲ್ಲ.

ಇ) ಹೌದು.

ಈ) ಪ್ರಶ್ನೆ "ಅ" ಮತ್ತು "ಆ" ರಲ್ಲಿ ವಿವರಿಸಿದ ಉಪ ಕ್ರಮದಿಂದಾಗಿ ರೈತರಿಗೆ ಹಾನಿ ಹಾಗೂ ಸರ್ಕಾರದ ಹಣದ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪಶ್ನಿತ ಜಮೀನಿಗೆ ನೆರೆಯ ತೊಂದರೆ ಹೋಗಲಾಡಿಸುವ ಉದ್ದೇಶದಿಂದ ಉಪಕ್ರಮ ಕೈಗೊಳ್ಳಲಾಗುತ್ತಿದ್ದು ಭೂ ಮಾಲೀಕರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಮುಂಬರುವ ಮಳೆಗಾಲದೊಳಗಾಗಿ ಕೆರೆಯನ್ನು ಎಲ್ಲಾ ರೀತಿಯಿಂದ 1992ರ ಮೇ ಒಳಗಾಗಿ ಸರಿಪಡಿಸಿ ಮುಗಿಸಲಾಗುವುದು.

ಬಂಗಾರುಪೇಟೆ ತಾಲ್ಲೂಕು ಕನಮನಹಳ್ಳಿ ರಸ್ತೆಯ ಅಭಿವೃದ್ಧಿ

1104 (1707) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ. ಬಂಗಾರಪೇಟೆ ತಾಲ್ಲೂಕು ಬೂಧಿಕೋಟೆ-ಬಂಗಾರಪೇಟೆಯಿಂದ ಕನಮನಹಳ್ಳಿ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಯಾವಾಗ ವಶಕ್ಕೆ ತೆಗೆದುಕೊಳ್ಳಲಾಯಿತು?

ಇ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ನಂತರ ಖರ್ಚು ಮಾಡಿದ ಹಣವೆಷ್ಟು? ಖರ್ಚು ಮಾಡದಿದ್ದಲ್ಲಿ ಕಾರಣವೇನು?

ಈ) ಈ ರಸ್ತೆಯು ಅಂತರ ರಾಜ್ಯ ರಸ್ತೆಗಳಿಗೆ ಸೇರಿದ್ದರೂ ಸಹ. ಇದನ್ನು ಅಭಿವೃದ್ಧಿಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದ ಈ ಬಗ್ಗೆ ಕ್ರಮ ಕೈಕೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಬೂಧಿಕೋಟೆ ಕನಮನಹಳ್ಳಿ ರಸ್ತೆಯ ಒಟ್ಟು ಉದ್ದ 20.50 ಕಿ.ಮೀ.

ಆ) ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ 1987ರಲ್ಲಿ ತೆಗೆದುಕೊಳ್ಳಲಾಗಿದೆ.

		ಲಕ್ಷ ರೂ.ಗಳು
ಇ)	1987-88ನೇ ಸಾಲಿನಿಂದ 1990-91ನೇ ಸಾಲಿನವರೆಗೆ	1.90
	1991-92ನೇ ಸಾಲಿನಲ್ಲಿ ಫೆಬ್ರವರಿ 92ರವರೆಗೆ	5.28
	ಒಟ್ಟು	7.18

ಈ) ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಯ ಅಭಿವೃದ್ಧಿ ಮಾಡುತ್ತಿದ್ದು ರಸ್ತೆ ಸಂಚಾರ ಯೋಗ್ಯವಾಗಿದೆ.

ಉ) ಬೂದಿಕೋಟೆ-ಕನಮನಹಳ್ಳಿ ರಸ್ತೆಗೆ 1991-92ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿ 3.00 ಲಕ್ಷ ರೂ. ಹಾಗೂ ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 6.00 ಲಕ್ಷ ರೂ.ಗಳಿಗೆ ಅಂದಾಜು ಮಂಜೂರಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಪ್ರಗತಿಯಲ್ಲಿದೆ.

ಬಂಗಾರುಪೇಟೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಗೆ ಕೆರೆಗಳಿಂದ ನೀರಾವರಿಯಾಗುವ ಜಮೀನಿನ ಪ್ರದೇಶ.

1105 (1708) ಶ್ರೀ ನಾರಾಯಣ ಸ್ವಾಮಿ, ಎಂ. (ಬೇತಮಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕಿನ ಸಣ್ಣ ನೀರಾವರಿಗೆ ಸೇರುವ ಬೃಹತ್ ಕೆರೆಗಳಾವುವು ; ಹಾಗೂ ಈ ಕೆರೆಗಳಲ್ಲಿ ಎಷ್ಟು ಎಕರೆ ಭೂಮಿಗೆ ನೀರಾವರಿ ಅನುಕೂಲವಾಗುತ್ತದೆ; (ಪ್ರತಿ ಕೆರೆಯ ವಿವರ ಕೊಡಿ)

ಆ) ಸದರಿ ಕೆರೆಯ ಕಾಲುವೆಗಳ ಉದ್ದವೆಷ್ಟು; ಹಾಗೂ ಈ ಕಾಲುವೆಗಳನ್ನು ದುರಸ್ತಿ ಮಾಡಲಾಗಿದೆಯೆ; ಹಾಗಿದ್ದರೆ ದುರಸ್ತಿ ಮಾಡಿ ಎಷ್ಟು ವರ್ಷಗಳಾಗಿವೆ ;

ಇ) ಇಲ್ಲದಿದ್ದರೆ, ದುರಸ್ತಿ ಮಾಡದಿರಲು ಕಾರಣವೇನು; ಹಾಗೂ ಯಾವಾಗ ಮಾಡಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ)

ಕೆರೆಯ ಹೆಸರು	ಅಚ್ಚು ಕಟ್ಟು (ಎಕರೆಗಳಲ್ಲಿ)
1) ರಾಮಸಾಗರ	1200
2) ರಾಮ ಸಮುದ್ರ	652
3) ಮುಷ್ಟ್ರಹಳ್ಳಿ	1110
4) ಮಾರ್ಕಂಡೇಯ	840

ಆ)

ಕೆರೆಯ ಹೆಸರು	ಕಾಲುವೆಯ ಉದ್ದ (ಕಿ.ಮೀ.)
1) ರಾಮಸಾಗರ	26.80
2) ಮುಷ್ಟ್ರಹಳ್ಳಿ	12.88
3) ಕಾಮಸಮುದ್ರ	9.60
4) ಮಾರ್ಕಂಡೇಯ	9.50

ಈ ಕಾಲುವೆಗಳಿಗೆ ಅವಶ್ಯಕವಾದ ದುರಸ್ತಿಯನ್ನು 1991-92ರ ಸಾಲಿನಲ್ಲಿ ಮಾಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಮುಂಡಗೋಡ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವ

1108 (1711) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಮುಂಡಗೋಡ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವವಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ ಈ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನೇನಾದರೂ ತಯಾರಿಸಲಾಗಿದೆಯೇ?

3) ಹಾಗಿದ್ದಲ್ಲಿ ಇದರ ವೆಚ್ಚವೆಷ್ಟು?

4) ಒಂದು ವೇಳೆ ಯೋಜನೆಯನ್ನು ತಯಾರಿಸದಿದ್ದಲ್ಲಿ ಕೂಡಲೇ ಕುಡಿಯುವ ನೀರಿನ ಯೋಜನೆಯನ್ನು ತಯಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಹೌದು.

2) ಇನ್ನೂ ಪರಿಶೀಲನೆಯಲ್ಲಿದೆ.

3) ಉದ್ಭವಿಸುವುದಿಲ್ಲ.

4) ಯೋಜನೆಯ ಬಗ್ಗೆ ಅನ್ವೇಷಣೆ ನಡೆಸಿ ಸೂಕ್ತ ಅಂದಾಜು ತಯಾರು ಮಾಡಿ ನಂತರ ಮುಂದಿನ ವರ್ಷದಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಜಿಲ್ಲಾ ಪರಿಷತ್ತುಗಳಲ್ಲಿ ಅಧಿಕಾರ ಕೇಂದ್ರೀಕರಣ

1109 (1712) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತಿನ ಮೂಲಕ ಅಧಿಕಾರ ವಿಕೇಂದ್ರೀಕರಣ ಮಾಡುವ ನೆಪದಲ್ಲಿ ಸರ್ಕಾರವು ಅಧಿಕಾರವನ್ನು ಕೇಂದ್ರೀಕರಣ ಮಾಡಲು ಹೊರಟಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕಳೆದ 2 ವರ್ಷಗಳಲ್ಲಿ ಸರ್ಕಾರವು ಜಿಲ್ಲಾ ಪರಿಷತ್ತುಗಳಿಂದ ಯಾವ ಯಾವ ಇಲಾಖೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ?

ಇ) ವಶಕ್ಕೆ ತೆಗೆದುಕೊಂಡ ಬಗ್ಗೆ ವಿವರಣೆಯನ್ನು ನೀಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ.

ಆ) ಮಂಡಲ ಪಂಚಾಯ್ತಿಗಳಿಗೆ ವಹಿಸಿ ಕೊಡಲಾಗಿದ್ದು ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿ ವಾಸವಾಗಿರುವ ನಿವೇಶನ ರಹಿತರಿಗೆ ನಿವೇಶನ ಹಂಚುವ ಯೋಜನೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಹಾಗೂ ಜಿಲ್ಲಾ ಪರಿಷತ್ತುಗಳಿಗೆ ವಹಿಸಲಾಗಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳಲಾಗಿದೆ.

ಇ) ಈ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲು ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲವರ್ಗಗಳ ಜನರಿಗೆ ಈ ಯೋಜನೆಗಳ ಲಾಭ ಪ್ರಾಪ್ತವಾಗುವುದನ್ನು ಖಾತರಿಪಡಿಸಿಕೊಳ್ಳಲು.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 300 ಸಹಾಯಕ ಇಂಜಿನಿಯರುಗಳ ನೇಮಕಾತಿ.

1111 (1748) ಶ್ರೀ ಶಿವಶೇಕರಪ್ಪಗೌಡ ಶಿರವಾಳ್ (ಶಹಾಪುರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 300 ಸಹಾಯಕ ಇಂಜಿನಿಯರುಗಳ ಹುದ್ದೆಗಳು ಖಾಲಿ ಇದ್ದು ಅದರ ಬಗ್ಗೆ ಈಗಾಗಲೇ ನೇಮಕಾತಿಗೆ ತೀರ್ಮಾನ ತೆಗೆದುಕೊಂಡಿದ್ದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಆ ದಿಶೆಯಲ್ಲಿ ಈವರೆವಿಗೂ ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು?

ಇ) ಇದರಿಂದಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕಾರ್ಯ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಹೌದು.

ಆ) ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನೇಮಕಾತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. 7,989 ಅರ್ಜಿಗಳು ಬಂದಿದ್ದು ಅವುಗಳ ಪರಿಶೀಲನಾ ಕಾರ್ಯ ನಡೆಯುತ್ತಿದೆ. ಮುಂದಿನ ಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.

ಇ) ಇಲ್ಲ.

ತಿಮ್ಮನಕಟ್ಟಿ ರಸ್ತೆ ಮುಖ್ಯ ರಸ್ತೆಯನ್ನಾಗಿ ಪರಿವರ್ತನೆ

1114 (1752) ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಮತ್ತು ಶಿವಮೊಗ್ಗ ಮಾರ್ಗದ ತಿಮ್ಮನಕಟ್ಟಿ ರಸ್ತೆಯನ್ನು ರಾಜ್ಯ ಮುಖ್ಯ ರಸ್ತೆಯನ್ನಾಗಿ ಪರಿವರ್ತಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ರಾಣೆಬೆನ್ನೂರು ಮತ್ತು ಶಿವಮೊಗ್ಗ (ತಿಮ್ಮನ ಕಟ್ಟಿ ಮಾರ್ಗ) ರಸ್ತೆಯು ಮುಖ್ಯ ಜಿಲ್ಲಾ ರಸ್ತೆಯಾಗಿದೆ. ಇದನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

Transfer of Zilla Parishat Minor Irrigation taks to M.I. department.

1116 (1949) SRI MANOHAR AINAPUR (Ballolli) : Will the Minister of state for Minor Irrigation be pleased to state?

a) Whether it is a fact that Minor Irrigation tanks of Zilla Parishad will be transferred to Minor Irrigation Department;

b) If so, when;

SRI K.S. MALLIKARJUNA PRASANNA (Minister of State for Minor Irrigation) :

a) This matter is under consideration of the Government.

b) This matter is under consideration of the Government.

ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ರಸ್ತೆ ಮತ್ತು ಸೇತುವೆಗಳಿಗೆ ನಿಗದಿಪಡಿಸಿರುವ ಅನುದಾನ

1117 (1950) ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನ ಸಭಾ ಮತ ಕ್ಷೇತ್ರಕ್ಕೆ ರಸ್ತೆ ಮತ್ತು ಸೇತುವೆಗಳಿಗೆ ನಿಗದಿಪಡಿಸಿರುವ ಅನುದಾನವೆಷು;

ಆ) ಡಾಂಬರೀಕರಣಕ್ಕೆ ವೆಚ್ಚ ಮಾಡಿರುವುದು ಎಷ್ಟು?

ಇ) ಈ ಸಾಲಿನಲ್ಲಿ ಹೆಚ್ಚುವರಿ ಅನುದಾನ ನೀಡುವ ಪ್ರಸ್ತಾಪವೇನಾದರು ಇದೆಯೆ?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಲೋಕೋಪಯೋಗಿ ಕಾಮಗಾರಿಗಳಿಗೆ ತಾಲ್ಲೂಕುವಾರು ಅನುದಾನವನ್ನು ನಿಗದಿಪಡಿಸುವುದಿಲ್ಲ. ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 1991-92ನೇ ಸಾಲಿನಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳಿಗೆ 27.26 ಲಕ್ಷ ರೂ.ಗಳ ಅನುದಾನವನ್ನು ನಿಗದಿಪಡಿಸಿದೆ.

ಆ) ಡಾಂಬರೀಕರಣಕ್ಕೆ 1991-92ನೇ ಸಾಲಿನಲ್ಲಿ 1.80 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಇ) ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ತೆಗೆದುಕೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸೆಪ್ಲಿಮೆಂಟರಿ ಅನುದಾನದ ಲಭ್ಯತೆಯನ್ನು ಅನುಸರಿಸಿ ಹೆಚ್ಚುವರಿ ಅನುದಾನ ನೀಡುವ ಉದ್ದೇಶವಿದೆ.

ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಓವರ್ ಬ್ರಿಡ್ಜ್ ನಿರ್ಮಾಣ

1118 (1805) ಶ್ರೀ ಪಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರ ಸಹಭಾಗಿತ್ವ ನೀಡುತ್ತದೆಯೆ;

ಆ) ನೀಡುತ್ತಿದ್ದಲ್ಲಿ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಬ್ರಹ್ಮಾವರ-ಹೆಬ್ರಿ ರಾಜ್ಯ ರಸ್ತೆಯ ಬಾಂತಾರು ಸ್ಥಳದಲ್ಲಿ ರೈಲ್ವೆಯವರು ನಿರ್ಮಿಸಲು ಉದ್ದೇಶಿಸಿರುವ 'ಲೆವೆಲ್‌ಕ್ರಾಸಿಂಗ್'ಗೆ ಬದಲಾಗಿ "ಓವರ್ ಬ್ರಿಡ್ಜ್" ನಿರ್ಮಾಣವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಇಲ್ಲದಿದ್ದಲ್ಲಿ ರಾಜ್ಯ ಸರ್ಕಾರವು ಈ ಸ್ಥಳದಲ್ಲಿ ಲೆವೆಲ್ ಕ್ರಾಸಿಂಗ್ ಬದಲು ಓವರ್ ಬ್ರಿಡ್ಜ್‌ನ್ನು ನಿರ್ಮಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದೆ?

ಶ್ರೀ ಜಿ.ಹೆಚ್. ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರವು ನೇರವಾಗಿ ಸಹಭಾಗಿತ್ವವನ್ನು ನೀಡುವುದಿಲ್ಲ. ಇದು ಹೊಸ ರೈಲು ಮಾರ್ಗವಾದ್ದರಿಂದ ಎಲ್ಲಾ ಕಾಮಗಾರಿಯನ್ನು ಕೊಂಕಣ ರೈಲ್ವೆ ಯೋಜನೆಯ ಅಂದಾಜು ಪಟ್ಟಿಯಲ್ಲಿ ಭರಿಸಬೇಕಾಗುತ್ತದೆ.

ಆ) ಬ್ರಹ್ಮಾವರ ಹೆಬ್ರಿ ಮುಖ್ಯ ಜಿಲ್ಲಾ ರಸ್ತೆಯ (ರಾಜ್ಯ ಹೆದ್ದಾರಿಯಲ್ಲಿ) 78.851 ಕಿ.ಮೀ. ರೈಲು ಮಾರ್ಗದ ರಸ್ತೆ ದಾಟಿನಲ್ಲಿ 'ಬಿ' ಕ್ಲಾಸ್ ಲೆವೆಲ್ ಕ್ರಾಸಿಂಗ್ ನಿರ್ಮಿಸಲು ಉದ್ದೇಶಿಸಲಾಗಿದೆ. ಈಗಿನ ವಾಹನ ಸಂಚಾರಗಳ ಪ್ರಮಾಣಕ್ಕೆ ಉದ್ದೇಶಿಸಿರುವ ಲೆವೆಲ್ ಕ್ರಾಸಿಂಗ್ ಸರಿಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಸಾಲಿಗ್ರಾಮದ ಪರಂಪಳ್ಳಿ ಸೇತುವೆಯ ಅಪೂರ್ಣ ಕೆಲಸ

1119 (1806) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಸಾಲಿಗ್ರಾಮ ಪುರಸಭೆಯ ಪಾರಂಪಳ್ಳಿ ಸೇತುವೆ ಪೂರ್ಣವಾಗಿರುವುದು ನಿಜವೆ; ಹಾಗಿದ್ದಲ್ಲಿ ಯಾವಾಗ ಪೂರ್ಣಗೊಂಡಿರುತ್ತದೆ.

ಆ) ಈ ಸೇತುವೆ ಸಾರ್ವಜನಿಕ ಸಂಚಾರಕ್ಕೆ ಇನ್ನು ಲಭ್ಯವಾಗದೇ ಇರುವುದು ನಿಜವಲ್ಲವೇ; ಹಾಗಿದ್ದಲ್ಲಿ ಯಾವ ಕಾರಣಗಳಿಂದ ಲಭ್ಯವಾಗಿಲ್ಲ, ತಿಳಿಸುವುದು;

ಇ) ಈ ಸೇತುವೆಯ ಎರಡು ಕಡೆಗಳ ಕೂಡು ರಸ್ತೆ ಯಾವಾಗ ಪೂರ್ಣವಾಗಬಹುದು?

ಶ್ರೀ ಜಿ.ಹೆಚ್. ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಪಾರಂಪಳ್ಳಿ ಸೇತುವೆ ಕಾಮಗಾರಿ ಭಾಗ 1991 ಮೇ ತಿಂಗಳಲ್ಲಿ ಪೂರ್ಣಗೊಂಡಿದ್ದು, ಛಾವಣಿಗೆ ಸಿಮೆಂಟ್ ಕಾಂಕ್ರೀಟ್ ರಕ್ಷಣಾತ್ಮಕ ಪದರವನ್ನು (ವೆರಿಂಗ್ ಕೋಟ್) ಹಾಕುವ ಕೆಲಸ ಬಾಕಿ ಇದೆ. ಮತ್ತು ಕೂಡು ರಸ್ತೆ ಬಾಕಿ ಇರುತ್ತದೆ.

ಆ) ನಿಜ. ಕೂಡು ರಸ್ತೆ ಪ್ರಗತಿಯಲ್ಲಿರುವುದರಿಂದ ಹಾಗೂ ಸೇತುವೆಯ ಮೇಲೆ ರಕ್ಷಣಾತ್ಮಕ ಪದರ ಹಾಕುವುದು ಬಾಕಿ ಇರುವುದರಿಂದ ಸಂಚಾರಕ್ಕೆ ಲಭ್ಯವಾಗಿಲ್ಲ.

ಇ) ಈ ಕಾಮಗಾರಿಯನ್ನು ಪೂರ್ತಿ ಮಾಡಲು 3.22 ಲಕ್ಷ ರೂ.ಗಳ ಹೆಚ್ಚಿನ ಅನುದಾನ ಬೇಕಾಗಿದೆ. ಈ ಸಾಲಿನಲ್ಲಿ 2 ಲಕ್ಷ ರೂ.ಗಳ ಅನುದಾನ ಇದೆ. ಇನ್ನು ಬೇಕಾಗಿರುವ ಹಣವನ್ನು ಅನುದಾನದ ಲಭ್ಯತೆಯ ಮೇಲೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹರಿಹರ ತಾಲೋಕು ಪಾಳ್ಯ ಪಂಚಾಯತ್ ಸಮಿತಿಯ ಅಧೀನದಲ್ಲಿರುವ ಜಮೀನು

1121 (1893) ಶ್ರೀ ವೈ. ನಾಗಪ್ಪ (ಹರಿಹರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೋಕಿನ ಪಾಳ್ಯ ಗ್ರಾಮದಲ್ಲಿರುವ ತಾಲ್ಲೋಕು ಪಂ. ಸಮಿತಿಯ ಅಧೀನದಲ್ಲಿ ಜಮೀನು ಇದೆಯೇ? ಇದ್ದರೆ ಅದರ ವಿಸ್ತೀರ್ಣತೆ ಎಷ್ಟು ಈ ಜಮೀನನ್ನು ಯಾವ ರೀತಿ ಅಭಿವೃದ್ಧಿಗೊಳಿಸಲಾಗಿದೆ ಮತ್ತು ಯಾವ ಇಲಾಖೆಯ ಉಸ್ತುವಾರಿಗೆ ವಹಿಸಲಾಗಿದೆ.

ಆ) ಸದರೀ ಜಮೀನನ್ನು ಖಾಸಗಿಯವರಿಗೆ ಬೋಗ್ಯಕ್ಕೆ ಜಿಲ್ಲಾ ಪರಿಷತ್ ಮುಖೇನ ನೀಡಿರುವುದು ನಿಜವಲ್ಲವೇ ಎಷ್ಟು ಹಣಕ್ಕೆ ಮತ್ತು ಎಷ್ಟ ವರ್ಷಕ್ಕೆ, ಬೋಗ್ಯಕ್ಕೆ ಒಪ್ಪಂದಕ್ಕೆ ಕೊಡಲಾಗಿದೆ, ಬೋಗ್ಯದ ಬಿಟ್ಟುಕೊಡಲು ಜಿಲ್ಲಾ ಪರಿಷತ್ ಕೈಗೊಂಡ ನಿರ್ಣಯಕ್ಕೆ ಕಾರಣಗಳೇನು?

ಇ) ಸಾರ್ವಜನಿಕ ಹಿತಾಶಕ್ತಿಗೆ ವಿರುದ್ಧವಾಗಿ ಜಿ.ಪ. ಕೈಗೊಂಡಿರುವ ಈ ಕ್ರಮವನ್ನು ರದ್ದುಪಡಿಸಿ ಭೂರಹಿತ ಕೃಷಿಕಾರ್ಮಿಕರಿಗೆ ಹಂಚಿಕೆ ಮಾಡುವ ಅಗತ್ಯ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇದೆ. ಸರ್ವೆ ನಂ. 31 / ಪಿ 22 ಎಕರೆ ವಿಸ್ತೀರ್ಣ ತೋಟಗಾರಿಕೆಗಾಗಿ ಇಡಲಾಗಿದೆ. ತೋಟಗಾರಿಕೆ ಇಲಾಖೆಯ ಉಸ್ತುವಾರಿಯಲ್ಲಿದೆ.

ಆ) ದಿನಾಂಕ 29-1-91 ರಂದು ನಡೆದ ಜಿಲ್ಲಾ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಸಂ. ನಂ. 32 ರಲ್ಲಿರುವ 22 ಎಕರೆ ಜಮೀನನ್ನು ಖಾಸಗಿಯವರಿಗೆ ಬೋಗ್ಯಕ್ಕೆ ಕೊಡಲು ನಿರ್ಧರಿಸಿದ್ದು ನಂತರ ಸರ್ವೆ ನಂ. ಬದಲಾಗಿದೆ ಎಂದು ತಿಳಿದುಬಂದಿದ್ದರಿಂದ ದಿನಾಂಕ 10-10-91ರ ಜಿ.ಪ.ನೆ. ಸಾಮ್ಾನ್ಯ ಸಭೆಯಲ್ಲಿ ಸಂ.ನಂ. 32ರ ಬದಲಾಗಿ 31 ಪಿ ಎಂದು ತಿದ್ದುಪಡಿ ಮಾಡಬಹುದೆಂದು ತೀರ್ಮಾನಿಸಿದ್ದು, ಇದು ಇನ್ನು ಕಾರ್ಯರೂಪಕ್ಕೆ ಬಂದಿಲ್ಲ.

ಮೊದಲನೇ 8 ವರ್ಷಕ್ಕೆ ಎಕರೆ 1ಕ್ಕೆ 330 ರೂ.ಗಳಂತೆ	7260
ಎರಡನೇ 8 ವರ್ಷಕ್ಕೆ ಎಕರೆ ಒಂದಕ್ಕೆ 880 ರೂ.ಗಳಂತೆ	19,360
ಕೊನೆಯ 9 ವರ್ಷಕ್ಕೆ ಎಕರೆ 1ಕ್ಕೆ 1050 ರೂ.ಗಳಂತ	23,100
ಒಟ್ಟು	49720

ಒಟ್ಟು 25 ವರ್ಷಗಳು ಬೋಗ್ಯಕ್ಕೆ ಒಪ್ಪಂದವಾಗಿತ್ತು.

ಸದರಿ ಜಮೀನಿನಲ್ಲಿರುವ ತೋಟಗಳು ಸಂಪೂರ್ಣವಾಗಿ ನಾಶವಾಗಿದ್ದು ಅಲ್ಲಲ್ಲಿ ಗುಂಡಿಗಳು ಮತ್ತು ತಗ್ಗುಗಳು ಉಂಟಾಗಿದ್ದು ಇವುಗಳನ್ನು ದುರಸ್ತಿಪಡಿಸಲು ಜಿ.ಪ. ನಿಂದ ಅನುದಾನ ಲಭ್ಯವಿಲ್ಲದಿರುವುದರಿಂದ ಖಾಸಗಿಯವರಿಗೆ ಬೋಗ್ಯಕ್ಕೆ ಕೊಟ್ಟು ಅದರಿಂದ ತಾ.ಪಂ.ಸ. ಗೆ ಆದಾಯ ಮಾಡಿಕೊಳ್ಳುವ ಉದ್ದೇಶದಿಂದ

ಇ) ರದ್ದುಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ದ.ಕ. ಜಿಲ್ಲೆಯಲ್ಲಿ ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಸಹಾಯಧನ ಬಿಡುಗಡೆ ಬಗ್ಗೆ

1122 (1895) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91. 1991-92 ರಲ್ಲಿ ಐ.ಆರ್.ಡಿ.ಪಿ. ಯೋಜನೆಯಲ್ಲಿ ಎಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾಗಬೇಕಾದ ಸಹಾಯಧನದ ಬಾಕಿ ಎಷ್ಟು? ಹಾಗೂ ಬಿಡುಗಡೆಯಾಗದಿರಲು ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ಇಲಾಖಾ ಹಾಗೂ ಕಂದಾಯ ಸಚಿವರು):

ಅ) 1990-91 ಬಿಡುಗಡೆ

ರೂ. 225.792 ಲಕ್ಷ ಪೂರ್ಣ ಹಣ ಬಿಡುಗಡೆ ಮಾಡಲಾಗಿದೆ.

1991-92 ಬಿಡುಗಡೆ (ರೂ. ಲಕ್ಷಗಳಲ್ಲಿ)

ಕೇಂದ್ರ			ರಾಜ್ಯ		
ಬಿಡುಗಡೆ ಯಾಗ ಬೇಕಾದ್ದು	ಬಿಡುಗಡೆ ಯಾಗಿ ರುವುದು	ಬಾಕಿ	ಬಿಡುಗಡೆ ಯಾಗ ಬೇಕಾದ್ದು	ಬಿಡುಗಡೆ ಯಾಗಿ ರುವುದು	ಬಾಕಿ
106.220	55.859	50.361	106.220	79.665	26.555

ಕಡಿಮೆ ಹಣ ಬಿಡುಗಡೆಯಾಗಲು ಕಾರಣ

1. 1991-92ನೇ ಸಾಲಿನ ಮಂಜೂರಾದ ಆಯವ್ಯಯದಲ್ಲಿ ಶೇಕಡಾ 5 ರಷ್ಟು ಕಡಿತ ಮಾಡಲಾಗಿದೆ (.)
2. ನೀಡಿರುವ ಗುರಿಯನ್ನು (30-9-91) ಸಾದಿಸದಿರುವುದು.
3. ನಿಗದಿತ ಹಣಕ್ಕಿಂತ ಹೆಚ್ಚು ಆಡಳಿತ ವೆಚ್ಚ ಭರಿಸಿರುವುದು.
4. ಹೆಚ್ಚಿನ ಆರಂಭ ಶಿಲ್ಕು.

ದಸರಾ ಕ್ರೀಡಾ ಮತ್ತು ಕನ್ನಡ ರಾಜ್ಯೋತ್ಸವದ ಪ್ರಶಸ್ತಿಗಳು

1123 (1896) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸರ್ಕಾರದವರು ಪ್ರತಿವರ್ಷ ದಸರಾ ಕ್ರೀಡಾ ಪ್ರಶಸ್ತಿ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುತ್ತಿರುವುದು ನಿಜವೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

1. ಹೌದು.

ಮಲಪ್ರಭಾ ನದಿಗೆ ಬ್ಯಾರೇಜ ಕಟ್ಟುವ ಬಗ್ಗೆ

1127 (1901) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಾದ್ರೊಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಬಾಂದಾರ ಕಟ್ಟುವ ಸಲುವಾಗಿ ಕಾರ್ಯಕಾರಿ ಅಭಿಯಂತರರು. ಚಿಕ್ಕ ನೀರಾವರಿ ಇಲಾಖೆ. ಬೆಳಗಾವಿ ಇವರು ನಕ್ಷೆ ಹಾಗೂ ಅಂದಾಜು ವೆಚ್ಚ

ಪತ್ರಿಕೆಯನ್ನು ತಯಾರು ಮಾಡಿ ಸರ್ಕಾರದ ಅನುಮತಿಗಾಗಿ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಬೆಂಗಳೂರು ಇವರಿಗೆ ಎಂದು ಒಪ್ಪಿಗೆಗೆ ಕಳುಹಿಸಲಾಗಿದೆ?

ಆ) ಬಾಂದಾರ ಕಟ್ಟುವುದರಿಂದ ಎಷ್ಟು ಎಕರೆ ಜಮೀನಿಗೆ ನೀರನ್ನು ಒದಗಿಸಲಾಗುವುದು ಮತ್ತು ಯಾವ ಯಾವ ಗ್ರಾಮದ ಜನರಿಗೆ ಇದರಿಂದ ಉಪಯೋಗವಾಗುವುದು ಹಾಗೂ ಇದಕ್ಕೆ ಎಷ್ಟು ಹಣ ಬೇಕಾಗುವುದು;

ಇ) ಇಲ್ಲಿ ಕೂಡಲೇ ಬಾಂದಾರ ಕಟ್ಟಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸಕ್ಕೆ ಮಂಜೂರಾತಿ ನೀಡಿ ಕೆಲಸವನ್ನು ಪ್ರಾರಂಭಿಸಲಾಗುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) :

ಅ) ಅಂದಾಜು ಪತ್ರಿಕೆ ಮತ್ತು ನಕ್ಷೆ ಕಳುಹಿಸಿರುವುದಿಲ್ಲ. ಆದರೆ ಪೂರ್ವಾನ್ವೇಷಣಾ ವರದಿಯನ್ನು ದಿನಾಂಕ 26-11-91ರಂದು ಸಣ್ಣ ನೀರಾವರಿ ಮುಖ್ಯ ಇಂಜನಿಯರ್‌ರವರಿಗೆ ಕಳುಹಿಸಿದ್ದಾರೆ.

ಆ) ಈ ಬಾಂದಾರದಿಂದ ಸುಮಾರು 500 ಎಕರೆ ಜಮೀನಿಗೆ ನೀರಾವರಿ ಒದಗಿಸಬಹುದಾಗಿದೆ. ಈ ಯೋಜನೆಯಿಂದ ಕಾದ್ರೊಳ್ಳಿ ಮತ್ತು ಎಂ.ಕೆ. ಹುಬ್ಬಳ್ಳಿ ಗ್ರಾಮದ ಜನರಿಗೆ ಉಪಯೋಗವಾಗುವುದು. ಈ ಯೋಜನೆಗೆ ಸುಮಾರು 65.00 ಲಕ್ಷ ರೂ.ಗಳು ಬೇಕಾಗಬಹುದು.

ಇ) ಈ ಯೋಜನೆ ಬಗ್ಗೆ ವಿವರವಾದ ತನಿಖೆ ನಡೆಸಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಕಾಮಗಾರಿಯು ಶಕ್ಯವೆಂದು ಕಂಡುಬಂದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿಮಕೋಡಿ ಗ್ರಾಮದ ಹತ್ತಿರ ಏತ ನೀರಾವರಿ ಕಾಮಗಾರಿ

1130 (1906) ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ತಾಲ್ಲೂಕಿನ ಚಿಮಕೋಡಿ ಗ್ರಾಮದ ಹತ್ತಿರ ಒಂದು ಏತ ನೀರಾವರಿ ಕಾಮಗಾರಿಯು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದು ಕಾರ್ಯ ನಿರ್ವಹಿಸುತ್ತಿದಯೆ? ಅಥವಾ ಇಲ್ಲವೇ?

ಇ) ಇಲ್ಲದಿದ್ದಲ್ಲಿ ಈ ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸರ್ಕಾರವು ಯಾವುದಾದರೂ ಕ್ರಮವನ್ನು ಕೈಗೊಳ್ಳಲು ಯೋಜಿಸಿದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಇದು ಕಾರ್ಯ ನಿರ್ವಹಿಸುತ್ತಿದೆ ಆದರೆ ದೀರ್ಘಕಾಲ ಬಳಕೆಯಲ್ಲಿದ್ದು ಪಂಪುಗಳ ಕಾರ್ಯದಕ್ಷತೆ ಕುಂಠಿತಗೊಂಡಿದೆ ಮತ್ತು 243 ಹೆಕ್ಟೇರ್ ಅಚ್ಚುಕಟ್ಟಿನ ಪೈಕಿ 100 ಹೆಕ್ಟೇರ್ ನೀರಾವರಿ ಆಗುತ್ತಿದೆ.

ಇ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ನ ಯೋಜನೆ ಅಡಿಯಲ್ಲಿ 1992-93ರಲ್ಲಿ ಪಂಪುಗಳನ್ನು ಬದಲಾಯಿಸಲು ಉದ್ದೇಶಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿರುವ ಯುವಕ ಸಂಘಗಳ ಸಂಖ್ಯೆ

1131(1907) ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೀದರ್ ಜಿಲ್ಲೆಯಲ್ಲಿರುವ ಯುವಕ ಸಂಘಗಳು ಎಷ್ಟು?
2. 1989-90 ರಿಂದ 1990-91 ಮತ್ತು 1991-92 ರವರೆಗೆ ಆಯವ್ಯಯದಲ್ಲಿ ನಿಗಧಿಪಡಿಸಿರುವ ಹಣ ಎಷ್ಟು?

ಶ್ರೀ ಎಸ್.ರಮೇಶ್ (ಯುವಜನ ಸೇವಾ. ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

1. 861 ಯುವಕ ಮಂಡಳಿಗಳು
2. ಆಯವ್ಯಯದಲ್ಲಿ ಹಂಚಿಕೆಯಾದ ವಿವರ ಈ ಕೆಳಗಿನಂತಿದೆ.

ವರ್ಷ	ರೂಪಾಯಿಗಳು
1989-90	54.000-00
1990-91	88.000-00
1991-92	1.78,000-00

ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ದಶಲಕ್ಷ ಯೋಜನೆಯಡಿಯಲ್ಲಿ ಮಂಜೂರಾದ ಹಣ

1133 (1910) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾವ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್ತಿನಿಂದ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ 1991-92ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ;

ಆ) ಸದರಿ ಯೋಜನೆಯಡಿಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು):

ಅ) 1991-92ನೇ ಸಾಲಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲಾ ಪರಿಷತ್ತಿನಿಂದ ಬಿಡುಗಡೆಯಾದ ಹಣ ರೂ. 64.819 ಲಕ್ಷಗಳು (ಪ್ರಾರಂಭ ಶಿಲ್ಕು ಸೇರಿ) ಇದರಲ್ಲಿ ಖರ್ಚಾದ ಹಣ ರೂ. 43.943 ಲಕ್ಷಗಳು.

ಆ) ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಗ್ರಾಮಗಳಲ್ಲಿ ಕೈಗೆತ್ತಿಕೊಂಡ ಕೆಲಸಗಳ ಹಾಗೂ ಅವುಗಳಿಗೆ ಖರ್ಚು ಮಾಡಲಾದ ಹಣದ ವಿವರಗಳನ್ನು ತೋರಿಸಿರುವ ತಃಖ್ತೆಯನ್ನು ಲಗತ್ತಿಸಿದೆ.

Name of the villages where works are taken up. and amount spent.

Sl. No.	Taluk.	Village.	Name of the work.		Amt.spent.	
1	2	3	4		5	
1.	Dharwad.	Mugad.	Check Dam-	2	99650-00	
		Mandignal	-do-	1	20000-00	under progress
		Durgadkeri	-do-	1	12000-00	"
		Halladkeri	Bench Terrace		20349-00	
		Honnapur	Check Dam8	1	18000-00	"
					170000-00	
2.	Hubli.	Devargudihal	Check Dam	1	49600-00	
		Adargunchi	-do-	2	71900-00	"
		Halyal	Agrl.pond	2	14000-00	
		Inamveerapur	Check Dam		5800-00	"
		Parasapur	-do-		28200-00	"
		Agrahartimmapur	-do-		31100-00	"
					200000-00	
3.	Kundgol	Kadapatti	April.pond	1	6303-00	
		Yaraguppi	-do-	1	6313-75	
		Chicknerale	-do-	2	12627-50	
		Kamadolli.	-do-	1	6313-75	
		Shiroor	Levelling Bund		6142-65	
		Bharadvad	-do-		6070-65	
		-do-	-do-		10948-60	
		Kodivad	Check Dam		160-00	"
		Betadoor	Bund levelling		5560-80	
		Harlapur	April.pon	1	6313-80	
		Goudageri	Check Dam	1	18786-00	"
					85542-00	

1	2	3	4		5	
4.	Kalghatgi.	Beeranhalli.	Agril. Pond	1	10001-60	
		-do-	Nal Band	1	31548-60	Under
		Nelli-harvi.	Bench Terrace		9867-50	Progress
					51417-70	
5.	Shiggaon.	Muddinkoppa.	Bench Terrace		3162-50	
		Jakkankatti.	-do-		6875-00	
		Neeralkatti	Check Dam	-1	49780-60	
		Bhadrapur.	-do-	-1	59032-85	
		Basavankoppa.	Bench Terrace		114930-70	
		Nakapoor	-do-		57312-00	
		Hiremallur	Bund Levelling		12818-00	
		Chendapoor	Bench Terrace		5181-85	
					299092-50	
6.	Hangal.	Jangundikoppa	Bench Terrace		80000-00	
		Makarvalli.	Agrl.pond	-1	4889-00	
		Shadnandi	-do-	-1	1697-00	
		Neeralagi.	-do-	-1	4889-00	
					91475-00	
7.	Shirhatti.	Doddur	Check Dam	-1	49975-00	
		Bellatti.	-do-	-2	87980-00	
		Hosoor	-do-	-1	47762-00	
		Majjoor	-do-	-2	93150-00	
		Jelligeri	-do-	-2	63446-00	U.P.
		Yellapur.	-do-	-1	49938-00	
					388251-00	
8.	Savanur.	Yelavagi	Check Dam	-2	80000-00	"
9.	Haveri.	Karjagi.	-do-	-3-	147531-80	
		Halagi	-do-	-1	49964-55	
		Kanakapur	-do-	-1	49863-75	
		Akkoor	-do-	-1	40000-00	"
		Hosaritti.	-do-	-1	45000-00	"
		Maradoor	-do-	-1	20000-00	"
		Ganajoor	-do-	-2	62639-90	"

1	2	3	4		5	
		Baradi.	-do-	-1	6000-00	UP
		Nelugal	-do-	-1	10000-00	
					430000-00	
10.	Byadgi.	Nagalapur	Check Dam	-1	49945-85	
		Chirnakatti	-do-	-1	40945-85	
		Byadg	-do-	-1	49568-00	
		Kalledevaru	-d0-	-2	67176-35	
		Gundenhalli	-do-	-1	18225-00	U.P.
		Sidenoor	-do-	-1	12471-00	"
		Mattur	-do-	-1	10000-00	"
		Kadenalli	-d0-	-1	12667-95	"
					270000-00	
11.	Gadag	Kalasapur	Nala Band	-1	100023-00	
			Check Dam	-2		
		Papanashi	Check Dam	-3	116159-00	
		Sambapoor	-do-	-2	13321-00	"
		Kanaginahal.	-do-	-1	10032-00	
		Kotumachagi	-do-	-1	44057-00	
		Malasamudra	-do-	-1	27766-00	UP
		Mahalingpoor	-d0-	-1	30953-00	"
		Hirehandigol	-d0-	-1	29002-20	"
		Kallur	-do-	-1	16529-00	"
		Kalasapoor	C.D.NB	-	88154-00	
					502837-00	
12.	Navalgund	Sasvihalli	Check Dam	-2	30280-00	UP
		Adnoor	Agril pond	-2	11247-50	"
		Tirlapur	-do-	-1	4305-00	"
					45832-50	
13.	Mundargi	Doni	Nala Bund	-2	44199-00	
		Hirewaddatti.	Check Dam	-2	78799-00	
		Korlahalli	-do-	-1	28210-00	UP
		Dambal	-d0-	-1	12882-00	"
		Koloor	-do-	-1	14309-00	"
		Dindoor	-do-	-2	44086-00	
		Bidnal	-d0-	-1	12499-00	UP
					237424-00	

1	2	3	4		5	
14.	Ron	D.S.Hadagali	Bujid Leveling	2-HA	2085-60	UP
		Benechmatti	agrl.pond	2 No.	2081-20	UP
		Gogeri	Check Dam	1 No.	41180-80	
		Naregal	-do-	-	13644-45	UP
		Abbigeri	-do-	1	15089-65	UP
		Nellur	-do-	1	26852-45	UP
		Shantagiri	-do-	1	26160-00	UP
					127054-15	

Implementing officers;- Asstt. Ex. Engineer; Z.P. Sub-Divn. Ranebennur.

Sl. No.	Name of Work	Taluk	Amount spent	
1.	Construction of tank in Kakol Tanda	Ranebennur	64,473-45	UP
2.	-do- in Basalikatti-Tanda	-do-	58,037-10	UP
3.	-do- Kanderayanahalli.	-do-	2,44,336-15	UP
4.	Construction of feeder-chennal to Tank ir Irani village	-do-	1,15, 371-40	UP
		Total:-	4,82,218-10	

Note :- U.T.- under progress.

Statement showing the progress under Million well Schemes-1991-92 upto the end of Feb 1992. (both Physical and Financial Progress)

Sl. No.	Taluka	Name of the village & No.	Name of the work	Expenditure upto the end of Feb. 92	Remarks
1.	Ranebennur	Nookapur-1	Nala Bund	20080-00	
2.		Kajjari-4	-do-	12500-00	
3.		-do-3	-do-	12500-00	
4.		Basariket-i	Tanda-1-dl-	20080-00	
5.		Hoolihali-2	-do-	16580-00	
6.		Ranebennur-4	Check Dam	20080-00	
7.		Magod-1	-do-	30000-00	
	Total :- NB-5, CD-2.		Total :-	131820-00	
1.	Byadgi	Kengonda-1	Check Dam	30000-00	
2.		Budapanhali	-do-	13080-00	
3.		-do- -3	-do-	13000-00	
4.		Gundenhalli-1	-do-	12080-00	
5.		Anoor-1	-do-	12030-00	
6.		Belakari-2	-do-	49957-00	
7.		Kadarmandalgi-2		49876-00	
8.		Bisalhali-5	-do-	49999-00	
9.		Budapanhalli-2	NalaBund	49985-00	
	Total: NB-1, CD-8			280057-00	
1.	Hirekerur	Galaginkatti-1	Nala Bund	13080-00	
2.		-do- 1	Check Dam	13080-00	
3.		Angargatti-2	-do-	14000-00	
4.		-do- -3	-do-	14000-00	
5.		Gangaikoppa -1	-do-	13000-00	
6.		-do- -2	-do-	13000-00	
7.		Hoszkatti -2	-do-	17780-00	
8.		-do—2	-do-	18380-00	
9.		-do- 3	-do-	15500-00	
10.		Neshvi -1	-do-	19500-00	
11.		Kadoor-1	-do-	32080-00	
12.		-do- 2	-do-	30080-00	
13.		Angargatti-1	-do-	25080-00	
14.		Medur 1-	-do-	25080-00	
	Total :- NB-1, CD-13			263640-00	

1	2	3	4	5
1.	Haveri.	Kanavilli-1	Check Dam	20000-00
2.		-do- 2	-do-	10000-00
3.		Baradi 1	-do-	5000-00
4.		Basapur -3	-do-	12000-00
5.		-do-	-do-	13000-00
6.		-Movundi-2	-do-	10000-00
	Total :- 6- CD			70000-00
1.	Hangal	Hulaginhalli-1	Check Dam	10000-00
2.		Konankoppa-1	-do-	10000-00
3.		Hirekaunshi-1	-do-	15000-00
4.		Karagudari-1	-do-	10000-00
5.		Guddadamattihalli	-do-	15000-00
6.		-do-	-do-	15000-00
7.		Kopparsikoppa-	Bench Tracia	2000-00
8.		-do-2	-do-	1240-00
9.		Guddadamattihalli-1	Nala Bund	4000-00
	Total:- NB-1, CD-6, BT-1			82240-00
1.	Savanur	Ichangi-1	C.D.	13000-00
2.		-do-2	-do-	10000-00
3.		Mannur-1	-do-	12080-00
4.		Kalival-1	-do-	1000-00
5.		Chiltur-Badni-1	-do-	20080-00
6.		Sirbadagi-1	-do-	20080-00
7.		Malligatti-1	-do-	25080-00
8.		Nandihalli-1	-do-	3000-00
9.		Hiremeralli-1	-do-	1500-00
	Total:- CD-9			105820-00

Abstract

1. Total physical works - (1) Nala Bund-8 (2) Check Dam-44 (3) Bench Terrasce-2
2. Total Amt. released upto end of Feb.92- Rs. 24.04 lakhs.
3. -do- spent -do- Rs. 9.33577 lakhs
4. -do- Balanced -do- Rs.14.70223 lakhs.

ಜಿಲ್ಲಾ ಪರಿಷತ್ತಿನಿಂದ ಕೊಳವೆ ಬಾವಿ ಕೊರೆತಕ್ಕೆ ಖರ್ಚಾದ ಹಣ

1134 (1912) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್‌ನಿಂದ ಪ್ರತಿ ತಾಲ್ಲೂಕಿನಲ್ಲಿ 1990-91, 1991-92ನೇ ಸಾಲಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಸದರಿ ಕೊಳವೆ ಬಾವಿ ಕೊರೆಯುವ ಮೊದಲು ಸಾರ್ವಜನಿಕ ಆರೋಗ್ಯ (ಪಿಹೆಚ್‌ಇ) ಇಂಜನೀಯರ್ ತಜ್ಞರ ಅಭಿಪ್ರಾಯ ಪಡೆಯಲಾಗಿದೆಯೆ?

ಇ) ಹಾಗಿದ್ದಲ್ಲಿ ಸದರಿ ತಜ್ಞರ ಅಭಿಪ್ರಾಯದ ಪ್ರಕಾರ ಎಲ್ಲಾ ಕೊಳವೆ ಬಾವಿಗಳಲ್ಲಿ ನೀರು ಬಿದ್ದಿದೆಯೋ ಅಥವಾ ಇಲ್ಲವೆ?

ಈ) ಕೊಳವೆ ಬಾವಿಗಳನ್ನು ತೆರೆಯಲು ಯಾವ ಏಜೆನ್ಸಿಯವರಿಗೆ ವಹಿಸಿಕೊಡಲಾಗಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಸಚಿವರು) :

ಅ) 1990-91ರಲ್ಲಿ ಒಟ್ಟು 354 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಖರ್ಚಾದ ಹಣ ರೂ. 54.89 ಲಕ್ಷಗಳು. 1991-92ರಲ್ಲಿ ಡಿಸೆಂಬರ್ 91ರವರೆಗೆ ಒಟ್ಟು 220 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಖರ್ಚಾದ ಹಣ ರೂ. 29.38 ಲಕ್ಷ ರೂ.ಗಳು. ವಿವರಗಳು ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	1990-91 ಕೊರೆದ ಕೊಳವೆ ಬಾವಿಗಳ ಸಂಖ್ಯೆ	1990-91 ಖರ್ಚಾದ ಹಣ ರೂ. ಲಕ್ಷಗಳಲ್ಲಿ	1991-92 ಕೊರೆದ ಕೊಳವೆ ಬಾವಿಗಳ	1991-92 ಖರ್ಚಾದ ಹಣ ರೂ. ಲಕ್ಷಗಳಲ್ಲಿ
1.	ಧಾರವಾಡ	15	2.87	11	2.21
2.	ಹುಬ್ಬಳ್ಳಿ	17	3.84	12	2.40
3.	ಕಲಘಟಗಿ	22	4.02	14	1.68
4.	ಕುಂದಗೋಳ	14	3.28	5	1.00
5.	ಶಿಗ್ಗಾಂವ್	50	11.66	8	1.72
6.	ಹಾವೇರಿ	28	3.62	6	1.55
7.	ಹಾನಗಲ್	35	1.81	38	3.96
8.	ಹಿರೇಕೆರೂರು	24	2.96	51	0.83
9.	ರಾಣೆಬೆನ್ನೂರು	30	3.59	26	4.32

10.	ಬ್ಯಾಡಗಿ	33	3.41	9	2.87
11.	ಸವಣೂರು	6	0.99	21	0.76
12.	ಗದಗ್	16	2.78	12	2.84
13.	ಮುಂಡರಗಿ	6	1.00	1	0.20
14.	ನರಗುಂದ	8	1.34	-	0.32
15.	ನವಲಗುಂದ	16	2.10	-	1.11
16.	ರೋಣ್	18	3.08	6	0.41
17.	ಶಿರಹಟ್ಟಿ	16	2.04	-	1.20
	ಒಟ್ಟು	354	54.89	220	29.38

ಆ) ಪಿ.ಹೆಚ್.ಇ. ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಭೂ ವಿಜ್ಞಾನಿಗಳಿಂದ ಅಭಿಪ್ರಾಯ ಪಡೆಯಲಾಗಿದೆ.

ಇ) ಕೊರೆದಿರುವ ಕೊಳವೆ ಬಾವಿಗಳಲ್ಲಿ ಸುಮಾರು ಶೇಖಡ 92ರಷ್ಟು ಯಶಸ್ವಿಯಾಗಿದೆ.

ಈ) 1) ಇಲಾಖೆ ರಿಗ್‌ಗಳ ಮೂಲಕ 2) ವೆಲೆಯನ್‌ಗಿರಿ ಬೋರ್‌ವೆಲ್ಸ್ 3) ಶಂಕರ್ ಬೋರ್‌ವೆಲ್ಸ್ 4) ಜಲದಾರ್ ಬೋರ್‌ವೆಲ್ಸ್ 5) ಕರ್ನಾಟಕ ಆಗ್ರೊ, ಇಂಡಸ್ಟ್ರೀಸ್ ಕಾರ್ಪೋರೇಷನ್, ಧಾರವಾಡ 6) ಕಿಸಾನ್ ರಿಗ್ ಸರವೀಸ್ 7) ಅಭಯ ಡ್ರಿಲ್ಲಿಂಗ್ 8) ಶ್ರೀಮಿಕ ಡ್ರಿಲ್ಲಿಂಗ್ ಕಂಪೆನಿ 9) ಭಾಗಿರಥಿ ಬೋರ್‌ವೆಲ್ಸ್ 10) ಸೋನಿ ಬೋರ್‌ವೆಲ್ಸ್.

ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು

1135 (1913) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯು ಯಾವ ಯಾವ ಕಾಮಗಾರಿ ಕೆಲಸಗಳನ್ನು ಎಂದು ಕೈಗೆತ್ತಿಕೊಳ್ಳಲಾಯಿತು. ಅದಕ್ಕೆ ತಗಲಿದ ಖರ್ಚಿನ ವಿವರವೇನು;

ಆ) ಸದರಿ ಯೋಜನೆ ಪ್ರಾರಂಭವಾದಾಗ ರಾಜ್ಯ ಸರ್ಕಾರದಿಂದ ತಯಾರಿಸಲ್ಪಟ್ಟ ಯೋಜನೆ ನಕ್ಷೆ ಹಾಗೂ ಯೋಜನಾ ಅಂದಾಜು ಪಟ್ಟಿಯ ವಿವರವೇನು;

ಇ) ಸದರಿ ಯೋಜನೆ ಪೂರ್ತಿಗೊಳಿಸಲು ಇನ್ನು ಎಷ್ಟು ಹಣ ಬೇಕು; ಹಾಗೂ ಸದರಿ ಕಾರ್ಯವನ್ನು ಪೂರ್ತಿಗೊಳಿಸಲು ಎಷ್ಟು ದಿವಸಗಳು ಬೇಕಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ನಿರ್ಮಾಣವಾಗುತ್ತಲಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮುಖ್ಯ ಕಾಮಗಾರಿಗಳನ್ನು ಪ್ರಾರಂಭ ಮಾಡಿದ ವರ್ಷ ಹಾಗೂ ಅವುಗಳ ಮೇಲೆ ಮಾಡಿರುವ ಖರ್ಚಿನ ವಿವರಗಳು.

	ಕಾಮಗಾರಿಯ ಹೆಸರು	ಪ್ರಾರಂಭ ಮಾಡಿದ ವರ್ಷ	ಜನವರಿ 1992 ರವರೆಗೆ ಆಗಿರುವ ವೆಚ್ಚ
1.	ನಾರಾಯಣಪುರ ಅಣೆಕಟ್ಟು ಮತ್ತು ಸಂಬಂಧಿತ ಕಾಮಗಾರಿಗಳು	1968-69	38.50 ಕೋಟಿ ರೂ.ಗಳು
2.	ಆಲಮಟ್ಟಿ ಅಣೆಕಟ್ಟು ಮತ್ತು ಸಂಬಂಧಿತ ಕಾಮಗಾರಿಗಳು	1972	37.24 ಕೋಟಿ ರೂ.ಗಳು
3.	ನಾರಾಯಣಪುರ ಕಾಲುವೆ ಮತ್ತು ಅದರ ಉಪ ಕಾಲುವೆಗಳು	1972	388.23 ಕೋಟಿ ರೂ.ಗಳು
4.	ಆಲಮಟ್ಟಿ ಎಡದಂಡೆ ಕಾಲುವೆ	ಇನ್ನೂ ಪ್ರಾರಂಭಿಸಿಲ್ಲ	-
5.	ಆಲಮಟ್ಟಿ ಜಲಾಶಯದಿಂದ ಮುಳವಾಡ ಏತ ನೀರಾವರಿ ಯೋಜನೆಯ ನೀರಾವರಿ ಯೋಜನೆಯ ಹೆಡ್ ವರ್ಕ್ಸ್	1992	- (ಇತ್ತೀಚೆಗೆ ಈ ಕಾಮಗಾರಿಗಾಗಿ 150 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ)

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಪ್ರಥಮ ಯೋಜನಾ ವರದಿಯನ್ನು 1965ರಲ್ಲಿ ತಯಾರಿಸಲಾಗಿದ್ದು ಅದರ ಅಂದಾಜು ವೆಚ್ಚ 58.20 ಕೋಟಿ ರೂ. ಗಳಾಗಿರುತ್ತದೆ. ಈ ಮೂಲ ಯೋಜನೆಯ ಪ್ರಕಾರ 103 ಟಿಎಂಸಿ ನೀರನ್ನು ಬಳಸಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಸುಮಾರು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು 1-4-1992 ರಲ್ಲಿರುವಂತೆ ಬೇಕಾದ ಹಣ ಸುಮಾರು 484 ಕೋಟಿ ರೂಪಾಯಿಗಳು (ಎಸ್‌ಕಲೇಶನ್ ಹೊರತುಪಡಿಸಿ) ಬೆಲೆ ಹೆಚ್ಚಳವನ್ನು (ಎಸ್‌ಕಲೇಶನ್) ಪರಿಗಣಿಸಿದಲ್ಲಿ, ಬಾಕಿ ಕಾಮಗಾರಿಗಳ ಅಂದಾಜು ವೆಚ್ಚ ಸುಮಾರು 919 ಕೋಟಿ ರೂ.ಗಳಾಗುತ್ತದೆ. ಮೊದಲ ಘಟ್ಟದ ಈ ಯೋಜನೆಯನ್ನು 1996ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಅನ್ವೇಷಣಾ ಹಂತದಲ್ಲಿರುವ ಎರಡನೇ ಘಟ್ಟದ ಯೋಜನೆಯನ್ನು 2000 ಇಸವಿ ಒಳಗಡೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ನೆಲಮಂಗಲ-ತುಮಕೂರು ರಸ್ತೆಯನ್ನು ನಾಲ್ಕು ಪಥದ ರಸ್ತೆಯಾಗಿ ಪರಿವರ್ತನೆ

1136 (1918) ಶ್ರೀ ಷಫಿ ಅಹಮದ್ (ತುಮಕೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನೆಲಮಂಗಲ - ತುಮಕೂರು ರಸ್ತೆಯನ್ನು 4 ಪಥ ರಸ್ತೆ ಮಾಡುವ ಕೆಲಸವನ್ನು ಪ್ರಾರಂಭಿಸಲು ಸರ್ಕಾರ ಪ್ರಸ್ತಾಪಿಸಿದೆಯೇ?

2) ಹಾಗಿದ್ದಲ್ಲಿ, ಭೂಸ್ವಾಧೀನ ನಡವಳಿಗಳು ಯಾವ ಹಂತದಲ್ಲಿದೆ?

3) ಈ ಬಗ್ಗೆ ಒಟ್ಟು ಅಂದಾಜು ಮೊತ್ತ ಎಷ್ಟು?

ಶ್ರೀ ಜಿ.ಹೆಚ್. ಅಶ್ವಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

1) ಹೌದು.

2) ಅಲೈನ್‌ಮೆಂಟ್ ಪ್ರಸ್ತಾವನೆಗಳಿಗೆ ಭಾರತ ಸರ್ಕಾರದ ಭೂಸಾರಿಗೆ ಮಂತ್ರಾಲಯದ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ.

3) ಪೂರ್ತಿ ಕಾಮಗಾರಿಗೆ ಸುಮಾರು 36 ಕೋಟಿ ರೂಪಾಯಿಗಳು.

ರಾಜಾಜಿನಗರ ವಸತಿ ಗೃಹಗಳಲ್ಲಿ ವಿದ್ಯುತ್ ದೀಪಗಳ ದುರಸ್ತಿ

1138 (1960) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರದ 6ನೇ ಬಡಾವಣೆಯ ಸರ್ಕಾರಿ ವಸತಿ ಗೃಹಗಳಲ್ಲಿ ಮೆಟ್ಟಿಲುಗಳಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳು ಕೆಟ್ಟಿದ್ದು. ಇದನ್ನು ದುರಸ್ತಿಗೊಳಿಸದಿರಲು ಕಾರಣವೇನು;

ಆ) ಈಗಾಗಲೇ ಸದರಿ ಮೆಟ್ಟಿಲುಗಳಲ್ಲಿ ಇರುವ ವಿದ್ಯುತ್ ದೀಪಗಳ ವಿದ್ಯುತ್ ಖರ್ಚನ್ನು ಸರ್ಕಾರವೇ ವಹಿಸಿಕೊಂಡು ಮೆಟ್ಟಿಲುಗಳಲ್ಲಿನ ದೀಪ ಉರಿಯಲು ಕ್ರಮ ಕೈಗೊಳ್ಳುವುದೇ;

ಇ) ಈಗಾಗಲೇ ವಿದ್ಯುತ್ ದೀಪಗಳನ್ನು ವ್ಯವಸ್ಥಿತ ರೀತಿಯಲ್ಲಿ ರಾತ್ರಿಯ ವೇಳೆಯಲ್ಲಿ ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಈ ದೀಪಗಳು ಯಾವುದೇ ಮನೆಗೆ ವೈಯಕ್ತಿಕವಾಗಿ ಇರದೇ. ಸಾರ್ವಜನಿಕವಾಗಿದ್ದು. ಇವುಗಳಿಗೆ ಯಾವುದೇ ತರಹದ ಸಂರಕ್ಷಣೆ ಇಲ್ಲದಿದ್ದು. ದುರಸ್ತಿ ಮಾಡಿಸಿದ ಕೆಲವೇ ದಿನಗಳಲ್ಲಿ ಹಾಳಾಗಿರುವುದು.

ಆ) ಸಂರಕ್ಷಣೆ ಹಾಗೂ ವಿದ್ಯುತ್ ಬಳಕೆಯ ದರಕ್ಕೆ ಅನುದಾನದ ಲಭ್ಯತೆ ಮೇಲೆ ಸರ್ಕಾರ ವಹಿಸಿಕೊಳ್ಳುವ ವಿಷಯದಲ್ಲಿ ಪರಿಶೀಲಿಸಲಾಗುವುದು.

ಇ) ವಿದ್ಯುತ್ ದೀಪಗಳು ರಾತ್ರಿಯ ವೇಳೆಯಲ್ಲಿಯೂ ಉರಿಯುವಂತೆ ಮಾಡಲು ವಿದ್ಯುಚ್ಛಕ್ತಿ ಮಂಡಲಿಯವರೊಂದಿಗೆ ಚರ್ಚಿಸಿ. ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗುವುದು.

ವಸತಿ ಗೃಹಗಳಿಗೆ ಮೂಲ ಸೌಲಭ್ಯವನ್ನು ನೀಡುವ ಬಗ್ಗೆ

1139 (1961) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ಮತ್ತು ವಿಲ್ಸನ್‌ಗಾರ್ಡನ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳು ಜೀವನ್ ಭೀಮಾನಗರದ ವಸತಿ ಗೃಹಗಳಿಗಿಂತ ವಿನ್ಯಾಸದಲ್ಲಿ ವ್ಯತ್ಯಾಸವಿದ್ದ, ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೆ?

ಆ) ಮೇಲ್ಕಂಡ ಸರ್ಕಾರಿ ವಸತಿ ಗೃಹಗಳಲ್ಲಿರುವ ನೌಕರರು ನೀಡುವ ಬಾಡಿಗೆ ದರವು ಒಂದೇ ಆಗಿದ್ದು. ಜೀವನ್ ಭೀಮಾ ನಗರದಲ್ಲಿ ಒದಗಿಸಿರುವ ಸೌಲಭ್ಯಗಳನ್ನು ಇತರೆ ಸರ್ಕಾರಿ ವಸತಿ ಗೃಹಗಳಿಗೆ ಒದಗಿಸದಿರಲು ಕಾರಣಗಳೇನು?

ಇ) ಈ ತಾರತಮ್ಯವನ್ನು ಹೋಗಲಾಡಿಸಲು ಅನೇಕ ಬಾರಿ ಮನವಿ ಸಲ್ಲಿಸಿದ್ದು ಹಾಗೂ ಸದನದಲ್ಲಿ ಪ್ರಶ್ನೆಗಳನ್ನು ಕೇಳಿದಾಗ್ಯೂ ಸಹ ಮೂಲ ಸೌಲಭ್ಯವನ್ನು ಒದಗಿಸದಿರುವ ಬಗ್ಗೆ ಸರ್ಕಾರದ ನಿಲುವೇನು?

ಈ) ಈ ದಿಸೆಯಲ್ಲಿ ಹಂತ ಹಂತವಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು, ಈಗಲಾದರೂ ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಯಪಯೋಗಿ ಮಂತ್ರಿಗಳು) :

ಅ) ಬಂದಿದೆ.

ಆ) ವಸತಿ ಗೃಹಗಳ ಕಟ್ಟುವಿಕೆಯ ವಿನ್ಯಾಸ ಮಾದರೀ ಇವುಗಳಿಂದಾಗಿ. ಈ ವ್ಯತ್ಯಾಸಗಳು ಸಹಜವಾಗಿರುತ್ತೆ.

ಇ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಕೊಟ್ಟೂರು-ಹರಿಹರ ರೈಲು ರಸ್ತೆಯ ವಿಸ್ತಾರ

1140 (1467) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರಿನಿಂದ ಹರಿಹರಕ್ಕೆ ಹೋಗುವ ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆಯೇ;

ಆ) ಈ ರಸ್ತೆಯನ್ನು ವಿಸ್ತಾರ ಮಾಡುವ ವಿಷಯ ಬಹಳ ಕಾಲದ ಬೇಡಿಕೆಯಾಗಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ ಸದರಿ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ;

ಈ) ಸಲ್ಲಿಸದಿದ್ದರೆ ಈಗಲಾದರೂ ಮನವಿಯನ್ನು ಸಲ್ಲಿಸಲಾಗುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು ರೈಲು ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆ.

ಆ) ಹೌದು.

ಇ) ಸಲ್ಲಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ಸಂಖ್ಯೆ

1141 (1948) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರತಿ ವರ್ಷ ರಾಜ್ಯದಲ್ಲಿ ತಯಾರಾಗುವ ಕನ್ನಡ ಚಲನಚಿತ್ರಗಳ ಸಂಖ್ಯೆ ಎಷ್ಟು?
2. ರಾಜ್ಯದ ಹೊರಗಡೆ ತಯಾರಾದ ಚಿತ್ರಗಳ ಸಂಖ್ಯೆ ಎಷ್ಟು?
3. ಕನ್ನಡ ಚಿತ್ರಗಳನ್ನು ತಯಾರಿಸಿದ ಮತ್ತು ತಾಂತ್ರಿಕ ನೆರವು ನೀಡಿದ ಹೊರ ರಾಜ್ಯಗಳಾವುವು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1. ಪ್ರತಿ ವರ್ಷ ಸರಾಸರಿ 75 ರಿಂದ 80 ಕನ್ನಡ ಚಲನಚಿತ್ರಗಳು ರಾಜ್ಯದಲ್ಲಿ ತಯಾರಾಗುತ್ತಿವೆ.
2. ಕನ್ನಡ ಚಲನಚಿತ್ರಗಳಾವುವು. ರಾಜ್ಯದ ಹೊರಗಡೆ ತಯಾರಾಗುತ್ತಿಲ್ಲ.
3. ಹೊರ ರಾಜ್ಯಗಳಾವುವು. ಕನ್ನಡ ಚಿತ್ರಗಳನ್ನು ತಯಾರಿಸಿರುವುದಿಲ್ಲ ಮತ್ತು ತಾಂತ್ರಿಕ ನೆರವು ನೀಡಿರುವುದಿಲ್ಲ.

ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದು.

1142 (1951) ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಬಳಿ ಯಾವುದಾದರೂ ಯೋಜನೆ ಇದೆಯೇ?

ಆ) ಹಾಗಿದ್ದಲ್ಲಿ. ಜಿಲ್ಲಾ ಪರಿಷತ್ತಿನ ರಸ್ತೆಗಳ ಸಂಖ್ಯೆ ಎಷ್ಟು?

ಇ) ಇದರಲ್ಲಿ ಬಳ್ಳೊಳ್ಳಿ ವಿಧಾನಸಭಾ ಮತ ಕ್ಷೇತ್ರದಲ್ಲಿ ಎಷ್ಟು ರಸ್ತೆಗಳು ಇವೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ 10000 ಕಿ.ಮಿ. ರಸ್ತೆಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮಿ. ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ

ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ 18-2-1992 ರಂದು ಹೊರಡಿಸಲಾಗಿದೆ.

ಆ) ಉತ್ತರ ಮೇಲಿನಂತೆ.

ಇ) ಬಳ್ಳಾರಿ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರವನ್ನು ಸಧ್ಯದಲ್ಲಿ ತೀರ್ಮಾನಿಸಲಾಗುವುದು.

ಉಪಾಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಸದಸ್ಯರು ಒಂದು ಕಾಗದವನ್ನು ಕಳುಹಿಸಿದ್ದಾರೆ. ಅದು ಏನೆಂದು ಕೇಳೋಣ.

ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ನಾಗರಹೊಳೆ ಅಭಯಾರಣ್ಯಕ್ಕೆ ಬೆಂಕಿ

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಬೆಳಿಗ್ಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ನಾಗರಹೊಳೆ ಅಭಯಾರಣ್ಯ ಹತ್ತಿಕೊಂಡು ಸಂಪೂರ್ಣವಾಗಿ ನಾಶವಾಗತಕ್ಕಂಥ ಮಟ್ಟಕ್ಕೆ ಬಂದಿದೆ ಎಂದು ಸುದ್ದಿ ಬಂದಿದೆ. ಅಲ್ಲಿ ಕಳೆದ 3-4 ದಿವಸಗಳಲ್ಲಿ ಅಭಯಾರಣ್ಯ ಹತ್ತಿಕೊಳ್ಳುವುದಕ್ಕೆ ಮುಂಚೆ ಎಲ್ಲ ಪೋಲೀಸ್ ಅಧಿಕಾರಿಗಳು ಇದ್ದರೂ ಸಹಿತ ಏನು ಪ್ರಯೋಜನವಾಗಿಲ್ಲ. ಅವರು ಸಂಧಾನ ಮಾಡತಕ್ಕಂಥದ್ದರಲ್ಲಿ ವಿಫಲರಾಗಿ. ಆಮೇಲೆ ಯಾರೋ ಒಬ್ಬ ಚಿನ್ನಪ್ಪ ಎಂಬುವರು ಸತ್ತು ಹೋದ ಹಿನ್ನೆಲೆಯಲ್ಲಿ ಈ ಗಲಾಟೆ ಪ್ರಾರಂಭವಾಗಿದೆ. ಇವತ್ತು ಇಡಿ ರಾಷ್ಟ್ರದಲ್ಲಿ ಬಹಳ ಪ್ರಮುಖ್ಯವಾಗಿರತಕ್ಕಂಥ ಒಂದು ಅಭಯಾರಣ್ಯಕ್ಕೆ ಬೆಂಕಿ ಬಿಟ್ಟಿರತಕ್ಕಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಅಧಿಕಾರಿ ಏತಕ್ಕೆ ಇಷ್ಟೊಂದು ನಿರ್ಲಕ್ಷತೆಯನ್ನು ತೋರಿಸಿದ್ದಾರೆ? ಏತಕ್ಕೆ ಇಡೀ ಅಭಯಾರಣ್ಯ ನಾಶವಾಗಿ ಹೋಗಿದೆ? ಈ ಒಂದು ಪತ್ರಿಕೆಯಲ್ಲಿ ಬಂದಿರುವ ವಿಷಯದ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದೆ? ಏನು ಕ್ರಮ ತೆಗೆದುಕೊಂಡಿದೆ? ಇದು ಹೇಗೆ ಪ್ರಾರಂಭವಾಯಿತು? ಅಲ್ಲಿಯ ಜನರು ಮುಚ್ಚಿದ್ದು ಬೆಂಕಿ ಹಚ್ಚಿದ ಸಂದರ್ಭದಲ್ಲಿ ಅದನ್ನು ಹತೋಟಿಗೆ ತೆಗೆದುಕೊಳ್ಳದಿರತಕ್ಕಂಥ ಮಟ್ಟಕ್ಕೆ ಅಧಿಕಾರಿಗಳು ಹೋಗಿರಬೇಕಾದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ? ಸರ್ಕಾರ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ರಾಮಲಿಂಗ ರೆಡ್ಡಿ : ಇವತ್ತಿನ ದಿವಸ ನಾಗರಹೊಳೆಯಲ್ಲಿ ಬೆಂಕಿಬಿದ್ದು ಸಾವಿರಾರು ಎಕರೆ ಅರಣ್ಯ ಸುಟ್ಟು ಹೋಗಿರುವುದರ ಜೊತೆಗೆ ಅಲ್ಲಿರತಕ್ಕ ಸಹಸ್ರಾರು ಪ್ರಾಣಿಗಳು ಬೆಂದುಹೋಗಿವೆ ಎಂದು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಳ್ಳುತ್ತಿದ್ದೇವೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಈ ಸಭೆಯ ಮೂಲಕ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ನ್ಯಾಯಾಂಗ ತನಿಖೆಗಿಂತ ಮುಖ್ಯವಾಗಿ ಮಾನ್ಯ ಅರಣ್ಯ ಮಂತ್ರಿಗಳು ಸ್ಪಾಟ್‌ಗೆ ಹೋಗಿ ಏನಾಗಿದೆ ಎಂದು ನೋಡಿ ಮುಂದೆ ಬೆಂಕಿ ಹರಡದಂತೆ ಎಚ್ಚರಿಕೆ ವಹಿಸಿದರೆ

ಒಳ್ಳೆಯದು. ಇದು ಬಹಳ ಮುಖ್ಯ. ನ್ಯಾಯಾಂಗ ತನಿಖೆ ಬೇರೆ ವಿಷಯ. Later it could be done. Immediately the Forest Minister should go there and see that it is stopped.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅರಣ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ. ಈಗ ಕೂರ್ಗ್ ಲ್ಯಾಂಡ್ಸ್ ಬಗ್ಗೆ ಒಂದು ಮೀಟಿಂಗ್ ಕೂಡ ಇತ್ತು. ಅಲ್ಲಿ ಕೆಲವು ಜನರು ಇದನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ವಿವರವಾಗಿ ಈ ಸದನದಲ್ಲಿ ಒಂದು ಹೇಳಿಕೆ ಮಾಡುತ್ತಾರೆ. ಆದ್ದರಿಂದ ಮಧ್ಯಾಹ್ನದ ಮೇಲೆ ಇದನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ.ವಿ. ವೆಂಕಟಪ್ಪ : 13 ರಂದು ನಮ್ಮ ಪ್ರಶ್ನೆಗಳು ಕೆಲವು ಇದ್ದವು.. ಅಂದು ಪ್ರಶ್ನೋತ್ತರ ವೇಳೆಯನ್ನು ತೆಗೆದುಹಾಕಿದ್ದೀರಿ. ಶುಕ್ರವಾರ ಇದ್ದ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳುತ್ತೀರಾ?

ಉಪಾಧ್ಯಕ್ಷಿಣಿಯವರು : ಅವುಗಳನ್ನು ಅನ್‌ಸ್ಟಾರ್ಡ್ ಆಗಿ ಪರಿವರ್ತಿಸಿ ಇವತ್ತು ಪ್ಲೇಸ್ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ನಮಗೆ ಉತ್ತರ ಬರುವುದೇ ಅಪರೂಪ. ಹೀಗಿರುವಾಗ ಪ್ರಶ್ನೆಗಳನ್ನು ಅನ್‌ಸ್ಟಾರ್ಡ್ ಮಾಡಿದ್ದಾರೆ ಹೇಗೆ? ಇನ್ನೊಂದು ದಿವಸ ಹಾಕಬಹುದಾಗಿತ್ತಲ್ಲವೆ?

ಉಪಾಧ್ಯಕ್ಷಿಣಿಯವರು : ಮುಂದೆ ಅದೇ ರೀತಿ ಮಾಡೋಣ.

ಶ್ರೀ ವಿನಯಕುಮಾರ್ ಸೊರಕೆ : ನನ್ನ ಅನ್‌ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ.

ನಿಯಮ 334ರ ಮೇರೆಗೆ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ನಿಟ್ಟೂರಿಗೆ ಆರಕ್ಷಕ ಠಾಣೆಯ ಮಂಜೂರು.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ): ಮಾನ್ಯ ಉಪಾಧ್ಯಕ್ಷಿಣಿಯರೆ, ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮವು ಹೋಬಳಿ ಕೇಂದ್ರವಾಗಿದ್ದು. ಶಿರಾ. ನೆಲ್ಲಿಗೆರೆ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಗಳು ಕೂಡುವ ಕೇಂದ್ರವಾಗಿದ್ದು. ತಾಲ್ಲೂಕಿಗೆ ದೊಡ್ಡ ವ್ಯಾಪಾರ ಕೇಂದ್ರವಾಗಿರುತ್ತದೆ. ಇತ್ತೀಚೆಗೆ ಜನ ಸಂಚಾರ ಮತ್ತು ವಾಹನ ಸಂಚಾರ ಹೆಚ್ಚಾಗಿದ್ದು. ಪ್ರತಿ ವರ್ಷ ಅನೇಕ ಅಪಘಾತಗಳು ಸಂಭವಿಸಿದ್ದು. ನೂರಾರು ಜನರ ಸಾವಿಗೆ ಕಾರಣವಾಗಿದ್ದು. ಇದರಿಂದ ಊರಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿ ಗಲಭೆಗಳಿಗೆ ಕಾರಣವಾಗಿರುತ್ತದೆ. ಸುತ್ತ 8-10 ಕಿ.ಮೀ. ದೂರದವರೆಗೆ ಯಾವುದೇ ಆರಕ್ಷಕ ಠಾಣೆಗಳಿಲ್ಲದೆ, ಹತೋಟಿಗೆ ತರಲು ತುಂಬಾ ಶ್ರಮವಾಗಿರುತ್ತದೆ. ಇದನ್ನು ಸರಿಪಡಿಸಲು ಸದರಿ ನಿಟ್ಟೂರಿಗೆ ಒಂದು ಆರಕ್ಷಕ ಠಾಣೆ ಅವಶ್ಯಕತೆ ಇದ್ದು. ಇದಕ್ಕಾಗಿ ಮಂಡಲ ಪಂಚಾಯಿತಿಯವರು ಹಾಗೂ ಸಾರ್ವಜನಿಕರು ಅನೇಕ ಬಾರಿ ಸರ್ಕಾರಕ್ಕೆ ಒತ್ತಾಯ ತಂದಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗಲಾದರೂ. ಸರ್ಕಾರದವರು ಆರಕ್ಷಕ ಠಾಣೆಯನ್ನು ಮಂಜೂರ್ಮಾಡಿಕೊಡಬೇಕೆಂದು ಗೃಹ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ. ನಾನು ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮ ಹೋಬಳಿ ಕೇಂದ್ರವಾಗಿದ್ದು. ಬೆಂಗಳೂರು-ಹೊನ್ನಾವರ ರಸ್ತೆ ಕೂಡುವ ಕೇಂದ್ರ ಸ್ಥಾನವಾಗಿದ್ದು. ತಾಲ್ಲೂಕಿನ ದೊಡ್ಡ ವ್ಯಾಪಾರ

ಕೇಂದ್ರವಾಗಿದ್ದು, ಈ ಸ್ಥಳದ ಸುತ್ತ-ಮುತ್ತ 8-10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಆರಕ್ಷಕ ಠಾಣೆ ಇಲ್ಲದಿರುವುದರಿಂದ ಇಲ್ಲಿ ಒಂದು ಆರಕ್ಷಕ ಠಾಣೆಯನ್ನು ತೆರೆಯಬೇಕೆಂದು ಒತ್ತಾಯಿಸಿದ್ದಾರೆ.

ಈ ಪ್ರಸ್ತಾವನೆಯನ್ನು ಬೆಂಗಳೂರು ವಿಭಾಗದ ಡಿ.ಐ.ಜಿ. ಯವರು ಪರಿಶೀಲಿಸಿದ್ದು. ಈ ಸಲಹೆಯನ್ನು ಒಪ್ಪುವುದು ಅಗತ್ಯವಾಗಿದೆಯೆಂದೂ. ಗುಬ್ಬಿ ಮತ್ತು ಚೇಳೂರು ಮತ್ತು ಕಡಬ ಔಟ್‌ಪೋಸ್ಟ್ ಸ್ಟೇಷನ್‌ಗಳ ವ್ಯಾಪ್ತಿಯಿಂದ ತಲಾ 23, 37 ಮತ್ತು 50 ಗ್ರಾಮಗಳನ್ನು ಒಟ್ಟುಗೂಡಿಸಿ 20 ಕಿ.ಮೀ. ವ್ಯಾಪ್ತಿಯ 110 ಗ್ರಾಮಗಳ ಜ್ಯೂರಿಸ್‌ಡಿಕ್ಷನ್ ಗೊತ್ತುಪಡಿಸಿ ನಿಟ್ಟೂರು ಗ್ರಾಮದಲ್ಲಿ ಒಂದು ಠಾಣೆಯನ್ನು ತೆಗೆಯುವುದು ಯೋಗ್ಯವೆಂದು ಶಿಫಾರಸ್ಸು ಮಾಡಿದ್ದಾರೆ.

ಮುಂದಿನ ವರ್ಷಗಳಲ್ಲಿ 40 ಪೋಲೀಸ್ ಠಾಣೆಗಳನ್ನು ತೆರೆಯುವ ಯೋಜನೆಯೊಂದನ್ನು ಸರ್ಕಾರ ಈಗಾಗಲೇ ಪರಿಶೀಲಿಸುತ್ತಿದೆ. ನಿಟ್ಟೂರು ಗ್ರಾಮದ ಅವಶ್ಯಕತೆಯನ್ನೂ ಗಮನದಲ್ಲಿಟ್ಟುಕೊಂಡು. ಈ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಪರಿಶೀಲಿಸಲಾಗುವುದು.

ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಹಸಿರುಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವುದು.

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಆಹಾರ ಪದಾರ್ಥಗಳ ಧಾರಣೆಯು ವಿಪರೀತ ಏರಿದ್ದು ಸರ್ಕಾರ ನಡೆಸುತ್ತಿರುವ ಪದವಿಪೂರ್ವ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಊಟ, ತಿಂಡಿ ವಗೈರೆಗೆ ಕೊಡುತ್ತಿರುವ ಹಣ ಬಹಳ ಕಡಿಮೆ ಇದೆ. ಸಮಾಜ ಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೆ ಹಸಿರು ಕಾರ್ಡ್‌ನ ಮೂಲಕ ಆಹಾರಧಾನ್ಯಗಳನ್ನು ಒಗಗಿಸುತ್ತಿರುವಂತೆ ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೂ ಹಸಿರು ಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವಂತೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೆ. ಕೆಲವು ಹಾಸ್ಟೆಲ್‌ಗಳಲ್ಲಿ ಕಾಫಿ ನಿಲ್ಲಿಸಿಬಿಟ್ಟಿದ್ದಾರೆ. ಊಟ ನಿಲ್ಲಿಸಿಬಿಟ್ಟಿದ್ದಾರೆ. ಇನ್ನು ಕೆಲವು ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಕೊಡತಕ್ಕ ಆಹಾರ ಹೊಟ್ಟೆ ತುಂಬುವುದಿಲ್ಲ ಎಂದು ಹೇಳಿದರು. ದುಡ್ಡು ಜಾಸ್ತಿ ಮಾಡಬೇಕು. ಇಲ್ಲವೇ ಕಡಿಮೆ ರೇಟ್‌ನಲ್ಲಿ ಆಹಾರಧಾನ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಏರ್ಪಾಡು ಮಾಡಬೇಕು. ಇಲ್ಲದೇ ಇದ್ದರೆ ನಿರ್ಭಾಗ್ಯ ಮಕ್ಕಳಿಗೆ ತೊಂದರೆಯಾಗುತ್ತದೆ.

ಶ್ರೀ ಎಂ. ಬ್ಲೇಸಿಯಸ್ ಡಿಸೌಜ (ಕಾನೂನು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ. ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ : ಏನು ಸ್ವಾಮಿ? ನೀವು ವ್ಯವಸ್ಥೆ ಮಾಡಿಸಿ. ಉತ್ತರ ಕೊಡದಿದ್ದರೂ ಚಿಂತೆ ಇಲ್ಲ. ಮಕ್ಕಳ ಮೇಲೆ ಕನಿಕರ ಇಟ್ಟುಕೊಂಡು ಮಕ್ಕಳಿಗೆ ಹೊಟ್ಟೆತುಂಬ ಊಟ, ತಿಂಡಿ ಕೊಡುವ ವ್ಯವಸ್ಥೆ ಮಾಡಿ.

3. ಮಳವಳ್ಳಿ ಟೌನ್ ಬಸ್ ನಿಲ್ದಾಣ ಕಟ್ಟಡದ ಕೆಲಸವನ್ನು ಜರೂರಾಗಿ ಪ್ರಾರಂಭಿಸುವುದು

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ. ಮಳವಳ್ಳಿ ಟೌನ್‌ಗೆ ಈಗಾಗಲೇ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮಂಜೂರಾಗಿದ್ದು ಗುದ್ದಲಿ ಪೂಜೆಯನ್ನು ಸಹ ಕಳೆದ 12-9-91ರಲ್ಲಿ ನೆರವೇರಿಸುತ್ತದೆ. ಇದುವರೆಗೂ ಟೆಂಡರ್ ಕರೆದಿರುವುದಿಲ್ಲ. ಕೂಡಲೇ ಟೆಂಡರನ್ನು ಕರೆದು ಬಸ್ ನಿಲ್ದಾಣದ ಕಟ್ಟಡದ ಕೆಲಸ ಅತಿ ಜರೂರಾಗಿ ಪ್ರಾರಂಭಿಸುವಂತೆ ಮಾನ್ಯ ಸಾರಿಗೆ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ. ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಉತ್ತರ ಕೊಡುತ್ತೇನೆ.

ಮಂಡ್ಯ ಜಿಲ್ಲೆ ಮಳವಳ್ಳಿ ಟೌನಿನಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲು ಸುಮಾರು 3 ಎಕರೆ 20 ಗುಂಟೆ ನಿವೇಶನವನ್ನು ದಿನಾಂಕ 10-5-91 ರಂದು ಪುರಸಭೆ ಮಳವಳ್ಳಿ ಇವರು ಸಂಸ್ಥೆಗೆ ವಹಿಸಿಕೊಟ್ಟಿರುತ್ತಾರೆ. ಬಸ್ ನಿಲ್ದಾಣ ನಿರ್ಮಾಣ ಮಾಡಲು 1991-92ರ ಕಾಮಗಾರಿ ಸಮಿತಿಯಲ್ಲಿ 10.00 ಲಕ್ಷ ರೂಪಾಯಿಗಳಿಗೆ ಒಪ್ಪಿಗೆ ನೀಡಲಾಗಿತ್ತು. ಈ ಬಸ್ ನಿಲ್ದಾಣಕ್ಕೆ ದಿನಾಂಕ 12-9-91 ರಂದು ಅಸ್ತಿಭಾರವನ್ನು ಹಾಕಲಾಗಿದೆ. ಆದರೆ ಮಳವಳ್ಳಿ ಟೌನಿಗೆ ಆಗಮಿಸುವ ಮತ್ತು ನಿರ್ಗಮಿಸುವ ಬಸ್ಸುಗಳ ಸಂಚಾರಕ್ಕೆ ಅನುಗುಣವಾಗಿ ದೊಡ್ಡ ನಿಲ್ದಾಣ ಕಟ್ಟಿಸಲು ಮಾನ್ಯ ಶಾಸಕಿಯವರ ಸಲಹೆಯಂತೆ ಸುಮಾರು15ಲಕ್ಷ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಧ್ಯದಲ್ಲೇ ಮಂಜೂರಾತಿ ನೀಡಿ 1992-93ನೇ ಸಾಲಿನಲ್ಲಿ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

4. ಅರಣ್ಯ ಶಾಸ್ತ್ರ ಪದವೀಧರರಿಗೆ ಉದ್ಯೋಗವನ್ನು ಕಲ್ಪಿಸುವುದು

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಉಪಾಧ್ಯಕ್ಷರೆ, ಅರಣ್ಯ ಶಾಸ್ತ್ರ ಪದವಿ ವಿದ್ಯಾರ್ಥಿಗಳು ತಾವು ಅರಣ್ಯ ಶಾಸ್ತ್ರ ಪಠ್ಯಕ್ರಮದಲ್ಲಿ ಪದವಿಯನ್ನು ಪಡೆದಿರುವುದಾದರೂ ಈತನಕ ಅವರಿಗೆ ಯೋಗ್ಯವಾದ ಹುದ್ದೆಯನ್ನು ಪಡೆಯಲು ಅಸಾಧ್ಯವಾಗಿದೆ. ಅರಣ್ಯ ಇಲಾಖೆಯಲ್ಲಿ ಅವರಿಗೆ ಈ ತನಕ ಸಹ ಯಾವ ತರಹದ ಉದ್ಯೋಗದ ಆಸ್ಪದವನ್ನು ಕಲ್ಪಿಸಲಾಗಿಲ್ಲ. ರಾಜ್ಯದಲ್ಲಿ ಎರಡು ಅರಣ್ಯಶಾಸ್ತ್ರ ಕಾಲೇಜುಗಳಿದ್ದು ಮುಂದಿನ ವರ್ಷ ಹೊಸದೊಂದು ಕಾಲೇಜನ್ನು ಪುನಃ ತೆರೆಯುವ ನಿರ್ಧಾರ ಮಾಡಿದೆ. ಹೀಗಿರುವಾಗ ಈ ಕಾಲೇಜಿನಲ್ಲಿ ಕಲಿತು ಪರಿಣತರಾದ ವಿದ್ಯಾರ್ಥಿಗಳಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕಲ್ಪಿಸುವ ಅವಕಾಶವನ್ನು ಕಲ್ಪಿಸಬೇಕಾಗಿದೆ. ಆದುದರಿಂದ ಸರ್ಕಾರ ಈ ಕುರಿತು ಕೂಡಲೇ ಸೂಕ್ತ ಕ್ರಮವನ್ನು ಕೈಗೊಂಡು ನಿರುದ್ಯೋಗಿಯಾಗಿರುವ ಅರಣ್ಯ ಶಾಸ್ತ್ರ ಪದವೀಧರರ ರಕ್ಷಣೆಯನ್ನು ಮಾಡಬೇಕಾಗಿದ್ದು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ಬ್ಲೇಸಿಯಸ್ ಡಿಸೌಜ : ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀಯುತರುಗಳಾದ ವಾಟಾಳ್ ನಾಗರಾಜ್ ಹಾಗೂ ಸಿ. ಬೈರೇಗೌಡ ಅವರನ್ನು ದಿನಾಂಕ 12-3-1992 ರಂದು 12 ಘಂಟೆ 20 ನಿಮಿಷದಲ್ಲಿ ವಿಧಾನಸೌಧದ ಮುಂದೆ ಬಂಧಿಸಿ ಅದೇ ದಿನ 14 ಘಂಟೆಗೆ ಬಿಡುಗಡೆ ಮಾಡಲಾಯಿತೆಂದು ಸಬ್-ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನಸೌಧ ಠಾಣೆ, ಬೆಂಗಳೂರು ಇವರಿಂದ ನಮಗೆ ಸಂದೇಶ ಬಂದಿದೆ.

ಸದನದ ಕಾರ್ಯಕಲಾಪಗಳಲ್ಲಿ ವಿರೋಧ ಪಕ್ಷದವರು ಭಾಗವಹಿಸಲು ಮನವಿ

† ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೆ, ಈಗ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡುತ್ತಿದ್ದೇವೆ. ನಮ್ಮನ್ನು ಕರೆದಿದ್ದೀರಿ. ನಾನು ಸರ್ಕಾರಕ್ಕೆ ಒಂದು ವಿನಂತಿ ಮಾಡುತ್ತೇನೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದವರೂ ಇದ್ದು ಚೆನ್ನಾಗಿ ನಡೆದರೆ ಬಹಳ ಚೆನ್ನಾಗಿರುತ್ತದೆ. ಕಳೆದ ವಾರ ಸರ್ಕಾರಕ್ಕೆ ಎಲ್ಲಾ ವಿನಂತಿ ಮಾಡಿಕೊಂಡೆವು. ಸರ್ಕಾರ ಸಹ ಎಲ್ಲ ಸದಸ್ಯರ ಮಾತಿಗೆ ಬೆಲೆ ಕೊಟ್ಟು ವಿರೋಧ ಪಕ್ಷದವರನ್ನು ಪದೇ ಪದೇ ವಿನಂತಿ ಮಾಡಿಕೊಂಡಿದ್ದು ಆಯಿತು. ಮಾನ್ಯ ಮುಖ್ಯಮಂತ್ರಿಯವರ ಬಜೆಟ್ ಭಾಷಣದ ಮೇಲೆ ತಾವು ಮಾತನಾಡಿ ಎಂದಾಗ ಅವರು ಕಿವಿಗೊಡಲಿಲ್ಲ. ಅದೆಲ್ಲ ಮುಗಿಯಿತು. ಅವರೂ ಕೂಡ 3 ದಿವಸ ಬಿಸಿಲಿನಲ್ಲಿ ಕುಳಿತು ಬಿಸಿಲಿನ ಝಳವನ್ನು ಅನುಭವಿಸಿ ರಾಜ್ಯದ ಜನತೆ ಏನೇನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೂ ಕೂಡ ಅರ್ಥವಾಗಿದೆ ಎಂದು ನಾನಾದರೂ ಭಾವನೆ ಮಾಡುತ್ತೇನೆ. ಈಗ ಅವರು ಹೊರಗಡೆ ಕುಳಿತಿದ್ದಾರೆ. ನಾನೂ ಕೂಡ ವಿರೋಧಪಕ್ಷದ ಮುಖಂಡರನ್ನು ಭೇಟಿ ಮಾಡಿ ಬಂದೆ. ಅವರಲ್ಲೂ ಕೂಡ ಈಗಾಗಲೇ ಮೊನ್ನೆ ಇದ್ದಂತಹ ಬಿರುಸು ಇನ್ನೂ ಕಡಿಮೆಯಾಗಿ ನಾವೂ ಚರ್ಚೆಯಲ್ಲಿ ಭಾಗವಹಿಸಿದ್ದರೆ ಸರಿಯಿತ್ತೋ ಏನೋ ಎನ್ನುವ ಅನಿಸಿಕೆ ಕೆಲವರಲ್ಲಿ ಮೂಡುತ್ತಿದೆ. ಅದಕ್ಕೇ ನಾನು ವಿನಂತಿ ಮಾಡುತ್ತೇನೆ. ಬೇಡಿಕೆ ಇನ್ನೂ ಪ್ರಾರಂಭ ಆಗಿಲ್ಲ. ಮೊದಲು ಪ್ರಾರಂಭ ಆದಾಗ ಇದಿನಬ್ಬನವರಿಂದ ಸ್ಟಾರ್ಟ್ ಮಾಡಿಸಿದಿರಿ ಎನ್ನುವ ಒಂದೇ ಒಂದು ಸಣ್ಣ ಕಾರಣಕ್ಕೋಸ್ಕರ ಅವರು ಆ ನಿಲುವು ತಳೆದರು. ಈ ದಿನ ಬೇಡಿಕೆಗಳು ಪ್ರಾರಂಭವಾಗುತ್ತಿದೆ. ಈ ಸಂದರ್ಭದಲ್ಲಿ ತಾವು ತಮ್ಮ ಕೊಠಡಿಗೆ ಅವರನ್ನು ಕರೆದು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. ವಿರೋಧ ಪಕ್ಷದವರು ಸದನದ ಒಳಗೆ ಬಂದು ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಸಲಹೆ ಮಾಡಿದರೆ ಸರ್ಕಾರಕ್ಕೂ ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮತ್ತೊಂದು ಅವಕಾಶವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅವರನ್ನು ತಾವು ತಮ್ಮ ಕೊಠಡಿಯಲ್ಲಿ ಕರೆಸಿ ಚರ್ಚೆ ಮಾಡಬೇಕು. ಅಲ್ಲಿಯವರೆಗೆ ಈ ಸದನವನ್ನು ಮುಂದೂಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳನ್ನೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಶಿವರಾಮೇಗೌಡರು ಏನು ಹೇಳುತ್ತಿದ್ದಾರೆ ಅದು ಉಚಿತವಾಗಿದೆ ಎಂದು ಕಾಣುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅವರನ್ನು ಭೇಟಿ ಮಾಡಿ ಬಂದಿದ್ದಾರೆ. ಮತ್ತೆ ತಾವೂ ಕೂಡ ಭೇಟಿ ಮಾಡಿದ್ದೀರಿ. ಅವರನ್ನು ತಮ್ಮ ಕೊಠಡಿಗೆ ಬರಮಾಡಿಕೊಂಡು ಈ ಚರ್ಚೆಗೆ ಅವಕಾಶ ಮಾಡಿಕೊಡುವುದು ಸೂಕ್ತ. ಅದಕ್ಕಾಗಿ ಈ ಸಭೆಯನ್ನು ಸ್ವಲ್ಪ ಕಾಲ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈ ಬಗ್ಗೆ ನಾನೂ ಸಹ ಬೆಳಿಗ್ಗೆ ಹೋಗಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರರನ್ನು ಭೇಟಿ ಮಾಡಿ ಬಂದಿದ್ದೇನೆ. ಅವರೂ ಸಹ ಬಂದು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಾದರೆ ಇದು ಅರ್ಥಪೂರ್ಣವಾಗುತ್ತದೆನ್ನುವ ದೃಷ್ಟಿಯಿಂದ ಎಲ್ಲರೂ ಸಹ ಇದೇ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತ ಮಾಡಿದ್ದೀರಿ. ಆದ್ದರಿಂದ ಈಗ ಸಭೆ ಮುಂದೂಡಲ್ಪಟ್ಟು ಮತ್ತೆ ಎರಡೂವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಪುನಃ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ 40-ಜಿಲ್ಲಾ ಡಳಿತ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36.90.68.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು;

ಅಭಿಯಾಚನೆ ಕ್ರಮಾಂಕ 48-ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71.20.21.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.01.84.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು;

ಅಭಿಯಾಚನೆ ಕ್ರಮಾಂಕ 49-ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8.31.90.000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ

ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,31,90,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 27,00,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 55-ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 90,53,85,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 56-ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 279,20,38,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 51-ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ಶ್ರೀ ರಾಜಾ ಅಮರೇಶ್ವರ ನಾಯಕ (ಧಾರ್ಮಿಕ ಮತ್ತು ದತ್ತಿ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-93 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,86,47,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಬೇಡಿಕೆಗಳನ್ನು ಮಂಡಿಸಲಾಯಿತು. ಈಗ ಮಾನ್ಯ ಶಿವರಾಮೇಗೌಡರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ. ಮಾನ್ಯ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಧಾರ್ಮಿಕ ದತ್ತಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಹಾಗೂ ಬೆಂಬಲಿಸುತ್ತಾ, ನನ್ನ ಚರ್ಚೆಯನ್ನು ಮುಂದುವರೆಸುತ್ತೇನೆ. ಇವೊತ್ತು ಕಂದಾಯ ಇಲಾಖೆಯ ಮೇಲೆ ಮಾತನಾಡಬೇಕಾದರೆ, ನಾವು ಸುಮಾರು ಹತ್ತಾರು ವರ್ಷಗಳಿಂದ ಪತ್ರಿಕೆಯಲ್ಲಿ ಓದುತ್ತಿದ್ದೆವು. ರೈತನಿಗೆ ಬಹಳ ಪ್ರಾಮುಖ್ಯವಾಗಿ ಆಗಬೇಕಾಗಿರತಕ್ಕಂಥ ಕೆಲಸಗಳೆಲ್ಲವೂ ಸಹ ಕಂದಾಯ ಇಲಾಖೆಯ ಮುಖಾಂತರವೇ ಆಗಬೇಕು.

ಇವತ್ತು ಹಳ್ಳಿಯಲ್ಲಿ ಒಬ್ಬ ರೈತ ತನ್ನ ಕಾಲಮೇಲೆ ನಿಂತು ಬದುಕಬೇಕಾಗಿದ್ದರೆ ಸರ್ಕಾರದ ವತಿಯಿಂದ ಅತನಿಗೆ ಪ್ರಾಮುಖ್ಯವಾಗಿ ಆಗಬೇಕಾದಂಥ ಕೆಲಸ-ಕಾರ್ಯಗಳು. ಅದು ಪಾಸ್‌ಬುಕ್ ಆಗಿರಬಹುದು. ಆರ್‌ಟಿಸಿ ಆಗಿರಬಹುದು. ಮನೆ ಕಟ್ಟತಕ್ಕಂಥ ವ್ಯವಸ್ಥೆಯಾಗಿರಬಹುದು. ಜಮೀನನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಂಥ ವ್ಯವಸ್ಥೆಯಾಗಿರಬಹುದು ಇವೆಲ್ಲಕ್ಕೂ ಮಿಗಿಲಾಗಿ ಕಂದಾಯ ಇಲಾಖೆ ರೈತನಿಗೆ ಇವತ್ತು ಅತ್ಯಗತ್ಯವಾಗಿ ಬೇಕಾದಂಥ ಇಲಾಖೆಯಾಗಿರುತ್ತದೆ. ನಾನು ಒಂದು ವಿಚಾರವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಂದಾಯ ಇಲಾಖೆಯಲ್ಲಿ ಬಹಳಷ್ಟು ಬದಲಾವಣೆಯಾಗಬೇಕೆಂದು ರೈತರ ಪರವಾಗಿ ಹಲವಾರು ವರ್ಷಗಳಿಂದ ಈ ಸದನದಲ್ಲಿ ಕೂಗಿ ಕೇಳಿಕೊಂಡು ಬಂದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಉದಾಹರಣೆಗೆ. ಪಾಸ್‌ಬುಕ್‌ಬೇಕು ಎಂದು ಶ್ರೀ ವಿ.ಎಲ್. ಪಾಟೀಲರವರ ಕಾಲದಲ್ಲಿ ಕೇಳುತ್ತಿದ್ದೇವು. ಆಗ ಶ್ರೀ ವಿ.ಎಲ್. ಪಾಟೀಲರು ಈ ರಾಜ್ಯದ ಕಂದಾಯ ಮಂತ್ರಿಗಳಾಗಿದ್ದರು. ಆಗಿನಿಂದ ಸಹ ನಾವು ಕೇಳುತ್ತಿದ್ದೇವೆ. ಅವನ ಹಣೆ ಬರಹ ಅವನು ನೋಡಿಕೊಳ್ಳಲಿ. ರೈತನ ಹಣೆಬರಹ ಏನೆಂದರೆ. ಪಿಎಲ್‌ಡಿ ಬ್ಯಾಂಕ್‌ನಲ್ಲಿ ಒಂದು ಸಾಲ ತೆಗೆದುಕೊಳ್ಳಬೇಕಾಗಿದ್ದರೆ ಅವನು ಸುತ್ತಾಡಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಅವನ ಹಣೆ ಬರಹ ಅವನು ನೋಡಿಕೊಳ್ಳತಕ್ಕಂಥ ಒಂದು ಪಾಸ್‌ಬುಕ್ ಕೊಡಬೇಕೆನ್ನುವಂಥ ಮಾತನ್ನು ಹೇಳುತ್ತಿದ್ದೆವು. ಆ ಕೆಲಸ ಆಗಿರಲಿಲ್ಲ. ಇನ್ನು ಭೂಮಿ ಒತ್ತುವರಿ ಮಾಡತಕ್ಕಂಥ ವಿಚಾರ. ಹಿಂದೆ ಶ್ರೀ ಎಸ್.ಆರ್. ಬೊಮ್ಮಾಯಿಯವರು ಈ ರಾಜ್ಯದ ಕಂದಾಯ ಮಂತ್ರಿಗಳಾಗಿದ್ದಾಗಿನಿಂದಲೂ ನಾವು ಕೇಳಿಕೊಂಡು ಬಂದಿದ್ದೇವು. ಆದರೆ ಇನ್ನೂ ಆಗಿರಲಿಲ್ಲ. ಇಂತಹ ಒಂದು ಮಹತ್ತರವಾದಂಥ ಸಾಧನೆ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಕಾಲದಲ್ಲಿ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಒಬ್ಬ ರೈತ ಮನೆ ಕಟ್ಟಬೇಕೆಂದರೆ ಅವನು ನೇರವಾಗಿ ತಾಲ್ಲೂಕು ಕಛೇರಿಗೆ ಹೋದರೆ ಕೆಲಸವಾಗುವುದಿಲ್ಲ. ಅವನು ಪಾಂಡವಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗೆ ಹೋಗಿ ದುಂಬಾಲು ಬೀಳಬೇಕು. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಒಬ್ಬ ರೈತ ಮನೆ ಕಟ್ಟಬೇಕೆಂದರೆ ಬಹಳ ತೊಂದರೆಪಡುತ್ತಿದ್ದಾನೆ ಎನ್ನುವ ವಿಚಾರ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತಿದೆ. ಮತ್ತು ಅಲಿನೇಶನ್ ಮಾಡತಕ್ಕಂಥ ವ್ಯವಸ್ಥೆ ತಹಶೀಲ್ದಾರ್‌ರವರ ಮಟ್ಟದಲ್ಲಿ ಇರಬೇಕೇ ಹೊರತು. ಬೇರೆ ಕಡೆ ಹೋಗದಿರುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉದಾಹರಣೆಗೆ. ಬೆಂಗಳೂರಿನಲ್ಲಿರತಕ್ಕ ವಿಶೇಷ ಜಿಲ್ಲಾಧಿಕಾರಿಗಳಿಗೆ ಇವತ್ತು ಅಲಿನೇಷನ್ ಕೊಡತಕ್ಕ ವ್ಯವಸ್ಥೆ ಇದೆ. ಅದೇ ಪ್ರಕಾರ ಇವತ್ತು ಅಲಿನೇಷನ್ ಮಾಡಿದ್ದಾರೆ. ಇವತ್ತು ಒಂದು ಗುಂಟೆ ಜಮೀನನ್ನು ಅಲಿನೇಷನ್ ಮಾಡಬೇಕಾದರೆ, ಮನೆಯನ್ನು ಕಟ್ಟಬೇಕಾದರೆ ಅದು ಮೂರು ಸಾವಿರ ರೂಪಾಯಿ ಬೆಲೆ ಬಾಳುವುದಿಲ್ಲ. ಆದರೂ ಕೂಡ ಅವರು ಅಸಿಸ್ಟೆಂಟ್ ಕಮಿಷನರ್ ಆಫೀಸುಗಳಲ್ಲಿ. ತಾಲ್ಲೂಕು ಆಫೀಸುಗಳಲ್ಲಿ ಲಂಚವನ್ನು ಕೊಟ್ಟು ಒಂದು ಗುಂಟೆ ಜಮೀನನ್ನು ಅಲಿನೇಷನ್ ಮಾಡಿಸಿಕೊಂಡು ಬರತಕ್ಕದನ್ನು ನಾವು ನೋಡುತ್ತಿದ್ದೇವೆ. ಇದು ತಪ್ಪಬೇಕು. ಇದಕ್ಕೆ ಒಂದು ಹೊಸದಾದ ವ್ಯವಸ್ಥೆಯನ್ನು ತರಬೇಕು ಎಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿಲೇಜ್ ಅಕೌಂಟೆಂಟ್‌ಗಳ ಬಗ್ಗೆ ಹೇಳುತ್ತೇನೆ. ಕಳೆದ ಅಧಿವೇಶನದಲ್ಲಿ ನಾವು ಎರಡು ಸಾವಿರ ವಿಲೇಜ್ ಅಕೌಂಟೆಂಟ್‌ಗಳ ಕೊರತೆ ಇದೆ. ನಾವು ವಿಲೇಜ್ ಅಕೌಂಟೆಂಟ್‌ಗಳನ್ನು

ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಿರಿ. ನಾನು ಈಗಲೂ ಸಹ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ವಿಲೇಜ್ ಅಕೌಂಟೆಂಟ್‌ಗಳು ಹಳ್ಳಿಗಳಲ್ಲಿಲ್ಲ. ಒಂದು ಹಳ್ಳಿಯಲ್ಲಿಯೂ ಇಲ್ಲ. ಇದರ ಮೇಲೆ ಚರ್ಚೆ ನಡೆಯುತ್ತಲೇ ಇದೆ. ನೀವು ಸುತ್ತೋಲೆಯನ್ನು ಕಳಿಸುತ್ತಲೇ ಇದ್ದೀರಿ. ಹಳ್ಳಿಗಳಲ್ಲಿ ಒಬ್ಬ ವಿಲೇಜ್ ಅಕೌಂಟೆಂಟ್ ಸಹ ಸಿಕ್ಕುವುದಿಲ್ಲ. ತಾಲ್ಲೂಕು ಕೇಂದ್ರದಲ್ಲಿ ಕೆಲಸ ಮಾಡುವವರೆಲ್ಲರೂ ಸಹ ಜಿಲ್ಲಾ ಕೇಂದ್ರಗಳಿಂದ ಪ್ರಯಾಣ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಕೆಲಸ ಮಾಡುವ ವಿಲೇಜ್ ಅಕೌಂಟೆಂಟ್‌ಗಳು ತಾಲ್ಲೂಕು ಕೇಂದ್ರದಿಂದ ಪ್ರಯಾಣ ಮಾಡುತ್ತಾರೆ. ಒಬ್ಬ ರೈತನಿಗೂ ವಿಲೇಜ್ ಅಕೌಂಟೆಂಟ್ ಸಿಗುವುದಿಲ್ಲ. ದಯಮಾಡಿ ನಿಮಗೆ ಕಾರಣಗಳಿಷ್ಟೇ ಇರಲಿ. ಮೊದಲು ವಿಲೇಜ್ ಅಕೌಂಟೆಂಟ್ಸ್‌ನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಸರ್ಕಾರದವರು ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇವತ್ತು ಡಿವಿಷನಲ್ ಕಮೀಷನರ್ ಹುದ್ದೆಯನ್ನು ರದ್ದು ಮಾಡುತ್ತೇವೆಂದು ಸರ್ಕಾರ ಹೇಳಿದೆ. ಅದನ್ನು ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡುತ್ತೇನೆ. ಡಿವಿಷನಲ್ ಕಮೀಷನರ್‌ಗಳು ಏನು ಮಾಡುತ್ತಿದ್ದಾರೆಂದರೆ. ಒಂದು ರೀತಿಯ ಪೋಸ್ಟ್ ಆಫೀಸ್ ಕೆಲಸವನ್ನು ಮಾಡುತ್ತಿದ್ದಾರೆ. ಒಬ್ಬ ಡಿವಿಷನಲ್ ಕಮೀಷನರ್ ಒಂದು ತಾಲ್ಲೂಕು ಕೇಂದ್ರಕ್ಕೆ ಪರಿಶೀಲನೆಗೆ ಬರುತ್ತಾರೆಂದರೆ ಅವರ ಹಿಂದೆ 60-70 ಕಾರುಗಳು ಬರುತ್ತವೆ. ಮುಖ್ಯಮಂತ್ರಿಗಳು ಬಂದರೆ ಎಷ್ಟು ಕಾರುಗಳು ಓಡಾಡುತ್ತವೋ ಅಷ್ಟು ಕಾರುಗಳು ಒಬ್ಬ ಡಿವಿಷನಲ್ ಕಮೀಷನರ್ ಬಂದರೆ ಪ್ರಯಾಣ ಮಾಡುತ್ತವೆ. ಅಲ್ಲಿ ಏನೂ ಕೆಲಸ ಇರುವುದಿಲ್ಲ. ನೀವು. ಸರ್ಕಾರ ಪೋಸ್ಟ್ ಹಾಕಿದರೆ ಮಂಡ್ಯದ ಡಿ.ಸಿ.ಗೆ ಹೋಗುವ ಬದಲು ಮೈಸೂರಿಗೆ ಹೋಗಿ ಮತ್ತೆ ಮೈಸೂರಿನಿಂದ ಮಂಡ್ಯಕ್ಕೆ ಬರತಕ್ಕ ವ್ಯವಸ್ಥೆ ಇದೆ. ಆದ್ದರಿಂದ ನಿಜವಾಗಲೂ ಸಹಿತ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ಅಸಿಸ್ಟೆಂಟ್ ಕಮೀಷನರ್ ಪೋಸ್ಟ್ ಏನು ಇದೆ ಅದನ್ನು ರದ್ದು ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ಅಸಿಸ್ಟೆಂಟ್ ಕಮೀಷನರ್ ಪೋಸ್ಟ್ ಏಕೆ ಬೇಕು? ಇವತ್ತು ತಾಲ್ಲೂಕು ಮಟ್ಟದಲ್ಲಿ ಏನಾದರೂ ಅಲಿನೇಷನ್ ಬೇಕಾದರೆ ಕೊಂಕಣ ಸುತ್ತಿಕೊಂಡು ಮೈಲಾರಕ್ಕೆ ಹೋದಂತೆ ನಾಗಮಂಗಲದಲ್ಲಿ ಕುಳಿತುಕೊಂಡು ಒಂದು ಅಲಿನೇಷನ್‌ಮಾಡಬೇಕಾದರೆ ಮೊದಲು ಪಾಂಡವಪುರಕ್ಕೆ ಹೋಗಬೇಕು. ನಂತರ ಪಾಂಡವಪುರದಿಂದ ಮಂಡ್ಯಕ್ಕೆ ಹೋಗಬೇಕು. ಇವತ್ತು 15-20 ವರ್ಷಗಳಿಂದಲೂ ನಾವು ಪ್ರತಿಯೊಂದು ಹಳ್ಳಿಯಲ್ಲಿ ಯಾವ ವ್ಯವಸ್ಥೆಯನ್ನು ನೋಡುತ್ತಿದ್ದೇವೋ ಅದು ನಿಮ್ಮ ಕಾಲದಲ್ಲಿ ಬದಲಾವಣೆಯಾಗಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ನೀವು ಏನು ಒಂದು ನಿಲುವನ್ನು ತೆಗೆದುಕೊಂಡಿದ್ದೀರೋ ಅದು ಅಚಲ. ಅದನ್ನು ಬದಲಾವಣೆ ಮಾಡಬೇಡಿ. ಡಿವಿಷನಲ್ ಕಮೀಷನರ್ ಹುದ್ದೆ ನಮಗೆ ಬೇಡ. ಅಸಿಸ್ಟೆಂಟ್ ಕಮೀಷನರ್ ಹುದ್ದೆ ಬೇಡ. ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್‌ಗಳ ಹುದ್ದೆಯನ್ನು ಕ್ರಿಯೇಟ್ ಮಾಡಿ. ಅವರಿಗೆ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಡತಕ್ಕ ಮಟ್ಟಕ್ಕೆ ಮಾಡಬೇಕು. ಯಾವುದೇ ಒಬ್ಬ ರೈತನ ಅಭಿವೃದ್ಧಿಗೆ ಬೇಕಾಗಿರತಕ್ಕ ರೆವಿನ್ಯೂ ಇಲಾಖೆಯಲ್ಲಿ ಆಗತಕ್ಕ ಕೆಲಸಗಳೂ ಸಹಿತ ತಾಲ್ಲೂಕು ಮಟ್ಟದಲ್ಲೇ ಆಗಬೇಕೇ ಹೊರತು ಅದು ಜಿಲ್ಲಾ ಮಟ್ಟಕ್ಕೆ ಹೋಗಬೇಕಾಗಿಲ್ಲ. ಸಬ್ ಡಿವಿಷನಲ್ ಮಟ್ಟಕ್ಕೆ ಹೋಗಬೇಕಾಗಿಲ್ಲ. ಇದನ್ನು ನೀವು ದೃಷ್ಟಿಯಲ್ಲಿಟ್ಟುಕೊಂಡು ಏನು ತೀರ್ಮಾನ ಮಾಡಿದ್ದೀರಿ ಅದು ಬಹಳ ಯೋಗ್ಯವಾದ ತೀರ್ಮಾನ. ಇವತ್ತು ಡೆಪ್ಯುಟಿ ಕಮೀಷನರ್‌ರವರ ಕತೆ ಏನಾಗಿದೆ ಎಂದರೆ. ನಮ್ಮ ಜಿಲ್ಲೆಯಲ್ಲಿ ಒಬ್ಬರು ಡೆಪ್ಯುಟಿ ಕಮೀಷನರ್ ಇದ್ದಾರೆ. ಅದೇ ರೀತಿ ಹಾಸನದಲ್ಲಿ ಒಬ್ಬರು

ಮತ್ತು ತುಮಕೂರಿನಲ್ಲಿ ಒಬ್ಬರು ಇದ್ದರು. ಮಾನ್ಯ ಕಂದಾಯ ಮಂತ್ರಿಗಳಿಗೆ ಇವರನ್ನು ಎಲ್ಲಿಂದ ಹಿಡಿದುಕೊಂಡು ಬಂದಿರಿ ಎಂದು ಕೇಳುತ್ತಿದ್ದೇನೆ? ಏಕೆಂದರೆ ಅವರು ಕಾರಿನಲ್ಲಿ ಕುಳಿತುಕೊಂಡಾಗ ಒಂದು ಆಜ್ಞೆಯನ್ನು ಮಾಡುತ್ತಾರೆ. ಕಾರಿನಿಂದ ಇಳಿದ ಮೇಲೆ ಒಂದು ಆಜ್ಞೆಯನ್ನು ಮಾಡುತ್ತಾರೆ. ತಮಗೆ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಶೀಲಮ್ಮವೆಂದು ಡಿ.ಸಿ. ಇದ್ದಾರೆ. ಆ ಶೀಲವೆಲ್ಲಾ ಹೋಗಿ ಅಶ್ಲೀಲವಾಗಿಬಿಟ್ಟಿದೆ. ಸಾಕ್ಷರತೆ ಕಾರ್ಯಕ್ರಮ ಬಂದಮೇಲಂತೂ ನಮ್ಮ ಜಿಲ್ಲೆಯ ಅಭಿವೃದ್ಧಿ ಈ ಜಿಲ್ಲಾಧಿಕಾರಿಯಿಂದ ಸಂಪೂರ್ಣವಾಗಿ ನಿರ್ಲಕ್ಷ್ಯವಾಗಿದೆ. ಇವತ್ತು ಆ ಹೆಸರಿನವರು ಯಾವ ಪುರುಷಾರ್ಥಕ್ಕಾಗಿ ನಮ್ಮ ರಾಜ್ಯದಲ್ಲಿ ಕಾಲಿಟ್ಟರೋ ದೇವರಿಗೇ ಗೊತ್ತು. ಅವರು ಸ್ವಲ್ಪವು ಅಭಿವೃದ್ಧಿ ಕೆಲಸಗಳ ಕಡೆ ಗಮನ ಹರಿಸುವುದಿಲ್ಲ. ನಮ್ಮ ಕಾಗೋಡು ತಿಮ್ಮಪ್ಪನವರು ಇಲ್ಲಿ ಇಲ್ಲ. ಒಂದು ಉದಾಹರಣೆ ಹೇಳುತ್ತೇನೆ ನನ್ನ ತಾಲ್ಲೂಕಿನಲ್ಲಿ ಹೌಸಿಂಗ್ ಬೋರ್ಡ್ ಸೈಟಿಗಾಗಿ ಒಂದು ಅರ್ಜಿಯನ್ನು ಹಾಕಿದ್ದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಸುಮಾರು 20 ಪತ್ರಗಳನ್ನು ಅದರ ಸಲುವಾಗಿ ಬರೆದಿದ್ದಾರೆ. ಆದರೂ ಇಲ್ಲದ ಸಲ್ಲದ ಕೊಕ್ಕೆಯನ್ನು ಇಟ್ಟು. ಆ ಕಾರಣ ಸರಿಯಾಗಿಲ್ಲ. ಈ ಕಾರಣ ಸರಿಯಾಗಿಲ್ಲವೆಂದು ಹೇಳಿ ಎಲ್ಲಾ ರೆಕಾರ್ಡ್‌ಗಳನ್ನು ಪೆಂಡಿಂಗ್ ಇಟ್ಟು ಏನೇನೂ ಕೆಲಸವನ್ನು ಮಾಡುತ್ತಿಲ್ಲ. ಇವತ್ತು ಮೊದಲು ನಮ್ಮ ಜಿಲ್ಲಾಧಿಕಾರಿಗಳನ್ನು ಬದಲಾವಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಮ್ಮ ಜಿಲ್ಲಾಧಿಕಾರಿಗಳ ಕೈಯಲ್ಲಿ ನಮ್ಮ ಜಿಲ್ಲೆಯ ಅಭಿವೃದ್ಧಿಯಾಗುವುದಿಲ್ಲವೆಂದು ನಾನು ಕಳೆದ ವರ್ಷವೂ ಕೂಡ ಹೇಳಿದ್ದೆ. ಈಗಲೂ ಕೂಡ ನಮ್ಮ ಜಿಲ್ಲಾಧಿಕಾರಿಗಳನ್ನು ಬದಲಾವಣೆ ಮಾಡಬೇಕೆಂದು ವಿನಂತಿ ಮಾಡಿಕೊಡುತ್ತೇನೆ. ಈಗ ಡಿವಿಷನಲ್ ಕಮಿಷನರ್ ಪೋಸ್ಟ್‌ನ್ನು ಮತ್ತು ಅಸಿಸ್ಟೆಂಟ್ ಕಮಿಷನರ್ ಪೋಸ್ಟ್‌ನ್ನು ರದ್ದು ಮಾಡುತ್ತಿದ್ದೀರಿ. ಅದನ್ನು ಸ್ವಾಗತಿಸುತ್ತೇನೆ.

ಆದರೆ ಇವತ್ತು ಜಿಲ್ಲಾಧಿಕಾರಿಗಳ ಪೋಸ್ಟ್ ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು. ಸೀನಿಯರ್ ಸೆಕ್ರೆಟರಿ ಲೆವೆಲ್‌ನಲ್ಲಿ ಇರತಕ್ಕಂತಹವರನ್ನು ಡೆಪ್ಯುಟಿ ಕಮಿಷನರ್ ಪೋಸ್ಟ್‌ಗೆ ಹಾಕಬೇಕು. ಏಕೆಂದರೆ, ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ. ಡಿವಿಜನಲ್ ಕಮಿಷನರ್ ಪೋಸ್ಟ್ ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ಡೆಪ್ಯುಟಿ ಸೆಕ್ರೆಟರಿ ಲೆವೆಲ್‌ನಲ್ಲಿರತಕ್ಕಂತಹವರನ್ನು ನೀವು ಡಿ.ಸಿ.ಗಳಾಗಿ ಹಾಕಿಬಿಟ್ಟರೆ ಏನು ಪ್ರಯೋಜನವಿಲ್ಲ. ಅವರನ್ನು ತೆಗೆದುಕೊಂಡು ಬಂದು ಮಂತ್ರಿಗಳಿಗೆ ಪಿ.ಎ. ಗಳಾಗಿ ಮಾಡಿಕೊಳ್ಳಿ. ಮಂತ್ರಿಗಳ ಹತ್ತಿರ ಪಿ.ಎಸ್. ಆಗಿ ಕೆಲಸ ಮಾಡುವುದಕ್ಕೂ ಸಹ ಅವರ ಕೈಯಲ್ಲಿ ಆಗುವುದಿಲ್ಲ. ಅವರನ್ನು ಪಿ.ಎ.ಗಳನ್ನಾಗಿ ಮಾಡಿಕೊಂಡರೆ ಮಾತ್ರ ಅವರಿಗೆ ನಿಜವಾಗಿ ಕೆಲಸ ಕೊಟ್ಟಹಾಗೆ ಆಗುತ್ತದೆಯೇ ಹೊರತು. ಇನ್ನು ಏನು ಆಗುವುದಿಲ್ಲ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ. ಸೀನಿಯರ್ ಸೆಕ್ರೆಟರಿ ಲೆವೆಲ್‌ನಲ್ಲಿರತಕ್ಕಂತಹವರನ್ನು ಜಿಲ್ಲೆಗೆ ಹಾಕಬೇಕು. ಆ ಜಿಲ್ಲೆಯಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಮಾಡಿದಂತಹ ಅಭಿವೃದ್ಧಿ ಕೆಲಸಗಳನ್ನು ಯಶಸ್ವಿಯಾಗಿ ಮಾಡಿದರೆ ಮಾತ್ರ ಇವತ್ತು ಆ ಜಿಲ್ಲೆಯಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ ಹೊರತು. ಈಗಿರತಕ್ಕಂತಹ ಶೀಲಂಗಳಿಂದ. ಈಗಿರತಕ್ಕಂತಹ ಶೈಲಂಗಳಿಂದ ಈಗಿರತಕ್ಕಂತಹ ಪೆರುಮಾಳ್‌ಗಳಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ರೈತರಿಗೆ ಪಾಸ್ ಪುಸ್ತಕ ಮಾಡಿಕೊಟ್ಟಿದ್ದೀರಿ. ಈ ಪಾಸ್ ಬುಕ್ ತೆಗೆದು ತಕ್ಷಣದಲ್ಲೇ ಅವನು ಬ್ಯಾಂಕಿನಲ್ಲಿ ಇಟ್ಟಿರತಕ್ಕಂತಹ ಠೇವಣಿ ಎಷ್ಟು ಅವನ ಹಣಬರಹ ಎಷ್ಟು ಇದೆ. ಎಷ್ಟು ರೂಪಾಯಿ ದುಡ್ಡು ಇದೆ. ಎಷ್ಟು ರೂಪಾಯಿ ಹೋಗಿದೆ ಎಂದು

ಗೊತ್ತಾಗುತ್ತದೆ. ಈ ತರಹ ತಾವು ಪಾಸ್ ಬುಕ್‌ನ್ನು ತಂದಿದ್ದೀರಿ. ಇದು ಬಹಳ ಚೆನ್ನಾಗಿದೆ, ಸ್ವಾಗತಾರ್ಹ. ಆದರೆ ಇದನ್ನು ಕೆಲವು ಏರಿಯಾದಲ್ಲಿ ಮಾತ್ರ ಕೊಟ್ಟಿದ್ದೀರಿ. ಇನ್ನು ಕೆಲವು ಏರಿಯಾಗಳಲ್ಲಿ ಕೊಟ್ಟಿಲ್ಲ. ಆದ್ದರಿಂದ ತಮಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಪಾಸ್ ಬುಕ್‌ನ್ನು ರೈತ ಜೇಬಿನಿಂದ ತೆಗೆದು ನೋಡಿದರೆ ಅವನ ಹಣೆಬರಹ ಸಂಪೂರ್ಣ ಅದರಲ್ಲಿ ಸಿಗಬೇಕು. ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಎಷ್ಟು ಲೋನ್ ಇದೆ. ಸೊಸೈಟಿಯಲ್ಲಿ ಎಷ್ಟು ಲೋನ್ ಇದೆ. ಅವನು ಯಾವುದಾದರೂ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿದ್ದರೆ ಅದರಲ್ಲಿ ಎಷ್ಟು ಲೋನ್ ಇದೆ ಎನ್ನುವುದೆಲ್ಲ ವ್ಯವಸ್ಥಿತವಾಗಿ ಸಿಗತಕ್ಕಂಥ ಪಾಸ್ ಬುಕ್‌ನ್ನು ನೀವು ಕೊಟ್ಟರೆ ಆ ರೈತನಿಗೆ ಉಪಯೋಗವಾಗುತ್ತದೆಯೇ ಹೊರತು ಇಲ್ಲದಿದ್ದರೆ ಉಪಯೋಗವಾಗುವುದಿಲ್ಲ. ಈ ಸಂದರ್ಭದಲ್ಲಿ, ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ಪಾಸ್ ಬುಕ್‌ಗಳನ್ನು ಬಹಳ ದಿವಸಗಳಿಂದ ಕೊಡುತ್ತೇವೆಂದು ಹೇಳಿಕೊಂಡು ಬರುತ್ತಿದ್ದೀರಿ. ಆದರೆ ಇನ್ನೂ ಕೊಟ್ಟಿಲ್ಲ. ಶೀಘ್ರವಾಗಿ ಇದನ್ನು ಪುನರ್ ಪರಿಶೀಲನೆ ಮಾಡಿ ಪಾಸ್ ಬುಕ್‌ಗಳನ್ನು ಶೀಘ್ರವಾಗಿ ಕೊಡತಕ್ಕಂತಹ ವ್ಯವಸ್ಥೆ ಆಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ಒತ್ತುವರಿ ಲ್ಯಾಂಡ್ ಮಾಡಿದ್ದೀರಿ. ಇವತ್ತು ಲಕ್ಷಾಂತರ ಎಕರೆ ಜಮೀನನ್ನು ಬಡ ಬೋರೇಗೌಡನಿಗೆ. ಒತ್ತುವರಿ ಮಾಡತಕ್ಕಂತಹವರಿಗೆ ಕೊಡುತ್ತೇವೆಂದು ಹೇಳಿರತಕ್ಕಂತಹ ಮಾತನ್ನು ಬಹಳ ನಾವೆಲ್ಲರೂ ಒಪ್ಪಿಕೊಳ್ಳಬೇಕು. ರೈತಾಪಿ ವರ್ಗಕ್ಕೆ ಬಹಳ ಪ್ರಯೋಜನ ಆಗತಕ್ಕಂತಹ ಕೆಲಸ ಇದು. ಆದರೆ ನಾನು ಕೇಳುತ್ತೇನೆ. ಒತ್ತುವರಿ ಕಮಿಟಿಯ ಅಧ್ಯಕ್ಷನಾಗಿ ನಾನು ಕಳೆದ ಮೂರು ತಿಂಗಳಿಂದ ಸತತವಾಗಿ ಹೋರಾಟ ಮಾಡುತ್ತಿದ್ದೇನೆ. ಒಬ್ಬ ಸರ್ವೆಯರ್ ಸಿಗುವುದಿಲ್ಲ. ತಾವು ಮೊನ್ನೆ ಅಧಿವೇಶನದಲ್ಲಿ ಸರ್ವೇಯರ್‌ಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಹಾಗಾದರೆ ನೀವು ಸರ್ವೆಯರ್‌ಗಳನ್ನು ತೆಗೆದುಕೊಳ್ಳುವವರೆಗೆ ನಾವು ಲ್ಯಾಂಡ್ ಅಕ್ವಿಷೇಷನ್ ಮಾಡುವುದು ಬೇಡ ಎಂದು ಹೇಳುವುದಾದರೆ. ಒತ್ತುವರಿ ಕಮಿಟಿಯನ್ನು ಪ್ರಾರಂಭ ಮಾಡುವುದು ಬೇಡವೆಂದು ಹೇಳಿದರೆ ಜನ ನಮ್ಮನ್ನು ಸಹಿಸುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರು ಇವೆಲ್ಲವನ್ನು ಸಹಿತ ಶೀಘ್ರವಾಗಿ ಮಾಡಿ. ಸರ್ವೆಯರ್‌ಗಳನ್ನು ಶೀಘ್ರವಾಗಿ ನೇಮಕ ಮಾಡತಕ್ಕಂತಹ ಕೆಲಸ ಆಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ನೀವು ಸರ್ವೆಯರ್‌ಗಳನ್ನು ಹಾಕಬೇಕು. ಇವತ್ತು ಏನು ಒತ್ತುವರಿ ಕಮಿಟಿಗಳ ಅಧ್ಯಕ್ಷರಿದ್ದೇವೆ. ಶಾಸಕರುಗಳಿದ್ದೇವೆ. ಶೀಘ್ರವಾಗಿ ಬಡ ಬೋರೇಗೌಡನಿಗೆ ಅವನ ಜಮೀನು ಅವನಿಗೆ ಸಿಗುವಂತೆ ಆಗಬೇಕು. ಅದಕ್ಕೆ ನೀವು ಸರ್ವೆಯರ್‌ಗಳನ್ನು ಶೀಘ್ರವಾಗಿ ಕೊಡಬೇಕು. ನೀವು ಮೊದಲು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಬೇಕು. ಶೀಘ್ರವಾಗಿ ಇಷ್ಟಿಷ್ಟು ಕೇಸ್‌ಗಳನ್ನು ಇಷ್ಟಿಷ್ಟು ದಿವಸಗಳಲ್ಲಿ ಪೂರೈಸಬೇಕೆಂದು ತಾವು ಅವರಿಗೆ ಹೇಳಬೇಕು. ನಮ್ಮಲ್ಲಿ ಸಬ್-ರಿಜಿಸ್ಟ್ರಾರ್ ಆಫೀಸ್ ಇದೆ. ಈ ಸಬ್-ರಿಜಿಸ್ಟ್ರಾರ್ ಆಫೀಸ್ ಇವತ್ತು ಯಾವ ಮಟ್ಟಕ್ಕೆ ಹೋಗಿದೆಯೆಂದರೆ. ಬೆಂಗಳೂರಿನಲ್ಲಿರತಕ್ಕಂತಹ ಒಬ್ಬ ಸಬ್ ರಿಜಿಸ್ಟ್ರಾರ್‌ಗೆ ನಮ್ಮ ಮಂತ್ರಿಗಳಿಗಿರುವಂತಹ ಸವಲತ್ತುಗಳಿಗೆ ಕಡಿಮೆಯೇನು ಇಲ್ಲ. ಮಂತ್ರಿಮಾನ್ಯರಿಗೆ ಇರತಕ್ಕಂತಹ ಸವಲತ್ತುಗಳಲ್ಲಿ ಒಂದು ಪೈಸೆಯಲ್ಲೂ ಇವರು ಕಡಿಮೆಯಿಲ್ಲ. ಅವನಿಗೆ ನಿಮ್ಮ ಹಾಗೆ ಕಾರುಗಳಿವೆ. ನಿಮ್ಮ ಹಾಗೆ ಬಂಗ್ಲೆ ಇದೆ. ಮಂತ್ರಿಗಳಿಗೆ ಏನೆಲ್ಲಾ ಸವಲತ್ತುಗಳು ಇವೆಯೋ ಆ ಎಲ್ಲಾ ಸವಲತ್ತುಗಳು ಅವನಿಗೆ ಇದೆ. ಅದಕ್ಕಾಗಿ ಒಂದು ತನಿಖೆ ಮಾಡಿ. ಈ ರಾಜ್ಯದಲ್ಲಿರತಕ್ಕಂತಹ ಸಬ್-ರಿಜಿಸ್ಟ್ರಾರ್‌ಗಳ ಆಫೀಸ್‌ನಲ್ಲಿ ಏನು ಮಾಡುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ಐದು ಎಕರೆ ಜಮೀನಿದ್ದರೆ ಐದು ಸಾವಿರ ರೂಪಾಯಿಯಂತೆ ಒಂದು ಎಕರೆಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ನಾನು ನನ್ನ ತಾಲ್ಲೂಕಿನಲ್ಲಿದ್ದಾಗ ಒಬ್ಬ ಸಬ್-ರಿಜಿಸ್ಟ್ರಾರ್ ಒಬ್ಬ

ಬಡ ರೈತನಿಗೆ ಹೇಳುತ್ತಾನೆ. ಅವನ ಜಮೀನನ್ನು ಐದು ಸಾವಿರದ ಮೇಲೆ ಅಲ್ಲಿ ಯಾರೂ ತೆಗೆದುಕೊಳ್ಳುವುದಿಲ್ಲ. ಸಬ್-ರಿಜಿಸ್ಟ್ರಾರ್ ಹೇಳುತ್ತಾನೆ. ನಿನ್ನ ಜಮೀನು 20 ಸಾವಿರ ರೂಪಾಯಿಗೆ ಬಾಳುತ್ತದೆ. ಕೊಡುವುದಾದರೆ ನಾನು ರಿಜಿಸ್ಟರ್ ಮಾಡುತ್ತೇನೆ. ಇಲ್ಲದೇ ಹೋದರೆ ಏನು ಹೇಳುತ್ತೀರಿ ಎನ್ನುತ್ತಾರೆ. ಇವನು ಏತಕ್ಕೆ ಹೇಳುತ್ತಾನೆಂದರೆ, ಕೊನೆಗೆ 5 ಸಾವಿರಕ್ಕೆ ಬಂದ ರಿಜಿಸ್ಟರ್ ಮಾಡುವುದು. ಮೇಲೆ 15 ಸಾವಿರ ರೂಪಾಯಿ ಹೆಚ್ಚಿಗೆ ಬರತಕ್ಕಂತಹ ಹಣಕ್ಕೆ ಸ್ಟ್ಯಾಂಪ್ ಡ್ಯೂಟಿ ನಷ್ಟವಾಗುತ್ತದೆ. ಆ ಸ್ಟ್ಯಾಂಪ್ ಡ್ಯೂಟಿ ಹಣವನ್ನು ನನಗೆ ಕೊಡುವುದಾದರೆ ನಿನಗೆ ಫ್ರೀಯಾಗಿ ಮಾಡುತ್ತೇನೆ ಎನ್ನುವಂತಹ ಉದ್ದೇಶ ಬಿಟ್ಟರೆ ಬೇರೇನು ಇಲ್ಲ. ನಾನು ಕೇಳುತ್ತೇನೆ ಇವತ್ತು ಬಡವರು ದೀನದಲಿತರು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂತಹ ಒಬ್ಬರು ಮುಖ್ಯಮಂತ್ರಿಗಳು ನಮ್ಮಲ್ಲಿ ಇರುವಾಗ ಗ್ರಾಮಾಂತರ ರೈತರಿಗೆ ಪ್ರಯೋಜನ ಮಾಡಬೇಕು ಎನ್ನುವಂತಹ ಆಸಕ್ತಿ ನಿಮಗೆ ಇರುವಾಗ ಸಬ್-ರಿಜಿಸ್ಟ್ರಾರ್ ಆಫೀಸ್‌ನಿಂದ ಆಗತಕ್ಕಂತಹ ತೊಂದರೆ ಅಷ್ಟಿಷ್ಟಲ್ಲ. ನಾನು ಇದಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತಿನ ದಿವಸ ನಾವು ಬಹಳ ಮುಂದೆ ಹೋಗುತ್ತಿದ್ದೇವೆ. ಬಹಳ ಅಡ್ವಾನ್ಸ್ ಕಂಟ್ರಿಯಲ್ಲಿ ಇದ್ದೇವೆ. ಇವತ್ತು ಕಂಪ್ಯೂಟರೈಸ್ ಮಾಡಿ ಒಬ್ಬ ಜಮೀನು ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಹೋದರೆ. ಅವನು ಆ ಕಂಪ್ಯೂಟರ್‌ನಲ್ಲಿ ಹಾಕಿದರೆ ಅದಕ್ಕೆ ಎಷ್ಟು ರೂಪಾಯಿ ಎಂದು ಫೀಸ್ ಬಂದು ಬಿಡಬೇಕು. ಇಷ್ಟಾದರೂ ಸಹಿತ ಲಂಚವನ್ನು ನಾವು ನೀವು ತಡೆಹಿಡಿಯುವುದಕ್ಕೆ ಆಗುವುದಿಲ್ಲ, ಯಾವ ಸರ್ಕಾರ ಬಂದರೂ ಲಂಚವನ್ನು ತಡೆಹಿಡಿಯುವುದಕ್ಕೆ ಆಗುವುದಿಲ್ಲ. ಇದರಮೇಲೆ ನೀವು ಏನಾದರೂ ಬಿಗಿ ವ್ಯವಸ್ಥೆ ಮಾಡಬೇಕು. ನೀವು ಸಬ್‌ರಿಜಿಸ್ಟ್ರಾರ್‌ಗಳನ್ನು ಕಂಪ್ಯೂಟರೈಸ್ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದಕ್ಕೇನೂ ಹೆಚ್ಚಿಗೆ ಹಣ ಖರ್ಚಾಗುವುದಿಲ್ಲ. ಆದರೆ ರೈತರಿಗೆ ವ್ಯವಸ್ಥಿತವಾಗಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಿದಂತಾಗುತ್ತದೆ. ಅಂಡರ್ ವ್ಯಾಲ್ಯುಯೇಷನ್ ಇನ್ನೂ ಮುಂತಾದುವನ್ನು ತಡೆಗಟ್ಟಿದಂತಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಸಬ್‌ರಿಜಿಸ್ಟ್ರಾರ್‌ರವರನ್ನು ಯಾವ ರೀತಿ ಕಂಪ್ಯೂಟರೈಸ್ ಮಾಡುತ್ತೀರಿ? ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮೋಟಮ್ಮನವರ ನೋವು ನನಗೆ ಅರ್ಥವಾಗುತ್ತಿದೆ. ಏಕೆಂದರೆ ಅವರು ಮಾಜಿ ಸಬ್-ರಿಜಿಸ್ಟ್ರಾರ್‌ರವರು. ಇವತ್ತು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ನಡೆಯುತ್ತಿರುವ ಲಂಚ ಇನ್ನು ಬೇರೆ ಯಾವ ಆಫೀಸ್‌ಗಳಲ್ಲೂ ಇಲ್ಲ. ಸಬ್‌ರಿಜಿಸ್ಟ್ರಾರ್‌ಗಳ ಆಫೀಸುಗಳು ಅಷ್ಟೊಂದು ಹೊಲಸಾಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಕಾಲದಲ್ಲೂ ಸಬ್‌ರಿಜಿಸ್ಟ್ರಾರ್‌ರವರ ಆಫೀಸ್‌ಗಳು ಸರಿಹೋಗದಿದ್ದರೆ ಇನ್ನು ಯಾರ ಕಾಲದಲ್ಲಿ ನಾವು ಇದನ್ನು ನಿರೀಕ್ಷಣೆ ಮಾಡಬೇಕು? ಶ್ರೀಮತಿ ಮೋಟಮ್ಮನವರು ರೆವಿನ್ಯೂ ಮಂತ್ರಿಗಳಾದಾಗಲೂ ಇದು ಬರುವುದಿಲ್ಲ. ಇವತ್ತು ಹಳ್ಳಿಗಳಲ್ಲಿರತಕ್ಕ ರೈತರ ಜುಟ್ಟನ್ನು ಸಬ್ ರಿಜಿಸ್ಟ್ರಾರ್‌ರವರು ಅಲ್ಲಾಡಿಸುತ್ತಿದ್ದಾರೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ನಡೆಯತಕ್ಕ ಎಲ್ಲ ವ್ಯವಹಾರಗಳನ್ನೂ ತಾವು ಕಂಪ್ಯೂಟರೈಸ್ ಮಾಡಿದರೆ ಅಲ್ಲಿ ನಡೆಯತಕ್ಕ ಲಂಚ ಕಡಿಮೆಯಾಗುತ್ತದೆ. ರೈತನಿಗೆ ಅಂಡರ್ ವ್ಯಾಲ್ಯುಯೇಷನ್ ಆಗುವುದಿಲ್ಲ. ಅವನು ಎಷ್ಟು ಬೆಲೆಗೆ ಜಮೀನನ್ನು ಕೊಂಡುಕೊಳ್ಳುತ್ತಾನೋ ಅಷ್ಟು ಬೆಲೆಗೆ ಸ್ಟ್ಯಾಂಪ್ ಪೇಪರ್‌ನ್ನು ತೆಗೆದುಕೊಳ್ಳುತ್ತಾನೆ. ಇದರಿಂದ ಸರ್ಕಾರಕ್ಕೆ ಹಣ ಕೂಡ ಸರಿಯಾದ ರೀತಿಯಲ್ಲಿ ಬರುತ್ತದೆಂದು ಹೇಳಬಯಸುತ್ತೇನೆ. ಇದರ ಬಗ್ಗೆ ಒಂದು ಹೊಸ ಚಿಂತನೆಯನ್ನು ಮಾಡಿ. ಇವತ್ತು ತಾಲೂಕ್ ಲೆವೆಲ್‌ನಲ್ಲಿ ಮಾತ್ರ ಸಬ್-ರಿಜಿಸ್ಟ್ರಾರ್‌ರವರ ಆಫೀಸ್‌ಗಳಿವೆ. ಇದನ್ನು ಹೋಬಳಿ ಲೆವೆಲ್‌ಗೂ

ತೆಗೆದುಕೊಂಡು ಹೋಗಬೇಕು. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ 2 ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಿವೆ. ಈ ಎರಡು ಆಫೀಸ್‌ಗಳನ್ನೂ ಕೂಡ ಒಂದೇ ಕಡೆ ಮಾಡಿದ್ದಾರೆ. ನನ್ನ ಹೋಬಳಿಯಿಂದ ಒಬ್ಬ ರೈತ ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋಗಬೇಕಾದರೆ ಸುಮಾರು 45 ಕಿ.ಮೀ. ದೂರ ಅಂದರೆ 15 ರೂಪಾಯಿ ಬಸ್ ಛಾರ್ಜ್‌ನ್ನು ಕೊಟ್ಟುಕೊಂಡು ಹೋಗಬೇಕಾದ ಪರಿಸ್ಥಿತಿ ಇರುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸ್‌ಗಳನ್ನು ಹೋಬಳಿ ಲೆವೆಲ್‌ಗೂ ವಿಸ್ತರಿಸುವ ಕೆಲಸ ಮಾಡಬೇಕು. ಇವತ್ತು ನಾವು ಯಾವ ಕಾಲದಲ್ಲಿದ್ದೇವೆಂದರೆ, ಕಂಪ್ಯೂಟರ್ ಎಂಬ ಯಂತ್ರವನ್ನು ನಂಬಬಹುದು, ಆದರೆ ಮನುಷ್ಯರನ್ನು ಅಧಿಕಾರಿಗಳನ್ನು ನಂಬದೆ ಇರತಕ್ಕಂಥ ಕಾಲ ಇದಾಗಿದೆ ಎಂದು ಹೇಳಬಯಸುತ್ತೇನೆ.

ಇನ್ನು ಧಾರ್ಮಿಕ ದತ್ತಿ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ದೇವಸ್ಥಾನಗಳು ಯಾವ ಮಟ್ಟದಲ್ಲಿವೇ ಎಂದರೆ, ತಾವು ತಿರುಪತಿ ದೇವಸ್ಥಾನವನ್ನು ಹೋಗಿ ನೋಡಿದರೆ ಗೊತ್ತಾಗುತ್ತದೆ. ಅದು ಇಡೀ ಅರ್ಧ ಆಂಧ್ರಪ್ರದೇಶದ ವ್ಯವಸ್ಥೆಯನ್ನೇ ನೋಡಿಕೊಳ್ಳುತ್ತಿದೆ. ಅಲ್ಲಿ ಭಕ್ತರು ದುಡ್ಡು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ನಾನು ನೋಡಿದ ಮಟ್ಟಿಗೆ ಹೇಳುವುದಾದರೆ, ನಮ್ಮ ಬೆಂಗಳೂರಿನಲ್ಲಿ 2-3 ದೇವಸ್ಥಾನಗಳಿವೆ. ಅಲ್ಲಿ ದುಡ್ಡನ್ನು ಹೊಡೆಯುವುದಕ್ಕೇ ಒಂದು ವರ್ಗ ಇದೆ ಇದನ್ನು ತಾವು ತಡೆಗಟ್ಟಬೇಕು. ಇದಕ್ಕೆ ಒಂದು ಹೊಸ ಮಸೂದೆಯನ್ನು ತನ್ನಿ. ಇವತ್ತು ನಾಗಮಂಗಲ ತಾಲ್ಲೂಕಿನಲ್ಲಿ, ಒಬ್ಬ ರೈತ ತಾಲ್ಲೂಕು ಲೆವೆಲ್‌ನಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಬೇಕೆಂದರೆ ಅವನ ರೆಕಾರ್ಡ್ ಹಿಂದಕ್ಕೆ ಬರಬೇಕಾದರೆ 5 ವರ್ಷ ಬೇಕಾಗುತ್ತದೆ. ಮಂಡ್ಯ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಬಂದಿರತಕ್ಕ ಅರ್ಜಿಗಳು ಎಷ್ಟು? ಆ ಅರ್ಜಿಗಳು ಎಷ್ಟು ವರ್ಷಗಳಿಂದ ಬಾಕಿ ಇವೆ ಇದಕ್ಕಾಗಿ ಇರತಕ್ಕ ನಮ್ಮ ಎಂಡೋಮೆಂಟ್ ಕಮಿಷನರ್‌ರವರು ಏನು ಮಾಡುತ್ತಿದ್ದಾರೆಂದು ನಾನು ಸರ್ಕಾರವನ್ನು ಕೇಳಬೇಕಾಗಿದೆ. ಒಬ್ಬ ಹಳ್ಳಿಯ ರೈತ ನಮ್ಮ ಊರಿನಲ್ಲಿ ಒಂದು ದೇವಸ್ಥಾನ ಆಗಬೇಕೆಂದು ಕೇಳಿದರೆ, ಅದು ಮುಜರಾಯಿ ದೇವಸ್ಥಾನವಾಗಿದ್ದು, ದೇವಸ್ಥಾನದ ರೆಕಾರ್ಡ್ ಕೊಟ್ಟಿದ್ದು, ಅದು ತಾಲ್ಲೂಕು ಆಫೀಸನ್ನು ಬಿಟ್ಟಿದ್ದು, ಅನಂತರ ಅದು ಜಿಲ್ಲಾಧಿಕಾರಿಗಳ ಕಛೇರಿಗೆ ಬಂದ ಮೇಲೆ ಅದು ಅಲ್ಲೇ ಹೆಲ್ಡ್‌ಅಪ್ ಆಗಿದೆಯೋ ಅಥವಾ ಎಂಡೋಮೆಂಟ್ ಕಮಿಷನರ್‌ರವರ ಆಫೀಸ್‌ನಲ್ಲಿ ಹೆಲ್ಡಪ್ ಆಗಿದೆಯೋ ಗೊತ್ತಿಲ್ಲ. ಇದರ ಬಗ್ಗೆ ಸಂಪೂರ್ಣವಾದ ತನಿಖೆ ಮಾಡಿಸಿ ಒಂದು ಹೊಸ ಸಿಸ್ಟಮನ್ನು ಮಾಡಿಸಿ. ಹಳ್ಳಿಗಳಿಗೆ ಇಂತಿಷ್ಟೇ ಹಣವನ್ನು ಕೊಡುತ್ತೇವೆಂದು ಹೇಳಿ ಹಳ್ಳಿಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಬೇಕಾದರೆ 25 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಎಲ್ಲೂ ನೀವು ಕೊಡುತ್ತಿಲ್ಲ. ಆದರಲ್ಲೂ ಕೂಡ ತಾರತಮ್ಯ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಮೊನ್ನೆ ಎಂಡೋಮೆಂಟ್ಸ್ ಕಮಿಷನರ್‌ರವರ ಆಫೀಸ್‌ಗೆ ಹೋಗಿದ್ದಾಗ ಆ ಪಟ್ಟಿಯನ್ನು ನೋಡಿದೆ. ಉದಾಹರಣೆಗೆ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಗೆ 6 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ಅದೇ ಮಂಡ್ಯ ಜಿಲ್ಲೆಗೆ ಕೇವಲ 2.5 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಈ ತಾರತಮ್ಯ ಹೋಗಬೇಕು. ತಾಲ್ಲೂಕು ವೈಸ್ ನೀವು ಹಣವನ್ನು ಹಂಚಬೇಕು. ಆ ರೀತಿ ಹಂಚುವಾಗ ಈ ವರ್ಷದಲ್ಲಿ ಇಂತಿಷ್ಟೇ ಹಣವನ್ನು ಕೊಡಬೇಕೆಂದು ತೀರ್ಮಾನವಾಗಬೇಕು, ಆಗ ಮಾತ್ರ ದೇವಸ್ಥಾನಗಳ ಜೀರ್ಣೋದ್ಧಾರ ಸರಿಯಾಗಿ ಆಗುತ್ತದೆ. ಇವತ್ತು ನೀವು ಮಂತ್ರಾಲಯಕ್ಕೆ ಹೋಗಿಬನ್ನಿ. ಅಥವಾ ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಬರತಕ್ಕ ಹಣವನ್ನು ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು

ವ್ಯವಸ್ಥಿತವಾಗಿ ಉಪಯೋಗಿಸುತ್ತಿದ್ದಾರೆಂಬುದು ಗೊತ್ತಾಗುತ್ತದೆ. ನನಗೆ ತಿಳಿದ ಮಟ್ಟಿಗೆ, ನನಗೆ ಲಭ್ಯವಾಗಿರತಕ್ಕ ರೆಕಾರ್ಡ್ಸ್ ಪ್ರಕಾರ ಧಾರ್ಮಿಕ ದತ್ತಿ ಇಲಾಖೆಯಿಂದ ಸುಮಾರು 45-50 ಕೋಟಿ ರೂಪಾಯಿ ಆದಾಯ ಇದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಅಧಿಕಾರಿಗಳ ಮೇಲೆ ಬಿಗಿಯಾದ ಕ್ರಮವನ್ನು ತೆಗೆದುಕೊಂಡು ಈ ವ್ಯವಸ್ಥೆಗೆ ಕಾಯಕಲ್ಪವನ್ನು ಮಾಡಿದರೆ ಈಗ ಏನು 45-50 ಕೋಟಿ ರೂಪಾಯಿ ಬರುತ್ತದೆ. ಅದು 100 ಕೋಟಿ ರೂಪಾಯಿ ಆಗುತ್ತದೆ. ನಮ್ಮ ಹೆಚ್.ಯು.ಡಿ. ಮಂತ್ರಿಗಳಿಗೆ ಈ ಇಲಾಖೆಯ ಬಗ್ಗೆ ಸ್ವಲ್ಪ ಅನುಭವ ಕಡಿಮೆ ಎನಿಸುತ್ತದೆ.

ಇವತ್ತು ದೇವಸ್ಥಾನಗಳಿಗೆ ದಾನ ಕೊಡುವುದಕ್ಕೆ ಭಕ್ತರು ರೆಡಿ ಇದ್ದಾರೆ. ಆದರೆ ಪೂಜಾರಿಗಳು ಅದರಲ್ಲಿ ಹೊಡೆದುಬಿಡುತ್ತಾರೆ. ಅದಕ್ಕೆ ಸರಿಯಾದ ಲೆಕ್ಕ ಇಲ್ಲ. ಅದಕ್ಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಧಾರ್ಮಿಕ ದತ್ತಿ ಒಂದು ಇಲಾಖೆಯಲ್ಲಿ 50 ಕೋಟಿ ರೂಪಾಯಿ ಹೆಚ್ಚು ಹಣ ಬರುತ್ತದೆ. ಇದಕ್ಕೆ ಒಂದು ಹೊಸ ವ್ಯವಸ್ಥೆ ತನ್ನಿ. ಈ ಒಂದು ಇಲಾಖೆಯಲ್ಲಿ ಹಳೆ ಪದ್ಧತಿ ಏನು ಇದೆ ಅದನ್ನು ಬದಲಾವಣೆ ಮಾಡಿ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ಬೋರೇಗೌಡರ ಊರಿನ ದೇವಸ್ಥಾನಗಳು ಸರಿಯಾಗಲಿಕ್ಕೆ ಅವಕಾಶವಾಗುತ್ತದೆ. ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ಒಂದು ಆರಾಧನ ಕಾರ್ಯಕ್ರಮವನ್ನು ತಂದಿದ್ದಾರೆ. ಧಾರ್ಮಿಕ ಮಂತ್ರಿಗಳೇ, ಈ ಕಾರ್ಯಕ್ರಮದಲ್ಲಿ ಬರೀ ಎಸ್‌ಸಿ/ಎಸ್‌ಟಿ ಕಾಲೋನಿಗಳಲ್ಲಿರತಕ್ಕಂಥ ಜಾಗಕ್ಕೆ ಮಾತ್ರ ಕೊಡಬೇಕು ಎಂದು ತಮ್ಮ ಸುತ್ತೋಲೆ ಹೇಳುತ್ತದೆ. ಈ ಬಗ್ಗೆ ನಾನು ವಿನಂತಿ ಮಾಡುತ್ತೇನೆ. ಬಡವರು ಎಲ್ಲಾ ವರ್ಗದಲ್ಲಿಯೂ ಇದ್ದಾರೆ. ಎಸ್‌ಸಿ/ಎಸ್‌ಟಿ ಯಲ್ಲಿದ್ದಾರೆ, ಇವತ್ತು ಬ್ರಾಹ್ಮಣರಲ್ಲಿಯೂ ತಿನ್ನಲಿಕ್ಕೆ ಹಿಟ್ಟಿಲ್ಲದೆ ಇರತಕ್ಕಂಥವರು ಇದ್ದಾರೆ. ಆದ್ದರಿಂದ ತಾವು ಎಲ್ಲಾ ಜನಾಂಗಕ್ಕೂ ಕೊಡಿ. ಎಲ್ಲಿ ಕಾಲೋನಿ ಇದೆ. ಆ ಕಾಲೋನಿಯಲ್ಲಿ ದೇವಸ್ಥಾನ ಮಾಡಲೇಬೇಕು ಎಂದು ಶಾಸಕರಿಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಅನ್ನಿಸಿದರೆ ಅಲ್ಲಿ ಕೊಡತಕ್ಕಂಥ ವ್ಯವಸ್ಥೆ ಮಾಡಿ. ನೀವು ಎಸ್.ಸಿ./ಎಸ್.ಟಿ. ಎಂದು ಇರುವುದನ್ನು ತೆಗೆದು ಎಲ್ಲಿ ಅತ್ಯಗತ್ಯವಾಗಿ ದೇವಸ್ಥಾನಗಳು ಆಗಬೇಕೆಂದರೆ ಇದೆಯೋ ಅಲ್ಲಿ ಆ ವ್ಯವಸ್ಥೆ ಆಗಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದೆಲ್ಲ ಮಾಡಿದರೆ 100-200 ಕೋಟಿ ರೂಪಾಯಿಗಳ ಲಾಭ ಬರುತ್ತದೆನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಕಂದಾಯ ಇಲಾಖೆ. ಡೆಪ್ಯುಟಿ ಕಮೀಷನರ್‌ರವರ ಇಲಾಖೆ ಸಾಕ್ಷರತಾ ಆಂದೋಲನ ಮಾಡುತ್ತಿದೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ಹೆಸರನ್ನು ಬರೆಸಿಕೊಳ್ಳುವುದನ್ನು ನಾವು ಚುನಾವಣೆಯಲ್ಲಿ ನೋಡಿದ್ದೇವೆ. ಹಾಗೆ ಇಲ್ಲಿ ಎಲ್ಲರ ಮನೆಗಳ ಗೋಡೆಗಳ ಮೇಲೆ ಹೆಸರುಗಳು ತುಂಬಿ ಹೋಗಿವೆ. ಎಲ್ಲ ಊರುಗಳಲ್ಲಿಯೂ ಬ್ಯಾನರ್‌ಗಳು ಹಾರಾಡುತ್ತಿವೆ. ಯಾವ ಉದ್ದೇಶಕ್ಕೋಸ್ಕರ ಈ ಸಾಕ್ಷರತಾ ಆಂದೋಲನವನ್ನು ತಂದಿದ್ದು? ಕೇಂದ್ರ ಸರ್ಕಾರದ ಉದ್ದೇಶ ಏನು? ಇವತ್ತು ರಾಜ್ಯ ಸರ್ಕಾರ ಮಾನಿಟರ್ ಮಾಡತಕ್ಕಂಥದ್ದು ನನಗೆ ಗೊತ್ತು. ಜಿಲ್ಲಾಧಿಕಾರಿಗಳ ಮೂಲಕ ನೀವು ಮಾಡಿಸುತ್ತಿರತಕ್ಕಂಥದ್ದು ಇವತ್ತು ಇಡೀ ಕರ್ನಾಟಕದಲ್ಲಿ 5 ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇದರ ಬಗ್ಗೆ ಸಮಗ್ರವಾದ ಒಂದು ತನಿಖೆಯಾಗಬೇಕು. ತನಿಖೆ ಎಂದರೆ ಸಿ.ಬಿ.ಐ. ಯಿಂದಲೇ ಆಗಬೇಕು. ಮಂಡ್ಯ ಜಿಲ್ಲೆ ಒಂದಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಎಷ್ಟು ಸ್ಲೇಟ್‌ಗಳನ್ನು ಕೊಟ್ಟಿದ್ದಾರೆ. ಈ ಸ್ಲೇಟ್‌ಗಳನ್ನು ಆಂಧ್ರ ಪ್ರದೇಶದಿಂದ ತರಿಸುತ್ತಿದ್ದಾರೆ. ನಿಜ ಕಾರ್ಯಕ್ರಮದಲ್ಲಿ. ನಮ್ಮ ದಿವಂಗತ ಮಾನ್ಯ ನಜೀರ್ ಸಾಬ್‌ರವರು ತಂದಿದ್ದಂಥ ಕಾರ್ಯಕ್ರಮದಡಿಯಲ್ಲಿ ಬಹಳಷ್ಟು ವಸ್ತುಗಳು ಸಿಕ್ಕುತ್ತಿದೆ.

ಬಳಪಗಳನ್ನು ಆಂಧ್ರಪ್ರದೇಶದಿಂದ ತರಿಸುತ್ತಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ವಿಶ್ವ ಕಾರ್ಯಕ್ರಮದ ಅಡಿಯಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಮಂಡ್ಯ ಜಿಲ್ಲೆಯೊಂದಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಸಾಮಗ್ರಿಗಳು ಬೇಕು. ಅವು ಎಲ್ಲಿಂದ ಬರುತ್ತಿವೆ. ಯಾವ ಜಿಲ್ಲಾಧಿಕಾರಿಗಳು ಆಂಧ್ರಪ್ರದೇಶದಿಂದ ಬಂದಿರುತ್ತಾರೋ ಅಲ್ಲಿಂದ ಇವೆಲ್ಲ ವಸ್ತುಗಳು ಬರುತ್ತಿದೆ. ಇದರ ಬಗ್ಗೆ ತನಿಖೆಯಾಗಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ಇಲ್ಲಿ ಹಣ ಲೂಟಿ ಮಾಡುತ್ತಿದ್ದಾರೆ. ಒಬ್ಬೊಬ್ಬ ಡೆಪ್ಯುಟಿ ಕಮೀಷನರ್ 50 ಲಕ್ಷ ರೂಪಾಯಿ ದುಡ್ಡು ಹೊಡೆದಿದ್ದಾರೆ. ಇದರ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು. ತನಿಖೆಯಾದರೆ ಮಾತ್ರ ನಿಜಸ್ಥಿತಿ ಹೊರಗೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಬಳಪ-ಸೀಮೆಸುಣ್ಣ-ಸ್ಲೇಟು ಗ್ರಾಮಾಂತರ ಪ್ರದೇಶಗಳಲ್ಲಿ ರತಕ್ಕಂಥ ಕೈಗಾರಿಕೆಗಳಿಂದ ತಯಾರು ಆಗತಕ್ಕಂಥದ್ದು. ಮಾನ್ಯ ಅಧ್ಯಕ್ಷರೇ. ಇನ್ನೊಂದು ಕ್ಷಮಾಪಣೆ ಹೇಳುತ್ತೇನೆ. ಸಾಕ್ಷರತಾ ಆಂದೋಳನದಲ್ಲಿ ಒಂದು ತಾಲ್ಲೂಕಿಗೆ ನಾಲ್ಕು ಲಕ್ಷದಿಂದ ಐದು ಲಕ್ಷದವರೆಗೆ ಪೆನ್ನುಗಳು ಬೇಕು. ನಮ್ಮ ವಿಶ್ವ ಕಾರ್ಯಕ್ರಮ ಪ್ರಾರಂಭವಾಗಿ ಸುಮಾರು 6-7 ತಿಂಗಳಾಯಿತು. ಕಲ್ಕತ್ತಾದಿಂದ ಪೆನ್ನುಗಳನ್ನು ತರಿಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ಗೆ ಈ ಸಾಕ್ಷರತಾ ಆಂದೋಳನ ಕಾರ್ಯಕ್ರಮ ಬರುತ್ತದೆ. ಅವರು ಮಾನಿಟರ್ ಮಾಡುತ್ತಾರೆ. ಡೆಪ್ಯುಟಿ ಕಮೀಷನರ್ ಮತ್ತು ತಹಸೀಲ್ದಾರರು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿದವರು. ಆದರೆ ಆ ಇಲಾಖೆಯವರು ಅದಕ್ಕೆ ನಿರ್ದೇಶನ ಕೊಡುತ್ತಾರೆ. ಸರ್ಕಾರದವರು ಆದೇಶವನ್ನು ಹೊರಡಿಸುತ್ತಾರೆ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಸಂಬಂಧಪಟ್ಟಿದ್ದರಿಂದ ಎಜ್ಯುಕೇಷನ್ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ಮಾನ್ಯ ಸದಸ್ಯರು ವಿವರವಾಗಿ ಹೇಳಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದನ್ನು ಜಿಲ್ಲಾಧಿಕಾರಿಗಳು. ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಖಾಂತರ ನೀವು ಮಾಡಿಸುತ್ತಿರುವುದರಿಂದ. ಜಿಲ್ಲಾಧಿಕಾರಿಗಳು ನಿಮ್ಮ ಹತೋಟಿಗೆ ಬರುವುದರಿಂದ ತನಿಖೆಯನ್ನು ನೀವೇ ಮಾಡಿಸಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಹೇಳಿದ ಹಾಗೆ ಸಾಕ್ಷರತಾ ಆಂದೋಲನದ ಬಗ್ಗೆ ಶಿಕ್ಷಣ ಇಲಾಖೆಯ ಬೇಡಿಕೆ ಬಂದಾಗ ಹೇಳುತ್ತೇನೆ. ಇವತ್ತು ವಯಸ್ಕರ ಶಿಕ್ಷಣ ಸಮಿತಿಯವರು ಬರೀ ಲೆಕ್ಕ ಕೊಡುತ್ತಿದ್ದಾರೆ. ಕಾಗದದ ಮೇಲೆ ಅಂಕಿಅಂಶಗಳು ಇವೆ. ನಿಜವಾಗಿಯೂ ಒಂದು ಬೋರೇಗೌಡ ಅಕ್ಷರವನ್ನು ಕಲಿಯುತ್ತಾ ಇಲ್ಲವೆಂದು ಗೊತ್ತಾಗಿಯೇ ಇವತ್ತು ಸಾಕ್ಷರತಾ ಆಂದೋಳನವನ್ನು ತಂದಿದ್ದು. ಆದರೆ ಸಾಕ್ಷರತಾ ಆಂದೋಲನವೂ ಸಹಿತ ವಯಸ್ಕರ ಶಿಕ್ಷಣ ಸಮಿತಿಯಾದಂತಾದರೆ ಏನು ಪ್ರಯೋಜನ. ಅದಕ್ಕೋಸ್ಕರ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಜಿಲ್ಲಾಧಿಕಾರಿಗಳು ತಮ್ಮ ಕಂಟ್ರೋಲ್‌ನಲ್ಲಿದ್ದಾರೆ. ಅದಕ್ಕೇನಾದರೂ ಕಾಯಕಲ್ಪ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ತಾವು ಹೇಳಿದಹಾಗೆ ನಾನು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನ ಬೇಡಿಕೆ ಬಂದಾಗ ಅದರ ಮೇಲೆ ಮಾತನಾಡುತ್ತೇನೆ. ಒಟ್ಟಿನಲ್ಲಿ ನಿಮ್ಮ ಜಿಲ್ಲಾಧಿಕಾರಿಗಳು, ನಿಮ್ಮ ಕೈಯಲ್ಲಿರತಕ್ಕಂಥವರ ಬಗ್ಗೆ ಇದರ ಬಗ್ಗೆ ಸಿ.ಬಿ.ಐ.ನಿಂದ ಒಂದು ಸಮಗ್ರವಾದ ತನಿಖೆಯಾಗಬೇಕು. ತನಿಖೆಯಾದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇದನ್ನು ತನಿಖೆ ಮಾಡಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಜಿಲ್ಲಾ ಪರಿಷತ್ತು. ಮಾನ್ಯ ಹನುಮೇಗೌಡರು ಇದ್ದಾರೆ. ಅವರು ಬಹಳ ಚೆನ್ನಾಗಿ ಹೇಳಿದರು; ಈ ಕಡೆ ಕುಳಿತಿರುವವರು ಜಿಲ್ಲಾ ಪರಿಷತ್ತುಗಳನ್ನು ತಂದು ಕತ್ತು ಹಿಸುಕಿ ಹಾಕಿದರು ಎಂದು ಹೇಳಿದರು. ಜಿಲ್ಲಾ ಪರಿಷತ್ತಿನ ಸಮಗ್ರ ಮಸೂದೆ ಮಾಡಿದೆವು, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗತಕ್ಕ ಕೆಲಸ ಮಾಡಿದೆವು ಎಂದು ಹೇಳಿದವರಿಗೆ ಹನುಮೇಗೌಡರು ಬಹಳ ಚೆನ್ನಾಗಿ ಹೇಳಿದರು. ಜಿಲ್ಲಾ ಪರಿಷತ್ತುಗಳನ್ನು ತಂದ ಕೇವಲ 5 ವರ್ಷಗಳ ಅವಧಿಯಲ್ಲಿ ಹಿಂದೆಂದೂ ಅನುಭವಿಸದ ಸೋಲನ್ನು ಅನುಭವಿಸಿದ್ದೀರಿ ಎಂದು ಹೇಳಿದರು. ಜಿಲ್ಲಾ ಪರಿಷತ್ತು. ಮಂಡಳ ಪಂಚಾಯಿತಿಗಳನ್ನು ತೆಗೆದ ಮೇಲೆ ಎಷ್ಟೋ ಊರುಗಳಲ್ಲಿ ಹೆಣ್ಣುಮಕ್ಕಳನ್ನು ಕೊಡಬೇಕು, ತರಬೇಕೆಂದರೆ ನೆಂಟಸ್ತನ ಕಿತ್ತು ಹೋಗಿತ್ತು. ಗಂಡ ಒಂದು ಪಾರ್ಟಿ. ಹೆಂಡತಿ ಒಂದು ಪಾರ್ಟಿ. ಹಳ್ಳಿಗಳಲ್ಲಿ ಜನ ಬಹಳ ಚಿತ್ರಹಿಂಸೆಗೆ ಗುರಿಯಾಗಿದ್ದರು. ಎಷ್ಟರಮಟ್ಟಿಗೆ ಆ ಪರಿಸ್ಥಿತಿ ಆಗಿತ್ತು ಎಂಬುದನ್ನು ನೋಡಬೇಕು. ನಮ್ಮ ಕಡೆ ಜನರು ಮಂಡಲ ಪಂಚಾಯಿತಿ ಎನ್ನುತ್ತಿರಲಿಲ್ಲ. ಮರ್ಡರ್ ಪಂಚಾಯಿತಿ ಎನ್ನುತ್ತಿದ್ದರು. ಆ ಮಟ್ಟಕ್ಕೆ ಮಂಡಲ ಪಂಚಾಯಿತಿಗಳು ಮುಟ್ಟಿದ್ದವು.

ಶ್ರೀಮತಿ ಮೋಟಮ್ಮ : ನಿಮಗೆ ಹೆಣ್ಣುಕೊಟ್ಟ ಮಾವ ಯಾವ ಪಾರ್ಟಿ?

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಜನತಾ ದಳ. ಈಗಿರತಕ್ಕ ವ್ಯವಸ್ಥೆಯಲ್ಲಿ ನಮ್ಮ ಮಾವ ಮಾಡಿದ್ದರೂ ಅದೇ ಉತ್ತರ. ಆದುದರಿಂದ ಇದಕ್ಕೆ ನಾನು ಸಂಪೂರ್ಣ ವಿರೋಧ. ಏತಕ್ಕೆ ಹೇಳುತ್ತಿದ್ದೇನೆಂದರೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿದ ನಜೀರ್ ಸಾಬ್ ಅವರು ಇಂದು ಇಲ್ಲ. ಅವರು ಮಾಡಿದಂತಹ ಸಂದರ್ಭದಲ್ಲಿ ಹೇಳಿದರು. ಇದು ಒಂದು ಹೊಸ ವ್ಯವಸ್ಥೆ. ಇದನ್ನು ಎಕ್ಸಪರಿಮೆಂಟಲ್ ಆಗಿ ಮಾಡುತ್ತೇವೆ. ಈ ರಾಜ್ಯದಲ್ಲಿ ಇದು ಸರಿಯಾದರೆ ಸರಿ. ಅಳವಡಿಸಿಕೊಳ್ಳೋಣ. ಇಲ್ಲದಿದ್ದರೆ ಬದಲಾವಣೆ ಮಾಡೋಣ ಎಂಬ ಮಾತನ್ನು ಸಹ ಅವರು ಹೇಳಿದ್ದರು. ನಾನು ಇವತ್ತು ಮಾನ್ಯ ವಿರೋಧ ಪಕ್ಷದ ಮುಖಂಡರಿಗೆ ಕೇಳುತ್ತೇನೆ. ಇವತ್ತೇನಾದರೂ ಅತಿ ಹೆಚ್ಚಿನ ಅನಾಹುತ ಹಿಂದಿನ ಸರ್ಕಾರಕ್ಕೆ ಆಗಿದ್ದರೆ ಅದು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ಮೇಲೆ ಎಂದು ಅದರ ಮೂಲ ಹೊಡೆತ ಹೊಡೆದದ್ದು ಇವತ್ತು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಸೀಟು ಕಡಿಮೆ ಇದ್ದರೂ ಮಾನ್ಯತೆ ಇರುತ್ತಿರಲಿಲ್ಲ. ಆ ಮಟ್ಟಕ್ಕೆ ಪರಾಭವ ಹೊಂದಬೇಕಾದರೆ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಮಸೂದೆಯನ್ನು ತಂದುದರ ಪರಿಣಾಮವೇ ಹೊರತು ಮತ್ತೆ ಬೇರೆ ಏನೂ ಅಲ್ಲವೆಂದು ತಿಳಿದುಕೊಳ್ಳಬೇಕಾಗಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಎಷ್ಟೋ ಜನ ಮುಖಂಡರು ನಿರ್ನಾಮವಾಗಿದ್ದರು. ಅವರು ಮನೆ ಬಿಟ್ಟು ಈಚೆಗೆ ಬರುವುದಕ್ಕೆ ಆಗದೆ ಇದ್ದರು. ಐದು ವರ್ಷಗಳ ಅವಧಿಯಲ್ಲಿ ಜಿಲ್ಲಾ ಪರಿಷತ್ತು ಮತ್ತು ಪಂಚಾಯಿತಿಯ ಪ್ರಧಾನರು ಬಹಳ ತನುವಾದರು. ದುಡ್ಡಿನಲ್ಲಿ ಫಲಪ್ರದವಾದರು. ಅವರ ಹಿಂದೆ ಯಾರು ಬ್ಯಾಗ್ ಹಿಡಿದುಕೊಂಡು ತಿರುಗುತ್ತಾರೆ ಅವರೆಲ್ಲ ತನುವಾದರು. ಮಾನ್ಯ ಲೋಕೋಪಯೋಗಿ ಸಚಿವರು. ಲೋಕೋಪಯೋಗಿ ಇಲಾಖೆಯಲ್ಲಿ ಸರ್ಕಾರ ಕೊಟ್ಟ ಅರ್ಧ ಹಣದ ಕೆಲಸವಾದರೆ ಸಾಕು ಎಂದು ಹೇಳಿದರು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಎಷ್ಟು ಹಣ ಕೊಟ್ಟಿದ್ದೇವೆ ಅದರಲ್ಲಿ 40 ಪರ್ಸೆಂಟ್ ಕೆಲಸವಾದರೆ ಸಾಕು ಎಂದು ಹೇಳಿದರು. ಇವತ್ತು 20 ಪರ್ಸೆಂಟ್ ಕೂಡ ಆಗಲಿಲ್ಲ. ದುಡ್ಡೆಲ್ಲ ಡೀ-ಸೆಂಟ್ರಲೈಸ್ ಆಯಿತು. ತಾಲ್ಲೂಕಿನಿಂದ ಹೋಬಳಿಗೆ. ಹೋಬಳಿಯಿಂದ ಮಂಡಲಕ್ಕೆ ಹಂಚಿಕೆಯಾಗಿ ಹೋಯಿತು. ಎಲ್ಲಾ ಜಿಲ್ಲಾ ಪರಿಷತ್ತು. ಮಂಡಲ ಪಂಚಾಯಿತಿ

ಪ್ರಧಾನರು ಲೂಟಿ ಹೊಡೆದು ದುಡ್ಡು ಮಾಡಿದರು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ 900 ಕೋಟಿ ರೂಪಾಯಿಗಳನ್ನು ಕೊಡಲಾಗುತ್ತಿತ್ತು. ಕಳೆದ 5 ವರ್ಷಗಳಿಂದ ಏನು ಅಭಿವೃದ್ಧಿಯಾಗಿದೆ? ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಕೋಟಿ ರೂಪಾಯಿ ಹೊಡೆದ ಮುಖ್ಯ ಕಾರ್ಯದರ್ಶಿಯವರನ್ನು ಏನೂ ಮಾಡುವುದಕ್ಕಾಗಲಿಲ್ಲ. ಅದರ ಬಗ್ಗೆ ಸಿಬಿಐ. ತನಿಖೆ ಮಾಡಿ ಎಂದು ಕೇಳಿದರೆ ಅದೂ ಆಗಲಿಲ್ಲ. ಇಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಸಮಗ್ರವಾಗಿ. ಏನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ವ್ಯವಸ್ಥೆ ಇದೆಯೋ ಇದನ್ನು ತೆಗೆದು 3 ಟೈರ್ ಸಿಸ್ಟಂ ಮಾಡಿ. ಇವತ್ತು 40 ಸಾವಿರ ಜನಸಂಖ್ಯೆಗೆ ಒಂದು ಮಂಡಲ ಪಂಚಾಯಿತಿ ಇದೆ. ಒಂದು ತಮಾಷೆ ಹೇಳಬೇಕಾಗುತ್ತದೆ. ನಾವು ತಾಲ್ಲೂಕು ಪಂಚಾಯಿತಿ ಮೀಟಿಂಗ್‌ನಲ್ಲಿ ಕುಳಿತುಕೊಂಡಾಗ ಪ್ರಧಾನರ ಮಾತನ್ನು ಕಿವಿಯಿಂದ ಕೇಳುವುದಕ್ಕಾಗುವುದಿಲ್ಲ. ನಮ್ಮ ಊರಿನಲ್ಲಿ ದೀಪದ ವ್ಯವಸ್ಥೆ ಸರಿಯಿಲ್ಲ. ರಸ್ತೆ ವ್ಯವಸ್ಥೆ ಸರಿಯಿಲ್ಲ. 8 ವರ್ಷಗಳಿಂದ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ರಸ್ತೆಗಳು ಒಂದು ಹಿಡಿ ಮಣ್ಣು ಕೂಡ ಕಾಣಲಿಲ್ಲ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರತಕ್ಕ ರಸ್ತೆಗಳನ್ನು ಸಂಪೂರ್ಣವಾಗಿ ಸರ್ಕಾರ ತೆಗೆದುಕೊಳ್ಳಬೇಕು. ಸರ್ಕಾರಕ್ಕೆ ಹಣಕಾಸಿನ ಮುಗ್ಗಟ್ಟು ಇದೆ ಎಂದು ಗೊತ್ತಿದೆ. ಆದರೆ ನೀವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ರಸ್ತೆಗಳನ್ನು ಬಿಟ್ಟರೆ ಮುಂದಿನ ಚುನಾವಣೆಗೆ ನಾವು ಯಾರೂ ಊರಿಗೆ ಹೋಗುವುದಕ್ಕಾಗುವುದಿಲ್ಲ. ಸನ್ಮಾನ್ಯ ಅಶ್ವತ್ಥರೆಡ್ಡಿಯರು. ಬಂಗಾರಪ್ಪನವರು ಅಧಿಕಾರ ವಹಿಸಿಕೊಂಡ ಮೇಲೆ ಬಂಡೀಪುರದ ರಸ್ತೆಗಿಂತ ಕಡೆಯಾಗಿದ್ದ ಪಿ.ಡಬ್ಲ್ಯೂ.ಡಿ ರಸ್ತೆಗಳು ಗುಂಡಿ ಮುಚ್ಚಿ ಸುಮಾರಾಗಿ ತಿರುಗಾಡುವಂತೆ ಆಗಿದೆ. ಅವತ್ತಿಗೂ ಎಷ್ಟೋ ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಯಲ್ಲಿ ಬರತಕ್ಕ ರಸ್ತೆಗಳು ಅದೇ ರೀತಿ ಇವೆ. ಇಂಟೀರಿಯರ್ ಪ್ಲೇಸ್ ಇರಲಿ, ತಾಲ್ಲೂಕು ಮಟ್ಟದ ರಸ್ತೆಗಳನ್ನು ಬಿಟ್ಟು ದೊಡ್ಡ ದೊಡ್ಡ ಹಳ್ಳಿಗಳ ರಸ್ತೆಗಳು ಹಾಗೇ ಇವೆ. ಇವತ್ತು ಜನ ಬಹಳ ಬುದ್ಧಿವಂತರಾಗಿದ್ದಾರೆ. ಹಿಂದೆ ಓಟು ಪಡೆದ ಶಾಸಕರು 5 ವರ್ಷವಾದರೂ ಊರಿಗೆ ಹೋಗದಿದ್ದರೆ ಕೇಳುತ್ತಿರಲಿಲ್ಲ. ಪ್ರತಿ ಹದಿನೈದು ದಿವಸಕ್ಕೆ ಜನರ ಮೆಚ್ಯೂರಿಟಿ ಜಾಸ್ತಿಯಾಗಿದೆ. ಪ್ರತಿ ಊರಿನಲ್ಲಿ ನೋದರ ಹೆಣ್ಣುಮಕ್ಕಳು ನಮ್ಮ ಊರಿಗೆ ಮಿನಿ ವಾಟರ್ ಮಾಡಿ ಎಂದು ಕೇಳುತ್ತಾರೆ. ಮಿನಿ ವಾಟರ್ ಮಾಡಿಸಿಕೊಂಡಿರುವವರು ಮೇಜರ್ ವಾಟರ್ ಮಾಡಿ ಎಂದು ಕೇಳುತ್ತಾರೆ. ಈಗ ರಸ್ತೆಯಲ್ಲಿ ಜೆಲ್ಲಿ ಹಾಕಿದರೆ ಯಾರೂ ಕೇಳುವುದಿಲ್ಲ. ಇವತ್ತು ಟಾರ್ ಕೇಳುತ್ತಿದ್ದಾರೆ. ಜನರ ವ್ಯೂ ಯಾವ ಕಡೆ ಹೋಗುತ್ತದೋ ಹಾಗೆ ನಾವೂ ಹೋಗಬೇಕು. ಸರ್ಕಾರವೂ ಹೋಗಬೇಕು. ಇಲ್ಲದಿದ್ದರೆ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವುದಕ್ಕಾಗುವುದಿಲ್ಲ. ಅದಕ್ಕೆ ನಾನು ನಿಮಗೆ ಒತ್ತಾಯ ಮಾಡುತ್ತೇನೆ ತಾವು ಪಿ.ಡಬ್ಲ್ಯೂ.ಡಿ. ಯಲ್ಲಿ ಒಂದು ತೀರ್ಪು ತೆಗೆದುಕೊಂಡಿದ್ದೀರಿ ಎಂಬ ಮಾತನ್ನು ಕೇಳಿದೆ. 40 ಲಕ್ಷ ರೂಪಾಯಿ ಒಬ್ಬ ಶಾಸಕರಿಗೆ ರಸ್ತೆಗಳ ಜೀರ್ಣೋದ್ಧಾರಕ್ಕಾಗಿ ಕೊಡುತ್ತಾರೆಂಬ ಮಾತು ಕೇಳಿದೆ. ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ದುಡ್ಡು ಕೊಟ್ಟರೆ ಏನೂ ಪ್ರಯೋಜನ ಇಲ್ಲ. ಪಿ.ಡಬ್ಲ್ಯೂ.ಡಿ. ರಸ್ತೆಯಲ್ಲಿ ತಿರುಗಾಡುವವನು ಬಡಬೋರೇಗೌಡನಲ್ಲ. ಪಿ.ಡಬ್ಲ್ಯೂ.ಡಿ. ರಸ್ತೆಯಲ್ಲಿ ತಿರುಗಾಡುವವರು ದೊಡ್ಡವರು. ಪಿ.ಡಬ್ಲ್ಯೂ.ಡಿ. ರಸ್ತೆಯಲ್ಲಿ ತಿರುಗಾಡುವುದು ದೊಡ್ಡ ಬಸ್ಸುಗಳ; ದೊಡ್ಡ ವಾಹನಗಳು. ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತ ತಿರುಗಾಡತಕ್ಕ ರಸ್ತೆಗಳು ಇವತ್ತು ಒಂದು ಹಿಡಿ ಮಣ್ಣು ಕಾಣುವುದಿಲ್ಲ. 8-10 ವರ್ಷಗಳಿಂದ ಹಾಗೇ ಬಿದ್ದಿವೆ. ಇವರು ಅಧಿಕಾರ ವಹಿಸಿಕೊಂಡಾಗಿನಿಂದಲೂ ಅದಕ್ಕೆ ಒಂದು ಹಿಡಿ ಮಣ್ಣು ಹಾಕಲಿಲ್ಲ. ಎ.ಆರ್.ನಲ್ಲಿ ದುಡ್ಡು ಕೊಡುತ್ತೀರಿ ಸ್ವಾಮಿ. ಎಲ್ಲಾ ಇಂಜಿನಿಯರುಗಳು ಬಿಲ್ ಮಾಡಿಕೊಳ್ಳುತ್ತಾರೆ. ಅದರ ಬಗ್ಗೆ ತಾವು ಒಂದು ಸಮಗ್ರ ತನಿಖೆ ಮಾಡಿಸಬೇಕು. ಎ.ಆರ್.ನಲ್ಲಿ ಜಿಲ್ಲಾ ಪರಿಷತ್ ಅಡಿಯಲ್ಲಿ. ಪಿ.ಡಬ್ಲ್ಯೂ.ಡಿ.

ಅಡಿಯಲ್ಲಿ ಕೊಡತಕ್ಕ ಹಣದಲ್ಲಿ ಯಾರೂ ಸಹ ಮಣ್ಣು ಹಾಕುವುದಿಲ್ಲ. ಎಲ್ಲರೂ ಸಹ ಆಫೀಸಿನಲ್ಲಿ ಕುಳಿತುಕೊಂಡು, ಎಲ್ಲಾ ಬರೆದುಕೊಂಡು ಎ.ಆರ್.ನಲ್ಲಿ ಕೊಡತಕ್ಕ ಎಲ್ಲಾ ದುಡ್ಡನ್ನೂ ನುಂಗಿಹಾಕಿದ್ದಾರೆ. ಇಂಜನಿಯರುಗಳು ತಿನ್ನುತ್ತಾರೆ ಎ.ಆರ್.ನಲ್ಲಿ ದುಡ್ಡು ಕೊಡಬೇಕು. ಆದರೆ ಅದು ಸರಿಯಾಗಿ ತಲುಪಿತೋ ಇಲ್ಲವೋ ಎಂಬ ಬಗ್ಗ ಮೇಲ್ಪಟ್ಟ ಅಧಿಕಾರಿಗಳು ಕಣ್ಣಿಟ್ಟು ಕಾಯಬೇಕು. ಒಂದೊಂದು ತಾಲ್ಲೂಕಿಗೆ ಹತ್ತಾರು ಲಕ್ಷ ರೂಪಾಯಿಗಳನ್ನು ಎ.ಆರ್.ನಲ್ಲಿ ಕೊಡುತ್ತೀರಿ. ಮೈಂಟೆನೆನ್ಸ್‌ಗೆ ದುಡ್ಡು ಕೊಡುತ್ತೀರಿ. ಅದು ಯಾವುದೂ ಸಹ ಆಗುತ್ತಿಲ್ಲ. ಆದುದರಿಂದ ಇದರ ಬಗ್ಗೆ ತಾವು ಗಮನ ಹರಿಸಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಸಿಕ್ಕಿರತಕ್ಕ ವರದಿ ಪ್ರಕಾರ ನನಗೆ ಲಭ್ಯವಾಗಿರತಕ್ಕ ಅಂಕಿಅಂಶಗಳ ಪ್ರಕಾರ, 10 ಸಾವಿರ ಕಿಲೋಮೀಟರ್ ರಸ್ತೆಯನ್ನು ಮಾತ್ರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬಿಟ್ಟು ದೊಡ್ಡ ದೊಡ್ಡ ಹಳ್ಳಿಗಳ ರಸ್ತೆಗಳನ್ನು ಗುರುತು ಮಾಡಿ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದಲ್ಲದೆ 40 ಲಕ್ಷ ರೂಪಾಯಿ ಹಣ ಏನು ಕೊಡಬೇಕೆಂದು ಇದ್ದೀರೋ ಅದರಲ್ಲಿ ಪಿ.ಡಬ್ಲ್ಯು.ಡಿ. ರಸ್ತೆಯನ್ನೇ ತೆಗೆದುಕೊಳ್ಳಬೇಕು ಎಂದು ಜಿ.ಒ. ಹೊರಡುತ್ತಿದೆ. ದಯವಿಟ್ಟು ಅದನ್ನು ತಡೆಹಿಡಿಯಬೇಕು. 40 ಲಕ್ಷ ರೂಪಾಯಿಗಳ ಕೆಲಸವನ್ನು ಕೊಡತಕ್ಕ ಸಂದರ್ಭದಲ್ಲಿ ಶಾಸಕ ಯಾವ ರಸ್ತೆಯನ್ನಾದರೂ ಗುರುತು ಮಾಡಲಿ. ಅದಕ್ಕೆ ಕೊಡುವಂತೆ. ತಾವು ಕಾನೂನು ತರಬೇಕು. ಆಗ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರಸ್ತೆಗಳನ್ನು ಸ್ವಲ್ಪ ಹೆಚ್ಚು ಕಡಿಮೆ ನಾವು ಮಾಡಿಸಿದ್ದೇವೆ ಎಂದು ಹೇಳುವ ಮಟ್ಟಕ್ಕೆ ಹೋಗುತ್ತೇವೆ. ಇದರ ಬಗ್ಗೆ ತಾವು ಸಮಾಲೋಚನೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ವೆಟರ್ನರಿ ಹಾಸ್ಪಿಟಲ್ ಬರುತ್ತದೆ. ಫಿಷರೀಸ್‌ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಈ ಇಲಾಖೆಯ ಮಂತ್ರಿಗಳಾದ ಮಾನ್ಯ ಬೆಳ್ಳಿಯಪ್ಪನವರಿಲ್ಲ. ಅವರನ್ನು ತಾವು ನಾಗಹೊಳೆಗೆ ಕಳುಹಿಸಿದ್ದೀರಿ. ಇವತ್ತು ಫಿಷರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ದ್ವಂದ್ವ ಇದೆ. ಆದರ ಟ್ಯಾಂಕುಗಳನ್ನು ಜಿಲ್ಲಾ ಪರಿಷತ್ತು ವಹಿಸಿಕೊಳ್ಳಬೇಕೇ ಅಥವಾ ಮಂಡಲ ಪಂಚಾಯಿತಿ ವಹಿಸಿಕೊಳ್ಳಬೇಕೇ ಎಂಬ ಬಗ್ಗೆ ದ್ವಂದ್ವ ಇದೆ. ಇವತ್ತು ಇವೆಲ್ಲಾ ಪರ್ಮನೆಂಟಾಗಿ ಬರತಕ್ಕ ಸೋರ್ಸ್‌ಗಳು. ಫಿಷರೀಸ್ ಡಿಪಾರ್ಟ್‌ಮೆಂಟಿನಲ್ಲಿ ಮೀನನ್ನು ಬಿಡತಕ್ಕ ಸಣ್ಣ ಕೆರೆಗಳು ಏನಿವೆ ಆ ಕೆರೆಗಳನ್ನೆಲ್ಲಾ ತಾವು ಮಂಡಲ ಪಂಚಾಯಿತಿಗೆ ವಹಿಸಿಕೊಟ್ಟು ಅದರಿಂದ ಬರತಕ್ಕ ವರಮಾನವನ್ನು ಏನು ಮಂಡಲ ಪಂಚಾಯಿತಿ ತೆಗೆದು ಗ್ರಾಮ ಪಂಚಾಯಿತಿ ಎಂದು ಮಾಡುತ್ತೀರೋ ಆ ಗ್ರಾಮ ಪಂಚಾಯಿತಿಗಳಿಗೆ ಅನುದಾನ ಬರತಕ್ಕ ವ್ಯವಸ್ಥೆ ಮಾಡಬೇಕು. ಆದಾಯ ಬರತಕ್ಕ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಬಸವರಾಜ ಪಾಟೀಲರು ಈಗ ಬಂದರು. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ವೆಟರ್ನರಿ ಡಿಪಾರ್ಟ್‌ಮೆಂಟ್ ಮತ್ತು ವೆಟರ್ನರಿ ಆಸ್ಪತ್ರೆಗಳು ರೈತರಿಗೆ ಬಹಳ ಪ್ರಾಮುಖ್ಯವಾಗಿ ಬೇಕು. ವೆಟರ್ನರಿ ಡಿಪಾರ್ಟ್‌ಮೆಂಟಿನಲ್ಲಿ ಈ ಸರ್ಕಾರ ಬಂದಮೇಲೆ ನೂರಾರು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಕೂಡ ಒಂದು ವರ್ಷದಿಂದೀಚೆಗೆ ಮೂರು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ. ನಾನು ಹದಿನೈದು ವರ್ಷಗಳಿಂದ ಒಂದು ಆಸ್ಪತ್ರೆಯನ್ನು ನೋಡಿರಲಿಲ್ಲ. ಮೂರು ಆಸ್ಪತ್ರೆಗಳನ್ನು ಒಂದು ವರ್ಷದಿಂದೀಚೆಗೆ ಕೊಟ್ಟಿದ್ದೀರಿ. ಆ ಆಸ್ಪತ್ರೆಯಲ್ಲಿ ಇವತ್ತು ಏನಾಗಿದೆ? ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರತಕ್ಕ ಆಸ್ಪತ್ರೆಗಳ ಬಗ್ಗೆ ಈ ಇಲಾಖೆ ಬೇಡಿಕೆ ಬಂದಾಗ ಹೇಳುತ್ತೇನೆ. ಅಲ್ಲಿ ಯಾವ ಸ್ಟಾಫ್ ಇಲ್ಲ. ಆಸ್ಪತ್ರೆ ಮಾತ್ರ ಲೆಕ್ಕಕ್ಕೆ ಇದೆ. ಇದನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಬೇಕು. ಇದನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬೇಕು ಎಂಬ ಮಾತನ್ನು

ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಡ್ರಿಂಕಿಂಗ್ ವಾಟರ್. ಕುಡಿಯುವ ನೀರು ಮನುಷ್ಯನಿಗೆ ಅತ್ಯಾವಶ್ಯಕವಾಗಿ ಬೇಕಾಗಿರತಕ್ಕದ್ದು.

ಶ್ರೀ ಹೆಚ್. ವಿಶ್ವನಾಥ್ : ಡ್ರಿಂಕಿಂಗ್ ವಾಟರ್ ಎಂದರೆ ಏನು?

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವೇ ಹೇಳಬೇಕು. ತಾವು ನನಗಿಂತ ಬಹಳ ಅನುಭವಸ್ಥರು. ಡ್ರಿಂಕಿಂಗ್ ವಾಟರ್ ಎಂಬುದಕ್ಕೆ ವಿಶ್ವನಾಥ್ ಕೇಳುತ್ತಾರೆ. ಏಕೆಂದರೆ. ಅವರ ಊರಿನಲ್ಲಿ ಅಷ್ಟೊಂದು ಅಭಾವ ಜಾಸ್ತಿಯಾಗಿದೆ ಎಂದು ಅರ್ಥವಾಗಿದೆ.

ಒಬ್ಬ ಮಾನ್ಯ ಸದಸ್ಯರು : ಡ್ರಿಂಕಿಂಗ್ ವಾಟ್ ಎಂದು ಅರ್ಥ ಮಾಡಿಕೊಂಡರು. ಅವರ ನೀರು ಬೇರೆ. ಡ್ರಿಂಕಿಂಗ್ ವಾಟ್?

ಶ್ರೀ ಎಲ್.ಆರ್. ಶಿವರಾಮೇಗೌಡ : ಡ್ರಿಂಕಿಂಗ್ ವಾಟ್ ಎಂದರೆ ಡ್ರಿಂಕಿಂಗ್ ವಾಟರ್ ಎಂದು ನಮ್ಮ ಅರ್ಥ. ಇನ್ನೇನೂ ಅಲ್ಲ. ಬಹುಶಃ ವಿಶ್ವನಾಥ್ ಅವರ ಅರ್ಥದಲ್ಲಿ ಬೇರೆ ಇರಬೇಕೇನೋ ನನಗೆ ಗೊತ್ತಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ಘೋರ್ಪಡೆಯವರು ಹಿಂದೆ ಆರ್‌ಡಿಪಿಆರ್ ಮಂತ್ರಿಗಳಾಗಿದ್ದರು. ನಾನು ಈ ಸದನದಲ್ಲಿ ಅವರನ್ನು ವಿನಂತಿ ಮಾಡಿದೆ. ಈ ರಾಜ್ಯದಲ್ಲಿ ಪಿಹೆಚ್‌ಇ ಇಲಾಖೆಯಲ್ಲಿ ಯಾರು ನಾರ್ಮ್ಸ್ ಮಾಡಿದ್ದಾರೋ ಅದು ದೇವರಿಗೇ ಗೊತ್ತು. ಈ ಕೇಂದ್ರದಲ್ಲಿ, ಪಿಹೆಚ್‌ಇ ಇಲಾಖೆಯಲ್ಲಿ ಕೆಲವು ಎಂಜಿನಿಯರ್ಸ್ ಇದ್ದಾರೆ. ಅವರು ಹೇಳಿದ್ದೇ ವೇದವಾಕ್ಯ. ನಮ್ಮ ಮಂತ್ರಿಮಹೋದಯರಿಗೆ ಅವರು ಹೇಳಿದರೆ ಇಂಪಾಗುತ್ತದೆಯೇ ಹೊರತು ನಾವು ಹೇಳಿದ್ದರೆ ಇಂಪಾಗುವುದಿಲ್ಲ. ನನ್ನ ತಾಲ್ಲೂಕಿನಲ್ಲಿ 545 ಹಳ್ಳಿಗಳು ಇವೆ. ಬೇರೆ ತಾಲ್ಲೂಕುಗಳಲ್ಲಿ ಸುಮಾರು 90 ಹಳ್ಳಿಗಳು ಬರುತ್ತವೆ. ನನ್ನ ತಾಲ್ಲೂಕಿನಲ್ಲಿ 20 ಮನೆಗಳು ಇರುವ ಒಂದು ಗ್ರಾಮ ಇದೆ. 50 ಮನೆಗಳು ಇರುವ ಒಂದು ಗ್ರಾಮ ಇದೆ. ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅವರು ಅಲ್ಲಿ ಹೋದಾಗ ಮಾಡೋಣ ಎಂದು ಹೇಳುತ್ತಾರೆ, ಆದರೆ ಇಲ್ಲಿ ಬಂದಮೇಲೆ ಕೈಬಿಡುತ್ತಾರೆ. ಇದು ನನಗೆ ಬಂದಿರತಕ್ಕ ಕಷ್ಟ. ಏನಾಗಿದೆ ಎಂದರೆ. ಕೆಲವು ಹಳ್ಳಿಗಳಲ್ಲಿ ನೀವು 10 ಬೋರ್‌ವೆಲ್‌ಗಳನ್ನು ಹಾಕಿದ್ದೀರಿ. ಒಂದಕ್ಕೆ 25 ಸಾವಿರ ರೂಪಾಯಿ ಎಂದರೂ ಇದಕ್ಕೆ ಎರಡೂವರೆ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಈ ನಮ್ಮ ಡೆಮಾಕ್ರಟಿಕ್ ಸೆಟಪ್‌ನಲ್ಲಿ ಸರ್ಕಾರ ಕುಡಿಯುವ ನೀರಿಗೆ ಮೊದಲ ಆದ್ಯತೆ ಕೊಡಬೇಕು. ಸರ್ಕಾರ ಇದನ್ನು ಕೊಟ್ಟಿದೆ. ಈ ಸಂದರ್ಭದಲ್ಲಿ ನೀವು 10 ಬೋರ್‌ವೆಲ್‌ಗಳನ್ನು ಹಾಕಿದರೂ ನೀರು ಬರದೇ ಇರುವ ಊರಿಗೆ 750 ಜನಸಂಖ್ಯೆ ಇಲ್ಲ ಎಂದು ನಾರ್ಮ್ಸ್ ಹೇಳಿದರೆ ನಾನು ನಮ್ಮ ಕ್ಷೇತ್ರದ ಜನರಿಗೆ ಏನು ಹೇಳಬೇಕೆಂದು ತಾವು ಹೇಳಬೇಕು. ಮಾನ್ಯ ಅಧ್ಯಕ್ಷಿಣಿಯವರೇ ತಾವು ನನ್ನ ಸಹಾಯಕ್ಕೆ ಬರಬೇಕು. ತಾವು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಸರ್ಕಾರದವರು ಸಮಸ್ಯಾತ್ಮಕ ಹಳ್ಳಿಗಳನ್ನು ಗುರ್ತುಮಾಡುತ್ತೇವೆಂದು ಹೇಳಿದರು. ಇವತ್ತು ನಮ್ಮ ತಾಲ್ಲೂಕಿನಲ್ಲಿ 90 ಹಳ್ಳಿಗಳನ್ನು ಗುರ್ತು ಮಾಡಿ ದಿನಾ ಬೆಳಿಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮುಂದೆ ಪಟ್ಟಿ ಹಿಡಿದುಕೊಂಡು ಕುಳಿತಿರುತ್ತೇನೆ. ಇದನ್ನು ತಮ್ಮ ಜಿಲ್ಲಾಧಿಕಾರಿಗಳಿಂದ ಪರಿಶೀಲನೆ ಮಾಡಿ 90 ಹಳ್ಳಿಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿ. 90 ಹಳ್ಳಿಗಳಲ್ಲಿ ತಾವು ಬೋರ್‌ವೆಲ್ ಹಾಕಿಸಿದ್ದೀರಿ. ಇವತ್ತು ಎಲ್ಲಾ ಹಳ್ಳಿಗಳಿಗೂ ಮಿನಿ ವಾಟರ್ ಸಪ್ಲೈ ಸ್ಕೀಮ್ ಮಾಡಿಸಲು ಆಗದಿದ್ದರೆ 2-3 ಹಳ್ಳಿಗಳನ್ನು ಸೇರಿಸಿ ಈ ಕೆಲಸ ಮಾಡಿಸಿ. ಹೀಗೆ ಮಾಡಿ 30-40 ಮಿನಿ ವಾಟರ್ ಸ್ಕೀಮ್‌ಗಳನ್ನು ಕೊಟ್ಟರೆ ನಾವು ಅಲ್ಲಿ ತಿರುಗಾಡಬಹುದಾಗಿದೆ. ಎಲ್ಲಾ ಕಡೆಗೂ ಅಷ್ಟು ಹಣವನ್ನು ಒದಗಿಸುವುದಕ್ಕೆ ತಮಗೆ ಕಷ್ಟ ಇದೆ ಎಂದು

ನನಗೆ ಗೊತ್ತಿದೆ. ತಾವು ಬಡ್ಜೆಟ್‌ನಲ್ಲಿ ಒದಗಿಸಿರುವ ಹಣವನ್ನು ನೋಡಿದರೆ 40-50 ಮಿನಿ ಅಥವಾ ಮೇಜರ್ ವಾಟರ್ ಸ್ಕೀಮ್‌ಗಳನ್ನು ನಮಗೆ ಕೊಡುವುದಕ್ಕಾಗುವುದಿಲ್ಲ. ಇವತ್ತು ಮಹಾರಾಷ್ಟ್ರಕ್ಕೆ ಹೋಗಿ ನೋಡಿ. ಅಲ್ಲಿ ವಿಶ್ವಬ್ಯಾಂಕಿನಿಂದ ಹಣ ತಂದು ಸಮಗ್ರ ಗ್ರಾಮೀಣ ಅಭಿವೃದ್ಧಿ ಮಾಡುತ್ತಿದ್ದಾರೆ. ಕೇಂದ್ರದಿಂದಾಗಲೀ ಅಥವಾ ಇತರೇ ಹೊರ ರಾಷ್ಟ್ರಗಳಿಂದ ಬರತಕ್ಕ ಹಣವನ್ನು ತಾವು ತಂದು ಹಾಕದೇ ಹೋದರೆ ತೊಂದರೆಯಾಗುತ್ತದೆ. ಇವತ್ತು ಕಾಲ ಬಹಳಷ್ಟು ಬದಲಾವಣೆಯಾಗಿದೆ. ಇವತ್ತು ಕುಡಿಯುವ ನೀರಿಗೆ ಆದ್ಯತೆ ಕೊಡದೇ ಹೋದರೆ. ಗ್ರಾಮೀಣ ರಸ್ತೆಗಳಿಗೆ ಆದ್ಯತೆ ಕೊಡದೇ ಹೋದರೆ ಜನರಿಗೆ ತೊಂದರೆಯಾಗುತ್ತದೆ. ಬೆಂಗಳೂರಿನಿಂದ ಮಂಗಳೂರಿಗೆ ರಸ್ತೆ ಹಾಕುವುದಕ್ಕೆ ಆದ್ಯತೆ ಕೊಟ್ಟರೆ ಜನ ಕೇಳುವುದು ಅಲ್ಲ. ಇವತ್ತು ನಾವು ಕೇಳುವುದು. ನಮ್ಮ ಊರ ತಿಮ್ಮೇಗೌಡ ಹೋಗತಕ್ಕ ರಸ್ತೆಗೆ ಆದ್ಯತೆ ಕೊಡಬೇಕಾಗುತ್ತದೆ. ಆಗಲೇ ಜನ ನಿಮ್ಮನ್ನು ಒಪ್ಪುತ್ತಾರೆ. ಇವತ್ತು ತಾವು ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿದ್ದೀರಿ. ಗ್ರಾಮೀಣ ಜನರು ಉದ್ಧಾರ ಆಗುವಂತಹ ಕಾರ್ಯಕ್ರಮಗಳನ್ನು ಹಾಕಿದ್ದೀರಿ. ಇವತ್ತು ಈ ಎಲ್ಲಾ ಕಾರ್ಯಕ್ರಮಗಳು ಫಲಪ್ರದ ಆಗಬೇಕಾದರೆ ಬಹಳ ಪ್ರಾಮುಖ್ಯವಾಗಿ ಕುಡಿಯುವ ನೀರಿನ ಹಾಗೂ ರಸ್ತೆ ಕಾರ್ಯಕ್ರಮವನ್ನು ತಾವು ಕೈಗೆತ್ತಿಕೊಳ್ಳಬೇಕು. ಕುಡಿಯುವ ನೀರಿನ ಬಗ್ಗೆ ಸಮಸ್ಯಾತ್ಮಕ ಹಳ್ಳಿಗಳ ಒಂದು ಪಟ್ಟಿ ಮಾಡಿ. ಯಾವತ್ತು ಇದ್ದರೂ ಸರ್ಕಾರ ಇದಕ್ಕೆ ಬಂಡವಾಳ ಹಾಕಬೇಕು. ಯಾವುದಾದರೂ ಹೆಡ್‌ನಲ್ಲಿ ಉಳಿದ ಹಣವನ್ನು ನನಗೆ ಕೊಡಿ. ಕೇಂದ್ರ ಹಾಗೂ ರಾಜ್ಯದ ಹಣದಿಂದ ಈಗ ತಾವು ಕೈಗೊಂಡಿರತಕ್ಕ ಕಾರ್ಯಕ್ರಮಗಳನ್ನು ಈ ವೇಗದಲ್ಲೀ ತಾವು ಮಾಡುತ್ತಾ ಹೋದರೆ. ಇಡೀ ರಾಜ್ಯದಲ್ಲಿ ಇನ್ನು 15 ವರ್ಷಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಕುಡಿಯುವ ನೀರಿನ ಕಾರ್ಯಕ್ರಮಗಳನ್ನು ಮಾಡಿ ಮುಗಿಸಬಹುದು. ಆದರೆ ಇನ್ನು 15 ವರ್ಷಗಳು ನಾವು ಇರಬೇಕೇ ಬೇಡವೇ ಎಂದು ಯೋಚನೆ ಮಾಡಿ. ನಾವು ಮತ್ತೆ ಈ ಮನೆಗೆ ಬರಬೇಕು ಎಂದರೆ ಕುಡಿಯುವ ನೀರಿಗೆ ಇನ್ನೂ ಹೆಚ್ಚಿನ ಆದ್ಯತೆಯನ್ನು ಕೊಡಿ. ಎಲ್ಲಾ ಮಿನಿ ವಾಟರ್ ಸ್ಕೀಮ್‌ಗಳನ್ನು ಈಗ ಮಾಡುವುದಕ್ಕಾಗುವುದಿಲ್ಲವೆಂದು ನಿಮ್ಮ ಸಮಸ್ಯೆಯನ್ನೂ ಹೇಳಿದಿರಿ. ತಾತ್ಕಾಲಿಕವಾಗಿ ಲಾರಿಯಲ್ಲಿ ನೀರನ್ನು ಕೊಡಿಸುವ ವ್ಯವಸ್ಥೆ ಮಾಡೋಣ. ನಾವು 50 ಹಳ್ಳಿಗಳಿಗೆ ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಏರ್ಗಾಯವರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಹಣಕಾಸಿನ ಮುಗ್ಗಟ್ಟು ಇದೆ. ನಿಮಗೆ ಕಷ್ಟ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಇವತ್ತು ರಿಸೋರ್ಸ್‌ಸ್ ಮೊಬಲೈಸ್ ಮಾಡಿ. ರಿಸೋರ್ಸಸ್ ಕ್ರಿಯೇಟ್ ಮಾಡಿ ಕುಡಿಯುವ ನೀರಿನ ಬಗ್ಗೆ ಮೊದಲ ಆದ್ಯತೆ ಕೊಡದೇ ಹೋದರೆ ಸರಿಹೋಗುವುದಿಲ್ಲ. ನಾವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಇಂತಹ ಒಂದು ಕೆಲಸದಲ್ಲಿ ನಾವು ಹಿಂದೆ ಬಿದ್ದರೆ ಬಿಳಿ ಶರ್ಟ್ ಮೇಲೆ ಒಂದು ಕಪ್ಪು ಚುಕ್ಕೆ ಇಟ್ಟಹಾಗೆ ಆಗುತ್ತದೆ. ದಯವಿಟ್ಟು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಈ ಒಂದು ತೀರ್ಮಾನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಿದ್ದೇನೆ. ಇವತ್ತು ಕುಡಿಯುವ ನೀರಿನ ಬಗ್ಗೆ ಸಮಗ್ರವಾಗಿ ಒಂದು ಹೊಸ ತಿದ್ದುಪಡಿಯನ್ನು ಮಾಡಿ. ದಯಮಾಡಿ ತಾವು ಇದನ್ನು ಉತ್ತರದಲ್ಲಿ ಹೇಳಬೇಕೆಂದು ಕೇಳುತ್ತೇನೆ. ನಾನು ಪದೇ ಪದೇ ತಮ್ಮನ್ನು ಕೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ 90 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ನೀವು ಅಲ್ಲಿ ಬೋರ್‌ವೆಲ್ ಹಾಕಿಸಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ನಾಗಮಂಗಲ ತಾಲ್ಲೂಕಿನ ಬಗ್ಗೆ ತಮಗೆ ಗೊತ್ತಿದೆ. ನಾವು ಏಕೆ ಆ ತಾಲ್ಲೂಕಿನಲ್ಲಿ ಹುಟ್ಟಿದೆವೋ ಎಂದು ಅಥವಾ ಆ ತಾಲ್ಲೂಕು ಏಕೆ ನಮ್ಮ ಹತ್ತಿರ ಇದೆ ಎಂದು ನಮಗನ್ನಿಸುತ್ತದೆ. ಇಡೀ ರಾಜ್ಯದಲ್ಲಿ ನಾವು ಇವತ್ತು ಬಿಸಿಲಿನ ಬೇಗೆ ಬಗ್ಗೆ ನಾವು ಗುಲ್ಬರ್ಗಾಕ್ಕೆ ಹೋಗಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹಾಗೆ ಹೇಳುವುದಕ್ಕೆ ಹೋಗಬೇಡಿ. ನಾಗಮಂಗಲದ ಜನ ಬೆಂಗಳೂರಿನಲ್ಲೂ ಇದ್ದಾರೆ. ಬೊಂಬಾಯಿಯಲ್ಲೂ ಇದ್ದಾರೆ. ಊಟಿಯಲ್ಲಿ ಇದ್ದಾರೆ. ಎಲ್ಲಾ ಕಡೆ ಸರ್ವವ್ಯಾಪಿಯಾಗಿ ತಾವು ಬೆಳೆದಿದ್ದೀರಿ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಶಿವರಾಮೇಗೌಡರೇ. ನೀವು ಗುಲ್ಬರ್ಗದಲ್ಲಿ ಹುಟ್ಟಿ. ನಾನು ನಾಗಮಂಗಲ ತಾಲ್ಲೂಕಿನಲ್ಲಿ ಹುಟ್ಟುತ್ತೇನೆ.

ಉಪಾಧ್ಯಕ್ಷರು : ಅವರ ಆಸೆ ನಿಮ್ಮ ಆಸೆ ನೆರವೇರಲಿಯೆಂದು ನಾನು ಹಾರೈಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಮುಂದಕ್ಕೆ ಗುಲ್ಬರ್ಗದಲ್ಲಿ ಹುಟ್ಟುತ್ತೇನೆ. ಏಕೆಂದರೆ. ಅಲ್ಲಿ ಒಳ್ಳೊಳ್ಳೆಯ ಇಂಡಸ್ಟ್ರೀಸ್‌ಗಳು ಬರುತ್ತಾ ಇವೆ. ಮಾನ್ಯ ಖರ್ಗೆಯವರು ಮತ್ತು ವೀರೇಂದ್ರ ಪಾಟೀಲ್‌ರವರ ಸರ್ಕಾರದಲ್ಲಿ ಹೈದಾರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಯೆಂದು ಮಾಡಿ ಬಹಳ ದುಡ್ಡು ಕೊಟ್ಟಿದ್ದಾರೆ. ಮುಂದಿನ ಸಾರಿಗೆ ದೇವರು ನನ್ನನ್ನು ಅಲ್ಲಿಯೇ ಹುಟ್ಟಿಸಲಿ. ಮಾನ್ಯ ಚವಾಣ್‌ರವರನ್ನು ನಮ್ಮ ಕಡೆ ಹುಟ್ಟಿಸಲಿ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾಗಮಂಗಲದ ಜನ ಎಲ್ಲ ಕಡೆ ಇದ್ದಾರೆಂದು ಮಾನ್ಯ ಸಚಿವರು ಹೇಳಿದರು. ತಮಗೆ ಗೊತ್ತಿದೆ. ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ವಲಸೆ ಹೋಗಿದ್ದಾರೆ. ಬೆಂಗಳೂರಿನಲ್ಲಿರುವ ಪ್ರತಿ ಹೋಟೆಲ್‌ಗಳಲ್ಲೂ ನಾಗಮಂಗಲದವರು ಇದ್ದಾರೆ. ನೀವು ಯಾವುದೇ ಒಂದು ಲಾಡ್ಜ್‌ಗೆ ಹೋಗಿ. ನಾಗಮಂಗಲ ತಾಲ್ಲೂಕಿನವನು ಒಬ್ಬ ಇಲ್ಲದೇ ಇರತಕ್ಕದ್ದನ್ನು ತೋರಿಸಿ. ತಾವು ವಿಧಾನಸೌಧದ ಒಳಗಡೆ ಬರಬೇಕಾದರೆ ಲಿಫ್ಟ್ ಓಡಿಸುವವನಿಂದ ಹಿಡಿದು. ಕಸ ಹೊಡೆಯುವವನಿಂದ. ಬಾಗಿಲು ತೆರೆಯುವವನವರೆಗೂ ಅವರೇ ಇದ್ದಾರೆ. ನಾಗಮಂಗಲ ತಾಲ್ಲೂಕಿನವರು ದೊಡ್ಡ ಚೇರ್‌ಗಳಿಗೆ ಬರಲಿಲ್ಲ ಮಂಗಳೂರಿನವರು ಬಡಿಸುವುದಕ್ಕೆ. ನಾಗಮಂಗಲ ತಾಲ್ಲೂಕಿನವರು ಕ್ಲೀನ್ ಮಾಡುವುದಕ್ಕೆ ಸ್ವಾಮಿ ಇರುವುದು. ಇನ್ನು ಏತಕ್ಕೂ ಇಲ್ಲ. ಇವತ್ತು ನಮ್ಮ ಜನ ಹೊಟ್ಟೆಪಾಡಿಗೋಸ್ಕರ ಬೊಂಬಾಯಿ ಭದ್ರಾವತಿ ಮತ್ತು ಎಲ್ಲಿ ಬೇಕಾದರೂ ಹೋಗಿದ್ದಾರೆ. ಇವತ್ತು ನಮ್ಮ ತಾಲ್ಲೂಕಿನ ಜನಗಳನ್ನು ತಾವು ಪ್ರಶಂಸೆ ಮಾಡಬೇಕು. ಕುಡಿಯುವುದಕ್ಕೆ ನೀರು ಇಲ್ಲದೆ ಜನ ವಲಸೆ ಹೋಗಿದ್ದಾರೆ. ಹೋದ ಸಾರಿ ನಾನು ಹೇಳಿದ್ದೆ. ತಾವು ಅದಕ್ಕೆ ಕ್ರಮ ತೆಗೆದುಕೊಂಡಿದ್ದೀರಿ. ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ಕೊಟ್ಟಿದ್ದೀರಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅದಕ್ಕಾಗಿಯೇ ಹೇಮಾವತಿ ನಾಲೆಯ ನೀರನ್ನು ಕೊಟ್ಟಿದ್ದಾರಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಹೇಮಾವತಿ ನಾಲೆ ಬಂದಮೇಲೆ ನಾವು ನೀವು ಹೊಡದಾಡಬೇಕಾಗಿದೆ. ಏಕೆಂದರೆ, ಈಗ ನೀವು ಹೆಚ್ಚಿಗೆ ನೀರನ್ನು ಉಪಯೋಗಿಸಿಕೊಳ್ಳುತ್ತಾ ಇದ್ದೀರಿ. ನಮಗೆ ಸೆಮಿ ಡ್ರೈಕ್ರಾಪ್‌ಗೆ ನೀರು ಕೊಡುತ್ತಾ ಇದ್ದೀರಿ. ಗಲಾಟೆಗೆ ಮುಂದಕ್ಕೆ ನಾವು ರೆಡಿ ಆಗಿರೋಣ. ಏನೂ ತೊಂದರೆಯಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ. ಇವತ್ತು ನಾಗಮಂಗಲ ತಾಲ್ಲೂಕಿನ ಜನ ಬೊಂಬಾಯಿ. ಭದ್ರಾವತಿ. ಬೆಂಗಳೂರು ಕಡೆಗೆ ಬರಬೇಕಾದರೆ ಮೂಲ ಕಾರಣ ಬಡತನ. ಕುಡಿಯುವುದಕ್ಕೂ ಸಹ ನೀರು ಇಲ್ಲದಿರತಕ್ಕ ಪರಿಸ್ಥಿತಿ. ನಮ್ಮ ತಾಲ್ಲೂಕಿನಲ್ಲಿ ತಾಂಡವವಾಡುತ್ತಿದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಬೇಕು. ನಾನು ಕೊಟ್ಟಿರತಕ್ಕ 90 ಹಳ್ಳಿಗಳ ಪಟ್ಟಿಗೆ ತಾವು ಒಪ್ಪಿಗೆಯನ್ನು ಕೊಡಬೇಕು. 90 ಹಳ್ಳಿಗಳಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್‌ನ್ನು ಸ್ಯಾಂಕ್ಷನ್ ಮಾಡಬೇಕು. ನಾನು 90 ಹಳ್ಳಿಗಳ ಪಟ್ಟಿಯನ್ನು ಕೊಟ್ಟಿದ್ದೇನೆ. ನಾನು 90 ಹಳ್ಳಿಗಳಿಗೂ

90 ಮಾಡಿಯೆಂದು ನಾನು ಕೇಳುವುದಿಲ್ಲ. ವಾಟರ್ ಸಪ್ಲೈ ಸ್ಕೀಮ್ ಮಾಡುವಾಗ ಎರಡು ಮೂರು ಹಳ್ಳಿಗಳನ್ನು ಸೇರಿಸಿ ಮಾಡಿ. ಅದರ ಜೊತೆಗೆ ಪಿಹೆಚ್ಇ ಡಿಪಾರ್ಟ್‌ಮೆಂಟ್ ತಮ್ಮ ಹತ್ತಿರವಿದೆ. ಆ ಇಂಜಿನಿಯರ್‌ಗಳು ಮತ್ತು ನಮ್ಮನ್ನು ಸೇರಿಸಿ ಒಂದು ಮೀಟಿಂಗ್ ಕರೆಸಿ. ಇವತ್ತು ದೊಡ್ಡ ನಲ್ಲಿಗಳನ್ನು ಮನೆ ಮನೆಗೆ ಕೊಡುತ್ತಿದ್ದಾರೆ. ಸುಮಾರು ಎರಡೂವರೆ-ಮೂರು ಲಕ್ಷ ರೂಪಾಯಿಗಳನ್ನು ಒಂದು ಊರಿಗೆ. ಒಂದು ಸಾವಿರ ಜನಸಂಖ್ಯೆ ಇರುವ ಕಡೆ ಕೊಡುತ್ತಿದ್ದಾರೆ. ಪಕ್ಕ ಪಕ್ಕದಲ್ಲಿಯೇ ನಾಲ್ಕು ಊರುಗಳು ಇದ್ದರೆ 5 ಲಕ್ಷ ರೂಪಾಯಿಗಳಲ್ಲಿಯೇ ಎಲ್ಲ ಊರುಗಳಿಗೂ ನೀರನ್ನು ಕೊಡಬಹುದು. ಐದು ಊರುಗಳಿಗೆ ಮಾಡಬೇಕಾದರೆ 15 ಲಕ್ಷ ರೂಪಾಯಿಗಳು ಬೇಕು. ನಿಮ್ಮ ನಾರ್ಮ್ಸ್ ಏನಿದೆ ಅದನ್ನು ಬದಲಾವಣೆ ಮಾಡಿಕೊಳ್ಳಿ. ಈ ಕುಡಿಯುವ ನೀರಿಗೆ ಒಂದು ಹೊಸ ಕಾರ್ಯಕ್ರಮವನ್ನು. ಹೊಸ ನೀತಿಯನ್ನು ಬದಲಾವಣೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಅಭಾವ ಎಷ್ಟರಮಟ್ಟಿಗೆ ಇದೆ ಎಂದರೆ. ಇಡೀ ರಾಜ್ಯದ ಆರ್ಥಿಕ ಪರಿಸ್ಥಿತಿ ಅಲ್ಲಾಡುತ್ತಿದೆ. ಆ ಮಟ್ಟದ ಪರಿಸ್ಥಿತಿಯಿದೆ. ರಾಯಚೂರು ಥರ್ಮಲ್ ಯೂನಿಟ್‌ನಿಂದ ಬರತಕ್ಕ ವಿದ್ಯುಚ್ಛಕ್ತಿ. ಜೋಗ್‌ಫಾಲ್ಸ್‌ನಿಂದ ಬರತಕ್ಕ ವಿದ್ಯುಚ್ಛಕ್ತಿ. ಶಿವನಸಮುದ್ರದಿಂದ ಬರತಕ್ಕ ವಿದ್ಯುಚ್ಛಕ್ತಿ. ಯಲಹಂಕದಲ್ಲಿ ಪ್ರಾರಂಭವಾಗುವ ಡೀಸಲ್ ಜನರೇಟರ್‌ನಿಂದ ಬರತಕ್ಕ ವಿದ್ಯುಚ್ಛಕ್ತಿ ಹಳ್ಳಿಗಳಿಗೆ ಬೇಕಾಗಿಲ್ಲ. ಇವತ್ತು ಹಳ್ಳಿಗಳಿಗೆ ಬೇಕಾಗಿರತಕ್ಕ ಹಳ್ಳಿಗಳ ಮನೆಗಳಿಗೆ ಬೇಕಾಗಿರತಕ್ಕ ದೀಪ. ಎಲ್ಇಹೆಚ್‌ಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿ. ರೈತನ ಪಂಪ್‌ಸೆಟ್ಟುಗಳಿಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿಯನ್ನು ಆಯಾಯ ಊರುಗಳಲ್ಲಿಯೇ ತೆಗೆದುಕೊಳ್ಳಬಹುದು. ಅದಕ್ಕಾಗಿ ಹೊಸದಾಗಿ ಏನೂ ಮಾಡಬೇಕಾಗಿಲ್ಲ. ಮಹಾರಾಷ್ಟ್ರದಲ್ಲಿ ಯಾವ ರೀತಿ ಮಾಡಿದ್ದಾರೆಂದರೆ. ಸೋಲಾರ್ ಸಿಸ್ಟಮ್ ಇದೆ. ವಿಂಡ್ ಸಿಸ್ಟಮ್ ಇದೆ. ಗೋಬರ್‌ಗ್ಯಾಸ್ ಸಿಸ್ಟಮ್ ಇದೆ. ಅದಕ್ಕೆ ನೀವು ಆದ್ಯತೆಯನ್ನು ಕೊಟ್ಟರೆ ಗ್ರಾಮಾಂತರ ಪ್ರದೇಶಗಳಲ್ಲಿ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯನ್ನು ಅಲ್ಲಿಯೇ ಉತ್ಪಾದನೆ ಮಾಡಿಕೊಳ್ಳಬಹುದು. ವಿಧಾನಸೌಧದಲ್ಲಿ ರಾಮಪ್ಪನವರನ್ನು ಹಿಡಿದುಕೊಂಡು ಅಲ್ಲಾಡಿಸಿದರೆ ಕರೆಂಟ್ ಬರುವುದಿಲ್ಲ. ರಾಮಪ್ಪನವರು ಅಷ್ಟು ಬಿಗಿಯಾಗಿ ಬಿಟ್ಟಿದ್ದಾರೆ. ರಾಮಪ್ಪನವರ ಪಾಪ ಅವರ ಪರಿಸ್ಥಿತಿ ಹೇಳತೀರದು. ಅಷ್ಟು ಗಟ್ಟಿಯಾಗಿ ಬಿಟ್ಟಿದ್ದಾರೆ. ರಾಮಪ್ಪನವರ ಕರೆಂಟ್ ನಮಗೆ ಅಗತ್ಯವಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಹಳ್ಳಿಯ ರೈತ ತಯಾರು ಮಾಡತಕ್ಕ ಕರೆಂಟ್‌ಗೆ ಕೇಂದ್ರಸರ್ಕಾರ ನಮಗೆ ಸಾಕಷ್ಟು ಹಣ ಕೊಡುತ್ತದೆ. ನೀವು ಹೊಸದಾಗಿ ಒಂದು ಸಮಗ್ರವಾದ ಮಸೂದೆಯನ್ನು ಮಾಡಿ ಅಥವಾ ಇರುವ ಕಾನೂನಿಗೆ ತಿದ್ದುಪಡಿ ಮಾಡಿ. ಇದಕ್ಕೆ ಹೊಸ ಕಾಯಕಲ್ಪ ಕೊಡುವುದಕ್ಕೆ ಒಂದು ಟೀಮ್ ತಯಾರು ಮಾಡಿಬಿಡಿ. ಗ್ರಾಮಾಂತರ ಪ್ರದೇಶದಲ್ಲಿ ಗೋಬರ್‌ಗ್ಯಾಸ್‌ನಿಂದ. ಸೋಲಾರ್ ಸಿಸ್ಟಮ್‌ನಿಂದ. ಮತ್ತು ವಿಂಡ್-ಸಿಸ್ಟಮ್‌ನಿಂದ ಕರೆಂಟನ್ನು ಪಡೆಯತಕ್ಕ ಸಿಸ್ಟಮ್‌ನ್ನು ಅಳವಡಿಸಿಕೊಂಡರೆ ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಬೇಕಾಗಿರತಕ್ಕ ಎಲ್ಲ ವ್ಯವಸ್ಥೆಯು ಸರಿಯಾಗುತ್ತದೆ. ಅದನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಮಹಾರಾಷ್ಟ್ರದಲ್ಲಿ ಇದಕ್ಕೆ ಬಹಳಷ್ಟು ಹಣವನ್ನು ಕೊಡುತ್ತಿದ್ದಾರೆ. ವಿಶ್ವಬ್ಯಾಂಕ್ ಮತ್ತು ಕೇಂದ್ರಸರ್ಕಾರ ಸಾಕಷ್ಟು ಸಹಾಯ ಮಾಡುತ್ತಿದೆ. ಸೋಲಾರ್ ಸಿಸ್ಟಮ್‌ನ್ನು ಮಾಡಿದರೆ ಇದಕ್ಕೆ ಕೇಂದ್ರ ಸರ್ಕಾರ ಶೇಕಡ 50 ರಷ್ಟು ಸಬ್ಸಿಡಿ ಕೊಡುತ್ತಿದೆ. ಆದ್ದರಿಂದ ಇದಕ್ಕೆ ಆದ್ಯತೆ ಕೊಟ್ಟು ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡಿ ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿಯನ್ನು ಅಲ್ಲಿಯೇ ತಯಾರು ಮಾಡುವಂತೆ ಮಾಡಬಹುದು. ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮಂಡಲ

ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಶೀಘ್ರವಾಗಿ ಚುನಾವಣೆ ಮಾಡಬೇಕು. ಈಗ ಇರತಕ್ಕಂಥ ತಿದ್ದುಪಡಿಯ ವಯವಸ್ಥೆಯಲ್ಲಿ ಹಣ ಹೆಚ್ಚು ಕ್ರಿಯಾಡಿಸತಕ್ಕಂಥ ಅವಕಾಶ ಇದೆ. ಅಡ್ಮಿನಿಸ್ಟ್ರೇಟರ್ ಕೈಗೆ ನೀವು ಹೆಚ್ಚು ದಿವಸ ಅಧಿಕಾರ ಕೊಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಕಟ್ಟಿಟ್ಟ ಬುತ್ತಿ. ಜನಸಾಮಾನ್ಯರಿಂದ ಚುನಾಯಿತರಾದಂಥ ಪ್ರಧಾನರು ಇದ್ದರೂ ಕೂಡ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿಲ್ಲ. ಇವತ್ತು ನೀವು ಇದನ್ನು ಅಧಿಕಾರಿಗಳ ಕೈಗೆ ಕೊಟ್ಟಿದ್ದೀ ಆದರೆ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬಂದೇ ಬರುತ್ತದೆ. ಆದಕ್ಕಾಗಿ ಶೀಘ್ರವಾಗಿ ಚುನಾವಣೆ ಮಾಡಬೇಕು. ಇದಕ್ಕೆ 1991ನೇ ಇಸವಿಯ ಸೆನ್ಸಸ್ಸನ್ನೆ ತೆಗೆದುಕೊಳ್ಳಬೇಕು. ಇನ್ನು ಎರಡು ಸಾವಿರದಿಂದ ಮೂರು ಸಾವಿರ ಜನಸಂಖ್ಯೆಗೆ ಒಂದು ಮಂಡಲ ಪಂಚಾಯಿತಿ ಮಾಡಬೇಕು. ಆಗಲೇ ಈ ಹಳ್ಳಿಗಳ ಉದ್ಧಾರವಾಗತಕ್ಕದ್ದು. ಆಗ ಜನ ಅಲ್ಲೇ ಉಗಿಯುತ್ತಾರೆ. ಒಬ್ಬ ಹಳ್ಳಿಯ ಯಜಮಾನ ಏನಾದರೂ ತಪ್ಪು ಮಾಡಿದರೆ ಇಂತಹ ತಪ್ಪು ಮಾಡಿದ್ದೀಯ ಎಂದು ಜನರು ಅಲ್ಲೇ ಹೇಳುತ್ತಾರೆ. ಆದ್ದರಿಂದ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಜಿಲ್ಲಾ ಪರಿಷತ್ತುಗಳ ಬಗ್ಗೆಯೂ ಅಷ್ಟೆ. ಇವತ್ತು 25 ಸಾವಿರ ಜನಸಂಖ್ಯೆಗೆ ಒಂದು ಜಿಲ್ಲಾ ಪರಿಷತ್ತು ಸೀಟು ಇದೆ. ಜಿಲ್ಲಾ ಪರಿಷತ್‌ನವರೆಲ್ಲ ಈಗ ಎಂ.ಎಲ್.ಎ. ಗಿರಿಗೆ ತಯಾರಾಗುತ್ತಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಯಾರೂ ಕೆಲಸ ಮಾಡುವುದಿಲ್ಲ. ಅವರ ಕಣ್ಣು ಈಗ ವಿಧಾನ ಸೌಧದ ಮೇಲಿದೆ, ಅವರು ಈ ಕಡೆಗೆ ನೋಡುತ್ತಿದ್ದಾರೆ. ಅವರು ಜನಸಾಮಾನ್ಯರ ಕೆಲಸ ಮಾಡುವುದಿಲ್ಲ. ಆದ್ದರಿಂದ ಮುಂದೆ ತಾಲ್ಲೂಕು ಬೋರ್ಡು ಸಿಸ್ಟಮ್ ಏನಿತ್ತು, ಜಿಲ್ಲಾ ಪರಿಷತ್ತನ್ನು ಆ ತರಹ ಮಾಡಿ ಮುಂದಿನ ತಿಂಗಳು ಈ ವ್ಯವಸ್ಥೆಗೆ ಸಮಗ್ರ ತಿದ್ದುಪಡಿಯನ್ನು ಏನು ತರುತ್ತಿದ್ದೀರಿ. ಅದರಲ್ಲಿ ನೀವು ತಾಲ್ಲೂಕು ಪಂಚಾಯ್ತಿಗೆ ಹೆಚ್ಚು ಶಕ್ತಿ ಕೊಡಬೇಕು. ಒಂದು ತಾಲ್ಲೂಕಿನಲ್ಲಿ ಏನಾದರೂ ಕೆಲಸ ಆಗಬೇಕು ಎಂದರೆ, ತಾಲ್ಲೂಕಿನಲ್ಲಿ ಇರತಕ್ಕಂಥ ಮುಖಂಡರು ಕುಳಿತು ಪಾಸ್ ಮಾಡತಕ್ಕಂಥ ಅಧಿಕಾರವನ್ನು ತಾಲ್ಲೂಕು ಪಂಚಾಯ್ತಿಗೆ ಕೊಡಬೇಕು. ಇದಕ್ಕೆ ಉದಾಹರಣೆಯಾಗಿ ಒಂದು ಮಾತನ್ನು ಹೇಳುತ್ತೇನೆ. ಈಗ ಯಾವುದಾದರೂ ಕೆಲಸ ಆಗಬೇಕಾದರೆ ಜಿಲ್ಲಾ ಪರಿಷತ್ತಿಗೆ ಕಳಿಸಿಕೊಡಬೇಕು. ಮಾನ್ಯ ವಿನಯಕುಮಾರ್ ಸೊರಕೆಯವರು ಇಲ್ಲಿ ಕುಳಿತಿದ್ದಾರೆ. ಮೊನ್ನೆ ಅವರು ಆರೋಗ್ಯ ಮಂತ್ರಿಗಳಾದ ಶ್ರೀ ಜಿ. ಪುಟ್ಟಸ್ವಾಮಿಗೌಡರನ್ನು ಕೇಳುತ್ತಿದ್ದರು. ನಮಗೊಂದು ಆಸ್ಪತ್ರೆ ಆಗಬೇಕು. ಆಸ್ಪತ್ರೆ ಆಗುವುದಕ್ಕೆ ಅಲ್ಲಿಂದ ಒಪ್ಪಿಗೆ ಬಂದಿಲ್ಲ. ತಿಂಗಳುಗಟ್ಟಲೆ ಅದು ಜಿಲ್ಲಾ ಪರಿಷತ್ತಿನಲ್ಲಿ ಕುಳಿತಿದೆ; ಅದು ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದರು. ಈ ಅಡಚಣೆ ಏಕೆ ಆಗುತ್ತಿದೆ ಎಂದರೆ, ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಆದರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಅದಕ್ಕಾಗಿ ದಯವಿಟ್ಟು ಕೊಂಕಣ ಸುತ್ತುವುದೂ ಬೇಡ. ಅವರಿಗೆ ಪುರಸ್ಕರಿಸಲ್ಲಿ ಆಗಬೇಕಾಗಿರತಕ್ಕಂಥ ಕೆಲಸ ನೇರವಾಗಿ ವಿಧಾನಸೌಧ ಮಟ್ಟದಲ್ಲಿ ಆಗಬೇಕು ಎಂದರೆ ನೀವು ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಅದಕ್ಕೆ ಜಿಲ್ಲಾ ಪರಿಷತ್ತಿಗೆ ಇಷ್ಟೊಂದು ಅಧಿಕಾರ ಕೊಟ್ಟಿರುವುದನ್ನು ಕಡಿಮೆ ಮಾಡಬೇಕು. ಜಿಲ್ಲಾ ಪರಿಷತ್ತು ವ್ಯಾಪ್ತಿಯಲ್ಲಿ ಬರತಕ್ಕಂಥ ಅಧ್ಯಕ್ಷ ಇಡೀ ಜಿಲ್ಲೆಯಲ್ಲೇ ಗೆಲ್ಲತಕ್ಕಂಥಾದ್ದು ಆಗಬೇಕೇ ಹೊರತು ಅವರು ಬರೀ ಕೈಯೆತ್ತುವ ಮೆಂಬರುಗಳಿಂದ ಆಗತಕ್ಕದ್ದು ಆಗಬಾರದೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಮಂಡಲ ಪಂಚಾಯತಿಯೇ ವಹಿಸಿಕೊಳ್ಳಬೇಕು. ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಊರುಗಳಲ್ಲಿ ಇವತ್ತು ಕಗ್ಗತ್ತಲು ಕಾಡುತ್ತಿದೆ ಯಾವ ಊರಿನಲ್ಲೂ ಬೀದಿ ದೀಪ ಇಲ್ಲ. ಸರ್ಕಾರ ಸಂಬಂಧಪಟ್ಟವರ ಜೊತೆ ಇದರ ಬಗ್ಗೆ ಚರ್ಚೆ ಮಾಡಬೇಕು. ಯಾರು

ಇಲ್ಲಿ ಕಾವೇರಿ ಭವನದಲ್ಲಿ ಕುಳಿತುಕೊಂಡು ತೀರ್ಮಾನ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಮೀಟರೇ ಹಾಕುವ ಹಾಗಿಲ್ಲ. ಮೀಟರ್ ಹಾಕದೆ ಒಂದು ತಿಂಗಳಿಗೆ 20-25 ಸಾವಿರ ರೂಪಾಯಿಗಳ ಬಿಲ್ ಕಳಿಸುತ್ತಾರೆ. ಆ ಬಿಲ್ಲನ್ನು ಅವನು ಕಟ್ಟಬೇಕು. ಅವರಿಗೆ ಕಟ್ಟುವುದಕ್ಕೆ ಶಕ್ತಿ ಇಲ್ಲ. ಶಕ್ತಿ ಇಲ್ಲದಿದ್ದರೆ ವಿದ್ಯುಚ್ಛಕ್ತಿ ಸರಬರಾಜು ಡಿಸ್‌ಕನೆಕ್ಟ್ ಮಾಡಿದರೆ ಆ ಊರಿನಲ್ಲಿ ಕತ್ತಲು. 6-7 ತಿಂಗಳಿಂದ ಒಂದು ವರ್ಷದಿಂದ ಲಕ್ಷಾಂತರ ರೂಪಾಯಿ ಮಂಡಲ ಪಂಚಾಯಿತಿಗಳಿಂದ ಬಾಕಿ ಬರಬೇಕಾಗಿದೆ. ಇದರಿಂದ ಲಕ್ಷಾಂತರ ಹಳ್ಳಿಗಳಲ್ಲಿ ಇವತ್ತು ಕಗ್ಗತ್ತಲು ಕಾಡುತ್ತಿದೆ. ಹಣ ಕಟ್ಟದೇಹೋದರೆ ಕ.ಇ.ಬಿ. ಯವರು ಕರೆಂಟ್ ಕೊಡುವುದಿಲ್ಲ. ಕೆ.ಇ.ಬಿ. ಯವರು ಯಾವಾಗ ಈ ಮೀಟರ್ ಇಲ್ಲವೋ ನೀವು ದುಡ್ಡು ಕಟ್ಟಿಲ್ಲವೆಂದರೆ ನಾವು ಕರೆಂಟ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಮೀಟರ್ ಇದ್ದಿದ್ದರೆ ಇವತ್ತು ಎಷ್ಟು ದೀಪ ಉರಿಯಿತು. ಏನು ಆಯಿತು ಎಂದು ಲೆಕ್ಕ ಸಿಗುತ್ತಿತ್ತು. ಆಗ ಅವರಿಗೆ ಬರತಕ್ಕಂಥ ಹಣ ಕಡಿಮೆ ಆಗುತ್ತಿತ್ತು. ಆಗ ಇಲಾಖೆ ಅವರ ಬಗ್ಗೆ ಕಣ್ಣು ಬಿಡುತ್ತಿತ್ತು. ಆದ್ದರಿಂದ ಮೀಟರ್ ಅಳವಡಿಸುವಂಥ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಬೇಕು. ಬೀದಿ ದೀಪದ ವ್ಯವಸ್ಥೆಗೆ ಮೀಟರ್‌ನ್ನು ಅಳವಡಿಸತಕ್ಕಂಥ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಷ್ಟು ಹೇಳುತ್ತಾ. ಇವತ್ತು ತಾವೇನು ಬೇಡಿಕೆಗಳನ್ನು ಇಟ್ಟಿದ್ದೀರಿ. ಅವೆಲ್ಲದಕ್ಕೂ ಸಹಿತ ನಾವು ಬೆಂಬಲ ಕೊಡುತ್ತಾ. ನಾವು ಹೇಳಿದ್ದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ. ಮುಂದೆ ಹೆಜ್ಜೆ ಹಾಕುತ್ತೀರಿ ಎಂದು ಭಾವಿಸಿ. ಈ ಸಂದರ್ಭದಲ್ಲಿ ತಮ್ಮ ಇಲಾಖೆಯ ಬೇಡಿಕೆಗಳಿಗೆ ಬೆಂಬಲ ಸೂಚಿಸಿ. ನಾನು ಇಷ್ಟು ಮಾತನಾಡುವುದಕ್ಕೆ ಅವಕಾಸ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

† ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ) : ಮಾನ್ಯ ಉಪಾಧ್ಯಕ್ಷರೇ. ಇವತ್ತಿನ ದಿವಸ ಸರ್ಕಾರ ಮಂಡಿಸಿರತಕ್ಕ ಕೆಲವು ಬಾಬುಗಳ ಮೇಲೆ. ತಮ್ಮ ಮೂಲಕ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ. ಕಂದಾಯ ಇಲಾಖೆ ಬಗ್ಗೆ ಒಂದೆರಡು ಮುಖ್ಯವಾದ ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿಯೂ ರೆವಿನ್ಯೂ ರೆಕಾರ್ಡ್ಸ್‌ನಿಂದ ಹಳ್ಳಿಗಾಡುಗಳಲ್ಲಿ. ಬಡವರು ಸಾಲ ವಗೈರೆ ತೆಗೆದುಕೊಳ್ಳುವುದಕ್ಕೆ ತುಂಬಾ ಕಷ್ಟವಾಗಿದೆ. ಈ ರೆವಿನ್ಯೂ ರೆಕಾರ್ಡ್ಸ್ ಬೇಗ. ಬೇಗ ಒದಗುವಂತೆ ಮಾಡಬೇಕಾದರೆ. ಆದರ ಬಗ್ಗೆ ಬರತಕ್ಕ ಅರ್ಜಿಗಳನ್ನು ಸೀರಿಯಲ್ ಆರ್ಡರ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡು. ಅದರ ಪ್ರಕಾರ ಕೊಡುವುದರಿಂದ. ಬಹುಶಃ ಕೊಡತಕ್ಕ ಲಂಚ ಮತ್ತು ಬೇರೆ ಎಲ್ಲಾ ಕಡಿಮೆಯಾಗುತ್ತದೆ. ಒಂದು ವೇಳೆ ರೆಕಾರ್ಡ್ಸ್ ಅರ್ಜೆಂಟಾಗಿ ಬೇಕಾಗಿದ್ದ ಪಕ್ಷದಲ್ಲಿ ಅದನ್ನು ಕೇಳತಕ್ಕಂಥ ಒಬ್ಬ ಅರ್ಜಿದಾರ ಸ್ಪೆಷಲ್ ಆಗಿ 8 ಆಣೆ. 1 ರೂಪಾಯಿ ಕೊಟ್ಟರೆ. ಜಾಸ್ತಿ ಸ್ಟಾಂಪ್ ಅಂಟಿಸಿ ಕೇಳಿದಾಗ. ಅಡಿಷನಲ್ ಸ್ಟಾಫ್ ಇಟ್ಟುಕೊಂಡು. ಯಾರಾದರೂ ಕೆಲವರು ಕೆಲಸ ಇಲ್ಲದೇ ಇರತಕ್ಕವರನ್ನು ನೌಕರರನ್ನಾಗಿ ನೇಮಿಸಿಕೊಂಡು. ಈ ರೆವಿನ್ಯೂ ರೆಕಾರ್ಡ್ಸ್ ಕೆಲಸವನ್ನು ಅವರಿಗೆ ಕೊಡುವುದರಿಂದ ಅನುಕೂಲವಾಗುತ್ತದೆ. ಸರ್ಕಾರದವರು ಈ ಸಲಹೆಯನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇಹೋದರೆ. ಇದರಲ್ಲಿ ಅನೇಕ ದುರ್ವ್ಯವಹಾರ ಹಾಗೂ ಲಂಚಕ್ಕೆ ಕಾರಣವಾಗುತ್ತದೆ. ಬಹುಶಃ ಇದನ್ನು ತಪ್ಪಿಸತಕ್ಕ ವಿಚಾರವೂ ಆಗುತ್ತದೆ. ಎರಡನೆಯದಾಗಿ. ಹಳ್ಳಿಗಳ ಕಡೆ ರೆವಿನ್ಯೂ ಲ್ಯಾಂಡ್ಸ್‌ನಲ್ಲಿ ಕೆಲವರು ಮನೆಗಳನ್ನು ಕಟ್ಟಬೇಕಾದರೆ. ಇದು ಗ್ರಾಮ ಪಂಚಾಯ್ತಿ ಲಿಮಿಟ್‌ನಲ್ಲಿ ಬರುತ್ತದೆಂದು ಗ್ರಾಮ ಪಂಚಾಯ್ತಿಯವರು ಹೇಳುತ್ತಾರೆ. ರೆವಿನ್ಯೂ ಲ್ಯಾಂಡ್ಸ್‌ನಲ್ಲಿ ಏನಾದರೂ ಅನ್ ಆಥರೈಸ್ ಆಗಿ ಮನೆಗಳನ್ನು ಕಟ್ಟಿದ್ದರೆ. ಅದು

ನಮ್ಮದಲ್ಲ. ನಾವು ಕಟ್ಟದೇ ಇದ್ದರೂ ಅದು ರೆವಿನ್ಯೂ ಭೂಮಿ ಎಂದು ಆ ಊರಿನ ವಿಲೇಜ್ ಅಕೌಂಟೆಂಟ್ ಮಾತೇ ಆಡುವುದಿಲ್ಲ. ಇದು ನಂಗೆ ಸೇರಿದುದಲ್ಲ. ರೆವಿನ್ಯೂಗೆ ಸೇರಿದ್ದು ಎಂದು ಪಂಚಾಯ್ತಿಯವರು ಹೇಳುತ್ತಾರೆ. ಈ ವಿಧವಾದ ವಿಚಾರಗಳನ್ನು ತಾವು ವಿಚಾರ ಮಾಡಿ, ಈ ಅನ್ ಆಥರೈಸ್ ಎರೆಕ್ಷನ್ ತಪ್ಪಿಸಬೇಕು. ಇದರ ಬಗ್ಗೆ ಯಾರಿಗಾದರೂ ಜವಾಬ್ದಾರಿಯನ್ನು ಹೊರಿಸಬೇಕು ಮತ್ತು ಇದರ ಬಗ್ಗೆ ವಿಚಾರ ಮಾಡಿ, ಅಲ್ಲಿ ಇರತಕ್ಕಂಥ ಅಪಾರವಾದ ಲಂಚ ಮತ್ತು ತಡಾಗುವುದು ತಪ್ಪುತ್ತದೆ. ಮೂರನೆಯದು. ಲ್ಯಾಂಡ್ ರೆವಿನ್ಯೂನಲ್ಲಿ ಒಂದು ಪ್ರಶ್ನೆ. ಬಡ ಜನಗಳಿಗೆ ಗ್ರಾಂಟ್ ಆದ ಜಮೀನುಗಳನ್ನು ಕೊಡುವ ವಿಚಾರದಲ್ಲಿ ಕೇಳಿದ್ದೆ. ಸರ್ಕಾರದವರು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಬೇಕಾದಷ್ಟು ಹೆಚ್ಚಿಗೆ ಭೂಮಿ ಬರುತ್ತದೆ. ಇದನ್ನು ಹಿಂದುಳಿದ ವರ್ಗದವರಿಗೆ ಇವತ್ತಿನ ದಿವಸ ಕೊಡಬೇಕಾದ 50 ಪರ್ಸೆಂಟ್‌ಗಿಂತ ಜಾಸ್ತಿ 60-70 ಪರ್ಸೆಂಟ್ ಕೊಡುತ್ತೇನೆ. ಇದರಿಂದ ಅವರಿಗೆ ಹೆಚ್ಚಿಗೆ ಸಹಾಯ ಮಾಡಿದಹಾಗೆ ಆಗುತ್ತದೆಂದು ಹೇಳಿದರೆ, ನಾನು ಒಪ್ಪುತ್ತೇನೆ, ಸಂತೋಷ. ಆದರೆ, ನನ್ನ ವಿಚಾರ ಅದಲ್ಲ. ಲ್ಯಾಂಡ್ ಗ್ರಾಂಟ್‌ನಲ್ಲಿ ಆರ್ಡಿನರಿ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕೊಡಬೇಕಾಗಿದ್ದರೂ ಆ ಜನಗಳಿಗೆ ಸಿಕ್ಕಲ್ಲ. ಅನ್ ಆಥರೈಸ್ ಆಕ್ಯುಪೈ ಮಾಡಿಕೊಂಡಿರತಕ್ಕ ಜಮೀನುಗಳಲ್ಲೂ. ಪೂರ್ತಿ ಮುಕ್ಕಾಲು ಭಾಗಕ್ಕಿಂತ ಜಾಸ್ತಿ ಆಕ್ಯುಪೈ ಮಾಡಿಕೊಂಡಿದ್ದಾರೆ. ಅದೂ ಕೂಡ ಆ ಕಡೆಗೆ ಹೊರಟುಹೋಯಿತು. ಇಷ್ಟೆಲ್ಲಾ ತೆಗೆದುಕೊಂಡರೂ, ಎಕ್ಸೆಸ್ ಲ್ಯಾಂಡ್‌ನಲ್ಲಿ ಇವರಿಗೆ ಎಷ್ಟು ಬರಬೇಕೋ ಅಷ್ಟು ಕೊಡುವುದರಿಂದ, ನಿಜವಾಗಿಯೂ ಆ ಬಡ ಜನಗಳಿಗೆ ಸಹಾಯ ಮಾಡುವುದಕ್ಕೆ ಅವಕಾಶ ಇರುತ್ತದೆ. ತಾವು ಇದನ್ನು ಮಾಡಬಹುದು. ಬೇರೆ ಜನ ತಮಗೆ ಬರಬೇಕಾದ ಪಾಲಿಗಿಂತಲೂ ಹೆಚ್ಚಿಗೆ ತೆಗೆದುಕೊಂಡಿರತಕ್ಕ ಜನ ಇದ್ದಾರೆ. ಆದುದರಿಂದ ಈ ಬಾಬಿನಲ್ಲಿ ಬರುವುದನ್ನು ಈ ಮೂಲಕ ಜಮೀನುಗಳನ್ನು ಕೊಡುವುದರಿಂದ ಏನು ತಪ್ಪು? ಇದು ನ್ಯಾಚುರಲ್ ಜಸ್ಟೀಸ್. ಇದು, ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯ. ಆದುದರಿಂದ ಇದನ್ನು ಪರಿಶೀಲನೆ ಮಾಡಿ, ಇಲ್ಲಿ ಜಮೀನು ಕಳೆದುಹೋಗಿದೆಯೋ. ಅನ್ ಆಥರೈಸ್ ಆಕ್ಯುಪೇಷನ್ ಮತ್ತು ರೆಗ್ಯುಲರ್ ಲ್ಯಾಂಡ್ ಗ್ರಾಂಟ್‌ನಲ್ಲಿ ಬರತಕ್ಕಂಥಾದ್ದು ಇವೆರಡರಲ್ಲೂ ಸೇರುವುದನ್ನು ಸರ್ಪಲಸ್ ಲ್ಯಾಂಡ್‌ನಲ್ಲಿ ಕೊಡಬೇಕು. ಒಂದು ವೇಳೆ ಇದರಲ್ಲಿಯೂ ಕಡಿಮೆ ಬರುವ ಹಾಗಿದ್ದರೆ ಸರ್ಕಾರ ಎಷ್ಟೋ ಜಮೀನುಗಳನ್ನು ಪರ್ಚೇಸ್ ಮಾಡುತ್ತದೆ. ಈ ಪರ್ಚೇಸ್ ಮಾಡುವ ಮೂಲಕ ಈ ವ್ಯತ್ಯಾಸವನ್ನು ಮೇಕಪ್ ಮಾಡಿ ಜನಗಳಿಗೆ ಏಕೆ ಕೊಡಬಾರದು? ಇದನ್ನು ಮಾಡುವುದರಲ್ಲಿ ಸರ್ಕಾರಕ್ಕೆ ಕಷ್ಟ ಇರಬಹುದು, ಸಮಸ್ಯೆ ಇರಬಹುದು. ಸರ್ಕಾರಕ್ಕೆ ಹಣದ ಹೊರೆ ಆಗಬಹುದು. ಆದರೆ ಇವತ್ತಿನ ದಿವಸ ಆ ಬಡ ಜನಗಳು, ಗುಲಾಮಗಿರಿ ಸ್ಥಾನದಲ್ಲಿದ್ದಾರೆ. ಈ ರೀತಿ ಮಾಡಿದರೆ ಆ ಗುಲಾಮಗಿರಿ ಕಂಡೀಷನ್‌ನಿಂದ ಅವರನ್ನು ಮೇಲೆತ್ತತಕ್ಕ ಒಂದು ಅವಕಾಶ ಆಗುತ್ತದೆ. ಆದುದರಿಂದ ಇದನ್ನು ಸರ್ಕಾರ ದೀರ್ಘವಾಗಿ ಹಾಗೂ ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ನೊಂದಾವಣೆ ವಿಚಾರದಲ್ಲಿ ಹೇಳುವುದಾದರೆ, ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಅನೇಕ ಸೊಸೈಟಿಗಳು ರಿಜಿಸ್ಟರಾಗಿವೆ. ಬೇಕಾದಷ್ಟು ಮಾಡಿದ್ದೀರಿ, ಬೇಕಾದಷ್ಟು ಸೊಸೈಟಿಗಳು ದೀಫಂಕ್ಟ್ ಆಗಿವೆ. ಸರ್ಕಾರ ಕೆಲವು ದಿವಸ ಈ ದೀಫಂಕ್ಟ್ ಆದ ಸೊಸೈಟಿಗಳನ್ನು ಕ್ಯಾನ್ಸಲ್ ಮಾಡಬೇಕೆಂದು ಆದೇಶ ಹೊರಡಿಸಿದ್ದರು. ಅದು ಹಾಗೆಯೇ ನಿಂತುಹೋಯಿತು. ದೀಫಂಕ್ಟ್ ಆದ ಸೊಸೈಟಿಗಳನ್ನು ಕ್ಯಾನ್ಸಲ್ ಮಾಡುವುದರಿಂದ ಏನು ಪ್ರಯೋಜನ? ಅವು ಇರಲಿ. ಇದ್ದರೆ ನಿಮಗೆ ಏನು ಕಷ್ಟ. ಒಂದು ವೇಳೆ ನಾನು ಪ್ರಶ್ನೆ ಕೇಳುವದಾಗಿದ್ದರೆ, ಈಗಿರತಕ್ಕ ಸೊಸೈಟಿಗಳು ಕೆಲಸ ಮಾಡದೇ ಇದ್ದರೆ, ಕಾನೂನಿನ ರೀತಿಯಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ಫೈಲ್ ಮಾಡದೇ ಇದ್ದರೆ, ಸೊಸೈಟಿ ಹೆಸರನಲ್ಲಿ ಅನೇಕ ರೀತಿಯ ಶೋಷಣೆ ನಡೆಯುತ್ತವೆ.

ಆದ್ದರಿಂದ ಈ ಸೊಸೈಟಿಗಳು ಪ್ರತಿವರ್ಷವೂ ಮಾಡತಕ್ಕ ವಾರ್ಷಿಕ ಲೆಕ್ಕಪತ್ರ ಮತ್ತು ಕೆಲಸಕಾರ್ಯಗಳ ನಿರ್ವಹಣೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಿದರೆ, ಇಲ್ಲಿ ಆಗತಕ್ಕ ಅನೇಕ ಅವ್ಯವಹಾರಗಳು, ದುರ್ವ್ಯವಹಾರಗಳು, ಮಾಡಬಾರದ ಕೆಲಸಗಳು ತಪ್ಪುತ್ತವೆ. ಆದುದರಿಂದ ಇದರ ಬಗ್ಗೆ ಹೆಚ್ಚಿಗೆ ಗಮನ ಹರಿಸಬೇಕು. ಇನ್ನು ಮೈಸೂರಿನಲ್ಲಿ ಮೈಸೂರು ಸ್ಟೇಟ್ ಆದಿಕರ್ನಾಟಕ ಅಭಿವೃದ್ಧಿ ಸಂಘ ಎಂದು 1931ನೇ ಇಸವಿಯಲ್ಲಿ ನೊಂದಾವಣೆ ಆಗಿರತಕ್ಕ ಸಂಘ ಇದೆ. ಆ ಸಂಘದ ಹೆಸರಿನಲ್ಲಿ ಅನೇಕ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಕೆಲವು ಪ್ರಾಪರ್ಟಿ ಸಹ ಇದೆ. ಆ ಸಂಘಕ್ಕೆ ನಾನು ಕೆಲವು ಕಾಲ ಜನರಲ್ ಸೆಕ್ರೆಟರಿ ಆಗಿದ್ದೆ. ಎಲ್ಲಾ ಕೆಲಸ ಕಾರ್ಯಗಳನ್ನು ಅಪ್ ಟು ಡೇಟ್ ಮಾಡಿಕೊಟ್ಟು ಹೋಗಿದ್ದೆ. ಈಗ ಆ ಸಂಘದಲ್ಲಿ ದುಡ್ಡು ಹೊಡೆಯುವುದಕ್ಕೋಸ್ಕರ ಹುನ್ನಾರ ನಡೆದಿದೆ. ಎಷ್ಟೋ ಸಾರಿ ನಾನು ಸರಕಾರಕ್ಕೆ ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ. ಅವೆಲ್ಲಾ ರೆಕಾರ್ಡ್ಸ್ ಸೆಕ್ರೆಟೇರಿಯೇಟ್‌ನಲ್ಲಿ. ಹಾಗೂ ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ ಇದೆ. ಅದನ್ನು ಏನೂ ಮಾಡಿಲ್ಲ. ಅದು ಹಾಗೇ ಉಳಿದಿರುವುದರಿಂದ ಅಲ್ಲಿ ಕೆಲವರು ನಾನು ಸೆಕ್ರೆಟರಿ, ನಾನು ಸೆಕ್ರೆಟರಿ ಎಂದು ಹೇಳಿಕೊಂಡು ಅನಾಹುತವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ, ಬಡವರ ಹಾಸ್ಟೆಲ್‌ನಲ್ಲಿ ದುಡ್ಡನ್ನು ತಿನ್ನುತ್ತಿದ್ದಾರೆ ಮತ್ತು ಅಲ್ಲಿ ಕೆಲವು ಸೌಲಭ್ಯಗಳು ಮತ್ತು ವರಮಾನಗಳು ಏನು ಬರುತ್ತಿದೆ. ಅದನ್ನೂ ಸಹ ಒಬ್ಬರಿಗೊಬ್ಬರು ಕಿತ್ತಾಡಿ ತಿನ್ನುತ್ತಿದ್ದಾರೆ. ಆದುದರಿಂದ ದಯವಿಟ್ಟು ರೆವಿನ್ಯೂ ಮಿನಿಸ್ಟರ್‌ರವರು ಇದರ ಬಗ್ಗೆ ಗಮನಹರಿಸಿದರೆ ಎಷ್ಟೋ ಬಡವರನ್ನು ಕಾಪಾಡಿದ ಹಾಗೆ ಆಗುತ್ತದೆ. ಇದನ್ನು ತಮಗೆ ಏತಕ್ಕೆ ಹೇಳುತ್ತಿದ್ದೇನೆ ಎಂದರೆ. ಈ ಹಿಂದುಳಿದ ವರ್ಗ ಅದರಲ್ಲೂ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಡತಕ್ಕಂಥ ಹಾಸ್ಟೆಲ್‌ಗಳು ರಿಜಿಸ್ಟರ್ ಆಗಿ ಅಂತಹದಕ್ಕೆ ಸರಕಾರದವರು ಗ್ರಾಂಟ್ ಕೊಡುತ್ತಿದ್ದಾರೆ. ಅಂತಹ ಹಾಸ್ಟೆಲ್‌ಗಳು ಇದುವರೆಗೆ ತಮ್ಮ ಆನ್ಯುಯಲ್ ಅಕೌಂಟ್ಸ್‌ನ್ನು ಅಪ್ ಟು ಡೇಟ್ ಆಗಿ ಫೈಲ್ ಮಾಡಿಲ್ಲ. ಇದು ಗೊತ್ತಿದ್ದರೂ ಸಹ ಸರಕಾರ ಗ್ರಾಂಟ್ ರಿಲೀಸ್ ಮಾಡುವಾಗ ಇವುಗಳ ಲೆಕ್ಕ ಸರಿಯಾಗಿ ಇದೆಯೋ ಇಲ್ಲವೋ ಎಂದು ನೋಡುವುದಿಲ್ಲ. ಅನೇಕ ಹಾಸ್ಟೆಲ್‌ಗಳ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ. 15-20 ವರ್ಷಗಳಾದರೂ ಆಡಿಟ್ ಆಗಿಲ್ಲ. ನಾನೇ ಎಷ್ಟೋ ದೂರು ಕೊಟ್ಟಿದ್ದೇನೆ. ಆದರೂ ಏನೂ ಆಗಿಲ್ಲ. ದಿವಂಗತ ದೇವರಾಜ ಅರಸ್ ಅವರು ಇದ್ದಂಥ ಕಾಲದಲ್ಲಿ ಈ ವಿಚಾರದಲ್ಲಿ ದೊಡ್ಡ ಗಲಾಟೆ ಮಾಡಿದ್ದರೂ ಸಹ. ಈ ಬಡವರ ಹಾಸ್ಟೆಲ್‌ಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಲಿಲ್ಲ. ನಾನು ರಿಜಿಸ್ಟ್ರೇಷನ್ ವಿಚಾರ ಬಂದುದರಿಂದ ಹೇಳುತ್ತಿದ್ದೇನೆ. ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಅಂಬೇಡ್ಕರ್ ಜನರಲ್ ಹಾಸ್ಟೆಲ್ ಎಂದು ಇದೆ. ಆ ಹಾಸ್ಟೆಲ್‌ನಲ್ಲಿ ಬರತಕ್ಕಂಥ ಗ್ರಾಂಟ್‌ಗಿಂತ ಹೆಚ್ಚು ಖರ್ಚು ಮಾಡಿರುತ್ತಾರೆ. ಎರಡು ಸಾವಿರ. ಮೂರು ಸಾವಿರ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡಿರುತ್ತಾರೆ. ಈ ಹಣ ಅವರಿಗೆ ಎಲ್ಲಿಂದ ಬಂತು? ಎಲ್ಲಿಂದ ಬಂದಿದೆ ಎಂದು ಅವರು ಹೇಳುವುದಿಲ್ಲ. ರೆಕಾರ್ಡ್‌ಗಳೂ ಇಲ್ಲ. ಇಷ್ಟೆಲ್ಲಾ ಇದ್ದು. ಆ ಹಾಸ್ಟೆಲ್ ಮೇಲ್ವಿಚಾರಣೆಯನ್ನು ನಾನು ನೋಡಿಕೊಳ್ಳುತ್ತಿದ್ದಾಗ. ಹಿಂದೆ ಎಂ.ಎಲ್.ಎ. ಆಗಿದ್ದ ಕಾಲದಲ್ಲಿ. ಈ ಹಾಸ್ಟೆಲ್ ಅಕೌಂಟ್ ಚೆಕ್ ಮಾಡಬೇಕು. ಆಡಿಟ್ ರಿಪೋರ್ಟ್ ಮಾಡಿ ಎಂದು ಹೇಳಿದಾಗ ಆಡಿಟರ್ಸ್ ಬಂದು ಎಲ್ಲಾ ಪುಸ್ತಕಗಳನ್ನೂ ಕಿತ್ತುಕೊಂಡು ಹೋಗಿದ್ದರು. ಆಮೇಲೆ ಇನ್ನೊಂದು ಸಲ ಮೇಲುಗಡೆಯಿಂದ ಆರ್ಡರ್ ಬಂತು. ಎಲ್ಲಿಂದ ಬಂತೋ ಗೊತ್ತಿಲ್ಲ, ಆ ಪುಸ್ತಕಗಳನ್ನು ಹಿಂದಕ್ಕೆ ಕೊಟ್ಟು ಬಿಡಿರಿ ಎಂದು ಆರ್ಡರ್ ಬಂದಿದೆ. ಈ ರೀತಿ ಆದರೆ ಆ ಬಡವರ ಗತಿ ಏನಾಗಬೇಕು. ಆದುದರಿಂದ ಈ ರಿಜಿಸ್ಟ್ರೇಷನ್ ಆದಂಥ ಹಾಸ್ಟೆಲ್ಸ್ ಇವೆಯಲ್ಲ ಇವುಗಳ ಲೆಕ್ಕ ಪರಿಶೀಲನೆ ಮಾಡಬೇಕು. ಆ ಹಿಂದುಳಿದ ವರ್ಗಗಳ ಹಾಸ್ಟೆಲ್.

ವಿಚಾರ ನಿಮ್ಮ ಡಿಮ್ಯಾಂಡ್‌ಗೆ ಸಂಬಂಧಪಡದೇ ಇದ್ದರೂ ಈ ಕಾರಣದಿಂದ ನಿಮಗೆ ಸಂಬಂಧ ಇದೆ. ಅದನ್ನು ನೋಡಿಸಿ ಈ ಬಡವರನ್ನು ಸ್ವಲ್ಪ ಸಲಹ ಬೇಕು. ಪ್ರತಿಯೊಂದು ಹಾಸ್ಟೆಲ್‌ಗಳಲ್ಲೂ ಇದರ ಅನಾಹುತ ವಿಪರೂತವಾಗಿದೆ. ನಾನು ಹೇಳತಕ್ಕಂಥ ಮಾತು ನಿಜ ಎನ್ನಬೇಕಾಗಿದ್ದರೆ, ಆಡಿಟ್ ರಿಪೋರ್ಟ್ ತರಿಸಿ, ಇಡಿ. 15-20 ವರ್ಷಗಳಿಂದ ಆಡಿಟ್ ಮಾಡಸದೇ ಇರುವುದಕ್ಕೆ ಕಾರಣ ಏನು? ಆದುದರಿಂದ ದಯವಿಟ್ಟು ಸರಕಾರ ಇದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಅನ್‌ಆಥರೈಸ್ಡ್ ಅಕ್ಯುಪೇಷನ್ಸ್‌ನಲ್ಲಿ ಮನೆಗಳನ್ನು ಏನು ಕಟ್ಟಿಕೊಂಡಿರುತ್ತಾರೆ. ಅಲ್ಲಿ ನಾನು ಮೊದಲು ಹೇಳಿದ ರೀತಿಯಲ್ಲಿ ಎರಡೂ ಕಡೆಯಿಂದ ಫಿಕ್ಸ್ ಮಾಡಿಸಿಕೊಟ್ಟರೆ ಅನೇಕ ಬಡವರು ಉಳಿಯುತ್ತಾರೆ, ಅವರ ಎಕ್ಸ್‌ಪ್ಲಾಯಿಟೇಷನ್ ತಪ್ಪುತ್ತದೆ. ಕಂದಾಯ ಇಲಾಖೆಯಲ್ಲಿ ಲ್ಯಾಂಡ್ ಅಭಿವೃದ್ಧಿ ವಿಚಾರ ತಾವು ಹೇಳಿದ್ದೀರಿ. ಬಡವರಿಗೆ ಹಿಂದುಳಿದ ವರ್ಗದವರಿಗೆ, ಅವರು ಯಾರೇ ಆಗಲಿ ಬಡವರಿಗೆ, ತಾವು ಜಮೀನುಗಳನ್ನು ಕೊಡುತ್ತೀರಿ. ಈ ರೀತಿ ಕೊಟ್ಟ ಜಮೀನಿನಲ್ಲಿ ಅವರು ವ್ಯವಸಾಯ ಮಾಡಿ ಬೆಳೆ ತೆಗೆಯುವ ಮಟ್ಟದಲ್ಲಿ ಆ ಜಮೀನು ಯೋಗ್ಯವಾಗಿರುವುದಿಲ್ಲ. ಹಳ್ಳಕೊಳ್ಳಗಳು ತುಂಬಿಕೊಂಡಿರುತ್ತವೆ. ದಯವಿಟ್ಟು ಸರಕಾರದಿಂದ ಅವರಿಗೆ ಬರತಕ್ಕಂಥ ಗ್ರಾಂಟ್ ಅಥವಾ ಇನ್ನು ಯಾವುದೋ ಒಂದು ರೂಪದಿಂದ ಜಮೀನುಗಳನ್ನು ಲೆವೆಲ್ ಮಾಡಿಸಿಕೊಟ್ಟು ಆ ಬಡಜನಗಳಿಗೆ ಒಂದು ಒಳ್ಳೆಯ ಕೆಲಸ ಮಾಡಿಕೊಡಿ. ಅನೇಕ ವ್ಯವಹಾರದಲ್ಲಿ ಖರ್ಚಾಗುವ ಹಣವನ್ನು ಈ ಬಾಬಿಗಾದರೂ ಖರ್ಚು ಮಾಡಿದರೆ ಸರಕಾರ ಕೊಟ್ಟ ಜಮೀನಿನಿಂದ ಒಳ್ಳೆಯ ಅನುಕೂಲವಾಗಿ ಪಾಪ ಆ ಬಡವರು ಉತ್ತಮ ಸ್ಥಿತಿಯಲ್ಲಿ ಜೀವನ ಮಾಡಿಕೊಳ್ಳುವುದಕ್ಕೆ ಒಂದು ಮಾರ್ಗವನ್ನಾದರೂ ಕಲ್ಪನೆ ಮಾಡಿಕೊಟ್ಟ ಹಾಗೆ ಆಗುತ್ತದೆ. ದಯವಿಟ್ಟು ಇದನ್ನು ಯೋಚನೆ ಮಾಡಿ. ಈ ರೀತಿಯ ಜಮೀನುಗಳನ್ನು ಗ್ರಾಂಟ್ ಮಾಡಿಕೊಡುವಾಗ ಸ್ವಲ್ಪ ಲೆವೆಲ್ ಮಾಡಿಸಿ ಆ ಜನಗಳಿಗೆ ಕೊಡಿರಿ. ಇದರಿಂದ ಕೊಟ್ಟದ್ದಕ್ಕಾದರೂ ಪ್ರಯೋಜನವಾಗುತ್ತದೆ. ಅವರ ಸ್ಥಿತಿ ಗತಿ ಉತ್ತಮವಾಗುತ್ತದೆ. ಈ ಸಲಹೆಯನ್ನು ತಾವು ಕನ್ಸಿಡರ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ, ಕೆಲವು ಗ್ರಾಮ ಪಂಚಾಯತಿಗಳು ಅಲ್ಲಿ ಇಲ್ಲಿ ಕೊಡತಕ್ಕಂಥ ಕಂದಾಯಗಳನ್ನು ಅನೇಕ ಕಡೆ ಅವ್ಯವಹಾರ ನಡೆಸಿ, ಸಾವಿರಾರು ರೂಪಾಯಿಗಳ ಅವ್ಯವಹಾರಗಳಾಗಿ ದುಡ್ಡನ್ನು ತೆಗೆದುಕೊಂಡು ಹೊರಟುಹೋಗಿದ್ದಾರೆ. ನಮ್ಮ ಗ್ರಾಮವಾದ ಚಾಮರಾಜನಗರ ತಾಲ್ಲೂಕು ಕುದೇರಿನಲ್ಲಿ ಒಬ್ಬ ವಿಲೇಜ್ ಅಕೌಂಟೆಂಟ್ ಸಾವಿರಾರು ರೂಪಾಯಿಗಳನ್ನು ಹೊಡೆದು ಅವರ ಹೆಂಗಸರನ್ನು ಓದಿಸುವುದಕ್ಕೋಸ್ಕರ ಖರ್ಚು ಮಾಡಿಕೊಂಡಿದ್ದಾನೆ. ಅವರು ಹೋಗಿ ಮೈಸೂರು ಸಿಟಿಯಲ್ಲಿದ್ದಾರೆಂದು ಗೊತ್ತಿದ್ದರೂ ಸಹ ಅಲ್ಲಿರತಕ್ಕಂಥ ಅಧಿಕಾರಿಗಳು ಅವರನ್ನು ಮರೆಮಾಚಿ ಇಟ್ಟುಕೊಂಡು ಅವರನ್ನು ಅರೆಸ್ಟ್ ಮಾಡಬಾರದು, ಅಂತಹ ಸ್ಥಿತಿಯಲ್ಲಿ ಅವರನ್ನು ಪ್ರೊಟೆಕ್ಟ್ ಮಾಡಿರುತ್ತಾರೆ. ಎಂತೆಂತಹ ಕಳ್ಳರನ್ನು ಎಲ್ಲೆಲ್ಲೋ ಇರತಕ್ಕಂಥವರನ್ನು ಹಿಡಿಯುವಾಗ ಒಬ್ಬ ಗುಮಾಸ್ತರನ್ನು. ಅವನ ಹೆಂಡತಿ ಮಕ್ಕಳು ಓದುವಂತಹ ಕಾಲೇಜಿನಲ್ಲಿ ಪತ್ತೆ ಮಾಡಿ ಹಿಡಿಯುವುದಕ್ಕೆ ಆಗದಿರುವ ವಿಚಾರವೇ ಇದು. ಇದನ್ನೆಲ್ಲ ಸರಕಾರ ನೋಡಬೇಕು. ಇದರಲ್ಲಿ ಸಹ ಜಾತಿ ಕುಲ ಮತ್ತು ಅವರ ಲಂಚ ವಗೈರೆ-ಇದಕ್ಕೆಲ್ಲಾ ಮರುಳಾಗಿ ಸಾರ್ವಜನಿಕರ ಸ್ವತ್ತನ್ನು ಈ ರೀತಿ ಅವ್ಯವಹಾರಕ್ಕೆ ಬಳಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಂಬಂಧಪಟ್ಟ ವಿಲೇಜ್ ಅಕೌಂಟೆಂಟ್ ಹೆಸರು ಹೇಳಿದರೆ ಎನ್‌ಕ್ವೈರಿ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಸಿದ್ದಯ್ಯ : ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ರಿಪೋರ್ಟ್ ಇದೆ. ಅಲ್ಲಿಂದ ನೀವು ತರಿಸಿಕೊಳ್ಳಬಹುದು. ನಾನು ಕೊಡುವುದಕ್ಕೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೆಸರು ಹೇಳಿದರೆ ತಕ್ಷಣ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ : ಇನ್ನು ಭೂ ಅಭಿವೃದ್ಧಿ ವಿಚಾರದಲ್ಲಿ ತಮಗೆ ನಾನು ಹೇಳುತ್ತೇನೆ. ಇವೆಲ್ಲ ಅವಶ್ಯಕತೆ ಇರುವ ವಿಚಾರಗಳು. ಸರ್ಕಾರ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಈ ಕೆಲಸಗಳನ್ನು ಮಾಡಬಹುಮ. ಕಷ್ಟವೇನೂ ಆಗುವುದಿಲ್ಲವೆಂದು ಇದನ್ನು ನಾನು ಮುಂದೆ ಹೇಳುತ್ತೇನೆ. ಈಗ ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ತಾವು ಅಭಿವೃದ್ಧಿಗೆ ಕೊಡತಕ್ಕಂಥಾದ್ದನ್ನು ಒಪ್ಪುತ್ತೇನೆ. ಆದರೆ ನೀವು ಕೊಟ್ಟ ಹಣವನ್ನು ಸದುಪಯೋಗಪಡಿಸಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥಾದ್ದನ್ನು ರಿವ್ಯೂ ಮಾಡುವ ಕೆಲಸ ಆಗಬೇಕು. ಅದು ಹಣ ಕೊಡುವುದಕ್ಕಿಂತ ಬಹಳ ಪ್ರಾಮುಖ್ಯವೆಂದು ನಾನು ಭಾವಿಸಿದ್ದೇನೆ. ನೀವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ರಿವ್ಯೂ ಮಾಡಬೇಕಾಗುತ್ತದೆ. ನಾನು ಉದಾಹರಣೆಗೆ ಹೇಳುತ್ತೇನೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಗ್ರಾಮಗಳಿಗೆ, ಮಂಡಲ ಪಂಚಾಯಿತಿಗಳಿಗೆ ಪ್ರತಿಯೊಂದಕ್ಕೂ ಎರಡೆರಡು ಸಾರಿ ಹೋಗಿದ್ದೇನೆ. ನಾನು ಹೋದ ಸಾರಿಯೂ ಈ ವಿಚಾರ ಹೇಳಿದ್ದೇನೆ. ಅಲ್ಲಿ ಕೇಳಿದಾಗ. ಪಾಪ ಬಡವರಿಗೆ ಧನ. ಕುರಿ. ಎತ್ತು. ಎಮ್ಮೆ ಕೊಟ್ಟಿರುವ ವಿಚಾರದಲ್ಲಿ ಮತ್ತು ನಿರುದ್ಯೋಗಿಗಳಿಗೆ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನಲ್ಲಿ ಉದ್ಯೋಗ ಕೊಡಲು ಸಹಾಯ ಮಾಡಿದ್ದೀರಲ್ಲ ಅದೆಲ್ಲಾ ಏನಾಗಿದೆ ಎಂದು ಅಲ್ಲಿರತಕ್ಕಂಥ ಛೇರ್ಮನ್‌ಗಳನ್ನು ಮೆಂಬರ್ಸ್‌ನ್ನು ಬನ್ನಿ ಹೋಗೋಣ ಏನು ಕೊಟ್ಟಿದ್ದೀರಿ ಅದನ್ನು ನೋಡೋಣ ಎಂದು ಕೇಳಿದರೆ ಅವರೊಬ್ಬರೂ ಬರುವುದಿಲ್ಲ. ನೀವು ರೀಸೆಂಟಾಗಿ ಇಷ್ಟೆಲ್ಲಾ ದನ. ಕುರಿಗಳನ್ನು ನಿಮ್ಮ ಊರಿನಲ್ಲಿ ಕೊಟ್ಟಿದ್ದೀರಿ. ಬನ್ನಿ ಹೋಗಿ ನೋಡೋಣ ಎಂದು ಕೇಳಿದರೆ ಅವರೊಬ್ಬರೂ ಬರುವುದಿಲ್ಲ. ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ನಾಗವಳ್ಳಿ ಎಂಬ ಒಂದು ದೊಡ್ಡ ಊರು ಇದೆ. ಅಲ್ಲಿ ಕುರಿಗಳು ಏನಾಗಿವೆ ನೋಡೋಣ ಎಂದರೆ. ಸ್ವಾಮಿ, ನಮ್ಮ ಕಡೆಗೆ ಬಿಸಿಲು ಕಾಲದಲ್ಲಿ ಒನ್ನೂರು ಕುರಿ ಜೀವಸಹಿತ ಇರುವುದಿಲ್ಲ. ಬಿಸಿಲಿನ ತಾಪಕ್ಕೆ ಎಲ್ಲಾ ಸತ್ತು ಹೋಗುತ್ತವೆ. ಆದ್ದರಿಂದ ಕುರಿಗಳೆಲ್ಲ ಸತ್ತುಹೋಗಿವೆ. ಕೊಡುವುದಕ್ಕೆ ಇಲ್ಲ ಎಂದು ಹೇಳಿದರು. ಆಗ ಅಲ್ಲೇ ಎದುರಿಗೆ ಇದ್ದ ಒನ್ನೂರು ಕುರಿಗಳನ್ನು ನಾನು ತೋರಿಸಿ ನೋಡಿ. ಅಲ್ಲಿ ಮೇಯುತ್ತಾ ಇವೆಯಲ್ಲ ಎಂದು ಕೇಳಿದರೆ ಆಗ ಎಲ್ಲರೂ ನಗಾಡುತ್ತಾರೆ. ಈ ತರಹ ಆಗಬಾರದು. ಬಹುಶಃ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತು. ತಾಲ್ಲೂಕು ಪಂಚಾಯತಿಗಳಿಗೆ ರಿವ್ಯೂ ಮಾಡತಕ್ಕ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಅವರು ನಿರ್ವಹಣೆ ಮಾಡದಿದ್ದರೆ ಹೇಗೆ? ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ರಿವ್ಯೂ ಮಾಡಿ ತಾವು ಕೊಡುವ ಹಣ ಸದುಪಯೋಗ ಆಗಬೇಕು. ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ಹಣ ಈ ರೀತಿಯಾಗಿ ಅನಾಶ್ಯಕವಾಗಿ ಹೋಗುತ್ತಿದೆ ಎಂದರೆ ಒಬ್ಬರೂ ಮಾತನಾಡುವುದಿಲ್ಲ. ಅದಕ್ಕೆ ತಾವು ಛೇರ್ಮನ್‌ಗಳನ್ನು ರೊಟೇಶನ್ ಪ್ರಕಾರ ಮಾಡಿದರೆ ಆಗ ಯಾರು ಉತ್ಸಾಹಿಗಳು ಇರುತ್ತಾರೆ ಅವರು ಛೇರ್ಮನ್‌ಗಳು ಆದರೆ ಬಹುಶಃ ಸ್ವಲ್ಪ ಪ್ರಯೋಜನವಾಗುತ್ತದೆ. ಸರ್ಕಾರ ಒದಗಿಸತಕ್ಕಂಥ ಹಣ ಯಾವ ಬಡವರ ಬಾಯಿಗೆ ಹೋಗಬೇಕೋ ಅವರ ಬಾಯಿಗೆ ಹೋಗದೆ ಬೇರೆ ಯಾವ ಬಾಯಿಗೂ ಹೋಗುತ್ತದೆ. ನೀವು ಇದನ್ನು ತಪ್ಪಿಸಬಹುದಾದ ವಿಚಾರ. ಇದನ್ನು ಏಕೆ ಏತಕ್ಕೆ ತಪ್ಪಿಸಬಾರದು? ಮಾಡುವುದಕ್ಕಾಗದೇ ಇದ್ದರೆ ಬಿಡೋಣ. ಇದು ಮಾಡತಕ್ಕಂಥ ವಿಚಾರ. ಆದ್ದರಿಂದ ನೀವು ಕೊಡತಕ್ಕಂಥ ಹಣಕ್ಕೆ ರಿವ್ಯೂ ಮಾಡುವ ಪ್ರೋಗ್ರಾಂ ಹಾಕಿಕೊಳ್ಳಬೇಕು. ಇದು ಬಹಳ ಮುಖ್ಯವಾದುದು. ಅದು ಎಷ್ಟರ ಮಟ್ಟಿಗೆ ಆಗಿದೆ, ಬಡವರು ಬಡತನ

ರೇಖೆಗಿಂತ ಮೇಲಕ್ಕೆ ಹೋಗಿದ್ದಾರೋ ಇಲ್ಲವೋ ಎನ್ನುವ ವಿಚಾರಗಳಲ್ಲಿ ತಾವು ನೋಡಬೇಕು. ಬಡವರು ಬಡತನದ ರೇಖೆಗಿಂತ ಮೇಲಕ್ಕೆ ಹೋಗಲಿ ಎಂದು ಇಷ್ಟೆಲ್ಲಾ ದುಡ್ಡು ನಾವು ಕೊಡುತ್ತೇವೆ. ಅವರು ಮೇಲಕ್ಕೆ ಹೋಗಿದ್ದಾರೋ ಅಥವಾ ಕೆಳಕ್ಕೆ ಬಂದಿದ್ದಾರೋ ನೋಡಬೇಕಲ್ಲ. ಒಂದು ವೇಳೆ ಮೇಲಕ್ಕೆ ಹೋಗಿದ್ದಾರೆಂದು ಇಟ್ಟುಕೊಳ್ಳೋಣ. ರಿವ್ಯೂ ಮಾಡಿದರೆ ಅವರು ಬಡತನ ರೇಖೆಯಲ್ಲಿಯೇ ಸ್ಟೆಬಿಲಿಟಿ ಮೆಂಟೇನ್ ಮಾಡಿಕೊಂಡು ಹೋಗುತ್ತಿದ್ದಾರೆಯೇ, ಮೇಲಕ್ಕೆ ಹೋಗಿದ್ದಾರೋ ಕೆಳಕ್ಕೆ ಹೋಗಿದ್ದಾರೋ ಎನ್ನುವುದು ಗೊತ್ತಾಗುತ್ತದೆ. ರಿವ್ಯೂ ಮಾಡದಿದ್ದರೆ ಹೇಗೆ ಗೊತ್ತಾಗುತ್ತದೆ? ಪ್ರತಿ ಸಾರಿಯೂ ಇಷ್ಟಿಷ್ಟು ಜನರನ್ನು ಮೇಲಕ್ಕೆತ್ತಿದ್ದೇವೆ ಎಂದರೆ, ನಿಜವಾಗಿ ಅವರು ಬಡತನದ ರೇಖೆಗಿಂತ ಮೇಲೆ ಇದ್ದಾರೋ ಅಥವಾ ಇದ್ದಲ್ಲೇ ಇದ್ದಾರೋ ಅಥವಾ ಕೆಳಗಡೆ ಹೋಗಿದ್ದಾರೋ ಎನ್ನುವುದನ್ನು ಈ ರಿವ್ಯೂ ಮಾಡಿದರೆ ತಾನೆ ತಿಳಿದುಕೊಳ್ಳಲು ಸಾಧ್ಯ. ರಿವ್ಯೂ ಮಾಡದಿದ್ದರೆ ಹೇಗೆ ಗೊತ್ತಾಗುತ್ತದೆ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಳ್ಳಿಯಲ್ಲಿ ಅನೇಕರು ತಿಳಿವಳಿಕೆ ಇರತಕ್ಕ ಜನ ಹೇಳಿದ್ದಾರೆ. ಸ್ವಾಮಿ, ಇದನ್ನೆಲ್ಲ ಮಾಡಿದರೆ ಅನೇಕರಿಗೆ ಬರತಕ್ಕ ದುಡ್ಡು ಬರುವುದಿಲ್ಲ. ಹಳ್ಳಿಗಳಲ್ಲಿ ಕಾರ್ಯಕರ್ತರು ಇರುತ್ತಾರಲ್ಲ. ಅವರಿಗೆ ಹಸಿವಾಗಬಹುದು, ಸ್ವಲ್ಪ ತೊಂದರೆ ಆಗಬಹುದು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದರೆ ಅದೆಲ್ಲ ಹೊರಗೆ ಬರುತ್ತದೆ ಎಂದು ಹೇಳುತ್ತಾರೆ. ಇಂತಹ ಚಾರ್ಜಸ್‌ಗೆ ತಾವು ಅವಕಾಶ ಕೊಡಬಾರದು. ಸಾರ್ವಜನಿಕರ ಹಿತದೃಷ್ಟಿಯಿಂದ ತಾವು ಹಣ ಒದಗಿಸುತ್ತೀರಿ. ಕೊಟ್ಟಿರುವ ಹಣ ಅವರ ಬಾಯಿಗೆ, ಕೈಗೆ ಹೋಗುತ್ತಿಲ್ಲ. ಆ ರೀತಿಯಾದರೆ ಪ್ರಯೋಜನ ಏನು? ತಾವು ರಿವ್ಯೂ ವಿಚಾರದಲ್ಲಿ ಅತ್ಯಂತ ಹೆಚ್ಚಿನ ಗಮನ ಕೊಡಬೇಕೆಂದು ನಾನು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಸ್ಟ್ಯಾಂಪುಗಳು ಕೊಡುವ ವಿಚಾರ ಹೇಳುತ್ತೇನೆ. ಈ ಬಡ ಹಾಸ್ಟೆಲ್‌ಗಳನ್ನು ರಿಜಿಸ್ಟ್ರೇಷನ್ ಮಾಡಬೇಕಾಗಿದ್ದರೆ, ಪ್ರತಿಸಾರಿ ಆ್ಯನ್ಯುಯಲ್ ಅಕೌಂಟ್ಸ್ ಫೈಲ್ ಮಾಡಬೇಕಾಗಿದ್ದರೆ ಮೊದಲು Under the Registration Act 2 ರೂಪಾಯಿ ಇತ್ತು. ಈಗ ಹೋದ ಸೆಷನ್‌ನಲ್ಲಿ ಬಹುಶಃ 1989-90ನೇ ಇಸವಿಯಲ್ಲಿ ತಾವು ರಿವೈಸ್ ಮಾಡುವಾಗ ಎರಡು ರೂಪಾಯಿಯಿಂದ ನೂರು ರೂಪಾಯಿಗಳಿಗೆ ಏರಿಸಿ ಬಿಟ್ಟಿದ್ದೀರಿ. ಬಹುಶಃ ಎಷ್ಟೆಷ್ಟೋ ಹಾಸ್ಟೆಲ್‌ಗಳ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ಆಗಿ, ಸೀಟ್ಸ್ ಕೊಟ್ಟು ಎಜುಕೇಷನ್ ಇನ್ಸಿಟ್ಯೂಷನ್ ನಡೆಸಲಿಕ್ಕೆ ಭಾರಿ ಭಾರಿ ಬಾಕ್ಸ್‌ಗಳಲ್ಲಿ ಲಕ್ಷಾಂತರ ರೂಪಾಯಿ ತಂದು ಕೊಡುತ್ತಾರಲ್ಲಾ. ಅವರು ನೂರು ರೂಪಾಯಿ ಕೊಡಬಹುದು. ಬಡ ಹುಡುಗರು ಹಾಸ್ಟೆಲ್ ಏಡೆಡ್ ಗ್ರ್ಯಾಂಟ್‌ನಲ್ಲಿ ಊಟ ಮಾಡುತ್ತಾರಲ್ಲ, ಆ ಮಕ್ಕಳು ಹಾಸ್ಟೆಲ್‌ಗಳಿಗೆ ಫೈಲ್ ಮಾಡಬೇಕಾದರೆ ಎರಡು ರೂಪಾಯಿಂದ ನೂರು ರೂಪಾಯಿ ಯಾರು ಸ್ವಾಮಿ ಕೊಡುತ್ತಾರೆ? ಈ ಹೊರೆ ಒಂದು ಪ್ರಪೋರ್ಷನೇಟ್ ಆಗಿಯಾದರೂ ಬೇಡವೆ? ಆ ಬಡ ಜನ ಈ ಹೊರೆಯನ್ನು ಹೊರುತ್ತಾರೆಯೇ ಎನ್ನುವುದನ್ನು ನೋಡಬೇಡವೆ? ದಯಮಾಡಿ ಇದನ್ನು 5 ರೂಪಾಯಿಗಾದರೂ ಇಳಿಸಿ. ಇಷ್ಟಾದರೂ ಮಾಡಬೇಕೆಂದು ಇವರ ಬಗ್ಗೆ ನಾನು ಪತ್ರ ಬರೆದಿದ್ದೇನೆ. ದಯಮಾಡಿ ಇದನ್ನು ನೋಡಿ. ಇದೇನೂ ಅಷ್ಟು ಕಷ್ಟವಾಗುವುದಿಲ್ಲ. ಬಹುಶಃ ಸರ್ಕಾ ಈ ರೀತಿ ರಿವೈಸ್ ಮಾಡುವ ಹಾಗಿದ್ದರೆ ನಿಮಗೆ ಇದರಿಂದ ಅಪಾರವಾದ ನಷ್ಟವೇನೂ ಆಗುವುದಿಲ್ಲ. ಒಟ್ಟಿನಲ್ಲಿ ಏನಾಗುತ್ತದೆಂದರೆ, ನೂರು ರೂಪಾಯಿ ಕೊಡಲಾರದಕ್ಕೋಸ್ಕರ ನಮ್ಮ ಹಾಸ್ಟೆಲ್ ರಿಜಿಸ್ಟೇಷನ್ ಆಗಿದೆ. ಕ್ಯಾನ್ಸಲ್ ಆಗಿಲ್ಲವೆಂದು ಹೇಳಿ ಮತ್ತಷ್ಟು ಅವ್ಯವಹಾರಗಳನ್ನು ನಡೆಸಿ, ಜನಗಳನ್ನು ಎಕ್ಸ್‌ಪ್ಲಾಯಿಟೇಷನ್ ಮಾಡುವುದಕ್ಕೆ ಮಾರ್ಗ ಮಾಡಿ ಕೊಟ್ಟಹಾಗೆ ಆಗುತ್ತದೆ.

ದಯಮಾಡಿ ಈ ಬಡ ಹಾಸ್ಟೆಲ್‌ಗಳಿಗೆ ತಾವು 5 ರೂಪಾಯಿಗಾದರೂ ಇಳಿಸಿ. ಒಂದಕ್ಕೆ ಎರಡೂವರೆಯಷ್ಟಾಯಿತು. ಆದ್ದರಿಂದ. ದಯಮಾಡಿ ಇದರ ಬಗ್ಗೆ ಸ್ವಲ್ಪ ತಾವು ನೋಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ನೈಸರ್ಗಿಕ-ವಿಕೋಪದ ವಿಚಾರ. ತಾವು ಇದರ ಬಗ್ಗೆ ಹೇಳಿದ್ದೀರಿ. ನಾನು ನಿನ್ನೆ ದಿವಸ ಪ್ರಶ್ನೆ ಕೇಳಿದ್ದೇನೆ. ಚಾಮರಾಜನಗರ ತಾಲ್ಲೂಕಿನ ಸುವರ್ಣಾವತಿ ರಿವರ್ ಏನಿದೆ ಅದು ಸರ್ಕಾರದ ನದಿ. ಆ ಕಡೆ ಇರುವ ನದಿ ದಡಗಳೂ ಸರ್ಕಾರದ್ದೇ. ಆ ಜಮೀನುಗಳನ್ನು ಅನುಕೂಲಸ್ಥರಿಗೆ ತಾವು ರೆಗ್ಯುಲರೈಸ್ ಮಾಡಿಬಿಟ್ಟಿದ್ದೀರಿ. ತಾವು ಉತ್ತರದಲ್ಲಿ ಅದನ್ನು ವಿಚಾರಿಸುತ್ತೇನೆಂದು ಹೇಳಿದ್ದೀರಿ. ಅದಕ್ಕೆ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್‌ರವರನ್ನು 20-25 ವರ್ಷಗಳ ಹಿಂದೆ ಹಾಕಿ. ಎಷ್ಟಾಗಿದೆ ಎಂದು ನೋಡಿ. ಇದನ್ನು ಮಾಡಬಾರದೆಂದುಇತ್ತು. ಕೊನೆಗೆ ಹೇಗಾಯಿತೊ? ಯಾರದೋ ಪ್ರಭಾವ ನಡೆದಿರಬೇಕು. ಅವರ ಜನಗಳಿಗೆ ಅನುಕೂಲವಾಗುವ ದಿಸೆಯಿಂದ ರೆಗ್ಯುಲರೈಸ್ ಮಾಡಿರಬಹುದು. ಇವತ್ತಿನ ದಿವಸ ನೀವು ರೆಗ್ಯುಲರೈಸ್ ಮಾಡಿದ್ದೀರಿ. ಯಾವ ಎನ್‌ಕ್ರೋಚ್ ಆಗಿಲ್ಲವೆಂದ ಮೂರ್ನಾಲ್ಕು ದಿವಸದ ಹಿಂದೆ ಉತ್ತರವನ್ನು ಕೊಟ್ಟಿದ್ದೀರಿ. ನೀರು ಹರಿಯುವ ಭಾಗ ಸುಮಾರು 10-20 ಅಡಿಯೂ ಇಲ್ಲ. ನದಿಯಲ್ಲಿ ಪ್ರವಾಹ ಹೆಚ್ಚಾಗಿ ಬಂದಾಗ ಆ ಪಾತ್ರದಲ್ಲಿ ನೀರು ಎಷ್ಟರಮಟ್ಟಿಗೆ ಹೋಗುವುದಕ್ಕೆ ಸಾಧ್ಯ? ನೀವು ಮಾಡಿದ ಕೆಲಸದಿಂದ ಅನ್ಯಾಯ ಆಗಿರತಕ್ಕಂಥಾದ್ದು ಬಡವರ ಮೇಲೆ. ಹತ್ತಾರು ವರ್ಷಗಳಿಂದ, 20 ವರ್ಷಗಳಿಂದ ತೆಂಗಿನ ಸಸಿಗಳನ್ನು ಬೆಳೆಸಿಕೊಂಡು ಸಾವಿರಾರು ರೂಪಾಯಿ ಸಂಪಾದನೆ ಮಾಡಿರತಕ್ಕಂಥ ದನಗಳಿಂದ ಆ ಬಡವರಿಗೆ ಆಗಿರುವ ಅನುಕೂಲಗಳು ಏನು? ಅವತ್ತಿನ ದಿವಸ ತಾವೆಲ್ಲ ಬಂದು ನೋಡಿದಾಗ ಆ ಜನರ ಮನೆ ಮಠಗಳನ್ನೆಲ್ಲಾ ಹಾಳಾಗಿ, ಸಣ್ಣ ಮಕ್ಕಳೆಲ್ಲಾ ಬೀದಿಪಾಲಾಗಿ, ಮಲಗಿಕೊಳ್ಳುವುದಕ್ಕೆ ಜಾಗ ಇಲ್ಲದೆ ಎಲ್ಲಾ ಕಡೆ ನೀರು ತುಂಬಿತ್ತು. ಅಂಥ ಸ್ಥಿತಿ ಇರುವಾಗ ದಯಮಾಡಿ ನೋಡಿ. ಅವರು ತುಂಬಾ ಅನುಕೂಲವಾಗಿ ಸಾಹುಕಾರರಾಗಿರತಕ್ಕಂಥ ಜನಗಳಿಗೆ ತೆಂಗಿನ ತೋಟವಾಗಿದೆ. ಆದರೆ ಈ ಬಡ ಜನಗಳಿಗೆ ಮಲಗಿಕೊಳ್ಳುವುದಕ್ಕೆ ಜಾಗ ಇಲ್ಲ. ಬರೀ ಗುಡಿಸಲು ಕಟ್ಟಿಕೊಳ್ಳಲಾರರು. ಈ ಸ್ಥಿತಿಗೆ ಬಂದಿದೆ. ದಯಮಾಡಿ ಇದರ ಬಗ್ಗೆ ತಾವು ಹೆಚ್ಚಿಗೆ ಗಮನ ಕೊಡಿ. ರೆಗ್ಯುಲರೈಸ್ ಮಾಡುವುದೆಂದರೆ. ಬೇರೆ ಜಮೀನನ್ನು ರೆಗ್ಯುಲರೈಸ್ ಮಾಡಿದ ಹಾಗೆ ಸುವರ್ಣಾವತಿ ನದಿ ಜಾಗ ರೆಗ್ಯುಲರೈಸ್ ಮಾಡಿದ್ದೀರಿ. ಇದರ ಪರಿಣಾಮ ಬಡವರ ಮೇಲೆ ಏನಾಗುತ್ತದೆ? ಇದನ್ನು ತಾವು ನೋಡಬೇಕು. ಈ ರೆಗ್ಯುಲರೈಸ್ ಮಾಡಿದಂಥ ಪುಣ್ಯಾತ್ಮರು ಯಾರು? ಹೇಗೆ ಮಾಡಿದರು ಎನ್ನುವುದನ್ನಾದರೂ ದಯವಿಟ್ಟು ತಿಳಿಸಿ. ಮತ್ತೆ ಇನ್ನೊಂದು ವಿಚಾರ ಏನೆಂದರೆ. ಗ್ರಾಮಾಂತರ ನೀರು ಸರಬರಾಜು ವಿಚಾರದಲ್ಲಿ. ಅವೆಲ್ಲಾ ಮಾಡುತ್ತಿದ್ದೀರಿ. ಹಿಂದೆ ಇದ್ದ ಸದಸ್ಯರು ಅದರಲ್ಲಿ ಎಷ್ಟು ಕಷ್ಟ ಇದೆಯೆಂದು ಅವರೆಲ್ಲರೂ ಹೇಳಿದ್ದಾರೆ. ಇದರಲ್ಲಿ ಬಹುಶಃ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹೆಚ್ಚಿಗೆ ಗಮನ ಹರಿಸುತ್ತಿದ್ದೀರಿ. ಒಂದು ವಿಚಾರ ಏನೆಂದರೆ, ನಲ್ಲಿ ಮೂಲಕ ನೀರು ಸರಬರಾಜು ಮಾಡುವುದರ ಬಗ್ಗ ಹೇಳುವುದಾದರೆ ಎಷ್ಟೋ ಗ್ರಾಮಗಳಲ್ಲಿ ಈ ಬಡವರಿಗೆ, ಹಿಂದುಳಿದವರ್ಗದ ಕೆಲವು ಜಾತಿ ಜನಗಳಿಗೆ ಈ ನಲ್ಲಿ ನೀರು ಸಿಗುವುದಿಲ್ಲ. ಅನೇಕ ಇನ್‌ಸ್ಟೆನ್ಸ್ ಇಲ್ಲೂ ಹೇಳಿದ್ದೇನೆ. ಜಿಲ್ಲಾಪರಿಷತ್ತಿನ ಸಭೆಯಲ್ಲೂ ಹೇಳಿದ್ದೇನೆ. ಅದರಲ್ಲೂ ಮಂತ್ರಿಗಳು ಅಲ್ಲಿಗೆ ಬಂದಾಗ ಇಂತಿಂಥಾ ಕಾರ್ಯಗಳೆಲ್ಲಾ ನಡೆಯುತ್ತವೆ. ದಯಮಾಡಿ ತಪ್ಪಿಸಿ ಸ್ವಾಮಿ ಎಂದು ಹೇಳಿದ್ದೇನೆ. ಅದು ಏನು ವಿಚಾರ ಎಂದರೆ. ನೀವು ಊರಿಗೆ ನಲ್ಲಿ ಮೂಲಕ ಸಪ್ಲೈ ಮಾಡತಕ್ಕಂಥ ಉದ್ದೇಶವೇನೆಂದರೆ. ಊರಿನ ಎಲ್ಲ ಜನಗಳಿಗೂ ಕುಡಿಯುವ ನೀರು ಸಿಕ್ಕಲಿ ಎಂದು. ಆ ನೀರು ಜಾಸ್ತಿಯಾಗಿ ಬೇಕಾದಷ್ಟು ಉಳಿದರೆ ಅಂಥಾ ಸಂದರ್ಭದಲ್ಲಿ ಮಾತ್ರ ಮನೆಗಳಿಗೆ ಹಾಕಿಕೊಳ್ಳಲಿ ಎಂಬ ಉದ್ದೇಶ ಇದೆಯೆಂದು ನಾನು

ತಿಳಿದುಕೊಂಡಿದ್ದೇನೆ. ಆದರೆ, ಇವತ್ತಿನ ದಿವಸ ತಿರುಗಾಮುರಗ ಆಗಿಬಿಟ್ಟಿದೆ. ಊರಿನ ಪಂಚಾಯಿತಿಯವರೆಲ್ಲಾ ತಮ್ಮ ಮನೆಗಳಿಗೆ ಪೊದಲು ಹಾಕಿಸಿಕೊಂಡು ಬಿಡುತ್ತಾರೆ. ನೀರು ಸಾಲದಿದ್ದರೆ, ಪಾಪ ಇಂಥಾ ಕೇರಿಯವರಿಗೆ ಸಾಕಾಗುವುದಿಲ್ಲ ಒಂದು ಬೋರ್‌ವೆಲ್ ತೆಗೆಸಿ ಎಂದು ಹೇಳುವುದು.

ಅವರಿಗೆ ಕುಡಿಯಲು ಪ್ರೋಟೆಕ್ಟೆಡ್ ವಾಟರ್. ಅದೇ ಬಡವರಿಗೆ ಬೋರ್‌ವೆಲ್ ನೀರು. ಜೊತೆಗೆ ಇನ್ನು ಕೆಲಸವರು ಏನು ಮಾಡುತ್ತಾರೆ ಅಂದರೆ, ಈ ವಿಚಾರವನ್ನು ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ; ಜಿಲ್ಲಾ ಪರಿಷತ್, ಮಂಡಲ ಪಂಚಾಯತ್‌ನಲ್ಲಿ ಮತ್ತು ಮಾನ್ಯ ಸಚಿವರು ಬಂದಾಗಲೂ ಕೂಡ ಹೇಳಿದ್ದೇನೆ. ನಲ್ಲಿ ನೀರು ಬರುವ ಕಡೆಗಳಲ್ಲಿ ನೀರು ಸಾಕಾಗದಿದ್ದರೆ ಕೆಲವು ಅನುಕೂಲಸ್ಥರು ಸಣ್ಣ ಸಣ್ಣ ಮೋಟರ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಇವರು ಮೋಟರ್ ಮೂಲಕ ನೀರು ಹಿಡಿದುಕೊಳ್ಳುವಾಗ ಕೆಳಗಡೆ ಇರತಕ್ಕವರಿಗೆ ನೀರು ಬರುವುದಿಲ್ಲ. ಇದನ್ನು ತಮ್ಮ ಗಮನಕ್ಕೆ ತಂದದ್ದಾಗಿದೆ. ಅಂಥ ಅನಾನುಕೂಲ ಪರಿಸ್ಥಿತಿಯಲ್ಲಿರುವಂಥ ಜನರನ್ನು ಏತಕ್ಕಾಗಿ ನೀವು ಈ ವಿಚಾರವನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದಿಲ್ಲ ಎಂದು ಕೇಳಿದರೆ, ಹೀಗೆ ಮಾಡಿದರೆ ಅನಾವಶ್ಯಕವಾಗಿ ನಮ್ಮ ನಮ್ಮಲ್ಲಿ ಜಗಳ ಪ್ರಾರಂಭವಾಗುತ್ತದೆ, ಅದು ಬೇಡ ಎಂದು ಹೇಳಿಕೊಳ್ಳುತ್ತಾರೆ. ಇದನ್ನೆಲ್ಲಾ ಸರಕಾರದವರು ನೋಡಬೇಕು. ಹೀಗೆ ಎಲ್ಲಾ ಸೌಲಭ್ಯಗಳನ್ನು ಸೌಕರ್ಯಗಳನ್ನು ಅನುಕೂಲಸ್ಥರು. ಪ್ರಭಾವಿಗಳು ಪಡೆದುಕೊಳ್ಳುತ್ತಾರೆ. ಬಡವರಿಗೆ ಎಲ್ಲಿ ಹೋದರೂ ಕೂಡ ಎಲ್ಲಾ ಹೋಗಿ ಅವರಿಗೆ ಕಕ್ಕಸಕ್ಕೆ ಕೂಡ ಜಾಗವಿಲ್ಲದ ಸ್ಥಿತಿ ಇದೆ. ಇಂಥ ಎನ್‌ಕ್ರೋಚ್‌ಮೆಂಟ್ ನೆಲದಲ್ಲಿಯೂ ಎನ್‌ಕ್ರೋಚ್‌ಮೆಂಟ್. ನೀರಿನಲ್ಲಿಯೂ ಎನ್‌ಕ್ರೋಚ್‌ಮೆಂಟ್, ಎಕ್ಸಪ್ಲಾಯ್‌ಟೇಷನ್‌ನ್ನು ತಪ್ಪಿಸಬೇಕು. ಆ ಬಗ್ಗೆ ಬಡವರಿಗೆ ರಕ್ಷಣೆ ಬಗ್ಗೆ ಅವರ ಸಹಕಾರಕ್ಕಾಗಿ ರಾಜ್ಯಾಂಗದಲ್ಲಿ ನಿರ್ದೇಶನ ಇಲ್ಲವೆ? ಆ ಕಡೆಗೆ ಸರಕಾರದವರು ಸ್ವಲ್ಪ ಗಮನಹರಿಸಬೇಕು. ಬಡವರನ್ನು ಬಡತನದ ರೇಖೆಗಿಂತ ಏರಿಸಬೇಕೆಂದು ಹೇಳುತ್ತಾ ಇದ್ದೀರಿ. ಹೀಗೆ ನೀವು ಏರಿಸಿದ ತಕ್ಷಣ ಅವರು ಕೆಳಗೆ ಬೀಳುತ್ತಾರೆ. ಅದನ್ನೆಲ್ಲ ನೋಡಬೇಕು. ಅವರಿಗೆ ಕುಡಿಯುವ ನೀರನ್ನಾದರೂ ಸರಿಯಾಗಿ ಕೊಡಿ. ನಲವತ್ತೂರು ವರ್ಷಗಳಾದರೂ ಅವರಿಗೆ ಕುಡಿಯಲು ನೀರು ಕೂಡ ಕೊಡಬೇಡವೆ? ಅವರಿಗೆ ಮಲಗಲು ಒಂದು ಜಾಗವನ್ನಾದರೂ ಕೊಡಬೇಡವೆ? ಮಾನ್ಯ ಬಂಗಾರಪ್ಪನವರ ಸರಕಾರದಲ್ಲಿ ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹಾಗೆಯೇ ರಾಜ್ಯದಲ್ಲಿ ಎಷ್ಟೋ ಲ್ಯಾಂಡ್ ಅಕ್ವಿಸಿಶನ್ ಕೇಸ್‌ಗಳು ಎರಡು ಮೂರು ದಶಕಗಳಿಂದಲೂ ಬಿದ್ದಿರುವುದು ಉಂಟು. ಇದರ ಬಗ್ಗೆ ಗಮನ ಹರಿಸಬೇಕು. ಇರುವ ನೆಲವೆಲ್ಲ ಶ್ರೀಮಂತರ ಪಾಲಾದರೆ ಬಡವರಿಗೆ ಒಂದು ಚೂರು ಜಾಗ ಬೇಡವೆ? ಅಂಥವರಿಗೆ ಏನಾದರೂ ಸಹಾಯ ಮಾಡುವುದು ಬೇಡವೆ? ಅವರಿಗೊಂದು ನೆಲೆ ಮಾಡಿಕೊಡಬೇಕು. ಇದರ ಬಗ್ಗೆ ಲ್ಯಾಂಡ್ ಅಕ್ವಿಸಿಶನ್ ಆಕ್ಟ್‌ಗೆ ಒಂದು ತಿದ್ದುಪಡಿ ತಂದು ಕಡಿಮೆ ಬೆಲೆಗೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ವಿತರಿಸುವ ಬಗ್ಗೆ ಸರಕಾರದವರು ವಿಚಾರ ಮಾಡಬೇಕು. ಲ್ಯಾಂಡ್ ಆಕ್ಟ್ ಪ್ರಕಾರ ಹೆಚ್ಚಿಗೆ ಭೂಮಿಯನ್ನು ತೆಗೆದುಕೊಳ್ಳಬೇಕಾದರೆ ಎಕರೆಗೆ ಕಂದಾಯ ಎಷ್ಟು ಇದೆಯೆಂದು ನೋಡಿ ಅದರ 100 ರಷ್ಟೋ, 200 ರಷ್ಟೋ ಕೊಟ್ಟು ತೆಗೆದುಕೊಳ್ಳುತ್ತೀರಿ. ಇದನ್ನು ತಿದ್ದುಪಡಿ ಮಾಡಿ ಒಂದು ಶೆಡ್ಯೂಲ್‌ಗೆ ಸೇರಿಸಿ ಯಾವ ರೀತಿಯಲ್ಲಿ ಮಾಡಿದ್ದೀರಿ ಅದೇ ರೀತಿಯಲ್ಲಿ ಇದನ್ನು ಮಾಡಿ. ಈ ದೇಶದಲ್ಲಿ ಹುಟ್ಟಿ ಸ್ವಾತಂತ್ರ ಪಡೆದು 40 ವರ್ಷಗಳಾದರೂ ಬಡವರಿಗೆ ಮಲಗಲು ಒಂದು ಚೂರು ಜಾಗ ಬೇಡವೆ? ಇಲ್ಲಿಯ ನೆಲವೆಲ್ಲವೂ ಇರುವವರಿಗೇ ಆದರೆ ಇಲ್ಲದವರು ಎಲ್ಲಿಗೆ ಹೋಗಬೇಕು? ಅದಕ್ಕಾಗಿ ಲ್ಯಾಂಡ್ ಅಕ್ವಿಸಿಶನ್ ಆಕ್ಟ್‌ಗೆ

ಒಂದು ತಿದ್ದುಪಡಿಯನ್ನು ತಂದು. ಎಮರ್ಜೆಂಟ್ ಬೇಸಿಸ್‌ನಲ್ಲಿ ಈ ಕೆಲಸವನ್ನು ಮಾಡಬೇಕು. ಇನ್ನು ಬಡವರಿಗೆ ಹಾಸ್ಟೆಲ್‌ಗಳು ಸ್ಕೂಲ್‌ಗಳು ಬೇಕು. ಅವುಗಳನ್ನು ತಾವೇ ನಡೆಸುತ್ತೇವೆ ಎಂದು ಅವರು ಹೇಳುತ್ತಾರೆ. ಅದನ್ನು ವ್ಯವಸ್ಥೆ ಮಾಡಿ. ಇನ್ನು ಶೌಚಾಲಯಗಳಿಗೆ ಕೆಲವು ಕಡೆಗಳಲ್ಲಿ ಜಾಗ ಇಲ್ಲ. ಚಾಮರಾಜನಗರದ ತಾಲ್ಲೂಕು ಆಲೂರು. ನಮ್ಮ ರಾಜ್ಯಪಾಲರ ಊರು ಅದು. ಆ ಊರಿನಲ್ಲಿ ಕಕ್ಕಸಕ್ಕೆ ಹೋಗಲು ಜಾಗವಿಲ್ಲ. ಈ ಬಗ್ಗೆ ನಾನು ಪತ್ರ ಬರೆದು ಒಂದು ವರ್ಷವಾಗಿದೆ. ಅದನ್ನು ಡಿಸಿಯವರಿಗೆ ಕಳುಹಿಸಿಕೊಟ್ಟಿದ್ದೀರಿ. ಅವರಿಂದ ಇನ್ನೂ ರಿಪೋರ್ಟ್ ಬಂದಿಲ್ಲ. ಆಲೂರಿನಲ್ಲಿ ಹೆಣ್ಣುಮಕ್ಕಳಿಗೆ ಕಕ್ಕಸಕ್ಕೆ ಹೋಗಲು ಜಾಗವಿಲ್ಲ. ಇಂತಹ ಅನೇಕ ಊರುಗಳಿವೆ. ಇವುಗಳನ್ನೆಲ್ಲಾ ಅತ್ಯಗತ್ಯವಾದ ಸೌಲಭ್ಯಗಳು. ಈ ಕನಿಷ್ಟ ಸೌಲಭ್ಯಗಳು ಕೂಡ ಬೇಡವೆ? ಇದು ಅನುಕೂಲಸ್ಥರಿಗೆ ಬೇಕಾಗಿಲ್ಲ. ಆದರೆ ಬಡವರಿಗೆ ಬೇಕಾಗಿದೆ. ಆದ್ದರಿಂದ ಈ ಬಗ್ಗೆ ಲ್ಯಾಂಡ್ ಅಕ್ವಿಸಿಶನ್ ಆಕ್ಟ್‌ಗೆ ಸೂಕ್ತ ತಿದ್ದುಪಡಿ ತಂದು ಎಮರ್ಜೆಂಟ್ ಬೇಸಿಸ್ ಮೇಲೆ ಈ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೆ ಉದ್ಯೋಗ ಕೊಡುವ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದು ಎಷ್ಟರ ಮಟ್ಟಿಗೆ ಅವರನ್ನು ತಲುಪುತ್ತದೆ ಎಂಬ ವಿಚಾರ ಬೇರೆ. ಅದರಲ್ಲಿಯೂ ಪ್ರಾಮುಖ್ಯವಾಗಿ ರೋಜ್ಗಾರ್ ಯೋಜನೆಯಡಿಯಲ್ಲಿ ಕೆಲಸ ಕೊಡುತ್ತೀರಿ. ಅದನ್ನು ಕಂಟ್ರಾಕ್ಟ್ ಮೂಲಕ ಕೊಟ್ಟರೆ ಅದರಲ್ಲಿ ಹಣದ ದುರುಪಯೋಗ ಆಗುತ್ತದೆಂದು ಸರಕಾರದ ವತಿಯಿಂದಲೇ ಮಾಡುತ್ತಿದ್ದೀರಿ. ಆದರೆ ಕಂಟ್ರಾಕ್ಟರ್‌ಗಳು ಅಲ್ಪಸ್ವಲ್ಪ ತಿಂದು ಹಾಕುತ್ತಿದ್ದ ಹಣವನ್ನು ಇವತ್ತಿನ ದಿವಸ ಅಧಿಕಾರಿಗಳು ಮತ್ತು ಪಂಚಾಯತಿಯವರು ಸೇರಿ ತಿಂದು ಹಾಕುತ್ತಿದ್ದಾರೆ. ನಮ್ಮ ತಾಲ್ಲೂಕು ಪಂಚಾಯತಿಯಲ್ಲಿ ನಡೆದ ಒಂದು ಉದಾಹರಣೆಯನ್ನು ತಮಗೆ ಹೇಳಬಯಸುತ್ತೇನೆ. ನಮ್ಮಲ್ಲಿ ಸಂಬಂಧಪಟ್ಟ ಚೇರ್ಮನ್‌ರು ಇಲ್ಲದ ಒಂದು ಸಮಯದಲ್ಲಿ ನಾನು ವಿಚಾರ ನಡೆಸತಕ್ಕಂಥ ಅವಕಾಶ ಸಿಕ್ಕಿತ್ತು. ಆ ಸಂದರ್ಭದಲ್ಲಿ ಈ ರೋಜ್ಗಾರ್ ಯೋಜನೆಯ ಕೆಲಸಗಳನ್ನು ಅಧಿಕಾರಿಗಳು ಮತ್ತು ಪಂಚಾಯತ್‌ನವರು ಸೇರಿ ಹೇಗೆ ಮಾಡಿದ್ದರು ಎಂಬುದನ್ನು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು : ತಾವು ಪ್ರಾರಂಭಮಾಡಿ ಅರ್ಧಗಂಟೆ ಆಯಿತು. ಬಹಳ ಜನ ಮಾತನಾಡುವವರಿದ್ದಾರೆ. ತಾವು ದಯವಿಟ್ಟು ಜಾಗ್ರತೆ ಮುಗಿಸಬೇಕು.

ಶ್ರೀ ಕೆ. ಸಿದ್ದಯ್ಯ : ಬಡವರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದರಲ್ಲೂ ಅತ್ಯಂತ ಮುಖ್ಯವಾಗಿ ಬಡತನದ ರೇಖೆಯಿಂದ ಮೇಲಕ್ಕೇರಿಸುವ ಕಾರ್ಯಕ್ರಮ ಇದು. ಉದ್ಯೋಗದಲ್ಲಿ ತಾವು ಕೊಡುತ್ತೀರಲ್ಲ. ಅದರಲ್ಲಿ ಅವರು ಮಾಡುವ ಅವ್ಯವಹಾರ ಹೇಳತೀರದು. ರೋಜ್‌ಗಾರ್ ಯೋಜನೆಯಲ್ಲಿ ಎಷ್ಟು ದೂರ ಮಾಡಿಸಿದ್ದೀರಿ. ಆ ಜಾಗ ಸ್ವಲ್ಪ ನೋಡೋಣ ನಡೀರಿ. ಎಷ್ಟು ಉದ್ದ ಮಾಡಿದ್ದೀರಿ. ಎಷ್ಟು ಖರ್ಚು ಮಾಡಿದಿರಿ ಎನ್ನುವುದು ಊರಿನ ಜನಗಳಿಗೆಲ್ಲ ಗೊತ್ತಾಗಲಿ. ನಾವು ಹೋಗಿದ್ದ ಕಡೆಗೆಲ್ಲ ಜನರು ಈ ಸರ್ಕಾರ ಏನೂ ಕೆಲಸ ಮಾಡಿಲ್ಲ. ನೀವು ಎಂಎಲ್‌ಎ ಆಗಿ ನಮಗಲ್ಲ ಏನೂ ಮಾಡಲಿಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ನಾವು ಏನೇನು ಕೆಲಸ ಮಾಡಿದ್ದೇವೆ ಎಂದು ಆಯಾ ಮಂಡಲ ಪಂಚಾಯ್ತಿಯಲ್ಲಿ ಒಂದು ಲಿಸ್ಟ್ ಮಾಡಿ ಬೋರ್ಡ್ ಹಾಕಿ. ಅದನ್ನು ತೋರಿಸಿ ನೋಡಪ್ಪ ನಿಮ್ಮೂರಿಗೆ ಇಂಥಿಂಥ ಕೆಲಸ ಮಾಡಿದ್ದೇವೆ. ಇಂಥಿಂಥ ಬಾಬಿಗೆ ಇಷ್ಟು ಖರ್ಚಾಗಿದೆ. ರಸ್ತೆ ಮಾಡಿಸಿದ್ದೇವೆ, ಇಷ್ಟು ದನ, ಕುರಿ, ಎತ್ತು, ಎಮ್ಮೆ ಕೊಟ್ಟಿದ್ದೇವೆ. ಇನ್ನೇನು ಮಾಡಬೇಕು. ಸರ್ಕಾರದಲ್ಲಿ ಆದಷ್ಟು ಎಲ್ಲ ಮಾಡಿದ್ದೇವೆ, ಇನ್ನೊಂದು ಸಾರಿಗೆ ಇನ್ನೂ ಸ್ವಲ್ಪ ಸರ್ಕಾರ ಕೊಡುವ

ಮಟ್ಟದಲ್ಲಿ ಇದೆ ಎಂದು ನಾವು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಹಳ್ಳಿಯವರಿಗೆ ನೀವು ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ. ಇದನ್ನೇ ನೀವು ಮಾಡುವ ಹಾಗಿದ್ದರೆ ಅವ್ಯವಹಾರ ಎಷ್ಟರಮಟ್ಟಿಗೆ ನಡೆಯುತ್ತದೆ ಎಂಬ ವಿಚಾರ ಬೆಳಕಿಗೆ ಬರುತ್ತದೆ. ಈ ದೃಷ್ಟಿಯಿಂದ ನೀವು ಕೊಡುವುದನ್ನು ರೋಜ್‌ಗಾರದಲ್ಲಿ ಮಾಡಿಸಿ. ಜೊತೆಗೆ ನಿಮಗೆ ಎಂಪ್ಲಾಯ್ಮೆಂಟ್ ಕೊಡಬೇಕೆಂದರೆ, ಎಜುಕೇಟೆಡ್ ಅನ್‌ಎಂಪ್ಲಾಯ್ಡ್ ಇದಾರಲ್ಲ. ಅವರಿಗೆ ಕೆಲಸ ಕೊಡುತ್ತೇವೆಂದು ಇದೂ ಅದೂ ಸ್ಕೀಮು ಇದೆಯೆಲ್ಲ ಆ ಬಡಮಕ್ಕಳು ಇರೋರಿಗೆ ಸಣ್ಣ ಸಣ್ಣ ಕಂಟ್ರಾಕ್ಟ್‌ಗಳನ್ನು ಕೊಡಿ. ಕೋ-ಆಪರೇಟಿವ್ ಲೇಬರ್ ಕಾಂಟ್ರಾಕ್ಟ್ ಸೊಸೈಟಿಗಳು ಎಂದು ಹಿಂದೆ ಕೆಲವು ಕಡೆ ಇದ್ದುವು. ಅವು ದಿಫಂಕ್ಟ್ ಆದುವು. ಏಕೆ ಹಾಗಾಯಿತು? ನಿಜವಾಗಿಯೂ ನೀವು ಅನ್‌ಎಂಪ್ಲಾಯ್ಡ್ ಜನರಿಗೆ ಕೆಲಸ ಒದಗಿಸಬೇಕಾಗಿದ್ದರೆ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳನ್ನು ರಿವೈವ್ ಮಾಡಿ, ಸಣ್ಣ ಸಣ್ಣದಾಗಿ ಕಂಟ್ರಾಕ್ಟ್ ಕೊಡಿ. ಒಬ್ಬರಿಗೇ ಕಂಟ್ರಾಕ್ಟ್ ಕೊಟ್ಟು ಅವನೂ ಆಫೀಸರೂ ಸೇರಿಕೊಂಡು ಅವ್ಯವಹಾರ ನಡೆಸುವುದಕ್ಕೆ ಬದಲು ಬಡವರಿಗೆ ಕೊಡಿ. ಒಂದು ಜಾಗವನ್ನು ಇಬ್ಬರು, ಮೂವರಿಗೆ ಕೊಟ್ಟರೆ ಯಾವ್ಯಾವನು ಎಷ್ಟು ಚೆನ್ನಾಗಿ ಕೆಲಸ ಮಾಡಿದಾನೆ ಎನ್ನತಕ್ಕ ವಿಚಾರ ಎಲ್ಲರಿಗೂ ಕಾಣುತ್ತದೆ. ನಿಮಗೂ ಗೊತ್ತಾಗುತ್ತದೆ. ಕೊನೇಪಕ್ಷ ಅವ್ಯವಹಾರ ನಡೆಸತಕ್ಕದ್ದು ಕಡಿಮೆಯಾಗುತ್ತದೆ. ಆದ್ದರಿಂದ ಎಂಪ್ಲಾಯ್ಮೆಂಟ್ ಕೊಡುವಾಗ ಇದನ್ನು ಏಕೆ ಕನ್‌ಸಿಡರ್ ಮಾಡಬಾರದು? ಒಂದು ಜಮೀನಿಗೆ ಕೊಡುವಾಗ ಕೋ-ಆಪರೇಟೀವ್ಸ್‌ಗೆ ಕೊಡಿ, ಹಾಗೆ ಕೊಡುವುದಕ್ಕಾಗುವುದಿಲ್ಲ ಎಂದರೆ ಒಂದು ಕಂಟ್ರಾಕ್ಟನ್ನು ಎರಡು, ಮೂರು ಜಾಗಗಳಿಗೆ ಬಿಟ್ಟುಕೊಡಿ. ಎಷ್ಟರಮಟ್ಟಿಗೆ ಅವರ ಕ್ವಾಲಿಟಿ ಇದೆ, ಎಷ್ಟು ಖರ್ಚು ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಹಿಂದೆ ಹನುಮಂತಯ್ಯನವರ ಕಾಲದಲ್ಲಿ ಟಿ. ಚೆನ್ನಯ್ಯನವರು ಎಕ್ಸೈಜ್ ಮಿನಿಸ್ಟರಾಗಿದ್ದರು. ಈ ದೇಶದಲ್ಲಿ ಟಾಡಿ ಕಂಟ್ರಾಕ್ಟ್ ಒಬ್ಬರಿಗೇ ಕೊಟ್ಟುಬಿಡುವುದು, ಅವರು ಸಬ್ ಕಂಟ್ರಾಕ್ಟ್ ಕೊಡುವುದ. ದುಡ್ಡಂತೂ ಬೇಕಾದಷ್ಟು ಹೊಳೆ ಹರಿಯುವ ಹಾಗೆ ಅವನ ಮನೆಗೇ ಬಂದುಬಿಡುತ್ತಿತ್ತು. ಅವರು ಏನು ಮಾಡಿದರು ಎಂದರೆ,ಚಿಲ್ಲರೆ ಅಂಗಡಿಗಳಿಗೆ ಕೊಟ್ಟುಬಿಟ್ಟರು, ಬೇಕಾದಷ್ಟು ವರಮಾನವೂ ಜಾಸ್ತಿಯಾಯಿತು. ಈ ಎಕ್ಸ್‌ಪ್ಲಾಯಿಟೇಶನೂ ತಪ್ಪಿತು. ಹಾಗೆ ನೀವೂ ಇಂಥದೇನಾದರೂ ಮಾಡಿದರೆ ಬಹುಶಃ ಇದು ಕಡಿಮೆಯಾಗುತ್ತದೆ ಎಂದು ಸಲಹೆ ಮಾಡುತ್ತೇನೆ. ಇದು ಮಾಡಬೇಕಾದ್ದು, ಮಾಡಿದ್ದಾರೆ, ನೋಡಿದ್ದಾರೆ. ದಯವಿಟ್ಟು ಇದನ್ನು ಮಾಡಿ. ಇದು ಕಂಟ್ರಾಕ್ಟ್ ಓರಿಯೆಂಟೆಡ್ ಆಗಬಾರದು. ಬಡವರಿಗೆ, ನಿರುದ್ಯೋಗಿಗಳಿಗೆ ಕೊಡಬೇಕು.

ಇನ್ನು ಧರ್ಮದತ್ತಿ ಬಗ್ಗೆ ಒಂದೆರಡು ವಿಚಾರ ಹೇಳಬೇಕಾಗಿದೆ. ಹಿಂದೂ ದೇವಸ್ಥಾನಗಳಲ್ಲಿ ಎಲ್ಲ ವರ್ಗದ ಹಿಂದೂಗಳಿಗೂ ಪ್ರವೇಶ ಉಂಟು, ಕಾನ್‌ಸ್ಟಿಟ್ಯೂಶನ್‌ನಲ್ಲಿ ಇದನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಸಬ್ಜೆಕ್ಟ್‌ಟು ಆರ್ಡರ್ ಅಂಡ್ ಮೊರಾಲಿಟಿ, ಏನಾದರೂ ಆರ್ಡರ್ ಏನಿರುತ್ತದೆ ಆ ಆರ್ಡರನ್ನು ನಾವೇ ಆಗಲಿ, ಡಿಸಾರ್ಡರ್ ಮಾಡಬಹುದು. ದೇವಸ್ಥಾನಕ್ಕೆ ಹೋಗುತ್ತೇವೆ ಅಂದರೆ ಡಿಸಾರ್ಡರ್ ಮಾಡುವುದು ಅಷ್ಟು ಕಷ್ಟವೇನಲ್ಲ, ನುಗ್ಗಿಬಿಡಬೇಡಿ ಎಂದು ಹೇಳುವುದು, ಗಲಾಟೆಯಾಗುತ್ತದೆ ಎಂದು ಪೋಲೀಸರು, ಅನವಶ್ಯಕವಾಗಿ ಲಾ ಅಂಡ್ ಆರ್ಡರ್ ಡಿಸ್ಟರ್ಬ್ ಆಗುತ್ತದೆ, ಆದ್ದರಿಂದ ಬೇಡಿ ಎಂದು ಹೇಳುವುದು. ಎಷ್ಟು ಚೆನ್ನಾಗಿದೇ ನೋಡಿ ಈ ಪ್ರಾವಿಷನ್. ನಾನು ಕೇಳುವುದು ಏನೆಂದರೆ, ಇದು ಬೇಡವೇ ಬೇಡ. ಸರ್ಕಾರದ ಮೇಜರ್ ಅಂಡ್ ಮೈನರ್ ಟೆಂಪಲ್ಸ್ ಇವೆಯೆಲ್ಲ. ನಿಮ್ಮ ಅಧಿಕಾರದಲ್ಲಿ, ನಿಮ್ಮ ವ್ಯಾಪ್ತಿಯಲ್ಲಿರುವುವು ಅವುಗಳಲ್ಲಿ 40-45 ಸಾವಿರ ಜನ ಇದ್ದಾರೆಂದು ಹೇಳುತ್ತಾರೆ. ಇದರ ಬಗ್ಗೆ ನಾನೊಂದು ಪ್ರಶ್ನೆ ಕಳುಹಿಸಿದ್ದೆ. ಅದಕ್ಕೆ ಇನ್ನೂ ಉತ್ತರ

ಬಂದಿಲ್ಲ. ಅಷ್ಟು ಜನ ಇದ್ದಾರೆ. ಅವರಲ್ಲಿ ಅರ್ಚಕರು ಮತ್ತು ಆಗಮಕಾರರು ಎಂದು ಎರಡು ಕ್ಯಾಟಗರಗಳಿವೆ. ಕಸ ಗುಡಿಸುವ ಕೆಲಸ ಕೊಡಬಹುದು. ನಮ್ಮ ಮೈಸೂರು ಜಿಲ್ಲೆಯಲ್ಲಿ ಎರಡು ಕೊಟ್ಟರೆ ಡಿಸಿ ಅವರು ಕೊಟ್ಟೋರ ಮೇಲೆ ಇಬ್ಬರು ಹೊರಟೇಹೋದರು. ಅದು ಏನಾಯಿತೋ ಗೊತ್ತಾಗಲಿಲ್ಲ. ಇವರಲ್ಲಿ ತಾವು ಅಗಮಕಾರರು ಮತ್ತು ಆರ್ಚಕರಿಗೆ ಟ್ರೈನಿಂಗ್ ಕೊಟ್ಟು ಪರೀಕ್ಷೆ ಮಾಡಿಸಿ ಕೊಡಿ. ಒಂದು ವೇಳೆ ಅವರು ಹೇಳುವ ಆಗಮನಗಳನ್ನು ಬರೆದುಕೊಂಡಾದರೂ ಓದುತ್ತಾರೆ. ಆಗಮಕಾರರು ಬಾಯಿಯಲ್ಲಿ ಹೇಳುವುದೆಲ್ಲ ಸರಿಯಾಗಿದೆ ಎಂದು ಹೇಗೆ ಗೊತ್ತು. ಅರ್ಚಕರ ಮತ್ತು ಆಗಮಕಾರರ ಹುದ್ದೆಗಳು 48 ಸಾವಿರ ಇವೆಯಂತೆ. ಹೀಗೆ ಮಾಡಿದರೆ ಎಷ್ಟೋ ಜನಕ್ಕೆ ನಿರುದ್ಯೋಗ ಸಮಸ್ಯೆ ಹೋಗುತ್ತದೆ ಮತ್ತು ಜಾತಿಯತೆ ತಪ್ಪುವುದಕ್ಕೆ ಅವಕಾಶವಾಗುತ್ತದೆ ಹಾಗೂ ಎಲ್ಲ ಹಿಂದೂಗಳು ಒಂದು ಸಂಗತ ಆಗುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಲಹೆಯನ್ನು ನಾನು ಇಡುತ್ತೇನೆ. ಮತ್ತೆ ಈ ಟ್ರೈಸಂನಲ್ಲಿ ಬೇರೆ ಇಂಡಸ್ಟ್ರಿಗಳಲ್ಲಿ ಉದ್ಯೋಗವನ್ನು ಕೊಡುತ್ತೇವೆ ಎಂದು ಹೇಳುತ್ತೀರಲ್ಲಾ, ನಾನು ಮೊದಲೇ ಹೇಳಿದ ರೀತಿಯಲ್ಲಿ ನೀವು ಹಣವನ್ನು ಕೊಡುವುದೆಲ್ಲಾ ಸರಿ. ನೀವು ಯಾವ ಯಾವ ಇಂಡಸ್ಟ್ರಿಗಳಿಗೆ ನಿರುದ್ಯೋಗಿ ಯುವಕರಿಗೆ ಏನೇನು ಕೆಲಸಗಳನ್ನು ಕೊಟ್ಟಿದ್ದೀರ ಎಂದು ಹೇಳುತ್ತೀರಲ್ಲಾ. ಕೊನೆಯ ಪಕ್ಷ ನಾವು ಕೊಟ್ಟಿರುವ ಹಣದಲ್ಲಿ ಅವರು ಆ ಕೆಲಸವನ್ನು ಮಾಡುತ್ತಿದ್ದಾರೆಯೇ? ಅವರು ಉದ್ಯೋಗವನ್ನು ಮಾಡುತ್ತಿದ್ದಾರೆಯೇ? ಇಲ್ಲವೇ? ಮಾಡದೇ ಇದ್ದರೆ ಅವರಿಗೆ ಏನು ಕಷ್ಟ ಎಂದು ತಿಳಿದುಕೊಳ್ಳುದಕ್ಕಾದರೂ ಅದನ್ನು ಒಂದು ರೆವ್ಯೂ ಮಾಡಿಸಿ. ಪ್ರತಿಯೊಂದು ಸ್ಕೀಮ್‌ನಲ್ಲೂ ಕೂಡ most important thing is review. ಇದರ ಬಗ್ಗೆ ನಾನು ಬಹಳ ಎಂಪಾಟಿಕಲ್ ಆಗಿ ಹೇಳುತ್ತೇನೆ. ದಯಮಾಡಿ ತಾವು ಇಷ್ಟು ಕೆಲಸ ಮಾಡಿಸಿಕೊಡಬೇಕು. ಇನ್ನು ಅನೇಕ ವಿಚಾರಗಳು ಇದ್ದವು. ಮಾನ್ಯ ಅಧ್ಯಕ್ಷರು ಎರಡು-ಮೂರು ಬಾರಿ ಬೆಲ್ ಬಾರಿಸಿದ್ದರಿಂದ ನಾನು ನಿಲ್ಲಿಸುತ್ತೇನೆ. ಬಹುಶಃ ನಾನು ಹಿಂದುಳಿದ ವರ್ಗದವನಾಗಿ ನಮಗೆ ಇದುವರೆಗೂ ಅವಕಾಶ ಸಿಕ್ಕಿರಲಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ರೆಪ್ರಸೆಂಟೇಷನ್, ಪರ್ಸನಲ್ ರೆಪ್ರಸೆಂಟೇಷನ್. ಪರ್ಸನ್ಸ್ ರೆಪ್ರಸೆಂಟೇಷನ್ ಇರುವುದರ ಜೊತೆಗೆ ಆಯಾ ವರ್ಗದವರ ಒಪಿನಿಯನ್ ಸಹ ಇದರಲ್ಲಿ not only the representation of persons but the representation of opinions in the democratic set up is most important. ಬರೀ ಸಭೆಯಲ್ಲಿ ಇರತಕ್ಕಂಥ ವ್ಯಕ್ತಿಗಳ ಪ್ರಾತಿನಿಧ್ಯ ಅಲ್ಲದೇ. ಆ ವ್ಯಕ್ತಿಗಳಿಗೆ ಇರತಕ್ಕಂಥ ಅಭಿಪ್ರಾಯವನ್ನೂ ಸಹ ಹೇಳುವುದಕ್ಕೆ ಈ ಅವಕಾಶ ಬಹಳ ಮುಖ್ಯವಾದುದು. ಇದುವರೆಗೂ ಹಿಂದುಳಿದ ವರ್ಗದ. ಷೆಡ್ಯೂಲ್ಡ್ ಕ್ಯಾಸ್ಟ್‌ನ 32 ಜನ ಸದಸ್ಯರು ಇದ್ದರೂ ಸಹ ಮೂರು ಜನ ಮಾತನಾಡಿಲ್ಲ. ಎಷ್ಟು ದಿವಸಗಳಿಂದ ನಾವು ಕೊಟ್ಟರೂ ಸಿಕ್ಕಿಲ್ಲ. ನಾನು ಹೇಳಿದ್ದುದರಲ್ಲಿ ಬಹಳ ಮುಖ್ಯವಾದ ವಿಚಾರಗಳಿವೆ. ಇದು ಸರ್ಕಾರ. ನೀವು ಮಾಡತಕ್ಕಂಥ ಶಕ್ತಿ ಮೀರಿಲ್ಲ. ನಿಮ್ಮ ಅಧಿಕಾರ ವ್ಯಾಪ್ತಿ. ನಿಮ್ಮ ಶಕ್ತಿ ವ್ಯಾಪ್ತಿಯಲ್ಲಿದೆ. ಆದ್ದರಿಂದ ದಯವಿಟ್ಟು ತಾವು ಕರುಣೆಯಿಂದ. ಒಂದು ಸಿಂಫತಿಯಿಂದ ಈ ವಿಚಾರಗಳನ್ನು ಪರಿಗಣಿಸಿ ಇದಕ್ಕೆ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕು ಎಂದು ಹೇಳಿ. ಇಷ್ಟು ಹೊತ್ತು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಏನೆಂದರೆ, ಇವತ್ತೇ ರಿಪ್ಲೈ ಇರುವುದರಿಂದ ದಯವಿಟ್ಟು ಎಲ್ಲರೂ ಟೈಮ್‌ಕಾನ್‌ಸಿಯೆಸ್ ಇಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. 15-20 ನಿಮಿಷದಲ್ಲಿ ಮುಗಿಸಿ. ಪಾಯಿಂಟ್ ಬೈ ಪಾಯಿಂಟ್.

ಶ್ರೀ ಜಿ.ಎಸ್. ಶಿವನಂಜಪ್ಪ : ಆ ಕಡೆ ವಿರೋಧ ಪಕ್ಷದ ಕಡೆಯಲ್ಲಿ ಮಾತನಾಡುವವರು ಯಾರೂ ಇಲ್ಲ. ಆದ್ದರಿಂದ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಛೇರ್ಮನ್ : ಇದ್ದಾರೆ; 13 ಜನರ ಹೆಸರು ಇದೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಈಗ ನಾವು ಎರಡು ಕೆಲಸಗಳನ್ನು ಮಾಡಬೇಕಾಗಿದೆ. ಆಳುವ ಪಕ್ಷಕ್ಕೆ ಸಪೋರ್ಟ್ ಮಾಡಬೇಕಾಗುತ್ತದೆ. ಮತ್ತು ವಿರೋಧ ಪಕ್ಷದಲ್ಲಿ ಅವರು ಇಲ್ಲದೇ ಇರುವುದರಿಂದ ಕೆಲವು ಸಲಹೆಗಳನ್ನು ಅವರ ಪರವಾಗಿ ನಾವು ಇವತ್ತಿನ ದಿವಸ ಕೊಡಬೇಕಾಗುತ್ತದೆ. ನೀವು ಕಟ್ ಡೌನ್ ಮಾಡಿದರೆ ಬಹಳ ಕಷ್ಟವಾಗುತ್ತದೆ.

ಛೇರ್ಮನ್ : ಹೇಳಿದ್ದೇ ಹೇಳುವುದರಲ್ಲಿ, ರಿಪೀಟ್ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ರಿಪ್ಲೈ ಕೊಡುವುದಕ್ಕೆ 7-8 ಗಂಟೆ ಆಗಲಿ. ಮಾತನಾಡಲಿ ಬಿಡಿ.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಗಳನ್ನು ಹಾಗೂ ಧರ್ಮದತ್ತಿ ಇಲಾಖೆಯ ಸಚಿವರು ಇಟ್ಟಿರತಕ್ಕಂಥ ಬೇಡಿಕೆಯನ್ನು ಸ್ವಾಗತ ಮಾಡುತ್ತಾ, ಬೆಂಬಲಿಸುತ್ತಾ ಕೆಲವೆರಡು ವಿಚಾರಗಳನ್ನು ತಮ್ಮ ಮುಂದೆ ಇಡುವುದಕ್ಕೆ ನಾನು ಪ್ರಯತ್ನವನ್ನು ಮಾಡುತ್ತಿದ್ದೇನೆ. ಮೊದಲನೆಯದಾಗಿ ಧರ್ಮದತ್ತಿ ಇಲಾಖೆ ಬಗ್ಗೆ ಹೇಳುತ್ತೇನೆ. ನಾನು ಸ್ವಲ್ಪ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆ. ಏಕೆಂದರೆ, ಹಿಂದಿನ ಯಾವುದೇ ಬಜೆಟ್‌ನಲ್ಲಿ ಈ ಧರ್ಮದತ್ತಿ ವಿಚಾರದಲ್ಲಿ ಯಾವುದೇ ರಿಪೋರ್ಟ್ ಬಂದ ಹಾಗೆ ನನಗೆ ಕಾಣಲಿಲ್ಲ. ಹೋದ ಸಾರಿ ಈ ಮಾತನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ನಾನು ಕೇಳಿದ್ದೆ. ಏಕೆಂದರೆ, ದೇವರನ್ನು ಕಂಡರೆ ನಿಮಗೆ ಆಗುವುದಿಲ್ಲವೇ? ದೇವಸ್ಥಾನಗಳನ್ನು ಕಂಡರೆ ನಿಮಗೆ ಏನಾದರೂ ಅಲರ್ಜಿ ಇದೆಯೇ? ಈ ಇಲಾಖೆಯನ್ನು ತಾವು ಏತಕ್ಕೆ ಕಡೆಗಣಿಸಿದ್ದೀರಿ? ಈ ಇಲಾಖೆಯ ವರದಿ ಏತಕ್ಕೆ ಇಲ್ಲ ಎಂದು ನಾನು ಕೇಳಿದ್ದೆ. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇವತ್ತು ಸ್ವಲ್ಪ ಕೊಟ್ಟಿದ್ದಾರೆ. ಅಧ್ಯಕ್ಷರೇ, ಕರ್ನಾಟಕವಾಗಿ ಸುಮಾರು 35-40 ವರ್ಷಗಳಾದರೂ ಕೂಡ ಹಳೆಯ ಮೈಸೂರಿಗೆ ಒಂದು ಕಾನೂನು, ಹಳೆಯ ಮದ್ರಾಸ್ ಭಾಗಕ್ಕೆ ಒಂದು ಕಾನೂನು, ಹಳೆಯ ಬಾಂಬೆಗೆ ಒಂದು ಕಾನೂನು, ಹಳೆಯ ಹೈದರಾಬಾದ್ ಪ್ರದೇಶಕ್ಕೆ ಒಂದು ಕಾನೂನು, ಕೊಡಗು ಪ್ರದೇಶದ ಪತ್ತು ದೇವಾಲಯಗಳಿಗೆ ಒಂದು ಕಾನೂನು ಇದೆ. ಈ ಇಲಾಖೆಯಲ್ಲಿ ಐದು ಕಾನೂನುಗಳನ್ನು ಸೆಪರೇಟ್-ಸೆಪರೇಟಾಗಿ ನಾವು ಇಟ್ಟುಕೊಂಡಿದ್ದೇವೆ. ನಾನು 1978 ರಿಂದ ಕೇಳುತ್ತಿದ್ದೇನೆ. ತಾವು ಇದಕ್ಕೆ ಸಮಗ್ರವಾಗಿರತಕ್ಕಂಥ ಒಂದು ಕಾನೂನು ಏಕೆ ತರಬಾರದು? ನಿಮಗೆ ದೇವರಲ್ಲಿ ನಂಬಿಕೆ ಇದ್ದರೆ ದೇವರಲ್ಲಿ ನಂಬಿಕೆ ಇಲ್ಲ ಎನ್ನುವ ಹಾಗಿದ್ದರೆ ಪೂರ್ಣವಾಗಿ ಇದನ್ನು ಡಿಸಾಲ್ವ್ ಮಾಡುವುದು ಬಹಳ ಒಳ್ಳೆಯದು. ಇದನ್ನು ಅರ್ಧಂಬರ್ಧ ಮಾಡಿ ತ್ರಿಶಂಕು ಸ್ವರ್ಗ ನಿರ್ಮಾಣ ಮಾಡುವುದು ಬೇಡ. ಆದುದರಿಂದ ಈ ಐದು ಕಾನೂನುಗಳು ಏನು ಬೇರೆ ಬೇರೆ ಇವೆ. ಈ ಐದು ಕಾನೂನುಗಳನ್ನು ಒಟ್ಟುಗೂಡಿಸಿ ಸಮಗ್ರವಾಗಿರತಕ್ಕಂಥ ಒಂದು ಕಾನೂನನ್ನು ತರತಕ್ಕಂಥದ್ದು ಬಹಳ ಒಳ್ಳೆಯದು. ಆದರ ಅಡಿಯಲ್ಲಿ ಎಲ್ಲಾ ಕೆಲಸಕಾರ್ಯಗಳನ್ನು ಅಳವಡಿಸಿ, ಆ ಕೆಲಸಕಾರ್ಯಗಳು ನಿರ್ವಹಣೆ ಆಗತಕ್ಕಂಥ ಮಾರ್ಗವನ್ನು ಕಂಡುಹಿಡಿಯಬೇಕು ಎಂದು ಸರ್ಕಾರವನ್ನು ನಾವು ಒತ್ತಾಯಪೂರ್ವಕವಾಗಿ ವಿನಂತಿ ಮಾಡುತ್ತೇನೆ.

ಧಾರ್ಮಿಕ ಸಂಸ್ಥೆಗಳ ಸಂಖ್ಯೆಯ 41.016 ಎಂದು ಕೊಟ್ಟಿದ್ದಾರೆ. ಇವರು ಲೆಕ್ಕಕ್ಕೆ ಸಿಕ್ಕಿರುವುದನ್ನು ಕೊಟ್ಟಿದ್ದಾರೆ. ಮೇಜರ್ ಇನ್‌ಸ್ಟಿಟ್ಯೂಷನ್. ಮೈನರ್ ಇನ್‌ಸ್ಟಿಟೂಷನ್. ವಿಲೇಜ್ ಇನ್‌ಸ್ಟಿಟ್ಯೂಷನ್ ಪ್ರಕಾರ ಕೊಡಬೇಕಾಗಿತ್ತು. ಆದರೆ ಅವರು ಕೊಟ್ಟಿಲ್ಲ. ಅದನ್ನು ಏತಕ್ಕೆ ಕೊಟ್ಟಿಲ್ಲವೋ ಗೊತ್ತಿಲ್ಲ. ಮುಂದಿನಸಾರಿ ಕೊಡುವಾಗ ಮೇಜರ್ ಇನ್‌ಸ್ಟಿಟ್ಯೂಷನ್ ಎಷ್ಟಿದೆ. ಮೈನರ್ ಇನ್‌ಸ್ಟಿಟ್ಯೂಷನ್ಸ್ ಎಷ್ಟಿದೆ. ವಿಲೇಜ್ ಇನ್‌ಸ್ಟಿಟ್ಯೂಷನ್ ಎಷ್ಟಿದೆ ಅಷ್ಟನ್ನು ಕೊಡಿ. ಈ ಭೂಸುಧಾರಣಾ ಕಾನೂನು ಬಂದು ಈ ರಾಜ್ಯದಲ್ಲಿ ದೇವಸ್ಥಾನಕ್ಕೆ ಇದ್ದಂತಹ ಎಲ್ಲಾ ಜಮೀನುಗಳನ್ನು ಟೆನೆಂಟ್ಸ್‌ಗೆ ಕೊಟ್ಟಾಗಿದೆ. ಇವತ್ತು ಜಮೀನುಗಳು ಇಲ್ಲ. ಅರ್ಚಕರಿಗೆ ಐದು ರೂಪಾಯಿ. ಎರಡು ರೂಪಾಯಿ. ಮೂರು ರೂಪಾಯಿ. ಹತ್ತು ರೂಪಾಯಿಗಳನ್ನು ಪೂಜೆ ಮಾಡಲಿಕ್ಕೆ ಪಗಾರವನ್ನು ಕೊಡುತ್ತಿದ್ದೆವು. ಈ ತಸ್ದಿಕ್ ಹಣವನ್ನು ತೆಗೆದುಕೊಂಡ ಮೇಲೆ ಯಾವ ಒಬ್ಬ ಅರ್ಚಕನು ಪೂಜೆ ಮಾಡಲಿಕ್ಕೆ ದೇವಸ್ಥಾನಕ್ಕೆ ಬರುವುದಿಲ್ಲ. ನಮ್ಮ ಧಾರ್ಮಿಕ ದತ್ತಿ ಮಂತ್ರಿಯವರ ಸ್ಥಿತಿ ಎಲ್ಲಿಗೆ ಬರುತ್ತದೆ ಅಂದರೆ ಆಯಾ ತಾಲ್ಲೂಕಿನಲ್ಲಿರತಕ್ಕ ಎಲ್ಲಾ ದೇವಸ್ಥಾನಗಳಲ್ಲಿರುವ ದೇವರುಗಳನ್ನು ತಂದು ತಾಲ್ಲೂಕ್ ಆಫೀಸಿನ ಕಾಂಪೌಂಡ್‌ನಲ್ಲಿ ಸಾಲಿಗೆ ಇಟ್ಟು ಎಲ್ಲಾ ದೇವರುಗಳ ಮೇಲೆ ನಲ್ಲಿಯನ್ನು ಇಟ್ಟುಬಿಡುವುದು. ಮತ್ತು ಹೂವನ್ನು ತುಂಬಿ ಈ ಕಡೆಯಿಂದ ಕಳಿಸಿದರೆ ಆ ದೇವರುಗಳ ಮೇಲೆ ಬೀಳುವ ಹಾಗೆ ಆಗಬೇಕು. ಗಂಧದ ಕಡ್ಡಿಯನ್ನು ಹಚ್ಚಿ. ಒಂದು ಕಡೆ ಅರ್ಚಕ ಮೈಕ್‌ನಲ್ಲಿ ಮಂತ್ರ ಹೇಳುವ ಸ್ಟೇಜ್‌ಗೆ ನೀವು ತರುತ್ತೀದ್ದಿರೆಂದು ನಾನು ಭಾವಿಸಿದ್ದೇನೆ. ಈ ಸ್ಟೇಜಿಗೆ ಬರಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರವರ ಜಾಗದಲ್ಲಿ ಅವರು ಚೆನ್ನಾಗಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಅದಕ್ಕೆ ನಾನು ಹೇಳಿದ್ದು. ದೇವರು ದೊಡ್ಡವನೋ ನಾನು ದೊಡ್ಡವನೋ ಎಂದು ನೀವು ಟೆಸ್ಟ್ ಮಾಡುತ್ತೀರಿ? ದಯಮಾಡಿ ಆ ರೀತಿ ಟೆಸ್ಟ್ ಮಾಡುವುದಕ್ಕೆ ಹೋಗಬೇಡಿ. ನಿಮಗೆ ಅದೃಷ್ಟ ಚೆನ್ನಾಗಿದೆ. ನೀವು ಎರಡು ಸಾರಿ ಈ ಇಲಾಖೆಗೆ ಮಂತ್ರಿಯಾಗಿದ್ದೀರಿ. ದೇವರ ಕೃಪೆಯಿಂದ ನೀವು ಮಂತ್ರಿ ಆಗಿದ್ದೀರೆಂದು ನಾನು ಭಾವಿಸಿದ್ದೇನೆ. ಅದರ ಬಗ್ಗೆ ಆಕಾರ ಅಥವಾ ಲಿಂಗ ಬೇಧವನ್ನು ನಾನು ಹೇಳುವುದಕ್ಕೆ ಬರುವುದಿಲ್ಲ. ದೇವರು ಎನ್ನುವುದು ಪ್ರಕೃತಿ ದತ್ತವಾಗಿರತಕ್ಕ ಕಣ್ಣಿಗೆ ಕಾಣದೆ ಇರತಕ್ಕ ಅಗೋಚರವಾದ ಶಕ್ತಿ ಇದೆ. ಆ ಶಕ್ತಿಯನ್ನು ಮಾರಮ್ಮ ಎಂದು ಕರೆಯುತ್ತಾರೆ. ಅಲ್ಲಾ ಎಂದು ಕರೆಯುತ್ತಾರೆ. ರಾಮ ಎಂದು ಕರೆಯುತ್ತಾರೆ. ದೇವರು ಇದ್ದಾನೆ ಎನ್ನತಕ್ಕ ನಂಬಿಕೆ ನನ್ನಲ್ಲಿದೆ; ನಿಮಗೂ ಇದೆ. ಇತ್ತೀಚೆಗೆ ದೇವರು ಇಲ್ಲ ಎಂದು ಹೇಳುತ್ತಿದ್ದೀರಿ. ಅದರ ಬಗ್ಗೆ ತಾತ್ಸಾರವಾಗಿ ಹೇಳುತ್ತೀರೋ ನನಗೆ ಗೊತ್ತಿಲ್ಲ. ಆದರೂ ಇವುಗಳ ಪರಿಸ್ಥಿತಿ ನಾವು ಎಲ್ಲಿಗೆ ತೆಗೆದುಕೊಂಡು ಬರುತ್ತಿದ್ದೇವೆಂದರೆ. ಈ ತಾಲ್ಲೂಕು ಆಫೀಸಿನ ಕಾಂಪೌಂಡ್ ವಿಶಾಲವಾಗಿದ್ದರೆ ಅಲ್ಲಿ ತೆಗೆದುಕೊಂಡು ಬಂದು ಎಲ್ಲಾ ದೇವರುಗಳನ್ನು ಇಟ್ಟುಬಿಟ್ಟು ಒಂದೇ ಕಡೆ ಗಂಧದ ಕಡ್ಡಿಯನ್ನು ಬೆಳಗಿಟ್ಟು ಗಂಟೆ ಅಲ್ಲಾಡಿಸಿದರೆ ಪೂಜೆ ಆಯಿತು ಎನ್ನತಕ್ಕ ವ್ಯವಸ್ಥೆಯೊಳಗೆ ನಾವು ಹೋಗುತ್ತಿದ್ದೇವೆ. ಇದು ಆಗಬಾರದು. ಈ ರಾಷ್ಟ್ರದ ಸಂಸ್ಕೃತಿ ಉಳಿದಿರತಕ್ಕಂಥದ್ದು ಈ ದೇವಸ್ಥಾನಗಳಲ್ಲಿ. ಆಗಿನ ಕಾಲದಲ್ಲಿ ಕಟ್ಟಿದಂತಹ ದೇವಸ್ಥಾನಗಳು ಏನಿವೆ. ಬೇಲೂರು. ಹಳೇಬೀಡಿನಲ್ಲಿ ಕಟ್ಟಿರತಕ್ಕ ದೇವಸ್ಥಾನಗಳನ್ನು ನಿಮ್ಮ ಕೈಯಲ್ಲಿ ಇವತ್ತು ಕಟ್ಟಿಸಲಿಕ್ಕೆ ಆಗುತ್ತದೆಯೇ ಎಂದು ನಾನು ಪ್ರಶ್ನೆಯನ್ನು ಹಾಕುತ್ತೇನೆ. ಆ ದೃಷ್ಟಿಯಿಂದಲಾದರೂ ಈ ದೇವಸ್ಥಾನಗಳನ್ನು ಕಾಪಾಡತಕ್ಕದ್ದು ಬಹಳ ಒಳ್ಳೆಯದು. ಇವುಗಳಿಗೆ ಸರಿಯಾದ ರೀತಿಯಲ್ಲಿ ಪೂಜೆ ಪುನಸ್ಕಾರಗಳು ನಡೆಯಬೇಕಾಗುತ್ತದೆ. ಇಲ್ಲ ಅಂದರೆ. ಪೂರ್ಣವಾಗಿ ಬಿಟ್ಟುಬಿಡೋಣ. ಯಾರಿಗಾದರೂ ಶಕ್ತಿ ಇದ್ದರೆ ಆಯಾ ಊರಿನವರು ಪೂಜೆಯನ್ನು

ಮಾಡಿಕೊಂಡು ಹೋಗುವಂತೆ ಮಾಡಲಿ. ಅರ್ಧಂಬರ್ಧ ಕೆಲಸವನ್ನು ಮಾಡುವುದ ಬೇಡ. ಇವತ್ತಿನ ದಿವಸ ಎಲ್ಲಾ ದೇವಸ್ಥಾನಗಳ ಆಸ್ತಿಗಳು ಹೋಗಿವೆ. ಅಲ್ಲೊಂದು ವಕ್ಫ್ ಬೋರ್ಡ್ ಇದೆ, ಅದರ ಮೂಲಕ ಎಲ್ಲಾ ಆಡಳಿತವನ್ನು ನಿಯಂತ್ರಣ ಮಾಡುತ್ತಿದ್ದಾರೆ. ಇವತ್ತು ಚರ್ಚ್‌ಗೆ ಹೋದರೆ ನಿಜವಾಗಿಯೂ ಕೂಡ ನಾವು ಕಾಲನ್ನು ಒರೆಸಿಕೊಂಡು ಒಳಗೆ ಹೋಗಬೇಕು ಎನ್ನತಕ್ಕ ಮನಸ್ಸು ಬರುತ್ತದೆ. ಅದೇ ರೀತಿ ನಾವು ಮಸೀದಿಗೆ ಹೋಗಬೇಕಾದರೂ ಕೂಡ ಕಾಲನ್ನು ಒರಿಸಿಕೊಂಡು ನಾವು ಒಳಗಡೆ ಹೋಗಬೇಕು ಎನ್ನತಕ್ಕ ಮನೋಭಾವ ಬರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಸೀದಿಗೆ ಕಾಲನ್ನು ತೊಳೆದುಕೊಂಡು ಹೋಗಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ : ಕಾಲನ್ನು ತೊಳೆದುಕೊಂಡು ಹೋಗಬೇಕು ಮತ್ತು ಒರಿಸಿಕೊಂಡು ಹೋಗಬೇಕು ಎನ್ನತಕ್ಕ ಮನಸ್ಸು ನಮಗೆ ಬರುತ್ತದೆ. ಅಲ್ಲಿ ಪಾವಿತ್ರ್ಯತೆಯನ್ನು ನಾವು ಕಾಣುತ್ತಿದ್ದೇವೆ. ಆದರೆ ಅದೇ ದೇವಸ್ಥಾನಕ್ಕೆ ಹೋಗಬೇಕಾದರೆ ನಾವು ಬುಡ್ಸ್ ಹಾಕಿಕೊಂಡು ಒಳಗೆ ಹೋಗುವಂತಹ ಪರಿಸ್ಥಿತಿ ಬಂದಿದೆ. ನಾನು ಒಂದು ಸಾರಿ ಪೂರಿ ಜಗನಾಥನ ದೇವಸ್ಥಾನಕ್ಕೆ ಹೋಗಿದ್ದೆ. ಯಾರು ಈ ದೇವಸ್ಥಾನವನ್ನು ಕಟ್ಟಿದ್ದರು; ಏಕೆ ಕಟ್ಟಿದ್ದರು ಎಂದು ಅಷ್ಟೊಂದು ಮನಸ್ಸಿನ ನೋವಿನಿಂದ ನಾವು ಹೊರಗಡೆ ಬರಬೇಕಾಯಿತು. ಇವತ್ತು ಬಹಳ ಸುಪ್ರಸಿದ್ಧವಾದಂತಹ ನಂಜನಗೂಡು ದೇವಸ್ಥಾನವನ್ನು ದಕ್ಷಿಣ ಕಾಶಿ ಎಂದು ನಾವು ಹೇಳುತ್ತಿದ್ದೇವೆ. ಇದು ನಮ್ಮ ಇಲಾಖೆಗೆ ಒಳಪಟ್ಟಿರತಕ್ಕಂತಹ ದೇವಸ್ಥಾನ. ಅಲ್ಲಿ ನಡೆಯತಕ್ಕ ಶೋಷಣೆ ಬಹುಶಃ ಎಲ್ಲೂ ನಡೆಯುವುದಿಲ್ಲವೆಂದು ನಾನು ಭಾವಿಸಿದ್ದೇನೆ. ನಮಗೆ ಅದನ್ನು ಏತಕ್ಕೆ ನಿಯಂತ್ರಣ ಮಾಡಲಿಕ್ಕೆ ಆಗುವುದಿಲ್ಲ. ಅದೇ ಧರ್ಮಸ್ಥಳದಲ್ಲಿ ನಿಯಂತ್ರಣವನ್ನು ಮಾಡುತ್ತಿದ್ದಾರೆ. ಮತ್ತೆ ತಿರುಪತಿಯಲ್ಲಿಯೂ ನಿಯಂತ್ರಣ ಮಾಡುತ್ತಿದ್ದಾರೆ. ನಂಜನಗೂಡಿನ ದೇವಾಲಯದಲ್ಲಿ ಏತಕ್ಕೆ ನಿಯಂತ್ರಣ ಮಾಡಬಾರದು. ಅಲ್ಲಿ ಮಾಡಲಿಕ್ಕೆ ನಿಮಗೆ ಏನು ಕಷ್ಟ? ಇದರ ಬಗ್ಗೆ ಏನಾದರೂ ಕಷ್ಟ ಸುಖಗಳನ್ನು ನೀವು ವಿಚಾರ ಮಾಡಿದ್ದೀರಾ ಎನ್ನತಕ್ಕ ವಿಚಾರವನ್ನು ನಾನು ಮಾನ್ಯ ಖರ್ಗೆಯವರಿಗೆ ಅಥವಾ ಆ ಇಲಾಖೆಯ ಮಂತ್ರಿಗಳಿಗೆ ನಾನು ಕೇಳಿಕೊಳ್ಳಬೇಕಾಗುತ್ತದೆ. ಇಂತಹ ದೇವಸ್ಥಾನಗಳು ನಿಜವಾಗಿಯೂ ನಮಗೆ ಆಸ್ತಿ, ಸಂಸ್ಕೃತಿಯ ಆಧಾರ ಸ್ಥಂಭಗಳಾಗಿವೆ. ಇದನ್ನು ನಾವು ಮರೆಯಬಾರದೆಂದು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಇವುಗಳ ಸುಧಾರಣೆಯಾಗಬೇಕು. ಮುಂದಿನ ಸಾರಿಯಾದರೂ ಬಜೆಟ್ ಮಂಡನೆ ಮಾಡುವಾಗ, ಈ ಐದು ಕಾನೂನುಗಳನ್ನು ಒಳಗೊಂಡಂತೆ ಒಂದು ಸಮಗ್ರವಾಗಿರತಕ್ಕ ದೇವಸ್ಥಾನಗಳ ಆಡಳಿತಗಳ ಮತ್ತು ಅದನ್ನು ನಿರ್ವಹಣೆ ಮಾಡತಕ್ಕ ಕಾನೂನನ್ನು ನೀವು ತರಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಈಗ ಪೂಜೆ ಮಾಡುವುದಕ್ಕೆ ಎರಡು ರೂಪಾಯಿಯನ್ನು ಅರ್ಚಕರಿಗೆ ಕೊಡುತ್ತಿದ್ದೇವೆ. ಇದು ಯಾವ ನ್ಯಾಯ ಎಂದು ನಾನು ಕೇಳುತ್ತಿದ್ದೇನೆ. ಅವರನ್ನು ನೀವು ನೌಕರರೆಂದು ಸೇರಿಸಿಕೊಂಡ ನಂತರ, ಸಮಗ್ರವಾಗಿ ಎಲ್ಲಾ ಅರ್ಚಕರುಗಳಿಗೆ ಸಮಾನವಾದ ವೇತನ ಕೊಡುವುದಕ್ಕೆ ತೊಂದರೆ ಏನಿದೆ ಎನ್ನತಕ್ಕಂಥ ವಿಚಾರವನ್ನು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ನಾವು ಅನೇಕ ಸಾರಿ ಹೇಳಿದ್ದೇವೆ. This is a mother department. ಆದಾಯದ ದೃಷ್ಟಿಯಲ್ಲಿ ಈ ಇಲಾಖೆ ಬಹಳ ಕಡಿಮೆಯಿದ್ದರೂ ಸಹ ಇದರ ಪ್ರಾಮುಖ್ಯತೆ ಮಾತ್ರ ಬಹಳಷ್ಟಿದೆ. ಮೊದಲು ಅಠಾರ ಕಛೇರಿ ಎಂದು ಇತ್ತು. ಅದರಲ್ಲಿ 18 ಇಲಾಖೆಗಳಿದ್ದುವು. ಇವೊತ್ತು 60 ಇಲಾಖೆಗಳಿವೆಯೋ, 100 ಇಲಾಖೆಗಳಿವೆಯೋ ಗೊತ್ತಿಲ್ಲ. ಈ ಇಲಾಖೆ ಮೇಲೆ ಬೇರೆ ಎಲ್ಲಾ ಇಲಾಖೆಗಳ ಅವಲಂಬನೆ ನಿಂತಿದೆ ಎಂದರೆ ತಪ್ಪಾಗಲಾರದು. ಈ ಹಿಂದೆ ಮಾತನಾಡಿದ ಶ್ರೀ ಶಿವರಾಮೇಗೌಡರು ಲಂಚ

ಬಹಳವಾಗಿದೆ ಎಂದರು. ನಿಜ, ಅದು ಬಹಳಷ್ಟು ಇದೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ. ಕಡಿಮೆ ಮಾಡುವುದು ಹೇಗೆ? ಈ ದಿಶೆಯಲ್ಲಿ ನಾವು ಪ್ರಯತ್ನ ಪಟ್ಟಿಲ್ಲವೆಂದರೆ ತಪ್ಪಾಗುತ್ತದೆ. ಖಂಡಿತವಾಗಿಯೂ ನಾವು ಏನೂ ಪ್ರಯತ್ನ ಮಾಡಲಿಲ್ಲ. ಅನೇಕ ಇಲಾಖೆಗಳಿದ್ದು. ಅದರಲ್ಲಿ ಲಂಚಗುಳಿತನ ಕಡಿಮೆ ಎಂದರೆ ಅದು ಸಾಧ್ಯವಿಲ್ಲದ ಮಾತು. ಎಲ್ಲಿಯವರೆಗೆ ವಿಧಾನಸೌಧ, ಬಹು ಮಹಡಿಗಳ ಕಟ್ಟಡ ಸರಿಯಾಗುವುದಿಲ್ಲವೋ ಅಲ್ಲಿಯವರೆಗೆ ತಾಲ್ಲೂಕು ಕಛೇರಿ ಮಟ್ಟದಲ್ಲಿ ನಾವು ಲಂಚಗುಳಿತನವನ್ನು ಕಡಿಮೇ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೇನಾದರೂ ಒಂದು ಉಪಾಯವಿದಯೇ ಎಂದರೆ. ನಿಜವಾಗಿಯೂ ಇದೆ. ನಾವು ಮೇಲ್ಮಟ್ಟದಲ್ಲಿ ಪ್ರಾಮಾಣಿಕರಾಗಿದ್ದು ಕೆಳಮಟ್ಟದಲ್ಲಿ ಎಫಿಷಿಯನ್ಸಿಯನ್ನು ಕೇಳುವುದಾದರೆ ಖಂಡಿತವಾಗಿಯೂ ಇದನ್ನು ಸುಧಾರಣೆ ಮಾಡಬಹುದು. ಇದಕ್ಕೆ ಮನಸ್ಸಿರಬೇಕಾಗುತ್ತದೆ. ನಮ್ಮ ದೇಶದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಕಲಬೆರಕೆ ಇಲ್ಲದಿರುವಂಥ ವಸ್ತುವೇನಾದರೂ ಸಿಗುವುದಾದರೆ ಅದು 'ಲಂಚ' ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಸರಿಪಡಿಸಬೇಕಾಗುತ್ತದೆ. ಈ ಇಲಾಖೆ ಬಗ್ಗೆ ನಾನು ಏತಕ್ಕೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರಿಗೆ ಬಹಳ ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆಂದರೆ, ಸಾರ್ವಜನಿಕರು ತಮ್ಮ ಸಣ್ಣ-ಪುಟ್ಟ ಕೆಲಸಗಳಿಗಾಗಿ ಈ ಇಲಾಖೆಯನ್ನು ಬಳಸಿಕೊಳ್ಳುತ್ತಾರೆ. ಪಿಡಬ್ಲ್ಯೂಡಿ ಇಲಾಖೆಯಲ್ಲಿ ಕಂಟ್ರಾಕ್ಟರ್ ಒಂದು ನಕ್ಷೆಯನ್ನು ತೆಗೆದುಕೊಂಡು ಬಂದು ಯಾರಿಗಾದರೂ ಕೊಟ್ಟರೆ. ಆ ವಿಷಯ ಈಚೆಗೆ ಬರುವುದಿಲ್ಲ. ತೆಗೆದುಕೊಂಡವನಿಗೆ ಮತ್ತು ಕೊಟ್ಟವನಿಗೆ ಮಾತ್ರ ಗೊತ್ತಾಗುತ್ತದೆ. ಆದರೆ. ಒಬ್ಬ ಬಡ ರೈತ ಪಹಣಿ ತೆಗೆದುಕೊಳ್ಳುವುದಕ್ಕೋಸ್ಕರ 4 ರೂಪಾಯಿ ಅಥವಾ 5 ರೂಪಾಯಿಗಳನ್ನು ಕೊಟ್ಟರೆ, ಆ 5 ರೂಪಾಯಿ ಅವನ ದೃಷ್ಟಿಯಲ್ಲಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಂತಾಗುತ್ತದೆ. ತನ್ನ ಕಷ್ಟವನ್ನು ಆತ 50 ಜನರಿಗೆ ಹೇಳುತ್ತಾನೆ. ಆತನಿಂದ 5 ರೂಪಾಯಿಗಳನ್ನು ತೆಗೆದುಕೊಂಡು ತಕ್ಷಣ ಕೆಲಸ ಮಾಡಿಕೊಡುತ್ತಾರೆಯೇ ಎಂದರೆ. ಬಹುಶಃ ಆತನನ್ನು ಇಪ್ಪತ್ತು ಸಾರಿ ತಿರುಗಿಸುತ್ತಾರೆ. ಅಷ್ಟು ಹೊತ್ತಿಗೆ ಆತನಿಗೆ 100-150 ರೂಪಾಯಿಗಳು ಖರ್ಚಾಗುತ್ತದೆ. ಇಂತಹ ಇಲಾಖೆಯಲ್ಲಿ ಲಂಚ ಇಲ್ಲದೆ ಇರುವಂಥ ರೀತಿಯಲ್ಲಿ ಎಫಿಷಿಯೆಂಟಾಗಿ ಕೆಲಸ ಮಾಡತಕ್ಕಂಥಾದ್ದನ್ನು ಬಹಳಷ್ಟು ಜನ ನಿರೀಕ್ಷಣೆ ಮಾಡಿದ್ದಾರೆ. ಏಕೆಂದರೆ. ಬೇರೆ ಬೇರೆ ಇಲಾಖೆಗಳಲ್ಲಿ ಲಂಚ ಇಲ್ಲವೆಂದು ನಾನು ಹೇಳುವುದಿಲ್ಲ. ಇದರ ನೂರರಷ್ಟು ಇರುತ್ತದೆ. ಆದರೆ, ಜನರ ಬಾಯಿಗೆ ಬೇಗ ಬರತಕ್ಕಂಥ ಇಲಾಖೆ ಯಾವುದೆಂದರೆ 'ಕಂದಾಯ ಇಲಾಖೆ' ಇದನ್ನು ಸರಿಪಡಿಸುವುದಕ್ಕೆ ನಾವು ನಮ್ಮ ಪ್ರಯತ್ನವನ್ನು ಮಾಡದೆ ಇದ್ದರೆ ನಿಜವಾಗಿಯೂ ಕೂಡ ಸಾರ್ವಜನಿಕರ ಸಿಟ್ಟಿಗೆ ಗುರಿಯಾಗಿ, ಒಂದಲ್ಲ ಒಂದು ದಿವಸ ನಾವೆಲ್ಲರೂ ತುತ್ತಾಗುತ್ತೇವೆ ಎನ್ನತಕ್ಕಂಥ ವಿಚಾರವನ್ನು ನಾನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. ಅನೇಕ ಸುಧಾರಣೆಗಳನ್ನು ನಾವು ತರುತ್ತಿದ್ದೇವೆ. ಭೂ ಸುಧಾರಣೆಯನ್ನು ತಂದೆವು. ಅದರಲ್ಲಿ ಪಹಣಿಗಳನ್ನು ಬರೆದು ಬಹಳಷ್ಟು ವಿಲೇಜ್ ಅಕೌಂಟೆಂಟ್‌ಗಳು ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ ಎನ್ನುವುದರ ಬಗ್ಗೆ ಗುಪ್ತವಾಗಿ ಇರತಕ್ಕಂಥ ವರದಿಯನ್ನು ತರಿಸಿಕೊಂಡರೆ ಗೊತ್ತಾಗುತ್ತದೆ. ಅದೇ ರೀತಿ ಇವೊತ್ತಿನ ದಿವಸ ಮೊದಲನೆ ಪೇಜ್‌ನಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಮೊದಲನೆಯದಾಗಿ 1991-92ನೇ ಸಾಲಿನಲ್ಲಿ ಖಾಸಗಿಯವರಿಗೆ ಜಮೀನನ್ನು ಮಂಜೂರು ಮಾಡಲು ಸರ್ಕಾರದ ಆದೇಶದ ಸಂಖ್ಯೆ ಆರ್‌ಡಿ 100 ಎಲ್‌ಜಿಪಿ 89 ದಿನಾಂಕ 15-3-90ರಲ್ಲಿ ಸರ್ಕಾರ ನಿಷೇಧ ವಿಧಿಸಿತ್ತು. ಆದುದರಿಂದ. ಖಾಸಗಿ ವ್ಯಕ್ತಿಗಳಿಗೆ ಜಮೀನನ್ನು ಮಂಜೂರು ಮಾಡಿರುವುದಿಲ್ಲ ಎಂದು ಇದೆ. ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಯಾವ ಧೈರ್ಯದ

ಮೇಲೆ ಇದನ್ನು ಬರೆದರು, ಬರೆಸಿದರು ಎಂಬುದು ಗೊತ್ತಾಗಲಿಲ್ಲ. ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಈ ಒಂದು ನಿರ್ಬಂಧ ಏನು ಹೇರಿದ್ದೀರಿ, ಆ ಅವಧಿಯಲ್ಲಿ ಗುಬ್ಬಿ ಮತ್ತು ಮಧುಗಿರಿ ತಾಲ್ಲೂಕಿನಲ್ಲಿ ಎಷ್ಟು ಜಮೀನುಗಳ ಮಂಜೂರಾಗಿವೆ? ಎಷ್ಟು ಜಮೀನುಗಳನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆ ಎನ್ನತಕ್ಕಂಥ ವರದಿಯನ್ನು ತರಿಸಿಕೊಂಡು, ಅವರೇನಾದರೂ ಮಂಜೂರು ಮಾಡಿದ ನಂತರ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥಾದ್ದನ್ನು ನಾನು ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಪ್ರಶ್ನೆ ರೂಪದಲ್ಲಿ ಕೇಳುತ್ತಿದ್ದೇನೆ. ಎರಡನೆಯದಾಗಿ ರಾಜ್ಯದಲ್ಲಿ ಭಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ ರಾಜ್ಯದಲ್ಲಿ ದಿನಾಂಕ 31-12-91ರವರೆಗೆ ಇದ್ದ 464 ಪ್ರಕರಣಗಳಲ್ಲಿ 1098.04 ಎಕರೆ ಜಮೀನನ್ನು ಸಕ್ರಮಗೊಳಿಸಲಾಗಿದೆ. ಎಂದು ಹೇಳಿದ್ದಾರೆ. ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿದ್ದಂಥ ಈ ಪ್ರಶ್ನೆಯನ್ನು ನಮ್ಮ ಸರ್ಕಾರದವರು ಕೈಗೆತ್ತಿಕೊಂಡು ಯಾರು ಅರ್ಹರಾಗಿರುತ್ತಾರೋ ಅವರಿಗೆ ಕೊಡತಕ್ಕಂಥ ಒಂದು ಕಾರ್ಯಕ್ರಮ ನಿಜಕ್ಕೂ ಕೂಡ ಬಹಳ ಮೆಚ್ಚತಕ್ಕಂಥ ಕೆಲಸ. ಇದರಲ್ಲಿ ತ್ವರಿತವಾಗಿ ಕೆಲಸಗಳು ಆಗಬೇಕಾಗುತ್ತದೆ. ನಾನು ಈ ಸಕ್ರಮಗೊಳಿಸತಕ್ಕ ಒಂದು ಸಮಿತಿಯಲ್ಲಿ ಛೇರ್‌ಮನ್ ಆಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 800 ರಿಂದ 1000 ಅರ್ಜಿಗಳನ್ನು ನಾನು ಈಗಾಗಲೇ ತೀರ್ಮಾನ ಮಾಡಿದ್ದೇನೆ. ಪ್ರತಿಯೊಂದು ಪ್ರಕರಣದಲ್ಲಿಯೂ ಕೂಡ ನಾವು ಸ್ಥಳಕ್ಕೆ ಹೋಗಿ ವಿಚಾರ ಮಾಡತಕ್ಕ ಒಂದು ಪರಿಸ್ಥಿತಿ ಬಂದಿದೆ. ಏಕೆಂದರೆ, ಅವರೇ ರೆಕಾರ್ಡ್ ಮಾಡಿಕೊಂಡು ಬಂದಿರುತ್ತಾರೆ. ತಂದೆ ಮತ್ತು ನಾಲ್ಕು ಜನ ಮಕ್ಕಳಿದ್ದರೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾನೆಂದು ತಂದೆಗೆ 4 ಎಕರೆ ಮತ್ತೆ ನಾಲ್ಕು ಜನ ಮಕ್ಕಳಿಗೆ ನಾಲ್ಕು ನಾಲ್ಕು ಎಕರೆ ಈ ರೀತಿ ರೆಕಾರ್ಡ್‌ನ್ನು ಬಿಲ್ಡಪ್ ಮಾಡಿಕೊಂಡು ಬಂದು ನಮ್ಮ ಮುಂದೆ ಇಟ್ಟರೆ ನಾವು ಯಾವ ರೀತಿ ಅದನ್ನು ತೀರ್ಮಾನ ಮಾಡುವುದು. ಇದರ ಬಗ್ಗೆ ವಿಲೇಜ್ ಅಕೌಂಟೆಂಟ್ ಆಗಲಿ, ರೆವಿನ್ಯೂ ಇನ್ಸ್‌ಪೆಕ್ಟರ್ ಆಗಲಿ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಒದಗಿಸದೆ ಇರುವುದರಿಂದ ನಾವು ಓಟರ್ಸ್ ಲಿಸ್ಟ್‌ನ್ನು ತೆಗೆದುಕೊಂಡು ಅದರಲ್ಲಿ ಯಾರ್‍ಯಾರು ಒಂದೇ ಮನೆಯಲ್ಲಿದ್ದಾರೆ. ಅದು ಹೇಗೆ ಬಂತು ಎಂದು ನಾವು ಕೇಳುವವರೆಗೂ ಕೂಡ ಅವರು ಹೇಳುವುದಿಲ್ಲ. ಇಂಥ ಅನೇಕ ಪ್ರಕರಣಗಳಿವೆ. ಇವತ್ತು ನಿಜವಾಗಿಯೂ ಬಡವರಿಗೆ. ಅರ್ಹರಾಗಿರತಕ್ಕವರಿಗೆ ಸಿಗತಕ್ಕ ವ್ಯವಸ್ಥೆಯನ್ನು ಮಾಡಬೇಕಾದರೆ ಕೇವಲ ನೀವು ಅಪಾಯಿಂಟ್‌ಮೆಂಟ್ ಮಾಡಿರತಕ್ಕ ಕಮಿಟಿಗಳಿಂದ ಸಾಧ್ಯವಾಗುತ್ತಿಲ್ಲ. ನೀವು ಲೋಕಲ್ ಅಧಿಕಾರಿಗಳಿಗೆ ಸರಿಯಾದ ಮಾಹಿತಿಯನ್ನು ಕೊಡದಿದ್ದರೆ ಶಿಕ್ಷೆಗೆ ಗುರಿಯಾಗುತ್ತೀರೆಂದು ಸುತ್ತೋಲೆಯನ್ನು ತಕ್ಷಣ ಕಳಿಸಿಕೊಡಬೇಕಾಗುತ್ತದೆ. ಏಕೆಂದರೆ, ಒಂದೇ ಕುಟುಂಬದಲ್ಲಿ 6 ಜನರಿಗೆ ರೆಕಾರ್ಡ್‌ನ್ನು ಬಿಲ್ಡಪ್ ಮಾಡಿಕೊಂಡು ಬರುತ್ತಾರೆ, ಗಂಡ-ಹೆಂಡತಿಗೆ ರೆಕಾರ್ಡ್‌ನ್ನು ಬಿಲ್ಡ್ ಅಪ್ ಮಾಡಿಕೊಂಡು ಬರುತ್ತಾರೆ. ಊರಿನಲ್ಲಿ ಇಲ್ಲದವರಿಗೆ ರೆಕಾರ್ಡ್‌ನ್ನು ಬಿಲ್ಡ್‌ಅಪ್ ಮಾಡಿದ್ದಾರೆ. ಜಮೀನಿನಲ್ಲಿ ಉಳುಮೆ ಮಾಡಿದವರಿಗೆ ರೆಕಾರ್ಡ್‌ನ್ನು ಬಿಲ್ಡ್ ಅಪ್ ಮಾಡಿದ್ದಾರೆ. ಇಂಥ ಅವ್ಯವಹಾರಗಳು ನನ್ನೆದುರಿಗೆ ಬೆಳಕಿಗೆ ಬಂದಿದೆ. ದಯಮಾಡಿ ಇದನ್ನು ಸರಿಪಡಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ನಿಮ್ಮ ಅಧಿಕಾರಿಗಳಿಗೆ ಇದನ್ನು ಸುತ್ತೋಲೆಯ ಮೂಲಕ ತಿಳಿಸಬೇಕೆಂದು ಹೇಳುತ್ತೇನೆ. ಈ ಒಂದು ಕಾರ್ಯಕ್ರಮವನ್ನು ಕರ್ನಾಟಕದ ಜನತೆ ನಿಜವಾಗಿಯೂ ಕೂಡ ಒಕ್ಕೊರಲಿನಿಂದ ಸ್ವಾಗತ ಮಾಡಿದ್ದಾರೆ. ನಿಮ್ಮನ್ನು ಅಭಿನಂದಿಸಿದ್ದಾರೆ.

ಇನ್ನು ಒತ್ತುವರಿ ಜಮೀನಿನ ಬಗ್ಗೆ ಈ ರೀತಿ ಇದೆ. ಭೂಕಂದಾಯ ನಿಯಮದ ಪ್ರಕಾರ 1966ನೇ ನಿಯಮ 119ನೇ ಪರಿಚ್ಛೇದಕ್ಕೆ ತಿದ್ದುಪಡಿಯನ್ನು ತಂದು ಕಂದಾಯ ಬಾಕಿ ಇರತಕ್ಕವನ್ನು

ಮುಟ್ಟುಗೋಲು ಹಾಕಿಕೊಂಡು ಸರ್ಕಾರಿ ಪದಕ್ಕೆ ನಿಂತ ಜಮೀನುಗಳು ಹಿಂದೆ ಕಂದಾಯವನ್ನು ಕೊಡದೆ ಅನೇಕ ಜಮೀನುಗಳು ಪದಕ್ಕೆ ಬಂದರೂ ಕೂಡ. ಸರ್ಕಾರದ ಪದವೆಂದು ರೆವಿನ್ಯೂ ರೆಕಾರ್ಡ್ ಬಂದರೂ ಕೂಡ. ಯಾರು ವಂಶಸ್ಥರು ಇದ್ದರೋ ಅವರೇ ಜಮೀನನ್ನು ಅನುಭವಿಸುತ್ತಾ ಬಂದಿರುತ್ತಿದ್ದಾರೆ. ಅಂಥ ಪ್ರಕರಣಗಳನ್ನು ಕೊನೆಗೊಳಿಸಬೇಕು ಎನ್ನತಕ್ಕ ಸದುದ್ದೇಶದಿಂದ ಅಂಥವರಿಗೆ ಗಡುವನ್ನು ಕೊಟ್ಟು ಅಂಥ ಬಾಕಿ ಇರತಕ್ಕ ಕಂದಾಯವನ್ನು ಕಟ್ಟಿ ಆ ಜಮೀನನ್ನು ನಿಮ್ಮದಾಗಿಸಿಕೊಳ್ಳಬೇಕು. ಪದವನ್ನು ವಜಾ ಮಾಡಬೇಕು ಎನ್ನತಕ್ಕಂಥ ಒಂದು ನಿಯಮವನ್ನು ಏನು ತಂದಿದ್ದಾರೆ ಅದು ನಿಜವಾಗಿಯೂ ಬಹಳ ಸ್ವಾಗತಾರ್ಹವಾಗಿರತಕ್ಕದ್ದು. ಇದರಡಿಯಲ್ಲಿ ಬಹಳಷ್ಟು ಜನರಿಗೆ ಅನುಕೂಲ ಆಗತಕ್ಕ ಪರಿಸ್ಥಿತಿ ಇದೆ.

ಇನ್ನು ಭೂಸುಧಾರಣೆ : ಇದರ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಏಕೆಂದರೆ. ಇದರಿಂದ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ಈಗ ಭೂಸುಧಾರಣೆ ಮತ್ತು ಬಗರ್‌ಹುಕುಂ ಸಾಗುವಳಿ ಜಮೀನಿನ ಸಲುವಾಗಿ ಏನು ಕಮಿಟಿಗಳನ್ನು ಮಾಡಿದ್ದೀರಿ ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಟಿ.ಎ.. ಡಿ.ಎ. ಕೊಡುವುದಕ್ಕಾಗಲಿ ಅಥವಾ ಸಾದಿಲ್ವಾರು ಖರ್ಚಿಗಾಗಲಿ ಹಣ ಬಿಡುಗಡೆ ಮಾಡಿಲ್ಲ. ಇದಕ್ಕೆ ಕೂಡಲೆ ಹಣವನ್ನು ಬಿಡುಗಡೆ ಮಾಡಬೇಕು. ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಲು ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಕೆಳಗಿನ ಹಂತದಲ್ಲಿ ನಾವು ಏನು ವಿಲೇಜ್ ಅಕೌಂಟೆಂಟ್‌ರನ್ನು ತಂದು, ಪಟೇಲರನ್ನು. ಶಾನುಭೋಗರನ್ನು ವಜಾ ಮಾಡಿದೆವೋ ಅದು ಆದಮೇಲೆ ಹಳ್ಳಿಗಳ ಕಡೆ ಸರ್ಕಾರವಿಲ್ಲ. ಹಳ್ಳಿಗಳ ಕಡೆ ಸರ್ಕಾರ ಸತ್ತುಹೋಗಿದೆ. ಸರ್ಕಾರವಿದೆ ಎಂದು ಹೇಳಬೇಕಾದರೆ. ತಾಲ್ಲೂಕು ಮಟ್ಟದಲ್ಲಿಯೇ ಹೊರತು ಹೋಬಳಿ ಮತ್ತು ಹಳ್ಳಿಗಳ ಮಟ್ಟದಲ್ಲಿ ಇವತ್ತಿನ ದಿವಸ ಸರ್ಕಾರ ಇಲ್ಲ. ಗುಂಡು ತೋಪಿನಲ್ಲಿ ಯಾರಿಗೂ ಲೆಕ್ಕವಿಲ್ಲದಂತೆ ಆ ಊರಿನ 4-5 ಜನರಿ ಸೇರಿಕೊಂಡು ಮರಗಳನ್ನು ಕಡಿದರೆ ಅವರನ್ನು ಕೇಳುವವರಾರೂ ಇಲ್ಲ. ಕೆರೆಯ ಅಂಗಳವನ್ನು ಒತ್ತುವರಿ ಮಾಡಿಕೊಂಡು ಬೆಳೆಯನ್ನಿಟ್ಟರೆ ಅದನ್ನು ಕೇಳುವವರಾರೂ ಇಲ್ಲಾ. ಸರ್ಕಾರದ ದಾರಿಯಲ್ಲಿ ಅಡ್ಡಗಟ್ಟಿ ಸಾರ್ವಜನಿಕರನ್ನು ತೊಂದರೆಗೀಡು ಮಾಡುವ ಬಲಾಢ್ಯರನ್ನು ಕೇಳುವವರಾರೂ ಇಲ್ಲ. ಇದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಇದೆ. ಇವತ್ತಿನ ದಿವಸ ಇಡೀ ಕರ್ನಾಟಕ ರಾಜ್ಯದಲ್ಲಿ ಯಾರಾದರೂ ಒಬ್ಬ ವಿಲೇಜ್ ಅಕೌಂಟೆಂಟ್ ಈ ರೀತಿ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ಅಥವಾ ಸರ್ಕಾರಿ ಮರಗಳನ್ನು ಕಡಿದು ಮಾರಿದ್ದನ್ನು ಸರ್ಕಾರಕ್ಕೆ ರಿಪೋರ್ಟ್ ಮಾಡಿದ್ದಾಗಲಿ, ಅದು ನಿಮ್ಮ ನೋಟೀಸ್‌ಗೆ ಬಂದಿದೆಯೇ? ಏಕೆ ಬರಲಿಲ್ಲವೆನ್ನತಕ್ಕ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. What are the people doing?

ರೆವಿನ್ಯೂ ಇನ್ಸ್‌ಪೆಕ್ಟರ್ ಇದ್ದಾರೆ. ತಹಶೀಲ್ದಾರರಿದ್ದಾರೆ, ಅಸಿಸ್ಟೆಂಟ್ ಕಮಿಷನರ್ ಇದ್ದಾರೆ, ಡಿ.ಸಿ.ಯವರು ಇದ್ದಾರೆ. ಡಿವಿಜನಲ್ ಕಮಿಷನರ್‌ರವರು ಇದ್ದಾರೆ. ಕಾರ್ಯದರ್ಶಿಯವರು ಇದ್ದಾರೆ. ಇವರೆಲ್ಲಾ ಏನು ಮಾಡುತ್ತಿದ್ದಾರೆ? ಇದರ ಬಗ್ಗೆ ಒಂದು ವರದಿಯನ್ನು ಸಹ ಅವರು ಏಕೆ ಕೊಡುತ್ತಾ ಇಲ್ಲ? ಇವತ್ತಿನ ದಿವಸ ಈ ಹಳ್ಳಿಗಾಡಿನ ಜನರ ಪರಿಸ್ಥಿತಿ ಸರಿಯಾಗದೇ ಇರುವುದರಿಂದ ಅನೇಕ ವ್ಯಾಜ್ಯಗಳಿಗೇ ಕಾರಣವಾಗಿದೆ. ಆಫೀಸ್‌ನಲ್ಲಿ ಬರೆಯತಕ್ಕಂತಹ ಪಹಣಿಯನ್ನು ಮನೆಯಲ್ಲೇ ಕುಳಿತು ಬರೆಯತಕ್ಕಂತಹ ವ್ಯವಸ್ಥೆಯಾಗಿದೆ. ಒಬ್ಬ ವಿಲೇಜ್ ಅಕೌಂಟೆಂಟ್‌ಗೂ ಇಂಥವರ ಜಮೀನು ಇಂತಾದ್ದು ಎಂದು ಗುರುತು ಮಾಡತಕ್ಕಂತಹ ಶಕ್ತಿ ಇಲ್ಲ. ಈ ಕಾರಣಗಳಿಂದ ಹಳ್ಳಿಗಳಲ್ಲಿ ಪರಿಸ್ಥಿತಿ ಮತ್ತು ಜೀವನ ಅಸ್ತವ್ಯಸ್ತವಾಗಿದೆ. ಒಬ್ಬೊಬ್ಬರಿಗೆ ವ್ಯಾಜ್ಯದಲ್ಲಿ ಈ ದಾರಿಯೊಳಗೆ ಇಲ್ಲ. ಮತ್ತು

ಮೇಲಾಗಿ ಅನೇಕ ಪಾಪ್ಯುಲರ್ ಸ್ಕೀಮ್‌ಗಳನ್ನು ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ಅದರಲ್ಲಿ ಟೆನನ್ಸಿ ಆಕ್ಟ್ ಎನ್ನುವುದು ಒಂದು. ಬಗರ್ ಹುಕುಂ ಸಾಗುವಳಿ ನಾವು ಮಾಡುತ್ತಿದ್ದೇವೆ. ಮತ್ತೆ ಈ ಜಮೀನನ್ನು ಒತ್ತುವರಿ ಮಾಡಿರತಕ್ಕಂಥದ್ದನ್ನು ಕೂಡ ಸಕ್ರಮ ಮಾಡಿಕೊಡುತ್ತಿದ್ದೇವೆ. ಈಗ ನಾನು ನೇರವಾಗಿ ಭೂ ಮಾಪನ-ಸರ್ವೆ ಡಿಪಾರ್ಟ್‌ಮೆಂಟ್‌ಗೆ ಸಂಬಂಧ ಕಲ್ಪಿಸಿ ಕೊಡುತ್ತಿದ್ದೇನೆ. ಹಿಂದೆ ಯಾವ ಯಾವ ಜಮೀನುಗಳು ಕೃಷಿ ಜಮೀನುಗಳಾಗಿದ್ದವು ಅಲ್ಲಿ ಈಗಿನ ಮಾರ್ಡನ್ ಟೆಕ್ನಾಲಜಿ ಉಪಯೋಗಿಸಿ ನೀರನ್ನು ಭೂಮಿಯಿಂದ ಎತ್ತಿ ಲಿಫ್ಟ್ ಇರಿಗೇಷನ್ ಮೂಲಕ ಜಮೀನನ್ನು ಆಬಾದು ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಕೆಲವರು ಬೆಲೆ ಬಾಳತಕ್ಕ ತೋಟ ಮಾಡಿದ್ದಾರೆ. ಮತ್ತೆ ಕೆಲವರು ಗದ್ದೆಗಳನ್ನು ಮಾಡಿಕೊಂಡಿದ್ದಾರೆ. ಇದರ ಮೂಲಕ ಹಾದು ಹೋಗತಕ್ಕಂತಹ ರಸ್ತೆಗಳನ್ನೆಲ್ಲಾ ಬೇಲಿ ಹಾಕಿ ಮುಚ್ಚಿದ್ದಾರೆ. ಮುಂದುಗಡೆ ನಾವು ಟೆನೆನ್ಸಿ ಆಕ್ಟ್ ಪ್ರಕಾರ ಬಡವರಿಗೆ ಜಮೀನು ಕೊಟ್ಟಿದ್ದೇವೆ. ಈ ಮಧ್ಯದಲ್ಲಿ ತೋಟ ಮಾಡಿಕೊಂಡಿದ್ದಾರೆ. ಜಮೀನು ಬಿಡುತ್ತಿಲ್ಲ. ಅವನ ಪರಿಸ್ಥಿತಿ ಏನಾಗಿದೆಯೇಂದರೆ, ಆ ಸಾಹುಕಾರನಿಗೆ ಜಮೀನು ಮಾರಿ ನಾನು ಹೋಗಬೇಕು ಎನ್ನುವ ಒಂದು ಪರಿಸ್ಥಿತಿ ಬಂದಿದೆ. ಆದುದರಿಂದಲೇ ಹಿಂದೆ ಬ್ರಿಟಿಷರು ಸ್ವಲ್ಪ ಯೋಚನೆ ಮಾಡಿದ್ದರೆಂದು ಕಾಣುತ್ತದೆ. ಅವರಿಗೆ ನಮಗಿಂತ ಸ್ವಲ್ಪ ಜಾಸ್ತಿ ಬುದ್ಧಿ ಇತ್ತು ಎಂದು ಕಾಣುತ್ತದೆ. 30 ವರ್ಷಕ್ಕೆ ಒಂದು ಸಾರಿ ಸರ್ವೆ ಆಗಬೇಕು, ಕ್ಲಾಸಿಫಿಕೇಷನ್ ಆಗಬೇಕು ಎಂದು ಮಾಡಿದ್ದರು. ಡ್ರೈ ಲ್ಯಾಂಡ್‌ಗೆ ಕಂದಾಯ ಮಾಫಿ ಮಾಡಿದ್ದೇವೆ. ತೋಟಕ್ಕೆ ನಾವು ಎಲ್ಲಿ ಮಾಫಿ ಮಾಡಿದ್ದೇವೆ? ನಾವು ಗದ್ದೆಗಳಿಗೇ ಎಲ್ಲಿ ಮಾಫಿ ಮಾಡಿದ್ದೇವೆ? ಅನೇಕ ಸವಲತ್ತುಗಳನ್ನು ಕೊಟ್ಟು ಬೆಲೆ ಬಾಳತಕ್ಕ ಜಮೀನುಗಳನ್ನು ಮಾಡಿ ಅದರ ಮೂಲಕ ನಾವು ಸಂಪಾದನೆ ಮಾಡತಕ್ಕಂತಹ ಒಂದು ವ್ಯವಸ್ಥೆಯೊಳಗೆ ಆತ ಎರಡು ರೂಪಾಯಿ ಕಂದಾಯ ಕೊಡುವುದಿಲ್ಲವೆ? ಕೊಡುತ್ತಾನೆ, ನೀವು ಸರಿಯಾದ ರೀತಿಯಲ್ಲಿ ಮಾಡತಕ್ಕಂತಹ ಒಂದು ವ್ಯವಸ್ಥೆ ಮಾಡಬೇಕು. ಕೂಡಲೇ ಎಷ್ಟೇ ಹಣ ಖರ್ಚಾಗಲಿ ಟೆನೆನ್ಸಿ ಆಕ್ಟ್‌ನಲ್ಲಿ ಬಂದಿರತಕ್ಕಂತಾದ್ದು ಮತ್ತು ಇವತ್ತು ಬಗರ್ ಹುಕುಂ ಸಾಗುವಳಿ ಮಾಡಿರುವಂಥಾದ್ದನ್ನು ಸಕ್ರಮಗೊಳಿಸತಕ್ಕಂಥಹ ಜಮೀನುಗಳಿಗೆ ದಾರಿ ಇಲ್ಲ. ಆದ್ದರಿಂದ ಅದರ ಕಡೆ ತಕ್ಷಣ ನಮ್ಮ ಖರ್ಗೆಯವರು ಗಮನ ಹರಿಸುತ್ತಾರೆಂದು ನಾನು ಭಾವಿಸುತ್ತೇನೆ. ದಯವಿಟ್ಟು ಎಷ್ಟೇ ಸರ್ಕಾರಕ್ಕೆ ಖರ್ಚಾಗಲಿ ಅದರ ಎಲ್ಲಾ ಖರ್ಚನ್ನು ಆಯಾಯ ರೈತರಿಗೆ ಎಕರೆಗೆ ಎರಡು ರೂಪಾಯಿ ಹಾಕುತ್ತೀರೋ, ಐದು ರೂಪಾಯಿ ಹಾಕುತ್ತೀರೋ, ಹತ್ತು ರೂಪಾಯಿ ಹಾಕುತ್ತೀರೋ ಹಾಕಿ ಸರ್ವೆ ಮಾಡಿಸಿ, ಅವರಿಗೆ ಹೋಗತಕ್ಕಂತಹ ದಾರಿ, ಅವರಿಗೆ ಬೇಕಾಗಿರತಕ್ಕ ಕಾಲುವೆ, ಅವರಿಗೆ ಬೇಕಾಗಿರತಕ್ಕಂತಹ ಇತರ ಸೌಲಭ್ಯಗಳನ್ನು ಒದಗಿಸತಕ್ಕಂತಹ ಒಂದು ಏರ್ಪಾಡನ್ನು ತಕ್ಷಣ ಮಾಡಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಮನವಿಯನ್ನು ಸಲ್ಲಿಸುತ್ತಿದ್ದೇನೆ. ಕಂದಾಯ ಇಲಾಖೆ ವಿಶೇಷ ಕೋಶ ಮತ್ತು ಸಾರ್ವಜನಿಕರದ್ದು ಎಂದು ಇದೆ. ಇದನ್ನು ಓದುತ್ತಾ ಹೋದರೆ ಬಹಳ ನಗು ಬರುತ್ತದೆ. ಇವರು ಬೆಟ್ಟ ಅಗೆದು ಇಲಿ ಹಿಡಿದಿದ್ದಾರೆ. ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೋ ಅದರ ವಿವರವನ್ನು ಕೊಟ್ಟಿದ್ದರೆ ಬಹಳ ಮಜ ಇರುತ್ತಿತ್ತು, ಇದು ಆಗಲಿಲ್ಲ 1991-92ನೇ ಸಾಲಿನಲ್ಲಿ ಅಂದರೆ 1-1-91 ರಿಂದ 31-12-91ರ ಅವಧಿಯಲ್ಲಿ ವಿಶೇಷ ಕೋಶವು 41 ಪ್ರಕರಣಗಳನ್ನು ತನಿಖೆ ಮಾಡಿದ್ದು ಅವುಗಳಲ್ಲಿ 10 ಪ್ರಕರಣಗಳಲ್ಲಿ 17 ಜನ ಅಧಿಕಾರಿ, ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಲಹೆಯನ್ನು ನೀಡಿದ್ದಾರೆ.ಓ Is this the efficiency of the Department? Can we expect this? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಇಷ್ಟೇ ಜನವೇ ನಿಮಗೆ ಸಿಕ್ಕಿದ್ದು? 175 ತಾಲ್ಲೂಕುಗಳಲ್ಲಿ ಎಷ್ಟು ಜನ ಅಧಿಕಾರಿಗಳಿದ್ದಾರೆ, ಸಿಕ್ಕಿದವರು 17 ಜನ ಮಾತ್ರ. ಪಾಪ ಅವರು ಬಹಳ ದುರ್ದೈವಿಗಳೆಂದು

ಕಾಣುತ್ತದೆ. ದೇವರನ್ನು ಮರೆತಂತಹ ಜನಗಳೆಂದು ಕಾಣುತ್ತದೆ. ಈ 17 ಜನ ಸಿಕ್ಕಿದ್ದಾರೆ. ಇದಕ್ಕೆ ಎಷ್ಟು ಖರ್ಚು ಮಾಡಿದ್ದೀರೆಂದು ಕೇಳುತ್ತಿದ್ದೇವೆ. ಇದಕ್ಕೆ ಎಷ್ಟು ಖರ್ಚಾಗುತ್ತದೆ, ಇದಕ್ಕೆ ಬೇಕಾಗಿರತಕ್ಕಂತಹ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಏಕೆ ಈ ತರಹ ನ್ಯೂನತೆಗಳು ನಮ್ಮ ರಾಜ್ಯದಲ್ಲಿ ಬರುತ್ತಿವೆ. ಇಲಾಖೆ ನಿಮ್ಮ ಕೈಗೆ ಸಿಗುತ್ತದೆಯೇ? ಈ ತರಹದ ಅವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟು ಒಂದು ವರ್ಷದಲ್ಲಿ 10 ಪ್ರಕರಣಗಳಲ್ಲಿ 17 ಜನ ನೌಕರರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ. ಇದು ನಾಚಿಕೆಗೇಡಿನ ಪ್ರಸಂಗವಲ್ಲವೆ? ದೊಡ್ಡ ಬೆಟ್ಟವನ್ನು ಅಗೆದು ಸಣ್ಣದಾಗಿರುವ ಇಲಿಯನ್ನು ಹಿಡಿದಿದ್ದಾರೆ. ಹೆಗ್ಗಣವನ್ನಾದರೂ ಹಿಡಿದದ್ದರೆ ಅದು ಬೇರೆಯಾಗುತ್ತಿತ್ತು. ಇಲಿ ಮರಿ ನಮ್ಮ ಕಡೆ ಸುಂಡ ಎಂದು ಹೇಳುತ್ತಾರೆ. ನಿಮ್ಮ ಕಡೆ ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಅಂದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಅದನ್ನು ಹಿಡಿದ ಹಾಗೆ ಆಗಿದೆ. ಏಕೆ ಈ ರೀತಿ ಮಾಡಿದಿರಿ, ನೀವು ಬಹಳ ಬುದ್ಧಿವಂತರಿದ್ದೀರಿ. ಸ್ವಲ್ಪ ಮನಸ್ಸು ಮಾಡಿದರೆ ಏನು ಕೆಲಸ ಮಾಡುವುದಕ್ಕೂ ನಿಮಗೆ ತಾಕತ್ತು ಇದೆ ಎನ್ನುವುದು ನನಗೆ ಗೊತ್ತು. ನೀವು ಏಕೆ ಇದರ ಕಡೆ ಗಮನ ಹರಿಸುತ್ತಿಲ್ಲ ಎಂದು ನಾನು ಹೋದ ವರ್ಷದಿಂದ ನೋಡುತ್ತಿದ್ದೇನೆ. ನನಗೆ ಇನ್ನು ಅರ್ಥವಾಗುತ್ತಿಲ್ಲ. ಏಕೆ ಈ ರೀತಿ ಮಾಡುತ್ತಿದ್ದೀರಿ? ರೈತರಿಗೆ ನಿಮ್ಮಿಂದ ಬಹಳಷ್ಟು ಸಹಾಯವಾಗಬೇಕಾಗಿದೆ. ಒಬ್ಬ ಕಂಟ್ರಾಕ್ಟರ್‌ಗೆ ಇಂಜಿನಿಯರ್ ಸಹಾಯ ಮಾಡದಿದ್ದರೂ ಪರವಾಗಿಲ್ಲ. ಅವನು ತಡೆದುಕೊಳ್ಳುತ್ತಾನೆ. ಆದರೆ ಒಬ್ಬ ಬಡ ರೈತ ತಾಲ್ಲೂಕು ಅಫೀಸಿಗೆ ಹೋಗಿ ಸುತ್ತಿಕೊಂಡು ವಾಪಸು ಬಂದಾಗ ಅವನ ನಿಟ್ಟುಸಿರು ನಿಮಗೆ ತಟ್ಟುತ್ತದೆ. ಆದುದರಿಂದ ದಯವಿಟ್ಟು ಇದರಲ್ಲಿ ಎಫಿಷಿಯನ್ಸಿ ಇನ್‌ಕ್ರೀಸ್ ಮಾಡಲಿಕ್ಕೆ. ಪ್ರಾಮಾಣಿಕತೆಯನ್ನು ಬೆಳೆಸುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡಬೇಕು. ಈ ದಿಸೆಯಲ್ಲಿ ನೀವು ಕೆಲಸ ಮಾಡಬೇಕೆಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಪ್ರಕೃತಿ ವಿಕೋಪದ ಬಗ್ಗೆ ಹೇಳುವುದಾದರೆ, ನೆರೆ ಹಾವಳಿ, ಬರ ಪರಿಸ್ಥಿತಿ ಬಂದಾಗ ಬರ ಪರಿಹಾರ ಕಾರ್ಯಕ್ರಮಗಳನ್ನು ನಿಮ್ಮ ಕೈಲಾದಮಟ್ಟಿಗೆ ಮಾಡುತ್ತಿದ್ದೀರಿ. ಆದರೆ ಉತ್ತರ ಭಾರತದಲ್ಲಿ ಮಳೆ ಬಂದು ಪ್ರವಾಹ ಬಂದು ಕೊಚ್ಚಿ ಹೋದಾಗ ಕೇಂದ್ರ ಸರ್ಕಾರದವರು ಏನು ಪರಿಹಾರ ಹಣವನ್ನು ಪೂರ್ತಿಯಾಗಿ ಕೊಡುತ್ತಾರೋ ಅದೇ ರೀತಿ ನಮ್ಮ ಸರ್ಕಾರಕ್ಕೂ ಕೂಡ ಕೇಂದ್ರದವರು ಹಣವನ್ನು ಕೊಡುತ್ತಾರೆ. ಆದರೆ ವಾಪಸು ನಮಗೆ ಹಣವನ್ನು ಕೊಡುವಾಗ ಇದನ್ನು ವಜಾ ಮಾಡಿಕೊಳ್ಳುತ್ತಾರೆ. ಈ ತಾರತಮ್ಯ ಏತಕ್ಕೆ? ರೀಜನಲ್ ಡಿಸ್ಕ್ರಿಮಿನೇಷನ್ ಏತಕ್ಕೆ? ಇದರ ಬಗ್ಗೆ ಕೇಂದ್ರಸರ್ಕಾರದ ವಿರುದ್ಧ ಏತಕ್ಕೆ ಹೋರಾಟಮಾಡುವುದಿಲ್ಲ. ಕೇಂದ್ರದ ಮೇಲೆ ಏತಕ್ಕೆ ಒತ್ತಾಯ ಮಾಡುವುದಿಲ್ಲ. ಉತ್ತರ ಭಾರತದಲ್ಲಿ ನೆರೆ ಹಾವಳಿ ಬಂದಾಗ ಯಾವ ರೀತಿ ಪರಿಹಾರವನ್ನು ಕೊಡುತ್ತಾರೋ ಅದೇ ರೀತಿ ನಮಗೂ ಕೂಡ ಪರಿಹಾರಧನವನ್ನು ಪೂರ್ಣವಾಗಿ ನಮಗೆ ಕೊಡಬೇಕೆಂದು ನೀವು ಕೇಳಬೇಕು. ಈಗ ಸಣ್ಣಪುಟ್ಟ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಆದರೆ ಇದಕ್ಕೆ ಎಷ್ಟು ಪ್ರಮಾಣದಲ್ಲಿ ಮಾಡಬೇಕೋ ಅಷ್ಟು ಪ್ರಮಾಣದಲ್ಲಿ ಮಾಡುತ್ತಿಲ್ಲ. ಇದಕ್ಕೆ ಕಾರಣ ಎಂದರೆ ನಮ್ಮಲ್ಲಿ ಹಣದ ಕೊರತೆ ಇದೆ. ಈ ಕೊರತೆಯನ್ನು ನೀಗಬೇಕಾದರೆ ನಮಗೆ ಅವರು ಏನು ಸಾಲದ ರೂಪದಲ್ಲಿ ಕೊಡುತ್ತಾರೆ ಅದು ಸಾಲ ಅಲ್ಲ, ಪೂರ್ಣ ಪರಿಹಾರ ಧನ. ಇದನ್ನು ಪೂರ್ಣವಾಗಿ ಕರ್ನಾಟಕ ರಾಜ್ಯಕ್ಕೆ ಕೊಡಬೇಕೆಂದು ಕೇಂದ್ರದ ಮೇಲೆ ಒತ್ತಾಯ ತರಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನ್ಯಾಚುರಲ್ ಕೆಲಾಮಿಟಿ ಫಂಡ್. ಇದು ಈಗ ಮೊದಲಿನಂತೆ ಇಲ್ಲ. ಮೊದಲು ಫ್ಲಡ್‌ಗಾಗಿ ಕೊಟ್ಟಂಥ ಗ್ರ್ಯಾಂಟ್‌ನ್ನು ಫ್ಲಡ್ ಗ್ರ್ಯಾಂಟ್ ಎಂದು

ಕೊಡುತ್ತಿದ್ದರು. ಸಾಮಾನ್ಯವಾಗಿ ಸ್ಕೇರ್ಸಿಟಿ ಎಂಬುದು ದಕ್ಷಿಣ ಭಾರತದಲ್ಲಿ ಬರುತ್ತಿತ್ತು. ಆಗ ಸ್ಕೇರ್ಸಿಟಿಗೆ ಅಡ್ವಾನ್ಸ್ ಅಸಿಸ್ಟೆನ್ಸ್ ಎಂದು ಕೊಟ್ಟು, ಮುಂದಿನ ವರ್ಷ ನಮ್ಮ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಅದನ್ನು ವಜಾ ಮಾಡಿಕೊಳ್ಳುತ್ತಿದ್ದರು. ಈಗ ಈ ನೀತಿಯನ್ನು ತೆಗೆದು ನ್ಯಾಚುರಲ್ ಕೆಲಾಮಿಟಿ ಫಂಡ್ ಎಂದು ಪ್ರತಿಯೊಂದು ರಾಜ್ಯಕ್ಕೂ ಇಂತಿಷ್ಟು ಎಂದು ನಿಗದಿ ಮಾಡಿದ್ದಾರೆ. ನಮಗೆ 27 ಕೋಟಿ, ಉತ್ತರ ಪ್ರದೇಶಕ್ಕೆ 100 ಕೋಟಿ, ತಮಿಳ್ನಾಡಿಗೆ 60 ಕೋಟಿ ಹೀಗೆ ಬೇರೆ ಬೇರೆ ರಾಜ್ಯಗಳಿಗೆ ಅವರವರು ಕಳೆದ 10 ವರ್ಷಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಅದರ ಆಧಾರದ ಮೇಲೆ ಇವತ್ತು ನಿಗದಿಮಾಡಿದ್ದಾರೆ. ಅದರ ಪ್ರಕಾರ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಇದರಲ್ಲಿ ಸಾಲ ಕೊಡತಕ್ಕದ್ದು, ತೆಗೆದುಕೊಳ್ಳತಕ್ಕದ್ದು ಏನೂ ಇಲ್ಲ. ನಮಗೆ 27 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಷ್ಟರೊಳಗೇ ನಾವು ಖರ್ಚು ಮಾಡಬೇಕು. ಇದಕ್ಕಿಂತ ಹೆಚ್ಚಿಗೆ ಖರ್ಚು ಮಾಡಬೇಕಾದರೆ ನಮ್ಮ ಸ್ಟೇಟ್ ಪ್ಲಾನ್‌ನಿಂದಲೋ ಅಥವಾ ನಮ್ಮ ಹಣದಿಂದಲೋ ರಿಲೀಫ್ ಕೊಡಬೇಕು. ಇದು ಈಗಿರತಕ್ಕ ಪರಿಸ್ಥಿತಿ. ನಾನು ಹೇಳಬೇಕಾದರೆ ಎಲ್ಲವನ್ನೂ ಹೇಳಬೇಕಾಗುತ್ತದೆ. 27 ಕೋಟಿ ನ್ಯಾಚುರಲ್ ಕೆಲಾಮಿಟಿ ಫಂಡ್ ಖರ್ಚಾದುದಲ್ಲದೆ ಇದುವರೆಗೆ ಸುಮಾರು 61 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಅಂದರೆ ಸ್ವಲ್ಪ ಹೆಚ್ಚೂಕಡಿಮೆ 30 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಈ ಮಾಹಿತಿಯನ್ನು ನಮಗೆ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ನಾನು ಏನು ತಿಳಿದಿದ್ದೆ ಎಂದರೆ, ಉತ್ತರ ಭಾರತದಲ್ಲಿ ನೆರೆ ಹಾವಳಿಗೆ ಏನು ಫ್ರೀ ಆಗಿ ಹಣ ಕೊಡುತ್ತಿದ್ದರು ಅದೇ ನೀತಿ ಈಗಲೂ ಮುಂದುವರಿದಿದೆ ಎಂದು ತಿಳಿದಿದ್ದೆ. ಆದರೆ ಈ ವರ್ಷದಲ್ಲಿ ಹೆಚ್ಚಿನ ಮಳೆ ಬಂದಿದ್ದರಿಂದ 30 ಕೋಟಿ ರೂಪಾಯಿ ಹೆಚ್ಚಿಗೆ ಖರ್ಚು ಮಾಡಿದ್ದೇವೆಂದು ತಾವು ಹೇಳಿದಿರಿ. ಇದನ್ನು ನೋಡಿದರೆ 27 ಕೋಟಿ ನಮಗೆ ಏನೇನೂ ಸಾಲದು, ಕೊನೆಯಪಕ್ಷ ನಮ್ಮ ಕರ್ನಾಟಕ ರಾಜ್ಯಕ್ಕೆ 50 ಕೋಟಿ ರೂಪಾಯಿಗಳನ್ನಾದರೂ ನಿಗದಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಾವು ಮನವರಿಕೆ ಮಾಡಿಕೊಡಬೇಕು.

ಇನ್ನು ಪುನರ್‌ವಸತಿ ವಿಚಾರದಲ್ಲಿ ನಾನು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ತಾವು ಎಷ್ಟು ವರ್ಷದಲ್ಲಿ ಈ ಪುನರ್ ವಸತಿ ಕಾರ್ಯಕ್ರಮವನ್ನು ಪೂರ್ತಿಗೊಳಿಸುತ್ತೀರಿ. ಮಲಪ್ರಭಾ, ಘಟಪ್ರಭಾ, ಕೈಗಾ, ಕೊಂಕಣ ರೈಲ್ವೆ, ಕಾಳಿ 2, 3 4ನೇ ಹಂತ, ಸೀಬರ್ಡ್, ವಾಟ್‌ಹೊಳೆ, ವರಾಹಿ, ಚಕ್ರ, ಎಗಚಿ, ಕೃಷ್ಣಾ ಮೇಲ್ದಂಡೆ, ಮಂಗಳೂರು ವಿಮಾನ ನಿಲ್ದಾಣ, ಕಾರವಾರ ಬಂದರು, ಎಂ.ಎಸ್.ಟಿ.ಪಿ. ಬೊಮ್ಮೇನಹಳ್ಳಿ, ಮುಲ್ಲಾಮಾರಿ, ಹೇಮಾವತಿ, ಹಾರಂಗಿ, ಕಾರಂಜಿ, ಮಂಚನಬೆಲೆ, ಮಂಗಳೂರು ಕೆಮಿಕಲ್ಸ್, ಬೆಳ್ಳಿತೊರೆ, ಮುಲ್ಕಿ-ಹೀಗೆ, ಅನೇಕವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಒಂದು ಪುಸ್ತಕವನ್ನೇ ಬರೆಯಬಹುದು. ಅವರ ಗತಿ ಏನಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ? ಈ ಎಲ್ಲಾ ಯೋಜನೆಗಳ ಅಡಿಯಲ್ಲಿ ಬರತಕ್ಕವರು ಎಂದರೆ ರೈತರು. ಅವರ ಗತಿ ಏನಾಗಿದೆ? ಅವರಿಗೆ ಜಮೀನಿಲ್ಲ, ಮನೆ ಇಲ್ಲ. ಅವರಿಗೆಲ್ಲಾ ವ್ಯವಸ್ಥೆ ಮಾಡಲಿಕ್ಕೆ ನೀವು ಎಷ್ಟು ವರ್ಷ ತೆಗೆದುಕೊಳ್ಳುತ್ತೀರೆಂಬುದನ್ನು ದಯವಿಟ್ಟು ತಾವು ಉತ್ತರ ಹೇಳುವಾಗ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮನೆ ಬಾಡಿಗೆ ನಿಯಂತ್ರಣ, ರೆಂಟ್ ಕಂಟ್ರೋಲ್ ಆಕ್ಟ್, ಇದು ಹಿಂದೆ ಮಾಡಿದಂಥ ಒಂದು ಕಾನೂನಾಗಿದೆ. ಈಗ ಎಲ್ಲದರಲ್ಲೂ ಬೆಲೆ ಏರಿಕೆಯಾಗುತ್ತಿದೆ. ನಾವು ಹತ್ತು ವರ್ಷಗಳ

ಹಿಂದೆನಿಗದಿ ಮಾಡಿದಂಥ ರೆಂಟ್ ಕಂಟ್ರೋಲ್‌ನ್ನು ಇವತ್ತು ಅದಕ್ಕೆ ಅಪ್ಲೈ ಮಾಡಿದರೆ ಬಹಳ ಡಿಸ್‌ಕ್ರಿಮಿನೇಷನ್ ಆಗುತ್ತದೆ, ಬಹಳ ಅನ್ಯಾಯವಾಗುತ್ತದೆ. ದಯವಿಟ್ಟು ಇದನ್ನು ಸರಿಪಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರಲು ಈ ಒಂದು ಆಕ್ಟನ್ನು ಅಮೆಂಡ್‌ಮೆಂಟ್ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ತಮ್ಮಲ್ಲಿ ಹೇಳುತ್ತೇನೆ. ಇನ್ನು ಪ್ರಮಿಳ ಕಮಿಟಿ ವರದಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿತ್ತು. ಹಿಂದಿನ ವಿಧಾನ ಸಭೆ ವಿಸರ್ಜನೆಯಾದ ಮೇಲೆ ವಿಧಾನ ಮಂಡಲದ ಸೆಲೆಕ್ಟ್ ಕಮಿಟಿಯು ಅಸ್ತಿತ್ವದಲ್ಲಿರುವುದಿಲ್ಲ. ಪ್ರಮಿಳಾ ಕಮಿಟಿ ರಿಪೋರ್ಟ್‌ಗೇನಾದರು ಜೀವ ಇದೆಯೇ? ಅಥವಾ ಜೀವ ಇದ್ದರೆ ಅದಕ್ಕೆ ಯಾವಾಗ ನೀವು ಕೈಕಾಲು ಕೊಡುತ್ತೀರಿ. ಇಲ್ಲದಿದ್ದರೆ ಬೇರೆ ಕಮಿಟಿಯನ್ನು ಮಾಡುತ್ತೀರಾ ಎಂಬುದರ ಬಗ್ಗೆ ವಿಷಧವಾಗಿ ತಾವು ತಿಳಿಸಬೇಕು. ಏತಕ್ಕೆಂದರೆ, ಬಹಳಷ್ಟು ಜನ ಮನೆ ಕಟ್ಟುವವರು ಮನೆ ಕಟ್ಟಲೇಬಾರದೆಂದು ಇದ್ದಾರೆ. ಕಟ್ಟಿದವರು ಯಾವ ರೀತಿ ಈ ಕಾನೂನನ್ನು ಯಾವ ರೀತಿ ನುಸುಳಿಕೊಂಡು ಹೋಗಬೇಕೆಂಬ ಯೋಚನೆಯಲ್ಲಿದ್ದಾರೆ. ಆದುದರಿಂದ ದಯಿಟ್ಟು ಇದಕ್ಕೆ ಏನಾದರು ಒಂದು ಮಾರ್ಗವನ್ನು ನೀವು ಈ ಸಭೆಗೆ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಮತ್ತೆ ಮುದ್ರಾಂಕ ಮತ್ತು ನೋಂದಣಿ. ಈಗ ನೋಂದಣಿ ಇಲಾಕೆ ಇದೆ. ಅದಕ್ಕೆ ಸೆಕ್ರೆಟರಿಯೇಟ್‌ನಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಅಧಿಕಾರಿಗಳು ಇದ್ದಾರೆ. ಈಗ ಒಂದು ಉದಾಹರಣೆ ಕೊಡುತ್ತೇನೆ. ಈ ಆಕ್ಟಿನ ಪ್ರಕಾರ ಬಹಳಷ್ಟು ಜನ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್‌ಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಕಾನೂನು ಪ್ರಕಾರ ಪ್ರತಿವರ್ಷ ಜನರಲ್‌ಬಾಡಿ ಮೀಟಿಂಗ್ ಮಾಡಬೇಕು. ಅಕೌಂಟ್ ವರದಿಯನ್ನು ಈ ಇಲಾಖೆಗೆ ಕಳುಹಿಸಬೇಕು. ಯಾವ ಯಾವ ಸಂಘಸಂಸ್ಥೆಗಳು ಇರುತ್ತವೆ. ಅವು ಪ್ರತಿವರ್ಷ ವರದಿಯನ್ನು ಕಳುಹಿಸಿದೆಯೇ ಅಥವಾ ಕಳುಹಿಸಿಲ್ಲವೇ ಎಂಬುದರ ಬಗ್ಗೆ ಏನಾದರು ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆಯೇ? ಯಾವುದಾದರೂ ಒಂದು ಅಥವಾ ಒಂದು ಜಿಲ್ಲೆಯೊಳಗೆ 10ಕ್ಕೆ ನೋಟೀಸ್ ಕೊಟ್ಟಿದ್ದಾರೆಯೇ? ಬಂದವರಿಗೆ ರಿಜಿಸ್ಟರ್ ಮಾಡಿ ಮನೆಯಲ್ಲಿ ತೆಪ್ಪಗೆ ಕಳಿತುಕೊಳ್ಳುವುದು ಒಂದೇ ಕೆಲಸವೇ? ಇದನ್ನು ಏತಕ್ಕೆ ಮಾಡಿದ್ದೇವೆಂದರೆ, ಸರಿಯಾದ ರೀತಿಯಲ್ಲಿ ನೋಂದಾಯಿಸಿ ಕೊಟ್ಟಂಥ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಬೇಕೆನ್ನುವ ಒಂಗು ದೃಷ್ಟಿಯಿಂದ ಈ ಕಾನೂನನ್ನು ತೆಗೆದುಕೊಂಡುಬಂದು, ಬೆಂಗಳೂರಿಗೆ ಬಂದು ರಿಜಿಸ್ಟರ್ ಮಾಡಿಸಿಕೊಂಡು ಹೋಗತಕ್ಕಂಥದ್ದನ್ನು ಡಿಸೆಂಟ್ರಲೈಸ್ ಮಾಡಿ, ಆಯಾ ಜಿಲ್ಲೆಗೆ ಒಬ್ಬ ಅಧಿಕಾರಿಯನ್ನು ಕೊಟ್ಟಿದ್ದೇವೆ. ಇಷ್ಟಾದರೂ ಅವರು ಕೆಲಸ ಮಾಡದಿದ್ದರೆ ಕಾರಣವೇನು? ಅವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿರುತ್ತೀರಿ? ಅಥವಾ ಕ್ರಮ ತೆಗೆದುಕೊಳ್ಳುವ ಬಗ್ಗೆ ಅವರಿಗೆ ಏನಾದರೂ ಸುತ್ತೋಲೆಯನ್ನು ಕಳುಹಿಸುತ್ತೀರಾ? ಏತಕ್ಕೆಂದರೆ, ಬಹಳಷ್ಟು ಸಂಸ್ಥೆಗಳು ಸರ್ಕಾರಕ್ಕೆ ಬಹಳ ಮೋಸಮಾಡುತ್ತಿವೆ. ಕೆಲವು ಸಂಸ್ಥೆಗಳು ಅಸ್ತಿತ್ವದಲ್ಲಿಯೇ ಇಲ್ಲ. ಯಾವತ್ತೋ ಮಾಡಿದವು, ಯಾರೋ ಗ್ರಾಂಟ್ ತಿನ್ನುತ್ತಿದ್ದಾರೆ. ಯಾರ ಹೆಸರಿನಲ್ಲೋ ಇದೆ. ಆ ಸಂಸ್ಥೆಯ ಫೌಂಡರ್ ಸತ್ತು ಹೋಗಿದ್ದಾನೆ. ಬೇರೆಯವರನ್ನು ಸಬ್‌ಸ್ಟ್ಯೂಟ್ ಮಾಡಿ ರಿಜಿಸ್ಟರ್ ಮಾಡಿಸಿರುವುದಿಲ್ಲ. ಇಂಥ ಅನೇಕ ಅವ್ಯವಹಾರಗಳು ಈ ಇಲಾಖೆಯಲ್ಲಿ ನಡೆಯುತ್ತಿವೆ. ಇದಕ್ಕೆ ಏನಾದರು ಒಂದು ಸೂಕ್ತ ಕ್ರಮವನ್ನು ತೆಗೆದುಕೊಂಡು ಸರಿಪಡಿಸುತ್ತೀರಾ ಎನ್ನತಕ್ಕಂಥ ಪ್ರಶ್ನೆಯನ್ನು ನಿಮ್ಮ ಎದುರಿಗೆ ನಾನು ಕೇಳುತ್ತಿದ್ದೇನೆ.

ಇನ್ನು ಸಬ್‌ರಿಜಿಸ್ಟ್ರಾರ್ ವಿಚಾರ. ನಾನು ಇವರ ಬಗ್ಗೆ ಹೇಳಬೇಕಾಗಿಲ್ಲ. ಬಹಳಷ್ಟು ವಿಚಾರ ನಮಗೆ ಗೊತ್ತಿದೆ ಎಂದು ನಾನು ಭಾವಿಸಿದ್ದೇನೆ. ಈಗ ಒಂದು ವರ್ಷದಿಂದ ಯಾರಾದರೂ ನಿಮ್ಮ

ಹಿಡಿತಕ್ಕೆ ಬಂದಿದ್ದಾರೆಯೇ? ತುಮಕೂರು, ನನ್ನ ಕ್ಷೇತ್ರದಲ್ಲಿ ಮತ್ತು ತುಮಕೂರು ಜಿಲ್ಲೆಯ 4-5 ಕಡೆ 7-8 ಕಡೆಯಿಂದ ನನಗೆ ಬಂದಿರುವ ವರದಿಗಳನ್ನು ನೋಡಿದರೆ ಈ ಇಲಾಖೆ ನಿಮ್ಮ ಕೈಗೆ ಸಿಕ್ಕಿಲ್ಲ. ನಿಮ್ಮ ಹಿಡಿತಕ್ಕೆ ಸಿಕ್ಕಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಅಲ್ಲಿ ಏರಿಯಾ ಫಿಕ್ಸ್‌ಮಾಡಿ ಚದರ ಅಡಿಗೆ ಅಥವಾ ಚದರ ಗಜಕ್ಕೆ 24 ರೂಪಾಯಿ ಎಂದು ನಿಗದಿಮಾಡಿದ್ದರೆ. 28 ರೂಪಾಯಿ ಹಾಕುತ್ತೇನೆ ಎಂದು ಅವರಿಗೆ ಹೆದರಿಸಿ ದುಡ್ಡು ಕಿತ್ತುಕೊಳ್ಳುವಂಥ ವ್ಯವಸ್ಥೆ ಈ ಸರ್ಕಾರದಲ್ಲಿ ಇದ್ದರೆ ನಾವು ಏನು ಮಾಡುವುದು? ಅಂಥವರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇಂಥ ಪ್ರಕರಣಗಳು ನೂರಾರು ತುಮಕೂರಿನಲ್ಲಿ ನಡೆದಿದೆ, ಗುಬ್ಬಿಯಲ್ಲಿ ಸುಮಾರು 10-15 ಪ್ರಕರಣಗಳು ನಡೆದಿದೆ. ತಿಪಟೂರಿನಲ್ಲಿ ನಡೆದಿದೆ, ಮಧುಗಿರಿಯಲ್ಲಿ ನಡೆಯುತ್ತಿದೆ. ಇದಕ್ಕೆ ಏನಾದರೂ ಕೊನೆ ಮೊದಲು ಬೇಕು. ನಿಜ, ನೀವು ಚಾಪೆಯಡಿಯಲ್ಲಿ ತೂರುತ್ತೇವೆಂದು ಕಾನೂನು ಮಾಡಿ ಏರಿಯಾ ಪಿಕ್ಸ್‌ಮಾಡಿದಿರಿ. ಒಂದೊಂದು ಏರಿಯಾಕ್ಕೆ ಮಾರ್ಕೆಟ್ ವಾಲ್ಯೂ ಇಷ್ಟೆಂದು ಪಿಕ್ಸ್ ಮಾಡಿದಿರಿ. ಆದರೆ ಅವರು ರಂಗೋಲಿನಡಿಯಲ್ಲಿ ತೂರುತ್ತಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ರಂಗೋಲಿಯಡಿಯಲ್ಲಿ ಏಕೆ, ಕಾಂಕ್ರೀಟ್ ಅಡಿಯಲ್ಲಿ ತೂರುತ್ತಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಇದು ನಿಜವಾಗಿಯೂ ಸಾರ್ವಜನಿಕರಿಗೆ ಬಹಳ ತೊಂದರೆಯಾಗತಕ್ಕ ಡಿಪಾರ್ಟ್‌ಮೆಂಟ್ ಆಗಿದೆ. ಅದು ಅನುಕೂಲವಾಗುವುದಕ್ಕೆ ಬದಲಾಗಿ ಬಹಳ ತೊಂದರೆಯಾಗಿದೆ. ಮತ್ತು ಇವತ್ತು ಕೊಟ್ಟಂಥ ಪತ್ರಗಳು ರಿಜಿಸ್ಟರ್ ಆದಮೇಲೆ ಒಂದು ವಾರದಲ್ಲಿ ಅದರ ಕಾಪಿಯನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಸುಮಾರು 100 ಸಾರಿ ತಿರಿಗಿಸಿಕೊಳ್ಳುತ್ತಾರೆ. 100 ಸಾರಿ ತಿರುಗಿಸಿಕೊಂಡು ಆಮೇಲೆ 101ನೇ ಸಾರಿಗೆ ಅವರಿಗೆ ಏನಾದರೂ ಶಾಕಾಯ ಲವಣಾಯ ಆದರೆ ಆ ಪತ್ರ ಈಚೆಗೆ ಬರುತ್ತದೆ. ಇಲ್ಲದಿದ್ದರೆ ನಾವು ಮನೆಗೆ ಕಳುಹಿಸುತ್ತೇವೆ, ರಿಜಿಸ್ಟ್ರೇಷನ್ ಚಾರ್ಜ್‌ಸ್ ಕೊಟ್ಟು ಹೋಗಿ ಎಂದು ಹೇಳತಕ್ಕಂಥ ಉತ್ತರಗಳು ಬರುತ್ತಿದೆ. ಮಾನ್ಯ ಪಾಟೀಲರ ಕಾಲದಲ್ಲಿ ಒಂದು ಸಲ ನಾನು ಹೇಳಿದ್ದೆ. ಅವರು ಒಂದಿಬ್ಬರನ್ನು ಒಂದು ತಿಂಗಳೊಳಗಾಗಿ ಕ್ರಮ ತೆಗೆದುಕೊಂಡು ಸಸ್‌ಪೆಂಡ್ ಮಾಡಿದ್ದರಿಂದ ಸ್ವಲ್ಪ ಹೆದರಿದ್ದರು. ನೀವು ಬಂದಮೇಲೆ ಏಕೋ ಆ ತರಹ ಬುಸುಗುಟ್ಟಲಿಲ್ಲ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರೆ, ನೀವು ಸ್ವಲ್ಪ ಬುಸುಗುಟ್ಟುವುದನ್ನು ಕಲಿಯಬೇಕು. ಇಲ್ಲದಿದ್ದರೆ ಇಲಾಖೆ ಹಿಡಿತಕ್ಕೆ ಬರುವುದಿಲ್ಲ.

ಛೇರ್ಮನ್ : ಬೇಗ ಮುಗಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ : ನಾನು ಇನ್ನೂ ರೂರಲ್ ಡೆವಲಪ್‌ಮೆಂಟಿಗೆ ಬರಲಿಲ್ಲ. ನಾನು ಹಳ್ಳಿಯಲ್ಲಿ ಹುಟ್ಟಿದವನು, ಅದರ ಬಗ್ಗೆ ಹೇಳದಿದ್ದರೆ ಗತಿ ಏನು? ಅಲ್ಲಿ ಯಾರೂ ಮಾತನಾಡುವವರು ಇಲ್ಲ. ಅದನ್ನು ನಾನೇ ತೆಗೆದುಕೊಳ್ಳುತ್ತೇನೆ. ಅವರಿಗೆ ಏನು ಟೈಂ ಅಲಾಟ್ ಮಾಡುತ್ತಿದ್ದಿರಿ ಅದನ್ನು ನನಗೇ ಕೊಡಿ.

ಛೇರ್ಮನ್ : ಹಾಗೆ ಮಾಡುವುದಕ್ಕೆ ಬರುವುದಿಲ್ಲ, ಹತ್ತು ನಿಮಿಷದಲ್ಲಿ ಮುಗಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಸರ್ವೆ ಇಲಾಖೆಯಲ್ಲಿ ಏನಾಗಿದೆ ಎಂದರೆ, ನಾನು ಸರ್ವೆ ಆಫೀಸಿಗೆ ಹೋಗಿದ್ದೆ. ನಮ್ಮ ಊರಿನ ಹಿಂದಿನ ನಕಾಶೆ ಕೊಡಿ ಎಂದು ಕೇಳಿದೆ. ಅವರು ಬಹಳ ಕಷ್ಟಪಟ್ಟು ಧೂಳು ಕೊಡವಿ ತೆಗೆದರು. ಅದು ಪುಡಿಪುಡಿಯಾಗಿ ಕೆಳಗೆ ಬಿತ್ತು. ಇಂಥ ಪರಿಸ್ಥಿತಿಯಲ್ಲಿ

ಆ ಇಲಾಖೆ ಇದೆ. ಎಲ್ಲಾ ಇಲಾಖೆಗೂ ಜೀಪು ಕೊಟ್ಟಿದ್ದೀರಿ. ಜಿಲ್ಲಾ ಮಟ್ಟದಲ್ಲಿ ಸರ್ವೆ ಇಲಾಖೆಗೆ ಒಂದು ಜೀಪು ಕೊಡಿ ಎಂದು ನಾನು ಕೇಳಿದೆ; ಕೊಡುವುದಕ್ಕಾಗುವುದಿಲ್ಲ ಎಂದು ಉತ್ತರ ಬಂದಿತ್ತು. ಒಂದು ವೇಳೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ. ಕೊನೆಯ ಪಕ್ಷ ಒಂದು ಕುದುರೆಯನ್ನಾದರೂ ಕೊಡಿ ಎಂದು ವ್ಯಂಗ್ಯವಾಗಿ ಹೇಳಿದ್ದೆ. ಯಾರಾದರೂ ಸರ್ವೆಗೆ ಅರ್ಜಿ ಹಾಕಿದರೆ, ಇಲಾಖೆಯವರು ಬರಬೇಕಾದರೆ ಬಸ್ಸು ಹತ್ತಿ ಇಳಿದು ಬರಬೇಕೆಂದರೆ ತೊಂದರೆ ಆಗುತ್ತದೆ. ಕೊನೇ ಪಕ್ಷ ಜಿಲ್ಲೆಗೆ ಒಂದು ಜೀಪು ಕೊಡತಕ್ಕ ವ್ಯವಸ್ಥೆ ಮಾಡಿ. ಎಫಿಷಿಯಂಟ್ ಆಗಿ ಕೆಲಸ ಮಾಡುವುದಕ್ಕೆ ಜೀಪು ಬೇಕಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಗಮನ ಹರಿಸಿ. ಜೀಪು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೂಡಲೇ ಹಳೇ ರೆಕಾರ್ಡ್ಸ್ ಏನಿದೆ ಅದನ್ನು ನವೀಕರಣ ಮಾಡತಕ್ಕ ವ್ಯವಸ್ಥೆ ಮಾಡದಿದ್ದರೆ ರೈತರ ಹಕ್ಕುಪತ್ರಗಳೆಲ್ಲ ನಾಶವಾಗುತ್ತವೆ. ಪಹಣಿಸೂದ್ ಕೊಡತಕ್ಕದ್ದು, ಶಿವಮೂರ್ತಿಯವರಿಗೆ ಗೊತ್ತಿದೆ. ಅವರು ಪ್ರಾಕ್ಟೀಸ್ ಮಾಡಿದ್ದಾರೆ. ಪಹಣಿಸೂದ್. ಫಾರಂ ನಂ. 1 ರಿಂದ 27ರವರೆಗೆ ಇದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕೇಳುತ್ತೇನೆ. ವಿಲೇಜ್ ಅಕೌಂಟೆಂಟಿಗೆ ಲಂಚ ತೆಗೆದುಕೊಳ್ಳಬೇಡಿ ಎಂದು ಹೇಳುತ್ತೀರಿ. ನಾವೂ ಹೇಳುತ್ತೇವೆ. ಆದರೆ ಅವರಿಗೆ ಎಷ್ಟು ಫಾರಂಗಳನ್ನು ನೀವು ಒದಗಿಸಿದ್ದೀರಿ. 1 ರಿಂದ 27 ರಲ್ಲಿ ಎಷ್ಟನ್ನು ನೀವು ಒದಗಿಸಿದ್ದೀರಿ? ನಿಮ್ಮ ಹತ್ತಿರ ಅಕೌಂಟ್ ಇದ್ದರೆ ದಯವಿಟ್ಟು ಉತ್ತರ ಕೊಡುವಾಗ ಹೇಳಿ. ಇಂತಹ ತಾಲ್ಲೂಕಿಗೆ ಇಷ್ಟು ರೆವಿನ್ಯೂ ಫಾರಂಗಳನ್ನು ಕಳುಹಿಸಿದ್ದೇವೆಂದು ಹೇಳಿ. ಫಾರಂಗಳು ಇಲ್ಲದಿದ್ದರೆ ವಿಲೇಜ್ ಅಕೌಂಟೆಂಟ್ ಏನು ಮಾಡಬೇಕು? ಅವನು 10 ಪೈಸೆ ಕೊಟ್ಟು ಅಂಗಡಿಯಿಂದ ಕೊಂಡುಕೊಂಡು ಬಂದು ರೈತರಿಂದ 10 ರೂಪಾಯಿ ವಸೂಲ್ಮಾಡುತ್ತಾನೆ. ನೀವಾಗಿ ಲಂಚ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಹಿಂದೆ ಇದ್ದ ಪಟೇಲರು ಶಾನುಭೋಗರನ್ನು ಏತಕ್ಕೆ ತೆಗೆದೆವು ಎಂದರೆ ಹೆರಿಡಿಟರಿ ಅಧಿಕಾರಿಗಳು ಇರಬಾರದು ಎಂದು ಸಂವಿಧಾನ ಅಸ್ತಿತ್ವಕ್ಕೆ ಬಂದಮೇಲೆ ಎಂದು ಹೆರಿಡಿಟರಿ ಆಫೀಸರ್ಸನ್ನು ಅಬಾಲಿಷ್ ಮಾಡಿದ್ದೇವೆ. ಆದುದರಿಂದ ವಿಲೇಜ್ ಅಕೌಂಟೆಂಟನ್ನು ಅಪಾಯಿಂಟ್ ಮಾಡಬಹುದು. ಹಳೆಯ ಶ್ಯಾನುಭೋಗರು. ಪಟೇಲರನ್ನು ತೆಗೆದು ಹಾಕಿದ್ದೇವೆ ಎನ್ನತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಈ ವ್ಯವಸ್ಥೆ ಹಳ್ಳಿಗಳಲ್ಲಿ ಅಸ್ತವ್ಯಸ್ತವಾಗಿದೆ. ಇವತ್ತಿನ ದಿವಸ ಯಾವನಾದರೂ ಬೇರೆಯವರು ಊರಿಗೆ ಬಂದರೆ ನಿನ್ನದು ಯಾವ ಊರು ಎಂದು ಯಾರೂ ಕೇಳುವುದಿಲ್ಲ. ಅವನು ಕಳ್ಳ. ದರೋಡೆಕಾರ. ಸ್ಮಗ್ಲರ್ ಆಗಬಹುದು. ಹಿಂದಿನ ಕಾಲದಲ್ಲಿ ಆ ರೀತಿ ಬರುವುದಕ್ಕೆ ಅವಕಾಶ ಇರಲಿಲ್ಲ. ನನಗೆ ಚೆನ್ನಾಗಿ ಜ್ಞಾಪಕ ಇದೆ. ನಮ ಚಿಕ್ಕಪ್ಪ ಪಟೇಲರಾಗಿದ್ದರು. ಪಕ್ಕದ ಊರಿನವರೊಬ್ಬರು ಶ್ಯಾನುಭೋಗರಿದ್ದರು. ಯಾರಾದರೂ ಹೊಸಬ ಊರಿಗೆ ಬಂದರೆ ತೋಟಿ ತಳವಾರರು ಅವನನ್ನು ಚಾವಡಿಯಲ್ಲಿ ಹಿಡಿದು ಕೂರಿಸುತ್ತಿದ್ದರು. ಪಟೇಲರು ಅಥವಾ ಊರಿನ ಪ್ರಮುಖರು ಬಂದು ಆತ ನನಗೆ ಗೊತ್ತಿದೆ ಎಂದು ಐಡೆಂಟಿಫೈ ಮಾಡದಿದ್ದರೆ ಪೋಲೀಸರಿಗೆ ತಕ್ಷಣ ರಿಪೋರ್ಟ್ ಕೊಡುತ್ತಿದ್ದರು. ಸರ್ಕಾರಿ ಜಮೀನು ಮತ್ತು ಸರ್ಕಾರದ ಆಸ್ತಿ ಏನಿತ್ತು ಅದನ್ನು ಕಾಪಾಡಿಕೊಂಡು ಬಂದಿದ್ದರು.ಇವತ್ತ ಲಕ್ಷಾಂತರ. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸರ್ಕಾರಿ ಆಸ್ತಿ ಲೂಟಿಯಾಗಿದೆ. ಅದನ್ನು ಕೇಳುವವರಿಲ್ಲ. ಇಂಥ ಅವ್ಯವಸ್ಥೆಗೆ ಬಂದು ತಲುಪಿದ್ದೇವೆ. ಬೆಂಗಳೂರು. ತುಮಕೂರಿನಲ್ಲಿ ಮಜಾಕೊಂಡಿರುತ್ತೇವೆ. ನಮ್ಮನ್ನು ಯಾರು ಕೇಳುವವರು ಇಲ್ಲ. ಹೇಳುವವರಿಲ್ಲ. ಹಳ್ಳಿಗಳ ಕಡೆ ಜಮೀನು ಒತ್ತುವರಿ ಆದರೆ ಕೇಳುವುದಿಲ್ಲ. ಪಕ್ಕದ ಜಮೀನಿಗೆ ಹಳ್ಳವನ್ನು ತಿರುವಿದರೆ ಕೇಳುವುದಿಲ್ಲ. ದಾರಿ ಒತ್ತುವರಿ ಮಾಡಿದರೆ. ಸರ್ಕಾರಿ ಜಮೀನು ಲೂಟಿ ಮಾಡಿದರೆ ಕೇಳುವವರು ಇಲ್ಲ. ಇಂತಹ ವ್ಯವಸ್ಥೆಯಾಗಿ ಹಳ್ಳಿಗಳಲ್ಲಿ ಸರ್ಕಾರ ನಿಜವಾಗಿ

ಸತ್ತುಹೋಗಿದೆ. ಇದಕ್ಕೆ ಜೀವ ತುಂಬತಕ್ಕ ವ್ಯವಸ್ಥೆ ಮಾಡಲಿಕ್ಕೆ ನಿಮ್ಮ ಕೈಯಲ್ಲಿ ಆಗುವುದಿದ್ದರೆ ಉತ್ತರ ಕೊಡುವಾಗ ಕೊಡಬೇಕೆಂದು ಹೇಳುತ್ತೇನೆ. ರೂರಲ್ ಡೆವಲಪ್‌ಮೆಂಟ್ ಬಗ್ಗೆ 5-10 ನಿಮಿಷದಲ್ಲಿ ಪೂರೈಸುತ್ತೇನೆ. ಈ ಇಲಾಖೆ ಕೂಡ ಅದೃಷ್ಟಕ್ಕೆ ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಿಕ್ಕಿದೆ. ಅದೃಷ್ಟವೋ ದುರಾದೃಷ್ಟವೋ ನನಗೆ ಗೊತ್ತಿಲ್ಲ. ಎರಡು ಇಲಾಖೆಗಳಿಗೆ ಪಟ್ಟಣ ಬಿಟ್ಟು ಇಡೀ ಕರ್ನಾಟಕ ರಾಜ್ಯದ ಆಗುಹೋಗುಗಳ ಬಗ್ಗೆ ಅವರಿಗೆ ಜವಾಬ್ದಾರಿ ವಹಿಸಿರತಕ್ಕ ಸನ್ನಿವೇಶ ಇದೆ. ಗ್ರಾಮೀಣ ಅಭಿವೃದ್ಧಿ ಮತ್ತು ಮಂಡಲ ಪಂಚಾಯಿತಿ ಬಗ್ಗೆ ಹೇಳುವುದಾದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅವಧಿ ಮುಗಿದ ಮೇಲೆ ಅಡ್ಮಿನಿಸ್ಟ್ರೇಟರ್‌ನ್ನು ನೇಮಕ ಮಾಡತಕ್ಕ ವ್ಯವಸ್ಥೆ ಮಾಡಿ ತಕ್ಷಣ ಆ ಒಂದು ಆ್ಯಕ್ಟಿಗೆ ತಿದ್ದುಪಡಿ ತಂದು ಚುನಾವಣೆ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಅದು ಬೇಗ ಫಲಿಸಲಿ ಎಂದು ನಿಮಗೆ ಹೇಳುತ್ತಾ, ಐದು ವರ್ಷದ ನಮ್ಮ ಅನುಭವದ ಪ್ರಕಾರ, ಮಂಡಲ ಪಂಚಾಯಿತಿಯಲ್ಲಿ ಅಕೌಂಟಬಲಿಟಿ ಎಂಬುದಿಲ್ಲ. ಮಂಡಲ ಪಂಚಾಯಿತಿ ಪ್ರಧಾನ ಮತ್ತು ಸೆಕ್ರೆಟರಿ ಎಷ್ಟು ಬೇಕಾದರೂ ಬಿಲ್ ಮಾಡಿಕೊಳ್ಳಬಹುದು, ಯಾವುದು ಬೇಕಾದರೂ ತಿನ್ನಬಹುದು. ಈ ತರಹದ ವ್ಯವಸ್ಥೆ ಇದೆ. ಮಾಡಿದ್ದಾರೆ ಎಂದು ಹೇಳುವುದಿಲ್ಲ. ಆ ರೀತಿ ವ್ಯವಸ್ಥೆ ಇದೆ. ಕೇಳುವವರಿಲ್ಲ, ಹೇಳುವವರಿಲ್ಲ. ಇವತ್ತಿನ ದಿವಸ ಅಕೌಂಟಬಿಲಿಟಿ ಎಲ್ಲಿದೆ? ನೀವು ಆಡಿಟ್ ಮಾಡಿಸಿದ್ದೀರಿ. ಮಂಡಲ ಪಂಚಾಯತಿ, ಜಿಲ್ಲಾ ಪರಿಷತ್‌ಗಳ ಆಡಿಟ್ ವರದಿಗಳು ನಿಮಗೆ ಬಂದಿವೆ. ಯಾವುದಾದರೂ ಒಂದು ಮಂಡಲ ಪಂಚಾಯಿತಿಯಲ್ಲಿ ಈ ತರಹ ಅವ್ಯವಹಾರ ನಡೆದಿದೆ, 10 ಸಾವಿರ ರೂಪಾಯಿ ಕೆಲಸ ತೋರಿಸಿದ್ದಾರೆ, ಆದರೆ 2 ಸಾವಿರ ರೂಪಾಯಿ ಕೆಲಸ ಕೂಡ ಆಗಿಲ್ಲ ಎಂದು ಯಾವುದಾದರೂ ಒಂದು ಮಂಡಲ ಪಂಚಾಯಿತಿಯಿಂದ ನಿಮಗೆ ವರದಿ ಬಂದಿದೆಯೆ? ಇದನ್ನು ನೀವು ದಯಮಾಡಿ ನೋಡಬೇಕಾಗುತ್ತದೆ. ನಾವು ಹಳ್ಳಿ ಮಟ್ಟಕ್ಕೆ ಅಧಿಕಾರ ಕೊಡಬಾರದು ಎಂಬ ದೃಷ್ಟಿಯಿಂದ ಹೇಳುವುದಿಲ್ಲ. ಇನ್ನೂ ಕೊಡಬೇಕು. ಹೆಚ್ಚಿನ ಅಧಿಕಾರ ಅಲ್ಲಿ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಒಂದು ಉದಾಹರಣೆ ಕೊಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ 40 ಹರಿಜನರ ಮನೆಗಳಿವೆ. ಮುಸ್ಕಳ್ಳಿ ಗ್ರಾಮದಲ್ಲಿ 40 ಮನೆಗಳಿವೆ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ 45 ಮನೆಗಳಿಗೆ 45 ಸ್ಪ್ರೇಯರ್ಸ್ ಕೊಟ್ಟಿದ್ದಾರೆ. ಇದನ್ನು ಯಾರು ಮಾಡಿದರು? ಮೂರು-ನಾಲ್ಕು-ಐದು ಮನೆಯವರಿಗೆ ಜಮೀನೇ ಇಲ್ಲ. ಅವರಿಗೆ ಸ್ಪ್ರೇಯರ್ಸ್ ಕೊಟ್ಟಿದ್ದಾರೆ. ಇದನ್ನು ಯಾರೋ ಡೆಲ್ಲಿಯಲ್ಲಿ ಕುಳಿತುಕೊಂಡಿರುವವರು ಭತ್ತದ ಮರ ಎಂದು ಹೇಳುವ ಮನುಷ್ಯ, ಭತ್ತವನ್ನು ನೋಡೇ ಇಲ್ಲ ಭತ್ತದ ಮರ ಎಂದು ತಿಳಿದುಕೊಂಡಿರುವ ಮನುಷ್ಯ ಅಲ್ಲಿಂದ ಎಸ್.ಇ.ಪಿ.ಯಲ್ಲಿ 45 ಈ ಊರಿಗೆ ಕೊಡಬೇಕೆಂದು ತೀರ್ಮಾನ ಮಾಡತಕ್ಕದ್ದು ಸರಿಯಲ್ಲ. ಈ ಹಳ್ಳಿಯಲ್ಲಿ ಏನೇನು ಅವಶ್ಯಕತೆ ಬೇಕಾಗಿದೆ ಎನ್ನತಕ್ಕ ತೀರ್ಮಾನವನ್ನು ಆ ಹಳ್ಳಿಯ ಜನ ಮತ್ತು ಆ ಮಂಡಲ ಪಂಚಾಯಿತಿ ಜನ ತೀರ್ಮಾನ ಮಾಡಿ ನಮಗೆ ಇಂಥದ್ದು ಬೇಕು ಎಂಬ ವ್ಯವಸ್ಥೆ ಮಾಡಿ ಇಲ್ಲಿಂದ ಡೆಲ್ಲಿಗೆ ಹೋಗಿ ಅಪ್ರೂವ್ ಆಗತಕ್ಕ ಒಂದು ವ್ಯವಸ್ಥೆ ಮಾಡಬೇಕು ಎಂಬುದೇ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಹುದುಗಿರತಕ್ಕ ಒಂದು ಆಸೆ. ಇದನ್ನು ನಾವು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ಇವತ್ತಿನ ದಿವಸ ನಾವು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಏನು ಅಧಿಕಾರಿಗಳನ್ನ ನೇಮಕ ಮಾಡಿದ್ದೇವೆ ಅದನ್ನು ಬಹಳಷ್ಟು ಜನ ಸ್ವಾಗತ ಮಾಡುತ್ತಾರೆ. ನಮ್ಮ ಗುಬ್ಬಿ ತಾಲ್ಲೂಕಿನಿಂದ ಸುಮಾರು 40-50 ಜನ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಬಂದಿದ್ದರು. ಸುಮಾರು ಐದಾರು ಜನ ಅಡ್ಡಲಾಗಿ ಮುಖ್ಯಮಂತ್ರಿಗಳ ಕಾಲಿಗೆ ಬಿದ್ದುಬಿಟ್ಟರು. ನನಗೆ ಅವರನ್ನು ಹಿಡಿದುಕೊಂಡು ಒದೆಯಬೇಕು ಅನ್ನಿಸುತ್ತಿತ್ತು. ಏತಕ್ಕೆ ಹೀಗೆ ಕಾಲಿಗೆ ಬಿದ್ದಿರಿ, ಅವರೇನು ದೇವರಾ? ನಿಮಗೆ ಏನು

ಬೇಕೋ ಕೇಳಿಕೊಳ್ಳಿ ಎಂದು ಹೇಳಿದೆ. ಅದಕ್ಕೆ ಅವರು ಸ್ವಾಮಿ. ನೀವು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತನ್ನು ವಜಾ ಮಾಡಿದ್ದಕ್ಕೆ ನಾವು ನಿಮ್ಮ ಕಾಲಿಗೆ ಬೀಳುತ್ತಿದ್ದೇವೆ ಎಂದು ಹೇಳಿದರು. ಅಂದರೆ ಅದರಿಂದ ಅಷ್ಟು ಕಷ್ಟವಾಗಿದೆ; ಅಷ್ಟು ತೊಂದರೆಯಾಗಿದೆ. ಒಬ್ಬನಿಗೆ ಲೈಸೆನ್ಸ್ ಕೊಡಬೇಕಾದರೆ ಅಷ್ಟು ತೊಂದರೆಯಾಗಿದೆ. ಒಂದು ಆಲಿಯನೇಷನ್ ಕೊಡಬೇಕಾಗಿದ್ದರೆ ಅಷ್ಟು ತೊಂದರೆಯಾಗಿದೆ. ಒಂದು ಸೈಟ್ ಕೊಡಬೇಕಾದರೆ ಅಷ್ಟು ತೊಂದರೆಯಾಗಿದೆ. ಹಳೇ ಮೈಸೂರಿನವರಿಗೆ ಈ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತಿನ ವ್ಯವಸ್ಥೆ ಹೊಸದಲ್ಲ. ಮೊದಲು ವಿಲೇಜ್ ಪಂಚಾಯಿತಿ. ತಾಲ್ಲೂಕು ಬೋರ್ಡ್ ಆಕ್ಟ್ ಇತ್ತು. ಅದರ ಮೇಲೆ ಜಿಲ್ಲಾ ಬೋರ್ಡ್ ಇತ್ತು. ಇದು ನಮಗೇನೂ ಹೊಸದಲ್ಲ. ಆದರೆ ಅದರಲ್ಲಿ ಸಫಿಷಿಯೆಂಟಾಗಿ. ಎಫಿಷಿಯಂಟಾಗಿ ಕೆಲಸ ಮಾಡಿದ ಹಾಗೆ ಹೊಸದಾಗಿ ಬಂದಿರುವ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಆಗುತ್ತಿಲ್ಲ. ಆದ್ದರಿಂದ ಮೊದಲಿದ್ದ ಮೂರು-ನಾಲ್ಕು ಪಂಚಾಯಿತಿಗಳನ್ನು ಸೇರಿಸಿ ಒಂದು ಮಂಡಲ ಪಂಚಾಯಿತಿ ಆಗಿದೆ. ಇದನ್ನು ನೋಡಿದರೆ, ಇದು ಡೀಸೆಂಟ್ರಲೈಸೇಷನ್ ಅಲ್ಲ ಸೆಂಟ್ರಲೈಸೇಷನ್ ಆಗಿದೆ. ಒಂದು ಕಡೆ ಡೀಸೆಂಟ್ರಲೈಸೇಷನ್ ಎಂದು ಹೇಳುತ್ತಾರೆ. ಆದರೆ ಸೆಂಟ್ರಲೈಸೇಷನ್ ಆಗಿದೆ. ಒಂದಕ್ಕೊಂದು ಅರ್ಥ ಇಲ್ಲ. ಈ ರೀತಿ ಆಗಿರುವುದನ್ನು ಸರಿಪಡಿಸತಕ್ಕ ಒಂದು ವ್ಯವಸ್ಥೆ ಮಾಡಿ ಒಳ್ಳೆಯ ಕೆಲಸ ಮಾಡತಕ್ಕ ಒಂದು ಅವಕಾಶವನ್ನು ನೀವು ಮಾಡಬೇಕು. ಮತ್ತೆ ಗ್ರಾಮೀಣಾಭಿವೃದ್ಧಿ. ಗ್ರಾಮೀಣಾಭಿವೃದ್ಧಿ ಎಂದರೆ ಮಾನ್ಯ ಖರ್ಗೆಯವರು ಏನು ತಿಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾನಂತೂ ಭಾವಿಸಿದ್ದೇನೆ. ಗ್ರಾಮೀಣಾಭಿವೃದ್ಧಿ ಎಂದರೆ ಗ್ರಾಮಗಳು ಪರಿಪೂರ್ಣವಾಗಬೇಕು. ಎಲ್ಲ ವ್ಯವಸ್ಥೆ ಗ್ರಾಮೀಣ ಜನರಿಗೆ ಸಿಗಬೇಕು. ಅಂಥ ಒಂದು ವ್ಯವಸ್ಥೆ ಗ್ರಾಮೀಣ ಅಭಿವೃದ್ಧಿಯಲ್ಲಿ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏನು ತಿಳಿದುಕೊಂಡಿದ್ದೇನೆ. ಏನು ಬಿಟ್ಟಿದ್ದೇನೆ ಅದು ನನ್ನ ಹತ್ತಿರ ಇರಲಿ. ಒಂದು ವರ್ಷದಿಂದ ನಾನು ಈ ಇಲಾಖೆಯಲ್ಲಿ ಇರಲಿಲ್ಲ. ನೀವು ವಾರ್ಷಿಕ ವರದಿ ಮೇಲೆ ಮಾತನಾಡುತ್ತೀರಿ. ಅದು ಏನಾಗಿದೆ ಎಂದು ಹೇಳಿ. ಮುಂದೆ ಸಲಹೆ ಕೊಡಿ. ನನಗೆ ತಿಳಿದದ್ದು ನಾನು ಮಾಡುತ್ತೇನೆ. ದುರ್ದೈವವೋ ಸುದೈವವೋ ಅದು ನನಗೆ ಇರಲಿ. ನನ್ನ ದುರ್ದೈವ. ನನ್ನ ಸುದೈವ ಅದು ನನಗೆ ಇರಲಿ. ಮತ್ತೆ ಗ್ರಾಮೀಣಾಭಿವೃದ್ಧಿ ಬಗ್ಗೆ ಗೊತ್ತಿದೆಯೋ ಗೊತ್ತಿಲ್ಲವೋ ಅದು ನನ್ನ ಜೊತೆ ಇರಲಿ. ನಿಮಗೇನಾಗಬೇಕು ಹೇಳಿ. ಹಿಂದೆ ಆಗಿರುವುದನ್ನು ಹೇಳಿ. ಏನು ಸುಧಾರಣೆ ಆಗಬೇಕು ಹೇಳಿ. ಈಗ ಮಾಡತಕ್ಕದ್ದನ್ನು ಹೇಳಿದರೆ ಒಳ್ಳೆಯದು ಎಂದು ನಾನು ಭಾವಿಸಿದ್ದೇನೆ. ಅದು ಬಿಟ್ಟು ಇವರಿಗೇನಾಗಿದೆ. ಅವರಿಗೇನಾಗಿದೆ, ತಾಕತ್ತಿಲ್ಲ ಎಂದರೆ ತಾಕತ್ತು ತೋರಿಸುವ ಜಾಗದಲ್ಲಿ ನಾನು ತಾಕತ್ತು ತೋರಿಸುತ್ತೇನೆ. ಈಗ ನನಗೆ ಅದನ್ನೇ ಕೇಳಿಕೊಳ್ಳುತ್ತಾ ಹೋದರೆ ಪ್ರಯೋಜನ ಇಲ್ಲ. ಏಕೆಂದರೆ. ಸಲಹೆ ಕೊಟ್ಟರೆ ನಾನು ಬರೆದುಕೊಳ್ಳುತ್ತೇನೆ. ಮಾನ್ಯ ಶಿವನಂಜಪ್ಪನವರಿಗೆ ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅವರು ಸೀನಿಯರ್ ಲೀಡರ್. ನಾಲ್ಕೈದು ಸಾರಿ ಆರಿಸಿ ಬಂದಿದ್ದಾರೆ. ಅವರು ಒಳ್ಳೆಯ ಅಡ್ವಕೇಟ್ ಇದ್ದಾರೆ. ಸಬ್‌ರಿಜಿಸ್ಟ್ರಾರ್‌ರವರ ಕಛೇರಿಗೆ ಹೋದಾಗ ವಕೀಲರು ಯಾವ ರೀತಿ ಮಾಡುತ್ತಾರೆಂದು ನನಗೂ ಗೊತ್ತು. ಕಳೆದ 40 ವರ್ಷಗಳಿಂದ ನಾನೇನು ಇದೇ ಒಂದು ಡಿಪಾರ್ಟ್‌ಮೆಂಟ್ ಹಿಡಿದು ಕುಳಿತಿಲ್ಲ. ಆದರೆ ನಾನು ಹೇಳುವುದೇನೆಂದರೆ. ನೀವು ನಿರ್ದಿಷ್ಟವಾಗಿ ಹೇಳಿ. ನಿಮ್ಮ ಊರಿನ ಸಬ್‌ರಿಜಿಸ್ಟ್ರಾರ್‌ರನ್ನು ಸಸ್ಪೆಂಡ್ ಮಾಡಬೇಕೆಂದರೆ ನೀವು 4-5 ಕೇಸ್‌ಗಳನ್ನು ಕೊಡಿ. ಈಗಲೆ ಮಾಡುತ್ತೇನೆ ಅಥವಾ ನೀವು ಹಾಕಿಸಿಕೊಂಡ ತಹಶೀಲ್ದಾರ್ ಅವರು ಸರಿ ಇಲ್ಲ ಎಂದು ಹೇಳಿ. ಈಗಲೆ ಅವರನ್ನು ಸಸ್ಪೆಂಡ್ ಮಾಡುತ್ತೇನೆ. ಹೀಗೆ ನೀವು ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟರೆ

ನನಗೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಅದು ಬಿಟ್ಟು ಸುಮ್ಮನೆ ನೀವು ನನ್ನ ಮೇಲೆ ಶಿರ್ಗಾ ಮುರ್ಗಿ ಹೇಳಿದರೆ ನಮಗೂ ನಿಮಗೂ ಸರಿಯಿಲ್ಲ ಎನ್ನುವ ಭಾವನೆ ಬರುತ್ತದೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಖರ್ಗೆಯವರು ಇದನ್ನು ವೈಯುಕ್ತಿಕವಾಗಿ ತೆಗೆದುಕೊಳ್ಳ ಬಾರದು. ತಾವು ಹೋದಸಾರಿ ರೆವಿನ್ಯೂ ಮಂತ್ರಿಗಳಾಗಿದ್ದಿರಿ.

ಛೇರ್ಮನ್ : ಸಾಕಷ್ಟು ಮಾತನಾಡಿದ್ದೀರಿ. ತಾವು ಮುಕ್ತಾಯ ಮಾಡಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಅವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಡಬೇಕಾಗುತ್ತದೆ.

ಛೇರ್ಮನ್ : ಅದಕ್ಕೆ ಉತ್ತರ ಕೊಟ್ಟು ತಮ್ಮ ಭಾಷಣ ಮುಕ್ತಾಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಇಲಾಖೆಯಲ್ಲಿ ಕಳೆದ ಒಂದು ವರ್ಷದಲ್ಲಿ ನಾನು ಏನೇನು ಮಾಡಿದ್ದೇನೆಂದು ಸಂಪೂರ್ಣವಾಗಿ ಒಂದು ಬುಕ್‌ಲೆಟ್ ಮಾಡಿಕೊಟ್ಟಿದ್ದೇನೆ. ಬಹುಶಃ ಅದನ್ನು ನೋಡಿದರೆ 50 ಪರ್ಸೆಂಟ್ ಸಮಾಧಾನ ಆಗಬಹುದೆಂದು ನಾನು ಭಾವಿಸಿದ್ದೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : 50 ಪರ್ಸೆಂಟ್ ಏಕೆ 70 ಪರ್ಸೆಂಟ್ ಸಮಾಧಾನ ಇದೆ. ತಾವು ಕೆಲಸ ಮಾಡಿದ್ದೀರಿ. ಕೆಲಸ ಮಾಡುವುದಕ್ಕೆ ತಾವು ಯೋಗ್ಯರಿದ್ದೀರಿ. ಎಲ್ಲ ದೀಲ್ ತಮ್ಮಲ್ಲಿ ಇದೆ. ಅದರ ಬಗ್ಗೆ ಸಂಶಯ ಇಲ್ಲ. ಆದರೆ ಹಿಂದೆ ಹೇಳಿದ ಸಲಹೆಗಳು ಏನಿವೆ ಅವುಗಳಲ್ಲಿ ದತ್ತಿ ಇಲಾಖೆಯದು ಒಂದು ಬಿಟ್ಟರೆ ಇನ್ನು ಯಾವ ಸಲಹೆಗಳಲ್ಲಿ ಯಾವುದರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಏಕೆ ಈ ರೀತಿ? ಮಾನ್ಯ ಖರ್ಗೆಯವರ ಬಗ್ಗೆ ನನಗೆ ಪ್ರೀತಿ ಇದೆ. ದೊಡ್ಡ ಎರಡು ಇಲಾಖೆಗಳನ್ನು ಅವರಿಗೆ ಕೊಟ್ಟಿದ್ದೇವೆ. ಅವರು ನಮ್ಮನ್ನು ಕಾಪಾಡತಕ್ಕ ಒಂದು ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅವರ ಕೈಗೆ ಗ್ರಾಮೀಣ ಅಭಿವೃದ್ಧಿ ಇಲಾಖೆ ಕೊಟ್ಟು ಸುಮಾರು 1 ತಿಂಗಳು ಆಗಿದೆ. ಇಷ್ಟರಲ್ಲಿ ಗ್ರಾಮೀಣ ಅಭಿವೃದ್ಧಿ ಎಂದರೆ ಏನು ಎಂದು ಸುಮಾರಾಗಿ ತಿಳಿದುಕೊಂಡಿರಬೇಕು. ಅವರು ತಿಳಿದುಕೊಂಡಿರತಕ್ಕ ವಿಚಾರದಲ್ಲಿ ಯಾವ ರೀತಿ ತಿಳಿಸಿದ್ದಾರೆ? ಇದರಲ್ಲಿ ನನ್ನ ವಿಚಾರ ಬೇರೆ. ಅವರ ವಿಚಾರ ಯಾವ ರೀತಿ ಇದೆ ಎಂಬುದನ್ನು ಅವರು ಉತ್ತರ ಕೊಡುವಾಗ ಹೇಳುತ್ತಾರೆ. ನಾನು ಹೇಳುವುದು ಏನೆಂದರೆ. ಹಿಂದೆ ನಮ್ಮ ಪೂರ್ವಿಕರು ಗ್ರಾಮಗಳನ್ನು ಜೋಡಣೆ ಮಾಡುವಾಗ ಪರಿಪೂರ್ಣ ಗ್ರಾಮಗಳಾಗಿ ಮಾಡಿದ್ದರು. ನಮಗೆ ಸ್ವಾತಂತ್ರ್ಯ ಬಂದು 45 ವರ್ಷದೊಳಗೆ ಈ ಗ್ರಾಮಗಳು ಛಿದ್ರವಿಛಿದ್ರವಾಗಿವೆ. ಇವತ್ತಿನ ದಿವಸ There is an exodus from the village to the Town ಇದು ಏಕೆ? ಇವತ್ತಿನ ದಿವಸ ಒಂದು ಕ್ರಾಫ್‌ಕಟ್ ಮಾಡಿಸಬೇಕಾದರೆ ತುಮಕೂರಿಗೆ ಅಥವಾ ತಾಲ್ಲೂಕು ಕೇಂದ್ರಕ್ಕೆ ಬರಬೇಕಾಗಿದೆ. ಮೊದಲು ಹೀಗೆ ಇರಲಿಲ್ಲ. ಅಲ್ಲೇ ಒಬ್ಬ ನಾಯಿಂದ. ಕ್ಷೌರಿಕ ಸಿಗುತ್ತಿದ್ದ. ಸುತ್ತಮುತ್ತಲ ಹಳ್ಳಿ ಜನ ಒಂದು ಶರ್ಟ್ ಇಸ್ತ್ರಿ ಮಾಡಿಸಬೇಕಾದರೆ ತುಮಕೂರಿಗೂ ಅಥವಾ ಬೆಂಗಳೂರಿಗೂ ಬರಬೇಕಾಗಿದೆ. ಮೊದಲು ಹಳ್ಳಿಯಲ್ಲಿ ಅಗಸ ಸಿಗುತ್ತಿದ್ದ. ಕಮ್ಮಾರ. ಚಮ್ಮಾರ. ಅಕ್ಕಸಾಲಿಗ ಊರಿನಲ್ಲಿ ಇರುತ್ತಿದ್ದ. ಇವತ್ತು ಇವರೆಲ್ಲಾ ಎಲ್ಲಿ ಹೋದರು. ಏಕೆ ಹೋದರು ಎನ್ನತಕ್ಕಂಥ ದೊಡ್ಡ ಪ್ರಶ್ನೆ ಇದೆ. ಇದನ್ನು ಅರ್ಥಮಾಡಿಕೊಳ್ಳಬೇಕೆಂದು ನಾನು ಮಾನ್ಯ ಖರ್ಗೆಯವರಿಗೆ ಹೇಳುತ್ತಿದ್ದೇನೆ. ಈ ಗುಡಿ ಕೈಗಾರಿಕೆಯಲ್ಲಿ ತೊಡಗಿದ್ದ ಜನರು ಸಹ ಇವತ್ತು ಪಟ್ಟಣಕ್ಕೆ ಬರುತ್ತಿದ್ದಾರೆ. ಇವತ್ತಿನ ದಿವಸ ರೈತನ ಸ್ಥಿತಿ ಏನಾಗಿದೆ ಎಂದರೆ. ರೈತನ ಕಸುಬಿಗೆ ಅನುಕೂಲವಾಗಿದ್ದ ಜನ ಇದ್ದರು ಅವರೊಬ್ಬರೂ ಇವತ್ತು ಹಳ್ಳಿಯಲ್ಲಿ ಇಲ್ಲ. ಇವತ್ತು ಒಂದು ನೇಗಿಲ ಹಿಡಿಯನ್ನು ಸರಿ ಮಾಡುವುದಕ್ಕೆ ನಾವು ತಾಲ್ಲೂಕು ಅಥವಾ ಹೋಬಳಿ ಕೇಂದ್ರಕ್ಕೆ

ಎತ್ತಿಕೊಂಡು ಹೋಗಿ ನೇಗಿಲು ರಿಪೇರಿ ಮಾಡಿಸತಕ್ಕಂಥ ಪರಿಸ್ಥಿತಿ ಬಂದಿದೆ. ಇದು ಗ್ರಾಮೀಣ ಅಭಿವೃದ್ಧಿ ಅಲ್ಲ. ಐಆರ್‌ಡಿಪಿ ಲೋನ್ 60 ಜನರಿಗೆ ಕೊಟ್ಟಿದ್ದೀರಿ. 600 ಜನರಿಗೆ ಕೊಡಬೇಕಾಗಿತ್ತು. ಖರ್ಗೆಯವರಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಐಆರ್‌ಡಿಪಿಯಲ್ಲಿ ನಮ್ಮ ರಾಜ್ಯದ ಗುರಿ ಏನಿತ್ತು. ಅದರ ಸಾಧನೆಯಲ್ಲಿ ತಾವು 50 ಪರ್ಸೆಂಟ್‌ಗೆ ಹೋಗಿಲ್ಲ. ಪೂರ್ಣವಾಗಿ ಎಲ್ಲ ಲೆಕ್ಕ ಹಾಕಿದರೆ 50 ಪರ್ಸೆಂಟ್ ಆಗಿಲ್ಲ. ಕೊಟ್ಟಿರತಕ್ಕ ಶೇಕಡ 50 ರಲ್ಲಿ ಎಷ್ಟು ಜನ ಇದರ ಉಪಯೋಗ ಮಾಡಿಕೊಂಡು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆಂದು ನೋಡಿದ್ದೀರಾ? ಕೇಂದ್ರದ 50 ಪರ್ಸೆಂಟ್ ಹಾಗೂ ರಾಜ್ಯದ 50 ಪರ್ಸೆಂಟ್ ಹಣವನ್ನು 50 ಜನ ಫಲಾನುಭವಿಗಳಿಗೆ ಕೊಟ್ಟಿದ್ದೇವೆಂದು ಪುಸ್ತಕದಲ್ಲಿ ಪ್ರಿಂಟ್ ಮಾಡಿದರೆ ಸಾಲದು. There should be a proper liason officer. ಅವರು ಇರಬೇಕಾಗುತ್ತದೆ. ನಮ್ಮ ಸರ್ಕಾರದ ಹಣ ಕೊಟ್ಟಿದ್ದೇವೆ. ಎತ್ತು. ಕರ. ಗಾಡಿ ಇತ್ಯಾದಿಗಳನ್ನು ಏನಾದರೂ ಆತ ತಂದಿದ್ದಾನೆಯೇ. ಇದರಿಂದ ಉಪಯೋಗವಾಗಿದೆಯೇ? ಅವನ ಜೀವನ ಮಟ್ಟ ಸುಧಾರಿಸಿದೆಯೇ ಎನ್ನುವ ಬಗ್ಗೆ ಯಾವುದೇ ಚೆಕ್ ಇಲ್ಲದೇ ಇದ್ದರೆ ನೀವು ಕೊಟ್ಟಿರತಕ್ಕದ್ದೆಲ್ಲಾ ನೀರಿನಲ್ಲಿ ಹುಣಸೇಹಣ್ಣು ತೊಳೆದಹಾಗೆ ಆಗುತ್ತದೆ.

ಛೇರ್ಮನ್ : ತಮ್ಮ ಭಾಷಣ 1 ಗಂಟೆ ಆಯಿತು. ಬೇಗ ಮುಗಿಸಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಡಿಪಿಎಪಿ ಪ್ರೋಗ್ರಾಮ್ ಬರಗಾಲ ಪೀಡಿತ ಪ್ರದೇಶದಲ್ಲಿ ಆಗತಕ್ಕ ಅಭಿವೃದ್ಧಿ ಕೆಲಸ ಮಾಡುವುದಕ್ಕೆ. ಕರ್ನಾಟಕದಲ್ಲಿ ಕೂಡ ಡಿಪಿಎಪಿ ಪ್ರೋಗ್ರಾಮನ್ನು ಕೆಲವೊಂದು ಜಿಲ್ಲೆಗಳಲ್ಲಿ. ಕೆಲವೊಂದು ತಾಲ್ಲೂಕುಗಳಲ್ಲಿ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನನ್ನ ತಾಲ್ಲೂಕು. ಗುಬ್ಬಿ ತಾಲ್ಲೂಕನ್ನು ಡಿಪಿಎಪಿಗೆ ಅಳವಡಿಸಿದ್ದಾರೆ. ಸುಮಾರು ಮೂರ್‍ನಾಲ್ಕು ವರ್ಷಗಳಿಂದ ಒಂದು ಪೈಸೆ ಕೊಡಲಿಲ್ಲ. ನಿಮ್ಮ ತಾಲ್ಲೂಕನ್ನು ಡಿಪಿಎಪಿಗೆ ಸೇರಿಸಿದ್ದೇವೆ. ನೀವು ಸಮಾಧಾನದಿಂದ ಇರಿ. ನಿಮಗೆಲ್ಲ ಸೌಕರ್ಯಗಳು ಸಿಗುತ್ತವೆಂದು ಹೇಳಿಬಿಟ್ಟು ಯಾರಿಗೆ ಸಮಾಧಾನಪಡಿಸುವುದಕ್ಕೋಸ್ಕರ ಈ ಕೆಲಸ ಮಾಡಿದ್ದೀರಿ? ಇದಕ್ಕೆ ಏತಕ್ಕೆ ಹಣ ಒದಗಿಸಿಲ್ಲವೆಂದು ನಾನು ಇಲಾಖೆಯವರನ್ನು ಕೇಳುತ್ತೇನೆ. ಸ್ಕೂಲ್‌ಗಳು. ರಸ್ತೆಗಳು ಮತ್ತು ರೈತನಿಗೆ ಬೇಕಾಗಿರತಕ್ಕ ಉಪಯುಕ್ತವಾಗಿರತಕ್ಕ ಬಿತ್ತನೆ ಬೀಜ. ಇವೆಲ್ಲ ರೈತನಿಗೆ ಬೇಕಾಗುತ್ತವೆ. ಸಣ್ಣ ನೀರಾವರಿ ಕೂಡ ಮಾನ್ಯ ಖರ್ಗೆಯವರಿಗೆ ಬರಬೇಕಾಗುತ್ತದೆ. ಮತ್ತೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಕೂಡ ಇವರ ಸಹಾಯಕ್ಕೆ ಬರಬೇಕಾಗುತ್ತದೆ. ಮತ್ತೆ ಎಜುಕೇಶನ್ ಡಿಪಾರ್ಟ್‌ಮೆಂಟಿನವರು ಇವರಿಗೆ ಸಹಾಯ ಮಾಡಬೇಕು. ಈ ರೀತಿಯಾಗಿ ಇವರುಗಳೆಲ್ಲರ ಸಂಯೋಜನೆಯಿಂದ ಒಂದು ಸಮಗ್ರವಾದ ಯೋಜನೆಯನ್ನು ಇಡೀ ತಾಲ್ಲೂಕಿಗೆ. ಇಡೀ ಹೋಬಳಿಗೆ. ಇಡೀ ಗ್ರಾಮಕ್ಕೆ ಮಾಡಿ. ಅಲ್ಲಿಂದ ಯಾವ್ಯಾವ ಹಳ್ಳಿಗಳಿಗೆ ಏನೇನು ಬೇಕು ಎನ್ನುವುದನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ಗಳ ಮೂಲಕ ಅಳವಡಿಸಿಕೊಡಬೇಕು ಎನ್ನುವ ವಿಚಾರವನ್ನು ಮುಂದೆ ಇಡುತ್ತಾ. ತಾವು ಎರಡು ಮೂರು ಸಾರಿ ಬೆಲ್ ಬಾರಿಸಿದಿರಿ. ನಾನಿನ್ನು ಮಾತನಾಡುವುದು ಬಹಳ ಇತ್ತು. ನಾನು ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

† ಶ್ರೀ ಗುರುದೇವ್ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷಿಣಿಯವರೆ. ನಾನು ಪ್ರಪ್ರಥಮವಾಗಿ 7 ಬೇಡಿಕೆಗಳನ್ನು ಅಭಿನಂದಿಸುತ್ತಾ ಮತ್ತು ಈ ಬೇಡಿಕೆಗಳನ್ನು ಒಪ್ಪುತ್ತಾ. ನನ್ನ ಕೆಲವು ಸಲಹೆಗಳನ್ನು ತಮ್ಮ ಮುಖಾಂತರ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಪ್ರಪ್ರಥಮವಾಗಿ ಜಿಲ್ಲಾದಳಿತದ ಬಗ್ಗೆ ಮಾತನಾಡುತ್ತಾ, ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು

ಇಷ್ಟೆ. ಮಾನ್ಯ ರಾಜ್ಯಪಾಲರು ಜಂಟೀ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡತಕ್ಕ ಸಂದರ್ಭದಲ್ಲಿ ಅವರ ಭಾಷಣದ ಪುಟದ ಸಂಖ್ಯೆ 11 ರಲ್ಲಿ ಈ ರೀತಿ ಹೇಳಿದ್ದಾರೆ.

"My Government intends to make the administration more responsive by clearly redefining the structure and the functions of various administrative authorities."

ಮತ್ತೆ 12ನೇ ಪುಟದಲ್ಲಿ ಏನು ಹೇಳುತ್ತಾರೆಂದರೆ ಅದು ಈ ರೀತಿ ಇದೆ :

"Despites the constitutional and legal safeguards and the economic measures taken for the advancement of Scheduled Castes and Scheduled Tribes, atrocities against them have continued to occur in occasional cases. These include bonded labour, caste prejudice, non-payment of minimum wages and deprivation of jobs in spite of the prescribed requirements of job-reservation."

ಈ ಮಾತನ್ನು ಏತಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ. ಇವತ್ತಿನ ದಿವಸ ನಮ್ಮ ನಾಯಕರು ತಮ್ಮ ಆಯವ್ಯಯ ಪತ್ರದಲ್ಲಿ ಹೇಳಿರುವ ಹಾಗೆ. ಸಿಬ್ಬಂದಿ ಮತ್ತು ಆಡಳಿತ. ಅದರಲ್ಲಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ತೆಗೆಯುವುದರ ಬಗ್ಗೆ ಮಾತನಾಡಿದ್ದಾರೆ. ಅದರಲ್ಲಿ ನನ್ನದೊಂದು ಅನಿಸಿಕೆ ಏನೆಂದರೆ. ಇವತ್ತಿನ ದಿವಸ ಅಸಿಸ್ಟೆಂಟ್ ಕಮಿಷನರ್ ಹುದ್ದೆ ಬಹಳ ಮುಖ್ಯವಾದ ಒಂದು ಹುದ್ದೆ. ಇವತ್ತಿನ ದಿವಸ ನಮ್ಮ ಜಿಲ್ಲಾಧಿಕಾರಿಗಳು ಎರಡು ಕೈಯಲ್ಲಿ ಕೆಲಸ ಮಾಡುವ ಅವಕಾಶವಿತ್ತು. ಆದರೆ ಇವತ್ತು ನಮ್ಮ ನಾಯಕರು ಹೇಳಿದ ಹಾಗೆ. ಉಳಿತಾಯ ಯೋಜನೆಯಲ್ಲಿ ಈವೊಂದು ಹುದ್ದೆಯನ್ನು ತೆಗೆದು. ಆಮೇಲೆ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸುವಂತಹ ಸಮಯದಲ್ಲಿ ಜಿಲ್ಲಾಧಿಕಾರಿಗಳಿಗೆ ಕೆಲಸ ಕಾರ್ಯಗಳು ಜಾಸ್ತಿಯಾಗುತ್ತವೆ. ಜಿಲ್ಲಾಧಿಕಾರಿಗಳಿಗೆ ಕೆಲಸ ಜಾಸ್ತಿಯಾಗಿ ಆ ಕೆಲಸಗಳನ್ನು ಮತ್ತೆ ಹಂಚತಕ್ಕ ಸಮಯದಲ್ಲಿ ಅವರಿಗೆ ಸುಮಾರು ಕೈಗಳು ಬೇಕಾಗುತ್ತವೆ. ನನ್ನ ಅನಿಸಿಕೆ ಪ್ರಕಾರ ಈವೊಂದು ಹುದ್ದೆ ಎಲ್ಲ ರಾಜ್ಯಗಳಲ್ಲಿ ಇವತ್ತಿನವರೆಗೆ ಇದೆ. ಆದರೆ ನಮ್ಮ ರಾಜ್ಯದಲ್ಲಿ ಆ ಹುದ್ದೆಗಳನ್ನು ತೆಗೆಯುವುದಕ್ಕೆ ಹೊರಟಿರುವುದು ಅಷ್ಟು ಸಮಂಜಸವಲ್ಲವೆಂದು ನನ್ನ ಅನಿಸಿಕೆ. ನಾವೇನು ಡೀಸೆಂಟ್ರಲೈಸ್ ಬಗ್ಗೆ ಜಾಸ್ತಿ ಮಾತನಾಡುತ್ತಿದ್ದೇವೆ. ಇಂತಹ ಸಮಯದಲ್ಲಿ ಜಿಲ್ಲಾಧಿಕಾರಿಗಳಿಗೆ ಕೆಲಸ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಆ ಒಂದು ದೃಷ್ಟಿಯಿಂದ ಈವೊಂದು ಹುದ್ದೆಯನ್ನು ಮುಂದುವರಿಸಬೇಕೆಂಬ ನನ್ನ ಅನಿಸಿಕೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಈ ಅಸಿಸ್ಟೆಂಟ್ ಕಮಿಷನರ್‌ರವರಿಗೆ ನಮ್ಮ ಆಕ್ಟ್ ಪ್ರಕಾರ ಹಲವಾರು ಕೆಲಸಗಳನ್ನು ನಾವು ಕೊಡಬೇಕಾಗುತ್ತದೆ. ಈ ರೀತಿ ಕೊಟ್ಟಿದ್ದಾರೆ. ಅದರಲ್ಲಿ ಡ್ರಗ್ಸ್. ಎಕ್ಸೈಜ್ ಆಕ್ಟ್. ಹೆಬಿಚ್ಯುಯಲ್ ಅಫೇಂಡರ್ಸ್. ಲ್ಯಾಂಡ್ ಅಕ್ವಿಜಿಷಿಯನ್. ಸೇಲ್ಸ್‌ಟ್ಯಾಕ್ಸ್. ಕ್ಯಾಟ್ಲ್ ಟ್ರೆಸ್‌ಪಾಸ್. ಸಿನೆಮಾ. ಕೋ-ಆಪರೇಟೀವ್ ಇವೆಲ್ಲ ಅವರಿಗೆ ಬರುತ್ತವೆ. ಮತ್ತೆ ಸೆಂಟ್ರಲ್ ಆಕ್ಟ್ ಪ್ರಕಾರ ಆರ್ಮ್ಸ್. ಬಾಂಡೆಡ್ ಲೇಬರ್ಸ್. ಸೆನ್ಸಸ್. ಎಲೆಕ್ಟ್ರಿಸಿಟಿ ಇವೆಲ್ಲ ಬರುತ್ತವೆ. ಆವೊಂದು ದೃಷ್ಟಿಯಿಂದ ಅವರಿಗೆ ಕೆಲಸ ಬಹಳ ಇದೆ. ಆದ್ದರಿಂದ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮುಂದುವರಿಸಬೇಕು. ಏಕೆಂದರೆ. ಒಂದೇ ವರ್ಷದಲ್ಲಿ ಡಿವಿಜನಲ್ ಕಮಿಷನರ್ ಹುದ್ದೆಯನ್ನು ಮತ್ತು ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ತೆಗೆದರೆ ಜಿಲ್ಲಾಧಿಕಾರಿಗಳು ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆ ಒಂದು ದೃಷ್ಟಿಯಿಂದ ಇವತ್ತಿನ ದಿವಸ ತಾವೇನು ಡಿವಿಜನಲ್ ಕಮಿಷನರ್

ಹುದ್ದೆಯನ್ನು ತೆಗೆಯಬೇಕೆಂದು ಮಾಡುತ್ತಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ತಾವು ತೆಗೆಯುವುದಕ್ಕೆ ಹೊರಟಿರುವಂಥ ಅಸಿಸ್ಟೆಂಟ್ ಕಮೀಷನರ್ ಹುದ್ದೆಯನ್ನು ದಯವಿಟ್ಟು ಮುಂದುವರೆಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಈಗಾಗಲೇ ಶ್ರೀ ಶಿವನಂಜಪ್ಪನವರು ವಿಲೇಜ್ ಅಕೌಂಟೆಂಟ್ಸ್ ಬಗ್ಗೆ ಮಾತನಾಡಿದ್ದಾರೆ. ನಾನು ಮೊನ್ನೆ ಸದನದಲ್ಲಿ ಪ್ರಶ್ನೆ ಕೇಳಿದ್ದ ಸಂದರ್ಭದಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಅದು ಅಷ್ಟು ಸಮಂಜಸ ಆಗಿಲ್ಲ. ವಿಲೇಜ್ ಅಕೌಂಟೆಂಟ್‌ಗಳು ಹಳ್ಳಿಗಳಲ್ಲಿ ವಾಸ ಇರುವುದಕ್ಕೆ ಅನುಕೂಲ ಮಾಡಿಕೊಟ್ಟು ಆ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಬೇಕು. ಮತ್ತು ಏನು ವಿಲೇಜ್ ಅಕೌಂಟೆಂಟ್‌ಗಳು ಬಹಳ ಕಡಿಮೆ ಇದ್ದಾರೆ, ಅವರನ್ನು ಅಪಾಯಿಂಟ್ ಮಾಡಿಕೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು ತಮ್ಮ ಈ ಬೇಡಿಕೆಗಳನ್ನು ಪೂರ್ಣವಾಗಿ ನಾನು ಸ್ವಾಗತಿಸುತ್ತೇನೆ. ಮತ್ತೆ, ಇವತ್ತಿನ ದಿವಸ ಇನ್ನೊಂದು ಬೇಡಿಕೆ ಎಂದರೆ, ಆರ್.ಡಿ.ಪಿ.ಆರ್. ಬಗ್ಗೆ ಮಾತನಾಡುತ್ತಾ, ನಾನಾದರೂ ಈ ಒಂದು ಸಭೆಗೆ ಬರುವುದಕ್ಕೆ ಮುಂಚೆ ಜಿಲ್ಲಾ ಪರಿಷತ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆ ರೀತಿ ಕೆಲಸ ಮಾಡಿದಂಥ ಸಂದರ್ಭದಲ್ಲಿ ಅಲ್ಲಿಯ ಕೆಲವು ಅನುಭವಗಳನ್ನು ತಮ್ಮ ಮುಂದೆ ಹಿಂದೆ ಇಟ್ಟಿದ್ದೇನೆ. ಈಗಲೂ ಇಡುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಕ್ಷೇತ್ರ ಸಕಲೇಶಪುರ ಮಲೆನಾಡು ಪ್ರದೇಶದಲ್ಲಿದ್ದು ಇವತ್ತಿನವರೆಗೆ ಜಿಲ್ಲಾ ಪರಿಷತ್ ವತಿಯಿಂದ ಅಲ್ಲಿ ಸುಮಾರು 9 ಗ್ರಾಮಾಂತರ ನೀರು ಸರಬರಾಜು ಯೋಜನೆಗಳು, ನಲ್ಲಿ ನೀರು ಸರಬರಾಜು ಯೋಜನೆಗಳು ಮಂಜೂರಾಗಿವೆ. 1982-83ರಲ್ಲಿ ಮಂಜೂರಾದಂಥ ಈ ಎನ್.ಆರ್.ಡಬ್ಲ್ಯು. ಸ್ಕೀಮ್‌ಗಳಲ್ಲಿ ಇವತ್ತಿನವರೆಗೂ ನಾವು ಕೆಲಸ ಮಾಡುವುದಕ್ಕೆ ಆಗಿಲ್ಲ. ಏತಕ್ಕೆಂದರೆ ಅಲ್ಲಿ ಎಷ್ಟೇ ಬೋರ್‌ವೆಲ್ ತೆಗೆದರೂ ನೀರು ಸಿಗುತ್ತಿಲ್ಲ. ಆದ್ದರಿಂದ ನನ್ನ ಮನವಿ ಏನೆಂದರೆ, ಹಿಂದೆ ಕೂಡ ನಾನು ಹೇಳಿದ್ದೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಎನ್.ಆರ್.ಡಬ್ಲ್ಯು. ಅಥವಾ ಮಿನಿವಾಟರ್ ಸಪ್ಲೈಯಲ್ಲಿ ನೀರು ಕೊಡುತ್ತೇವೆ ಎಂದು ಹೇಳಿದರೆ ಅಲ್ಲಿ ನೀರು ಸಿಗುವುದಿಲ್ಲ. ಮಲೆನಾಡು ಪ್ರದೇಶ ಆಗಿರುವುದರಿಂದ ನೀರು ಬಹಳ ತಳಮಟ್ಟದಲ್ಲಿ ಇರುತ್ತದೆ. ಇಂತಹ ಒಂದು ಸಂದರ್ಭದಲ್ಲಿ ನಾನು ಮೊದಲೆ ಹೇಳಿದ ಹಾಗೆ ಒಂಬತ್ತು ಯೋಜನೆಗಳು ಹಾಗೆಯೇ ನಿಂತಿವೆ. ಇವು 1982-83ರಲ್ಲಿ ಮಂಜೂರಾದಂಥ ಎನ್.ಆರ್.ಡಬ್ಲ್ಯು. ಸ್ಕೀಮ್‌ಗಳು. ಇವನ್ನು ಪೂರ್ಣಗೊಳಿಸಬೇಕು ಮತ್ತು ಜನರಿಗೆ ನೀರು ಕೊಡಬೇಕು ಎಂದರೆ ಕೆಲವೊಮ್ಮೆ ಟ್ಯಾಂಕ್ ಕಟ್ಟಿ ಆ ಟ್ಯಾಂಕಿಗೆ ಹರಿಯುವ ನೀರಿನ ಮುಖಾಂತರ ವ್ಯವಸ್ಥೆ ಮಾಡಿಕೊಡಬೇಕು. ಈಗ ಆರೋಗ್ಯದ ದೃಷ್ಟಿಯಿಂದ ತಾವು ಇದನ್ನು ಒಪ್ಪುವುದಿಲ್ಲ. ಆದರೆ ಈ ಒಂದು ದೃಷ್ಟಿಯಿಂದ ನೋಡಬೇಕು. ಏಕೆಂದರೆ, ಮಲೆನಾಡಿನಲ್ಲಿ ನೀರು ಸಿಗುವುದಿಲ್ಲ. ಆದ್ದರಿಂದ ಹರಿಯುವ ನೀರನ್ನು ಒಂದು ಟ್ಯಾಂಕ್‌ನಲ್ಲಿ ಶೇಖರಣೆ ಮಾಡಿ. ಅಲ್ಲಿ ಶುದ್ಧೀಕರಣ ಮಾಡಿ ನೀರು ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ಹಾಗೆಯೇ ಈಗ ತಾನೆ ನಮ್ಮ ನಾಯಕರು ಮತ್ತು ಮಾನ್ಯ ರಾಜ್ಯಪಾಲರು ಮಾತನಾಡಿದ ಹಾಗೆ ನೈರ್ಮಲ್ಯದ ಬಗ್ಗೆ ಲ್ಯಾಟರೀನ್ ಕಟ್ಟುವುದಕ್ಕೆ ಕೇಂದ್ರ ಸರ್ಕಾರದಿಂದ ಏನು ಹಣ ಕೊಡುತ್ತಿದ್ದಾರೆ. ಇಲ್ಲಿ ಬಡವರು ಏನಿದ್ದಾರೆ ಅವರೇ ಸುಮಾರು ಹಣವನ್ನು ಭರಿಸಬೇಕಾಗುತ್ತದೆ. ಅಲ್ಪ ಸಹಾಯವನ್ನು ಸರ್ಕಾರ ಮಾಡುತ್ತದೆ. ಉಳಿದ ಹಣವನ್ನು ಬಡವರು ಹಾಕಬೇಕಾಗುತ್ತದೆ. ನಾವು ತಾಲ್ಲೂಕು ಸಮಿತಿಯಲ್ಲಿ ಸಭೆ ಸೇರಿದಂಥ ಸಂದರ್ಭದಲ್ಲಿ ನಾನಾದರೂ ಯೋಚನೆ ಮಾಡಿದ್ದೆ. ನಾವು ಹೆಣ್ಣುಮಕ್ಕಳು ಓದುವ ಶಾಲೆಗಳಲ್ಲಿ ನೋಡಿದ್ದೇವೆ. ಪಾಪ, ಅವರು ಬಹಳ ಕಷ್ಟಪಡುತ್ತಿದ್ದಾರೆ. ಈ ದೃಷ್ಟಿಯಿಂದ ಹೆಣ್ಣು ಮಕ್ಕಳು ಇರುವ ಹೈಸ್ಕೂಲುಗಳಿಗೆ ಈ ಲ್ಯಾಟರೀನ್ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ತಾಲ್ಲೂಕು

ಸಮಿತಿಯಲ್ಲಿ ತೀರ್ಮಾನ ತೆಗೆದುಕೊಂಡು, ಇಂಡಿವಿಜ್ಯುಯಲ್ ಬೆನಿಫಿಶರ್ಸ್ ಆಯ್ಕೆ ಮಾಡಬೇಕೆಂದು ಏನು ನಿರ್ದೇಶನ ಇತ್ತು. ಅದನ್ನು ಸ್ವಲ್ಪ ಬದಿಗೊತ್ತಿ ಈ ಶಾಲೆಗಳನ್ನು ಗುರುತಿಸಿದ್ದೆವು. ಆದರೆ ದುರ್ದೈವದಿಂದ ಜಿಲ್ಲಾ ಪರಿಷತ್‌ನವರು ಅದನ್ನು ಒಪ್ಪಲಿಲ್ಲ. ಆದರೆ ಇವತ್ತಿನ ದಿವಸ ಜಿಲ್ಲಾ ಪರಿಷತ್ ಆಡಳಿತ ತಮ್ಮ ಕೈಯಲ್ಲಿದೆ. ತಾವು ಈ ರೂಲ್ಸ್ ಏನಿದೆ, ಅದನ್ನು ಸ್ವಲ್ಪ ಬದಲಾವಣೆ ಮಾಡಿ ಮಂಡಲಗಳಲ್ಲಿ ಮತ್ತು ಹೆಣ್ಣುಮಕ್ಕಳು ಓದುವ ಶಾಲೆಯಗಳಲ್ಲಿ ಈ ಲ್ಯಾಟ್ರೀನ್ ಕೊಡುವಂಥ ವ್ಯವಸ್ಥೆ ಏನಿದೆ ಈ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಮಂಡಲ ಮತ್ತು ಜಿಲ್ಲಾ ಪರಿಷತ್ತುಗಳು ಹೋಗಿವೆ. ಮಂಡಲಗಳ ಬಗ್ಗೆ ಮಾತನಾಡುವುದಕ್ಕೆ ಹೋದರೆ ತುಂಬಾ ಸಮಯ ಹಿಡಿಯುತ್ತದೆ. ನಾನಾದರೂ ಕೇಳುವುದು ಇಷ್ಟೆ. ಕೆಲವು ಮಂಡಲಗಳಲ್ಲಿ ನಡೆದಂತ ದುರಾಡಳಿತ ಏನಿದೆ ಅದನ್ನು ಖಂಡಿತವಾಗಿಯೂ ತಾವು ವಿಚಾರಣೆ ಮಾಡಬೇಕು. ನನ್ನ ಕ್ಷೇತ್ರದಲ್ಲಂತೂ ಹೆಗ್ಗದ್ದೆಮಂಡಲದಲ್ಲಿ ನೌಕರರು ಕೆಲಸ ಮಾಡುವುದಕ್ಕೆ ಸೇರಬೇಕಾದರೆ ಸೆಕ್ಯುರಿಟಿ ಡಿಪಾಸಿಟ್ ಎಂದು ಏನು ಕೊಟ್ಟಿದ್ದಾರೋ, ಅದನ್ನೂ ಲೆಕ್ಕ ಇಡದೆ ಪ್ರಧಾನರು ನುಂಗಿಹಾಕಿದ್ದಾರೆ. ಆಡಿಟ್‌ನವರು ಹೋಗಿ ಆಡಿಟ್ ಮಾಡಿ ಬಂದಿದ್ದಾರೆ. ಹೆಗ್ಗಡೆ ಮಂಡಲದಲ್ಲಿ ನಾಲ್ಕು ವರ್ಷವಾದರೂ ಈ ಆಡಿಟ್ ರಿಪೋರ್ಟ್ ಇಲ್ಲ. ಆದರೂ ಆಡಿಟ್‌ನವರು ಹೇಗೆ ಒಪ್ಪಿಕೊಂಡು ಬಂದಿದ್ದಾರೊ ನನಗಂತೂ ಗೊತ್ತಿಲ್ಲ. ತಾವು ಕೂಲಂಕುಷವಾಗಿ, ದೀರ್ಘವಾಗಿ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯ್ತಿ ಆಕ್ಟ್ ಬಗ್ಗೆ, ನನ್ನ ಒಂದೇ ಒಂದು ಅನಿಸಿಕೆ ಎಂದರೆ, ತಾವು ಇಷ್ಟು ದಿವಸ 1971ನೇ ಇಸವಿ ಜನಗಣತಿ ಪ್ರಕಾರ ಈ ಮಂಡಳಿಗಳಿಗೆ ಹಣವನ್ನು ಕೊಡುತ್ತಿದ್ದಿರಿ. ಇವತ್ತಿನ ದಿವಸ ನಮ್ಮ ಸರ್ಕಾರ 1992ನೇ ಜನಗಣತಿ ಪ್ರಕಾರ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ನಮಗೆ ಡಿ-ಲಿಮಿಟೇಷನ್ ಮಾಡುವುದಕ್ಕೆ ಸಮಯ ಬೇಕೆಂದು ಕೇಳಿದ್ದೀರಿ, ನಾವೆಲ್ಲರೂ ಒಪ್ಪಿದ್ದೇವೆ. 1992ನೇ ಇಸವಿ ಜನಗಣತಿ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳುತ್ತಾ, ಇವತ್ತಿನ ದಿವಸ ಧಾರ್ಮಿಕ ಮಂತ್ರಿಗಳಲ್ಲಿ ನನ್ನ ಒಂದೇ ಬೇಡಿಕೆ. ತಾವೇನು ಆರಾಧನಾ ಎಂಬ ಯೋಜನೆಯನ್ನು ಹಾಕಿಕೊಂಡಿದ್ದೀರಿ, ಇದರ ಬಗ್ಗೆ ನಾವೆಲ್ಲರೂ ಬಹಳ ಸಂತೋಷಪಟ್ಟೆವು. ಏನೋ ಕೆಲವೊಂದು ರಾಜಕೀಯ ಪಕ್ಷಗಳು ನಾವು ಮಂದಿರವನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದರೋ ಅದಕ್ಕೆ ಸರಿಯಾದ ಉತ್ತರ ಈ ಆರಾಧನಾ ಯೋಜನೆ. ನಾವು ಯಾವುದೇ ಹಳ್ಳಿಗೆ ಹೋದರೂ, ಅತಿ ಮುಖ್ಯವಾಗಿ ಹರಿಜನ ಗಿರಿಜನರು ವಾಸ ಮಾಡತಕ್ಕ ಕಾಲೋನಿಗಳಿಗೆ ಹೋದಂಥ ಸಂದರ್ಭದಲ್ಲಿ ನಮಗೆ ಕೇಳಿಬರುತ್ತಿರುವ ಕೂಗು, ನಮಗೆ ರಾಮಮಂದಿರ ಕಟ್ಟಿಸಿಕೊಂಡಿ ಎಂದು, ಇದಕ್ಕೆ ಸರಿಯಾದ ಯೋಜನೆ ಈ ಆರಾಧನಾ ಯೋಜನೆ ಎಂದು ಸಂತೋಷಪಟ್ಟೆವು. ಆದರೆ, ದುರ್ದೈವ, ಮೊನ್ನೆ ನನಗೆ ತಿಳಿದುಬಂತು. ಈ ಆರಾಧನಾ ಯೋಜನೆ ಅಡಿಯಲ್ಲಿ ರಿಪೇರಿ ಮಾಡಿಸಬೇಕೆಂದು ಅಥವಾ ಹೊಸದಾಗಿ ಕಟ್ಟಿಸಬೇಕೆಂಬುದು ಈ ಸ್ಕೀಮಿಗೆ ಬರುವುದಿಲ್ಲ. ನನಗೆ ಸಂಬಂಧಪಟ್ಟ ಅಧಿಕಾರಿಗಳು ಹೇಳಿದರು. ನಮ್ಮ ತಾಲ್ಲೂಕಿಗೆ ಬರೀ ಒಂದು ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ ಮತ್ತು ಈ ರೀತಿ ಕೊಟ್ಟಂಥ ಹಣದಲ್ಲಿ ಒಂದೊಂದು ಹಳ್ಳಿಯಲ್ಲಿ, ಅವರು ಕೊಟ್ಟಂಥ ಪ್ಲಾನ್ ಪ್ರಕಾರ, ಒಂದು ದೇವಸ್ಥಾನ ಕಟ್ಟಿಸಬೇಕೆಂದು ಹೇಳಿದರು. ಆ ಪ್ಲಾನ್ ಪ್ರಕಾರ ದೇವಸ್ಥಾನ ಕಟ್ಟಿಸಬೇಕಾದರೆ, ಸುಮಾರು 85 ಸಾವಿರ ರೂಪಾಯಿ ಮೇಲೆ ಆಗುತ್ತದೆ. ಈ ಯೋಜನೆ ನಿಜವಾಗಿಯೂ ಪ್ರಯೋಜನವಾಗುವುದಿಲ್ಲ ಎಂದು

ನನ್ನ ಅನಿಸಿಕೆ. ದಯಮಾಡಿ ಇದರ ಬಗ್ಗೆ ತಮ್ಮ ಉತ್ತರದಲ್ಲಿ ತಿಳಿಸಬೇಕು. ಈ ರೀತಿ ಕೊಟ್ಟಂಥ ಒಂದು ಲಕ್ಷ ರೂಪಾಯಿಗಳಲ್ಲಿ ಬಿದ್ದು ಹೋಗಿರುವ ದೇವಸ್ಥಾನವನ್ನು ರಿಪೇರಿ ಮಾಡಿಸಬಹುದೇ. ಸುಣ್ಣ ಬಣ್ಣ ಹೊಡೆಯಬಹುದೇ ಎನ್ನುವುದನ್ನು ತಾವು ತಿಳಿಸಬೇಕು. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಲ್ಲಿ ಹೇಳಿದ್ದೇನೆ, ಬೇಲೂರು ತಾಲ್ಲೂಕಿನ ಪುಷ್ಪಗಿರಿ ಎಂಬ ದೇವಸ್ಥಾನವನ್ನು ಈಗಾಗಲೇ ಅಲ್ಲಿಯ ಸಂಬಂಧಪಟ್ಟ ಕೆಲವರು ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ. ಬಹಳ ಇಂಪ್ರೂವ್ ಮಾಡಿದ್ದಾರೆ. ಸರ್ಕಾರದ ವತಿಯಿಂದ ಹಣವನ್ನು ಮಂಜೂರ್ಮಾಡಿಕೊಡುತ್ತೇವೆಂದು ಹಿಂದಿನ ಸರ್ಕಾರ ಭರವಸೆ ನೀಡಿತ್ತು. ಆದರೆ ಇವತ್ತಿನವರೆಗೂ ಆಗಿಲ್ಲ. ದಯಮಾಡಿ, ಪುಷ್ಪಗಿರಿ ಎಂಬ ಬೇಲೂರು ತಾಲ್ಲೂಕಿನ ದೇವಸ್ಥಾನಕ್ಕೆ ಹಣವನ್ನು ಬೇಗ ಮಂಜೂರ್ಮಾಡಬೇಕೆಂದು ಕೇಳಿಕೊಳ್ಳುತ್ತಾ, ಇನ್ನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ, ಮಾನ್ಯ ಉಪಾಧ್ಯಕ್ಷರಿಗೆ ನನ್ನ ವಂದನೆಗಳನ್ನು ಹೇಳುತ್ತಾ, ಈ ಬೇಡಿಕೆಗಳನ್ನು ಮತ್ತೊಮ್ಮೆ ಸ್ವಾಗತಿಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಬೇಡಿಕೆ ಸಂಖ್ಯೆ 40,46,49,50,55,56 ಮತ್ತು 51-ಈ ಬೇಡಿಕೆಗಳನ್ನು ಬೆಂಬಲಿಸುತ್ತಾ, ಕಂದಾಯ ಇಲಾಖೆಯಲ್ಲಿ ಸಾಕಷ್ಟು ಕಾನೂನು ತಿದ್ದುಪಡಿ ಮಾಡಿ, ರೈತ ಸಮುದಾಯಕ್ಕೆ ವಿಶೇಷವಾದ ಕಾರ್ಯಕ್ರಮ ರೂಪಿಸಿರುವುದಕ್ಕಾಗಿ ಮಾನ್ಯ ಕಂದಾಯ ಸಚಿವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಬಗರ್ ಹುಕುಂ ಜಮೀನುಗಳನ್ನು ಸಕ್ರಮಗೊಳಿಸುವ ಕಾನೂನನ್ನು ತಂದು, ಈ ದಿಶೆಯಲ್ಲಿ ಹೆಚ್ಚಿನ ಕ್ರಮ ತೆಗೆದುಕೊಂಡಿದ್ದಾರೆ. ಇದೊಂದು ಕ್ರಾಂತಿಕಾರಕವಾದ ಬದಲಾವಣೆ ಎಂದು ಈ ಸಂದರ್ಭದಲ್ಲಿ ಭಾವಿಸುತ್ತಾ, ಇದರ ಬಗ್ಗೆ ರಾಜ್ಯಾದ್ಯಂತ ಒಂದು ಟೈಂಬೌಂಡ್ ಪ್ರೋಗ್ರಾಂ ಹಾಕಿಕೊಂಡು, ಇದನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಸಿ ಅಂಡ್ ಡಿ ಲ್ಯಾಂಡ್‌ಗಳನ್ನು ವಾಪಸ್ ಪಡೆದು ಹರಿಜನ ಗಿರಿಜನರಿಗೆ ಮಂಜೂರ್ಮಾಡಬೇಕೆಂದು ಆದೇಶ ಕೊಟ್ಟಿದ್ದೀರಿ. ಇದೂ ಕೂಡ ಬಹಳಷ್ಟು ಒಳ್ಳೆಯ ಕಾರ್ಯಕ್ರಮ. ಸಿ ಅಂಡ್ ಡಿ ಲ್ಯಾಂಡ್ಸ್ ಯಾವ ಯಾವ ಭಾಗದಲ್ಲಿ ಇದೆ ಎನ್ನುವುದನ್ನು ಈಗಲೇ ಗುರುತಿಸಿ ಕೊಡುವುದಕ್ಕೆ ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಆರ್.ಐ. ಮತ್ತು ವಿ.ಎ.ಗಳ ಜಾಗಗಳು ಕೆಲವು ಕಡೆ ಬಹಳಷ್ಟು ಖಾಲಿ ಇವೆ. ಇವುಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕು. ಸಾಕಷ್ಟು ಕಡೆ ಸರ್ವೆಯರುಗಳು ಇಲ್ಲ. ಏಕೆಂದರೆ, ಈ ಆಶ್ರಯ ಯೋಜನೆಯಲ್ಲಿ ನಿವೇಶನಗಳನ್ನು ಹಂಚುವಂಥ ಸಂದರ್ಭದಲ್ಲಿ ಈ ವಿ.ಎ.ಗಳಿಲ್ಲದೆ ಸಾಕಷ್ಟು ಡಿಲೇ ಆಗಿ ಉಳಿದುಕೊಂಡಿದೆ. ತಾವು ಇದನ್ನು ಸ್ಪೆಷಲ್ ಡ್ರೈವ್ ಆಗಿ ತೆಗೆದುಕೊಂಡು. ಪೆಂಡಿಂಗ್ ಇರತಕ್ಕಂಥ ಈ ಕೇಸ್‌ಗಳನ್ನು ವಿಲೇವಾರಿ ಮಾಡುವುದಕ್ಕೆ ಸರ್ವೇಯರುಗಳನ್ನು ಆದಷ್ಟು ಬೇಗ ಭರ್ತಿ ಮಾಡಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಮತ್ತೆ, ಸಾವಿರಾರು ದರಖಾಸ್ತು ರೆಕಾರ್ಡ್ಸ್ ಈಗಾಗಲೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ, ಮತ್ತೆ ಎ.ಸಿ.ಯವರ ಕಚೇರಿಯಲ್ಲಿ ಪೆಂಡಿಂಗ್ ಉಳಿದುಕೊಂಡಿದೆ. ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಕೇಸುಗಳು ಪೆಂಡಿಂಗ್ ಉಳಿದುಕೊಂಡಿವೆ. ಕಳೆದ ಒಂದು ವರ್ಷದಿಂದ ಇದನ್ನು ವಿಲೇವಾರಿ ಮಾಡುತ್ತಿಲ್ಲ. ತಾವು ದಯವಿಟ್ಟು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹಾಗೂ ಆ ಕಚೇರಿಯಲ್ಲಿರತಕ್ಕಂಥ ಅಧಿಕಾರಿಗಳಿಗೆ ನಿರ್ದಿಷ್ಟವಾಗಿ ಒಂದು ಆದೇಶ ಕೊಟ್ಟು ಇದು ಬೇಗ ವಿಲೇವಾರಿ ಆಗುವಂತೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಸಬ್‌ರಿಜಿಸ್ಟ್ರಾರ್‌ಗಳ ಮೇಲೆ ಸಾಕಷ್ಟು ಅಪಾದನೆಗಳನ್ನು ಈಗಾಗಲೇ ಮಾನ್ಯ ಸದಸ್ಯರು ಮಾಡಿದ್ದಾರೆ. ನಾನು ಹೇಳುವುದು ಏನೆಂದರೆ, ಬೆಂಗಳೂರು ನಗರದಲ್ಲಿ ಸಾಕಷ್ಟು ವರ್ಷಗಳಿಂದ ಸಬ್‌ರಿಜಿಸ್ಟ್ರಾರ್‌ಗಳು

ಒಂದು ರೀತಿ ಜಾಗೀರ್‌ದಾರರ ರೀತಿ ಉಳಿದುಕೊಂಡಿದ್ದಾರೆ. ಅವರನ್ನು ಬೇರೆ ಕಡೆಗೆ ಏತಕ್ಕೆ ವರ್ಗಾವಣೆ ಮಾಡಬಾರದು? ಅವರನ್ನು ವರ್ಗಾವಣೆ ಮಾಡಬೇಕು. ಕಳೆದ 5-10 ವರ್ಷಗಳಿಂದ ಈ ರೀತಿ ಉಳಿದುಕೊಂಡಿರುವವರನ್ನ ವರ್ಗಾವಣೆ ಮಾಡಬೇಕೆಂದು ಈ ಸದನದ ಮೂಲಕ ತಮ್ಮನ್ನು ಒತ್ತಾಯ ಮಾಡುತ್ತೇನೆ. ಅದೇ ರೀತಿ ತಾವು ಡಿವಿಜನಲ್ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳನ್ನು ಅಬಾಲಿಷ್ ಮಾಡಿರುವುದು ಸ್ವಾಗಾತರ್ಹವಾದುದು ಎಂದು ನಾನಾದರೂ ಕೂಡ ಭಾವಿಸುತ್ತೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ದರಖಾಸ್ತು ಜಮೀನುಗಳು ಮಂಜೂರಾಗಿದ್ದು ಸಂಬಂಧ. ಪಟ್ಟ ಹರಿಜನ ಗಿರಿಜನರಿಗೆ ಈಗಾಗಲೇ ಸಾಗುವಳಿ ಪತ್ರ ಕೊಟ್ಟಿರುತ್ತೀರಿ, ಆದರೆ ಅವರುಗಳಿಗೆ ಇನ್ನೂ ಪೊಸೆಷನ್ ಕೊಡಿಸಿಲ್ಲ. ಕಳೆದ ಒಂದು ಅಧಿವೇಶನದಲ್ಲಿ ನಾನು ಇದರ ಬಗ್ಗೆ ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಇನ್ನು ಮೂರು ತಿಂಗಳ ಒಳಗಾಗಿ ಕೊಡಿಸುತ್ತೇನೆ ಎಂಬ ಉತ್ತರ ಹೇಳಿರುತ್ತೀರಿ. ಆದರೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಈ ಕೇಸ್‌ಗಳು ಪೆಂಡಿಂಗ್ ಇವೆ. ತಾವು ಒಂದು ನಿರ್ದಿಷ್ಟವಾದ ಆದೇಶ ಕೊಟ್ಟು ಅವರಿಗೆ ಜಮೀನು ಬಿಡಿಸಿ ಕೊಡುವಂಥ ಕೆಲಸವನ್ನು ಮಾಡಬೇಕು. ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಏನು ಒತ್ತುವರಿ ಮಾಡಿಕೊಂಡಿರುತ್ತಾರೆ ಅವರಿಂದ ಈ ಒಂದು ಸಕ್ರಮಗೊಳಿಸುವಂತಹ ಕಾನೂನಿನ ಮೂಲಕ ಹರಿಜನ ಗಿರಿಜನರಿಗೆ ಅನ್ಯಾಯ ಆಗಬಹುದು, ಆ ರೀತಿ ಅನ್ಯಾಯ ಆಗದಂತೆ ಈ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದು ಹರಿಜನ ಗಿರಿಜನರಿಗೆ ಈ ಒಂದು ಜಮೀನನ್ನು ಉಳುಮೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಸರ್‌ಪ್ಲಸ್ ಲ್ಯಾಂಡ್ ನಮ್ಮ ಜಿಲ್ಲೆಯಲ್ಲಿ ಹಂಚಿಕೆಯಾಗಿಲ್ಲ. ಅದನ್ನು ಕೂಡಲೇ ಹಂಚಿಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಲಂಬಾಣಿ ತಾಂಡಾಗಳು ಇರುವ ಕಡೆ ಸಿ ಅಂಡ್ ಡಿ ಲ್ಯಾಂಡ್‌ನ್ನು ಅವರು ಉಳುಮೆ ಮಾಡಿಕೊಂಡಿದ್ದಾರೆ. ನನ್ನ ಕ್ಷೇತ್ರದ ಹಲಗೂರು ಹೋಬಳಿಯಲ್ಲಿ ಸಿ ಅಂಡ್ ಡಿ ಲ್ಯಾಂಡ್‌ನ್ನು ಅಲ್ಲಲ್ಲಿ ಸಾಗುವಳಿ ಮಾಡಿಕೊಂಡು ಮನೆಗಳನ್ನೂ ಕೂಡ ಕಟ್ಟಿಕೊಂಡಿದ್ದಾರೆ. ಅವನ್ನು ಕಂದಾಯ ಗ್ರಾಮಗಳನ್ನಾಗಿ ತಾವು ಘೋಷಣೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಭೂಹೀನರಿಗೆ, ಹರಿಜನ ಗಿರಿಜನರಿಗೆ ಭೂಮಿ ಇಲ್ಲದಿರುವವರಿಗೆ ಸರಕಾರಿ ಭೂಮಿಯನ್ನು ಕೊಡಬೇಕೆಂದು ಕ್ರಮ ತೆಗೆದುಕೊಂಡಿದ್ದೀರಿ. ಇದು ಅತಿ ಶೀಘ್ರವಾಗಿ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ರುದ್ರಭೂಮಿ ಬಗ್ಗೆ ಏನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆ; ಅದು ಬೇಗ ಜಾರಿಗೆ ಬರಬೇಕು. ಸತ್ತವರಿಗೆ ಹೂಳುವುದಕ್ಕೆ ಜಾಗ ಇಲ್ಲ, ಅದರಲ್ಲೂ ತರಿ ಜಮೀನು ಇರುವ ಕಡೆ ಬಹಳಷ್ಟು ತೊಂದರೆ ಇದೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಸರಕಾರಿ ಜಮೀನನ್ನು ಯಾರು ಒತ್ತುವರಿ ಮಾಡಿಕೊಂಡಿರುತ್ತಾರೆ ಅವರ ಬಗ್ಗೆ ಕಠಿಣ ಕ್ರಮ ತೆಗೆದುಕೊಂಡು ಅದನ್ನು ರುದ್ರಭೂಮಿ ಮಾಡುವುದಕ್ಕೆ ಮೀಸಲಿಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಏನು ಆರಾಧನಾ ಕಾರ್ಯಕ್ರಮ ಜಾರಿಗೆ ತಂದಿದ್ದೀರಿ. ಅದರ ಬಗ್ಗೆ ನನ್ನ ಕ್ಷೇತ್ರದ ಜನರಿಗೆ ಸಾಕಷ್ಟು ಒಲವಿದೆ. ಈ ಕಾರ್ಯಕ್ರಮ ಒಳ್ಳೆಯದು. ಇದಕ್ಕಾಗಿ 1 ಲಕ್ಷದ 77 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತೀರಿ. ಮಾನ್ಯ ಸದಸ್ಯರು ಹೇಳಿದ ಹಾಗೆ, ನಿರ್ದಿಷ್ಟ ಪ್ಲಾನ್ ಪ್ರಕಾರ ಕಟ್ಟಬೇಕೆಂದು ಹೇಳಿರುತ್ತೀರಿ. ದುರಸ್ತಿ ಮಾಡಿಸುವುದಕ್ಕೂ 5 ಸಾವಿರ 10 ಸಾವಿರ ಎಂದು ಕೊಡುತ್ತೀರಿ. ಇದರ ಬಗ್ಗೆ ಅರ್ಜಿಗಳು ಹೆಚ್ಚು ಬಂದುದರಿಂದ 5 ರಿಂದ 10 ಸಾವಿರ ಕೊಡುತ್ತೇವೆ. ಹೆಚ್ಚು ಎಂದರೆ 20 ಸಾವಿರ ಕೊಡುತ್ತೇವೆ ಎಂದು ಹೇಳಿದ್ದೀರಿ. ದಯವಿಟ್ಟು ಈ ಹಣವನ್ನು ಹೆಚ್ಚು ಮಾಡಬೇಕು ಮತ್ತು ನಿಮ್ಮ ಅಧಿಕಾರಿಗಳು ಹೇಳಿದ

ರೀತಿಯಲ್ಲಿಯೇ ನಿರ್ದಿಷ್ಟ ಪ್ಲಾನ್ ಪ್ರಕಾರ ಇದನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆಯಾ ಏರಿಯಾಕ್ಕೆ ಅನುಗುಣವಾದ ರೀತಿಯಲ್ಲಿ ಕಟ್ಟುವುದಕ್ಕೆ ಅವಕಾಶ ಕೊಡಬೇಕು ಹಾಗೂ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಧಾರ್ಮಿಕ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ತಸ್‌ದೀಕ್ ಹಣ ನನ್ನ ತಾಲೋಕಿನಲ್ಲಿ ಕಳೆದ ಸಾರಿ ಸುಮಾರು 44 ಲಕ್ಷ ರೂಪಾಯಿಗಳಷ್ಟು ದುರುಯೋಗವಾಗಿದೆ ಎಂದು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಸಿ.ಒ.ಡಿ ತನಿಖೆ ಮಾಡಬೇಕೆಂದು ಒತ್ತಾಯ ಮಾಡಿದಾಗ ತಾವೂ ಕೂಡ ಭರವಸೆ ಕೊಟ್ಟಿದ್ದೀರಿ. ಆದರೆ ಆದರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ನೀವು ಏನೂ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಅಧಿಕಾರಿಗಳು ನಿರ್ಭಯವಾಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಾಲೋಕಿನಲ್ಲಿ 44 ಲಕ್ಷ ರೂಪಾಯಿಗಳು ಮತ್ತು ಮಾನ್ಯ ಸದಸ್ಯರಾದ ಶಿವರಾಮೇಗೌಡರ ನಾಗಮಂಗಲ ಕ್ಷೇತ್ರದಲ್ಲಿ 50 ಲಕ್ಷ ರೂಪಾಯಿಗಳು ದುರುಪಯೋಗವಾಗಿದೆ. ಇದು ಪತ್ರಿಕೆಗಳಲ್ಲೂ ಕೂಡ ಬಂದಿದ್ದು ಸಂಬಂಧಪಟ್ಟ ಅಧಿಕಾರಿಗಳು ಸಸ್ಪೆಂಡ್ ಆಗಿದ್ದರು. ಸಸ್ಪೆಂಡ್ ಆದವರು ರಿವೋಕ್ ಮಾಡಿಸಿಕೊಂಡಿದ್ದಾರೆ. ತಾವು ಅದನ್ನು ಸಿ.ಒ.ಡಿ. ಯಿಂದ ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದೀರಿ. ಅದರ ಬಗ್ಗೆ ಇದುವರೆಗೂ ಯಾವ ರಿಪೋರ್ಟ್ ಬಂದಿಲ್ಲ. ದಯಮಾಡಿ ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ತಾವು ಸಸ್‌ಪೆಂಡ್‌ನಲ್ಲಿಡುವುದು ಅಥವಾ ಏನು ಮಾಡಬೇಕೋ ಅದನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಮಗೆ ಹೇಳುತ್ತೇನೆ. ಬೋರ್‌ವೆಲ್ಸ್‌ನ್ನು ಜನಸಂಖ್ಯೆಯ ಆಧಾರದ ಮೇಲೆ ಹಾಕಬಾರದು. ಮಾನವೀಯತೆ ದೃಷ್ಟಿಯಿಂದ ಹಾಕಬೇಕು. 2500 ಕುಟುಂಬಗಳು ಇರುವ ಕಡೆ ಬೋರ್‌ವೆಲ್ಸ್ ಹಾಕಿ ಎಂದು ಹೇಳಿದ್ದೀರಿ. ನಮ್ಮ ಕಡೆ ಏನಾಗಿದೆಯೇಂದರೆ. ಹಲಗೂರು. ಬಿಜಿಪುರ ಮತ್ತು ಲಂಬಾಣಿ ತಾಂಡಗಳಲ್ಲಿ 10 ಕುಟುಂಬಗಳು ಒಂದು ಕಡೆ ಇರುತ್ತವೆ. ಅವರು ಕುಡಿಯುವ ನೀರು ತರಲು ಸಾಕಷ್ಟು ದೂರ ಹೋಗಬೇಕಾಗುತ್ತದೆ. ಆದುದರಿಂದ ತಾವು ಈ ನಿಯಮವನ್ನು ಸಡಿಲಗೊಳಿಸಿ ಎಲ್ಲೆಲ್ಲಿ ಹರಿಜನ ಮತ್ತು ಗಿರಿಜನರು ಇದ್ದಾರೆ ಅತವಾ ಆರ್ಥಿಕವಾಗಿ ಹಿಂದುಳಿದವರು ದೂರ ದೂರ ಇದ್ದಾರೆ. ಇಂತಹ ಕಡೆ ಬೋರ್‌ವೆಲ್ ಹಾಕಲು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಕಿರು ನೀರು ಸರಬರಾಜು ಯೋಜನೆಗಳ ಅಡಿಯಲ್ಲಿ ಸಾಕಷ್ಟು ಕಡೆ ಏನಾಗಿದೆ ಎಂದರೆ. ಪೈಪ್ಸ್ ಇಲ್ಲದೆ. ಬೋರ್‌ವೆಲ್‌ಗಳಿಗೆ ಹ್ಯಾಂಡ್ಸ್ ಇಲ್ಲದೆ ನಿಂತಿವೆ. ಅದಕ್ಕೆ ತಾವು ಹೆಚ್ಚಿನ ಪೈಪ್ಸ್ ಮತ್ತು ಹ್ಯಾಂಡ್ಸ್ ಒದಗಿಸಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ. ಸಂಬಂಧಪಟ್ಟ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ಸ್ ಏನು ಇಂಡೆಂಟ್ಸ್ ಹಾಕುತ್ತಾರೋ ಅವರೇ ಅದನ್ನು ಪರ್ಚೇಸ್ ಮಾಡತಕ್ಕಂಥ ಅವಕಾಶ ತಾವು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೆ ಈಗ ಕೃಷಿ ಭೂಮಿಗಳು ಇರುವ ಕಡೆ ವಾಟರ್ ಲೆವೆಲ್ ಸಾಕಷ್ಟು ಕೆಳಗೆ ಹೋಗಿದೆ. ಕಳೆದ ವರ್ಷ ಮಳೆ ಇಲ್ಲದ ಕಾರಣ ಬೋರ್‌ವೆಲ್‌ಗಳನ್ನು 200-250 ಅಡಿಗಳಷ್ಟು ಕೊರೆದರೂ ನೀರು ಸಿಗುತ್ತಿಲ್ಲ. ಆದರೆ ಈ ಸಾರಿ ಸಾಕಷ್ಟು ಮಳೆಯಾಗಿರುವ ಕಾರಣ ನೀರು ಬೇಗ ಸಿಗುತ್ತದೆ. ಆದ್ದರಿಂದ ದಯಮಾಡಿ ತಾವು ಬೋರ್‌ವೆಲ್‌ಗಳಿಗೆ ಬೇಕಾದಂತಹ ಮೆಟೀರಿಯಲ್ಸ್‌ನ್ನು ಒಟ್ಟಿಗೆ ತಂದು ಎಲ್ಲಿ ಬೋರ್‌ವೆಲ್ ಕೊರೆಯುತ್ತಾರೋ ಅಲ್ಲಿ ಹ್ಯಾಂಡ್ಸ್. ಪ್ಲಾಟ್‌ಫಾರಮ್ ಮಾಡುವಂಥ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎಸ್.ಪಿ. ನಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮಶತಾಬ್ದಿ ಕಾಲದಲ್ಲಿ ಕೇಂದ್ರ ಸರ್ಕಾರವನ್ನು ಈಗಾಗಲೇ 3-

ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಅದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ದಯಮಾಡಿ ಆ ಹಣವನ್ನು ತಾಲ್ಲೂಕುವಾರು ಹಂಚಿಕೆ ಮಾಡಬೇಕು: ಅದರಲ್ಲೂ ಎಲ್ಲೆಲ್ಲಿ ಹರಿಜನ ಮತ್ತು ಗಿರಿಜನರು ಹೆಚ್ಚು ಇದ್ದಾರೆ ಅವರಿಗೆ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಜಿಲ್ಲಾ ಪರಿಷತ್ತಿನ ರಸ್ತೆಗಳ ಬಗ್ಗೆ ಹೇಳುವುದಾದರೆ. ಸ್ವಾಮಿ ನನ್ನ ಕ್ಷೇತ್ರದಲ್ಲಿ ಬಹಳಷ್ಟು ಭಾಗಗಳಲ್ಲಿ ಇವತ್ತು ಬಸ್ಸುಗಳು ಓಡಾಡುತ್ತಿಲ್ಲ. ಎಲ್ಲಾ ಬಸ್ಸುಗಳು ನಿಂತಿವೆ. ಉದಾಹರಣೆಗೆ ಹೇಳಬೇಕಾದರೆ. ನಾನು ಕೆ.ಎಸ್.ಆರ್.ಟಿ.ಸಿ. ಎಂ.ಡಿ.ಯವರನ್ನು ಮೀಟ್ ಮಾಡಿದಾಗ ಅವರು ಹೇಳಿದರು. ನಾನು ರಸ್ತೆಗಳನ್ನು ಸರ್ವೆ ಮಾಡಿ ನೋಡಿದ್ದೇನೆ. ನಿಮ್ಮ ಕಡೆಗೆ ಬಸ್ಸುಗಳನ್ನು ಹಾಕಲು ಸಾಧ್ಯವಿಲ್ಲ. ಕಾರಣವೇನೆಂದರೆ ನಾವು 6 ಸಾವಿರ ರೂಪಾಯಿಗಳು ಕೊಟ್ಟು ಒಂದು ಟೈರ್ ತೆಗೆದುಕೊಂಡು ಬಂದು ಹಾಕುತ್ತೇವೆ. ಆ ರಸ್ತೆಯಲ್ಲಿ ನಮ್ಮ ಬಸ್ಸು ಹೋದರೆ ಪುನಃ ಬಸ್ಸು ವಾಪಸ್ ಬರುತ್ತದೋ ಇಲ್ಲವೋ ಎನ್ನುವ ಅನುಮಾನ ನಮಗೆ ಇದೆ ಎಂದು ಅವರು ನನಗೆ ಪತ್ರದ ಮೂಲಕ ತಿಳಿಸಿದ್ದಾರೆ. ಆದ್ದರಿಂದ ದಯಮಾಡಿ ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ತಾವು ಹೆಚ್ಚು ರಿಪೇರಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥಿಸುತ್ತೇನೆ. ಮತ್ತೆ ಹರಿಜನ ಮತ್ತು ಗಿರಿಜನ ವಾಡಿಗಳ ಯೋಜನೆ ಇದೆ. ಈ ಹರಿಜನ ವಾಡಿಗಳಲ್ಲಿ ಕೆಲಸ ನನ್ನ ಕ್ಷೇತ್ರದಲ್ಲಂತೂ ಮಾಡಿಲ್ಲ. ಬೇರೆ ಎಲ್ಲಿ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಒಂದು ತರಹ ಆರತಿ ತೋರಿಸಿದ ಹಾಗೆ ಎಲ್ಲಾ ಕಡೆಯಿಂದ ಕೆಲಸ ಮಾಡಿಕೊಂಡು ಬಂದು ಹರಿಜನ ಕಾಲೋನಿಗೆ ಕೆಲಸ ನಿಲ್ಲಿಸಿದ್ದಾರೆ. ಇದನ್ನು ಯಾವ ಯೋಜನೆಯಲ್ಲಿ ಮಾಡಿದ್ದೀರಿ ಎಂದು ಕೇಳಿದರೆ ಹರಿಜನವಾಡಿ ಯೋಜನೆಯಲ್ಲಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ಸಾಕಷ್ಟು ಅನ್ಯಾಯವಾಗಿದೆ. ಈ ಯೋಜನೆ ಅಡಿಯಲ್ಲಿ ಏನು ಕಾರ್ಯಕ್ರಮಗಳು ಇವೆ ಅವನ್ನು ಸರ್ಕಾರದವರು ಒಂದು ನಿರ್ದಿಷ್ಟವಾದ ಜನಾಂಗಕ್ಕೆ ಹಾಕಿಕೊಂಡಿದ್ದರೋ ಜನಾಂಗದವರು ಇರುವ ಬೀದಿಗಳಲ್ಲಿ ಆಗಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಸಾಕಷ್ಟು ಮಂಡಲ ಪಂಚಾಯಿತಿಗಳಲ್ಲಿ 18 ಪರ್ಸೆಂಟ್ ಹಣವನ್ನು ಉಪಯೋಗ ಮಾಡಿಲ್ಲ. ಕೆಲವರು ಉದ್ದೇಶಪೂರ್ವಕವಾಗಿ ಮಾಡಿಲ್ಲ. ಇನ್ನು ಕೆಲವರು ಅಭಿಮಾನ ಇರತಕ್ಕಂಥವರು ಆ ಜನಗಳ ಕೆಲಸ ಮಾಡಬೇಕೆಂದು ಕಾಳಜಿ ಇದ್ದವರು ಮಾತ್ರ ಮಾಡಿದ್ದಾರೆಯೇ ವಿನಃ ಉಳಿದವರು ಯಾರೂ ಮಾಡಿಲ್ಲ. ಆದ್ದರಿಂದ ತಾವು ನಿರ್ದಿಷ್ಟವಾಗಿ ಆದೇಶ ಕೊಡಬೇಕು. ಒಂದು ವೇಳೆ ಆ ಹಣವನ್ನು ಉಪಯೋಗ ಮಾಡಿಲ್ಲವೆಂದರೆ ನಾವು ಬೇರೆ ಹಣವನ್ನು ಬಿಡುಗಡೆ ಮಾಡುವುದಿಲ್ಲವೆಂದು ಕಟ್ಟುನಿಟ್ಟಾದ ಒಂದು ಕಾನೂನನ್ನು ತಾವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯಗಳನ್ನು. ಕೌಟುಂಬಿಕ ಶೌಚಾಲಯಗಳನ್ನು ಪ್ರಾರಂಭಿಸಬೇಕೆಂದರು ಹೇಳಿದ್ದೀರಿ. ತಾವು ಶೀಘ್ರದಲ್ಲಿ ಶೌಚಾಲಯಗಳನ್ನು ಮಾಡಬೇಕು. ಅದರಿಂದ ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ಸಾಕಷ್ಟು ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಜಿಲ್ಲಾ ಪರಿಷತ್ತಿನಲ್ಲಿ ಏನು 30 ಪರ್ಸೆಂಟ್ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಟ್ಟಿದ್ದೀರಿ. ಅದೇ ರೀತಿ ಪ್ರಧಾನರು ಮತ್ತು ಅಧ್ಯಕ್ಷರ ಹುದ್ದೆಯಲ್ಲಿ ಜಿಲ್ಲೆಯಲ್ಲಿ ಇಷ್ಟು ಕಡೆ ಮಹಿಳೆಯರು ಆಗಬೇಕು ಎಂದು ಇರಬೇಕು. ಪ್ರಧಾನರನ್ನು ಕೂಡ ಮಹಿಳೆಯರಲ್ಲಿ ಮಾಡತಕ್ಕಂಥಾದ್ದು ಇರಬೇಕು. ಉಪಾಧ್ಯಕ್ಷರು, ಉಪ ಪ್ರಧಾನರನ್ನಾಗಿಯೂ ಮಹಿಳೆಯರನ್ನು ಮಾಡಬೇಕು. ಅದೇ ರೀತಿ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಲ್ಲಿ, ಕೊನೆ ಪಕ್ಷ 20 ರಲ್ಲಿ 4 ರಲ್ಲಾದರೂ ಅಧ್ಯಕ್ಷರು

ಹರಿಜನರು ಇರಬೇಕು. ಪ್ರಧಾನರು ಕೂಡ ಹರಿಜನ ಗಿರಿಜನರು ಆಗಬೇಕೆನ್ನುವಂಥ ಮಿಾಸಲಾತಿಯನ್ನು ಕಾನೂನು ಮುಖಾಂತರ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಬೇಡಿಕೆಗಳನ್ನ ಸ್ವಾಗತಿಸುತ್ತಾ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಅಧ್ಯಕ್ಷಣಿಯವರೆ. ಮಾನ್ಯ ಕಂದಾಯ ಸಚಿವರು. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಪಟ್ಟಂತ ಬೇಡಿಕೆಗಳನ್ನು ಏನು ಮಾಡಿಸಿದ್ದಾರೆ ಅವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಕಂದಾಯ ಇಲಾಖೆ ಭಾರಿ ಪ್ರಾಮುಖ್ಯವಾದಂಥ ಇಲಾಖೆ. ಜನರಿಗೆ ಸ್ಪಂದನವಾಗುವಂಥ ಅದರಲ್ಲೂ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಜನರಿಗೆ ಸ್ಪಂದನ ಆಗುವಂಥ ಇಲಾಖೆ. ಹುಟ್ಟಿದರೂ ಕಂದಾಯ ಇಲಾಖೆ ಬೇಕು, ಮದುವೆ ಆಗುವುದಕ್ಕೂ ಕಂದಾಯ ಇಲಾಖೆ ಬೇಕು, ಪರಿಹಾರ ಕೊಡುವುದಕ್ಕೂ ಕಂದಾಯ ಇಲಾಖೆ ಬೇಕು, ಬರ ಬಂದರೆ ಕಂದಾಯ ಇಲಾಖೆ ಬೇಕು, ನೆರೆ ಬಂದರೆ ಕಂದಾಯ ಇಲಾಖೆ ಬೇಕು. ಸತ್ತರ ಕಂದಾಯ ಇಲಾಖೆ ಬೇಕು. ಆದುದರಿಂದ ಕಂದಾಯ ಇಲಾಖೆ ಅತಿ ಪ್ರಾಮುಖ್ಯವಾದಂಥ ಇಲಾಖೆಯಾಗಿದೆ. ಈ ಸಲ ಮಾನ್ಯ ಕಂದಾಯ ಸಚಿವರು ಒಳ್ಳೆಯ ರೀತಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಸ್ಪಂದನವಾಗುವಂಥ ರೀತಿಯಲ್ಲಿ. ಅದರಲ್ಲೂ ರೈತರಿಗೆ ಸ್ಪಂದನವಾಗುಂಥ ರೀತಿಯಲ್ಲಿ ಹಲವಾರು ರೀತಿಯ ಕಾನೂನುಗಳನ್ನು ತರುವುದರ ಜೊತೆಯಲ್ಲಿ ಬಹುಶಃ ಒಂದು ಪಾವರ್‌ಫ್ಲೆಟ್ ಕೂಡ ಪ್ರಿಂಟ್ ಮಾಡಿಸಿದ್ದಾರೆ. ರೈತರ ಬದುಕಿಗೆ ಭರವಸೆಯ ಹೊಂಗಿರಣ ಎನ್ನುವ ದಿಸೆಯಲ್ಲಿ ಕಾರ್ಯಕ್ರಮ ರೂಪಿಸಿದ್ದಾರೆ. ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಜನರಿಂದ ದೂರ ಹೋಗುವಂಥ ಒಂದು ಇಲಾಖೆ. ಈ ಕಂದಾಯ ಇಲಾಖೆ ಆಗಿತ್ತು. ಇವತ್ತು ಜನರಿಗೆ ಸ್ವಲ್ಪ ಹತ್ತಿರ ಬರುವಂಥ ಹಲವಾರು ಕಾರ್ಯಕ್ರಮಗಳು ನಡೆದಿವೆ. ಕ್ರಾಂತಿಕಾರಕವಾದಂಥ ಒಂದು ಕಾನೂನು ಕೂಡ ಬಂದಿದೆ. ಭೂ ಮಸೂದೆಯು ಯಾವ ರೀತಿ ಕ್ರಾಂತಿಕಾರಕವಾದ ಕಾನೂನು ಆಗಿದೆಯೋ ಅದೇ ರೀತಿಯಲ್ಲಿ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂಥ ಕಾನೂನನ್ನು ಏನು ತಂದಿದ್ದಾರೆ ಅದೂ ಕೂಡ ಅಷ್ಟೇ ಕ್ರಾಂತಿಕಾರಕವಾದಂಥ ಕಾನೂನು. ಇದೊಂದು ಚರಿತ್ರಾರ್ಹವಾದುದು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 1985ನೇ ಇಸವಿಯಲ್ಲಿ ನನ್ನ ಕ್ಷೇತ್ರದಿಂದ ನಾನು ಇಲ್ಲಿಗೆ ಪ್ರತಿನಿಧಿಸುವುದಕ್ಕೆ ಬಂದಂಥ ಸಂದರ್ಭದಲ್ಲಿ ಅಂದರೆ 1985ನೇ ಇಸವಿಯಿಂದಲೂ ಕೂಡ ಆಗ ಇದ್ದಂಥ ಸರ್ಕಾರಕ್ಕೆ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಮಟ್ಟಿಗೆ ಕಾನೂನು ಬದಲಾವಣೆ ತರಬೇಕು ಎಂದು ಒತ್ತಾಯ ತರುವಂಥ ಕಾರ್ಯಕ್ರಮಗಳನ್ನು ನಡೆಸಿ, ಇದೇ ರೆವಿನ್ಯೂ ಸಚಿವರ ನಾಯಕತ್ವದಲ್ಲಿ, ಈಗಿನ ಮುಖ್ಯ ಮಂತ್ರಿಗಳ ನಾಯಕತ್ವದಲ್ಲಿ ಎಷ್ಟೋ ಸಂದರ್ಭದಲ್ಲಿ ಧರಣಿ ನಡೆಸಿದಂಥ ಸಂದರ್ಭದಲ್ಲೂ ಕೂಡ ಹಿಂದಿನ ಸರ್ಕಾರ ಅದನ್ನು ಜನರ ಸಮಸ್ಯೆ ಎನ್ನುವುದನ್ನು ಬಿಟ್ಟು ರಾಜಕೀಯವಾದಂಥ ರೀತಿಯಲ್ಲಿ ನೋಡಿ ಕಡೇ ಹಂತದಲ್ಲೂ ಕೂಡ ಆ ಕಾನೂನಿಗೆ ಬದಲಾವಣೆ ತರದೆ, ಅದರಿಂದ ಜನರಿಗೆ ಪ್ರಯೋಜನವಾಗುವಂಥ ಕೆಲಸಕಾರ್ಯ ನಡೆಸದೆ ಇರುವಂಥ ಹಿನ್ನೆಲೆ ಕೂಡ ಇದೆ. ಇವತ್ತುಯಾರು ಯಾರಿಗೆ ಶಕ್ತಿ ಇದೆ. ಯಾರು ಯಾರಿಗೆ ಮಸಲ್ ಪವರ್ ಇದೆ, ಹಣದ ಶಕ್ತಿ ಇದೆ ಅಂತಹವರಿಗೆ ಒಂದೊಂದು, ಎರಡೆರಡು, ಮೂರು ಮೂರು ಭೂಮಿ ಪಟ್ಟಾ ಕೊಡುವಂಥ ವ್ಯವಸ್ಥೆಯಾಗಿದೆ. ಯಾರ ಹತ್ತಿರ ವಿದ್ಯಾಭ್ಯಾಸ ಇಲ್ಲ. ಯಾರ ಹತ್ತಿರ ಹಣದ ಶಕ್ತಿ ಇಲ್ಲ ಅವರಿಗೆ ಶಾನುಭೋಗ ಏನು ಅಳತೆ

ಮಾಡಿಕೊಟ್ಟಿದ್ದಾನೆ ಆ ಜಾಗವನ್ನು ಅನುಭೋಗ ಮಾಡಿಕೊಂಡು ಕೃಷಿ ಮಾಡಿಕೊಂಡು ಇವತ್ತಿಗೂ ಕೂಡ ನಾವು ವಿಚಾರಣೆ ಮಾಡುವಂಥ ಸಂದರ್ಭದಲ್ಲಿ 45 ವರ್ಷಗಳ ಹಿಂದಿನ ಫೈಲ್ ಕೂಡ ಅಂದರೆ ಅಷ್ಟು ವರ್ಷಗಳಿಂದ ಬಾಕಿ ಇರುವಂಥ ಕಡತಗಳನ್ನು ನಾವು ಕಾಣುತ್ತಿದ್ದೇವೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ 28 ಸಾವಿರದ 4 ನೂರು ಅರ್ಜಿಗಳು ಈ ಒಂದು ಅಕ್ರಮ ಸಕ್ರಮಕ್ಕೆ ಬಂದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಆಸುಪಾಸಿನ ಕಡು ಬಡ ಕುಟುಂಬಕ್ಕೆ ಸೇರಿದಂಥವರು ಎಷ್ಟೋ ವರ್ಷಗಳಿಂದ ನ್ಯಾಯವಾಗಿ ಸರ್ಕಾರದ ಸವಲತ್ತು ಸಿಗಬೇಕೆಂದು ಇದ್ದರೂ ಕೂಡ ಹಕ್ಕುಪತ್ರ ಇಲ್ಲ ಎನ್ನುವ ಕಾರಣಕ್ಕೋಸ್ಕರ ಯಾವ ರೀತಿಯ ಸವಲತ್ತು ಕೂಡ ಅವರಿಗೆ ಸಿಗದಂಥ ಪರಿಸ್ಥಿತಿ ಏನಿತ್ತು. ಅದಕ್ಕೆ ಪೂರ್ಣ ವಿರಾಮ ಹಾಕುವಂಥ ಒಂದು ಕಾನೂನು ಈಗಲೇ ಬಂದಿದೆ. ಈಗಾಗಲೇ ಅದಕ್ಕೆ ಕಮಿಟಿ ಕೂಡ ರಚನೆಯಾಗಿ ಆ ಕಮಿಟಿ ಮುಖಾಂತರ ತೀರ್ಮಾನ ಮಾಡುವಂಥ ಒಂದು ಕ್ರಾಂತಿಕಾರಕವಾದ ಕಾನೂನು ಅವಶ್ಯಕತೆ ಇತ್ತು. ಇದು ಅನುಷ್ಠಾನಕ್ಕೆ ಬರುವಂಥ ಅವಕಾಶವಾಗಿದೆ.

ಅದೇ ರೀತಿಯಲ್ಲಿ ಮನೆ ನಿವೇಶನಗಳ ವಿಚಾರದಲ್ಲಿ ಹೇಳುವುದಾದರೆ. ಹಿಂದಿನ ಸರಕಾರ ಇದ್ದಂಥ ಸಂದರ್ಭದಲ್ಲ ಒಂದು ನಿವೇಶನವನ್ನು ಬಡವರಿಗೆ ಕೊಡಬೇಕಾಗಿದ್ದರೆ, ಪಟ್ಟಣ ಪ್ರದೇಶಗಳಲ್ಲಿ ಯಾವ ರೀತಿಯ ಒಂದು ಮೌಲ್ಯವನ್ನು ಕೊಡಬೇಕಾಗಿ ಬರುತ್ತಿತ್ತೋ ಅದೇ ರೀತಿಯಲ್ಲಿ ಕೊಡುವಂಥ ಒಂದು ಅವಕಾಶ ಎಲ್ಲಾ ಕಡೆಗಳಲ್ಲಿಯೂ ಇತ್ತ. ಆದರೆ ಇತ್ತೀಚೆಗೆ ಆಶ್ರಯ ಕಾರ್ಯಕ್ರಮದ ಮುಖಾಂತರ ಸಂಪೂರ್ಣ ರಿಯಾಯಿತಿ ಅಥವಾ ಧರ್ಮಾರ್ಥವಾಗಿ ಹಕ್ಕುಪತ್ರ ಕೊಡುವ ಕಾರ್ಯಕ್ರಮವನ್ನು ನಮ್ಮ ಸರಕಾರದವರು ಹಾಕಿಕೊಂಡಿದ್ದಾರೆ. ಇದೊಂದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಮೂರು ಸೆಂಟ್ಸ್‌ನ ಸೈಟ್ಸ್ ಎಂದು ಏನು ಮಾಡಿದ್ದಾರೆ ಅದು ಸಾಕಾಗುವುದಿಲ್ಲ. ಆದ್ದರಿಂದ ಅದನ್ನ ಐದು ಸೆಂಟ್ಸ್‌ಗೆ ಏರಿಸಬೇಕು. ಐದು ಸೆಂಟ್ಸ್ ಮನೆ ನಿವೇಶನವನ್ನ ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಸೇರಿದ ಕಾರ್ಯವಾಗಿದ್ದರೂ ಕೂಡ ಜಮೀನು ತಮ್ಮ ಇಲಾಖೆಯ ವತಿಯಿಂದ ಪುರಸಭೆಗೆ ಅಲ್ಲಿಯ ಆಶ್ರಯ ಸಮಿತಿಯವರಿಗೆ ಕೊಡಬೇಕಾಗಿದೆ. ಆ ಸಂದರ್ಭದಲ್ಲಿ ಅರ್ಬನ್‌ನಲ್ಲಿಯೂ ಕೂಡ ಇಂಥ ಆಶ್ರಯ ಸಮಿತಿಗಳಿಗೆ ಜಮೀನು ಒದಗಿಸುವಂಥ ಕೆಲಸ ಕಾರ್ಯಗಳು ನಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ನಗರ ಪ್ರದೇಶಗಳಲ್ಲಿಯೂ ಕೂಡ ಸರ್ಕಾರದ ಭಾಗವನ್ನು ಅತಿಕ್ರಮಣ ಮಾಡಿಕೊಂಡು ಬಂದಿದ್ದಾರೆ. ಮನೆ ನಿವೇಶನ ಅಥವಾ 10-15 ಸೆಂಟ್ಸ್ ಜಾಗವನ್ನು ಎಷ್ಟೋ ವರ್ಷಗಳಿಂದ ಅತಿಕ್ರಮಣ ಮಾಡಿಕೊಂಡು ಬಂದವರಿದ್ದಾರೆ. ಅಂಥವರ ವಿಚಾರವನ್ನು ಕೂಡ ಪರಿಗಣನೆಗೆ ತೆಗೆದುಕೊಂಡು ಅವರಿಗೆ ಪರಿಹಾರ ಒದಗಿಸುವ ಕಾರ್ಯಕ್ರಮವನ್ನ ಹಮ್ಮಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂಥ ಸಮಸ್ಯೆ. ಏನೆಂದರೆ, ನಮ್ಮಲ್ಲಿ ಕುಮ್ಕಿ ಹಕ್ಕು ಎಂದು ಹಿಂದಿನಿಂದಲೂ ಇದೆ. ನಮ್ಮ ಜಿಲ್ಲೆಯು ಮದ್ರಾಸ್‌ಗೆ ಸೇರಿದಂಥ ಸಂದರ್ಭದಲ್ಲಿ, ಮಲಬಾರ್ ಡಿಸ್ಟ್ರಿಕ್ಟ್ ಎಂದು ಇದ್ದಂಥ ಸಂದರ್ಭದಲ್ಲಿ ನಮಗೆ ಅಂಥ ಒಂದು ಪ್ರಿವಿಲೇಜ್ ಇತ್ತು. ಮಡಿಕೇರಿಯಲ್ಲಿ ಜಮ್ಮಾ ಎಂದು ಇದೆ. ಸುಳ್ಯ ಪ್ರದೇಶದಲ್ಲಿ ಕಾನಬಾನ ಎಂದು ಹೇಳುತ್ತಾರೆ. ಇದರಲ್ಲಿ 50 ಪರ್‌ಸೆಂಟ್ ಜಮೀನಿನ ಒಡೆಯನಿಗೆ, 50 ಪರ್‌ಸೆಂಟ್ ಸರಕಾರಕ್ಕೆ ಅಧೀನ ಎಂದು ಇತ್ತು. ಹೀಗೆ ಎಷ್ಟೋ ವರ್ಷಗಳಿಂದ ಈ ಕುಮ್ಕಿ ಹಕ್ಕನ್ನು ಜನರು ಅನುಭೋಗ ಮಾಡಿಕೊಂಡು ಬಂದಿದ್ದಾರೆ. ರಾಜ್ಯ ವಿಂಗಡಣೆ ಆದಂಥ ಸಂದರ್ಭದಲ್ಲಿ ಕಾಸರಗೋಡು ಕೇರಳಕ್ಕೆ ಸೇರಿದ ಸಂದರ್ಭದಲ್ಲಿ, ಕೇರಳ ರಾಜ್ಯ ತೀರ್ಮಾನ ತೆಗೆದುಕೊಂಡಿದೆ. ಅಲ್ಲಿ ಕುಮ್ಕಿ ಹಕ್ಕನ್ನು ಜಮೀನಿನ ಒಡೆಯರಿಗೆ ಕೊಡುವಂಥ ಕಾರ್ಯವನ್ನು

ಮಾಡಿದ್ದಾರೆ. ಹಾಗೆಯೇ ಇಲ್ಲಿಯೂ ಕೂಡ ತೀರ್ಮಾನ ಆಗಬೇಕು ಮತ್ತು ಆ ದಿಶೆಯಲ್ಲಿ ಮಾನ್ಯ ಸಚಿವರು ಆದಷ್ಟು ಶೀಘ್ರವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಯಾರ್‍ಯಾರು ಪಟ್ಟಾದಾರರು ಇದ್ದಾರೋ, ಯಾರ್‍ಯಾರು ಕುಮ್ಕಿ ಜಮೀನಿನ ಒಡೆಯರು ಇದ್ದಾರೋ ಅವರಿಗೆ ಪೂರ್ಣ ಹಕ್ಕನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇನ್ನು ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ದಿಸೆಯಲ್ಲಿ ನಾವು ಪುತ್ತೂರಿನಲ್ಲಿ ಈಗಾಗಲೇ ಅರ್ಜಿಗಳನ್ನು ತನಿಖೆ ಮಾಡುವಂಥ ವಿಚಾರದಲ್ಲಿ ಮುಂದುವರಿದಿದ್ದು, ಸುಮಾರು 500 ಪ್ರಕರಣಗಳನ್ನು ಈಗಾಗಲೇ ಪೂರ್ತಿ ಮಾಡುತ್ತಾ ಬಂದಿದ್ದೇವೆ. ತನಿಖೆ ನಡೆಸುವ ಸಂದರ್ಭದಲ್ಲಿ ಕೆಲವೊಂದು ಸಮಸ್ಯೆಗಳು ನಮಗೆ ಎದುರಾಗಿವೆ. ಅರ್ಜಿಗಳನ್ನು ಕೊಡಲು ಸಾಕಷ್ಟು ಪ್ರಚಾರ ಮಾಡಿದ್ದಾಗ್ಯೂ ವಿದ್ಯಾಭ್ಯಾಸವಿಲ್ಲದಂಥ ಕಡುಬಡವರ ವರ್ಗ ಏನಿದೆ, ಆ ಜನರು ಇನ್ನೂ ಕೂಡ ಅರ್ಜಿಗಳನ್ನು ಕೊಡದೇ ಇರುವ ಪ್ರಸಂಗಗಳನ್ನು ನಾವು ಕಾಣುತ್ತಾ ಇದ್ದೇವೆ. ನಮ್ಮ ಹತ್ತಿರ ಅವರ ಕಡತ ಇದೆ, ಎಂಸಿಆರ್ ಫೈಲ್ ಇದೆ, ಆದರೆ ಅವರಿಂದ ಅರ್ಜಿಗಳು ಬಂದಿಲ್ಲ. ಈ ನಡುವೆ ಅರ್ಜಿ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಸಚಿವರ ಒಂದು ಹೇಳಿಕೆ ಬಂದಿದೆ. ಈ ಅರ್ಜಿ ಕೊಡುವ ಅವಧಿಯನ್ನು ಮುಂದುವರಿಸುತ್ತೇವೆ ಎಂದು ಹೇಳಿದ್ದಾರೆ. ಇನ್ನೂ ಸ್ವಲ್ಪ ಮಟ್ಟಿಗೆ ಯಾರಾದರೂ ಬಡವರದು ಬಿಟ್ಟುಹೋಗಿದೆ ಅವರಿಗೆ ಅರ್ಜಿ ಕೊಡುವ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ. ಹಾಗೆಯೇ ನಾವು ಕಮಿಟಿಯವರು ತೀರ್ಮಾನ ಮಾಡಿದ್ದನ್ನು ಕೂಡ ಅಸಿಸ್ಟೆಂಟ್ ಕಮಿಷನರ್‌ರವರು ರಿಜೆಕ್ಟ್ ಮಾಡಬಹುದಾಗಿದೆ. ತಮ್ಮ ಕಾನೂನಿನಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಒಂದು ಅಧಿಕಾರವನ್ನು ಕೊಟ್ಟು, ನಾವು ತೀರ್ಮಾನ ಮಾಡಿದ್ದನ್ನು ಅವರು ರಿಜೆಕ್ಟ್ ಮಾಡಬಹುದು ಎಂದು ಮಾಡಿದ್ದೀರಿ. ಈ ದಿಸೆಯಲ್ಲಿ ಜನರ ಸಮಸ್ಯೆಗಳು ಗೊತ್ತಿಲ್ಲದಂಥ ಅಧಿಕಾರಿಗಳು ಸಮಿತಿಯವರು ಮಾಡಿದಂಥ ತೀರ್ಮಾನವನ್ನು ರಿಜೆಕ್ಟ್ ಮಾಡುವಂಥ ಹಂತಕ್ಕೆ ಬಂದರೆ ಇದರಿಂದ ಅನ್ಯಾಯವಾಗುವುದಕ್ಕೆ ಅವಕಾಶ ಇರುತ್ತದೆ. ಇದನ್ನು ತಾವು ಪರಿಶೀಲಿಸಬೇಕು. ನಮ್ಮಲ್ಲಿ ಫಾರೆಸ್ಟ್‌ಫರ್‌ಗೂ, ಸರಕಾರಿ ಜಾಗಕ್ಕೂ 100 ಮೀಟರ್ ಅಂತರ ಇರಬೇಕೆಂದು ಇದೆ. ಆದರೆ ಕೆಲವೊಂದು ಫೈಲ್‌ನಲ್ಲಿ 100 ಮೀಟರ್ ಅಂತರ ಇರುವುದಿಲ್ಲ. ಹೀಗೆ ಅಂತರ ಇಲ್ಲದಂತ ಎಷ್ಟೋ ಕೇಸ್‌ಗಳು ರೆವಿನ್ಯೂಗೆ ಸಂಬಂಧಪಟ್ಟಂಥ ಫೈಲ್‌ಗಳು ಬೇಕಾದಷ್ಟು ಬಾಕಿ ಇವೆ. ಅಂಥವರಿಗೆ 20-30 ವರ್ಷಗಳಾದರೂ ಕೂಡ ಹಕ್ಕುಪತ್ರ ಕೊಡುವ ವ್ಯವಸ್ಥೆ ಇನ್ನೂ ಆಗಿಲ್ಲ. ಈ ಬಗ್ಗೆ ಒಂದು ತೀರ್ಮಾನವನ್ನು ಮಾಡಬೇಕು. ಕುಮ್ಕಿ ಜಾಗದಲ್ಲಿ ಯಾರಾದರೂ ಅಕ್ರಮಣ ಮಾಡಿದ್ದರೆ, 6 ತಿಂಗಳ ಒಳಗಾಗಿ ಅದಕ್ಕೆ ಅವರು ಆಕ್ಷೇಪಣೆ ಕೊಡಬೇಕೆಂದು ಇದೆ. ಹಾಗೆ ಕೊಡದಿದ್ದರೆ ಅದನ್ನು ಕನ್‌ಫರ್ಮ್ ಮಾಡಬಹುದು ಎಂದು ಇದೆ. ಇದರ ಬಗ್ಗೆ ತಾವು ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗಾಗಲೆ ಕನ್‌ವರ್ಶನ್‌ಗೆ ಒಂದು ವ್ಯವಸ್ಥೆ ಮಾಡಿ. ಹೊಸ ಕಾನೂನೊಂದು ತಂದು ಅಸಿಸ್ಟೆಂಟ್ ಕಮಿಷನರ್‌ಗೆ ಅಧಿಕಾರ ಕೊಟ್ಟು ಸರಳಗೊಳಿಸುವ ಕಾರ್ಯಕ್ರಮವಾಗಿದೆ. ಇದರಿಂದ ಎಷ್ಟೋ ಜನರಿಗೆ ಕೂಡ ಪ್ರಯೋಜನವಾಗಿದೆ. ಕೃಷಿ ಜಮೀನನ್ನು ಸರಳಗೊಳಿಸಿ ಮನೆ ಕಟ್ಟಲಿಕ್ಕೆ ಅಥವಾ ಕಮರ್ಶಿಯಲ್ ಮಾಡಿಕೊಳ್ಳುವ ದಿಸೆಯಲ್ಲಿ ಪ್ರಯೋಜನವಾಗಿದೆ. ಭೂಮಸೂದೆಯ ಕಾನೂನಿನ ಅನುಷ್ಠಾನದಲ್ಲಿ ಇನ್ನೂ ಕೂಡ ಎಷ್ಟೋ ಕಡತಗಳು ವಿಲೇವಾರಿಯಾಗದೆ ಪೆಂಡಿಂಗಿವೆ. ತಾವು ಅಪಲೇಟ್ ಟ್ರಿಬ್ಯುನಲ್ಸ್‌ಗಳನ್ನು ರದ್ದು ಮಾಡಿದ್ದೀರಿ. ಇದರಿಂದಾಗಿ ನ್ಯಾಯವಾಗಿ ಯಾರ ಹತ್ತಿರ ರೆಕಾರ್ಡ್ ಇಲ್ಲವೋ, ಸರಿಯಾದ ಸಾಬೀತು ಸಾಕ್ಷಿ ಆಧಾರ ಇಲ್ಲವೋ ಅಂತಹ

ಒಕ್ಕಲುಗಳೇನಿದ್ದಾರೆ ಅವರಿಗೆ ಭೂಮಿ ಸಿಗುವಂತಹ ಅವಕಾಶ ಪುನಃ ಒದಗಿಬಂದಿದೆ. ಅಪೀಲೇಟ್ ಟ್ರಿಬ್ಯುನಲ್‌ಗಳಲ್ಲಿ ತೀರ್ಮಾನವಾದ ಕೆಲವು ಫೈಲುಗಳನ್ನು ನೋಡಿದರೆ ಇವತ್ತು ಯಾರು ನಿಜವಾದ ಒಕ್ಕಲಿದ್ದಾರೆ ಅವರಿಗೆ ವಿರುದ್ಧವಾಗಿ ತೀರ್ಮಾನವಾಗಿರುವುದು ತಿಳಿದು ಬರುತ್ತದೆ.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನಲಂಕರಿಸಿದರು)

ಆ ದೃಷ್ಟಿಯಿಂದ ಅಂತಹ ಫೈಲುಗಳ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಅಪಿಲೇಟ್ ಟ್ರಿಬ್ಯೂನಲ್‌ನಲ್ಲಿ ತೀರ್ಮಾನವಾಗಿ ಹೈಕೋರ್ಟಿಗೆ ಬಂದು ರಿಜೆಕ್ಟಾಗಿರುತ್ತವೆ. ನಿಜವಾಗಿ ಅವನು ಒಕ್ಕಲಿದ್ದಾಗಲೂ ರಿಜೆಕ್ಟ್ ಆಗುವಂಥ ಪ್ರಸಂಗವಿದೆ. ಹೈಕೋರ್ಟಿನಲ್ಲಿ ರಿಜೆಕ್ಟ್ ಆದ ನಂತರ ಸುಪ್ರೀಂ ಕೋರ್ಟಿಗೆ ಅಥವಾ ಬೇರೆ ಕಡೆಗೆ ಹೋಗಲು ಅವಕಾಶ ಇಲ್ಲ. ಒಂದು ವೇಳೆ ರಿಜೆಕ್ಟ್ ಆಗಿದ್ದರೂ ಅದನ್ನು ಪುನರ್‌ವಿಮರ್ಶೆ ಮಾಡುವಂತಹ ಒಂದು ಅವಕಾಶವನ್ನು ತಮ್ಮ ಕಾನೂನಿನಲ್ಲಿ ಅಳವಡಿಸಿಕೊಂಡು ಹೋಗಬೇಕು. ಅವತ್ತು ಹೈಕೋರ್ಟಿನಲ್ಲಿ ರಿಜೆಕ್ಟ್ ಆದರೆ ಭೂಮಾಲೀಕರು ನೇರವಾಗಿ ಅದರ ಸ್ವಾಧೀನತೆಗೆ ಬರುವಂತಹ ಕೆಲವು ಪ್ರಸಂಗಗಳಿವೆ. ಆ ದೃಷ್ಟಿಯಿಂದ ರಕ್ಷಣೆ ಕೊಡುವಂತಹ ಕ್ರಮವನ್ನು ಕಾನೂನಿನಲ್ಲಿ ರೂಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕೃಷಿ ಕೂಲಿ ಮಾಡುವವರಿಗೆ ಮನೆ ನಿವೇಶನ ಕೊಡುವ ಕಾರ್ಯಕ್ರಮ ಹಿಂದೆ ಇತ್ತು. ಆದರಲ್ಲಿ ಎಷ್ಟೋ ಜನರಿಗೆ, ಒಕ್ಕಲುಗಳಿಗೆ ಅರ್ಜಿ ಕೊಡುವ ಅವಕಾಶ ಆಗಲಿಲ್ಲ. ಈ ದೃಷ್ಟಿಯಿಂದ ಹಿಂದೆ ತುಂಬ ಸಲ ನಾವು ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅಂಥವರಿಗೆ ತಾವು ಅರ್ಜಿಕೊಡುವ ಅವಕಾಶ ಇನ್ನೊಂದು ಸಲ ತಾವು ಕಲ್ಪಿಸಿಕೊಡಬೇಕು. ಕೃಷಿ ಕೂಲಿಕಾರರಿಗೆ ಮನೆ ನಿವೇಶನ ಕೊಡುವ ಬಗ್ಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸೆಕ್ಷನ್ 79ಎ ಪ್ರಕಾರ 12 ಸಾವಿರಕ್ಕಿಂತ ಆದಾಯ ಜಾಸ್ತಿಯಿರುವವರು ಕೃಷಿ ಜಾಗವನ್ನು ಪರ್ಚೇಸ್ ಮಾಡಬಾರದೆಂದು ಕಾನೂನಿತ್ತು. ತಾವು ಇತ್ತೀಚೆಗೆ ತಿದ್ದುಪಡಿ ತಂದು ಅದನ್ನು 50 ಸಾವಿರ ರೂಪಾಯಿಗಳಿಗೆ ಏರಿಸಿದ್ದೀರಿ. ಆದರೆ ನಮ್ಮಲ್ಲಿ ಹಿಂದಿನಿಂದ. ಅಸಿಸ್ಟೆಂಟ್ ಕಮಿಷನರ್ ಅಫೀಸಿನಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಕಡತಗಳಿವೆ. ಹಿಂದೆ 12 ಸಾವಿರಕ್ಕಿಂತ ಜಾಸ್ತಿ ಆದಾಯವಿದ್ದವರು ಪರ್ಚೇಸ್ ಮಾಡಿದವುಗಳಿಗೂ ಸೀಮಿತವಾಗುವ ರೀತಿಯಲ್ಲಿ ಒಂದು ತಿದ್ದುಪಡಿಯನ್ನು ರೂಪಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಹಳ್ಳಿಗಳಲ್ಲಿ ಯುವಕ ಮಂಡಲ ಇರುವಾಗ ಅವುಗಳ ಕಟ್ಟಡಕ್ಕೆ ಸೈಟ್ ಬೇಕು ಎಂದು ಬೇಡಿಕೊಳ್ಳುತ್ತಾರೆ. ಆ ನಿವೇಶನಕ್ಕೆ ತಾವು ವ್ಯಾಲ್ಯುಯೇಶನ್ ಸಾಧಾರಣ 8 ರಿಂದ 10 ಸಾವಿರ ಕಟ್ಟುತ್ತಾ ಇದ್ದೀರಿ. ಇಂತಹ ಯುವಕ ಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಸೈಟನ್ನು ಫ್ರೀಯಾಗಿ ಕೊಟ್ಟರೆ ಒಳ್ಳೆಯದು ಅಥವಾ ರಿಯಾಯ್ತಿಯಲ್ಲಾದರು ಕೊಡುವ ರೀತಿ ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಪ್ರಕೃತಿವಿಕೋಪದ ಮಟ್ಟಿಗೆ ನೆರೆಹಾವಳಿ ಬಗ್ಗೆ ನಮ್ಮ ಮಲೆನಾಡಿನಲ್ಲಿ ಪರಿಹಾರ ಕೊಡುವ ವ್ಯವಸ್ಥೆ ಇದೆ. ಆದರೆ ಸಿಡಿಲು ಹೊಡೆದು ಕೃಷಿ ಹಾಳಾದರೆ ಅದಕ್ಕೆ ಪರಿಹಾರ ಕೊಡುವ ವ್ಯವಸ್ಥೆ ಇಲ್ಲ. ಮಳೆಹಾನಿಗಾಗಿ ಪರಿಹಾರ ಕೊಡುವ ರೀತಿಯಲ್ಲಿ ಇದಕ್ಕೂ ಕೊಡಬೇಕು. ಆದರಿಂದ ರೈತರಿಗೆ ಪ್ರಯೋಜನವಾಗುವಂತಹ ಅವಕಾಶ ಇದೆಯೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ಜನಸಂಪರ್ಕ ಸಭೆಯನ್ನು ತಿಂಗಳಿಗೆ 4 ಸಾರಿ ನಡೆಸಬೇಕೆಂದು ನಿರ್ದೇಶನ ಇದೆ. ಆ ಜನಸಂಪರ್ಕ ಸಭೆಗಳು ಸಂಪೂರ್ಣ ನಿಂತುಹೋಗುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಈ ಬಗ್ಗೆ ಜನಸಂಪರ್ಕ ಸಭೆಗೂ, ತಮ್ಮ ಗ್ರಾಮ ಸಭೆಗೂ ಹೊಂದಾಣಿಕೆಯಾಗುವಂತಹ ರೀತಿಯಲ್ಲಿ ಪ್ರತಿ ತಿಂಗಳೂ, ಪ್ರತಿ ಇಲಾಖೆಯವರು, ತಾಲ್ಲೂಕು

ಮಟ್ಟದ ಅಧಿಕಾರಿಗಳು ಗ್ರಾಮಸಭೆ ಮತ್ತು ಜನಸಂಪರ್ಕ ಸಭೆಗಳನ್ನು ನಡೆಯಬೇಕೆಂದು ತಾವು ನಿರ್ದೇಶನ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ದತ್ತಿ ಇಲಾಖೆಗೆ ಹೊಂದಿಕೊಂಡಂತೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮದರಾಸು ಆಕ್ಟ್ ರೀತಿಯಲ್ಲಿ ಬಳಕೆಯಲ್ಲಿದೆ. ಭಕ್ತಾಭಿಮಾನಿಗಳ ಮುಖಾಂತರ ನಾವು ಆಡಳಿತ ಸಮಿತಿ ನೇಮಕ ಮಾಡುವಂತಹ ಆಕ್ಟ್ ನಮ್ಮಲ್ಲಿದೆ. ಆದರೆ ಇತ್ತೀಚೆಗೆ ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಕಾಣುತ್ತಿದ್ದೇವೆ ಎಂದರೆ, ಅಧಿಕಾರಿಗಳಿಂದ ಈ ಒಂದು ಆ್ಯಕ್ಟ್‌ನ ಮುಖಾಂತರ ಇರುವಂಥ ಹಕ್ಕಿಗೆ ದೊಡ್ಡ ಕೊಡಲಿ ಪೆಟ್ಟು ಬೀಳುವಂಥ ಪ್ರಸಂಗವನ್ನು ನಾವು ಕಾಣುತ್ತಿದ್ದೇವೆ. ಎಲ್ಲಾ ದೇವಸ್ಥಾನಗಳಲ್ಲೂ ಎಕ್ಸಿಕ್ಯೂಟಿವ್ ಆಫೀಸರ್ ಇರುವಂಥದ್ದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಭಕ್ತಾಭಿಮಾನಿಗಳಿಗೆ ಆಡಳಿತ ಮಂಡಲಿಗಳನ್ನು ನೇಮಕ ಮಾಡುವಂಥ ಹಕ್ಕಿದ್ದರೂ ಕೂಡ ಅಂಥ ಹಕ್ಕನ್ನು ಸಂಪೂರ್ಣವಾಗಿ ನೆಗ್ಲೆಕ್ಟ್ ಮಾಡಿ ಎಕ್ಸಿಕ್ಯೂಟಿವ್ ಆಫೀಸ್‌ರ್ ಮುಖಾಂತರ ತಾವೇ ನಡೆಸುವಂಥ ಒಂದು ಅವಕಾಶವನ್ನು ನಾವು ಕಾಣುತ್ತಿದ್ದೇವೆ. ತಮ್ಮ ಕೆಳಹಂತದ ಒಬ್ಬ ಎಕ್ಸಿಕ್ಯೂಟಿವ್ ಆಫೀಸರ್ ಅವನೇ ಚೆಕ್ ಡ್ರಾ ಮಾಡುವುದರಿಂದ ಹಿಡಿದು ಎಲ್ಲಾ ಕಾಮಗಾರಿಗಳನ್ನು ಅವನೇ ನಿರ್ವಹಿಸುವಂಥ ಒಂದು ಅವಕಾಶವನ್ನು ನಾವು ಕಾಣುತ್ತಿದ್ದೇವೆ. ಇದನ್ನು ತಾವು ತಡೆಗಟ್ಟಬೇಕು. ಇದರ ಬಗ್ಗೆ ಸೂಕ್ತವಾದಂಥ ಕಾರ್ಯಕ್ರಮವನ್ನು ತಾವು ಕೈಗೊಳ್ಳಬೇಕು ,ಎಂದು ನಾನು ಮಾನ್ಯ ಧಾರ್ಮಿಕ ದತ್ತಿ ಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಇತ್ತೀಚೆಗೆ ನಾವು ಏನು ಕಾಣುತ್ತಿದ್ದೇವೆ ಎಂದರೆ, ಕೆಲವೊಂದು ದೇವಸ್ಥಾನಗಳನ್ನು, ಧಾರ್ಮಿಕ ಕ್ಷೇತ್ರಗಳನ್ನು ಒಂದು ಪಕ್ಷದ ಕಛೇರಿಯಾಗಿ ನಿರೂಪಣೆ ಮಾಡುವುದಕ್ಕೆ ಕೆಲವೊಂದು ಪಕ್ಷಗಳು ಇವತ್ತು ಪ್ರಯತ್ನವನ್ನು ಮಾಡುತ್ತಿವೆ. ಇದಕ್ಕೋಸ್ಕರ ಇಂಥ ಚಟುವಟಿಕೆಗಳಿಗೆ ಅಂದರೆ ಧಾರ್ಮಿಕ ಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳಿಗೆ ಯಾವುದೇ ರೀತಿಯ ಅವಕಾಶ ಇಲ್ಲದ ರೀತಿಯಲ್ಲಿ ಸೂಕ್ತವಾದಂಥ ಕ್ರಮ ಕೈಗೊಳ್ಳುವುದಕ್ಕೆ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಇನ್ನೊಂದು ಬೇಡಿಕೆಯನ್ನು ಮಾನ್ಯ ಸಚಿವರು ಇಲ್ಲಿ ಮಂಡಿಸಿದ್ದಾರೆ. ಗ್ರಾಮೀಣ ಅಭಿವೃದ್ಧಿ ಮಟ್ಟಿಗೆ, ಮಂಡಲ ಪಂಚಾಯಿತಿ ಜಿಲ್ಲಾಪರಿಷತ್ತಿನ ವ್ಯವಸ್ಥೆಯ ಮಟ್ಟಿಗೆ ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಏನೋ ಒಂದು ಮಹಾ ದೊಡ್ಡ ಬದಲಾವಣೆಯನ್ನೇ ಇಲ್ಲಿ ತರುತ್ತೇನೆ ಎನ್ನತಕ್ಕಂಥ ಪ್ರಯತ್ನ ನಡೆಯಿತು. ಒಳಗೊಳಗೆ ಬೇರೆ ವಿಚಾರ ಇದರಲ್ಲಿ ಅಳವಡಿಸಿದ್ದರೂ ಕೂಡ, ಪಕ್ಷದ ಒಳಗೆ ಶಾಸಕರನ್ನು ಕ್ಷೀಣಗೊಳಿಸಬೇಕು ಎಂದು ಹೇಳುವಂಥ ಮುಖ್ಯಮಂತ್ರಿಗಳ ಒಂದು ಚಟುವಟಿಕೆಯ ಮುಖಾಂತರ ಈ ಒಂದು ಕಾನೂನನ್ನು ತರುವುದಕ್ಕೆ ಪ್ರಯತ್ನವನ್ನು ಮಾಡಿದರೂ ಕೂಡ ಇವತ್ತು ಈ ವ್ಯವಸ್ಥೆಯಿಂದ ಉಂಟಾಗಿರುವ ಕೆಲವೊಂದು ತೊಂದರೆಗಳನ್ನು ನಿವಾರಣೆ ಮಾಡುವ ಹಂತದಲ್ಲಿ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಉದಾಹರಣೆಗೆ ಈ ಒಂದು ವ್ಯವಸ್ಥೆಯಲ್ಲಿ ಗ್ರಾಮ ಸಭೆ ಅತೀ ಪ್ರಾಮುಖ್ಯವಾದ ಒಂದು ವ್ಯವಸ್ಥೆ. ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಗ್ರಾಮಸಭೆ ವ್ಯವಸ್ಥೆ ಅತಿ ಪ್ರಾಮುಖ್ಯವಾದ ವ್ಯವಸ್ಥೆ. ಇತ್ತೀಚೆಗೆ ಆಡಳಿತಾಧಿಕಾರಿಗಳು ನೇಮಕವಾದ ನಂತರ ನಾವು ಕ್ಷೇತ್ರದಲ್ಲಿ ಗ್ರಾಮ ಸಭೆಗಳನ್ನು ಕರೆದು ಜನರು ಯಾವ ರೀತಿಯ ಸಲಹೆಸೂಚನೆಗಳನ್ನು ಕೊಡುತ್ತಾರೆ, ಅದನ್ನು ತೆಗೆದುಕೊಳ್ಳತಕ್ಕಂತ ಒಂದು ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳುತ್ತಿದ್ದೇವೆ. ಗ್ರಾಮಸಭೆಯ ಒಂದು ವ್ಯವಸ್ಥೆ ಸಂಪೂರ್ಣವಾಗಿ ನಿರ್ನಾಮವಾಗುವಂಥ ಅವಕಾಶವನ್ನು ಈ ವ್ಯವಸ್ಥೆಯಲ್ಲಿ ನಾವು ಕಾಣುತ್ತಿದ್ದೇವೆ. ಗ್ರಾಮಸಭೆಯಲ್ಲಿ ಆದಂಥ ನಿರ್ಣಯವನ್ನು ಬರೀ ಪುಸ್ತಕದಲ್ಲಿ ಮಾತ್ರ ಬಿಟ್ಟು, ಮುಂದಿನ ಈ ಹಂತದಲ್ಲಿ ಮಂಡಲ ಪಂಚಾಯಿತಿಯಲ್ಲಿ ಆಗುವಂಥ ನಿರ್ಣಯ ಸಂಪೂರ್ಣವಾಗಿ ಗ್ರಾಮಸಭೆಯ ನಿರ್ಣಯಕ್ಕೆ

ಅನುಗುಣವಾಗದಂಥ ವಿಚಾರಗಳನ್ನು ನಾವು ಕಾಣುತ್ತಿದ್ದೇವೆ. ಇವತ್ತು ಹತ್ತು ಜನ, ಐದು ಜನ ಕೂಡ ಗ್ರಾಮ ಸಭೆಯಲ್ಲಿ ಭಾಗವಹಿಸದೇ ಇರುವಂಥ ಒಂದು ವ್ಯವಸ್ಥೆಯನ್ನು ಕೆಳ ಹಂತದಲ್ಲಿ ನಾವು ಕಾಣುತ್ತಿದ್ದೇವೆ. ಮಾನ್ಯ ಸಚಿವರು ಇನ್ನು ಮುಂದಕ್ಕೆ ಗ್ರಾಮಸಭೆಗೆ ಹೆಚ್ಚಿನ ರೀತಿಯ ಆದ್ಯತೆ ಬರುವಂಥ ರೀತಿಯಲ್ಲಿ, ಹೆಚ್ಚಿನ ರೀತಿಯಲ್ಲಿ ಮಹತ್ವ ಬರುವಂಥ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ತಾವು ಅಳವಡಿಸಿಕೊಂಡು ಹೋಗಬೇಕು. ಅದೇ ದೃಷ್ಟಿಯಲ್ಲಿ ನಾವು ಕೂಡ ನಮ್ಮ ನಮ್ಮ ಕ್ಷೇತ್ರದಿಂದ ಒಂದು ಲಕ್ಷ 25 ಸಾವಿರ ಜನ ಮತದಾರ ಬಾಂಧವರಿಂದ ಆಯ್ಕೆಯಾಗಿ ಬಂದಂಥ ಜನರು ಇದ್ದೇವೆ. ನಮ್ಮಲ್ಲಿ ಕೂಡ ನಮ್ಮ ಜನರು ಅಂದರೆ ಮತ ಕೊಟ್ಟಂಥ ಜನರು ನಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳ ಮಟ್ಟಿಗೆ ನಮ್ಮನ್ನೂ ಕೂಡ ಪ್ರಶ್ನೆ ಮಾಡತಕ್ಕಂಥ ಅವಕಾಶಗಳನ್ನು ನಾವು ಕಾಣುತ್ತಿದ್ದೇವೆ. ಈ ಹಂತದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿ ಹಂತದಲ್ಲಿ ಮಾನ್ಯ ಶಿವರಾಮೇಗೌಡರು ಯಾವ ರೀತಿಯ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿಯ ಸಮಿತಿಗೆ ಹೆಚ್ಚಿನ ರೀತಿಯ ಒತ್ತನ್ನು ಕೊಟ್ಟು ಅದರ ಮುಖಾಂತರ ಅಭಿವೃದ್ಧಿ ಕಾರ್ಯಕ್ರಮಗಳು ಪೂರೈಕೆಯಾಗುವಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ತಾವು ಮುಂದುವರಿಸಿಕೊಂಡು ಹೋಗಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮುಂದೆ ಬರುವಂಥ ತಮ್ಮ ಕಂದಾಯ ಇಲಾಖೆಗೆ ಹೊಂದಿಕೊಂಡು ಹೊಸ ಒಂದು ರೀತಿಯ ಸೂತ್ರವನ್ನು ತಾವು ಏನು ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಿ ಅಂದರೆ ಡಿವಿಜನಲ್ ಕಮಿಷನರ್ ಕಛೇರಿಯನ್ನು ನಿರ್ಮೂಲನ ಮಾಡುವಂಥದ್ದು, ಅಸಿಸ್ಟೆಂಟ್ ಕಮಿಷನರ್ ಅವರ ಕಛೇರಿಯನ್ನು ನಿರ್ಮೂಲನ ಮಾಡತಕ್ಕಂಥದ್ದು, ಇದು ಒಳ್ಳೆಯ ಕಾರ್ಯಕ್ರಮವಾಗಬಹುದು ಎಂದು ಈ ಸಂದರ್ಭದಲ್ಲಿ ನಾನು ಹಾರೈಕೆ ಮಾಡುತ್ತೇನೆ. ಜಮೀನನ್ನು ಪರ್ಚೇಸ್ ಮಾಡುವಾಗ ಸಬ್-ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಫೀಯನ್ನು ಕಟ್ಟುವಂಥ ರೀತಿಯಲ್ಲಿ ತಾವು ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಇದರಿಂದ ಇವತ್ತು ತುಂಬಾ ಒಳ್ಳೆಯ ರೀತಿಯ ಪ್ರಯೋಜನವಾಗಬಹುದು. ಉದಾಹರಣೆಗೆ, ಬೆಂಗಳೂರಿನಲ್ಲಿ ನಂದಿನಿ ಬಡಾವಣೆಯಲ್ಲಿ ಬಿಡಿಎ ವತಿಯಿಂದ ಸೆಲ್ಫ್ ಫೈನಾನ್ಸ್-ಹೌಸಿಂಗ್ ಸ್ಕೀಮ್‌ನಲ್ಲಿ ಕಟ್ಟಿರುವ ಮನೆಗಳಿಗೆ ರಿಜಿಸ್ಟ್ರೇಷನ್ ಶುಲ್ಕವನ್ನು ನಿವೇಶನದ ದರದ ಮೇರೆಗೆ ತೆಗೆದುಕೊಳ್ಳಬೇಕು. ಮನೆಯ ಕಿಮ್ಮತ್ತಿನ ಮೇಲೆ ಅಲ್ಲ. ಮನೆ ಕಟ್ಟಿಗುವುದು ಅವರು ಸಾಲ ಮಾಡಿ ಅಥವಾ ಬೇರೆ ಯಾವುದೇ ರೀತಿಯ ಆರ್ಥಿಕ ಸವಲತ್ತುಗಳನ್ನು ತೆಗೆದುಕೊಂಡು ಮಾಡಿರಬಹುದು. ಆದರೆ ಈ ಮನೆಯ ಕಿಮ್ಮತ್ತಿನ ಮೇಲೆ ರಿಜಿಸ್ಟ್ರೇಷನ್ ಫೀಯನ್ನು ಕಲೆಕ್ಟ್ ಮಾಡುವುದಕ್ಕೆ ಹೋದರೆ ಅದು ಒಂದು ರೀತಿಯಲ್ಲಿ ಈ ಸಾಲ ತೆಗೆದುಕೊಂಡ ಹಣಕ್ಕೆ ಬಡ್ಡಿ ಕೂಡ ಕಟ್ಟುವಂಥ ಅವಕಾಶ ಆಗಬಹುದು.

ರಿಜಿಸ್ಟ್ರೇಷನ್ ಫೀಯನ್ನು ಕೂಡ ಕಟ್ಟಲಿಕ್ಕೆ ತೊಂದರೆಯಾಗುವಂತಹ ಪರಿಸ್ಥಿತಿಯಾಗಬಹುದು. ಆ ದಿಸೆಯಲ್ಲಿ ಜಮೀನನ್ನು ಪರ್ಚೇಸ್ ಮಾಡುವಂತಹ ಮೂಲ ಹಂತದಲ್ಲಿ ಅದಕ್ಕೆ ರಿಜಿಸ್ಟ್ರೇಷನ್ ಫೀ ಅನ್ನು ಕಟ್ಟಲಿಕ್ಕೆ ಮಾಡಿದರೆ ಅದರಿಂದ ತುಂಬಾ ಜನರಿಗೆ ಪ್ರಯೋಜನವಾಗುವಂತಹ ಅವಕಾಶವಿದೆ. ಈ ರೀತಿಯ ಕಾರ್ಯಕ್ರಮವನ್ನು ತಾವು ಅಳವಡಿಸಿಕೊಂಡು ಬರಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಉಪಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ 6 ಗಂಟೆ 5 ನಿಮಿಷ ಆಗಿದೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನಗೆ ಮಾತನಾಡಲು ಅವಕಾಶ ಕೊಡಲಿಲ್ಲ.

ಉಪಾಧ್ಯಕ್ಷಿಣಿಯವರು : ಇವತ್ತು ಈ ಬೇಡಿಕೆಯನ್ನು ಮುಗಿಸಿ ನಾಳೆ ಮತ್ತೊಂದು ಬೇಡಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನೊಂದು ಸ್ವಲ್ಪ ಹೊತ್ತು ಜಾಸ್ತಿ ಕುಳಿತುಕೊಳ್ಳೋಣ.

ಶ್ರೀ ಬಾಬುರಾವ್ ಚವಾಣ್ : ಹೈದರಾಬಾದ್ ಕರ್ನಾಟಕ ವತಿಯಿಂದ ಯಾರೂ ಮಾತನಾಡಿಲ್ಲ; ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷಿಣಿಯವರು : ಇನ್ನೊಂದು ಅರ್ಧ ಗಂಟೆ ಚರ್ಚೆ ಮುಂದುವರೆಸೋಣ. ಮಾನ್ಯ ಚವಾಣ್‌ರವರೆ ತಾವು ಮಾತನಾಡಿ. ತಾವುಗಳು 10-10 ನಿಮಿಷ ಮಾತನಾಡಿದರೆ ಇನ್ನೂ 4-5 ಮಾನ್ಯ ಸದಸ್ಯರುಗಳು ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ. ಸಂಕ್ಷಿಪ್ತವಾಗಿ ಮುಗಿಸಿಬಿಡಿ.

† ಶ್ರೀ ಬಾಬುರಾವ್ ಚವಾಣ್ (ಶಹಬಾದ್) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಸರ್ಕಾರದ ಕಂದಾಯ, ಗ್ರಾಮೀಣ ಹಾಗೂ ಧಾರ್ಮಿಕ ದತ್ತಿ ಇಲಾಕೆಗಳ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ, ನಾನು ಕೆಲವು ಮಹತ್ವದ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಯವರಿಗೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮುಖ್ಯವಾದಂತಹ ವಿಷಯ ಏನೆಂದರೆ ನಮ್ಮ ಜನರು ಬಿಸಿಲಿನ ಝಳದಲ್ಲಿ, ಬಿಸಿಲಿನಲ್ಲಿ ಬೆಂದು, ಕಾಲು ಸುಡತಕ್ಕ ನಮ್ಮ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿದೆ. ನನ್ನ ಮಿತ್ರರಾದಂತಹ ಮಾನ್ಯ ಶಿವರಾಮೇಗೌಡರು ಈಗ ತಾನೆ ಹೇಳಿದ್ದಾರೆ. ನಾಗಮಂಗಲದಲ್ಲಿ ಇರತಕ್ಕ ಬಿಸಿಲಿಗೂ ಗುಲ್ಬರ್ಗದಲ್ಲಿ ಇರತಕ್ಕ ಬಿಸಿಲಿಗೂ ನಾವು ವ್ಯತ್ಯಾಸವನ್ನು ಮಾಡಿ ನೋಡಿದರೆ ನಮಗೆ ಕುಡಿಯುವ ನೀರಿನ ಅವಶ್ಯಕತೆ ಬಹಳಷ್ಟು ಇದೆ. ಏಕೆಂದರೆ. ಮಧ್ಯಾಹ್ನದ ಸಮಯದಲ್ಲಿ ನಾವು ಹಳ್ಳಿಗಳಲ್ಲಿ ನಡೆದುಕೊಂಡು ಹೋದರೆ ನಮ್ಮ ಕಾಲನ್ನು ನಾವು ಬೆಂಕಿಯಲ್ಲಿ ಇಟ್ಟಹಾಗೆ ಕಾಣುತ್ತದೆ. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಇದೆ. ಅಲ್ಲಿ ಇರತಕ್ಕ ಜೆ.ಇ.ಸ್‌ಗಳು ತಮ್ಮ ಕೆಲಸಗಳನ್ನು ಅಲಕ್ಷ ರೀತಿಯಿಂದ ಮಾಡುತ್ತಿದ್ದಾರೆ. ಅವರು ಮುಖ್ಯವಾಗಿ ಮಾಡತಕ್ಕ ಕೆಲಸ ಮೊದಲು ರೋಡು, ರೋಡು ಎಲ್ಲಿದೆ. ಬ್ರಿಡ್ಜ್ ಎಲ್ಲಿದೆ ಎಂದು ಅದಕ್ಕೆ ಮೊದಲು ಅವರು ಪ್ರಾತಿನಿಧ್ಯವನ್ನು ಕೊಡುತ್ತಾರೆ. ಕುಡಿಯುವ ನೀರಿನ ವಿಷಯದಲ್ಲಿ ಅವರು ಮೊದಲನೆಯ ಪ್ರಾತಿನಿಧ್ಯವನ್ನು ಕೊಡುತ್ತಿಲ್ಲ. ಅದಕ್ಕೆ ಎ.ಇ., ಜೆ.ಇ.ಸ್ ರವರನ್ನು ಸಪರೇಟ್ ವಿಭಾಗ ಮಾಡಿ, ಕುಡಿಯುವ ನೀರಿಗೋಸ್ಕರ ಸಪರೇಟಾಗಿ ಅಧಿಕಾರಿಗಳನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಕೆಲವು ಹಳ್ಳಿಗಳನ್ನು ನೋಡಿದರೆ ಅಲ್ಲಿ ಕುಡಿಯಲಿಕ್ಕೆ ನೀರೇ ಸಿಗುವುದಿಲ್ಲ. ಬೇಸಿಗೆಯಲ್ಲಿ ನೀರು ಒಣಗಿ ಹೋಗಿದೆ. ಕುಡಿಯುವ ನೀರಿಗೋಸ್ಕರ 8-10 ಮೈಲಿಗಳು ನಡೆದುಕೊಂಡು ಹೋಗಿ ತೆಗೆದುಕೊಂಡು ಬರತಕ್ಕ ವ್ಯವಸ್ಥೆ ಆ ಹಳ್ಳಿಗಳಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರದ ವತಿಯಿಂದ ವಾಹನದಿಂದ ನೀರನ್ನು ಸಪ್ಲೈ ಮಾಡುತ್ತಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತಮ್ಮ ಸ್ಪಷ್ಟವಾದಂತಹ ಅಭಿಪ್ರಾಯವನ್ನು ಹೇಳಬೇಕು. ಏಕೆಂದರೆ, ಹೈದರಾಬಾದ್-ಕರ್ನಾಟಕ ರಾಜ್ಯದಲ್ಲಿಯೇ ಅತಿ ಹಿಂದುಳಿದ ಭಾಗವಾಗಿದೆ. ಅದು ಬಿಸಿಲು ಜಾಸ್ತಿ ಇರತಕ್ಕ ಭಾಗವಾಗಿದೆ. ನೀರು ಇರಲಾರದ ಹಳ್ಳಿಗಳಿಗೆ ವಾಹನದ ಮುಖಾಂತರ ನೀರನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇರತಕ್ಕ ಪಿ.ಡಬ್ಲ್ಯೂ.ಎಸ್.

ಅಧಿಕಾರಿಗಳು ಬೇಗ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ. ಪೈಪ್ಡ್ ವಾಟರ್ ಸ್ಕೀಂ ಮತ್ತು ಮಿನಿ ವಾಟರ್ ಸ್ಕೀಮ್ಸ್ ಅನ್ನು ಒಂದು ವರ್ಷದಲ್ಲಾಗಲಿ, ಎರಡು ವರ್ಷದಲ್ಲಾಗಲಿ. ಕಂಪ್ಲೀಟ್ ಮಾಡಿರುವುದನ್ನು ನಿರ್ದಿಷ್ಟವಾಗಿ ನಾವು ನೋಡಿಲ್ಲ. ಒಂದು ಪಿ.ಡಬ್ಲ್ಯೂ.ಎಸ್.. ಎಂ.ಡಬ್ಲ್ಯೂ.ಎಸ್. ಸ್ಕೀಮ್ ಅನ್ನು 5-6-7 ವರ್ಷಕ್ಕೆ ಮುಗಿಸುತ್ತಾರೆ. ಹೀಗಾದರೆ ಆ ಹಳ್ಳಿಯ ಜನರು ನೀರನ್ನು ಹೇಗೆ ಕುಡಿಯಬೇಕು. ಸರ್ಕಾರದಿಂದ ಮಂಜೂರಾದ ಪಿ.ಡಬ್ಲ್ಯೂ.ಎಸ್.. ಎಂ.ಡಬ್ಲ್ಯೂ.ಎಸ್. ಕೆಲಸಗಳನ್ನು ಒಂದು-ಒಂದೂವರೆ ವರ್ಷದೊಳಗೆ ಮುಗಿಸಬೇಕು. ರೋಡ್ ಕೆಲಸ, ಬ್ರಿಡ್ಜ್ ಕೆಲಸಕ್ಕಿಂತ ಅತಿ ಮುಖ್ಯವಾಗಿ ಕುಡಿಯುವ ನೀರಿಗೆ ಮೊದಲ ಆದ್ಯತೆ ಕೊಡಬೇಕು. ರೋಡ್ ಕೆಲಸ, ಬ್ರಿಡ್ಜ್ ಕೆಲಸವನ್ನು ನಿಧಾನವಾಗಿ ಮಾಡಿದರೂ ನಡೆದುಹೋಗುತ್ತದೆ. ಆದರೆ ಕುಡಿಯುವ ನೀರಿನ ಸರಬರಾಜು ಕೆಲಸವನ್ನು ಇಮ್ಮಿಡಿಯೆಟ್ ಆಗಿ ಮಾಡಬೇಕು. ಇದಕ್ಕೆ ಅಧಿಕಾರಿಗಳು ಮೊದಲನೆಯ ಆದ್ಯತೆಯನ್ನು ಕೊಡಬೇಕು. ಕುಡಿಯುವ ನೀರಿಗೆ ಮೊದಲನೆಯ ಆದ್ಯತೆಯನ್ನು ಕೊಡುತ್ತಿಲ್ಲ. ಕೊನೆಯ ಆದ್ಯತೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾನು ಮಂತ್ರಿಯವರಲ್ಲಿ ಕಳಕಳಿಯಿಂದ ಒತ್ತಾಯ ಮಾಡುವುದೇನೆಂದರೆ, ಈ ಅಧಿಕಾರಿಗಳು ತಾಲ್ಲೂಕ್ ಪಂಚಾಯತಿ ಸಮಿತಿಯ ಮೀಟಿಂಗ್‌ನಲ್ಲಾಗಲಿ, ಅಥವಾ ಯಾವುದೇ ಮೀಟಿಂಗ್‌ನಲ್ಲಾಗಲಿ. ಕುಡಿಯುವ ನೀರಿನ ಸಮಸ್ಯೆಗೆ ಮೊದಲನೆಯ ಆದ್ಯತೆಯನ್ನು ಕೊಟ್ಟು. ಮೊದಲು ಆ ಕೆಲಸ ಮಾಡತಕ್ಕಂಥ ಆದೇಶವನ್ನು ಮಾನ್ಯ ಮಂತ್ರಿಯವರ ಇಲಾಖೆಯಿಂದ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ಸ್ಕೇರ್‌ಸಿಟಿ ದುಡ್ಡಿನ ಬಗ್ಗೆ ಹೇಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸ್ಕೇರ್‌ಸಿಟಿ ದುಡ್ಡನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತಾರೆ. ಜಿಲ್ಲಾಧಿಕಾರಿಗಳು, ತಹಶೀಲ್ದಾರ್, ಬಿಡಿಓ ಕಡೆಯಿಂದ ತಮ್ಮ ಮನಸ್ಸಿಗೆ ಬೇಕಾದಂಥ ಲಿಸ್ಟ್ ಅನ್ನು ತರಿಸಿಕೊಂಡು. ಸಿಕ್ಕಲ್ಲೇ ಬೋರ್‌ವೆಲ್ ಹಾಕುತ್ತಾರೆ. ಅದು ಸರಿಯಾದಂಥ ನಿಲುವು ಅಲ್ಲ. ಏಕೆಂದರೆ, ಸ್ಕೇರ್‌ಸಿಟಿ ದುಡ್ಡನ್ನು ತಾಲ್ಲೂಕು ಪಂಚಾಯಿತಿ ಸಮಿತಿ ಆಫೀಸಿಗೆ ಕೊಡಿ. ಅಲ್ಲಿ ಮಂಡಲ ಪಂಚಾಯಿತಿಯ ಪ್ರಧಾನರು. ಅನಂತರ ಶಾಸಕರು. ಅಧ್ಯಕ್ಷರು ಇರುತ್ತಾರೆ. ಅಲ್ಲಿ. ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ ಎನ್ನುವುದನ್ನು ಗಮನಿಸಿ, ಅಲ್ಲಿ ಬೋರ್‌ವೆಲ್ ಹಾಕತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನಾವು ಕೊಡತಕ್ಕಂಥ ಲಿಸ್ಟ್ ಬೇರೆ. ಡೆಪ್ಯೂಟಿ ಕಮಿಷನರ್ ಮತ್ತು ತಹಶೀಲ್ದಾರ್ ಅವರ ಲೀಸ್ಟ್ ಬೇರೆಯಾಗಿರುತ್ತದೆ. ಆದುದರಿಂದ, ವಿಪರೀತ ರೀತಿಯಲ್ಲಿ ಬೋರ್‌ವೆಲ್‌ಗಳನ್ನು ಅನಾವಶ್ಯಕವಾಗಿ ಕೆಲವು ಹಳ್ಳಿಗಳಲ್ಲಿ ಹಾಕುತ್ತಿದ್ದಾರೆ. ಇದನ್ನು ತಡೆದು ತಾಲ್ಲೂಕು ಪಂಚಾಯಿತಿ ಸಮಿತಿಗೆ ಸ್ಕೇರ್‌ಸಿಟಿ ದುಡ್ಡನ್ನು ಕೊಟ್ಟು, ಅವರಿಗೆ ಅಧಿಕಾರ ಕೊಡಬೇಕೆಂದು ನಾನು ಮನವಿಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹಳ್ಳಿಗಳಲ್ಲಿರುವ ರಸ್ತೆ ಬಗ್ಗೆ ಹೇಳುತ್ತೇನೆ. ಹೈದರಾಬಾದ್-ಕರ್ನಾಟಕ ಜಿಲ್ಲೆಗಳಲ್ಲಿ ಹಳ್ಳಿಗಳ ರಸ್ತೆಗಳ ಸ್ಥಿತಿ ನೋಡಿದರೆ ಸರಿಯಾದಂಥ ರೀತಿಯಲ್ಲಿಲ್ಲ. ಒಂದು ಹಳ್ಳಿಯಲ್ಲಿ ಒಬ್ಬ ಹೆಂಗಸಿಗೆ ಹೆರಿಗೆಯಾದರೆ, ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ರಸ್ತೆ ಸರಿಯಾಗಿರುವುದಿಲ್ಲ. ಅವರನ್ನು ದವಾಖಾನೆಗೆ ಕರೆದುಕೊಂಡು ಹೋಗಬೇಕಾದರೆ ಹಾದಿಗಳು ಇಲ್ಲವೇ ಇಲ್ಲ. ಆದುದರಿಂದ, ನಾನು ಮನವಿಪೂರ್ವಕವಾಗಿ ಮಾನ್ಯ ಮಂತ್ರಿಗಳು ಒತ್ತಾಯ ಮಾಡುವುದೇನೆಂದರೆ, ಇರತಕ್ಕಂಥ ಎಂಟಿಎ ರಸ್ತೆ ಏನಿದೆ, ಅದನ್ನು ಕನಿಷ್ಟ ಪಕ್ಷ ವರ್ಷಕ್ಕೆ 50 ಕಿಲೋಮೀಟರ್ ಎಂಡಿಎ ರಸ್ತೆಯಾಗಿ ಮಾಡಬೇಕು. ಹಳ್ಳಿಯಲ್ಲಿರತಕ್ಕಂಥ ರಸ್ತೆಯನ್ನು ಎಂಡಿಎ ರಸ್ತೆಯನ್ನಾಗಿ ಮಾಡಬೇಕು. ಹೆಚ್ಚಿನ ದುಡ್ಡನ್ನು ಮೇಂಟೆನೆನ್ಸ್‌ಗೆ ಕೊಡಬೇಕು. ಹಳ್ಳಿಯಲ್ಲಿ ಒಂದು

ರಸ್ತೆಯನ್ನೂ ಮೇಂಟೇನ್ ಮಾಡುವುದಿಲ್ಲ. ಅಧಿಕಾರಿಗಳು ಯಾವಾಗ ಎಲ್ಲಿ ಮೇಂಟೆನೆನ್ಸ್ ರಸ್ತೆ ಮಾಡುತ್ತಾರೋ, ಅದ್ಯಾವುದೋ ನನಗಂತೂ ಗೊತ್ತಿಲ್ಲ. ಒಂದು ಬ್ರಿಡ್ಜ್ ಬಿದ್ದಿವೆ, ಸಮಯಕ್ಕೆ ಸರಿಯಾಗಿ ರಿಪೇರಿ ಮಾಡಿ ಎಂದರೆ ಅಧಿಕಾರಿಗಳು ಯಾವುದನ್ನೂ ಮಾಡುದಿಲ್ಲ. ಅದಕ್ಕೆ ಸ್ಪೆಸಿಸ್ಫೆ ಆದಂಥ ಡೈರೆಕ್ಷನ್ ಅನ್ನು ಎಲ್ಲಾ ಅಧಿಕಾರಿಗಳಿಗೂ ಕೊಟ್ಟು, ಒಂದು ಬಸ್, ಸೈಕಲ್, ಮೋಟಾರ್ ಸೈಕಲ್ ಆಗಲಿ, ಕನಿಷ್ಠ ಪಕ್ಷ ನಾಲ್ಕು ಕಾರುಗಳಾಗಲಿ ಓಡಾಡುವ ಹಾಗೆ ರಸ್ತೆಯನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ತಾಲ್ಲೂಕು ಪಂಚಾಯಿತಿ ಸಮಿತಿಯ ವಿಚಾರ. ನಾನು ತಾಲ್ಲೂಕು ಪಂಚಾಯಿತಿ ಸಮಿತಿ ಅಧ್ಯಕ್ಷನಾಗಿ. ಅಲ್ಲಿಯ ಅಧಿಕಾರಿಗಳ ನಿರ್ಲಕ್ಷ್ಯ ಭಾವನೆ ಮತ್ತು ಅವರು ಮಾಡತಕ್ಕಂಥ ಕೆಲಸಗಳನ್ನು ನೋಡಿದ್ದೇನೆ. ಅವರು ಮಾಡುವಂಥ ಕೆಲಸಗಳು ಸರಿಯಾದಂಥ ರೀತಿಯಲ್ಲಿಲ್ಲ. ತಾಲ್ಲೂಕು ಪಂಚಾಯಿತಿಗೆ ಕೆಲವು ಅಧಿಕಾರಿಗಳು ಬಂದರೆ ಮತ್ತೆ ಕೆಲವು ಅಧಿಕಾರಿಗಳು ಬರುವುದಿಲ್ಲ. ಅವರು ತಮ್ಮ ಕಛೇರಿಯಲ್ಲಿರತಕ್ಕಂಥ ಮ್ಯಾನೇಜರ್ ಆಗಲಿ, ಕ್ಲರ್ಕ್ ಆಗಲಿ ಕಳುಹಿಸಿಕೊಡುತ್ತಾರೆ. ಅವರನ್ನು ನಾವು ಏನೆಂದು ವಿಚಾರ ಮಾಡಬೇಕು? ಅವರನ್ನು ಕೇಳಿದರೆ ನಮಗೆ ಗೊತ್ತಿಲ್ಲ ಎನ್ನುವ ಮಾಹಿತಿ ಕೊಡುತ್ತಾರೆ. ಅದಕ್ಕೋಸ್ಕರ, ತಾಲ್ಲೂಕು ಪಂಚಾಯಿತಿ ಸಮಿತಿ ಬಗ್ಗೆ ನಿರ್ಲಕ್ಷ್ಯ ಭಾವನೆ ತೋರತಕ್ಕಂಥ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳೇ ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಗೆ ಬರುವ ಹಾಗೆ ಮಾನ್ಯ ಮಂತ್ರಿಗಳು ಮಾಡಬೇಕು. ಇನ್ನೊಂದು ವಿಷಯವೇನೆಂದರೆ, ಕ್ಷೇತ್ರದ ಕೇಂದ್ರಸ್ಥಾನದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿ ಸಭೆ ಆಗಬೇಕೆಂದು ನನ್ನ ಕೋರಿಕೆ. ಏಕೆಂದರೆ, ನಾನು ಶಹಾಬಾದ್ ಮತ ಕ್ಷೇತ್ರಕ್ಕೆ ಸೇರಿದಂಥ ಶಾಸಕ. ತಾಲ್ಲೂಕು ಪಂಚಾಯಿತಿ ಸಮಿತಿ ಸಭೆ ಮಾಡಬೇಕಾದರೆ ನಾನು ಈ ಕಡೆ ಚಿತ್ತಾಪುರಕ್ಕೂ ಹೋಗಬೇಕು, ಅತ್ತ ಕಡೆ ಗುಲ್ಬರ್ಗ ತಾಲ್ಲೂಕಿಗೂ ಹೋಗಬೇಕು. ನನ್ನ ಮತಕ್ಷೇತ್ರದ ಕೇಂದ್ರಸ್ಥಾನದಲ್ಲಿ ಸಭೆ ಮಾಡಿದರೆ ಅವರನ್ನು ಕರೆಸಿಕೊಂಡು ಮಾತನಾಡಬಹುದು. ಎರಡೆರಡು ತಾಲ್ಲೂಕುಗಳಿಗೆ ಹೋದರೆ ಕಾಲವ್ಯಯವಾಗುತ್ತದೆ. ಅಲ್ಲದೆ, ಅಧಿಕಾರಿಗಳೂ ಕೂಡ ನನಗೆ ಸಿಗುವುದಿಲ್ಲ. ಆದುದರಿಂದ, ಕ್ಷೇತ್ರದ ಕೇಂದ್ರಸ್ಥಾನದಲ್ಲಿ ತಾಲ್ಲೂಕು ಪಂಚಾಯಿತಿ ಸಭೆ ಕರೆಯುವ ಹಾಗೆ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹಳ್ಳಿಗಳು ಮಂಡಲ ಹೆಡ್‌ಕ್ವಾರ್ಟರ್‌ಗೆ ಬಹಳಷ್ಟು ದೂರ ಇದೆ. ಯಾವ ಹಳ್ಳಿ ಮಂಡಲ ಪಂಚಾಯಿತಿಗೆ ಸಮೀಪವಾಗುತ್ತದೋ, ಅಂತಹ ಹಳ್ಳಿಯನ್ನು ಮಂಡಲ ಪಂಚಾಯಿತಿಗೆ ಸೇರಿಸಿ ಕೊಡಬೇಕು. ಅನಂತರ, ಪ್ರಧಾನರು, ಉಪ ಪ್ರಧಾನರು ಎಂದು ಏನು ಕಂಟ್ರಾಕ್ಟ್ ಮಾಡುತ್ತಿದ್ದಾರೆ, ಇವರ ಬಗ್ಗೆ ಇಲಾಖೆಯವರು ಗಮನಿಸಬೇಕು. ಪ್ರಧಾನರು ಮತ್ತು ಉಪ ಪ್ರಧಾನರು ರಿಜಿಸ್ಟರ್‌ನಲ್ಲಿ ಹೆಸರುಗಳನ್ನು ಬರೆದು ಸುಮಾರು ದುಡ್ಡನ್ನು ದೋಚಿಕೊಂಡು ಹೋಗಿದ್ದಾರೆ. ಯಾರ ಯಾರದೋ ಸಿಗ್ನೇಚರ್ ಮಾಡುತ್ತಾರೆ, ಯಾರದೋ ರೆವಿನ್ಯೂ ಸ್ಟಾಂಪು ಹಚ್ಚಿ ದುಡ್ಡನ್ನು ದೋಚಿಕೊಂಡು ಹೋಗತಕ್ಕಂಥಾದ್ದು ಗುಲ್ಬರ್ಗ ಜಿಲ್ಲೆಯಲ್ಲಿರುವ ಬಹಳಷ್ಟು ಮಂಡಲ ಪಂಚಾಯಿತಿಗಳಲ್ಲಿದೆ. ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡು ಪ್ರಧಾನರು, ಉಪಪ್ರಧಾನರು ಕಂಟ್ರಾಕ್ಟ್ ಕೆಲಸದಲ್ಲಿ ಸೇರಬಾರದು ಎನ್ನತಕ್ಕಂಥ ಒಂದು ಕಟ್ಟುನಿಟ್ಟಾದ ಆದೇಶವನ್ನು ಎಲ್ಲಾ ತಾಲ್ಲೂಕು ಪಂಚಾಯಿತಿ ಸಮಿತಿಗೆ ಮಂಡಲ ಪ್ರಧಾನರಿಗೆ ಕಳುಹಿಸಿಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ಮಂಡಲ ಪ್ರಧಾನರು ದುರುಪಯೋಗ ಮಾಡಿದ್ದಾರೆ. ಮೊನ್ನೆ ದಿವಸ ಮಂಡಲ ಪಂಚಾಯಿತಿ ಮುಗಿಸಿಕೊಂಡು ಹೋಗುವ ವೇಳೆಯಲ್ಲಿ ಮಂಡಲ ಪಂಚಾಯಿತಿ ಪ್ರಧಾನರು ಮಂಡಲ ಪಂಚಾಯಿತಿಯ ಎಲ್ಲಾ ಸದಸ್ಯರಿಗೆ ಒಂದು ಟಿ.ವಿ. ಸೆಟ್ಟನ್ನು ದೇಣಿಗೆ ರೂಪದಲ್ಲಿ ಕೊಟ್ಟಿದ್ದಾರೆ. ಟೆಲಿವಿಶನ್ ಸೆಟ್ಟಿಗೆ ದುಡ್ಡು

ಎಲ್ಲಿಂದ ಬಂತು? ಏತಕ್ಕೆ ಕೊಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ, ಅವರು ಸದಸ್ಯರು ಹೋಗುತ್ತಿರುವ ಸಮಯದಲ್ಲಿ ಈ ರೀತಿ ಕೊಡತಕ್ಕಂಥ ಕಾನೂನು ಇದೆ. ನಾವು ಒಂದೊಂದು ಟಿ.ವಿ. ಸೆಟ್ಟನ್ನು ಮಂಡಲ ಪಂಚಾಯಿತಿಯ ಸದಸ್ಯರಿಗೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಕೆಲವು ಮಂಡಲ ಪಂಚಾಯಿತಿಯಿಂದ ನಾನು ಕೇಳಿದ್ದೇನೆ.

ಈ ರೀತಿ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ಇಂಥಾದ್ದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತಿದ್ದೇನೆ. ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ನೀರು ಸಿಕ್ಕುವುದಿಲ್ಲ. ಆದುದರಿಂದ ದಯಮಾಡಿ ಸ್ವಲ್ಪ ನೀರನ್ನು ಕುಡಿಯುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಉಪಾಧ್ಯಕ್ಷಿಣಿಯವರೆ, ಗುಲ್ಬರ್ಗದಲ್ಲಿ ಸರಿಯಾಗಿ ನೀರು ಸಿಕ್ಕುವುದಿಲ್ಲವೆಂದು ಇಲ್ಲಿ ಬೆಂಗಳೂರಿನ ಕಾವೇರಿ ನೀರನ್ನು ಕುಡಿಯುತ್ತಿದ್ದಾರೆ. ಇನ್ನೂ ಬೇಕಾದರೆ ತರಿಸಿಕೊಂಡು ಕುಡಿಯಿರಿ.

ಶ್ರೀ ಬಾಬುರಾವ್ ಚೌವಾಣ್ : ನಾವು ಇಲ್ಲಿಗೆ ಬಂದಾಗ ಕಾವೇರಿ ನೀರನ್ನ ಕುಡಿಯುತ್ತೇವೆ. ಅಲ್ಲಿಗೆ ಹೋದಾಗ ಭೀಮಾ ನದಿ ನೀರು ಅಥವಾ ಕೃಷ್ಣಾ ನದಿ ನೀರನ್ನು ಕುಡಿಯುತ್ತೇವೆ. ಆದರೂ ಕೂಡ ಬೇಸಿಗೆಯಲ್ಲಿ ಆ ನದಿಗಳು ಬತ್ತಿ ಹೋಗತ್ತವೆ. ಅಲ್ಲಿ ನೀರು ಸರಿಯಾಗಿ ಸಿಕ್ಕುವುದಿಲ್ಲ. ಅದು ನಮ್ಮ ಕಷ್ಟ.

ಇನ್ನು ನೈಸರ್ಗಿಕ ವಿಕೋಪ ಪರಿಹಾರ : ಹೈದರಾಬಾದ್-ಕರ್ನಾಟಕ ಜಿಲ್ಲೆಗಳಲ್ಲಿ ನೈಸರ್ಗಿಕ ವಿಕೋಪ ಪರಿಹಾರಕ್ಕೆ ದುಡ್ಡನ್ನು ಮುಂಗಡವಾಗಿ ಡೆಪ್ಯೂಟಿ ಕಮಿಷನರ್‌ರವರ ಕಾರ್ಯಾಲಯದಲ್ಲಿಡುವ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ, ನಾನು ನೋಡಿದಂತೆ ನಮ್ಮ ಬಹಳಷ್ಟು ಭಾಗದಲ್ಲಿ ಮಳೆ ಜಾಸ್ತಿ ಬಂದಾಗ, ಅಂಥ ಘಟನೆಯಾದ ನಂತರ, ಒಂದು ತಿಂಗಳ ನಂತರ ಹಣವನ್ನು ರಿಲೀಸ್ ಮಾಡುತ್ತಾರೆ. ಬಹಳ ತಡವಾಗಿ ಹಣವನ್ನು ರಿಲೀಸ್ ಮಾಡುತ್ತಾರೆ. ಆದುದರಿಂದ ಈ ರೀತಿ ತಡವಾಗಿ ಹಣವನ್ನು ರಿಲೀಸ್ ಮಾಡದಂತೆ, ತಕ್ಷಣ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಬಯಸುತ್ತೇನೆ.

ಆಮೇಲೆ ಈ ವಿಲೇಜ್ ಅಕೌಂಟೆಂಟ್ಸ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹೆಡ್‌ಕ್ವಾರ್ಟರ್‌ಗಳಲ್ಲಿ ಇರುವುದಿಲ್ಲ. ಅವರುಗಳು ಹೆಡ್‌ಕ್ವಾರ್ಟರ್‌ಗಳಲ್ಲಿ ಇರುವಂತೆ ವ್ಯವಸ್ಥೆ ಮಾಡಬೇಕು. ತಲಾಟಿ ಮಾಡಿದ ಗಲಾಟೆ; ಎನ್ನತಕ್ಕ ಪದ ನಿಜವಾಗಿಯೂ ಒಳ್ಳೆಯ ಪದ. ಯಾರದೋ ಹೊಲವನ್ನು, ಯಾರದೋ ಹೆಸರಿನಲ್ಲಿ ಬರೆದು, ರೈತರಿಂದ ದುಡ್ಡನ್ನು ಸುರಿಸತಕ್ಕ ವಹಿವಾಟು ಹಳ್ಳಿಯಲ್ಲಿ ಬಹಳಷ್ಟು ಬೆಳೆಯುತ್ತಿದೆ. ಇದನ್ನು ಕಟ್ಟುನಿಟ್ಟಾಗಿ ನೋಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳುತ್ತೇನೆ.

ಕೊನೆಯದಾಗಿ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು ಶ್ರೀಮತಿ ಮಲ್ಲಾಜಮ್ಮನವರು ಹೇಳಿದರು. ಮಾನ್ಯ ಮಂತ್ರಿಯವರು ಸಹ ನಮ್ಮ ಭಾಗವದರು, ಅವರಿಗೆ ಲಂಬಾಣಿ ತಾಂಡಾಗಳ ಬಗ್ಗೆ ಚೆನ್ನಾಗಿ ಪರಿಚಯವಿದೆ, ಅವರಿಗೆ ಲಂಬಾಣಿ ತಾಂಡಾಗಳ ಮೇಲೆ ಬಹಳಷ್ಟು ಪ್ರೀತಿ ಇದೆ. ಆದುದರಿಂದ ಲಂಬಾಣಿ ತಾಂಡಾಗಳು, ವಡ್ಡರ ಕೇರಿಗಳು, ಕೆಲವು ಹರಿಜನರ ಕೇರಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಅವಶ್ಯಕತೆ ಇದೆ. ಮಾನ್ಯ ಮಂತ್ರಿಗಳು ಈ ತಾಂಡಾಗಳ ಮೇಲೆ ಕಾಳಜಿಯನ್ನಿಟ್ಟು ಬೇಗನೆ ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು

ಹೇಳುತ್ತಾ, ಈ ಸರ್ಕಾರದ ಬೇಡಿಕೆಯನ್ನು ಸ್ವಾಗತ ಮಾಡುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸದನದಲ್ಲಿ ಮಂಡಿಸಿದಂಥ ಕಂದಾಯ ಇಲಾಖೆಯ ಮತ್ತು ಧಾರ್ಮಿಕ ಗತ್ತಿ ಇಲಾಖೆಯ ಆಯವ್ಯಯ ಪಟ್ಟಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಕಂದಾಯ ಇಲಾಖೆಯಲ್ಲಿ ಅಮೂಲಾಗ್ರವಾದ ಕ್ರಾಂತಿಯನ್ನು ತಂದು, ಆಡಳಿತವನ್ನು ಚುರುಕುಗೊಳಿಸುವಂಥ ದಿಟ್ಟ ಹೆಜ್ಜೆಯನ್ನಿಟ್ಟಂಥ ಸರ್ಕಾರದ ಒಳ್ಳೆಯ ಕಾರ್ಯವನ್ನು ಅಭಿನಂದಿಸುವುದಕ್ಕೆ ನಾನು ಸಂತೋಷ ಪಡುತ್ತಿದ್ದೇನೆ.

ಫೈಲುಗಳು ಆಫೀಸ್‌ನಿಂದ ಆಫೀಸಿಗೆ ಹೋಗುವಾಗ, ಕಷ್ಟದಲ್ಲಿ ಸಿಲುಕಿದ ಬಡ ರೈತನಿಗೆ ಅವನು ಸಾಯುವ ತನಕ ಸಹ ಆಜ್ಞೆ ಬಾರದೆ ತೊಂದರೆಯನ್ನು ಪಡುತ್ತಿದ್ದ. ಈ ರೇಸಿನ ಓಟದಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ಡಿವಿಷನಲ್ ಕಮಿಷನರ್ ಹುದ್ದೆಗಳೆಂಬ ಎರಡು ಹರ್ಡಲ್ಸ್‌ನ್ನು ತೆಗೆದು ಈಗ ನಾವು ರೈತರು ಓಡುವಂಥ ಓಟದಲ್ಲಿ, ನಮ್ಮ ಜಿಲ್ಲೆಯಲ್ಲಿ ಕಂಬಳದ ಓಟ ಸಾಗುವಾಗ ಅಡೆ ತಡೆ ಇಲ್ಲದೆ ವೇಗವಾಗಿ ಓಡಲು ಅನುಕೂಲವಾಗುವಂತೆ ನಮ್ಮ ಕಂದಾಯ ಇಲಾಖೆಯವರು ಒಂದು ಒಳ್ಳೆಯ ಕ್ರಾಂತಿಯುತ ಹೆಜ್ಜೆಯನ್ನು ಧೈರ್ಯವಾಗಿ ಇಟ್ಟಿದ್ದಾರೆ. ಇದರಿಂದ ಆಡಳಿತವು ಸುಲಭವಾಗುತ್ತದೆ. ಮಾತ್ರವಲ್ಲದೆ ಫೈಲುಗಳ ಓಡಾಟವು ಕೆಲವೇ ಹಂತಗಳಲ್ಲಿ ಸಾಗುವ ಕಾರಣ ಸುಲಭದಲ್ಲಿ ರೈತನಿಗೆ, ಜನಸಾಮಾನ್ಯನಿಗೆ ಅವನು ಇಟ್ಟಂಥ ಬೇಡಿಕೆಯನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ.

ಆದ್ದರಿಂದ ಇಂತಹ ಒಂದು ಒಳ್ಳೆಯ ಬದಲಾವಣೆಯನ್ನು ತಂದಂತಹ ಈ ಕಂದಾಯ ಇಲಾಖೆಯ ಮಂತ್ರಿವರ್ಯರನ್ನು ಈ ಸಂದರ್ಭದಲ್ಲಿ ನಾನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಇಷ್ಟು ಮಾತ್ರವಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಬಹಳಷ್ಟು ಹಣವು ಉಳಿತಾಯವಾಗುವುದು ಖಂಡಿತ. ಬಡವರಿಗೆ ಹೇಗೆ ಸಮಯ ಮತ್ತು ಅವರ ಕೆಲಸ ಸುಲಭ ಸಾಧ್ಯವಾಗುತ್ತದೋ ಹಾಗೆಯೇ ಈ ಎರಡು ಕಛೇರಿಗಳ ಲಭ್ಯತೆಯಿಂದ ಹಣವು ತುಂಬಾ ಹಾಳಾಗುತ್ತದೆ. ನಾನು ಮಾನ್ಯ ಖರ್ಗೆಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ನೀವು ಪಡೆಯಬೇಕು. ಈ ಉಳಿತಾಯವಾದಂತಹ ಹಣದಲ್ಲಿ ನೀವು ದೊಡ್ಡ ಕೆಲಸವನ್ನು ಸಾಧಿಸಬೇಕಾಗಿದೆ. ನಮ್ಮ ಕರ್ನಾಟಕ ರಾಜ್ಯಪುನರ್ ರಚನೆ ಆಗಬೇಕು, ಜಿಲ್ಲೆಗಳ ಪುನರ್ ರಚನೆ ಆಗಬೇಕೆಂದು ಯಾವಾಗ ಕಮಿಟಿ ನಿರ್ಧರಿಸಿ ಫೈಲ್‌ನ ಪರಿಶೀಲನೆ, ತೀವ್ರ ಪರಿಶೀಲನೆ, ಅತೀ ತೀವ್ರ ಪರಿಶೀಲನೆಯನ್ನು ಮಾಡುತ್ತಾ, ಉತ್ತರ ಕೊಡುತ್ತಾ. ಆ ಫೈಲೇ ದೊಡ್ಡದಾಗುತ್ತಾ ಬಂದಿದೆ. ಈ ಉಳಿಕೆಯಾದ ಹಣವನ್ನು ತಾಲ್ಲೂಕುಗಳ ಪುನರ್ ರಚನೆ, ಜಿಲ್ಲೆಗಳ ಪುನರ್ ರಚನೆ ಬಗ್ಗೆ ಯಾವ ನಿರ್ಧಾರವನ್ನು ಕಮಿಟಿ ಕೈಗೊಂಡಿದೆಯೋ ಅದನ್ನು ಅನುಷ್ಠಾನಗೊಳಿಸಿ, ಮಾನ್ಯ ಖರ್ಗೆಯವರು ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಪಡೆದು ಜನರಿಗೆ ಉಪಯೋಗವಾಗುವಂತಹ ಈ ಕೆಲಸವನ್ನು ಮಾಡಬೇಕು. ನೀವು ಧೈರ್ಯವಾಗಿ ಮುಂದುವರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ತಾಲ್ಲೂಕುಗಳ ಪುನರ್ ರಚನೆ ಆಗದೇ ನಾವು ಕೇಂದ್ರ ಸರ್ಕಾರದಿಂದ ಪಡೆಯಬೇಕಾದಂತಹ ಅನೇಕ ತರಹದ ಆರ್ಥಿಕ ಸವಲತ್ತುಗಳನ್ನು ಕಳೆದುಕೊಂಡಿದ್ದೇವೆ. ಉದಾಹರಣೆಗೆ ನನ್ನ ಕ್ಷೇತ್ರ ನಿಜವಾಗಿಯೂ ಎರಡು ತಾಲ್ಲೂಕುಗಳಾಗಬೇಕಿತ್ತು. ಒಂದು ಭಾಗ ಮಂಗಳೂರು ತಾಲ್ಲೂಕಿನಲ್ಲಿ, ಇನ್ನೊಂದು ಭಾಗ ಕಾರ್ಕಳ ತಾಲ್ಲೂಕಿನಲ್ಲಿ ಇದೆ. ಈ ಕಮಿಟಿಯವರು ಈ ಎರಡು ಭಾಗಗಳನ್ನು ಬೇರೆ ಬೇರೆ ತಾಲ್ಲೂಕುಗಳಾಗಬೇಕೆಂದು ಶಿಫಾರಸ್ಸು ಮಾಡಿದ್ದು, ಈ ಯೋಜನೆ ಅವರ ವರದಿಯಿಂದ

ಅನುಷ್ಠಾನಗೊಂಡರೆ ನನ್ನ ಕ್ಷೇತ್ರಕ್ಕೆ ತುಂಬಾ ಪ್ರಯೋಜನವಾಗುತ್ತದೆ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸವಲತ್ತು ಸಿಕ್ಕಿ ನಮ್ಮ ಜನಗಳಿಗೆ ಹೇಗೆ ಪ್ರಯೋಜನವಾಗುತ್ತದೋ ಹಾಗೆ ಕರ್ನಾಟಕ ರಾಜ್ಯದಲ್ಲಿ ಈ ತಾಲ್ಲೂಕುಗಳ ಪುನರ್ ರಚನೆಯಿಂದ, ಕೇಂದ್ರದಿಂದ ಹೆಚ್ಚುವರಿ ಹಣವನ್ನು ನಾವು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸ್ವಲ್ಪವೇ ಜನಕ್ಕೆ ಖರ್ಚಾಗುವಂತಹ ಹಣವನ್ನು ನೀವು ಅಸಿಸ್ಟೆಂಟ್ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ರದ್ದುಪಡಿಸಿರುವುದರಿಂದ ಆ ಆಫೀಸರ್‌ಗಳ ಭತ್ಯೆ, ಆಫೀಸ್‌ನ ಹಣ ಉಳಿತಾಯವಾಗುತ್ತದೆ. ಈ ಹಣವನ್ನು ಅದಕ್ಕೆ ಉಪಯೋಗಿಸಿ ಹಲವಾರು ವರ್ಷಗಳಿಂದ ಬಾಕಿ ಉಳಿದಂತಹ ಈ ಕೆಲಸವನ್ನು ನೀವು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ಇದಲ್ಲದೆ, ನಮ್ಮ ಕಂದಾಯ ಇಲಾಖೆಯು ಟಾಸ್ಕ್ ಫೋರ್ಸ್ ನೇತೃತ್ವದಲ್ಲಿ ಮನೆ ನಿವೇಶನ ಕೊಟ್ಟಂಥ ಒಂದು ಕೆಲಸ ನಿಜವಾಗಿಯೂ ಇದು ಚಾರಿತ್ರಿಕವಾದ ಕೆಲಸವೆಂದು ಹೇಳಬಹುದು. ಕಳೆದ ಏಳು ವರ್ಷಗಳಿಂದ ಬಡಜನರಿಗೆ ನಿವೇಶನ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಒಂದು ವೇಳೆ ನಿವೇಶನ ಪಡೆಯುವುದಾದರೂ ಹಣ ಕೊಟ್ಟರೆ ಅವರು ನಿವೇಶನವನ್ನು ಪಡೆಯುವಾಗ ಬಹಳ ತೊಂದರೆ ಇತ್ತು. ಆದರೆ ಈ ವರ್ಷ ನೀವು ಬಹಳಷ್ಟು ಧೈರ್ಯದ ಸಾಹಸವನ್ನು ಮಾಡಿ. ಮೂರು ತಿಂಗಳೊಳಗಾಗಿ ಇದನ್ನು ಅನುಷ್ಠಾನಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟಾಜ್ಞೆಯನ್ನು ಮಾಡಿದ ಕಾರಣ, ನನ್ನ ಒಂದು ಕ್ಷೇತ್ರದಲ್ಲಿ ಸುಮಾರು ಮೂರು ಸಾವಿರ ಬಡಜನತೆಗೆ ಮನೆ ನಿವೇಶನವನ್ನು ಪಡೆಯುವಂತಹ ಒಂದು ಭಾಗ್ಯವನ್ನು ನೀವು ತಂದುಕೊಟ್ಟಿದ್ದೀರಿ. ಈ ಪ್ರಯೋಜನ ಈಗ ಕೇವಲ ಹಳ್ಳಿಗಳಿಗೆ ಮಾತ್ರ ಸಿಕ್ಕಿದೆ, ಪುರಸಭೆಯ ವಿಭಾಗದಲ್ಲಿ ಇದರ ಪ್ರಯೋಜನ ಪಡೆಯಲಿಕ್ಕೆ ಆಗುವುದಿಲ್ಲ. ಆದ್ದರಿಂದ ಪುರಸಭೆಯ ವ್ಯಾಪ್ತಿಯಲ್ಲಿರುವಂತಹ ಸರ್ಕಾರಿ ಸ್ಥಳವನ್ನು ಟಾಸ್ಕ್ ಫೋರ್ಸ್ ಕಮಿಟಿ ಮೂಲಕವೇ ಬಡಜನರಿಗೆ ವಿತರಣೆಯಾಗುವಂತೆ ನೀವು ಒದಗಿಸಬೇಕು. ಅದಕ್ಕೆ ಸೂಕ್ತವಾದಂತಹ ಕಾನೂನನ್ನು ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ನನ್ನ ಹಳ್ಳಿಯಲ್ಲಿ ಮೂರು ಸಾವಿರ ಕೊಟ್ಟರೂ ಸಹ ಮೂಡಬಿದರೆಯಂತಹ ಒಂದು ಪುರಸಭಾ ಕ್ಷೇತ್ರದಲ್ಲಿ ಕಳೆದ ಒಂದೂವರೆ ವರ್ಷದಿಂದ ಫೈಲ್ ಬಿಲ್ಡ್ ಅಪ್ ಮಾಡಿ ಐದಾರು ಫೈಲ್‌ಗಳು ಮುಡಿಬಿಡದರೆಯಿಂದ ಕಾರ್ಕಳ, ಕಾರ್ಕಳದಿಂದ ಕುಂದಾಪುರ, ಕುಂದಾಪುರದಿಂದ ಮಂಗಳೂರಿಗೆ ಹೋಗಿ ಅವುಗಳು ಮಂಜೂರಾಗದೆ ವಾಪಸ್ಸು ಬಂದುದರಿಂದ ಪುರಸಭೆಗಳ ವ್ಯಾಪ್ತಿಯಲ್ಲಿ ಏಳು ವರ್ಷಗಳಿಂದ ಆ ಬಡಜನರಿಗೆ ಒಂದೇ ಒಂದು ನಿವೇಶನವನ್ನು ಕೊಡುವುದಕ್ಕೆ ಆಗಲಿಲ್ಲ. ಆದ್ದರಿಂದ ಟಾಸ್ಕ್ ಫೋರ್ಸ್ ಕಮಿಟಿಯವರಿಗೆ ಈ ಕಂದಾಯ ಇಲಾಖೆಯ ಭೂಮಿಯನ್ನು ಕೊಡುವಂತಹ ಒಂದು ತಿದ್ದುಪಡಿಯನ್ನು ತಾವು ಮಾಡಬೇಕೆಂದು ನಾನು ಆ ಬಡ ಜನತೆಯ ಪರವಾಗಿ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಅಲ್ಲದೆ, ಈಗಾಗಲೇ ಕಲಸ ಮಾಡುತ್ತಿರುವಂತಹ ನಾಡ ಕಛೇರಿಗಳು ಹೋಬಳಿಗಳಲ್ಲಿ ಕೇಂದ್ರಗಳಲ್ಲಿ ನಮಗೆ ತುಂಬಾ ಪ್ರಯೋಜನವಾಗಿವೆ. ಒಂದು ವೇಳೆ ನೀವು ತಾಲ್ಲೂಕು ಪುನರ್ ವಿಂಗಡಣೆ ಮಾಡುವುದಾದರೆ, ಅವುಗಳನ್ನು ರದ್ದು ಮಾಡುವುದಾದರೆ ಅದಕ್ಕೆ ನನ್ನ ಆಕ್ಷೇಪವಿಲ್ಲ. ತಾಲ್ಲೂಕು ಪುನರ್ ರಚನೆ ಆಗದೇ ನಾಡ ಕಛೇರಿಗಳನ್ನು ನೀವು ರದ್ದು ಮಾಡಿದರೆ, ನಮ್ಮ ಮೂಡಬಿದರೆ ಮತ್ತು ಇತರ ವಿಭಾಗಗಳಿಗೆ ನಾಡ ಕಛೇರಿಗಳು ಇಲ್ಲದೇ ಹೋದರೆ ತೊಂದರೆಯಾಗುತ್ತದೆ. ಆದ್ದರಿಂದ ತಾಲ್ಲೂಕುಗಳ ಪುನರ್ ರಚನೆ ಆಗುವವರೆಗೆ ಈ ನಾಡ ಕಛೇರಿಗಳನ್ನು ತಾವು ರದ್ದುಪಡಿಸಬಾರದೆಂದು ನಾನು ತಮ್ಮಲ್ಲಿ ವಿನಂತಿಸುತ್ತಿದ್ದೇನೆ.

ಮೂರನೆಯದಾಗಿ ನೀರು ಪೂರೈಕೆ ವಿಚಾರದಲ್ಲಿ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 120 ಅಂಗುಲಕ್ಕಿಂತ ಹೆಚ್ಚು ಮಳೆ ಬಂದರೂ ಕೂಡ ಮಾರ್ಚಿ ತಿಂಗಳಿಂದ ಜೂನ್

ತಿಂಗಳವರೆಗೆ ನೀರಿಗೆ ಬಹಳಷ್ಟು ಬರಗಾಲ ಬಂದಿದೆ. ನಾವು ಅಲ್ಲಿ ನೀರಿನ ಸಮಸ್ಯೆಯನ್ನು ಬಹಳಷ್ಟು ಎದುರಿಸುತ್ತಿದ್ದೇವೆ. ಆದುದರಿಂದ ತಾವು ನೀರಿನ ಪೂರೈಕೆಗಾಗಿ ಧಾರಾಳ ಮನಸ್ಸನ್ನು ಉಪಯೋಗಿಸಿಕೊಂಡು ಉದಾರ ರೀತಿಯಲ್ಲಿ ಹಣವನ್ನು ಪೂರೈಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, 1981ನೇ ಖಾನೆಷುಮಾರಿ ಲೆಕ್ಕದಲ್ಲಿ, ಅದಕ್ಕೂ ಹಿಂದಿನ ಲೆಕ್ಕದಲ್ಲಿ ಪ್ರತಿಯೊಂದು ಮಂಡಲಕ್ಕೂ ಇಂತಿಷ್ಟು ಕೊಳವೆ ಭಾವಿಗಳೆಂದು ಒದಗಿಸಲಾಗುತ್ತಿತ್ತು. ನನ್ನ ಕ್ಷೇತ್ರದ ಬೆಳುವಾಯಿ ಎಂಬ ಊರಿನಲ್ಲಿ 13 ಹರಿಜನರ ಕೇರಿಗಳು 1981ನೇ ಇಸವಿಯ ನಂತರ ಆಗಿವೆ. ಈ 13 ಕೇರಿಗಳಲ್ಲಿ ನೂರಾರು ಜನ ಹರಿಜನರಿದ್ದರೂ ಅಲ್ಲಿಗೆ ಇದುವರೆಗೂ ನೀರಿನ ಅನುಕೂಲವನ್ನು ಮಾಡಲಿಕ್ಕೆ ಆಗಲಿಲ್ಲ. ಅವರು ಕುಡಿಯುವ ನೀರಿಗಾಗಿ ಅನೇಕ ಕಿ.ಮೀ. ದೂರ ಹೋಗಿ ನೀರನ್ನು ತಂದು ಬದುಕಬೇಕಾಗಿದೆ. ಹೀಗಿರುವಾಗ ಅಂಥ ಪ್ರದೇಶಕ್ಕೆ ನೀವು ಇಟ್ಟುಕೊಂಡಿರತಕ್ಕ ಅಳತೆಗೋಲನ್ನು ಸ್ವಲ್ಪ ವಿನಾಯಿತಿಗೊಳಿಸಿ ಅವರಿಗೆ ನೀರನ್ನೊದಗಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವಿಶ್ವ ಯೋಜನೆಯ ಮುಖಾಂತರ ಹಳ್ಳಿಯ ಜನರು ಸ್ವಯಂ ಸ್ವಾವಲಂಬಿಗಳಾಗುವಂಥ ದೊಡ್ಡ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ನನ್ನ ಕ್ಷೇತ್ರದಲ್ಲಿ ಬೆಳವಾಯಿ ಎಂಬ ಮಂಡಲದಲ್ಲಿ ಈ ಯೋಜನೆ ಬಹಳ ಫಲಕಾರಿಯಾಗಿದ್ದು ಅಲ್ಲಿ ಯುವ ಜನರಿಗೆ ತರಬೇತಿಯನ್ನು ಕೊಡುತ್ತಿದ್ದಾರೆ. ಹಳ್ಳಿಯ ಉದ್ಯೋಗಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಅಲ್ಲಿರತಕ್ಕಂಥ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಕೂಡ ನೀರಿನ ಕೊರತೆ ಉಂಟಾಗಿದೆ. ಆದ್ದರಿಂದ ಸರ್ಕಾರ ಅಲ್ಲಿ ನೀರಿನ ಕೊರತೆಯನ್ನು ನೀಗಿಸುವುದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಆಗುವಂತಹ ಅಡಚಣೆಗಳನ್ನು ಈಗಾಗಲೇ ಹಲವಾರು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಮುಲ್ಕಿಯಲ್ಲಿ ಒಂದು ಸಬ್‌ರಿಜಿಸ್ಟ್ರಾರ್ ಆಫೀಸ್ ಇದೆ. ಅದು ಬಹಳ ಉತ್ತಮವಾದ ಕಟ್ಟಡ. ಹಿಂದೆ ಮುಲ್ಕಿಯಲ್ಲಿ ಒಂದು ಕೋರ್ಟ್ ಇತ್ತು. ಇದು ತಾಲ್ಲೂಕು ಆದಮೇಲೆ ಕೈಬಿಟ್ಟು ಹೋಯಿತು. ಆ ಸ್ಥಳದಲ್ಲಿ ಬಹಳ ಸುಂದರವಾದ ಒಂದು ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನ ಕಟ್ಟಡ ಇದೆ. ಇದು ಹಳೆಯ ಕಟ್ಟಡ. 82 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಇದನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯವಿದೆ ಎಂದು ಪಿ.ಡಬ್ಲ್ಯು.ಡಿ. ನವರು ಹೇಳಿದರು. ಆದರೆ ಆ 82 ಸಾವಿರ ರೂಪಾಯಿಗಳನ್ನು ಸರ್ಕಾರದವರು ಒದಗಿಸದೇ ಇದ್ದ ಕಾರಣ ಆ ಕಟ್ಟಡ ರಿಪೇರಿ ಆಗದೆ ಬೇರೆ ಬಾಡಿಗೆ ಕಟ್ಟಡಕ್ಕೆ ಹೋಗಿದ್ದೀರಿ. ಆದುದರಿಂದ ಈ ವರ್ಷವಾದರೂ 82 ಸಾವಿರ ರೂಪಾಯಿಗಳನ್ನು ಒದಗಿಸಿ ಬೇರೆ ಕಡೆ ಸಾವಿರಾರು ರೂಪಾಯಿಗಳು ಬಾಡಿಗೆಯನ್ನು ಕೊಡುವ ಬದಲು ಈಗಿರತಕ್ಕ ಈ ಸುಂದರ ಕಟ್ಟಡವನ್ನೇ ರಿಪೇರಿ ಮಾಡಿಸಲು ಹಣವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೈಸರ್ಗಿಕ ಪ್ರಕೋಪಕ್ಕೆ ತುತ್ತಾದಾಗ ಕೊಡತಕ್ಕ ಪರಿಹಾರಧನ ಬಹಳಷ್ಟು ಕಡಿಮೆ ಇದೆ. ಅಷ್ಟು ಮಾತ್ರವಲ್ಲ, ಆ ಪರಿಹಾರ ಧನ ಕ್ಲುಪ್ತ ಸಮಯದಲ್ಲಿ ಅವರಿಗೆ ಸಿಗುವುದಿಲ್ಲ. ಆದುದರಿಂದ ಆದಷ್ಟು ಬೇಗ ಕ್ಲುಪ್ತ ಸಮಯದಲ್ಲಿ ಅವರಿಗೆ ಪರಿಹಾರಧನ ಸಿಕ್ಕುವಂತೆ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದವರು ಪರಿಹಾರ ರೂಪದಲ್ಲಿ ಕೊಡುವಂಥ ಹಣದ ಪ್ರಮಾಣವನ್ನು ಹಿಂದೆಗಿಂತಲೂ ಈಗ ಹೆಚ್ಚು ಮಾಡಿದರೂ ಆ ಕ್ಲುಪ್ತತೆಯನ್ನು ಕಾಪಾಡಿಕೊಂಡು ಜನರಿಗೆ ಕೂಡಲೇ ಪರಿಹಾರ ಸಿಕ್ಕುವಂತೆ ತಾವು ಪ್ರಯತ್ನಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂಥ ಕಾನೂನನ್ನು ನೀವು ಏನು ತಂದಿದ್ದೀರಿ ಇದು ನಿಜವಾಗಿಯೂ ಬಡಬಗ್ಗರಿಗೆ, ಹಳ್ಳಿಯ ಜನರಿಗೆ ವರದಾನವಾಗಿದೆ. ನನ್ನ ಮಂಗಳೂರು ತಾಲ್ಲೂಕಿನಲ್ಲಿ ಸುಮಾರು 18 ಸಾವಿರ ಅರ್ಜಿಗಳು ಬಂದಿರುತ್ತವೆ. ದುರದೃಷ್ಟವಶಾತ್ 1 ಸಾವಿರ ಅರ್ಜಿಗಳಿಗೆ ಮಂಜೂರಾತಿ ಕೊಡುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಮಂಗಳೂರು ಮಹಾ ನಗರಪಾಲಿಕೆ ಏನಿದೆ ಅದರ ಸುತ್ತ 10 ಕಿ.ಮೀ. ದೂರದವರೆಗೆ ಯಾವ ಸ್ಥಳವನ್ನೂ ಕೊಡಬಾರದೆಂದು ನಿರ್ದೇಶನ ಇರುವುದರಿಂದ ಮಂಗಳೂರು ತಾಲೂಕಿನಲ್ಲಿ ಕೇವಲ 30 ಗ್ರಾಮಗಳಿಗೆ ಮಾತ್ರ ಈ ಸ್ಥಳವನ್ನು ಕೊಡುವುದಕ್ಕೆ ಆಗದ ಪರಿಸ್ಥಿತಿ ಬಂದಿದೆ. ಈ ಮಹಾ ನಗರಪಾಲಿಕೆಯೊಳಗೆ ಬೇಡ, ಅದರ ಸುತ್ತಲೂ ಇರುವಂಥ ಜನರಿಗಾದರೂ ಆ ಭೂಮಿಯನ್ನು ಕೊಡುವಂಥ ತಿದ್ದುಪಡಿಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಹೇಳಿದಂತ ಕುಂಕಿ ಪ್ರದೇಶ ಯಾವುದು ಇದೆ ಆ ಕುಮ್ಕಿ ಸ್ಥಳವನ್ನು 6 ತಿಂಗಳಿಗಿಂತ ಹೆಚ್ಚು ಕಾಲ ರೈತ ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದರೆ ಆ ಧಣಿಯು ಸ್ವಾಭಾವಿಕವಾಗಿ ಆ ಹಕ್ಕನ್ನು ಕಳೆದುಕೊಳ್ಳುವುದರಿಂದ ಇದರ ಬಗ್ಗೆ ತಾವು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಆ ಕುಂಕಿ ಸ್ಥಳವನ್ನು ಹಕ್ಕುದಾರರಿಗೆ ಕೊಡಿಸುವಂಥ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕನ್ವರ್ಷನ್ ಕಾನೂನನ್ನು ತಂಗು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ದೊಡ್ಡ ಸಮಸ್ಯೆಯನ್ನು ನೀಗಿಸಿದ ತಮಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು.

ಇನ್ನು ಕೊನೆಯಾಗಿ, ಧಾರ್ಮಿಕ ದತ್ತಿ ಸಚಿವರಲ್ಲಿ ನನ್ನದೊಂದು ವಿನಂತಿ. ತಾವು ಏನು ಆರಾಧನಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿದ್ದೀರಿ ಇದು ಬಹಳ ಸ್ವಾಗತಾರ್ಹ. ಏಕೆಂದರೆ. ದೇವಸ್ಥಾನದ 7 ಬಾಗಿಲುಗಳಿಂದ ಹೊರಗೆ ನಿಂತು ಅಸ್ಪೃಶ್ಯರೆನಿಸಿಕೊಂಡು, ಸಮಾಜದಲ್ಲಿ ಬಾಕಿಯವರಿಂದ ಒತ್ತಲ್ಪಟ್ಟು, ಮಾನವೀಯತೆಯನ್ನು ಕಳೆದುಕೊಂಡು, ಹಿಂದೂ ಧರ್ಮದ ಒಂದು ಶಾಪವಾಗಿ ಉಳಿದಿರುತಕ್ಕ ಈ ಜನರಿಗೆ ಜೀವನಾಧಾರ ಕೊಟ್ಟಂಥ. ಮನುಷ್ಯತ್ವವನ್ನು ಕೊಟ್ಟಂಥ ಒಂದು ದೊಡ್ಡ ಕೀರ್ತಿ ಬರುವುದಾದರೆ ಅದು ಈ ಆರಾಧನಾ ಕಾರ್ಯಕ್ರಮದಿಂದ. ಆ ಹಳ್ಳಿಯ ಜನರು ನಂಬಿಕೊಂಡು ಬಂದಂಥ ದೇವರಿಗೆ ಒಂದು ಸುಂದರವಾದ ಗುಡಿಯನ್ನು ಕಟ್ಟಿಸುವ ಸೌಭಾಗ್ಯವನ್ನು ನೀವು ತಂದಿದ್ದೀರಿ. ಆದರೆ ಇದಕ್ಕೆ ತಾವು ಮಂಜೂರು ಮಾಡಿರತಕ್ಕ ಹಣ ಏನೇನೂ ಸಾಲದು. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಮಂಜೂರು ಮಾಡಿ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ಈ ಪಾಪದ ಜನರುಗಳಿಗೆ, ಅಸ್ಪೃಶ್ಯರುಗಳಿಗೆ ಒಳ್ಳೆಯ ದೇವರ ಗುಡಿಯನ್ನು ಕಟ್ಟಿಸುವ ಪುಣ್ಯದ ಕೆಲಸವನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ನನ್ನ ಕ್ಷೇತ್ರ ಮೂಡಿಬಿದರೆ. ಇದಕ್ಕೆ ಜೈನಕಾಶಿ ಎಂದು ಹೇಳುತ್ತಾರೆ. 18 ಜೈನ ಬಸದಿಗಳು, 18 ದೊಡ್ಡ ಕೆರೆಗಳು ಇದ್ದು, ಅಲ್ಲಿರತಕ್ಕಂಥ ಸಾವಿರ ಕಂಬದ ಬಸದಿ ಭಾರತದಲ್ಲೇ ಅತ್ಯುತ್ತಮವಾದ ಶಿಲ್ಪಕಲೆಗೆ ಹೆಸರಾಗಿದ್ದು ಜೈನರು, ಸಾವಿರಾರು ಯಾತ್ರಿಕರು ಬರುವಂಥ ಒಂದು ಪುಣ್ಯ ಕ್ಷೇತ್ರವಾಗಿದೆ. ಆದರೆ ಆ ಸಾವಿರ ಕಂಬದ ಬಸದಿ ಈಗ ಕುಸಿದು ಬೀಳುವಂಥ ಹಂತದಲ್ಲಿದ್ದು, ಇಂಥ ಪುಣ್ಯ ಬಸದಿಯನ್ನು ಜೀರ್ಣೋದ್ಧಾರ ಮಾಡದಿದ್ದರೆ, ದಕ್ಷಿಣ ಕನ್ನಡ ಜಿಲ್ಲೆಗೆ ಇದು ಒಂದು ದೊಡ್ಡ ಶಾಪವಾಗಿ ಪರಿಣಮಿಸುವಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅದರ ಜೀರ್ಣೋದ್ಧಾರಕ್ಕಾಗಿ ನಾವು ಈಗಾಗಲೇ ಒಂದು ಕಮಿಟಿಯನ್ನು ಮಾಡಿಕೊಂಡು ಕೂಡಲೇ ಜೀರ್ಣೋದ್ಧಾರ ಕಾರ್ಯವನ್ನು ಮಾಡಲಿಕ್ಕೆ ಮುಂದಾಗಿದ್ದೇವೆ. ಅದಕ್ಕೆ ಆಗುವಂಥ ಖರ್ಚಿನಲ್ಲಿ ಅರ್ಧ ಪಾಲನ್ನು ತಮ್ಮ ಸರ್ಕಾರದ

ವತಿಯಿಂದ ಮಂಜೂರಾತಿ ಮಾಡಿ, ನಮ್ಮ ಮೂಡಬಿದರೆ ಜೈನ ಕಾಶಿ ಬಸದಿಯ ಪಾವಿತ್ರ್ಯತೆಯನ್ನು ಉಳಿಸಬೇಕು. ಉತ್ತರ ಭಾರತದ ಯಾತ್ರಿಕರು ಬರುವಂಥ ಈ ಪುಣ್ಯ ಕ್ಷೇತ್ರ ಉಳಿದು ಬೆಳೆದು ತನ್ನ ಧಾರ್ಮಿಕ ನೆಲೆಯನ್ನು ಉಳಿಸಿದಂಥ ಕೀರ್ತಿಗೆ ಪಾತ್ರರಾಗಬೇಕು ಅದಕ್ಕಾಗಿ ಈ ವರ್ಷವೇ ತಾವು ಅದರ ಜೀರ್ಣೋದ್ಧಾರಕ್ಕಾಗುವ ಖರ್ಚಿನಲ್ಲಿ ಅರ್ಧಾಂಶ ಹಣವನ್ನು ಸರ್ಕಾರ ಮಂಜೂರಾತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ತಮಗ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬಹುದು. ಮಾನ್ಯ ಸದಸ್ಯರು ಇನ್ನು ಸ್ವಲ್ಪಹೊತ್ತು ಕುಳಿತುಕೊಳ್ಳುತ್ತೇವೆಂದು ನನ್ನದೇನು ಅಭ್ಯಂತರವಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷಿಣಿಯವರೇ, ರೆವಿನ್ಯೂ ಡಿಪಾರ್ಟ್‌ಮೆಂಟ್ ಇದರಲ್ಲಿ ಬರುತ್ತದೆ. ಸುಮಾರು ಮುಕ್ಕಾಲು ಭಾಗ ಸ್ಟೇಟ್ ಬಜೆಟ್ ಇದರಲ್ಲಿ ಬರುತ್ತದೆ, ರೂರಲ್ ಡೆವಲಪ್‌ಮೆಂಟ್ ಇದರಲ್ಲಿ ಬರುತ್ತದೆ.

ಉಪಾಧ್ಯಕ್ಷಿಣಿಯವರು : ಚೀಫ್ ವಿಪ್ ಅವರ ಕಡೆಯಿಂದ ಬಂದಿರತಕ್ಕಂಥ ಲಿಸ್ಟ್ ಪ್ರಕಾರ ಹೋಗುತ್ತೇನೆ. ಇದರಲ್ಲಿ ಇಬ್ಬರು ಮಾನ್ಯ ಸದಸ್ಯರು ಆಬ್ಸೆಂಟ್ ಆಗಿರುತ್ತಾರೆ. ಮಿಕ್ಕವರಿಗೆಲ್ಲರಿಗೂ ಚಾನ್ಸ್ ಕೊಟ್ಟಿದ್ದೇನೆ. ಈಗ ಮಾನ್ಯ ಮಂತ್ರಿಗಳನ್ನು ಉತ್ತರ ಹೇಳಲು ಕರೆದಿದ್ದೇನೆ. ಈಗ ತಾವೆಲ್ಲರೂ ಮಾತನಾಡಬೇಕು, ಇನ್ನೂ ಸ್ವಲ್ಪಹೊತ್ತು ಕುಳಿತುಕೊಳ್ಳೋಣ ಎಂದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷಿಣಿಯವರೇ, ಧಾರ್ಮಿಕ ದತ್ತಿ ಬಗ್ಗೆ ಮಾತನಾಡಬೇಕಾಗಿದೆ. ಎಂಟುವರೆ ಗಂಟೆಯಾಗುತ್ತದೆ. ನಾಳೆ ಮಾನ್ಯ ಸಚಿವರು ಉತ್ತರವನ್ನು ಕೊಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿರುವಂತೆ ಅದನ್ನು ನಾನು ಒಪ್ಪುತ್ತೇನೆ. ಉತ್ತರ ಕೊಡಬೇಕೆಂದರೆ ಅದಕ್ಕೂ ನಾನು ಸಿದ್ಧನಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷಿಣಿಯವರೇ. ಬಿ.ಎ.ಸಿ.ಯಲ್ಲಿ ಆಗಿರತಕ್ಕಂಥ ತೀರ್ಮಾನವನ್ನು ಒಪ್ಪುತ್ತೇನೆ. ಮಾನ್ಯ ಸಚಿವರು ಇವತ್ತು ಉತ್ತರವನ್ನು ಕೊಡಲು ಒಪ್ಪಿರುತ್ತಾರೆ. ಆದರೆ ಬೆಳಿಗ್ಗೆಯಿಂದ ಕುಳಿತಿದ್ದೇವೆ. ಈಗಾಗಲೇ ಆರೂವರೆ ಗಂಟೆಯಾಗಿದೆ. ಇವು ಬಹಳ ಪ್ರಾಮುಖ್ಯವಾದ ಇಲಾಖೆಗಳು ಅವರು ಸೆಕ್ರೆಟರಿಯವರ ಜೊತೆಯಲ್ಲಿ ಡಿಸ್‌ಕಸ್‌ಮಾಡಿ ಸಮಂಜಸವಾದ ಉತ್ತರವನ್ನು ಕೊಡಬೇಕು. ಆದ್ದರಿಂದ ಬೆಳಿಗ್ಗೆ 9-10 ಗಂಟೆಗೆ ಮಾನ್ಯ ಸಚಿವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇವೆ.

ಉಪಾಧ್ಯಕ್ಷಿಣಿಯವರು : ಇನ್ನು ಸ್ವಲ್ಪ ಹೊತ್ತು ಚರ್ಚೆ ಮಾಡೋಣ ಎಂದರೆ ಸ್ವಲ್ಪಹೊತ್ತ ಸಭೆಯನ್ನು ಮುಂದುವರಿಸೋಣ.

ಶ್ರೀ ಜಿ. ರಾಜುಗೌಡ : ಮಾನ್ಯ ಸಚಿವರು ಬೆಳಿಗ್ಗೆ 10 ಗಂಟೆಗೆ ಉತ್ತರವನ್ನು ಕೊಡಲಿ. ಏತಕ್ಕೆಂದರೆ, ಮಾನ್ಯ ಸಚಿವರು ಈಗ ಉತ್ತರವನ್ನು ಕೊಡುತ್ತೇವೆಂದರೆ ಮತ್ತೆ ಅದಕ್ಕೆ ಕ್ಲಾರಿಫಿಕೇಷನ್ಸ್ ಕೇಳಬೇಕಾಗುತ್ತದೆ. ಸಮಯ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರು ಏನು ಹೇಳುತ್ತಾರೋ ಆದರಂತೆ ಕೇಳೋಣ. ತಮ್ಮ ಆದೇಶಕ್ಕೆ ನಾನು ರೆಡಿ ಇದ್ದೇನೆ.

ಉಪಾಧ್ಯಕ್ಷಿಣಿಯವರು : ಈಗ ಡಿಸ್‌ಕಷನ್ ಮುಗಿದು ಬಿಡಲಿ. ಇಬ್ಬರು ಮೂರು ಜನರ ಹೆಸರುಗಳು ಇದೆ. 5-5 ನಿಮಿಷ ಮಾತನಾಡಿದರೆ ಅನರದು ಮುಗಿದುಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉತ್ತರ ಯಾವಾಗ ?

ಉಪಾಧ್ಯಕ್ಷಿಣಿಯವರು : ಇವತ್ತು ಮಧ್ಯಾಹ್ನ 3.30ಕ್ಕೆ ಚರ್ಚೆ ಶುರುವಾದುದು. ಇನ್ನೂ ಅರ್ಧ ಗಂಟೆ ಕೂರಬಹುದೆಂದು ನನಗೆ ಅನ್ನಿಸುತ್ತದೆ. ಇಬ್ಬರು ಮೂವರು ಮಾತನಾಡುವವರಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ರಾತ್ರಿ 8 ಗಂಟೆಯವರೆಗೆ ಬೇಕಾದರೆ ಕೂರುತ್ತೇನೆ. ಆದರೆ ಮಂತ್ರಿಗಳು ನಾಳೆ ಉತ್ತರ ಕೊಡಲಿ.

ಶ್ರೀ ಬಿ.ಎಂ. ಇದಿನಬ್ಬ : ಮಂತ್ರಿಗಳು ಇವತ್ತೇ ಉತ್ತರ ಕೊಡುತ್ತಾರೆಂದು ನಮ್ಮ ಹೆಸರು ಬಿಟ್ಟಿದ್ದಾರೆ. ನಮಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷಿಣಿಯವರು : ನನ್ನ ಹತ್ತಿರ ಇರತಕ್ಕ ಪಟ್ಟಿಯ ಪ್ರಕಾರ ಕೇವಲ 3 ಜನ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಅವರಿಗೆ ಐದೈದು ನಿಮಿಷ ಕೊಡುತ್ತೇನೆ. ಆಮೇಲೆ ತಾವು ಉತ್ತರ ಕೊಡಿ. ಈಗ ಚರ್ಚೆ ಮುಗಿಯಲಿ. ಸಭೆ ಹೇಗೆ ಹೇಳುತ್ತದೆ ಆ ರೀತಿ ತೀರ್ಮಾನ ಮಾಡುತ್ತೇನೆ.

† ಶ್ರೀ ಆರ್. ನಾರಾಯಣ (ಬೆಳ್ಳಾವಿ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ. ಇವತ್ತು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ. ಬಹಳ ಮಹತ್ವವಾದ ಗ್ರಾಮಾಭಿವೃದ್ಧಿ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೊಸದಾಗಿ ಹೇಳುವುದು ಏನೂ ಇಲ್ಲ; ಮಾನ್ಯ ಸ್ನೇಹಿತರು ಹೇಳಿರುವುದನ್ನು ಮತ್ತೆ ಮತ್ತೆ ಒತ್ತಾಯಪೂರ್ವಕವಾಗಿ. ವಿನಯಪೂರ್ವಕವಾಗಿ ಹೇಳಬೇಕಾಗಿದೆ. ಗ್ರಾಮಾಂತರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇದುವರೆಗೆ ಮಾತನಾಡಿದ ಸದನದ ಎಲ್ಲಾ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ ಸರ್ಕಾರ ಈ ವಿಷಯದಲ್ಲಿ ಹಿಂದೆ ಉಳಿದಿದೆ ಎಂದು ಮಾನ್ಯ ಸಚಿವರಿಗೆ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಸದಸ್ಯರು ನಿರೀಕ್ಷಿಸಿದ ಮಟ್ಟಕ್ಕೆ ರಿಕ್ವೈರ್ಡ್ ಅಟೆನ್‌ಷನ್ ಸರ್ಕಾರ ಕೊಟ್ಟಿಲ್ಲವೆಂದು ವ್ಯಥೆಯಿಂದ ಸಚಿವರ ಗಮನಕ್ಕೆ ತರಬೇಕಾಗಿದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಎಷ್ಟೊಂದು ಡೈಮೆನ್‌ಷನ್ ಆಗಿದೆ ಎಂದರೆ. ನಾನು ಪ್ರತಿನಿಧಿಸತಕ್ಕ ಕ್ಷೇತ್ರ, ಗ್ರಾಮಾಂತರ ಪ್ರದೇಶದ ಕ್ಷೇತ್ರ . ಇವತ್ತು ನಾವು ಶಾಸಕರಾಗಿ ಓಡಾಡುವುದು ಕಷ್ಟವಾಗಿದೆ. ಯಾವುದೇ ಗ್ರಾಮಕ್ಕೆ ಹೋದರೂ ಕುಡಿಯುವ ನೀರಿನ ಅಭಾವ ಕಾಣುತ್ತಿದ್ದೇವೆ. ಕೆಲವು ಭಾಗದಲ್ಲಿ ಅಲ್ಪಸ್ವಲ್ಪ ಮಳೆ ಆಗಿರಬಹುದು. ಆದರೆ ಕುಡಿಯುವ ನೀರಿಗೂ ಅದಕ್ಕೂ ನೇರವಾದ ಸಂಬಂಧವಿಲ್ಲ. ನಾವು ಅನೇಕ ಸಾರಿ ಸರ್ಕಾರದ ಮೇಲೆ ಒತ್ತಡ ತಂದಿದ್ದೇವೆ. ಹಿಂದೆ 10-12 ವರ್ಷಗಳ ಕೆಳಗೆ 60-80 ಅಡಿ ಕೊರೆದರೆ ಸಾಕು ಆ ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತಿತ್ತು. ಆದರೆ, ಇವತ್ತಿನ ದಿವಸ ವ್ಯವಸಾಯಕ್ಕೋಸ್ಕರ ಅಕ್ಕಪಕ್ಕದಲ್ಲಿ ನೂರಾರು ಅಡಿಗಳ ಬೋರ್‌ವೆಲ್‌ಗಳನ್ನು ಕೊರೆಯುವುದರಿಂದ ಕುಡಿಯುವ ನೀರಿನ ಬೋರ್‌ವೆಲ್‌ಗಳಲ್ಲಿ ಕೂಡ ನೀರಿನ ಮಟ್ಟ ಕೆಳಕ್ಕೆ ಹೋಗುತ್ತಿದೆ. ಅಲ್ಲದೆ ವಿಪರೀತ ಜನಸಂಖ್ಯೆಯಾಗಿ. ಬೋರ್‌ವೆಲ್‌ಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಅಡಿಷನಲ್ ಬೋರ್‌ವೆಲ್‌ಗಳನ್ನು ಹಾಕಬೇಕಾಗಿದೆ. ಎಲ್ಲೆಲ್ಲಿ ಮಿನಿ ವಾಟರ್ ಸಪ್ಲೈ, ಎನ್‌ಆರ್‌ಡಬ್ಲ್ಯುಎಸ್ ಸ್ಕೀಂಗಳಿವೆ ಅಲ್ಲಿ ವಿದ್ಯುಚ್ಛಕ್ತಿಯ ತೊಂದರೆಯಿಂದಾಗಿ ಸಕಾಲದಲ್ಲಿ ಟ್ಯಾಂಕ್ ಭರ್ತಿ ಮಾಡುವುದಕ್ಕೆ ತೊಂದರೆ ಇರುವುದರಿಂದ ಅಲ್ಲಿ ಸಮರ್ಪಕವಾಗಿ ನೀರಿನ ಹಂಚಿಕೆಯಾಗದೆ ಇರುವುದರಿಂದ ಹೋಬಳಿ ಮಟ್ಟದ ಗ್ರಾಮಗಳಲ್ಲಿ ಮತ್ತು ಮಂಡಲ ಪಂಚಾಯಿತಿ

ಗ್ರಾಮಗಳಲ್ಲಿ ನೀರಿನ ತೊಂದರೆ ಬಹಳವಾಗಿದೆ. ಅಲ್ಲಿ ಹೆಚ್ಚಿನ ಬೋರ್‌ವೆಲ್‌ಗಳ ಅವಶ್ಯಕತೆ ಇದೆ. ಅಲ್ಲಿ ಯಾವ ರೀತಿ ಪರಿಸ್ಥಿತಿ ಉಂಟಾಗಿದೆ ಎಂದರೆ ಜನರು ಊರನ್ನು ಬಿಟ್ಟು ದೂರ ಹೋಗಿ ವಾಸ ಮಾಡತಕ್ಕದ್ದನ್ನು ಕಾಣುತ್ತಿದ್ದೇವೆ. ಅಲ್ಲೂ ಸಹ ಹೊಸ ಬೋರ್‌ವೆಲ್‌ಗಳನ್ನು ಕೊರೆಸಬೇಕಾಗಿದೆ. ಅದೇ ರೀತಿ ಶಾಲಾ ಕಾಲೇಜುಗಳು ಇರುವ ಕಡೆ, ದೇವಸ್ಥಾನಗಳು ಇರುವ ಕಡೆ ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂಬ ಬೇಡಿಕೆ ಬಂದಿದೆ. ಕುಡಿಯುವ ನೀರಿನ ಅವಶ್ಯಕತೆ ಬಹಳ ಇರುವುದರಿಂದ ನಿರೀಕ್ಷಿಸಿದ ಮಟ್ಟದಲ್ಲಿ ಸರ್ಕಾರ ಈ ಒಂದು ವ್ಯವಸ್ಥೆ ಮಾಡಲು ಮುಂದೆ ಬರಬೇಕಾಗಿದೆ. ನಾವು ಸಮರ್ಪಕವಾಗಿ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಮಾನ್ಯ ಘೋರ್ಪಡೆಯವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಅಡಿಷನಲ್ ಗ್ರಾಂಟ್ ಎಂದು 25 ಕೋಟಿ ರೂಪಾಯಿಗಳ ಒಂದು ಸ್ಕೀಂ ಅನ್ನು ತಂದರು. ಆದರೆ ಅದು ಸಚಿವ ಸಂಪುಟದಲ್ಲಿ ಮಂಜೂರು ಆಗಲಿಲ್ಲ. ಪ್ಲಾನ್ ಆಲೋಕೇಷನ್ ಹೊರತಾಗಿ ಸಮಸ್ಯಾತ್ಮಕ ಗ್ರಾಮಗಳಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವುದಕ್ಕೆ25 ಕೋಟಿ ರೂಪಾಯಿ ಯೋಜನೆಯನ್ನು 1991-92ರಲ್ಲಿ ತಂದು ಅಲ್ಲಿಗೆ ಕೈಬಿಡಲಾಯಿತು. ಅದರ ಬಗ್ಗೆ ಸದನದಲ್ಲಿ ದೀರ್ಘವಾಗಿ ಚರ್ಚೆಯಾದ ಸನ್ನಿವೇಶವನ್ನು ನಾವು ಕಂಡಿದ್ದೇವೆ. ಅದನ್ನು 1992-93ನೇ ಸಾಲಿನಲ್ಲಾದರೂ ತಂದು ರೆಗ್ಯುಲರ್ ಗ್ರಾಂಟ್ ಹೊರತಾಗಿ 50 ಕೋಟಿ ರೂಪಾಯಿಗಳನ್ನು ಇಟ್ಟು ಮತ್ತೆ ಅದೇ ಸ್ಕೀಮನ್ನು ಅಳವಡಿಸಿ ಸಮಸ್ಯಾತ್ಮಕ ಗ್ರಾಮಗಳಿಗೆ ಕುಡಿಯುವ ನೀರನ್ನು ಪೂರೈಸಬೇಕಾಗಿದೆ. ಅದು ಬಹಳ ಒಳ್ಳೆಯ ಯೋಜನೆ ಮತ್ತು ಉತ್ತರ ಸಲಹೆಗಳನ್ನೊಳಗೊಂಡಿದೆ. ಅದನ್ನು ನಾನೇ ಮಂತ್ರಿಗಳಿಗೆ ಖುದ್ದಾಗಿ ಹೋಗಿ ಕೊಡುತ್ತಿದ್ದೇನೆ.

ಅದನ್ನು ಬಹಳ ಗಹನವಾಗಿ ಸರ್ಕಾರ ಪರಿಶೀಲನೆ ಮಾಡಿ ಕನಿಷ್ಠ 1992-93ರಲ್ಲಿ 50 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಮತ್ತು ಇವತ್ತು ಎಲ್ಲ ಸಮಸ್ಯಾತ್ಮಕ ಗ್ರಾಮಗಳಿಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೋಸ್ಕರ ರೂರಲ್ ವಾಟರ್ ಸಪ್ಲೈ ಸ್ಕೀಮನ್ನು ಕಂಪ್ಯೂಟರೈಸ್ ಮಾಡುವ ಪರಿಸ್ಥಿತಿ ಬಹಳ ಅನಿವಾರ್ಯವಾಗಿದೆ ಎಂದು ಸದನದಲ್ಲಿ ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದು ಪ್ರಮುಖವಾದಂಥ ವಿಷಯ. ನಾನು ಮೊದಲೇ ಹೇಳಿದ ರೀತಿಯಲ್ಲಿ ಸರ್ಕಾರ ಇದರ ಕಡೆ ಕೊಡಬೇಕಾದ ಗಮನವನ್ನು ಕೊಟ್ಟಿಲ್ಲ. ಮಾನ್ಯ ಶಿವರಾಮೇಗೌಡರು ಅದರ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ನನ್ನ ಕ್ಷೇತ್ರ ಗ್ರಾಮಾಂತರ ಪ್ರದೇಶಗಳಿಂದ ಕೂಡಿದ್ದು ಸುಮಾರು 500 ಹಳ್ಳಿಗಳಿವೆ. ಸುಮಾರು 70-80 ಗೊಲ್ಲರ ಹಟ್ಟಿಗಳಿವೆ. ಅಲ್ಲಿ ಅನೇಕ ಕಾರಣಗಳಿಂದ ಬೋರ್‌ವೆಲ್‌ಗಳು ಬತ್ತಿಹೋಗಿವೆ. ಮತ್ತು ನಾನ್-ಫಂಕ್ಷನ್ ಆಗಿವೆ. ಎಲ್ಲ ದೃಷ್ಟಿಯಿಂದ ಕನಿಷ್ಠ 70 ಬೋರ್‌ವೆಲ್‌ಗಳನ್ನಾದರೂ ಬೆಳ್ಳಾವಿ ವಿಧಾನಸಭಾ ಕ್ಷೇತ್ರಕ್ಕೆ ಹಾಕಬೇಕಾದ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಶಾಸಕನಾಗಿ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದ ಮೇಲೆ ನಾವು ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂಬುದನ್ನು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮತ್ತು ರೋಡಿನ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಇವತ್ತು ಬೇಕಾದರೆ ಸರ್ವೆ ಮಾಡಿಸಿ ನೋಡಿ. ಕನಿಷ್ಠ ಒಂದು ಮಂಡಲ ಪಂಚಾಯಿತಿಯಲ್ಲಿ 50 ಲಕ್ಷ ರೂಪಾಯಿಗಳಿಂದ 1 ಕೋಟಿ ರೂಪಾಯಿಗಳನ್ನು ರೋಡಿಗೆ ಖರ್ಚು ಮಾಡುವ ಅವಶ್ಯಕತೆ ಇದೆ. ಅಷ್ಟನ್ನೂ ಒಂದೇ ಸಾರಿ ಮಾಡಿ ಎಂದು ಕೇಳುವುದಕ್ಕಾಗುವುದಿಲ್ಲ. ಆದರೆ ಕನಿಷ್ಠ 15 ಲಕ್ಷ ರೂಪಾಯಿಗಳನ್ನಾದರೂ ಖರ್ಚು ಮಾಡಿ ಒಂದು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸ ರಸ್ತೆಗಳ ನಿರ್ಮಾಣ, ರಸ್ತೆಗಳ ದುರಸ್ತಿ,

ಸಿ.ಡಿ. ವರ್ಕ್ಸ್ ಮಾಡಬೇಕಾದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇನ್ನೊಂದು ಬಹಳ ದುಃಖದ ಸಂಗತಿ ಎಂದರೆ, ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರತಕ್ಕ ಕೆರೆಗಳ ನಿರ್ಮಾಣ. ಒಂದು ಸಣ್ಣ ಉದಾಹರಣೆ ಕೊಡುವುದಾದರೆ, ತುಮಕೂರು ಜಿಲ್ಲೆಯಲ್ಲಿ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ 500 ಎಕರೆ ಅಚ್ಚುಕಟ್ಟು ಒಳಗಡೆ ಇರುವ ಕೆರೆಗಳು ಸುಮಾರು 85 ಅನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಅದು ವಿವಿಧ ನಿರ್ಮಾಣದ ಹಂತದಲ್ಲಿವೆ. ಇವತ್ತಿನ ಎಸ್.ಆರ್. ರೇಟಿನ ಪ್ರಕಾರ ಅದಕ್ಕೆ 7 ಕೋಟಿ ರೂಪಾಯಿಗಳು ಬೇಕು. ಆದರೆ ಕೊಟ್ಟಿರತಕ್ಕದ್ದು ಕೇವಲ 60 ಲಕ್ಷ ರೂಪಾಯಿಗಳು. ಅಂದರೆ ಬೇಡಿಕೆಯಲ್ಲಿ 10 ಪರ್ಸೆಂಟ್ ವ್ಯವಸಾಯಕ್ಕೋಸ್ಕರ ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲಾ ಪರಿಷತ್ ಕೆರೆಗಳಿಗೆ ಕೊಡುವುದಕ್ಕೆ ಶಕ್ತಿ ಇಲ್ಲ. ಎಂದರೆ ಬಹಳ ಕಷ್ಟವಾಗುತ್ತದೆ. ಮತ್ತು ಹಾಲಿ ಇರತಕ್ಕ ಕೆರೆಗಳಲ್ಲಿ ಬಹಳಷ್ಟು ದುರಸ್ತಿಯಾಗಬೇಕಾಗಿದೆ. ಇವತ್ತು ನಮಗೆ ಬಹಳ ದುಃಖವಾಗುತ್ತಿದೆ. ಎಲ್ಲಾ ಕೆರೆಗಳಲ್ಲಿ ಹೂಳನ್ನು ತೆಗೆಯಬೇಕಾದ ಪರಿಸ್ಥಿತಿ ಮುಟ್ಟಿದೆ. ಚಾನಲ್‌ಗಳ ರಿಪೇರಿ ಇರಬಹುದು. ಏರಿಯಾ ಉಟಾವಣೆ ಇರಬಹುದು. ರೆಸ್ಟೋರೇಷನ್ ಆಫ್ ಟ್ಯಾಂಕ್ಸ್ ಇರಬಹುದು. ಇವುಗಳಿಗೆ ಬೃಹತ್ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಕುಡಿಯುವ ನೀರು ಪ್ರಮುಖವಾಗಿರತಕ್ಕದ್ದು, ರಸ್ತೆಗಳು ಮತ್ತು ಕೆರೆಗಳ ಅಭಿವೃದ್ಧಿ ಆದರೆ ಇನ್ನೊಂದು ಪ್ರಮುಖವಾದ ವಿಷಯವೆಂದರೆ, ಇವತ್ತು ಜಿಲ್ಲಾ ಪರಿಷತ್ ವ್ಯವಸ್ಥೆ ಇರಬೇಕೇ ಬೇಡವೇ ಎಂಬುದನ್ನು ನಾವು ಬಹಳಷ್ಟು ಸೀರಿಯಸ್ಸಾಗಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ಅಧಿಕಾರ ವಿಕೇಂದ್ರೀಕರಣ ವ್ಯಾಪ್ತಿಯ ಹೆಸರಿನಲ್ಲಿ, ಡೀಸೆಂಟ್ರಲೈಸೇಷನ್ ಆಫ್ ಪವರ್ ಎಂದು ಏನು ಹೇಳುತ್ತಿದ್ದೇವೆ, ಅದರ ಮೀನಿಂಗ್‌ನಲ್ಲಿ ಜಿಲ್ಲಾ ಪರಿಷತ್ತು ಬರುತ್ತದೋ ಇಲ್ಲವೋ ಎಂಬ ಬಗ್ಗೆ ಎಲ್ಲರೂ ಬಿಚ್ಚು ಮನಸ್ಸಿನಿಂದ, ಮುಕ್ತ ಮನಸ್ಸಿನಿಂದ ಯೋಚನೆ ಮಾಡುವ ಕಾಲ ಬಂದಿದೆ. ಇದನ್ನು ಅಬಾಲಿಷ್ ಮಾಡತಕ್ಕದ್ದು ಎಲ್ಲ ರೀತಿಯಿಂದಲೂ ಸೂಕ್ತ. ಆಡಳಿತಾತ್ಮಕ, ರಾಜಕೀಯ ಮತ್ತು ಅಧಿಕಾರ ವಿಕೇಂದ್ರೀಕರಣ ಎಲ್ಲ ದೃಷ್ಟಿಯಿಂದ ಒಳ್ಳೆಯದು. ಗ್ರಾಮಾಂತ್ರರ ಅಭಿವೃದ್ಧಿಗೆ ಏನಾದರೂ ಆಗಬೇಕಾಗಿದ್ದರೆ ಮೊದಲು ಜಿಲ್ಲಾ ಪರಿಷತ್ತುಗಳನ್ನು ರದ್ದು ಮಾಡುವ ಬಗ್ಗೆ ನಾವೆಲ್ಲರೂ ಮುಕ್ತ ಮನಸ್ಸಿನಿಂದ ಇರಬೇಕಾಗುತ್ತದೆ. ಇದು ಕೇವಲ ಯಾವುದೋ ಒಂದಕ್ಕೆ ಅಂಟಿಕೊಂಡು ಮಾಡಬಾರದು. ನಮ್ಮ ಅನುಭವದ ದೃಷ್ಟಿಯಲ್ಲಿ ನಿಜವಾಗಿಯೂ ಇದರಿಂದ ಹೆಚ್ಚಿನ ಅನುಕೂಲಕ್ಕಿಂತ ಅನಾನುಕೂಲಗಳೇ ಜಾಸ್ತಿಯಾಗಿದೆ. ಜಿಲ್ಲಾ ಪರಿಷತ್ ವ್ಯವಸ್ಥೆಯಿಂದ ಒಂದು ರೀತಿಯ ಪ್ಯಾರಲಲ್ ಗೌರ್ನಮೆಂಟ್ ಆಗಿ ಕೆಲಸ ಮಾಡುವುದಕ್ಕೆ ಹೋಗಿ ಇಲ್ಲಸಲ್ಲದ ಗೊಂದಲವಾಗಿದೆ. ಇಷ್ಟು ಮಾತನ್ನು ಜಿಲ್ಲಾ ಪರಿಷತ್ತಿನ ಬಗ್ಗೆ ಹೇಳಿದ್ದೇನೆ. ನಾವು ಸಮರ್ಪಕವಾದ ನೀರಿನ ವ್ಯವಸ್ಥೆಯನ್ನು ಮಾಡಬೇಕಾದರೆ ಕಂಪ್ಯೂಟರೈಸ್ ಸಿಸ್ಟಂ ತರಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಎರಡು, ಮೂರು ಒಳ್ಳೆಯ ಸ್ಕೀಂಗಳು ಜಿಲ್ಲಾ ಪರಿಷತ್ತಿನಲ್ಲಿ ಇವೆ. ಹರಿಜನರಿಗೆ ಅನುಕೂಲವಾಗತಕ್ಕ ಮಿಲಿಯನ್ ವೆಲ್ ಸ್ಕೀಂ ಏನಿದೆ ಅದು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ. ಅದನ್ನು ಈಗಲೂ ವ್ಯಾಪಕವಾಗಿ ವಿಸ್ತಾರಗೊಳಿಸತಕ್ಕ ಅವಶ್ಯಕತೆ ಇದೆ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ವಾಟರ್ ಷೆಡ್ ಸ್ಕೀಂ, ಜಲಾನಯನ ಪ್ರದೇಶಗಳ ಒಂದು ಸ್ಕೀಂ ಏನಿದೆ ಅದನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ತರಬೇಕಾಗಿದೆ. ಇನ್ನು ಎರಡು ಮಾತನ್ನು ಹೇಳಿ, ನನ್ನ ಭಾಷಣವನ್ನು ಮುಗಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮ್ಮಲ್ಲಿ ಹಿಂದೆ ರೆವಿನ್ಯೂ ಮಂತ್ರಿಗಳನ್ನು ಗೊಲ್ಲರ ಹಟ್ಟಿಗಳು ಮತ್ತು ಲಂಬಾಣಿ ತಾಂಡಾಗಳನ್ನು ರೆವಿನ್ಯೂ ಗ್ರಾಮಗಳಾಗಿ ಘೋಷಣೆ ಮಾಡಬೇಕೆಂದು ಕೇಳಿದ್ದೆವು. ಇದನ್ನು ಹಿಂದೆ ಪ್ರಶ್ನೆ ರೂಪದಲ್ಲಿ ಕೇಳಿದಾಗ ಮಾಡಿದ್ದೇವೆ ಎಂದು ಹೇಳಿದರು. ರೆವಿನ್ಯೂ ಗ್ರಾಮಗಳಿಗಾಗಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೂ ಸಹ ಇವತ್ತು

ಅನೇಕ ಸೌಲಭ್ಯಗಳಿಂದ ವಂಚಿತರಾಗಿರುವ ಗೊಲ್ಲರ ಹಟ್ಟಿ ಮತ್ತು ಲಂಬಾಣಿ ತಾಂಡಾಗಳನ್ನು ತಕ್ಷಣ ರೆವಿನ್ಯೂ ಗ್ರಾಮಗಳನ್ನಾಗಿ ಘೋಷಣೆ ಮಾಡಬೇಕು. ಇನ್ನು ದತ್ತಿ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನ ರಾಜ್ಯದಲ್ಲಿ ಪ್ರಮುಖವಾದ ದೇವಸ್ಥಾನ. ಅಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರು ಕಾರ್ಯದರ್ಶಿಯಾಗಿದ್ದಾರೆ. ಅವರು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಬೆಂಗಳೂರಿನಿಂದ ಪ್ರಯಾಣ ಮಾಡಿ ಓಡಾಡುತ್ತಿದ್ದಾರೆ. ಅಲ್ಲಿರತಕ್ಕ ಆಡಳಿತ ಮಂಡಲಿ ಎಂದರೆ ಬಹಳ ಜವಾಬ್ದಾರಿಯುತವಾದ ಕಮಿಟಿ ಏನಿದೆ ಅದರಲ್ಲಿರುವ ಮೂರು ನಾಲ್ಕು ಜನರು ನಾವು ಕಮಿಟಿಗೆ ಬರುವುದಿಲ್ಲ ಎಂದು ಬರೆದುಕೊಟ್ಟಿದ್ದಾರೆ. ಆದ್ದರಿಂದ ತಕ್ಷಣ ಆ ಕಮಿಟಿಯನ್ನು ಪುನರ್‌ರಚಿಸಬೇಕು. ಮತ್ತು ಸೆಕ್ರೆಟರಿಯಾಗಿ ಅಸಿಸ್ಟೆಂಟ್ ಕಮಿಷನರ್ ಅವರನ್ನು ಏನು ಹಾಕಿದ್ದಾರೆ ತಕ್ಷಣ ಅವರನ್ನು ಬದಲಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನದ ಬಗ್ಗೆ ಸನ್ಮಾನ್ಯ ಮಂತ್ರಿಗಳಿಗೆ ಹೇಳಬೇಕು. ಅದರ ಪಕ್ಕದಲ್ಲಿ ನಮ್ಮದೇ ಮುಕ್ಕಾಲು ಭಾಗ ಇದೆ. ನಾಗಮಂಗಲ ತಾಲ್ಲೂಕಿನವರು, ತುರುವೇಕೆರೆ ಮತ್ತು ತಿಪಟೂರು ತಾಲ್ಲೂಕಿನವರು ಇದ್ದೇವೆ. ಆದರೆ ಅಲ್ಲಿನ ಕಮಿಟಿಗೆ ಗದಗ್ ಮತ್ತು ಬಿಜಾಪುರದವರನ್ನು ಸದಸ್ಯರನ್ನಾಗಿ ಮಾಡುತ್ತೀರಿ. ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ಈಗಾಗಲೇ ವಿನಂತಿ ಮಾಡಿದ್ದೆ. ಆ ಕಮಿಟಿಯನ್ನು ರೀಕಾನ್‌ಸ್ಟಿಟ್ಯೂಟ್ ಮಾಡಿ ಯಾರು ಅರ್ಹರಾಗಿದ್ದಾರೆ ಆ ಭಾಗದವರು ಯಾರಿದ್ದಾರೆ ಅವರನ್ನು ಮೆಂಬರ್ ಮಾಡಿ ಎಂದು ವಿನಂತಿ ಮಾಡಿದ್ದೆ. ಆದ್ದರಿಂದ ದಯಮಾಡಿ ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ನಾರಾಯಣ್ : ಬೆಳ್ಳಾವಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸಿದ್ದೇಶ್ವರ ಸ್ವಾಮಿ ಇರತಕ್ಕ ಸಿದ್ದರಬೆಟ್ಟ ಒಂದು ಪವಿತ್ರ ಸ್ಥಾನವಾಗಿದ್ದು ಅದನ್ನು ಒಂದು ಪ್ರವಾಸಿಕೇಂದ್ರ ಎಂದು ಡಿಕ್ಲೇರ್ ಮಾಡಿದ್ದಾರೆ. ಅದಕ್ಕೂ ಕೂಡ ದತ್ತಿ ಇಲಾಖೆಯಿಂದ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ಕಾಲಾವಕಾಶ ಕಡಿಮೆ ಇರುವುದರಿಂದ ನನ್ನ ಕಟ್ಟಕಡೆಯ ಕಳಕಳಿ ಎಂದರೆ, ಇವತ್ತು ನಾವು ಜನರಿಗೆ ಕುಡಿಯುವ ನೀರನ್ನು ಒದಗಿಸದೇ ಹೋದರೆ ನಾವು ಸರ್ಕಾರ ನಡೆಸತಕ್ಕದ್ದು ಏಕೆ, ಶಾಸಕರಾಗಿ ನಾವೆಲ್ಲರೂ ಏತಕ್ಕೆ ಇರಬೇಕು ಎನ್ನತಕ್ಕ ಮೂಲ ಪ್ರಶ್ನೆ ಬರುತ್ತದೆ. ಇವತ್ತು ಬೇರೆ ಏನೂ ಮಾಡದಿದ್ದರೂ ಚಿಂತೆ ಇಲ್ಲ, ಕಡೆಯ ಪಕ್ಷ ಇವತ್ತಿನ ದಿವಸ ಜನಸಂಖ್ಯಾ ಸ್ಫೋಟವನ್ನು ನೋಡಿದರೆ ಮುಂದಿನ ದಿವಸಗಳಲ್ಲಿ ನೀರು ಕೊಡುವ ಸ್ಥಿತಿಯಲ್ಲಿ ಸರ್ಕಾರ ಇರುತ್ತದೋ ಇಲ್ಲವೋ ಎನ್ನುವ ಪರಿಸ್ಥಿತಿ ಇದೆ. ಈ ಬಗ್ಗೆ ಎಲ್ಲಾ ಸದಸ್ಯರ ಕಳಕಳಿ ಒಂದೇ ಇರುವುದರಿಂದ ಕನಿಷ್ಟ ಪಕ್ಷ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಅದರಲ್ಲೂ ನಮ್ಮಂತಹ ಗ್ರಾಮಾಂತರ ಪ್ರದೇಶಗಳಿಗೆ ಕನಿಷ್ಟ 100 ಬೋರ್‌ವೆಲ್‌ಗಳನ್ನು ಕೊಡತಕ್ಕ ಭರವಸೆಯನ್ನು ಕೊಟ್ಟೇ ಕೊಡಬೇಕೆಂದು ವಿನಯಪೂರ್ವಕವಾಗಿ ಒತ್ತಾಯ ಮಾಡುತ್ತೇವೆ. ಇಲ್ಲದಿದ್ದರೆ ಧರಣಿಗೆ ನುತ್ತೊಂದಕ್ಕೆ ನಾವು ಇಳಿಯಬೇಕಾಗುತ್ತದೆನ್ನುವ ಕಳಕಳಿಯನ್ನು ಇಡೀ ಸದನದ ಎಲ್ಲ ಸದಸ್ಯರ ಪರವಾಗಿ ವ್ಯಕ್ತ ಮಾಡುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತಾ, ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇವೆ.

† ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೆ ಸಮಯ

ಜಾಸ್ತಿಯಾಗಿದೆ. ಮಾನ್ಯ ರೆವಿನ್ಯೂ ಮಂತ್ರಿಗಳು ಸಮಯದ ಬಗ್ಗೆ ನನಗೆ ಸೂಚನೆಯನ್ನು ಕೊಟ್ಟಿದ್ದಾರೆ. ಆದರೂ ಸಹ ನಾನು ಐದು ನಿಮಿಷಕ್ಕಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. 2-3 ವಿಷಯಗಳ ಬಗ್ಗೆ ನಾನು ಸಲಹೆ ಕೊಡುತ್ತೇನೆ. ಮೊದಲನೆಯದಾಗಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ. ನಮ್ಮ ಕಂದಾಯ ಇಲಾಖೆಯ ಹೇಳಿಕೆ ಪ್ರಕಾರ 71 ತಾಲ್ಲೂಕುಗಳು ನೈಸರ್ಗಿಕ ವಿಕೋಪಕ್ಕೆ ತುತ್ತಾಗಿವೆ. ಅತಿವೃಷ್ಟಿ ಹಾಗೂ ಅನಾವೃಷ್ಟಿಗಳು ನಮ್ಮ ರಾಜ್ಯಕ್ಕೆ ಮೊದಲಿನಿಂದಲೂ ಬಂದಂತಹವುಗಳೇ. ಬಿಜಾಪುರ, ಗುಲ್ಬರ್ಗ, ಕೋಲಾರ, ಬಳ್ಳಾರಿಯ ಕೆಲವು ಭಾಗ, ತುಮಕೂರು ಜಿಲ್ಲೆ, ಬೆಂಗಳೂರು ಗ್ರಾಮಾಂತರದ ಬಯಲು ಸೀಮೆಯಲ್ಲಿ ಸುಮಾರು 71 ತಾಲ್ಲೂಕುಗಳು ಎಂದರೆ, ಇದರ ಜೊತೆ ಇನ್ನೂ 8 ತಾಲ್ಲೂಕು ಸೇರಿದರೆ ಹೆಚ್ಚಕಡಿಮೆ ಶೇಕಡಾ 50 ಭಾಗ ಈ ರಾಜ್ಯದಲ್ಲಿ ಈ ನೈಸರ್ಗಿಕ ವಿಕೋಪಕ್ಕೆ ತುತ್ತಾಗುತ್ತವೆ. ಇಲ್ಲಿ ಅನಾವೃಷ್ಟಿ. ಆದರೆ ಮಳೆಗಾಲದಲ್ಲಿ ದಕ್ಷಿಣ ಕನ್ನಡ, ಮಲೆನಾಡಿನಲ್ಲಿ ಅತಿವೃಷ್ಟಿ ಆಗುತ್ತದೆ. ಆದ್ದರಿಂದ ಕಂದಾಯ ಇಲಾಖೆಯವರು ಇವತ್ತು ಏನು ಮಾಡಬೇಕು? ಇವತ್ತು ಅತಿವೃಷ್ಟಿ ಹಾಗೂ ಅನಾವೃಷ್ಟಿ ಪ್ರದೇಶಗಳಲ್ಲಿ ಯಾವ ಯಾವ ರೀತಿಯ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ ಒಂದು ಪರ್ಮನೆಂಟ್ ಬೋರ್ಡ್ ಮಾಡಬೇಕು. ಏಕೆಂದರೆ, ಈಗತಾನೇ ಮಾನ್ಯ ಕಂದಾಯ ಮಂತ್ರಿಗಳು ಕೇಂದ್ರದಿಂದ ಇದಕ್ಕೆ 27 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದರು. ಈ ಹಣವನ್ನು ತಂದು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹಾಕಿ ಹ್ಯಾಚ್ ಪ್ಯಾಚ್ ಮಾಡುವ ಬದಲಾಗಿ ಯಾವ ಯಾವ ತಾಲ್ಲೂಕುಗಳಲ್ಲಿ 40 ಇಂಚಿಗಿಂತಲೂ ಕಡಿಮೆ ಮಳೆ ಬರುತ್ತದೋ ಆ ತಾಲ್ಲೂಕುಗಳನ್ನೆಲ್ಲಾ ಸೇರಿಸಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ರೀತಿ, ಮಲೆನಾಡು ಅಭಿವೃದ್ಧಿ ಬೋರ್ಡ್ ರೀತಿ ಒಂದು ಬೋರ್ಡ್ ಮಾಡಿ, ಪರ್ಮನೆಂಟ್ ರಿಲೀಫ್ ಕೊಡುವುದಕ್ಕೆ ಏರ್ಪಾಟು ಮಾಡಬೇಕು. ಇನ್ನು ಮಿನಿ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಹೇಳುವುದಾದರೆ, ಒಂದೊಂದು ತಾಲ್ಲೂಕಿಗೆ 40-50 ಸ್ಕೀಮ್‌ಗಳನ್ನು ಕೊಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲೇ ನಿನ್ನೆ 2-3 ಮಿನಿ ವಾಟರ್ ಸ್ಕೀಮ್‌ಗಳನ್ನು ಓಪನ್ ಮಾಡಿದೆ. ಅಲ್ಲಿ ನೀರನ್ನು ಒದಗಿಸಿದ್ದಾರೆ. ಆದರೆ ಮನೆಯ ಒಳಕ್ಕೆ ನೀರು ಪೈಪು ಹಾಕಿಕೊಳ್ಳಬಾರದೆಂದು ಕಾನೂನು ಇದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಸುಮಾರು 15 ಲಕ್ಷ ರೂಪಾಯಿ ವಿದ್ಯುತ್ ಶುಲ್ಕ ಕಟ್ಟಬೇಕಾಗಿದೆ. ಹಿಂದಿನ ಪ್ರಧಾನರು ಈ ಬಿಲ್ ಕಟ್ಟಬೇಕಾಗಿತ್ತು ಕಳೆದ 5 ವರ್ಷಗಳಿಂದ ಒಬ್ಬರೂ ಕಟ್ಟಿಲ್ಲ. ಈಗ ಅಡ್ಮಿನಿಸ್ಟ್ರೇಟರ್ ಬಂದಿದ್ದಾರೆ. ಯಾರು ಕಟ್ಟುತ್ತಾರೆ, ಕೆಇಬಿಯವರು ಇನ್ನು ಎರಡು ದಿವಸ ನೋಡಿ ಡಿಸ್‌ಕನೆಕ್ಟ್ ಮಾಡುತ್ತಾರೆ. ಕೊನೆಗೆ ಕೆಟ್ಟ ಹೆಸರು ನಿಮಗೆ ಬರುತ್ತದೆ. ಈ ಪವರ್ ಛಾರ್ಜ್ ಕಟ್ಟುವುದಕ್ಕೆ ಈ ಮಂಡಲದ ವ್ಯಾಪ್ತಿಯಲ್ಲಿ ಸುಮಾರು ಆಸ್ತಿ ಇದೆ. ಉದಾಹರಣೆಗೆ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಸುಮಾರು 50 ಲಕ್ಷ ರೂಪಾಯಿ ಪ್ರಾಪರ್ಟಿ ಆಗುವಷ್ಟು ಅರಣ್ಯ ಸಂಪತ್ತು ನಮ್ಮಲ್ಲಿ ಇದೆ. ನೀಲಗಿರಿ ಹಾಗೂ ಹಳೇ ಮರಗಳು ಏನಿವೆ ಅವನ್ನು ಆರ್‌ಡಿಪಿಆರ್ ಇಲಾಖೆಯವರು ಕಟಾವು ಮಾಡಿ ಮಾರಾಟ ಮಾಡಿದರೆ ಸರ್ಕಾರಕ್ಕೆ ಸುಮಾರು 200 ಕೋಟಿ ರೂಪಾಯಿ ಬರುತ್ತದೆ. ಇದನ್ನು ಮಾಡದೇ ಇದ್ದರೆ ಪ್ರಧಾನರು 50 ಮರಗಳನ್ನು ಕಡಿದುಕೊಂಡು ಹೋಗುತ್ತಾರೆ. ಉಪಪ್ರಧಾನರು 50 ಮರ ಕಡಿದುಹೋಗುತ್ತಾರೆ. ಇವತ್ತು ಸರ್ಕಾರಿ ಸ್ವತ್ತು ಎಂದರೆ ಎಲ್ಲರಿಗೂ ಬೇಕಾಬಿಟ್ಟಿ. ಇವತ್ತು ಈ ಮರಗಳನ್ನು ಕಡಿದು ಮಾರಾಟ ಮಾಡುತ್ತಿದ್ದಾರೆ. ಇದನ್ನ ಯಾರೂ ನೋಡುತ್ತಿಲ್ಲ. ವಿಲೇಜ್ ಅಕೌಂಟೆಂಟ್‌ರು, ರೆವಿನ್ಯೂ ಇನ್ಸ್‌ಪೆಕ್ಟರುಗಳು ಎಲ್ಲಿದ್ದಾರೋ ಗೊತ್ತಿಲ್ಲ. ಒಂದೊಂದು ಮಂಡಲದಲ್ಲಿ ಸ್ವಲ್ಪ ಹೆಚ್ಚು ಕಡಿಮೆ 2 ಲಕ್ಷ, 3 ಲಕ್ಷ, 5 ಲಕ್ಷ ರೂಪಾಯಿ ಆಸ್ತಿ ಇದೆ. ನಮ್ಮ ತಾಲ್ಲೂಕಿನಲ್ಲಿ 12 ಮಂಡಲಗಳು ಇವೆ. 5 ಲಕ್ಷದಂತೆ ಲೆಕ್ಕ ಹಾಕಿದರೂ 60 ಲಕ್ಷ

ರೂಪಾಯಿಗಳವರೆಗೆ, ಅಂದರೆ ಸುಮಾರು 1 ಕೋಟಿ ರೂಪಾಯಿ ಬೆಲೆ ಬಾಳುವ ಅರಣ್ಯ ಸಂಪತ್ತು ಇದೆ. ಅದನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಹಿಂದೆ ಇದ್ದ ಮಂಡಲದ ಪ್ರಧಾನರುಗಳು ಬೇಕಾದಷ್ಟು ಲೂಟಿ ಹೊಡೆದುಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕು ಒಂದೇ ಅಲ್ಲ, ಎಲ್ಲಾ ತಾಲ್ಲೂಕುಗಳಲ್ಲಿ ಈ ರೀತಿಯಾಗಿದೆ. ಅದಕ್ಕೋಸ್ಕರ ನಾನು ಹೇಳುವುದಿಷ್ಟೆ. ಅರಣ್ಯ ಸಂಪತ್ತು ಏನಿದೆ ಅದನ್ನು ಕಟಾವು ಮಾಡಿದರೆ ಅದರಿಂದ 200 ಕೋಟಿ, 300 ಕೋಟಿ ರೂಪಾಯಿ ನಿಮ್ಮ ಬಜೆಟ್‌ಗೆ ಬರುತ್ತದೆ. ಅದನ್ನು ಕಟಾವು ಮಾಡಿದ ಮೇಲೆ ಬೇರೆ ಗಿಡಗಳನ್ನು ಹಾಕಿ. ಪುನಃ ಅಲ್ಲಿ ಗಿಡಗಳು ಬರುತ್ತವೆ. ಮಾವಿನ ತೋಪು ಬೆಳಿಸಿ ಅಥವಾ ಯುಕಲಿಪ್ಟಸ್ ಗಿಡಗಳನ್ನು ಹಾಕಿ ಅವುಗಳನ್ನು ಬೆಳೆಸಬಹುದು. ಅದನ್ನು ಮಾಡಿ, ಎಲೆಕ್ಟ್ರಿಸಿಟಿ ಚಾರ್ಜನ್ನು ನೀವು ಕಟ್ಟಬೇಕು. ಉದಾಹರಣೆಗೆ ಹಳ್ಳಿಗಾಡಿನ ಪ್ರದೇಶದಲ್ಲಿ ನಾನು ನಿನ್ನೆ ಒಂದು ವಾಟರ್‌ಸಪ್ಲೈ ಸ್ಕೀಮ್‌ನ್ನು ಓಪನ್ ಮಾಡಿದೆ. ಅಲ್ಲಿ ಮುಸ್ಲಿಂ ಜನರ 150 ಮನೆಗಳು ಇವೆ. ಮುಸ್ಲಿಂ ಮಹಿಳೆಯವರು ಪಾಪ ಅವರು ಎಲ್ಲರ ಎದುರಗಡೆ ಬಂದು ನೀರು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಅದು ಅವರ ಸಂಪ್ರದಾಯವಿದೆ. ಅವರು ಬರುವುದಿಲ್ಲ. ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳು ಇರುವ ಕಡೆ ಅವರು ಬರುವುದಿಲ್ಲ. ಅದಕ್ಕೋಸ್ಕರ ಅವರು ತಮ್ಮ ಮನೆಗಳಿಗೆ ಒಂದು ನಲ್ಲಿಯನ್ನು ಹಾಕಿಸಿಕೊಟ್ಟರೆ ಎಷ್ಟು ಕರೆಂಟ್ ಚಾರ್ಜ್ ಬರುತ್ತದೆ ಅದನ್ನು ನಾವೇ ಕಟ್ಟಿಕೊಳ್ಳುತ್ತೇವೆಂದು ಹೇಳುತ್ತಾರೆ. ಒಂದೊಂದು ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಒಬ್ಬ ಮನುಷ್ಯನನ್ನು ಇಡಬೇಕು. ಅವನು ಡೈಲಿ ಮಾರ್ನಿಂಗ್ ಟು ಅವರ್ಸ್ ಈವಿನಿಂಗ್ ಟು ಅವರ್ಸ್ ಇರಬೇಕು. ಸ್ವಲ್ಪ ಹೆಚ್ಚು ಕಡಿಮೆ ಒಂದು ಮಿನಿ ವಾಟರ್ ಸಪ್ಲೈ ಸ್ಕೀಮ್‌ಗೆ 200 ರೂಪಾಯಿ ತಿಂಗಳಿಗೆ ಬರುತ್ತದೆ. ನಮ್ಮ ತಾಲ್ಲೂಕಿನಲ್ಲಿ 60 ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳಿವೆ. ಈ ಖರ್ಚೆಲ್ಲ ಇದರಲ್ಲಿ ಉತ್ಪತ್ತಿಯಾಗುತ್ತದೆ. ಮನೆಗೆ ಒಂದೊಂದು ಟ್ಯಾಪ್ ಕನೆಕ್ಷನ್ ಕೊಟ್ಟರೆ 10 ರೂಪಾಯಿಯನ್ನು ತಿಂಗಳಿಗೆ ಕೊಡುವುದಕ್ಕೆ ತಯಾರಾಗಿದ್ದಾರೆ. ಮಿನಿ ವಾಟರ್ ಸಪ್ಲೈ ಸ್ಕೀಮ್ ಎಲ್ಲೆಲ್ಲಿ ಇದೆ ಅಲ್ಲಿ ಇದನ್ನು ಮಾಡಬೇಕು. ಹಾಗೆ ಮಾಡಿದರೆ ಆದಾಯ ಬರುತ್ತದೆ. ಬಗರ್ ಹುಕುಂ ಸಾಗುವಳಿಯನ್ನು ಸರ್ವೆ ಮಾಡಲಿಕ್ಕೆ ಒಬ್ಬರೂ ಸರ್ವೇಯರ್ ಇಲ್ಲ. ಶಾಸಕರುಗಳೆಲ್ಲ ಲ್ಯಾಂಡ್ ಗ್ರಾಂಟ್ ಕಮಿಟಿಯ ಛೇರ್ಮನ್‌ಗಳಾಗಿದ್ದೇವೆ. ಸರ್ವೇಯರ್ ಒಬ್ಬರೂ ಇಲ್ಲ. ನನಗೆ 17 ಚೆಕ್ ಪಾಯಿಂಟ್‌ಗಳಿವೆ. ಎಲ್ಲ ಮಾಡಿ, ಪ್ರಾಪರ್ ಆಗಿ ಸರ್ವೆ ಡಿಪಾರ್ಟ್‌ಮೆಂಟ್‌ನಿಂದ ಸರ್ವೆ ಮಾಡದಿದ್ದರೆ ಖಂಡಿತಾ ಟ್ರಿಬ್ಯುನಲ್‌ನಲ್ಲಿ, ಹೈಕೋರ್ಟ್‌ನಲ್ಲಿ ಹೊಡೆದು ಹಾಕುತ್ತಾರೆ. ನೀವು ನಮ್ಮನ್ನು ಏನು ಛೇರ್ಮನ್ ಮಾಡಿದ್ದೀರಿ ಕಂಪ್ಲೀಟ್ ಆಗಿ ಹೊರಟು ಹೋಗುತ್ತದೆ. ಕಂದಾಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಾನು ಇದುವರೆಗೆ ರೆವಿನ್ಯೂ ಮಿನಿಸ್ಟರ್‌ಗಳನ್ನು ನೋಡಿರುವವರ ಪೈಕಿ ಇವರೇ ಹೆಚ್ಚಾಗಿ ಇಂಟರೆಸ್ಟ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೂ ಕೂಡ ನೀವು ಸರ್ವೇಯರ್‌ಗಳನ್ನು ಬೇಗ ಕಳುಹಿಸದಿದ್ದರೆ ಹೇಗೆ? ಪ್ರೋಗ್ರೆಸ್ ತೋರಿಸಬೇಕೆಂದು ಹೇಳುತ್ತೀರಿ. ಮೊನ್ನೆ ಜಿಲ್ಲಾಧಿಕಾರಿಗಳು ಬಂದು ಪ್ರೋಗ್ರೆಸ್ ಇಲ್ಲವೆಂದು ಹೇಳುತ್ತಾರೆ. ಸರ್ವೇಯರ್‌ಗಳು ಇಲ್ಲದೆ, ನಾವು ಸರ್ವೆ ಮಾಡದೆ ಮಾಡಿದರೆ ಮುಂದೆ ಟ್ರಿಬ್ಯುನಲ್‌ನಲ್ಲಿ, ಹೈಕೋರ್ಟ್‌ನಲ್ಲಿ ಹೊಡೆದು ಹಾಕುತ್ತಾರೆ. ಪ್ರಯೋಜನವಿಲ್ಲ. ಆದುದರಿಂದ ಆದಷ್ಟು ಬೇಗ ಸರ್ವೆ ಮಾಡುವುದಕ್ಕೆ ನೀವು ಏರ್ಪಾಡು ಮಾಡಬೇಕು.

ಇನ್ನು ಆರಾಧನಾ ಯೋಜನೆ ಬಹಳ ಒಳ್ಳೆಯ ಸ್ಕೀಮ್. ಬಡವರು ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇದು ಇದೆ. ನಮ್ಮ ತಾಲ್ಲೂಕಿನಲ್ಲಿ 300 ಹಳ್ಳಿಗಳಿವೆ. 300 ಹಳ್ಳಿಗಳಿಗೆ 900 ದೇವಾಲಯಗಳು ಇವೆ. ಒಂದೊಂದು ಹಳ್ಳಿಗೆ ಮೂರು ಮೂರು ದೇವಸ್ಥಾನಗಳು

ಇವೆ. ಗಂಗಮ್ಮ, ಮಾರಮ್ಮ, ಸೊಲ್ಲಾಪುರದಮ್ಮ ಈ ತರಹ ಏನೇನೋ ಹೆಸರುಗಳಿವೆ. ಆ ದೇವರುಗಳ ಬಗ್ಗೆ ಆ ಜನರು ಬಹಳ ಭಕ್ತಿಯಿಂದ ಇದ್ದಾರೆ. ಪಾಪ: ಅವರ ಗುಡಿಗಳ ಬಗ್ಗೆ ಯಾರೂ ಕೂಡ ಗಮನ ಕೊಡುತ್ತಿರಲಿಲ್ಲ. ಗಂಗಮ್ಮ, ಮಾರಮ್ಮ, ಸೊಲ್ಲಾಪುರದಮ್ಮ ದೇವಾಲಯಗಳು ಏನಿವೆ ಅವುಗಳ ಕಡೆಗೆ ಯಾರೂ ಗಮನ ಕೊಡುತ್ತಿರಲಿಲ್ಲ. ಎಲ್ಲರೂ ದೊಡ್ಡ ದೊಡ್ಡ ದೇವರುಗಳನ್ನು ನೋಡುತ್ತಿದ್ದರು. ಶ್ರೀರಾಮ್ಮ, ಕೃಷ್ಣ, ವೆಂಕಟರಮಣಸ್ವಾಮಿ ಈ ದೇವರುಗಳ ಬಗ್ಗೆ ಗಮನವಿತ್ತು. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಬಂದಮೇಲೆ ಸೊಲ್ಲಾಪುರದಮ್ಮ, ಮಾರಮ್ಮ, ಗಂಗಮ್ಮ-ಈ ದೇವರುಗಳ ಬಗ್ಗೆ ಗಮನ ಹರಿಸಿ ಬಹಳ ಒಳ್ಳೆಯ ಸ್ಕೀಮ್ ಮಾಡಿ ಈ ದೇವಾಲಯಗಳಿಗೂ ಹಣ ಕೊಟ್ಟಿದ್ದಾರೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಶಾಸನಸಭಾ ಕ್ಷೇತ್ರಕ್ಕೆ ಒಂದೂವರೆ ಎರಡು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಒಂದು ಊರಿನಲ್ಲಿ ಮಾರಮ್ಮ, ಗಂಗಮ್ಮ, ಸೊಲ್ಲಾಪುರದಮ್ಮ ಈ ದೇವಾಲಯಗಳ ಇಂಪ್ರೂವ್‌ಮೆಂಟ್ಸ್‌ಗೋಸ್ಕರ ಕೊಡುತ್ತಿದ್ದಾರೆ. ಅದೇ ರೀತಿಯಾಗಿ ಊರುಗಳಲ್ಲಿ ಸವರ್ಣೀಯರ ದೇವಾಲಯಗಳಿವೆ. ವೆಂಕಟರಮಣ ದೇವಾಲಯ, ಶ್ರೀರಾಮ ದೇವಾಲಯ, ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ಭಕ್ತಿಯಿಂದ ಅವರುಗಳ ದೇವರುಗಳನ್ನು ಪೂಜಿಸುತ್ತಾರೆ. ಸವರ್ಣೀರುಗಳು ಏನು ಹೇಳುತ್ತಾರೆಂದರೆ, ಏನು ಸ್ವಾಮಿ ಅವರಿಗೆ ಮಾತ್ರ ಕೊಡುತ್ತಾ ಇದ್ದೀರಿ, ನಮಗೆ ಕೊಡುತ್ತಿಲ್ಲವೆಂದು ಕೇಳುತ್ತಾರೆ. ಮೊನ್ನೆ ಅತಿವೃಷ್ಟಿಯಾಗಿ ಎಷ್ಟೋ ದೇವಾಲಯಗಳ ಗೋಡೆಗಳು ಬಿದ್ದು ಹೋಗಿವೆ. ಅವುಗಳ ರಿಪೇರಿಯಾಗಬೇಕು. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ಅನುಸೂಚಿತ ಜಾತಿ ಮತ್ತು ಬುಡಕಟ್ಟು ವರ್ಗದವರಿಗೆ ಕೊಡಿ. ಈಗ ಕೊಡುತ್ತಿರುವುದು ಸಾಲದು. ಹೊಸದಾಗಿ ಈ ಯೋಜನೆಯನ್ನು ಪ್ರಾರಂಭ ಮಾಡಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಸರ್ಕಾರದವರಿಗೆ ಆ ವಿಷಯದಲ್ಲಿ ಎಷ್ಟು ಹೊಗಳಿಕೆ ಮಾಡಿದರೂ ಸಾಲದು. ನಾವು ಎಷ್ಟು ಹೊಗಳಿಕೆ ಮಾಡಬೇಕು. ಅವರಿಗೆ ಕೊಡುತ್ತಿರುವುದು ಸಾಲದು. ಈಗ ಕೊಡುತ್ತಿರುವುದಕ್ಕಿಂತ ಎರಡರಷ್ಟು ಕೊಡಿ. ಪಾಪ ಅವರು ಸಾವಿರಾರು ವರ್ಷಗಳಿಂದ ವಂಚಿತರಾಗಿದ್ದಾರೆ. ನಾನು ಎಷ್ಟೋ ಕಡೆ ಕೈಯಿಂದ ಕೊಟ್ಟಿದ್ದೇನೆ. 500-600 ರೂಪಾಯಿಗಳನ್ನು ಕೊಟ್ಟಿದ್ದೇನೆ. ನಾವು ಅವರ ಊರುಗಳಿಗೆ ಹೋದಾಗ ಅವರು ನಮ್ಮ ದೇವಾಲಯಗಳನ್ನು ರಿಪೇರಿ ಮಾಡಿಸಲಿಕ್ಕೆ 5 ಮೂಟೆ ಸಿಮೆಂಟ್ ಕೊಡಿಸಿ, ನಮಗೆ ರಿಪೇರಿ ಅಥವಾ ನಮ್ಮ ದೇವಾಲಯದ ಮೇಲ್ಗಡೆ ಕಾಂಕ್ರೀಟ್ ಹಾಕಿಸಿಕೊಡಿಯೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲೆಕ್ಷನ್ ಟೈಮ್‌ನಲ್ಲಿ ಕೊಟ್ಟಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಎಲೆಕ್ಷನ್ ಆದಮೇಲೆ ಸಹ ಕೊಟ್ಟಿದ್ದೀರಿ. ಹೀಗೆ ಬೇಕಾದಷ್ಟು ಕೊಟ್ಟಿದ್ದೀರಿ. ಅವರಿಗೆ ಈಗೇನೂ ಕೊಡುತ್ತಿದ್ದೀರಿ, ಅದನ್ನು ಡಬ್ಬಲ್ ಮಾಡಿ. ಎರಡನೆಯದು ಊರಿನಲ್ಲಿ ಬೇರೆಯವರ ದೇವಾಲಯಗಳು ಇವೆ. ಅಲ್ಲಿ ಒಳ್ಳೆಯ ವಾತಾವರಣವನ್ನು ಹುಟ್ಟಿಸಬೇಕಾದರೆ, ಬರೀ ಕೆಲವು ದೇವಾಲಯಗಳಿಗೆ ಕೊಟ್ಟು ಬೇರೆ ಸವರ್ಣೀಯರ ದೇವಾಲಯಗಳಿಗೆ ಕೊಡದಿದ್ದರೆ ಸ್ಥಳೀಯ ಶಾಸಕರುಗಳು ಬಹಳ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದೇವೆ. ಅವರಿಗೆ ಎಷ್ಟು ಕೊಡುತ್ತೀರೋ ಅಷ್ಟು ಕೊಡಿ. ಇಲ್ಲದಿದ್ದರ ಇನ್ನೊಂದು ಕೆಲಸ ಮಾಡಿ. ರೋಜ್‌ಗಾರ್ ಯೋಜನೆ ಏನಿದೆ ಅದರ ಬಗ್ಗೆ ನೀವು ಒಂದು ಸರ್ಕ್ಯುಲರ್ ಕೊಡಿ. ಆರ್‌ಡಿಪಿಆರ್ ಮಿನಿಸ್ಟ್ರಿಯಿಂದ ಒಂದು ಸರ್ಕ್ಯುಲರ್ ಕೊಡಿ. ದೇವಾಲಯಗಳ ರಿಪೇರಿಗೋಸ್ಕರ ನಾಟ್ ನ್ಯೂ ಕನ್‌ಸ್ಟ್ರಕ್ಷನ್. ಅದಕ್ಕೇನೂ ಸರ್ಕಾರ ಕೊಡಬೇಕಾಗಿಲ್ಲ. ರೋಜ್‌ಗಾರ್ ಯೋಜನೆಯ ಅಮೌಂಟ್ ಇದೆ. ಹೇಗೂ ಮಂಡಲಗಳು ನಿಮ್ಮ ಕೈಯಲ್ಲಿ ಬಂದಿದೆ. ಎಂಎಲ್‌ಎ ಕೈಯಲ್ಲಿದೆ. ರೋಜ್‌ಗಾರ್ ಅಮೌಂಟ್ ಉಪಯೋಗಿಸಿಕೊಳ್ಳಬಹುದೆಂದು ನೀವು ಒಂದು ಸರ್ಕ್ಯುಲರ್ ಕೊಡಿ. ಅವರು ಮುಜರಾಯಿ-

ದೇವಾಲಯಗಳು ಇವೆಯೆಂದು ಹೇಳಬಹುದು. ನಮ್ಮ ತಾಲ್ಲೂಕಿನಲ್ಲಿ ಮುಜರಾಯಿ ಟೆಂಪಲ್‌ಗಳೇ ಇಲ್ಲ. ಕೆಲವು ದೇವಸ್ಥಾನಗಳು ಮುಜರಾಯಿಗೆ ಸೇರುವುದಿಲ್ಲ. ಅಂತಹ ದೇವಸ್ಥಾನಗಳಿಗೆ ನೀವು ಸರ್ಕಾರದಿಂದ ಹಣ ಕೊಡಿ. ಮತ್ತು ರೋಜಗಾರ್‌ದಿಂದ ಉಪಯೋಗಿಸಿಕೊಂಡರೆ ಲೆಜಿಸ್ಲೇಟರ್ಸ್‌ಗೆ ಇಕ್ಕಟ್ಟಿನ ಪರಿಸ್ಥಿತಿ ಹೊರಟುಹೋಗುತ್ತದೆ. ನೀವು ಇದನ್ನು ದಯವಿಟ್ಟು ಮಾಡಬೇಕು. ಆಮೇಲೆ ಈ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯತಿಗಳ ಬಗ್ಗೆ ತಿಂಗಳುಗಟ್ಟಲೆ ಹೇಳಿದರೂ ಸಮಯ ಸಾಲುವುದಿಲ್ಲ. ಈಗ ನಾನು ಹೇಳುವುದಿಲ್ಲ. ಈಗ ಹೇಳುವುದಕ್ಕೆ ಸಮಯ ಇಲ್ಲ, ನಾಳೆ ಮಂಡಲ ಪಂಚಾಯತ್ ಮಸೂದೆ ಬಂದಾಗ ಹೇಳುತ್ತೇನೆ. ಡಿಪಾರ್ಟ್‌ಮೆಂಟ್‌ನವರಿಗೂ ಪ್ರಾಪರ್ ಕೋ-ಆರ್ಡಿನೇಷನ್ ಇಲ್ಲ. ಅದು ಇಲ್ಲದೆ, ಅನೇಕ ರಿಟ್ ಪಿಟಿಶನ್‌ಗಳು ಹೈಕೋರ್ಟಿಗೆ ಹೋಗಿ ವಿನಾಕಾರಣ ವಿಳಂಬವಾಗಿ ಸ್ಟೇ ಕೊಡುವುದು, ವೆಕೇಟ್ ಮಾಡುವುದು ಆಗಿದೆ. ನೀವೇನೋ ಕ್ವಿಕ್ ಆಗಿ ಆ್ಯಕ್ಟ್ ಮಾಡುತ್ತಿದ್ದೀರಿ. ನಿಮ್ಮಲ್ಲಿ ಕೆಲವು ಅಧಿಕಾರಿಗಳು, ಸಿಂಗ್ ಅವರು, ಬಸಪ್ಪ, ಅವರೆಲ್ಲ ಆ್ಯಕ್ಟ್ ಮಾಡುತ್ತಾರೆ. ಆವರೆಲ್ಲಾ ಡಿಪಾರ್ಟ್‌ಮೆಂಟ್‌ನವರು ಸ್ವಲ್ಪ ಸೋಮಾರಿತನದಿಂದ ಅನೇಕ ಕಡೆ ಹಳೆಯ ಪ್ರಧಾನರನ್ನೇ ರೀಇನ್‌ಸ್ಟೇಟ್ ಮಾಡುತ್ತಿದ್ದಾರೆ. I am not going into the merits of the High court decision ಪ್ರಾಪರ್ ಕೋ-ಆರ್ಡಿನೇಷನ್ ಇಲ್ಲದೆ ನಿಧಾನವಾಗುತ್ತಿದೆ. ಇದರ ಬಗ್ಗೆ ತಾವು ಮತ್ತು ಲಾ ಮಿನಿಸ್ಟರ್ ಏನಿದ್ದೀರಿ, ಈಗಾಗಲೇ ಮಾಡಿದ್ದೀರಿ. ಆದರೆ ಇನ್ನು ಮುಂದೆ ಬರುವಂಥ ರಿಟ್‌ಪಿಟಿಶನ್ ವಿಷಯದಲ್ಲಿ ಆದಷ್ಟು ಬೇಗ ನೀವು ಮಾಡಬೇಕೆಂದು ಹೇಳುತ್ತೇನೆ. ಇನ್ನು ನನಗೆ ಸಮಯ ಇಲ್ಲ. ಅರಣ್ಯ ಸಂಪತ್ತಿನಿಂದ ಮಾತ್ರ ಇನ್ನೂರು-ಮುನ್ನೂರು ಕೋಟಿ ರೂಪಾಯಿ ನಿಮಗೆ ಬರುತ್ತದೆ. ನೀವು ಬೇಗನೆ ಎಕ್ಸಟ್ರಾಕ್ಟ್ ಮಾಡದೇ ಇದ್ದರೆ ಮಂಡಲಪಂಚಾಯತ್‌ಗಳಲ್ಲಿ ಖಂಡಿತ ಹೊಡೆದುಕೊಂಡು ಹೋಗುತ್ತಾರೆ. ಮೊದಲು ಅದನ್ನು ಮಾಡಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಸಭೆಯ ಮುಂದೆ ಇಟ್ಟರತಕ್ಕಂಥ ಎಲ್ಲ ಬೇಡಿಕೆಗಳಿಗೆ ಬೆಂಬಲ ಸೂಚಿಸುತ್ತಾ, ವೇಳೆ ಆಗಿರತಕ್ಕದ್ದನ್ನು ಗಮನಿಸಿ, ಸಂಕ್ಷಿಪ್ತವಾಗಿ ನಾನು ಕೆಲವಾರು ಅಂಶಗಳನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಉಪವಿಭಾಗ ಮಟ್ಟದಲ್ಲಿ ಹಾಗೂ ವಿಭಾಗ ಮಟ್ಟದಲ್ಲಿರತಕ್ಕಂಥ ಹುದ್ದೆಗಳನ್ನು ರದ್ದುಮಾಡಿ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಕಂದಾಯ ಇಲಾಖೆಯಲ್ಲಿ ತರುವಂಥ ಒಂದು ವಿಚಾರವನ್ನು ಸರ್ಕಾರ ಇವತ್ತು ಕೈಗೆತ್ತಿಕೊಂಡಿರತಕ್ಕದ್ದನ್ನು ಸ್ವಾಗತ ಮಾಡುತ್ತಾ, ಈಗ ನಾಡಕಚೇರಿಗಳ ಉಪಯುಕ್ತತೆ ಇದೆಯೇ ಎನ್ನುವ ಬಗ್ಗೆ ಸರ್ಕಾರ ಮತ್ತೆ ತನ್ನ ಗಮನಹರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಶ್ರಯ ಯೋಜನೆಯ ಒಂದು ಉಪಯುಕ್ತತೆಯಂತೆ ಗ್ರಾಮಗಳಲ್ಲಿ ಸ್ಮಶಾನದ ಅವಶ್ಯಕತೆ ಬಹಳ ಇದೆ. ಸರ್ಕಾರ ಈ ಸಾರಿ ಸ್ಮಶಾನಗಳ ಬಗ್ಗೆ ಅದರಲ್ಲೂ ತೀರಾ ದುರ್ಬಲವರ್ಗದವರ, ಹರಿಜನ-ಗಿರಿಜನರು ಮತ್ತು ಇತರ ವರ್ಗದವರಿಗೆ ಸ್ಮಶಾನಗಳ ಕಲ್ಪನೆ ಮಾಡಿಕೊಡುವ ಒಂದು ಕ್ರಾಂತಿಕಾರಕ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈಗಾಗಲೇ ಇರತಕ್ಕಂಥ ಸ್ಮಶಾನಗಳಲ್ಲಿ ಸಾಕಷ್ಟು ಒತ್ತುವರಿಯಾಗಿದೆ. ಅದನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸುವುದರ ಜೊತೆಗೆ ಎಲ್ಲ ಗ್ರಾಮಗಳಿಗೆ ಸ್ಮಶಾನಗಳ ಉಪಯುಕ್ತತೆಯನ್ನು ಮಾಡಿಕೊಡಬೇಕೆಂಬುದು ನನ್ನ ಎರಡನೇ ಪ್ರಾರ್ಥನೆ. ಗ್ರಾಮಾಂತರ ಜಮೀನುಗಳ ರೀಸರ್ವೆ 1954ರಲ್ಲಿ ಆಗಬೇಕಿತ್ತು. ಆದರೆ ಅದು 1964ರಲ್ಲಿ ಆಯಿತು. ಅದರ ನಂತರ 1984ರಲ್ಲಿ ಆಗಬೇಕಿತ್ತು. ಸರ್ವೆಯರುಗಳ ಕೊರತೆಯಿಂದಲೋ ಅಥವಾ ಇನ್ಯಾವ

ತೊಂದರೆಯಿಂದಲೋ ಇದು ಆಗಲಿಲ್ಲ. ಆದಷ್ಟು ಬೇಗ ಸರ್ಕಾರ ಹೆಚ್ಚುವರಿ ಸರ್ವೆಯರುಗಳನ್ನು ನೇಮಕ ಮಾಡಿಕೊಂಡು ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲ ಭೂಮಿಗಳನ್ನು ರೀಸರ್ವೆ ಮಾಡಬೇಕು. ಹಾಗೂ ಈಗ ಸರ್ಕಾರ ಕೈಗೆತ್ತಿಕೊಂಡಿರತಕ್ಕಂಥ ಆಶ್ರಯ ಯೋಜನೆ ಮತ್ತು ಬಗರ್‌ಹುಕುಂ ಸಾಗುವಳಿ ಇರತಕ್ಕಂಥ ಭೂಮಿ ಏನಿದೆ, ಅದನ್ನು ಮಾಡತಕ್ಕಂಥವರಿಗೇ ಖಾಯಂಗೊಳಿಸುವ ವ್ಯವಸ್ಥೆಯಲ್ಲಿ ಹೆಚ್ಚು ಸರ್ವೆಯರುಗಳ ಅವಶ್ಯಕತೆ ಇದೆಯೆಂಬುದು ನಮ್ಮ ಗಮನಕ್ಕೆ ಬಂದಿದೆ. ದಯವಿಟ್ಟು ತಾವು ಈಗ ಲಭ್ಯವಿರತಕ್ಕಂಥ ಸರ್ವೆಯರುಗಳನ್ನು ಈ ಎರಡು ಕಾರ್ಯಕ್ರಮಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಇನ್ನು ಸಬ್‌ರಿಜಿಸ್ಟ್ರಾರ್‌ಗಳ ಕ್ಲಾಸಿಫಿಕೇಷನ್ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಎಲ್ಲ ಕಚೇರಿಗಳಲ್ಲೂ ಡಿ ವರ್ಗ, ಸಿ ವರ್ಗ, ಬಿ ವರ್ಗ, ಮತ್ತು ಎ ವರ್ಗ ಎಂದು ಇದೆ. ಕ್ಲಾಸ್ 4-3-2-1 ಎಂದು ಇದೆ. ಆದರೆ ಈ ಇಲಾಖೆಯಲ್ಲಿ ಸಬ್‌ರಿಜಿಸ್ಟ್ರಾರ್ ಗ್ರೇಡ್ 2, ಸಬ್‌ರಿಜಿಸ್ಟ್ರಾರ್ ಗ್ರೇಡ್1- ಅವರ ನಂತರ ಕ್ಲಾಸ್ 2 ಇಲ್ಲ. ಎಲ್ಲ ಇಲಾಖೆಗಳಲ್ಲೂ ಕೊಟ್ಟಿರುವಾಗ ಈ ಇಲಾಖೆಯಲ್ಲಿ ಕ್ಲಾಸ್ 2 ಹುದ್ದೆಯನ್ನು ಏಕೆ ನಿರ್ಮಾಣ ಮಾಡಬಾರದು ಎಂದು ತಾವು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕು. ನೆರೆರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿನಲ್ಲಿ ಕ್ಲಾಸ್-ಒನ್ ಆದಮೇಲೆ ಫಸ್ಟ್‌ಗ್ರೇಡ್ ಸಬ್‌ರಿಜಿಸ್ಟ್ರಾರ್ ಆದಮೇಲೆ ಸೀನಿಯರ್ ಗ್ರೇಡ್ ಸಬ್‌ರಿಜಿಸ್ಟ್ರಾರ್‌ರನ್ನು ಗೆಜೆಟೆಡ್ ಮಾಡಿದ್ದಾರೆ. ಇಲ್ಲಿ ಕೂಡ ಅದನ್ನು ಮಾಡಿದರೆ ಹೆಚ್ಚಿನ ಹೊರೆ ಸರ್ಕಾರಕ್ಕೆ ಬರಲಾರದು ಎಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಒಂದೇ ಒಂದು ವಿಚಾರ. ಕೊಳವೆ ನೀರು ಪೂರೈಕೆ ಯೋಜನೆ ಹಾಗೂ ಕಿರು ನೀರು ಸರಬರಾಜು ಯೋಜನೆ ಬಗ್ಗೆ ತಾವು ಕೊಟ್ಟಿತಕ್ಕ ನಿರ್ವಹಣಾ ಬಜೆಟನ್ನು ನೋಡಿದಾಗ, ನನಗೆ ನಿರಾಶೆಯಾಯಿತು ಎನ್ನುವುದನ್ನು ತಮ್ಮಲ್ಲಿ ಬಹಳ ಮುಕ್ತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದುವರೆಗೆ ಮಾತನಾಡಿದ ಅನೇಕ ಸದಸ್ಯರು ಈ ಬಗ್ಗೆ ಸಾಕಷ್ಟು ಒತ್ತಾಯ ಹೇಳಿದ್ದಾರೆ. ತಾವು ಈ ವರ್ಷದಲ್ಲಿ ಬೇರೆ ರೀತಿಯಲ್ಲಿ ಹೆಚ್ಚಿನ ಹಣ ಕಾಸನ್ನು ಒದಗಿಸಿಕೊಂಡು, ಇನ್ನೂ ಹೆಚ್ಚಿನ ರೀತಿಯಲ್ಲಿ, ಸಾಕಷ್ಟು ಹಣವನ್ನು ಇದರಲ್ಲಿ ತೊಡಗಿಸಿ. ಕಿರು ನೀರು ಸರಬರಾಜು ಯೋಜನೆಗಳು, ಮತ್ತು ನಲ್ಲಿ ನೀರು ಸರಬರಾಜು ಯೋಜನೆಗಳಾಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲಿ ಆಗಿರುವಂಥ ಒಂದು ವ್ಯತ್ಯಾಸವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಲ್ಲಿ ನೀರು ಸರಬರಾಜು ಯೋಜನೆಗೆ ಕೇಂದ್ರ ಮತ್ತು ರಾಜ್ಯಗಳು ಎರಡೂ ಸೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 90 ಲಕ್ಷ ರೂಪಾಯಿಗಳನ್ನು ಒದಗಿಸುವುದಾದರೆ, ಬೆಳಗಾಂ ಜಿಲ್ಲೆಗೆ 344 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಬೆಳಗಾಂ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 4 ಪಟ್ಟು ದೊಡ್ಡದಿದ್ದರೆ ನನ್ನ ಅಭ್ಯಂತರ ಇಲ್ಲ. 4 ಪಟ್ಟಿಗಿಂತ ಕಡಿಮೆ ಇದ್ದರೆ, ಬೆಳಗಾಂ ಜಿಲ್ಲೆಗಾಗಿ ಏಕೆ ಇಷ್ಟೊಂದು ಹೆಚ್ಚಿನ ಒತ್ತು ಬೇಕಾಗಿತ್ತು ಎನ್ನುವುದನ್ನು ತಮಗೆ ಬಿಟ್ಟು, ಇದರ ಬಗ್ಗೆ ತಾವು ಉತ್ತರ ಕೊಡುತ್ತೀರೆಂದು ನಿರೀಕ್ಷಣೆ ಮಾಡುತ್ತೇನೆ. ಇನ್ನು ಕಡೆಯದಾಗಿ ಧಾರ್ಮಿಕ ಮತ್ತು ದತ್ತಿ ಇಲಾಖೆ ಬಗ್ಗೆ ಹೇಳುವುದಾದರೆ, ಗ್ರಾಮಾಂತರದಲ್ಲಿರತಕ್ಕ ಅನೇಕ ದೇವಸ್ಥಾನಗಳ ನಿರ್ಮಾಣಕ್ಕೆ ಧಾರ್ಮಿಕ ದತ್ತಿ ಮತ್ತು ಆಯುಕ್ತರ ಮೂಲಕ ಹಣವನ್ನು ಕೊಡಿಸುತ್ತಿದ್ದೀರಿ, ಇದರ ನಿಯಮಗಳನ್ನು ಸ್ವಲ್ಪ ಸರಳಗೊಳಿಸಬೇಕೆಂದು ನನ್ನ ಪ್ರಾರ್ಥನೆ. ಕಾರಣ, ಗ್ರಾಮಾಂತರದ ದೇವಸ್ಥಾನದವರು ತಮ್ಮ ಬೇಡಿಕೆಯನ್ನು ಸಲ್ಲಿಸಿದ ಮೇಲೆ, ಅದು ಪಿ.ಡಬ್ಲ್ಯು.ಡಿ. ಇಂಜಿನಿಯರ್ ಅವರಿಗೆ ಬರಬೇಕು, ಅವರು

ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಕಳುಹಿಸಬೇಕು, ಅಲ್ಲಿ ಸ್ಕ್ರೂಟಿನಿ ಆಗಬೇಕು, ಮತ್ತೆ ವಾಪಸ್ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಬಂದು, ಅವರು ಸರ್ಟಿಫೈ ಮಾಡಬೇಕು. ಅಲ್ಲಿಂದ ತಾಲ್ಲೂಕು ಕಚೇರಿ, ಅಲ್ಲಿಂದ ಎ.ಸಿ.ಯವರ ಕಚೇರಿಗೆ ಹೋಗಬೇಕು, ಎ.ಸಿ. ಯವರ ಕಚೇರಿಯಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಬರಬೇಕು. ಜಿಲ್ಲಾಧಿಕಾರಿಗಳಾದ ಮೇಲೆ ಧಾರ್ಮಿಕ ಮತ್ತು ದತ್ತಿ ಆಯುಕ್ತರು. ಇಷ್ಟೊಂದು ದೂರ ಕಳುಹಿಸುವುದನ್ನು ತಾವು ಸರಳೀಕರಣ ಮಾಡಿ, ತಹಶೀಲ್ದಾರ್ ಕಚೇರಿಯಿಂದ ನೇರವಾಗಿ ಧಾರ್ಮಿಕ ಮತ್ತು ದತ್ತಿ ಆಯುಕ್ತರಿಗೆ ಕಡತವನ್ನು ಕಳುಹಿಸಿ ಮಂಜೂರ್ಮಾಡಿಸಿಕೊಡತಕ್ಕ ಒಂದು ಸರಳೀಕರಣವನ್ನು ತಾವು ಮಾಡಬೇಕೆಂದು ಇಷ್ಟು ವಿಚಾರವನ್ನು ತಿಳಿಸಿ, ಮಾನ್ಯ ಉಪಾಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಪಟ್ಟಿ ಪ್ರಕಾರ, ಶ್ರೀಯುತ ಕೆ. ಕುಶಾಲ, ಶ್ರೀಯುತ ಷಫಿ ಅಹಮದ್, ಶ್ರೀಯುತ ರಾಜುಗೌಡ, ಶ್ರೀಯುತ ಕಮುರಲ್ ಇಸ್ಲಾಂ ಇದ್ದಾರೆ. ಇವರುಗಳ ಸದನದಲ್ಲಿ ಹಾಜರಿಲ್ಲದೇ ಇರುವುದರಿಂದ, ಈ ಚರ್ಚೆ ಇಲ್ಲಿಗೆ ಮುಗಿಯಿತು.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಸಭಾ ಸದಸ್ಯರಾದ ಶ್ರೀಯುತ ವಾಟಾಳ್ ನಾಗರಾಜ್ ಅವರನ್ನು ದಿನಾಂಕ 13-3-1992 ರಂದು ಸಮಯ 10 ಗಂಟೆ 10 ನಿಮಿಷದಲ್ಲಿ ವಿಧಾನ ಸೌಧದ ಪಶ್ಚಿಮ ದ್ವಾರದ ಮುಂದೆ ಬಂಧಿಸಿ, ಅದೇ ದಿನ 12 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನ ಸೌಧ ಠಾಣೆ, ಬೆಂಗಳೂರು, ಇವರಿಂದ ನಮಗೆ ಸಂದೇಶ ಬಂದಿದೆ.

ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಿಗ್ಗೆ 10 ಗಂಟೆಗೆ ಮತ್ತೆ ಸಮಾವೇಶವಾಗುವುದು.

(ಸದನವು ಸಂಜೆ 7 ಗಂಟೆ 5 ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ, ದಿನಾಂಕ 17-3-92 ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

BLANK PAGE

ಕರ್ನಾಟಕ ವಿಧಾನಸಭೆ

ಮಂಗಳವಾರ 17ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-30 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು

ಅಲಂಕರಿಸಿದ್ದರು.

ಉಪಾಧ್ಯಕ್ಷರು : ಈಗ ಮಾನ್ಯ ಕಂದಾಯ ಮಂತ್ರಿಗಳಿಂದ ಉತ್ತರ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷಿಣಿಯವರೆ. ನಾನು ಮಾತನಾಡಬೇಕಾಗಿತ್ತು.

ಉಪಾಧ್ಯಕ್ಷರು : ಚರ್ಚೆ ಮುಗಿದಿದೆ. ಈಗ ಆಗುವುದಿಲ್ಲ. ನಿನ್ನೆ ದಿವಸ ಮಾತನಾಡಬೇಕೆಂದು ಹೆಸರು ಕೊಟ್ಟಿದ್ದವರನ್ನೆಲ್ಲಾ ಕರೆದಿದ್ದೆ. ನಿನ್ನೆಯೇ ಚರ್ಚೆ ಮುಗಿದಿರುವುದರಿಂದ ಈಗ ಮಾನ್ಯ ಕಂದಾಯ ಸಚಿವರು ಉತ್ತರ ಕೊಡಬೇಕು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರೆದುದು)

(ಕಂದಾಯ ಮಂತ್ರಿಗಳಿಂದ ಉತ್ತರ)

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಿನ್ನೆ ಮಾನ್ಯ ಶಿವರಾಮೇಗೌಡರು, ಕೆ. ಸಿದ್ಧಯ್ಯನವರು, ಮಾನ್ಯ ಶಿವನಂಜಪ್ಪನವರು, ಶ್ರೀಮತಿ ಮಲ್ಲಾಜಮ್ಮನವರು, ಮಾನ್ಯ ವಿನಯಕುಮಾರ್ ಸೊರ್ಕೆಯವರು, ಮಾನ್ಯ ಸೋಮಪ್ಪ ಸುವರ್ಣ ಅವರು, ಮಾನ್ಯ ಎಂ.ವಿ. ವೆಂಕಟಪ್ಪನವರು, ಮಾನ್ಯ ಲಿಂಗಪ್ಪನವರು, ಮಾನ್ಯ ನಾರಾಯಣ್‌ರವರು ರೆವಿನ್ಯೂ ಇಲಾಖೆ ಬೇಡಿಕೆ ಮೇಲೆ ಮತ್ತು ಆರ್.ಡಿ.ಪಿ.ಆರ್. ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ, ಕೆಲವು ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ ಮತ್ತು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಎಲ್ಲಿ ಲೋಪದೋಷಗಳು ಇವೆ ಅವುಗಳ ಬಗ್ಗೆ ಕಟುವಾಗಿ ಟೀಕೆ ಕೂಡ ಮಾಡಿದ್ದಾರೆ. ಮುಖ್ಯವಾಗಿ ರೆವಿನ್ಯೂ ಇಲಾಖೆ ಏನಿದೆ, ಇದು ಅತ್ಯಂತ ಹಳೆಯ ಇಲಾಖೆಯೂ ಹೌದು. ಈ ಇಲಾಖೆಯ ಅಧೀನದಲ್ಲಿ ಅನೇಕ ಇಲಾಖೆಗಳು ಹಿಂದೆ ಕೆಲಸ ಮಾಡುತ್ತಾ ಇದ್ದವು. ಆದರೆ ಕಾರಣಾಂತರಗಳಿಂದ ಇವೊತ್ತು ಈ ಇಲಾಖೆಯು ಸಿಂಕ್ರೋನೈಸ್ ಆಗಿ ಒಂದು ರೀತಿಯಲ್ಲಿ ಹೋಗುತ್ತಾ ಇದೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಏನೊಂದು ಹಿಡಿತ ಇತ್ತು ಅದು ಅನೇಕ ಕಾರಣಗಳಿಂದ ತಪ್ಪಿ ಹೋಗುತ್ತಾ ಇದೆ. ಏಕೆಂದರೆ ಇವೊತ್ತು ಸ್ವತಂತ್ರವಾಗಿ ತಮ್ಮದೇ ಆದಂಥ ಒಂದು ಇಲಾಖೆಗಳನ್ನು ಸೃಷ್ಟಿ ಮಾಡಿಕೊಂಡ ಮೇಲೆ ಬಹುಶಃ ಇದರ ಮಹತ್ವ ಕಡಿಮೆಯಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ನಾನು 1980ರಲ್ಲಿಯೂ ಕೂಡ ರೆವಿನ್ಯೂ ಇಲಾಖೆಯನ್ನು ವಹಿಸಿಕೊಂಡಿದ್ದೆ. ಸುಮಾರು ಮೂರು ವರ್ಷಗಳ ಕಾಲ ಇವರಲ್ಲಿ ಕೆಲಸ ಮಾಡತಕ್ಕಂಥ ಅವಕಾಶವು ನನಗೆ ಸಿಕ್ಕಿತ್ತು. ಆವೊತ್ತಿಗೂ. ಇವೊತ್ತಿಗೂ ಹೋಲಿಸಿ ನೋಡಿದಾಗ

ಆವಾಗ ಇರತಕ್ಕಂಥ ಕೆಲವು ಇಲಾಖೆಗಳು ಈಗ ಇಲ್ಲವಾಗಿವೆ. ಈಗಾಗಲೇ ಮಾನ್ಯ ಶಿವನಂಜಪ್ಪನವರು ಹೇಳಿದ ಹಾಗೆ, ಇದು ಮಹತ್ವದ ಇಲಾಖೆಯಾಗಿದ್ದರೂ ಕೂಡ ಇದರ ಕೈ, ಕಾಲು, ಕಿವಿ, ಮೂಗು ಹೀಗೆ ಎಲ್ಲವನ್ನೂ ತೆಗೆದುಹಾಕಿದ ಮೇಲೆ, ಬಹುಶಃ ಇನ್ನು ಏನೂ ಉಳಿಯಲಿಕ್ಕಿಲ್ಲ ಎಂದು ಕಾಣುತ್ತದೆ. ಇವೊತ್ತು ಯಾವುದೇ ಒಂದು ಇಲೆಕ್ಷನ್ ಬಗಲಿ, ಸೆನ್ಸಸ್ ಬರಲಿ, ಕೆಲಮಿಟೀಸ್ ಬರಲಿ, ಅಥವಾ ಯಾರಾದರೂ ಅಧಿಕಾರಿಗಳು, ಮಂತ್ರಿಗಳು ಬರಲಿ, ಅವರನ್ನು ರಿಸಿಪ್‌ಶನ್ ಮಾಡತಕ್ಕಂಥಾದ್ದು ಮುಂತಾಗಿ ಎಲ್ಲವನ್ನೂ ಕೂಡ ಈ ಖಾತೆಯೇ ವಹಿಸಿಕೊಂಡಿದ್ದರೂ ಕೂಡ, ಅಂತೆಯೇ ಬೇರೆ ಇಲಾಖೆಯ ಮಂತ್ರಿಗಳು. ಅಧಿಕಾರಿಗಳು ಬಂದಾಗಲು ಕೂಡ ಮೊದಲು ಅವರು ಕೇಳತಕ್ಕಂಥಾದ್ದು ತಹಶೀಲ್ದಾರರು ಎಲ್ಲಿ ಎಂದು. ಆದರೆ ಅದೇ ಡಿ.ಸಿ.ಗೆ, ಅಸಿಸ್ಟೆಂಟ್ ಕಮಿಶನರ್‌ಗೆ ಅಧಿಕಾರ ಕೊಡಿ ಎಂದು ಕೇಳಿದರೆ ಸಂಬಂಧಪಟ್ಟ ಯಾವ ಇಲಾಖೆಯವರೂ ಕೂಡ ಒಪ್ಪುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಿಡಬ್ಲ್ಯೂಡಿ ಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಅಥವಾ ಜಿಲ್ಲಾ ಪರಿಷತ್ ಆಡಳಿತದಲ್ಲಿ ಬರತಕ್ಕಂಥವರೇ ಆಗಲಿ ಅಥವಾ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಬರತಕ್ಕಂಥವರೇ ಆಗಲಿ. ಒಂದು ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ, ಆಡಳಿತವನ್ನು ನಾವು ಸರಿಯಾಗಿ ನಡೆಸಿಕೊಂಡು ಹೋಗಬೇಕಾದರೆ, ಕನಿಷ್ಟ ಅವರ ಕಾನ್‌ಫಿಡೆನ್ಷಿಯಲ್ ರಿಪೋರ್ಟನ್ನು ಬರೆಯತಕ್ಕಂಥ ಅಧಿಕಾರವನ್ನಾದರೂ ನಮಗೆ ವಹಿಸಿಕೊಡಿ ಎಂದರೆ ಬಹುಶಃ ಯಾವ ಇಲಾಖೆಯವರೂ ಕೂಡ ಇದನ್ನು ಒಪ್ಪುವುದಿಲ್ಲ ಎಂದು ಭಾವಿಸುತ್ತೇನೆ ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ದೇಶದ ಇತರ ಕಡೆಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ನಾನು ಮೊನ್ನೆ ರೆವಿನ್ಯೂ ಮಿನಿಸ್ಟರ್ಸ್ ಕಾನ್‌ಫರನ್ಸ್‌ಗೆ ಹೋಗಿದ್ದೆ. ಅಲ್ಲಿ ಕೂಡ ಅನೇಕರು ಹೇಳಿದರು. ಮಾನ್ಯ ರಾವ್‌ಬೀರೇಂದ್ರ ಸಿಂಗ್‌ರವರು ಕೂಡ ಇದೇ ಮಾತನ್ನು ಹೇಳಿದ್ದರು. ಹೀಗೆ ಯಾರೂ ಕೂಡ ಇವರ ಅಧೀನದಲ್ಲಿ ಕೆಲಸ ಮಾಡುವುದಕ್ಕೆ ತಯಾರಾಗಿಲ್ಲ. ಅವರೆಲ್ಲರಿಗೂ ಸ್ವತಂತ್ರರಾಗಿ ಇರಬೇಕೆಂದು ಮನಸ್ಸು ಇದೆ. ಹೀಗಾಗಿ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ವಲ್ಪಮಟ್ಟಿಗೆ ಅವರ ಅಧಿಕಾರ ಕುಂಠಿತವಾದ ಕಾರಣ ಇವೊತ್ತು ಕೆಲವುಕಡೆ ಈ ಒಂದು ವ್ಯವಸ್ಥೆಯನ್ನು ನಾವು ಕಾಣುತ್ತಾ ಇದ್ದೇವೆ. ಆದರೂ ಕೂಡ ಹಾಗೆ ಆಗಿದೆ ಎಂದು ನಾವು ನಿರ್ಲಕ್ಷ ಮಾಡುವುದಕ್ಕೆ ಆಗುವುದಿಲ್ಲ. ಈ ಮಾತನ್ನು ನಾನು ಒಪ್ಪುತ್ತೇನೆ, ಏಕೆಂದರೆ ಈ ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕೆಂದರೆ ನಮಗಿರತಕ್ಕಂಥ ಅಧಿಕಾರದ ಇತಿಮಿತಿಯಲ್ಲಿಯೇ ನಾವು ಸರಿಪಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ನಮಗೆ ಇವೊತ್ತು ಮುಖ್ಯವಾಗಿ ಇರತಕ್ಕಂಥ ಎರಡು ಮೇಜರ್ ಕೆಲಸಗಳಲ್ಲಿ ಒಂದು ರೆವಿನ್ಯೂ ಅಡ್ಮಿನಿಸ್ಟ್ರೇಶನ್, ಇನ್ನೊಂದು ಸ್ಟ್ಯಾಂಪ್ಸ್ ಮತ್ತು ರಿಜಿಸ್ಟ್ರೇಶನ್, ಇವುಗಳನ್ನು ಬಿಟ್ಟ ಮೇಲೆ ಬಹುಶಃ ಬೇರೆ ಇಲಾಖೆಯ ಕೆಲಸವನ್ನು ನಾವು ಮಾಡುತ್ತೇವೆ. ಉದಾಹರಣೆಗೆ ಹೇಳುವುದಾದರೆ ಆಶ್ರಯ ಸ್ಕೀಮ್. ಇದು ಹೌಸಿಂಗ್ ಮಿನಿಸ್ಟ್ರೀಯವರ ಸ್ಕೀಂ ಆಗಿದ್ದರೂ ಕೂಡ ತಮಗೆ ಗೊತ್ತಿರುವ ಹಾಗೆ ನಮ್ಮ ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಶನರ್‌ಗಳು ಬಹಳ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಪ್ರತಿಯೊಂದು ಕಡೆಗೂ ಹೋಗಿ ಕೆಲಸ ಮಾಡುತ್ತಾರೆ. ಇವೊತ್ತು ಸುಮಾರು 4 ಲಕ್ಷ ಸೈಟುಗಳನ್ನು ರಾಜ್ಯದಲ್ಲಿ ಬಡವರಿಗೆ ಹಂಚಿಕೆ ಮಾಡಿದ್ದಾರೆ. ಕೆಲವು ಇಲಾಖೆ ಬೇರೆ ಇದ್ದರೂ ಕೂಡ ಈಗ ನೇರವಾಗಿ ಮಾಡತಕ್ಕಂಥದ್ದು ರೆವಿನ್ಯೂ ಡಿಪಾರ್ಟ್‌ಮೆಂಟ್. ಹೀಗೆ ಯಾರೇ ಟಾರ್‌ಗೆಟ್ ಕೊಟ್ಟರೂ ಕೂಡ, ಈ ಗ್ರೀನ್ ಕಾರ್ಡ್ಸ್, ಐಡೆಂಟಿಫಿಕೇಶನ್ ಮಾಡಿ, ಹಳ್ಳಿಗೆ ಹೋಗಿ ಅಂತ ಅವರಿಗೆ ಹೇಳೋಣ. ಯಾವುದೇ ಇಲಾಖೆಯನ್ನು ವಹಿಸಿಕೊಟ್ಟರೆ ಅವರು ಮಾಡುತ್ತಾರೆ. ಅದೇ ರೀತಿಯಲ್ಲಿ ಅವರಲ್ಲಿ ಲೋಪದೋಷಗಳು ಇರುತ್ತವೆ. ಇದಕ್ಕೆ ಅಧಿಕಾರ ಕೊಡಬೇಕು ಎಂದು ಹೇಳಿ ನಾವು ಎಲ್ಲರೂ ಕೂಡ ಸ್ವಲ್ಪ ಮನಸ್ಸು

ಮಾಡಿದರೆ ಬಹುಶಃ ನಮ್ಮ ಈ ಸಮಸ್ಯೆಗಳನ್ನು ಬಗೆಹರಿಸಲು ಸ್ವಲ್ಪ ಅನುಕೂಲ ಆಗುತ್ತದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ಎರಡನೆಯದಾಗಿ ಮತ್ತು ಮುಖ್ಯವಾಗಿ ನಮ್ಮ ಇಲಾಖೆಯ ಕೆಲಸ ಲ್ಯಾಂಡ್ ಗ್ರಾಂಟ್ಸ್ ಮಾಡತಕ್ಕದ್ದು ತಮಗೆ ಗೊತ್ತಿದೆ. ಈ ಲ್ಯಾಂಡ್ ಗ್ರಾಂಟ್ಸ್ ಮಾಡತಕ್ಕಂಥದ್ದನ್ನು ನಾವು ನಿಲ್ಲಿಸಿಬಿಟ್ಟಿದ್ದೇವೆ. ಏಕೆಂದರೆ, ಅನ್‌ಆಥರೈಸ್ಡ್ ಕಲ್ಟಿವೇಷನ್ ಈ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ, ಅದನ್ನು ರೆಗ್ಯುಲರೈಸ್ ಮಾಡಬೇಕು ಎಂದು ಹೇಳಿ ನಾವು ಒಂದು ಕಾರ್ಯಕ್ರಮವನ್ನು ಹಾಕ್ಕೊಂಡು ಕಾನೂನು ತಿದ್ದುಪಡಿಯನ್ನು ತಂದಿದ್ದೇವೆ. ಇವತ್ತು ನಮ್ಮ ಮುಖ್ಯ ಮಂತ್ರಿಗಳು ಬಹುಶಃ ಹತ್ತಾರು ವರ್ಷಗಳಿಂದ ರೆವಿನ್ಯೂ ಇಲಾಖೆಯಲ್ಲಿ ಯಾರೂ ಮಾಡದಂತಹ ಕೆಲಸವನ್ನು ಮಾಡಿದ್ದಾರೆ. ಕೆಲವೇ ದಿವಸಗಳಲ್ಲಿ ನಾವು ಅಪ್ಲಿಕೇಷನ್ ಕಲೆಕ್ಟ್ ಮಾಡಿ ನೋಡಿದಾಗ ಸುಮಾರು 10 ಲಕ್ಷ 86 ಸಾವಿರ 826 ಜನರು ಅಪ್ಲಿಕೇಷನ್ಸ್ ಹಾಕಿದ್ದಾರೆ. ಅದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಜನಾಂಗದವರು 3 ಲಕ್ಷ 31 ಸಾವಿರ 562 ಜನರಿದ್ದಾರೆ. ಇದರಲ್ಲಿ ಡಿಸ್‌ಪೋಸ್ ಆದಂತಹ ಕೇಸಸ್ ಎಷ್ಟು ಅಂದರೆ ಕೇವಲ 1 ಸಾವಿರ ಮಾತ್ರ. ಇದು ಏತಕ್ಕೆ ಹೀಗೆ ಆಯಿತು ಎಂದರೆ ಅನೇಕ ಕಡೆ ನಾವು ಶಾಸಕರನ್ನು ಛೇರ್‌ಮೆನ್ ಮಾಡಿ ಮತ್ತು ನಾನ್ ಅಫಿಷಿಯಲ್ ಮೆಂಬರ್ಸನ್ನು ಅದರಲ್ಲಿ ಸೇರಿಸಿ ಈ ಕಮಿಟಿಗಳನ್ನು ಮಾಡಿದ್ದೇವೆ. ಸುಮಾರು 22 ತಾಲ್ಲೂಕುಗಳಲ್ಲಿ ಇನ್ನೂ ಕಮಿಟಿ ಕಾನ್‌ಸ್ಟ್ಯೂಟ್ ಆಗಿಲ್ಲ. ಅದರಲ್ಲಿ ಸುಮಾರು 18 ತಾಲ್ಲೂಕುಗಳಿಗೆ ಮಾತ್ರ ಮಾಡತಕ್ಕಂಥ ಅವಶ್ಯಕತೆ ಇದೆ. ನಾವು ಒಂದೆರಡು ದಿವಸದಲ್ಲಿ ಅವನ್ನು ಮಾಡಿ ಪೂರೈಸುತ್ತೇವೆ. ಆದರೆ ಉಳಿದ ಕಡೆ ನಾವು ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಅಂದರೆ ಬಹಳಷ್ಟು ಕಡೆ ಸಿಟಿಂಗ್ ಆಗಿಲ್ಲ. ಏಕೆಂದರೆ ಕೆಲವು ನಮ್ಮ ಶಾಸಕ ಮಿತ್ರರು ಕೂಡ ಕೆಲವು ಕಡೆ ಟೈಮ್ ಕೊಟ್ಟಿಲ್ಲ ಅಥವಾ ಕೆಲವು ಕಡೆ ಈ ನಾನ್ ಅಫಿಷಿಯಲ್ ಮೆಂಬರ್ಸ್ ಬೇಗನೆ ಅಲ್ಲಿ ಕೋರಮ್ ಮಾಡುವುದಿಲ್ಲ ಅದಕ್ಕಾಗಿ ನಾವು ಈ ಸಂದರ್ಭದಲ್ಲಿ ಅವರಿಗೆ ಅಪೀಲು ಮಾಡುವುದು ಏನೆಂದರೆ ಅವರು ಯಾವ ರೀತಿ "ಆಶ್ರಯ" ಯೋಜನೆ ಕೆಳಗೆ ಸೈಟ್ ಡಿಸ್ಟ್ರಿಬ್ಯೂಟ್ ಮಾಡಲಿಕ್ಕೆ ಆಸಕ್ತಿಯನ್ನು ವಹಿಸಿ ಕೆಲಸವನ್ನು ಮಾಡಿದರೋ ಅದೇ ರೀತಿ ಈ ಕೆಲಸವನ್ನು ಕೂಡ ಮಾಡಬೇಕು. ಒಂದು ವರ್ಷದೊಳಗೆ ಕನಿಷ್ಟ ಪಕ್ಷ 5 ಲಕ್ಷ ಎಕರೆ ಜಮೀನನ್ನಾದರೂ ಮುಂದಿನ ಮಾರ್ಚಿಯೊಳಗೆ ಹಂಚಬೇಕು ಅನ್ನತಕ್ಕಂಥ ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಈ ಗುರಿಯನ್ನು ಅಲ್ಲಿ ಸಾಧಿಸಬೇಕು ಅಂದರೆ ನಮ್ಮ ಎಲ್ಲಾ ಶಾಸಕ ಮಿತ್ರರು ಇದಕ್ಕೆ ಬೆಂಬಲ ನೀಡಬೇಕು, ಸಹಾಯ ಮಾಡಬೇಕು, ಕೆಲಸ ಮಾಡಬೇಕು. ಒಂದು ವೇಳೆ ಅವರು ಆಬ್ಸೆಂಟ್ ಇದ್ದರೂ ಕೂಡ ಅಲ್ಲಿ ಇರತಕ್ಕಂಥ ಸದಸ್ಯರಿಗೆ ಪ್ರಿಸೈಡ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟು ಕೇಸಸ್ ಅನ್ನು ಡಿಸ್‌ಪೋಸ್ ಆಫ್ ಮಾಡಬೇಕು. ನಾನು ಈಗಾಗಲೇ ಇದರ ಬಗ್ಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇನೆ. ಒಂದು ವೇಳೆ ಶಾಸಕರು ಆಬ್ಸೆಂಟ್ ಇದ್ದರೆ ಅಲ್ಲಿರತಕ್ಕಂಥ ಸದಸ್ಯರಲ್ಲಿ ಯಾರಾದರೂ ಒಬ್ಬರು ಪ್ರಿಸೈಡ್ ಮಾಡಿ ನಾನ್ ಅಫಿಷಿಯಲ್ ಮೆಂಬರ್ಸ್ ಆ ಕಮಿಟಿಗಳನ್ನು ಮುಂದುವರಿಸಬೇಕು. ಮತ್ತು ಜನರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥ ಆದೇಶವನ್ನು ಈಗಾಗಲೇ ನೀಡಿದ್ದೇವೆ. ಈ ಸರ್ಕ್ಯುಲರ್ ಈಗಾಗಲೇ ತಲುಪಿದೆ. ಹೀಗೆ ಸುಮಾರು ಲಕ್ಷಾಂತರ ಎಕರೆ ಜಮೀನನ್ನು ಇವತ್ತು ಸಕ್ರಮಗೊಳಿಸುವಂಥದ್ದನ್ನು ನಾವು ಕೈಗೊಂಡಿದ್ದೇವೆ. ಜನರು ಹಾಕಿದಂಥ ಅಪ್ಲಿಕೇಷನ್‌ಗಳು ಜಾಸ್ತಿ ಇವೆ. ನಮ್ಮ ಅಂಕೆ ಸಂಖ್ಯೆಯ ಪ್ರಕಾರ ಅರ್ಜಿಗಳು 25 ಲಕ್ಷ ಇಲ್ಲ. ಅಂದರೆ ಕೆಲವು ಕಡೆ ಅಪ್ಲಿಕೇಷನ್ ಡೂಪ್ಲಿಕೇಷನ್‌ಆಗಿವೆ. ಒಂದೇ ಭೂಮಿ ಮೇಲೆ, ಜಮೀನು ಮೇಲೆ, ಇಬ್ಬರು, ಮೂವರು ಕೆಲವು ಕಡೆ ಹಾಕಿರಬಹುದು. ಆದ್ದರಿಂದ ಇದನ್ನು ನೋಡಿಕೊಂಡು ಹೋಗಬೇಕೆಂದು ಹೇಳಿ ನಾನ್ ಅಫಿಷಿಯಲ್

ಕಮಿಟಿ ಮಾಡಿದ್ದೇವೆ. ಮಾನ್ಯ ಶಿವನಂಜಪ್ಪನವರು ಒಂದೇ ಮನೆಯಲ್ಲಿ ನಾಲ್ಕು-ನಾಲ್ಕು ಜನ ಬೇನಾಮಿ ಅರ್ಜಿ ಹಾಕಿದ್ದಾರೆಂದು ಹೇಳಿದರು. ಈ ರೀತಿ ಆಗುತ್ತದೆ ಎಂದು ತಿಳಿದುಕೊಂಡೇ ನಾವು ಆ ಶಾಸಕರನ್ನೇ ಚೇರ್‌ಮನ್ ಮಾಡಿದ್ದೇವೆ.

ಗುಬ್ಬಿ ತಾಲ್ಲೂಕಿನಲ್ಲಿ ಶಿವನಂಜಪ್ಪನವರಿಗೆ ಚೇರ್‌ಮನ್ ಮಾಡಿದ್ದೇವೆ. ಅಲ್ಲಿ ಏನಾದರೂ ಬೇನಾಮಿ ಆದರೆ ಅಲ್ಲಿ ಏನಾದರೂ ಒಂದೇ ಮನೆಯಲ್ಲಿ ಇಬ್ಬರಿಗೆ, ಮೂವರಿಗೆ ಸಿಕ್ಕಿದರೆ ಆ ದೋಷ ಅವರಿಗೆ ಹೋಗಬೇಕೆ ಹೊರತು ನಮಗೆ ಬರುವ ಹಾಗೆ ಇಲ್ಲ. ಏಕೆಂದರೆ ಅಲ್ಲಿ ನೀವು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ, ರೆಕಾರ್ಡ್ಸ್ ನೋಡಿ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ನಾವು ಅಫಿಷಿಯಲ್ಸ್ ಛೇರ್‌ಮನ್ ತೆಗೆದು ಇವತ್ತಿನ ದಿವಸ ನಮ್ಮ ಶಾಸಕರನ್ನೇ ಆ ಒಂದು ಸಮಿತಿಯ ಛೇರ್‌ಮನ್ ಆಗಿ ಮಾಡಿದ್ದೇವೆ. ಆದಕ್ಕೆ ಬಹುಶಃ ಯಾವ ಸದಸ್ಯ ಮಿತ್ರರು ಕೂಡ ಅವಕಾಶ ಮಾಡಿಕೊಡುವುದಿಲ್ಲ ಎಂಬ ನಂಬಿಕೆ ನನಗೆ ಇದೆ. ಆದಕ್ಕಾಗಿ ಇವತ್ತಿನ ದಿವಸ ನಾವು ಈ ಒಂದು ಜಮೀನಿನ ಪಟ್ಟಾವನ್ನು ಕೊಡತಕ್ಕಂಥದ್ದು ಅಥವಾ ಅವರಿಗೆ ಗ್ರ್ಯಾಂಟ್ ಮಾಡತಕ್ಕಂಥ ಸರ್ವ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಆದಕ್ಕೆ ಇದರಲ್ಲಿ ಅವರು ಸರಿಪಡಿಸುತ್ತಾರೆ ಎನ್ನತಕ್ಕಂಥ ನಂಬಿಕೆ ಇದೆ. ಎರಡನೆಯದಾಗಿ ಪಿಟಿಸಿಎಲ್ ಆ್ಯಕ್ಟ್. ಈ ಆ್ಯಕ್ಟ್‌ನಲ್ಲಿ ಇಲ್ಲಿಯವರೆಗೆ ಡಿಟೆಕ್ಟ್ ಆದಂಥ ಕೇಸಸ್ 40,014. ಎಕ್ಸ್‌ಟೆಂಟ್ ಒಂದು ಲಕ್ಷದ ಆರು ಸಾವಿರ. ಆದರೆ ಇದರಲ್ಲಿ ರೆಸ್ಟೋರ್ ಆಗಿದ್ದುದು 26,298. ಎಕರೆ 52. ಅಂದರೆ 50 ಪರ್‌ಸೆಂಟ್ ರೆಸ್ಟೋರ್ ಆಗಿದೆ. ಇನ್ನು 50 ಪರ್‌ಸೆಂಟ್ ರೆಸ್ಟೋರ್ ಆಗತಕ್ಕಂಥ ಹಂತದಲ್ಲಿದೆ. ಕೆಲವು ಕೇಸಸ್ ಪೆಂಡಿಂಗ್ ಇವೆ. ಕೆಲವು ಕೇಸಸ್ ಅಸಿಸ್ಟೆಂಟ್ ಕಮಿಷನರ್ ಹತ್ತಿರ ಇವೆ. ಕೆಲವು ಕೇಸಸ್ ಹೈಕೋರ್ಟ್‌ನಲ್ಲಿ ಇವೆ. ಮತ್ತೆ ಕೆಲವು ಕಡೆ ಏನಾಗಿದೆ, ಅನೇಕ ಸಲ ನಮ್ಮ ಮಾನ್ಯ ಸದಸ್ಯರು ಮೋಟಮ್ಮನವರು ಮತ್ತು ನಮ್ಮ ಮಲ್ಲಾಜಮ್ಮನವರು ಮತ್ತು ಬೇಲೂರು ಶಾಸಕರೂ ಕೂಡ ಹೇಳುತ್ತಿದ್ದರು. ಅನೇಕ ಕಡೆ ಗ್ರಾಂಟ್ ಆದಂಥವು ಇವತ್ತು ಬೇರೆಯವರ ಕಬ್ಜಾದಲ್ಲಿದೆ. ಅಂದರೆ ಪಟ್ಟಾ ಈ ಷೆಡ್ಯೂಲ್ಡ್‌ಕ್ಯಾಸ್ಟ್ ಹೆಸರಿನಲ್ಲಿ. ಆದರೆ ಇವತ್ತು ಅನುಭವ ಪಡೆದುಕೊಳ್ಳತಕ್ಕಂಥವರು ಅಥವಾ ಅನುಭವಿಸತಕ್ಕಂಥವರು ಇತರೆಯವರು ಇದ್ದಾರೆ ಎನ್ನತಕ್ಕಂಥದ್ದು ನಮ್ಮ ಗಮನಕ್ಕೆ ಬಂದಮೇಲೆ ಅಂಥ ಕೇಸಸ್‌ನ್ನು ಕೂಡ ನೀವು ಇವಿಕ್ಟ್ ಮಾಡಿಸಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಆದರೆ ಕೆಲವು ಕಡೆ ಡೆಪ್ಯುಟಿ ಕಮಿಷನರ್ಸ್ ಮತ್ತು ಅಸಿಸ್ಟೆಂಟ್ ಕಮಿಷನರ್ ಅವರು ಏನು ಆಸಕ್ತಿಯನ್ನು ವಹಿಸಬೇಕು, ಆ ಆಸಕ್ತಿಯನ್ನು ವಹಿಸಿಲ್ಲ. ಆದಕ್ಕೆ ಇನ್ನು ಮೇಲೆ ಅವರಿಗೂ ಕೂಡ ಒಂದು ಗಡುವನ್ನು ಕೊಡುತ್ತಿದ್ದೇವೆ. ಅವರು ಆರು ತಿಂಗಳ ಒಳಗೆ ಇಂಥ ಕೇಸಸ್‌ನ್ನು ಸೆಟ್ಲ್ ಮಾಡದೇ ಹೋದರೆ ಅಥವಾ .ಯಾವುದು ಗ್ರಾಂಟ್ ಆಗಿದ್ದನ್ನು ಬಿಡಿಸಿ ಕೊಡದೇ ಹೋದರೆ ಅಂಥವರ ಮೇಲೆ ಕೂಡ ನಾವು ಇವತ್ತು ಡಿಸಿಪ್ಲಿನರಿ ಆ್ಯಕ್ಷನನ್ನು ಇನಿಸಿಯೇಟ್ ಮಾಡತಕ್ಕಂಥ ಪ್ರಸಂಗ ಬರುತ್ತದೆ ಎಂದು ಹೇಳಿ ನಾನು ಈ ಸದನದ ಮುಖಾಂತರ ಅವರಿಗೆ ತಿಳಿಸಬಯಸುತ್ತೇನೆ. ಮತ್ತು ಅದೇ ರೀತಿಯಾಗಿ ನಾನು ಈ ಸರ್ಕ್ಯುಲರನ್ನು ಕೂಡ ಕಳುಹಿಸಿ, ಆ ಕೇಸಸ್ ಸಾಕಷ್ಟು ಇದ್ದರೂ ಕೂಡ ಅದರಲ್ಲಿ ಆಸಕ್ತಿ ಬಹಳಷ್ಟು ಅಧಿಕಾರಿಗಳು ವಹಿಸಿಲ್ಲ. ಅದಕ್ಕಾಗಿ ಇದರ ಬಗ್ಗೆ ನಾನು ರಿವ್ಯೂ ಮಾಡಿ ತಕ್ಷಣ ಹೆಚ್ಚಿನ ರೀತಿಯಲ್ಲಿ ಸರ್ಕಾರ ಸಹಾಯ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಮೇಲೆ ಡಿಸ್ಟ್ರಿಬ್ಯೂಷನ್ ಆಫ್ ಹೌಸ್ ಸೈಟ್ಸ್, ಈ 'ಆಶ್ರಯ' ಯೋಜನೆ ಕೆಳಗೆ ಕೊಡತಕ್ಕಂಥ ಹೌಸ್ ಸೈಟ್ಸ್ ಬೇರೆ. ಆದರೆ ಹಿಂದೆ ನಮ್ಮ ಕರ್ನಾಟಕ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್ ಪ್ರಕಾರ ಹೌಸ್ ಸೈಟ್ಸ್‌ನ್ನು ಹಳ್ಳಿಗಳಲ್ಲಿ ಕೊಡಬೇಕು ಎಂದು ಅಂದರೆ

ಆಗ ಬ್ಯಾನ್ ಇತ್ತು. ಅಂದರೆ ರೂಲ್ 97(4) ಕೆಳಗೆ ಹಿಂದೆ ಬ್ಯಾನ್ ಮಾಡಿದ್ದರು. ಆದರೆ ಈಗ ನಾವು ಅಮೆಂಡ್‌ಮೆಂಟ್ ಮಾಡಿ ಹಳ್ಳಿಯಲ್ಲಿ ತಕ್ಕಂಥ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಆಗಲಿ ಅಥವಾ ಬಡವರಾಗಲಿ ಯಾರು ಅವರ ಆದಾಯ 6400 ಸಾವಿರ ರೂಪಾಯಿಗಳ ಒಳಗಡೆ ಇದೆ, ಅಂಥವರಿಗೆ ನಾವು ಸೈಟ್ಸ್‌ನ್ನು ಕೊಡಬೇಕು ಎನ್ನತಕ್ಕಂಥ ಆದೇಶವನ್ನು ಡೆಪ್ಯೂಟಿ ಕಮಿಷನರ್‌ಗೆ ಕೊಟ್ಟಿದ್ದೇವೆ. ಆ ಬ್ಯಾನನ್ನು ಲಿಫ್ಟ್ ಮಾಡಿದ್ದೇವೆ. ಇದರಿಂದ ಇವತ್ತು ಸುಮಾರು ಒಂಬತ್ತು ಸಾವಿರ ಜನರಿಗೆ ಸೈಟುಗಳು ಸಿಕ್ಕಿದೆ. ಇನ್ನೊಂದು ವಿಶೇಷವಾದಂಥದ್ದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳ ಕೆಳಗೆ ಹಿಂದೆ Rule 105 of KLR Rules is amended to waive the conversion fine for small scale industries upto 2 acres. ನಮ್ಮ ಈ 'ವಿಶ್ವ' ಯೋಜನೆ ಕಾರ್ಯಕ್ರಮದಲ್ಲಿ ನಮ್ಮ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಿನಿಸ್ಟರ್ಸ್ ಕೂಡ ಒಂದು ರೆಕಮೆಂಡೇಷನನ್ನು ಮಾಡಿದ್ದರು. ಅದೂ ಅಲ್ಲದೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಎನ್‌ಕರೇಜ್ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇವತ್ತು 105 ಕೆಎಲ್‌ಆರ್‌ಇ ರೂಲ್ಸ್‌ನ್ನೂ ಕೂಡ ಅಮೆಂಡ್ ಮಾಡಿ ಎರಡು ಎಕರೆ ಜಮೀನಿಗೆ ಕನ್‌ವರ್ಷನ್ ಫೀ ಕೂಡ ಇಲ್ಲ. ಮುಫತ್ತಾಗಿ ಅವರಿಗೆ ಕೊಡಬೇಕು ಎನ್ನತಕ್ಕಂಥ ಕನ್‌ವರ್ಷನ್ ಫೀ ಇರಲಾರದೆ ಅವರಿಗೆ ಮಂಜೂರು ಮಾಡಬೇಕು ಎನ್ನತಕ್ಕಂಥ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದರಿಂದ ಸಾಕಷ್ಟು ಜನರಿಗೆ ಲಾಭವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದು ಆದ ಮೇಲೆ 163 ಕೆಎಲ್‌ಆರ್ ಆ್ಯಕ್ಟ್‌ಗೆ ನಾವು ಇವತ್ತು ಅಮೆಂಡ್‌ಮೆಂಟ್ ತಂದಿದ್ದೇವೆ. ಅಂದರೆ ಕೆಲವು ಪವರ್ಸ್ ತಹಶೀಲ್ದಾರ್‌ಗೆ ಹಿಂದೆ ಇತ್ತು. ಏನು? ಯಾವುದೇ ಹತ್ತು ಸಾವಿರ ರೂಪಾಯಿಗಳ ಒಳಗಡೆ ಏನು ಲೋನ್ ಕೊಡತಕ್ಕಂಥದ್ದು ಇತ್ತು, ಆ ಲೋನನ್ನು ಕೊಡದೇ ಹೋದರೆ ಅದನ್ನು ಫೋರ್‌ಫೀಟ್ ಮಾಡಿಕೊಳ್ಳಬೇಕು ಎನ್ನತಕ್ಕಂಥ ಅಧಿಕಾರ ತಹಶೀಲ್ದಾರ್‌ರವರಿಗೆ ಇತ್ತು. ಅದನ್ನು ಫೋರ್‌ಫೀಟ್ ಮಾಡಿಕೊಳ್ಳಬಾರದು. ಏಕೆಂದರೆ ಬಡವರಿಗೆ ಅನೇಕ ಸಲ ಗೊತ್ತಿರಲಾರದೆ ಹಣ ತುಂಬುವುದಿಲ್ಲ. ಅದಕ್ಕಾಗಿ ಅವರಿಗೆ ಅವಕಾಶವನ್ನು ಮಾಡಿಕೊಡಬೇಕು ಎಂದು ಹೇಳಿ ಯಾವಾಗ ಇದೇ ಒಂದು ಸದನದಲ್ಲಿ ನಮ್ಮ ವಿರೋಧಿ ಪಕ್ಷದ ಕೆಲವು ಮಿತ್ರರು ಮತ್ತು ಆಡಳಿತ ಪಕ್ಷದ ಕೆಲವು ಮಿತ್ರರು ಸಲಹೆಯನ್ನು ಮಾಡಿದ ಮೇಲೆ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಈ ತಿದ್ದುಪಡಿಯಿಂದ ಯಾವ ರೈತನೂ ಕೂಡ ತನ್ನ ಜಮೀನನ್ನು ಕಳೆದುಕೊಳ್ಳುವುದಿಲ್ಲ. ಅವನಿಗೆ ನೋಟೀಸ್ ಕೊಟ್ಟು ಕಾನೂನು ಬದ್ಧವಾಗಿಯೇ ಆ ಜಮೀನನ್ನು ತೆಗೆದುಕೊಳ್ಳಬಹುದೇ ಹೊರತಾಗಿ ನೇರವಾಗಿ ಮುಟ್ಟುಗೋಲು ಹಾಕತಕ್ಕ ಹಕ್ಕು ತಹಶೀಲ್ದಾರ್‌ರವರಿಗೆ ಇಲ್ಲ. ಅದನ್ನು ನಾವು ತೆಗೆದುಕೊಂಡಿದ್ದೇವೆ. ಇದರಿಂದ ರೈತರಿಗೆ ದೊಡ್ಡ ಅನುಕೂಲವಾಗಿತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಕೆ.ಎಲ್.ಆರ್.ಇ. ರೂಲ್ಸ್ 119ಕ್ಕೆ ಅಮೆಂಡ್‌ಮೆಂಟ್ ತಂದಿದ್ದೇವೆ. ಇದಕ್ಕೂ ಕೂಡ ಪರ ಭೂಮಿ ಅಂತ ಏನಿತ್ತು ಆ ಜಮೀನನ್ನು ಅನೇಕ ಕಡೆ ಹಣವನ್ನು ಕಟ್ಟತಕ್ಕ ಬಾಕಿ ಇದ್ದಾಗ ಕಲ್ಟಿವೇಟೆಡ್ ಕಾಲಂನಲ್ಲಿ ಅಲ್ಲಿರತಕ್ಕ ವಿಲೇಜ್ ಅಕೌಂಟೆಂಟ್ ಪಡ ಪಡ ಎಂದು ಬರೆಯುತ್ತಿದ್ದರು. ಆದ್ದರಿಂದ ಅವನಿಗೆ ಏನೂ ಹಕ್ಕು ಸಿಕ್ಕುತ್ತಿರಲಿಲ್ಲ. ಅದನ್ನು ಆ ರೀತಿಯಾಗಿ ಬರೆಯಬಾರದು. ಮತ್ತು ಅವರಿಗೆ ರೆಸ್ಟೋರ್ ಮಾಡತಕ್ಕ ಅವಕಾಶವನ್ನು ಕೊಡಬೇಕೆಂದು 1-3-92ರವರೆಗೆ ನಾನು ಅದನ್ನು ಎಕ್ಸ್‌ಟೆಂಡ್ ಮಾಡಿದ್ದೇವೆ. ಈ ಪಡ ಭೂಮಿಯನ್ನು ರೈತರು ವಾಪಸ್ಸು ಪಡೆದುಕೊಳ್ಳತಕ್ಕ ಅವಕಾಶವನ್ನು ಇದರ ಮುಖಾಂತರ ಕೊಟ್ಟಿದ್ದೇವೆ. ಮಾರ್ಚ್ ಒಳಗಾಗಿ ಯಾರ್‍ಯಾರು ಅಪ್ಲಿಕೇಶನ್ ಹಾಕಿದ್ದರೆ, ಆಯಾ ಸರ್ಕಾರಿ ಜಮೀನೆಂದು ಏನು ಬರೆದಿದೆ ಅಥವಾ ಪಡ

ಎಂದು ಏನು ಬರೆದಿದೆ ಆ ಜಮೀನನ್ನು ತಿರುಗಿ ಅವರಿಗೆ ರೆಸ್ಟೋರ್ ಮಾಡಿಕೊಡತಕ್ಕ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಇನ್ನೊಂದು ಮಹತ್ತರವಾದ ತಿದ್ದುಪಡಿ ಏನೆಂದರೆ ಅಮೆಂಡ್‌ಮೆಂಟ್ ಆಫ್ 5(ಎ) ಕರ್ನಾಟಕ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಇದರೊಳಗೆ ಹಿಂದೆ ಶೇಕಡ 50 ರಷ್ಟು ಎಸ್.ಸಿ / ಎಸ್.ಟಿ.ಯವರಿಗೆ ಮಾಡಬೇಕೆನ್ನುವುದು ಇತ್ತು. ಈಗ 50 ಪರ್ಸೆಂಟ್ ಇದ್ದಿದ್ದನ್ನು 60 ಪರ್ಸೆಂಟ್ ಮಾಡಿದ್ದೇವೆ. ಏಕೆಂದರೆ ಅವರಿಗೆ ಎಲ್ಲಾ ಕಾನೂನಿನಲ್ಲಿ ಜಮೀನನ್ನು ಕೊಡುತ್ತೇವೆ ಎಂದು ಹೇಳುತ್ತೇವೆ. ನಾವು ತೆಗೆದುನೋಡಿದಾಗ ಅವರಿಗೆ ಏನು ಶೇಕಡ 50 ರಷ್ಟು ಜಮೀನು ಬರಬೇಕು, ಅದು ಬಂದಿರುವುದಿಲ್ಲ. ಅದು ಎನ್‌ಕ್ರೋಚ್‌ಮೆಂಟ್‌ನಲ್ಲಿ ಇರಲಿ, ಅಥವಾ ಸರ್ಕಾರೀ ಜಮೀನು ಕೊಡತಕ್ಕದ್ದರಲ್ಲೇ ಇರಲಿ, ಡಿಸ್ಟ್ರಿಬ್ಯೂಷನ್‌ನಲ್ಲಿ ಆಗಲೀ ಆ ರೀತಿ ಇಲ್ಲ. ಅದಕ್ಕಾಗಿ ಆ ಕೋಟಾವನ್ನು ಸರಿಪಡಿಸಬೇಕೆಂಬ ದೃಷ್ಟಿಯಿಂದ ಅವರಿಗೆ ಶೇಕಡ 75 ರಷ್ಟು ಅವೇಲ್‌ಬಲ್ ಲ್ಯಾಂಡ್ ಕೊಡಬೇಕು ಎನ್ನತಕ್ಕದ್ದನ್ನು ಇವತ್ತು ನಾವು ಮಾಡಿದ್ದೇವೆ. ಇದರಿಂದ ಸಾಕಷ್ಟು ಜನರಿಗೆ ಅನುಕೂಲವಾಗುತ್ತದೆ. ಇದಕ್ಕೆ ಲ್ಯಾಂಡ್ ಗ್ರ್ಯಾಂಟ್ ಮಾಡುವಾಗ ನಮ್ಮ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯ ಛೇರ್ಮನ್ಸ್ ಗಮನದಲ್ಲಿಟ್ಟುಕೊಂಡು ಸರ್ಕಾರದ ಆದೇಶವನ್ನು ನೋಡಿಕೊಂಡು ಜನರಿಗೆ ಸಹಾಯ ಮಾಡಬೇಕು. ವಿಶೇಷವಾದಂತಹ ಸವಲತ್ತುಗಳನ್ನು ಸೈನಿಕರಿಗೆ ಕೊಟ್ಟಿದ್ದೇವೆ. ಅವರ ಇನ್‌ಕಮ್ ಲಿಮಿಟ್ ಕೇವಲ 2000 ಇತ್ತು. ಯಾರಿಗೆ 2000 ಸಾವಿರ ಇನ್‌ಕಮ್ ಇದೆ ಅಂತಹ ಮಾಜಿ ಸೈನಿಕರಿಗೆ ಮಾತ್ರ ಜಮೀನು ಕೊಡಬೇಕೆಂದು ಇತ್ತು. ಇವತ್ತು ಆ ಇನ್‌ಕಮ್ ಲಿಮಿಟ್ ಅನ್ನು ಎನ್‌ಹ್ಯಾನ್ಸ್ ಮಾಡಿದ್ದೇವೆ. 12,000 ಸಾವಿರದಿಂದ 20 ಸಾವಿರದ ವರೆಗೆ ಮಾಡಿದ್ದೇವೆ. ಅದರಿಂದ ಸಾಕಷ್ಟು ಮಾಜಿ ಸೈನಿಕರಿಗೆ ಮತ್ತು ಮಿಲಿಟರಿಯಲ್ಲಿ ಕೆಲಸಮಾಡುವಂತಹ ಸಿಪಾಯಿಗಳಿಗೆ ಈ ಜಮೀನಿನ ಅನುಕೂಲ ಸಿಗುತ್ತದೆ. ಅವರ ಇನ್‌ಕಮ್ ಲಿಮಿಟ್ ಎನ್‌ಹ್ಯಾನ್ಸ್ ಆಗಿದ್ದರಿಂದ ಬಹಳಷ್ಟು ಜನ ಇದಕ್ಕೆ ಅರ್ಹರಾಗುತ್ತಾರೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಭೂಸುಧಾರಣಾ ಕಾಯಿದೆ ಬಗ್ಗೆ ತಮಗೂ ಗೊತ್ತಿದೆ. ಈ ಸದನಕ್ಕೆ ಅದರ ಬಗ್ಗೆ ಹೆಚ್ಚಿನ ಗೌರವ ಇದೆ. ಈ ಭೂಸುಧಾರಣಾ ಕಾನೂನು ಒಂದು ಕ್ರಾಂತಿಕಾರಕ ಕಾನೂನೆಂದು ಈ ರಾಜ್ಯದವರು ಒಪ್ಪಿಕೊಂಡಿದ್ದಾರೆ. ಅದನ್ನು ನಾವು ಇಂಪ್ಲಿಮೆಂಟ್ ಕೂಡ ಮಾಡಿದ್ದೇವೆ. ಅದನ್ನು ಸುಮಾರು 1974ರಲ್ಲಿ ಅನೇಕ ತಿದ್ದುಪಡಿಗಳನ್ನು ತಂದು, ಆ ತಿದ್ದುಪಡಿ ಇಡೀ ನಮ್ಮ ದೇಶದಲ್ಲಿ ಬಹಳ ಪ್ರೋಗ್ರೇಸಿವ್ ತಿದ್ದುಪಡಿ ಎಂದು ಇಲ್ಲಿಯವರೆಗೂ ಹೆಸರಾಗಿದೆ. ಮೊನ್ನೆ ರೆವಿನ್ಯೂ ಮಿನಿಸ್ಟರ್ ಕಾನ್‌ಫರೆನ್ಸ್‌ನಲ್ಲಿ ನಮ್ಮ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನ ತಿದ್ದುಪಡಿಗಳನ್ನು ನೋಡಿದ್ದಾರೆ. ಸಾಕಷ್ಟು ಜನರು ಅಪ್ರಿಷಿಯೇಟ್ ಮಾಡಿದ್ದಾರೆ. ಈ ಆ್ಯಕ್ಟ್ ಅನ್ನು ಇಷ್ಟೊಂದು ಸ್ಟ್ರಿಂಜೆಂಟ್ ಆಗಿ, ಸ್ಟ್ರಿಕ್ಟ್ ಆಗಿ ನೀವು ಫಾಲೋ ಮಾಡುತ್ತಿದ್ದೀರಿ. ಅದು ಇನ್‌ಕಮ್ ಲಿಮಿಟ್ ಇರಬಹುದು ಅಥವಾ ಸೀಲಿಂಗ್ ಲಿಮಿಟ್ ಇರಬಹುದು, ಸರ್ಪ್ಲಸ್ ಲ್ಯಾಂಡ್ ಡಿಸ್ಟ್ರಿಬ್ಯೂಟ್ ಮಾಡತಕ್ಕಂಥಾದ್ದು ಇರಬಹುದು ಅಥವಾ ಡಿಸ್ಟ್ರಿಬ್ಯೂಟ್ ಮಾಡಿದ ಲ್ಯಾಂಡ್ ಅನ್ನು ರೆಸ್ಟೋರ್ ಮಾಡತಕ್ಕಂಥ ಕಾನೂನು ಏನಿದೆ, ಹಿಂದೆ ಶ್ರೀಮಾನ್ ಬಸವಲಿಂಗಪ್ಪನವರು ರೆವೆನ್ಯೂ ಮಿನಿಸ್ಟರ್ ಆಗಿದ್ದಾಗ Prohibition of alienation of certain land ಆ ಒಂದು ಕಾನೂನು 1978ರಲ್ಲಿ ಜಾರಿಗೆ ಬಂತು. ಆ ಕಾನೂನುನಡಿಯಲ್ಲಿ ಎಸ್‌ಸಿ / ಎಸ್‌ಟಿ ಜಮೀನನ್ನು, ಯಾರಾದರೂ ಕಾನೂನಿಗೆ ವಿರುದ್ಧವಾಗಿ ತೆಗೆದುಕೊಂಡರೆ ಅಥವಾ ಕಂಡೀಷನ್ಸ್ ಅನ್ನು ಉಲ್ಲಂಘನೆ ಮಾಡಿದರೆ, ಅಂತಹ ಎಲ್ಲಾ ಜಮೀನುಗಳನ್ನು ನಾವು ರೆಸ್ಟೋರ್ ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಅವರಿಗೆ ತಿಳಿಸಿದ ನಂತರ ಬಹಳ ಆಶ್ಚರ್ಯವಾಯಿತು. ಏಕೆಂದರೆ, ಕೇಂದ್ರದಲ್ಲಿ 1991ರಲ್ಲಿ ಕಾನೂನು ಬಂದು ಅದು 1992ರಲ್ಲಿ

ಬಹುಶಃ ಜಾರಿಯಾಗತಕ್ಕಂಥ ಹಂತದಲ್ಲಿದೆ. Atrocities on SC/ST ಕೆಳಗೆ ಅದನ್ನು ಅವರು ಸೇರಿಸಿದ್ದಾರೆ. ಆ ಕಾನೂನನ್ನು ನಮ್ಮಲ್ಲಿ ಸುಮಾರು 14 ವರ್ಷಗಳ ಹಿಂದೆ ನಾವು ಮಾಡಿದ್ದೆವು. ಮತ್ತು ಈಗಾಗಲೇ ಅದರಿಂದ ಸಾಕಷ್ಟು ಜನರಿಗೆ ಪ್ರಯೋಜನವಾಗಿದೆ ಎನ್ನತಕ್ಕಂಥಾದ್ದು ಕೂಡ ಮನವರಿಕೆಯಾದ ನಂತರ ಆ ಕಾನೂನನ್ನು ಇಡೀ ದೇಶದಲ್ಲಿ ಅದೇ ಮಾದರಿಯಲ್ಲಿ ತರುವುದಕ್ಕೆ ಕೂಡ ಕೇಂದ್ರದವರು ಒಪ್ಪಿಕೊಂಡಿದ್ದಾರೆ. ಹೀಗೆ ಪ್ರಗತಿಪರವಾದಂಥ ಕಾನೂನನ್ನು ತರುವುದರಲ್ಲಿ ಕರ್ನಾಟಕ ರಾಜ್ಯ ಮುಂದಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಟೆನೆನ್ಸಿ ಮ್ಯಾಟರ್ಸ್ ಮುಗಿದುಹೋಗಿದೆ. ಹೆಚ್ಚು-ಕಡಿಮೆ ಕೆಲವು ಕೇಸ್‌ಗಳು ನಮ್ಮ ಹೈಕೋರ್ಟ್ ಮತ್ತು ಟ್ರಿಬ್ಯೂನಲ್‌ಗಳಲ್ಲಿ ಪೆಂಡಿಂಗ್ ಇವೆ. ಅದಕ್ಕಾಗಿ ಈಗಾಗಲೇ ನಾವು ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಎಲ್ಲಾ ತಾಲ್ಲೂಕುಗಳಲ್ಲೂ ರಚಿಸಿದ್ದೇವೆ. ಆದರೆ, ಸಿಟ್ಟಿಂಗ್ ಬಹಳ ಕಡಿಮೆಯಾಗಿದೆ ಎನ್ನತಕ್ಕಂಥ ಮಾತನ್ನು ಕೆಲವು ಜನರು ಹೇಳಿದರು, ಮತ್ತು ಕೆಲವು ಜನ ಸದಸ್ಯರು ಹೇಳಿದರು. ಇನ್ನು ಟಿಎ, ಡಿಎ. ಬಂದಿಲ್ಲ, ಇದರ ಬಗ್ಗೆ ಯಾವುದೇ ಗೌರ್ನಮೆಂಟ್ ಆರ್ಡರ್ ಇಲ್ಲ ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದರು. ನನಗನ್ನಿಸಿದ ಮಟ್ಟಿಗೆ 2ನೇ ಫೆಬ್ರುವರಿ ತಾರೀಖಿನಂದು ಪ್ರತಿಯೊಂದು ಡಿವಿಜನಲ್ ಕಮಿಷನರ್‌ರವರಿಗೆ ಹಣವನ್ನು ಕಳುಹಿಸಿದ್ದೇವೆ. ಸದಸ್ಯರ ಟಿಎ, ಡಿಎ. ಗೋಸ್ಕರ ಹಣ ಕೊಡಬೇಕೆಂದು, ಹಣವನ್ನು ಬಿಡುಗಡೆ ಮಾಡಿದ್ದೇವೆ. ಹೀಗೆ ಲ್ಯಾಂಡ್ ಟ್ರಿಬ್ಯೂನಲ್ ಈ ಒಂದು ಕೆಲಸ ಮಾಡುತ್ತಿದೆ. ಆದರೆ, ಮುಖ್ಯವಾಗಿ ಇವೊತ್ತು ಆಗತಕ್ಕಂಥ ಕೆಲಸ ಯಾವುದೆಂದರೆ, ಸರ್ಪ್ಲಸ್ ಲ್ಯಾಂಡ್ ಅನ್ನು ನಾವು ಕಂಡುಹಿಡಿಯತಕ್ಕಂಥಾದ್ದು. ಏಕೆಂದರೆ, ಸೀಲಿಂಗ್ ಅನ್ನು ಕೆಲವು ಜನರು ಹೈಡ್ ಮಾಡಿ 54 ಎಕರೆಯನ್ನು ಏನು ಇಟ್ಟುಕೊಳ್ಳಬೇಕು, ಅದಕ್ಕಿಂತ ಮೀರಿ ಕೆಲವು ಜನರು ಇಟ್ಟುಕೊಂಡಿದ್ದಾರೆ. ಅಂದರೆ, ಅವರು ಬೇನಾಮಿ ಟ್ರಾನ್ಸ್ಯಾಕ್ಷನ್ ಮಾಡಿ ಇಟ್ಟುಕೊಂಡಿದ್ದಾರೆ ಅಥವಾ ಬೇರೆಯವರ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆ. ಇಂಥದ್ದೆಲ್ಲವನ್ನು ಪತ್ತೆ ಹಚ್ಚಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಈಗಾಗಲೇ ತಿದ್ದುಪಡಿ ಮಸೂದೆಯನ್ನು ಸದನದ ಮುಂದಿಟ್ಟಿದೆ. ಆ ಒಂದು ತಿದ್ದುಪಡಿ ನಮ್ಮ ಕೈಗೆ ಸಿಕ್ಕರೆ ಪುನಃ ನಮ್ಮ ಲಕ್ಷಾಂತರ ಎಕರೆ ಜಮೀನು ಸಿಗತಕ್ಕಂಥ ಒಂದು ವ್ಯವಸ್ಥೆಯಾಗುತ್ತದೆ. ಏಕೆಂದರೆ, ಆ ತಿದ್ದುಪಡಿ ಬಂದನಂತರ ನಾವು ಪುನಃ ಅಂತಹ ಕೇಸ್‌ಗಳನ್ನು ರಿನ್ಯೂ ಮಾಡತಕ್ಕಂಥ ಅಧಿಕಾರ ಟ್ರಿಬ್ಯೂನಲ್‌ಗೆ ಬರುತ್ತದೆ. ಟ್ರಿಬ್ಯೂನಲ್ ಒಂದು ಸಾರಿ ಫ್ರಾಡ್ ಆಗಲಿ, ಚೀಟಿಂಗ್ ಆಗಲಿ, ಮಿಸ್ ರೆಪ್ರಸೆಂಟೇಶನ್ ಆಗಲಿ, ಬೇನಾಮಿಯಾಗಲಿ ಮಾಡಿಕೊಂಡು ಯಾರ್ಯಾರು ವ್ಯವಸ್ಥಿತವಾಗಿ 'ನಮ್ಮದೆಲ್ಲಾ ಮುಗಿದಿದೆ, ಈಗ ಯಾರು ಕೇಳುವ ಹಾಗಿಲ್ಲ' ಎಂದು ಇಟ್ಟುಕೊಂಡಿದ್ದಾರೋ ಅವರನ್ನು ಕಂಡುಹಿಡಿಯುವುದಕ್ಕೆ ಈ ಕಾನೂನಿನಿಂದ ಸಾಧ್ಯವಾಗುತ್ತದೆ. ಮತ್ತು ಪುನಃ ಬಹಳಷ್ಟು ಜನರು ಇಂತಹ ಒಂದು ಕಾನೂನು ಬಂದಿದೆಯೆಂದು ನಿದ್ದೆ ಮಾಡುವುದಿಲ್ಲ. ಅಂತಹ ಒಂದು ಕಾನೂನನ್ನು ತಂದಿದ್ದೇವೆ. ಬಹುಶಃ 28ನೇ ತಾರೀಖು ಆ ಕಾನೂನನ್ನು ಪಾಸ್ ಮಾಡಿಕೊಡುತ್ತೀರೆಂದು ನಾನು ಭಾವಿಸಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಬಹಳ ಸ್ಟ್ರಿಕ್ಟ್ ಆಗಿ ಎಚ್ಚರಿಕೆ ಕೊಟ್ಟಿದ್ದಾರೆ ಅಲ್ಲದೆ, ಮೊನ್ನೆ ಪ್ರಧಾನಮಂತ್ರಿಯವರು ಮಾತನಾಡುವಾಗ 'ಮೋತಿ' ಎಂದು ಹೇಳಿದ್ದಾರೆ. ಅದು ನಾಯಿಯ ಹೆಸರು ಇರಬಹುದು, ಮನುಷ್ಯನ ಹೆಸರು ಇರಬಹುದು. ಈಗ ಅನೇಕ ಕಡೆ 'ಮೋತಿ' ಮತ್ತು 'ಹೀರಾ' ಇಂತಹ ಹೆಸರುಗಳಲ್ಲಿ ಎಕ್ಸೆಸ್ ಲ್ಯಾಂಡ್ ಅನ್ನು ಮಾಡಿಕೊಂಡಿರುವುದರಿಂದ, ಇದನ್ನು ನಾವು ಪತ್ತೆ ಹಚ್ಚಬೇಕಾಗುತ್ತದೆ. ಇದಕ್ಕಾಗಿ ಇನ್‌ವೆಸ್ಟಿಗೇಟ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ, ಎಲ್ಲಾ ರಾಜ್ಯಗಳವರು ಇದರ ಬಗ್ಗೆ ಗಮನಕೊಡಬೇಕೆಂದು ಮೊನ್ನೆ ನಡೆದ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದಾರೆ. ಆದರೆ, ಇದಕ್ಕಿಂತ ಮುಂಚೆ ನಮ್ಮ ಸರ್ಕಾರ ಒಂದು

ಕ್ರಮ ತೆಗೆದುಕೊಂಡು ಈಗಾಗಲೇ ಸದನದ ಮುಂದೆ ಆ ತಿದ್ದುಪಡಿಯನ್ನು ನಾವು ಇಟ್ಟಿದ್ದೇವೆ. ಈ ದೃಷ್ಟಿಯಿಂದ ಅಂತಹ ಕೇಸ್‌ಗಳನ್ನು ಪತ್ತೆ ಹಚ್ಚುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಎರಡನೆಯದು, ಈಗ ಹೈಕೋರ್ಟಿನಲ್ಲಿ ಕೆಲವು ಕೇಸ್‌ಗಳು ಪೆಂಡಿಂಗ್ ಇವೆ ಮತ್ತು ಟ್ರಿಬ್ಯೂನಲ್‌ನಲ್ಲಿ ಕೆಲವು ಕೇಸ್‌ಗಳು ಪೆಂಡಿಂಗ್ ಇವೆ. ಯಾವ ಕೇಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ ಅದರ ಬಗ್ಗೆ ನಾವು ಈಗಾಗಲೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಸಾಕಷ್ಟು ಕೇಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವುದರಿಂದ ನಮಗೆ surplus land distribute ಮಾಡುವುದಕ್ಕೆ ಆಗುತ್ತಿಲ್ಲ ಆದುದರಿಂದ ದಯುವಮಾಡಿ special benches constitute ಮಾಡಿ ಅಲ್ಲಿ land reforms cases ಮಾತ್ರ ಡೀಲ್ ಮಾಡಬೇಕು land ceiling cases ಮಾತ್ರ ಡೀಲ್ ಮಾಡಬೇಕೆಂದು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕೋರಿಕೊಂಡಿದ್ದೇವೆ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಎಲ್ಲಾ ಮಂತ್ರಿಗಳಿಗೂ ಕೂಡ ಕಾನ್ಫರೆನ್ಸ್‌ನಲ್ಲಿ urge ಮಾಡಿದ್ದೇವೆ. ಬಹುಶಃ ಅವರೂ ಕೂಡ ಹೈಕೋರ್ಟಿನಲ್ಲಿ ಅಥವಾ ಟ್ರಿಬ್ಯೂನಲ್‌ಲ್ಲಿ special bench ನ್ನು ಮಾಡೋಣ ಎನ್ನತಕ್ಕ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಬಹುಶಃ ಅವೆರಡರಲ್ಲಿ ಯಾವುದಾದರೊಂದು ತೀರ್ಮಾನ ಬಹಳ ಬೇಗನೆ ಕೇಂದ್ರ ಸರ್ಕಾರದವರು ತೆಗೆದುಕೊಂಡು ನಮಗೆ ತಿಳಿಸುತ್ತಾರೆ, ಇಲ್ಲದಿದ್ದರೆ special bench ಏನಾದರೂ ಕೂಡ ನಾವು ಪ್ರಾರಂಭ ಮಾಡಬೇಕಾಗುತ್ತದೆ, ಅದನ್ನು ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ನಾವು ಪುನಃ Law Minister ಮತ್ತು Prime Minister ರೊಂದಿಗೆ ಇದರ ಬಗ್ಗೆ ಸಂಪರ್ಕವನ್ನು ಬೆಳಸಿ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಅವಶ್ಯಕತೆ ಬಹಳವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ : ಅದೇನೆಂದರೆ ವಿಲೇಜ್ ಅಕೌಂಟೆಂಟ್‌ರುಗಳ ಬಹಳಷ್ಟು ಪೋಸ್ಟ್‌ಗಳು ಖಾಲಿ ಇವೆ ಮತ್ತು ವಿಲೇಜ್ ಅಕೌಂಟೆಂಟ್‌ಗಳು ಹಳ್ಳಿಯಲ್ಲಿ ಇರುವುದಿಲ್ಲ ಎನ್ನತಕ್ಕದ್ದು. ಇದು ಬಹುಶಃ ಎಲ್ಲರ ಗಮನಕ್ಕೂ ಕೂಡ ಬಂದಿದೆ ಇದನ್ನು ನಾನು ಮುಚ್ಚಿಡುತ್ತಿಲ್ಲ ಅಥವಾ ಅವರುಗಳು ಹಳ್ಳಿಯಲ್ಲಿರುತ್ತಾರೆ ಎಲ್ಲರೂ ಸಹ ಸರಿಯಾಗಿ ಕೆಲಸ ಮಾಡುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಿಲ್ಲ. ಸಾಕಷ್ಟು ವಿಲೇಜ್ ಅಕೌಂಟೆಂಟ್‌ರುಗಳು ಹಳ್ಳಿಗಳನ್ನು ಬಿಟ್ಟು ಪಟ್ಟಣದಲ್ಲಿರತಕ್ಕದು ಇಲ್ಲದಿದ್ದರೆ ಹೋಬಳಿಯಲ್ಲಿನ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರತಕ್ಕದ್ದು, ತಾಲ್ಲೂಕು ಹೆಡ್‌ಕ್ವಾಟರ್ಸ್‌ನಲ್ಲಿ ಇರತಕ್ಕದ್ದನ್ನು ಮಾಡುತ್ತಿದ್ದಾರೆ. ನಾವು ಇದರ ಬಗ್ಗೆ ಈಗಾಗಲೆ ಅವರಿಗೆ ಸುತ್ತೋಲೆಯನ್ನು ಕಳಿಸಿದ್ದೇವೆ. ಆದರೆ, ಅದರ ಪರಿಣಾಮ ಸಾಕಷ್ಟು ಆಗುತ್ತಿಲ್ಲ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಎಲ್ಲೆಲ್ಲಿ ವಿಲೇಜ್ ಅಕೌಂಟೆಂಟ್‌ಗಳು ನಿಮ್ಮ ಎದುರಿಗೆಯೇ ಇಂಥ ಒಂದು ಅವ್ಯವಹಾರದಲ್ಲಿ ಅಥವಾ ತಮ್ಮ ಹೆಡ್‌ಕ್ವಾರ್ಟ್ಸನ್ನು ಬಿಟ್ಟು ಅಡ್ಡಾಡಿದುದನ್ನು ತಿಳಿದು ನನಗೆ ನೇರವಾಗಿ ಪತ್ರ ಬರೆದರೆ ನಾನು ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಏಕೆಂದರೆ ಎಲ್ಲರಿಗೂ ಕೂಡ ಒಂದೇ ಕಾಲದಲ್ಲಿ ಸಸ್‌ಪೆಂಡ್ ಮಾಡುತ್ತೇವೆ, ಸರಿಮಾಡುತ್ತೇವೆ ಎನ್ನತಕ್ಕ ಮಾತು ಹೇಳುತ್ತಿಲ್ಲ. ಆದರೆ ಯಾರು ಕೆಲವರು ತುಂಬಾ worst ಆಗಿರುತ್ತಾರೋ? ಯಾರು ನಮ್ಮ ಸೂಚನೆಯನ್ನು violate ಮಾಡುತ್ತಾರೋ ಅಂಥವರಿಗೆ ಪಾಠ ಕಲಿಸಿದರೆ ಬಹುಶಃ ಪಟ್ಟಣಕ್ಕೆ ಬರತಕ್ಕದ್ದು, ತಾಲ್ಲೂಕು ಅಥವಾ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರತಕ್ಕದ್ದು, ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕದ್ದು. ಜಿಲ್ಲಾ ಹೆಡ್‌ಕ್ವಾರ್ಟರ್ಸ್

ನಲ್ಲಿರತಕ್ಕದ್ದು ತಪ್ಪುತ್ತದೆ, ಅದು ಕಡಿಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ಬಿಗಿಯಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಅವರುಗಳು ಆದಷ್ಟು ಮಟ್ಟಿಗೆ ಹಳ್ಳಿಗಳಲ್ಲಿಯೇ ಇರತಕ್ಕ ಒಂದು ವ್ಯವಸ್ಥೆಗೆ ಪ್ರಯತ್ನಿಸುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮಗೆ ವಿಲೇಜ್ ಅಕೌಂಟೆಂಟ್‌ಗಳು ಏನು ಕಂಪ್ಲೇಂಟ್ ಮಾಡುತ್ತಾರೆಂದರೆ ಕೆಲವು ಕಡೆ ಕ್ವಾಟ್ರಸ್ ಇಲ್ಲ ಮತ್ತು ಹೋದರೆ ಯಾರೂ ಮನೆಯನ್ನು ಕೊಡುವುದಿಲ್ಲ ಮತ್ತು ಅಲ್ಲಿ ಇರಲು ನಮಗೆ ಅವಕಾಶ ಕೊಡುವುದಿಲ್ಲ ಆದುದರಿಂದ ದಯಮಾಡಿ ನೀವು ಕ್ವಾಟ್ರಸ್‌ಗಳನ್ನು ಕಟ್ಟಿಸಿಕೊಡಿ ಎನ್ನತಕ್ಕ ಬಗ್ಗೆ ಕೆಲವು ವಿಲೇಜ್ ಅಕೌಂಟೆಂಟ್ಸ್‌ಗಳು ರೆಪ್ರಸೆಂಟೇಷನ್ ಮಾಡುತ್ತಿದ್ದಾರೆ. ಕೆಲವು ತಹಸೀಲ್ದಾರರು ಕೂಡ ಇದನ್ನೇ ಹೇಳುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಈಗಾಗಲೆ Eighth Finance Commission ನಲ್ಲಿ ಸುಮಾರು 2 ಕೋಟಿ ರೂಪಾಯಿಗಳನ್ನು ಈ ವಿಲೇಜ್ ಅಕೌಂಟೆಂಟ್ಸ್‌ಗಳ ಕ್ವಾರ್ಟರ್ಸ್‌ನ್ನು ಕಟ್ಟಿಸಲು ಪ್ರಾವಿಷನ್ ಮಾಡಿದ್ದಾರೆ ಅದನ್ನು ಕೂಡ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ನಮ್ಮಲ್ಲಿ 10 ಸಾವಿರ ಜನ ವಿಲೇಜ್ ಅಕೌಂಟೆಂಟ್ಸ್‌ಗಳೇನಿದ್ದಾರೆ ಅವರೆಲ್ಲರಿಗೂ ಕೂಡ ಕ್ವಾರ್ಟರ್ಸ್ ಇಲ್ಲ. ಕೆಲವು ಜನರಿಗೆ ಮಾತ್ರ ಕ್ವಾರ್ಟರ್ಸ್ ಇದೆ. ಸುಮಾರು 6-7 ಸಾವಿರ ಜನರಿಗೆ ಕ್ವಾರ್ಟರ್ಸ್ ಇಲ್ಲ. ಅವರೆಲ್ಲರಿಗೂ ಕೂಡ ಕ್ವಾರ್ಟರ್ಸ್‌ನ್ನು ಕಟ್ಟಿಸಿಕೊಡಬೇಕೆಂದರೆ ಸುಮಾರು 20 ರಿಂದ 25 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ. ಹಂತಹಂತವಾಗಿ ನಮಗೆ ಪ್ರತಿವರ್ಷವು 5 ಕೋಟಿ ರೂಪಾಯಿಗಳನ್ನಾದರೂ ಸಹಾಯ ಮಾಡಿದರೆ, ಹಳ್ಳಿಗಳಲ್ಲಿ ಒಳ್ಳೆಯ ಆಡಳಿತವಿರುತ್ತದೆ, ತಾಲ್ಲೂಕು ಮಟ್ಟದಲ್ಲಿ ಒಳ್ಳೆಯ ಆಡಳಿತವಿರುತ್ತದೆ ನೀವು ಸಹಾಯ ಮಾಡದಿದ್ದರೆ ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಆಡಳಿತವಿಲ್ಲ, ಸರ್ಕಾರವಿಲ್ಲ ಎನ್ನತಕ್ಕ ಪರಿಸ್ಥಿತಿ ಬರುತ್ತದೆ ಎನ್ನತಕ್ಕ ಮಾತನ್ನು ಕೂಡ ಹೇಳಿದ್ದೇನೆ. ಆದುದರಿಂದ 5 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಪುನಃ ಕೇಂದ್ರ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬಹುಶಃ ಅವರಿಂದ ಸ್ವಲ್ಪವಾದರೂ ಬರಬಹುದು ಎನ್ನತಕ್ಕ ಆಶೆಯು ನನಗಿದೆ. ಮುಂದೆ ಜಿಲ್ಲಾ ಪರಿಷತ್‌ಗಳು ಕೂಡ ಕನ್‌ಸಲ್ಟ್ ಮಾಡಿ ಫಂಡ್ಸ್ ರೀ-ಅಲೋಕೇಷನ್ ಮಾಡಿಕೊಳ್ಳಬೇಕು ಎಂದು ಹೇಳಿ ಒಂದು ಸುತ್ತೋಲೆಯನ್ನು ಮೊನ್ನೆ ನಾವು ಕಳುಹಿಸಿದ್ದೇವೆ. ಅದಕ್ಕಾಗಿ ಜಿಲ್ಲಾ ಪರಿಷತ್ತು ಅಲಾಟ್‌ಮೆಂಟ್ಸ್‌ನಲ್ಲಿ ಈ ಜವಹರ್‌ರೋಜ್‌ಗಾರ್ ಯೋಜನೆಯಲ್ಲಿ ವಿಲೇಜ್ ಅಕೌಂಟೆಂಟ್ ಕ್ವಾರ್ಟರ್ಸ್ ಕಟ್ಟಿಸುವುದಕ್ಕೆ ಸ್ವಲ್ಪ ಹೆಚ್ಚಿನ ಆಸಕ್ತಿ ವಹಿಸಿ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಕನಿಷ್ಟಪಕ್ಷ 5-10 ಪ್ರೊಪೋಸ್ ಮಾಡಿದರೆ ಈ ಒಂದು ಸಮಸ್ಯೆಗೆ ಸ್ವಲ್ಪ ಪರಿಹಾರ ಸಿಗುತ್ತದೆ. ನಾವು ಕೂಡ ನಿರ್ಧಿಷ್ಟವಾಗಿ ಅವರಿಗೆ ಇಂತಹ ಕಡೆ ನಿಮ್ಮ ಆಫೀಸ್ ಇದೆ, ಇಂತಹ ಕಡೆ ನಿಮ್ಮ ಮನೆ ಇದೆ, ನೀವು ಅಲ್ಲಿ ಇರಲೇಬೇಕು ಇಲ್ಲದೇ ಹೋದರೆ ನಾವು ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ನಿರ್ಧಾಕ್ಷಿಣ್ಯವಾಗಿ ಹೇಳುವುದಕ್ಕೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲಿ ಇಲ್ಲದೇ ಇದ್ದರೂ ಕೂಡ ಅಲ್ಲಿ ಇರಬೇಕೆಂದು ಅವರ ಕರ್ತವ್ಯ ಇದೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರೆ ಕೆಲವು ಸವಲತ್ತುಗಳನ್ನು ಮಾಡಿಕೊಡಬೇಕು. ಇದು ನಮ್ಮ ಧರ್ಮ, ಒಂದು ಕರ್ತವ್ಯ ಆ ದೃಷ್ಟಿಯಿಂದ ನಾನು ತಮ್ಮನ್ನು ಈಗ ಬರತಕ್ಕಂಥ 1992-93ನೇ ಬಜೆಟ್‌ಲ್ಲಿ ರೀ-ಅಲೋಕೇಷನ್ ಮಾಡಿಕೊಂಡು ಸ್ವಲ್ಪ ಇದರ ಕಡೆ ಗಮನ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ನಮ್ಮ ಸರ್ವೆ ಸೆಟ್ಲಮೆಂಟ್ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಅದರಲ್ಲಿ

ವಿಶೇಷವಾಗಿ ನಮ್ಮ ಹಳ್ಳಿಯಲ್ಲಿ ವಿಲೇಜ್ ಅಕೌಂಟೆಂಟ್ ಪಟ್ಟಣದಲ್ಲಿ ಸಬ್-ರಿಜಿಸ್ಟ್ರಾರ್ ಎಲ್ಲಿ ಹೋದರೂ ಕೂಡ ಅವರ ಹಾವಳಿ ಮತ್ತು ಅವರು ಮಾಡತಕ್ಕಂತಹ ಕೆಲಸದ ಬಗ್ಗೆ, ಅವರು ಮಾಡತಕ್ಕಂತಹ ಶೋಷಣೆ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಅದರ ಬಗ್ಗೆ ಸಲಹೆಗಳು ಸಾಕಷ್ಟು ಬರಲಿಲ್ಲ. ಏಕೆಂದರೆ ಅವರು ಲಂಚ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ, ಅದನ್ನು ಇಲ್ಲಿ ಯಾರೂ ಕೂಡ ಅಲ್ಲಗಳೆಯುವುದಿಲ್ಲ. ಆದರೆ ಇದನ್ನು ಹೇಗೆ ನಿಲ್ಲಿಸಬೇಕು, ಇದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಾನು ಇಲ್ಲಿಯವರೆಗೆ ಡೆಪ್ಯುಟಿ ಕಮಿಷನರ್‌ರವರಿಗೆ ಅಧಿಕಾರ ಇರಲಿಲ್ಲ. ಅವರ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಬರೆಯತಕ್ಕಂಥದ್ದು ಅಥವಾ ಸೂಪರ್‌ವೈಸ್ ಮಾಡತಕ್ಕಂಥದ್ದು ಇರಲಿಲ್ಲ. ಅದನ್ನು ನಾನು ಮಂತ್ರಿಯಾಗಿ ಬಂದಮೇಲೆ ಒಂದು ಹತೋಟಿಗೆ ಬರಲಿ ಎಂದು ಡೆಪ್ಯುಟಿ ಕಮಿಷನರ್ ಕೂಡ ಸೂಪರ್‌ವೈಸ್ ಮಾಡಬೇಕು, ಚೆಕ್ ಮಾಡಬೇಕು, ಕಂಪ್ಲೇಂಟ್ಸ್ ಬಂದಮೇಲೆ ಅವರು ಕೂಡ ಹೋಗಬೇಕು ಅವರ ಒಂದು ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ನ್ನು ಇವರು ಬರೆದು ಕಳುಹಿಸಬೇಕೆಂದು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಡಿಸಿಷನ್ ತೆಗೆದುಕೊಂಡು ನಾನು ಒಂದು ಆದೇಶವನ್ನು ಹೊರಡಿಸಿದ್ದೇನೆ. ಇನ್ನು ಮೇಲೆ ಅವರಿಗೆ ಸೂಪರ್‌ವೈಸ್ ಮಾಡತಕ್ಕಂತಹವರು ಡೆಪ್ಯೂಟಿ ಕಮಿಷನರ್‌ರವರು. ಆ ಡೆಪ್ಯೂಟಿ ಕಮಿಷನರ್‌ರವರು ಇವತ್ತಿನ ದಿವಸ ಎಲ್ಲಾ ಕಡೆ ಹೋಗಿ ಚೆಕ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಅದರ ಪ್ರಕಾರ ಇದರಲ್ಲಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಬಹುದೆಂದು ನಾನು ಭಾವಿಸಿದ್ದೇನೆ. ಹೋದ ಸಲ ಈ ಇಲಾಖೆಗೆ 1991-92ರಲ್ಲಿ 210 ಕೋಟಿ ರೂಪಾಯಿಯ ಟಾರ್ಗೆಟ್‌ನ್ನು ಆಗಿನ ಮುಖ್ಯಮಂತ್ರಿಗಳು ಕೊಟ್ಟಿದ್ದರು. ಈಗಾಗಲೇ ಫೆಬ್ರವರಿ ಎಂಡ್‌ನೊಳಗೆ 190ಕೋಟಿ ರೂಪಾಯಿಗೆ ನಾವು ಆ ಟಾರ್ಗೆಟ್ ರೀಚ್ ಆಗಿದ್ದೇವೆ. ಅಂದರೆ 20 ಕೋಟಿ ರೂಪಾಯಿ ಮಾತ್ರ ಬರಬೇಕು, ಬಹುಶಃ ಮಾರ್ಚ್ ತಿಂಗಳಲ್ಲಿ ವಸೂಲಿಯಾಗುತ್ತದೆ. ಈ ಇಲಾಖೆಗೆ ವಹಿಸಿಕೊಟ್ಟಂಥ 210 ಕೋಟಿ ರೂಪಾಯಿ ಟಾರ್ಗೆಟ್‌ನ್ನು ನಾವು ಮುಟ್ಟುತ್ತಿದ್ದೇವೆ. ಮತ್ತು ಮುಂದಿನ ವರ್ಷ 1992-93ರಲ್ಲಿ 275 ಕೋಟಿ ರೂಪಾಯಿ ಮಾಡಬೇಕು ಎನ್ನುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇದರಲ್ಲಿಯೂ ಕೂಡ ನಾವು ಯಶಸ್ವಿಯಾಗಬಹುದು. ಅಲ್ಲದೆ ಇನ್ನೊಂದು ಹೊಸ ಮೆಥೆಡ್‌ನ್ನು ನಾವು ಅಡಾಪ್ ಮಾಡುತ್ತಿದ್ದೇವೆ ಅಂದರೆ ಪ್ರತಿಯೊಂದು ತಾಲ್ಲೂಕಿಗೆ ಮತ್ತು ಹೋಬಳಿಗೆ ವ್ಯಾಲ್ಯುಯೇಷನ್ ಕಮಿಟಿ ಸಪರೇಟ್ ಮಾಡಬೇಕು. ಈಗ ಏನಾಗಿದೆಯೆಂದರೆ ನಮ್ಮ ಸಬ್ ರಿಜಿಸ್ಟ್ರಾರ್ ಏನು ಹೇಳುತ್ತಾರೆ ಅದೇ ಸರಿ ಮತ್ತು ಅವರು ಹೇಳಿದ ಪ್ರಕಾರವೇ ನಾವು ಒಪ್ಪಿಕೊಳ್ಳಬೇಕು, ಒಪ್ಪಿಕೊಳ್ಳಲಿಲ್ಲವೆಂದರೆ ತೊಂದರೆ ಕೊಡುತ್ತಾರೆಂದು ಅನೇಕ ಸದಸ್ಯರು ಹೇಳಿದ್ದಾರೆ. ಅದಕ್ಕೆ ಒಂದು ಹೊಸ ಪದ್ಧತಿಯನ್ನು ಇನಾಲ್ವ್ ಮಾಡಿ ಅದರಲ್ಲಿ ಪಿ.ಡಬ್ಲ್ಯೂ.ಡಿ. ಅಸಿಸ್ಟೆಂಟ್ ಇಂಜಿನಿಯರ್ ಮತ್ತು ತಹಶೀಲ್ದಾರರು, ಸಬ್ ರಿಜಿಸ್ಟ್ರಾರ್ಸ್ ಹೀಗೆ ಒಂದು 4-5 ಜನ ಮತ್ತು ಆ ಹೋಬಳಿಗಳಲ್ಲಿರತಕ್ಕಂತಹ, ಮಂಡಲಿಯಲ್ಲಿರತಕ್ಕಂತಹ ಮಂಡಲ ಸೆಕ್ರೆಟರಿ ಸೇರಿಸಿ ಹೀಗೆ ಒಂದು ಕಮಿಟಿ ಮಾಡಿದರೆ ಅವರು ವ್ಯಾಲುಯೇಷನ್ ಮಾಡುತ್ತಾರೆ. ಆ ಭಾಗದಲ್ಲಿ ಇರತಕ್ಕಂತಹ ಪ್ರಾಪರ್ಟಿ ಎಷ್ಟು ಬೆಲೆ ಬಾಳುತ್ತದೆ ಎಷ್ಟಕ್ಕೆ ರಿಜಿಸ್ಟ್ರೇಷನ್ ಮಾಡಬೇಕು ಎನ್ನುವುದನ್ನು ಅವರು ಹೇಳಬೇಕು ಅದಕ್ಕೋಸ್ಕರ ಇವತ್ತು ಕಮಿಟಿ ಮಾಡಿದ್ದೇವೆ. ಆದರಿಂದ ನಮಗೆ ಇನ್ನು ಹೆಚ್ಚಿನ ಆದಾಯ ಬರುತ್ತದೆ ಮತ್ತು ಇಲ್ಲಿ ಅಡೆತಡೆ ಮಾಡತಕ್ಕಂತಹ ಸಬ್ ರಿಜಿಸ್ಟ್ರಾರ್ ಏನು ಇದ್ದಾರೆ ಅವರಿಗೂ ಕೂಡ ಇದರಲ್ಲಿ ಕೈ ಹಾಕುವುದಕ್ಕೆ ಅಥವಾ ಪದೇ ಪದೇ ಜನರನ್ನು ಹೆರ್‍ಯಾಸ್‌ಮೆಂಟ್ ಮಾಡಿ ಲಂಚ ಕೇಳತಕ್ಕಂಥಾದ್ದನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಿದ ಹಾಗೆ ಆಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅದಕ್ಕೆ ಈ ಐದು ಮಂದಿ ಕಮಿಟಿ ಏನು ನಾವು ಮಾಡಿದ್ದೇವೆ, ಬಹುಶಃ ಅವರು ಸರಿಯಾದ ರೀತಿಯಿಂದ ನಿರ್ವಹಿಸಿದರೆ ಅದರಿಂದ ಒಳ್ಳೆಯ ಕೆಲಸ ಆಗಬಹುದು ಎಂದು ನಾನು ಭಾವಿಸುತ್ತೇನೆ. ಅದಕ್ಕೆ ಈ ಒಂದು ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಇದೂ ಅಲ್ಲದೆ ಸರ್ವೆ ಸೆಟಲ್‌ಮೆಂಟ್‌ನಲ್ಲಿ ಕೆಲವು ಡೆವಲಪ್‌ಮೆಂಟ್ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ಏಕೆಂದರೆ, ಅನೇಕ ಕಡೆ ರೆಕಾರ್ಡ್ಸ್, ಲ್ಯಾಂಡ್ ರೆಕಾರ್ಡ್ಸ್ ಆಗಲಿ, ಅಥವಾ ಮ್ಯಾಪ್ಸ್ ಆಗಲಿ ಎಲ್ಲವೂ ಕೂಡ ಹಳೆಯ ಕಾಲದವು. ಹಿಂದೆ ಒಂದು ಸಲ ಮಾಡಿಟ್ಟಿದ್ದು ಮತ್ತೆ ಅದರ ಬಗ್ಗೆ ಯೋಚನೆ ಮಾಡಿಯೇ ಇಲ್ಲ. ಮೊನ್ನೆ ನಮ್ಮ ಮಾನ್ಯ ಚೌಡರೆಡ್ಡಿಯವರು ರೀ ಸರ್ವೆ ಮಾಡಿ ಎಷ್ಟು ವರ್ಷ ಆಯಿತು ಎಂದು ಒಂದು ಪ್ರಶ್ನೆಯನ್ನು ಹಾಕಿದರು. ಕರ್ನಾಟಕ ರಾಜ್ಯದಲ್ಲಿ ರೀ ಸರ್ವೆ ವರ್ಕ್ ಆಗಿದ್ದು ಸುಮಾರು 130 ವರ್ಷಗಳ ಹಿಂದೆ. ಅಂದರೆ ಬ್ರಿಟೀಷರ ಕಾಲದಲ್ಲೂ ಕೆಲವು ದಿವಸ ಆಗಲಿಲ್ಲ. ಈಗ ನಾವು ಈ ರೀ ಸರ್ವೆ ತೆಗೆದುಕೊಳ್ಳಬೇಕು ಅಂದರೆ ಸುಮಾರು ಒಂದು ಜಿಲ್ಲೆಗೆ ಕನಿಷ್ಟ 20ರಿಂದ 25 ಕೋಟಿ ರೂಪಾಯಿ ಬೇಕಾಗುತ್ತದೆ. ಮೊನ್ನೆ ಅವರು ಹೇಳಿದರು ಕೂರ್ಗ್‌ದು ಸುಮಾರು ಅಲ್ಲಿ 3 ತಾಲ್ಲೂಕುಗಳನ್ನು ಸರ್ವೆ ಮಾಡುವುದಕ್ಕೆ ಆರ್ಡರ್ ಯಾವಾಗ ಮಾಡಿದ್ದೀರಿ ಎಂದರೆ ಶ್ರೀಮಾನ್ ಬಸವಲಿಂಗಪ್ಪಾಜಿಯವರು ರೆವಿನ್ಯೂಮಿನಿಷ್ಟರ್ ಆಗಿದ್ದಾಗ 1978ರಲ್ಲಿ ಮಾಡಿದ್ದರು. ಇಲ್ಲಿಯವರೆಗೂ ಆ ಒಂದು ಸೋಮವಾರಪೇಟೆ ತಾಲ್ಲೂಕು ಮುಗಿಯುತ್ತಾ ಇದೆ. ಆದರೆ, ಇನ್ನು 69 ಹಳ್ಳಿಗಳು ಸರ್ವೆ ಮಾಡುವುದು ಉಳಿದಿದೆ. ಅಂದರೆ ಇಷ್ಟು ಅದಕ್ಕೆ ನಿಧಾನ ಕೆಲಸ ಮತ್ತು ಸಾಕಷ್ಟು ಸ್ಟ್ಯಾಫ್ ಬೇಕು, ಸಾಕಷ್ಟು ಹಣಬೇಕು. ಅದಕ್ಕಾಗಿ ಇದನ್ನು ನಾವು ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ, ಇದು ಕೇವಲ ಹಣ ಮತ್ತು ಸ್ಟ್ಯಾಫ್ ಬೇಕಾಗುತ್ತದೆ ಎನ್ನತಕ್ಕಂಥ, ಎನ್ನುವ ಕಾರಣದಿಂದ ನಾವು ಇದನ್ನು ಕೈಬಿಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಹಂತಹಂತದಲ್ಲಿ ಈ ರೀ ಸರ್ವೆ ವರ್ಕ್ಸ್‌ನ್ನು ಮಾಡಬೇಕಾಗುತ್ತದೆ. ನಮ್ಮ ಕಾನೂನು ಪ್ರಕಾರ ಪ್ರತಿ 30 ವರ್ಷಗಳಿಗೆ ಒಮ್ಮೆ ಮಾಡಬೇಕು ಎಂದು ಇದೆ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ. ಆದರೆ, 30 ವರ್ಷಗಳಾದರೂ ಇಲ್ಲಿಯವರೆಗೂ ಯಾರೂ ಮಾಡಿಲ್ಲ. ಈಗ ಮಾಡತಕ್ಕಂಥ ಅವಶ್ಯಕತೆ ಏಕೆ ಇದೆಯೆಂದರೆ, ಸುಮಾರು 130 ವರ್ಷಗಳಿಂದ ಮಾಡಿಲ್ಲ, ಅಂದರೆ, ಅವು ಈಗ ಎಷ್ಟು ವರ್ಷ ರೆಕಾರ್ಡ್ ಇರುತ್ತವೆ. ಮತ್ತು ಹಳ್ಳಿಗಳಲ್ಲಾಗಲಿ, ಎಲ್ಲೇ ಆಗಲಿ ಜಗಳದ ಮೂಲ ಕಾರಣ ಏನೆಂದರೆ ಬೌಂಡರಿ ಡಿಸ್‌ಪ್ಯೂಟ್. ನನ್ನ ಕಲ್ಲು ಇಲ್ಲಿದೆ, ನಿನ್ನ ಕಲ್ಲು ಇಲ್ಲಿದೆ ಎಂದು ಜಗಳ. ಇಂಟರ್‌ಸ್ಟೇಟ್ ತೆಗೆದುಕೊಳ್ಳಲಿ. ಅಥವಾ ಒಂದೇ ಹಳ್ಳಿಯ ಡಿಸ್‌ಪ್ಯೂಟ್ ತೆಗೆದುಕೊಳ್ಳಲಿ, ಅಥವಾ ಇಬ್ಬರ ಹೊಲದ ಡಿಸ್‌ಪ್ಯೂಟ್ ತೆಗೆದುದೊಳ್ಳಲಿ, ಅಥವಾ ಅಂತರರಾಷ್ಟ್ರೀಯದ್ದೇ ತೆಗೆದುಕೊಳ್ಳಲಿ, ಡಿಸ್‌ಪ್ಯೂಟ್ ಬರುವುದು ಬೌಂಡರಿ ಡಿಸ್‌ಪ್ಯೂಟ್. ಅದನ್ನು ನಾವು ಸರಿಯಾಗಿ ಇಡದೇ ಹೋದರೆ ನಾವಾಗಿಯೇ ಹಳ್ಳಿ ಹಳ್ಳಿಯವರಿಗೆ ಜಗಳವನ್ನು ಹಚ್ಚಿಸಿದಂತಾಗುತ್ತದೆ. ಅದಕ್ಕೆ ಇದನ್ನು ಸರಿ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ನಾವು ಇವತ್ತಿನ ದಿವಸ ಹಾಕಿಕೊಂಡಿದ್ದೇವೆ.

"Printing and supply of village maps. A modern printing press purchased at a cost of Rs. 19 lakhs has been installed at the premises of the Directorate, Bangalsore. The same has been brought under operational Stage on 7-3-1992. With this, the printing of maps on large scale is expedited so as

to supply sufficient number of copies to the general public."

ಇದು ಒಂದು ಕೆಲಸವನ್ನು ನಾವು ಮಾಡಿತ್ತಿದ್ದೇವೆ. ಎರಡನೆಯದು

"Preservation of land records with the micro-filming equipments. Two micro-filming units are scheduled to be installed, one at Bangalore and one at Gulbarga, in order to preserve the original survey records safely. For this purpose a sum of Rs. 53 lakhs for the year 1991-92 has been sanctioned by the Government. The steps are taken to purchase micro-filming equipment and other accessories shortly."

ಮತ್ತು ಇದು ಅಲ್ಲದೇ 53 ಲಕ್ಷಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ಸ್ ಸಲುವಾಗಿ ನಾವು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಬಹುಶಃ ಇದು ಬಂದರೆ ರಿಜರ್‌ವೇಷನ್ ಆಫ್ ಲ್ಯಾಂಡ್ ರೆಕಾರ್ಡ್ಸ್ ಅಂಡರ್ ಮೈಕ್ರೋ ಫಿಲ್‌ಮಿಂಗ್ ಇದು ಒಂದು ದೊಡ್ಡ ಕೆಲಸ ಆಗುತ್ತದೆ. ಮತ್ತು ಕೆಲವು ತೊಂದರೆಗಳು ಇದರಿಂದ ನಿವಾರಣೆ ಆಗುತ್ತವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಮೂರನೆಯದಾಗಿ ಕಂಪ್ಯೂಟರೈಸೇಷನ್ ಆಫ್ ಲ್ಯಾಂಡ್ ರೆಕಾರ್ಡ್ಸ್ ಕೆಲಸವನ್ನು ನಾವು ಗುಲ್ಬರ್ಗಾ ಜಿಲ್ಲೆಯದನ್ನು ಗುಲ್ಬರ್ಗಾ ಯೂನಿವರ್ಸಿಟಿಗೆ ವಹಿಸಿದ್ದೇವೆ. ಈ ಕೆಲಸಕ್ಕಾಗಿ ಕೇಂದ್ರ ಸರ್ಕಾರದವರು 25ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದೇ ರೀತಿ ಮೈಸೂರನ್ನು ಮೈಸೂರು ಯೂನಿವರ್ಸಿಟಿಗೆ, ಬೆಂಗಳೂರನ್ನು ಬೆಂಗಳೂರು ಯೂನಿವರ್ಸಿಟಿಗೆ, ಶಿವಮೊಗ್ಗಾವನ್ನು ಶಿವಮೊಗ್ಗಾ ಯೂನಿವರ್ಸಿಟಿಗೆ, ಮಂಗಳೂರನ್ನು ಮಂಗಳೂರು ಯೂನಿವರ್ಸಿಟಿಗೆ ಈ ರೀತಿ ಆಯಾಯ ಯೂನಿವರ್ಸಿಟಿಗಳಲ್ಲಿರತಕ್ಕ ಕಂಪ್ಯೂಟರ್ಸ್ ಸೆಕ್ಷನ್‌ಗಳಿಗೆ ಈ ಕೆಲಸವನ್ನು ವಹಿಸಿಕೊಡಬೇಕೆಂಬ ನಿರ್ಣಯವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಏಕೆಂದರೆ ಬೇರೆ ಕಂಟ್ರ್ಯಾಕ್ಟರ್‌ಗಳಿಗೆ ಅಥವಾ ಬೇರೆ ಫರ್ಮ್‌ಗಳಿಗೆ ಈ ಕೆಲಸವನ್ನು ಕೊಟ್ಟರೆ ಅದಕ್ಕೆ ಹಲವಾರು ರೀತಿಯ ದೂರುಗಳು ಬರುತ್ತವೆ. ಆದುದರಿಂದ, ನಾವು ಈ ಕೆಲಸವನ್ನು ನಮ್ಮ ಯೂನಿವರ್ಸಿಟಿಗಳಿಗೇ ವಹಿಸಿಕೊಟ್ಟರೆ ಅವರ ಹತ್ತಿರ ಈ ಎಕ್ವಿಪ್‌ಮೆಂಟ್ಸ್ ಉಳಿದಂತಾಗುತ್ತದೆ, ಮತ್ತು ಅದರ ಈ ಟ್ರೈನಿಂಗ್ ಯೂನಿಟ್ಸ್‌ನ್ನು ಬಲಪಡಿಸಿದಂತಾಗುತ್ತದೆ ಮತ್ತು ಸರ್ಕಾರದ ಕೆಲಸವನ್ನು ಸರ್ಕಾರವೇ ಮಾಡಿಕೊಂಡಂತಾಗುತ್ತದೆ. ಲಾಭ, ನಷ್ಟ ಎರಡೂ ಕೂಡ ಜೊತೆಯಲ್ಲೇ ಇರುತ್ತದೆಂಬ ದೃಷ್ಟಿಯಿಂದ ಕಂಪ್ಯೂಟರೈಸೇಷನ್ ಆಫ್ ಲ್ಯಾಂಡ್ ರೆಕಾರ್ಡ್ಸ್ ಕೆಲಸವನ್ನು ನಾವು ತೆಗೆದುಕೊಂಡಿದ್ದೇವೆ.

ಇನ್ನು ಸರ್ವೇಯರ್ಸ್ ಕೊರತೆ ಇದೆ ಎನ್ನತಕ್ಕ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿಯೂ ಕೂಡ ನಾನು ಇದೇ ಮನೆಯಲ್ಲಿ ಹೇಳಿದ್ದೇನೆ. ಆದಷ್ಟುಬೇಗ ರಿಕ್ರೂಟ್‌ಮೆಂಟ್ ಮಾಡಿಕೊಡುತ್ತೇವೆಂದು ಹೇಳಿದ್ದೇನೆ. ಇದರ ಬಗ್ಗೆ ಈಗಾಗಲೇ ಸ್ಪೆಷಲ್ ರೂಲ್ಸ್‌ನ್ನು ಫ್ರೇಮ್ ಮಾಡಿದ್ದೇವೆ. ಸುಮಾರು 1000 ಹೊಸ ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದೇವೆ. ಇದೂ ಅಲ್ಲದೆ 435 ವೇಕೆನ್ಸಿಗಳನ್ನೂ ಕೂಡ ನಾವು ಫಿಲಪ್ ಮಾಡುತ್ತೇವೆ. ಒಟ್ಟು 1375 ಹುದ್ದೆಗಳನ್ನು ಆದಷ್ಟು ಬೇಗ ಭರ್ತಿಮಾಡಿದರೆ ಬಹುಶಃ ಸರ್ವೇಯರ್‌ಗಳ ಕೊರತೆ ಏನಿದೆ

ಅದನ್ನು ನಿವಾರಣೆ ಮಾಡಿದಂತಾಗುತ್ತದೆ, ಮತ್ತು ವಿಶೇಷವಾಗಿ ನಮ್ಮ ಎನ್‌ಕ್ರೋಚ್‌ಮೆಂಟ್ ರೆಗ್ಯುಲರೈಸೇಷನ್ ಪ್ರೋಗ್ರಾಂಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ. ಮಾನ್ಯ ಶಿವರಾಮೇಗೌಡರು, ಮಾನ್ಯ ಶಿವನಂಜಪ್ಪನವರೂ ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಸರ್ವೇಯರ್‌ಗಳು ಇಲ್ಲದಿದ್ದರೆ ಸ್ಕೆಚ್‌ನ್ನು ತಯಾರು ಮಾಡುವವರು ಯಾರು? ಮ್ಯಾಪನ್ನು ತಯಾರು ಮಾಡುವವರು ಯಾರು? ಸರ್ವೆ ಕೆಲಸಮಾಡುವವರು ಯಾರು? ಅವರಿಗೆ ಎಷ್ಟು ಎಂದು ಕೊಡಬೇಕು ಎನ್ನತಕ್ಕ ಪ್ರಶ್ನೆ ಬರುತ್ತದೆ. ನಾಳೆ ಗ್ರ್ಯಾಂಟೀಸ್‌ನಲ್ಲೇ ಡಿಸ್‌ಪ್ಯೂಟ್ ಬರುತ್ತವೆಂಬ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕಾಗಿ ಈ ಹುದ್ದೆಗಳನ್ನೆಲ್ಲಾ ಆದಷ್ಟು ಬೇಗ ಭರ್ತಿಮಾಡಿ ಎಲ್ಲಾ ಕಡೆ ಈ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಈ ಸಮಸ್ಯೆ ಬಗೆಹರಿಯುತ್ತದೆಂದು ಹೇಳಬಯಸುತ್ತೇನೆ. ಸರ್ವೆ ಸೆಟಲ್‌ಮೆಂಟ್‌ನಲ್ಲಿರತಕ್ಕ ಟ್ರೈನಿಂಗ್ ಕೆಲಸವನ್ನೂ ಕೂಡ ಮಾಡಿಸಬೇಕಾಗುತ್ತದೆ. ಏಕೆಂದರೆ ನಾವು ರೆಗ್ಯುಲರೈಸ್ ಮಾಡಿದಮೇಲೆ ಅವರಿಗೆ ಬೇಗನೆ ಟ್ರೈನಿಂಗ್ ಕೊಡಿಸಿ ಅವರಿಂದ ಕೆಲಸವನ್ನು ನಾವು ತೆಗೆದುಕೊಳ್ಳದಿದ್ದರೆ ಅವರು ಪುನಃ ರಾ ಹ್ಯಾಂಡ್ಸ್ ಆಗುತ್ತಾರೆ. ಆದುದರಿಂದ ಅವರಿಗೆ ಟ್ರೈನಿಂಗ್ ಕೊಡಿಸತಕ್ಕ ಕೆಲಸವನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಪಾಸ್ ಪುಸ್ತಕಗಳ ಬಗ್ಗೆ ಹೇಳುವುದಾದರೆ ಈಗಾಗಲೇ ಕೆಲವು ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ನಮ್ಮಲ್ಲಿ ಸುಮಾರು 67, 50, 346 ಜನ ಪಟ್ಟಾದಾರರಿದ್ದಾರೆ. ಈಗ 2.20 ಕೋಟಿ ಪಾಸ್ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ್ದೇವೆ. ಇದನ್ನೆಲ್ಲಾ ಹಂಚುವುದಕ್ಕೆ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೂ ಆದೇಶವನ್ನು ನೀಡಿದ್ದೇವೆ. ಆದರೆ ಆಶ್ರಯ ಯೋಜನೆ, ಪಾರ್ಲಿಮೆಂಟ್ ಚುನಾವಣೆ ಇನ್ನೂ ಮುಂತಾದ ಕೆಲಸಗಳು ಅಡ್ಡಬಂದಿದ್ದರಿಂದ ಈ ಕೆಲಸ ಸ್ವಲ್ಪ ನಿಧಾನವಾಗಿದೆ. ಇದುವರೆಗೆ ಸುಮಾರು 6,13,770 ಪಾಸ್ ಪುಸ್ತಕಗಳನ್ನು ಮಾತ್ರ ಹಂಚಿದ್ದೇವೆ. ಇನ್ನು ಉಳಿದುದನ್ನು ಹಂಚಬೇಕಾಗಿದೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಾದರೆ, ಗ್ರಾಮಸಭೆ ಆಗಲಿ, ಅಥವಾ ತಾವು ಹಳ್ಳಿಗಳಿಗೆ ಹೋದಾಗ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಥವಾ ತಾಲ್ಲೂಕು ಪಂಚಾಯಿತಿ ಸಮಿತಿಗಳಲ್ಲಿ ಅಥವಾ 20 ಅಂಶದ ಕಾರ್ಯಕ್ರಮದಲ್ಲಿ ನೀವು ಇದನ್ನು ಇನ್‌ಸಿಸ್ಟ್ ಮಾಡಬೇಕು. ಏಕೆಂದರೆ, ನೀವು ಯಾವುದೇ ಗ್ರಾಮಸಭೆಗೆ ಹೋದಾಗಲೂ ಅಲ್ಲಿ ಪಟ್ಟಾ ಪುಸ್ತಕಗಳನ್ನು ಎಷ್ಟು ಕೊಟ್ಟಿರಿ ಎನ್ನುವ ಬಗ್ಗೆ ಎಲ್ಲ ಛೇರ್ಮನ್‌ಗಳೂ ಕೇಳಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತು ನಾವು ಇದಕ್ಕೂ ಕೂಡ ಒಂದು ಡ್ರೈವ್‌ನ್ನು ಹಾಕಿಕೊಳ್ಳುತ್ತೇವೆ. ಕೇವಲ ಪಟ್ಟಾ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಪಾಸ್ ಪುಸ್ತಕಗಳ ಪ್ರಯೋಜನವಾಗಬೇಕು, ರೈತರಿಗೆ ಇದರ ಲಾಭ ದೊರಕಬೇಕೆಂಬ ದೃಷ್ಟಿಯಿಂದಲೇ ನಾವು ಇದನ್ನು ಮಾಡಿದ್ದೇವೆ. ಆದುದರಿಂದ ಬಹಳ ಬೇಗ ಈ ಪಟ್ಟಾಪುಸ್ತಕಗಳನ್ನು ಹಂಚುವ ಬಗ್ಗೆ ಒಂದು ಡ್ರೈವ್‌ನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನೊಂದು ಮಹತ್ತರವಾದಂಥ ಕೆಲಸವೆಂದರೆ ಈ ನ್ಯಾಚ್ಯುರಲ್ ಕ್ಯಲಾಮಿಟೀಸ್ ಈ ಸಾರಿ ಸ್ವಲ್ಪ ಕಡಿಮೆ ಸಲಹೆಗಳು ಬಂದಿರುತ್ತವೆ. ಹೋದಸಲ ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮಾನ್ಯ ಸದಸ್ಯರು ತಾವಾಗಿಯೇ ಕೊಟ್ಟಿದ್ದರು. ನ್ಯಾಚ್ಯುರಲ್ ಕ್ಯಲಾಮಿಟೀಸ್‌ನಲ್ಲಿ ಫ್ಲಡ್, ಡ್ರೌಟ್, ಫೈರ್ ಆಕ್ಸಿಡೆಂಟ್ ಇವೆಲ್ಲಾ ಕೂಡ ಇದರಲ್ಲಿ ಬರುತ್ತವೆ. ನ್ಯಾಚ್ಯುರಲ್ ಕ್ಯಲಾಮಿಟೀಸ್ ಫಂಡ್ ಎಂದು ಹೇಳಿ ನಮ್ಮಲ್ಲಿರತಕ್ಕಂಥದ್ದು 27 ಕೋಟಿ ರೂಪಾಯಿಗಳು ಮಾತ್ರ. ಕೇಂದ್ರ ಸರ್ಕಾರದವರು ಈ

ಫಂಡ್ ಬಗ್ಗೆ ಒಂದು ಮಿತಿಯನ್ನು ಹಾಕಿದ್ದಾರೆ. 27ಕೋಟಿ ರೂಪಾಯಿಗಳ ಮೇಲೆ ಖರ್ಚು ಮಾಡಬಾರದೆಂದು. ಅದು ಯಾವುದೇ ಇರಲಿ ಫ್ಲಡ್ ಇರಲಿ, ಸ್ಕೇರ್‌ಸಿಟಿ ಇರಲಿ, ಫೈರ್ ಆಕ್ಸಿಡೆಂಟ್ ಇರಲಿ ಆದೆಲ್ಲ ಸೇರಿ ನ್ಯಾಚ್ಯುರಲ್ ಕ್ಯಲಾಮಿಟೀಸ್ ಹೆಡ್ ಕೆಳಗಡೆ 27 ಕೋಟಿ ರೂಪಾಯಿಗಳೆಂದು ನಿಗದಿ ಮಾಡಿದ್ದಾರೆ. ಅದಕ್ಕಿಂತ ಹೆಚ್ಚು ಹಣವನ್ನು ಖರ್ಚುಮಾಡಿದರೆ ಬಹುಶಃ ಸ್ಟೇಟ್ ಗೌವರ್ನಮೆಂಟ್ ಮಾಡಬೇಕಾಗುತ್ತದೆ, ರಾಜ್ಯ ಸರ್ಕಾರದವರೇ ವಹಿಸಿಕೊಳ್ಳಬೇಕಾಗುತ್ತದೆಂದು ಹೇಳಿರುತ್ತಾರೆ. ಅದಕ್ಕಾಗಿ ಅನೇಕ ಸಲ ಏನಾಗುತ್ತದೆಂದರೆ ಹೆಚ್ಚು ಹಣವನ್ನು ಖರ್ಚುಮಾಡಬೇಕಾದ ಸಂದರ್ಭಗಳು ಒದಗಿಬಂದಾಗ ಇಲ್ಲಿ ಸ್ಟೇಟ್ ಗೌವರ್ನಮೆಂಟ್‌ನಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿರುವ ಹಣವನ್ನು ತೆಗೆದುಕೊಂಡು ಆ ಒಂದು ಹೆಡ್ ಕೆಳಗಡೆ ಖರ್ಚುಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮಗೆ 27 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರುತ್ತದೆಂದು ಹೇಳಿದರು ಅವರು ಕೊಟ್ಟಿರತಕ್ಕಂಥದ್ದು 20.75 ಲಕ್ಷ, ನಮ್ಮ ಕಾಂಟ್ರಿಬ್ಯೂಷನ್ 6.75 ಲಕ್ಷ ಇರುತ್ತದೆ. ಒಟ್ಟು 27 ಕೋಟಿ ರೂಪಾಯಿಗಳು. ಇದರಲ್ಲಿ 20 ಕೋಟಿ ಬಂದಿದೆ. ಇದಲ್ಲದೆ ನಾವು ಸುಮಾರು 46 ಕೋಟಿ 41 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅಂದರೆ 27 ಕೋಟಿ ರೂಪಾಯಿಗಳನ್ನು ಇದರಲ್ಲಿ ಡಿಡೆಕ್ಟ್ ಮಾಡಿದರೂ ಕೂಡ ಸುಮಾರು 22 ಕೋಟಿ ರೂಪಾಯಿಗಳನ್ನು ನಮ್ಮ ಸ್ಟೇಟ್ ಗೌವರ್ನಮೆಂಟ್‌ನವರು ಖರ್ಚುಮಾಡಿದ್ದಾರೆ. ಇದಲ್ಲದೆ 20 ಕೋಟಿ ರೂಪಾಯಿಗಳನ್ನು ನಾವು ಆಶ್ರಯ ಯೋಜನೆಯ ಕೆಳಗಡೆ ಖರ್ಚುಮಾಡುತ್ತೇವೆ. ಯಾರು ಮನೆಗಳನ್ನು ಕಳೆದುಕೊಂಡಿರುತ್ತಾರೋ ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಯೋಜನೆ. ನಮ್ಮ ಕೋಲಾರ, ತುಮಕೂರು, ಮಂಡ್ಯ, ಮೈಸೂರು ಇನ್ನೂ ಕೆಲವು ಕಡೆ ಅಂದರೆ ಬೆಂಗಳೂರು ರೂರಲ್ ಇಂಥ ಎಲ್ಲಾ ಜಿಲ್ಲೆಗಳಿಗೆ ನಾವು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಆಶ್ರಯ ಯೋಜನೆಯ ಕೆಳಗಡೆ ಒಂದು ದಿಟ್ಟ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಹಿಂದೆ ನ್ಯಾಚ್ಯುರಲ್ ಕ್ಯಲಾಮಿಟೀಸ್ ಕೆಳಗಡೆ ಮನೆಗಳನ್ನು ಕಳೆದುಕೊಂಡವರಿಗೆ ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಕೊಡುತ್ತಿದ್ದೆವು. ಮ್ಯಾಕ್ಸಿಮಮ್ 1,200 ರೂಪಾಯಿಗಳನ್ನು ಕೊಡುತ್ತಿದ್ದೆವು. ಆದರೆ ಇವತ್ತು ಒಂದು ಮನೆಗೆ 15 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆಂದರೆ 45 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚುಮಾಡುತ್ತಿದ್ದೇವೆ. ಹಿಂದೆ ಪೀಪಲ್ ಹೌಸಿಂಗ್ ಸ್ಕೀಮ್ ಎಂದು ಹೇಳಿ 5-6 ಸಾವಿರ ರೂಪಾಯಿಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುತ್ತಿದ್ದರು. ಇಂದು ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ, ನಮ್ಮ ಮುಖ್ಯಮಂತ್ರಿಗಳು ಬಡವರ ಮನೆಗಳು ಬಿದ್ದುಹೋಗಿದ್ದರೆ ಅವುಗಳನ್ನು ಕಟ್ಟಿಸಿಕೊಡಲು ಹೌಸಿಂಗ್ ಸ್ಕೀಮ್‌ನಲ್ಲಿ ಎಷ್ಟು ಹಣ ಖರ್ಚಾದರೂ ಸರಿ ಎಂದು ಹೇಳಿ ಅದಕ್ಕೋಸ್ಕರವಾಗಿ 20 ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದ್ದಾರೆ. ಇದರಿಂದ ಮಾನ್ಯ ವೆಂಕಟಪ್ಪನವರ ಜಿಲ್ಲೆಗೂ ಅನುಕೂಲವಾಗುತ್ತದೆ. ಹೀಗೆ ಒಂದು ಮಹತ್ವವಾದಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಅದೇ ರೀತಿಯಲ್ಲಿ ಸ್ಕೇರ್‌ಸಿಟಿಗೋಸ್ಕರ ಹೆಚ್ಚಿನ ಹಣವನ್ನು ನಾವು ಬಿಡುಗಡೆಮಾಡಿದ್ದೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರು. ಆದರೆ ಈ ನ್ಯಾಚ್ಯುರಲ್ ಕ್ಯಲಾಮಿಟೀಸ್ ಅಡಿಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಮೂರು ಸಾವಿರಕ್ಕೂ ಮೇಲ್ಪಟ್ಟು ಮನೆಗಳು ಬಿದ್ದುಹೋಗಿರುತ್ತವೆ. ಅವರು ಕೊಟ್ಟಿರುವುದು ಒಂದು ಸಾವಿರ ಮನೆಗಳು. ಇದು ಅರ್ಥವಾಗುತ್ತಿಲ್ಲ, ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಒಂದು ಸಾವಿರ ಮನೆಗಳು ರೆಗ್ಯುಲರ್ ಪ್ರೋಗ್ರಾಮ್‌ನಲ್ಲಿ ಎಂ.ಎಲ್.ಎ.ಗಳಿಗೆ ಕೊಟ್ಟಿದ್ದು ಮೂರುಸಾವಿರ ಮನೆಗಳು ಕಂಪ್ಲೀಟ್ ಕೊಲಾಪ್ಸ್ ಆಗಿದ್ದರೆ, ಅದು ನ್ಯಾಚ್ಯುರಲ್ ಕ್ಯಲಾಮಿಟೀಸ್ ಫಂಡ್‌ನಲ್ಲಿ ಸಪರೇಟ್ ಆಗಿ ಕಟ್ಟಲು ಬರುತ್ತದೆ. ಒಟ್ಟು 40 ಸಾವಿರ ಮನೆಗಳು ಕಟ್ಟಲು ಅನುಕೂಲತೆ ಇದೆ. ನಿಮ್ಮಲ್ಲಿ 3 ಸಾವಿರಕ್ಕೂ ಡಿ.ಸಿ. ಯವರು ಕಂಪ್ಲೀಟ್ ರೆಕಾರ್ಡ್ ಬಿಲ್ಡ್ ಅಪ್ ಮಾಡಿದ್ದರೆ ಸಂಪೂರ್ಣ ಹಣ ಸಿಗುತ್ತದೆ. ಒಂದು ಸಾವಿರ ಬೇರೆ, ಇದು ಬೇರೆ. ಇದನ್ನು ಸ್ಪೆಶಲ್ ಆಗಿ ಮಾಡಿದ್ದೇವೆ. ಇಂಥ ಇಂಪಾರ್ಟೆಂಟ್ ಕೆಲಸ ಮಾಡಿದ್ದಕ್ಕೆ ಮಾಡಿದ್ದಕ್ಕೆ ಮಾಡಿದ್ದಾರೆಂದು ಹೇಳಿದ್ದರೆ ನಾನು ಮೆಚ್ಚಿಕೊಳ್ಳುತ್ತಿದ್ದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ನೀವೇ ಹೇಳಿ, ಯಾವುದಾದರೂ ಮನೆ ಬಿದ್ದರೆ ಮನೆ ಕಟ್ಟಿಸಲಿಕ್ಕೆ 45 ಕೋಟಿ ರೂಪಾಯಿಗಳನ್ನು ಇದುವರೆಗೆ ಯಾರಾದರೂ ಕೊಟ್ಟಿದ್ದಾರೆಯೆ? We have deposited 20 crores with Housing Board in cash ನಾಳೆ ಬರುತ್ತದೆ, ನಾಡಿದ್ದು ಬರುತ್ತದೆಂದು ಇಲ್ಲ. ಎಲ್.ಒ.ಸಿ. ಇಲ್ಲ ಎಂಬ ಪ್ರಶ್ನೆ ಅಲ್ಲ. ಹಣ ಕೊಟ್ಟು ಕಟ್ಟಿಸಿ ಎಂದು ಅವರಿಗೆ ಏಜೆನ್ಸಿ ಏತಕ್ಕೆ ಫಿಕ್ಸ್ ಮಾಡಿದ್ದೇವೆಂದರೆ ಬಿಡಿಓ ಮುಖಾಂತರ ಕಟ್ಟಿಸಿದರೆ ಸರಿ ಹೋಗುವುದಿಲ್ಲವೆಂದು ಇದನ್ನು ಮಾಡಿದೆವು. ಯಾರು ನೊಂದ ಜನರಿದ್ದಾರೆ ಅವರಿಗೆ ಈ ಸಹಾಯ ಮಾಡುತ್ತಿದ್ದೇವೆ. ಇದಲ್ಲದೆ, 2 ಕೋಟಿ 50 ಲಕ್ಷ ರೂಪಾಯಿ ಕ್ರಾಪ್ ಕಾಂಪನ್‌ಸೇಷನ್ ಅನ್ನು ಈ 4 ಜಿಲ್ಲೆಗಳಲ್ಲಿ ಏನು ಬೆಳೆ ಹಾನಿಯಾಗಿದೆ ಅದಕ್ಕೆ ಬಿಡುಗಡೆ ಮಾಡತಕ್ಕದ್ದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಇನ್ನು ನಾವು ಸೀಸನ್‌ನಲ್ಲಿ ಮಿನಿ ಕಿಟ್ಸ್ ಕೊಡಬೇಕೆಂದು ಮಾಡಿದ್ದೇವೆ. ಕೆಲವು ಶಾಸಕ ಮಿತ್ರರು ಹೇಳಿದಂತೆ ಈಗಲೇ ಕೊಡಬೇಕೆಂದರೆ ಕೊಡೋಣ. ಈಗ ಕೊಟ್ಟರೆ ಉಪಯೋಗವಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಮತ್ತು ವ್ಯವಸಾಯಾಧಿಕಾರಿಗಳು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಅದನ್ನು ಸೀಸನ್‌ನಲ್ಲಿ ಕೊಡಬೇಕೆಂಬ ನಿರ್ಣಯ ತೆಗೆದುಕೊಂಡಿದ್ದೇವೆ. ಇದಲ್ಲದೆ ಇನ್ನೊಂದು ಸಂತೋಷದ ಸುದ್ದಿ ಎಂದರೆ ಫ್ಲಡ್ ಡ್ಯಾಮೇಜ್ ಕೆಳಗೆ ಏನು ಕೆಲವು ಮೈನರ್ ಇರಿಗೇಷನ್ ಟ್ಯಾಂಕ್ಸ್, ರೋಡ್ಸ್ ಕೊಚ್ಚಿಕೊಂಡು ಹೋಗಿವೆ ಅಂಥವೆಲ್ಲವನ್ನು ಸೇರಿಸಿ ಆ ಜಿಲ್ಲೆಯ ವತಿಯಿಂದ ಏನು ನಾವು ಮೆಮೋರ್‍ಯಾಂಡಂ ಕೊಟ್ಟಿದ್ದೇವೆ ಅದರ ಪ್ರಕಾರ ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ನಮಗೆ ಬರಲಿಲ್ಲ. ಆದರೂ ನಾವು ಅಂಥ ಕೆಲಸಗಳಿಗೆ 5-6 ಜಿಲ್ಲೆಗಳಿಗೆ ವಿಶೇಷವಾಗಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರಿಂದ ಬಹುಶಃ ನಮ್ಮ ಜಿಲ್ಲಾ ಪರಿಷತ್ತಿನ ಎಲ್ಲಾ ರಸ್ತೆಗಳು ಮತ್ತು ಮೈನರ್ ಇರಿಗೇಷನ್ ಟ್ಯಾಂಕ್ಸ್ ಎಲ್ಲವನ್ನು ಮೇ ತಿಂಗಳೊಳಗೆ ರಿಪೇರಿ ಮಾಡತಕ್ಕ ವ್ಯವಸ್ಥೆ ಆಗಬಹುದೆಂಬ ಭಾವನೆ ಇದೆ. ಇದರಿಂದ ಆ ಭಾಗದ ರೈತರೆಲ್ಲರಿಗೂ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಸ್ಕೇರ್ಸಿಟಿ ವಿಚಾರ. ಇದು ಕೂಡ ಎಲ್ಲಾ ಭಾಗದಲ್ಲಿ ಇದೆ. ಈಗಾಗಲೇ ಸುಮಾರು 30-35 ತಾಲ್ಲೂಕುಗಳಲ್ಲಿ ಸ್ಕೇರ್ಸಿಟಿ ಡಿಕ್ಲೇರ್ ಮಾಡಿದ್ದೇವೆ. ಡಿಕ್ಲೇರ್ ಎಂದರೆ ಸ್ಕೇರ್ಸಿಟಿ ಇದೆ ಎಂಬ ಅಸೆಸ್‌ಮೆಂಟ್ ತೆಗೆದುಕೊಂಡಿದ್ದೇವೆ. ಅದರಲ್ಲಿ ವಿಶೇಷವಾಗಿ ಬೀದರ್, ಗುಲ್ಬರ್ಗಾದ ಕೆಲವು ಭಾಗ, ಬಿಜಾಪುರ, ಬಳ್ಳಾರಿ ಮತ್ತು ರಾಯಚೂರು ಇವೇ ಕೆಲವು ಭಾಗಗಳು ಬರಗಾಲಕ್ಕೆ ತುತ್ತಾಗಿವೆ. ಅಲ್ಲಿಯೂ ಕೂಡ ಸಾಕಷ್ಟು ಹಣ ಬಿಡುಗಡೆ ಮಾಡುತ್ತಿದ್ದೇವೆ. ಅದರಲ್ಲಿ ವಿಶೇಷವಾದ ಕೆಲಸಗಳಿಗೆ ಹೆಚ್ಚಿನ ಮಹತ್ವ ಅಂದರೆ ಕುಡಿಯುವ ನೀರು ಮತ್ತು ದನಕರುಗಳಿಗೆ ಮೇವು. ಎಲ್ಲಿ ದನಗಳಿಗೆ ಮೇವು ಬೇಕು ಅದಕ್ಕೆ ಸಂಪೂರ್ಣ ವ್ಯವಸ್ಥೆ ಮಾಡಿ ಎಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಕುಡಿಯುವ ನೀರಿನ ವ್ಯವಸ್ಥೆ ಎಲ್ಲಿ ಮಾಡಬೇಕು ಅಲ್ಲಿ ಟ್ರಾನ್ಸ್‌ಪೋರ್ಟ್ ಆದರೂ ಮಾಡಿ ನೀರು ಕೊಡಿ ಎಂದು ಅವರಿಗೆ

ಆದೇಶ ಕೊಟ್ಟಿದ್ದೇವೆ. ಒಂದು ಕಡೆ ಬೋರ್‌ವೆಲ್ ಹಾಕಿ ನೀರು ಬರಲಿಲ್ಲವೆಂದರೆ ಪಕ್ಕದ ಹಳ್ಳಿಯಿಂದಲಾದರೂ ಟ್ರಾನ್ಸ್‌ಪೋರ್ಟ್‌ಮಾಡಿ ಜನರಿಗೆ ನೀರಿನ ವ್ಯವಸ್ಥೆ ಮಾಡಬೇಕೆಂಬ ಆದೇಶ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾಗಿ ಇದರ ಬಗ್ಗೆ ಅಧಿಕಾರ ಕೊಟ್ಟು ಹಣ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ಆ ಭಾಗದಲ್ಲಿ ಯಾವ ತೊಂದರೆಯೂ ಇಲ್ಲ. ಸರ್ಕಾರ ಅದಕ್ಕೆ ಸಾಕಷ್ಟು ಹಣ ಕೊಡುವುದಕ್ಕೆ ಸಿದ್ಧವಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಮಸ್ಯಾತ್ಮಕ ಹಳ್ಳಿಗಳನ್ನು ಸ್ಕೇರ್ಸಿಟಿ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತೆಗೆದುಕೊಳ್ಳೋಣ. ಈ ರೀತಿ ಸ್ಕೇರ್ಸಿಟಿ, ಫ್ಲಡ್ ಎಂದು ವಿವಿಧ ಶಾಖೆಗಳಿವೆ. ಇವೆಲ್ಲದರಲ್ಲಿ ಸರ್ಕಾರ ಸಾಕಷ್ಟು ಆಸಕ್ತಿ ವಹಿಸಿದೆ. ಇದಲ್ಲದೆ ಏನು ಈ ಸದನದಲ್ಲಿ ಹೋದ ಸಾರಿ ಮಾತು ಕೊಟ್ಟಿದ್ದೇನೆ, ಅದರಲ್ಲಿ ಏನೇನು ಕೆಲಸ ಮಾಡಿದ್ದೇವೆಂದು ಪ್ರಿಂಟ್ ಮಾಡಿ ಎಲ್ಲಾ ಮಾನ್ಯ ಸದಸ್ಯರಿಗೆ ಕಳುಹಿಸಿದ್ದೇನೆ. ಅಂದರೆ ಒಂದು ವರ್ಷದಲ್ಲಿ ನಮ್ಮ ಸರ್ಕಾರ, ಶ್ರೀಮಾನ್ ಬಂಗಾರಪ್ಪನವರು ಅಧಿಕಾರ ವಹಿಸಿಕೊಂಡಮೇಲೆ ಮತ್ತು ನಾನು ರೆವಿನ್ಯೂ ಇಲಾಖೆ ವಹಿಸಿಕೊಂಡಮೇಲೆ ಯಾವ ಯಾವ ಕೆಲಸಗಳನ್ನು ನಾವು ಮಾಡಿದ್ದೇವೆ, ಯಾವ ಯಾವ ತಿದ್ದುಪಡಿಯನ್ನು ನಾವು ತಂದಿದ್ದೇವೆ, ನಮ್ಮ ಗುರಿ ಏನಿತ್ತು ಅದೆಲ್ಲವನ್ನೂ ಕೂಡ ಸಮಗ್ರವಾಗಿ ಪ್ರಿಂಟ್ ಮಾಡಿ ಮಾನ್ಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದ್ದೇವೆ. ಅದಲ್ಲದೆ ಮೈಕ್ರೋ ಫಿಲಮಿಂಗ್, ಕಂಪ್ಯೂಟರೈಸೇಷನ್ ಆಫ್ ಲ್ಯಾಂಡ್ ರೆಕಾರ್ಡ್ಸ್, ಆಮೇಲೆ ಸರ್ವೆ ಸೆಟ್ಲ್‌ಮೆಂಟ್‌ನಲ್ಲಿ ವೇಕೆನ್ಸೀಸ್ ಫಿಲಪ್ ಮಾಡತಕ್ಕುದ್ದು, ಲ್ಯಾಂಗ್ ಗ್ರಾಂಟ್‌ನಲ್ಲಿ ಕನ್‌ವರ್ಷನ್ ಫೀಸ್ ಎಗ್ಸೆಂಪ್ಟ್ ಮಾಡತಕ್ಕದ್ದು ಹೊಸದಾಗಿ ಏನು ಮಾಡಿದ್ದೇವೆ ಅದೂ ಕೂಡ ಪಟ್ಟಿಯನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಬಹುಶಃ ಇದರಿಂದ ತಮಗೆ ತೃಪ್ತಿಯಾಗಿರಬಹುದು ಮತ್ತು ಈ ಒಂದು ಬೇಡಿಕೆಗೆ ಸಂಪೂರ್ಣವಾಗಿ ಬೆಂಬಲಿಸುತ್ತೀರಿ ಎಂದು ನಾನು ನಿರೀಕ್ಷೆ ಮಾಡಿಕೊಂಡು ಈಗ ರೂರಲ್ ಡೆವಲಪ್ಮೆಂಟ್ ಮೇಲೆ ಎರಡು ಮಾತನ್ನು ಹೇಳುತ್ತೇನೆ. ಅದೂ ಕೂಡ ಒಂದು ಮಹತ್ವವಾದ ಇಲಾಖೆ ಇದೆ, ಅದಕ್ಕಿಂತ ಮುಂಚೆ ಕೆಲವು ಸದಸ್ಯರು ಕೆಲವು ಪಾಯಿಂಟ್ಸ್ ಇಲ್ಲಿ ಹೇಳಿದ್ದಾರೆ. ಒಂದು ಮಾತನ್ನು ಹೇಳುವುದನ್ನು ಮರೆತೆ. ಡ್ರಾಟ್‌ಪ್ರೋನ್ ತಾಲ್ಲೂಕುಗಳು ಏನಿವೆ ಅಂಥ ಕಡೆ ಒಂದು ವಿಶೇಷವಾದ ಬೋರ್ಡ್ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದವರು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರತ ಸರ್ಕಾರದ ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್ ಒಂದು ಪ್ರಾವಿಷನ್ ಮಾಡಿದ್ದಾರೆ. For re-establishment of Disaster Management Cell, This is a type of Multi Disciplinary Disaster Management Cell Committee. ಅದನ್ನು ರಾಜ್ಯ ಸರ್ಕಾರ ಕೂಡ ಮಾಡಬೇಕೆಂದು ಈಗಾಗಲೇ ಅವರು ಹೇಳಿದ್ದಾರೆ. ಅದೇನಿದೆ ಎಂಬ ಬಗ್ಗೆ ನಿರ್ದಿಷ್ಟವಾದ ಆದೇಶಗಳು ಬಂದಮೇಲೆ ಅದರ ಬಗ್ಗೆ ಕೂಡ ನಾವು ವಿಚಾರ ಮಾಡತಕ್ಕ ಅವಶ್ಯಕತೆ ಇದೆ. ರೂರಲ್ ಡೆವಲಪ್ಮೆಂಟ್ ಮತ್ತು ಪಂಚಾಯತ್‌ರಾಜ್ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್ : ತಾವು ಆಶ್ರಯದಲ್ಲಿ 20 ಕೋಟಿ ರೂಪಾಯಿಗಳನ್ನು ಹೌಸಿಂಗ್ ಬೋರ್ಡಿಗೆ ಕೊಟ್ಟಿದ್ದೇವೆ, ಅವರೇ ಮನೆಗಳನ್ನು ಕಟ್ಟುತ್ತಾರೆ ಎಂದು ಹೇಳುತ್ತೀರಿ. ಒಂದು ಮನೆಗೆ 15 ಸಾವಿರ ರೂಪಾಯಿ ಕಾಸ್ಟ್ ಎಂದು ತಾವು ನಿಗದಿ ಮಾಡಿದ್ದೀರಿ. ಕಾಂಟ್ರಾಕ್ಟ್ ಕೊಟ್ಟರೆ ಅದರ

ಕಾಸ್ಟ್ 15 ಸಾವಿರಕ್ಕಿಂತ ಕಡಿಮೆ ಆದಹಾಗೆ ಆಗುತ್ತದೆ. ಏಕೆಂದರೆ ಅದನ್ನು ಪುನರ್‌ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಾವು ಅದನ್ನು ಸ್ಥಿರೀಕರಿಸತಕ್ಕ ಮಾರ್ಗ ಇದೆ. ಕನಿಷ್ಠ ಎರಡು ಸಾವಿರ ರೂಪಾಯಿ ಕಾಂಟ್ರಾಕ್ಟರ್‌ಗೆ ಉಳಿಯುತ್ತದೆ ಎಂದರೆ 15 ಸಾವಿರ ರೂಪಾಯಿಗಳಿಗೆ ಮನೆ ಆಗುವುದಿಲ್ಲ. 13 ಸಾವಿರ ರೂಪಾಯಿ ಆಗುತ್ತದೆ ಬೆನಿಫಿಷರೀಸ್‌ಗೆ. ಆದರ ಕಾಸ್ಟ್ 15 ಸಾವಿರ ರೂಪಾಯಿ ಇರುವಾಗ ನೀವು ಅದನ್ನು ಕಾಂಟ್ರಾಕ್ಟ್ ಕೊಟ್ಟರೆ ಅದರಲ್ಲಿ 2 ಸಾವಿರ ರೂಪಾಯಿ ಲಾಭ ಉಳಿಯುತ್ತದೆ. ಅಥವಾ 1 ಸಾವಿರ ಅಂದರೆ 14 ಸಾವಿರ ರೂಪಾಯಿ ಆಗುತ್ತದೆ. 3 ಸಾವಿರ ರೂಪಾಯಿ ಎಂದರೆ 12 ಸಾವಿರ ರೂಪಾಯಿ ಆಯಿತು. ಹೀಗಾದರೆ ತಾವು ಬಯಸಿದಷ್ಟು ಗುಣಮಟ್ಟ ಎಲ್ಲಿರುತ್ತದೆ? ಕ್ವಾಲಿಟಿ ಕಂಟ್ರೋಲ್ ಪ್ರಕಾರ ಏನು ಸ್ಪೆಸಿಫಿಕೇಷನ್ ಮಾಡಿದ್ದೀರಿ ಅದನ್ನು ದೃಢೀಕರಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಈಗ ಒಂದು ವೇಳೆ ಇಲ್ಲ ಎಂದರೆ ಅದನ್ನು ಪುನರ್‌ಪರಿಶೀಲನೆ ಮಾಡುವ ವಿಚಾರ ಮಾಡುತ್ತೀರೋ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಹೌಸಿಂಗ್ ಬೋರ್ಡಿನವರು ಬೇರೆ ಬೇರೆ ಏಜೆನ್ಸಿ ಮುಖಾಂತರ ಎಸ್ಟಿಮೇಟ್ಸ್ ಮಾಡಿಸಿದ್ದಾರೆ. ಆಶ್ರಯ ಯೋಜನೆ ಕೆಳಗೆ ಆ ಮನೆ ಕಟ್ಟಿಸಿಕೊಡಬೇಕೆಂದು ಇದ್ದೇವೆ. ಟೋಟಲ್ ಎಸ್ಟಿಮೇಟ್‌ನಲ್ಲಿ ಸೂಪರ್‌ವಿಷನ್ ಚಾರ್ಜಸ್ ಸೇರೇ ಇದೆ. 15 ಸಾವಿರ ರೂಪಾಯಿ ಏತಕ್ಕೆ ಒಪ್ಪಿದ್ದೇವೆ ಎಂದರೆ ಬೇರೆಯವರಿಂದ ಕಟ್ಟಿಸುವುದಕ್ಕಿಂತ ಹೌಸಿಂಗ್ ಬೋರ್ಡ್ ಗೌರ್ನಮೆಂಟ್ ಏಜೆನ್ಸಿ ಆಗಿದ್ದು ಅದರ ಮುಖಾಂತರ ಕಟ್ಟಿಸಿದರೆ ಎಲ್ಲಾ ಕಡೆ ಬೇಗನೆ ಆಗುತ್ತದೆ ಎಂಬ ದೃಷ್ಟಿಯಿಂದ.

ಶ್ರೀ ಕೆ.ಎಚ್. ರಂಗನಾಥ್ : ನನ್ನ ಅಭಿಪ್ರಾಯ ಅದಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಗೊತ್ತಾಯಿತು. ಮಾರ್ಜಿನ್ ಇಟ್ಟುಕೊಂಡೇ ಎಸ್ಟಿಮೇಟ್ ಮಾಡಿಕೊಂಡಿರುತ್ತಾರೆ. ಒಂದು ಪ್ರಾಜೆಕ್ಟ್ ಮಾಡುತ್ತಾರೆ. ಆಗ ಕಂಟ್ರಾಕ್ಟರ್ ಮಾರ್ಜಿನ್ ಸೇರೇ 15 ಲಕ್ಷ 20 ಲಕ್ಷ ಇರುತ್ತದೆ.

ಶ್ರೀ ಕೆ.ಎಚ್. ರಂಗನಾಥ್ : ಬೆನಿಫಿಷರೀಸ್‌ಗೆ ನಿಮ್ಮ ಸ್ಪೆಸಿಫಿಕೇಷನ್ ಪ್ರಕಾರ ಏನು ಗುಣಮಟ್ಟ ಇರಬೇಕು ಎಂದು ಇದೆ ಅದನ್ನು ದೃಢೀಕರಿಸುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಹೇಗೆ? 15 ಸಾವಿರ ರೂಪಾಯಿಗಳು ಎನ್ನುವುದನ್ನು ಜನರಿಗೆ ಹೇಳಿದಹಾಗೆ ಆಗುತ್ತದೆ. ಅವರು ಕಟ್ಟುವಾಗ ಅದು 11 ಸಾವಿರ ಬರಬಹುದು, ಇಲ್ಲವೇ 10 ಸಾವಿರವೇ ಬಂದು 5 ಸಾವಿರ ರೂಪಾಯಿ ಅವರಿಗೆ ಲಾಭವಾಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್‌ನಲ್ಲಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಇರುತ್ತಾರೆ, ಸೂಪರಿಂಟೆಂಡಿಂಗ್ ಎಂಜಿನಿಯರ್ ಇರುತ್ತಾರೆ, ಮುಖ್ಯ ಎಂಜಿನಿಯರ್ ಇರುತ್ತಾರೆ. ಎಲ್ಲಾ ಕೆಲಸ ಅವರಿಗೆ ಗೊತ್ತಿರುತ್ತದೆ. ಯಾವುದೇ ಒಂದು ಕೆಲಸ ಮಾಡಬೇಕಾದರೆ ಎಸ್ಟಿಮೇಟ್ ಇರುತ್ತದೆ, ಸೂಪರ್‌ವಿಷನ್ ಛಾರ್ಜಸ್ ಇರುತ್ತದೆ, ಲಾಭ ಕೂಡ 1 ಸಾವಿರ ಇರಬಹುದು ಅಥವಾ 500 ರೂಪಾಯಿ ಇರಬಹುದು. ಇದೆಲ್ಲಾ ಸೇರಿಸಿ 15 ಸಾವಿರ ಎಂದು ಮಾಡಿದ್ದೇವೆ. ಈ 15 ಸಾವಿರದಲ್ಲಿ ಕಟ್ಟಿಸತಕ್ಕ ಮನೆಗಳನ್ನು ಇವರಿಗೆ ಏಕೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಎಂದರೆ ಕೇವಲ ನಮ್ಮ ನಾರ್ಮ್ಸ್ ಪ್ರಕಾರ 1200 ರೂಪಾಯಿ ಕೊಟ್ಟರೆ ಅವರಿಗೆ ಏನೂ ಆಗುವುದಿಲ್ಲ. ಕನಿಷ್ಟಪಕ್ಷ ಬಡವರಿಗೆ ಇಂತಹ ಒಂದು ಹೌಸಿಂಗ್ ಬೋರ್ಡ್ ಮುಖಾಂತರ ಮನೆ ಕಟ್ಟಿಸಿ ಇವರಿಗೆ ಒಳ್ಳೆಯ ಮನೆಗಳು ಸಿಗಲಿ ಎನ್ನುವ ದೃಷ್ಟಿಯಿಂದ ಈ

ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಕ್ವಾಲಿಟಿ ಕಂಟ್ರೋಲ್ ಎಲ್ಲವನ್ನೂ ಹೌಸಿಂಗ್ ಬೋರ್ಡ್‌ನವರು ನೋಡುತ್ತಾರೆ. ಎನ್ನುವ ದೃಷ್ಟಿಯಿಂದ ಆ ಕೆಲಸವನ್ನು ಅವರಿಗೆ ಒಪ್ಪಿಸಿದ್ದೇವೆ. ಅವರು ಸಂಪೂರ್ಣವಾದ ನಿಯಂತ್ರಣವನ್ನು ಇಟ್ಟುಕೊಂಡು ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡುತ್ತಾರೆನ್ನುವ ನಂಬಿಕೆ ನನಗಿದೆ. ಇನ್ನು ಮುಖ್ಯವಾಗಿ ಇರತಕ್ಕ ಎರಡನೇ ಬೇಡಿಕೆ ಎಂದರೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಶ್ರೀ ಡಿ.ಎ. ಚಿನ್ನಪ್ಪ : ಕಂದಾಯ ಇಲಾಖೆ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತೇನೆ.

ಉಪಾಧ್ಯಕ್ಷರು : ಎರಡೂ ದೊಡ್ಡ ಇಲಾಖೆಗಳಾಗಿರುವುದರಿಂದ ಒಂದು ಇಲಾಖೆ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕೆಂಬುದು ಸದಸ್ಯರ ಅಭಿಪ್ರಾಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಪಂಚಾಯತ್ ರಾಜ್ ಬಗ್ಗೆ ಮುಗಿಸಿ ಬಿಡುತ್ತೇನೆ. ಪಂಚಾಯಿತ್ ರಾಜ್ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಸದನ ಪ್ರಾರಂಭವಾದಾಗಿನಿಂದಲೂ ಅನೇಕ ಸಲ ಈ ಸದನದಲ್ಲಿ ಇದರ ಬಗ್ಗೆ ಒಂದಲ್ಲ ಒಂದು ರೀತಿಯಲ್ಲಿ ಚರ್ಚೆಗೆ ಬಂದಿವೆ. ಇದರಲ್ಲಿ ವಿಶೇಷವಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಗಳು ಯಾವಾಗ ಆಗುತ್ತವೆ ಮತ್ತು ಎಂತಹ ಕಾನೂನು ಪ್ರಕಾರ ಮಾಡಬೇಕು ಎನ್ನತಕ್ಕ ಬಗ್ಗೆ ಅನೇಕ ರೀತಿಯ ಊಹಾಪೋಹಗಳು ಇವೆ. ಈಗಾಗಲೇ ನಾನು ಇದರ ಬಗ್ಗೆ ಹೇಳಿದ್ದೇನೆ ಅಧ್ಯಕ್ಷರೇ. ಈ ಒಂದು ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಗಳ ಒಂದು ಹೊಸ ಬಿಲ್ಲನ್ನು ತಂದು ಈ 1991ರ ಸೆನ್ಸಸ್ ಪ್ರಕಾರ ಕಾನ್‌ಸ್ಟಿಟ್ಯೂಯೆನ್ಸಿಗಳ ಡೀ ಲಿಮಿಟೇಷನ್ ಮಾಡಿ ಮತ್ತು ಅದರಲ್ಲಿ ಕೆಲವು ರಿಸರ್ವೇಷನ್ ಬಗ್ಗೆ ಮತ್ತು ಈವನ್ ಎಸ್‌ಸಿ. ಎಸ್‌ಟಿ. ಗಳಿಗೆ ರಿಸರ್ವೇಷನ್, ಛೇರ್ಮನ್‌ಶಿಪ್‌ಗೆ ರಿಸರ್ವೇಷನ್ ಕೊಡುವ ಬಗ್ಗೆ ಮತ್ತು ಮಂಡಲಗಳನ್ನು ಚಿಕ್ಕದು ಮಾಡತಕ್ಕ ಬಗ್ಗೆ, ಜಿಲ್ಲಾಪರಿಷತ್ತುಗಳ ಕಾನ್‌ಸ್ಟಿಟ್ಯೂಯೆನ್ಸಿಯನ್ನು ಚಿಕ್ಕದು ಮಾಡತಕ್ಕ ಬಗ್ಗೆ. ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಸರ್ಕಾರ ಕೂಡ ಈ ದಿಕ್ಕಿನಲ್ಲಿ ಇವತ್ತು ಯೋಚನೆ ಮಾಡುತ್ತಾ ಇದೆ. ಡೀಲಿಮಿಟೇಷನ್ ಹೋದಸಲ ಮಾಡಿದ್ದು ಅದರಲ್ಲಿ ಅನೇಕ ಕೆಲವು ತೊಂದರೆಗಳು ಇವೆ ಎಂಬುದು ನಮ್ಮ ಜನರಿಗೆ ಬಂದಿದೆ. ಈಗ ಒಂದು ಹಳ್ಳಿ ಒಂದು ಕಡೆ ಇದ್ದರೆ ಇನ್ನೊಂದು ಕಡೆ ಅಲ್ಲಿಂದ ಮಂಡಲ ಹೆಡ್‌ಕ್ವಾರ್ಟರ್ಸ್‌ಗೆ 15, 16, 18 ಕಿಲೋಮೀಟರ್ ದೂರದಲ್ಲಿ ಇರುವುದನ್ನು ಸೇರಿಸಿದ್ದಾರೆ. ಇವೆಲ್ಲಾ ವಿಚಾರವನ್ನು ಕೂಡ ಗಮನದಲ್ಲಿ ಇಟ್ಟುಕೊಂಡು ನಾವು ಇವತ್ತು ಒಂದು ಹೊಸ ಬಿಲ್ಲನ್ನು ತಂದು, ಆ ಒಂದು ಬಿಲ್ಲಿನ ಮುಖಾಂತರ ಹೊಸ ಚುನಾವಣೆಗೆ ಆದಷ್ಟು ಬೇಗನೇ ಮಾಡಿಸಬೇಕೆಂಬುದೇ ಸರ್ಕಾರದ ಒಂದು ತೀರ್ಮಾನ ಇದೆ. ಏಕೆಂದರೆ ಚುನಾವಣೆ ಮಾಡದೇ ಬರೀ ಅಡ್ಮಿನಿಸ್ಟ್ರೇಟರ್ಸ್ ಹಾಕಿಕೊಂಡು ಮುಂದುವರಿಸಿಕೊಂಡು ಹೋಗಬೇಕೆಂದು ಅಲ್ಲ. ಏಕೆಂದರೆ ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟಿದ್ದೇವೆ. ಅದರಲ್ಲೂ ಕೂಡ ಡೀಸೆಂಟ್ರಲೈಸೇಷನ್ ಆಫ್ ಪವರ್ ಆಗಬೇಕು, ಹಳ್ಳಿ ಹಳ್ಳಿಗೆ ಅಧಿಕಾರದ ವಿಕೇಂದ್ರೀಕರಣ ಆಗಬೇಕೆನ್ನುವ ಒಂದು ದೃಢ ನಂಬಿಕೆಯಿಂದಲೇ ನಾವೂ ಕೂಡ ಈ ಕೆಲಸ ಮಾಡುತ್ತಿದ್ದೇವೆ. ಆದರೆ ಆ 72ನೇ ತಿದ್ದುಪಡಿ ಬಂದಮೇಲೆ ನಮ್ಮ ಮುಂದಿರತಕ್ಕ ನಮ್ಮ ಐದು ವರ್ಷಗಳ ಅನುಭವದ ಆಧಾರದ ಮೇಲೆ ನಾವು ಕೆಲವೊಂದು ತಿದ್ದುಪಡಿಯನ್ನು ಸಲಹೆ ಮಾಡುತ್ತಿದ್ದೇವೆ. ಅದೆಲ್ಲವನ್ನು ಕ್ರೋಢೀಕರಿಸಿ ಒಂದು ಕಡೆ ಸೇರಿಸಿ ಆಮೇಲೆ ಚುನಾವಣೆಗೆ ಹೋಗತಕ್ಕದ್ದು ಸೂಕ್ತ. ಅಲ್ಲಿಯವರೆಗೆ ಈಗ ಅಡ್ಮಿನಿಸ್ಟ್ರೇಟರ್‌ಗಳನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ಗಳಲ್ಲಿ ಹಾಕಿದ್ದೇವೆ. ಬೇರೆ ಯಾವ ಉದ್ದೇಶದಿಂದ ಆ ರೀತಿ ಮಾಡಿಲ್ಲ. ಅಡ್ಮಿನಿಸ್ಟ್ರೇಟರ್‌ನ್ನು ಕಂಟಿನ್ಯೂ ಮಾಡಬೇಕೆನ್ನುವ ಉದ್ದೇಶ ಈ ಸರ್ಕಾರಕ್ಕೆ ಇಲ್ಲ. ಕೇವಲ

ತಾತ್ಪೂರ್ವಕವಾಗಿ ಒಂದು ಅರೇಂಜ್‌ಮೆಂಟ್ಸ್ ಮಾಡಿದ್ದೇವೆ. ಆದಷ್ಟು ಬೇಗ ನಾವು ಚುನಾವಣೆ ಮಾಡಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಗ್ರಾಮೀಣಾಭಿವೃದ್ಧಿ ಕೆಲಸ ಬಹಳ ಮುಖ್ಯ. ಅದರಲ್ಲಿ ವಿಶೇಷವಾಗಿ ಹಳ್ಳಿಗಳಲ್ಲಿ ವಾಸ ಮಾಡತಕ್ಕವರು 75 ಪರ್ಸೆಂಟ್ ಜನ ಇದ್ದಾರೆ. ಈ 75 ಪರ್ಸೆಂಟ್ ಜನರ ಬಗ್ಗೆ ಚಿಂತನೆ ಮಾಡತಕ್ಕದ್ದು ಬಹಳ ಅತ್ಯವಶ್ಯ. ಅವರ ಅಭಿವೃದ್ಧಿಯನ್ನು ಮಾಡುವಾಗ ಯಾವ್ಯಾವ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು ಯಾವ್ಯಾವ ಕಾರ್ಯಕ್ರಮಗಳಿಂದ ಈ ಹಳ್ಳಿಯ ಬಡವರ ರೈತರ ಅಭಿವೃದ್ಧಿಯಾಗುತ್ತದೆ ಎನ್ನತಕ್ಕದ್ದನ್ನು ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಈಗಾಗಲೇ ಹೇಳಿದ್ದೇನೆ, ಇದೆಲ್ಲವೂ ಆಗಬೇಕೆಂದರೆ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟದಲ್ಲಿ ನಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಕೊಡಬೇಕಾಗುತ್ತದೆ. ತಮಗೆಲ್ಲರಿಗೂ ಗೊತ್ತಿದೆ ಹಿಂದಕ್ಕೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಬರುವುದಕ್ಕೆ ಮುಂದೆ ವಿಲೇಜ್ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಇತ್ತು. ಇದಕ್ಕಿಂತ ಡೀಸೆಂಟ್ರಲೈಸೇಷನ್ ಆಫ್ ಪವರ್ ಮೊದಲು ಇತ್ತು. ತಾಲ್ಲೂಕು ಮತ್ತು ವಿಲೇಜ್ ಲೆವೆಲ್‌ನಲ್ಲಿತ್ತು. ಇವರು ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳನ್ನು ಮಾಡಿದಾಗ ಅಧಿಕಾರ ಇನ್ನು ಕೇಂದ್ರೀಕರಣವಾಯಿತೇ ಹೊರತಾಗಿ ವಿಕೇಂಧ್ರೀಕರಣವಾಗಲಿಲ್ಲ. ಇದೆಲ್ಲವನ್ನು ನೋಡಿಕೊಂಡು ಯಾವರೀತಿ ಮಾಡಬೇಕೆಂದು ಯೋಚಿಸಿ ಅದಕ್ಕಾಗಿ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕೆನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ದಿಸೆಯಲ್ಲಿ ಈ ದಿಕ್ಕಿನಲ್ಲಿ ಹೋಗುತ್ತಿದ್ದೇವೆ. ಇವತ್ತು ಸರ್ಕಾರ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆ. ಕೆಲವು ಕಡೆ ನಮಗೇನು ಆಪಾದನೆಗಳು ಬಂದಿದೆ ಅಂದರೆ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲ ಅಭಿವೃದ್ಧಿ ಕೆಲಸಗಳಿಗೆ ಸಹಾಯ ಮಾಡಲಿಲ್ಲ. ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳು ಸ್ಥಗಿತಗೊಂಡಿವೆ ಎನ್ನುವ ಕೂಗನ್ನು ಅವರು ಹೊರಗಡೆ ಹೇಳುತ್ತಿದ್ದಾರೆ. ಅವರು ಇಲ್ಲಿದ್ದರೆ ಹೇಳುತ್ತಿದ್ದರೆಂದು ಕಾಣಿಸುತ್ತಿದೆ. ವಿರೋಧಪಕ್ಷದವರನ್ನು ಹೃತ್ಪೂರ್ವಕವಾಗಿ ಎಷ್ಟೋ ರಿಕ್ವೆಸ್ಟ್ ಮಾಡಿದ್ದೇವೆ. ಅವರು ಬರಲಿಲ್ಲ. ಮುಖ್ಯಮಂತ್ರಿಗಳು ರಿಕ್ವೆಸ್ಟ್ ಮಾಡಿದ್ದಾರೆ, ನಾವು ಮಾಡಿದ್ದೇವೆ, ತಾವು ಮಾಡಿದ್ದೀರಿ ಅವರು ಸದನಕ್ಕೆ ಬರಲಿಲ್ಲ, ಬಂದಿದ್ದರೆ ಚೆನ್ನಾಗಿತ್ತು. ಇವತ್ತು ಸಾಕಷ್ಟು ಹಣವನ್ನು ಪ್ರತಿಯೊಂದು ಪ್ಲಾನ್‌ನಲ್ಲಿ ಮತ್ತು ನಾನ್‌ಪ್ಲಾನ್‌ನಲ್ಲಿ ಮತ್ತು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್‌ಗಳಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಯಾವ ಹಣವನ್ನು ಸಹ ನಿಲ್ಲಿಸಿಲ್ಲ. ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ಸುಮಾರು 60ಕೋಟಿ ರೂಪಾಯಿ ಹಣವಿತ್ತು. ಅದರಲ್ಲಿ ಈಗಾಗಲೇ 40 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಕೇವಲ 15-16 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕಾಗಿದೆ. ಈ ಹಣವನ್ನು ಕೂಡ ಬಹುಬೇಗನೆ ಬಿಡುಗಡೆ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಜವಹರ ರೋಜ್‌ಗಾರ್ ಯೋಜನೆಯಲ್ಲಿ 68 ಪರ್ಸೆಂಟ್ ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ. ಇದು ಕೇಂದ್ರ ಸರ್ಕಾರದಿಂದ ಬರತಕ್ಕ ಹಣ, ಹಣ ಬಂದ ಹಾಗೆ ನೇರವಾಗಿ ಬಿಡುಗಡೆಯಾಗುತ್ತದೆ. ಇದರಲ್ಲಿ ಯಾವ ತಾಪತ್ರಯವೂ ಇಲ್ಲ. ಈ ತಿಂಗಳು ಉಳಿದಂತಹ ಹಣವನ್ನು ಅದು ಎಷ್ಟು ಬರುತ್ತದೆ ಅಷ್ಟು ಹಣವನ್ನು ನಾವು ಬಿಡುಗಡೆ ಮಾಡುತ್ತೇವೆ. ಇನ್ನು 30 ಪರ್ಸೆಂಟ್ ಹಣವನ್ನು ನಾವು ಬಿಡುಗಡೆ ಮಾಡುತ್ತೇವೆ. ತದ ನಂತರ ಮಿಲಿಯನ್ ವೆಲ್ಸ್ ಪ್ರೋಗ್ರಾಮ್‌ನಲ್ಲಿ ಅದರಲ್ಲಿ ಸ್ವಲ್ಪ ಕುಂಠಿತವಾಗಿದೆ. ಕೇವಲ 50 ಪರ್ಸೆಂಟ್ ಮಾತ್ರ ಎಕ್ಸ್‌ಪೆಂಡೀಚರ್ ಆಗಿದೆ. ಉಳಿದಂತಹ 50 ಪರ್ಸೆಂಟ್ ಹಣವನ್ನು ಬಿಡುಗಡೆ ಮಾಡಲಿಕ್ಕೆ ಅದನ್ನು ಖರ್ಚುಮಾಡಲಿಕ್ಕೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಈ ಕೆಲಸ ಅನೇಕ ಜಿಲ್ಲೆಗಳಲ್ಲಿ ಬಹಳ ಸ್ಲೋ ಇದೆ. ಈ ಪ್ರೋಗ್ರಾಮ್ ಹಳ್ಳಿಯಲ್ಲಿರತಕ್ಕ ದೀನದಲಿತರ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ

ಲಾಭವಾಗತಕ್ಕ ಕಾರ್ಯಕ್ರಮವಿದೆ. ಇದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸತಕ್ಕ ಅವಶ್ಯಕತೆಯಿದೆ. ಇನ್ನೊಂದು ಕಾರ್ಯಕ್ರಮ ಇಂದಿರಾ ಆವಾಸ್ ಯೋಜನೆ. ಇದರ ಕೆಳಗಡೆಯೂ ಕೂಡ 6 ಕೋಟಿ 91 ಲಕ್ಷ ಅಲೋಕೇಶನ್ ಇದ್ದರೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವುದು 6 ಕೋಟಿ 78 ಲಕ್ಷ ರೂಪಾಯಿಗಳು. ಇದರಲ್ಲಿಯೂ ಕೂಡ ಈ ಏಜೆನ್ಸಿ ಬಗ್ಗೆ ಹೆಚ್ಚು ಕಡಿಮೆ ಸ್ವಲ್ಪ ವ್ಯತ್ಯಾಸ ಆದ ಕಾರಣ ಬಹಳ ಮಂದಗತಿಯಿಂದ ನಡೆದಿದೆ. ಈಗಾಗಲೇ ಅಧಿಕಾರಿಗಳಿಗೆ ನಾನು ಹೇಳಿದ್ದೇನೆ. ಒಟ್ಟು ಒಂದು ಕೋಟಿ 20 ಲಕ್ಷ ರೂಪಾಯಿ ಖರ್ಚಾಗಿದೆ. ಆದರೆ ಉಳಿದಿರುವಂಥ ಹಣವನ್ನು ಬೇಗನೆ ನಾವು ಖರ್ಚು ಮಾಡುತ್ತೇವೆ ಮತ್ತು ಕೆಲಸ ಮುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅದಕ್ಕಾಗಿ ಈ ಕೆಲಸದ ಕಡೆ ನಾವು ಹೆಚ್ಚಿನ ಗಮನವನ್ನು ಇತ್ತೀಚಿನ ದಿವಸ ಕೊಡುತ್ತಿದ್ದೇವೆ. ತಮಗೆ ಗೊತ್ತಿದ್ದಂತೆ ಕೆಲವು ಕಡೆ ಖರ್ಚು ಮಾಡಿದ್ದಾರೆ. ಆದರೆ ಹಣ ಬಿಡುಗಡೆಯಾಗಿಲ್ಲ. ಇಂದಿರಾ ಆವಾಸ್ ಯೋಜನೆಯಲ್ಲಿ ಮನೆಗಳನ್ನು ಕೆಲವು ಕಡೆ ಕಟ್ಟಿಸಿಕೊಂಡಿದ್ದಾರೆ. ಆದರೆ ಫೈನಲ್ ಬಿಲ್ ಕೊಟ್ಟಿಲ್ಲ. ಅದಕ್ಕಾಗಿ ಈಗ ಬಿಡುಗಡೆ ಮಾಡಿದ್ದಾರೆ. ಇದನ್ನು ಖರ್ಚು ಮಾಡತಕ್ಕಂಥ ವ್ಯವಸ್ಥೆಯನ್ನು ನಾನು ಮಾಡಿಸುತ್ತೇನೆ.

ಎರಡನೆಯದ್ದು, ಈ ಡಿ.ಪಿ.ಎ.ಪಿ. ಯೋಜನೆಯಲ್ಲಿ total amount released 936 lakhs and total funds available 11.60 and total expenditure 7.28 ಅಂದರೆ ಇದರಲ್ಲಿ ಸುಮಾರು 65 ಪರ್ಸೆಂಟ್ ಖರ್ಚಾಗಿದೆ. ಉಳಿದಿರುವಂಥ ಹಣ, ಇದು ನನ್ನಲ್ಲಿ ಇರತಕ್ಕ ಅಂಕಿಗಳು ಇದು ಬಹುಶಃ ಜನವರಿ ಕೊನೆಯವರೆಗೆ ಇದೆ. ಉಳಿದದ್ದು ಕೂಡ ಖರ್ಚಾಗತಕ್ಕಂಥ ಲಕ್ಷಣ ಇದೆ. ಆದಾದಮೇಲೆ ವೆಸ್ಟರ್ನ್ ಘಾಟ್ಸ್ ಪ್ರೋಗ್ರಾಮ್ಸ್ ಕೂಡ ಸುಮಾರು 60 ಪರ್ಸೆಂಟ್ ಹಣ ಖರ್ಚಾಗಿದೆ. ಅದಕ್ಕೆ ಅಲೋಕೇಶನ್ ಆದದ್ದು 817 ಲಕ್ಷ ಮತ್ತು ಖರ್ಚಾದದ್ದು ಇಲ್ಲಿಯವರೆಗೆ 500 ಲಕ್ಷ. ಇದೂ ಕೂಡ ಹೆಚ್ಚು ಕಡಿಮೆ 60 ಪರ್ಸೆಂಟ್‌ವರೆಗೆ ಬರುತ್ತದೆ. ಈ ವೆಸ್ಟರ್ನ್ ಘಾಟ್ಸ್ ಪ್ರೋಗ್ರಾಮ್ಸ್‌ಗೆ ಉಳಿದಂಥ ಹಣ ಖರ್ಚುಮಾಡುತ್ತಾರೆ. ಇದು ಜವಾಹರ್ ರೋಜ್‌ಗಾರ್ ಯೋಜನೆಯ ಕೆಳಗೆ ತೆಗೆದುಕೊಂಡಂಥ ಕೆಲಸ. ಈಗ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರಲ್ಲಿ ಶ್ರೀ ಶಿವರಾಮೇಗೌಡರು, ಶ್ರೀ ನಾರಾಯಣ್ ಅವರು ಮತ್ತು ಶ್ರೀ ವೆಂಕಟಪ್ಪನವರು ಅನೇಕ ಮಾನ್ಯ ಮಿತ್ರರು ಕೂಡ ಮಾತನಾಡಿದ್ದಾರೆ. ಇದರಲ್ಲಿ ಇವತ್ತು ಪ್ರಾಬ್ಲಮೇಟಿಕ್ ವಿಲೇಜಸ್ ಎಂದರೆ ಇಡೀ ರಾಜ್ಯದಲ್ಲಿ ಕೇವಲ 159 ಮಾತ್ರ ಇವೆ. ಸುಮಾರು 52 ಗ್ರಾಮಗಳಲ್ಲಿ ಈಗ ನಮ್ಮ ಹತ್ತಿರ ಇರತಕ್ಕಂಥ ಅಂಕಿಸಂಖ್ಯೆಗಳು ಇದರ ಆಧಾರದಮೇಲೆ, ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿದ್ದರ ಮೇಲೆ,

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಾಬ್ಲಮ್ಯಾಟಿಕ್ ಎಂದರೆ ಇಲ್ಲಿಯವರೆಗೆ ಯಾವುದೇ ರೀತಿಯಿಂದಲೂ ವ್ಯವಸ್ಥೆ ಮಾಡುವುದಕ್ಕೆ ಆಗದೇ ಇರುವುದು. ತಮ್ಮ ಹಳ್ಳಿಯೇ ಇರಬಹುದು. ಯಾವುದೇ ಒಂದು ಹಳ್ಳಿಯಲ್ಲಿ, ಈ ಬೋರ್‌ವೆಲ್ ಇಲ್ಲವೆಂದು ಒಂದಾದರೂ ಹಳ್ಳಿ ಇದೆಯೆ? ಅದು ಬತ್ತಿಹೋಗಿರಬಹುದು. ಆದರೆ ಸರ್ಕಾರದ ವತಿಯಿಂದ ವ್ಯವಸ್ಥೆ ಆಗಿಲ್ಲವೆಂದು ಇಲ್ಲ. ಇಂತಹ ಯಾವುದೇ ವ್ಯವಸ್ಥೆ ಇಲ್ಲದ 159 ಹಳ್ಳಿಗಳಲ್ಲಿ ದ.ಕ. ಜಿಲ್ಲೆ 146, ತುಮಕೂರು 4, ಕೊಡಗು 2.....

ಶ್ರೀಮತಿ ಮೋಟಮ್ಮ : ನನ್ನ ತಾಲ್ಲೂಕಿನಲ್ಲಿ ಜಾಸ್ತಿ ಇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನಾಲ್ಕು ಪ್ರಾಬ್ಲಮೇಟಿಕ್ ವಿಲೇಜಸ್ ಇವೆ. ನನ್ನ ಜಿಲ್ಲೆಯಲ್ಲೇ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಇಂತಹ ಗ್ರಾಮಗಳಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಾಬ್ಲಮ್ಯಾಟಿಕ್ ಬೇರೆ. ಇವು ಸೋಫಾರ್ ಅನ್‌ಕವರ್ಡ್. ಅಲ್ಲಿ ಯಾವ ರೀತಿಯ ವ್ಯವಸ್ಥೆಯೂ ಇಲ್ಲ. ಈಗ ನಿಮ್ಮಲ್ಲಿ ಬೋರ್‌ವೆಲ್ ಇರಬಹುದು. ಅದು ಫೇಲ್ ಆಗಿರಬಹುದು. ನಿಮ್ಮಲ್ಲಿ ಒಂದು ಮಿನಿ ವಾಟರ್ ಸಪ್ಲೈ ಇರಬಹುದು. ಅದು ಮೇಂಟನೆನ್ಸ್‌ನಲ್ಲಿ ಇರಬಹುದು. ಯಾವುದೇ ಒಂದು ರೀತಿಯ ವ್ಯವಸ್ಥೆ ಇದ್ದರೂ ಕೂಡ ಇನ್‌ಸಫಿಶಿಯಂಟ್ ಇರಬಹುದು. ಇದು ನಾನು ಹೇಳತಕ್ಕದ್ದು, ಆ ಹಳ್ಳಿಗಳಿಗೆ ಯಾವುದೂ ರೀಚ್ ಆಗದೇ ಇರತಕ್ಕಂಥಾದ್ದು. ಐದು-ಹತ್ತು ಮನೆಗಳು ಇರತಕ್ಕಂಥ ಹಳ್ಳಿಗಳು. ಕೆಲವು ಕಡೆ 50 ಮನೆಗಳು ಇರತಕ್ಕಂಥ ಹಳ್ಳಿಗಳು ಇರಬಹುದು. ಯಾವುದೇ ರೀತಿಯಿಂದ ವ್ಯವಸ್ಥೆ ಮಾಡುವುದಕ್ಕೆ ಎಲ್ಲಿ ಸಾಧ್ಯವಿಲ್ಲವೋ ಅಂತಹ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳು.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಅಂಕಿಅಂಶಗಳನ್ನು ಯಾರೂ ಒಪ್ಪುವುದಿಲ್ಲ, ಮರು ಪರಿಶೀಲನೆ ಮಾಡಿ.

ಡಾ. ವೈ. ನಾಗಪ್ಪ : ಹೊಸದಾಗಿ ಬೋರ್‌ವೆಲ್‌ಗಳನ್ನು ಹಾಕುವುದು ಇರಲಿ, ಜಿಲ್ಲಾ ಪರಿಷತ್ತಿನಿಂದ ಹಾಕಿರತಕ್ಕ ಬೋರ್‌ವೆಲ್‌ಗಳು ಸಾಕಷ್ಟು ಕೆಟ್ಟು ಹೋಗಿವೆ, ಅವುಗಳನ್ನು ರಿಪೇರಿ ಮಾಡುವುದಕ್ಕಾಗಿಲ್ಲ.

ಶ್ರೀ ಯು.ಕೆ. ಶಾಮಣ್ಣ : ನನ್ನ ಕ್ಷೇತ್ರದಲ್ಲಿರತಕ್ಕ ಸಮಸ್ಯಾತ್ಮಕ ಹಳ್ಳಿಗಳ ಹೆಸರು, ತಮ್ಮ ಲಿಸ್ಟ್‌ನಲ್ಲಿ ಇಲ್ಲ, ಅದನ್ನು ಯಾರು ಸರ್ವೆ ಮಾಡಿದ್ದಾರೆ, ಏನು ಎನ್ನುವ ಮಾಹಿತಿ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ, ಹಾಲಿ ಇರತಕ್ಕ ಮಾಹಿತಿಯನ್ನು ಇಟ್ಟಿದ್ದೇನೆ. ಅಂಥಾದ್ದು ಏನಾದರೂ ಇದ್ದರೆ, ಪುನಃ ಸಂಬಂಧಪಟ್ಟ ಚೀಫ್ ಇಂಜಿನಿಯರ್ ಜೊತೆಯಲ್ಲಿ ಮಾತನಾಡಿ ಅಥವಾ ಅಡ್ಮಿನಿಸ್ಟ್ರೇಟರ್ಸ್ ಸಲಹೆ ತೆಗೆದುಕೊಂಡು ಮಾಹಿತಿಯನ್ನು ಒದಗಿಸಿಕೊಡುತ್ತೇನೆ. ಆದರೆ, ಈಗ ಇರತಕ್ಕಂಥಾದ್ದು ಸತ್ಯ ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ನಮ್ಮ ಹತ್ತಿರ ರೆಕಾರ್ಡ್ಸ್ ಇದೆ. ಅದರ ಪ್ರಕಾರ ಹೇಳುತ್ತಿದ್ದೇನೆ. ಹಾಗೆ ಏನಾದರೂ ಬಿಟ್ಟುಹೋಗಿದ್ದರೆ..........

ಶ್ರೀ ಜಿ.ಎಸ್. ಶಿವನಂಜಪ್ಪ : ಗುಬ್ಬಿ ತಾಲ್ಲೂಕಿನಲ್ಲ 60 ಹಳ್ಳಿಗಳಿವೆ ಎಂದು ಈ ಸದನದಲ್ಲಿ ತಾವೇ ಉತ್ತರ ಕೊಟ್ಟಿದ್ದೀರಿ. ನಾನು ಹೋದವರ್ಷ ಕೇಳಿದ ಪ್ರಶ್ನೆಗೆ, ಸಮಸ್ಯಾತ್ಮಕ ಹಳ್ಳಿಗಳು 60 ಇವೆಯೆಂದು ಹೇಳಿದ್ದೀರಿ. ಒಂದು ಬೋರ್‌ವೆಲ್ ಕೂಡ ಹಾಕದೇ ಇರತಕ್ಕ ಹಳ್ಳಿಗಳೂ ಇವೆ ಎಂದು ಹೇಳಿದ್ದೀರಿ. ಆದರೆ, ಈಗ ಮಾತ್ರ ಗುಬ್ಬಿ ತಾಲ್ಲೂಕಿನದು ಒಂದೂ ಬರಲೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಡೀ ರಾಜ್ಯದಲ್ಲಿ ಪಿ.ಹೆಚ್.ಇ. ಡಿಪಾರ್ಟ್‌ಮೆಂಟ್‌ನವರು ಇದರ ಬಗ್ಗೆ ವಿವರವಾಗಿ ಸರ್ವೆ ಮಾಡುತ್ತಿದ್ದಾರೆ. ಅವರಿಂದ ಬೇಗನೆ ರಿಪೋರ್ಟ್ ಬರುತ್ತದೆ, ಆ ರಿಪೋರ್ಟ್ ಬಂದಮೇಲೆ ನಿಜವಾದ ಪರಿಸ್ಥಿತಿ ಗೊತ್ತಾಗುತ್ತದೆ. ಬೇಕಾದರೆ ಪುನಃ ಸದನದ ಮುಂದೆ ಅದನ್ನು ತಿಳಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಬೋರ್‌ವೆಲ್ ಹಾಕಿದರೂ ನೀರು ಬರದೇ ಇರತಕ್ಕಂಥ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳೆಂದು ಹೇಳಿದಿರಿ, ಇಂತಹ ಹಳ್ಳಿಗಳ ಸಂಖ್ಯೆ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಹಳ್ಳಿಗಳು ಬಂದ, ಬಂದಹಾಗೆ ನಾವು ನಿವಾರಣೆ ಮಾಡುತ್ತೇವೆ. ಈ ತಿಂಗಳು ನೂರು ಇರಬಹುದು, ಮುಂದಿನ ತಿಂಗಳಲ್ಲಿ ಇನ್ನೂರು ಆಗಬಹುದು. ಬೇಸಿಗೆ ಬಂದಹಾಗೆ ಸಮಸ್ಯೆ ಹೆಚ್ಚಿ, ಇವು ಜಾಸ್ತಿಯಾಗುತ್ತವೆ. ಇನ್ನು ಐ.ಆರ್.ಡಿ.ಪಿ. ಯಲ್ಲಿ ಕೊಟ್ಟಂಥ ಹಣದಲ್ಲಿ ಸುಮಾರು 60 ಪರ್ಸೆಂಟ್ ಹಣ ಈಗಾಗಲೇ ಖರ್ಚಾಗಿದೆ. ಮತ್ತು ಈ ಕೆಲಸ ನಿಧಾನ ಏಕೆ ಆಗಿದೆ ಎಂದರೆ, ಕೆಲವು ಕಡೆ ಬ್ಯಾಂಕ್‌ಗಳವರು ಕೋ ಆಪರೇಟ್ ಮಾಡುತ್ತಾ ಇಲ್ಲ. ಈ ಬ್ಯಾಂಕುಗಳವರು ಕೋ ಆಪರೇಟ್ ಮಾಡಬೇಕೆಂಬ ದೃಷ್ಟಿಯಿಂದ, ನಾವು ಈಗಾಗಲೇ ಅವರೆಲ್ಲರ ಸಭೆ ಮಾಡಿ, ನೀವು ಇದಕ್ಕೆ ಸಪೋರ್ಟ್ ಮಾಡಬೇಕು, ಸಹಾಯ ಮಾಡಬೇಕೆಂದು ಹೇಳಿದ್ದೇವೆ. ಏಕೆಂದರೆ, ಇದು ಬಡವರಿಗಾಗಿ ನೇರವಾಗಿ ಸಹಾಯ ಮಾಡತಕ್ಕ ಯೋಜನೆ ಇರುವುದರಿಂದ. ಇಂತಹ ಸ್ಕೀಮುಗಳ ಕಡೆ ಗಮನಹರಿಸತಕ್ಕಂಥಾದ್ದು ಮತ್ತು ಬಹಳ ತೀವ್ರಗತಿಯಿಂದ ಬೆಂಬಲ ಕೊಡತಕ್ಕ ಅವಶ್ಯಕತೆ ಇದೆ. ನಾವು ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಿಗೂ ಕೂಡ ಪತ್ರವನ್ನು ಬರೆಯುತ್ತಿದ್ದೇವೆ. ಏಕೆಂದರೆ, ಅನೇಕ ಕಡೆ ನಾವು ಬ್ಯಾಂಕರ್ಸ್ ಸಭೆ ಕರೆದಾಗ ಅವರು ಬರುವುದೇ ಇಲ್ಲ. ಬಂದರೆ, ಯಾರಾದರೂ ಕೆಳಗಿನ ಅಧಿಕಾರಿಗಳು ಬರುತ್ತಾರೆ, ಅವರು ಇದರ ಬಗ್ಗೆ ರಿಕವರಿ ಆಗಿಲ್ಲ ಅದಾಗಿಲ್ಲ, ಇದಾಗಿಲ್ಲವೆಂದು ಹೇಳಿ, ತಪ್ಪಿಸಿಕೊಂಡು ಹೋಗತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಈ ಒಂದು ಕಾರ್ಯಕ್ರಮವನ್ನು ಪುನಃ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ ಮತ್ತು ಹೆಚ್ಚಿನ ರೀತಿಯಲ್ಲಿ ಗಮನವನ್ನು ಆ ಕಡೆ ಮಾಡಬೇಕಾಗಿದೆ, ತಕ್ಷಣ ನಾನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕರಿಯಣ್ಣ : ಐ.ಆರ್.ಡಿ.ಪಿ. ನಲ್ಲೇ ಹೆಚ್ಚಿನ ಸಾಲ ಸಿಕ್ಕುವುದು. ಬ್ಯಾಂಕುಗಳವರು ಸಹಕಾರ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ, ದುಡ್ಡನ್ನು ತೆಗೆದುಕೊಂಡು ಹೋಗಿ ಬ್ಯಾಂಕುಗಳಲ್ಲಿ ಇಡುತ್ತೀರಿ, ಅವರು ಬಡ್ಡಿ ದುಡಿದುಕೊಳ್ಳುತ್ತಾರೆ. ತಾವು ಇದನ್ನು ಎಕ್ಸಿಕ್ಯೂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕಾಗಿಯೇ ನಾವು ಕೇಂದ್ರ ಹಣಕಾಸಿನ ಸಚಿವರಿಗೂ ಪತ್ರ ಬರೆಯುತ್ತಿದ್ದೇವೆ. ನಾವು ಇಟ್ಟಂಥ ಹಣವನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಎಂದು ಸೂಚನೆ ಕೊಡಬೇಕಾಗುತ್ತದೆ. ಆ ರೀತಿಯಾದ ವರ್ತನೆ ಮಾಡಬೇಕಾಗುತ್ತದೆ. ಇದರಲ್ಲಿ ಒಟ್ಟು 1991-92ರಲ್ಲಿ ಈ ಇಲಾಖೆಗೆ ಪ್ಲಾನ್ ಮತ್ತು ನಾನ್‌ಪ್ಲಾನ್‌ನಲ್ಲಿ ಕೊಟ್ಟಂಥ ಹಣ, 1,556 ಕೋಟಿ ರೂಪಾಯಿಗಳು ಮತ್ತು 1992-93ರಲ್ಲಿ ... ಮತ್ತು 92-93 ನಾವು ಪ್ರೊವಾಯ್ಡ್ ಮಾಡಿದ್ದುದು 1642 ಕೋಟಿ ರೂಪಾಯಿಗಳು. ಇದರಲ್ಲಿ ರೂರಲ್ ಹೌಸಿಂಗ್ ಮೊದಲು ಜಿಲ್ಲಾ ಪರಿಷತ್‌ಗೆ ಇತ್ತು, ಅದನ್ನು ಇವತ್ತಿನದಿವಸ ಹೌಸಿಂಗ್ ಮಿನಿಸ್ಟ್ರಿಗೆ ಸೇರಿಸಿದ್ದಾರೆ. ಅದು ಹೌಸಿಂಗ್ ಮಿನಿಸ್ಟ್ರಿಗೆ ಹೋದ ಮೇಲೆ ಸ್ವಲ್ಪ ಅಲೋಕೇಷನ್ ಕಡಿಮೆಯಾದರೂ ಓವರ್ ಆಲ್ ನಾವು ನೋಡಿದಾಗ ಇನ್ನೂ ಹೆಚ್ಚಿನ ಅಲೋಕೇಷನ್ ಇದರಲ್ಲಿ ಆಗಿದೆ. ಅದರಲ್ಲಿ ಸ್ಟೇಟ್ ಪ್ಲಾನ್ ಔಟ್‌ಲೇ ಸುಮಾರು 400 ಕೋಟಿ, ಈ ವರ್ಷ ಹೆಚ್ಚು ಬಂದಿದೆ. ಈ ರೀತಿಯಾಗಿ ಅನೇಕ ಯೋಜನೆಗಳು ಇವತ್ತಿನ ದಿವಸ ಬೇರೆ ಬೇರೆ ಇಲಾಖೆಯವರು ಹಾಕಿಕೊಂಡಿದ್ದಾರೆ. ಏತಕ್ಕೆಂದರೆ ಜಿಲ್ಲಾ ಪರಿಷತ್‌ನಲ್ಲಿ ಎಲ್ಲಾ ಇಲಾಖೆಗಳು ಬರುತ್ತದೆ. ಅವರವರ ಇಲಾಖೆಗಳು ಬಂದಾಗ ಅವರು ಹೇಳುತ್ತಾರೆ. ವೆಟರ್‌ನರಿ, ಹೆಲ್ತ್, ಹೈಸ್ಕೂಲ್ ಆಗಲೀ ಇವರ ಬಗ್ಗೆ ಸವಿಸ್ತಾರವಾದ ಮಾಹಿತಿ ಕೊಡುತ್ತಾರೆ. ನನ್ನ ಹತ್ತಿರ ಇರತಕ್ಕಂಥ ಅಂಕಿ ಅಂಶಗಳ ಪ್ರಕಾರ ಏನು ಜಿಲ್ಲಾ ಪರಿಷತ್‌ಗಳು ಇದುವರೆಗೆ ಕೆಲಸ ಮಾಡಿದೆ ಮತ್ತು ಕೆಲವು ಜಿಲ್ಲಾ ಪರಿಷತ್‌ನಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಅದೂ ಕೂಡ ನಮ್ಮ ಗಮನಕ್ಕೆ ಬಂದಿದೆ, ಅದನ್ನು ಕೂಡ

ಎನ್‌ಕ್ವೈರಿ ಮಾಡಿಸಿ ಎಲ್ಲೆಲ್ಲಿ ಇಂತಹ ಒಂದು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಅಥವಾ ಅವರು ಸರಕಾರದ ಹಣವನ್ನು ಬೇರೆ ರೀತಿಯಿಂದ ಉಪಯೋಗ ಮಾಡಿರುತ್ತಾರೆ ಅದನ್ನೂ ಕೂಡ ಎನ್‌ಕ್ವೈರಿ ಮಾಡಿಸುತ್ತೇನೆ ಎಂಬ ಮಾತನ್ನು ಹೇಳಿ, ಇವತ್ತು ಒಟ್ಟು 81 ಪರ್ಸೆಂಟ್ ಹಣ ಈಗಾಗಲೇ ಖರ್ಚು ಮಾಡಲಾಗಿದೆ. ಬಹಳಷ್ಟು ಹಣ ಖರ್ಚಾಗಿಲ್ಲ ಎಂದು ಹೇಳಿ ಕೆಲವು ಜನ ಏನು ಆಪಾದನೆ ಮಾಡಿದ್ದಾರೆ ಅದು ಸತ್ಯಕ್ಕೆ ದೂರವಾದುದು, ಇಷ್ಟು ಹಣ ಖರ್ಚು ಮಾಡಿದಮೇಲೆ ಉಳಿದಂಥದ್ದು 20 ಪರ್ಸೆಂಟ್ ಇರುತ್ತದೆ, ಮೋರ್ ಆರ್ ಲೆಸ್ ಈ ಮಂತ್ ಎಂಡ್‌ನಲ್ಲಿ ನಾವು ಖರ್ಚು ಮಾಡಬಹುದು ಮತ್ತು ಕೆಲವು ಹಣವನ್ನು ನಾವು ಇದರಿಂದ ನ್ಯಾಚುರಲ್ ಕೆಲಾಮಿಟಿ ಫಂಡ್‌ಗೆ ಎಂದರೆ ಈ ರೀತಿಯ ಕೆಲಸಗಳಿಗೆ ತೆಗೆದುಕೊಂಡಿರುತ್ತೇವೆ. ಅದೂ ಕೂಡ ಹಳ್ಳಿಯಲ್ಲೇ ಕೆಲಸ ಮಾಡತಕ್ಕಂಥಾದ್ದು ಅದಕ್ಕಾಗಿ ಈ ಒಂದು ಹಣವನ್ನೂ ಕೂಡ ಹಳ್ಳಿಗೇ ಕೊಡತಕ್ಕಂಥಾದ್ದು, ಜಿಲ್ಲಾ ಪರಿಷತ್ ಕೊಡತಕ್ಕಂಥಾದ್ದು ಅಥವಾ ಮಂಡಲ್ ಪಂಚಾಯತ್‌ಗೆ ಕೊಡತಕ್ಕಂಥಾದ್ದು ಬೇರೆ ಯಾವ ಕೆಲಸಕ್ಕೆ ಕೂಡ ನಾವು ತೆಗೆದಿಲ್ಲ, ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನ್ನ ಈ ಬೇಡಿಕೆಗೆ ತಾವೆಲ್ಲರೂ ಕೂಡ ಬೆಂಬಲಿಸಬೇಕೆಂದು ಹೇಳಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಒಬ್ಬೊಬ್ಬರಾಗಿ ಕ್ಲಾರಿಫಿಕೇಷನ್ ಕೇಳಿ, ಎಲ್ಲರೂ ಒಟ್ಟಿಗೆ ಎದ್ದರೆ ಹೇಗೆ, ಎಲ್ಲರಿಗೂ ಅವಕಾಶ ಕೊಡೋಣ, ನಾನು ಈ ಕಡೆಯಿಂದ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಮಾತನಾಡಿದವರಿಗೇ ಮತ್ತೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟರೆ ಹೇಗೆ? ಮಾತನಾಡಿದವರಿಗೇ ಏತಕ್ಕೆ ಅವಕಾಶ ಕೊಡುತ್ತೀರಿ? ಒಂದು ಕಡೆಯಿಂದ ಕೊಡಿರಿ, ನಿನ್ನೆ ಮಾತನಾಡಿದವರಿಗೆ ಮಾತನಾಡಲೂ ಅವರಿಗೇ ಅವಕಾಶ ಕೊಟ್ಟು, ಕ್ಲಾರಿಫಿಕೇಷನ್‌ಗೂ ಅವರಿಗೆ ಅವಕಾಶ ಕೊಟ್ಟರೆ ನಾವು ಬಂದಿರುವುದು ಏತಕ್ಕೆ?

(ಗೊಂದಲ)

ಉಪಾಧ್ಯಕ್ಷರು : ಎಲ್ಲರಿಗೂ ಕೊಡೋಣ, ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ ಅವರಿಗೇ ಅವಕಾಶ ಕೊಟ್ಟರೆ ನಾವು ಅವರ ಮುಖ ನೋಡಿಕೊಂಡು ಕುಳಿತುಕೊಳ್ಳಬೇಕೇ?

(ಗೊಂದಲ)

ಉಪಾಧ್ಯಕ್ಷರು : ಶ್ರೀ ಬಿ.ಎಂ. ಇದಿನಬ್ಬ.

ಶ್ರೀ ಡಿ.ಎ. ಚಿನ್ನಪ್ಪ : ಮಾತಾನಾಡಲಿಕ್ಕೂ ಅವರಿಗೇ ಚಾನ್ಸ್, ಕ್ಲಾರಿಫಿಕೇಷನ್‌ಗೂ ಅವರಿಗೇ ಚಾನ್ಸ್, ನಮಗೆ ಚಾನ್ಸ್ ಇಲ್ಲ, ಆಗಲಿಂದ ಕೇಳುತ್ತಿದ್ದೇವೆ.

ಉಪಾಧ್ಯಕ್ಷರು : ಶ್ರೀ ಇದಿನಬ್ಬ, ಒಂದು ಕಡೆಯಿಂದ ಕೇಳಿರಿ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಕ್ಲಾರಿಫಿಕೇಷನ್‌ಗಾದರೂ ಬೇಡವೇ?

ಉಪಾಧ್ಯಕ್ಷರು : ಅವರಲ್ಲ ಅವಕಾಶ ಕೊಡುವುದು, ನಾನು ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಸಿಗದಿದ್ದರೂ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಗ್ರಾಮೀಣ ಅಭಿವೃದ್ಧಿ ವಿಚಾರದಲ್ಲಿ, ಜಿಲ್ಲಾ ಪರಿಷತ್ ಬಂದಮೇಲೆ ಅವರು ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ದುರಸ್ತಿ ಮಾಡಬೇಕಾಗಿತ್ತು. ಯಾವುದನ್ನೂ ಅವರು ಮಾಡಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನೇ ತೆಗೆದುಕೊಂಡರೆ, ನೂರಾರು ಚಿಕ್ಕಚಿಕ್ಕ ರಸ್ತೆಗಳು ಏನಿವೆ ಅವುಗಳನ್ನು ರಿಪೇರಿ ಮಾಡಲಿಲ್ಲ. ದುರಸ್ಥಿ ಮಾಡಲಿಲ್ಲ, ಡಾಂಬರು ಹಾಕಲಿಲ್ಲ, ಅದನ್ನೆಲ್ಲಾ ಮಾಡದಿದ್ದುದರಿಂದ ಹೊಂಡಗಳು ಬಿದ್ದಿದೆ. ಆದುದರಿಂದ ಜಿಲ್ಲಾ ಪರಿಷತ್ ವತಿಯಿಂದ ಈ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಗೆ ವರ್ಗಾಯಿಸಿ ಕೆಲಸ ಮಾಡತಕ್ಕಂಥ ವ್ಯವಸ್ಥೆಯನ್ನು ಕೂಡಲೇ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೀರಾ? ಹಾಗೆ ಮಾಡಿದರೆ ಬಹಳ ಉಪಕಾರವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ತಮಗೆ ಗೊತ್ತಿದೆ, ಹಣ ನಿಂತು ಹೋಗಿದೆ. ಈಗಾಗಲೇ ನಾನು ಹೇಳಿದ್ದೇನೆ, ರೋಡ್ಸ್ ಬ್ರಿಡ್ಜಸ್ ಮೈನರ್ ಇರಿಗೇಷನ್ ಹೆಡ್‌ನಲ್ಲಿ ಏನು ಹಣ ಕೊಡಬೇಕಾಗಿತ್ತು. ಅದನ್ನು ಮೊನ್ನೆ 15 ದಿವಸದ ಹಿಂದೆ 30 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ನಿನ್ನೆ ಕೂಡ ಸುಮಾರು ಎಂಟೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿರುತ್ತೇವೆ. ಅದಕ್ಕೆ ಬಹುಶಃ ಎಲ್ಲಾದರೂ ಈ ಕೆಲಸ ಪ್ರಾರಂಭವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

12.00 ಪಿ.ಎಂ.

ಶ್ರೀ ಕೆ.ಎಚ್. ಹನುಮೇಗೌಡ : ಮಾನ್ಯ ಅಧ್ಯಕ್ಷಣೀಯರೇ ಕಳೆದ ಸಾರಿ ಅಧಿವೇಶನದಲ್ಲಿ ಮಾತನಾಡುವಾಗ ಮಾನ್ಯ ರೆವಿನ್ಯೂ ಮಂತ್ರಿಗಳ ಗಮನ ಸೆಳೆದಿದ್ದೆ. ಅದೇನೆಂದರೆ ಯಾರು ಹೆಚ್ಚು ಮಳೆಯಿಂದ ಮನೆ ಕಳೆದುಕೊಂಡಿದ್ದರು ಯಾರ್ಯಾರ ಪೈರು ಹೋಗಿತ್ತು ಎಲ್ಲಿ ಸರ್ವನಾಶವಾಗಿತ್ತು ಅವರಿಗೆ ಪರಿಹಾರ ಹೇಗೆ ಕೊಟ್ಟರು? ಆಗ 200 ರೂಪಾಯಿಗಳು ಕೊಡುವ ಕಡೆ ಇನ್ನು 100 ರೂಪಾಯಿಗಳು ಸೇರಿಸಿ ಜಾಸ್ತಿ ಮಾಡಿ 300 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಆಗ ನಾನು ಹೇಳಿದ್ದೆ 8 ರೂಪಾಯಿಗಳಿಗೆ 6 ರೂಪಾಯಿಗಳಿಗೆ ಚೆಕ್ ಕೊಟ್ಟಿದ್ದಾರೆಂದು. ಈಗ ಒಂದು ಎಕರೆಯಲ್ಲಿ ಆಲೂಗಡ್ಡೆ ಬೆಳೆಯುವುದಕ್ಕೆ 2 ಸಾವಿರ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಅದೇ ರೇಷ್ಮೆಗೆ 1 ಎಕರೆಯಲ್ಲಿ ಚೆನ್ನಾಗಿ ಬೆಳೆದರೆ ಇದೇ ರೇಟ್ ಇದ್ದರೆ 20-30 ಸಾವಿರ ರೂಪಾಯಿಗಳಾಗುತ್ತದೆ. ಅಂತಹವರಿಗೆ ತಾವು 5 ರೂಪಾಯಿ 10 ರೂಪಾಯಿ ಕೊಡುವುದರಿಂದ ಅದು ನ್ಯಾಯ ಅಲ್ಲ ಧರ್ಮ ಅಲ್ಲ ಯಾರು ಈ ದೇಶಕ್ಕೆ ಅನ್ನ ಕೊಡುತ್ತಾರೆ ಟ್ಯಾಕ್ಸ್ ಕೊಡುತ್ತಾರೆ ಅಂತಹ ಜನಗಳನ್ನು ನಾವು ಭಿಕ್ಷುಕರನ್ನಾಗಿ ಕಾಣಬಾರದು ಎಂದು ನಾನು ಹೇಳಿದಾಗ ಸ್ವಲ್ಪಮಟ್ಟಿಗೆ ಅವರಿಗೂ ನನಗೂ ವಾದವಿವಾದ ನಡೆಯಿತು ಅದನ್ನು ನಾನು ಅವರಿಗೆ ನೆನಪು ಮಾಡುತ್ತಿದ್ದೇನೆ. ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ, ಎಷ್ಟು ನಷ್ಟವಾಗಿದೆ ಅಷ್ಟು ಪರಿಹಾರವನ್ನು ನ್ಯಾಯವಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ಕಳೆದ ಅಧಿವೇಶನದಲ್ಲಿ ಕೊಟ್ಟಿದ್ದೀರಿ. ಆ ಭರವಸೆ ಈಗ ಯಾವ ಹಂತದಲ್ಲಿದೆ. ಇನ್ನು ಎರಡನೆಯದಾಗಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ದುಡ್ಡು ಕೊಟ್ಟು ನೋಡಿದಿರಿ. ಆ ದುಡ್ಡಿನಿಂದ ಕೆರೆ ಮತ್ತು ರಸ್ತೆಗಳ ರಿಪೇರಿಯನ್ನು ಸೊಗಸಾಗಿ ಮಾಡಿದರು. ಮಾನ್ಯ ಅಧ್ಯಕ್ಷರೇ ನಿಮ್ಮ ಕ್ಷೇತ್ರದಲ್ಲಿ ಕೆಲಸ ಹೇಗೆ ಮಾಡಿದ್ದಾರೋ ಗೊತ್ತಿಲ್ಲ. ಆದರೆ ಅವರು ದುಡ್ಡು ಹೇಗೆ ಹೊಡೆಯಬೇಕು, ಮೋಸ ಹೇಗೆ

ಮಾಡಬೇಕು ತಿನ್ನುವುದನ್ನು ಮಾತ್ರ ಚೆನ್ನಾಗಿ ಕಲಿತಿದ್ದಾರೆ. ತಾವೇನಾದರೂ ಆ ಬಗ್ಗೆ ಟ್ರೈನಿಂಗ್ ಕೊಡುವುದಿದ್ದರೆ ಜಿಲ್ಲಾ ಪರಿಷತ್ತ್ ಇಂಜಿನೀಯರ್ಸ್ ಹತ್ತಿರ ಕಳುಹಿಸಬೇಕು ಅಷ್ಟೇ. ಬಹುಶಃ ಲೂಟ್ ಎನ್ನುವ ಪದವನ್ನು ಇಂಗ್ಲೀಷ್‌ನವರು ಕಂಡುಹಿಡಿದರು ಅವರಿಗೂ ಇದು ಗೊತ್ತಿಲ್ಲ. ಆ ಪದದ ಅರ್ಥವನ್ನು ಇವರು ಸಾರ್ಥಕಪಡಿಸಿಕೊಂಡಿದ್ದಾರೆ. ಜಿಲ್ಲಾ ಪರಿಷತ್ತಿನ ಇಂಜಿನೀಯರ್ಸ್‌ನ್ನು ಯಾರೂ ಕೇಳುವವರಿಲ್ಲ ಯಾರು ಹೇಳುವವರಿಲ್ಲ, ಯಾರಾದರೂ ಕೇಳಿದರೆ ಅವರಿಂದ ತಪ್ಪಿಸಿಕೊಳ್ಳುತ್ತಾರೆ. ಚೆಕ್ಕಿಂಗ್‌ಗೆ ಹೋದರೂ ಅವರನ್ನೇ ಸರಿ ಮಾಡಿಕೊಳ್ಳುತ್ತಾರೆ. ಅಲ್ಲಿ ಆಗಿರವ ಅನ್ಯಾಯವನ್ನು ನೋಡಿದರೆ ಸಂಕಟವಾಗುತ್ತದೆ. ಇದು ಬಡಬಗ್ಗರ ದುಡ್ಡು ಬಡವರಿಗೆ ಕೊಡುವಂತಹ ಹಣ ಆ ಹಣವನ್ನು ಹೇಗೆ ನುಂಗಿ ಹಾಕಿದ್ದಾರೆಂದು ನಾನೊಂದು ಉದಾಹರಣೆ ಹೇಳುತ್ತೇನೆ. ನಾನು ಒಂದು ರಸ್ತೆ ಚೆಕ್ಕಿಂಗ್‌ಗೆ ಹೋದೆ, ಅಲ್ಲಿ ಸುಮಾರು 15 ಸಾವಿರ ರೂಪಾಯಿಗಳ ಹಣ ಖರ್ಚುಮಾಡಿದ್ದಾರೆ. ಆ ರಸ್ತೆಗೆ ಜಲ್ಲಿ ಹಾಕಿಲ್ಲ, ಎಲ್ಲಿ ಜಲ್ಲಿ ಹಾಕಿಲ್ಲ ಎಂದು ನಾನು ಕೇಳಿದರೆ ಎಲ್ಲಾ ಹೋಗಿದೆ ಸಾರ್ ಎಂದು ಹೇಳಿದರು. ಎಲ್ಲಿ ಹೋಯಿತು ಗಾಡಿ ಪಾಡಿ ಹೊಡೆದು ಹೋಗಿದೆ ಅಲ್ಲಿದ್ದ ಸಣ್ಣ ಹಳೆಯ ಜಲ್ಲಿಯನ್ನು ತೋರಿಸಿದರು. ಮಣ್ಣು ಹಾಕಿಲ್ಲ. ಒಂದು ಮಂಕ್ರಿ ಮಣ್ಣು ಹಾಕಿಲ್ಲ. ಇಂತಹ ನೂರಾರು ಕೆಲಸಗಳು ಆಗಿವೆ. ಅಲ್ಲಿ ಮಣ್ಣು ಹಾಕಿಲ್ಲ ಸುಡಗಾಡು ಹಾಕಿಲ್ಲ. ಇನ್ನು ನಮ್ಮ ಏರಿಯಾದಲ್ಲಿ ಕೆಲವು ಕೆರೆಗಳನ್ನು ದುಡ್ಡು ಬಂದಾಗಲೆಲ್ಲಾ ರಿಪೇರಿ ಮಾಡುತ್ತಾರೆ. ಪ್ರತಿ ವರ್ಷ ದುಡ್ಡು ಬಂದಾಗಲೆಲ್ಲಾ ರಪೇರಿ ಮಾಡುವುದು. ಯಾವಾಗ ದುಡ್ಡು ಬರುತ್ತದೆಯೋ ಅವಾಗ. ಇವರನ್ನು ಹೇಳುವವರು ಇಲ್ಲ ಕೇಳುವವರು ಇಲ್ಲ. ಪ್ರತಿ ಸಾರಿ ಈ ಕೆರೆ ರಿಪೇರಿ ತೋರಿಸುವುದು. ಸಾವಿರಾರು ಕೋಟಿ ಗಟ್ಟಲೆ ದುಡ್ಡು ಹೊಡೆಯುವುದು. ಇವರನ್ನು ಹೇಳುವವರು ಇಲ್ಲ ಕೇಳುವವರೂ ಇಲ್ಲ. ಹೇಗೆ ಲೂಟ್ ಎನ್ನುವ ಪದವನ್ನು ಅನ್ವರ್ಥಗೊಳಿಸಿಕೊಳ್ಳುತ್ತಿದ್ದಾರೆ ಆ ಜಿಲ್ಲಾ ಪರಿಷತ್ತಿನ ಇಂಜಿನೀಯರುಗಳು. ಇದಕ್ಕೆ ಯಾರ್‍ಯಾರು ಶಾಮೀಲಾಗಿದ್ದಾರೋ ನನಗೆ ಗೊತ್ತಿಲ್ಲ ಇದು ಏನಾಗುತ್ತಿದೆ ಅಂದರೆ ಬಡ ಜನರಿಗೆ ಕೊಡುವಂತಹ ಹಣ ಸಾರ್ಥಕವಾಗಬೇಕಾದರೆ, ದಯಮಾಡಿ ತಾವು ಇದನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿ ಅವರಿಗೆ ಈ ಕೆಲಸ ಕೊಡಿ ಆ ಜಿಲ್ಲಾ ಪರಿಷತ್ತಿನ ಇಂಜನೀಯರುಗಳನ್ನು ಆ ಬ್ರಹ್ಮ ಬಂದರೂ ಸರಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಈ ಇಂಜನೀಯರ್ಸ್ ಪುನಃ ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡಿಸಿಕೊಳ್ಳುತ್ತಾರೆ.

ಶ್ರೀ ಕೆ.ಎಚ್. ಹನುಮೇಗೌಡ : ಅಲ್ಲಿಗೆ ಲೋಕೋಪಯೋಗಿ ಇಲಾಖೆ ಮುಗಿಯಿತು. ಅಲ್ಲಿ ಈಗ ಒಂದು 50-60 ಪರ್ಸೆಂಟ್‌ನಷ್ಟು ಕೆಲಸ ನಡೆಯುತ್ತಿದೆ. ಇವರು ಹೋದರೆ ಕೆರೆ ರಸ್ತೆಗಳ ರಿಪೇರಿ ಮುಗಿಯಿತು. ತಾವು ಕೆರೆ ಮತ್ತು ರಸ್ತೆಗಳ ರಿಪೇರಿ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ಕೊಟ್ಟು ಮಾಡಿಸಬೇಕು. ನಾನು ಮೊದಲೇ ಹೇಳಿದಹಾಗೆ ಪರಿಹಾರ 5-6 ರೂಪಾಯಿಗಳಿಗೆ ಚೆಕ್ ಕೊಡುವುದು, ಅದನ್ನು ತಪ್ಪಿಸಿ ಅಕಸ್ಮಾತ್ ಅದು ಆಗದಿದ್ದರೆ ತಾವು ಗಲಾಟೆ ಮಾಡಿ ಆದರೂ ಬಡವರಿಗೆ 500 ರೂಪಾಯಿ ಕೊಡುವ ಕಡೆ 250 ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯದು. ಅದು ಬಿಟ್ಟು 5 ರೂಪಾಯಿ ಚೆಕ್ ಕೊಡುವುದು ಏತಕ್ಕೆ? ಅದಕ್ಕೆ ನಾನು ಅವರಿಗೆ ಸ್ವಲ್ಪ ಮಾನದಟ್ಟಾಗುವ ರೀತಿಯಲ್ಲಿ ವಿವರವಾಗಿ ಹೇಳುತ್ತಿದ್ದೇನೆ. ಅದನ್ನು ತಾವು ಮಾಡಿಸಬೇಕು ತಾವು ಮಾಡಿಸಿ ನನಗೆ ನೆಕ್ಸ್ಟ್ ರಿಪ್ಲೈ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನಾನು ಹೇಳಿದ್ದೇನೆ.

ಯಾವಾಗ ನನ್ನ ಗಮನಕ್ಕೆ ಬಂತು ಆಗ ನಾನು ಮಿನಿಮಮ್ 100 ರೂಪಾಯಿಗಳನ್ನು ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಅದರ ಪ್ರಕಾರ 100 ರೂಪಾಯಿಗಳನ್ನು ಕೊಡುತ್ತಿದ್ದಾರೆ. 2 ರೂಪಾಯಿ 3 ರೂಪಾಯಿ ಕೊಡುವ ಪ್ರಶ್ನೆಯೇ ಇಲ್ಲ. ಯಾರು ನ್ಯಾಚುರಲ್ ಕ್ಯಲಾಮಿಟೀಸ್‌ನಲ್ಲಿ ತೊಂದರೆಗೆ ಒಳಗಾಗಿರುತ್ತಾರೋ ಅವರಿಗೆ ಆ ಒಂದು ರೂಲ್ಸ್ ಪ್ರಕಾರ ಕೇಂದ್ರ ಸರ್ಕಾರದ ಆದೇಶ ಏನಿದೆ ನಮ್ಮದು ಏನು ಇದೆ ಇವೆರಡನ್ನೂ ಸೇರಿಸಿ ಆ ಆದೇಶದ ಪ್ರಕಾರ ಪರಿಹಾರ ಕೊಡಬೇಕು ಅಂತ ಅದರಲ್ಲಿದೆ. ಆದರೆ ಆಲೂಗಡ್ಡೆಗೆ 20 ಸಾವಿರ ಹೋಗಿರಬಹುದು, ರೇಷ್ಮೆಗೆ 40 ಸಾವಿರ ಹೋಗಿರಬಹುದು, ಅದರ ಇತಿಮಿತಿಯಲ್ಲಿ ಬಾರದೇ ಇದ್ದರೆ ನಾವು ಕೊಡುವುದಕ್ಕಾಗುವುದಿಲ್ಲ. ಆ ಪ್ರಕಾರ ಮತ್ತೆ ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೆವು ಈ ರೀತಿಯಾಗಿ ನಷ್ಟವಾಗುತ್ತದೆ ನಮಗೆ ಸಹಾಯ ಮಾಡಿ ಎಂದು. ಅದಕ್ಕೆ ಅವರು ಇವತ್ತು ಏನು ಕಾನೂನು ಇದೆ ಆ ಕಾನೂನಿನ ಚೌಕಟ್ಟಿನಲ್ಲಿ ಏನು ಬರುತ್ತದೆ ಅಷ್ಟು ಮಾತ್ರ ನಾವು ಕೊಡುತ್ತೇವೆಂದು ಹೇಳಿದರು.

ಶ್ರೀ ಕೆ.ಎಚ್. ಹನುಮೇಗೌಡ : ಅದನ್ನು ಚೇಂಜ್ ಮಾಡುವುದಕ್ಕೆ ಬರುವುದಿಲ್ಲವೇ? ಯಾರೋ ಡೆಲ್ಲಿಯಲ್ಲಿ ಕುಳಿತುಕೊಂಡು ಬರೆದುಬಿಟ್ಟರೆ ಆಯಿತೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಡೆಲ್ಲಿಗೆ ಹೋಗಿ ಹೇಳಿ. ಆಮೇಲೆ ತಮಗೂ ಕೂಡ ಗೊತ್ತಿದೆ ನಾವು ಕೂಡ ಮೆಮೋರಂಡಮ್ ಕೊಟ್ಟಿದ್ದೇವೆ. ಎಲ್ಲಾ ಕೊಟ್ಟಿದ್ದೇವೆ. ಬೇರೆ ರಾಜ್ಯದವರು ಕೂಡ ಕೊಟ್ಟಿದ್ದಾರೆ. ಎಲ್ಲಾ ಕಡೆ ಒಂದೇ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಬೇಕೆಂದು ಬಂದಿದೆ. ಅದೇ ರೀತಿಯಾಗಿ ನಮಗೂ ಪ್ರತಿ ವರ್ಷ ಮಾಡುತ್ತಿದ್ದಾರೆ. ನಾನೇನು ಹೊಸದಾಗಿ ಮಂತ್ರಿಯಾದ ಮೇಲೆ ಸೃಷ್ಟಿ ಮಾಡಿದ್ದುದು ಅಲ್ಲ. ನಾನೇನು ಹೊಸದಾಗಿ ಗೌರ್ನ್‌ಮೆಂಟ್ ಆರ್ಡರ್ ತೆಗೆದಿದ್ದು ಅಲ್ಲ. ನಾನು ಅದರಲ್ಲಿ ವಿಫಲನಾಗಿದ್ದೇನೆ. ಬಹುಶಃ ತಾವು ಶಕ್ತಿ ಇದ್ದರೆ ಹೋಗಿ ಹೇಳಿ ನಾನು ತಮಗೆ ನನ್ನ ಶಕ್ತಿಯನ್ನು ಕೊಡುತ್ತೇನೆ. ಆಮೇಲೆ ಪಿ.ಡಬ್ಲ್ಯೂ.ಡಿ., ಕೆರೆ ಬಗ್ಗೆ ಅವರು ಹೇಳಿದರು. ಈ ಡಿಪಾರ್ಟ್‌ಮೆಂಟ್‌ನಿಂದ ತೆಗೆದು ಅದಕ್ಕೆ ಕೊಟ್ಟರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಅಂಜನಮೂರ್ತಿ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಬಗರ್‌ಹುಕುಂ ಸಾಗುವಳಿ ಜಮೀನು ಬಗ್ಗೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಇದು ಏನಾಗಿದೆ ಎಂದರೆ, ಸಭ್ಯಾಧ್ಯಕ್ಷಣಿಯವರೆ, 19-9-90ರೊಳಗಾಗಿ ಅರ್ಜಿ ಸಲ್ಲಿಸಬೇಕೆಂದು ಲಾಸ್ಟ್ ಡೇಟ್ ಫಿಕ್ಸ್ ಮಾಡಿದರು. ಇದರಲ್ಲಿ ವಿಲೇಜ್ ಅಕೌಂಟೆಂಟ್‌ಗಳ ಅಕ್ರಮ ಅವ್ಯವಹಾರ ನಡೆದಿದೆ. ಯಾವ ರೀತಿ ಎಂದರೆ, ಅವರು ಯಾವ ರೀತಿಯಲ್ಲೂ ಪ್ರಚುರಪಡಿಸಿಲ್ಲ. ಒಳಗೇ, ಅರ್ಜಿ ಹಾಕಬೇಕೆಂದು ಯಾರೂ ದುಡ್ಡು ಕೊಟ್ಟಿದ್ದಾರೋ ಅಂಥವರಿಗೆ ಅರ್ಜಿ ಸ್ವೀಕಾರ ಮಾಡಿ ತಹಶೀಲ್ದಾರ್ ಆಫೀಸ್‌ಗೆ ಕೊಟ್ಟಿದ್ದಾರೆ. ನಾನು ಕಂದಾಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಡೇಟನ್ನು ಸ್ವಲ್ಪ ಎಕ್ಸ್‌ಟೆಂಡ್ ಮಾಡಬೇಕು. ಬಡವರಿಗೆ, ಉಳಮೆ ಮಾಡುವವರಿಗೆ ಸಹಾಯ ಮಾಡಬೇಕು ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅದನ್ನು ಸ್ವಲ್ಪ ಎಕ್ಸ್‌ಟೆಂಡ್ ಮಾಡಿದರೆ ಅನ್‌ಡ್ಯೂ ಅಡ್ವಾಂಟೇಜ್ ಬೇರೆಯವರು ತೆಗೆದುಕೊಳ್ಳಬಹುದು. ಆದ್ದರಿಂದ, ಅಂಥ ಯಾರು ತೀರಾ ಬಡವರು ಇದ್ದು ಕಾನೂನು ಪ್ರಕಾರ ಅವರಿಗೆ ರೆಗ್ಯುಲರೈಸ್ ಮಾಡಬೇಕಾಗಿದ್ದು ಅವರು ಅಪ್ಲಿಕೇಷನ್ ಹಾಕಿಲ್ಲವೆಂದರೆ ಅವರಿಗೆ ಬೇರೆ ರೀತಿಯಾಗಿ, ಯಾವ ರೀತಿಯಾಗಿ ಸಹಾಯ ಮಾಡಬೇಕೆಂದು ನಾನು ಪರಿಶೀಲನೆ ಮಾಡುತ್ತೇನೆ. ಈಗ ಡೇಟ್ ಎಕ್ಸ್‌ಟೆಂಡ್ ಮಾಡಿದರೆ ಅನೇಕ ಜನ ಈಗಾಗಲೇ, ನಾವು

ಎಕ್ಸ್‌ಪೆಕ್ಟ್ ಮಾಡಿದ್ದುದು ಏನೆಂದರೆ, 10 ಲಕ್ಷ ಎಕರೆ ಎನ್‌ಕ್ರೋಚ್ ಇದೆಯೆಂದು ತಿಳಿದುಕೊಂಡಿದ್ದೆವು. 3 ಲಕ್ಷ, ಮೂರುವರೆ ಲಕ್ಷ ಮಾತ್ರ ಕಲ್ಟಿವೇಟರ್ಸ್ ಇದ್ದಾರೆಂದು. ಆದರೆ ಅಪ್ಲಿಕೇಷನ್ 10 ಲಕ್ಷದಷ್ಟು ಜನ ಹಾಕಿದ್ದಾರೆ. ಎಂದರೆ ಟೆನ್‌ನ್ನಿಗಿಂಥಾ ಜಾಸ್ತಿ ಆಗಿಬಿಟ್ಟಿದೆ. ಅದಕ್ಕೆ ಫ್ಲಡ್ ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ. ಅವರಿಗೆ ಬೇರೆ ರೀತಿಯಿಂದ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ, ಬೇಕಾದರೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗೆ ಅವರು ಬರುತ್ತಿದ್ದಾರೆಂದರೆ ರೆಗ್ಯುಲರೈಸ್ ಮಾಡತಕ್ಕಂಥಾದ್ದು ಅಥವಾ ಗ್ರ್ಯಾಂಟ್ ಮಾಡತಕ್ಕಂಥಾದ್ದಕ್ಕೆ ಬೇರೆ ರೀತಿಯಿಂದ ಅದಕ್ಕೆ ನೋಡೋಣ.

ಶ್ರೀ ಶಫಿ ಅಹಮದ್ : ಮಾನ್ಯ ಸಭಾಧ್ಯಕ್ಷಣಿಯವರೆ, ಮಾನ್ಯ ಸಚಿವರಲ್ಲಿ ಹೇಳುವುದೇನೆಂದರೆ, ತುಮಕೂರು ಜಿಲ್ಲೆಯ ಬೋರ್‌ವೆಲ್‌ಗಳ ಬಗ್ಗೆ ಕೈ ಬಿಟ್ಟಿದ್ದಾರೆಂದು ನನಗನಿಸುತ್ತದೆ. ತುಮಕೂರು ಜಿಲ್ಲೆ ಅತ್ಯಂಥ ಕ್ಷಾಮಕ್ಕೆ ತುತ್ತಾಗಿರುವುದರಿಂದ ಆದ್ಯತೆ ಮೇಲೆ ರೀ-ಸರ್ವೇಮಾಡಿಸಿ ಒಂದು ಕ್ಷೇತ್ರಕ್ಕೆ ನೂರು, ನೂರು ಬೋರ್‌ವೆಲ್ ಕೊಡುವುದು ಉತ್ತಮ. ನಂತರ ಮೈನರ್ ಇರಿಗೇಷನ್ ಟ್ಯಾಂಕ್ಸ್ ನೂರು ಎಕರೆಗಿಂತ ಮೇಲ್ಪಟ್ಟು ಅಚ್ಚುಕಟ್ಟು ಇರುವ ಟ್ಯಾಂಕುಗಳನ್ನು ಇವತ್ತು ಸುಮಾರು ಜಿಲ್ಲಾ ಪರಿಷತ್ತು ಬಂದಾಗಲಾಯಿತು ಇವತ್ತಿನತನಕ ರಿಪೇರಿಗೆ ತೆಗೆದುಕೊಳ್ಳಲಿಲ್ಲ. ಎರಡನೆಯದು, ತಾವು ರಿಜಿಸ್ಟ್ರಾರ್ ಅವರ ಮೇಲೆ ಕಂಟ್ರೋಲನ್ನು ಡಿ.ಸಿ.ಯವರು ತೆಗೆದುಕೊಳ್ಳುತ್ತಾರೆಂದು, ಅವರೇ ಸೂಪರ್‌ವೈಸ್ ಮಾಡುತ್ತಾರೆಂದು ಹೇಳಿದ್ದೀರಿ. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಏನಿದ್ದಾರೆ ಅಲ್ಲಿ ಹೋದರೆ ಸುಮಾರು ಮೂರ್‍ನಾಲ್ಕು ತಿಂಗಳುಗಳಾದರೂ ಒಂದು ಕೇಸ್ ಡಿಸ್ಪೋಸ್ ಆಗುವುದಿಲ್ಲ. ಅದನ್ನು ಡಿ.ಸಿ.ಯವರಿಗೆ ಅಟ್ಯಾಚ್ ಮಾಡಿದರೆ ಬಹಳ ಒಳ್ಳೆಯದು. ನಂತರ ಇನ್ನೊಂದು ಬಜೆಟ್‌ನಲ್ಲಿ, ಅಬಾಲಿಷನ್ ಆಫ್ ಅಸಿಸ್ಟೆಂಟ್ ಕಮಿಷನರ್ಸ್ ಅಂಡ್ ಡಿ.ವಿ.ಸಿ., ಪೋಸ್ಟ್ ಬಗ್ಗೆ ತಾವು ಹೇಳಿದ್ದೀರಿ. ಆದರೆ ಯಾವ ರೀತಿ ಮಾಡುತ್ತೀರೆಂದು ಅದರ ಬಗ್ಗೆ ತಾವು ತಿಳಿಸಲಿಲ್ಲ. ಅದೂ ಸಹಾ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಮಾನ್ಯ ಶಫಿಯವರು ಹೇಳಿದ್ದಾರೆ. ಹೋದ ಸಲವೂ ಸಾಕಷ್ಟು ಬೋರ್‌ವೆಲ್ ತೆಗೆದುಕೊಂಡಿದ್ದಾರೆ. ಸ್ಕೇರ್‌ಸಿಟಿಯಲ್ಲಿ ಈ ಸಾರಿ ಅವರು ಕೇಳುತ್ತಿದ್ದಾರೆ. ಈಗ ಹಣದ ಪ್ರಾವಿಷನ್ ನೋಡಿಕೊಂಡು ಎಷ್ಟು ಸಹಾಯ ಮಾಡಬೇಕೋ ಅದು ಮಾಡುತ್ತೇನೆ.

ಶ್ರೀ ಆರ್. ನಾರಾಯಣ : ಕುಡಿಯುವ ನೀರಿನ ಬಗ್ಗೆ ತಾವು ಸ್ವಲ್ಪ ಖಚಿತವಾಗಿ ಹೇಳಬೇಕು. ಇದು ಬಹಳ ಗಹನವಾದಂಥ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ರೋಡ್ಸ್ ಬಗ್ಗೆ ಹೇಳಿದರು. ಈಗಾಗಲೇ ಸುಮಾರು ನಾಲ್ಕೈದು ಜಿಲ್ಲೆಯಲ್ಲಿ ತುಮಕೂರು, ಕೋಲಾರ, ಮಂಡ್ಯ, ಮೈಸೂರು ಮತ್ತು ಕೆಲವು ಭಾಗಗಳಲ್ಲಿ ಎಲ್ಲಿ ಅತಿ ಮಳೆಯಿಂದ ಏನು ರಸ್ತೆ ಕೊಚ್ಚಿಕೊಂಡು ಹೋಗಿದೆಯೋ ಅಂಥಾ ಪ್ರದೇಶದಲ್ಲಿ ಸ್ವಲ್ಪ ಹಣ ಕೊಡಬೇಕೆಂದು 5 ಕೋಟಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೇನೆ. ಅದರಲ್ಲಿ ಬಹುಶಃ ತುಮಕೂರಿಗೂ ಸಿಗುತ್ತದೆ. ಈ ದುರಸ್ತಿ ಕೆಲಸ ನಡೆಯುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷಣಿಯವರೆ, ರೆಗ್ಯುಲೈಸೇಷನ್ ಆಫ್ ಅನ್ ಆಥರೈಸ್ಡ್ ಕಲ್ಟಿವೇಷನ್‌ನಲ್ಲಿ ಯಾರು 5 ಎಕರೆ ಒಳಪಟ್ಟು ಎನ್‌ಕ್ರೋಚ್ ಮಾಡಿದ್ದಾರೆ ಅವರಿಗೆ ಕೊಡಬೇಕೆಂದು ಹೇಳತಕ್ಕಂಥ ಕಾನೂನನ್ನು ಮಾಡಿದ್ದಾರೆ. ಕೊಡಗಿನಲ್ಲಿ ಏನು ಪರಿಸ್ಥಿತಿಯಾಗಿದೆಯೆಂದರೆ, ನಮ್ಮಲ್ಲಿ ಪ್ಲಾಂಟೇಷನ್ ಲ್ಯಾಂಡ್ ಇದೆ. ಪ್ಲಾಂಟೇಷನ್ ಲ್ಯಾಂಡ್‌ನಲ್ಲಿ ರೆಗ್ಯುಲರೈಸ್ ಮಾಡಕೂಡದು ಎಂದು

ಅನ್ನತಕ್ಕಂಥ ಒಂದು ಸರ್ಕ್ಯುಲರ್‌ನ್ನು ಕಮಿಶನರ್ ಕಳುಹಿಸುತ್ತಾರೆ. ಆದರೆ ಕೊಡಕೂಡದೆಂದಾದರೆ, ನೋಟಿಫಿಕೇಷನ್‌ನಲ್ಲಿ ಅಂಥಾದ್ದು ಏನೂ ಹೇಳಲಿಲ್ಲ. ಈಗ ಕೊಡಗಿನಲ್ಲಿ 2 ಎಕರೆ ಅರ್ಧ ಎಕರೆ ಮಾಡತಕ್ಕಂಥ ಬಡಪಾಯಿಗಳು ಇದ್ದಾರೆ. ಅವರು ಕಾಫಿ ತೋಟವನ್ನು ಮಾಡಿಲ್ಲ. ಒಂದೆರಡು ಕಾಫಿ ಗಿಡ ಹಾಕಿದ್ದರೆ ಅದಕ್ಕೆ ಕೊಡಕೂಡದೆಂದು ಮಾಡಿದ್ದಾರೆ. ಎಲ್ಲೋ ಒಂದೆರಡು ಕಾಫಿ ಗಿಡಗಳನ್ನು ಹಾಕಿದ್ದಿರಬಹುದು. ಈಗ ನೋಟಿಫಿಕೇಷನ್ ಆಗಿರತಕ್ಕಂಥಾದ್ದು ಏಪ್ರಿಲ್ 9ರಲ್ಲಿ, ಇವರು ಕಾಗದ ಬರೆದಿರತಕ್ಕಂಥಾದ್ದು ಏಪ್ರಿಲ್ 19ರಲ್ಲಿ ಇದರಲ್ಲಿ Whether the Government is superior, or the Secretary is superior ಎನ್ನುವುದು ಹೇಳಬೇಕಾಗಿದೆ. ಕೊಡಗಿನಲ್ಲಿ ಪ್ಲಾಂಟೇಶನ್ ಮಾಡತಕ್ಕಂಥವರಿಗೂ ಸಹ ಈ ಒಂದು ಸೌಲಭ್ಯವನ್ನು ಕೊಡಬೇಕೆಂದು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇನ್ನು ರಬ್ಬರ್ ಪ್ಲಾಂಟೇಶನ್‌ನಲ್ಲಿ 999 ವರ್ಷಗಳಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಲೀಸ್ ಕೊಟ್ಟಿದ್ದೀರಿ. ಇದರ ಬಗ್ಗೆಯೂ ಕೂಡ ಇರುವ ಕಾನೂನುಗಳನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಬಗ್ಗೆ ಮತ್ತು ರಸ್ತೆಗಳ ಬಗ್ಗೆ ಎಂಟೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಕೊಡಗಿಗೆ ಎಷ್ಟು ಬಿಡುಗಡೆ ಮಾಡಿದ್ದೀರಿ? ಇನ್ನೆರಡು ತಿಂಗಳಲ್ಲಿ ಅಲ್ಲಿ ಮಳೆ ಪ್ರಾರಂಭವಾಗುತ್ತದೆ. ಅಷ್ಟರೊಳಗಾಗಿ ಹಣ ಬಿಡುಗಡೆ ಮಾಡಿ ಕಾಮಗಾರಿಗಳನ್ನು ತೆಗೆದುಕೊಳ್ಳದಿದ್ದರೆ ಪುನಃ ಯಥಾ ಪ್ರಕಾರವಾದ ಸ್ಥಿತಿಗೆ ಬರುತ್ತದೆ. ಆದ್ದರಿಂದ ಕೂಡಲೆ ಹಣಕೊಟ್ಟು ಕೆಲಸವನ್ನು ಪ್ರಾರಂಭ ಮಾಡಬೇಕು. ಅಲ್ಲಿ ಈಗ ಮಾಡಿದ ಕೆಲಸವೂ ನಿಂತು ಹೋಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೆಗ್ಯುಲರೈಸೇಶನ್ ಬಗ್ಗೆ ಅವರು ಕೇಳಿದರು. ನಿನ್ನೆ ಕೊಡಗು ಏಕೀಕರಣ ಸಮಿತಿಯವರ ಒಂದು ಸಭೆಯನ್ನು ಕರೆಸಿದ್ದೆ. ಬಹುಶಃ ತಾವುಗಳು ಬರಲಿಲ್ಲ. ನಾನು ಅವರಲ್ಲಿ ಈ ವಿಚಾರವಾಗಿ ಮಾತನಾಡಿದ್ದೇನೆ. ಸೆಕ್ರೆಟರಿಯವರಿಗೆ ಮತ್ತು ರೆವಿನ್ಯೂ ಕಮಿಶನರ್‌ರವರಿಗೆ ತಿಳಿಸಿ ಅವರುಗಳು ಯಾವ ರೀತಿಯಾಗಿ ಈ ಸಮಸ್ಯೆಯನ್ನು ಬಗೆಹರಿಸಬಹುದು ಮತ್ತು ಇದಕ್ಕೆ ಒಂದು ಕ್ಲಾರಿಫಿಕೇಶನ್ ಕೂಡ ಕೊಡಿ ಎಂದು ನಾನು ಈಗಾಗಲೇ ಡಿ.ಸಿ.ಯವರಿಗೆ ಮತ್ತು ರೆವಿನ್ಯೂ ಕಮಿಶನರ್‌ರಿಗೆ ಹೇಳಿದ್ದೇನೆ. ಅವರು ಈ ಕೆಲಸವನ್ನು ಒಂದೆರಡು ದಿವಸಗಳಲ್ಲಿ ಮಾಡುತ್ತಾರೆ. ರಸ್ತೆ ಬಗ್ಗೆ ಹೇಳಿದ್ದೀರಿ. ಲೋಕೋಪಯೋಗಿ ಇಲಾಖೆ ವತಿಯಿಂದ ಕೆಲವು ಹಣವನ್ನು ಕೊಡಗಿಗೆ ಬಿಡುಗಡೆ ಮಾಡಿದ್ದೇವೆ. ಮತ್ತು ಜಿಲ್ಲಾ ಪರಿಷತ್ ಮೂಲಕವೂ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಜನಸಂಖ್ಯೆಯ ಆಧಾರದ ಮೇಲೆ ಏನೇನು ಕೊಡಬೇಕೆಂಬ ವಿವರಗಳನ್ನು ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷಿಣಿಯವರೇ ಒಂದು ಕಾಲದಲ್ಲಿ ಶ್ರೀರಂಗಪಟ್ಟಣವು ಇಡೀ ಕರ್ನಾಟಕದ ರಾಜಧಾನಿ ಆಗಿತ್ತು. ಇವೊತ್ತು ಅಲ್ಲಿಯ ತಾಲ್ಲೂಕು ಕಚೇರಿಯು ಓಬೀರಾಯನ ಕಾಲದ ಹಳೆಯ ಕಟ್ಟಡದಲ್ಲಿ ಇದೆ. ಅದಕ್ಕೆ ಒಂದು ಮಿನಿ ವಿಧಾನ ಸೌಧವನ್ನು ಮಾಡಿಕೊಡುತ್ತೀರಾ? ವೈಭವದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣಕ್ಕೆ ಈ ಒಂದು ಕಟ್ಟಡವನ್ನು ಒದಗಿಸಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಪರಿಶೀಲಿಸುತ್ತೇನೆ.

ಶ್ರೀ ಗುರುದೇವ್ : ನಿನ್ನೆ ನಾನು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನನ್ನ ಕ್ಷೇತ್ರದ ಕೆಲವು ಸಮಸ್ಯೆಗಳನ್ನು ಮಾನ್ಯ ಮಂತ್ರಿಯವರಲ್ಲಿ ಹೇಳಿಕೊಂಡಿದ್ದೇನೆ. ಮಾನ್ಯ ಸಚಿವರು ಅದಕ್ಕೆ ನಿರೀಕ್ಷಿಸಿದ ಉತ್ತರವನ್ನು ಕೊಟ್ಟಿಲ್ಲ. ದಯಮಾಡಿ ಅವುಗಳಿಗೆ ಉತ್ತರ ಕೊಡಬೇಕೆಂದು ವಿನಂತಿ.

ಶ್ರೀ ಕರಿಯಣ್ಣ : ನಮ್ಮ ಭಾಗದಲ್ಲಿನ ಸರ್ವೆ ಇಲಾಖೆಯಲ್ಲಿನ ಎಲ್ಲಾ ರಿಕಾರ್ಡ್‌ಗಳು ಸಂಪೂರ್ಣವಾಗಿ ಹಾಳಾಗಿ ಹೋಗಿವೆ. ಶಿವಮೊಗ್ಗದಲ್ಲಿ 1805ನೇ ಇಸವಿಯಲ್ಲಿದ್ದಂಥವು ಎಲ್ಲಾ ಧೂಳು ತಿಂದು ಹೋಗಿದೆ. ರಿಕಾರ್ಡ್‌ಗಳನ್ನು ಸರಿಯಾಗಿ ಇಡುವುದಕ್ಕೆ ಆಗುತ್ತಿಲ್ಲ. ಸ್ಕೆಚ್, ನಕಾಶೆ ಮುಂತಾದುವುಗಳು ನಷ್ಟವಾಗಿವೆ. ಅದನ್ನು ತಾವುಗಳು ಮಾಡಿಸಿ ಕೊಡಬೇಕು. ಅಲ್ಲಿನ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ವ್ಯಾಲ್ಯುವೇಶನ್ ಕಮಿಟಿಯೊಂದನ್ನು ಮಾಡಿದ್ದೇವೆ ಎಂದು ಹೇಳಿದ್ದರು. ಕಮಿಟಿಯಲ್ಲಿನ ಐದು ಜನ ಅಧಿಕಾರಿಗಳ ಹೆಸರು ಹೇಳಿದರು. ಆದರೆ ಡಿ.ಸಿ.ಯವರ ಅಧ್ಯಕ್ಷತೆಯಲ್ಲಿನ ಈ ಸಮಿತಿಯು 6 ತಿಂಗಳಾದರೂ ಕೂಡ ಒಮ್ಮೆಯೂ ಸಭೆ ಸೇರಿಲ್ಲ. ಆದ್ದರಿಂದ ಆ ಸಮಿತಿಗೆ ಇಬ್ಬರು ನಾನ್ ಅಫೀಶಿಯಲ್ ಸದಸ್ಯರನ್ನು ಸೇರಿಸಿದರೆ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ನಂಬಿದ್ದೇನೆ.

ಇನ್ನು ನದಿ ಮೂಲ ಪ್ರದೇಶಗಳಲ್ಲಿ ಸಾಗುವಳಿ ಕೆಲಸ ನಡೆಯುತ್ತಿರುವ ಬಗ್ಗೆ ಹೇಳಬೇಕಾಗಿದೆ. ಈಗ ಎಲ್ಲರೂ ಇರಿಗೇಶನ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಕಬ್ಬು, ಭತ್ತ ಮುಂತಾಗಿ ಬೆಳೆಯುತ್ತಿದ್ದಾರೆ. ಹೀಗಾಗಿ ಮೇಲಿನಿಂದ ನೀರು ಬರುತ್ತಾ ಇಲ್ಲ. ದನಕರುಗಳಿಗೆ ಮತ್ತು ಮನುಷ್ಯರಿಗೂ ಕೂಡ ಕುಡಿಯಲು ನೀರು ಸಿಗುತ್ತಾ ಇಲ್ಲ. ಅಂತೆಯೇ ನೀರುಪಲ್ಯುಶನ್ ಈಗ ಮೀನುಗಳು, ಪ್ರಾಣಿಗಳು ಸಾಯುತ್ತಾ ಇವೆ. ಹೊನ್ನಾವಳಿಯ ಹತ್ತಿರ ಇಂಥ ಪ್ರಕರಣದಿಂದ ಮೀನುಗಳು ಸತ್ತಿದ್ದನ್ನು ತಾವುಗಳು ಗಮನಿಸಿರಬಹುದು. ಈ ರೀತಿಯಲ್ಲಿ ನದಿ ತೀರದಲ್ಲಿ ಸಾಗುವಳಿ ಮಾಡುತ್ತಿರುವುದನ್ನು ಯಾವರೀತಿಯಲ್ಲಿ ತಪ್ಪಿಸುತ್ತೀರಿ ಎಂಬುದನ್ನು ತಿಳಿಸಬೇಕು. ಇನ್ನು ರೂರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವ ಬಗ್ಗೆ ಹೇಳಬೇಕಾಗಿದೆ. ನಮ್ಮಲ್ಲಿ ಎಲ್ಲಾ ಬೋರ್‌ವೆಲ್‌ಗಳು ಹಾಳಾಗಿ ಹೋಗಿವೆ. ತುಕ್ಕು ಹಿಡಿದು ಕೆಟ್ಟು ಹೋಗಿವೆ. ಇದನ್ನು ರಿಪೇರಿ ಮಾಡಿಸಲು ಮಂಡಲ್ ಪಂಚಾಯತ್‌ನವರಿಗೆ ಹೇಳಿದರೆ ಅವರು ಜಿಲ್ಲಾ ಪರಿಷತ್‌ನವರು ಎಂದು ಹೇಳುತ್ತಾರೆ, ಜಿಲ್ಲಾ ಪರಿಷತ್‌ನ್ನು ಕೇಳಿದರೆ ಮಂಡಲದವರು ಎಂದು ಹೇಳುತ್ತಾರೆ. ಈಗ ಸುಮಾರು 250 ರೂಪಾಯಿಗಳನ್ನು ಮಾತ್ರ ರಿಪೇರಿ ಕೆಲಸಕ್ಕೆ ಕೊಡುತ್ತಿದ್ದು ಇದು ಸಾಕಾಗುವುದಿಲ್ಲ. ಆದ್ದರಿಂದ ಮಂಡಲ ಪಂಚಾಯಿತಿಯವರು ರಿಪೇರಿ ಮಾಡಬಾರದು. ಸಂಪೂರ್ಣವಾಗಿ ಜಿಲ್ಲಾ ಪರಿಷತ್‌ನವರೇ ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳಬೇಕು, ಕಾರಣವೇನೆಂದರೆ ಮಂಡಲ ಪಂಚಾಯಿತಿಯಲ್ಲಿ ಹಣ ಇಲ್ಲದೇ ಇರುವುದರಿಂದ ಬೇಸಿಗೆ ಬಂದಮೇಲೆ ಕಷ್ಟ ಆಗುತ್ತದೆ. ಆದ್ದರಿಂದ ಈ ಕೆಲಸಕ್ಕೆ ಹಣ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದಲ್ಲದೆ ಸಮಾಜ ಕಲ್ಯಾಣ ಇಲಾಖೆಯನ್ನು ಜಿಲ್ಲಾಪರಿಷತ್ತಿಗೆ ಸೇರಿಸಿಬಿಟ್ಟಿದ್ದಾರೆ. ಈಗ ಸ್ಪೆಷಲ್ ಕಾಂಪೊನೆಂಟ್‌ನ ಹಣವನ್ನು ಜಿಲ್ಲಾಪರಿಷತ್ತಿನವರು ಖರ್ಚು ಮಾಡುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯವರು ಜಿಲ್ಲಾ ಪರಿಷತ್‌ಗೆ ಸಬಾರ್ಡಿನೇಟಾಗಿದ್ದರಿಂದ ಹರಿಜನ ಗಿರಿಜನರ ಕೆಲಸವನ್ನು ಮಾಡುತ್ತಾರೆ? ಏನು ಜಿಲ್ಲಾಪರಿಷತ್ ನಿರ್ಣಯ ಮಾಡಿ ಕೆಲಸ ತಗೊಳ್ತಾರೋ ಅದಕ್ಕೆ ಇವರು ಯೆಸ್ ಅನ್ನಬೇಕಾಗಿದೆ. ಹಾಗಾಗಿ ಹರಿಜನ ಗಿರಿಜನರಿಗಾಗಿ ಮೀಸಲಿಟ್ಟ ಹಣ ಸಮರ್ಪಕವಾಗಿ ಖರ್ಚಾಗುತ್ತಿಲ್ಲ, ಇಂಜಿನಿಯರಿಂಗ್ ಡಿವಿಜನ್‌ನಲ್ಲೂ ಸಹ 50 ಪರ್ಸೆಂಟ್ ಹಣ ಖರ್ಚಾಗದಿರುವುದಕ್ಕೆ ಇದೇ ಕಾರಣ. ಸೂಪರ್‌ವೈಸಿಂಗ್ ಮಾಡುವ ಅಧಿಕಾರ ಯಾರಿಗೂ ಇಲ್ಲ. ಸಮಾಜಕಲ್ಯಾಣ ಇಲಾಖೆಯವರಿಗೂ ಇಲ್ಲ. ಆದ್ದರಿಂದ ಆ ಇಲಾಖೆಯನ್ನು ಜಿಲ್ಲಾಪರಿಷತ್ತಿನಿಂದ ತೆಗೆದು ಅದನ್ನು ಸೂಪರ್‌ವೈಸರಿ ಮಾಡುವ ಅಧಿಕಾರ ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಜಕಲ್ಯಾಣ ತೆಗೆದು ಜಿಲ್ಲಾ ಪರಿಷತ್ತಿನಿಂದ ಮತ್ತೆ ಸಮಾಜಕಲ್ಯಾಣ ಇಲಾಖೆಗೇ ವಹಿಸಿಕೊಡಬೇಕೆಂಬುದು, ಅದನ್ನು ಇಲ್ಲಿ ಬಿಟ್ಟಿದ್ದೆವು, ಏಕೆಂದರೆ ಆ ಅಮೆಂಡ್‌ಮೆಂಟ್ ಬಂದಾಗ ಯಾವ್ಯಾವು ತೆಗೆಯಬೇಕು ತೆಗೆಯಿರಿ. ಯಾವ್ಯಾವು ಇಡಬೇಕು ಅದನ್ನು ಇಡಿರಿ. ಇಟ್ಟಿದ್ದು ಈ ಇಲಾಖೆಗೆ ಉಳಿಯುತ್ತದೆ, ಹೋಗಿದ್ದು ಇನ್ನೊಂದಕ್ಕೆ ಹೋಗುತ್ತದೆ. ಹನುಮೇಗೌಡರು ಪಿ.ಡಬ್ಲ್ಯೂ.ಡಿ ಕೊಡಿ ಅಂದರು. ರೋಡ್ ಸೆಂಟರ್ ಇದೆ ಅಲ್ಲಿ ಹೋಗುತ್ತದೆ. ತಾವು ಸ್ಪೆಷಲ್ ಕಾಂಪೊನೆಂಟ್, ಸಮಾಜಕಲ್ಯಾಣಕ್ಕೆ ಅಂದ್ರಿ, ಅದು ಅಲ್ಲಿ ಹೋಗಲಿ. ಹೆಲ್ತ್ ಹೇಳಿದರೆ ಅಲ್ಲಿ ಹೋಗಲಿ, ಆದರೆ ತಾವೇ ಡಿಸೈಡ್ ಮಾಡುವವರು ಮುಂದೆ ಅದು ಕಾನೂನು ತಿದ್ದುಪಡಿ ಬರುತ್ತದೆ. ಅದರೊಳಗೆ ಯಾವುದು ಇಡಬೇಕು; ಸಮಗ್ರವಾಗಿ ತಿದ್ದುಪಡಿ ಯಾವುದು ತೆಗಿಬೇಕು ಅಂದಾಗ ಈ ಸದನದ ಇಚ್ಛೆ ಪ್ರಕಾರ ಅದನ್ನು ಮಾಡಲಾಗುತ್ತದೆ. ಎರಡನೆಯದು, ತಾವು ಬೋರ್‌ವೆಲ್ ಮೇಂಟಿನೆನ್ಸ್ ಬಗ್ಗೆ ಹೇಳಿದಿರಿ, ಮಂಡಲದವರು ಮಾಡಬೇಕೋ ಜಿಲ್ಲಾ ಪರಿಷತ್ತಿನವರು ಮಾಡಬೇಕೋ ಅನ್ನುವ ವ್ಯಾಜ್ಯದಲ್ಲಿ ಅನೇಕ ಬೋರ್‌ವೆಲ್ಸ್ ರಿಪೇರಿಯಾಗದೆ ಹಾಗೆ ಬಿದ್ದಿವೆ ಅಂತ. ಅದಕ್ಕೆ ನಾನು ತಕ್ಷಣ ಚೀಫ್ ಇಂಜಿನಿಯರನ್ನು ಕರೆಯಿಸಿ ಯಾವುದಾದರೂ ಒಂದು ಏಜೆನ್ಸಿ ಮಾಡುವುದನ್ನು ಮಾಡಬೇಕು. ಏಕೆಂದರೆ ಹಣಾನೂ ಕೂಡ ಜಿಲ್ಲಾ ಪರಿಷತ್ತಿನವರು ಮಾಡಿದರೆ ಆ ಮೇಂಟಿನೆನ್ಸ್ ಗ್ರ್ಯಾಂಟನ್ನು ಅವರಿಗೆ ಅಲೋಕೇಟ್ ಮಾಡಬೇಕು, ಮಂಡಲ ಪಂಚಾಯಿತಿ ಮಾಡಿದರೆ ಅವರಿಗೆ ಕೊಡಬೇಕಾಗುತ್ತದೆ. ಯಾವುದು ಸೂಕ್ತ ಅನ್ನುವ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳಲು ಪರಿಶೀಲಿಸುತ್ತೇನೆ. ಮೂರನೆಯದು ನದಿ ದಂಡೆಯಲ್ಲಿ ಅನೇಕ ಪಂಪ್‌ಸೆಟ್‌ಗಳನ್ನು ಹಾಕಿ ನೀರು ಇರಲಾರದಂತೆ ಮಾಡಿದ್ದಾರೆ ಅಂತ ಹೇಳ್ತಿದೀರಿ. ಅದು ಯಾವ ಏರಿಯಾದಲ್ಲಿ ಎಂದು ಹೇಳಿದರೆ ನಾನು ಸಂಬಂಧಪಟ್ಟ ಡಿ.ಸಿ.ಗೆ ಪತ್ರ ಬರೆದು ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಯು.ಕೆ. ಶಾಮಣ್ಣ : ಅಧ್ಯಕ್ಷಿಣಿಯವರೇ, ಬಡವರಿಗೆ ಈಗಾಗಲೇ ಮನೆ ಕಟ್ಟಿರುವ ಜಾಗದಲ್ಲೇ ನೀವು ಸಾಗುವಳಿ ಚೀಟಿ ಕೊಡುತ್ತೇವೆಂದು ಘೋಷಣೆ ಹೇಳದ್ದಾಗಿತ್ತು. ಆದರೆ ಬಗರ್‌ಹುಕ್ಕುಂ ಕಾಯಿದೆ ಪ್ರಕಾರ ಅವನು ಮನೆ ಕಟ್ಟಿದ್ದರೆ ಅವನಿಗೆ ಅಲ್ಲಿ ಕೊಡುವ ಅಧಿಕಾರ ನಮಗಿಲ್ಲ. ನಮ್ಮ ಸಮಿತಿಯವರಿಗಿಲ್ಲ. ಜಿಲ್ಲಾಧಿಕಾರಿಗಳಿಗೆ ಹೋದಾಗ ಅದು ನಮ್ಮ ಮಿತಿಯಲ್ಲಿಲ್ಲ ಅಂತ ಹೇಳಿ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಹಾಗೇ ಈಗೇನು ಜಿಲ್ಲಾ ಪರಿಷತ್ ಮೂಲಕ ರಸ್ತೆಗಳನ್ನು ಟಾರ್ ಹಾಕುವ ವ್ಯವಸ್ಥೆ ಮಾಡ್ತಿದಾರೋ ಬಹುಶಃ ಅದು ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದೇವೆ. ಅಂತ ಹೇಳಿದರೆ ತಪ್ಪಲ್ಲ. ಏಕೆಂದರೆ ನಿನ್ನೆ ನನ್ನ ಕ್ಷೇತ್ರಕ್ಕೆ ಒಂದು ಟ್ರಕ್ಕರ್‌ಲೋಡ್ ಟಾರ್ ಬಂತು, ಅದನ್ನು ಕೆಳಗೆ ಇಳಿಸಿಕೊಳ್ಳುವುದಕ್ಕೆ ಬ್ಯಾರೆಲ್ಸ್ ಇಲ್ಲ, ಆಮೇಲೆ ಅದನ್ನೆಲ್ಲಾ ತಗೊಂಡು ಹೋಗಿ ಒಂದು ಗುಂಡಿಯೊಳಕ್ಕೆ ಹಾಕಿ ಅಲ್ಲಿಂದ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಜೊತೆಗೆ ನನ್ನ ಚಿಕ್ಕಮಗಳೂರು ಜಿಲ್ಲೇಲಿ ರೋಲರ್ ತಳ್ಳುವ ವ್ಯವಸ್ಥೆ ಇಲ್ಲ, ಇಂಜಿನಿಯರ್‌ಗಳನ್ನೂ ಸಹ ಈವರೆಗೆ ಹಾಕಿಲ್ಲ. ಈ ವ್ಯವಸ್ಥೆ ಅಲ್ಲಿ ಅವ್ಯವಸ್ಥಿತಿ ರೂಪದಲ್ಲಿ ನಡೆಯುತ್ತಿರುವುದನ್ನು ಕಟುವಾಗಿ ಟೀಕೆ ಮಾಡಿದರೆ ತಪ್ಪಿಲ್ಲ. ಇದಕ್ಕೆ ಅವರು ಸಮಂಜಸವಾದ ಉತ್ತರ ಕೊಡಬೇಕು. ಜೊತೆಗೆ ಕಿಮೀಗೆ ಒಂದು ಲಕ್ಷ ರೂ. ಖರ್ಚು ಮಾಡ್ತಿದೇವೆ. ಆದರೆ ಈಗಾಗಲೇ ಇದ್ದಿನಬ್ಬರು ಹೇಳಿದಂತೆ ಜಲ್ಲಿ ಇಲ್ಲ ಹಾಕುವ ವ್ಯವಸ್ಥೆ ಸರಿಯಿಲ್ಲ. ಇಂಜಿನಿಯರ್ ಹಾಜರಾತಿ ಇಲ್ಲದೆ ಮಾಡುವುದು ನಮ್ಮ ಜಿಲ್ಲೆಯಲ್ಲಿ ಕಾಣುತ್ತಾ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂಜಿನಿಯರಿಲ್ಲ ಅಂತ ಹೇಳ್ತಿದಾರೆ, ಅದು ನನ್ನ ಗಮನಕ್ಕೆ ಅವರು ತಂದಿಲ್ಲ. ತಹಶೀಲ್ದಾರ್ ತಂದಿದ್ದರು, ಮಾಡಿಕೊಟ್ಟೆ. ಇಂಜಿನಿಯರ್ ಇಲ್ಲ ಎಂದು

ಇಂಥವರೇ ಬೇಕೆಂದು ಹೇಳಿದ್ದರೆ ಹಾಕಿಸಿಕೊಡಬಹುದಿತ್ತು. ಟಾರ್ ಬಗ್ಗೆ ಹೇಳಿದ್ದಾರೆ, ಅವರು ಯಾರು ಎಕ್ಸಿಕ್ಯುಟಿವ್ ಇಂಜಿನಿಯರೊ ನಾನು ಕೇಳಿಕೊಂಡು ಏಕೆ ಈ ರೀತಿಯಾಗಿ ಮಾಡಿದ್ದಾರೆ, ಸರಿಯಾಗಿ ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಯು.ಕೆ. ಶ್ಯಾಮಣ್ಣ : ರೆವಿನ್ಯೂ ಜಾಗದಲ್ಲಿ ಇವತ್ತು ಯಾರ್ಯಾರು ಮನೆಗಳನ್ನು ಕಟ್ಟಿಸಿಕಂಡು ಕುಳಿತಿದ್ದಾರೆ, ಅವರ ಬಗ್ಗೆ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ಕ್ಲಾರಿಫಿಕೇಷನನ್ನು ಕೊಡಬೇಕಾಗುತ್ತದೆ. ಅಂದರೆ ಲ್ಯಾಂಡ್ ರೆಗ್ಯುಲರೈಜ್ ಮಾಡುವಾಗ ಮನೆ ಇದ್ದವರಿಗೂ ಕೂಡ ಮಾಡಬೇಕೋ ಹೇಗೆ ಎನ್ನತಕ್ಕಂಥದ್ದರ ಬಗ್ಗೆ ನಾವು ಒಂದು ಕ್ಲಾರಿಫಿಕೇಷನನ್ನು ಇಷ್ಯೂ ಮಾಡಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಹೇಳಲಿಲ್ಲ. ಅದೇನೆಂದರೆ 'ಆರಾಧನಾ' ಯೋಜನೆಯಡಿಯಲ್ಲಿ ಏನು ಬರುತ್ತದೆ, ಕೆಲವು ದೇವಸ್ಥಾನಗಳನ್ನು ಮಾತ್ರ ರಿಪೇರಿ ಮಾಡಿಸಬೇಕು ಎಂದು ಹೇಳಿದ್ದಾರೆ. ಅದನ್ನು ಎಲ್ಲಾ ಊರಿನಲ್ಲಿರುವ ದೇವಸ್ಥಾನಗಳು ಯಾವುವು ಇವೆ ಅವುಗಳನ್ನು ರಿಪೇರಿ ಮಾಡುವುದಕ್ಕೆ ನಾವು ಊರುಗೆ ಹೋದಾಗ ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ. ಅದರ ಬದಲು ಎಲ್ಲಾ ದೇವಸ್ಥಾನಗಳನ್ನು ರಿಪೇರಿ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಮಿನಿ ವಾಟರ್ ಸ್ಕೀಮ್ಸ್ ಇದೆಯಲ್ಲಾ, ಅದರಲ್ಲಿ ಅನೇಕ ಕಡೆಗಳಲ್ಲಿ ಅಬಂಡೆಂಟ್ ವಾಟರ್ ಬರುತ್ತಿದೆ. ಐದು ಸಾವಿರ, ಆರು ಸಾವಿರ ಈ ರೀತಿ ಬರುತ್ತಿದೆ. ಮನೆಗಳಿಗೆ ಕೆಲವರು ನಮ್ಮ ಸ್ವಂತ ಖರ್ಚಿನಲ್ಲಿ ಹಾಕಿಕೊಳ್ಳುತ್ತೇವೆ ಎಂದು ಹೇಳಿದರೂ ಕೂಡ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನವರು ಬಿಡುತ್ತಿಲ್ಲ. ಅದನ್ನು ಹಾಕಿಕೊಂಡು ಅವರ ಖರ್ಚಿನಲ್ಲೇ ನಾವು ಕೊಡುತ್ತೇವೆ, ಎಂಟೈರ್ ಮೆಯಿನ್‌ಟೆನೆನ್ಸ್ ಖರ್ಚೆಲ್ಲವನ್ನೂ ನಾವು ಕೊಡುತ್ತೇವೆ ಎಂದು ಹೇಳುತ್ತಿದ್ದರೂ ಕೂಡ ಅವರು ಕೇಳುತ್ತಿಲ್ಲ. ಇದನ್ನು ಸರಿಪಡಿಸಬೇಕು. ಮೂರನೆಯದಾಗಿ ಈ ಮಂಡಲ ವ್ಯಾಪ್ತಿಯಲ್ಲಿ ಬರುವ ಫಾರೆಸ್ಟ್ ಏನು ಇದೆ, ಯೂಕಲಿಪ್ಟಸ್ ತೋಪು ಆಗಬಹುದು, ಬೇರೆ ಬೇರೆ ಇನ್ನೊಂದು ಮರಗಳಾಗಬಹುದು. ಅದನ್ನು ಆದಷ್ಟು ಬೇಗ ನೀವು ಎಕ್ಸ್‌ಟ್ರಾಕ್ಟ್ ಮಾಡದಿದ್ದರೆ 150-200 ಕೋಟಿ ರೂಪಾಯಿ ಲಾಸ್ ಆಗುತ್ತದೆ. ಈ ಮೂರು ಪ್ರಶ್ನೆಗಳಿಗೂ ನನಗೆ ಉತ್ತರವನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇದನ್ನು ಫಾರೆಸ್ಟ್‌ಗೆ ಏನಾದರೂ ನಾವು ಕನ್‌ಸಲ್ಟ್ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕೋ ಏನೋ ಗೊತ್ತಿಲ್ಲ ಅದು. ನಾನು ಬೇಕಾದರೆ ಅದಕ್ಕೆ ತಮ್ಮನ್ನೂ ಕರೆಯಿಸಿ ಒಂದು ಮೀಟಿಂಗನ್ನು ಮಾಡಿ ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳೋಣ. ಉಳಿದಂಥದ್ದು ಗುಡಿ ದುರಸ್ತಿ ಬಗ್ಗೆ ತಾವು ಹೇಳುತ್ತಿದ್ದೀರಿ. ಆರಾಧನಾ ಸ್ಕೀಮ್‌ನಲ್ಲಿ ತಮಗೆ ಗೊತ್ತಿದೆ. ದೇವಸ್ಥಾನ ಬಡವರಿಗೆ, ನಿರ್ಗತಿಕರಿಗೆ ಯಾರೂ ಹಣವನ್ನು ಹಾಕಿಕೊಂಡು ರಿಪೇರಿ ಮಾಡುವುದಕ್ಕೆ, ದೇವಸ್ಥಾನಗಳನ್ನು ಕಟ್ಟಿಸತಕ್ಕಂಥದ್ದು ಆಗಲಿ ಆಗುವುದಿಲ್ಲ, ಅವರಿಗೆ ಈ ಕೆಲಸಗಳಿಗೆ ಹಣ ಕೊಡಬೇಕು ಎನ್ನತಕ್ಕಂಥ ಒಂದು ಯೋಜನೆ. ಹೊಸದಾಗಿ ಅದಕ್ಕೆ ನಾವು ಸುಮಾರು ನಾಲ್ಕೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ಇತಿಹಾಸದಲ್ಲಿ ಮೊದಲನೆಯ ಸಲ ನಡೆಯುತ್ತಿರುವುದು. ಎಂಡೋಮೆಂಟ್ ಇದರಲ್ಲಿ ಇದೇ ಮೊದಲನೆ ಸಲ ನಡೆಯುತ್ತಿರುವುದು. ತಾವು ಇದಕ್ಕೆ ಅಪ್ರಿಷಿಯೇಟ್ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಉಳಿದವರಿಗೆ ಯಾರು ಯಾರಿಗೆ ಶಕ್ತಿ ಇದೆ, ಅದು ಭಕ್ತರ ಗುಡಿಯಾಗಬೇಕು.

ಸರ್ಕಾರದ ಗುಡಿ ಎಲ್ಲಾ ಆಗಿಬಿಟ್ಟರೆ ಹೇಗೆ? ಸ್ವಲ್ಪ ಭಕ್ತರ ಗುಡಿಯೂ ಆಗಲಿ ಎಂದು ಹೇಳುತ್ತೇನೆ ಮತ್ತು ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಇಂಥದ್ದು ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಎನ್ನತಕ್ಕಂಥದ್ದನ್ನು ನಾನು ಎಕ್ಸಾಮಿನ್ ಮಾಡಿಸಬೇಕಾಗುತ್ತದೆ. ಏಕೆಂದರೆ ನಮ್ಮ ಗೈಡ್‌ಲೈನ್ಸ್ ಪ್ರಕಾರ ನಾವು ಕೆಲಸಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ : ಇದು ಬರೀ ರಿಪೇರಿ ಮಾಡುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಲ್‌ರೈಟ್. ರಿಪೇರಿಯೇ ಇರಲಿ. ಅದನ್ನು ನಾನು ಎಕ್ಸಾಮಿನ್ ಮಾಡಿಸುತ್ತೇನೆ. ಆಮೇಲೆ ಕ್ರಮ ತೆಗೆದುಕೊಳ್ಳೋಣ. ಮತ್ತು ಈ ಫಾರೆಸ್ಟ್ ಬಗ್ಗೆ ಹೇಳಿದಿರಿ, ಅದರಲ್ಲಿ ಬರತಕ್ಕಂಥ ಔಟ್‌ಪುಟ್‌ನಲ್ಲಿ ಡೆವಲಪ್‌ಮೆಂಟ್ ವರ್ಕ್‌ನ್ನು ತೆಗೆದುಕೊಳ್ಳಬೇಕು ಎಂದು ಹೇಳಿದಿರಿ, ಅದನ್ನೂ ಕೂಡ ನಾನು ಪರಿಶೀಲನೆ ಮಾಡಿಸುತ್ತೇನೆ. ಮೂರನೆಯದಾಗಿ ತಾವು ಮಿನಿ ವಾಟರ್ ಸಪ್ಲೈಗಳಿಗೆ ತಾವು ಕನೆಕ್ಷನನ್ನು ಕೊಡಬೇಕು ಎಂದು ಹೇಳಿದಿರಿ. ಈಗ ಮಿನಿ ವಾಟರ್ ಸಪ್ಲೈಯಲ್ಲಿ ಎಲ್ಲಾ ಮನೆ ಮನೆಗೂ ಕನೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ವಾಟರ್ ಸೋರ್ಸ್ ಜಾಸ್ತಿ ಇದ್ದರೂ ಕೂಡ ಅಲ್ಲಿ ಸ್ಕೀಮ್ ಏನು ಇರುತ್ತದೆ, ಅದರ ಕೆಪಾಸಿಟಿ ಚಿಕ್ಕದಾಗಿರುತ್ತದೆ. ಅದಕ್ಕಾಗಿ ಆ ವ್ಯವಸ್ಥೆ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಮಾಡುವವರೆಗೆ ಮನೆ ಮನೆಗೂ ಇದನ್ನು ಕೊಡುವುದಕ್ಕಾಗುವುದಿಲ್ಲ. ಆದರೂ ಕೂಡ ನಾನು ಸಂಬಂಧಪಟ್ಟಂಥ ಚೀಫ್ ಇಂಜಿನಿಯರ್‌ರವರ ಜೊತೆಯಲ್ಲಿ ಮಾತನಾಡಿ ಯಾವ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳಬೇಕೋ ಅದರಂತೆ ತೆಗೆದುಕೊಳ್ಳೋಣ.

SRI K.C. MODAGEKAR DESAI : Due to ignorance and illeteracy, the farmers could not submit Form No. 7 duly filled up under the Land Reforms to get tenancy rights. I think the last date to submit the forms has expired. You are aware that we are always talking about betterment of farmers. So, I am requesting the Hon'ble Revenue Minister as well as the Chief Minister kindly to extend to date for submitting form No.7 so that the farmers can get tenancy rights. Will you consider this ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಈಗ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ವೋಟಮ್ಮ : ಮಾನ್ಯ ಉಪಾಧ್ಯಕ್ಷಿಣಿಯವರೇ, ನ್ಯಾಚುರಲ್ ಕೆಲಾಮಿಟೀಸ್‌ನಲ್ಲಿ ಮನೆ ಬಿದ್ದು ಹೋದರೆ ಮಳೆಗಾಲದಲ್ಲಿ ಮನೆಗಳು ಬಿದ್ದು ಹೋದರೆ ಎಂಟು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅದೇ ಅಕಸ್ಮಿಕವಾಗಿ ಮನೆಗೆ ಬೆಂಕಿ ಬಿದ್ದರೆ ತಹಶೀಲ್ದಾರ್‌ರವರಿಗೆ ಇಮ್ಮಿಡಿಯೇಟ್ ಆಗಿ ಕೊಡುವುದಕ್ಕೆಂದು ಕೇವಲ ಮೂರು ನೂರು ರೂಪಾಯಿಗಳು ಮಾತ್ರ ಅವಕಾಶ ಇರುವುದು. ಅದು ಬಿಟ್ಟರೆ ಎ.ಸಿ. ಅವರಿಗೆ 500 ರೂಪಾಯಿ, ಆಮೇಲೆ ಡಿ.ಸಿ. ಅವರಿಗೆ ಒಂದು ಸಾವಿರ ರೂಪಾಯಿ. 500 ರೂಪಾಯಿಗಳಿಗೂ ಇವನು ಕಾಯಬೇಕಾಗುತ್ತದೆ. ಮತ್ತೆ ಎ.ಸಿ. ಅವರ ಹತ್ತಿರ 500 ರೂಪಾಯಿ, ಡಿ.ಸಿ. ಅವರ ಹತ್ತಿರ ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಬೇಕಾಗಿದ್ದರೆ ಒಂದು ವರ್ಷ ಅವನು ಕಾಯಬೇಕಾಗುತ್ತದೆ. ಹೀಗಾಗಿ ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಈ ತರಹದ

ಅರ್ಜಿಗಳು ಪೆಂಡಿಂಗ್ ಇವೆ. ಅದಕ್ಕೆ ನಾನು ಹೇಳುವುದು, ಇದಕ್ಕೆ ಮಿನಿಮಮ್ ರೇಟನ್ನು ಏತಕ್ಕೆ ತಾವು ಫಿಕ್ಸ್ ಮಾಡಬಾರದು? ಈಗ ಅಕಸ್ಮಿಕವಾಗಿ ಮನೆಗಳು ಬೇಸಿಗೆ ಕಾಲದಲ್ಲಿ ನಮ್ಮಲ್ಲಿ ಸಿಕ್ಕಾಪಟ್ಟೆ ಬೀಳುತ್ತದೆ. ಬಡವರ ಗುಡಿಸಲುಗಳಿಗೆ, ಮನೆಗಳಿಗೆ ಬೆಂಕಿ ಬಿದ್ದರೆ ಅವರ ಪಾತ್ರೆ, ಬಟ್ಟೆ ಎಲ್ಲಾ ಸುಟ್ಟುಹೋಗುತ್ತದೆ. ಆದರೆ ಮಳೆಗಾಲದಲ್ಲಿ ಮನೆ ಕುಸಿದು ಬಿದ್ದರೆ ಉಳಿದದ್ದೆಲ್ಲಾ ಉಳಿದುಕೊಳ್ಳುತ್ತದೆ. ಗೋಡೆ, ಕಿಟಕಿ-ಬಾಗಿಲುಗಳು ಇತ್ಯಾದಿ ಇವೆಲ್ಲಾ ಹೋಗುತ್ತದೆ. ಇದಕ್ಕೆ ಏನಾದರೂ ಒಂದು ಅಮೌಂಟನ್ನು ಫಿಕ್ಸ್ ಮಾಡಿ. ಐದು ಸಾವಿರ ರೂಪಾಯಿಗಳು ಎಂದು ಫಿಕ್ಸ್ ಮಾಡಿ. ಬೆಂಕಿ ಬಿದ್ದು ಸುಟ್ಟುಹೋಗುವ ಮನೆಗಳಿಗೆ ಐದು ಸಾವಿರ ರೂಪಾಯಿಗಳು ಎಂದು ನೀವು ಏತಕ್ಕೆ ಫಿಕ್ಸ್ ಮಾಡಬಾರದು? ರೂರಲ್ ಡೆವಲಪ್‌ಮೆಂಟ್ ಬಗ್ಗೆ ಕುಡಿಯುವ ನೀರಿನ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ನಮ್ಮಲ್ಲಿ ಕುಡಿಯುವ ನೀರಿನ ವಿಷಯದಲ್ಲಿ ನಮ್ಮ ಭಾಗದಲ್ಲಿ ಒಂದು ಬರಗಾಲ ಇದ್ದಹಾಗೆ. ಏಕೆಂದರೆ ನಮ್ಮ ಮಲೆನಾಡಿನಲ್ಲಿ ಬೋರ್‌ವೆಲ್‌ಗಳು ಯಶಸ್ವಿಯಾಗುವುದಿಲ್ಲ, ಓಪನ್ ವೆಲ್‌ಗಳು ಯಶಸ್ವಿಯಾಗುವುದಿಲ್ಲ. ಬೇಸಿಗೆ ಕಾಲದಲ್ಲಿ ಅವೆಲ್ಲಾ ಒಣಗಿಹೋಗುತ್ತವೆ. ಇದು ಮಲೆನಾಡಿನ ಎಲ್ಲರಿಗೂ ಗೊತ್ತಿದೆ. ಮಂಗಳೂರಿನಲ್ಲಿ ಆ ರೀತಿಯಾಗಿದೆ. ಕೊಡಗಿನಲ್ಲಿ ಆ ರೀತಿಯಾಗಿದೆ. ನಮ್ಮ ತಾಲ್ಲೂಕಿನಲ್ಲಿಯೂ ಆ ರೀತಿಯಾಗಿದೆ. ಅಂತಹ ಹಳ್ಳಿಗಳನ್ನೇ ಪ್ರಾಬ್ಲಮ್‌ಮೆಟಿಕ್ ವಿಲೇಜ್ ಎಂದು ಕರೆದಿರುವುದು. ಎಲ್ಲಿ ಬೋರ್‌ವೆಲ್ ಫೇಲ್ಯೂರ್ ಆಗುತ್ತದೆ, ಎಲ್ಲಿ ಓಪನ್‌ವೆಲ್ ಫೇಲ್ಯೂರ್ ಆಗುತ್ತದೆ ಅಂತಹ ಕಡೆ, ಆ ಹಳ್ಳಿಗಳನ್ನು ಪ್ರಾಬ್ಲಮ್‌ಮೆಟಿಕ್ ವಿಲೇಜಸ್ ಎಂದು ಗುರ್ತಿಸಿದ್ದಾರೆ. ಆದರೆ, ಇನ್ನು ಅನ್‌ಕವರ್ಡ್ ವಿಲೇಜ್‌ಗಳು ಸಾಕಷ್ಟು ಇವೆ. ಇದಕ್ಕೆ ಏನು ಸ್ಪೆಷಲ್ ಸ್ಕೀಮ್ ಹಾಕಿಕೊಳ್ಳುತ್ತೀರಿ? ಅಥವಾ ಸ್ಪೆಷಲ್ ಡ್ರೈಲ್ಯಾಂಡ್ ಅನ್ನಾದರೂ ಮಾಡುತ್ತೀರಾ, ಸಾಕಷ್ಟು ಹಣ ಕುಡಿಯುವ ನೀರಿಗೆ ನೀವು ಏತಕ್ಕೆ ಕೊಡಬಾರದು? ಹಾಗೆಯೇ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಎಲ್ಲಾ ಇಲಾಖೆಯ ರಿಪೇರಿ ಕಟ್ಟಡಗಳು ಇವರಿಗೆ ಬರುತ್ತವೆ. ಆಸ್ಪತ್ರೆಯ ಕಟ್ಟಡಗಳು ನಮ್ಮಲ್ಲಿ ಬಿದ್ದು ಹೋಗಿದೆ. ಪಶುವೈದ್ಯಾ ಶಾಲೆಯ ಕಟ್ಟಡಗಳು ನಮ್ಮಲ್ಲಿ ಬಿದ್ದು ಹೋಗಿದೆ. ಶಾಲೆಯ ಕಟ್ಟಡಗಳು ಬಿದ್ದುಹೋಗುತ್ತಿವೆ. ಇವೆಲ್ಲವುಗಳ ರಿಪೇರಿಗೆಂದು ಇಟ್ಟಿರುವ ಹಣ ಸಾಕಷ್ಟು ಕಡಿಮೆ ಇದೆ. ಅದಕ್ಕೆ ಸಾಕಷ್ಟು ಹಣವನ್ನು ಇಡುತ್ತೀರಾ ಎಂದು ಕೇಳುತ್ತೇನೆ. ನಮ್ಮ ಜಿಲ್ಲಾ ಪರಿಷತ್ತಿನಿಂದ ಶಾಲೆಗಳನ್ನು ಈ ವರ್ಷ ಕಟ್ಟಿರುತ್ತಾರೆ. ಮುಂದಿನ ಎರಡು ವರ್ಷಗಳಲ್ಲಿ ಆ ಮನೆಗಳು ಬಿದ್ದುಹೋಗುತ್ತವೆ. ಆ ಕಂಟ್ರಾಕ್ಟರ್ ಯಾರು? ಅವರಿಗೆ ನೀವು ಏತಕ್ಕೆ ಟೈಮ್‌ಬಾಂಡ್ ಫಿಕ್ಸ್ ಮಾಡಬಾರದು? ಒಬ್ಬ ಕಂಟ್ರಾಕ್ಟರು ಮನೆಯನ್ನು ಕಟ್ಟುತ್ತಾನೆಂದರೆ ಅವನು 10 ವರ್ಷ ಗ್ಯಾರೆಂಟಿಯನ್ನು ಕೊಡಬೇಕು. ಅಷ್ಟರೊಳಗೆ ಬಿದ್ದು ಹೋದರೆ ಅವನನ್ನೇ ರೆಸ್ಪಾನ್ಸಿಬಲ್ ಮಾಡಲಿಕ್ಕೆ ನೀವು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಳೆಯಿಂದ ಸಂಪೂರ್ಣವಾಗಿ ಮನೆಗಳು ಏನು ಬಿದ್ದು ಹೋಗಿವೆ ಅಂತಹವುಗಳಿಗೆ ಆಶ್ರಯ ಯೋಜನೆಯೊಳಗೆ ಕಟ್ಟಿಸಬೇಕೆಂದು ವಿಶೇಷ ಆಜ್ಞೆಯನ್ನು ಮುಖ್ಯಮಂತ್ರಿಗಳು ಆಸಕ್ತಿ ವಹಿಸಿ ಹೊರಡಿಸಿದ್ದಾರೆ. ಅದು ಎಲ್ಲಾ ಕಡೆ ಆಗತಕ್ಕದ್ದಲ್ಲ. ಈ ಸಲ ಸುಮಾರು 30-40 ಸಾವಿರಕ್ಕೂ ಹೆಚ್ಚು ಮನೆಗಳು ಬಿದ್ದಿವೆ ಎಂದು, ಸ್ಪೆಷಲ್ ಸ್ಕೀಮ್ ಎಂದು ಹೇಳಿ ಅವರು ಧಾರಾಳವಾಗಿ ಕೊಟ್ಟಿದ್ದಾರೆ. ಆದರೂ ನಮ್ಮ ನ್ಯಾಚುರಲ್ ಕ್ಯಲಾಮೆಟಿಸ್ ರೂಲ್ಸ್ ಪ್ರಕಾರ ಅದಕ್ಕೊಂದು ಇತಿಮಿತಿ ಹಾಕಿದ್ದಾರೆ. ಎಷ್ಟು ಲುಕ್ಸಾನ್ ಆದರೆ ಎಷ್ಟು ಹಣ ಕೊಡಬಹುದು, ಫೈರ್‌ನಲ್ಲಿ ಎಷ್ಟು, ಕ್ರಾಪ್ ಡ್ಯಾಮೇಜ್ ಆದರೆ ಎಷ್ಟು, ಮನೆಗಳು ಬಿದ್ದರೆ ಎಷ್ಟು, ಅಥವಾ ದನಗಳು

ಸತ್ತರೆ ಎಷ್ಟು, ಅದಕ್ಕಾಗಿ ಒಂದು ಸ್ಕೀಮೇ ಇದೆ. ಆ ಸ್ಕೀಮ್ ಪ್ರಕಾರ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ ಇದನ್ನು ಎಲ್ಲಾ ಕಡೆ ಕೊಡುವುದಕ್ಕಾಗುವುದಿಲ್ಲ. ಇದು ಸ್ಪೆಷಲ್‌ಕೇಸ್ ಎಂದು ಚೀಫ್ ಮಿನಿಸ್ಟರ್ ಕೊಟ್ಟಿದ್ದಾರೆ.

ಶ್ರೀಮತಿ ಮೋಟಮ್ಮ : ಸುಟ್ಟು ಹೋದರೆ ನೀವು ಪರಿಹಾರ ಕೊಡುವುದಿಲ್ಲ. ಬಡವರು ಎಲ್ಲಿಗೆ ಹೋಗಬೇಕು?

ಶ್ರೀ ಜಿ. ರಾಜೂಗೌಡ : ರಾಜ್ಯದಲ್ಲಿ ಜಿಲ್ಲಾ ಮತ್ತು ತಾಲ್ಲೂಕ್ ಪುನರ್ ವಿಂಗಡಣೆ ಮಾಡಬೇಕೆಂದು ಹೇಳಿ ಮೂರು ಸಮಿತಿಗಳು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ವಾಸುದೇವ್ ಸಮಿತಿ, ಹುಂಡೇಕಾರ್ ಸಮಿತಿ, ಗುದ್ದಿಗೌಡರ ಸಮಿತಿ, ಈ ಸಮಿತಿಯ ವರದಿ ಬಂದಮೇಲೆ ಸಚಿವ ಸಂಪುಟದಲ್ಲಿ ಉಪ ಸಮಿತಿಯನ್ನೂ ಸಹ ನೇಮಿಸಿದ್ದೀರಿ. ಆ ಉಪ ಸಮಿತಿಯ ವರದಿಯೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ಯಾವಾಗ ಇದನ್ನು ಜಾರಿಗೆ ಕೊಡುತ್ತೀರಿ? ಇಡೀ ಕರ್ನಾಟಕದಲ್ಲಿಯೇ ಕೊಳ್ಳೇಗಾಲ ಬಹಳ ದೊಡ್ಡದಾದಂತಹ ತಾಲ್ಲೂಕ್ಕಾಗಿದೆ. ಅತಿ ಚಿಕ್ಕದಾದಂತಹ ತಾಲ್ಲೂಕು ಯಳಂದೂರು. ಈ ಎರಡು ತಾಲ್ಲೂಕುಗಳು ಅಕ್ಕಪಕ್ಕದಲ್ಲಿವೆ. ನಾವು ಕೇಳಿದರೆ 100 ಕೋಟಿ ರೂಪಾಯಿ ಸರ್ಕಾರಕ್ಕೆ ಖರ್ಚಾಗುತ್ತದೆಂದು ಹೇಳುತ್ತಾರೆ. ನಾನು ತಮಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಒಂದು ರೂಪಾಯಿಯೂ ಕೂಡ ಖರ್ಚಾಗುವುದಿಲ್ಲ. ಯಳಂದೂರನ್ನು ಕೊಳ್ಳೇಗಾಲಕ್ಕೆ ಮರ್ಜ್ ಮಾಡಿದರೆ ಆ ತಾಲ್ಲೂಕನ್ನು ಪುನರ್‌ವಿಗಂಡಣೆ ಮಾಡಿದ ಹಾಗೆ ಆಗುತ್ತದೆ. ಆ ಕೆಲಸವನ್ನು ಮಾಡಿಕೊಟ್ಟರೆ ಖಂಡಿತವಾಗಿ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಶ್ರೀಮತಿ ಮೋಟಮ್ಮ : ನನಗೆ ಪೂರ್ತಿಯಾಗಿ ಉತ್ತರವನ್ನೇ ಕೊಟ್ಟಿಲ್ಲ. ಕಟ್ಟಡಗಳ ಬಗ್ಗೆ ಕುಡಿಯುವ ನೀರಿನ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಿಸ್ಟ್ರಿಕ್ಟ್ ರೀ ಆರ್ಗನೈಜೇಷನ್ ಬಗ್ಗೆ ಏನು ಹೇಳಿದ್ದಾರೆ. ಮೂರು ಸಮಿತಿಗಳು ವರದಿಯನ್ನು ಕೊಟ್ಟಿರುವುದು ನಿಜ. ಅವರ ಅನಿಸಿಕೆ ಏನಿದೆ ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನನಗೂ ಅದರ ಬಗ್ಗೆ ಕಂಪ್ಲೀಟ್ ಸಿಂಪತಿ ಇದೆ. ನನಗೂ ಮಾಡಬೇಕೆನ್ನತಕ್ಕ ಮನಸ್ಸು ಇದೆ. ಆದರೆ ಹಣದ ಕೊರತೆ ಇರುವ ಕಾರಣ ಇದು ಆಗುತ್ತಿಲ್ಲ. ಎಷ್ಟು ಬೇಗ ಆಗುತ್ತದೆ ಅಷ್ಟು ಒಳ್ಳೆಯದೆಂದು ಎಲ್ಲರ ಭಾವನೆ ಇದೆ. ಅದಕ್ಕಾಗಿಯೇ ನಾವು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದುದು.

ಶ್ರೀ ಜಿ. ರಾಜೂಗೌಡ : ಕೇರಳದಲ್ಲಿ ಮಾಡುತ್ತಿದ್ದಾರೆ, ತಮಿಳುನಾಡಿನಲ್ಲಿ ಮಾಡುತ್ತಿದ್ದಾರೆ, ಕರ್ನಾಟಕದಲ್ಲಿ ಏತಕ್ಕೆ ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು 30 ತಾಲ್ಲೂಕ್‌ಗಳನ್ನು ಮಾಡಬೇಕಾಗಿದೆ. 8 ಜಿಲ್ಲೆಗಳನ್ನು ಹೊಸದಾಗಿ ಮಾಡಬೇಕಾಗಿದೆ. ಇವು ಆದರೆ ಅನೇಕ ಕಡೆ ಅಡ್ಮಿನಿಸ್ಟ್ರೇಷನ್‌ಗೆ ಒಳ್ಳೆಯದಾಗುತ್ತದೆ ಮತ್ತು ಜನರಿಗೆ ಇದರಿಂದ ಪ್ರಯೋಜನವಾಗುತ್ತದೆ ಎನ್ನುವಂತಹ ಭಾವನೆ ಸರ್ಕಾರದ್ದು ಇದೆ. ಅದಕ್ಕಾಗಿ ಹಣದ ಕೊರತೆ ಕಡಿಮೆ ಆದಮೇಲೆ ಇದನ್ನು ಬೇಗನೇ ತೀರ್ಮಾನ ತೆಗೆದುಕೊಳ್ಳಬಹುದು. ನಾನೂ ಸಹ ಮುಖ್ಯಮಂತ್ರಿಗಳಿಗೂ ಕೂಡ ಮನವಿ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗನೇ ಮಾಡಿಕೊಡುವಂತಹ ಪ್ರಯತ್ನ ಮಾಡುತ್ತೇವೆ.

ಡಾ: ವೈ. ನಾಗಪ್ಪ : ಮಾನ್ಯ ಮಂತ್ರಿಗಳು ಅವರ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಸಾಕಷ್ಟು ಸಲಹೆಗಳನ್ನು ಕೊಡಲಿಲ್ಲ ಅಂತ ಹೇಳಿದರು. If the Hon'ble Minister goes through the old records as well as the present records, every hon.member of this House has given so many valuable suggestions. But, in my opinion, they have remained as tomb stone on the grave-yard. That is my suggestion. It is my strong objection. Regarding this natural calamity, specially this fire accidents ಗೆ ಸರ್ಕಾರದವರು 300 ರೂಪಾಯಿ, 500 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸುಮಾರು 6 ತಿಂಗಳು, ಒಂದು ವರ್ಷದಿಂದ ಕೆಲವು ಮನೆಗಳು ಸುಟ್ಟು ಹೋಗಿದ್ದರೂ ಇವೊತ್ತಿನವರೆವಿಗೂ ಅವರಿಗೆ ಪರಿಹಾರ ಕೊಟ್ಟಿಲ್ಲ. ತಹಶೀಲ್ದಾರ್ ಅವರನ್ನು ಕೇಳಿದರೆ ಅವರು, 'ಆ ಪರ್ಟಿಕುಲರ್ ಹೆಡ್‌ಗೆ ಡೆಪ್ಯೂಟಿ ಕಮಿಷನರ್‌ರವರು ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಾರೆ. Is it not an emergency? That is my first question. ಇವರು ಕೊಡುವ 500 ರೂಪಾಯಿಗಳಿಗೆ ಬಡವರು, ಹರಿಜನ-ಗಿರಿಜನರು ಪ್ರತಿ ದಿವಸ ತಾಲ್ಲೂಕಿಗೆ ಬಂದು ತಾಲ್ಲೂಕು ಕಛೇರಿ ಹತ್ತಿರ ಕಾಯುವುದಕ್ಕೆ ಅವರಿಗೆ ಎಷ್ಟು ದುಡ್ಡು ಖರ್ಚಾಗುತ್ತದೆ? ಅವರು ಕೂಲಿ ಮಾಡಿ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಈ ಸಮಯದಲ್ಲಿ ನಾವು ಯೋಚನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, under rural development, I am suggesting the Hon'ble Minister ಇಂಗ್ಲೀಷ್‌ನಲ್ಲಿ ಒಂದು ಗಾದೆ ಹೇಳುತ್ತಾರೆ.

ಉಪಾಧ್ಯಕ್ಷಿಣಿಯವರು : ಸಬ್ಜೆಕ್ಟೀವ್ ಆಗಿ ಏನು ಕೇಳುತ್ತಿದ್ದೀರಿ, ಅದನ್ನು ಕೇಳಿ. ಪೀಠಿಕೆ ಏನೂ ಬೇಡ.

ಡಾ: ವೈ. ನಾಗಪ್ಪ : ಈಗ this ZP has been proved beyond doubt that it is of no use. In my opinion it is better to tighten the old horse rather than to train a new horse. ಏಕೆಂದರೆ, ಜಿಲ್ಲಾ ಪರಿಷತ್‌ನಲ್ಲಿ 81 ಪರ್ಸೆಂಟ್ ದುಡ್ಡನ್ನು ಖರ್ಚು ಮಾಡಿದ್ದೇವೆಂದು ಇವರು ಹೇಳುತ್ತಾರೆ. ಅದೇ ರೀತಿ ಎಷ್ಟು ಕೆಲಸವಾಗಿದೆ? ಎಷ್ಟು ಒಳ್ಳೆಯ ಕೆಲಸವಾಗಿದೆ? ಎಷ್ಟು ಪರ್ಸೆಂಟ್ ಕೆಲಸವಾಗಿಲ್ಲ ಎಂಬುದನ್ನು ಮಂತ್ರಿಗಳು ತಿಳಿಸುತ್ತಾರೆಯೇ? ಜನರ ಕಣ್ಣಿಗೆ ಮಣ್ಣೆರಚಿ ರಸ್ತೆಗೆ ಮಣ್ಣು ಹಾಕುವುದಕ್ಕಾಗಿ ದುಡ್ಡನ್ನು ತೆಗೆದುಕೊಳ್ಳುತ್ತೇವೆ. ನಾನು ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಪ್ರತಿಯೊಂದು ಮಂಡಲ ಪಂಚಾಯಿತಿಯಲ್ಲಿ 5 ವರ್ಷಗಳ ಅವಧಿಯಲ್ಲಿ ಕನಿಷ್ಠ ಪಕ್ಷ 25 ಕಿಲೋಮೀಟರ್ ಟಾರ್ ರೋಡ್ ಮಾಡಿಸಬೇಕು. ಈ ರೋಜ್‌ಗಾರ್ ಯೋಜನೆಯಲ್ಲಿ ರಸ್ತೆಗೆ ಮಣ್ಣನ್ನು ಹಾಕಿಸುವುದನ್ನು ಬಿಟ್ಟು, ಟಾರ್ ರೋಡ್ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

At least in 5 years they should make arrangements to implement the scheme of making 25 KMs tar road in Mandal Panchayats if at all this ZPs exist in the State? Whether the Minister is interested to convert the Gomal land and Lambani tandas as revenue villages. These are

all my 3 questions: I want the Minister to answer and this should be implemented. I am asking this on behalf of the house.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಸರ್ವೆ ಸೆಟ್ಲ್‌ಮೆಂಟ್ ವಿಚಾರದಲ್ಲಿ 30 ವರ್ಷಗಳಲ್ಲಿ ರೀ-ಸರ್ವೆ ಆಗಬೇಕೆಂದು ಸರ್ಕಾರದಲ್ಲಿ ನಿಯಮ ಇದೆ. ಈಗ ಮಂತ್ರಿಗಳು ಹೇಳಿದ ಹಾಗೆ 30 ವರ್ಷಗಳಲ್ಲ, 130 ವರ್ಷಗಳಾಗಿದೆ ಎಂದು. ಇದಕ್ಕೆ ಸ್ಟಾಫ್ ಮತ್ತು ದುಡ್ಡು ಬೇಕೆಂದು ಮಾನ್ಯ ಮಂತ್ರಿಗಳು ಹೇಳುದರು. ನಿಜಕ್ಕೂ ಸ್ಟಾಫ್ ಬೇಕಾಗುತ್ತದೆ. ಈಗ ಎಷ್ಟೋ ಭೂಮಿಗಳು ಏನಾಗಿದೆಯೆಂದರೆ, ಡ್ರೈಲ್ಯಾಂಡ್ ಹೋಗಿ ಗಾರ್ಡನ್ ಲ್ಯಾಂಡ್, ವೆಟ್ ಲ್ಯಾಂಡ್ ಆಗಿದೆ. ಇದು ಕ್ಲಾಸಿಫಿಕೇಶನ್ ಆದರೆ ಸರ್ಕಾರಕ್ಕೆ ಹೆಚ್ಚು ದುಡ್ಡು ಬರುತ್ತದೆ. ಆದುದರಿಂದ, ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಈ ರೀ-ಸರ್ವೆಯನ್ನು ಆದಷ್ಟು ಬೇಗ ಮಾಡಿಸಿದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎರಡನೆಯದಾಗಿ, ಬೇಲೂರು ತಾಲ್ಲೂಕಿನಲ್ಲಿರುವ ತಾಲ್ಲೂಕು ಆಫೀಸ್ ಬಿಲ್ಡಿಂಗ್ ನೂರು ವರ್ಷ ಹಳೆಯದಾಗಿದ್ದು, ಆ ಬಿಲ್ಡಿಂಗ್ ಅನ್ನು ಕೆಡವಬೇಕೆಂದು ಸುಮಾರು ವರ್ಷಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಆದರೆ, ಇವೊತ್ತಿನವರೆವಿಗೂ ಆ ಕೆಲಸ ಮಾಡಿಲ್ಲ. ಈಗ ಮಿನಿ ವಿಧಾನಸೌಧವನ್ನು ಕಟ್ಟುವುದಕ್ಕೆ ಅಂದಾಜು ಮಾಡಿ ಎಲ್ಲವನ್ನೂ ತಯಾರಿಸಿ ಸರ್ಕಾರಕ್ಕೆ ಕಳುಹಿಸಿದ್ದೇವೆ. ದಯಮಾಡಿ ಮಾನ್ಯ ಮಂತ್ರಿಗಳು ಅದಕ್ಕೆ ಅಂಗೀಕಾರ ಕೊಡಬೇಕು. ಮತ್ತು ಮೂರನೆಯದಾಗಿ, ಕುಡಿಯುವ ನೀರಿನ ವಿಚಾರದ ಬಗ್ಗೆ. ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ನಮ್ಮ ಮಲೆನಾಡು ಪ್ರದೇಶ ಬೆಟ್ಟ-ಗುಡ್ಡ, ಸೀಮೆ ಪ್ರದೇಶವಾದ್ದರಿಂದ ಕುಡಿಯುವ ನೀರಿಗಾಗಿ ಬಾವಿ ಕೊರೆದರೆ, ಬಾವಿಗಳಲ್ಲಿ ನೀರು ಬರುವುದಿಲ್ಲ. ಜೊತೆಗೆ ನಮ್ಮಲ್ಲಿ ಬೋರ್‌ವೆಲ್ ರಿಗ್ ಮೆಷಿನ್‌ಗಳು ಸಾಕಷ್ಟಿಲ್ಲದೆ ಬಾವಿ ಕೊರೆಯುವುದಕ್ಕಾಗುತ್ತಿಲ್ಲ. ಹಾಸನ ಜಿಲ್ಲೆಯಲ್ಲಿ 3-4 ರಿಗ್ ಮೆಷಿನ್‌ಗಳಿವೆ. ನಮ್ಮ ಒಂದೊಂದು ತಾಲ್ಲೂಕಿನಲ್ಲೂ 70-80 ಬಾವಿಗಳು ಬೇಕಾಗಿದೆ. ಆದುದರಿಂದ, ಬಯಲು ಸೀಮೆಗೆ ನೀವು ಬೋರ್‌ವೆಲ್‌ಗಳನ್ನು ಅಪ್ಲೈ ಮಾಡುತ್ತೀರಿ, ಮಲೆನಾಡಿಗೆ ಅಪ್ಲೈ ಮಾಡುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ಅಂತರ್ಜಲ ಬಹಳ ಕೆಳಮಟ್ಟಕ್ಕೆ ಹೋಗಿರುವುದರಿಂದ ಆದಷ್ಟು ಬೇಗ ಬಾವಿಗಳನ್ನು ಕೊರೆಯುವುದಕ್ಕೆ ರಿಗ್ ಮೆಷಿನ್‌ಗಳನ್ನು ಒದಗಿಸಬೇಕು. ಸರ್ಕಾರದವರು ರಿಗ್ ಮೆಷಿನ್‌ಗಳನ್ನು ಒದಗಿಸುವುದಕ್ಕಾಗುವುದಿಲ್ಲ. ಏಕೆಂದರೆ, ಸರ್ಕಾರದ ಹತ್ತಿರ ಅಷ್ಟೊಂದು ಮಿಷಿನ್‌ಗಳಿಲ್ಲ. ಕನಿಷ್ಟ ಪಕ್ಷ ನೀರಿನ ಅಗತ್ಯತೆಯನ್ನು ಮನಗಂಡು, ಈ ಕೆಲಸವನ್ನು ಪ್ರೈವೇಟ್‌ನವರಿಗೆ ಕೊಟ್ಟು ರಿಗ್ ಮೂಲಕ ಬಾವಿಗಳನ್ನು ಕೊರೆಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯಮಾಡುತ್ತೇನೆ.

ಶ್ರೀ ಎಂ. ಮುನಿಸ್ವಾಮಿ : ಮಾನ್ಯ ಉಪಸಭಾಧ್ಯಕ್ಷಿಣಿಯವರೆ, ಬೆಂಗಳೂರು ನಗರದಲ್ಲಿ ನನಗೆ ಗೊತ್ತಿರುವ ಹಾಗೆ ಸುಮಾರು 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿದೆ. ಇಲ್ಲಿ ರತಕ್ಕಂಥ ತಹಶೀಲ್ದಾರರು ಇಬ್ಬರು. ಒಂದು, ಬೆಂಗಳೂರು ಉತ್ತರ, ಇನ್ನೊಂದು ಬೆಂಗಳೂರು ದಕ್ಷಿಣ. ಇದರಲ್ಲಿ ಎರಡು ಗ್ರಾಮಾಂತರ ತಾಲ್ಲೂಕುಗಳು ಸೇರಿಕೊಂಡಿವೆ. ಒಂದು ಬೆಂಗಳೂರು ಉತ್ತರ ತಾಲ್ಲೂಕು, ಮತ್ತೊಂದು ದಕ್ಷಿಣ ತಾಲ್ಲೂಕು. ಯಾವುದಾದರೊಂದು ಕ್ಯಾಸ್ಟ್ ಸರ್ಟಿಫಿಕೇಟ್ ಆಗಲಿ, ಇನ್‌ಕಮ್ ಸರ್ಟಿಫಿಕೇಟ್ ಆಗಲಿ, ವಿಡೋ ಪೆನ್‌ಷನ್ ಆಗಲಿ ಓಲ್ಡೇಜ್ ಪೆನ್ಷನ್ ಆಗಲಿ ಮತ್ತು ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಪೆನ್ಷನ್ ತೆಗೆದುಕೊಳ್ಳಬೇಕಾದರೆ ತಹಶೀಲ್ದಾರರುಗಳ ಹತ್ತಿರ ಹೋಗಬೇಕಾಗಿದೆ.

ಆದರೆ, ಇಬ್ಬರೂ ತಹಶೀಲ್ದಾರರುಗಳು ಆಫೀಸಿನಲ್ಲಿ ಸಿಗುವುದಿಲ್ಲ. ನಾನು ಮಂತ್ರಿಗಳಿಗೆ ಸಲಹೆ ಕೊಡುತ್ತಿದ್ದೇನೆ. ಇಷ್ಟು ಜನಸಂಖ್ಯೆಗೆ ಇಬ್ಬರು ತಹಶೀಲ್ದಾರರು ಇರುವುದು ಸಾಧ್ಯವಿಲ್ಲ. ಆದುದರಿಂದ ಅಲ್ಲಿಗೆ ಮಾನ್ಯ ಮಂತ್ರಿಗಳು ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಿ Income certificate or physically handicapped pension old-age pension, widow, pension ತೆಗೆದುಕೊಳ್ಳುವ ಬಗ್ಗೆ ಆಗಲಿ, ಆದಾಯ ಪತ್ರವನ್ನು ತೆಗೆದುಕೊಳ್ಳುವ ಬಗ್ಗೆಯಾಗಲಿ ತೊಂದರೆಯನ್ನು ಪಡತಕ್ಕ ಜನರಿಗೆ ಸೌಲಭ್ಯವನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ಅಲ್ಲಿರತಕ್ಕ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ವಿಚಾರದ ಬಗ್ಗೆ ಹಿಂದೆ ಇದ್ದಂಥ ಕಂದಾಯ ಸಚಿವರಾದ ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರು ಈ ಸದನದಲ್ಲಿ ಉತ್ತರವನ್ನು ಕೊಡುವಾಗ ಆಶ್ವಾಸನೆಯನ್ನು ಕೊಟ್ಟಿದ್ದರು. ಆದುದರಿಂದ ನಾನು ಮಾನ್ಯ ಕಂದಾಯ ಸಚಿವರಾದ ಖರ್ಗೆಯವರಲ್ಲಿ ಈ ವಿಚಾರವನ್ನು ಕೇಳುತ್ತಿದ್ದೇನೆ. ದಯಮಾಡಿ ಈ civil area ಇರತಕ್ಕ 4 ವಿಧಾನಸಭಾ ಕ್ಷೇತ್ರಗಳು ಏನು ಇವೆ, ಅಲ್ಲಿಗೆ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಈ.ಟಿ. ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷಿಣಿಯರೆ, ಈಗ ಜಿಲ್ಲಾ ಪರಿಷತ್ತಿಗೆ 2-3 ದಿನಗಳ ಹಿಂದೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ತಮಗೆ ಗೊತ್ತಿರುವ ಹಾಗೆ ನಾನ್ ಪ್ಲಾನಿಂಗ್‌ನಲ್ಲಿ ZP ಗೆ ಬಿಡುಗಡೆ ಮಾಡಿದಂಥ ಹಣವೇನು ಇದೆ ಅದನ್ನು ಮಾರ್ಚ್ 31ರೊಳಗೆ ಮಾಡಬೇಕಾಗುತ್ತದೆ. ಇನ್ನು 15 ದಿನದಲ್ಲಿ ಎಸ್ಟಿಮೇಟ್ ತಯಾರು ಮಾಡಿ, ಬಿಲ್ಲನ್ನು ಮಾಡಿ ಕೆಲಸ ಮಾಡಿದರೆ ಅದು ಎಷ್ಟರಮಟ್ಟಿಗೆ ಕೆಲಸ ಪರಿಪೂರ್ಣವಾಗುತ್ತದೆ ಎನ್ನತಕ್ಕದನ್ನು ಸರ್ಕಾರ ಆಲೋಚನೆ ಮಾಡಬೇಕು. ಈ ದಿಕ್ಕಿನಲ್ಲಿ ಹಣವನ್ನು ಬಿಡುಗಡೆ ಮಾಡಿದಮೇಲೆ ಅದನ್ನು ಖರ್ಚು ಮಾಡಲು 3 ತಿಂಗಳಾದರು ಅವಕಾಶ ಕೊಡಬೇಕು, ಆಗ ಮಾತ್ರ ಕೆಲಸಗಳು ಪರಿಪೂರ್ಣವಾಗಿ ಆಗಲು ಅವಕಾಶವಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ : ಉಪಾಧ್ಯಕ್ಷಿಣಿಯರೆ, 'ಆಶ್ರಯ' ಯೋಜನೆಯಡಿಯಲ್ಲಿ ಸುಮಾರು ಮೂರುವರೆ ಲಕ್ಷ ಸೈಟುಗಳನ್ನು ಕೊಟ್ಟಿದ್ದೇವೆ, ಇನ್ನೂ ಮೂರು ಲಕ್ಷ ಸೈಟುಗಳನ್ನು ಕೊಡತಕ್ಕ ಯೋಜನೆಯನ್ನಿಟ್ಟುಕೊಂಡಿದ್ದೇವೆಂದು ಸನ್ಮಾನ್ಯ ಸಚಿವರು ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಹೇಳಿದರು. ಅದಕ್ಕೆ ಮಾರಕವಾಗಿರತಕ್ಕದ್ದು ಯಾವ ಗ್ರಾಮಗಳಲ್ಲಿ ಶೇಂದಿ ವನಗಳಿರುತ್ತವೆ, ಅಂದರೆ ನಮ್ಮ ಕ್ಷೇತ್ರದಲ್ಲಿ, ನಮ್ಮ ಜಿಲ್ಲೆಯಲ್ಲಿ, ಹಳೆ ಮೈಸೂರು ಭಾಗದಲ್ಲಿ ಶೇಂಧಿ ವನಗಳು ಜಾಸ್ತಿ. ಅಲ್ಲಿ ಗಿಡಗಳಿಲ್ಲ ಏನೂ ಇಲ್ಲ. ಆ ಕಾರಣಕ್ಕಾಗಿ ಅದನ್ನು ಕೊಡಲು ಬರುತ್ತಿಲ್ಲವೆಂದು, ತಹಶೀಲ್ದಾರರು ಕೂಡ ಅದನ್ನು ಒಪ್ಪುತ್ತಿಲ್ಲ. ಶ್ರೀಮಾನ್ ಧರ್ಮಸಿಂಗ್‌ರವರು ಇಲ್ಲಿಯೇ ಇದ್ದಾರೆ, ಕೊನೆಯ ಪಕ್ಷ ಆಶ್ರಯ ಯೋಜನೆಯಡಿಯಾದರೂ ಕೂಡ ಸೈಟುಗಳನ್ನು ಕೊಡತಕ್ಕ, ವಿತರಣೆ ಮಾಡತಕ್ಕಂಥ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳದಿದ್ದರೆ ಕಷ್ಟವಾಗುತ್ತದೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಮತ್ತೆ ಹರಿಜನರಿಂದ ಜಮೀನುಗಳನ್ನು ಕೊಂಡುಕೊಂಡ ಮೇಲೆ ಅವರಿಂದ ವಾಪಸ್ ಪಡೆದ ಮೇಲೆ ಅವರನ್ನು ಅಭಿವೃದ್ಧಿ ಮಾಡುವುದಕ್ಕೆ, ಅವರಿಗೆ ಪರಿಹಾರವನ್ನುಕೊಡುವುದರ ಬಗ್ಗೆ ಹೈಕೋರ್ಟ್ ಸಪರೇಟ್ ಆದ ಒಂದು ಲೆಜಿಸ್‌ಲೇಷನ್ ಮಾಡಬೇಕು ಎನ್ನತಕ್ಕ ಒಂದು ಆದೇಶವನ್ನು ಮಾಡಿದೆ. ಅದರ ಬಗ್ಗೆ ಇಲ್ಲಿಯವರೆಗೂ ಸರ್ಕಾರ ಮೌನವಾಗಿರಲು ಕಾರಣವೇನು? ಇಲ್ಲಿಯವರೆಗೂ ಅದರ ಬಗ್ಗೆ ಯಾವುದೇ ತರವಾದಂಥ ಪ್ರಸ್ತಾಪ ಬಂದಂತಿಲ್ಲ ಅದಕ್ಕೆ ಕಾರಣವೇನು? ಮಳೆಯಿಂದ ಸಾಕಷ್ಟು ಅನೂಹುತವಾಗಿ ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟಿದ್ದೀರಿ ಅದನ್ನು ನಾನು ಸ್ವಾಗತ

ಮಾಡುತ್ತೇನೆ. ಆದರೆ ಇಲ್ಲಿ ಏನಾಗಿದೆ ಎಂದರೆ ಅನೇಕ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಂದಿದೆ. ಅಲ್ಲಿ ಹಾನಿಯಾಗಿರತಕ್ಕದನ್ನು ಬಿಟ್ಟು ಬೇರೆ ಕೆಲಸವನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ನಡೆಯುತ್ತಿದೆ. ಆದುದರಿಂದ ತುಮಕೂರು ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ಕೊನೆಯದಾಗಿ ಈ ಪರಿಹಾರವನ್ನು ಕೊಡಬೇಕಾದರೆ ನಿಮ್ಮ ಅಸಿಸ್ಟೆಂಟ್ ಕಮಿಷನರ್‌ಗಳೇ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳಾಗಿರುತ್ತಾರೆ. ಅವರಿಗೆ ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಪ್ರಶ್ನೆಯನ್ನು ಹಾಕಿದ್ದೆ ಆದರೆ ಉತ್ತರ ಬಂದಿಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಎಕರೆ ಅಕ್ವೈರ್ ಮಾಡುವುದಕ್ಕೆ ಗೊಲ್ಲರಹಟ್ಟಿ ಕೆರೆ ಎಂದು ಅಲ್ಲ, ಒಂದು ಎಕರೆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ 12 ಲಕ್ಷ ಕಾಂಪೆನ್‌ಸೇಷನ್‌ನ್ನು ರಾಜ್ಯದ ಅಸಿಸ್ಟೆಂಟ್ ಕಮಿಷನರ್‌ರವರು ಕೂಡ ಕೊಟ್ಟಿದ್ದಾರೆ. ಅದನ್ನು ಹೇಗೆ ಕೊಟ್ಟಿದ್ದಾರೆ? ಅವರಿಗೆ ಏನಾದರೂ ನಿರ್ದೇಶನವಿದೆಯೋ ಅದಕ್ಕೆ ಏನಾದರೂ ಕಾನೂನು ಇದೆಯೋ ಎನ್ನುವುದನ್ನು ಕೂಡ ವಿಚಾರ ಮಾಡುತ್ತೀರಾ? ಏಕೆಂದರೆ ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಇದು ಆಗದೇ ಇರತಕ್ಕಂಥದ್ದು, ಒಂದು ಎಕರೆಗೋಸ್ಕರ 12 ಲಕ್ಷ ರೂಪಾಯಿ ಕಾಂಪೆನ್‌ಸೇಷನ್ ಕೊಟ್ಟಿರತಕ್ಕಂಥದ್ದು ನನ್ನ ಕ್ಷೇತ್ರದಲ್ಲಿ ಆಗಿದೆ. ಅದರ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಕೆ. ಗಂಗಾಧರ ಗೌಡ : ಮಾನ್ಯ ಅಧ್ಯಕ್ಷಣಿಯವರೇ ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿರಿಯ ಎನ್ನುವಂತಹ ಗ್ರಾಮದಲ್ಲಿ 20 ಸಾವಿರ ಎಕರೆಯನ್ನು ಕೆಲವು ಭೂ-ಮಾಲೀಕರು ಸುಳ್ಳು ಮಾಹಿತಿಯನ್ನು ಒದಗಿಸಿಕೊಟ್ಟು ಭೂ ಸುಧಾರಣಾ ಕಾನೂನು 66ರ ಪ್ರಕಾರ ಸ್ವಾಧೀನಪಡಿಸಿಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೋಗಿದೆ. ಆದರೂ ಕೂಡ ಭೂ-ಮಾಲೀಕರು ಸರ್ಕಾರದ ಮೇಲೆ ಪ್ರಭಾವವನ್ನು ತಂದು ಆ 20 ಸಾವಿರ ಎಕರೆಯನ್ನು ತನ್ನದಾಗಿಸಿಕೊಂಡಿದ್ದಾರೆ. ಸರ್ವೇಯರ್‌ಗಳು ಕೂಡ ಸುಳ್ಳು ಡಿಕ್ಲರೇಷನ್‌ಗಳನ್ನು ಕೊಟ್ಟು ಅಲ್ಲಿ ಭೂ-ಮಾಲೀಕರ ಪರವಾಗಿ ಜಮೀನನ್ನು ಕೊಡಲು ಸಹಾಯ ಮಾಡಿದ್ದಾರೆ. ಇದು ಪಶ್ಚಿಮ ಘಟ್ಟದಲ್ಲಿ ಇದೆ. ಸಕಲೇಶಪುರದಲ್ಲಿ ಒಂದು ಜಮೀನನ್ನು ಸರ್ಕಾರ ಉಳಿಸಿಕೊಳ್ಳುವುದಕ್ಕಾಗಿ ಸ್ಪೆಷಲ್ ಆಫೀಸರ್‌ನ್ನು ನೇಮಕ ಮಾಡಿ ತಾವು ತನಿಖೆಯನ್ನು ಹೇಗೆ ಮಾಡಿದ್ದೀರೋ ಅದೇ ರೀತಿಯಲ್ಲಿ 20 ಸಾವಿರ ಎಕರೆಯ ಬಗ್ಗೆ ತನಿಖೆ ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂಕಿ ಜಮೀನನ್ನು ಸಣ್ಣಸಣ್ಣ ರೈತರು ಸಾಗುವಳಿ ಮಾಡಿಕೊಂಡು ಕೃಷಿ ಮಾಡಿದ್ದಾರೆ. ನಿಮ್ಮ ಕಾನೂನು ಪ್ರಕಾರ ಅವರಿಗೆ ನಾವು ಇವತ್ತು ಜಮೀನು ಕೊಡುವುದಕ್ಕಾಗುವುದಿಲ್ಲ. ಅದನ್ನೂ ಕೂಡ ನೀವು ರೈತರಿಗೆ ಸಕ್ರಮ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಮೂರನೆಯದಾಗಿ ನಮ್ಮನ್ನು ನೀವು ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಇದರಿಂದ ಹೆಚ್ಚಿನ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಿದ್ದೀರಿ. ಒಂದೊಂದು ರೆಕಾರ್ಡ್ ಮಾಡಲಿಕ್ಕೆ ರೆವಿನ್ಯೂ ಅಧಿಕಾರಿಗಳು ಒಂದು ಸಾವಿರ, ಎರಡು ಸಾವಿರ ಲಂಚ ಕೇಳುವಂತಹ ಪರಿಸ್ಥಿತಿಯಲ್ಲಿದ್ದಾರೆ. ರೆಕಾರ್ಡ್ ಮಾಡಿಕೊಡುವಂತಹ ಸಂದರ್ಭದಲ್ಲಿ ಇಷ್ಟು ನಮಗೆ ಲಂಚ ಬೇಕೆಂದು ಅವರು ಕೇಳುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಅಧಿಕಾರವನ್ನು ನಮಗೆ ಕೊಡುತ್ತೀರಾ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಸಿ.ಆರ್. ಸಾಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಇಡೀ ರಾಜ್ಯದಲ್ಲಿ ಅನೇಕ ಗ್ರಾಮಗಳಲ್ಲಿ ಬರಿಯಲ್ ಗ್ರೌಂಡ್‌ನ್ನು

ಒತ್ತುವರಿ ಮಾಡಿದ್ದಾರೆ. ಇದನ್ನು ಖುಲ್ಲಾ ಮಾಡುವುದಕ್ಕಾಗಿ ಯಾವುದೇ ತರಹದ ಕಾನೂನನ್ನು ಮಂತ್ರಿಗಳು ತರುತ್ತಾರೆಂದು ನಾನು ಅವರಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ ನನ್ನ ಕ್ಷೇತ್ರವಾದ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ರೆವಿನ್ಯೂ ಇಲಾಖೆಯ ಬಗ್ಗೆ ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ, ಆದರೆ ಇದಕ್ಕೆ ಇಲ್ಲಿಯವರೆಗೆ ಉತ್ತರವನ್ನು ನನಗೆ ಕೊಡಲಿಲ್ಲ. ಇದು ನನ್ನ ತಾಲ್ಲೂಕಿಗೆ ಸಂಬಂಧಪಟ್ಟಿದ್ದುದು. ರೆವಿನ್ಯೂ ಇಲಾಖೆಯಲ್ಲಿ ಒಂದು ಬೋಗಸ್ ಸಾಗುವಳಿ ಚೀಟಿ ಪ್ರಕರಣ ನಡೆದಿದ್ದು, ಇದರಲ್ಲಿ ಬಹುಶಃ 10 ಸಾವಿರ ಎಕರೆಯಷ್ಟು ಭೂಮಿಯನ್ನು ಬೋಗಸ್ ಸಾಗುವಳಿ ಚೀಟಿ ಮುಖಾಂತರವಾಗಿ ಸಾರ್ವಜನಿಕರಲ್ಲಿ ಹಂಚಿಕೊಂಡಿದ್ದಾರೆ. ಇದು ಅನೇಕ ಶ್ರೀಮಂತರಿಗೆ ಸಿಕ್ಕಿದಂತೆ ಈ ಸಾಗುವಳಿ ಚೀಟಿಯನ್ನು ಖಾತೆ ಬದಲಾವಣೆಯಾಗಲಿ, ಸಿ.ಆರ್.ಸಿ. ಗಳಾಗಿ ಆಗಿರುವಂಥದ್ದು ನನ್ನ ಗಮನಕ್ಕೆ ಹಾಗೂ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಬಂದಿದೆ. ಆದರೆ ಬಡವರಿಗೆ ಸಿಕ್ಕಿದಂಥ ಈ ಖೋಟಾ ಸಾಗುವಳಿ ಚೀಟಿಯನ್ನು ಇವತ್ತಿನವರೆಗೂ ಖಾತೆಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಥವಾ ಅವರಿಗೆ ಅದರಿಂದ ಅನುಕೂಲವಾಗುವಂತಹ ಯಾವುದೇ ರೀತಿಯಲ್ಲಿ ಸರ್ಕಾರದವರಾಗಲಿ, ಅಧಿಕಾರಿಗಳಾಗಲಿ ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅದಕ್ಕಾಗಿ ಯಾವ ರೀತಿಯಲ್ಲಿ ತಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೆಂದು ಹೇಳಬೇಕಾಗಿ ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ನಮ್ಮ ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಈ ಎಸ್.ಸಿ.ಪಿ. ಕಾರ್ಯಕ್ರಮದಲ್ಲಿ 100 ಬಾವಿ ಯೋಜನೆ ಮತ್ತು ದಶಲಕ್ಷ ಬಾವಿ ಯೋಜನೆಗಳು ಇದ್ದು ಈ ಎಸ್.ಸಿ.ಪಿ. ಕಾರ್ಯಕ್ರಮದಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂದರೆ ತಪ್ಪಾಗಲಾರದು. ಏಕೆಂದರೆ ಇದು ಒಂದು ಕಡೆ ಬಾವಿ ತೆಗೆದಾಗ, ಮೋಟಾರ್ ಇಳಿಸುವುದಕ್ಕೆ ಒಂದು ವರ್ಷ ಕಾಲ ಬೇಕು. ಮೋಟಾರ್ ಇಳಿಸಿದ ನಂತರ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಬೇಕು.

ಉಪಾಧ್ಯಕ್ಷಿಣಿಯವರು : ಭಾಷಣ ಮಾಡುವುದಕ್ಕೆ ಟೈಂ ಇಲ್ಲ.

ಎಸ್.ಸಿ.ಪಿ. ಕಾರ್ಯಕ್ರಮದಲ್ಲಿ ಎಸ್.ಸಿ / ಎಸ್.ಟಿ.ಯವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಆದುದರಿಂದ ಮಾನ್ಯ ಮಂತ್ರಿಗಳು ಚಿಕ್ಕಮಗಳೂರು ಇಡೀ ಜಿಲ್ಲೆಯಲ್ಲಿ ಎಸ್.ಸಿ.ಪಿ. ಯೋಜನೆಗಳಲ್ಲಿ ಬಾವಿಗಳನ್ನು ಏನು ತೋಡಿಸಿದ್ದಾರೆ, ಅದಕ್ಕೆ 3-4 ವರ್ಷಗಳಾದರೂ ಕೂಡ ಇವತ್ತಿನವರೆಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗಿಲ್ಲ. ಇದರಿಂದ ಅನ್ಯಾಯವಾಗಿದೆ. ಮಾನ್ಯ ಮಂತ್ರಿಗಳು ಅವರು ಏನು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಕೆ. ಶಿವರಾಮು : ಮಾನ್ಯ ಮಂತ್ರಿಗಳು ಜಿಲ್ಲಾ ಪರಿಷತ್ತಿನ ಕೆಲವು ಯೋಜನೆಗಳ ಪ್ರಗತಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಪ್ರಮುಖವಾಗಿ ಗಂಗಾಕಲ್ಯಾಣ ಎನ್ನತಕ್ಕ ಯೋಜನೆ ಇದೆ. ಅದರ ಬಗ್ಗೆ ಪ್ರಗತಿ ಏನೆಂದು ಮಂತ್ರಿಗಳು ಕೊಟ್ಟಿಲ್ಲ. ಅದರ ಬಗ್ಗೆ ವಿಶೇಷವಾಗಿ ಮಂತ್ರಿಗಳ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ ನಮ್ಮ ಜಿಲ್ಲೆಯಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮೈನರ್ ಇರಿಗೇಷನ್ ಹೆಡ್‌ನಲ್ಲಿ ಸಣ್ಣ ನೀರಾವರಿ ಯೋಜನೆಗೆ 10 ಲಕ್ಷ ರೂಪಾಯಿಯನ್ನು ಒದಗಿಸಿದ್ದಾರೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಿಂದ ಸಮಾಜ ಕಲ್ಯಾಣ ಇಲಾಖೆಯ ಮೂಲಕ 5.5 ಲಕ್ಷ ರೂಪಾಯಿಯನ್ನು ಒದಗಿಸಿದ್ದಾರೆ. ಇಲ್ಲಿಯವರೆಗೂ ಯಾವುದೇ ಒಂದು ಕೆಲಸವನ್ನು ತೆಗೆದುಕೊಳ್ಳತಕ್ಕಂಥ ಕಾರ್ಯ ಆಗಿಲ್ಲ. ಮಂತ್ರಿಗಳು ಅದರ ಬಗ್ಗೆ ಪ್ರಗತಿಯನ್ನು ಏನೂ ಹೇಳಿಲ್ಲ. ಇದು ಜಿಲ್ಲಾ ಪರಿಷತ್‌ನವರ

ಗಮನಕ್ಕೆ ಬಂದಿಲ್ಲವೆಂದು ನನಗೆ ಅನ್ನಿಸುತ್ತದೆ. ಈ ಯೋಜನೆ ಇರತಕ್ಕದ್ದು ವಿಶೇಷವಾಗಿ ಎಸ್‌ಸಿ/ ಎಸ್‌ಟಿ ಯವರಿಗೆ ಮತ್ತೆ ಬಡವರಿಗೆ ನೀರಾವರಿ ಸೌಲಭ್ಯವನ್ನು ಮಾಡುವುದಕ್ಕೋಸ್ಕರ. ಆದ್ದರಿಂದ ನನ್ನ ಕ್ಷೇತ್ರ ವಿಶೇಷವಾಗಿ ಬರಗಾಲ ಕ್ಷೇತ್ರವಾಗಿದೆ. ಈ ಯೋಜನೆಯ ಅವಶ್ಯಕತೆ ಬಹಳ ಇರುವುದರಿಂದ ತಾವು ಗಮನವನ್ನು ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ : ನಮ್ಮ ರಾಜ್ಯದಲ್ಲಿ ವಕ್ಫ್ ಪ್ರಾಪರ್ಟಿ ಎನ್‌ಕ್ರೋಚ್ ಆಗಿದೆ. ಈ ಹಿಂದೆಯೂ ಸರ್ಕಾರ ವಕ್ಫ್ ಪ್ರಾಪರ್ಟಿ ಎನ್‌ಕ್ರೋಚ್‌ಮೆಂಟ್ ಅನ್ನು ತೆಗೆಯಬೇಕೆಂದು ಸರ್ಕಾರ ಹೇಳಿದ್ದರೂ ಇದುವರೆಗೂ ತೆಗೆದಿಲ್ಲ. ಅದಕ್ಕೋಸ್ಕರ ಪುನಃ ವಿಚಾರಮಾಡಬೇಕೆಂದು ಮಂತ್ರಿಯವರಿಗೆ ಸಲಹೆ ಮಾಡುತ್ತೇನೆ. ಎರಡನೆಯದಾಗಿ ಅರ್ಬನ್ ಏರಿಯಾ ಅಥವಾ ರೂರಲ್ ಏರಿಯಾ ಬಗರ್‌ಹುಕುಂಗೆ ಸರಿಯಾಗಿ ಲ್ಯಾಂಡ್ ಸರಿಯಾಗಿ ಸಿಕ್ಕುತ್ತಿಲ್ಲ. ಸತ್ತವರಿಗೂ ಸಿಗುವುದಿಲ್ಲ. ಅದರ ಸಲುವಾಗಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ವಕ್ಫ್ ಪ್ರಾಪರ್ಟಿ ಎಂಟರಿಸ್ ರೆವಿನ್ಯೂ ವಿಷಯದಲ್ಲಿ ತಹಶೀಲ್ದಾರರು ಆಗಲಿ, ಸಿಟಿ ಸರ್ವೆ ಆಗಲಿ ಸರಿಯಾಗಿ ಆಗಿಲ್ಲ, ಅದರ ಸಲುವಾಗಿ ಒಂದು ವಿಶೇಷ ಪಿರಿಯಡ್ ಕೊಟ್ಟು ನೋಟಿಫಿಕೇಶನ್ ಮಾಡಿ ರೀ ಸರ್ವೆ ಮಾಡಿ ಈ ವಕ್ಫ್ ಪ್ರಾಪರ್ಟಿ ರೀ ಎಂಟ್ರಿ ಮಾಡಬೇಕೆಂದು ನಾನು ಸಲಹೆಯನ್ನು ತಮ್ಮ ಮುಖಾಂತರ ಮಂತ್ರಿಯವರಿಗೆ ಕೊಡುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಗ್ರಾಮೀಣ ಯೋಜನೆಯಡಿಯಲ್ಲಿ ಕೊಟ್ಟಿದ್ದೇವೆ. ಆದರ ಅನುಷ್ಠಾನದಲ್ಲಿ ಹಲವಾರು ಕೋಟಿ ರೂಪಾಯಿಗಳು ಫಲಾನುಭವಿಗಳಿಗೆ ಸರಿಯಾಗಿ ಸಿಕ್ಕಿದೆ ಎನ್ನುವ ಬಗ್ಗೆ ಇದುವರೆಗೂ ಸರಿಯಾಗಿ ಮಾಹಿತಿ ಇಲ್ಲ. ಅದರ ಬಗ್ಗೆ ಒಂದು ವಿಜಿಲೆನ್ಸ್ ಸ್ಕ್ವಾಡ್ ಅನ್ನು ಇಟ್ಟು ನಮ್ಮ ಹಣ ಸರಿಯಾಗಿ ಖರ್ಚಾಗಿದೆಯೇ ಎನ್ನುವುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಅದರ ಜೊತೆಗೆ ನೆಹರು ರೋಜ್‌ಗಾರ್ ಯೋಜನೆಯ ಮೂಲಕ ಉದ್ಯೋಗ ಸೃಷ್ಠಿ ಮಾಡುವುದಕ್ಕೆ ಪರಿಸರ ನೈರ್ಮಲ್ಯ ಮಾಡುವುದಕ್ಕೋಸ್ಕರ ಇದುವರೆಗೂ ಸುಮಾರು 200 ಕೋಟಿ ರೂಪಾಯಿಗಳನ್ನು ನಾವು ಮಂಡಲ್ ಪಂಚಾಯತಿ ಮೂಲಕ ತೊಡಗಿಸಿದ್ದೇವೆ. ಆ ಹಣ ಸರಿಯಾಗಿ ವ್ಯಯ ಆಗಿದೆಯೆ ಎನ್ನತಕ್ಕದ್ದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಈಗಾಗಲೇ ಮಾನ್ಯ ಸದಸ್ಯರಾದಂಥ ರಾಜೂಗೌಡರು ಕೇಳಿದಂತೆ ಜಿಲ್ಲಾ ಪುನರ್ ರಚನೆಯಾಗುವುದು ಅತಿ ಮುಖ್ಯವಿದೆ. ಹಾವೇರಿಯು ಧಾರವಾಡ ಜಿಲ್ಲೆಯ ಮುಖ್ಯವಾದ ಕೇಂದ್ರವಾಗಿದೆ. ಹುಂಡೇಕಾರ್ ಸಮಿತಿಯವರು ಹಾವೇರಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿಗಣಿಸಬೇಕೆಂದು ಈಗಾಗಲೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆ ಪ್ರಕಾರ ಜಿಲ್ಲಾ ಪುನರ್ ರಚನೆಯನ್ನು ಮಾಡತಕ್ಕ ಕಾಲಕ್ಕೆ ಹಾವೇರಿಯನ್ನು ಪರಿಗಣಿಸಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಅತಿಯಾಗಿದ್ದು ಜಿಲ್ಲಾ ಪರಿಷತ್ತು ಆಡಳಿತದಲ್ಲಿ ಒಂದು ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ಮಾತ್ರ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಭೌಗೋಳಿಕವಾಗಿ ಒಂದಕ್ಕೊಂದು ಹತ್ತಿರ ಇದ್ದಂತಹ ಸಂದರ್ಭದಲ್ಲಿ ಸಂಯುಕ್ತವಾಗಿ ಕಿರು ನೀರು ಯೋಜನೆಯನ್ನು ಮಾಡಲಿಕ್ಕೆ ಕಾನೂನು ಬದ್ಧವಾಗಿ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೈಸರ್ಗಿಕವಾಗಿ ಪ್ರಕೃತಿ ವಿಕೋಪಕ್ಕೆ ತುತ್ತಾದಂತಹ ಸಂದರ್ಭದಲ್ಲಿ, ನನ್ನ ಮತ

ಕ್ಷೇತ್ರದ ಸವಣೂರು ತಾಲ್ಲೂಕಿನ ಜಗ್ಗಿಹಳ್ಳಿಯಲ್ಲಿ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಅನೇಕಲ್ಲು ಮಳೆಯಿಂದಾಗಿ ಅಲ್ಲಿ 400-500 ಎಕರೆಯಲ್ಲಿ ಇರತಕ್ಕ ಮೆಣಸಿನಕಾಯಿ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಆ ಬಗ್ಗೆ ರೈತರುಗಳು ಅನೇಕ ಮನವಿಗಳನ್ನು ಸಹ ಸಲ್ಲಿಸಿದ್ದಾರೆ. ಒಂದು ಎಕರೆಗೆ 300 ರೂಪಾಯಿಗಳ ಪರಿಹಾರ ಧನವನ್ನು ಕೊಡಬೇಕೆಂದು ಇದ್ದರೂ ಕೂಡ ಕೊಟ್ಟಿಲ್ಲ. ಆ ಭಾಗದಲ್ಲಿ ನಾವು ಹೋಗಿ ನೋಡಿದಾಗ ಭಯಂಕರ ವಾಸನೆಯಿಂದ ಆ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಜೊತೆಗೆ ಹಾವು, ನರಿ ಅಲ್ಲಿ ಸತ್ತು ಬಿದ್ದಿದ್ದಂತಹ ಸನ್ನಿವೇಶವನ್ನು ನಾನು ಕಂಡಿದ್ದೇನೆ. ಇಂತಹ ಸಂದರ್ಭ ಇದ್ದಾಗ್ಯೂ ಕೂಡ ಅಧಿಕಾರಿಗಳು ಈವರೆಗೂ ಒಂದು ಪೈಸಾ ಪರಿಹಾರ ಧನವನ್ನು ಆ ಭಾಗದ ರೈತರಿಗೆ ಕೊಟ್ಟಿರುವುದಿಲ್ಲ. ಈ ಸಂದರ್ಭವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಹೆಚ್ಚು ಪರಿಹಾರವನ್ನು ಕೊಡಲಿಕ್ಕೆ ಮಾನ್ಯ ಸಚಿವರು ಅನುಕೂಲ ಮಾಡಬೇಕೆಂದು ತಮ್ಮ ಮುಖೇನ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಮೋತಿ ವೀರಣ್ಣ : ಮಾನ್ಯ ಉಪಾಧ್ಯಕ್ಷಿಣಿಯವರೆ, ದಾವಣಗೆರೆ ಮಹಾನಗರವನ್ನು ಜಿಲ್ಲೆಯಾಗಿ ಮಾಡಬೇಕೆಂಬುದು ಬಹಳ ದಿವಸದ ಬೇಡಿಕೆಯಾಗಿದೆ. ಇದರ ಬಗ್ಗೆ ಹೆಚ್ಚಿನ ವಿಶ್ಲೇಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ, ಕಾರಣ ಕಾಲಾವಕಾಶ ಇಲ್ಲದಿರುವುದು. ಕಳೆದ ಅಧಿವೇಶನದಲ್ಲಿಯೂ ಕೂಡ ನಾನು ಈ ದಾವಣಗೆರೆ ಮಹಾ ನಗರವನ್ನು ಜಿಲ್ಲೆಯಾಗಿ ಮಾಡಬೇಕೆಂಬ ಬೇಡಿಕೆಯನ್ನು ಮಾನ್ಯ ಮಂತ್ರಿಗಳ ಮುಂದಿಟ್ಟಾಗ ಇದಕ್ಕೆ ಹೆಚ್ಚಿನ ಅಡೆತಡೆ ಏನೂ ಇಲ್ಲ, ಇದನ್ನು ಹೆಚ್ಚು ದಿವಸಗಳ ಕಾಲ ತಳ್ಳದೆ ದಾವಣಗೆರೆ ನಗರವನ್ನು ಜಿಲ್ಲೆಯಾಗಿ ಪುನರ್ ವಿಂಗಡಣೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ದಾವಣಗೆರೆ ಮಹಾ ನಗರಕ್ಕೆ ಆಗಿಂದಾಗ್ಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲೂ ಕೂಡ ಅಲ್ಲಿನ ಜನತೆ ಈ ಮಹತ್ವವಾದ ಬೇಡಿಕೆ ಈಡೇರಬೇಕೆಂದು ಕೇಳುತ್ತಿರುವುದು. ಅದನ್ನು ಮನಗಂಡು ಈ ಸಾರಿ ಮಾಡಿಸುತ್ತೇನೆಂದು ಭರವಸೆಯನ್ನೂ ಕೂಡ ಕೊಟ್ಟಿದ್ದರು. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಬಹಳ ಮುಖ್ಯವಾದ ಅಂಶವೆಂದು ಪರಿಗಣಿಸಬೇಕು. ದಾವಣಗೆರೆ ಮಹಾ ನಗರ ಬಹಳ ಹಿಂದೆಯೇ ಜಿಲ್ಲೆಯಾಗಬೇಕಾಗಿತ್ತು. ಒಂದು ಕಾಲದಲ್ಲಿ ರಾಜಧಾನಿ ಆಗತಕ್ಕ ವಾತಾವರಣವನ್ನು ಹೊಂದಿರತಕ್ಕ ಮಹಾ ನಗರ. ಇದು ಇಲ್ಲಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಕೂಡ ಇದು ಇನ್ನೂ ಕೈಗೊಂಡಿಲ್ಲ. ಈ ಬೇಡಿಕೆಯ ಬಗ್ಗೆ ಆದಷ್ಟು ಜಾಗ್ರತೆ ಈ ಸಾಲಿನಲ್ಲೇ ತೀರ್ಮಾನ ಮಾಡಿ ಈ ನಗರವನ್ನು ಜಿಲ್ಲೆಯಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ದಾವಣಗೆರೆಯಲ್ಲಿ ತಹಶೀಲ್ದಾರ್ ಆಫೀಸ್, ಸಬ್‌ರಿಜಿಸ್ಟ್ರಾರ್ ಆಫೀಸ್, ಸಬ್ ಡಿವಿಜನ್ ಆಫೀಸ್ ಎಲ್ಲವೂ ಇವೆ. ಈ ಕಟ್ಟಡಗಳು ಸುಮಾರು 150 ವರ್ಷಗಳ ಹಿಂದಿನವು. ಆವತ್ತಿನ ದಿವಸ ಕೇವಲ 30 ಸಾವಿರ ಜನಸಂಖ್ಯೆಯನ್ನು ಹೊಂದಿದ್ದ ಸಣ್ಣ ಊರಾಗಿದ್ದ ದಾವಣಗೆರೆ ಇಂದು ಮೂರುವರೆ ಲಕ್ಷಕ್ಕಿಂತ ಹೆಚ್ಚಿಗೆ ಜನಸಂಖ್ಯೆಯನ್ನು ಹೊಂದಿರುವ ನಗರವಾಗಿದೆ. ಇಲ್ಲಿ ಒಂದು ಮಿನಿ ಸೌಧವನ್ನು ಕಟ್ಟಿಸಿದರೆ ಆ ಕಟ್ಟಡದಲ್ಲಿ ರೆವಿನ್ಯೂ ಇಲಾಖೆ,ಸಬ್ ಡಿವಿಜನ್, ಸಬ್‌ರಿಜಿಸ್ಟ್ರಾರ್ ಆಫೀಸ್ ಹೀಗೆ ಎಲ್ಲಾ ಸರ್ಕಾರೀ ಆಫೀಸ್‌ಗಳನ್ನೂ ಒದೇ ಕಡೆ ನಡೆಸಬಹುದು. ಈ ಕಟ್ಟಡಕ್ಕೆ ಅವಶ್ಯವಾಗಿ ಬೇಕಾದ ನಿವೇಶನ ಕೂಡ ಬಹಳ ಮುಖ್ಯವಾದ ಸ್ಥಳದಲ್ಲಿದೆ. ಆದುದರಿಂದ ಅಲ್ಲಿ ಒಂದು ಮಿನಿ ಸೌಧವನ್ನು ಕಟ್ಟಿಸಿ ಸರ್ಕಾರಿ ಕಛೇರಿಗಳೆಲ್ಲಾ ಒಂದೇ ಕಡೆ ಇರುವುದಕ್ಕೆ ಅವಕಾಶ

ಮಾಡಿಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ನಾನು ಕಳೆದ ಸಾರಿ ತಂದಿದ್ದೆ.

ಶ್ರೀ ಎಸ್. ಚಿಕ್ಕಮಾಧು : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಗ್ರಾಮಾಂತರ ಪ್ರದೇಶದ ಕಡು ಬಡವರ ಏಳಿಗೆಗೋಸ್ಕರ ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿರತಕ್ಕದ್ದು ಅತ್ಯಂತ ಮೆಚ್ಚುಗೆಯಾದುದು. ಇತ್ತೀಚೆಗೆ ಈ ಕಾರ್ಯಕ್ರಮದಲ್ಲಿ ಸರ್ಕಾರ ಏನು 40 ಪರ್ಸೆಂಟ್ ಪರಿಹಾರ ಧನವನ್ನು ಕೊಡುತ್ತದೆ ಇದಕ್ಕೆ ಇತ್ತೀಚೆಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳೂ ಕೂಡ 60 ಪರ್ಸೆಂಟ್ ಪ್ರೋತ್ಸಾಹ ಧನವನ್ನು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ. ಇದರಿಂದಾಗಿ ಈ ಕಾರ್ಯಕ್ರಮಗಳು ಸ್ಥಗಿತವಾಗಿವೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಆದೇಶ ನೀಡಿ ಈ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯನ್ವಯ ಗ್ರಾಮಾಂತರ ಪ್ರದೇಶ ಕಡು ಬಡವರಿಗೆ ಇದರ ಫಲ ದೊರಕುವಂತೆ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಎರಡನೆಯದಾಗಿ ಅತ್ಯುತ್ತಮ ಕಾರ್ಯಕ್ರಮ ಎಂದರೆ ಮಿಲಿಯನ್ ವೆಲ್ ಯೋಜನೆ. ಈ ಯೋಜನೆ ಹರಿಜನರಿಗೆ ಮುಟ್ಟತಕ್ಕ ಯೋಜನೆ. ಇದಕ್ಕೆ ನಮ್ಮ ಸರ್ಕಾರ 20 ಸಾವಿರ ಖರ್ಚು ಮಾಡಿ ಅವರಿಗೆ ಮುಫತ್ತಾಗಿ ಬಾವಿ ತೆಗೆಸಿಕೊಡುವ ಕಾರ್ಯಕ್ರಮವನ್ನುಹಾಕಿಕೊಂಡಿದೆ. ಆದರೆ ಈ ಬಾವಿಯನ್ನು ತೆಗೆಸಿಕೊಟ್ಟನಂತರ ಮುಂದೆ ಏನು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿಲ್ಲ. ಆದುದರಿಂದ ಸರ್ಕಾರ ಇವರಿಗೆ ಮುಫತ್ತಾಗಿ ಏನು ಬಾವಿಯನ್ನು ತೋಡಿಸಿಕೊಟ್ಟಿದೆ ಅದಕ್ಕೆ ಒಂದು ಮೋಟಾರನ್ನೂ ಕೂಡ ಸರ್ಕಾರದ ವತಿಯಿಂದಲೇ ಅಳವಡಿಸಿಕೊಟ್ಟರೆ ಇದರಿಂದ ಕಡುಬಡವರಿಗೆ ಅನುಕೂಲವಾಗುತ್ತದೆ. ಹಿಂದೆ ಆರ್‌ಎಲ್‌ಇಜಿಪಿ ಮತ್ತು ಎನ್‌ಆರ್‌ಇಪಿ ಪ್ರೋಗ್ರಾಂಗಳನ್ನು ವಿಲೀನಗೊಳಿಸಿ ಈ ಜಿ.ಆರ್.ವೈ. ಕಾರ್ಯಕ್ರಮವನ್ನು ರೂಪಿಸಿದ್ದೀರಿ. ಇದನ್ನು ರೂಪಿಸುವಾಗ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಮಾಡಿದ್ದೀರಿ. ಆದರೆ ಇದನ್ನು ಮಾಡುವಾಗ ಅತಿ ಮುಖ್ಯವಾದ ಕುಡಿಯುವ ನೀರಿನ ಬಗ್ಗೆ ಗಮನಹರಿಸಿಲ್ಲ. ಉದಾಹರಣೆಗೆ ಹೇಳುವುದಾದರೆ ಅದು ಎನ್‌ಆರ್‌ಡಬ್ಲ್ಯುಎಸ್ ಆಗಬಹುದು. ಎಂಡಬ್ಲ್ಯುಎಸ್ ಆಗಬಹುದು ಇದರಲ್ಲಿ ಎಕ್ಸ್‌ಟೆನ್‌ಷನ್, ಕಾಲೋನಿಗಳಿಗೆ ಪೈಪ್‌ಲೈನ್‌ನ್ನು ಕೂಡ ಅಳವಡಿಸುವುದಕ್ಕೆ ಜಿ.ಆರ್.ವೈ. ನಲ್ಲಿ ಇಲ್ಲ ಎನ್ನತಕ್ಕ ಗೈಡ್‌ಲೈನ್ಸ್ ಇಲ್ಲದೇ ಇರುವುದರಿಂದ ಈ ಗೈಡ್‌ಲೈನ್ಸ್‌ನ್ನು ಕೇಂದ್ರ ಸರ್ಕಾರಕ್ಕಾಗಲೀ, ತಾವಾಗಲಿ ಮಾರ್ಪಾಡು ಮಾಡಿ ಅತಿ ಮುಖ್ಯವಾದ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ರಮಕ್ಕೆ ಈ ಹಣವನ್ನು ಖರ್ಚುಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ ....

ಉಪಾಧ್ಯಕ್ಷಿಣಿಯವರು : ತಾವೆಲ್ಲರೂ ಮಾತನಾಡಿದ್ದೀರಿ.

ಶ್ರೀ ಎಂ. ಮಹದೇವ್ : ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.

ಉಪಾಧ್ಯಕ್ಷಿಣಿಯವರು : ಸಾಕಷ್ಟು ಜನರಿಗೆ ನಾವು ಅವಕಾಶ ಕೊಟ್ಟಿದ್ದೇವೆ. ಒಟ್ಟು 23 ಜನರಿಗೆ ಈಗ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಬೋರ್‌ವೆಲ್‌ಗಳ ಮೂಲಕ ಭೂಮಿಯಿಂದ ನಾವು ನೀರನ್ನು ತೆಗೆಯುತ್ತಿದ್ದೇವೆ. ನಮ್ಮ ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯ

ಭೂಮಿಯಿಂದ ಅತ್ಯಂತ ಹೆಚ್ಚಿನ ನೀರನ್ನು ತೆಗೆಯುತ್ತಿದೆ. ನಮ್ಮ ರಾಜ್ಯದಲ್ಲಿ 5-6 ನದಿಗಳಿವೆ. ನದಿಗಳ ಪಾತ್ರದಲ್ಲಿರತಕ್ಕ ಗ್ರಾಮೀಣ ಪ್ರದೇಶ, ಪಟ್ಟಣ ಪ್ರದೇಶಗಳಿಗೆ ಈ ನೀರನ್ನು ಕುಡಿಯುವ ಸಲುವಾಗಿ ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು? ನಂಜನಗೂಡು, ಹರಿಹರ ಇಂಥ ಕಡೆ ಕೆಲವು ಪಟ್ಟಣ ಪ್ರದೇಶಗಳಲ್ಲಿ ಇಂಡಸ್ಟ್ರೀಸ್ ಪ್ರಾರಂಭವಾಗಿವೆ. ಅಲ್ಲಿ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಬಹುಶಃ ಇಂಡಸ್ಟ್ರೀಯವರು ಈ ನದಿಗಳ ನೀರನ್ನು ತೆಗೆದುಕೊಳ್ಳುತ್ತಿರುವಾಗ ಅದೇ ನದಿ ಪಾತ್ರದಲ್ಲಿರತಕ್ಕಂಥ ಪಟ್ಟಣ ಪ್ರದೇಶಗಳಿಗೆ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು? ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಎರಡನೆಯದಾಗಿ ನನ್ನ ಮಿತ್ರರು ಜಿಲ್ಲಾ ಪುನರ್ ವಿಂಗಡಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಜಿಲ್ಲಾ ಪುನರ್ ವಿಂಗಡಣೆಯಲ್ಲಿ, ಗದ್ದಿಗೌಡರು ಮತ್ತು ಹುಂಡೇಕಾರ್ ಸಮಿತಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಹುಂಡೇಕಾರ್ ಸಮಿತಿ ತಾಂತ್ರಿಕವಾಗಿ ಸರಿಯಾದಂಥ ರಿಪೋರ್ಟ್‌ನ್ನು ಸರ್ಕಾರಕ್ಕೆ ಮಾಹಿತಿ ಸಮೇತ ಕೊಟ್ಟಿದೆ. ಅಂದಿನ ಸರ್ಕಾರದವರು ಇದು ಸರಿಯಾದಂಥ ರಿಪೋರ್ಟ್ ಅಲ್ಲವೆಂದು ಹೇಳಿರುತ್ತಾರೆ. ಮಾಹಿತಿ ಇದ್ದು, ತಾಂತ್ರಿಕವಾಗಿ ಸರಿಯಾಗಿದ್ದರೂ, ಅಂದಿನ ಸರ್ಕಾರ ರಾಜಕೀಯ ದೃಷ್ಟಿಯಿಂದ ಈ ಹುಂಡೇಕಾರ್ ಸಮಿತಿಯ ರಿಪೋರ್ಟ್‌ನ್ನು ಸರಿಯಿಲ್ಲವೆಂದು ಹೇಳಿ ಅದರ ಬದಲಾಗಿ ಅವರ ಅನುಕೂಲಕ್ಕೆ ತಕ್ಕಂತೆ ಗದ್ದಿಗೌಡರ ಸಮಿತಿಯನ್ನು ರಚನೆಮಾಡಿ, ಅವರು ಕೊಟ್ಟಂಥ ರಿಪೋರ್ಟ್ ಮುಖಾಂತರ ಅವರು ರಾಜಕೀಯ ಲಾಭವನ್ನು ಪಡೆದು ಸಭೆಯ ಮುಂದಿಟ್ಟಿದ್ದಾರೆ. ಇದನ್ನು ಸರ್ಕಾರದ ಗಮನಕ್ಕೆ ತಮ್ಮ ಮುಖಾಂತರ ತಿಳಿಸುತ್ತಿದ್ದೇನೆ, ಈ ಗದ್ದಿಗೌಡರ ರಿಪೋರ್ಟ್‌ನ್ನು ಕ್ಯಾನ್ಸಲ್ ಮಾಡಿ ಹುಂಡೇಕಾರ್ ಸಮಿತಿಯವರು ಕೊಟ್ಟಿರುವ ರಿಪೋರ್ಟ್‌ನ್ನು ಗಮನಕ್ಕೆ ತೆಗೆದುಕೊಂಡು ಸಚಿವ ಸಂಪುಟದ ಉಪಸಮಿತಿ ಅದನ್ನು ಪರಿಶೀಲನೆ ಮಾಡಿ ಸರ್ಕಾರದ ಮುಂದಿಡಬೇಕೆಂದು ಕೇಳುತ್ತಿದ್ದೇನೆ. ಹುಂಡೇಕಾರ್ ಸಮಿತಿಯವರು ನಂಜನಗೂಡನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಸಲಹೆ ಮಾಡಿರುತ್ತಾರೆ. ಅದನ್ನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ನಂಜನಗೂಡನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷಿಣಿಯವರೇ ಶ್ರೀಮಾನ್ ರಾಮಸ್ವಾಮಿಯವರು ಹೇಳಿದ್ದಾರೆ. ಈಗಾಗಲೇ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆ. ಆದರೆ ಇದನ್ನು ಮಾರ್ಚ್‌ಯೊಳಗೆ ಖರ್ಚುಮಾಡುವಂತಿಲ್ಲ. ದುರುಪಯೋಗವಾಗುತ್ತದೆ, ಸ್ವಲ್ಪ ಟೈಮ್ ಎಕ್ಸ್‌ಟೆಂಡ್ ಮಾಡಬೇಕೆಂದು ಹೇಳಿ ಅವರು ಕೇಳಿದ್ದಾರೆ. ನಾನೂ ಕೂಡ ಇದನ್ನು ಬಿಡುಗಡೆ ಮಾಡುವ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದೆ. ನಾವು ಬಿಡುಗಡೆ ಮಾಡುತ್ತಿರುವುದು 15 ದಿವಸದ ಒಳಗೆ ಮಾಡುತ್ತಿದ್ದೇವೆ. ಇದು ಹೋಗಿ ಹಿಂದಿನ ಬಿಲ್ ಸೆಟಲ್‌ಮೆಂಟ್‌ಗೆ ಅನುಕೂಲವಾಗುತ್ತದೆ. ಇದಕ್ಕೆ ಸ್ವಲ್ಪ ತಡೆ ಹಿಡಿದರೆ ಚೆನ್ನಾಗಿರುತ್ತದೆನ್ನುವುದು ಒಂದು ಕಡೆ. ಇನ್ನೊಂದು ಕಡೆ ಕೆಲಸವಾಗಬೇಕು ಅದಕ್ಕೆ ಹಣಬಿಡುಗಡೆ ಮಾಡಬೇಕೆಂದು ಒತ್ತಡ. ಅದಕ್ಕೆ ಈಗಲೂ ನಾನೂ ಕೂಡ ವಿಚಾರ ಮಾಡುತ್ತಿದ್ದೇನೆ. ಇದರ ಬಗ್ಗೆ ಕನಿಷ್ಟಪಕ್ಷ ಮೇ ವರೆಗೆ ಎಕ್ಸ್‌ಟೆಂಡ್ ಮಾಡಿ ಅಕೌಂಟ್ ಕ್ಲೋಸ್ ಮಾಡದೆ ಅವರಿಗೆ ಅಲೋ ಮಾಡಬೇಕು. ಸ್ಟ್ರಿಕ್ಟ್ ಆಗಿ ಹೇಳುವುದಾದರೆ ಇದು ಲ್ಯಾಪ್ಸ್ ಆಗುವುದಿಲ್ಲ. ಆದರೆ ಏನು ಮಾಡುತ್ತಾರೆಂದರೆ ಗೌವರ್ನ್ಮೆಂಟಿನವರು ಅದನ್ನು 31 ಮಾರ್ಚ್‌ನೊಳಗೆ ನಿಮ್ಮ ಬ್ಯಾಲೆನ್ಸ್ ಎಷ್ಟಿದೆ ಅದನ್ನೆಲ್ಲಾ ನಿಲ್ಲಿಸಿಬಿಡುತ್ತೇವೆಂದು ಹೇಳಿ, ಲೆಕ್ಕ ತೆಗೆದುಕೊಂಡು ನಿಲ್ಲಿಸಿಬಿಡುತ್ತಾರೆ. ಅದಕ್ಕೆ ತಾಪತ್ರಯ ಬರುತ್ತದೆ. ಅದಕ್ಕೆ ನಾನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಜೊತೆಯಲ್ಲಿ ಚರ್ಚೆ ಮಾಡಿ ಅಮೌಂಟ್ ರಿಲೀಸ್ ಮಾಡಬಾರದೆಂದು ಹೇಳಿ ನಾನೂ ಕೂಡ ಅವರಿಗೆ ರಿಕ್ವೆಸ್ಟ್

ಮಾಡುತ್ತೇನೆ. ಇದು ನನಗೆ ಮೊದಲೇ ಗೊತ್ತಾಗಿದ್ದು ಅದರ ಬಗ್ಗೆ ಚಿಂತನೆ ಮಾಡಿದ್ದೇನೆ. ಎರಡನೆಯದಾಗಿ ಡಾ. ನಾಗಪ್ಪನವರು ಫೈರ್ ಆಕ್ಸಿಡೆಂಟ್ ಬಗ್ಗೆ ಹೇಳಿ ನನ್ನ ಜಿಲ್ಲೆಗೆ ದುಡ್ಡಿಲ್ಲ, ಹಣವನ್ನು ಕೊಟ್ಟಿಲ್ಲವೆಂದು ಹೇಳಿದರು. ಈಗ ತಮ್ಮಲ್ಲಿ ಒಂದು ಅಭಿಪ್ರಾಯಬಂದಿದೆ. ಈ ಮನೆಗೆ ಏನಾಗುತ್ತದೆಂದರೆ ನಾನೇ ಉದ್ದೇಶಪೂರ್ವಕವಾಗಿ ಹಣವನ್ನು ಬಿಡುಗಡೆಮಾಡುತ್ತಿಲ್ಲವೋ ಏನೋ ಅಥವಾ ಅವರಿಗೆ ಡಿಸ್‌ಕ್ರೀಶನ್ ಪವರ್ ಇದೆ, 100 ಕೊಡುವಲ್ಲಿ 50 ಕೊಡುತ್ತಿದ್ದಾರೆ, ಒಂದು ಸಾವಿರ ಕೊಡುವಲ್ಲಿ 200 ಕೊಡುತ್ತಿದ್ದಾರೆ ಎನ್ನತಕ್ಕಂಥ ಭಾವನೆ ಮಾನ್ಯ ಅನೇಕ ಸದಸ್ಯರಿಗೆ ಬಂದಿದೆ. ನಾನು ಅನೇಕ ಸಲ ಸರ್ಕ್ಯುಲರ್ ಓದಿ ಹೇಳಿದ್ದೇನೆ, ಗೈಡ್‌ಲೈನ್ಸ್ ಹೇಳಿದ್ದೇನೆ. ಆದರೂ ಕೂಡ ಇದರ ಬಗ್ಗೆ ಮಾತನಾಡತಕ್ಕಂಥದ್ದು ನಿಲ್ಲಿಸಿಲ್ಲ. ಗೈಡ್‌ಲೈನ್ಸ್ ಪ್ರಕಾರ ಹಣ ಸಿಕ್ಕದೆ ಹೋದರೆ ನಾನು ರೆಸ್ಪಾನ್ಸಿಬಲ್ ಆಗುತ್ತೇನೆ. ಗೈಡ್‌ಲೈನ್ಸ್ ಪ್ರಕಾರ ಹಣವನ್ನು ಕೊಟ್ಟರೂ ಪದೇ ಪದೇ ಅದೇ ಮಾತುಗಳನ್ನು ಹೇಳಿದರೆ ನಾನು ಏನು ಹೇಳಬೇಕು? ಅದಕ್ಕೆ ಪುನಃ ಒಮ್ಮೆ ಇದರ ಬಗ್ಗೆ ಹೇಳುತ್ತೇನೆ.

ಉಪಾಧ್ಯಕ್ಷಣಿಯವರು : ಅವರು ಹೇಳುವುದು 6-6 ತಿಂಗಳು 8-8 ತಿಂಗಳು ಆದರೂ ಹಣ ಸಿಗುವುದಿಲ್ಲವೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ಹೇಳಿದ್ದುದು ಹಣ ಬಿಡುಗಡೆ ಮಾಡಿದ ಬಗ್ಗೆ. ನಾನು ಬೇಕಾದರೆ ಅದರ ರೇಟ್, ಯಾವ ಹೆಡ್, ಯಾವಾಗ ಹೋಗಿದೆ ಅದನ್ನೂ ಕೂಡ ಹೇಳುತ್ತೇನೆ. Natural calamity includes food scarcity, fire, accident, short circuit – all these considered as natural calamities. Loss up to 1,000 – full relief subject to minimum of Rs.500; loss ranging between 1000 to 2000 – Rs.500 plus 50% of the loss; loss exceeding Rs.2000 – Rs.1000 + 25% of the loss over and above Rs.2,000 or Rs.750 whichever is less, total Rs.1758. In addition to cash relief, building materials, the value of which does not exceed – Rs.1200 per family may be sanctioned. Desilting, removal of debris, loss of agricultural crops, compensation in case of agricultural input subsidy of Rs.300 per hectare. Animal husbandry – assistance to small and marginal farmers and agricultural labourers for loss of bullock, milch animals, sheep, goats, pigs, poultry etc – 25% of the loss of the livestock to be determined by the Department of Animal Husbandry and Veterinary Services – income limit Rs. 6400 per annum. Powers to sanction : Tahsildar – Rs.800 cash, building material – Rs.500; So, 1000 he can do it. Assistant Commissioner – 1000 cash and 1000 building material, 2000 he can do it; Deputy Commissioner – Rs.1750 cash, Rs.1200 building materials, Rs.2950 maximum; This order was issued on 7-6-1991. ಇದರ ಜೊತೆಗೆ ಹೊಸದಾಗಿ ನಾವು ಕೆಲವು

ಅಮೆಂಡ್‌ಮೆಂಟ್ ಮಾಡಿದ್ದೇವೆ. ಅದರ ಪ್ರಕಾರ ಮ್ಯಾಕ್ಸಿಮಂ 2750. ಫೈರ್ ಆ್ಯಕ್ಸಿಡೆಂಟ್ ಆದವರಿಗೆ ಕೂಡ ಇದೇ ನಾರ್ಮ್ಸ್ ಪ್ರಕಾರ ಕೊಡುತ್ತಿದ್ದೇವೆ. ಅದಕ್ಕಾಗಿ ತಹಶೀಲ್ದಾರರಿಗೆ 200-300 ರೂಪಾಯಿ ಕೊಡುವುದಕ್ಕೆ ಪ್ರಾವಿಷನ್ ಇದೆ ಎಂದು ಅಲ್ಲ. ಐದು ನೂರು ರೂಪಾಯಿ ಕ್ಯಾಷ್, 500 ರೂಪಾಯಿ ಬಿಲ್ಡಿಂಗ್ ಮೆಟೀರಿಯಲ್ಸ್‌ಗೆ ಎಂದು ಒಟ್ಟು ಒಂದು ಸಾವಿರ ರೂಪಾಯಿ ಕೊಡಬಹುದೆಂದು ಮಾಡಿದ್ದೇವೆ.

ಶ್ರೀಮತಿ ಮೋಟಮ್ಮ : ಎ.ಸಿ; ಡಿ.ಸಿ. ಎಂದು ಬೇರೆ ಬೇರೆ ಸ್ಟೇಜಸ್ ಏತಕ್ಕೆ? ನೇರವಾಗಿ ತಹಶೀಲ್ದಾರರೇ 2 ಸಾವಿರ ರೂಪಾಯಿ ಕೊಡುವುದಕ್ಕೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡನೆಯದಾಗಿ, ಫೈರ್ ಆ್ಯಕ್ಸಿಡೆಂಟ್ ಆದವರಿಗೆ ರಿಲೀಫ್ ಕೊಡುವುದಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿ ಇನ್ನೂ ಕೂಡ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದರು. ತಾ. 4-1-91 ರಿಂದ 21-2-92ರ ಅವಧಿಯಲ್ಲಿ 7 ಲಕ್ಷ ರೂಪಾಯಿಗಳನ್ನು ಫೈರ್ ಆ್ಯಕ್ಸಿಡೆಂಟ್‌ಗೋಸ್ಕರ ರಿಲೀಸ್ ಮಾಡಿದೆ. ಎಲ್ಲಿ ಮನೆಗಳು ಸುಟ್ಟಿವೆ ಅಲ್ಲಿ ಒಂದು ವೇಳೆ ಹಣ ಇಲ್ಲವೆಂದರೆ ಪಿ.ಡಿ. ಅಕೌಂಟ್‌ನಲ್ಲಿ ಹಣ ತೆಗೆದು ಖರ್ಚು ಮಾಡಿ ಆಮೇಲೆ ಕ್ಲೈಂ ಮಾಡಬೇಕೆಂಬ ಆದೇಶ ಕೊಟ್ಟಿದ್ದೇವೆ. ಅದಕ್ಕಾಗಿ ಈ ತಾಪತ್ರಯ ಇದರಲ್ಲಿ ಬರುವುದಿಲ್ಲ. ಶ್ರೀ ಜಯಚಂದ್ರ ಅವರು ಹೇಳಿದರು, ಎಕ್ಸೆಸ್ ಲ್ಯಾಂಡ್ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು, ಏತಕ್ಕೆಂದರೆ ನಮಗೆ ಹೌಸ್ ಸೈಟ್ಸ್ ಕೊಡುವುದಕ್ಕಾಗುತ್ತಿಲ್ಲ ಎಂದು. ಬಹುತೇಕ ತುಮಕೂರು, ಚಿತ್ರದುರ್ಗ, ಕೆಲವು ಭಾಗ ಬೆಂಗಳೂರು ಕಡೆ ಎಕ್ಸೆಸ್ ಲ್ಯಾಂಡ್ ಎಂದು ಕನ್ಸಿಡರ್ ಮಾಡುತ್ತೀರಿ, ಅದರಲ್ಲಿ ಹೌಸ್ ಸೈಟ್ಸ್ ಕೊಡತಕ್ಕ ಅಧಿಕಾರ ಆಶ್ರಯ ಯೋಜನೆಯಲ್ಲಿ ಇಲ್ಲ, ಅದನ್ನು ಪರಿಶೀಲಿಸಬೇಕೆಂದು ಹೇಳಿದ್ದಾರೆ. ನಾನು ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿ ಪತ್ರ ಬರೆದು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಅದಕ್ಕೆ ಅವರು ಪರ್ಮಿಷನ್ ಕೊಟ್ಟರೆ ಆಶ್ರಯ ಯೋಜನೆ ಕೆಳಗೆ ಮಾಡುವುದಕ್ಕೆ ಅನುಕೂಲ ಮಾಡಿಸಿ ಕೊಡುತ್ತೇನೆ. ಶ್ರೀ ಮುನಿಸ್ವಾಮಿಯವರು ಪ್ರಶ್ನೆ ಎತ್ತಿದರು, ಅವರು ಪದೇಪದೇ ಹೇಳುತ್ತಿದ್ದಾರೆ, ಮತ್ತು ನನಗೂ ಅನೇಕ ಸಾರಿ ಹೇಳಿದ್ದಾರೆ. ಬೆಂಗಳೂರು ಸಿಟಿಗೆ ಸೌತ್ ಮತ್ತು ನಾರ್ತ್‌ಗೆ ಎಂದು ಎರಡು ಮಂದಿ ತಹಶೀಲ್ದಾರು ಇದ್ದಾರೆ. ಅವರ ಕೆಲಸದ ಒತ್ತಡದಿಂದ ಅನೇಕ ಕಡೆ ಕೆಲಸಗಳು ನಿಂತುಹೋಗುತ್ತಿವೆ. ಮಕ್ಕಳಿಗೆ ಇನ್‌ಕಂ ಸರ್ಟಿಫಿಕೇಟ್, ಕ್ಯಾಸ್ಟ್ ಸರ್ಟಿಫಿಕೇಟ್ ಕೊಡತಕ್ಕದ್ದಕ್ಕೆ ತಾಪತ್ರಯವಾಗುತ್ತಿದೆ. ಅದೇ ರೀತಿ ಓಲ್ಡ್-ಏಜ್ ಪೆನ್‌ಷನ್ ಬಗ್ಗೆ ಕೂಡ ಹೇಳಿದ್ದಾರೆ. ಇಲ್ಲಿ ಇನ್ನೂ ಎರಡು ತಹಶೀಲ್ದಾರರ ಹುದ್ದೆಗಳನ್ನು ಕ್ರಿಯೇಟ್ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ. ಅದನ್ನು ಎಫ್.ಡಿ.ಯವರು ಒಪ್ಪಿದರೆ ಇನ್ನೂ ಎರಡು ತಹಶೀಲ್ದಾರರ ಪೋಸ್ಟ್ ಕ್ರಿಯೇಟ್ ಆಗುತ್ತದೆ. ಆಗ ಸಾಕಷ್ಟು ತೊಂದರೆ ನಿವಾರಣೆ ಆಗಬಹುದು. ಅದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅವರು ಸ್ವಲ್ಪ ಮುಖ್ಯ ಮಂತ್ರಿಗಳನ್ನು ನೋಡಿ ಫೈನಾನ್‌ಷಿಯಲ್ ಅಪ್ರೂವಲ್ ಕೊಡಿಸಿದರೆ ಸರಿಹೋಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಲಕ್ಷ್ಮಣಯ್ಯನವರು ಕೂಡ ಮಿನಿ ವಿಧಾನಸೌಧದ ಬಗ್ಗೆ ಸ್ವಲ್ಪ ಜಾಸ್ತಿ ಒತ್ತು ಕೊಟ್ಟಿದ್ದಾರೆ. ಈಗಾಗಲೇ ಹೋದ ವರ್ಷ ಏನು ಅಪ್ಲಿಕೇಷನ್ಸ್ ಇದ್ದವು ಅವುಗಳಿಗೆ ಐದಾರು ಸೇರಿಸಿದ್ದೇವೆ. ಮತ್ತೆ ನಾಲ್ಕೈದನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಕೂಡ ಅಪ್ರೂವ್ ಮಾಡಿ ಕಳುಹಿಸಿದ್ದಾರೆ. ಸುಮಾರು

ಹನ್ನೆರಡೋ ಏನೋ ಈ ವರ್ಷ ಮಿನಿ ವಿಧಾನಸೌಧಗಳು ಸ್ಯಾಂಕ್ಷನ್ ಆಗಿವೆ. ಆದರೆ ಉಳಿದ ಸುಮಾರು 20-25 ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಮಿನಿ ವಿಧಾನಸೌಧಗಳಿವೆ. ಅಂದರೆ ತಹಶೀಲ್ದಾರ್ ಆಫೀಸ್‌ಗಳಿವೆ. ಅದನ್ನು ಕೂಡ ಹುಡ್ಕೊ ಅಸಿಸ್ಟೆನ್ಸ್‌ನಿಂದ ಕಟ್ಟಿಸಬೇಕೆಂದು ಒಂದು ವಿಚಾರ ಮಾಡುತ್ತಿದ್ದೇವೆ. ಮತ್ತು ಹೌಸಿಂಗ್ ಬೋರ್ಡ್ ಛೇರ್ಮನ್ನರ ಜೊತೆ ಈಗಾಗಲೇ ಇದರ ಬಗ್ಗೆ ವಿಚಾರ ಮಾಡಿದ್ದೇನೆ. ಅವರೂ ಕೂಡ ಹೇಳಿದ್ದಾರೆ. ತಾಲ್ಲೂಕು ಆಫೀಸ್ ಕಾಂಪ್ಲೆಕ್ಸ್‌ಗೆ ಹುಡ್ಕೋದವರು ಹಣ ಕೊಡುತ್ತಾರೆ. ಆದಕ್ಕಾಗಿ ನಾವು ಇದಕ್ಕೆ ಒಂದು ಮ್ಯಾಸೀವ್ ಸ್ಕೇಲ್ ಮೇಲೆ ಎಲ್ಲೆಲ್ಲಿ ತಾಲ್ಲೂಕು ಕಚೇರಿಗಳು ಬಹಳ ಹೀನಾವಸ್ಥೆಯಲ್ಲಿವೆ ಅಂಥದ್ದನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಾನು ಸಮಗ್ರವಾಗಿ ಒಂದು ಯೋಜನೆಯನ್ನು ಹಾಕುತ್ತೇನೆ. ಮತ್ತು ಹೌಸಿಂಗ್ ಬೋರ್ಡ್ ಮುಖಾಂತರ ಹುಡ್ಕೊ ಅಸಿಸ್ಟೆನ್ಸ್‌ನಿಂದ ಕಟ್ಟಿಸುವುದಕ್ಕೆ ಹಂತಹಂತವಾಗಿ ಒಂದು ವ್ಯವಸ್ಥೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಸ್ವಾಮಿ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮದೇ ಹೇಳಿದೆ. 20-25 ಅಂಥದ್ದು ಇವೆ. ಅದು ಸೇರಿಲ್ಲ. ದುರ್ದೈವದಿಂದ ನೀವು ಬರೆದುಕೊಡಲಿಲ್ಲ ನನಗೆ. ಅದಕ್ಕೆ ಬೇರೆ ಐದಾರು ಇತ್ತು, ಅದರಲ್ಲಿ ಸೇರಿಸಿದ್ದೇನೆ. ಮತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು ಮೊದಲೇ ಸೇರಿಸಿದ್ದಾರೆ. ಹತ್ತು ಹನ್ನೆರಡು ಮಾತ್ರ ಬಂದಿದೆ. ಅದಕ್ಕೂ 1/3 ಭಾಗ ಬಜೆಟ್ ಪ್ರಾವಿಷನ್ ಆಗಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆ ಚರ್ಚೆ ಮಾಡಿ 1/3 ಭಾಗ ಪ್ರಾವಿಷನ್ ಮಾಡಿಸಿ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡಿಸತಕ್ಕ ವ್ಯವಸ್ಥೆ ಮಾಡಿಸುತ್ತೇನೆ. ಶ್ರೀ ಗಂಗಾಧರ ಗೌಡರು ಒಂದು ಪ್ರಶ್ನೆ ಕೇಳಿದರು. 20 ಸಾವಿರ ಎಕರೆಯನ್ನು ಯಾರೋ ಒಬ್ಬರು ಸರ್ಕಾರದಿಂದ ಹಿಂದೆ ತೆಗೆದುಕೊಂಡಿದ್ದಾರೆ, ಈಗ ಪುನಃ ದೋಚಿಕೊಂಡು ಹೋಗತಕ್ಕ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ರೆವಿನ್ಯೂ ಇಲಾಖೆ ಮೇಲೆ ಪ್ರಭಾವ ಬೀರುತ್ತಿದ್ದಾರೆ ಎಂದೂ ಹೇಳಿದರು. ನನಗೆ ಅವರು ಸವಿಸ್ತಾರವಾಗಿ ತಂದುಕೊಟ್ಟಿದ್ದರು. ಇದು ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ನಮ್ಮ ಅಧಿಕಾರಿಗಳಿಗೂ ಕೂಡ ಹೇಳಿದೆ ಈ ಕೇಸನ್ನು ಸರಿಯಾಗಿ ನಡೆಸಬೇಕೆಂದು. ನಂತರ ಅಡ್ವೋಕೇಟ್ ಜನರಲ್ ಅವರ ಜೊತೆಯೂ ಮಾತನಾಡಿ ಇದರ ಬಗ್ಗೆ ನಾನೂ ಕೂಡ ಹೇಳಿದ್ದೇನೆ. ಆದರೆ ...

ಶ್ರೀ ಕೆ. ಗಂಗಾಧರ ಗೌಡ : ಸ್ಪೆಷಲ್ ಆಫೀಸರ್ ನೇಮಕ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡೋಣ. ನೀವು ಹೇಳಿದ್ದೀರಿ ನಿಮ್ಮ ಜೊತೆ ಚರ್ಚೆ ಮಾಡಿ ಮುಂದಿನ ಕಾರ್ಯ ಮಾಡಿದ್ದೇನೆ. ಆದರೆ ಈಗ ....

ಶ್ರೀ ಕೆ. ಗಂಗಾಧರ ಗೌಡ : ಸಕಲೇಶಪುರದಲ್ಲಿ ಯಾವುದೋ ಒಂದು ಸಂಸ್ಥೆ ಇದೇ ರೀತಿ ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನೂ ನಾನೇ ಮಾಡಿದೆ. ವಿಶ್ವನಾಥ್ ಎಂಬುವವರನ್ನು ಸ್ಪೆಷಲ್ ಆಫೀಸರ್ ಆಗಿ ನೇಮಕ ಮಾಡಿ ಅಲ್ಲೂ ಕೂಡ 10-15 ಕೋಟಿ ರೂಪಾಯಿನ ಪ್ರಾಪರ್ಟಿ ಹೋಗುತ್ತಿತ್ತು. ಸ್ಪೆಷಲ್ ಆಫೀಸರ್ ಹಾಕಿ ಅದೂ ಕೂಡ ಕೇಸ್ ಆಗುತ್ತಿದೆ. ಅದೇರೀತಿ ಇದೂ ಕೂಡ ಬಂದಿದೆ. ಇದಕ್ಕೂ ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿ ಇದನ್ನು ನಿಲ್ಲಿಸಬೇಕೆಂದು ಮಾಡುತ್ತಿದ್ದೇವೆ. ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಎಲ್ಲ ರೀತಿಯಿಂದಲೂ ನಾವು ಮಾಡುತ್ತಿದ್ದೇವೆ.

ಶ್ರೀ ಕೆ. ಗಂಗಾಧರ ಗೌಡ : 200 ಕೋಟಿ ರೂಪಾಯಿ ಮರ ಇದೆ. ಅಲ್ಲದೆ ಅಲ್ಲಿ ಗ್ರಾನೈಟ್ ಕೂಡ ಕದ್ದು ಆ ಏರಿಯಾದಿಂದ ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಿ. ಅದಕ್ಕೆ ಏನು ಮಾಡಬೇಕು ಅಂದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಅದರ ಬಗ್ಗೆ ...

ಶ್ರೀ ಕೆ. ಗಂಗಾಧರಗೌಡ : ಸ್ಪೆಷಲ್ ಆಫೀಸರ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪೆಷಲ್ ಆಫೀಸರ್‌ನಿಂದ ಪರಿಹಾರ ಆಗುತ್ತದೆಂದು ಆದರೆ ಮಾಡಿಸೋಣ ಅದನ್ನು. ಅದೇರೀತಿ ಇದನ್ನು ಮಾಡಿಸತಕ್ಕ ವ್ಯವಸ್ಥೆಯನ್ನು ನಿಮ್ಮ ಜೊತೆಯಲ್ಲೇ ಚರ್ಚೆಮಾಡಿ ಮಾಡುತ್ತೇನೆ ನಾನು. ಆಮೇಲೆ ಸಗೀರ್ ಅಹಮದ್ ಅವರು ಬರಿಯಲ್ ಗ್ರೌಂಡ್ಸ್ ಬಗ್ಗೆ ಹೇಳಿದ್ದಾರೆ. ಸಂಬಂಧಪಟ್ಟ ಡೆಪ್ಯೂಟಿ ಕಮಿಷನರ್ ಜೊತೆ ರಿಪೋರ್ಟ್ ತರಿಸಿಕೊಂಡು ಎಲ್ಲೆಲ್ಲಿ ಈ ರೀತಿ ಆಗಿದೆ ಅದಕ್ಕೆ ಎವಿಕ್ಷನ್ ಮಾಡಿಸತಕ್ಕ ಒಂದು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಅವರೂ ಕೂಡ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ಯಾವ ಯಾವ ಸರ್ವೆ ನಂಬರ್‌ನಲ್ಲಿ ಹೀಗಾಗಿದೆ ಎಂಬ ಬಗ್ಗೆ ನಿರ್ದಿಷ್ಟವಾದ ಒಂದು ಪಟ್ಟಿ ಕೊಟ್ಟರೆ ಸ್ವಲ್ಪ ಸುಲಭವಾಗುತ್ತದೆ ಎಂಬ ಮಾತನ್ನು ಅವರು ಹೇಳಿದರು. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಇದನ್ನು ಡೀಲ್ ಮಾಡುತ್ತಿದ್ದಾರೆ. ಅದಕ್ಕಾಗಿ ...

ಶ್ರೀ ಬಿ. ಶಿವರಾಮು : ಜಿಲ್ಲಾ ಪರಿಷತ್ತು ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಿಲ್ಲಾ ಪರಿಷತ್ತು ಏಜೆನ್ಸಿ ಇರಬಹುದು. ಆದರೆ ಸ್ಕೀಂಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಹಣ ಕೊಡುವುದು. ಸೂಪರ್‌ವೈಸ್ ಮಾಡತಕ್ಕವರೂ ಅವರೇ. ನೀವು ಹೇಳಿದ ಮೇಲೆ ನಾನು ತರಿಸಿಕೊಂಡೆ.

ಶ್ರೀ ಬಿ. ಶಿವರಾಮು : ನಾನು ಹಾಸನ ಜಿಲ್ಲಾ ಚೀಫ್ ಸೆಕ್ರೆಟರಿಯವರ ಜೊತೆ ನಿನ್ನೆ ಚರ್ಚೆ ಮಾಡಿದ್ದೇನೆ. ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಂನಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ 15 1/2 ಲಕ್ಷ ರೂಪಾಯಿ ಹಣ ಬಂದು ಇಲ್ಲಿಯವರೆಗೆ ಒಂದು ಯೋಜನೆ ತೆಗೆದುಕೊಂಡಿಲ್ಲ. ಎರಡು ಹೆಡ್‌ನಲ್ಲೂ ದುಡ್ಡಿದೆ. ಇದನ್ನು ಕ್ಲಾರಿಫೈ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮಾಹಿತಿ ತರಿಸಿಕೊಂಡು ಹೇಳುತ್ತೇನೆ. ನನಗೆ ಈಗ ನಮ್ಮ ಇಲಾಖೆಯವರು ಬರೆದುಕೊಟ್ಟ ಪ್ರಕಾರ This programme is being implemented by the Social Welfare Department through Scheduled Caste/Scheduled Tribe Development Corporation. ಎಂದು ಕೊಟ್ಟಿದ್ದಾರೆ. ಆದರೂ ಕೂಡ ಅದು ಏನಿದೆ ಎಂದು ತನಿಖೆ ಮಾಡಿಸಿ ನಾನು ನೋಡುತ್ತೇನೆ. ಏಕೆಂದರೆ ಇದು ಬಹಳ ಸ್ಲೋ ಸ್ಪೀಡ್‌ನಲ್ಲಿ ಇದೆ. ಮಾನ್ಯ ನಾಗರಾಜ್ ಅವರು ಹೇಳಿದ ಹಾಗೆ ನೋ ವಾಟರ್ 'ನೋ ಮನಿ' ಎಂದು ಮಾಡಿದ ಮೇಲೆ ಅವರಿಗೆ ತಾಪತ್ರಯ ಆಗಿದೆ ಎಂದು ಕೇಳಿದ್ದೇನೆ. ಏಕೆಂದರೆ ಬಾವಿ ಫೇಲ್ ಆದರೆ ನಮಗೆ ಹಣ ಸಿಗುವುದಿಲ್ಲ ಎಂದು ಬೋರ್‌ವೆಲ್‌ನವರು ಯಾರೂ ಮುಂದೆ ಬರುತ್ತಾ ಇಲ್ಲ ಎಂದು ನಾನು ಕೇಳಿದ್ದೇನೆ. ಪುನಃ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ಕೆಲಸ ಮಾಡುತ್ತೇನೆ.

ಶ್ರೀ ಬಿ. ಶಿವರಾಮು : ಎಸ್.ಸಿ./ಎಸ್.ಟಿ. ಕಾರ್ಪೋರೇಷನ್, ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗಲಿಲ್ಲ ಎಂದರೂ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಪ್ರೋಗ್ರಾಮ್ಸ್ ಅವರೇ ಮಾಡಬೇಕು.

ಶ್ರೀ ಬಿ. ಶಿವರಾಮು : ಜಿಲ್ಲಾ ಪರಿಷತ್ತುಗಳ ಮೂಲಕ ಇಂಪ್ಲಿಮೆಂಟೇಷನ್‌ಗೆ ಈಗಾಗಲೇ ಯೋಜನೆಗಳನ್ನು ತರಿಸಿಕೊಳ್ಳತಕ್ಕ ಕೆಲಸವನ್ನು ಹಾಸನದಲ್ಲಿ ಮಾಡುತ್ತಿದ್ದಾರೆ. ಇಲ್ಲಿಯವರೆವಿಗೂ ಯಾವುದೂ ಮಾಡಿಲ್ಲ. ಅವರು ಏಕೆ ತರಿಸಿಕೊಳ್ಳಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲವು ಹೀಗೇ ಇರುತ್ತವೆ. ಏಜೆನ್ಸಿ ಜಿಲ್ಲಾ ಪರಿಷತ್ ಮುಖಾಂತರ ಕೆಲಸ ಮಾಡಿದರೂ ಕೂಡ ಅದೇ ಇಲಾಖೆಯವರೇ ಇಂಪ್ಲಿಮೆಂಟ್ ಮಾಡುತ್ತಾರೆ. ಹಣವನ್ನು ಅವರೇ ಡೈರೆಕ್ಟಾಗಿ ಮಾಡುತ್ತಾರೆ. ಸೂಪರ್‌ವಿಷನ್ ಅವರೇ ಮಾಡುತ್ತಾರೆ. ಆಮೇಲೆ ಅದರ ಬಗ್ಗೆ ಪ್ರೋಗ್ರೆಸ್ ರಿಪೋರ್ಟ್ ಕೂಡ ಅವರೇ ತರಿಸಿಕೊಳ್ಳುತ್ತಾರೆ. ಏಜೆನ್ಸಿ ನಮ್ಮದು ಇದ್ದರೂ ಕೂಡ ಕೆಲವು ಸಲ ಹತೋಟಿ ಅವರದ್ದೇ ಇರುತ್ತದೆ.

ಶ್ರೀ ಬಿ. ಶಿವರಾಮು : ಜಿಲ್ಲಾ ಪರಿಷತ್ತು ಇಂಪ್ಲಿಮೆಂಟ್ ಮಾಡುತ್ತಾ ಇದೆ. ಹಣವನ್ನು ಕೂಡ ಜಿಲ್ಲಾ ಪರಿಷತ್ತಿನ ಹೆಡ್‌ನಲ್ಲೇ ಒದಗಿಸುತ್ತಾರೆ.

ಉಪಾಧ್ಯಕ್ಷರು : ಆಮೇಲೆ ನೀವು ಅವರ ಹತ್ತಿರ ಹೋಗಿ ಚರ್ಚೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗೆ ಇದ್ದರೂ ಕೂಡ ಸೋಷಿಯಲ್ ವೆಲ್‌ಫೇರ್ ಹೆಡ್‌ನಲ್ಲೇ ಇರೋದು.

ಶ್ರೀ ಬಿ. ಶಿವರಾಮು : ಆಮೇಲೆ ಮಾತನಾಡುವುದು ಬೇರೆ ವಿಷಯ. ಜಿಲ್ಲಾ ಪರಿಷತ್ತಿನ ನಿಮ್ಮ ಹೆಡ್‌ನಲ್ಲೇ ನೋಡಿ, ಜಿಲ್ಲಾ ಪರಿಷತ್ತಿನ ಹೆಡ್ ಪುಸ್ತಕದಲ್ಲಿ ತೆಗೆದು ನೋಡಿ, ಅಲ್ಲಿ ಹಣ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೆಡ್‌ನಲ್ಲಿ ಎಲ್ಲಾ ಡಿಪಾರ್ಟ್‌ಮೆಂಟ್‌ದೂ ಬರುತ್ತದೆ. ನಮಗೆ ಇಲ್ಲಿ ರೂರಲ್ ಡೆವಲಪ್‌ಮೆಂಟ್ ಹೆಡ್ ಕೆಲಸಗಳಿಗೆ ಏನು ಹಣ ಇರುತ್ತದೆ ಅದು ನೇರವಾಗಿ ನಮ್ಮ ಹತೋಟಿಗೆ ಬರುತ್ತದೆ. ಉಳಿದ ಎಲ್ಲಾ ಇಲಾಖೆಗಳೂ ಹಣವನ್ನು ನೇರವಾಗಿ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡುತ್ತವೆ. ಅನೇಕ ಸಲ ಪ್ರೋಗ್ರೆಸ್ ರಿಪೋರ್ಟ್ ಅಲ್ಲೂ ಹೋಗುತ್ತದೆ. ನಮ್ಮ ಹತ್ತಿರ ಬರುವುದಿಲ್ಲ. ಆದರೂ ಕೂಡ ನಾನು ತರಿಸಿ ನೋಡುತ್ತೇನೆ ಎಂದು ಹೇಳಿದ್ದೇನೆ. ಇನ್ನು ಮಾನ್ಯ ವಿಶ್ವನಾಥ್ ಅವರು ಒಂದು ಮಾತನ್ನು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಅಥವಾ ಮುಂಡಲ ಪಂಚಾಯಿತಿಗಳಲ್ಲಿ ಖರ್ಚುಆಗತಕ್ಕ ಹಣಕ್ಕೆ ಹತೋಟಿ ಇಲ್ಲವಾದ್ದರಿಂದ ಒಂದು ವಿಜಿಲೆನ್ಸ್ ಮಾಡಬೇಕೆಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ. ಇದನ್ನು ಯಾವರೀತಿಯಾಗಿ ಮಾಡಬೇಕು. ಲೋಕಲ್ ಆಡಿಟರ್ಸ್ಸೇ ಸರ್‌ಪ್ರೈಸ್ ವಿಸಿಟ್ ಮಾಡಬೇಕೋ ಅಥವಾ ಅಸಿಸ್ಟೆಂಟ್ ಕಮಿಷನರ್ಸ್‌ನ್ನು ಇದರಲ್ಲಿ ಇನ್‌ವಾಲ್ವ್ ಮಾಡಿಸಬೇಕೇ ಎಂದು ನೋಡಬೇಕು. ಈಗ ಕೆಲಸ ಸ್ವಲ್ಪ ಸುಲಭ ಆಗಿದೆ. ಈಗ ಅಲ್ಲಿ ಅಡ್ಮಿನಿಸ್ಟ್ರೇಟರ್ಸ್ ಆಗಿದ್ದಾರೆ. ಸ್ವಲ್ಪ ಚೆಕ್ ಮಾಡಿಸಬೇಕು. ಆದರೆ ಶಾಶ್ವತವಾಗಿ ಇದರ ಬಗ್ಗೆ ಏನಾದರೂ ಯೋಚನೆ ಮಾಡಿ ನೋಡಬೇಕು. ಇದಕ್ಕೆ ಒಂದು ವಿಜಿಲೆನ್ಸ್ ಕಮಿಟಿಯಾದರೆ ಅಥವಾ ಒಂದು ಚೆಕಿಂಗ್ ಪಾರ್ಟಿ ಇಡತಕ್ಕ ಒಂದು ವ್ಯವಸ್ಥೆಯ ಅವಶ್ಯಕತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಕೂಡ ಒಪ್ಪುತ್ತೇನೆ. ಇನ್ನು ಮಂಜುನಾಥ್ ಕುನ್ನೂರ್ ಅವರು ಜಿಲ್ಲಾ

ಪುನರ್ವಿಂಗಡನೆ ಆಗಬೇಕು ಎಂದು ಹೇಳಿದ್ದಾರೆ. ಇನ್ನೂ ಅನೇಕ ಮಾನ್ಯ ಸದಸ್ಯರು ಇದನ್ನೇ ಹೇಳಿದ್ದಾರೆ. ಮೋತಿ ವೀರಣ್ಣನವರು, ಸೋಮಪ್ಪ ಸುವರ್ಣ ಅವರೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಹೀಗಾದರೆ ನನಗೂ ಕೂಡ ಚೆನ್ನಾಗಿದೆ ಎಂದು ಅನ್ನಿಸುತ್ತದೆ. ಏಕೆಂದರೆ, ನನ್ನ ತಾಲ್ಲೂಕು ಕೂಡ ಜಿಲ್ಲೆ ಆಗುತ್ತದೆ. ಆದರೆ ಇದನ್ನು ಮಾಡಬೇಕು ಎನ್ನತಕ್ಕದ್ದಕ್ಕೆ ಸರ್ಕಾರದ ಒಂದು ನಿಲುವು ಇದೆ. ಅದಕ್ಕಾಗಿ ಈಗಾಗಲೇ ಒಂದು ಸಬ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಅಫಿಶಿಯಲ್ ಸಬ್ ಕಮಿಟಿಯನ್ನು ಮಾಡಿದ್ದೇವೆ. ಅದು ಈ ಮಾರ್ಚಿ ತಿಂಗಳ ಕೊನೆಯೊಳಗೆ ಒಂದು ವರದಿಯನ್ನು ಕೊಡುತ್ತಿದೆ. ಅದು ಬಿದಮೇಲೆ ಅದನ್ನು ಮಂತ್ರಿ ಮಂಡಲ ಸಭೆಯಲ್ಲಿ ಇಟ್ಟು ಯಾವಾಗ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮೋತಿ ವೀರಣ್ಣನವರೂ ಕೂಡ ಇದೇ ಸಲಹೆಯನ್ನು ಮಾಡಿದ್ದಾರೆ. ಮತ್ತು ಮಹದೇವ್ ಅವರು ಏಕೆ ಮಧ್ಯೆ ಏಳುತ್ತಿದ್ದಾರೆ. ನಿಮ್ಮ ಸಲಹೆಯನ್ನು ಕೊನೆಯಲ್ಲಿ ಕೊಟ್ಟಿದ್ದೀರಿ.

ಉಪಾಧ್ಯಕ್ಷರು : ಏಕೋ ಮಹದೇವ್ ಅವರು ಬಹಳ ಎದ್ದು ಎದ್ದು ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಬಹಳ ಆತುರ. ಅಧ್ಯಕ್ಷರೇ, ಅವರು ಒಂದು ಸಲಹೆಯನ್ನು ಕೊಟ್ಟರು. ರಿವರ್‌ಬೆಲ್ಟ್‌ನಲ್ಲಿ ಇರತಕ್ಕ ಹಳ್ಳಿಗಳಿಗೆ ನೀವು ನೀರು ಸರಬರಾಜು ಏಕೆ ಮಾಡಬಾರದು ಎಂದು. ಏಕೆಂದರೆ ಅವರ 23 ಹಳ್ಳಿಗಳಿಗೆ ಇದರಿಂದ ಅನುಕೂಲ ಆಗುತ್ತದೆ. ಅವರಿಗೆ ಸ್ಯಾಂಕ್ಷನ್ ಕೂಡ ಆಲ್‌ರೆಡಿ ಆಗಿದೆ. ಅದು ಇಂಪ್ಲಿಮೆಂಟ್ ಆಗುವ ಹಂತದಲ್ಲಿ ಇದೆ. ಅದಕ್ಕೇ ಅವರಿಗೆ ಖುಷಿ ಸ್ವಲ್ಪ. ಆ ಒಂದು ಸಲಹೆ ಅವರು ಕೊಟ್ಟಿದ್ದಾರೆ. ಅದಕ್ಕಾಗಿ ಯಾವರೀತಿಯಿಂದ ಪಟ್ಟಣಗಳಿಗೆ ದೊಡ್ಡ ದೊಡ್ಡ ರಿವರ್‌ಗಳಿಂದ ನೀರು ತರುತ್ತೀರಿ ಅದೇರೀತಿಯಲ್ಲಿ ಹಳ್ಳಿಗಳಿಗೆ ಒಯ್ಯಬೇಕೆಂದು ಸಲಹೆಯನ್ನು ಅವರು ಕೊಟ್ಟಿದ್ದಾರೆ, ಅದನ್ನು ನೋಡೋಣ. ಹುಣಸೂರು ಕ್ಷೇತ್ರದ ಶಾಸಕರಾದ ಮಾನ್ಯ ಚಿಕ್ಕಮಾದುರವರು ಐ.ಆರ್.ಡಿ.ಪಿ. ಬಗ್ಗೆ ಮಾತನಾಡಿದ್ದಾರೆ. ಅವರು ಕುಡಿಯುವ ನೀರಿನ ಬಗ್ಗೆ ಮಾತನಾಡಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ. ಕೆಲವು ಬ್ಯಾಂಕುಗಳು ಕೋ-ಆಪರೇಟ್ ಮಾಡುತ್ತಿಲ್ಲ. ಸರಿಯಾದ ರೀತಿಯಲ್ಲಿ ಅವರು ಸಾಲ ಕೊಡದ ಕಾರಣ ಇವತ್ತು ಐಆರ್‌ಡಿಪಿ ಪ್ರೋಗ್ರಾಮ್ ಕುಂಠಿತವಾಗಿದೆ. ನಿಜವಾಗಿಯೂ ನೇರವಾಗಿ ಬಡವರಿಗೆ ಮುಟ್ಟತಕ್ಕದ್ದು ಇದು. ಗ್ರಾಮೀಣಾಬ್ಯಾಂಕುಗಳು, ನ್ಯಾಷನಲೈಸ್ಡ್ ಬ್ಯಾಂಕುಗಳು ಈ ರೀತಿಯಾದ ವರ್ತನೆ ಮಾಡಿದರೆ ನಾವು ಕೂಡ ಅವರಿಗೆ ಕೊಡತಕ್ಕ ಡಿಪಾಸಿಟ್ ಆಗಲಿ, ಸರ್ಕಾರ ಕೊಡತಕ್ಕ ಡಿಪಾಸಿಟ್ ಆಗಲಿ, ಕೊಡುವ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಸಮಯ ಬಂದರೆ ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಇದು ಕೇಂದ್ರ ಸರ್ಕಾರದ ಕಾರ್ಯಕ್ರಮ. ರಾಜ್ಯ ಸರ್ಕಾರ ಆಸಕ್ತಿ ವಹಿಸಿ ಇದನ್ನು ತೆಗೆದುಕೊಂಡಿದೆ. ಇದಕ್ಕೂ ಬ್ಯಾಂಕುಗಳು ಕೋಆಪರೇಟ್ ಮಾಡದಿದ್ದರೆ ನಾವು ನೇರವಾಗಿ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಹೇಳಬೇಕಾಗುತ್ತದೆನ್ನುವ ಮಾತನ್ನು ಈ ಸದನದ ಮುಖಾಂತರ ಅವರಿಗೆ ತಿಳಿಸುತ್ತೇನೆ. ಇನ್ನೊಂದು ವಿಶೇಷವಾದ ವಿಷಯವನ್ನು ಹೇಳುವುದನ್ನು ಮರೆತಿದ್ದೆ. ಡಾ: ಅಂಬೇಡ್ಕರ್ ಸೆಂಟಿನರಿ ಸೆಲಬರೇಷನ್ ನಿಮಿತ್ತವಾಗಿ ಕೇಂದ್ರ ಸರ್ಕಾರದವರು ಈ ತಿಂಗಳು 2 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಹೋದಸಲ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಮೊನ್ನೆ 15 ದಿವಸಗಳ ಹಿಂದೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಎಲ್ಲಿ ಮಾಡಬೇಕೆಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಲೊಕಾಲಿಟಿಯಲ್ಲಿ ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ ಅಂತಹ ಕಡೆ ಮಾತ್ರ ಈ ಹಣವನ್ನು

ಉಪಯೋಗ ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಹಣವನ್ನು ಕೊಟ್ಟಿದ್ದಾರೆ. ಈಗಾಗಲೇ ಅಂತಹ ಹಳ್ಳಿಗಳನ್ನು ಕೇಂದ್ರ ಸರ್ಕಾರದವರು ಗುರುತಿಸಿ ಐಡೆಂಟಿಫೈ ಮಾಡಿ ಲಿಸ್ಟನ್ನು ತಯಾರು ಮಾಡಿದ್ದಾರೆ. ಅದರ ಪ್ರಕಾರ ಆ ಜನರ ಲೊಕಾಲಿಟಿಯಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ಆದೇಶವಿದೆ. ಈಗಾಗಲೇ ನಾನು 1 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇನೆ. 2 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕೆಂದು ಈಗಾಗಲೇ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇವೆ. ಅದೂ ಕೂಡ ನಾಳೆ ನಾಡಿದ್ದು ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮಹದೇವ್‌ರವರು ಹೇಳಿದರು ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅವರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆ ಸಲಹೆಯಿಂದ ಬೇರೆಯವರಿಗೂ ಅನುಕೂಲವಾಗಬೇಕು. ಇವರಹಾಗೆ ದುಡ್ಡಿನ ಅನುಕೂಲ ಬೇರೆಯವರಿಗೆ ಇದ್ದರೆ ಒಳ್ಳೆಯದು ಎನ್ನತಕ್ಕ ಮಾತನ್ನು ನಾನು ಒಪ್ಪಿಕೊಂಡು ಇನ್ನು ಮಾನ್ಯ ಅನೇಕ ಸದಸ್ಯರು ಮಾತನಾಡದವರು ಇದ್ದಾರೆ.

ಶ್ರೀ ಎಂ. ಮಹದೇವ್ : ನಾನು ನಂಜನಗೂಡು ತಾಲ್ಲೂಕನ್ನು ಜಿಲ್ಲೆ ಮಾಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ವಿಚಾರ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ. ಆಮೇಲೆ ವಿಶೇಷವಾಗಿ ಪದೇ ಪದೇ ಈ ಸದನದಲ್ಲಿ ಅನೇಕ ಸದಸ್ಯರು ಈ ಮಾತನ್ನು ಹೇಳುತ್ತಿದ್ದಾರೆ. ಏನೆಂದರೆ ಲಂಬಾಣಿ ತಾಂಡಗಳು, ವಡ್ಡರಹಟ್ಟಿ, ಗೊಲ್ಲರಹಟ್ಟಿ, ಹ್ಯಾಮ್ಲೆಟ್ಸ್ ಇವುಗಳನ್ನು ರೆವಿನ್ಯೂ ವಿಲೇಜಸ್ ಎಂದು ಡಿಕ್ಲೇರ್ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ನಾವು ಕೆಲವೊಂದು ಕ್ರೈಟೀರಿಯಾ ಹಾಕಿಕೊಂಡಿದ್ದೇವೆ. ಮಿನಿಮಮ್ ಕ್ರೈಟೀರಿಯಾದಿಂದ ಅವುಗಳನ್ನು ಬದಲಾವಣೆ ಮಾಡತಕ್ಕದ್ದು. ಕೊನೆಯ ಪಕ್ಷ ಮಿನಿಮಮ್ ಪಾಪ್ಯುಲೇಷನ್ ಬೇಕಾಗುತ್ತದೆ. ಅದಕ್ಕಾಗಿ ಈಗಾಗಲೇ ಕೆಲವು ನೋಟೀಫಿಕೇಶನ್ ಇಷ್ಯು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಕೆಲವು ತಾಂಡಗಳು, ವಡ್ಡರಹಟ್ಟಿ, ಗೊಲ್ಲರಹಟ್ಟಿ ಮತ್ತು ಹ್ಯಾಮ್ಲೆಟ್‌ಗಳನ್ನು ಹಳ್ಳಿಗಳೆಂದು ತೀರ್ಮಾನ ಮಾಡಿ ನೋಟೀಫಿಕೇಶನ್ ಇಷ್ಯು ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ತಾಂಡಗಳು, ಹ್ಯಾಮ್ಲೆಟ್‌ಗಳು, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಇವುಗಳನ್ನು ಕ್ರೈಟೀರಿಯಾ ಪ್ರಕಾರ 500 ಜನಸಂಖ್ಯೆ ಇರಬೇಕು; ಸರೌಂಡಿಂಗ್ ಸರ್ವೆ ನಂಬರ್ ಲೆಕ್ಕದಲ್ಲಿ ತೆಗೆದುಕೊಳ್ಳಬೇಕು ಡಿಸ್ಟೆನ್ಸ್ ಇವುಗಳನ್ನೆಲ್ಲ ಲೆಕ್ಕದಲ್ಲಿಟ್ಟುಕೊಂಡು ರೆವಿನ್ಯೂ ವಿಲೇಜಸ್ ಮಾಡಬೇಕೆಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಶ್ರೀಮತಿ ಸುಮ ವಸಂತ್ : ಮಲೆನಾಡು ಪ್ರದೇಶದಲ್ಲಿ 500 ಜನಸಂಖ್ಯೆಯೆಂದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿನ ಪರಿಸ್ಥಿತಿಗೆ ತಕ್ಕಹಾಗೆ ರಿಲ್ಯಾಕ್ಸ್ ಮಾಡಬೇಕು. ಆದರೆ 50 ಮನೆಗಳಿಗೆ ಮಾಡಬೇಕೆಂದು ಹೇಳಿದರೆ ಮಾಡುವುದಕ್ಕಾಗುವುದಿಲ್ಲ. ಅದು ಊರು ಬಿಟ್ಟು ಮೂರು-ನಾಲ್ಕು ಕಿಲೋಮೀಟರ್ ದೂರ ಇದ್ದರೆ ಪಾಪ್ಯುಲೇಶನ್ ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಅಥವಾ ಕೆಲವು ಹಳ್ಳಿಗಳಲ್ಲಿ ಸರ್ವೆ ನಂಬರ್ಸ್ ಕಡಿಮೆ ಇದ್ದು ಪಾಪ್ಯುಲೇಶನ್ ಜಾಸ್ತಿ ಇದ್ದರೆ ಆ ಕಂಡಿಶನ್ ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಆದ್ದರಿಂದ ಈ ಕಂಡೀಶನ್ ನೋಡಿಕೊಂಡು, ವಾತಾವರಣ ನೋಡಿಕೊಂಡು ನಾವು ರಿಲ್ಯಾಕ್ಸ್ ಮಾಡಿ ಅವರಿಗೆ ಅನುಕೂಲ ಮಾಡಿಕೊಡುವುದು ನಮ್ಮ

ಕರ್ತವ್ಯವಾಗಿದೆ. ಅದಕ್ಕಾಗಿ ಈ ಎಲ್ಲಾ ತಾಂಡಾಗಳು, ವಡ್ಡರಹಟ್ಟಿಗಳು, ಗೊಲ್ಲರಹಟ್ಟಿಗಳು ಈ ಕ್ರೈಟೀರಿಯಾ ಪ್ರಕಾರ ಬರುತ್ತವೆ, ಎಲ್ಲೆಲ್ಲಿ ರಿಲ್ಯಾಕ್ಸ್ ಮಾಡಬೇಕೋ ಮಾಡಿ ಆ ಹಳ್ಳಿಗಳನ್ನು ರೆವಿನ್ಯೂ ವಿಲೇಜಸ್ ಅಂತ ಹೇಳಿ ಮಾಡುತ್ತೇವೆ ಎಂದು ಹೇಳುತ್ತೇನೆ. ಪುನಃ ಮತ್ತೊಮ್ಮೆ ಈ ಸದನದಲ್ಲಿ ಈ ಒಂದು ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅವೆಲ್ಲದಕ್ಕೂ ಕೂಡ ಉತ್ತರ ಕೊಟ್ಟಿದ್ದೇನೆ. ಅದೇರೀತಿ ಇನ್ನು ಕೆಲವರೇನು ಮಾತನಾಡಿದ್ದಾರೆ, ಅವರಿಗೂ ನನ್ನಲ್ಲಿ ಉತ್ತರ ಇತ್ತು. ಆದರೆ ಸಮಯದ ಅಭಾವದಿಂದ ನಾನು ಎಲ್ಲದಕ್ಕೂ ಉತ್ತರ ಹೇಳುವುದಕ್ಕೆ ಆಗಿಲ್ಲ. ಆದರೆ ಈ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಯಾವುದು ಸಾಧ್ಯವಿದೆ, ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ, ಈ ಡಿಮಾಂಡ್ಸ್‌ನ್ನು ತಾವು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಸದಸ್ಯರಿಗೆ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮತೀಯ ಮತ್ತು ಧರ್ಮದಾಯ ಸಂಸ್ಥೆಗಳ ಮಂತ್ರಿಗಳು.

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಬೇಡಿಕೆ ಸಂಖ್ಯೆ 51 ಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಅಡಿಯಲ್ಲಿ ಮಾನ್ಯ ಸದಸ್ಯರಾದಂಥ ಶಿವರಾಮೇಗೌಡರು, ಶಿವನಂಜಪ್ಪನವರು, ಎಂ.ವಿ. ವೆಂಕಟಪ್ಪನವರು, ಮಲ್ಲಾಜಮ್ಮನವರು, ನಾರಾಯಣ್, ಚವಾಣ್‌ರವರು, ಗುರುದೇವ್, ಸಿದ್ಧಯ್ಯ, ಸೋಮಪ್ಪ ಸುವರ್ಣ, ವಿನಯಕುಮಾರ್ ಸೊರಕೆ ಮತ್ತು ಇನ್ನೂ ಅನೇಕ ಶಾಸಕ ಮಿತ್ರರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಅನೇಕ ಕುಂದುಕೊರತೆಗಳ ಬಗ್ಗೆ ಸರ್ಕಾರದ ಗಮನಕ್ಕೂ ಸಹ ತಂದಿದ್ದಾರೆ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾನಾ ಕಡೆ, ನಾನಾ ಭಾಗಗಳಲ್ಲಿ ಇರತಕ್ಕಂಥ ಐದು ಕಾನೂನುಗಳು ಇರುವ ವ್ಯವಸ್ಥೆಯಿಂದಾಗಿ ಇಂತಹ ಅನೇಕ ಸಮಸ್ಯೆಗಳು ಇರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಈ ಐದು ಶಾಸನಗಳಾದ -, Mysore Religious & Charitable Institutions Act, 1927; Hindu Religious and Charitable Endowments Act, 1950; Bombay Public Trust Act, 1950; Hyderabad Endowment Regulation 1349 and Coorg Temple Fund Management Act, 1956. ಇವುಗಳನ್ನು ಏಕರೂಪವಾಗಿ ಕರಡುಶಾಸನ ತಂದು ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದರ ಜೊತೆಗೆ ಒಂದೇ ರೀತಿಯ ಶಾಸನವನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿದಾಗ ಇಂತಹ ಅನೇಕ ಸಮಸ್ಯೆಗಳು ಪರಿಹಾರವಾಗಲಿಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಕಾನೂನು ಇಲಾಖೆಯ ಜೊತೆ ಚರ್ಚೆ ನಡೆಸುತ್ತಾ ಒಂದು ಅಂತಿಮ ಘಟ್ಟಕ್ಕೆ ನಾವು ಬಂದಿದ್ದೇವೆ. ಆದಷ್ಟು ಶೀಘ್ರವಾಗಿ ಈ ಶಾಸನವನ್ನು ಈ ಸದನದಲ್ಲಿ ಮಂಡಿಸುತ್ತೇವೆ, ಇದನ್ನು ಸದನದಲ್ಲಿ ಇಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ನಮ್ಮ ನಾಯಕರು ಹಾಗೂ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಂಗಾರಪ್ಪನವರು ಈ ಹರಿಜನರ ಮತ್ತು ಗಿರಿಜನರ ಹಾಗೂ ಸಮಾಜದ ತುಳಿತಕ್ಕೆ ಒಳಗಾಗಿದ್ದ ಜನರ ಮತ್ತು ಇನ್ನಿತರ ಅನೇಕ ಬಡಜನರ ಏಳಿಗೆಗಾಗಿ ಪ್ರಗತಿಪರ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇವುಗಳಲ್ಲಿ ಈ ಆರಾಧನಾ ಯೋಜನೆಯೂ ಸಹ ಒಂದು. ಈ ವರ್ಷ ಈ ಆರಾಧನಾ ಯೋಜನೆಯಲ್ಲಿ 91-92ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದರು. ಯಾವ ಒಂದು ಹರಿಜನ-ಗಿರಿಜನರ ಲಂಬಾಣಿ ತಾಂಡಾ ಮತ್ತು ಸಮಾಜದ ತುಳಿತಕ್ಕೆ ಒಳಗಾಗಿರತಕ್ಕಂಥ ಜನರು ಇರುವ ಏರಿಯಾಗಳಲ್ಲಿ, ಕೇರಿಗಳಲ್ಲಿ ಇರತಕ್ಕಂಥ ಆರಾಧನಾ ಮಂದಿರಗಳ ಜೀರ್ಣೋದ್ಧಾರ

ಮತ್ತು ನೂತನ ಕಟ್ಟಡಗಳ ಸಲುವಾಗಿ ಹಣವನ್ನು ವಿನಿಯೋಗಿಸಕ್ಕಂಥ ಆದೇಶದ ಪ್ರಕಾರ ಮತ್ತು ಸಾರ್ವಜನಿಕರಿಂದ, ಶಾಸಕರಿಂದ, ಗಣ್ಯರಿಂದ ಬಂದಂಥ ಬೇಡಿಕೆಗೆ ಅನುಗುಣವಾಗಿ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚುವರಿ ಹಣವಾಗಿ 4 ಕೋಟಿ ರೂಪಾಯಿಗಳನ್ನು ಕೊಟ್ಟರು. ಈ ರೀತಿಯಾಗಿ ಸುಮಾರು ಈ ವರ್ಷ 5 ಕೋಟಿ ರೂಪಾಯಿಗಳನ್ನು ಈ ಆರಾಧನಾ ಯೋಜನೆಗೆ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಪ್ರಥಮ ಹಂತವಾಗಿ ನಾವು ಸುಮಾರು 50 ಲಕ್ಷ ರೂಪಾಯಿಗಳನ್ನು 10-7-91ರಲ್ಲಿ ಬಿಡುಗಡೆ ಮಾಡಿ ಮತ್ತು ಅದೇರೀತಿ ಎರಡೂವರೆ ಕೋಟಿ ರೂಪಾಯಿಗಳನ್ನು 9-10-91ರಂದು ಬಿಡುಗಡೆ ಮಾಡಿದ್ದೇವೆ. ಈ ಮೂರು ಕೋಟಿ ರೂಪಾಯಿಗಳನ್ನು ಜೀರ್ಣೋದ್ಧಾರ ವ್ಯವಸ್ಥೆಗಾಗಿ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚನೆ ಮಾಡಿ ಮತ್ತು ಅದೇರೀತಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚನೆ ಮಾಡಿ ಜಿಲ್ಲಾಧಿಕಾರಿಗಳ ಒಂದು ಅಧ್ಯಕ್ಷತೆಯಲ್ಲಿ ಬಂದಂಥ ಪ್ರಸ್ತಾವನೆಗಳನ್ನು ಪರಿಶೀಲಿಸಿ...........

ಜಿಲ್ಲಾ ಹಂತದಲ್ಲಿಯೇ ತುಳಿತಕ್ಕೆ ಒಳಗಾದಂಥ ಜನರ ಪ್ರಸ್ತಾವನೆಗಳನ್ನು, ಬೇಡಿಕೆಗಳನ್ನು ಪೂರೈಸುವ ಸಲುವಾಗಿ, ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಮತ್ತು ರೆಗ್ಯುಲರ್ ಬಜೆಟ್‌ನಲ್ಲಿ ಬಂದಂಥ ಏನು ಸಮಸ್ಯೆ ಇದೆ, ಕೆಲವು ಜಿಲ್ಲೆಗೆ ಹೆಚ್ಚಿಗೆ, ಕೆಲವು ಜಿಲ್ಲೆಗೆ ಕಡಿಮೆಯಾಗಿದೆ ಎನ್ನುವ ಕೂಗಿಗೆ, ಇಲ್ಲಿ ಅವಕಾಶ ಇಲ್ಲದಂತೆ ಬಂದಂಥ ಹಣವನ್ನು, ಬಿಡುಗಡೆ ಮಾಡುವಂಥ ಹಣವನ್ನು ಕ್ಷೇತ್ರಾವಾರು ಹಂಚಿ, ಆ ಕ್ಷೇತ್ರದಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನೂ ಸಹ ಮಾಡಿದ್ದೇವೆ. ಇದರ ಜೊತೆಗೆ 18-2-91ರಂದು ಮತ್ತೆ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಆ ಹಣವನ್ನು ನೂತನ ಕಟ್ಟಡದ ಸಲುವಾಗಿ ವಿನಿಯೋಗಿಸಬೇಕು ಮತ್ತು ನಾವೇನು ಮಾದರಿ ವಿನ್ಯಾಸವನ್ನು ಕಳುಹಿಸಿ ಕೊಟ್ಟಿದ್ದೇವೆ ಅದೇ ಪ್ರಕಾರ ಮಾಡಬೇಕೆಂದು ತಿಳಿಸಿದ್ದೇವೆ. ಆದರೆ, ಚರ್ಚೆಯಲ್ಲಿ ಭಾಗವಹಿಸಿದಂಥ ಅನೇಕ ಶಾಸಕರು, ಈ ಒಂದು ಜೀರ್ಣೋದ್ಧಾರ ಮತ್ತು ಕಟ್ಟಡದ ಬಗ್ಗೆ ಕೊಟ್ಟಂಥ ಹಣದ ವ್ಯತ್ಯಾಸದಲ್ಲಿ ಸ್ವಲ್ಪ ತಪ್ಪು ತಿಳುವಳಿಕೆಯಿಂದಾಗಿ, ಇಲಾಖೆಯವರು ಹೇಳಿದಂಥ ರೀತಿಯಲ್ಲಿ ನಾವು ಮಾಡಬೇಕೆಂದರೆ ಕಷ್ಟಸಾಧ್ಯವೆಂದು ಹೇಳಿದರು. ಆ ರೀತಿ ಅಲ್ಲ, ಮೂರು ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ, ಇದನ್ನು ಜೀರ್ಣೋದ್ಧಾರಕ್ಕಾಗಿ, ಅಲ್ಲಿ ಬಂದಂಥ ಪ್ರಸ್ತಾವನೆಗಳು ಏನಿರುತ್ತವೆ, ಅಲ್ಲಿ ಏನು ಅನುಕೂಲತೆಗಾಗಿ ಬೇಡಿಕೆ ಸಲ್ಲಿಸಿರುತ್ತಾರೆ ಆ ರೀತಿ ಹಣವನ್ನು ಜೀರ್ಣೋದ್ಧಾರಕ್ಕಾಗಿ ವಿನಿಯೋಗ ಮಾಡಿಕೊಳ್ಳಬೇಕು. ಅದೇರೀತಿ ಈ ಎರಡು ಕೋಟಿ ರೂಪಾಯಿಗಳನ್ನು ಪ್ರತಿ ಕ್ಷೇತ್ರದಲ್ಲಿ ಒಂದು ಕಟ್ಟಡ, ಸುಮಾರು 89 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ನಿರ್ಮಾಣ ಮಾಡುವುದರ ಜೊತೆಗೆ, ಈ ಒಂದು ಯೋಜನೆಯನ್ನು ಮಾದರಿಯಾಗಿ ನಿರೂಪಿಸುವುದು ನಮ್ಮ ಉದ್ದೇಶವಾಗಿದೆ. ಈ ದಿಸೆಯಲ್ಲಿ ಜಿಲ್ಲಾವಾರು ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅನೇಕ ಕಡೆ ಕೆಲಸಗಳನ್ನೂ ಸಹ ತೆಗೆದುಕೊಂಡಿದ್ದಾರೆ. ಇದನ್ನು ಸಾರ್ವಜನಿಕರು, ಶಾಸಕರು ಹಾಗೂ ಗಣ್ಯರು ಮುಕ್ತಕಂಠದಿಂದ ಪ್ರಶಂಶಿಸಿದ್ದಾರೆ. ಅನೇಕ ಹಿರಿಯ ಸದಸ್ಯರು ಇನ್ನೂ ಹೆಚ್ಚಿನ ಹಣವನ್ನು ನೀಡಬೇಕು, ಅನೇಕ ವರ್ಷಗಳಿಂದ ಈ ರೀತಿಯ ಸೌಲಭ್ಯಕ್ಕಾಗಿ ವಂಚಿತರಾಗಿದ್ದಂಥ ಜನಕ್ಕೆ ಇದು ಉತ್ತಮ ಯೋಜನೆ ಎಂದು ಬೆಂಬಲಿಸಿದ್ದಾರೆ. ಅದೇರೀತಿ ನಮ್ಮ ಮುಖ್ಯಮಂತ್ರಿಗಳು, ತಾವು ಮಂಡಿಸಿದಂಥ ಮುಂದಿನ ಅನುದಾನದಲ್ಲಿಯೂ ಸಹ ಈ ಒಂದು ಆರಾಧನಾ ಯೋಜನೆಗಾಗಿ, ಸುಮಾರು 5 ಕೋಟಿ ರೂಪಾಯಿಗಳನ್ನು ನೀಡುತ್ತೇವೆಂದು ಈಗಾಗಲೇ ತಿಳಿಸಿದ್ದಾರೆ. ಇದೇವರ್ಷ ಈ ಯೋಜನೆ ರೂಪಿತವಾಗಿ ಬಂದಿರುವುದರಿಂದ, ಕೆಲವೊಂದು ಕಡೆ, ತಾಲ್ಲೂಕು ಮಟ್ಟದ. ಮತ್ತು ಜಿಲ್ಲಾಮಟ್ಟದ ಸಮಿತಿಗಳು ರಚನೆಯಾಗುವಂಥ ಸಂದರ್ಭದಲ್ಲಿ, ಈ ಕೆಲಸಗಳು ವಿಳಂಬವಾಗಿರಬಹುದೇ

ಹೊರತು, ಈ ಸಮಿತಿಗಳ ರಚನೆಯಲ್ಲಿ ಹಾಗೂ ನಾಮನಿರ್ದೇಶಕರನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಸ್ವಲ್ಪ ತಡವಾಗಿರುವುದರಿಂದ ಈ ವಿಳಂಬಕ್ಕೆ ಕಾರಣವಾಗಿರಬಹುದು. ಆದರೆ, ಬಂದಂಥ ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈಗಾಗಲೇ ಅನೇಕ ಕೆಲಸಗಳೂ ಸಹ ನಡೆದಿವೆ. ಮತ್ತು ಅದರಲ್ಲಿಯೂ, ಜಿಲ್ಲಾ ಮಟ್ಟದ ಸಮಿತಿಯಲ್ಲಿ, ಜಿಲ್ಲಾ ಪರಿಷತ್ತಿನ ಇಂಜಿನಿಯರು ಹಾಗೂ ಪಿ.ಡಬ್ಲ್ಯೂ.ಡಿ. ಇಂಜಿನಿಯರುಗಳನ್ನು ಸೇರಿಸಿದ್ದೇವೆ. ಅವರಿಂದ ಒಂದು ನೀಲಿ ನಕ್ಷೆ ಮತ್ತು ಇನ್ನಿತರ ಕೆಲಸಗಳಿಗೆ ಸಹಾಯ ಮಾಡತಕ್ಕಂಥ ಉದ್ದೇಶ ಇದೆ. ಅಲ್ಲಿಯೂ ಸಹ ಕೆಲವೊಮ್ಮೆ ವಿಳಂಬವಾದ ಪ್ರಕರಣ ಬಂದುದರಿಂದ, ನಾವು ಸುತ್ತೋಲೆಯನ್ನು ನೀಡಿ, ಆದಷ್ಟು ಈ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ನಡೆಸಬೇಕೆಂದು ಆದೇಶ ಮಾಡಿದ್ದೇವೆ. 1991-92ನೆ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ 60 ಲಕ್ಷ ರೂಪಾಯಿಗಳನ್ನು ಮತ್ತು ನವ ನಿರ್ಮಾಣ ಕಟ್ಟಡಗಳಿಗಾಗಿ ಸುಮಾರು 60 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಲ್ಲಿ ಈಗಾಗಲೇ, ರಿಪೇರಿಗಾಗಿ ಸುಮಾರು 31 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಕಟ್ಟಡಕ್ಕಾಗಿ 43 ಲಕ್ಷದ 5 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಬಂದಿರತಕ್ಕ ಪ್ರಸ್ತಾವನೆಗನುಗುಣವಾಗಿ, ಎಲ್ಲಾ ಜಿಲ್ಲೆಗಳ ಪ್ರಾತನಿಧ್ಯವನ್ನು ತೆಗೆದುಕೊಂಡು ಹಣವನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಆದರೆ, ಬಂದಂಥ ಬೇಡಿಕೆಗಳು ಬಹಳವಾಗಿವೆ. ಸುಮಾರು 5-6 ಕೋಟಿ ರೂಪಾಯಿಗಳ ಒಂದು ಬೇಡಿಕೆ ಇದೆ. ನಮ್ಮ ಕಂದಾಯ ಸಚಿವರು ಹೇಳಿದಂತೆ ಪ್ರತಿಯೊಂದು ಬೇಡಿಕೆಗೂ ಸರ್ಕಾರದಿಂದಲೇ ಹಣ ಒದಗಬೇಕೆಂದರೆ ಸ್ವಲ್ಪ ಕಷ್ಟಸಾಧ್ಯ. ಸಾರ್ವಜನಿಕರು, ಅಲ್ಲಿನ ಗಣ್ಯರು ಸಹಕಾರ ನೀಡಿದಾಗ ಅಲ್ಲಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿ ತಸ್‌ದೀಕ್ ಹಣದ ಬಗ್ಗೆ ಅನೇಕ ಶಾಸಕರು ಗಮನಕ್ಕೆ ತಂದಿದ್ದಾರೆ. ತಸ್‌ದೀಕ್ ನಿಗದಿಪಡಿಸಲು ಸುಮಾರು 30 ಸಾವಿರ ಸಂಸ್ಥೆಗಳು ಅರ್ಹವಾಗಿವೆ. ಅದರಲ್ಲಿ ಈಗಾಗಲೇ 29,589 ಸಂಸ್ಥೆಗಳಿಗೆ ಅಂತಿಮವಾಗಿ ತಸ್‌ದೀಕ್ ನಿಗದಿಪಡಿಸಲಾಗಿದೆ. ಅದರ ಜೊತೆಗೆ 91-92 ರಲ್ಲಿ 9 ಕೋಟಿ ರೂಪಾಯಿ ತಸ್‌ದೀಕ್ ಪಾವತಿಗೆ ಹಣವನ್ನು ಆಯವ್ಯಯದಲ್ಲಿ ಒದಗಿಸಿದ್ದು ಅದರಲ್ಲಿ 8 ಕೋಟಿ 28 ಲಕ್ಷ ರೂಪಾಯಿ ಖರ್ಚಾಗಿದೆ. ಉಳಿದ ಹಣವನ್ನು ಆದಷ್ಟು ತೀವ್ರವಾಗಿ ಅಂತಹ ಒಂದು ಸಂಸ್ಥೆಗಳಿಗೆ ಬಿಡುಗಡೆ ಮಾಡತಕ್ಕಂಥ ಕೆಲಸ ಮಾಡುತ್ತೇವೆ. ಆದರೆ ಇಲ್ಲಿ ಬಂದಿರತಕ್ಕಂಥ ಒಂದು ತೊಂದರೆ, ಮಾನ್ಯ ಸದಸ್ಯರು ಗಮನಕ್ಕೆ ತಂದಿರತಕ್ಕಂಥಾದ್ದು ಈ ತಸ್‌ದೀಕ್ ಅಥವಾ ವರ್ಷಾಸನದ ಬಿಲ್‌ಗಳನ್ನು ಪಾವತಿ ಮಾಡಲು ಅನುಸರಿಸಿಕೊಂಡು ಬಂದಿರತಕ್ಕಂಥ ಕ್ರಮಗಳು ಬಹಳ ದೀರ್ಘವಾಗಿದ್ದು ಇದರಿಂದ ಅಂತಹ ಸಂಸ್ಥೆಗಳಿಗೆ ಬಹಳ ವಿಳಂಬವಾಗುತ್ತಿದೆ ಎನ್ನುವುದು. ಅಂತಹ ತಸದೀಕ್ ಬಿಲ್‌ಗಳನ್ನು ಸಹಿ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾ ಮಟ್ಟದಲ್ಲಿ ನೀಡಿದಾಗ ಈ ವ್ಯವಸ್ಥೆಯನ್ನು ಸರಳೀಕರಣ ಗೊಳಿಸಬಹುದೆಂಬ ಪ್ರಸ್ತಾವನೆ ಸರಕಾರದ ಮುಂದಿದ್ದು, ಇದನ್ನು ಆದಷ್ಟು ತೀವ್ರವಾಗಿ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ವರ್ಷಾಸನದ ವಿಚಾರದಲ್ಲೂ ಆದಷ್ಟು ಸರಳೀಕರಣಗೊಳಿಸಿ ಹಣವನ್ನು ನೀಡತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ. ಇದರ ಜೊತೆಗೆ ನಮ್ಮಲ್ಲಿರತಕ್ಕಂಥ ಅನೇಕ ದೇವಾಲಯಗಳು ಪ್ರಸಿದ್ಧ ಮಂದಿರಗಳ ಬಗ್ಗೆ ಅಲ್ಲಿರತಕ್ಕಂಥ ವ್ಯವಸ್ಥೆಯ ಬಗ್ಗೆ ಕೆಲವೊಂದು ಕುಂದುಕೊರತೆಗಳ ಬಗ್ಗೆ ಗಮನಕ್ಕೆ ತಂದಿದ್ದಾರೆ. ಅಂತಹ ಯಾವುದೇ ಒಂದು ಕುಂದುಕೊರತೆ ಇದ್ದರೆ ನಾವು ತೀವ್ರವಾಗಿ ಗಮನಿಸಿ ಅಂತಹ ಕಡೆ ಸೂಕ್ತ ವ್ಯವಸ್ಥೆ ಮಾಡತಕ್ಕಂಥ ಕೆಲಸವನ್ನು ನಾವು ಹಾಕಿಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನು

ಹೇಳಬಯಸುತ್ತೇನೆ. ಅದರ ಜೊತೆಗೆ ಹೊರರಾಜ್ಯಗಳಲ್ಲಿರತಕ್ಕಂಥ ಛತ್ರಗಳ ವಿಚಾರ, ತಿರುಪತಿ, ಮಂತ್ರಾಲಯ, ವಾರಣಾಸಿ ಮತ್ತು ಶ್ರೀಶೈಲ ಹಾಗೂ ಇನ್ನಿತರ ಕಡೆಗಳಲ್ಲಿ ಇರತಕ್ಕಂಥ ನಮ್ಮ ಕರ್ನಾಟಕ ಭವನವಾಗಲೀ ಅಥವಾ ಛತ್ರವಾಗಲಿ ಅದಕ್ಕೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ವ್ಯವಸ್ಥೆಯನ್ನೂ ಮಾಡತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಉದಾಹರಣೆಗಾಗಿ ತಿರುಪತಿಯಲ್ಲಿ ಮತ್ತೆ 102 ಕೊಠಡಿಗಳನ್ನು ಮಾಡತಕ್ಕಂಥ ಕಾರ್ಯಕ್ರಮ ತೀವ್ರಗತಿಯಲ್ಲಿ ನಡೆದಿದೆ. ಅದೇ ರೀತಿ ಇನ್ನಿತರ ಕಡೆ ಮಾನ್ಯ ಸದಸ್ಯರು ಗಮನಕ್ಕೆ ತಂದಂಥ ಜಾಗಗಳಲ್ಲಿ ಈ ಒಂದು ವ್ಯವಸ್ಥೆಯನ್ನು ಸೌಲಭ್ಯವನ್ನು ಸುಧಾರಣೆ ಮಾಡತಕ್ಕಂಥ ಕಾರ್ಯಕ್ರಮ ನಮ್ಮದಾಗಿದೆ. ಮತ್ತು ಮಾನ್ಯ ಸದಸ್ಯರು ಗಮನಕ್ಕೆ ತಂದಂತೆ, ಆಗಮತ್ರಯ ಮಹಾ ಮಂಡಲದವರು ದಿನಾಂಕ 15-3-92 ರಂದು ಕೆಲವೊಂದು ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ಆಗಮತ್ರಯ ಮಹಾಮಂಡಲ ಹಾಗೂ ಅರ್ಚಕರು ಹೇಳಿದಂಥ ಕೋರಿಕೆಗಳು ನಮ್ಮ ಮುಂದೆ ಇದೆ, ಅವುಗಳಿಗೆ ಸೂಕ್ತ ವ್ಯವಸ್ಥೆ ಮಾಡತಕ್ಕಂಥ ಒಂದು ಕಾರ್ಯಕ್ರಮ ನಾವು ಇಟ್ಟುಕೊಂಡಿದ್ದೇವೆ, ಆ ಒಂದು ಸಮಸ್ಯೆಗಳನ್ನು ಸರಿಪಡಿಸುವುದಕ್ಕೆ ಆದಷ್ಟು ತೀವ್ರವಾಗಿ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ಈ ಒಂದು ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಗಮನಕ್ಕೆ ತಂದಂಥ ವಿಷಯಗಳಲ್ಲಿ ಹೇಳುವುದಾದರೆ, ಮಾನ್ಯ ಶಿವರಾಮೇಗೌಡರು ಈ ಒಂದು ತಸ್‌ದೀಕ್ ಹಣ ಮಂಜೂರಾದ ನಂತರ ಅದನ್ನು ಪಡೆಯುವುದಕ್ಕೆ ವಿಳಂಬವಾಗುತ್ತದೆ ಎಂದು ಹೇಳಿದ್ದಾರೆ, ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ, ಅದನ್ನು ಸರಳೀಕರಣ ಮಾಡತಕ್ಕಂಥ ಕಾರ್ಯ ಮಾಡುತ್ತೇವೆ. ಆರಾಧನಾ ಯೋಜನೆಯನ್ನು ಇನ್ನಿತರ ವರ್ಗಗಳಿಗೂ ಸಹ ವಿಸ್ತರಣೆ ಮಾಡಬೇಕೆಂದು ಹೇಳಿದರು. ಈ ಒಂದು ವಿಷಯವನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ. ಹೆಚ್ಚಾಗಿ ಯಾವ ಒಂದು ವರ್ಗಗಳು ಸಮಾಜದ ತುಳಿತಕ್ಕೆ ಒಳಗಾಗಿದ್ದಾವೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನರು ಲಂಬಾಣಿ ಜನರು ಇರುವಂತಹ ಕಡೆಗಳಲ್ಲಿ ಈ ಒಂದು ಕಾರ್ಯಕ್ರಮ ಈಗಾಗಲೇ ಪ್ರಾರಂಭವಾಗಿದ್ದು ಕೆಲಸಕಾರ್ಯಗಳು ನಡೆದಿದೆ. ಇನ್ನಿತರ ಕಡೆ ಗಮನಕ್ಕೆ ಬಂದಾಗ ಏನು ಆ ಜನರಿಗೆ ವ್ಯವಸ್ಥೆ ಬೇಕಾಗಿದೆ ಅಂತಹ ವರ್ಗಗಳಿಗೆ ಅದನ್ನು ನೀಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮತ್ತು ಅದೇ ರೀತಿಯಾಗಿ ಅನೇಕ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ಬಂದಂತಹ ಕೆಲವೊಂದು ದೇವಸ್ಥಾನಗಳಲ್ಲಿ ಉದಾಹರಣೆಗೆ ಶಿವನಂಜಪ್ಪನವರು ಒಂದು ಮಾತು ಹೇಳಿದರು. ಯಡಿಯೂರಿನಲ್ಲಿ ನಡೆಯುತ್ತಿರತಕ್ಕ ಆಡಳಿತ ವ್ಯವಸ್ಥೆ ಬಗ್ಗೆ, ನಂಜನಗೂಡಿನಲ್ಲಿ ನಡೆಯುತ್ತಿರತಕ್ಕಂಥದ್ದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಆದಷ್ಟು ಅಂತಹ ಒಂದು ವ್ಯವಸ್ಥೆಯನ್ನು ಸುಧಾರಣೆ ಮಾಡಿ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲಿಕ್ಕೆ ಆದೇಶ ನೀಡುತ್ತೇನೆ. ಮತ್ತು ಅದೇ ರೀತಿಯಾಗಿ ಉಳಿದಕಡೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆಂದು ಹೇಳುತ್ತೇನೆ. ಇನ್ನು ವಿಶೇಷವಾಗಿ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಕಮಿಟಿಗಳು ರದ್ದಾಗಿ ಅಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಆ ಬಗ್ಗೆ ನನ್ನ ಮಿತ್ರರಾದ ವಿನಯಕುಮಾರ್ ಸೊರಕೆಯವರು, ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿರತಕ್ಕಂಥ ದೇವಸ್ಥಾನಗಳು ಮದ್ರಾಸ್ ಇತಿಮಿತಿಯ ಹುಂಬಳಿ ಕಾಯ್ದೆ 1950ರ ಪ್ರಕಾರ ಸೆಕ್ಷನ್ 31ರಂತೆ ಉಚ್ಚನ್ಯಾಯಾಲಯಕ್ಕೆ ಹೋಗಿರುವುದರಿಂದ ಅನೇಕ ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿದ್ದಾರೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಅಲ್ಲಿ ಆಡಳಿತ ಮಂಡಲಿಗಳನ್ನು ರದ್ದುಪಡಿಸಿ, ಅವೆಲ್ಲವುಗಳಿಗೆ ನಾವು ಆಡಳಿತಾಧಿಕಾರಿಗಳನ್ನು ಹಾಕಿದ್ದೇವೆ. ಮತ್ತೆ ಅಲ್ಲಿಯ ಅಭಿವೃದ್ಧಿ ಕೆಲಸಕಾರ್ಯಗಳು ಏನು ಆಗಬೇಕೋ ಅವು ಕಾನೂನಿನ ಚೌಕಟ್ಟಿನಲ್ಲಿ ಮಾಡಲು ಕಮಿಟಿಗಳು ಮಾಡತಕ್ಕಂಥ ಅವಕಾಶ ಇದೆ. ಅದನ್ನು ಮಾಡಿ ಸುಲಲಿತವಾಗಿ

ಆ ಕೆಲಸಕಾರ್ಯಗಳು ನಡೆದುಕೊಂಡು ಹೋಗುವಂತೆ ಕಾರ್ಯಕ್ರಮ ಹಾಕುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ದಿಸೆಯಲ್ಲಿ ಬಹಳ ಉತ್ತಮವಾದ ಸೇವೆ ಸೌಲಭ್ಯಗಳನ್ನು ಕೊಡತಕ್ಕಂಥಾದ್ದಕ್ಕೆ ಮತ್ತು ಸಂಪ್ರದಾಯಬದ್ಧವಾಗಿ ನಡೆದುಕೊಂಡು ಬಂದ ರೀತಿಯಲ್ಲಿ ಭಾವನೆ ಮೂಡಿಸತಕ್ಕಂಥ ಈ ಒಂದು ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಈ ದೇವಸ್ಥಾನಗಳಿಗೆ ತನ್ನದೆ ಆದಂತಹ ಸ್ವಂತ ಆಸ್ತಿ, ರಾಜಾಶ್ರಯ ಇತ್ತು. ಮಾನ್ಯ ಶಿವರಾಮೇಗೌಡರು ಹೇಳಿದ ರೀತಿ ಕೋಟ್ಯಾಂತರ ರೂಪಾಯಿಗಳ ಆದಾಯ ಕೆಲವು ದೇವಸ್ಥಾನಗಳಿಗೆ ಇದೆ. ಯಾವ ಒಂದು ದೇವಸ್ಥಾನಗಳಲ್ಲಿ, ಸಂಸ್ಥೆಗಳಲ್ಲಿ ಆದಾಯ ಇರುತ್ತದೆ ಅಲ್ಲಿ ಆ ಆದಾಯವನ್ನು ಸರಿಯಾಗಿ ವ್ಯವಸ್ಥಿತವಾಗಿ ಉಪಯೋಗಿಸಿಕೊಂಡು ಅದೇ ಸಂಸ್ಥೆಗಳಲ್ಲಿ ಆಡಳಿತ ಮಾಡಿಕೊಂಡು ಬರುವ ಯಾತ್ರಾರ್ಥಿಗಳಿಗೆ, ಭಕ್ತಾಧಿಗಳಿಗೆ ಸೌಲಭ್ಯಗಳನ್ನು ನೀಡತಕ್ಕಂಥಾದ್ದಕ್ಕೆ ಅನುಗುಣವಾಗಿ ಮಾಡಬೇಕೆ ಹೊರತು ಆ ಹಣವನ್ನು ಇನ್ನೊಂದು ಸಂಸ್ಥೆಗಳಿಗೆ ನೀಡತಕ್ಕಂಥಾದ್ದಕ್ಕೆ ಆಗುವುದಿಲ್ಲ ನಮ್ಮದು ಅದಲ್ಲ. ಎಲ್ಲಿ ಉತ್ತಮ ಆದಾಯ ಇದೆ ಅಂಥ ದೇವಸ್ಥಾನಗಳಲ್ಲಿ ಅದು ಇರಬೇಕು ಈ ವ್ಯವಸ್ಥೆ ಕೈಗೊಂಡಿದ್ದೇವೆ. ಇನ್ನು ಎಲ್ಲಾ ಕಡೆಗೆ ಏನಿದೆ ಆ ಒಂದು ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಧಾರ್ಮಿಕ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಸುಮಾರು 40 ಸಾವಿರಕ್ಕೂ ಮೇಲ್ಪಟ್ಟು ಇರುವುದರಿಂದ ನಮ್ಮ ಒಂದು ಇಲಾಖೆ ಸ್ವತಂತ್ರ ಇಲಾಖೆ ಆಗದೆ ನಾವು ಅನೇಕ ವಿಚಾರಗಳಲ್ಲಿ ಕಂದಾಯ ಇಲಾಖೆಯನ್ನು ಅವಲಂಬಿಸಿರುತ್ತೇವೆ. ಈ ಒಂದು ಹೊಸ ಏಕರೂಪ ಮಸೂದೆಯನ್ನು ಜಾರಿಗೆ ತಂದಲ್ಲಿ ನಮ್ಮದೆ ಆದಂತಹ ಒಂದು ಪ್ರತ್ಯೇಕ ಸಿಬ್ಬಂದಿ ಇದ್ದರೆ ಇವೆಲ್ಲವುಗಳನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದಷ್ಟು ಈ ಮಸೂದೆಯನ್ನು ತರುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳಿ ಈ ಸದನದ ಮುಂದೆ ಇಟ್ಟಿರತಕ್ಕಂಥ ಆಯವ್ಯಯ ಬೇಡಿಕೆಗಳನ್ನು ತಾವೆಲ್ಲ ಸಂಪೂರ್ಣವಾಗಿ ಒಪ್ಪಿ ಮಂಜೂರು ಮಾಡಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ : ಮಾನ್ಯ ಸಭಾಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ಮಹದೇಶ್ವರ ಬೆಟ್ಟ, ಚಾಮುಂಡಿ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ ಈ ಪ್ರದೇಶವನ್ನು ನೋಟಿಫೈಡ್ ಏರಿಯಾ ಎಂದು ಘೋಷಣೆ ಮಾಡಿದ್ದರಿಂದ ಅಲ್ಲಿಗೆ ಬರತಕ್ಕಂಥ ವಾಹನಗಳ ಶುಲ್ಕ ಹೋಗುತ್ತದೆ. ದೇವಸ್ಥಾನಗಳನ್ನು ನಿರ್ಮಾಣ ಮಾಡಿರತಕ್ಕಂಥ ಶುಲ್ಕ ಹೋಗುತ್ತದೆ, ಭಕ್ತಾದಿಗಳು ಕಟ್ಟಿಸಿರುವ ಕಟ್ಟಡಗಳ ಶುಲ್ಕ ಹೋಗುತ್ತದೆ. ಇದರಿಂದ ಆ ದೇವಸ್ಥಾನಗಳಿಗೆ ತೊಂದರೆಯಾಗುತ್ತದೆ, ಆದ್ದರಿಂದ ತಾವು ಈಗ ಯಡಿಯೂರಿನಲ್ಲಿ ಮಾಡಿರುವ ರೀತಿಯಲ್ಲಿ ಅಲ್ಲಿ ಬರುವ ಆದಾಯದಲ್ಲಿ ಇಂತಿಷ್ಟು ಪೈಸೆ ದೇವಸ್ಥಾನಕ್ಕೆ ಕೊಡಬೇಕೆಂದು ಏಕರೂಪ ಕಾನೂನು ತಂದಾಗ ದೇವಸ್ಥಾನಗಳಿಗೆ ಬರತಕ್ಕಂಥ ಆದಾಯವನ್ನು ಹೆಚ್ಚು ಮಾಡುವ ಬಗ್ಗೆ ಗಮನ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀಮತಿ ಮಲ್ಲಾಜಮ್ಮ : ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿವಸ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಕಳೆದಸಲ ನಮ್ಮ ತಾಲ್ಲೂಕಿನಲ್ಲಿ ತಸ್ತಿಕ್ ಹಣ ದುರುಪಯೋಗವಾಗಿದೆ ಎಂದು ಹೇಳಿದಾಗ ಮಾನ್ಯ ಕಂದಾಯ ಸಚಿವರು ಅದನ್ನು ಸಿ.ಓ.ಡಿ. ಗೆ ಒಪ್ಪಿಸುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟರು ಆ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಅದು ಯಾವ ಹಂತದಲ್ಲಿದೆ ? ಅರ್ಚಕರನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಹರಿಜನರಿಗೆ 18 ಪರ್‌ಸೆಂಟ್

ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರಾದ ಸಿದ್ಧಯ್ಯನವರು ಹೇಳಿದರು. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಅದರ ಬಗ್ಗೆ ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ : ಮಾನ್ಯ ಅಧ್ಯಕ್ಷಣಿಯವರೆ, ಈಗಾಗಲೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಮದ್ರಾಸ್ ಆ್ಯಕ್ಟ್ ಪ್ರಕಾರ, ಕೆಲವೊಂದು ಆಡಳಿತ ಸಮಿತಿಗಳನ್ನು ಮಾಡಿ ಅವುಗಳ ಮುಂದುವರಿಕೆಯನ್ನು ಬಿಡುವಂಥ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದ ತೀರ್ಮಾನದಂತೆ ಅದಕ್ಕೆ ತಡೆಯಾಗಿದೆಯೆಂದು ಹೇಳಿ ಪ್ರಸ್ತಾಪ ಮಾಡಿದ್ದಾರೆ. ಉಚ್ಚ ನ್ಯಾಯಾಲಯದಲ್ಲಿ ಇದ್ದರೂ ಕೂಡ, ಕೆಲವು ಸಲ ಅಧಿಕಾರಿಗಳು ಉಚ್ಚ ನ್ಯಾಯಾಲಯದ ತೀರ್ಮಾನಕ್ಕೆ ವಿರುದ್ಧವಾಗಿ ಕ್ರಮ ತೆಗೆದುಕೊಂಡ ಅವಕಾಶವನ್ನು ನಾವು ಕಾಣುತ್ತಿದ್ದೇವೆ. ಬೇರೆ ಕಾರಣದಿಂದ ಉಚ್ಚ ನ್ಯಾಯಾಲಯದಲ್ಲಿ ಆ ಪ್ರಕರಣ ಇದೆಯೆಂದು ಪ್ರಸ್ತಾಪ ಮಾಡುತ್ತಾರೆಯೇ ವಿನಃ ಅವರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಆಡಳಿತ ಸಮಿತಿಯನ್ನು ನಿರ್ಮೂಲನ ಮಾಡಲಿಕ್ಕೆ ಅಲ್ಲ. ಆ ದೃಷ್ಟಿಯಲ್ಲಿ ಸುಮ್ಮನೆ ಒಂದು ಕಾರಣಕ್ಕೋಸ್ಕರ, ಅಧಿಕಾರಿಗಳ ಅನುಕೂಲತೆಗೋಸ್ಕರ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಸೂಕ್ತವಾದ ಕ್ರಮವನ್ನು ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳುತ್ತೇನೆ.

ಡಾ : ಎನ್.ಬಿ. ನಂಜಪ್ಪ : ಮಾನ್ಯ ಅಧ್ಯಕ್ಷಣಿಯವರೆ, ಈಗ ದತ್ತಿ ಮಂತ್ರಿಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಅನೇಕ ಅನುಕೂಲಗಳನ್ನು ಮಾಡತಕ್ಕಂಥಾದ್ದು, ದೊಡ್ಡ ದೊಡ್ಡ ದೇವಸ್ಥಾನದಲ್ಲಿ, ತಾಂಡಗಳಲ್ಲಿ ಇರತಕ್ಕಂಥಾದ್ದರಲ್ಲಿ 'ಆರಾಧನ' ಸ್ಕೀಮ್‌ನಲ್ಲಿ ಈಗ ದೇವಸ್ಥಾನಗಳನ್ನು ರಿಪೇರಿ ಮಾಡತಕ್ಕಂಥಾದ್ದು ಮತ್ತು ಹೊಸದಾಗಿ ದೇವಸ್ಥಾನಗಳನ್ನು ಕಟ್ಟಿಸುವ ಅನುಕೂಲ ಮಾಡಿರತಕ್ಕಂಥಾದ್ದರ ಬಗ್ಗೆ ಹೇಳಿದರು. ಅದು ನಮಗೂ ಕೂಡ ಗೊತ್ತಿದೆ. ಸರ್ಕಾರ ಅದರ ಬಗ್ಗೆ ಚಿಂತನೆಯನ್ನು ಮಾಡಿದೆ. ಇದನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಾನಾದರೂ ಕೂಡ ಒಂದು ಮಾತನ್ನು ಮಂತ್ರಿಯವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ದೇವಸ್ಥಾನಗಳು, ತಮಗೆಲ್ಲಾ ಗೊತ್ತಿರುವಂತೆ ಸುಮಾರು 5-6 ಸಾವಿರ ವರ್ಷಗಳ ಕಾಲದಿಂದಲೂ ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿವೆ.

ಉಪಾಧ್ಯಕ್ಷಣಿಯವರು : ಈಗ, ಡೈರೆಕ್ಟ್ ಆಗಿ ಕ್ಲಾರಿಫಿಕೇಶನ್ ಇದ್ದರೆ ಕೇಳಿ. ಭಾಷಣ ಬೇಡ.

ಡಾ : ಎನ್.ಬಿ. ನಂಜಪ್ಪ : ಭಾಷಣ ಅಲ್ಲ. ಇದನ್ನು ಮಾಡತಕ್ಕಂಥ ಸಂದರ್ಭದಲ್ಲಿ ಏನು ಪುರೋಹಿತಶಾಹಿ ಸಾಮ್ರಾಜ್ಯ, ನಮ್ಮ ಹಿಂದೂ ಧರ್ಮದ ಹೆಸರಿನಲ್ಲಿ ಏನೇನು ನಡೆದಿದೆಯೋ, ಏನೇನು ತೊಡಕುಗಳು ಇವೆಯೋ ಅದನ್ನು ಮೊದಲು ತೊಡೆದುಹಾಕುವುದಕ್ಕೆ ಮಂತ್ರಿಗಳು ಏನು ಮಾಡುತ್ತಾರೆ ? ಏತಕ್ಕೆಂದರೆ ಇಂಡಿಯಾ ದೇಶದಲ್ಲಿರತಕ್ಕಂಥ ನಾವೆಲ್ಲರೂ ಕೂಡ ಹಿಂದೂ ಧರ್ಮದವರೇ ಆಗಿದ್ದರೂ ಕೂಡ ಈ ಧರ್ಮದ ಹೆಸರಿನಲ್ಲಿ ಬೇರೆ ಬೇರೆ ಎ.ಬಿ.ಸಿ.ಡಿ. ಆಗಿರತಕ್ಕಂಥಾದ್ದನ್ನು ತಪ್ಪಿಸಿ ಧರ್ಮಗಳು ಒಂದೇ ಆಗಬೇಕು. ಧರ್ಮದಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಕೂಡ ಸಮಾನವಾದ ಹಕ್ಕನ್ನು ದೊರಕಿಸುವುದಕ್ಕೆ ಏನನ್ನು ಮಾಡುತ್ತಾರೆ ಎನ್ನುವುದು ಒಂದು, ಇನ್ನೊಂದು ದೇವಸ್ಥಾನಕ್ಕೆ ಕೊಟ್ಟಿರತಕ್ಕಂಥ ಜಮೀನಿನಲ್ಲಿ ಕೆಲವು ಜಮೀನುಗಳು ಏನಾಗಿವೆ ಎಂದರೆ ಪೂಜಾರಿಗಳಿಗೆ ಅವರ ಹೆಸರಿಗೆ ಆದಮೇಲೆ ಮಾರಿಕೊಂಡು ಹೋಗಿ ಅನೇಕ ದೇವಸ್ಥಾನಗಳಲ್ಲಿ ಪೂಜೆಗಳನ್ನು ಮಾಡತಕ್ಕಂಥಾದ್ದು ನಿಂತುಹೋಗಿದೆ. ದೇವಸ್ಥಾನಗಳನ್ನು ಕಟ್ಟುತ್ತಿದ್ದೇವೆ. ಆದರೆ ಅಲ್ಲಿ ಪೂಜೆ ಮಾಡಲಿಕ್ಕೆ ಸರಿಯಾದ ವ್ಯವಸ್ಥೆ ಆಗದೇ ಇರುವಂಥಾದ್ದು, ಎಲ್ಲಾ ಗುಡಿ ಗೋಪುರಗಳ ಮೇಲೆ ಗಿಡ ಗೆಂಟೆಗಳು

ಬೆಳೆದುಕೊಂಡಿರತಕ್ಕಂಥಾದ್ದು ಈ ಎಲ್ಲವನ್ನೂ ನಾವು ನೋಡುತ್ತಿದ್ದೇವೆ. ಅದರ ಬಗ್ಗೆ ಸರ್ಕಾರ ಏನನ್ನು ಚಿಂತನೆ ಮಾಡಿದೆ ಎಂದು, ಇದು ಬಹಳ ಮುಖ್ಯವಾಗಿದೆ.

ಉಪಾಧ್ಯಕ್ಷಣಿಯವರು : ಈಗ ಸಮಯ ಹೆಚ್ಚಾಗಿದೆ. ಇನ್ನೂ ಬಹಳ ಜನ ವಿವರಣೆ ಕೇಳುವವರಿದ್ದಾರೆ.

ಡಾ : ಎನ್.ಬಿ. ನಂಜಪ್ಪ : ಒಂದು ಕಡೆ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದೇವೆ. ಒಂದು ಕಡೆ ದೇವಸ್ಥಾನಗಳ ಮೇಲೆ ಗಿಡ ಗೆಂಟೆಗಳು ಬೆಳೆದುಕೊಂಡು ಆ ದೇವಸ್ಥಾನಕ್ಕೆ ಪೂಜೆ ಇಲ್ಲದಂಥ ಒಂದು ಪರಿಸ್ಥಿತಿ ಇವತ್ತು ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ ಎನ್ನುವುದರ ಬಗ್ಗೆ, ಇದು ಬಹಳ ಮುಖ್ಯ.

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷಣಿಯವರೆ, ಕೊಡಗಿನಲ್ಲಿ ಮತ್ತು ಇಡೀ ರಾಷ್ಟ್ರದಲ್ಲಿ ಹೆಸರುವಾಸಿಯಾದಂಥ ಕಾವೇರಿ ನದಿಯು ತಲಕಾವೇರಿಯಲ್ಲಿ ಜನ್ಮ ತಾಳಿ ಅದಕ್ಕೆ ದಕ್ಷಿಣ ಗಂಗೆ ಎಂದು ಹೆಸರು ಬಂದಿದೆ. ಈ ಹಿಂದೆ ಆ ದೇವಸ್ಥಾನಕ್ಕೆ ಸುಮಾರು 5 ಸಾವಿರ ಎಕರೆ ಏಲಕ್ಕಿ ಬೆಳೆಯತಕ್ಕಂಥ ಜಾಗ ಇತ್ತು. 100 ಎಕರೆ ಗದ್ದೆ ಇತ್ತು. ಟೆನೆನ್ಸಿ ಆ್ಯಕ್ಟ್ ಬಂದಮೇಲೆ ಅದನ್ನು ಟೆನೆಂಟ್‌ಗಳಿಗೆ ಕೊಟ್ಟರು. ಇವತ್ತು ಆ ದೇವಸ್ಥಾನ ಬಹಳಷ್ಟು ಹೀನ ಸ್ಥಿತಿಗೆ ಬಂದಿದೆ. ಲಕ್ಷಾಂತರ ಜನ ತಲಕಾವೇರಿಗೆ ಪೂಜೆಗೆ ಹೋಗುತ್ತಾರೆ. ಅಲ್ಲಿ ಉಳಿಯುವುದಕ್ಕೆ ಸ್ಥಳ ಇಲ್ಲ. ತಮಿಳುನಾಡಿನಿಂದ ಬರುತ್ತಾರೆ, ಆಂಧ್ರದಿಂದ ಬರುತ್ತಾರೆ, ಕೇರಳದಿಂದ ಬರುತ್ತಾರೆ, ಒಂದು ಒಳ್ಳೆಯ ಗೆಸ್ಟ್ ಹೌಸ್ ತಲಕಾವೇರಿಯಲ್ಲಿ ಕಟ್ಟಿಸಿಕೊಡಬೇಕೆಂದು ನಾನು ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಭಾಗಮಂಡಲ ದೇವಸ್ಥಾನ ಬಹಳಷ್ಟು ಹೀನಸ್ಥಿತಿಗೆ ಬರುತ್ತಿದೆ. ಅದರ ಡೆವಲಪ್‌ಮೆಂಟ್‌ಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಮಂತ್ರಿಯವರಲ್ಲಿ ಕೇಳುತ್ತಾ ಈಗ ಅಲ್ಲಿನ ಪೂಜೆ ಮಾಡತಕ್ಕಂಥವರಿಗೆ 100 ರೂಪಾಯಿ ಸಂಬಳ ಕೊಟ್ಟರೆ, ಪೂಜಾರಿಗಳು ನಮಗೆ ಸಿಗುತ್ತಾ ಇಲ್ಲ. ನಾವು ಕೇರಳದಿಂದ ಪೂಜಾರಿಗಳನ್ನು ಕರೆದುಕೊಂಡು ಬಂದು ಪೂಜೆ ನಡೆಸಬೇಕಾದ ಪರಿಸ್ಥಿತಿಯು ಬಂದಿದೆ. ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಪೂಜಾರಿಗಳೇ ಇಲ್ಲದೆ ಪರಿಸ್ಥಿತಿ ಬಂದಿತ್ತು. ಆದ್ದರಿಂದ ಅಲ್ಲಿ ಪೂಜೆ ಮಾಡುವವರಿಗೆ ಸ್ವಲ್ಪ ಸಂಬಳ ಹೆಚ್ಚಿಗೆ ಕೊಟ್ಟು ಅಲ್ಲಿಗೆ ಪೂಜಾರಿಯವರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಫಿ ಅಹಮ್ಮದ್ : ಮಾನ್ಯ ಮುಖ್ಯಮಂತ್ರಿಯವರು 'ಆರಾಧನಾ' ಯೋಜನೆಯಡಿಯಲ್ಲಿ ಸಾಕಷ್ಟು ಉತ್ತೇಜನವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಕನ್‌ವರ್ಟೆಡ್ ಕ್ರಿಶ್ಚಿಯನ್ ಎಂದು ಎಸ್‌ಸಿ/ಎಸ್‌ಟಿ ಯವರು ಆಗಿದ್ದಾರೆ. ಹಾಗೆಯೇ ಎಷ್ಟೋ ಜನ ಟ್ರೈಬಲ್ಸ್ ಇದ್ದಾರೆ. ಮುಸ್ಲಿಮ್ ಜನರಲ್ಲಿ ದರ್ವೇಶ್, ಚಪ್ಪರ್‌ಬಂದ್, ಕುಳಾರ, ಮುಂತಾದ ಕಮ್ಯುನಿಟಿಯವರು ಇದ್ದಾರೆ, ಇವರೆಲ್ಲರೂ ಬಹಳ ಹಿಂದುಳಿದ ವರ್ಗದವರು. ಈ ಆರಾಧನಾ ಸ್ಕೀಮ್‌ನಲ್ಲಿ ಅವರನ್ನು ಸೇರಿಸಬೇಕು. ಹಾಗೆಯೇ ನನ್ನ ಕ್ಷೇತ್ರದಲ್ಲಿ ಶ್ರೀ ನರಸಿಂಹಸ್ವಾಮಿ ದೇವಸ್ಥಾನ ಇದೆ. ಇದು ಬಹಳ ಪ್ರಸಿದ್ಧವಾದ ಕ್ಷೇತ್ರ. ಈ ದೇವಸ್ಥಾನದಲ್ಲಿ 10 ಲಕ್ಷ ರೂಪಾಯಿಗಳ ಫಂಡ್ಸ್ ಕೂಡ ಇದೆ. ಅಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಇದೆ. ಅಲ್ಲಿ ಜಾತ್ರೆ ನಡೆಯುತ್ತದೆ, ಕನಿಷ್ಟಪಕ್ಷ ದೇವಸ್ಥಾನದ ಫಂಡ್ಸ್‌ನಲ್ಲಾದರೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಳ್ಳಲು ಪರ್ಮಿಶನ್ ಕೊಡಿ. ಅವರು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿ. ಅಲ್ಲಿಗೆ ಪ್ರವಾಸಿಗರು ಬಹಳ ಜನರು ಬರುತ್ತಿರುತ್ತಾರೆ. ದಯವಿಟ್ಟು ಈ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಕೆ. ಶಾಮಣ್ಣ : ನಮ್ಮ ಶೃಂಗೇರಿ ಕ್ಷೇತ್ರದಲ್ಲಿ ಮಲ್ಲೇಶಯ್ಯನ ಛತ್ರ ಎಂದು ಒಂದು ಇದೆ. ಇದು ಹರಿಪುರ ಹೋಬಳಿಯಲ್ಲಿ ಬರುತ್ತದೆ. ಅಲ್ಲಿ ದಿವಸಕ್ಕೆ ನೂರಾರು ಜನ ವಿದ್ಯಾರ್ಥಿಗಳಿಗೆ ಧರ್ಮಾಧಾರವಾಗಿ ಊಟ ವಸತಿ ಕೊಟ್ಟು ಅನುಕೂಲ ಮಾಡಿಕೊಡುತ್ತಾರೆ. ಈ ಛತ್ರದಲ್ಲಿ ಹಿಂದೆ ಪೂಜೆ ಮಾಡುವಂಥ ಅವಕಾಶ ಇತ್ತು. ಅಲ್ಲಿಯ ಭಟ್ಟರಿಗೆ ಕೊಡುವಂಥ ವೇತನ ಇದುವರೆಗೂ ಕೊಟ್ಟಿರುವುದಿಲ್ಲ. ಇದನ್ನು ಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಈ ಛತ್ರಕ್ಕೆ ಸೇರಿದಂಥ 50 ಎಕರೆ ಭೂಮಿಯು ಭೂಸುಧಾರಣ ಕಾಯಿದೆ ಮೇರೆಗೆ ರೈತರಿಗೆ ಹೋಗಿರುವುದರಿಂದ ಅದರ ಸಂಬಂಧಪಟ್ಟ ಪರಿಹಾರಧನ ಸರಕಾರದ ಮೂಲಕವಾಗಿ ಬರಬೇಕಾಗಿದೆ. ಇದನ್ನು ಕೇಳಿದಾಗ ಅದು ದತ್ತಿ ಮಂತ್ರಿಯವರ ಖಾತೆಗೆ ಈಗಾಗಲೇ ಸೇರಿದೆ ಎಂದು ತಿಳಿಸಿದ್ದಾರೆ. ಆ ಛತ್ರ ಬಿದ್ದು ಹೋಗುವ ಸ್ಥಿತಿಯಲ್ಲಿದ್ದರೂ, ಕಟ್ಟಡದ ರಿಪೇರಿಗಾಗಿ ಹಣವನ್ನು ಕೇಳಿದ್ದರೂ ಕೊಟ್ಟಿಲ್ಲ. ಅದಕ್ಕೆ ಕಾರಣ ಏನು ಎಂದು ತಿಳಿಸಬೇಕು.

ಶ್ರೀ ಆರ್. ನಾರಾಯಣ : ಮಾನ್ಯ ಸಚಿವರು ಚೆನ್ನಾಗಿಯೇ ಉತ್ತರವನ್ನು ಕೊಟ್ಟಿದ್ದಾರೆ. ಆರಾಧನ ಯೋಜನೆಡಿಯಲ್ಲಿ ಹರಿಜನ ಕೇರಿಗಳು, ಲಂಬಾಣಿ ತಾಂಡಗಳಿಗೆ ಮಾತ್ರ ಅನ್ವಯವಾಗುವಂತೆ ಮಾಡಿರುವುದು ಸರಿಯಲ್ಲ. ಅದಕ್ಕೆ ಗೊಲ್ಲರಹಟ್ಟಿಗಳನ್ನು ಕೂಡ ಸೇರಿಸಬೇಕು. ಲಂಬಾಣಿ ಜನರು ಮತ್ತು ಗೊಲ್ಲರಹಟ್ಟಿಯವರು ಒಂದೇ ರೀತಿಯಲ್ಲಿ ಜೀವನ ಮಾಡುವಂಥವರಾಗಿದ್ದಾರೆ. ಈ ಗೊಲ್ಲರಟ್ಟಿಗಳನ್ನು ಈ ವ್ಯಾಪ್ತಿಯಲ್ಲಿ ತರಲು ಸೂಕ್ತ ಆದೇಶವನ್ನು ಸರಕಾರದವರು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಆರಾಧನ ಸಮಿತಿಯನ್ನು ಸರಕಾರದವರು ತಾಲ್ಲೂಕು ಮಟ್ಟದಲ್ಲಿ ನೇಮಕ ಮಾಡಿದ್ದಾರೆ. ಅದನ್ನು ಕ್ಷೇತ್ರ ಮಟ್ಟದಲ್ಲಿ ಮಾಡಬೇಕು. ನಮ್ಮಲ್ಲಿ ಹಾಗೆ ಮಾಡಿಲ್ಲ. ನಮ್ಮ ಮೂಲ್ಕಿ ಕ್ಷೇತ್ರವು, ಕಾರ್ಕಳ ಮತ್ತು ಮಂಗಳೂರು ಎರಡು ತಾಲ್ಲೂಕಿಗೆ ಸೇರಿರುತ್ತದೆ. ಹೀಗಾಗಿ ನಮಗೆ ಹಣ ಬರುವಲ್ಲಿ ಸ್ವಲ್ಪ ತೊಂದರೆಯಾಗುತ್ತದೆ. ಆದ್ದರಿಂದ ಆಶ್ರಯ ಯೋಜನೆಯನ್ನು ಯಾವರೀತಿಯಲ್ಲಿ ಕ್ಷೇತ್ರವಾರು ಮಾಡಿದ್ದಾರೋ ಅದೇ ರೀತಿಯಲ್ಲಿ ಇದನ್ನು ಮಾಡಬೇಕು. ಆಗ ನಮ್ಮ ಕ್ಷೇತ್ರದಲ್ಲಿರುವವರಿಗೆ ಅನುಕೂಲ ಮಾಡಿಕೊಡಲು ಆಗುತ್ತದೆ.

ಶ್ರೀ ಶಂಕರಗೌಡ ಪಾಟೀಲ್ : ಯಡಿಯೂರು ದೇವಸ್ಥಾನವು ಬಹಳ ಪುರಾತನ ದೇವಸ್ಥಾನವಾಗಿದ್ದು ಅದಕ್ಕೆ ಸರಕಾರವು ಮ್ಯಾಚಿಂಗ್ ಗ್ರಾಂಟ್‌ನ್ನು ಕೂಡ ಕೊಡಬೇಕು. ಹಾಗೆಯೇ ಆರಾಧನ ಯೋಜನೆಯಡಿಯಲ್ಲಿ ಕೇವಲ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಸಾಕಾಗುವುದಿಲ್ಲ. ಹೊಸ ಮಂದಿರಗಳನ್ನು ಕಟ್ಟುವುದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಒಂದು ತಾಲ್ಲೂಕಿಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಗೋಡೆಗಳನ್ನು ಕೂಡ ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಹಣವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಮೈಲಾರ ಕ್ಷೇತ್ರ ದೊಡ್ಡ ಸುಕ್ಷೇತ್ರ. ಅಲ್ಲಿ ಭಕ್ತರಿಂದ ಕೂಡಿದ ಹುಂಡಿ ಹಣ ಎಣಿಸುವಾಗ ಅವ್ಯವಹಾರ ಆಗೋದು ಸರ್ಕಾರದ ಗಮನಕ್ಕೆ ಬಂದಿದೆಯೋ ಹ್ಯಾಗೆ ? ದತ್ತು ಕೂಡಿದಂತಹ ಹಣ ಅದೇ ಕ್ಷೇತ್ರಕ್ಕೆ ಇದುವರೆಗೂ ಖರ್ಚು ಮಾಡಿದ್ದರೆ ಕ್ಷೇತ್ರ ಅಭಿವೃದ್ಧಿಯಾಗುತ್ತಿತ್ತು. ಆ ದಿಸೆಯೊಳಗೆ ಮಾನ್ಯ ಮಂತ್ರಿಗಳು ಏನು ಗಮನಹರಿಸಿ ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ವಿವರವಾಗಿ ಉತ್ತರ ಬೇಕು.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ : ಸಚಿವರು ಸಮಾಧಾನಕರವಾಗಿ ಉತ್ತರ ಕೊಟ್ಟಿದ್ದಾರೆ ಆದರೆ ಈಗ ಮೂರ್ನಾಲ್ಕು ಕಾನೂನುಗಳಿಗೆ ಒಳಪಟ್ಟ ಧಾರ್ಮಿಕದತ್ತಿ ಸಂಸ್ಥೆಗಳಿಗೆ ತಾರತಮ್ಯ ಎದ್ದು

ಕಾಣುತ್ತದೆ ಅದು ಯಾವಾಗ ಒಂದು ಆ್ಯಕ್ಟ್ ಮಾಡುತ್ತೀರಿ ? ಆದಷ್ಟು ಬೇಗ ಮಾಡಬೇಕು. ಉತ್ತರ ಕರ್ನಾಟಕದ ಎಲ್ಲಾ ಗುಡಿಗಳಿಗೂ ಸಾಕಷ್ಟು ಸಮಾಧಾನವಾಗುವಂತೆ ಹೆಚ್ಚಿನ ಹಣ ಕೊಡುವಂತಹ ವ್ಯವಸ್ಥೆ ಈವರೆಗೂ ಆಗಿಲ್ಲ ಕಮಿಟಿಗಳನ್ನು ಸಂಪೂರ್ಣವಾಗಿ ರಚಿಸಿಲ್ಲ ಇವನ್ನು ಯಾವಾಗ ಮಾಡುತ್ತೀರಿ. ಆದಷ್ಟು ಬೇಗನೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ಕಮಿಟಿಯನ್ನು ರಿಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ವಿನಂತಿ ಮಾಡಿದ್ದೇನೆ, ಅದನ್ನು ಯಾವಾಗ ಮಾಡುತ್ತೀರೆಂದು ಹೇಳಬೇಕು. ಆರಾಧನಾ ಯೋಜನೆಯಲ್ಲಿ ಕೇವಲ ಎಸ್‌ಸಿ / ಎಸ್‌ಟಿ ಮತ್ತು ಲಂಬಾಣಿ ತಾಂಡಾಗಳಿಗೆ ಮಾತ್ರ ದೇವಸ್ಥಾನ ಕಟ್ಟುತ್ತಿದ್ದೀರಿ, ಅದನ್ನು ಎಲ್ಲಿ ಬಡವರ ಕಾಲೋನಿಗಳು ಇವೆ ಅಲ್ಲಿಗೆಲ್ಲ ವಿಸ್ತರಿಸಬೇಕೆಂದು ಕೇಳಿದ್ದೆ, ವಿಸ್ತರಿಸುವ ಬಗ್ಗೆ ಸದನದಲ್ಲಿ ಭರವಸೆ ಕೊಡಬೇಕೆಂದು ಧಾರ್ಮಿಕದತ್ತಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್ ಆಚಾರ್ : ಈ ಏಕರೂಪ ಶಾಸನ ಕುರಿತು ಕಳೆದ ಅನೇಕ ವರ್ಷಗಳಿಂದ ಆಶ್ವಾಸನೆ ಬರುತ್ತಿದೆ: ಈ ವರ್ಷ ಖಂಡಿತವಾಗಿ ಇದು ಆಗುತ್ತದೆಯೆ ಎಂದು ಕೇಳುತ್ತೇನೆ. ಎರಡನೆಯದು ಅಂತಹ ಕಾನೂನು ಬರುವಾಗ ಆಡಳಿತ ಮಂಡಲಿ ವಿಸರ್ಜನೆಯಾಯಿತು ಅಂದರೆ ಹೈಕೋರ್ಟಿಗೆ ಹೋಗಿದೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ರಕ್ಷಣೆಯನ್ನು ಏನಾದರೂ ಆ ಕಾನೂನಿನಲ್ಲಿ ಒಳಪಡಿಸುವ ಹಾಗೆ ಮಾಡಿಕೊಳ್ತೀರಾ ? ಇನ್ನೊಂದು ನನ್ನ ಕ್ಷೇತ್ರದ ಕೊಲ್ಲೂರಿನಂತಹ ದೇವಸ್ಥಾನದಲ್ಲಿ ಅರ್ಚಕರು, ಕ್ಷೇತ್ರ ಪುರೋಹಿತರು ತಮ್ಮ ಹಕ್ಕು ಭಾಧ್ಯತೆ ವರಮಾನ ತಮಗೆ ಸಿಗುವ ಆದಾಯದ ಪಾಲು ಇದರ ಬಗ್ಗೆ ಕೋರ್ಟಿಗೆ ಹೋಗಿದ್ದಾರೆ. ಅನೇಕ ವರ್ಷಗಳಿಂದ ಕೋರ್ಟಿನಲ್ಲಿ ನಡೆಯುತ್ತಿದೆ. ಆದರೂ ಸೆಟ್ಲ್‌ಮೆಂಟಾಗಿಲ್ಲ. ಜನರ ನಂಬಿಕೆಯ ಶ್ರದ್ಧಾಕೇಂದ್ರಗಳು ಈ ದೇವಸ್ಥಾನಗಳು. ಈ ರೀತಿಯ ವ್ಯಾಜ್ಯಗಳಿಂದಾಗಿ ಇಂತಹ ಕಡೆ ಬರುವ ಜನರಿಗೂ ಕೂಡ ಉತ್ಸಾಹ ಸಿಗೋದಿಲ್ಲ, ನಂಬಿಕೆ ಹೋಗ್ತದೆ, ಆದ್ದರಿಂದ ಇದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ? ಕೊನೆಯದು ಸರ್ಕಾರದಿಂದ ಅಭಿವೃದ್ಧಿಗಾಗಿ ಗ್ರಾಂಟ್ ಕೊಡುತ್ತಿದ್ದಾರೆ. ಆ ಗ್ರಾಂಟ್ ತೆಗೆದುಕೊಂಡು ಕಾಂಕ್ರೀಟ್ ಸ್ಟ್ರಕ್ಚರ್ ಆಗ್ತಾಯಿವೆ ಇಂದು, ಯಾವುದೇ ಹಳೆಯ ಚಾಲುಕ್ಯ ಹೊಯ್ಸಳ ಶಿಲ್ಪಕಲೆಯ ಅಪೂರ್ವವಾದ ಮಂದಿರಗಳಿವೆ ಅಂಥವನ್ನು ನೋಡಿ, ಅದನ್ನು ಕಿತ್ತುಹಾಕಿ ಇವನ್ನು ಕಟ್ಟುವಂಥದವು, ಇಲ್ಲಿ ಯಾವ ಶಿಲ್ಪಕಲೆಯೂ ವರ್ಧಿಸುವಂತಹ ಕೆಲಸ ಆಗೋದಿಲ್ಲ ನಮ್ಮ ಹಳೆಯ ಪರಂಪರೆಗನುಗುಣವಾಗಿ ಮಾಡಲಿಕ್ಕೆ ಪ್ರಯತ್ನಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಸಿದ್ಧಯ್ಯ : ಅಧ್ಯಕ್ಷಿಣಿಯವರೇ ಅನೇಕ ದೇವಸ್ಥಾನಗಳಲ್ಲಿ ಸ್ಟಾಫ್ ಬಹಳ ಎಕ್ಸಸ್ಸಾಗಿದೆ. ತಾವು ನೋಡಿ ಕ್ರಮ ತೆಗೆದುಕೊಳ್ತೀರಾ ? ಏಕೆಂದರೆ ಸಂಬಳ ಸಾರಿಗೆ ಜಾಸ್ತಿ ಈ ಕಾಲದಲ್ಲಿರುವುದರಿಂದ ಅದನ್ನು ಮಾಡ್ತೀರಾ ? ಎರಡನೆಯದು ಬರುವ ರೆವಿನ್ಯೂನಲ್ಲಿ ಬಹಳ ಸೋರಿಕೆ ಇದೆ, ಅದರಲ್ಲೂ ದೇವಸ್ಥಾನದಲ್ಲಿ ಪೂಜಾರಿಗಳು ಬರುವ ಭಕ್ತಾಧಿಗಳು ಕೊಡುವ ದುಡ್ಡನ್ನೆಲ್ಲ ಗೋಲಕಕ್ಕೆ ಹಾಕೋದಿಲ್ಲ ಹಾಗೆ ಮಾಡಿ ಅವರೇ ಎಲ್ಲಾ ತೆಗೆದುಕೊಂಡು ಹೋಗುತ್ತಿರುವುದನ್ನು ತಪ್ಪಿಸ್ತೀರಾ ?

ಶ್ರೀ ಎಂ. ಮಹದೇವ್ : ಪ್ರಸಿದ್ಧವಾದ ನಂಜನಗೂಡಿನ ದೇವಸ್ಥಾನದ ಕ್ಷೇತ್ರದವನು ನಾನು, ನನಗೇ ಅವಕಾಶ ಇಲ್ಲ. ಸ್ವಲ್ಪ ನಾನು ಹೇಳುವುದು ಕೇಳಿ. ದೇವಸ್ಥಾನಗಳಲ್ಲಿ ವರಮಾನ ಬರುತ್ತಿದೆ, ಆದರಿಂದ ಅಭಿವೃದ್ಧಿಪಡಿಸಿ. ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಪೂಜೆ ಮಾಡುವವರು 80 ಪರ್ಸೆಂಟ್ ಬ್ರಾಹ್ಮಣರು ಅವರನ್ನು ಮುಂದುವರೆದ ವರ್ಗ ಅಂತ ಸೇರಿಸಿ ಬಿಟ್ಟಿದ್ದೀರಿ, ಹೋಗಲಿ ಬೇಡ

ನಮಗೆ ಉದ್ಯೋಗಾನೂ ಸಿಕ್ಕೋಲ್ಲ, ಪೂಜೆ ಆದರೂ ಮಾಡಿಕೊಂಡು ಇರ್ತೀವೆ ಅಂದರೆ ಅಂತಹ ಆಗಮ ಮಾಡಿದ ಅರ್ಚಕರುಗಳಿಗೆ ತಿಂಗಳಿಗೆ ಸಂಬಳ ಎಷ್ಟು ಅಂದರೆ, ಅವರಿಗೆ ತಿಂಗಳಿಗೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಆಗಮಿಕರಿಗೆ ಒಂದು ರೂಪಾಯಿ, ಅರ್ಚಕರಿಗೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಇದೇನು ಟಿಪ್ಸ್ ಕೊಡುವುದಕ್ಕೂ ಕೂಡ ಆಗುವುದಿಲ್ಲ. ಇಂಥ ಪರಿಸ್ಥಿತಿ ಇದೆ. ಯಾವುದೋ ಬ್ರಿಟಿಷರ ಕಾಲದಲ್ಲಿ ಮಾಡಿದ್ದಂಥ ವೇತನವನ್ನು ಇವತ್ತಿಗೂ ಕೊಡುತ್ತಿದ್ದೇವೆ. ಸ್ವಾತಂತ್ರ್ಯ ಬಂದು 47-48 ವರ್ಷಗಳಾದರೂ ಅವರಿಗೆ ಈ ರೀತಿ ಹೊಟ್ಟೆಮೇಲೆ ಹೊಡೆಯುತ್ತಿದ್ದರೆ ಹೇಗೆ ? ಶ್ರದ್ಧೆಯಿಂದ ಪೂಜೆ ಕೂಡ ಮಾಡುವುದಕ್ಕೆ ನಾವು ಆ ಬ್ರಾಹ್ಮಣರನ್ನು ಬಿಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ದಯವಿಟ್ಟು ಆ ವೇತನವನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಒಬ್ಬೊಬ್ಬರಿಗೆ ಪೂಜೆಗೆ 300-500-800 ರೂಪಾಯಿಗಳ ವೇತನವನ್ನು ಕೊಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಆದ್ಯತೆಯನ್ನು ಕೊಡಬೇಕು, ಇದನ್ನು ಮಾಡಿದರೆ ದೇವಸ್ಥಾನಗಳ ಉದ್ಧಾರವಾಗುತ್ತದೆ ಮತ್ತು ನಂಜನಗೂಡಿನಲ್ಲಿ ಸಾಕಾದಷ್ಟು ಲಕ್ಷಾಂತರ ರೂಪಾಯಿಗಳ ವರಮಾನ ಇದೆ. ಆದರೆ ವರಮಾನಕ್ಕೆ ತಕ್ಕ ಹಾಗೆ ಅಲ್ಲಿ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ದಯವಿಟ್ಟು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಅಭಿವೃದ್ಧಿ ಕೆಲಸಗಳಾದರೆ ಭಕ್ತಾದಿಗಳಿಗೆ ಅನುಕೂಲವನ್ನು ಮಾಡಿಕೊಡುವುದಕ್ಕೆ ಹಣವನ್ನು ಸಾಕಷ್ಟು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ರಾಜಾ ಅಮರೇಶ ನಾಯಕ್ : ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯರಾದಂಥ ರಾಜುಗೌಡರು ನೋಟಿಫೈಡ್ ಏರಿಯಾ ಮಹದೇಶ್ವರ ದೇವಸ್ಥಾನಕ್ಕೆ ಸೇರಿದ ಏರಿಯಾದಲ್ಲಿ ವಾಹನ ಮತ್ತು ಇನ್ನಿತರ ತೆರಿಗೆಯನ್ನು ವಿಧಿಸುತ್ತಾರೆಂದು ಕೇಳಿದ್ದಾರೆ. ಕಟ್ಟಡದ ತೆರಿಗೆ ವಿನಾಯಿತಿ ಬಗ್ಗೆ ಅವರು ತಿಳಿಸಿದ್ದಾರೆ, ಅದನ್ನು ಪರಿಶೀಲಿಸಿ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಶ್ರೀಮತಿ ಮಲ್ಲಾಜಮ್ಮನವರು ತಸದೀಕ್ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಇನಾಂ ರದ್ದಿಯಾತಿ ಕಾಯ್ದೆಯಡಿಯಲ್ಲಿ ಬರುತ್ತದೆ, ಮಾನ್ಯ ಕಂದಾಯ ಸಚಿವರು ಅದರ ಬಗ್ಗೆ ಈಗಾಗಲೇ ವಿವರಣೆಯನ್ನು ನೀಡಿ ಹೋಂ ಡಿಪಾರ್ಟ್‌ಮೆಂಟ್‌ಗೆ ಸಿ.ಓ.ಡಿ. ಎನ್‌ಕ್ವೈರಿ ಸಲುವಾಗಿ ಅವರು ಆಗಲೇ ತಿಳಿಸಿರುತ್ತಾರೆಂದು ನಾನು ಹೇಳಬಯಸುತ್ತೇನೆ. ಅದೇ ರೀತಿ ಮಿತ್ರರಾದಂಥ ವಿನಯಕುಮಾರ್ ಸೊರಕೆಯವರು ಅಲ್ಲಿ ಇರತಕ್ಕಂಥ ಆಡಳಿತ ಮಂಡಲಿಗಳ ರಚನೆ ಬಗ್ಗೆ ಮತ್ತು ಆಡಳಿತಾಧಿಕಾರಿಗಳನ್ನು ನೇಮಿಸುವುದರಿಂದ ಅಲ್ಲಿ ಆಗತಕ್ಕಂಥ ತೊಂದರೆ ಬಗ್ಗೆ ಹೇಳಿದ್ದಾರೆ, ನಮ್ಮಲ್ಲಿ ಇರತಕ್ಕಂಥ ವಿವಿಧ ರೀತಿಯ ಕಾನೂನುಗಳ ಒಂದು ಚೌಕಟ್ಟಿನಲ್ಲಿ ನಾವು ಮಾಡುವುದರಿಂದ ಕೆಲವೊಮ್ಮೆ ತೊಂದರೆಯಾಗುತ್ತದೆಂದು ನಾನು ಈಗಾಗಲೇ ಹೇಳಿದ್ದೇನೆ. ಆದರೂ ಸಹ ಅಂಥ ಅಭಿವೃದ್ಧಿ ಸಮಿತಿಗಳನ್ನು ಮಾಡಿ ಕಾನೂನು ಚೌಕಟ್ಟಿನಲ್ಲಿ ಏನು ನಾವು ಅಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾನ್ಯ ಸದಸ್ಯರ ಸಲಹೆಯೊಂದಿಗೆ ಕುಳಿತು ಅಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ. ಈ ಒಂದು ಏಕರೂಪ ಕಾಯ್ದೆ ಬಂದಾಗ ಅವೆಲ್ಲಕ್ಕೂ ಒಂದು ಸರಿಯಾದ ಪರಿಹಾರ ದೊರೆಯುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಡಾ : ನಂಜಪ್ಪನವರು, ಈ ದೇವಸ್ಥಾನಗಳಿಗೆ ಇರತಕ್ಕಂಥ ಜಮೀನುಗಳು ಭೂಸುಧಾರಣಾ ಕಾನೂನು ಸಂದರ್ಭದಲ್ಲಿ ಹೊರಟು ಹೋಗಿರುವುದರಿಂದ ಅವುಗಳಿಗೆ ನೀಡತಕ್ಕಂಥ ಪರಿಹಾರಧನವನ್ನು ಸರಿಯಾಗಿ ನೀಡುತ್ತಿಲ್ಲವೆಂದು ಹೇಳಿದ್ದಾರೆ. ನಾವೂ ಸಾಧ್ಯವಾದಷ್ಟು ನೀಡಿದ್ದೇವೆ. ಎಲ್ಲಿಯಾದರೂ ತಡವಾಗಿದ್ದರೆ, ಅದು ಸಂದಾಯವಾಗದಿದ್ದರೆ ಅಂಥವುಗಳನ್ನು ನಮ್ಮ ಗಮನಕ್ಕೆ ತಂದಾಗ ಅವುಗಳಿಗೂ ಸಹಾ ನಾವು ಪರಿಹಾರ ನೀಡುವುದಕ್ಕೆ

ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಅದೇ ರೀತಿ ಹಿರಿಯ ಶಾಸಕರಾದಂಥ ಶ್ರೀಮಾನ್ ಚಿನ್ನಪ್ಪನವರು ತಲಕಾವೇರಿ ಅಭಿವೃದ್ಧಿಯ ಬಗ್ಗೆ ತಿಳಿಸಿದ್ದಾರೆ. ಅಲ್ಲಿ ಬರತಕ್ಕಂಥ ದೇವಸ್ಥಾನದ ಆದಾಯ ಹೆಚ್ಚಿಗೆ ಇದ್ದಾಗ ನಾವು ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಣುವಾಗುತ್ತದೆ. ಆದರೂ ಸಹ ಅದು ಒಂದು ಪವಿತ್ರವಾದ ವಿಖ್ಯಾತಿಗೊಂಡಂಥ ಸ್ಥಳವಾಗಿರುವುದರಿಂದ ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳುತ್ತೇವೆ ಎಂದು ಹೇಳುತ್ತೇನೆ. ಮತ್ತೆ ಕೆಲವೊಂದು ಯಾತ್ರಾಸ್ಥಳಗಳಲ್ಲಿ ಕುಡಿಯುವ ನೀರಿನ ಬಗ್ಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಇದೇ ರೀತಿ ಸವದತ್ತಿ ಒಂದು ಕ್ಷೇತ್ರದಲ್ಲಿ ತೊಂದರೆ ಆದಾಗ ಅಲ್ಲಿ ಬರತಕ್ಕಂಥ ಹಣದ ವ್ಯವಸ್ಥೆಯಿಂದ ಸುಮಾರು ಎರಡು ಕೋಟಿ ರೂಪಾಯಿಯಷ್ಟು ಪ್ರಾಜೆಕ್ಟ್ ಮಾಡಿ ಈಗ ಕುಡಿಯುವ ನೀರಿನ ಒಂದು ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದೇವೆ. ಅದೇ ರೀತಿ ಮಾನ್ಯ ಸದಸ್ಯರುಗಳು ತಿಳಿಸಿರತಕ್ಕಂಥ ದೇವಸ್ಥಾನಗಳಲ್ಲಿ, ಕ್ಷೇತ್ರಗಳಲ್ಲಿ ಆ ಒಂದು ಆದಾಯವನ್ನು ನೋಡಿಕೊಂಡು ಆದಷ್ಟು ಇಂಥ ಒಂದು ಅತಿ ಮುಖ್ಯವಾದ ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಶಾಮಣ್ಣನವರು ಶೃಂಗೇರಿ ಮತ್ತು ವೇತನ ಪರಿಷ್ಕರಣೆ ಬಗ್ಗೆ ಹೇಳಿದ್ದಾರೆ. ಈ ವೇತನವನ್ನು ದೇವಸ್ಥಾನದ ಆದಾಯದ ಮೇಲೆ ನೀಡುತ್ತಿದ್ದೇವೆ. ಮಲೇಮಹದೇಶ್ವರ ಮತ್ತು ಇನ್ನು ಇತರೆ ದೇವಸ್ಥಾನಗಳಲ್ಲಿ ಹೆಚ್ಚಿಗೆ ಪಡೆಯುತ್ತಿದ್ದಾರೆ. ಕೆಲವೊಂದು ಕಡೆ ಬಹಳ ಕಡಿಮೆ ಇದೆ. ಇದು ನನ್ನ ಗಮನಕ್ಕೂ ಬಂದಿದೆ. ಇದು ಅನೇಕ ದಿವಸಗಳಿಂದ ಇರತಕ್ಕ ಸಮಸ್ಯೆ. ನಾವು ಏಕರೂಪ ಶಾಸನ ತಂದಾಗ ರಾಜ್ಯದ ಎಲ್ಲಾ ಕಡೆ ಇರತಕ್ಕವರಿಗೂ ಸಹ ಸಮನಾದಂಥ ವೇತನ ಪರಿಷ್ಕರಣೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದನ್ನು ಸಹ ಮಾಡುತ್ತೇವೆ. ಮಾನ್ಯ ನಾರಾಯಣರವರು ಆರಾಧನಾ ಯೋಜನೆಗಳಲ್ಲಿ ಇನ್ನು ಇತರೆ ಹಿಂದುಳಿದ ವರ್ಗಗಳನ್ನು ಸಹ ಸೇರಿಸಿಕೊಂಡು ಗೊಲ್ಲರ ಹಟ್ಟಿಯಲ್ಲಿ ಕೂಡ ದೇವಸ್ಥಾನಗಳನ್ನು ನಿರ್ಮಾಣ ಮಾಡಿಕೊಡಬೇಕೆಂದು ಕೇಳಿದ್ದಾರೆ. ಅದನ್ನು ಸಹ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಮಾನ್ಯ ಸೋಮಪ್ಪ ಸುವರ್ಣರವರು ಆರಾಧನಾ ಸಮಿತಿಗೆ ಈಗ ತಾಲ್ಲೂಕು ಮಟ್ಟದ ಸಮಿತಿಯನ್ನು ನೀವು ಮಾಡಿದ್ದೀರಿ, ಯಾವರೀತಿ ಕ್ಷೇತ್ರವಾರು ಹಣವನ್ನು ಬಿಡುಗಡೆ ಮಾಡಿದ್ದೀರಿ, ಅದೇರೀತಿ ಕ್ಷೇತ್ರವಾರು ಸಮಿತಿಯನ್ನು ಮಾಡುತ್ತೀರಾ ಎಂಬ ಸಲಹೆಯನ್ನು ಇಟ್ಟಿದ್ದಾರೆ. ಅದರ ಜೊತೆಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದೂ ಸಹ ಅವರ ಬೇಡಿಕೆ ಇದೆ. ಈಗ ಪರಿವರ್ತನೆ ಮಾಡುವುದರಿಂದ ಇದರಲ್ಲಿ ಕಾಲ ವ್ಯಯವಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಮಾಡಿಲ್ಲ. ಮುಂದಿನ ವರ್ಷ ಇಂತಹ ಬೇಡಿಕೆಗಳು ಏನು ಬಂದಿದ್ದಾವೆ, ನಮ್ಮ ಯೋಜನೆಯಲ್ಲಿ ಏನು ಕುಂದುಕೊರತೆ ಇದ್ದಾವೆ ಅವುಗಳನ್ನು ಮಾನ್ಯ ಶಾಸಕರು ನೀಡತಕ್ಕ ಸಲಹೆಗಳ ಮುಖಾಂತರ ನಮ್ಮ ಯೋಜನೆಯಲ್ಲಿ ಅಳವಡಿಸಿಕೊಳ್ಳುತ್ತೇವೆ.

ಮಾನ್ಯ ವಿನಯಕುಮಾರ್‌ರವರು ದೇವಸ್ಥಾನಕ್ಕೆ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಬೇಕು. ಮತ್ತು ಪುರಾತನ ದೇವಸ್ಥಾನಗಳಿಗೆ ಅನುದಾನ ನೀಡಬೇಕೆಂದು ಹೇಳಿದ್ದಾರೆ. ಅದೇರೀತಿ ಮಾನ್ಯ ಆಚಾರ್‌ರವರು ಪ್ರಾಚೀನ ದೇವಾಲಯದ ಜೀರ್ಣೋದ್ಧಾರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳಿದ್ದಾರೆ. ನಾವು ಕಟ್ಟಡ ನಿರ್ಮಾಣಕ್ಕಾಗಿ ನೀಡತಕ್ಕ ಹಣ ಹೆಚ್ಚಾಗಿ, ಕಲ್ಯಾಣ ಮಂಟಪ ಮುಖ್ಯ ಇನ್ನಿತರ ಸಂಸ್ಥೆಗಳಿಗೆ ನೀಡುತ್ತೇವೆ. ಅವು ಹೆಚ್ಚಾಗಿ ವ್ಯವಸ್ಥಿತವಾಗಿರುತ್ತದೆ. ನನ್ನ ಗಮನಕ್ಕೂ ಸಹ

ಪ್ರಾಚೀನ ದೇವಾಲಯಗಳ ಬಗ್ಗೆ ಇತ್ತು. ಅವರ ಸಲಹೆ ಬಹಳ ಸೂಕ್ತವಾಗಿದೆ. ಪ್ರಾಚೀನ ದೇವಾಲಯಗಳ ಅಭಿವೃದ್ಧಿಗೆ ಜೀರ್ಣೋದ್ಧಾರಕ್ಕೆ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಅದೇ ರೀತಿ ಮಾನ್ಯ ಶಂಕರ್ ಗೌಡರು ಆರಾಧನಾ ಕಾರ್ಯಕ್ರಮಕ್ಕೆ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ 1 ಕೋಟಿ ರೂಪಾಯಿಯನ್ನು ನಿಗಧಿಪಡಿಸಿದ್ದರು. ತರನಂತರ ಈ ರೀತಿಯ ಬೇಡಿಕೆಗಳು ಬಂದಿದ್ದರಿಂದ ಮತ್ತು ಆ ವರ್ಗಗಳು ನೂರಾರು ವರ್ಷಗಳಿಂದ ಈ ಸೌಲಭ್ಯದಿಂದ ವಂಚಿತರಾಗಿದ್ದಕ್ಕೆ ಮಾನ್ಯ ಸದಸ್ಯರ ಗಣ್ಯರ ಬೇಡಿಕೆಗಳನ್ನು ಅನುಸರಿಸಿ ಮತ್ತೆ ಹೆಚ್ಚುವರಿ 4 ಕೋಟಿ ರೂಪಾಯಿಯನ್ನು ಮುಖ್ಯ ಮಂತ್ರಿಗಳು ನೀಡಿದ್ದಾರೆ. ಈ ರೀತಿಯಾಗಿ ಈಗಾಗಲೇ 5 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ. ಅದೇ ರೀತಿ ಮುಂದಿನ ವರ್ಷಕ್ಕೂ ಸಹ 5 ಕೋಟಿ ರೂಪಾಯಿಯನ್ನು ನಿಗಧಿಪಡಿಸಿದ್ದಾರೆ. ಅಂತಹ ಬೇಡಿಕೆಗಳು ಹೆಚ್ಚು ಬಂದಾಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಬೇಡಿಕೆಗೆ ಹೆಚ್ಚು ಅನುದಾನವನ್ನು ಕೇಳಲಿಕ್ಕೆ ನಾನು ಅವರಲ್ಲಿ ಭಿನ್ನವಿಸಿಕೊಳ್ಳುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಅದೇ ರೀತಿ ಮೈಲಾರ್ ಕ್ಷೇತ್ರ. ಆ ಭಾಗದ ಪ್ರಸಿದ್ಧವಾದಂಥ ಕ್ಷೇತ್ರ. ಕೆಲವೊಂದು ಕ್ಷೇತ್ರದಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ನಾನೂ ಸಹ ಅಲ್ಲಿಗೆ ಭೇಟಿಯನ್ನು ಕೊಡಬೇಕಾಗಿತ್ತು. ಕಾರಣಾಂತರಗಳಿಂದ ಭೇಟಿ ಕೊಡಲು ಆಗಲಿಲ್ಲ. ಅಲ್ಲಿಗೆ ಸ್ವಯಂ ಆಗಿ ಭೇಟಿ ಕೊಟ್ಟು ಸದಸ್ಯರ ಜೊತೆಗೆ ನಾನು ಮಾತನಾಡಿ ಅಲ್ಲಿ ವ್ಯವಸ್ಥೆಗಳನ್ನು ಕಲ್ಪಿಸಿಕೊಡಬೇಕು ಆ ಕಾರ್ಯವನ್ನು ನಾನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಮಾನ್ಯ ಹಿರಿಯ ಸದಸ್ಯರಾದಂಥ ಗೋಪಿನಾಥ್ ಸಾಂಡ್ರರವರು ಉತ್ತರ ಕನ್ನಡಕ್ಕೆ ಹೆಚ್ಚಿನ ಹಣವನ್ನು ನೀಡಬೇಕೆಂದು ಹಾಗೂ ಆದಷ್ಟು ತೀವ್ರವಾಗಿ ಏಕರೂಪ ಶಾಸನವನ್ನು ತರಬೇಕು, ಮತ್ತು ಕಮಿಟಿಗಳನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ. ಇದೂ ಸಹ ಬೆಳಗಾಂ ಭಾಗದಲ್ಲಿ ಬರತಕ್ಕ ನಾಲ್ಕು ಜಿಲ್ಲೆಗಳಲ್ಲಿ ಇರತಕ್ಕ ತೊಂದರೆ. ಅಲ್ಲಿ ಚಾರಿಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಚಾರಿಟಿ ಕಮಿಷನರ್‌ರವರನ್ನು. ಲಾ ಡಿಪಾರ್ಟ್‌ಮೆಂಟಿನಿಂದ ಹೈಕೋರ್ಟ್‌ನವರಿಂದ ನೇಮಕಮಾಡುವುದರಿಂದ ಕೆಲವೊಮ್ಮೆ ವಿಳಂಬವಾಗಿರುತ್ತದೆ. ಅದೇರೀತಿ ಚಾರಿಟಿ ಕಮಿಷನರ್‌ರವರ ಒಂದು ಹುದ್ದೆ ಖಾಲಿ ಇದೆ. ಅಸಿಸ್ಟೆಂಟ್ ಚಾರಿಟಿ ಕಮಿಷನರ್ ಅನ್ನು ಕೆಲವು ತಿಂಗಳುಗಳ ಹಿಂದೆ ಅಲ್ಲಿ ನೇಮಕಮಾಡಿದ್ದಾರೆ. ಏಕರೂಪ ಶಾಸನ ತಂದಾಗ ಈ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ಹಣದ ಬಗ್ಗೆ ಅವರು ಕೇಳಿದ್ದಾರೆ. ಎಲ್ಲಾ ಜಿಲ್ಲೆಗಳಿಗೂ, ತಾಲ್ಲೂಕುಗಳಿಗೂ ಸಮರ್ಪಕವಾದ ರೀತಿಯಲ್ಲಿ ಯಾವರೀತಿ ಆರಾಧನಾ ಯೋಜನೆಯಲ್ಲಿ ನೀಡಿದ್ದೇವೆ ಅದೇರೀತಿ ನೀಡಲಿಕ್ಕೆ ಪ್ರಯತ್ನಪಡುತ್ತೇವೆಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ, ಅನೇಕ ವಿವಿಧ ಭಾಗಗಳಲ್ಲಿ ಇರತಕ್ಕಂಥ ಇಂತಹ ಸಮಸ್ಯೆಗಳನ್ನು ಪದೇ ಪದೇ ಬದಲಾವಣೆಗೊಳ್ಳದಂತೆ ಒಂದೇ ಸಮಯದಲ್ಲಿ ಚರ್ಚೆ ಮಾಡುವುದರ ಮೂಲಕ ತಡವಾದರೂ ಚಿಂತೆಯಿಲ್ಲ, ಒಳ್ಳೆಯ ರೀತಿಯಿಂದ ಯೋಜನೆ ಮಾಡಬೇಕೆನ್ನುವ ಉದ್ದೇಶವಿಟ್ಟುಕೊಂಡು ಮಾಡುತ್ತಿದ್ದೇವೆ. ಈಗಾಗಲೇ ಅದು ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಅಂತಿಮ ಘಟ್ಟದಲ್ಲಿದೆ. ಅದನ್ನು ಆದಷ್ಟು ತೀವ್ರವಾಗಿ ತರುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಶಿವರಾಮೇಗೌಡರು ಯಡಿಯೂರು ಕ್ಷೇತ್ರದ ಆಡಳಿತಾಧಿಕಾರಿಗಳ ಬಗ್ಗೆ ಮತ್ತು 'ಆರಾಧನಾ' ಯೋಜನೆಯನ್ನು ಬಡವರ

ಕಾಲೋನಿಗೂ ವಿಸ್ತರಿಸಬೇಕೆಂದು ಹೇಳಿದ್ದಾರೆ. ಅವರ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ. ಅಲ್ಲದೆ, ಯಡಿಯೂರು ಕ್ಷೇತ್ರದ ಬಗ್ಗೆ ಆದಷ್ಟು ತೀವ್ರವಾಗಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ. ಕೆಲವೊಮ್ಮೆ ಕಮಿಟಿಯ ಕಾನೂನು ವ್ಯಾಪ್ತಿ ಇರುವುದರಿಂದ, ಆ ಕಾನೂನು ವ್ಯಾಪ್ತಿಯ ನಂತರ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಅನೇಕ ಶಾಸಕರು, ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಅವರುಗಳೆಲ್ಲರ ಸಲಹೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ. ಅಲ್ಲದೆ, ದೇವಸ್ಥಾನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರನ್ನು ಅರ್ಚಕರನ್ನಾಗಿ ನೇಮಿಸಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆ ರೀತಿಯ ನೇಮಕಾತಿ ಮಾಡುವುದಕ್ಕೆ ಈಗಾಗಲೇ ನಾವು ಆದೇಶವಿತ್ತಿದ್ದೇವೆ. ಈ ರೀತಿಯ ನೇಮಕನ್ನೂ ಸಹ ಮಾಡಿಕೊಳ್ಳುತ್ತೇವೆಂದು ಹೇಳುತ್ತೇನೆ. ಇಷ್ಟೆಲ್ಲಾ ಸದಸ್ಯರ ಸಲಹೆಗಳನ್ನು ಮತ್ತು ಇನ್ನಿತರ ಬಿಟ್ಟುಹೋಗಿರತಕ್ಕ ವಿಚಾರಗಳೇನೇ ಇದ್ದರೂ ಮಾನ್ಯ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡಿ, ಯಾವ ರೀತಿ ಹೆಚ್ಚಿನ ಸೌಲಭ್ಯ ಕೊಡುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ಅವರ ಸಲಹೆಗಳನ್ನು ತೆಗೆದುಕೊಂಡು ಮಾಡುತ್ತೇವೆ. ಆದುದರಿಂದ, ಈ ಸಂದರ್ಭದಲ್ಲಿ ಸದನ ಮತ್ತು ತಾವು ಈ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> "ದಿನಾಂಕ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 40, 48, 49, 50, 55, 56 ಮತ್ತು 51ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 40 - ಜಿಲ್ಲಾದಳಿತ

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾದಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36,90,68,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 48 - ಭೂ ಕಂದಾಯ ಇತ್ಯಾದಿ

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,20,21,000 ರೂ.

ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,01,84,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 49 - ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,31,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 50 - ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,00,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 55 - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 90,53,85,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 56 - ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 279,20,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 51 - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,86,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಉಪಾಧ್ಯಕ್ಷಿಣಿಯವರು : ಈಗ ಸಭೆ ಮುಂದೂಡಲ್ಪಟ್ಟು ಮಧ್ಯಾಹ್ನ ಪುನಃ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಪುನಃ 3-15 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಉಪಾಧ್ಯಕ್ಷಿಣಿಯವರು : ಮಾನ್ಯ ಪ್ರಭಾಕರ್ ರಾಣೆಯವರ ಪ್ರಶ್ನೆ ಪಿ.ಡಬ್ಲ್ಯೂ.ಡಿ. ಗೆ ಟ್ರಾನ್ಸ್‌ಫರ್ ಆಗಿದೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಅದು ಮುಂದಿನ ವಾರದಲ್ಲಿ ಬರುತ್ತದೆ.

ಬಯಲುನಾಡು ಅಭಿವೃದ್ಧಿ ಮಂಡಳಿಯ ಸ್ಥಾಪನೆ

1836. ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಅಸ್ತಿತ್ವದಲ್ಲಿರುವಂತೆ ಬಯಲುನಾಡು ಅಭಿವೃದ್ಧಿ ಮಂಡಳಿ ರಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಂತೆ ಬಯಲುನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಸ್ತಾವನೆಯು ಸರ್ಕಾರದಲ್ಲಿ ಈಗ ಯಾವ ಹಂತದಲ್ಲಿದೆ?

ಇ) ಹಾಗಿದ್ದರೆ, ಅದರ ಮುಂದಿನ ರೂಪುರೇಷಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷಿಣಿಯವರೆ, ನಾನು ಕೇಳಿರತಕ್ಕಂಥ ಪ್ರಶ್ನೆಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗಳು ಅಸ್ತಿತ್ವದಲ್ಲಿರುವಂತೆ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸುವ ಬಗ್ಗೆ ಸರಕಾರದಲ್ಲಿ ಪ್ರಸ್ತಾವನೆಯು ಇದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಂತೆ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸುವ ಪ್ರಸ್ತಾವನೆಯು ಸರಕಾರದಲ್ಲಿ ಈಗ ಯಾವ ಹಂತದಲ್ಲಿ ಇದೆ ಎಂದು ಕೇಳಿದ್ದಕ್ಕೆ 'ಉದ್ಭವಿಸುವುದಿಲ್ಲ' ಎಂದು ಉತ್ತರಿಸಿದ್ದಾರೆ. ಈಗ ಬಯಲುಸೀಮೆ ಪ್ರದೇಶವಾಗಿರತಕ್ಕಂಥ ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ರಸ್ತೆಯ ಪರಿಸ್ಥಿತಿಯು ಹೇಗೆ ಇದೆ ಎಂಬುದನ್ನು ನಮ್ಮ ಜಿಲ್ಲೆಯಿಂದ ಬಂದಂಥ ತಾವುಗಳು ಕೂಡ ಅರಿತುಕೊಂಡಿದ್ದೀರಿ. ಹಾಗಿದ್ದಲ್ಲಿ ಈ ಮಲತಾಯಿ ಧೋರಣೆಯು ಏತಕ್ಕಾಗಿ? ಈಗ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಹಣವನ್ನು ಕೊಡುತ್ತಾ

ಇದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಳಿಗೂ ಕೊಡುತ್ತಾ ಇದ್ದಾರೆ. ಹಾಗೆಯೇ ಯಾವ ಕಾರಣಕ್ಕಾಗಿ ಈ ಒಂದು ಬೋರ್ಡ್‌ನ್ನು ಮಾಡಬಾರದು ಎಂದು ಕೇಳಬಯಸುತ್ತೇನೆ. ಹಾಗೂ ಇದು ಸರಕಾರದ ಪರಿಶೀಲನೆಯಲ್ಲಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೆ, ಇದು ಮಲತಾಯಿ ಧೋರಣೆಯೂ ಅಲ್ಲ, ಬೇರೆ ಏನೂ ಅಲ್ಲ. ಈಗ ಸರಕಾರ ಎರಡು ಬೋರ್ಡ್‌ಗಳನ್ನು ಮಾಡಿ, ಇವುಗಳು ಯಾವತರಹದಲ್ಲಿ ಕೆಲಸ ಮಾಡುತ್ತವೆ ಎಂಬುದನ್ನು ನೋಡುವ ನಿರೀಕ್ಷೆಯಲ್ಲಿದೆ. ಅದಕ್ಕೆ ರೆಗ್ಯೂಲರ್ ಆಗಿ ಪಿಡಬ್ಲ್ಯುಡಿ ಹಾಗೂ ಜಿಲ್ಲಾ ಪರಿಷತ್‌ಗಳ ಮೂಲಕ ಹಣವನ್ನು ಒದಗಿಸಿಕೊಡುತ್ತಿದೆ. ಇದು ಅಭಿವೃದ್ಧಿ ಕೆಲಸಗಳನ್ನು ಮಾತ್ರ ಮಾಡುತ್ತಿದೆ. ರಸ್ತೆ ಇತ್ಯಾದಿಗಳ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರಲ್ಲಿ ಈ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ಮಾಡುವ ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿಲ್ಲ. ಈಗಾಗಲೇ ಮಾಡಿದ ಎರಡು ಬೋರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತಿಳಿದುಕೊಂಡು ಮುಂದೆ ಬೇಕಾದರೆ ಪ್ರಸ್ತಾವನೆಯನ್ನು ಮಾಡುವ ವಿಚಾರ ಇದೆ.

ಶ್ರೀ ಎ.ವಿ. ಉಮಾಪತಿ : ಇದು ಬರೀ ರಸ್ತೆ ಇತ್ಯಾದಿಗಳನ್ನು ಮಾಡತಕ್ಕಂಥ ಪ್ರಶ್ನೆಯಲ್ಲ. ಈ ನಾಲ್ಕು ಜಿಲ್ಲೆಗಳು ಹಿಂದುಳಿದಿರತಕ್ಕಂಥ ಜಿಲ್ಲೆಗಳಾಗಿವೆ. ಇವುಗಳು ಬರಗಾಲಕ್ಕೆ ತುತ್ತಾಗಿರತಕ್ಕಂಥ ಜಿಲ್ಲೆಗಳಾಗಿವೆ. ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳು ಇಲ್ಲಿ ಆಗಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಇದಕ್ಕೂ ಕೂಡ ಒಂದು ಮಂಡಳಿಯನ್ನು ರಚಿಸಿಕೊಟ್ಟು ಅವುಗಳ ಅಭಿವೃದ್ಧಿ ಮಾಡುವ ಬಗ್ಗೆ ಯೋಚನೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಚಿವೆಯವರು ಉತ್ತರದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗಳನ್ನು ಮಾಡಿರುವುದಾಗಿ ಹೇಳಿದರು. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬರತಕ್ಕಂಥ ಪ್ರದೇಶ. ಮಾನ್ಯ ಬಂಗಾರಪ್ಪನವರು ಮಲೆನಾಡು ಪ್ರದೇಶದವರು ಎಂದು ಅವರು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಮಾಡಿದರು. ಮಲೆನಾಡಿನಲ್ಲಿ ಹುಟ್ಟಿದ ಎಲ್ಲಾ ನದಿಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹರಿಯುತ್ತವೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಆ ಭಾಗಕ್ಕೆ ಒಂದು ಮಂಡಳಿಯನ್ನು ಮಾಡಿದರು. ನಮ್ಮ ಬಯಲುಸೀಮೆ ಭಾಗಕ್ಕೆ ಮಳೆಯೂ ಇಲ್ಲ, ನದಿಗಳೂ ಹರಿಯುವುದಿಲ್ಲ ಮತ್ತು ಮುಖ್ಯಮಂತ್ರಿಗಳೂ ಇಲ್ಲ. ಹಾಗಾದರೆ ನಾವುಗಳು ಎಲ್ಲಿಗೆ ಹೋಗಬೇಕು? ನಮಗೆ ಮುಖ್ಯಮಂತ್ರಿಗಳು ಇಲ್ಲದಿದ್ದರೂ ಕೂಡ ತಾವುಗಳು ಇದ್ದೀರಿ ನಮ್ಮ ಕಷ್ಟ ನಿಮಗೆ ಗೊತ್ತೇ ಇದೆ. ಆದ್ದರಿಂದ ದಯವಿಟ್ಟು ಅದೇ ಮಾದರಿಯಲ್ಲಿ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಇದು ಮಲತಾಯಿಧೋರಣೆ ಆಗುತ್ತದೆ. ಅಥವಾ ಇನ್ನಾವುದೇ ರೀತಿಯಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿಯನ್ನು ಮಾಡುತ್ತೀರಿ ಎಂಬ ಬಗ್ಗೆ ಖಚಿತವಾಗಿ ತಿಳಿಸಬೇಕು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಬಂಗಾರಪ್ಪನವರು ಮಲೆನಾಡಿಗೆ ಮಾತ್ರ ಮುಖ್ಯ ಮಂತ್ರಿಯಲ್ಲ. ವೀರೇಂದ್ರ ಪಾಟೀಲರು ಹೈದ್ರಾಬಾದ್ ಕರ್ನಾಟಕ್ಕೆ ಮಾತ್ರ ಮುಖ್ಯಮಂತ್ರಿ ಆಗಿರಲಿಲ್ಲ. ಮುಖ್ಯಮಂತ್ರಿಗಳಾದವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳಾಗಿರುತ್ತಾರೆ. ಅವರು

ಯಾವ ಕೆಲಸ ಮಾಡಿದರೂ ಅದು ಮಲತಾಯಿ ಧೋರಣೆ ಮಾಡಿದಂತಲ್ಲ. ತಾವುಗಳು ಸಜೆಶನ್ಸ್ ಕೊಟ್ಟಿದ್ದೀರಿ. ಈಗಾಗಲೇ ಮಾಡಿದ ಬೋರ್ಡ್‌ಗಳು ಯಾವರೀತಿಯಲ್ಲಿ ಕೆಲಸ ಮಾಡುತ್ತವೆ ಎಂಬುದನ್ನು ನೋಡಬೇಕಾಗಿದೆ. ಸ್ಟ್ಯಾಚುಟರಿ ಬೋರ್ಡ್‌ಗಳಾಗಿ ಅವುಗಳಿಗೆ ಮೆಂಬರ್ಸ್ ಒಂದೂ ಮಾಡಿಲ್ಲ. ಮೊದಲು ಅವುಗಳ ಕೆಲಸ ನೋಡಿಕೊಂಡು ತಾವುಗಳು ಕೊಟ್ಟ ಸೂಚನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ತುಮಕೂರು ಚಿತ್ರದುರ್ಗ ಭಾಗಕ್ಕೆ ಜಾಸ್ತಿ ಹಣ ಕೊಟ್ಟುಬಿಡಿ.

ಶ್ರೀ ಕೆ. ಶಿವರಾಮು : ಸಚಿವರು, ಎರಡು ಬೋರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂದು ನೋಡಿಕೊಂಡು ಅನಂತರ ಮೂರನೆಯ ಬೋರ್ಡ್ ಮಾಡುವ ಬಗ್ಗೆ ಯೋಚನೆ ಮಾಡೋಣ ಅಂತ ಹೇಳಿದ್ದಾರೆ. ಹೈದರಾಬಾದ್ ಅಭಿವೃದ್ಧಿ ಮಂಡಳಿ ರಚನೆಯಾದಾಗ ಅದು ಯಾವರೀತಿ ಅನುಷ್ಠಾನಕ್ಕೆ ಬರುತ್ತದೆ ಅಂತ ಪರಿಶೀಲನೆ ಮಾಡುವ ಮೊದಲೇ ಮಲೆನಾಡು ಅಭಿವೃದ್ಧಿ ಮಂಡಳಿ ರಚನೆ ಮಾಡಿದರು. ಈಗ ಡ್ರೈಲ್ಯಾಂಡ್ ಅಭಿವೃದ್ಧಿ ಯೋಜನೆ ಡ್ರೈ ಏರಿಯಾದಲ್ಲಿ ಅರಸೀಕೆರೆ ಹಾಸನದ ಪೂರ್ವಭಾಗ ಮತ್ತು ಚಿತ್ರದುರ್ಗ ಹೀಗೆ ಯಾವ ಜಿಲ್ಲೆಗಳಲ್ಲಿ ಎಲ್ಲಿ ಬರಗಾಲ ಸತತವಾಗಿ ಬರುತ್ತದೆಯೋ ಆ ಏರಿಯಾದಲ್ಲಿ ತಗೊಂಡು ಈಗಾಗಲೇ ಬೇರೆ ರೀತಿಯಲ್ಲಿ ತಗೊಂಡು ಕೆಲಸವನ್ನು ಶುರುಮಾಡಿದ್ದಾರೆ. ಈ ಯೋಜನೆಯನ್ನೂ ಇದರ ಜೊತೆಗೇ ತಗೊಂಡು ಮುಖ್ಯವಾಗಿ ರಸ್ತೆ ಅಭಿವೃದ್ಧಿ ಮಾಡುವುದು ಮುಖ್ಯವಾದ ಪ್ರಶ್ನೆ ಅಲ್ಲ. ಅಲ್ಲಿ ಬರಗಾಲ ಸತತವಾಗಿ ಬಂದು ಏನು ನೀರಾವರಿ ಸೌಲಭ್ಯ ಇಲ್ಲದೇ ಕಡಿಮೆ ಮಳೆಯನ್ನು ಸದುಪಯೋಗಪಡಿಸಿಕೊಳ್ಳಲು ನಾವು ಏನು ಯೋಜನೆ ರೂಪಿಸುತ್ತಿದ್ದೇವೋ, ಆ ಯೋಜನೆಯಲ್ಲಿ ಡ್ರೈಲ್ಯಾಂಡ್ ಅಭಿವೃದ್ಧಿ ಮಂಡಳಿ ಎಂದು ಮಾಡಿ ಕೆಲಸವನ್ನು ತೆಗೆದುಕೊಂಡರೆ ಅವು ಹೇಗೆ ಅನುಷ್ಠಾನಕ್ಕೆ ಬರುತ್ತವೆಯೋ ಅದೇ ರೀತಿ ಇದು ಅನುಷ್ಠಾನಕ್ಕೆ ಬರಲು ಅವಕಾಶವಾಗುತ್ತದೆ ಆ ಭಾಗದ ಜನಕ್ಕೂ ಅನುಕೂಲವಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅವರು ಸೂಚನೆ ಕೊಟ್ಟಿದ್ದಾರೆ, ಪರಿಶೀಲನೆ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಹಾಗಿದ್ದರೆ ಮುಂದಿನ ರೂಪರೇಷೆಗಳೇನು ಎಂದು ಸಚಿವರನ್ನು ಕೇಳಿದ್ದೇನೆ ಅದಕ್ಕೆ ಬೇರೆ ಎರಡು ಬೋರ್ಡ್‌ಗಳನ್ನು ಯಾವರೀತಿ ಮಾಡಿದ್ದಾರೆ ಅದೇ ರೀತಿ ನಮ್ಮ ಜಿಲ್ಲೆಗಳ ಅಭಿವೃದ್ಧಿ ಆಗುವ ಬೋರ್ಡ್‌ನ್ನು ಮಾಡಲು ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್ ನಾಗರತ್ನಮ್ಮ : ಈಗತಾನೇ ಉತ್ತರ ಹೇಳಿದ್ದೇನೆ, ಅವರು ಸೂಚನೆ ಕೊಟ್ಟಿದ್ದಾರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಶ್ರೀ. ಕಾಳಮರಿಗೌಡರ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಕೇಳಿದ್ದೇನೆ, ದಯವಿಟ್ಟು ಮುಂದಕ್ಕೆ ಹಾಕಿ.

ಉಪಾಧ್ಯಕ್ಷಿಣಿಯವರು : ಸ್ವಲ್ಪ ಕಾಲಾವಕಾಶ ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್ ಕಾಳಮರಿಗೌಡ : ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

1332. ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆಯಾದ ಹೊನ್ನಮ್ಮನ ಹಳ್ಳ 1ನೇ ಹಂತಕ್ಕೆ ಇಲ್ಲಿಯವರೆಗೆ ಒದಗಿಸಿರುವ ಮೊತ್ತವೆಷ್ಟು?

ಆ) ಈ ಯೋಜನೆಗಾಗಿ ಜೀವವಿಮಾ ನಿಗಮದಿಂದ ಸರ್ಕಾರ ಪಡೆದಿರುವ ಮೊತ್ತವೆಷ್ಟು?

ಇ) ಈ ಸಾಲದ ಮೊತ್ತ ನಗರ ಸಭೆಗೆ ಹೆಚ್ಚಿನ ಹೊರೆಯಾಗಲಿರುವುದರಿಂದ ಈ ಸಾಲದ ಮೊತ್ತವನ್ನು ಸರ್ಕಾರವೇ ವಹಿಸಿಕೊಂಡು ನಗರ ಸಭೆಗೆ ಮನ್ನಾ ಮಾಡುವ ಬಗ್ಗೆ ಸರ್ಕಾರವೇನಾದರೂ ಆಲೋಚಿಸಿದೆಯೇ?

ಈ) ಹೊನ್ನಮ್ಮನ ಹಳ್ಳ 2ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 119.52 ಲಕ್ಷಗಳು.

ಆ) ಇಲ್ಲ. ಆದಾಗ್ಯೂ ರೂ. 38.09 ಲಕ್ಷ ಹಣವನ್ನು ಸಾಲವಾಗಿ ಹುಡ್ಕೊ ನಿಗಮದಿಂದ ಪಡೆಯಲಾಗಿದೆ.

ಇ) ಇಲ್ಲ.

ಈ) ಮಾರ್ಚಿ 1993ರ ಒಳಗೆ ಸಂಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ಸವಲತ್ತಿನ ಬಗ್ಗೆ ಮೊದಲನೇ ಹಂತದ ಕಾರ್ಯವನ್ನು ಏರ್ಪಾಡಿಸಿಕೊಂಡಿರುವಾಗ 80 ಲಕ್ಷ ರೂ. ಅಂದಾಜು ತಯಾರಿಸಿ ಈಗ 119.57 ಲಕ್ಷ ರೂ. ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಇದು ಜಾಸ್ತಿ ಖರ್ಚಾಗಿರುವ ನಗರಸಭೆಯವರ ಮೇಲೆ ಭಾರ ಬೀಳುತ್ತದೋ ಅಥವಾ ಸರ್ಕಾರವೇ ಈ ಹಣ ಕೊಡುತ್ತದೋ ಅಂತ ಸಚಿವರಿಂದ ಉತ್ತರಬೇಕಾಗಿದೆ. ಎರಡನೇ ಹಂತದ ಯೋಜನೆಗಾಗಿ ನನ್ನ ನಾಲ್ಕನೇ ಪ್ರಶ್ನೆಗೆ 31-3-93ರಲ್ಲಿ ನಾವು ಪೂರೈಸಿಕೊಡ್ತೇವೆ ಅಂತ ಉತ್ತರಿಸಿದ್ದಾರೆ. ಟೆಂಡರ್ ಕರೆದಿರುವ ಹಾಗೆ 31-3-92ರಲ್ಲೇ ಇದು ಮುಗಿಯಬೇಕಾಗಿತ್ತು ಆದರೆ ಇಲ್ಲಿಯವರೆಗೆ ಮುಗಿದಿಲ್ಲ, ಸಚಿವರು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಹೆಚ್ಚುವರಿ ಹಣವನ್ನು ಸರ್ಕಾರದಿಂದ ಒದಗಿಸಲಾಗಿದೆ ಈ ಎರಡನೇ ಹಂತ ಮಾರ್ಚ್ 92-93ರಲ್ಲಿ ಪೂರ್ಣಗೊಳಿಸುವ ಕೆಲಸ ಮಾಡ್ತಾ ಇದೇವೆ.

ಯಲಹಂಕದಲ್ಲಿರುವ ಗೃಹಮಂಡಳಿ ಮನೆಗಳ ಬಗ್ಗೆ

310 (1940) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು ಕಟ್ಟಿಸಿರುವ ಯಲಹಂಕ ನಾಲ್ಕನೇ ಹಂತದಲ್ಲಿ 707 ಮನೆಗಳ ನಿರ್ಮಾಣ ಯಾವ ಹಂತದಲ್ಲಿದೆ?

ಆ) ಅವುಗಳ ಭದ್ರತೆ ಬಗ್ಗೆ ತಾಂತ್ರಿಕರ ಅಭಿಪ್ರಾಯವೇನು? ಮತ್ತು ಆ ಯೋಜನೆಯನ್ನು ಪೂರ್ಣಗೊಳಿಸುವ ಅಥವಾ ಬೇರೇನಾದರೂ ಬದಲು ಮಾಡುವ ಯೋಜನೆ ಇದೆಯೇ?

ಇ) ಈ ಯೋಜನೆಗೆ ಇಲ್ಲಿಯವರೆಗೆ ಒಟ್ಟು ತಗಲಿರುವ ವೆಚ್ಚ ಎಷ್ಟು?

ಈ) ಮನೆಗಳಿಗಾಗಿ ಹಣ ಕಟ್ಟಿರುವವರ ಸದಸ್ಯರುಗಳ ಮುಂದಿನ ಪರಿಸ್ಥಿತಿ ಏನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯಲ್ಲಿ ನಿರ್ಮಾಣ ಮಾಡುತ್ತಿರುವ 707 ಮನೆಗಳು ಮುಗಿಯುವ ಹಂತದಲ್ಲಿದೆ.

ಆ) ಈ ಮನೆಗಳು ತಾಂತ್ರಿಕ ಮಂಡಳಿಯ ಅಭಿಪ್ರಾಯದ ಪ್ರಕಾರ ವಾಸಕ್ಕೆ ಯೋಗ್ಯವಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಇದೇ ಜಾಗದಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಸದರಿ ಜಾಗವನ್ನು ಸದುಪಯೋಗ ಮಾಡಿಕೊಳ್ಳುವ ಯೋಜನೆ ಪರಿಶೀಲನೆಯಲ್ಲಿದೆ.

ಇ) 290 ಲಕ್ಷ ರೂಪಾಯಿಗಳು.

ಈ) ಗೃಹ ಮಂಡಳಿಯ ಸಭೆ ತೀರ್ಮಾನಿಸಿದಂತೆ ಈ ಯೋಜನೆಯ ಮನೆಗಳಿಗೆ ಹಣ ಕಟ್ಟಿರುವ ಸದಸ್ಯರುಗಳಿಗೆ ಕರ್ನಾಟಕ ಗೃಹ ಮಂಡಳಿ ಬೇರೆ ಕಡೆ ಕಟ್ಟಿಸುತ್ತಿರುವ ಹೊಸ ಮನೆಗಳನ್ನು ಕೊಡುವ ಅಥವಾ ಅವರ ಠೇವಣಿ ವಾಪಸ್ಸು ಮಾಡುವ ಯೋಜನೆ ಇದೆ. ಹಣ ಕಟ್ಟಿರುವ ಸದಸ್ಯರ ಅಭಿಪ್ರಾಯ ಪಡೆದು ತೀರ್ಮಾನ ತೆಗೆದುಕೊಳ್ಳಲಾಯಿತು.

ಶ್ರೀ ಬಿ. ಶಿವರಾಮು : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಯಲಹಂಕ ನಾಲ್ಕನೆಯ ಹಂತ ಯಾವ ಮಟ್ಟದಲ್ಲಿದೆ ಎಂದು ನಾನು ಕೇಳಿದ್ದೇನೆ. ಅದು ಮುಗಿಯುವ ಹಂತದಲ್ಲಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ಈಗಾಗಲೇ 290 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ, ಮತ್ತೆ ತಾಂತ್ರಿಕ ಮಂಡಳಿಯ ಅಭಿಪ್ರಾಯದ ಪ್ರಕಾರ ಅದು ವಾಸಕ್ಕೆ ಯೋಗ್ಯವಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ಅದನ್ನು ಪೂರ್ಣ ಡೆಮಾಲಿಷ್ ಮಾಡಿ ಆ ಸ್ಥಳದಲ್ಲಿ ಬಹು ಮಹಡಿ ಕಟ್ಟಡಗಳನ್ನು ಕಟ್ಟುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಅಧ್ಯಕ್ಷಿಣಿಯವರೇ, ಈಗ ಅವರು ಹೇಳಿದಂತೆ 707 ಮನೆಗಳನ್ನು ಕಟ್ಟುವುದಕ್ಕೆ 290 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 87-88ನೇ ಇಸವಿಯಲ್ಲಿ ಶುರು ಮಾಡಿದಂಥ ಯೋಜನೆಯನ್ನು ಈಗ ಈ ಒಂದು ಗೃಹನಿರ್ಮಾಣ ಮಂಡಳಿ ಏನು ಇದೆ. ಅದರಲ್ಲಿ ಅಸಿಸ್ಟೆಂಟ್ ಇಂಜಿನಿಯರಿಂದ ಹಿಡಿದು ಚೀಫ್ ಇಂಜಿನಿಯರ್‌ವರೆಗೂ ಇರತಕ್ಕಂಥ ಒಂದು ಇಂಜಿನಿಯರ್ಸ್‌ಗಳನ್ನು ಹೊಂದಿರತಕ್ಕಂಥ ಒಂದು ಮಂಡಳಿ ಈಗ ಕಟ್ಟಿರತಕ್ಕಂಥ ಈ ಕಟ್ಟಡದ ಯೋಜನೆ ಇವತ್ತು ಪೂರ್ಣ ಕೆಡವತಕ್ಕಂಥ ವ್ಯವಸ್ಥೆಗೆ ಬಂದಿದೆ ಎಂದು ಹೇಳಿದರೆ ಇದಕ್ಕೇನು ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ಇದಕ್ಕೆ ಯಾರು ಕಾರಣ? ಏನು? ಇದು ಹೇಗೆ ಆಯಿತು? ಈ ವೆಚ್ಚವನ್ನು ಯಾವುದರಿಂದ ಭರಿಸುತ್ತೀರಿ ಎಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷಿಣಿಯವರೇ, 1988ನೇ ಇಸವಿಯಲ್ಲಿ ಸುಮಾರು 707 ಮನೆಗಳನ್ನು ಕಟ್ಟತಕ್ಕಂಥ ಕೆಲಸವನ್ನು ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ತೆಗೆದುಕೊಳ್ಳಲಾಗಿದೆ. ಇದಕ್ಕೆ ಒಂದು ಹೊಸ ಟೆಕ್ನಾಲಜಿಯನ್ನು ಅವತ್ತು ಪ್ರಯೋಗ ಮಾಡಿದ್ದಾರೆ. Soil stagnation mud blocks technology ಅದನ್ನು ಹುಡ್ಕೋದಿಂದ ಅವರು ಕೊಟ್ಟಿರತಕ್ಕಂಥದ್ದು. ಸುಮಾರು 15 ಮಾದರಿ ಮನೆಗಳನ್ನು ಆ ಸಂದರ್ಭದಲ್ಲಿ ಕಟ್ಟಿ ನೋಡಿ ಆಗಿತ್ತು. ಆ ಮನೆಗಳು ಚೆನ್ನಾಗಿತ್ತು. ಆದರೆ

ದುರಾದೃಷ್ಟವಶಾತ್ ಈ ಮನೆಗಳನ್ನು ಕಟ್ಟಿದ ಮೇಲೆ ದೊಡ್ಡ ಮಳೆ ಬಂದಾಗ ಸಂಪೂರ್ಣವಾಗಿ ಬಿರುಕು ಬಿಟ್ಟಿತು. ನಂತರ ನಾವು ಒಂದು ಕಮಿಟಿಯನ್ನು ಅದಕ್ಕೆ ನೇಮಕ ಮಾಡಿದೆವು. ಆ ಕಮಿಟಿಯವರು ಈಗಾಗಲೇ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಈ ರಿಪೋರ್ಟ್ ಪ್ರಕಾರ ಅವು ವಾಸಕ್ಕೆ ಯೋಗ್ಯವಾದ ಮನೆಗಳಲ್ಲ, ಅದನ್ನು ಕೆಡವಿ ಹಾಕಬೇಕು ಎಂದು ಹೇಳಿ ರಿಪೋರ್ಟನ್ನು ಕೊಟ್ಟಿದ್ದಾರೆ. ಆ ಕಮಿಟಿ ರಿಪೋರ್ಟ್ ಮೇಲೆ ಈಗಾಗಲೇ ಲಕ್ಷ್ಮಣ್‌ರಾವ್, ರಿಟೈರ್ಡ್ ಇಂಜಿನಿಯರಿಂಗ್ ಚೀಫ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಯಾರು ತಪಿತಸ್ಥರು? ಆ ಕಮಿಟಿಗೆ ನಾವು ಎರಡು ತಿಂಗಳಲ್ಲಿ ಅವರಿಗೆ ರಿಪೋರ್ಟ್ಸ್ ಸಬ್‌ಮಿಟ್ ಮಾಡಬೇಕೆಂದು ಹೇಳಿದ್ದೇವೆ. ನಿಜವಾಗಿಯೂ ಸಹ ಇದು ದುರದೃಷ್ಟಕರ. ಈ ರೀತಿ ಆಗಬಾರದಾಗಿತ್ತು. ಸುಮಾರು 290 ಲಕ್ಷ ರೂಪಾಯಿಗಳನ್ನು ಈಗಾಗಲೇ ನಾವು ಅದರಲ್ಲಿ ಖರ್ಚು ಮಾಡಿದ್ದೇವೆ. ಇದರಿಂದ 1988ನೇ ಇಸವಿಯಿಂದ ಇದು ಪ್ರಾರಂಭವಾಗಿದ್ದು ಈ ಕಮಿಟಿಯ ರಿಪೋರ್ಟ್ ಬಂದ ಕೂಡಲೇ ಯಾರು ತಪಿತಸ್ಥರು ಇದ್ದಾರೆ. ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ಆದೇಶವನ್ನು ಕೊಡುತ್ತೇನೆ.

ಶ್ರೀ ಬಿ. ಶಿವರಾಮು : ಮಾನ್ಯ ಉಪಾಧ್ಯಕ್ಷಿಣಿಯವರೇ. ಇದು 87-88ರಲ್ಲಿ ಶುರುವಾಗಿ ಅವರು ಹೇಳಿದ ಪ್ರಕಾರ 290 ಲಕ್ಷ ರೂಪಾಯಿಗಳು ಖರ್ಚಾಗಿದೆ. ಅದಕ್ಕೆ ಬಡ್ಡಿ ಸೇರಿದರೆ ಬಹುಶಃ ನಾಲ್ಕು ಕೋಟಿ ರೂಪಾಯಿ ಆಗಬಹುದು. ಇವತ್ತು ಸಮರ್ಥ ಅಧಿಕಾರಿಗಳನ್ನು, ಇಂಜಿನಿಯರುಗಳನ್ನು ಹೊಂದಿರತಕ್ಕಂಥ ಆ ಒಂದು ಇಲಾಖೆಯಲ್ಲಿ ಈ ರೀತಿಯ ಒಂದು ಅಲಕ್ಷ್ಯದ ಒಂದು ಕೆಲಸವನ್ನು ಮಾಡಿದ್ದಾರೆ ಎಂದರೆ ಬಹುಶಃ ಬೇರೆ ಏನಾದರೂ ಯೋಜನೆಗಳನ್ನು ಇವರಿಂದ ಯಾವ ರೀತಿ ಅನುಷ್ಠಾನಕ್ಕೆ ಬರುವುದಕ್ಕೆ ಈ ಮಂಡಲಿಯಲ್ಲಿ ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಇದು ಕೇವಲ ಒಬ್ಬರು, ಇಬ್ಬರು ಇಂಜಿನಿಯರುಗಳು ಇರತಕ್ಕಂಥ ಒಂದು ಮಂಡಳಿಯೇನೂ ಅಲ್ಲ. ಅಸಿಸ್ಟೆಂಟ್ ಇಂಜಿನಿಯರಿಂದ ಹಿಡಿದು ಸಮರ್ಥ ಚೀಫ್ ಇಂಜನಿಯರುಗಳನ್ನು ಹೊಂದಿರತಕ್ಕಂಥ ಒಂದು ಇಲಾಖೆ. ಮತ್ತೆ ಮಂತ್ರಿಗಳು ಹೇಳಿದ ಹಾಗೆ ಮೊದಲು ಟ್ರೈಯಲ್ ಅಂಡ್ ಯರರ್ ಆಗಿ ಬಿಲ್ಡಿಂಗ್‌ಗಳನ್ನು ಅವರು ಏನು ಸಿಮೆಂಟ್ ಮಣ್ಣು ಹಾಕಿ ಹೊಸ ತಾಂತ್ರಿಕತೆಯಿಂದ ಒಂದು ಹೊಸ ಸಂಸ್ಥೆಯ ಅಭಿಪ್ರಾಯವನ್ನು ತೆಗೆದುಕೊಂಡು. ತಾಂತ್ರಿಕ ಸಲಹೆಗಾರರಿಂದ ಕಟ್ಟಿರತಕ್ಕಂಥ ಮನೆಗಳು, ಮಳೆ ಬಂದಂಥ ಕಾಲದಲ್ಲಿ ಬಿದ್ದುಹೋಗಿಲ್ಲ. ಆದರೆ ಇವರು ಕಟ್ಟಿರತಕ್ಕಂಥ ಗೃಹಮಂಡಲಿಯಲ್ಲಿ ಇಂಜಿನಿಯರ್ರುಗಳು ನಿಂತು ಕಟ್ಟಿರತಕ್ಕಂಥ ಮನೆಗಳು ಬಿದ್ದುಹೋಗಿವೆ. ಇದೇ ಟೆಕ್ನಾಲಜಿಯನ್ನು ಅಡಾಪ್ಟ್ ಮಾಡಿ ನಮ್ಮ ಹಾಸನದಲ್ಲಿ ಒಬ್ಬರು ಚೀಫ್ ಸೆಕ್ರೆಟರಿಯವರು ಇದ್ದಾರೆ, ಐಎಎಸ್ ಆಫೀಸರ್ ಅವರು. ಇದೇ ಟೆಕ್ನಾಲಜಿ ಅದೇ ನೇಮ್ ಲ್ಯಾಂಡ್‌ನಲ್ಲಿ ಜಸ್ಟ್ ಅರ್ಧ ಕಿಲೋ ಮಿಾಟರ್ ಡಿಫರೆನ್ಸ್‌ನಲ್ಲಿ ಅಲ್ಲಿಗೂ ಮಳೆ ಬಿದ್ದಿದೆ, ಇಲ್ಲಿಗೂ ಮಳೆ ಬಿದ್ದಿದೆ. ಆ ಬಿಲ್ಡಿಂಗ್ ಚೆನ್ನಾಗಿದೆ, ಈ ಬಿಲ್ಡಿಂಗ್ ಬಿದ್ದುಹೋಗಿದೆ. ಅಂದರೆ ಏನು ವ್ಯತ್ಯಾಸ ಇರಬಹುದು ಎನ್ನತಕ್ಕಂಥದ್ದು. ಅದಕ್ಕೆ ಕಾರಣವೇನು ಎಂದು ನಾವೇ ಊಹಿಸಬಹುದು. ಇವತ್ತು ಟೆಕ್ನಿಕಲ್ ರಿಪೋರ್ಟ್ ಮತ್ತೊಂದು ಬೇಕಾಗಿಲ್ಲ. ಆದರೆ ನಾನು ಏನು ಮಾನ್ಯ ಮಂತ್ರಿಗಳಲ್ಲಿ ನಿರೀಕ್ಷೆ ಮಾಡುವುದು, ಆ ವರದಿ ಬಂದಾಗ ಅದಕ್ಷ ಅಧಿಕಾರಿಗಳು ಏನು ಇದ್ದಾರೆ, ಅವರೇನು ಅಲಕ್ಷ್ಯದಿಂದ ಕೆಲಸ ಮಾಡಿದ್ದಾರೆ, ಅವರಿಂದ ಈ ಹಣವನ್ನು ತುಂಬಿಸತಕ್ಕಂಥ ಕೆಲಸ ಮತ್ತು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಎರಡನ್ನೂ ಮಾಡುತ್ತೇವೆ ಎನ್ನತಕ್ಕಂಥ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳುತ್ತೇನೆ. ಎರಡನೆಯದು ಇವತ್ತು 707 ಜನರು ಹಣವನ್ನು ಕಟ್ಟಿದ್ದಾರೆ, 87ನೇ ಇಸವಿ ಏಪ್ರಿಲ್‌ನಲ್ಲಿ ಐದು ಸಾವಿರ ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕಟ್ಟಿದ್ದಾರೆ. ಅದು ಆದನಂತರ

60 ಸಾವಿರ, 80 ಸಾವಿರ ಹಣವನ್ನು ಕೂಡ ಈಗಾಗಲೇ ತುಂಬಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಬಹುಶಃ ಕೆಲವು ಅಧಿಕಾರಿಗಳು ಇರಬಹುದು. ಬೇರೆಯವರು ಖಾಸಗಿಯವರಿರಬಹುದು, 3 ಪರ್‌ಸೆಂಟ್, 2 ಪರ್‌ಸೆಂಟ್ ಬಡ್ಡಿ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇವತ್ತು ಇವರು ಹೇಳಿದ್ದಾರೆ, ನಾವು ಬಡ್ಡಿಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಯಾವ ದರದಲ್ಲಿ ಅವರಿಗೆ ಬಡ್ಡಿಯನ್ನು ಕೊಡುತ್ತಾರೆ ಎನ್ನತಕ್ಕಂಥದ್ದು ಒಂದು ಪ್ರಶ್ನೆ.

ಉಪಾಧ್ಯಕ್ಷರು : ಎಷ್ಟು ಹೊತ್ತು ಪ್ರಶ್ನೆಯನ್ನು ಕೇಳುತ್ತೀರಿ? ಪ್ರಶ್ನೆಯೇ ಇಷ್ಟು ಹೊತ್ತಾದರೆ ಉತ್ತರ ಇನ್ನೆಷ್ಟು ಹೊತ್ತು ಆಗುತ್ತದೆ?

ಶ್ರೀ ಬಿ. ಶಿವರಾಮು : ಬಹಳ ಇಂಪಾರ್‌ಟೆಂಟ್ ಕ್ವೆಶ್ಚನ್. 707 ಜನರಿಗೆ ಬಂದಿರತಕ್ಕಂಥ ಒಂದು ದೊಡ್ಡ ಸಮಸ್ಯೆಗೆ ಈ ಪ್ರಶ್ನೆಗೆ ಕಾಲಾವಕಾಶವನ್ನು ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ?

ಉಪಾಧ್ಯಕ್ಷರು : ಆಯಿತು. ನೀವು ನೇರವಾಗಿ ಪ್ರಶ್ನೆಯನ್ನು ಹಾಕುವುದು ಬಿಟ್ಟು ಅವರು ಮನೆಯನ್ನು ಕಟ್ಟಿದರು, ಇವರು ಮನೆಯನ್ನು ಕಟ್ಟಿದರು, ಇವೆಲ್ಲಾ ಬೇಡ.

ಶ್ರೀ ಬಿ. ಶಿವರಾಮು : ಈಗ ಏನು ಮಾಡಬೇಕು ಹೊಸ ತಾಂತ್ರಿಕತೆಯನ್ನು ಮಂತ್ರಿಯವರು ಹೇಳಲಿ. ಅವರ ಬಿಲ್ಡಿಂಗ್ ಚೆನ್ನಾಗಿದೆ, ...

ಉಪಾಧ್ಯಕ್ಷರು : ಆಯಿತು ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ. ಶಿವರಾಮು : ನೀವು 707 ಜನಕ್ಕೆ ಬಡ್ಡಿ ಯಾವ ದರದಲ್ಲಿ ಕೊಡುತ್ತೀರಿ? ಅಥವಾ ನೀವು ಕಟ್ಟಿರತಕ್ಕ ಬಿಲ್ಡಿಂಗ್ ಅನ್ನು ಡೆಮಾಲಿಷ್ ಮಾಡಿ ಮತ್ತೆ ಕಟ್ಟಡವನ್ನು ಕಟ್ಟುತ್ತೇವೆಂದು ಹೇಳಿದ್ದಿರಲ್ಲಾ, ಅದರ ಬದಲು ಅಪ್ಲಿಕೇಶನ್ ಹಾಕಿದವರಿಗೆ ಆ ನಿವೇಶನವನ್ನು ಅಲ್ಲಿ ಏನು ಬೆಲೆ ಇದೆಯೋ ಆ ಬೆಲೆಗೆ ಕೊಡುವುದಕ್ಕೆ ತಾವು ತಯಾರಿದ್ದೀರಾ ಎನ್ನತಕ್ಕ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷಣಿಯವರೆ, ಈಗಾಗಲೇ ನಾನು ಹೇಳಿದ್ದೇನೆ. ಆ ಕಮಿಟಿಯ ಪ್ರಕಾರ ಇದು ವಾರ್ಷಿಕ ಯೋಜನೆನ್ವಯ ಮನೆಯೆಂದು ರಿಪೋರ್ಟ್ ಕೊಟ್ಟಿದ್ದಾರೆ. ತಪ್ಪಿತಸ್ಥರು ಯಾರೆಂದು ಕಂಡುಹಿಡಿಯಬೇಕಾದರೆ ಅದಕ್ಕೆ ಇನ್ನೊಂದು ಕಮಿಟಿ ಮಾಡಿದ್ದೇವೆ. ಎರಡು ತಿಂಗಳಲ್ಲಿ ರಿಪೋರ್ಟ್ ಕೊಡಲು ಆದೇಶ ಕೊಟ್ಟಿದ್ದೇವೆ. ಲೋಕಾಯುಕ್ತದ ತನಿಖೆಗೆ ಸಹ ಫೈಲ್ ಅನ್ನು ಕಳುಹಿಸಿಕೊಟ್ಟಿದ್ದೇವೆ. ಯಾರು ತಪಿತಸ್ಥರೆಂದು ಕಮಿಟಿಯ ವರದಿ ಬಂದಮೇಲೆ ಅವರ ಮೇಲೆ ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಪ್ಲಾಟ್ ಸಿಸ್ಟಂನಲ್ಲಿ ತೆಗೆದು ಕೊಳ್ಳುವುದಾದರೆ, ಆ ರೀತಿ ಕಟ್ಟಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಅಲಾಟ್ ಆಗಿರುವವರಿಗೆ ಕಾಗದವನ್ನು ಬರೆದಿದ್ದೇವೆ. ಇಲ್ಲದಿದ್ದರೆ ಅವರಿಗೆ ಹಣವನ್ನು ಹಿಂದಿರುಗಿಸುವ ಕೆಲಸವನ್ನು ಮಾಡುತ್ತೇವೆ. ಬಡ್ಡಿ ದರದ ಬಗ್ಗೆ ಹೌಸಿಂಗ್ ಬೋರ್ಡ್‌ನವರೊಂದಿಗೆ ವಿಚಾರಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ. ಶಿವರಾಮು : ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ನಾನು ಕೇಳಿದ್ದುದು ಏಕೆಂದರೆ ಈಗ ಅವರಿಗೆ ಮನೆ ಅಲಾಟ್ ಮಾಡಿದ್ದೀರಿ. ನೀವು ಮನೆಯನ್ನು ಡೆಮಾಲಿಷ್ ಮಾಡುತ್ತೀರಿ. ಅವರು ಆ ಸ್ಥಳ ಏನಿದೆ ಅದನ್ನು ನಮಗೆ ಕೊಡಿ ಮನೆ ಕಟ್ಟಿಕೊಳ್ಳುತ್ತೇವೆನ್ನುವುದಾದರೆ ನೀವು ಕನಿಷ್ಠ ನಾಗರಿಕತೆಯ ಸೌಕರ್ಯಗಳನ್ನು ಒದಗಿಸಿ ಅವರಿಗೆ ಆ ಸೈಟು ಅನ್ನು ಕೊಡಲಿಕ್ಕೆ ನಿಮಗೆ ಏನು ತೊಂದರೆ ಇದೆ? ಮನೆ

ಒಂದೇ ಮನೆ. ಮಹಡಿ ಮೇಲೆ ಮಹಡಿ ಮನೆಯನ್ನು ಕಟ್ಟಿಲ್ಲ. ಒಬ್ಬರಿಗೆ ಇಂಡಿವಿಜುವಲ್ ಹೌಸ್ ಅಲಾಟ್‌ಮೆಂಟ್ ಟೈಪ್ ಇದೆ. ಆ ಸ್ಥಳವನ್ನೇ ಅವರಿಗೆ ಕೊಟ್ಟರೆ ಹಣವನ್ನು ಹೌಸಿಂಗ್ ಬೋರ್ಡ್‌ನಿಂದ ಕೊಡತಕ್ಕ ಕೆಲಸವನ್ನು ಮಾಡಿ ಅವರು ಕಟ್ಟಿಕೊಳ್ಳುತ್ತಾರೆ. ಅದಕ್ಕೆ ತಮ್ಮ ಅಭಿಪ್ರಾಯ ಏನೆಂದು ನಾನು ಕೇಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಅವರಿಗೆ ಅಲ್ಲಿ ಜಾಗ ಕೊಡಲಿಕ್ಕೆ ಆಗುವುದಿಲ್ಲ. ಏಕೆಂದರೆ ಇದು ಮನೆ ಕಟ್ಟಿಕೊಳ್ಳುವಂಥಹ ಸ್ಕೀಮ್ ಅದರ ಪ್ರಕಾರ ಮನೆಯನ್ನು ಕಟ್ಟಿಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಪ್ರತಿಯೊಬ್ಬರಿಗೂ ನಾವು ಈಗಾಗಲೇ ಕಾಗದವನ್ನು ಬರೆದಿದ್ದೇವೆ. ಅವರಿಂದ ಉತ್ತರ ಬಂದಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಬಿ. ಶಿವರಾಮು : ಇಲ್ಲಿ ಏತಕ್ಕೆ ಆ ಜನಗಳಿಗೆ ಮೋಸ ಆಗಬೇಕು. ಅವರಿಗೂ ಸೈಟುಗಳನ್ನು ಕೊಡಿ. ಈಗಾಗಲೇ ಈ ಯೋಜನೆಯಲ್ಲಿ ಸೈಟುಗಳನ್ನು ಕೊಟ್ಟಿದ್ದೀರಿ. ಈಗ ಜನಗಳು ದುಡ್ಡು ಕಟ್ಟಿ ಸೈಟ್ ಸಿಗದೆ ಮೋಸವಾಗಿದೆ. ಏಕೆ ನೀವು ಅದನ್ನು ಕೊಡಬಾರದು?

ಶ್ರೀಮತಿ ಮೋಟಮ್ಮ : ಹೌಸಿಂಗ್ ಬೋರ್ಡ್‌ನಲ್ಲಿ ಅವರ ಇಂಜಿನಿಯರ್ಸ್ ನಿಂತುಕೊಂಡು ಕಟ್ಟಿರತಕ್ಕ ಮನೆಗಳು ಹೀಗೆ ಅಲ್ಲಲ್ಲಿ ಬಿದ್ದು ಹೋಗುತ್ತಿದೆ ಅನ್ನುವುದನ್ನು ನಿದರ್ಶನವಾಗಿ ಮಾನ್ಯ ಶಿವರಾಮುರವರು ಹೇಳುತ್ತಿದ್ದಾರೆ. ಹಾಗೆಯೇ ನಮ್ಮಲ್ಲೂ ಆಗಿದೆ ಆದರೆ 'ಆಶ್ರಯ' ಸ್ಕೀಮ್ ಮನೆಗಳನ್ನು ಹೌಸಿಂಗ್ ಬೋರ್ಡ್‌ನವರೇ ಮಾಡುತ್ತಾರೆ. ನೇರವಾಗಿ ಅವರ ಇಂಜಿನಿಯರ್ಸ್‌ಗಳು ಕಟ್ಟುತ್ತಿಲ್ಲ. ಅವರು ಯಾವುದೋ ಏಜೆನ್ಸಿಗಳಿಗೆ ಕೊಡುತ್ತಿದ್ದಾರೆ. ಈ ಮನೆಗಳಿಗಾದರೂ ಏನು ಗ್ಯಾರೆಂಟಿ. ಇದು ಎಷ್ಟು ವರ್ಷ ಇರುತ್ತದೆ. ಅದಕ್ಕೇನಾದರು ನೀವು ಯಾರಿಗೆ ಏಜೆನ್ಸಿಯನ್ನು ಕೊಡುತ್ತೀರಿ, ಹೌಸಿಂಗ್ ಬೋರ್ಡ್‌ನವರು ಕಟ್ಟತಕ್ಕ ಮನೆಯಾಗಲಿ, ಅಥವಾ ಆಶ್ರಯ ಯೋಜನೆಯಲ್ಲಿ ಕಟ್ಟತಕ್ಕ ಮನೆಯಾಗಲಿ, ನೀವು ಮನೆಯನ್ನು ಕಟ್ಟಿಕೊಳ್ಳುವವರ ಹತ್ತಿರ ಗ್ಯಾರೆಂಟಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿ. ಈ ಮನೆಗಳು ಎಷ್ಟು ವರ್ಷಗಳ ಕಾಲ ನಿಲ್ಲಬೇಕು. ಇಷ್ಟು ದುಡ್ಡು ಖರ್ಚು ಮಾಡಿ ಕಟ್ಟಿದ ಮೇಲೆ ಆ ಮನೆಗಳ ಮೇಲೆ ಗ್ಯಾರೆಂಟಿಯನ್ನು ತೆಗೆದುಕೊಳ್ಳಿ. ಕಟ್ಟಿದ ಮೇಲೆ ಬಿದ್ದು ಹೋಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ನಾನು ಹೇಳಿದ್ದೇನೆ. 1978 ನೇ ಇಸವಿಯಲ್ಲಿ ಇದನ್ನು ಕಟ್ಟಿದಂತಹ ಮನೆಗಳು. ಆ ದಿವಸ ಮಾಡಿದ ಟೆಕ್ನಾಲಜಿಯವರು ಮಾಡಿರುವುದು. ಅದರಲ್ಲಿ ಗುಣಮಟ್ಟ ಸರಿಯಿಲ್ಲ ಅದಕ್ಕೆ ಬಿದ್ದು ಹೋಗಿದೆ. ಇವತ್ತು ನಾವು ಏನು ಮಾಡುತ್ತಿದ್ದೇವೆಂದರೆ ಆ ರೀತಿಯಾಗಬಾರದೆಂದು ಫ್ರೀ ಫ್ಯಾಬ್ರಿಕ್ರೆಟೆಡ್ ಮೆಟೀರಿಯಲ್ಸ್ ಹಾಕಿ ಕೆಂಗೇರಿಯಲ್ಲಿ ಹೊಸ ಮನೆಗಳನ್ನು ಕಟ್ಟುತ್ತಿದ್ದಾರೆ. ಬೇಕಾದರೆ ಯಾರಾದರೂ ಸದಸ್ಯರು ಇಂಟರೆಸ್ಟ್ ಇದ್ದರೆ ಬನ್ನಿ ನಾವೇ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅವರು ಒಳ್ಳೆಯದಾಗಿ ಚೆನ್ನಾಗಿ ಕಟ್ಟುತ್ತಿದ್ದಾರೆ.

ಉಪಾಧ್ಯಕ್ಷಣಿಯವರು : ಈ ಮನೆಗಳು ಇದೇ ರೀತಿ ಆಗಬಾರದು ಗ್ಯಾರೆಂಟಿ ಏನಾದರೂ ತೆಗೆದುಕೊಳ್ಳುತ್ತೀರಾ ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಮೋಟಮ್ಮ : 5 ವರ್ಷ 10 ವರ್ಷ ಗ್ಯಾರೆಂಟಿ ಕೊಡಿ. ಏಕೆಂದರೆ ಹಣವನ್ನು ತೆಗೆದುಕೊಂಡು ಕಂಟ್ರಾಕ್ಟ್ ಮಾಡಿರುವುದಿಲ್ಲವೇನು.

ಶ್ರೀ ಬಿ. ಶಿವರಾಮು : ಗುಣಮಟ್ಟ ಮೆಂಟೇನ್ ಮಾಡದೆ ಹೋದರೆ ಕೊನೆಗೆ ಅವು ಅದೇ ರೀತಿ ಬಿದ್ದುಹೋಗುವ ಪರಿಸ್ಥಿತಿ ಬರಬಾರದು ಎನ್ನತಕ್ಕ ವಿಚಾರದಲ್ಲಿ ಮೋಟಮ್ಮನವರು ಹೇಳುತ್ತಿರುವುದು.

ಶ್ರೀ ಕೆ.ಜೆ. ಜಾರ್ಜ್ : ಈಗ ನಾವು 'ಆಶ್ರಯ' ಸ್ಕೀಮ್‌ನಲ್ಲಿ ಏನು ಮಾಡಿದ್ದೇವೆಂದರೆ ಎಂ.ಎಲ್.ಎ. ಗಳನ್ನು ಛೇರ್‌ಮನ್ ಮಾಡಿ ಕಮಿಟಿ ಮಾಡಿದ್ದೇವೆ. ಅವರ ಮೇಲ್ವಿಚಾರಣೆಯನ್ನು ಮಾಡುವಂಥಹ ಕೆಲಸ ಅವರ ಕೈಯಲ್ಲಿದೆ. ನಾವು ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ಅದರ ಪ್ರಕಾರ ಅವರು ಇನ್ಸ್‌ಪೆಕ್ಷನ್ ಮಾಡಿ ಗುಣಮಟ್ಟದ ವಿಚಾರದಲ್ಲಿ ಅವರು ಸ್ವಲ್ಪ ಆಸಕ್ತಿಯನ್ನು ವಹಿಸಿದರೆ ಬಹುಶಃ ಚೆನ್ನಾಗಿ ಆಗಬಹುದು.

ಶ್ರೀಮತಿ ಮೋಟಮ್ಮ : ಅದರಲ್ಲಿ ಏನು ತೊಂದರೆಯಾಗುತ್ತದೆ. ಅವರಿಗೂ ನಿಮಗೂ ಏನು ಆಬ್ಲಿಗೇಶನ್ ಇಲ್ಲತಾನೆ. ಯಾರೇ ಏಜೆನ್ಸಿಯಾಗಿರಲಿ. ಹೌಸಿಂಗ್ ಬೋರ್ಡ್ ನಿಮ್ಮ ಇಂಜನಿಯರ್ಸ್ ಕಟ್ಟಿಸುವ ಮನೆಯಲ್ಲಿ ಅಥವಾ ಆಶ್ರಯ ಸ್ಕೀಮ್‌ಗಳನ್ನು ಬೇರೆ ಯಾರೂ ಏಜೆನ್ಸಿಗಳಿಗೆ ಕೊಡುತ್ತಿದ್ದಿರಲ್ಲಾ, ಅವರ ಹತ್ತಿರ ನೀವು ಗ್ಯಾರೆಂಟಿಯನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಏನು ಪ್ರಾಬ್ಲಮ್ ಇದೆ? 10 ವರ್ಷ ಅಂತ ತೆಗೆದುಕೊಳ್ಳಿ. 20 ವರ್ಷ ಅಂತ ತೆಗೆದುಕೊಳ್ಳಿ. ಅವರಿಗೆ ಹಣವನ್ನು ಕೊಟ್ಟಿರುವುದಿಲ್ಲವೇನು? ಸರ್ಕಾರದ ಹಣ ಏತಕ್ಕೆ ಹಾಳಾಗಬೇಕು?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಸದಸ್ಯಣಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಅಧ್ಯಕ್ಷರೆ, ಹಳ್ಳಿಗಳ ಕಡೆ ಯಾವ ಯುನಿವರ್ಸಿಟಿಗೂ ಹೋಗುವ ಆಗಿಲ್ಲ, ಡಿಗ್ರಿಯೂ ಇಲ್ಲ, ಡಿಪ್ಲೊಮೋನೂ ಇಲ್ಲ, ಬರೀ ಮಣ್ಣಿನ ಗೋಡೆಗಳನ್ನು ಕಟ್ಟಿದ್ದಾರೆ. ನೂರು-ನೂರೈವತ್ತು ವರ್ಷ. ಸೊಗಸಾಗಿದ್ದಾವೆ ಇನ್ನೂ ಚೆನ್ನಾಗಿದ್ದಾವೆ ಏನೂ ಆಗಿಲ್ಲ. ಈ ಮನೆಗಳನ್ನು ಕಟ್ಟುವುದಕ್ಕೆ ಇವರು ಯಾವ ಡಿಗ್ರಿ ತೆಗೆದುಕೊಂಡರು? ಯಾವ ಕಾಲೇಜಿನಲ್ಲಿ ಓದಿದರು? ಅದಕ್ಕೆ ಲೆಕ್ಕ-ಪತ್ರ ಬೇಡವೆ? ಯಾರಿಗೋ ಮನೆ ಕಟ್ಟುವುದಕ್ಕೆಂದು ಒಂದಲ್ಲ, ಎರಡಲ್ಲ 750 ಮನೆಗಳು ಕ್ರ್ಯಾಕ್ ಬಂದು, ಇವುಗಳೆಲ್ಲವೂ ಅನ್‌ಫಿಟ್ to reside ಎಂದು ಸರ್ಟಿಫಿಕೇಟ್ ಕೊಟ್ಟು ಕೆಡವಿ ಎಂದು ಹೇಳಿರುವುದು ನಾಚಿಕೆಪಟ್ಟುಕೊಳ್ಳಬೇಕಾದಂಥ ವಿಚಾರ. ಒಂದು ಊರಿಗೆ ಒಂದು ಬಾವಿ ತೆಗೆಯುವುದಕ್ಕೆ ದುಡ್ಡಿಲ್ಲವೆಂದು ಹೇಳುವಂಥ ಈ ಕಾಲದಲ್ಲಿ 4 ಕೋಟಿ ರೂಪಾಯಿಗಳು ಹೋಯಿತು ಎಂದು ಮಂತ್ರಿಗಳು ಇಷ್ಟು ತಾತ್ಸಾರದಿಂದ ಉತ್ತರ ಹೇಳಿದರೆ, ಹೇಳುವವರು ಕೇಳುವವರು ಯಾರು ಇಲ್ಲವೆ? ಜವಾಬ್ದಾರಿ ಇಲ್ಲವೆ? ಆ ಇಂಜನಿಯರ್ಸ್ ಯಾರು? ಒಂದು ಮನೆ ಅಚಾತುರ್ಯವಾಗಿ ಅಕಸ್ಮಾತ್ ಬಿದ್ದುಹೋಗಿದ್ದರೆ ಏನೋ ಆಗಿದೆಯೆಂದು ಹೇಳಬಹುದು. ಆದರೆ, 750 ಮನೆಗಳನ್ನು ಸಾರಾಸಗಟಾಗಿ ಕೆಡುವುದಕ್ಕೆ ಆದೇಶ ಕೊಟ್ಟಿದ್ದೇವೆಂದು ಹೇಳಿಬಿಟ್ಟರೆ ಅದು ಯಾರ ಮನೆ ದುಡ್ಡು? ದೇಶದ ಜನರು ರಟ್ಟೆ ಮುರಿದು ಬೆವರು ಸುರಿಸಿ ಸಂಪಾದನೆ ಮಾಡಿ ಕೊಟ್ಟ ದುಡ್ಡಲ್ಲವೆ? ಏತಕ್ಕೆ ನಿಮಗೆ ಇಷ್ಟೊಂದು ತಾತ್ಸಾರ? ಆಗಾಗ್ಗೆ ಚೆಕ್ ಕೊಡುವುದಿಲ್ಲವೆ? ಬಿಲ್ ಪೇಮೆಂಟ್ ಮಾಡುವುದಿಲ್ಲವೆ? ಬಿಲ್ ಪೇಮೆಂಟ್ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇರಲಿಲ್ಲವೆ? ನೀವು ಈ ರೀತಿ ಮಾಡಿರುವುದನ್ನು ನೋಡಿ ನಮಗೆ ಹೊಟ್ಟೆ ಉರಿಯುತ್ತದೆ. 10 ರೂಪಾಯಿಗಳ ಕಂದಾಯ ಕೊಡದೆ ಹೋದರೆ ಅಧಿಕಾರಿಗಳು ಹೆಂಗಸರ ತಾಳಿಯ ಮೇಲೆ ಕೈ ಹಾಕುತ್ತಾರೆ. ಅವರು 100 ರೂಪಾಯಿಗಳ ಸಾಲ ತೆಗೆದುಕೊಂಡಿದ್ದರೆ, ಅದು 500 ರೂಪಾಯಿಗಳಾಗಿವೆ ಎಂದು ಅವರ ಎತ್ತು, ದನ-ಕರುಗಳನ್ನು

ಹರಾಜು ಹಾಕುತ್ತಿದ್ದಾರೆ. ಇಂತಹ ಬಡ ಪರಿಸ್ಥಿತಿಯಲ್ಲೂ 4 ಕೋಟಿ ರೂಪಾಯಿಗಳು ಹೋಯಿತು ಎಂದು ಮಂತ್ರಿಗಳು ಇಷ್ಟು ತಾತ್ಸಾರದಿಂದ ಉತ್ತರ ಹೇಳಿದರೆ ನಾವು ಯಾರಿಗೆ ಹೇಳಬೇಕು? ನಮಗೆ ಜವಾಬು ಹೇಳುವವರು ಯಾರು? ನೀವು ಮನಸ್ವೇಚ್ಛೆಯಾಗಿ ಏನು ಹೇಳುತ್ತಿದ್ದೀರಿ, ಇದಕ್ಕೆ ತಕ್ಕದಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಎಲ್ಲರೂ ಹೋರಾಟ ಮಾಡಿ ನಿಮ್ಮ ಮನೆ ಮುಂದೆ 'ಘೇರಾವ್' ಹೂಡಬೇಕಾದಂಥ ಪರಿಸ್ಥಿತಿ ಬರುತ್ತದೆ.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಶ್ರೀಮಾನ್ ಹನುಮೇಗೌಡರ ಮಾತನ್ನು ಕೇಳಿದರೆ, ನಮ್ಮ ಕಾಲದಲ್ಲಿ ಆಗಿದೆ ಎನ್ನುವಂತೆ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಶಿವರಾಮು : ಇದು ತಮ್ಮ ಕಾಲದಲ್ಲಾಯಿತು ಎನ್ನುವ ಪ್ರಶ್ನೆ ಅಲ್ಲ. ಇಂಜಿನಿಯರ್ಸ್ ಮಾಡತಕ್ಕ ಕೆಲಸ ಎಷ್ಟು ಅಸಮರ್ಪಕವಾಗಿದೆ ಎಂಬುದನ್ನು ಹೇಳುತ್ತಿದ್ದಾರೆ. ಈಗ ಒಂದು ಸಾವಿರ ರೂಪಾಯಿಗಳನ್ನು ಕಟ್ಟದೇ ಹೋದರೆ ಹಳ್ಳಿಗಳಲ್ಲಿ ರೈತರ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆ. 4 ಕೋಟಿ ರೂಪಾಯಿಗಳನ್ನು ಸುಲಭವಾಗಿ ಮುಚ್ಚಿ ಹಾಕತಕ್ಕಂಥ ಪ್ರಶ್ನೆ ಅಲ್ಲ. ನಾವೂ ಕೂಡ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಈಗ ಕೆಲವು ಅಧಿಕಾರಿಗಳು ರಿಟೈರ್ಡ್ ಆಗಿ ಹೋಗಿರುತ್ತಾರೆ. ನೀವು ಯಾರನ್ನು ವಿಚಾರಿಸುತ್ತೀರಿ?

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಏತಕ್ಕೆ ಹೇಳಿದರು ಎಂದರೆ, ನಾನು, ನನ್ನ ಕಾಲದಲ್ಲಿ ಬಿ.ಎ. ಡಿಗ್ರಿ ಆಗಲಿಲ್ಲವೆಂದು ಹೇಳಿದೆ. ಅವರ ಕಳಕಳಿ ಏನೆಂದು ನನಗೂ ಅರ್ಥವಾಗುತ್ತದೆ. ಅದಕ್ಕೋಸ್ಕರ ನಾನು ಹೇಳಿದ್ದುದು. ದುರಾದೃಷ್ಟ ಕಾಲ ಇತ್ತು, ಇದು ಆಗಬಾರದು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೇನೆ. ಏನೆಂದರೆ, ನಮ್ಮ ಕಾನೂನಿನ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ರಿಪೋರ್ಟ್ ಬರಬೇಕಾಗುತ್ತದೆ, ಕಮಿಟಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಯಾರ ಮೇಲೂ ನಾವು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ, ಇನ್ನೆರಡು ತಿಂಗಳುಗಳಲ್ಲಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೇವೆ. ರಿಪೋರ್ಟ್ ಬಂದ ತಕ್ಷಣ ಅವರ ವಿಚಾರದಲ್ಲಿ ನಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾರೇ ಇನ್‌ವಾಲ್ವ್ ಆಗಿದ್ದರೂ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಲೋಕಾಯುಕ್ತಕ್ಕೆ ಸಹ ರೆಫರ್ ಮಾಡುವುದಕ್ಕೆ ಸರ್ಕಾರ ಹಿಂದೆ-ಮುಂದೆ ನೋಡುವುದಿಲ್ಲ. ಯಾರೇ ತಪ್ಪು ಮಾಡಿದ್ದರೂ ಅವರಿಗೆ ಶಿಕ್ಷೆ ವಿಧಿಸುವ ಕೆಲಸ ಮಾಡುತ್ತೇವೆ.

ಕೋಮು ಗಲಭೆಗಳನ್ನು ಹತ್ತಿಕ್ಕಲು ವಿಶೇಷ ಪೋಲೀಸ್ ದಳ

1935. ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ ನಗರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಶೇಷವಾಗಿ ಕೋಮು ಗಲಭೆಗಳನ್ನು ಹತ್ತಿಕ್ಕಲು ವಿಶೇಷ ಪೋಲೀಸ್ ದಳ ರಚನೆ ಪ್ರಸ್ತಾವನೆ / ವಿಚಾರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅನುಸರಿಸಲಾಗುವ ರೀತಿ ಯಾವುದು?

ಇ) ಸಿಬ್ಬಂದಿ ನೇಮಕಾತಿ ಮಾಡುವಾಗ ಅಲ್ಪಸಂಖ್ಯಾತರು ಹಾಗೂ ಇತರೆ ಕೋಮುಗಳ ನಡುವೆ ಶೇಕಡ 50ರ ಅನುಪಾತ ಪದ್ಧತಿಯನ್ನು ಅನುಸರಿಸಲಾಗುತ್ತದೆಯೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ. ನೇಮಕಾತಿಗಳನ್ನು ಸಂಬಂಧಪಟ್ಟ ನೇಮಕಾತಿ ನಿಯಮಾವಳಿಗಳನ್ನನುಸರಿಸಿ ಮಾಡಲಾಗುವುದು.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯದಲ್ಲಿ ಒಂದು ಆಂಟಿ ರಯಟ್ಸ್ ಸ್ಕ್ವಾಡ್ ಮಾಡುವ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ, ಉತ್ತರವಾಗಿ ಇನ್ನು ಯಾವುದೇ ಪ್ರಸ್ತಾವನೆ ಇಲ್ಲವೆಂದು ಹೇಳಿದ್ದಾರೆ. ಮತ್ತು ನೇಮಕಾತಿಯಲ್ಲಿ ಅಲ್ಪಸಂಖ್ಯಾತರಿಗೆ ಆದ್ಯತೆ ಕೊಡಲಾಗುತ್ತದೆಯೇ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಪರಿಶೀಲಿಸುತ್ತಿದ್ದೇವೆಂದು ಹೇಳಿದ್ದಾರೆ. ಆದರೆ, ಮಾನ್ಯ ದಿವಂಗತ ರಾಜೀವ್ ಗಾಂಧಿಯವರ 15 ಅಂಶಗಳ ಕಾರ್ಯಕ್ರಮದಲ್ಲಿ ಹೇಳಿದ್ದಾರೆ : "In the recruitment of police personnel the State Government should be advised to give special consideration." ಸರ್ಕಾರ ಆ 15 ಅಂಶಗಳ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತದೆಯೇ? ಇಲ್ಲವೆ? ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ಆಂಟಿ ಡಕಾಯಿತ್ ಫೋರ್ಸ್ ಮಾಡುತ್ತೀರಾ? ಏಕೆಂದರೆ, ದೇಶದ ಎಲ್ಲಾ ಕಡೆಯಿರುವ ವಾತಾವರಣ ನೋಡಿದರೆ ಮಾತು-ಮಾತಿಗೆ ಸಾಕಷ್ಟು ರಯಟ್ಸ್ ಆಗುತ್ತಿದೆ. ಅದಕ್ಕೋಸ್ಕರ, ಒಂದು ಆಂಟಿ ರಯಟ್ಸ್ ಸ್ಕ್ವಾರ್ಡ್ ಮಾಡಬೇಕೆಂದು ತಮ್ಮ ಮೂಲಕ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಹಿಂಡಸಗೇರಿಯವರು ಕೇಳಿರತಕ್ಕ ಪ್ರಶ್ನೆಗೆ ಈಗಾಗಲೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಆಗಿನ ಪ್ರಧಾನ ಮಂತ್ರಿಯಾಗಿದ್ದಂಥ ಶ್ರೀಮಾನ್ ರಾಜೀವ್ ಗಾಂಧಿ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು 15 ಅಂಶಗಳ ಕಾರ್ಯಕ್ರಮವನ್ನು ಮಾಡಿ, ಎಲ್ಲಾ ಕಡೆಗಳಿಗೂ ಆದೇಶವನ್ನು ಕಳಿಸಿದ್ದರು. ಅಲ್ಪಸಂಖ್ಯಾತರಿಗೆ ಪ್ರೊಟೆಕ್ಷನ್ ಕೊಡತಕ್ಕ ರೀತಿಯಲ್ಲಿ ಎಲ್ಲಾ ಪೋಲೀಸ್ ಸಿಬ್ಬಂದಿಯ ನೇಮಕಾತಿಯಲ್ಲಿಯೂ ಕೂಡ ಶೇಕಡ 15 ರಷ್ಟನ್ನು ಅವರಿಗೆ ಕೊಡಬೇಕು ಎಂದು ಆದೇಶದಲ್ಲಿದೆ. ಮತ್ತೆ ಎಗ್ಸಿಸ್ಟಿಂಗ್ ರೂಲ್‌ನಲ್ಲಿ ಎಸ್‌ಸಿ / ಎಸ್‌ಟಿ ಗೆ ಅದಕ್ಕೆ ಸ್ವಲ್ಪ ಪ್ರಾವಿಷನ್ ಇದೆ. ಆದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಹುದ್ದೆಗಳನ್ನು ಭರ್ತಿ ಮಾಡತಕ್ಕ ಸಂದರ್ಭದಲ್ಲಿ ಮೈನಾರಿಟಿ community ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಆದ್ಯತೆಯನ್ನು ಕೊಟ್ಟಿದ್ದೇವೆ. ಈಗ ಕೋಮು ಗಲಭೆಗಳು ಹೆಚ್ಚಾಗಿ ಆಗುತ್ತಿವೆ. ಅದಕ್ಕಾಗಿ ಒಂದು ಸ್ಕ್ವಾಡನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿಂಥ ಕೋಮು ಗಲಭೆಗಳು 1990-91ರ ಹಿನ್ನಲೆಯಲ್ಲಿ ಆಗುತ್ತಿವೆ ಅವೆಲ್ಲವನ್ನು ಕೂಡ ಸೆನ್‌ಸಿಟೀವ್ ಏರಿಯ ಎಂದು ಐಡೆಂಟಿಫೈಡ್ ಮಾಡಿದ್ದೇವೆ. ಪೋಲೀಸ್ ಇಲಾಖೆಯವರು ಇದರ ಬಗ್ಗೆ ಈಗ ಹೆಚ್ಚಿನ ಗಮನವನ್ನು ತೆಗೆದುಕೊಳ್ಳುತ್ತಾರೆ.

SRI QUMURUL ISLAM : As you have said, as per the 15 point programme anti-riot force is to be created and for that certain directions are there. As per the police report of 1991 riots are comparatively more than the previous year and in the previous year riots are more than the other pre-previous years. In this context, I want to know, whether the

Government, in order to curb the communal riots implement the 15 point programme, which was discussed in the National Integration Council Meeting?

SRI DHARAM SINGH : Just now I have told that this matter has already been discussed in the National Integration Council meeting. They have given direction to all the State Governments because, as it is there is no provision for that. But Government is seriously considering it.

ಶ್ರೀ ಎ.ಎಂ.ಹಿಂಡಸಗೇರಿ : ಉಪಾಧ್ಯಕ್ಷಣಿಯವರೆ, ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಏನು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ರೂಲ್ಸ್‌ನ ಪ್ರಕಾರ ಮಾಡಲಾಗುವುದಿಲ್ಲವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ಹಾಗಾದರೆ ಕೌನ್ಸಿಲ್‌ನವರು ಈ ರೀತಿ ಕೆಲಸ ಮಾಡಬೇಕೆಂದು ಏಕೆ ಸಲಹೆಯನ್ನು ಮಾಡಿದ್ದಾರೆ? ಮಾನ್ಯ ಸದಸ್ಯರು ಹೇಳಿದಂತೆ ಅಂಕಿ ಅಂಶಗಳನ್ನು ನೋಡಿದರೆ ವರ್ಷದಿಂದ ವರ್ಷಕ್ಕೆ ಇದು ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಇದನ್ನು ಮಾನ್ಯ ಸದಸ್ಯರಾದ ಖಮುರುಲ್ ಇಸ್ಲಾಮ್‌ರವರು ಹೇಳಿದ್ದಾರೆ. ಆದುದರಿಂದ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಇಂಥ ಸ್ಕ್ವಾಡನ್ನು ಮಾಡಬೇಕೆಂದು ತಮ್ಮ ಮುಲಕ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಉಪಾಧ್ಯಕ್ಷಣಿಯವರೆ, ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಎಲ್ಲಾ ಕೋಮಿನವರಿಗೂ ಕೂಡ ಪ್ರಾತಿನಿಧ್ಯವನ್ನು ಕೊಡಬೇಕು. ಆ ರೀತಿಯ ಪ್ರಾತಿನಿಧ್ಯವನ್ನು ಕೊಟ್ಟರೆ ಅಲ್ಲಿರತಕ್ಕ ಎಲ್ಲಾರಿಗೂ ಕೂಡ ಪ್ರೊಟೆಕ್ಷನ್ ಕೊಡುತ್ತಾರೆ ಎನ್ನತಕ್ಕ ಒಂದು ರೀತಿಯ psychological ಪ್ರಭಾವಕೂಡ ಇದರಲ್ಲಿ ಇರುತ್ತದೆ ಎನ್ನತಕ್ಕ ರೀತಿಯಲ್ಲಿ ಕೊಟ್ಟಿದ್ದಾರೆ. ಆದರೆ as it is ಪ್ರಾವಿಷನ್ ಇಲ್ಲ ಎಸ್.ಸಿ. / ಎಸ್.ಟಿ. ಗೆ ಪ್ರಾವಿಷನ್ ಇದೆ. ಆದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಈಗಾಗಲೆ ಎಷ್ಟೋ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿದ್ದಾರೆ ಮತ್ತೆ ಬೇರೆ ಬೇರೆ ಕಡೆಯೂ ಕೂಡ ಅವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ. ಮುಂದೆಯೂ ಕೂಡ ಭರ್ತಿ ಮಾಡತಕ್ಕ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನವನ್ನು ಕೊಡುತ್ತೇವೆ.

ಶ್ರೀ ಶಫಿ ಅಹಮದ್ : ಉಪಾಧ್ಯಕ್ಷಣಿಯವರೆ. ಇಷ್ಟು ವರ್ಷ ಏನು ಈ ಗಲಭೆಗಳಾಗಿವೆ ಅದರಲ್ಲಿ ಅನಿವಾರ್ಯವಾಗಿ ಕೆಲವು ಮುಗ್ಧ ಜನರ ಮೇಲೆ ಕೇಸನ್ನು ಹಾಕಿದ್ದಾರೆ. ಅದನ್ನು ವಿತ್‌ಡ್ರಾ ಮಾಡಲು ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದೆಯೆ ಎಂಬ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಉಪಾಧ್ಯಕ್ಷಣಿಯವರೆ, ಕರ್ನಾಟಕ ರಾಜ್ಯದಲ್ಲಿ ಎಲ್ಲಿಲ್ಲಿ ವಿನಾ ಕಾರಣದಿಂದ ಕೋಮು ಗಲಭೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೇಲಾಗಲಿ, ಅಲ್ಪಸಂಖ್ಯಾತರ ಮೇಲಾಗಲಿ, ರೈತರ ಮೇಲಾಗಲಿ ಕೇಸನ್ನು ಹಾಕಿದ್ದರೆ ಅದನ್ನು ವಿತ್‌ಡ್ರಾ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈಗಾಗಲೆ ಸಾಕಷ್ಟು ಅಂದರೆ ಸುಮಾರು 900 ಕ್ಕಿಂತ ಹೆಚ್ಚು ಕೇಸುಗಳನ್ನು ನಾವು ವಿತ್‌ಡ್ರಾ ಮಾಡಿದ್ದೇವೆ.

ಶ್ರೀ ಶಫಿ ಅಹಮದ್ : ಉಪಾಧ್ಯಕ್ಷಣಿಯವರೆ. Congress manifesto ದಲ್ಲಿ ನಮ್ಮ ಶ್ರೀಮಾನ್ ರಾಜೀವ್ ಗಾಂಧಿಯವರ 15 ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಅದರ ಪ್ರಕಾರ recruitment ನಲ್ಲಿ 12 ಪರ್‌ಸೆಂಟ್ ಹುದ್ದೆಯ ಮೀಸಲಾತಿಯನ್ನು ಕೊಡಬೇಕು. ಮತ್ತು

ಪೋಲೀಸ್ ಫೋರ್ಸ್‌ನಲ್ಲಿಯೂ ಮುಖ್ಯವಾಗಿ ಪೋಲೀಸ್ ಪೇದೆಗಳ ನೇಮಕಾತಿಯಲ್ಲಿ ಅವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳಿದ್ದಾರೆ. ತಾವು ಇದರಲ್ಲಿ ಏನು ಈ ಸಾರಿ ಪ್ರಾವಿಷನ್ ಮಾಡಿಕೊಂಡಿದ್ದೀರೊ? ಮತ್ತು ಬೈಲಾದಲ್ಲಿ ಏನು ಒಂದು ಮಾಡಿದ್ದೀರೋ? ಆ ರೀತಿಯಲ್ಲಿ ಮಾಡುತ್ತೇವೆಂದು ತಾವು ಹಿಂದಿನ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಅದನ್ನು ಈ ಸಾರಿಯಾದರೂ ಮಾಡಿಕೊಡುತ್ತೇವೆಂದು ಸದನದಲ್ಲಿ ಆಶ್ವಾಸನೆಯನ್ನು ಕೊಡಬೇಕು.

(ಅಧ್ಯಕ್ಷರ ಪೀಠವನ್ನು ಶ್ರೀಮಾನ್ ಡಿ.ಎ. ಚಿನ್ನಪ್ಪನವರು ಅಲಂಕರಿಸಿದರು)

ಮುಖ್ಯವಾಗಿ ಎಲ್ಲೆಲ್ಲಿ ಮೈನಾರಿಟಿಯವರಿಗೆ ಜಾಸ್ತಿ ಅವಕಾಶವಿದೆಯೋ ಅಲ್ಲಿ ಮೈನಾರಿಟಿಯವರನ್ನು ಅಧಿಕಾರಿಗಳನ್ನಾಗಿ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ.

ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್ : ಈಗ ಮ್ಯಾನಿಫೆಸ್ಟೋದಲ್ಲಿ ಏನು ಕೊಟ್ಟಿದ್ದೇವೆ ಮತ್ತು ಚುನಾವಣಾ ಸಮಯದಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೇವೆ ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಎಕ್ಸಿಕ್ಯೂಟೀವ್ ಪೋಸ್ಟ್ ಎಷ್ಟು ಇದೆಯೆಂದರೆ ಎಂಟು ಡಿ.ಎಸ್.ಪಿ. ಗಳಿದ್ದರೆ ಏಳು ಮಂದಿಗೆ ಎಕ್ಸಿಕ್ಯೂಟೀವ್ ಪೋಸ್ಟ್ ಕೊಟ್ಟಿದ್ದೇವೆ. ಮತ್ತು ನಾಲ್ಕು ಮಂದಿಗೆ ಎಸ್.ಪಿ.ಜಿ. ಸ್ಯಾಂಕ್ಷನ್ ಆಗಿ ಈಗಾಗಲೇ ಇಬ್ಬರಿಗೆ ಎಸ್.ಪಿ.ಜಿ. ಕೊಟ್ಟಿದ್ದೇವೆ. ಇವತ್ತು ಮೈನಾರಿಟೀಸ್‌ಗೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾಜಿ ಪ್ರಧಾನಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಹಾಗೂ ರಾಜೀವ್ ಗಾಂಧಿಯವರು ಒಂದು ಕಾಲದಲ್ಲಿ ಈ 15 ಅಂಶದ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಹೇಳಿ ಆಗಲೇ ಅವರು ಘೋಷಣೆ ಮಾಡಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಸರ್ಕಾರ ಇದನ್ನು ಪರಿಶೀಲಿಸುತ್ತದೆ ಅಥವಾ ಈ 15 ಅಂಶದ ಕಾರ್ಯಕ್ರಮದ ಪ್ರಕಾರ ಮುಂದೆ ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತದೆ ಎಂದು ಹೇಳುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಆಗಲೇ ಎರಡೂವರೆ ವರ್ಷವಾಗಿದೆ. ಈ 15 ಅಂಶದ ಕಾರ್ಯಕ್ರಮದಲ್ಲಿ ಏನು ಅಂಶಗಳಿವೆ, ಅವುಗಳನ್ನು ಜಾರಿಗೊಳಿಸುವುದಕ್ಕೆ ಇನ್ನು ಎಷ್ಟು ಕಾಲಾವಕಾಶ ಬೇಕು ಎಂದು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ. ಜೊತೆಗೆ ಈಗ ಕರ್ನಾಟಕ ರಾಜ್ಯದಲ್ಲಿರುವಂತಹ ಅಧಿಕಾರಿಗಳ ಸಂಖ್ಯೆಯನ್ನು ಹೇಳುವುದನ್ನು ನೋಡಿದರೆ ಬಹುಶಃ ಈ ಕಾರ್ಯಕ್ರಮ ಜಾರಿ ಆಗುವುದಕ್ಕಿಂತ ಮುಂಚೆ ಅಥವಾ ಈ ಕಾರ್ಯಕ್ರಮವನ್ನು ಘೋಷಿಸುವುದಕ್ಕಿಂತ ಮುಂಚೆಯೇ ಈ ಅಧಿಕಾರಿಗಳು ನೇಮಕವಾಗಿದ್ದರು ಎಂದರೆ ತಪ್ಪಾಗಲಾರದು. ಆದುದರಿಂದ ನಿರ್ದಿಷ್ಟವಾಗಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರವು ಈ 15 ಅಂಶದ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕಾಗಿ ಇನ್ನು ಎಷ್ಟು ಕಾಲಾವಕಾಶ ಬೇಕೆಂದು ಮಾನ್ಯ ಮಂತ್ರಿಗಳು ತಿಳಿಸಬೇಕಾಗಿ ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಈ 15 ಅಂಶದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರತಕ್ಕಂತಹ ರೀತಿಯಲ್ಲಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿರುವುದರಿಂದ ಪರಿಶೀಲಿಸತಕ್ಕಂತಹ ವಿಚಾರವಿಲ್ಲ. ಇವರು ಎಲ್ಲಿ ನೇಮಕಾತಿಯಲ್ಲಿ ಬಹಳ ಕಡಿಮೆ ಇದ್ದಾರೆ ಎನ್ನುವಂಥಾದ್ದು ಇದೆ, ಮುಂದೆ ಏನು ರಿಕ್ರೂಟ್‌ಮೆಂಟ್ ಆಗುತ್ತಿದೆ, ಅದರಲ್ಲಿ ಹೆಚ್ಚಿನ ರೀತಿಯಲ್ಲಿ ಇವರಿಗೆ ಪ್ರಾತಿನಿಧ್ಯ ಸಿಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ಅಧ್ಯಕ್ಷಿಣಿಯವರೇ, ಈ ನೇಮಕಾತಿಯಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರಿಗೆ ಪೋಲೀಸ್ ಇಲಾಖೆಯಲ್ಲಿ ಇಂತಿಷ್ಟೇ ಹುದ್ದೆಗಳೆಂದು, ಅದೇ ರೀತಿಯಲ್ಲಿ ಅಧಿಕಾರ ವರ್ಗ ತೆಗೆದುಕೊಳ್ಳುವಾಗ ಇಂತಿಷ್ಟೇ ಎಂದು ಹೇಳತಕ್ಕಂತಹ ನಾಮಾಶವನ್ನು ಕಡ್ಡಾಯವಾಗಿ ಮುಂದೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಈಗಾಗಲೇ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ, ಅದನ್ನು ಮಾಡುತ್ತೇವೆಂದು ಕೂಡ ಹೇಳಿದ್ದೇವೆ.

ಹಾಸನದಲ್ಲಿರುವ ಕೊಳಚೆ ಪ್ರದೇಶಗಳು

1364. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದಲ್ಲಿ ಸರ್ಕಾರ ಯಾವ ಯಾವ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಪ್ರಕಟಿಸಿದೆ (ವಿವರವನ್ನೊದಗಿಸುವುದು) ?

ಆ) ಈ ಕೊಳಚೆ ಪ್ರದೇಶಗಳಲ್ಲಿ ಯಾವ ಯಾವ ಕೊಳಚೆ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಎಷ್ಟು ಹಣದ ಅಂದಾಜನ್ನು ತಯಾರಿಸಿರುವುದು. (ವಿವರವನ್ನು ಒದಗಿಸುವುದು) ?

ಇ) ಯಾವ ಯಾವ ಕೊಳಚೆ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಇದುವರೆವಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದೆ (ವಿವರ ಒದಗಿಸುವುದು)?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಒಟ್ಟು 12 ಪ್ರದೇಶಗಳನ್ನು ಹಾಸನ ನಗರದಲ್ಲಿ ಅಧಿಕೃತವಾಗಿ ಕೊಳಚೆ ಪ್ರದೇಶಗಳೆಂದು ಘೋಷಿಸಿದೆ. (ವಿವರ ಅನುಬಂಧ-'ಅ' ನಲ್ಲಿದೆ)

ಆ) ಒಟ್ಟು ಅಂದಾಜು ರೂ. 33.61 ಲಕ್ಷಗಳು (ವಿವರ ಅನುಬಂಧ-'ಅ' ನಲ್ಲಿದೆ)

ಇ) ಒಟ್ಟು ರೂ. 30.69 ಲಕ್ಷಗಳನ್ನು ಖರ್ಚು ಮಾಡಿದೆ. 1991ರ ಮಾರ್ಚ್‌ವರೆಗೆ (ವಿವರ ಅನುಬಂಧ-'ಅ' ನಲ್ಲಿದೆ)

ಅನುಬಂಧ - 'ಅ'

ಹಾಸನದಲ್ಲಿರುವ ಕೊಳಚೆ ಪ್ರದೇಶಗಳ ಅಂದಾಜು ವೆಚ್ಚ, ಖರ್ಚು ಇತ್ಯಾದಿಗಳ ವಿವರಣಾತ್ಮಕ ಪಟ್ಟಿ.

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಅಂದಾಜು ವೆಚ್ಚ	ಒಟ್ಟು ಖರ್ಚಾದ ಹಣ (ಲಕ್ಷ ರೂ. ಗಳಲ್ಲಿ)	ಷರಾ
1.	ಹರಿಜನ ಮೋಚಿ ಕಾಲೋನಿ,			
	1 ಮತ್ತು 2ನೇ ಹಂತ	7.59	6.90	1991-92 ರ
2.	ಚಿಪ್ಪನಕಟ್ಟೆ ಪೌರ ಕಾರ್ಮಿಕರ ಕಾಲೋನಿ	1.25	1.22	ಸಾಲಿನಲ್ಲಿ 1.00

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಅಂದಾಜು ವೆಚ್ಚ	ಒಟ್ಟು ಖರ್ಚಾದ ಹಣ (ಲಕ್ಷ ರೂ. ಗಳಲ್ಲಿ)	ಷರಾ
3.	ಬೀರನಹಳ್ಳಿ ಕೊಳಚೆ ಪ್ರದೇಶ	0.47	0.43	ಲಕ್ಷ ರೂ.ಅಂದಾಜು
4.	ರಂಗೋಲಿ ಹಳ್ಳ	1.05	1.24	ವೆಚ್ಚದಲ್ಲಿ ಚಿಕ್ಕನಾಳು
5.	ಕುಂಬಾರಗೇರಿ	4.50	4.30	ಕೊಳಚೆ ಪ್ರದೇಶಕ್ಕೆ
6.	ಜಿಲ್ಲಾ ಬಂಧೀಖಾನೆ ಹಿಂಭಾಗ	1.95	1.98	ಮೂಲಭೂತ
7.	ಕೆ.ಇ.ಬಿ. ಕಾಲೋನಿ ಹಿಂಭಾಗ	1.54	1.01	ಸೌಕರ್ಯ ಒದಗಿಸಲು
8.	ಬಿ.ಎಂ. ರಸ್ತೆ ಪಕ್ಕ ಹರಿಜನ ಕಾಲೋನಿ	1.01	0.90	ಯೋಚಿಸಿದ್ದು ಕೆಲಸ
9.	ಹೊಳೆನರಸೀಪುರ ರಸ್ತೆ ಸುಂಕದಕಟ್ಟೆ	0.84	0.66	ಪ್ರಗತಿಯಲ್ಲಿದೆ.
10.	ಚಿಕ್ಕನಾಳು 1, 2 ಮತ್ತು 3ನೇ ಹಂತ	5.46	6.39	
11.	ಅಡುವಳ್ಳಿ	3.82	2.22	
12.	ರಾಜಪಟ್ಟೆ 1 ಮತ್ತು 2ನೆ ಹಂತ	4.13	3.44	
		33.61	30.69	

ಶ್ರೀ ಕೆ.ಹೆಚ್. ಹನುಮೇಗೌಡ : ಅಧ್ಯಕ್ಷಿಣಿಯವರೇ, ಹಾಸನದಲ್ಲಿ ರತಕ್ಕಂತಹ 12 ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ 30,69,000 ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ತಿಳಿಸಿದ್ದೀರಿ. ಕೊಳಚೆಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯ ಅತ್ಯಾವಶ್ಯಕ. ಬಡವರು ನೂರಾರು ಗುಡಿಸಲುಗಳನ್ನು ಒಂದು ಕಡೆ ಕಟ್ಟಿಕೊಂಡಿದ್ದಾರೆ. ಈ ಗುಡಿಸಲುಗಳ ಉದ್ದ ಅಗಲ 6-8 ಮತ್ತು 8-12, ಇಷ್ಟಿಷ್ಟು ಜಾಗದಲ್ಲಿ ಹೋಗಿ ಬರುವುದಕ್ಕೆ ಜಾಗವೇ ಇಲ್ಲ. ಅಂತಹ ಮನೆಗಳಲ್ಲಿ ಕಕ್ಕಸ್ ರೂಮ್‌ಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಕೊಳಚೆಪ್ರದೇಶದ ಅಭಿವೃದ್ಧಿಗೆ ಎಷ್ಟು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ? ಎಷ್ಟು ಸಾರ್ವಜನಿಕ ಶೌಚಾಲಯಗಳನ್ನು ನಿರ್ಭಾಗ್ಯ ಜನರ ಅನುಕೂಲಕ್ಕೋಸ್ಕರ ಕಟ್ಟಿದ್ದಾರೆ ಇದಕ್ಕೆ ಮಾನ್ಯ ಸಚಿವರು ವಿವರ ಕೊಡಬೇಕು.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈಗಾಗಲೇ 30 ಲಕ್ಷ ರೂಪಾಯಿಯನ್ನು 12 ಕೊಳಚೆ ಪ್ರದೇಶಗಳಿಗೆ ರಸ್ತೆ, ಚರಂಡಿ, ಬೀದಿ ದೀಪ, ಕುಡಿಯುವ ನೀರಿನ ಸೌಲಭ್ಯ ಇದಕ್ಕೆಲ್ಲಾ ಖರ್ಚು ಮಾಡಿದ್ದೇವೆ. ಸನ್ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದ್ದುದು ನಿಜ. ಪಬ್ಲಿಕ್ ಟಾಯ್‌ಲೆಟ್ ಆಗಬೇಕಾಗಿದೆ. ಆದರೆ ಅಲ್ಲಿನ ಪರಿಸ್ಥಿತಿ ತಮಗೇ ಗೊತ್ತಿದೆ ಸ್ಲಮ್‌ನಲ್ಲಿ ಪಬ್ಲಿಕ್ ಟಾಯ್‌ಲೆಟ್ ಕಟ್ಟುವುದಕ್ಕೆ ಸ್ಥಳ ಇರುವುದಿಲ್ಲ. ಈಗಾಗಲೇ ನಮ್ಮ ಅಧಿಕಾರಿಗಳು ಮುನಿಸಿಪಾಲಿಟಿಯವರನ್ನು ಜಾಗ ಕೊಡಿ ಎಂದು ಕೇಳಿದ್ದಾರೆ. ಅಲ್ಲಿ ಜಾಗ ಸಿಕ್ಕಿದ ಕೂಡಲೇ ಪಬ್ಲಿಕ್ ಟಾಯ್‌ಲೆಟ್ ಕಟ್ಟುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಅಧ್ಯಕ್ಷಿಣಿಯವರೇ, ಸಾವಿರಾರು ಜನ ವಾಸವಾಗಿರತಕ್ಕಂಥ ಜಾಗದಲ್ಲಿ ಬೆಳಗಿನಜಾವದಿಂದ ರಾತ್ರಿ 9-10 ಗಂಟೆಯವರೆಗೆ ಏನಾದರೂ ಹೆಂಗಸರು ಮಕ್ಕಳು ಹೊರಗಡೆ ಹೋಗಬೇಕಾದರೆ ಎಲ್ಲಿ ಹೋಗಬೇಕು? ಕಾಡು ಇದೆಯೇ; ಹಳ್ಳ ಇದೆಯೇ; ಏನು ಇದೆ ಅಲ್ಲಿ? ಅದು ಬೇರೆಯವರಿಗೆ ಅರ್ಥವಾಗುವುದು ಹೇಗೆ? ಅಲ್ಲಿಗೆ ನಾನು ಹೋದರೆ ಕೇಳುತ್ತಾರೆ ಜನ,

ನಾನು ಒಂದು ಹತ್ತು ಸಾರಿ ಅಲ್ಲಿಗೆ ಹೋಗಿ ಕೇಳಿದಾಗ ಹೆಂಗಸರು ಮಕ್ಕಳು ಕಣ್ಣೀರು ಹಾಕಿಕೊಂಡು ಹೇಳಿದ್ದಾರೆ, ಏನು ಹನುಮೇಗೌಡರೇ ನಿಮಗೆ ಎಷ್ಟು ಓಟು ಕೊಟ್ಟೆವು, ಇಂತಹ ಒಂದು ಬೇಸಿಕ್ ನೆಸಸಿಟಿಯನ್ನು ನಿಮ್ಮ ಕೈಯಲ್ಲಿ ಮಾಡಿಸುವುದಕ್ಕೆ ಆಗಲಿಲ್ಲವೇ ಎಂದು. ನಾನು ಕಾಗದ ಬರೆದಿದ್ದೇನೆ, ಇಂಜಿನಿಯರ್‌ಗಳನ್ನು ಕರೆದುಕೊಂಡು ಹೋಗಿ ತೋರಿಸಿದೆ. ಆದರೂ ಏನೂ ಮಾಡುತ್ತಿಲ್ಲ. ಏಕೆ ಹೀಗೆ ಮಾಡುತ್ತಿದ್ದೀರಿ, ಬೇರೆ ಮನೆಗಳಲ್ಲಿರುವ ಹೆಂಗಸರಿಗೆ ಮಾತ್ರ ಮಾನ ಮರ್ಯಾದೆ ಇದೆ, ಈ ಬಡಪಾಯಿಗಳ ಹೆಂಗಸರುಗಳಿಗೆ ಮಾನ ಮರ್ಯಾದೆ ಇಲ್ಲವೇ? ಅವರು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು? 30 ಲಕ್ಷ ರೂಪಾಯಿಗಳನ್ನು ಈ ರೀತಿ ಖರ್ಚು ಮಾಡುವುದಕ್ಕೆ ಬದಲು ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸಬೇಕಾಗಿತ್ತು. ನಮ್ಮ ಮನೆಯಲ್ಲೂ ಹೆಂಗಸರಿದ್ದಾರೆ, ನಿಮ್ಮ ಮನೆಯಲ್ಲೂ ಹೆಂಗಸರಿದ್ದಾರೆ, ನೇಚರ್ ಕಾಲ್‌ಗೆ ಅವರು ಎಲ್ಲಿ ಹೋಗಬೇಕು? ಮಾನವೀಯ ದೃಷ್ಟಿಯಿಂದ ನಿಮ್ಮ ಅಧಿಕಾರಿಗಳು ಈ ಕೆಲಸವನ್ನು ಮಾಡಬೇಕಾಗಿತ್ತು. ಜಾಗ ಇಲ್ಲದಿದ್ದರೆ ಕೊಂಡುಕೊಂಡು ಕಟ್ಟಿಸಬೇಕಾಗಿತ್ತು. ದುಡ್ಡು ಕೊಟ್ಟಿದ್ದಿದ್ದರೆ ಜಾಗ ಸಿಕ್ಕುತ್ತಿರಲಿಲ್ಲವೇ? ಈ ರೀತಿ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಆದರೆ 4-5 ಸಾವಿರ ರೂ. ಕೊಟ್ಟು ಜಾಗಗಳನ್ನು ತೆಗೆದುಕೊಂಡು ಈ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದರೆ ಆಗುತ್ತಿರಲಿಲ್ಲವೆ? ಆ ಪ್ರದೇಶಕ್ಕೆಯಾರೇ ಹೋದರೂ ಅವರನ್ನೆಲ್ಲಾ ಕೇಳುತ್ತಿರುತ್ತಾರೆ.

ಛೇರ್ಮನ್ : ಜಾಗ ಸಿಕ್ಕಿದ ಕೂಡಲೇ ಕಟ್ಟಿಸಿಕೊಡುತ್ತೇವೆಂದು ಹೇಳಿದ್ದಾರಲ್ಲವೇ?

ಶ್ರೀ ಕೆ.ಹೆಚ್. ಹನುಮೇಗೌಡ : ಈ ಮಾತನ್ನು ನಾನು ಹತ್ತಾರು ಸಾರಿ ಇಲ್ಲಿ ಹೇಳಿದ್ದೇನೆ. ಇಂಜಿನಿಯರ್‌ಗಳಿಗೆ ಹೇಳಿದ್ದೇನೆ; ಪತ್ರ ಬರೆದಿದ್ದೇನೆ; ಮುನಿಸಿಪಾಲಿಟಿಯವರಿಗೆ ಹೇಳಿದ್ದೇನೆ. ನಾನು ಎಲ್ಲಾ ರೀತಿಯ ಪ್ರಯತ್ನವನ್ನೂ ಕೂಡ ಮಾಡಿದ್ದಾಯಿತು. ಆದರೂ ಇದನ್ನು ನೀವು ಮಾಡಿಸಲಿಲ್ಲ. ಆ ಹೆಂಗಸರು ಈ ದೇಶದಲ್ಲಿ ಏನು ಅಪರಾಧವನ್ನು ಮಾಡಿದ್ದಾರೆ? ನಾನು ಅಲ್ಲಿ ಹೋಗಿದ್ದಾಗ ಕೆಲವು ಹೆಂಗಸರು ಹೇಳಿದರು, ನಮಗೆ ರೋಡು ಇಲ್ಲದಿದ್ದರೂ ಚಿಂತೆ ಇಲ್ಲ, ಚರಂಡಿ ಇಲ್ಲದಿದ್ದರೂ ಚಿಂತೆ ಇಲ್ಲ ಆದರೆ ನಮಗೆ ಕಕ್ಕಸನ್ನು ಕಟ್ಟಿಸಿಕೊಡಿ ಎಂದು. 2-3 ವರ್ಷವಾದರೂ ಇನ್ನೂ ನೀವು ಕಟ್ಟಿಸಲಿಲ್ಲ ಎಂದರೆ ಇದರ ಅರ್ಥ ಏನು? ನನಗನಿಸುತ್ತದೆ, ಆ ಜನರ ಬಗ್ಗೆ ನಿಮಗೆ ಕನಿಕರ ಇಲ್ಲ, ಆ ಹೆಂಗಸರ ಬಗ್ಗೆ ನಿಮಗೆ ಅನುಕಂಪ ಇಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಅಲ್ಲಿ ಜಾಗ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ; ನೀವು ಎಷ್ಟು ದಿವಸದಲ್ಲಿ ಇದನ್ನು ಮಾಡಿಸಿಕೊಡುತ್ತೀರೆಂದು ನನಗೆ ಖಡಾಖಂಡಿತವಾಗಿ ಹೇಳಬೇಕು; ಮತ್ತು ಅಷ್ಟು ದಿವಸದಲ್ಲಿ ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಹಾರಿಕೆ ಉತ್ತರವನ್ನು ಹೇಳಿದರೆ ನಾನು ಸುಮ್ಮನಿರುವುದಿಲ್ಲ. ಅಲ್ಲಿನ ಜನರನ್ನು ಹೋಗಿ ನೋಡಿದರೆ, ಆ ಹೆಂಗಸರ ಸ್ಥಿತಿಗತಿಗಳನ್ನು ಹೋಗಿ ನೋಡಿದರೆ ನಮ್ಮ ಕರುಳು ಕಿತ್ತು ಬರುತ್ತದೆ. ಅವರು ಹಗಲು ಹೊತ್ತು ಶೌಚಕ್ಕೆ ಎಲ್ಲಿಗೆ ಹೋಗಬೇಕು. ನಿಮ್ಮ ಮನೆಯ ಹೆಂಗಸರಿಗೇ ಈ ಪರಿಸ್ಥಿತಿ ಇದ್ದರೆ ನೀವು ಏನು ಮಾಡುತ್ತಿದ್ದಿರಿ ಹನುಮೇಗೌಡರೆ ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಏನುಹೇಳಬೇಕು.

ಛೇರ್ಮನ್ : ಕಟ್ಟಿಸಿಕೊಡಬೇಕೆಂದಲ್ಲವೇ ನೀವು ಕೇಳುತ್ತಿರುವುದು?

ಶ್ರೀ ಕೆ.ಹೆಚ್. ಹನುಮೇಗೌಡ : ದುಡ್ಡನ್ನು ಖರ್ಚುಮಾಡಿಲ್ಲದ ರೀತಿಯಲ್ಲಿ ನೀವು ಮಾತನಾಡುತ್ತಿದ್ದೀರಿ. 30 ಲಕ್ಷ ರೂ. ಗಳನ್ನು ಖರ್ಚುಮಾಡಿದ್ದೀರಿ, ಆದರೆ ಈ ಬೇಸಿಕ್ ನೆಸಿಸಿಟಿಯನ್ನು ನಿಮ್ಮ ಇಂಜಿನಿಯರ್‌ಗಳು ಏತಕ್ಕೆ ಮಾಡಲಿಲ್ಲ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

ಶ್ರೀ ಟಿ.ಬಿ. ಜಯಚಂದ್ರ :- ಸ್ವಾಮಿ, ಮಾನ್ಯ ಹನುಮೇಗೌಡರು ಎದ್ದು ನಿಂತಕೂಡಲೇ ನೀವು ಸ್ವಿಚ್‌ನ್ನು ಆಫ್ ಮಾಡಿದರೆ ನಾವು ನೆಮ್ಮದಿಯಿಂದಿರುತ್ತೇವೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ನಮ್ಮ ಅಧಿಕಾರಿಗಳು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಈಗಾಗಲೇ ನಾವು 30 ಲಕ್ಷ ರೂ.ಗಳನ್ನು ಖರ್ಚುಮಾಡಿದ್ದೇವೆ. ಮಾನ್ಯ ಸದಸ್ಯರು ಸ್ಥಳೀಯ ಶಾಸಕರಾಗಿದ್ದಾರೆ. ಅವರು ನಮಗೆ ಸಹಾಯ ಮಾಡಿ ಎಲ್ಲಾದರೂ ಖಾಸಗಿ ಜಾಗ ಅಥವಾ ಮುನಿಸಿಪಾಲಿಟಿ ಜಾಗವನ್ನು ಕೊಡಿಸಿದರೆ ಆದಷ್ಟು ಬೇಗ ಪಬ್ಲಿಕ್ ಟಾಯ್ಲೆಟ್‌ನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಎಮರ್ಜೆನ್ಸಿ ಅಕ್ವಿಸಿಷನ್ ಆಕ್ಟ್ ಪ್ರಕಾರ ಜಾಗವನ್ನು ಅಕ್ವೈರ್ ಮಾಡಿಕೊಳ್ಳಿ. ರೋಡಿಗೆ, ನಾಲೆಗಳಿಗೆ ಮಾಡಿಕೊಳ್ಳುತ್ತೀರಲ್ಲಾ ಅದೇ ರೀತಿ ಇದಕ್ಕೂ ಮಾಡಿ. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ, ಕೋಳಿ ಕೇಳಿ ಸಾಂಬಾರ ಅರೆಯುತ್ತಾರೆಯೇ? ನೀವು ಅವರನ್ನು ಕೇಳಿ ಮಾಡಬೇಕೆ? ಎಮರ್ಜೆನ್ಸಿ ಅಕ್ವಿಸಿಷನ್ ಆಕ್ಟ್ ಪ್ರಕಾರ ನಿಮಗೆ ಬೇಕಾದ 5-10 ಗುಂಟೆ ಜಾಗಗಳನ್ನು ಅಕ್ವೈರ್ ಮಾಡಿಕೊಳ್ಳಿ.

ಶ್ರೀ ಕೆ.ಜೆ. ಜಾರ್ಜ್ : ಎಮರ್ಜೆನ್ಸಿ ಅಕ್ವಿಸಿಷನ್ ಆಕ್ಟ್ ಪ್ರಕಾರ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎ .ಕೆ. ಅನಂತಕೃಷ್ಣ : ಮುನಿಸಿಪಾಲಿಟಿ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸಜೆಷನ್ ಕೊಡಬೇಕೆ? ಅಥವಾ ಕಾನೂನು ಮೂಲಕ ಹಕ್ಕು ಇದೆಯೇ. ಅಥವಾ ಇಲ್ಲವೆ?

ಶ್ರೀ ಕೆ.ಜೆ. ಜಾರ್ಜ್ : ತಮಗೆ ಗೊತ್ತಿರುವಂತೆ ಮುನಿಸಿಪಾಲಿಟಿ ಒಂದು ಅಟಾನಮಸ್ ಬಾಡಿ. ನಮಗೆ ಜಾಗ ಕೊಡಿ ಎಂದು ನಮ್ಮ ಅಧಿಕಾರಿಗಳು ಮುನಿಸಿಪಾಲಿಟಿಯವರ ಜೊತೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಖಾಸಗೀ ಜಮೀನು ಎಲ್ಲಾದರೂ ಇದ್ದರೆ ಅದನ್ನು ತೋರಿಸಿದರೆ ನಾವು ಕ್ರಯಕ್ಕೆ ತೆಗೆದುಕೊಳ್ಳುವುದಕ್ಕೂ ಕೂಡ ಸಿದ್ಧವಾಗಿದ್ದೇವೆ. ಅದನ್ನು ಕೊಡಿಸಿ ಎಂದು ನಾವು ಕೇಳುತ್ತಿದ್ದೇವೆ. ಈಗಾಗಲೇ ಮುನಿಸಿಪಾಲಿಟಿ ಜಾಗಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಯಾವುದೇ ಸ್ಕೀಂನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ನಿಮ್ಮ ಇಂಜನಿಯರ್‌ಗಳು ಪ್ಲಾನ್ ಮಾಡಿರುತ್ತಾರೆ. ಇಂಜನಿಯರ್‌ಗಳೆಂದರೆ ಅವರೇನೂ ಲೇ-ಮೆನ್ ಅಲ್ಲ. ಟೌನ್ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇದೆ. ಇಂಜಿನಿಯರ್‌ಗಳು ಪ್ಲಾನ್ ಮಾಡುವಾಗ ಇಲ್ಲಿ ಕಕ್ಕಸು ಇರಬೇಕೆಂದು ಅವರಿಗೆ ಗೊತ್ತಾಗುವುದಿಲ್ಲವೆ? ಇದು ಗೊತ್ತಾಗಲಿಲ್ಲ ಎಂದರೆ ಅವರು ಎಂಥ ಇಂಜಿನಿಯರುಗಳು?

ಶ್ರೀ ಕೆ.ಜೆ. ಜಾರ್ಜ್ : ಇದು ಟೌನ್ ಪ್ಲಾನಿಂಗ್ ವಿಚಾರ ಅಲ್ಲ. ಮಾನ್ಯ ಸದಸ್ಯರಾದ ಹನುಮೇಗೌಡರು ಸ್ಲಂ ವಿಚಾರದಲ್ಲಿ ಮಾತನಾಡುತ್ತಿದ್ದಾರೆ. ಅಲ್ಲೀ ಪ್ಲಾನ್ ಪ್ರಕಾರ ಮಾಡಿರುವುದಿಲ್ಲ, ಅಲ್ಲಿ ಜಾಗ ಇರುವುದಿಲ್ಲ.

ಶ್ರೀ ಎನ್. ಶಫಿ ಅಹ್ಮದ್ : ಯು.ಬಿ.ಎಸ್.ನಿಂದ ಹಣವನ್ನು ಇಡೀ ರಾಜ್ಯದಲ್ಲೆಲ್ಲಾ ಖರ್ಚು ಮಾಡುತ್ತಿದ್ದೀರಿ. ಆದರೆ ಯುಬಿಎಸ್‌ನ ಮೂಲಕ ಖರ್ಚು ಮಾಡುವುದಕ್ಕೆ ಬದಲು ಸ್ಲಂ ಬೋರ್ಡ್‌ಗೆ

ಇದೇ ಹಣವನ್ನು ಕೊಟ್ಟು ಎಲ್ಲೆಲ್ಲಿ ಜಾಗ ಇರುತ್ತದೆ, ಎಲ್ಲೆಲ್ಲಿ ಟಾಯ್ಲೆಟ್ಸ್‌ನ್ನು ಕಟ್ಟಿಸುವುದಕ್ಕೆ ಸಾಧ್ಯವಿರುತ್ತದೆ ಅಂಥ ಕಡೆ ಇಂಡಿವಿಜುಯಲ್ ಲ್ಯಾವೆಟ್ರಿಗಳನ್ನು ಕಟ್ಟಿಸಿಕೊಟ್ಟರೆ ಒಳ್ಳೆಯದು. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಜಿ. ಜಾರ್ಜ್ : ಇದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಕೆಳಗಡೆ ಬರುವುದಿಲ್ಲ. ಮುನಸಿಪಾಲಿಟಿಯವರಿಗೆ ಬರುತ್ತದೆ. ಮುನಸಿಪಾಲಿಟಿಗಳಿಗೆ ಆದೇಶವನ್ನು ಕೊಡುತ್ತೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇದು ಹಾಸನ ಜಿಲ್ಲೆಗೆ ಸಂಬಂಧಪಟ್ಟ ವಿಚಾರವಲ್ಲ. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಅನೇಕ ಕಡೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಲ್ಯಾವೆಟ್ರಿಗಳನ್ನು ಕಟ್ಟುವ ವಿಚಾರದಲ್ಲಿ ಮುನಸಿಪಾಲಿಟಿಯವರ ಅನುಮತಿಯನ್ನು ಪಡೆದು ಲ್ಯಾವೆಟ್ರಿಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ಪತ್ರ ವ್ಯವಹಾರ ಆಗುವವರೆಗೆ ಬಹುಶಃ ನಾವು ಇಲ್ಲಿ ಶಾಸಕರಾಗಿರುತ್ತೇವೆಯೋ ಇಲ್ಲವೋ ಎನ್ನುವ ಅನುಮಾನ ನನಗಂತೂ ಹುಟ್ಟಿದೆ. ಕಾರಣವೇನೆಂದರೆ ಅನೇಕ ನಗರ ಪ್ರದೇಶಗಳಲ್ಲಿ ಏನು ಸ್ಲಮ್‌ಗಳು ಬಂದಿವೆ ಇವು ಮುನಸಿಪಾಲಿಟಿ ಜಾಗಗಳಲ್ಲಿ ಬಂದಿರುವುದಿಲ್ಲ. ಬಂದಿರುವುದು ಅನೇಕ ಕಡೆ ರೆವಿನ್ಯೂ ಜಾಗದಲ್ಲಿ ಬಂದಿವೆ. ನಗರ ಪ್ರದೇಶಗಳಲ್ಲಿ ನಮ್ಮ ಸರಹದ್ದೆ ಗುರುತಿಸಿಲ್ಲ. ಇಂಥ ಕಡೆಗಳಲ್ಲಿ ಸ್ಲಮ್ ಬೆಳೆದಿರುವ ಜಾಗಗಳಲ್ಲಿ ಮುನಿಸಿಪಾಲಿಟಿಯವರ ಅನುಮತಿಯನ್ನು ಪಡೆದು ನೀವು ಲಾವೆಟ್ರಿಯವನ್ನು ಕಟ್ಟುತ್ತೇವೆಂದು ಹೇಳಿದರೆ ಅದು ಆಶ್ಚರ್ಯದ ಸಂಗತಿ. ಆದುದರಿಂದ ನನ್ನ ಸಲಹೆ ಬೋರ್ಡ್‌ನವರು ಮಾನ್ಯ ಮಂತ್ರಿಗಳಿಗೆ, ಅಂದರೆ ಸ್ಲಮ್ಸ್ ಎಲ್ಲಿದೆ ಅಲ್ಲಿ ಅವರೇ ನೇರವಾಗಿ ಸ್ಲಮ್ ಬೋರ್ಡ್‌ನವರು ಖಾಲಿ ಇರುವಂಥ ಜಾಗದಲ್ಲಿ ಲ್ಯಾವೆಟ್ರಿಯನ್ನು ಕಟ್ಟುವುದು ಒಳ್ಳೆಯದು. ರೆವಿನ್ಯೂ ಇಲಾಖೆಯವರ ಒಪ್ಪಿಗೆ ಪಡೆದು ಮಾಡುವುದರಲ್ಲಿ ಅರ್ಥವಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಶಿವರಾಮು : ಹಾಸನ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಜಾಗ ಕೊಡಲಿಕ್ಕೆ ಬಹುಶಃ ಸಮಸ್ಯೆ ಬಂದಿಲ್ಲ. ಏತಕ್ಕೆಂದರೆ ಪ್ರತಿ ಸೌಲಭ್ಯವನ್ನು ಅರ್ಬನ್ ಮಿನಿಸ್ಟರ್ ಕೊಡಬೇಕಾಗುತ್ತದೆ. ಕೊಡತಕ್ಕಂಥ ಕಾಲದಲ್ಲಿ ಕೆಲಸವನ್ನು ಮಾಡದೆಹೋದರೆ. ಭೂಮಿಯನ್ನು ಕೊಡದಿದ್ದರೆ ಆ ಕೆಲಸ ಮಾಡಲಿಕ್ಕೆ ನಿಮಗೆ ಸವಲತ್ತುಗಳನ್ನು ಕೊಡುವುದಿಲ್ಲವೆನ್ನತಕ್ಕಂಥ ಕಡೀಷನ್‌ನ್ನು ಮಾನ್ಯ ಸಚಿವರು ಹಾಕಿದರೆ ಏತಕ್ಕೆ ಮುನಿಸಿಪಾಲಿಟಿ ಪ್ರೆಸಿಡೆಂಟರು ಕೊಡುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಸಚಿವರಿಗೆ ಹೇಳುತ್ತೇನೆ ತಮ್ಮ ಮೂಲಕ ಮುನಸಿಪಲ್ ಪ್ರೆಸಿಡೆಂಟರ್ 15 ದಿವಸಗಳೊಳಗೆ ಜಾಗ ಕೊಡದಿದ್ದರೆ ಸರ್ಕಾರದಿಂದ ಬರತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಕೊಡುವುದಿಲ್ಲ ಎಂದು ಕಂಡೀಷನ್ಸ್ ಹಾಕಿ. ನಿಮ್ಮದು ಅಟಾನಮಸ್ ಬಾಡಿ ಇರಬಹುದು. ಮುನಸಿಪಲ್ ಪ್ರೆಸಿಡೆಂಟ್‌ರು ಜಾಗವನ್ನು ಕೊಡುತ್ತಾರೆ. ಜಾಗ ಪಡೆದು ಕೆಲಸವನ್ನು ತಾವು ಮಾಡಬೇಕು. ಏತಕ್ಕೆಂದರೆ ಇದು ಒಂದು ಸಾಮಾನ್ಯ ಮನುಷ್ಯನಿಗೆ ಕನಿಷ್ಠ ಸೌಲಭ್ಯವನ್ನು ಒದಗಿಸತಕ್ಕಂಥ ಒಂದು ಪ್ರಶ್ನೆ. ಇದನ್ನು ಮಾನ್ಯ ಸಚಿವರು ಸೀರಿಯಸ್ ಆಗಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಗೀರ್ ಅಹಮದ್‌ರವರು ಹೇಳಿದಹಾಗೆ ಸ್ಲಮ್ ಒಳಗಡೆ ಜಾಗವಿದ್ದರೆ ನಾವು ಕೊಡಬಹುದು. ಅದಕ್ಕೆ ಮುನಸಿಪಲ್ ಪರ್ಮಿಷನ್ ಬೇಕಾಗಿಲ್ಲ. ಆದರೆ ಸ್ಲಮ್ ಹೊರಗಡೆ ಇರುವ ಜಾಗ ಮುನಸಿಪಾಲಿಟಿ ಜಾಗವಿದ್ದರೆ ಮುನಸಿಪಾಲಿಟಿಯವರು

ಕೊಡಬೇಕಾಗುತ್ತದೆಂದು ಹೇಳುತ್ತಿದ್ದೇನೆ. ನಾನು ಈಗಲೇ ಅವರೊಟ್ಟಿಗೆ ವ್ಯವಹಾರ ಮಾಡುತ್ತೇನೆ. ಆದೇಶ ಕೊಡಲಿಕ್ಕೆ ಬರುವುದಾದರೆ ಆದೇಶವನ್ನು ಕೊಡುತ್ತೇನೆ.

ಯಾದಗಿರಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ

1501. ಶ್ರೀ ಡಾ: ಎ.ಬಿ. ಮಲಕರೆಡ್ಡಿ (ಯಾದಗಿರಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಯಾದಗಿರಿ ಪಟ್ಟಣಕ್ಕೆ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಪ್ರಗತಿಯಲ್ಲಿರುವ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರೈಸಲಾಗುವುದು?

3) ಬರುವ ಬೇಸಿಗೆ ಕಾಲಕ್ಕೆ ಕುಡಿಯುವ ನೀರನ್ನು ಒದಗಿಸಲು ಈ ಬಗ್ಗೆ ಸರ್ಕಾರ ಮಾಡಿರುವ ಯೋಜನೆ ಏನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಹೌದು.

2) ಮೇ 1992ರ ಅಂತ್ಯದಲ್ಲಿ ಪೂರೈಸಲಾಗುವುದು.

3) ಕೆ.ಇ.ಬಿ. ಯವರಿಂದ ವಿದ್ಯುಚ್ಛಕ್ತಿ ದೊರತಕೂಡಲೇ ಯೋಜನೆಯನ್ನು ಕಾರ್ಯಾರಂಭ ಮಾಡಲಾಗುತ್ತದೆ. ಹಾಗಿಲ್ಲದಿದ್ದಲ್ಲಿ ರೂ. 4.50 ಲಕ್ಷಗಳ ವೆಚ್ಚದಲ್ಲಿ 15 ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

ಡಾ: ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಯಾದಗಿರಿ ನಗರಕ್ಕೆ ಕುಡಿಯುವ ನೀರಿನ ಸರಬರಾಜು ವಿಷಯದಲ್ಲಿ ಈಗಾಗಲೇ ನಾನು ಮೂರನೆ ಸಲ ಪ್ರಸ್ತಾಪ ಮಾಡುತ್ತಿರುವುದು. ಪ್ರತಿ ವರ್ಷ ಸರ್ಕಾರದವರು ಹೇಳುತ್ತಿದ್ದಾರೆ, ಡಿಸೆಂಬರ್ 1990ರ ಅಂತ್ಯದಲ್ಲಿ ಕೊಡುತ್ತೇವೆಂದು. ಆಮೇಲೆ 1991ರಲ್ಲಿ ನಾನು ಡಿಮ್ಯಾಂಡ್ಸ್ ಮೇಲೆ ಭಾಷಣ ಮಾಡುವಾಗ ಕೇಳಿದ್ದಕ್ಕೆ 1991ರ ಅಂತ್ಯದಲ್ಲಿ ಕೊಡುತ್ತೇವೆಂದು ಹೇಳಿದರು. ಈಗ ಎರಡು ವರ್ಷ ಮುಗಿದು ಹೋಯಿತು. ಈಗ ಉತ್ತರದಲ್ಲಿ 1992ರ ಮೇ ತಿಂಗಳಲ್ಲಿ ನೀರನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಎರಡು ವರ್ಷದ ಅಂತರದಲ್ಲಿ ಈ 1992ನೇ ಮೇಗೆ ನೀರನ್ನು ಸಪ್ಲೈ ಮಾಡುತ್ತೇವೆಂದು ಹೇಳಿದರೂ ಕೂಡ ಇದು ವಾಸ್ತವಿಕವಾಗಿ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೇ. ನೀರು ಸರಬರಾಜು ಭೀಮಾನದಿಯಿಂದ ಆಗತಕ್ಕಂಥದ್ದು ಇರುತ್ತದೆ. ಭೀಮಾನದಿ ಮಹಾರಾಷ್ಟ್ರದಿಂದ ಬರುತ್ತದೆ. ಈ ಎರಡು ವರ್ಷಗಳ ಅಂತರದಲ್ಲಿ ಅವರು ಯಥೇಚ್ಛವಾಗಿ ಬ್ಯಾರೇಜ್ ಕಟ್ಟಿದ್ದಾರೆ. ಅವರು ಬ್ಯಾರೇಜ್ ಕಟ್ಟಿರುವುದರಿಂದ ವಾಟರ್ ಫ್ಲೋ ಆಗುವುದಿಲ್ಲ. 1992 ಮೇ ಗೆ ನೀರು ಕೊಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ತಾವು ಕೊಡುತ್ತೇವೆಂದು ಒಪ್ಪಿಕೊಂಡರೂ ಕೂಡ ಹೊಳೆಯಲ್ಲಿ ನೀರೇ ಇರುವುದಿಲ್ಲ. ನೀರಿಲ್ಲದಿರುವಾಗ ಯಾವರೀತಿ ನೀರನ್ನು ಕೊಡುತ್ತೀರಿ ಎಂಬುದನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಸಭಾಧ್ಯಕ್ಷರೇ ಈ ಪ್ರಾಜೆಕ್ಟ್ ಸಂಪೂರ್ಣವಾಗಿದೆ. ನಾವು ಎಲೆಕ್ಟ್ರಿಸಿಟಿಯವರಿಗೆ ದುಡ್ಡನ್ನು ಕೂಡ ಕಟ್ಟಿದ್ದೇವೆ. ಎನರ್ಜೈಸ್ ಮಾಡಿದಕೂಡಲೇ ನಾವು ಸ್ಟಾರ್ಟ್ ಮಾಡುತ್ತೇವೆ. ನದಿಯಲ್ಲಿ ನೀರು ಇದೆಯೋ ಇಲ್ಲವೋ ಎನ್ನುವ ಪ್ರಶ್ನೆ ಅದನ್ನು ನಾವು ನೋಡಬೇಕಾಗುತ್ತದೆ. ನದಿಯಲ್ಲಿ ನೀರೇ ಇಲ್ಲವೆಂದರೆ ಆ ಪ್ರಾಜೆಕ್ಟನ್ನು ತೆಗೆದುಕೊಳ್ಳಬಾರದಾಗಿತ್ತು. ನಾನು ಬೇಕಾದರೆ ಅದನ್ನು ತೆಗೆಸಿಬಿಡುತ್ತೇನೆ.

ಡಾ. ಎ.ಬಿ. ಮಲಕರೆಡ್ಡಿ : ಸಮಸ್ಯೆ ಉದ್ಭವವಾಗಿರುತಕ್ಕಂಥ ಬೇಸಿಗೆಯಲ್ಲಿ ಈ ವರ್ಷ ಬೇಸಿಗೆಯಲ್ಲಿ ನೀರು ಫ್ಲೋ ಇಲ್ಲ. ಕಟ್ಟಿ ಆಗಿಬಿಟ್ಟಿದೆ. ಹೋದ ವರ್ಷ ಒಂದು ಸೂಚನೆ ಕೊಟ್ಟಿದ್ದೆ. ಆದೇನೆಂದರೆ ಒಂದು ಬ್ಯಾರೇಜ್ ಕಟ್ಟಿದರೆ ಎರಡು ಫುಟ್ ಮೂರು ಫುಟ್ ನೀರು ಶೇಖರಣೆ ಮಾಡಬಹುದಾಗಿತ್ತು, ಮೇ ತಿಂಗಳಲ್ಲಿ ಎಲೆಕ್ಟ್ರಿಸಿಟಿ ತೆಗೆದುಕೊಂಡು ನೀರನ್ನು ಕೊಡಬಹುದಾಗಿತ್ತು. ಈಗ ಬೋರ್‌ವೆಲ್ ಸಲುವಾಗಿ 5-6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನೆಲ್ಲಾ ನೋಡಿದರೆ ಕೇವಲ ಆಶ್ವಾಸನೆಗಳ ಸುರಿಮಳೆ ಆಗುತ್ತಿದೆಯೇ ಹೊರತು ನಮ್ಮ ಕೆಲಸಗಳು ಆಗುತ್ತಿಲ್ಲ. ಯಾದಗಿರಿ ಎತ್ತರ ಪ್ರದೇಶದಲ್ಲಿದೆ. ಅಲ್ಲಿ ಬೋರ್‌ವೆಲ್ ಹಾಕಿದರೂ ನೀರು ಸಿಗುವುದಿಲ್ಲ. The town is situated in the hill. There is no water available there. ನದಿಗೆ ಬ್ಯಾರೇಜ್ ಕಟ್ಟುವುದಾದರೆ ಕೇವಲ 3 ತಿಂಗಳಲ್ಲಿ ಕಟ್ಟಬಹುದಾಗಿತ್ತು. ಆ ಬಗ್ಗೆ ಏನಾದಾರೂ ಸೂಚನೆ ಇದೆಯೇ? ಈವರೆಗೆ ಏತಕ್ಕೆ ಕಟ್ಟಿಲ್ಲ?

ಶ್ರೀ ಕೆ.ಜೆ. ಜಾರ್ಜ್ : ಈಗ ನದಿಯಲ್ಲಿ ಬೇಕಾದಷ್ಟು ನೀರು ಇದೆ. ನೀರು ಕಡಿಮೆಯಾದರೆ ಟೆಂಪರರಿಯಾಗಿ ಮುಂದೆ ಬ್ಯಾರೇಜ್ ಕಟ್ಟತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಕೆ. ಗಂಗಾಧರ ಗೌಡ : ಇದೇ ರೀತಿ ಸಮಸ್ಯೆ ನಮ್ಮ ರಾಜ್ಯದ ಬೇರೆ ಬೇರೆ ಕಡೆಯೂ ಇದೆ. ನಮ್ಮ ಬೆಳ್ತಂಗಡಿಯಲ್ಲಿ ಕೂಡ ಇದೇ ರೀತಿ ಸಮಸ್ಯೆ ಇದೆ. ಇಲಾಖೆಯವರು 40-50 ಲಕ್ಷರೂಪಾಯಿಗಳನ್ನು ಖರ್ಚು ಮಾಡಿ ನೀರಿಲ್ಲದ ಟ್ಯಾಂಕ್ ಕಟ್ಟುವುದು, ಪೈಪ್ ಹಾಕುವುದು ಬಹಳ ಬೇಸರದ ವಿಷಯ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದೇ ರೀತಿ ಯೋಜನೆ ಮಾಡಿದ್ದಾರೆ. ಅದಕ್ಕೆ 50 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ ಹೊಳೆಯಲ್ಲಿ ನೀರಿಲ್ಲ. ಗೋಲ್‌ಗುಂಬಸ್ ಹಾಗೆ ಟ್ಯಾಂಕ್ ಕಟ್ಟಿದರೆ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಸರ್ಕಾರಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನಾನು 2-3 ಸಾರಿ ಈ ಬಗ್ಗೆ ಪ್ರಶ್ನೆ ಕೇಳಿದರೂ ಪರಿಹಾರ ಇಲ್ಲ. ಅಧಿಕಾರಿಗಳು ನೀರು ಉಂಟು ಎಂದು ಹೇಳುತ್ತಾರೆ. ಸ್ಥಳೀಯ ಶಾಸಕರು ಹೊಳೆಯಲ್ಲಿ ನೀರು ಇಲ್ಲವೆಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ? ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ 50 ಲಕ್ಷ ರೂಪಾಯಿ ಯೋಜನೆ ಮಾಡಿದ್ದರೂ ಮಾರ್ಚ್ ಏಪ್ರಿಲ್‌ನಲ್ಲಿ ನೀರು ಇಲ್ಲ. ಮಳೆಗಾಲದಲ್ಲಿ ಹೊಳೆಯಲ್ಲಿ ನೀರಿದ್ದರೆ ಆಗ ಏನು ಮಾಡುತ್ತೀರಿ?

ಶ್ರೀ ಕೆ.ಜೆ. ಜಾರ್ಜ್ : ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಚವಾಣ್ : ಕುಡಿಯುವ ನೀರಿನ ಯೋಜನೆ ಸಲುವಾಗಿ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ? ಅವರು ಬಹಳ ಸ್ಲೋ ಆಗಿ ಪ್ರೋಸೆಸ್ ಮಾಡುತ್ತಿದ್ದಾರೆ. ಮಂತ್ರಿಗಳು ಬೇಗನೆ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಂತ್ರಿಗಳು ಚುರುಕಿದ್ದಾರೆ, ಆದರೆ ಇಲಾಖೆ ಚುರುಕಿಲ್ಲ.

ಶ್ರೀ ಬಿ.ಎಸ್. ಚವಾಣ್ : ಈ ಯೋಜನೆಯನ್ನು 3-4 ವರ್ಷಗಳವರೆಗೆ ಮಾಡಿಕೊಂಡು ಹೋದರೆ ಸಾರ್ಥಕವಾಗುವುದಿಲ್ಲ. ಈ ಯೋಜನೆಯನ್ನು ಬೇಗನೆ ಪೂರ್ಣ ಮಾಡಿ ನೀರು ಕೊಡಿಸುತ್ತೀರಾ?

ಶ್ರೀ ಕೆ.ಜೆ. ಜಾರ್ಜ್ : ಇದರಲ್ಲಿ ಹಲವಾರು ತೊಂದರೆಗಳಿವೆ. ನಗರ ಪ್ರದೇಶಗಳಲ್ಲಿ ಸುಮಾರು 200 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಕಳೆದ ವರ್ಷ 22 ಕೋಟಿ ರೂಪಾಯಿಗಳನ್ನು ವ್ಯವಸ್ಥೆ ಮಾಡಿದ್ದರು. ಮುಖ್ಯ ಮಂತ್ರಿಗಳು ಹತ್ತು ಕೋಟಿ ರೂಪಾಯಿ ಹೆಚ್ಚು ಮಾಡಿ 32 ಕೋಟಿ ರೂಪಾಯಿ ಮಾಡಿದರು. ಮೊದಲಿಲ್ಲ 10-12 ಕೋಟಿ ರೂಪಾಯಿಗಳನ್ನು ವರ್ಷಕ್ಕೆ ಇಡುತ್ತಿದ್ದರು. ನಮ್ಮ ಮುಖ್ಯ ಮಂತ್ರಿಗಳು ಬರುವ ವರ್ಷ 50 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಒದಗಿಸಿದ್ದಾರೆ. ಈಗ ದುಡ್ಡು ಬೇಕಾದಷ್ಟು ಇಟ್ಟುಕೊಂಡಿದ್ದೇವೆ. ಅದರಿಂದ ಆದಷ್ಟು ಬೇಗ ಎಲ್ಲಾ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ತೊಂದರೆ ಏನು ಬರುತ್ತಾದೆಂದರೆ ಮುನಿಸಿಪಾಲಿಟಿಯವರು ಅವರ ಭಾಗದ ಹಣವನ್ನು ಕೊಡಬೇಕಾಗುತ್ತದೆ. ಅದನ್ನು ಎಷ್ಟೋ ಮುನಿಸಿಪಾಲಿಟಿವರು ಕೊಡುತ್ತಿಲ್ಲ. ಅವರು ಕೊಡದಿದ್ದರೆ ಕೆಲಸ ನಿಧಾನವಾಗುತ್ತದೆ. ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಯಾವ ಯಾವ ಮುನಿಸಿಪಾಲಿಟಿಗಳು ದುಡ್ಡು ಕೊಡಬೇಕು ಅವು ಆದಷ್ಟು ಬೇಗ ಕೊಟ್ಟರೆ ಎಲ್‌ಐಸಿ ಯಿಂದ, ಹುಡ್ಕೋದಿಂದ ಸಾಲ ತೆಗೆದು ಕುಡಿಯುವ ನೀರಿನ ಯೋಜನೆಗಳನ್ನು ಪೂರ್ತಿಗೊಳಿಸುವ ಕೆಲಸ ಮಾಡಬಹುದು.

ಶ್ರೀ ಎಂ. ಮಹಾದೇವ್ : ಮುನಿಸಿಪಾಲಿಟಿ ಕಡೆಯಿಂದ ಏನು ಹಣ ತುಂಬಬೇಕು ಆ ಹಣವನ್ನು ಕೊಟ್ಟರೆ ಕೆಲಸ ಜಲ್ದಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಎಷ್ಟೋ ಮುನಿಸಿಪಾಲಿಟಿಗಳು ಲಾಸ್‌ನಲ್ಲಿ ನಡೆಯುತ್ತಿವೆ. ವಾಟರ್ ಬಿಲ್, ಲೈಟ್ ಚಾರ್ಜ್ ಕಟ್ಟುವುದಕ್ಕಾಗುತ್ತಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಒಂದೊಂದು ಮುನಿಸಿಪಾಲಿಟಿಯ ಕರೆಂಟ್ ಚಾರ್ಜ್ ಭರ್ತಿ ಮಾಡಿ ಲೈಟ್ ಕನೆಕ್ಷನ್ ತೆಗೆದುಕೊಂಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಮತ್ತು ಮುನಿಸಿಪಾಲಿಟಿಯವರು ಹಣ ಕೊಡಲು ಅಶಕ್ತರಾಗಿದ್ದಂಥ ಸಂದರ್ಭದಲ್ಲಿ ಸರ್ಕಾರವೇ ಮುಂದೆ ಬಂದು ಸಹಾಯ ಮಾಡಿ ಆ ಹಣವನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆಕ್ಟ್ರಾಯ್ ಬದಲು ಎಂಟ್ರಿ ಟ್ಯಾಕ್ಸ್ ಹಾಕಬೇಕೆಂದು ಈ ಹಿಂದೆಯೇ ಪಾಸ್ ಆದ ಮಸೂದೆಗೆ ಪ್ರೆಸಿಡೆಂಟ್ ಅಪ್ರೂವಲ್ ಆಗಿದೆ. ಇದರಿಂದ ಹೆಚ್ಚಿನ ಹಣ ಸಹಾಯ ಮುನಿಸಿಪಾಲಿಟಿಗೆ ಬರುತ್ತದೆ. ಆ ಹಣ ಸಹಾಯವನ್ನು ಉಪಯೋಗಿಸಿಕೊಂಡು ಕುಡಿಯುವ ನೀರಿನ ಯೋಜನೆಗಳನ್ನು ಆದಷ್ಟು ಬೇಗ ಪೂರ್ತಿಗೊಳಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

ರಾಜ್ಯ ಸೇವೆಯಲ್ಲಿನ ಭಾರತ ಸರ್ಕಾರದ ಅಧಿಕಾರಿಗಳು

1504. ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ಸರ್ಕಾರದ ಯಾವ ಯಾವ ಇಲಾಖೆಯ ಅಧಿಕಾರಿಗಳು ರಾಜ್ಯ ಸರ್ಕಾರದ ಸೇವೆಯಲ್ಲಿ ಇರುವರು ಹಾಗೂ ಅವರ ಸಂಖ್ಯೆ ಎಷ್ಟು?

ಆ) ಇವರಲ್ಲಿ ರಾಜ್ಯ ಸರ್ಕಾರದ ಸೇವೆಯಿಂದ ಅಖಿಲ ಭಾರತ ಸೇವೆಗೆ ಪದೋನ್ನತಿ ಪಡೆದಿರುವವರ ಸಂಖ್ಯೆ ಎಷ್ಟು?

ಇ) ಅಖಿಲ ಭಾರತ ಸೇವೆಗೆ ಸೇರಿರುವ ಅಧಿಕಾರಿಗಳು ಮೂಲತಃ ಯಾವ ಯಾವ ರಾಜ್ಯಗಳಿಗೆ ಸೇರಿದವರು?

ಈ) ಅಖಿಲ ಭಾರತ ಸೇವೆಯ ಅಧಿಕಾರಿಗಳು ರಾಜ್ಯ ಸರ್ಕಾರದ ಸೇವೆಗೆ ನೇಮಕಾತಿಗೊಳ್ಳಲು ಕೇಂದ್ರ ಸರ್ಕಾರ ಸೂಚಿಪತ್ರವೇನಾದರೂ ನೀಡಿದೆಯೇ (ಅಗತ್ಯ ಆದೇಶ ಪತ್ರವಿದ್ದಲ್ಲಿ ಲಗತ್ತಿಸುವುದು)

ಉ) ರಾಜ್ಯ ಸರ್ಕಾರದ ಸೇವೆಯಲ್ಲಿರುವ ಹಿರಿಯ ಅಧಿಕಾರಿಗಳಿಗೆ ಅಖಿಲ ಭಾರತ ಸೇವೆಗೆ ಪದೋನ್ನತಿ ಮಾಡಲು ಯಾವ ಮಾನದಂಡವನ್ನು ರೂಪಿಸಿಕೊಂಡಿದೆ?

ಊ) 1987 ರಿಂದ ಇಂದಿನವರೆವಿಗೂ ಯಾವ ಯಾವ ಇಲಾಖೆಯ ಯಾವ ಯಾವ ಅಧಿಕಾರಿಗಳು ಅಖಿಲ ಭಾರತ ಸೇವೆಗೆ ಪದೋನ್ನತಿ ಪಡೆದು ಸೇವೆ ಸಲ್ಲಿಸುತ್ತಿರುವರು ಹಾಗೂ ಅವರು ನಿರ್ವಹಿಸುತ್ತಿರುವ ಹುದ್ದೆ ಯಾವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಲಭ್ಯವಿರುವ ಮಾಹಿತಿಯ ಪ್ರಕಾರ ಭಾರತ ಸರ್ಕಾರದ ವಾರ್ತಾ ಇಲಾಖೆಗೆ ಸೇರಿದ್ದ ದೂರದರ್ಶನ ಕೇಂದ್ರದ ಅಧಿಕಾರಿಯೊಬ್ಬರು ರಾಜ್ಯ ಸರ್ಕಾರದ ಸೇವೆಯಲ್ಲಿ ಇರುವರು. ಅವರ ಸಂಖ್ಯೆ -ಒಂದು (1).

ಆ) ಯಾರೂ ಇಲ್ಲ.

ಇ) ಕರ್ನಾಟಕ. ಕೇರಳ. ಪಂಜಾಬ್. ತಮಿಳುನಾಡು. ಪಶ್ಚಿಮ ಬಂಗಾಳ. ಉತ್ತರ ಪ್ರದೇಶ. ಆಂಧ್ರ ಪ್ರದೇಶ. ಆಸ್ಸಾಂ. ಮಹಾರಾಷ್ಟ್ರ. ಒರಿಸ್ಸಾ. ಮಿಜೋರಾಮ್. ಗುಜರಾತ್. ಗೋವಾ. ಮಧ್ಯಪ್ರದೇಶ. ಬಿಹಾರ. ಹರಿಯಾಣ. ಹಿಮಾಚಲ ಪ್ರದೇಶ. ಮಣಿಪುರ. ರಾಜಸ್ಥಾನ. ದೆಹಲಿ.

ಈ) ಇಲ್ಲ.

ಉ) 1) ಭಾರತೀಯ ಆಡಳಿತ ಸೇವೆ (ಬಡ್ತಿ ಮೇಲೆ ನೇಮಕಾತಿ) ರೆಗ್ಯುಲೇಷನ್ 1955.

2) ಭಾರತೀಯ ಆಡಳಿತ ಸೇವೆ (ಆಯ್ಕೆ ಮೇಲೆ ನೇಮಕಾತಿ) ರೆಗ್ಯುಲೇಷನ್ 1956.

3) ಭಾರತೀಯ ಪೋಲೀಸು ಸೇವೆ (ಬಡ್ತಿ ಮೇಲೆ ನೇಮಕಾತಿ) ರೆಗ್ಯುಲೇಷನ್ 1955.

4) ಭಾರತೀಯ ಅರಣ್ಯ ಸೇವೆ (ಬಡ್ತಿ ಮೇಲೆ ನೇಮಕಾತಿ) ರೆಗ್ಯುಲೇಷನ್ 1966.

ಊ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ - 1

1987 ರಿಂದ ಇಂದಿನವರೆವಿಗೂ ಅಖಿಲ ಭಾರತ ಸೇವೆಗೆ ಪದೋನ್ನತಿ ಹೊಂದಿದ ಅಧಿಕಾರಿಗಳ ವಿವರ

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು	ಸೇವೆ ಸಲ್ಲಿಸುತ್ತಿದ್ದ ಇಲಾಖೆ / ಸೇವೆ	ನಿರ್ವಹಿಸುತ್ತಿರುವ ಹುದ್ದೆ
1	2	3	4
	ಐ.ಎ.ಎಸ್. ಅಧಿಕಾರಿಗಳು		
	ಶ್ರೀಯುತರುಗಳಾದ		
1.	ಪಿ. ನಾಗೇಶ್ವರ ರಾವ್	ವಾಣಿಜ್ಯ ತೆರಿಗೆ	ಸದಸ್ಯರು, ಕೆ.ಎ.ಟಿ. ಬೆಂಗಳೂರು
2.	ಎ.ಎ. ದೇಸಾಯಿ	ಸಹಕಾರ ಇಲಾಖೆ	ಜಿಲ್ಲಾಧಿಕಾರಿಗಳು, ಬೆಂಗಳೂರು (ಗ್ರಾಮಾಂತರ) ಜಿಲ್ಲೆ, ಬೆಂಗಳೂರು
3.	ಸಿ. ಚಿಕ್ಕಣ್ಣ	ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	ಯುವಜನಸೇವಾ ನಿರ್ದೇಶಕರು ವಾಣಿಜ್ಯ ಇಲಾಖೆ, ಬೆಂಗಳೂರು
4.	ಅರವಿಂದ ಜಿ. ರಸ್‌ಬೂಟ್	ಕೆ.ಎ.ಎಸ್.	ರಿಜಿಸ್ಟ್ರಾರ್, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ
5.	ಜಯಕರ್ ಜೆರೋಮೆ	-"-	ರಾಜ್ಯಪಾಲರ ಕಾರ್ಯದರ್ಶಿ ಬೆಂಗಳೂರು
6.	ಅಶೋಕ್ ವಿ. ಡೇವಿಡ್	-"-	ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ
7.	ಎಂ.ಜಿ. ಹಾಲಪ್ಪನವರ್	-"-	ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ
8.	ಟಿ.ವೈ. ನಯಾಜ್ ಅಹ್ಮದ್	ಅಭಿವೃದ್ಧಿ ಇಲಾಖೆ	ನಿರ್ದೇಶಕರು, ಎಸ್‌ಇಪಿ ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು
9.	ಶ್ರೀಮತಿ ಆರ್.ಎಸ್. ಸುಜಾತ	ಕೆ.ಎ.ಎಸ್.	ನಿರ್ದೇಶಕರು, ಕರ್ನಾಟಕ ಕೋ-ಆಪರೇಟಿವ್ ಆಡಿಟ್, ಬೆಂಗಳೂರು
10.	ಟಿ. ತಿಮ್ಮೇಗೌಡ	-"-	ಜಿಲ್ಲಾಧಿಕಾರಿ, ಕೋಲಾರ
11.	ಸದಾಶಿವಯ್ಯ	-"-	ಜಿಲ್ಲಾಧಿಕಾರಿ, ಶಿವಮೊಗ್ಗ
12.	ಎ.ಎಸ್. ಶ್ರೀಕಾಂತ್	-"-	ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ
13.	ವೀರಭದ್ರಾಚಾರಿ	ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	ಡೈರೆಕ್ಟರ್ ಆಫ್ ಮೈನ್ ಅಂಡ್ ಜಿಯೋಲಾಜಿ, ಬೆಂಗಳೂರು.
14.	ಎಂ.ಕೆ. ಶಂಕರಲಿಂಗೇಗೌಡ	ಕೆ.ಎ.ಎಸ್.	ಜಿಲ್ಲಾಧಿಕಾರಿ, ಧಾರವಾಡ
15.	ಸಿದ್ದಯ್ಯ	ಕೆ.ಎ.ಎಸ್.	ಜಿಲ್ಲಾಧಿಕಾರಿ, ಮೈಸೂರು
16.	ಸಿ.ಆರ್. ಚಿಕ್ಕಮಠ್	-"-	ಜಿಲ್ಲಾಧಿಕಾರಿ, ಬೆಳಗಾವಿ

1	2	3	4
17.	ಕೆ.ಎಸ್. ಮಂಜುನಾಥ್	ಕೆ.ಎ.ಎಸ್.	ಉಪಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ, ಗುಲ್ಬರ್ಗಾ
18.	ಲುಕೋಸ್ ವಲ್ಲಥರಾಯ್	-"-	ಜಿಲ್ಲಾಧಿಕಾರಿ, ಹಾಸನ
19.	ಬಿ.ಹೆಚ್. ಮಂಜುನಾಥ್	-"-	ಯೋಜನೆ ಮತ್ತು ಸಾಂಸ್ಥಿಕ ಹಣಕಾಸು ಸಚಿವರ ಆಪ್ತಕಾರ್ಯದರ್ಶಿ, ಬೆಂಗಳೂರು
20.	ಸಿ. ಕೃಷ್ಣಪ್ಪ	-"-	ಜನಗಣತಿಯ ಉಪನಿರ್ದೇಶಕರು ಕರ್ನಾಟಕ, ಬೆಂಗಳೂರು.
21.	ಐ.ಎಂ. ವಿಠಲಮೂರ್ತಿ	-"-	ಜಿಲ್ಲಾಧಿಕಾರಿ, ಬಿಜಾಪುರ
22.	ಕೆ. ಕೇಶವಾಚಾರಿ	-"-	ಉಪಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
23.	ಬಿ.ಕೆ. ವಿಶ್ವನಾಥನ್	-"-	ಜಂಟಿ ರಿಜಿಸ್ಟ್ರಾರ್, ಸಹಕಾರ ಇಲಾಖೆ ಬೆಂಗಳೂರು.
24.	ಕೆ.ಹೆಚ್. ಗೋಪಾಲಕೃಷ್ಣೇಗೌಡ	-"-	ನಿರ್ದೇಶಕರು, ಸರಕು ಖರೀದಿ ಇಲಾಖೆ ಬೆಂಗಳೂರು
25.	ಮಹಮ್ಮದ್ ಸನಾವುಲ್ಲಾ	-"-	ಮುಖ್ಯಕಾರ್ಯದರ್ಶಿ, ಜಿಲ್ಲಾ ಪರಿಷತ್ತು ಮಂಡ್ಯ
26.	ಜಿ.ವಿ. ರಾಮಚಂದ್ರ	-"-	ವಿಶೇಷ ಜಿಲ್ಲಾಧಿಕಾರಿ, (ಆರ್ ಅಂಡ್ ಎಂಎಸ್‌ಟಿಬಿಪಿ) ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
27.	ಬಿ. ಭೀಮಯ್ಯ	-"-	ಆಡಳಿತಾಧಿಕಾರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
28.	ಶ್ರೀಮತಿ ಟಿ. ಮುಕ್ತಾಂಬ	-"-	ಮುಖ್ಯಕಾರ್ಯದರ್ಶಿ, ಜಿಲ್ಲಾ ಪರಿಷತ್ತು ಕೋಲಾರ
	ಐ.ಪಿ.ಎಸ್. ಅಧಿಕಾರಿಗಳು		
1.	ಖಲೀಲ್ ಉರ್ ರೆಹಮಾನ್	ರಾಜ್ಯ ಪೊಲೀಸ್ ಸೇವೆ	ಪೊಲೀಸು ಮಹಾ ನಿರೀಕ್ಷಕರು (ಸಾಮಾನ್ಯ) ಸೇವೆ, ಬೆಂಗಳೂರು
2.	ಖಾಜಿ ಅಬ್ದುಲ್ ಹಫೀಜ್	-"-	ಪೊಲೀಸು ಅಧೀಕ್ಷಕರು, ಚಿಕ್ಕಮಗಳೂರು
3.	ಚಂದ್ರಶೇಖರ್. ಸಿ.	-"-	ಪೊಲೀಸು ಅಧೀಕ್ಷಕರು (ಗುಪ್ತವಾರ್ತೆ) ಬೆಂಗಳೂರು
4.	ಹರಿಕೃಷ್ಣ. ಟಿ.	-"-	ಪೊಲೀಸು ಅಧೀಕ್ಷಕರು, ಕೋಲಾರ ಜಿಲ್ಲೆ
5.	ಎಂ.ಕೆ. ನಾಗರಾಜ	-"-	ಪೊಲೀಸು ಅಧೀಕ್ಷಕರು, ರಾಯಚೂರು
6.	ಎಸ್. ರಾಮಕೃಷ್ಣ	-"-	ಪೊಲೀಸು ಅಧೀಕ್ಷಕರು, ಬಿಜಾಪುರ
7.	ಎಂ.ಆರ್. ಪೂಜಾರ್	-"-	ಪೊಲೀಸು ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು

1	2	3	4
8.	ಜಿ.ಎಂ. ಹಯಾತ್	ರಾಜ್ಯ ಪೊಲೀಸ್	ಪೊಲೀಸು ಅಧೀಕ್ಷಕರು, ಕೆ.ಜಿ.ಎಫ್.
9.	ಎಂ.ಎಫ್. ಪಾಷಾ	-"-	ಪೊಲೀಸು ಅಧೀಕ್ಷಕರು (ಗುಪ್ತವಾರ್ತೆ) ಬೆಂಗಳೂರು.
10.	ಎಂ.ವಿ. ಮೂರ್ತಿ	-"-	ಪೊಲೀಸು ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ, ಕಾರವಾರ
11.	ಟಿ.ಬಿ. ದೊರೆಸ್ವಾಮಿ ನಾಯಕ್	-"-	ಉಪಪೊಲೀಸು ಕಮಿಷನರು ಹುಬ್ಬಳ್ಳಿ-ಧಾರವಾಡ
	ಐ.ಎಫ್.ಎಸ್. ಅಧಿಕಾರಿಗಳು		ಐ.ಎಫ್.ಎಸ್. ಅಧಿಕಾರಿಗಳು
1.	ಕೆ.ಎಸ್. ಅರಳಿಕಟ್ಟೆ	ರಾಜ್ಯ ಅರಣ್ಯ ಸೇವೆ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ
2.	ಎಂ. ನಾಗರಾಜ ಹಂಪೋಲಿ	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ
3.	ಬಿ. ರಘೋತ್ತಮ ರಾವ್	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ
4.	ಎಂ.ವಿ. ಕೃಷ್ಣೇಗೌಡ	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು
5.	ಕೆ. ರಾಮಕೃಷ್ಣ	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ
6.	ಎಸ್.ಎಂ. ಪುಟ್ಟಬುದ್ದಿ	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ಲಾನಿಂಗ್ ಅಂಡ್ ಮಾನಿಟರಿಂಗ್ ಸೆಲ್, ಬೆಂಗಳೂರು (ಪಶ್ಚಿಮ ಘಟ್ಟಗಳ ಯೋಜನೆ)
7.	ಪಿ.ಎಲ್. ಬೂದಿಹಾಳ್	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ ಚಿತ್ರದುರ್ಗ ಜಿಲ್ಲಾ ಪರಿಷತ್ತು
8.	ಶಿವಾನಂದಮೂರ್ತಿ, ಹೆಚ್.ಜಿ.	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೀದರ್
9.	ನಾಡಗೌಡರ್, ಬಿ.ಬಿ.	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ
10.	ನಾರಾಯಣ ಸ್ವಾಮಿ. ಎಂ.ಎನ್.	-"-	ಉಪ ಸಂರಕ್ಷಣಾಧಿಕಾರಿ, ಹಳಿಯಾಳ್
11.	ಅಣ್ಣಯ್ಯ, ಎ.ಎಂ.	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ
12.	ಶಿವಣ್ಣ, ಸಿ.ಕೆ.	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ
13.	ಶ್ರೀನಿವಾಸನ್, ಸಿ.	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಣಸೂರು
14.	ಸಿ. ಜಯರಾಮ್	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ
15.	ಡಿ.ಎಸ್. ಪುರುಷೋತ್ತಮ	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ, ಕುಂದಾಪುರ
16.	ವಿ. ಸತ್ಯಪಾಲ್	-"-	ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಫ್.ಡಿ.ಸಿ., ಐ.ಆರ್. ವಿಭಾಗ, ದಕ್ಷಿಣ ಕನ್ನಡ (ಈಗ ನೇಮಕಾತಿ ನಿರೀಕ್ಷಣೆಯಲ್ಲಿ)

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀ ಹೆಚ್. ವಿಶ್ವನಾಥ್ ಅವರ ಪರವಾಗಿ ಕೇಳಿರುವ ಪ್ರಶ್ನೆಗೆ ಉತ್ತರ ಒದಗಿಸಿದ್ದೀರಿ. ಶ್ರೀ ವಿಶ್ವನಾಥ್ ಅವರ ಕೊನೆಯ ಪ್ರಶ್ನೆಗೆ 1987 ರಿಂದ ಇಂದಿನವರೆಗೂ ಯಾವ ಯಾವ ಇಲಾಖೆಯ ಯಾವಯಾವ ಅಧಿಕಾರಿಗಳು ಅಖಿಲ ಭಾರತ ಸೇವೆಗೆ ಪದೋನ್ನತಿ ಪಡೆದು ಸೇವೆ ಸಲ್ಲಿಸುತ್ತಿರುವವರು ಹಾಗೂ ಅವರು ನಿರ್ವಹಿಸುತ್ತಿರುವ ಹುದ್ದೆ ಯಾವುದು ಎಂದು ಕೇಳಿರುವುದಕ್ಕೆ ಉತ್ತರ ಕೂಡ ಕೊಟ್ಟಿದ್ದೀರಿ. ಕೆಲಸ ಮಾಡುತ್ತಿರುವವರು ಯಾರು, ಅವರು ಸೇವೆ ಸಲ್ಲಿಸುತ್ತಾ ಇರತಕ್ಕದ್ದು ಎಲ್ಲಿ, ಅವರು ನಿರ್ವಹಿಸುತ್ತಿರುವ ಹುದ್ದೆ ಯಾವುದು ಎಂಬ ಪಟ್ಟಿ ನೋಡಿದಾಗ ನಮಗನ್ನಿಸುತ್ತದೆ ಇದರಲ್ಲಿ ಪ್ರಚಾರ ಇರತಕ್ಕದ್ದು ಈ ಇಲಾಖೆಯಲ್ಲಿ ಎರಡು ತರಹದ ಹುದ್ದೆಗಳಿವೆ ಎಂದು. ಯಾರು ನೇರವಾಗಿ ಮೇಲಿನಿಂದ ಬಂದಿರುತ್ತಾರೋ ಅವರನ್ನು 'ಎ' ಗ್ರೇಡ್ ಎಂತಲೂ, ಕೆಳಗಿನಿಂದ ಮೇಲೆ ಹೋಗಿರುವವರನ್ನು 'ಬಿ' ಗ್ರೇಡ್ ಎಂತಲೂ ಎರಡು ತರಹ ಹುದ್ದೆಗಳಿವೆ ಎಂದು ಕೇಳಿದ್ದೇನೆ. ಸರ್ಕಾರದ ಇಲಾಖೆಯಲ್ಲಿ ಅದಿಲ್ಲ. ಇಲ್ಲಿ ಪೋಸ್ಟಿಂಗ್ಸ್ ನೋಡಿದರೆ ಎಲ್ಲಾ 'ಬಿ' ಗ್ರೇಡ್‌ಗೆ ಕೊಟ್ಟಿದ್ದೀರಲ್ಲ, ಅದನ್ನು ಎ ಗ್ರೇಡ್‌ಗೆ ಏತಕ್ಕೆ ಏರಿಸಬಾರದು ಎಂಬುದು ಒಂದು. ಏತಕ್ಕೆ ಈ ಮಾತನ್ನು ಪೂರಕವಾಗಿ ಕೇಳುತ್ತಿದ್ದೇನೆ ಅಂದರೆ ಇಲ್ಲಿಯೇ ಸ್ಥಳೀಯವಾಗಿ ಇದ್ದು, ಕೆಲಸ ಮಾಡಿ, ನಮ್ಮ ರಾಜ್ಯದಲ್ಲೇ ಹುಟ್ಟಿ ಕನ್ನಡದಲ್ಲಿ ಎಲ್ಲಾ ರೀತಿಯಲ್ಲೂ ಬಲ್ಲಂಥವರು ಹಾಗೂ ಸ್ಥಳೀಯವಾಗಿರತಕ್ಕ ಜನರ ಸಮಸ್ಯೆಯನ್ನು ಅರಿತಿರುವವರಿಗೆ ಪ್ರೊಮೋಷನ್ ಕೊಟ್ಟಾಗ, ಮುಖ್ಯವಾದ ಹುದ್ದೆಗಳಲ್ಲಿ ಡೆಪ್ಯುಟಿ ಕಮಿಷನರ್ ಇಂಥ ಪೋಸ್ಟ್‌ಗೆ ಹೋಗುವುದರಿಂದ ಜನರಿಗೆ ಹೆಚ್ಚು ಸಹಾಯವಾಗುತ್ತದೆ ಎಂಬ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ, ಮತ್ತು ಅದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೇಳುತ್ತಿದ್ದೇನೆ. ಮತ್ತೊಂದು, ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಬಜೆಟ್ ಭಾಷಣವನ್ನು ಸಮರ್ಥನೆ ಮಾಡುವಂಥ ಸಂದರ್ಭದಲ್ಲಿ ಸಾಕಷ್ಟು ಪೋಸ್ಟ್‌ಗಳನ್ನು ಅಬಾಲಿಷ್ ಮಾಡುತ್ತಿದ್ದೇವೆ, ಮಾಡಬೇಕಾದರೆ ಆ ಮನುಷ್ಯನನ್ನ ಎಲ್ಲಾದರೂ ಒಂದು ಕಡೆ ಕಳುಹಿಸುವುದು ಕಷ್ಟವಾಗಿದೆ ಎಂಬ ಮಾತನ್ನು ಹೇಳಿದರು. ಅದಕ್ಕೋಸ್ಕರ ಒಂದು ಸಲಹೆ ಇದೆ. ಐ.ಎ.ಎಸ್. ಅಧಿಕಾರಿಗಳ ಇನ್‌ಟೇಕ್ ಕೆಪಾಸಿಟಿ ಏನಿದೆ ಅದನ್ನು ಕಡಿಮೆ ಮಾಡಿ. ತಮಿಳುನಾಡಿನಲ್ಲಿ ಬೇಡವೇ ಬೇಡ ಎಂದು ಹೇಳಿಬಿಟ್ಟರು. ಆದರೆ ಕರ್ನಾಟಕದಲ್ಲಿ ನೀವು ಹೇಳಲಿಲ್ಲ. ಕೇಂದ್ರದವರು ಕಳುಹಿಸಿದ್ದನ್ನು ನೀವು ಒಪ್ಪುತ್ತಿದ್ದೀರಿ. ಇನ್‌ಟೇಕ್ ಕೆಪಾಸಿಟಿ ಕಡಿಮೆ ಮಾಡುವುದರಿಂದ ಬಹುಶಃ ಮುಖ್ಯಮಂತ್ರಿಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪರಿಹಾರ ಸಿಗಬಹುದು ಎಂದು ನಾನು ಭಾವನೆ ಮಾಡಿದ್ದೇನೆ. ಆ ದಿಸೆಯಲ್ಲಿ ಇನ್‌ಟೇಕ್ ಕೆಪಾಸಿಟಿಯನ್ನು ಕಡಿಮೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ವಿಶ್ವನಾಥ್ ಅವರ ಪರವಾಗಿ ಜಯಚಂದ್ರ ಅವರು ಕೇಳಿದ್ದಾರೆ. ಸಪ್ಲಿಮೆಂಟರಿಯಲ್ಲಿ ಅದಕ್ಕೆ ತಕ್ಕಂತೆ ಉತ್ತರ ಕೂಡ ನಿರೀಕ್ಷಣೆ ಮಾಡಿದ್ದಾರೆ. ಈಗಾಗಲೇ ಪಟ್ಟಿ ಕೂಡ ನಾವು ಒದಗಿಸಿದ್ದೇವೆ. ಮೇಲಿನಿಂದ ಬರತಕ್ಕ ಜನರಿಗೆ 'ಎ' ಗ್ರೇಡ್ ಮತ್ತು ಇಲ್ಲಿರತಕ್ಕ ಜನರಿಗೆ 'ಬಿ' ಗ್ರೇಡ್ ಮಾಡಿದ್ದೀರಿ, ಏತಕ್ಕೆ ತಾರತಮ್ಯ ಆಗುತ್ತಿದೆ ಎಂಬುದು ತಮ್ಮ ಮನಸ್ಸಿನಲ್ಲಿದೆ. ಡೈರೆಕ್ಟಾಗಿ ಐ.ಎ.ಎಸ್. ಆಗಲೀ ಐ.ಪಿ.ಎಸ್. ಆಗಲೀ ಬರತಕ್ಕವರು ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಬರುತ್ತಾರೆ. ಮತ್ತು ಮೂರನೇ ಒಂದು ಭಾಗ, ಮೂರನೇ ಎರಡು ಭಾಗ ರೇಷ್ಯೋ ಪ್ರಕಾರ ರಾಜ್ಯ ಸರ್ಕಾರಕ್ಕೆ ಕೊಡುತ್ತಾರೆ. ತಮಿಳುನಾಡಿನಲ್ಲಿ ಅಲ್ಲಿಂದ ಬರತಕ್ಕವರನ್ನು ಬರಲೇಬೇಡ ಎಂದು ಡಿಸಿಷನ್ ತೆಗೆದುಕೊಂಡಿರುವುದನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಈಗ ಕರ್ನಾಟಕ ರಾಜ್ಯದಲ್ಲಿ ಕೂಡ ಕನ್ನಡ ಬಲ್ಲವರು ಮತ್ತು ಕರ್ನಾಟಕ ರಾಜ್ಯದ ಎಲ್ಲಾ ಸಮಸ್ಯೆಗಳನ್ನು ಬಲ್ಲಂಥ ಜನರಿಗೆ ಏತಕ್ಕೆ ಕೊಡಬಾರದು ಎಂದು ಇದೆ. ಅದನ್ನು ಕೂಡ ನಾವು ಪರಿಶೀಲನೆ ಮಾಡೋಣ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು

ಕೂಡ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕು, ಡಿವಿಷನಲ್ ಕಮಿಷನರ್ ಆಗಲೀ ಬೇರೆ ಬೇರೆ ಹುದ್ದೆಗಳು ಐ.ಎ.ಎಸ್.ಮತ್ತು ಐ.ಪಿ.ಎಸ್ ಗಳಲ್ಲಿ ಜಾಸ್ತಿನ ಪ್ರಾಶಸ್ತ್ಯ ಕೊಟ್ಟಿದ್ದೇವೆ ಅದು ಕಡಿಮೆ ಮಾಡಬೇಕಾಗಿದೆ. ಕಡಿಮೆ ಮಾಡುವಾಗ ಕೆಲವು ಅಧಿಕಾರಿಗಳು ಹೆಚ್ಚಾದರೆ ಬೇರೆ ಕಡೆ ಕಳುಹಿಸಬೇಕಾಗುತ್ತದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಎಲ್ಲವನ್ನೂ ಕೂಡ ವಿವರವಾಗಿ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಅಡ್ಮಿನಿಸ್ಟ್ರೇಟೀವ್ ಪಾಯಿಂಟ್‌ನಿಂದ ನೋಡಿ ಕ್ರಮ ತೆಗೆದುಕೊಳ್ಳುತ್ತದೆ.

9ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ

ರಾಜಶ್ರೀ ಸಿಮೆಂಟ್ ಕಾರ್ಖಾನೆಯವರಿಂದ ತೆರಿಗೆಯ ಬಾಕಿ

633. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 50-60 ಲಕ್ಷ ರೂಪಾಯಿ ವಾಣಿಜ್ಯ ತೆರಿಗೆಯ ಬಾಕಿಯನ್ನು ಕೊಡಬೇಕಾಗಿರುವುದು ನಿಜವೆ;

ಆ) ಗುಲ್ಬರ್ಗಾ ಜಿಲ್ಲೆಯ ವಾಣಿಜ್ಯ ತೆರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ವಸೂಲಿಯ ಕ್ರಮ ಕೈಗೊಳ್ಳುವುದರಲ್ಲಿ ವಿಫಲ ಹೊಂದಿರುವುದು ನಿಜವೆ:

ಇ) ಇಷ್ಟು ದೊಡ್ಡ ಮೊತ್ತದ ಹಣವನ್ನು ವಸೂಲಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ನಿಜವಲ್ಲ. ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 1984-85ನೇ ಸಾಲಿಗೆ ಸಂಬಂಧಿಸಿದಂತೆ 5.96 ಲಕ್ಷ ರೂ.ಗಳ ಮಾರಾಟ ತೆರಿಗೆ ಬಾಬ್ತು ಮಾತ್ರ ಬಾಕಿ ಇದ್ದು ವಿಧಿಸಿರುವ ಈ ತೆರಿಗೆ ವಿರುದ್ಧ ಸದರಿ ಕಂಪೆನಿಯವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಆ) ನಿಜವಲ್ಲ, ಬಾಕಿ ಇರುವ 5.95 ಲಕ್ಷ ರೂ.ಗಳ ಮಾರಾಟ ತೆರಿಗೆ ವಸೂಲಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ತನ್ನ ಆದೇಶ ಸಂಖ್ಯೆ : ಎಸ್‌ಟಿಎ:24:90-91 ದಿನಾಂಕ 3-1-91ರಲ್ಲಿ ತಡೆಯಾಜ್ಞೆ ನೀಡಿದ್ದು, ಪ್ರಾಧಿಕಾರದ ಆದೇಶಾನುಸಾರ ಕಂಪೆನಿಯವರು ಬ್ಯಾಂಕ್ ಜಾಮೀನು ನೀಡಿರುತ್ತಾರೆ. ಈ ತಡೆಯಾಜ್ಞೆ ಜಾರಿಯಲ್ಲಿರುವವರೆಗೆ ಬಾಕಿ ವಸೂಲಿ ಮಾಡಲು ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಅವಕಾಶವಿರುವುದಿಲ್ಲ.

ಇ) ಮೇಲ್ಮನವಿ ಇತ್ಯರ್ಥವಾದ ತಕ್ಷಣ ಮೇಲ್ಮನವಿಯ ತೀರ್ಮಾನಕ್ಕೆ ಒಳಪಟ್ಟು, ತೆರಿಗೆ ಬಾಕಿಯನ್ನು ವಸೂಲಿ ಮಾಡಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಸಭಾಧ್ಯಕ್ಷರೇ, 'ಅ' ಪ್ರಶ್ನೆಗೆ ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 50-60 ಲಕ್ಷ ರೂಪಾಯಿ ವಾಣಿಜ್ಯ ತೆರಿಗೆಯ ಬಾಕಿಯನ್ನು ಕೊಡಬೇಕಾಗಿರುವುದು

ನಿಜವೇ ಎಂಬುದಕ್ಕೆ ನಿಜವಲ್ಲ ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ಹಣ ಬಾಕಿ ಇದ್ದು ಇಷ್ಟರಲ್ಲೇ ಪಾವತಿ ಮಾಡಿರುವುದು ನಿಜವಲ್ಲವೆ? ಅಲ್ಲದೆ 1984-85ನೇ ಸಾಲಿಗೆ ಸಂಬಂಧಿಸಿದಂತೆ 5,96,000 ರೂಪಾಯಿ ಬಾಕಿ ಇದೆ ಎಂದು ತಿಳಿಸಿದ್ದಾರೆ.

'ಅ' ಪ್ರಶ್ನೆಗೆ ಉತ್ತರವಾಗಿ ಈ ಹಣಕ್ಕೆ ತಡೆ ಆಜ್ಞೆಯನ್ನು 3-1-91ರಲ್ಲಿ ತಂದಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ನಮ್ಮ ವಾಣಿಜ್ಯ ತೆರಿಗೆ ಇಲಾಖೆಯವರು 5-6 ವರ್ಷಗಳ ಕಾಲ ವಸೂಲಿ ಮಾಡುವಲ್ಲಿ ವಿಫಲಗೊಂಡ ಕಾರಣ ವಿಳಂಬ ಅವಧಿಯನ್ನು ಉಪಯೋಗಿಸಿಕೊಂಡು ತಡೆ ಆಜ್ಞೆ ತರಲು ಅವಕಾಶ ಮಾಡಿದ್ದುದು ತಪ್ಪು ಅಲ್ಲವೆ? ಒಂದು ವೇಳೆ ಇದೇ ರೀತಿ ರೈತರು ಕೊಡುವ ಸಾಲವನ್ನು 5-6 ವರ್ಷ ವಿಳಂಬ ಮಾಡಿದರೆ ಅವರ ಮೇಲೆ ಬಡ್ಡಿ, ಚಕ್ರಬಡ್ಡಿ ಹಾಕಿ ವಸೂಲಿ ಕ್ರಮ ತೆಗೆದುಕೊಂಡು ಅವನ ಹಂಡೆ ಪಂಡೆ ಬಜಾರ್‌ನಲ್ಲಿ ಹಾಕಿ ಅವನ ಮರ್ಯಾದೆ ತೆಗೆಯುವುದಿಲ್ಲವೇ? ಇವತ್ತು ಕೋಟ್ಯಾಂತರ ರೂಪಾಯಿ ...

ಛೇರ್ಮನ್ : ಪ್ರಶ್ನೆ ಕೇಳಿ ಸ್ವಾಮಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಕೋಟ್ಯಾಂತರ ರೂಪಾಯಿ ಲಾಭ ಪಡೆಯುವ ಈ ಬಿರ್ಲಾ ಅಂತಹವರಿಂದ ತೆರಿಗೆಯನ್ನು ವಸೂಲಿ ಮಾಡದೇ ಅವರು ತಡೆ ಆಜ್ಞೆ ತರಲು ಅವಕಾಶ ಕೊಟ್ಟಿದ್ದುದು ಏಕೆ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಪತಿಗಳೇ ಮಾನ್ಯ ಬಸವಂತರೆಡ್ಡಿಯವರ ಕ್ಷೇತ್ರದಲ್ಲಿ ಈ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿ ಇದೆ. ಅವರಿಗೆ ಇದು ಗುರ್ತಿದ್ದುದರಿಂದ ಈ ಪ್ರಶ್ನೆ ಕೇಳಿದ್ದಾರೆ. ಆ ಕಾರ್ಖಾನೆಯವರಿಂದ 5.96 ಲಕ್ಷ ರೂಪಾಯಿಗಳು ಬರಬೇಕಾಗಿದ್ದು ಆ ಬಗ್ಗೆ ಅವರು ಅಪಲೇಟ್ ಟ್ರಿಬ್ಯುನಲ್ಸ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಸ್ಟೇ ಇರುವ ಕಾರಣ ವಸೂಲಿ ಆಗಿಲ್ಲ. ಅದಕ್ಕೆ ಸ್ಟೇ ವೆಕೇಟ್ ಮಾಡಿಸಬೇಕಾಗುತ್ತದೆ. ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ಸ್ ಉದ್ದೇಶಪೂರ್ವಕವಾಗಿ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇದು ಆ ರೀತಿ ಅಲ್ಲ. ಸ್ಟೇ ಆರ್ಡರ್‌ನ್ನು ನಾವು ವೆಕೇಟ್ ಮಾಡಿಸುತ್ತೇವೆ. ವೆಕೇಟ್ ಮಾಡಿಸಿದ ಮೇಲೆ 5.96 ಲಕ್ಷ ರೂ.ಗಳನ್ನು ಏನು 1984-85ನೇ ಸಾಲಿನದ್ದು ಬಾಕಿ ಇದೆ ಅದನ್ನು ವಸೂಲಿ ಮಾಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : 5-6 ವರ್ಷ ವಿಳಂಬ ಮಾಡಿದ್ದಕ್ಕೆ ಅದನ್ನು ಉಪಯೋಗಿಸಿಕೊಂಡು ಸ್ಟೇ ತಂದಿದ್ದಾರೆ.

ಶ್ರೀ ಧರ್ಮಸಿಂಗ್ : ವಿಳಂಬ ಆಗಿದೆ ಎಂದು ಇವತ್ತು ಇಲ್ಲಿ ಬಂದಿದೆ. ಇದನ್ನೂ ಕೂಡ ನಾವು ತೀವ್ರವಾಗಿ ಪರಿಗಣಿಸಿ ವಸೂಲಿಗೆ ಪ್ರಯತ್ನ ಮಾಡುತ್ತೇವೆ.

ಉಪಾಧ್ಯಕ್ಷರು : ಈಗ 11ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಎ.ಬಿ. ಮಲಕರೆಡ್ಡಿಯವರ ಪ್ರಶ್ನೆ.

ಡಾ: ಎ.ಬಿ. ಮಲಕಾರೆಡ್ಡಿ : ನನಗೆ ಉತ್ತರವೇ ಬಂದಿಲ್ಲ.

ಉಪಾಧ್ಯಕ್ಷರು : ಇದಕ್ಕೆ ಉತ್ತರ ಬಂದಿಲ್ಲ. ಇದನ್ನು ತಡೆಹಿಡಿಯಲಾಗಿದೆ. ಈಗ ಪೆರಿಕಲ್ ಎಂ. ಮಲ್ಲಪ್ಪನವರ ಪ್ರಶ್ನೆ.

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೆಯ ಹಂತದಿಂದ ನೀರು ಸರಬರಾಜು

1159. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು 4ನೇ ಹಂತದ ಯೋಜನೆಗೆ ಯೋಜನಾ ಆಯೋಗವು ಒಪ್ಪಿಗೆ ನೀಡಿರುವುದು ನಿಜವೇ?

2) ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು?

3) ಈ ಯೋಜನೆಯು ಪೂರ್ಣಗೊಂಡಾಗ ನಗರಕ್ಕೆ ಎಷ್ಟು ಹೆಚ್ಚುವರಿ ನೀರು ಬರುವುದು?

4) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಹೌದು, ಕಾವೇರಿ 4ನೇ ಹಂತದ ಯೋಜನೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ.

2) ಕಾವೇರಿ 4ನೇ ಹಂತದ ಕೆಲಸವನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಇದರ ಮೊದಲ ಹಂತವನ್ನು 1992-93ರಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

3) ಕಾವೇರಿ 4ನೇ ಹಂತದ ಮೊದಲನೆಯ ಹಾಗೂ ಎರಡನೆಯ ಹಂತಗಳು ಪೂರ್ಣಗೊಂಡಾಗ ನಗರಕ್ಕೆ ಒಟ್ಟು ದಿನಂಪ್ರತಿ 540 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಬರುವುದು.

4) ಕಾವೇರಿ 4ನೇ ಹಂತದ ಮೊದಲ ಹಂತವನ್ನು 1997-98ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ. ನನ್ನ ಮೊದಲನೆಯ ಪ್ರಶ್ನೆಗೆ ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿ ಸೇರಿಸಲಾಗಿದೆ ಎಂದಿದ್ದಾರೆಯೇ ಹೊರತು ಎಷ್ಟು ಕೋಟಿ ರೂಪಾಯಿ ವೆಚ್ಚ ಆಗುತ್ತದೆ. ಎಷ್ಟು ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ ಎಂದು ಹೇಳಿಲ್ಲ. ಮತ್ತು ನನ್ನ ಎರಡನೆಯ ಪ್ರಶ್ನೆಗೆ 'ಎರಡು ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಉದ್ದೇಶಿಸಲಾಗಿದೆ' ಎಂದಿದ್ದಾರೆ. ಹಾಗೂ 1992-93ರಲ್ಲಿ ಮೊದಲ ಹಂತವನ್ನು ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ. ಈಗಾಗಲೇ 1992-93ರ ಬಡ್ಜೆಟ್ ಮಂಡನೆ ಆಗಿದೆ. ಇವರು ಹೆಚ್‌ಯುಡಿ ಇಲಾಖೆಯ ವತಿಯಿಂದ ಕಾವೇರಿ 4ನೇ ಹಂತದ ಯೋಜನೆಗೆ ಎಷ್ಟು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆಂದು ತಿಳಿಸಬೇಕು. ಅಷ್ಟು ಹಣವನ್ನು ಅವರು ಮೀಸಲು ಇಟ್ಟಿದ್ದಾರೆಯೇ ಅಥವಾ ಸುಮ್ಮನೆ ಸಮಾಧಾನಕ್ಕೋಸ್ಕರವಾಗಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆಯೇ? ಕಾವೇರಿ 3ನೇ ಹಂತದ ಕೆಲಸ ಮುಗಿಯಬೇಕಾದರೆ, ಬಿಡಿಎ, ಕಾರ್ಪೊರೇಷನ್, ಎಲ್ಐಸಿ, ಪಬ್ಲಿಕ್ ಸೆಕ್ಟರ್‌ನಲ್ಲಿ ಹಣ ವಸೂಲಿ ಮಾಡಿ ಅವರಿಗೆ ಸಪ್ಲೈ ಮಾಡಿದರು. ಆದರೆ ಈ 4ನೇ ಹಂತಕ್ಕೂ ಕೂಡ ಅದೇ ರೀತಿ ಏನಾದರೂ ಪ್ರಾವಿಷನ್ ಮಾಡಿ ಅವರ ಹತ್ತಿರ ಕರಸ್ಪಾಂಡೆನ್ಸ್ ಮಾಡಿದ್ದೀರಾ? ಇಲಾಖಾ ಅಧಿಕಾರಿಗಳು ಬೆಂಗಳೂರು

ನಗರದಲ್ಲಿ ನೀರಿಗೆ ಏನು ಅಭಾವ ಇದೆ ಅದರಲ್ಲಿ ನಾವೆಷ್ಟು ಕಳಕಳಿಯಿಂದ ನಿಗಾ ಇಟ್ಟು ಕೆಲಸ ಮಾಡುತ್ತಿದ್ದಾರೆಯೇ? ಇನ್ನು 3ನೇ ಪ್ರಶ್ನೆಗೆ 540 ಲಕ್ಷ ದಶಲೀಟರ್ ನೀರು ಬರುವುದು ಎಂದು ಹೇಳಿದ್ದೀರಿ. ಇಷ್ಟು ನೀರು ಸರಬರಾಜಾಗಲು ಕಾವೇರಿಯಿಂದ 40-50 ಟಿಎಂಸಿ ಅಡಿ ನೀರು ಬರಬೇಕಾಗುತ್ತದೆ. ಕಾವೇರಿ ನೀರಿನ ವಿಷಯ ಟ್ರಿಬ್ಯುನಲ್ ಮುಂದೆ ಇದೆ. ಆದ್ದರಿಂದ ನಮ್ಮ ಹೆಚ್‌ಯುಡಿ ಇಲಾಖೆಯವರು ಏನಾದರೂ 4ನೇ ಹಂತಕ್ಕೆ ಎಷ್ಟು ನೀರು ಬೇಕಾಗುತ್ತದೆ ಆ ಬಗ್ಗೆ ಲಾಯರ್ಸ್ ಮುಖಾಂತರ ಟ್ರಿಬ್ಯೂನಲ್ ಮುಂದೆ ಅಪ್ಲಿಕೇಷನ್ ಹಾಕಿಸಿದ್ದಾರೆಯೇ ಏಕೆಂದರೆ 50 ಟಿಎಂಸಿ ಅಡಿ ನೀರು ಕುಡಿಯುವ ನೀರಿನ ಸಲುವಾಗಿ ಬೇಕಾದಾಗ ತಾವು ಟ್ರಿಬ್ಯುನಲ್ ಮುಂದೆ ಆ ಬಗ್ಗೆ ಅರ್ಜಿಯನ್ನು ಹಾಕಲೇಬೇಕಾಗುತ್ತದೆ. ಅಪ್ಲಿಕೇಶನ್ ಹಾಕಲಿಲ್ಲವೆಂದರೆ ನಾಳೆ ದಿವಸ ನೀರು ಡ್ರಾ ಮಾಡುವುದಕ್ಕಾಗುವುದಿಲ್ಲ. ಬೆಂಗಳೂರು ಮಹಾನಗರಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ನನ್ನ ನಾಲ್ಕನೆಯ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. 1997-98ರಲ್ಲಿ ನಾಲ್ಕನಯ ಹಂತದಲ್ಲಿ ಮೊದಲೆಯ ಹಂತವನ್ನು ಮುಗಿಸುತ್ತೇವೆಂದರೆ. ಮೊದಲನೆಯ ಹಂತವನ್ನು ಮುಗಿಸಬೇಕಾದರೆ ಐದು ವರ್ಷ ಬೇಕು. ಎರಡನೆಯ ಹಂತ ಮುಗಿಸಬೇಕಾದರೆ ಫರ್ದರ್ 5 ವರ್ಷ ಬೇಕಾಗುತ್ತದೆ. ಅಲ್ಲಿಗೆ 10 ವರ್ಷಕ್ಕೆ ಮುಗಿಸುತ್ತಾರೆ. 10 ವರ್ಷಕ್ಕೆ ಬೆಂಗಳೂರಿನ ಜನಸಂಖ್ಯೆ. ಇವತ್ತು ಬೆಂಗಳೂರಿನ ಜನಸಂಖ್ಯೆ 50 ಲಕ್ಷ ಇದೆ. ಇನ್ನು ಹತ್ತು ವರ್ಷಕ್ಕೆ 1 ಕೋಟಿ ಜನಸಂಖ್ಯೆಯಾಗುತ್ತದೆ. 1 ಕೋಟಿ ಜನಸಂಖ್ಯೆಗೆ ಎಷ್ಟು ಮಿಲಿಯನ್ ಲೀಟರ್ಸ್ ನೀರು ಬೇಕು? ಪರ್ ಕ್ಯಾಪಿಟಾ ಕನ್‌ಸಮ್‌ಷನ್ ಎಷ್ಟು ಬೇಕು? ತಮಗೆಲ್ಲರಿಗೂ ಗೊತ್ತಿರುವ ಹಾಗೆ. ಇಲ್ಲಿ ಕುಳಿತಿರುವವರೆಲ್ಲರೂ ಬೆಂಗಳೂರು ನಗರದಲ್ಲಿರುವವರೇ. 50-60 ಲೀಟರ್ ಪರ್ ಕ್ಯಾಪಿಟಾ ಕನ್‌ಸಮ್‌ಷನ್ ನೀರು ಯೂಸ್ ಮಾಡುತ್ತಿದ್ದೇವೆ. ಆ ಪರಿಸ್ಥಿತಿ ಇರುವಾಗ. ನ್ಯಾಷನಲ್ ಆವರೇಜ್ 150 ರಿಂದ 200 ಲೀಟರ್ ಇದೆ. ಈಗಿರುವ ಎಕ್ಸಿಸ್ಟಿಂಗ್ ಪೈಪ್‌ನಲ್ಲಿ ಎರಡು ಗಂಟೆ ನೀರು ಕೊಡುತ್ತಿಲ್ಲ. 10 ವರ್ಷ ಆದಮೇಲೆ ನಮ್ಮ ಡಿಮ್ಯಾಂಡ್ ಎಷ್ಟಾಗುತ್ತದೆ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ. ಈಗಾಗಲೇ ಕಾವೇರಿ ಥರ್ಡ್‌ಸ್ಟೇಜ್ ಮುಗಿದಿದೆ. ಈ ವರ್ಷದ ಜೂನ್ ತಿಂಗಳಿನಲ್ಲಿ ಕಾವೇರಿ ಥರ್ಡ್‌ಸ್ಟೇಜ್‌ನಿಂದ 270 ದಶಲಕ್ಷ ಲೀಟರ್ ನೀರು ಬರುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ನಾಲ್ಕನೆಯ ಸ್ಟೇಜ್ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಅದು ಕೇಂದ್ರ ಸರ್ಕಾರದಿಂದ ಅಪ್ರೂವ್ ಆಗಿದೆ. ಅಪ್ರೂವಲ್ ಆದಮೇಲೆ ಪೆಂಡಿಂಗ್ ಪ್ಯಾಟ್ರನ್ ಯಾವ ಟೈಪ್‌ನಲ್ಲಿ ಮಾಡಬೇಕು ಎನ್ನುವ ಬಗ್ಗೆ ಡಿಸ್‌ಕಷನ್ ಮಾಡಿ ಫೈನಲ್ ಡಿಸೀಸನ್ ಮಾಡಬೇಕಾಗುತ್ತದೆ. ಒಂದನೆಯ ಸ್ಟೇಜ್‌ಗೆ ಎಷ್ಟು ದುಡ್ಡು ಬೇಕೆಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿರಲಿಲ್ಲ. 4ನೇ ಸ್ಟೇಜ್‌ಗೆ ಸುಮಾರು 1 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ನಾಲ್ಕನೆಯ ಸ್ಟೇಜ್‌ನಲ್ಲಿ ಎರಡನೆಯ ಹಂತದ ಕೆಲಸವನ್ನು ಮಾಡುವ ವ್ಯವಸ್ಥೆ ಮಾಡಿದ್ದೇವೆ. 490 ಕೋಟಿ ಇನ್ನೊಂದು ಸುಮಾರು 510 ಕೋಟಿ ಈ ರೀತಿಯಲ್ಲಿ ನಾವು ತೆಗೆದುಕೊಂಡಿದ್ದೇವೆ. ಪ್ರತಿ ಹಂತಕ್ಕೂ ಸುಮಾರು 270 ದಶಲಕ್ಷ ಲೀಟರ್ ನೀರು ಬರುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ನಮಗೆ ಬೇಕಾದ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ನಾವು ಕೇಂದ್ರಸರ್ಕಾರಕ್ಕೆ ಹೋಗಬೇಕಾಗಿಲ್ಲ. ಕುಡಿಯುವ ನೀರು ತೆಗೆದುಕೊಳ್ಳುವುದಕ್ಕೆ ನಮ್ಮ ಲೋಕೋಪಯೋಗಿ ಇಲಾಖೆಯವರ ಪರ್ಮಿಷನ್ ತೆಗೆದುಕೊಂಡಿದ್ದೇವೆ. ನಮ್ಮ ಕರ್ನಾಟಕದ ಷೇರ್‌ನಲ್ಲಿಯೇ ನೀರು ತೆಗೆದುಕೊಂಡು ಸಮಾಧಾನಕರವಾದ ರೀತಿಯಲ್ಲಿ ನೀರನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡಲಿಲ್ಲ. ಲೋಕೋಪಯೋಗಿ ಇಲಾಖೆಯ ಜೊತೆ ಕರೆಸ್ಪಾಂಡೆನ್ಸ್ ಮಾಡಿ-ವಾಟರ್ ತೆಗೆದುಕೊಳ್ಳುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ನಾಳೆ ಕೆಆರ್ ಎಸ್ ನಿಂದ ವಾಟರ್ ರಿಲೀಸ್ ಮಾಡುವುದಿಲ್ಲ, ತಮಿಳುನಾಡಿನವರು ಎಲ್ಲಾ ನೀರನ್ನು ಹೊತ್ತುಕೊಂಡು ಹೋಗುತ್ತಾರೆ. ಆಗ ಬೆಂಗಳೂರು ಮಹಾನಗರಕ್ಕೆ ಎಲ್ಲಿಂದ ನೀರನ್ನು ಡ್ರಾ ಮಾಡುತ್ತೀರಿ? ಈ ದಿಸೆಯಲ್ಲಿ ಕೆಲವು ಕ್ಲೈಮ್ಸ್ ಏನಾದರೂ ಕಾವೇರಿ ವಾಟರ್ ಟ್ರಿಬ್ಯುನಲ್‌ಗೆ ಹಾಕಿದ್ದೀರಾ? ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿಗಾಗಿ ಇಷ್ಟು ನೀರು ಕೊಡಿಯೆಂದು ಕ್ಲೈಮ್ ಹಾಕದಿದ್ದರೆ, ನೀವು ಹೋಗಿ ಅಲ್ಲಿ ನೀರು ಡ್ರಾ ಮಾಡುವುದಕ್ಕೆ ಹೋದರೆ ನಾಳೆ ಅಲ್ಲಿ ರೈತರು ಬೊಂಬಡಾ ಹೊಡೆಯುತ್ತಾರೆ. ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ. ಕಾವೇರಿಯಿಂದ ಕುಡಿಯುವ ನೀರು ಡ್ರಾ ಮಾಡುವುದಕ್ಕೆ ಯಾವುದೇ ಇಂಟರ್‌ಸ್ಟೇಟ್ ಡಿಸ್‌ಪ್ಯೂಟ್ ಅಡ್ಡ ಬರುವುದಿಲ್ಲ. ನಾನು ಏನು ಹೇಳಿದ್ದೇನೆಂದರೆ ನಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ನಾವು ಪರ್ಮಿಶನ್ ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಪರ್ಮಿಷನ್ ತೆಗೆದುಕೊಂಡಿದ್ದೇವೆ. ನೀರು ಡ್ರಾ ಮಾಡುವ ವಿಚಾರದಲ್ಲಿ ಯಾವುದೇ ತೊಂದರೆಯಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ಆತಂಕವನ್ನು ವ್ಯಕ್ತಪಡಿಸುವ ಅವಶ್ಯಕತೆಯಿಲ್ಲ. ಇದು ಪಂಚವಾರ್ಷಿಕ ಯೋಜನೆಯಲ್ಲಿ ಅಪ್ರೂವಲ್ ಆಗಿ ಬಂದಿದೆ. ಫಂಡಿಂಗ್ ಪ್ಯಾಟ್ರನ್ ಯಾವ ರೀತಿ ಮಾಡಬೇಕು ನಮ್ಮ ಬಜೆಟ್‌ನಲ್ಲಿ ಎಷ್ಟು ಹಣ ಇಡಬೇಕು ಈ ವಿಚಾರವನ್ನು ಈಗಾಗಲೇ ನಾವು ಅದನ್ನು ವರ್ಕ್ ಔಟ್ ಮಾಡುತ್ತಿದ್ದೇವೆ. ಹುಡ್ಕೋದಿಂದ ಹಣ ತೆಗೆದುಕೊಳ್ಳಬೇಕೇ ಅಥವಾ ಎಲ್‌ಐಸಿ ಯಿಂದ ತೆಗೆದುಕೊಳ್ಳಬೇಕೇ ಅಥವಾ ವರ್ಲ್ಡ್ ಬ್ಯಾಂಕಿನಿಂದ ತೆಗೆದುಕೊಳ್ಳಬೇಕೇ ಎನ್ನುವ ವಿಚಾರದಲ್ಲಿ ನಾವು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ನನಗನಿಸುತ್ತಿದೆ ಎಲ್‌ಐಸಿ ಮತ್ತು ಹುಡ್ಕೋದಿಂದ ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್‌ಗೆ ಹಣ ಕೊಡುವುದಕ್ಕೆ ಅವರು ಈಗಾಗಲೇ ಮುಂದೆ ಬಂದಿದ್ದಾರೆ. ಬಹುಶಃ ಅದನ್ನು ತೆಗೆದುಕೊಂಡರೆ ಆದಷ್ಟು ಬೇಗ ಆಗಬಹುದು. ವರ್ಲ್ಡ್ ಬ್ಯಾಂಕಿನದು ಆದರೆ ಅವರ ರಿಕ್ವೈರ್‌ಮೆಂಟ್‌ಗಳನ್ನು ಫುಲ್‌ಫಿಲ್ ಮಾಡುವುದಕ್ಕೆ ಸಮಯವಾಗುತ್ತದೆ. ಆದರೂ ಸಹ ವರ್ಲ್ಡ್ ಬ್ಯಾಂಕಿನ ವಿಚಾರದಲ್ಲಿ ನಾವು ಪರಿಶೀಲನೆ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾಗ ಪ್ರಶ್ನೋತ್ತರಗಳು

ಕಾವೇರಿ ಮೂರನೆಯ ಹಂತ

1728. ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಿನ 3ನೇ ಹಂತದ ಕಾರ್ಯ ಯಾವಾಗ ಪ್ರಾರಂಭವಾಯಿತು?

ಆ) ಈ ಯೋಜನೆಯ ಒಟ್ಟು ವೆಚ್ಚವೆಷ್ಟು?

ಇ) 3ನೇ ಹಂತದ ಈ ಕಾರ್ಯವು ಯಾವಾಗ ಪೂರ್ಣಗೊಳ್ಳುವುದು?

ಈ) ಈ ಯೋಜನೆ ಪೂರ್ಣಗೊಂಡಾಗ ಬೆಂಗಳೂರು ನಗರಕ್ಕೆ ಎಷ್ಟು ಹೆಚ್ಚುವರಿ ನೀರು ದೊರೆಯುತ್ತದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಕಾವೇರಿ 3ನೇ ಹಂತದ ಯೋಜನೆಯ ಪ್ರಾಥಮಿಕ ಕೆಲಸಗಳನ್ನು 1985-86ರಲ್ಲಿ ಪ್ರಾರಂಭಿಸಿ ಬೃಹತ್ ಕಾಮಗಾರಿಗಳನ್ನು 1988-89ರಲ್ಲಿ ಪ್ರಾರಂಭಿಸಲಾಯಿತು.

ಆ) ಕಾವೇರಿ 3ನೇ ಹಂತದ ಯೋಜನೆಯ ಅಂದಾಜು ವೆಚ್ಚ ರೂ. 240.00 ಕೋಟಿಗಳು.

ಇ) ಈ ಯೋಜನೆಯನ್ನು ಜೂನ್ 1992ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಕಾವೇರಿ 3ನೇ ಹಂತದ ಯೋಜನೆ ಪೂರ್ಣಗೊಂಡಾಗ ನಗರಕ್ಕೆ ದಿನಂಪ್ರತಿ 270 ದಶ ಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುತ್ತದೆ.

ಕರ್ನಾಟಕದ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು

1965. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಲ್ಲಿ ಕರ್ನಾಟಕಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕದ ಮೂಲದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಯಾವ ಯಾವ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವರುಗಳ ಹೆಸರುಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

ಅ) ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ 106

ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ 55

ಆ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ಮೂಲದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು

ಐ.ಎ.ಎಸ್. ಅಧಿಕಾರಿಗಳು

ಶ್ರೀಯುತರುಗಳಾದ :

1)	ಜಿ.ವಿ. ವಿಶ್ವನಾಥ್	ಅಧ್ಯಕ್ಷರು, ದಕ್ಷತೆ ಪರಿಶೋಧನೆ ಮತ್ತು ಜಾಗೃತ ವಿಭಾಗ, ವಿಧಾನ ಸೌಧ, ಬೆಂಗಳೂರು.
2)	ಎಸ್. ಬಿ. ಮುದ್ದಪ್ಪ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎನ್‌ಜಿಇಎಫ್ ನಿಯಮಿತ, ಬೆಂಗಳೂರು.
3)	ಬಿ.ಆರ್. ಪ್ರಭಾಕರ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಲಿಮಿಟೆಡ್
4)	ಎಸ್. ದೊರೈರಾಜು	ಆಯುಕ್ತರು, ಮತ್ತು ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಬೆಂಗಳೂರು
5)	ಎನ್.ಎ ಮುತ್ತಣ್ಣ	ಮೆಟ್ರೊಪಾಲಿಟನ್ ಕಮಿಷನರ್, ಬಿ.ಎಂ ಆರ್.ಡಿ.ಎ., ಬೆಂಗಳೂರು
6)	ಎ. ರವೀಂದ್ರ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸೋಪು ಮತ್ತು ಡಿಟರ್‌ಜೆಂಟ್ ನಿಯಮಿತ, ಬೆಂಗಳೂರು
7)	ಎ. ಭರತ್	ಮುಖ್ಯ ಚುನಾವಣಾಧಿಕಾರಿ, ಬೆಂಗಳೂರು
8)	ಎಂ.ಬಿ. ಪ್ರಕಾಶ್	ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹಾದ್ಯೋಮ, ಬೆಂಗಳೂರು
9)	ಆರ್. ಶಂಕರಪ್ಪ	ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
10)	ಬಿ.ಎಸ್. ಪಾಟೀಲ್	ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು
11)	ಪಿ.ಡಿ. ಶೆಣೈ	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು
12)	ಜಿ. ಮುನಿಯಪ್ಪ	ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಮಿನರಲ್ಸ್ ನಿಯಮಿತ, ಬೆಂಗಳೂರು
13)	ಸಿ. ಮುನಿಸ್ವಾಮಿ	ವಾಣಿಜ್ಯ ತೆರಿಗೆಗಳ ಆಯುಕ್ತರು, ಬೆಂಗಳೂರು.
14)	ವಿ.ಕೆ.ಕೆ. ಘೋರಿ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಎಂ.ಇ.ಐ. ನಿಯಮಿತ, ಬೆಂಗಳೂರು.
15)	ಎಸ್. ಕೃಷ್ಣಕುಮಾರ್	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ವಿಕ್ರಾಂತ್ ಟೈರ್ಸ್ ನಿಯಮಿತ, ಮೈಸೂರು

16)	ಶ್ರೀಮತಿ ಮಾಲತಿ ದಾಸ್	ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಬೆಂಗಳೂರು.
17)	ಎಸ್.ಆರ್. ವಿಜಯ್	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕೆ.ಎಸ್.ಎಸ್.ಐ.ಡಿ.ಸಿ., ಬೆಂಗಳೂರು.
18)	ಹೆಚ್.ಕೆ. ಶಿವಾನಂದ	ಸಾರಿಗೆ ಆಯುಕ್ತರು, ಬೆಂಗಳೂರು.
19)	ದಿಲೀಪ್ ರಾವ್	ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು.
20)	ಎ.ಆರ್.ಎಂ. ಇಕ್ಬಾಲ್ ಅಹ್ಮದ್	ಸರ್ಕಾರದ ಕಾರ್ಯದರ್ಶಿ, ಆಹಾರ ಮತ್ತು ಸಾರಿಗೆ ಇಲಾಖೆ ಬೆಂಗಳೂರು.
21)	ಎಂ. ಕೃಷ್ಣಮೂರ್ತಿ	ಸರ್ಕಾರದ ಕಾರ್ಯದರ್ಶಿ.2, ಕಂದಾಯ ಇಲಾಖೆ ಬೆಂಗಳೂರು
22)	ಪಿ.ಎಸ್.ಸಿ. ರಾವ್	ಸರ್ಕಾರದ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
23)	ಪಿ.ಎಸ್. ನಾಗರಾಜನ್	ಸರ್ಕಾರದ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ಬೆಂಗಳೂರು.
24)	ಎಂ.ಎಲ್. ಚಂದ್ರಕೀರ್ತಿ	ಸರ್ಕಾರದ ಕಾರ್ಯದರ್ಶಿ-2, ಶಿಕ್ಷಣ ಇಲಾಖೆ, ಬೆಂಗಳೂರು
25)	ಹೆಚ್. ಬಸವಯ್ಯ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕೆ.ಹೆಚ್.ಡಿ.ಸಿ., ಬೆಂಗಳೂರು.
26)	ಕೆ.ಎಂ. ಪೊನ್ನಪ್ಪ	ಆಡಳಿತಾಧಿಕಾರಿ, ತುಂಗಭದ್ರಾ ಪ್ರಾಜೆಕ್ಟ್, ಮುನಿರಾಬಾದ್
27)	ಎಸ್.ಎನ್. ಶಾಂತಕುಮಾರ್	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
28)	ಶ್ರೀಮತಿ ಉಷಾ ಗಣೇಶ್	ಸರ್ಕಾರದ ಕಾರ್ಯದರ್ಶಿ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
29)	ಸುಧಾಕರ್ ರಾವ್	ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು
30)	ಎಸ್.ಎಲ್. ಗಂಗಾಧರಪ್ಪ	ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು
31)	ಎಸ್.ಎಂ. ಆಚಾರ್ಯ	ಆಡಳಿತಾಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ ಭೀಮರಾಯನಗುಡಿ
32)	ಎ.ಕೆ.ಎಂ. ನಾಯಕ್	ಸರ್ಕಾರದ ಕಾರ್ಯದರ್ಶಿ-2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
33)	ಎಸ್.ವಿ. ರಂಗನಾಥ್	ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು
34)	ರಿಚರ್ಡ್ ಕ್ರಾಸ್ತಾ	
35)	ಟಿ. ಧನಶೇಖರನ್	ಸಹಕಾರ ಸಂಘಗಳ ರಿಜಿಸ್ಟ್ರಾರ್, ಬೆಂಗಳೂರು
36)	ಎಂ. ಮಹೇಶನ್	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು

37)	ಬಿ. ಪಾರ್ಥಸಾರಥಿ	ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ. ಬೆಂಗಳೂರು
38)	ಕೆ. ಜಯರಾಜ್	ವ್ಯವಸ್ಥಾಪಕ ನಿರ್ದೇಶಕರು. ಕೆ.ಎಸ್.ಎಸ್.ಐ.ಡಿ.ಸಿ. ಬೆಂಗಳೂರು
39)	ಆರ್. ಸುರೇಶ್	ಆಯುಕ್ತರು, ಬೆಂಗಳೂರು ಮಹಾನಗರಪಾಲಿಕೆ ಬೆಂಗಳೂರು.
40)	ಆರ್.ಕೆ. ಭಾಟಿಯಾ	ಕಾರ್ಯಕಾರಿ ನಿರ್ದೇಶಕರು (ಅಭಿವೃದ್ಧಿ) ಕೆ.ಎಸ್.ಆರ್.ಟಿ.ಸಿ., ಬೆಂಗಳೂರು
41)	ಬಿ. ಈಶ್ವರಪ್ಪ	ನಿರ್ದೇಶಕರು ಕೃಷಿ ಮಾರುಕಟ್ಟೆ, ಬೆಂಗಳೂರು
42)	ವಿ. ಗೋವಿಂದರಾಜ್	ಅಪರ ಕಾರ್ಯದರ್ಶಿ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಬೆಂಗಳೂರು
43)	ಎ.ಆರ್. ಚಂದ್ರಹಾಸಗುಪ್ತ	ನಿರ್ದೇಶಕರು. ವಾರ್ತಾ ಮತ್ತು ಪ್ರಸಾರ ಇಲಾಖೆ. ಬೆಂಗಳೂರು
44)	ನರೇಂದ್ರಸಿಂಗ್	ಕಾರ್ಮಿಕ ಆಯುಕ್ತರು, ಬೆಂಗಳೂರು
45)	ಬಿ.ಎಲ್. ಶ್ರೀಧರ್	ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು. ಬೆಂಗಳೂರು
46)	ಐ. ದೇವೇಂದ್ರನ್	ವಿದೇಶಿ ತರಬೇತಿ ಮೇಲೆ
47)	ಜಿ. ಶಶಿಕಾಂತರಾವ್	ಸದಸ್ಯರು. ಕೆ.ಎ.ಟಿ. ಬೆಂಗಳೂರು
48)	ಕೆ.ಎ. ಬೆಳ್ಳಿಯಪ್ಪ	ವ್ಯವಸ್ಥಾಪಕ ನಿರ್ದೇಶಕರು. ಕೆ.ಎಸ್.ಎಂ.ಬಿ. ಬೆಂಗಳೂರು
49)	ಪಿ. ನಾಗೇಶ್ವರ ರಾವ್	ಸದಸ್ಯರು. ಕೆ.ಎ.ಟಿ. ಬೆಂಗಳೂರು.
50)	ಅರವಿಂದ ಜಾದವ್	ಅಪರ ನಿರ್ದೇಶಕರು (ವಿಶ್ವ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ. ಬೆಂಗಳೂರು
51)	ಎಸ್.ಆರ್. ವೆಂಕಟೇಶ್	ರಿಲೀಜಿಯಸ್ ಮತ್ತು ಚಾರಿಟಬಲ್ ಎಂಡೋಮೆಂಟ್ ಆಯುಕ್ತರು
52)	ರಂಗನಾಥ ಕಿಲವಡಿ	ನಿರ್ದೇಶಕರು. ಪೌರಾಡಳಿತ ಮಂಡಲಿ. ಬೆಂಗಳೂರು
53)	ಪಿ. ಕೋಟಿಲಿಂಗನಗೌಡ	ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿ. ಬೆಂಗಳೂರು
54)	ಸಿ.ಎಸ್. ಕೇದಾರ್	ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು
55)	ಪಿ.ಎ. ಶೆಟ್ಟಿ	ನಿರ್ದೇಶಕರು. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು. ಬೆಂಗಳೂರು
56)	ಎಸ್.ಎಂ. ಜಾಮದರ್	ಉಪ ಆಡಳಿತಾಧಿಕಾರಿ. ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ, ಬೆಳಗಾವಿ
57)	ವಿ. ಉಮೇಶ್	ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಬೆಂಗಳೂರು
58)	ಎಂ.ಎಸ್. ವಿಜಯಕುಮಾರ್	ಆಡಳಿತಾಧಿಕಾರಿ. ಜಿಲ್ಲಾ ಪರಿಷತ್ತು, ಧಾರವಾಡ
59)	ಎಸ್.ವಿ. ಕುಲಕರ್ಣಿ	ವ್ಯಾಸಂಗ ರಜೆ

60)	ಜಿ.ಕೆ. ಲೋಕಾರೆ	ವಿದೇಶಿ ತರಬೇತಿ
61)	ಎಸ್.ಎಂ. ಹೆಗಡೆ	ನಿರ್ದೇಶಕರು, ಎಡಿಸಿ ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
62)	ಪಿ.ಜಿ. ನಾಯಕ್	ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ಬೆಂಗಳೂರು
63)	ಜಿ.ಕೆ. ಸಂಗಮೇಶ್ವರ್	ನಿರ್ದೇಶಕರು, ಇ.ಎಸ್.ಐ., ಬೆಂಗಳೂರು
64)	ಎ.ಎ. ದೇಸಾಯಿ	ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
65)	ಸಿ. ಚಿಕ್ಕಣ್ಣ	ಯುವಜನಸೇವಾ ನಿರ್ದೇಶಕರು, ಬೆಂಗಳೂರು
66)	ಕೆ. ಕೇಸವರಾಜು	ನಿರ್ದೇಶಕರು, ಸಮಾಜ ಕಲ್ಯಾಣ, ಬೆಂಗಳೂರು
67)	ಎ.ಕೆ.ಸಿ. ಮನೋಲಿ	ನಿರ್ದೇಶಕರು, ವಾಟರ್ ಶೆಡ್‌ಡೆವಲಪ್‌ಮೆಂಟ್, ಬೆಂಗಳೂರು
68)	ಅರವಿಂದ ಜಿ. ರಿಸ್‌ಬೂದ್	ರಿಜಿಸ್ಟ್ರಾರ್, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ
69)	ಜಯಕರ್ ಜೆರೋಮ್	ರಾಜ್ಯಪಾಲರ ಕಾರ್ಯದರ್ಶಿ, ಬೆಂಗಳೂರು
70)	ಅಶೋಕ್ ವಿ. ಡೆವಿಸ್	ಜಿಲ್ಲಾಧಿಕಾರಿ, ಬಳ್ಳಾರಿ
71)	ಎಂ.ಜಿ. ಹಾಲಪ್ಪನವರ್	ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ
72)	ಟಿ.ವೈ. ನಯಾಜ್ ಅಹ್ಮದ್	ನಿರ್ದೇಶಕರು, ಎನ್‌ಇಪಿ ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು
73)	ಎಸ್. ಸುಬ್ರಮಣ್ಯ	ಜಿಲ್ಲಾಧಿಕಾರಿ, ಚಿಕ್ಕಮಗಳೂರು
74)	ಟಿ.ಎಂ. ವಿಜಯಭಾಸ್ಕರ್	ಆಡಳಿತಾಧಿಕಾರಿ, ಮಂಡ್ಯ ಜಿಲ್ಲಾ ಪರಿಷತ್ತು, ಮಂಡ್ಯ
75)	ಹೆಚ್. ಭಾಸ್ಕರ್	ಆಡಳಿತಾಧಿಕಾರಿ, ಜಿಲ್ಲಾ ಪರಿಷತ್ತು, ಶಿವಮೊಗ್ಗ
76)	ಶ್ರೀಮತಿ ಆರ್.ಎಸ್. ಸುಜಾತ	ನಿರ್ದೇಶಕರು, ಕರ್ನಾಟಕ ಸಹಕಾರ ಲೆಕ್ಕಪರಿಶೋಧನೆ ಬೆಂಗಳೂರು
77)	ಟಿ. ತಿಮ್ಮೇಗೌಡ	ಜಿಲ್ಲಾಧಿಕಾರಿ, ಕೋಲಾರ
78)	ಪಿ.ಬಿ. ರಾಮಮೂರ್ತಿ	ಉಪಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು
79)	ಡಿ.ಎಸ್. ನರಸಿಂಹರಾಜು	ಉಪಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
80)	ಎನ್.ಪಿ. ಮುನಿಯಪ್ಪ	ಜಿಲ್ಲಾಧಿಕಾರಿ, ಚಿತ್ರದುರ್ಗ
81)	ಸದಾಶಿವಯ್ಯ	ಜಿಲ್ಲಾಧಿಕಾರಿ, ಶಿವಮೊಗ್ಗ
82)	ಎ.ಎಸ್. ಶ್ರೀಕಾಂತ್	ಜಿಲ್ಲಾಧಿಕಾರಿ, ಕೊಡಗು
83)	ವೀರಭದ್ರಾಚಾರಿ	ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಬೆಂಗಳೂರು
84)	ಮಹೇಂದ್ರ ಜೈನ್	ಆಡಳಿತಾಧಿಕಾರಿ, ಜಿಲ್ಲಾ ಪರಿಷತ್ತು, ಉತ್ತರ ಕನ್ನಡ ಜಿಲ್ಲೆ, ಕಾರವಾರ

85)	ಕೆ. ಶಿವರಾಮು	ಉಪ ಆಯುಕ್ತರು (ಅಭಿವೃದ್ಧಿ) ಬೆಂಗಳೂರು ಮಹಾನಗರಪಾಲಿಕೆ. ಬೆಂಗಳೂರು
86)	ಎಂ.ಆರ್. ಕಾಂಬ್ಳೆ	ಸರ್ಕಾರದ ಉಪಕಾರ್ಯದರ್ಶಿ. ಸಿಆಸುಇ (ಸೇವೆಗಳು) ಬೆಂಗಳೂರು
87)	ಎಂ.ಕೆ. ಶಂಕರಲಿಂಗೇಗೌಡ	ಜಿಲ್ಲಾಧಿಕಾರಿ. ಧಾರವಾಡ
88)	ಸಿದ್ದಯ್ಯ	ಜಿಲ್ಲಾಧಿಕಾರಿ. ಮೈಸೂರು
89)	ಸಿ.ಆರ್. ಚಿಕ್ಕಮಠ್	ಜಿಲ್ಲಾಧಿಕಾರಿ. ಬೆಳಗಾವಿ
90)	ಕೆ.ಎಸ್. ಮಂಜುನಾಥ್	ಉಪಕಾರ್ಯದರ್ಶಿ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಮತ್ತು ಪದನಿಮಿತ್ತ ಉಪಕಾರ್ಯದರ್ಶಿ. ಯೋಜನಾ ಇಲಾಖೆ. ಗುಲ್ಬರ್ಗಾ
91)	ಲೂಕೋಸ್ ವಲ್ಲಥರಾಯ್	ಜಿಲ್ಲಾಧಿಕಾರಿ. ಹಾಸನ
92)	ಬಿ.ಹೆಚ್. ಮಂಜುನಾಥ್	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ಸಚಿವರ ಆಪ್ತಕಾರ್ಯದರ್ಶಿ, ಬೆಂಗಳೂರು
93)	ಐ.ಎಂ. ವಿಠಲಮೂರ್ತಿ	ಜಿಲ್ಲಾಧಿಕಾರಿ. ಬಿಜಾಪುರ
94)	ಎಂ. ಲಕ್ಷ್ಮಿನಾರಾಯಣ	ಉಪ ಆಯುಕ್ತರು (ಅಬಕಾರಿ) ಬೆಂಗಳೂರು
95)	ಬಿ.ಹೆಚ್. ಅನಿಲ್‌ಕುಮಾರ್	ಪ್ರಧಾನ ಕಾರ್ಯದರ್ಶಿ. ವಯಸ್ಕರ ಶಿಕ್ಷಣ ಪರಿಷತ್ತು ಬೆಂಗಳೂರು
96)	ಶ್ರೀಮತಿ ಎಂ.ವಿ. ಜಯಂತಿ	ಉಪ ವಿಭಾಗಾಧಿಕಾರಿ. ದೊಡ್ಡಬಳ್ಳಾಪುರ ಉಪ ವಿಭಾಗ. ಬೆಂಗಳೂರು.
97)	ಬಿ. ಬಸವರಾಜು	ಉಪ ವಿಭಾಗಾಧಿಕಾರಿ. ಪುತ್ತೂರು
98)	ನಾಗಾಂಬಿಕಾ ದೇವಿ	ಉಪ ವಿಭಾಗಾಧಿಕಾರಿ. ಮದುಗಿರಿ
99)	ಜಿ. ಕುಮಾರ್ ನಾಯಕ್	ಐಎಎಸ್ ಪ್ರೊಬೇಷನರ್
100)	ಬಿ.ಕೆ. ವಿಶ್ವನಾಥನ್	ಜಂಟಿ ರಿಜಿಸ್ಟ್ರಾರ್. ಸಹಕಾರಿ ಸಂಘಗಳು. ಬೆಂಗಳೂರು
101)	ಕೆ.ಹೆಚ್. ಗೋಪಾಲಕೃಷ್ಣಗೌಡ	ನಿರ್ದೇಶಕರು, ಎಸ್‌ಪಿಡಿ. ಬೆಂಗಳೂರು
102)	ಕೆ. ಕೇಶವಚಾರಿ	ಉಪಕಾರ್ಯದರ್ಶಿ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಬೆಂಗಳೂರು.
103)	ಮಹಮ್ಮದ್ ಸನಾವುಲ್ಲಾ	ಉಪಕಾರ್ಯದರ್ಶಿ. ಜಿಲ್ಲಾ ಪರಿಷತ್ತು. ಮಂಡ್ಯ
104)	ಜಿ.ವಿ. ರಾಮಚಂದ್ರ	ವಿಶೇಷ ಜಿಲ್ಲಾಧಿಕಾರಿ. ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು
105)	ಬಿ. ಭೀಮಯ್ಯ	ಆಡಳಿತಾಧಿಕಾರಿ. ಜಿಲ್ಲಾ ಪರಿಷತ್ತು. ಬೆಂಗಳೂರು (ಗ್ರಾಮಾಂತರ)
106)	ಟಿ. ಮುಕ್ತಾಂಬ	ಉಪಕಾರ್ಯದರ್ಶಿ. ಜಿಲ್ಲಾ ಪರಿಷತ್ತು. ಕೋಲಾರ

ಕರ್ನಾಟಕ ವೃಂದಕ್ಕೆ ಸೇರಿದ ಐ.ಪಿ.ಎಸ್. ಅಧಿಕಾರಿಗಳು

1)	ಶ್ರೀ ಎಸ್.ಎನ್.ಎಸ್. ಮೂರ್ತಿ	ಪೊಲೀಸು ಮಹಾ ನಿರ್ದೇಶಕರು (ಅಪರಾಧ ಮತ್ತು ತರಬೇತಿ) ಬೆಂಗಳೂರು
2)	ಆರ್.ಎಂ. ವಸಂತಕುಮಾರ್	ಅಡಿಷನಲ್ ಮಹಾ ನಿರ್ದೇಶಕರು ಮತ್ತು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಪೊಲೀಸು ವಸತಿ ನಿಗಮ. ಬೆಂಗಳೂರು
3)	ಪಿ.ಟಿ.ಆರ್. ಕೊಲಸೋ	ಅಡಿಷನಲ್ ಡಿಜಿಪಿ (ಕಾನೂನು ಮತ್ತು ನ್ಯವಸ್ಥೆ) ಬೆಂಗಳೂರು
4)	ಸುಭಾಷ್ ಚಂದ್ರ	ಐಜಿಪಿ. (ಸಾರ್ವಜನಿಕ ದೂರು)
5)	ಡಾ: ಕೆ. ಶ್ರೀನಿವಾಸನ್	ಐಜಿಪಿ. ಸದಸ್ಯರ ರಕ್ಷತೆ ಮತ್ತು ಜಾಗೃತಿ ವಿಭಾಗ
6)	ಎಲ್. ರೇವಣಸಿದ್ದಯ್ಯ	ಐಜಿಪಿ. ಸಿಒಡಿ. ಬೆಂಗಳೂರು
7)	ಡಾ: ಪಿ.ಎಸ್. ರಾಮಾನುಜಂ	ಕನ್ನಡ ಮತ್ತು ಸಂಸ್ಕೃತಿಯ ಆಯುಕ್ತರು
8)	ಟಿ. ಮಡಿಯಾಳ	ಐಜಿಪಿ. ಕೆ.ಎಸ್.ಆರ್.ಪಿ.. ಬೆಂಗಳೂರು
9)	ಡಾ: ಎನ್. ಕೃಷ್ಣಮೂರ್ತಿ	ಐಜಿಪಿ. (ತರಬೇತಿ) ಬೆಂಗಳೂರು
10)	ಎಸ್.ಎಸ್. ಪಾವಟೆ	ಡಿಐಜಿ. ನಾರ್ತ್-ಈಸ್ಟ್ರನ್ ರೇಂಜ್. ಬೆಳಗಾಂ
11)	ಎಸ್.ಎಸ್. ಬೋರ್ಕರ್	ಡಿಐಜಿ. ಲೋಕಾಯುಕ್ತ
12)	ಎಸ್. ಸಿದ್ದಲಿಂಗು	ಡಿಐಜಿ. (ಗುಪ್ತವಾರ್ತೆ) ಬೆಂಗಳೂರು
13)	ಬಿ.ಎನ್.ಪಿ. ಆಲ್ಬುರ್ಕರ್	ಡಿಐಜಿ. (ಪಿಆರ್ಸ್ ಯುನಿಟ್). ಬೆಂಗಳೂರು
14)	ವಿಜಯಸಾಸನೂರ	ವ್ಯವಸ್ಥಾಪಕ ನಿರ್ದೇಶಕರು. ಕೆ.ಎಸ್.ಟಿ.ಡಿ.ಸಿ. ಲಿ.,
15)	ಜಿ. ಮರಿಸ್ವಾಮಿ	ಅಪರ ಪೊಲೀಸು ಆಯುಕ್ತರು. ಬೆಂಗಳೂರು
16)	ಸುಭಾಷ್ ಭರಣಿ	ಡಿಐಜಿ. ಕೇಂದ್ರ ವಲಯ. ಬೆಂಗಳೂರು
17)	ಡಿ.ವಿ. ಗುರುಪ್ರಸಾದ್	ಡಿಐಜಿ. ಉತ್ತರ-ಪೂರ್ವ ವಲಯ. ಗುಲ್ಬರ್ಗಾ
18)	ಎಸ್.ಬಿ. ರಮೇಶ್	ಡಿಐಜಿ. (ಆಡಳಿತ) ಬೆಂಗಳೂರು
19)	ಹೆಚ್.ಆರ್. ಕಸ್ತೂರಿ ರಂಗನ್	ಡಿಐಜಿ (ಕೇಂದ್ರ ಕಾರ್ಯಸ್ಥಾನ). ಬೆಂಗಳೂರು
20)	ಡಿ.ಎನ್. ಮುನಿಕೃಷ್ಣ	ಡಿಐಜಿ (ಆಹಾರ ಘಟಕ). ಬೆಂಗಳೂರು
21)	ಬಿ.ಎನ್. ನಾಗರಾಜ್	ಡಿಐಜಿ (ಸಿಒಡಿ). ಬೆಂಗಳೂರು
22)	ಎಸ್.ಎಸ್. ಮಸಾಲಿ	ಡಿಐಜಿ (ಜಾಗೃತಿ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಬೆಂಗಳೂರು
23)	ಕೆ.ಎಸ್. ಮಂಡೆಗರ್	ಪೊಲೀಸು ಕಮಿಷನರ್. ಮೈಸೂರು
24)	ಕುಚಣ್ಣ ಶ್ರೀನಿವಾಸನ್	ಪೊಲೀಸು ಅಧೀಕ್ಷಕರು. ಲೋಕಾಯುಕ್ತ. ಬೆಂಗಳೂರು
25)	ಎಸ್.ಎಂ. ಬಿದರಿ	ಪೊಲೀಸು ಅಧೀಕ್ಷಕರು. ಧಾರವಾಡ
26)	ಬಿ.ಇ. ಉಮಾಪತಿ	ಪೊಲೀಸು ಅಧೀಕ್ಷಕರು. ಕೊಡಗು
27)	ಕೆಂಪಯ್ಯ	ಉಪ ಪೊಲೀಸು ಆಯುಕ್ತರು (ಪೂರ್ವ) ಬೆಂಗಳೂರು

28)	ಹರ್ಷವರ್ಧನ ರಾಜು	ಪೊಲೀಸು ಅಧೀಕ್ಷಕರು, ಹಾಸನ
29)	ಚಂದ್ರಶೇಖರ	ಉಪ ಪೊಲೀಸು ಆಯುಕ್ತರು (ಗುಪ್ತವಾರ್ತೆ), ಬೆಂಗಳೂರು
30)	ಕೆ.ವಿ.ಆರ್. ಬಾಗುರ್	ಉಪ ಪೊಲೀಸು ಆಯುಕ್ತರು (ಅಪರಾಧ), ಬೆಂಗಳೂರು
31)	ಬಿ.ಜಿ. ಕೋಕಟನೂರು	ಉಪ ಪೊಲೀಸು ಆಯುಕ್ತರು (ಸಿ.ಎ.ಆರ್), ಬೆಂಗಳೂರು
32)	ಎಂ. ಲಕ್ಷ್ಮಣ	ದೆಪ್ಯೂಟಿ ಕಮಾಂಡೆಂಟ್ ಗೃಹ ರಕ್ಷಕ ದಳ ಬೆಂಗಳೂರು
33)	ಜೀವನಕುಮಾರ್ ವಿ. ಗಾವಂಕರ್	ಪೊಲೀಸು ಅಧೀಕ್ಷಕರು, ಚಿತ್ರದುರ್ಗ
34)	ಜಿ.ಎಸ್.ಎನ್. ಚಿಕ್ಕೆರೂರ್	ಉಪ ಪ್ರಾಂಶುಪಾಲರು, ಪೊಲೀಸು ತರಬೇತಿ ಕಾಲೇಜು ಮೈಸೂರು
35)	ಬಿ.ಐ.ಜಿ. ಮಿರ್ಜಿ	ಪೊಲೀಸು ಅಧೀಕ್ಷಕರು, (ಲೋಕಾಯುಕ್ತ), ಬೆಳಗಾಂ
36)	ಟಿ. ಜಯಪ್ರಕಾಶ್	ಪೊಲೀಸು ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ
37)	ಸಿ. ವೋತಿರಾಮ್	ಪೊಲೀಸು ಅಧೀಕ್ಷಕರು, ರೈಲ್ವೇಸ್, ಬೆಂಗಳೂರು
38)	ಕೆ.ಸಿ. ರಾಮಮೂರ್ತಿ	ಪೊಲೀಸು ಉಪ ಆಯುಕ್ತರು (ಎಲ್ ಅಂಡ್ ಓ) ಪಶ್ಚಿಮ
39)	ಸೆಚ್.ಸಿ. ಕಿಶೋರ್ ಚಂದ್ರ	ಪೊಲೀಸು ಅಧೀಕ್ಷಕರು, ಸಿಒಡಿ, ಬೆಂಗಳೂರು
40)	ಹೆಚ್.ಎಸ್.ಸತ್ಯನಾರಾಯಣರಾವ್	ಪೊಲೀಸು ಅಧೀಕ್ಷಕರು, ಬೀದರ್ ಜಿಲ್ಲೆ
41)	ಕೆ.ಡಿ. ಗಗನದೀಪ	ಪೊಲೀಸು ಅಧೀಕ್ಷಕರು, ಬೆಳಗಾಂ
42)	ಆರ್.ಹೆಚ್. ಔರಾದಕರ್	ಕಮಾಂಡೆಂಟ್, ಕೆ.ಎಸ್.ಆರ್.ಪಿ., ಗುಲ್ಬರ್ಗಾ
43)	ಕಲೀಲ್ ಉರ್ ರೆಹಮನ್	ಸಹಾಯಕ ಪೊಲೀಸು ಮಹಾನಿರ್ದೇಶಕರು (ಸಾಮಾನ್ಯ)
44)	ಕೆ.ಎ. ಹಫೀಜ್	ಪೊಲೀಸು ಅಧೀಕ್ಷಕರು, ಚಿಕ್ಕಮಗಳೂರು
45)	ಸಿ. ಚಂದ್ರಶೇಖರ್	ಪೊಲೀಸು ಅಧೀಕ್ಷಕರು (ಗುಪ್ತವಾರ್ತೆ) ಬೆಂಗಳೂರು
46)	ಟಿ. ಹರಿಕೃಷ್ಣ	ಪೊಲೀಸು ಅಧೀಕ್ಷಕರು, ಕೋಲಾರ ಜಿಲ್ಲೆ
47)	ಎಂ.ಕೆ. ನಾಗರಾಜ್	ಪೊಲೀಸು ಅಧೀಕ್ಷಕರು, ರಾಯಚೂರು ಜಿಲ್ಲೆ
48)	ಎಸ್. ರಾಮಕೃಷ್ಣ	ಪೊಲೀಸು ಅಧೀಕ್ಷಕರು, ಬಿಜಾಪುರ
49)	ಎಂ.ಆರ್. ಪೂಜಾರ್	ಪೊಲೀಸು ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
50)	ಜಿ.ಎಂ. ಹಯಾತ್	ಪೊಲೀಸು ಅಧೀಕ್ಷಕರು, ಕೆ.ಜಿ.ಎಫ್.
51)	ಎಂ.ಎಫ್. ಪಾಷಾ	ಪೊಲೀಸು ಅಧೀಕ್ಷಕರು, (ಗುಪ್ತವಾರ್ತೆ), ಬೆಂಗಳೂರು
52)	ಎಂ.ವಿ. ಮೂರ್ತಿ	ಪೊಲೀಸು ಅಧೀಕ್ಷಕರು, ಉತ್ತರ ಕನ್ನಡ, ಕಾರವಾರ
53)	ಟಿ.ಜಿ. ದೊರೆಸ್ವಾಮಿನಾಯಕ್	ಪೊಲೀಸು ಉಪ ಆಯುಕ್ತರು, ಹುಬ್ಬಳ್ಳಿ-ಧಾರವಾಡ
54)	ಭಾಸ್ಕರ್ ರಾವ್	ಪ್ರೊಬೇಷನರ್, ಧಾರವಾಡ
55)	ವೈ.ಆರ್. ಪಾಟೀಲ್	ಪೊಲೀಸು ಅಧೀಕ್ಷಕರು, (ಗುಪ್ತವಾರ್ತೆ) ಬೆಂಗಳೂರು.

ಅವಶ್ಯಕ ಸೇವೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ

1717. ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾ ಕಾಲೇಜುಗಳಿಗೆ ಮತ್ತು ಸಾರಿಗೆ ಬಸ್ಸುಗಳಿಗೆ ಹಾಗೂ ಹಲವಾರು ಇಲಾಖಾ ಕಛೇರಿಗಳಿಗೆ ಅಗತ್ಯ ಸೇವಾ ಸಿಬ್ಬಂದಿ ವರ್ಗದ ನೇಮಕಾತಿ ಬಗ್ಗೆ ಕಳೆದ ಒಂದೂವರೆ ವರ್ಷದಿಂದ ಸರ್ಕಾರದಿಂದ ಬರುತ್ತಿರುವ ಹೇಳಿಕೆಗಳು ನೈಜವಾಗಿ ಕಾರ್ಯಗತವಾಗಲು ಇನ್ನೆಷ್ಟು ವರ್ಷ ಬೇಕಾಗಬಹುದು;

ಆ) ಅರ್ಜಿಗಳನ್ನು ಕರೆದು ಸಂದರ್ಶನ ಮುಂದೂಡುತ್ತಿರುವುದರಿಂದ ಲಕ್ಷಾಂತರ ನಿರುದ್ಯೋಗಿಗಳಿಗೆ ಆರ್ಥಿಕ ಸಂಕಷ್ಟ, ಮಾನಸಿಕ ಯಾತನೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇನ್ನು ಮುಂದೆ ಅಭ್ಯರ್ಥಿಗಳಿಗೆ ಆರ್ಥಿಕ ಹೊರೆ ಬೀಳದಂತೆ ಅರ್ಜಿ ಶುಲ್ಕ ವಿನಾಯಿತಿ ಮತ್ತು ಸಂದರ್ಶನಕ್ಕೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ಸರ್ಕಾರ ಆಲೋಚಿಸಿದೆಯೇ?

ಈ) ಇಲ್ಲದಿದ್ದರೆ ಈ ಬಗ್ಗೆ ಕಾನೂನೊಂದನ್ನು ತಂದು ಬಡ ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸಲು ಸಾಧ್ಯವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

ಅ) ಅವಶ್ಯಕ ಸೇವೆಗಳಲ್ಲಿ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೇಬೇಕಾದ ಅವಶ್ಯಕತೆ ಇರುವೆಡೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಸರ್ಕಾರವು ಕ್ರಮ ಕೈಗೊಂಡಿದೆ ಮತ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಇಲ್ಲ.

ಇ) ಇಲ್ಲ.

ಈ) ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದಾಗಿ. ಇದು ಉದ್ಭವಿಸುವುದಿಲ್ಲ.

ಲಕ್ಷ್ಮೇಶ್ವರದಲ್ಲಿ ಕುಡಿಯುವ ನೀರಿನ ಅಭಾವ

1204. ಶ್ರೀ ಎಸ್.ಎಸ್. ಪಾಟೀಲ್ (ಶಿರಹಟ್ಟಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಕುಡಿಯುವ ನೀರಿನ ತೀವ್ರ ಅಭಾವವನ್ನು ನೀಗಿಸಲು ಬರಗಾಲ ಕಾಮಗಾರಿಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇದಲ್ಲದೆ ಈ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಯೋಜನೆಯನ್ನು ತಯಾರಿಸಲು ತನಿಖೆಯನ್ನು ಮಾಡಲಾಗುತ್ತದೆ.

ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯವರಿಂದ ಭೂಸೇನಾ ನಿಗಮಕ್ಕೆ ವಹಿಸಲಾದ ಕಾಮಗಾರಿ

1257. ಶ್ರೀ ಮಲ್ಲಿಕಾರ್ಜುನ ದಿವಟರ (ಕೊಪ್ಪಳ) . ಶ್ರೀ ಬಸವನಗೌಡ ಪಾಟೀಲ (ಮಾನ್ವಿ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಭೂಸೇನಾ ನಿಗಮಕ್ಕೆ ಯಾವ. ಯಾವ ಕಾಮಗಾರಿಗಳನ್ನು ಒದಗಿಸಲಾಗಿದೆ (ವಿವರಗಳನ್ನೊದಗಿಸುವುದು) ?

ಆ) ಈ ಭೂ ಸೇನಾ ನಿಗಮದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ದೂರುಗಳು ಬಂದಿವೆಯೇ?

ಇ) ದೂರುಗಳು ಬಂದಿದ್ದಲ್ಲಿ ಸರಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ. ಸಾಂಖ್ಯಿಕ ಗಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಭೂ ಸೇನಾ ನಿಗಮಕ್ಕೆ ವಹಿಸಲಾಗಿದ್ದ ಕಾಮಗಾರಿಗಳ ವಿವರಗಳು ಕೆಳಗಿನಂತಿವೆ.

1.	ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳು	753 ಕೊಠಡಿಗಳು
2.	ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳು	655 ಕೊಠಡಿಗಳು
3.	ಪ್ರೌಢ ಶಾಲಾ ಕಟ್ಟಡಗಳು	751 ಕೊಠಡಿಗಳು
4.	ಶಿಕ್ಷಕರ ಮನೆಗಳು	40
5.	ಮಧ್ಯಾಹ್ನದ ಉಪಹಾರ ಗೋಡೌನ್‌ಗಳು.	7
6.	ಪ್ರಥಮ ದರ್ಜೆ ಕಾಲೇಜು	3
7.	ಆರೋಗ್ಯ ಕಟ್ಟಡಗಳನ್ನು ದುರಸ್ತು ಒಳಗೊಂಡು	26

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣ

1766. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ 1991-92ರ ವರ್ಷದಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ?

ಆ) ಕೆಲವು ತಾಲ್ಲೂಕುಗಳಲ್ಲಿ ಈ ಹಣವು ಗಡಿ ಪ್ರದೇಶದ ಗ್ರಾಮಗಳ ರಸ್ತೆಗಳಿಗೆ ಖರ್ಚು ಮಾಡದೆ. ಬೇರೆ ರಸ್ತೆಗಳಿಗೆ ಖರ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರಿಂದ ಗಡಿ ಪ್ರದೇಶದ ಅಭಿವೃದ್ಧಿಯಾಗಬೇಕೆಂಬ ಉದ್ದೇಶ ಸಂಪೂರ್ಣ ವಿಫಲವಾಗುವುದಿಲ್ಲವೇ? ಇದನ್ನು ಸರ್ಕಾರ ಸರಿಮಾಡುವುದೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ. ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಪ್ರತಿ ತಾಲ್ಲೂಕಿಗೆ ಸರ್ಕಾರ ಬಿಡುಗಡೆ ಮಾಡಿದ ವಿವರದ ತಃಖ್ತೆ ಲಗತ್ತಿಸಲಾಗಿದೆ.

ಆ) ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಗಡಿ ತಾಲ್ಲೂಕನ್ನು ಘಟಕವನ್ನಾಗಿ ತೆಗೆದುಕೊಂಡಿದ್ದು. ಗಡಿ ಗ್ರಾಮಗಳಿಗೆ ಈ ಯೋಜನೆಯಡಿಯಲ್ಲಿ ಆದ್ಯತೆ ನೀಡಲು ಸರ್ಕಾರ ಸೂಚಿಸಿದೆ. ಈ ಹಣವನ್ನು ಗಡಿ ತಾಲ್ಲೂಕುಗಳನ್ನುಳಿದು ಹೊರಗಡೆ ಉಪಯೋಗ ಮಾಡಲು ಅವಕಾಶವಿರುವುದಿಲ್ಲ.

Karnataka State Border Area Development Programme

ಕರ್ನಾಟಕ ರಾಜ್ಯ ಗಡಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮ

Statement of releases and Expenditure for the year 1990-91 & 1991-92 up to the end of December 1991.

1990-91 ಮತ್ತು 1991-92ನೇ ಸಾಲಿನಲ್ಲಿ 1991ರ ಡಿಸೆಂಬರ್ ಅಂತ್ಯದವರೆಗೆ ಬಿಡುಗಡೆ ಮಾಡಲಾದ ವೆಚ್ಚದ ಪಟ್ಟಿ

(Rs. in lakhs)
(ಲಕ್ಷ ರೂ.ಗಳಲ್ಲಿ)

Sl. No. ಕ್ರ.ಸಂ.	District/Taluk ಜಿಲ್ಲೆ-ತಾಲ್ಲೂಕು	1990-91		1991-92	
		Amount released upto ಬಿಡುಗಡೆ ಮಾಡಲಾದ ಹಣ	Expenditure ವೆಚ್ಚ	Amount released upto ಬಿಡುಗಡೆ ಮಾಡಲಾದ ಹಣ	Expenditure ವೆಚ್ಚ
1	2	3	4	5	6
I.	Bangalore (Urban) ಬೆಂಗಳೂರು (ನಗರ)				
	1. Anekal ಆನೇಕಲ್	9.00	9.00	25.00	9.99
II.	Bangalore (Rural) ಬೆಂಗಳೂರು (ಗ್ರಾಮಾಂತರ)	9.00	9.00	25.00	-
	1. Hoskote ಹೊಸಕೋಟೆ				
	2. Kanakapura ಕನಕಪುರ	9.00	9.00	25.00	-
III.	Chitradurga ಚಿತ್ರದುರ್ಗ				
	1. Challakere ಚಳ್ಳಕೆರೆ	9.00	5.86	25.00	1.62
	2. Hiriyur ಹಿರಿಯೂರು	9.00	2.34	25.00	2.00
	3. Molakalmuru ಮೊಳಕಾಲ್ಮೂರು	9.00	0.97	25.00	-

1	2	3	4	5	6
IV.	Kolar ಕೋಲಾರ				
	1. Bagepalli ಬಾಗೇಪಲ್ಲಿ	9.00	9.00	25.00	10.64
	2. Bangarpet ಬಂಗಾರಪೇಟೆ	8.00	7.93	25.00	4.83
	3. Chintamani ಚಿಂತಾಮಣಿ	9.00	9.00	25.00	5.38
	4. Gauribidanur ಗೌರಿಬಿದನೂರು	9.00	9.00	25.00	10.90
	5. Gudibanda ಗುಡಿಬಂಡ	9.00	9.00	25.00	6.44
	6. Malur ಮಾಲೂರು	9.00	7.00	25.00	6.14
	7. Mulbagal ಮುಳಬಾಗಲು	9.00	8.62	25.00	4.42
	8. Srinivasapura ಶ್ರೀನಿವಾಸಪುರ	8.00	8.00	25.00	4.22
V.	Tumkur ತುಮಕೂರು				
	1. Madhugiri ಮಧುಗಿರಿ	9.00	4.17	25.00	-
	2. Pavagada ಪಾವಗಡ	93.00	93.00	25.00	-
	3. Sira ಶಿರಾ	9.00	4.31	25.00	3.61
VI.	Dakshina Kannada ದಕ್ಷಿಣ ಕನ್ನಡ				
	1. Bantwala ಬಂಟ್ವಾಳ	8.00	7.17	25.00	0.24
	2. Mangalore ಮಂಗಳೂರು	8.00	8.00	25.00	-
	3. Puttur ಪುತ್ತೂರು	8.00	8.00	25.00	1.13
	4. Sulya ಸುಳ್ಯ	8.00	6.87	25.00	-
VII.	Kodagu ಕೊಡಗು				
	1. Madikeri ಮಡಿಕೇರಿ	9.00	4.79	25.00	0.35

1	2	3	4	5	6
	2. Virajpet ವಿರಾಜಪೇಟೆ	9.00	3.56	25.00	-
VIII.	Mysore ಮೈಸೂರು				
	1. Chamarajanagar ಚಾಮರಾಜನಗರ	9.00	-	25.00	-
	2. Gundlupet ಗುಂಡ್ಲುಪೇಟೆ	9.00	4.27	25.00	-
	3. H.D. Kote ಹೆಚ್.ಡಿ. ಕೋಟೆ	9.00	5.65	25.00	0.59
	4. Kollegal ಕೊಳ್ಳೇಗಾಲ	9.00	3.90	25.00	-
IX.	Belgaum ಬೆಳಗಾಂ				
	1. Athani ಅಥಣಿ	9.00	5.82	25.00	0.15
	2. Belgaum ಬೆಳಗಾಂ	9.00	5.80	25.00	0.73
	3. Chikkodi ಚಿಕ್ಕೋಡಿ	9.00	4.91	25.00	10.00
	4. Hukkeri ಹುಕ್ಕೇರಿ	9.00	3.85	25.00	1.00
	5. Khanapur ಖಾನಾಪುರ	9.00	1.52	25.00	2.65
X.	Bijapur ಬಿಜಾಪುರ				
	1. Bijapur ಬಿಜಾಪುರ	9.00	9.00	25.00	12.95
	2. Indi ಇಂಡಿ	9.00	8.58	25.00	11.39
XI.	Uttara Kannada ಉತ್ತರ ಕನ್ನಡ				
	1. Karwar ಕಾರವಾರ	9.00	5.43	25.00	-
	2. Supa ಸುಫಾ	9.00	4.13	25.00	-
XII.	Bellary ಬಳ್ಳಾರಿ				
	1. Bellary ಬಳ್ಳಾರಿ	-	-	6.00	-

1	2	3	4	5	6
	2. Sandur ಸಂಡೂರು	-	-	6.00	-
	3. Siraguppa ಶಿರಗುಪ್ಪ	-	-	6.00	-
XIII.	Bidar ಬೀದರ್				
	1. Aurad ಔರಾದ್	-	-	6.00	-
	2. Basavakalyana ಬಸವಕಲ್ಯಾಣ	-	-	6.00	-
	3. Bhalki ಭಾಲ್ಕಿ	-	-	6.00	-
	4. Bidar ಬೀದರ್	-	-	6.00	-
	5. Humnabad ಹುಮ್ನಾಬಾದ್	-	-	6.00	-
XIV.	Gulbarga ಗುಲ್ಬರ್ಗಾ				
	1. Afzalpur ಅಫ್ಜಲ್‌ಪುರ	-	-	6.00	6.00
	2. Aland ಅಲಂದ	-	-	6.00	-
	3. Chincholi ಚಿಂಚೋಳಿ	93.00	93.00	6.00	-
	4. Sedam ಸೇಡಂ	-	-	10.00	-
	5. Shahapur ಷಹಪುರ	-	-	6.00	-
	6. Yadgir ಯಾದಗಿರಿ	-	-	6.00	-
XV.	Raichur ರಾಯಚೂರು				
	1. Manvi ಮಾನ್ವಿ	-	-	6.00	-
	2. Raichur ರಾಯಚೂರು	-	-	6.00	-
	Total ಒಟ್ಟು	500.00	399.37	1000.00	111.97

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ದಿನಾಂಕ 17-3-1992ರ 16ನೇ ಪಟ್ಟಿಯಲ್ಲಿರುವ 72 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 51 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸ್ವಾತಂತ್ರ್ಯ ಯೋಧರ ಪೆನ್‌ಶನ್‌ಗಾಗಿ ಬಂದ ಅರ್ಜಿಗಳ ಸಂಖ್ಯೆ

1256. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈವರೆಗೆ ಮಾಸಾಶನ ಕೇಳಿ ಸ್ವಾತಂತ್ರ್ಯ ಯೋಧರಿಂದ ಬಂದಿರುವ ಒಟ್ಟು ಅರ್ಜಿಗಳೆಷ್ಟು?

ಆ) ಆ ಪೈಕಿ ಈವರೆಗೆ ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ಕೊಡಲಾಗಿದೆ?

ಇ) ಇನ್ನು ಎಷ್ಟು ಅರ್ಜಿಗಳು ಮಂಜೂರಾತಿಗೆ ಬಾಕಿ ಇದೆ?

ಈ) ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು; ಹಾಗೂ ಹಣ ಮಂಜೂರು ಮಾಡದೇ ಇರಲು ಕಾರಣಗಳೇನಾದರೂ ಇವೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು 1969ನೇ ಸಾಲಿನಿಂದ ಜಾರಿಗೆ ತಂದ ದಿನದಿಂದ ಇಲ್ಲಿಯವರೆಗೆ ಸುಮಾರು 33.043 ಮಂದಿ ಸದರಿ ಪಿಂಚಣಿ ಕೋರಿ ಅರ್ಜಿ ಸಲ್ಲಿಸಿದ್ದರು.

ಆ) ರಾಜ್ಯದಲ್ಲಿ 19.914 ಮಂದಿಗೆ ರಾಜ್ಯ ಗೌರವಧನ ಮಂಜೂರು ಮಾಡಲಾಗಿದೆ. ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರಿಗೆ / ಅವಲಂಬಿತ ವಿಧವೆಯರಿಗೆ ಮಾಹೆಯಾನ ರೂ. 400-00 ರಂತೆ ಮಾಸಾಶನ ಕೊಡಲಾಗುತ್ತಿದೆ.

ಇ) 1800 ಅರ್ಜಿಗಳು ಬಾಕಿ ಇದೆ.

ಈ) ಅರ್ಜಿದಾರರಿಂದ ಸಂಪೂರ್ಣ ಮಾಹಿತಿ ಬರದೇ ಇರುವ ಕಾರಣ ಬಾಕಿ ಇರುವ ಈ ಅರ್ಜಿಗಳಲ್ಲಿ ಅರ್ಜಿದಾರರು ಸಂಪೂರ್ಣ ಮಾಹಿತಿ ಹಾಜರುಪಡಿಸಿದ ಕೂಡಲೇ ಈ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು.

1991ನೇ ಡಿಸೆಂಬರ್ ಕೊನೆಯವರೆಗೆ ಹೈಕೋರ್ಟಿನಲ್ಲಿ ಬಾಕಿ ಇರುವ ಪ್ರಕರಣಗಳು

1814. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹೈಕೋರ್ಟಿನಲ್ಲಿ 1991ನೇ ಡಿಸೆಂಬರ್ ಕೊನೆಯವರೆಗೆ ತೀರ್ಮಾನವಾಗದೆ ಬಾಕಿ ಉಳಿದಿರುವ ಪ್ರಕರಣಗಳೆಷ್ಟು;

ಆ) ಈ ಬಾಕಿ ಉಳಿದ ಪ್ರಕರಣಗಳು ತೀರ್ಮಾನವಾಗಲು ಇನ್ನು ಎಷ್ಟು ಕಾಲ ಬೇಕಾಗುವುದು; ಈ ರೀತಿ ಬಾಕಿ ಉಳಿಯಲು ಇರುವ ಕಾರಣಗಳಾದರೂ ಏನು;

ಇ) ಬಾಕಿ ಉಳಿದ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳ ಸಂಖ್ಯೆ

1255. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇಂದಿನವರೆಗೂ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು;

ಆ) ಇವುಗಳಲ್ಲಿ 3 ವರ್ಷಗಳಿಗಿಂತ ಹಿಂದಿನ ಮೊಕದ್ದಮೆಗಳೆಷ್ಟು;

ಇ) ಈ ಮೊಕದ್ದಮೆಗಳನ್ನು ಶೀಘ್ರ ವಿಲೇವಾರಿ ಮಾಡಲು ಸರಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ;

ಈ) ಹಾಗಿದ್ದರೆ. ಅದರ ವಿವರಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ವಿದ್ಯಾ ಸಂಸ್ಥೆಗಳಿಗೆ ವೃತ್ತಿ ತೆರಿಗೆ ಹಾಕುವುದನ್ನು ನಿಲ್ಲಿಸುವ ಬಗ್ಗೆ

1735. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾ ಸಂಸ್ಥೆಗಳಿಗೆ ರೂ. 2500-00ಗಳ ವೃತ್ತಿ ತೆರಿಗೆ ವಿಧಿಸುತ್ತಿರುವುದನ್ನು ಸರ್ಕಾರ ನಿಲ್ಲಿಸುವುದೆ;

ಆ) ಹಾಗಿದ್ದರೆ. ಎಂದಿನಿಂದ ನಿಲ್ಲಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1992-93ರ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ ಕನ್ನಡ ಮಾಧ್ಯಮ ಶಾಲೆಗಳಿಗೆ, ಹಾಗೂ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ. ಹಿಂದುಳಿದ ಜಾತಿ ಅಥವಾ ಹಿಂದುಳಿದ ಪಂಗಡದ ಮಾಲೀಕರುಗಳು ನಡೆಸುವ ಶಾಲೆಗಳಿಗೆ 1-4-1992 ರಿಂದ ವೃತ್ತಿ ತೆರಿಗೆಯಿಂದ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.

ಮೊಳಕಾಲ್ಮೂರಿನಲ್ಲಿ ವೃತ್ತ ಪೊಲೀಸ್ ಠಾಣೆ

1932. ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರುವಿನಲ್ಲಿ ವೃತ್ತ ಪೊಲೀಸ್ ಠಾಣೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಠಾಣೆಯನ್ನು ಮಂಜೂರು ಮಾಡಲಾಗುವುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ. ಆದಾಗ್ಯೂ, ಆ ರೀತಿ ಪ್ರಸ್ತಾವನೆ ಬಂದಲ್ಲಿ ಅದನ್ನು ಆದ್ಯತೆ, ಅಗತ್ಯತೆ ಮತ್ತು ಲಭ್ಯ ಸಂಪನ್ಮೂಲಗಳ ಆಧಾರದ ಮೇಲೆ ಪರಿಗಣಿಸಲಾಗುವುದು.

ಕರ್ನಾಟಕ ಗೃಹ ಮಂಡಳಿಯ ವಿವಿಧ ಯೋಜನೆಗಳು

1522. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯು ರಾಜ್ಯದಲ್ಲಿ ವಿವಿಧ ಯೋಜನೆಗಳಡಿಯಲ್ಲಿ 1990-91 ಹಾಗೂ 1991-92ರ ಸಾಲಿಗೆ ಮನೆ ಮತ್ತು ಬಹುಮಹಡಿ ಮನೆ ನಿರ್ಮಾಣ ಮಾಡಲು ಗುರುತಿಸಲಾಗಿರುವ ಸ್ಥಳಗಳಾವುವು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)?

ಆ) ಈ ಉದ್ದೇಶಕ್ಕಾಗಿ ಮೀಸಲಾಗಿರಿಸಿರುವ ಹಣ (ವಿವರ ನೀಡುವುದು) ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಪಟ್ಟಿ ಲಗತ್ತಿಸಲಾಗಿದೆ (ಅನುಬಂಧ -ಎ)

ಆ) 1990-91ರ ಸಾಲಿಗೆ 24.61 ಕೋಟಿ ರೂಪಾಯಿಗಳು

1991-92ರ ಸಾಲಿಗೆ 44.54 ಕೋಟಿ ರೂಪಾಯಿಗಳನ್ನು ಕರ್ನಾಟಕ ಗೃಹ ಮಂಡಳಿಯು ಮೀಸಲಾಗಿರಿಸಿದೆ.

ವಿವರ ಲಗತ್ತಿಸಿದೆ (ಅನುಬಂಧ-ಎ)

ANNEXURE-A

Places identified and proposed for construction of houses during the year 1990-91

Sl. No.	Place	No. of Units	Project cost (Approximate) Rs. in lakhs
1.	Specal housing scheme for Single working women at Yelahanka, Bangalore	104	57.60
2.	Community Hall & Club house & staff quarters at Bangalore	9	44.00
3.	Cash loan B'lore Urban	80	96.60
4.	C.H.S. @ Channapatna	156	18.14
5.	C.H.S. @ Tumkur	366	188.62
6.	S.F.S. @ Bellary	47	131.70
7.	Sites at Sindhanoor, Raichur	54	3.00
8.	S.C.H.S. @ Yelaburga	120	60.00
9.	C.H.S. @ Shahapur, Gulbarga	175	122.75
10.	C.H.S. @ Badepur	150	67.97
11.	Cash loan in Gulbarga	40	52.00
12.	Housing Scheme for Beedi workers @ Nipani, Belgaum District	120	26.19
13.	Cash loan Hubli-Dharwad	40	52.00
14.	S.F.S. @ Mysore	50	145.20
15.	Housing Scheme for Beedi workers at K.H. Halli, Mysore	1000	250.00
16.	- do - @ Gundlupet, Mysore	150	30.90
17.	- do - @ Gargeshwari	150	24.95
18.	C.H.S. @ T. Narasipur	120	65.84
19.	C.H.S. @ Bannur	245	120.00
20.	C.H.S. @ Hootagalli, Mysore (N.H.B.)	475	363.23
21.	Cash loan in Mysore	40	52.00
22.	C.H.S. @ Kallahalli, Shimoga	375	198.60
23.	C.H.S. @ Dandeli (U.K.)	198	118.50
24.	C.H.S. @ Sirsi (-"-)	103	37.49
25.	C.H.S. @ Keelakote, Chitradurga	234	134.00
	Total	**4601**	**2461.30**

ANNEXURE - A

Places identified and proposal for construction of houses during the year 1991-92

Sl. No.	Places	No. of Units	Project cost (Approximate) Rs. in lakhs
1.	C.H.S. @ Bidadi	281	144.59
2.	Cash loan B'lore (Urban)	200	120.00
3.	Cash loan B'lore (Rural)	50	30.00
4.	Housing Scheme for Industrial Workers @ Tumkur	308	285.27
5.	C.H.s. @ Harapanahalli Bellary District	163	75.64
6.	Housing Scheme for Beedi Workers @ Bellary	156	38.52
7.	Cash loan Scheme at Bellary Dist.	75	45.00
8.	C.H.S. @ Pothagal at Raichur	1318	1032.01
9.	C.H.S. @ Sindanoor	177	116.70
10.	C.H.S. @ Kothanoor at Gulbarga District	548	393.51
11.	Cash loan in Gulbarga District	125	75.00
12.	C.H.S. @ Chincholi	96	42.90
13.	Cash loan in Hassan District	80	48.00
14.	Housing Scheme for Beedi workers @ Davanagere	302	73.88
15.	Cash loan in Hubli-Dharwad District	175	105.00
16.	C.H.S. @ Hootagalli @ Mysore	2219	1458.68
17.	Cash loan in Mysore District	200	120.00
18.	Cash loan in Shimoga District	75	45.00
19.	S.F.S. @ Ullal, Mangalore	60	180.00
20.	Cash Loan in Mangalore Dist.	40	24.00
	Total	**6648**	**4453.70**

ಗುಲ್ಬರ್ಗಾ ಜಿಲ್ಲೆಯಲ್ಲಿ ಮೃತಪಟ್ಟ ಕುಟುಂಬಗಳಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ನೀಡುವುದು

1723. ಶ್ರೀ ಜಿ. ರಾಮಕೃಷ್ಣ (ಕಮಲಾಪುರ) : ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 7-7-1991 ರಂದು ಕಮಲಾಪುರದಲ್ಲಿ ಬರುವ ಕುದಮೂಡ, ಓಕಳಿ ಹಾಗೂ ಸಿರಸಗಿ ಗ್ರಾಮಗಳ ಪರಿಶಿಷ್ಟ ವರ್ಗದ ಜನರು ಟ್ರ್ಯಾಕ್ಟರ್‌ನಲ್ಲಿ ದನ್ನೂರು ಗ್ರಾಮಕ್ಕೆ ಶವಸಂಸ್ಕಾರಕ್ಕೆ ಹೋಗಿ ಹಿಂದಿರುಗುವಾಗ ಟ್ರ್ಯಾಕ್ಟರ್ ಮುಗುಚಿ ಬಿದ್ದು ಏಳು ಜನ ಸ್ಥಳದಲ್ಲೇ ಮೃತಪಟ್ಟು, 37 ಜನರು ಮರಣಾಂತಿಕ ಗಾಯಗೊಂಡು ಗುಲ್ಬರ್ಗಾ ಆಸ್ಪತ್ರೆಗೆ ದಾಖಲಾಗಿದ್ದುದು ನಿಜವೇ;

ಆ) ಗುಲ್ಬರ್ಗಾ ಜಿಲ್ಲಾಧಿಕಾರಿಯವರು ಸ್ಥಳ ಪರಿಶೀಲನೆ ನಡೆಸಿ ಮೃತರಾದ ಕುಟುಂಬದವರಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ಧನ ನೀಡಬೇಕೆಂದು ಸರ್ಕಾರಕ್ಕೆ 1991 ರಲ್ಲಿ ಶಿಫಾರಸ್ಸು ಮಾಡಿದ್ದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಈವರೆಗೆ ಸದರಿ ಪರಿಹಾರ ಧನವನ್ನು ಸಂಬಂಧಪಟ್ಟವರಿಗೆ ನೀಡದಿರುವುದಕ್ಕೆ ಕಾರಣವೇನು;

ಈ) ಸಂಬಂಧಪಟ್ಟವರಿಗೆ ಪರಿಹಾರ ಧನ ಯಾವಾಗ ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

ಅ) ಟ್ರ್ಯಾಕ್ಟರ್ ಅಪಘಾತವು ಸಂಭವಿಸಿದ್ದು ದಿನಾಂಕ 27-6-1991 ರಂದು. 7-7-1991 ರಂದು ಅಲ್ಲ.

ಆ ಘಟನೆಯಲ್ಲಿ 7 ಜನರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. 37 ಜನರು ಗಾಯಗೊಂಡಿದ್ದಾರೆ ಹಾಗೂ ಇವರನ್ನು ಗುಲ್ಬರ್ಗಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಆ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಧನ ಸಹಾಯ ನೀಡಲು ಶಿಫಾರಸ್ಸು ಮಾಡಿದ್ದಾರೆ.

ಇ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಹಣವಿಲ್ಲದಿದ್ದುದರಿಂದ ಪರಿಹಾರವನ್ನು ಕೂಡಲೇ ನೀಡಲು ಸಾಧ್ಯವಾಗಿಲ್ಲ.

ಈ) ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಲಾ ರೂ. 1,000-00 ನಂತೆ ಧನ ಸಹಾಯ ನೀಡಲು ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಸಾದರ ಮಂಗಲ ಗ್ರಾಮದಲ್ಲಿ ಹಸಿರು ವಲಯ ವ್ಯಾಪ್ತಿಯಲ್ಲಿ ಬರುವ ಭೂಮಿಯನ್ನು ಬಿ.ಡಿ.ಎ.ದಿಂದ ವೈಕಾನ್ ಲಿಮಿಟೆಡ್ ಇವರಿಗೆ ಹಂಚಿಕೆ.

1670. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಸಾದರ ಮಂಗಲ ಗ್ರಾಮದಲ್ಲಿ ಹಸಿರು ವಲಯ ವ್ಯಾಪ್ತಿಯಲ್ಲಿ ಬರುವ ಭೂಮಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವೈಕಾನ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಿದೆಯೇ?

ಆ) ಹಾಗಿದ್ದಲ್ಲಿ ಹಂಚಿಕೆಯಾಗಿರುವ ಭೂಮಿಯ ವಿಸ್ತೀರ್ಣ?

ಇ) ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಹಂಚಿಕೆ ಮಾಡಿದೆ?

ಈ) ವೈಕಾನ್ ಲಿಮಿಟೆಡ್‌ನವರು ಮೇಲಿನ ಭೂಮಿಗಾಗಿ ಸಂದಾಯ ಮಾಡಿರುವ ಹಣ?

ಉ) ಸದರಿ ಭೂ ಹಂಚಿಕೆಯನ್ನು ರದ್ದುಪಡಿಸಲು ಮತ್ತು ಸಾರ್ವಜನಿಕರಿಗಾಗಿ ನಿವೇಶನ ರಚಿಸಲು ಜನರಿಂದ ಬೇಡಿಕೆ ಏನಾದರೂ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಬೆಂಗಳೂರು ಸಂಚಾರಿ ಪೋಲೀಸರು ವಸೂಲಿ ಮಾಡಿದ ದಂಡದ ಮೊಬಲಗು

1812. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಇಸವಿ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಬೆಂಗಳೂರು ಸಂಚಾರಿ ಪೋಲೀಸರು ವಸೂಲಿ ಮಾಡಿದ ದಂಡದ ಮೊಬಲಗು ಎಷ್ಟು (ಮಾಹೆಯಾನ ಅಂಕಿ ಅಂಶಗಳನ್ನು ಒದಗಿಸುವುದು):

ಆ) ಸಂಚಾರಿ ಪೋಲೀಸರು ಮೊಕದ್ದಮೆಗಳನ್ನು ವಿವೇಚನಾರಹಿತವಾಗಿ ದಾಖಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ:

ಇ) ಮೊಕದ್ದಮೆಗಳನ್ನು ದಾಖಲು ಮಾಡುವ ಬದಲು ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

ಅ) ಮಾಹೆ	ಸಂಬಲಗು (ರೂ.ಗಳಲ್ಲಿ)
ಜನವರಿ 1991	7.63.096-00
ಫೆಬ್ರುವರಿ 1991	8.00.236-00
ಮಾರ್ಚ್ 1991	8.30.873.60
ಏಪ್ರಿಲ್ 1991	8.83.107-30
ಮೇ 1991	9.54.033-00
ಜೂನ್ 1991	11.57.719-20
ಜುಲೈ 1991	14.06.011-50
ಆಗಸ್ಟ್ 1991	14.65.989-00
ಸೆಪ್ಟೆಂಬರ್ 1991	11.94.656-60
ಅಕ್ಟೋಬರ್ 1991	9.86.395-00
ನವೆಂಬರ್ 1991	11.45.985-00
ಡಿಸೆಂಬರ್ 1991	9.11.554-60
ಒಟ್ಟು	**1,24,99,656-80**

ಆ) ಇಲ್ಲ.

ಇ) ಸಂಚಾರಿ ಪೋಲೀಸರು ಸಾರ್ವಜನಿಕರಿಗೆ ಸಂಚಾರಿ ಅಪರಾಧಗಳ ಬಗ್ಗೆ ತಿಳುವಳಿಕೆ ಕೊಟ್ಟು, ಅವನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ :

(1) ಪ್ರಚಾರ. (2) ಸಂಚಾರಿ ವ್ಯವಸ್ಥೆಯ ಬಗ್ಗೆ ಚಲನಚಿತ್ರ ಪ್ರದರ್ಶನಗಳನ್ನು ಏರ್ಪಡಿಸುವುದು. (3) ಸಾರ್ವಜನಿಕರಿಗೆ ಸಂಚಾರಿ ನಿಯಮಗಳ ಬಗ್ಗೆ ಪ್ರತಿವರ್ಷ ಸಂಚಾರಿ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವುದು. (4) ಸಂಚಾರಿ ಸುರಕ್ಷತಾ ಸಪ್ತಾಹಗಳನ್ನು ಆಚರಿಸುವುದು. (5) ಶಾಲಾಮಕ್ಕಳಿಗೆ ವಿದ್ಯಾರ್ಥಿ ಸಂಘಸಂಸ್ಥೆಗಳ ವತಿಯಿಂದ ಸಂಚಾರಿ ನಿಯಮಗಳ ಬಗ್ಗೆ ತರಬೇತಿ ನೀಡುವುದು.

ಬೆಂಗಳೂರು ಜಲಮಂಡಲಿಯ ಸಂಚಾರಿ ಶುಲ್ಕ ಪಾವತಿ

1811. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜನತೆಯಿಂದ ನೀರಿನ ಬಿಲ್‌ಗಳ ಹಣ ಪಾವತಿ ಮಾಡಲು ಬೆಂಗಳೂರು ಜಲ ಮಂಡಲಿಯ ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಇದೆಯೇ?

ಆ) ಇಲ್ಲದೆ ಹೋದಲ್ಲಿ ಸರ್ಕಾರವು ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಸೇವಾ ಠಾಣೆಗಳಲ್ಲಿ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಇದಲ್ಲದೆ ಉಪ ವಿಭಾಗಗಳಲ್ಲಿಯೂ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಪ್ರಸ್ತುತ ಕಾರ್ಯಾಚರಣೆ ವ್ಯವಸ್ಥೆಯಿಂದ ಸಂಚಾರಿ ಶುಲ್ಕ ಪಾವತಿ ಮಾಡುವ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ ಇಲ್ಲ. ಸಾರ್ವಜನಿಕ ಬೇಡಿಕೆಯನ್ನು ನಿರ್ವಹಿಸಲು ಪ್ರಸ್ತುತ ಹಣ ವಸೂಲಿ ಕೌಂಟರ್‌ಗಳು ಸಾಕಾಗಿದೆ.

ಜಯನಗರ ವಿಧಾನ ಸಭೆ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶದ ಅಭಿವೃದ್ಧಿ

1767. ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರ ಸಾಲಿನಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣವೆಷ್ಟು? (ಏಪ್ರಿಲ್ 1991 ರಿಂದ ಜನವರಿ 92ರ ಅಂತ್ಯದವರೆಗೆ);

ಆ) ತೆಗೆದುಕೊಂಡಿರುವ ಅಭಿವೃದ್ಧಿ ಕಾಮಗಾರಿಯ ರೀತಿ ಹೇಗೆ?

ಇ) ಈ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದ ಸ್ಥಳಗಳು ಯಾವುವು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 13.06 ಲಕ್ಷಗಳು

ಆ) ಪೇವಿಂಗ್, ಸ್ಯಾನಿಟರಿ. ರಿಟೈನಿಂಗ್ ವಾಲ್. ಸ್ಟಾರಮ್ ವಾಟರ್ ಡ್ರೈನ್ ಮತ್ತು ಸುಲಭ ಶೌಚಾಲಯ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗಾಗಿ ವಸತಿಗಳ ನಿರ್ಮಾಣ.

ಇ) 1) ಸರ್ವೆ ನಂ. 66. ಆಡುಗೋಡಿ

2) ಸರ್ವೆ ನಂ. 7. ತಾವರೆಕೆರೆ

3) ಸರ್ವೆ ನಂ. 5. ತಾವರೆಕೆರೆ

4) ಲಾಲ್‌ಬಾಗ್ ಸಿದ್ದಾಪುರ ಮತ್ತು

5) ಶಾಸ್ತ್ರೀನಗರ.

ಭತ್ತದ ಮೇಲೆ ಮಾರಾಟ ತೆರಿಗೆ

1936. ಶ್ರೀ ಎ.ಎಂ. ಹಿಂದಸಗೇರಿ (ಹುಬ್ಬಳ್ಳಿ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಡಕ್ಕಿ ಮತ್ತು ಅವಲಕ್ಕಿಗಳ ತಯಾರಿಸುವಿಕೆಗಾಗಿ ಖರೀದಿಸುವ ಭತ್ತಕ್ಕೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತಿದೆಯೆ? ಹಾಗಿದ್ದಲ್ಲಿ, ಯಾವಾಗಿನಿಂದ:

ಆ) ಭತ್ತದ ಮೇಲೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಿರುವ ದಿನಾಂಕಕ್ಕಿಂತ ಪೂರ್ವಾವಧಿಯಿಂದ ಈ ವಿನಾಯಿತಿ ವಿಸ್ತರಿಸುವ ಪ್ರಸ್ತಾವನೆಯೇನಾದರೂ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಮನೆ ನಿವೇಶನದ ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ

1527. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕುಂದಾಪುರ ತಾಲ್ಲೂಕಿನಲ್ಲಿ 1991-92ರಲ್ಲಿ ನಡೆದ ಜನ ಸಂಪರ್ಕ ಸಭೆಗಳಲ್ಲಿ ಮನೆ/ನಿವೇಶನ ಮಂಜೂರಾತಿ ಕೋರಿ ಬಂದ ಅರ್ಜಿಗಳೆಷ್ಟು? ಗ್ರಾಮಾವಾರು ವಿಳಾಸ ಸಹಿತ ವಿವರ ನೀಡುವುದು.

ಬಿ) ಇದರಲ್ಲಿ ಮಂಜೂರಾದ ಅರ್ಜಿಗಳು ಎಷ್ಟು (ಗ್ರಾಮಾವಾರು ವಿಳಾಸ ಸಹಿತ ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಎ) ಮನೆ/ನಿವೇಶನ ಕೋರಿ 193 ಅರ್ಜಿಗಳು ಬಂದಿದ್ದವು. (ಗ್ರಾಮಾವಾರು ಪಟ್ಟಿ ಲಗತ್ತಿಸಿದೆ-'ಅ')

ಬಿ) ಒಟ್ಟು 39 ಅರ್ಹ ಮಂದಿಗೆ ಮನೆ/ನಿವೇಶನ ಮಂಜೂರು ಮಾಡಲಾಗಿದೆ. (ಪಟ್ಟಿ ಲಗತ್ತಿಸಿದೆ 'ಅ')

ಅನುಬಂಧ 'ಅ'

ಜನಸಂಪರ್ಕ ಸಭೆಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರ ಹೆಸರು (1991-92 ಸಾಲಿನಲ್ಲಿ)

ತಾಲ್ಲೂಕು : ಕುಂದಾಪುರ

ಕ್ರ.ಸಂ.	ಗ್ರಾಮ	ಹೆಸರು
1	2	3
1)	ಬೆಳ್ವ	ನರಸಿಂಹ ನಾಯ್ಕ. ಬೆಳ್ವ
2)	-"-	ಲಕ್ಷ್ಮಣ. ತಂ. ಕಾಳಿಂಗ. ಬಳ್ವ
3)	-"-	ನಾಗರಾಜ. ಬೆಳ್ವ
4)	-"-	ವಿಠಲ ಪೂಜಾರಿ. ಬೆಳ್ವ
5)	-"-	ಅನ್ವರ್ ಹುಸೇನ್. ಬೆಳ್ವ
6)	-"-	ಕೆಡಿರಾಯ. ಬೆಳ್ವ
7)	-"-	ಮಹಾಬಲಶೆಟ್ಟಿ. ಗೋಲಯಂಗಡಿ
8)	-"-	ಗಲಾಬಿಶೆಡ್ತಿ. ಯಳಂತೂರು
9)	-"-	ಜಯಂತಿ ಹೆಗ್ಗಡ್ತಿ. ಯಳಂತೂರು
10)	ಅಲ್ಬಾಡಿ	ಅಣ್ಣಯ್ಯಶೆಟ್ಟಿ. ಬೆಳ್ವ ಅಲ್ವಾಡಿ
11)	-"-	ರಾಜೀವಶೆಟ್ಟಿ
12)	-"-	ಶಿವರಾಮ ಮರಜಾಲ. ಅರ್ಡಿ
13)	-"-	ಪಂಕಮ್ಮ ಶೆಡ್ತಿ. ಆರ್ಡಿ
14)	ಮುಡಾಮಕ್ಕ	ಬಚ್ಚಮ್ಮ ಶೆಡ್ತಿ. ಮಡಾಮಕ್ಕ
15)	ಅಮಾನಚ್ಚಲು	ಮಂಜನ್ಯಾಕ. ಅಮಾನಚ್ಚಲು
16)	-"-	ಸಾಧು ಕೊರಗ. ಮಚ್ಚಟ್ಟು
17)	ರಟ್ಬಾಡಿ	ಲಕ್ಷ್ಮ. ರಟ್ಬಾಡಿ
18)	-"-	ಭದ್ರಕೊರಗ. ಕಾನ್‌ಬೈಲು
19)	-"-	ಬಸವಕೊರಗ. ಕಾನ್‌ಬೈಲು
20)	-"-	ರಾಮಕೊರಗ. ಕಾನ್‌ಬೈಲು
21)	-"-	ಬಾಲಕೃಷ್ಣಶೆಟ್ಟಿ. ಹೊಲಿತಬೆಟ್ಟು
22)	ಯೆಡ್ಯಾಡಿ	ರಾಮಕೋಲ
	ಮತ್ಯಾಡಿ	ಯೆಡ್ಯಾಡಿ. ಮತ್ಯಾಡಿ
23)	-"-	ಗೌರಿ ಹೆಂ. ಅನಂತ ಮಡಿವಾಳ
24)	ಯೆಡ್ಯಾಡಿ / ಮತ್ಯಾಡಿ	ಚಂದು ತಂ.. ಒಡಿಯ ಮರಕ
25)	-"-	ಭಾಗಿ ಮರಕಾಲ

1	2	3
26)	ಯಡ್ಯಾಡಿ / ಮತ್ಯಾಡಿ	ಸಂಜೀವ. ಮಡಿವಾಳ. ತಂ. ನಡಿಯ
27)	-"-	ಗಿರಿಜ ಮರಕಾಲಿ. ಹೆಂ.ಬಸವ ಮರಕಾಲ
28)	-"-	ಚಂದ್ರಶೇಖರ್, ತಂ. ನರಸಿಂಹ. ಮರಕಾಲ
29)	-"-	ಶೀನ ಮರಕಾಲ. ತಂ. ನರಸಿಂಹ. ಮರಕಾಲ
30)	-"-	ರಾಜೀವ ಮರಕಾಲ. ತಂ ನರಸಿಂಹ. ಮರಕಾಲ
31)	-"-	ಜಗನ್ನಾಥಶೆಟ್ಟಿ
32)	ಹೆಂಗವಳ್ಳಿ	ಗುಲಾಬಿಶೆಡ್ತಿ
33)	-"-	ಸದಾಶಿವಶೆಟ್ಟಿ
34)	-"-	ಸುಮತಿಶೆಡ್ತಿ
35)	-"-	ಸುಧಾಕರನಾಯ್ಕ
36)	76 ಹಾಲಾಡಿ	ಯಶೋದಾ. ಹೆಂ. ಶೀನನಾಯ್ಕ
37)	-"-	ರುದ್ರಚಾರಿ. ತಂದೆ ಪರಮೇಶ್ವರ
38)	-"-	ನಾರಾಯಣ ಪೂಜಾರಿ
39)	-"-	ಸೂರಪೂಜಾರಿ. ತಂ. ಅಣ್ಣಪ್ಪ
40)	28 ಹಾಲಾಡಿ	ಕಾವೇರಿ. ಹೆಂ ಜೀಂಜನಾಯ್ಕ
41)	-"-	ಶೀನಆಚಾರ್ಯ, ಲಚ್ಚು
43)	-"-	ಮೀನಾಕ್ಷಿ. ತಂ. ಶೀನನಾಯ್ಕ
44)	ಮೊಳಹಳ್ಳಿ	ಶಂಕರಪೂಜಾರಿ. ತಂ. ಅಣ್ಣಯಪೂಜಾರಿ
45)	ಹೊಸಂಗಡಿ	ನರ್ಸಮ್ಮ. ಹೆಂ. ನರ್ಸಮಯ್ಯ
46)	-"-	ಪ್ರೇಮ. ಹೆಂ. ರುದ್ರಯ್ಯ
47)	-"-	ಜಯಲಕ್ಷ್ಮಿ ಪೂಜಾರ್ತಿ. ಹೆಂ. ನಾಗರಾಜ ಭಾಗಿಮನೆ
48)	-"-	ರಾಧಾ ಬಾಗಮನೆ
49)	-"-	ಚಲ್ಲಮ್ಮ. ಹೆಂ. ಮುನಿಸ್ವಾಮಿ
50)	ಅಂಪಾರು	ನಾಗೂ ಹರಿಜನ ಹೆಂ. ನಂದಿ ಹರಿಜನ, ಬಲಾಡಿ
51)		ಕೊಯ್ಲ ಹರಿಜನ. ತಂ. ನರಸಿಂಹ
52)		ಅಂತ ಹರಿಜನ. ಬಲಾಡಿ ಗುಡ್ಡೆ
53)		ಓರಗಾರ ಹರಿಜನ
54)		ಸ್ಫೂರ್ತಿ ಹರಿಜನ. ಸಂ. ಬಸವ
55)	ಕುಳಂಜಿ	ಜಯಲಕ್ಷ್ಮಿ ಪೂಜಾರ್ತಿ. ಹೆಂ. ನಾಗರಾಜ ಬಾಗಿಮನೆ
56)	-"-	ರಾಧಾ. ತಂ. ಗೋವಿಂದಶೆಟ್ಟಿ

1	2	3
57)	ಶಂಕರ	ಗಿರಿಜ ರಾಡ್ತಿ. ಯದಮಕ್ಕ
58)	ನಾರಾಯಣ	ಚಂದು ದೇವಾಡ್ತಿ. ತಂ. ನಾರಾಯಣ ದೇವಡಿಗ
59)	-"-	ಮಹಾಬಲ ದೇವಾಡಿಗ. ತಂ. ಶಂಕರ ದೇವಾಡಿಗ
60)	-"-	ಮಂಜುನಾಥ ಸಂ. ಅನಂತ ಹರಿಜನ
61)	-"-	ಪಾರ್ವತಿ ಆಚ್ಚಾರ್ತಿ. ತಂ. ಶಿವರಾಮ ಆಚಾರಿ
62)	-"-	ಗೌರಿ ಹೆಂಗ್ಸು. ಹೆಂ. ಅನಂತ ಹರಿಜನ. ಕ್ರೋಡಾ ಬೈಲೂರು
63)	-"-	ವನಿತ ಹಾಗಿಡ್ತಿ. ಹೆಂ. ಶಂಕರ್ ಹಾಂಡ
64)	ಹಳ್ನಾಡು	ಕುಡು ಹರಿಜನ ತಂ. ಕೋಟಿ ಹರಿಜನ
65)	-"-	ನಾರಾಯಣ ಹರಿಜನ. ತಂ. ಮಂಜ
66)	-"-	ಲೀಲಾವತಿ. ಹೆಂ. ಬಸವಶೆಟ್ಟಿ
67)	-"-	ನಾರಾಯಣ ಹರಿಜನ. ತಂ. ಬಸವ
68)	-"-	ಗ>ಪತಯ್ಯ ಶೆಟ್ಟಿ. ತಂ. ಅಂತಯ್ಯಶೆಟ್ಟಿ
69)	-"-	ಕಾವೇರಿ ಮೋಗೇರ್ತಿ. ಹೆಂ. ನದಿಯ ಮೊಗ್
70)	ಕಾವ್ರಾಡಿ (ಕರಡ್ಲೂರು)	ಬಿ. ಮಾಮಾಬೀ. ತಂ. ಮುದ್ದೀನ್
71)	-"-	ಜೀಬಿಮನ್
72)	ಕಾವ್ರಾಡಿ (ಕರಡ್ಲೂರು)	ಸತ್ರಮಾಬಿ
73)	-"-	ಬಲ್ಕೀನ್ ತಂ. ಖಾದಿರ್ ಸಾಹೇಬ್
74)	-"-	ಶಂಸುನ್ನೀಸ್ ತಂ. ಶೇ ಉಮ್ಮರ್ದ್
75)	-"-	ಜೈಮುಲ ಹಾಲಿದ್ದೀನ್. ತಂ. ಹಮೀದ್ ಸಾಹೇಬ್
76)	-"-	ಗಿರಿಜ ಕುಲಾಲ್ತಿ. ಹೆಂ. ರಘುರಾಮ್ ಕುಲಾಲ್
77)	-"-	ಶಾರ್ಭನ್ನಾ ಹೆಂ. ಸಮಿಾದ್ ಸಾಹೇಬ್
78)	-"-	ಕೆ.ಶಫಿ ಕೋಂ ಬುಡ್ಡನ್
79)	-"-	ಶಾರಭನ್. ತಂ. ಮಹಮದ್ ಗೌಸ್
80)	-"-	ಹಚ್. ಶಾರಭನ್ನಾ. ಹೆಂ. ಖಾದಿರ್ ಸಾಹೇಬ್
81)	-"-	ಜರಿವನಾ ತಂ. ಶೇಖ್ ಉಮ್ಮರ್ದ್ ಸಾಹೇಬ್
82)	-"-	ಗೋವಿಂದ ಕುಲಾಲಿ. ತಂ. ಬಚ್ಚ ಕುಲಾಲಿ

1	2	3
83)	ಕಾವ್ರಾಡಿ (ಕರಡ್ಲೂರು)	ಶಾಜೂನ್ನೀಸಾ. ಹೆಂ. ಕರೀಂ ಸಾಹೇಬ್
84)	-"-	ಕುಲೀಜಾ. ತಂಹಮ್ಮದ್ ಸಾಹೇಬ್
85)	-"-	ಎಪಜಾಬಿ ತಂ. ಇಕ್ಬಾಲ್ ಸಾಹೇಬ್
86)	-"-	ಮಹಮ್ಮದ್ ಖಾಸಿಂ ತಂ. ಶೊನ್ರೆ ಸಾಹೇಬ್
87)	-"-	ಜಾಫರ್ ಸಾಹೇಬ್ ತಂ. ಜಮ್ಮಿ ಅಲ್ಲ ಸಾಹೇಬ್
88)	-"-	ಖಲೀಫ್ ಜಾಫರ್ ತಂ. ಜರೀನಾ ಮೊಹದ್ದೀನ್
89)	-"-	ಬೀಬಿಹಾಜರ ಹೆಂ. ಉಸ್ತಾದ್
90)	-"-	ಇಬ್ರಾಹಿಂ ತಂ. ಭಾಷಾ ಸಾಹೇಬ್
91)	-"-	ಶಾಬುದ್ದೀನ್ ತಂ. ಹಾಜಿಬಾಪು
92)	-"-	ಜುಫ್ರುಲ್ಲಾ ತಂ. ಸಾಹೇಬ್
93)	-"-	ಬೀಬಿನಾರ. ಹಂ. ಅಕ್ಬರ್ ಸಾಹೇಬ್
94)	-"-	ಜಲ್ಲೀಸ್ ತಂ. ಅಬ್ದುಲ್‌ಮನ್
95)	ಕಾವ್ರಾಡಿ ಕರಡ್ಲೂರು	ಶಫ್ಪಿ ಮಹಮದ್ ಇಸಾಕ್ ತಂ. ಅಬ್ದುಲ್ ರೆಹಮಾನ್
96)	-"-	ಜರೀನಾ. ಹೆಂ. ಶಫಿ
97)	-"-	ಖಾಜಿಮಾರ್ ಮಹಮದ್ ತಂ. ಖಾಜಿಅಕ್ಬರ್ ಸಾಹೇಬ
98)	-"-	ಖಲೀಫ್ ಅಬೂಬ್‌ಕರ್ ತಂ. ಹಾಜಿ ಬಾಪೂಸಾಹೇಬ್
99)	-"-	ನಾರಾಯಣ ಪೂಜಾರಿ ತಂ. ಕೃಷ್ಣ ಪೂಜಾರಿ
100)	-"-	ಕೆ. ಅಸ್ರಫ್ ತಂ. ಹಲೀಮ್ ಮಹಮದ್
101)	-"-	ಖಾಸಿಂ ಹಬ್ಬೀರ್ ತಂ. ಖಾಸಿಂ ಮೊಹಿಟ್ಟೀನ್
102)	-"-	ಗುಂಪಯ್ಯಶೆಟ್ಟಿ ತಂ. ಅಂತಯ್ಯ ಶೆಟ್ಟಿ.
103)	-"-	ಎಸ್.ಎಂ. ಫಕೂರ್. ತಂ.
104)	-"-	ಅಬ್ದುಲ್ ನೂಕುರ್ ಸಾಹೇಬ್ ತಂ. ಅಬ್ದುಲ್ ಅಜೀಜ್ ಸಾಹೇಬ್
105)	-"-	ಶಾರಬನ್ನಾ ತಂ. ಹಮೀದ್
107)	-"-	ವೆಂಕಹರಿಜನ. ತಂ. ವೆಂಕಹರಿಜನ
108)	-"-	ಸಾರಾಬಿ / ತಂ. ಹಾರಿಜ್‌ಸಾಹೇಬ್
109)	-"-	ಸರೀನಾಬಿ. ತಂ. ಹಮ್ಮದ್ ಸಾಹೇಬ್

1	2	3
110)	ಕಾವ್ರಾಡಿ / ಕರಡ್ಲೂರು	ಅಬ್ದುಲ್ ಗುಫೂರ್. ತಂ. ಖಲೀಫ್ ಬ್ಯಾರಿ
111)	-"-	ಫಾತಿಯ. ತಂ. ಮ್ಯಾಜಿರ್ ಸಾಹೇಬ
112)	-"-	ಕುರ್ತಾಲಬಿದ್ದೀನ್. ತಂ. ಉಮ್ಮರ್ ಸಾಹೇಬ
113)	-"-	ಕೆ.ಬಿ. ಸಾಧಿಕ್. ತಂ. ಹುಸೇನ್ ಸಾಹೇಬ್
114)	-"-	ಗುಲಾಬಿಶೆಡ್ತಿ. ಹೆಂ. ಶೇಖರಶೆಟ್ಟಿ
115)	-"-	ಜಾವ್ರಾದ್ ಬೀಬಿ. ತಂ. ಹಮದ್ ಸಾಹೇಬ್
116)	-"-	ದಿಲ್‌ಷಾದ್. ತಂ. ಮುಹಮುದ್‌ಗೌಸ್
117)	-"-	ಕರಾಣಿ ಅಬ್ದುಲ್ ಖದಿರ್. ತಂ. ಕರಾಣಿ ಹಸನ್ ಸಾಹೇಬ್
118)	-"-	ಕರಾಣಿ ಸಲೀಮ್ ತಂ. ದಾಕ್ಲು ಸಾಹೇಬ್
119)	-"-	ಎಸ್. ಸಾಧಿಕ್ ತಂ. ಮೊಹಿದ್ದೀನ್ ಸಾಹೇಬ್
120)	-"-	ಲೂಸಿ. ಹೆಂ. ಚಾರ್ಲ್ಸ್ ಡಿಸೋಜ
121)	-"-	ಖಲೀಫ್ ಅಬ್ದುಲ್ ಗಫೂರ್ ತಂ. ಖಲೀಪ್ ಹಾಜಿ ಬಾಪ್ರು
122)	ಬಸ್ರೂರು	ಸುಲೇಮಾನ್ ತಂ. ಸಾಹೇಬ್ ಕೊಳ್ಕೇರಿ
123)	-"-	ರಂಗಪರಿಜನ. ತಂ. ರಾಮು
124)	-"-	ಕೊರಗುಪರಿಜನ. ತಂ. ಬಸವ
125)	-"-	ಕೃಷ್ಣ ಪೂಜಾರಿ. ತಂ. ಶೀನ
126)	-"-	ಬಾಬುಪೂಜಾರಿ. ತಂ. ಮಾಲಿಂಗ
127)	ಬಳ್ಕೂರು	ಕೃಷ್ಣ ಪೂಜಾರಿ. ತಂ. ಶೀನ
128)	-"-	ಬಾಬು ಕೆ. ಚಾರಿ. ತಂ. ಮಾಲಿಕ್
129)	ಬವ್ತಿ	ಮತ್ತು ಮಾಗೇರ್ತಿ. ಹೆಂ. ಬಸವ ಮಾಗೇರ
130)	-"-	ಬಾಬಿ ಮೋಗೇರ್ತಿ. ತಂ. ಬಸವ ಮೊಗೇರ
131)	-"-	ಬಚ್ಚಶೆಟ್ಟಿ ತಂ. ಕೊರಸ
132)	-"-	ಚುದು ಕೊಠಾರ್ತಿ. ಹೆಂ. ಮಂಜ
133)	-"-	ಕಾವೇರಿ ಕೊಠಾರ್ತಿ. ಹೆಂ. ನಾಗು
134)	-"-	ಗಿರಿಜಮೊಗೇರ್ತಿ. ಹೆಂ. ಆಸಾಡು
135)	-"-	ಅಕ್ಕುಬಾಂಡಿ. ಹೆಂ. ಅಣ್ಣಯ್ಯಬಾಂಡಿ
136)	-"-	ಗಿರಿಜ ಬಾಂಡಿ ಹೆಂ. ಸಂಜೀವ ಬಾಂಡಿ. ಕಲ್ಕೇಡಿ
137)	-"-	ಪಿತ್ರ ಪರಿಜನ ತಂ. ಪುಟ್ಟ ಪರಿಜನ. ಸುಬ್ಬನಕೆರೆ
138)		ಗಿರಿಜ. ಹೆಂ. ಮುತ್ತಯ್ಯ ಮಾಗೇರ. ಯಳಹಕ್ಲೂ

1	2	3
139)	ಕೆದೂರು	ಲೋಕೇಶ ಪೂಜಾರಿ. ತಂ. ಬಚ್ಚ
140)	-"-	ಕೆ.ಡಿ. ದನಕರಶೆಟ್ಟಿ
141)	-"-	ಕೆ. ಕರುಣಾಕರ ತಂ. ಸೂರ ಹರಿಜನ
142)	-"-	ಕುಶಲ ಮೊಗೇರ
143)	-"-	ಶೇಖರ್ ಪೂಜಾರಿ
144)	-"-	ಪರಮೇಶ್ವರ ಆಚಾರಿ. ತಂ. ಬಚ್ಚು ಆಚಾರಿ
145)	-"-	ಶಂಕರ ಆಚಾರಿ. ತಂ. ಕೊರಗ
146)	-"-	ಗಿರಿಜ. ಹೆಂಚ ಶಂಕರಯ್ಯ
147)	-"-	ಬಾಬು ಆಚಾರಿ. ತಂ. ವೆಂಕಟ್ರಮಣ. ಶಾನಾಡಿ
148)	-"-	ಈಶ್ವರಪ್ಪ. ತಂ. ಆರ್ಮುಗಂ
149)	-"-	ತಂಗವೇಲು ತಂ. ಈಶ್ವರಪ್ಪ
150)	-"-	ಮಂಜೋವಿ ತಂ. ಕನ್ನಪ್ಪ ಸ್ವಾಮಿ
151)	-"-	ಸಾದು ಕುಲಾಲ್ತಿ ಹೆಂ. ಮಂಜಕುಯಿ
152)	-"-	ಕೊಂಡಾ ಸಂ. ರಾಮಸ್ವಾಮಿ
153)	ಕೆಡೂರು	ಮಕಾಂಬೋವಿ. ತಂ. ಕಿಡಿವೇಲು
154)	-"-	ಸಾದಮ್ಮ ಭೋವಿ. ತಂ. ರಂಗನಾಥ
155)	-"-	ವಿಟ್ಟು ಕುಲಾಲಿ. ತಂ. ಬಚ್ಚ ಕಲಾಲಿ
156)	-"-	ಬಸವ ಹರಿಜನ
157)	-"-	ಮಕಾಂಯಮ್ಮ ಜನತಾ ಕೊಂವಿ
158)	-"-	ನಾಗರಾಜ. ತಂ. ವೆಂಕಟಪ್ಪ
159)	ಉಳ್ತೂರು	ಲಕ್ಷ್ಮಿ ಆಚಾರ್ತಿ. ಹೆಂ. ಪುಟ್ಟಯ್ಯ
160)	-"-	ಶೀನ ಕುಲಾಲಿ
161)	-"-	ಕೃಷ್ಣ ಕುಲಾಲಿ
162)	-"-	ಜಲಜ ದೇವಾಡಿಗ ತಂ. ರಾಮು ದೇವಾಡಿಗ
163)	-"-	ಸಂಜೀವ ದೇವಾಡಿಗ. ತಂ. ರಾಮ ದೇವಾಡಿಗ
164)	-"-	ಬಾಬು ಶೆಟ್ಟಿ. ತಂ. ದೇವಪ್ಪ ಶೆಟ್ಟಿ
165)	-"-	ವನಜಶೆಡ್ತಿ. ಹೆಂ. ಶಿವರಾಮಶೆಟ್ಟಿ
166)	-"-	ಲಕ್ಷ್ಮಿ ಭಂಡಾರಿ. ತಂ. ನಾರಾಯಣ ಭಂಡಾರಿ
167)	-"-	ಶಂಕರ ಆಚಾರ್ಯ. ತಂ. ಮಂಜುನಾಥ ಆಚಾರ್ಯ

1	2	3
168)	ಉಳ್ಳೂರು	ಜಾನಕಿ ಹೆಂ. ಮಂಜುನಾಥ
169)	-"-	ನಾರಾಯಣ ಆಚಾರಿ. ತಂ. ಮಂಜುನಾಥ ಆಚಾರ್ಯ
170)	-"-	ನಾರಾಯಣ ಆಚಾರಿ. ತಂ. ಗಣಪಯ್ಯ ಆಚಾರಿ
171)	-"-	ಕಮಲಮ್ಮ ಆಚಾರಿ. ಹೆಂ. ಮಂಜುನಾಥ ಆಚಾರಿ
172)	-"-	ಗಿರಿಜ. ತಂ. ಮಂಜುನಾಥ ಆಚಾರಿ
173)	-"-	ಲಕ್ಕಮ್ಮ. ಹೆಂ. ಅನಂತ
174)	-"-	ಜಲಜಮ್ಮ. ಶೆಡ್ತಿ. ಹೆಂ. ನಾರಾಯಣ
175)	-"-	ವೆಂಕಟ್ರಮಣ ಆಚಾರ್ಯ. ತಂ. ಮಂಜಯ್ಯ
176)	-"-	ಮಹಾಬಲ ಆಚಾರ್ಯ. ತಂ. ಶೀನ
177)	-"-	ಸಿದ್ದಯ್ಯ ಕುಲಾಲಿ. ತಂ. ಶೀನ
178)	-"-	ಕೃಷ್ಣ ದೇವಾಡಿಗ. ತಂ. ಬಸವ ದೇವಾಡಿಗ
179)	-"-	ಲಚ್ಚು. ಹೆಂ. ಬಸವ
180)	-"-	ಅನಂತ ದೇವಾಡಿಗ. ಸಂ. ಶುಕ್ರ
181)	ಉಳ್ಳೂರು	ಜಗ್ಗು ದೇವಾಡಿಗ ತಂ. ನರ್ಸು
182)	-"-	ದುಗ್ಗಪ್ಪ ಶೆಟ್ಟಿ. ತಂ. ಮಂಜಯ್ಯ ಶೆಟ್ಟಿ
183)	-"-	ಮಂಜುನಾಥ ಆಚಾರಿ. ತಂ. ಪುಟ್ಟಯ್ಯ
184)	-"-	ನರಸಿಂಹ ಆಚಾರಿ. ತಂ. ಪುಟ್ಟ ಆಚಾರಿ
185)	-"-	ಕೊರಮಾ ಬ್ಯಾ ಹೆಂ. ನರಸಿಂಹನಾಯಕ್
186)	-"-	ಮಹಾಲಿಂಗಶೆಟ್ಟಿ. ತಂ. ಬಡಿಯ ಶೆಟ್ಟಿ
187)	-"-	ಕಾವೇರಿ. ತಂ. ಪುಟ್ಟ ದೇವಾಡಿಗ
188)	-"-	ಗಿರಿಜ. ತಂ. ಪುಟ್ಟ ದೇವಾಡಿಗ
189)	-"-	ತುಂಗ ದೇವಾಡ್ತಿ. ಹೆಂ. ಬೋಜು
190)	ಕಾಳಾವರ	ಪದ್ಮಮ್ಮ ಶೆಡ್ತಿ. ಹೆಂ. ಕುಷ್ಟಪ್ಪ
191)	-"-	ಮಹಮದ್ ಹಮೀದ್ ಸಾಹೇಬ್. ತಂ. ಹಸನ್
192)	ಅಜ್ರಿಗ್ರಾಮ (ಕಮಲಶಿಲೆ)	ಸಾಧು ಅಜ್ರಿ ಕಮಲಶಿಲೆ
193)	-"-	ತೇಜಗೊಲ್ಲ ಅಜ್ರಿ

ಅನುಬಂಧ - ಆ

ಕುಂದಾಪುರ ತಾಲ್ಲೂಕಿನಲ್ಲಿ 1991-92ರಲ್ಲಿ ಜನಸಂಪರ್ಕ ಸಭೆಯಲ್ಲಿ ಪಡೆದ ಅರ್ಜಿಗಳಲ್ಲಿ ಮಂಜೂರಾದ ನಿವೇಶನಗಳ ವಿವರ-

ಕ್ರ. ಸಂ.	ಗ್ರಾಮ	ಹೆಸರು
1	2	3
1)	ಬೆಳ್ವೆ	ಲಕ್ಷ್ಮಣ ಬಿನ್ ಕಾಳಿಂಗ
2)	-"-	ನಾಗರಾಜನಾಯ್ಕ ಬಿನ್ ಕೊರಗನಾಯ್ಕ
3)	-"-	ಜಯಂತಿ ಹೆಗ್ಗಡ್ತಿ
4)	ಕಲ್ಪಾಡಿ	ಸಂಕಮ್ಮ ಶೆಡ್ತಿ
5)	-"-	ಶಿವರಾಮ ಮರಕಾಲ
6)	-"-	ಕಣ್ಣಯ್ಯ ಶೆಟ್ಟಿ
7)	ಯಸ್ಪಾಡಿ ಮತ್ಪಾಡಿ	ರಾಮಕುಲಾಲ ಬಿನ್ ಬಿಳಿಯಕುಲಾಲ
8)	-"-	ಗಿರಿಜ ಮರಕಾಲ್ತಿ
9)	-"-	ಸಂಜೀವ ಮಡಿವಾಳ
10)	-"-	ಚಂಜು
11)	ಜತ್ತಿ	ಐತುಹರಿಜನ ಕೋಂ ಮಂಜು
12)	-"-	ತಂಗವೇಲು
13)	-"-	ಮಣಬೋವಿ ಕೋಂ ಪಡಿವೇಲು
14)	ಉಳೂರು	ಲಕ್ಷ್ಮಿ ಆಚಾರ್ತಿ ಕೋಂ ಕೃಷ್ಣ ಆಚಾರಿ
15)	-"-	ಸೀನಕುಲಾಲ ಬಿನ್ ಶುಕ್ರಕುಲಾಲ
16)	-"-	ಜಲಜದೇವಾಡಿಗ ಕೋಂ ನಾರಾಯಣ
17)	-"-	ಸಂಜೀವ ದೇವಾಡಿ ಬಿನ್ ರಾಮ
18)	-"-	ಬಾಬುಶೆಟ್ಟಿ ಬಿನ್ ಸೀನಪ್ಪಶೆಟ್ಟಿ
19)	-"-	ಲಕ್ಷ್ಮಣ ಭಂಡಾರಿ ಬಿನ್ ನಾರಾಯಣ
20)	-"-	ಜಾನಕಿ ಕೋಂ ಮಂಜುನಾಥ ಆಚಾರಿ
21)	-"-	ನಾರಾಯಣ ಆಚಾರಿ ಬಿನ್ ಗಣಪಯ್ಯ
22)	-"-	ಗಿರಿಜ ಕೋಂ ಮಂಜುನಾಥ ಆಚಾರಿ
23)	-"-	ಲಕ್ಷ್ಮಮ್ಮ
24)	-"-	ಮಹಾಬಲ ಆಚಾರಿ ಬಿನ್ ಅನಂತ ಆಚಾರಿ
25)	-"-	ಕಾವೇರಿ ದೇವಾಡಿಗ ಕೋಂ ಸೀನದೇವಾಡಿಗ
26)	-"-	ವನಜಶೆಡ್ತಿ

1	2	3
27)	ಹೆಂಗವಳ್ಳಿ	ಸುಮತಿ ಶೆಡ್ತಿ
28)	-"-	ಸುಧಾಕರ ನಾಯ್ಕ
29)	-"-	ಗುಲಾಬಿ ಶೆಡ್ತಿ
30)	-"-	ಶಂಕರ ಪೂಜಾರಿ
31)	ಗ್ರೂರು	ಸುಲೇಮಾನ್
32)	ಕೆದೂರು	ಕರುಣಾಕರ ಪರಿಜನ ಬಿನ್ ಸೂರ ಪರಿಜನ
33)	ಕಾಳಾವರ	ಪದ್ಮಮ್ಮ ಶೆಡ್ತಿ ಕೋಂ ಕೃಷ್ಣಪ್ಪ ಶೆಟ್ಟಿ
34)	ಕವ್ರಾಡಿ	ಶಂಷುನ್ನೀಸಾ ಕೋಂ ಇಬ್ರಾಹಿಂ
35)	-"-	ಖತೀಜಾ ಜಾಫರ್
36)	-"-	ಜಾಫರ್ ಸಾಹೇಬ್ ಬಿನ್ ಜಮಿತಲ್ಲಿ
37)	-"-	ಝುರೀನ್ನಾ ಕೋಂ ಶಫಿ
38)	-"-	ಖಾಜಿನೂರ್ ಮಹಮದ್ ಬಿನ್ ಹಾಜಿ ಹಾಜಿಸಾಹೇಬ್
39)	-"-	ವೆಂಕ್ಟ ಪರಿಜನ ಬಿನ್ ಸಂಕ ಪರಿಜನ

ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರ ಬಗ್ಗೆ

1330. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಂತ ಹಂತವಾಗಿ ಪಾನ ನಿರೋಧವನ್ನು ಜಾರಿಗೆ ತರುವುದಾಗಿ ಸರ್ಕಾರದವರು ತೀರ್ಮಾನಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ರಾಜ್ಯದಲ್ಲಿ ಮದ್ಯದ ದುರಂತವಾದ ನಂತರ ಕಮಿಷನ್ ಆಫ್ ಇಂಕ್ವೈರಿಯ ಶಿಫಾರಸುಗಳನ್ನು ಪರೀಕ್ಷಿಸಲು. ಮದ್ಯದ ವ್ಯಾಪಾರದ ಬಗ್ಗೆ ನೆರೆ ರಾಜ್ಯಗಳು ಅನುಸರಿಸುತ್ತಿರುವ ನೀತಿ. ನಿಯಮಗಳನ್ನು ಅಧ್ಯಯಿಸಲು ಮತ್ತು ಪಾನ ನಿಷೇಧವನ್ನೊಳಗೊಂಡಂತೆ ಪರ್ಯಾಯ ನೀತಿಯನ್ನು ಅಳವಡಿಸುವ ಸಾಧ್ಯತೆಯನ್ನು ಶಿಫಾರಸು ಮಾಡಲು ಕರ್ನಾಟಕ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು 1988ನೇ ಜುಲೈ ತಿಂಗಳಿನಲ್ಲಿ ರಚಿಸಿತು. 1989ರಲ್ಲಿ

ವಿಧಾನಸಭೆಯ ವಿಸರ್ಜನೆಯಿಂದಾಗಿ ಸದರಿ ಸಮಿತಿಯನ್ನು ಪುನರ್ ರಚಿಸಲು ಕ್ರಮ ಕೈಗೊಳ್ಳಲಾಗಿದೆ. ಪುನರ್ ರಚಿತ ಸಮಿತಿಯು ತನ್ನ ವರದಿಯನ್ನು ಕೊಟ್ಟ ಕೂಡಲೇ ಸರ್ಕಾರವು ಮುಂದಿನ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತ

1506. ಡಾ. ಎ.ಬಿ. ಮಾಲಕ ರೆಡ್ಡಿ (ಯಾದಗಿರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತವನ್ನು ರಾಜ್ಯ ಸರ್ಕಾರವೂ ಜಾರಿಗೊಳಿಸಿರುವುದು ವಾಸ್ತವವೇ?

ಆ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು :

1. ಇಲಾಖೆಗಳ ಹೆಸರು
2. ಆಯವ್ಯಯದಲ್ಲಿ ಸೂಚಿಸಿರುವ ಹಣ
3. ಜಾರಿಗೊಳಿಸಿರುವ ಕಡಿತ
4. ಖರ್ಚಾಗಿರುವ ವಾಸ್ತವಿಕ ವೆಚ್ಚ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಆದೇಶಗಳನ್ನು ಜಾರಿಗೊಳಿಸುತ್ತಿದೆ. ಕೇಂದ್ರ ಸರ್ಕಾರದ ಅನುಷ್ಠಾನದಲ್ಲಿರುವ ಕೆಲವು ಮಿತವ್ಯಯ ಕ್ರಮಗಳನ್ನು ರಾಜ್ಯ ಸರ್ಕಾರವು ಈ ಕೆಳಗೆ ಸೂಚಿಸಿರುವಂತೆ ಅನ್ವಯಿಸಿಕೊಂಡಿದೆ.

1. ದೂರವಾಣಿ ವೆಚ್ಚದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
2. ಸಾರ್ವಜನಿಕ ಕಟ್ಟಡಗಳಲ್ಲಿ ಹಾಗೂ ಕಚೇರಿಗಳ ವಿದ್ಯುಚ್ಛಕ್ತಿ ಉಪಯೋಗದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
3. ಪೆಟ್ರೋಲ್, ಡೀಸೆಲ್, ಎಣ್ಣೆ, ವಾಹನಗಳ ನಿರ್ವಹಣೆಯ ವೆಚ್ಚದಲ್ಲಿ ಶೇ. 20 ರಷ್ಟು ಕಡಿತ ವಿಧಿಸಲಾಗಿದೆ.

ಈ ಮಧ್ಯೆ ಕೇಂದ್ರ ಸರ್ಕಾರವು ಕೈಗೊಂಡಿರುವ ಮಿತವ್ಯಯ ಕ್ರಮಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರಿ ವೆಚ್ಚದಲ್ಲಿ ಮಿತವ್ಯಯ ಕ್ರಮಗಳನ್ನು ಸೂಚಿಸಲು ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ನೇಮಿಸಲಾಗಿದೆ. ಈ ಉಪ ಸಮಿತಿಯು ವರದಿ ನೀಡಿದೆ. ವಿವರಗಳನ್ನು ಆಯವ್ಯಯ ಭಾಷಣದಲ್ಲೂ ತಿಳಿಸಲಾಗಿದೆ. ಇದನ್ನು ಸರ್ಕಾರದಲ್ಲಿ ಒಪ್ಪಿಕೊಳ್ಳಲಾಗಿದ್ದು, ಈ ಬಗ್ಗೆ ಕೈಗೊಂಡ ನಿರ್ಣಯಗಳನ್ನು ಜಾರಿಗೊಳಿಸಲು ಸರ್ಕಾರದ ಆದೇಶಗಳನ್ನೂ ಸಹ ಸದ್ಯದಲ್ಲಿಯೇ ಹೊರಡಿಸಲಾಗುತ್ತದೆ.

ಆ) ಮಿತವ್ಯಯ ಆದೇಶಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಹಾಗೂ ರಾಜ್ಯದ ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಈ ರೀತಿ ಜಾರಿಗೊಳಿಸಿದ ಆದೇಶಗಳಿಂದ ಸರ್ಕಾರಕ್ಕೆ ಲಭ್ಯವಾದ ವಾಸ್ತವಿಕ ಉಳಿತಾಯವನ್ನು ಕೂಡಲೆ ಪರಿಮಾಣ ಮಾಡಲು ಸಾಧ್ಯವಿಲ್ಲ. ಆದಾಗ್ಯೂ ಸಾಕಷ್ಟು ರೀತಿಯಲ್ಲಿ ವೆಚ್ಚವನ್ನು ಕಡಿತಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.

ಆಶ್ರಯ ಯೋಜನೆಯಡಿಯಲ್ಲಿ ಭೂಮಿ ಖರೀದಿ ಮಾಡಲು ಬಿಡುಗಡೆಯಾದ ಹಣ.

1725. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗೆ "ಆಶ್ರಯ" ಯೋಜನೆಯಡಿಯಲ್ಲಿ ನಿವೇಶನಗಳಿಗಾಗಿ ಭೂಮಿ ಖರೀದಿ ಮಾಡಲು ಬಿಡುಗಡೆ ಮಾಡಿದ ಹಣವೆಷ್ಟು;

ಆ) ಇಲ್ಲಿಯವರೆಗೆ ಈ ಹಣದಲ್ಲಿ ಖರ್ಚಾಗಿರುವ ಮತ್ತು ಉಳಿದ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಗುಲ್ಬರ್ಗಾ ಜಿಲ್ಲೆಯ ತಾಲ್ಲೂಕುವಾರು ಮಂಜೂರಾಗಿ ಬಿಡುಗಡೆ ಮಾಡಿದ ಹಣವೆಷ್ಟು?

ಈ) ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಎಕರೆ ಭೂಮಿ ಖರೀದಿ ಮಾಡಲಾಗಿದೆ, ಹಾಗೂ ಈ ಭೂಮಿಯಲ್ಲಿ ನಿವೇಶನಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಉ) ಬಿಡುಗಡೆ ಮಾಡಿರುವ ಹಣದಲ್ಲಿ ಭೂಮಿ ಖರೀದಿಯ ನಂತರ ಉಳಿದಿರುವ ಹಣ ಎಷ್ಟು? (ತಾಲ್ಲೂಕುವಾರು ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 1740 ಲಕ್ಷಗಳು

ಆ)	ಬಿಡುಗಡೆಯಾದ ಹಣ	ರೂ. 174000000-00
	ಖರ್ಚಾದ ಹಣ	ರೂ. 54370858-62
	ಬಾಕಿ	**ರೂ. 119629141-38**

(ಜಿಲ್ಲಾವಾರು ವಿವರ ಅನುಬಂಧ 'ಅ' ದಲ್ಲಿರುವಂತೆ)

ಇ) ಗುಲ್ಬರ್ಗಾ ಜಿಲ್ಲೆಗೆ ಒಟ್ಟು 122.09 ಲಕ್ಷ ರೂ.ಗಳು ಬಿಡುಗಡೆ ಮಾಡಲಾಗಿದ್ದು ತಾಲೂಕಾವಾರು ಖರ್ಚಿನ ವಿವರ ಈ ಕೆಳಗಿನಂತಿವೆ.

1)	ಗುಲ್ಬರ್ಗ	875000
2)	ಆಳಂದ	1100000
3)	ಅಫ್ಜಲ್‌ಪುರ್	1525000
4)	ಜೇವರ್ಗಿ	825000
5)	ಸೇಡಂ	1070000
6)	ಚಿತ್ತಾಪುರ್	1665000
7)	ಚಿಂಚೋಳಿ	676000
8)	ಯಾದಗಿರ್	1875000
9)	ಶಹಾಪುರ್	1465000
10)	ಶೋರಾಪುರ್	921000
	ಒಟ್ಟು	**ರೂ. 11997000**

ಈ)	1)	ಗುಲ್ಬರ್ಗ	19.01
	2)	ಚಿಂಚೋಳಿ	7.22
	3)	ಸೇಡಂ	32.08
	4)	ಜೇವರ್ಗಿ	32.20
	5)	ಅಫ್ಜಲ್‌ಪುರ್	81.13
	6)	ಚಿತ್ತಾಪುರ್	50.20
	7)	ಯಾದಗಿರ್	52.09
	8)	ಶಹಾಪುರ್	48.21
	9)	ಆಳಂದ	32.15
	10)	ಶೋರಾಪುರ್	5.00
		ಒಟ್ಟು ಎಕರೆಗಳು	361.09

ಒಟ್ಟು ಫಲಾನುಭವಿಗಳು ಸಂಖ್ಯೆ 27800 (31-1-92ರ ವರೆಗೆ)

ಉ) ಗುಲ್ಬರ್ಗಾ ಜಿಲ್ಲೆಗೆ	ಬಿಡುಗಡೆ ಮಾಡಿದ ಹಣ	ರೂ. 12290000
	ಖರ್ಚಾದ ಹಣ	ರೂ. 11997000
	ಬಾಕಿ ಹಣ	**ರೂ. 293000**

ಅನುಬಂಧ - 'ಅ'

ಕ್ರಮ ಸಂಖ್ಯೆ	ಜಿಲ್ಲೆಗಳು	ಬಿಡುಗಡೆಯಾದ ಹಣ (ಲಕ್ಷ ರೂ.ಗಳಲ್ಲಿ)	ಖರ್ಚು	ಬಾಕಿ
1)	ಬೆಂಗಳೂರು (ಗ್ರಾ)	129.80	5711577-00	7268423-00
2)	ಬೆಂಗಳೂರು (ನಗರ)	252.60	1026000-00	24234000-00
3)	ತುಮಕೂರು	54.80	1752427-00	3727573-00
4)	ಚಿತ್ರದುರ್ಗ	72.20	2314138-00	4905862-00
5)	ದಕ್ಷಿಣ ಕನ್ನಡ	30.25	290000-00	2825000-00
6)	ಕೊಡಗು	43.40	895187-00	3444813-00
7)	ಬೆಳಗಾಂ	52.95	766750-00	4528250-00
8)	ಬೀದರ್	11.50	123850-00	1026150-00
9)	ಧಾರವಾಡ	45.20	2057608-25	2462391-75
10)	ಚಿಕ್ಕಮಗಳೂರು	33.50	2350000-00	1000000-00
11)	ಕೋಲಾರ	116.50	1401177-00	10248823-00
12)	ರಾಯಚೂರು	70.00	908910-65	6091089-35
13)	ಮೈಸೂರು	186.60	12402000-00	6258000-00
14)	ಬಳ್ಳಾರಿ	129.00	1697047-72	11202952-28
15)	ಮಂಡ್ಯ	107.00	1049994-00	9650006-00
16)	ಗುಲ್ಬರ್ಗಾ	122.90	11997000-00	293000-00
17)	ಉತ್ತರ ಕನ್ನಡ	104.60	1357500-00	9102500-00
18)	ಶಿವಮೊಗ್ಗ	79.60	2400000-00	5560000-00
19)	ಹಾಸನ	37.00	1281064-00	2418936-00
20)	ಬಿಜಾಪುರ	60.60	2679628-00	3381372-00
	ಒಟ್ಟು	1740.00	54370858-62	119629141-38

ಕಾವೇರಿ ನೀರಿನ ವಿವಾದದ ಬಂದ್‌ನ ಸಮಯದಲ್ಲಿ ಹಾನಿಗೊಳಗಾದ ನಷ್ಟದ ಅಂದಾಜು

1503. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾವೇರಿ ನೀರಿನ ವಿವಾದ ಸಮಯದ / ಬಂದ್ ಸಮಯದಲ್ಲಿ ಹಾನಿಗೊಳಗಾದ ವಸ್ತುಗಳ, ಕಟ್ಟಡಗಳ, ವಾಹನಗಳ ಮತ್ತು ಇತರೆ ನಾಶವಾದ ವಸ್ತುಗಳ ಅಂದಾಜು ಹಣವೆಷ್ಟು;

ಆ) ರಾಜ್ಯದಿಂದ ತಮಿಳುನಾಡಿಗೆ ಹೋದ ತಮಿಳರ ಸಂಖ್ಯೆ ಎಷ್ಟು;

ಇ) ವಾಪಸು ಬಂದವರ ಸಂಖ್ಯೆ ಎಷ್ಟು;

ಈ) ರಾಜ್ಯ ಸರ್ಕಾರದವರು ತಮಿಳರ ಸಂರಕ್ಷಣೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):

ಅ) ರೂ. 46.98.53.017-00

ಆ) ಸುಮಾರು 69.085 ಜನರು.

ಇ) ಬಹುತೇಕ ಎಲ್ಲರೂ ವಾಪಸ್ಸು ಬಂದಿರುತ್ತಾರೆ.

ಈ) ತಮಿಳರು ವಾಸಿಸುವ ಸ್ಥಳಗಳಲ್ಲಿ ಅವರ ಮೇಲಿನ ದುಷ್ಕೃತ್ಯಗಳನ್ನು ತಡೆಯಲು ಬಿಗಿ ಬಂದೋಬಸ್ತು ಏರ್ಪಡಿಸಲಾಗಿದೆ. ತಮಿಳರ ಪ್ರಾಣ, ಆಸ್ತಿ-ಪಾಸ್ತಿ ಹಾನಿಯಾಗದಂತೆ ಸಂಪೂರ್ಣ ಸಂರಕ್ಷಣಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ರಾಜ್ಯದಿಂದ ವಲಸೆ ಹೋದ ಹಾಗೂ ರಾಜ್ಯಕ್ಕೆ ವಲಸೆ ಬಂದವರಿಗೆ ಗಡಿ ಜಿಲ್ಲೆಗಳಲ್ಲಿ ಪುನರ್ವಸತಿ, ಊಟ ಹಾಗೂ ಬಟ್ಟೆಬರೆ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿ ನಡೆದಿರುವ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

1817. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ 1989 ರಿಂದ ಇಲ್ಲಿಯವರೆಗೆ ಎಷ್ಟು ವರದಕ್ಷಿಣೆ ಪ್ರಕರಣಗಳು ನಡೆದಿವೆ?

2) ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಎಷ್ಟು ಜನ ಸಾವಿಗೀಡಾಗಿದ್ದಾರೆ?

3) ಸರ್ಕಾರ ವರದಕ್ಷಿಣೆ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿದೆಯೇ? ಯಾವುವು (ವಿವರ ನೀಡುವುದು)?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

1)

	1989	1990	1991	1992 (31-1-92 ರವರೆಗೆ)
ವರದಕ್ಷಿಣೆ ಸಾವು ಪ್ರಕರಣಗಳು	190	193	221	14
ವರದಕ್ಷಿಣೆ ಕಿರುಕುಳ ಪ್ರಕರಣಗಳು	752	887	892	59

2)

ವರ್ಷ		ವರದಕ್ಷಿಣೆ ಪ್ರಕರಣಗಳಲ್ಲಿ ಮೃತರಾದವರು
1989		190
1990		193
1991		221
1992	(31-1-92ರವರೆಗೆ)	14

3) 1) ವರದಕ್ಷಿಣೆಯ ಬಾಬ್ತು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ನಿವಾರಿಸಲು ವರದಕ್ಷಿಣೆ ನಿರೋಧ ದಳವೆಂಬ ಒಂದು ವಿಶೇಷ ದಳವನ್ನು ಅಪರಾಧ ತನಿಖಾ ವಿಭಾಗದಲ್ಲಿ 1989 ರಲ್ಲಿ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟ್. ಮಹಿಳಾ ಪೋಲೀಸ್ ಅಧಿಕಾರಿಗಳು ಮತ್ತು ಇತರೆ ಪೆಂಬಲಿತ ಸಿಬ್ಬಂದಿಯೊಂದಿಗೆ ಪ್ರಾರಂಭಿಸಲಾಗಿದೆ. ಇತ್ತೀಚಿಗೆ ಸರ್ಕಾರವು ವರದಕ್ಷಿಣೆ ನಿರೋಧ ದಳಕ್ಕೆ ಹೆಚ್ಚುವರಿಯಾಗಿ 11 ಜನ ಮಹಿಳಾ ಪೋಲೀಸ್ ಇನ್ಸ್‌ಪೆಕ್ಟರ್‌ಗಳ ಹುದ್ದೆಯ ಮಂಜೂರಾತಿಯನ್ನು ನೀಡಿರುತ್ತದೆ.

2) ವರದಕ್ಷಿಣೆ ನಿಷೇಧ ಕಾಯ್ದೆ 1984ನ್ನು 1985 ಮತ್ತು 1986ರಲ್ಲಿ ತಿದ್ದುಪಡಿ ಮಾಡಿ. ಇಂಥಹ ಹಾವಳಿಯನ್ನು ತಡೆಗಟ್ಟಲು ಹೆಚ್ಚಿನ ಶಿಕ್ಷೆ ನೀಡಬಹುದಾಗಿದೆ. ಭಾರತೀಯ ದಂಡ ಸಂಹಿತೆಯಲ್ಲಿ ಕಲಂ 304(ಬಿ) ಎಂಬ ಕಲಂ ಅನ್ನು ವರದಕ್ಷಿಣೆ ಅಪರಾಧ ತಡೆಗಟ್ಟಲು ಅಳವಡಿಸಲಾಗಿದೆ.

3) ಎಲ್ಲಾ ವರದಕ್ಷಿಣೆ ಪ್ರಕರಣಗಳಲ್ಲಿ. ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್ ಅಥವಾ ಅದಕ್ಕೆ ಮೇಲ್ಪಟ್ಟ ಅಧಿಕಾರಿಯವರು ತನಿಖೆಯನ್ನು ಕೈಗೊಳ್ಳುತ್ತಾರೆ. ಮುಖ್ಯವಾದ ಪ್ರಕರಣಗಳನ್ನು ಅಪರಾಧ ತನಿಖಾ ವಿಭಾಗವು ತೆಗೆದುಕೊಳ್ಳುವುದು.

ಅಬಕಾರಿ ಇಲಾಖೆಯಲ್ಲಿ ಉಪ ಆಯುಕ್ತರ ಹುದ್ದೆಗಳ ಸೃಷ್ಠಿ.

1816. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಹೊಸದಾಗಿ ಸೃಷ್ಟಿಸಿರುವ ಉಪ ಆಯುಕ್ತರ ಹುದ್ದೆಗಳೆಷ್ಟು?

ಆ) ಈ ಸೃಷ್ಟಿಸಿದ ಹುದ್ದೆಗಳಿಂದ ಸರ್ಕಾರಕ್ಕೆ ವರ್ಷವೊಂದಕ್ಕೆ ತಗಲುವ ವೆಚ್ಚವೆಷ್ಟು?

ಇ) ಹಾಲಿ ಇದ್ದ ಸಿಬ್ಬಂದಿ ವರ್ಗದಿಂದ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲವೇ?

ಈ) ಈ ಹುದ್ದೆಗಳನ್ನು ಸೃಷ್ಟಿಸಿರುವ ಔಚಿತ್ಯವೇನಿತ್ತು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) 23.

ಆ) ವರ್ಷಕ್ಕೆ ರೂ. 52.75 ಲಕ್ಷ.

ಇ) ಅಬಕಾರಿ ಉಪ ಆಯುಕ್ತರು ಹುದ್ದೆಗಳನ್ನು ನ್ಯಾಯಮೂರ್ತಿ ದೇಸಾಯಿ ಆಯೋಗದ ಸಲಹೆಯಂತೆ ಅಬಕಾರಿ ನಿಯಮ ಮತ್ತು ಎನ್‌ಫೋರ್ಸ್‌ಮೆಂಟ್ ಕಾಯಿದೆಯನ್ನು ಅನುಷ್ಠಾನಗೊಳಿಸಲು ಮತ್ತು ರೆವಿನ್ಯೂ ಜಿಲ್ಲಾಧಿಕಾರಿಗಳ ಹೆಚ್ಚುವರಿ ಕೆಲಸವನ್ನು ಕಡಿಮೆ ಮಾಡಲೂ ಸೃಷ್ಟಿಸಲಾಗಿದೆ.

ಈ) - " -

ಬೆಂಗಳೂರು ನಗರದಲ್ಲಿ ನಡೆದ ಡಕಾಯಿತಿ ಪ್ರಕರಣಗಳ ಪತ್ತೆ

1182 (1731) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1987-88. 1988-89. 1989-90. 1990-91 ಹಾಗೂ 1991-92ರ ಜನವರಿ 31ರವರೆವಿಗೆ ಬೆಂಗಳೂರು ನಗರ ಹಾಗೂ ಬೆಂಗಳೂರು ನಗರದ ಹೊರವಲಯದಲ್ಲಿ ಎಷ್ಟು ಡಕಾಯಿತಿ ಪ್ರಕರಣಗಳು ಪತ್ತೆಯಾಗಿವೆ?

ಆ) ಈ ಪ್ರಕರಣಗಳಲ್ಲಿ ಸಂಭವಿಸಿದ ಆಸ್ತಿ ಪಾಸ್ತಿಗಳ ನಷ್ಟದ ಅಂದಾಜು ವಿವರಗಳೇನು?

ಇ) ಇದುವರೆವಿಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಈ) ಮುಂದಿನ ದಿನಗಳಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಹೊರವಲಯಗಳಲ್ಲಿ ಡಕಾಯಿತಿಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

1987	1988	1989	1990	1991	1992
3	3	2	6	5	ಇಲ್ಲ.

ಆ)

1987	ರೂ. 1.36.900-00
1988	ರೂ. 2.72.870-00
1989	ರೂ. 3.83.200-00
1990	ರೂ. 6.46.900-00
1991	ರೂ. 3.80.050-00
1992	ರೂ. ಇಲ್ಲ.

ಇ)

1987	1988	1989	1990	1991	1992
3	3	2	6	5	ಇಲ್ಲ

ಈ) 1. ದರೋಡೆ ಪ್ರಕರಣಗಳನ್ನು ತಡೆಗಟ್ಟಲು ರಾತ್ರಿ ವೇಳೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಂದ ರಾತ್ರಿ ವೇಳೆಯ ಹೆದ್ದಾರಿ ಗಸ್ತನ್ನು ಏರ್ಪಡಿಸಿದೆ.

2. ಮುಖ್ಯವಾದ ಸ್ಥಳಗಳಲ್ಲಿ ಹೊಂಚು ಹಾಕುವ ಪೊಲೀಸ್ ಸ್ಥಾವರಗಳನ್ನು ಏರ್ಪಡಿಸಿದೆ.

3. ಗೊತ್ತಾದ ಅಪರಾಧಗಳನ್ನು ಎಸಗುವವರ ಚಲನವಲನಗಳ ಕಡೆಗೆ ನಿಗಾ ಇಡಲಾಗಿದೆ. ಸಮಾಜ ವಿರೋಧಿ ವ್ಯಕ್ತಿಗಳ ಮೇಲೆ ಮುಂಜಾಗ್ರತಾ ಕಾಯಿದೆಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

4. ಪೊಲೀಸ್ ಸಂಚಾರಿದಳ ಮತ್ತು ಸಂಪರ್ಕ ಸಾಧನಗಳನ್ನು ಸುಧಾರಿಸಲಾಗಿದೆ.

5. ಅಪರಾಧಗಳನ್ನು ಪತ್ತೆ ಹಚ್ಚಿ ಪ್ರಕರಣಗಳನ್ನು ಪತ್ತೆಮಾಡಲು ಕಷ್ಟಕರವಾದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

6. ಪೊಲೀಸ್ ಅಧಿಕಾರಿಗಳಿಗೆ ಅನುಕೂಲವಾಗುವಂತೆ ಪೊಲೀಸ್ ನಿಯಂತ್ರಣ ಕೋಣೆಗಳನ್ನು ಚುರುಕುಗೊಳಿಸಲಾಗಿದೆ.

ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಕುರಿತು

1669. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಬ್ ಇನ್ಸ್‌ಪೆಕ್ಟರ್‌ರವರ ಹುದ್ದೆಯ ನೇಮಕಾತಿ ಮಾಡಲಾಗುವುದೆ;

ಆ) ಮಾಡುವುದಾದಲ್ಲಿ ಯಾವಾಗ ಮತ್ತು ಯಾವ ರೀತಿಯಲ್ಲಿ ನೇಮಕಾತಿ ಮಾಡಲಾಗುವುದು;

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಆ) ನೇಮಕಾತಿ ನಿಯಮಗಳಿಗೆ ಕೆಲವೊಂದು ತಿದ್ದುಪಡಿ ಮಾಡಲಾಗುತ್ತಿದೆ. ತಿದ್ದುಪಡಿ ಆದ ನಂತರ ನೇಮಕಾತಿಗಳನ್ನು ಅದಕ್ಕಾಗಿಯೇ ರಚಿಸಲಾಗಿರುವ ನೇಮಕಾತಿ ಸಮಿತಿ ಮುಖಾಂತರ ಮಾಡಲಾಗುವುದು.

ನಾಡ ಕಛೇರಿಗಳಿಗೆ ಟೆಲಿಫೋನ್ ಸೌಕರ್ಯ.

1627. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಡ ಕಛೇರಿಗಳಿಗೆ ಟೆಲಿಫೋನ್ ಸೌಕರ್ಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದರೆ ಸರ್ಕಾರವು ಟೆಲಿಫೋನ್ ಒದಗಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಬ್ಕಾರಿ ಇಲಾಖೆಯಿಂದ ಬಂದ ರಾಜ್ಯಸ್ವದ ಬಗ್ಗೆ.

1185 (1732) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಅಬ್ಕಾರಿ ಇಲಾಖೆಯಿಂದ ಬಂದ ರಾಜಸ್ವ ನಿಧಿಯ (ರೆವಿನ್ಯೂ) ಮೊತ್ತ ಎಷ್ಟು?

(ಪ್ರತಿ ವರ್ಷದ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಆ) ಈ ವರ್ಷಗಳಲ್ಲಿ ಎಷ್ಟು ಗುರಿಯನ್ನು ಇಟ್ಟುಕೊಳ್ಳಲಾಗಿತ್ತು? ಅದರಲ್ಲಿ ಕಳೆದ 3 ವರ್ಷಗಳಿಂದ 31-1-92ರವರೆಗೆ ಬಂದ ರಾಜಸ್ವ ನಿಧಿಯ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

ವರ್ಷ	ರೂ. ಗಳು (ಕೋಟಿಗಳಲ್ಲಿ)
1988-89	258.89
1989-90	327.57
1990-91	429.47

ಆ) ಇಟ್ಟುಕೊಳ್ಳಲಾಗಿದ್ದ ಗುರಿ (ಕೋಟಿಗಳಲ್ಲಿ)

ವರ್ಷ	ಆಯವ್ಯಯ ಅಂದಾಜು	ಪರಿಷ್ಕೃತ ಅಂದಾಜು
1988-89	289	280.60
1989-90	320	335.00
1990-91	365	469.00

ರಾಜಸ್ವ ನಿಧಿಯ ಮೊತ್ತ (ಕೋಟಿಗಳಲ್ಲಿ)

1988-89	258.89
1989-90	327.57
1990-91	429.47
1991-92	401.65

(ಜನವರಿ 92ರವರೆಗೆ ಮಾತ್ರ)

1991-92ನೇ ಸಾಲಿನಲ್ಲಿ ವಸೂಲಾದ ಮಾರಾಟ ತೆರಿಗೆ ಒಟ್ಟು ಮೊತ್ತ

1962. ಶ್ರೀ ಮನೋಹರ್ ಆಯ್ನಾಪುರ್ (ಬೆಳಗ್ಲಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರ ಸಾಲಿನಲ್ಲಿ ವಸೂಲಿಯಾದ ಮಾರಾಟ ತೆರಿಗೆ ಒಟ್ಟು ಮೊತ್ತ ಎಷ್ಟು;

ಆ) ಹೆಚ್ಚಳದ ಶೇಕಡಾವಾರು ಪ್ರಮಾಣ ಎಷ್ಟು;

ಇ) ಇಲಾಖೆಯಲ್ಲಿ ಬಾಕಿ ಇರುವ ಒಟ್ಟು ಮೊತ್ತವೆಷ್ಟು;

ಈ) 1991-92ರ ಸಾಲಿನಲ್ಲಿ ವಸೂಲಿಯಾದ ಪ್ರವೇಶ ತೆರಿಗೆ ಒಟ್ಟು ಮೊತ್ತವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಫೆಬ್ರವರಿ 1992ರ ಅಂತ್ಯಕ್ಕೆ 1,395.29 ಕೋಟಿ ರೂ.ಗಳು.

ಆ) ಶೇಕಡ 21.94.

ಇ) 1991 ಸೆಪ್ಟೆಂಬರ್ ಅಂತ್ಯದವರೆಗೆ ಹಳೇ ಬಾಕಿ ಮೊತ್ತವಾದ 168.79 ಕೋಟಿ ರೂ.ಗಳು ಸೇರಿದಂತೆ ಒಟ್ಟು 236.23 ಕೋಟಿ ರೂ.ಗಳು.

ಈ) 1992 ಫೆಬ್ರವರಿ ಅಂತ್ಯದವರೆಗೆ 69.18 ಕೋಟಿ ರೂ.ಗಳು.

ಹತ್ತು ವರ್ಷ ಕಾರಾಗೃಹದಲ್ಲಿರುವ ಖೈದಿಗಳ ಬಿಡುಗಡೆ.

304. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

10 ವರ್ಷ ಜೀವಾವಧಿ ಶಿಕ್ಷೆ ಅನುಭವಿಸಿ ಕಾರಾಗೃಹದಲ್ಲಿರುವ ಖೈದಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) :

ಇದು ತೀವ್ರ ಪರಿಶೀಲನೆಯಲ್ಲಿ ಇರುತ್ತೆ.

ಉತ್ತರ ಕರ್ನಾಟಕದಲ್ಲಿ ಉಚ್ಚನ್ಯಾಯಾಲಯದ ಪೀಠ

1525. ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಗುರ್ತಿಸಲಾಗಿದೆ.

ಇ) ಅದು ಯಾವಾಗ ಕಾರ್ಯಾರಂಭ ಪ್ರಾರಂಭಿಸುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು. ಆದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ. ಈ ಪ್ರಸ್ತಾವನೆಗೆ ಉಚ್ಚನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಆ) - ¨ -

ಇ) - ¨ -.

ರಾಜ್ಯದಲ್ಲಿರುವ ಸಿದ್ಧದೋಷಿ ಬಂದಿಗಳ ಸಂಖ್ಯೆ.

1523. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಸಿದ್ಧದೋಷಿ ಬಂದಿಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು.

ಆ) ಪ್ರತಿಯೊಬ್ಬ ಖೈದಿಯು ಗಳಿಸಿದ ಒಟ್ಟು ಹಣವೆಷ್ಟು?

ಇ) ಒಬ್ಬ ಖೈದಿಗೆ ಒಂದು ತಿಂಗಳಿಗೆ ಖರ್ಚು ಮಾಡುವ ಹಣವೆಷ್ಟು?

ಈ) 1990-91 ಮತ್ತು 1991-92ರ ಸಾಲಿನಲ್ಲಿ ದುಡಿಮೆಯಿಂದ ಉತ್ಪಾದಿಸಿದ ಒಟ್ಟು ಹಣವೆಷ್ಟು ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) :

ಅ) 1433 ಜನ ಸಿದ್ಧದೋಷಿ ಬಂದಿಗಳು ದಿನಾಂಕ 15-2-92 ರಂದು ಬಂಧೀಖಾನೆಗಳಲ್ಲಿ ಇದ್ದರು. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ :

		ಸಿದ್ಧದೋಷಿ		ಒಟ್ಟು
		ಗಂಡಸರು	ಹೆಂಗಸರು	
1)	ಕೇಂದ್ರ ಕಾರಾಗೃಹ. ಬೆಂಗಳೂರು	336	15	351
2)	ಬೆಂಗಳೂರು ಗ್ರಾಮಾಂತರ	38	00	38
3)	ಬೆಳಗಾಂ ಜಿಲ್ಲೆ	370	07	377
4)	ಬಳ್ಳಾರಿ ಜಿಲ್ಲೆ	87	1	88
5)	ಬಿಜಾಪುರ ಜಿಲ್ಲೆ	78	00	78
6)	ಗುಲ್ಬರ್ಗಾ ಜಿಲ್ಲೆ	248	02	250
7)	ಮೈಸೂರು ಜಿಲ್ಲೆ	130	02	132
8)	ಬೀದರ್ ಜಿಲ್ಲೆ	01	00	01
9)	ಕಾರವಾರ ಜಿಲ್ಲೆ	02	00	02
10)	ಮಡಿಕೇರಿ ಜಿಲ್ಲೆ	-	-	-

11)	ಮಂಗಳೂರು ಜಿಲ್ಲೆ	08	00	08
12)	ರಾಯಚೂರು ಜಿಲ್ಲೆ	07	00	07
13)	ಶಿವಮೊಗ್ಗ ಜಿಲ್ಲೆ	26	00	26
14)	ಚಿಕ್ಕಮಗಳೂರು	-	-	-
15)	ಚಿತ್ರದುರ್ಗ	02	00	02
16)	ಧಾರವಾಡ	54	00	54
17)	ಹಾಸನ	01	00	01
18)	ಕೋಲಾರ	04	00	04
19)	ಮಂಡ್ಯ	05	00	05
20)	ತುಮಕೂರು	09	00	09
	ಮೊತ್ತ	**1406**	**27**	**1433**

ಆ) 1990-91 ಮತ್ತು 1991-92ನೇ ಸಾಲಿನಲ್ಲಿ ಖೈದಿಗಳು ಗಳಿಸಿದ ಸಂಪಾದನೆ ಮೊತ್ತ ಈ ಕೆಳಕಂಡಂತಿದೆ :

	ಕಾರ್ಖಾನೆ (ರೂ. ಲಕ್ಷಗಳಲ್ಲಿ)	ಸಿವಿಲ್ (ರೂ. ಲಕ್ಷಗಳಲ್ಲಿ)
1990-91	1:05	3:93
1991-92	0:96 (ಡಿಸೆಂಬರ್ 91ರ ವರೆಗೆ)	1:12 (ಡಿಸೆಂಬರ್ 91 ರವರೆಗೆ)

ಇ) ಒಂದು ತಿಂಗಳಿಗೆ ಒಬ್ಬ ಬಂಧಿಗೆ ಸರಾಸರಿ 1991-92 (ಡಿಸೆಂಬರ್ 91ರವರೆಗೆ) ರಲ್ಲಿ ಕೆಳಕಂಡಂತೆ ಖರ್ಚು ಮಾಡಲಾಗಿದೆ.

ಊಟದ ವೆಚ್ಚ	ರೂ. 243-00
ಆಡಳಿತಾತ್ಮಕ ವೆಚ್ಚ	ರೂ. 906-00

ಈ)

	ಕಾರ್ಖಾನೆ (ರೂ. ಲಕ್ಷಗಳಲ್ಲಿ)	ಸಿವಿಲ್ (ರೂ. ಲಕ್ಷಗಳಲ್ಲಿ)
1990-91	37:07	15:58
1991-92 (ಡಿಸೆಂಬರ್ 91ರವರೆಗ)	24:29	10:78

ಮೂರ್ತೆದಾರರ ನಿರುದ್ಯೋಗದ ಬಗ್ಗೆ

1765. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಂದಿ ಮಾರಾಟ ರದ್ದತಿಯಿಂದ ರಾಜ್ಯದಲ್ಲಿ ಎಷ್ಟು ಜನ ಮೂರ್ತೆದಾರರು ಉದ್ಯೋಗ ಕಳೆದುಕೊಂಡಿರುವರು?

ಆ) ಮೂರ್ತೆ ಕಳೆದುಕೊಂಡ ಈ ಮೂರ್ತೆದಾರರಿಗೆ ಯಾವ ಬದಲಿ ಉದ್ಯೋಗ ಒದಗಿಸಲಾಗಿದೆ?

ಇ) ಈ ಉದ್ಯೋಗ ಹೀನ ಮೂರ್ತಿದಾರರು ಯಾವ ಕೇಳಿಕೆಯನ್ನು ಸರ್ಕಾರಕ್ಕೆ ಒಪ್ಪಿಸಿರುವರು?

ಈ) ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೂರ್ತೆದಾರರಿಗೆ ಬದಲಿ ಉದ್ಯೋಗ ಒದಗಿಸುವ ಸಮಿತಿ ನೇಮಿಸಿರುವುದು ಎಷ್ಟರತನಕ ಫಲಕಾರಿಯಾಗಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಸುಮಾರು 10.468.

ಆ) ಉದ್ಯೋಗ ಕಳೆದುಕೊಂಡ ಮೂರ್ತೆದಾರರಿಗೆ ಪುನರ್ವಸತಿ ವ್ಯವಸ್ಥೆ ಮಾಡಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಮಾಲೋಚನೆಯೊಂದಿಗೆ ಬದಲಿ ಉದ್ಯೋಗ ಕಲ್ಪಿಸಲು ಮತ್ತು ಐಆರ್‌ಡಿಪಿಯಡಿಯಲ್ಲಿ ಇತರೆ ಸುಧಾರಣ ಯೋಜನೆಯಲ್ಲಿರುವ ಉಪಯೋಗವನ್ನು ಕಲ್ಪಿಸಲು ಜಿಲ್ಲಾ ಡೆಪ್ಯುಟಿ ಕಮಿಷನರುಗಳ ನಿರ್ದೇಶಿಸಲಾಗಿದೆ.

ಇ) ಪರಿಹಾರ ಕೇಳಿದ್ದಾರೆ.

ಈ) ದ.ಕ. ಜಿಲ್ಲೆಯಲ್ಲಿ ಶೇಂದಿ ಮಾರಾಟಕ್ಕಾಗಿ ಮೂರ್ತೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಲು ಸರ್ಕಾರ ಅನುಮತಿ ನೀಡಿದೆ. ಈವರೆವಿಗೆ 32 ಸಂಘಗಳ ನೋಂದಣಿ ಆಗಿದ್ದು ಅದರಲ್ಲಿ 16 ಸಂಘಗಳಿಗೆ ಅಬಕಾರಿ ಇಲಾಖೆಯಿಂದ ಶೇಂದಿ ಇಳಿಸಲು ಹಾಗೂ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ. ಈ ಸಂಘಗಳು ಗಳಿಸುವ ಲಾಭವು ಸಂಘದ ಸದಸ್ಯರಾದ ಮೂರ್ತೆದಾರರಿಗೆ ಸಲ್ಲುವುದು. ಇನ್ನೂ ಉಳಿದ ಭಾಗಗಳಲ್ಲಿ ಸಂಘಗಳನ್ನು ನೋಂದಾಯಿಸುವ ಕಾರ್ಯ ರಾಜ್ಯ ಹೈಕೋರ್ಟಿನ ತಡೆಯಾಜ್ಞೆ ಇರುವುದರಿಂದ ಸ್ಥಗಿತವಾಗಿದೆ.

ಗೌರಿಬಿದನೂರ್ ತಾಲ್ಲೂಕಿನಲ್ಲಿ ಹೆಂಡದ ಮಾರಾಟ

1329. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಾದ್ಯಂತ ಹೆಂಡ ಮಾರಾಟ ನಿಷೇಧವಿದ್ದು ಪಾವಗಡ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಬಹಿರಂಗವಾಗಿ ಹೆಂಡ ಮಾರಾಟ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

2) ಹೀಗೆ ಬಹಿರಂಗವಾಗಿ ಹೆಂಡ ಮಾರಾಟಕ್ಕೆ ಪರೋಕ್ಷ ಅನುಮತಿ ಕೊಟ್ಟಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇ?

3) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಕೆಲವು ದೂರುಗಳು ಬಂದಿವೆ.

ಆ) ಕಾನೂನಿನ ಪ್ರಕಾರ ಅಂತಹ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲಾಖೆಯ ಅಧಿಕಾರಿಗಳು ಇಂತಹ ಪ್ರಕರಣಗಳಲ್ಲಿ ಐದು ಮೊಕದ್ದಮೆಗಳನ್ನು ಹೂಡಿದ್ದು. 225 ಲೀಟರ್ ಶೇಂದಿಯನ್ನು ಇಲಾಖೆಗೆ ವಶಪಡಿಸಿಕೊಂಡಿದ್ದಾರೆ. ಅಂತಹ ಸ್ಥಳದಲ್ಲಿರುವ ಸಿಬ್ಬಂದಿಗೆ ಹೆಚ್ಚು ಜಾಗರೂಕರಾಗಿರಲು ಸೂಚನೆಗಳನ್ನು ನೀಡಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ.

1840. ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಕೋರಿಕೆಯ ಬಗ್ಗೆ ಬಂದಿರುವ ಅರ್ಜಿಗಳಲ್ಲಿ ವಿಲೇವಾರಿಯಾಗದೆ ಉಳಿದಿರುವ ಅರ್ಜಿಗಳೆಷ್ಟು:

ಆ) ಎಷ್ಟು ದಿವಸಗಳಿಂದ ವಿಲೇವಾರಿಯಾಗದೆ ಉಳಿದಿವೆ:

ಇ) ವಿಲೇವಾರಿಯಾಗದೇ ಉಳಿದಿರುವುದಕ್ಕೆ ಕಾರಣಗಳೇನು:

ಈ) ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಎಷ್ಟು ಕಾಲ ಬೇಕಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1800 ಅರ್ಜಿಗಳು ಬಾಕಿ ಇವೆ.

ಆ) ದಿನಾಂಕ 31-12-1982 ರಂದು ಸರ್ಕಾರವು ರಾಜ್ಯ ಗೌರವಧನ ಮಂಜೂರಾತಿಗೆ ಕಡೆಯ ದಿನಾಂಕವೆಂದು ನಿಗದಿಪಡಿಸಿತ್ತು. ಬಾಕಿ ಇರುವ ಈ ಅರ್ಜಿಗಳೆಲ್ಲ 1983 ರಿಂದೀಚೆಗೆ ಇಲ್ಲಿಯವರೆಗೆ ಬಂದಿರುವ ಅರ್ಜಿಗಳು.

ಇ) ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿರುವುದಿಲ್ಲವಾದುದರಿಂದ ಈ ಅರ್ಜಿಗಳು ವಿಲೇವಾರಿಯಾಗದೆ ಉಳಿದಿವೆ.

ಈ) ಅರ್ಜಿದಾರರು ಮಾಹಿತಿ ಒದಗಿಸಿದ ಕೂಡಲೇ ಉಪ ಸಮಿತಿಯ ಸಲಹೆ ಪಡೆದು ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ರಾಜ್ಯ ಪೊಲೀಸ್ ಸಿಬ್ಬಂದಿ ಬಲವನ್ನು ಹೆಚ್ಚಿಸುವುದು.

1762. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರಾಜ್ಯ ಪೋಲೀಸ್ ಸಿಬ್ಬಂದಿ ಬಲವನ್ನು ಹೆಚ್ಚಿಸಲು ನಿರ್ಧರಿಸಿದೆಯೇ? ಹಾಗಿದ್ದಲ್ಲಿ ಎಷ್ಟು ಹೆಚ್ಚಿಗೆ ಮಾಡಲಾಗುವುದು.

ಆ) ಪೋಲೀಸ್ ಸಿಬ್ಬಂದಿಯ ನೇಮಕಾತಿಯನ್ನು ಹೇಗೆ ಮಾಡಲಾಗುವುದು?

ಇ) ಪೋಲೀಸ್ ಸಿಬ್ಬಂದಿಯ ನೇಮಕಾತಿಯಲ್ಲಿ ಸರ್ಕಾರವು ಅಲ್ಪಸಂಖ್ಯಾತರಿಗೆ ಪ್ರತಿನಿಧಿಸಲು ಅದರಲ್ಲಿಯೂ ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಯಾವುದೇ ಪ್ರಮಾಣವನ್ನು ನಿಗಧಿಪಡಿಸುವುದೇ?

ಈ) ಎಲ್ಲಾ ಜನಾಂಗ (ಅಂದರೆ ಮುಸ್ಲಿಮ್ ಕ್ರಿಶ್ಚಿಯನ್. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ)ಗಳ ಸೂಕ್ತ ಪ್ರಾತಿನಿಧ್ಯವಿಲ್ಲದಿರುವುದರಿಂದ. ಆ ಜನಾಂಗಗಳ ವ್ಯಕ್ತಿಗಳಿಗೆ ಅನ್ಯಾಯನಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಪರಿಸ್ಥಿತಿಯನ್ನು ತಪ್ಪಿಸಲು ತೆಗೆದುಕೊಳ್ಳುವ ಕ್ರಮಗಳಾವುವು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಸರ್ಕಾರವು ಸಿವಿಲ್ ಪೋಲೀಸ್ ಮಹಿಳಾ ಪೋಲೀಸ್ ಮತ್ತು ಸಶಸ್ತ್ರ ಪೋಲೀಸ್ ಸಿಬ್ಬಂದಿಗೆ ಸಂಬಂಧಿಸಿದಂತೆ ಹೆಚ್ಚಿನ ಸಿಬ್ಬಂದಿ ಬಲವನ್ನು ಹಂತ ಹಂತವಾಗಿ ಮಂಜೂರು ಮಾಡಲು ಒಪ್ಪಿಗೆ ನೀಡಿರುತ್ತದೆ. ವಿವರ ಕೆಳಕಂಡಂತಿದೆ.

ಹುದ್ದೆ	ಸಿವಿಲ್ ಪೊಲೀಸ್	ಮಹಿಳಾ ಪೊಲೀಸ್	ಸಶಸ್ತ್ರ ಪೊಲೀಸ್
ಆರಕ್ಷಕ ಅಧೀಕ್ಷಕರು	-	-	12
ಉಪ ಆರಕ್ಷಕ ಅಧೀಕ್ಷಕರು	-	-	27
ಆರಕ್ಷಕ ನಿರೀಕ್ಷಕರು	-	5	36
ಆರಕ್ಷಕ ಉಪ ನಿರೀಕ್ಷಕರು	149	46	108
ಸಹಾಯಕ ಆರಕ್ಷಕ ಉಪ ನಿರೀಕ್ಷಕರು	1116	80	146
ಮುಖ್ಯ ಪೇದೆ	2389	240	1088
ಪೋಲೀಸ್ ಪೇದೆ	3769	704	4797

ಆ) ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲಾಗುವುದು. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ನೇಮಕಾತಿ ಪ್ರಾಧಿಕಾರವು ತರಿಸಿಕೊಂಡು.

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿದ ವಿಧಾನಗಳಿಗನುಗುಣವಾಗಿ ನೇಮಕಾತಿ ಮಾಡಿಕೊಳ್ಳಲಾಗುವುದು.

ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಸಂಬಂಧಿಸಿದಂತೆ 66 2/3% ಹುದ್ದೆಗಳನ್ನು ನೇರ ನೇಮಕಾತಿಯಿಂದಲೂ 33 1/3% ಹುದ್ದೆಗಳನ್ನು ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್/ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಹುದ್ದೆಗಳಿಂದ ತುಂಬಲಾಗುವುದು. ಈ ಕೆಳಕಾಣಿಸಿದ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ:74:ಪಿಇಐ:91. ದಿನಾಂಕ 17-12-1991ರಲ್ಲಿ ನೇಮಕಾತಿ ಸಮಿತಿಯನ್ನು ರಚಿಸಿ. ಅಧಿಸೂಚನೆ ಹೊರಡಿಸಲಾಗಿದೆ.

1) ಪೊಲೀಸ್ ಸಬ್ ಇನ್ಸ್‌ಪೆಕ್ಟರ್. ಸಿವಿಲ್
2) ಪೊಲೀಸ್ ಸಬ್ ಇನ್ಸ್‌ಪೆಕ್ಟರ್. ಸಿಎಆರ್
3) ಪೊಲೀಸ್ ಸಬ್ ಇನ್ಸ್‌ಪೆಕ್ಟರ್. (ಎಫ್‌ಪಿಬಿ)
4) ಪೊಲೀಸ್ ಸಬ್ ಇನ್ಸ್‌ಪೆಕ್ಟರ್. (ಮಹಿಳಾ)
5) ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್. (ಕೆಎಸ್‌ಆರ್‌ಪಿ)

ನೇಮಕಾತಿ ಸಮಿತಿಯ ಅಧ್ಯಕ್ಷರಾದ ಡೈರೆಕ್ಟರ್ ಜನರಲ್ (ಅಪರಾಧ ಮತ್ತು ತರಬೇತಿ) ಇವರು ನೇಮಕಾತಿಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಗಳಿಗೆ ಸಂಬಂಧಿಸಿದಂತೆ 33 1/3% ಹುದ್ದೆಗಳನ್ನು 1966ರ ಪತ್ರಾಂಕಿತ ಅಧಿಕಾರಿಗಳ ನೇಮಕಾತಿ ನಿಯಮ (ವೃಂದ ಎ ಮತ್ತು ಬಿ ಸ್ಪರ್ಧಾತ್ಮಕ ಪರೀಕ್ಷೆಗಳು) ದಡಿಯಲ್ಲಿ ನೇರ ನೇಮಕಾತಿಯಿಂದಲೂ ಮತ್ತು 66 2/3% ಹುದ್ದೆಗಳನ್ನು ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯ ಬಡ್ತಿಯಿಂದ ತುಂಬಲಾಗುವುದು.

ಪೊಲೀಸ್ ಇಲಾಖೆಯಲ್ಲಿ ಐ.ಪಿ.ಎಸ್. ಹುದ್ದೆಗಳನ್ನು ಹೊರತುಪಡಿಸಿದ ಎಲ್ಲಾ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಲಾಗುವುದು.

ಇ) ಸಿ.ಆ.ಸು. ಇಲಾಖೆಯ ಮಾರ್ಗದರ್ಶನದಡಿಯಲ್ಲಿ ನೇಮಕಾತಿಯನ್ನು ಮಾಡಲಾಗುವುದು ಹಾಗೂ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಪ್ರಮಾಣವನ್ನು ನಿಗಧಿಪಡಿಸಲಾಗುವುದಿಲ್ಲ.

ಈ) ಇಲ್ಲ.

ಉ) ಈ ಪ್ರಶ್ನೆಗೆ ನೀಡಿರುವ ಉತ್ತರದನ್ವಯ ಉದ್ಭವಿಸುವುದಿಲ್ಲ.

ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ತೆಗೆದುಕೊಂಡಿರುವ ಕೆಲಸಗಳು.

1943. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವ್ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳು ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಿರುತ್ತವೆ?

ಆ) 1991-92ರಲ್ಲಿ ಬೆಳಗಾವ್ ಜಿಲ್ಲೆಗೆ ಮಲೆನಾಡ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು? (ತಾಲ್ಲೂಕುವಾರು ವಿವರ ಕೊಡುವುದು)

ಇ) ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ? (ಕೆಲಸದ ವಿವರ ಮತ್ತು ಡಿಸೆಂಬರ್ 31ರ ವರೆಗೆ ಎಷ್ಟು ಹಣ ಇವುಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಖರ್ಚಾದ ಹಣವೆಷ್ಟು?)

ಈ) ಈ ಕೆಲಸಗಳನ್ನು ಯಾವ ಯಾವ ಇಲಾಖೆಯವರು ನಿರ್ವಹಿಸುವರು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ. ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಬೆಳಗಾವ್ ಜಿಲ್ಲೆಯ ಖಾನಾಪುರ. ಹುಕ್ಕೇರಿ. ಮತ್ತು ಬೆಳಗಾಂ. ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳು ಸೇರಿವೆ.

ಆ) ಈ ಯೋಜನೆಯಡಿಯಲ್ಲಿ ಯಾವ ಜಿಲ್ಲೆಗೂ ಹಣವನ್ನು ಬಿಡುಗಡೆ ಮಾಡಿಲ್ಲ.

ಇ) ಇನ್ನೂ ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ.

ಈ) ಉತ್ತರ (ಇ) ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾವ್ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ತೊಂದರೆ.

1944. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆಯಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರದವರು ತಕ್ಷಣ 20 ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೆ?

ಇ) ನೀರಿನ ತೊಂದರೆಯಿಂದ ಸಾರ್ವಜನಿಕರು ಮೇಲಿಂದ ಮೇಲೆ ಉನ್ನತಾಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದೇಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈಗಲಾದರೂ. ಸರ್ಕಾರದವರು ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಮೇ 1991ರಲ್ಲಿ 4 ಕೊಳವೆ ಬಾವಿಗಳನ್ನು ತೋಡಲಾಗಿದೆ. 3 ಹೆಚ್ಚು ಇಳುವರಿ ಇರುತ್ತವೆ. ಈ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಹಾಗೂ ಪೈಪ್ ಲೈನ್ ಹಾಕಲು ಜಿಲ್ಲಾಧಿಕಾರಿ. ಬೆಳಗಾವಿಯವರು 3.63 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಅವಶ್ಯಕತೆ ಬಂದರೆ ಇನ್ನೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗುವುದು.

ಇ) ಸಾರ್ವಜನಿಕ ಮತ್ತು ಸ್ಥಳೀಯ ಶಾಸಕರ ವಿನಂತಿಯ ಮೇರೆಗೆ ಹಾಗೂ ಜಿಲ್ಲಾಧಿಕಾರಿ ಬೆಳಗಾವಿಯವರ ಆದೇಶದ ಪ್ರಕಾರ ಬರಪರಿಹಾರ ನಿಧಿಯಿಂದ 4 ಕೊಳವೆ ಬಾವಿಗಳನ್ನು ತೋಡಲಾಗಿದೆ. ಇವುಗಳಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಲು ಜಿಲ್ಲಾಧಿಕಾರಿ. ಬೆಳಗಾವಿಯವರು 3.63 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು. ಈ ಕೆಲಸವು ಪ್ರಗತಿಯಲ್ಲಿವೆ.

ಈ) ಉದ್ಭವಿಸುವುದಿಲ್ಲ.

RECRUITMENT OF K.A.S. OFFICERS

1760. SRI SADATH ALI KHAN (Channapatna) : Will the Chief Minister be pleased to state :–

a) the number of KAS Class-I and Class-II Officers recruited by the K.P.S.C. during the last five years i.e. 1987 to 1991 (Details of posts and Departments be furnished);

b) out of which number of officers belonging to SC/ST and Backward Classes;

c) the number of officers belonging to minorities like Mus'ims and christians recruited and their percentage;

d) whether it has come to notice of Government that there is no proper representation of Minorities like Muslims and christians in recruitment;

e) if so, the reasons for the same and the steps taken to provided proper representation to these communities?

SRI S. BANGARAPPA (Chief Minister) :

a) Number of officers recruited through the Karnataka Public Service Commission to K.A.S. Class & II posts during 1987-91 is as follows:-

Class-I (Group-A)	56
Class-II (Group-B)	170

Details of posts and Departments are as follows :-

	Class-I (Group-A)	**No. of posts**
1.	Assistant Commissioners	9
2.	Assistant Controller of State Accounts	16
3.	Commercial Tax Officers	20
4.	Treasury Officer	1
5.	Asst. Labour Commissioners	2
6.	Deputy Superintendent of Police	6
7.	Asst. Commandents	2

	Class-II (Group-B)	**No. of Posts**
1.	Asst. Commercial Tax Officers	65
2.	Labour Officers	3
3.	Asst. Controller of Weights & Measures	1
4.	Asst. Supdt. of Prison & Technical Assistant	1
5.	Asst. Registrar of Co-operative Societies	12
6.	Employment Officers	4
7.	Chief Officer Grade-I	2
8.	Asst. Treasury Officers	3
9.	Asst. Director of Agricutural Marketing	6
10.	Block Development Officers	64
11.	Assistant Auditors	17

b)

Category of reservation	Class-I (Group-A)	Class-II (Group-B)
S.C.	12	34
S.T.	6	13
B.Cs.	20	71

c) The number of officers belonging to-

	Muslims	Christians
Class-I	3 (3.5%)	- (Nil)
Class-II	8 (4.4%)	1 (0.5%)

d) Yes.

e) Under Article 16 (4) of Constitution of India, State may make provision for the reservation of appointments or posts only in favour of backward classes of citizens which in the opinion of the State is not adequately represented in the services under the State. Accordingly, reservation has been provided to Backward Classes in matters of recruitment to State Civil Services Muslims and Christians are covered under Group-C & Group-D reservation categories respectively.

ಕರ್ನಾಟಕದ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳು ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಬಗ್ಗೆ.

1963. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರಕಾರದಲ್ಲಿ, ಕರ್ನಾಟಕ ರಾಜ್ಯದ ಮೂಲದವರಾದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಅವರುಗಳು ಯಾವ ಯಾವ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವರುಗಳ ಹೆಸರೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು) :

ಅ) ಐ.ಎ.ಎಸ್. ಅಧಿಕಾರಿಗಳು 15

ಐ.ಪಿ.ಎಸ್. ಅಧಿಕಾರಿಗಳು 2

ಆ) ಅನುಬಂಧ-1 ರಲ್ಲಿ ವಿವರಗಳನ್ನು ಕೊಡಲಾಗಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಹರ್ಷಕುಮಾರ ಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1963ರ ಪ್ರಶ್ನೆ (ಆ) ಗೆ ಅನುಬಂಧ-1

ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ರಾಜ್ಯದ ಮೂಲದವರಾದ ಐಎಎಸ್ ಅಧಿಕಾರಿಗಳು

ಶ್ರೀಯುತರುಗಳಾದ :

1) ಜಿ. ಅಶ್ವತನಾರಾಯಣ	ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು. ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರೆಂಟಿ ಕಾರ್ಪೋರೇಷನ್. ವಾಣಿಜ್ಯ ಮಂತ್ರಾಲಯ, ನವದೆಹಲಿ.
2) ಸಿಸಿಲ್ ನರೋನಾ	ಉಪಾಧ್ಯಕ್ಷರು, ದೆಹಲಿ ಅಭಿವೃದ್ಧಿ ಪ್ರಾಧಿಕಾರ, ನವದೆಹಲಿ.
3) ಪಿ.ಸಿ. ಪ್ರಭು	ಅಧ್ಯಕ್ಷರು. ಕಾಫಿ ಮಂಡಲಿ. ಬೆಂಗಳೂರು.

4)	ಎಸ್.ಎಸ್. ಥಾಮಸ್	ಸದಸ್ಯ ಕಾರ್ಯದರ್ಶಿ, ಕೇಂದ್ರ ರೇಷ್ಮೆ ಮಂಡಲಿ, ಬೆಂಗಳೂರು.
5)	ಸಿ.ಬಿ. ಮಹಿಷಿ	ವಿಶೇಷ ಕರ್ತವ್ಯದ ಮೇಲಿನ ಅಧಿಕಾರಿ, ಪ್ರಧಾನ ಮಂತ್ರಿಗಳ ಕಛೇರಿ, ನವದೆಹಲಿ.
6)	ಎ. ರಾಮಸ್ವಾಮಿ	ರಾಜ್ಯ ಪೆಟ್ರೋಲಿಯಂ ಸಚಿವರ ಆಪ್ತಕಾರ್ಯದರ್ಶಿ, ನವದೆಹಲಿ.
7)	ಎಂ.ಆರ್. ಶ್ರೀನಿವಾಸಮೂರ್ತಿ	ಕಂಟ್ರೋಲರ್, ಇಸ್ರೋ ಸಾಟಲೈಟ್ ಸೆಂಟರ್, ಬೆಂಗಳೂರು.
8)	ಬಿ.ಎ. ಕುಟಿನೋ	ಉಪಾಧ್ಯಕ್ಷರ ಆಪ್ತಕಾರ್ಯದರ್ಶಿ, ಯೋಜನಾ ಆಯೋಗ, ನವದೆಹಲಿ.
9)	ಸಿ.ಎಸ್. ಸುರಂಜನಾ	ಕಾರ್ಯದರ್ಶಿ, ಕಾಫಿ ಮಂಡಲಿ, ಬೆಂಗಳೂರು.
10)	ಕೆ.ಎಂ. ಶಿವಕುಮಾರ್	ಮುಖ್ಯ ಕಾಫಿ ಮಾರಾಟ ಅಧಿಕಾರಿ, ಕಾಫಿ ಮಂಡಲಿ, ಬೆಂಗಳೂರು.
11)	ವಿ.ಪಿ. ಬಾಲಿಗಾರ್	ಡೆಪ್ಯೂಟಿ ಎಜುಕೇಷನಲ್ ಆಡ್ವೈಸರ್, ನವದೆಹಲಿ.
12)	ಎಂ.ಎನ್. ವಿದ್ಯಾಶಂಕರ್	ಭಾರತ ಸರ್ಕಾರದ ಉಪಕಾರ್ಯದರ್ಶಿ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ನವದೆಹಲಿ.
13)	ಜಿ. ಗುರುಚರಣ್	ಭಾರತ ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಮತ್ತು ಸಹಕಾರಿ ಇಲಾಖೆ, ನವದೆಹಲಿ.
14)	ರೇಣುಕಾ ಚಿದಂಬರಂ	ವಾರ್ತಾ ಮತ್ತು ಪ್ರಚಾರ ಸಚಿವರ ಆಪ್ತಕಾರ್ಯದರ್ಶಿ, ನವದೆಹಲಿ.
15)	ಸಿ. ಕೃಷ್ಣಪ್ಪ	ಜನಗಣತಿಯ ಉಪನಿರ್ದೇಶಕರು, ಕರ್ನಾಟಕ, ಬೆಂಗಳೂರು.

ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ರಾಜ್ಯ ಮೂಲದವರಾದ ಐಪಿಎಸ್ ಅಧಿಕಾರಿಗಳು

1)	ಶ್ರೀ ಎ.ಎಸ್. ಮಾಲೂರ್‌ಕರ್	ಜಂಟಿ ಕಾರ್ಯದರ್ಶಿ, ಭಾರತ ಸರ್ಕಾರ, ಸಂಪುಟ ಸಚಿವಾಲಯ, ನವದೆಹಲಿ.
2)	ಶ್ರೀಮತಿ ಪ್ರಭಾ ಹೆಚ್. ರಾವ್	ಅಧೀನ ಕಾರ್ಯದರ್ಶಿ, ಸಂಪುಟ ಸಚಿವಾಲಯ, ನವದೆಹಲಿ.

ರಾಜ್ಯದ ವಿವಿಧ ಮಂಡಳಿಗಳಿಗೆ ತಾಂತ್ರಿಕ ಜ್ಞಾನವುಳ್ಳ ಅಧಿಕಾರಿಗಳ ನೇಮಕ.

1967. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಮಂಡಳಿಗಳು ಮತ್ತು ನಿಗಮಗಳಿಗೆ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಕಾರಣಗಳೇನು;

ಆ) ಸದರಿ ಅಧಿಕಾರಿಗಳ ತಾಂತ್ರಿಕ ಜ್ಞಾನದ ಕೊರತೆಯಿಂದ ಮಂಡಳಿಗಳ ಅಧ್ಯಕ್ಷತೆಯು ಹೆಚ್ಚುವುದಲ್ಲದೆ ನಷ್ಟಕ್ಕೆ ಕಾರಣವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ತಾಂತ್ರಿಕ ಜ್ಞಾನವನ್ನು ಹೊಂದಿರುವವರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಸರ್ಕಾರವು ನಿಯಮವೇನಾದರೂ ರಚಿಸುವುದೇ; ಹಾಗಿದ್ದಲ್ಲಿ ಯಾವಾಗ ರಚಿಸಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಆಡಳಿತದ ಹಿತದೃಷ್ಟಿಯಿಂದ ಕೆಲವು ಮಂಡಳಿ ಮತ್ತು ನಿಗಮಗಳಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆಯಾದರೂ, ಅವಶ್ಯಕತೆ ಇರುವ ಕಡೆ ತಂತ್ರಜ್ಞಾನ ಉಳ್ಳವರನ್ನೂ ಸಹ ವಿವಿಧ ಮಂಡಳಿ ಮತ್ತು ನಿಗಮಗಳಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಆ) ಇಂತಹ ಯಾವ ನಿದರ್ಶನಗಳು ಇದುವರೆವಿಗೂ ಕಂಡುಬರುವುದಿಲ್ಲ.

ಇ) ಪ್ರಶ್ನೆ (ಅ) ಮತ್ತು (ಆ)ಗೆ ನೀಡಿರುವ ಉತ್ತರಗಳ ಮೇರೆಗೆ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಉಚ್ಚ ನ್ಯಾಯಾಲಯ ಪ್ರಾರಂಭ

1617. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಉಚ್ಚ ನ್ಯಾಯಾಲಯ ಪೀಠ (ಹೈಕೋರ್ಟ್ ಬೆಂಚ್) ಪ್ರಾರಂಭಿಸುವುದು ಸರ್ಕಾರದ ಗಮನದಲ್ಲಿದೆಯೆ;

ಆ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಸದರೀ ಉಚ್ಚ ನ್ಯಾಯಾಲಯ ಪೀಠ ಸ್ಥಾಪನೆ ಮಾಡಲು ಶಿಫಾರಸನ್ನು ಮಾಡಲಾಗಿದೆಯೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು. ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ. ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆ

1730. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 1989-90, 1990-91 ಹಾಗೂ 1991-92ರ ಜನವರಿ 31ರ ವರೆವಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ನಿವೇಶನಗಳನ್ನು ನೀಡಲಾಗಿದೆ?

ಆ) ಇದರಲ್ಲಿ ಎಷ್ಟು ಜನರಿಗೆ ಹಕ್ಕು ಪತ್ರ ಹಾಗೂ ಸ್ವಾಧೀನ ಪತ್ರಗಳನ್ನು ನೀಡಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1989-90, 1990-91 ಮತ್ತು 1991-92ರ ಜನವರಿ 31ರ ಅಂತ್ಯದ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದ ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಬರುವ ತಾಲ್ಲೂಕುಗಳು

1665. ಶ್ರೀ ಕೆ.ಎಸ್. ಕಾಳಮರಿ ಗೌಡ (ಪಿರಿಯಾಪಟ್ಟಣ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳು ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುತ್ತದೆ?

ಆ) ಇದಕ್ಕಾಗಿ ಎಷ್ಟು ಹಣವನ್ನು ಸರ್ಕಾರ ನೀಡಿರುತ್ತದೆ? ಇದುವರೆವಿಗೂ ಎಷ್ಟು ಹಣ ಖರ್ಚಾಗಿರುತ್ತದೆ ಹಾಗೂ ಯಾವ ಯಾವ ಉದ್ದೇಶಕ್ಕಾಗಿ ಹಣ ಉಪಯೋಗಿಸಲಾಗಿದೆ?

ಇ) ಈ ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಪಿರಿಯಾಪಟ್ಟಣ ತಾಲ್ಲೂಕು ಸೇರುತ್ತದೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಮಲೆನಾಡು ಅಭಿವೃದ್ಧಿ ಯೋಜನೆಯಡಿ ರಾಜ್ಯದ 58 ತಾಲ್ಲೂಕುಗಳು ಬರುತ್ತದೆ.

ಆ) 1991-92ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗಾಗಿ 10 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದು ಇದರ ಪೈಕಿ ಯಾವ ಹಣವೂ ಖರ್ಚಾಗಿರುವುದಿಲ್ಲ.

ಇ) ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಈ ಯೋಜನೆಯ ವ್ಯಾಪ್ತಿಯಲ್ಲಿದೆ.

ಅಬಕಾರಿ ಗುತ್ತಿಗೆಯಿಂದ ಬಂದ ಆದಾಯ.

1667. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರಕ್ಕೆ ಅಬಕಾರಿ ಗುತ್ತಿಗೆಯಿಂದ 1989-90 ಮತ್ತು 1990-91ನೇ ಸಾಲುಗಳಲ್ಲಿ ಬಂದ ಆದಾಯವೆಷ್ಟು? (ವರ್ಷಾವಾರು ವಿವರ ನೀಡುವುದು)

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

ವರ್ಷ	ಸರ್ಕಾರಕ್ಕೆ ಬಂದ ಆದಾಯ
1989-90	208.72 ಕೋಟಿ ರೂ.ಗಳು
1990-91	278.84 ಕೋಟಿ ರೂ.ಗಳು
ಒಟ್ಟು	487.56 ಕೋಟಿ ರೂ.ಗಳು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯ ಕುರಿತು

1716. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಜನವರಿ 1991 ರಿಂದ ಡಿಸೆಂಬರ್ 1991ರ ಅಂತ್ಯದ ವರೆಗೆ ತೆಗೆದುಕೊಂಡ ಕಾರ್ಯಕ್ರಮಗಳ ವಿವರಗಳನ್ನು ಕೊಡುವುದು (ತಾಲ್ಲೂಕ್‌ವಾರು ವಿವರಗಳನ್ನು ಒದಗಿಸುವುದು).

ಆ) ಈ ಅವಧಿಯಲ್ಲಿ ಖರ್ಚು ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಇ) 1992-93ನೇ ಸಾಲಿಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ ಕಾರ್ಯಕ್ರಮಗಳಾವುವು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ. ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ವಲಯವಾರು ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಮತ್ತು 1-1-1991 ರಿಂದ 12-12-1991 ರವರೆಗೆ ಖರ್ಚು ಮಾಡಿದ ಹಣದ ವಿವರಗಳು ಕೆಳಗಿನಂತಿವೆ. ತಾಲ್ಲೂಕ್‌ವಾರು ವಿವರಗಳು ತತಕ್ಷಣ ಲಭ್ಯವಿರುವುದಿಲ್ಲ.

	ವಲಯ-ತೆಗೆದುಕೊಂಡ ಕಾಮಗಾರಿಗಳು		ಖರ್ಚು (ಲಕ್ಷ ರೂ.ಗಳಲ್ಲಿ)
1.	ರಸ್ತೆ ಮತ್ತು ಸೇತುವೆಗಳು	13	181.82
2.	ದೊಡ್ಡ ಮತ್ತು ಸಾಧಾರಣ ನೀರಾವರಿ	2	271.15
3.	ಸಣ್ಣ ನೀರಾವರಿ	2	7.68
4.	ಶಿಕ್ಷಣ	198	172.26
5.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	175	245.00
6.	ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	2	57.14
7.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	4	101.31
8.	ಸಹಕಾರ	1	910.00
9.	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	43	192.35

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು 10-3-1992 ರಿಂದ ಅಸ್ತಿತ್ವಕ್ಕೆ ಬಂದಿದ್ದು, ಈ ಮಂಡಳಿಯು 1992-93ನೇ ಸಾಲಿಗೆ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯನ್ನು ತಯಾರಿಸುವುದು.

ನಿಲುವಳಿ ಸೂಚನೆ ಪ್ರಸ್ತಾಪ

ಮೈಷುಗರ್ ಕಂಪನಿಯವರು ರೈತರಿಂದ ಕಬ್ಬನ್ನು ತೆಗೆದುಕೊಳ್ಳದೇ ಇರುವುದು.

† ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಕಬ್ಬನ್ನು ಬೆಳೆದಂತಹ ರೈತರು, ಕಬ್ಬನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದ ಸರ್ಕಾರದ ಕಂಪನಿ ಮೈಷುಗರ್ ಕಂಪನಿ ಕಬ್ಬನ್ನು ತೆಗೆದುಕೊಳ್ಳದೆ ರೈತರು ಕಂಗಾಲಾಗಿರತಕ್ಕ ವಿಚಾರದಲ್ಲಿ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ.

ಛೇರ್ಮನ್ : ಈಗ ಸಭೆಯಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಇಲ್ಲ. ಅವರು ಬಂದಮೇಲೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇಲ್ಲಿ ಬಹಳ ಪ್ರಾಮುಖ್ಯವಾಗಿ 50-60 ಕೋಟಿ ರೂಪಾಯಿಗಳಷ್ಟು ಕಬ್ಬು ಬೆಳೆದು ನಿಂತಿದೆ. ತಾವು ಹೇಳಿದ ಹಾಗೆ ಭಾರಿ ಕೈಗಾರಿಕೆಗಳ ಸಚಿವರು ಬಂದ ನಂತರ ಉತ್ತರ ಪಡೆಯುವುದಕ್ಕೆ ನಾವು ರೆಡಿ ಇದ್ದೇವೆ. ಅದಕ್ಕೆ ಏನೂ ಅಡ್ಡಿಯಿಲ್ಲ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಏನು ನೀರು ಬಿಡುತ್ತಿದ್ದರು. ಅದನ್ನು ಈಗ ಸ್ಟಾಪ್ ಮಾಡಿದ್ದಾರೆ. ಕಬ್ಬು ಒಣಗಿಹೋಗುತ್ತಿದೆ. ಸಕ್ಕರೆ ಕಂಪನಿಯವರು ಕಬ್ಬನ್ನು ತೆಗೆದುಕೊಳ್ಳುತ್ತಿಲ್ಲ. ಏನಾದರೂ ಒಂದುಕಡೆ ಸಣ್ಣ ಬೆಂಕಿ ಅನಾಹುತ ಆದರೆ, ನಾಗರಹೊಳೆಯಲ್ಲಿ ಏನು ಆಯಿತು. ಅದೇ ಅನಾಹುತವನ್ನು ನಾವು

ಮಂಡ್ಯ ಜಿಲ್ಲೆಯಲ್ಲಿ ನೋಡಬೇಕಾಗುತ್ತದೆ. ದಯವಿಟ್ಟು ಸರ್ಕಾರ ಇದರಲ್ಲಿ ಮಧ್ಯಪ್ರವೇಶ ಮಾಡಬೇಕು ಸಕ್ಕರೆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್. ಚೇರ್‌ಮನ್ ಇದ್ದಾರೆ. ಅವರು ರೈತರ ಹತ್ತಿರ ಹೋಗಿ ನಾವು ಕಬ್ಬು ತೆಗೆದುಕೊಳ್ಳುತ್ತೇವೆ ಎಂದು ಹೇಳಬೇಕು. ಇವತ್ತು ಏನು ಕಬ್ಬು ಬೆಳೆದು ನಿಂತ ಜಾಗ ಇದೆ. ಆ ಜಾಗ ಬೇರೆ ಸಕ್ಕರೆ ಕಂಪನಿಗೆ ಸೇರಿದ್ದು. ನೀವು ಅಲ್ಲಿಗೆ ಹೋಗಿ ನಾವೆಲ್ಲಾ ಕಬ್ಬನ್ನು ತೆಗೆದುಕೊಳ್ಳುತ್ತೇವೆ. ಬೇರೆಯವರಿಗೆ ಕೊಡಬೇಡಿ ಎಂದು ಹೇಳಿ. ಕಬ್ಬನ್ನು ತೆಗೆದುಕೊಳ್ಳದೇ ಹೋದರೆ ರೈತರ ಗತಿ ಏನಾಗಬೇಕು? ನಾವು ಯಾರೂ ಊರಿನೊಳಗೆ ಹೋಗುವುದಕ್ಕೆ ಆಗುವುದಿಲ್ಲ. ಸಾವಿರಾರು ಜನ ರೈತರು ಬಂದಿದ್ದಾರೆ. ಕಬ್ಬು ಎಲ್ಲಾ ಒಣಗಿಹೋಗುತ್ತಿದ್ದು. ಸರ್ಕಾರ ಈಗ ಮಧ್ಯಪ್ರವೇಶ ಮಾಡಿ ಮೊದಲು ನೀರು ಬಿಡುವ ಕೆಲಸ ಮಾಡಬೇಕು. ತಾತ್ಕಾಲಿಕವಾಗಿ ನೀರು ಬಿಟ್ಟಾದ ಮೇಲೆ ಸಕ್ಕರೆ ಕಂಪನಿಯವರು ಏನು ಒಪ್ಪಿಗೆಕೊಟ್ಟಿದ್ದಾರೆ. ಆ ಕಬ್ಬನ್ನು ತೆಗೆದುಕೊಳ್ಳತಕ್ಕದ್ದು ಆಗಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಮಂಡ್ಯ ಸಕ್ಕರೆ ಕಂಪನಿಗೆ ಇರುವುದು 5 ಸಾವಿರ ಟನ್ ಕಬ್ಬನ್ನು ಅರೆಯುವಂಥ ಸಾಮರ್ಥ್ಯ. ಕೇವಲ ಒಂದೂವರೆ ಸಾವಿರ ಟನ್ ಅರೆದುಕೊಂಡು ಕುಳಿತಿದ್ದಾರೆ. ರೈತ ಮುಳುಗಿ ಹೋಗತಕ್ಕಂಥ ಮಟ್ಟಕ್ಕೆ ಬಂದಿದ್ದಾನೆ. ಮಾನ್ಯ ಅಧ್ಯಕ್ಷರು ಇಲ್ಲಿ ಇಲ್ಲ. ನೂರಾರು ರೈತರು ಬಂದು ಅಧ್ಯಕ್ಷರ ಮನೆ ಹತ್ತಿರ ಕುಳಿತಿದ್ದಾರೆ. ನಮ್ಮ ಮನೆಗಳ ಹತ್ತಿರ ರೈತರು ಬಂದು ಕುಳಿತಿದ್ದಾರೆ. ದಯವಿಟ್ಟು ಸರ್ಕಾರ ನಿರ್ದಿಷ್ಟವಾದ ಉತ್ತರ ಕೊಡಬೇಕು. ಸರ್ಕಾರ ಮಧ್ಯ ಪ್ರವೇಶ ಮಾಡಬೇಕು ಮತ್ತು ಸರ್ಕಾರದಿಂದ ಶೀಘ್ರ ಉತ್ತರವನ್ನು ನಿರೀಕ್ಷೆಯನ್ನು ನಾನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) : ವಿಷಯ ಬಹಳ ಗಂಭೀರವಾಗಿದೆ ಮತ್ತು ಜರೂರು ಕೂಡ ಆಗಿದೆ. ಇದಕ್ಕೆ ಬಹಳ ಸಮರ್ಪಕವಾದಂಥ ಉತ್ತರ ಮಾತ್ರವಲ್ಲ ಪರಿಹಾರ ಕೂಡ ಒದಗಿಸಿದರೆ ತಾವು ಎತ್ತಿದಂಥ ಪ್ರಶ್ನೆ ಸಾರ್ಥಕವಾಗುತ್ತದೆ. ಈ ದೃಷ್ಟಿಯಿಂದ ಮಂತ್ರಿಗಳು ಇಲ್ಲಿ ಇಲ್ಲ. ಆದರೂ ಕೂಡ ತಮಗೆ ಸಮರ್ಪಕವಾದಂಥ ಉತ್ತರ. ಅದರ ಜೊತೆಯಲ್ಲಿ ನಿಮಗೆ ಒಪ್ಪಿಗೆಯಾಗತಕ್ಕಂಥ ಪರಿಹಾರ. ಈ ಎರಡೂ ಬೇಕಾದರೆ ತಾವು ಕೆಲವು ದಿವಸ ಕಾಯುವುದು ಒಳ್ಳೆಯದು. ಅದು ಯಾವುದೂ ಬೇಡ. ಬರೀ ಉತ್ತರದಿಂದ ತೃಪ್ತಿಯಾಗುತ್ತದೆ ಎಂದರೆ ಉತ್ತರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಪರಿಹಾರ ಕೂಡ ಉತ್ತರದ ಜೊತೆಯಲ್ಲಿ ಇದ್ದರೆ ಒಳ್ಳೆಯದು ಎಂದು ಆ ದೃಷ್ಟಿಯಿಂದ ನಾವು ಸಮಯ ಕೇಳುತ್ತಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಚಿವರು ಹೇಳಿರತಕ್ಕಂಥ ಮಾತನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಕಬ್ಬು ತೆಗೆದುಕೊಳ್ಳುವುದಕ್ಕೆ ಬೇಕಾದರೆ ಪರಿಶೀಲನೆ ಮಾಡಿ. ಮಾನ್ಯ ಮಂತ್ರಿಗಳನ್ನು ಸ್ಥಳಕ್ಕೆ ಕಳುಹಿಸಿ. ಸಕ್ಕರೆ ಕಂಪನಿಯ ಅಧ್ಯಕ್ಷರು. ಎಂ.ಡಿ. ಯವರನ್ನು ಕಳಿಸಿ ಪರಿಶೀಲನೆ ಮಾಡಿಸಿ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ನೀರು ನಿಲ್ಲಿಸಿದ್ದಾರೆ. ಅವರಿಗೆ ನೀರು ಕೊಡಲು ಆದೇಶ ನೀಡುವುದಕ್ಕೆ ಇಲ್ಲಿ ಸದನದಲ್ಲಿ ಭರವಸೆಯನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಜರೂರಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ. ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಅದು ಉತ್ತರಕ್ಕಾಗಿ ಕಾಯುವುದಿಲ್ಲ. ಆದರೆ ಸದನಕ್ಕೆ ಸಮರ್ಪಕವಾದ ಮಾಹಿತಿಯನ್ನು ಕೊಟ್ಟು ಪರಿಹಾರ ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ತಾವು ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಹಾಕಬಹುದು. ಅದಕ್ಕೆ ಸರಿಯಾದ ಉತ್ತರ ಕೊಡುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಯಾರನ್ನಾದರೂ ಸ್ಥಳಕ್ಕೆ ಕಳುಹಿಸಿ ನಾವು ಊರಿನೊಳಗೆ ಹೋಗುವುದಕ್ಕೆ ಆಗುವುದಿಲ್ಲ. ಸರ್ಕಾರದ ವತಿಯಿಂದ ಯಾರನ್ನಾದರೂ ಕಳಿಸಿ ಈಗ ಎಂ.ಡಿ. ಯವರು ಏನು ಒಪ್ಪಿಕೊಂಡಿದ್ದಾರೆ, ಅವರನ್ನು ಸಮಜಾಯಿಸಿಕೊಂಡು ಬರಲಿ. ದಯವಿಟ್ಟು ಆ ಭರವಸೆಯನ್ನಾದರೂ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು. ಆದನ್ನು ಮಾಡೋಣ.

2. ದೇವನಹಳ್ಳಿ ಬಳಿ ನಡೆದ ದುರ್ಘಟನೆಯ ಬಗ್ಗೆ

† ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ) : ಮಾನ್ಯ ಅಧ್ಯಕ್ಷರೇ. ನಾನು ಒಂದು ಸೂಚನೆಯನ್ನು ಕಳಿಸಿಕೊಟ್ಟಿದ್ದೆ. ನನ್ನ ಕ್ಷೇತ್ರದಲ್ಲಿ ನಡೆದ ಘಟನೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ. ಮಾನ್ಯ ಅಧ್ಯಕ್ಷರೇ. ನಿನ್ನೆ ದಿವಸ ಒಂದು ದುರ್ಘಟನೆ ದೇವನಹಳ್ಳಿ ಕ್ಷೇತ್ರದ ಬಳಿ ನಡೆದಿದ್ದು ಎರಡು ಟೆಂಪೋಗಳು ಮುಖಾಮುಖಿ ಡಿಕ್ಕಿಯಾಗಿ 16 ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇದಕ್ಕೆ ಕಾರಣ. ರಾಜ್ಯ ರಸ್ತೆ ಸಾರಿಗೆಯವರು, ಸ್ವಲ್ಪ ಭಾಗ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನವರು ಮತ್ತು ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರು ಎಲ್ಲರೂ ಇದರಲ್ಲಿ ಭಾಗಿಗಳಾಗಿರುತ್ತಾರೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ. ಈ ಒಂದು ಘಟನೆ ಸಂಭವಿಸಬೇಕಾದರೆ 11 ಜನರನ್ನು ತುಂಬಿ ಒಯ್ಯತಕ್ಕಂಥ ಟೆಂಪೋದಲ್ಲಿ 20 ರಿಂದ 25 ಜನರನ್ನು ತುಂಬಿಕೊಂಡು ಒಬ್ಬ ಚಾಲಕ. ಚಾಲನೆಯನ್ನು ಕೂಡ ಸಮರ್ಪಕವಾಗಿ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಎದುರುಗಡೆಯಿಂದ ಬಂದಂಥ ಇನ್ನೊಂದು ಟೆಂಪೋಗೆ ಡಿಕ್ಕಿ ಹೊಡೆದುದ್ದರ ಪರಿಣಾಮವಾಗಿ 16 ಜನರು ಸ್ಥಳದಲ್ಲೇ ಮೃತಪಟ್ಟಿದ್ದು . ಈ ಒಂದು ಸ್ಥಳಕ್ಕೆ ನಮ್ಮ ರಾಜ್ಯದ ಹಿರಿಯ ಪೋಲೀಸ್ ಅಧಿಕಾರಿಗಳೂ. ಜಿಲ್ಲೆಯ ಪೋಲೀಸ್ ಅಧಿಕಾರಿಗಳೂ. ಎಲ್ಲರೂ ಕೂಡ ಭೇಟಿ ಕೊಟ್ಟಿದ್ದಾರೆ. ಅಲ್ಲಿ ನಡೆದಂಥ ಘಟನೆ ಸಂದರ್ಭದಲ್ಲಿ ಎಲ್ಲಾ ರೋಗಿಗಳನ್ನು. ಮೃತಪಟ್ಟವರನ್ನು. ಮತ್ತು ಕೈಕಾಲು ಮೂಳೆ ಮುರಿದುಕೊಂಡವರನ್ನು ನಾವು ಸಂಜಯಗಾಂಧಿ ಆಸ್ಪತ್ರೆಗೆ ಕೊಂಡೊಯ್ದಾಗ ಅಲ್ಲಿ ಶುಶೂಷೆ ಮಾಡುವುದಕ್ಕೆ ಕೂಡ ಸರಿಯಾದ ವ್ಯವಸ್ಥೆ ಇರಲಿಲ್ಲ.

ಅಲ್ಲಿ ಒಂದೊಂದು ಇಂಜೆಕ್ಷನ್ ಒಂದು ನೂರು ರೂಪಾಯಿ ಬೆಲೆ ಬಾಳುವಂಥಾದ್ದು ಎಂದು ಹೇಳಿ. ರೋಗಿಗಳನ್ನು ಕೂರಿಸಿ ನಮ್ಮಲ್ಲಿ ಇಂಜೆಕ್ಷನ್ ಇಲ್ಲವೆಂದು ಹೇಳುತ್ತಾರೆ. ಮತ್ತೆ ಎಕ್ಸರೇ ಮಾಡುವುದಕ್ಕೆ 110 ರೂಪಾಯಿ ಚಾರ್ಜ್ ಮಾಡಬೇಕು ಎನ್ನುವ ಉತ್ತರವನ್ನು ಕೊಡುತ್ತಾರೆ. ಈ ಸಂದರ್ಭದಲ್ಲಿ ಅಪಘಾತದಲ್ಲಿ ನೋವಾದವರಿಗೆ, ನಾವು ಶುಶ್ರೂಷೆ ಪಡೆಯುವುದಕ್ಕೆ ಬಹಳ ಕಷ್ಟವಾಗಿದೆ. ಈ ವಿಚಾರವಾಗಿ. ಈ ಸಂದರ್ಭದಲ್ಲಿ ಸರ್ಕಾರದವರು ಆಸ್ಪತ್ರೆ ಕಡೆ ಗಮನಹರಿಸಬೇಕಾಗುತ್ತದೆ. ರಸ್ತೆ ಸಾರಿಗೆ ಬಸ್ಸುಗಳ ಟಾಪ್ ಮೇಲೆ 10-12 ಜನ ಕುಳಿತುಕೊಂಡು ಪ್ರಯಾಣ ಮಾಡುವುದನ್ನು ಕಾಣುತ್ತಿದ್ದೇವೆ. ಇದೇ ರೀತಿ ಮುಂದುವರಿದರೆ. ಮುಂದೆ ಬರತಕ್ಕ ದಿವಸಗಳಲ್ಲಿ ಅನೇಕ ಅನಾಹುತಗಳು ಸಂಭವಿಸತಕ್ಕಂಥಾದ್ದನ್ನು ನೋಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ. ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥೆಯನ್ನು ನಾವು ಉತ್ತಮಪಡಿಸದೇ ಹೋದರೆ. ಮುಂದೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂಬ ಬಗ್ಗೆ ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ. ಇದರ ಜೊತೆಗೆ ನಗರ ಸಾರಿಗೆ ಇಲಾಖೆ ಅಂದರೆ. ಬಿ.ಟಿ.ಎಸ್. ನವರು ಕಳೆದ 20 ವರ್ಷಗಳಿಂದ ಸಿಟಿ ಕಾರ್ಪೋರೇಷನ್ ಲಿಮಿಟ್‌ನಿಂದ 22 ಕಿಲೋ ಮೀಟರ್ ರಸ್ತೆಯಲ್ಲಿ ಮಾತ್ರ ಬಿ.ಟಿ.ಎಸ್. ಓಡಿಸುತ್ತಿದ್ದಾರೆ. ಇದಕ್ಕೆ ಅವರು ಒಂದು ಕಾಯಿದೆಯನ್ನು ಇಟ್ಟುಕೊಂಡಿದ್ದಾರೆ. ಈಗಾಗಲೇ ನಗರ ಸುಮಾರು 10-15 ಕಿಲೋಮೀಟರ್ ಮುಂದಕ್ಕೆ ವಿಸ್ತರಣೆ ಆಗಿದ್ದು. ಅಭಿವೃದ್ಧಿಯಾಗಿರುವುದರಿಂದ. ಬಿ.ಟಿ.ಎಸ್. ವ್ಯವಸ್ಥೆಯನ್ನೂ ವಿಸ್ತರಿಸಬೇಕು....

ವೈಸ್ ಛೇರ್ಮನ್ : ನೀವು ಆಗಲೇ ಹೇಳಿದ್ದಕ್ಕೂ, ಈಗ ಹೇಳುವುದಕ್ಕೂ ಸಂಬಂಧ ಏನಿದೆ. ರಸ್ತೆನಾರಿಗೆ ಮೇಲೆ ಡಿಮ್ಯಾಂಡ್ ಬರುತ್ತದೆ, ಆಗ ವಿವರವಾಗಿ ಮಾತನಾಡಿ.....

ಶ್ರೀ ಮುನಿನರಸಿಂಹಯ್ಯ : ಹಾಲಿ ಇರತಕ್ಕ 22 ಕಿಲೋಮೀಟರ್ ಏನಿದೆ, ಅದನ್ನು ವಿಸ್ತಾರ ಮಾಡಿ, ಬಿ.ಟಿ.ಎಸ್. ಬಸ್ಸುಗಳನ್ನು ಹೆಚ್ಚಾಗಿ ಓಡಿಸತಕ್ಕ ವ್ಯವಸ್ಥೆ ಮಾಡಿದರೆ, ಅನೇಕ ಅನಾಹುತಗಳನ್ನು ತಪ್ಪಿಸಬಹುದು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಈ ಅಪಘಾತ ಸರ್ಕಾರಿ ಬಸ್ಸಿನಲ್ಲಿ ಆಗಿ ಜನ ಸತ್ತಿದ್ದರೆ ಅಥವಾ ಖಾಸಗಿ ಬಸ್ಸಿನಲ್ಲಿ ಆಗಿ ಸತ್ತಿದ್ದರೆ, ಈ ದುರ್ಘಟನೆ ನಡೆದಿರತಕ್ಕ. ದುರ್ದೈವಿಗಳಿಗೆ ಹಣ ಸಿಗುತ್ತಿತ್ತು. ಇವತ್ತು ಅವರಿಗೆ ಒಂದು ರೂಪಾಯಿ ಕೂಡ ಸಿಗುವುದಿಲ್ಲ. ಈ ರೀತಿ ಅವರಿಗೆ ಹಣವೂ ಸಿಗದೇ, ಇವತ್ತು ಬಡವರು, ನಿರ್ಗತಿಕರು ಅಲ್ಲಿ ಸತ್ತು, ಮೂಳೆ ಮುರಿದುಕೊಂಡು ಆಸ್ಪತ್ರೆಯಲ್ಲಿ ಸಾಯುತ್ತಿದ್ದಾರೆ. ಸರ್ಕಾರ ಇವರ ಕಡೆ ಗಮನಹರಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ

ಶ್ರೀ ಧರ್ಮಸಿಂಗ್. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ನಿನ್ನೆ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಸ್ಥಳಕ್ಕೆ ಎಲ್ಲಾ ಅಧಿಕಾರಿಗಳೂ ಹೋಗಿದ್ದಾರೆ. ತಾವು ಕೂಡ ಹೋಗಿದ್ದೀರಿ. ಇದು ಕಾರ್ಪೊರೇಶನ್‌ನವರಿಗೆ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸಂಬಂಧಪಟ್ಟ ವಿಷಯ ಇದೆ. ಇದನ್ನು ಅವರ ಗಮನಕ್ಕೂ ತರುತ್ತಿದ್ದೇವೆ. ಅಲ್ಲಿ ಏನು ಅಪಘಾತವಾಗಿದೆ. ಅದಕ್ಕೆ ಬೇರೆ ರೀತಿಯಲ್ಲಿ ಪರಿಹಾರ ಕೊಡುವ ವಿಚಾರವನ್ನೂ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಸರ್ಕಾರ ತೀವ್ರತರವಾದ ಗಮನ ಕೊಡುತ್ತದೆ.

ಶ್ರೀ ಮುನಿನರಸಿಂಹಯ್ಯ : ಪರಿಹಾರ ಕೊಡತಕ್ಕ ಕೆಲಸವನ್ನು ತಾವು ಆದಷ್ಟು ಜಾಗ್ರತೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ನೀವು ಸಂಬಂಧಪಟ್ಟ ಶಾಸಕರಾಗಿದ್ದೀರಿ. ಸರ್ಕಾರದ ಗಮನಕ್ಕೆ ತರುವುದು ತಮ್ಮ ಕರ್ತವ್ಯವಾಗಿದೆ. ಇದು ಈಗಾಗಲೇ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ತಾವು ಏನೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ, ಅವುಗಳನ್ನು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ ಮತ್ತು ಈ ವಿಷಯವಾಗಿ ಸಾರಿಗೆ ಸಚಿವರ ಜೊತೆಯಲ್ಲೂ ಸಮಾಲೋಚನೆ ಮಾಡಿ, ಕಾರ್ಪೊರೇಷನ್ ಸಿಬ್ಬಂದಿಯವರ ಜೊತೆಯಲ್ಲೂ ಸಮಾಲೋಚನೆ ಮಾಡಿ, ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಈ ದಿವಸ ಒಂದು ವಿಷಯವನ್ನು ಪ್ರಸ್ತಾಪ ಮಾಡಲು ನಿಂತಿದ್ದೇನೆ. ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. ಇಲ್ಲದೇ ಹೋದರೆ ನಾಳೆ ನನಗೆ ಅವಕಾಶ ಕೊಡಿ.

ವೈಸ್ ಛೇರ್ಮನ್ : ನಾನು ಈಗ ಆ ಸಬ್ಜೆಕ್ಟ್ ದಾಟಿ ಬಂದಿದ್ದೇನೆ. ನಿಮಗೆ ನಾಳೆ ಅವಕಾಶ ಕೊಡಲಾಗುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾಗರಹೊಳೆಯಲ್ಲಿ ಬೆಂಕಿಬಿದ್ದ ಬಗ್ಗೆ. ಮಾನ್ಯ ಅರಣ್ಯ ಸಚಿವರು ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ, ಈಗ ಅವರಿಂದ ಉತ್ತರ ಕೊಡಿಸಬೇಕು.

ವೈಸ್ ಛೇರ್ಮನ್ : ಈ ವಿಚಾರವಾಗಿ ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ನಿಯಮ 334ರ ಮೇರೆಗೆ

1. ಗುಲ್ಬರ್ಗಾ ಜಿಲ್ಲೆಯ, ಸೇಡಂ ತಾಲ್ಲೂಕಿನ ಮುಧೋಳ ನ್ಯಾಯಬೆಲೆ ಅಂಗಡಿ ನಂ. 36ಕ್ಕೆ ಮತ್ತೆ ಡೀಲರ್‌ಷಿಪ್ ಕೊಟ್ಟಿರುವ ವಿಚಾರ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ ನ್ಯಾಯ ಬೆಲೆ ಅಂಗಡಿ ನಂ. 36. ಡೀಲರ್ ಅವ್ಯವಹಾರ ಮಾಡಿದ್ದು, ಡೀಲರ್‌ಷಿಪ್ ರದ್ದು ಪಡಿಸಲಾಗಿತ್ತು. ಬೇರೆಯವರನ್ನು ನೇಮಕಾತಿಗಾಗಿ ತಹಸೀಲ್ದಾರ ಹಾಗೂ ಸ್ಥಳೀಯ ಪ್ರಜಾಪ್ರತಿನಿಧಿಗಳು ಶಿಫಾರಸ್ ಮಾಡಿದ್ದು, ಅದನ್ನು ಕಡೆಗಣಿಸಿ, ಸಹಕಾರ ಸಂಘಗಳ ಇಲಾಖೆಯವರ ವರದಿಯನ್ನೂ ಕೇಳದೇ, ಮುಧೋಳ ನೇಕಾರರ ಸಹಕಾರ ಸಂಘದವರಿಗೆ ನ್ಯಾಯಬೆಲೆ ಅಂಗಡಿಯ ಡೀಲರ್‌ಷಿಪ್ ಕೊಡಲಾಗಿದೆ. ಈ ಕ್ರಮಗ್ಗ ನೇಕಾರರ ಸಹಕಾರ ಸಂಘ, ಮುಧೋಳ 1989-90ನೇ ಸಾಲಿನಲ್ಲಿ 26.464 ರೂಪಾಯಿ 99 ಪೈಸೆ ಹಾನಿಯಲ್ಲಿರುತ್ತದೆಂದೂ, ಸಂಘದ ಕೆಲಸವು ಸ್ಥಗಿತಗೊಂಡಿದೆಯೆಂದೂ, ಯಾವ ಬ್ಯಾಂಕಿನಲ್ಲಿಯೂ ಸಹ ಇದರ ಠೇವಣಿ ಹಣ ಇಲ್ಲವೆಂದು ಸಹಕಾರ ಇಲಾಖೆಯ ಸಹಾಯಕ ನಿಬಂಧಕರು, ಸೇಡಂ ಅವರ ಪತ್ರ ಸಂಖ್ಯೆ:ಎಆರ್:2 ಎಸ್ 5 ಕೆಎಂಸಿ 91-92. ದಿನಾಂಕ 6-3-92ರಂದು ತಿಳಿಸಿದ್ದಾರೆ. ಸ್ಥಗಿತಗೊಂಡಿರುವ ಈ ಸಂಘ ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಇತ್ಯಾದಿ ಸರಬರಾಜು ಮಾಡದೇ ಒಬ್ಬ ವ್ಯಕ್ತಿಯ ಲಾಭಕ್ಕಾಗಿ, ಈ ಡೀಲರ್‌ಷಿಪ್ ಕೊಟ್ಟಿದ್ದು ತಪ್ಪಲ್ಲವೇ? ಇದರಿಂದ ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಸರಬರಾಜು ತೊಂದರೆಯುಂಟಾಗಿ, ವರ್ಷಾನುಗಟ್ಟಲೆ ಆಹಾರಧಾನ್ಯ ಸಿಗದಂತೆ ಆಗುವುದಿಲ್ಲವೇ? ಇದನ್ನು ತಪ್ಪಿಸಲು ಸಹಕಾರ ನಿಬಂಧಕರ ವರದಿಯನ್ನು ವೀಕ್ಷಿಸಿ, ತಕ್ಷಣವೇ ನೇಕಾರರ ಸಂಘಕ್ಕೆ ನೀಡಿದ ಡೀಲರ್‌ಷಿಪ್‌ನ್ನು ರದ್ದುಗೊಳಿಸಿ, ಅಥವಾ ತಡೆಯಾಜ್ಞೆ ನೀಡಿ, ಸ್ಥಳೀಯರ ಶಿಫಾರಸ್ಸು ಮೇರೆಗೆ ನ್ಯಾಯಬೆಲೆ ಅಂಗಡಿಯ ಡೀಲರ್‌ಷಿಪ್‌ನ್ನು ಕೊಟ್ಟು, ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಇತ್ಯಾದಿ ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಸಂಬಂಧಪಟ್ಟ ಮಂತ್ರಿಗಳಿಂದ ಒದಗಿಸಿಕೊಡುತ್ತೇನೆ.

2. ಬೆಂಗಳೂರು ನಗರದ ಗಾಂಧೀನಗರ ಕ್ಷೇತ್ರದಲ್ಲಿರುವ ಪೋಲೀಸ್ ವಸತಿಗೃಹಗಳ ಕಾಲೋನಿಗೆ ನಾಗರಿಕ ಸೌಲಭ್ಯ.

ಶ್ರೀ ಆರ್. ದಯಾನಂದರಾವ್ (ಗಾಂಧೀನಗರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಗಾಂಧೀನಗರ ಕ್ಷೇತ್ರದಲ್ಲಿ ಆನಂದರಾವ್ ವೃತ್ತದ ಬಳಿ ಒಂದು ಪೋಲೀಸ್ ಕಾಲೋನಿ ಇದೆ. ಇದು ಸುಮಾರು ಎಪ್ಪತ್ತು ವರ್ಷ ಹಳೆಯದು. ಇಲ್ಲಿ 400 ರಿಂದ 500 ಮನೆಗಳಿವೆ. ಇಲ್ಲಿ ಸರಿಯಾದ ರಸ್ತೆ ಮತ್ತು ದೀಪಗಳು ಇಲ್ಲ. ಇಲ್ಲಿಯ ರಸ್ತೆಗಳು ಡಾಂಬರ್ ಕಂಡು ಸುಮಾರು ವರ್ಷಗಳಾಗಿವೆ. ಇಲ್ಲಿಯ ನಿವಾಸಿಗಳಿಗೆ ಸರಿಯಾದ ರಸ್ತೆ ಮತ್ತು ಬೀದಿ ದೀಪಗಳಿಲ್ಲದೆ ಹೆಂಗಸರು ಮತ್ತು ಮಕ್ಕಳು ಓಡಾಡುವುದಕ್ಕೆ ತುಂಬಾ ತೊಂದರೆ ಆಗಿದೆ. ಈ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ? ಲೋಕೋಪಯೋಗಿ ಇಲಾಖೆಯವರ ಗಮನಕ್ಕೆ ತಂದರೂ ಸಹಾ ಸೂಕ್ತ ಪರಿಹಾರ ದೊರಕಿಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಹೇಳಿಕೆ ನೀಡಬೇಕೆಂದು ಕೋರುತ್ತೇನೆ ಮತ್ತು ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ರೂಪಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆ ನೀಡಲು ತಮ್ಮ ಅನುಮತಿ ಕೋರುತ್ತೇನೆ.

ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಬೆಂಗಳೂರು ನಗರ, ಗಾಂಧೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆನಂದರಾವ್ ವೃತ್ತದ ಬಳಿ ಸುಬೇದಾರ್ ಛತ್ರಂ ರಸ್ತೆಗೆ ಹೊಂದಿಕೊಂಡಂತೆ ಒಂದು ಪೋಲೀಸ್ ಕಾಲೋನಿ ಇದೆ. ಇದನ್ನು 1975ನೇ ಇಸವಿಯಲ್ಲಿ ಅಂದರೆ, ಸುಮಾರು 17 ವರ್ಷಗಳ ಹಿಂದೆ ನಿರ್ಮಿಸಿರುತ್ತಾರೆ. ಇಲ್ಲಿ 252 ಪೋಲೀಸ್ ಕಾನ್ಸ್‌ಟೇಬಲ್‌ಗಳ ಹಾಗೂ 3 ವರ್ಷಗಳ ಹಿಂದೆ ಕಟ್ಟಿದ 12 ಸಬ್ ಇನ್ಸ್‌ಪೆಕ್ಟರ್‌ಗಳ ವಸತಿ ಗೃಹಗಳು ಇವೆ. ಇಲ್ಲಿ 2 ಕಿ.ಮೀ. ಉದ್ದ ಇರುವ ರಸ್ತೆಗಳನ್ನು ಸುಮಾರು 15 ವರ್ಷಗಳ ಹಿಂದೆ ನಿರ್ಮಿಸಿದ್ದು, ಇದಕ್ಕೆ ಡಾಂಬರನ್ನೂ ಸಹ ಹಾಕಿರುತ್ತಾರೆ. ಈ ರಸ್ತೆಗಳ ದುರಸ್ತಿ ಮಾಡದೇ ಇರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದು ಜನರ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಕಂಡು ಬಂದಿದೆ. ಹಾಗೆಯೇ ಬೀದಿ ದೀಪಗಳ ದುರಸ್ತಿ ಮಾಡಬೇಕಾಗಿದೆ. ಇದನ್ನು ಗಮನಿಸಿ, ಸದರೀ ಕಾಲೋನಿಯ ರಸ್ತೆ ಹಾಗೂ ದೀಪಗಳ ದುರಸ್ತಿಗೆ ರೂ. 2.10.000 ಗಳ ಅಂದಾಜನ್ನು ತಯಾರಿಸಲಾಗಿದೆ. ಸಾಕಷ್ಟು ಅನುದಾನ ಈ ಸಾಲಿನಲ್ಲಿ ಲಭ್ಯವಿಲ್ಲದೇ ಇರುವುದರಿಂದ ಈ ಸಾಲಿನಲ್ಲಿ ದುರಸ್ತಿ ಕಾರ್ಯವನ್ನು ತೆಗೆದುಕೊಳ್ಳಲಾಗಲಿಲ್ಲ. ಸದರೀ ಕೆಲಸವನ್ನು ಅನುದಾನದ ಲಭ್ಯತೆ ಮೇಲೆ ಮುಂದಿನ ಸಾಲಿನಲ್ಲಿ (1992-93) ತೆಗೆದುಕೊಳ್ಳಲಾಗುವುದು.

3. ಮಂಗಳೂರು ತಾಲ್ಲೋಕು ಉಳ್ಳಾಲವನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲೋಕಿನ ಉಳ್ಳಾಲ ಮಂಡಲ್ ಪಂಚಾಯತಿಯು 34 ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯ ಊರು. ಈ ಗ್ರಾಮದ ಅಭಿವೃದ್ಧಿ, ಬೆಳವಣಿಗೆಯ ದೃಷ್ಟಿಯಿಂದ ಉಳ್ಳಾಲದಲ್ಲಿ ಮಂಡಲ ಪಂಚಾಯತ್ ರದ್ದುಪಡಿಸಿ, ಪುರಸಭೆಯನ್ನಾಗಿ ಪರಿವರ್ತನೆ ಮಾಡುವುದು ತುಂಬಾ ಹಿತಕರವಾಗಿದೆ.

ಆದಕಾರಣ 34 ಸಾವಿರದಷ್ಟು ಜನಸಂಖ್ಯೆ ಇರುವ ಉಳ್ಳಾಲವನ್ನು ಪುರಸಭೆಯಾಗಿ ಮಾರ್ಪಡಿಸಬೇಕಾದುದು ಅತೀ ಅವಶ್ಯಕವಾಗಿರುತ್ತದೆ. ಈ ಕುರಿತು ಗ್ರಾಮಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಇದಿನಬ್ಬ ಅವರ ಸೂಚನೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಉತ್ತರ ತರಿಸಿಕೊಡುತ್ತೇನೆ.

4. ಹನುಮನಹಳ್ಳಿ ಏತ ನೀರಾವರಿ

ಶ್ರೀ ಕೆ.ಎಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ ಹಾಸನ ಕ್ಷೇತ್ರದ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದ್ದು ಬರಗಾಲದ ಬವಣೆಯಿಂದ ನಿರ್ಭಾಗ್ಯ ಜನರನ್ನು ರಕ್ಷಿಸಲು ಸರ್ಕಾರ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಹಾಸನ ಕ್ಷೇತ್ರದಲ್ಲಿ ಹೇಮಾವತಿ ಡ್ಯಾಮ್‌ನ್ನು ಕಟ್ಟಿದ್ದು ಸಾವಿರಾರು ಎಕರೆಗಳು ಮುಳುಗಡೆಯಾಗಿದ್ದರೂ ಈ ತಾಲ್ಲೂಕಿಗೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿರುವ ವಿಚಾರವನ್ನು ಈಗ್ಗೆ ಸುಮಾರು 8 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ವಿಧಾನ ಸೌಧದ ಮೂರನೆಯ ಮಹಡಿ ಕಾನ್‌ಫರೆನ್ಸ್ ಹಾಲಿನಲ್ಲಿ ನಡೆದ ಶಾಸಕರ ಮತ್ತು ಇಂಜನೀಯರುಗಳ ಮೀಟಿಂಗ್‌ನಲ್ಲಿ ಇದನ್ನು ತಂದಾಗ ಹನುಮನಹಳ್ಳಿ

ಏತದ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಿ ಹಾಸನ ತಾಲ್ಲೂಕಿನ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಒದಗಿಸುವ ವಿಚಾರದಲ್ಲಿ ಭರವಸೆ ಕೊಟ್ಟಿದ್ದರು ಈ ಯೋಜನೆಯ ಅಂದಾಜು ಮತ್ತು ಪ್ಲಾನ್ ತಯಾರಾಗಿದ್ದು ಈ ಯೋಜನೆಯನ್ನು ತಕ್ಷಣ ಕಾರ್ಯಗತ ಮಾಡುವ ವಿಚಾರವನ್ನು ಮಾನ್ಯ ಭಾರಿ ನೀರಾವರಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ದಿನಾಂಕ 9-4-1991ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಾಸನ ಜಿಲ್ಲೆಯ ಹನುಮನಹಳ್ಳಿ ಏತ ನೀರಾವರಿ ಯೋಜನೆಯನ್ನು ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ನಿರ್ಧರಿಸಲಾಯಿತು. ಅದರಂತೆ. ಹೇಮಾವತಿ ಕೊಳ್ಳದಲ್ಲಿರುವ ನೀರಿನ ಲಭ್ಯತೆಯನ್ನನುಸರಿಸಿ 0.35 ಟಿ.ಎಂ.ಸಿ. ನೀರನ್ನು ಬಳಸುವ ಒಂದು ಯೋಜನೆಯನ್ನು ತಯಾರಿಸುವಂತೆ ತಾಂತ್ರಿಕ ಸಮಿತಿ ನಿರ್ಧಾರ ತೆಗೆದುಕೊಂಡಿತು.

ಈ ಯೋಜನೆಯ ಪೂರ್ವಭಾವಿ ತಪಾಸಣಾ ವರದಿಯನ್ನು ಈಗ ತಯಾರಿಸಲಾಗಿದೆ. ಮುಖ್ಯ ಇಂಜಿನಿಯರ್. ಸಣ್ಣ ನೀರಾವರಿ. ಇವರು ಎರಡು ಪರ್ಯಾಯ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ರೂ. 6.00 ಕೋಟಿಯ ಒಂದು ಅಂದಾಜಿ ಪ್ರಕಾರ 6500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಪ್ರಸ್ತಾವೆಯಲ್ಲಿ ಆಗುವ ನೀರಿನ ಬಳಕೆ 0.65 ಟಿ.ಎಂ.ಸಿ. ಇನ್ನೊಂದು ಪರ್ಯಾಯ ಪ್ರಸ್ತಾವನೆಯ ಪ್ರಕಾರ ನೀರಾವರಿಯಾಗುವ ಪ್ರದೇಶ 9,600 ಎಕರೆ. ಇದರ ಅಂದಾಜು ರೂ. 10.75 ಕೋಟಿ ಮತ್ತು ನೀರಿನ ಬಳಕೆ 0.768 ಟಿ.ಎಂ.ಸಿ.

ಈ ಎರಡೂ ಪ್ರಸ್ತಾವೆಗಳಲ್ಲಿ ಆಗುವ ನೀರಿನ ಬಳಕೆ ತಾಂತ್ರಿಕ ಸಮಿತಿ ನಿರ್ಣಯಿಸಿರುವುದಕ್ಕಿಂತ ಹೆಚ್ಚಿರುವುದರಿಂದ. ಪುನಃ ಈ ಪ್ರಸ್ತಾವೆಗಳನ್ನು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅದರ ನಿರ್ಣಯದಂತೆ ಸಾಧುವಾದ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

5. ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದ ಆಸ್ಪತ್ರೆಯ ಕಟ್ಟಡ ಹಾಗೂ ಸಿಬ್ಬಂದಿಯ ನೇಮಕ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ 10 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ಕಾಮಗಾರಿಕೆ ಮುಕ್ತಾಯಗೊಂಡಿದೆಯೇ ಈ ಕಟ್ಟಡದ ಕಾಮಗಾರಿಕೆಯು ಕರ್ನಾಟಕ ಭೂ ಸೇನಾ ನಿಗಮದವರು ಪೂರ್ಣಗೊಳಿಸಿರುತ್ತಾರೆಯೇ? ಹಾಗಿದ್ದಲ್ಲಿ ಈ ಆಸ್ಪತ್ರೆಗೆ ಅವಶ್ಯಕವಾಗಿ ಬೇಕಾದ ವೈದ್ಯರು ದಾದಿಯರು ಮುಂತಾದ ಅವಶ್ಯಕ ಸಿಬ್ಬಂದಿಗಳ ನೇಮಕ ಮಾಡಬೇಕಾದುದು ಸರ್ಕಾರದ ಅವಶ್ಯ ಕೆಲಸ ಹಾಗಾಗಿ ಸಿಬ್ಬಂದಿ ನೇಮಕ ಮಾಡಲಾಗಿದೆಯೇ ಮಾಡಿದ್ದಲ್ಲಿ ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಲಾಗಿದೆ ಹುದ್ದೆವಾರು ವಿವರ ನೀಡುವುದು. ನೇಮಕ ಮಾಡಿದ್ದಲ್ಲಿ ಈಗ ಹಾಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ. ಈ ಪ್ರದೇಶದ ಜನರಿಗೆ ಇರುವ ಅಥವಾ ಸಿಗುತ್ತಿರುವ ಸೌಲಭ್ಯಗಳೇನು ಇವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ಮಾನ್ಯ ಸಗೀರ್ ಅಹಮದ್‌ರವರು ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ

ಕೇಂದ್ರಕ್ಕೆ ಬೇಕಾದ ಸೌಲಭ್ಯಗಳ ಬಗ್ಗೆ ನಿಯಮ 334 ರಲ್ಲಿ ಗಮನ ಸೆಳೆದಿದ್ದಾರೆ. ಮಾನ್ಯ ಅಧ್ಯಕ್ಷರೇ ಪ್ರಾಥಮಿಕ ಆರೋಗ್ಯ ಕೇಂದ್ರ 1986ರಲ್ಲಿ ಮಂಜೂರಾಗಿದೆ. ಮತ್ತು ಇದರ ಕಟ್ಟಡಕ್ಕಾಗಿ 8.5 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕಟ್ಟಡ ಕೂಡ ಕಟ್ಟಿದ್ದೇವೆ. ದಿನಾಂಕ 30-9-91 ರಂದು ಕಟ್ಟಡ ಪೂರ್ಣವಾಗಿದೆ. ಆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಬ್ಬ ವೈದ್ಯರನ್ನು ವರ್ಗ ಮಾಡಿದ್ದೆವು. ಅವರು ಬೇರೆ ಕಡೆಗೆ ಪಿ.ಜಿ. ಕೋರ್ಸ್ ಮಾಡಲು ಹೋಗಿದ್ದರಿಂದ ಆ ಸ್ಥಾನ ತೆರವಾಯಿತು. ಶೀಘ್ರದಲ್ಲೇ ಆ ಹುದ್ದೆಯನ್ನು ಭರ್ತಿ ಮಾಡಲಾಗುವುದು ಮತ್ತು ಆ ಆರೋಗ್ಯ ಕೇಂದ್ರಕ್ಕೆ ಬೇಕಾದಂಥ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಮೊನ್ನೆ ತಾನೆ ನಮ್ಮ ಆರ್ಥಿಕ ಇಲಾಖೆಯವರು ಇದ್ದ ನಿರ್ಬಂದವನ್ನು ತೆಗೆದುಹಾಕಿದ್ದಾರೆ. ಈ ಕೂಡಲೇ ಅಲ್ಲಿಗೆ ಸಾಕಷ್ಟು ಸಿಬ್ಬಂದಿ ಹಾಕತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಸೈನಿಕರಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಬಗ್ಗೆ ಮನವಿಯನ್ನು ಒಪ್ಪಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ. ಶ್ರೀರಾಂಪುರ ಹೋಬಳಿ ಕುದುರೆ ಕಣಿವೆ, ಸರ್ವೆ ನಂ. 1ರ ಸಾಗುವಳಿ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಸಸಿ ನೆಡಲು ಗುಂಡು ತೆಗೆಯುತ್ತಿರುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೆ. 1) ಖಂಬದ ಕೋಣೆ ಮಂಡಲ್ ಪಂಚಾಯಿತಿಗೆ ಸೇರಿದ ಕಾಲ್ತೋಡು ಹಳ್ಳಿಗೆ ಪ್ರೌಢ ಶಾಲೆಯ ಮಂಜೂರಾತಿಯ ಬಗ್ಗೆ.

2) ಕಿರಿ ಮಂಜೇಶ್ವರ ಹಳ್ಳಿಯಲ್ಲಿನ ಪ್ರೌಢ ಶಾಲೆ ಮುಂಭಾಗದ ರಸ್ತೆಯನ್ನು ಪೂರ್ಣಗೊಳಿಸುವ ಬಗ್ಗೆ.

3) ಖಂಬದ ಕೋಣೆಗೋಳಿ ಹೊಳೆ ಹಳ್ಳಿಯ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ.

4) ಪಡುವರಿ ಗ್ರಾಮದ ದೊಂಬೆಯಲ್ಲಿ ಗುಂಪುಗಳ ವಿವಾದದಿಂದಾಗಿ ದೇವಸ್ಥಾನವನ್ನು ಮುಚ್ಚಿರುವ ಬಗ್ಗೆ.

5) ಖಂಬದ ಕೋಣೆ ಮಂಡಲ್ ಪಂಚಾಯಿತಿ ವ್ಯಾಪ್ತಿಗೆ ಸೇರಿದ 6 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಅರ್ಜಿಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವೈಸ್ ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ

ವೈಸ್ ಛೇರ್ಮನ್ : 1992-93ನೇ ಸಾಲಿನ ಈ ಕೆಳಕಂಡ ಬೇಡಿಕೆಗಳ ಚರ್ಚೆ ಮತ್ತು ಮತಕ್ಕೆ ಹಾಕುವುದು. ಬೇಡಿಕೆ ಸಂಖ್ಯೆ : 23, 25. 26. ರಾಜ್ಯದ ಅಬಕಾರಿ. ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು, ಜೈಲು ಇತ್ಯಾದಿ ಬೇಡಿಕೆಗಳನ್ನು ಮಂಡಿಸಬೇಕು.

ಬೇಡಿಕೆಯ ಸಂಖ್ಯೆ 23, 25

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16.66.97.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ. ಹಾಗೂ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 242. 58. 20.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ 26

ಶ್ರೀ ಡಿ.ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11.65.98.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ವೈಸ್ ಛೇರ್ಮನ್ : ಈ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾನ್ಯ ಕಮರುಲ್ ಇಸ್ಲಾಮ್‌ರವರು ಇನಿಷಿಯೇಟ್ ಮಾಡುತ್ತಾರೆ.

† SRI QUMARUL ISLAM : (GULBARGA)

Sir, three very important Demands namely Home, Excise and Prisons Departments are before this house. I begin by saying, as we all know, Home Department plays a very vital role to maintain peace in the State and also the Law and Order of the State. Any State which is having more number of communal riots, murders, dacoities, robberies, thefts etc., will create a sense of insecurity amongst the people of the State. A good State is one where there are no communal riots, and where there are very very limited number of thefts and dacoities. I have gone through the Annual Report of the Police Department for the year 1990-91 published by this Department. It comprises of 30 pages and if I divide this report into three parts, first part of the report is regarding important sanctions received by the Police Department during the year 1990-91. In this part, it has been mentioned that sanction was given to the posts of Inspector General of Police, Technical Services, Commissioner for Traffic and Road Safety and also the Additional Director General of Police. About 15 new Police Stations have been created and about ten out-posts have been converted into Police Stations and also certain Police Stations

which were short of staff, have been provided with sanctions for 3400 Police Constables, Head Constables, A.S.Is., and P.S.Is.,

Police Constables were given promotion to Head Constables, Head Constables to A.S.Is., A.S.Is., to P.S.Is., and P.S.Is., to P.Is., All these exercises have been done in the larger interests of the Police and fully equipping the Police force to see that the law and order is maintained in the State. The Second part of this report consists of bifurcation of the Police organisation as to the number of ranges, about 20 Police districts, about the powers of the Police department, Forest Cell, and also Cell of the Food and Civil Supplies Enforcement, Police Training Schools, Intelligence, so on and so forth. The third part of the report is appendices 1, 2 and 3. If you go through the report, in page 7, some details have been given under the head of Forest Cell and Forest Mobile Squad. The details are like this:- In the year 1991, the Forest Cell has detected 1227 cases including 611 Sandalwood cases and 1547 persons were arrested including 822 persons in Sandalwood cases and also it is stated that out of 163 vehicles seized, 92 vehicles were seized in connection with Sandalwood and also the total value of the property being about 1,59,18,056/- out of which the value of the Sandalwood is about 95,70,539/-. This part of the report shows that there is a mention regarding the detection of the cases as to how many persons are arrested, how many vehicles are seized and as to how much worth property is seized. But there is no mention as to, after doing all these exercises, how many culprits have been punished by the courts and how many culprits have been sent to jail & who are all involved in this smuggling business of Sandalwood. As you know, Sandalwood is a product of our Karnataka State and there are number of factories in other States which are only dependent on the smuggling of Sandalwood from our state to those states. If the Sandalwood is not smuggled, those factories will close down and they cannot run. The density of the smuggling, the value thereof and the vehicles seized shows the racket that is going on in the State so far as Sandalwood smuggling is concerned. I wanted to know through you. as to why there is no mention about the same in the report. The House and the representatives of the people want to know as to what action the Police Department has taken, whether they have sincerely followed the cases in the Court to see that these smugglers are punished. There is no mention about the same.

So far as the essential commodities are concerned, there is an Enforcement Cell for the Food and Civil Supplies and there is a para about the same that we cannot keep up the prices and that the prices are not maintained.

> " The department conducted 1638 raids during the year 1990-91 and 374 cases were booked. The total value of the essential commodities seized is Rs. 2,25,50,327/- and the value of the vehicles seized is Rs. 1,97,46,150/- and the number of persons arrested were 403."

Here also how many persons, who are involved in the essential commodities case, who have been convicted, has not been mentioned. How many have been sent behind the bars is not mentioned. That means the Information is not correct. Only police part of the work is arresting and sending to the court. Police work will not end there. police has to work out and see that witnesses are Produced and fear should be created that there is punishment. For this kind of Act if they are not punished there will not be any fear of the Police, this smuggling whether in essential commodity or forest produce or sandalwood, will be continued. I have gone through this Annual report and also I referred to 1990 report because I wanted to compare as the Hon. Minister has taken lot of pain for sanctioning so many posts and so many promotions were given and the Hon. Minister tried to see that so many vehicles are given to each range and the vehicles have been purchased and the police force has been made well-equipped. "Crimes reported in Karnataka State during the year 1990-91" It is on page 25. Figures for 1990 is on page 22. ""Murders-number of cases reported during 1990-91 - 1421. "What about 1990, the previous year? It is 1354. That means the murders this year are more compared to the last year. Now, dacoity. This year 337, previous year 303. More dacoities this year and if you see the House-Break Theft, this year it is 9293, last year 8833. More House-Break Thefts are reported this year. And ordinary theft, this year it is 18,907 and the previous year it was 17,000 and odd. Rioting, this year 9054, 8058 last year. Total cases this year is 1,04,489 and for last year it was 1,00,740. Therefore, this had made the Hon.Minister to equip the department, to create so many posts, to give new vehicles, to promote the officials PCs to PSI level. Murders, dacoities, house-break theft and even communal riots and increasing. They are in the ascending order. Parabola crossed in the hyperbola and if this is the situation we can see how the law and order is in our State. Earlier we used to see this thefts and all in Chambalghati, North India, Rajasthan, some parts of UP. These dacoits come and loot buses and journey in North India was not safe in the night. In Karnataka also, more particularly Gulbarga division, Bijapur division, Bellary division, night journey is not safe. people are not ready to move freely and travel in the nights. We have seen number of dacoities and looting of KSRTC buses also. Why this is happening? What step the Police department has taken? I just went to quote one incident. A gang of four dacoits stopped a bus and looted and the cash and gold that was looted was worth about Rs. 8000. It seems, after some time the ring leader of the dacoits said: You just return the cash and gold to the passengers. It was unique the dacoits returned the cash and gold to the passengers and the people were happy. When the bus was moving, then there was a discussion between the leaders and his colleagues. Leader was saying: We will stop this business. We have already given to the police Rs. 10,000 for looting this bus. it has really happened and it was reported in some of the

newspapers in north India. That situation should not come to our State. "We could only get Rs. 8000; we will wait for another bus." That situation should not come to our state as far as this dacoities are concerned. Sir, the number of communal riots is increasing. I have got my own study on this communal riots. I take this opportunity and I will say that my study is also based on the reports we received from the Government in the State Integration Council meeting and other occasions. We know Sir, there are fascist forces in our state and in the country. These fascist forces have killed the Father of Nation. these fascist forces have killed Mrs. Indira Gandhi. We lost two Prime ministers. These fascist forces have to be curbed in this country, if we want this country to remain integrated. The fascist forces are creating a sort of hatredness among the Hindus and the Muslims, among the Hindus and Dalits and among the Hindus and Christians and these fascist forces have got a definite strategy and plan and these forces have given training to their volunteers to increase the militancy among the youths and once the militancy is increased among the youths and if their mind is Poisoned, no power on this earth could stop them from doing anything. And this has also been stated in the integration council meeting of the state during the last year; that it has been mentioned who are these forces? It is mentioned that RSS , Hindu Munnani, Shiv Sena, Bajrang Dal, are Involved on these things. I will quote one example. Frankly speaking and for that I will congratulate the Police also. At least they have brought certain facts to the notice of the people. One of the BJP leaders Mr. Murli Manohar Joshi was addressing Ekta Yatra meeting in Bangalore recently. It was a big rally and he was giving his speech. When he was coming to the point that Congress-I, Muslim league, DMK, CPI, CPM were creating trouble, two boys, one with a Pakistani flag and Pakistan Zindabad slogan and the other boy went to the dais and he tried to attack Dr. Murli Manohar Joshi. That was reported in the paper. I have shown the paper in this House. Hon'ble Home Minister is also here. When I was speaking on the Motion of thanks to Governor's Address I have mentioned this. The Times of India reported that the Police has arrested the two persons and these two were RSS trained workers. One is Raja shekhara Reddy and the other one is Manjunath. Sir, this incident we cannot take lightly. It cannot be brushed aside because we have seen a number of communal riots. Sirs, how the communal riot will start. Somebody will throw some stone on a religious procession and the police will say: Stone has come on the procession and the mob got wild and all of a sudden, looting and burning started. Sirs, it is not so. My study says it is not so. There are riots starting with the simple throwing of stone but it cannot be all of a sudden. There is a definite plan in this regard. Certain fascist forces are working with the ulterior motive with certain goals in their minds. They want to achieve their goals that this sort of communal riot and hatredness among the people will definitely strengthen them to reach the

goal. Sirs, if it is all-of-a- sudden riot, if you go to the hospital to see the injured, the Knives used would have been the same. Knives used in Ramanagaram communal riot, Knives used in Channapattana communal riots, Srinivasapura communal riot are the same. Same type Knives have been seized by the police and even attack on the people, the mark on the people will be the same. Injury will be the same type. That shows there is full indication that there is a definite planning in this. Because the ordinary man cannot injure a person with the same type of weapon. That means there is a trained fascist force doing this. I Want to know what our Intelligence department is doing. Intelligence department has to know the things before anything happen, but here the police will try to prove the communal riot a more secular. If you telephone to our Police Commissioner Sab, or DGP sab, or our IGP sab they will say, Quamarul Islam Sab we have got the report that there was a Stone throwing and all of a sudden communal clashes Started, some houses were burnt and some have been looted and some people have been killed and some are injured and a few are serious and the police have arrested among the two communities about 50 Muslims and 50 non-Muslims. The beautiful secular reply will come from the Police. Police will not see any discrimination in arresting 45 Muslims and 55 Hindus or 55 Muslims and 45 Hindus. Police will definitely arrest 50 Muslims and 50 Hindus. If there is a fight between the Dalits and Hindus, they will arrest 50 Hindus and 50 Dalits, because they want to be more secular. The word ' secular ' is there only to see equal number of people are arrested. And sir, out of 50 people arrested only 5 people would have involved in that. 45 persons would be most innocent. Many a time it has happened, we know. And the government of Karnataka has realised and that is why the government says, we will withdraw the cases. One of the reason is, people who have gone for the purchase to Bazaar would have been arrested. Because police wants in a certain period of time, certain people have to be arrested, because, they are answerable to the government, to the minister. So, they will immediately arrest and give a figure. There should be a sincerity in this and we must take this issue of communal riots very very seriously. Karnataka State has faced last year series of communal riots and these communal riots have become one of the reasons for the change of Chief Ministers of this State. For any government, the Home Department and the police is the backbone. If don't give me food for Two days I will tolerate. if you don't give me water I will tolerate. I want to live in my country, in my motherland, where I born, with peace. I do not want any tensions in my land. I want to sleep in my land in my mother land, in my house calmly. If I cannot sleep calmly then what is the use of my being a citizen of this country. And I am proud of my country to which our leaders got Independence. They have sacrificed for the Independence of this country, but the morale of the police, integrity of the police, has gone down. Here there is mention of the morale

of the police Department. I do not want to tell only about Karnataka Police. Through out India, if you go, there is the Police Hapta. It is in a big way in Bombay, Calcutta and Delhi. But this Hapta is also there in Bangalore. Police Hapta is fixed. Every Barman has to give police Hapta: every Hotelier, cabarets has to give Police Hapta. The small man who want to sell vegetable sitting roadside also has to give Police Hapta to the constable. Hapta has become integral part of the police department and now the report says the moral is high. Sir, I am very sorry to say that I have to bring certain facts to the notice of this house because we are representing the people. I can understand in some of the Metropolitan cities some advancement in the matter of Audio and Videos. This I can understand to certain extent in cities. but if you go to the Talukas, Villages, you can find blue- films and other illegal shows are being exhibited to the people. This is taking place in almost all the Talukas and Villages after midnight. it is their in the Hyderabad Karnataka area- rural areas. People are watching without any restrictions and hindrance from the police. I would like to ask you where our moral has gone. I can quote number of such instances to the house if the Hon'ble Speaker permits me. I am just quoting the happenings that is going in Talukas and Villages. Sir, what will be the character of new generation, young people. As you know young generation is the future of our country. Now this disease which was there in some advanced cities has extended to rural areas, Villages and Talukas. Many video parlours and Video Games are run in villages and Talukas, When this is the situation, how can we expect that there will not be communal riots, how can we expect that there will not be smuggling of the Sandalwood, how can we expect there will not be price rise of essential commodities. In order to control all these things the presence of Police department is very much essential. If you put forth certain demand for certain amount, as far as I am concerned , if you increase certain crores of rupees I am ready to vote for it. I want that the Police department and the Police personnel should have well- equipped weapons. Nowadays the Dacoits are having sophisticated weapons whereas our police Department have the same old 303 guns, the same old pistols which don't work sometime. Our Police Department is having some old jeeps, many of them don't have self-starter and they are not in good condition and thereby the police cannot reach the crime spot immediately. Sir, we are not against giving full and Sophisticated equipment. As far as Police personnel are concerned you gave them modernised equipment, you give them good jeep and other vehicles, you give them additional police force. What I wanted is that the Police should act in such a way that there should be a sort of fear among the people, there should be sort of fear among the dacoits, thieves, goondas. But what is happening now is some of the Sub- Inspectors, Circle Inspectors - I don't want to name, they will act as if they are hero's. These Sub- Inspectors they will bring some

students, they will bring some innocent people and they beat them and they will try to create some sort of terror. But, at the same time some Circle Inspectors will not beat the man who runs Matka, the Circle Inspector will not beat the man who violates the Government rules and regulations, who sell Wine in the wholesale shop as a retailer - some times he will also give company to the visitors to that shop and have a peg of it. The same Circle Inspector will definitely beat all those who are sitting on the roads, who are selling vegetables for their livelihood, people who are in the below poverty line — they will beat all these people. It is not the job of the Police but still Police take this. There is Corporation and the authorities of Corporation should check this but in our place it is reverse. The police are beating these people and take away all the things available there on the streets. They will not have any Panchanamas, there are instances some costly Banaras sarees were taken way from one shop worth about 15,000 rupees - but no Panchanama, no rules. All these things are taking place because the Shop-keepers have not given the Mamools to them. What I am trying to say is in the guise of law and order, removing traffic hurdle the police should not create a sort of fear in the minds of the common people. They should take people into confidence while enforcing the rules. The fear of the police should be in the minds of Goondas, in the Smugglers.

(Smt. Damayanthi Boregowda in the Chair)

Madam, in the last communal riots that took place in Srinivasapura, Mulbagal, Channapatna, Ramanagaram, number of houses were damaged and demolished and it was assured by the Home Department that those houses will be constructed and the people of that area are waiting from the last one year. The Government has assured on the floor of the Houses on this issue many times that they will reconstruct them and it will be given to the affected people, But one year has passed, so far the Government has not reconstructed those houses. I want to know from the Government and the Hon'ble Minister for home when the Government is going to reconstruct those houses and given shelter to all those affected people. It was also promised that those who have been killed in the communal riots, one of the member of the family members who have been killed in the communal riots they will be given job by the Government. I know Madam there are more than 100 applications pending before the Government and the Hon'ble Chief Minister and the Hon'ble Home minister categorically assured we will give job to one person of the family in which persons killed in the communal riots but till now on one has got the job. They lost the life, they lost their houses, they lost household articles - with all this miseries how can they pull on the days, when will the Government give them job and relief. How many months the Government

requires to amend the rules. I request through you madam that the Government should expedite and amend the relevant rules immediately.

Then, 15 point programme. madam, the intention of the 15 points programme was to create sense of confidence among the minorities of the country. For that purpose after the deliberations in the National Integration Council Hon'ble Late Mrs. Indira Gandhi, former Prime Minister of this country, has given this 15 points programme and she said this is my aspirations and if this country is to be united and integrated then there should be a sense of confidence among minorities. So, a decision was taken to establish a Anti - Riot Force in each State and that Communal Riot Force — there is a circular and direction that minimum 50% of the police personnel should be from minorities. When I say minorities it is religious minorities. They are Muslims, Christians, Parsis, Buddists. The Anti - Riot Force should consist of these religious minorities so that whenever communal riots takes place this force should Act and be on the forefront. This is the real concern for establishing this force. This is not the programme of the Muslim League, this is not programme of the Janata Dal. This is the programme of the Congress. This is a programme of the late Messrs Indira Gandhi, beloved Prime Minister of this country, who ruled this country for over 17 years and after so long experience in the large interest of the country. She has come to an understanding that if this Anti-riots force be created then there will be a confidence among the people. She said in each of the States with this composition of the police personal would safeguard the people of all community. I am not putting forth this demand. This is a demand of the Congress party, it is their manifesto and the people believed and voted for that. Therefore, I urge upon the Hon'ble minister and I am confident that if the Hon'ble Minister should mind to implement the programme of his own party and also request of my colleagues who are sitting on the other side. My colleagues sitting here should also press for the creation of Anti-riot Force in Karnataka . Once upon a time there was most communal harmony but now that is deteriorating day by day and all sorts of law and order problems are increasing. So, if your want to stop this communal clashes and the law and order problem, you should nip them in the bud itself, you should nip all these fascist forces, militancy otherwise no Government can stay in power. Therefore, I sincerely urge upon the Government to go deep into this and issue circulars and directions given by the Central Government the Circular which was issued after the consensus of the nation by the then Prime Minster of India.

As far as my constituency is concerned, I am thankful you have given a police station near the University but at the same time we are need of one more traffic Sub-Inspector Police Station. At present there is only one police

station for traffic. Previously there were only 8,000 vehicles and now we have 35,000 in Gulbarga city - that means 400 times increase. There is therefore really need for traffic police station also with a Circle Office of the Traffic in Gulbarga. I hope the Hon'ble Minister will consider this request and meet the demand of the people of this constituency.

Now, I come to Excise Department. I will just highlight some points because I know you people are not following the advice of founding father of the nation. I am firm believer in his advice. Mahatmaji said there should be a ban on liquor. The excise report says that it is the largest revenue earning department of the State. You earn money, let the money go to the State, now it is a second largest revenue collection department, let it become first largest. As far as I am concerned I have full faith in the advice of Mahatmaji. He is for banning of liquors. Our friends have left wearing Gandhi cap also. many of our friends are not wearing even Khadi. I am not very happy. Therefore, I want my friends to follow the advice and preachings of Mahatmaji. There are number of whole-sale, retail and distilleries coming up now and then. If you go to any city there will be one wine shop in lanes. Last week there will be one shop you can see in lane if you happen to go but the very next week or month if you visit the same line you will find one more liquor shop opened and it is said these shops are opened because the Government wanted to earn revenue. There is a circular , wherever there is a school, temple, mosque, liquor shops should not be allowed to function and licenses should not be granted. But in the Bangalore city itself, I will mention one instance. In Broadway, there is one liquor shop and I think during the period of Sri Gundu Rao, former MLA Sri Hamid Sha went Dharana for the removal of a liquor shop which was opened in a public place in Broadway area and the minister Mr. A. K. Abdul Samad also went there and offered juice to Hamid Sha. This has happened during the period of Mr. Gundu Raoji. Sri Veerappa Moily and another one Minister went there Sri Shah was fighting for the removal of that liquor shop. These 3 ministers who went there gave him the juice and all that to stop his fasting. He gave up his Harthal but still the liquor shop continues to be there. You can imagine as to how much powerful this liquor lobby is. These 3 ministers have requested to end fasting. It is still there. then the period of Janata Dal Government came. Sri Raghupati and Roshan Baig were there, they also promised to remove that shop. But, they could not remove it. You can also imagine here as to how much powerful the liquor lobby is. That liquor shop was not removed from that place. Still it is existing and I came to know that an order was also passed and as far as my knowledge goes, that order was passed for the removal of that liquor shop, but the Exicse Department is not changing this. I will blame the Excise department here. The corporation has passed the order but the Excise department is not implemented it in changing

the liquor shop. There are a number of places which I can quote. Even in the Bangalore city there are liquor shops existing in front or adjacent to religious places. Even in my constituency there is one famous Darga called Bandenavaz Darga and in left and right sides of that Darga there are liquor shops. In Gulbarga even in front of a mandir on more road there are liquor shops. On the Queens Road, there is one Taskar Mosque, High School and other important institutions and mandirs and in front of them there are wine shops. In majestic there is one mosque behind Himalaya Talkies and there is also one high school and in front of them there is one wine shop.

Nowadays, due to the increase of these liquor shops, bars and pubs, students are addicted to drinking of beer instead of having a cup of coffee or tea. I remember, when we used to go to schools during 1963-64, we were afraid of even going to hotels for taking a cup of tea imagining that somebody will tell our going there to our parents. We were afraid of even going to hotels at that time. Nowadays, tea and coffee are common, let them have it. But, consumption of beer by students is not correct. In those days beer used to have 4% alcohol, but now-a-days it contains 13 to 14% alcohol. Though I don't drink I know it. I came to know it through academic discussion. Instead of giving them pure fruit juice we are giving them beer and we are making them addict. If we make them addict the pillars of this country will be shakened and the foundation of this country is loosened. The future of this country is depending upon the youths of this country who are dedicated with the national feelings. They should be dedicated to the cause of the integrity and dignity of this country. I only appeal to the Government to make the youth follow the advice of Mahatma Gandhiji.

Dr. N.B. NANJAPPA: The foundation material is soaked with alcohol, you mean?

SRI QUMARUL ISLAM: I only request the Government, at least in future they should follow the advice of Mahatma Gandhi. They should ban all types of alcohol. We don't want the money coming from that source, where we are making the generation addict.

CHAIRMAN : You have got only 8 minutes.

SRI QUMARUL ISLAM : I want to conclude, quoting the advice of Mahatma Gandhi. Let his advice prevail upon this Government. With this I conclude. I have got opportunity to speak on other demands. Lastly I suggest, one thing. The licences for these liquor shops will end on 30th June. Before renewing these licences, I request the Hon'ble Minister call a meeting of the legislators of the concerned constituencies and then decide as to whom these licences should be renewed. Such meetings can be convened by the District Minister or the Deputy Commissioner. They should invite all MLAs of the

district and putforth the list before the meeting. If any legislator objects for the licences to be given for the shops which are going to sell arrack, toddy, whisky or any other form of alcohol, then such licences may be withheld or may not be renewed. If there is no violation of this rule by the shops then we have no objection. Such meeting can be called before 30th June of this year. If there no objection from the elected representatives you can give the licence. With this suggestion I conclude my speech. Thank you.

† ಶ್ರೀ ಜಿ..ರಾಜುಗೌಡ (ಹನೂರು) : ಸನ್ಮಾನ್ಯ ಸಭಾಧ್ಯಕ್ಷಣಿಯವರೆ....

ಶ್ರೀ ಎಲ್.ಆರ್. ಶಿವರಾಮೇಗೌಡ : ರಿಪ್ಲೈ ಇವತ್ತೇ ಇದೆಯೆ?

ಛೇರ್ಮನ್ : ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇನ್ನು ಎಷ್ಟು ಹೊತ್ತಿನವರೆಗೆ ಕೊಡುವುದು?

ಶ್ರೀ ಜಿ. ರಾಜುಗೌಡ : ಈ ಸದನದಲ್ಲಿ ಮಂಡಿಸಿರತಕ್ಕ ಗೃಹ ಇಲಾಖೆ. ಅಬ್ಕಾರಿ ಇಲಾಖೆ ಮತ್ತು ಕಾರಾಗೃಹ ಇಲಾಖೆಗಳ ಬೇಡಿಕೆಗಳನ್ನು ಸಂಪೂರ್ಣವಾಗಿ ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ಅಬ್ಕಾರಿ ಇಲಾಖೆ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಪಡುತ್ತೇನೆ. ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಅಬ್ಕಾರಿ ಇಲಾಖೆಯು ಎರಡನೇ ಅಧಿಕ ಆದಾಯ ತರತಕ್ಕ ಇಲಾಖೆ. ಇದು ಆರ್ಥಿಕ ಇಲಾಖೆ ಅಡಳಿತ ವ್ಯಾಪ್ತಿಯಲ್ಲಿ ಬರುತ್ತದೆ. 1991-92ರಲ್ಲಿ ಅಬ್ಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಸುಮಾರು 555 ಕೋಟಿ ರೂಪಾಯಿಗಳ ಆದಾಯ ಕೊಟ್ಟಿದೆ. 1992-93ನೇ ಸಾಲಿನಲ್ಲಿ ಇನ್ನೂ ಹೆಚ್ಚಿನ ಆದಾಯವನ್ನು ನಿರೀಕ್ಷಣೆ ಮಾಡುತ್ತಾ ಸುಮಾರು 25 ಕೋಟಿ ರೂಪಾಯಿಗಳ ಜಾಸ್ತಿ ವರಮಾನ ಪಡೆಯಬೇಕೆಂದು ಸರ್ಕಾರ ನಿರೀಕ್ಷಣೆ ಮಾಡಿದೆ. ಒಂದು ವಿಷಯವನ್ನು ಮಾನ್ಯ ಅಬಕಾರಿ ಮಂತ್ರಿಗಳಿಗೆ ತಿಳಿಸುತ್ತೇನೆ. ತಾವು ಎಲ್ಲೆಲ್ಲಿ ಹೊಸದಾಗಿ ವೈನ್ ಶಾಪ್‌ಗಳಿಗೆ ಪರವಾನಿಗೆ ಕೊಡುತ್ತೀರಿ ಮತ್ತು ಎಲ್ಲಿ ಹಳೆಯ ಪರವಾನಿಗೆಯನ್ನು ಮುಂದುವರಿಸುತ್ತೀರಿ ಆ ವಿಷಯದಲ್ಲಿ ಸಿಟಿ. ಟೌನ್ ಮತ್ತು ಹಳ್ಳಿಗಾಡಿನ ಮಟ್ಟದಲ್ಲಿ ಒಂದೇ ರೀತಿಯ ಶುಲ್ಕವನ್ನು ವಿಧಿಸಿದ್ದೀರಿ. ಎಂದರೆ 25 ಸಾವಿರ ರೂಪಾಯಿಯ ಶುಲ್ಕವನ್ನು ವಿಧಿಸಿದ್ದೀರಿ. ಸಿಟಿ, ಟೌನ್ ಮತ್ತು ಗ್ರಾಮಾಂತರ ಮಟ್ಟದಲ್ಲಿ ಬರತಕ್ಕ ವೈನ್‌ಷಾಪ್‌ಗಳಲ್ಲಿ ಬಹಳ ವ್ಯತ್ಯಾಸ ಇದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕೂಡ ಅಷ್ಟೇ ಶುಲ್ಕ ಹಾಕುವುದರಿಂದ ಕಷ್ಟ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಅನೇಕ ನಿರುದ್ಯೋಗಿ ಪದವೀಧರರು ವೈನ್‌ಶಾಪ್‌ಗಳನ್ನು ನಡೆಸುತ್ತಿದ್ದಾರೆ. ಅವರ ವಹಿವಾಟು ಕೂಡ 25 ಸಾವಿರ ರೂಪಾಯಿಗಳು ಆಗುವುದಿಲ್ಲ. ಆದ್ದರಿಂದ ಇವರನ್ನೆಲ್ಲಾ ಒಂದೇ ರೀತಿ ಪರಿಗಣಿಸಬಾರದು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಸಿಟಿಯಲ್ಲಿರುವ. ತಾಲ್ಲೂಕು ಮಟ್ಟದಲ್ಲಿರುವ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬರುವ ಶಾಪ್‌ಗಳಿಗೆ ಬೇರೆ ರೀತಿಯಿಂದ ಶುಲ್ಕವನ್ನು ಹಾಕಬೇಕು ಎಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಕಳ್ಳಬಟ್ಟಿ ಹಾವಳಿ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇದನ್ನು ನಿಯಂತ್ರಣ ಮಾಡಬೇಕು. ಯಾವ ಸರ್ಕಾರವೂ ಕೂಡ ಇದನ್ನು ನಿಯಂತ್ರಣಕ್ಕೆ ಒಳಪಡಿಸಿಲ್ಲ. ಸರ್ಕಾರದ ವರದಿಯಲ್ಲಿ ಈ ಬಗ್ಗೆ ಉಲ್ಲೇಖ ಇಲ್ಲ. ನಮಗೆ ತಿಳಿದ ಪ್ರಕಾರ ಈ ವರ್ಷ ಸುಮಾರು 14 ಜನ ನಮ್ಮ ರಾಜ್ಯದಲ್ಲಿ ಕಳ್ಳಬಟ್ಟಿ ಸೇವನೆಯಿಂದ ಮೃತರಾಗಿದ್ದಾರೆ. ಮುಗ್ಧ ಜನರ ಮೇಲೆ ಕಳ್ಳಬಟ್ಟಿ ಹಾವಳಿ ಜಾಸ್ತಿಯಾಗಿದೆ. ಇದನ್ನು ನಿಯಂತ್ರಣ ಮಾಡದೇ ಇದ್ದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಹೇಗಾದರೂ

ಮಾಡಿ ಇದನ್ನು ನಿಲ್ಲಿಸತಕ್ಕ ವ್ಯವಸ್ಥೆ ಮಾಡಬೇಕು. ಅನೇಕ ಅಬಕಾರಿ ದಾಳಿಗಳನ್ನು ಮಾಡಿದ್ದೀರಿ. ಆದರೆ ಏನು ಪ್ರಯೋಜನ ಆಯಿತು? ವರದಿಯಲ್ಲಿ ಆ ಬಗ್ಗೆ ಸಾವಿರ ದಾಳಿ ಮಾಡಿದ್ದೇವೆಂದು ಹೇಳಿದ್ದೀರಿ.

ಕಳೆ ನಾಶ ಮಾಡತಕ್ಕದ್ದು. ಇರತಕ್ಕ ಸರಕನ್ನು. ಉಪಕರಣಗಳನ್ನು ತೆಗೆದುಕೊಂಡು ಬರತಕ್ಕದ್ದು ಮಾಡುವುದರಿಂದ ಇದನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಈ ಬಗ್ಗೆ ತಾವು ಯೋಚನೆ ಮಾಡಬೇಕು. ತಾವು ಕಳ್ಳ ಬಟ್ಟಿ ದೊರೆಗಳನ್ನು ಗೂಂಡ ಕಾಯ್ದೆ ಅಡಿಯಲ್ಲಿ ತರಬೇಕು. ಇದರಿಂದ ಕಳ್ಳ ಬಟ್ಟಿ ಇರುವುದಿಲ್ಲ. ಇವತ್ತು ಸರ್ಕಾರಕ್ಕೆ ಆದಾಯ ಮುಖ್ಯ ಅಲ್ಲ. ರಾಜ್ಯದ ಪ್ರತಿಯೊಬ್ಬ ಜನರ ಸಾವು ನೋವಿನ ಕಡೆಗೆ ಗಮನ ಕೊಡಬೇಕು. ಈ ಕೆಲಸವನ್ನು ಬರೀ ಸರ್ಕಾರದಿಂದ ಮಾಡುವುದಕ್ಕಾಗುವುದಿಲ್ಲ. ಸಾರ್ವಜನಿಕರೂ ಕೂಡ ಇದರಲ್ಲಿ ಜಾಗೃತರಾಗಬೇಕು. ಅವರು ಯಾವ ರೀತಿ ಜಾಗೃತರಾಗಬೇಕು? ಈಗ ಕಳ್ಳ ಬಟ್ಟಿ ತಯಾರು ಮಾಡುವ ಜಾಗ ಸಾರ್ವಜನಿಕರಿಗೆ ತಿಳಿದಿದ್ದರೂ ಕೂಡ ಅದನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಅವರು ಹೆದರುತ್ತಾರೆ. ಸಾರ್ವಜನಿಕರನ್ನು ಜಾಗೃತಗೊಳಿಸುವ ಸಲುವಾಗಿ ಇವತ್ತು ರಾಜ್ಯ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಳ್ಳ ಬಟ್ಟಿ ತಯಾರಿಸುವುದನ್ನು ತೋರಿಸತಕ್ಕವರಿಗೆ ಇಷ್ಟು ರೂಪಾಯಿಗಳ ಬಹುಮಾನ ಕೊಡುತ್ತೇವೆಂದು ಬಹಿರಂಗ ಮಾಡಬೇಕು. ಅದರ ಮುಖಾಂತರ ಕಳ್ಳ ಬಟ್ಟಿ ದಾಂಧಲೆಯನ್ನು ನಿಯಂತ್ರಣ ಮಾಡಬೇಕು. ಈ ಬಗ್ಗೆ ಸರ್ಕಾರ ಆದಷ್ಟು ಬೇಗ ಗಮನ ಕೊಡಬೇಕೆಂದು. ಈ ತಂತ್ರದ ಸದುಪಯೋಗ ಸಾರ್ವಜನಿಕರಿಂದ ಪಡೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರ ಆದಾಯವನ್ನು ಹೆಚ್ಚು ಮಾಡಬೇಕು ಎಂದಿರುವ ಸಮಯದಲ್ಲಿ ನಾನು ಈ ಬಗ್ಗೆ ಮತ್ತೊಂದು ಸಲಹೆ ಕೊಡುತ್ತೇನೆ. ಹಿಂದೆ ತಾವು ಏನು ತಾಲ್ಲೂಕು ಮಟ್ಟದಲ್ಲಿ ಸಾರಾಯಿ ಹರಾಜು ಮಾಡುತ್ತಿದ್ದೀರೋ ಅದರ ಬದಲು ಪ್ರತಿಯೊಂದು ಹಳ್ಳಿ ಮಟ್ಟದಲ್ಲಿ ಹರಾಜು ಮಾಡಿದರೆ ಒಳ್ಳೆಯ ಗುಣಮಟ್ಟದ ಸರಕನ್ನು ಆ ಮೂಲಕ ಕೊಡುವುದಾದರೆ ಕಳ್ಳ ಬಟ್ಟಿ ಕೂಡ ಕಡಿಮೆಯಾಗಿ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಂದು ಹೇಳುತ್ತೇನೆ. ಇದರಿಂದ 575 ಕೋಟಿ ಏನು ಆದಾಯ ನಿರೀಕ್ಷೆ ಮಾಡುತ್ತಿದ್ದೀರೋ ಅದರ ಇಮ್ಮಡಿ ಆದಾಯ ತಮಗೆ ಬರುತ್ತದೆ. ಇವತ್ತು ಯಾರು ದೊಡ್ಡ ದೊಡ್ಡ ಪ್ರಥಮ ದರ್ಜೆ ಗುತ್ತಿಗೆದಾರರು ಇದ್ದಾರೆ ಅವರೆಲ್ಲರೂ ಹರಾಜು ಸಮಯದಲ್ಲಿ ಶಾಮೀಲಾಗಿ. ನೀವು ಆ ತಾಲ್ಲೂಕು ಮಾಡಿಕೊಳ್ಳಿ. ನಾವು ಈ ತಾಲ್ಲೂಕು ಮಾಡಿಕೊಳ್ಳುತ್ತೇನೆಂದು ಅವರವರೇ ಸರಿದೂಗಿಸಿಕೊಂಡು ರಾಜ್ಯಕ್ಕೆ ಬರತಕ್ಕ ಆದಾಯವನ್ನು ಬಹಳ ಕಡಿಮೆ ಮಾಡಿರುವುದರಿಂದ ಇದನ್ನು ತಪ್ಪಿಸುವುದಕ್ಕೋಸ್ಕರ ತಾವು ದಯಮಾಡಿ ಪ್ರತಿಯೊಂದು ಗ್ರಾಮ ಮಟ್ಟದಲ್ಲಿ ಹಳ್ಳಿ ಮಟ್ಟದಲ್ಲಿ ಹರಾಜು ಮಾಡಿದರೆ ಈಗ ಬರತಕ್ಕ ಆದಾಯ ಇನ್ನೂ 2 ಪಟ್ಟು 4 ಪಟ್ಟು ಜಾಸ್ತಿಯಾಗುತ್ತದೆಂದು. ಇದರಿಂದ ಕಳ್ಳ ಬಟ್ಟಿ ಹಾವಳಿ ತಪ್ಪಿಸುವುದಕ್ಕೆ ಸಾಧ್ಯವೆಂದೂ ನಾನು ಹೇಳುತ್ತೇನೆ. ಉದಾಹರಣೆಗೆ ನಾನು ಒಂದು ಹಳ್ಳಿಯಲ್ಲಿ ಹರಾಜಿನಲ್ಲಿ ಒಂದು ಅಂಗಡಿ ತೆಗೆದು ಇಟ್ಟುಕೊಂಡಾಗ ನನ್ನ ಹಳ್ಳಿಯ ಪರಿಸರದಲ್ಲಿ ಯಾರೇ ಕಳ್ಳ ಬಟ್ಟಿಯನ್ನು ಮಾಡದ ರೀತಿಯಲ್ಲಿ ನಾನು ಜಾಗೃತನಾಗಿರಬೇಕಾಗುತ್ತದೆ. ಈ ರೀತಿಯಲ್ಲಿ ನಾವು ಕಳ್ಳ ಬಟ್ಟಿಯನ್ನು ತಪ್ಪಿಸುವುದಕ್ಕೆ ಆಗುತ್ತದೆ. ಮತ್ತು ಒಳ್ಳೆಯ ಗುಣಮಟ್ಟದ ಸಾರಾಯಿಯನ್ನು ಕೊಡುವುದರಿಂದ ರಾಜ್ಯ ಸರ್ಕಾರಕ್ಕೂ ಆದಾಯ ಜಾಸ್ತಿ ಬರುತ್ತದೆ ಎಂದು ನಾನು ಹೇಳುತ್ತೇನೆ.

5.45 ಪಿ.ಎಂ.

ಮಾನ್ಯ ವಿರೋಧ ಪಕ್ಷದವರು. ಬಂಗಾರಪ್ಪನವರ ಸರ್ಕಾರ ಅಬಕಾರಿ ಲಾಬಿ ಜೊತೆ ಒಂದಾಗಿದೆಯೆಂದು ಹೇಳುತ್ತಿದ್ದಾರೆ. ಅದು ಉರುಳಿಲ್ಲದೇ ಇರತಕ್ಕ ಮಾತು. ಹಿಂದ ಇದ್ದ ಅನೇಕ ಸರ್ಕಾರಗಳು ಅಬಕಾರಿ ಗುತ್ತಿಗೆಯನ್ನು ಕೊಟ್ಟು, ಅದನ್ನು ಅವರಿಂದ ಏನು ಬಾಕಿ ಬರಬೇಕಾಗಿತ್ತು ಅದನ್ನು

ವಸೂಲಿ ಮಾಡಲಿಕ್ಕೆ ಹೋದಾಗ. ರಾಜ್ಯದಲ್ಲಿರತಕ್ಕ ನ್ಯಾಯಾಲಯದಲ್ಲಿ ಮತ್ತು ದೇಶದ ಪ್ರಧಾನ ನ್ಯಾಯಾಲಯದಿಂದ ಒಂದು ಸ್ಟೇ ತಂದಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡುವ ವಿಷಯದಲ್ಲಿ ನಾವು ಹೋದಾಗ ಕೆಲವು ಗುತ್ತಿಗೆದಾರರು ನಮ್ಮ ಸರ್ಕಾರಕ್ಕೆ ನಾವು ಕೊಡಬೇಕಾದ ಬಾಕಿಯನ್ನು ಕೊಟ್ಟುಬಿಡುತ್ತೇವೆ. ದಯಮಾಡಿ ಬಡ್ಡಿಯನ್ನು ವಜಾ ಮಾಡಬೇಕೆಂದು ಹೇಳಿದಾಗ, ನಾವು ಅದನ್ನು ಯೋಚನೆ ಮಾಡುತ್ತಿರುವಾಗ ಸುಮ್ಮನೆ ಇವರು ಏನೋ ಅಬಕಾರಿ ಗುತ್ತಿಗೆದಾರರಿಗ ಸಹಾಯ ಮಾಡುವ ರೀತಿಯಲ್ಲಿ ಬಂಗಾರಪ್ಪನವರ ಸರ್ಕಾರ ಮಾಡುತ್ತದೆ ಎನ್ನತಕ್ಕ ಮಾತು ಸತ್ಯಕ್ಕೆ ದೂರವಾದುದು. ಈಗೇನು ನಾವು ನೋಟಿಫಿಕೇಶನ್ ಹೊರಡಿಸಿದೆವು ಅದನ್ನು ವಿತ್‌ಡ್ರಾ ಮಾಡಿದ್ದೇವೆ. ಮತ್ತು ಅವರ ತಡೆಯಾಜ್ಞೆಯನ್ನು ತೆರವು ಮಾಡಿ ಅವರಿಂದ ಬರಬೇಕಾದ ಬಾಕಿಯನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುತ್ತೇವೆ. ಆ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶಾಪ್‌ವೈಸ್ ಹರಾಜು ಮಾಡಿ ಅಂತಹ ಒಂದು ಕೆಲಸ ನೀವು ಮಾಡುವುದಿಲ್ಲ. ಶರತ್ತಿನಲ್ಲಿ ಒಂದು ನಿರ್ಬಂಧವನ್ನು ಹಾಕಬೇಕು. ನಾಲ್ಕು ತಿಂಗಳು ಗುತ್ತಿಗೆ ಹಣವನ್ನು ಮುಂಗಡವಾಗಿ ಕೊಡತಕ್ಕದ್ದು ಎಂದು ಮತ್ತು ಕೊಡಬೇಕಾದ ಹಣವನ್ನು ಪ್ರತಿ ತಿಂಗಳೂ 10ನೇ ತಾರೀಖು ಕೊಡಬೇಕಾಗಿರತಕ್ಕ ಹಣವನ್ನು ಸಂದಾಯ ಮಾಡದಿದ್ದರೆ ಮರು ಹರಾಜು ಮಾಡತಕ್ಕ ಒಂದು ನಿಬಂಧನೆಯನ್ನು ಮಾಡಿದಾಗ ಅಬಕಾರಿ ಬಾಬಿನಲ್ಲಿ ಎಷ್ಟು ನಿಮಗೆ ಬರಬೇಕಾಗಿತ್ತು ಅಷ್ಟು ಹಣ ವಸೂಲಿಯಾಗುತ್ತದೆ. ಯಾರೂ ಕೂಡ ಕೋರ್ಟ್‌ಗೆ ಹೋಗುವುದಿಲ್ಲ. ಇಂತಹ ಸಂದರ್ಭದಲ್ಲಿ ದಯಮಾಡಿ ಮುತುವರ್ಜಿ ವಹಿಸಿ ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ. ನಮ್ಮ ಸ್ನೇಹಿತರು ಹೇಳಿದಹಾಗೆ ಸಾರಾಯಿ ಅಂಗಡಿಗಳನ್ನು ಕೆಲವು ಪವಿತ್ರ ಸ್ಥಳಗಳಲ್ಲಿ ಮಾಡಬಾರದೆಂದು ಹೇಳಿದರು. ನಾನೂ ಕೂಡ ಅದಕ್ಕೆ ಧ್ವನಿಗೂಡಿಸುತ್ತೇನೆ. ಸಾರಾಯಿ ಅಂಗಡಿಗಳನ್ನು ಹರಿಜನ ಗಿರಿಜನರ ಬೀದಿಗಳಲ್ಲಿ ಶಾಲೆಗಳ ಪಕ್ಕದಲ್ಲಿ. ಮಸೀದಿ ಪಕ್ಕದಲ್ಲಿ. ಚರ್ಚ್ ಪಕ್ಕದಲ್ಲಿ. ದೇವಾಲಯಗಳ ಪಕ್ಕದಲ್ಲಿ ಮಾರಾಟ ಮಾಡಬಾರದೆಂದು ಇದೆ. ಒಂದು ಸಾರಿ ರಾಜ್ಯಪತ್ರದಲ್ಲಿ ಇಂಥಿಂಥ ಕಡೆ ಸಾರಾಯಿ ಅಂಗಡಿಗಳನ್ನು ತೆರೆಯಬಾರದೆಂದು ನೋಂದಾಯಿಸಿದ ಮೇಲೆ ಅದನ್ನು ಸರ್ಕಾರ ಕೂಡ ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ತಾವು ನೋಂದಾಯಿಸುವುದಕ್ಕೆ ಮೊದಲು ರಾಜ್ಯಪತ್ರದಲ್ಲಿ ಪಬ್ಲಿಷ್ ಆಗಿ ಬಂದು ಅದನ್ನು ತಾವು ಸಾರ್ವಜನಿಕರ ಗಮನಕ್ಕೆ ತಂದು ಇಲ್ಲಿ ಅಂಗಡಿಗಳನ್ನು ತೆರೆಯತಕ್ಕದ್ದು ಸರಿಯೇ ಅಥವಾ ಇಲ್ಲವೇ ಎನ್ನುವುದನ್ನು ಸಾರ್ವಜನಿಕರ ಅಬ್ಜಕ್ಷನ್ ಕಾಲ್‌ಫರ್ ಮಾಡಿ ಅನಂತರ ಅಂಗಡಿಗಳನ್ನು ತೆರೆಯತಕ್ಕದ್ದು ಒಳ್ಳೆಯದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಈ ಅಬಕಾರಿ ಬಾಬಿನಲ್ಲಿ ಹೆಚ್ಚಿನ ಆದಾಯವನ್ನು ರಾಜ್ಯದ ಬೊಕ್ಕಸಕ್ಕೆ ತರಬೇಕು ಎನ್ನುವ ಇಚ್ಛೆಯಿದ್ದರೆ ಬಹುಶಃ ಪ್ರತಿಯೊಂದು ಇಂಡಿವಿಜುಯಲ್ ಶಾಪ್‌ಗಳನ್ನು ಹರಾಜು ಮಾಡತಕ್ಕ ಒಂದು ದೃಷ್ಟಿಯನ್ನು ತಾವಿಟ್ಟುಕೊಂಡು ಮಾಡಿದಾಗ ಬಹಳ ಒಳ್ಳೆಯದಾಗುತ್ತದೆ. ಸ್ವಲ್ಪವಾದರೂ ಕೂಡ ಉತ್ತರವಾದದ್ದಾಗುತ್ತದೆಂದು ನಾನು ಸಲಹೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಗೃಹ ಇಲಾಖೆಯ ಬಗ್ಗೆ ಮಾತನಾಡುವುದಾದರೆ. ಗೃಹ ಇಲಾಖೆ ಒಂದು ರಾಜ್ಯದಲ್ಲಿ ಇದೆಯೆಂದು ಹೇಳುವುದಕ್ಕೆ ಅಲ್ಲಿ ಶಾಂತಿ ಪಾಲನೆ ಮತ್ತು ಕಾನೂನು ಸುವ್ಯವಸ್ಥೆ ಇದೆಯೆಂದು ಮೇಲ್ನೋಟಕ್ಕೆ ನಾವು ಪರೀಕ್ಷೆ ಮಾಡಬೇಕಾದರೆ, ನಾನೊಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬಳು ಸುಂದರ ಯುವತಿ ತನ್ನೆಲ್ಲಾ ಅಂಗಾಂಗಗಳಿಗೆ ಹೆಚ್ಚಿನ ಬೆಲೆ ಬಾಳತಕ್ಕ ಆಭರಣಗಳನ್ನು ತೊಟ್ಟು ಅಹೋರಾತ್ರಿಯಲ್ಲಿ ರಾಜ್ಯದಲ್ಲಿ ಸಂಚರಿಸಿದಾಗ ಅವಳಿಗೆ ಯಾವುದೇ ರೀತಿಯ ಕೊಂಕು ಬಾರದಿದ್ದಾಗ. ಆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಪಾಲನೆಯಲ್ಲಿ ಸುವ್ಯವಸ್ಥಿತವಾಗಿದೆಯೆಂದು

ಹೇಳಬಹುದು. ಈಗ ಜನಸಂಖ್ಯೆಗೆ ಅನುಸಾರವಾಗಿ ನಮ್ಮ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆ ಇಲ್ಲ. ಅದನ್ನು ಹೆಚ್ಚು ಮಾಡಬೇಕೆಂದು ತಾವು ಅನೇಕ ಭಾರೀ ಸದನದ ಒಳಗೆ ಸದನದ ಹೊರಗೆ ಹೇಳಿದ್ದೇವೆ. ಅದಕ್ಕೆ ನೀವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆ ಆಶ್ವಾಸನೆ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ದಯಮಾಡಿ ಆ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಎರಡನೆಯದಾಗಿ ತಾವು ಎಷ್ಟೇ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೂ ಸಹ ರಾಜ್ಯದಲ್ಲಿರತಕ್ಕ ಜನಸಂಖ್ಯೆ ಜಾಸ್ತಿಯಿರುವುದರಿಂದ, ಸಮಸ್ಯೆಗಳು ಸಹ ಜಾಸ್ತಿಯಿರುವುದರಿಂದ ಆ ಸಮಸ್ಯೆಗಳೆಲ್ಲವನ್ನು ಪೋಲೀಸರಿಂದ ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ನನ್ನ ಸಲಹೆ ಏನೆಂದರೆ ಪ್ರತಿಯೊಂದು ಹಳ್ಳಿಗಳಲ್ಲಿಯೂ 50 ಜನಗಳಿಗೆ ಒಬ್ಬರಂತೆ 5 ಸಾವಿರ ಜನಸಂಖ್ಯೆ ಇರತಕ್ಕ ಗ್ರಾಮದಲ್ಲಿ 100 ಜನ ಗೃಹದಳ ಎಂದು ಹೊಸ ಸೈನ್ಯವನ್ನು ತಯಾರು ಮಾಡಬೇಕು. ಅವರಿಗೆ ಸಂಬಳ ಕೊಡಬೇಕಾಗಿಲ್ಲ. ಅವರಿಗೆ ಸಮವಸ್ತ್ರ ಕೊಡಬೇಕು. ಗ್ರಾಮದಲ್ಲಿ ಯಾವುದೋ ಒಂದು ಕೃತ್ಯ ನಡೆದರೆ ದುಷ್ಕೃತ್ಯಗಳು ನಡೆದರೆ ಗಲಭೆಗಳು ಆದಾಗ ಅವುಗಳನ್ನು ನಿಯಂತ್ರಣ ಮಾಡತಕ್ಕ ಕೆಲಸವನ್ನು ಮಾಡಿದಾಗ ಅವರಿಗೆ ಪಾರಿತೋಷಕ ಅಥವಾ ಬಹುಮಾನ ರೂಪದಲ್ಲಿ ಏನಾದರೂ ಕೊಡತಕ್ಕದ್ದು ತನ್ಮೂಲಕ ಉತ್ತೇಜನ ಮಾಡತಕ್ಕದ್ದು ಮಾಡಬೇಕು. ಇಂತಹ ವ್ಯವಸ್ಥೆಯನ್ನ ತಾಲ್ಲೂಕಿನಲ್ಲಿ ಮಾಡಿದಾಗ, ಬಹುಶಃ ಪ್ರತಿಯೊಂದು ಹಳ್ಳಿಗಳಲ್ಲಿಯೂ ಕೂಡ ಪ್ರತಿಯೊಂದು ವಠಾರದಲ್ಲೂ ಕೂಡ ಶಾಂತಿ ನೆಲೆಸುವಂತೆ ಮಾಡಬಹುದು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ತಾವು 3400 ಹುದ್ದೆಗಳನ್ನು ತಾವು ಬೇಗ ಭರ್ತಿ ಮಾಡಿ. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿದರೆ ಅದರಿಂದ ಎಲ್ಲಾ ಸಮಸ್ಯೆಗಳು ಬಗೆಹರಿಯಿತು ಎಂದು ತಿಳಿದುಕೊಳ್ಳುವುದು ಬೇಡ. 1992-93ನೇ ಸಾಲಿನಲ್ಲಿ ತಾವು ಗಡಿ ಪ್ರದೇಶಗಳಲ್ಲಿ 40 ಹೊಸ ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕೆಂದು ಘೋಷಣೆ ಮಾಡಿದ್ದೀರಿ ದಯಮಾಡಿ ತಾವು ತಕ್ಷಣ ಹೊಸ ಪೋಲೀಸ್ ಠಾಣೆಗಳನ್ನು ಬೇಗ ಮಾಡಬೇಕು. ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದೇ ರೀತಿಯಾಗಿರತಕ್ಕ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆಯನ್ನು ತಾವು ಮಾಡಬೇಕು.

ಈಗ ಕೆಲವು ಕಡೆ ತಾರತಮ್ಯ ಇದೆ. ಇದನ್ನು ಯೂನಿಫಾರಂ ಪ್ಯಾಟರ್ನ್ ಮಾಡಬೇಕು. ದಯವಿಟ್ಟು ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಒಂದೇ ರೀತಿಯಾದಂಥ ಪೋಲೀಸ್ ಪೇದೆಗಳ ಸಂಖ್ಯೆಯನ್ನು ಗೊತ್ತು ಮಾಡತಕ್ಕದ್ದು. ಒಂದೇ ರೀತಿಯಾದಂಥ ಹೆಡ್‌ಕಾನ್‌ಸ್ಟೇಬಲ್‌ಗಳ ಸಂಖ್ಯೆಯನ್ನು ಗೊತ್ತು ಮಾಡತಕ್ಕದ್ದು. ಈ ಕೆಲಸವನ್ನು ತಾವು ಮಾಡಬೇಕು. ಈಗ ಹೊಸದಾಗಿ ಕರ್ನಾಟಕಕ್ಕೆ ಬಂದಿರತಕ್ಕಂಥ ಮುಂಬೈ ಪ್ರದೇಶ. ಹೈದರಾಬಾದ್ ಕರ್ನಾಟಕ, ಮದ್ರಾಸ್, ಕೊಡಗು ಎನ್ನತಕ್ಕಂಥ ಭಾಗಗಳಲ್ಲಿ ಇರುವ ಪೋಲೀಸ್ ಠಾಣೆಗಳಲ್ಲಿ ಒಂದಕ್ಕೊಂದು ಬಹಳ ತಾರತಮ್ಯ ಇದೆ. ಈ ತಾರತಮ್ಯವನ್ನು ತಾವು ಹೋಗಲಾಡಿಸಬೇಕು. ಕೊನೆಯಪಕ್ಷ ಒಂದು ತಾಲ್ಲೂಕಿನೊಳಗೆ 30 ಪೇದೆಗಳನ್ನು ಹಾಕಬೇಕು. 5 ಹೆಡ್‌ಕಾನ್‌ಸ್ಟೇಬಲ್‌ಗಳನ್ನು ಹಾಕಬೇಕು. ಈ ರೀತಿ ಮಾಡಿದಾಗ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಪೋಲೀಸರಿಗೆ ಬೇಕಾದಷ್ಟು ಕೆಲಸಗಳು ಇರುತ್ತವೆ. ಈಗ ಕೆಲವು ಕಡೆ 10-15 ಜನ ಪೋಲೀಸ್ ಪೇದೆಗಳು ಇದ್ದು. ಈ ರೀತಿ ಮಾಡತಕ್ಕದ್ದು ಬೇಡ. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದೇ ರೀತಿಯಾದ, ಯೂನಿಫಾರಂ ಪ್ಯಾಟರ್ನ್ ಇರತಕ್ಕಂಥ ಕೆಲಸವನ್ನು ಮಾಡುವುದರ ಜೊತೆಗೆ ಈ ಗೃಹದಳ ಎಂದು ನಾನು ಏನು ಸಲಹೆ ಕೊಟ್ಟಿದ್ದೇನೆ ಅದನ್ನು ಕಾರ್ಯಗತ ಮಾಡುವುದಕ್ಕೆ ತಾವು ಮನಸ್ಸು ಮಾಡಬೇಕೆಂದು ನಾನು ಕೇಳಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಮೈಸೂರು ಜಿಲ್ಲೆಯಲ್ಲಿ ಕಾವೇರಿ ಬಗ್ಗೆ ಬಹಳ ಹಲ್ಲೆಯಾಯಿತು. ಇದಕ್ಕೆ ನಮ್ಮ ಸರ್ಕಾರ 2 ಕೋಟಿ ರೂಪಾಯಿ ಪರಿಹಾರ ಕೊಟ್ಟಿದೆ. ಪೋಲೀಸ್ ಪೇದೆಗಳ ಸಂಖ್ಯೆ ಬಹಳ ಕಡಿಮೆ ಇದ್ದುದರಿಂದ ಭೀಕರವಾದ ರೀತಿಯಲ್ಲಿ ಆಸ್ತಿ ಲೂಟಿ ಮಾಡತಕ್ಕದ್ದು. ಬೆಂಕಿ ಹಚ್ಚತಕ್ಕದ್ದು ಬಹಳ ಆಯಿತು. ನನ್ನ ತಾಲ್ಲೂಕಿನಲ್ಲಿ ಸುಮಾರು 900 ಮನೆಗಳನ್ನು ಸುಟ್ಟುಹಾಕಿದ್ದಾರೆ. ಸುಮಾರು 5 ಕೋಟಿ ರೂಪಾಯಿಗಳ ನಷ್ಟವಾಗಿದೆ. ಕೆಲವು ಜಾಗದಲ್ಲಿ ಪೋಲೀಸ್‌ನವರಿಗೆ ಗನ್‌ಗಳು ಇದ್ದರೂ ಸಹಿತ. ಈ ಒಂದು ಹಾವಳಿ ನಡೆದಿದೆ; ಈ ವಿಧ್ವಂಸಕ ಕೃತ್ಯ ನಡೆದಿದೆ. ಇದನ್ನು ತಡೆಗಟ್ಟಲಿಕ್ಕೆ ಆಗಿಲ್ಲ. ಪೋಲೀಸರಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗದಿರುವ ಪ್ರಯುಕ್ತ ದಯಮಾಡಿ ನಾನು ಹೇಳಿದ ರೀತಿಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಈ ಗೃಹದಳವನ್ನು ರಚಿಸಿದಾಗ, ಈ ದುಷ್ಕೃತ್ಯಗಳಿಗೆ. ವಿಧ್ವಂಸಕ ಕೃತ್ಯಗಳಿಗೆ ತಡೆ ಹಾಕುವುದಕ್ಕೆ ಆಗುತ್ತದೆಯೆಂದು ನನ್ನ ನಂಬಿಕೆ ಇದೆ. ಈ ಕೆಲಸವನ್ನು ಜರೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ತಾಲ್ಲೂಕಾದ ಕೊಳ್ಳೇಗಾಲದ ಪೂರ್ವದಲ್ಲಿ ಮತ್ತು ದಕ್ಷಿಣದಲ್ಲಿ ತಮಿಳುನಾಡು ಗಡಿಪ್ರದೇಶ ಇರುವುದರಿಂದ ನನ್ನ ತಾಲ್ಲೂಕು ಗಡಿಪ್ರದೇಶವಾಗಿದೆ. ನನ್ನ ತಾಲ್ಲೂಕು ಸುಮಾರು ಕೊಡಗಿನಷ್ಟೇ ವಿಸ್ತೀರ್ಣವಾಗಿರುವುದರಿಂದ ದಯಮಾಡಿ ಎರಡು ಹೊಸದಾಗಿ ಪೋಲೀಸ್ ಠಾಣೆಗಳನ್ನು ಕೊಡಬೇಕೆಂದು ಈಗಾಗಲೇ ನಾನು ಮನವಿಯನ್ನು ಸಲ್ಲಿಸಿದ್ದೇನೆ. ನನ್ನ ಮನವಿಯಂತೆ ಎರಡು ಹೊಸ ಪೋಲೀಸ್ ಠಾಣೆಗಳನ್ನು ಕೊಡಬೇಕು. ತನ್ಮೂಲಕ ಪೋಲೀಸ್ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಒಂದು ತುದಿಯಿಂದ ಮತ್ತೊಂದು ತುದಿಗೆ ಸುಮಾರು 140 ಕಿಲೋಮೀಟರ್ ದೂರ ಇರುವುದರಿಂದ ಈಗ ಇರತಕ್ಕಂಥ ಪೋಲೀಸ್ ಪೇದೆಗಳ ಸಂಖ್ಯೆ ಸಾಲದೇ ಇರುವ ಪ್ರಯುಕ್ತ ಮತ್ತೆ ಎರಡು ಹೊಸ ಪೋಲೀಸ್ ಠಾಣೆಗಳನ್ನು ತಾವು ಆದಷ್ಟು ಬೇಗ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯವೆಂದರೆ ಸಂಶಯಕ್ಕೆ ಬಂದಂಥ ವ್ಯಕ್ತಿಗಳನ್ನು ಪೋಲೀಸರು ಕರೆದುಕೊಂಡು ಬಂದು ಅವರಿಂದ ಸತ್ಯಸಂಗತಿಗಳನ್ನು ಹೊರಡಿಸುವಾಗ ಅನೇಕ ಅಮಾನುಷ ಕೃತ್ಯಗಳನ್ನು ಅವರು ಮಾಡುತ್ತಾರೆ. ಏರೋಪ್ಲೇನ್ ಹತ್ತಿಸತಕ್ಕದ್ದು. ಅವರ ಕಾಲಿಗೆ ಮರದ ತುಂಡು ಕಟ್ಟಿ ಹಿಂಸೆ ಮಾಡತಕ್ಕದ್ದು. ಸೂಜಿಯಿಂದ ಚುಚ್ಚತಕ್ಕದ್ದು ಸರಿಯಲ್ಲ. ವೈಜ್ಞಾನಿಕವಾದ ಹೊಸ ರೀತಿಯಿಂದ. ಹೊಸ ಪದ್ಧತಿಯಿಂದ ಯಾವ ರೀತಿ ಪರದೇಶಗಳಲ್ಲಿ ಮಾಡುತ್ತಾರೆ. ಅದರಂತ ನಾವು ಸತ್ಯಸಂಗತಿಗಳನ್ನು ಹೊರಡಿಸುವುದಕ್ಕೆ ಉಪಯೋಗ ಮಾಡಬೇಕು. ಇದನ್ನು ತಮ್ಮ ಕಾಲದಲ್ಲಿ ಇಂಟ್ರಡ್ಯೂಸ್ ಮಾಡಿದರೆ ಒಳ್ಳೆಯದು. ಏಕೆಂದರೆ ಅನೇಕ ನಿರಪರಾಧಿಗಳು ಪೋಲೀಸ್ ಠಾಣೆಗೆ ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಅವರೂ ಕೂಡ ಚಿತ್ರಹಿಂಸೆಗೆ ಗುರಿಯಾಗುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಮತ್ತು ನಿಜವಾದ ಅಪರಾಧಿಗಳನ್ನು ಪತತ್ತೆ ಮಾಡುವುದಕ್ಕೆ ತಾವು ಹೊಸದಾದ ರೀತಿಯಿಂದ ಅಧ್ಯಯನ ಮಾಡಿ. ಅದನ್ನು ಪೋಲೀಸ್ ಇಲಾಖೆಯಲ್ಲಿ ಅಳವಡಿಸಬೇಕೆಂದು ನಾನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಮೂರನೆಯದಾಗಿ, ಕಾರಾಗೃಹಗಳ ಬಗ್ಗೆ ನಾಲ್ಕಾರು ಮಾತುಗಳನ್ನು ಆಡಬೇಕೆಂದು ನಾನು ಇಚ್ಛೆಪಡುತ್ತೇನೆ. ತಮ್ಮ ವರದಿಯಲ್ಲಿ ರಾಜ್ಯದಲ್ಲಿ ಎಷ್ಟು ಬಂಧೀಖಾನೆಗಳಲ್ಲಿ ಎಷ್ಟು ಖೈದಿಗಳ ಸಂಖ್ಯೆ ಇದೆ ಎಂದು ನಮೂದಿಸಿಲ್ಲ. ಕಳೆದ ವರ್ಷಕ್ಕಿಂತ ಈ ಅಪರಾಧಗಳ ಸಂಖ್ಯೆ ಜಾಸ್ತಿಯಾಗಿದೆ ಮತ್ತು ಖೈದಿಗಳ ಸಂಖ್ಯೆ ಜಾಸ್ತಿ ಇದೆ. ಯಾವ್ಯಾವ ವರ್ಗದ. ಯಾವ್ಯಾವ ಅಪರಾಧಗಳನ್ನು ಮಾಡಿದ ಖೈದಿಗಳಿದ್ದಾರೆ ಎಂಬುದನ್ನು ನೋಡಿದಾಗ ಯಾವುದೂ ಕಾಣಿಸಲಿಲ್ಲ. ದಯವಿಟ್ಟು ಈ ವಿಷಯವನ್ನು ನಮೂದಿಸಿದ್ದರೆ ಚೆನ್ನಾಗಿತ್ತೆಂದು ನಾನು ಹೇಳುತ್ತೇನೆ. ಈ ಖೈದಿಗಳ ಬಗ್ಗೆ ಎರಡು ವಿಧ ಇದೆ. ವಿಚಾರಣೆಯಾಗಿ.

ತಪ್ಪಿತಸ್ಥನಾಗಿ ಅವನು ಖೈದಿಯೆಂದು ಹೇಳತಕ್ಕದ್ದು ಒಂದು ವರ್ಗ. ಆದರೆ ವಿಚಾರಣೆಗೆ ಒಳಪಟ್ಟವರನ್ನು ಖೈದಿಗಳೆಂದು ಪರಿಗಣಿಸಬಾರದು.

ದಯಮಾಡಿ ಇವರಿಗೆ ಬೇರೆ ಒಂದು ಕೋಣೆಯನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ತಾವು ಕೊಡತಕ್ಕ ಮಜೂರಿ ಬಹಳ ಕಡಿಮೆ ಇದೆ, ಸುಮಾರು 8 ರೂಪಾಯಿಯಿಂದ 12 ರೂಪಾಯಿ. ಇದನ್ನು ಜಾಸ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ, ಜೈಲಿನಿಂದ ಹೊರಗಡೆ ಹೋದತಕ್ಷಣ. ತನ್ನ ಸ್ವಂತ ಕಾಲಿನ ಮೇಲೆ ನಿಂತು ಜೀವನ ನಡೆಸತಕ್ಕಂಥ ಶಕ್ತಿಯನ್ನು ತಾವು ತುಂಬಬೇಕು ಎನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಪೆರೋಲ್‌ಗೆ 15 ದಿವಸ ಮಾಡಿದ್ದೀರಿ. ಇದನ್ನು ಒಂದು ತಿಂಗಳಾದರೂ ಮಾಡಿದರೆ ಒಳ್ಳೆಯದು ಎನ್ನತಕ್ಕಂಥದ್ದನ್ನು ಯೋಚನೆ ಮಾಡಬೇಕು. ಜೈಲ್ ಆವರಣದಲ್ಲಿ ಒಂದು ಉಪಹಾರ ಮಂದಿರವನ್ನು ತೆಗೆದಾಗ. ಖೈದಿ ಅಥವಾ ವಿಚಾರಣೆಗೆ ಒಳಪಟ್ಟಿರತಕ್ಕಂಥ ಆರೋಪಿ. ತನಗೆ ಬೇಕಾದ ತಿಂಡಿ ತಿನಿಸುಗಳನ್ನು ತಿನ್ನುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ತಾವು ಹಿಂದೆ ಒಂದು ಘೋಷಣೆ ಮಾಡಿದ್ದೀರಿ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಜೀವಾವಧಿ ಶಿಕ್ಷೆಯನ್ನು 10 ವರ್ಷಕ್ಕೆ ಇಳಿಸುವ ಬಗ್ಗೆ ಕೇಂದ್ರದ ಗೃಹಖಾತೆಯ ಸಹಾಯಕ ಸಚಿವರಾದ ಎನ್.ಎಂ. ಜೇಕಬ್ ಮತ್ತು ಕಾನೂನು ಖಾತೆಯ ಸಹಾಯಕ ಸಚಿವರಾದ ಕುಮಾರ ಮಂಗಳಂ ಅವರ ಸಂಗಡ ಸಮಾಲೋಚಿಸಲಾಗಿದೆ ಎಂದು ತಿಳಿಸಿದ್ದೀರಿ. ಕೇಂದ್ರ ಸಚಿವರೂ ಕೂಡ ಈ ಬಗ್ಗೆ ಒಲವು ವ್ಯಕ್ತಪಡಿಸಿದ್ದಾರೆ. ಈ ಜೀವಾವಧಿ ಶಿಕ್ಷೆಯನ್ನು ಇವತ್ತಿನ ದಿವಸ ತೆಗೆಸುವುದಕ್ಕೆ ವಿವಿಧ ಸಂಘಸಂಸ್ಥೆಗಳೂ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಹಾಗೆಯೇ ಖೈದಿಗಳೂ ಕೂಡ ಇದೇ ರೀತಿಯ ಮನವಿ ಮಾಡಿಕೊಂಡಿದ್ದಾರೆ. ಅಪರಾಧಿಗಳ ಸಂಖ್ಯೆಗೆ ಸಂಬಂಧಪಟ್ಟಂತೆ. ರಾಷ್ಟ್ರಮಟ್ಟದಲ್ಲಿ ಏಕರೂಪದ ಶಾಸನವನ್ನು ತರಬೇಕಾಗಿದೆ. ಡಾ: ಅಂಬೇಡ್ಕರ್ ಜನ್ಮ ಶತಾಬ್ದಿ ವರ್ಷವಾದ್ದರಿಂದ. ಯಾರು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದಾರೆ. ಅಂತಹ ಖೈದಿಗಳನ್ನು 10 ವರ್ಷ ತುಂಬಿದ್ದರೆ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ ಜೊತೆಗೆ ಮುಂದಿನ ಅಧಿವೇಶನದಲ್ಲಿಯೇ ಈ ಕಾಯಿದೆಗೆ ತಿದ್ದುಪಡಿ ತರುತ್ತೇವೆಂದೂ ಹೇಳಿದಿರಿ: ಆದರೆ. ಈ ಕೆಲಸ ನಿಮ್ಮಿಂದ ಆಗಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಲಾದರೂ ಈ ಅಧಿವೇಶನದಲ್ಲಿ ಈ ಕಾಯಿದೆಗೆ ತಿದ್ದುಪಡಿ ತಂದು. ಅಂಬೇಡ್ಕರ್ ಜನ್ಮಶತಾಬ್ದಿ ವರ್ಷದಲ್ಲಿ ಯಾರು ಯಾರು 10 ವರ್ಷ ಕಾರಾಗೃಹ ವಾಸವನ್ನು ಅನುಭವಿಸಿದ್ದಾರೋ ಅಂತಹ ಖೈದಿಗಳನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೂ ಕೂಡ ಬಂಧಿಗಳಿಗೆ ಉಚಿತ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದರು, ತಾವು ಕೂಡ ಹೇಳಿಕೆ ಕೊಟ್ಟಿದ್ದೀರಿ. 10 ವರ್ಷವಾದ ಅಪರಾಧಿಗಳನ್ನು ಬಿಡುತ್ತೇವೆಂದು ಹೇಳಿ. ರಾಜ್ಯ ಸರ್ಕಾರವು ಶೀಘ್ರದಲ್ಲಿಯೇ ತಿದ್ದುಪಡಿ ತಂದು ಇಂತಹ ಬಂಧಿಗಳನ್ನು ಡಾ: ಅಂಬೇಡ್ಕರ್ ಜನ್ಮ ಶತಾಬ್ದಿ ವರ್ಷದಲ್ಲಿ ಬಿಡುಗಡೆ ಮಾಡುವ ಬಗ್ಗೆ ಗಂಭೀರವಾಗಿ ಪರಿಶೀಲಿಸುತ್ತಿದೆಯೆಂದು ಧರ್ಮಸಿಂಗ್‌ರವರೂ ಹೇಳಿದ್ದಾರೆ. ಆದುದರಿಂದ, ದಯಮಾಡಿ, ಇವರನ್ನು ಬಿಡುಗಡೆ ಮಾಡಬೇಕು. ಮತ್ತು ನಮಗೆ 10 ವರ್ಷ ಜೈಲುವಾಸ ಅನುಭವಿಸಿರತಕ್ಕ ಅನೇಕ ಖೈದಿಗಳು ರೆಪ್ರಸೆಂಟೇಷನ್ಸ್ ಕಳುಹಿಸಿದ್ದಾರೆ. ಇವುಗಳನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸುತ್ತಿದ್ದೇನೆ. ದಯಮಾಡಿ ಇದಕ್ಕೆ ಪುರಸ್ಕಾರ ಕೊಡಬೇಕು. ತಾವು ಬಂಧೀಖಾನೆ ರಾಜ್ಯಮಂತ್ರಿಗಳಾದ ಮೇಲೆ. ರಾಜ್ಯದ ಬಂಧೀಖಾನೆಯಲ್ಲಿರತಕ್ಕ ಖೈದಿಗಳಿಗೆ ಹೆಚ್ಚಿನ ಶಿಕ್ಷಣ ಕೊಡತಕ್ಕ ವಿಚಾರ ಮಾಡುತ್ತಿದ್ದೀರಿ. ಶಿಕ್ಷಣ ಎಂದರೆ. ಒಂದು ಸಾರಿ ತಪ್ಪು ಮಾಡಿ ಜೈಲು ಶಿಕ್ಷೆಗೆ ಬಂದಿರತಕ್ಕವರು ಮತ್ತೊಮ್ಮೆ ಬರಬಾರದು. ಆ ರೀತಿಯಲ್ಲಿ ಅವರ ಮನೋಭಾವವನ್ನು ಬದಲಾವಣೆ ಮಾಡತಕ್ಕ ವಾತಾವರಣವನ್ನು ಕಲ್ಪನೆ

ಮಾಡಬೇಕು. ಈ ವಿಷಯದಲ್ಲಿ ಅಪರಾಧಿಗಳ ಸಂಖ್ಯೆ ವರ್ಷ, ವರ್ಷಕ್ಕೆ ಕೆಳಗಡೆ ಇಳಿಯಬೇಕೆಂಬ ದೃಷ್ಟಿಯಿಂದ ತಾವು ಯಾವ ರೀತಿಯಾಗಿ ಸಮಗ್ರವಾದ ಕೆಲಸ ಮಾಡಬೇಕೋ ಅವೆಲ್ಲವನ್ನೂ ಮಾಡಿ, ನಾನು ತಮಗೆ ಮನವಿ ಮಾಡಿಕೊಂಡ ರೀತಿಯಲ್ಲಿ, 10 ವರ್ಷ ಜೈಲುವಾಸ ಅನುಭವಿಸಿರತಕ್ಕವರನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡುವುದಕ್ಕೆ ತಾವು ಘೋಷಣೆ ಮಾಡುತ್ತೀರಿ ಎಂದು ನಿರೀಕ್ಷಣೆ ಮಾಡಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ. ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ವೈಸ್ ಛೇರ್ಮನ್ : ಇವತ್ತು ಚರ್ಚೆ ಮುಗಿಯಬೇಕು ಈಗ ಶ್ರೀಯುತ ಅನಂತಕೃಷ್ಣ ಅವರು ಮಾತನಾಡಲಿ.

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಉಪಾಧ್ಯಕ್ಷರೇ, ಈ ಡಿಮ್ಯಾಂಡ್ ವಿಷಯದಲ್ಲಿ ನನ್ನ ಸಂಪೂರ್ಣ ಸಮರ್ಥನೆಯನ್ನು ತೋರಿಸಿ, ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನನಗೆ ಸಾಕಷ್ಟು ಪೋಲೀಸ್ ಇಲಾಖೆಯ ಕಾರ್ಯನಿರ್ವಹಣೆ ವಿಷಯದಲ್ಲಿ ನೇರ ಪರಿಚಯವಿಲ್ಲದಿದ್ದರೂ ಕೂಡ, ಒಬ್ಬ ನಾಗರೀಕನಾಗಿ, ನಾಗರೀಕರ ಪ್ರತಿನಿಧಿಯಾಗಿ, ನಾಗರೀಕರಿಗೂ, ಪೋಲೀಸ್ ಇಲಾಖೆಯವರಿಗೂ, ಅವರ ಮೇಲಧಿಕಾರಿಗಳಾದ ಸರ್ಕಾರಕ್ಕೂ ಯಾವ ರೀತಿಯ ಸಂಪರ್ಕ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ಕಾಲದಿಂದ ನಾವು ಕೇಳುತ್ತಿದ್ದೇವೆ, ಈ ಪೋಲೀಸ್ ಇಲಾಖೆ ನಾಗರೀಕರ ಸೇವಾಕಾಂಕ್ಷಿ ಎಂದು ಕೇಳುತ್ತಿದ್ದೇವೆ. ಹಾಗೆಯೇ ಪೋಲೀಸ್ ಇಲಾಖೆಯವರು ನಾಗರೀಕರ ಮಾರ್ಗದರ್ಶಕರಾಗಿರಬೇಕು, ಹಾಗೆಯೇ ಪೋಲೀಸ್ ಇಲಾಖೆಯವರು ನಮ್ಮ ಸಮಾಜದ ಸರ್ವತೋಮುಖ ಪ್ರಗತಿಯನ್ನು ಸಾಧಿಸಬೇಕಾಗಿದ್ದರೆ ಈ ಇಲಾಖೆ ಸರ್ಕಾರದ, ಸಮಾಜದ ಸರ್ವ ಅಂಗಳದಲ್ಲಿ ಬಹಳ ಮುಖ್ಯವಾದ ಒಂದು ಅಂಗ ಎಂದು ಹೇಳಬಹುದು.

ಈ ಒಂದು ದೃಷ್ಟಿಕೋನದಲ್ಲಿ ನಾವು ಎಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಿ ಬಹಳ ಮುಖ್ಯವಾದ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾದುದು ಬಹಳ ಅವಶ್ಯಕ ಎಂದು ನಾನು ಭಾವಿಸುತ್ತೇನೆ. ನನ್ನ ಭಾವನೆಯಲ್ಲಿ ಹೇಗಿದೆ ಎಂದು ಹೇಳಿದರೆ ಪೋಲೀಸ್ ಇಲಾಖೆಯ ಒಂದು ಕಾರ್ಯನಿರ್ವಹಣೆ ಕೇವಲ ಸಮಯೋಚಿತವಾಗಿದ್ದು ಜನತೆಗೆ ಕಣ್ಣಿಗೆ ಕಾಣುವಂತಹ ಒಂದು ಕೆಲಸವಾಗಿದೆ, ಮೂಲಭೂತವಾಗಿ ಏನಾಗಬೇಕಾಗಿತ್ತೋ, ಯಾವ ರೀತಿ ಪ್ರಗತಿಯನ್ನು ಸಾಧಿಸಿಬೇಕಾಗಿತ್ತೋ ಅದರ ಸಾಧನೆಯಾಗಿಲ್ಲ. ಜನತೆಯೂ ಕೂಡ ಪೋಲೀಸ್ ಇಲಾಖೆ ನಮ್ಮದು, ನಮ್ಮ ರಕ್ಷಣೆಗಾಗಿ ನಮ್ಮ ಸೇವೆಗಾಗಿ ಇದೆ, ಯಾವ ರೀತಿ ನಾವು ಪೋಲೀಸ್ ಇಲಾಖೆಯನ್ನು ಸದುಪಯೋಗ ಮಾಡಿಕೊಳ್ಳಬೇಕೆಂಬ ಒಂದು ರೀತಿಯಲ್ಲಿ ತಿಳುವಳಿಕೆ ಇಲ್ಲದಂಥ ವಿಚಾರ ಹೀನರಾಗಿದ್ದಾರೆ ಎಂದು ಹೇಳಬಯಸುತ್ತೇನೆ, ಈ ಮಾತು ಅತಿಶಯೋಕ್ತಿಯಾಗುವುದಿಲ್ಲ ಎಂದೂ ಹೇಳಬಯಸುತ್ತೇನೆ. ಸಮಾಜದಲ್ಲಿ ಕಾರಣವಾದರೂ ಸಾಕಷ್ಟು ಪ್ರಮಾಣದಲ್ಲಿ ಪೋಲೀಸ್ ಇಲಾಖೆಯಲ್ಲಿರುವವರೂ, ಜನತೆಯ ಆಸೆ ಆಕಾಂಕ್ಷೆಗಳು ಪ್ರಗತಿಶೀಲವಾದ ಬದಲಾವಣೆಗಳು ಏನಾಗುತ್ತಿದೆ, ಹಂತದಲ್ಲಿ ಇಲಾಖೆಯವರಿಗೆ ಸೂಕ್ತವಾದ ಒಂದು ತರಬೇತಿ ಯಾವ ಒಂದು ಮಟ್ಟದಲ್ಲಿ ಕೊಡಬೇಕಾಗಿತ್ತೋ ಆ ಮಟ್ಟದಲ್ಲಿ ಕೊಡದಿರುವುದೂ ಮತ್ತೊಂದು ಕಾರಣ. ಆದುದರಿಂದ ನಾವು ಎಷ್ಟು ಹಣವನ್ನು ಪೋಲೀಸ್ ಇಲಾಖೆಯವರಿಗೆ ಖರ್ಚು ಮಾಡುತ್ತಿದ್ದರೂ ಕೂಡ ಅದರಿಂದ ನಮ್ಮ ಸಮಾಜಕ್ಕೆ ಎಷ್ಟು ಸೇವೆ ಯಾವ ಒಂದು ಸಮಗ್ರ ಹಂತದಲ್ಲಿ ಬರಬೇಕಾಗಿತ್ತೋ ಅದು ಬರುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ನಮ್ಮ ಆಡಳಿತ ಮತ್ತು ಪೋಲೀಸ್ ಇಲಾಖೆ. ಎರಡೂ ಸೇರಿ ಜನತೆಗೆ ಯಾವ ಹಂತದಲ್ಲಿ ಈ ಒಂಧು ಸರ್ವತೋಮುಖವಾದ ಕಾರ್ಯವ್ಯಾಪ್ತಿಯುಳ್ಳ, ಕಾರ್ಯಶೀಲವಾದ ಒಂದು ಇಲಾಖೆ ಹೇಗೆ ಕೆಲಸ ಮಾಡುತ್ತಿದೆ, ಮಾಡಬೇಕಾಗಿದೆ, ಜನತೆಯಿಂದ

ಯಾವ ರೀತಿ ಸಹಕಾರ ಪಡೆಯಬೇಕು. ಜನತೆಗೆ ಯಾವ ರೀತಿ ತಿಳುವಳಿಕೆ ಕೊಡಬೇಕಾಗಿದೆ. ಈ ವಿಷಯ ಬಹಳವಾಗಿ ಕಡಿಮೆಯಾಗಿದೆ. ಆದುದರಿಂದ ನಾನಾದರೂ ಹೇಳಬಯಸುತ್ತಿದ್ದೇನೆ. ನಮ್ಮ ಸರಕಾರ ಒಂದು ತೀವ್ರವಾದ ಆಲೋಚನೆ ಮಾಡಿ ಪೋಲೀಸ್ ಇಲಾಖೆ ಜನತೆಗೆ ಸಂಬಂಧಪಟ್ಟ ಒಂದು ಇಲಾಖೆ. ಜನತೆಯ ಒಂದು ಸೇವೆಗಾಗಿ ಇರುವ ಇಲಾಖೆ, ಜನತೆ ಅದನ್ನು ಸದುಪಯೋಗ ಮಾಡಿಕೊಳ್ಳಬೇಕು; ಅದನ್ನು ಯಾವ ರೀತಿ ಮಾಡಿಕೊಳ್ಳಬೇಕಾಗಿದೆ ಮತ್ತು ಜನತೆಗೆ ಹಾಗೂ ಪೋಲೀಸ್ ಇಲಾಖೆಯ ನಡುವೆ ಯಾವ ರೀತಿ ಸೌಹಾರ್ಧತೆ. ಸಹಾನುಭೂತಿ. ಸ್ನೇಹ. ವಿಶ್ವಾಸ, ಪರಸ್ಪರ ನಂಬಿಕೆ ಯಾವ ರೀತಿ ಬೆಳೆದುಕೊಂಡು ಬರಬೇಕೆಂಬ ಕೆಲಸ ಆಗದೇ ಇಲಾಖೆ ಒಂದು ಕಡೆ ಇದ್ದು. ಮತ್ತು ಜನತೆ ಮತ್ತೊಂದು ಕಡೆ ಇದ್ದು ಕೇವಲ ಯಾರು ಈ ಒಂದು ಇಲಾಖೆಯ ಕೈಗೆ ನಾನಾ ಕಾರಣಕ್ಕಾಗಿ ಸಿಕ್ಕಿಕೊಳ್ಳುತ್ತಾರೆ. ಅವರಿಗೆ ಸಂಬಂಧಪಟ್ಟಂತೆ ಆಗಿದೆ. ಒಂದು ರೀತಿಯಾಗಿ ಅವೇ ವಿಷಯಗಳನ್ನು ನಾವು ಪತ್ರಿಕೆಗಳಲ್ಲಿಯೂ ಕೂಡ ಓದುತ್ತೇವೆ. ಯಾರಾದರೂ ದರೋಡೆಕೋರರು ಸಿಕ್ಕಿಬಿದ್ದರೆ. ಇಲ್ಲ ಸಿಗಲಿಲ್ಲ ಎಂಬ ವಿಚಾರಗಳನ್ನು ಅಷ್ಟರಮಟ್ಟಿಗೆ ಮಾತ್ರ ಪತ್ರಿಕೆಗಳಲ್ಲಿ ಓದುತ್ತೇವೆ. ಅದಕ್ಕಾಗಿ ಯಾವ ಸಿಬ್ಬಂದಿಯನ್ನು ಯಾವ ರೀತಿ ನೇಮಕ ಮಾಡಿದ್ದೇವೆ. ಒಂದು ಟಾಸ್ಕ್‌ಫೋರ್ಸ್ ಮಾಡಿದ್ದೇವೆ. ಅದನ್ನು ಮಾತ್ರ ಕೇಳುತ್ತೇವೆ. ಈ ಒಂದು ಕಮ್ಯುನಲ್ ರಯಟ್ ಮತ್ತೊಂದು ಆಯಿತು ಎಂದಾಗ ಮಾತ್ರ ಆ ಸಮಯದಲ್ಲಿ ನಾವು ಈ ಪೋಲೀಸ್ ಫೋರ್ಸ್ ಯಾವ ರೀತಿ ಕೆಲಸ ಮಾಡಿದೆ ಎಂದು ಪತ್ರಿಕೆಗಳಲ್ಲಿ ತಿಳಿದುಕೊಳ್ಳುತ್ತೇವೆ. ಪ್ರತಿಯೊಂದು ದಿನ ಇಪ್ಪತ್ತನಾಲ್ಕು ಘಂಟೆಯೂ. ಮುನ್ನೂರ ಅರವತ್ತೈದು ದಿವಸವೂ ಇಲಾಖೆಗೂ ಜನತೆಗೂ ಯಾವ ರೀತಿಯಾದ ನೇರ ಸಂಪರ್ಕ ಇದ್ದು. ಆಗಬಾರದಂಥ ಒಂದು ಅಸಾಮಾಜಿಕವಾದಂಥ ಕೆಲಸಗಳು ಏನು ನಡೆಯುತ್ತಿವೆ. ಅದನ್ನು ಯಾವ ರೀತಿ ತಡೆ ಹಿಡಿಯಬೇಕು. ಯಾವ ರೀತಿ ಈ ಯಂತ್ರವನ್ನು ಉಪಯೋಗಿಸಿಕೊಳ್ಳಬೇಕು ಎಂಬ ಒಂದು ತಿಳುವಳಿಕೆ ಕೊಡುವಂತಹ ಕೆಲಸ ಆಗುತ್ತಿಲ್ಲ. ಇದು ಪ್ರಮುಖವಾಗಿ ಆಗಬೇಕು. ಅಂದಾಗ ಮಾತ್ರ ಮೂಲಭೂತವಾಗಿ ಈ ಇಲಾಖೆಯ ಒಂದು ಸೇವೆಯನ್ನು ಜನತೆ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ನಾನು ಬಹಳ ಕಳಕಳಿಯಿಂದ. ತೀವ್ರತೆಯಿಂದ ಒತ್ತಾಯಪೂರ್ವಕವಾಗಿ ಹೇಳಬಯಸುತ್ತಿದ್ದೇನೆ.

ಅದಕ್ಕಾಗಿ ನಮ್ಮಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಪಬ್ಲಿಕ್ ರಿಲೇಶನ್ ಡಿಪಾರ್ಟ್‌ಮೆಂಟ್ ಎಂದು ಇದೆ. ಆ ಪಬ್ಲಿಕ್ ರಿಲೇಶನ್ ಸಂಪರ್ಕ ಏನಿದೆ ಅದನ್ನು ನಾನು ಕೆಲವು ದಿನಗಳವರೆಗೂ ತಿಳಿದುಕೊಂಡಿರಲಿಲ್ಲ. ಇಂತಹ ಒಂದು ಪಬ್ಲಿಕ್ ರಿಲೇಶನ್ ಡಿಪಾರ್ಟ್‌ಮೆಂಟ್ ಇದೆ ಎಂದು ಹೇಳಿ ಅದಕ್ಕೆ ಸಂಬಂಧಪಟ್ಟ ಒಬ್ಬ ಜವಾಬ್ದಾರಿಯುತ ಅಧಿಕಾರಿ ಇದ್ದಾರೆಂದು ನನಗೆ ಗೊತ್ತಿಲ್ಲ. ಜನತೆಗೆ ಇನ್ನು ಏನು ಗೊತ್ತಿರುತ್ತದೆ? ಯಾವಾಗ ನಾವು ಜನತೆ ಮತ್ತು ಪೋಲೀಸ್ ಇಲಾಖೆಯ ಮಧ್ಯೆ ನೇರವಾಗಿ ಒಳ್ಳೆಯ ಸಂಪರ್ಕವನ್ನು ಬೆಳೆಸುವಂಥ ರೀತಿಯಲ್ಲಿ ಒಂದು ಪ್ರಯತ್ನವನ್ನು ಮಾಡುತ್ತಿಲ್ಲವೋ ಆಗ ಜನತೆ ಈ ಪೋಲೀಸ್ ಇಲಾಖೆ ಏನು ಜನರಿಗೆ ಸೇವೆ ಮಾಡುತ್ತಾ ಇದೆ. ಅವರ ರಕ್ಷಣೆಗೆ ಏನು ಮಾಡುತ್ತಾ ಇದೆ. ಅದರ ಬಗ್ಗೆ ತಿಳುವಳಿಕೆ ಯಾವಾಗ ಬರಲಿಲ್ಲವೋ ಆಗ ಈ ಡಿಪಾರ್ಟ್‌ಮೆಂಟ್‌ಗೆ ಸಾಕಷ್ಟು ಬೆಂಬಲವೂ ಸಿಗುವುದಿಲ್ಲ. ಗೌರವ ಸಿಗುವುದಿಲ್ಲ. ಪೋಲೀಸ್ ಎಂದ ತಕ್ಷಣ ಯಾವುದೋ ಒಂದು ಭಯೋತ್ಪಾದನೆಯ ಫೋರ್ಸ್ ಎನ್ನುವ ಒಂದು ಭಾವನೆ ಬರುತ್ತದೆ. ನಾನೇ ಕೆಲವು ಕಾಲದವರೆಗೂ ಈ ಪೋಲೀಸ್ ಸ್ಟೇಶನ್‌ಗೆ ಹೋಗಿ ಕಂಪ್ಲೇಂಟ್ ಕೊಟ್ಟು ಬರಬೇಕು ಎಂದು ಹೇಳಿದರೆ ನಾನೇ ಭಯ ಬೀಳುತ್ತಿದೆ. ನಾನು ಎಲ್ಲಿ ಅವರ ಒಂದು ಅಸಹನೀಯವಾದ ನೀತಿಗೇ ಬಲಿಯಾಗಿಬಿಡುತ್ತೇನೋ ಎನ್ನುವ ಭಯ ನನಗೇ ಬರುತ್ತಿತ್ತು. ನಾನು ಇದ್ದ ಮಾತನ್ನು ಇದ್ದ ಹಾಗೇ ಹೇಳುತ್ತೇನೆ. ಇದು ನನ್ನ ವೈಯಕ್ತಿಕ

ಮತ್ತು ಸ್ವಾರ್ಥಕ್ಕಾಗಿ ಅಲ್ಲ. ಜನತೆ ಪೋಲೀಸ್ ಸ್ಟೇಶನ್‌ಗೆ ಹೋಗಬೇಕು ಕಂಪ್ಲೇಂಟ್ ಕೊಡಬೇಕು ಎಂದು ಹೇಳಿದರೆ. ಹೋದರೆ ಏನಾಗುತ್ತದೋ ಎನ್ನುವ ಒಂದು ಭಯ. ನಮಗೆ ದಿನ ಬರುವ ಕಂಪ್ಲೇಂಟ್ಸ್ ಹೇಗಿವೆ ಅಂದರೆ ನಾವು ಕಂಪ್ಲೇಟ್ ಕೊಡುತ್ತೇವೆ. ಆದರೆ ರಿಜಿಸ್ಟರ್ ಮಾಡುವುದಿಲ್ಲ. ನಾವು ಕಂಪ್ಲೇಂಟ್ ಕೊಟ್ಟರೇ ನಾವು ಯಾರ ವಿರುದ್ಧವಾಗಿ ಕಂಪ್ಲೇಂಟ್ ಕೊಟ್ಟಿರುತ್ತೇವೆಯೋ ಅವರಿಗೆ ಬೆಂಬಲ ಕೊಟ್ಟು ನಮಗೆ ಬೆಂಬಲ ಸಿಗುವುದಿಲ್ಲ. ಈ ರೀತಿಯಾಗಿ ಪ್ರತಿ ಸಂದರ್ಭದಲ್ಲೂ ನಾವು ಕೇಳುತ್ತಿರುತ್ತೇವೆ. ಏತಕ್ಕೆ ಏನು ಇದಕ್ಕೆ ಮೂಲಭೂತವಾದ ಕಾರಣ? ಮೂಲ ಕಾರಣ ಏನು ಎನ್ನುವುದನ್ನು ಇಲಾಖೆಯವರು ಕೂಡ ಸರ್ಕಾರದವರು ಕೂಡ ತೀವ್ರವಾಗಿ ಇದನ್ನು ಗಮನಿಸಬೇಕು ಎಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೇ ಎಲ್ಲಿ ಅನ್ಯಾಯವಾಗುತ್ತದೆ ಎಲ್ಲಿ ಅಕ್ರಮವಾಗುತ್ತದೆ ಅದರ ವಿರುದ್ಧ ಒಂದು ಕಂಪ್ಲೇಂಟ್ ಕೊಡಬೇಕು ಎನ್ನುವವರಿಗೇ ಧೈರ್ಯ ಬರುವುದಿಲ್ಲ ಅಂತ ಹೇಳಿದರೆ ಇಲಾಖೆಯವರಿಗೂ ಈ ವಿಷಯ ತಿಳಿಯುವುದಾದರೂ ಹೇಗೆ? ತಿಳಿದುಕೊಳ್ಳದ ಮೇಲೆ ಕೆಲಸ ಮಾಡುವುದಾದರೂ ಹೇಗೆ? ತಿಳುವಳಿಕೆ ಕೊಟ್ಟ ಮೇಲೆ ಸರಿಯಾಗಿ ಗಮನ ಕೊಡದೇ ಹೋದರೆ ಜನತೆಗೆ ಅವರ ಸೇವೆ ಸಿಗುತ್ತದೆ ಎನ್ನುವ ನಂಬಿಕೆ ಬರುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಇದು ಬಹಳ ಮುಖ್ಯವಾದ ವಿಷಯ. ನಾನು ಒತ್ತಾಯಪೂರ್ವಕವಾಗಿ ಹೇಳುವುದು ಮೊದಲು ಸಿಬ್ಬಂದಿಯವರಿಗೆ ಯಾವ ರೀತಿ ಜನತೆಯ ಜೊತೆಯಲ್ಲಿ ನಡೆದುಕೊಳ್ಳಬೇಕು ಸೇವೆ ಯಾರಿಗೆ ಮಾಡಬೇಕು ಯಾವ ರೀತಿಯ ಸೇವೆ ಯಾರಿಗೆ ಬೇಕಾಗುತ್ತದೆ ಎನ್ನುವುದನ್ನು ಗುರುತಿಸಬೇಕು. ಮತ್ತು ಯಾರಿಗೆ ಶಿಕ್ಷೆ ಮಾಡಬೇಕು ಎಂದು ಅನಿಸುತ್ತದೆ. ಅಂತಹವರಿಗೆ ಸಹ ಗುರುತು ಮಾಡಬೇಕು. ಇದನ್ನು ಎರಡು ಗುಂಪುಗಳನ್ನಾಗಿ ಬೇರೆಬೇರೆಯಾಗಿ ತಾವು ತೀರ್ಮಾನ ಮಾಡಬೇಕಾಗುತ್ತದೆ ಎನ್ನುವುದು ಬಹಳ ಮುಖ್ಯ. ನನಗೆ ಗೊತ್ತಿದೆ ಯಾರು ರೌಡಿಗಳು ಇದ್ದಾರೆ ಅವರ ಲಿಸ್ಟ್ ಪೋಲೀಸ್ ಇಲಾಖೆಯಲ್ಲಿ ಇದೆ. ಯಾರು ಆನ್ ಸೋಷಿಯಲ್ ಕ್ಯಾರೆಕ್ಟರಿಸ್ಟ್ ಇದ್ದಾರೆ ಅವರ ಲಿಸ್ಟ್ ಇದೆ. ಎಲ್ಲಾ ಇದೆ. ಆದರೆ ಒಳ್ಳೆಯವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಅವರೆಷ್ಟು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎನ್ನುವುದನ್ನು ಕೂಡ ನಾವು ತೀವ್ರವಾಗಿ ಯೋಚನೆ ಮಾಡುವುದಾದರೆ ಯಾರು ಜನತೆಯ ವಿರುದ್ಧವಾಗಿದ್ದಾರೆ ಯಾರು ಜನತಾ ವಿರೋಧಿಗಳಾಗಿದ್ದಾರೆ. ಯಾರು ಜನತೆ ವಿರುದ್ಧವಾಗಿದ್ದಾರೆ ಯಾರು. ಜನತೆಯ ಕ್ಷೇಮಕ್ಕೆ ರಕ್ಷಣೆಗೆ ವಿರುದ್ಧವಾಗಿದ್ದಾರ್ವರ ಲಿಸ್ಟ್ ಇದ್ದು ಕೂಡ ಅವರ ಮೇಲೆ ಏತಕ್ಕೆ ಸಂಪೂರ್ಣವಾದ ಹತೋಟಿ ಇಲ್ಲ? ಮತ್ತು ಯಾರಿಗೆ ನೇರವಾದ ಸೇವೆ ಬೇಕಾಗಿದೆ ಸರ್ವ ಹಂತದಲ್ಲೂ ಸರ್ವ ಸಮಯದಲ್ಲೂ ಕೂಡ ಏತಕ್ಕೆ ಅವರಿಗೆ ಸಿಗುತ್ತಿಲ್ಲ. Same type of crimes, same type of criminals, same type of attack on the people ಪದೇ ಪದೇ ಆಗುತ್ತದೆ. ಇದು ಏತಕ್ಕೆ ಆಗುತ್ತಾ ಇದೆ? ಎನ್ನುವ ಬಗ್ಗೆ ಯೋಚನೆ ಮಾಡಬೇಕು. ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೇ? ನಮ್ಮ ಸ್ನೇಹಿತರು ಈಗಾಗಲೇ ಮಾತನಾಡುವಾಗ ಹೇಳಿದರು ನಮ್ಮಲ್ಲಿ ಆಧುನಿಕ ಯಂತ್ರೋಪಕರಣಗಳು ಬೇಕಾಗಿದೆ. ಆ ಸಾಧನೆಗಳು ಬೇಕಾಗಿದೆ. ಅದು ನಮ್ಮಲ್ಲಿ ಇಲ್ಲವೇ? ಸರಿಯಾದ ಒಂದು ಹತೋಟಿ ಇಲ್ಲವೆ? ಈ ಸಿಬ್ಬಂದಿ ಯಾವ ಕಾರಣಕ್ಕಾಗಿ ಜನಗಳಿಗೆ ಹೆಲ್ಪ್‌ಫುಲ್ ಆಗಿ ಇರಬೇಕಾಗುತ್ತದೆ. ಆದ್ದರಿಂದ ಅವರ ಅಟೆನ್‌ಷನ್ ಡೈವರ್ಟ್ ಆಗಿದೆಯೇ? ಡೈವರ್ಟ್ ಏತಕ್ಕೆ ಆಗಿದೆ ಇದರಿಂದ ಯಾರಿಗೆ ಪ್ರಯೋಜನವಾಗುತ್ತಿದೆ ಇವುಗಳನ್ನು ನಾವು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇವರು ವಿ.ಐ.ಪಿ.ಗಳ ಕಡೆ ಎಷ್ಟು ಗಮನ ಕೊಡಬೇಕು? ವಿ.ವಿ.ಐ.ಪಿ. ಗಳ ಕಡೆ ಎಷ್ಟು ಗಮನ ಕೊಡಬೇಕಾಗುತ್ತದೆ. ಬೇರೆ ಬೇರೆ ಕಾರಣಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಗಮನ ಕೊಡಬೇಕಾಗುತ್ತದೆ ಅದನ್ನು ಕೇಳುತ್ತಿದ್ದೇವೆ. ಆದರೆ ಅದಕ್ಕೆ ಒಂದು ಸಲೂಶನ್ ನಾವು ಕಾಣುತ್ತಿಲ್ಲ. ಆದ್ದರಿಂದ ನಾನು ಹೇಳುವುದಿಷ್ಟೇ ಅಲ್ಲಿ ರೀಸರ್ಚ್ ಡೆವಲಪ್‌ಮೆಂಟ್ಸ್ ಮಾಡಬೇಕಾಗುತ್ತದೆ. ಮಾಡದೇ

ಹೋದರೆ ನಾವು ಎಷ್ಟು ಖರ್ಚು ಮಾಡಿದರೂ ಏನು ಮಾಡಿದರೂ ನಾವು ಪ್ರಗತಿಶೀಲ ಸೇವೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾನು ಒಂದು ಉದಾಹರಣೆಗೆ ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ನಮ್ಮ ರಾಜ್ಯ ಸರ್ಕಾರದಿಂದ ರಾಜ್ಯಪಾಲರಿಂದ ಬೇರೆ ಬೇರೆ ಡಿಪಾರ್ಟ್‌ಮೆಂಟ್ಸ್‌ಗಳಿಂದ ನಾಗರೀಕರಿಗೆ ನೀವು ಬನ್ನಿ ಎಂದು ಇನ್‌ವಿಟೇಶನ್ಸ್ ಕಳುಹಿಸಿಕೊಡುತ್ತಾರೆ. ಪಾಪ ಅವರು ಅವರ ಪಾಡಿಗೆ ಮನೆಯಲ್ಲಿರುತ್ತಾರೆ. ಆದರೆ ಅವರ ಕಾರ್ಯಕ್ರಮ ಪೂರ್ತಿ ಆಗಬೇಕು ಅಥವಾ ಸಕ್ಸಸ್‌ಫುಲ್ ಆಗಬೇಕು ಎಂದು ಇನ್‌ವಿಟೇಶನ್ಸ್ ಕಳುಹಿಸಿಕೊಡುತ್ತಾರೆ. ದಾಕ್ಷಿಣ್ಯಕ್ಕೆ ಯಾರು ಇನ್‌ವಿಟೇಶನ್ಸ್ ಕಳುಹಿಸಿಕೊಡುವುದಿಲ್ಲ. ಇಲ್ಲಾ ಕೆಲವರು ಕೇಳಿಕೊಂಡು ತೆಗೆದುಕೊಳ್ಳಬಹುದು ಅಲ್ಲಿಗೆ ಹೋದಾಗ. ಅಲ್ಲಿ ಹೋದಾಗ ಯಾರು ಇನ್‌ವೈಟೀಸ್?. ಯಾರು ಇನ್‌ವೈಟೀಸ್ ಅಲ್ಲ? ಯಾರನ್ನು ಯಾವ ರೀತಿ ಟ್ರೀಟ್ ಮಾಡಬೇಕು ಎನ್ನುವಂಥ ತರಬೇತಿ ನಮ್ಮ ಪೋಲೀಸ್ ಇಲಾಖೆಯಲ್ಲಿರುವ ಸಿಬ್ಬಂದಿಗೆ ಕೊಡಬೇಕಾದುದು ಬಹಳ ಅವಶ್ಯಕವೆಂದು ಹೇಳುತ್ತಿದ್ದೇನೆ. ಏಕೆಂದರೆ, ನನಗೆ ಸಾಕಷ್ಟು ಸಾಲ ಬಹಳ ತೊಂದರೆಯಾಗಿದೆ. ಸಂಬಂಧಪಟ್ಟ ಮುಖ್ಯಾಧಿಕಾರಿಗಳಿಗೆ ನಾನು ತಿಳುವಳಿಕೆ ಕೊಟ್ಟಿದ್ದೇನೆ. ಕಾರಣ, ಏನಾಗುತ್ತದೆಂದರೆ ನಾವು ಯಾವ ಯಾವ ಒಂದು ಭಾಗದಲ್ಲಿ, ಯಾವ ಒಂದು ಸಂದರ್ಭದಲ್ಲಿ ಎಂಥ ಪೋಲೀಸ್ ಅಧಿಕಾರಿಯನ್ನು ಅಲ್ಲಿ ಹಾಕಬೇಕು? ಯಾರು ಜನತೆಯನ್ನು ಗುರುತಿಸುತ್ತಾರೆ? ಯಾರು ಇನ್‌ವೈಟೀಸ್‌ನ್ನು ಸರಿಯಾಗಿ ಗುರುತಿಸುತ್ತಾರೆ? ಯಾರಿಗೆ ಯಾವ ಮಾರ್ಗದರ್ಶನ ಮಾಡಿ ಎಲ್ಲಿ ಕೂರಿಸಬೇಕು ಎಲ್ಲಿ ಕಳುಹಿಸಿಕೊಡಬೇಕು ಅನ್ನುವಂಥ ನಿರ್ದೇಶನ ಕೊಡುವಂಥಾದ್ದಾಗಲೀ ಆದೇಶವನ್ನು ಕೊಡುವಂಥಾದ್ದು ಆಗಿರಲಿ ಮಾಡುವಂಥ ಪ್ರಯತ್ನ ಆಗುತ್ತಿಲ್ಲ. ಅಂದ ಮೇಲೆ ನಮ್ಮ ಪೋಲೀಸ್ ಇಲಾಖೆಯಲ್ಲಿ ನಮ್ಮ ಹೋಮ್ ಡಿಪಾರ್ಟ್‌ಮೆಂಟ್ ಆಗಿರಲಿ, ಮೇಲಿನಿಂದ ಕೆಳಗಿನವರೆಗೆ ಏತಕ್ಕೆ ಈ ವಿಷಯಗಳಲ್ಲಿ ತೀವ್ರವಾದ ಗಮನ ಕೊಡುತ್ತಿಲ್ಲ? ಪ್ರತಿಯೊಬ್ಬ ಸಿಬ್ಬಂದಿ ವರ್ಗದ ಮತ್ತು ಪ್ರತಿಯೊಬ್ಬ ವ್ಯಕ್ತಿ, ಕಾನ್‌ಸ್ಟೇಬಲ್‌ನಿಂದ ಹಿಡಿದುಕೊಂಡು ಡಿ.ಜಿ.ಪಿ., ವರೆಗೂ ಕೂಡ ಸರ್ವ ಹಂತದಲ್ಲಿ ಇದನ್ನು ಅರ್ಥ ಮಾಡಿಕೊಳ್ಳದೆ ಹೋದರೆ ನಾವು ಜನತೆಗೆ ಸೇವೆ ಮಾಡುವುದು ಬಹಳ ಕಷ್ಟವಾಗುತ್ತದೆ. ನಮ್ಮ ಆಡಳಿತ ವರ್ಗ ಇದೆ. ಕೆಲವು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ, ಜವಾಬ್ದಾರಿ ವಹಿಸಿದ್ದೇವೆ. ಅವರು ಜವಾಬ್ದಾರಿಯನ್ನು ನಿರ್ವಹಿಸುತ್ತಾ ಹೋಗುತ್ತಾರೆ ಎನ್ನುವುದಕ್ಕೆ ಈ ರಿಪೋರ್ಟ್ ಏನು ಹೇಳುತ್ತದೆ? ಇಂಥ ರಿಪೋರ್ಟ್‌ಗಳನ್ನು ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಗ ಜನತೆ ಮನಸ್ಸಿಗೆ ಸಂತೋಷ ಬರುವಂಥ ಒಂದು ವಾತಾವರಣ ಕಲ್ಪಿಸುವುದು ಕಷ್ಟವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಟ್ರಾಫಿಕ್ ಪೋಲೀಸ್‌ರು ಕಂಟ್ರೋಲ್ ಮಾಡಬೇಕು. ಅವರನ್ನು ಬಿಟ್ಟರೆ ಇಡೀ ರಾಜ್ಯದ ಯಾವ ಇಲಾಖೆಯವರು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಟ್ರಾಫಿಕ್ ಡಿಪಾರ್ಟ್‌ಮೆಂಟಿಗೆ ಎಷ್ಟು ಸಿಬ್ಬಂದಿ ಬೇಕಾಗಿದೆ, ಪೋಲೀಸ್ ಡಿಪಾರ್ಟ್‌ಮೆಂಟಿಗೆ ಎಷ್ಟು ಸಿಬ್ಬಂಧಿ ಬೇಕಾಗಿದೆ ಎಂಬುದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿದ್ದು ಬಹಳ ಕಡಿಮೆ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ನನ್ನ ಹತ್ತಿರ ಅಂಕಿ ಅಂಶಗಳು ಇಲ್ಲ. ನಾಳೆ ಭಾಷಣ ಮಾಡುವುದಿದ್ದರೆ ಅಂಕಿ ಅಂಶಗಳನ್ನು ತರಿಸಿಕೊಳ್ಳುತ್ತಿದ್ದೆ. ಇದ್ದಕ್ಕಿದ್ದ ಹಾಗೆ ಮಾತನಾಡುತ್ತಿದ್ದೇನೆ. ಈ ಟ್ರಾಫಿಕ್ ಹೆಜಾರ್ಡ್ ಎಂದು ಏನು ಹೇಳುತ್ತೇವೆ ಅದರಿಂದ ಜನತೆಯ ಸಾವು ನೋವುಗಳು, ಮತ್ತು ವಾಹನಗಳಿಂದ ಬೇರೆ ರೀತಿಯಲ್ಲಿ ಆಗುತ್ತಿರುವ ಪ್ರಾಪರ್ಟಿ ಡ್ಯಾಮೇಜ್‌ಗಳು, ಲಾಸ್ ಏನಿದೆ? ಇದನ್ನು ನಾವು ಯೋಚನೆ ಮಾಡಿದ್ದೇ ಆಗಿದ್ದರೆ, ಬೇರೆ ಒಂದು ಡಿಪಾರ್ಟ್‌ಮೆಂಟ್ ಅಂದರೆ, ಈ ಪೋಲೀಸ್ ಇಲಾಖೆಯಲ್ಲೇ ಬೇರೆ ಡಿಪಾರ್ಟ್‌ಮೆಂಟ್, ಕ್ರೈಮ್, ಲಾ ಅಂಡ್ ಆರ್ಡರ್ ಇದಕ್ಕೆ ಸಂಬಂಧಪಟ್ಟಂತೆ ಒಂದು ಇಲಾಖೆಗೆ

ಒಳಪಟ್ಟಂಥ ಒಂದು ಸಾವು ನೋವುಗಳನ್ನು, ನಷ್ಟವನ್ನು ನಾವು ನೋಡಿದ್ದೇ ಆದರೆ, ಈ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿರುವಂಥ ಹಣ ಏನಿದೆ ಅದಕ್ಕೂ ಉಳಿದ ಡಿಪಾರ್ಟ್‌ಮೆಂಟ್‌ಗೂ ಅಜಗಜಾಂತರ ವ್ಯತ್ಯಾಸ ಇದೆ. ಮನುಷ್ಯನ, ನಾಗರೀಕನ, ಒಂದು ಜೀವ ಟ್ರಾಫಿಕ್‌ನಲ್ಲಿ ಕಳೆದಿದ್ದೆ ಆಗಿದ್ದರೆ, ಒಂದು ಮಗು ಸತ್ತಿದ್ದೇ ಆಗಿದೆ. ಅದರ ವ್ಯಾಲ್ಯು ಎಷ್ಟು? ಇಲ್ಲಾ ಕಳ್ಳರು ಬಂದು ದರೋಡೆಕೋರರು ಬಂದು ಒಂದಷ್ಟು ದುಡ್ಡನ್ನು ದೋಚಿಕೊಂಡು ಹೋದರೆ ಅದರ ವಾಲ್ಯೂ ಎಷ್ಟು? ಈ ಎರಡನ್ನೂ ತಾವು ಯೋಚನೆ ಮಾಡಿದ್ದೇ ಆದರೆ, ಮನುಷ್ಯನ ಒಂದು ಜೀವಕ್ಕೆ ವಾಲ್ಯೂ ಏನಿದೆ? ಮೌಲ್ಯ ಏನಿದೆ? ಅದಕ್ಕೂ ಈ ಆಸ್ತಿಪಾಸ್ತಿ ಮೌಲ್ಯಕ್ಕೂ ಯಾವ ರೀತಿಯಾದ ಸಂಬಂಧ ಇಲ್ಲ. ಒಬ್ಬ ನಾಗರೀಕ ಈ ದೇಶಕ್ಕೆ ಸಾಕಷ್ಟು ಸೇವೆ ಮಾಡುವಂಥ ಪ್ರಜ್ಞಾವಂತನೂ ಆಗಬಹುದು, ದೊಡ್ಡ ನಾಯಕ ಆಗಬಹುದು, ಅಂತರರಾಷ್ಟ್ರೀಯ ಮಟ್ಟಕ್ಕೆ ಖ್ಯಾತಿ ಪಡೆಯುವವನೂ ಆಗಬಹುದು. ಆದರೆ, ಪುಸ್ತಕಕ್ಕೆ ಡ್ಯಾಮೇಜ್ ಆಗಿರಲಿ, ಯಾವುದೇ ತರಹದ ಡ್ಯಾಮೇಜ್ ಆಗಿರಲಿ ಅದು ಅಷ್ಟಕ್ಕೇ ಸೀಮಿತವಾಗಿರುತ್ತದೆ. ಅಂದ ಮೇಲೆ ಈ ರಸ್ತೆಯಲ್ಲಿ ಅಪಘಾತಗಳಿಗೆ ಸಿಕ್ಕುವಂಥ ಒಬ್ಬ ನಾಗರೀಕನ ಜೀವವನ್ನು ಉಳಿಸತಕ್ಕಂಥ ಪ್ರಯತ್ನ ಮಾಡಬೇಕಾಗಿದ್ದರೆ, ಅದು ಕೇವಲ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ಗೆ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ಈ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ಗೆ ನಾವು ಎಷ್ಟು ಹಣವನ್ನು ಒದಗಿಸಿಕೊಡಬೇಕಾಗಿದೆಯೋ ಅಷ್ಟೂ ಹಣವನ್ನು ಒದಗಿಸಿಕೊಡಬೇಕಾಗಿದೆ, ಎಷ್ಟು ಸಿಬ್ಬಂದಿ ವರ್ಗ ಕೊಡಬೇಕಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ನಡೆಯುತ್ತಿರುವಂಥ ರಸ್ತೆ ಅಪಘಾತಗಳು ಏನಿವೆ? ಇವುಗಳ ನಿಯಂತ್ರಣಕ್ಕೆ ಏನು ಹಣ ಕೊಟ್ಟಿದ್ದಾರೆ ಅದಕ್ಕೆ ಯಾವ ಸಂಬಂಧವೂ ಇಲ್ಲವೆನ್ನುವ ಮಾತನ್ನು ಬಹಳ ದುಃಖದಿಂದ ಹೇಳಬಯಸುತ್ತೇನೆ. ಆದ್ದರಿಂದ, ನಾನು ಮಾನ್ಯ ಗೃಹ ಮಂತ್ರಿಗಳಲ್ಲಿ ಮತ್ತು ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಈ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನ್ನು ಮಲತಾಯಿಧೋರಣೆಯಿಂದ ನೋಡಬೇಡಿ. ಟ್ರಾಫಿಕ್ ಡಿಪಾರ್ಟ್‌ಮೆಂಟಿನವರಿಗೆ ಏನು ಕೊಟ್ಟಿದ್ದಾರಪ್ಪ ಎಂದರೆ ಒಂದು ಬಿಳೀ ಬಟ್ಟೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದು ಜನಕ್ಕೆ ಕಾಣುತ್ತದೆ. ಆತ್ಮ ಪ್ರಾಣ ಉಳಿಸುವ ಕೇಸ್ ಆಗಿರಲಿ, ಅಪಘಾತಗಳಿಂದ ಉಳಿಸುವಂಥ ಕೇಸ್ ಆಗಿರಲಿ ಮಾಡುವುದರಲ್ಲಿ ಅಷ್ಟು ಎಫೆಕ್ಟೀವ್ ಆಗಿ ಇಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

6.15 ಪಿ.ಎಂ.

ಬೆಂಗಳೂರು ನಗರದ ಬಗ್ಗೆ ಹೇಳುವುದಾದರೆ ಬೆಂಗಳೂರು ನಗರದ ಜನಸಂಖ್ಯೆಯು ಅತೀವೇಗವಾಗಿ, ಅತೀ ಅಕ್ರಮವಾಗಿ ಬೆಳೆಯುತ್ತಾ ಇದೆ. ಅದೇ ವೇಗದಲ್ಲಿ ನಮ್ಮಲ್ಲಿ ಟ್ರಾಫಿಕ್ ಕೂಡ ಅಷ್ಟೇ ಅಕ್ರಮವಾಗಿ ಮುಂದುವರಿಯುತ್ತಾ ಇದೆ. ಪೋಲೀಸ್‌ನವರು ಎಷ್ಟೇ ನಿಷ್ಠೆಯಿಂದ ದೃಢಮನ ನಿರ್ಧಾರದಿಂದ ಪ್ರಯತ್ನ ಮಾಡಿದ್ದರೂ ಕೂಡ ಅದು ಕೇವಲ Tip of the ice berg ಆಗಿದೆ. ಈ ರೀತಿಯಲ್ಲಿ ನೂರು ಪ್ರಯತ್ನಗಳನ್ನು ಮಾಡಿದರೂ ಕೂಡ ಅದು ಒಂದು ರೂಪಾಯಿಯಷ್ಟು ಕೂಡ ಅನುಕೂಲವನ್ನು ಮಾಡಿಕೊಡುತ್ತಾ ಇಲ್ಲ. ಅದಕ್ಕೆ ಕಾರಣವೇನೆಂದರೆ, ಇಲಾಖೆಯಲ್ಲಿ ಎಷ್ಟು ಸಿಬ್ಬಂದಿ ಇರಬೇಕೋ ಅಷ್ಟು ಸಿಬ್ಬಂದಿ ಇಲ್ಲ. ಎಲ್ಲೆಲ್ಲಿ ಟ್ರಾಫಿಕ್ ಕಂಟ್ರೋಲ್ ಮಾಡಬೇಕೋ ಅಂಥ ಜಾಗಗಳಲ್ಲಿ ಯಾವ ರೀತಿಯಲ್ಲಿ ಆಧುನಿಕ ಮಾರ್ಗಗಳನ್ನು ಅನುಸರಿಸಬೇಕೋ ಆ ಮಾರ್ಗವನ್ನು ಅನುಸರಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ ಎಂದು ಹೇಳಬೇಕಾಗುತ್ತದೆ. ನಾನು ಒಂದು ಸಾರ್ವಜನಿಕ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುವ ಸಂದರ್ಭ ಒದಗಿತ್ತು. ಅಲ್ಲಿ ಈ ಟ್ರಾಫಿಕ್ ಬಗ್ಗೆ ವಿಚಾರ ಸಂಕೀರ್ಣವು ನಡೆದಿತ್ತು. ಅಲ್ಲಿ ಭಾಷಣಕಾರರು ಕೆಲವರು ಇದ್ದರು. ಅಲ್ಲಿ ಭಾಷಣ ಮಾಡುವ ಕಾಲದಲ್ಲಿ ನೆರೆದಿದ್ದ ನಾಗರೀಕರು ಪ್ರಶ್ನೆ ಮಾಡುವ ಕಾಲದಲ್ಲಿ ನನಗೆ ಒಂದು ವಿಚಾರ ತಿಳಿದು ಬಂತು.

ಬೆಂಗಳೂರಿನಲ್ಲಿ ಈಗ ಏನು ಅಪಘಾತಗಳು ಆಗುತ್ತಾ ಇವೆ, ಇವುಗಳಿಂದ ನಾಗರೀಕರು ಪಾರಾಗಬೇಕಾಗಿದ್ದರೆ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಟ್ರಾಫಿಕ್ ವಲಯಕ್ಕೆ ಎಷ್ಟು ಹಣ ಬೇಕಾಗಿದೆ, ಕೇವಲ ಅಪಘಾತಗಳನ್ನು ನಿಲ್ಲಿಸುವುದಕ್ಕೆ, ಅಪಘಾತಗಳನ್ನು ಕಡಿಮೆಗೊಳಿಸಲು ಎಷ್ಟು ಹಣ ಬೇಕಾಗುತ್ತದೆ, ಅಷ್ಟು ಹಣ ಒದಗಿಸಿಕೊಟ್ಟರೆ ಇದನ್ನು ನಿಲ್ಲಿಸಬಹುದು ಎಂದು ಕೇಳಿದ್ದಾರೆ ಮತ್ತು ಈ ಅಪಘಾತಕ್ಕೆ ಬಲಿಯಾಗಿ ದಿನವೂ ಯಾರ್‍ಯಾರು ಸಾಯುತ್ತಾ ಇದ್ದಾರೆ, ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುತ್ತಿದ್ದಾರೆ, ಬಲಿಯಾಗುತ್ತಿದ್ದಾರೆ, ಇದನ್ನು ತಡೆಗಟ್ಟಲು ಎಷ್ಟು ಹಣಕಾಸು ಬೇಕಾಗಬಹುದು ಎಂದು ಕೇಳಿದಾಗ ಅಲ್ಲಿದ್ದ ಒಬ್ಬ ಅನುಭವಿಗಳು ಕೇವಲ 5 ಕೋಟಿ ರೂಪಾಯಿಗಳು ಕೊಟ್ಟರೆ ನಮ್ಮ ಬೆಂಗಳೂರು ನಗರದಲ್ಲಿ ಈಗ ನಡೆಯುತ್ತಿರುವ ಎಷ್ಟೋ ಅಪಘಾತಗಳನ್ನು ನಿಲ್ಲಿಸಬಹುದು ಎಂದು ಹೇಳಿದರು. ಹಾಗೆ ಹೇಳಿದವರು ಒಬ್ಬ ಜವಾಬ್ದಾರಿಯುತ ಅಧಿಕಾರಿಗಳು. ಈ ಒಂದು ಒಳ್ಳೆಯ ಸಲಹೆಯ ಬಗ್ಗೆ ಮಾನ್ಯ ಗೃಹಸಚಿವರು ಮುಖ್ಯ ಅಧಿಕಾರಿಗಳನ್ನು ಕರೆದು ಸಮಾಲೋಚನೆ ಮಾಡಿ ಇಂಥ ಸಲಹೆಯೊಂದು ಕಾರ್ಯಗತ ಮಾಡಲು ಏನು ಮಾಡಬೇಕು, ಅದರ ಸಾಧಕಬಾಧಕಗಳನ್ನು ನೋಡಿ ಒಂದು ನಿರ್ಧಾರ ಮಾಡಬೇಕು. Five crores is no money at all in our budget, if you can save one life in our Bangalore city. We are losing one life or two lives even everyday in Bangalore City. If we can save the largest number of lives in a year, by spending Rs. five crores or ten crores. I don't think we would have done any better service in Bangalore in any other walk of life. ಇದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಪೋಲೀಸ್ ಇಲಾಖೆಗೆ ಎಷ್ಟು ಹಣವನ್ನು, ಎಷ್ಟು ಸಿಬ್ಬಂದಿಯನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿ ಕೊಡಬೇಕು. ಆ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನವನ್ನು ಮಾಡಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಮಾಡದೇ ಹೋದರೆ ಈ ಒಂದು ಇಲಾಖೆಯು ಇದ್ದೂ ಕೂಡ ಯಾವ ಪ್ರಯೋಜನವೂ ಆಗಲಾರದು. ಹಾಗೆಯೇ ಪೋಲೀಸ್ ಡಿಪಾರ್ಟ್‌ಮೆಂಟ್‌ನವರು, ಟ್ರಾಫಿಕ್ ವಿಭಾಗದವರು ನಗರದಲ್ಲಿರುವ ಎಲ್ಲಾ ಸರ್ಕಲ್‌ಗಳಲ್ಲಿಯೂ ಪೋಲೀಸ್ ನಿಲ್ಲುವ ಪ್ಲಾಟ್‌ಫಾರಂ ಮತ್ತು ನಾಮಫಲಕಗಳನ್ನು ಡಿಪಾರ್ಟ್‌ಮೆಂಟ್‌ನ ವತಿಯಿಂದಲೇ ಖರ್ಚು ಮಾಡಿ ಮಾಡುವುದಕ್ಕೆ ಆಗುವುದಿಲ್ಲವೇ? ಅದಕ್ಕೆ ಖಾಸಗಿಯವರ ನೆರವನ್ನು ಏತಕ್ಕಾಗಿ ಪಡೆಯುತ್ತೀರಿ? Have we reduced our Department to the position of a beggar, an un-compromising beggary? ಹಾಗಿದ್ದರೆ ಈ ಒಂದು ಆಡಳಿತವಾದರೂ ಏತಕ್ಕಾಗಿ ಇರಬೇಕು? ಒಂದು ವೇಳೆ ಸಾರ್ವಜನಿಕರೇ ಈ ಕೆಲಸವನ್ನು ಮಾಡುವುದು ಎಂದಾದರೆ ಅವರ ಕೈಗೇ ಕೊಟ್ಟು ಬಿಡಬಹುದಲ್ಲ? ಏಕೆಂದರೆ ಖಾಸಗೀಕರಣದ ಬಗ್ಗೆ ಹೆಚ್ಚು ಮಾತುಗಳು ಕೇಳಿಬರುತ್ತಾ ಇವೆ. ನಾನು ಅದಕ್ಕೆ ಖಂಡಿತವಾಗಿಯೂ ಮೂಲಭೂತವಾಗಿ ವಿರೋಧವನ್ನು ವ್ಯಕ್ತಪಡಿಸುವವನು. ಈಗ ಸೆಕ್ಯುರಿಟಿ ಕೆಲಸವನ್ನು ಕೆಲವು ಖಾಸಗಿಯವರು ಮಾಡುತ್ತಿದ್ದಾರೆ. ಬೇರೆ ಬೇರೆ ಕಾರ್ಖಾನೆಗಳವರು ಇಂಥ ಸೆಕ್ಯುರಿಟಿ ಸರ್ವೀಸ್‌ನ್ನು ಉಪಯೋಗಿಸುತ್ತಿದ್ದಾರೆ. ಸಾರ್ವಜನಿಕ ಉದ್ಯಮಗಳ ವಲಯದಲ್ಲಿಯೂ ಇಂಥ ಸೇವೆಯನ್ನು ಬಳಸಿಕೊಳ್ಳುತ್ತಿದ್ದಾರೆ. ನಿಮ್ಮ ವಿಚಾರ ಅದಾಗಿದ್ದರೆ ಇದನ್ನೂ ಕೂಡ ಖಾಸಗೀಯವರಿಗೆ ಕೊಟ್ಟು ಬಿಡೋಣವೆ? ಟ್ರಾಫಿಕ್ ಕಂಟ್ರೋಲ್ ಕೂಡ ಖಾಸಗೀಯವರು ಮಾಡಲಿ ಎಂದು ನಿಮ್ಮ ಅಭಿಪ್ರಾಯ ಆಗಿರಬಹುದು? ಲಾ ಅಂಡ್ ಆರ್ಡರ್ ಕೂಡ ಅಂಥವರ ಕೈಗೆ ಕೊಟ್ಟುಬಿಡಿ. ಇದನ್ನು ಖಾಸಗೀ ಜನರ ಕೈಗೆ ಕೊಟ್ಟರೆ ಸಾಧ್ಯವಾಗುತ್ತದೆಯೇ? ಇದು ನ್ಯಾಯ ಸಮ್ಮತವಾದುದೇ ಎಂದು ವಿಚಾರ ಮಾಡಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಹೀಗೆ ಇಲಾಖೆಯವರು ಖಾಸಗೀಯವರ ನೆರವನ್ನು ಇಂಥ ವಿಚಾರದಲ್ಲಿ ಬಳಸಿಕೊಳ್ಳಬಾರದು. ಇದರಿಂದ

ಪ್ರಾಮಾಣಿಕವಾಗಿ ಜನಸೇವೆ ಮೊದಲು, ಜನರ ಸಂರಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ. ಇಲಾಖೆಯು ಜನರ ಸಂರಕ್ಷಣೆ ಮಾಡುವುದರ ಜೊತೆಗೆ ಅವರಿಗೆ ಉತ್ತಮ ಸೇವೆಯನ್ನು ಕೂಡ ಕೊಡಬೇಕಾಗುತ್ತದೆ. ಆ ಬಗ್ಗೆ ಗಮನಕೊಡಬೇಕಾಗುತ್ತದೆ. ಜನರ ಸಮಸ್ಯೆಗಳನ್ನು ಈ ಬಗ್ಗೆ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದು ಸರಕಾರದ ಜವಾಬ್ದಾರಿಯೂ ಆಗಿದೆ. ಆದ್ದರಿಂದ ಈ ದಿಸೆಯಲ್ಲಿ ಸರ್ಕಾರ ಸಾಕಷ್ಟು ಹಣವನ್ನು ಈ ಇಲಾಖೆಗೆ ಕೊಟ್ಟು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ಈ ಕುರಿತು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಪೋಲೀಸ್ ಇಲಾಖೆಗೆ ನಾವು ಪ್ರತಿ ಹಂತದಲ್ಲಿ ಸಹಾಯ ಮಾಡಬೇಕಾಗಿದೆ, ಸಹಕಾರ ಕೊಡಬೇಕಾಗಿದೆ. ಆಮೇಲೆ ಜನತೆಯನ್ನು ಕೇಳಿ, ನಾವು ಇಷ್ಟೆಲ್ಲ ಮಾಡಿದ್ದೇವೆ ನಿಮ್ಮ ಕಡೆಯಿಂದ ಏನೇನು ಮಾಡುವುದಕ್ಕೆ ಸಾಧ್ಯವಾಗ್ತದೆ. ಸೆಮಿನಾರ್ಸ್ ಮಾಡಿ, ಸಿಂಪೋಜಿಯಂ ಮಾಡಿ, ಕಾನ್‌ಫರೆನ್ಸ್ ಮಾಡಿ, ವರ್ಕ್‌ಷಾಪ್ ಮಾಡಿ ಜನತೆ ಕಡೆಯಿಂದ ಯಾವ ತರಹದ ಸಹಾಯಬೇಕಾದರೂ ಪಡೆಯಲಿಕ್ಕೆ ಸಾಧ್ಯ ಆಗುತ್ತದೆ. **Let the Department be on its own feet. Let the Government put the Department on its own feet and then go to the people for co-operation, and not other way around.** ಎನ್ನುವ ಭಾವನೆಯನ್ನು ಈ ಮಾತನ್ನು ಹೇಳ್ತಾಯಿದೇನೆ. ನಾನು ಟ್ರಾಫಿಕ್ ಇಲಾಖೆಯ ಬಗ್ಗೆ ಬಹಳ ಹೇಳಬೇಕಾಗಿತ್ತು. ಆದರೆ ಸಮಯ ಬಹಳ ಕಡಿಮೆ ಇರೋದ್ರಿಂದ ಅದನ್ನು ನಾನು ಹೇಳ್ತಾಯಿಲ್ಲ. ಈಗ ನಮ್ಮಲ್ಲಿ ಪೋಲೀಸ್ ಇಲಾಖೆಯವರನ್ನು ಬೇರೆಯವರು ಯಾವ ತರಹ ಮಾಡ್ತಾ ಇದಾರೆ ಎಂದು ನಾನು ಬಹಳ ನಮ್ರತೆಯಿಂದ, ತೀವ್ರತೆಯಿಂದ ಹೇಳಬಯಸುತ್ತಿದ್ದೇನೆ; ನಮ್ಮ ಇಂಟೆಲಿಜೆನ್ಸ್ ಇಲಾಖೆ ಎಷ್ಟು ಆಧುನಿಕವಾಗಿ ಎಷ್ಟು ಚೆನ್ನಾಗಿ ತನ್ನ ಕರ್ತವ್ಯವನ್ನು ಪರಿಪಾಲನೆ ಮಾಡಬೇಕಾಗಿತ್ತೋ ಅಷ್ಟು ಚೆನ್ನಾಗಿ ಕೆಲಸ ಮಾಡಬೇಕಾಗಿದೆ. ಸಮಾಜಘಾತುಕರು ಸಮಾಜದಲ್ಲಿ ಅಶಾಂತಿ ತರಲು ಕೆಲಸ ಮಾಡುತ್ತಿದ್ದಾರೆ ಅಂತಹ ವಿಷಯಗಳಲ್ಲಿ ಯಾವ ರೀತಿ ಇಂಟೆಲಿಜೆನ್ಸ್ ಕೆಲಸ ಮಾಡಬೇಕು ಜನತೆಯ ಶಾಂತಿಯನ್ನು ಕಾಪಾಡಿಕೊಂಡು ಬರಬೇಕು ಶಾಂತಿ ಪರಿಪಾಲನೆ ಮಾಡಬೇಕು. ಶಾಂತಿಯಿಂದ ಜನತೆ ಜೀವನ ನಡೆಸಬೇಕೆನ್ನುವುದು ಏನಿದೆ ಅವರು ಯಾವ ಮಟ್ಟದಲ್ಲಿ ಇಂಟೆಲಿಜೆನ್ಸ್ ಅಡ್ವಾನ್ಸಾಗಿ ಕೆಲಸ ಮಾಡಬೇಕಾಗಿತ್ತು ಅದನ್ನು ಮಾಡುವುದಕ್ಕೆ ಆಗಿಲ್ಲ ಅಂತ ಹೇಳಿದೆ. ಇಲಾಖೆ ಇಲ್ಲ ಅಂತ ಹೇಳಲಿಲ್ಲ. ಇಂಟೆಲಿಜೆನ್ಸ್ ಇಲಾಖೆ ಎಷ್ಟು ತೀವ್ರವಾಗಿ ಕೆಲಸ ಮಾಡುತ್ತದೆ ಅಷ್ಟು ನಮ್ಮ ಸಮಾಜದಲ್ಲಿ ಶಾಂತಿ ವಾತಾವರಣ ಉಳಿಯಲಿಕ್ಕೆ ಸಾಧ್ಯವಾಗುತ್ತದೆ. ಅದು ಆಗ್ತಾ ಇಲ್ಲ ಎನ್ನುವ ಭಾವನೆ. ಹಾಗೆಯೇ ಪ್ರತಿ ಹಂತದಲ್ಲೂ ರಿಲಿಜಿಯಸ್ ಮತ್ತು ಕಮ್ಯುನಲ್ ಫಂಡಮೆಂಟಲಿಸಂ ತಲೆ ಎತ್ತುತ್ತಾ ಇವೆ. ಇದನ್ನು ತಡೆಗಟ್ಟಬೇಕು. ಲಿಂಗ್ವಿಸ್ಟಿಕ್ ಚೈನಿಸಂ ಬೆಳೀತಿದೆ. ಅದನ್ನು ತಡೆಗಟ್ಟಬೇಕು, ಸಂಪೂರ್ಣ ಶಾಂತಿ ವಾತಾವರಣ ಬೆಳೆದುಕೊಂಡು ಬರಬೇಕು ಅದರಿಂದ ನಾವು ಆರ್ಥಿಕ ಸಾಮಾಜಿಕ ಬೆಳವಣಿಗೆ ಅನುಕೂಲ ಮಾಡಿಕೊಡಬೇಕೆನ್ನುವಾಗ, ಇವು ಆಗಿಂದಾಗ್ಗೆ ತಲೆದೋರುತ್ತಿದ್ದರೆ ಜನತೆಗೆ ಶಾಂತಿಭಂಗವಾಗುತ್ತಿದೆ ಅಂದಾಗ ಏತಕ್ಕೆ ಈ ಇಂಟೆಲಿಜೆನ್ಸ್ ಇಲಾಖೆ, ಅಡ್ವಾನ್ಸಾಗಿ ತಿಳಿವಳಿಕೆ ಕೊಟ್ಟು ಉಳಿದ ಇಲಾಖೆಗಳ ಮೂಲಕ ಕ್ರಮ ಜರುಗಿಸುವುದಕ್ಕೆ ಸಾಧ್ಯವಾಗಿಲ್ಲ ಅನ್ನೋ ಮಾತು ಹೇಳಬಯಸುತ್ತಿದ್ದೇನೆ. ನಮ್ಮ ಗಮನವೆಲ್ಲ ಎಲ್ಲಿದೆ? ನಕ್ಸಲೈಟ್ಸ್ ಎಲ್ಲಿಂದ ಬರ್ತಾ ಇದ್ದಾರೆ. ಪೀಪಲ್‌ವಾರ್ ಗ್ರೂಪ್ ಡಿಸ್ಟ್ರಿಕ್ಟ್ ಕೊನೆಗಳಿಂದ ಬರ್ತಾ ಇದಾರೆ, ವೀರಪ್ಪನ್ ಸ್ಯಾಂಡಲ್ ಜಾಲ ಬರ್ತಾ ಇದೆ, ಎಲ್‌ಟಿಟಿಇ ಬಗ್ಗೆ ಕೇಳ್ತಾ ಇದೀವಿ, ಹೀಗೆ ನ್ಯೂಸ್ ಐಟೆಂನಲ್ಲಿ ಓದೋದೇನಪ್ಪ ಅಂದರೆ, ಇದೇನೆ. ಇಡೀ ಪೋಲೀಸ್ ಇಲಾಖೆ ಅತ್ತಕಡೆಗೆ ಗಮನ ಕೊಡ್ತಾ ಇದೆಯಾ? ಸಾರ್ವಜನಿಕರಿಗೆ ಗಮನ ಕೊಡುವ ಕಡೆ ಏನಾದರೂ ಇದೆಯಾ ಎಂದು ಹೇಳಿ ಜನತೆಯ ಶಂಕೆ ಬರುವ ರೀತಿ ಆಗ್ತಾ ಇದೆ. ಜನತೆಗೆ ಏನು ಶಂಕೆ ಬರ್ತಾಯಿದೆ. ಇಲ್ಲಿ ನಾವು

ಅಡ್ವಾನ್ಸಾಗಿ ಕೆಲಸ ಮಾಡಬೇಕಾಗಿದೆ, ಮಾಡ್ತಾಯಿಲ್ಲ. ಸಮರ್ಥ ರೀತಿಯಿಂದ ಕೆಲಸ ಮಾಡಬೇಕಾಗಿದೆ. ಅದು ಆಗುತ್ತಾ ಇಲ್ಲ ಎಂಬ ಶಂಕೆ ಏನಿದೆ ಅದನ್ನು ತೆಗೆಯುವ ದಿಸೆಯಲ್ಲಿ ಇಲಾಖೆಯವರು ಮಾಡಬೇಕೆಂದು ಹೇಳ್ತಾಯಿದ್ದೇವೆ, ಒಂದು ಸಣ್ಣ ಸಲಹೆ. ಸ್ಯಾಂಡಲ್‌ವುಡ್ ಮತ್ತು ಐವರಿ ಸ್ಮಗಲಿಂಗ್ ಅಂತ ಹೇಳ್ತಾ ಇದ್ದೇವೆ. ಆ ಕಳ್ಳರು ಯಾರು ಎಷ್ಟು ಜನ ಅಂತ ರಿಪೋರ್ಟ್‌ನಲ್ಲಿದೆ. ಅಂದರೆ ಎಷ್ಟು ಕೋಟಿ ಉಳಿತಾಯವಾಗಿದೆ ಎಂದು ಕೂಡ ಹೇಳಿದ್ದಾರೆ. ನಾನು ಒಂದು ಹೇಳ್ತೀನಿ ವೀರಪ್ಪನ್ ವಿಷಯದಲ್ಲಿ ಬೆಂಗಳೂರಿನಲ್ಲಿ ಅವನಿಗೆ ಸಾಕಷ್ಟು ಸ್ನೇಹಿತರು ಇದಾರೆಂತ ಪತ್ರಿಕೆಗಳಲ್ಲಿ ಓದಿದೀವಿ ಅವರಿಗೆ ಬೆಂಬಲಿಗರು ಇದಾರೆಂತ ನಾವು ಕೇಳಿದೇವೆ. ಅವರಿಗೆ ಯಾವ್ಯಾವ ಹಂತದಲ್ಲಿ ಬೆಂಬಲ ಇದೆ ಎಂದು ಕೇಳ್ತಾಯಿದೇವೆ. ಅಂದರೆ ವೀರಪ್ಪನ್ ಆಗಿರಲಿ ಅವನ ತಂಡವನ್ನಾಗಲಿ ಪರಿಪೂರ್ಣವಾಗಿ ಹಿಡಿದು ಅವರ ಅಕ್ರಮವನ್ನು ನಿರ್ನಾಮ ಮಾಡುವಲ್ಲಿ ನಾವು ಏಕೆ ವಿಫಲರಾಗಿದ್ದೇವೆಂಬುದನ್ನು ನಾವು ಯೋಚನೆ ಮಾಡಿದರೆ ಅವರು ಸ್ಮಗಲ್ ಮಾಡಿದ ಶ್ರೀಗಂಧ ಅಥವಾ ದಂತವಾಗಿರಲಿ ಎಲ್ಲಿ ಹೋಗುತ್ತದೆ ಅದು? ಎಲ್ಲಿ ಹೋದರೂ ಬಜಾರಿಗೆ ಬರಬೇಕು ಅದು. ವ್ಯಾಪಾರಸ್ಥರ ಕೈಯಲ್ಲಿಯೇ ಇರಬೇಕು. ಕಾರ್ಖಾನೆ ಕೈಯಲ್ಲಿಯೇ ಇರಬೇಕು ಹ್ಯಾಂಡಿಕ್ರಾಫ್ಟ್ ಮಾಡುವವರ ಕೈಯಲ್ಲೇ ಇರಬೇಕು. ಎಲ್ಲೆಲ್ಲಿ ಯಾರ್ಯಾರಿಗೆ ಯಾವ ಕಡೆಯಿಂದ ರಾಮೆಟೀರಿಯಲ್ ಬಂತು ಎನ್ನುವುದನ್ನು ಅವರನ್ನು ನಾವು ಹೋಗಿ ತಿಳಿದುಕೊಂಡೆವು ಎಂದು ಹೇಳಿದರೆ ಅದೇ ಒಂದು ಲಿಂಕನ್ನು ನಾವು ಬೆಳೆಸಿಕೊಂಡು ಹೋದರೆ ನಮಗೆ ವೀರಪ್ಪನ್‌ನ ಕಾರ್ಯ ಚಟುವಟಿಕೆಗಳು ಸುಲಭವಾಗಿ ಗೊತ್ತಾಗುತ್ತವೆ. ಅವನ ತಂಡವು ಕೂಡ ನಮಗೆ ಗೊತ್ತಾಗುತ್ತದೆ. ಅವನನ್ನು ಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ನೀವು ಮಾಡಬೇಕು. ಬೆಂಗಳೂರು ನಗರದಲ್ಲಿ ಸಾಕಷ್ಟು ಜನರು ಸ್ಯಾಂಡಲ್‌ವುಡ್ ಸ್ಮಗ್ಲರ್ ಹೋರ್ಡರ್ಸ್, ಇದ್ದಾರೆ ಎಂದು ನಾವು ತಿಳಿದುಕೊಂಡು ಬರುತ್ತಿದ್ದೇವೆ. ಹಾಗೆಯೇ ~~ಇದನ್ನು~~ ಮಾಡುತ್ತಿದ್ದೇವೆ. ಆದ್ದುದರಿಂದ ನಾವು ಬೇಸಿಕ್ ಆಗಿ even if it means a reverse order ಆ ಕೆಲಸವನ್ನು ಮಾಡಬೇಕು ಎಂದು ಹೇಳಿ. ನಾನು ಬಹಳವಾಗಿ ಕೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಎಷ್ಟು ಹ್ಯಾಂಡಿಕ್ರಾಫ್ಟ್ ಅಂಗಡಿಗಳು ಇವೆ, ಮಳಿಗೆಗಳು ಇವೆ, ಗೋಡೌನ್ಸ್‌ಗಳು ಇವೆ, ಅವರನ್ನು ಹೋಗಿ ತಾವು ತನಿಖೆ ಮಾಡಿದ್ದೇ ಆದರೆ ಅವರಿಗೆ ಎಲ್ಲಿಂದ ಮೆಟೀರಿಯಲ್ ಸಪ್ಲೈ ಆಗುತ್ತದೆ, ಅವರ ಕಂಟ್ಯಾಕ್ಟ್ಸ್ ಎಲ್ಲೆಲ್ಲಿ ಇದೆ ಎಂದು ಹೇಳಿ ಮೊದಲು ಮಾಡಿದರೆ ಆ ತಂಡವೆಲ್ಲಾ ಕೈಗೆ ಸಿಗುತ್ತದೆ ಎನ್ನತಕ್ಕಂಥ ಅಭಿಪ್ರಾಯ ನನ್ನದಾಗಿದೆ. ಹಾಗೆಯೇ ನಮ್ಮ ನಗರದಲ್ಲಿ ಎಲ್ಲಾ ಕಡೆಯೂ ಇದೆ. ಈಗತಾನೆ ನಮ್ಮ ಸ್ನೇಹಿತರು ಮಾತನಾಡುವಾಗ ಈ ಸಾರಾಯಿ ಅಂಗಡಿಗಳ ವಿಷಯ, ಲಿಕ್ಕರ್ ಷಾಪ್ಸ್, ಲಿಕ್ಕರ್ ಡೆನ್ಸ್ ವಿಷಯವನ್ನು ಹೇಳುತ್ತಿದ್ದರು. ಈ ಅನ್-ಸೋಷಿಯಲ್ ಆಕ್ಟಿವಿಟೀಸ್, ಈ ವಿಡಿಯೋ ಪಾರ್ಲರ್ ಮತ್ತು ಬಾರ್‌ಗಳು, ಈ ಸಾರಾಯಿ ಅಂಗಡಿಗಳು ಅದಕ್ಕೆ ಸಂಬಂಧಪಟ್ಟಂತೆ ಜನರು ಎಲ್ಲಿ ಎಲ್ಲಿ ಇದ್ದಾರೆ, ಮತ್ತು ಗ್ಯಾಂಬ್ಲಿಂಗ್ ಡೆನ್ ಎಲ್ಲಾ ತರಹದವರು ಎಲ್ಲೆಲ್ಲಿ ಇದ್ದಾರೆ ಎಂದು ಎಲ್ಲರಿಗೂ ಕೂಡ ಗೊತ್ತಿದೆ. ಆ ಡಿವಿಜನ್‌ನಲ್ಲಿ ಎಲ್ಲೆಲ್ಲಿ ಏನೇನು ಇದೆ, ಅದು ಜನರಿಗೂ ಗೊತ್ತಿದೆ. ಅಲ್ಲಿರತಕ್ಕಂಥ ಪೋಲೀಸ್ ಸ್ಟೇಷನ್‌ಗೆ ಸಂಬಂಧಪಟ್ಟ ಸಿಬ್ಬಂದಿಗೂ ಕೂಡ ಅದು ಗೊತ್ತಿದೆ. ಇವೆಲ್ಲಾ ಅಕ್ರಮವಾಗಿ ನಡೆಯುತ್ತಿವೆ ಎಂದು ಗೊತ್ತಿದೆ. ಇಷ್ಟು ಅಕ್ರಮವಾಗಿ ನಡೆಯುತ್ತಿವೆ ಎಂದ ಮೇಲೆ ನಮ್ಮ ಡಿಪಾರ್ಟ್‌ಮೆಂಟ್‌ನವರು ಅವರನ್ನು ಹಿಡಿದು ಬಲಿ ಹಾಕುವಷ್ಟು ಕೆಲಸವಾಗಿಲ್ಲ. ಇವರನ್ನು ಮಾಡಬೇಕೆ ಎಂದು ಸರ್ಕಾರದಿಂದ ಯಾರಾದರೂ ಹೇಳಿದ್ದಾರೆಯೇ? ಮಾಡಬೇಡ ಎನ್ನುವುದಕ್ಕೆ ಅದಕ್ಕೆ ಒಂದು ಸಿಬ್ಬಂದಿ ಸರ್ಕಾರಕ್ಕೆ ಬೇಕಾಗಿದೆಯೇ? ಇದು ಒಂದು ಮೂಲ ಪ್ರಶ್ನೆಯನ್ನು ಜನರು ನಮಗೆ ಕೇಳುತ್ತಾರೆ. ನಾವು ಏನು ಹೇಳಬೇಕು? ಈ ವಿಡಿಯೋ ಪಾರ್ಲರ್‌ಗಳನ್ನು ನೀವು ಸ್ಟಾಪ್ ಮಾಡಿ ಎಂದು ಹೇಳಿದರೆ ಅದಕ್ಕೆ ಲೈಸೆನ್ಸ್‌ನ್ನು ಕೊಡಬೇಡಿ ಎಂದು ಹೇಳಿದರೆ ಲೈಸೆನ್ಸ್‌ನ್ನು ಕೊಡುವುದಕ್ಕೆ ಮೊದಲು ಅವನು

ಸ್ಟಾರ್ಟ್ ಮಾಡಿಬಿಡುತ್ತಾನೆ. ಆ ರೀತಿ ಸ್ಟಾರ್ಟ್ ಮಾಡಿದ ಮೇಲೆ ಅವನ ಮೇಲೆ ಸ್ಟೇ ಕೊಡುವ ಹಾಗೆ ಇಲ್ಲ. ಲೈಸೆನ್ಸ್‌ನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವ ಹಾಗೆ ಇಲ್ಲ. ಜನರೇ ಮೇಲೆ ಬಿದ್ದು ಇದನ್ನು ತಡೆಹಿಡಿಯುವಂಥ ಸಂದರ್ಭ ಬಂದು ನಾನು ಎರಡು ಕಡೆ ಅದನ್ನು ಮಾಡಿಸಿದ್ದೇನೆ. ಅದು ನಿಂತು ಹೋಗಿದೆ. ಮುಂದೆ ಬರುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಇಲಾಖೆಯವರಾದರೂ ಮಾಡಬೇಕು. ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೆ ಜನರ ಕೈಯಲ್ಲಿ ಬಿಟ್ಟುಬಿಡು. ನಾವು ನಿಲ್ಲಿಸುತ್ತೇವೆ, ಖಂಡಿತವಾಗಿಯೂ ನಾವು ಅದನ್ನು ನಿಲ್ಲಿಸುತ್ತೇವೆ. ನಮ್ಮ ಕೈಯಲ್ಲಿ ಆಗುತ್ತದೆ. ಎಲ್ಲೆಲ್ಲಿ ಗ್ಯಾಂಬ್ಲಿಂಗ್ ಡೈನ್ಸ್‌ನ್ನು ನಿಲ್ಲಿಸಬೇಕು, ಎಲ್ಲಿ ವಿಡಿಯೋ ಪಾರ್ಲರ್‌ಗಳನ್ನು ನಿಲ್ಲಿಸಬೇಕು? ಎಲ್ಲಿ ಮಾಡಬಾರದ ಕೆಲಸವನ್ನು ಎಲ್ಲಿ ಜನರ ವಿರುದ್ಧವಾಗಿ ಮಾಡುತ್ತಿದ್ದಾರೆ, ಅದು ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಇಲಾಖೆಯವರು ಹೇಳಿದರೆ ನಮ್ಮ ಜನರು ಶಕ್ತಿಶೀಲರಾಗಿದ್ದಾರೆ. ಅವರು ಮಾಡುತ್ತಾರೆ. ಇಲ್ಲದಿದ್ದರೆ ಈ ಇಲಾಖೆಯಿಂದ ದಯವಿಟ್ಟು ಅದನ್ನು ಮಾಡಿ. ಎಷ್ಟು ಸಲ, ನಾವು ಒಂದೊಂದು ಸಲಕ್ಕೂ ಏನು ಕೇಳುತ್ತೇವೆ, ದೇವಸ್ಥಾನದ ಪಕ್ಕದಲ್ಲಿ ಸಾರಾಯಿ ಅಂಗಡಿಗಳು ಇದೆ, ದೇವಸ್ಥಾನದ ಪಕ್ಕದಲ್ಲಿ ವೈನ್‌ಷಾಪ್ಸ್‌ಗಳು ಇವೆ. ಶಾಲೆ ಪಕ್ಕದಲ್ಲಿ ಇದೆ. ಇದನ್ನೇ ಕೇಳುತ್ತಿದ್ದೇವೆ, ವರ್ಷೇ ವರ್ಷೇ, ವರ್ಷಂಪೂರ. ಇದನ್ನು ನಾವು ಪ್ರತಿಯೊಂದು ಸಾರಿಯೂ ಕೇಳಿಕೊಂಡು ಹೋಗಬೇಕೇ? Is there nothing like a duty of the Government and the Government creating a department to take suo moto action in these matters? Should it become unpopular amongst the people more for allowing these unsocial institutions to come up and professions to come up and then become the target of these unsocial characters in the society? ಇದನ್ನು ತಾವು ದಯವಿಟ್ಟು ಯೋಚನೆ ಮಾಡಿ ನೋಡಿ. ನಾವು ಎಲ್ಲೆಲ್ಲಿ ಹೋಗೋಣ, ಎಲ್ಲಿ ಸಿಕ್ಕಿಕೊಂಡು ಯವ ತರಹದ ಒದೆಯನ್ನು ತಿನ್ನೋಣ? ದಯವಿಟ್ಟು ಈ ವಿಷಯಗಳ ಕಡೆಗೆ ತೀವ್ರ ಗಮನವನ್ನು ಕೊಡಬೇಕು. ಮತ್ತು ಯಾವ ಎಕ್ಸೈಜ್ ಡಿಪಾರ್ಟ್‌ಮೆಂಟ್ ಆಗಿರಲಿ, ಪೋಲೀಸ್ ಡಿಪಾರ್ಟ್‌ಮೆಂಟ್ ಆಗಿರಲಿ, ಅವರವರ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿದ್ದೇ ಆದರೆ ನಿಸ್ಪೃಹತೆಯಿಂದ, ನಿರ್ಧಾಕ್ಷಿಣ್ಯದಿಂದ, ನಿರ್ಭೀತಿಯಿಂದ, ನಿಸ್ವಾರ್ಥತೆಯಿಂದ ಮಾಡಿದ್ದೇ ಆದರೆ ಯಾವುದೇ ರಾಜಕಾರಣವಾಗಲಿ, ರಾಜಕಾರಣಿಯ ಒಂದು ಒತ್ತಡಕ್ಕೆ ಆಗಿರಲಿ, ಯಾವ ಬಂಡವಾಳ ಶಾಹಿಯ ಒಂದು ಒತ್ತಡಕ್ಕೇ ಆಗಿರಲಿ, ಅದನ್ನು ಬಲಿ ಹಾಕದೇ ಹೋದರೆ ನಮ್ಮ ಸಮಾಜ ಶಾಂತಿಯುತವಾದ ಜೀವನವನ್ನು ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂದು ನಾನಾದರೂ ಕೇಳುತ್ತಿದ್ದೇನೆ. ಬಹಳ ಮುಖವಾದ ವಿಷಯಕ್ಕೆ ನಾನು ಬಂದು ಇಷ್ಟರಲ್ಲೇ ನನ್ನ ಮಾತನ್ನು ಮುಗಿಸುತ್ತೇನೆ. ಫೈರ್‌ಫೋರ್ಸ್ ಡಿಪಾರ್ಟ್‌ಮೆಂಟ್ ಇದೆ, ನಮ್ಮಲ್ಲಿ ಸ್ಕೈಸ್ಕ್ರೈಸ್ ಕಟ್ಟಡಗಳಿಗೆ ಲೈಸೆನ್ಸ್‌ಗಳನ್ನು ಕೊಡುವಾಗ, ಕೊಡಬಾರದಂತಹ ರೀತಿಯಲ್ಲಿ ಲೈಸೆನ್ಸ್ ಅನ್ನು ಕೊಡುತ್ತಿರುವಾಗ ಅದರ ನಿಯಂತ್ರಣ ಯಾರ ಕೈಯಲ್ಲಿದೆ? ಕಾರ್ಪೋರೇಷನ್ ಕೈಯಲ್ಲಿದೆ. ಡಿಪಾರ್ಟ್‌ಮೆಂಟ್ ಆಫ್ ಟೌನ್ ಪ್ಲಾನಿಂಗ್ ಕೈಯಲ್ಲಿದೆ. ಪೋಲೀಸ್ ಇಲಾಖೆಯ ಕೈಯಲ್ಲಿದೆ. ಫೈರ್ ಸರ್ವೀಸ್ ಅವರದು ಇದೆ. ಇಷ್ಟು ಡಿಪಾರ್ಟ್‌ಮೆಂಟ್ ಇದ್ದು ಕೂಡ ಎಂತಹ ಬಿಲ್ಡಿಂಗ್ ಎಲ್ಲಿ ಬರಬಾರದೋ ಅಲ್ಲಿಯೇ ಬರುತ್ತಿವೆ. ಎಲ್ಲಿ ಟ್ರಾಫಿಕ್ ಜಾಸ್ತಿಯಾಗುತ್ತದೆಯೋ ಅಲ್ಲಿಯೇ ಬರುತ್ತಿದೆ. ಯಾವ ಬಿಲ್ಡಿಂಗ್ ಅನ್ನು ಸರಿಯಾಗಿ ಸೈಂಟಿಫಿಕ್ ಪ್ರಕಾರ ಕಟ್ಟಬೇಕೋ, ಆ ಪ್ರಕಾರ ಕಟ್ಟದೆ ಅದು ಕೊಲ್ಯಾಪ್ಸ್ ಆಗುತ್ತಿದೆ. ಇವೆಲ್ಲ ಈ ರೀತಿಯಾಗುತ್ತಿರುವುದಕ್ಕೆ ಯಾರ ಜವಾಬ್ದಾರಿ ಹೆಚ್ಚಾಗಿದೆ ಬಿಲ್ಡಿಂಗ್ ಬಿದ್ದ ಮೇಲೆ ಫೈರ್‌ಸರ್ವೀಸಸ್‌ನವರು ಬರುತ್ತಾರೆ. ಪೋಲೀಸಿನವರು ಬರುತ್ತಾರೆ. ತನಿಖೆಯನ್ನು ಮಾಡುತ್ತಾರೆ. ಹಾಗೂ ಬೇರೆ ಬೇರೆ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟವರು ಬರುತ್ತಾರೆ. ನಮ್ಮ

ಇಲಾಖೆಯವರ ಕೆಲಸ ಪೋಸ್ಟ್‌ಮಾರ್ಟಮ್ ಮಾಡುವುದೇ ಇಲ್ಲಿ ಪ್ರಿವೆನ್‌ಷನ್‌ಗೆ ಅವಕಾಶ ಇದೆ. ಸೆಕ್ಷನ್‌ನ್ನು ತೆಗೆದುಕೊಳ್ಳೋಣವೆ? ಇದನ್ನು ಯಾವ ರೀತಿ ತಹಬಂದಿಗೆ ತರಬೇಕು, ಕೋಆರ್ಡಿನೇಷನ್ ಇರಬೇಕು ಇದರ ಬಗ್ಗೆ ತೀವ್ರವಾಗಿ ನಾವು ಆಲೋಚನೆ ಮಾಡಿ ಅದನ್ನು ಎನ್‌ಫೋರ್ಸ್ ಮಾಡುವ ಪ್ರಯತ್ನವನ್ನು ಮಾಡೋಣ. ನಮ್ಮಲ್ಲಿರುವ ಮತ್ತೊಂದು ಏನೆಂದರೆ ಪ್ರತಿಯೊಂದೂ ಕೂಡ ಫಾಲ್ ಸಿಲಿಂಗ್ಸ್ ಏರ್‌ಕಂಡೀಷನ್‌ಗೋಸ್ಕರ, ರೂಫ್ ಲೆವೆಲ್ ಬಹಳ ಕಮ್ಮಿ, ಮತ್ತು ಫರ್ನಿಚರ್ ಫಿಟಿಂಗ್ಸ್ ಕೂಡ ಯಾವ ರೀತಿ ಇದೆ ಅಂದರೆ ಮನುಷ್ಯ ಓಡಾಡುವುದಕ್ಕಾಗುವುದಿಲ್ಲ. ಎಲ್ಲಾದರೂ ಫೈರ್ ಆಕ್ಸಿಡೆಂಟ್ ಆಯಿತು ಅಂದರೆ ಆ ಇಡೀ ಬಿಲ್ಡಿಂಗ್ ಅದರಿಂದ ಕಂಪ್ಲೀಟ್ ಆಗಿ ಸುಟ್ಟುಹೋಗುತ್ತದೆ. ಅಲ್ಲಿ ಕೆಲಸ ಮಾಡುತ್ತಿರುವ ಜನರ ಗತಿ ಏನು? ನೆರೆಹೊರೆಯವರ ಜನರ ಗತಿ ಏನು? ಅವರ ಆಸ್ತಿಪಾಸ್ತಿಗಳ ಗತಿ ಏನು? ಈ ಬಿಲ್ಡಿಂಗ್ಸ್‌ನಲ್ಲಿ ಈ ರೀತಿಯ ಆಧುನಿಕವಾದ ಬೆಳವಣಿಗೆ ಬರುತ್ತಿದ್ದರೆ, ಅದಕ್ಕೆ ನಾವು ತಪ್ಪುಕಲ್ಪನೆಗಳಿಂದ, ಬೆಳೆಯುವುದಕ್ಕೆ ಅವಕಾಶವನ್ನು ಮಾಡಿ ಅವರಿಗೆ ನಾವು ಲೈಸೆನ್ಸ್ ಅನ್ನು ಕೊಡುವುದಕ್ಕೆ ಶುರುಮಾಡುತ್ತಿದ್ದರೆ, ನಾವು ಯಾವ ರೀತಿಯಾಗಿ ನಿಯಂತ್ರಣವನ್ನು ಇಟ್ಟುಕೊಂಡು ಈ ಸಮಾಜವನ್ನು ಕಾಪಾಡುವುದಕ್ಕೆ, ರಕ್ಷಣೆಯನ್ನು ಕೊಡುವುದಕ್ಕೆ, ಸಾಧ್ಯವಾಗುತ್ತದೆ. ಆ ಕೆಲಸದಲ್ಲಿ ನಾವು ಮಗ್ನರಾಗಿದ್ದೇವೆಯೇ ಎನ್ನುವುದನ್ನು ನಾವು ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಆದ್ದರಿಂದ 4-6 ಡಿಪಾರ್ಟ್‌ಮೆಂಟ್‌ಗಳಿಂದ ಕೋ ಆರ್ಡಿನೇಷನ್ ಯಾವ ರೀತಿಯಾಗಿ ಸೈಂಟಿಫಿಕ್ ಆಗಿ ಬರಬೇಕೋ, ಬಹಳ ನಿಸ್ಪೃಹತೆಯಿಂದ ಬರಬೇಕೋ ನಿಷ್ಠಾವಂತವಾಗಿ ಬರಬೇಕೋ ಯಾವ ಬಲತ್ಕಾರಕ್ಕೂ ಬಲಿಯಾಗತಕ್ಕ ರೀತಿಯಲ್ಲಿ ಯಾವ ದಾಕ್ಷಿಣ್ಯಕ್ಕೂ ಬಲಿಯಾಗದ ರೀತಿಯಲ್ಲಿ ಆ ಕೆಲಸವನ್ನು ಮಾಡಿದಾಗ ಮಾತ್ರ ನಮ್ಮ ನಗರದಲ್ಲಿ ಸರಿಯಾದ ಕಟ್ಟಡಗಳು ಬರುತ್ತವೆ. ಇದರಿಂದ ಜನಕ್ಕೆ ಸೌಖ್ಯವಾಗಿ ಬಾಳುವುದಕ್ಕೂ ಅನುಕೂಲವಾಗುತ್ತದೆ. ನಮ್ಮ ಲಕ್ಷಾಂತರ ಜನರು ಏನು ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ ಅದನ್ನು ತಪ್ಪಿಸಬೇಕಾದರೆ ಈ ಕೆಲಸವನ್ನು ಮಾಡಬೇಕು. ಹೌಸಿಂಗ್ ಪ್ರೋಗ್ರಾಂ ಪೋಲೀಸ್ ಡಿಪಾರ್ಟ್‌ಮೆಂಟ್ ಹೇಗಿದೆ ಅಂದರೆ ಎಷ್ಟು ದಿವಸ ಅವನು ಸರ್ವೀಸ್‌ನಲ್ಲಿರುತ್ತಾನೆ. ಅಷ್ಟು ದಿನ ಅವನಿಗೆ ಮನೆಯನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅವನ ನಿವೃತ್ತಿ ಆದಮೇಲೆ ಅವನ ಗತಿ ಏನು? ಅದರಲ್ಲಿಯೂ ರಿಸರ್ವ್ ಪೋಲೀಸ್ ನಲ್ಲಿರುವವನು ಮತ್ತು ಫೈರ್ ಸ್ಟೇಷನ್‌ನಲ್ಲಿರುವವನು, ಹೋಂಗಾರ್ಡ್ಸ್‌ನಲ್ಲಿರುವವನ ಗತಿ ಏನು? ಉಳಿದವರಿಗೆ ಸಂಬಳ ಸಿಕ್ಕುತ್ತದೆ, ಗಿಂಬಳವೂ ಸಿಕ್ಕುತ್ತದೆ, ಆದರೆ ಈತನ 'ಗತಿ ಏನು? ಇವರಿಗೆ ಏನು ಸಿಗುತ್ತದೆ? ಯಾವ ರೀತಿ ಸೈಟ್ ಮಾಡಿಕೊಳ್ಳುತ್ತಾನೆ. ಹೇಗೆ ಮನೆಯನ್ನು ಮಾಡಿಕೊಳ್ಳುತ್ತಾನೆ? ಇಂತಹ ಜನರಿಗೆ ಹೆಚ್ಚಿನ ಗಮನವನ್ನು ಕೊಟ್ಟು ಅವರಿಗೆ ಹೌಸಿಂಗ್ ಸ್ಕೀಮ್‌ನಲ್ಲೋ ಯಾವುದೋ ಒಂದು ಬೇಸಿಸ್ ಮೇಲೆ ಮನೆಯನ್ನು ಮಾಡಿಕೊಡುವುದು ಸೂಕ್ತ. ಪೋಲೀಸ್ ಕ್ವಾಟ್ರರ್ಸ್ ಮೆಂಟೆನೆನ್ಸ್‌ಗೆ ಹಣ ಎಷ್ಟು ಕೊಟ್ಟಿದ್ದೀರಿ ಅಂದರೆ ಎಲ್ಲಿ ನೂರು ರೂಪಾಯಿ ಬೇಕಾಗಿದೆ ಮಾನ್ಯ ಗೃಹ ಮಂತ್ರಿಗಳು ಗಮನಿಸಬೇಕು, ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಇದನ್ನು ಗಮನಿಸಬೇಕು. ಗಮನಿಸಿ ಮುಖ್ಯಮಂತ್ರಿಗಳಿಗೆ ತಾವು ತಿಳಿಸಬೇಕು, ನಮ್ಮ ಡಿಪಾರ್ಟ್‌ಮೆಂಟಿನ ಕೆಲಸಗಾರರಿಂದ 18 ಗಂಟೆಯಿಂದ 20 ಗಂಟೆಯವರೆಗೆ ನಾವು ಕೆಲಸವನ್ನು ಮಾಡಿಸಿಕೊಳ್ಳುತ್ತೇವೆ, ಅವರು ಮನೆಯ ಕಡೆ ಹೋಗಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರ ಹೆಂಡತಿ ಮಕ್ಕಳು ಹಳೆಯ ಮನೆಗಳಲ್ಲಿ, ಬಾಗಿಲು ಇಲ್ಲದ ಮನೆಗಳಲ್ಲಿ ನೋಡಿ ಹೋಗುವ ಮನೆಗಳಲ್ಲಿ, ಅಲ್ಲಿನ ವಾತಾವರಣವನ್ನು ನೋಡಿದ್ದ ಆದರೆ ತಾವು ಕೂಡ ಕಣ್ಣಲ್ಲಿ ನೀರನ್ನು ಹಾಕುತ್ತೀರಿ? ನಮ್ಮ ಶಿವಾಜಿನಗರ ಕ್ಷೇತ್ರದಲ್ಲಿ ಪೋಲೀಸ್ ಕ್ವಾರ್ಟಸ್ ಇದೆ. ರಿಪೇರಿಗೆ ದುಡ್ಡಿಲ್ಲ ಮೆಂಟೇನೆನ್ಸ್‌ಗೆ ದುಡ್ಡಿಲ್ಲ ವೈಟ್‌ವಾಶ್‌ಗೆ ದುಡ್ಡಿಲ್ಲ. ಮೇಲುಗಡೆಯ ತಾರಿಸಿ ಸೋರುತ್ತಿದೆ. ಆ ಮನೆಯಲ್ಲಿ ಏತಕ್ಕೆ ಇರಬೇಕು? ಅವರು ಯಾರಿಗೂ ಕೊಡಲೇ ಬೇಡಿ. ಅವರು ಫುಟ್‌ಬಾತ್‌ನಲ್ಲಿ

ಮಲಗಿಕೊಳ್ಳುತ್ತಾರೆ. ಇನ್ನೆಲ್ಲಿಲ್ಲೋ ಹೋಗುತ್ತಾರೆ. ಜಾಗಕೊಟ್ಟು ಅವರನ್ನು ಗೌರವಯುತವಾದ ಬೇಸಿಕ್ ರಿಕ್ವೈರ್‌ಮೆಂಟಿಗೆ ನೀವು ಅವಕಾಶವನ್ನು ಮಾಡಿಕೊಡಲಿಲ್ಲ ಅಂದರೆ ಮಾರನೆಯ ದಿವಸ ಅಲ್ಲಿ ಬಂದು ಕೆಲಸ ಮಾಡು ಅಂದರೆ ಪೋಲೀಸ್‌ನವರು ಯಾವ ರೀತಿ ಮಾಡುತ್ತಾರೆ. ಆದ್ದರಿಂದ ಸರ್ಕಾರದ ಕಟ್ಟಡವನ್ನೇ ಮೆಂಟೇನ್ ಮಾಡಿಕೊಳ್ಳುವುದಕ್ಕೆ ರಿಪೇರಿ ಮಾಡಿಕೊಳ್ಳುವುದಕ್ಕೆ ಸೂಕ್ತವಾದ ಅನುಕೂಲವನ್ನು ಮಾಡಿಕೊಡದೇ ಹೋದರೆ ನಮ್ಮ ಜನರನ್ನು ನಾವೇ ಕೈಬಿಟ್ಟಂತೆ ಆಗುತ್ತದೆ ಎಂದು ಹೇಳಬಯಸುತ್ತಿದ್ದೇನೆ. ಇಷ್ಟನ್ನು ಹೇಳಿ ನಾನು ಒಂದು ಅಪೀಲ್ ಮಾಡಿಕೊಳ್ಳುತ್ತೇನೆ. ರಾಷ್ಟ್ರಕ್ಕೆ ಮೂಲಭೂತವಾದ್ದಂಥ ಒಂದು ಸಿದ್ಧಾಂತದ ಆಧಾರದ ಮೇಲೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಸರ್ವ ಹಂತಗಳಲ್ಲೂ ನಾವು ಪ್ರಗತಿಯನ್ನು ಸಾಧಿಸಬೇಕೆಂದು ಯಾವ ರೀತಿ ನಾವು ಅಂದುಕೊಂಡಿದ್ದೇವೆಯೋ, ಆ ವಿಷಯದಲ್ಲಿ ಯಾವ ಒಂದು ಡೆಮಾಕ್ರಸಿ, ಸೆಕ್ಯುಲರಿಸಂ, ಸೋಶಿಯಲಿಸಂ ಮತ್ತೊಂದು ಎಂದು ಹೇಳುತ್ತಾ ಬರುತ್ತಿದ್ದೇವೆ. ಆ ಕ್ಯಾಸ್ಟ್ ಫ್ರೀ ಸೊಸೈಟಿಗೆ ನಾವು ಆ ದಿಸೆಯಲ್ಲಿ ಪೋಲೀಸರಿಗೆ ಸಾಕಷ್ಟು ತರಬೇತಿಯನ್ನು ಕೊಡುತ್ತಿದ್ದೇವೆಯೇ? ಇದನ್ನು ಕೈಬಿಟ್ಟಾಗ ಸಮಾಜದಲ್ಲಿ ಅಶಾಂತಿ ಯಾವ ರೀತಿ ಆಗುತ್ತದೆ? ಶೋಷಣೆ ಯಾವ ರೀತಿ ಆಗುತ್ತದೆ? ಆ ಸಂದರ್ಭದಲ್ಲಿ ಪೋಲೀಸ್ ಇಲಾಖೆಯವರು ಯಾವ ರೀತಿ ಜನತೆಗೆ ಸೇವೆ ಮಾಡುವುದಕ್ಕೆ ಮುಂದೆ ಬರಬೇಕು ಎನ್ನುವ ಒಂದು ದಿಸೆಯಲ್ಲಿ ಅವರಿಗೆ ಒಂದು ತಿಳುವಳಿಕೆ ಕೊಡುತ್ತಿದ್ದೀರಾ? ಅಲ್ಲದೆ, ಕಾರ್ಮಿಕ ಮತ್ತು ಮಾಲೀಕನ ಮಧ್ಯೆ ಯಾವ ರೀತಿಯ ಸಂಪರ್ಕವಿರಬೇಕು? ಯಾವ ರೀತಿಯ ಹೊಂದಾಣಿಕೆ ಇರಬೇಕು? ಈ ಸಮಾಜದಲ್ಲಿ ಕಾರ್ಮಿಕರ ಜವಾಬ್ದಾರಿ ಏನು? ಮಾಲೀಕನ ಜವಾಬ್ದಾರಿ ಏನು? ಮಾಲೀಕನ ಸೌಜನ್ಯ, ದಾಕ್ಷಿಣ್ಯದಿಂದ ಕಾರ್ಮಿಕ ಬದುಕಬೇಕು ಎನ್ನುವ ಒಂದು ಆಧಾರದ ಮೇಲೆ ನಾವು ಕಾರ್ಮಿಕರ ಜೊತೆ ಹೋಗಬೇಕೆ? ಅಥವಾ ಪಕ್ಕಕ್ಕೆ ಹೋಗಬೇಕೆ? ಇಲ್ಲವೆ ಮಾಲೀಕರ ಪರವಾಗಿ ಹೋಗಬೇಕೆ? ಎನ್ನುವ ವಿಚಾರದ ಬಗ್ಗೆ ಪೋಲೀಸರಿಗೆ ನಾವು ಸಾಕಷ್ಟು ತಿಳುವಳಿಕೆಯನ್ನು ಕೊಟ್ಟಿದ್ದೇ ಆದರೆ ಮಾಲೀಕ ಮತ್ತು ಕಾರ್ಮಿಕರ ಮಧ್ಯೆ ಏನು ಘರ್ಷಣೆಯಾಗುತ್ತಿದೆಯೋ ಅದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ಏಕೆಂದರೆ, ನಮ್ಮ ಸಮಾಜದಲ್ಲಿ ಮಾಲೀಕ, ಪೋಲೀಸ್ ಇಲಾಖೆಯವರ ಸಹಾಯ ಕೇಳಿದ ತಕ್ಷಣ ಕಾರ್ಮಿಕರ ವಿರುದ್ಧವಾಗಿ ಮಾಲೀಕನ ಪರ ಹೊರಟುಹೋಗುವುದು ಮೊದಲನೆಯ ಕೆಲಸ. ಮೊದಲನೆಯ ಹೆಜ್ಜೆ ಅಂದರೆ ಅದೇ. ಅದಕ್ಕಾಗಿ ಕಾರ್ಮಿಕರ ವಿರುದ್ಧ ಮಾಲೀಕನಿಗೆ ಅನಾವಶ್ಯಕವಾಗಿ, ಅಕ್ರಮವಾಗಿ, ಅಧರ್ಮವಾಗಿ ಸಹಾಯ ಮಾಡುವುದಕ್ಕೆ ಪೋಲೀಸ್ ಸಿಬ್ಬಂದಿ ಬೇಕೆ? ಇದರ ಬಗ್ಗೆ ನಾವು ಯೋಚಿಸಬೇಕಾಗಿದೆ. ಇಷ್ಟನ್ನು ಹೇಳುತ್ತಾ ಅಂತಮವಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಕೆಲವೇ ದಿನಗಳಲ್ಲಿ ನನಗೆ ಒಂದು ಬಂತು. ಪೋಲೀಸ್ ಇಲಾಖೆಯವರೆಂದರೆ ಕೇವಲ ಖಾಕಿ ಬಟ್ಟೆ ಹಾಕಿಕೊಂಡವರು, ಲಾಠಿ ಮತ್ತು ರೈಫಲ್ಸ್ ಬಿಲ್ಡ್ ಮಾಡುವವರು, ಅವರಿಗೂ ಜನರಿಗೂ ಯಾವ ರೀತಿಯಾದಂಥ ಸಾಂಸ್ಕೃತಿಕವಾದಂಥ ಸಂಬಂಧವಿಲ್ಲ ಎನ್ನುವಂಥ ಭಾವನೆ ಇತ್ತು. ಆದರೆ, ನನಗೆ ಕೆಲವು ದಿನಗಳ ಹಿಂದೆ ಗೋಚರವಾಯಿತು. ಪೋಲೀಸರಲ್ಲೂ ಸಂಸ್ಕೃತಿ ಇದೆ, ಸಾಹಿತ್ಯ ಇದೆ, ಸಾಕಷ್ಟು ಕಲೆ ಇದೆ, ಕ್ರೀಡೆಗಳಿವೆ, ಸಾಕಷ್ಟು ಶಕ್ತಿ ಇದ್ದು, ಪ್ರಭಾವಶಾಲಿಗಳಿದ್ದಾರೆ. ಅಂದರೆ, ಸಾರ್ವಜನಿಕ ಜೀವನದಲ್ಲಿ ಸಾರ್ವಜನಿಕರು ಯಾವ ರೀತಿ ತಮ್ಮದೇ ಆದಂಥ ಒಂದು ಜೀವನವನ್ನು ನಡೆಸುವುದರಲ್ಲಿ ಎಂತಹ ಒಂದು ಸಮಗ್ರವಾದಂಥ ಸಂಸ್ಕೃತಿಯನ್ನು ಒಳಗೊಂಡಂಥ ದಿಸೆ ಏನಿದೆ, ಅವೆಲ್ಲವೂ ಅವರಲ್ಲಿದೆ. ಅಂತಹ ಪ್ರದರ್ಶನ ಮಾಡುವ ಶಕ್ತಿ ಇದೆ, ಜನತೆಯ ಮೇಲೆ ಪ್ರಭಾವವನ್ನು ಬೀರುವಂಥ ಶಕ್ತಿ ಇದೆ. ಜನರ ಮತ್ತು ಪೋಲೀಸರ ಮಧ್ಯೆ ಒಳ್ಳೆಯ ಸ್ನೇಹಭಾವನೆ, ಸಹಾನುಭೂತಿಯಾದಂಥ ಸೌಹಾರ್ದ ಸಂಪರ್ಕ ಬೆಳೆಸುವುದಕ್ಕೆ ಅವರ ಕಲೆ, ಸಾಹಿತ್ಯ, ಕ್ರೀಡೆಗಳು ಕೆಲಸಕ್ಕೆ ಬರುತ್ತದೆ ಎನ್ನುವುದನ್ನು ನಾನು ಕೆಲವೇ ದಿನಗಳಲ್ಲಿ ಅರ್ಥಮಾಡಿಕೊಂಡೆ. ಅಂದ

ಮೇಲೆ, ಇದರ ಒಂದು ಬೆಳವಣಿಗೆ ಈ ಸಿಬ್ಬಂದಿಗಳಲ್ಲಿ ಬೆಳೆಯಬೇಕಾಗಿದ್ದರೆ, ಇಲಾಖೆಯಿಂದ ಅವರಿಗೆ ಯಾವುದೇ ರೀತಿಯ ಸಹಾಯ ಇದ್ದಂತೆ ನನಗೆ ಕಾಣಿಸುವುದಿಲ್ಲ. ಎಷ್ಟು ಕ್ರೀಡಾಪಟುಗಳನ್ನು ತಯಾರು ಮಾಡಬಹುದು? ಎಷ್ಟು ಕಲಾವಿದರನ್ನು ತಯಾರು ಮಾಡುವುದಕ್ಕಾಗುತ್ತದೆ? ಎಷ್ಟು ಜನ ಸಾಹಿತಿಗಳನ್ನು ತಯಾರು ಮಾಡುವುದಕ್ಕಾಗುತ್ತದೆ? ಈ ಸಮಾಜದ ಉದ್ಧಾರಕ್ಕಾಗಿ, ಬೆಳವಣಿಗೆಗಾಗಿ ಪ್ರತಿಯೊಂದು ಹಂತದಲ್ಲೂ ಪ್ರಗತಿ ಸಾಧಿಸುವುದಕ್ಕೆ ಅವರ ಕೈಯಿಂದ ಸಾಧ್ಯವಾಗುತ್ತದೆ. ಆ ಕ್ಷೇತ್ರದಲ್ಲಿ ಸಾಧ್ಯತೆ ಇದೆ ಎಂಬುದನ್ನು ತಿಳಿದೂಕೂಡ ಅವರಿಗೆ ಸಾಕಷ್ಟು ಸಹಾಯ ಮಾಡದೆ ಹೋದರೆ ನಾವೇ ನಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡದೆ ತಪ್ಪಿತಸ್ಥರಾಗುತ್ತೇವೆ ಎನ್ನುವ ಭಾವನೆ ನಮಗಾಗುತ್ತದೆ. ಆದುದರಿಂದ, ಗೃಹ ಮಂತ್ರಿಗಳು ಈ ಒಂದು ಹಂತದಲ್ಲಿ ಕೂಡ ಪೋಲೀಸ್ ಇಲಾಖೆಯವರಿಗೆ ಸಾಕಷ್ಟು ಉತ್ತೇಜನ ಕೊಡುವಂಥ ರೀತಿಯಲ್ಲಿ ಸಹಾಯ ಮಾಡಿದರೆ ಕೇವಲ ಆ ಒಂದು ಕ್ಷೇತ್ರದ ಬದಲಾವಣೆ ಮಾತ್ರವಲ್ಲ, ಆ ಒಂದು ಬೆಳವಣಿಗೆಯಿಂದ ಇಡೀ ಸಮಾಜವೂ ಬೆಳವಣಿಗೆಯಾಗುವಂಥ ರೀತಿಯಲ್ಲಿ ಸಹಾಯಕವಾಗುತ್ತದೆಂದು ಹೇಳುತ್ತೇನೆ. ಇನ್ನು ಫೈರ್ ಸರ್ವಿಸ್ ಡಿಪಾರ್ಟ್‌ಮೆಂಟ್ ಸಾಕಷ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರೆ, ನಮ್ಮ ಜನಸಂಖ್ಯೆ, ಬೆಳೆಯುತ್ತಿರುವಂಥ ವ್ಯಾಪಾರ-ವ್ಯವಹಾರ, ಕೈಗಾರಿಕೆಗಳು ಇವುಗಳೆಲ್ಲವನ್ನೂ ನೋಡುತ್ತಾ ಹೋದರೆ, ಈ ಇಲಾಖೆಗೆ ತಾವು ಏನು ಹಣವನ್ನು ಒದಗಿಸಿದ್ದೀರಿ, ಸಿಬ್ಬಂದಿ ಇಟ್ಟಿದ್ದೀರಿ, ಅದು ಸಾಲದಾಗಿದೆ. ಅದಕ್ಕೂ ಹೆಚ್ಚು ಹಣ ಮತ್ತು ಸಿಬ್ಬಂದಿ ಕೊಡುವಂಥ ಒಂದು ಪ್ರಯತ್ನ ಮಾಡಬೇಕೆಂದು, ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವು (ನಂಜನಗೂಡು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಪೋಲೀಸ್ ಇಲಾಖೆಯ ಬೇಡಿಕೆಗೆ ನನ್ನ ಒಪ್ಪಿಗೆಯನ್ನು, ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಈ ಇಲಾಖೆಯು ರಾಜ್ಯದ ಎಲ್ಲಾ ಇಲಾಖೆಗಳಿಗಿಂತ ಬಹಳ ಪ್ರಾಮುಖ್ಯವಾದಂಥ ಇಲಾಖೆಯಾಗಿದೆ. ಕಾರಣ ರಾಜ್ಯದ ಜನತೆ, ನಾಗರೀಕರು ಸುರಕ್ಷಿತವಾಗಿ ಇರಬೇಕಾದರೆ, ಆಸ್ತಿಪಾಸ್ತಿಗಳು ರಕ್ಷಣೆಯಿಂದಿರಬೇಕಾದರೆ ಮತ್ತು Antisocial elements, ಕಂಟ್ರೋಲ್ ಮಾಡಬೇಕಾಗಿದ್ದರೆ ಕಾನೂನನ್ನು ಪಾಲನೆ ಮಾಡಬೇಕಾದರೆ ಈ ಇಲಾಖೆ ಅತ್ಯಂತ ಅವಶ್ಯಕವಾಗಿರಬೇಕಾಗಿದೆ. ಈ ಇಲಾಖೆ ಇರುವಾಗ ಜನತೆ ನಾಗರೀಕತೆಯಿಂದ ಕೂಡಿರಬೇಕು. ಹಿಂದಿನ ನಮ್ಮ ನೂರಾರು ವರ್ಷದ ಇತಿಹಾಸವನ್ನು ತೆಗೆದುಕೊಂಡು ನೋಡಿದರೆ, ಅಲ್ಲಿ ಅಂದಿನ ಆಡಳಿತಕ್ಕೆ ತಕ್ಕಹಾಗೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಿದ್ದರು. ಆದರೆ ನಾವು ಈಗ 20ನೇ ಶತಮಾನದಲ್ಲಿ ಈ ಜನಸಂಖ್ಯೆಗೆ ಅನುಗುಣವಾಗಿ ಈ ಇಲಾಖೆಯನ್ನು ಸುಸಜ್ಜಿತಗೊಳಿಸಿ ಒಳ್ಳೆಯ ಆಡಳಿತವನ್ನು ನಾವು ಮಾಡಬೇಕಾದಂಥ ಒಂದು ಕಾಲವಿದೆ. ಈ ಇಲಾಖೆಯಿಂದ ದಕ್ಷವಾದ ಆಡಳಿತವನ್ನು ಕೊಡಬೇಕಾದರೆ ಅದರ ಬೇಡಿಕೆಗೆ ಅನುಗುಣವಾಗಿ ನಾವು ವ್ಯವಸ್ಥೆಯನ್ನು ಮಾಡಬೇಕು. ಈ ಪ್ರಜಾಪ್ರಭುತ್ವದಲ್ಲಿ ಪೋಲೀಸ್ ಇಲಾಖೆಯಲ್ಲಿ ಸಾರ್ವಭೌಮತ್ವದಲ್ಲಿ ಏನು ನಿಯಮಗಳಿವೆ. ಕಾನೂನುಗಳೇನು ಇದೆ ಅದರಲ್ಲಿ ಕೆಲವು ತಿದ್ದುಪಡಿಯನ್ನು ಮಾಡಬೇಕು. ಬಹುಶಃ ಸ್ವಾತಂತ್ರ್ಯ ಪೂರ್ವದಲ್ಲಿದ್ದ ನಿಯಮಗಳನ್ನೇ ಇಂದೂ ಕೂಡ ನಾವು ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದು ಇಂದಿಗೆ 47 ವರ್ಷಗಳಾಯಿತು? ಈ ಪ್ರಜಾಪ್ರಭುತ್ವದ ಆಳ್ವಿಕೆಗೆ ತಕ್ಕಂತೆ ನಾವು ಹಿಂದೆ ಇದ್ದ ಕೆಲವು ನಿಯಮಗಳನ್ನು, ಪದ್ಧತಿಗಳನ್ನು ಮಾರ್ಪಾಡು ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ಆಳ್ವಿಕೆಗೆ ಅನುಸಾರವಾಗಿ ಕೆಲವೊಂದು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಏಕೆಂದರೆ ಪ್ರಜೆಗಳಿಗೂ ಸರ್ಕಾರಕ್ಕೂ ಸಂಬಂಧವಿದೆ. ಪ್ರಜೆಗಳು ಆಲಿ ಕೆಯನ್ನು ಮಾಡುತ್ತಿದ್ದಾರೆ. ಅವರ, ನಾಗರೀಕರ

ಹಕ್ಕುಗಳನ್ನು ಸುರಕ್ಷಿತವಾಗಿ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ನಾವು ಅದನ್ನು ರಕ್ಷಣೆ ಮಾಡಿ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕಾಗಿದೆ. ಈ ದಿಶೆಯಲ್ಲಿ ನಾಗರೀಕರಿಗೂ ಪೋಲೀಸ್ ಇಲಾಖೆಯವರಿಗೂ ಸುಮಧುರ ಸಂಪರ್ಕವನ್ನು ರೂಪಿಸಬೇಕಾದ ಅವಶ್ಯಕತೆ ಇದೆ. ಮತ್ತು ಅಷ್ಟೇ ದಕ್ಷತೆಯಿಂದ ಆಡಳಿತವನ್ನು ಮಾಡಬೇಕಾದರೆ ಅವರಿಗೆ ನಾವು ಕೆಲವು ಅನುಕೂಲಗಳನ್ನೂ ಸಹ ಮಾಡಿಕೊಡಬೇಕಾಗಿದೆ.

ಪೋಲೀಸ್ ಇಲಾಖೆಯ ಆಡಳಿತದ ಅನುಕೂಲಕ್ಕಾಗಿ ನಾವು ಅನೇಕ ವಿಭಾಗಗಳನ್ನು ಮಾಡಿದ್ದೇವೆ. ಸಬ್-ಇನ್ಸ್‌ಪೆಕ್ಟರ್‌ನಿಂದ ಹಿಡಿದು ಸರ್ಕಲ್ ಇನ್‌ಪೆಕ್ಟರ್ ವರೆಗೆ, ಡಿ.ಎಸ್.ಪಿ. ಯಿಂದ ಎಸ್.ಪಿ. ಯಿಂದ ಮತ್ತು ಡಿ.ಐ.ಜಿ. ಯಿಂದ ಡಿ.ಜಿ.ಪಿ. ಯವರೆಗೂ ಕೂಡ ಅನೇಕ ಸುಧಾರಣೆಗಳನ್ನು ಮಾಡಿದ್ದೇವೆ. ಉನ್ನತ ಮಟ್ಟದಲ್ಲಿ 3-4 ಜನ ಅಥವಾ 5 ಜನರು ಈ ರಾಜ್ಯದ ಆಡಳಿತವನ್ನು, ಕಾನೂನಿನ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕ ಸಂದರ್ಭದಲ್ಲಿ ಸುಮಾರು 10-15 ಜನರಿಗೆ ಈ ಒಂದು ಆಡಳಿತದ ವ್ಯವಸ್ಥೆಯನ್ನು ನಾಡಿಕೊಳ್ಳುವ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ನಾವು ಮೇಲ್ಮಟ್ಟದಲ್ಲಿ ಸುಧಾರಣೆಯನ್ನು ಕಾಣುತ್ತಿರಬಹುದು. ಆದರೆ, ಕೆಳಮಟ್ಟದಲ್ಲಿ ನಾವು ಇನ್ನೂ ಕೂಡ ಸುಧಾರಣೆಯನ್ನು ಮಾಡಬೇಕಾಗಿದೆ.

6.45. ಪಿ.ಎಂ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಸಮಸ್ಯೆಗಳಿವೆ. ಪಟ್ಟಣ ಪ್ರದೇಶಗಳಲ್ಲಿ ನಾಗರೀಕ ರಕ್ಷಣೆ, ಆಸ್ತಿಪಾಸ್ತಿ ರಕ್ಷಣೆ ಮತ್ತು ಗೂಂಡಾಗಿರಿ ಇವೆಲ್ಲಾ ನಡೆಯುವುದರ ಜೊತೆಯಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಒಂದು ನೆಮ್ಮದಿ ಶಾಂತಿಯ ಜೀವನ ಸ್ಥಾಪನೆ ಮಾಡಿಕೊಳ್ಳುವುದಕ್ಕೆ ಪೋಲೀಸ್‌ನವರ ಸಹಕಾರ ಅತ್ಯಾವಶ್ಯಕ. ಮೇಲ್‌ಮಟ್ಟದಲ್ಲಿ ಎಸ್.ಪಿ., ಡಿ.ಐ.ಜಿ., ಐ.ಜಿ.ಪಿ. ಇವರ ಮಟ್ಟದಲ್ಲಿ ಉತ್ತಮವಾದ ಆಡಳಿತ ದಕ್ಷತೆಯನ್ನು ನಿರೀಕ್ಷೆ ಮಾಡಬಹುದು. ಆದರೆ ಕೆಳ ಮಟ್ಟದಲ್ಲಿ ಜನರಿಗೆ ಕಿರುಕಿಳ ಕೊಡುತ್ತಿರುವುದನ್ನು ನಾವು ಹಲವಾರು ಕಡೆ ನೋಡುತ್ತಿದ್ದೇವೆ. ಅನೇಕ ದೂರುಗಳು ಬರುತ್ತಿವೆ. ಆದಕ್ಕೆ ಸಕಾಲದಲ್ಲಿ ಜನರಿಗೆ ಏನು ಸಮಸ್ಯೆ ಬಂದಿದೆ, ರಕ್ಷಣೆಯ ಅಗತ್ಯ ಇದೆಯೋ ಅಂತಹ ಸಂದರ್ಭದಲ್ಲಿ ಪೋಲೀಸರು ಕೆಳ ಮಟ್ಟದಲ್ಲಿ ಆ್ಯಕ್ಷನ್ ತೆಗೆದುಕೊಳ್ಳದೇ ಇರುವುದು ಮೊದಲನೇ ಕೊರತೆ, ಇದರಿಂದ ಎಷ್ಟೋ ಜನ ನಿರಪರಾಧಿಗಳು ಸ್ಟೇಷನ್‌ಗೆ ಬರುತ್ತಾರೆ. ಸ್ಟೇಷನ್‌ಗೆ ಬಂದ ಕೂಡಲೇ ಅವರಿಗೆ ನ್ಯಾಯ ದೊರಕುತ್ತದೆ ಎಂಬ ನಿರೀಕ್ಷೆಯಿಂದ ಅವನಿಗೆ ತಕ್ಷಣ ರಕ್ಷಣೆ ಕೊಟ್ಟು ಅವನಿಗೆ ನ್ಯಾಯ ದೊರಕಿಸಿಕೊಟ್ಟರೆ ಬಹುಶಃ ಅವನಿಗೆ ಅದಕ್ಕಿಂತ ಮಿಗಿಲಾದಂತಹ ಸಂತೋಷ ಮತ್ತೊಂದು ಇರುವುದಿಲ್ಲ. ರಕ್ಷಣೆ ದೊರೆಯಿತು, ಪೋಲೀಸರು ನನ್ನ ಮುಂದೆ ಬಂದು ಸಹಾಯ ಮಾಡಿದರು ಎಂಬ ಒಂದು ಭಾವನೆ ಜನಸಾಮಾನ್ಯರಿಗೆ ಬರುತ್ತದೆ. ಆದರೆ ಕೆಳ ಹಂತದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ನ್ಯಾಯ ದೊರಕಲಿಲ್ಲ, ಅನಾವಶ್ಯಕವಾಗಿ ನಮ್ಮನ್ನು ತಿರುಗಿಸುತ್ತಿದ್ದಾರೆ ಮತ್ತು ಭ್ರಷ್ಟಾಚಾರದ ಒಂದು ಆಕರ್ಷಣೆಗೆ ಮಾರು ಹೋಗಿ ನಮಗೆ ನ್ಯಾಯ ದೊರಕಲಿಲ್ಲ ಅಥವಾ ಒಂದು ಪ್ರಭಾವಕ್ಕೆ ಒಳಗಾಗಿ ಜನರಿಗೆ ಅನುಕೂಲವಾಗಲಿಲ್ಲ, ನಮಗೆ ರಕ್ಷಣೆ ಸಿಗಲಿಲ್ಲ ಆ ರೀತಿ ವರ್ತನೆಯಾಗಿದೆ ಎಂಬ ಭಾವನೆ ಜನಸಾಮಾನ್ಯರಿಗೆ ಬಂದರೆ ಪೋಲೀಸ್ ಇಲಾಖೆಯ ಮೇಲಧಿಕಾರಿಗಳಿಗೆ ಕೆಟ್ಟ ಹೆಸರು ಬರುತ್ತದೆ. ಉತ್ತನ ಅಧಿಕಾರಿಗಳಿಗೆ ಈ ವಿಚಾರ ಗೊತ್ತಿದೆಯೋ ಇಲ್ಲವೋ ಅದು ಬೇರೆ ವಿಚಾರ. ಆದರೆ ಕೆಳ ಹಂತದಲ್ಲಿ ಜನ ಸಂಪರ್ಕ ಇರತಕ್ಕಂತಹ ಸ್ಟೇಷನ್‌ಗಳಲ್ಲಿ ಜನಸಾಮಾನ್ಯರು ಬಹುಶಃ ಹಣವಂತರಾಗಲೀ ಅಥವಾ ರಾಜಕೀಯ ಪ್ರಭಾವಶಾಲಿಗಳಾಗಲೀ ಯಾರಿಗಾದರೂ ಅನಾನುಕೂಲವಾಯಿತೆಂದರೆ ಉನ್ನತ ಮಟ್ಟದ ಅಧಿಕಾರಿಗಳನ್ನು ಬಂದು ನೋಡಬಹುದು. ಏಕೆಂದರೆ ಅನೇಕ ಸೌಲಭ್ಯಗಳು ಇರುತ್ತವೆ, ಬೇರೆ ಬೇರೆ ವ್ಯವಸ್ಥೆ ಇರುತ್ತದೆ, ದೂರನ್ನು ಉನ್ನತ ಅಧಿಕಾರಿಗಳಿಗೆ ಕೊಟ್ಟು ಅವರ ಗಮನವನ್ನು ಸೆಳೆದು ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಸಿಕೊಳ್ಳುವಂಥ ಶಕ್ತಿ ಅವರಿಗೆ ಇರುತ್ತದೆ. ಆದರೆ ಬಡ

ಬೋರೇಗೌಡ ಹಳ್ಳಿಯಿಂದ ತಾಲ್ಲೂಕಿನ ಹೆಡ್ ಕ್ವಾರ್ಟರ್ಸ್‌ಗೆ ಬಂದು ತನ್ನ ಕಷ್ಟವನ್ನು ಸ್ಟೇಷನ್‌ನಲ್ಲಿ ಹೇಳಿ ಅಲ್ಲಿ ನ್ಯಾಯ ದೊರಕಿಸಿಕೊಂಡು ರಕ್ಷಣೆಯನ್ನು ಪಡೆಯುವಂಥ ವೇಳೆಯಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಸರಿಯಾದಂತಹ ರಕ್ಷಣೆ ಸಿಗಲಿಲ್ಲವೆಂದು ಹೇಳಿದಾಗ ಅವರ ಮೇಲೆ ಜನ ಸಾಮಾನ್ಯರಿಗೆ ಬಹಳ ಪರಿಣಾಮವಾಗುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಒತ್ತಾಯಪೂರ್ವಕವಾಗಿ ಒಂದು ಸಲಹೆಯನ್ನು ಕೊಡುತ್ತೇನೆ. ಕೆಳ ಹಂತದ ಪೋಲೀಸ್ ಸ್ಟೇಷನ್ ಯಾವ್ಯಾವು ಇದ್ದಾವೋ ಉಪ ಪೋಲೀಸ್ ಠಾಣೆ ಆಗಬಹುದು ಅಥವಾ ಬೇರೆ ಸ್ಟೇಷನ್ ಆಗಬಹುದು ಅಲ್ಲಿ ಪೋಲೀಸ್ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಬೇಕು ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಜನಸಾಮಾನ್ಯರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ನ್ಯಾಯಕ್ಕಾಗಿ ಬಂದಂತಹವರು ರಕ್ಷಣೆಯನ್ನು ಕೋರಿದಾಗ ಅವರಿಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಕಟ್ಟುನಿಟ್ಟಾದ ಆಜ್ಞೆಯನ್ನು ಕೊಡಬೇಕೆಂದು ಹೇಳಿ ಅಂತವರಿಗೆ ಒಂದು ಶಿಕ್ಷಣ ಕೊಟ್ಟು ತರಬೇತಿ ಕೊಟ್ಟು ಉತ್ತಮ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ನ್ನು ಅಲ್ಲಿ ಹಾಕಬೇಕೆಂದು ಒಂದು ಸಲಹೆಯನ್ನು ಕೊಡುತ್ತೇನೆ. ಇದರ ಜೊತೆಗೆ ನಮ್ಮ ಅನೇಕ ಮಾನ್ಯ ಮಿತ್ರರು ಏನು ಹೇಳಿದ್ದಾರೆಂದರೆ, ಜನಸಂಖ್ಯೆಗನುಗುಣವಾಗಿ ನಮ್ಮಲ್ಲಿ ಪೋಲೀಸ್ ಸ್ಟೇಷನ್‌ಗಳು ಇಲ್ಲ, ಸಾಕಷ್ಟು ಪೋಲೀಸ್ ಸಿಬ್ಬಂದಿ ಇಲ್ಲ. ಅವರೆಲ್ಲರಿಗೂ ಹೇಳಿದಂಥ ವಿಚಾರ ಸರಿಯಾಗಿದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ನಂಜನಗೂಡು ಟೌನ್‌ನಲ್ಲಿ ಸುಮಾರು 50 ಸಾವಿರ ಪ್ರಜಾಸಂಖ್ಯೆ ಇದೆ. ನಂಜನಗೂಡು ಟೌನ್ ಸೇರಿದಂತೆ ನನ್ನ ಕ್ಷೇತ್ರದಲ್ಲಿ ಸುಮಾರು 50 ಸಾವಿರ ಪ್ರಜಾಸಂಖ್ಯೆ ಇದೆ. ನಂಜನಗೂಡು ಟೌನ್ ಸೇರಿದಂತೆ ನನ್ನ ಕ್ಷೇತ್ರದಲ್ಲಿ ಸುಮಾರು ಒಂದೂಕಾಲು ಲಕ್ಷ ಪ್ರಜಾಸಂಖ್ಯೆ ಇದೆ. ನನ್ನ ಪಕ್ಕದ ಕ್ಷೇತ್ರದಲ್ಲಿ ಸುಮಾರು 2 ಲಕ್ಷ ಪ್ರಜಾಸಂಖ್ಯೆ ಇದೆ. ಅಂದರೆ ನಂಜನಗೂಡು ತಾಲ್ಲೂಕಿನಲ್ಲಿ ಒಟ್ಟು 3 ಮತ ಕ್ಷೇತ್ರಗಳಿವೆ. ನಾನು ಹೇಳುವುದರಲ್ಲಿ ತಮಗೆ ಸ್ವಲ್ಪಮಟ್ಟಿಗೆ ಆಶ್ಚರ್ಯವಾಗಬಹುದು. 3 ಕ್ಷೇತ್ರಗಳ ಸಂಪರ್ಕ ಇರತಕ್ಕ ನಂಜನಗೂಡು ಟೌನ್‌ನಲ್ಲಿ ಪೋಲೀಸ್ ಫೋರ್ಸ್ ಎಷ್ಟಿದೆ ಎಂದರೆ, ನನಗೆ ತಿಳಿದಮಟ್ಟಿಗೆ 19 ಅಥವಾ 20 ಇರಬಹುದು. ಗ್ರಾಮಾಂತರ ಪೋಲೀಸ್ ಸ್ಟೇಷನ್‌ನಲ್ಲಿ 19 ಅಥವಾ 20 ಜನ ಪೋಲೀಸ್ ಇರಬಹುದು. ಸುಮಾರು 2-3 ಲಕ್ಷ ಪ್ರಜಾಸಂಖ್ಯೆ ಇರತಕ್ಕ ಈ ಸ್ಥಳದಲ್ಲಿ ಏನಾದರೂ ಘರ್ಷಣೆ ನಡೆದಾಗ ಅದನ್ನು ನಿಯಂತ್ರಣ ಮಾಡಲು ಸುಮಾರು 30-40 ಜನ ಪೋಲೀಸರು, ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳು, ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೆ? ಇದರ ಬಗ್ಗೆ ಚಿಂತನೆ ಮಾಡಬೇಕು. ಇತ್ತೀಚೆಗೆ ತಮಿಳರು ಮತ್ತು ಕನ್ನಡಿಗರ ನಡುವೆ ಘರ್ಷಣೆ ಆದಾಗ ನಂಜನಗೂಡಿನಲ್ಲಿ ಸಾಕಷ್ಟು ಪೋಲೀಸ್ ಫೋರ್ಸ್ ಇದ್ದಿದ್ದರೆ ಅಷ್ಟೊಂದು ಅನಾಹುತವಾಗುತ್ತಿರಲಿಲ್ಲ. ಏಕಕಾಲದಲ್ಲಿ ಅಷ್ಟು ಧಾಳಿ ನಡೆದಾಗ ನಮ್ಮಲ್ಲಿ ಪೋಲಿಸ್ ಸಿಬ್ಬಂದಿ ಹೆಚ್ಚಿಗೆ ಇದ್ದಿದ್ದರೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿತ್ತು. ಆದುದರಿಂದ ಜನಸಂಖ್ಯೆಗನುಗುಣವಾಗಿ ನಮ್ಮಲ್ಲಿ ಪೋಲೀಸ್ ವ್ಯವಸ್ಥೆ ಇಲ್ಲದಿದ್ದರೆ ಈ ಇಲಾಖೆಯಿಂದ ನಮಗೆ ಏನು ಪ್ರಯೋಜನ ಎನ್ನತಕ್ಕದ್ದನ್ನು ನಾವು ವಿಚಾರ ಮಾಡಬೇಕಾಗುತ್ತದೆ ಮತ್ತು ದಕ್ಷತೆಯ ಬಗ್ಗೆ ಹೇಳುವುದಾದರೆ, ಸರಿಯಾದ ವ್ಯವಸ್ಥೆಯೇ ಇಲ್ಲದಿರುವಾಗ ನಾವು ದಕ್ಷತೆಯನ್ನು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ನಮಗೆ ಒಳ್ಳೆಯ ಗೃಹ ಮಂತ್ರಿಗಳಿದ್ದಾರೆ. ಆದರೆ ಇವರು ನಮ್ಮ ಪಕ್ಷದ ಸಚಿವರು ಎಂದು ನಾನು ಈ ಮಾತನ್ನು ಹೇಳುತ್ತಿಲ್ಲ. ವೈಯಕ್ತಿಕವಾಗಿ ನನಗೆ ಇವರ ಬಗ್ಗೆ ಗೌರವ ಇದೆ. ಸರ್ಕಾರವನ್ನು ನಾವು ಡಿಫೆಂಡ್ ಮಾಡಿಕೊಳ್ಳಬೇಕೆಂದು ಹೇಳುತ್ತಿಲ್ಲ. ಎಲ್ಲಾದರೂ ಲೋಪದೋಷಗಳಾಗಿದ್ದರೆ ಅದನ್ನು ನೇರವಾಗಿ ಎತ್ತಿ ಹೇಳುವುದಕ್ಕೆ ಇದು ಸರಿಯಾದ ವೇದಿಕೆ. ಉತ್ತಮ ಮಾರ್ಗದರ್ಶನದಲ್ಲಿ ಅವರು ಸಾಕಷ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ನಮ್ಮ ನಂಜನಗೂಡಿಗೆ ಬಂದಿದ್ದಾಗ

ನಾನು ಅವರ ಗಮನವನ್ನು ಸೆಳೆದಿದ್ದೇನೆ. ನಮ್ಮಲ್ಲಿ ಪರಿಸ್ಥಿತಿ ಹೀಗಿದೆ,, ಇಷ್ಟೊಂದು ಪ್ರಜಾಸಂಖ್ಯೆ ಇದೆ. ಇಲ್ಲಿ 2-3 ಪೋಲೀಸ್ ಸ್ಟೇಷನ್‌ಗಳಿವೆ. ಇಲ್ಲಿ 40-50 ಪೋಲೀಸರನ್ನು ಇಟ್ಟುಕೊಂಡು ಗಲಾಟೆಗಳಾದಾಗ ಯಾವ ರೀತಿ ಕಂಟ್ರೋಲ್ ಮಾಡಬೇಕು? ಅವರು ಎಲ್ಲಿಗೆ ಹೋಗಬೇಕು? ಪೋಲಿಸ್ ಸ್ಟೇಷನ್‌ನಲ್ಲಿ 2-3 ಜನ ಇರುತ್ತಾರೆ, ಅಥವಾ ಬೇರೆ ಬೇರೆ ಕೋರ್ಟ್ ಕೆಲಸಕ್ಕೆ ಎಂದು 3-4 ಜನ ಹೋಗುತ್ತಾರೆ. ಇನ್ನೂ ಬೇರೆ ಎಲ್ಲೆಲ್ಲೋ ಹೋಗುವಂಥ ಸಂದರ್ಭ ಕೂಡ ಇರುತ್ತದೆ. ಹೀಗಾಗಿ ನಿಜವಾಗಿ ಕೆಲಸ ಮಾಡುವವರು ಸುಮಾರು 25-30 ಜನ ಸಿಕ್ಕಬಹುದು. ಇದರ ಜೊತೆಗೆ ಅಲ್ಲಿ ಸುಮಾರು 50-60 ಫ್ಯಾಕ್ಟರಿಗಳಿವೆ, ಬಹಳಷ್ಟು ನೌಕರರಿದ್ದಾರೆ, ಅಲ್ಲಿಯ ಸುತ್ತಮುತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಕೇವಲ ಆಗಿಂದಾಗ್ಗೆ ಒಂದಲ್ಲೊಂದು ಕಾರಣದಿಂದ ಘರ್ಷಣೆಗಳಾಗುತ್ತಲೇ ಇರುತ್ತವೆ. ಇಂಥ ಪರಿಸ್ಥಿತಿ ಇರುವಾಗ ಕೇವಲ 25-30 ಜನ ಪೋಲೀಸರಿಂದ ಯಾವ ರೀತಿ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಾನು ನಂಜನಗೂಡನ್ನು ಏತಕ್ಕೆ ಉದಾಹರಣೆಯಾಗಿ ಕೊಟ್ಟೆ ಎಂದರೆ ಇದೇ ರೀತಿ ಪರಿಸ್ಥಿತಿ ಇಡೀ ರಾಜ್ಯದಲ್ಲೇ ಇರಬಹುದು ಎಂದು. ಎಲ್ಲಾ ಕಡೆಯಲ್ಲೂ ಇದೇ ರೀತಿಯ ಪರಿಸ್ಥಿತಿ ಇದ್ದರೆ ಪೋಲೀಸರು ಎಷ್ಟೇ ದಕ್ಷತೆಯಿಂದ ಕೆಲಸ ಮಾಡಬೇಕೆಂದಿದ್ದರೂ ಕೂಡ ಸರಿಯಾದ ವ್ಯವಸ್ಥೆ ಇಲ್ಲದಿರುವಾಗ ಅವರಿಂದ ದಕ್ಷತೆಯನ್ನೂ ನಾವು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ ಇಲಾಖೆಯ ಮುಖ್ಯಸ್ಥರೂ ಕೂಡ ಎಷ್ಟೇ ಪ್ರಾಮಾಣಿಕತೆಯಿಂದ ಇದ್ದರೂ ದಕ್ಷತೆಯಿಂದ ಕೆಲಸ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದಿದ್ದರೂ ಕೂಡ ಈ ಕೊರತೆಯಿಂದ ಜನರಿಗೆ ಒಳ್ಳೆಯ ರಕ್ಷಣೆಯನ್ನು ಕೊಡುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ತಕ್ಷಣವೇ ಅಗತ್ಯಕ್ಕನುಗುಣವಾಗಿ ಅದನ್ನು ಮಾಡಬೇಕು ಒಮ್ಮೆಲೇ ಮಾಡುವುದಕ್ಕಾಗುವುದಿಲ್ಲ ಎಂಬುದಕ್ಕೆ ಅನೇಕ ಕಾರಣಗಳಿವೆ. ಇದಕ್ಕೆ ಇರುವಂಥ ಹಣಕಾಸಿನ ಕೊರತೆಯನ್ನು ಬಜೆಟ್‌ನಲ್ಲಿ ಏಕ ಕಾಲದಲ್ಲೇ ಏರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಎಷ್ಟು ಸಾಧ್ಯವೋ ಅಂದರೆ ಬೇರೆ ಇಲಾಖೆಗಳಿಗೆ ನೀರಾವರಿ ಇಲಾಖೆಗೆ ಎಷ್ಟು ಆದ್ಯತೆಯನ್ನು ಕೊಡುತ್ತೀರೋ ಹಾಗೆಯೇ ಈ ಇಲಾಖೆಗೂ ಅಷ್ಟೇ ಗಮನವನ್ನು ಕೊಡಬೇಕು. ಅಷ್ಟೇ ಪ್ರಮಾಣದಲ್ಲಿ ಪೋಲೀಸ್ ಇಲಾಖೆಗೆ ಸಿಬ್ಬಂದಿಯನ್ನು ಏರಿಸಲಿಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಇಲಾಖೆಯಲ್ಲಿ ಉಳಿತಾಯ ಮಾಡಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಖರ್ಚಿನ ಬಾಬುಗಳೇ ಜಾಸ್ತಿ. ಈ ಪೋಲೀಸ್ ಇಲಾಖೆಗೆ ನಾವು ಎಷ್ಟು ಹಣವನ್ನು ಕೊಟ್ಟರೂ ಇನ್ನೂ ಬೇಕು ಬೇಕು ಎಂದು ಕೇಳತಕ್ಕಂಥ ಇಲಾಖೆ. ಇದು ಡ್ರೈಲ್ಯಾಂಡ್‌ಗೆ ವಾಟರ್ ಪ್ರೊವೈಡ್ ಮಾಡಿದಂತೆ, ನೀರು ಕೇಳುತ್ತಲೇ ಇರುತ್ತದೆ. ಎಷ್ಟು ನೀರನ್ನು ಹಾಯಿಸಿದರೂ ಡ್ರೈಲ್ಯಾಂಡ್ ನೀರನ್ನು ತೆಗೆದುಕೊಳ್ಳುತ್ತಿರುತ್ತದೆ. ಇಲ್ಲಿಯ ಪರಿಸ್ಥಿತಿ ಹೇಗಿರುತ್ತದೆಂದರೆ ಅಲ್ಲಿಯ ಬೇಡಿಕೆ ಇದ್ದಷ್ಟು ಹಣವನ್ನು ಸರ್ಕಾರದವರು ಕೊಡಲಿಕ್ಕೆ ಸಾಧ್ಯವಾಗುತ್ತಲೇ ಇಲ್ಲ. ಆದ್ದರಿಂದ ಇನ್ನು ಮುಂದಾದರೂ ಅನೇಕ ಬಾಬುಗಳಿಂದ ಬರತಕ್ಕಂಥ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನೀರಾವರಿಗೆ ಎಷ್ಟು ಆದ್ಯತೆಯನ್ನು ಕೊಡುತ್ತೇವೆಯೋ ಅಷ್ಟೇ ಆದ್ಯತೆಯನ್ನು ಪೋಲೀಸ್ ಇಲಾಖೆಗೆ ಕೊಟ್ಟು ಅದಕ್ಕೆ ಬೇಕಾದ ಹಣವನ್ನು ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನೀರಾವರಿಗೆ ಆದ್ಯತೆ ಬೇಡವೆಂದು ಹೇಳುತ್ತೀರಾ?

ಶ್ರೀ ಎಂ. ಮಹದೇವು : ಇಲ್ಲ ನಿಮ್ಮ ಇಲಾಖೆಯಿಂದ ಕಿತ್ತುಕೊಂಡು ಇಲ್ಲಿಗೆ ಕೊಡಬೇಕೆಂದು ಹೇಳುತ್ತಿಲ್ಲ. ನಾಗರೀಕರ ಹಿತದೃಷ್ಟಿಯಿಂದ, ಸರ್ಕಾರ ಆದ್ಯತೆಯ ಮೇಲೆ ಪೋಲೀಸ್ ಇಲಾಖೆಗೆ ಹಣವನ್ನು ಒದಗಿಸಿಕೊಡಬೇಕೆಂದು ಹೇಳುತ್ತಿದ್ದೇನೆ.

ಮತ್ತೆ ಆಧುನಿಕ ವ್ಯವಸ್ಥೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈಗ ಅನೇಕ ಆಧುನಿಕ ಶಸ್ತ್ರಾಸ್ತ್ರಗಳು ಬಂದಿವೆ, ವಾಹನಗಳು ಬಂದಿವೆ. ತಾಲ್ಲೂಕ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಮತ್ತು ಜಿಲ್ಲಾ ಹೆಡ್‌ಕ್ವಾಟರ್ಸ್‌ಗಳಲ್ಲಿ ಯಾವುದೇ ಭಾಗದಲ್ಲಿ ಏನಾದರೂ ಅಪಘಾತ ಸಂಭವಿಸಿದರೆ ತಕ್ಷಣ ಅಲ್ಲಿಗೆ ಭೇಟಿಕೊಡುವಂಥ ಸಂದರ್ಭಗಳು ಬಂದಾಗ ಇವರಿಗೆ ವಾಹನಗಳ ಅವಶ್ಯಕತೆ ಬಹಳವಾಗಿರುತ್ತದೆ. ಉತ್ತಮವಾದ ಕಂಡೀಷನ್‌ನಲ್ಲಿ ರತಕ್ಕಂಥ ವಾಹನಗಳು ಇರಬೇಕು. ಇವರಿಗೆ ಕೊಟ್ಟಿರುವ ವಾಹನಗಳು ಉತ್ತಮವಾದ ಕಂಡೀಷನ್‌ನಲ್ಲಿ ಇರುವುದಿಲ್ಲ. ನಾನು ಒಂದು ಸಂದರ್ಭದಲ್ಲಿ ಮೈಸೂರಿನಿಂದ ನಂಜನಗೂಡಿಗೆ ಹೋಗುತ್ತಿದ್ದೆ. ಎಸ್.ಪಿ. ಯವರ ಕಾರು ಚಾಮರಾಜನಗರಕ್ಕೆ ಹೋಗುತ್ತಿತ್ತೆಂದು ಕಾಣುತ್ತದೆ. ಚಾಮರಾಜನಗರಕ್ಕೆ ಹೋಗುವ ಸಂದರ್ಭದಲ್ಲಿ ರೈಲ್‌ಗೇಟ್ ಹಾಕಿಬಿಟ್ಟಿತ್ತು. ರೈಲು ಪಾಸ್ ಆದ ಕೂಡಲೇ ಗೇಟ್ ತೆಗೆದರು. ಎಸ್.ಪಿ. ಯವರ ಕಾರ್ ಕೂಡಲೇ ಸ್ಟಾರ್ಟ್ ಆಗಲೇ ಇಲ್ಲ. ಡ್ರೈವರ್ ಮತ್ತು ಅವರ ಜೊತೆಯಲ್ಲಿ ಇದ್ದ ಇನ್ನಿಬ್ಬರು ತಳ್ಳುವುದಕ್ಕೆ ಪ್ರಾರಂಭಿಸಿದರು. ಆ ಕಾರ್ ಮೇಲೆ ರೆಡ್ ಲೈಟ್ ಇದ್ದುದರಿಂದ ಇಂಥವರದೇ ಕಾರೆಂದು ತಿಳಿಯಿತು. ಇಲ್ಲದಿದ್ದರೆ ಗೊತ್ತಾಗುತ್ತಿರಲಿಲ್ಲ. ಎಸ್.ಪಿ. ಯವರು ಸೇರಿ ಕಾರನ್ನು ತಳ್ಳುವಂಥ ಪರಿಸ್ಥಿತಿ ಬಂದಿತ್ತು. ಆಗ ಗಲಾಟೆಗಳು ನಡೆದು 4-5 ದಿವಸಗಳಾಗಿತ್ತು. ತಮಿಳರು ಮತ್ತು ಕನ್ನಡಿಗರಿಗೆ ನಡೆದ ಗಲಾಟೆಯ ಸಂದರ್ಭದಲ್ಲಿ ಇಂಥ ಒಂದು ಪರಿಸ್ಥಿತಿ ಬಂದು ಈ ರೀತಿ ತಳ್ಳುತ್ತಾ ನಿಂತುಕೊಂಡರೆ ಏನು ಮಾಡುವುದು ಎಂದು ನಮ್ಮವರು ತಮಾಷೆ ಮಾಡುತ್ತಿದ್ದರು. ಇಂಥ ಜೀಪ್‌ಗಳನ್ನು, ಹಳೆಕಾಲದ ಜೀಪ್‌ಗಳನ್ನು ರಿಪೇರಿ ಮಾಡಿಸಿ ಅವುಗಳನ್ನೇ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಿಗೆ ಕೊಟ್ಟುಬಿಟ್ಟಿರುತ್ತಾರೆ. ಇದಾಗಬಾರದು. ಎಸ್‌ಪಿಯವರೇ ಇರಲಿ, ಯಾರೇ ಅಧಿಕಾರಿಗಳಿರಲಿ ಅವರಿಗೆ ಒಳ್ಳೆಯ ವಾಹನಗಳನ್ನು ಕೊಡಬೇಕು. ರಾಜ್ಯದ ಎಲ್ಲಾ ಪೋಲೀಸ್ ಸ್ಟೇಷನ್‌ಗೂ ಒಂದೊಂದು ವಾಹನವನ್ನು ಕೊಡಬೇಕು. ಕಾರಣವೇನೆಂದರೆ ಕೆಲವು ಸ್ಟೇಷನ್‌ಗಳಲ್ಲಿ ಡಿ.ಎಸ್.ಪಿ. ಸರ್ಕಲ್ ಇನ್‌ಸ್ಪೆಕ್ಟರ್‌ರವರಿಗೆ 1-2 ವಾಹನಗಳು ಇರುತ್ತವೆ. ತಕ್ಷಣ ಗ್ರಾಮಗಳಲ್ಲಿ ಏನಾದರೂ ಗಲಾಟೆಯಾದಲ್ಲಿ, ಯಾವುದೇ ಕಾರಣಕ್ಕಾಗಿ ಏನಾದರೂ ರಕ್ಷಣೆ ಕೊಡುವ ಅಗತ್ಯ ಇದೆ ಎಂದು ಕಾಲ್ ಬಂದಾಗ ಅವರು ಎಸ್.ಪಿ. ಜೀಪನ್ನು ಕಾಯ್ದುಕೊಂಡು ಇರಬೇಕು ಅಥವಾ ಸರ್ಕಲ್ ಇನ್‌ಸ್ಪೆಕ್ಟರ್‌ವರ ಜೀಪನ್ನೋ ಅಥವಾ ಸಬ್‌ಇನ್‌ಸ್ಪೆಕ್ಟರ್‌ರವರ ಜೀಪನ್ನೋ ಕಾಯ್ದುಕೊಂಡು ಇರಬೇಕು. ಅವರಿಗೆ ಎರಡು ಚಕ್ರಗಳ ವಾಹನವನ್ನು ಕೊಟ್ಟಿರಬಹುದು. ಅದರಿಂದ ಕೂಡಲೇ ರಿಲೀಫ್ ಕೊಡು ಸಾಧ್ಯವಾಗುವುದಿಲ್ಲ. ಆದ್ದರಿಂದ ಪೋಲೀಸ್ ಸ್ಟೇಷನ್‌ನಲ್ಲಿ ಒಂದು ವಾಹನವನ್ನು ಕಡ್ಡಾಯವಾಗಿ ಎಷ್ಟೇ ಸಮಸ್ಯೆ ಇದ್ದರೂ ಕೂಡ ಕೊಟ್ಟಲ್ಲಿ ಜನರಿಗೆ ಅನುಕೂಲವಾಗುತ್ತದೆನ್ನುವ ವಿಚಾರವನ್ನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಮ್ಮ ಮೈಸೂರು ಜಿಲ್ಲೆ ದೊಡ್ಡದು. ನಮ್ಮ ಮೈಸೂರು ಜಿಲ್ಲೆಗೆ ಹೆಚ್ಚಿಗೆ ಪೋಲೀಸ್ ಸಿಬ್ಬಂದಿಯನ್ನು ಒದಗಿಸಿಕೊಡಿ ಮತ್ತು ಅಗತ್ಯವಿರುವ ಕಡೆ ಪೋಲೀಸ್ ಠಾಣೆಗಳನ್ನು ಕೊಡಿ. ಎಲ್ಲಿ ಗಲಭೆ ಸಂಭವಿಸುತ್ತದೆ ಅದರ ಬಗ್ಗೆ ನಿಮಗೆ ವರದಿ ಬಂದಿರುತ್ತದೆ, ಅಂಥ ಕಡೆ ತಾವು ದಯವಿಟ್ಟು ಪೋಲೀಸ್ ಠಾಣೆಗಳನ್ನು ಕೊಡಿ. ಗಲಭೆ ಇಲ್ಲದಿದ್ದರೂ ಪ್ರಭಾವಕ್ಕೆ ಒಳಗಾಗಿ ಒಂದೆರಡು ಪೋಲೀಸ್ ಠಾಣೆಗಳನ್ನು ಮೈಸೂರು ಜಿಲ್ಲೆಯಲ್ಲಿ ಕೊಟ್ಟಿದ್ದೀರಿ. ಏತಕ್ಕೆ ಕೊಟ್ಟಿದ್ದೀರೆಂದು ಗೊತ್ತಿಲ್ಲ. ಆ ಊರು ನೆಮ್ಮದಿಯಾಗಿದೆ. ಅಲ್ಲಿ ಅವಶ್ಯಕತೆ ಇಲ್ಲದಿದ್ದರೂ ಏತಕ್ಕೆ ಕೊಟ್ಟಿದ್ದೀರೆಂದು ಗೊತ್ತಿಲ್ಲ. ಬೇಕಾದಷ್ಟು ಕಡೆ ಗಲಾಟೆ ಇದೆ, ಕುಡುಕರ ಹಾವಳಿ ಇದೆ, ಅಂಥ ಕಡೆ ವರದಿ ತರಿಸಿಕೊಂಡು ಪೋಲೀಸ್ ಠಾಣೆಗಳನ್ನು ಕೊಡಬೇಕೆಂದು ಮಾನ್ಯ ಗೃಹ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಒಂದು ಉಪ ಪೋಲೀಸ್ ಠಾಣೆಯನ್ನು ಕೊಟ್ಟಿದ್ದೀರಿ, ಅಲ್ಲಿ ಯಾವ ಗಲಾಟೆಯೂ ಇಲ್ಲ. ಜನರು ಐಕ್ಯಮತ್ಯದಿಂದ ಇದ್ದಾರೆ.

ಎಲ್ಲೆಲ್ಲಿ ಗಲಾಟೆ ಇದೆ, ಗೂಂಡಾಗಳ ಹಾವಳಿ ಇದೆ, ಎಲ್ಲಿ ಜನರು ನೆಮ್ಮದಿಯಿಂದ ವಾಸ ಮಾಡಲಿಕ್ಕೆ ಸಾಧ್ಯವಿಲ್ಲ ಅಂಥ ಕಡೆ ಪರಿಶೀಲಿಸಿ ಉಪ ಠಾಣೆಗಳನ್ನು ಕೊಡುವುದು ಬಿಟ್ಟು, ದೇವಸ್ಥಾನಗಳು ಇರುವಂಥ ಸ್ಥಳದಲ್ಲಿ ಪೊಲೀಸ್ ಠಾಣೆಯನ್ನು ಕೊಟ್ಟಿದ್ದೀರಲ್ಲ, ಏತಕ್ಕೆ ಕೊಟ್ಟಿದ್ದೀರಿ? ಇದೇ ರೀತಿ ರಾಜ್ಯದಲ್ಲಿ ಎಲ್ಲಾ ಕಡೆ ಕೊಟ್ಟಿದ್ದೀರಿ. ಶಾಂತಿ ಇರುವ ಕಡೆ ಹೆಚ್ಚಿಗೆ ಉಪ ಠಾಣೆಗಳನ್ನು ಏಕೆ ಕೊಟ್ಟಿದ್ದೀರಿ ಎಂದು ಶಂಕೆ ಇದೆ, ದಯವಿಟ್ಟು ಇದನ್ನು ಪರಿಶೀಲಿಸಿ, ಮೈಸೂರು ಜಿಲ್ಲೆ, ನಂಜನಗೂಡು ಕಡೆ ಎಲ್ಲೆಲ್ಲಿ ಗಲಭೆ ಇದೆ ಅಲ್ಲಿ ಠಾಣೆ ಉಪ ಠಾಣೆಗಳನ್ನು ಜಾಸ್ತಿ ಮಾಡಿಕೊಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಿಮ್ಮ ಎಕ್ಸೈಜ್ ಬಗ್ಗೆ ಹೇಳಬೇಕೆಂದರೆ ಬಹಳ ಇದೆ. ನನಗೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಪೊಲೀಸ್, ಎಕ್ಸೈಜ್ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದೆ. ಎಕ್ಸೈಜ್ ಬಗ್ಗೆ ಸ್ವಲ್ಪ ಖಾರವಾಗಿ ಮಾತನಾಡಬೇಕಾಗಿದೆ. ನಮ್ಮಲ್ಲಿ ಎಕ್ಸೈಜ್ ಪ್ರಭಾವ ಬಹಳ ಇದೆ. ನಂಜನಗೂಡಿನಲ್ಲಾಗಲಿ ಅಥವಾ ರಾಜ್ಯದ ಯಾವುದೇ ಸ್ಥಳಗಳಲ್ಲಿ ಡಿಸ್ಟಿಲರಿಗಳನ್ನು ಕೊಡುವಾಗ ಸುಮಾರು 4-5 ಅಥವಾ 15-20 ಕಿಲೋಮೀಟರ್‌ಗಳ ಅಂತರದಲ್ಲಿ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ಯಾವುದೇ ಭಾಗದಲ್ಲಿ ಡಿಸ್ಟಿಲರಿ ಕೊಡುತ್ತೀರಾ ಕೊಡಿ, ಬೇಡ ಅನ್ನುವುದಿಲ್ಲ. ಆದರೆ ಪಟ್ಟಣಕ್ಕೆ ಸಮೀಪದಲ್ಲಿರುವ ಪ್ರದೇಶಗಳಲ್ಲಿ ಒಂದು ಕಿಲೋಮೀಟರ್ ಅತವಾ ಅರ್ಧ ಕಿಲೋಮೀಟರ್ ಪ್ರದೇಶದಲ್ಲಿ ನೀವು ಡಿಸ್ಟಿಲರಿಗಳನ್ನು ಕೊಟ್ಟರೆ ಅದರ ದುರ್ವಾಸನೆ ಎಷ್ಟಿರುತ್ತದೆ? ನಾಗರೀಕರಿಗೆ ಎಷ್ಟು ಕಷ್ಟವಾಗುತ್ತದೆ? ಅದನ್ನು ತಾಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಮಾತನ್ನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಂಜನಗೂಡು ಪಟ್ಟಣದ ಜನರು ಸಂಜೆ 4-5 ಗಂಟೆ ಮೇಲೆ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಿಲ್ಲ. ನಂಜನಗೂಡಿನಲ್ಲಿ ಜಮ್ಮಿ ಡಿಸ್ಟಿಲರಿ ಎಂದು ಇದೆ, ಅಲ್ಲಿ 7 ಗಂಟೆ ಆದರೆ ಸಾಕು ಎಲ್ಲರೂ ಊರು ಬಿಟ್ಟು ಹೊರಟು ಹೋಗಬೇಕು, ಇಲ್ಲಿರಬಾರದು ಅನ್ನಿಸುತ್ತದೆ. ಅಷ್ಟು ದುರ್ವಾಸನೆ, ಅದನ್ನು ತಾಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಪರಿಸ್ಥಿತಿ ಇದೆ. ಅದು ಸಂಜೆ 6 ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಬಸವಲಿಂಗಪ್ಪನವರು ಪಲ್ಯೂಷನ್ ಮಂತ್ರಿಗಳಾದ ಮೇಲೂ ಇದೆ ನಡೆಯುತ್ತಿದೆಯೆ? ಈಗ ಅವರು ಇಲ್ಲ, ಅವರು ಬಂದ ಮೇಲೆ ಅವರ ಗಮನಕ್ಕೆ ತನ್ನಿ.

ಮಾನ್ಯ ಬಸವಲಿಂಗಪ್ಪನವರು ಪಲ್ಯೂಷನ್ ಮಂತ್ರಿಯಾಗುವುದಕ್ಕೆ ಮುಂಚೆ ಸುಮಾರಾಗಿತ್ತು. ಅವರು ಪಲ್ಯೂಷನ್ ಮಂತ್ರಿ ಆದಮೇಲೆ ಬಹುಶಃ ಅಲ್ಲಿ ಮಾಮೂಲಿಯಾಗಿ 6 ಗಂಟೆಯಿಂದ 9 ಗಂಟೆಯವರೆಗೆ ಕೆಟ್ಟ ವಾಸನೆ ಬರುತ್ತಿದ್ದುದು ಇವರು ಪಲ್ಯೂಷನ್ ಮಂತ್ರಿ ಆದಕೂಡಲೇ ರಾತ್ರಿ 12 ಗಂಟೆವರೆಗೂ ವಾಸನೆ ಬರುತ್ತಿದೆ. ಪಲ್ಯೂಷನ್ ಮೂರು ಗಂಟೆ ಜಾಸ್ತಿಯಾಯಿತು. ಓವರ್ ಪಲ್ಯೂಷನ್ ಆದ ಹಾಗೆ ಆಗಿದೆ. ದಯವಿಟ್ಟು ತಮ್ಮ ಮುಖೇನ ನಮ್ಮ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ, ರಾಜ್ಯದ ಯಾವ ಭಾಗದಲ್ಲೂ ಡಿಸ್ಟಿಲರಿಗಳನ್ನು ಕೊಡುವಾಗ ಸುಮಾರು 10-15 ಕಿಲೋಮೀಟರ್ ದೂರದಲ್ಲಿ, ಪಟ್ಟಣ ಆಗಲೀ ಗ್ರಾಮಾಂತರ ಪ್ರದೇಶದಲ್ಲಿ ಆಗಲೀ ಕೊಡಬೇಕು. ಇದರಿಂದ ಆರೋಗ್ಯ ಕೆಡುವುದಷ್ಟೇ ಅಲ್ಲ ಏರ್ ಪಲ್ಯೂಷನ್ ಅಲ್ಲದೆ ವಾಟರ್ ಪಲ್ಯೂಷನ್ ಕೂಡ ಆಗಿದೆ. ಜೆಮಿನಿ ಡಿಸ್ಟಿಲರಿ ಸ್ಥಾಪನೆಯಿಂದ ಸುತ್ತಮುತ್ತ 10-15 ಗ್ರಾಮಗಳಲ್ಲಿ ಯಾವ ಭಾಗದಲ್ಲಿ 20 ಅಡಿ 30 ಅಡಿ ಬಾವಿ ತೋಡಿದರೂ ಬೀರ್ ಮಾದರಿಯಲ್ಲಿ ಕಪ್ಪು ನೀರು ಬರುತ್ತದೆ. ಹೆಚ್ಚು ಕಡಿಮೆ ಬೀರೇ ಇರುತ್ತದೆ. ನಾವು ಒಮ್ಮೊಮ್ಮೆ ಹೇಳುತ್ತಾ ಇರುತ್ತೇವೆ ಯಾರಿಗಾದರೂ ಬೀರ್ ಬೇಕಾದರೆ ಪುಕ್ಕಟೆ ಬೀರ್ ಕೊಡುತ್ತೇವೆ ಎಂದು. ನೀರು ಕುಡಿಯುವುದಕ್ಕಾಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇತ್ತೀಚೆಗೆ ವಿಸ್ಕಿ ಎಷ್ಟು ಕುಡಿದರೂ ನಿಶಾ ಬರುತ್ತಿಲ್ಲ. ಬಹುಶಃ ಅದೇ ಇರಬಹುದೇನೋ.

ಶ್ರೀ ಎಂ.ಮಹದೇವ್ : ನಮ್ಮಲ್ಲಿ ನಿಶಾ ಬರುತ್ತದೆ. ಅದರಿಂದ ಜನಗಳಿಗೆ ಖಾಯಿಲೆ ಬರುತ್ತಿದೆ. ಜನಗಳು ಕುಡಿಯುವ ನೀರು ಉಪಯೋಗಿಸುವುದಕ್ಕೆ ಆಗುತ್ತಿಲ್ಲ. ವ್ಯವಸಾಯಕ್ಕೂ ಅನುಕೂಲ ಆಗುತ್ತಿಲ್ಲ. ಮೂರು ಪರಿಣಾಮ ಆಗುತ್ತಿದೆ. ಬಾವಿಯಿಂದ ನೀರು ಪಲ್ಯೂಷನ್ ಆಗಿದೆ. ಜಲಮಾಲಿನ್ಯ, ವಾಯುಮಾಲಿನ್ಯ ಆಗಿದೆ. ಜನರಿಗೆ ವಾಸಕ್ಕೆ ತೊಂದರೆಯಾಗಿದೆ. ಇಂಥ ಡಿಸ್ಟಿಲರಿಗಳನ್ನು ಕೊಟ್ಟರೆ ನಮ್ಮ ಜನಸಾಮಾನ್ಯರ ಕಥೆ ಏನು? ಇದರ ಬಗ್ಗೆ ತಮ್ಮ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಲಿಕ್ಕರ್ ಷಾಪ್ಸ್ ಕೊಡುತ್ತಾ ಇದ್ದೀರಿ. ಕೆಲವು ಪ್ರಭಾವ ಇರುವ ಕಡೆ ದೇವಸ್ಥಾನ ಇದ್ದರೂ ಲೈಸೆನ್ಸ್ ಸಿಗುತ್ತದೆ. ಸ್ಕೂಲ್, ಹಾಸ್ಟೆಲ್, ಕಾಲೇಜು ಇರುವ ಕಡೆಯೂ ಸಿಕ್ಕುತ್ತದೆ. ಇಂಥ ಕಡೆ ಕೊಟ್ಟುಬಿಟ್ಟಿದ್ದಾರೆ. ಇದರಲ್ಲಿ ಸ್ಥಳೀಯ ಎಕ್ಸೈಜ್ ಡಿಪಾರ್ಟ್‌ಮೆಂಟಿನವರ ಜವಾಬ್ದಾರಿ ಇದೆ. ಸಚಿವರನ್ನೇ ದೂರುವುದಕ್ಕೆ ಸಾಧ್ಯವಾಗುವುದಿಲ್ಲ. ಸಣ್ಣ ಪುಟ್ಟ ವಿಚಾರಗಳಲ್ಲಿ ಸಚಿವರು ಗಮನ ಹರಿಸುವುದಕ್ಕಾಗುವುದಿಲ್ಲ. ಯಾರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ಸ್ ಇದ್ದಾರೆ, ತಾಲ್ಲೂಕು ಎಕ್ಸೈಜ್ ಆಫೀಸರ್ಸ್ ಇದ್ದಾರೆ ಅವರು ಇಂಥ ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿ ಪರ್ಮಿಷನ್ ಕೊಡಬಾರದು. ಪರ್ಮಿಷನ್ ಕೊಟ್ಟರೆ ಏನಾಗುತ್ತದೆಂದರೆ ನಮ್ಮ ಜನರಿಗೆ ಕಷ್ಟವಾಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಇರುವ ಬೀದಿಗಳಲ್ಲಿ ಮದ್ಯದಂಗಡಿಗಳನ್ನು ತೆಗೆಯಬಾರದು ಎಂದಿದೆ. ಆದರೂ ಅಂಥ ಕಡೆ ತೆಗೆಯುತ್ತಿದ್ದಾರೆ. ದೇವಸ್ಥಾನ, ಹಾಸ್ಟೆಲ್‌ಗಳು ಇಂಥ ಕಡೆ ಇದನ್ನು ಕೊಡಬಾರದು ಎಂದು ಇದ್ದರೂ ಅಂಥ ಕಡೆ ಕೊಡುತ್ತಿದ್ದಾರೆ. ಈ ರೀತಿ ನಿಯಮಗಳನ್ನು ಸಡಿಲಿಸಿ ಜನರಿಗೆ ಅನಾನುಕೂಲವಾಗುವ ರೀತಿಯಲ್ಲಿ ವ್ಯವಹರಿಸಿದರೆ ಇಂಥ ಇಲಾಖೆ ಇದ್ದೂ ಏನು ಪ್ರಯೋಜನವಾಗುತ್ತದೆ? ಮತ್ತು ಎಕ್ಸೈಜ್ ಇನ್‌ಸ್ಪೆಕ್ಟರ್‌ಗಳು ಅಥವಾ ಸಿಬ್ಬಂದಿ ವರ್ಗ ಏನಿದೆ ಇವರು ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಎಷ್ಟು ಇಂಥ ಕೇಸ್‌ಗಳ ಬಗ್ಗೆ ಗಮನ ತೆಗೆದುಕೊಂಡು ಕ್ರಮ ತೆಗೆದುಕೊಂಡಿದ್ದಾರೆ.? ಅವರ ಜೊತೆಯಲ್ಲಿ ಶಾಮೀಲಾಗಿ 'ಎಸ್' ಎಂದು ಸರ್ಟಿಫಿಕೇಟ್ ಕೊಡುವುದಾದರೆ ಇಲಾಖೆ ಏತಕ್ಕಿದೆ? ಇದನ್ನು ಸರ್ಕಾರದಲ್ಲಿ ತೀವ್ರವಾಗಿ ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಅನೇಕ ಕಡೆ ಕಳ್ಳಭಟ್ಟಿ ತಯಾರಾಗುತ್ತಿದೆ ಮತ್ತು ಕೆಲವು ಕಡೆ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಿದೆ. ಕೆಲವು ಫ್ಯಾಕ್ಟರಿ ಜೊತೆ ಅಧಿಕಾರಿಗಳು ಶಾಮೀಲಾಗಿರುತ್ತಾರೆ. ಎಕ್ಸೈಜ್ ಇಲಾಖೆಯ ಕೆಲವು ಅಧಿಕಾರಿಗಳು ಹಾಗಿದ್ದಾರೆ. ಎಲ್ಲರನ್ನೂ ನಾನು ಹೇಳುವುದಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಒಳ್ಳೆಯ ಅಧಿಕಾರಿಗಳಿಂದಲೂ ಸಹ ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಕೆಲವರು ವಾತಾವರಣಕ್ಕೆ ಅನುಗುಣವಾಗಿ ನಡೆದುಕೊಳ್ಳತಕ್ಕ ಅಧಿಕಾರಿಗಳಿದ್ದಾರೆ. ಅವರು ಮನಸೋ ಇಚ್ಛೆ ನಡೆದುಕೊಳ್ಳತಕ್ಕ ವಿಚಾರ ಇದೆ. ಇಲಾಖೆಯಲ್ಲಿ ಅದರ ಬಗ್ಗೆ ಗಮನ ಹರಿಸಬೇಕು. ಅವರು ಯಾರೂ ನಿಯಮಗಳನ್ನು ಗಾಳಿಗೆ ತೂರಿ ಪ್ರಭಾವಶಾಲಿಗಳಾಗಿ ವರ್ತಿಸುತ್ತಿದ್ದಾರೆ ಅಂಥವರ ಬಗ್ಗೆ ತಾವು ಪರಿಶೀಲನೆ ಮಾಡಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಮತ್ತು ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ಪೋಲೀಸ್ ಇಲಾಖೆ ಬಗ್ಗೆ ಆಗಲೀ ಅಥವಾ ಎಕ್ಸೈಜ್ ಇಲಾಖೆ ಬಗ್ಗೆ ಆಗಲೀ ನಾನು ಬಹಳ ಕಳಕಳಿಯಿಂದ ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಯಾರು ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ ಅವರಿಗೆ ತಾವು ದಯವಿಟ್ಟು ಪ್ರೋತ್ಸಾಹವನ್ನು ಕೊಡಿ. ಸರ್ಕಾರದ ಪತಿಯಿಂದ ಅವರಿಗೆ ಪ್ರೋತ್ಸಾಹ ಹಾಗೂ ರಕ್ಷಣೆಯನ್ನು ಕೊಡಿ. ಯಾರು ಪ್ರಾಮಾಣಿಕರಾಗಿದ್ದಾರೆ ಅವರು ಇವತ್ತು ಒಳ್ಳೆಯ ಎಕ್ಸಿಕ್ಯೂಟಿವ್ ಜಾಬ್‌ಗಳಿಗೆ ಬರುವುದಕ್ಕೆ ಆಗುತ್ತಾ ಇಲ್ಲ. ಏಕೆಂದರೆ ಕೆಲವರು ಏನು ಎಕ್ಸಿಕ್ಯೂಟಿವ್

ಜಾಗಕ್ಕೆ ಬರುತ್ತಿದ್ದಾರೆ ಅವರು ಯಾವ ರೀತಿ ಪ್ರಭಾವ ಉಪಯೋಗಿಸುತ್ತಿದ್ದಾರೆಂದು ನನಗಂತೂ ಗೊತ್ತಿಲ್ಲ. ಪ್ರಾಮಾಣಿಕರಾಗಿರುವ ಅಧಿಕಾರಿಗಳು ನಮ್ಮ ಹತ್ತಿರವೂ ಬರುವುದಿಲ್ಲ. ಸಚಿವರ ಹತ್ತಿರವೂ ಹೋಗಿ ಪ್ರಭಾವವನ್ನು ಬೀರುವುದಿಲ್ಲ. ಸರ್ಕಾರ ಎಲ್ಲಿ ನೇಮಿಸುತ್ತದೆಯೋ ಅಲ್ಲಿ ಕೆಲಸ ಮಾಡೋಣ ಎಂದು ದೇವರ ಸ್ಮರಣೆ ಮಾಡಿ ಹಾಕಿದ ಕಡೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಸನ್ನಿವೇಶಕ್ಕೆ ತಕ್ಕಹಾಗೆ ಹೊಂದಿಕೊಂಡು ರಾಜಕೀಯ ಪ್ರಭಾವವನ್ನು ಸಹಾ ಸಾಧ್ಯವಾದಷ್ಟು ಬೆಳೆಸಿಕೊಂಡು ಒಳ್ಳೊಳ್ಳೆಯ ಪೋಸ್ಟ್‌ಗೆ ಬರುವುದಕ್ಕೆ ಯಾರು ಪ್ರಯತ್ನ ಮಾಡುತ್ತಾರೋ ಅವರ ಹಿನ್ನಲೆಯನ್ನು ತಾವು ಅರ್ಥ ಮಾಡುಕೊಂಡು ಅಂತಹ ಅಧಿಕಾರಿಗಳ ಮೇಲೆ ನೀವು ಗಮನಹರಿಸಿ. ಒಳ್ಳೆಯ ಅಧಿಕಾರಿಗಳಿಗೆ ತಾವು ಉತ್ತೇಜನ ಕೊಡಿ. ಪ್ರಾಮಾಣಿಕ ಅಧಿಕಾರಿಗಳು ಈ ಎರಡೂ ಇಲಾಖೆಯಲ್ಲಿ ಇದ್ದಾರೆ. ಅವರನ್ನು ತಾವು ಗುರ್ತಿಸಿ ಸಾಕಷ್ಟು ಪ್ರೋತ್ಸಾಹ ಕೊಟ್ಟು ಒಳ್ಳೆಯ ಕೆಲಸವನ್ನು ಅವರಿಂದ ತಾವು ತೆಗೆದುಕೊಳ್ಳಬೇಕೆಂದು ಈ ಸನ್ನವೇಶದಲ್ಲಿ ತಮ್ಮ ಮುಖಾಂತರ ನಾನು ಮನವಿ ಮಾಡಿಕೊಂಡು ಇಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಛೇರ್ಮನ್ : ಈಗ ಕುಶಾಲ ಅವರು ಭಾಷಣ ಮಾಡಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಬಹಳ ಹೊತ್ತಿನಿಂದ ಕಾದಿದ್ದೇನೆ. ನನಗೆ ತಾವು ಅವಕಾಶ ಮಾಡಿಕೊಡಬೇಕು.

ಛೇರ್ಮನ್ : ತಮ್ಮ ಹೆಸರೂ ಲಿಸ್ಟ್‌ನಲ್ಲಿ ಇದೆ. ತಮ್ಮನ್ನೂ ಕರೆಯುತ್ತೇನೆ.

† ಶ್ರೀ ಕೆ. ಕುಶಾಲ (ಸುಳ್ಯ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷಿಣಿಯವರೇ ಗೃಹ ಹಾಗೂ ಅಬಕಾರಿ ಇಲಾಖೆಗಳ ಬಗ್ಗೆ ಎಬಿಡು ಮಾತುಗಳನ್ನು ಹೇಳಬಯಸುತ್ತೇನೆ. ಗೃಹ ಖಾತೆ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ ನಾನು ಈಗ ಸಿ.ಆರ್.ಇ. ಸಲ್ ಬಗ್ಗೆ ಹೇಳುವುದಾದರೆ ಬಹಶಃ ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಮೇಲೆ ಏನು ದೌರ್ಜನ್ಯ ನಡೆಯುತ್ತಿದೆ ಆ ಬಗ್ಗೆ ವಿಚಾರ ತಿಳಿದು ಅವರ ಪುರೋಭಿವೃದ್ಧಿ ಕಡೆಗೆ ಗಮನ ಹರಿಸುವ ಸಲುವಾಗಿ ತಪ್ಪಿತಸ್ಥರ ಮೇಲೆ ದೂರು ದಾಖಲು ಮಾಡಬೇಕಾಗುತ್ತದೆ. ಈ ಒಂದು ಸೆಲ್ ವತಿಯಿಂದ ಏನೇನು ಕೆಲಸಕಾರ್ಯಗಳು ಆಗಿವೆ ಎನ್ನುವ ಬಗ್ಗೆ ಇಲ್ಲಿಯುವರೆಗೂ ಅದರ ವತಿಯಿಂದ ಒಂದೂ ವರದಿ ಹೊರಬಂದಿರುವುದಿಲ್ಲ. ನಾನು ಈ ಸದನದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾಗಿ ಕಳೆದ ಒಂದು ವರ್ಷದ ನನ್ನ ಅನುಭವ ಹೇಳುವುದಾದರೆ, ಈ ಸಿಆರ್‌ಇ ಸೆಲ್‌ನವರು ಒಂದೂ ವರದಿಯನ್ನು ಈ ಸಮಿತಿಗೆ ಸಲ್ಲಿಸಿರುವುದಿಲ್ಲ. ಇದರಿಂದಾಗಿ ಈ ಇಲಾಖೆ ಏನೂ ಚುರುಕಿನಿಂದ ಕೆಲಸ ಮಾಡುತ್ತಿಲ್ಲವೆಂದು ನಾನು ಬೇಸರದಿಂದ ಹೇಳಬೇಕಾಗುತ್ತದೆ. ಈ ಸೆಲ್‌ನಲ್ಲಿ ಡಿಐಜಿ ಮಟ್ಟದ ಅಧಿಕಾರಿಗಳು ಒಬ್ಬರು ಇದ್ದಾರೆ. ಆದರೂ ಇಷ್ಟರವರೆಗೆ ಒಂದೂ ವರದಿಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದು ರಾಜ್ಯದಲ್ಲಿ ಇರುವ ಒಂದು ಸಮಸ್ಯೆ. ಸಿಆರ್‌ಇ ಸೆಲ್‌ನವರು ಇದುವರೆಗೆ ಒಂದೂ ವರದಿಯನ್ನು ಕೊಡದೇ ಇರುವುದು ಬೇಜವಾಬ್ದಾರಿತನ ಎಂದು ಹೇಳಿದರೆ ತಪ್ಪಾಗಲಾರದು. ಡಿಐಜಿ ಮಟ್ಟದ ಒಬ್ಬ ಅಧಿಕಾರಿಯನ್ನು ಕೊಟ್ಟು ಎಲ್ಲಾ ಸೌಕರ್ಯಗಳನ್ನು ಅವರಿಗೆ ಕೊಟ್ಟಿದ್ದರೂ ಒಂದು ವರದಿಯನ್ನು ಅವರು ಕೊಡಲು ಸಾಧ್ಯವಾಗಿಲ್ಲವೆಂದರೆ ಪರಿಶಿಷ್ಟ ಜಾತಿ ಪಂಗಡದವರ ಬಗ್ಗೆ, ದಲಿತರ ಬಗ್ಗೆ ಆಗುತ್ತಾ ಇರುವ ಅನ್ಯಾಯ ಎಂಥಾದ್ದು ಎಂದು ನಾನು ಬೇಸರದಿಂದ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಇವತ್ತು ಗೃಹ ಇಲಾಖೆ. ಗೃಹ ಇಲಾಖೆಯಲ್ಲಿ ನಮ್ಮ ಈಗಿನ ಸಚಿವರು ಹೆಚ್ಚಿನ ಸಿಬ್ಬಂದಿಯನ್ನು ಅಲ್ಲಿ ನೇಮಕ ಮಾಡುವುದರಲ್ಲಿ

ಆಗಾಗ ಪ್ರಯತ್ನ ಮಾಡುತ್ತಿದ್ದಾರೆ. ಹೆಚ್ಚಿನ ಪೋಲೀಸ್ ಪೇದೆಗಳನ್ನು ನೇಮಕ ಮಾಡಿದ್ದಾರೆ. ಆದರೆ ಇದು ಅತಿಶಯೋಕ್ತಿ ಏನೂ ಅಲ್ಲ. ಆದರೂ ಕೂಡ ಶಿಸ್ತನ್ನು ಕಾಪಾಡುವುದಕ್ಕೆ ಅಥವಾ ದಕ್ಷತೆಯನ್ನು ಕಾಪಾಡುವುದಕ್ಕೆ ನಮ್ಮಲ್ಲಿ ಸಿಬ್ಬಂದಿ ಕೊರತೆ ಬಹಳ ಇದೆ. ಇದರ ಬಗ್ಗೆ ತೀವ್ರ ಗಮನಹರಿಸಬೇಕೆಂದು ನಾನು ಸರ್ಕಾರದಲ್ಲಿ ಅರಿಕೆ ಮಾಡುತ್ತಿದ್ದೇನೆ. ಬಹುಶಃ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಹೋಮ್ ಗಾರ್ಡ್ಸ್ ಆಗಿ ಯಾರು ಕೆಲಸ ಮಾಡುತ್ತಿದ್ದಾರೆ ಅವರ ಸೇವೆಯನ್ನು ಪೋಲೀಸ್ ಇಲಾಖೆಗೆ ವರ್ಗ ಮಾಡುತ್ತೇನೆಂದು ಹೇಳುತ್ತಿದ್ದರು. ಆದರೂ ಕೂಡ ಹೋಮ್‌ಗಾರ್ಡ್ಸ್ ಇಲಾಖೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಹೋಮ್‌ಗಾರ್ಡ್ಸ್‌ಗಳು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅದರಲ್ಲಿರುವವರು ಬಹುಶಃ ಉದ್ಯೋಗದಲ್ಲಿರಬಹುದು.. ಉದ್ಯೋಗದಲ್ಲಿ ಇಲ್ಲದೇ ಇರುವವರು ಇದ್ದಾರೆ. ಕೆಲವರು ಅರ್ಹತೆ ಇಲ್ಲದವರು ಇರಬಹುದು. ನಿರದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಹೋಮ್‌ಗಾರ್ಡ್ಸ್ ಇಲಾಖೆಯಲ್ಲಿ ಇರುವಂತಹ ನಿರುದ್ಯೋಗಿ ಹೋಮ್‌ಗಾರ್ಡ್ಸ್‌ಗಳು ಏನಿದ್ದಾರೆ ಅವರ ಸೇವೆಯನ್ನು ಖಾಯಂ ಮಾಡಿದರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಿದೆ. ನಮ್ಮ ಪೋಲೀಸ್ ಇಲಾಖೆಗೆ ಅವರನ್ನು ತೆಗೆದುಕೊಂಡರೆ ಹೆಚ್ಚಿನ ತರಬೇತಿಯನ್ನು ನೀಡದೆ ಸೇವೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ. ಕಳೆದ 7ನೇ ತಾರೀಖು ಪರಿಶಿಷ್ಟ ಜಾತಿಯವರಿಗೆ ನೀಡಿದಂತಹ ದೌರ್ಜನ್ಯ ಎದಿಮಲ್ಲೆ ಸುಬ್ರಮಣ್ಯ ಪೋಲೀಸ್ ಠಾಣೆಯಲ್ಲಿ ನಡೆದಿದೆ. ಅದರ ಬಗ್ಗೆ ಪೋಲೀಸ್ ಇಲಾಖೆಯವರು ಹೆಚ್ಚಿನ ಕೆಲಸವನ್ನು ಮಾಡಿದ್ದಾರೆ. ಆದರೂ ಕೂಡ ಏನೊಂದು ದೌರ್ಜನ್ಯ ಮಾಡಿದ್ದರು ಅವರಿಂದ ಆಯುಧಗಳನ್ನು ಸೀಸ್ ಮಾಡದೆ 10 ಮಂದಿಯನ್ನು ಬಂಧಿಸಿ ಆಮೇಲೆ ವಾಪಸ್ಸು ಕಳುಹಿಸುವಂತಹ ಪ್ರಸಂಗ ನಡೆಯುತ್ತಿದೆ. ಮಾರಕ ಆಯುಧಗಳನ್ನು ಹಿಡಿದುಕೊಂಡು ದೌರ್ಜನ್ಯದಿಂದ ಹರಿಜನ ಗಿರಿಜನರನ್ನು ನಿಂದನೆ ಮಾಡಿದ್ದರೂ ಕೂಡ ಯಾರು ಆರೋಪಿಗಳಿದ್ದಾರೆ ಅವರಿಂದ ಆಯುಧಗಳನ್ನು ಸೀಸ್ ಮಾಡದೆ ಅವರನ್ನು ಬೇಲ್ ಮೇಲೆ ಬಿಡುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಲ್ಲಿ ಇನ್ನೊಂದು ದೌರ್ಜನ್ಯ ನಡೆದಿದ್ದರೂ ಕೂಡ ನಮ್ಮ ಪಕ್ಷದ ಕಾರ್ಯಕರ್ತರು ಅದರಲ್ಲಿ 6 ಮಂದಿ ಇದ್ದರು. ಅದರಲ್ಲಿ ಇಬ್ಬರು ಸಭೆಗೆ ಆಗಮಿಸಿದ್ದರು. ಅವರು ನಮ್ಮ ಕಾರ್ಯಕರ್ತರು ಇದ್ದರು. ಅಪರಾಧಿಗಳ ಮೇಲೆ 107ನೇ ಸೆಕ್ಷನ್ ಪ್ರಕಾರ ಕೇಸನ್ನು ಹಾಕಿದ್ದಾರೆ. ಅದರ ಜೊತೆಗೆ ಸುಬ್ರಮಣ್ಯ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನಮ್ಮ ಪಕ್ಷದ 6 ಜನ ಕಾರ್ಯಕರ್ತರ ಮೇಲೂ ಸೆಕ್ಷನ್ 107ರ ಪ್ರಕಾರ ಕೇಸು ದಾಖಲು ಮಾಡಿದ್ದಾರೆ. ಅಲ್ಲಿಯ ವಿರೋಧಪಕ್ಷಗಳವರ ಒಂದು ದಬ್ಬಾಳಿಕೆಯಿಂದ ಮತ್ತು ಅಲ್ಲಿರುವ ಪಟ್ಟಭದ್ರಾಹಿತಾಸಕ್ತಿಗಳು ಯಾರಿದ್ದಾರೆ ಅವರು ಈ ಕೆಲಸ ಮಾಡಿಸಿದ್ದಾರೆ. ಸುಬ್ರಮಣ್ಯಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಿಜವಾಗಿ ಹೇಳಬೇಕಾದರೆ ಕೆಲವು ಮಠಾದೀಶರು ಕೈವಾಡ ನಡೆಸುತ್ತಿದ್ದಾರೆ. ಆ ಮಠಾಧೀಶರುಗಳ ಕೈವಾಡಕ್ಕೆ ಬಲಿಯಾಗಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅವರಿಗೆ ಅಡ್ಜೆಸ್ಟ್ ಮಾಡಿಕೊಂಡು ಅಲ್ಲಿನ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಇಂತಹ ದುಷ್ಕೃತ್ಯಗಳು ನಡೆಯುತ್ತಿದ್ದರೂ ಕೂಡ ಯಾರು ದುಷ್ಕೃತ್ಯಗಳನ್ನು ಎಸಗುತ್ತಿದ್ದಾರೆ ಅವರನ್ನು ಬಿಟ್ಟು ಆರು ಜನ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಸೆಕ್ಷನ್ 107ರ ಪ್ರಕಾರ ಕೇಸನ್ನು ಹಾಕಿದ್ದಾರೆಂದರೆ ಕೆಲವೊಮ್ಮೆ ಪೋಲೀಸ್ ಇಲಾಖೆಯವರು ಪಟ್ಟಭದ್ರಾಹಿತಾಸಕ್ತಿಗಳ ಕೈವಾಡದಿಂದ ಪೋಲೀಸ್ ಅಧಿಕಾರಿಗಳಿಗೆ ಅವರು ತಮ್ಮ ಕೆಲಸವನ್ನು ಮತ್ತು ಅಧಿಕಾರವನ್ನು ಉಪಯೋಗ ಮಾಡಲಿಕ್ಕೆ ಅಸಾಧ್ಯವಾಗಿದೆ. ಈ ಸಂದರ್ಭದಲ್ಲಿ ಅವರು ತಮ್ಮ ಅಧಿಕಾರವನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಅವರ

ಒಂದು ಅಂಜಿಕೆಗೆ ಅವರ ಹೆದರಿಕೆಗೆ ಅವರು ಅಲ್ಲಿ ಸೇವೆಯನ್ನು ಮಾಡುತ್ತಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಲ್ಲಿ ಇನ್ನೊಂದು ತಮಾಷೆಯ ಮಾತನ್ನು ಹೇಳಬೇಕಾದರೆ. ಯಾವುದೇ ಒಬ್ಬ ಅಪರಾಧಿ ದರೋಡೆ ಅಥವಾ ಕೊಲೆಗಡುಕನಾಗಿದ್ದರೆ ಅವನನ್ನು ತಳಿಸುವ ಹಾಗೆ ಇರಲಿಲ್ಲ. ಹಿಂದೆ ಗುಂಡೂರಾಯರ ಸರ್ಕಾರವಿರುವಾಗ ಆ ರೀತಿ ಇತ್ತೆಂದು ಠಾಣೆಯಲ್ಲಿ ಹೇಳುವ ಮಾತು. ಯಾರಾದರೂ ಅಪರಾಧ ಮಾಡಿದವರು ಇದ್ದರೆ ಅವರನ್ನು ಬಿಟ್ಟು ಬಿಡುವ ಪರಿಸ್ಥಿತಿ ಇತ್ತು. ಅಂತಹ ಆದೇಶ ಯಾವುದೂ ಇಲ್ಲ. ಯಾವುದೇ ರೀತಿಯಿಂದ ನಾವು ಹೊಡೆಯುವುದಕ್ಕೆ ಸಾಧ್ಯವಿಲ್ಲ. ಈಗ ತಾವು ಹೊಡೆಯುವಂತಹ ಆದೇಶವನ್ನು ಸರ್ಕಾರದಿಂದ ಮಾಡಿಸಿದೆಯೆಂದು ಹೇಳುವಂತಹ ಮಾತನ್ನು ಕೂಡ ನನ್ನ ಕ್ಷೇತ್ರದಲ್ಲಿ ಕೆಲವು ಅಧಿಕಾರಿಗಳು ಪೋಲೀಸ್ ಸಿಬ್ಬಂದಿ ಹೇಳುವ ಮಾತನ್ನು ನಾನು ಹೇಳಿದ್ದೇನೆ. ನಾನು ಕೇಳಿದ್ದಕ್ಕೆ ಅದು ವ್ಯಂಗ್ಯದ ಮಾತು ಎಂದು ತಿಳಿಯಿತು. ಈ ರೀತಿಯಿಂದ ಪೋಲೀಸ್ ಸಿಬ್ಬಂದಿ ವರ್ತನೆ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಸುಬ್ರಹ್ಮಣ್ಯ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಠಾಧೀಶರ ಆಧಿಪತ್ಯಕ್ಕೆ ಒಳಗಾಗಿ ದಬ್ಬಾಳಿಕೆಗೆ ಒಳಗಾಗಿ ಯಾವುದೇ ಸಿಬ್ಬಂದಿ ಅಪರಾಧ ಎಸಗಿದವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಮುಂದೆ ಬರುತ್ತಿಲ್ಲ. ಅಲ್ಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಗೃಹ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಫೈರ್ ಸರ್ವೀಸ್ ಸ್ಟೇಶನ್ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಹಿಂದೆ ಫೆಬ್ರುವರಿ 1ನೇ ತಾರೀಖು ದೊಡ್ಡ ಕೋಮು ಗಲಭೆ ನಡೆಯಿತು. ಫೈರ್ ಸರ್ವೀಸ್ ಸ್ಟೇಶನ್‌ನಿಂದ ಸಿಬ್ಬಂದಿಯನ್ನು ಎರಡು ವ್ಯಾನ್‌ಗಳಲ್ಲಿ ಕಳುಹಿಸಿದ್ದರು. ನ್ಯಾಯವನ್ನು ಕಾಪಾಡುವುದಕ್ಕೆ ಮತ್ತು ರಕ್ಷಣೆಯನ್ನು ಕೊಡುವುದಕ್ಕೆ ಎರಡು ವ್ಯಾನುಗಳು ಬಂತು. ಅಲ್ಲಿ ಸುಮಾರು 10 ತಿಂಗಳ ಕಾಲ ಫೈರ್ ಸರ್ವೀಸ್ ಸ್ಟೇಶನ್ ಇತ್ತು. ಆಗಿನ ಡಿಜಿಪಿಯವರು ಅಲ್ಲಿ ಸ್ಥಳವನ್ನು ಕೊಟ್ಟರೆ ಫೈರ್ ಸರ್ವೀಸ್ ಸ್ಟೇಷನ್ ಮಂಜೂರು ಮಾಡುತ್ತೇವೆನ್ನುವ ಮಾತನ್ನು ಕೂಡ ಹೇಳಿದ್ದಾರೆ. ನಾವು ಕೂಡ ಸ್ಥಳವನ್ನು ಮಂಡಲ ಪಂಚಾಯಿತಿಯ ವ್ಯಾಪ್ತಿಯೊಳಗೆ ನಗರ ಸರಹದ್ದಿನೊಳಗಡೆ ಕೊಟ್ಟಿದ್ದೇವೆ. ಇವತ್ತು ನಮಗೆ ಕೊಡಬೇಕಾದ ಫೈರ್ ಸರ್ವೀಸ್ ಸ್ಟೇಶನ್ ಅನ್ನು ಕೈಬಿಡಲಾಗಿದೆ. ನನ್ನ ಸುಳ್ಯಾ ಕ್ಷೇತ್ರದಲ್ಲಿ 2500 ಹೆಕ್ಟೇರ್ ರಬ್ಬರ್ ತೋಟವಿದೆ. ಈ ರಬ್ಬರ್ ತೋಟ ಯಾವುದಾದರೂ ಪೆಟ್ರೋಲ್. ಸೀಮೆಎಣ್ಣೆ ಹಾಕಿದರೆ ಯಾವ ರೀತಿ ಬೆಂಕಿ ಉರಿಯುತ್ತದೆ ಆ ಪ್ರಕಾರ ರಬ್ಬರ್ ತೋಟದಲ್ಲಿ ಬೆಂಕಿ ಉರಿಯುತ್ತಿದೆ. ಆ ತರಹ ಬೆಂಕಿಯಿಂದ ಇವತ್ತು ರಬ್ಬರ್ ತೋಟ ಉರಿಯುವಂತಹ ಪರಿಸ್ಥಿತಿ ಇದೆ. ಇದು ಅತಿ ಪ್ರಾಮುಖ್ಯವಾದ ವಿಷಯವಾಗಿದ್ದರೂ ಕೂಡ ಇಲ್ಲಿ ಫೈರ್ ಸರ್ವೀಸ್ ಸ್ಟೇಷನ್ ಅನ್ನು ಕೈಬಿಟ್ಟರು ಅಂದರೆ ಇದು ತುಂಬಾ ಬೇಸರದ ಸಂಗತಿ. ಇದನ್ನು ಖಂಡಿತವಾಗಿಯೂ ಮಂಜೂರು ಮಾಡಬೇಕೆಂದು ಮಾನ್ಯ ಗೃಹಸಚಿವರನ್ನು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಅದೇ ರೀತಿ ಇವತ್ತು ಕಾರಾಗೃಹದ ಬಗ್ಗೆ ಮಾತನಾಡುವುದಿದ್ದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಕಾರಾಗೃಹ ಇದೆ. ಈ ಕಾರಾಗೃಹದಲ್ಲಿ ಕೋಮು ಗಲಭೆ ವಾತಾವರಣ ನಡೆಯುತ್ತಿದೆ. ಅಲ್ಲಿರುವಂಥ ಹಿಂದು ಅಥವಾ ಮುಸ್ಲಿಂ ಅಪರಾಧಿಗಳನ್ನು ಒಳಗೆ ಬಿಟ್ಟರೆ ಎರಡು ತಂಡಗಳಲ್ಲಿ ಗಲಭೆ ನಡೆಯುತ್ತದೆ. ಹಿಂದೂಗಳು ಇದ್ದರೆ ಮುಸ್ಲೀಮರನ್ನು ವಿರೋಧಿಸುವುದು, ಮುಸ್ಲಿಂ ಇದ್ದರೆ ಹಿಂದೂಗಳನ್ನು ವಿರೋಧಿಸುವುದು ಮಾಡಿ ಹಿಂದೆ ಹೋದ ಖೈದಿಗಳು ಅಂದರೆ ಸೀನಿಯರ್ ಕೈದಿಗಳು ಹೊಸಬರನ್ನು ಥಳಿಸುವ ಪರಿಸ್ಥಿತಿ ಈ ಕಾರಾಗೃಹದಲ್ಲಿ ನಡೆಯುತ್ತಿದೆ. ಆದೇ ರೀತಿಯಲ್ಲಿ ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಿದ್ದರೆ ಇವತ್ತು ಪರಿಶಿಷ್ಟ ಜಾತಿ ಮತ್ತು ಇನ್ನಿತರ ಸಾರ್ವಜನಿಕ ಪರಿಸರದಲ್ಲಿ ಅಬ್ಕಾರಿ ಇಲಾಖೆಯಿಂದ ಕಾನೂನು ಇದ್ದರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಶರಾಬು ಅಂಗಡಿಗಳನ್ನು, ಮದ್ಯದ

ಅಂಗಡಿಗಳನ್ನು, ಬಾರ್-ರೆಸ್ಟೋರೆಂಟ್‌ಗಳನ್ನು ತೆರೆಯುವ ಪರಿಸ್ಥಿತಿ ಕಾಣುತ್ತಿದ್ದೇವೆ. ಆದರೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಪ್ರಾಶಸ್ತ್ಯ ಕೊಡದೆ ಈ ಇಲಾಖೆ ಅವರನ್ನು ಕಡೆಗಣಿಸಿ ಮಂಜೂರಾತಿಯನ್ನು ನೀಡುತ್ತಿದೆ. ನಾನು ಮಾನ್ಯ ಗೃಹಸಚಿವರನ್ನು ವಿನಂತಿಸುತ್ತೇನೆ. ಹಿಂದೆ ಕೂಡ ಸರ್ಕಾರದಲ್ಲಿ ಪರಿಶಿಷ್ಟ ಜಾತಿ-ಜನಾಂಗದವರಿಗೆ ರಾಜ್ಯಮಟ್ಟದ ಅಬ್ಕಾರಿ ಗುತ್ತಿಗೆಯನ್ನು ಕರೆಯುವಾಗ ಮಂಡಲ ವ್ಯಾಪ್ತಿಯಲ್ಲಿ ಅಥವಾ ತಾಲ್ಲೂಕು ವ್ಯಾಪ್ತಿಯಲ್ಲಿ ಅವರನ್ನು ಕೂಡ ನೇಮಿಸಿಕೊಂಡು ಶರಾಬು ಗುತ್ತಿಗೆ ಅಥವಾ ವೈನ್ ಷಾಪ್‌ಗಳನ್ನು ತೆರೆಯುವ ಅಕಾಶ ಕೊಡಬೇಕೆಂದು ಮಾತು ಕೂಡ ಕೇಳಿಬರುತ್ತಿತ್ತು. ಆದರೆ ಇವತ್ತು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ ಇಂತಹ ಒಂದು ಗುತ್ತಿಗೆಯನ್ನು ಕೊಡುವಂಥ ಪರಿಸ್ಥಿತಿ ಕಾಣುತ್ತಿಲ್ಲ. ಇವರಿಗೆ ಏಕೆ ಇತರರಂತೆ ಕೊಡಬಾರದು ಎನ್ನುವಂತ ದೃಷ್ಟಿಯಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ಅಥವಾ ದಲಿತ ಹಿಂದುಳಿದ ವರ್ಗದವರಿಗೆ ಶೇಕಡಾವಾರು ಮಿತಿಯಲ್ಲಿ ಅಬ್ಕಾರಿ ಗುತ್ತಿಗೆಯನ್ನು ಕೊಡಬೇಕೆಂದು ಸಂಬಂಧಪಟ್ಟ ಸಚಿವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸುಳ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಳ್ಳಾರೆಯಲ್ಲಿ ಪೋಲೀಸ್ ಔಟ್‌ಪೋಸ್ಟ್ ಠಾಣೆ ಇದೆ. ಬಹುಶಃ ಬ್ರಿಟಿಷ್ ಸರ್ಕಾರ ಇದ್ದಾಗಿನಿಂದ ಈ ಠಾಣೆ ಮತ್ತು ಈ ಠಾಣೆಯನ್ನು ಪಕ್ಕಾ ಪೋಲೀಸ್ ಠಾಣೆಯನ್ನಾಗಿ ಮಾಡುವುದಕ್ಕೆ ಕಳೆದ ಆರೇಳು ವರ್ಷಗಳಿಂದ ಕೇಳಿಕೊಂಡರೂ ಕೂಡ ಈ ಪಕ್ಕಾ ಪೋಲೀಸ್ ಸ್ಟೇಷನ್ ಮಂಜೂರಾಗಿರುವುದಿಲ್ಲ. ಸುಳ್ಯ ತಾಲ್ಲೂಕಿನ ಕೇಂದ್ರಸ್ಥಳವಾಗಿರುವ ಬೆಳ್ಳಾರೆಯಲ್ಲಿ ಇರುವಂಥ ಪೋಲೀಸ್ ಠಾಣೆ ಏನಿದೆ, ಅದನ್ನು ಪಕ್ಕಾ ಠಾಣೆಯನ್ನಾಗಿ ಮಾಡಬೇಕೆಂದು ಈ ಮೂಲಕ ನಾನು ಮಾನ್ಯ ಗೃಹಸಚಿವರನ್ನು ಕೇಳಿಕೊಳ್ಳುತ್ತಾ, ಈ ಸಂದರ್ಭದಲ್ಲಿ ತಮ್ಮ ಇಲಾಖೆಯ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ, ಅಬ್ಕಾರಿ, ಪೋಲೀಸ್ ಮತ್ತು ಜೈಲು ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ ನನ್ನ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅಬ್ಕಾರಿ ಮತ್ತು ಪೋಲೀಸ್‌ಗೆ ನಿಜವಾಗಿಯೂ ರಾಜ್ಯದಲ್ಲಿ ಬಿಗಿಯಾದ ಮಂತ್ರಿತ್ವ ಇದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಮಂತ್ರಿತ್ವ ಸಹ ಬಿಗಿಯಾಗಿರಬೇಕು. ಇಲ್ಲದೇ ಹೋದರೆ ಇಲಾಖೆ ದಷ್ಟವಾಗಿ, ಪುಷ್ಟವಾಗಿ ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಾವು ಯೋಚನೆ ಮಾಡಿದಾಗ ಅಬ್ಕಾರಿ, ಪೋಲೀಸ್ ಮತ್ತು ಜೈಲು ಇಲಾಖೆಗಳಿಗೆ ಬಂದೋಬಸ್ತಾದ ಮಂತ್ರಿಗಳು ಇದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಒಂದು ಏನಾಗಿದೆ ಎಂದರೆ, ನಾವು ಹಿಂದಿನ ಕಾಲದಲ್ಲಿ ಇದ್ದ ಪೋಲೀಸರಿಗೂ ಈಗಿನ ಪೋಲೀಸರಿಗೂ ವ್ಯತ್ಯಾಸ ಇದೆ. ಅವರ ಪದ್ಧತಿಯನ್ನು ಈಗಿನ ಪೋಲೀಸರಲ್ಲಿ ನಾವು ಕಾಣುತ್ತಿಲ್ಲ. ನಾನು ಮಾನ್ಯ ಗೃಹಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೊಂಟಕ್ಕೆ ಬಾಂಬ್ ಕಟ್ಟಿಕೊಂಡು ಬಾಂಬ್ ಹೊಡೆಯತಕ್ಕಂಥ ಕಾಲದಲ್ಲಿ, ಪೋಲೀಸರನ್ನು ಲೆಕ್ಕಹಾಕಿದರೆ ಹಿಂದೆ ಮಲ್ಲಯುದ್ಧ ಮಾಡುತ್ತಿದ್ದರು. ಆ ಹೋಲಿಕೆ ಇರತಕ್ಕಂಥ ಪೋಲೀಸ್ ವ್ಯವಸ್ಥೆ ನಮ್ಮಲ್ಲಿದೆ. ನಮ್ಮಲ್ಲಿ ಪೋಲೀಸರಿಗೆ ವೀರಪ್ಪನ್‌ನ್ನು ಹಿಡಿಯಿರಿ ಎಂದರೆ, ಆತ ಪೋಲೀಸರನ್ನು ಹಿಡಿದುಕೊಂಡು ಹೋದ. ಈ ಪರಿಸ್ಥಿತಿ ಇರುವಾಗ ವೀರಪ್ಪನ್ ಹತ್ತಿರ ಇರತಕ್ಕಂಥ ಆಯುಧಗಳು ನಮ್ಮ ಪೋಲೀಸ್ ಇಲಾಖೆಯಲ್ಲಿ ಇಲ್ಲ. ಗಂಧದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡತಕ್ಕಂಥ ವಾಹನಗಳು ಏನಿವೆ, ಅವರು ಮಂಗಳೂರು ಕಡೆಗೆ ಅಥವಾ ಸಕಲೇಶಪುರ ಕಾಡಿನಲ್ಲಿ ಮರ ಕಡಿದು ಕಾಡಿನಲ್ಲಿ ಕಾರಿನಲ್ಲಿ ತುಂಬಿಕೊಂಡು ಬರುತ್ತಿರಬೇಕಾದರೆ, ಕಾರಿನ ಕಾರ್ಬೋರೇಟರ್‌ಗಳನ್ನು ಬಿಚ್ಚಿ ಬಿಟ್ಟು ಒಂದು ಲೀಟರ್‌ಗೆ 3 ಕಿಲೋಮೀಟರ್

ಕೊಡುವುದಿಲ್ಲ, ಅಂತ ಕಾರ್ಬೋರೇಟರ್ ಹಾಕಿಕೊಂಡು ಇವರು ಬರುತ್ತಾರೆ. ಅವರ ವಾಹನಗಳು ಗಂಟೆಗೆ 140-145 ಕಿಲೋಮೀಟರ್ ಸ್ಪೀಡ್‌ನಲ್ಲಿ ಬಂದರೆ ಇವರ ವಾಹನಗಳು 3-4 ಕಿಲೋಮೀಟರ್ ವೇಗದಲ್ಲಿ ಹೋಗುತ್ತವೆ. ಮಾನ್ಯ ಮಹದೇವ್ ಅವರು ಹೇಳುತ್ತಿದ್ದರು ಪೋಲೀಸ್ ಇಲಾಖೆಯ ವಾಹನವನ್ನು ಎಸ್.ಪಿ. ಯವರು ತಳ್ಳುತ್ತಿದ್ದರು ಎಂದು. ಸ್ವಾಮಿ, ನಾನು ತಮಗೆ ಹೇಳುತ್ತೇನೆ, ನಾನೂ ಮತ್ತು ಮಾನ್ಯ ಸಚಿವರಾದ ರಮೇಶ್‌ರವರೂ ನಮ್ಮ ಕ್ಷೇತ್ರಕ್ಕೆ ಹೋಗಿದ್ದೆವು. ಸಾಮಾನ್ಯವಾಗಿ ಮಂತ್ರಿಗಳು ಜಿಲ್ಲೆಗಳಲ್ಲಿ ಪ್ರವಾಸ ಹೋದಾಗ ಪೋಲೀಸ್ ಎಸ್ಕಾರ್ಟ್ ಕೊಡುತ್ತಾರೆ. ಅವರು ಬಾರ್ಡ್‌ರ್‌ನಲ್ಲಿ ನಿಂತು ಸೆಲ್ಯೂಟ್ ಹೊಡೆದರೆ ಮಂತ್ರಿಗಳ ಕಾರು ಊರು ತಲುಪಿರುತ್ತದೆ. ಆದರೆ ಪೋಲೀಸರು ಇಲ್ಲಿ ತಮ್ಮ ಜೀಪನ್ನು ತಳ್ಳಿ ಕೊಂಡು ಹತ್ತುತ್ತಾರೆ. ನನ್ನ ಒಂದು ಅನುಭವವನ್ನು ಹೇಳುವುದಾದರೆ, ಮಂಡ್ಯದಿಂದ ಒಂದು ಪೆಟ್ರೋಲ್ ಜೀಪು ಬಂತು. ನೀನು ಮುಂದೆ ನಡಿ ಎಂದು ಹೇಳಿ ಕಳುಹಿಸಿದೆವು. ಆ ಜೀಪಿನ ಸೈಲೆನ್ಸರ್‌ನಲ್ಲಿ ಬೆಂಕಿ ಹತ್ತಿ ಉರಿಯುತ್ತಿತ್ತು.

ಶ್ರೀ ಎಂ.ವಿ. ವೆಂಕಟಪ್ಪ :ಹೊಸ ಜೀಪುಗಳನ್ನು ಕೊಟ್ಟಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಕಡೆ ಇನ್ನೂ ಕೊಟ್ಟಿಲ್ಲ. ತಮ್ಮ ಕಡೆ ಹೊಸ ಜೀಪುಗಳನ್ನು ಕೊಟ್ಟಿರಬಹುದು. ಏಕೆಂದರೆ ಹಿಂದೆ ಗೃಹ ಇಲಾಖೆ ತಮ್ಮ ಕಡೆ ಇತ್ತು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ. ಇವತ್ತು ಈ ಇಲಾಖೆಗೆ ಹೊಸ ಕಾಯಕಲ್ಪ ಆಗಬೇಕು. 135 ಕೋಟಿ ರೂ.ಗಳನ್ನು ಕೊಡುವುದಕ್ಕೆ ಮಾಸ್ಟರ್ ಪ್ಲಾನ್ ನಮ್ಮ ಸರ್ಕಾರದಲ್ಲಿ ಸಿದ್ಧವಾಗಿದೆ. ಅದಕ್ಕೆ ಫೈನಾನ್ಸ್ ಕ್ಲಿಯರೆನ್ಸ್ ಆಗಬೇಕು. ಈಗತಾನೆ ಭಾಷಣ ಮಾಡಿದಂಥ ಮಾನ್ಯ ಸದಸ್ಯರು ಹೇಳಿದರು. ನೀರಾವರಿ ಇಲಾಖೆಗೆ ಯಾವ ರೀತಿ ಆದ್ಯತೆಯನ್ನು ಕೊಡುತ್ತೇವೆಯೋ ಅದೇ ರೀತಿ ಈ ಇಲಾಖೆಗೆ ಆದ್ಯತೆಯನ್ನು ಕೊಡಬೇಕು ಎಂದು. ಇಡೀ ರಾಜ್ಯದಲ್ಲಿ ಎಲ್.ಟಿ.ಟಿ.ಇ. ಗಳ ಹಾವಳಿ ಇದೆ. ಇಡೀ ರಾಷ್ಟ್ರದಲ್ಲಿರತಕ್ಕ ಅನೇಕ ವಿ.ವಿ.ಐ.ಪಿ.ಗಳು ಬಂದು ವಾಸ ಮಾಡತಕ್ಕ ಸ್ಥಳ ನಮ್ಮ ರಾಜ್ಯವಾಗಿದೆ. ನಮ್ಮ ರಾಜ್ಯವನ್ನು ಜಡ್ ಜೋನ್ ಎಂದು ಕರೆಯುತ್ತೇವೆ. ಈ ಜಡ್ ಜೋನ್‌ನಲ್ಲಿ ಮಾನ್ಯ ಜೈಲ್ ಸಿಂಗ್‌ರವರು. ಮಾನ್ಯ ಬೂಟಾ ಸಿಂಗ್‌ರವರು. ಮಾನ್ಯ ಸಂಜೀವ ರೆಡ್ಡಿಯವರು. ತಮಿಳ್ನಾಡಿನ ಮಾಜಿ ರಾಜ್ಯಪಾಲರಾದಂಥ ಅಲೆಗ್ಸಾಂಡರ್‌ರವರಂಥ ವಿ.ವಿ.ಐ.ಪಿ.ಗಳು ಬಂದು ನಮ್ಮ ರಾಜ್ಯದಲ್ಲಿ ನೆಲೆಸಿದ್ದಾರೆ. ಇವರು ಇಲ್ಲಿ ಏತಕ್ಕೆ ನೆಲೆಸಿದ್ದಾರೆ. ಹೊರ ರಾಜ್ಯಗಳಲ್ಲಿ ಎಲ್.ಟಿ.ಟಿ.ಇ. ಭಯ ಇದೆ. ಈ ಭಯವನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಇಲ್ಲಿಗೆ ಬಂದು ವಾಸಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಪೋಲೀಸ್ ಸ್ಟ್ರೆಸ್ತ್ ಎಷ್ಟು ಎಂಬುದನ್ನು ನಾವು ಮೊದಲು ಚಿಂತನೆ ಮಾಡಬೇಕಾಗಿದೆ. ಈ ಇಲಾಖೆಗೆ ಹೊಸ ಕಾಯಕಲ್ಪವನ್ನು ಮಾಡದಿದ್ದರೆ. ನಮಗಿರತಕ್ಕ ವೈರ್‌ಲೆಸ್ ಸೆಟ್‌ಗಳು. ನಮ್ಮಲ್ಲಿರತಕ್ಕ ವಾಹನಗಳು, ನಮ್ಮ ಪೋಲೀಸರ ಹತ್ತಿರ ಏನೇನು ವ್ಯವಸ್ಥೆ ಇದೆ ಅದನ್ನೆಲ್ಲಾ ಸಮಗ್ರವಾಗಿ ಬದಲಾವಣೆ ಮಾಡಬೇಕು. ನಾವು ಮಲ್ಲಯುದ್ಧವನ್ನು ಮಾಡುವುದಕ್ಕಾಗುವುದಿಲ್ಲ. ಸೊಂಟಕ್ಕೆ ಬಾಂಬ್‌ನ್ನು ಕಟ್ಟಿಕೊಂಡು ಪ್ರಾಣ ತೆಗೆಯುವ ಮಟ್ಟಕ್ಕೆ ಹೋಗಿರುವಾಗ, ನಮ್ಮ ಈ ಪೋಲೀಸರ ವ್ಯವಸ್ಥೆ ಯಾವ ರೀತಿ ಇದೆ ಎಂಬುದನ್ನು ನೋಡಿದರೆ ಹಳೇ ಕಾಲದ ಪದ್ಧತಿಯಲ್ಲಿದೆಯೇ ಹೊರತು ಹೊಸ ಪದ್ಧತಿಯನ್ನು ಇನ್ನೂ ನಾವು ಅಳವಡಿಸಿಕೊಂಡಿಲ್ಲ. ನಮ್ಮಲ್ಲಿರತಕ್ಕ ಪೋಲೀಸರಿಗೆ ಕೋವಿ ಹೊಡೆಯುವುದಕ್ಕೆ ಬರುವುದಿಲ್ಲ. ಪರೀಕ್ಷೆ ಮಾಡಬೇಕೆಂದರೆ ನೀವು ಯಾರಿಗಾದರೂ ಕೋವಿಯನ್ನು ಹೊಡೆಸಿ ನೋಡಿ. ಅವರಿಗೆ ಹೊಡೆಯುವುದಕ್ಕೇ ಬರುವುದಿಲ್ಲ. ಫಾರೆಸ್ಟ್‌ನಲ್ಲಿ ಎಲ್ಲೋ ಹೊಡೆಯುವ ರೀತಿಯಲ್ಲಿ ಇವರು ಹೊಡೆಯುತ್ತಾರೆ. ಇವರಿಗೆ ಮೊದಲು ಸರಿಯಾದ ತರಬೇತಿಯನ್ನು ಕೊಡಬೇಕು. ವಿ.ವಿ.ಐ.ಪಿ.ಗಳು ಇರುವಂಥ ಈ ನಮ್ಮ ರಾಜ್ಯಗಳಲ್ಲಿ

ಇವರುಗಳಿಗೆ ಒಳ್ಳೆಯ ಸೆಕ್ಯುರಿಟಿಯನ್ನು ಕೊಡಬೇಕಾದರೆ ಹೊರರಾಜ್ಯಗಳಾದ ಪಂಜಾಬ್, ಕಾಶ್ಮೀರಗಳಲ್ಲಿ ನಾವು ಏನು ನೋಡುತ್ತಿದ್ದೇವೆ ಅಂಥ ವ್ಯವಸ್ಥೆಯನ್ನು ನಾವು ಮಾಡಬೇಕಾಗಿದೆ. 1983-84ರಲ್ಲಿ 94 ಕೋಟಿ ರೂ.ಗಳನ್ನು ಈ ಇಲಾಖೆಗೆ ಕೊಟ್ಟಿದ್ದೆವು. ಆದರೆ ಕೇವಲ 8 ವರ್ಷದ ಅವಧಿಯಲ್ಲಿ ಅಂದರೆ ಇವತ್ತು 223 ಕೋಟಿ ರೂ.ಗಳನ್ನು ಸರ್ಕಾರ ಕೊಡುತ್ತಿದೆ. ಅಂದರೆ ಕೇವಲ 8 ವರ್ಷಗಳಲ್ಲಿ 135 ಕೋಟಿ ರೂ.ಗಳನ್ನು ಹೆಚ್ಚಿಗೆ ಕೊಡತಕ್ಕ ಈ ಇಲಾಖೆಯಲ್ಲಿ ಏನು ಬದಲಾವಣೆ ಆಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ನಿಜವಾಗಿಯೂ ಏನೇನೂ ಬದಲಾವಣೆ ಆಗಿಲ್ಲ. ಲಾ ಅಂಡ್ ಆರ್ಡರ್ ಪ್ರಾಬ್ಲಂ ಹಿಂದೆ ಯಾವ ರೀತಿ ಇತ್ತೋ ಅದೇ ರೀತಿ ಇದೆ. ನಿಮ್ಮ ಪೋಲೀಸ್ ಇಲಾಖೆಯಲ್ಲಿ ಕೆಲವರು ಬಹಳ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ಹೋರಾಟ ಮಾಡತಕ್ಕವರಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ನಾಗರ-ಹೊಳೆಯಲ್ಲಿ ಪೋಲೀಸ್ ಎಸ್.ಪಿ. ಮತ್ತು ಡಿ.ಸಿ. ಇಬ್ಬರೂ ಇದ್ದ ಸಂದರ್ಭದಲ್ಲಿ 25 ಕಾರುಗಳಲ್ಲಿ ಬಂದು ಕಾಡಿಗೆ ಬೆಂಕಿ ಹಚ್ಚಿ ಓಡಿಹೋಗಿದ್ದಾರೆ. ಈ ಕಾಡನ್ನು ಬೆಳೆಸುವ ಸಲುವಾಗಿ ನಾವು 76 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ. ನಮ್ಮ ನಾಗರಹೊಳೆಯಲ್ಲಿ ಬೆಂಕಿ ಬಿದ್ದಿದ್ದರಿಂದ ಸುಮಾರು 20-30 ಕೋಟಿ ರೂ. ಹಾಳಾಗಿ ಹೋದುದನ್ನು ನಾವು ನೋಡುತ್ತಿದ್ದೇವೆ. ಅಷ್ಟೇ ಅಲ್ಲ ಅನೇಕ ವನ್ಯ ಪ್ರಾಣಿಗಳು ಸತ್ತುಹೋದುವು. ಆದುದರಿಂದ ನಮ್ಮ ಪೋಲೀಸ್ ಇಲಾಖೆಗೆ ಒಂದು ಹೊಸ ವ್ಯವಸ್ಥೆಯನ್ನು ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಇನ್ನೊಂದು ಮುಖ್ಯ ಕಾರಣ ಎಂದರೆ ಅಧಿಕಾರಿಗಳಲ್ಲಿರುವ ನಿರ್ಲಕ್ಷ್ಯತನ. ಇವರ ನಿರ್ಲಕ್ಷ್ಯತನಕ್ಕೆ ಕಾರಣ ಏನು ಎಂಬುದನ್ನು ಕಂಡು ಹಿಡಿದರೆ ಎಲ್ಲಾ ಸರಿಹೋಗುತ್ತದೆ. ಉದಾಹರಣೆಗೆ ಬೆಂಗಳೂರಿನಲ್ಲಿ ಕಾವೇರಿ ನೀರಿಗೆ ಸಂಬಂಧಪಟ್ಟಂತೆ ಗಲಾಟೆ ಕಳೆದ ತಿಂಗಳು 13-14 ರಂದು ನಡೆಯಿತು. ಆಗ ಇಡೀ ರಾಜ್ಯ ಸರ್ಕಾರಕ್ಕೇ ಕೆಟ್ಟ ಹೆಸರು ಬಂತು. ತಮಿಳ್ನಾಡಿನಲ್ಲಿ ಸ್ಟ್ರೈಕ್ ಆಯಿತು. ಅಲ್ಲಿ ಯಾವ ರೀತಿ ಪೋಲೀಸರು ಬಂದೋಬಸ್ತ್ ಮಾಡಿದ್ದರು ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ನಮ್ಮ ಪೋಲೀಸರು ಬಂದೋಬಸ್ತ್ ಮಾಡುವುದಕ್ಕೆ ಏನಾಗಿತ್ತು? ಇದನ್ನೆಲ್ಲಾ ತಾವು ಸಮಗ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಗಲಾಟೆಗೆ ಸಂಬಂಧಪಟ್ಟಂತೆ ನೂರಾರು ಕೋಟಿ ರೂ.ಗಳ ಹಾನಿಯಾಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ನಾವು ಸಾರ್ವಜನಿಕರಿಗೆ ರಕ್ಷಣೆಯನ್ನು ಕೊಡುತ್ತೇವೆಂದು ಹೇಳತಕ್ಕ ಈ ಸರ್ಕಾರ ನಮ್ಮ ರಾಜ್ಯಸರ್ಕಾರದ ಒಬ್ಬ ಮಂತ್ರಿಯ ಮನೆಗೆ ಬಾಂಬ್ ಎಸೆದವರನ್ನು ಕಂಡುಹಿಡಿಯತಕ್ಕ ಶಕ್ತಿಯನ್ನು ತೋರಿಸಲಿಲ್ಲ. ಅಂದರೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಇನ್ನೊಂದಿಲ್ಲ ಎಂದು ಹೇಳಬೇಕಾಗಿದೆ. ಮಂತ್ರಿಗಳ ಮನೆಗೆ ಬಾಂಬ್ ಹಾಕಿದಾಗ ಏನಾಯಿತೆಂಬುದನ್ನು ನೋಡದಿದ್ದರೆ, ಅದನ್ನು ಕಂಡುಹಿಡಿಯದೇ ಇದ್ದರೆ ಇನ್ನು ಸಾಮಾನ್ಯ ಜನರಿಗೆ ಯಾವ ರೀತಿಯ ರಕ್ಷಣೆ ಈ ಇಲಾಖೆಯಿಂದ ಸಿಕ್ಕುತ್ತದೆಂಬುದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಹೊಸ ಒಂದು ವ್ಯವಸ್ಥೆಯನ್ನು ಮಾಡದೇ ಹೋದರೆ ಸಾಧ್ಯವಾಗುವುದಿಲ್ಲ. ತಮಗೆ ಇನ್ನೊಂದು ವಿನಂತಿ ಮಾಡುತ್ತೇನೆ. ಪೋಲಿಸ್ ಸ್ಟೇಷನ್‌ಗೆ ಮರ್ಯಾದಸ್ತರು ಯಾರು ಹೋಗುವಹಾಗೆಯೇ ಇಲ್ಲ. ನಾನು ಮೊದಲೇ ಹೇಳಿದ್ದೇನೆ. ಕೆಲವರು ಮರ್ಯಾದಸ್ತರು ಇದ್ದಾರೆ, ಇಲ್ಲ ಎಂದು ಅಲ್ಲ, ಆದರೆ ಅಷ್ಟೇ ನೀಚರೂ ಇದ್ದಾರೆ. ಹೆಣ್ಣುಮಕ್ಕಳು ಯಾರೂ ಪೋಲೀಸ್ ಸ್ಟೇಷನ್‌ಗೆ ಹೋಗುವಹಾಗೆ ಇಲ್ಲ. ಹೆಣ್ಣು ಮಕ್ಕಳು ಪೋಲೀಸ್ ಸ್ಟೇಷನ್‌ಗೆ ಕೇಸ್ ಕೊಡಬೇಕೆಂದು ಹೋದರೆ ಅಲ್ಲಿರುವ ಸಬ್‌ಇನ್‌ಸ್ಪೆಕ್ಟರ್ ಉದ್ದಕ್ಕೂ ನೋಡುತ್ತಾನೆ, ಎಲ್ಲಿಂದ ಬಂದಳು ಎಂದು ಅಲ್ಲ, ಅಲ್ಲಿ ರೇಪ್ ನಡೆಯುತ್ತದೆ, ಮಾನ್ಯ ಗೃಹಮಂತ್ರಿಗಳು ತಿಳಿದುಕೊಳ್ಳಬೇಕು. ಸಬ್‌ಇನ್‌ಸ್ಪೆಕ್ಟರ್ ರೇಪ್ ಮಾಡಿರತಕ್ಕಂಥಾದ್ದು ಇದೆ, ಸರ್ಕಲ್ ಇನ್‌ಸ್ಪೆಕ್ಟರ್

ರೇಪ್ ಮಾಡಿರತಕ್ಕಂಥದ್ದು ಇದೆ. ಅದಕ್ಕಾಗಿ ನಾನು ಸರಕಾರಕ್ಕೆ ಒತ್ತಾಯ ಮಾಡುತ್ತೇನೆ, ಹೆಣ್ಣು ಮಕ್ಕಳ ಕಾನ್‌ಸ್ಟೇಬಲ್‌ಗಳನ್ನು ಹೆಚ್ಚು ತೆಗೆದುಕೊಳ್ಳಿ. ಆಗ ಒಂದು ರೀತಿಯ ಕೋ-ಆರ್ಡಿನೇಷನ್ ಇರುತ್ತದೇ. ಹೆಣ್ಣು ಮಕ್ಕಳಿಗೆ ತೊಂದರೆಯಾದಾಗ ಹೋಗಿ ಅಪೀಲ್ ಮಾಡುವಂತಹ ಅವಕಾಶ ಬರುತ್ತದೆ. ಇವತ್ತು ನಾಲ್ಕು ಪರ್‌ಸೆಂಟ್ ವರ್ಕಿಂಗ್ ವುಮೆನ್ಸ್ ಇದ್ದಾರೆ. ಈ ಒಂದು ಪರಿಸ್ಥಿತಿಯಲ್ಲಿ ಲೇಡೀಸ್ ಪೋಲೀಸ್ ಸ್ಟೇಷನ್ ತೆರೆಯದೇ ಹೋದರೆ ಕಷ್ಟವಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ. ಈ ರೀತಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ತುಂಬದೇ ಹೋದರೇ ಪೋಲೀಸ್ ಇಲಾಖೇಗೇ ಕಾಯಕಲ್ಪ ಬರುವುದಿಲ್ಲ. ಇದಕ್ಕೋಸ್ಕರ ಮುಂದೆ ತೆಗೆದುಕೊಳ್ಳತಕ್ಕಂಥ ಹುದ್ದೆಗಳಲ್ಲಿ ಅರ್ಧಕ್ಕರ್ಧ ಭಾಗ ಹೆಣ್ಣು ಮಕ್ಕಳು ಕಾನ್‌ಸ್ಟೇಬಲ್‌ಗಳನ್ನು ದಫೇದಾರ್‌ಗಳನ್ನು ಸಬ್‌ಇನ್‌ಸ್ಪೆಕ್ಟರ್‌ಗಳನ್ನು ತೆಗೆದುಕೊಂಡರೆ ಆಗ ಒಂದು ಬಿಗಿ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಒತ್ತಾಯ ಮಾಡುತ್ತೇನೆ. ಒಂದು ಹೆಣ್ಣು ಮಕ್ಕಳ ಸ್ಟೇಷನ್ ಮಾಡಲಿ, ಇದು ಬೆಂಗಳೂರಿನಲ್ಲಿ ಆಗಬೇಕು. ವಿಧಾನ ಸೌಧದಿಂದ ಶುರುವಾಗಬೇಕು, ಇಲ್ಲಿಂದಲೇ ಇದನ್ನು ಪ್ರಾರಂಭ ಮಾಡೋಣ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಕಾನ್‌ಸ್ಟೇಬಲ್ ಇರತಕ್ಕಂಥ ಪೋಲೀಸ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡತಕ್ಕದ್ದು ಮುಖ್ಯ. ಇದನ್ನು ಮಾಡದೇ ಹೋದರೆ ನಿಜಕ್ಕೂ ಸಹ ಮುಂದೆ ತೊಂದರಯಾಗುತ್ತದೆ. ಕಾಲ ಬದಲಾವಣೆ ಆಗಿದೆ, ಕಾಲ ಬದಲಾವಣೆ ಆಗಿರತಕ್ಕಂಥ ಸಂದರ್ಭದಲ್ಲಿ ಕಾಲಕ್ಕೆ ತಕ್ಕ ಹಾಗೆ ಹೊಂದಿಕೊಳ್ಳಬೇಕೇ ಹೊರತು ಮಲ್ಲಯುದ್ಧ ಮಾಡುವ ಕಾಲಕ್ಕೆ ಹಿಂದಿರುಗುವುದಕ್ಕೆ ಹೊಂದಿಕೊಳ್ಳುವುದಕ್ಕೆ ಆಗುವುದಿಲ್ಲ. ಹಿಂದೆ ಒಬ್ಬ ಕಾನ್‌ಸ್ಟೇಬಲ್ ಒಂದು ಊರನ್ನೇ ಕಂಟ್ರೋಲ್ ಮಾಡುತ್ತಿದ್ದ. ಇವತ್ತು ಒಬ್ಬ ಎಸ್.ಪಿ. ಕೈಯಲ್ಲಿ ಒಂದು ಊರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಎಸ್.ಪಿ. ಕೈಯಲ್ಲೂ ಸಹ ಒಂದು ಊರನ್ನು ಕಂಟ್ರೋಲ್ ಮಾಡುವುದಕ್ಕೆ ಆಗದ ಪರಿಸ್ಥಿತಿ ಬಂದಿದೇ. ಇವತ್ತು 20 ಜನ ಎಸ್.ಪಿ. ಗಳನ್ನು ಜಾಸ್ತಿ ಮಾಡಿರುತ್ತೀರಿ. ಎಸ್.ಪಿ.ಗಳನ್ನು ಜಾಸ್ತಿ ಮಾಡುವುದರಿಂದ, ಡಿ.ಐ.ಜಿ.ಗಳನ್ನು ಜಾಸ್ತಿ ಮಾಡುವುದರಿಂದ ಈ ಪೋಲೀಸ್ ಇಲಾಖೆಗೆ ಕಾಯಕಲ್ಪ ಆಗುವುದಿಲ್ಲ. ನೀವು ಕಾನ್‌ಸ್ಟೇಬಲ್ಸ್‌ನ್ನು ಜಾಸ್ತಿ ಮಾಡಬೇಕು. ಇದು ಬಹಳ ಮಹತ್ವವಾದುದು ಎಂದು ಹೇಳುತ್ತಿದ್ದೇನೆ. ಒಂದು ವಿಚಾರ ತಮಾಷೆಯಾಗಿದೆ ಹೇಳುತ್ತೇನೆ. ಮಾನ್ಯ ಗರುಡಾಚಾರ್‌ರವರು ಡಿ.ಜಿ.ಪಿ. ಆಗಿದ್ದರು. ಅವರು ನನ್ನ ಊರಿನ ಪಕ್ಕದ ಬಿಂಡಿಗನವಿಲೆ ಎಂಬ ಊರಿನವರು. ನಾನು ಒಂದು ದಿವಸ ಅವರ ಆಫೀಸಿಗೆ ಹೋದೆ. ನೀವು ಪೋಲೀಸ್ ಇಲಾಖೆಯಲ್ಲಿ ಉನ್ನತವಾದ ಹುದ್ದೆಗೆ ಬಂದಿರುತ್ತೀರಿ, ಆದರೆ ನಿಮ್ಮ ಊರಿಗೆ ನೀವು ಏನೂ ಮಾಡಿಕೊಡಲಿಲ್ಲವಲ್ಲ ಎಂದು ಕೇಳಿದೆ. ಒಂದು ಪೋಲೀಸ್ ಸ್ಟೇಷನ್‌ನ್ನಾದರೂ ಮಾಡಿರಿ ಎಂದು ಕೇಳಿದೆ. ಅವರು ಅಲ್ಲಿ ಒಂದು ಪೋಲೀಸ್ ಸ್ಟೇಷನ್ನು ಮಾಡಿದರು ಅಲ್ಲಿ ಮೊದಲು ಔಟ್‌ಪೋಸ್ಟ್ ಇತ್ತು. ಅಲ್ಲಿ ಈಗ ನಾಲ್ಕು ಜನ ದಫೇದಾರರು, ಇಬ್ಬರು ಸಬ್‌ಇನ್‌ಸ್ಪೆಕ್ಟರ್‌ಗಳು, 26 ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇದ್ದಾರೆ. ಅಧ್ಯಕ್ಷಣಿಯವರೇ ತಮಗೆ ಗೊತ್ತು, ಬಿಂಡಿಗನವಿಲೆ ಊರು ತಮಗೇನೂ ದೂರ ಅಲ್ಲ. ಇವತ್ತು ಗಂಡಹೆಂಡತಿ ಜಗಳ ಆಡಿ ಹೋದರೆ ಅಲ್ಲಿರತಕ್ಕ 26 ಜನಕ್ಕೂ ಕಾಣಿಕೆ ಒಪ್ಪಿಸಿ ಹೋಗಬೇಕು. ಔಟ್ ಪೋಸ್ಟ್ ಇದ್ದಾಗ ಅಲ್ಲಿದ್ದ ನಾಲ್ಕು ಕಾನ್‌ಸ್ಟೇಬಲ್‌ಗಳು ಒಬ್ಬ ಸಬ್‌ಇನ್‌ಸ್ಪೆಕ್ಟರ್‌ನ್ನು ನೋಡಿ ಒಳಗೆ ಹೊರಟು ಹೋಗುತ್ತಿದ್ದರು. ಆದರೆ ಇವತ್ತು 26 ಜನರನ್ನೂ ನೋಡಬೇಕು, ತಮಗೆ ಗೊತ್ತಿದೆ ಹೇಗೆ ನಡೆಯುತ್ತಿದೆ ಎಂಬುದು. ತಮ್ಮ ಹತ್ತಿರ ಎಲ್ಲಾ ಇಲಾಖೆ ಇದೆ, ಇಂಟಲಿಜೆನ್ಸ್ ಇದೆ. ಯಾರು ಯಾರು ಅಂತಹವರು ಇದ್ದಾರೆ ಪರಿಶೀಲಿಸಿ ಅವರ ಸಂಬಳ ಡ್ರಾಪ್ ಮಾಡಿಸಿ. ಇದು ಸಂಬಳದ ಕಾಲ ಅಲ್ಲ, ಇದು ಗಿಂಬಳದ ಕಾಲ, ತಾವು ಕೊಡತಕ್ಕಂಥ ಸಂಬಳ ಕೆಲವು ಅಧಿಕಾರಿಗಳಿಗೆ ಎರಡು ದಿವಸಕ್ಕೆ ಸಾಕಾಗುವುದಿಲ್ಲ. ಆ ಮಟ್ಟಕ್ಕೆ ಅವರ ವ್ಯವಹಾರಗಳು ಇದ್ದಾವೆ. ಅಂತಹವರನ್ನು ಬಲಿ ಹಾಕದೇ

ಹೋದರೆ ಹೇಗೆ? ಅದೂ ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಇವರನ್ನು ಬಲಿ ಹಾಕದೇ ಹೋದರೆ ಇನ್ನು ಯಾರ ಕಾಲದಲ್ಲಿ ಇದನ್ನು ನೋಡುತ್ತೇವೋ ಗೊತ್ತಿಲ್ಲ. ಇದಕ್ಕೆ ತಾವು ಒಂದು ಹೊಸ ರೂಪ ಕೊಡಬೇಕು. ಹೆಚ್ಚು ಕಾನ್‌ಸ್ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಸರ್ಕಲ್ ಇನ್‌ಸ್ಪೆಕ್ಟರ್‌ಗಳಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಆದರೆ ಡಿ.ಎಸ್.ಪಿ.ಗಳಿಗೆ ಪ್ರಮೋಷನ್ ಕೊಡತಕ್ಕಂಥ ವಿಚಾರ ಬಹಳ ಹಿಂದುಳಿದಿದೆ ಎಂದು ಬಹಳ ಜನ ದೂರು ಹೇಳುತ್ತಿದ್ದಾರೆ, ತಾವು ಇವರಿಗೂ ಪ್ರಮೋಷನ್ಸ್ ಕೊಡಬೇಕು, ಕೆಳಗಿನ ಹಂತದಲ್ಲಿರತಕ್ಕಂಥ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಉತ್ತೇಜನ ಕೊಡದೇ ಹೋದರೆ. ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಉತ್ತೇಜನ ಕೊಡದೇ ಹೋದರು ಅದು ಸರಿ ಆಗುವುದಿಲ್ಲ. ಪೋಲೀಸ್ ಇಲಾಖೆ ಎಂದರೆ ಒಂದು ಆಗಿ ಇರಬೇಕು, ಘನತೆ ಇರಬೇಕು. ಆದರೆ, ಇವರ ಎಲ್ಲಾ ವ್ಯವಹಾರವನ್ನು ಸಾರ್ವಜನಿಕರ ಜೊತೆ ಶುರು ಮಾಡಿದ್ದಾರೆ. ಅವರ ಜೊತೆ ಊಟ ಮಾಡುವುದು, ಅವರ ಜೊತೆ ಕೂರುವುದು. ಅವರ ಜೊತೆ ಮಲಗುವುದು. ಪೋಲೀಸ್ ಇಲಾಖೆ ಎಂದರೆ ಒಂದು ರೀತಿ ಭಯ ಇರಬೇಕು, ಇಲ್ಲದೇ ಹೋದರೆ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನನಗೆ ಗೊತ್ತಿದೆ ನಾವು ಇನ್ನೂ ಎರಡು ಕಡೆ ಹೋಗಬೇಕಾಗಿದೆ. ಇನ್ನು ಹೆಚ್ಚು ಸಮಯ ತೆಗೆದುಕೊಳ್ಳದೆ ಒಂದು ಮಾತು ಹೇಳುತ್ತೇನೆ. ನಮ್ಮ ರಾಜ್ಯಕ್ಕೆ 1200 ಪೋಲೀಸ್ ಸ್ಟೇಷನ್ ಅವಶ್ಯಕತೇ ಇದೆ, ನನಗೆ ಸಿಕ್ಕಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಈಗ 700 ಪೋಲೀಸ್ ಸ್ಟೇಷನ್ ಇದೆ, ಇನ್ನೂ 500 ಪೋಲೀಸ್ ಸ್ಟೇಷನ್ ಷಾರ್ಟೇಜ್ ಇದೆ. ಅದರೊಳಗೆ 340,20 ಕಾನ್‌ಸ್ಟೇಬಲ್ ಇರತಕ್ಕದ್ದು. 354 ಕಾನ್‌ಸ್ಟೇಬಲ್ ಇರತಕ್ಕ ಔಟ್ ಪೋಸ್ಟ್‌ಗಳು. ಮಹಾರಾಷ್ಟ್ರದಲ್ಲಿ ನಾವು ನೋಡುತ್ತೇವೇ. ಇವತ್ತು ಅಲ್ಲಿ 500 ಜನಕ್ಕೆ ಒಬ್ಬ ಪೋಲೀಸ್ ಪೇದೆ ಇದ್ದಾನೆ, ನಮ್ಮ ರಾಜ್ಯದಲ್ಲಿ 1400 ಜನಕ್ಕೆ ಒಬ್ಬ ಪೇದೆ ಇರುವುದನ್ನು ನಾವು ನೋಡುತ್ತೇವೆ. 48-50 ಸಾವಿರ ಜನ ಪೋಲೀಸರು ಇರಬಹುದು. ಹೋಳಿಹಬ್ಬ ಆಯಿತು ಎಂದರೆ ಪೋಲೀಸರು ಹೋಗಬೇಕು. ಹುಡುಗಿಯರನ್ನು ಚುಡಾಯಿಸಿದರು ಎಂದರೆ ಪೋಲೀಸರು ಹೋಗಬೇಕು. ಮಸೀದಿಗೆ ಬೆಂಕಿ ಹಾಕಿದರು ಎಂದರೆ ಪೋಲೀಸರು ಹೋಗಬೇಕು, ಬಿ.ಜೆ.ಪಿ. ಯವರ ರಾಮರಥ ಬರುತ್ತಿದೆ ಎಂದರೆ ಪೋಲೀಸರು ಹೋಗಬೇಕು, ಕೋಮುಗಲಭೆ ಆಯಿತು ಎಂದರೆ ಪೋಲೀಸರು ಹೋಗಬೇಕು. ವಿದ್ಯಾರ್ಥಿಗಳ ಸ್ಟ್ರೈಕ್ ಎಂದರೆ ಪೋಲೀಸರು ಹೋಗಬೇಕು, ಕಾರ್ಮಿಕರ ಸ್ಟ್ರೈಕ್ ಎಂದರೆ ಪೋಲೀಸರು ಹೋಗಬೇಕು. ಇಷ್ಟೆಲ್ಲಾ ಆದರೆ ನಮ್ಮ ರಾಜ್ಯದಲ್ಲಿರತಕ್ಕ 48 ಸಾವಿರ ಜನ ಪೋಲೀಸರು ಅಲ್ಲಿಗೆ ಹೋಗಬೇಕು. 48 ಸಾವಿರ ಜನ ಪೋಲೀಸರು ಇವೆಲ್ಲಾ ಮಾಡಬೇಕಾಗಿದೆ. ಆದುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರಾಜ್ಯವನ್ನು ಜೆಡ್ ಜೋನ್ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಕೆಲವು ವಿ.ವಿ.ಐ.ಪಿ. ಗಳು ಬಂದು ವಾಸ ಮಾಡುತ್ತಿದ್ದಾರೆ. ಇವತ್ತು ವಿ.ವಿ.ಐ.ಪಿ.ಗಳು ಬಂದಿದ್ದರೂ ಸಹ ಎಲ್.ಟಿ.ಟಿ.ಇ. ಗಳ ಪ್ರಭಾವ ನಮ್ಮ ರಾಜ್ಯದಲ್ಲೂ ಇದೆ. ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಿಗೆ ಅವರು ಒಂದು ಪತ್ರ ಬರೆದಿದ್ದರು. ಮುಖ್ಯಮಂತ್ರಿಗಳೇ ನಿಮ್ಮ ಮನೆಯನ್ನು ಇಷ್ಟು ಹೊತ್ತಿಗೆ ಸ್ಫೋಟ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅಂತಹ ಮಟ್ಟದಲ್ಲಿ ನೀವು ಏನು ರಕ್ಷಣೆ ಕೊಡಲಿಕ್ಕೆ ಆಗುತ್ತದೆ ಈಗ ಇರತಕ್ಕಂಥ ಪೋಲೀಸ್‌ನಲ್ಲಿ ನೀವು ಪೋಲೀಸ್ ಇಲಾಖೆಗೆ ಮಾನ್ಯ ನೀರಾವರಿ ಸಚಿವರಿಗೆ ಎಷ್ಟು ಆದ್ಯತೆ ಕೊಟ್ಟಿದ್ದಾರೋ ನಮ್ಮ ನಾಯಕರಾದಂತಹ ಮುಖ್ಯಮಂತ್ರಿಗಳು ನಿಮ್ಮ ಇಲಾಖೆಗೂ ಅಷ್ಟೇ ಪ್ರಾಮುಖ್ಯತೆ ಕೊಡಬೇಕು ನಿಮ್ಮ ಇಲಾಖೆ ಅಷ್ಟು ಪ್ರಾಮುಖ್ಯವಾಗಿರತಕ್ಕಂಥಾದ್ದು ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ ಪ್ರತಿ ಸಲ ನೀರಾವರಿ ನೀರಾವರಿ ಅಂತಾರೆ ಅದರ ಜೊತೆಗೆ ದೊಡ್ಡದು ಮಾಡಿ ದೊಡ್ಡದು ಹೊಳೆ ಮಾಡಿ ಕೊಡಿ ಅಂತಾರೆ ಮಾಡಿ ಕೊಟ್ಟ ಮೇಲೆ ನೀರಾವರಿ ಇಲಾಖೆ ದುಡ್ಡು ಹೊಳು ಮಾಡಿ ಕೊಟ್ಟರೆ ನಿಮ್ಮ ನೀರಾವರಿ ಇಲಾಖೆ ಎಲ್ಲಿರುತ್ತದೆ ?

ಶ್ರೀ ಎಲ್.ಆರ್. ಶಿವರಾಮೇಗೌಡ : ಇಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರು ಇದರ ಜೊತೆಯಲ್ಲಿ ಎಕ್ಸೈಜ್ ಸಹ ಇಟ್ಟುಕೊಂಡಿದ್ದಾರೆ. ಎಕ್ಸೈಜ್‌ನಲ್ಲಿ ದುಡ್ಡು ಹೆಚ್ಚು ವಸೂಲಿ ಮಾಡದೆ ಹೋದರೆ ನಿಮ್ಮ ನೀರಾವರಿ ಇಲಾಖೆಗೆ ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ನಾನು ನೀರಾವರಿ ಇಲಾಖೆಗೆ ಎಷ್ಟು ಆದ್ಯತೆ ಕೊಟ್ಟಿದ್ದೀರೋ ಅಷ್ಟೇ ಆದ್ಯತೆ ಕೊಡಿ. ನೀರಾವರಿ ಇಲಾಖೆಗೆ ಕಡಿಮೆ ಮಾಡಿ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ ಅಲ್ಲ. ನೀರಾವರಿ ಇಲಾಖೆಗೆ ಕೊಟ್ಟಷ್ಟೇ ಆದ್ಯತೆಯನ್ನು ಈ ಪೋಲೀಸ್ ಇಲಾಖೆಗೂ ಕೊಡಬೇಕು. ಶಾಸಕರುಗಳೂ ಸಹ ಹುಷಾರಾಗಿ ತಿರುಗಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ ನಾನು ಒಂದು ಮಾತು ಹೇಳುತ್ತೇನೆ. ಮೊನ್ನೆ ರಾತ್ರಿ ಒಂದು ತಿಂಗಳ ಹಿಂದೆ ನನ್ನ ಮನೆಗೆ ಯಾರೋ ಒಬ್ಬ ರಾತ್ರಿ 12-30 ಗಂಟೆಯಲ್ಲಿ ಬಂದು ಕದ ತಟ್ಟಿ ಇದ್ದಾರಾ ಎಂ.ಎಲ್.ಎ. ಯವರು ಅಂತ ಹೇಳಿ ಹೊರಟು ಹೋದ. ಮತ್ತೆ ಬರಲಿಲ್ಲ. ಸುಮಾರು 200-300 ಅಡಿ ದೂರದಲ್ಲಿ ಒಂದು ಆಟೋರಿಕ್ಷಾದಲ್ಲಿ 4 ಜನ ಇದ್ದರು ಅವರು 4 ಜನ ಆಟೋರಿಕ್ಷಾ ಹತ್ತಿ ಹೋದರು. ಅದನ್ನು ನಾನು ತಮ್ಮ ವರೆವಿಗೂ ವಿಚಾರ ತರಲಿಲ್ಲ. ಸಂಬಂಧಪಟ್ಟಂತಹ ಪೋಲೀಸ್ ಇಲಾಖೆಗೆ ಹೇಳಿದೆ ಅವರು ಪೋಲೀಸ್‌ನವರನ್ನು ಹಾಕಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕಾಲ ಬದಲಾವಣೆಯಾಗಿದೆ. ಆಂಧ್ರಪ್ರದೇಶದಲ್ಲಿ ಒಬ್ಬ ಶಾಸಕರೂ ಪೋಲೀಸ್ ಪ್ರೊಟೆಕ್ಷನ್ ಇಲ್ಲದೆ ಹೋಗುವುದಕ್ಕೆ ಆಗುತ್ತಿಲ್ಲ. ಕಳೆದ 2-3 ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲೂ ಸಹ ಅಂತಹ ಪರಿಸ್ಥಿತಿ ಬರುವ ಕಾಲ ದೂರ ಇಲ್ಲವೆಂದು ನಾನು ಹೇಳುತ್ತೇನೆ ಅದಕ್ಕೆ ನೀವು ಈಗಲೇ ಸಕಲ ಸಿದ್ಧತೆ ಮಾಡಿಕೊಂಡು ಅದಕ್ಕೆ ಒಂದು ಕಾಯಕಲ್ಪ ಮಾಡಿ ಈ 135 ಕೋಟಿ ರೂಪಾಯಿಗಳ ಪ್ಲಾನ್ ಏನಿದೆ ಅದಕ್ಕೆ ತಾವು ದಯವಿಟ್ಟು ಅಂಕಿತ ಹಾಕಿಸಿಕೊಳ್ಳಬೇಕು ಅದನ್ನು ಶೀಘ್ರವಾಗಿ ಜಾರಿಗೆ ತರಬೇಕು ಪೋಲೀಸ್ ಸ್ಟೇಷನ್ಸ್ ಜಾಸ್ತಿ ಮಾಡಬೇಕು ಆಗ ಮಾತ್ರ ಇದಕ್ಕೆ ಒಂದು ಹೊಸ ಕಾಯಕಲ್ಪವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೊನೆಯದಾಗಿ ಜೈಲು ವಿಚಾರದಲ್ಲಿ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಏಕೆಂದರೆ ನಮ್ಮ ಸ್ನೇಹಿತರು ಜೈಲು ಮಂತ್ರಿಯಾಗಿದ್ದಾರೆ. ಜೈಲುಗಳಿಗೆ 11 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಲ್ಲಾ ಸೇರಿ. ಖೈದಿಗಳೂ ಸೇರಿ. ಒಂದು ದಿವಸ ನಾವು ರಾಜಕೀಯ ಮಾಡತಕ್ಕಂಥವರು ಮನೆಯಲ್ಲಿ ಇರುವುದಕ್ಕಾಗುವುದಿಲ್ಲ. ವ್ಯಾಪಾರ ಮಾಡತಕ್ಕಂಥವರು ಮನೆಯಲ್ಲಿರುವುದಕ್ಕಾಗುವುದಿಲ್ಲ. ಬೇರೆ ಬೇರೆಯವರು ಏನೇನು ಮಾಡುತ್ತಾರೋ ಅವರು ಒಂದು ದಿವಸ ಮನೆಯಲ್ಲಿರುವುದಕ್ಕಾಗುವುದಿಲ್ಲ. ಅವರ ವ್ಯವಹಾರಗಳನ್ನು ಬಿಟ್ಟು ಒಂದು ದಿವಸ ಎರಡು ದಿವಸ ಮನೆಯಲ್ಲಿರುವುದಕ್ಕಾಗುವುದಿಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ 5-6 ವರ್ಷಗಳ ಕಾಲ ಜೈಲಿನಲ್ಲಿ ಒಬ್ಬ ಖೈದಿ ಜೈಲಿನಲ್ಲಿದ್ದರೆ ನಾನು ತಿಳಿದ ಮಟ್ಟಿಗೆ ಈಗ ಹೇಗೋ ನನಗೆ ಗೊತ್ತಿಲ್ಲ. ಅವರು ನಮ್ಮನ್ನು ಒಂದು ದಿವಸವೂ ಕರೆದುಕೊಂಡು ಹೋಗಿಲ್ಲ. ಜೈಲು ಮಂತ್ರಿಗಳು. ಹಿಂದೆ ಮೈಸೂರಿನಲ್ಲಿ ಜೈಲಿನಲ್ಲಿ ಎಲ್ಲಾ ತರಹದ ಕೆಲಸಗಳನ್ನು, ಕಾರ್‌ಪೆಂಟ್ರಿ ಮಾಡತಕ್ಕಂಥಾದ್ದು ಖುರ್ಚಿ ಮಾಡತಕ್ಕಂಥಾದ್ದು ಎಲ್ಲಾ ವ್ಯವಸ್ಥೆಯನ್ನು ಅವರಿಗೆ ಮೈಂಡ್ ಪರಿವರ್ತನೆ ಮಾಡಬೇಕು. ಮರ್ಡರ್ ಮಾಡಿರತಕ್ಕಂಥವರು ಇರುತ್ತಾರೆ. ಕ್ರಿಮಿನಲ್ಸ್ ಮಾಡಿರತಕ್ಕಂಥವರು ಇರುತ್ತಾರೆ. ಎಲ್ಲರೂ ಇದರಲ್ಲಿ ಇದ್ದಾರೆ. ಅವರನ್ನು ನಾವು 5 ವರ್ಷ ಇಟ್ಟುಕೊಂಡ ಮೇಲೆ ಅವರನ್ನು ಮನುಷ್ಯರನ್ನಾಗಿ ಪರಿವರ್ತನೆ ಮಾಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಮನುಷ್ಯರನ್ನಾಗಿ ಪರಿವರ್ತನೆ ಮಾಡಿ ಅವರನ್ನು ಈಚೆಗೆ ಬಿಡಬೇಕು ಅದು

ಮಾಡದೆ ಹೋದರೆ ಜೈಲಿನಲ್ಲಿ ಇದ್ದೂ ಏನೂ ಪ್ರಯೋಜನವಾಗುವುದಿಲ್ಲ. ನಾವು ಅವರಿಗೆ ಎಲ್ಲಾ ಸೌಲತ್ತುಗಳನ್ನು ಕೊಡುತ್ತಿದ್ದೇವೆ. ಅವರಿಗೆ ಬರೀ ಮಾಂಸ ತಂದು ಹಾಕಿದರೆ ಜೈಲಿನಲ್ಲಿರತಕ್ಕಂಥ ಖೈದಿಗಳಿಗೆ ಸರಿಯಾಗಿರುವುದಿಲ್ಲ. ಬರೀ ಊಟ ತಂದು ಹಾಕಿದರೆ ಅವರು ಸರಿಯಾಗಿರುವುದಿಲ್ಲ. ಜೈಲಿನಲ್ಲಿರತಕ್ಕಂಥ ಖೈದಿಗಳನ್ನು ಮನುಷ್ಯರನ್ನಾಗಿ ಪರಿವರ್ತನೆ ಮಾಡಿ ಹೊರಗೆ ಕಳುಹಿಸಿಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕು ಆಗಲೇ ಕಳ್ಳತನ ಇವೆಲ್ಲಾ ಸಹ ಕಡಿಮೆಯಾಗತಕ್ಕಂಥಾದ್ದು ಅದಕ್ಕೆ ಆ ವ್ಯವಸ್ಥೆ ಮಾಡಬೇಕು ಎನ್ನುತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ 85 ಫೈರ್ ಸ್ಟೇಶನ್ಸ್ ಇವೆ. ಹೊಸದಾಗಿ ಕೆಲವು ಫೈರ್ ಸ್ಟೇಷನ್ಸ್ ಕೊಟ್ಟಿರತಕ್ಕಂಥ ಅಂಕಿಅಂಶಗಳು ನನಗೆ ದೊರೆತಿಲ್ಲ.

ಶ್ರೀ ಧರ್ಮಸಿಂಗ್ : ಹೊಸದಾಗಿ 19 ಕೊಟ್ಟಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಲ್ಲಿಗೆ 85 ಮತ್ತು 19 ಒಟ್ಟು 104 ಫೈರ್ ಸ್ಟೇಷನ್ಸ್ ಆದವು. ತಮಿಳುನಾಡಿನಲ್ಲಿ 280 ಫೈರ್ ಸ್ಟೇಷನ್ಸ್ ಇವೆ. ಕೇರಳದಲ್ಲಿ 250 ಫೈರ್ ಸ್ಟೇಷನ್ಸ್ ಇದ್ದಾವೆ. ನಮ್ಮ ರಾಜ್ಯದಲ್ಲಿ ಕೇವಲ 104ಕ್ಕೆ ಈಗ ಹೋಗಿದ್ದಾರೆ. ಇದು ಏನೇನೂ ಸಾಲದು. ನಾಗಮಂಗಲ ತಾಲ್ಲೂಕಿನಲ್ಲಿ ಒಂದು ಊರಿನಲ್ಲಿ ಒಂದು ಮನೆಗೆ ಬೆಂಕಿ ಬಿದ್ದರೆ ಬೆಳಿಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳುತ್ತಿದ್ದರು 500 ರೂಪಾಯಿಗಳನ್ನು ಕೊಡುತ್ತೇವೆಂದು ಒಂದು ಗುಡಿಸಲು ಬೆಂದು ಹೋದರೆ ಅಂತ. ಆದ್ದರಿಂದ ತಾಲ್ಲೂಕು ಕೇಂದ್ರಗಳಲ್ಲಿ ನೀವು ಫೈರ್ ಸ್ಟೇಷನ್ಸ್ ಮಾಡಬೇಕು ಆಗಲೇ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ನಮ್ಮಂತಹ ನಾಗಮಂಗಲ ತಾಲ್ಲೂಕಿನಲ್ಲಿ ಬಡ ತಾಲ್ಲೂಕಿನಲ್ಲಿ ಬಿಸಿಲಿನ ಬೇಗೆಗೆ ಬೇಯತಕ್ಕಂಥ ತಾಲ್ಲೂಕುಗಳಲ್ಲಿ ಫೈರ್ ಸ್ಟೇಶನ್ಸ್ ಇಲ್ಲದೆ ನಾವೇನು ವನವಾಸ ಪಡುತ್ತಿದ್ದೇವೆ ದಯಮಾಡಿ ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ನಾನು ಬಹಳಷ್ಟು ಸಾರಿ ವಿನಂತಿ ಮಾಡಿದ್ದೇನೆ. ನಮಗೆ ಒಂದು ಫೈರ್ ಸ್ಟೇಷನ್ ಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಗುಲ್ಬರ್ಗದಲ್ಲಿ ಕೋಮು ಗಲಭೆ ನಡೆದರೆ ಮೈಸೂರಿನಿಂದ ಫೈರ್ ಇಂಜಿನ್ ಹೋಗಬೇಕು. ಬೆಂಗಳೂರಿನಿಂದ ಫೈರ್ ಇಂಜಿನ್ ಹೋಗಬೇಕು ಈ ವ್ಯವಸ್ಥೆ ತಪ್ಪಬೇಕು. ಈ ವ್ಯವಸ್ಥೆಯನ್ನು ತಪ್ಪಿಸದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ ಇವೆಲ್ಲಾ ಆಗಬೇಕಾದರೆ ನೀವು 135 ಕೋಟಿ ರೂಪಾಯಿಗಳ ಪ್ಲಾನ್‌ಗೆ ಅಪ್ರೋವಲ್ ತೆಗೆದುಕೊಂಡು ಈ ಇಲಾಖೆಗೆ ಒಂದು ಕಾಯಕಲ್ಪ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಅಷ್ಟೇ ಅಲ್ಲ. ಈ ಹೆಣ್ಣು ಮಕ್ಕಳನ್ನು ತಾವು ಕಾನ್‌ಸ್ಟೇಬಲ್ ಆಗಿ ಹೆಚ್ಚು ತೆಗೆದುಕೊಂಡರೆ ಮರ್ಯಾದಸ್ಥರು ಪೋಲೀಸ್ ಸ್ಟೇಷನ್‌ಗೆ ಹೋಗಬಹುದು. ವ್ಯವಸ್ಥೆಯೆಲ್ಲಾ ಸರಿ ಆಗಬಹುದು ಅನ್ನತಕ್ಕಂಥ ಆಶಯವನ್ನು ವ್ಯಕ್ತಿ ಮಾಡಿ. ನಿಮ್ಮ ಇಲಾಖೆಗೆ 135 ಕೋಟಿ ರೂಪಾಯಿಗೆ ಅಂಕಿತ ಬೀಳಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ. ನನಗೆ ಅರ್ಥವಾಗಿದೆ. ಪೌಣುಮುಕ್ಕಾಲು ಗಂಟೆಯಾಗಿದೆ. ನಾವು ಎಂಥಾ ಪರಿಸ್ಥಿತಿಯಲ್ಲಿ ಇದ್ದೇವೆಂದರೆ, ಪ್ರಪಂಚದಲ್ಲಿ ಹೊರಗಡೆ ಜನರೆಲ್ಲರೂ ಎಕ್ಸೈಸ್‌ನಲ್ಲಿ ಮುಳುಗಿರುವಂಥ ಸಂದರ್ಭದಲ್ಲಿ ನಾವು ಈ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಕುಳಿತಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಲೋಕಸಭೆಯಲ್ಲಿ ನಿನ್ನೆ ದಿವಸ ರಾತ್ರಿ 2 ಗಂಟೆಯವರೆಗೆ ಚರ್ಚೆ ನಡೆದಿದೆ.

ಶ್ರೀ ಟಿ.ಬಿ. ಜಯಚಂದ್ರ : ಈಗ ನಾನು ಈ ಸಂದರ್ಭದಲ್ಲಿ ನೀವು ತಂದಿರತಕ್ಕ ಬೇಡಿಕೆಗಳಿಗೆ ಸಹಮತ ವ್ಯಕ್ತಪಡಿಸುವುದರ ಜೊತೆಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಬಹಳ ಪ್ರಾಮುಖ್ಯವಾದ ಈ ಅಬಕಾರಿ ಇಲಾಖೆಯ ಬಗ್ಗೆ ನಾನು ಕೆಲವು ಅನಿಸಿಕೆಗಳನ್ನು ನಿಮಗೆ ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಬಹಳ ವಿವೇಚನಾಶಕ್ತಿಯಿಂದಲೇ ಅಬಕಾರಿ ಮತ್ತು ಪೋಲೀಸ್ ಇಲಾಖೆಗಳನ್ನು ನಿಮಗೆ ಕೊಟ್ಟಿದ್ದಾರೆ. ಅಬಕಾರಿ ಇಲಾಖೆ ಸಮಾಜದಲ್ಲಿ ಗೊಂದಲವನ್ನು ಉಂಟು ಮಾಡತಕ್ಕಂಥ ಇಲಾಖೆ. ಸೃಷ್ಟಿಕರ್ತ. ಅದನ್ನು ಸಮಾಧಾನ ಮಾಡಿ ಅದಕ್ಕೆ ತಕ್ಕ ಶಾಸ್ತಿ ಮಾಡತಕ್ಕಂಥದ್ದು ಪೋಲೀಸ್ ಇಲಾಖೆ. ಒಂದು ಸೃಷ್ಟಿ, ಒಂದು ಲಯ. ಎರಡೂ ಇಲಾಖೆಗಳನ್ನು ಕೊಟ್ಟು ಕೂರಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾರು ಸದನದಲ್ಲಿ ಮಾತನಾಡಿದರೂ ಕೂಡ ಈ ಇಲಾಖೆಯಿಂದ 5 ನೂರು ಕೋಟಿ ರೂಪಾಯಿ ಎಂದರೆ 6 ನೂರು ಕೋಟಿ ರೂಪಾಯಿ ಬಂತು ಅನ್ನತಕ್ಕಂಥಾದ್ದರ ಬಗ್ಗೆ ಮೆಚ್ಚುಗೆ ಸೂಚಿಸುತ್ತಿರುತ್ತಾರೆ. ಮತ್ತು ಅದರ ಬಗ್ಗೆ ಭಾಷಣ ಮಾಡುತ್ತಾರೆ. ಆ ಹಣ ಏನು 500 ಕೋಟಿ ರೂಪಾಯಿ ಎಂದರೆ 6 ನೂರು ಕೋಟಿ ರೂಪಾಯಿ ಎಂದರೆ ನಮಗೆ ಏನು ವರಮಾನ ಬರುತ್ತಿದೆಯೋ? ಅದು ಯಾರಿಂದ ಬರುತ್ತಿದೆ ಅನ್ನತಕ್ಕಂಥಾದ್ದರ ಬಗ್ಗೆ ಸೂಕ್ಷ್ಮವಾಗಿ ಯೋಚನೆ ಮಾಡಿದರೆ, ಸಭಾಧ್ಯಕ್ಷಿಣಿಯವರೆ ಅದು ಬರುತ್ತಿರತಕ್ಕಂಥಾದ್ದು. ಯಾರು ಯಾರಿಗೋಸ್ಕರ ನಾವು, ಏತಕ್ಕೋಸ್ಕರ ನಾವು ಇಲ್ಲಿ ಕುಳಿತಿದ್ದೇವೆಯೋ ಅಂಥವರಿಂದ ಬರುತ್ತಿರತಕ್ಕಂಥ ಈ ಹಣ. ಇವತ್ತು ಈ ರಾಜ್ಯಕ್ಕೆ 5 ನೂರು ಕೋಟಿ, 6 ನೂರು ಕೋಟಿ ರೂಪಾಯಿ ಜಾಸ್ತಿ ಬರಬೇಕೆಂದು ನಾವು ಏನು ಒತ್ತಾಯ ಮಾಡುತ್ತಿದ್ದೇವೆ. ಬರುತ್ತಿರತಕ್ಕಂಥಾದ್ದು ಈ ನಾಡಿನ ಸಾಮಾನ್ಯ ಜನರಿಂದ. ಬಡವರಿಂದ. ಆ ಹಣದಲ್ಲಿ ಎಷ್ಟು ಜನರ ಮಾಂಗಲ್ಯಗಳು ಅಡಗಿದೆಯೋ ಗೊತ್ತಿಲ್ಲ. ಎಷ್ಟು ಜನಗಳ ಕುಂಕುಮ ಅಳಿಸಿ ಬರುತ್ತಿದೆಯೋ ನಮಗೆ ಗೊತ್ತಿಲ್ಲ. ಅಂತೂ ನಮಗೆ ಹಣ ಬರುತ್ತಿದೆ. ನಾನು ಈಗ ಸಲಹೆ ಕೊಡತಕ್ಕಂಥಾದ್ದು ಇಷ್ಟೇ. ಈ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರುತ್ತಿರತಕ್ಕಂಥವರು ನೋಡುತ್ತಿದ್ದೇವೆ. ಬೆಳಿಗ್ಗೆ ದುಡಿದು ಕಷ್ಟಪಟ್ಟು 20 ರೂಪಾಯಿ ಸಂಪಾದನೆ ಮಾಡಿ 10 ರೂಪಾಯಿ ಕುಡಿಯುವುದಕ್ಕೋಸ್ಕರ ನಮಗೆ ತೆರಿಗೆ ರೂಪದಲ್ಲಿ ಹಣ ಕೊಟ್ಟು ಇನ್ನು 10 ರೂಪಾಯಿಯಲ್ಲಿ ಹೋಗಿ ಅರೆ ಹೊಟ್ಟೆಯಲ್ಲಿ ತಿಂದು ಮಲಗತಕ್ಕಂಥ ಜನಗಳನ್ನು ನೋಡಿದ್ದೇವೆ. ಹಳ್ಳಿಗಳಲ್ಲಿ ಹೋದರೆ ಸಾಯಂಕಾಲ 4-5 ಗಂಟೆಯಲ್ಲಿ ಮಾತನಾಡುವುದಕ್ಕೆ ಯಾರೂ ಇರುವುದಿಲ್ಲ. ಎಲ್ಲರೂ ಕುಡಿದಿರುತ್ತಾರೆ. ಇದರ ಬಗ್ಗೆ ಸಂಪೂರ್ಣವಾಗಿ ಪಾನ ನಿರೋಧ ತರತಕ್ಕಂಥಾದ್ದು ಒಳ್ಳೆಯದೇ ಎಂದು ಯೋಚನೆ ಮಾಡಬೇಕಾಗುತ್ತದೆ. ಆದರೆ, ತಮಿಳುನಾಡಿನಲ್ಲಿ ಹಿಂದೆ ಒಂದು ಸಾರಿ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತಂದಿದ್ದರು. ಆದರೆ ಆಗ ಆದದ್ದಾದರೂ ಏನು? ಎಲ್ಲೆಲ್ಲೂ ಕಳ್ಳಭಟ್ಟಿ ದೊರೆಗಳು ಬೆಳೆದು ಎಲ್ಲೆಲ್ಲೂ ಕಳ್ಳಭಟ್ಟಿ ಸಿಗುವುದಕ್ಕೆ ಸಾಧ್ಯವಾಯಿತು. ಆ ಸಂದರ್ಭದಲ್ಲೂ ಕೂಡ ನಾವು ತಮಿಳುನಾಡಿಗೆ ಹೋಗಿ ನೋಡಿ ಬಂದಿದ್ದೇವೆ. ಆದರೆ ಸಂಪೂರ್ಣವಾಗಿ ಪಾನ ನಿರೋಧವನ್ನು ತರುವುದು ಕಷ್ಟ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಇವತ್ತು ತರುವುದಕ್ಕಾಗುವುದಿಲ್ಲವೆಂದರೆ ಮತ್ತೆ ಇನ್ನೂ ಯಾವ ರೀತಿಯಾದಂಥ ವ್ಯವಸ್ಥೆ? ನಿಮ್ಮನ್ನು ಪ್ರಥಮವಾಗಿ ಶ್ಲಾಘನೆ ಮಾಡಬೇಕಾಗುತ್ತದೆ. ಏಕೆಂದರೆ ಈ ಶೇಂದಿಯನ್ನು ರದ್ದು ಮಾಡಿದ್ದೀರಿ ಅದರಿಂದ ನಿಜವಾಗಲೂ ಜನರಿಗೆ ಬಹಳ ಸಹಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮಲ್ಲಿ ಶೇಂದಿ ಇದ್ದಂಥ ಸಂದರ್ಭದಲ್ಲಿ ನಮ್ಮಲ್ಲಿ ಶೇಂದಿ ಮರಗಳೇ ಇರಲಿಲ್ಲ. ಆದರೂ ಪೌಡರನ್ನು ಮಿಕ್ಸ್ ಮಾಡಿ ಕೊಡುತ್ತಿದ್ದುದನ್ನು ನೋಡಿದ್ದೇವೆ. ಅದನ್ನು ಕುಡಿದು ಜನಗಳು ಸಾಯುತ್ತಿದ್ದುದನ್ನು ನಾವು ನೋಡಿದ್ದೇವೆ. ಅದನ್ನು ತಪ್ಪಿಸಿ ಸರ್ಕಾರದ ದೊಡ್ಡ ಸಹಾಯವನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು.

ಇವತ್ತು ಏನಾಗಿದೆ ಅರ್ರ್ಯಾಕ್ ಷಾಪ್ಸ್‌ನ್ನು ಸಾಕಷ್ಟು ಸಂಖ್ಯೆಯಲ್ಲಿ ಮಾಡಿದ್ದೀರಿ ಇನ್ನು ಕೆಲವೇ ದಿವಸದಲ್ಲಿ ಮತ್ತೆ ಕೆಲವು ಭಾಗದಲ್ಲಿ ಸೇಂದಿಯನ್ನು ಬಿಡುವ ಪ್ರಯತ್ನ ಮಾಡಿದಿರಿ. ನಾನು ಒಪ್ಪುತ್ತೇನೆ. ನೀವು ಮಾಡಿರುವುದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಎಲ್ಲಿ ಮರಗಳಿವೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಗಳಿರಬಹುದು, ಮಡಿಕೇರಿಯಲ್ಲಿರಬಹುದು, ಅಂತಹ ಕಡೆ ಮಾತ್ರ ನೀವು ಸೇಂದಿ ಬಿಡುವುದಕ್ಕೆ ಪ್ರಯತ್ನ ಮಾಡಿದರೆ ಅದು ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಭಾರ್ಡರ್ ಏರಿಯಾಗಳಾದ ಗುಲ್ಬರ್ಗಾದಲ್ಲಿ ಸಾಕಷ್ಟು ಏರಿಯಾದಲ್ಲಿ ಬಿಟ್ಟಿದ್ದೀರಿ. ಪಾವಗಡ, ಮಧುಗಿರಿ ಮುಂತಾದ ಬಾರ್ಡರ್ ಏರಿಯಾದಲ್ಲಿ ಯಥೇಚ್ಛವಾಗಿ ಆಂಧ್ರದಿಂದ ಸೇಂದಿ ಬಂದು ನಮ್ಮ ಅಬ್ಕಾರಿ ಇಲಾಖೆಗೆ ಸಾಕಷ್ಟು ಲಾಸಾಗುತ್ತಿದೆ. ಅಲ್ಲಿ ಗುತ್ತಿಗೆದಾರರು ಏನಿದ್ದಾರೆ ಅವರಿಗೆ ಕಿಸ್ತು ಕಟ್ಟುವುದಕ್ಕೆ ಆಗದಿರುವಂತಹ ಪರಿಸ್ಥಿತಿ ಉದ್ಭವವಾಗಿದೆ ಎಂದಾಗ ಅದರ ಬಗ್ಗೆ ಯಾವ ತರಹದ ನಿಯಂತ್ರಣ ನೀವು ಮಾಡಿದಿರಿ ಎಂದು ನಿಮ್ಮಿಂದ ತಿಳಿಯಬಯಸುತ್ತೇನೆ. ಈಗ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಬರೀ ಹೆಂಡದವರಿಗೆ ಸಾರಾಯಿಯವರಿಗೆ ಸಹಾಯ ಮಾಡುತ್ತಾರೆಂಬ ಮಾತು ಪದೇಪದೇ ಬರ್‍ತಾ ಇರುವುದನ್ನು ಕೇಳ್ತಾಯಿದ್ದೇವೆ. ಆದರೆ ನಾನು ಕುತೂಹಲದಿಂದ ಅಂಕಿಅಂಶದಿಂದ ಅರ್ಥಮಾಡಿಕೊಂಡೆ. ನಾವು ಹಿಂದಿನ ವರ್ಷ, ವರ್ಷವರ್ಷಕ್ಕೆ ನಮ್ಮ ರಾಜ್ಯಕ್ಕೆ ಬರುವ ವರಮಾನವನ್ನು ಅವಲೋಕನ ಮಾಡಿ ನೋಡಿದಾಗ ಒಂದು ವರ್ಷಕ್ಕೆ ಬಂದ ವರಮಾನಕ್ಕೂ ಇನ್ನೊಂದು ವರ್ಷದ ವರಮಾನಕ್ಕೂ ತಾಳೆ ಇರುವುದಿಲ್ಲ. ತಾವು ನಿಗದಿ ಮಾಡುವುದೇ ಒಂದು ಆದರೆ ವರಮಾನ ಬರುವುದೇ ಒಂದು. ಹಿಂದಿನ ವರ್ಷ ನಾವು 555 ಕೋಟಿ ಬರಬೇಕೆಂದು ನಿಗದಿ ಮಾಡಿದ್ದೆವಿ. ಆದರೆ ಬಂದದ್ದಾದರೂ ಸುಮಾರು 400-425 ಕೋಟೀನೋ. ಆದರೆ ಇಂದು ನೀವು ನಿಗದಿ ಮಾಡಿರುವುದು ಎಷ್ಟು 555-560 ಕೋಟಿ ಬರಬೇಕೆಂದು, ಈಗಾಗಲೇ ಸುಮಾರು 450 ಕೋಟಿ ಬಂದಿದೆ. ಅಂದಾಗ ನೀವು ಯಾವುದೇ ರೀತಿಯಲ್ಲಿ ಅವರ ಪರವಹಿಸಿಲ್ಲ ಅವರ ಮುಲಾಜಿಗೆ ಒಳಗಾಗಿಲ್ಲ ಎಂದು ಸ್ಥಿರಪಡಿಸುತ್ತದೆ. ಯಾವಾಗಲೂ ನೀವು ವರಮಾನ ಬರುವ ದೃಷ್ಟಿಯಿಂದಲೇ ನೋಡಬಾರದು. ಹಾಗೆ ಮಾಡಿದರೆ ಇವತ್ತು ಹಳ್ಳಿಗಳಲ್ಲಿ ಕುಡಿಯುವುದನ್ನು ಬಿಡಿಸಲಂತೂ ಸಾಧ್ಯವಿಲ್ಲ. ಇವತ್ತು ನೀವು ರೇಟ್ ಎಷ್ಟೇ ಮಾಡಿರಿ ನಾಳೆ 1000 ಕೋಟಿ ಬರಬೇಕೆಂದು ತೀರ್ಮಾನ ಮಾಡಿದರೂ ಕೂಡ ದುಡಿದ 20 ರೂ. ಕೂಡ ಸೇಂದಿ ಅಥವಾ ಸಾರಾಯಿ ಅಂಗಡಿಗೆ ಕೊಟ್ಟು ಬರೀ ಹೊಟ್ಟೇಲಿ ಮಲಗೋ ಮಟ್ಟಕ್ಕೆ ಜನ ಇರಬೇಕಾದರೆ ಬರೀ ಇನ್‌ಕಂ ದೃಷ್ಟಿಯನ್ನೆ ಏರಿಸಿಕೊಂಡು ಹೋಗುವುದಾದ್ರೆ ಅದಕ್ಕೆ ಅರ್ಥವಿಲ್ಲ. ಕುಡಿಯುವುದನ್ನು ನೀವು ಬಿಡಿಸಬೇಕಾದರೆ ಕಾಲ ಬದಲಾವಣೆಯಾಗಬೇಕಾಗುತ್ತದೆ. ಮತ್ತು ಜನಗಳಿಗೆ ಕುಡಿಯುವುದರಿಂದಾಗುವ ಅನಾಹುತಗಳ ಬಗ್ಗೆ ಪ್ರಜ್ಞೆ ಮೂಡಿಸಬೇಕಾಗುತ್ತದೆ, ಅದಕೆಲ್ಲಾ ಸಾಕಷ್ಟು ಕಾಲ ಬೇಕಾಗುತ್ತದೆ. ಸರ್ಕಾರಕ್ಕೆ ಬರುವ ವರಮಾನದ ದೃಷ್ಟಿಯಿಂದಲೇ ನೀವು ಈ ಕೆಲಸವನ್ನು ಮಾಡಬಾರದು ಎಂಬುದು ಒಂದು ಸಲಹೆ. ಮತ್ತು ಅನೇಕ ಯೋಜನೆಗಳನ್ನು ನೀವು ಹಾಕಿದ್ದೀರಿ. ನೀವು ಸಾಕಷ್ಟು ಹಣವನ್ನೂ ನಿರೀಕ್ಷಣೆ ಮಾಡ್ತೀರಿ. ಇಂದೇನಾಗಿದೆ ಹಣ ಯಾರಿಂದ ಬರ್‍ತಾ ಇದೆ. ಕಂಟ್ರಾಕ್ಟರ್‌ಗಳು ಯಾರು ಎಂದು ಯೋಚನೆ ಮಾಡಿದರೆ ಉದಾಹರಣೆಗೆ ತುಮಕೂರಿನಲ್ಲಿ ದಾಸಪ್ಪ ಅಂಡ್ ಕಂಪೆನಿ ಯಾವತ್ತೂ ಕೂಡ ಅವರೇನೆ. ವೀರೇಂದ್ರಪಾಟೀಲ್ ಮುಖ್ಯಮಂತ್ರಿಯಾಗಿರಬಹುದು, ಬಂಗಾರಪ್ಪನವರಿರಬಹುದು. ಹಿಂದೆ ಗುಂಡೂರಾಯರಿದ್ದಾಗ ಕೂಡ ಆ ಒಂದು ಕಂಪನೀನೆ. ದಾಸಪ್ಪನವರು ಅಂತ ಅಲ್ಲ. ಯಾವುದೋ ಒಂದು ಕಂಪೆನಿ. ಅರಸೀಕೆರೆಯಲ್ಲಿ ಯಾವುದೋ ಒಂದು ಕಂಪೆನಿ ಮಾಡ್ತರೆ. ಬೆಳ್ತಂಗಡೀಲಿ ಯಾವುದೋ ಒಂದು ಕಂಪೆನಿಯವರು ಮಾಡ್ತಾರೆ ಅವರ ಕೈಯಿಂದ ಕಿತ್ತುಕೊಳ್ಳೋಕೆ ಆಗಿಲ್ಲ ನಿಮಗೆ. ಅಂದಾಗ ಏನಾಗುತ್ತದೆ ಪ್ರತಿ ಸಾರಿ ನೀವು ಆಕ್ಷನ್ ಮಾಡುವ ಸಂದರ್ಭದಲ್ಲಿ ಸೂಡೊ ಕಂಪೆನಿಗಳೆಲ್ಲ ಹುಟ್ಕೊಂಡು

ಬೊಕ್ಕಸಕ್ಕೆ ಸಾಕಷ್ಟು ಮೋಸ ಮಾಡುವ ಕೆಲಸಕ್ಕೆ ಹೋಗ್ತಾರೆ ಅನ್ನುವುದನ್ನು ನೀವು ಒಪ್ಪಬೇಕಾಗುತ್ತದೆ. ಅದಕ್ಕೋಸ್ಕರ ನಾನು ಒಂದು ಹೊಸ ಸಲಹೆ ಕೊಡಬಯಸುತ್ತೇನೆ. ಅದು ಎಷ್ಟು ಸೂಕ್ತ ಅಂತ ತಾವು ವಿಚಾರ ಮಾಡಬೇಕು. ನೀವು ಯೋಜನೆ ಇಟ್ಟುಕೊಂಡು 5-6 ವರ್ಷಕ್ಕೆ ನಿಗದಿತವಾಗಿ ಇಷ್ಟು ಹಣ ಬರಬೇಕೆಂದು ಯೋಚಿಸ್ತೀರಿ. ಇವತ್ತು ಏನು ಬಂದಿದೆ ಹಣ ಅದಕ್ಕೆ ಸರಿಪಟ್ಟು ಮುಂದಿನ ವರ್ಷಕ್ಕೆ ಇಷ್ಟೊಂತ ಹೆಚ್ಚು ಮಾಡಿ 3-4 ವರ್ಷಕ್ಕೆ ಕೊಡುವಂತೆ ಮಾಡಿದರೆ ಆಗ ಪರಿಸ್ಥಿತಿ ಹೇಗಾಗುತ್ತದೆ ಎಂದು ಯೋಚನೆ ಮಾಡಬೇಕು. ಮತ್ತು ಸ್ಪಷ್ಟವಾದ ಉತ್ತರವನ್ನೂ ಕೂಡ ತಾವು ಕೊಡಬೇಕು. ಏಕೆಂದರೆ ಬೇರೆ ರಾಜ್ಯದಲ್ಲಿ ಇಂತಹ ವ್ಯವಸ್ಥೆ ಇರುವುದನ್ನು ಕೇಳಿದ್ದೇನೆ. ಮೂರು ವರ್ಷ 5 ವರ್ಷಕ್ಕೆ ಇವತ್ತು ಕಟ್ರಾಕ್ಟನ್ನು ಕೊಡುವುದು ಒಂದು ವರ್ಷಕ್ಕೆ ಇಷ್ಟೂಂತ ರೇಸ್ ಮಾಡಿ ಕೊಡುವುದು ಕೂಡ ವ್ಯವಸ್ಥೆಯಿದೆ ಅದನ್ನು ರಾಜ್ಯದಲ್ಲೂ ಕೂಡ ಅಡಾಪ್ಟ್ ಮಾಡುವುದರಿಂದ ಎಷ್ಟು ಪ್ರಯೋಜನವಾಗುತ್ತದೆಂದು ಕೂಡ ತಾವು ಯೋಚನೆ ಮಾಡಬೇಕು. ಮತ್ತು ಕಳ್ಳಭಟ್ಟಿ ಬಗ್ಗೆ ಹಿಂದೆ ತಾವೂ ಮಂತ್ರಿಗಳಾಗಿದ್ದಿರಿ ನಾನೂ ಶಾಸಕನಾಗಿದ್ದೆ. ಸುಮಾರು 300-400 ಜನ ಸತ್ತು ಹೋದರು. ದೇಸಾಯಿ ಕಮಿಷನ್ ಅಪಾಯಿಂಟಾಗಿ ದೊಡ್ಡ ರಿಪೋರ್ಟ್‌ನ್ನು ಕೊಡ್ತು. ಅದು ಅಕ್ಷರಶಃ ಇಂಪ್ಲಿಮೆಂಟಾಗಲಿಲ್ಲ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನೀವು ಹೋಗಬೇಕೂಂತ ಒಂದು ಮಾತುಹೇಳುತ್ತಾ ಕಳ್ಳಭಟ್ಟಿ ಹೆಚ್ಚು ಜಾಸ್ತಿಯಾಗಿದೆ ಎಂದರೆ ಮೊನ್ನೆ ಕೂಡ 8-10 ಜನ ಸತ್ತು ಹೋಗಿದ್ದಾರೆ. ಇವತ್ತು ಹಳ್ಳಿಹಳ್ಳಿಯಲ್ಲಿ ಕಳ್ಳಭಟ್ಟಿ ಕಾಣ್ತಾ ಇದೇವೆ. ಏತಕ್ಕಾಗಿ ಬರ್ತಾ ಇದೆ ಎಂದರೆ ಅರ್‍ಯಾಕಿಗೆ ಯಥೇಚ್ಛ ಬೆಲೆ ನೀವು ಇಟ್ಟುಬಿಟ್ಟಿರಿ. ಅದರಿಂದ ಕಾಂಪಿಟೇಶನ್ ಬಂದು ಕೂಗಿಬಿಡ್ತಾರೆ. ಬೆಲೆಗಳು ಜಾಸ್ತಿ ಮಾಡಿದಾಕ್ಷಣಕ್ಕೆ ರೈತರು ಕೊಡೋದಕ್ಕೆ ಶಕ್ತಿ ಇದೆ ಅಂತಲ್ಲ ಕಳ್ಳಭಟ್ಟಿ ಸಿಗುವುದನ್ನು ನಾವು ನೋಡಿದೀವಿ. ಅದರ ಮೇಲೆ ಯಾವ ನಿಯಂತ್ರಣಾನೂ ಇಲ್ಲ. ಅಬ್ಕಾರಿಯವರಾಗಲಿ ಪೋಲೀಸರಾಗಲಿ ಬಂದು ಹೇಳ್ತಾರೆ ನಾವು ಯಾವ ರೀತಿ ಕಂಟ್ರೋಲ್ ಮಾಡುವುದು ಒಂದು ಸಾರಿ ರೈಡ್ ಮಾಡೋದೋ ಎರಡು ಸಲ ಮಾಡೋದೋ ಂತ ಎಲ್ಲಿ ಮಾಡಿದರೂ ಕೂಡ ಇದೇ ಆಗಿದೆ ಪ್ರತಿ ಹಳ್ಳೀನಲ್ಲೂ ಪ್ರಾರಂಭವಾಗಿದೆ ಅಂದಾಗ ಜನಗಳನ್ನು ಕೇಳಿದರೆ ಅವರು ಹೇಳ್ತಾರೆ ನಾವು ಇಷ್ಟು ಕುಡಿಯಲೇಬೇಕು ಇಲ್ಲದಿದ್ದರೆ ನಾವು ಮಲಗೋಕಾಗೋಲ್ಲ, ಇಷ್ಟು ಕೊಟ್ಟು ಕುಡಿಯೋದು ಹೇಗೆ ಎಂದು ಮಾತು ಬಂದಾಗ ನಾನಾದರೂ ಸಲಹೆ ಮಾಡುವುದು ಇಷ್ಟೆ. ಕೇವಲ ಬೊಕ್ಕಸಕ್ಕೆ ವರಮಾನ ಬರುವ ದೃಷ್ಟಿಯಿಂದ ಮಾತ್ರ ಈ ಇಲಾಖೆಯನ್ನು ನೋಡಬಾರದು. ಜನಗಳ ಜೀವನಪರಿಸ್ಥಿತಿ ಅವರ ಆರೋಗ್ಯದ ಬಗ್ಗೆ ಕಲಾಪ ಸಾಕಷ್ಟು ಚಿಂತನೆ ಮಾಡಿ ನೀವು ವರಮಾನ ನಿರೀಕ್ಷಣೆ ಮಾಡಬೇಕೆಂದು ಹೇಳುತ್ತಾ ನಮ್ಮಲ್ಲಿ ಸೇಂದಿಯನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೀರಿ. ನಮ್ಮ ಕ್ಷೇತ್ರದಲ್ಲಿ ಸಾಕಷ್ಟು ಎಕ್ಸೈಜ್ ಲ್ಯಾಂಡಿದೆ. ಮರಗಳಿಲ್ಲ, ಗಿಡಗಳಿಲ್ಲ, ಬೆಳೆಯುವಂತಹ ಪರಿಸ್ಥಿತಿಯಲ್ಲಿಲ್ಲ ಎಷ್ಟೋ ವರ್ಷಗಳಿಂದ ಉತ್ತುಕೊಂಡಿದಾರೆ ಜನ ತೆಂಗಿನಗಿಡ ಫಸಲು ಬಿಡ್ತಾ ಇದೆ ಮತ್ತು ಅನೇಕ ಹಳ್ಳಿಗಳು ನೂರಿನ್ನೂರು ವರ್ಷಗಳಿಂದ ಹಳ್ಳಿಗಳು ಇರುವುದೇ ಎಕ್ಸೈಜ್ ಲ್ಯಾಂಡ್ಸ್‌ನಲ್ಲಿವೆ. ಅದು ಯಾರ ತಪ್ಪಿನಿಂದಾನೋ ಗೊತ್ತಿಲ್ಲ. ಹಿಂದೆ ಯಾರ ತಪ್ಪಿನಿಂದ ಊರಿಗೂರೇ ಎಕ್ಸೈಜ್ ಲ್ಯಾಂಡೆಂದು ಸೇರಿಹೋಗಿಬಿಟ್ಟಿದೆ. 500-1000 ಮನೆ ಇರುವ ಹಳ್ಳಿಗಳೂ ಎಕ್ಸೈಜ್ ವ್ಯಾಪ್ತಿಯಲ್ಲಿ ಬರ್‍ತವೆ. ಆಶ್ರಯ ಸ್ಕೀಮಿನಲ್ಲಿ ಸೈಟ್ ಕೊಡಲು ನಮಗೆ ಆಗ್ತಾನೇ ಇಲ್ಲ. ಹಾಗಿರುವಾಗ ಸೇಂದಿಯನ್ನು ರದ್ದು ಮಾಡಿರುವುದರಿಂದ ಲ್ಯಾಂಡ್ಸ್‌ನ್ನು ರಿಲೀಸ್ ಮಾಡಿಸುವಂತಹ ಮತ್ತು ಎಲ್ಲೆಲ್ಲಿ ಸಾಗು ಮಾಡಿದಾರೋ ಅವರಿಗೆ ಪಟ್ಟವನ್ನು ಕೊಡಿಸುವಂತಹ ಕೆಲಸ ನೀವು ಮಾಡಬೇಕೆಂದು ಹೇಳುತ್ತೇನೆ. ಮತ್ತು ನೀವು ಸ್ಪಷ್ಟವಾಗಿ ನಿರ್ದೇಶನವನ್ನು ಲ್ಯಾಂಡ್‌ಗ್ರಾಂಟ್ ಸಮಿತಿಗಳಿಗೆ ಕೊಡಬೇಕಾಗುತ್ತದವೆ. ಎಕ್ಸೈಜ್ ಲ್ಯಾಂಡಿನ ವ್ಯಾಪ್ತಿಯಲ್ಲಿ ಬರುವ ಜಮೀನನ್ನು ರಿಜೆಕ್ಟ್ ಮಾಡ್ತಾ ಇದಾರೆ. ಅದನ್ನು ರಿಜೆಕ್ಟ್ ಮಾಡಿದಾಗ ಏನು ಕಾನೂನುಬದ್ಧವಾಗಿ ಹಕ್ಕು ಕೊಟ್ಟಿರುವುದು ಇದೆ

ಅದನ್ನು ರೆಗ್ಯುಲರೈಸ್ ಮಾಡುವ ವ್ಯಾಪ್ತಿಯಲ್ಲಿ ಅದು ಬರದೇ ಇದ್ದಾಗ ಅದರಿಂದ ಬಹಳಷ್ಟು ಜನಕ್ಕೆ ವಂಚನೆಯಾಗುತ್ತದೆ. ಇವತ್ತು ನೀವು ಸೂಕ್ತ ನಿರ್ದೇಶನ ಕೊಟ್ಟು ಅದು ಎಕ್ಸೈಜ್ ಲ್ಯಾಂಡ್ಸಾಗಿದ್ದರೂ ಕೂಡ ಅದನ್ನು ರೆಕಮೆಂಡೇಶನ್ ಮಾಡಿ ನಮಗೆ ಕಳಿಸಿರಿ. ನಾವು ರಿಲೀಸ್ ಮಾಡುತ್ತೇವೆ ಅಂತ ಸುತ್ತೋಲೆ ಕಳಿಸುವುದರ ಮೂಲಕ ಬಹುಶಃ ಪರಿಸ್ಥಿತಿ ಸುಧಾರಿಸಬಹುದು ಎಂದು ನಾನಾದರೂ ಹೇಳಬಯಸುತ್ತೇನೆ. ಸೆಕೆಂಡ್ಸ್ ಹಾವಳಿ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ಇವತ್ತು ಅದು ಎಷ್ಟಾಗಿದೆ ಎಂದರೆ ಎಲ್ಲಿ ನೀವು ಹೋದರೂ ಕೂಡ ಒಂದಕ್ಕೆ ನಾಲ್ಕು ಪಟ್ಟು ಮಾರುಕಟ್ಟೆಗೆ ಬರ್ತಾ ಇದೆ. ಅದು ಎಲ್ಲಿಂದ ಬರ್ತಾ ಇದೆ, ನಮ್ಮ ರಾಜ್ಯದಿಂದ ಬರ್ತಾ ಇದೆಯೋ ಅತವಾ ಹೊರಗಿನಿಂದ ಬರ್ತಾ ಇದೆಯೋ ಅಂತ ಯೋಚನೆ ಮಾಡಿದರೆ ಅದು ಹೊರಗಿನಿಂದ ಸಾಕಷ್ಟು ಜಾಸ್ತಿ ಬರ್ತಾ ಇದೆ. ಸೆಕೆಂಡ್ಸ್ ಹಾವಳಿ ಜಾಸ್ತಿಯಾಗಿರುವುದರಿಂದ ನಮ್ಮ ಬೊಕ್ಕಸಕ್ಕೆ ಕೋಟ್ಯಂತರ ರೂ. ಲಾಸಾಗುತ್ತಿದೆ ಎಂಬುದನ್ನು ನೀವು ಮರೆಯಬಾರದು ಅದನ್ನು ನಿಯಂತ್ರಣ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ಸಚಿವರು ಉತ್ತರದಲ್ಲಿ ತಿಳಿಸಬೇಕೆಂದು ಹೇಳುತ್ತಾ ಮತ್ತು ಐಎಂಎಲ್, ಷಾಪ್ಸನ್ನು ಸಾಕಷ್ಟು ಸಂಖ್ಯೆಯಲ್ಲಿ ಕೊಡ್ತಾ ಇದೀರಿ. ಇವತ್ತು ಬೇಡಿಕೆ ಇದೆ ಕೊಡ್ತಿದೀರಿ, ಅದರ ಬಗ್ಗೆಯಲ್ಲ, ನೀವು ಕೊಡಬೇಕಾದರೆ ನಿರ್ದಿಷ್ಟವಾದ ಒಂದು ನಿರ್ದೇಶನ ಇರಬೇಕು. ಎಲ್ಲಿ ಐಎಂಎಲ್ ಷಾಪ್ ಇರುತ್ತದೆ ಎಂದರೆ ಮೇನ್ ರಸ್ತೆಯಲ್ಲಿ ಯಾವುದೋ ದೇವಸ್ಥಾನ ಇರುವ ಕಡೆ ಜನಸಂದಣಿ ಸೇರುವ ಜಾಗದಲ್ಲಿ ಐಎಂಎಲ್ ಷಾಪ್ಸ್ ಕೊಡ್ತೀರಿ ಅಂದ ಮೇಲೆ ಅವರು ಇಟ್ಟಿರುವ ಬಣ್ಣ ಬಣ್ಣದ ವಿಸ್ಕಿಗಳನ್ನು ರಮ್‌ಗಳನ್ನು ನೋಡಿದಾಗ ನ್ಯಾಚುರಲಾಗಿ ಜನಗಳಿಗೆ ಟೆಂಪ್ಟೇಶನ್ ಆಗುವುದು ಉಂಟು. ಅದರಲ್ಲೂ ಕೂಡ ಯುವಜನಾಂಗದವರಿಗೆ ಅದನ್ನು ಹೋಗಿ ಒಂದು ಸಲ ಕುಡಿಯಬೇಕೆಂಬ ಭಾವನೆ ಬರುವಂತಹ ಮಟ್ಟಕ್ಕೆ ಷೋ ಮಾಡಿಟ್ಟಿರುತ್ತಾರೆ. ಅದಕ್ಕಾಗಿ ಐಎಂಎಲ್ ಷಾಪ್ ಕೊಡಬೇಕಾದರೆ ನಿರ್ದಿಷ್ಟವಾದ ಜಾಗ ಜನಸಂದಣಿ ಇಲ್ಲದಿರುವ ಜಾಗದಲ್ಲಿ ಅದನ್ನಿಡಬೇಕೆಂಬ ನಿರ್ದೇಶನವನ್ನು ನೀವು ಕೊಡಬೇಕು.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಉಪಾಧ್ಯಕ್ಷರೇ, ಬೇರೆ ಇಲಾಖೆಗಳ ಬೇಡಿಕೆಗಳಿಗೆ ಚರ್ಚೆ ಆಗುವಾಗ ಇಷ್ಟು ಹೊತ್ತು ಆಗುತ್ತಿರಲಿಲ್ಲಾ ಎಂದು ಕಾಣುತ್ತದೆ. ಇವತ್ತು ಎಕ್ಸೈಜ್ ಅಂದ ತಕ್ಷಣ ಇದು ರಾತ್ರಿ ಬಹಳ ಹೊತ್ತು ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭವಾಗಿದೆ. ದಯಮಾಡಿ ಬೇಗ ಮುಗಿಸಿರಿ. ಇನ್ನು ಎರಡು ಕಾರ್ಯಕ್ರಮಗಳು ಇದ್ದಾವೆ.

ಶ್ರೀ ಬಿ.ಎಂ. ಇದಿನಬ್ಬ : ಹಿಂದೆ ಒಂಭತ್ತೂವರೆ ಗಂಟೆ ರಾತ್ರಿಯವರೆಗೂ ಹಿಂದಿನ ಸರ್ಕಾರದಲ್ಲಿ ಆದದ್ದು ನಮಗೆ ಗೊತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಡಿಸ್ಟಿಲರಿಗಳು ಬಂದಿವೆ, ಬ್ರೆವರೀಸ್ ಬಂದಿವೆ. ಇನ್ನು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿದೆ. ಆದರೆ ನಾನು ಒಂದು ಸಲಹೆಯನ್ನು ಕೊಡತಕ್ಕಂಥದ್ದು ಇವತ್ತು ಹೆಚ್ಚು ಡಿಸ್ಟಿಲರಿಗಳು ತಮ್ಮ ಗುಣಮಟ್ಟವನ್ನು ಕಾಪಾಡಿಕೊಂಡು ಬಂದದ್ದೇ ಆದರೆ ರಾಜ್ಯದ ವರಮಾನ ಕೂಡ ಹೆಚ್ಚಾಗುತ್ತದೆ. ಸ್ಕಾಟ್‌ಲ್ಯಾಂಡ್ ಮುಂದುವರಿದಿರತಕ್ಕಂಥದ್ದು ಒಳ್ಳೆಯ ಸ್ಕಾಚನ್ನು ಮಾಡಿ ನಮಗೆ ಕೊಡುವುದರಿಂದಲೇ ಮುಂದುವರಿದಿರತಕ್ಕಂಥದ್ದು. ನೀವು ಒಳ್ಳೆಯ ಸ್ಕಾಚನ್ನು ಮಾಡತಕ್ಕಂಥದ್ದು, ಒಳ್ಳೆಯ ಎಸ್ಸೆನ್ಸ್‌ನ್ನು ತರಿಸಿ ಕ್ವಾಲಿಟಿ ಸ್ಕಾಚನ್ನು ಮಾಡಿದರೆ ರಾಜ್ಯದಿಂದ ಹೊರಗೂ ಬಿಡಬಹುದು. ಮತ್ತು ದೇಶದ ಹೊರಗೂ ಕೂಡ ಕಳುಹಿಸಬಹುದು. ಈ ರೀತಿ ಮಾಡಿದರೆ ವಿದೇಶಿ ವಿನಿಮಯವನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತದೆ, ಈ ಬಗ್ಗೆ ಯೋಚನೆ ಮಾಡಿ ಎನ್ನತಕ್ಕಂಥ ಒಂದು ಮಾತನ್ನು ಹೇಳುತ್ತಾ ಈಗ ಪೋಲೀಸ್ ಇಲಾಖೆ ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಕ್ಕೆ

ಬಯಸುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳನ್ನು ಜಾಸ್ತಿ ಮಾಡಬೇಕು ಎನ್ನತಕ್ಕಂಥದ್ದು ನನ್ನ ಒಂದು ಸಲಹೆ. ಇವತ್ತು ಐಜಿಪಿ, ವಿಶೇಷವಾದಂಥ ಐಜಿಪಿಗಳನ್ನು ಮಾಡುವುದರಿಂದ ಖಂಡಿತವಾಗಿಯೂ ಇವತ್ತು ಸುಧಾರಣೆಯಾಗುವುದಿಲ್ಲ. ಇವತ್ತು ಪೋಲೀಸ್ ಸ್ಟೇಷನ್‌ನಲ್ಲಿ ಸಬ್-ಇನ್ಸ್‌ಪೆಕ್ಟರ್ಸ್‌ಗಳು ಏನು ಇದ್ದಾರೆ, ಅವರ ವ್ಯಾಪ್ತಿಯಲ್ಲಿ ಅನೇಕ ಜನ ಇವತ್ತು ಕಾನ್ಸ್‌ಟೇಬಲ್‌ಗಳನ್ನು ಹೆಚ್ಚಿಗೆ ಮಾಡುವುದರಿಂದ ಪರಿಸ್ಥಿತಿ ಸುಧಾರಣೆಯಾಗುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಇವತ್ತು ನಮ್ಮ ಹಳ್ಳಿಗಳಲ್ಲಿ ಏನು ಇದೆ ಎಂದರೆ, ಪೋಲೀಸ್ ಸ್ಟೇಷನ್‌ಗೆ ಯಾರಾದರೂ ಒಬ್ಬರು ಬಂದು ಪೋಲೀಸ್‌ನವರು ಕರೆದುಕೊಂಡು ಹೋದರೆ ಅವರಿಗೆ ಬಹಿಷ್ಕಾರ ಹಾಕತಕ್ಕಂಥದ್ದನ್ನು ಇವತ್ತು ನಾವು ಹಳ್ಳಿಗಳಲ್ಲಿ ನೋಡುತ್ತೇವೆ. ಇವತ್ತು ಒಬ್ಬ ಪೋಲೀಸ್ ಸ್ಟೇಷನ್‌ಗೆ ಹೋಗಿ ಬಂದರೆ ಏನೋ ದೊಡ್ಡ ಅಪರಾಧವನ್ನು ಮಾಡಿದ್ದಾನೆ ಎನ್ನತಕ್ಕಂಥ ಭಾವನೆ ಇರತಕ್ಕಂಥ ಜನ ಇವತ್ತು ಆ ಸಂಸ್ಕೃತಿಯಲ್ಲಿ ಬೆಳೆದಿರತಕ್ಕಂಥ ಜನ ಇದ್ದಾರೆ. ಪೋಲೀಸ್ ಸ್ಟೇಷನ್ ಎಂದರೆ ಅಂಥ ಒಂದು ಭಯ ಇರತಕ್ಕಂಥ ಜನರು ಇವತ್ತು ಇದ್ದಾರೆ. ನನಗೆ ಒಂದು ಏನು ಕೊರತೆಯಾಗಿದೆ ಎಂದರೆ ಇವತ್ತು ಪೋಲೀಸ್ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿ, ಪ್ರಾಮಾಣಿಕತನ ದೂರವಾಗಿರುವುದರಿಂದ ಇವತ್ತು ಅರಾಜಕತೆ ಎಲ್ಲೆಲ್ಲಿಯೂ ಕೂಡ ನಡೆಯುತ್ತಿದೆ. ಲಿಟಿಗೇಷನ್ ಜಾಸ್ತಿ ಆಗಿರತಕ್ಕಂಥದ್ದು ಎಲ್ಲಿಂದ ಎಂದರೆ ಪೋಲೀಸ್‌ನವರಿಂದಲೇ ಸೃಷ್ಟಿಯಾಗಿರತಕ್ಕಂಥ ಕೇಸಸ್‌ಗಳು ಸಾಕಷ್ಟು ಇದೆ. ಯಾರೋ ಒಬ್ಬ ಸಬ್ ಇನ್ಸ್‌ಪೆಕ್ಟರ್ ಆಗಲಿ ಅವರ ಲಿಮಿಟ್ಸ್‌ನಲ್ಲಿ ಹತ್ತು ಜನ ಇಪ್ಪತ್ತು ಜನ ಏಜೆಂಟ್ಸ್‌ಗಳನ್ನು ಇಟ್ಟುಕೊಂಡು ಇವತ್ತು ಕಾರ್ಯವನ್ನು ಮಾಡತಕ್ಕಂಥ ಮಟ್ಟಕ್ಕೆ ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಅಧ್ಯಕ್ಷರು ತಾವು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM CHAIRMAN : Now the discussion is concluded. Hon'ble Ministers will reply tomorrow. Now, the House stands adjourned to meet tomorrow at 11 A.M.

(The House adjourned at fifty eight minutes Past Seven of the Clock to meet again tomorrow, the 18th of March 1992, at Eleven of the Clock)

* * *

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನ ಸಭೆ

ಬುಧವಾರ, ೧೮ನೇ ಮಾರ್ಚ್ ೧೯೯೨, ಫಾಲ್ಗುಣ ೨೮, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ : ಮಂಡ್ಯ ಜಿಲ್ಲೆಯ ರೈತರಿಗೇ ನೀರು ಬಿಡುವ ಬಗ್ಗೆ

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚೆ ಒಂದು ವಿನಂತಿ. ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಆ ಸೂಚನೆ ಮೇಲೆ ಸರಕಾರದವರು ಉತ್ತರ ಕೊಡುತ್ತೇವೆಂದು ಹೇಳಿದ್ದರು.

ಉಪಾಧ್ಯಕ್ಷರು : ಮಧ್ಯಾಹ್ನ ...

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಏನಾಗಿದೆ ಎಂದರೆ ಇಡೀ ಮಂಡ್ಯ ಜಿಲ್ಲೆಯಲ್ಲಿ ನಾವು ಯಾರೂ ಊರುಗಳಿಗೆ ಹೋಗುವಹಾಗೆಯೇ ಇಲ್ಲ. ನಾನು ಒಂದು ಮಾತು ಹೇಳುತ್ತೇನೆ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಿ ನೀರು ಬಿಡಿಸಿ. ಆಗ ನಮಗೆ ಸರಿಹೋಗುತ್ತೇದೆ.

ಶ್ರೀಮತಿ ಮೋಟಮ್ಮ : ಕೊಶ್ಚನ್ ಹವರ್ ಆದಮೇಲೆ...

ಶ್ರೀ ಎಲ್.ಆರ್. ಶಿವರಾಮೇಗೌಡ : ಕೊಶ್ಚನ್ ಹವರ್ ಕಟ್ಟಿಕೊಂಡು ನನಗೆ ಏನಾಗಬೇಕಾಗಿದೆ ಮೋಟಮ್ಮನವರೇ, ಅಲ್ಲಿ ಜನ ನಾವು ಊರಿಗೆ ಹೋಗಗೊಡುತ್ತಿಲ್ಲ. ಮಾನ್ಯ ಉಪಾಧ್ಯಕ್ಷಣಿಯವರೇ ನೀವು ನಮ್ಮ ಸಹಾಯಕ್ಕೆ ಬರುತ್ತೀರೋ ಇಲ್ಲವೋ?

ಉಪಾಧ್ಯಕ್ಷಣಿಯವರು : ಖಂಡಿತಾ ಬರುತ್ತೇನೆ ...

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಈ ಸದನದ ಒಬ್ಬ ಗೌರವಾನ್ವಿತ ಸದಸ್ಯ. ನನ್ನ ಗೌರವ ನನ್ನ ಹಕ್ಕನ್ನು ಕಾಪಾಡತಕ್ಕದ್ದು ನಿಮ್ಮ ಕರ್ತವ್ಯ. ಆ ಕಾರಣಕ್ಕಾಗಿ ನಾನು ಕೇಳುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿ ರೈತರು ಕಂಗಾಲಾಗಿದ್ದಾರೆ. ನೀರು ಬಿಡಬೇಕು, ರೈತರ ಕಬ್ಬನ್ನು ಶುಗರ್ ಫ್ಯಾಕ್ಟರಿಯವರು ತೆಗೆದುಕೊಳ್ಳಬೇಕು, ಅದು ಯಾವುದೂ ಆಗುತ್ತಿಲ್ಲ.

ಉಪಾಧ್ಯಕ್ಷಣಿಯವರು : ಮಧ್ಯಾಹ್ನ ಕೊಶ್ಚನ್ ಹವರ್ ಆದ ತಕ್ಷಣ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಈಗ ಕ್ಯಾಬಿನೆಟ್ ಮೀಟಿಂಗ್ ನಡೆಯುತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ. ಕೊಶ್ಚನ್ ಹವರ್ ಆದಮೇಲೆ ಅವಕಾಶ ಇದೆ, ಸಂಬಂಧಪಟ್ಟ ಮಂತ್ರಿಗಳು ಬಂದಮೇಲೆ ತಾವು ಮತ್ತೊಮ್ಮೆ ಹೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಹತ್ತು ಲಕ್ಷ ಟನ್ ಕಬ್ಬು ಒಣಗಿ ಹಾಳಾಗುತ್ತಿದೆ.

ಉಪಾಧ್ಯಕ್ಷಣಿಯವರು : ಈಗ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಶಿವರಾಮೇಗೌಡರೇ ಸ್ವಲ್ಪ ಕುಳಿತುಕೊಳ್ಳಿ. ನೀವು ಹಠ ಮಾಡಬಾರದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಹಠ ಮಾಡುತ್ತಿಲ್ಲ. ಯಾರಾದರೂ ಅಧಿಕಾರಿಗಳು ಮಂಡ್ಯ ಜಿಲ್ಲೆಗೆ ಹೋಗಿ ಬಂದಿದ್ದಾರೆಯೇ ಕೇಳಿರಿ. ಇಷ್ಟೆಲ್ಲಾ ಗಲಾಟೆ ಮಾಡಿದ್ದರೂ ಒಬ್ಬ ಅಧಿಕಾರಿಯೂ ಸ್ಥಳಕ್ಕೆ ಹೋಗಿ ನೋಡಲಿಲ್ಲ. ರೈತರು ಕಂಗಾಲಾಗಿದ್ದಾರೆ. ಇವತ್ತು ನಾವು ಊರುಗಳಿಗೆ ಹೋಗುವುದಕ್ಕೆ ಬಿಡುವುದಿಲ್ಲ.

ಉಪಾಧ್ಯಕ್ಷಿಣಿಯವರು : ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೇ ನಾನು ತಮಗೆ ಗೌರವ ಕೊಡುತ್ತೇನೆ. ನೀವು ಹೇಳತಕ್ಕಂಥ ಮಾತಿಗೆ ಎರಡನೇ ಮಾತಿಲ್ಲ. ಈಗ ಸರಕಾರ ಮಧ್ಯ ಪ್ರವೇಶ ಮಾಡಬೇಕು. ರೈತರಿಗೆ ನೀರು ಬಿಡಿಸಬೇಕು, ರೈತರಿಗೆ ನೀರು ಬಿಡದೇ ಹೋದರೆ ರೈತರ ಪರವಾಗಿ ಈ ಸರಕಾರ ಇಲ್ಲ ಎಂದು ಆಗುತ್ತದೆ.

ಉಪಾಧ್ಯಕ್ಷಿಣಿಯವರು : ದಯವಿಟ್ಟು ಸ್ವಲ್ಪ ಸಮಯ ಕೊಡುತ್ತೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : ಎರಡು ಸಾರಿ ಸಮಯ ಕೊಟ್ಟಾಯಿತು. ಇಲ್ಲಿಯವರೆಗೆ ಯಾರೂ ಚಕಾರ ಎತ್ತಲಿಲ್ಲ. ಮೊದಲು ರೈತರಿಗೆ ನೀರು ಬಿಡಿ, ನಾನು ಆಮೇಲೆ ಕುಳಿತು ಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ ನೀವೊಬ್ಬರೇ ಮಾತನಾಡುತ್ತೀರೋ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೋ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸರ್ಕಾರದಿಂದ ನೀರು ಬಿಡಿಸುತ್ತೀರಾ?

ಉಪಾಧ್ಯಕ್ಷಣಿಯವರು : ನಿನ್ನೆಯ ದಿವಸ ಈ ವಿಷಯವನ್ನು ತಾವು ಎತ್ತಿದ್ದೀರಿ. ಸಂಸದೀಯ ಮತ್ತು ಶಿಕ್ಷಣ ಮಂತ್ರಿಗಳು, ಇದರ ಬಗ್ಗೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬರಲಿ, ಆಗ ತಾವು ವಿಷಯವನ್ನು ಪ್ರಸ್ತಾಪ ಮಾಡಿ ಆಗ ಅವರು ಅದರ ಬಗ್ಗೆ ತಮಗೆ ಒಪ್ಪಿಗೆಯಾಗುವ ರೀತಿಯಲ್ಲಿ ಉತ್ತರ ಕೊಡುತ್ತಾರೆಂದು ಹೇಳಿದ್ದಕ್ಕೆ ಆಗ ತಾವೂ ಸಹ ಒಪ್ಪಿದಿರಿ. ಈಗ ಮತ್ತೆ ಎತ್ತಿದ್ದೀರಿ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬರಬಹುದು ನೋಡೋಣ. ಖಂಡಿತವಾಗಿ ನಾನು ತಮಗೆ ಸಮಯ ಕೊಡುತ್ತೇನೆ. ಆಗ ತಾವು ಎತ್ತಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಿಮ್ಮ ಮಾತಿಗೆ ನನ್ನ ಸಹಮತ ಇದೆ. ಆದರೆ ಭಾರಿ ಕೈಗಾರಿಕಾ ಮಂತ್ರಿಗಳು ಬಂದು ಹೇಳಿಕೆ ಕೊಡುತ್ತಾರೆಂದು ತೀರ್ಮಾನ ಆಗಲಿ. ಆದಕ್ಕೆ ನಾನು ಬದ್ಧನಾಗಿದ್ದೇನೆ. ಈಗ ತೀರ್ಮಾನ ಮಾಡತಕ್ಕಂಥಾದ್ದು ಏನೆಂದರೆ ಮಂಡ್ಯ ನಗರದೊಳಗೆ ಬೆಂಕಿ ಬಿದ್ದಿದೆ ಮಂಡ್ಯದಲ್ಲಿ ಬೆಂಕಿ ಬೀಳುತ್ತದೆ. ಅಲ್ಲಿ ಸುಮಾರು 10 ಲಕ್ಷ ಟನ್ ಕಬ್ಬು 30 ಕೋಟಿ ರೂಪಾಯಿಗಳ ಬೆಳೆ ಹಾಳಾಗುತ್ತಿದೆ; ಹೀಗಾದರೆ ನಮ್ಮ ರೈತರ ಗತಿ ಏನು? ಅದಕ್ಕೆ ತಾವು .... _

(ಗೊಂದಲ)

ಶ್ರೀ ಧರ್ಮಸಿಂಗ್ : ಈಗ ನೀವು ಅಧ್ಯಕ್ಷರ ಗಮನಕ್ಕೆ ತಂದಿದ್ದೀರಿ. ನಿನ್ನೆಯು ಕೂಡ ಮಾನ್ಯ ಶಿಕ್ಷಣ ಸಚಿವರು ತಮ್ಮ ಮೂಲಕ ಹೇಳಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಬರಲಿ, ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಸಮಗ್ರವಾದ ಉತ್ತರವನ್ನು ಕೊಡಿಸಲಿಕ್ಕೆ ಸರ್ಕಾರ ಸಿದ್ಧವಿದೆ. ಅದರ ಬಗ್ಗೆ

ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ, ಈ ಮಾತನ್ನು ನಿನ್ನೆಯೂ ಕೂಡ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬರುತ್ತಾರೆ. ಸಂಪುಟ ಸಭೆ ನಡೆಯುತ್ತಿದೆ ಅವರು ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಏನು ಆಗಬೇಕೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳ ಉತ್ತರ ಮುಗಿದ ಮೇಲೆ ದಯವಿಟ್ಟು ನನಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷಣಿಯವರು : ಮಾನ್ಯ ಗೃಹ ಮಂತ್ರಿಗಳು ಈಗ ಉತ್ತರ ಪ್ರಾರಂಭ ಮಾಡಬಹುದು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಪೋಲೀಸ್, ಅಗ್ನಿಶಾಮಕ ಸೇವೆಗಳು, ಜೈಲುಗಳು ಇತ್ಯಾದಿ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ.

† ಶ್ರೀ ಧರ್ಮಸಿಂಗ್. (ಗೃಹ ಮತ್ತು ಅಬಕಾರಿ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, ನಿನ್ನೆಯ ದಿವಸ ಅಬಕಾರಿ ಇಲಾಖೆ ಮತ್ತು ಪೋಲೀಸ್ ಇಲಾಖೆಯ ಮೇಲೆ ಸಾಕಷ್ಟು ಈ ಸದನದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಾನು ಮೊಟ್ಟ ಮೊದಲನೆಯದಾಗಿ ಅಬಕಾರಿ ಇಲಾಖೆಯನ್ನು ತೆಗೆದುಕೊಂಡು ಅದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ ಆಗಲಿ. 1991-92ನೇ ಸಾಲಿನಲ್ಲಾಗಲಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಆದ್ಯತೆಕೊಟ್ಟು ಹೆಚ್ಚಿನ ಮೊತ್ತಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ಲಾನಿಂಗ್ ಕಮಿಷನ್‌ನಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಇದರ ಜೊತೆಗೆ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್, ತದನಂತರ ಅಬಕಾರಿಯಲ್ಲಿ ಸಾಕಷ್ಟು ರೆವಿನ್ಯೂ ಪಡೆಯುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ 4 ಕೋಟಿ ಜನಸಂಖ್ಯೆ ಸಂಬಂಧವಾಗಿ ಅವರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ರೀತಿಯಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಜನರ ಕಲ್ಯಾಣ ಕೆಲಸ ಮಾಡತಕ್ಕಂಥ ರೀತಿಯಲ್ಲಿಯೂ ಕೂಡ ಆದಾಯ ಪಡೆಯಬೇಕಾಗಿದೆ. 1991-92ನೇ ಸಾಲಿನಲ್ಲಿ ಮತ್ತು 1989-90ನೇ ಸಾಲಿನಲ್ಲಿ 550 ಕೋಟಿ ರೂಪಾಯಿಗಳಷ್ಟು ಆದಾಯ ಈ ಒಂದು ಇಲಾಖೆಯಿಂದ ಬರಬೇಕಾಗಿತ್ತು. ಇದನ್ನು ಕೂಡ ನಿಗದಿಪಡಿಸಲಾಗಿತ್ತು. ಇವತ್ತು ಅಬಕಾರಿ ಇಲಾಖೆಯ ಬಗ್ಗೆ ಸಾರ್ವಜನಿಕರ ಮನಸ್ಸಿನಲ್ಲಿ ಏನಿದೆ, ಮತ್ತೆ ಸಮಾಜದಲ್ಲಿ ಕೆಲವು ಚಿಂತನಶೀಲ ವ್ಯಕ್ತಿಗಳು ಏನಿದ್ದಾರೆ ಅವರು ಈ ಒಂದು ಇಲಾಖೆಯನ್ನು ಬೇರೆ ದೃಷ್ಟಿಯಿಂದ ಕೂಡ ನೋಡುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅಧಿಕಾರ ಸ್ವೀಕಾರ ಮಾಡಿಕೊಂಡ ಮೇಲೆ ಈ ಒಂದು ಇಲಾಖೆಯಲ್ಲಿ ಏನು ಇವತ್ತು ರೆವಿನ್ಯೂ ಕಲೆಕ್ಷನ್ ಮಾಡುವಂತಾದ್ದು ಆಗಬಹುದು ಮತ್ತು ಇವತ್ತು ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ್ದು ಬಾಕಿ ಆಗಿರಬಹುದು. ಇದರಲ್ಲಿ ಸ್ವಲ್ಪ ನಾವು ರಿಯಾಯಿತಿ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತು ಮತ್ತು ಜನರ ಮನಸ್ಸಿನಲ್ಲಿರತಕ್ಕಂತ ಭಾವನೆಗಳನ್ನು ಮಾನ್ಯ ಸದನದ ಸದಸ್ಯರು ಕೂಡ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ 550 ಕೋಟಿ ರೂಪಾಯಿಗಳ ಆದಾಯ ಬರಬೇಕು. ಅಂಕಿ ಅಂಶಗಳ ಮೂಲಕ ನಾನು ಹೇಳಬೇಕಾದರೆ 1990-91ನೇ ಸಾಲಿನಲ್ಲಿ 550 ಕೋಟಿ ರೂಪಾಯಿಗಳವರೆಗೆ ವಸೂಲಿ ಮಾಡುವ ನಿರ್ಧಾರ ಇತ್ತು. ಆದರೆ ಆ ಒಂದು ವರ್ಷದ ಅವಧಿಯಲ್ಲಿ ಕೇವಲ 429 ಕೋಟಿ ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಲಾಯಿತು. 1991-92ನೇಸಾಲಿನಲ್ಲಿ 550 ಕೋಟಿ ರೂಪಾಯಿ ಏನು ನಿರೀಕ್ಷೆ ಮಾಡಿದ್ದೇವೋ ಆದರಲ್ಲಿ ಕೇವಲ 11 ತಿಂಗಳಲ್ಲಿ 441 ಕೋಟಿ

ರೂಪಾಯಿಗಳನ್ನು ವಸೂಲಿ ಮಾಡಿದ್ದೇವೆ. ಅಂದರೆ 1991-91ನೇ ಸಾಲಿನಲ್ಲಿ 11 ತಿಂಗಳ ಅವಧಿಯಲ್ಲಿ 380 ಕೋಟಿ ರೂಪಾಯಿ ವಸೂಲಾದರೆ ಈ ಸಲ 11 ತಿಂಗಳಲ್ಲಿ ಈ ಸರ್ಕಾರ 441 ಕೋಟಿ ರೂಪಾಯಿ ವಸೂಲು ಮಾಡಿದೆ. ಹೋದ ವರ್ಷ 1990-91ರ ಸಾಲಿನಲ್ಲಿ ಏನು ವಸೂಲಾಗಿತ್ತು ಅದಕ್ಕಿಂತ 1991-92ರ ಸಾಲಿನಲ್ಲಿ 52 ಕೋಟಿ ರೂಪಾಯಿಯನ್ನು ಹೆಚ್ಚಿಗೆ ವಸೂಲಿ ಮಾಡಿದ್ದೇವೆ. ಇದರಲ್ಲಿ ಯಾರೇ ದೊಡ್ಡವರಾಗಲಿ, ಬಿಡಬಾರದೆಂದು ಸ್ಪೆಸಿಫಿಕ್ ಆಗಿ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ನಾವು ರೆವಿನ್ಯೂ ಕಲೆಕ್ಷನ್ ಮಾಡುವ ವಿಚಾರದಲ್ಲಿ ಅಬಕಾರಿ ಕಮೀಷನರ್, ಫೈನಾನ್ಸ್ ಕಮೀಷನರ್‌ರವರ ಜೊತೆ ಸಾಕಷ್ಟು ಸಲ ಸಮಾಲೋಚನೆ ಮಾಡಿದ್ದೇವೆ. ಸಭೆಯನ್ನೂ ಮಾಡಿದ್ದೇವೆ. ಅಬಕಾರಿ ಕಮೀಷನರ್‌ರವರು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿ ರತಕ್ಕಂಥ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ರೆವಿನ್ಯೂ ಕಲೆಕ್ಷನ್ ಬಗ್ಗೆ ಕಟ್ಟುನಿಟ್ಟಾಗಿ ತಿಳಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳ ಆದೇಶ ಕೂಡ ಇದೆ. ಏನು ಕಲೆಕ್ಷನ್‌ಮಾಡಬೇಕಾಗಿದೆಯೋ ಅದನುನ ನಿರ್ದಾಕ್ಷಿಣ್ಯವಾಗಿ ಮಾಡಬೇಕೆಂದು ನಿರ್ದಿಷ್ಟವಾಗಿ ನಾವು ಆದೇಶ ಕೊಟ್ಟಿದ್ದೇವೆ. ಆ ರೀತಿ ರೆವಿನ್ಯೂ ಕಲೆಕ್ಷನ್ ಆಗುತ್ತಿದೆ. ಹೋದ ಸಲ ಒಂದು ವರ್ಷಕ್ಕೆ 429 ಕೋಟಿ ರೂಪಾಯಿ ಇತ್ತು. ಈ ವರ್ಷ 11 ತಿಂಗಳಲ್ಲಿ 441 ಕೋಟಿ ರೂಪಾಯಿ ವಸೂಲಿ ಮಾಡಿದ್ದೇವೆ. ಇನ್ನೂ ಒಂದು ತಿಂಗಳು ಕಲೆಕ್ಷನ್ ಮಾಡಬೇಕಾಗಿದೆ. ಆದರಲ್ಲೂ ನಮ್ಮ ಟಾರ್ಗೆಟ್ ಏನಿದೆ ಅಂದರೆ 500 ಕೋಟಿಗಿಂತಲೂ ಹೆಚ್ಚು ಕಲೆಕ್ಷನ್ ನಾವು ಮಾಡುತ್ತಿದ್ದೇವೆ. ನಿನ್ನೆ ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಮಾನ್ಯ ಸದಸ್ಯರು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇವತ್ತು ನಾನು ಅಂಕಿ ಅಂಶಗಳ ಮೂಲಕ ಈ ಸದನಕ್ಕೆ. ಈ ರಾಜ್ಯದ ಜನತೆಗೆ ಹೇಳಬಯಸುತ್ತೇನೆ. ಈ ಒಂದು ಇಲಾಖೆಯಲ್ಲಿ ನಾವು ಯಾರಿಗೂ ಕೂಡಾ ರಿಯಾಯತಿ ಕೊಡುತ್ತಿಲ್ಲ. ಇವತ್ತು ಹೆಂಡದ ದೊರೆಗಳಿಗೆ ಈ ಸರ್ಕಾರ ರಿಯಾಯಿತಿ ತೋರಿಸುತ್ತಿದೆ ಎನ್ನುವುದು ತಪ್ಪು ಎಂದು ಈ ಅಂಕಿ ಅಂಶಗಳ ಮುಖಾಂತರ ಇವತ್ತಿನ ದಿವಸ ನಾನು ತಮಗೆ ಹೇಳಬಯಸುತ್ತೇನೆ. ಇವತ್ತು ಬೇನಾಮಿ ಕಂಟ್ರಾಕ್ಟರುಗಳು ಕರ್ನಾಟಕ ರಾಜ್ಯದಲ್ಲಿ ಬರುತ್ತಿದ್ದರು. ಅದನ್ನು ನಿಲ್ಲಿಸಬೇಕೆಂಬ ಉದ್ದೇಶ ಇತ್ತು. 90-91ನೇ ಸಾಲಿನಲ್ಲಿ ಅಮೆಂಡ್ ಮಾಡಿ, ಕಂಟ್ರಾಕ್ಟರುಗಳು ರಿಜಿಸ್ಟ್ರೇಷನ್ ಮಾಡಿ ಹರಾಜಿನಲ್ಲಿ ಪಾರ್ಟಿಸಿಪೇಟ್ ಮಾಡಬೇಕು. ಮೊದಲು ಕಂಟ್ರಾಕ್ಟರ್ ರಿಜಿಸ್ಟ್ರೇಷನ್ ಫೀಸ್ 1 ಸಾವಿರ ರೂಪಾಯಿ ಮಾಡಿದ್ದರು, ಬೇನಾಮಿ ಕಂಟ್ರಾಕ್ಟರುಗಳನ್ನು ಅವಾಯ್ಡ್ ಮಾಡುವ ದೃಷ್ಟಿಯಿಂದ ರಿಜಿಸ್ಟ್ರೇಷನ್ ಫೀಸನ್ನು 25 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಹೋದ 90-91ನೇ ಸಾಲಿನಲ್ಲಿ 300 ಕಂಟ್ರಾಕ್ಟರುಗಳು ರಿಜಿಸ್ಟರ್ ಮಾಡಿ ಕೇವಲ 3 ಲಕ್ಷ ರೂಪಾಯಿ ನಮಗೆ ರಿಜಿಸ್ಟ್ರೇಷನ್ ಫೀ ಬಂದಿತ್ತು. ಇವತ್ತು 25 ಸಾವಿರಕ್ಕೆ ಹೆಚ್ಚು ಮಾಡಿರುವ ಕಾರಣ ಇವತ್ತು 150 ಕಂಟ್ರಾಕ್ಟರುಗಳ ಸಂಖ್ಯೆಗೆ ಇಳಿದಿದೆ. ಬೇನಾಮಿ ಕಂಟ್ರಾಕ್ಟರಗುಳು ಬರುತ್ತಿಲ್ಲ. ಅದರ ಪರಿಣಾಮವಾಗಿ 38 ಕೋಟಿ ರೂಪಾಯಿಯಷ್ಟು ಸರ್ಕಾರಕ್ಕೆ ಆದಾಯ ಬಂದಿದೆ. ನಾವು ಪ್ರತಿಯೊಂದು ಹಂತದಲ್ಲೂ ಇವತ್ತಿನ ದಿವಸ ಮೆಥಾಡಿಕಲ್ ಆಗಿ, ವ್ಯವಸ್ಥಿತವಾಗಿ ಕೆಲಸ ಮಾಡಬೇಕಾಗಿದೆ. ಇವತ್ತು ನಮ್ಮ ಇಲಾಖೆಗೆ ಹೆಚ್ಚಿನ ರೀತಿಯಲ್ಲಿ ಗಮನ ಕೊಡಬೇಕಾಗಿದೆ. ಆ ಒಂದು ಹಂತದಲ್ಲಿ ಕೂಡ ಇವತ್ತಿನ ದಿವಸ ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಕಾಂಪ್ರಹೆನ್ಸಿವ್ ಆ್ಯಕ್ಟ್ ತರತಕ್ಕಂಥ ರೀತಿಯಲ್ಲಿ ಸನ್ಮಾನ್ಯ ಸಭಾಧ್ಯಕ್ಷಣಿಯವರೆ ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಅದರ ಆ್ಯಕ್ಟ್ ಬಗ್ಗೆ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿದಾಗ ಇವತ್ತು ಏನು piece meal ಆಗಿತ್ತು. ಆ ಬಗ್ಗೆ ಕಾಂಪ್ರಹೆನ್ಸೀವ್ ಆ್ಯಕ್ಟ್ ತರತಕ್ಕಂಥಾದ್ದು ಕೂಡಾ ನಮ್ಮ ಪರಿಶೀಲನೆಯಲ್ಲಿದೆ. ಇವತ್ತು ಕೋರ್ಟ್‌ನಲ್ಲಿ ಲಿಟಿಗೇಷನ್, ಕೇಸ್‌ಗಳು 400 ಇವೆ. ಅದಕ್ಕೆ ಸಪರೇಟ್ ಆಗಿ ವಕೀಲರುಗಳನ್ನು ಸೇರಿಸಿ we have constituted a Committee of Private Advocates.... ಯಾರು ಯಾರು ಅಡ್ವೋಕೇಟ್‌ಗಳು

ಎಫೆಕ್ಟೀವ್ ಆಗಿ ಪ್ರತಿಪಾದನೆ ಮಾಡಬಹುದೋ? ಅಂಥವರನ್ನು ನೇಮಕ ಮಾಡುವ ಬಗ್ಗೆ ಕೂಡ ಸರ್ಕಾರ ವಿಚಾರ ಮಾಡಿದೆ. ಇವೊತ್ತು 62 ಕೋಟಿ ರೂಪಾಯಿಗಳ ಅರಿಯರ್ಸ್ ಏನಿದೆ ಅದರಲ್ಲಿ ಕೆಲವರು ಇವೊತ್ತು ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ಗೆ ಹೋದುದನ್ನು ಹೊರತುಪಡಿಸಿ, 1945ರಿಂದ ದೀರ್ಘಾವಧಿಯ ಪೆಂಡಿಂಗ್ ಏನಿತ್ತು ಅಂಥ ಅರಿಯರ್ಸ್ ಏನು ನಮಗೆ ಬರಬೇಕಾಗಿದೆ, ಅಂಥದ್ದರಲ್ಲಿ 30 ಕೋಟಿಗಳಿಗಿಂತಲೂ ಹೆಚ್ಚು ಅರಿಯರ್ಸ್‌ನ್ನು ನಾನು ಅಧಿಕಾರ ವಹಿಸಿಕೊಂಡ ಮೇಲೆ ತೆಗೆದುಕೊಂಡಿದ್ದೇವೆ. ಇದು ಹೇಗೆ ಬಂತು ಅಂದರೆ ಪ್ರಸ್ತುತ ಇಲಾಖೆಯಲ್ಲಿ ರತಕ್ಕಂಥ ಸಮಸ್ಯೆಗಳ ಬಗ್ಗೆ ನಾನು ನನ್ನ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ವ್ಯವಸ್ಥಿತವಾಗಿ ಯಾವ ರೀತಿಯಾಗಿ ಮಾಡಿದರೆ, ಈ ಡಿಪಾರ್ಟ್‌ಮೆಂಟ್ ಬಗ್ಗೆ ಸಾರ್ವಜನಿಕರ ಮನಸ್ಸಿನಲ್ಲಿ ಏನೊಂದು ಭಾವನೆ ಇದೆ, ಇವೊತ್ತು ರಿಯಾಯಿತಿ ತೋರಿಸತಕ್ಕಂಥ ರೀತಿಯಲ್ಲಿ ಯಾರು ರಿಯಾಯತಿಯಿನ್ನು ತೋರಿಸುತ್ತಿದ್ದಾರೆ ಎಂದು ಹೇಳತಕ್ಕಂಥಾದ್ದರಲ್ಲಿ ಕೂಡ ಪ್ರಪ್ರಥಮವಾಗಿ ಕ್ರಮ ತೆಗೆದುಕೊಳ್ಳಲು ಅವಕಾಶ ಇದ್ದರೂ ಕೂಡ ಅಂಥವರು ಕ್ರಮ ತೆಗೆದುಕೊಳ್ಳಲು ಆಗಲಿಲ್ಲ. ಆದರೆ ನಾವು ಆ ಒಂದು ಕ್ರಮವನ್ನು ತೆಗೆದುಕೊಂಡಿದ್ದೇನೆ. ಬಹಳ ಜವಾಬ್ದಾರಿಯಿಂದ ನಾನು ಈ ಮಾತನ್ನು ಆಡುತ್ತಿದ್ದೇನೆ. ನಾವು 1985-86, 1986-87, 1987-88ನೇ ಸಾಲಿನಲ್ಲಿ ಆಗಿನ ಸರಕಾರ ಮತ್ತು ಯಾರು ಎಕ್ಸೈಸ್ ಕಾಂಟ್ರಾಕ್ಟರ್ಸ್ ಇದ್ದರು, ಇವೊತ್ತಿನ ದಿವಸ ನಮಗೆ ಅವರಿಂದ 60-70 ಕೋಟಿ ರೂಪಾಯಿಗಳನ್ನೇನು ಅವರು ಕೊಡಬೇಕಾಗಿದೆ, ಅದರಲ್ಲಿ ಬಹಳಷ್ಟು ಕಂಟ್ರಾಕ್ಟರ್ಸ್ ವೈಂಡಪ್ ಆಗಿ ಹೋಗಿಬಿಟ್ಟಿದ್ದಾರೆ. ಕೆಲವು ಜನರ ಹೆಸರುಗಳು ಕೂಡ ಇಲ್ಲ. ಆದರೆ ಅವರು ಖುದ್ದಾಗಿ ಬಂದು ಸರಕಾರಕ್ಕೆ ನಾವು ಕೂಡ ಬೇಕಾದ ಹಣವನ್ನು ಕೊಡಬಹುದು ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದರು. ಸಾಕಷ್ಟು ಕೇಸ್‌ಗಳು ಸುಪ್ರೀಮ್ ಕೋರ್ಟ್, ಹೈಕೋರ್ಟ್‌ಗಳಲ್ಲಿ ಏನು ಪೇಂಡಿಂಗ್‌ನಲ್ಲಿ ಇತ್ತು, ಸುಪ್ರೀಂ ಕೋರ್ಟ್‌ನವರು ಆ ಎಲ್ಲಾ ಕೇಸ್‌ಗಳನ್ನು ಹೈಕೋರ್ಟ್‌ಗೆ ಕಳುಹಿಸಿದ್ದಾರೆ. ಯಾವ ಕಾರ>ಗಳಿಂದ ಇವೊತ್ತು ಸುಪ್ರೀಂ ಕೋರ್ಟ್‌ಗೆ, ಹೈಕೋರ್ಟ್‌ಗೆ ಬಂದಿದ್ದಾರೆ, ಅವರ ಸಮಸ್ಯೆಗಳು ಏನು ಇವೆ, ಅದರ ಬಗ್ಗೆ ಕೂಡ ಸರಕಾರದವರು ಪರಿಶೀಲನೆ ಮಾಡಬೇಕೆಂದು ಹೇಳಿದಾಗ ಆಗಿನ ಎಕ್ಸೈಸ್ ಮಂತ್ರಿಯವರಾಗಿ ಶ್ರೀ ಇನಾಂದಾರ್‌ರವರು ಏನಿದ್ದರು, ಅವರು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು 1988ರಲ್ಲಿ ಹೇಳಿದ್ದರು. ಇವೊತ್ತು ಇಂಟ್ರೆಸ್ಟ್ ವೇವ್ ಮಾಡತಕ್ಕಂಥ ಪ್ರಶ್ನೆ ಬಂದಾಗ ಎಕ್ಸಿಸ್ಟಿಂಗ್ ಆಕ್ಟ್‌ನಲ್ಲಿಯ 15ಎ, ಪ್ರಕಾರ ಇಂಟರೆಸ್ಟ್ ವೇವ್ ಮಾಡತಕ್ಕಂಥ ಪವರ್ ಸರಕಾರಕ್ಕೆ ತೆಗೆದುಕೊಂಡು, ಯಾರಾದರೂ ಇಷ್ಟು ಹಣ ನಾವು ಕೊಡುತ್ತೇವೆ ಎಂದು ಮುಂದೆ ಬಂದಾಗ ಅದನ್ನು ಪರಿಶೀಲನೆ ಮಾಡತಕ್ಕ ಒಂದು ವಿಚಾರ ಬಂದಿತ್ತು. ಆಗಲೂ ಕೂಡ ಕೆಲವು ಜನ ಕಂಟ್ರಾಕ್ಟರ್ಸ್ ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್ ಕೂಡ ನಮ್ಮ ಸರಕಾರದ ಪರವಾಗಿ ಅಪಹೆಲ್ಡ್ ಮಾಡಿದೆ. ಈ ಮಾತನ್ನು ನಾನು ಯಾಕೆ ಹೇಳುತ್ತೀದ್ದೇನೆ ಅಂದರೆ, ಇವೊತ್ತು ಯಾವ ಕಂಟ್ರಾಕ್ಟರ್ಸ್‌ಗಳಿಗೆ ಕೂಡ ಇಂಟ್ರೆಸ್ಟ್ ವೇವ್ ಮಾಡಿ ಕೊಟ್ಟಿಲ್ಲ. ಯಾರೂ ನಮ್ಮಲ್ಲಿಗೆ ಬಂದಿಲ್ಲ. ಇವೊತ್ತು ಯಾವ ಸಮಸ್ಯೆಗಳು ಇಲಾಖೆಯಲ್ಲಿ ಪೆಂಡಿಂಗ್‌ನಲ್ಲಿ ಇತ್ತು, ಯಾವ ಕ್ರಮವನ್ನು ನಾವು ತೆಗೆದುಕೊಳ್ಳಲಿಲ್ಲ. ಆ ಕ್ರಮದ ಬಗ್ಗೆ ಇವೊತ್ತು ಸರಕಾರವು ನಿಗಾ ವಹಿಸಿದೆ ಹೊರತಾಗಿ ಯಾರಿಗೇ ಕೊಡಬೇಕೆನ್ನುವುದು ವಿಚಾರ ಸರಕಾಕಕ್ಕೆ ಇಲ್ಲ. ಇವೊತ್ತು ಬಿಜೆಪಿಯ ಮಾನ್ಯ ಸದಸ್ಯರುಗಳು ಮತ್ತು ಬೇರೆಯವರು ಕೂಡ ಪ್ರಸ್ತಾಪ ಮಾಡಿದ್ದಾರೆ. ನೀವು ಇಂಟ್ರೆಸ್ಟ್ ವೇವ್ ಮಾಡುತ್ತೀರಿ ಎಂದು ಹೇಳಿದ್ದಾರೆ; ರೈತರಿಗೆ ಸವಲತ್ತುಗಳನ್ನು ಕೊಡುತ್ತಾ ಇಲ್ಲ, ಆದರೆ ಹೆಂಡದ ದೊರೆಗಳಿಗೆ ಸಹಾಯ ಮಾಡುತ್ತಿದ್ದಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಅಂಕಿಅಂಶಗಳ ಮೂಲಕ ಯಾವುದೇ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ, ಸರಕಾರ ಎಲ್ಲಿ ತಪ್ಪು ಮಾಡಿದೆ, ಎಂಬುದನ್ನು ನೋಡಿ ಸಂಬಂಧಪಟ್ಟ ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ

ಗಮನಕ್ಕೆ ತರತಕ್ಕಂಥ ಅಧಿಕಾರ ಇದೆ. ಇವೊತ್ತು ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕೆಲವು ವಿಚಾರಗಳು ನಬಾರ್ಡ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನವರ ಏನೊಂದು ಬೇರೆ ಬೇರೆ ಸಂಸ್ಥೆಗಳು ಇವೆ, ಅವರಿಗೆ ನಾವು ಹಣ ಕಟ್ಟಬೇಕಾಗುತ್ತದೆ. ಔಟಫ್ಲೋ ಇದೆ. ಆದರೆ ಇದು ಇನ್‌ಫ್ಲೋ ಇದೆ. ಇವೊತ್ತಿನ ದಿವಸ 90-95 ಕೋಟಿ, ಬಾಕಿ ವಿಚಾರದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಉತ್ತರ ಕೊಡತಕ್ಕಂಥ ಕಾಲದಲ್ಲಿ, ವಿವರಗಳು ಒಂದು ಅಬಕಾರಿ ಇಲಾಖೆಯ ಬುಕ್‌ನಲ್ಲಿ ಇದೆ. ಅದರಲ್ಲಿ 90 ಕೋಟಿ ರೂಪಾಯಿಗಳು ಬರಬೇಕಾಗಿದೆ, ವಸೂಲು ಮಾಡಬೇಕಾಗಿದೆ, ವಿವಿಧ ಹಂತಹಂತದಲ್ಲಿದೆ; ಅದನ್ನೆಲ್ಲಾ ಪರಿಶೀಲನೆ ಮಾಡುತ್ತೇವೆ. ಎಫೆಕ್ಟೀವ್ ಆಗಿ ಇವೊತ್ತು 1945 ರಿಂದ ಇಲ್ಲಿಯ ವರೆಗೆ ಏನು ಬಾಕಿ ಆಗಿದೆ. ಅದನ್ನು ಎಫೆಕ್ಟೀವ್ ಆಗಿ ಮಾಡಬೇಕೆಂಬ ಉದ್ದೇಶ ಸರಕಾರಕ್ಕೆ ಇದ್ದರೂ ಮಾಡಿಲ್ಲ, ಆದರೆ ಅದನ್ನು ಕೂಡ ನಾವು ಇವೊತ್ತು ಜನರ ಗಮನಕ್ಕೆ ತಂದಿದ್ದೇವೆ. ಇವೊತ್ತು ರೈತರ ಸಾಲವನ್ನು ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಸರಕಾರ ಹಿಂಜರಿದು, ಅಬ್ಕಾರಿ ಗುತ್ತಿಗೆದಾರರಿಗೆ ಹೆಚ್ಚಿನ ರಿಯಾಯತಿಯನ್ನು ಕೊಡುತ್ತೇವೆಂದು ಹೇಳುವುದು ಬಹಳ ಸತ್ಯಕ್ಕೆ ದೂರವಾದುದು; ಅಂಥ ಯಾವುದೇ ಕ್ರಮಗಳನ್ನು ಸರಕಾರದವರು ತೆಗೆದುಕೊಂಡಿಲ್ಲ. ಯಾರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂಬ ರೀತಿಯಲ್ಲಿ 1988ರಲ್ಲಿ ಏನು ಸರಕಾರದ ಪರಿಶೀಲನೆಯಲ್ಲಿತ್ತು, ಅದನ್ನು ಮಾತ್ರ ನಾವು ಜಾರಿಗೆ ತಂದಿದ್ದೇವೆ. ಈ ರೀತಿಯಾದ ಒಂದು ಕೆಲಸವನ್ನು ನಾವು ಹಂತ ಹಂತವಾಗಿ ಇಂದು ಮಾಡುತ್ತಿದ್ದೇವೆ. ಪ್ರತಿಪಕ್ಷದ ನಾಯಕರಿಂದ ಕೂಡ ಹೋದ ಸದನದಲ್ಲಿ ಡಿಸ್ಟಿಲರಿ ಲೈಸೆನ್ಸ್ ಹೆಚ್ಚಿಗೆ ಕೊಟ್ಟಿದ್ದಾರೆ ಎಂಬ ಮಾತು ಬಂತು. ನಾನು ಆವಾಗಲೇ ಹೇಳಿದ್ದೇನೆ. ಏನೆಂದರೆ. ಮೊಲ್ಯಾಸಿಸ್ ಬೇಸ್ಡ್ ಇಂಡಸ್ಟ್ರಿ ಏನಿವೆ. ಇವಕ್ಕೆ ಕರ್ನಾಟಕದಲ್ಲಿ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಚೀಫ್‌ಸೆಕ್ರೆಟರಿಯವರಾದ ಪ್ರಭಾಕರರಾಯರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಿಸಿದ್ದೇವೆ ಎಂದು; ಕರ್ನಾಟಕದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ ಅವುಗಳಿಂದ 4.80 ಲಕ್ಷ ಮೆಟ್ರಿಕ್‌ಟನ್ ಮೊಲ್ಯಾಸಿಸ್ ಅವೇಲಬಲ್ ಇದೆ. ಅದನ್ನು ನಾವು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇವತ್ತು ಎಕ್ಸ್‌ಪೋರ್ಟ್ ಮಾಡಿದರೂ ಅದರ ಮೇಲೆ ಡ್ಯೂಟಿ ಹಾಕುವ ಪರಿಸ್ಥಿತಿಯಲ್ಲಿ ನಾವಿಲ್ಲ. ಆದರೂ ಹೋದ ವರ್ಷ 75 ಸಾವಿರ ಮೆಟ್ರಿಕ್ ಟನ್‌ನಷ್ಟು ಬೇರೆ ರಾಜ್ಯಗಳಿಗೆ ಕೊಟ್ಟಿದ್ದೇವೆ. ಆಂಟಿಸಿಪೇಟೆಡ್ 94-95ರ ಸಾಲಿನಲ್ಲಿ ಇನ್ನೂ ಕೂಡ 27 ಖಂಡಸಾರಿ ಶುಗರ್ ಫ್ಯಾಕ್ಟರಿಗಳು ಬರುತ್ತವೆ ಮತ್ತು ಇನ್ನೂ 5 ಶುಗರ್ ಫ್ಯಾಕ್ಟರಿಗಳು ಬರುತ್ತಿವೆ. ಆಗ 8 ಲಕ್ಷ ಮೆಟ್ರಿಕ್ ಟನ್ ಮೊಲಾಸಿಸ್ ಸಿಗುತ್ತದೆ. ಇವತ್ತು ಮೊಲ್ಯಾಸಿಸ್ ಬೇಸ್ಡ್ ಇಂಡಸ್ಟ್ರಿಗಳಿಗೆ ಫೆಸಿಲಿಟಿ ಕೊಟ್ಟರೆ ಉದ್ಯೋಗಾವಕಾಶವಾಗಲಿ ಆರ್ಥಿಕ ದೃಷ್ಟಿಯಿಂದಲೂ ನಮ್ಮ ಇಲಾಖೆಗೆ ಹೆಚ್ಚು ರೆವಿನ್ಯೂ ಬರುವುದೆಂದು ವಿಚಾರ ಮಾಡಿ ಕೊಟ್ಟಿದ್ದೇವೆ. ಯಾರು ನಿಜವಾದ ಟ್ರೇಡರ್ಸ್ ಇದ್ದಾರೆ. ಕೆಲಸ ಮಾಡುವಲ್ಲಿ ಮುಂದೆ ಬಂದಿದ್ದಾರೆ ಎಷ್ಟು ಅಪ್ಲಿಕೇಶನ್ಸ್ ಇವೆ, ಎಲ್ಲಿ ಫೀಜ್ ಕೊಟ್ಟಿದ್ದಾರೆ ಅಲ್ಲಿ ಎಲ್ಲವನ್ನೂ ಕೂಡ ಸರಿಯಾಗಿ ಪರಿಶೀಲನೆ ಮಾಡಿ ಕೊಟ್ಟಿದ್ದೇವೆ. ಯಾರಿಗೂ ನೆಪೋಟಿಸಂ ಫೇವರಿಟಿಸಂ ತೋರಿಸಿಲ್ಲ: ಇಂದು ಡಿಸ್ಟಲರಿ ಯೂನಿಟ್ ಮಾಡಬೇಕಾದರೆ 6 ರಿಂದ 7 ಕೋಟಿ ಬೇಕಾಗುತ್ತದೆ. ಬ್ಯಾಂಕ್‌ಗಳೂ ಕೂಡ ಸಹಾಯ ಮಾಡುತ್ತಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಇಂದು 13 ಡಿಸ್ಟಿಲರಿ ಲೈಸೆನ್ಸ್‌ನ್ನು ಕರ್ನಾಟಕದಲ್ಲಿ ಕೊಟ್ಟಿದ್ದೇವೆ. ಅದು ಮೊದಲು ಬ್ಯಾನಾಗಿತ್ತು, ಪ್ರಸ್ತುತದಲ್ಲಿರುವ ಮೊಲಾಸಿಸ್‌ನ್ನು ಉಪಯೋಗಿಸಿಕೊಂಡು ಮಾಡಲೇಬೇಕಾಗಿದೆ ಎಂದು ಸರ್ಕಾರ ಪ್ರಾಕ್ಟಿಕಲ್ ಡಿಸಿಶನ್ ತೆಗೆದುಕೊಂಡಿದೆ; ಆಮೇಲೆ ಎಲ್ಲ ಕಡೆ ಆಲ್ಕೊಹಾಲ್ ಇಂಡಸ್ಟ್ರಿಗಳಿಗೆ ಅನುಮತಿ ಕೊಡುವ ಬಗ್ಗೆ ಸರ್ಕಾರ ವ್ಯವಸ್ಥಿತವಾಗಿ ವಿಚಾರ ಮಾಡಿದೆ ಎಂಬುದನ್ನೂ ಕೂಡ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರಾದ ಎಸ್.ಎಂ. ಯಾಹ್ಯಾರವರು ಮೊನ್ನೆ ಕಳ್ಳಭಟ್ಟಿ ದುರಂತದ ಬಗ್ಗೆ

ಪ್ರಸ್ತಾಪಿಸಿದರು. 1981ರಲ್ಲಿ ಇಂತಹ ಒಂದು ದುರಂತ ರಾಜ್ಯದಲ್ಲಿ ನಡೆದಿದೆ. ಅದರಲ್ಲಿ 336 ಜನ ಸತ್ತು ಹೋಗಿದ್ದಾರೆ. ಆ ದುರಂತಕ್ಕೆ ಕಾರಣರಾಗಿದ್ದರವರನ್ನು ಹಿಡಿಯುವ ಪ್ರಯತ್ನ ಸರ್ಕಾರ ಆಗಿನ ಕಾಲದಲ್ಲಿ ಮಾಡಿದರೂ ಕೂಡ ಒಂದು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಲು ಆಗಲಿಲ್ಲ. ಅದರ ಪರಿಣಾಮವಾಗಿ ಆಗಿನ ಸರ್ಕಾರ ದೇಸಾಯಿ ಕಮಿಶನ್ ರಚನೆ ಮಾಡಿತ್ತು. ಈ ಕಳ್ಳಬಟ್ಟಿ ತಯಾರು ಮಾಡುವುದರಲ್ಲಿ ಏನು ಅವ್ಯವಹಾರ ಆಗುತ್ತಿದೆ ಇದಕ್ಕೆ ವ್ಯವಸ್ಥಿತವಾಗಿ ಜನರ ಆರೋಗ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಯಾವ ರೀತಿ ಮಾಡಿಕೊಂಡು ಹೋಗಬೇಕೇಂದು ಟರ್ಮ್ಸ್ ಆಫ್ ರೆಫರೆನ್ಸ್ ಅವರಿಗೆ ಮಾಡಿದಾಗ ಅವರೂ ಕೂಡ ಒಂದು ರಿಪೋರ್ಟ್ ಸರ್ಕಾರಕ್ಕೆ ಒದಗಿಸಿದ್ದಾರೆ. ಅದರಲ್ಲಿ 85 ಶಿಫಾರಸ್‌ಗಳನ್ನು ಅವರು ಮಾಡಿದ್ದಾರೆ, ಅದರಲ್ಲಿ ಇಂದು 23 ಶಿಫಾರಸ್‌ಗಳು ಕೆಎಸ್‌ಆರ್‌ಟಿಸಿ, ಎಜುಕೇಶನ್ ಹಾಗೂ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿವೆ. ಉಳಿದಲ್ಲಿ 36 ಶಿಫಾರಸ್‌ಗಳನ್ನು ಒಪ್ಪಿಕೊಂಡಿದ್ದೇವೆ. ಅದರಲ್ಲೇ ಬಾಟ್ಲಿಂಗ್ ಚೆನ್ನಾಗಿ ವ್ಯವಸ್ಥಿತವಾಗಿ ಮಾಡಬೇಕೆಂದು ಇದೆ. ಸರ್ಕಾರ ಒಂದು ಬಾಟ್ಲಿಂಗ್ ಯೂನಿಟ್ಟಿಗೆ ಕೊಟ್ಟಿದೆ. ಅದನ್ನು ಕೂಡ ಮುಂದುವರೆಸಿಕೊಂಡು ಹೋಗುವುದು ಸರ್ಕಾರದ ಗಮನದಲ್ಲಿದೆ. ಎಫೆಕ್ಟೀವಾಗಿ ಈ ಇಲಾಖೆಗೆ ಎನ್‌ಫೋರ್ಸ್‌ಮೆಂಟ್ ಸೆಲ್ ಒಂದು ಇದೆ. ಎಲ್ಲಿ ಇಂತಹ ಕಳ್ಳಭಟ್ಟಿ ದುರಂತ ಆಗುವುದರಲ್ಲಿ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂತಹ ಕಡೆ ಇಲಾಖೆಯವರು ಸರಿಯಾಗಿ ನಿಗಾವಹಿಸಬೇಕೆಂದು ನಾವು ರೆವಿನ್ಯೂ ಡಿ.ಸಿ. ಅವರಿಗೆ ಈ ಕೆಲಸ ವಹಿಸಿಕೊಟ್ಟಿದ್ದೇವೆ. ನಮ್ಮ ಇಲಾಖೆಯಲ್ಲಿ ಕೆಲಸಕಾರ್ಯಗಳು ಸರಿಯಾಗಿ ಆಗುವ ರೀತಿಯಲ್ಲಿ ರೆಗ್ಯುಲರ್ ಡಿಸಿ ಕೂಡ ಇದರ ಬಗ್ಗೆ ನಿಗಾ ವಹಿಸುತ್ತಿದ್ದಾರೆ. ದೇಸಾಯಿ ಕಮಿಶನ್ನಿನ ಶಿಫಾರಸಿನ ಮೇಲೆ ನಮ್ಮ ಸರ್ಕಾರ 20 ಡಿಸಿ ಪೋಸ್ಟ್ಸ್ ಅನ್ನು ಕ್ರಿಯೇಟ್ ಮಾಡಿದ್ದೇವೆ. ಅವರೇ ಶಿಫಾರಸ್ ಮಾಡಿದ್ದರು. ಇವತ್ತು ಎನ್‌ಫೋರ್ಸ್‌ಮೆಂಟ್ ಸೆಲ್ ಸರಿಯಾಗಿ ಕೆಲಸ ಮಾಡಲು ಅಧಿಕಾರ ನಮ್ಮ ಅಧಿಕಾರಿಗಳಿಗೇ ಇರಬೇಕೂಂತ ಇದನ್ನು ಇಂಪ್ಲಿಮೆಂಟ್ ಮಾಡಿದ್ದೇವೆ. ಇದನ್ನು ಹಂತಹಂತವಾಗಿ ದೇಸಾಯಿ ಕಮಿಶನ್ನಿನ ಶಿಫಾರಸ್ ಏನಿದೆ ಕೆಲವು ಪಾಲಿಸಿ ಮ್ಯಾಟರ್ಸ್ ಇವೆ ಕೆಲವು ಬೇರೆ ಕೂಡ ಇವೆ. ನಾನೂ ಕೂಡ ನಮ್ಮ ಎಲ್ಲ ಉನ್ನತ ಅಧಿಕಾರಿಗಳೊಂದಿಗೆ ನಿನ್ನೆ ಮೊನ್ನೆ ಸಮಾಲೋಚನೆ ಮಾಡಿ, ಆ ಶಿಫಾರಸ್ಸಿನ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನವನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊನ್ನೆ ಕಳ್ಳಭಟ್ಟಿ ದುರಂತ ಬಾಗಲೂರು ಲೇಔಟ್‌ನಲ್ಲಿ ನಡೆದಿದೆ. That is biggest slum in Bangalore. ಅದನ್ನು ನಾನು ಒಪ್ಪುತ್ತೇನೆ. ಮತ್ತು ಅದನ್ನು ಎಫೆಕ್ಟೀವಾಗಿ ತಡೆಗಟ್ಟ ತಕ್ಕಂಥ ರೀತಿಯಲ್ಲಿ ಕೇವಲ ಬಾಗಲೂರಿನಲ್ಲಿ ಆಯಿತು, ಅವರು ಸತ್ತ ಮೇಲೆ ಸರ್ಕಾರ ನಿಗಾ ಮಾಡಬಾರದು, ಎನ್ನತಕ್ಕಂಥದ್ದು ಏನೂ ಇಲ್ಲ. ಆ ರೀತಿ ಮಾಡದೇ ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬೇರೆ ಬೇರೆ ಕಡೆಯಲ್ಲಿ ಕೂಡಾ ಏನು ನಡೆಯುತ್ತಿದೆ, ಅದಕ್ಕಾಗಿ ಇವತ್ತು ಜಾಯಿಂಟ್ ಆಪರೇಷನ್ ಮಾಡಬೇಕಾಗಿದೆ. ಪೋಲೀಸ್ ಇಲಾಖೆ, ಅಬ್ಕಾರಿ ಇಲಾಖೆಗಳನ್ನೂ ಒಳಗೊಂಡು ಎಫೆಕ್ಟೀ ಕೆಲಸ ಮಾಡಬೇಕು. ಆ ಒಂದು ದುರಂತವಾದ ಮೇಲೆ ನಾನು ಖುದ್ದಾಗಿ ಆಸ್ಪತ್ರೆಗೆ ಹೋಗಿ ನೋಡಿದ್ದೇನೆ. ಅಲ್ಲಿಂದ ಬಂದ ಮೇಲೆ ಎಲ್ಲಾ ಕಡೆಗೂ ನಮ್ಮ ಪೋಲೀಸ್ ಮತ್ತು ಅಬ್ಕಾರಿ ಇಲಾಖೆಯವರ ಜೊತೆಯಲ್ಲಿ ಒಂದು ಮೀಟಿಂಗನ್ನು ಕೂಡಾ ನಾನು ಮಾಡಿದ್ದೇನೆ. ವೇಲು ಅವರು ಗೃಹಮಂತ್ರಿಗಳ ಸಮ್ಮುಖದಲ್ಲಿ ಓಡಿಹೋಗಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ನಾನು ಹೇಳಿದೆ, ಇವತ್ತು ವೇಲು ಆಗಲಿ, ಕಳ್ಳಭಟ್ಟಿ ರಾಣಿ ಕೌಸಲ್ಯಾದೇವಿಯಾಗಲಿ, ಅವರು ಎಲ್ಲೇ ಹೋಗಲಿ, ಅವರನ್ನು ನಾವು ಹಿಡಿದು ತರುತ್ತೇವೆ ಎಂದು ಇದೇ ಸದನದಲ್ಲಿ ನಾನು ಹೇಳಿದೆ. ನಮ್ಮ ಪೋಲೀಸ್ ಇಲಾಖೆಯ ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ. ಕೌಸಲ್ಯಾದೇವಿಯನ್ನೂ ಹಿಡಿದಿದ್ದಾರೆ, ವೇಲುವನ್ನೂ ಕೂಡಾ ಹಿಡಿದಿದ್ದಾರೆ. ಈ ದುರಂತದ ಬಗ್ಗೆ ಏನೇನು ತನಿಖೆಯಾಗಬೇಕು ಎನ್ನತಕ್ಕಂಥ

ರೀತಿಯಲ್ಲಿ ಈಗಾಗಲೇ ಉನ್ನತ ಮಟ್ಟದ ಅಧಿಕಾರಿಗಳನ್ನು, ಅವರ ಮೇಲ್ವಿಚಾರಣೆಯಲ್ಲಿ ತನಿಖೆಯಾಗಬೇಕು ಎನ್ನತಕ್ಕಂಥ ವಿಚಾರದಲ್ಲಿ ಕೂಡಾ ನಾನು ಆಜ್ಞೆಯನ್ನು ಮಾಡಿದ್ದೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಎಲ್ಲೆಲ್ಲಿ ಈ ದುರಂತವಾಗಿದೆ, ಯಾರು ತಪ್ಪಿತಸ್ಥರು ಇದ್ದಾರೆ, ಅವರು ಎಷ್ಟೇ ದೊಡ್ಡವರು ಇರಲಿ, ಯಾವುದೇ ಹಿನ್ನೆಲೆಯಲ್ಲಿರಲಿ, ರಾಜಕಾರಣಿಗಳಾಗಲಿ, ಬೇರೆ ಯಾರೇ ಆಗಿರಲಿ ನಾವೇನೂ ಹಿಂಜರಿಯುವುದಿಲ್ಲ ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದ್ದೇವೆ. ಇವೆಲ್ಲಾ ವಿಚಾರಗಳೂ ಕೂಡಾ ಸ್ವಲ್ಪ ಸಂಶಯಕ್ಕೆ ಇವತ್ತು ಎಡೆ ಮಾಡಿಕೊಡುತ್ತವೆ. ಎಲ್ಲ ಜನರೂ ನೋಡುತ್ತಾರೆ. ಇವತ್ತು ಈ ರೀತಿ ಆಗಿದೆ, ಆದರೂ ಯಾರನ್ನೂ ಹಿಡಿಯುತ್ತಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದಾಗ ಅದರ ಬಗ್ಗೆ ಕೂಡಾ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. Inpection and enforcement machinery is being streamlined. ನಾವು ರೀ-ಆರ್ಗನೈಜ್ ಮಾಡುತ್ತಿದ್ದೇವೆ. ಇವತ್ತು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಮೂರು ತಾಲ್ಲೂಕುಗಳಲ್ಲಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇದೆ. ಇಂದು ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಸರ್ಕಲ್ ಇನ್‌ಪೆಕ್ಟರನ್ನು ಹಾಕುತ್ತಿದ್ದೇವೆ. ಪ್ರತಿಯೊಂದು ಹೋಬಳಿಗೂ ಒಬ್ಬ ಎಕ್ಸೈಸ್ ಸಬ್-ಇನ್ಸ್‌ಪೆಕ್ಟರನ್ನು ಹಾಕಬೇಕು. ಮತ್ತು ಈಗ ಡೆಪ್ಯುಟಿ ಕಮಿಷನರ್ ಕೂಡ ಅಲ್ಲಿ ಇನ್‌ಛಾರ್ಜ್ ಆಗಿದ್ದಾರೆ. ಈ ರೀತಿಯಲ್ಲಿ ನಾವು ಮಾಡಿದರೆ ಎಫೆಕ್ಟೀವಾಗಿ ಪ್ರಸ್ತುತ ಇರತಕ್ಕಂಥ ಸಮಸ್ಯೆ ಏನು ಇದೆ, ಆ ಸಮಸ್ಯೆ ನಿವಾರಣೆಯಾಗಬೇಕು ಎನ್ನತಂಕ್ಕಂಥದ್ದು ಮುಖ್ಯವಾಗಿದೆ. ಇವತ್ತು ಬಹಳಷ್ಟು ಜನರು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಕಮರುಲ್ ಇಸ್ಲಾಂರವರು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಬಹಳ ಹೆಚ್ಚಿನ ರೀತಿಯಲ್ಲಿ ಹೇಳಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಲೈಸೆನ್ಸ್‌ಗಳನ್ನು ಹೆಚ್ಚು ಕೊಡುತ್ತಿದ್ದೀರಿ ಎಂದು ಹೇಳಿದರು. ಬ್ರಾಡ್‌ವೇಯಲ್ಲಿ ಅವತ್ತು ಹಮೀದ್ ಷಾ ಅವರು ಉಪವಾಸ ಕುಳಿತಿದ್ದರು. ಆಗಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾವ್ ಮತ್ತು ನಮ್ಮ ವೀರಪ್ಪ ಮೊಯಿಲಿಯವರು,, ಅಜೀಜ್ ಸೇಠ್ ಅವರು ಹೋದಾಗ ಇವರು ಕೂಡಾ ಹೋಗಿದ್ದಾರೆ. ಹಮೀದ್‌ಷಾ ಉಪವಾಸ ಕುಳಿತಾಗ ಅದನ್ನು ಅಲ್ಲಿಂದ ತೆಗೆಸಿಹಾಕುತ್ತೇವೆ ಎಂದು ತೀರ್ಮಾನ ಆಯಿತು. ನಾನು ನೋಡಿದೆ, ಮತ್ತೆ ಪರಿಶೀಲನೆ ಮಾಡಿದಾಗ 25 ವರ್ಷಗಳಿಂದ ಆ ಒಂದು ಅಂಗಡಿ ಅಲ್ಲಿಯೇ ಇದೆ. 25 ವರ್ಷಗಳಿಂದ ಅಲ್ಲಿಯೇ ಇದೆ. ನಾವು ಇಲ್ಲಿ ತೆಗೆಯುತ್ತಿಲ್ಲ ಎನ್ನತಕ್ಕಂಥ ಮಾತೇನೂ ಇಲ್ಲ. ಇವತ್ತು ಕೂಡಾ ನಾವು ಸರ್ಕ್ಯುಲರನ್ನು ಕೊಟ್ಟಿದ್ದೇವೆ. ಎಜುಕೇಷನ್ ಇನ್ಸ್‌ಟಿಟ್ಯೂಷನ್ ಆಗಲಿ, ಮಸೀದಿ ಆಗಲಿ, ಬೇರೆಕಡೆಗೆ ಇರತಕ್ಕಂಥ ಅಂಗಡಿಗಳಿಗೆ ಎಷ್ಟೋ ಜನ ಕೋರ್ಟ್‌ಗೆ ಹೋಗಿ ಅವರು ಸ್ಟೇಯನ್ನು ತಂದರೂ ಕೂಡಾ ನಾವು ನಿರ್ದಾಕ್ಷಿಣ್ಯವಾಗಿ ಕಾನೂನು ಜಾರಿ ಎನ್ನತಕ್ಕಂಥ ಆದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಕಮಿಷನರ್ ಅವರು ಅದರ ಬಗ್ಗೆ ಸರ್ಕ್ಯುಲರನ್ನು ಕೂಡಾ ಇಷ್ಯೂ ಮಾಡಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಇದು ಏನಾಗುತ್ತದೆ, ಎಲ್ಲಿಯಾದರೂ ಒಂದು ಕಡೆ ಕೋರ್ಟ್‌ಗೆ ಹೋದರೆ ಅಲ್ಲಿ ನಮಗೆ ಆಗುವುದಿಲ್ಲ. ಅದನ್ನು ಕೂಡಾ ನಾನು ವಿಚಾರ ಮಾಡತ್ತೇನೆ ಎನ್ನತಕ್ಕಂಥ ಮಾತನ್ನು ಕೂಡಾ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಎಲ್ಲೆಲ್ಲಿ ಬೇರೆ ಕಡೆಗೆ ಬಂದಾಗ ಸ್ಪೆಷಿಫಿಕ್ ಆಗಿ ಇವತ್ತು ಸದನದಲ್ಲಿ ಮಾನ್ಯ ಸದಸ್ಯರುಗಳು ಕೂಡಾ ನಮ್ಮ ಸರ್ಕಾರದ ಗಮನಕ್ಕೆ ತಂದಾಗ ಅದರ ಬಗ್ಗೆ ಗಮನಕ್ಕೆ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಡ್ರಗ್ಸ್‌ಗಳ ಬಗ್ಗೆ ನೋಡುವುದಾದರೆ ನಾರ್ಕೋಟಿನ್ ಡ್ರಗ್ಸ್ ಬಗ್ಗೆ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಅದನ್ನು ಡೆಪ್ಯುಟಿ ಕಮಿಷನರ್‌ಗೆ ನಾವು ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. We have created a post for that. ಎಲ್ಲಾ ಕಡೆಗೆ ಈ ತರಹದ ಒಂದು ನಿಯಂತ್ರಣವನ್ನು ತರಬೇಕಾಗಿದೆ. ಯುವಕರು ಒಂದು ರೀತಿಯಲ್ಲಿ ಇದಕ್ಕೇನು ಒಳಗಾಗುತ್ತಿದ್ದಾರೆ, ಇದನ್ನು ತಡೆಗಟ್ಟತಕ್ಕಂಥ ರೀತಿಯಲ್ಲಿ

ಕೂಡಾ ನಾವು ಡೆಪ್ಯೂಟಿ ಕಮಿಷನರ್‌ಗೆ ಅದನ್ನು ವಹಿಸಿಕೊಟ್ಟಿದ್ದೇವೆ. ಎಫೆಕ್ಟೀವಾಗಿ ಜಾರಿ ಮಾಡಬೇಕೆಂದು ನಾವೆಲ್ಲಾ ಕಡೆಗೆ ಹೇಳಿದ್ದೇವೆ. ಇವತ್ತು 91-92ನೇ ಸಾಲಿನಲ್ಲಿ ದಕ್ಷಿಣ ಕನ್ನಡದಲ್ಲಿ ಏನು ಟಾಡಿ ಟ್ಯಾಪರ್ಸ್ ಇದ್ದಾರೆ ಅವರಲ್ಲಿ ಒಬ್ಬ ವ್ಯಕ್ತಿಗೂ ಕೂಡಾ ನಾವು ಫೇವರ್ ಮಾಡತಕ್ಕಂಥ ರೀತಿಯಲ್ಲಿ ಲೈಸನ್ಸ್ ಕೊಟ್ಟಿಲ್ಲ.

11.45 ಪಿ.ಎಂ.

ಇದರಲ್ಲಿ ಲಕ್ಷಗಟ್ಟಲೆ ಜನರು ಕೆಲಸ ಮಾಡತಕ್ಕವರು ಇದ್ದಾರೆ. ಸೊಸೈಟಿಯ ಮುಖಾಂತರ ಕೊಡಬೇಕೆಂಬುದು ಸರ್ಕಾರದ ನಿರ್ಧಾರವಾಗಿದೆ. 54 ಸೊಸೈಟಿಗಳಿವೆ. ನಾವು ಶಿಕ್ಷಣ ಸಚಿವರ ಕೊಠಡಿಯಲ್ಲಿ ನನ್ನ ಕೊಠಡಿಯಲ್ಲಿಯೂ ಕೂಡ ಸಾಕಷ್ಟು ಸಲ ಕೋ ಆಪರೇಟಿವ್ ಡಿಪಾರ್ಟ್‌ಮೆಂಟಿನ ಆಫೀಸರ್ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಇವತ್ತು 32 ಸೊಸೈಟಿಗಳಿಗೆ ನಾವು ಈಗಾಗಲೇ ಮನ್ನಣೆಯನ್ನು ಕೊಟ್ಟಿದ್ದೇವೆ. ಇವತ್ತು ಯಾರು ಟ್ಯಾಪರ್ಸ್ ಇದ್ದಾರೆ, ಅಂತಹವರೇ ಚೀಫ್ ಪ್ರಮೋಟರ್ಸ್ ಆಗಬೇಕೆನ್ನತಕ್ಕ ಸರ್ಕಾರದ ನಿರ್ಣಯದ ಮೇಲೆ ಮತ್ತು ಕೆಲವು ಸೊಸೈಟಿಗಳನ್ನು ರೀ ಆರ್ಗನೈಜೆಷನ್ ಮಾಡತಕ್ಕ ರೀತಿಯಲ್ಲಿದ್ದಾಗ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಇವತ್ತು ನಮಗೆ 10 ಕೋಟಿ ವರಮಾನ ಬರತಕ್ಕ ರೀತಿಯಲ್ಲಿ ಸೊಸೈಟಿ ಮುಖಾಂತರ ಮಾಡಬೇಕೆಂದು ಸರ್ಕಾರದ ನಿರ್ಧಾರ ಏನಿದೆ ಅದಕ್ಕೆ ಇದೇ ರೀತಿ ತಡೆಯಾಜ್ಞೆಯಾಗತಕ್ಕ ರೀತಿಯಲ್ಲಿ ಹೋದರೆ ಸರ್ಕಾರ ಇದರ ಬಗ್ಗೆ ಮತ್ತೆ ವಿಚಾರ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳ ಕಟ್ಟುನಿಟ್ಟಿನ ಆದೇಶ ಇದೆ. ಏಕೆಂದರೆ ಇಲಾಖೆಗಳಿಂದ ಬರತಕ್ಕ ರೆವಿನ್ಯೂ ಬಾಬ್ತು ಕಡಿಮೆ ಮಾಡತಕ್ಕ ಹಂತದಲ್ಲಿ ನಾವಿಲ್ಲ. ಯಾರು ಕೆಲಸಗಾರರು ಇದ್ದಾರೆ, ಅವರಿಗೂ ನಾವು ಕೊಡಬೇಕು. ಆದರೆ, ಕೋರ್ಟ್‌ಗೆ ಈ ತರಹ ಹೋದರೆ ಅದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಡಿಪಾರ್ಟ್‌ಮೆಂಟ್ ಎಂಪ್ಲಾಯಿಸ್‌ಗೆ ಸಿ.ಅಂಡ್.ಆರ್ ರೂಲ್ಸ್ ಏನಿದೆ, ಅದಕ್ಕೆ ನಾವು ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಅವರಿಗೂ ಕೂಡಾ ಸಾಕಷ್ಟು ಇವತ್ತಿನ ದಿವಸ ಎಂಪ್ಲಾಯಿಮೆಂಟ್ ಅಪರ್ಚ್ಯುನಿಟಿಯನ್ನು ನಾವು ಕೊಟ್ಟಿದ್ದೇವೆ. ಪ್ರಸ್ತುತ 1992-93ನೇ ಸಾಲಿನಲ್ಲಿ 500 ಎಕ್ಸೈಸ್ ಗಾರ್ಡ್‌ಗಳ ಪೋಸ್ಟ್‌ಗಳನ್ನು ಭರ್ತಿ ಮಾಡುತ್ತಿದ್ದೇವೆ. ಇದನ್ನು 1992-93ನೇ ಸಾಲಿನಲ್ಲಿ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇವತ್ತು 550 ಕೋಟಿ ರೂಪಾಯಿಗಳಷ್ಟು ಏನು ನಮಗೆ ವರಮಾನ 1992-93ನೇ ಸಾಲಿನಲ್ಲಿ ಬರುತ್ತಿದೆ, ಅದನ್ನು ಮುಂದಕ್ಕೆ ಹೆಚ್ಚಿಸತಕ್ಕ ರೀತಿಯಲ್ಲಿ 20 ಬಾಬತ್ತಿನಲ್ಲಿ ನಾವು ಹೆಚ್ಚಿಗೆ ಮಾಡಿದ್ದೇವೆ. ಅದರ ಪರಿಣಾಮವಾಗಿ 25 ಕೋಟಿ ರೂಪಾಯಿ ನಮಗೆ ಬರುತ್ತಿದೆ. ಹೀಗೆ ಒಟ್ಟು 573 ಕೋಟಿ ರೂಪಾಯಿ 1992-93ನೇ ಸಾಲಿನಲ್ಲಿ ಈ ಇಲಾಖೆಯಿಂದ ನಮಗೆ ವರಮಾನ ಬರುತ್ತಿದೆ. ಮಾನ್ಯ ಜಯಚಂದ್ರರವರು ಪ್ರಮುಖವಾದ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಎಂಟನೆ ಪಂಚವಾರ್ಷಿಕ ಯೋಜನೆಯಲ್ಲಿ ರಿಸೋರ್ಸ್ ಮೊಬಲೈಜೇಷನ್ ಬಗ್ಗೆ ಚರ್ಚೆಯಾದಂತೆ ಸೇಲ್ಸ್‌ಟ್ಯಾಕ್ಸ್, ಎಕ್ಸೈಜ್‌ನಿಂದ ಏನು ವರಮಾನ ಬಾಬ್ತು ಬರಬೇಕಾಗಿದೆ ಅದು ಬರುತ್ತಿದೆ. ನಾನು ಮೊನ್ನೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡತಕ್ಕ ಕಾಲದಲ್ಲಿ ತಾವು ನಿನ್ನೆ ಪ್ರಸ್ತಾಪ ಮಾಡಿದ್ದನ್ನು ನಾನು ಮಾತನಾಡಿದ್ದೇನೆ. 16 ವರ್ಷಗಳ ಅಂಕಿಅಂಶಗಳನ್ನು ನಾವು ತೆಗೆದುಕೊಂಡಾಗ ಅದರಲ್ಲಿ ಸಾಕಷ್ಟು ಏರಿಳಿತವಿರುವುದು ಕಂಡು ಬಂದಿದೆ. 1989-90ರಲ್ಲಿ 174ಕ್ಕೆ ಹೋಗಿಬಿಟ್ಟಿತ್ತು. ಮತ್ತೆ ಕೋರ್ಟಿಗೆ ಹೋಗಿ ಲಿಟಿಗೇಷನ್ ಆಗಿ ಮುಂದೆ ಬರತಕ್ಕ ದಿವಸಗಳಲ್ಲಿ ಬಹಳ ಕಡಿಮೆಯಾಗಿದೆ. ಇವತ್ತು ಆ ದೃಷ್ಟಿಯಿಂದ ದೇಸಾಯಿ ಕಮಿಷನರ್‌ರವರು ಶಿಫಾರಸ್ಸು ಮಾಡಿದ್ದಾರೆ. ಈಗ ಎಲ್ಲಾ ಕಡೆ ಏನು ಅಂಗ್ರಡಿಗಳು ಇವೆ, ಅವನ್ನು ಬಹಳ ಸ್ವಚ್ಛವಾಗಿಡಬೇಕು. ಮೆಂಟೇನೆನ್ಸ್ ಸರಿಯಾಗಿ ಮಾಡುತ್ತಿಲ್ಲ

ಅನ್ನತಕ್ಕ ರೀತಿಯಲ್ಲಿ ಹೇಳಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡಿದಾಗ ಅಂಗಡಿಯನ್ನು ಇಡತಕ್ಕವನಿಗೆ 1990-91ನೇ ಸಾಲಿನಲ್ಲಿ ಅವನಿಗೆ ಅಂಗಡಿ ಸಿಕ್ಕಿದರೆ 1992-93ನೇ ಸಾಲಿನಲ್ಲಿ ಮತ್ತೆ ಅಂಗಡಿ ಸಿಕ್ಕುತ್ತದೆ ಅನ್ನುವುದು that security is not there. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ವಿಚಾರ ಮಾಡಿದಾಗ ಇವತ್ತು ಸ್ಟೆಬಿಲಿಟಿ ಮಾಡತಕ್ಕ ರೀತಿಯಲ್ಲಿ ಇವತ್ತು ಅದಕ್ಕೆ ಗ್ರೋಥ್ ಕೊಟ್ಟು ಏನನ್ನು ಕೊಡಬೇಕೆಂದು ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ. ನಾನು ನಿರ್ದಿಷ್ಟವಾಗಿ ಹೇಳತಕ್ಕ ರೀತಿಯಲ್ಲಿ ಅಲ್ಲ. ಇವತ್ತು ಯಾವಯಾವ ಬಾಬ್ತಿನಿಂದ ರೆವಿನ್ಯೂ ಈ ಸರ್ಕಾರಕ್ಕೆ ಬರುತ್ತಿದೆ. ಅದರ ಬಗ್ಗೆ ಕೂಡ ಪರಿಣಾಮಕಾರಿಯಾಗಿ ಎಲ್ಲಿ ಒಂದು ವರ್ಷ ಹೆಚ್ಚಾಗುತ್ತದೆ, ಮುಂದಿನ ವರ್ಷ ಕಡಿಮೆಯಾಗುತ್ತದೆ ಎಲ್ಲಿ ರೆವಿನ್ಯೂ ನಾವು ಟಾರ್ಗೇಟ್ ಏನು ನಿಗದಿ ಮಾಡುತ್ತೇನೆ, ಅಷ್ಟು ಬರುವುದಿಲ್ಲ ಅಂತಹದರ ಬಗ್ಗೆ ಕೂಡ ಏನು ವಿಚಾರ ಮಾಡಬೇಕೆನ್ನತಕ್ಕದ್ದು ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ಈಚಲು ಮರಗಳು ಬೆಳೆಯತಕ್ಕ 80 ಸಾವಿರ ಎಕರೆ ಜಮೀನು ಕರ್ನಾಟಕ ರಾಜ್ಯದಲ್ಲಿದೆ.

ಬಹಳ ವರ್ಷಗಳಿಂದ ಈ ರೀತಿ ನಡೆದುಕೊಂಡು ಬಂದಿದೆ. ಇದರಲ್ಲಿ ಕೆಲವರು ದೊಡ್ಡವರು ಮತ್ತು ಸಣ್ಣವರೂ ಕೂಡ ಇದ್ದಾರೆ. ಇವೊತ್ತು ಟಾಡಿ ತೆಗೆಯುವವರಲ್ಲಿ ಯಾರು ಬಡತನದ ರೇಖೆಯಲ್ಲಿದ್ದಾರೆ, ಅವರಿಗೆ ಪುನರ್ವಸತಿ ಕಲ್ಪಿಸಿಕೊಡಬೇಕೆಂದು ತಾವು ಪ್ರಸ್ತಾಪ ಮಾಡಿದ್ದೀರಿ. ಇದಕ್ಕೆ ರೆವಿನ್ಯೂ ಕೂಡ ಹೆಚ್ಚು ಬರುತ್ತದೆ. ತಾವು ಇದರ ಬಗ್ಗೆ ಅತ್ಯಂತ ಉತ್ತಮವಾದ ಸಲಹೆ ಕೊಟ್ಟಿದ್ದರೂ ಈಗಲೇ ಇದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮಹದೇವರವರು ಜೈಮಿನಿ ಡಿಸ್ಟಲರೀಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಪೊಲ್ಯೂಶನ್ ಕಂಟ್ರೋಲ್ ಬೋರ್ಡ್‌ನವರು ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಅವರು ಈ ಸಭೆಯಲ್ಲಿಲ್ಲ. ಇಷ್ಟೆಲ್ಲಾ ಸಮಸ್ಯೆಗಳನ್ನು ಇವೊತ್ತು ನಾನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇವೊತ್ತು ಪಾಲಿಸಿ ಮ್ಯಾಟರ್ಸ್ ಬಗ್ಗೆ ಸರ್ಕಾರ ಯಾವ್ಯಾವ ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥಾದ್ದನ್ನು ಕೂಡ ನಾನು ಈಗಾಗಲೇ ಉಲ್ಲೇಖ ಮಾಡಿದ್ದೇನೆ. ಮತ್ತು ಈ ಒಂದು ಇಲಾಖೆಯಲ್ಲಿ ಏನು 'ಸೆಕೆಂಡ್ಸ್' ಮಾರಾಟವಾಗುತ್ತಿದೆ, ಯಾರು ಡ್ಯೂಟಿ ತಪ್ಪಿಸುತ್ತಿದ್ದಾರೋ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅವರು ದೊಡ್ಡವರಾಗಲಿ, ಯಾರೇ ಆಗಲಿ, ಎಲ್ಲಿ ಡ್ಯೂಟಿ ತಪ್ಪಿಸಿ 'ಸೆಕೆಂಡ್ಸ್' ಅನ್ನು ಮಾರಾಟ ಮಾಡುತ್ತಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶವಿತ್ತಿದ್ದೇವೆ. ಅಲ್ಲದೆ, ಇವೊತ್ತು ರೆವಿನ್ಯೂ ಕಲೆಕ್ಷನ್ ಹೆಚ್ಚು ಮಾಡಿದ್ದೇವೆ. ಅರಿಯರ್ಸ್ ಅನ್ನು ಕೂಡ ಬಹಳ ಎಫೆಕ್ಟಿವ್ ಆಗಿ ಕಲೆಕ್ಟ್ ಮಾಡಿದ್ದೇವೆ. ಪ್ರತಿ ತಿಂಗಳು ಎಷ್ಟು ಅರಿಯರ್ಸ್ ಅನ್ನು ಕಲೆಕ್ಟ್ ಮಾಡಬೇಕೆಂಬುದರ ಬಗ್ಗೆ ರೆವಿನ್ಯೂ ಕಲೆಕ್ಷನ್‌ನಲ್ಲಿ ಟಾರ್ಗೆಟ್ ಕೂಡ ಕೊಟ್ಟಿದ್ದೇವೆ. ನಾವು ಯಾರಿಗೂ ಯಾವುದೇ ರೀತಿಯ ರಿಯಾಯಿತಿ ನೀಡುತ್ತಿಲ್ಲ. ಎಲ್ಲಾ ಕಡೆಗಳಲ್ಲಿಯೂ ಇದನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ. ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣವನ್ನು ಯಾರಾದರೂ ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ನಾವು ಅವರ ಬಗ್ಗೆ ಬಹಳ ಎಫೆಕ್ಟಿವ್ ಆಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ಬಹಳಷ್ಟು ಸದಸ್ಯರು ಯಾವ್ಯಾವ ಸಮಸ್ಯೆಗಳ ಬಗ್ಗೆ ನಿಗಾ ವಹಿಸಬೇಕು ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಎರಡು ಖಾತೆಗಳು ಸಿಕ್ಕಿವೆ. ಇವೊತ್ತು ಪೋಲೀಸ್ ಇಲಾಖೆಯಾಗಲಿ, ಅಬ್ಕಾರಿ ಇಲಾಖೆಯಾಗಲಿ ಜನರಿಗೆ ನೇರವಾಗಿ ಸಂಬಂಧಪಟ್ಟ ಸಮಸ್ಯೆಗಳ ಕುರಿತು ವಿಚಾರ ಮಾಡತಕ್ಕಂಥ ಇಲಾಖೆಗಳು ನನಗೆ ಸಿಕ್ಕಿದೆ. ಇದು ಸೂಕ್ಷ್ಮವಾದ ಇಲಾಖೆಯಾಗಿದ್ದು, ಅದರಲ್ಲೂ ಕೂಡ ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗದಂಥ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನ

ಮಾಡಿದ್ದೇನೆಂದು ನನಗನ್ನಿಸುತ್ತದೆ; ಈ ಅಂಕಿ ಅಂಶಗಳು ಹೋದ ಸರ್ಕಾರಕ್ಕೂ, ಇಂದಿನ ಸರ್ಕಾರಕ್ಕೂ ತುಲನೆ ಮಾಡತಕ್ಕಂಥ ರೀತಿಯಲ್ಲಿಲ್ಲ; ನನ್ನಲ್ಲಿ ಅಂಕಿ-ಅಂಶಗಳಿವೆ. ಆದರೂ ಕೂಡ ಪ್ರಸ್ತುತ ಸರ್ಕಾರ ಇದರ ಬಗ್ಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥಾದ್ದನ್ನು ಅಂಕಿ-ಅಂಶಗಳ ಮುಖಾಂತರ ನಾನು ತಿಳಿಸಿದ್ದೇನೆ. ಆದುದರಿಂದ, ನಾನು ಎಲ್ಲಾ ಸನ್ಮಾನ್ಯ ಸದಸ್ಯರುಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಒಂದು ಬೇಡಿಕೆ ಏನಿದೆ, ಅದು ಹೆಚ್ಚಿನ ರೀತಿಯಲ್ಲಿ ಸಾಮಾನ್ಯ ಜನರಿಗೆ ಕೆಲಸ ಮಾಡತಕ್ಕಂಥ ರೀತಿಯಲ್ಲಿದೆ. ಈ ಇಲಾಖೆ ಮೂಲಕ ಇನ್ನು ಹೆಚ್ಚಿನ ರೀತಿಯಲ್ಲಿ ದುಡ್ಡನ್ನು ಸರ್ಕಾರಕ್ಕೆ ಒದಗಿಸಿಕೊಡಲು ಪ್ರಯತ್ನ ಮಾಡಲಾಗುವುದು. ಆದ್ದರಿಂದ ಈ ಇಲಾಖೆಯ ಬೇಡಿಕೆಗೆ ಅನುಮತಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ತಾವು ಗೃಹ ಇಲಾಖೆ ಬಗ್ಗೆ ಸಹ ಮಾತನಾಡಿ ಮುಗಿಸಿದರೆ, ಮಾನ್ಯ ಸದಸ್ಯರು ಅದರ ಮೇಲೆ ಸಹ ಕ್ಲಾರಿಫಿಕೇಶನ್ಸ್ ಕೇಳುತ್ತಾರೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಗೃಹ ಖಾತೆಯನ್ನು ವಹಿಸಿಕೊಂಡ ನಂತರ 1990ರಲ್ಲೂ ಕೂಡ ಕರ್ನಾಟಕ ರಾಜ್ಯದಲ್ಲಿ ಕೋಮು-ಗಲಭೆಗಳು ನಡೆದು, ಅದಕ್ಕೂ ಮಿಗಿಲಾಗಿ ಈ ಕಾವೇರಿ ನದಿ ನೀರಿನ ಸಮಸ್ಯೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ನಾಲ್ಕು ಕೋಟಿ ಜನರಿಗೆ ಸಂಬಂಧಪಟ್ಟ ಮಹತ್ವವಾದ ಸಮಸ್ಯೆಗಳ ಮಧ್ಯದಲ್ಲಿ ಸಾಕಷ್ಟು ಗಲಾಟೆಗಳಾಗಿವೆ. ಕಾನೂನು ವ್ಯವಸ್ಥೆಯಲ್ಲಿ ಇವೊತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ನಾಲ್ಕು ಕೋಟಿ ಜನರಿಗೆ ಹೆಚ್ಚಿನ ರೀತಿಯಲ್ಲಿ ಸಂರಕ್ಷಣೆ ಕೊಡತಕ್ಕಂಥ ಖಾತೆ ನನಗೆ ಸಿಕ್ಕಿದೆ. ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ, ನನ್ನ ಇಲಾಖೆಗೆ ಸಂಬಂಧಪಟ್ಟಂಥ ಉನ್ನತ ಮಟ್ಟದ ಅಧಿಕಾರಿಗಳು ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಇದನ್ನು ನಾನು ಅಂಕಿ-ಅಂಶಗಳ ಮುಖಾಂತರ ಹೇಳುತ್ತಿಲ್ಲ.

ಸರ್ಕಾರ ತನ್ನ ನಿರೀಕ್ಷೆಯನ್ನು ಮೀರಿ ಕೆಲಸ ಮಾಡಿದೆ. ಇವತ್ತು 1990-91ರ ಗಲಭೆಗಳನ್ನು ಹಿಂದಿನ ವರ್ಷಗಳೊಂದಿಗೆ ಹೋಲಿಸಲಾಗುವುದಿಲ್ಲ. ಇವತ್ತು ದೇಶದೆದುರು ಯಾವ ವಾದವಿದೆ, ಯಾವ ಇಶ್ಯೂ ಇದೆ ಅದರ ಹಿನ್ನೆಲೆಯಲ್ಲಿ ನಾವು ಇದನ್ನು ನೋಡಬೇಕಾಗಿದೆ. ಎಲ್.ಟಿ.ಟಿ.ಇ.ಯ ಚಟುವಟಿಕೆಯಿಂದ ಭಾರತ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ರಾಜೀವ್ ಗಾಂಧಿಯವರ ಹತ್ಯೆಯು ಚುನಾವಣೆಯ ಮಧ್ಯದಲ್ಲಿ ಆಯಿತು. ಇವತ್ತು ಎರಡು ಚುನಾವಣೆಗಳು ಕರ್ನಾಟಕ ರಾಜ್ಯದಲ್ಲಿ ಮತ್ತು ದೇಶದಲ್ಲಿ ನಡೆದವು ಇವತ್ತು ಕರ್ನಾಟಕದ ಬೀದರ್ ಜಿಲ್ಲೆಯಲ್ಲಿ ಕೂಡ Naxalite activities ಕೂಡ ಪ್ರಾರಂಭವಾಗಿದೆ. ನಮ್ಮ ನೆರೆರಾಜ್ಯವಾದ ಆಂಧ್ರಪ್ರದೇಶದಿಂದ ಅವರುಗಳು ಬಂದು ನಮ್ಮ ಗಡಿಭಾಗದಲ್ಲಿ ಅವರ ಚಟುವಟಿಕೆಯನ್ನು ಪ್ರಾರಂಭ ಮಾಡಿದರು. ಬೆಂಗಳೂರು ನಗರದಲ್ಲಿ ಉಲ್ಫಾ ಚಟುವಟಿಕೆ ಕೂಡ ಆಯಿತು. ಇವೆಲ್ಲ ಚುನಾವಣೆಯ ಮಧ್ಯದಲ್ಲಾಯಿತು. ನಿನ್ನೆ ದಿನ ಶ್ರೀಮಾನ್ ಕಮರುಲ್ ಇಸ್ಲಾಮ್ ರವರು Pascists ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. They are all creating law and order problem ಎನ್ನತಕ್ಕ ಮಾತು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ ಇಡೀ ದೇಶದಲ್ಲಿ ಇಂಥ ಒಂದು ಸಮಸ್ಯೆ ಇದೆ. ಕಾವೇರಿಯ ಗಲಭೆ ಇದ್ದಾಗಲೇ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಶ್ರೀಮಾನ್ ಮುರಳಿಮನೋಹರ ಜೋಶಿಯವರ ಏಕತಾ ಯಾತ್ರೆ ಪ್ರಾರಂಭವಾಯಿತು. ಇಂಥ ಎಲ್ಲಾ ಗಲಭೆಗಳ ಹಿನ್ನೆಲೆ ತೆಗೆದುಕೊಂಡು ನೋಡಬೇಕಾಗುತ್ತದೆ. 30 ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಏನು ಒಂದು ಪೋಲೀಸ್ ಸಿಬ್ಬಂದಿ ಇತ್ತೋ, ಆ ಸಿಬ್ಬಂದಿಯ ಸಂಖ್ಯೆ ಹೆಚ್ಚಾಗಲಿಲ್ಲ.

ಧರ್ಮವೀರ ಅವರ ಅಧ್ಯಕ್ಷತೆಯಲ್ಲಿ ನ್ಯಾಷನಲ್ ಪೋಲೀಸ್ ಕಮಿಷನವರು 1981ರಲ್ಲಿ ಏನು ಒಂದು ರಿಪೋರ್ಟ್‌ನ್ನು ಈ ರಾಜ್ಯಕ್ಕೆ, ಈ ದೇಶಕ್ಕೆ ಕೊಟ್ಟರೋ ಅದನ್ನು ಯಾರು ಕೂಡ ಅನುಷ್ಠಾನಕ್ಕೆ ತರಲಿಲ್ಲ. ಇವುಗಳೆಲ್ಲ ಇದ್ದರೂ ಕೂಡಾ ಈ ಒಂದು ವಿಶೇಷವಾದ ಖಾತೆ ನನಗೆ ಬಂದ ಮೇಲೆ ಅಂಥ ಎಲ್ಲಾ ಚಟುವಟಿಕೆಗಳನ್ನು ನಾವು ಬಹಳ ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ತಡೆಗಟ್ಟಬೇಕಾದುದು ನಮ್ಮ ಕರ್ತವ್ಯವಾಗಿದೆ. ತಾವೆಲ್ಲರೂ ನೋಡಬಹುದು, ಇವತ್ತು ಶ್ರೀಮಾನ್ ರಾಜೀವ್ ಗಾಂಧಿಯವರ ಹತ್ಯೆಯಾದ ಮೇಲೆ ಅಪರಾಧಿಗಳು ದೇಶದ ಎಲ್ಲಾ ಕಡೆ ಕೊನೆಗೆ ಶ್ರೀಲಂಕಾಗೆ ಕೂಡ ಹೋಗಿ ಬಂದರು. ಇವತ್ತು ನಾವು ನಮ್ಮ ಪೋಲೀಸ್ ಇಲಾಖೆಯವರನ್ನು ಅಭಿನಂದಿಸಬೇಕು, We have to congratulate our Police Department. ಏಕೆಂದರೆ ಬೆಂಗಳೂರು ಪೋಲೀಸ್ ಕಮಿಷನರ್ ಹಾಗೂ ಡೆಪ್ಯೂಟಿ ಪೋಲೀಸ್ ಕಮಿಷನರ್ ಹಾಗೂ ಅವರ ಸಿಬ್ಬಂದಿ ಅಪರಾಧಿಗಳನ್ನು ಪತ್ತೆಹಚ್ಚಿದರು. ಯಾರು ನಮ್ಮ ನಾಯಕರಾಗಿದ್ದರೋ, ಯಾರು ಈ ದೇಶದಲ್ಲಿ 5 ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿ ಜನರ ಮನಸ್ಸಿನಲ್ಲಿ ಒಂದು ಒಳ್ಳೆಯ ಭಾವನೆಯನ್ನು ನಿರ್ಮಾಣ ಮಾಡಿದಂಥ ನೇತಾರರನ್ನು ಬಲಿ ತೆಗೆದುಕೊಂಡ ಶಿವರಾಸನ್ ಎನ್ನುವವನನ್ನು ನಾವು ಹಿಡಿಯತಕ್ಕ ಪ್ರಯತ್ನ ಮಾಡಿದ್ದೇವೆ. ಅವರನ್ನು ಹಿಡಿಯುವಲ್ಲಿ ಮಂಡ್ಯ ಜಿಲ್ಲೆಯಿಂದ ಪ್ರಾರಂಭವಾಗಿ ಕೊನೆಗೆ ಬೆಂಗಳೂರಿನ ಇಂದಿರಾ ನಗರದಲ್ಲಿ ಹಿಡಿದು ಅವರನ್ನು ಪತ್ತೆ ಹಚ್ಚಿ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇವೆ. ಇದು ಕೇವಲ ರಾಜ್ಯಕಲ್ಲ, ದೇಶಕ್ಕಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು, ಸುದ್ದಿಯನ್ನು ನಿರ್ಮಾಣ ಮಾಡತಕ್ಕ ಕೆಲಸವನ್ನು ನಮ್ಮ ಪೋಲೀಸ್ ಇಲಾಖೆಯವರು ಮಾಡಿದ್ದಾರೆ.

ಇವತ್ತು ಉಲ್ಫಾ ಚಟುವಟಿಕೆಗಳನ್ನು ಕೂಡ ಪತ್ತೆ ಮಾಡಿದ್ದೇವೆ. ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ. ನಿನ್ನೆ ದಿನ ಅನಂತಕೃಷ್ಣರವರು Intelligence wing ಬಗ್ಗೆ ಹೇಳಿದರು. ಇವತ್ತು ದೇಶದಲ್ಲಿ ಬೇರೆ ಬೇರೆ ಘಟನೆಗಳು ನಡೆಯುತ್ತಿದೆ ಅದರ ಹಿನ್ನೆಲೆಯಲ್ಲಿ ತಾವು ಕೇಳಿರತಕ್ಕದ್ದು ಸರಿಯಾಗಿದೆ.

ಇವತ್ತು ಕರ್ನಾಟಕದಲ್ಲಿ ULFA activities ಮಾಡತಕ್ಕಂಥ ಜನರನ್ನು ಕೂಡ ಹಿಡಿದ ಕೀರ್ತಿ ನಮಗೆ ಇದೆ. 1948ರಲ್ಲಿ ತೆಲಂಗಾಣ ಮೂವ್‌ಮೆಂಟ್ ಎಂದು ಇತ್ತು. ಇವತ್ತು ನಕ್ಸಲೇಟ್‌ನ ಚಟುವಟಿಕೆಗಳು ನಡೆಯುತ್ತಿದೆ. ಇವತ್ತು ಆಂಧ್ರಪ್ರದೇಶದಲ್ಲಿ ತೆಲಂಗಾಣ ಮೂವ್‌ಮೆಂಟ್ ನಿಂತಿಲ್ಲ. ಇವತ್ತು ಗಡಿಪ್ರದೇಶದಲ್ಲೆಲ್ಲಾ ಆ ರೀತಿಯ ಚಟುವಟಿಕೆ ಪ್ರಾರಂಭವಾಗಿದೆ. 1990-91ನೇ ಸಾಲಿನಲ್ಲಿ ಆ ರೀತಿಯ ಎರಡು ಚಟುವಟಿಕೆಗಳನ್ನು ಕರ್ನಾಟಕ ರಾಜ್ಯದಲ್ಲಿ ಪತ್ತೆ ಮಾಡಿದ್ದೇವೆ. ಅದೆಂದರೆ ಗುಲ್ಬರ್ಗಾದಲ್ಲಿನ ರೊಬ್ಬಾವರದ, ಚಿಂಚೋಳ್ಳಿ ತಾಲ್ಲೂಕಿನಲ್ಲಿ ಮತ್ತು ತುಮಕೂರು ಜಿಲ್ಲೆಯ ಪಾವಗಡ ಮತ್ತು ತಿರುಮಣಿಯಲ್ಲಿ ಕೂಡ ಇಂಥ ಚಟುವಟಿಕೆಯನ್ನು ಪತ್ತೆ ಮಾಡಿದ್ದೇವೆ. That is a radical movement. ಇವತ್ತು ಪ್ರಸ್ತುತವಿರುವ ಸಮಸ್ಯೆಯನ್ನು ಅಲ್ಲಿರತಕ್ಕ ಜನರ ಮೇಲೆ ಪರಿಣಾಮ ಬೀರತಕ್ಕ ರೀತಿಯಲ್ಲಿ ಅವರು ಹೇಳಿದ್ದಾರೆ. ಸ್ವಾತಂತ್ರ್ಯ ಬಂದು 47 ವರ್ಷಗಳಾದರೂ ಕೂಡ ಶಾಲಾ ಕಟ್ಟಡಗಳಿಲ್ಲ, ಬೇರೆ ಬೇರೆ ಸಮಸ್ಯೆಗಳು ಪರಿಹಾರವಾಗಿಲ್ಲವೆನ್ನತಕ್ಕ ರೀತಿಯಲ್ಲಿ ಪ್ರಚಾರ ಮಾಡಿದ್ದಾರೆ ಈ ಒಂದು ರೀತಿಯ ಚಟುವಟಿಕೆ ನಡೆಯುತ್ತಿದೆ. ಇವತ್ತು ನೆಕ್ಸ್‌ಲೇಟ್ ಚಟುವಟಿಕೆಗಳು ಆಂಧ್ರಪ್ರದೇಶದಲ್ಲಿ, ಒರಿಸ್ಸಾದಲ್ಲಿ, ಮಧ್ಯಪ್ರದೇಶದಲ್ಲಿ ಆಗುತ್ತದೆ. ಆದರೆ ಕರ್ನಾಟಕದಲ್ಲಿಲ್ಲ ಎನ್ನತಕ್ಕ ಒಂದು ಮಾತನ್ನು ಹೇಳುತ್ತೇನೆ. ಆದರೂ ಕೂಡ ಈ ಒಂದು ಚಟುವಟಿಕೆ ಪ್ರಾರಂಭವಾಗಿ ಜನರಿಗೆ ಇದರ ಪರಿಣಾಮ ಹಬ್ಬುತ್ತದೆ ಎನ್ನುವ ರೀತಿಯಲ್ಲಿ ನಾವು ಇವತ್ತು ಅಡಿಷನಲ್ ಎಸ್.ಪಿ. ಅವರ ನೇತೃತ್ವದಲ್ಲಿ ಒಂದು ಸ್ಕ್ವಾಡನ್ನು ಮಾಡಿದ್ದೇವೆ. ಇವತ್ತು ಬೀದರ್‌ನಲ್ಲಾಗಲಿ, ಪಂಚಾವರಂನಲ್ಲಾಗಲಿ, ರಾಯಚೂರಿನಲ್ಲಾಗಲಿ,

ಬಳ್ಳಾರಿಯಲ್ಲಾಗಲಿ ಕೋಲಾರದಲ್ಲಾಗಲಿ ಇಂಥ ಚಟುವಟಿಕೆಗಳು ನಡೆಯುತ್ತಿದ್ದರೆ ಅದರ ಬಗ್ಗೆ ನಾವು ಹೆಚ್ಚು ನಿಗಾವಹಿಸಿದ್ದೇವೆ. ಇಷ್ಟೇ ಅಲ್ಲದೆ, ಹೈ ಲೆವೆಲ್ ಕಮಿಟಿ ಮೀಟಿಂಗ್ ಮಾಡಿ ಡಿ.ಜಿ. ಮತ್ತು ಡಿ.ಜಿ. ಲಾ ಅಂಡ್ ಆರ್ಡರ್ ಇಂಟೆಲಿಜೆನ್ಸ್ ಐ.ಜಿ. ಮತ್ತು ಸಂಬಂಧಪಟ್ಟ ಅಧಿಕಾರಿಗಳ ಒಂದು ಸಭೆಯನ್ನು ಬೀದರ್‌ನಲ್ಲಿ ಮಾಡಿದ್ದೇವೆ. ಇವತ್ತು ಪೋಲೀಸ್‌ನವರಿಂದ ನಾಲ್ಕು ರೈಫಲ್ ಹೋಯಿತು ಎನ್ನುವಂತಹ ಪ್ರಸ್ತಾಪ ಬಂತು. ನಾನು ಜನರಿಗೆ ಅವರನ್ನು ಹಿಡಿಯುತ್ತೇನೆಂದು ಬೀದರ್‌ನಲ್ಲಿ ಘಂಟಾಘೋಷವಾಗಿ ಹೇಳಿದೆ. ಹಾಗೆಯೇ ಅವರನ್ನು ಹಿಡಿದೆವು. ಇವತ್ತು ಬಳ್ಳಾರಿಯಲ್ಲಿಯೂ ಕೂಡ we had a high level meeting, ಏಕೆಂದರೆ ಇವತ್ತು ನಕ್ಸಲೈಟ್ಸ್ ಹಾಗೂ ಡಕಾಯಟ್ಸ್ ಬಂದಿರತಕ್ಕಂಥಹ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸೆನ್ಸಿಟೀವ್ ಏರಿಯಾಗಳನ್ನು ಐಡೆಂಟಿಫೈ ಮಾಡಿದ್ದೇವೆ. 1987-88ರಲ್ಲಿ ಚಿತ್ರದುರ್ಗದಲ್ಲಿ ಒಂದು ಡಕಾಯಿತಿ ಆಯಿತು. ಆ ಜನರನ್ನು ಹಿಡಿದು ಬಳ್ಳಾರಿ ಜಿಲ್ಲೆಯಲ್ಲಿ ಮೂರು ವರ್ಷಗಳ ಕಾಲ ಶಿಕ್ಷೆ ವಿಧಿಸಿದ ನಂತರ ಅಲ್ಲಿಂದ ಬಿಟ್ಟುಬಿಟ್ಟರು. ಕನ್ಸರ್‌ಬೆಟ್ಟಾ ಅವರು ಮಧ್ಯ ಪ್ರದೇಶದಿಂದ ಬಂದು ಬಳ್ಳಾರಿ, ರಾಯಚೂರು, ಗುಲ್ಬರ್ಗಾ ನಮ್ಮ ನಗರದಲ್ಲೂ ಕೂಡ 10 ಕಿ.ಮೀ. ಹಿಂದೆ ಬಸ್‌ನ್ನು ಹಿಡಿದು ಲೂಟಿ ಮಾಡಿಕೊಂಡು ಹೋದರು. ನಾವು ಅವರನ್ನು ಐಡೆಂಟಿಫೈ ಮಾಡಿದ್ದೇವೆ. ಅವರು ಹೇಗೆ ಇದ್ದಾರೆ ಅಂತ ಮೊನ್ನೆ ಬೀದರ್, ಬಳ್ಳಾರಿಯಲ್ಲಿ ಆದಂತಹ ಸಭೆಯಲ್ಲಿ ಕೂಡ ನಾವು ಹೇಳಿದ್ದೇವೆ. ಇವತ್ತು ಪ್ರಿಸನರ್ಸ್‌ಗೆ ಕೂಡ ಹೇಳಿದ್ದೇವೆ. ಯಾವ ಕಾಲದಲ್ಲೂ ಶಿಕ್ಷೆಗೆ ಗುರಿಯಾದಂತಹ ಜನರನ್ನು ಬಿಡತಕ್ಕಂತಹ ಕಾಲದಲ್ಲಿ ಒಂದು ಪೋಲೀಸ್ ಇಲಾಖೆಯವರಿಗೆ ವರ್ತಮಾನ ಕೊಡಬೇಕೆಂದು ಹೇಳಿದ್ದೇವೆ. ರಾಚಯ್ಯನವರು ಸಹ ಗೃಹಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಜಾಲಪ್ಪನವರು ಸಹ ಗೃಹ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಎಲ್ಲಿ ಫಾರಂ ಹೌಸ್ ಇದೆ, ಅದರಲ್ಲಿ ಐಸೋಲೇಟ್ ಡಕಾಯಟ್ಸ್ ಆಗತಕ್ಕಂತಹ ಮಾತು ಕೇಳಿಬಂದಿದೆ. ಅದಕ್ಕಾಗಿ ಇವತ್ತು ನಾವು ಒಳ್ಳೆಯ ಕಮಿಟಿ ಮಾಡಿದ್ದೇವೆ. 1991-92ನೇ ಸಾಲಿನಲ್ಲಿ ಬಹಳ ಕೆಳಗೆ ಇಳಿದಿದ್ದೇವೆ. ಕರ್ನಾಟಕ ರಾಜ್ಯದ ಬೆಂಗಳೂರು ನಗರದಲ್ಲಿ, ಮತ್ತು ಹೊರ ವಲಯದಲ್ಲಿ ಯಾವ ಒಂದು ವಾತಾವರಣ ಇತ್ತು, ಅದರ ತೀವ್ರತೆಯನ್ನು ಗಮನಿಸಿ ಇವತ್ತು 80 ಜೀಪುಗಳನ್ನು ಕೊಟ್ಟಿದ್ದೇವೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬೆಂಗಳೂರು ನಗರದ ಜನಸಂಖ್ಯೆ ಇವತ್ತು 25 ಲಕ್ಷಕ್ಕಿಂತ ಹೆಚ್ಚಾಗುತ್ತಿದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಡಿ.ಸಿ.ಪಿ. ಯವರ ನೇತೃತ್ವದಲ್ಲಿ ವೈರಲೆಸ್ ಸೆಟ್ ಆಗಲಿ ಎಕ್ಯುಪ್‌ಮೆಂಟ್ಸ್ ಕೊಡತಕ್ಕಂತಹ ರೀತಿಯಲ್ಲಿ ಇವತ್ತು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದೇವೆ. ನಾವು ಆ ಒಂದು ಸುದ್ದಿಯನ್ನೇ ಕೇಳುತ್ತಿಲ್ಲ. ಇವತ್ತು ನಕ್ಸಲೈಟ್ಸ್ ಆಕ್ಟಿವಿಟೀಸ್ ಹೆಚ್ಚಿನ ರೀತಿಯಲ್ಲಿ ಆಗುತ್ತಿಲ್ಲ. ಇವತ್ತು ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಆಂಧ್ರಪ್ರದೇಶದಿಂದ ಬಂದು ಈ ತರಹದ ಡಕಾಯಿತಿಗಳನ್ನು ಮಾಡುತ್ತಿದ್ದಾರೆ. ನಾವು ಅದಕೋಸ್ಕರ ಎಲ್ಲಾ ಕಡೆಗೆ ಅಂತರಾಜ್ಯ ಸಿ.ಓ.ಡಿ. ಕಾನ್‌ಫರೆನ್ಸ್ ಮಾಡಿದ್ದೇವೆ. ಯಾರ್‍ಯಾರು ಕ್ರಿಮಿನಲ್ಸ್ ಇದ್ದಾರೆ ಅವರನ್ನು ಐಡೆಂಟಿಫೈ ಮಾಡಿ ಇಲ್ಲಿರತಕ್ಕಂತಹ ನಮ್ಮ ಅಧಿಕಾರಿಗಳನ್ನು ಆಂಧ್ರಪ್ರದೇಶಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರು ಎಲ್ಲರನ್ನೂ ಹಿಡಿದಿದ್ದಾರೆ. ತಾವು ಪತ್ರಿಕೆಯಲ್ಲಿ ನೋಡಬಹುದು. ಒಬ್ಬ ದೊಡ್ಡ ಕಳವು ಮಾಡತಕ್ಕಂತಹ ಪ್ರಖ್ಯಾತಿ ಕಳ್ಳನನ್ನು ಕೂಡ ಮೊನ್ನೆ ಹುಬ್ಬಳ್ಳಿಯಲ್ಲಿ ಹಿಡಿದಿದ್ದೇವೆ. ಅಲ್ಲಿ ಬೇರೆ ಬೇರೆ ರೀತಿಯಲ್ಲಿ ಬರತಕ್ಕಂತಹದ್ದು ಇದೆ, ನಾವು ಈ ಕಳ್ಳತನಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಿಂದ ಅಧಿಕಾರಿಗಳನ್ನು ಆಂಧ್ರಾಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇವತ್ತು ಹಾಸನದಲ್ಲಿ ಮುಜಫರ್ ನಗರದಿಂದ ಬಂದು ಬಸ್‌ನ್ನು ಹಿಡಿದು ದರೋಡೆ ಮಾಡಿದಂತಹವರನ್ನು ಹಿಡಿಯಲು ನಮ್ಮ ಅಧಿಕಾರಿಗಳು ಮುಜಫರ್ ನಗರಕ್ಕೆ ಹೋಗಿ ಕೆಲಸ ಮಾಡಿದ್ದಾರೆ. ನಾವು ಇವತ್ತು ಕೆಲಸ ಮಾಡುತ್ತಿದ್ದೇವೆ. ಅದರಲ್ಲಿ ಸಮಸ್ಯೆ ಬಹಳ ಇದೆ ಆದರೂ ಕೂಡ ಇವತ್ತಿನ ದಿವಸ ಚೇಂಜ್ಡ್ ಸಿಚುಯೇಷನ್ ಇದೆ. ಈ ಬದಲಾಗದ

ಪರಿಸ್ಥಿತಿಯಲ್ಲಿ ಕ್ರೈಮ್ಸ್‌ಗಳಾಗಲೀ ಡಕಾಯಟ್ಸ್ ಆಕ್ಟಿವಿಟೀಸ್ ಆಗಲೀ ನಡೆಯಲು ಹೆಚ್ಚಿನ ಬೇರೆ ಬೇರೆ ಫ್ಯಾಕ್ಟರ್ ಕೂಡ ಇದೆ, ಆದರೂ ನಿಯಂತ್ರಣ ಮಾಡತಕ್ಕ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಬಹಳಷ್ಟು ಸದಸ್ಯರು ಇವತ್ತು ಪೋಲೀಸ್ ಫೋರ್ಸ್ ಸಾಕಷ್ಟು ಇಲ್ಲವೆಂದು ಹೇಳಿದರು. ನ್ಯಾಷನಲ್ ಪೋಲೀಸ್ ಕಮಿಷನ್ ರಿಪೋರ್ಟ್, 81ರಲ್ಲಿ ಬಂದಿದೆ ಎನ್ನುವ ಮಾತನ್ನು ಕೂಡ ನಾನು ಹೇಳಿದ್ದೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಮ್ಮ ಜನಸಂಖ್ಯೆಗೆ ಅನುಗುಣವಾಗಿ 150 ಕಿ.ಮೀ.ಗೆ ಒಂದು ಪೋಲೀಸ್ ಸ್ಟೇಷನ್ ಬೇಕು. ಆದರೆ ಇವತ್ತು 365 ಕಿ.ಮೀ. ಗೆ ಒಂದು ಪೋಲೀಸ್ ಸ್ಟೇಷನ್ ಇದೆ. ಇವತ್ತಿನ ಜನಸಂಖ್ಯೆ ಏನು ಇದೆ ಇದಕ್ಕೆ ಇವತ್ತು 1200 ಪೋಲೀಸ್ ಸ್ಟೇಷನ್ ಬೇಕಾಗಿದೆ. ಆದರೆ ಇವತ್ತು ನಮ್ಮಲ್ಲಿ ಇರತಕ್ಕಂಥ ಪೋಲೀಸ್ ಸ್ಟೇಷನ್‌ಗಳ ಸಂಖ್ಯೆ 689 ಮಾತ್ರ. ನ್ಯಾಷನಲ್ ಪೋಲೀಸ್ ಕಮಿಷನ್‌ರವರು ಸಜೆಸ್ಟ್ ಮಾಡಿದ್ದಾರೆ. ಐದು ವರ್ಷದ ಒಂದು ಪ್ಲಾನ್ ಮಾಡಿ ಪ್ರತಿ ವರ್ಷಕ್ಕೆ ಒಂದು 15 ಪೋಲೀಸ್ ಸ್ಟೇಷನ್‌ಗಳನ್ನು ಹೊಸದಾಗಿ ಪ್ರಾರಂಭ ಮಾಡಿ 5 ವರ್ಷದಲ್ಲಿ 55 ಪೋಲೀಸ್ ಸ್ಟೇಷನ್ ಕೊಡಬೇಕೆಂದು ಹೇಳಿದ್ದಾರೆ. ನಾನು ಹೋದ ಸದನದಲ್ಲಿ ಹೇಳಿದ್ದೇನೆ. ಈ ವರ್ಷ ನಾವು 15 ಪೋಲೀಸ್ ಸ್ಟೇಷನ್‌ಗಳನ್ನು 10 ಔಟ್‌ಪೋಸ್ಟ್ ಕೊಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಎಲ್ಲಾ ಕಡೆಗೆ ಕೊಟ್ಟಿದ್ದೇವೆ. ನಮ್ಮ ಕ್ಷೇತ್ರಕ್ಕೂ ಬೇಕಾಗಿದೆ. ಅದನ್ನು ಕೂಡ 1992-93ನೇ ಸಾಲಿನಲ್ಲಿ ಕೊಡುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈ ಒಂದು ಇಲಾಖೆಯನ್ನು ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್‌ನಿಂದ ತೆಗೆದು ಪ್ಲಾನ್‌ನಲ್ಲಿ ಅಳವಡಿಸಿಲ್ಲ. ಪ್ರಣಾಬ್ ಮುಖರ್ಜಿಯವರು ಬೆಂಗಳೂರಿಗೆ ಬಂದಾಗ ಮುಖ್ಯಮಂತ್ರಿಗಳು ಅವರಲ್ಲಿ ಈ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ. ಇವತ್ತು ನಾನಾ ರೀತಿಯ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದರೂ ಕೂಡ ಈ ಇಲಾಖೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ.

ನಿನ್ನೆ ದಿವಸ ಮಾನ್ಯ ಮಹದೇವಪ್ಪನವರು ಅಲ್ಲಿ 40 ಫ್ಯಾಕ್ಟರಿಗಳು ಇವೆ, ಒಂದು ಪೋಲೀಸ್ ಸ್ಟೇಷನ್ ಇದೆ, 20 ಕಾನ್‌ಸ್ಟೇಬಲ್ಸ್ ಮಾತ್ರ ಇದ್ದಾರೆ ಎಂದು ಹೇಳಿದರು. ಎಲ್ಲಾ ಕಡೆ ಗಲಾಟೆ ಆದರೆ ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಎಲ್ಲಿ ಇದ್ದಾರೆ ಪೋಲಿಸರು ಒಬ್ಬರು ಇಲ್ಲವಲ್ಲ ಎಂದು. ಎಲ್ಲಿ ಎಕ್ವಿಪ್‌ಮೆಂಟ್ಸ್ ಇದೆ ಎನ್ನತಕ್ಕ ಮಾತನ್ನು ಕೂಡ ಪ್ರಸ್ತಾಪ ಮಾಡುತ್ತಾರೆ. ಅವತ್ತೇ ನಾನು ಹೇಳಿದೆ, ಅಲ್ಲಿಗೆ ಮತ್ತೆ ಒಂದು ಪೋಲೀಸ್ ಸ್ಟೇಷನ್ ಕೊಡಬೇಕು ಎನ್ನತಕ್ಕಂಥದ್ದು ಕೂಡ ಇದೆ. ಮೊನ್ನೆ ಕಾವೇರಿ ಗಲಾಟೆ ಆದ ಮೇಲೆ ಮೈಸೂರು ಭಾಗದಲ್ಲಿ ಬಾರ್ಡರ್ ಏರಿಯಾದಲ್ಲಿ ಗಲಾಟೆ ಆದಮೇಲೆ ಸರ್ಕಾರ ಒಂದು ನಿರ್ಣಯಕ್ಕೆ ಬಂತು. ಇವತ್ತು 1990-91, 1991-92ನೇ ಸಾಲಿನಲ್ಲಿ 15 ಪೋಲೀಸ್ ಸ್ಟೇಷನ್, 10 ಔಟ್‌ಪೋಸ್ಟ್ ತೆಗೆದಿದ್ದು ಅಲ್ಲದೆ 1 ಸಾವಿರ ಕಾನ್‌ಸ್ಟೇಬಲ್ಸ್ ಅನ್ನು ಕೂಡ ನಾವು ರೆಕ್ರೂಟ್‌ಮೆಂಟ್ ಮಾಡಿದ್ದೇವೆ. ಇಷ್ಟೂ ಸಾಲದು; ಇವತ್ತು 135 ಕೋಟಿ ರೂಪಾಯಿ, ಮತ್ತು 27 ಕೋಟಿ ರೂಪಾಯಿ ಒಂದೇ ಸಾಲಿನಲ್ಲಿ ಕೊಟ್ಟಿದ್ದೇವೆ. ಇವತ್ತು ನಮ್ಮ ಬಜೆಟ್ 186 ಕೋಟಿ ರೂಪಾಯಿ ಇದೆ. ಮುಂದೆ ಬರತಕ್ಕಂಥ 1992-93ನೇ ಸಾಲಿನಲ್ಲಿ 245 ಕೋಟಿ ರೂಪಾಯಿ ಇದಕ್ಕೆ ಬರುತ್ತಾ ಇದೆ. ಮತ್ತೆ ಮೊನ್ನೆ ನಾವು ಹೀಗೆ ಪ್ರಸ್ತುತ 1992-93ನೇ ಸಾಲಿನಲ್ಲಿ ಏನು ನಾವು ಹಣ ಕೊಡುತ್ತೇವೆ, ಇದು ಕೂಡ ಸಾಲದು. ಇದಕ್ಕೆ ಹೆಚ್ಚಿನ ರೀತಿಯಲ್ಲಿ ಶಕ್ತಿಯುತವಾದ ಒಂದು ಇಲಾಖೆಯನ್ನು ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ 40 ಕೋಟಿ ರೂಪಾಯಿಗಳನ್ನು ಕೊಡಲು ಒಪ್ಪಿದ್ದಾರೆ. ಇದಕ್ಕೆ ಈಗಾಗಲೇ ಸಂಪುಟದ ಮನ್ನಣೆ ಸಿಕ್ಕಿದೆ. ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಈಗಾಲೆ ಕರ್ನಾಟಕ ರಾಜ್ಯದಲ್ಲಿ ಆರು ಬೆಟಾಲಿಯನ್‌ಗಳು ಆಗಿವೆ. ಏನಾದರೂ ಗಲಾಟೆ ಆದರೆ ಅಲ್ಲಿರತಕ್ಕಂಥ ಸಿಬ್ಬಂದಿ ಸಾಲುವುದಿಲ್ಲ; ಕೆ.ಎಸ್.ಆರ್.ಪಿ. ಬೆಟಾಲಿಯನ್‌ಗಳನ್ನು

ಹೆಚ್ಚಿಸಬೇಕು ಎನ್ನತಕ್ಕಂಥ ರೀತಿಯಲ್ಲಿ ಇವತ್ತು ಕೆ.ಎಸ್.ಆರ್.ಪಿ. ಬೆಟಾಲಿಯನ್‌ಗೆ ಕೂಡ 18 ಕೋಟಿ, 73 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಈಗಾಗಲೇ 689 ಪೋಲೀಸ್ ಸ್ಟೇಷನ್ ಏನಿದೆ, ಇಲ್ಲಿ 392 ಜನ ಕೆಲಸ ಮಾಡುತ್ತಿದ್ದಾರೆ ಅಂಡರ್ ಸ್ಟ್ಯಾಪ್ ಇದೆ. ಅಂಡರ್ ಸ್ಟ್ಯಾಪ್ ಅಂದರೆ, ನ್ಯಾಷನಲ್ ಪೋಲೀಸ್ ಕಮಿಷನ್‌ನಲ್ಲಿ, ರೂರಲ್ ಪೋಲೀಸ್ ಸ್ಟೇಷನ್ 48 ಜನ ಇರಬೇಕು, ಟೌನ್ ಪೋಲೀಸ್ ಸ್ಟೇಷನ್‌ನಲ್ಲಿ ಒಂದು ನೂರು ಜನ ಇರಬೇಕೆಂದು ಮಾಡಿದ್ದಾರೆ. ಕಾರ್ಪೋರೇಷನ್‌ನಲ್ಲಿ ಒಂದು ಪೋಲೀಸ್ ಸ್ಟೇಷನ್‌ನಲ್ಲಿ 78 ಜನರು ಇರಬೇಕೆಂದು ನಿಗದಿ ಮಾಡಿದ್ದಾರೆ. ಎಷ್ಟು ಪ್ರಮಾಣದಲ್ಲಿ ಪಿ.ಎಸ್.ಐ, ಎ.ಎಸ್.ಐ. ಇರಬೇಕು ಎನ್ನತಕ್ಕಂಥ ರೀತಿಯಲ್ಲಿ ಕೂಡ ಅದಕ್ಕೆ ಈ ಸಲ 16 ಕೋಟಿ 75 ಲಕ್ಷ ರೂಪಾಯಿಗಳನ್ನು ನಾವು ನಿಗದಿ ಮಾಡಿದ್ದೇವೆ. ಇವತ್ತು ಕೆ.ಎಸ್.ಆರ್.ಪಿ. ಹೊಸ ಬೆಟಾಲಿಯನ್ ಮಾಡತಕ್ಕಂಥ ರೀತಿಯಲ್ಲಿ ಬೀದರ್‌ನಲ್ಲಿ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಾಡುತ್ತಿದ್ದೇವೆ, ಶಿವಮೊಗ್ಗದಲ್ಲಿ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಾಡುತ್ತಿದ್ದೇವೆ. ದಾವಣಗೆರೆಯಲ್ಲಿ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಾಡುತ್ತಿದ್ದೇವೆ. ಕೋಲಾರದಲ್ಲಿ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಾಡುತ್ತಿದ್ದೇವೆ. ಈ ತರಹದಾಗಿ ಒಟ್ಟು ಒಂದೇ ವರ್ಷದ ಅವಧಿಯಲ್ಲಿ ಕಾನ್‌ಸ್ಟೇಬಲ್ಸ್, ಹೆಡ್ ಕಾನ್‌ಸ್ಟೇಬಲ್ಸ್, ಎ.ಎಸ್.ಐ. ಪಿ.ಎಸ್.ಐ. ಮತ್ತು ಅವಾಲ್ದಾರರನ್ನು ಕೂಡಿಕೊಂಡು 12,323 ಜನರನ್ನು ನೇಮಕ ಮಾಡಲು ಬರುತ್ತದೆ. ಇಷ್ಟು ವ್ಯವಸ್ಥೆಯನ್ನು ಎಲ್ಲಾ ಕಡೆಗೂ ನಾವು ಮಾಡುತ್ತಿದ್ದೇವೆ. ಕೆ.ಎಸ್.ಆರ್.ಪಿ. ಬೆಟಾಲಿಯನ್‌ನಲ್ಲಿ ಕೂಡ ಈಗಿರುವ ಸಂಖ್ಯೆಯನ್ನು ಮೂರು ಸಾವಿರಕ್ಕಿಂತ ಹೆಚ್ಚು ಮಾಡಬೇಕಾಗಿದೆ. ಇವೊತ್ತು ಕೇವಲ ಕೋಮು ಗಲಭೆಯಾದರೆ, ಗಲಾಟೆಯಾದರೆ, ದರೋಡೆ ಆದರೆ ಅವತ್ತೇ ನಾವು ಇಲ್ಲಿಂದ, ಅಲ್ಲಿಂದ ನಾಲ್ಕು ಪೋಲೀಸ್ ತರಿಸತಕ್ಕದ್ದಲ್ಲ. ಖಾಯಂ ಆಗಿ ಇವತ್ತು ವ್ಯವಸ್ಥೆ ಮಾಡಬೇಕು ಎನ್ನತಕ್ಕ ಸರ್ಕಾರದ ಏನು ಕ್ರಮ ಇದೆ, ಅದಕ್ಕಾಗಿ ಇವತ್ತಿನ ದಿವಸ 40 ಕೋಟಿ ಮತ್ತು 27 ಕೋಟಿ ಸೇರಿಸಿ ಪ್ರಸ್ತುತ ವರ್ಷದಲ್ಲಿ 67 ಕೋಟಿ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ನಾವು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮತ್ತೆ ಇವತ್ತಿನ ದಿವಸ ನಮ್ಮ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ವರ್ಗದವರು 30 ವರ್ಷ ಕಾನ್‌ಸ್ಟೇಬಲ್ ಆಗಿ ಸೇವೆಸಲ್ಲಿಸಿ ಹಾಗೇ ಸತ್ತು ಹೋಗುತ್ತಿದ್ದರು. ಅದಕ್ಕಾಗಿ ಕಾನ್‌ಸ್ಟೇಬಲ್‌ನಿಂದ ಹೆಡ್ ಕಾನ್‌ಸ್ಟೇಬಲ್, ಹೆಡ್ ಕಾನ್‌ಸ್ಟೇಬಲ್‌ನಿಂದ ಎ.ಎಸ್.ಐ., ಎ.ಎಸ್.ಐ. ಯಿಂದ ಪಿ.ಎಸ್.ಐ.ಗೆ ಪ್ರಮೋಷನ್ ಕೊಡಬೇಕೆಂದಿದ್ದೇವೆ. 163 ಇನ್‌ಸ್ಪೆಕ್ಟರ್ ಹುದ್ದೆಗಳನ್ನು ಇವತ್ತಿನ ದಿವಸ ಅಪ್‌ಗ್ರೇಡೇಷನ್ ಮಾಡಿದ್ದೇವೆ. ಪ್ರತಿ ಜಿಲ್ಲೆಗೆ ಅಡಿಷನಲ್ ಎಸ್.ಪಿ. ಕೊಡಬೇಕು, ಪ್ರತಿ ಜಿಲ್ಲೆಗೆ ಒಬ್ಬ ಎಸ್.ಪಿ. ಸಾಲದೆಂದು ಇವೊತ್ತು ನಿರ್ಣಯ ತೆಗೆದುಕೊಂಡಿದ್ದೇವೆ. ಎಸ್.ಪಿ. ಕೂಡ ಇವತ್ತು ನಾವು 22 ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಅದನ್ನು ಕೂಡ ಕೊಡುತ್ತಿದ್ದೇವೆ.

ಈ ರೀತಿ ಹಂತಹಂತವಾಗಿ ನಾವು ಸುಧಾರಣೆ ಮಾಡುತ್ತಿದ್ದೇವೆ. ಮಾಡ್ರನೈಸೇಷನ್‌ಗೋಸ್ಕರ ಕೇಂದ್ರ ಸರ್ಕಾರದಿಂದ ನಮಗೆ 65.84 ಲಕ್ಷ ರೂ. ಬಂದಿದೆ. ಇದರಲ್ಲಿ 32 ವೆಹಿಕಲ್‌ನನ್ನು ನಾವು ಪರ್ಚೇಸ್ ಮಾಡಿದ್ದೇವೆ. ಒಂದೇ ವರ್ಷದಲ್ಲಿ 2 ಕೋಟಿ ರೂ. ಖರ್ಚು ಮಾಡಿ ವಾಹನಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು 10-15 ದಿವನಸಗಳಲ್ಲಿ ಜಿಪ್ಸಿ ಜೀಪ್ಸ್ ಬರುತ್ತವೆ; ಈಗಿನ ನಮ್ಮ ವೆಹಿಕಲ್ಸ್‌ನಿಂದ ಹೊಗೆ ಹೆಚ್ಚಾಗಿ ಹೋಗುತ್ತಿದೆಯೆಂದು ತಾವು ಏನು ಹೇಳುತ್ತಿದ್ದೀರಿ. ಅದಕ್ಕೆ ನಾವು ಕ್ರಮ ತೆಗೆದುಕೊಳ್ಳಬೇಕಲ್ಲಾ. ಅದಕ್ಕಾಗಿ 23 ಕಾರುಗಳು, 23 ಜೀಪುಗಳು, 50 ಜಿಪ್ಸಿ, 23 ಮೋಟಾರ್ ಸೈಕಲ್ಸ್, 9 ಮಿನಿ ಬಸ್‌ಗಳು, 1 ಅಂಬುಲೆನ್ಸ್, 22 ಬಸ್ಸುಗಳು, 52 ವ್ಯಾನ್‌ಗಳು ಇದನ್ನೆಲ್ಲಾ ಕೊಂಡುಕೊಳ್ಳಬೇಕಾದರೆ 6.69 ಕೋಟಿ ರೂ. ಖರ್ಚಾಗುತ್ತದೆ. ಈಗಾಗಲೇ ನಾವು ಆರ್ಡರ್ ಕೊಟ್ಟಿದ್ದೇವೆ.

ಇನ್ನು 15-20 ದಿವಸದಲ್ಲಿ ಪ್ರತಿಯೊಂದು ಜಿಲ್ಲೆಗೂ ಈ ವ್ಯವಸ್ಥೆಯನ್ನು ಕೊಡುತ್ತೇವೆ. ನಾನು ಒಮ್ಮೆ ಹಾಸನಕ್ಕೆ ಹೋಗಿ ಮಂಗಳೂರಿಗೆ ಬಂದಾಗ ಹಾಸನದ ಎಸ್.ಪಿ. ಸಕಲೇಶಪುರವನ್ನು ದಾಟಿ ಸ್ವಲ್ಪ ಮುಂದಕ್ಕೆ ಬಂದಿದ್ದರು. ನಾವು ಮಂಗಳೂರಿನಲ್ಲಿ ಸಮಾರಂಭವನ್ನು ಮುಗಿಸಿಕೊಂಡು ಬಂದರೂ ಅವರು ಅಲ್ಲೇ ಕೂತಿದ್ದರು. ಏತಕ್ಕೆ ಕೂತಿದ್ದೀರಿ ಎಂದರೆ ಕಾರ್ ಕೆಟ್ಟು ಹೋಗಿದೆ ಎಂದು ಹೇಳಿದರು. ಅಂದರೆ ಈ ಸಮಸ್ಯೆ ಏನು ಎಂಬುದು ನನಗೂಗೊತ್ತಿದೆ. ಇವತ್ತು ನಾವು ಎಲ್ಲಾ ಕಡೆಗೂ ಒಳ್ಳೆಯ ವೆಹಿಕಲ್ಸ್‌ನ್ನು ಕೊಡಬೇಕಾಗಿದೆ. ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುವ ವಿಚಾರದಲ್ಲಿ ಹೇಳುವುದಾದರೆ ಬಾಂಬ್ ಡಿಸ್‌ಪೋಸಲ್ ಎಕ್ವಿಪ್‌ಮೆಂಟ್ ಬಗ್ಗೆ ತಾವೇ ಪ್ರಸ್ತಾಪ ಮಾಡಿದ್ದೀರಿ. ಇದನ್ನು ನಾವು 13 ಲಕ್ಷ ರೂ.ಗಳಿಗೆ ಕೊಂಡುಕೊಳ್ಳುತ್ತಿದ್ದೇವೆ. ನೈಟ್ ವಿಷನ್ ಬೈನಾಕ್ಯುಲರ್‌ಗೆ 3.45 ಲಕ್ಷ . ಇದೇ ರೀತಿ ಸರ್ಚ್‌ಲೈಟ್‌ಗೆ 14 ಸಾವಿರ ರೂ. ರಾಡಾರ್ ಗನ್ಸ್ 4.68. ಇವತ್ತು ಬೆಂಗಳೂರು ನಗರದಲ್ಲಿ ಸೀಡಾಟ್ 30 ಲಕ್ಷರೂ.ಗೆ ಮೇಲಿದೆ. ಏಕೆಂದರೆ 100, 103 ಸರಿಯಾಗಿ ಕೆಲಸ ಮಾಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಫೋನ್ ಎಕ್ವಿಪ್‌ಮೆಂಟ್ ವ್ಯವಸ್ಥೆಯನ್ನು ನಾವು ಈಗ ಏನು ಮಾಡಿದ್ದೇವೆ ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇವತ್ತು ಕಂಟ್ರೋಲ್ ರೂಂನ್ನು ಮಾಡ್ರನೈಸ್ ಮಾಡುವುದಕ್ಕೆ 5 ಲಕ್ಷ ರೂ. ಕೊಟ್ಟಿದ್ದೇವೆ. ಆಧುನಿಕ ರೈಫಲ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ವೀರಪ್ಪನ್‌ನ ವಿಚಾರವನ್ನೂ ಕೂಡ ನಾವು ಪ್ರಸ್ತಾಪ ಮಾಡಿದ್ದೇವೆ. ವೀರಪ್ಪನ್‌ನ ಬಗ್ಗೆ ಈಗ ನಾನೇನು ಹೆಚ್ಚಿಗೆ ಹೇಳುವುದಿಲ್ಲ. ಆದರೆ ವೀರಪ್ಪನ್‌ನನ್ನು ಹಿಡಿಯುವ ಕಾರ್ಯಕ್ರಮದಲ್ಲಿ ನಾವು ಬಹಳ ಹತ್ತಿರ ಇದ್ದೇವೆ. ವೀರಪ್ಪನ್‌ನ ಬಹಳ ಆಪ್ತರು 18 ಜನ ಏನಿದ್ದಾರೆ ಅವರ ಪೈಕಿ ಗುರುನಾಥನ್ ಎನ್ನುವವನನ್ನು ಈಗಾಗಲೇ ನಾವು ಹಿಡಿದು ಹಾಕಿದ್ದೇವೆ. ಇವತ್ತು 2000 ಸ್ಕ್ವೇರ್ ಮೈಲ್ ಫಾರೆಸ್ಟ್ ನಮ್ಮಲ್ಲಿದ್ದರೆ, 4000 ಸ್ಕ್ವೇ ಮೈಲ್ ತಮಿಳ್ನಾಡಿನಲ್ಲಿದೆ. ಆದುದರಿಂದ ಇದು ಬಹಳ ಕಷ್ಟದ ಕೆಲಸವಾಗಿದೆ. ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಅಂತರ್‌ರಾಜ್ಯ ಪೋಲೀಸ್ ಅಧಿಕಾರಿಗಳ ಮೀಟಿಂಗ್‌ನ್ನೂ ಕೂಡ ನಾವು ಈಗಾಗಲೇ ಎಲ್ಲಕಡೆ ಮಾಡಿದ್ದೇವೆ. ಇದು ಪ್ರಪ್ರಥಮ ಪ್ರಸಂವೆಂದು ತಮಗೆಲ್ಲಾ ಗೊತ್ತಿದೆ. ನಾವು ಎಲ್ಲಿಯವರೆಗೆ ವೀರಪ್ಪನ್‌ನನ್ನು ಹಿಡಿಯುವುದಿಲ್ಲವೋ ಆದುವರೆಗೂ ಜನರಿಗೆ ಕಾನ್‌ಫಿಡೆನ್ಸ್ ಬರುವುದಿಲ್ಲ. ಆದುದರಿಂದಲೇ ನಾವು ಏನು ಹೇಳಿದ್ದೇವೆ, ಬೇರೆ ಬೇರೆ ಆಧುನಿಕ ರೈಫಲ್ಸ್‌ನ್ನು ಕೊಂಡುಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದಿಂದ ಏನು ಹಣ ಬರುತ್ತದೋ ಅದನ್ನು ಉಪಯೋಗ ಮಾಡಿಕೊಂಡು ರೈಫಲ್ಸ್‌ನ್ನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದೇವೆ. ಈ ರೀತಿಯ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಸರ್ಕಾರ ಮಾಡುತ್ತಿದೆ.

ಇವತ್ತು ಪೋಲಿಸ್ ಕಾನ್‌ಸ್ಟೇಬಲ್‌ಗಳಿಗೆ ಸೆಕ್ಯುರಿಟಿ ಬೇಕಾಗಿದೆ. ಎಲ್ಲಾದರೂ ಗಲಾಟೆಯಾದಾಗ ನೀನು ಹೋಗಿ ಕೆಲಸಮಾಡು ಎಂದರೆ ಯಾರು ಹೋಗುವುದಿಲ್ಲ. ಅವರು ಸತ್ತರೆ ಅವರ ಮನೆಯವರನ್ನು ಕೇಳುವವರಿಲ್ಲ. ಅದಕ್ಕಾಗಿ ಯಾರಾದರೂ ಪೋಲಿಸ್ ಕಾನ್‌ಸ್ಟೇಬಲ್ ಗಲಭೆಗಳಲ್ಲಿ ಸತ್ತರೆ 1 ಲಕ್ಷ ರೂ. ಕೊಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಅವನಿಗೆ ಇನ್‌ಷ್ಯೂರೆನ್ಸ್ ಹಣವನ್ನು ಏನು ಕೊಡಬೇಕೋ ಅದನ್ನು ತಕ್ಷಣ ಸರ್ಕಾರದಿಂದ ಕೊಟ್ಟಿದ್ದೇವೆ. ಈ ತೀರ್ಮಾನವನ್ನು ಇವತ್ತು ನಾವು ತೆಗೆದುಕೊಂಡಿದ್ದಲ್ಲ. ಬಹಳ ಹಿಂದೆಯೇ ಇದನ್ನು ತೆಗೆದುಕೊಂಡಿದ್ದೇವೆ. ಕಳೆದಸಾರಿ ನನ್ನ ಖಾತೆಯ ಬೇಡಿಕೆಯನ್ನು ಗಿಲಿಟಿನ್ ಹಾಕಿದ್ದರಿಂದ ಆಗ ನಾನು ಉತ್ತರವನ್ನು ಸ್ಪಷ್ಟವಾಗಿ ಹೇಳುವುದಕ್ಕಾಗಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಹೋದಂಥ 4 ಜನ ಸಬ್ ಇನ್‌ಸ್ಪೆಕ್ಟರ್‌ಗಳು ಸತ್ತರು, ಅವರ ಮನೆಯವರಿಗೆ ಇನ್ನೂ ಹಣ ಕೊಟ್ಟಿಲ್ಲವೆಂದು ಅವರ ಬಂಧುಗಳು ನನ್ನ ಹತ್ತಿರ ಬಂದಿದ್ದರು.

ಶ್ರೀ ಧರ್ಮಸಿಂಗ್ : ಕೊಟ್ಟಿದ್ದೇವೆ. ನಕ್ಸಲೈಟ್ಸ್ ...

ಶ್ರೀ ಆರ್ ದಯಾನಂದರಾವ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ...

ಉಪಾಧ್ಯಕ್ಷಿಣಿಯವರು : ಮೊದಲು ಅವರು ಮುಗಿಸಲಿ, ಅನಂತರ ತಮಗೆ ಅವಕಾಶ ಕೊಡುತ್ತೇನೆ. ತಾವು ಮಾತನಾಡುವುದಕ್ಕೆ ಹೋದರೆ ಅವರ ಕಂಟಿನ್ಯೂಟಿ ಹೋಗುತ್ತದೆ. ನೀವು ಅನಂತರ ಕೇಳಿ.

ಶ್ರೀ ಆರ್. ದಯಾನಂದರಾವ್ : ಈ ಜನಗಳ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಲು ಸರ್ಕಾರ ಏನಾದರೂ ಸಹಾಯ ಮಾಡುತ್ತದೆಯೆ?

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಲಾ ಅಂಡ್ ಆರ್ಡರ್ ಬಗ್ಗೆ ಮಾನ್ಯ ಸದಸ್ಯರಾದ ಕಮರುಲ್ ಇಸ್ಲಾಂರವರು ಮಾತನಾಡುವಾಗ ಪೋಲಿಸ್ ಫೈರಿಂಗ್ ಆಗುತ್ತಿದೆ ಎಂದು ಹೇಳಿದರು. ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಮಾತನಾಡಿದಂಥ ಹಿನ್ನೆಲೆಯಲ್ಲಿ ನಾನು ಬೇರೆ ಏನನ್ನೂ ತಿಳಿಯಲಿಲ್ಲ. ಆದರೆ ಜನರ ಭಾವನೆ ಏನೆಂಬುದನ್ನು ಅವರು ಬಹಳ ಚೆನ್ನಾಗಿ ಪ್ರತಿಪಾದನೆ ಮಾಡಿದ್ದಾರೆ. 1990ರಲ್ಲಿ ಪೋಲಿಸ್ ಫೈರಿಂಗ್ ಆದುದು 75. ಅದರಲ್ಲಿ 17 ಜನ ಸತ್ತರು; 45 ಜನರಿಗೆ ಗಾಯಗಳಾಗಿವೆ. 1991ರಲ್ಲಿ 41 ಫೈರಿಂಗ್ ಆಗಿವೆ, ಅದರಲ್ಲಿ 19 ಜನ ಸತ್ತು 43 ಜನ ಗಾಯಗೊಂಡಿದ್ದಾರೆ. 92ನೇ ಸಾಲಿನಲ್ಲಿ ಅಂದರೆ ಕೇವಲ 2 ತಿಂಗಳು ಕಳೆದಿದೆ; ಇಷ್ಟರಲ್ಲಿ 2 ಸಾರಿ ಫೈರಿಂಗ್ ಆಗಿದೆ, ಅದರಲ್ಲಿ ಒಬ್ಬರು ಸತ್ತಿದ್ದಾರೆ. ಇದನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ಹೇಳುವುದಾದರೆ ಕ್ರೈಂಸ್ ಹೆಚ್ಚಾಗಿದೆ ಎಂಬ ಅಂಕಿ ಅಂಶಗಳನ್ನೂ ಕೂಡ ನಾನು ಕೊಡಬೇಕಾಗುತ್ತದೆ.

1990-92ನೇ ಸಾಲಿನಲ್ಲಿ ಕಡಿಮೆ ಇದೆ ಹೆಚ್ಚಿದೆ ಎನ್ನುವ ಮಾತು ಕೂಡ ಇಲ್ಲ. ಆಂಧ್ರ ಪ್ರದೇಶದಲ್ಲಿ 1,40,299 ಆಗಿದೆ, ತಮಿಳುನಾಡಿನಲ್ಲಿ 1,28,520 ಆಗಿದೆ. ಮಹಾರಾಷ್ಟ್ರದಲ್ಲಿ 1,86,652 ಆಗಿದೆ. ಕರ್ನಾಟಕ ರಾಜ್ಯದಲ್ಲಿ 1,740 ಆಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ವಿಶೇಷ ಸಂದರ್ಭದಲ್ಲಿ ಇದು ಆಗುತ್ತಿದೆ. 1990ರಿಂದ ಇಲ್ಲಿಯವರೆಗೆ ಬಹಳಷ್ಟು ಕೂಡ ಇಂಥ ಸಮಸ್ಯೆಗಳನ್ನು ಪರಿಹರಿಸುತ್ತಾ ಬಂದಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಫೈರ್ ಸ್ಟೇಷನ್ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗ ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ 28 ಫೈರ್ ಸ್ಟೇಷನ್ ಕೊಟ್ಟಿದ್ದರು. ನಾನು ಬಂದಮೇಲೆ ಅದಕ್ಕೆ 7,11,000 ರೂಪಾಯಿಗಳನ್ನು 1991-92ನೇ ಸಾಲಿನಲ್ಲಿ ಕೊಟ್ಟಿದ್ದೇವೆ. 19 ಫೈರ್ ಸ್ಟೇಷನ್‌ಗಳನ್ನು ಒಂದೇ ವರ್ಷದಲ್ಲಿ ಕೊಟ್ಟಿದ್ದೇವೆ. 40 ವರ್ಷಗಳ ಅವಧಿಯಲ್ಲಿ 28 ಫೈರ್ ಸ್ಟೇಷನ್‌ಗಳು ಕರ್ನಾಟಕ ರಾಜ್ಯದಲ್ಲಿ ಇದ್ದರೆ ಕೇವಲ ಒಂದು ವರ್ಷದಲ್ಲಿ ಇವತ್ತು 19 ಫೈರ್ ಸ್ಟೇಷನ್‌ಗಳನ್ನು ಹೊಸದಾಗಿ ಕೊಟ್ಟಿದ್ದೇವೆ. ಪ್ರತಿ ಸಬ್‌ಡಿವಿಜನ್‌ನಲ್ಲೂ ಫೈರ್ ಸ್ಟೇಷನ್ ತೆಗೆಯತಕ್ಕಂಥದ್ದಕ್ಕೆ ಕೂಡ ಸರ್ಕಾರದವರು ಇವತ್ತು ಆಜ್ಞೆಯನ್ನು ಹೊರಡಿಸಿದ್ದಾರೆ. ಅಲ್ಲಿ ಕೆಲಸ ಮಾಡಲು 263 ವೇಕೆನ್ಸೀಸ್ ಬೇಕೆನ್ನತಕ್ಕಂಥ ಮಾತನ್ನು ವಿಧಾನ ಪರಿಷತ್ತಿನಲ್ಲಿ ಮತ್ತು ಇಲ್ಲಿಯೂ ಕೂಡ ಹೇಳಿದಾಗ ನಾನು ಅದನ್ನು ಕೂಡ ರೆಕ್ರೂಟ್ ಮಾಡಿದ್ದೇವೆ. ಇವತ್ತು ನಮ್ಮ ಫೈರ್ ಫೋರ್ಸ್ ಇಲಾಖೆಯವರು 117 ಕೋಟಿ ರೂಪಾಯಿಗಳ ಆಸ್ತಿ ಪಾಸ್ತಿಗಳಿಗೆ ಬೆಂಕಿಹತ್ತಿದುದನ್ನು ಆರಿಸಿ, 80 ಕೋಟಿ ರೂಪಾಯಿಗಳವರೆಗೆ ಉಳಿಸಿಕೊಟ್ಟು ಬಹಳಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ನಾಗರಹೊಳೆಯಲ್ಲಿ ಏತಕ್ಕೆ ಮಾಡಲಿಲ್ಲವೆಂದು ಮಾನ್ಯ ಶಿವರಾಮೇಗೌಡರು ಕೇಳಬಹುದು. ನಾಗರಹೊಳೆಯಲ್ಲಿ ಇದು ಆಗುತ್ತಿರಲಿಲ್ಲ. ಕೆಲವು ವೇಳೆ ಹೀಗಾಗುತ್ತದೆ. ಇವತ್ತು 13ನೇ ತಾರೀಖು ಬೆಂಗಳೂರಿನಲ್ಲಿ ಏನಾಯಿತೆಂದರೆ ಅದು ಒಂದು ಎಮೋಷನಲ್

ಹಾಗಾಗಿ ಹೋಗಲಿಕ್ಕೆ ಆಗಲಿಲ್ಲ. ನಾಗರಹೊಳೆಯಲ್ಲಿ ಹೋಗಲಿಕ್ಕೆ ದಾರಿಯೇ ಇಲ್ಲ. ಆದರೂ ಕೂಡ ಎಲ್ಲ ಕಡೆ ನಮ್ಮ ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಿದೆ. ಒಳ್ಳೆಯ ಕೆಲಸ ಮಾಡುತ್ತಿದೆನ್ನುವುದನ್ನು ನಾನು ತಮಗೆ ಹೇಳಬಯಸುತ್ತೇನೆ.

ಇವತ್ತು ಕರ್ನಾಟಕ ಮರ್ಡರ್ಸ್‌ನಲ್ಲಿ 6ನೇ ಸ್ಥಾನದಲ್ಲಿದ್ದರೆ ಡಕಾಯಿತ್‌ನಲ್ಲಿ 9ನೇ ಸ್ಥಾನದಲ್ಲಿದೆ. ರಾಬರಿಯಲ್ಲಿ 11ನೇ ಸ್ಥಾನದಲ್ಲಿದೇ ಎಂದು ಹೇಳಿ ಒಂದು ಫಿಗರ್ಸ್‌ನ್ನು ನಾನು ಕೊಡಬಯುಸುತ್ತೇನೆ

ಮತ್ತೆ ಟ್ರಾಫಿಕ್ ಬಗ್ಗೆ ಮಾನ್ಯ ಅನಂತಕೃಷ್ಣರವರು ಹೇಳಿದ್ದಾರೆ. ಇವತ್ತು 12,383 ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡತಕ್ಕಂಥಕಾಲದಲ್ಲಿ ನಾವು 300 ಜನ ಲೇಡೀಸ್ ಕಾನ್‌ಸ್ಟೇಬಲ್ಸ್‌ಗಳನ್ನು ತೆಗ್ದುಕೊಳ್ಳುವ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಪ್ರತಿ ಜಿಲ್ಲೆಯಲ್ಲಿಯೂ ಕೂಡ ಮಹಿಳೆಯರ ಗ್ರಿವೆನ್ಸ್ ಸೆಲ್ ಮಾಡಬೇಕೆಂದಿದ್ದೇವೆ. ಇದರ ಜೊತೆಗೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಮಹಿಳಾ ಸಬ್‌ಇನ್‌ಸ್ಪೆಕ್ಟರ್‌ಗಳು ಇರಬೇಕೆಂದು ಸರ್ಕಾರದ ಕಾರ್ಯಕ್ರಮ ಇದೆ. ಏಕೆಂದರೆ ಇವತ್ತು ಡೌರಿ ಡೆತ್ಸ್ ಬಗ್ಗೆಯೂ ಕೂಡ ಕೇವಲ ಪುರುಷ ಇನ್‌ಸ್ಪೆಕ್ಟರ್‌ರವರೇ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಇದಕ್ಕಾಗಿ ಪ್ರಸ್ತುತ ವರ್ಷದಲ್ಲಿ 16 ಲಕ್ಷರೂಪಾಯಿಗಳನ್ನು ಬಿಡುಗಡೆ ಮಾಡಿ ಡಿ.ವೈ.ಎಸ್.ಪಿ. ಮತ್ತು 11 ಇನ್‌ಸ್ಪೆಕ್ಟರ್ ಪೋಸ್ಟ್‌ಗಳನ್ನು ಕೂಡ ಕ್ರಿಯೇಟ್ ಮಾಡಿದ್ದೇವೆ. ಎಫೆಕ್ಟೀವ್ ಆಗಿ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಕೂಡ ನಾವು ಕ್ರಮ ತೆಗೆದುಕೊಂಡಿದ್ದೇವೆ. ಬೆಂಗಳೂರು ನಗರದ ಟ್ರಾಫಿಕ್ ವಿಷಯದಲ್ಲಿ ಮಾನ್ಯ ಅನಂತಕೃಷ್ಣರವರು ಹೇಳಿದ್ದಾರೆ. ಅವರಿಗೆ ಗುರುತಿರಬಹುದು. ಬೆಂಗಳೂರಿನಲ್ಲಿ ಅವರು ಬಹಳ ದಿವಸದಿಂದ ಇದ್ದಾರೆ. ಕೆಲವು ದಿವಸ ಹೈದರಾಬಾದ್‌ನ ಸಿಕಂದರಾಬಾದ್‌ನಲ್ಲಿದ್ದರು. 1940ರಲ್ಲಿ ಬೆಂಗಳೂರು ನಗರದ ಪಾಪ್ಯುಲೇಷನ್ 3 ಲಕ್ಷ ಇದ್ದು ಇವತ್ತು ಬೆಂಗಳೂರು ನಗರದ ಪಾಪ್ಯುಲೇಷನ್ 55 ಲಕ್ಷಕ್ಕೆ ಏರಿದೆ. ಇನ್ನು 2000 ನೇ ಇಸವಿಗೆ ಎಲ್ಲಿಗೆ ಹೋಗುತ್ತಿದೆಂದರೆ 75 ಲಕ್ಷಕ್ಕೆ ಹೋಗುತ್ತದೆ. ಇಡೀ ಇಂಡಿಯಾದಲ್ಲಿ ಬಹಳ ಫಾಸ್ಟ್ ಆಗಿ ಬೆಳೆಯುತ್ತಿರತಕ್ಕಂಥ ಸಿಟಿಯಾಗಿದೆ. 74 ಪರ್ಸೆಂಟ್ ಫಾಸ್ಟ್ ಆಗಿ ಬೆಳೆಯುತ್ತಿದೆ; ಜೊತೆಗೆ ಫ್ಲೋಟಿಂಗ್ ಪಾಪ್ಯುಲೇಷನ್ ಇಲ್ಲಿ ಮೂರು ಲಕ್ಷ ಇದೆ. ಜೊತೆಗೆ ಸಾಕಷ್ಟು ವೆಹಿಕಲ್ಸ್ ಓಡಾಡುತ್ತಿವೆ. ಕೆಂಪೇಗೌಡ ನಗರದಿಂದ ಶಭಾಷ್ ನಗರಕ್ಕೆ ಹೋಗಬೇಕೆಂದರೆ ನಾವು ತಿರುಗಾಡಲಿಕ್ಕೆ ಆಗುವುದಿಲ್ಲ. ಒಂದು ಕಾಲದಲ್ಲಿ ಅಂದರೆ 1972ರಲ್ಲಿ ನಾನು ವಿಧಾನ ಸಭಾ ಸದಸ್ಯನಾಗಿ ಬಂದ ಮೇಲೆ ಆಗ ನೋಡಿದ್ದಕ್ಕೂ ಈಗ ನೋಡುವುದಕ್ಕೂ ಬಹಳಷ್ಟು ಟ್ರಾಫಿಕ್ ಬೆಳೆದಿರುತ್ತದೆ. ಇದಕ್ಕೆ 500 ಜನಕ್ಕೂ ಹೆಚ್ಚಿನ ರೀತಿಯಲ್ಲಿ ಸಿಬ್ಬಂದಿಬೇಕೆಂದು ಕೇಳಿದ್ದಾರೆ. ಇವತ್ತು 5 ಕೋಟಿ ರೂಪಾಯಿ ವೆಚ್ಚದಲ್ಲಿ ಟ್ರಾಫಿಕ್ ರ್‍ಯಾಡ್ಸ್ ಏಜೆನ್ಸಿಯವರಿಂದ ಒಂದು ಫರ್‌ಫೆಕ್ಟ್ ಪ್ಲಾನ್ ಮಾಡಿಸಿ ನಾವು ಬೆಂಗಳೂರು ನಗರಕ್ಕೆ ಕೊಡುತ್ತಿದ್ದೇವೆ.

ಪ್ರತಿ ಜಿಲ್ಲೆಯಲ್ಲಿ ಕೂಡ ಒಂದು ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡಬೇಕೆಂದು ಸರ್ಕಾರದ ಇಚ್ಛೆ ಇದೆ. ರಾಯಚೂರು ಬೇರೆ ಕಡೆ ಈಗಾಗಲೇ ಠಾಣೆ ತೆರೆದಿದ್ದೇವೆ. ಶ್ರೀ ಕಮರುಲ್ ಇಸ್ಲಾಂ ಅವರು ಡಿವಿಜನಲ್ ಹೆಡ್‌ಕ್ವಾರ್ಟರ್ಸ್ ಗುಲ್ಬರ್ಗಾದಲ್ಲಿ ಆಗಬೇಕಂದು ಹೇಳಿದ್ದಾರೆ. ಅದನ್ನು ಮಾಡೋಣ. ಎಲ್ಲಿ 4-5 ಲಕ್ಷಕ್ಕಿಂತಹೆಚ್ಚು ಜನಸಂಖ್ಯೆ ಇದೆ, ಅಂಥ ಡಿವಿಜನಲ್ ಹೆಡ್‌ಕ್ವಾರ್ಟರ್‌ನಲ್ಲಿ ಮಾಡೋಣವೆಂದು ಹೇಳುತ್ತಿದ್ದೇನೆ. ಇವತ್ತಿನ ತಿವಸ ಮಾನ್ಯ ಸದಸ್ಯರು ಟ್ರಾಫಿಕ್ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕಳಕಳಿ ವ್ಯಕ್ತ ಮಾಡಿದ್ದಾರೆ. ಅದನ್ನೆಲ್ಲ ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ನಿನ್ನೆ ಕಮರುಲ್ ಇಸ್ಲಾಂ ಅವರು ಫ್ಯಾಸಿಸ್ಟ್ ಫೋರ್ಸ್ ಬೆಳೆಯುತ್ತಿದೆ ಎಂದು ಹೇಳಿದರು. ಈ ಬಗ್ಗೆ ನ್ಯಾಷನಲ್

ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಶ್ರೀ ರಾಜೀವ್ ಗಾಂಧಿಯವರು ಹೆಚ್ಚಿನ ರೀತಿಯಲ್ಲಿ ಕಳವಳ ವ್ಯಕ್ತ ಮಾಡಿದ್ದರು. ಶ್ರೀ ವಿ.ಪಿ. ಸಿಂಗ್ ಅವರು ಕೂಡ ಪ್ರಧಾನ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನ ಕೊಟ್ಟಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಹೆಚ್ಚಿನ ಸಿಬ್ಬಂದಿ ಇದ್ದರೆ ಜನರಿಗೆ ಹೆಚ್ಚಿನ ರಕ್ಷಣೆ ಕೊಡಬಹುದೆಂದು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ್ಯಂಟಿ ರೈಯಟ್ ಸ್ಕ್ವಾಡನ್ನು ಮಾಡಬೇಕೆಂದು ಸಹ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಕೇಂದ್ರದ ಗೃಹ ಸಚಿವರಾದ ಶ್ರೀ ಚವಾಣರು ಮೊನ್ನೆ ಸಿಆರ್‌ಪಿಎಫ್.ನ 10 ಬೆಟಾಲಿಯನ್ ಮಾಡಿದ್ದಾರೆ. ಇದು ಕೂಡ ನಮ್ಮ ಗಮನದಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ನಾವು ಈಗಾಗಲೇ ಪ್ಲೇಸ್ ಐಡೆಂಟಿಫೈ ಮಾಡಿ ಎಲ್ಲಿ ಮಾಡಲು ಸಾಧ್ಯವಾಗುತ್ತದೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಶ್ರೀ ಸಾದತ್ ಆಲಿ ಖಾನ್ ಅವರು ಇರಲಿಲ್ಲ; 1990ರಲ್ಲಿ ಕೋಮು ಗಲಭೆ ಆದ ಮೇಲೆ 2 ಕೋಟಿ ರೂಪಾಯಿಗೂ ಹೆಚ್ಚು ಕಾಂಪನಸೇಷನ್ ಕೊಟ್ಟಿದ್ದೇವೆ. ಇವತ್ತು 40 ಲಕ್ಷ ರೂಪಾಯಿ ವೆಚ್ಚದ ಮೇಲೆ ಮನೆ ಕಟ್ಟಿಸತಕ್ಕದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಂತೆ ಕೆಲಸ ಮಾಡುತ್ತಿದ್ದೇವೆ. ಬಡವರ ಬಗ್ಗೆ ಆಶ್ವಾಸನೆ ಕೊಟ್ಟಿರತಕ್ಕದ್ದು ಕಾರ್ಯಗತವಾಗುತ್ತಿದೆ. ಇವತ್ತು ಯಾರು ಸತ್ತಿದ್ದಾರೆ, ಅಂದರೆ ಸುಮಾರು 17-18 ಜನ ವಿಕ್ಟಿಮ್ಸ್ ಇರಬಹುದು, ಅವರ ಮಕ್ಕಳಿಗೆ ಪರಿಹಾರ ಕೊಡಬೇಕೆಂದರೆ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ನಾವು ಪ್ರಪ್ರಥಮವಾಗಿ ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲಾ ಪ್ರೋಸೆಸ್ ಆಗಿ ಬಂದಿದೆ. ಕ್ಯಾಬಿನೆಟ್ ಮುಂದೆ ಬಂದು 8-10 ದಿನಗಳಲ್ಲಿ ಯಾರು ಯಾರು ತ್ತಿದ್ದಾರೆ ಅವರಿಗೆ ಪರಿಹಾರ ಕೊಡಬೇಕೆಂದು ಸರ್ಕಾರದ ನಿರ್ಧಾರ ಆಗಿದೆ. ಅವರಿಗೆ ಪರಿಹಾರ ಕೊಡುತ್ತೇವೆಂದು ಹೇಳಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಇನ್ನೂ ಕಳವಳ ಇದೆ ಆ ಎಲ್ಲಾ ಕಡೆ ವ್ಯವಸ್ಥೆ ಮಾಡಬೇಕೆಂದು ಏನು ಸದಸ್ಯರ ಮತ್ತು ರಾಜ್ಯದ ಜನರ ನಿರೀಕ್ಷೆ ಇದೆ; ಈ ಬಗ್ಗೆ ರಾಜ್ಯದ ಮುಖ್ಯ ಮಂತ್ರಿಗಳಿಂದ, ಗೃಹ ಮಂತ್ರಿಗಳಿಂದ, ಸರ್ಕಾರದಿಂದ ಏನು ನಿರೀಕ್ಷೆ ಮಾಡುತ್ತಿದ್ದಾರೆ ಅಂತಹ ಎಲ್ಲಾ ಕಡೆ ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ. ಮೊನ್ನೆ ಕೂಡ ಕಾವೇರಿ ಗಲಭೆಯಲ್ಲಿ 3 ಕೋಟಿ ರೂಪಾಯಿಗೂ ಹೆಚ್ಚಿಗೆ ಪರಿಹಾರವನ್ನು ಎಲ್ಲಾ ಕಡೆಗೆ ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ, ಸಂಜಯನಗರದಲ್ಲಿ ಮತ್ತು ಬೇರೆ ಬೇರೆ ಕಡೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ದುರಂತ ನಡೆದಾಗ ಪೋಲೀಸರು ಏನು ಮಾಡುತ್ತಿದ್ದರು ಎಂದು ಪ್ರಸ್ತಾಪ ಮಾಡಿದ್ದಾರೆ. ಭಾವನಾತ್ಮಕವಾದ ಸಮಸ್ಯೆ ಬಂದಾಗ ನಿಯಂತ್ರಿಸುವುದು ಕಷ್ಟವಾಗುತ್ತದೆ. ಆದರೂ 13 ದಿವಸ ಆದಮೇಲೆ, ಘಟನೆ ಮತ್ತೆ ಜರುಗಿಲ್ಲ. ಇವತ್ತು ತಾವು ಹೇಳಿದ್ದೀರಿ. ನೀಲಗಿರಿಯಲ್ಲಿ ಪೋಲೀಸ್ ಫೈರಿಂಗ್ ಆಗಿ 7 ಜನ ಸತ್ತರು ಎಂದು. ಗುಂಡ್ಲುಪೇಟೆ ಮತ್ತೊಂದು ಕಡೆ ಅದು ಆಗದಂತೆ ಕಂಟ್ರೋಲ್ ಮಾಡಿದ್ದೇವೆ. 12 ಕೋಟಿ 63 ಲಕ್ಷ ರೂಪಾಯಿಗಳಷ್ಟು ಆಸ್ತಿಗೆ ಹಾನಿಯಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ವ್ಯವಸ್ಥಿತವಾಗಿ ಪರಿಹಾರ ಕೊಡತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಇಂಡಸ್ಟ್ರೀಸ್ ಇಲಾಖೆಯವರು ಬೆಂಗಳೂರು ನಗರದಲ್ಲಿ ಮತ್ತು ಬೇರೆ ಕಡೆ ಇರತಕ್ಕ ಇಂಡಸ್ಟ್ರೀಗಳಲ್ಲಿ ಬಹಳಷ್ಟು ಹಾನಿಯಾಗಿದೆ ಎಂದು ಹೇಳಿದ್ದಾರೆ. ಮಾರ್ಚ್ 31ರೊಳಗೆ ಅದನ್ನೆಲ್ಲ ಪ್ಯಾಕೇಜ್ ಮಾಡತಕ್ಕ ಕಾರ್ಯಕ್ರಮವನ್ನು ಸರ್ಕಾರದ ಕಡೆಯಿಂದ ತೆಗೆದುಕೊಂಡಿದ್ದೇವೆ. ಘಟನೆಗಳು ನಡೆದ ಮೇಲೆ ಅಲ್ಲಿ ಸರ್ಕಾರದ ಜವಾಬ್ದಾರಿ ಇರುತ್ತದೆ. ಅಲ್ಲೆಲ್ಲ ನಾವು ಮೀಟಿಂಗ್ ಮಾಡಿದ್ದೇವೆ. ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿದ್ದೇವೆ. ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿದ್ದೇವೆ. ಎಲ್ಲಾ ಮಾಡಿದ್ದೇವೆ. ಎಲ್ಲಿಯಾದರೂ ಗಲಭೆಯಾದರೆ ಡಿ.ಸಿ. ಯವರಿಗೆ ಹೇಳುತ್ತೇವೆ, ಅವರೂ ಹೋಗಿ ಬಂದಿದ್ದಾರೆ. ಮೈಸೂರು ಹಾಗೂ ಬೇರೆ ಎಲ್ಲಾ ಕಡೆಗೆ ಅಧಿಕಾರಿಗಳನ್ನು ಡೆಪ್ಯೂಟ್ ಮಾಡುತ್ತಿದ್ದೇವೆ. ಫೋನ್

ಮುಖಾಂತರ ಕೂಡ ಹೇಳಿ ಕೆಲಸ ಮಾಡಿಸುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ದಲಿತರ ಸಮಸ್ಯೆಗಳ ಬಗ್ಗೆ ಮೊಟ್ಟ ಮೊದಲನೆಯದಾಗಿ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದ್ದೇವೆ. ನಾನು, ರೆವಿನ್ಯೂ ಮಿನಿಸ್ಟರ್, ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಜೊತೆ 3-4 ಸಾರಿ ಮಾತನಾಡಿದ್ದೇವೆ. ದಲಿತರಿಗೆ ಸಂಬಂಧಪಟ್ಟ ಹಾಗೆ ಎನ್‌ಕ್ರೋಚ್‌ಮೆಂಟ್ ಸಮಸ್ಯೆ ಇದೆ. ಅದನ್ನು ಪ್ರಸ್ತಾಪ ಮಾಡಿದ್ದೇವೆ. ಒಂದೊಂದು ತಿಂಗಳಿಗೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮೀಟಿಂಗ್ ಆಗಬೇಕು ಮತ್ತು ಪ್ರತಿಯೊಂದು ಕಡೆ ಇರತಕ್ಕ ಗ್ರಿವೆನ್ಸಸ್ ಸೆಲ್ಲಿಗೆ ಯಾರಾದರೂ ಅರ್ಜಿ ತೆಗೆದುಕೊಂಡು ಬಂದರೆ ಅವರಿಗೆ ರಶೀತಿ ಕೊಡಬೇಕು. ಎಷ್ಟು ದಿನ ಆಯಿತು ಅರ್ಜಿಗಳು ಬಂದು ಮತ್ತು ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು.

ಮೊನ್ನೆ 25ನೇ ಆಗಸ್ಟ್‌ಗೆ ನಾವು ಎಲ್ಲಾ ಕಡೆ ಜನರ ಸಮಸ್ಯೆಗಳ ವಿಚಾರದಲ್ಲಿ ಯಾವ ರೀತಿ ವರ್ತಿಸಬೇಕು ಎಂಬ ಬಗ್ಗೆ ಕೂಡ ನಾವು ಅನೇಕ ಸಭೆಗಳನ್ನು ಮಾಡಿದ್ದೇವೆ. ಬಹಳ ದರ್ಪದಿಂದ ಬರುತ್ತಿದ್ದಾರೆ, ಹೋಗುತ್ತಿದ್ದಾರೆ ಎಂಬ ಮಾತನ್ನು ತಾವು ಹೇಳಿದ್ದೀರಿ; ಅದು ನಾನು ಒಪ್ಪುತ್ತೇನೆ. ಇಲ್ಲ ಎಂದು ಅಲ್ಲಗಳೆಯುವುದಿಲ್ಲ. ಏಕೆಂದರೆ ನಾನು ಕೂಡ ಸಾರ್ವಜನಿಕ ಜೀವನದಲ್ಲಿ 20 ವರ್ಷಗಳ ಕಾಲ ಶಾಸಕನಾಗಿ ಕೆಲಸ ಮಾಡುವಾಗ ಇಂತಹ ಸಮಸ್ಯೆಗಳು ಕೂಡ ನನ್ನ ಗಮನಕ್ಕೆ ಬಂದಿವೆ. ಆ ಅನುಭವದ ಆಧಾರದ ಮೇಲೆ ಸಾಮಾನ್ಯ ಜನರು ಕರ್ನಾಟಕ ರಾಜ್ಯದಲ್ಲಿ ಏನು ನಿರೀಕ್ಷಣೆ ಮಾಡುತ್ತಿದ್ದಾರೆ ಅದರ ಬಗ್ಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದೇವೆ. ಮತ್ತು ಮೈನಾರಿಟೀಸ್‌ಗಾಗಲೀ ದಲಿತರಿಗಾಗಲೀ ವಿದ್ಯಾರ್ಥಿಗಳಿಗಾಗಲೀ ತೊಂದರೆಯಾಗಿಲ್ಲ. ನಾವು ಬಂದಮೇಲೆ ಒಂದು ವರ್ಷದ ಅವಧಿಯಲ್ಲಿ ಇವತ್ತು ಸ್ಟೂಡೆಂಟ್ಸ್ ಫ್ರಂಟ್ ಆಗಲೀ ಲೇಬರ್ ಫ್ರಂಟ್ ಆಗಲೀ, ರೈತರ ಫ್ರಂಟ್ ಆಗಲೀ, ಎಲ್ಲಾ ಕಡೆ ಹೆಚ್ಚು ಗಲಭೆಗಳಾಗಿಲ್ಲ. ಇಷ್ಟು ಸಮಸ್ಯೆಗಳ ಮಧ್ಯದಲ್ಲಿ ಕೂಡ ನಿಯಂತ್ರಣ ಮಾಡಿದ್ದೇವೆ. ನಾಲ್ಕು ಕೋಟಿ ಜನಸಂಖ್ಯೆ ಇರುವಾಗ ಇಷ್ಯೂಗಳ ಹಿನ್ನೆಲೆಯಲ್ಲಿ ಗಲಭೆಗಳಾಗುತ್ತಿದೆ. ಆಗುತ್ತಿಲ್ಲ ಎಂದು ನಾನು ಹೇಳುವುದಿಲ್ಲ. ಆದರೂ ಕೂಡ ಈ ಒಂದು ಇಲಾಖೆ ಕ್ರಮ ತೆಗೆದುಕೊಂಡಿದೆ. ಸರ್ಕಾರ ಕ್ರಮ ತೆಗೆದುಕೊಂಡಿದೆ. ಯಾರೇ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳಿಗಾಗಿ ಪ್ರತಿಭಟನೆ ಮಾಡಿದಾಗ ಪೋಲೀಸ್ ಕೇಸ್‌ಗಳನ್ನು ಹಾಕಿದ್ದಾರೆ. ರೈತರ ಮೇಲೆ ಹಾಕಿದ್ದಾರೆ. ರೈತರ ಮೇಲೆ ಹಾಕಿರುವ 123 ಕೇಸ್‌ಗಳನ್ನು ವಿತ್‌ಡ್ರಾ ಮಾಡಿದ್ದೇವೆ. ಡೆಕ್ಕನ್ ಹೆರಾಲ್ಡ್ ಕೇಸ್ ಏನಿತ್ತು ಷಫಿಅಹಮದ್ ಕೇಸ್ ಅದು 30 ಕೇಸ್ ವಿತ್‌ಡ್ರಾ ಮಾಡಿದ್ದೇವೆ. ಬೇರೆ ಬೇರೆ ಹಂತದಲ್ಲಿ ವಿದ್ಯಾರ್ಥಿಗಳ ಮೇಲೆ ಕೂಡ ಕೇಸ್‌ಗಳು ಇವೆ. ಯಾವುದಾದರೂ ವಿಚಾರದಲ್ಲಿ ಸಾಮೂಹಿಕವಾಗಿ ಪ್ರತಿಭಟನೆ ಮಾಡುವಾಗ ಅನೇಕ ತೊಂದರೆಗಳಾಗುತ್ತಿವೆ. 107ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿದಾಗ ಅವರೆಲ್ಲರೂ ಬರಬೇಕು. ನಾವು ಸರ್ಕಾರದವರು ಕೋಲಾರ ಮತ್ತು ಬೇರೆ ಜಿಲ್ಲೆಗಳಲ್ಲಿ ಕೇಸ್ ವಿತ್‌ಡ್ರಾ ಏನು ಮಾಡಬೇಕಾಗಿದೆ ಅದನ್ನು ಕೂಡ ನಾವು ಮಾಡುತ್ತಿದ್ದೇವೆ. ಯಾವುದಾದರೂ ಒಂದು ಕೇಸ್ ವಿತ್‌ಡ್ರಾ ಮಾಡಬೇಕಾದರೆ ಪರ್ಫೆಕ್ಟಾಗಿ ರಿಪೋರ್ಟ್ ತರಿಸಿ ನಾವು ಮಾಡಬೇಕಾಗುತ್ತದೆ. ಈ ಕೆಲಸವನ್ನು ನಾವು ಹಂತಹಂತವಾಗಿ ಮಾಡುತ್ತಿದ್ದೇವೆ. ಒಂದೇ ವರ್ಷದಲ್ಲಿ 200 ಕೇಸ್‌ಗಳನ್ನು ವಿತ್‌ಡ್ರಾ ಮಾಡಿದ್ದೇವೆ. ಇನ್ನೂ ವಿತ್‌ಡ್ರಾ ಮಾಡತಕ್ಕ ಹಂತದಲ್ಲಿದ್ದೇವೆ. ರಿಪೋರ್ಟ್‌ಗಳು ಬರುತ್ತಿವೆ. ರಿಪೋರ್ಟ್ ಬಂದಮೇಲೆ ನಾವು ಮಾಡುತ್ತಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಹೇಳುವಂತಹ ಇನ್ನೂ ಬಹಳಷ್ಟು ವಿಷಯಗಳಿವೆ. ಮತ್ತೊಂದು ಸಾರಿ ಅದನ್ನು ಹೇಳೋಣ ಎಂಬ ಮಾತನ್ನು ಹೇಳಿ ಸದಸ್ಯರ ಮನಸ್ಸಿನಲ್ಲಿ ಪೋಲೀಸ್ ಇಲಾಖೆಗೆ ಹೆಚ್ಚು ಕಾನ್‌ಸ್ಟೇಬಲ್‌ಗಳು ಬೇಕು, ಪೋಲೀಸ್ ಸ್ಟೇಷನಗಳು ಬೇಕು, ಫೈರ್ ಸ್ಟೇಷನ್‌ಗಳು ಬೇಕು, ಎಕ್ವಿಪ್‌ಮೆಂಟ್ಸ್

ಬೇಕು, ಮತ್ತು ವ್ಯವಸ್ಥಿತವಾಗಿ ಕರ್ನಾಟಕ ರಾಜ್ಯದಲ್ಲಿ ಜನರ ಹಿತರಕ್ಷಣೆ ಮಾಡಬೇಕು ಎಂದು ಏನು ತಾವು ಪ್ರಸ್ತಾವನೆ ಮಾಡಿದ್ದೀರಿ ಅದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡುತ್ತೇನೆ. ಮತ್ತು ಯಾವಾಗಲೂ ಕೂಡ ಖುದ್ದಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹೇಳತಕ್ಕ ಅವಕಾಶ ಇದೆ. ನಾನು ಕೂಡ ಕೇಳುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ಅಬ್ಕಾರಿ ಇಲಾಖೆ ಮತ್ತು ಪೋಲೀಸ್ ಇಲಾಖೆ ಬೇಡಿಕೆಗಳಿಗೆ ತಾವು ತಮ್ಮ ಅನುಮೋದನೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಜೈಲು ಮಂತ್ರಿಗಳೇ, ತಾವು ಉತ್ತರ ಹೇಳಿ, ಆಮೇಲೆ ಕ್ಲಾರೀಫಿಕೇಷನ್ಸ್ ಕೇಳಲಿ.

† ಶ್ರೀ ಡಿ.ಕೆ. ಶಿವಕುಮಾರ್ : (ಜೈಲು ಮತ್ತು ಗೃಹ ರಕ್ಷಕ ರಾಜ್ಯ ಸಚಿವರು):

ಸಭಾಧ್ಯಕ್ಷರೆ, ನಿನ್ನೆ ನಾನು ನನ್ನ ಜೈಲು ಮತ್ತು ಗೃಹ ರಕ್ಷಕ ದಳ ಇಲಾಖೆಯ ಬೇಡಿಕೆಯನ್ನು ಸದನದ ಮುಂದೆ ಒಪ್ಪಿಸಿದೆ. ನಾನು ಜೈಲು ಮಂತ್ರಿಯಾದ ಮೇಲೆ ಅನೇಕರು ಇವರು ಜೈಲು ಮಂತ್ರಿ ಜೈಲು ಮಂತ್ರಿ ಎಂದು ಹಾಸ್ಯ ಮಾಡುತ್ತಿದ್ದರು.

ಶ್ರೀ ಎಲ್. ಆರ್. ಶಿವರಾಮೇಗೌಡ : ತಾವೂ ಅದೇ ಹೇಳುತ್ತಿದ್ದೀರಿ ನನ್ನ ಜೈಲು ಎಂದು.

ಒಬ್ಬ ಸದಸ್ಯರು : ಸರ್ಕಾರದ ಜೈಲೋ ಅದು ಅಥವಾ ಶಿವಕುಮಾರ್ ಅವರ ಜೈಲೋ?

ಶ್ರೀ ಡಿ.ಕೆ. ಶಿವಕುಮಾರ್ : ಉಪಾಧ್ಯಕ್ಷರೆ, ಉಡುಪಿ ಪೇಜಾವರ ಮಠದ ಸ್ವಾಮಿಗಳು ಬೆಂಗಳೂರಿಗೆ ಬಂದಿದ್ದರು. ಕೃಷ್ಣ ಜಯಂತಿ ಹಬ್ಬದ ದಿವಸ ನನ್ನನ್ನು ಆಹ್ವಾನ ಮಾಡಿದರು. ಒಂದು ಲಕ್ಷ ಭಗವದ್ಗೀತೆ ಯಜ್ಞ ಮಾಡುತ್ತಿದ್ದೇವೆ. ಅದಕ್ಕೆ ತಾವು ದಯವಿಟ್ಟು ಬರಬೇಕು ಎಂದು ಹೇಳಿದರು. ನನಗೂ ಇದಕ್ಕೂ ಏನು ಸಂಬಂಧ. ನನ್ನನ್ನು ಏತಕ್ಕೆ ಕರೆಯುತ್ತಿದ್ದಾರೆ ಎಂದು ನಾನು ಅಂದುಕೊಂಡೆ. ಆದರೂ ದೊಡ್ಡ ಮಠಾಧೀಶರು ಬಂದು ಕರೆದಾಗ ಸ್ವಲ್ಪ ಗೌರವ ಕೊಟ್ಟು ಹೋಗಬೇಕು ಎಂದು ಸರಿಯಾದ ವೇಳೆಗೆ ನಾನು ಹೋದೆ. ಹೋದಂಥ ಸಂದರ್ಭದಲ್ಲಿ ಅವರು ಹೇಳಿದರು, ಕೃಷ್ಣ ಹುಟ್ಟಿದ್ದು ನಮ್ಮ ಕಾರಾಗೃಹದಲ್ಲಿ ಎಂದು. ಅಂಥ ಒಂದು ಪವಿತ್ರವಾದ ಇಲಾಖೆಯನ್ನು ಮಾನ್ಯ ಬಂಗಾರಪ್ಪನವರು ನನಗೆ ವಹಿಸಿಕೊಟ್ಟಿದ್ದಾರೆ. ಆ ಇಲಾಖೆಯ ಚರ್ಚೆಯನ್ನು ....

ಶ್ರೀ ಎಲ್.ಆರ್. ಶಿವರಾಮೇಗೌಡ : ಕೃಷ್ಣ ಹುಟ್ಟಿದ್ದು ಅವರ ಜೈಲಿನಲ್ಲಿ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಶ್ರೀ ಶಿವಕುಮಾರ್ ಅವರೇನೂ ಜೈಲಿನಲ್ಲಿ ಹುಟ್ಟಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಗೃಹಮಂತ್ರಿಗಳು ಹೇಳುತ್ತಿದ್ದಾರೆ ಏನೆಂದರೆ. 1976ರಲ್ಲಿ ಮುಖ್ಯ ಮಂತ್ರಿಗಳು ಕೂಡ ಇದೇ ಖಾತೆಯನ್ನು ವಹಿಸಿಕೊಂಡಿದ್ದರಂತೆ. ಇವತ್ತು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ನಮ್ಮದು ಪ್ಲಾನ್‌ಗಿಂತ ನಾನ್‌ಪ್ಲಾನ್ ಜಾಸ್ತಿ. ಇವತ್ತು 94 ಜೈಲುಗಳು ನಮ್ಮ ರಾಜ್ಯದಲ್ಲಿ ಇವೆ. ಅವುಗಳ ಪೈಕಿ 6 ಸೆಂಟ್ರಲ್ ಜೈಲ್‌ಗಳಿವೆ. ಇದರಲ್ಲಿ 50 ಜೈಲುಗಳು ನಮ್ಮ ಇಲಾಖೆಯವರು ವಹಿಸಿಕೊಂಡು ಕೆಲಸ ಮಾಡುತ್ತಿದ್ದರೆ ಇನ್ನು 44 ಜೈಲುಗಳು ರೆವಿನ್ಯೂ ಡಿಪಾರ್ಟ್‌ಮೆಂಟ್ ವ್ಯಾಪ್ತಿಯಲ್ಲಿ ಇವೆ. ಅಂದರೆ ಅವುಗಳನ್ನು ಶಿರಸ್ತೇದಾರರು ಮತ್ತು ಪೋಲೀಸ್ ಸಿಬ್ಬಂದಿಯವರು ನೋಡುತ್ತಾರೆ. ರಕ್ಷಣೆ ಮಾಡುವ ಜವಾಬ್ದಾರಿ ಇರುತ್ತದೆ. ಮತ್ತು ಇದಕ್ಕೆ ಹಣವನ್ನು ನಾವು ಕೊಡುತ್ತೇವೆ. ಈ 24 ರಲ್ಲಿ 6 ಡಿಸ್ಟ್ರಿಕ್ಟ್ ಪ್ರಿಸನ್ಸ್ ಇವೆ. ಇನ್ನು 7 ಜಿಲ್ಲಾ ಸಬ್ ಜೈಲ್‌ಗಳು ಇವೆ. ಮತ್ತೆ ಮಕ್ಕಳನ್ನು ಇಟ್ಟುಕೊಳ್ಳುವುದಕ್ಕೆ ಕೆಲವನ್ನು ಇಟ್ಟುಕೊಂಡಿದ್ದೇವೆ. ಹಾಗೂ ದೇವನಹಳ್ಳಿ ಒಂದು

ಓಪನ್ ಏರ್ ಜೈಲ್ ಇದೆ. ಇದರ ಉದ್ದೇಶ ಶಿಕ್ಷೆಗೆ ಒಳಗಾಗಿ ಬಂದವರನ್ನು ಒಳ್ಳೆಯ ನಾಗರೀಕರನ್ನಾಗಿ ಮಾಡುವುದು ಆಗಿದೆ. ಏನು ಮಾನ್ಯ ಧರ್ಮಸಿಂಗ್ ಅವರು ಹಿಡಿಯುತ್ತಾರೆ, ಅವರನ್ನು ತಕ್ಷಣ ನಮ್ಮ ಹತ್ತಿರ ಕಳುಹಿಸುತ್ತಾರೆ. ಆ ಕ್ರಿಮಿನಲ್ಸ್‌ನ್ನು ನಾವು ಕರೆದುಕೊಂಡು ಸುಧಾರಣೆ ಮಾಡುವ ಕೆಲಸ ನಮ್ಮದು. ಇವತ್ತು ಒಬ್ಬ ಖೈದಿಯನ್ನು ಜೈಲಿನಲ್ಲಿ ಇಟ್ಟುಕೊಳ್ಳಬೇಕಾದರೆ ಸರ್ಕಾರಕ್ಕೆ ಒಂದು ದಿವಸಕ್ಕೆ 38 ರೂಪಾಯಿ ಖರ್ಚು ಬರುತ್ತದೆ. ಇದರಲ್ಲಿ 8 ರೂಪಾಯಿ 10 ಪೈಸೆ ಊಟಕ್ಕೆ ಖರ್ಚು ಆಗುತ್ತದೆ. ಇನ್ನು ಮಿಕ್ಕ 30 ರೂಪಾಯಿ ಆಡಳಿತಕ್ಕೆ, ಸಿಬ್ಬಂದಿಗೆ ಮತ್ತೊಂದಕ್ಕೆ ಖರ್ಚು ಆಗುತ್ತದೆ. ಜೈಲಿನಲ್ಲಿ ಖೈದಿಗಳು ಇದ್ದಾಗ ಅವರ ಸುಧಾರಣೆ ಬಗ್ಗೆ ಚಿಂತನೆ ಮಾಡಬೇಕೆಂದು ಕುಶಾಲ ಅವರು, ರಾಜೂಗೌಡರು, ಶಿವನಂಜಪ್ಪನವರು ಹೇಳಿದರು. ಇವತ್ತು ಜೈಲಿನಲ್ಲಿ ಅವರ ಸುಧಾರಣೆಗೋಸ್ಕರವಾಗಿ ನೇಯ್ಗೆ, ಕೈಮಗ್ಗವನ್ನು ಕಲಿಸುವುದಕ್ಕೆ ಟ್ರೈನಿಂಗ್ ಕೊಡುತ್ತೇವೆ. ಮರಗೆಲಸ, ದರ್ಜಿ, ಜಮಖಾನ ತಯಾರು ಮಾಡುವುದರಲ್ಲಿ ತರಪೇತಿ ಕೊಡುತ್ತೇವೆ. ನಮ್ಮ ಗುಲ್ಬರ್ಗಾ ಜೈಲಿನಲ್ಲಿ ಒಳ್ಳೆಯ ಟೆಂಟ್‌ಗಳನ್ನು ತಯಾರು ಮಾಡುತ್ತಿದ್ದಾರೆ. ಮುದ್ರಣ, ಚಮ್ಮಾರಿಕೆ, ಕಮ್ಮಾರಿಕೆ, ಸೋಪು ತಯಾರಿಕೆ, ಲಾಂಡ್ರಿ ಈ ವಿಚಾರಗಳಲ್ಲೂ ತರಪೇತಿ ಕೊಡುತ್ತಿದ್ದೇವೆ. ಮತ್ತೆ ನಮ್ಮ ಜೈಲುಗಳಲ್ಲಿ ಯಾರು ಯಾರು ಖೈದಿಗಳು ಇದ್ದಾರೆ ಅವರಿಗೆ ವಿಶೇಷವಾಗಿ ವ್ಯವಸಾಯ ಹಾಗೂ ತೋಟಗಾರಿಕೆಯಲ್ಲಿ ತರಪೇತಿ ಕೊಡುತ್ತಿದ್ದೇವೆ. ಜೈಲಿಗೆ 2 ವರ್ಷ, 5 ತಿಂಗಳು, 6 ವರ್ಷ, 14 ವರ್ಷಗಳ ವರೆಗೆ ಖೈದಿಗಳಾಗಿ ಬರುವವರಿದ್ದಾರೆ. ಅವರು ಮತ್ತೆ ಮನೆಗೆ ಹೋಗುವಾಗ ಏನಾದರೂ ಒಂದು ಉದ್ಯೋಗ ಕಲಿತುಕೊಂಡು ಹೋಗಲಿ ಎಂದು ಕರಕ್ಷನ್ ಸೆಂಟರ್ ಎಂದು ಇದನ್ನು ಪ್ರಾರಂಭ ಮಾಡಿದ್ದೇವೆ. ಯಾವುದೋ ಗಳಿಗೆಯಲ್ಲಿ ಆತ ತಪ್ಪು ಕೆಲಸ ಮಾಡಿದ್ದರೂ ಆತನನ್ನು ಒಳ್ಳೆಯವನನ್ನಾಗಿ ಮಾಡಲು ನಮ್ಮ ಇಲಾಖೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ಈ ಕೆಲಸವನ್ನು ಮಾಡುವ ಸಂದರ್ಭದಲ್ಲಿ ನಮಗೂ ಬಹಳ ಕಷ್ಟ ಇದೆ. ಇಲ್ಲ ಎಂದು ಹೇಳುವುದಿಲ್ಲ. ಈ ಸದನದಲ್ಲಿ ಕೆಲವು ಸದಸ್ಯರು ಜೀವಾವಧಿ ಶಿಕ್ಷೆಗೆ ಒಳಪಟ್ಟವರ ಬಗ್ಗೆ ಚರ್ಚೆ ಮಾಡಿದ್ದಾರೆ. ಮಾನ್ಯ ಕೌಜಲಗಿಯವರು ಒಂದು ಸಂದರ್ಭದಲ್ಲಿ ಮಾತನಾಡುತ್ತಾ ನಿಮ್ಮ ಜೈಲುಗಳಿಗೆ ಹೊರಗಿನಿಂದ ಖೈದಿಗಳನ್ನು ಕರೆದುಕೊಂಡು ಬರುತ್ತಿರುವುದರಿಂದ ಇಲ್ಲಿನ ವಾತಾವರಣ ಹೆಚ್ಚು ಕಡಿಮೆ ಆಗುತ್ತೆ ಎಂದು ಹೇಳಿದ್ದರು. ಆ ವಿಚಾರವನ್ನು ಮುಂದೆ ಪ್ರಸ್ತಾಪ ಮಾಡುತ್ತೇನೆ. ಇವತ್ತಿನ ದಿವಸ ನಮ್ಮ ಖೈದಿಗಳ ಸುಧಾರಣೆಗೋಸ್ಕರ ಅನೇಕ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಇವತ್ತು ದೇವನಹಳ್ಳಿಯಲ್ಲಿ ಬಯಲು ಬಂಧೀಖಾನೆ ಇದೆ. ಅದು ಇಡೀ ರಾಷ್ಟ್ರದಲ್ಲಿಯೇ ಹೆಸರುವಾಸಿಯಾಗಿದೆ. ಅಲ್ಲಿ ಸುಮಾರು 100 ಚಿಲ್ಲರೆ ಎಕರೆ ಜಮೀನು ಇದೆ. ನಮ್ಮ ಜೈಲುಗಳಲ್ಲಿ ಯಾರು ಯಾರು ಖೈದಿಗಳು 5 ವರ್ಷ ಕಾಲ ಉತ್ತಮ ನಡತೆ ಹೊಂದಿರುತ್ತಾರೆ ಅಂತಹವರನ್ನು ನಾವು ಬಯಲು ಬಂಧೀಖಾನೆಗೆ ಕಳುಹಿಸುತ್ತೇವೆ. ನಮ್ಮ ಈ ಓಪನ್ ಜೈಲ್ ಬಗ್ಗೆ ಒಂದು ಆರ್ಟಿಕಲ್ ಅನ್ನು ನಾನು ದೆಹಲಿಯಲ್ಲಿ ಇದ್ದಾಗ ನೋಡಿದೆ. ಈ ಓಪನ್ ಏರ್ ಜೈಲ್ ಬಗ್ಗೆ ಕುಂಕುಂ ಚಾಡ್ ಎನ್ನುವ ಒಬ್ಬ ಮಹಿಳೆ ತಮ್ಮ ಲೇಖನದಲ್ಲಿ ಈ ರೀತಿ ಬರೆದಿದ್ದಾರೆ:

> "The agriculture is the main activity in the open prison in Karnataka. The Koramangala Open Prison in Karnataka has done a commendable work in horticulture and agricultural development. High fodder crops are also grown and sheep rearing is taken up. The best..."

ಎಂದರೆ ಬಹಳ ಚೆನ್ನಾಗಿ ಖೈದಿಗಳ ಪರಿವರ್ತನೆ ಕೆಲಸವನ್ನು ಮಾಡುತ್ತಿದ್ದು, ಇಂತಹದ್ದು ಇಡೀ ರಾಷ್ಟ್ರದಲ್ಲೇ ಎಲ್ಲೂ ಇಲ್ಲ ಎಂದು ಬರೆದಿದ್ದಾರೆ. ಈ ರೀತಿ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ರಾಜೂಗೌಡರು ಮಾತನಾಡುವಾಗ ಸೆಕ್ಷನ್ 433(ಎ) ಬಗ್ಗೆ ಪ್ರಸ್ತಾಪ ಮಾಡಿ ಇದು ಸರಿಯಿಲ್ಲ ಎಂದು ಹೇಳಿದರು. ಈ ಬಗ್ಗೆ ಮಂತ್ರಿಗಳು ಆಶ್ವಾಸನೆಯನ್ನೂ ಸಹಾ ಕೊಟ್ಟಿದ್ದಾರೆಂದು ಹೇಳಿದರು. ಈ ವಿಚಾರದ ಬಗ್ಗೆ ಕೆಲವರು ಗಮನ ಸೆಳೆದ ಸೂಚನೆಯನ್ನೂ ಹಾಕಿ ಮೇಲ್ಮನೆ ಹಾಗೂ ಈ ಮನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸೆಕ್ಷನ್ 433(ಎ) ಬಗ್ಗೆ ನಾನು ಹಿಂದೆ ಈ ಸಭೆಯಲ್ಲಿ ಒಂದು ಆಶ್ವಾಸನೆ ಕೊಟ್ಟಿದ್ದು ಇದೆ. ಜೈಲು ವಾಸವನ್ನು 14 ರಿಂದ 10 ವರ್ಷಕ್ಕೆ ಇಳಿಸಬೇಕೆಂದು ಏನು ಪ್ರಸ್ತಾವನೆ ಇಟ್ಟಿದ್ದೆವು ಅದು ಈಗ ಕಾನೂನು ಇಲಾಖೆಯಲ್ಲಿ ಇದೆ. ಈ ವಿಚಾರವಾಗಿ ಅನೇಕ ಸಂಘಸಂಸ್ಥೆಗಳು ವಿಚಾರ ಇಟ್ಟಿದ್ದರಿಂದ ನಾನು ಸ್ವಲ್ಪ ಮುತುವರ್ಜಿ ವಹಿಸಿ ಈ ವರ್ಷವೇ ಇದನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡುವುದಕ್ಕೆ ಹೊರಟಿದ್ದೇನೆ. ಈ ಬಗ್ಗೆ ಕೆಲವು ಮಂತ್ರಿಗಳೂ ಕೂಡಾ ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೂ ಕೂಡಾ ಇದರ ಬಗ್ಗೆ ಚಿಂತನೆ ಮಾಡಿ ಎಂದು ಮಾನ್ಯ ನಜೀರ್ ಅಹಮದ್ ಅವರ ಪತ್ರದಲ್ಲಿ ಬರೆದು ಕಳುಹಿಸಿದ್ದಾರೆ. ನಾನು ಹೋದ ಸಭೆಯಲ್ಲಿ ಹೋದ ವರ್ಷ ಇದರ ಬಗ್ಗೆ ಚರ್ಚೆ ಮಾಡಿ ಇಲ್ಲಿ ಒಂದು ಹೇಳಿಕೆ ಕೊಟ್ಟಾದ ಮೇಲೆ 'ಪ್ರಜಾಮತ' ವಾರಪತ್ರಿಕೆಯಲ್ಲಿ ಇದರ ಬಗ್ಗೆ ಬಹಳ ವಿಶೇಷವಾಗಿ 2 ಪುಟಗಳಷ್ಟು ಬರೆದಿದ್ದಾರೆ.

ಅದರಲ್ಲಿ ಕೊಲೆ ಮಾಡಿದವರಿಗೆ ಜೀವಾವಧಿ ಶಿಕ್ಷೆ ಎಷ್ಟಿರಬೇಕೆನ್ನುವ ಬಗ್ಗೆ ಬರೆದಿದ್ದಾರೆ; ಅವರು ಏನೋ ಮಂತ್ರಿಯಾಗಿದ್ದಾರೆ, ಇನ್ನು ಯುವಕರಾಗಿದ್ದಾರೆ ಅವರಿಗೆ ಏನೂ ಗೊತ್ತಾಗುವುದಿಲ್ಲ ಇವರು ಮಂತ್ರಿಯಾಗಿ ಬಂದು ಜೀವಾವಧಿ ಶಿಕ್ಷೆಯನ್ನು 14 ವರ್ಷದಿಂದ 10 ವರ್ಷಕ್ಕೆ ಇಳಿಸಬೇಕೆಂದು ಹೊರಟಿದ್ದಾರೆ. ಇನ್ನು ಬೇರೆ ಯಾರೋ ಒಬ್ಬರು ಬರುತ್ತಾರೆ ಅವರು 10 ವರ್ಷದಿಂದ 5 ವರ್ಷಕ್ಕೆ ಇಳಿಸಬೇಕೆಂದು ಪ್ರಯತ್ನ ಮಾಡುತ್ತಾರೆಂದು ಕ್ರಿಟಿಸೈಜ್ ಮಾಡಿ ಬರೆದಿದ್ದಾರೆ. ಅವರು ಬರೆದಿರುವುದರಲ್ಲಿ ಒಂದನ್ನು ಹೇಳುತ್ತೇನೆ ಕೇಳಿ. "ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಇರಬೇಕು, ಮರಣದಂಡನೆ ಇರಬೇಕು; ಆದರೆ ಅದು ಕಡ್ಡಾಯವಾಗಬಾರದು. ಜೀವಾವಧಿ ಶಿಕ್ಷೆಯನ್ನು ಇಳಿಸಿ ಬಿಟ್ಟರೆ ಕೊಲೆಗಡುಕರು ಕೊಲೆಗಾರರ ಸಂಖ್ಯೆ ಹೆಚ್ಚಾಗುವುದು. ಕೊಲೆಗಳನ್ನು ನಡೆಸಲು ಬಾಡಿಗೆ ಕೊಲೆಗಾರರನ್ನು ಇಟ್ಟುಕೊಳ್ಳಲು ಅನುಕೂಲವಾಗುತ್ತದೆ. ಜೀವಾವಧಿ ಶಿಕ್ಷೆಯನ್ನು 10 ವರ್ಷಗಳಿಗೆ ಇಳಿಸಿಬಿಟ್ಟರೆ ಅಪಹಾಸ್ಯಕರವಾಗಿ ಸಮಾಜದಲ್ಲಿ ಅಪರಾಧಿಗಳು ಜಾಸ್ತಿಯಾಗುತ್ತಾರೆ. ಇದು ಅಪರಾಧಿಗಳಿಗೆ ಸಹಾಯವಾಗುತ್ತದೆ. "It is nothing but indirectly encouraging a class of bandicoots" ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ. "ಹಿಂದೆ ಯಾವುದಾದರೂ ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿ ತಪ್ಪು ಮಾಡಿ ಅಪರಾಧಿ ಅನಿಸಿದರೂ ಸಮಾಜ ಅವನಿಗೆ ಬಹಿಷ್ಕಾರ ಹಾಕುತ್ತದೆ. ಈ ಹಂತದಲ್ಲಿ ಯಾವುದೇ ಬಹಿಷ್ಕಾರ ಅಪರಾಧಿಗಳಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸುತ್ತದೆ. ಸರ್ಕಾರವೇ ಉಚಿತ ವಕೀಲಿಯನ್ನು ಕಲ್ಪಿಸುತ್ತದೆ. ಕಾನೂನಿಗೆ ತಿದ್ದುಪಡಿಯನ್ನು ತಂದು ಜೀವಾವಧಿ ಶಿಕ್ಷೆಯನ್ನು ಇಳಿಸಿದರೆ ಈಗಿರುವ ಭಯ ಹೊರಟು ಹೋಗುತ್ತದೆ. "Apparently the Minister had made the statement without application of his mind", ಹೀಗೆ ಅನೇಕ ಸಂದರ್ಭಗಳಲ್ಲಿ ಬೇರೆ ಪತ್ರಿಕೆಗಳಲ್ಲಿ ಮತ್ತೊಂದು ಪತ್ರಿಕೆಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದಾರೆ. ಆದರೆ ಕೇರಳ ಸರ್ಕಾರದಲ್ಲಿ ಹೋದ ವರ್ಷ ಈವೊಂದು ಕಾಯಿದೆ ಅಡಿಯಲ್ಲಿ ಆರ್ಟಿಕಲ್ 161ರ ಪ್ರಕಾರ 14 ವರ್ಷಗಳಿಂದ 10 ವರ್ಷಗಳಿಗೆ ಜೀವಾವಧಿ ಶಿಕ್ಷೆಯನ್ನು ಇಳಿಸಬೇಕೆಂದು ಹೇಳಿ ಖೈದಿಗಳನ್ನು ಬಿಟ್ಟಿರತಕ್ಕದ್ದು ನಮ್ಮ ಸರ್ಕಾರದ ಗಮನಕ್ಕೆ

ಬಂದಿದೆ. ಅನೇಕ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಮೊನ್ನೆ ತಮಿಳುನಾಡು ಮುಖ್ಯಮಂತ್ರಿ ಶ್ರೀಮತಿ ಜಯಲಲಿತಾರವರ ಹುಟ್ಟಿದ ಹಬ್ಬದ ಪ್ರಯುಕ್ತ ಕೆಲವು ಖೈದಿಗಳನ್ನು ಬಿಟ್ಟಿದ್ದಾರೆ. ಮಹಿಳೆಯರು ಮತ್ತು ಗಂಡಸರನ್ನು ಬಿಟ್ಟಿದ್ದಾರೆ. ಎಲ್ಲರನ್ನೂ ಬಿಟ್ಟಿದ್ದಾರೆ. ನಾವು ಈ ವಿಚಾರದಲ್ಲಿ ಏನಾದರು ಸಹಾಯ ಮಾಡುವುದಕ್ಕೆ ಆಗುತ್ತದೆಯೇ ಎಂದು ಅಲ್ಲಿಂದ ಆಜ್ಞೆಯನ್ನು ಟೆಲೆಕ್ಸ್ ಮುಖಾಂತರ ತರಿಸಿದ್ದೇನೆ. ಅವರು ಸಹ ನಮ್ಮ ಹಾಗೆ ಚಿಂತನೆ ಮಾಡಿದ್ದಾರೆ. ಏನು ಮಾಡಬೇಕೆಂದು ಹೇಳಿ ಕೊನೆಗೆ ಅವರು ಸಹಾಯ ಮಾಡುವುದಕ್ಕೆ ಆಗಿಲ್ಲ. Under Article 161 - the powers of the Governor to grant pardon ಆ ಪ್ರಕಾರ ಸುಮಾರು ಇನ್ನೂರು ಚಿಲ್ಲರೆ ಜನರನ್ನು ಬಿಟ್ಟಿದ್ದಾರೆ. ನಾನು ಈವೊಂದು ಅಧಿವೇಶನದಲ್ಲಿಯೇ ನಮ್ಮ ಲೋಕಲ್ ಕಾನೂನಿಗೆ ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಪಡುತ್ತೇನೆ. ಅನೇಕ ಮಾನ್ಯ ಸದಸ್ಯರು ಈ ವಿಚಾರದಲ್ಲಿ ನನಗೆ ಪತ್ರಗಳನ್ನು ಬರೆದಿದ್ದಾರೆ. ನಾನು ಮಾನ್ಯ ಸದಸ್ಯರುಗಳಿಗೆ ಮತ್ತು ರಾಜ್ಯದ ಜನತೆಗೆ ತಿಳಿಸುವುದಕ್ಕೆ ಬಯಸುತ್ತೇನೆ. ಏನೆಂದರೆ, ಈ ಬಗ್ಗೆ ತಿದ್ದುಪಡಿಯನ್ನು ತರುತ್ತೇನೆಂದು. ಇದಕ್ಕೆ ದೆಹಲಿಗೆ ಬರೆದು ಅನುಮತಿಯನ್ನು ಪಡೆಯಬೇಕಾಗಿದೆ. ನಮ್ಮ ರಾಜ್ಯದಲ್ಲಿಯೂ ಸಹ ರಾಜ್ಯಪಾಲರ ಶಿಫಾರಸ್ಸಿನ ಮೇಲೆ ಅನುಮತಿಯನ್ನು ಪಡೆದುಕೊಂಡು ಮಾಡಿಕೊಳ್ಳಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನಮ್ಮ ಅನೇಕ ಜೈಲುಗಳನ್ನು ಭದ್ರತಾ ಜೈಲುಗಳನ್ನಾಗಿ ಮಾಡಬೇಕೆಂದು ಹೊರಟಿದ್ದೇವೆ. ಬಳ್ಳಾರಿ, ಬೆಳಗಾಂ ಜೈಲುಗಳಲ್ಲಿ ಈಗಾಗಲೇ ನಾವು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರ ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ನಮ್ಮ ಸರ್ಕಾರ 50 ಲಕ್ಷ ರೂಪಾಯಿಗಳನ್ನು ಹಾಕಿ, ಫಿಫ್ಟಿ ಫಿಫ್ಟಿ ಹಾಕಿಕೊಂಡು ನಾವು ಕೆಲಸವನ್ನು ಮಾಡಿದ್ದೇವೆ. 90 ಲಕ್ಷ ರೂಪಾಯಿ ಹಣವನ್ನು 100 ಪರ್ಸೆಂಟ್ ಗ್ರ್ಯಾಂಟ್‌ಗೆ ಕೊಟ್ಟಿದ್ದೇವೆ. ಬೆಳಗಾಂ ಮತ್ತು ಬಳ್ಳಾರಿ ಜೈಲುಗಳಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. High Security Prison ಪರಿವರ್ತನೆ ಮಾಡಿ ಆ ಕೆಲಸವನ್ನು ಬಹಳ ಚುರುಕಾಗಿ ಮಾಡುತ್ತಿದ್ದೇವೆ. ಈವೊಂದು ವಿಚಾರವನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೌಜಲಗಿಯವರು ಒಂದು ಪ್ರಶ್ನೆಯನ್ನು ಹಾಕಿ high security jail ಬೆಂಗಳೂರು ಜೈಲಿಗೆ ಟೆರರಿಸ್ಟ್‌ಗಳನ್ನು ಕರೆದುಕೊಂಡು ಬರುತ್ತೀರಾ ಎಂದು ಪ್ರಶ್ನೆಯನ್ನು ಹಾಕಿದ್ದರು. ದಯವಿಟ್ಟು ಇದರ ಬಗ್ಗೆ ಹೆಚ್ಚು ಚರ್ಚೆ ಬೇಡವೆಂದು ಅವರಲ್ಲಿ ನಾನು ಮನವಿ ಮಾಡಿಕೊಂಡಿದ್ದೆ. ನಾನು ಏತಕ್ಕೆ ಮನವಿ ಮಾಡಿಕೊಂಡೆ ಅಂದರೆ, ಅದರ ಬಗ್ಗೆ ಚರ್ಚೆ ಮಾಡುತ್ತಾ ಹೋದರೆ ನಾವು ಕೆಲವು ಸಂದರ್ಭಗಳಲ್ಲಿ ಗುಟ್ಟನ್ನು ಕಾಪಾಡಬೇಕಾಗುತ್ತದೆಂದು ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಎಂತಹ ಸಂದರ್ಭದಲ್ಲಿಯಾದರೂ ಏನೇ ಒತ್ತಡವಿದ್ದರೂ ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ಟೆರರಿಸ್ಟ್‌ಗಳನ್ನು ಕರೆದುಕೊಂಡು ಬಂದು ಇಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಮನವಿ ಮಾಡಿಕೊಳ್ಳುತ್ತಾರೆ. ನಮ್ಮ ರಾಜ್ಯವನ್ನು ಎಕ್ಸೆಮ್‌ಷನ್ ಮಾಡಬೇಕೆಂದು ನಾವು ಈಗಾಗಲೇ ಮನವಿ ಮಾಡಿಕೊಂಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಟೆರರಿಸ್ಟ್‌ಗಳನ್ನು ಇಟ್ಟುಕೊಳ್ಳುವ ಪರಿಸ್ಥಿತಿ ಬರುತ್ತದೆ. ನಮ್ಮ ರಾಜ್ಯದಲ್ಲಿ ಟೆರರಿಸ್ಟ್‌ಗಳನ್ನು ಹಿಡಿದಿದ್ದರೆ ನಮ್ಮ ಪೋಲೀಸ್‌ನವರು ಅವರನ್ನು ಬಂಧಿಸಿದ್ದರೆ ಅಂತಹವರನ್ನು ಮಾತ್ರ ನಾವು ಇಟ್ಟಿದ್ದೇವೆ. ಕಾನೂನು ಪ್ರಕಾರ ಅವರು ಕೋರ್ಟಿಗೆ ಹೋದ ನಂತರ ಏನು ಆಗುತ್ತದೋ ಅದು ಅವರ ಪಾಡು. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. Until some one has been caught in our State ಹೊರಗಡೆಯವರಿಗೆ ಮಾತ್ರ ನಾವು ಅವಕಾಶ ಕೊಡವುದಿಲ್ಲ. ನಮ್ಮ ರಾಜ್ಯದಲ್ಲಿ ಹಿಡಿದವರನ್ನು ಪೋಲೀಸರು ಜೈಲಿಗೆ ಕಳುಹಿಸಿದಾಗ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ನಮ್ಮ ಬೆಂಗಳೂರು ಜೈಲನ್ನು ಬೇರೆಡೆಗೆ ಶಿಫ್ಟ್ ಮಾಡುವ ವಿಚಾರದಲ್ಲಿ ಇಲ್ಲಿ ಮತ್ತು ಆ ಮನೆಯಲ್ಲಿ ಕೂಡ ಇದನ್ನು ಇನ್ನೂ ಮಾಡಿಲ್ಲವೆಂದು ಪ್ರಶ್ನೆ ಹಾಕಿದ್ದರು.

ಇದು ನಮಗೆ ಅರ್ಥವಾಗುತ್ತದೆ. 1979ರಲ್ಲಿ ಈ ಜೈಲನ್ನು ಶಿಫ್ಟ್ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿ 2-3 ಕೋಟಿ ರೂಪಾಯಿಗಳಲ್ಲಿ ಈ ಕೆಲಸ ಆಗುತ್ತದೆ ಎಂದು ಹೇಳಿದರು. ಇದುವರೆಗೆ ಮುಕ್ಕಾಲುಭಾಗ ಕೆಲಸ ಆಗಿದೆ. ಇನ್ನೂ ಬಹಳ ಕೆಲಸ ಆಗಬೇಕಾಗಿದೆ. ಇಲ್ಲಿ ಏನು ಜೈಲು ಇದೆ. ಅದು 17 ಎಕರೆಯಷ್ಟು ಜಾಗದಲ್ಲಿದೆ. ನಗರದ ಮಧ್ಯಭಾಗದಲ್ಲಿರುವ ಈ ಜೈಲಿನಲ್ಲಿ ಸೆಕ್ಯುರಿಟಿ ಕಡಿಮೇನೇ ಇದೆ. ಅಕ್ಕಪಕ್ಕದಲ್ಲಿ ಗೋಡೆಗಳು. ಬಹಳ ದೊಡ್ಡ ಬಿಲ್ಡಿಂಗ್‌ಗಳು ಆಗಿವೆ. ಮಾರಕವಸ್ತುಗಳನ್ನು ಎಸೆಯುತ್ತಾರೆ, ಗಾಂಜಾ ಎಸೆಯುತ್ತಾರೆ, ರಮ್ ಬಾಟಲ್ ಎಸೆಯುತ್ತಾರೆ. ಅರಾಕ್ ಪ್ಯಾಕೆಟ್‌ಗಳನ್ನು ಹೊರಗಡೆಯಿಂದ ಎಸೆಯುತ್ತಾರೆ. ಇದರಿಂದ ಬಹಳ ತೊಂದರೆಯಾಗಿದ ಕೆಲವು ಸಂದರ್ಭದಲ್ಲಿ ನಾವು ವೆಪನ್ಸ್ ಕೂಡ ಸೀಜ್ ಮಾಡಿದ್ದೇವೆ. ನಮಗೆ ಸೆಕ್ಯುರಿಟಿ ಕಾಪಾಡುವುದು ಕಷ್ಟವಾಗುತ್ತಿದೆ. ಇದನ್ನು ಶೀಘ್ರ ಸ್ಥಳಾಂತರ ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡಿ 12-13 ವರ್ಷಗಳಿಂದ ಈ ಕೆಲಸ ನಡೆದಿದೆ. ಹಿಂದೆ 11 ಕೋಟಿ ವೆಚ್ಚದಲ್ಲಿ ಈ ಕೆಲಸ ಆಗಬಹುದು ಎಂದು ಎಸ್ಟಿಮೇಟ್ ಬಂದಿತ್ತು. ಈಗ ಬಹುಶಃ 20 ಕೋಟಿಗೆ ಹೋಗುತ್ತದೋ ಏನೋ ಗೊತ್ತಿಲ್ಲ. ಒಂದು ಅಡ್ಮಿನಿಸ್ಟ್ರೇಟಿವ್ ಬ್ಲಾಕ್ ಮಾಡಬೇಕು ಮತ್ತು ಗೇಟ್ ಹಾಕಬೇಕು. ಈಗ 121 ಸ್ಟಾಫ್‌ಗೋಸ್ಕರ ಕ್ವಾರ್ಟರ್ಸ್ ಸಿದ್ಧವಾಗಿದೆ. ಸ್ಟಾಫ್‌ನ್ನು ಆದಷ್ಟು ಬೇಗ ಶಿಫ್ಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಸ್ಟಾಫನ್ನು ಕಳಿಸಿದ ನಂತರ ವರ್ಷಕ್ಕೆ 5 ಲಕ್ಷ ರೂಪಾಯಿ ನಮ್ಮ ಇಲಾಖೆಗೆ ಉಳಿತಾಯವಾಗುತ್ತದೆ. ಇದಲ್ಲದೆ ಇದು ಬೆಂಗಳೂರಿನ ಹೊರಗಡೆ ಇರುವುದರಿಂದ ನೀರಿನ ಸಮಸ್ಯೆ ಕೂಡ ಇದೆ. ಇದು ಗ್ರೀನ್‌ಬೆಲ್ಟ್‌ನಲ್ಲಿ ಇರುವುದರಿಂದ ನೀರು ಕೊಡುವುದಕ್ಕೆ ಆಗುವುದಿಲ್ಲ ಎನ್ನುತ್ತಾರೆ. ಮೊನ್ನೆ ನಾನು ಶ್ರೀ ಜಾರ್ಜ್‌ರವರಿಗೆ ಮನವಿ ಮಾಡಿಕೊಂಡೆ. ಅವರು ಈ ವಿಚಾರದಲ್ಲಿ ನಾಳೆ ಬೆಳಿಗ್ಗೆ ಒಂದು ಮೀಟಿಂಗ್‌ನ್ನು ಕರೆದಿದ್ದಾರೆ. ಅನುಮತಿ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ನಾಳೆ 50 ಲಕ್ಷ ರೂಪಾಯಿ ಹಣ ತುಂಬುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಶ್ರೀ ಜಾರ್ಜ್‌ರವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ. ಅವರು ಜೈಲಿಗೆ ನೀರು ಕೊಟ್ಟ ತಕ್ಷಣವೇ ನಾವು ಸಿಬ್ಬಂದಿಯನ್ನು ಅಲ್ಲಿಗೆ ಹಾಕಿ, ಈ ಗೋಡೆ ಮತ್ತು ಅಡ್ಮಿನಿಸ್ಟ್ರೇಟಿವ್ ಬ್ಲಾಕ್ ಆದಕೊಡಲೇ ಈ ಜೈಲನ್ನು ಅಲ್ಲಿಗೆ ವರ್ಗ ಮಾಡುತ್ತೇವೆ. ಕೆಲವರು ಇದನ್ನು ಇನ್ನು ಎಷ್ಟು ವರ್ಷಗಳಲ್ಲಿ, ಎಷ್ಟು ತಿಂಗಳಲ್ಲಿ ಮಾಡುತ್ತೀರಿ ಎಂದು ಕೇಳಿದ್ದಾರೆ. ಆದಷ್ಟು ಬೇಗ ಜರೂರಾಗಿ ಈ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾ. ಸಿಬ್ಬಂದಿ ಬಗ್ಗೆ ನಮ್ಮಲ್ಲಿ ಬಹಳ ಕೊರತೆ ಇದೆ. ಸುಮಾರು 1488 ಹುದ್ದೆಗಳು ನಮ್ಮ ಇಲಾಖೆಯಲ್ಲಿವೆ. ಅವರಲ್ಲಿ 1135 ಜನರು ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೂ 355 ಹುದ್ದೆಗಳು ಖಾಲಿ ಇವೆ. ಈಗಿನ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಂಡಿದ್ದಕ್ಕೆ ಈ ಹುದ್ದೆಗಳನ್ನು ತುಂಬಲು ಅನುಮತಿಯನ್ನು ಕೊಟ್ಟಿದ್ದಾರೆ. 117 ಹುದ್ದೆಗಳನ್ನು ತುಂಬಲಿಕ್ಕೆ ರಿಕ್ರೂಟ್‌ಮೆಂಟ್ ಕಮಿಟಿ ಮಾಡಿ ಸರ್ಕಾರ 6.3.92ರಲ್ಲಿ ಒಂದು ಆದೇಶ ಹೊರಡಿಸಿದೆ. ಬಹುಶಃ ಇನ್ನು ಒಂದು-ಒಂದೂವರೆ ತಿಂಗಳಲ್ಲಿ ಈ 117 ಹುದ್ದೆಗಳನ್ನು ತುಂಬುತ್ತೇವೆ. ಮಾತ್ರವಲ್ಲ ಮಿಕ್ಕ ಖಾಲಿ ಇರುವ ಹುದ್ದೆಗಳನ್ನು ಈ ವರ್ಷದಲ್ಲಿ ತುಂಬುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅನೇಕ ಸುಧಾರಣೆಗಳ ಬಗ್ಗೆ, ವಿದ್ಯಾಭ್ಯಾಸದ ಬಗ್ಗೆ ಹೇಳಿದ್ದಾರೆ. ಮಾನ್ಯ ಶ್ರೀ ಶಿವರಾಮೇಗೌಡರು ಮಾತನಾಡುತ್ತಾ. ಅವರಿಗೆ ಸರಿಯಾದ ಟ್ರೈನಿಂಗ್ ಕೊಡಬೇಕು. ವಿದ್ಯಾಭ್ಯಾಸ ಸೌಕರ್ಯ ಕೊಡಬೇಕೆಂದು ಹೇಳಿದರು. ನಾವು ಕೂಡ ಅಲ್ಲಿ ಒಳಗಡೆ ಸೆಂಟ್ರಲ್ ಪ್ರಿಸನ್‌ನಲ್ಲಿ ವಿದ್ಯಾ ಇಲಾಖೆಯಿಂದ ಶಾಲೆಗಳನ್ನು ನಡೆಸುತ್ತಿದ್ದೇವೆ. ಅವರಿಗೆ ಅನೇಕ ಸಂದರ್ಭದಲ್ಲಿ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಅಂಕಿಅಂಶಗಳ ಪ್ರಕಾರ ವರ್ಷದಲ್ಲಿ ಮುನ್ನೂರು ಚಿಲ್ಲರೆ ಜನರಿಗೆ ಹೊರಗಡೆಯಿಂದ, ಕೆಲವರಿಗೆ ಒಳಗಡೆಯಿಂದಲೇ ಪರೀಕ್ಷೆಗೆ ಅವಕಾಶವನ್ನು ನಾವು ಮಾಡಿಕೊಟ್ಟಿದ್ದೇವೆ. ಈ ವರ್ಷ ಕೆಲವರು ಡಿಗ್ರಿಯನ್ನೂ ಸಹ ಮಾಡಿದ್ದಾರೆ. ಗುಲ್ಬರ್ಗಾದಲ್ಲಿ

ಒಬ್ಬರು ಎಂ.ಎ. ಡಿಗ್ರಿ ಮಾಡಿದ್ದಾರೆ. ಆರೇಳು ಜನ ಹಿಂದಿ ಪರೀಕ್ಷೆ ಪಾಸು ಮಾಡಿದ್ದಾರೆ. ಮತ್ತು ನೂರಾರು ಜನರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ್ದಾರೆ. ಅವರಲ್ಲಿ ಕೆಲವರು ಪಾಸ್ ಆಗಿದ್ದಾರೆ ಮತ್ತು ಕೆಲವರು ಫೇಲ್ ಆಗಿದ್ದಾರೆ. ಅವರಿಗೆ ಸರಿಯಾದ ಅವಕಾಶ ಮಾಡಿಕೊಡಬೇಕೆಂದು ಇಂದಿರಾಗಾಂಧಿ ಓಪನ್ ಯೂನಿವರ್ಸಿಟಿ ವತಿಯಿಂದ ಒಂದು ಸೆಂಟರ್‌ನ್ನು ಅಲ್ಲಿಯೇ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅನೇಕ ಒಳಗಡೆ ಇರುವ ಕೈದಿಗಳು ಇದರ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ಅಲ್ಲಿಯ ಕೇಂದ್ರದ ರೀಜನಲ್ ಡೈರೆಕ್ಟರ್‌ರವರು ಬಂದಿದ್ದರು. ವೈಸ್ ಛಾನ್ಸಲರ್‌ನ್ನು ನಾನು ಭೇಟಿ ಮಾಡಿ ಈ ವಿಚಾರದಲ್ಲಿ ಚರ್ಚೆ ಮಾಡಿದ್ದೇನೆ. ಈ ರೀತಿಯ ಕೇಂದ್ರ ಇಡೀ ದೇಶದಲ್ಲಿಯೇ ಮೊದಲನೆಯದು ಎಂದು ಅವರು ಬಹಳ ಸಂತೋಷಪಟ್ಟರು. ಬಹುಶಃ ಅದಕ್ಕೆ ಧಾರವಾಡದಲ್ಲಿ ಜಾಗ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಜಾಗ ಕೊಡುತ್ತೇವೆ ಎಂದು ಮೋರೆಯವರು ಹೇಳುತ್ತಿದ್ದಾರೆ. ಇಲ್ಲ, ನಾವು ಜೈಲಿನೊಳಗೇ ಮಾಡುತ್ತೇವೆ. ಹೊರಗಡೆ ಇದ್ದರೆ ಯಾರಾದರೂ ತಪ್ಪಿಸಿಕೊಂಡು ಹೋದರೆ ಮಾರನೇ ದಿವಸವೇ ನನಗೆ ರಾಜೀನಾಮೆ ಕೊಡಿ ಎಂದು ಹೇಳಿಬಿಡುತ್ತೀರಿ. ಆದ್ದರಿಂದ ನಮ್ಮ ಕರ್ತವ್ಯ ನಾವು ಮಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಇರುವವರೆಗೆ ಯಾರೂ ತಪ್ಪಿಸಿಕೊಳ್ಳುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಸೆಂಟ್ರಲ್ ಪ್ರಿಸನ್‌ನಲ್ಲಿ ಇದು ಆಗಬೇಕು. ಈ ಕೆಲಸ ನಾವು ಮಾಡುತ್ತೇವೆ. ಇದಕ್ಕೆ ಖರ್ಚು ಕೂಡ ಕಡಿಮೆ ಆಗುತ್ತದೆ. ನಮ್ಮಲ್ಲೇ ಪೀಠೋಪಕರಣಗಳನ್ನು ತಯಾರು ಮಾಡುತ್ತೇವೆ. ನಮಗೆ ಸ್ವಲ್ಪ ಕಡಿಮೆ ವೆಚ್ಚದಲ್ಲಿ ಅದು ಆಗುತ್ತದೆ. ಇದಕ್ಕೆ ಅವರೂ ಕೂಡ ಸಹಕಾರ ನೀಡುತ್ತಾರೆ. ಸೆಂಟರ್ ಓಪನ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಅವರು ಒಪ್ಪಿರುವುದರಿಂದ, ನಾವು ಈ ಕೆಲಸವನ್ನು ಮಾಡುತ್ತೇವೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ನಮ್ಮ ಮಹಾನಿರೀಕ್ಷಕರ ಕಚೇರಿಯನ್ನು ಹೊಸ ಕಟ್ಟಡಕ್ಕೆ ಹಾಕಿದ್ದೇವೆ. ಹಿಂದೆ ಗಾಂಧಿನಗರದಲ್ಲಿರತಕ್ಕ ಒಂದು ಹಳೆಯ ಮನೆಯಲ್ಲಿ ಕಚೇರಿ ನಡೆಯುತ್ತಿತ್ತು. ಈಗ ಮಹಾರಾಣಿ ಕಾಲೇಜ್ ಪಕ್ಕದಲ್ಲಿ ಒಂದು ಒಳ್ಳೆಯ ಕಟ್ಟಡ. ಯಾರಾದರೂ ಪ್ರಿಸನ್ ಡಿಪಾರ್ಟ್‌ಮೆಂಟ್ ಕಟ್ಟಡ ಎಂದು ಹೇಳಿದರೆ ಸ್ವಲ್ಪ ನಮಗೆ ಗೌರವ ಸಿಗುವಂಥ ಕಟ್ಟಡಕ್ಕೆ ಹಾಕಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರೇ ಬಂದು ಈ ಕಟ್ಟಡದ ಉದ್ಘಾಟನೆಯನ್ನು ಸಂತೋಷದಿಂದ ನೆರವೇರಿಸಿಕೊಟ್ಟಿದ್ದಾರೆ. ಅಲ್ಲಿ ಕೆಲಸ ಜರೂರಾಗಿ ನಡೆಯುತ್ತಿದೆ. ಇದಾದ ನಂತರ, ಅನೇಕ ಕಡೆ ಜೈಲು ಕಟ್ಟಡಗಳ ಕೆಲಸ ತೆಗೆದುಕೊಂಡಿದ್ದೇವೆ. ಈ ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಮತ್ತು ತಮಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಏನೆಂದರೆ, ಸದ್ಯಕ್ಕೆ ~~ಹೊಸದಾಗಿ ಈ~~ ವರ್ಷ ಜೈಲುಗಳನ್ನು ಪ್ರಾರಂಭ ಮಾಡುವ ಹಂತದಲ್ಲಿ ನಾವಿಲ್ಲ. ಏನಾದರೂ ಅಕ್ವಿಸಿಷನ್ ~~ಪ್ರೊಸೀಡಿಂಗ್ಸ್~~ ಮತ್ತೊಂದು ಇದೆ ಎಂದರೆ ನಾವು ಮಾಡುತ್ತೇವೆ. ಹೊಸ ಕಟ್ಟಡ ಪ್ರಾರಂಭ ಮಾಡುವುದಕ್ಕೆ ನಾವು ತಯಾರಿಲ್ಲ. ಹಾಲಿ ನಾವು ಮಾಡಿರತಕ್ಕ ಕಟ್ಟಡಗಳ ಅರ್ಧ, ಅರ್ಧಕ್ಕೆ ನಿಂತಿವೆ. ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು, ಚಿಕ್ಕಮಗಳೂರು ಜೈಲು ಬಗ್ಗೆ ಸ್ವಲ್ಪ ಹೇಳಿ ಎಂದು ಕೇಳಿದ್ದರು. ಅವರ ಜೈಲ್ ಕಟ್ಟಡದ ಕೆಲಸ ತೆಗೆದುಕೊಂಡು 10-12 ವರ್ಷವಾಗಿದೆ, ಇನ್ನೂ ಕಾಂಪೌಂಡ್ ವಾಲ್ ಮುಗಿದಿಲ್ಲ. ಪಾಪ ಅವರು ಹೇಳುವುದರಲ್ಲಿ ಸತ್ಯಾಂಶ ಇದೆ. ಈಗ ಎಲ್ಲೆಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ಅವುಗಳ ಕೆಲಸ ಮೊದಲು ಪೂರ್ಣವಾಗಬೇಕಾಗಿದೆ. ಅನಂತರ, ನಮ್ಮ ಸ್ಟಾಫ್ ಕ್ವಾರ್ಟರ್ಸ್ ಬಗ್ಗೆಯೂ ಚಿಂತನೆ ಮಾಡಬೇಕಾಗಿದೆ. ಬಹಳ ವರ್ಷಗಳಿಂದ ಸ್ಟಾಫ್ ಕ್ವಾರ್ಟರ್ಸ್ ಎಲ್ಲಿಯೂ ರಿಪೇರಿ ಆಗಿಲ್ಲ. ಈ ದೃಷ್ಟಿಯಿಂದ ಸ್ಟಾಫ್ ಕ್ವಾರ್ಟರ್ಸ್ ರಿಪೇರಿ ಮತ್ತು ಎಲ್ಲಿ ಕಟ್ಟಡದ ಕೆಲಸ ಪ್ರಾರಂಭ ಮಾಡಿದ್ದೇವೆ.

ಆ ಕೆಲಸವನ್ನು ಪೂರ್ಣ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅನೇಕ ಹೊಸ ಹುದ್ದೆಗಳ ವಿಚಾರದ ಬಗ್ಗೆ ಈಗಾಗಲೇ ತಮಗೆ ಹೇಳಿದ್ದೇನೆ. ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನ ಪಡುತ್ತೇನೆ. ಮತ್ತು ಮಹಾರಾಜರು 1924ರಲ್ಲಿ ಖೈದಿಗಳ ಪರಿವರ್ತನೆಗೋಸ್ಕರ. ಇದಾದನಂತರ ಏನಾದರೂ ಉದ್ಧಾರವಾಗಲಿ ಎಂದು ಗಾಂಧಿನಗರದಲ್ಲಿ ಸುಮಾರು 180 × 200 ಅಡಿ ಜಾಗವನ್ನು ದಾನ ಮಾಡಿದ್ದರು. ಇದರ ಬೆಲೆ ಇವತ್ತು ಎರಡು ಮೂರು ಕೋಟಿ ರೂಪಾಯಿಗಳಾಗುತ್ತದೆ. ಇದು ಯಾವುದೋ ಸಮಾಜಘಾತುಕರ ಕೈಯಲ್ಲಿ ಸೇರಿಕೊಂಡಿತ್ತು. ನಾನು ಬಂದ ತಕ್ಷಣ ಕೆಲವು ಪತ್ರಕರ್ತರು ಬಂದು ಆ ಜಾಗವನ್ನು ತಮಗೆ ಮಾಡಿಸಿಕೊಡಿ ಎಂದು ಕೇಳಿದರು. ನಾನು ಸ್ವಲ್ಪ ಗಾಬರಿಗೊಂಡೆ, ತಕ್ಷಣ ನಾನು, ಅವರನ್ನೂ ಕರೆದುಕೊಂಡು ಹೋಗಿ, ಆ ಜಾಗವನ್ನು ನೋಡಿದಾಗ, ಅಲ್ಲಿ ಬಹಳ ದೊಡ್ಡ, ದೊಡ್ಡ ಜನ ಸೇರಿಕೊಂಡಿರುವುದನ್ನು ನೋಡಿದಾಗ, ನನಗೆ ಗಾಬರಿ ಉಂಟಾಗತಕ್ಕ ಪರಿಸ್ಥಿತಿ ಬಂತು, ತಕ್ಷಣ ನಮ್ಮ ಅಧಿಕಾರಿಗಳನ್ನು ಕರೆದು ಮಾತನಾಡಿ ಅದನ್ನು ಸೂಪರ್‌ಸೀಡ್ ಮಾಡಿ, ಈಗ ನಮ್ಮ ಡಿ.ಸಿ.ಪಿ. ರಾಮಮೂರ್ತಿಯವರನ್ನು ಅಡ್ಮಿನಿಸ್ಟ್ರೇಟರ್ ಆಗಿ ಹಾಕಿ, ನಮ್ಮ ಪೋಲೀಸ್ ಇಲಾಖೆಯ ಅನುಮತಿ ಪಡೆದು, ನಾವು ಪೂರ್ಣವಾಗಿ ಕಟ್ಟಡವನ್ನು ವಶಪಡಿಸಿಕೊಂಡಿದ್ದೇವೆ.

ಶ್ರೀ ದಯಾನಂದರಾವ್ : ಅಲ್ಲಿ ಇನ್ನೂ ಯಾರೂ ಜಾಗ ಖಾಲಿ ಮಾಡಿಲ್ಲ ...

ಶ್ರೀ ಡಿ.ಕೆ. ಶಿವಕುಮಾರ್ : ಒಬ್ಬರೋ, ಇಬ್ಬರೋ ಇದ್ದಾರೆ. ಅವರು ಕೋರ್ಟಿಗೆ ಹೋಗಿದ್ದಾರೆ, ಆ ಬಗ್ಗೆ ನಾವು ಮಾತನಾಡುವುದಕ್ಕಾಗುವುದಿಲ್ಲ. ತಾವು ದಯಮಾಡಿ , ನನ್ನ ಜೊತೆ ಬರಬೇಕು. ಅದು ತಮ್ಮ ಕ್ಷೇತ್ರವೇ, ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ನರಸಿಂಹಮೂರ್ತಿಯವರು ಹೋಟೆಲ್‌ಗೆ ಕರೆಯುತ್ತಾರೆ, ನೀವು ಜೈಲಿಗೆ ಕರೆಯುತ್ತೀರಿ, ನಾವು ಎಲ್ಲೆಲ್ಲಿಗೆ ಎಂದು ಹೋಗುವುದು.

ಉಪಾಧ್ಯಕ್ಷರು : ಬೆಳಿಗ್ಗೆ ಹೋಟಲಿಗೆ ಹೋಗಿ, ಮಧ್ಯಾಹ್ನ ಜೈಲಿಗೆ ಹೋಗಿ ...

ಶ್ರೀ ಡಿ.ಕೆ. ಶಿವಕುಮಾರ್ : ಆ ಒಂದು ಸೊಸೈಟಿ ಏನಿದೆ. ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆ. ಆ ಆಸ್ತಿ ಬಗ್ಗೆ ಮುಖ್ಯಮಂತ್ರಿಗಳಿಗೆ ಏನಾದರೂ ಮಾಡಿ ತೀರ್ಮಾನ ಮಾಡಿ. ಎಂದು ಹೇಳಿ ಪತ್ರವನ್ನೂ ಬರೆದಿದ್ದೇವೆ. ಅಲ್ಲಿ ಸ್ಟೇಷನ್ ಮತ್ತೊಂದು ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಮಾಡಿ ಎಂದು ಮನವಿ ಮಾಡಿಕೊಂಡಿದ್ದೇವೆ. ಅದರ ಫಾಡಿಗೆ ಆ ಕೆಲಸವಾಗುತ್ತದೆ ಮತ್ತು ಕಂದಾಯ ಇಲಾಖೆಯಲ್ಲಿರುವ 44 ಉಪ ಕಾರಾಗೃಹಗಳನ್ನು ನಮ್ಮ ಇಲಾಖೆಗೆ ವಹಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ರೂಪರೇಷೆಯನ್ನು ಹುಡುಕುತ್ತಿದ್ದೇವೆ. ಸಿಬ್ಬಂದಿಗೆ ಅವಕಾಶ ಸಿಕ್ಕಿಲ್ಲ, ನಂತರ ಆ ಕೆಲಸವನ್ನೂ ಕೂಡ ನಾವು ಮಾಡುತ್ತೇವೆ. ಮತ್ತು ಇನ್ನೊಂದು ನನ್ನ ಇಲಾಖೆಗೆ ಸಂಬಂಧಪಟ್ಟಂತೆ, ಹೇಳಬೇಕೆಂದರೆ, ತಮಿಳುನಾಡಿನ ವೆಲ್ಲೂರಿನಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕರೆಕ್ಷನಲ್ ಅಡ್ಮಿನಿಸ್ಟ್ರೇಷನ್ ಎಂದು ಇದೆ. ನಮ್ಮ ರಾಜ್ಯ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡು ಈ 4 ರಾಜ್ಯಗಳು ಸೇರಿ, ಈ ಸೆಂಟರನ್ನು ಇಟ್ಟುಕೊಂಡಿದ್ದೇವೆ. ಅಲ್ಲಿ ವರ್ಷಕ್ಕೆ ಸುಮಾರು 100-150 ಜನಕ್ಕೆ ನಮ್ಮ ಇಲಾಖೆಯವರಿಗೆ ತರಬೇತಿ ಕೊಡತಕ್ಕ ಅವಕಾಶ ಇದೆ. ಈ ವರ್ಷ ನಮ್ಮ ರಾಜ್ಯದ್ದೇ ಪಾಲು. ಈ ವರ್ಷ ನಮ್ಮ ರಾಜ್ಯದ ಅಧಿಕಾರಿಗಳೇ ಅದಕ್ಕೆ ಚೇರ್ಮನ್. ವರ್ಷ, ವರ್ಷಕ್ಕೆ ಒಬ್ಬರು ಚೇರ್ಮನ್ ಆಗುತ್ತಾರೆ. ಪ್ರತಿ ವರ್ಷ ನಾವು 4 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಒಂದು ವರ್ಷ ಮೂರು, ಮೂರುವರೆ ಲಕ್ಷ ಕೊಡಬೇಕಾಗುತ್ತದೆ. ಈ ವರ್ಷ ಮೂರು ಲಕ್ಷದ ಅರವತ್ತೇಳು ಸಾವಿರ ರೂಪಾಯಿ

ಕಟ್ಟಿದ್ದೇವೆ. ನಮ್ಮ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸುತ್ತಿದ್ದೇವೆ. ಆ ರೀಜನಲ್ ಇನ್‌ಸ್ಟಿಟ್ಯೂಟ್ ಬಹಳ ಒಳ್ಳೆಯ ತರಬೇತಿ ಕೇಂದ್ರ. ನಾನೂ ಕೂಡ ಅಲ್ಲಿಗೆ ಹೋಗಿದ್ದೇನೆ. ಶಂಕುಸ್ಥಾಪನೆಗೆ ನನ್ನನ್ನು ಕರೆದಿದ್ದರು; ಮೊನ್ನೆತಾನೆ ಕಟ್ಟಡದ ಶಂಕುಸ್ಥಾಪನೆಯನ್ನೂ ಮಾಡಿ ಬಂದಿದ್ದೇನೆ.

ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದರಿಂದ ನಮ್ಮ ರಾಜ್ಯಕ್ಕೆ ಬಹಳ ಉಪಯೋಗವಾಗುತ್ತಿದೆ. ನಮ್ಮಲ್ಲಿರುವಂತಹ ಸಿಬ್ಬಂದಿಗೆ ಒಳ್ಳೆಯ ಟ್ರೈನಿಂಗ್ ದೊರಕಿಸಿಕೊಡುವಂತಹದು. ನಮ್ಮ ರಾಜ್ಯಕ್ಕೆ ಸುಮಾರು 6 ತಿಂಗಳಿಗೆ 12 ಜನ. ಇನ್ನು ಆರು ತಿಂಗಳಿಗೆ 12 ಜನ ಈ ರೀತಿ ವರ್ಷಕ್ಕೆ 24 ಜನ ಸಿಬ್ಬಂದಿಗೆ ಟ್ರೈನಿಂಗ್ ಕೊಡುವ ಅವಕಾಶ ಇದೆ. ಇದೂ ಕೂಡಾ ಚೆನ್ನಾಗಿ ಕೆಲಸ ಮಾಡುತ್ತಿದೆ. ಇನ್ನು ಅನೇಕರು ಜೈಲಿನ ಒಳಗಡೆ ಟಿವಿ ಒದಗಿಸಿಕೊಡಬೇಕೆಂದು ಕೆಲವು ಸಂದರ್ಭದಲ್ಲಿ ಹೇಳಿದ್ದಾರೆ. ಇನ್ನು ಕೆಲವರು ಇದು ಸರಿಯಲ್ಲ ಎಂದು ಹೇಳಿದರು. ಇದರ ಬಗ್ಗೆ ವಿಶ್ಲೇಷಣೆ ಮಾಡಿಕೊಂಡು ಹೋದರೆ ಕೆಲವು ಟೀಕೆ ಟಿಪ್ಪಣಿಗಳಿಗೆ ಕಾರಣವಾಗುತ್ತದೆ. ಸೆಂಟ್ರಲ್ ಜೈಲಿನಲ್ಲಿ ಒಂದು ಬ್ಯಾರೆಕ್‌ಗೆ ಒದಗಿಸಿಕೊಡೋಣ ಎಂದು ಅಲೋಚನೆ ಮಾಡಿರುತ್ತೇವೆ ಮತ್ತು ಎಲ್ಲಾ ಡಿಸ್ಟ್ರಿಕ್ಟ್ ಸೆಂಟ್ರಲ್ ಜೈಲ್ಸ್ ಏನಿವೆ, ಅಲ್ಲಿ ಒಂದೂ ವಾಹನಗಳು ಇಲ್ಲ. ನಮ್ಮ ಸೂಪರಿಂಟೆಂಡೆಂಟ್‌ಗಳಿಗೆ ಒಂದು ವಾಹನವೂ ಇಲ್ಲ. ಒಂದು ಉದಾಹರಣೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಆರ್. ದಯಾನಂದರಾವ್ : ಮಂತ್ರಿಗಳೇ, ಜೈಲಿಗೆ ಹೋದರೆ ಎಲ್ಲಾ ಸೌಕರ್ಯ ಸಿಗುತ್ತದೆ ಅನ್ನಿ. ಟಿವಿ ಮತ್ತು ಎಲ್ಲರಿಗೂ ...

ಶ್ರೀ ಡಿ.ಕೆ. ಶಿವಕುಮಾರ್ : ತಾವು ದಯವಿಟ್ಟು ಅಲ್ಲಿಗೆ ಬರಬೇಕು: ಜೈಲ್‌ನಲ್ಲಿ ಮಹಾತ್ಮಾಗಾಂಧಿಯವರು ಇದ್ದರು, ಜವಹರಲಾಲ್ ನೆಹರೂರವರು ಇದ್ದರು. ತಾವೂ ಸ್ವಲ್ಪ ದಿವಸ ಇರಬೇಕಾಗುತ್ತದೆ.

ಶ್ರೀ ರಾಮಲಿಂಗಾರೆಡ್ಡಿ : ತಾವು ಜೈಲಿಗೆ ಹೋಗಬೇಕೆಂದಿದ್ದರೆ, ಜೈಲು ಮಂತ್ರಿಗಳ ಜೊತೆಗೇ ಹೋಗಿ.

SRI D.K. SHIVA KUMAR: Let him come as a political prisoner or a criminal prisoner. ಹೇಗಾದರೂ ಬರಲಿ. ಅದು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ವಿಚಾರ. ನಮ್ಮದು ಏನಿದ್ದರೂ ಆಹ್ವಾನ ಮಾಡುವುದು ಅಷ್ಟೇ. ಬಂದೀಖಾನೆ ಇರುವುದು ಅವರ ಕ್ಷೇತ್ರದಲ್ಲಿ. ಈಗ ನಾನು ನಮ್ಮ ಸೂಪರಿಂಟೆಂಡೆಂಟ್ಸ್‌ಗೆ ವಾಹನಗಳು ಇಲ್ಲವೆಂಬ ವಿಚಾರ ಹೇಳುತ್ತಿದ್ದೇನೆ. ನಮ್ಮ ಸೂಪರಿಂಟೆಂಡೆಂಟ್‌ಗಳಿಗೆ ಇನ್ನಾದರೂ ವಾಹನ ಸೌಕರ್ಯ ಮಾಡಿಕೊಡಬೇಕೆಂದು ಅಲೋಚನೆ ಮಾಡಿರುತ್ತೇವೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಹೋದ ಸೆಷನ್‌ನಲ್ಲಿ ಯಾವುದೋ ಒಂದು ಪ್ರಶ್ನೆ ಬಂದಿತ್ತು. ನಮ್ಮ ಸೂಪರಿಂಟೆಂಡೆಂಟ್ ಅವರ ಹತ್ತಿರ ಇದರ ಬಗ್ಗೆ ಚರ್ಚೆ ಮಾಡಿ ಉತ್ತರ ಕೊಡೋಣ ಎಂದು ಕರೆದೆ. ಅದು ವಾಟಾಳ್ ನಾಗರಾಜ್‌ರವರ ಪ್ರಶ್ನೆ. ಅದು ಮುಂದಕ್ಕೆ ಹೋಯಿತು. ನನ್ನ ಪುಣ್ಯ ಚೆನ್ನಾಗಿತ್ತು, ಇಲ್ಲದೆ ಹೋಗಿದ್ದರೆ ಇದರ ಬಗ್ಗೆ ಚರ್ಚೆ ಆಗುತ್ತಿತ್ತು. ಈ ವಿಚಾರ ಬಂದಾಗ ಅವರನ್ನು ಕರೆದೆ. ಅವರು ಕೂಡಲೇ ಬರುವುದಕ್ಕೆ ಅವರಿಗೆ ಜೀಪ್ ಇಲ್ಲ. ಹಾಗೇ ಅಲ್ಲಿಗೆ ಬಂದರೆ ಅವಮಾನವಾಗುತ್ತದೆ ಎಂದು ಹೇಳಿ ಅವರು ಒಂದು ಆಟೋ ಹಿಡಿದಿದ್ದರು ಮೊದಲೇ ಅಡ್ವಾನ್ಸ್ ಆಗಿ 5 ರೂಪಾಯಿ ಕೊಟ್ಟು ಬಿಟ್ಟಿದ್ದರು. ವಿಧಾನ ಸೌಧದ ಮುಂದೆ ಬಂದಾಗ ನನ್ನನ್ನು ಕೇಳಬೇಡ ಎಂದು ಹೇಳಿದ್ದರು. ಏತಕ್ಕೆಂದರೆ ಅವರಿಗೆ ಅಶೋಕಚಕ್ರ ಮತ್ತೊಂದು ಇರುತ್ತದೆ

ಸೂಪರಿಂಟೆಂಡೆಂಟ್ ಎಂದರೆ ದೊಡ್ಡ ಹುದ್ದೆ; ಅದಕ್ಕಾಗಿ ಈ ರೀತಿ ಮಾಡಿದ್ದರು. ಆದರೆ ಅದೇನಾಗಿತ್ತು ಎಂದರೆ ಬಿಲ್ 6 ರೂಪಾಯಿ ಆಗಿತ್ತು ಇಲ್ಲಿ ಬಂದಾಗ ಆ ಆಟೋ ಡ್ರೈವರ್ ಕರೆಯುತ್ತಿದ್ದಾನೆ; ಇವನು ಹೋಗುವಹಾಗೆ ಇಲ್ಲ. ನಮ್ಮ ಇಲಾಖೆಯ ಹಾಗೂ ಬೇರೆ ಇಲಾಖೆಗಳ ಸ್ಟಾಫ್ ಎಲ್ಲಾ ನೋಡಿ ನಗುವ ಪರಿಸ್ಥಿತಿ ಬಂತು. ಹೀಗಾಗಿ ಒಂದು ರೂಪಾಯಿ ಕೊಡದೇ ಅವರು ಒಳಗಡೆ ಬರುವ ಪರಿಸ್ಥಿತಿ ಬಂತು. ನಾನು ಈ ಮಾತನ್ನು ಬಹಳ ವೇದನೆಯಿಂದ ಹೇಳುತ್ತಿದ್ದೇನೆ. ಪೋಲೀಸ್ ಇಲಾಖೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ಸ್‌ಗೆ ಜೀಪ್ ಕೊಡುತ್ತಾರೆ, ಡಿ.ಎಸ್.ಪಿ.ಗೆ ಕೊಡುತ್ತಾರೆ. ನಮ್ಮಲ್ಲಿ ಸೂಪರಿಂಟೆಂಡೆಂಟ್‌ಗೆ ಇಲ್ಲ. ಆದುದರಿಂದ ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಣದಲ್ಲಿ ಅವರಿಗೆ ಜೀಪುಗಳನ್ನು ಒದಗಿಸಿಕೊಡಬೇಕೆಂದು ತೀರ್ಮಾನ ಮಾಡಿರುತ್ತೇವೆ. ಯಾರಾದರೂ ಹಾಸ್ಪಿಟಲ್‌ಗೆ ಹೋಗಬೇಕಾದ ಸಂದರ್ಭ ಮತ್ತೊಂದು ಬರುತ್ತದೆ. ನಮ್ಮ ಖೈದಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಗಿರುತ್ತದೆ: ಅಂತಹ ಸಂದರ್ಭದಲ್ಲಿ ಉಪಯೋಗಿಸುತ್ತೇವೆ. ಕೆಲಸ ವಿಚಾರದಲ್ಲಿ ನಮ್ಮ ಸದಸ್ಯರುಗಳು ಅನೇಕ ಸಂದರ್ಭದಲ್ಲಿ ಸಲಹೆ ಕೊಟ್ಟಿದ್ದಾರೆ. ಆದುದರಿಂದ ಈ ರೀತಿ ಮಾಡಬೇಕೆಂದು ಮಾಡಿದ್ದೇವೆ. ಮತ್ತು ಇಂಟರ್ ಕಾಂ ಹಾಗೂ ರಕ್ಷಣಾ ದೃಷ್ಟಿಯಿಂದ ಇನ್ನೂ ಕೆಲವು ಉಪಕರಣಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿರುತ್ತೇನೆ. ಇದರ ಜೊತೆಗೆ ಇನ್ನೊಂದು ಇಲಾಖೆ ನನ್ನ ವಶದಲ್ಲಿದೆ. ಅದು ಹೋಮ್‌ಗಾರ್ಡ್ಸ್ ಇಲಾಖೆ. ನನಗೆ ಬಹಳ ಸಂತೋಷ. ಮಾನ್ಯ ಸದಸ್ಯರಾದ ಕುಶಾಲರವರು ಮಾತನಾಡುತ್ತಾ, ಹೋಮ್‌ಗಾರ್ಡ್ಸ್ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಅವರು ಅಭಿನಂದನೆ ಸಲ್ಲಿಸಿದರು. ಅಭಿನಂದನೆ ನನಗೆ ಮುಖ್ಯ ಅಲ್ಲ. ಅದು ನನಗಿಂತ ಮೊದಲು ಮುಖ್ಯವಾಗಿ ನಮ್ಮ ಎಲ್ಲಾ ಹೋಮ್‌ಗಾರ್ಡ್ಸ್‌ಗಳಿಗೆ ಸಲ್ಲಬೇಕಾಗುತ್ತದೆ. ಹೋಮ್‌ಗಾರ್ಡ್ಸ್ ಇಲಾಖೆಯ ಬಗ್ಗೆ ಏನು ಅಭಿನಂದನೆ ಸಲ್ಲಿಸಿದ್ದಾರೆ, ನಾನು ಅದನ್ನು ಅವರಿಗೆ ತಿಳಿಸಬೇಕಾಗುತ್ತದೆ. ನಾಳೆ ನಾಡಿದ್ದು ಒಂದು ಫಂಕ್ಷನ್ ಇದೆ. ಅಲ್ಲಿ ಅವರಿಗೆ ಇದನ್ನು ನಾನು ತಿಳಿಸುತ್ತೇನೆ. ಹಾಗೂ ನನ್ನ ಅಭಿನಂದನೆಗಳನ್ನು ಸಹ ಅವರಿಗೆ ಸಲ್ಲಿಸುತ್ತೇನೆ. ಇದೊಂದು ವಾಲಂಟರಿ ಆರ್ಗನೈಸೇಷನ್. ನಮ್ಮ ರಾಜ್ಯದಲ್ಲಿ ಕೇಂದ್ರ ಸರಕಾರದವರು 17 ಸಾವಿರ ಹೋಮ್‌ಗಾರ್ಡ್ಸ್ ತರಬೇತಿ ಪಡೆದಂಥ ಸ್ಟಾಫ್ ಇಟ್ಟುಕೊಳ್ಳುವ ಅವಕಾಶ ಮಾಡಿಕೊಟ್ಟಿದ್ದಾರೆ. ಅದರಲ್ಲಿ 16.274 ಸಂಖ್ಯೆ ಸದ್ಯಕ್ಕೆ ನಮ್ಮಲ್ಲಿ ಇದೆ. ಅದರಲ್ಲಿ ಐದು ನೂರು ಜನ ಮಹಿಳಾ ಹೋಮ್‌ಗಾರ್ಡ್ಸ್ ಇದ್ದಾರೆ. ಬೆಂಗಳೂರು, ಮೈಸೂರು, ಕೊಡಗು, ದಕ್ಷಿಣ ಕನ್ನಡ, ಹಾಸನ, ಕೋಲಾರ, ತುಮಕೂರು, ಉತ್ತರಕನ್ನಡ, ಮಂಡ್ಯ ಈ ಸ್ಥಳಗಳಲ್ಲಿ ಮಾತ್ರ ಮಹಿಳಾ ಹೋಮ್‌ಗಾರ್ಡ್ಸ್ ಇದ್ದಾರೆ. ಒಟ್ಟು 17,274 ಜನರಿಗೆ 230 ಘಟಕಗಳು ಇವೆ. 20 ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್ ವ್ಯಾಪ್ತಿಯಲ್ಲಿ 230 ಘಟಕಗಳು ಇವೆ. ಅನೇಕ ಕಡೆ ಬೇಡಿಕೆಗಳು ಈಗಾಗಲೇ ಬಂದಿದೆ. ಕೆಲವು ಸದಸ್ಯರು ಇನ್ನೂ ಹೆಚ್ಚಿಸಬೇಕು, ಬೇರೆ ಬೇರೆ ಕಡೆಗೆ ಆಗಬೇಕೆಂದು ಮನವಿ ಮಾಡಿದ್ದಾರೆ. ಹಾಗೂ ಒತ್ತಾಯ ಮಾಡಿದ್ದಾರೆ. ಈಗ 17 ಸಾವಿರ ಚಿಲ್ಲರೆ ಇದ್ದಾರೆ. ಇವತ್ತಿನ ಪರಿಸ್ಥಿತಿ ನಮಗೆ ಗೊತ್ತಿದೆ. ಇದು ಆಗಿ ಬಹಳ ವರ್ಷ ಆಯಿತು. ಇದು ಆದಮೇಲೆ ಬಹಳ ಗಲಭೆ ಮತ್ತೊಂದು ಆಗಿದೆ. ಆ ದೃಷ್ಟಿಯಿಂದ ಹೆಚ್ಚಿಸಬೇಕೆಂದು ಮಾಡಿದ್ದೇವೆ, 17 ಸಾವಿರದಿಂದ 20 ಸಾವಿರಕ್ಕೆ ಹೆಚ್ಚಿಸಬೇಕೆಂದು ನಾವು ಮನವಿ ಮಾಡಿರುತ್ತೇವೆ. ಕೇಂದ್ರ ಸರಕಾರ ಅನುಮತಿ ಕೊಟ್ಟ ಕೂಡಲೇ ಮತ್ತೆ ಕೆಲವು ಹೊಸ ಘಟಕಗಳನ್ನು ಪ್ರಾರಂಭ ಮಾಡುತ್ತೇವೆ. ಸಧ್ಯದಲ್ಲಿ ಬಹಳ ತುರ್ತು ಇದ್ದಂಥ ಸಂದರ್ಭದಲ್ಲಿ ನಮ್ಮ ವ್ಯಾಪ್ತಿಯಲ್ಲಿ ಇರುವುದನ್ನೇ ಅನುಸರಿಸಿ ನಾವು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತಿನ ದಿವಸ ಅವರಿಗೆ 20 ಜನ ಜಿಲ್ಲಾ ಕಮ್ಯಾಂಡೆಂಟ್ಸ್ ಇದ್ದಾರೆ. ಅವರು ಬಹಳ ದಕ್ಷತೆಯಿಂದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ವಾಲೆಂಟ್ರಿಯಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ.

ಇವರಿಗೆ ಬಹಳಷ್ಟು ಜನರು ಹೇಳಿದರು ಏನಪ್ಪ ಈ ಹೋಮ್ ಗಾರ್ಡ್ಸ್‌ನ್ನು ತಾವು ಕರೆದುಕೊಂಡು ಹೋಗಿ ಸೇವೆ ಪಡೆದುಕೊಳ್ಳುತ್ತೀರಿ, ಅವರಿಗೆ ಬಹಳ ತೊಂದರೆಯಾಗುತ್ತದೆ; ಅವರಿಗೆ ನೀವು ಬರೀ 22 ರೂಪಾಯಿಗಳನ್ನು ಕೊಡುತ್ತೀರಿ ಅದರಲ್ಲಿ ಏನು ಮಾಡುವುದುಕ್ಕಾಗುತ್ತದೆ, ನಿಮಗೆ ಬೇಕಾದಾಗ ಪೋಲೀಸ್ ಇಲಾಖೆಯವರು ಕರೆದುಕೊಂಡು ಹೋಗುತ್ತಾರೆ. ಸಂಘ ಸಂಸ್ಥೆಗಳವರು ಕರೆದುಕೊಂಡು ಹೋಗುತ್ತಾರೆ ಕೆಲಸ ಮಾಡಿಸಿಕೊಳ್ಳುತ್ತಾರೆ ಮಧ್ಯೆದಲ್ಲಿ ವಾಪಸ್ಸ್ ಕಳುಹಿಸುತ್ತಾರೆ ಅಂತ ಹೇಳಿದರು. ಈ ಬಗ್ಗೆ ಅನೇಕ ಜನ ನನಗೆ ಪತ್ರ ಸಹ ಬರೆದಿದ್ದಾರೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೂ ನಾವು ಬರೆದಿದ್ದೇವೆ. ನಮ್ಮ ಈ ಇಲಾಖೆಯಲ್ಲಿ ಮಾತ್ರ ಏನು ಮಾಡಬೇಕಾದರೂ ಕೇಂದ್ರ ಸರ್ಕಾರ ಒಪ್ಪಿಕೊಳ್ಳಬೇಕು; ಅವರದ್ದು ಅರ್ಧ ಹಣ ನಮ್ಮದು ಅರ್ಧ ಹಣ, ಏನೊಂದು ಚಿಕ್ಕ ತೀರ್ಮಾನ ಮಾಡಬೇಕಾದರೂ ಅವರು ಒಪ್ಪಿಕೊಳ್ಳಬೇಕು; ಅವರು ಒಪ್ಪಿಕೊಂಡರೆ ಮಾತ್ರ ನಾವು ಮಾಡಲಿಕ್ಕೆ ಸಾಧ್ಯ. ಈ ವಿಚಾರದಲ್ಲಿ ಇಡೀ ರಾಷ್ಟ್ರಕ್ಕೆ ಒಂದು ಕಾನೂನು ಇದೆ. ಆ ದೃಷ್ಟಿಯಿಂದ 22 ರೂಪಾಯಿಗಳಿಂದ 35 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ನಾವು ಕೇಂದ್ರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಅದು ಅಲ್ಲಿಂದ ಒಪ್ಪಿಗೆ ಆಗಿ ಬಂದ ಕೂಡಲೇ 35 ರೂಪಾಯಿಗಳನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ; ಈ ಹೋಮ್ ಗಾರ್ಡ್ಸ್‌ಗಳಿಗೆ 5 ದಿವಸ ಕೆಲಸ ಸಿಗುತ್ತದೆ. ಕೆಲವರು ಅನ್ ಎಂಪ್ಲಾಯ್ಡ್ ಇರುತ್ತಾರೆ. ಅವರು ಕೆಲಸ ಮಾಡುತ್ತಾರೆ. ಅವರು ಈ ದೇಶಕ್ಕೆ ಈ ರಾಷ್ಟ್ರಕ್ಕೆ ಒಳ್ಳೆಯದು ಆಗಲಿ ಎಂದು ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಅವರ ಬಗ್ಗೆ ಅನುಕಂಪ ತೋರಿಸಬೇಕಾಗುತ್ತದೆ. ಮತ್ತೆ ಅನೇಕ ಸಂದರ್ಭದಲ್ಲಿ ಏನಾಗುತ್ತದೆಂದರೆ ಅವರು ಡ್ಯೂಟಿಯಲ್ಲಿದ್ದಾಗಲೇ ಕೆಲವರು ಸಾಯುತ್ತಾರೆ. ನಮ್ಮ ಪೋಲೀಸ್ ಇಲಾಖೆಯಲ್ಲಿ 11 ಸಾವಿರ ಜನ ಇದ್ದಾರೆ; ಅವರಲ್ಲಿ ಅರ್ಧದಷ್ಟು ಜನ ಈ ಹೋಮ್ ಗಾರ್ಡ್ಸ್ ಇದ್ದಾರೆ. ಅವರಿಗೆ ಏನಾದರೂ ಹೆಚ್ಚು ಕಡಿಮೆ ಆದರೆ ಪೋಲೀಸಿನವರಿಗಿಂತ ಜಾಸ್ತಿ ನಮ್ಮ ಹೋಮ್‌ಗಾರ್ಡ್ಸ್ ಹೆಚ್ಚಿಗೆ ಕೆಲಸ ಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ತಮಗೆ ಗೊತ್ತಿದೆ, ಜಾತ್ರೆಗಳಾದಾಗ ಮತೀಯಗಲಭೆಗಳಾದಾಗ ಎಲೆಕ್ಷನ್ ಆದಾಗ ಎಲ್ಲಾ ಎಲೆಕ್ಷನ್‌ನಲ್ಲೂ ಬರೀ ಪೋಲೀಸ್‌ನವರನ್ನು ಎಲ್ಲಾ ಬೂತ್ಸ್‌ಗೆ ಒದಗಿಸುವುದಕ್ಕೆ ಆಗುವುದಿಲ್ಲ ಅಂತ ಹೇಳಿ ನಮ್ಮ ಈ ಹೋಮ್‌ಗಾರ್ಡ್ಸ್‌ಗಳಿಗೆ ಖಾಕಿ ಬಟ್ಟೆ ಹಾಕಿ ಅವರನ್ನು ಪೋಲೀಸ್‌ನವರ ತರಹಃ ನಿಲ್ಲಿಸಿ ಒಂದು ಕೋಲು ಕೊಟ್ಟು ಕೆಲಸ ಮಾಡಿಸುವುದನ್ನು ನಾವು ನೋಡಿದ್ದೇವೆ. ನಮ್ಮ ಎಲೆಕ್ಷನ್ ಕಮಿಷನ್‌ನವರು ಕೂಡ ಇವರ ಉತ್ತಮ ಕೆಲಸವನ್ನು ನೋಡಿ ಮೆಚ್ಚಿ ನನಗೆ ಪತ್ರವನ್ನು ಬರೆದಿದ್ದಾರೆ. ಇನ್ನು ಅವರಿಗೆ ನಾವು ಒಂದು ಯೂನಿಫಾರಮ್ ಕೊಡುವ ವಿಚಾರ ಇತ್ತು. ಅವರು ಹೇಳುತ್ತಿದ್ದರು ಏನೆಂದರೆ, ನಮಗೆ ಬರೀ ಕಾಟನ್ ಬಟ್ಟೆ ಕೊಡುತ್ತಾರೆ, ನಮಗೆ ಬಹಳ ತೊಂದರೆ ಇದೆ, 4 ವರ್ಷಕ್ಕೋ 3 ವರ್ಷಕ್ಕೋ 2 ಜೊತೆ ಬಟ್ಟೆ ಕೊಡುತ್ತಾರೆ ಎಂದು; ನನಗೆ ಬಹಳ ಸಂತೋಷವಾಗುತ್ತದೆ. ನಮ್ಮ ಈ ಹೋಮ್ ಗಾರ್ಡ್ಸ್‌ಗೆ ಈ ಸಲ ಟೆರಿಕಾಟ್ ಬಟ್ಟೆ ಒದಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ಇದರ ಜೊತೆಗೆ ಕಾಟನ್ ಬಟ್ಟೆ ಪ್ರತಿ ವರ್ಷ ಕೂಡ ಒಂದು ಸೆಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮೊದಲು 3 ವರ್ಷಕ್ಕೆ 2 ಸೆಟ್ ಮಾತ್ರ ಕಾಟನ್ ಬಟ್ಟೆ ಕೊಡುತ್ತಿದ್ದರು. ಈಗ ಒಂದು ಜೊತೆ ಟೆರಿಕಾಟ್ ಬಟ್ಟೆ ಮತ್ತು ಪ್ರತಿ ವರ್ಷ ಒಂದು ಜೊತೆ ಕಾಟನ್ ಬಟ್ಟೆ ಒದಗಿಸಿಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಮತ್ತೆ ಇವರಿಗೆ ಗ್ರೂಪ್ ಇನ್‌ಶೂರೆನ್ಸ್ ಮಾಡುವ ಬಗ್ಗೆ ಮಾನ್ಯ ಸದಸ್ಯರು ಮನವಿ ಮಾಡಿದರು. ಅವರು ಡ್ಯೂಟಿಯಲ್ಲಿದ್ದಾಗ ಸತ್ತರೆ ತೊಂದರೆಯಾಗುತ್ತದೆ ಸತ್ತರೆ, ಅವರಿಗೆ ಕೊಡುವ ಕಾಂಪೆನ್‌ಜೇಸನ್ ವಿಚಾರದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುತ್ತಾ ಬಹಳ ಕಡಿಮೆ ಅಂತ ಹೇಳಿದರು. ತಾವು ಬರೀ 10 ಸಾವಿರ ಮಾತ್ರ ಕೊಡುತ್ತಿದ್ದೀರಿ ಎಂದು ಹೇಳಿದರು.

ನಮಗೆ ಅವಕಾಶ ಇರುವುದು ಬರೀ 10 ಸಾವಿರ ಮಾತ್ರ. ಆದರೆ ನಾವು ಗ್ರೂಪ್ ಇನ್‌ಶೂರೆನ್ಸ್ ಮಾಡಬೇಕೆಂದು ಯೋಚನೆ ಮಾಡಿದೆವು. ಅದಕ್ಕೆ ಸಾವಿರಾರು ರೂಪಾಯಿ ಅಂದರೆ ವರ್ಷಕ್ಕೆ 5-6 ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ ಅಂತ ಹೇಳಿ ನಾವು ಒಂದು ತೀರ್ಮಾನ ಮಾಡಿದ್ದೇವೆ. ಏನೆಂದರೆ, ಈಗ ಕೊಡುತ್ತಿರುವ 10 ಸಾವಿರಕ್ಕೆ ನಾವು 40 ಸಾವಿರ ರೂಪಾಯಿ ಸೇರಿಸಿ ನಮ್ಮ ಹೋಮ್‌ಗಾರ್ಡ್ಸ್ ಸತ್ತಾಗ ಪರಿಹಾರವಾಗಿ ಈ ವರ್ಷದಿಂದ 50 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ಅವರಿಗೆ ಟ್ರೈನಿಂಗ್ ಕೊಡಲಿಕ್ಕೆ 130 ಜನ ಆನರರಿ ಲೆಕ್ಚರರ್ಸ್ ಅನ್ನು ಈ ವರ್ಷ ಅಪಾಯಿಂಟ್ ಮಾಡಿಕೊಂಡಿದ್ದೇವೆ. ಈ ಆನರರಿ ಇನ್‌ಸ್ಟ್ರಕ್ಟರ್ಸ್‌ಗೆ ಕೊಡಲು ನಮಗೆ ಅವಕಾಶ ಇರುವುದು ಪಾಪ ಒಂದು ತಿಂಗಳಿಗೆ 15 ರೂಪಾಯಿಗಳು ಮಾತ್ರ. ಅವರು 4 ದಿವಸಕ್ಕೋ 5 ದಿವಸಕ್ಕೋ 8 ದಿವಸಕ್ಕೋ ಬಂದು ನಮ್ಮ ಹೋಮ್‌ಗಾರ್ಡ್ಸ್‌ಗೆ ಟ್ರೈನಿಂಗ್ ಕೊಡತಕ್ಕಂಥಾದ್ದು. ಅವರಿಗೆ 15 ರೂಪಾಯಿ ಬಸ್ಸು ಚಾರ್ಜ್‌ಗೆ ಆಗುವುದಿಲ್ಲ. ಅದಕ್ಕಾಗಿ ನಾವು ಈ ಸಾರಿ 15 ರೂಪಾಯಿಗಳಿಂದ 40 ರೂಪಾಯಿಗಳಿಗೆ ಎನ್ಹಾನ್ಸ್ ಮಾಡಲು ತೀರ್ಮಾನ ತೆಗೆದುಕೊಂಡಿದ್ದೇವೆ. ಮತ್ತು ನಾನು ಮಂತ್ರಿಯಾದ ಹೊಸದರಲ್ಲಿ ಪ್ರವಾಹ ಬಂತು. ಮಂಡ್ಯ ಜಿಲ್ಲೆಯಲ್ಲಿ, ಹಾಸನ ಜಿಲ್ಲೆಯಲ್ಲಿ, ಮೈಸೂರು ಜಿಲ್ಲೆಯಲ್ಲಿ ಆಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದರು. ನಮ್ಮ ಹೋಮ್‌ಗಾರ್ಡ್ಸ್ ಬಹಳ ಎಫೆಕ್ಟೀವ್ ಆಗಿ ಪ್ರಾಮಾಣಿಕ ಪ್ರಯತ್ನ ಪಟ್ಟರು. ಆ ಪ್ರವಾಹದಲ್ಲಿ ನೊಂದವರಿಗೆ ಸಹಾಯ ಮಾಡಬೇಕೆಂದು ಕೆಲವರು ಶಕ್ತಿ ಮೀರಿ ಸಹಾಯ ಮಾಡಿದ್ದಾರೆ. ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ 2-3 ಬೋಟ್ಸ್ ನಾವು ಇಟ್ಟುಕೊಂಡಿದ್ದೇವೆ. ಆದರೆ ನಮ್ಮ ಬೋಟ್ಸ್ ಏನೂ ನಡೆಯಲಿಲ್ಲ ಆ ಪ್ರವಾಹದ ಮುಂದೆ. ಕಾವೇರಿ ನಿಮಗೆ ಗೊತ್ತಿದೆಯಲ್ಲ; ಆಗ ರಾಜ್ಯ ಎಂತಹ ತೊಂದರೆಗೆ ಸಿಕ್ಕಿತ್ತು ಅಂತ. ಕಾವೇರಿ ಪ್ರವಾಹ ಬಂದಾಗ ಅವರಿಗೆ ಏನಾದರೂ ಸಹಾಯ ಮಾಡಬೇಕೆಂದು ಮುಂದೆ ಬಂದರು. ಆಗ ಅವರ ಕೈಯಲ್ಲಿ ಏನೂ ಮಾಡಲಿಕ್ಕೆ ಆಗಲಿಲ್ಲ ಕೊನೆಗೆ ಮಿಲ್ಟ್ರಿ ಕರೆಸಬೇಕಾಯಿತು. ನಮ್ಮ ಎಂ.ಇ.ಜಿ. ಬಂದು ರಕ್ಷಣೆ ಮಾಡಬೇಕಾಯಿತು. ಆಗ ನಮ್ಮ ವ್ಯಾಪ್ತಿಯಲ್ಲಿ ಹೋಮ್‌ಗಾರ್ಡ್ಸ್ ಏನೋ ಆಗಿದ್ದು ಆಗಿ ಹೋಯಿತು ಇನ್ನು ಮುಂದೆ ನಾವೇ ಪ್ರಯತ್ನ ಮಾಡೋಣ ಅಂತ ಹೇಳಿ ನಮಗೆ ಮನವಿ ಮಾಡಿಕೊಂಡರು. ಅದಕ್ಕೆ ನಾವೀಗ 5 ಮೋಟಾರ್ ಬೋಟ್ಸ್ ಪರ್ಚೇಜ್ ಮಾಡಲು ಅವಕಾಶ ಕೊಟ್ಟಿದ್ದೇವೆ. ಈಗಾಗಲೇ 4 ಮೋಟಾರ್ ಬೋಟ್ಸ್ ಖರೀದಿ ಮಾಡಿದ್ದೇವೆ. ಇನ್ನೂ 2 ಪರ್ಚೇಜ್ ಮಾಡುತ್ತೇವೆ. ನಂತರ ಸೆಂಟ್ರಲ್ ಕಸ್ಟಮ್ಸ್ ಡಿಪಾರ್ಟ್‌ಮೆಂಟ್‌ನವರು 2 ಮೋಟಾರ್ ಬೋಟ್ಸ್ ಬಿಟ್ಟಿಯಾಗಿ ಕೊಟ್ಟಿದ್ದಾರೆ. ನಮ್ಮ ಹೋಮ್‌ಗಾರ್ಡ್ಸ್ ಡಿಪಾರ್ಟ್‌ಮೆಂಟ್‌ನಿಂದ ಈಗಾಗಲೇ ಅವರಿಗೆ ಟ್ರೈನಿಂಗ್‌ನ್ನು ಸರಿಯಾದ ರೀತಿಯಲ್ಲಿ ಕೊಡುತ್ತಿದ್ದೇವೆ ಬಹುಶಃ ಇನ್ನು ಮುಂದಕ್ಕೆ ಇಂಥಾ ಯಾವುದಾದರು ಸಂದರ್ಭದಲ್ಲಿ ಒಳ್ಳೆಯ ಫಲ ಸಿಕ್ಕಬಹುದು ಅಂದುಕೊಂಡು ಕೆಲಸವನ್ನು ಮಾಡುತ್ತಾ ಇದ್ದೇವೆ. ಇನ್ನು ಅನೇಕ ಸಂದರ್ಭಗಳಲ್ಲಿ ನಾಲ್ಕೈದು ವರ್ಷದಿಂದ ಈ ಸ್ಪೋರ್ಟ್ಸ್ ಮತ್ತು ಕಾನ್‌ಫರೆನ್ಸ್ ನಡೆಯುತಿತ್ತು ಅಧ್ಯಕ್ಷರೆ, ಡಿಸ್ಟ್ರಿಕ್ಟ್ ಹೋಮ್ ಗಾರ್ಡ್ ಕಮಾಂಡೆಂಟ್ ಕಾನ್‌ಫರೆನ್ಸ್ ಮತ್ತು ಸ್ಪೋರ್ಟ್ಸ್ ಈ ಎರಡೂ ರಾಜ್ಯ ಮಟ್ಟದಲ್ಲಿ ನಿಂತುಹೋಗಿತ್ತು. ಇನ್ನೂ ಕೂಡಾ ಈ ವರ್ಷದಿಂದ ಪ್ರಾರಂಭ ಮಾಡಬೇಕೆಂದು ಈಗಾಗಲೇ ನಾನು ನವಂಬರ್ 20 ಮತ್ತು 21ರಲ್ಲಿ ಕಾನ್‌ಫರೆನ್ಸ್ ಕೂಡಾ ಮಾಡಿದ್ದೇವೆ ಮತ್ತು ನಾಳೆಯಿಂದ ಸ್ಟೇಟ್ ಲೆವಲ್ ಸ್ಪೋರ್ಟ್ಸ್ ಪ್ರಾರಂಭವಾಗುತ್ತದೆ. 22ನೇ ತಾರೀಖು ಮುಕ್ತಾಯವಾಗುತ್ತದೆ. ಏಕೆಂದರೆ, ಅವರನ್ನು ಚುರುಕುಗೊಳಿಸಬೇಕು, ಜೊತೆಗೆ ಸೇರಿಸಬೇಕು, ಒಳ್ಳೆಯ ಸೇವೆ ಮಾಡುತ್ತಿದ್ದವರನ್ನೆಲ್ಲಾ ಗುರುತಿಸಬೇಕೆಂದು ಹೇಳಿ ಹೊರಟಿದ್ದೇವೆ. ಮತ್ತು ರಿಫ್ರೆಷರ್ ಕೋರ್ಸ್ ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷಣಿಯವರೇ ಇನ್ನೊಂದು ವಿಷಯ ಮರೆತುಬಿಟ್ಟಿದ್ದೆ.

ದೇವನಹಳ್ಳಿ ಜೈಲ್‌ನಲ್ಲಿ ಸುಮಾರು 37 ಜನ 38 ಜನ ಇದ್ದಾರೆ. ಅದು ಒಳ್ಳೆಯ ಹೆಸರಾದಂಥ ಜೈಲು. ಸುಮಾರು ನೂರು ಚಿಲ್ಲರೆ ಎಕರೆಯಲ್ಲಿದೆ. ಬಹುಶಃ ಅಲ್ಲಿ ಸಾಕಷ್ಟು ನೀರು ಸಿಗದೆ ಒಂದು ತೊಂದರೆಯಾಗಿದೆ. ಕಳೆದ ಎರಡು ಮೂರು ವರ್ಷದಿಂದ. ದೇವನಹಳ್ಳಿಯಲ್ಲಂತೂ 500 ಅಡಿಗಿಂಥಾ ಕೆಳಗೆ ನೀರಿನ ಮಟ್ಟ ಹೋಗಿದೆ. ಒಂದು ಎಳೆಂಟು ಬೋರ್‌ವೆಲ್‌ಗಳನ್ನು ಹಾಕಿ ಬಹಳ ಕಷ್ಟಪಟ್ಟೆವು. ಅಲ್ಲಿ ನಮ್ಮ ಖೈದಿಗಳು ಬಂದು ಕೆಲಸ ಮಾಡಲಿಕ್ಕೆ ಹಿಂದೇಟು ಹೊಡೆಯುತ್ತಿದ್ದಾರೆ. ಏಕೆಂದರೆ. ಬಿಸಿಲು. ಬಹಳ ತೊಂದರೆ. ಆಕಡೆ ಹುಬ್ಬಳಿ, ಗುಲ್ಬರ್ಗಾ ರಾಯಚೂರು ಕಡೆಯವರು ಸುಮಾರು 40-50 ಜನ ಇದ್ದಾರೆ. ಅವರು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ನಾವು ಉತ್ತೇಜನ ಕೊಡಬೇಕೆಂದು ಹೇಳಿ ಎರಡೂವರೆ ರೂಪಾಯಿ ಮಜೂರಿ ಏನಿತ್ತು. ಆ ಮಜೂರಿಯನ್ನು ಹೆಚ್ಚಿಸಬೇಕೆಂದು ನಮ್ಮ ರಾಜೂಗೌಡರು ಹೇಳಿದರು. ಎರಡೂವರೆ ರೂಪಾಯಿ ಇದ್ದದ್ದನ್ನು ನಾನು ಬಂದ ಮೇಲೆ ಅದನ್ನು 8 ರೂಪಾಯಿಗೆ ಹೆಚ್ಚು ಮಾಡಿದ್ದೇನೆ. ಇನ್ನು ಮರಗೆಲಸ ಮಾಡುವವರಿಗೆ ಹೆಚ್ಚಿಸಬೇಕಾಗಿದೆ. ಅವರಿಗೂ ಸಹಾ ಮಜೂರಿಯನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಪಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ಇನ್ನು ಮಾನ್ಯ ಶಿವರಾಮೇಗೌಡರು ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದೇನೆಂದು ಕಾಣುತ್ತದೆ. ಮತ್ತು ರಾಜೂಗೌಡರು ಕ್ಯಾಂಟೀನ ವಿಚಾರ ಹೇಳಿದರು. ಈಗಾಗಲೇ ನಮ್ಮಲ್ಲಿ ಕ್ಯಾಂಟೀನ್ ನಡೆಯುತ್ತಿದೆ. ಅವರೇ ಹಣ ಕೊಟ್ಟು ತೆಗೆದುಕೊಳ್ಳಬೇಕು. ಏಕೆಂದರೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಮಾಡಿಕೊಂಡು ಹೋಗುವುದಕ್ಕೆ ತೊಂದರೆಯಾಗುತ್ತದೆ. ಕ್ಯಾಂಟೀನ್‌ಗಳು ಎಲ್ಲಾ ಸೆಂಟ್ರಲ್ ಜೈಲ್‌ಗಳಲ್ಲೂ ಇವೆ. ಇನ್ನು ಎಜುಕೇಷನ್ ಬಗ್ಗೆ ರಾಜೂಗೌಡರು ಹೇಳಿದರು. ಆ ವಿಚಾರದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ಮಹದೇವ್ : ಜೈಲಿನಲ್ಲಿರುವ ಕ್ಯಾಂಟೀನ್ ಚೆನ್ನಾಗಿ ನಡೆಯುತ್ತಿದ್ದರೆ ಅಲ್ಲಿಂದಲೇ ನಮ್ಮ ಎಲ್.ಹೆಚ್.ಗೂ ಸಪ್ಲೈ ಆಗುವ ಹಾಗೆ ಮಾಡಿ. ಇಲ್ಲಿಗೂ ವ್ಯವಸ್ಥೆ ಆದರೆ ಬಹಳ ಒಳ್ಳೆಯದು.

ಶ್ರೀ ಡಿ.ಕೆ. ಶಿವಕುಮಾರ್ : ಮತ್ತು ರಾಜೂಗೌಡರು ಯಾವ ಯಾವ ತರಹದ ಕ್ರಿಮಿನಲ್‌ಗಳು ಇದ್ದಾರೆಂದು ವರದಿ ಕೊಟ್ಟಿಲ್ಲವೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಎಷ್ಟು ಕಾನೂನುಗಳಿವೆ ಏನೇನಿವೆ ಯಾವ ತರಹ ಇವೆ ಎಂಬ ಬಗ್ಗೆ ಪಟ್ಟಿಯನ್ನು ಓದಬೇಕಾದರೆ ಒಂದು ಗಂಟೆ ಬೇಕಾಗುತ್ತದೆ. ಎಷ್ಟು ಜನ ನಮ್ಮ ಜೈಲಿನಲ್ಲಿದ್ದಾರೆ ಎಂಬುದನ್ನು ಮಾತ್ರ ನಾನು ಹೇಳಬಹುದು. ಇನ್ನೊಂದು ಅಂಶವನ್ನು ವಿಶೇಷವಾಗಿ ಮಾನ್ಯ ಕುಶಾಲರವರು ಪ್ರಸ್ತಾಪ ಮಾಡಿದರು. ಏನೆಂದರೆ ಮಂಗಳೂರಿನಲ್ಲಿ ಹಿಂದೂಗಳಿಂದ ಮುಸ್ಲೀಮರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದರು. ಈ ವಿಚಾರವನ್ನು ಅನೇಕ ಜಿಲ್ಲಾ ಸದಸ್ಯರುಗಳು ಕೂಡಾ ತಿಳಿಸಿದರು. ಮಾನ್ಯ ಮಂತ್ರಿಗಳಾದ ಅಜೀಜ್ ಸೇಠ್‌ರವರು ಕೂಡಾ ನಮ್ಮ ಹೋಮ್ ಮಿನಿಸ್ಟರ್‌ಗೆ ಒಂದು ಪತ್ರ ಬರೆದಿದ್ದಾರೆ. ಮತ್ತು ನಮ್ಮ ಚೀಫ್ ವಿಪ್ ಆದ ಮಸೂದ್‌ರವರು ಕೂಡಾ ಪತ್ರ ಬರೆದಿದ್ದಾರೆ. ಮತ್ತು ಅನೇಕ ಪತ್ರಿಕೆಗಳಲ್ಲೂ ಕೂಡಾ ಈ ವಿಚಾರ ಪ್ರಕಟಣೆಯಾಗಿತ್ತು. ನಾನು ವಿಚಾರ ತಿಳಿದ ಕೂಡಲೇ ಮಂಗಳೂರಿಗೆ ಹೋದೆ; ಮಾನ್ಯ ವಿಜಯಕುಮಾರ್‌ರವರನ್ನೂ ಪರ್ಸನಲ್ ಆಗಿ ಕರೆದುಕೊಂಡು ಹೋಗಿದ್ದೆ, ತಮ್ಮ ಜಿಲ್ಲೆಯ ಸಮಸ್ಯೆ ಇದೆ ತಾವು ನೋಡ್ರಿ ಎಂದು. ಅಲ್ಲಿ ನಾನು ಎಲ್ಲಾ ಮುಸ್ಲಿಮ್ ವರ್ಗದ ಮತ್ತು ಇತರೆ ವರ್ಗದವರನ್ನು ಪ್ರತ್ಯೇಕವಾಗಿ ಕೇಳಿದೆ. ಏನಿದು ಪರಿಸ್ಥಿತಿ ಏಕೆ ಈ ತರಹ ಪತ್ರಿಕೆಗಳಲ್ಲಿ ಬಂತು ಎಂದು. ಇದು ನಿಜವೇ, ಸುಳ್ಳೇ. ಈ ಮಟ್ಟಕ್ಕೆ ಹೋಗಬಾರದೆಂದು ಹೇಳಿದೆ. ನಾನು ಬಹಳ ಪ್ರಾಮಾಣಿಕವಾಗಿ ಪ್ರತಿಯೊಬ್ಬರನ್ನೂ ಕರೆದು ಎನ್‌ಕ್ವೈಯರಿ ಮಾಡಿದೆ. ಅಂಥಾ ಸಂದರ್ಭ ಏನೂ ಆಗಿಲ್ಲ. ಆದರೆ, ಒಳಗಡೆ ಅವರು ಇವರನ್ನು ರೇಗಿಸುತ್ತಿದ್ದಾರೆಂದು ತಿಳಿದು ಬಂತು. ಇನ್ನು ಮುಂದೆ ತೊಂದರೆ ಆಗಬಹುದು ಅನ್ನುವ ಶಂಕೆ ಇದೆ ಎಂದು ಕೆಲವರು ಹೇಳಿದರು.

ಈ ಬಗ್ಗೆ ಎಲ್ಲಾ ಅಧಿಕಾರಿಗಳಿಗೆ ಮತ್ತು ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ನಾನು ಆದೇಶವನ್ನು ಕೊಟ್ಟು ಬಂದಿದ್ದೇನೆ. ಅಂಥಾ ತೊಂದರೆ ಮುಂದೆ ಆಗಲಿಕ್ಕೆ ಬಿಡುವುದಿಲ್ಲ.

ಇದು ತನಕವೂ ಅಂಥ ಪ್ರಕರಣವೇನೂ ಆಗಿಲ್ಲ, ಮುಂದಕ್ಕೆ ಆಗಲು ಬಿಡುವುದೂ ಇಲ್ಲವೆಂಬ ಆಶ್ವಾಸನೆಯನ್ನು ಕೊಡುತ್ತಾ ಈ ಒಂದು ಬೇಡಿಕೆಗೆ ಉತ್ತರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಂಡು, ಅವಕಾಶ ಕೊಟ್ಟ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸಹಕಾರ ಕೊಟ್ಟ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ. ಕೋಲಾರ ಜಿಲ್ಲೆಯಲ್ಲಿ ಸೆಪ್ಟೆಂಬರ್ ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ನಡೆದ ಕೋಮುಗಲಭೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯುಸುತ್ತೇನೆ. ಅದೇ ಸಮಯದಲ್ಲಿ ಮುಳಬಾಗಿಲು, ಶಿಡ್ಲಘಟ್ಟ, ರಾಮನಗರ, ಚೆನ್ನಪಟ್ಟಣ ಮತ್ತು ದಾವಣಗೆರೆ ಮುಂತಾಗಿ ಅನೇಕ ಕಡೆಗಳಲ್ಲಿ ಕೋಮುಗಲಭೆಗಳು ನಡೆಯಿತು. ಆ ಸಂದರ್ಭದಲ್ಲಿ ಹಾಕಿದ ಕೋಮುಗಲಭೆ ಕೇಸ್‌ಗಳು ಇನ್ನೂ ಪೆಂಡಿಂಗ್‌ನಲ್ಲಿ ಇವೆ. ನಾನು ಸುಮಾರು 10-12 ಸಲ ಮಾನ್ಯ ಗೃಹಸಚಿವರನ್ನು ಭೇಟಿಯಾಗಿದ್ದೆನು. ಡಿಜಿಯವರ ಹತ್ತಿರ ಕೂಡ 2-3 ಸಲ ಹೋಗಿದ್ದೆ. ನಮ್ಮ ಡಿಜಿಯವರು ಇತರ ಉನ್ನತ ಅಧಿಕಾರಿಗಳು ಎಲ್ಲರೂ ಒಳ್ಳೆಯವರು ಇದ್ದಾರೆ. ಅವರುಗಳು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಫೋನ್ ಮಾಡಿ ಹೇಳಿದ್ದಾರೆ. ಆದರೆ ಕೆಳಕಡೆ ಇರತಕ್ಕಂಥ ಅಧಿಕಾರಿಗಳು ಫೈಲ್‌ಗಳನ್ನು ಒಂದು ವರ್ಷದಿಂದಲೂ ಹಾಗೆಯೇ ಇಟ್ಟುಕೊಂಡಿದ್ದಾರೆ. ಸುಮಾರು 106 ಕೇಸ್‌ಗಳು ಇವೆ. ಕೋಮುಗಲಭೆ ಸಂದರ್ಭದಲ್ಲಿ ಹುಡುಗರು ಉದ್ರೇಕಕ್ಕೆ ಒಳಗಾಗಿ ಏನೋ ತಪ್ಪುಗಳನ್ನು ಮಾಡಿರಬಹುದು; ಅಂಥವರ ಮೇಲೆ ಇರುವ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದೇನೆ. ನಾನು ಆ ಬಗ್ಗೆ ಮಾನ್ಯ ಗುರುಮೂರ್ತಿಯವರಿಗೂ ಕೂಡ ಪತ್ರವನ್ನು ಬರೆದಿದ್ದೇನೆ. No other case in respect of withdrawal orders is pending. ಈ ಪತ್ರವು ನನಗೆ 24-1-92ರಂದು ಬಂದಿದೆ. ಆದರೆ ಇವೊತ್ತು ಸುಮಾರು 61 ಕೇಸ್‌ಗಳು ಬಾಕಿ ಇವೆ. ನಾನು ಈ ಬಗ್ಗೆ ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಈಗ ಈ ತರಹದ ಪ್ರಕರಣಗಳು ಯಾವ ಸ್ಟೇಜಿಗೆ ಬಂದಿವೆ ಅಂದರೆ, ಈಗ ನಾವುಗಳೆಲ್ಲರೂ ಶಾಂತಿಯಿಂದ ಇದ್ದೇವೆ. ಈಗ ಎವಿಡೆನ್ಸ್ ಸ್ಟೇಜಿಗೆ ಬಂದಿದ್ದು ಒಬ್ಬರ ಮೇಲೆ ಮತ್ತೊಬ್ಬರು ದೂರು ಹೇಳಿಕೊಂಡು ಪುನಃ ಎಲ್ಲಿ ಕೋಮು ಗಲಭೆ ಪ್ರಾರಂಭವಾಗುತ್ತದೋ ಏನೋ ಎಂಬ ಆತಂಕ ಬಂದುಬಿಟ್ಟಿದೆ. ಯಾರು ಜಮಿನಾನ್ದಾರರು ಇದ್ದಾರೋ ಅವರ ಜಮಿನಾನನ್ನು ಹರಾಜು ಹಾಕುವ ಸ್ಟೇಜಿಗೆ ಬಂದಿದೆ. ಮಾನ್ಯ ಗೃಹಸಚಿವರು ಈ ಬಗ್ಗೆ ನಿಗಾವಹಿಸಿ ಡಿಲೇ ಮಾಡದೇ ಈ ಕೇಸ್‌ಗಳ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಮುಳಬಾಗಿಲು ಟೌನ್ ಲಾಕ್‌ಅಪ್ ಏನಿದೆ ಅದು ಬಹಳ ಇಕ್ಕಟ್ಟಾಗಿದೆ. ಹಂದಿಗೂಡು ಇದ್ದ ಹಾಗೆ ಅದು ಇದೆ. 1947ನೇ ಇಸವಿಯಲ್ಲಿ ಅದೇ ಲಾಕ್‌ಅಪ್‌ನಲ್ಲಿ ನನ್ನನ್ನು ಸೇರಿಸಿ 11 ಜನರನ್ನು ಹಾಕಿದ್ದರು. ನಾವು ಆಗ ರಾಜಕೀಯ ಪ್ರಿಸನರ್ಸ್ ಆಗಿದ್ದೆವು. ಪೋಲೀಸ್ ಸ್ಟೇಶನ್ ಲೂಟಿ ಪ್ರಕರಣದ ಕೇಸ್‌ನ್ನು ನಮ್ಮ ಮೇಲೆ ಹಾಕಿದ್ದರು. ಅಲ್ಲಿಂದ ಮುಂದೆ ಕೋಲಾರ ಜೈಲಿಗೆ ಕಳುಹಿಸಿದ್ದರು. ಆ ಜೈಲ್‌ನಲ್ಲಿ ಕೂಡ ಎಂದೋ ಮೇಲ್ಭಾಗದಲ್ಲಿ ಇದೆ. ಅದೊಂದು ಕತ್ತಲೆ ಕೋಣೆ ಇದ್ದಾ ಹಾಗೆ ಇದೆ. That is 45 years back. We went to Kolar Jail for a month. No doubt they should be confined in Jail but not like pigs. It should not be black house... ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕೋಲಾರ ಮತ್ತು

ಮುಳಬಾಗಿಲು ಟೌನ್‌ನ ಜೈಲುಗಳನ್ನು ಸರಿಪಡಿಸಬೇಕು. ಇತ್ತೀಚೆಗೆ ಕೂಡ ಅದನ್ನು ನೋಡಲೆಂದು ನಾವು ಹೋಗಿದ್ದೆವು. 45 ವರ್ಷಗಳ ಹಿಂದೆ ಹೇಗೆ ಇತ್ತೋ ಈಗಲೂ ಹಾಗೆಯೋ ಇದೆ. ಅಲ್ಲಿ ಸೂಕ್ತ ರಿಪೇರಿ ಕಾರ್ಯವನ್ನು ಕೈಗೊಳ್ಳಬೇಕು ಹಾಗೂ ಸರಿಯಾದ ಗಾಳಿ ಬೆಳಕು ಬರುವಂತೆ ಮಾಡಬೇಕು.

I have to congratulate some of the Police Officers in Bangalore City because they have solved the traffic problem in Hudson Circle and also in Richmond Circle. I have to congratulate them.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ಅಬ್ಕಾರಿ ಇಲಾಖೆಯ ವಾರ್ಷಿಕ ವರದಿ. 1991-92ರ 16ನೇ ಪೇಜ್‌ನಲ್ಲಿ ಗುಲ್‌ಬರ್ಗ ಜಿಲ್ಲೆಯ ಗುಲ್‌ಬರ್ಗ, ಚಿಂಚೋಳಿ ಮತ್ತು ಸೇಡಂಗಳಲ್ಲಿ ಸೇಂದಿ ಮಾರಾಟ ಮಾಡಲು ಮಂಜೂರು ಮಾಡಿದ್ದಾರೆ. ಇದನ್ನು ಪೂರ್ತಿಯಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಏತಕ್ಕಾಗಿ ಮಂಜೂರು ಮಾಡಿಲ್ಲ? ನನಗೆ ಗೊತ್ತಿರುವ ಹಾಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬಹಿರಂಗವಾಗಿ ಶೇಂದಿ ಮಾರಾಟವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ? ಇದನ್ನು ಏತಕ್ಕೆ ತಡೆದಿಲ್ಲ ಮತ್ತು ಕೋಟ್ಯಾಂತರ ರೂಪಾಯಿಗಳ ಹಣವು ಸರಕಾರಕ್ಕೆ ಬರುವುದು ತಪ್ಪಿ ಹೋಗುತ್ತಿದೆಯಲ್ಲ, ಅದನ್ನು ಏಕೆ ಗಮನಿಸಿಲ್ಲ? ಆದ್ದರಿಂದ ಇದನ್ನು ಎಲ್ಲಾ ತಾಲ್ಲೂಕುಗಳಿಗೂ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸೇಡಂ ತಾಲ್ಲೂಕಿನಲ್ಲಿ ಬೃಹತ್ ಸಿಮೆಂಟ್ ಕಾರ್ಖಾನೆಯು ಇದ್ದು ಅಲ್ಲಿನ ಜನಸಂಖ್ಯೆ ಕೂಡ ಹೆಚ್ಚಾಗುತ್ತಾ ಬರುತ್ತಿದೆ.

ಆದರೆ ಈ ತಾಲ್ಲೂಕಿನಲ್ಲಿ ಕೇವಲ ಮೂರೇ ಮೂರು ಪೋಲೀಸ್ ಠಾಣೆಗಳಿವೆ. ಭಿಗಿ ಬಂದೋಬಸ್ತಿಗಾಗಿ ಕಡಿಮೆ ಪೋಲಿಸಿರಿದ್ದ ಕಾರಣ ಆಂಧ್ರದಿಂದ ತೆಲುಗು ಮಾತನಾಡುವ ನಕ್ಸಲೀಯರು ಬಂದು ದರೋಡೆ ಮಾಡಿದ್ದಾರೆ. ಅಲ್ಲದೆ ಕಾರ್‌ಗಳನ್ನು ಲಾರಿಗಳನ್ನು ನಿಲ್ಲಿಸಿ ದರೋಡೆ ಮಾಡಿದ್ದಾರೆ. ಅಲ್ಲದೆ ಇಳ್ಕಲ್‌ನಲ್ಲಿ ಕೊಲೆ ಮಾಡಿ ಪೋಲೀಸರಿಗೆ ಗುರ್ತಿಲ್ಲದೆ ಮಣ್ಣು ಸಹ ಮಾಡಿದ್ದಾರೆ. ಇದೇ ಪ್ರಕಾರ ಮಲ್ಕೇಡ್ ದೊಡ್ಡ ಗ್ರಾಮವಾಗಿ ಸುತ್ತಮುತ್ತಲೂ ಸಿಮೆಂಟ್ ಕಾರ್ಖಾನೆ ಇದ್ದ ಕಾರಣ ಮಲ್ಕೇಡ್ ಹಾಗೂ ಆಂಧ್ರ ಗಡಿಪ್ರಾಂತದಲ್ಲಿರುವ ಮೇಡಕ್‌ನಲ್ಲಿ ಪೋಲೀಸ್ ಠಾಣೆಗಳನ್ನು ತೆರೆಯಬೇಕೆಂದು ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಡಿ ಪ್ರದೇಶಗಳಿವೆ. ಉಳ್ಳಾಲದಲ್ಲಿ ಗಡಿಪ್ರದೇಶ ಹಾಗೂ ವಿಟ್ಲದಲ್ಲಿ ಗಡಿ ಪ್ರದೇಶ ಇದೆ. ಈ ಪ್ರದೇಶಗಳಿಂದ ಸಾಧಾರಣವಾಗಿ ಪ್ರತಿದಿನವೂ ಗಂಧದ ಮರಗಳು ಕಳ್ಳಸಾಗಾಣಿಕೆ ನಡೆಯುತ್ತಾ ಇದೆ. ಹಾಗಿರುವಾಗ 10 ಲೋಡ್ ಹೋದರೂ ಒಂದು ಲೋಡ್ ಹಿಡಿದು ನಾವು ಹಿಡಿದಿದ್ದೇವೆಂದು ಪತ್ರಿಕೆಯಲ್ಲಿ ಹಾಕಿಸುತ್ತಿದ್ದರೆ ನಾವು ಹೌದು ಅಂತಲೇ ಭಾವಿಸುವುದು. ನೋಡಿದರೆ ಒಳಗಿನಿಂದ 10 ಲೋಡ್ ಹೋಗಿರುತ್ತದೆ. ಆದ್ದರಿಂದ ಬಹಳ ಬಲವಾಗಿ ಕಳ್ಳಸಾಗಣಿಕೆಯಾಗುವ ಗಂಧದಮರಗಳನ್ನು ಹಿಡಿಯಲು ಒಂದು ವಿಶೇಷ ವ್ಯವಸ್ಥೆ ಮಾಡಬೇಕು. ಅದೇ ರೀತಿಯಲ್ಲಿ ಬೆಂಗಳೂರು ಬಿಟ್ಟರೆ ಮಂಗಳೂರಿನ ಹೋಟೆಲ್‌ಗಳಲ್ಲಿ ಕ್ಯಾಬರೆ ಮುಂತಾದ ಅನೈತಿಕ ವ್ಯಾಪಾರ ಜಾಸ್ತಿಯಾಗುತ್ತಿದೆ ಎಂದು ಜನರ ದೂರು ದಿನನಿತ್ಯ ಕೇಳಿ ಬರುತ್ತಿದೆ. ಇದನ್ನು ಹಿಡಿಯುವ ಪರಿಸ್ಥಿತಿ ಬಹಳ ಕಮ್ಮಿ. ಅದರಿಂದಾಗಿ ವಿಶೇಷವಾಗಿ ಜನರ ನೈತಿಕಮಟ್ಟ ಕುಸಿಯುತ್ತಿದೆ. ಜನರು ಒಳ್ಳೆಯ ಗುಣದಲ್ಲಿ ನಡೆಯುವ ಹಾಗೆ ಆಗಬೇಕಾದರೆ ಪೋಲೀಸರು ರೇಡ್ ಮಾಡಿ ಇದನ್ನೆಲ್ಲ ಹಿಡಿಯುವಂತಹ ವ್ಯವಸ್ಥೆ ಮಾಡಬೇಕು. ಮತ್ತೊಂದು ವಿಷಯ ಅಂದರೆ, ಸುಳ್ಯದಲ್ಲಿ ಕೋಮುಗಲಭೆಯಾದಾಗ ಅನೇಕ ಸುಳ್ಳುಕೇಸ್‌ಗಳನ್ನು ಮುಸಲ್ಮಾನರ ಮೇಲೆ ಹಾಕಿದ್ದಾರೆ. ಆದ್ದರಿಂದ ಅವನ್ನೂ ಕೂಡ ತಾವು ವಿತ್‌ಡ್ರಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಇತ್ತೀಚೆಗೆ ಖಾದಿ, ಖಾಕಿ ಮತ್ತು ಕಾವಿಯ ಬಗ್ಗೆ ಜನರಲ್ಲಿ ಜಿಗುಪ್ಸೆ ಬಹಳ ಜಾಸ್ತಿಯಾಗ್ತಾ ಇದೆ. ಇದು ತಪ್ಪಬೇಕು. ಖಾಕಿ ಬಟ್ಟೆಯವರು ಸರಿಯಾಗಿ ಕೆಲಸ ನಿರ್ವಹಿಸಿದರೆ ಅನೇಕ ಅನಾಚಾರಗಳನ್ನು ತಪ್ಪಿಸಬಹುದು. ವಿಐಪಿಸ್ ಬಂದಾಗ ಪಿಸಿಗಳನ್ನು ರಸ್ತೆ ಪಕ್ಕ ಒಳ್ಳೆಯ ಸಾಲುಮರದಂತೆ ನಿಲ್ಲಿಸಿಬಿಡುತ್ತಾರೆ. ಅದರ ಅವಶ್ಯಕತೆ ಆದರೂ ಏನು? ಅವರಿಗೆ ನಿಲ್ಲಲು ನೆರಳಿರೋಲ್ಲ; ಕುಡಿಯಲು ನೀರಿರೋಲ್ಲ, ಊಟ ಇರೋಲ್ಲ; ಆ ಪಿಸಿಗಳು ನಿಂತಿರೋದು ನೋಡಿದರೆ ನಮಗೆ ಅಯ್ಯೋ ಅನ್ನಿಸುತ್ತದೆ. ಇವತ್ತಿನ ಪರಿಸ್ಥಿತಿಗೆ ಇದು ಔಟ್ ಆಫ್ ಡೇಟ್ ಅಂತ ಹೇಳಬಹುದು. ಈ ಓಬೇರಾಯನ ಕಾಲದ ಪದ್ಧತಿಯನ್ನು ತಾವು ತಪ್ಪಿಸಬೇಕು. ಏಕೆಂದರೆ ವಿ.ಐ.ಪಿ. ಗಳಿಗೆ ಅಂಗರಕ್ಷಕರಿರುತ್ತಾರೆ. ಆಮೇಲೆ ಗ್ರಾಮೀಣ ಪ್ರದೇಶದಲ್ಲಿ ಚಿಕ್ಕಚಿಕ್ಕ ಊರುಗಳಲ್ಲಿ ಬೆಂಗಳೂರಿನಲ್ಲಿ ಗ್ಯಾಂಬ್ಲಿಂಗ್ ಹಾಗೂ ಡ್ಯಾನ್ಸ್ ಬಹಳ ಜಾಸ್ತಿಯಾಗ್ತಾ ಇದೆ. ಇದರಿಂದ ನಮ್ಮ ಯುವಪೀಳಿಗೆ ಹಾಳಾಗುತ್ತದೆ. ಇದರ ಬಗ್ಗೆ ಕೂಡ ತಾವು ಸಾಕಷ್ಟು ಗಮನಕೊಡಬೇಕು. ಮತ್ತೆ ಕಾವೇರಿ ಗಲಾಟೆಯಲ್ಲಿ prevention would have been better than cure ಎಂಬಂತೆ a step in time would have saved so many lives. ತಮ್ಮ ಇಲಾಖೆಯವರು ಆ ನಿಟ್ಟಿನಲ್ಲಿ ಸರಿಯಾಗಿ ಕೆಲಸ ನಿರ್ವಹಿಸಿಲ್ಲ ಎಂದು ನಾನು ಹೇಳೋದಿಕ್ಕೆ ಬಯಸುತ್ತೇನೆ. ಕೆ.ಆರ್. ಸಾಗರ ಮತ್ತು ಶ್ರೀರಂಗಪಟ್ಟಣಕ್ಕೆ ವಿ.ಐ.ಪಿಸ್ ಸತತವಾಗಿ ಬರುವುದರಿಂದ ಅಲ್ಲಿರುವ ಪೋಲೀಸ್ ಸ್ಟಾಫ್‌ಗೆ ಬಿಡುವೇ ಇರೋಲ್ಲ. ಅನೇಕ ಸಲ ಅಲ್ಲಿನ ಪೋಲೀಸ್ ಸ್ಟೇಷನ್‌ನಲ್ಲಿ ಜವಾಬ್ದಾರಿಯುತರಾದ ಪೋಲೀಸ್ ಆಫೀಸರ್ಸ್ ಕೂಡ ಇರೋದಿಲ್ಲ. ಮೇಲ್ಕೋಟೆ ಜಾತ್ರೆ ಮತ್ತು ಚುಂಚನಗಿರಿ ಜಾತ್ರೆ, ಹೀಗೆ ಒಂದಲ್ಲ ಒಂದು ನಡೆಯುವುದರ ಜೊತೆಗೆ ಕೆ.ಆರ್.ಎಸ್., ಶ್ರೀರಂಗಪಟ್ಟಣಕ್ಕೆ ವಿ.ಐ.ಪಿ.ಸ್‌ಗಳು ಬರುವುದೂ ಜಾಸ್ತಿ ಆದ್ದರಿಂದ ತಾವು ಆ ಪೋಲೀಸ್ ಸ್ಟೇಷನ್ನಿಗೆ ಹೆಚ್ಚಿನ ಸಿಬ್ಬಂದಿ ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಕಾಳಮರಿಗೌಡ : ಗೃಹ ಇಲಾಖೆಗೆ ಸಂಬಂಧಿಸಿದಂತೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಕರ್ನಾಟಕದಲ್ಲಿ ಫೋರೆನ್‌ಸಿಕ್ ಸೈನ್ಸ್ ಲ್ಯಾಬರೇಟರಿ ಅಂತ ಇದೆ. ಇದರಲ್ಲಿ ರಾಜ್ಯದ ಯಾವ ಭಾಗದಲ್ಲೇ ಮರ್ಡರ್ ಆಗಿರಬಹುದು, ಅಕ್ಸಿಡೆಂಟ್ ಆಗಿರಬಹುದು, ಇಂಥಾದ್ದು ಇಲ್ಲಿ ಚೆಕ್ ಅಪ್ ಆಗಿ ಯಾವ ರೀತಿ ಸತ್ತಿದ್ದಾರೆ. ವಿಷ ಕುಡಿದು ಸತ್ತಿದ್ದಾರೋ. ಆಕ್ಸಿಡೆಂಟ್ ಆಗಿ ಸತ್ತಿದ್ದಾರೋ ಎಂದು ರಿಪೋರ್ಟ್ ಹೋದ ಮೇಲೆ ಪೋಲೀಸಿನವರು ಕೇಸ್ ಹಾಕುತ್ತಾರೆ. ಇಲ್ಲದೆ ಹೋದರೆ ವಜಾ ಮಾಡುತ್ತಾರೆ. ಇವತ್ತು

1.15 ಪಿ.ಎಂ.

ಕರ್ನಾಟಕ ರಾಜ್ಯದಲ್ಲಿ ಇಂಥ ಸುಮಾರು 10-15 ಸಾವಿರ ಕೇಸ್‌ಗಳಿವೆ ಎಂದು ನಾವು ಕೇಳಿದ್ದೇವೆ. ಒಂದು ವರ್ಷವಾದರೂ ಕೂಡ ಏಳು ಎಂಟು ಸಾವಿರ ಕೇಸ್‌ಗಳು ಪೆಂಡಿಂಗ್ ಇರತಕ್ಕಂಥದ್ದು ಇದೆ. ಕರ್ನಾಟಕ ರಾಜ್ಯದಲ್ಲಿ ಈಗ ಇದು ಒಂದೇ ಒಂದು ಬೆಂಗಳೂರಿನಲ್ಲಿ ಲ್ಯಾಬೋರೇಟರಿ ಇರತಕ್ಕಂಥದ್ದು. ಆದಕ್ಕಾಗಿ ಪ್ರತಿಯೊಂದು ಡಿವಿಜನ್‌ನಲ್ಲೂ ಕೂಡ ಒಂದೊಂದನ್ನು ಏತಕ್ಕೆ ತೆರೆಯಬಾರದು? ಈ ರೀತಿ ಮಾಡಿದರೆ ಈಗ ರಿಪೋರ್ಟನ್ನು ಕೊಡುವುದು ಒಂದು ವರ್ಷ ತಡವಾಗುವುದಕ್ಕೆ ಬದಲಾಗಿ 15-20 ದಿವಸದಲ್ಲಿ ರಿಪೋರ್ಟನ್ನು ಕೊಡಬಹುದು. ಸುಲಭವಾದಂಥ ಇಂಥ ಒಂದು ವ್ಯವಸ್ಥೆಯನ್ನು ಏತಕ್ಕೆ ಜಾರಿ ಮಾಡಬಾರದು?

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಗೃಹ ಮಂತ್ರಿಗಳು ವಿದ್ಯಾರ್ಥಿಗಳ ಮೇಲೆ ಮತ್ತೆ ಬೇರೆ ರೈತರ ಮೇಲೆ ಹಾಕಿರತಕ್ಕಂಥ ಕೇಸುಗಳನ್ನು ನಾವು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಈಗಾಗಲೇ ಹೇಳಿದ್ದಾರೆ. ಮೊನ್ನೆ ಕಳೆದ ಒಂದೂವರೆ ತಿಂಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ 100-150 ವಿದ್ಯಾರ್ಥಿಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಈಗ ಆ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯ ಬೇರೆ.

ಆದರೂ ವಾರಕ್ಕೆ ಒಂದು ಸಾರಿ ಅವರು ಕೋರ್ಟ್ ಕೇಸ್‌ಗೆ ಹೋಗಬೇಕಾಗಿದೆ. ಆದುದರಿಂದ ಆ ಕೇಸುಗಳನ್ನು ತತ್‌ಕ್ಷಣ ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟವರಿಗೆ ಆದೇಶವನ್ನು ಕೊಡಬೇಕು ಎಂದು ಮಾನ್ಯ ಗೃಹ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಹಾಗೆಯೇ ಅವರು ತಾಲ್ಲೂಕಿಗೆ ಒಂದರಂತೆ ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಕೊಡುತ್ತೇವೆ ಎಂದು ಕಳೆದ ಸಾರಿ ಕೂಡ ಹೇಳಿದ್ದರು. ಆ ಒಂದು ಸಲಹೆ ಕೂಡ ಸರ್ಕಾರದ ಆಲೋಚನೆಯಲ್ಲಿದೆ ಎಂದು ಹೇಳಿದ್ದರು. ಈ ಸಾರಿ ಇದೇ ತಿಂಗಳಲ್ಲಿ ನನ್ನ ತಾಲ್ಲೂಕಿನಲ್ಲಿ ನಾಲ್ಕು ಫೈರ್ ಆಕ್ಸಿಡೆಂಟ್‌ಗಳಾಗಿ ಎಲ್ಲಾ ಗುಡಿಸಲುಗಳು, ಹುಲ್ಲಿನ ಬಣವೆಗಳೆಲ್ಲಾ ಸಂಪೂರ್ಣವಾಗಿ ಸುಟ್ಟುಹೋಗಿವೆ. ಈಗ ನಮ್ಮ ಜಿಲ್ಲೆಯಲ್ಲಿ ದಾವಣಗೆರೆ, ಚಿತ್ರದುರ್ಗ ಬಿಟ್ಟರೆ ಬೇರೆ ಎಲ್ಲಿಯೂ ಕೂಡ ಅಗ್ನಿಶಾಮಕ ದಳದ ಸಿಬ್ಬಂದಿ ಇಲ್ಲ. ಅವರು ಏನಾದರೂ ತಾಲ್ಲೂಕ್ ಕೇಂದ್ರಕ್ಕೆ ಬರಬೇಕು ಎಂದು ಹೇಳಿದರೆ ಸಂಪೂರ್ಣವಾಗಿ ಎಲ್ಲವೂ ಸುಟ್ಟುಬೂದಿಯಾದ ಮೇಲೆ ಬರುತ್ತಾರೆ. ಅದಕ್ಕಾಗಿ ತಾಲ್ಲೂಕಿಗೆ ಒಂದರಂತೆ ಈ ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಕೊಡಬೇಕು ಎಂದು ಮಾನ್ಯ ಗೃಹಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷಣಿಯವರೇ, ತಮ್ಮ ಮೂಲಕ ಗೃಹಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳಾ ಅಪರಾಧಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಬೆಂಗಳೂರು ಮತ್ತು ಕೆಲವು ಪಟ್ಟಣಗಳನ್ನು ಬಿಟ್ಟರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸ್ಥಳಗಳಲ್ಲಿರುವ ಪೋಲೀಸ್ ಠಾಣೆಗಳಲ್ಲಿ ಮಹಿಳಾ ಪೇದೆಗಳನ್ನು ಅಪಾಯಿಂಟ್ ಮಾಡಿಲ್ಲ. ಮಹಿಳಾ ಪೇದೆಗಳನ್ನು ಅಪಾಯಿಂಟ್ ಮಾಡಿದರೆ ಅವರು ಮಹಿಳಾ ಅಪರಾಧಿಗಳನ್ನು ನೋಡಿಕೊಳ್ಳುತ್ತಾರೆ. ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಪೋಲೀಸ್ ಠಾಣೆಗಳು ಸಪರೇಟ್ ಆಗಿಲ್ಲ. ಇದರಿಂದಾಗಿ ಇಂಟರಾಗೇಷನ್, ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ತೊಂದರೆಯಾಗುತ್ತದೆ. ವಿಶೇಷವಾಗಿ ನೆಲಮಂಗಲದಲ್ಲಿಯಂತೂ ಖಾಲಿ ಜಾಗ ಇದೆ. ಅಲ್ಲಿ ಸೆಪರೇಟ್ ಆಗಿ ಪೋಲೀಸ್ ಠಾಣೆಯನ್ನು ಕೇಳಿದ್ದೇನೆ. ಇದುವರೆಗೂ ಆಗಿಲ್ಲ. ಅದನ್ನು ಮಾಡಬೇಕು. ಮತ್ತೆ ಅದೇ ರೀತಿಯಲ್ಲಿ ಅಗ್ನಿಶಾಮಕ ದಳದ ಬಗ್ಗೆ ಹೇಳಬೇಕೆಂದರೆ ನೆಲಮಂಗಲದಲ್ಲಿ ಮೊನ್ನೆ ನಾಲ್ಕು ದಿವಸದಲ್ಲಿ ಫೈರ್ ಆಕ್ಸಿಡೆಂಟ್ ಆಯಿತು. ಸುಮಾರು ಲಕ್ಷಗಟ್ಟಲೆ ರೂಪಾಯಿಯಷ್ಟು ಆಸ್ತಿ ನಾಶವಾಯಿತು. ಆದ್ದರಿಂದ ಅಲ್ಲಿ ವಿಶೇಷವಾಗಿ ಅಗ್ನಿಶಾಮಕ ಕೇಂದ್ರವನ್ನು ತೆರೆಯಬೇಕು ಎಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷಿಣಿಯವರೇ, ಪೋಲೀಸ್ ಇಲಾಖೆಯಲ್ಲಿ ಕೆಳದರ್ಜೆಯ ಸ್ಟಾಫ್ ಅಂದರೆ ಕಾನ್‌ಸ್ಟೇಬಲ್‌ಗಳು ಬಹಳ ಕಡಿಮೆ ಇದ್ದಾರೆ. ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲೂ ಇದೇ ರೀತಿಯಾಗಿದೆ. ಆದರೆ ಅತ್ಯುನ್ನತ ಅಧಿಕಾರಿಗಳ ಪೋಸ್ಟ್‌ಗಳನ್ನು ಸಿಕ್ಕಾಪಟ್ಟೆ ಹೆಚ್ಚಿಗೆ ಮಾಡಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ಎಷ್ಟು ಡಿಜಿಪಿ ಪೋಸ್ಟ್‌ಗಳು ಇವೆ, ಎಷ್ಟು ಐಜಿ ಪೋಸ್ಟ್‌ಗಳು ಇವೆ? ಇದರ ಅವಶ್ಯಕತೆ ಇದೆಯೇ? ಇವುಗಳಲ್ಲಿ ಒಂದು ಉನ್ನತ ಮಟ್ಟದ ಅಧಿಕಾರಿಗಳ ಪೋಸ್ಟ್‌ಗಳನ್ನು ನೀವು ತೆಗೆದರೆ ಸುಮಾರು ನೂರು ಕಾನ್‌ಸ್ಟೇಬಲ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳಬಹುದು. ಅದಕ್ಕೆ ದಯಮಾಡಿ ಅತ್ಯುನ್ನುತ ಉನ್ನತ ಹುದ್ದೆಗಳನ್ನುಕಡಿಮೆ ಮಾಡಿ ಹೆಚ್ಚು ಹೆಚ್ಚು ಕಾನ್‌ಸ್ಟೇಬಲ್‌ಗಳನ್ನು ನೇಮಕ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರದಲ್ಲಿ ಏನಾದರೂ ಯೋಚನೆ ಇದೆಯೇ? ಇದು ಒಂದು. ಎರಡನೆಯದಾಗಿ ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಾ ಕನಿಷ್ಟಪಕ್ಷ ಎರಡು ಮಹಿಳಾ ಪೇದೆಗಳು ಇರುವಂಥ ವ್ಯವಸ್ಥೆ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ? ಮತ್ತು ಫೈರ್ ಸ್ಟೇಷನ್‌ನ್ನು ರಾಣಿಬೆನ್ನೂರ್ ನಗರಕ್ಕೆ ಕೊಡುವ ಬಗ್ಗೆ ಅನೇಕ ಸಂದರ್ಭದಲ್ಲಿ ನಾನು ವಿನಂತಿಯನ್ನು

ಮಾಡಿಕೊಂಡೆ. ಸುಮಾರು ನಾಲ್ಕು ಕೋಟಿ ರೂಪಾಯಿ ಬೆಲೆಯ ಹತ್ತಿ ಹೋದ ವರ್ಷ ಸುಟ್ಟು ಹಾಳಾಗಿ ಹೋಗಿದೆ. ಅದಕ್ಕೋಸ್ಕರ ರಾಣಿಬೆನ್ನೂರ್ ನಗರಕ್ಕೆ ಒಂದು ಫೈರ್ ಸ್ಟೇಷನ್‌ನ್ನು ಕೂಡಲೇ ಮಂಜೂರು ಮಾಡತ್ತೀರಾ?

ಶ್ರೀ ಎನ್.ಜಿ. ನಾಯಕ್ : ನಾನು ನಮ್ಮ ಕ್ಷೇತ್ರಕ್ಕೆ ಒಂದು ಪೋಲೀಸ್ ಠಾಣೆಯನ್ನು ಕೊಡಬೇಕೆಂದು 1984ರಲ್ಲಿಯೇ ಕೇಳಿಕೊಂಡಿದ್ದೆ. ಮಾನ್ಯ ಸಚಿವರು ಕೊಡುತ್ತೇವೆಂದು ವಾಗ್ದಾನವನ್ನು ಮಾಡಿದ್ದರು. ಆದರೆ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಗಡಿಪ್ರದೇಶವಾದ ನಮ್ಮ ಕ್ಷೇತ್ರದಿಂದ ಬೇಕಾದಷ್ಟು ಆಹಾರ ವಸ್ತುಗಳು ಆಂಧ್ರಕಡೆಗೆ ಹೋಗುತ್ತಿದೆ. ಇದನ್ನು ತಡೆಯಲು ಈ ವರ್ಷವಾದರೂ ನಮ್ಮ ಕ್ಷೇತ್ರವನ್ನು ಗಣನೆಗೆ ತೆಗೆದುಕೊಂಡು ಒಂದು ಪೋಲೀಸ್ ಠಾಣೆಯನ್ನು ನಮ್ಮ ಕ್ಷೇತ್ರಕ್ಕೆ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚವಾಣ್ : ನಾನು ಕೆಲವು ಸಲಹೆಗಳನ್ನು ಮಾನ್ಯ ಗೃಹಮಂತ್ರಿಗಳಿಗೆ ಕೊಡಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಕೆಲವು ಫ್ಯಾಕ್ಟರಿಗಳು ಏನಿವೆ. ಆ ಫ್ಯಾಕ್ಟರಿಗಳ ಮಾಲೀಕರುಗಳು ಜನಗಳ ಮೇಲೆ ಹಾಗೂ ಕಾರ್ಮಿಕರ ಮೇಲೆ ಹೆಚ್ಚಿಗೆ ಕೇಸನ್ನು ಹಾಕುತ್ತಿದ್ದಾರೆ. ಕಾರ್ಮಿಕರನ್ನು ಒಂದು ಹತೋಟಿಗೆ ತರಲು ಅವರಿಗೆ ಹೊಡೆದು ಬಡಿದು ಫ್ಯಾಕ್ಟರಿಯ ಆಡಳಿತ ಮಂಡಲಿಯವರು ಕಾರ್ಮಿಕರ ಮೇಲೆ ಕೇಸುಗಳನ್ನು ಹಾಕುತ್ತಿದ್ದಾರೆ. ಜನರು ಏನಾದರು ಅವರ ಮೇಲೆ ಕೇಸ್ ಹಾಕಿದರೆ ಪೋಲೀಸಿನವರು ಕೇಸನ್ನು ತೆಗೆದುಕೊಳ್ಳುವುದಿಲ್ಲ. ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಮಂತ್ರಿಗಳು ಆದೇಶವನ್ನು ಕೊಡಬೇಕು. ಬೆಳ್ಳಕೆರೆ ತಾಲ್ಲೂಕ್‌ನ ದೇವನಹಳ್ಳಿ ಲಂಬಾಣಿ ತಾಂಡದ ಪ್ರಕರಣ ಮಾನ್ಯ ಮಂತ್ರಿಯವರಿಗೆ ಗೊತ್ತಿರಬೇಕು. ಮಾನ್ಯ ಶಿವಕುಮಾರ್ ಅವರಿಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿತ್ತು. ಏನೆಂದರೆ ಗುಲ್ಬರ್ಗ ಜೈಲಿಗೆ ಸುಮಾರು ಆರು ತಿಂಗಳ ಹಿಂದೆ ನಾನು ಭೇಟಿ ಕೊಟ್ಟಾಗ ಅಲ್ಲಿ ಇರತಕ್ಕ ಒಬ್ಬ ಖೈದಿಗೆ ತೋಟದ ಕೆಲಸವನ್ನು ಮಾಡಿಸಲಿಕ್ಕೆ ಹೊರಗಡೆ ಕರೆದುಕೊಂಡು ಹೋಗಿದ್ದರು. ಅವರು ಬರುವ ಸಮಯದಲ್ಲಿ ರೋಡ್‌ನಲ್ಲಿ ಆಕ್ಸಿಡೆಂಟ್ ಆಯಿತು. ಆಗ ಅವನ ಕೈ ಮುರಿದು ಹೋಯಿತು; ಅಂತಹ ಕೈದಿಗಳಿಗೆ ವಿಶೇಷವಾದಂತಹ ಸವಲತ್ತುಗಳನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಮತ್ತೆ ಗುಲ್ಬರ್ಗ ಜಿಲ್ಲೆಯಲ್ಲಿರತಕ್ಕ ಶಹಬಾದ್ ಪಟ್ಟಣದಲ್ಲಿ ಒಂದು ಅಗ್ನಿಶಾಮಕದಳದ ಕೇಂದ್ರವನ್ನು ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಹಾಸನ ಟೌನ್‌ನಲ್ಲಿ 75 ಸಾವಿರ ಪ್ರಜಾ ಸಂಖ್ಯೆ ಇದೆ. ಬಹುಶಃ 5 ಸಾವಿರಕ್ಕೋ 8 ಸಾವಿರಕ್ಕೋ ಒಂದೊಂದು ವೈನ್-ಷಾಪ್ ಹಾಗೂ ಸಾರಾಯಿ ಅಂಗಡಿ ತೆರೆಯಲು ಅನುಮತಿ ಕೊಡಬೇಕೆಂದು ರೂಲ್ಸ್ ಮಾಡಿಕೊಂಡು ಇಟ್ಟುಕೊಂಡಿದ್ದಾರಂತೆ; ಆದರೆ ಅಲ್ಲಿ ಈಗಾಗಲೇ 130 ಅಂಗಡಿಗಳುಇದ್ದಾವೆ. ಹಾಸನದ ಟೌನ್‌ನ ಯಾವ ದಿಕ್ಕಿಗೆ ಹೋದರು ಮೂರು ಮೂರು ಹೆಜ್ಜೆಗಳಿಗೆ ಒಂದೊಂದು ವೈನ್-ಷಾಪ್ ಇರುತ್ತವೆ. ಹೀಗಾದರೆ ಈ ದೇಶ ಉಳಿಯುತ್ತದಾ? ಜನರು ತಾವು ದುಡಿದದ್ದನ್ನೆಲ್ಲಾ ಇವರಿಗೆ ತಂದು ಕೊಟ್ಟರೆ ಅವರು ಹೆಂಡರು ಮಕ್ಕಳ ಗತಿ ಏನು? ಜೀವನ ಮಾಡುವುದು ಹೇಗೆ? ಹೆಂಗಸರು ಮಕ್ಕಳು ಪೇಟೆಯಲ್ಲಿ ತಿರುಗುವುದು ಹೇಗೆ? ಹೆಂಗಸರು ಮಕ್ಕಳು ಮಾನಮಾರ್ಯಾದೆಯಿಂದ ಬದುಕುವುದಾದರೂ ಹೇಗೆ? ಇದಕ್ಕೆ ಒಂದು ಇತಿಮಿತಿ ಇಲ್ಲವೇನು?

ಉಪಾಧ್ಯಕ್ಷಿಣಿಯವರು : ಅದಕ್ಕೆ ಏನು ಮಾಡಬೇಕು ಹೇಳಿ?

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಯಾವ ಕೆಲಸ ಮಾಡಿದರೂ ಇಂತಹ ಪಾಪದ ಕೆಲಸವನ್ನು ಇದುವರೆಗೂ ಮಾಡಿಲ್ಲ. ನನ್ನ ಜೀವನದಲ್ಲಿ ಇಂತಹ ಕೆಲಸವನ್ನು ಮಾಡಿಲ್ಲ. ನನ್ನ ಹತ್ತಿರ ಕೆಲವರು ನಾಲ್ಕು ಸಾರಿ ಬಂದು ವೈನ್-ಷಾಪ್ ಮಾರಾಟದ ಅಂಗಡಿ ತೆರೆಯಲು ಶಿಫಾರಸ್ಸು ಮಾಡಿ ಎಂದು ಪ್ರಾಣ ಹಿಂಡಿಬಿಟ್ಟರು. ನಿಮಗಾಗಿ ಇಷ್ಟು ಖರ್ಚು ಮಾಡಿದ್ದೇವೆ. ಇಷ್ಟು ಕಷ್ಟಪಟ್ಟಿದ್ದೇವೆ. ನಿಮ್ಮನ್ನು ಗೆಲ್ಲಿಸಿದ್ದೇವೆಂದು ಹೇಳಿದರು. ಅದಕ್ಕೆ ಇದನ್ನು ಹೇಳುವುದಿಲ್ಲ ಅಂತ ಅಂದೆ. ಹೇಳಲೇ ಬೇಕು ಅಂದ್ರು, ನೀವು ಓಟು ಕೊಟ್ಟಿದ್ದಕ್ಕೆ ಬೇಕಾದರೆ ಮಾರ್ಕೇಟಿಗೆ ನಡೆಯಿರಿ. ನೀವು ಸಹಾಯ ಮಾಡಿದ್ದೀರೆಂದು ಜನರೆದುರಿಗೆ ನಾನು ನಿಮ್ಮ ಕಾಲನ್ನು ಮುಟ್ಟಿ ನಮಸ್ಕಾರ ಮಾಡುತ್ತೇನೆ; ಆದರೆ ನಾನು ವೈನ್-ಷಾಪ್ ಮಾರಾಟದ ಅಂಗಡಿಗೆ ಮಾತ್ರ ರೆಕಮೆಂಡ್ ಮಾಡುವುದಿಲ್ಲ ಅಂತ ಹೇಳಿಕಳುಹಿಸಿದೆ. ಆಮೇಲೆ ಅವರು ಬೈದುಕೊಂಡು ಹೋದರು.

ಉಪಾಧ್ಯಕ್ಷಿಣಿಯವರು : ಈಗ ನೀವು ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ : ಕ್ಲಾರಿಫಿಕೇಶನ್ ಕೇಳುತ್ತೇನೆ. ಈ ರೂಲ್ಸ್ ಮಾಡಿರುವುದು ಏತಕ್ಕೆ? ಈ ರೂಲ್ಸ್ ಇದ್ದರೂ ಈ ರೀತಿ ಮಾಡಿ ಸರ್ವನಾಶವಾಗುತ್ತಿದೆ. ಹಗಲೊತ್ತು ರಾತ್ರಿ ಹೊತ್ತು ಹೀಗೆ ಯಾವಾಗ ನೋಡಿದರೂ ಕುಡಿತಾ, ಜಗಳ, ದೊಂಬಿ ಕಲಹ, ಇನ್ನು ಕಾಲೇಜು ಹುಡುಗರ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ಹೀಗೆ ಆದರೆ ಹೇಗೆ? ಒಂದು ಸರಿಯಾದ ವ್ಯವಸ್ಥೆ ಬೇಡವಾ? ಇದಕ್ಕೆ ಯಾರು ಜವಾಬ್ದಾರರು? ಸರ್ಕಾರ ಅಂತ ಇದ್ದ ಮೇಲೆ ಇದನ್ನೆಲ್ಲಾ ನೋಡುವುದು ಬೇಡವಾ? ಜನರ ಸರ್ವತೋಮುಖವಾದಂತಹ ಅಭಿವೃದ್ಧಿ ಮಾಡುತ್ತೇವೆಂದು ಒಂದು ಕಡೆ ಹೇಳಿ ಇನ್ನೊಂದು ಕಡೆ ಹೀಗೆ ಜನರಿಗೆ ಕುಡಿಸಿ ಕುಡಿಸಿ ಎಲ್ಲಾ ಸರ್ವ ನಾಶ ಮಾಡುವುದಾ? ಯಾವ ನಿಯಮದ ಪ್ರಕಾರ. ಯಾವ ಆಧಾರದ ಮೇಲೆ ಇಷ್ಟೆಲ್ಲಾ ಮಾಡಿ ಹಾಸನವನ್ನು ಹಾಳು ಮಾಡುತ್ತೀದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಈ ಅಂಗಡಿಯವರು ಆದಾಯ ಬರುತ್ತದೆಂದು ಈ ರೀತಿ ಮಾಡಿಕೊಂಡಿದ್ದಾರೆ. ನೀವು ನಿಯಮ ಮಾಡಿಕೊಂಡಿದ್ದೀರಿ, ಆ ನಿಯಮದ ಪ್ರಕಾರ ಅಂಗಡಿಗಳನ್ನು ಕೊಡಲಿಕ್ಕೆ ನನ್ನ ವಿರೋಧವಿಲ್ಲ. ಏಕೆಂದರೆ. ಅವರು ದುಡ್ಡನ್ನು ಕೊಡಬೇಕು. ಆದರೆ, ನೀವು ನಿಯಮ ಪಾಲಿಸದೆ ಈ ರೀತಿ ಮನಸ್ವೇಚ್ಛೆಯಂತೆ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಿದರೆ ಸರ್ವನಾಶವಾಗುತ್ತದೆ. ಆದುದರಿಂದ, ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ; ನಿಯಮದ ಪ್ರಕಾರ ಎಷ್ಟು ಅಂಗಡಿಗಳನ್ನು ಕೊಡಬೇಕೋ. ಅಷ್ಟು ಅಂಗಡಿಗಳನ್ನು ಕೊಟ್ಟು, ಉಳಿದ ಅಂಗಡಿಗಳನ್ನು ರದ್ದು ಮಾಡಬೇಕು. ಎರಡನೆಯದಾಗಿ, ಸ್ಕೂಲು-ಕಾಲೇಜುಗಳು, ಹರಿಜನ ಕೇರಿ, ಮಸೀದಿ, ಚರ್ಚ್, ದೇವಸ್ಥಾನಗಳಿರುವಡೆಯೆಲ್ಲಾ ಅಂಗಡಿಗಳನ್ನು ತೆರೆಯಲು ಅನುಮತಿ ಕೊಟ್ಟಿರುವುದರಿಂದ ಭಾರಿ ಗದ್ದಲವುಂಟಾಗಿದೆ. ನಾನು ಡೆಪ್ಯೂಟಿ ಕಮಿಷನರ್ ಮತ್ತು ಎಕ್ಸೈಜ್ ಸೂಪರಿಂಟೆಂಡೆಂಟ್‌ರವರನ್ನು ಕೇಳಿದಾಗ ಅವರು 'ಹನುಮೇಗೌಡರೇ, ಹರಾಜು ಮಾಡುವಾಗ ಈ ಅಂಗಡಿಗಳೆಲ್ಲಾ ಸೇರಿಬಿಟ್ಟಿವೆ, ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಮುಂದಿನ ಸಲ ಹರಾಜಾಗುವುದರೊಳಗೆ ಇವನ್ನು ವೆರಿಫೈ ಮಾಡಿ ಕ್ಯಾನ್ಸಲ್ ಮಾಡುತ್ತೇವೆ' ಎಂದು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ; ಕಾನೂನಿಗೆ ವಿರುದ್ಧವಾಗಿ ಎಲ್ಲೆಲ್ಲಿ ಶಾಪ್‌ಗಳನ್ನು ಕೊಟ್ಟಿದ್ದಾರೆ, ಅವುಗಳನ್ನೆಲ್ಲಾ ಐಡೆಂಟಿಫೈ ಮಾಡಿ ಮುಂದಿನ ಬಾರಿ ಹರಾಜಾಗುವುದರೊಳಗೆ ಕ್ಯಾನ್ಸಲ್ ಮಾಡಲು ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, ಕುಖ್ಯಾತ ಆನೆ ದಂತಚೋರ ವೀರಪ್ಪನ್‌ನನ್ನು ಹಿಡಿಯಲು ಸರ್ಕಾರ ಇಷ್ಟೊಂದು ಅಸಹಾಯಕವಾಗಿದೆಯೇ? ಅವನನ್ನು ಹಿಡಿಯಲು ಹೋಗಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸತ್ತರು, ಪೋಲೀಸ್ ಕಾನ್ಸ್‌ಟೇಬಲ್ ಸತ್ತರು, ಫಾರೆಸ್ಟ್

ರೇಂಜ್ ಆಫೀಸರ್ ಸತ್ತರು. ಇಷ್ಟು ಜನ ಸತ್ತರೂ ಕೂಡ ಒಬ್ಬ ಕಳ್ಳನನ್ನು ಹಿಡಿಯಲಿಕ್ಕೆ ಆಗಲಿಲ್ಲವೆಂದರೆ ನನಗೇನೂ ಅರ್ಥವಾಗುತ್ತಿಲ್ಲ. ಕೆಲವರು ಮಾತನಾಡಿಕೊಳ್ಳುತ್ತಾರೆ : 'ಅವನನ್ನು ಹಿಡಿಯಲೇಬೇಕೆಂದು ಹಿಡಿದಿದ್ದರೆ. ಇಷ್ಟೊತ್ತಿಗೆ 50 ಸಲ ಹಿಡಿದು ಬಿಟ್ಟು ಬಿಡಬಹುದಾಗಿತ್ತು. ಆದರೆ, ಹನುಮೇಗೌಡರೇ ಮನಸ್ಸು ಮಾಡಿ ಹಿಡಿಯುತ್ತಿಲ್ಲ. ಅದರಲ್ಲಿ ಏನೋ ಒಂದು ಅಂತರಂಗ ಇದೆ ಎನ್ನುವ ಮಾತನ್ನು ಕೂಡ ಹೇಳುತ್ತಿದ್ದಾರೆ. ಸುಳ್ಳು ಹೇಳುವುದು ನನಗೆ ಗೊತ್ತಿಲ್ಲ. ಆದರೆ, ಇವರ ಅಸಹಾಯಕತೆಯನ್ನು ನೋಡಿದರೆ ಜನರು ಮಾತನಾಡಿಕೊಳ್ಳುವುದರಲ್ಲಿ ಅರ್ಥ ಇದ್ದರೂ ಇರಬಹುದೆಂದು ನನಗನ್ನಿಸುತ್ತದೆ. ಅವನನ್ನು ಹಿಡಿಯುವುದರಲ್ಲಿ ಇಷ್ಟೊಂದು ನಿರ್ಲಿಪ್ತತೆಯೇ? ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿ ಅವನನ್ನು ಹಿಡಿಯುವುದಕ್ಕಾಗುವುದಿಲ್ಲವೆಂದರೆ ಏನರ್ಥ? ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ; ಇಲ್ಲವೆ. ನಿಮ್ಮ ಕೈಯಲ್ಲಿ ಹಿಡಿಯುವುದಕ್ಕಾಗುವುದಿಲ್ಲವೆಂದರೆ, ಕೇಂದ್ರ ಸರ್ಕಾರದಿಂದ ಮಿಲಿಟರಿ ಪಡೆಗಳನ್ನು ಕಳುಹಿಸಿ ಅವನನ್ನು ಹಿಡಿಯಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ ಬಳ್ಳಾರಿ ಜಿಲ್ಲೆ ಆಂಧ್ರಪ್ರದೇಶದ ಗಡಿಯಲ್ಲಿರತಕ್ಕಂಥ ಜಿಲ್ಲೆಯಾಗಿದೆ. ಅಲ್ಲಿ ನಕ್ಸಲೈಟ್ಸ್, ರ್‍ಯಾಡಿಕಲ್ಸ್ ಹಾವಳಿ ಹಾಗೂ ಹೈವೇ ರಾಬರಿ ಬಹಳ ಜಾಸ್ತಿಯಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ಅವರಿಗೆ ಗೊತ್ತಿದ್ದೂ ಕೂಡ ವಾರ್ಷಿಕ ವರದಿಯಲ್ಲಿ ನಮ್ಮ ಜಿಲ್ಲೆಗೆ ಒಂದು ಔಟ್ ಪೋಸ್ಟ್ ಆಗಲಿ. ಒಂದು ಅಡಿಷನಲ್ ಪೋಲೀಸ್ ಸ್ಟೇಷನ್ ಆಗಲಿ ಅಥವಾ ಬೇರೆ ಅಡಿಷನಲ್ ಡೌನ್ ಸ್ಕ್ವಾಡ್ ಆಗಲಿ ಯಾವುದನ್ನೂ ಮಂಜೂರು ಮಾಡಿಲ್ಲ. Why is it that our district has been neglected? ಎರಡನೆಯದಾಗಿ. ಕೇವಲ 15 ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಟ್ರಾಫಿಕ್‌ಗೆ ಹಾಕಿದ್ದಾರೆ. That will not serve the purpose of stopping the decoity of anything like that. ಮೂರನೆಯದಾಗಿ, ನನ್ನ ಉಜ್ಜಯನಿ ಕ್ಷೇತ್ರದಲ್ಲಿ I had asked for a Police Station. ಅಲ್ಲಿಗೆ ಪೋಲೀಸ್ ಸ್ಟೇಷನ್ ಅನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಇದುವರೆವಿಗೂ ಕೊಟ್ಟಿಲ್ಲ. ಆ ಕ್ಷೇತ್ರದಲ್ಲೂ ಕೂಡ ಸಾಕಷ್ಟು ಗಲಾಟೆಗಳಾಗಿವೆ. ಬಳ್ಳಾರಿಯ ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಶ ಹೀಗೆ ಎಲ್ಲಿಯೂ ಅಡಿಷನಲ್ ಪೋಲೀಸ್ ಸ್ಟೇಷನ್ ಇಲ್ಲ. ಮತ್ತು ಹೆಚ್ಚಿಗೆ ಏನನ್ನೂ ಮಾಡಿಲ್ಲ. I don't know why this district has been neglected. ಇನ್ನು ನಮ್ಮಲ್ಲಿ ಟಾಡಿ ಟ್ಯಾಪರ್ಸ್ ಕೆಲಸವಿಲ್ಲದೆ ತುಂಬಾ ತುಂಬಾ ಕಷ್ಟದಲ್ಲಿದ್ದಾರೆ. ಇತರರಿಗೆಲ್ಲಾ ಅನುಕೂಲತೆ ಮಾಡಿಕೊಡುತ್ತಿದ್ದೀರಿ; why not to day tappers? ಗೌವರ್ನಮೆಂಟ್ ಲ್ಯಾಂಡ್ ಏನಿದೆ, ಆ ಲ್ಯಾಂಡ್‌ನಲ್ಲಿ ಅವರ ಉಳುಮೆ ಮಾಡಿ ವ್ಯವಸಾಯ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಉದಾಹರಣೆಗೆ, ಕಡೂರು ಮತ್ತು ಬೀರೂರು ಮಧ್ಯದಲ್ಲಿ there are about hundreds of tappers without food today.

ಅಲ್ಲಿ ಅಮೃತ್ ಮಹಲ್ ಕಾವಲ್ ಇದೆ. ಅಲ್ಲಿ ಸಾವಿರಾರು ಎಕರೆ ಜಮೀನು ಇದೆ. ಅದರಲ್ಲಿ ಒಂದು, ಒಂದೂವರೆ ಎಕರೆಯನ್ನು ಇಂಥ ಒಂದೊಂದು ಕುಟುಂಬಗಳಿಗೆ ಕೊಟ್ಟರೆ ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಾರೆ. ಇದು ಎಕ್ಸೈಸ್‌ಗೆ ಸಂಬಂಧಪಟ್ಟಿದ್ದು.

ಉಪಾಧ್ಯಕ್ಷಿಣಿಯರು : ನೀವು ಚಿಕ್ಕದಾಗಿ ಕೇಳಬೇಕು, ಭಾಷಣ ಮಾಡಿದರೆ ಹೇಗೆ?

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಈಗ ನಾವು ಫೈರ್ ಸ್ಟೇಷನ್ ಬಗ್ಗೆ ಕೇಳಿದ್ದೇವೆ. ಬಳ್ಳಾರಿ ಜಿಲ್ಲೆ ಕಾಟನ್ ಬೆಳೆಯುವ ಪ್ರದೇಶ. ಆದುದರಿಂದ ಅಲ್ಲಿನ ಫೈರ್ ಸ್ಟೇಷನ್‌ನ ಸಂಖ್ಯೆಯನ್ನು ಜಾಸ್ತಿ

ಮಾಡಬೇಕು. ಕೊಟ್ಟೂರು ಸಹ ಹತ್ತಿಯನ್ನು ಹೆಚ್ಚಾಗಿ ಬೆಳೆಯತಕ್ಕ ಪ್ರದೇಶ. ಆದುದರಿಂದ ಕೊಟ್ಟೂರಿಗೆ ಅಥವಾ ಕೂಡ್ಲಿಗಿಗೆ ಒಂದು ಫೈರ್ ಸ್ಟೇಷನ್‌ನ್ನು ಮಂಜೂರು ಮಾಡಿಕೊಡಬೇಕು. ಈಗ ಅವರು ನೂರಾರು ಕಿ.ಮೀ. ದೂರದಿಂದ ಬರುವುದರೊಳಗಾಗಿ ಎಲ್ಲಾವೂ ಸಹ ಸುಟ್ಟು ಬೂದಿಯಾಗಿರುತ್ತದೆ. ಆದುದರಿಂದ ದಯಮಾಡಿ ಇದನ್ನು ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ನಗೀರ್ ಅಹಮದ್ : ಉಪಾಧ್ಯಕ್ಷಿಣಿಯವರೆ. ನಮಗೆ ಹೆಚ್ಚಿನ ಸಮಯ ಏಕೆ ಸಿಗುತ್ತದೆಂದರೆ ವಿರೋಧ ಪಕ್ಷದವರಿಲ್ಲವೆಂದು ಹೇಳುತ್ತೀರಿ; ಆದರೆ ಬೇಡಿಕೆಗಳ ಮೇಲೆ ಮಾತನಾಡುತ್ತೇವೆಂದರೆ ಸಮಯವಲ್ಲವೆಂದು ಹೇಳುತ್ತೀರಿ. ಈಗ ನಾವು ಎರಡೆರಡು ಕೈಗಳನ್ನೆತ್ತಿದರೂ ಕೂಡ ಬೇಗನೆ ಹೇಳಿ ಮುಗಿಸಬೇಕೆಂದರೆ ನಾನು ಹೇಗೆ ಮಾತನಾಡಬೇಕೋ ಅರ್ಥವಾಗುವುದಿಲ್ಲ. ಮುಖ್ಯವಾಗಿ ಎಕ್ಸೈಸ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಹಿರಿಯರಾದ ಶ್ರೀಮಾನ್ ಹನುಮೇಗೌಡರು ಈ ಬಗ್ಗೆ ಒಂದು ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗ ಪ್ರಮುಖವಾಗಿ ಸಮಸ್ಯೆಗಳಿರತಕ್ಕ ಅನೇಕ ಕಡೆ, ಅನೇಕ ಜಾಗಗಳಲ್ಲಿ ಸರ್ಕಾರದವರು ಅನುಮತಿಯನ್ನು ಕೊಟ್ಟು ಅಂಗಡಿಗಳನ್ನು ತೆರೆದಿದ್ದಾರೆ. ಇದನ್ನು ತೆಗೆಯಬೇಕೆಂದು ಸಾರ್ವಜನಿಕರು ನೂರಾರು ಅರ್ಜಿಗಳನ್ನು ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಅಂಥ ಅಂಗಡಿಗಳನ್ನು ತೆಗೆಯದಿರಲು ಕಾರಣವೇನು ಎನ್ನತಕ್ಕದ್ದು ನನ್ನ ಮೊದಲನೆಯ ಪ್ರಶ್ನೆ. ಇದಕ್ಕೆ ಮಾನ್ಯ ಮಂತ್ರಿಗಳು ದಯಮಾಡಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಪೋಲೀಸ್ ಇಲಾಖೆಯಲ್ಲಿ. ಪೋಲೀಸ್ ಸ್ಟೇಷನ್‌ಗೆ ಗೌರವಾನ್ವಿತ ನಾಗರೀಕರು ಹೋದಾಗ ಅವರೊಂದಿಗೆ ಪೋಲೀಸ್‌ನವರು ವರ್ತಿಸುವ ಬಗ್ಗೆ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಆದುದರಿಂದ ನಾಗರೀಕರು ಪೋಲೀಸ್ ಸ್ಟೇಷನ್‌ಗೆ ಹೋದಾಗ ಅವರಿಗೆ ಸರ್ಕಾರದ ವತಿಯಿಂದ ಯಾವ ರೀತಿ ವರ್ತನೆಯನ್ನು ಮಾಡಬೇಕು ಎನ್ನತಕ್ಕದನ್ನು ದಯಮಾಡಿ ಅವರಿಗೆ ಸರ್ಕಾರ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ಎಸ್.ಪಿ. ಯವರ ಕಛೇರಿಯಲ್ಲಾಗಲಿ. ತಾಲ್ಲೂಕು ಮಟ್ಟದಲ್ಲಾಗಲಿ. ಸರ್ಕಲ್ ಇನ್ಸ್‌ಪೆಕ್ಟರ್ ಅವರಿಂದಾಗಲೀ ಸಾರ್ವಜನಿಕರ ಕಷ್ಟ ಸುಖವನ್ನು ವಿಚಾರಿಸಲು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಒಂದು ಸಭೆ ನಡೆಯುತ್ತಿತ್ತು. Public Grievances Cell ಎಂದು ಇರುತ್ತಿತ್ತು. ಇದಲ್ಲಿ ಸಬ್-ಇನ್ಸ್‌ಪೆಕ್ಟರ್ ಅವರಿಂದಗಾಲೀ, ಪೋಲೀಸ್ ಪೇದೆಯಿಂದಾಗಲಿ ಅಥವಾ ಪೋಲೀಸ್ ಮುಖ್ಯ ಪೇದೆಯಿಂದಾಗಲಿ ಏನು ತೊಂದರೆ ತಾಪತ್ರಯಗಳು ಬರುತ್ತದೆ, ಸಾರ್ವಜನಿಕರೊಂದಿಗೆ ಅವರ ವರ್ತನೆ ಸರಿಯಾಗಿ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಒಂದು ಸಭೆ ನಡೆಯುತ್ತಿತ್ತು. ಅದನ್ನು ಈಗ ನಿಲ್ಲಿಸಿಬಿಟ್ಟಿದ್ದೀರಿ. ಆದುದರಿಂದ ದಯಮಾಡಿ Public Grievances Cell ಅನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ ಚಿಕ್ಕಮಗಳೂರು ಪಟ್ಟಣದಲ್ಲಿ ಹೊಸದಾಗಿ ಒಂದು ಸಂಚಾರಿ ಪೋಲೀಸ್ ಸ್ಟೇಷನ್ ಮಾಡಿಕೊಡಬೇಕೆಂದು ಕೇಳಿದ್ದೆ. ಈ ಸಾರಿ ಮಾಡಿರತಕ್ಕ ಪಟ್ಟಿಯಲ್ಲಿ ಮಾನ್ಯ ಮಂತ್ರಿಗಳು ಸಂಚಾರಿ ಪೋಲೀಸ್ ಸ್ಟೇಷನ್ ಮಾಡಲು ಅನುಮತಿಯನ್ನು ಕೊಟ್ಟಿಲ್ಲ. ಅಲ್ಲಿ ಅದರ ಅಗತ್ಯತೆ ಹೆಚ್ಚಾಗಿರುವುದರಿಂದ ಅಲ್ಲಿಗೆ ಸಂಚಾರಿ ಪೋಲೀಸ್ ಸ್ಟೇಷನ್‌ನ್ನು ಕೊಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಹಿಳಾ ಪೇದೆಗಳ ಕೊರತೆ ಇದೆ. ತಮಗೆ ಗೊತ್ತಿರುವ ಹಾಗೆ ಅಲ್ಲಿ ಕೇವಲ ಮೂರು ಜನ ಮಾತ್ರ ಮಹಿಳಾ ಪೇದೆಗಳಿದ್ದಾರೆ. ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿ ಇದೆ ಎಂದು ನಾವೆಲ್ಲಾ ರಾಜಕಾರಣಿಗಳು ಸಹ ಮಾತನಾಡುತ್ತಿರುತ್ತೇವೆ. ಆದರೆ ಮಹಿಳಾ ಪೇದೆಗಳ ಹುದ್ದೆಯು ಕಡಿಮೆ ಇರುವುದರಿಂದ ಈ ಹುದ್ದೆಗಳನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

MADAM DY. SPEAKER : You cannot go on like this. I have given you time only to put two or three questions to the Minister.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇನ್ನು ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನವರಿಗೂ ಮತ್ತು ಕೆಎಸ್‌ಆರ್‌ಟಿಸಿ ನವರ ನಡುವೆ ವ್ಯಾಜ್ಯವಾಗಿ ಪೋಲೀಸ್‌ನವರು ಕೇಸನ್ನು ಹಾಕಿದ್ದಾರೆ. ದಯಮಾಡಿ. ಆ ಕೇಸನ್ನು ವಿತ್‌ಡ್ರಾ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ನಮ್ಮ ಚಿಕ್ಕಮಗಳೂರು ಕ್ಷೇತ್ರದಲ್ಲಾಗಿರುವ ಜೈಲಿನ ಬಗ್ಗೆ ಹೇಳುತ್ತೇನೆ. ಏಕೆಂದರೆ ಅದನ್ನು ಮಾನ್ಯ ಮಂತ್ರಿಗಳೇ ಪ್ರಸ್ತಾಪ ಮಾಡಿದ್ದಾರೆ. ಇದರ ಕೆಲಸ ಪ್ರಾರಂಭವಾಗಿ 8-10 ವರ್ಷಗಳಾದರೂ ಸಹ ಅಲ್ಲಿ ಒಂದು ಗೋಡೆಯ ಕೆಲಸವನ್ನು ಕೂಡ ಮಾಡಲು ಸಾಧ್ಯವಾಗಿಲ್ಲ. ಅಲ್ಲಿ ನಡೆಯುತ್ತಿರತಕ್ಕ ಜೈಲಿನ ಕೆಲಸವನ್ನು ನೋಡಿದರೆ ಬಹುಶಃ ಇದು ಯಾವಾಗ ಪೂರ್ಣವಾಗುತ್ತದೆಂಬುದು ಗೊತ್ತಾಗುವುದಿಲ್ಲ.

ಉಪಾಧ್ಯಕ್ಷಣಿಯರು : ಮಾನ್ಯ ಮಂತ್ರಿಗಳೇನು ಹೇಳಿದ್ದಾರೆ, ಆದರಲ್ಲಿ ನಿಮ್ಮ ವಿಷಯವೇನಾದರು ಇದ್ದರೆ ಹೇಳಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಉಪಾಧ್ಯಕ್ಷಣಿಯವರೆ, ಬೇಲೂರು ಮತ್ತು ಹಳೆಬೀಡು ಒಂದು ಪ್ರವಾಸಿ ಕೇಂದ್ರ. ಅದು ಒಂದು ಅಂತರಾಷ್ಟ್ರೀಯ ಪ್ರವಾಸಿಗರ ಕೇಂದ್ರವಾಗಿದೆ. ಅಲ್ಲಿಗೆ ದಿನಾ ನೂರಾರು ಬಸ್ಸುಗಳು ಬರುತ್ತದೆ. ಸಾವಿರಾರು ಪ್ರವಾಸಿಗರು ಬರುತ್ತಾರೆ. ಆದರೆ ಹಳೆಬೀಡಿನಲ್ಲಿರತಕ್ಕದ್ದು ಒಂದು ಔಟ್ ಪೋಸ್ಟ್ ಪೋಲೀಸ್ ಸ್ಟೇಷನ್. ಹಳೆಬೀಡಿನ ದೇವಸ್ಥಾನಕ್ಕೆ ದಿನಾ ಸಾವಿರಾರು ಜನರು ಬರುತ್ತಾರೆ. ಆದುದರಿಂದ ತಾವು ಅಲ್ಲಿಗೆ ಒಂದು ಪೋಲೀಸ್ ಸ್ಟೇಷನ್‌ಕೊಡಬೇಕು. ಮತ್ತು ಬೇಲೂರಿನಲ್ಲಿ ಒಂದು ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಯನ್ನು ತೆರೆಯಬೇಕು. ನಮಗೆ ಅರಸೀಕೆರೆಯ ಡೆಪ್ಯೂಟಿ ಸೂಪರಿಂಟೆಂಡೆಂಟ್‌ಅವರು ಬೇಡ, ಸಕಲೇಶಪುರದಲ್ಲಿ ಡೆಪ್ಯೂಟಿ ಸೂಪರಿಂಟೆಂಡೆಂಟ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಬೇಕೆಂದು ಕೇಳಿದ್ದೆವು. ಆದರೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಹಳೆಬೀಡು ಮತ್ತು ಬೇಲೂರು ಪ್ರವಾಸಿ ಕೇಂದ್ರಗಳಾದ್ದರಿಂದ ಅಲ್ಲಿಗೆ ವಿ.ಐ.ಪಿ.ಗಳು ಬರುತ್ತಾರೆ. ಮತ್ತೆ ಬೇರೆಯವರೆಲ್ಲಾ ಬರುತ್ತಾರೆ. ಇಂತಹ ದೊಡ್ಡ ತಾಲ್ಲೂಕಿನಲ್ಲಿರತಕ್ಕಂತಹದ್ದು ಎರಡು ಪೋಲೀಸ್ ಸ್ಟೇಷನ್‌ಗಳು ಮಾತ್ರ. ಹಳೆಬೀಡಿಗೆ ಪೋಲೀಸ್ ಸ್ಟೇಷನ್‌ನ ಅಗತ್ಯ ಬಹಳ ಇದೆ. ಮತ್ತು ಬೇಲೂರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಆಫೀಸ್ ಬಹಳ ಅಗತ್ಯವಿದೆ. ಅದನ್ನು ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಹೇಳಬೇಕು. ಎರಡನೆಯದಾಗಿ ಜೈಲಿನಲ್ಲಿರುವ ಖೈದಿಗಳಿಗೆ ಒಂದು ದಿವಸಕ್ಕೆ ಎಂಟು ರೂಪಾಯಿ 10 ಪೈಸೆ ಊಟ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಕಾಲದಲ್ಲಿ ಎಂಟು ರೂಪಾಯಿ 10 ಪೈಸೆ ಊಟ ನಿಜಕ್ಕೂ ಸಾಕಾಗುವುದಿಲ್ಲ. ಅವರು ಖೈದಿಗಳಿರಬಹುದು. ಆದರೆ ಅವರಿಗೆ ಹೊಟ್ಟೆ ತುಂಬಾ ಊಟ ಕೊಡುವುದಕ್ಕೆ ಆಗದೇ ಇದ್ದರೆ ಹೇಗೆ? ಹೋಟೆಲ್‌ನಲ್ಲಿ 8 ರೂಪಾಯಿ 10 ಪೈಸೆ ಕೊಟ್ಟರೂ ಒಂದು ಊಟ ಸಿಗುವುದಿಲ್ಲ. ಅವರು ಎಷ್ಟೋ ವಿಚಾರಗಳಲ್ಲಿ ಈಗ ಸುಧಾರಣೆಗಳ ಬಗ್ಗೆ ಮಾತನಾಡಿದರು. ಆದ್ದರಿಂದ ಇವರ ಬಗ್ಗೆ ಸಹ ಅವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ದಯಾನಂದರಾವ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನ ಕ್ಷೇತ್ರದಲ್ಲಿ ಶ್ರೀರಾಂಪುರ ಪೋಲೀಸ್ ಠಾಣೆಯಲ್ಲಿ 47 ಜನ ಸಿಬ್ಬಂದಿ ವರ್ಗವಿದೆ. ಈ ವ್ಯಾಪ್ತಿಯಲ್ಲಿ ಸುಮಾರು ಒಂದು ಲಕ್ಷ ಐವತ್ತು ಸಾವಿರ ಜನಸಂಖ್ಯೆ ಇದೆ. ಆದ ಕಾರಣ ಆ ಒಂದು ಠಾಣೆಯಲ್ಲಿ ಸ್ವಲ್ಪ ಜಾಸ್ತಿ ಸಿಬ್ಬಂದಿ ವರ್ಗವನ್ನು ಮಂತ್ರಿಗಳು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕರಿಯಣ್ಣ : ಮಾನ್ಯ ಉಪಾಧ್ಯಕ್ಷಿಣಿಯವರೇ. ಹಿಂದುಳಿದ ವರ್ಗದವರ ಮಾಸಲಾತಿಯಲ್ಲಿ ಧಕ್ಕೆ ಆದರೆ ನೋಡಲು ಒಂದು ಸಿ.ಆರ್.ಸಿ. ಸೆಲ್‌ನ್ನು ಮಾಡಿದ್ದಾರೆ. ಆದರೆ ಅದು ಏನು ಕೆಲಸಮಾಡುತ್ತದೆಂದು ಗೊತ್ತಿಲ್ಲ. ಅದನ್ನು ಮಂತ್ರಿಗಳು ರಿವ್ಯೂ ಮಾಡಿಲ್ಲವೆಂದು ಕಾಣುತ್ತದೆ. ಅವರಿಗೆ ಯಾವುದೇ ಅಧಿಕಾರವಿಲ್ಲವೆಂದು ಹೇಳುತ್ತಾರೆ. ನಮಗೆ ಯಾವುದೇ ಅಧಿಕಾರವಿಲ್ಲ, ಹಾಗೂ ಸ್ಟಾಫ್ ಇಲ್ಲವೆಂದು ಹೇಳುತ್ತಾರೆ. ದಯವಿಟ್ಟು ಅದರ ಬಗ್ಗೆ ಕೇಸ್ ರಿಜಿಸ್ಟರ್ ಮಾಡುವುದಕ್ಕೆ ಮತ್ತು ಆ ಕೇಸ್ ಏನಾಗಿದೆ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ತತ್‌ಕ್ಷಣದಲ್ಲೇ ಯಾವುದಾದರೂ ಒಂದು ಕ್ರಮ ಕೈಗೊಳ್ಳಬೇಕು. ಅದನ್ನು ಪ್ರತಿ ತಿಂಗಳು ಯಾರಾದರೂ ಒಬ್ಬರು ರಿವ್ಯೂ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಹೇಳಬೇಕೆಂದರೆ ಹರಿಜನ ಗಿರಿಜನ ಕೇರಿಯಲ್ಲಿ ಮತ್ತು ದೇವಸ್ಥಾನದ ಪಕ್ಕದಲ್ಲಿ ಹೆಂಡದ ಅಂಗಡಿಗಳನ್ನು ಇಡುತ್ತಾರೆ. ಹನುಮೇಗೌಡರು ಹೇಳಿದ ಹಾಗೆ ಈ ವರ್ಷದ ಹರಾಜಿಗೆ ಬಂದಿದೆ, ಆದ್ದರಿಂದ ನೀವು ಅರ್ಜಿ ಕೊಟ್ಟರೂ ತೆಗೆಯುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ, ಆದ್ದರಿಂದ ಮುಂದಿನ ವರ್ಷ ಹರಾಜಿಗೆ ಬರುವುದಕ್ಕೆ ಮೊದಲೇ ಏನಾದರೂ ಕಾನೂನು ಬದಲಾವಣೆ ಮಾಡಿ. ಕಾನೂನಿನಲ್ಲಿ ಇದನ್ನು ಸೇರಿಸಬಾರದೆಂದು ಇದೆ. ಆದರೆ ಆ ತರಹದ ಕಂಪ್ಲೇಂಟ್‌ಗಳು ಬಂದರೆ ತಕ್ಷಣದಲ್ಲೇ ತೆಗೆಯುವುದಕ್ಕೆ ಏನಾದರೂ ಕಾನೂನು ಬದಲಾವಣೆ ಮಾಡಿ ಅನುಕೂಲ ಮಾಡಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ. ಕೆಲವು ದಳ್ಳಾಳಿಗಳು ಮತ್ತು ಪೋಲೀಸ್‌ನವರ ಬಗ್ಗೆ ಹೇಳಬೇಕೆಂದರೆ ಕೆಲವು ಮಾಮೂಲಿ ದಲ್ಲಾಳಿಗಳು ಯಾವಾಗಲೂ ಇರುತ್ತಾರೆ. ಇವರು ಇರುವುದರ ದೆಸೆಯಿಂದ ಆ ಪೋಲೀಸ್ ಕಂಪ್ಲೇಂಟ್ಸ್ ತೆಗೆದುಕೊಳ್ಳುವವರಿಂದಲೂ ದುಡ್ಡು ತೆಗೆದುಕೊಳ್ಳುತ್ತಾರೆ, ಪೋಲೀಸ್‌ನವರಿಗೂ ದುಡ್ಡು ಕೊಡುತ್ತಾರೆ. ಇದನ್ನು ತಪ್ಪಿಸಬೇಕಾದರೆ ಕೇಸ್ ದಾಖಲು ಮಾಡುವ ಬುಕ್ ಅಂತ ಇಡಬೇಕು, ಕಂಪ್ಲೇಂಟ್ಸ್‌ದಾರರ ಜೊತೆಗೆ ಬರುವವರೆಲ್ಲಾ ಅವರ ನೇಮ್, ಅಡ್ರೆಸ್‌ನ್ನು ರಿಜಿಸ್ಟರ್ ಬುಕ್‌ನಲ್ಲಿ ಬರೆದುಕೊಂಡರೆ ಇಂತಹ ಅನೇಕ ಅವ್ಯವಹಾರ ತಪ್ಪುತ್ತದೆ. ಮತ್ತು ಪೋಲೀಸ್ ಆಫೀಸರ್‌ಗಳ ಮೇಲೆ ಅವರು ಹೇಳಿದ ರೀತಿಯಲ್ಲಿ ಕೆಲಸ ಮಾಡಲಾಗದೇ ಈ ದಲ್ಲಾಳಿಗಳು ಅನೇಕ ಸುಳಿವು ಕಂಪ್ಲೇಂಟ್‌ಗಳನ್ನು ಕೊಡುತ್ತಾರೆ. ಆದರೆ ಈ ಒಂದು ರಿಜಿಸ್ಟರ್‌ನ್ನು ಮೇನ್‌ಟೈನ್ ಮಾಡಿ ಅದನ್ನೆಲ್ಲಾ ಬರೆದರೆ ಬಹಳ ಒಳ್ಳೆಯದು.

ಶ್ರೀ ವಿಜಯಕುಮಾರ್ ಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಪ್ರಥಮವಾಗಿ ಹತ್ತು ವರ್ಷದ ಬಳಿಕ ನಮ್ಮ ಕರ್ನಾಟಕದಲ್ಲಿ ಸರ್ಕಾರದವರು ಹಲವಾರು ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸುತ್ತಿದ್ದಾರೆ, ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅದರ ಜೊತೆಗೆ ನನ್ನ ಕ್ಷೇತ್ರವಾದ ಸೂರತ್‌ಕಲ್‌ನಲ್ಲಿ ಈ ಪುನರ್ ನಿವೇಶನ ಸ್ಥಳವಿದೆ. ಸುಮಾರು 25-30 ಸಾವಿರ ಜನಸಂಖ್ಯೆ ಇದೆ. ಸೂರತ್ಕಲ್ ಮುನಿಸಿಪಾಲಿಟಿ ಇದೆ. ನಾನು ಹಲವಾರು ಸಲ ಇದರ ಬಗ್ಗೆ ಮನವಿಯನ್ನು ಅರ್ಪಿಸಿದರೂ ಪ್ರಥಮವಾಗಿ ಆದ್ಯತೆಯನ್ನು ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಒಪ್ಪಿದ್ದಾರೆ. ಆದರೆ ದುರಾದೃಷ್ಟವಶಾತ್ ಹೊಸದಾಗಿ 15 ಪೋಲೀಸ್ ಠಾಣೆಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದರೂ ಸೂರತ್‌ಕಲ್‌ಗೆ ಸ್ಟೇಷನ್ ಕೊಟ್ಟಿಲ್ಲ. ದಯವಿಟ್ಟು ಈ ಸಲವೇ ಸೂರತ್‌ಕಲ್‌ಗೆ ಸ್ಟೇಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ಅಂಶವೆಂದರೆ ನಮ್ಮ ಸೂರತ್‌ಕಲ್‌ನಲ್ಲಿ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು ಇದೆ. ಇದರಿಂದ ಸೂರತ್‌ಕಲ್‌ಗೆ ಆದ್ಯತೆಯ ಮೇರೆಗೆ ಇದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾರದೊಳಗೆ

ಸುಮಾರು 10-15 ಆಕ್ಸಿಡೆಂಟ್ಸ್ ಆಗಿದೆ. ಈ ಆಕ್ಸಿಡೆಂಟ್‌ನಲ್ಲಿ ನೊಂದವರಿಗೆ ಮಾನ್ಯ ಮಂತ್ರಿಗಳು ಎರಡು ಸಾವಿರದಿಂದ ಐದು ಸಾವಿರದವರೆಗೆ ಪರಿಹಾರವನ್ನು ಕೊಟ್ಟಿದ್ದಾರೆ. ಆಕ್ಸಿಡೆಂಟ್‌ನಲ್ಲಿ ನೊಂದವರೆಲ್ಲರೂ ಬಡವರು. ದಲಿತ ವರ್ಗಕ್ಕೆ ಸೇರಿದವರು. ಮತ್ತು ವಿದ್ಯಾರ್ಥಿಗಳಾಗಿದ್ದಾರೆ. ಆದ್ದರಿಂದ ಇವರಿಗೆ ಸುಮಾರು 25 ಸಾವಿರ ರೂಪಾಯಿ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ತಾವು ಭಾಷಣ ಮಾಡಲಿಕ್ಕೆ ಸಮಯ ಇಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಒಂದೆರಡು ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಾಗು ಬೆಳಗಾಂನಲ್ಲಿ ಇತ್ತೀಚೆಗೆ ಒಂದೆರಡು ಮೂರು ತಿಂಗಳಲ್ಲಿ ಐದಾರು ಲಾರಿ ಅಪಹರಣಗಳಾಗಿವೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಮೊನ್ನೆ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆಯೇ ಹೊರತು ಅದಕ್ಕೆ ಏನು ಮಾಡುತ್ತೇವೆ ಎಂದು ತಿಳಿಸಿಲ್ಲ. ಕೆಲವರು ಮೃತ ಪಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿಖರವಾಗಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಮೊಟಮ್ಮ : ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಕಳ್ಳಭಟ್ಟಿ ತಯಾರಿಕೆಯನ್ನು ತಡೆಗಟ್ಟಲು ಏನು ಕ್ರಮ ತೆಗೆದುಕೊಳ್ಳುತ್ತೇವೆ ಅನ್ನುವುದರ ಬಗ್ಗೆ ಸ್ಪಷ್ಟಪಡಿಸಿಲ್ಲ. ಏಕೆಂದರೆ, ಪ್ರತಿ ದಿನ ಮನೆ ಮನೆಯಲ್ಲಿ ಕಳ್ಳಭಟ್ಟಿ ತಯಾರಿಕೆ ಜಾಸ್ತಿಯಾಗುತ್ತಿದೆ. ಅದರಲ್ಲೂ ನಮ್ಮ ಏರಿಯಾದಲ್ಲಿದ್ದ ಒಬ್ಬ ಎಕ್ಸೈಜ್ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬರು ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದಿದ್ದಾರೆ. ಏಕೆಂದರೆ ನನಗೆ ಅಲ್ಲಿ ಕೆಲಸ ಮಾಡಲಿಕ್ಕೆ ಕಷ್ಟ ಅಂಥ ಹೇಳಿ. ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಕೆಲವು ಫೆಸಿಲಿಟಿಸ್ ಅನ್ನು ಒದಗಿಸಿದ್ದರು. ಅದೂವರೆಗೂ ಇದರ ಬಗ್ಗೆ ಚಿಂತನೆ ಮಾಡಿರಲಿಲ್ಲ. ಈಗ ನಾನು ಏನು ಹೇಳುತ್ತಿದ್ದೇನೆ ಎಂದರೆ ಕಾನ್‌ಸ್ಟೇಬಲ್‌ಗಳಿಗಾದರೂ ಸ್ಯಾಲರಿ ಜಾಸ್ತಿ ಮಾಡಿ; ಅವರ ಬಗ್ಗೆ ಈ ಸಮಾಜದಲ್ಲಿ ಬಹಳ ಸಣ್ಣದಾಗಿ ಕಾಣುವ ಒಂದು ಪರಿಸ್ಥಿತಿ ಇದೆ. ಜೊತೆಗೆ ಸಣ್ಣಪುಟ್ಟದಕ್ಕೆಲ್ಲ ಅವರು ಕಾಸಿಗೆ ಕೈ ನೀಡುತ್ತಾರೆ ಅನ್ನುವ ಭಾವನೆ ಇದೆ. ಒಳ್ಳೆಯ ಸ್ಯಾಲರಿ ಕೊಟ್ಟರೆ ಅವರಲ್ಲಿ ಸ್ವಲ್ಪ ಕರಪ್‌ಷನ್ ಕಡಿಮೆ ಮಾಡಬಹುದು. ಅಂಥ ನನ್ನ ಭಾವನೆ. ಎರಡನೆಯದು, ಈ ವರದಕ್ಷಿಣೆಯ ಬಗ್ಗೆ ತಾವು ಏನಾದರೊಂದು ಕಠಿಣವಾದ ಕಾನೂನು ತಿದ್ದುಪಡಿ ತರಬೇಕಾಗುತ್ತದೆ. ಸಾವಿರಾರು ವರದಕ್ಷಿಣೆ ಕೇಸ್‌ಗಳು ಇವತ್ತು ರಿಜಿಸ್ಟರ್ ಆಗುತ್ತಿವೆ. ಅದರಲ್ಲಿ ಎಷ್ಟು ಜನಕ್ಕೆ ಪನಿಷ್‌ಮೆಂಟ್ ಆಗಿದೆ ಎನ್ನತಕ್ಕಂಥಾದ್ದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ಏನಾದರೊಂದು ಕಠಿಣವಾದ ಕಾನೂನನ್ನು ತರಲಿಕ್ಕೆ ಈಗಿನ ಕಾನೂನನ್ನು ತಿದ್ದುಪಡಿ ಮಾಡುತ್ತೀರಾ? ಆಮೇಲೆ, ತಾವು ಮಾತನಾಡಬೇಕಾದರೆ ಹರಿಜನರ ಬಗ್ಗೆ ನಡೆಯುತ್ತಿರುವ ಅಟ್ರಾಸಿಟಿ ಬಗ್ಗೆ ಹೇಳಿದ್ದೀರಿ. ಆದರೆ ಈ ಅಟ್ರಾಸಿಟಿ ಎಲ್ಲೆಲ್ಲಿ ಆಗಿದೆ ಮತ್ತು ಈ ರಾಜ್ಯದಲ್ಲಿ ಅಟ್ರಾಸಿಟಿ ನಡೆಸಿದವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಿಲ್ಲ. ಹಾಗೆಯೇ ಪ್ರತಿಯೊಂದು ಕೇಸ್‌ಗಳಲ್ಲಿ ನಾವೆಲ್ಲರೂ ಹೇಳುತ್ತಿದ್ದೇವೆ; ಏನೆಂದರೆ ಸಿ.ಒ.ಡಿ.ಗೆ ರೆಫರ್ ಮಾಡಿ, ಸಿ.ಒ.ಡಿ.ಗೆ ರೆಫರ್ ಮಾಡಿ ಅಂಥ. ಈಗ ರೆಫರ್ ಆದ ಕೇಸ್‌ಗಳಲ್ಲಿ ಎಷ್ಟು ಜನರಿಗೆ ನ್ಯಾಯ ಸಿಕ್ಕಿದೆ ಎನ್ನುವುದನ್ನು ತಾವು ಹೇಳಿದ್ದರೆ ಜನರಿಗೆ ಅಟ್‌ಲೀಸ್ಟ್ ಈ ಒಂದು ಗೃಹ ಖಾತೆಯ ಬಗ್ಗೆ ನಂಬಿಕೆ ಬರುತ್ತದೆ ಹಾಗೂ ಜನರಿಗೆ ಸಾಕಷ್ಟು ರಕ್ಷಣೆ ಇದರಲ್ಲಿದೆ ಅಂಥ ಭಾವನೆ ಬರುತ್ತದೆ.

ಶ್ರೀ ಮನೋಹರ ಐನಾಪುರ್ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು ಐದು ಸಾವಿರಕ್ಕಿಂಥ ಹೆಚ್ಚು ಲಂಬಾಣಿ ತಂಡಗಳಿವೆ. ಇಂತಹ ಪ್ರತಿಯೊಂದು ಹರಿಜನ

ಕೇರಿಯಲ್ಲೂ ಸೇಂದಿ, ಸಾರಾಯಿ ಅಂಗಡಿಗಳಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಅಬಕಾರಿ ಕಾಯಿದೆ ಅನುಗುಣವಾಗಿ ಅಲ್ಲಿ ತೆಗೆಯಬಾರದೆಂದು ಇದೆ. ಆದ್ದರಿಂದ ಸರ್ಕಾರದವರು ಏನಾದರೂ ಇಂತಹ ಕಡೆ ತೆಗೆಯುವ ಪ್ರಯತ್ನ ಮಾಡುತ್ತಾರೋ ಹೇಗೆ ಇದು ಒಂದನೆಯದು. ಎರಡನೆಯದು ಮಹಿಳಾ ಪೇದೆಗಳಲ್ಲಿ ಸಬ್ ಇನ್ಸ್‌ಪೆಕ್ಟರ್‌ವರೆಗೆ ಬಡ್ತಿಯನ್ನು ಕೊಟ್ಟಿದ್ದಾರೆ. ಸಬ್ ಇನ್ಸ್‌ಪೆಕ್ಟರ ಆದ ನಂತರ ಅವರಿಗೆ ಯಾವುದೇ ತರಹದ ಪ್ರಮೋಷನ್‌ಕೊಟ್ಟಿಲ್ಲ. ಇದನ್ನು ಏನಾದರೂ ಮಾನ್ಯ ಮಂತ್ರಿಗಳು ವಿಚಾರ ಮಾಡಿದ್ದಾರೆಯೇ ಹೇಗೆ? ಮೂರನೆಯದು, ಗೃಹಸಚಿವರು ನನ್ನ ಕ್ಷೇತ್ರದ ಜಳಕೆಯಲ್ಲಿ ಒಂದು ಪೋಲೀಸ್ ಠಾಣೆಯನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆಮೇಲೆ ಅದಕ್ಕೆ ಒಂದು ಕಟ್ಟಡ ಬೇಕು ಏಕೆಂದರೆ, ಈಗ ಅದು ಒಂದು ಚಿಕ್ಕದಾದಂತ ರೂಮ್‌ನಲ್ಲಿ ಪ್ರಾರಂಭ ಮಾಡಿದ್ದಾರೆ. ಅದಕ್ಕೋಸ್ಕರ ಒಂದು ಕಟ್ಟಡವನ್ನು ಮಾಡಿಕೊಡಬೇಕು ಎಂದು ಗೃಹ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಕೊನೆಯದಾಗಿ ನನ್ನ ಕ್ಷೇತ್ರ ಗಡಿ ಪ್ರದೇಶದಲ್ಲಿದೆ. ಅದು ಬಿಜಾಪುರದಿಂದ ಸುಮಾರು 70-80 ಕಿಲೋ ಮೀಟರ್ ದೂರ ಇದೆ. ಮೊನ್ನೆ ಬರ್‌ಡೋನ್‌ನಲ್ಲಿ ಸುಮಾರು 11 ಜನ ಸಜೀವ ದಹನ ಆಯಿತು. ಆದರೂ ಅಗ್ನಿಶಾಮಕ ದಳ ಬರುವವರೆಗೆ ಏನೂ ಮಾಡಲಿಕ್ಕೆ ಆಗಲಿಲ್ಲ. ಅದಕ್ಕೋಸ್ಕರ ಒಂದು ಅಗ್ನಿಶಾಮಕ ದಳವನ್ನು ನನ್ನ ಕ್ಷೇತ್ರಕ್ಕೆ ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಅಬಕಾರಿ ಸಚಿವರು ನಮ್ಮ ಜಿಲ್ಲೆಯಲ್ಲಿ ಮೂರ್ತೆದಾರರ ಅನುಕೂಲಕ್ಕಾಗಿ ಸಹಕಾರ ಸಂಘಗಳನ್ನು ಏರ್ಪಡಿಸಿ ಆ ಬಡ ಮೂರ್ತೆದಾರರಿಗೆ ಜೀವದಾನವನ್ನು ಕೊಟ್ಟಂತಹ ಪುಣ್ಯ ಕೆಲಸ ಮಾಡಿದ್ದಕ್ಕೆ ಅವರನ್ನು ಅಭಿನಂದಿಸುತ್ತಾ ಈ ಮೂರ್ತೆದಾರರ ಸೊಸೈಟಿಗಳಲ್ಲಿ ಕೆಲವು ಗೋಮುಖ ವ್ಯಾಘ್ರಗಳು ಈಗ ನುಗ್ಗಿವೆ. ಮೂರ್ತೆದಾರರ ಹೆಸರಿನಲ್ಲಿ ಅವರು ಪ್ರವೇಶ ಮಾಡಿ ಈ ಮೂರ್ತೆದಾರರನ್ನು ಸುಲಿಯುವಂಥ ಕೆಲಸವನ್ನು ಮಾಡುತ್ತಿವೆ. ಆದ್ದರಿಂದ ಅಂತಹವರನ್ನು ಗುರುತಿಸಿ, ಅವರನ್ನು ಒಂದು ಹತ್ತು ಸಲ ತೆಂಗಿನ ಮರಕ್ಕೆ ಹತ್ತಿಸಿ, ಕೆಳಕ್ಕೆ ಇಳಿಸಿದರೆ ಆ ಗೋಮುಖ ವ್ಯಾಘ್ರಗಳ ನಿಜವಾದ ಚಿತ್ರ ಹೊರಬರುತ್ತದೆ. ಈ ರೀತಿ ಮಾಡಿದರೆ ನಿಜವಾದ ಮೂರ್ತೆದಾರರಿಗೂ ಪ್ರಯೋಜನ ಸಿಗುತ್ತದೆ. ಮತ್ತೆ ಜಿಲ್ಲೆಯ ಇತರೆಡೆ ಸಹ ಇರುವ ಮೂರ್ತೆದಾರರಿಗೆ ತಾವು ಸಹಾಯ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಎರಡು ವರ್ಷಗಳಿಂದಲೂ ಈ ಜನಕ್ಕೆ ಯಾವ ಸಹಾಯವೂ ಸಿಕ್ಕದೆ ಅವರು ಬೀದಿ ಮಾರ್ಗದಲ್ಲಿ ಬೀಳುವಂತಹ ದಾರುಣ ಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇದರ ಫೈಲ್ ಇದೆ ಅಂಥ ಕೇಳಿದೆ, ಆ ಫೈಲ್ ಜನತೆಗೆ ಮುಟ್ಟುವ ಹಾಗೆ ನೀವು ಕೂಡಲೆ ಕಾರ್ಯಕ್ರಮವನ್ನು ರೂಪಿಸಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. 100 ವರ್ಷಗಳ ಮೂಡಬಿದ್ರೆ ಪೋಲೀಸ್ ಸ್ಟೇಷನ್‌ಗೆ ಈಗಲೂ ಸಹ 9 ಜನ ಪೋಲೀಸ್ ಪೇದೆಗಳು, 3 ಜನ ಹೆಡ್ ಕಾನ್‌ಸ್ಟೇಬಲ್‌ಗಳು, ಒಬ್ಬರು ಸಬ್ ಇನ್‌ಸ್ಪೆಕ್ಟರ್ ಇದ್ದಾರೆ. ವರ್ಷ ನೂರಾದರೂ ಪೋಲೀಸ್ ಪೇದೆಗಳ ಸಂಖ್ಯೆ ಹೆಚ್ಚಾಗಲಿಲ್ಲ. ಅಲ್ಲಿಗೆ ಅವಶ್ಯಕವಾದಂಥ ಹೆಚ್ಚಿನ ಸಂಖ್ಯೆಯ ಪೇದೆಗಳನ್ನು ಕೊಟ್ಟು ಕನಿಷ್ಟ ಪಕ್ಷ ಒಂದು ಜೀಪನ್ನಾದರೂ ಅಲ್ಲಿಗೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಾದತ್ ಅಲಿಖಾನ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ವೈನ್ ಷಾಪ್‌ಗಳು ಮತ್ತು ಪಬ್‌ಗಳಿಗೆ ಸಂಬಂಧ ಪಟ್ಟಂತೆ ಎಷ್ಟು ಲೈಸೆನ್ಸ್ ಕೊಟ್ಟಿದ್ದೀರೆಂಬ ಬಗ್ಗೆ ಈ ಬಜೆಟ್‌ನಲ್ಲಿ ಉಲ್ಲೇಖ ಇಲ್ಲ. ಇದರ ಸಂಖ್ಯೆ ಸಾಕಷ್ಟು ಮಿತಿ ಮೀರಿರುವದರಿಂದ ಈಗಲಾದರೂ ಇದಕ್ಕೆ ಒಂದು ಫುಲ್‌ಸ್ಟಾಪ್ ಹಾಕಬೇಕು. "ಇನ್-ಹೋಲ್-ಆಫ್ ಇಂಡಿಯ" ಎನ್ನತಕ್ಕ ಮ್ಯಾಗಸಿನ್‌ನಲ್ಲಿ

ನಮ್ಮ ಇಂಡಿಯಾದಲ್ಲಿ ರತಕ್ಕ ವೈನ್ ಷಾಪ್ಸ್ ಮತ್ತು ಪಬ್ಸ್ ಬಗ್ಗೆ ಲೇಖನಗಳು ಬರುತ್ತಿವೆ. ಈಗ ಯಾವ ರೀತಿ ಇವುಗಳಿಗೆ ಲೈಸೆನ್ಸ್ ಕೊಡುತ್ತಿದ್ದೀರೋ ಇದನ್ನೇ ಮುಂದುವರಿಸಿದರೆ ಇಡೀ ಇಂಡಿಯಾದಲ್ಲೇ ನಮ್ಮ ಬೆಂಗಳೂರು ಮೊದಲನೇ ಸ್ಥಾನದಲ್ಲಿ ನಿಲ್ಲುತ್ತದೆ. ಮೆಡಿಕಲ್ ಕಾಲೇಜುಗಳು. ನರ್ಸಿಂಗ್ ಹೋಂಗಳ ವಿಚಾರದಲ್ಲಿ ನಮ್ಮ ಕರ್ನಾಟಕ ಏನು ಒಳ್ಳೆಯ ಹೆಸರನ್ನು ತೆಗೆದುಕೊಂಡಿದೆ. ಅದೇ ರೀತಿ ಈ ವೈನ್ ಷಾಪ್ಸ್ ಮತ್ತು ಪಬ್ಸ್ ಬಗ್ಗೆ ಕೂಡ ನಮ್ಮ ರಾಜ್ಯ ಇಡೀ ಪ್ರಪಂಚದಲ್ಲೇ ಮೊದಲನೇ ಸ್ಥಾನದಲ್ಲಿ ಬಂದು ನಿಲ್ಲುತ್ತದೆ. ಇದನ್ನು ತಾವು ಆದಷ್ಟು ಬೇಗ ತಡೆಗಟ್ಟಬೇಕು. ಮಾನ್ಯ ಎಕ್ಸೈಸ್ ಮಂತ್ರಿಗಳು ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ತಕ್ಷಣ ಇದನ್ನು ನಿಲ್ಲಿಸಬೇಕು. ಇದನ್ನು ಬ್ಯಾನ್ ಮಾಡಬೇಕು. ಸ್ವಾಮಿ. ನಮ್ಮ ಕಡೆ ಮಧ್ಯಾಹ್ನ 12 ಗಂಟೆ ಸಮಯದಲ್ಲಾಗಲಿ, ಸಂಜೆ 4 ಗಂಟೆ ಸಮಯದಲ್ಲಾಗಲಿ ಹಳ್ಳಿಯ ಕಡೆ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ ಅಷ್ಟೊಂದು ವೈನ್ ಷಾಪ್ಸ್ ಇವೆ. ಇವತ್ತು ಒಂದೊಂದು ಹಳ್ಳಿಯಲ್ಲೂ ಕೂಡ 2-3 ವೈನ್ ಷಾಪ್‌ಗಳಿವೆ. ಇನ್ನು ಮುಂದೆ ಈ ರೀತಿ ಲೈಸೆನ್ಸ್ ಕೊಡುವುದನ್ನು ನಿಲ್ಲಿಸಬೇಕು, ಹಾಗೂ ಇದರ ಬಗ್ಗೆ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕು. ಕಳೆದ ಸುಮಾರು ಒಂದೂವರೆ ವರ್ಷದ ಹಿಂದೆ ಮತೀಯ ಘರ್ಷಣೆಗಳು ನಡೆದವು. ಆಗ ಹಾಕಿದಂಥ ಎಲ್ಲಾ ಕೇಸುಗಳನ್ನೂ ಕೂಡ ವಿತ್‌ಡ್ರಾ ಮಾಡಿಸಬೇಕು. ಏಕೆಂದರೆ, ಎಲ್ಲಾ ಕಡೆಯಲ್ಲೂ ಇನ್ನೂ ಈ ಕೇಸುಗಳನ್ನು ವಿತ್‌ಡ್ರಾ ಮಾಡಿಲ್ಲ. ಇದರ ಬಗ್ಗೆ ತಕ್ಷಣ ಮಾನ್ಯ ಮಂತ್ರಿಗಳು ಕ್ರಮತೆಗೆದುಕೊಳ್ಳಬೇಕು.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ವೈ. ನಾಗಪ್ಪ : ನಾವು ಸಹ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು : ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಎಲ್ಲರೂ ಎಲ್ಲ ವಿಷಯಗಳ ಬಗ್ಗೆಯೂ ಕೇಳುವುದಕ್ಕೂ ಆಗುವುದಿಲ್ಲ ಮತ್ತು ಎಲ್ಲರಿಗೂ ಮಾತನಾಡುವುದಕ್ಕೂ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಶಿಸ್ತು ಮತ್ತು ರಕ್ಷಣೆ ಎರಡೂ ಕೂಡ ಬಹಳ ಪ್ರಮುಖ ವಿಚಾರಗಳು. ಆದುದರಿಂದ ಇಲಾಖೆಯ ಬಗ್ಗೆ ಕೇಳುವುದಕ್ಕೆ ತಾವು ಎಲ್ಲರಿಗೂ ಅವಕಾಶ ಕೊಡಬೇಕು.

ಉಪಾಧ್ಯಕ್ಷಿಣಿಯವರು : ನಾವು ಸಾಕಷ್ಟು ಮಾತನಾಡದ್ದೀರಿ. ಪ್ರತಿಯೊಂದು ಡಿಮ್ಯಾಂಡ್ ಮೇಲೂ ಮಾತನಾಡಿದ್ದೀರಿ. ಬೇರೆಯವರಿಗೂ ಅವಕಾಶ ಮಾಡಿಕೊಡಿ. ಈಗ ನೀವು ಏನೂ ಹೇಳುವಂತಿಲ್ಲ. ಕುಶಾಲರವರೇ ತಾವೂ ಮಾತನಾಡಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ರಾಜ್ಯದಲ್ಲಿ ಬೆಂಗಳೂರನ್ನು ಬಿಟ್ಟರೆ ಹುಬ್ಬಳ್ಳಿ-ಧಾರವಾಡವೇ ಅತಿ ದೊಡ್ಡ ನಗರ. ಈಗಾಗಲೇ ಅಲ್ಲಿಗೆ ಪೋಲೀಸ್ ಕಮಿಷನರ್‌ರವರು ಬಂದಿದ್ದಾರೆ. ಪೋಲೀಸ್ ಡೆಪ್ಯೂಟಿ ಕಮಿಷನರ್‌ರವರು ಬಂದಿದ್ದಾರೆ, ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಬಂದಿದ್ದಾರೆ. ಆದರೆ ಇವರಿಂದ ನಮಗೆ ಏನೇನೂ ಸಹಾಯವಿಲ್ಲ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ದೊಡ್ಡ ದೊಡ್ಡ ಅಧಿಕಾರಿಗಳು ನಮಗೆ ಬಂದರೆ ಅವರಿಂದ ಏನೂ ಪ್ರಯೋಜನ

ಇಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ. ಹೆಚ್ಚು ಹೆಚ್ಚು ಪೋಲೀಸ್ ಪೇದೆಗಳನ್ನು ನಮಗೆ ಹಾಕಬೇಕು. ಏಕೆಂದರೆ ನಮ್ಮ ಕಡೆ ಎಕ್ಸ್‌ಟೆನ್‌ಷನ್‌ಗಳು ಜಾಸ್ತಿಯಾಗಿವೆ. ಸ್ಲಂಗಳು ಜಾಸ್ತಿಯಾಗಿವೆ.

ಇನ್ನು ಎರಡನೆಯದಾಗಿ ನಮ್ಮ ಹುಬ್ಬಳ್ಳಿ ಸೆನ್ಸಿಟಿವ್ ಏರಿಯಾ ಆಗಿದೆ. 1982 ರಲ್ಲಿ ವೈದ್ಯನಾಥನ್ ಕಮಿಷನ್ ಅನ್ನು ನೇಮಕ ಮಾಡಿದಾಗ ಅವರು ನಮ್ಮ ಏರಿಯಾವನ್ನು ಪರಿಶೀಲನೆ ಮಾಡಿ ನಮ್ಮದು ಸೆನ್ಸಿಟಿವ್ ಏರಿಯಾ. ಆದ್ದರಿಂದ ಅಲ್ಲಿಗೆ ಪೋಲೀಸ್ ಸ್ಟೇಷನ್ ಮಂಜೂರು ಮಾಡಬೇಕೆಂದು ರೆಕಮೆಂಡ್ ಮಾಡಿದರು. ಆದರೆ ಇದುವರೆಗೂ ಅದು ಕಾರ್ಯಗತವಾಗಿಲ್ಲ. ಕೆಲವು ಸೆನ್ಸಿಟಿವ್ ಏರಿಯಾದಲ್ಲಿ ಇನ್ನೂ 3 ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಲಿಕ್ಕೆ ಮಂಜೂರಾತಿ ಕೊಡಬೇಕು. ಈಗ ಫೈರ್‌ಸ್ಟೇಷನ್ ಅನ್ನು ಹುಬ್ಬಳ್ಳಿಯ ಮಧ್ಯದ ಅಮರ್‌ಗೋದಲ್ಲಿ ಮಾಡಿದ್ದಾರೆ. ಸಿಟಿಯಲ್ಲಿ ಎಲ್ಲಾದರೂ ಬೆಂಕಿ ಹತ್ತಿದರೆ ಫೈರ್ ಟ್ರಕ್ ಬರುವುದರೊಳಗೆ ಎಲ್ಲಾ ಸುಟ್ಟುಹೋಗುತ್ತದೆ. ಆದುದರಿಂದ ಒಂದು ಸಬ್ ಸ್ಟೇಷನನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮಂತ್ರಿಗಳು ಈ ಬೇಡಿಕೆಯನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮಹಿಳಾ ಪೋಲೀಸರ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಬೆಂಗಳೂರು ಮುಂತಾದ ಕೆಲವು ಸಿಟಿಗಳಲ್ಲಿ ಮಹಿಳಾ ಪೋಲೀಸರು ಕೆಲಸ ಮಾಡುತ್ತಿದ್ದಾರೆ. ಯಾರೂ ಪೋಲೀಸ್ ಕಾನ್‌ಸ್ಟೇಬಲ್ ಆಗಿ ಈಗ ಕೆಲಸ ಮಾಡುತ್ತಿದ್ದಾರೆ, ಅವರು ಪೋಲೀಸ್ ಕಾನ್‌ಸ್ಟೇಬಲ್‌ಗಳಾಗಿಯೇ ನಿವೃತ್ತರಾಗಬೇಕಾಗಿದೆ. ಅವರಿಗೆ ಪ್ರೊಮೋಷನ್ ಇಲ್ಲ. ಪೋಲೀಸ್ ಇಲಾಖೆಯಲ್ಲೇ ಮಹಿಳೆಯರ ಬಗ್ಗೆ ಒಂದು ರೀತಿಯ ಶೋಷಣೆಯಾಗಿದೆ ಎಂದರೆ ಅದು ಅತಿಶಯೋಕ್ತಿ ಅಲ್ಲ. ಅವರಿಗೆ ಪ್ರೊಮೋಷನ್ ಹಾಗೂ ಪ್ರೋತ್ಸಾಹ ಕೊಡತಕ್ಕ ಕೆಲಸವನ್ನು ಮಾನ್ಯ ಮಂತ್ರಿಗಳು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಮಂತ್ರಿಗಳ ಮುಂದೆ ಮೂರ್ತೆಗಾರರ ಒಂದು ಬೇಡಿಕೆ ಇದೆ. ಅದು ಎಂದರೆ, ಲೀಟರ್ ಫೀ ಎನ್ನತಕ್ಕದ್ದನ್ನು ಬಿಟ್ಟು ಲೈಸೆನ್ಸ್ ಫೀ ಎಂದು ತೆಗೆದುಕೊಳ್ಳಬೇಕು. ಲೀಟರ್ ಫೀ ಎಂದು ಮಾಡಿದರೆ ಅದರಲ್ಲಿ ಸಾಕಷ್ಟು ಗೊಂದಲವಾಗುತ್ತದೆಂಬ ಮನವಿ ಅವರದ್ದು ಇದೆ. ಇದನ್ನು ಪುರಸ್ಕರಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶಂಕರಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷಣಿಯವರೇ, ತಮ್ಮ ಮೂಲಕ ಗೃಹರಕ್ಷಕ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಉಪಾಧ್ಯಕ್ಷಣಿಯವರು : ಈಗ ಸಲಹೆಗಳನ್ನು ಕೊಡುವುದಿಲ್ಲ. ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ ಅದರ ಮೇಲೆ ನಿಮ್ಮದೇನಾದರು ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಶಂಕರಗೌಡ ಪಾಟೀಲ್ : ಗೃಹ ರಕ್ಷಣ ಇಲಾಖೆಯವರು ಎಂದರೆ ನಿಸ್ವಾರ್ಥ ಸೇವೆ ಸಲ್ಲಿಸತಕ್ಕಂಥವರು. ಅವರಿಗೆ ಬಟ್ಟೆ ಮತ್ತು ತರಬೇತಿ ಭತ್ಯೆ ಹೆಚ್ಚು ಮಾಡಿದ್ದಕ್ಕೆ ಅವರ ಪರವಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಏತಕ್ಕೆಂದರೆ ಈ ಗೃಹ ರಕ್ಷಕ ಇಲಾಖೆಯಲ್ಲಿ ನಾನೂ ಕೂಡ 15 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದೇನೆ. ಅವರ ಬಗ್ಗೆ ಹೇಳಲಿಕ್ಕೆ ಬಹಳಷ್ಟು ವಿಷಯವಿದೆ. ಅವರಿಗೆ ವಾಷಿಂಗ್ ಅಲೋಯನ್ಸ್ ಎಂದು ಮೂರು ರೂಪಾಯಿಗಳನ್ನು ಕೊಟ್ಟರೆ ಅದರಿಂದ ಒಂದು ಬನೀನ್ ವಾಷಿಂಗ್ ಮಾಡಲು ಸಾಲುವುದಿಲ್ಲ. ಆದ್ದರಿಂದ ವಾಷಿಂಗ್ ಅಲೋಯನ್ಸ್‌ನ್ನು ಜಾಸ್ತಿ ಮಾಡಬೇಕು. ಮತ್ತು

ಅವರಿಗೆ ಒಂದು ತಿಂಗಳಿಗೆ ಇಂತಿಷ್ಟು ಪಗಾರ್ ಎಂದು ಕೊಟ್ಟು ಸಹಾಯ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಹಾಗೆಯೇ ಅವರ ಸರ್ವೀಸ್ ಮುಗಿದ ಮೇಲೆ ಉಡುಪು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಗೃಹ ಮಂತ್ರಿಗಳಲ್ಲಿ ಮತ್ತೊಂದು ವಿಜ್ಞಾಪನೆ ಎಂದರೆ ಇವತ್ತು ಲಕ್ಷ್ಮೇಶ್ವರ ಬಹಳ ದೊಡ್ಡ ನಗರ. ಅಲ್ಲಿಗೆ ಒಂದು ಫೈರ್ ಸ್ಟೇಷನ್ ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಗದಗ್‌ನಿಂದ ಬರುವುದರೊಳಗೆ ಫೈರ್ ಆಕ್ಸಿಡೆಂಟ್ ಆದ ಕಡೆ ಎಲ್ಲವೂ ಮುಗಿದುಹೋಗಿರುತ್ತದೆ. ಆದಕ್ಕೆ ದಯವಿಟ್ಟು ಅಲ್ಲಿಗೆ ಫೈರ್ ಪೋಲೀಸ್ ಸ್ಟೇಷನ್ ಕೊಡುವುದರ ಜೊತೆಗೆ ಒಂದು ತಾಲ್ಲೂಕ್ ಸಮಿತಿಯನ್ನು ರಚನೆ ಮಾಡಬೇಕು. ಏತಕ್ಕೆಂದರೆ ನಮ್ಮಲ್ಲಿ ಪಬ್ಲಿಕ್‌ಗೂ ಮತ್ತು ಪೋಲೀಸ್‌ನವರಿಗೂ ಒಂದು ಬಾಂಧವ್ಯ ಬೆಳೆಯಲು ಇದರಿಂದ ಅನುಕೂಲವಾಗುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ.ವೈ. ನಾಗಪ್ಪ (ಹರಿಹರ) : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಇವತ್ತಿನ ದಿನ ಮಾನ್ಯ ಗೃಹಮಂತ್ರಿಗಳು ಬಹಳ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. He has apprised the police department so much and very well and I also got the same conception that these police stations are the temples of protection. No doubt about it. One sad incident has occurred at Davanagere, you also know very well. A lady who has consumed Satta Rum has died. It was highlighted in the paper about two months back people forced the police authorities to take action about it. But I do not know why they were so much incapacitated, they could not arrest the particular person. ನನ್ನ ಅಭಿಪ್ರಾಯದಲ್ಲಿ ಇವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದಂಥವರು. ಪ್ರಜಾಪ್ರಭುತ್ವವನ್ನು ಕಾಪಾಡತಕ್ಕಂಥ ಜನರೆಂದರೆ ಪತ್ರಿಕೆಗಳವರು. ಸಮಾಜದ ಕುಂದುಕೊರತೆಗಳನ್ನು ಎತ್ತಿ ತೋರಿಸತಕ್ಕಂಥ ಜನರ ಮೇಲೆ ಇವತ್ತು ಅತ್ಯಾಚಾರ, ಅನ್ಯಾಯ ಪೋಲೀಸಿನವರಿಂದ ಆದರೆ ನಮ್ಮಲ್ಲಿ ಯಾವ ಪ್ರಜಾಪ್ರಭುತ್ವ ಇದೆ ಎಂದು ಕೇಳಬೇಕಾಗುತ್ತದೆ. ಆದ್ದರಿಂದ, ದಯವಿಟ್ಟು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. Whether it has come to his notice or not? If it has come to his notice, what action the Hon'ble Home Minister has taken, he must tell in this House.

ಶ್ರೀ ಎಂ. ವೀರಭದ್ರಪ್ಪ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳು ನಮ್ಮ ಪೋಲೀಸ್ ಇಲಾಖೆಯಲ್ಲಿ ಹತ್ತು ವರ್ಷಗಳಿಂದ ಭರ್ತಿಯಾಗಿರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆನ್ನುವ ಮಾತನ್ನಾಡಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಈಗಾಗಲೇ ನನ್ನ ಕ್ಷೇತ್ರವಾದ ಕಡೂರು ಒಂದಾನೊಂದು ಕಾಲದಲ್ಲಿ ಜಿಲ್ಲಾ ಕೇಂದ್ರವಾಗಿತ್ತು. ಇಲ್ಲಿ ಸದ್ಯ ಕೇವಲ 27 ಜನ ಪೋಲೀಸ್ ಪೇದೆಗಳಿದ್ದಾರೆ. 15 ಮೈಲಿಗಳ ಸುತ್ತಳತೆಯಲ್ಲಿ ಬೇರೆ ಯಾವ ಪೋಲೀಸ್ ಸ್ಟೇಷನ್ ಸಹ ಇಲ್ಲ. ಜನಸಂಖ್ಯೆಯ ಆಧಾರ ತೆಗೆದುಕೊಂಡರೆ ಕಡೂರು ಪಟ್ಟಣದಲ್ಲಿ 25 ಸಾವಿರದಿಂದ 45 ಸಾವಿರದವರೆಗೆ ಜನಸಂಖ್ಯೆ ಇದೆ. ಇಲ್ಲಿಗೆ ರೂರಲ್ ಪೋಲೀಸ್ ಸ್ಟೇಷನ್ನಿನ ಅವಶ್ಯಕತೆ ಬಹಳವಾಗಿದೆ. ಆದ್ದರಿಂದ, ಮಾನ್ಯ ಮಂತ್ರಿಗಳು ದಯವಿಟ್ಟು ಅಲ್ಲಿಗೆ ರೂರಲ್ ಪೋಲೀಸ್ ಸ್ಟೇಷನ್ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕ ಫೈರ್ ಸ್ಟೇಷನ್ ಇಡೀ ಜಿಲ್ಲೆಗೆ ಒಂದೇ ಆಗಿರುವುದರಿಂದ ಮಲೆನಾಡು ಬಯಲು ಸೀಮೆ ಎಂದು ಎರಡು ಭಾಗವಾಗಿ ಬರತಕ್ಕ ಚಿಕ್ಕಮಗಳೂರು, ಕಡೂರು, ತರೀಕೆರೆ ಭಾಗಗಳಿಂದ 50 ಕಿಲೋಮೀಟರ್ ಪ್ರಯಾಣ ಮಾಡಿ ಬರುವುದರೊಳಗೆ ಅಗ್ನಿ ದುರಂತ ಆಗಿಹೋಗಿರುತ್ತದೆ. ಕಡೂರಿನಲ್ಲಿ ಸಾಕಷ್ಟು ಅಗ್ನಿಗೆ ಒಳಗಾಗಿರತಕ್ಕ

ಸಂದರ್ಭಗಳು ಒದಗಿಬಂದಿವೆ. ಅಲ್ಲಿ ಒಂದು ಅಗ್ನಿಶಾಮಕ ಸ್ಟೇಷನ್ ಮಾಡಿಕೊಡಬೇಕೆಂದು ಕೇಳಿದರೂ ಇನ್ನೂ ಆಗಿಲ್ಲ. ಕೂಡಲೇ ಏಪ್ರಿಲ್, ಮೇ ತಿಂಗಳೊಳಗೆ ಕಡೂರಿನಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಮಾಡಿಕೊಡಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರವಾದ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನಮ್ಮ ಊರಿನಲ್ಲಿ ಹೆಂಡದ ಅಂಗಡಿಗಳು ಬೇಡ, ನಾವು ಕುಡಿಯುವುದಿಲ್ಲವೆಂದು ಬಾಯ್‌ಕಾಟ್ ಮಾಡಿದಾಗ ಎಕ್ಸೈಜ್ ಇಲಾಖೆಯವರು ನೇರವಾಗಿ ಹೋಗಿ ಹೆಂಡದ ಅಂಗಡಿಗಳನ್ನು ಓಪನ್ ಮಾಡಿ ಜನರಿಗೆ ಕುಡಿಯಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಯಾವಯಾವ ಊರಿನಲ್ಲಿ ಹೆಂಡವನ್ನು ವಿತರಣೆ ಮಾಡಕೂಡದೆಂದು ಬಾಯ್‌ಕಾಟ್ ಮಾಡಿದ್ದಾರೆ ಅಂಥ ಊರುಗಳನ್ನು ಡಿಲೀಟ್ ಮಾಡಿ, ಹೆಂಡವನ್ನು ಹರಾಜು ಮಾಡಬೇಕು ಮತ್ತು ಗ್ರಾಮಾಂತರ ಪ್ರದೇಶದ ಜನರಿಗೆ ಹೆಂಡ ಕುಡಿಯುವಂತೆ ಒತ್ತಾಯ ಮಾಡಬಾರದೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಇವತ್ತಿನ ದಿವಸ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಹಳಷ್ಟು ಅಪಘಾತಗಳು ಆಗುತ್ತಿವೆ, ದರೋಡೆ ಪ್ರಕರಣಗಳು ನಡೆಯುತ್ತಿವೆ. ಆ ಕಾರಣದಿಂದ ನಮ್ಮ ಸರ್ಕಾರದವರು ಹೆಚ್ಚುವರಿ ಪೋಲೀಸ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿರುವುದರಿಂದ, ವಿಶೇಷವಾಗಿ ಸಂಚಾರಿ ಪೋಲೀಸ್ ಠಾಣೆಗಳನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಾಡತಕ್ಕದ್ದು ಅವಶ್ಯಕತೆ ಇದೆ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ಸವಣೂರು ಮತಕ್ಷೇತ್ರದಲ್ಲಿ ಅರಳೀಹಳ್ಳಿ ಎಂಬ ಗ್ರಾಮ ಇದೆ. ಅಲ್ಲಿ ಅಂಡಮಾನ್-ನಿಕೋಬಾರ್. ಐಲ್ಯಾಂಡ್ ಪರಿಸ್ಥಿತಿ ಆಗಿದೆ ಎಂದರೂ ತಪ್ಪಾಗುವುದಿಲ್ಲ. ಅಲ್ಲಿ ಸತತವಾಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಅಪಮಾನ, ಅನಾಗರಿಕ ವರ್ತನೆ ಮಾಡತಕ್ಕ ದುಷ್ಟ ಶಕ್ತಿಗಳು ಹುಟ್ಟಿಕೊಂಡಿವೆ; ಜೊತೆಗೆ ಹಾಡಹಗಲೇ ದರೋಡೆ ಪ್ರಕರಣಗಳು ನಡೆದಿವೆ. ಈ ದೃಷ್ಟಿಯಿಂದ ಅಲ್ಲಿ ಹೆಚ್ಚು ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ಒದಗಿಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವೈ.ಎಂ. ವೀರಣ್ಣ : ನಮ್ಮ ದಾವಣಗೆರೆ ಮಹಾನಗರದಲ್ಲಿ ಜನಸಂಖ್ಯೆ ಬಹಳವಾಗಿ ಬೆಳೆದು ಸೂಕ್ಷ್ಮ ಪ್ರದೇಶವಾಗಿದೆ. 1990ರ ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಗಲಭೆಯಲ್ಲಿ ಪೋಲೀಸರು ಏನು ಕೇಸುಗಳನ್ನು ಬುಕ್ ಮಾಡಿದ್ದಾರೆ ಅದನ್ನು ಪೂರ್ಣ ಪ್ರಮಾಣದಲ್ಲಿ ವಾಪಸ್ಸು ತೆಗೆದುಕೊಳ್ಳತಕ್ಕ ಕೆಲಸ ಆಗಿಲ್ಲ. ಅದನ್ನು ಕೂಡಲೇ ವಾಪಸ್ಸು ತೆಗೆದುಕೊಳ್ಳತಕ್ಕ ಕಾರ್ಯಕ್ರಮ ಆಗಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ದಾವಣಗೆರೆ ಸೂಕ್ಷ್ಮ ಪ್ರದೇಶ, ತೀಕ್ಷ್ಣತೆ ಇರತಕ್ಕ ಪ್ರದೇಶ ಎಂದು ಗೃಹ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಕೆಲವು ಕಡೆ ಬೆಟಾಲಿಯನ್‌ಗಳನ್ನು ಒದಗಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದೇ ಪ್ರಕಾರ ದಾವಣಗೆರೆಯಲ್ಲಿ ಒಂದು ಕೆ.ಎಸ್.ಆರ್.ಪಿ. ಸೆಲ್ ಅನ್ನು ಖಾಯಂ ಆಗಿ ಇಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ದಾವಣಗೆರೆಗೆ ಅಡಿಷನಲ್ ಎಸ್.ಪಿ. ಪೋಸ್ಟ್ ಕೊಡುತ್ತೇವೆಂದು ಹೇಳಿದ್ದರು. ಅದು ಅಗತ್ಯವಾಗಿ ಬೇಕಾಗಿರುವುದರಿಂದ ಕೂಡಲೇ ಎಸ್.ಪಿ. ಪೋಸ್ಟ್ ಮಂಜೂರ್ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಆ ಕೊರತೆಯನ್ನು ನೀಗುವ ಕಡೆ ಗೃಹಸಚಿವರು ಗಮನ ಹರಿಸಬೇಕು. ಹೆಂಡದ ಅಂಗಡಿಗಳ ಬಗ್ಗೆ ಸಾಕಷ್ಟು ಮಂದಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈಗಿನ ಜನಸಂಖ್ಯೆ ಪ್ರಮಾಣವನ್ನು ಗಮನಿಸಿದರೆ ತುಂಬಾ ಅಂಗಡಿಗಳಾಗಿವೆ. ಮತ್ತೆ ಇತ್ತೀಚೆಗೆ ಎಲ್ಲಾ ಕಡೆ ಹೆಂಡದ ಅಂಗಡಿಗಳನ್ನು ಕೊಡುತ್ತಿದ್ದಾರೆ. ಅದರಲ್ಲೂ ಎಲ್ಲಿ ಬಡವರು ಹೆಚ್ಚಾಗಿ ವಾಸವಾಗಿದ್ದಾರೆ,

ಪರಿಶಿಷ್ಟ ಜಾತಿಯವರು ವಾಸವಾಗಿದ್ದಾರೆ ಅಂಥ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಂಡದ ಅಂಗಡಿಗಳನ್ನು ಕೊಡತಕ್ಕ ಸನ್ನಿವೇಶ ಕಾಣುತ್ತಿದೆ. ಅದನ್ನು ತಡೆಗಟ್ಟಬೇಕೆಂದು ಮಾನ್ಯ ಗೃಹ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಪೋಲೀಸ್ ಇಲಾಖೆಯನ್ನು ಸುಧಾರಣೆ ಮಾಡುವ ಬಗ್ಗೆ ಧರ್ಮವೀರ ಕಮಿಟಿಯವರು ವರದಿಯನ್ನು ಏನು ಕೊಟ್ಟಿದ್ದರು. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಎರಡನೆಯದಾಗಿ, ಬ್ರಿಟಿಷರ ಕಾಲದಿಂದ ಖಾಕಿ ಬಟ್ಟೆಯನ್ನು ಯಾರು ಹಾಕಿಕೊಂಡರೂ ಜನಗಳ ಪ್ರೀತಿಯನ್ನು ಗಳಿಸಲಿಕ್ಕೆ ಇದುವರೆಗೆ ಸಾಧ್ಯವಾಗಿಲ್ಲ. ಆದುದರಿಂದ, ಈ ಬಟ್ಟೆಯನ್ನು ಬದಲಾಯಿಸಿ ಜನರ ಪ್ರೀತಿ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಏಕೆಂದರೆ ಖಾಕಿ ಬಟ್ಟೆ ಇಲ್ಲದಾಗ ಪೋಲೀಸರು ಸೌಜನ್ಯವಾಗಿರುತ್ತಾರೆ. ಖಾಕಿ ಬಟ್ಟೆ ಹಾಕಿಕೊಂಡ ತಕ್ಷಣ ಗೂಳಿಗಳು ಎಗರಿದಂತೆ ಎಗರುತ್ತಾರೆ. ಇದೇನು ಈ ಬಟ್ಟೆಯ ಪ್ರಭಾವವೆ? ಹೇಗೆ? ಇನ್ನು ಜೈಲು ಬಗ್ಗೆ ಹೇಳಬೇಕಾದರೆ ಎಮರ್ಜೆನ್ಸಿ ಟೈಂನಲ್ಲಿ ನಾನೂ ಜೈಲಿನಲ್ಲಿದ್ದೆ. ದುರ್ದೈವವೋ ಅಥವಾ ಸುದೈವವೋ ಗೊತ್ತಿಲ್ಲ. ನಮ್ಮ ಶಿವಕುಮಾರ್ ಅವರು ಜೈಲು ವರ್ಣನೆ ಮಾಡಿದಾಗ ಗೊತ್ತಾಯಿತು ನಾವೆಲ್ಲಾ ವಾಪಸ್ ಜೈಲಿಗೆ ಹೋಗಬೇಕೋನೋ ಎಂದು. ಏನೇನು ಸ್ಮಗಲ್ಡ್ ಆರ್ಟಿಕಲ್ಸ್ ನಿಮಗೆ ಬೇಕೋ ಅದೆಲ್ಲಾ ಜೈಲಿನಲ್ಲಿ ಸಿಗುತ್ತದೆ. ಅಫೀಮು ಸಿಗುತ್ತದೆ, ಗಾಂಜಾ ಸಿಗುತ್ತದೆ. ಏನೇನು ಸಿಗಬೇಕೋ ಅದೆಲ್ಲಾ ಸಿಗುತ್ತದೆ. ಮತ್ತೆ ಜೀವಾವಧಿ ಶಿಕ್ಷೆಗೆ ಒಳಗಾಗಿರತಕ್ಕವರು ಬಹುಶಃ ಜಮೀನು ವ್ಯಾಜ್ಯದಲ್ಲಿ, ಅಣ್ಣತಮ್ಮಂದಿರ ವ್ಯಾಜ್ಯದಲ್ಲಿ ಏನೋ ದುರ್ದೈವದಿಂದ ಜೈಲಾಗಿದೆ. ಅವರಿಗೆ ಅವರು 10 ವರ್ಷ ಜೈಲು ಶಿಕ್ಷೆ ಅನುಭವಿಸಿದರೆ ಅವರನ್ನು ಬಿಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ? ಬಹಳಷ್ಟು ಅರ್ಜಿಗಳು ಅದರ ಬಗ್ಗೆ ಬರುತ್ತಿವೆ. ಮೂರನೆಯದು. ಅವರು ಕೂಲಿ ಕೆಲಸ ಏನು ಮಾಡುತ್ತಿದ್ದಾರೆ ಅದನ್ನು ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡಿಕೊಂಡು ತಿಂಗಳಾದ ತಕ್ಷಣ ಅಲ್ಲಿರುವ ಆಫೀಸರ್‌ಗಳೇ ತೆಗೆದುಕೊಂಡುಬಿಡುತ್ತಾರೆ. ಅದರ ಬದಲು ಅವರಿಗೆ ಬರತಕ್ಕ ಕೂಲಿಯನ್ನು ಪೋಸ್ಟ್ ಆಫೀಸಿಗೆ ಹಾಕಿ ಅವರು ಬಿಡುಗಡೆ ಆದಾಗ ವಾಪಸ್ ಕೊಡುವ ವ್ಯವಸ್ಥೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ. ಲಕ್ಕಣ್ಣ : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಪೋಲೀಸ್ ವಸತಿ ಗೃಹಗಳ ಕಟ್ಟಡಗಳ ರಿಪೇರಿಗೋಸ್ಕರ ಹಣ ತುಂಬಾ ಕಡಿಮೆ ಇಟ್ಟಿದ್ದಾರೆ. ಇಡೀ ರಾಜ್ಯಕ್ಕೆ 20 ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದು ಏನೇನು ಸಾಕಾಗುವುದಿಲ್ಲ. ಸುಮಾರು 20 ವರ್ಷದ ಹಿಂದೆ ಕಟ್ಟಿದ ಮನೆಗಳಿವೆ. ವೆಚ್ಚದ 5 ಪರ್ಸೆಂಟನ್ನು ರಿಪೇರಿಗೆ ಕೊಡುತ್ತಾರೆ. ಅದು ಏನೇನೂ ಸಾಕಾಗುವುದಿಲ್ಲ. ಆದ್ದರಿಂದ ಅದನ್ನು ಹೆಚ್ಚಿಗೆ ಮಾಡಬೇಕು. ರಾಜಾಜಿನಗರ 6ನೇ ಬ್ಲಾಕ್ ಪೋಲೀಸ್ ಕ್ವಾರ್ಟರ್ಸ್ ಮತ್ತು ಜಾರಕಾಬಂಡೆ ಪೋಲೀಸ್ ಕ್ವಾರ್ಟರ್ಸ್ ಅಧ್ವಾನವಾಗಿದೆ; ಪ್ಲಾಸ್ಟಿಂಗ್ ಎಲ್ಲಾ ಬಿದ್ದುಹೋಗಿದೆ. ಸುಮಾರು ಹತ್ತು ವರ್ಷದಿಂದ ರಿಪೇರಿ ಮಾಡಿಲ್ಲ. ಅದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಹಾಗೆಯೇ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಏನು ಷೂ ಕೊಡುತ್ತಿದ್ದೀರಿ ಅದನ್ನು ಬದಲಾವಣೆ ಮಾಡಬೇಕು. ಅದು ಸುಮಾರು ಹತ್ತು ಕೆ.ಜಿ.ಇದೆ. ಇಂತಹ ಷೂ ಹಾಕಿಕೊಂಡು ಹೋಗಿ ಕಳ್ಳನನ್ನು ಹಿಡಿಯುವುದಕ್ಕಾಗುವುದಿಲ್ಲ. ಆದ್ದರಿಂದ ಬದಲಾವಣೆ ಮಾಡಬೇಕು. ಮತ್ತು ರಾತ್ರಿ ಡ್ಯೂಟಿಯಲ್ಲಿ ಅವರಿಗೆ ಕ್ಯಾನ್‌ವಾಸ್ ಷೂಗಳನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ರಾಜಾಜಿನಗರ ಕ್ಷೇತ್ರದಲ್ಲಿ ಫೈರ್ ಬ್ರಿಗೇಡ್ ಆಫೀಸ್ ಮಾಡಬೇಕು. ಅದಕ್ಕೆ ಸ್ಥಳ ಇದೆ. ಅಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಇರುವುದರಿಂದ ಬಂದ್‌ಗಳು ಆದಾಗ ತುಂಬಾ ಅನಾಹುತವಾಗಿದೆ. ಆದ್ದರಿಂದ ಅಲ್ಲಿ ಫೈರ್ ಸ್ಟೇಷನ್ ಪ್ರಾರಂಭ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಮಂತ್ರಿಗಳು ...

ಶ್ರೀ ಗುರುದೇವ್ : ನನಗೆ ನಿನ್ನೆಯೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.

ಉಪಾಧ್ಯಕ್ಷರು : ಈಗ ಸಾಧಾರಣ 25 ಜನರಿಗೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಗುರುದೇವ್ : ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು : ನೀವು ಒಂದು ನಿಮಿಷ ತೆಗೆದುಕೊಳ್ಳುವುದಿಲ್ಲ. ಪ್ರತಿಯೊಬ್ಬರೂ ಭಾಷಣ ಮಾಡುವುದಕ್ಕೆ ಶುರು ಮಾಡುತ್ತೀರಿ. ಆದ್ದರಿಂದ ಎರಡು ಗಂಟೆ ಕಾಲ ...

ಶ್ರೀ ಗುರುದೇವ್ : ನಮ್ಮ ಕ್ಷೇತ್ರದ ಬಗ್ಗೆ ಹೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಇನ್ನೊಂದು ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡೋಣ.

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಸಚಿವರು ಉತ್ತರ ಕೊಡುವಂಥ ಕಾಲದಲ್ಲಿ ಈಗಿನ ಹರಾಜು ಸಿಸ್ಟಂ ಬದಲಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆ ಸಿಸ್ಟಮನ್ನು ಯಾವ ರೀತಿ ಮಾಡುತ್ತಾರೆ? ನಾಳೆ ಬರತಕ್ಕ ಆಕ್ಷನ್‌ನಲ್ಲಿ ಮಾಡುತ್ತಾರಾ? ಮತ್ತು ಸಿ.ಎಲ್.2 ಮತ್ತು ಸಿ.ಎಲ್. 9 ಡಿಸ್ಟಿಲರೀಸ್‌ಗೆ ಲೈಸೆನ್ಸ್ ಫೀಸ್ ಜಾಸ್ತಿ ಮಾಡಿದ ಕಾರಣ ಎಲ್ಲಾ ಮುಚ್ಚಿಹೋಗುವ ಪರಿಸ್ಥಿತಿ ಬಂದಿದೆ. ಅದನ್ನು ಏನಾದರೂ ಕಡಿಮೆ ಮಾಡುತ್ತೀರಾ ಎಂದು ದಯವಿಟ್ಟು ಹೇಳಬೇಕು.

ಶ್ರೀ ಗುರುದೇವ್ : ಹಿಂದೆ ಕೇಳಿದ ಸಂದರ್ಭದಲ್ಲಿ ಈ ಇಲಾಖೆ ಬೇಡಿಕೆ ಬಂದಂಥ ಸಂದರ್ಭದಲ್ಲಿ ಮಾತನಾಡಿ ಎಂದು ಹೇಳಿದಿರಿ.

ಉಪಾಧ್ಯಕ್ಷರು : ಅದೆಲ್ಲಾ ಬೇಡ. ನೇರವಾಗಿ ಕೇಳಿ.

ಶ್ರೀ ಗುರುದೇವ್ : ನನ್ನ ಒಂದೇ ಒಂದು ಬೇಡಿಕೆ ಎಂದರೆ ಇವರ ರಿಪೋರ್ಟ್ ಪ್ರಕಾರ 13 ತಾಲ್ಲೂಕುಗಳಲ್ಲಿ ಸೇಂದಿ ಮಾರಾಟಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ನಮ್ಮಲ್ಲಿ ಮೂರ್ತೆದಾರರು ಜಾಸ್ತಿ ಇರುವುದರಿಂದ ದಯಮಾಡಿ ಸಕಲೇಶಪುರ ಸೇರಿಸಿ ನಮಗೆ ಒಂದು ಸೊಸೈಟಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಎರಡನೆಯದಾಗಿ ಹಾಸನ ಜಿಲ್ಲೆಯ ಹೊಳೇನರಸೀಪುರದಲ್ಲಿ ಒಂದು ಪೋಲೀಸ್ ಸ್ಟೇಷನ್ ಕೊಟ್ಟಿದ್ದಾರೆ. ಮತ್ತು ಹಿರೇಸಾವೆಯಲ್ಲಿ ಒಂದು ಔಟ್‌ಪೋಸ್ಟ್ ಕೊಟ್ಟಿದ್ದಾರೆ. ಆದರೆ ತಮಗೆಲ್ಲಾ ಗೊತ್ತಿರುವ ಹಾಗೆ ನನ್ನ ಕ್ಷೇತ್ರದಲ್ಲಿ ಮತೀಯ ಗಲಭೆ ನಡೆದು ನಾಲ್ಕು ಕೊಲೆಗಳಾಯಿತು. ಕೊಲೆ ಆದಂಥ ಜಾಗಗಳಲ್ಲಿ ಪೋಲೀಸ್ ಸ್ಟೇಷನ್ ಮತ್ತು ಔಟ್‌ಪೋಸ್ಟ್ ಕೊಡಿ ಎಂದು ಈಗಾಗಲೇ ಮಾನ್ಯ ಮಂತ್ರಿಗಳನ್ನು ಕೇಳಿದ್ದೇನೆ. ಮತ್ತು ಹಿಂದೆ ಕೇಸ್ ಹಾಕಿದ್ದನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಆದರೆ ಇವತ್ತಿನವರೆಗೂ ತೆಗೆದುಕೊಂಡಿಲ್ಲ. ದಯಮಾಡಿ ಅದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೊಡಬೇಕು.

ಶ್ರೀ ಎಸ್. ಚಿಕ್ಕಮಾದು : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಸರ್ಕಾರ 1992-93ನೇ ಸಾಲಿನಲ್ಲಿ 40 ಹೊಸ ಪೋಲೀಸ್ ಸ್ಟೇಷನ್‌ಗಳನ್ನು ತೆಗೆಯತಕ್ಕ ವಿಚಾರವನ್ನು ನಾನು ಸ್ವಾಗತಿಸಿ ಅಭಿನಂದಿಸುತ್ತೇನೆ. ಮತ್ತು ಹುಣಸೂರು ತಾಲ್ಲೂಕಿನಲ್ಲಿ ಬಹಳ ದಿನಗಳಿಂದ ಇರತಕ್ಕ ಒಂದು ಬೇಡಿಕೆಯಂತೆ ಬಿಳಿಕೆರೆ ಗ್ರಾಮಕ್ಕೆ ಒಂದು ಪೋಲೀಸ್ ಸ್ಟೇಷನ್, ಕಟ್ಟೆಮಳಿವಾಡಿ ಗ್ರಾಮಕ್ಕೆ ಔಟ್‌ಪೋಸ್ಟ್ ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಐದು ವರ್ಷಗಳ ಹಿಂದೆ

ಬನ್ನಿಕುಪ್ಪೆ ಗ್ರಾಮದಲ್ಲಿ ಒಂದು ಸಣ್ಣ ಪುಟ್ಟ ವಿಚಾರಕ್ಕೋಸ್ಕರ ಸುಮಾರು 85 ಜನರ ಮೇಲೆ ಮೊಕದ್ದಮೆ ಇದೆ. ಅದನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಮತ್ತು ಹಿಂದೆ ಸರ್ಕಾರ ಧರ್ಮವೀರ ಆಯೋಗವನ್ನು ಪೋಲೀಸ್ ಇಲಾಖೆ ಸುಧಾರಣೆಗೋಸ್ಕರ ಮಾಡಿತ್ತು. ಅದರ ಬಗ್ಗೆ ವರದಿ ಬಂದಿದ್ದು ಅದನ್ನು ಜಾರಿಗೆ ಕೊಟ್ಟರೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಧರ್ಮಸಿಂಗ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ. ಮೊದಲನೆಯದಾಗಿ ಕೇಸಸ್ ವಿತ್‌ಡ್ರಾ ಮಾಡುವ ಬಗ್ಗೆ ಮಾನ್ಯ ವೆಂಕಟಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಎಲ್ಲಾ ಕೇಸಸ್ ವಿತ್‌ಡ್ರಾ ಮಾಡಬೇಕಾಗಿದೆ. ಈಗಾಗಲೇ ರಾಜ್ಯದಲ್ಲಿ 242 ಕೇಸ್‌ಗಳನ್ನು ವಿತ್‌ಡ್ರಾ ಮಾಡಿದ್ದೇವೆ. ಇನ್ನೂ ಕೂಡಾ ಕೆಲವು ಕೇಸಸ್‌ಗಳು ವಿತ್‌ಡ್ರಾ ಮಾಡುವ ಸಲುವಾಗಿ ಬೇರೆ ಬೇರೆ ಹಂತದಲ್ಲಿ ಇವೆ. ಇದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೇವೆ. ಅದಕ್ಕಾಗಿ ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇನ್ನು ಒಂದೆರಡು ತಿಂಗಳಲ್ಲಿ ಉಳಿದ ಕೇಸ್‌ಗಳನ್ನು ವಿತ್‌ಡ್ರಾ ಮಾಡುತ್ತೇವೆ. ಇನ್ನು ಎಕ್ಸೈಸ್ ಬಗ್ಗೆ ಮಾತನಾಡುತ್ತಾ ಶಾಲೆ ಕಟ್ಟಡ ಇರುವ ಕಡೆ ಧಾರ್ಮಿಕ ಸ್ಥಳದಲ್ಲಿ ಎಲ್ಲಾ ಕಡೆ ಅಂಗಡಿ ತೆರೆಯಲು ಅನುಮತಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಹಾಸನದಲ್ಲಿ, ಚಿಕ್ಕಮಗಳೂರಿನಲ್ಲಿ. ಹೀಗೆ ಬೇರೆ ಕಡೆ ಕೊಟ್ಟಿದ್ದಾರೆಂದು ಪ್ರಸ್ತಾಪ ಮಾಡುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಸರ್ಕಾರ ಒಂದು ಡಿಸಿಷನ್ ತೆಗೆದುಕೊಂಡಿದೆ. ಎಲ್ಲೆಲ್ಲಿ ಈ ರೀತಿ ಆಗಿದೆ ಅಲ್ಲಿ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಬೇಕೆಂದು ಇವತ್ತು ಕೂಡ ಸರ್ಕ್ಯುಲರ್ ಹೋಗುತ್ತಿದೆ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಲ್ಲಿ ಬಹಳಷ್ಟು ಪಬ್ಸ್ ಬಂದಿವೆ, ಬಾರ್ಸ್ ಬಂದಿವೆ ಎಂದು ಸೌದತ್ ಆಲಿ ಖಾನ್ ಅವರು ಹೇಳಿದ್ದಾರೆ. ಇವತ್ತು ನಾವು ಜನಸಂಖ್ಯೆಗೆ ಅನುಗುಣವಾಗಿ ಕೊಡುತ್ತಿದ್ದೇವೆ. ಇವತ್ತು ಹಾಸನದಲ್ಲಿ ಜಾಸ್ತಿ ಬಂದಿದ್ದಾವೆ ಎಂದು ಹೇಳಿದರು. ಹಾಸನದ ಶಾಸಕರು ಯಾರೂ ನನ್ನ ಕಡೆ ಬಂದಿಲ್ಲ. ತಾವೂ ಕೂಡಾ ಬಂದಿಲ್ಲ. ಆದರೂ ಕೂಡಾ ಇದರ ಬಗ್ಗೆ ಸಮೀಕ್ಷೆ ಮಾಡಿಸುತ್ತೇನೆ. ಎಲ್ಲಿ ಹೆಚ್ಚಾಗಿದೆ ಎಂಬ ಬಗ್ಗೆ ಸರ್ಕಾರದ ಗಮನಕ್ಕೆ ತಂದಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಎಲ್ಲಾ ಕಡೆ ಇದೆ ಎಂದು ಶಿವನಂಜಪ್ಪನವರು ಮತ್ತು ಚಿಕ್ಕಮಾದು ಅವರು ಹೇಳಿದ್ದಾರೆ. ಇನ್ನು ನ್ಯಾಷನಲ್ ಪೋಲೀಸ್ ಕಮಿಷನ್‌ನವರು ಏನು ರಿಪೋರ್ಟ್‌ನ್ನು 80ರಲ್ಲಿ ಕೊಟ್ಟಿದ್ದಾರೆ ಅದನ್ನು ನಾವೇ ಪ್ರಥಮವಾಗಿ ಅನುಷ್ಠಾನಕ್ಕೆ ತಂದಿದ್ದೇವೆ. ಅದರ ಪರಿಣಾಮವಾಗಿ 15 ಔಟ್ ಪೋಸ್ಟ್ ಪೋಲೀಸ್ ಸ್ಟೇಷನ್ ಕೊಟ್ಟು, 135 ಕೋಟಿ ರೂ. ಖರ್ಚು ಮಾಡತಕ್ಕದ್ದು ಏನಿದೆ, ಅದರಲ್ಲಿ 1990-91ರಲ್ಲಿ ಸುಮಾರು 22 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮುಂದಿನ 5 ವರ್ಷಗಳಲ್ಲಿ ಕೂಡಾ ಎಷ್ಟು ಹೆಚ್ಚು ಮಾಡಬೇಕು ಮತ್ತು ಸಿಬ್ಬಂದಿ ಎಷ್ಟು ಹೆಚ್ಚು ಮಾಡಬೇಕೆಂದು ವಿಚಾರ ಮಾಡಿ ಅದನ್ನು ಮಾಡುತ್ತಿದ್ದೇವೆ. ಮತ್ತೆ ಬಸವಂತರೆಡ್ಡಿಯವರು ಸೇಂದಿ ಮಾರತಕ್ಕ ಅನುಮತಿಯನ್ನು 3 ತಾಲ್ಲೂಕಿಗೆ ಕೊಟ್ಟಿದ್ದೀರಿ. ಬೇರೆ ಕಡೆ ಕೊಟ್ಟಿಲ್ಲ ಎಂದು ಹೇಳಿದರು. ಇವತ್ತು ಶೇಂದಿ ಗಿಡ ಎಲ್ಲಿ ಇದೆ ಅಲ್ಲಿ ನಾವು ಕೊಟ್ಟಿದ್ದೇವೆ. ದಕ್ಷಿಣ ಕನ್ನಡದಲ್ಲಿ ಕೊಟ್ಟಿದ್ದೇವೆ. ಮೂರ್ತೆದಾರರ ಕೊ-ಆಪರೇಟಿವ್ ಸೊಸೈಟಿ ಮುಖಾಂತರ ಕೊಡಬೇಕೆಂದು ಸೊಸೈಟಿ ಮುಖಾಂತರ ಕೊಡಬೇಕೆಂದು ಮತ್ತು ಮಾರಾಟ ಮಾಡಬೇಕೆಂದು ನಿಯಮ ಇದೆ. ಎಲ್ಲಿ ಇವತ್ತು ಬಾರ್ಡರ್ ಏರಿಯಾ ಇದೆ, ಆಂಧ್ರಪ್ರದೇಶದಿಂದ ತಂದು ಶೇಂದಿ ಮಾರತಕ್ಕದ್ದು ಇದೆ. ಎಲ್ಲಿ ಶೇಂದಿ ಗಿಡ ಇದೆ ಅಲ್ಲಿ ಕೊಟ್ಟಿದ್ದೇವೆ. ಮತ್ತು ಅವರಿಗೆ ಒಂದು ಫೈರ್ ಸ್ಟೇಷನ್ ಸೇಡಂನಲ್ಲಿ ಕೊಟ್ಟಿದ್ದೇವೆ. ಅದರ ಬಗ್ಗೆ ಅವರು ಪ್ರಸ್ತಾಪ ಮಾಡಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಲ್ಲೆಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೆಚ್ಚಿನ ರೀತಿಯಲ್ಲಿ ಪೋಲೀಸ್ ಸ್ಟೇಷನ್ ಬೇಕು ಎಂದು ಹೆಚ್ಚಿನ ಶಾಸಕರು ಇವತ್ತು ಕೇಳಿದ್ದಾರೆ. ಇವತ್ತು ನಾವು 1992-93ನೇ ಸಾಲಿನಲ್ಲಿ ಹೊಸ ಪೋಲೀಸ್ ಠಾಣೆ ತೆರೆಯುವ ಬಗ್ಗೆ

ರೆಗ್ಯುಲರ್ ಪ್ಲಾನ್‌ನಲ್ಲಿ ತೆಗೆದು ಕೊಳ್ಳುತ್ತಿದ್ದೇವೆ. ಇವತ್ತು 40 ಹೊಸ ಪೋಲೀಸ್ ಠಾಣೆಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಮನ್ನಣೆ ಕೊಟ್ಟಿದೆ. ಮತ್ತು ಈಗಾಗಲೇ 28 ಫೈರ್ ಸ್ಟೇಷನ್‌ಗಳು ಕರ್ನಾಟಕ ರಾಜ್ಯದಲ್ಲಿ ಇವೆ. ಒಂದೇ ವರ್ಷದಲ್ಲಿ 19 ಫೈರ್ ಸ್ಟೇಷನ್ ಸಲುವಾಗಿ 7 ಕೋಟಿ 11 ಲಕ್ಷ ರೂಪಾಯಿಗಳನ್ನು ನಾವು ವೆಚ್ಚ ಮಾಡಿದ್ದೇವೆ. ಇವತ್ತು ಪ್ರತಿ ಸಬ್ ಡಿವಿಜನ್‌ಗೆ ಫೈರ್ ಸ್ಟೇಷನ್ ಕೊಡಬೇಕೆಂದು ಮಾಡಿದ್ದೇವೆ. ಒಂದೊಂದು ಜಿಲ್ಲೆಯಲ್ಲಿ ಮತ್ತು ಸಬ್‌ಡಿವಿಜನ್‌ನಲ್ಲಿ ತೆರೆಯಬೇಕು ಎಂದು ಸರ್ಕಾರ ನಿರ್ಧಾರ ಮಾಡಿ ಎಲ್ಲಾ ಸಬ್‌ಡಿವಿಜನ್‌ನಲ್ಲಿ ಫೈರ್ ಸ್ಟೇಷನ್ ಕೊಟ್ಟಿದ್ದೇವೆ. ಎಲ್ಲಿ ಕಾಟನ್ ಬೆಳೆಯುವ ಏರಿಯಾ ಇದೆ ಅಲ್ಲಿಗೆ ಫೈರ್ ಸ್ಟೇಷನ್ ಕೊಡಬೇಕೆಂದು ಕೋಳಿವಾಡ್ ಅವರು ಮತ್ತು ರವೀಂದ್ರಬಾಬುರವರು ಕೇಳಿದ್ದಾರೆ. ಕಾಟನ್ ಗ್ರೋಯಿಂಗ್ ಏರಿಯಾ ಎಂದರೆ ಮೊನ್ನೆ ಬೈಲಹೊಂಗಲದಲ್ಲಿ 4 ಕೋಟಿ ರೂಪಾಯಿಯಷ್ಟು ಹತ್ತಿ ಬೆಂಕಿಗೆ ಆಹುತಿಯಾಯಿತು. ಇಲ್ಲಿ ಒಂದನ್ನು ತಾವು ನೋಡಬೇಕು. ಇದು ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಇರುವುದರಿಂದ ಮೇಲಿಂದ ನಮಗೆ ಹಣ ಸಿಗುತ್ತಿಲ್ಲ. ಆದರೂ ಕೂಡಾ ಇದರ ಬಗ್ಗೆ ಸರ್ಕಾರ ಗಮನಕೊಟ್ಟಿದೆ. ಇವತ್ತು ಉಮಾಪತಿಯವರು ಕೇಸಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನೂ ಕೂಡಾ ನಾವು ನೋಡುತ್ತಿದ್ದೇವೆ. ಇನ್ನು ನಾಯಕ್ ಅವರು ಡಕಾಯಿತಿಗಳ ಬಗ್ಗೆ ಹೇಳಿದರು. ಎಲ್ಲಿ ನಿರ್ದಿಷ್ಟ ಪ್ರಕರಣಗಳು ಬರುತ್ತವೋ ಅವನ್ನು ನೋಡೋಣ. ಇನ್ನು ಡಾಗ್ ಸ್ಕ್ವಾಡ್ ಬಗ್ಗೆ ರವೀಂದ್ರಬಾಬುರವರು ಹೇಳಿದ್ದಾರೆ. ಸ್ಕ್ವಾಡ್ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪ್ರಸ್ತಾಪ ಮಾಡಿಲ್ಲ. ಇವತ್ತು ಮೈಸೂರಿನಲ್ಲಿ ಮೌಂಟ್ ಹಾರ್ಸ್ ಇದೆ. ಕುದುರೆಗಳ ಸಹಾಯದಿಂದ ಇವತ್ತು ಡಕಾಯಿತರನ್ನು ಹೆಚ್ಚು ಪತ್ತೆಹಚ್ಚಿ ಅವರನ್ನು ಹಿಡಿಯಬಹುದಾಗಿದೆ. ಇವತ್ತು ಡಾಗ್ ಸ್ಕ್ವಾಡ್ ಪ್ರತಿ ಜಿಲ್ಲೆಯಲ್ಲಿ ಇದ್ದು ಈ ಬಗ್ಗೆ ನಾವು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಮಾನ್ಯ ದಯಾನಂದ್ ಅವರು ಪೋಲೀಸ್ ಫೋರ್ಸ್ ಬಗ್ಗೆ ಹೇಳಿದ್ದಾರೆ. ಅದನ್ನೂ ಕೂಡಾ ನೋಡುತ್ತಿದ್ದೇವೆ. ಮತ್ತು ಕುಶಾಲಾ ಅವರು ಸಿಆರ್‌ಇ ಸೆಲ್ ಬಗ್ಗೆ ಹೇಳಿದ್ದಾರೆ. ಹಾಗೇ ಮೊಟಮ್ಮನವರೂ ಸಹಾ ಈ ಬಗ್ಗೆ ಹೇಳಿದ್ದಾರೆ - Civil Rights Enforcement Cell Protection of Civil Rights ಇವರು 1990ರಲ್ಲಿ 692 ಕೇಸಸ್ ರಿಜಿಸ್ಟರ್ ಮಾಡಿದ್ದಾರೆ. ಇದರಲ್ಲಿ 634 ಕೇಸ್‌ಗಳು ಇನ್‌ವೆಸ್ಟಿಗೇಷನ್‌ನಲ್ಲಿವೆ. ಅದೇ ಪ್ರಕಾರ 1991ರಲ್ಲಿ 664 ಕೇಸ್‌ಗಳ ಪೈಕಿ 58ಕ್ಕೆ ಶಿಕ್ಷೆ ಆಗಿದೆ. ಮತ್ತೆ 647 ಕೇಸ್‌ಗಳು ಇನ್‌ವೆಸ್ಟಿಗೇಷನ್‌ಲ್ಲಿವೆ.

ಇವತ್ತು ಅಟ್ರಾಸಿಟಿ ಕೇಸಸ್ ಏನಿದೆ ಅದರ ಬಗ್ಗೆ ಕೂಡ ನಾವು ಹೆಚ್ಚು ಎಫೆಕ್ಟೀವ್ ಆಗಿ ಕ್ರಮ ಜರುಗಿಸುತ್ತಿದ್ದೇವೆ. ಸಿಆರ್‌ಇ ಸೆಲ್ ಇದುವರೆಗೆ ಸ್ಟೇಟ್ ಲೆವಲ್‌ನಲ್ಲಿತ್ತು. ಈಗ ಡಿವಿಜನಲ್ ಲೆವಲ್‌ನಲ್ಲಿ ಕೂಡ ಒಬ್ಬರು ಡಿವೈಎಸ್‌ಪಿ ಅನ್ನು ಕೊಡುತ್ತಾ ಇದ್ದೇವೆ. ಹೆಚ್ಚು ವೆಹಿಕಲ್ಸ್ ಕೊಡುತ್ತಿದ್ದೇವೆ. ಟೋಟಲ್ ಕಾಸ್ಟ್ 1.05 ಕೋಟಿ ಇದೆ. ಇದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದವರು ಕೂಡ 66. 63 ಲಕ್ಷ ಕೊಟ್ಟಿದ್ದಾರೆ. ಸ್ಪೆಷಲ್ ಮೊಬೈಲ್ ಕೋರ್ಟ್ಸ್ ಎಂದು ಹೇಳಿ 10 ಲಕ್ಷ ರೂಪಾಯಿ ಇಟ್ಟು ಅದನ್ನು ಮಾಡುತ್ತಿದ್ದೇವೆ. frequently I had a meeting with them.. ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ ಎಲ್ಲೆಲ್ಲಿ ದೌರ್ಜನ್ಯಗಳು ಆಗಿದೆ, ಆ ಎಲ್ಲಾ ಕಡೆಗೂ ಸಿಆರ್‌ಇ ಸೆಲ್‌ನ ಐಜಿ ಆದಂಥ ಜಯಪ್ರಕಾಶ್‌ರವರನ್ನು ಖುದ್ದಾಗಿ ಗುಲ್ಬರ್ಗ ಜಿಲ್ಲೆಯೂ ಸೇರಿದಂತೆ ಎಲ್ಲ ಕಡೆಗೂ ನಾವು ಕಳುಹಿಸಿದ್ದೇವೆ. ಎಲ್ಲ ಕಡೆಗೂ ಡೆಸಿಗ್ನೆಟೆಡ್ 20 ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಎಲ್ಲ ಡಿಸ್ಟ್ರಿಕ್ಟ್‌ಗಳಿಗೂ ನೇಮಕ ಮಾಡಿದ್ದೇವೆ.

ಶ್ರೀಮತಿ ಮೋಟಮ್ಮ : ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೆಲವು ಕೇಸಸ್ ಮೇಲೆ ಆಕ್ಷನ್ ಆಗಿದೆಯೆಂದು ಹೇಳಿದ್ದೀರಿ. ಅವು ಯಾವುವು ಎಂದು ಕೇಳಬಹುದೇ?

ಉಪಾಧ್ಯಕ್ಷರು : ಡೀಟೈಲ್ಸ್ ಇಲ್ಲಿ ಇರುವುದಿಲ್ಲ. ಈಗ ಮಂತ್ರಿಗಳ ಉತ್ತರ ಮುಗಿದಿದೆ.

ಶ್ರೀ ಧರ್ಮಸಿಂಗ್ : ಏನೇನು ಅನುಕೂಲಗಳು ಬೇಕಾಗಿವೆ ಎಲ್ಲವನ್ನು ಕೊಡುತ್ತೇನೆ. ಒಂದು ಸಾರಿ ಬೇಕಾದರೆ ಸಂಬಂಧಪಟ್ಟ ಸಿಆರ್‌ಇ ಸೆಲ್‌ನ ಎಲ್ಲ ಆಫೀಸರ್ಸ್‌ಗಳನ್ನು ಕರೆಸಿ ತಮಗೂ ಕೂಡ ಕರೆಸಿ ಒಂದು ಸಭೆ ಏರ್ಪಾಟು ಮಾಡೋಣ. ಆಗ ತಮ್ಮ ಅನಿಸಿಕೆಗಳನ್ನು ಅಲ್ಲಿ ಹೇಳಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಕೆಲವು ಕೇಸಸ್ ವಿಚಾರ ಹೇಳಿದಿರಿ. ಈಗ ತೀರ್ಮಾನವಾಗಿರತಕ್ಕ ಕೇಸುಗಳಲ್ಲಿ ಎಷ್ಟಕ್ಕೆ ಕನ್ವಿಕ್ಷನ್ ಆಗಿದೆ ಎನ್ನುವುದನ್ನು ತಾವು ದಯವಿಟ್ಟು ಹೇಳುತ್ತೀರಾ?

ಶ್ರೀ ಧರ್ಮಸಿಂಗ್ : ಈಗ ತೀರ್ಮಾನವಾಗತಕ್ಕ ರೀತಿಯನ್ನು ಸ್ಪೀಡ್ ಮಾಡಲಿಕ್ಕೆ we require special courts. ಮೊದಲು ಎರಡು ಕೋರ್ಟ್ಸ್ ಇತ್ತು. Six months back we have taken a decision. ಈಗ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ 20 ಕೋರ್ಟ್‌ಗಳನ್ನು ಎಲ್ಲಾ ಕಡೆಗೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಯಾವುದಾದರೂ ಕೇಸ್‌ನಲ್ಲಿ ಶಿಕ್ಷೆ ಆಗಬೇಕೆನ್ನುವ ದೃಷ್ಟಿಯಲ್ಲಿ ಬಂದರೆ ಅದು ಕೋರ್ಟ್ ಮುಖಾಂತರ ಆಗಬೇಕಾಗಿದೆ. ಆದ ಕಾರಣ this Government has taken a decision. ಡೌರಿ ಡೆತ್ ಕೇಸಸ್ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಸಿಬ್ಬಂದಿಯನ್ನು ಹೆಚ್ಚು ಮಾಡಿದ್ದೇವೆ. ಎರಡು ಡಿವೈಎಸ್‌ಪಿ ಕೊಟ್ಟಿದ್ದೇವೆ. 11 ವುಮನ್ ಪೋಲೀಸ್ ಇನ್ಸ್‌ಪೆಕ್ಟರ್ ಕೊಟ್ಟಿದ್ದೇವೆ. ಇದಕ್ಕಾಗಿ 21 ಲಕ್ಷ ಏನು ಬೇಕಾಗಿತ್ತು ಅದನ್ನು ಕೊಟ್ಟಿದ್ದೇವೆ. ಸ್ಪೆಷಲ್ ಕೋರ್ಟ್ಸ್ ಹೈ ಲೆವೆಲ್ ಕಮಿಟಿ ಮತ್ತು ಎಕ್ಸಿಸ್ಟಿಂಗ್ ಆಕ್ಟ್‌ನಲ್ಲೂ ಕೂಡ ಸ್ಪೀಡ್ ಅಪ್ ಮಾಡಲಿಕ್ಕೆ ಅವರು ಕೇಳುತ್ತಿದ್ದರು. Already we had a meeting with the Law Secretary. ಈಗಿನ ರೂಲ್ ಅಮೆಂಡ್‌ಮೆಂಟ್ ಮಾಡಲಿಕ್ಕೆ ಕೇಳುತ್ತಿದ್ದರು ಅದನ್ನು ಕೂಡ ನಾವು ಮಾಡುತ್ತಿದ್ದೇವೆ. ಆಂಟಿ ಡೌರಿ ಡೆತ್ ಕೇಸಸ್ ಬಗ್ಗೆ ಮಾನ್ಯ ವಿನಯಕುಮಾರ್ ಸೊರಕೆಯವರು ಹೇಳಿದ್ದಾರೆ. ವುಮನ್ ಪೋಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಭಡ್ತಿ ಕೊಟ್ಟಿದ್ದೇವೆ. ಯಾರ್‍ಯಾರು ಕೇಳಲಿಲ್ಲ ಅಲ್ಲೂ ಕೂಡ ಸೇರಿಸಿ ನಾನು ಹೇಳುತ್ತಿದ್ದೇನೆ. ಪೋಲೀಸ್ ಹೌಸಿಂಗ್ ಬಗ್ಗೆ ಕೇಳಿದ್ದಾರೆ. ಪೋಲೀಸ್ ವಾಸ ಮಾಡುವ ಮನೆಗಳನ್ನು ಲೋಕೋಪಯೋಗಿ ಇಲಾಖೆಯವರು ರಿಪೇರಿ ಮಾಡಬೇಕು. ನಾನು ಅದನ್ನು ಹೇಳುವುದನ್ನು ಮರೆತಿದ್ದೆ. ಇವತ್ತು ಪೋಲೀಸ್ ಹೌಸಿಂಗ್ ಸ್ಕೀಮ್‌ಗೆ ಟಾಪ್ ಪ್ರೈಯಾರಿಟಿ ಕೊಟ್ಟಿದ್ದೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಪೋಲೀಸ್ ಹೌಸಿಂಗ್ ಸೊಸೈಟಿ 48 ಪರ್ಸೆಂಟ್ ಹಣವನ್ನು ಕೊಡಬೇಕಾಗಿದೆ. ಇನ್ನು ಮುಂದಕ್ಕೆ 25 ಸಾವಿರ ಮನೆಗಳನ್ನು ಕಟ್ಟಬೇಕಾಗಿದೆ. ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. 4000 ಮನೆಗಳನ್ನು 40 ಕೋಟಿ ವೆಚ್ಚದಲ್ಲಿ ಕಟ್ಟಬೇಕೆಂದು 1991-92ರಲ್ಲಿ ಕ್ಯಾನ್‌ಫಿನ್ ಹೋಮ್‌ನಿಂದ 10 ಕೋಟಿ ರೂಪಾಯಿ ತೆಗೆದುಕೊಂಡಿದ್ದೇವೆ. ಕ್ಯಾನ್‌ಫಿನ್ ಹೋಮ್ ಫಸ್ಟ್ ಇನ್‌ಸ್ಟಾಲ್‌ಮೆಂಟ್ ಬಿಡುಗಡೆ ಮಾಡಿ ಮತ್ತೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಹೆಚ್‌ಡಿಎಫ್‌ಸಿಗೆ ನಾವು ಅಪ್ಲೈ ಮಾಡಿದ್ದೇವೆ. 535 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಎಲ್ಲ ಕಡೆಗೆ ಪೋಲೀಸ್ ಹೌಸ್‌ಗಳನ್ನು ಪೋಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಕಟ್ಟತಕ್ಕ ವ್ಯವಸ್ಥೆ ಮಾಡಿದ್ದೇವೆ. ಏನಾದರೂ ಗಲಾಟೆಗಳು ಆದರೆ ಇನ್ಸ್‌ಪೆಕ್ಟರ್ ಆಗಲಿ. ಪೋಲೀಸ್ ಕಮೀಷನರ್ ಆಗಲಿ ಡಿಜಿಯನ್ನಾಗಲೀ ಸಂಪರ್ಕ ಮಾಡಲಿಕ್ಕೆ ಅವರು ಇರತಕ್ಕ ಜಾಗಗಳು ದೂರವಿದ್ದರೆ ತೊಂದರೆಯಾಗುತ್ತದೆ. ಸ್ಲಮ್‌ನಲ್ಲಿರತಕ್ಕ ಪಿ.ಸಿ.ಯನ್ನು ಕರೆಸಬೇಕಾದರೆ ನಾಲ್ಕು ತಾಸು ಆಗುತ್ತದೆ. ಅದಕ್ಕೋಸ್ಕರ ಪೋಲೀಸ್ ಸ್ಟೇಶನ್ ಪಕ್ಕದಲ್ಲಿಯೇ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹೇಳುವುದು ಇನ್ನೂ ಬಹಳಷ್ಟು ಇದೆ. ತಾವು

ಹೇಳಿದ್ದನ್ನು ನಾನು ಒಂದೊಂದಾಗಿ ಬರೆದುಕೊಂಡಿದ್ದೇನೆ. ಈ ಬಗ್ಗೆ ತಾವು ಖುದ್ದಾಗಿ ಭೇಟಿ ಮಾಡಿ ಸಮಕ್ಷಮದಲ್ಲಿ ನನ್ನೊಟ್ಟಿಗೆ ಮಾತನಾಡಬಹುದು. ಮಾನ್ಯ ಜಯಚಂದ್ರರವರು ಎಕ್ಸೈಜ್ ಬಗ್ಗೆ ಮಾತನಾಡುತ್ತಾ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಸ್ಯೂರ್ಡ್ ಮೊಬಲೈಸ್ ಕೊಡಲಾಗಿದೆ. ಇದರಲ್ಲಿ ಸ್ಟೆಬಿಲಿಟಿ ಇಲ್ಲ. ಕಳೆದ 10-15 ವರ್ಷಗಳಲ್ಲಿ ಏನೇನು ಆಕ್ಷನ್ ಆಗಿದೆ. ಆ ಆಧಾರದ ಮೇಲೆ ಗ್ರೋತ್ ಕೊಟ್ಟು ಏನಾದರೂ ಕಾನ್‌ಸ್ಟೆಂಟ್ ಸ್ಟೆಬಿಲಿಟಿ ಬರತಕ್ಕ ರೀತಿಯಲ್ಲಿ ಮಾಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆಯೆಂದು ಈಗಾಗಲೇ ಮೊದಲೇ ಹೇಳಿದ್ದೇನೆ. ಇವತ್ತು ಐ.ಎಂ.ಎಲ್.ಡಿಸ್ಟಿಲ್‌ಗೆ ಫೀಸ್ ಹೆಚ್ಚಾಗಿದೆ. ಇವತ್ತು 25 ಕೋಟಿ ರೂಪಾಯಿ ವರಮಾನ ತರತಕ್ಕಂಥ ರೀತಿಯಲ್ಲಿ ಹೆಚ್ಚಳವಾಗಿವೆ. ಏಕೆಂದರೆ, ನಾವು ಪ್ರಾಕ್ಟಿಕಲ್ ಆಗಿ ಹೋಗಬೇಕಾಗಿದೆ. ಲಿಕ್ಕರ್ ಟ್ರೇಡ್‌ಗೆ ಏನೂ ಮಾಡತಕ್ಕದ್ದು ಇಲ್ಲ. ಇದರ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೇ ...

ಉಪಾಧ್ಯಕ್ಷರು : ಕ್ಲಾರಿಫಿಕೇಶನ್‌ಗೆ ಅವಕಾಶ ಇಲ್ಲ. ಈಗ ಜೈಲು ಮಂತ್ರಿಗಳೇ, ತಮ್ಮ ಉತ್ತರ ಶುರುಮಾಡಿ.

ಶ್ರೀ ಎಂ. ಮಹದೇವ್ : ನಾನು ಒಂದು ಪ್ರಶ್ನೆ ಕೇಳಬೇಕು. ..

ಉಪಾಧ್ಯಕ್ಷರು : ನಿಮಗೆ ಅವಕಾಶ ಕೊಡುವುದಿಲ್ಲ. ಕ್ಲಾರಿಫಿಕೇಶನ್‌ಗಳಿಗೆಲ್ಲಾ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೇ ...

MADAM DEPUTY SPEAKER : Mr. Mahadev, That stage is over ಈಗ ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷಿಣಿಯವರೇ .... (***)

ಉಪಾಧ್ಯಕ್ಷಿಣಿಯವರು : ಈಗ ಎಲ್ಲರಿಗೂ ಅವರು ಉತ್ತರ ಕೊಡುವುದಕ್ಕೆ ಹೋದರೆ ಮೂರು ಗಂಟೆಯಾಗುತ್ತದೆ.

ಶ್ರೀ ಧರ್ಮಸಿಂಗ್ : ಮೊನ್ನೆ ಮೈಸೂರು ಜಿಲ್ಲೆಯಲ್ಲಿ ಆಗಿರತಕ್ಕಂಥ ಕಾವೇರಿ ಬಗ್ಗೆ ಗಲಾಟೆ ಏನಿದೆ, ಕನ್ನಡಿಗರ ಮೇಲಾಗಲಿ, ತಮಿಳರ ಮೇಲಾಗಲಿ, ಏನು ಕೇಸ್‌ಗಳು ಆಗಿವೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂಬ ಮಾತನ್ನು ಹೇಳಿದ್ದೇನೆ. ಆಮೇಲೆ 40 ಫ್ಯಾಕ್ಟರಿಗಳಿದ್ದರೆ ಒಂದು ಪೋಲೀಸ್ ಸ್ಟೇಷನ್ ಕೊಡಬೇಕೆಂದು ನಿಯಮ ಇದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹೊಸ ಪೋಲೀಸ್ ಸ್ಟೇಷನ್‌ಗಳನ್ನು ಕೊಡುವ ಬಗ್ಗೆ ಅವರು ಸಭೆಗೆ ಬರುವುದಕ್ಕೆ ಮುಂಚೆ ನಾನು ಹೇಳಿದ್ದೇನೆ. ಆಗ ಅವರು ಇಲ್ಲಿ ಇರಲಿಲ್ಲ.

*** ಉಪಾಧ್ಯಕ್ಷಿಣಿಯವರ ಆದೇಶದ ಮೇರೆಗೆ ನಡವಳಿಕೆಗಳನ್ನು ದಾಖಲು ಮಾಡಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಹೋಮ್‌ಗಾರ್ಡ್ಸ್ ರಾಜ್ಯಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ವೆಂಕಟಪ್ಪನವರು ಕೋಲಾರ ಜೈಲು ಬಗ್ಗೆ ಹೇಳಿದ್ದಾರೆ. ಈ ಅಧಿವೇಶನ ಮುಗಿದ ನಂತರ ನಾನೇ ಆ ಸ್ಥಳಕ್ಕೆ ಹೋಗಿ ಪರಿಶೀಲಿಸಿ ಏನಾದರೂ ತೊಂದರೆ ಇದ್ದರೆ ಸರಿಮಾಡುವುದಕ್ಕೆ ಪ್ರಯತ್ನಪಡುತ್ತೇನೆ. ಶ್ರೀ ಬಾಬುರಾವ್ ಚವಾಣ್ ಅವರು ಗುಲ್ಬರ್ಗಾದಲ್ಲಿನ ಒಬ್ಬ ಶ್ರೀ ಗಣಪತಿ ಸನ್ ಆಫ್ ಶಂಕರ್ ಅವರ ಬಗ್ಗೆ ಹೇಳಿ ಆತನಿಗೆ ಅಪಘಾತವಾಗಿದೆಯೆಂದು ತಿಳಿಸಿದರು. 17-9-91ರಲ್ಲಿ ಈ

ಬಗ್ಗೆ ಕೇಸು ದಾಖಲೆಯಾಗಿದೆ. ಆ್ಯಕ್ಸಿಡೆಂಟ್ ಆದ ಬಗ್ಗೆ ಮತ್ತು ಆತನಿಗೆ ತೊಂದರೆಯಾಗಿರುವ ಬಗ್ಗೆ ಡಾಕ್ಟರ್ ಸರ್ಟಿಫಿಕೇಟ್ ಕೂಡ ಪಡೆದಿದ್ದೇವೆ. ಇದನ್ನು ಕೂಡ ಪರಿಶೀಲಿಸಿ ಆತನಿಗೆ ಸಹಾಯವಾಗುವಂತೆ ವ್ಯವಸ್ಥೆ ಮಾಡುತ್ತೇನೆ. ಶ್ರೀ ಸಗೀರ್ ಅಹಮದ್ ಅವರು ಚಿಕ್ಕಮಗಳೂರು ಜೈಲು ಬಗ್ಗೆ ಹೇಳಿದರು. ಇದು ಎರಡು ಮೂರು ವರ್ಷಗಳಲ್ಲೇ ಮುಗಿದು ಹೋಗಿಬಿಡಬೇಕಾಗಿತ್ತು. ಅವರು ಹೇಳಿದಹಾಗೆ ಅಲ್ಲಿ ಬರೇ ಕಾಂಪೌಂಡ್ ಆಗಿದೆ. ಅದರ ಜೊತೆಗೆ ಮನೆಗಳ ಕೆಲಸ ಕೂಡ ಆಗಿದೆ. ಅಲ್ಲಿ ಹೈಟೆನಷನ್ ವೈರ್ ಜೈಲು ಮೇಲೆ ಪಾಸ್ ಆಗುತ್ತಿದ್ದು. ಅದನ್ನು ಸ್ಥಳಾಂತರ ಮಾಡುವುದಕ್ಕೆ ಎರಡು ಮೂರು ವರ್ಷ ಆಯಿತು. ಇಷ್ಟಾದಮೇಲೆ-ಕಂಟ್ರಾಕ್ಟರ್ ಕೊಟ್ಟಿದ್ದ ಆಗಿನ ರೇಟಿಗೂ ಈಗಿನ ರೇಟಿಗೂ ವ್ಯತ್ಯಾಸ ಬಂದು ಮತ್ತೆ ನಮ್ಮ ಪಿ.ಡಬ್ಲ್ಯೂಡಿ ಇಲಾಖೆಯಿಂದ ಕೆಲಸ ಮಾಡಿಸುವುದಕ್ಕೆ ಬಹಳ ತಡವಾಯಿತು. ಈ ವರ್ಷ ಸ್ವಲ್ಪ ಹೆಚ್ಚಿಗೆ ಹಣ ಬಿಡುಗಡೆ ಮಾಡಿದ್ದೇವೆ. ಆದಷ್ಟು ಬೇಗ ಈ ಕೆಲಸಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ ಎಂದು ಹೇಳಿ ಅದರ ಜೊತೆಗೆ ಶ್ರೀ ಲಕ್ಷ್ಮಣಯ್ಯನವರು ಖೈದಿಗಳಿಗೆ ಎಂಟು ರೂಪಾಯಿ 10 ಪೈಸೆ ಕೂಲಿ ಕೊಡುತ್ತಿದ್ದೀರಿ. ಇದು ಸಾಲುವುದಿಲ್ಲ ಎಂದು ಹೇಳಿದರು. ಊಟದ ಬಗ್ಗೆ ಪ್ರಿಸನ್ ಮ್ಯಾನ್ಯುಯಲ್‌ನಲ್ಲಿ ನಿಗದಿಯಾಗಿದೆ. ಎಷ್ಟು ರಾಗಿ ಹಿಟ್ಟು ಕೊಡಬೇಕು. ಎಷ್ಟು ಚಪಾತಿ ಕೊಡಬೇಕು, ಎಷ್ಟು ಗ್ರಾಮ್ ತೂಕ ಕೊಡಬೇಕು ಮತ್ತು ಕಾಫಿ, ಟೀ ಎಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದರ ಪ್ರಕಾರ ನಾವು ಕೊಡಬೇಕಾಗುತ್ತದೆ. ಹೋದವರ್ಷ ಅವರಿಗೆ ಹಣ ಸರಾಸರಿ 7 ರೂಪಾಯಿ 43 ಪೈಸೆ ಸಿಗುತ್ತಿತ್ತು. ಈ ವರ್ಷ ಎಂಟು ರೂಪಾಯಿಗೆ ಬಂದಿದೆ. ಬಹುಶಃ. ಮುಂದೆ ಒಂಬತ್ತು ರೂಪಾಯಿ ಆಗುತ್ತದೆ. ಈ ರೀತಿಯಾಗಿ ನಾವು ಕೆಲಸ ಮಾಡಬೇಕಾಗುತ್ತದೆ. ಅಕ್ಕಿ. ಗೋಧಿ. ಸಕ್ಕರೆ, ಪಾಮ್‌ಆಯಿಲ್ ಇವುಗಳನ್ನು ಸರ್ಕಾರ ಕಂಟ್ರೋಲ್ಡ್ ರೇಟ್‌ನಲ್ಲಿ ಒದಗಿಸಿಕೊಡಲಾಗುತ್ತಿದೆ. ಶ್ರೀ ಎಸ್.ಎಫ್. ಪಾಟೀಲ್ ಅವರು ಒಂದು ಸಲಹೆ ಕೊಟ್ಟರು. ಅವರು ಹೋಮ್‌ಗಾರ್ಡ್ಸ್‌ನಲ್ಲಿ ಹದಿನೈದು ವರ್ಷ ಸೇವೆ ಸಲ್ಲಿಸಿದ್ದಾರೆ. ಇನ್ನೂ ಏಳೆಂಟು ಜನರು ಮೊದಲು ಹೋಮ್‌ಗಾರ್ಡ್ಸ್‌ನಲ್ಲಿದ್ದವರು ಇವತ್ತು ಶಾಸಕರಾಗಿದ್ದಾರೆ. ಅವರು ಹೇಳಿದ ವಾಶಿಂಗ್ ಅಲೋಯೆನ್ಸ್ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅದನ್ನು ಹೆಚ್ಚಿಸಬೇಕೆಂದು ಪತ್ರ ಬರೆದಿದ್ದೇವೆ. ಅವರು ಒಪ್ಪಿಗೆ ಕೊಟ್ಟನಂತರ ಅವರದ್ದು ನಮ್ಮದು ಸೇರಿಸಿ ನಾವು ಕೊಡಬೇಕಾಗುತ್ತದೆ. ಮತ್ತು ಹೋಮ್‌ಗಾರ್ಡ್ಸ್ ಹುದ್ದೆಗಳನ್ನು ಪರ್ಮನೆಂಟ್ ಮಾಡುವ ವಿಚಾರ ಬಗ್ಗೆ ಹೇಳಿದರು. ಇದೊಂದು ವಾಲಂಟರಿ ಆರ್ಗನೈಜೇಶನ್ ಆಗಿದ್ದು. ಪರ್ಮನೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ. ಅವರ ಪೆನಶನ್ ವಿಚಾರದಲ್ಲಿ ಸಹ ಹೇಳಿದ್ದಾರೆ. ಇದು ಸ್ವಯಂ ಸೇವಾ ಸಂಸ್ಥೆ ಆಗಿರುವುದರಿಂದ ಅದನ್ನು ಸಹ ಒದಗಿಸಿಕೊಡುವುದಕ್ಕೆ ಆಗುವುದಿಲ್ಲ. ಶ್ರೀ ಕುಶಾಲರವರು ಮಾತನಾಡುತ್ತಾ ಅವರಿಗೇನಾದರೂ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಕೊಡಬೇಕೆಂದು ಹೇಳಿದರು. ಇದು ಪೋಲೀಸ್ ಡಿಪಾರ್ಟ್‌ಮೆಂಟ್ ಒಂದೇ ಅಲ್ಲ, 1984ರ ಸೆಪ್ಟೆಂಬರ್‌ನಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗಿತ್ತು.

ಅದರಲ್ಲಿ ಏನು ಹೇಳಿದ್ದಾರೆಂದರೆ ಹೋಮ್‌ಗಾರ್ಡ್ಸ್ ವಾಲಂಟರಿಯಾಗಿ, ಫಿಜಿಕಲ್ ಟ್ರೈನಿಂಗ್‌ನಲ್ಲಿ ತರಬೇತಿ ಪಡೆದಿದ್ದಾರೆ,

> "... They may be useful to the Group C and D posts like constables, security guards, despatch riders, peons, orderlies, chowkidars, firemen, forest guards ..."

ಇದನ್ನು ನೋಡಿ ಈಗಾಗಲೇ ಸೆಕ್ರೆಟರಿಯವರು ಒಂದು ಆದೇಶ ಕೊಟ್ಟಿದ್ದಾರೆ.

"... Secretary to Government are, therefore, requested to review the recruitment rules for the Group C and D posts of types mentioned above as the administrative control take immediate steps including atleast 3 years service rendered by the Home Guards and Civil Volunteers and training in the basic refreshner course. In this, Home Guards should have, as preferencial qualification in case considered, as it is considered by the service of the Home Guards and Civil Defence Volunteers..."

ಇದಕ್ಕನುಗುಣವಾಗಿ, ಕಾನೂನು ಚೌಕಟ್ಟಿನಲ್ಲಿ ಯಾರು ಯಾರು ಸರಿಹೋಗುತ್ತಾರೋ, ಅಂತಹವರಿಗೆ ಆದ್ಯತೆ ಕೊಡಬಹುದೇ ಹೊರತು, ಇಷ್ಟು ಪರ್ಸಂಟೇಜ್ ಎಂದು ನಿಗದಿ ಮಾಡುವುದಕ್ಕಾಗುವುದಿಲ್ಲ. ಮತ್ತು ಮಾನ್ಯ ಶಿವನಂಜಪ್ಪನವರು, ಅವರ ಅನುಭವವನ್ನು ಹೇಳಿದರು. ಜೈಲುಗಳಲ್ಲಿ ಯಾವ ರೀತಿಯ ಕಿರುಕುಳ ಇದೆ ಎಂಬುದನ್ನು ಹೇಳಿದರು. ಈ ವಿಚಾರದಲ್ಲಿ ಹಿಂದೆ ಯಾವ ರೀತಿ ಇತ್ತೋ ಗೊತ್ತಿಲ್ಲ. ಸದ್ಯಕ್ಕೆ ಯಾವ ಕಿರುಕುಳವೂ ಇಲ್ಲವೆಂದು ಹೇಳುತ್ತಾ, ಮತ್ತೆ ಅವರು ಗಾಂಜಾ ಗೀಂಜಾ ಎಂದು ಹೇಳಿದರು. ಸಧ್ಯಕ್ಕೆ ಏನೂ ಅಂತಹ ತೊಂದರೆ ಇಲ್ಲ, ನಾವು ಸರಿಯಾಗಿ ಪರಿಶೀಲನೆ ಮಾಡಿದ್ದೇವೆ. ಮತ್ತು ಜೀವಾವಧಿ ಶಿಕ್ಷೆ ಬಗ್ಗೆ ಹೇಳಿದರು. ಮಾನ್ಯ ಸದಸ್ಯರು ನಾನು ಈ ಬಗ್ಗೆ ಉತ್ತರ ಹೇಳುವ ಸಮಯದಲ್ಲಿ ಇರಲಿಲ್ಲ. ಸುಮಾರು 10 ನಿಮಿಷ ಅದರ ಬಗ್ಗೆಯೇ ವಿಶ್ಲೇಷಣೆ ಮಾಡಿದ್ದೇನೆ; ಮುಂದೆ ಕಾಯಿದೆಯನ್ನು ಈ ಸದನಕ್ಕೆ ತಂದನಂತರ, ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ.

ಉಪಾಧ್ಯಕ್ಷಿಣಿಯವರು : ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 23, 25 ಮತ್ತು 26ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರ್ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷಿಣಿಯವರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 23 - ರಾಜ್ಯದ ಅಬಕಾರಿ :

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,66,97.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ 25 - ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು :

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 242.58.20.000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.00.000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು:

ಅಭಿಯಾಚನೆ ಕ್ರಮಾಂಕ 26 - ಜೈಲು ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,65.98.000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮಂಡ್ಯ ಜಿಲ್ಲೆಯಲ್ಲಿ ಅಧ್ಯಾಪಕರ ಮತ್ತು ಉಪನ್ಯಾಸಕರ ಕೊರತೆ ಬಗ್ಗೆ

1811. ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆಯ ಪ್ರಾಥಮಿಕ. ಪ್ರೌಢ ಶಾಲೆಗಳಲ್ಲಿ ಹಾಗೂ ಕಿರಿಯ ಕಾಲೇಜುಗಳಲ್ಲಿ ಅಧ್ಯಾಪಕರ ಮತ್ತು ಉಪನ್ಯಾಸಕರುಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದಾಗಿ ವಿಧ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ?

ಇ) ಹೊಸದಾಗಿ ಮಂಜೂರಾಗಿರುವ ಸರ್ಕಾರಿ ಪ್ರೌಢ ಶಾಲೆಗಳಿಗೆ ಯಾವಾಗ ಅಧ್ಯಾಪಕರ ಹುದ್ದೆಗಳನ್ನು ಮಂಜೂರು ಮಾಡಲಾಗುವುದು ?

ಈ) ಕಿರಿಯ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ತೊಂದರೆಯಾಗುತ್ತಿದೆ.

ಇ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸ್ನಾತಕೋತ್ತರ ಪದವಿ ಪಡೆದ ಸಹ ಶಿಕ್ಷಕರ ಅಂತಿಮ ಜೇಷ್ಟತಾ ಪಟ್ಟಿಯನ್ನು ತಯಾರಿಸಿ ದಿನಾಂಕ 8-10-91 ರಂದು ಪ್ರಕಟಿಸಲಾಗಿದೆ. ಅರ್ಹ ಶಿಕ್ಷಕರಿಗೆ ಉಪನ್ಯಾಸಕರಾಗಿ ಬಡ್ತಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಹಾಗೂ ಕಿರಿಯ ಕಾಲೇಜುಗಳಲ್ಲಿ ಅಧ್ಯಾಪಕರ ಮತ್ತು ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ

ಗಮನಕ್ಕೆ ಬಂದಿದ್ದು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂಬುದನ್ನೂ ಒಪ್ಪಿದ್ದಾರೆ. ಈ ಶಿಕ್ಷಕರನ್ನು ಇಷ್ಟು ವರ್ಷವಾದರೂ ಕೂಡ ಏತಕ್ಕೆ ನೇಮಕ ಮಾಡಿಲ್ಲ. ಕಳೆದ ವರ್ಷದ ಜೂನ್ ತಿಂಗಳಲ್ಲಿಯೇ ನೇಮಕ ಮಾಡುತ್ತೇವೆಂದು ಹೇಳಿದರು ಈ ವರ್ಷದ ಕೊನೆಯಾದರೂ ನೇಮಕ ಮಾಡಿ ಕೊಟ್ಟಿಲ್ಲ. ಆದುದರಿಂದ ಇವರನ್ನು ಯಾವಾಗ ನೇಮಕ ಮಾಡುತ್ತೀರಿ? ಎರಡನೆಯದಾಗಿ. ಹೊಸದಾಗಿ ಶಾಲೆಗಳನ್ನು ಮಂಜೂರ್ಮಾಡಿದ್ದಾರೆ. ಪ್ರಾಥಮಿಕ ಶಾಲೆಗಳನ್ನು ಉನ್ನತ ಪ್ರಾಥಮಿಕ ಶಾಲೆಗಳಾಗಿ ಬಡ್ತಿ ಕೊಡುತ್ತೀರಿ. ಹಾಗೆಯೇ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆದಿದ್ದೀರಿ. ನೀವು ಯಾವ ಶಾಲೆಗಳನ್ನು ಮಂಜೂರ್ಮಾಡುತ್ತೀರೋ ಅಥವಾ ಉನ್ನತ ಶಾಲೆಗಳಿಗೆ ಬಡ್ತಿ ಕೊಡುತ್ತೀರೋ ಮತ್ತು ಹೊಸ ಪ್ರೌಢಶಾಲೆಗಳನ್ನು ತೆರೆಯುತ್ತೀರೋ ಆಗಲೇ ಇದಕ್ಕೆ ಬೇಕಾದ ಹುದ್ದೆಗಳನ್ನು ಏತಕ್ಕೆ ಮಂಜೂರ್ಮಾಡುವುದಿಲ್ಲ. ಈ ರೀತಿ ಮಾಡದೇ, ಉಪನ್ಯಾಸಕರನ್ನು, ಅಧ್ಯಾಪಕರನ್ನು ಕೊಡದೇ ಶಾಲೆಗಳನ್ನು ಪ್ರಾರಂಭ ಮಾಡಿದರೆ, ಅದರಿಂದ ಏನು ಪ್ರಯೋಜನ? ಆದುದರಿಂದ ಈ ವಿಷಯವನ್ನು ಕೂಡಲೇ ಗಮನಕ್ಕೆ ತೆಗೆದುಕೊಂಡು. ಯಾವಾಗ ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಿ ಅಥವಾ ಯಾವಾಗ ಮಂಜೂರ್ಮಾಡುತ್ತೀರಿ ಆಗಲೇ ಶಿಕ್ಷಕರನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಆತಂಕ ಬಹಳ ಅರ್ಥವತ್ತಾದುದು ಮತ್ತು ಸರಿ ಇದೆ. ಅದಕ್ಕಾಗಿಯೇ ನಾವು ಪ್ರಾಥಮಿಕ ಶಾಲಾ ಅಧ್ಯಾಪಕರನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಈಗಾಗಲೇ 7 ಸಾವಿರ ಅಧ್ಯಾಪಕರನ್ನು ಕರ್ನಾಟಕ ರಾಜ್ಯದಲ್ಲಿ ನೇಮಕ ಮಾಡಿದ್ದೇವೆ. ಇನ್ನು ಆಪರೇಷನ್ ಬ್ಲಾಕ್‌ಬೋರ್ಡ್ ಸ್ಕೀಮ್ ಪ್ರಕಾರ ಉಳಿದ ವೇಕೆನ್ಸಿಗಳನ್ನೂ ತುಂಬುವುದಕ್ಕೆ ನಿಯಮದ ಪ್ರಕಾರ ಈಗಾಗಲೇ ಆದೇಶ ಹೊರಡಿಸಿದ್ದೇವೆ. ಆದರೆ ಅದರಲ್ಲಿ ಗ್ರಾಮಾಂತರ ಪ್ರದೇಶದವರಿಗೆ ಹದಿನೈದು ಪರ್ಸೆಂಟ್ ಗ್ರೇಸ್ ಮಾರ್ಕ್ಸ್ ಕೊಡಬೇಕು ಮತ್ತು ಗೌರವ ಶಿಕ್ಷಕರಿಗೆ ಒಂದೊಂದು ವರ್ಷ ಅವರು ಸೇವೆ ಮಾಡಿದ್ದಕ್ಕೆ ಅರ್ಧ ಅರ್ಧ ಪರ್‌ಸೆಂಟ್ ಜಾಸ್ತಿ ಮಾರ್ಕ್ಸ್ ಕೊಡಬೇಕೆಂದು ಕಾನೂನು ಬದಲಾವಣೆಯಾಗಬೇಕಾದ ಕಾರಣ ಕ್ಯಾಬಿನೆಟ್ ಅದನ್ನು ಪುನರ್‌ಪರಿಶೀಲಿಸಿ ಅದು ರಾಜ್ಯಪಾಲರ ಅಂಕಿತಕ್ಕೆ ಹೋಗಿದೆ. ಇವತ್ತು ನಾಳೆ ಅದಕ್ಕೆ ಅಂಕಿತ ಸಿಗಬಹುದು, ಅಂಕಿತ ಸಿಕ್ಕಿದಮೇಲೆ, ಅರ್ಜಿ ಕರೆಯುವುದಕ್ಕೆ ಒಂದು ತಿಂಗಳ ಸಮಯ ಬೇಕು. ಅರ್ಜಿ ಕರೆದ ಮೇಲೆ ಪ್ರೊಸೆಸಿಂಗ್ ಮಾಡುವುದಕ್ಕೆ ಒಂದು ತಿಂಗಳು ಬೇಕು. ಆದುದರಿಂದ ಪ್ರಾಥಮಿಕ ಶಾಲಾ ಉಪಾಧ್ಯಾಯರ ವೇಕೆನ್ಸೀಸ್ ಏನಿದೆ ಅದನ್ನೆಲ್ಲಾ ನಾವು ಈ ಒಂದು ಪ್ರಕ್ರಿಯೆಯಿಂದ ತುಂಬುತ್ತಿದ್ದೇವೆ. ಪ್ರೌಢ ಶಾಲಾ ಉಪಾಧ್ಯಾಯರ ವೇಕೆನ್ಸೀಸ್ ಏನಿದೆ ಅದಕ್ಕೆ ಪ್ರತ್ಯೇಕವಾದ ನಿಯಮಗಳು ಈಗಾಗಲೆ ಸಿದ್ಧವಾಗಿದೆ. ಅದು ಕೂಡಾ ರಾಜ್ಯಪಾಲರ ಅಂಕಿತಕ್ಕೆ ಹೋಗಿದೆ, ಅದೂ ಬರುತ್ತದೆ. ಪ್ರೌಢ ಶಾಲಾ ಅಧ್ಯಾಪಕರ ಖಾಲಿ ಇರುವ ಹುದ್ದೆಗಳನ್ನು ನಾವು ತುಂಬುತ್ತಿದ್ದೇವೆ. ಇನ್ನು ಜೂನಿಯರ್ ಕಾಲೇಜ್ ಉಪನ್ಯಾಸಕರ ಹುದ್ದೆಗಳಿಗೆ ಕೂಡಾ ಈಗಾಗಲೇ ಇದೇ ಪ್ರಕಾರ, ಏನು ಪ್ರಾಥಮಿಕ ಶಾಲಾ ಉಪಾಧ್ಯಾಯರ ವಿಚಾರದಲ್ಲಿ ರೂರಲ್‌ನವರಿಗೆ 15 ಪರ್ಸೆಂಟ್ ಗ್ರೇಸ್ ಎಂದು ಕ್ರೈಟೀರಿಯಾ ಮಾಡಿರುತ್ತೇವೆ. ಅದೇ ಕ್ರೈಟೀರಿಯಾದ ಮೇಲೆ ನಾವು ಇದನ್ನೂ ಕೂಡ ಮಾಡಿರುತ್ತೇವೆ. ಇವತ್ತು ನಾಳೆ ರಾಜ್ಯಪಾಲರ ಅಂಕಿತ ಸಿಗುತ್ತದೆ. ಇನ್ನು ಎರಡು ತಿಂಗಳೊಳಗೆ ಈ ಪ್ರೊಸೆಸ್ ಕೂಡಾ ಮುಗಿಯುತ್ತದೆ. ಎಂದರೆ ಜೂನಿಯರ್ ಕಾಲೇಜು. ಪ್ರೌಢಶಾಲೆ, ಪ್ರಾಥಮಿಕ ಶಾಲೆ ಇಲ್ಲಿ ಏನು ಅಧ್ಯಾಪಕರ ಹುದ್ದೆಗಳು ಖಾಲಿ ಇವೆ. ಅವೆಲ್ಲಾ ಹುದ್ದೆಗಳನ್ನೂ ತುಂಬತಕ್ಕಂಥ ಪ್ರಕ್ರಿಯೆಗೆ ಕ್ಯಾಬಿನೆಟ್ ಮಂಜೂರಾತಿ ಕೊಟ್ಟಿದೆ. ಬರುವ ಅಕಾಡೆಮಿಕ್ ವರ್ಷ

ಪ್ರಾರಂಭವಾಗುವುದಕ್ಕೆ ಮೊದಲು ಈ ಖಾಲಿ ಬಿದ್ದ ಎಲ್ಲಾ ಹುದ್ದೆಗಳನ್ನೂ ಈ ಒಂದು ಹಂತದಲ್ಲಿ ತುಂಬಿಸತಕ್ಕ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಮಂತ್ರಿಯವರು ಅಧ್ಯಾಪಕರ ಹುದ್ದೆಗಳನ್ನು ತುಂಬುತ್ತಾರೆ. ಆದರೆ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಇರತಕ್ಕಂಥ ಶಾಲೆಗಳಲ್ಲಿ ಗುಮಾಸ್ತರ ಹುದ್ದೆಗಳನ್ನು ತುಂಬುವುದಕ್ಕೆ ಏನಾದರೂ ತಾವು ವಿಚಾರ ಮಾಡುತ್ತಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ನಮಗೆ ಗುಮಾಸ್ತರಿಗಿಂತ ಮೊದಲು ಅಧ್ಯಾಪಕರದ್ದು ಮುಖ್ಯ. ಮೊದಲು ಅಧ್ಯಾಪಕರ ಹುದ್ದೆ ತುಂಬಿಬಿಡೋಣ. ಆಮೇಲೆ ಗುಮಾಸ್ತರ ಹುದ್ದೆ ತುಂಬಿಕೊಳ್ಳತಕ್ಕಂಥದ್ದನ್ನು ವಿಚಾರ ಮಾಡಬಹುದು.

ಶ್ರೀ ಬಾಬೂರಾವ್ ಚವಾಣ್ : ಮಾನ್ಯ ಅಧ್ಯಕ್ಷರೇ ನಾನು ಹೇಳತಕ್ಕಂಥಾದ್ದು, ಆ ಶಾಲೆಗಳಲ್ಲಿ ಕಸ ಹೊಡೆಯುವವರು ಯಾರೂ ಇಲ್ಲ. ಹಳ್ಳಿಗಳಲ್ಲಿ ಬಾಗಿಲೂ ಸಹ ಇರಲಾರದಂಥ ಶಾಲೆಗಳು ಬಹಳಷ್ಟು ಇವೆ. ಆ ಶಾಲೆಗಳಲ್ಲಿ ದನಕರುಗಳು ರಾತ್ರಿ ಹೊತ್ತು ಮಲಗಿ ಮುಂಜಾನೆ ಎದ್ದು ಹೋಗಿಬಿಡುತ್ತವೆ. ಆ ಎಲ್ಲಾ ಕಸ ತೆಗೆಯಬೇಕೆಂದರೆ ಯಾರು ತೆಗೆಯಬೇಕು. ಇಲ್ಲ ಹುಡುಗರು ತೆಗೆಯಬೇಕು. ಅಥವಾ ಶಿಕ್ಷಕರು ತೆಗೆಯಬೇಕು. ಆ ಕಸದ ಮೇಲೇ ಕೂರತಕ್ಕಂಥ ಪರಿಪಾಠ ಹಳ್ಳಿಗಳಲ್ಲಿ ಬೆಳೆದು ಬಂದಿದೆ. ಶಾಲೆ ಕ್ಲೀನಾಗಿದ್ದರೆ ಮಕ್ಕಳು ಕೂಡುವುದಕ್ಕೆ ಒಳ್ಳೆಯ ವಾತಾವರಣ ಇರುತ್ತದೆ. ಅದನ್ನು ಕ್ಲೀನಾಗಿ ಮಾಡುವುದಕ್ಕೆ ಚಪ್ರಾಸಿಗಳ ಹುದ್ದೆ ಎಸೆನ್‌ಷಿಯಲ್; ಅದಕ್ಕಾಗಿ ಚಪ್ರಾಸಿಗಳು ಬೇಕು ಹಾಗೆಯೇ ಉಳಿದ ಲೆಕ್ಕಪತ್ರದ ಕೆಲಸ ಮಾಡಲು ಗುಮಾಸ್ತರು ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಏನಾಗಿದೆ ನಾವೆಲ್ಲಾ ಮತ್ತೊಬ್ಬರ ಮೇಲೆ ಅವಲಂಬನೆ ಮಾಡಿಕೊಂಡಿರತಕ್ಕಂಥ ಪ್ರವೃತ್ತಿ ಈಗ ಜಾಸ್ತಿಯಾಗಿದೆ. ನಾವು ಚಿಕ್ಕ ಮಕ್ಕಳಿರುವಾಗ ಎಸ್.ಎಸ್.ಎಲ್.ಸಿ. ವರೆಗೆ ನಾವೇ ಕಸ ಹೊಡೆಯುತ್ತಿದ್ದವು. 1979 ರಲ್ಲಿ ನಾನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಆಗಿದ್ದಾಗ, ನಾನೇ ಪ್ರದೇಶ ಕಾಂಗ್ರೆಸ್ ಕಛೇರಿಯ ಕಸ ಹೊಡೆಯುತ್ತಿದ್ದೆ. ನಮ್ಮ ಕೆಲಸ ನಾವೇ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಪ್ಯೂನ್ ಮತ್ತೊಂದು ಇರತಕ್ಕಂಥ ಅವಶ್ಯಕತೆ ಇಲ್ಲ. ಸ್ವಲ್ಪ ಸ್ವಾವಲಂಬನ ಪ್ರವೃತ್ತಿಯಿಂದ ನಾವು ಜೀವನ ಮಾಡುವುದಕ್ಕೆ ಕಲಿಯಬೇಕು. ಗುಮಾಸ್ತರು ಅಕೌಂಟ್ಸ್ ಸರಿಯಾಗಿ ಇಡುವುದಕ್ಕೆ ಬೇಕೆಂದು ಹೇಳಿದ್ದೀರಿ. ಆದರೆ ಶಾಲಾ ಅಧ್ಯಾಪಕರು ಅದನ್ನು ಕಲಿಯಬೇಕು. ಅದನ್ನು ಅವರಿಗೇ ಬಿಡುತ್ತೇವೆ; ಅವರೂ ಲೆಕ್ಕ ಬರೆಯುವುದಕ್ಕೆ ಸಾಧ್ಯವಾಗುತ್ತದೆ. ಅದೂ ಕೂಡಾ ಪ್ರಾಥಮಿಕ ಶಾಲೆಗಳಲ್ಲಿ ಗುಮಾಸ್ತರ ಹುದ್ದೆ ಬೇಕಾಗಿಲ್ಲ. ಎಸ್.ಎಸ್.ಎಲ್.ಸಿ. ಯಲ್ಲಿ ಹಾಗೂ ಕಾಲೇಜುಗಳಿಗೆ ಕನಿಷ್ಠ ಎಷ್ಟು ಗುಮಾಸ್ತರು ಬೇಕು ಅದನ್ನು ತುಂಬಲಿಕ್ಕೆ ನಾವು ಬರುವ ಹಣಕಾಸು ವರ್ಷದಲ್ಲಿ ಪ್ರಯತ್ನ ಮಾಡುತ್ತೇವೆ. ಆದರೆ ನಾನು ಹೇಳುವುದು ನಾವೆಲ್ಲಾ ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ನಮ್ಮ ಕೈಯಿಂದ ಕೆಲಸ ಮಾಡತಕ್ಕಂಥ ಪ್ರವೃತ್ತಿ ಬೆಳೆಸತಕ್ಕಂಥಾದ್ದನ್ನು ಮಾಡುವುದು ಒಳ್ಳೆಯದು. ಪ್ಯೂನ್, ಗುಮಾಸ್ತರು ಎಂದು ಕುಳಿತರೆ ಆಗುವುದಿಲ್ಲ. ಶಾಲಾ ಅಧ್ಯಾಪಕರಿಗೆ ಬರೆಯುವುದಕ್ಕೆ ಗೊತ್ತಿಲ್ಲವೇ ? ಅಕೌಂಟ್ಸ್ ಇಡುವುದಕ್ಕೆ ಅವರಿಗೆ ಸಾಧ್ಯ ಇದೆ. ನಾವು ಎಷ್ಟು ದೂರಕ್ಕೆ ಆಲೋಚನೆ ಮಾಡುತ್ತಿದ್ದೇವೆ ಎಂದರೆ, ಲೆಕ್ಕ ಬರೆಯುವುದಕ್ಕೆ ಗೊತ್ತಿಲ್ಲದೇ ಇದ್ದರೆ ಅಂತಹ ಅಧ್ಯಾಪಕರಿಗೆ ಒಂದು ಓರಿಯಂಟೇಷನ್ ಟ್ರೈನಿಂಗ್ ಪ್ರೋಗ್ರಾಂನ್ನು ಏತಕ್ಕೆ ಪ್ರಾರಂಭಿಸಬಾರದು ಎಂಬ ಆಲೋಚನೆಯಲ್ಲಿದ್ದೇವೆ.

ಶ್ರೀ ಎಂ. ಮಹದೇವ್ : ಈಗ ಕಸ ಹೊಡೆಯುವುದಕ್ಕೆ ಬಹಳ ಜನ ಸಿಗುತ್ತಾರೆ. ಆದರೆ, ಸೇವಾ ಸಂಸ್ಥೆಗಳಲ್ಲಿ ಕಸ ಹೊಡೆಯುವುದಕ್ಕೆ ಜನ ಸಿಗುವುದಿಲ್ಲ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು 7 ಸಾವಿರಕ್ಕಿಂತ ಜಾಸ್ತಿ ಟೀಚರ್ಸ್ ಅನ್ನು ನೇಮಕ ಮಾಡಿಕೊಂಡಿದ್ದೇವೆ ಅಂತ ಹೇಳಿದರು. ಬಹುಶಃ ತಮಗೂ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ 1990-91ರಲ್ಲಿ ಮತ್ತು 1991-92ರಲ್ಲಿ ಟೀಚರ್ಸ್ ನೇಮಕ ಆಗಲಿಲ್ಲ. ಅವರು ನೇಮಕ ಮಾಡಿದರೂ ಸಹ ತಾವು ಸ್ಟಾಪ್ ಮಾಡಿಸಿದಿರಿ. ಅದರ ಸಲುವಾಗಿ ಜಿಲ್ಲೆಯಲ್ಲಿ ವಿಶೇಷವಾಗಿ ಹುಬ್ಬಳ್ಳಿ, ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ ಟೀಚರ್ಸ್ ನೇಮಕ ಆಗಲಿಲ್ಲ. ದಯಮಾಡಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಅದನ್ನು ರಿಲ್ಯಾಕ್ಸ್ ಮಾಡಬೇಕು. ಟೀಚರ್ಸ್ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್ : ಮಾನ್ಯ ಅಧ್ಯಕ್ಷರೇ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಮಂಡಲ ಪಂಚಾಯತಿ ವತಿಯಿಂದ ಸುಮಾರು ಜನ ಟೀಚರ್ಸ್‌ನ್ನು ನೇಮಕ ಮಾಡಿಕೊಂಡರು. ಆದರೆ ಅವರು ಇವತ್ತು ಬೀದಿಪಾಲಾಗಿದ್ದಾರೆ. ಆದಕ್ಕೆ ಸರ್ಕಾರದವರು ಅವರಿಗೆ ಏನಾದರೂ ನೇಮಕ ಮಾಡಿಕೊಳ್ಳಲಿಕ್ಕೆ ಹೊಸದಾಗಿ ಕಾರ್ಯಕ್ರಮ ತೆಗೆದುಕೊಂಡು ಆ ಜನಗಳಿಗೆ ನೌಕರಿ ಒದಗಿಸಿಕೊಡುವುದಕ್ಕೆ ಸಾಧ್ಯವೇ? ಮಂಡಲ ಪಂಚಾಯತಿ ವತಿಯಿಂದ ಕೆಲವರನ್ನು ನೇಮಕ ಮಾಡಿದ್ದಾರೆ. ಅವರ ಬಗ್ಗೆ ಸರ್ಕಾರ ಏನಾದರೂ ಅನುಕಂಪದ ಆಧಾರದ ಮೇಲೆ ಅಥವಾ ಇನ್ಯಾವುದೇ ರೀತಿಯಲ್ಲಾದರೂ ಕೂಡ ನೇಮಕ ಮಾಡಲು ಮತ್ತು ಇವರ ನೌಕರಿಯನ್ನು ಖಾಯಂ ಮಾಡುವುದಕ್ಕೆ ಸಾಧ್ಯ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ : ನಾನು ಈಗಾಗಲೇ ಹೇಳಿದ್ದೇನೆ. ಏನೆಂದರೆ. ಮಂಡಲ ಪಂಚಾಯಿತಿಯವರು ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡಲಿಕ್ಕೆ ಹೊರಟರೆ ಎಲ್ಲಿ ಹತೋಟಿ ಸಿಗುತ್ತದೆ ? ನನಗೆ ಅರ್ಥವಾಗುವುದಿಲ್ಲ. ಕೆಲವು ನೇಮಕಾತಿ ನಿಯಮಗಳು ಇದ್ದಾವೆ. ಆ ನಿಯಮಗಳ ಪ್ರಕಾರ ನೇಮಕ ಮಾಡತಕ್ಕಂಥವರೇ ಮಾಡಬೇಕು. ಜಿಲ್ಲಾ ಪರಿಷತ್ತುಗಳು. ಮಾಡಬೇಡಿ ಅದು ಕಾನೂನು ಬಾಹಿರ ಆಗುತ್ತದೆ ನೇಮಕಾತಿ ನಿಯಮಗಳಲ್ಲಿ ನಿಮಗೆ ಅಧಿಕಾರ ಇಲ್ಲ ಅಂತ ಹೇಳಿದರೂ ಕೆಲವರು ಮಾಡಿದ್ದಾರೆ. ಇದು ಬಹಳ ಅವಾಂತರವಾಗಿದೆ. ಮಾನವೀಯತೆ ದೃಷ್ಟಿಯಿಂದ ಅದಕ್ಕೆ ಅವರು ಪ್ರತಿ ವರ್ಷ ಮಾಡಿದಂತಹ ಸೇವೆಗೆ ಅರ್ಧ ಮಾರ್ಕ್ಸ್ ಕೊಡಬೇಕೆಂದು ಅಂತ ಹೇಳಿ ನಾವು ಈಗಾಗಲೇ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ತರಹ ಮಂಡಲ ಪಂಚಾಯತಿಗಳಲ್ಲಿ ಜಿಲ್ಲಾ ಪರಿಷತ್ತುಗಳಲ್ಲಿ ನೇಮಕಾತಿ ನಿಯಮಗಳಲ್ಲಿ ಸಾಧ್ಯವಿಲ್ಲದಿದ್ದರೂ ಕೂಡ ನೇಮಕ ಮಾಡುವ ಮಟ್ಟಕ್ಕೆ ಹೋದರೆ ಶಿಕ್ಷಣದ ಮಟ್ಟ ಉಳಿಯುವುದಿಲ್ಲ ಮತ್ತೆ ನೇಮಕಾತಿ ವ್ಯವಸ್ಥೆ ಕೂಡ ಉಳಿಯುವುದಿಲ್ಲ: ಎಲ್ಲಾ ಹಾಳಾಗುತ್ತದೆ. ಹೀಗಾದರೆ ಎಜುಕೇಶನ್ ಡಿಪಾರ್ಟ್‌ಮೆಂಟ್‌ನ್ನೂ ನಾವು ಎನ್‌ಕ್ರೋಜ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ನಾಗರಾಜು : ಈಗ ಮಾನ್ಯ ಸಚಿವರು ಖಾಲಿ ಇರುವ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿದರು. ಬಹಳ ಸಂತೋಷ. ಆದರೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇರುವುದರಿಂದ 40:1 ಪ್ರಮಾಣದಲ್ಲಿ ಮಾಸ್ಟರ್ಸ್ ಇರಬೇಕೆಂದು ನಿಯಮ ಏನಿದೆ ಅದನ್ನು ರೀ-ಸರ್ವೆ ಮಾಡಿ ಹುದ್ದೆಗಳನ್ನು ಕ್ರಿಯೇಟ್ ಮಾಡಿ ಭರ್ತಿ ಮಾಡುವ ಬಗ್ಗೆ ಆಶ್ವಾಸನೆಯನ್ನು ತಾವು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂತಹ ಪ್ರಶ್ನೆ ಕೂಡ ಬಹಳ ಉಪಯುಕ್ತವಾಗಿದೆ. ಏಕೆಂದರೆ ಈಗ ನಮ್ಮಲ್ಲಿ ವೇಕೆನ್ಸಿಗಳು ಯಾವುವು ಇದ್ದವು ಅವನ್ನು ಮಾತ್ರ ನಾವು ತುಂಬಿಸಿರತಕ್ಕಂಥಾದ್ದು. ಈಗ ಅವರು ಹೇಳಿದ ಪ್ರಕಾರ ಮತ್ತು ಅನುಪಾತ ಪದ್ಧತಿ ಪ್ರಕಾರ ನಾವು

ಒಬ್ಬ ಟೀಚರ್‌ಗೆ 50 ಮಕ್ಕಳು ಇರಬೇಕೆನ್ನುವ ದೃಷ್ಟಿಯಲ್ಲಿ ನೇಮಕ ಮಾಡಬೇಕು. ಆದರೆ ಈಗ ಅನೇಕ ಕಡೆ ಒಬ್ಬ ಟೀಚರ್‌ಗೆ 75. 80 ಜನ ಮಕ್ಕಳು ಇರುವ ಪ್ರಕರಣಗಳು ಇವೆ. ಅದನ್ನು ನಾವು ಪುನರ್ ವಿಮರ್ಶೆ ಮಾಡಿ ಸರ್ವೆ ಮಾಡಿಸುತ್ತಿದ್ದೇವೆ. ಅನುಪಾತಕ್ಕೆ ಸರಿಯಾಗಿ ಟೀಚರ್ಸ್ ನೇಮಕಾತಿ ಅವಶ್ಯಕತೆ ಇದೆ. ಅದನ್ನು ಕೂಡ ನಾವು ಈಗಾಗಲೇ ಸರ್ವೆ ಮಾಡಿಸುತ್ತಿದ್ದೇವೆ. ಸರ್ವೆ ಆದ ಕೂಡಲೇ ಅನುಪಾತಕ್ಕೆ ಅನುಗುಣವಾಗಿ. ಉಪಾಧ್ಯಾಯರನ್ನು ತುಂಬುವ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಹಲಗೇಗೌಡ : ಈಗ ಕೆಲವು ಹುದ್ದೆಗಳಿಗೆ ನೇಮಕಾತಿ ಮಾಡಿದ್ದೀರಿ. ಏಕೋಪಾಧ್ಯಾಯ ಶಾಲೆಗಳಿಂದ 7ನೇ ತರಗತಿಗೆ ಕೊಟ್ಟಿರುವ ಏಕೋಪಾಧ್ಯಾಯ ಅಥವಾ ಇಬ್ಬರು ಉಪಾಧ್ಯಾಯರನ್ನು ಮಾತ್ರ ತೆಗೆದುಕೊಂಡಿದ್ದೀರಿ. 7ನೇ ತರಗತಿಗೆ ಉಳಿದ ಅಧ್ಯಾಪಕರುಗಳಿಗೆ ಮಂಜೂರಾತಿ ನೀಡಿರುವುದಿಲ್ಲ. 7ನೇ ತರಗತಿ ಶಾಲೆಗಳೂ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿದೆ. ಆದ್ದರಿಂದ 7ನೇ ತರಗತಿಗಳನ್ನೂ ಸಹ ಲೆಕ್ಕಕ್ಕೆ ತೆಗೆದುಕೊಂಡು ಅಲ್ಲಿಗೆ ಹೆಚ್ಚಿನ ಹುದ್ದೆಗಳಿಗೆ ಮಂಜೂರಾತಿ ಕೊಡುತ್ತೀರಾ? ಇವತ್ತು ಪ್ರಾಥಮಿಕ ಶಾಲೆಗಳಲ್ಲಿ ಯಾರು ಗ್ರ್ಯಾಜುಯೇಟ್ಸ್ ಅಸಿಸ್ಟೆಂಟ್ಸ್ ಇದ್ದರು ಅವರನ್ನು ಅಲ್ಲಿಗೆ ಹಾಕಿದ್ದೀರಿ, ಅವರು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ವಿಷಯದ ಬಗ್ಗೆ ಜ್ಞಾನವಿಲ್ಲದ ಕಾರಣ ಬೋಧನೆ ಮಾಡಲು ಕಷ್ಟವಾಗುತ್ತದೆ. ವಿಷಯದ ಜ್ಞಾನ ಇಲ್ಲ ಆದ್ದರಿಂದ ಸರಿಯಾಗಿ ವಿಷಯದ ತಜ್ಞರನ್ನು ವಿಷಯಕ್ಕೆ ತಕ್ಕಂತೆ ಉಪಾಧ್ಯಾಯರುಗಳನ್ನು ಪ್ರೌಢಶಾಲೆಗಳಿಗೆ ನೇಮಿಸುತ್ತೀರಾ? ನೇಮಿಸುವಾಗ ತರಬೇತಿ ಹೊಂದಿದಂತಹ ಅನೇಕರಿಗೆ ವಯಸ್ಸಾಗಿದೆ. ಆದ್ದರಿಂದ ಮುಂದೆ ನೇಮಕ ಮಾಡುವಾಗ ಅರ್ಹತೆ ಮತ್ತು ವಯಸ್ಸು ಎರಡನ್ನೂ ಕೂಡ ಗಣನೆಗೆ ತೆಗೆದುಕೊಂಡು ವಯಸ್ಸಾದವರಿಗೆ ಸಹಾಯ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೇ, ಈಗ ಆಪರೇಷನ್ ಬ್ಲಾಕ್ ಬೋರ್ಡ್ ಮಿತಿಯಲ್ಲಿ ಮತ್ತು ಆ ಯೋಜನೆಯಲ್ಲಿ ನಾವು ಏಕೋಪಾಧ್ಯಾಯ ಶಾಲೆಗಳು ಇರಬಾರದು ಅಂತ ಹೇಳಿ ಒಂದರಿಂದ 5ನೇ ತರಗತಿಯವರೆಗೂ ಅಂತ ನೀತಿ ಇರುವುದು ಬಹುಶಃ ಕೇಂದ್ರ ಸರ್ಕಾರದ 4ನೇ ಹಂತದ ಆಪರೇಷನ್ ಬ್ಲಾಕ್ ಬೋರ್ಡ್ ಯೋಜನೆ ಏನು ಇದೆ ಅದನ್ನು ಅನುಷ್ಠಾನಗೊಳಿಸಿದರೆ, ಬಹುಶಃ ಇನ್ನು 5ನೇ ಹಂತ, 6ನೇ ಹಂತ, ಹಾಗೂ 7ನೇ ಕ್ಲಾಸ್‌ವರೆಗೂ ವಿಸ್ತರಣೆ ಮಾಡುವುದಕ್ಕೆ ಸಾಧ್ಯ ಆಗಬಹುದು. ಅದನ್ನು ಪರಿಶೀಲನೆ ಮಾಡುತ್ತೇನೆ. ಇನ್ನು ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ವಯಸ್ಸಿನ ಮಿತಿಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ನಾವು ಮೊದಲಿನ ಹಂತದ ನೇಮಕಾತಿಯಲ್ಲಿ ಇದನ್ನು ಅನ್ವಯ ಮಾಡಿದ್ದೇವೆ. ನಾವು ಎರಡನೇ ಹಂತದಲ್ಲಿ ನೇಮಕಾತಿ ಮಾಡುವಾಗ ಇದನ್ನು ಕೈಬಿಟ್ಟೆವು. ಆಮೇಲೆ ತಮ್ಮಂಥ ಶಾಸಕರು ಮತ್ತು ಸಾರ್ವಜನಿಕರ ಬೇಡಿಕೆ ಬಂದಾಗ ಒಟ್ಟು ಪ್ರಾಥಮಿಕ ಶಾಲಾ ಅಧ್ಯಾಪಕರ ನೇಮಕಾತಿಯಲ್ಲಿ 50 ಪರ್‌ಸೆಂಟ್ 29 ವರ್ಷಕ್ಕೆ ಮೇಲಿನವರು, 50 ಪರ್‌ಸೆಂಟ್ 29 ವರ್ಷದ ಕೆಳಗಿನವರಿಗೆ ಕೊಟ್ಟಿದ್ದೇವೆ. ಈ ತರಹ ಅನುಪಾತದ ಪ್ರಕಾರ ನೇಮಕಾತಿ ಮಾಡಲಿಕ್ಕೆ ನಾವು ತಿದ್ದುಪಡಿ ಮಾಡಿದ್ದೇವೆ. ಇವತ್ತು ಅಥವಾ ನಾಳೆ ಅದಕ್ಕೆ ರಾಜ್ಯಪಾಲರ ಅಂಕಿತ ಬೀಳಬಹುದು. ಅಲ್ಲಿಂದ ಬಂದ ಕೂಡಲೇ ಇದನ್ನು ಮಾಡುತ್ತೇವೆ. ಆಮೇಲೆ ಸನ್ಮಾನ್ಯ ಹಲಗೇಗೌಡರು ಬಹಳ ಪ್ರಮುಖವಾದ ಇನ್ನೊಂದು ಪ್ರಶ್ನೆಯನ್ನು ಎತ್ತಿದರು. ಅದೇನೆಂದರೆ, ಪ್ರಾಥಮಿಕ ಶಾಲೆಯಲ್ಲಿ ರತಕ್ಕಂಥ ಗ್ರ್ಯಾಜುಯೇಟ್ ಟೀಚರ್ಸ್ ಏನಿದ್ದಾರೆ ಅವರು ಹೈಸ್ಕೂಲ್‌ಗೆ ಕಲಿಸತಕ್ಕಂಥಾದ್ದು ಅಥವಾ ಹೈಸ್ಕೂಲ್‌ನಲ್ಲಿ ಕಲಿಸತಕ್ಕಂಥ ಪ್ರಾಥಮಿಕ ಶಾಲೆಯಲ್ಲಿ ಕಲಿಸತಕ್ಕಂಥ ಅಧ್ಯಾಪಕರ ಒಂದು ಶಿಕ್ಷಣವನ್ನು ಕೊಡತಕ್ಕಂಥ. ಒಂದು ಮಟ್ಟ. ಅದು ಸ್ವಲ್ಪ ಕಡಿಮೆ ಇದೆ ಅದನ್ನು ಹೆಚ್ಚಿಸಬೇಕೆಂದು. ಇದಕ್ಕೆ ತಮಗೆ ಹೇಳುವುದಿದ್ದರೆ,

ಕೇಂದ್ರ ಸರ್ಕಾರದ ಒಂದು DIET ಎಂದು ಒಂದು ಯೋಜನೆ ಇದೆ. ಪ್ರತಿ ಜಿಲ್ಲೆಗೆ ಒಂದೊಂದು ಕೋಟಿ ರೂಪಾಯಿಯನ್ನು ಈ ರೀತಿಯಲ್ಲಿ ಶಿಕ್ಷಕರ ಮಾನವ ಸಂಪನ್ಮೂಲದ ಮಟ್ಟವನ್ನು ಪರಿಸತಕ್ಕಂಥ ಯೋಜನೆ 10 ಜಿಲ್ಲೆಗಳಿಗೆ ಈಗಾಗಲೇ ಮಂಜೂರು ಮಾಡಿದ್ದಾರೆ. ಈಗಾಗಲೇ 10 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ನೂರಕ್ಕೆ ನೂರು ಪಾಲು ಕೊಡುತ್ತಿದ್ದಾರೆ. ಅದಕ್ಕಾಗಿ ನಾವು ಕಟ್ಟುನಿಟ್ಟಾಗಿ ಟಿ.ಸಿ.ಹೆಚ್., ಕೊಡುವುದಿಲ್ಲ. ಬಿ.ಎಡ್., ಕೊಡುವುದಿಲ್ಲ ಮತ್ತೆ ಯಾವುದೇ ಇನ್‌ಟೇಕ್ ಜಾಸ್ತಿ ಮಾಡುವುದಿಲ್ಲವೆಂದು ಹೇಳಿ ಅದು ಐಎಂಎಫ್ ಕಂಡೀಷನ್ ತರಹ ಇರಬೇಕೆಂದು ಕೇಂದ್ರ ಸರ್ಕಾರದವರು ಈ ಕಂಡೀಷನ್ಸ್ ಹಾಕಿದ್ದಾರೆ. ನೀವು ಟಿ.ಸಿ.ಹೆಚ್. ಮಾಡಿದರೆ. ಬಿ.ಎಡ್. ಕಾಲೇಜುಗಳನ್ನು ಜಾಸ್ತಿ ಮಾಡಿದರೆ. ಇನ್‌ಟೇಕ್‌ನ್ನು ಜಾಸ್ತಿ ಮಾಡಿದರೆ ಈ ಯೋಜನೆ ಕೊಡುವುದಕ್ಕಾಗುವುದಿಲ್ಲವೆಂದು ಕಟ್ಟುನಿಟ್ಟಾಗಿ ಹೇಳಿದ್ದಾರೆ. ಅದಕ್ಕಾಗಿ ನಾವು ಮಾಡುತ್ತಿದ್ದೇವೆ. ಇದು ಮಹಾರಾಷ್ಟ್ರ ಮತ್ತು ಇನ್ನೂ ಅನೇಕ ರಾಜ್ಯಗಳಲ್ಲಿ ಆಗಿದೆ. ನಮ್ಮ ರಾಜ್ಯದಲ್ಲಿ ಆಗದ ನಮ್ಮ ಶಿಕ್ಷಣದ ಮಟ್ಟ ಬಹಳ ಕುಸಿತ ಆಗಿದೆ. ಅವನತಿಯಲ್ಲಿದೆ ಎಂಬ ಅಭಿಪ್ರಾಯ ರಾಷ್ಟ್ರಮಟ್ಟದಲ್ಲೂ ಇದೆ. ರಾಜ್ಯಮಟ್ಟದಲ್ಲೂ ಇದೆ. ಇದನ್ನು ಪರಿಸತಕ್ಕಂಥ ದೃಷ್ಟಿಯಲ್ಲಿ ಈ ಯೋಜನೆಯನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ತಾಂಡಾಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಬಗ್ಗೆ

1799. ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಎಷ್ಟು ತಾಂಡಾಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಮತ್ತು ಇನ್ನು ಎಷ್ಟು ತಾಂಡಾಗಳಿಗೆ ಮಂಜೂರು ಮಾಡಬೇಕಾಗಿದೆ ?

ಆ) ಉಳಿದ ತಾಂಡಾಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಇನ್ನೂ ಎಷ್ಟು ಸಮಯ ಬೇಕಾಗಬಹುದು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಶಹಪುರ ತಾಲ್ಲೂಕಿನಲ್ಲಿ ಫೆಬ್ರುವರಿ 1992ರ ಅಂತ್ಯದವರೆಗೆ 36 ತಾಂಡಾಗಳನ್ನು ವಿದ್ಯುದ್ದೀಕರಣ ಮಾಡಲಾಗಿದೆ ಮತ್ತು ಬಾಕಿ ಉಳಿದಿರುವ ತಾಂಡಾಗಳ ಸಂಖ್ಯೆ : 21.

ಆ) ಉಳಿದ 21 ತಾಂಡಾಗಳನ್ನು ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ವಿದ್ಯುದ್ದೀಕರಣ ಮಾಡಲಾಗುವುದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್ : ಮಾನ್ಯ ಅಧ್ಯಕ್ಷರೆ. ಶಹಾಪುರ ತಾಲ್ಲೂಕಿನಲ್ಲಿ ಸುಮಾರು 36 ತಾಂಡಗಳಿದ್ದು ಅದರಲ್ಲಿ ಎಲೆಕ್ಟ್ರಿಸಿಟಿ ಆಗತಕ್ಕಂಥ ತಾಂಡಗಳು ಇನ್ನೂ 21 ಇವೆಯೆಂದು ಹೇಳಿದ್ದಾರೆ. ಈ ತಾಂಡಗಳಿಗೆ ಹಂತ ಹಂತವಾಗಿ ಎಲೆಕ್ಟ್ರಿಫಿಕೇಷನ್ ಮಾಡಿಕೊಡುತ್ತೇವೆ ಎನ್ನತಕ್ಕ ಉತ್ತರ ಕೊಟ್ಟಿದ್ದಾರೆ. ಸುಮಾರು 40-42 ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದರೂ ಕೂಡಾ ಇನ್ನೂ ಈ ತಾಂಡಗಳಿಗೆ ವಿದ್ಯುತ್ ಒದಗಿಸದೇ ಹೋದರೆ ಅಲ್ಲಿಯ ಜನಕ್ಕೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಹೈದರಾಬಾದ್ ಅಭಿವೃದ್ಧಿ ಮಂಡಳಿ ಕಾಮಗಾರಿಗಳಲ್ಲಿ ಈ ತಾಂಡಗಳನ್ನು ಸೇರಿಸಿ ಇದೇ ವರ್ಷ ಟೈಮ್ ಬೌಂಡ್ ಪ್ರೋಗ್ರಾಮ್ ಎಂದು ತಿಳಿದುಕೊಂಡು ಈ ಕಾರ್ಯಕ್ರಮವನ್ನು ಅದರೊಳಗೆ ಸೇರಿಸಿ ಮಾಡಬೇಕೆಂದು ತಮ್ಮ ಮುಖೇನ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ : ಸರ್ಕಾರ ಹಣ ಜಾಸ್ತಿ ಒದಗಿಸಿದರೆ ಅದನ್ನು ಪ್ರಯತ್ನ ಮಾಡಿ ಕೊಡಿಸುತ್ತೇನೆ.

ಶ್ರೀ ಬಾಬುರಾವ್ ಚೌಹಾಣ್ : ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಯವರು ಹಂತ ಹಂತವಾಗಿ ತಾಂಡಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಮಾನ್ಯ ಮಿತ್ರರಾದ ಶಿವಲೇಖಿರಪ್ಪನವರಿಗೆ ಹೇಳಿದರು. ಅವರು ಹೇಳಿದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಹಂತ ಹಂತ ಎಂದರೆ ಎಷ್ಟು ವರ್ಷ. ಒಂದು ವರ್ಷನಾ? ಎರಡು ವರ್ಷವಾ. ಮೂರು ವರ್ಷನಾ? 5 ವರ್ಷನಾ. ಡೆಮಾಕ್ರಸಿ ಬಂದು ಸುಮಾರು ಇಷ್ಟು ವರ್ಷಗಳಾದರೂ ಇನ್ನೂ ನಾವು ಕತ್ತಲಲ್ಲೇ ಇದ್ದೇವೆ. ನಿಜವಾಗಿ ಹೇಳಬೇಕಾದರೆ, ಮಾನ್ಯ ಮಂತ್ರಿಗಳು ಬಹುಶಃ ಬೆಳಕಿನಲ್ಲಿ ಜನ್ಮತಾಳಿರಬೇಕು. ನಾನು ನಿಜವಾಗಿ ಹೇಳುತ್ತೇನೆ ನಾನು ಕತ್ತಲಲ್ಲೇ ಹುಟ್ಟಿದ್ದೇನೆ. ಅದು ಏಕೆ ಹೇಳುತ್ತೇನೆಂದರೆ, ಲಂಬಾಣಿ ಜನರು ಕತ್ತಲಲ್ಲೇ ಊಟ ಮಾಡುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ನಡೆಯುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ವಾಸ ಮಾಡುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ಅಡಿಗೆ ಮಾಡಿ ಊಟ ಮಾಡುತ್ತಾರೆ. ಲಂಬಾಣಿ ಹೆಂಗಸರಿಗೆ ಹೆರಿಗೆ ಆಗಬೇಕಾದರೆ ಕತ್ತಲಲ್ಲೇ ಆಗುತ್ತದೆ. ಇಂಥಾ ಜನಗಳನ್ನು ಬೆಳಕಿಗೆ ತರಬೇಕಾದರೆ ಇನ್ನೂ ಹಂತ ಹಂತವಾಗಿ ಮಾಡುತ್ತೇವೆಂದು ಹೇಳಿದರೆ ಇದು ಬಹಳ ವಿಷಾದಕರವಾದುದು. ತಾವು ಹಂತ ಹಂತ ಎಂದು ಹೇಳುವ ಬದಲಾಗಿ 93ನೇ ಇಸವಿಯೊಳಗೆ ಎಲ್ಲಾ ಮಾಡಿಕೊಡುತ್ತೇವೆಂದು ಹೇಳಿ.

ಶ್ರೀ ಎಂ. ಮಹದೇವ್ : ಒಂದು ನಿಮಿಷ. ಸೂರ್ಯೋದಯ ಆಗುವತನಕ ಕತ್ತಲಲ್ಲೇ ಇರಬೇಕಾಗುತ್ತದೆ.

ಶ್ರೀ ಬಾಬುರಾವ್ ಚೌಹಾನ್ : ನಾವು ಕತ್ತಲಲ್ಲಿ ಇದ್ದು ಸಾಕಾಗಿದೆ. ಅದನ್ನು ಹಂತ ಹಂತ ಎಂದು ಹೇಳುವುದನ್ನು ತಾವು ತೆಗೆದುಹಾಕಿ 94ರ ಒಳಗೆ. ಇನ್ನು ಒಂದು ವರ್ಷದ ಒಳಗಡೆ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ತಾಂಡಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಿಕೊಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಂ. ರಾಮಪ್ಪ : ಅಧ್ಯಕ್ಷರೆ, ಹಂತ ಹಂತವಾಗಿ ಎಂದು ಏಕೆ ಹೇಳಿದ್ದೇನೆಂದರೆ, ಹಣದ ವಿಚಾರವನ್ನು ನೋಡಿಕೊಂಡು ನಾವು ಮಾಡಬೇಕಾಗುತ್ತದೆ. ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಮಾಡಬೇಕೆಂದು ನಮಗೂ ಇಚ್ಛೆ ಇದೆ. ಆದರೆ, ಹಣದ ಪರಿಸ್ಥಿತಿ ನೋಡಿಕೊಂಡು ಬೇಗ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾನ್ : ನಾನು ಹೇಳಿದ ಕಾರ್ಯಕ್ಕೆ ಜಾಸ್ತಿ ಹಣವೇನೂ ಬೇಕಾಗಿಲ್ಲ. ತಾವುಗಳು ಮನಸ್ಸು ಮಾಡಿ ಅಗತ್ಯವಿರುವಂಥ ಕೆಲಸಕಾರ್ಯಗಳನ್ನು ಕೈಗೊಂಡು ತಾಂಡಾಗಳಿಗೆ ಲೈಟ್ ಕೊಡುವ ಕೆಲಸವನ್ನು ಮಾಡುತ್ತೇವೆ ಎಂಬ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು. ಇಷ್ಟು ಸಮಯದೊಳಗಾಗಿ ಎಂದಾದರೂ ಹೇಳಬಹುದಲ್ಲವೇ ?

ಉಪಾಧ್ಯಕ್ಷರು : ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಷ್ಟೇ ಸಮಯವಲ್ಲಿ ಮಾಡಿಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಇನ್ನು ಶ್ರೀ ಕೆ. ಹರ್ಷಕುಮಾರ ಗೌಡ ಅವರ ಪ್ರಶ್ನೆಯು ಪಶುಸಂಗೋಪನ ಇಲಾಖೆಗೆ ವರ್ಗವಾಗಿದೆ. ಇದನ್ನು ಮುಂದೆ ತೆಗೆದುಕೊಳ್ಳೋಣ.

ಮೊಳಕಾಲ್ಮೂರು ಪ್ರಥಮ ದರ್ಜೆ ಮಹಾವಿದ್ಯಾಲಯ ನಿರ್ಮಾಣದ ಬಗ್ಗೆ

1788. ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ನಿರ್ಮಿಸಲು ಉದ್ದೇಶಿಸಿದೆಯೇ ;

ಆ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣವನ್ನು ಎಂದು ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಸೋಮೇನಹಳ್ಳಿಯ ಸರ್ವೆ ನಂಬರ್ 21:3 ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲು ಚಿತ್ರದುರ್ಗ ಭೂ ಸ್ವಾಧೀನಾಧಿಕಾರಿಗಳನ್ನು ಕೋರಲಾಗಿದೆ. ಭೂಸ್ವಾಧೀನಪಡಿಸಿಕೊಂಡ ನಂತರ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಹೌದು ಎಂದು ಉತ್ತರ ಕೊಡುತ್ತಾ ಈಗ ಭೂಸ್ವಾಧೀನಪಡಿಸಿಕೊಂಡ ನಂತರ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಹೀಗೆ ಕ್ರಮ ತೆಗೆದುಕೊಳ್ಳುವುದು ಅಂದರೆ ಏನು ಮತ್ತು ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಮತ್ತು ಯಾವಾಗ ಅದನ್ನು ಕಟ್ಟುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕ್ರಮ ಅಂದರೆ ಅದಕ್ಕೆ ಭೂಸ್ವಾಧೀನ ಆಗಬೇಕಾಗುತ್ತದೆ. ಅದಕ್ಕೆ ಈಗಾಗಲೇ ನಾವು ಕೋರಿಕೆಯನ್ನು ಸಲ್ಲಿಸಿದ್ದೇವೆ. ಸೋಮೇನಹಳ್ಳಿ ಸರ್ವೆ ನಂಬರ್ 21:3ರಲ್ಲಿ ಕೋರಿಕೆ ಸಲ್ಲಿಸಿ ಆಗಿದೆ. ಒಂದು ಲಕ್ಷದ 20 ಸಾವಿರ ರೂಪಾಯಿ ಅದಕ್ಕೆ ಬೇಕಾಗಿದ್ದು ಅದನ್ನು ನಾವು ತಕ್ಷಣ ಪಾವತಿ ಮಾಡುತ್ತಿದ್ದೇವೆ. ಜಾಗ ಸಿಕ್ಕಿದ ಕೂಡಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ತಾವು ಜಮೀನನ್ನು ಸ್ವಾಧೀನಕ್ಕೆ ಕೊಡಿಸಿದರೆ ಎಸ್ಟಿಮೇಟ್ ಪ್ಲಾನ್ ಇತ್ಯಾದಿಗಳನ್ನು ತಯಾರು ಮಾಡಿ ಕೆಲಸ ಪ್ರಾರಂಭ ಮಾಡುತ್ತೇವೆ.

ಸಾರಿಗೆ ತರಬೇತಿ ಕೇಂದ್ರ ಒಂದನ್ನು ದಾವಣಗೆರೆ ನಗರಕ್ಕೆ ಮಂಜೂರು ಮಾಡುವ ಬಗ್ಗೆ.

1719. ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರಿಗೆ ಸಂಸ್ಥೆ ಸೇವಾ ಸುಧಾರಣೆ ಅಂಗವಾಗಿ ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಆರು ಚಾಲಕ ನಿರ್ವಾಹಕ ತರಬೇತಿ ಕೇಂದ್ರಗಳಲ್ಲಿ ಒಂದನ್ನು ದಾವಣಗೆರೆ ನಗರಕ್ಕೆ ಮಂಜೂರು ಮಾಡಲು ಸಾಧ್ಯವೇ ?

ಆ) ಇಂತಹ ವಿಷಯಗಳನ್ನು ಸರ್ಕಾರವು ಪ್ರಕಟಿಸುವ ಮೊದಲು ಸದನದಲ್ಲಿ ಮಂಡಿಸಿ ಸದಸ್ಯರ ಅಭಿಪ್ರಾಯ ಪಡೆಯುವ ಸಂಪ್ರದಾಯ ಪಾಲಿಸಿದರೆ ಉಚಿತವಲ್ಲವೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಸಧ್ಯಕ್ಕೆ ಸಾಧ್ಯವಿಲ್ಲ.

ಆ) ಇದು ಸದನದಲ್ಲಿ ಮಂಡಿಸುವಂತಹ ವಿಷಯವಲ್ಲ.

ವೈ.ಎಂ. ವೀರಣ್ಣ : ಮಾನ್ಯ ಅಧ್ಯಕ್ಷರೇ. ದಾವಣಗೆರೆಯಲ್ಲಿ ಇತ್ತೀಚಿನ ದಿನಗಳಲ್ಲಿ ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅಲ್ಲಿ ಎಲ್ಲಾ ರೀತಿಯ ವಾಹನಗಳು ಜಾಸ್ತಿಯಾಗಿದ್ದು ಅಲ್ಲಿ ನಡೆಯತಕ್ಕಂಥ ಕೈಗಾರಿಕೋದ್ಯಮವು ಸ್ಥಗಿತವಾಗಿದ್ದು, ಅನೇಕ ಜನರು ನಿರುದ್ಯೋಗಿಗಳಾಗಿದ್ದಾರೆ. ಇಂಥ ಸಂದರ್ಭದಲ್ಲಿ ಮಾನ್ಯ ಸಚಿವರು ದಾವಣಗೆರೆಯಲ್ಲಿ ಚಾಲಕ ನಿರ್ವಾಹಕರ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಿದರೆ ಅದರಿಂದ ಬಹಳ ಒಳ್ಳೆಯದಾಗುತ್ತದೆ. ಆ ಭಾಗದಲ್ಲಿ ಉತ್ತಮ ಕರ್ತವ್ಯ ನಿರ್ವಹಿಸತಕ್ಕಂಥ ಚಾಲಕರನ್ನು ಮತ್ತು ನಿರ್ವಾಹಕರನ್ನು ತಯಾರು ಮಾಡಲು ಸಾಧ್ಯವಾಗುತ್ತದೆ. ನಮ್ಮ ಅನುಕೂಲಕ್ಕಾಗಿ ಮಾನ್ಯ ಸಾರಿಗೆ ಸಚಿವರು ವಿಭಾಗೀಯ ಕಚೇರಿಯನ್ನು ಸ್ಥಾಪನೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಈ ತರಬೇತಿ ಕೇಂದ್ರವನ್ನು ಕೂಡ ನಮ್ಮ ಭಾಗದಲ್ಲಿ ಸ್ಥಾಪನೆ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೇ, ಕೆಎಸ್ಆರ್‌ಟಿಸಿ ಆಡಳಿತದ ಸುಧಾರಣೆ ಬಗ್ಗೆ ಹೇಳಬೇಕಾದರೆ, ಎಲ್ಲೆಲ್ಲಿ ಏನೇನು ಮಾಡಬೇಕಾಗುತ್ತದೋ, ಅದನ್ನು according to their needs and requirements ಮಾಡಬೇಕೇ ಹೊರತು ರಾಜಕೀಯವಾಗಿ ಯಾವುದನ್ನೂ ಮಾಡುವುದಕ್ಕೆ ಬರುವುದಿಲ್ಲ. ನಮ್ಮಲ್ಲಿ ಬರೇ ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ಗೆ ಮಾತ್ರ ಟ್ರೈನಿಂಗ್ ಕೊಡುವುದಿಲ್ಲ, ಬೇರೆ ಟ್ರೈನಿಂಗ್‌ಗಳು ಕೂಡ ಇವೆ. ಈ ಎಲ್ಲಾ ಅಂಶಗಳನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ. Considering these aspects, the Board at its meeting held on 18-12-91 decided to establish six regional institutes in each region at Kolar, Kengeri, Hassan, Hubli. Humnabad and Bagalkot and a Central Training Institute at Mysore at a total cost of Rs. 6.46 crores. The places were selected considering their viability and the infrastructure facilities available like land, nationalised area etc. Since imparting training was one of the service conditions envisaged in Regulation No. 12 of the KSRTC C&R Regulations which has been approved by the Karnataka Government. The Board of the Corporation is a competent authority to take a decision for the establishment of training institutes to provide for its employees suitable conditions of service as per Section 19(1) of the Road Transport Corporation Act of 1950.

ಬಾಡಿಗೆ ನಿಯಂತ್ರಣ ಕಾಯ್ದೆಯಿಂದ ವಕ್ಫ್ ಆಸ್ತಿಗಳಿಗೆ ವಿನಾಯಿತಿ ನೀಡುವ ಬಗ್ಗೆ.

1781. ಶ್ರೀ ಎ.ಎಂ. ಹಿಂಡಸಗೇರ (ಹುಬ್ಬಳ್ಳಿ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಕರ್ನಾಟಕ ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳಿಗೆ ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ ಇಂದ ವಿನಾಯ್ತಿ ಕೊಡುವ ಬಗ್ಗೆ ಪ್ರಸ್ತಾವನೆ ಇದೆಯೇ ?

ಬಿ) ಇಂತಹ ವ್ಯವಸ್ಥೆಯನ್ನು ಬೇರೆ ರಾಜ್ಯಗಳಲ್ಲಿ ಮಾಡಲಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಸಿ) ಬೇರೆ ರಾಜ್ಯಗಳಲ್ಲಿರುವಂತೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಎ) ಹೌದು.

ಬಿ) ಹೌದು. ಕೆಲವು ರಾಜ್ಯಗಳಲ್ಲಿ.

ಸಿ) ಕಂದಾಯ ಇಲಾಖೆಗೆ ವಕ್ಫ್ ಇಲಾಖೆಯು ವಕ್ಫ್ ಆಸ್ತಿಗಳನ್ನು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಯಿಂದ ವಿನಾಯ್ತಿ ನೀಡಲು ಕೋರಿದೆ.

2.45 ಪಿ.ಎಂ.

ಶ್ರೀ ಅಜೀಜ್ ಸೇಠ್ : ಈ ರೆಂಟ್ ಕಂಟ್ರೋಲ್ ಆ್ಯಕ್ಟ್ ಅಮೆಂಡ್ಮೆಂಟ್‌ನಲ್ಲಿ ಆಗಲೇ ವಕ್ಫ್ ಬೋರ್ಡ್‌ ಆಸ್ತಿಗಳಿಗೆ ರೆಂಟ್ ಕಂಟ್ರೋಲ್ ಆ್ಯಕ್ಟ್ ಪರ್ವ್ಯೂನಿಂದ ವಿನಾಯಿತಿ ಕೊಟ್ಟಿದ್ದಾರೆ. Wakf Board is not a wakf; It is an Administrative body. ನಾವು ಈಗಲೇ ರೆವಿನ್ಯೂ ಮಿನಿಸ್ಟರ್‌ಗೆ Wakf Institutions to be exempted from the purview of the Rent Control Act ಅಂತ ಸೂಚನೆ ಕಳುಹಿಸಿದ್ದೇವೆ. ಮತ್ತೆ ಇವತ್ತೂ ಸಹ ಕಂದಾಯ ಸಚಿವರ ಹತ್ತಿರ ಮಾತನಾಡಿದ್ದೇನೆ. ಈ ತಿದ್ದುಪಡಿಯಲ್ಲಿ ಇದನ್ನು ಸೇರಿಸುತ್ತಾರೆ ಅಂತ ನನಗೆ ನಂಬಿಕೆ ಇದೆ.

ಶ್ರೀ ಎ.ಎಂ. ಹಿಂಡಸಗೇರಿ : ವಕ್ಫ್ ಪ್ರಾಪರ್ಟೀಸ್ ರೆಂಟ್ ಕಂಟ್ರೋಲ್ ಆ್ಯಕ್ಟ್‌ನಲ್ಲಿ ಬರುತ್ತದೆ. ಈ ರೆವಿನ್ಯೂ ಕೋಡ್‌ನಲ್ಲಾಗಲೀ, ಜ್ಯುಡಿಷಿಯರಿಯಲ್ಲಾಗಲೀ ಈ ಪ್ರಾಪರ್ಟೀಸ್ ಬಗ್ಗೆ ನಮಗೆ ಬಹಳ ತೊಂದರೆಯಾಗುತ್ತಿದೆ. ಎವಿಕ್ಟ್ ಮಾಡುವ ಸಲುವಾಗಿ ಅಥವಾ ನಮ್ಮ ಹಕ್ಕು ಬಾಧ್ಯತೆ ಸಲುವಾಗಿ ಇದು ಬಹಳ ಹಳೇ ಪ್ರಾಬ್ಲಮ್ ಆಗಿದೆ. ಇದನ್ನು ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆಂದು ಹೇಳುತ್ತಾರೆ. ತಮಗೆ ನಾನು ಹೇಳಬೇಕೆಂದರೆ ಉತ್ತರ ಪ್ರದೇಶದಲ್ಲಿ ನಾನ್-ಕಾಂಗ್ರೆಸ್ ಗೌವರ್ನಮೆಂಟ್ ಇದೆ. ಅಲ್ಲಿ ಮಾಡಿದ್ದರೂ ಇಲ್ಲಿ ಕಾಂಗ್ರೆಸ್ ಗೌವರ್ನಮೆಂಟ್ ಇದ್ದರೂ ಮಾಡಿಲ್ಲ. ನಾವು ನಮ್ಮ ಮ್ಯಾನಿಫೆಸ್ಟೋದಲ್ಲಿ ಸಾಕಷ್ಟು ಮೈನಾರಿಟೀಸ್ ಬಗ್ಗೆ ಹೇಳುತ್ತೇವೆ. ಆದರೆ, ಕಿಂಚಿತ್ತೂ ಸಹಾಯ ಮಾಡಲು ತಯಾರಿಲ್ಲ. ಆದ್ದರಿಂದ, ಮಾನ್ಯ ಸಚಿವರು ಇದು ಎಷ್ಟು ದಿವಸದಲ್ಲಿ ಆಗುತ್ತದೆಂದು ತಿಳಿಸಬೇಕು.

SRI AZIZ SAIT : There is no two opinion as far as the exemption of Rent Control Act for wakf institutions. As I told you, there were some mis-understanding. While exempting the wakf institutions, earlier the Government has used the word "Wakf Board". The property which directly comes under the supervision of wakf board have been exempted from the purview of the Rent Control Act. Now our efforts are to amend that word and give exemption to the wakf institutions. I assure, the Hon. Member that I am also as eager as my

colleague is concerned, and I am sure that this will come through in the recent amendment of the Rent Control Act.

ಅನುಮೋದನೆಯಿಲ್ಲದೆ ಶಾಲೆಗೆ ವೇತನ ಅನುದಾನ ಬಿಡುಗಡೆ ಮಾಡುವ ಬಗ್ಗೆ

1801. ಶ್ರೀ ಕುಮರುಲ್ ಇಸ್ಲಾಮ್. (ಗುಲ್ಬರ್ಗ). ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ). ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) . ಶ್ರೀ ಬೈರೇಗೌಡ (ವೇಮಗಲ್) : ಮಾನ್ಯ ಶಿಕ್ಷಣ ಸಂಸದೀಯ ವ್ಯವಹಾರ ಸಂಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗದ ಗಾಜಿಪುರದಲ್ಲಿರುವ ಶಿಶುಶಿಕ್ಷಣ ಪ್ರಾಥಮಿಕ ಶಾಲೆಗಳು ಅನುದಾನ ರಹಿತ ಶಾಲೆಗಳೆಂಬುದು ಸರ್ಕಾರಕ್ಕೆ ತಿಳಿದಿದೆಯೇ :

ಆ) ಹಾಗಿದ್ದಲ್ಲಿ, ಸರ್ಕಾರದ ಅನುಮತಿ ಇಲ್ಲದೆ ಈ ಶಾಲೆಗೆ ವೇತನಾನುದಾನವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಹಾಗಿದ್ದಲ್ಲಿ. ಇದುವರೆಗೆ ಈ ಶಾಲೆಗೆ ನೀಡಿದ ಮೊತ್ತ :

ಈ) ಗುಲ್ಬರ್ಗ ಜಿಲ್ಲಾ ಪರಿಷತ್ತಿನ ಉಪಕಾರ್ಯದರ್ಶಿ ಮತ್ತು ಗುಲ್ಬರ್ಗ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಮೇಲಿನ ಅಕ್ರಮ ಪಾವತಿ ಸರ್ಕಾರದ ಗಮನಕ್ಕೆ ಬಂದಿರುವುದು ನಿಜವೇ ?

ಉ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮವೇನಾದರೂ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಗಾಜಿಪುರದ ಶಿಶುನಿಕೇತನ ಕನ್ನಡ ಪ್ರಾಥಮಿಕ ಶಾಲೆ ಅನುದಾನಿತ ಶಾಲೆಯಾಗಿದೆ. ಆದರೆ ಮರಾಠ ಮಾಧ್ಯಮದ ಶಾಲೆ ಅನುದಾನಿತ ಶಾಲೆಯಾಗಿಲ್ಲ.

ಆ) ಹೌದು.

ಆ) ರೂ. 53.762-51.

ಇ) ಹೌದು. ಎರಡೂ ಮಾಧ್ಯಮದ ಶಾಲೆಗಳು ಒಂದೇ ಎಂದು ಪರಿಗಣಿಸಿ ಮರಾಠಿ ಮಾಧ್ಯಮದ ಶಾಲಾ ಸಿಬ್ಬಂದಿಗೆ ವೇತನ ಬಿಡುಗಡೆ ಮಾಡಲಾಗಿದೆ.

SRI QUMARUL ISLAM : Sir, this is a very important question I have raised. A very serious offence has been committed by some of the officers. There is one school in my constituency -Shivashiniketan Primary School. That school is not approved and it does not come under the grant-in-aid. Then I put the question whether this school has been given grants and the teachers have received their salary, the reply given is 'Yes'. They are getting the salary from the last eight years. i.e.

Rs. 53,782 so far. They are getting the salary right from the establishment. i.e. from 1980 onwards. That school doesn't come under grant-in-aid and it is not approved, but still the teachers are getting their salary and this fact has been accepted. When I put a further question whether it has been brought to the notice of the Government by the DDPI, Gulbarga and the Deputy Secretary, Zilla Parishad and what action has been taken, the reply given was, both Marathi medium and Kannada medium are running in the same school, and because of this confusion, salary has been paid. Regarding action taken, they have replied that no action has been taken. If such a grave offence has been committed, I would expect that the government will immediately suspend those officers. The money involved here is Rs. 53,000/- and it has been going on for the last eight years. So, I demand through the Chair, that such officers who are involved in this should be immediately suspended and enquiry is to be conducted.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ. 'ಶಿಶುನಿಕೇತನ' ಕನ್ನಡ ಮೀಡಿಯಂ ಪ್ರಾಥಮಿಕ ಶಾಲೆ ಏನು ಇದೆ. ಅದರ ಜೊತೆ ಮರಾಠಿ ಮೀಡಿಯಂ ಶಾಲೆಯನ್ನು ಕೂಡಾ ಸೇರಿಸಿದೆ. ಮರಾಠಿ ಮೀಡಿಯಂ ಶಾಲೆ ನಿಜವಾಗಿಯೂ ಅದು ಅನುದಾನಕ್ಕೆ ಒಳಪಟ್ಟಿರಲಿಲ್ಲ., ಆದರೆ ಅಲ್ಲಿ ಪೇಮೆಂಟ್ ಆಗಿದೆ. ಅನುದಾನಕ್ಕೆ ಒಳಪಡದಿದ್ದರೂ ಅವರಿಗೆ ಅಲ್ಲಿ ಸಂಬಳವನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಕೂಡಲೇ ಆ ಸಂಬಳ ಬಿಡುಗಡೆ ಮಾಡುವಂಥದ್ದನ್ನು ಈಗ ನಿಲ್ಲಿಸಿದ್ದೇವೆ. ಈಗಾಗಲೇ 53.762-51 ರೂಪಾಯಿಗಳನ್ನು ಅದನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದರಲ್ಲಿ ತಪ್ಪಾಗಿದೆ. ಅದಕ್ಕೆ ಯಾವ ಅಧಿಕಾರಿಗಳು ಕಾರಣಕರ್ತರು? ಎಂಬ ಬಗ್ಗೆ ತನಿಖೆ ಮಾಡಬೇಕೆಂದು ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರಿಗೆ ಹೇಳಿದ್ದೇನೆ. ಎರಡು ವಾರದ ಒಳಗೆ ವರದಿಯನ್ನು ತರಿಸಿ ಯಾರು ತಪ್ಪಿತಸ್ಥರು ಇದ್ದರೂ ಕೂಡಾ ಅವರ ಮೇಲೆ ಕಠಿಣವಾದಂಥ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳ ಬಗ್ಗೆ.

1803. ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಪ್ಪುಹಲಗೆ ಕಾರ್ಯಾಚರಣೆ ಯೋಜನೆ ಅನ್ವಯ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳೆಷ್ಟು ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ನೇಮಕಗೊಂಡಿರುವ ಶಾಲಾ ಅಧ್ಯಾಪಕರ ಸಂಖ್ಯೆ ಎಷ್ಟು (ಭಾಷಾವಾರು ವಿವರ ನೀಡುವುದು)?

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ ಶಾಲಾ ಉಪಾಧ್ಯಾಯರ ಸಂಖ್ಯೆ ಎಷ್ಟು (ಭಾಷಾವಾರು ವಿವರ ನೀಡುವುದು)?

ಈ) ಖಾಲಿ ಇರುವ ಉಪಾಧ್ಯಾಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕಪ್ಪುಹಲಗೆ ಯೋಜನೆ ಅನ್ವಯ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 403 ಕೊಠಡಿಗಳನ್ನು ನಿರ್ಮಿಸಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

1.ಮೂಡಿಗೆರೆ	102	1ನೇ ಹಂತ 87-88
2.ಕಡೂರು	145	2ನೇ ಹಂತ 88-89
3.ತರೀಕೆರೆ	48	2ನೇ ಹಂತ 88-89
4.ಚಿಕ್ಕಮಗಳೂರು	78	3ನೇ ಹಂತ 89-90
5.ಕೊಪ್ಪ	80	3ನೇ ಹಂತ 89-90
	403	

4ನೇ ಹಂತದ (90-91) ರಲ್ಲಿ ನರಸಿಂಹರಾಜಪುರ-64 ಹಾಗೂ ಶೃಂಗೇರಿ-55 ತಾಲ್ಲೂಕುಗಳಲ್ಲಿ ಕೊಠಡಿಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರ ಭಾಷಾವಾರು ವಿವರ ಈ ಕೆಳಕಂಡಂತಿದೆ.

ವರ್ಷ	ಕನ್ನಡ	ಉರ್ದು	ತಮಿಳು	ಹಿಂದಿ	ಒಟ್ಟು
1988 (ಯೋಜನೇತರ)	238	08	01	-	247
1989 (ಯೋಜನೇತರ)	123	04	-	-	127
1990 (ಯೋಜನೇತರ)	100	-	-	-	100
1991 (ಯೋಜನೇತರ) (ಫೆಬ್ರವರಿ)	104	-	-	-	104
1991 (ಯೋಜನೇತರ) (ಆಗಸ್ಟ್)	36	08	01	-	45

(ಕಪ್ಪು ಹಲಗೆ ಕಾರ್ಯಾಚರಣೆಯಡಿಯಲ್ಲಿ)

1988-89 ಯೋಜನೆ 1ನೇ ಹಂತ	103	-	-	-	103
1988-90 ಯೋಜನೆ 2ನೇ ಹಂತ	249	-	-	-	249
1989-ಯೋಜನೆ ಕೇಂದ್ರ ಹಿಂದಿ ಶಿಕ್ಷಕರ ಯೋಜನೆ	-	-	-	50	50
	ಒಟ್ಟು				1025

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ 31-12-1991 ರಲ್ಲಿದ್ದಂತೆ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಭಾಷಾವಾರು ವಿವರ ಈ ಕೆಳಕಂಡಂತಿದೆ.

ವಿಷಯ	ಭಾಷೆ	ಶಿಕ್ಷಕರ ಹುದ್ದೆಗಳ ಸಂಖ್ಯೆ.
ಯೋಜನೇತರ	ಕನ್ನಡ	244
ಯೋಜನೇತರ	ಉರ್ದು	27
ಯೋಜನೇತರ	ತಮಿಳು	29
ಯೋಜನೇತರ	ಹಿಂದಿ	03
ಯೋಜನೇತರ	ಸಂಸ್ಕೃತ	01
ಯೋಜನೇತರ	ದೈಹಿಕ ಶಿಕ್ಷಕರು	11
ಯೋಜನೇತರ	ವೃತ್ತಿ ಶಿಕ್ಷಕರು	05
ಯೋಜನೇತರ	ಸಂಗೀತ	09
		309

ಇದಲ್ಲದೆ ಕಪ್ಪುಹಲಗೆ ಕಾರ್ಯಾಚರಣೆ ಯೋಜನೆಯಲ್ಲಿ ಮೂರು ಮತ್ತು 4ನೇ ಹಂತದಲ್ಲಿ (207+88) ಒಟ್ಟು 295 ಅಧಿಕ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು ಭರ್ತಿ ಆಗಬೇಕಾಗಿವೆ.

ಈ) 1. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯವನ್ನು ಸಡಿಲಿಸಲಾಗಿದೆ.

2. ಶಿಕ್ಷಕರ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗುತ್ತಿದೆ.

3. ನಂತರ ಖಾಲಿ ಇರುವ ಹುದ್ದೆಗಳ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಆಪರೇಷನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ಈಗ ನಮ್ಮಲ್ಲಿ ಸಾಕಷ್ಟು ಕೊಠಡಿಗಳು ಆಗಿರತಕ್ಕಂಥದ್ದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಅವರು ಇದರ ಹಿಂದೆ ಬಂದಂಥ ಒಂದು ಪ್ರಶ್ನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ 604 ಹುದ್ದೆಗಳು ಇನ್ನೂ ಖಾಲಿ ಇವೆ. ನಮ್ಮ ಜಿಲ್ಲೆಯಲ್ಲಿ ಎರಡು ಭಾಗ ಇದೆ. ಒಂದು ಬಯಲು ಸೀಮೆ, ಮತ್ತೊಂದು ಮಲೆನಾಡು ಸೀಮೆ ಎಂದು. ಮಲೆನಾಡು ಭಾಗದ ಅನೇಕ ಕಡೆಗಳಲ್ಲಿ ಆಪರೇಷನ್ ಬ್ಲಾಕ್ ಬೋರ್ಡ್ ಯೋಜನೆ ಕೆಳಗೆ ಕೊಠಡಿಗಳು ನಿರ್ಮಾಣವಾಗಿವೆ. ಆದರೆ ಶಿಕ್ಷಕರ ಒಂದು ಕೊರತೆಯಿಂದ ಅಲ್ಲಿ ಶಿಕ್ಷಕರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಸ್ಕ್ಯಾಟರ್ಡ್ ಪಾಪ್ಯುಲೇಷನ್ ಎನ್ನುತ್ತಾರಲ್ಲಾ, ಆ ರೀತಿ ಮಲೆನಾಡು ಭಾಗಗಳಲ್ಲಿ ಆಗುತ್ತದೆ. ಕೊಠಡಿಗಳು ಇದ್ದು ವಿದ್ಯಾರ್ಥಿಗಳು ಶಾಲೆಗೆ ಬಂದರೂ ಸಹಾ ಶಿಕ್ಷಕರ ಒಂದು ಕೊರತೆ ಇದೆ. ಆದುದರಿಂದ ಈ ಮಲೆನಾಡು ಭಾಗಗಳಲ್ಲಿ ಇಂಥ ಒಂದು ಶಾಲೆಗಳಿಗೆ ಶಿಕ್ಷಕರ ಒಂದು ನೇಮಕಾತಿ ಮಾಡುವ ಬಗ್ಗೆ ನಾವು ಅನೇಕ ಬಾರಿ ನಾನು ತಾಲ್ಲೂಕು ಸಮಿತಿಯ ಒಬ್ಬ ಅಧ್ಯಕ್ಷನಾಗಿ, ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ಅನೇಕ ನಿರ್ಣಯವನ್ನು ಮಾಡಿದರೂ ಸಹಾ ಈ ಆಪರೇಷನ್ ಬ್ಲಾಕ್ ಬೋರ್ಡಿನ ಶಾಲೆಗಳಿಗೆ ಶಿಕ್ಷಕರ ನೇಮಕಾತಿಯಾಗಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈ ಶಾಲೆಗಳಿಗೆ ತುರ್ತಾಗಿ ಏನಾದರೂ ಶಿಕ್ಷಕರನ್ನು ನೇಮಕ ಮಾಡಿಕೊಡುತ್ತಾರೆಯೇ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ಶಿಕ್ಷಕರ ನೇಮಕಾತಿಯ ಬಗ್ಗೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅದರ ಪ್ರಕಾರ ನಮ್ಮಲ್ಲಿ ಏನು 31.5.91ರ ಹೊತ್ತಿಗೆ 489 ಶಿಕ್ಷಕರ ಹುದ್ದೆಯನ್ನು ತುಂಬಬೇಕಾಗಿದೆ. ಅದನ್ನು ತುಂಬುವುದಕ್ಕೆ ಈಗಾಗಲೇ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಎರಡು ತಿಂಗಳ ಒಳಗಡೆ ಮಾಡುತ್ತೇವೆ. ಅಂದರೆ ಜೂನ್‌ನಲ್ಲಿ ಶಾಲೆ ಪ್ರಾರಂಭವಾಗುವ ಮೊದಲು ಖಾಲಿ ಹುದ್ದೆಗಳನ್ನು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ನಾನು ತುಂಬುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಲ್ಪಸಂಖ್ಯಾತರ ಒಂದು ಶಾಲೆಗಳಲ್ಲಿ 27 ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಕೇವಲ 15 ಜನ ವಿದ್ಯಾರ್ಥಿಗಳು ಇದ್ದ ಪಕ್ಷದಲ್ಲಿ ಅಲ್ಲಿ ಶಿಕ್ಷಕರನ್ನು ನೇಮಿಸಬೇಕೆಂದು ಸರ್ಕಾರಿ ಆದೇಶವೇ ಇದೆ. ಆದರೂ ಸಹ ಇವತ್ತು ನಾವು ನೋಡಿದಹಾಗೆ ಅಲ್ಪಸಂಖ್ಯಾತರ ಉರ್ದು ಪಾಠಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಿಕೊಡಬೇಕಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

Appointment of Public Prosecutors

1808. SRI SADATH ALI KHAN (Channapatna) : Will the Minister for Law be pleased to state:-

a) the total number of Public Prosecutors appointed by Government in Civil and Criminal Courts (Districtwise information be furnished ;

b) The number of Public Prosecutors belonging to SC/ST, Muslims and Christians;

c) The criteria of selection of candidates for appointment as Public Prosecutors;

d) Whether Government is aware that the representation of persons belonging to SC/ST, Muslims and Christians is very poor when compared to other communities;

e) If so, the reasons and the steps taken by the Government to give proper representation to these Communities?

SRI BLASIUS M. D'SOUZA (Minister for Law) :

a) 42 Public Prosecutors are appointed in Sessions Courts (details as in statement enclosed). No Public Prosecutors are appointed in Civil Courts. 12 Public Prosecutors are working as Deputy Director of Prosecutions and Legal Advisors.

b)

SC	ST	Muslims	Christiams
2	Nil	4	1

c) 1) By promotion by Seniority-cum-merit from the Cadre of Senior Assistant Public Prosecutors/Assistant Directors of Prosecutions who have put in not less than 5 years of service in that Cadre.

2) If no suitable candidate is available for promotion, by appointing a person from the panel of names prepared by the District Magistrate under sub-section (4) of Sec. 24 of the Code of Criminal Procedure, 1973.

d) Yes.

e) The posts of Public Prosecutors are filled by promotion and no reservation is provided for these posts.

Details of Public Prosecutors appointed in Districts.

	Name of the District	No. of Public Prosecutors appointed
1.	Bangalore City	7
2.	Bangalore Rural	2
3.	Kolar	2
4.	Tumkur	2
5.	Mysore	3
6.	Mandya	1
7.	Hassan	1
8.	Kodagu	1
9.	Dakshina Kannada	2
10.	Uttara Kannada	1
11.	Chitradurga	2
12.	Bellary	1
13.	Shimoga	2
14.	Belgaum	4
15.	Dharwad	3
16.	Bijapur	2
17.	Gulbarga	2
18.	Raichur	2
19.	Bidar	1
20.	Chickmagalur	1
		42

ಶ್ರೀ ಸಾದತ್ ಅಲಿ ಖಾನ್ : ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. the total number of public prosecutors appointed by the Government in Civil and Criminal Courts (districtwise information be furnished) ಎಂದು ಕೇಳಿದ್ದಕ್ಕೆ ಒಟ್ಟು 42 ಅಂತ ಕೊಟ್ಟಿದ್ದಾರೆ. ಇದರಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ 2, ಶೆಡ್ಯೂಲ್ಡ್ ಟ್ರೈಬ್ಸ್‌ಗೆ ಇಲ್ಲ. ಮುಸ್ಲಿಮ್ಸ್‌ಗೆ 4, ಕ್ರಿಶ್ಚಿಯನ್ಸ್‌ಗೆ ಒಂದು. ಹೀಗೆ ಒಟ್ಟು 7 ಜನರಿಗೆ ಕೊಟ್ಟಿದ್ದಾರೆ. ಮತ್ತು 35 ಹುದ್ದೆಗಳು ಬೇರೆಬೇರೆ ಜಾತಿಯವರಿಗೆ ಹೋಗಿದೆ. to my another question, whether Government in aware that the representation of persons belong to SC, ST, Muslims and Christians is very poor when compared to other communities, the Hon'ble Minister has admitted by replying "Yes". So, what action the Government is going to take to fill up the posts in the forthcoming recruitment? ಶೇಕಡ 18 ರಷ್ಟು ಹುದ್ದೆಗಳನ್ನು ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಡಬೇಕು. ಮುಸ್ಲಿಂ ಜನಾಂಗದವರಿಗೆ ಶೇಕಡ 16 ರಷ್ಟು ಕೊಡಬೇಕು. ಆದರೆ ಇಲ್ಲಿ ಏತಕ್ಕೆ ಕಡಿಮೆ ಕೊಟ್ಟಿದ್ದೀರಿ?

SRI BLASIUS M. D'SOUZA : Sir, the promotion is done from the Senior Asst. Public Prosecutors to Public Prosecutors. Regarding Scheduled Castes, we have already in the year 1991 filled up 13 vacancies of the Asst. Public Prosecutors and again we are going to notify shortly 17 vacancies for Scheduled Castes and Scheduled Tribes so that this backlog may be filled up.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಸದಸ್ಯರು ಕೇಳತಕ್ಕಂಥ ಪ್ರಶ್ನೆಗೆ ನೇರವಾದಂತಹ ಉತ್ತರ ಬರಲಿಲ್ಲ. ಏಕೆಂದರೆ ಹರಿಜನ ಗಿರಿಜನ ಮತ್ತು ಮುಸ್ಲಿಂ ಹಾಗೂ ಕ್ರಿಶ್ಚಿಯನ್ಸ್‌ಗೆ ಬರತಕ್ಕ ಕೋಟಾ ಬರಲಿಲ್ಲ ಅಂತ ಅವರು ಕೇಳುತ್ತಿದ್ದಾರೆ. ತಾವು ಬ್ಯಾಕ್‌ಲಾಗ್ ವೇಕೆನ್ಸಿಯನ್ನು ಫಿಲ್‌ಅಪ್ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಆದರೆ ಎಷ್ಟು ದಿವಸದಲ್ಲಿ ಮಾಡುತ್ತೀರಿ? ಅವರಿಗೆ ನಿಜವಾಗಿಯೂ ಅನ್ಯಾಯವಾಗಿದೆ. ಹರಿಜನ ಗಿರಿಜನರಿಗೆ ಸಿಗತಕ್ಕಂಥದ್ದು ಸಿಕ್ಕಲ್ಲ. ಎಷ್ಟು ಪರ್ಸೆಂಟೇಜ್ ಕೊಡಬೇಕು ಅಷ್ಟು ಪರ್ಸೆಂಟೇಜ್ ಅನ್ನು ಕೊಡುತ್ತಿಲ್ಲ. ಅದನ್ನು ತಾವು ಎಷ್ಟು ದಿವಸದಲ್ಲಿ ಮಾಡಿಕೊಡುತ್ತೀರಾ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಪಬ್ಲಿಕ್ ಪ್ರಾಸಿಕ್ಯೂಟರ್ ಆಗಬೇಕಾದರೆ ಎ.ಪಿ.ಪಿ. ಯಿಂದ ಅವರಿಗೆ ಪ್ರಮೋಷನ್ ಮಾಡಬೇಕಾಗುತ್ತದೆ. ಎ.ಪಿ.ಪಿ. ಯಲ್ಲಿ ನಾವು ಆದಷ್ಟೂ ಪ್ರಾತಿನಿಧ್ಯವನ್ನು ಎಸ್‌ಸಿ/ಎಸ್‌ಟಿ ಯವರಿಗೆ ಕೊಡುತ್ತೇವೆ. ನಾನು ಮೊದಲೇ ಹೇಳಿದ ಹಾಗೆ ಈ ಸಾಲಿನಲ್ಲಿ 13 ವೇಕೆನ್ಸಿಯನ್ನು ಭರ್ತಿ ಮಾಡಿದ್ದೇವೆ. ಇನ್ನೂ 17 ವೇಕೆನ್ಸಿಗೆ ಈಗತಾನೆ ನೋಟಿಫಿಕೇಷನ್ ಮಾಡಿದ್ದೇವೆ. ಅದನ್ನು ಸಹ ಭರ್ತಿ ಮಾಡುತ್ತೇವೆ. ಎ.ಪಿ.ಪಿ. ನಲ್ಲಿ ಸರಿಯಾದ ಪ್ರಮೋಷನ್ ಇಟ್ಟರೆ ಅದೇ ಪ್ರಕಾರ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ಸೀನಿಯಾರಿಟಿ-ಕಂ-ಮೆರಿಟ್ ಮೇಲೆ ನಾವು ಅವರನ್ನು ಸೆಲೆಕ್ಷನ್ ಮಾಡುತ್ತೇವೆ. ಇನ್ನು ಮುಂದೆ ಆಗುವ ಸೆಲೆಕ್ಷನ್‌ನಲ್ಲಿ ಅವರಿಗೆ ಸರಿಯಾದ ಪ್ರಾತಿನಿಧ್ಯ ಸಿಗುತ್ತದೆ. ಮುಸ್ಲಿಂನವರು "ಸಿ" ಗ್ರೂಪ್ ಕ್ಯಾಟಗರಿಯಲ್ಲಿ ಬರುತ್ತಾರೆ. ಶೇಕಡ 16 ರಷ್ಟು ಹುದ್ದೆಗಳನ್ನು ಅವರಿಗೆ ಮೀಸಲಿಟ್ಟಿದ್ದೇವೆ. ಈ ಶೇಕಡ 16 ರಲ್ಲಿ ಬೇರೆ ಕಮ್ಯುನಿಟಿಯವರಿದ್ದರೆ ಆದರೊಳಗೆ ಮುಸ್ಲಿಂ ಜನಾಂಗದವರು ಸಹ ಬರುತ್ತಾರೆ. ಕ್ರಿಶ್ಚಿಯನ್ ಜನಾಂಗದ ಕುಟುಂಬದ ವಾರ್ಷಿಕ ಆದಾಯ 8 ಸಾವಿರಕ್ಕಿಂತ ಕಡಿಮೆ ಇದ್ದರೆ ಅವರಿಗೆ ಸ್ಪೆಷಲ್ ಕ್ಯಾಟಗರಿಯಲ್ಲಿ ಶೇಕಡ 5 ರಷ್ಟು ವೇಕೆನ್ಸಿಗಳನ್ನು ಮೀಸಲಿಡಲಾಗಿದೆ. ಒಂದು ವೇಳೆ ಬ್ಯಾಕ್‌ವರ್ಡ್ ಸ್ಪೆಷಲ್ ಗ್ರೂಪ್‌ನಲ್ಲಿ ಬಂದರೆ ಅವರಿಗೂ ಸಹ ನಾವು ನೇಮಕಾತಿಯನ್ನು ಮಾಡುತ್ತೇವೆ.

(SRI G.S. SHIVANANJAPPA in the Chair)

SRI QUMURAL ISLAM : One clarification. The Hon'ble Minister replied that while appointing Assistant Public Prosecutors, the Senior Advocates were not available among Muslims. That means, actually you have appointed Asst. Public Prosecutors from among Senior Advocates. I want to know whether senior advocates are available among Muslims, SC and ST, and other Backward Classes? Actually they are available. Therefore, injustice has been done to them. Now you have agreed that proportionate and adequate representation to be given as it is fixed. Will the Government take steps to fillup those posts and remove injustice done previously by giving them the backlog posts also?

SRI BLASIUS M. D'SOUZA : Earlier the Public Prosecutors were selected from the Bar. We used to get names from the District Magistrates and we used to select the Public Prosecutors from the Bar. Now, it is from the cadre. It is from the Assistant Public Prosecutors. We are selecting and it is not from the Bar. Whatever the Senior Assistant Public Prosecutors are there, they have been selected as per merit-cum-service.

SRI SADATH ALI KHAN : I want an assurance from the Minister to the effect that the backlog will be filled up.

SRI BLASIUS M. D'SOUZA : It is the policy of the Government to give representation to all communities and as far as possible, if we are able to do it, we are definitely going to fill up the backlog.

ಛೇರ್ಮನ್ : ಪ್ರಶ್ನೆ ಸಂಖ್ಯೆ 339 (1991) ನ್ನು ತಡೆಹಿಡಿಯಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಎಣ್ಣೆಯ ಕಲಬೆರಕೆ ಬಗ್ಗೆ ನಾನು ಯಾವುದೇ ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರ ಬರುವುದಿಲ್ಲವೆಂದು ನನಗೆ ಗೊತ್ತು. ಈಗಾಗಲೇ ಈ ನನ್ನ ಪ್ರಶ್ನೆ ಹೆಲ್ಡ್ ಓವರ್ ಆಗಿದೆ. ಮತ್ತೆ ಹೆಲ್ಡ್ ಓವರ್ ಆಗುವುದು ಬೇಡ.

SRI AZIZ SAIT : He was very much present here. He has to go to the other House.

ಶ್ರೀ ಟಿ.ಬಿ. ಜಯಚಂದ್ರ : ಮುಂದಿನ ಯಾವ ದಿನಾಂಕಕ್ಕೆ ಈ ಪ್ರಶ್ನೆ ಹಾಕುತ್ತೀರಿ ?

ಛೇರ್ಮನ್ : ಮುಂದಿನ ವಾರದಲ್ಲಿ ನಿಮ್ಮ ಪ್ರಶ್ನೆಯನ್ನು ಹಾಕುತ್ತೇನೆ.

ಶ್ರೀ ಬಾಬುರಾವ್ ಚವಾಣ್ : ಅಧ್ಯಕ್ಷರೇ, ಸುಮಾರು ಒಂದು ವಾರದಿಂದ ನಮ್ಮ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಬರುತ್ತಿಲ್ಲ.

ಛೇರ್ಮನ್ : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ.

1785. ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಲೋಪದೋಷಗಳು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ಕಿಬ್ಬನಹಳ್ಳಿಯಲ್ಲಿ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಮತ್ತು ಅನ್ತರಸನಹಳ್ಳಿ ರಿಸೀವಿಂಗ್ ಸ್ಟೇಷನ್ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಯೇನು?

ಇ) ಚಿಕ್ಕನಾಯಕನಹಳ್ಳಿ. ಗುಬ್ಬಿ ತಾಲ್ಲೂಕು ವಿದ್ಯುತ್ ಸ್ಟೇಷನ್‌ದಲ್ಲಿ ಬರುತ್ತಿರುವ ಹಾಗೂ ಅಲ್ಲಿಂದ ಬಿಡುಗಡೆಯಾಗುತ್ತಿರುವ ವಿದ್ಯುತ್ ಸ್ವಾಮ್ಯ ವೋಲ್ಟೇಜ್ ಎಷ್ಟು?

ಈ) ನೀರಾವರಿ ಪಂಪುಸೆಟ್ಟುಗಳಿಗೆ ಬೇಕಾಗುವ ವಿದ್ಯುತ್ ಪ್ರಮಾಣವೆಷ್ಟು ; ಹಾಗೂ ಈಗ ಸರಬರಾಜಾಗುತ್ತಿರುವ ಪ್ರಮಾಣವೆಷ್ಟು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು.

ಆ) ಕಿಬ್ಬನಹಳ್ಳಿಯಲ್ಲಿನ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಮತ್ತು ಅಂತರಸನಹಳ್ಳಿಯಲ್ಲಿನ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಕೆಲಸಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಈಗಾಗಲೇ ಕೈಕೊಂಡಿದೆ.

ಇ) ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ 110 ಕೆ.ವಿ.

ಹೊರ ಹೋಗುತ್ತಿರುವ ವಿದ್ಯುತ್ ವೋಲ್ಟೇಜ್ 11 ಕೆ.ವಿ.

ಈ) ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಗೆ ಯಾವ ಮಿತಿಯನ್ನು ವಿಧಿಸಿಲ್ಲ ಅಲ್ಲದೇ 10 ಹೆಚ್.ಪಿ. ವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಮಾಪಕಗಳನ್ನು ಅಳವಡಿಸುತ್ತಿಲ್ಲ. ಆದುದರಿಂದ ಬೇಕಾಗುವ ವಿದ್ಯುತ್ ಪ್ರಮಾಣ, ಹಾಲಿ ರಾಜ್ಯದ ಒಟ್ಟು ವಿದ್ಯುತ್ ಪ್ರಮಾಣದ ಶೇಕಡ 37 ರಷ್ಟಿದೆಯೆಂದು ಅಂದಾಜು ಮಾಡಿದೆ.

Filling up of vacancies of Judges in the State

1953. SRI R.V. DESHPANDE (Haliyal) : Will the Hon'ble Minister for Law be pleased to state ?

1. No. of vacant posts of Civil Judges, Munsiffs, Chief Judicial Magistrates and Judicial Magistrate First Class in the State (Districtwise information to be furnished);
2. Since how long they are vacant ;
3. Whether it has come to the notice of the Government that due to non filling up of these vacant posts in time the disposal of cases of litigant public is considerably delayed;
4. If so, what are the steps taken by the Government to fill up the above vacant posts ?

SRI BLASIUS M. D'SOUZA (Minister for Law) :

1.	No. of vacant posts of Civil Judge and C.J.M.	Nil
2.	No. of vacant posts of Munsiffs and Judicial Magistrate First Class.	27+ 14 Leave Reserve

District-wise break up of vacancies

1.	Metropolitan Area, Bangalore	3
2.	Bangalore Rural District	1
3.	Belgaum District	2
4.	Chickmagalur District	1
5.	Chitradurga District	1
6.	Dharwad District	2
7.	Dakshina Kannada, Mangalore	4
8.	Kodagu, Madikeri	2
9.	Uttara Kannada, Karwar	2
10.	Kolar District	1

11.	Mandya District	1
12.	Mysore District	2
13.	Raichur District	2
14.	Tumkur District	2
15.	Gulbarga District	1
		27
16.	+ 14 Munsiffs (Leave Reserve, High Court, Bangalore)	14
	Total	41

2. The posts of Munsiffs are vacant ranging from 16 days to 3 years.
3. Yes.
4. Action will be taken to fill up the vacant posts of Munsiffs.

ತುಮಕೂರಿನಲ್ಲಿ 40 ಮೆ. ವ್ಯಾಟ್ಸ್‌ನ ಡೀಸಲ್ ಉತ್ಪಾದನಾ ಕೇಂದ್ರದ ಸ್ಥಾಪನೆ ಬಗ್ಗೆ.

1796. ಶ್ರೀ ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರಿನಲ್ಲಿ ವಿದ್ಯುತ್ ಸರಬರಾಜಿನ ವೋಲ್ಟೇಜ್‌ನ್ನು ಉತ್ತಮಪಡಿಸಲು ಮತ್ತು ಓವರ್ ಲೋಡ್‌ನ್ನು ಕಡಿಮೆ ಮಾಡಲು ಒಂದು 40 ಮೆಗಾವಾಟ್ ಡೀಸೆಲ್ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ ?

ಆ) ಹಾಗಿಲ್ಲದಿದ್ದರೆ ಓವರ್ ಲೋಡ್ ಮತ್ತು ಕಡಿಮೆ ವೋಲ್ಟೇಜ್‌ನ್ನು ಉತ್ತಮಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ತುಮಕೂರಿನಲ್ಲಿ 40 ಮೆ.ವಾ. ಡೀಸೆಲ್ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಯೋಜನೆ ಇಲ್ಲ.

ಆ) ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಉತ್ತಮಪಡಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ .

1) ವಿಶ್ವಬ್ಯಾಂಕ್ ಆರ್ಥಿಕ ನೆರವಿನೊಂದಿಗೆ ತುಮಕೂರು ತಾ: ಅಂತರಸನಹಳ್ಳಿಯಲ್ಲಿ ಒಂದು 200:66 ಕೆ.ವಿ. ಉಪಕೇಂದ್ರವನ್ನು ಸ್ಥಾಪಿಸಲಾಗುವುದು. ಇಲ್ಲಿ ಎರಡು 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು.

2) ಇನ್ನೊಂದು 220:110 ಕೆ.ವಿ. ಉಪಕೇಂದ್ರವನ್ನು ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿ ಕ್ರಾಸ್ ಹತ್ತಿರ ಸ್ಥಾಪಿಸಲಾಗುತ್ತಿದೆ. ಇಲ್ಲಿ ಒಂದು 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಹಾಕಲಾಗುವುದು.

3) ಹೊಸ 66:11 ಕೆ.ವಿ. ಉಪಕೇಂದ್ರಗಳನ್ನು ಕಲ್ಲಂಬೆಲ್ಲ. ಚೇಲೂರು ಮತ್ತು ಕೋಲಾಲಗಳಲ್ಲಿ ಸ್ಥಾಪಿಸಲಾಗುವುದು.

4) ತುಮಕೂರು ಉಪಕೇಂದ್ರದಲ್ಲಿರುವ ಟ್ರಾನ್ಸ್‌ಫಾರ್ಮರನ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು.

5) ಕೆಪಾಸಿಟರ್ ಬ್ಯಾಂಕ್‌ಗಳನ್ನು 11 ಕೆ.ವಿ. ಲೈನ್‌ಗೆ ಮತ್ತು ಉಪಕೇಂದ್ರಗಳಲ್ಲಿ ಅಳವಡಿಸಲಾಗುವುದು.

ಜಯನಗರ ಬಸ್ ನಿಲ್ದಾಣದ ವಿಸ್ತರಣೆ ಬಗ್ಗೆ.

1572. ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಜಯನಗರ ಬಸ್ ನಿಲ್ದಾಣಕ್ಕೆ ಪ್ರತಿದಿನ ಬರುವ ಬಿ.ಟಿ.ಎಸ್. ಬಸ್ಸುಗಳ ಸಂಖ್ಯೆ:

ಆ) ಜಯನಗರ ಬಸ್ ನಿಲ್ದಾಣದಿಂದ ಪ್ರತಿದಿನ ಹೊರಡುವ ಬಸ್ಸುಗಳ ಸಂಖ್ಯೆ :

ಇ) ಈಗಿರುವ ಬಸ್ ನಿಲ್ದಾಣ ಸಾಕಾಗದಿರುವುದು ನಿಜವೇ :

ಈ) ಹಾಗಿದ್ದಲ್ಲಿ. ಜಯನಗರದಲ್ಲಿ ಮತ್ತೊಂದು ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರ ಯೋಜಿಸಿದೆಯೇ :

ಉ) ಇಲ್ಲದಿದ್ದಲ್ಲಿ. ಪ್ರಸಕ್ತ ಇರುವ ಬಸ್ ನಿಲ್ದಾಣವನ್ನು ವಿಸ್ತರಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 125 ಬಸ್ಸುಗಳು (1500 ಟ್ರಿಪ್ಪುಗಳು).

ಆ) 19 ಬಸ್ಸುಗಳು (273 ಟ್ರಿಪ್ಪುಗಳು).

ಇ) ಹೌದು.

ಈ) ಇಲ್ಲ.

ಉ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ ಬಸ್ ನಿಲ್ದಾಣವನ್ನು ವಿಸ್ತರಿಸುವ ಬಗ್ಗೆ ಬೆಂಗಳೂರು ನಗರ ಪಾಲಿಕೆಯನ್ನು ನಿಲ್ದಾಣಕ್ಕೆ ಹೊಂದಿಕೊಂಡಿರುವ ಜಾಗವನ್ನು

ಮಂಜೂರು ಮಾಡಿಕೊಡುವಂತೆ ಕೋರಿರುತ್ತದೆ. ಹೆಚ್ಚುವರಿ ಭೂಮಿಯನ್ನು ಮಂಜೂರು ಮಾಡಿದರೆ, ಈಗ ಇರುವ ಬಸ್ ನಿಲ್ದಾಣವನ್ನು ವಿಸ್ತರಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಚಾಲಕ ಹಾಗೂ ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

1666. ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಸಾರಿಗೆ ಸಂಸ್ಥೆಯು ಡ್ರೈವರ್ ಮತ್ತು ಕಂಡಕ್ಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕರೆದಿದ್ದು ನಿಜವೇ?

ಆ) ಈ ನೇಮಕಾತಿಗಳನ್ನು ತಡೆಹಿಡಿದಿರಲು ಕಾರಣವೇನು? ಮತ್ತೆ ಯಾವಾಗ ನೇಮಕಾತಿಯನ್ನು ಮಾಡಲಾಗುವುದು?

ಇ) ನೇಮಕಾತಿಯನ್ನು ಮಾಡುವಾಗ ಹಿಂದೆ ಸಲ್ಲಿಸಿದ್ದ ಅರ್ಜಿಗಳನ್ನು ತೀರ್ಮಾನಿಸಲಾಗುವುದೇ ಅಥವಾ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬೇಕೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿಜ.

ಆ) ನೇಮಕಾತಿಗಳನ್ನು ಮಾಡುವ ಬಗ್ಗೆ ಸರ್ಕಾರವು ತಡೆಹಿಡಿದಿದೆ. ಕಾರಣ ಈಗ ಇರುವ ನೇಮಕಾತಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಸಲುವಾಗಿ ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಅಂತಿಮ ತೀರ್ಮಾನವಾದ ನಂತರ, ನೇಮಕಾತಿಗಳನ್ನು ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಈಗಾಗಲೇ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲಾಗುವುದು. ಅಂತಹ ಅಭ್ಯರ್ಥಿಗಳು ಹೊಸದಾಗಿ ಪುನಃ ಅರ್ಜಿಗಳನ್ನು ಸಲ್ಲಿಸಬೇಕಾಗುವುದಿಲ್ಲ.

ಎ.ಪಿ.ಎಂ.ಸಿ. ಹಣದ ಬಿಡುಗಡೆ ಬಗ್ಗೆ

1974. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎ.ಪಿ.ಎಂ.ಸಿ. ನಿಧಿಯಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 12 ಲಕ್ಷ ರೂಪಾಯಿ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಗಮನದಲ್ಲಿ ಇದೆಯೆ ?

ಆ) ಈ ವಿಚಾರದ ಬಗ್ಗೆ ಅನೇಕ ಬಾರಿ ಸರ್ಕಾರವು ಆಶ್ವಾಸನೆ ಕೊಟ್ಟಿರುವುದು ನಿಜವೆ ?

ಇ) ಹಾಗಿದ್ದರೆ ಈ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುತ್ತದೆ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಆದಾಗ್ಯೂ ಮಾರುಕಟ್ಟೆ ಸಮಿತಿಗಳ ಹೆಚ್ಚುವರಿ ಉಳಿತಾಯದ ಹಣದಿಂದ ಗೊತ್ತುಪಡಿಸಬಹುದಾದ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ 1991ರಲ್ಲಿ ಕೃಷಿ ಉತ್ಪನ್ನ ಮಾರಾಟ (ನಿ) ಕಾಯ್ದೆ 1966ಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ 1968ರ ಕೃಷಿ ಉತ್ಪನ್ನ ಮಾರಾಟ (ನಿ) ನಿಯಮಾವಳಿಗೆ ಮಾರುಕಟ್ಟೆ ಕ್ಷೇತ್ರದಲ್ಲಿ ಒದಗಿಸಬಹುದಾದ ಮೂಲಭೂತ ಸೌಲಭ್ಯಗಳನ್ನು ಗೊತ್ತುಪಡಿಸಿ ತಿದ್ದುಪಡಿ ಮಾಡಬೇಕಾಗಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 18-3-1992 ರಂದು ಲಿಖಿತ ಮೂಲಕ ಉತ್ತರಿಸುವ 17ನೇ ಪಟ್ಟಿಯಲ್ಲಿರುವ 68 ಪ್ರಶ್ನೆಗಳ ಪೈಕಿ 16 ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 52 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಖಾಸಗಿ ವ್ಯಕ್ತಿಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಹೂಡಿಕೆ ಮಾಡುವ ಬಗ್ಗೆ.

1265. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವವನ್ನು ನೀಗಿಸಲು ಸರ್ಕಾರದವರು ಖಾಸಗಿಯವರೊಡನೆ ಕರಾರು ಮಾಡಿಕೊಂಡು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಆಲೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅಂತಹ ಖಾಸಗೀ ವ್ಯಕ್ತಿಗಳು ಎಷ್ಟು ಮಂದಿ ಮುಂದೆ ಬಂದಿದ್ದಾರೆ ?

ಇ) ಅವರುಗಳು ಹೂಡಲಿಚ್ಛಿಸಿರುವ ಹಣದ ಮೊತ್ತವೆಷ್ಟು (ಅದರ ಹೆಸರುಗಳೇನು)?

ಈ) ಅವರುಗಳ ಪೈಕಿ (ಎಲ್‌ಆರ್‌ಐ) ಪರದೇಶದಲ್ಲಿರುವ ಭಾರತೀಯರೆಷ್ಟು ?

ಉ) ಖಾಸಗಿಯವರು ಹೂಡಬೇಕೆಂದಿರುವ ಹಣದಿಂದ ಅಂದಾಜು ಎಷ್ಟು ಮೆವ್ಯಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವ ಸಂಭವವಿದೆ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು.

ಆ) ಎಂಟು ಮಂದಿ ಖಾಸಗಿ ವ್ಯಕ್ತಿಗಳು.

ಇ) ಈ ಕೆಳಗಿನ ಸಂಸ್ಥೆಗಳು ಜಲ / ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉತ್ಸಾಹ ತೋರಿಸಿವೆ.

ಶಾಖೋತ್ಪನ್ನ ಕೇಂದ್ರಗಳು :

1. ಮೆ. ನಾರ್ಡಿಕ್ ಪವರ್ ಇನ್‌ವೆಸ್ಟ್. ಸ್ವೀಡನ್.
2. ಮೆ. ಏಷಿಯ ಪಾಂಶೋಶನ್ ಅಂಡ್ ಕನ್‌ಸ್ಟ್ರಕ್ಷನ್ ಲಿಮಿಟೆಡ್, ಬಾಂಬೆ-25.
3. ಮೆ. ಎಲ್.ಕೆ. ಪವರ್ ಕಾರ್ಪೊರೇಷನ್. ಬೆಂಗಳೂರು-62

ಜಲವಿದ್ಯುತ್ ಕೇಂದ್ರಗಳು :

1. ಮೆ. ದಾಂಡೇಲಿ ಸ್ಟೀಲ್ ಅಂಡ್ ಫೆರ್ರೋ ಅಲ್ಲಾಯಸ್ ಲಿಮಿಟೆಡ್. ದಾಂಡೇಲಿ.
2. ಮೆ. ರುಕ್ಮಿಣಿ ಸ್ಟೀಲ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು-2
3. ಮೆ. ಕೆನರಾ ಸ್ಟೀಲ್ಸ್ ಲಿಮಿಟೆಡ್, (ಮೆ. ಮಣಿಪಾಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್), ಮಣಿಪಾಲ್-576119.
4. ಮೆ. ಬರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್, ಬೆಂಗಳೂರು-1.
5. ಮೆ. ಗ್ರಾಫೈಟ್ ಇಂಡಿಯ ಲಿಮಿಟೆಡ್. ಕಲ್ಕತ್ತ.

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯವರು ಸರಬರಾಜು (ಉಪಕರಣ) ರಚನೆ ಮತ್ತು ಕಮಿಷನಿಂಗ್ (ಚಾಲೂ ಮಾಡುವುದು) ಇದಕ್ಕೆ ಸೀಮಿತವಿದ್ದಂತೆ ಡೀಸೆಲ್ ಘಟಕವನ್ನು ಸ್ಥಾಪಿಸಲು ಉತ್ಸಾಹ ತೋರಿಸಿದ್ದಾರೆ.

ಚರ್ಚೆ ಇನ್ನೂ ನಡೆಯುತ್ತಿದೆ.

ಈ ಯೋಜನೆಗಳನ್ನು ವಹಿಸಿಕೊಟ್ಟ ನಂತರವೇ ಬಂಡವಾಳ ಹೂಡಿಕೆಯ ಪ್ರಮಾಣವನ್ನು ಖಚಿತವಾಗಿ ಹೇಳಲು ಸಾಧ್ಯವಾಗುತ್ತದೆ. ಇದೇ ಸಮಯಕ್ಕೆ 18.5 ಮೆ.ವ್ಯಾಟ್ ಸಾಮರ್ಥ್ಯದ 2 ಸಣ್ಣ ಜಲವಿದ್ಯುತ್ ಕೇಂದ್ರಗಳನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುತ್ತದೆ. ಅವುಗಳು :

1) ಮೆ. ಗ್ರಾಫೈಟ್ ಇಂಡಿಯಾ ಲಿಮಿಟೆಡ್ (15 ಮೆ.ವ್ಯಾಟ್)
2) ಮೆ. ರುಕ್ಮಿಣಿ ಸ್ಟೀಲ್ ಇಂಡಸ್ಟ್ರೀಸ್ (3.5 ಮೆ.ವ್ಯಾಟ್)

ಇವರುಗಳು ಬಂಡವಾಳ ಹೂಡಿಕೆ ಸುಮಾರು 42 ಕೋಟಿ ರೂಪಾಯಿಗಳು.

ಈ) ಇಲ್ಲ.

ಉ) ಯೋಜನೆಗಳನ್ನು ಖಾಸಗಿಯುವರಿಗೆ ವಹಿಸಿಕೊಟ್ಟ ನಂತರವೇ ಇದನ್ನು ಗೊತ್ತುಪಡಿಸಬಹುದು.

ಲಿಂಕಿಂಗ್ ವಿತ್ ಮಾರ್ಕೆಟಿಂಗ್ ಯೋಜನೆಯಲ್ಲಿ ರೈತರಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

1334. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ವ್ಯವಸಾಯ ಸಹಕಾರ ಸಂಘಗಳ ಮುಖಾಂತರ ಲಿಂಕಿಂಗ್ ವಿತ್ ಮಾರ್ಕೆಟಿಂಗ್ ಯೋಜನೆಯಲ್ಲಿ ರೈತರು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಿಸಿ ಅವರ ಸಾಲಗಳಿಗೆ ಜಮಾ ಪಡೆಯುವ ಯೋಜನೆಯಲ್ಲಿ ರೈತರಿಗೆ ಶೇಕಡಾ 5 ಪ್ರೋತ್ಸಾಹ ಧನ ಕೊಡುವುದು 1983 ರಿಂದ ಜಾರಿಯಲ್ಲಿ ಇರುವುದು ನಿಜವೇ ;

ಆ) ಈ ಯೋಜನೆಯಲ್ಲಿ 1986-87 ರಿಂದ 88-89 ರವರೆಗೆ ಎಷ್ಟು ಸಂಘಗಳು ಈ ವ್ಯವಹಾರ ಕೈಗೊಂಡಿದ್ದವು ;

ಇ) ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಯಾವ ಸಹಕಾರ ಸಂಘಗಳಿಗೆ ಎಷ್ಟು ಬಾಕಿ ನೀಡಬೇಕಾಗಿದೆ ;

ಈ) ಹಾಗಾದರೆ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) 15 ತುಮಕೂರು ಜಿಲ್ಲೆಯಲ್ಲಿ.

ಇ) ರೂ. 2,60,510 ಬಾಕಿ ಇಲ್ಲ.

ಈ) ಉದ್ಭವಿಸುವುದಿಲ್ಲ.

ಅಮಾನತ್ತಿಗೊಳಗಾದ ನ್ಯಾಯಬೆಲೆ ಅಂಗಡಿಗಳ ಬಗ್ಗೆ

1395. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಮಾನತ್ತಿಗೊಳಗಾದ ನ್ಯಾಯಬೆಲೆ ಅಂಗಡಿಗಳನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಉಸ್ತುವಾರಿಗೆ ವಹಿಸಲ್ಪಟ್ಟಾಗ ಸದರೀ ನಿಗಮಕ್ಕೆ ಸಾಕಷ್ಟು ಸಿಬ್ಬಂದಿ ಮತ್ತು ಹೊಂದಿಕೊಂಡ ಸೌಲಭ್ಯಗಳ ಕೊರತೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇಂತಹ ನ್ಯಾಯಬೆಲೆ ಅಂಗಡಿಗಳಿಂದ ವರ್ಗಾಯಿಸಲ್ಪಟ್ಟ ಪಡಿತರ ಚೀಟಿದಾರರಿಗೆ ತಮ್ಮ ಪಡಿತರ ವಸ್ತುಗಳನ್ನು ಪಡೆಯಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಈ ಪರಿಸ್ಥಿತಿಯನ್ನು ಪರಿಹರಿಸಲು ಯಾವ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಸಾಕಷ್ಟು ಸಿಬ್ಬಂದಿ ಹಾಗೂ ಹೊಂದಿಕೊಂಡ ಇತರ ಸೌಲಭ್ಯಗಳಿವೆ. ನಿಗಮದ ನ್ಯಾಯಬೆಲೆ ಅಂಗಡಿಗಳಿಗೆ ಹೊಂದಿಕೊಂಡ ಪಡಿತರ ಚೀಟಿದಾರರಿಗೆ ಅತ್ಯುತ್ತಮ ಸೇವೆ ದೊರಕುತ್ತಿದೆಯೆಂದು ಸಾಮಾನ್ಯ ಅಭಿಪ್ರಾಯವಾಗಿದೆ. ಆದರೂ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಚೀಟಿದಾರರಿಗೆ ನೀಡಲಾಗುತ್ತಿರುವ ಸೇವೆಯನ್ನು ಸುಧಾರಿಸಲು ಸತತವಾದ ಪ್ರಯತ್ನವನ್ನು ಮಾಡಲಾಗುತ್ತಿದೆ.

ಕಾರ್ಮಿಕ ಸಂಘಗಳ ಪುನಃಚ್ಚೇತನದ ಬಗ್ಗೆ.

1528. ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಕಾರ್ಮಿಕ ಸಹಕಾರ ಸಂಘಗಳೆಷ್ಟು :

ಆ) ಈ ಪೈಕಿ ಎಷ್ಟು ಸಂಘಗಳು ಸ್ಥಗಿತಗೊಂಡಿರುತ್ತವೆ :

ಇ) ಸ್ಥಗಿತಗೊಂಡಿರುವ ಕಾರ್ಮಿಕ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು :

ಈ) ಸರ್ಕಾರವು ಕಾರ್ಮಿಕ ಸಹಕಾರ ಸಂಘಗಳಿಗೆ ಕಂಟ್ರಾಕ್ಟ್ ಕೆಲಸವನ್ನು ಕೊಡುವಾಗ ಗ್ರಾಮೀಣ ಪುನರುಜ್ಜೀವನ ಯೋಜನೆಯಡಿಯಲ್ಲಿ ಏನಾದರೂ ಉತ್ತೇಜನ ನೀಡುತ್ತಿದೆಯೇ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) 211 (ಇನ್ನೂರ ಹನ್ನೊಂದು).

ಆ) 107 (ನೂರ ಏಳು).

ಇ) ಇಂತಹ ಸಂಘಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಷೇರು ಹಣ ಮತ್ತು ಧನ ಸಹಾಯವನ್ನು ಮಂಜೂರು ಮಾಡುವ ಅವಕಾಶವಿರುತ್ತದೆ.

ಈ) ಸರ್ಕಾರವು ಇಂತಹ ಸಂಘಗಳಿಗೆ ಕಂಟ್ರಾಕ್ಟ್ ಕೆಲಸ ನೀಡುವಾಗ ಈ ಕೆಳಕಂಡ ರಿಯಾಯಿತಿಗಳನ್ನು ನೀಡಿ ಆದೇಶ ಹೊರಡಿಸಿರುತ್ತದೆ.

1) ಟೆಂಡರ್‌ಗಳನ್ನು ಕರೆಯದ ಒಂದು ಜಾರಿಗೆ. ಒಂದು ಕೆಲಸಕ್ಕೆ ರೂ.ಗಳು 50.000 ಮೀರದಂತೆ ಕೆಲಸಗಳನ್ನು ಪೀಸ್ ಕೆಲಸದ ಪದ್ಧತಿಯಲ್ಲಿ ಸರ್ಕಾರವು ನಿಗದಿಪಡಿಸಿರುವ ದರಗಳ ಅನುಸೂಚಿ-ಪ್ರಕಾರ ಈ ಸಂಘಗಳಿಗೆ ವಹಿಸಿಕೊಡತಕ್ಕದ್ದು.

2) ಈ ಸಂಘಗಳಿಂದ ಭದ್ರತಾ ಠೇವಣಿಯನ್ನು ಪಡೆಯಬಾರದು.

3) ಲೋಕೋಪಯೋಗಿ ಇಲಾಖೆಯಿಂದ ಕಾಂಟ್ರಾಕ್ಟ್ ಕೆಲಸಗಳನ್ನು ಪಡೆಯುವ ಮೊದಲು ಈ ಕಾರ್ಮಿಕ ಸಂಘಗಳು ಸದರಿ ಇಲಾಖೆಯಿಂದ ನೋಂದಾಯಿಸಿಕೊಳ್ಳುವ ನಿಬಂಧನೆಯಿಂದ ವಿನಾಯಿತಿಯನ್ನು ಕೊಡಲಾಗಿದೆ.

4) ಕಾರ್ಮಿಕ ಸಂಘಗಳು ಅವು ನೀಡಿದ ಬಿಲ್ಲುಗಳ ಶೇಕಡ 75 ಬಿಲ್ಲಿನ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳು ಬಿಲ್ಲು ನೀಡಿದ ಒಂದು ವಾರದೊಳಗಾಗಿ ಸಂಬಂಧಪಟ್ಟ ಸಂಘಕ್ಕೆ ಪಾವತಿ ಮಾಡತಕ್ಕದ್ದು.

ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಆರ್.ಟಿ.ಓ. ರವರ ತಪಾಸಣೆ ಬಗ್ಗೆ

1529. ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರೀಯ ಹೆದ್ದಾರಿ 4ರಲ್ಲಿ ನೆಲಮಂಗಲ ತಾಲ್ಲೋಕ್ ವ್ಯಾಪ್ತಿಯಲ್ಲಿ 1988 ರಿಂದ 1991ರ ಡಿಸೆಂಬರ್‌ವರೆವಿಗೆ ಆರ್‌ಟಿಓ ಇಲಾಖೆಯವರು ವಾಹನಗಳ ತಪಾಸಣೆ ಬಗ್ಗೆ ಹೂಡಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು :

ಆ) ಈ ಮೊಕದ್ದಮೆಗಳಿಂದ ವಸೂಲಾದ ದಂಡ ಶುಲ್ಕವೆಷ್ಟು ;

ಇ) ಈ ರೀತಿ ವಸೂಲಾತಿಯಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 10224.

ಆ) ರೂ. 43,45,715-00

ಇ) ಇಲ್ಲ.

ಈ) ಮೇಲಿನ (ಇ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ರಾಜ್ಯಾದ್ಯಂತ ಒಟ್ಟು ಸೀಮೆ ಎಣ್ಣೆ ವಿತರಣೆ ಬಗ್ಗೆ.

1539. ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಒಟ್ಟು ಸೀಮೆಎಣ್ಣೆ ವಿತರಣೆ ಮಾಡಲು ಎಷ್ಟು ಜನ ಮಧ್ಯವರ್ತಿಗಳು ಇರುವರು ;

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಎಷ್ಟು ಜನರಿಗೆ ಏಜೆನ್ಸಿ ಮಂಜೂರು ಮಾಡಿದೆ ;

ಇ) ಮೇಲ್ಕಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಹೆಚ್ಚಿಗೆ ಏಜೆನ್ಸಿ ಮಂಜೂರು/ ಮಾಡಲು ಏನಾದರೂ ಕ್ರಮ ಕೈಗೊಂಡಿರುವರೆ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 26095, (ಪಟ್ಟಿ ಲಗತ್ತಿಸಿದ).

ಆ) 1) ಸಗಟುದಾರರು 19 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ

2) ಚಿಲ್ಲರೆ ವರ್ತಕರು 1737

(ಹಾಕರ್ಸ್)

ಇ) ಸೀಮೆಎಣ್ಣೆ ವಿತರಣೆಗಾಗಿ ಲೈಸೆನ್ಸ್ ನೀಡಲು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ ಆದ್ಯತೆ ನೀಡಲಾಗುತ್ತಿದೆ.

DISTRICTWISE KEROSENE OIL WHOLESALE & RETAIL DEALERS IN THE STATE.

Sl. No.	Name of the Districts.	Wholesalers			Retailers		
		SC/ST	Others	Total	SC/ST	Others	Total
1.	Bangalore (IR)	10	32	42	374	2194	2568
2.	Bangalore (U)	1	10	11	151	1060	1211
3.	Bangalore (R)	2	7	9	96	972	1068
4.	Belgaum	1	23	24	33	1677	1710
5.	Bellary	-	13	13	68	1292	1360
6.	Bidar	-	10	10	37	619	656
7.	Bijapur	-	18	18	32	1340	1372
8.	Chikkamagalur	-	5	5	25	502	527
9.	Chitradurga	-	17	17	171	1579	1750
10.	D. Kannada	-	21	21	8	909	917
11.	Dharwar	1	35	36	87	2172	2259
12.	Gulbarga	-	18	18	43	822	865
13.	Hassan	-	7	7	16	974	990
14.	Kodagu	-	5	5	3	401	404
15.	Kolar	-	14	14	110	1628	1738
16.	Mandya	-	5	5	23	848	.871
17.	Mysore	2	20	22	248	1553	1801
18.	Raichur	-	15	15	94	1161	1255
19.	Shimoga	2	16	18	56	765	821
20.	Tumkur	-	8	8	58	994	1052
21.	U. Kannada	-	15	15	4	563	567
		19	**314**	**333**	**1737**	**24025**	**25762**

ನೆಲಮಂಗಲ ಮುನ್ಸೀಫ್ ಕೋರ್ಟಿನ ಬಗ್ಗೆ.

1531. ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಟೌನ್‌ನಲ್ಲಿರುವ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಒಂದು ಸಣ್ಣ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ತನ್ನದೇ ಆದ ಸ್ವಂತ ಕಟ್ಟಡದ ನಿರ್ಮಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ;

ಇ) ಕಕ್ಷಿದಾರರ ಹಾಗೂ ನ್ಯಾಯಾಲಯದ ಅಧಿಕಾರಿಗಳ ಹಿತದೃಷ್ಟಿಯಿಂದ ಕಟ್ಟಡ ನಿರ್ಮಿಸಲು ಸರ್ಕಾರ ಕಾಲ ಗೊತ್ತುಪಡಿಸುವುದೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು.

ಆ) ಸ್ವಂತ ಕಟ್ಟಡ ಹೊಂದಲು ಸರ್ಕಾರವು ನೆಲಮಂಗಲ ಸರ್ವೆ ನಂ. 214 ರಿಂದ 215:5 ರಲ್ಲಿರುವ 5 ಎಕರೆ 10 ಗುಂಟೆ ಪ್ರದೇಶವನ್ನು ಭೂ ಸ್ವಾಧೀನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಕಟ್ಟಡದ ಕಾರ್ಯವನ್ನು ದೊರೆಯುವ ಸಂಪನ್ಮೂಲಗಳನ್ನು ಆಧರಿಸಿ, ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ನೆಲಮಂಗಲ ಮತಕ್ಷೇತ್ರಕ್ಕೆ ವಿದ್ಯುತ್‌ನಿಂದಾಗುವ ತೊಂದರೆ ಬಗ್ಗೆ.

1532. ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಕಡಿಮೆ ವಿದ್ಯುತ್ ವೋಲ್ಟೇಜ್‌ನಿಂದಾಗಿ ರೈತರಿಗೆ, ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸರ್ಕಾರದ ಈ ಕ್ಷೇತ್ರದ ಜನರ ಹಿತದೃಷ್ಟಿಯಿಂದ ಹಾಗೂ ಈಗೀಗ ಹೆಚ್ಚಿನ ಕೈಗಾರಿಕೆಗಳು ಪ್ರಾರಂಭವಾಗುತ್ತಿರುವುದರಿಂದ 25 ಮೆಗವಾಟ್ಸ್ ಟ್ರಾನ್ಸ್‌ಫಾರ್ಮರನ್ನು ಒದಗಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಬಂದಿದೆ.

ಆ) ನೆಲಮಂಗಲದಲ್ಲಿರುವ ಉಪ ವಿದ್ಯುತ್ ಕೇಂದ್ರದಲ್ಲಿ ಹೆಚ್ಚುವರಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವ ಅವಶ್ಯಕತೆ ಸದ್ಯಕ್ಕಿಲ್ಲ. ದಾಬಸ್‌ಪೇಟೆಯಲ್ಲಿ

ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಹೊಸದಾಗಿ ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಉಪ ವಿದ್ಯುತ್ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ನೆಲಮಂಗಲ ಉಪ ವಿದ್ಯುತ್ ಕೇಂದ್ರದ ಲೋಡ್ ಕಡಿಮೆಯಾಗುವುದು. ವೋಲ್ಟೇಜ್ ಮಟ್ಟದ ಸುಧಾರಣೆಗಾಗಿ ನೆಲಮಂಗಲ ತಾಲ್ಲೂಕಿನಲ್ಲಿ ವೋಲ್ಟೇಜ್ ರೆಗ್ಯುಲೇಟರನ್ನು ಹಾಕಿದೆ. ಮತ್ತು ಕನಸವಾಡಿ, ಟಿ. ಬೇಗೂರು ಫೀಡರುಗಳನ್ನು ಬೇರ್ಪಡಿಸಿ, ಹೊರೆಯನ್ನು ಕಡಿಮೆಗೊಳಿಸಲಾಗಿದೆ.

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಹಾಗೂ ಅನುದಾನಿತ ಬಿ.ಎಡ್ ಕಾಲೇಜುಗಳ ಬಗ್ಗೆ.

1573. ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಹಾಗೂ ಅನುದಾನಿತ ಮತ್ತು ಅನುದಾನ ರಹಿತ ಬಿ.ಎಡ್. ಕಾಲೇಜುಗಳ ಒಟ್ಟು ಸಂಖ್ಯೆ ;

ಆ) ಆ ಬಿ.ಎಡ್. ಕಾಲೇಜುಗಳ ಹೆಸರುಗಳು ;

ಇ) ಪ್ರತಿಯೊಂದು ಕಾಲೇಜಿನಲ್ಲಿಯೂ ಲಭ್ಯವಿರುವ ಸೀಟುಗಳ ಸಂಖ್ಯೆ ;

ಈ) ಬೆಂಗಳೂರು ನಗರದಲ್ಲಿರುವ ಎಲ್ಲಾ ಅನುದಾನಿತ ಬಿ.ಎಡ್. ಕಾಲೇಜುಗಳ ಸೀಟುಗಳನ್ನು ಸರ್ಕಾರ ಒಟ್ಟುಗೂಡಿಸಿ ಕೇಂದ್ರೀಕೃತ ಪದ್ಧತಿಯಲ್ಲಿ ಪ್ರವೇಶ ನೀಡುವುದನ್ನು ಅಳವಡಿಸುವ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ)	ಸರ್ಕಾರಿ		ಇಲ್ಲ.
	ಖಾಸಗಿ :	ಅನುದಾನಿತ	04
		ಅನುದಾನ ರಹಿತ	07
		ಒಟ್ಟು	11
	ಸರ್ಕಾರಿ		ಇಲ್ಲ

ಆ) **ಅನುದಾನಿತ ಖಾಸಗಿ ಕಾಲೇಜುಗಳು**

1) ರಾಷ್ಟ್ರೀಯ ವಿದ್ಯಾಲಯ ಕಾಲೇಜು, ಬೆಂಗಳೂರು.

2) ಎಂ.ಇ.ಎಸ್. ಶಿಕ್ಷಣ ಕಾಲೇಜು, ಬೆಂಗಳೂರು.

3) ವಿಜಯ ಶಿಕ್ಷಣ ಕಾಲೇಜು, ಬೆಂಗಳೂರು.

4) ಬಿ.ಇ.ಎಸ್. ಶಿಕ್ಷಣ ಕಾಲೇಜು, ಬೆಂಗಳೂರು.

ಅನುದಾನ ರಹಿತ ಖಾಸಗಿ ಕಾಲೇಜುಗಳು

1) ನ್ಯೂ ಹಾರಿಜಾನ್ ಶಿಕ್ಷಣ ಕಾಲೇಜು, ಇಂದಿರಾನಗರ, ಬೆಂಗಳೂರು.

2) ಡಾ. ಅಂಬೇಡ್ಕರ್ ಶಿಕ್ಷಣ ಕಾಲೇಜು, ಬೆಂಗಳೂರು.

3) ಎಂ.ವಿ.ಜಿ. ಶಿಕ್ಷಣ ಕಾಲೇಜು, ಬೆಂಗಳೂರು.

4) ಕರ್ನಾಟಕ ತಿಗಳರ ವಿದ್ಯಾವರ್ಧಕ ಸಂಘದ ರಾಜಾಜಿನಗರ ಶಿಕ್ಷಣ ಕಾಲೇಜು, ಬೆಂಗಳೂರು.

5) ಸರ್ವಜ್ಞ ಶಿಕ್ಷಣ ಕಾಲೇಜು, ಬೆಂಗಳೂರು.

6) ಶ್ರೀ ಜಯಚಾಮರಾಜೇಂದ್ರ ಶಿಕ್ಷಣ ಸಂಸ್ಥೆಯ ಬಿ.ಎಡ್. ಕಾಲೇಜು, ಬೆಂಗಳೂರು.

7) ಸಂಜಯಗಾಂಧಿ ಶಿಕ್ಷಣ ಕಾಲೇಜು, ಬೆಂಗಳೂರು.

ಇ) 100 + 10 (ಸೇವೆಯಲ್ಲಿರುವ ಉಪಾಧ್ಯಾಯರುಗಳಿಗೆ ಮೀಸಲಾದ ಸೀಟುಗಳು)

ಈ) ಇಲ್ಲ.

ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕುರಿತು

1631. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸಾಲ ಮತ್ತು ಬಡ್ಡಿ ಸೇರಿದಂತೆ ರೂ. 10,000-00 ಮಿತಿಯವರೆಗೆ ಪ್ರಸಕ್ತ ಸಾಲಿನಲ್ಲಿ ಮನ್ನಾ ಮಾಡಲು ಸರ್ಕಾರ ಯೋಚಿಸುತ್ತಿದೆಯೇ ;

ಆ) ಹಾಗಿದ್ದಲ್ಲಿ, ಯಾವಾಗ ;

ಇ) ಸಾಲಗಳನ್ನು ಮನ್ನಾ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ತಗಲುವ ಹೊರೆಯೆಷ್ಟು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಕ್ಫ್ ಸಂಸ್ಥೆಯಿಂದ ಕಟ್ಟಲಾದ ವಾಣಿಜ್ಯ ಸಂಕೀರ್ಣಗಳ ಮತ್ತು ಉತ್ಪಾದಿಸಿದ ಫಂಡು.

1633. ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) 1985 ರಿಂದ ಈ ರಾಜ್ಯದಲ್ಲಿ ವಿವಿಧ ವಕ್ಫ್ ಸಂಸ್ಥೆಗಳು ಕಟ್ಟಿರುವ ವಾಣಿಜ್ಯ ಸಂಕೀರ್ಣಗಳು ಎಷ್ಟು ;

ಬಿ) ವರ್ಷಕ್ಕೆ ವಸೂಲಾದ ಬಾಡಿಗೆ :

ಸಿ) ಯಾವ ಉದ್ದೇಶಕ್ಕಾಗಿ ಬಾಡಿಗೆಯಿಂದ ಬಂದ ಹಣವನ್ನು ಉಪಯೋಗಿಸಲಾಗಿದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಎ) ವಿವಿಧ ವಕ್ಫ್ ಸಂಸ್ಥೆಗಳು 1985 ರಿಂದ ಈ ರಾಜ್ಯದಲ್ಲಿ 23 ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಅದರಲ್ಲಿ. 8 ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕಾರ್ಯವು ಸಂಪೂರ್ಣಗೊಂಡಿದೆ.

ಬಿ) 1) ಕರ್ನಾಟಕ ವಕ್ಫ್ ಕಛೇರಿ ಸಂಕೀರ್ಣ "ದಾರುಲ್ ಅವ್‌ಕಾಫ್ ಕಟ್ಟಡ" ಬೆಂಗಳೂರು ಇದರಿಂದ ವರ್ಷಕ್ಕೆ ರೂ. 10,30,960-00 ಬಾಡಿಗೆ ವಸೂಲಾಗುತ್ತಿದೆ.

2) ಬೇರೆ ಇತರೆ 7 ವಾಣಿಜ್ಯ ಸಂಕೀರ್ಣಗಳಿಂದ ವರ್ಷಕ್ಕೆ ಬಾಡಿಗೆ ಮೊತ್ತ ಕೂಡಲೇ ಲಭ್ಯವಿಲ್ಲ.

ಸಿ) 1) ಕರ್ನಾಟಕ ವಕ್ಫ್ ಕಛೇರಿಯ ಸಂಕೀರ್ಣವು ಕೇಂದ್ರ ವಕ್ಫ್ ಕೌನ್ಸಿಲ್‌ನಿಂದ ಪಡೆದ ಸಾಲದ ಜವಾಬ್ದಾರಿಯನ್ನು ತೀರಿಸಲಾಗುತ್ತಿದೆ. ಹಾಗೆಯೇ, ವಕ್ಫ್ ಸಂಕೀರ್ಣದ ನಿರ್ವಹಣೆ ಮತ್ತು ರಿಪೇರಿಗೆ ಮತ್ತು ಬೆಂಗಳೂರು ನಗರ ಮಹಾನಗರಪಾಲಿಕೆಗೆ ಕೊಡಬೇಕಾದ ಆಸ್ತಿ ತೆರಿಗೆಯನ್ನು ಈ ವರಮಾನದಿಂದ ಕೊಡಲಾಗುತ್ತಿದೆ.

2) ಇತರೆ 7 ವಾಣಿಜ್ಯ ಸಂಕೀರ್ಣಗಳು ಯಾವ ಕಾರ್ಯಗಳಿಗೆ ತಮ್ಮ ವಸೂಲಾದ ಬಾಡಿಗೆಯ ಹಣವನ್ನು ಉಪಯೋಗಿಸುತ್ತಿವೆ ಎಂಬುದು ಕೂಡಲೇ ಲಭ್ಯವಿಲ್ಲ.

ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳ ಮೀಸಲಾತಿ ಬಗ್ಗೆ

1636. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವ ಸಂದರ್ಭದಲ್ಲಿ ಈಗಿರುವ ನಿಯಮಗಳಿಗನುಗುಣವಾಗಿ (ಮೆರಿಟ್ ಮೇಲೆ) ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಶೇ. 50 ಸೀಟುಗಳನ್ನು ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ದೊರಕುವಂತೆ ಸರ್ಕಾರವು ಕ್ರಮ ಕೈಗೊಳ್ಳುವುದೇ :

ಇ) ಹಾಗಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಪ್ರತಿ ಪಾಲಿಟೆಕ್ನಿಕ್‌ನ ಪ್ರವೇಶ ಸಂಖ್ಯೆಯ ಜನರಲ್ ಮೆರಿಟ್ ಸ್ಥಾನಗಳ ಪೈಕಿ, ಶೇ. 25 ರಷ್ಟು ಪ್ರವೇಶಗಳನ್ನು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಮೀಸಲಾಗಿಟ್ಟಿರುತ್ತದೆ. ಉಳಿದ ಶೇ. 75ರಷ್ಟು ಸ್ಥಾನಗಳು ಇತರರಿಗೆ ಕೊಡಲಾಗುತ್ತಿದೆ. ಆದ್ದರಿಂದ ಈಗ ಜಾರಿಯಲ್ಲಿರುವ ಪದ್ಧತಿಗೆ ತಿದ್ದುಪಡಿಯ ಅಗತ್ಯವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕ.ರಾ.ರ.ಸಾ. ಸಂಸ್ಥೆಯು ಖರೀದಿಸಿದ ಯಂತ್ರೋಪಕರಣಗಳ ಒಟ್ಟು ಮೌಲ್ಯದ ಬಗ್ಗೆ

1771. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕ.ರಾ.ರ.ಸಾ. ಸಂಸ್ಥೆಯು 1991 ಜನವರಿಯಿಂದ ಡಿಸೆಂಬರ್‌ವರೆಗೂ ಬಿಡಿಭಾಗಗಳು ಹಾಸಿ, ಟೈರು ಟ್ಯೂಬುಗಳನ್ನು ಖರೀದಿಸಿದ ಒಟ್ಟು ಮೌಲ್ಯವೆಷ್ಟು ;

ಆ) ಖರೀದಿ ಮಾಡಲು ಕೊಟೇಷನ್ ಕರೆಯಲಾಗಿದೆಯೇ ;

ಇ) ಈ ಖರೀದಿಯನ್ನು ಖರೀದಿ ಮತ್ತು ಉಗ್ರಾಣ ಇಲಾಖೆ, ಕೆಎಸ್‌ಜಿಎಂಸಿ. ಡಿಜಿಎಸ್‌ಡಿ. ಯಲ್ಲಿ ಅಧಿಕೃತವಾಗಿ ನಮೂದಿಸಿದ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆಯೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಕ.ರಾ.ರ.ಸಾ. ಸಂಸ್ಥೆಯು 1991ರಲ್ಲಿ ಬಿಡಿಭಾಗಗಳು, ಚಾಸಿಗಳು, ಟೈರು, ಟ್ಯೂಬುಗಳ ಒಟ್ಟು ಮೌಲ್ಯ ಕೆಳಗಿನಂತಿದೆ.

	ಕೋಟಿ ರೂ.ಗಳಲ್ಲಿ
ಬಿಡಿ ಭಾಗಗಳು	15.70
ಚಾಸಿಗಳು	36.26
ಟೈರು ಮತ್ತು ಟ್ಯೂಬುಗಳು	24.00

ಆ) ಕ.ರಾ.ರ.ಸಾ. ಸಂಸ್ಥೆಯು ಮೂರು ವಿಧಾನದ ಖರೀದಿಯನ್ನು ಅನುಸರಿಸುತ್ತವೆ. ಅವುಗಳೆಂದರೆ ಏಕಸ್ವಾಮ್ಯ ಒಡೆತನ, (ರೇಟ್ ಕಂಟ್ರಾಕ್ಟ್) ದರ ಸಂವಿದ ಮತ್ತು ಟೆಂಡರ್‌ನಂತೆ ಖರೀದಿ.

ಏಕಸ್ವಾಮ್ಯ ಒಡೆತನದ ಬಿಡಿಭಾಗಗಳನ್ನು ಅದರ ತಯಾರಕರಾದ ಮೈಕೋ, ಟೆಲ್ಕೋ, ಲೇಲ್ಯಾಂಡ್, ಲ್ಯೂಕಾಸ್, ಟಿವಿಎಸ್. ಇವರಿಂದ ಬೆಲೆ ಪಟ್ಟಿ ಆಧಾರದ ಮೇಲೆ ಖರೀದಿಸಲಾಗುವುದು.

ದರ ಸಂವಿದ ಬಿಡಿಭಾಗಗಳನ್ನು ಎ.ಎಸ್.ಆರ್.ಟಿ. ಯು (ದೆಹಲಿ ಭೂಸಾರಿಗೆ ಅಧೀನಕ್ಕೊಳಪಟ್ಟ ನಿಗಮ) ನಿರ್ಧರಿಸಿದ ದರ ಸಂವಿದಯಂತೆ ತುಲನೆ ಮಾಡಿ ಗುಣಮಟ್ಟದ ಆಧಾರದ ಮೇಲೆ ಖರೀದಿಸಲಾಗುವುದು.

ಟೈರು ಮತ್ತು ಟ್ಯೂಬುಗಳನ್ನು ಅದರ ತಯಾರಕರಿಂದ ಮೂರು ತಿಂಗಳಿಗೊಮ್ಮೆ ಟೆಂಡರ್ ಕರೆದು ತೀರ್ಮಾನಿಸಲಾಗುವುದು. ಇನ್ನಿತರ ಬಿಡಿಭಾಗಗಳನ್ನು ಕ.ರಾ.ರ.ಸಾ. ಸಂಸ್ಥೆ ಮಾರಕ ಉದ್ಯಮಗಳಿಂದಲೂ ನಮ್ಮಲ್ಲಿ ದಾಖಲು ಮಾಡಿದ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದಲೂ ಮತ್ತು ರಾಜ್ಯದಲ್ಲಿನ ಕೈಗಾರಿಕೆ ಸಂಸ್ಥೆ, ದರ ಸಂವಿದ ಸಂಸ್ಥೆಗಳು ಜೊತೆ ತುಲನೆ ಮಾಡಿ ಖರೀದಿಸಲಾಗುವುದು. ಇನ್ನಿತರ ಟೆಂಡರ್ ಬಿಡಿಭಾಗಗಳಿಗೆ ಕೋಟೇಷನ್ ಕರೆದು ಖರೀದಿಯನ್ನು ನಿರ್ಧರಿಸಲಾಗುವುದು.

ಇ) ಕ.ರಾ.ರ.ಸಾ. ಸಂಸ್ಥೆಯು ಇನ್ನಿತರ ಸಂಸ್ಥೆಗಳಾದ ಕೆ.ಎಸ್.ಐ.ಎಂ.ಸಿ., ಖರೀದಿ ಮತ್ತು ಉಗ್ರಾಣ ಇಲಾಖೆ, ಡಿ.ಜಿ.ಎಸ್.ಡಿ. ಯಲ್ಲಿ ಅಧಿಕೃತವಾಗಿ ದಾಖಲು ಮಾಡಿದ ಸಂಸ್ಥೆಗಳಿಂದಲೂ ಅವುಗಳು ಟೆಂಡರ್ ಕರೆದಾಗ ಭಾಗವಹಿಸಿದಲ್ಲಿ ಪರಿಗಣಿಸುವುದು.

ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್‌ಡೆಕರ್ ವಾಹನಗಳ ಬಗ್ಗೆ

1772. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್ ಡೆಕರ್ ವಾಹನಗಳ ಸಂಖ್ಯೆ ;

ಆ) 1991ನೇ ಸಾಲಿನಲ್ಲಿ ಖರೀದಿಸಿದ ಡಬಲ್ ಡೆಕರ್‌ಗಳ ಸಂಖ್ಯೆ ;

ಇ) ಡಬಲ್‌ಡೆಕರ್ ವಾಹನಗಳು ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಬದಲಾವಣೆಗೆ ತೆಗೆದುಕೊಂಡ ಕ್ರಮ :

ಉ) 1992ನೇ ಸಾಲಿನಲ್ಲಿ ಎಷ್ಟು ಡಬಲ್ ಡೆಕರ್ ವಾಹನಗಳನ್ನು ಸೇರ್ಪಡಿಸುವ ಪ್ರಸ್ತಾವನೆ ಇದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 22 ಅನುಸೂಚಿಗಳಿಗೆ 27 ವಾಹನಗಳಿವೆ.

ಆ) 1991ನೇ ಸಾಲಿನಲ್ಲಿ ಡಬಲ್ ಡೆಕರ್‌ಗಳನ್ನು ಖರೀದಿಸಿರುವುದಿಲ್ಲ.

ಇ) ಹೌದು, ಕೆಲವು ವಾಹನಗಳು ಹಳೆಯದಾಗಿರುತ್ತವೆ.

ಈ) ವಾಹನಗಳನ್ನು ಹಂತಹಂತವಾಗಿ ತೆಗೆದು, ರದ್ದುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ಉ) 1992ನೇ ಸಾಲಿನಲ್ಲಿ ಡಬಲ್‌ಡೆಕರ್ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಇಲ್ಲ.

ಬೆಂಗಳೂರು ನಗರದಲ್ಲಿ ಅನುದಾನಿತ ಖಾಸಗಿ ಆಡಳಿತ ಮಂಡಳಿಯವರು ನಡೆಸುತ್ತಿರುವ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಬಗ್ಗೆ.

1773. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನರದಲ್ಲಿರುವ ಅನುದಾನಿತ ಖಾಸಗಿ ಆಡಳಿತ ಮಂಡಳಿಯವರು ನಡೆಸುತ್ತಿರುವ ಪದವಿಪೂರ್ವ ಕಾಲೇಜುಗಳು ಮತ್ತು ಪದವಿ ಕಾಲೇಜುಗಳೆಷ್ಟು ;

ಆ) ಈ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ, ಪ್ರಥಮ ಬಿ.ಎ., ಬಿ.ಕಾಂ., ಬಿ.ಎಸ್ಸಿ., ವಿದ್ಯಾರ್ಥಿಗಳಿಗೆ ತರಗತಿಗಳಿಗೆ ಪ್ರವೇಶಾವಕಾಶವಿರುವ ಸಂಖ್ಯೆ ಎಷ್ಟು ;

ಇ) ಈ ಕಾಲೇಜುಗಳಲ್ಲಿ ಆಗಿರುವ ವಿದ್ಯಾರ್ಥಿಗಳ ಪ್ರವೇಶದ ಮೇಲೆ ಸರ್ಕಾರದ ಹತೋಟಿಯಿದೆಯೇ ;

ಈ) ಆಡಳಿತ ಮಂಡಳಿಯವರು ಅದರ ಇಚ್ಛಾನುಸಾರ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಈ ಕಾಲೇಜುಗಳಿಗೆ ಸರ್ಕಾರವು ನೀಡುತ್ತಿರುವ ಶೇಕಡ ಅನುದಾನವೆಷ್ಟು ;

ಊ) ಈ ಕಾಲೇಜುಗಳಲ್ಲಿ ಮೇಲ್ಕಂಡ ಕೋರ್ಸುಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದಲ್ಲಿ ಸರ್ಕಾರದ ಪಾಲನ್ನು ಮೀಸಲಿಡುವ ಬಗ್ಗೆ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪದವಿಪೂರ್ವ ಕಾಲೇಜು ಪದವಿ ಕಾಲೇಜು

19 38

ಆ) 80, 88 ವಿಶೇಷ ಸಂದರ್ಭಗಳಲ್ಲಿ 110.

ಇ) ವಿದ್ಯಾರ್ಥಿಗಳ ಪ್ರವೇಶವು ಮೀಸಲಾತಿ ನಿಯಮಗಳಿಗೆ ಒಳಪಟ್ಟಿರಬೇಕಾಗುತ್ತದೆ.

ಈ) ಇಲ್ಲ.

ಉ) ಶೇಕಡಾ 100.

ಊ) ಇಲ್ಲ.

ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸಂಪರ್ಕ ವ್ಯವಸ್ಥೆ ಕಲ್ಪಿಸುವ ಬಗ್ಗೆ

1720. ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಸರ್ಕಾರವು ಗ್ರಾಮಾಂತರ ಪ್ರದೇಶಗಳಿಗೆ ಕನಿಷ್ಠ ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ತೃಪ್ತಿಕರವಾಗಿ ಕಲ್ಪಿಸಿಲ್ಲದಿರಲು ಕಾರಣವೇನು (ತಿಳಿಸುವುದು)?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರೀಕರಣವಾಗಿರುವ ವಲಯದಲ್ಲಿ ಗ್ರಾಮೀಣ ಜನತೆಗೆ ಸಮರ್ಪಕ ಸಾರಿಗೆ ಸೇವೆಯನ್ನು ಕಲ್ಪಿಸಿದೆ.

ಶಿಕ್ಷಕರ ಪ್ರತಿನಿಧಿಗಳಿಗೆ ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ನೀಡುವ ಬಗ್ಗೆ

1720 (ಎ). ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾಥಮಿಕ, ಮಾಧ್ಯಮಿಕ, ಸೆಕೆಂಡರಿ ಶಾಲೆಗಳಿಗೆ ಅಗತ್ಯ ಶಿಕ್ಷಕರ ನೇಮಕ, ಕಾಲೇಜು ಶಿಕ್ಷಕರಿಗೆ ಯುಜಿಸಿ ವೇತನ (ವಿಧಾನ ಪರಿಷತ್ತಿನಲ್ಲಿ ಪ್ರಾಥಮಿಕ ಶಿಕ್ಷಕರ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಮೊದಲಾದ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಗಮನ ನೀಡುವುದೆ ;

ಆ) ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 1-3-90 ರಿಂದ 31-12-90ರ ವರೆಗೆ 4,634 ಹಾಗೂ ದಿನಾಂಕ 1-1-91 ರಿಂದ 31-5-91ರ ವರೆಗೆ 14,080 ಯೋಜನೇತರ ಹುದ್ದೆಗಳು ಖಾಲಿ ಇರುತ್ತವೆ. ಇದಲ್ಲದೆ ಕಪ್ಪು ಹಲಗೆ ಯೋಜನೆಯಡಿಯಲ್ಲಿ 3ನೇ ಮತ್ತು 4ನೇ ಹಂತಗಳನ್ನೊಳಗೊಂಡಂತೆ ಒಟ್ಟು 7309 ಯೋಜನಾ ಹುದ್ದೆಗಳು ಖಾಲಿ ಇರುತ್ತವೆ. ರಾಜ್ಯದಲ್ಲಿನ 1264 ಪ್ರೌಢ ಶಾಲಾ ಸಹಾಯಕ ಶಿಕ್ಷಕರ ಹುದ್ದೆಗಳು ದಿನಾಂಕ 31-12-91ರ ವರೆಗೆ ಖಾಲಿ ಇರುತ್ತವೆ.

ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ ಯುಜಿಸಿ ವೇತನ ನೀಡುತ್ತಿಲ್ಲ. ಸರ್ಕಾರಿ ಆದೇಶ ಸಂಖ್ಯೆ : ಇಡಿ 88 ಯುಎಸ್‌ಪಿ 88 ದಿನಾಂಕ 30-8-90ರ ಪ್ರಕಾರ ದಿನಾಂಕ 1-1-88 ರಿಂದ ಯುಜಿಸಿ ವೇತನವನ್ನು ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಿಗೆ ನೀಡಲಾಗುತ್ತಿದೆ.

ವಿಧಾನ ಪರಿಷತ್ತಿನಲ್ಲಿ ಪ್ರಾಥಮಿಕ ಶಿಕ್ಷಕರ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡುವ ಪ್ರಸ್ತಾವನೆಯು ಇಲ್ಲವಾಗಿದ್ದು, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 131 ಪಿಎಂಎಸ್ 91 ದಿನಾಂಕ 8-11-91 ರಲ್ಲಿ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಯೋಜನೇತರ ಬಾಬ್ತು ದಿನಾಂಕ 1-3-90 ರಿಂದ 31-12-91ರ ವರೆಗೆ ಖಾಲಿ ಇರುವ 4634 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಉಳಿದ 1680 ಹುದ್ದೆಗಳಿಗೂ ಸಹ ಆದೇಶ ಸಂಖ್ಯೆ : ಇಡಿ 131 ಪಿಎಂಎಸ್ 91 ದಿನಾಂಕ 27-2-92 ರಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ ಭರ್ತಿ ಮಾಡಲು ಅನುಮತಿ ನೀಡಿದೆ.

ಕಪ್ಪು ಹಲಗೆ ಕಾರ್ಯಾಚರಣೆಯ ಯೋಜನೆಯ 3ನೇ ಹಂತದ ಅಡಿಯಲ್ಲಿ ಮಂಜೂರಾದ 2712 ಹುದ್ದೆಗಳನ್ನು ಮಿತವ್ಯಯ ಸಡಿಲಿಸಿ ಯೋಜನೇತರ ಹುದ್ದೆಗಳ

ಪೈಕಿ ಹೊಂದಾಣಿಕೆ ಮೂಲಕ (ಸೆಟ್ ಆಫ್) ನೇಮಕಾತಿ ಮಾಡಿಕೊಳ್ಳಲು ಹಾಗೂ ಕ.ಹೆ. 4ನೇ ಹಂತದ ಅಡಿಯಲ್ಲಿ ಮಂಜೂರಾದ 4597 ಹುದ್ದೆಗಳಿಗೂ ಸಹ ಆದೇಶ ಸಂಖ್ಯೆ : ಇಡಿ 181 ಪಿಎಂಎಸ್ 91 ದಿನಾಂಕ 17-1-92 ರಲ್ಲಿ ಸರ್ಕಾರವು ಅನುಮತಿ ನೀಡಿದೆ.

ಅಧಿಸೂಚನೆ ಸಂಖ್ಯೆ : ಇಡಿ 88 ಪಿಎಂಎಸ್ 91 ದಿನಾಂಕ 21-10-91 ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ನಿಯಮಾವಳಿಗಳನ್ನು ರೂಪಿಸಿದ್ದು ನೇರ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಕ್ರಮ ಕೈಗೊಳ್ಳಲಾಗುವುದು.

ದಿನಾಂಕ 31-12-91ರ ವರೆಗೆ ಖಾಲಿ ಇರುವ 1234 ಪ್ರೌಢ ಶಾಲಾ ಸಹಾಯಕ ಶಿಕ್ಷಕರ ಹುದ್ದೆ 505 ಹುದ್ದೆಗಳನ್ನು (ಶೇಕಡ 40) ಮಿತವೇತನ ಪದವೀಧರರಿಂದಲೂ ಹಾಗೂ ಉಳಿದ 759 ಖಾಲಿ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರ ಅರ್ಹ ಅಭ್ಯರ್ಥಿಗಳ ಮೂಲಕ ನೇರ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ರೈತರ ಸಾಲದ ಬಡ್ಡಿ ರಿಯಾಯಿತಿ ಕುರಿತು

1722. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸಾಲದ ಬಡ್ಡಿಯನ್ನು ರಿಯಾಯಿತಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಇದ್ದಲ್ಲಿ ಯಾವಾಗ ಯಾವ ಆಧಾರದಲ್ಲಿ ಮಾಡಲಾಗುವುದು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇಂಧನ ಉಳಿತಾಯ ಸಪ್ತಾಹದ ಕುರಿತು.

1776. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಧನ (ಡೀಸೆಲ್) ಉಳಿತಾಯ ಸಪ್ತಾಹದಿಂದ ಉಳಿಸಿದ ಇಂಧನದ ಪ್ರಮಾಣವೆಷ್ಟು ;

ಆ) ಇಂಧನ ಉಳಿತಾಯ ಸಪ್ತಾಹದ ಬಗ್ಗೆ ವೆಚ್ಚ ಮಾಡಿದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಂಧನ ಉಳಿತಾಯದ ಅವಶ್ಯಕತೆ ಬಗ್ಗೆ ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಲು ಭಾರತ ಸರ್ಕಾರದ ಸಲಹೆಯ ಮೇರೆಗೆ "ಇಂಧನ ಉಳಿತಾಯ ಸಪ್ತಾಹ" ವನ್ನು ದಿನಾಂಕ : 10-02-92 ರಿಂದ 16-02-92ರ ವರೆಗೆ ಆಚರಿಸಲಾಯಿತು. ಇದರ ಪ್ರಭಾವ / ಪರಿಣಾಮವನ್ನು ತಕ್ಷಣದಲ್ಲೇ ಅಂದಾಜು ಮಾಡಲು ಯಾವುದೇ ವಿಧಾನ ಇರುವುದಿಲ್ಲ.

ಆ) ಇಂಧನ ಉಳಿತಾಯ ಸಪ್ತಾಹವನ್ನು ಆಚರಿಸಲು ರಾಜ್ಯ ಸರ್ಕಾರವು ಹಣವನ್ನು ವೆಚ್ಚ ಮಾಡಿರುವುದಿಲ್ಲ.

ರಾಜ್ಯದ ಸಹಕಾರಿ ಸಂಘಗಳಿಗೆ ಸರ್ಕಾರದಿಂದ ಬರಬೇಕಾದ ಹಣದ ಬಗ್ಗೆ.

1775. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಡಿತರ ಸಗಟು ವ್ಯಾಪಾರದಲ್ಲಿ ಕೇಂದ್ರ ಸರ್ಕಾರದ ಸಕ್ಕರೆ ವಿತರಣೆ ನೀತಿಯಿಂದಾಗಿ ಇಡೀ ರಾಜ್ಯದ ಸಹಕಾರಿ ಸಂಘಗಳಿಗೆ ರಾಜ್ಯ ಸರ್ಕಾರದಿಂದ ಬರಬೇಕಾದ ಹಣ ಎಷ್ಟು ;

ಆ) ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳಿಗೆ ಎಷ್ಟು ಹಣ ಬರಬೇಕಾಗಿದೆ ;

ಇ) ಬಾಕಿ ಹಣವನ್ನು ರಾಜ್ಯ ಸರ್ಕಾರ ಯಾವಾಗ ಪಾವತಿ ಮಾಡುವುದು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ರೂ. 406.65 ಲಕ್ಷಗಳು.

ಆ) ರೂ. 65.66 ಲಕ್ಷಗಳು.

ಇ) ಈ ಮೇಲೆ ತಿಳಿಸಿದ ಹಣವನ್ನು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಿಂದ ಬಿಡುಗಡೆ ಮಾಡಬೇಕಾಗಿದ್ದು ಸದರೀ ಬಾಕಿ ಹಣವನ್ನು ಸಂಬಂಧಿಸಿದ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲು ತೀವ್ರ ಕ್ರಮ ಕೈಗೊಳ್ಳುವಂತೆ ಆ ಇಲಾಖೆಗೆ ತಿಳಿಸಲಾಗುವುದು.

ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಶಾಖೆಯಲ್ಲಿ ದೊಡ್ಡ ಪ್ರಮಾಣದ ದುರುಪಯೋಗ ನಡೆದಿರುವ ಬಗ್ಗೆ.

1777. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಶಾಖೆಯಲ್ಲಿ ದೊಡ್ಡ ಪ್ರಮಾಣದ ದುರುಪಯೋಗ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಎಷ್ಟು ಹಣದ ದುರುಪಯೋಗವಾಗಿದೆ ;

ಇ) ಈ ದುರುಪಯೋಗದ ಪ್ರಕರಣ ಯಾವಾಗ ನಡೆದಿದೆ ;

ಈ) ಈ ದುರುಪಯೋಗಕ್ಕೆ ಹೊಣೆಯಾದವರ ವಿರುದ್ಧ ಕೈಗೊಂಡಿರುವ ಕ್ರಮವೇನು ;

ಉ) ಇನ್ನು ಮುಂದೆ ಈ ರೀತಿ ದೊಡ್ಡ ಪ್ರಮಾಣದ ದುರುಪಯೋಗ ತಪ್ಪಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಇತ್ತೀಚಿನ ತನಿಖೆ ವರದಿಯ ಪ್ರಕಾರ ರೂ. 2,10,25,355-50 ಗಳು.

ಇ) ಬಹುಶಃ 1984 ರಿಂದ ಇರಬಹುದು ಸರಿಯಾದ ದಿನಾಂಕ ತನಿಖೆ ಮುಗಿದ ಮೇಲೆ ಗೊತ್ತಾಗುತ್ತದೆ.

ಈ) 1) ಸಹಕಾರ ಕಾಯಿದೆ ಕಲಂ 70ರ ಮೇರೆಗೆ ವಸೂಲಾತಿಗಾಗಿ ದಾವೆ ಹಾಕಲಾಗಿದೆ.

2) ಕಲಂ 103 ರಂತೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

3) ಪೋಲೀಸ್ ಕೇಸನ್ನು ಹಾಕಿದೆ.

4) 6 ಜನರನ್ನು ಅಮಾನತ್ತಿನಲ್ಲಿಡಲಾಗಿದೆ.

ಉ) ಲೆಕ್ಕ ಹೊಂದಾಣಿಕೆ ವ್ಯವಸ್ಥೆ ಬಲಪಡಿಸಲಾಗಿದೆ ಹಾಗೂ ತನಿಖಾ ವ್ಯವಸ್ಥೆಯನ್ನು ತೀವ್ರಗೊಳಿಸಲಾಗಿದೆ.

ನಗರ ಕೇಂದ್ರ ಗ್ರಂಥಾಲಯದಿಂದ ಖರೀದಿಸಲಾಗಿರುವ ಗ್ರಂಥಗಳ ಬಗ್ಗೆ

1778. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1991-92ನೇ ಸಾಲಿನ ಅಂತ್ಯದವರೆಗೆ (ಜನವರಿ ಅಂತ್ಯದವರೆಗೆ) ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದಿಂದ ಖರೀದಿಸಲಾಗಿರುವ ಗ್ರಂಥಗಳ ಒಟ್ಟು ಸಂಖ್ಯೆ ಎಷ್ಟು ?

2) ಸದರಿ ಸಾಲಿನಲ್ಲಿ ಖರೀದಿಸಲಾಗಿರುವ ಗ್ರಂಥಗಳಿಗೆ ಪಾವತಿ ಮಾಡಿರುವ ಮೊಬಲಗು ಎಷ್ಟು ?

3) ಒಮ್ಮೆ ಖರೀದಿಸಲಾಗಿರುವ ಗ್ರಂಥಗಳನ್ನು ಮತ್ತೊಮ್ಮೆ ಅನಾವಶ್ಯಕವಾಗಿ ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

4) ಹಾಗಿದ್ದಲ್ಲಿ, ಒಮ್ಮೆ ಖರೀದಿಸಿದ ಪುಸ್ತಕಗಳನ್ನು ಮತ್ತೊಮ್ಮೆ ಖರೀದಿಸಿ ಪಕ್ಷಪಾತ ಮಾಡಿರುವ ವ್ಯಕ್ತಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1) 72.317 ಗ್ರಂಥಗಳು.

2) 31.24.864-00 ರೂಪಾಯಿಗಳು.

3) ಇಲ್ಲ.

4) ಉದ್ಭವಿಸುವುದಿಲ್ಲ.

ವಕ್ಫ್ ಇಲಾಖೆಯಿಂದ ಬಿಡುಗಡೆಯಾದ ಹಣದ ಬಗ್ಗೆ.

1779. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ವಕ್ಫ್ ಇಲಾಖೆಯ ವತಿಯಿಂದ ಯಾವ ಯಾವ ಜಿಲ್ಲೆಗಳಿಗೆ ಮಸೀದಿ, ಪ್ರಾರ್ಥನಾ ಮಂದಿರ, ಇತ್ಯಾದಿಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ನೀಡಿರುವ ಹಣವೆಷ್ಟು ;

ಆ) ಗುಲ್ಬರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳ ವಿವಿಧ ಮಸೀದಿಗಳಿಗೆ ನೀಡಿರುವ ಹಣವೆಷ್ಟು ;

ಇ) ಈ ಕೆಲಸಗಳು ಯಾವ ಹಂತದಲ್ಲಿವೆ ಹಾಗೂ ಒಂದು ವೇಳೆ ಪೂರ್ತಿಯಾಗದಿದ್ದರೆ ಅವುಗಳನ್ನು ಪೂರ್ತಿಗೊಳಿಸಲು ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿದೆಯೆ ;

ಈ) ಮಾಡಿದ್ದರೆ ಅವು ಯಾವ ಯಾವ ಮಸೀದಿಗಳು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿರ್ಮಾಣಕ್ಕೆ ಧನ ಸಹಾಯವಾಗಿ ರೂ. 4.40,000-00ನ್ನು ಕೊಟ್ಟಿರುವುದು ಈ ಕೆಳಗಿನಂತಿದೆ :-

1) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಕಾಂಪೌಂಡ್ ಗೋಡೆ ಕಟ್ಟಲು ರೂ. 2.50,000-00.

2) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಶಮಿರ್ ದರ್ಗಾದ ನಿರ್ಮಾಣಕ್ಕಾಗಿ ರೂ. 1,50,000-00.

3) ಮೊಯುದ್ದೀನ್ ಜುಮ್ಮ ಮಸ್ಜಿದ್, ಕಯರ್‌ತಡ್ಕ ಹಳ್ಳಿ, ಕಲಂಜ್ ಪೋಸ್ಟ್, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಸೀದಿ ಕಟ್ಟಲು ರೂ. 40,000-00.

ಆ) ಏನೂ ಇಲ್ಲ.

ಇ) ಏನೂ ಇಲ್ಲ.

ಈ) ಏನೂ ಇಲ್ಲ.

ಶಿವಮೊಗ್ಗ ಜಿಲ್ಲೆಗೆ ವಿದ್ಯುತ್ ಸಾಮಗ್ರಿ ಪೂರೆಸುವ ಬಗ್ಗೆ.

1782. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಿಂದ ವಿದ್ಯುತ್ ಇಲಾಖೆಗೆ ಬೇಕಾಗಿರುವ ಸಾಮಗ್ರಿಗಳ ಬಗ್ಗೆ ಬಂದಿರುವ ಬೇಡಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಲಾಗಿರುವುದೇ ?

ಆ) ಹಾಗಿಲ್ಲದಿದ್ದಲ್ಲಿ ಪೂರೈಸದೇ ಇರುವ ಸಾಮಗ್ರಿಗಳು ಯಾವುದು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಬಂದಿರುವ ಬೇಡಿಕೆ ಮತ್ತು ಅವಶ್ಯಕತೆಯನ್ನು ಅವಲಂಬಿಸಿ ಸಾಮಗ್ರಿಗಳನ್ನು ಪೂರೈಸಲಾಗಿದೆ.

ಆ) 'ಅ' ನಲ್ಲಿ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರದ ಬಸ್ ನಿಲ್ದಾಣದ ಕಾರ್ಯಪೂರ್ಣಗೊಳಿಸುವ ಬಗ್ಗೆ.

1783. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ನಗರದಲ್ಲಿ ಬಸ್ ನಿಲ್ದಾಣ ಕಾರ್ಯ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿಂತಿರುವುದಿಲ್ಲ. ಸಣ್ಣಪುಟ್ಟ ಕೆಲಸಗಳನ್ನು ಮಾಡಲಾಗುತ್ತಿದೆ.

ಆ) ಸುಮಾರು 4 ತಿಂಗಳ ಅವಧಿಯಲ್ಲಿ ಮುಗಿಸಲಾಗುವುದು.

ಶಿವಮೊಗ್ಗದ ಮಹಿಳಾ ಪಾಲಿಟೆಕ್ನಿಕ್‌ಗೆ ಸ್ಥಳ ನೀಡುವ ಬಗ್ಗೆ.

1784. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗದ ಮಹಿಳಾ ಪಾಲಿಟೆಕ್ನಿಕ್ ಈಗ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಸಂಸ್ಥೆಗೆ ಸರಿಯಾದ ಸ್ಥಳವನ್ನು ನೀಡಲು ಸರ್ಕಾರ ನಿರ್ಧರಿಸಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸ ಯಾವಾಗ ಆರಂಭವಾಗಲಿದೆ ; ಹಾಗೂ ಯಾವಾಗ ಮುಕ್ತಾಯವಾಗಲಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು. ಸೂಕ್ತ ನಿವೇಶನವನ್ನು ಆರಿಸಲು ಪ್ರಯತ್ನಿಸಲಾಗುತ್ತಿದೆ.

ಆ) ನಿವೇಶನ ದೊರೆತ ಕೂಡಲೇ. ಕಟ್ಟಡದ ಕೆಲಸ ಪ್ರಾರಂಭಿಸಲು, ಕ್ರಮ ಕೈಗೊಳ್ಳಲಾಗುವುದು.

ಶಹಾಪುರ ನ್ಯಾಯಾಲಯ ಕಟ್ಟಡ ನಿರ್ಮಾಣ.

1786. ಶ್ರೀ ಶಿವಶೇಖರಪ್ಪಗೌಡ ಶಿರ್ವಾಳ (ಶಹಾಪುರ್) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರದಲ್ಲಿ ನ್ಯಾಯಾಲಯ ಇರುವುದು ನಿಜವಲ್ಲವೆ ;

ಆ) ಹಾಗಿದ್ದಲ್ಲಿ, ಈ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೇ ;

ಇ) ಸ್ವಂತ ಕಟ್ಟಡಕ್ಕಾಗಿ ಜಾಗವನ್ನು ಸ್ವಾಧೀನಪಡಿಸಿಕೊಳ್ಳುವ ಸಂಬಂಧದಲ್ಲಿ ಎಲ್ಲಾ ಕಾರ್ಯಕ್ರಮಗಳು ಪೂರ್ತಿಯಾಗಿದ್ದು ಜಮೀನಿನ ಮಾಲೀಕರಿಗೆ ಹಣವನ್ನು ಕೊಡುವ ಸಲುವಾಗಿ ಸರ್ಕಾರವು ಬಿಡುಗಡೆ ಮಾಡದಿರುವುದಕ್ಕೆ ಕಾರಣವೇನು ;

ಈ) ಸರ್ಕಾರದವರು ಈಗಲಾದರೂ ಹಣ ಬಿಡುಗಡೆ ಮಾಡಿ ಕಟ್ಟಡ ನಿರ್ಮಾಣ ಕಾರ್ಯವನ್ನು ತ್ವರಿತಗೊಳಿಸುವರೆ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು.

ಆ) ಹೌದು.

ಇ) ಈ ವರ್ಷದ 1991-92ರ ಆಯವ್ಯಯದಲ್ಲಿ ಹಣ ದೊರೆಯದೆ ಇರುವುದರಿಂದ ಜಮೀನಿನ ಮಾಲೀಕರಿಗೆ ಭೂ ಸ್ವಾಧೀನದ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಈ) ಇದನ್ನು ಪರಿಶೀಲಿಸಲಾಗುತ್ತಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿನ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಬಗ್ಗೆ.

1790. ಶ್ರೀ ಎಸ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿನ ಪದವಿಪೂರ್ವ ಕಾಲೇಜುಗಳಲ್ಲಿ. ಪ್ರಥಮ ದರ್ಜೆ ಕಾಲೇಜು. ಪ್ರೌಢ ಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ;

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಿನಾಂಕ 1-8-90 ರಿಂದ 31-12-90ರ ವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ 431 ಹಾಗೂ 1-1-91 ರಿಂದ 31-5-91ರ ವರೆಗೆ 128 ಪ್ರಾಥಮಿಕ ಶಾಲಾ ಶಿಕ್ಷಕರ ಯೋಜನೇತರ ಹುದ್ದೆಗಳು ಹಾಗೂ ಕಪ್ಪುಹಲಗೆ ಕಾರ್ಯಾಚರಣೆ ಯೋಜನೆಯ 3ನೇ ಹಂತದಲ್ಲಿ 198 ಮತ್ತು 4ನೇ ಹಂತದಲ್ಲಿ 271 ಹುದ್ದೆಗಳು ಖಾಲಿ ಇರುತ್ತದೆ.

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ದಿನಾಂಕ 31-12-91 ರಲ್ಲಿದ್ದಂತೆ 59 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಪದವಿ ಪೂರ್ವ ಕಾಲೇಜುಗಳಲ್ಲಿ 7 ಉಪನ್ಯಾಸಕ ಹುದ್ದೆಗಳು ಹಾಗೂ ಸ್ವತಂತ್ರ ಪದವಿಪೂರ್ವ ಕಾಲೇಜುಗಳಲ್ಲಿ 1 ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತವೆ. ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಟ್ಟು 36 ಹುದ್ದೆಗಳು ಖಾಲಿ ಇವೆ.

ಆ) ಯೋಜನೇತರ ಅಡಿಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಸರ್ಕಾರವು ಇಡಿ 131 ಪಿಎಮ್‌ಎಸ್ 91 ದಿನಾಂಕ 8-11-91 ಮತ್ತು 27-2-92 ರಲ್ಲಿ ಆರ್ಥಿಕ ಮಿತವ್ಯಯವನ್ನು ಸಡಲಿಸಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಿದೆ.

ಇದಲ್ಲದೆ ಕಪ್ಪು ಹಲಗೆ ಯೋಜನೆಯ 3ನೇ ಹಾಗೂ 4ನೇ ಹಂತದ ಕಾರ್ಯಾಚರಣೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ಸಂಖ್ಯೆ ಇಡಿ 131 ಪಿಎಂಎಸ್ 91 ದಿನಾಂಕ 17-1-92 ರಲ್ಲಿ ಅನುಮತಿಸಿದ್ದು, ಹೊಂದಾವಣೆ ಮುಖಾಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯ ಬಗ್ಗೆ ಅಧಿಸೂಚನೆ ಸಂಖ್ಯೆ ಇಡಿ 88 ಪಿಎಂಎಸ್ 91 ದಿನಾಂಕ 21-10-91 ರಲ್ಲಿ ನಿಯಮಾವಳಿಗಳನ್ನು ರೂಪಿಸಿದ್ದು ಅದರಂತೆ ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಸಹಾಯಕ ಶಿಕ್ಷಕರ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿತ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಸ್ನಾತಕೋತ್ತರ ಪದವಿ ಪಡೆದ ಅರ್ಹ ಸಹ ಶಿಕ್ಷಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 8-10-91ರಂದು ಪ್ರಕಟಿಸಲಾಗಿದ್ದು ಅರ್ಹ ಸಹ ಶಿಕ್ಷಕರಿಗೆ ಉಪನ್ಯಾಸಕರಾಗಿ ಬಡ್ತಿ ನೀಡುವ ಬಗ್ಗೆ ಹಾಗೂ ನೇರ ನೇಮಕಾತಿಯಿಂದ ತುಂಬುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳೂ ಸೇರಿದಂತೆ ಒಟ್ಟು 335 ಭೋದಕ ಖಾಲಿ ಹುದ್ದೆಗಳ ಪೈಕಿ 271 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವು ಈಗಾಗಲೇ ಸಂದರ್ಶನಗಳನ್ನು ನಡೆಸುತ್ತಿದ್ದು, ಉಳಿದ 84 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಧ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದು. ಇದೇ ಇಲಾಖೆಯಲ್ಲಿ ಖಾಲಿ ಇರುವ 'ಡಿ' ದರ್ಜೆ ಪರಿಚಾರಕರ ಹುದ್ದೆಗಳನ್ನು ಅರ್ಹ ದಿನಗೂಲಿ ನೌಕರರಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಜಯನಗರ ಗೃಹ ನಿರ್ಮಾಣ ಸಹಕಾರಿ ಸಂಘದಲ್ಲಿ ಸದಸ್ಯರನ್ನು ನೋಂದಾಯಿಸುವ ಬಗ್ಗೆ.

1793. ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಯನಗರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಕಳೆದ ಮೂರು ವರ್ಷಗಲ್ಲಿ ನೋಂದಾಯಿಸಲಾಗಿರುವ ಸದಸ್ಯರ ಸಂಖ್ಯೆ ಎಷ್ಟು (ವರ್ಷಾವಾರು ವಿವರಗಳನ್ನು ನೀಡುವುದು) ;

ಆ) ಸದರಿ ಅವಧಿಯಲ್ಲಿ ಎಷ್ಟು ಮಂದಿ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗಿದೆ (ವರ್ಷಾವಾರು ವಿವರಗಳನ್ನು ನೀಡುವುದು) ;

ಇ) 1991-92ರಲ್ಲಿ ಸಂಘದಲ್ಲಿ ಸದಸ್ಯರಾಗಿರುವವರನ್ನು 1989-90ರಲ್ಲಿ ಸದಸ್ಯರಾಗಿರುವುದಾಗಿ ಪರಿಗಣಿಸಿ ನಿವೇಶನ ನೀಡಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೆ ;

ಈ) ಹಾಗಿದ್ದಲ್ಲಿ ಈ ಬಗ್ಗೆ ವಿಚಾರಣೆ ನಡೆಸಿ ಅಂತಹ ಕೃತ್ಯಗಳಲ್ಲಿ ಭಾಗಿಗಳಾಗಿರುವ ಸದಸ್ಯರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಸಂಘವು ನೋಂದಣಿ ಮಾಡಿಕೊಂಡಿರುವ ಸದಸ್ಯರುಗಳ ವಿವರಗಳು ಈ ಕೆಳಕಂಡಂತೆ ಇವೆ.

1)	1988-89	209
2)	1989-90	188
3)	1990-91	233
4)	1991-92	167
	(ದಿನಾಂಕ 27-2-92 ರವರೆಗೆ)	
	ಒಟ್ಟು	797

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಂಘವು ತನ್ನ ಸದಸ್ಯರುಗಳಿಗೆ ನೀಡಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.

1)	1988-89	ಇಲ್ಲ
2)	1989-90	73
3)	1990-91	ಇಲ್ಲ
4)	1991-92	ಇಲ್ಲ

ಇ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮುನ್ಸೀಫರ ನೇಮಕಾತಿ ಕುರಿತು.

1802. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು 34 ಅಭ್ಯರ್ಥಿಗಳನ್ನು ಮುನ್ಸೀಫ್ ಹುದ್ದೆಗೆ ಆಯ್ಕೆ ಮಾಡಿದ್ದು, ಅವರಿಗೆ ನೇಮಕಾತಿ ಆಜ್ಞೆಯನ್ನು ನೀಡಲಾಗಿದೆಯೆ; ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು ;

ಆ) ನೇಮಕಾತಿ ನೀಡಿದ್ದಲ್ಲಿ ಎಷ್ಟು ಅಭ್ಯರ್ಥಿಗಳಿಗೆ ನೀಡಲಾಗಿದೆ ಹಾಗೂ ಉಳಿದವರಿಗೆ ಯಾವಾಗ ನೇಮಕಾತಿ ನೀಡಲಾಗುವುದು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಕರ್ನಾಟಕ ಉಚ್ಚ ನ್ಯಾಯಾಲಯವು ಮುನ್ಸೀಫ್ ಹುದ್ದೆಗಳಿಗೆ ಆಯ್ಕೆ ಮಾಡಿದ 34 ಮಂದಿ ಅಭ್ಯರ್ಥಿಗಳ ಪೈಕಿ 5 ಮಂದಿ ಅಭ್ಯರ್ಥಿಗಳನ್ನು ಮುನ್ಸೀಫರನ್ನಾಗಿ ನೇಮಕಾತಿ ಮಾಡಿದ್ದು, ಉಳಿದ 29 ಮಂದಿಗಳನ್ನು ನೇಮಕಾತಿ ಮಾಡುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಗ್ಗಾಂವ್ ತಾಲ್ಲೂಕಿನ ಗ್ರಾಮಗಳ ಬಸ್ ಸೌಲಭ್ಯದ ಕುರಿತು

1915. ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಷೆಡ್ಯೂಲ್ ಬಸ್ ಕೊಡಲಾಗಿದೆ ; ಹುಬ್ಬಳ್ಳಿ-ಧಾರವಾಡದಲ್ಲಿ ಎಷ್ಟು ಷೆಡ್ಯೂಲ್ ಬಸ್‌ಗಳಿವೆ ;

ಆ) ಉಭಯ ತಾಲ್ಲೂಕುಗಳಲ್ಲಿ

ಇ) ಶಿಗ್ಗಾಂವ್ ತಾಲ್ಲೂಕು ವಿವಹಳ್ಳಿ, ಹುಣಶೆರಟ್ಟಿ ಗ್ರಾಮಗಳಿಗೆ ಇನ್ನು ಎಷ್ಟು ದಿವಸಗಳಲ್ಲಿ ಬಸ್ ಸಂಚಾರ ಪ್ರಾರಂಭವಾಗುವುದು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ 73 ವಾಹನಗಳು ಸಂಚರಿಸುತ್ತಿವೆ. ಹುಬ್ಬಳ್ಳಿ ಹಾಗೂ ಧಾರವಾಡ ನಗರಗಳಲ್ಲಿ 158 ವಾಹನಗಳು ಸಂಚರಿಸುತ್ತಿವೆ.

ಆ) ಶಿಗ್ಗಾಂವ ತಾಲ್ಲೂಕಿನಲ್ಲಿ 20 ಹಳ್ಳಿಗಳಿಗೆ ಹಾಗೂ ಸವಣೂರು ತಾಲ್ಲೂಕಿನಲ್ಲಿ 5 ಹಳ್ಳಿಗಳಿಗೆ ವಾಹನ ಸಂಪರ್ಕ ಇರುವುದಿಲ್ಲ.

ಇ) ಶಿಗ್ಗಾಂವ ತಾಲ್ಲೂಕಿನಲ್ಲಿ ಈ ಹಳ್ಳಿಗಳು ಬರುವುದಿಲ್ಲ. ಆದರೆ ವನಹಳ್ಳಿ ಮತ್ತು ಹುಣಸಿಕಟ್ಟಿ ಹಳ್ಳಿಗಳು ಶಿಗ್ಗಾಂವ ತಾಲ್ಲೂಕಿನಲ್ಲಿ ಬರುವುವು. ಈ ಹಳ್ಳಿಗಳು ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳನ್ನು ಹೊಂದಿರುವುದಿಲ್ಲ. ಆದರೂ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಯಾದ ನಂತರ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುವುದು.

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ನಷ್ಟದಲ್ಲಿರುವ ಬಗ್ಗೆ.

1820. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡದಲ್ಲಿರುವ ಏಕೈಕ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಈಗ ನಷ್ಟದಲ್ಲಿದೆಯೆ ;

ಆ) ಈ ಕಾರ್ಖಾನೆ ಚುರುಕಾಗಿ ಕಾರ್ಯ ನಿರ್ವಹಿಸುವಂತೆ ಸರ್ಕಾರ ಯಾವ ರೀತಿಯ ನೆರವನ್ನು ನೀಡಲು ಉದ್ದೇಶಿಸಿದೆ ;

ಇ) ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಉಪಕಾರವಾಗುವ ಈ ಏಕೈಕ ಕಾರ್ಖಾನೆಯನ್ನು ಚೇತನಗೊಳಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೆ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಕೇಂದ್ರ ಸರ್ಕಾರವು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಮಂಜೂರು ಮಾಡಿರುವ ರೂ. 45.00 ಲಕ್ಷಗಳಿಗೆ ಖಾತರಿ ನಿಲ್ಲುವ ಹಾಗೂ ರೂ. 1.75 ಕೋಟಿ ನೆರವನ್ನು ಮಂಜೂರು ಮಾಡಬೇಕೆಂಬ ಕಾರ್ಖಾನೆಯ ಬೇಡಿಕೆಯ ಬಗೆಗಿನ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಕಾರ್ಖಾನೆಯ ಪುನಃಶ್ಚೇತನದ ಸಾಧ್ಯಾಸಾಧ್ಯತೆಯ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಹಸಿರು ಕಾರ್ಡು ಮತ್ತು ಇತರ ಕಾರ್ಡುಗಳನ್ನು ನೀಡಿರುವ ಬಗ್ಗೆ.

1922. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991ನೇ ಡಿಸೆಂಬರ್ ಅಖೈರುವರೆಗೆ ಇರುವ ಹಸಿರು ಕಾರ್ಡು ಮತ್ತು ಇತರ ಕಾರ್ಡುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಿರು ಕಾರ್ಡು ಮತ್ತು ಇತರೆ ಕಾರ್ಡುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಇ) ಸರಿಯಾಗಿ ಎಲ್ಲ ವರ್ಗದ ಜನರಿಗೆ ಕಾರ್ಡುಗಳು ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 31.14,608 ಹಸಿರು ಪಡಿತರ ಚೀಟಿಗಳು

27,28,677 ಕೇಸರಿ ಪಡಿತರ ಚೀಟಿಗಳು

21,69,929 ಇತರೆ ಕಾರ್ಡುಗಳು.

(ಜಿಲ್ಲಾವಾರು ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ).

ಆ) 1,28,755 ಹಸಿರು ಪಡಿತರ ಚೀಟಿಗಳು

2,56,967 ಕೇಸರಿ ಪಡಿತರ ಚೀಟಿಗಳು ಮತ್ತು

91,426 ಇತರೆ ಪಡಿತರ ಚೀಟಿಗಳು

(ತಾಲ್ಲೂಕು ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಇ) ಬಂದಿರುತ್ತದೆ.

ಈ) ಪಡಿತರ ಚೀಟಿಗಳನ್ನು ಪಡೆಯದೆ ಇರುವ ಯಾವುದೇ ವರ್ಗದ ಕುಟುಂಬಗಳು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಲ್ಲಿ ಅಂತಹ ಕುಟುಂಬಗಳಿಗೆ ಕೂಡಲೇ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಸೂಚನೆ ನೀಡಲಾಗಿದೆ.

ಅನುಬಂಧ 'ಅ'

ಜಿಲ್ಲಾವಾರು ವಿವರಗಳನ್ನೊಳಗೊಂಡ ಹಸಿರು, ಕೇಸರಿ ಮತ್ತು ಇತರೆ ಪಡಿತರ ಚೀಟಿಗಳ ಸಂಖ್ಯೆ : (1991ನೇ ಡಿಸೆಂಬರ್ ಅಖೈರ್‌ನಲ್ಲಿದ್ದಂತೆ)

ಕ್ರ. ಸಂ.	ಜಿಲ್ಲೆಯ ಹೆಸರು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
1.	ಬೆಂಗಳೂರು (ಅ.ಪ.ಪ್ರದೇಶ)	-	-	7,62,494
2.	ಬೆಂಗಳೂರು ನಗರ ಜಿಲ್ಲೆ	75,936	95,087	8.431
3.	ಬೆಂಗಳೂರು (ಗ್ರಾಮಾಂತರ ಜಿಲ್ಲೆ)	1,43,608	1,17,603	53,146
4.	ಬೆಳಗಾಂ	2,03,895	2,69,175	1,45,306
5.	ಬಳ್ಳಾರಿ	1.18,992	1,10,488	67,882
6.	ಬೀದರ್	83,511	92,380	32,647
7.	ಬಿಜಾಪುರ	1,98,479	2,28,066	1,00,365
8.	ಚಿಕ್ಕಮಗಳೂರು	1.04,040	62,608	30,802
9.	ಚಿತ್ರದುರ್ಗ	1,68,993	1,56,025	76,693
10.	ದಕ್ಷಿಣ ಕನ್ನಡ	1,28,755	2,56,967	91,426
11.	ಧಾರವಾಡ	2,57,120	1,44,475	1,74,012
12.	ಗುಲ್ಬರ್ಗ	2,08,013	1,45.571	78,491
13.	ಹಾಸನ	1,34,143	1,11,699	38,718

ಕ್ರ. ಸಂ.	ಜಿಲ್ಲೆಯ ಹೆಸರು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
14.	ಕೊಡಗು	55,484	41,974	5,644
15.	ಕೋಲಾರ	1,91,654	1,32,032	83,361
16.	ಮಂಡ್ಯ	1,52,536	1,14,179	37,772
17.	ಮೈಸೂರು	2,49,004	1,66,455	1,58,482
18.	ರಾಯಚೂರು	1,73,078	1,62,685	54,947
19.	ಶಿವಮೊಗ್ಗ	1,40,777	1,09,662	72,380
20.	ತುಮಕೂರು	2,23,671	1,43,829	52,245
21.	ಉತ್ತರ ಕನ್ನಡ	1,02,919	67,717	44,685
	ಒಟ್ಟು	31,14,608	27,28,677	21,69,929

ಅನುಬಂಧ 'ಬ'

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಹಸಿರು ಮತ್ತು ಇತರೆ ಪಡಿತರ ಚೀಟಿಗಳ ಪಟ್ಟಿ

ಕ್ರ. ಸಂ.	ತಾಲ್ಲೂಕುಗಳು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
1.	ಮಂಗಳೂರು (ಅ.ಪ)			54517
2.	ಮಂಗಳೂರು	16756	37769	5861
3.	ಉಡುಪಿ	18280	57566	9446
4.	ಕುಂದಾಪುರ	25214	26958	5745
5.	ಕಾರ್ಕಳ	13503	29005	5967
6.	ಪುತ್ತೂರು	15962	20750	4171
7.	ಬೆಳ್ತಂಗಡಿ	12486	35828	-
8.	ಬಂಟ್ವಾಳ	16864	31541	5689
9.	ಸುಳ್ಯ	9690	17550	
	ಒಟ್ಟು	128755	256967	91426

ರಾಜ್ಯದಲ್ಲಿರುವ ಸ್ಕೂಲು ಮತ್ತು ಕಾಲೇಜುಗಳ ಸಂಖ್ಯೆ ಬಗ್ಗೆ.

1919. ಶ್ರೀ ಎಸ್. ಷಫಿ ಅಹಮದ್ (ತುಮಕೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸ್ಕೂಲ್‌ಗಳು, ತಾಂತ್ರಿಕ ಶಿಕ್ಷಣ ಸಂಸ್ಥೆ ಮತ್ತು ವಿಜ್ಞಾನ ಮತ್ತು ಕಲಾ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಮತ್ತು ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಸಂಖ್ಯೆ ಎಷ್ಟು ;

ಇ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳು ಮತ್ತು ಸ್ಕೂಲ್‌ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

ಈ) ಆರ್ಥಿಕ ದಿಗ್ಬಂಧನ ಸಡಿಲಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ 34 ಚಿತ್ರಕಲಾ ಕಾಲೇಜುಗಳು, 258 ಕಲಾ ಕಾಲೇಜುಗಳು. ಮತ್ತು 76 ವಿಜ್ಞಾನ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.

ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ 51 ಇಂಜನಿಯರಿಂಗ್ ಕಾಲೇಜುಗಳು ಮತ್ತು 6 ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳು ಇರುತ್ತವೆ. ರಾಜ್ಯದಲ್ಲಿನ 118 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 18 ಕಲಾ. 7 ವಿಜ್ಞಾನ, 3 ಕಲಾ ಮತ್ತು ವಿಜ್ಞಾನ 70 ಕಲಾ ಮತ್ತು ವಾಣಿಜ್ಯ, 2 ವಾಣಿಜ್ಯ, 18 ಕಲಾ. ವಾಣಿಜ್ಯ ವಿಜ್ಞಾನ ಸಂಯೋಜಿತ ಶಿಕ್ಷಣ ಸಂಸ್ಥೆಗಳಾಗಿರುತ್ತವೆ.

ಆ) ರಾಜ್ಯದಲ್ಲಿ 135 ಪಾಲಿಟೆಕ್ನಿಕ್ ಮತ್ತು ವೃತ್ತಿಪರ ಶಿಕ್ಷಣ ಕೋರ್ಸ್‌ಗಳಲ್ಲಿ. 462. ಪದವಿಪೂರ್ವ ಕಾಲೇಜುಗಳಲ್ಲಿ, ಹಾಗೂ 42 ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳಲ್ಲೂ ಇರುತ್ತವೆ.

ಇ) ಸರ್ಕಾರಿ ಇಂಜನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಒಟ್ಟು 774 ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜುಗಳಲ್ಲಿ 21 ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ 789 ಹುದ್ದೆಗಳು ಖಾಲಿ ಇರುತ್ತವೆ.

ಈ) ಸರ್ಕಾರದ ಪತ್ರ ಸಂಖ್ಯೆ ಇಡಿ 116 ಡಿಟಿಇ 90 ದಿನಾಂಕ 30-1-91ರಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ 145 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಿದ್ದು, ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಈ ದಿಶೆಯಲ್ಲಿ ಸಂದರ್ಶನಕ್ಕೆ ಕರೆದಿದ್ದಾರೆ. ಬಾಕಿ ಉಳಿದ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕನ್ನಡ ಪಂಡಿತ ತರಬೇತಿ ಕೇಂದ್ರದ ಬಗ್ಗೆ.

1972. ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನ್ನಡ ಪಂಡಿತ ತರಬೇತಿಯ ಕೇಂದ್ರವನ್ನು ಸರ್ಕಾರ ಮುಚ್ಚಲು ಉದ್ದೇಶಿಸಿದೆಯೇ ;

ಆ) ಮುಚ್ಚಲು ಉದ್ದೇಶಿಸಿದ್ದಲ್ಲಿ ಈಗಾಗಲೇ ತರಬೇತಿ ಪಡೆದಿರುವ ಅಭ್ಯರ್ಥಿಗಳನ್ನು ಹೇಗೆ ಸರ್ಕಾರ ಸೇವೆಯಲ್ಲಿ ಉಳಿಸಿಕೊಳ್ಳುತ್ತದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :.

1) ಇಲ್ಲ.

2) ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಮೇಲೆ ಜನ ಪ್ರಯಾಣ ಮಾಡುವುದನ್ನು ನಿಲ್ಲಿಸುವ ಬಗ್ಗೆ.

1975. ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ಮೇಲೆ ಜನ ಕುಳಿತು ಪ್ರಯಾಣ ಮಾಡುವುದು ಸರ್ಕಾರಕ್ಕೆ ತಿಳಿದಿದೆಯೇ :

ಆ) ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳು ಏನು ;

ಇ) ಈಗಲಾದರೂ ಬಸ್ಸುಗಳ ಮೇಲೆ ಕುಳಿತು ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಹೌದು.

ಆ) (1) ದಿನಾಂಕ 13-3-92ರಿಂದ ಗುಲ್ಬರ್ಗ ಜಿಲ್ಲೆಯಲ್ಲಿ 6 ಹೆಚ್ಚುವರಿ ಮಾರ್ಗಸೂಚಿಗಳನ್ನು (ಬಸ್ಸುಗಳನ್ನು) ಪ್ರಾರಂಭಿಸಲಾಗಿದೆ.

(2) ಸಾರಿಗೆಗಳು ರದ್ದಾಗುವುದನ್ನು ಕಡಿಮೆ ಮಾಡಲು ಮತ್ತು ಅವುಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆಗೊಳಪಡಿಸಲು ಕ್ರಮ ಕೈಗೊಳ್ಳಲಾಗಿದೆ.

(3) ಕಡಿಮೆ ಅಂತರದ ಟ್ರಿಪ್ಪುಗಳನ್ನು ಹೆಚ್ಚಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗುತ್ತಿದೆ.

ಇ) ಪ್ರಕರಣದ ಒತ್ತಡವನ್ನು ನಿವಾರಿಸುವ ಸಲುವಾಗಿ 1992-93ನೇ ಸಾಲಿಗೆ ಗುಲ್ಬರ್ಗ ಜಿಲ್ಲೆಯಲ್ಲಿ 37 ಬಸ್ಸುಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ಆನೇಕಲ್ ತಾಲ್ಲೂಕ್ ಬೊಮ್ಮಸಂದ್ರದಲ್ಲಿ ವಿದ್ಯುತ್ ನಿಲುಗಡೆಯಾಗುತ್ತಿರುವುದರ ಬಗ್ಗೆ

1976 ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆನೇಕಲ್ ತಾಲ್ಲೂಕು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಪ್ರತಿದಿನ ಬೇಡಿಕೆ ಇರತಕ್ಕ ವಿದ್ಯುತ್ ಪ್ರಮಾಣ ಎಷ್ಟು ;

ಆ) ಪ್ರತಿ ದಿನ ಸರಬರಾಜಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ;

ಇ) ಪ್ರತಿದಿನ ಇದ್ದಕ್ಕಿದ್ದಂತೆ 2-3 ಸಾರಿ ವಿದ್ಯುತ್ ನಿಲುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ ಈ ರೀತಿ ನಿಲುಗಡೆಯಾಗುತ್ತಿರುವುದನ್ನು ತಪ್ಪಿಸಲು ಸಣ್ಣ ಕೈಗಾರಿಕೆಯವರಿಗೆ ಹೋಗಲಾಡಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಪ್ರತಿದಿನ ಅಂದಾಜು ಬೇಡಿಕೆ ಪ್ರಮಾಣ ಸುಮಾರು 1.3 ಲಕ್ಷ ಯೂನಿಟ್‌ಗಳು.

ಆ) ಪ್ರತಿದಿನ ಸುಮಾರು 1 ಲಕ್ಷ ಯೂನಿಟ್ಟುಗಳು.

ಇ) ನಿಯಮಿತ ಲೋಡ್ ಶೆಡ್ಡಿಂಗ್ ಮತ್ತು ಇತರ ಅನಿವಾರ್ಯ ಕಾರಣಗಳಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತದೆ.

ಈ) ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯನ್ನು ಸುಧಾರಿಸಲು ಬೊಮ್ಮಸಂದ್ರದಲ್ಲಿ ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ 6.8 ಎಂ.ವಿ.ಎ. ಸಾಮರ್ಥ್ಯದ ಒಂದು ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು.

ಅಲ್ಲದೇ ಯರಂದಹಳ್ಳಿ (ಬೊಮ್ಮಸಂದ್ರ)ಯಲ್ಲಿ ಒಂದು 220:66 ಕೆ.ವಿ.ಸಬ್-ಸ್ಟೇಷನನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ.

ರಾಜ್ಯದಲ್ಲಿ ಹೊಸ ಬಿ.ಎಡ್. ಕಾಲೇಜುಗಳನ್ನು ಪ್ರಾರಂಭಿಸುವುದರ ಬಗ್ಗೆ.

1989. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಬಿ.ಎಡ್. ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಅವುಗಳಲ್ಲಿ ಸರ್ಕಾರಿ ಬಿ.ಎಡ್. ಕಾಲೇಜುಗಳು ಎಷ್ಟು ಮತ್ತು ಸರ್ಕಾರಿ ಬಿ.ಎಡ್. ಕಾಲೇಜುಗಳು ಯಾವ ಯಾವ ಸ್ಥಳಗಳಲ್ಲಿ ಇವೆ ಮತ್ತು ಖಾಸಗೀ ಬಿ.ಎಡ್. ಕಾಲೇಜುಗಳ ಸಂಖ್ಯೆ ಎಷ್ಟು, ಅವು ಎಲ್ಲೆಲ್ಲಿ ಇವೆ ;

ಇ) ಖಾಸಗಿ ಬಿ.ಎಡ್. ಕಾಲೇಜುಗಳಲ್ಲಿ ಎಷ್ಟು ಕಾಲೇಜುಗಳಿಗೆ ಅನುದಾನವನ್ನು ಕೊಡಲಾಗುತ್ತಿದೆ ಹಾಗೂ ಅನುದಾನ ಪಡೆಯುತ್ತಿರುವ ಕಾಲೇಜುಗಳು ಮತ್ತು ಅವುಗಳಿಗೆ ಯಾವ ದಿನಾಂಕದಿಂದ ಅನುದಾನವನ್ನು ಕೊಡಲಾಗುತ್ತಿದೆ ;

ಈ) ಅನುದಾನ ಪಡೆಯಲು ಸರ್ಕಾರದವರು ಅಳವಡಿಸಿರುವ ನೀತಿ ನಿಯಮಗಳೇನು ;

ಉ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬಿ.ಎಡ್. ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ ; (ಅವುಗಳ ವಿವರಗಳನ್ನು ನೀಡುವುದು);

ಊ) ಈಗ ಹೊಸ ಬಿ.ಎಡ್. ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದವರು ಅನುಮತಿ ನೀಡುತ್ತಿರುವರೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 63.

ಆ) 6 ಸರ್ಕಾರಿ ಬಿ.ಎಡ್. ಕಾಲೇಜುಗಳು (ಸ್ಥಳಗಳಿಗೆ ಅನುಬಂಧ ನೋಡುವುದು) 56 ಖಾಸಗಿ ಬಿ.ಎಡ್. ಕಾಲೇಜುಗಳು (ಸ್ಥಳಗಳಿಗೆ ಅನುಬಂಧ ನೋಡುವುದು) .

ಇ) 14 (ವಿವರಗಳಿಗೆ ಅನುಬಂಧ ನೋಡುವುದು).

ಈ) ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಕರ ಶಿಕ್ಷಣ ಕಾಲೇಜುಗಳ ಹೊಸ ಅನುದಾನ ಸಂಹಿತೆ.

ಉ) ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ.

1. ಆಲ್-ಅಮಿನ್ ಬಿ.ಎಡ್. ಕಾಲೇಜು ಬೆಂಗಳೂರು 1990-91, 1991-92ನೇ ಸಾಲಿಗೆ ಮಾತ್ರ ಮತ್ತು

2) ಜೈನ್ ಮಹಿಳಾ ಮಂಡಳ ಬಿ.ಎಡ್. ಕಾಲೇಜು, ಬೆಳಗಾಂ, 1990-91, 1991-92 ಮತ್ತು 1992-93ನೇ ಸಾಲಿಗೆ ಮಾತ್ರ (3 ವರ್ಷ).

ಊ) ಇಲ್ಲ.

ಅನುಬಂಧ

ಕ್ರ.ಸಂ.	ಕಾಲೇಜಿನ ಹೆಸರು	ಅನುದಾನ ನೀಡಿದ್ದಲ್ಲಿ ಯಾವ ವರ್ಷದಿಂದ
	ಬೆಂಗಳೂರು ವಿಶ್ವವಿದ್ಯಾನಿಲಯ	
1.	ರಾಷ್ಟ್ರೀಯ ವಿದ್ಯಾಲಯ ಶಿಕ್ಷಣ ಕಾಲೇಜು, ಬೆಂಗಳೂರು (ಅನುದಾನಿತ)	1976
2.	ಎಂ.ಇ.ಎಸ್. ಶಿಕ್ಷಣ ಕಾಲೇಜು, ಬೆಂಗಳೂರು (ಅನುದಾನಿತ)	1961
3.	ವಿಜಯ ಶಿಕ್ಷಣ ಕಾಲೇಜು, ಬೆಂಗಳೂರು (ಅನುದಾನಿತ)	1962
4.	ಬಿಇಎಸ್ ಶಿಕ್ಷಣ ಕಾಲೇಜು, ಬೆಂಗಳೂರು (ಅನುದಾನಿತ)	1979
5.	ನ್ಯೂ ಹಾರಿಜನ್ ಶಿಕ್ಷಣ ಕಾಲೇಜು, ಇಂದಿರಾನಗರ, ಬೆಂಗಳೂರು	
6.	ಡಾ: ಅಂಬೇಡ್ಕರ್ ಶಿಕ್ಷಣ ಕಾಲೇಜು, ಬೆಂಗಳೂರು	
7.	ಎಂ.ವಿ.ಜೆ. ಶಿಕ್ಷಣ ಕಾಲೇಜು, ಬೆಂಗಳೂರು.	
8.	ಕರ್ನಾಟಕ ತಿಗಳರ ವಿದ್ಯಾವರ್ಧಕ ಸಂಘ ಶಿಕ್ಷಣ ಕಾಲೇಜು, ಬೆಂಗಳೂರು.	
9.	ಸರ್ವಜ್ಞ ಶಿಕ್ಷಣ ಕಾಲೇಜು, ಬೆಂಗಳೂರು	
10.	ಜಯಚಾಮರಾಜೇಂದ್ರ ಸಂಸ್ಥೆಯ ಶಿಕ್ಷಣ ಕಾಲೇಜು, ಬಟ್ರಹಳ್ಳಿ, ಬೆಂಗಳೂರು.	
11.	ಸಿದ್ಧಗಂಗಾ ಶಿಕ್ಷಣ ಕಾಲೇಜು, ತುಮಕೂರು	
12.	ಕೆ.ಎಸ್.ಇ.ಎಫ್. ಶಿಕ್ಷಣ ಕಾಲೇಜು, ತುಮಕೂರು	
13.	ಸಿದ್ಧಾರ್ಥ ಶಿಕ್ಷಣ ಕಾಲೇಜು, ತುಮಕೂರು	
14.	ಮುನಿಸಿಪಲ್ ಶಿಕ್ಷಣ ಕಾಲೇಜು, ಚಿಕ್ಕಬಳ್ಳಾಪುರ	
15.	ವೆಂಕಟಪ್ಪ ಶಿಕ್ಷಣ ಕಾಲೇಜು, ಚಿಕ್ಕಬಳ್ಳಾಪುರ	
16.	ಶ್ರೀ ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಕಾಲೇಜು, ಮಧುಗಿರಿ	

ಕ್ರ.ಸಂ.	ಕಾಲೇಜಿನ ಹೆಸರು	ಅನುದಾನ ನೀಡಿದ್ದಲ್ಲಿ ಯಾವ ವರ್ಷದಿಂದ
17.	ಗೋಲ್ಡ್‌ಫೀಲ್ಡ್ ಶಿಕ್ಷಣ ಕಾಲೇಜು. ಕೆ.ಜಿ.ಎಫ್.	
18.	ಸಂಜಯಗಾಂಧಿ ಶಿಕ್ಷಣ ಕಾಲೇಜು. ಬೆಂಗಳೂರು	
	ಮೈಸೂರು ವಿಶ್ವವಿದ್ಯಾನಿಲಯ	
19.	ಸರ್ಕಾರಿ ಶಿಕ್ಷಣ ಕಾಲೇಜು. ಮೈಸೂರು	
20.	ಶಾರದ ವಿಲಾಸ್ ಶಿಕ್ಷಣ ಕಾಲೇಜು. ಮೈಸೂರು (ಅನುದಾನಿತ)	1964
21.	ಸೇಂಟ್ ಜೋಸೆಫ್ ಶಿಕ್ಷಣ ಕಾಲೇಜು. ಮೈಸೂರು (ಅನುದಾನಿತ)	1971
22.	ಶಿಕ್ಷಣ ಸಂಸ್ಥೆ. ಮೈಸೂರು (ಅನುದಾನಿತ)	1963
23.	ರಾಮಕೃಷ್ಣ ಶಿಕ್ಷಣ ಕಾಲೇಜು. ಮೈಸೂರು	
24.	ಶಂಕರಗೌಡ ಶಿಕ್ಷಣ ಕಾಲೇಜು. ಮೈಸೂರು	
25.	ಹಾಸನಾಂಬ ಶಿಕ್ಷಣ ಕಾಲೇಜು. ಮಂಡ್ಯ	
26.	ಆದಿಚುಂಚನಗಿರಿ ಶಿಕ್ಷಣ ಕಾಲೇಜು. ಚನ್ನರಾಯಪಟ್ಟಣ	
27.	ವಿವೇಕಾನಂದ ಶಿಕ್ಷಣ ಕಾಲೇಜು. ಅರಸೀಕೆರೆ (ಅನುದಾನಿತ)	1979
28.	ಬಿ.ಆರ್.ಡಿ.ಎಂ. ಶಿಕ್ಷಣ ಕಾಲೇಜು. ಸಕಲೇಶಪುರ	
	ಕುವೆಂಪು ವಿಶ್ವವಿದ್ಯಾನಿಲಯ	
29.	ರಾಷ್ಟ್ರೀಯ ಶಿಕ್ಷಣ ಕಾಲೇಜು, ಶಿವಮೊಗ್ಗ (ಅನುದಾನಿತ)	1964
30.	ಸರ್ಕಾರಿ ಶಿಕ್ಷಣ ಕಾಲೇಜು. ಚಿತ್ರದುರ್ಗ	
31.	ಎಂ.ಎಂ. ಶಿಕ್ಷಣ ಕಾಲೇಜು ದಾವಣಗೆರೆ (ಅನುದಾನಿತ)	1970
32.	ಬಿಇಎಸ್ ಶಿಕ್ಷಣ ಕಾಲೇಜು. ದಾವಣಗೆರೆ	
33.	ಶ್ರೀಶೈಲ ಶಿಕ್ಷಣ ಕಾಲೇಜು. ಹರಿಹರ	
34.	ಎಂಎಲ್‌ಎಂಎಸ್‌ಎನ್ ಶಿಕ್ಷಣ ಕಾಲೇಜು. ಚಿಕ್ಕಮಗಳೂರು	
35.	ಶ್ರೀ ದೇವರಾಜ್ ಅರಸ್ ಸಂಸ್ಥೆಯ ಶಿಕ್ಷಣ ಕಾಲೇಜು. ಚಿತ್ರದುರ್ಗ	
	ಮಂಗಳೂರು ವಿಶ್ವವಿದ್ಯಾನಿಲಯ	
36.	ಸರ್ಕಾರಿ ಶಿಕ್ಷಣ ಕಾಲೇಜು. ಮಂಗಳೂರು	
37.	ಸೇಂಟ್ ಅನ್ಸ್ ಶಿಕ್ಷಣ ಕಾಲೇಜು. ಮಂಗಳೂರು (ಅನುದಾನಿತ)	1943
38.	ಡಾ. ಟಿ.ಎಂ.ಎ.ಪೈ. ಶಿಕ್ಷಣ ಕಾಲೇಜು. ಉಡುಪಿ (ಅನುದಾನಿತ)	1965

ಕ್ರ.ಸಂ.	ಕಾಲೇಜಿನ ಹೆಸರು	ಅನುದಾನ ನೀಡಿದ್ದಲ್ಲಿ ಯಾವ ವರ್ಷದಿಂದ
39.	ಸರ್ವೋದಯ ಶಿಕ್ಷಣ ಕಾಲೇಜು, ವಿರಾಜಪೇಟೆ	
	ಕರ್ನಾಟಕ ವಿಶ್ವವಿದ್ಯಾನಿಲಯ	
40.	ವಿಶ್ವವಿದ್ಯಾನಿಲಯ ಶಿಕ್ಷಣ ಕಾಲೇಜು, ಧಾರವಾಡ	
41.	ಕರ್ನಾಟಕ ವಿದ್ಯಾವರ್ಧಕ ಸಂಘ ಶಿಕ್ಷಣ ಕಾಲೇಜು. ಗದಗ	
42.	ಸರ್ಕಾರಿ ಶಿಕ್ಷಣ ಕಾಲೇಜು, ಬೆಳಗಾವಿ	
43.	ಸಂಗೊಳ್ಳಿ ರಾಯಣ್ಣ ಶಿಕ್ಷಣ ಕಾಲೇಜು, ಬೆಳಗಾವಿ	
44.	ಬಿ.ಎಲ್.ಡಿ.ಇ. ಸಂಸ್ಥೆ ಶಿಕ್ಷಣ ಕಾಲೇಜು, ವಿಜಾಪುರ	
45.	ಸರ್ಕಾರಿ ಶಿಕ್ಷಣ ಕಾಲೇಜು, ಜಮಖಂಡಿ	
46.	ಶಿವಾಜಿ ಶಿಕ್ಷಣ ಕಾಲೇಜು. ಬಾದ್ (ಕಾರವಾರ)	
47.	ಕಮಲಾ ಬಾಳಿಗಾ ಶಿಕ್ಷಣ ಕಾಲೇಜು, ಕುಮಟ (ಅನುದಾನಿತ)	1983
48.	ಕೆ.ಎಲ್.ಇ. ಸಂಸ್ಥೆ, ಶಿಕ್ಷಣ ಕಾಲೇಜು. ಹುಬ್ಬಳ್ಳಿ	
49.	ಕೆ.ಆರ್.ಸಿ.ಇ. ಸಂಸ್ಥೆ ಶಿಕ್ಷಣ ಕಾಲೇಜು, ಬೈಲಹೊಂಗಲ್	
50.	ಎಸ್.ಆರ್. ಕಂಠಿ ಶಿಕ್ಷಣ ಕಾಲೇಜು, ಇಳಕಲ್	
51.	ಜನತಾ ಶಿಕ್ಷಣ ಸಂಸ್ಥೆ. ಶಿಕ್ಷಣ ಕಾಲೇಜು, ಹಾನಗಲ್	
52.	ವಿಜಯನಗರ ಶಿಕ್ಷಣ ಕಾಲೇಜು, ಹುಬ್ಬಳ್ಳಿ	
53.	ಚಾಸನ್ ಶಿಕ್ಷಣ ಸಂಸ್ಥೆಯ ಶಿಕ್ಷಣ ಕಾಲೇಜು. ಚಿಕ್ಕೋಡಿ	
	ಗುಲ್ಬರ್ಗಾ ವಿಶ್ವವಿದ್ಯಾನಿಲಯ	
54.	ಸರ್ಕಾರಿ ಶಿಕ್ಷಣ ಕಾಲೇಜು, ಗುಲ್ಬರ್ಗಾ	
55.	ಹೆಚ್.ಕೆ.ಇ. ಸೊಸೈಟಿಯ ಬಸವೇಶ್ವರ ಶಿಕ್ಷಣ ಕಾಲೇಜು, ಬೀದರ್	
56.	ಟಾಗೂರ್ ಮೆಮೋರಿಯಲ್ ಶಿಕ್ಷಣ ಕಾಲೇಜು, ರಾಯಚೂರು	
57.	ಶ್ರೀ ಕೊಟ್ಟೂರಸ್ವಾಮಿ ಶಿಕ್ಷಣ ಕಾಲೇಜು, ಬಳ್ಳಾರಿ (ಅನುದಾನಿತ)	1965
58.	ಟಿಎಂಎಇ ಶಿಕ್ಷಣ ಕಾಲೇಜು. ಗಂಗಾವತಿ	
59.	ಟಿಎಂಎಇ ಶಿಕ್ಷಣ ಕಾಲೇಜು. ಹರಪನಹಳ್ಳಿ	
60.	ಮಹಮ್ಮದಿ ಶಿಕ್ಷಣ ಕಾಲೇಜು, ಗುಲ್ಬರ್ಗಾ	
61.	ಚಾಂದಬೀಬಿ ಮಹಿಳಾ ಶಿಕ್ಷಣ ಕಾಲೇಜು. ಗುಲ್ಬರ್ಗಾ	
62.	ಜವಾಹರ ಶಿಕ್ಷಣ ಕಾಲೇಜು, ಯಾದಗೀರ್	
63.	ಬಿಲಾಲ್ ಶಿಕ್ಷಣ ಸಂಸ್ಥೆಯ ಮಹಿಳಾ ಬಿ.ಎಡ್. ಕಾಲೇಜು. ಕಮಠಾನ. ಬೀದರ್ ಜಿಲ್ಲೆ.	

ಬೆಳಗಾಂ ಜಿಲ್ಲೆಯಲ್ಲಿನ ಸೀಮೆಎಣ್ಣೆ ಅಭಾವದ ಬಗ್ಗೆ

1995. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿ ಸೀಮೆಎಣ್ಣೆ ಹಾಗೂ ಪಾಮ್ ಆಯಿಲ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ವಿತರಣೆಯನ್ನು ಸರಿಯಾಗಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ;

ಇ) ಬೆಳಗಾಂ ಜಿಲ್ಲೆಗೆ ಬೇಕಾಗಿರುವ ಸೀಮೆ ಎಣ್ಣೆ ಮತ್ತು ಪಾಮ್ ಆಯಿಲ್ ಪ್ರಮಾಣವೆಷ್ಟು ಮತ್ತು ಸರ್ಕಾರದಿಂದ ಬಿಡುಗಡೆ ಮಾಡುವ ಪ್ರಮಾಣವೆಷ್ಟು ;

ಈ) ಬೈಲಹೊಂಗಲ ನಗರದಲ್ಲಿ ಹಾಗೂ ತಾಲ್ಲೂಕಿನಲ್ಲಿ ಸೀಮೆಎಣ್ಣೆ ಕೊರತೆ ಇದ್ದ ಸಂಗತಿ ಸರ್ಕಾರದ ಗಮಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ. ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಜಿಲ್ಲೆಯಲ್ಲಿ ಸೀಮೆಎಣ್ಣೆ ಕೊರತೆ ಇಲ್ಲ. ಆದರೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಪ್ರಮಾಣದ ಹಂಚಿಕೆ ಆಗದೇ ಇರುವುದರಿಂದಾಗಿ ಪಾಮೋಲಿನ್ ಎಣ್ಣೆ ಕೊರತೆ ಇದೆ.

ಆ) ಪಡಿತರ ಚೀಟಿಗಳ ಮೂಲಕ ಸೀಮೆಎಣ್ಣೆ ಹಾಗೂ ಪಾಮೋಲಿನ್ ಎಣ್ಣೆಯನ್ನು ಹಂಚಲಾಗುತ್ತಿದೆ. ತಪ್ಪಿತಸ್ಥ ವರ್ತಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ತಿಂಗಳ ಅವಶ್ಯಕತೆ :

1) ಸೀಮೆಎಣ್ಣೆ 3800 ಕಿ.ಲೀ.

2) ಪಾಮೋಲಿನ್ ಎಣ್ಣೆ 650.0 ಮೆ.ಟನ್

ತಿಂಗಳ ಹಂಚಿಕೆ :

	ಸೀಮೆಎಣ್ಣೆ	ಪಾಮೋಲಿನ್ ಎಣ್ಣೆ
ನವೆಂಬರ್-91	3270 ಕಿ.ಲೀ.	162 ಮೆ.ಟನ್
ಡಿಸೆಂಬರ್-91	3270 ಕಿ.ಲೀ.	-
ಜನವರಿ-92	3270 ಕಿ.ಲೀ.	-
ಫೆಬ್ರುವರಿ-92	3845 ಕಿ.ಲೀ.	150 ಮೆ.ಟನ್
ಮಾರ್ಚ್-92	4036 ಕಿ.ಲೀ.	-

ಈ) ಕೇಂದ್ರ ಸರ್ಕಾರದಿಂದ ಸಾಕಷ್ಟು ಪ್ರಮಾಣದ ಹಂಚಿಕೆ ಆಗದೇ ಇದ್ದುದರಿಂದ ಕೊರತೆ ಇತ್ತು.

ಉ) ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ಸೀಮೆಎಣ್ಣೆ ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಅವರು ಹೆಚ್ಚಿನ ಪ್ರಮಾಣ ನೀಡಿದರೆ ಬೆಳಗಾಂ ಜಿಲ್ಲೆಯನ್ನು ಸೇರಿ ಎಲ್ಲಾ ಜಿಲ್ಲೆಗಳಿಗೂ ಹೆಚ್ಚಿನ ಪ್ರಮಾಣದ ವಿತರಣೆ ಮಾಡಲಾಗುವುದು.

ರಾಜ್ಯದಲ್ಲಿ ಖಾಲಿ ಇರುವ ಮುನ್ಸೀಫರ ಹುದ್ದೆ ಭರ್ತಿ ಬಗ್ಗೆ.

1998. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಖಾಲಿಯಿರುವ ಮುನ್ಸೀಫ್ ಮ್ಯಾಜಿಸ್ಟ್ರೇಟರ್‌ಗಳ ಹುದ್ದೆಗಳ ಸಂಖ್ಯೆ ಎಷ್ಟು ;

2) ಈಗಾಗಲೇ ಆಯ್ಕೆ ಮಾಡಿರುವ ಹುದ್ದೆಗಳ ಸಂಖ್ಯೆಯೆಷ್ಟು ;

3) ಆಯ್ಕೆ ಮಾಡಿದವರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಭರ್ತಿ ಮಾಡದೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು ;

4) ಭರ್ತಿ ಮಾಡುವಲ್ಲಿ ಆದ ವಿಳಂಬಕ್ಕೆ ಕಾರಣವೇನು ;

5) ಖಾಲಿಯಾಗಿರುವ ಹುದ್ದೆ ತುಂಬಲು ಹಾಗೂ ಆಯ್ಕೆಯಾದವರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

1) 41.

2) 37.

3) ಉದ್ಭವಿಸುವುದಿಲ್ಲ.

4) ಕಾದಿರಿಸಲಾದ ಮೀಸಲಾತಿ ಹುದ್ದೆಗಳನ್ನು ಭರ್ತಿ ಮಾಡಲಾಗದ ಹೊರತು. ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಸರ್ಕಾರ ಒಪ್ಪಲಿಲ್ಲ. ಆದ್ದರಿಂದ. ನೇಮಕಾತಿ ನಿಯಮಗಳನ್ನು ಬದಲಾಯಿಸಿ ಭರ್ತಿ ಮಾಡಲು ಕಾಲಾವಕಾಶ ಬೇಕಾಗಿದ್ದರಿಂದ, ವಿಳಂಬವಾಯಿತು.

5) ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಚೇರ್ಮನ್ : ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ : ಉಪಾಧ್ಯಕ್ಷರೆ, ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳು ಬರುವುದಿಲ್ಲ. ನಾವು ಪ್ರಶ್ನೆಯನ್ನು ಮಂಡಿಸಿದಾಗ. ಅದಕ್ಕೆ ಆಗ ಉತ್ತರ ಇರುವುದಿಲ್ಲ. ನಾವು ಹೋಗಿ ಹುಡುಕಿದರೂ ಸಹ ಉತ್ತರ ಬರುವ ಪ್ರಯತ್ನವಿಲ್ಲ. ಹೀಗೇ ಬಿಟ್ಟರೆ ಅದು ಯಾವಾಗ ಬರುತ್ತದೆ ? ನಮಗೆ ಯಾವ ಪ್ರಶ್ನೆಗಳು ಬಹಳ ಪ್ರಮುಖವಾಗಿರುತ್ತವೆ, ಅಂತಹ ಪ್ರಶ್ನೆಗಳು ಅನ್‌ಸ್ಟಾರ್ಡ್ ಆಗುತ್ತವೆ. ಮತ್ತು ಉತ್ತರ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಟ್ಟು 68 ಪ್ರಶ್ನೆಗಳಲ್ಲಿ 16 ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿಲ್ಲ. ಇಷ್ಟು ಪ್ರಮಾಣದಲ್ಲಿ ಯಾವೊತ್ತೂ ಉತ್ತರ ಬಂದಿರುವುದಿಲ್ಲ.

ಶ್ರೀ ಬಾಬುರಾವ್ ಚವಾಣ್ : ಆ 16 ಪ್ರಶ್ನೆಗಳು ಬಹಳ ಮಹತ್ವವಾದಂತವುಗಳು. ಆ ಪ್ರಶ್ನೆಗಳಿಗೂ ಉತ್ತರ ಬರಬೇಕಾಗಿತ್ತು.

ಚೇರ್ಮನ್ : ಅಂತಹ ಪ್ರಶ್ನೆಗಳನ್ನು ಬರೆದು ಮಂತ್ರಿಗಳಿಗೆ ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಯಾವ ಪ್ರಶ್ನೆಯನ್ನು ಸ್ಟಾರ್ ಮಾಡಬೇಕು, ಯಾವುದನ್ನು ಅನ್‌ಸ್ಟಾರ್ಡ್ ಮಾಡಬೇಕೆಂಬುದರ ಬಗ್ಗೆ ನಿಯಮಗಳಿವೆ. ಅದು ಶಾಸಕಾಂಗಕ್ಕೆ ಬಿಟ್ಟಂಥ ವಿಚಾರ. ಅದರಲ್ಲಿ ಸರ್ಕಾರ ಕೈ ಹಾಕುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಬಾಬುರಾವ್ ಚವಾಣ್ : ಜಯಚಂದ್ರರವರು ಸ್ಟಾರ್ಡ್ ಎನ್ನುವ ವಿಚಾರದಲ್ಲಿ ಹೇಳುತ್ತಿಲ್ಲ.

ಚೇರ್ಮನ್ : ಉತ್ತರ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮಾನ್ಯ ಅರಣ್ಯ ಮಂತ್ರಿಗಳು ಒಂದು ಹೇಳಿಕೆ ಕೊಡುತ್ತಾರೆ.

ಮಂತ್ರಿಗಳ ಹೇಳಿಕೆ

ನಾಗರಹೊಳೆ ಬೆಂಕಿ ಅಪಘಾತದ ಬಗ್ಗೆ

† ಶ್ರೀ ಈ.ಟಿ. ಶಂಬುನಾಥ್ (ರಾಜ್ಯ ಅರಣ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ. ಗುರುವಾರ ಅಂದರೆ ದಿನಾಂಕ 12-3-92ರ ರಾತ್ರಿ ನಲ್ಕೇರಿ ಕಾದಿಟ್ಟ ಅರಣ್ಯದ ಸಮೀಪದಲ್ಲಿರುವ ಬಾಡಗಾ ಗ್ರಾಮದ ಶ್ರೀ ಎಂ.ವಿ. ಚಿನ್ನಪ್ಪ. ಎಂಬುವರು ಕಾಡಿಗೆ ಹೋಗಿದ್ದ ಎಮ್ಮೆಗಳನ್ನು ಮನೆಗೆ ವಾಪಸ್ಸು ಕರೆದುಕೊಂಡು ಬರಲು ಶ್ರೀ ಕುಂಜಪ್ಪ ಎಂಬ ಸ್ನೇಹಿತರೊಡನೆ ಹೊರಟರು. ಶುಕ್ರವಾರ ಅಂದರೆ ದಿನಾಂಕ 13-3-92ನೇ ಬೆಳಿಗ್ಗೆ ಚಿನ್ನಪ್ಪನ ಜೊತೆಗೆ ಹೋಗಿದ್ದ ಕುಂಜಪ್ಪ ಎಂಬುವರು. ಚಿನ್ನಪ್ಪನ ಮನೆಗೆ ಬಂದು ಅವರಿಗಾಗಿ ವಿಚಾರಿಸಿದರು. ಅಲ್ಲಿ ಕೇವಲ ಎಮ್ಮೆಗಳು ಇದ್ದುವೆ ಹೊರತು ಚಿನ್ನಪ್ಪನವರು (ಚಿಪ್ಪ). ಇರಲಿಲ್ಲ. ಆ ಸಮಯದಲ್ಲಿ ಕುಂಜಪ್ಪನವರು ಹಿಂದಿನ ದಿನ ರಾತ್ರಿ ಚಿನ್ನಪ್ಪನವರೊಡನೆ ಕಾಡಿನಲ್ಲಿ ಕೋಡಂಗ ಎಂಬ ಕಡೆ ಎಮ್ಮೆಗಳನ್ನು ಹುಡುಕುತ್ತಿದ್ದಾಗ ಒಂದು ಗುಂಡೇಟಿನ ಶಬ್ದ ಕೇಳಿತು. ಆ ಶಬ್ದವನ್ನು ಕೇಳಿದೊಡನೆ ಚಿನ್ನಪ್ಪನವರು ಓಡಿ ಹೋಗು ಎಂದು ನನಗೆ ಹೇಳಿದರು; ಅದೇ ರೀತಿ ತಾನು ಓಡಿದೆನು ಎಂದು ತಿಳಿಸಿರುತ್ತಾರೆ. ತದನಂತರ, ಕುಂಜಪ್ಪನವರು ಮಾಚಯ್ಯ ಎಂಬುವರ ಜೊತೆ ಗುಂಡೇಟಿನ ಶಬ್ದ ಕೇಳಿದ ಸ್ಥಳಕ್ಕೆ ಹೋಗಿ ಅಲ್ಲಿ ಗುಂಡಿನೇಟಿನಿಂದ ಸತ್ತು ಬಿದ್ದಿದ್ದ ಚಿನ್ನಪ್ಪನವರ ಮೃತ ದೇಹವನ್ನು ಕಂಡರು. ಅದೇ ದಿನ ಅಂದರೆ ದಿನಾಂಕ 13-3-92ರಂದು ಕುಟ್ಟ ಪೋಲೀಸ್ ಠಾಣೆಗೆ ಒಂದು ಅರ್ಜಿಯನ್ನು ಸಲ್ಲಿಸಿ ಅರಣ್ಯಾಧಿಕಾರಿಗಳು ಗುಂಡಿನೇಟಿನಿಂದ ಶ್ರೀ ಚಿನ್ನಪ್ಪವರನ್ನು ಕೊಂದಿದ್ದಾರೆಂದು ಪೋಲೀಸರಿಗೆ ದೂರಿದರು. ಏತನ್ಮಧ್ಯೆ ಅದೇ ದಿನ ಸಾಯಂಕಾಲ ಂದರೆ ದಿನಾಂಕ 13-3-92ರ ಸಾಯಂಕಾಲ ವನ್ಯ ಪ್ರಾಣಿ ವಿಭಾಗದ ವಲಯ ಅರಣ್ಯಾಧಿಕಾರಿ ಶ್ರೀ ಚಿನ್ನಪ್ಪನವರು. ಹುಣಸೂರು ವಿಭಾಗದ ಅರಣ್ಯಾಧಿಕಾರಿ ಶ್ರೀ ಶ್ರೀನಿವಾಸ್‌ರವರನ್ನು ಸಂಪರ್ಕಿಸಿ ತನಗೆ ಸಿಕ್ಕಿದ ಮಾಹಿತಿ ಪ್ರಕಾರ ಇಲ್ಲಿ ಗಲಾಟೆಯಾಗುವ ಸಂಭವವಿದೆಯೆಂದು ತಿಳಿಸಿದರು.

ತಕ್ಷಣವೇ ವಿಭಾಗ ಅರಣ್ಯಾಧಿಕಾರಿ ಶ್ರೀ ಶ್ರೀನಿವಾಸ್‌ರವರು. ಮಡಿಕೇರಿಯ ಜಿಲ್ಲಾ ದಂಡಾಧಿಕಾರಿ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೂ ಹಾಗೂ ಮೈಸೂರು ಪೋಲೀಸ್ ವಲಯ ಅಧಿಕಾರಿ

ಶ್ರೀ ಶ್ರೀನಿವಾಸ್‌ರವರಿಗೂ, ನಾಗರಹೊಳೆಯಲ್ಲಿ ಗಲಾಟೆಯಾಗುವ ಸಂಭವವಿದೆಯೆಂದು ಮತ್ತು ಅದಕ್ಕಾಗಿ ಸಿಬ್ಬಂದಿಯೊಡನೆ ಸ್ಥಳಕ್ಕೆ ಬರಬೇಕೆಂದು ವಿನಂತಿಸಿಕೊಂಡರು. ಈ ವಿಷಯವನ್ನು ವನ್ಯ ಪ್ರಾಣಿ ವಿಭಾಗಾಧಿಕಾರಿ ಶ್ರೀ ಶಿವಲಿಂಗಯ್ಯನವರಿಗೂ ತಿಳಿಸಿದರು. ಆತ್ಮ ರಕ್ಷಣೆಗಾಗಿ ವಲಯ ಅರಣ್ಯ ಅಧಿಕಾರಿ ಶ್ರೀ ಚಿನ್ನಪ್ಪನವರನ್ನು ನಾಗರಹೊಳೆಯಿಂದ ದೂರವಿರಲು ಆದೇಶವನ್ನು ನೀಡಿದರು. ದಿ: 14-3-92ನೇ ಬೆಳಗಿನ ಜಾವ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಶ್ರೀನಿವಾಸ್. ಇತರೆ ಅರಣ್ಯ ಸಿಬ್ಬಂದಿಯವರೊಡನೆ ನಾಗರಹೊಳೆಗೆ ಧಾವಿಸಿದರು. ಮೃತ ದೇಹದ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಬರುವುದು ಉಚಿತವಲ್ಲವೆಂದು ಜಿಲ್ಲಾ ದಂಡಾಧಿಕಾರಿ ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರ ಇಚ್ಛೆ ಮೇರೆಗೆ ಅವರು ಅಲ್ಲಿಗೆ ಭೇಟಿ ಕೊಡಲಿಲ್ಲ. ಹೀಗಿರುವಾಗ ಮಧ್ಯಾಹ್ನದ ಹೊತ್ತಿಗೆ ಸುಮಾರು 200 ರಿಂದ 300 ಜನರು, ಸುಮಾರು 30 ರಿಂದ 40 ವಾಹನಗಳೊಡನೆ ಮೃತನ ದೇಹವನ್ನು ನಾಗರಹೊಳೆಗೆ ತೆಗೆದುಕೊಂಡು ಬಂದು ವಲಯ ಅರಣ್ಯಾಧಿಕಾರಿ ಶ್ರೀ ಚಿನ್ನಪ್ಪನ ಮನೆಯ ಬಾಗಿಲಿನಲ್ಲಿ ಇಟ್ಟು ಚಿನ್ನಪ್ಪನಿಗಾಗಿ ಹುಡುಕಾಡಿದರು. ಮತ್ತು ದೊಂಬಿಯು ಅರಣ್ಯ ವಿಶ್ರಾಂತಿ ಗೃಹಕ್ಕೆ "ಕಾವೇರಿ"ಗೆ ಧಾವಿಸಿ. ಅಲ್ಲಿನ ಗಾಜು ಮತ್ತು ವಿದ್ಯುತ್ ಸಲಕರಣೆಗಳನ್ನು ಧ್ವಂಸ ಮಾಡಿದರು. ತದನಂತರ ಅಲ್ಲಿದ್ದ ಸುಮಾರು 8 ಜನ ಅರಣ್ಯಾಧಿಕಾರಿಗಳನ್ನು ಸದೆ ಬಡಿದರು. ಗಾಯಗೊಂಡ ಅರಣ್ಯ ಅಧಿಕಾರಿಗಳು ಹೆಸರು ಈ ರೀತಿ ಇರುತ್ತದೆ.

ವಲಯ ಅರಣ್ಯಾಧಿಕಾರಿಗಳಾದ ಶ್ರೀಯುತ ಎಂ.ಡಿ. ಅಪ್ಪಯ್ಯ. ಮತ್ತು ಸೋಮಶೇಖರ್ ವನಪಾಲಕರುಗಳಾದ ಶ್ರೀಯುತ ಕೃಷ್ಣೇಗೌಡ. ಮಾದಪ್ಪ ಹಾಗೂ ರಾಘವೇಂದ್ರರಾವ್ ಹಾಗೂ ಅರಣ್ಯ ರಕ್ಷಕರಾದ ಶ್ರೀ ಕುಮಾರ್. ಬೋರನಾಯಕ್ ಹಾಗೂ ಬೊಮ್ಮಯ್ಯ.

ಇವರುಗಳಲ್ಲಿ ವನಪಾಲಕರುಗಳಾದ ಶ್ರೀ ಕೃಷ್ಣೇಗೌಡ ಹಾಗೂ ಬೊಮ್ಮಯ್ಯ. ಎಂಬುವರಿಗೆ ಅತಿ ಹೆಚ್ಚಿನ ಏಟುಗಳು ಬಿದ್ದಿರುತ್ತವೆ. ಇವರುಗಳು ಹುಣಸೂರು ಮತ್ತು ಮೈಸೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ತದನಂತರ, ನೆರೆದಿದ್ದ ಗುಂಪು ಅನೇಕ ಗುಂಪುಗಳಾಗಿ ವಿಂಗಡಿಸಿಕೊಂಡು ಅಭಯಾರಣ್ಯದ ಸುಮಾರು ಕಡೆಗಳಲ್ಲಿ ಬೆಂಕಿಯನ್ನು ಹಚ್ಚಿದರು. ಇದರಲ್ಲಿ ರಿಸರ್ಚ್ ಬ್ಲಾಕ್ ಮತ್ತು ರಿಸರ್ಚ್‌ಗೆ ಸಂಬಂಧಪಟ್ಟ ಶ್ರೀಯುತ ಉಲ್ಲಾಸ ಕಾರಾಂತರವರ ವಾಹನವನ್ನು ಸುಟ್ಟು ಹಾಕಿರುತ್ತಾರೆ. ಅಷ್ಟರಲ್ಲಿ. ಬಾಳೆಕೊಪ್ ರೇಂಜ್ ಆಫೀಸ್‌ಗೆ ತೆರಳಿ ಅಲ್ಲಿರುವ ವೈರ್‌ಲೆಸ್ ಆಪರೇಟರ್‌ನ್ನು ಹೊರಗೆಳೆದು ಬಂದಿಸಿ ಆ ರೇಂಜ್ ಆಫೀಸ್‌ನ್ನು ಸಂಪೂರ್ಣವಾಗಿ ಸುಟ್ಟು ಹಾಕಿರುತ್ತಾರೆ. ಇದಕ್ಕೆ ಮುನ್ನ ದಿನಾಂಕ 14-3-92ರ ಬೆಳಿಗ್ಗೆ ಮೃತಪಟ್ಟ ಸ್ಥಳಕ್ಕೆ ಕೊಡಗು ಜಿಲ್ಲಾ ದಂಡಾನಾಧಿಕಾರಿ. ಸೂಪರಿನ್‌ಟೆಂಡೆಂಟ್ ಆಫ್ ಪೋಲೀಸ್ ಹಾಗೂ ತಹಸೀಲ್ದಾರ್‌ರವರು ಮತ್ತು ಅನೇಕ ಜನರು ಸೇರು. ಮೃತರ ಶವ ಪರೀಕ್ಷೆಯನ್ನು ಕುಟ್ಟ ಆಸ್ಪತ್ರೆಯಲ್ಲಿ ಮಾಡಲು ನಿರ್ಧರಿಸಿದರು. ಆದರೆ, ಶವವನ್ನು ಅಲ್ಲಿ ನೆರೆದಿದ್ದ ಗುಂಪಿನವರು ಕುಟ್ಟಕ್ಕೆ ಕೊಂಡೊಯ್ಯುವುದಕ್ಕೆ ಬದಲು ಶವದೊಡನೆ ನಾಗರಹೊಳೆಗೆ ದಾವಿಸಿದರು. ಶವ ಪರೀಕ್ಷೆಯನ್ನು ವಲಯ ಅರಣ್ಯಾಧಿಕಾರಿಗಳಾದ ಚಿನ್ನಪ್ಪನವರ ಮನೆಯ ಹಿತ್ತಲಿನಲ್ಲಿ ಮಾಡಿದರು. ಅದೇ ದಿನ ಬೆಳಿಗ್ಗೆ ಅಲ್ಲಿ ನೆರೆದಿದ್ದ ಮತ್ತೊಂದು ಗುಂಪು ವನಪಾಲಕ ಶ್ರೀ ಮಾದಪ್ಪನವರನ್ನು ಥಳಿಸಿ ಅರಣ್ಯಾಧಿಕಾರಿಗಳ ಮೇಲೆ ಬಲಾತ್ಕಾರದ ಹೇಳಿಕೆಯೊಂದನ್ನು ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ಮುಂದಿನ ತನಿಖೆಯನ್ನು ಪೋಲೀಸಿನವರು ನಡೆಸುತ್ತಿದ್ದಾರೆ. ಬೆಂಕಿಯು ನೆಲ ಮಟ್ಟದಲ್ಲಿದ್ದು ಸುಮಾರು ಐದು-ಆರು ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಹರಡಿದ್ದು ಅರಣ್ಯ ಇಲಾಖೆ ಹತೋಟಿಗೆ ತಂದಿರುತ್ತಾರೆ. ಬೆಂಕಿಯು ನೆಲ ಮಟ್ಟದಲ್ಲಿರುವುದರಿಂದ, ಮರಗಳು ನಾಶವಾಗಿರುವುದಿಲ್ಲ. ವನ್ಯ ಪ್ರಾಣಿಗಳು ಸ್ವಲ್ಪಕಾಲ ಕಂಗೆಟ್ಟಿವೆಯಾದರೂ ಪ್ರಾಣ ಹಾನಿಯಾಗಿರುವುದಿಲ್ಲ.

ನಮ್ಮ ಇಲಾಖೆಯವರು ಗುಂಡು ಹಾರಿಸಿರುವುದಿಲ್ಲ. ಹಾಗೆ ಅವರು ಗುಂಡು ಹಾರಿಸಿದ್ದರೆ ನಮ್ಮ ಮೇಲಧಿಕಾರಿಗಳಿಗೂ ಹಾಗೂ ಜಿಲ್ಲಾ ದಂಡಾಧಿಕಾರಿಗೂ ತಿಳಿಸುತ್ತಿದ್ದರು. ಈ ಎಲ್ಲಾ ವಿಷಯಗಳ ಬಗ್ಗೆ ಪೋಲೀಸ್ ಇಲಾಖೆಯಿಂದ ಸಮಗ್ರ ತನಿಖೆ ನಡೆಸಲಾಗುತ್ತಿದೆ.

ನೆಲ ಬೆಂಕಿಯಿಂದ ಅರಣ್ಯ ನಾಶವಾದ ಬಗ್ಗೆ ಅಂದಾಜು ಮಾಡಲು ರೂಪಾಯಿ ಮೌಲ್ಯದಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಪರಿಸರಕ್ಕೆ ಧಕ್ಕೆ ಉಂಟಾಗಿರುತ್ತದೆ. ಮಳೆ ಬರುವವರೆಗೆ ವನ್ಯ ಜೀವಿಗಳಿಗೆ ಕ್ಲಿಷ್ಟ ಪರಿಸ್ಥಿತಿ ಇರುತ್ತದೆ. ಒಂದೆರಡು ಮಳೆ ಬಂದ ಮೇಲೆ ಈ ಪರಿಸ್ಥಿತಿ ಸುಧಾರಿಸುತ್ತದೆ.

ಹಲ್ಲೆಕೋರರು ಹಲ್ಲೆ ನಡೆಸಿ ನಾಶಪಡಿಸಿರುವ ಅಂದಾಜು ಬೆಲೆ ಸುಮಾರು ರೂ. 13 ಲಕ್ಷ ಇರುತ್ತದೆ. ಬಾಳೆಕೋವು ಅರಣ್ಯ ವಲಯ ಕಛೇರಿ ನಾಶ ಹಾಗೂ ವೈರ್‌ಲೆಸ್, ಟೆಲಿಫೋನ್ ಮತ್ತು ಇತರೆ ವಸ್ತುಗಳ ನಾಶ ಸೇರಿ ಸುಮಾರು 3 ಲಕ್ಷ ರೂ.ಗಳು. ಕಟ್ಟಿಗೆ ಮತ್ತು ನಾಟಾಗಳ ನಾಶ ಸುಮಾರು 4 ಲಕ್ಷ ರೂ.ಗಳು ಪರಗೋಲ ಮತ್ತು ಕಾವೇರಿ ವಿಶ್ರಾಂತಿ ಗೃಹಗಳ ನಾಶ 2 ಲಕ್ಷ ರೂ.ಗಳು. ವನ್ಯಪ್ರಾಣಿ ಅನುಸಂಧಾನ ಕಛೇರಿ ಹಾಗೂ ಕಛೇರಿ ವಸ್ತುಗಳ ನಾಶ 2 ಲಕ್ಷ ರೂ. ವನ್ಯ ಪ್ರಾಣಿ ಅನುಸಂಧಾನ ಕಛೇರಿಯ ಜಿಪ್ಸಿ ವ್ಯಾನ್ ನಾಶ 2 ಲಕ್ಷ ರೂ.ಗಳು.

ನಾಗರಹೊಳೆ ಅಭಯಾರಣ್ಯ ಮತ್ತು ಬ್ರಹ್ಮಗಿರಿ ಅರಣ್ಯ ವಲಯದಲ್ಲಿ ಹರಡುತ್ತಿರುವ ಬೆಂಕಿಯನ್ನು ಪೂರ್ಣವಾಗಿ ಹತೋಟಿಗೆ ತರಲಾಗಿದೆ. ನಾಗರಹೊಳೆ ಅಭಯಾರಣ್ಯದ ನಾಲ್ಕು ವಲಯಗಳ ಅರಣ್ಯ ಸಿಬ್ಬಂದಿಯವರ ಮೇಲೆ ಸುತ್ತಮುತ್ತಲಿನ ಹಳ್ಳಿಯ ಜನರು ಇನ್ನೂ ಗಲಾಟೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ. ಇದರಿಂದಾಗಿ ಅರಣ್ಯ ಸಿಬ್ಬಂದಿಯವರು ಕಂಗಾಲಾಗಿ ಹುಣಸೂರು ವಿಭಾಗಾಧಿಕಾರಿಗಳ ಮುಂದೆ ತಮಗೆ ಮತ್ತು ತಮ್ಮ ಸಂಸಾರಕ್ಕೆ ರಕ್ಷಣೆ ಕೊಡದ ಹೊರತು ಅಭಯಾರಣ್ಯದ ಒಳಗೆ ಕಾರ್ಯನಿರ್ವಹಿಸಲು ಕಷ್ಟವಾಗುತ್ತದೆ ಎಂದು ತಿಳಿಸಿರುತ್ತಾರೆ. ಅರಣ್ಯ ಅಧಿಕಾರಿಗಳು ಪೋಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಅರಣ್ಯ ಸಿಬ್ಬಂದಿಯವರಿಗೆ ಕೆಲಸ ಮಾಡಲು ಸಹಾಯವಾಗುವಂತೆ ನಾಲ್ಕು ವಲಯಗಳಲ್ಲೂ ಪೋಲೀಸ್ ಸಿಬ್ಬಂದಿಯನ್ನು ಅರಣ್ಯ ಸಿಬ್ಬಂದಿಯವರ ರಕ್ಷಣೆಗೆ ಕಲುಹಿಸಿಕೊಡಲು ಕೇಳಿಕೊಂಡಿರುತ್ತಾರೆ.

ನಿಯಮ 334ರ ಮೇರೆಗೆ

1. ಪ್ರವೇಶ ತೆರಿಗೆಯ ಬಗ್ಗೆ

ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಅಧ್ಯಕ್ಷರೇ.

1) 1991-92ನೇ ಅವಧಿಗೆ "ಪ್ರವೇಶ ತೆರಿಗೆ" ಮೂಲಕ ವಸೂಲಾದ ಒಟ್ಟು ಹಣವೆಷ್ಟು ?

2) ಇದೇ ಅವಧಿಗೆ ರಾಜ್ಯದ ಪುರಸಭೆ, ನಗರ ಸಭೆ, ಮಹಾನಗರ ಸಭೆ, ಸ್ಯಾನಿಟರಿ ಬೋರ್ಡಿನ ಮತ್ತು ನೋಟಿಫೈಡ್ ಏರಿಯಾಗಳಿಗೆ ಆಕ್ಟ್ರಾಯ್‌ಗೆ ಪರಿಹಾರವಾಗಿ ಕೊಟ್ಟ ಅಥವಾ ಈ ವರ್ಷದ ಮಾಡ್ರನ್ ಕಾಟ್ರನ್‌ಗೆ ಸೇರಿಸಿಕೊಡಬಹುದಾದ ಒಟ್ಟು ಆಕ್ಟ್ರಾಯ್ ಅನುದಾನವೆಷ್ಟು; (ಪ್ರವೇಶ ತೆರಿಗೆಯಿಂದ) ;

3) 1991-92ನೇ ಅವಧಿಗೆ 8 ಐಟಂಗಳಿಂದ ರೂ. 100 ಕೋಟಿ ನಿರೀಕ್ಷಿಸಿದ್ದು. 1991-92ನೇ ಅವಧಿಗೆ 200 ಕೋಟಿ ನಿರೀಕ್ಷಿಸಲಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಇದು ಬಹಳ ಕಡಿಮೆ ಎನಿಸಲಿಲ್ಲವೇ :

4) ಈ ರೀತಿ ಪ್ರವೇಶ ತೆರಿಗೆಯಿಂದ ವಸೂಲಿ ಮಾಡುವ ಹಣವನ್ನು ಪೂರ್ತಿಯಾಗಿ ಪುರಸಭೆ. ನಗರಸಭೆ, ಮಹಾನಗರಸಭೆ ಸ್ಯಾನಿಟರಿ ಬೋರ್ಡ್ ಮತ್ತು ನೋಟಿಫೈಡ್ ಏರಿಯಾಗಳಿಗೆ ಬಿಡುಗಡೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ :-

ಕೇಂದ್ರ ಸರ್ಕಾರವು ಅಕ್ಟ್ರಾಯ್ ಕಾಯ್ದೆಯು ಬಹಳ ಹಳೆಯ ತೆರಿಗೆ ಸಂಗ್ರಹಣೆ ಪದ್ಧತಿಯೆಂದು ಪರಿಗಣಿಸಿ ಸ್ಥಳೀಯ ನಿಕಾಯಗಳ ಕಂದಾಯಕ್ಕೆ ದಕ್ಕೆ ಬರದಂತೆ ಸೂಕ್ತ ಬದಲಾವಣೆಗಾಗಿ ಸರ್ಕಾರವು ಒಂದು ಆಯೋಗವನ್ನು ರಚಿಸಿತು. ಸದರಿ ಆಯೋಗದ ಶಿಫಾರಸ್ಸಿನ ಮೇರೆಗೆ ಆಕ್ಟ್ರಾಯನ್ನು ರದ್ದು ಪಡಿಸಿ ಪ್ರವೇಶ ತೆರಿಗೆಯನ್ನು ದಿನಾಂಕ 1-4-1979 ರಿಂದ ಜಾರಿಗೊಳಿಸಲಾಯಿತು. ರಾಜ್ಯ ತೆರಿಗೆ ಹಾಗೂ ಸ್ಥಳೀಯ ನಿಕಾಯಗಳೆರಡಕ್ಕೂ ಅನ್ವಯಿಸುವಂತೆ ಪ್ರವೇಶ ತೆರಿಗೆಯನ್ನು ಜಾರಿಗೊಳಿಸಿ ಪ್ರಾರಂಭದಲ್ಲಿ ಟೆಕ್ಸ್‌ಟೈಲ್ಸ್, ತಂಬಾಕು ಮತ್ತು ಸಕ್ಕರೆ, 3 ಪದಾರ್ಥಗಳು ಮತ್ತಾ ಪ್ರವೇಶ ತೆರಿಗೆಗೆ ಒಳಪಡುತ್ತಿದ್ದು ನಂತರ ತೆರಿಗೆ ವರಮಾನ ದೃಷ್ಟಿಯಿಂದ ಕೈಗಾರಿಕಾ ಯಂತ್ರಗಳು ಮತ್ತು ಅವುಗಳ ಬಿಡಿ ಭಾಗಗಳು, ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳು, ಸರಿಕಿನ ಪ್ಯಾಕಿಂಗ್ ಸಾಧನಗಳು, ಕೈಗಾರಿಕಾ ಗ್ಯಾಸ್ (ಎಲ್.ಪಿ. ಹೊರತು) ಮತ್ತು ಕಾರ್ಖಾನೆಯಲ್ಲಿ ಸಿದ್ದ ವಸ್ತು ತಯಾರಿಕೆ, ಅಥವಾ ಸಂಸ್ಕರಣೆ ಹಾಗೂ ರಿಪೇರಿಗೆ ಬೇಕಾಗುಂತಹ ಕಚ್ಚಾ ವಸ್ತುಗಳು, ಅಂಗ ಭಾಗಗಳು-ಪ್ರಸ್ತುತ 8 ಪದಾರ್ಥಗಳ ಮೇಲೆ ಶೇಕಡ 2 ರಂತೆ ಪ್ರವೇಶ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಪ್ರವೇಶ ತೆರಿಗೆ ಕಾಯ್ದೆ 1979 ಕಲಂ 29ರ ಅನ್ವಯ ಪ್ರವೇಶ ತೆರಿಗೆ ರೂಪದಲ್ಲಿ 1991-92ರಲ್ಲಿ ಅಯವ್ಯಯ ಅಂದಾಜುಗಳ ಪ್ರಕಾರ ರೂ. 72 ಕೋಟಿಗಳಷ್ಟು ವಸೂಲಿ ಮಾಡಬೇಕಾಗಿದ್ದು 1991-92ರ ಫೆಬ್ರವರಿ ಅಂತ್ಯದವರೆಗೆ 69.18 ಕೋಟಿ ರೂ. ವಸೂಲಿ ಮಾಡಲಾಗಿದೆ.

1992-93ನೇ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ 103 ಪದಾರ್ಥಗಳ ಮೇಲೆ ಶೇಕಡ 5 ರವರೆಗೆ ಪ್ರವೇಶ ತೆರಿಗೆಯನ್ನು ವಿಧಿಸಬಹುದು. ಆದರೆ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ಬಡ ವರ್ಗದವರ ನಿತ್ಯ ಬಳಕೆಯಲ್ಲಿರುವ ಕೆಲವು ವಸ್ತುಗಳ ಮೇಲೆ ಈ ತೆರಿಗೆ ವಿಧಿಸಲು ಉದ್ದೇಶಿಸಿರುವುದಿಲ್ಲ. ಈ ಸಂದರ್ಭದಲ್ಲಿ ಪ್ರವೇಶ ತೆರಿಗೆಯಿಂದ ಬರುವ ಆದಾಯದ ಮೊತ್ತ 216 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

2. ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಗೆ ಶಾಲಾ ಮಕ್ಕಳಿಗಾಗಿ ಬಸ್ಸನ್ನು ಓಡಿಸುವ ಬಗ್ಗೆ.

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ ನನ್ನ ಮತಕ್ಷೇತ್ರಕ್ಕೆ ಸೇರಿದ್ದು. ಈ ಮೇಲ್ಕಂಡ ಹೋಬಳಿಯಲ್ಲಿ ಜಿಂದಾಲ್ ಪಾಠಶಾಲೆ ಹಾಗೂ ಟಿ.ಸಿ.ಐ. ಇಂಗ್ಲೀಷ್ ಶಾಲೆ ಎಂಬ ಹೆಸರಿನ ಪಾಠಶಾಲೆಗಳಿದ್ದು ಈ ಶಾಲೆಗಳಿಗೆ

ನೆಲಮಂಗಲ ಟೌನ್‌ನಿಂದ ಹಾಗೂ ಇತರ ಗ್ರಾಮಗಳಿಂದ ಸುಮಾರು ಮಕ್ಕಳು ಯುಕೆಜಿ, ಎಲ್‌ಕೆಜಿ ಹಾಗೂ ಪ್ರಾಥಮಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಹಾ ಬರುತ್ತಿರುತ್ತಾರೆ. ಈ ಮಕ್ಕಳ ಹಿತದೃಷ್ಟಿಯಿಂದ ಕಳೆದ ಒಂದು ವರ್ಷದಿಂದ ವಿಶೇಷವಾಗಿ ಬೆಳಿಗ್ಗೆ ಪಾಠಶಾಲೆಗೆ ಹಾಜರಾಗಲು ಹಾಗೂ ಸಾಯಂಕಾಲ ಶಾಲೆ ಮುಗಿಸಿ ಮನೆಗಳಿಗೆ ವಾಪಸು ಬರುವುದಕ್ಕೆ ಬೆಂಗಳೂರು ನಗರ ರಸ್ತೆ ಸಾರಿಗೆ ವಾಹನವನ್ನು ಓಡಿಸುತ್ತಿದ್ದು. ಈ ವಿದ್ಯಾ ಸಂಸ್ಥೆಗಳು ಯಾವ ರೀತಿಯ ವಂತಿಗೆ (ಡೊನೇಷನ್) ಯನ್ನು ಪಡೆಯದೆ ಮಾದರಿಯ ವಿದ್ಯಾ ಸಂಸ್ಥೆಗಳೆಂದು ಹೆಸರು ಗಳಿಸಿವೆ. ಈ ಶಾಲೆಗಳಲ್ಲಿ ಓದುವ ಮಕ್ಕಳು ನೂರಕ್ಕೆ ನೂರರಷ್ಟು ರ್‍ಯಾಂಕ್. ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆಗಳಲ್ಲಿ ತೇರ್ಗಡೆ ಹೊಂದುತ್ತಿರುತ್ತಾರೆ. ನೆಲಮಂಗಲ ಟೌನ್‌ನಿಂದ ಬರುವ ಸಣ್ಣ ಮಕ್ಕಳು (ಯುಕೆಜಿ. ಎಲ್‌ಕೆಜಿ) ಬೇರೆ ವಾಹನಗಳಲ್ಲಿ ಸರಿಯಾದ ವೇಳೆಗೆ ಶಾಲೆಗಳಿಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಕಾರಣ ಎಲ್ಲಾ ವಾಹನಗಳು ಭರ್ತಿಯಾಗಿ ಸಣ್ಣ ಮಕ್ಕಳು ಕಾಲುತುಳಿತಕ್ಕೆ ಸಿಕ್ಕಿ ಒದ್ದಾಡುವುದನ್ನು ನೋಡಿದಾಗ ಯಾರ ಮನಸ್ಸಾದರೂ 'ಅಯ್ಯೋ' ಅನ್ನದೆ ಇರುವುದಿಲ್ಲ. ಈಗ ಶಾಲೆಗಳಲ್ಲಿ ಪರೀಕ್ಷೆಗಳು ಈ ತಿಂಗಳು 20 ರಿಂದ ಪ್ರಾರಂಭವಾಗಲಿದೆ. ದುರಾದೃಷ್ಟವಶಾತ್ ವಿಭಾಗೀಯ (ಉತ್ತರ) ಅಧಿಕಾರಿಗಳು ತಾರೀಖು 4-3-92ರಂದು ಪತ್ರದ ಸಂಖ್ಯೆ ಕೆಎಸ್‌ಟಿ. ಬಿಟಿಎಸ್. ಟಿಆರ್‌ಎಫ್. ಡಿಪಿಎನ್ ಸಿಸಿ 3530 / 91-92ರಂದು ಮೇಲ್ಕಂಡ ಶಾಲೆಗಳ ಪ್ರಾಂಶುಪಾಲರಿಗೆ ಒಂದು ಪತ್ರ ಬರೆದು 16-3-92ರಿಂದ ಮಕ್ಕಳಿಗಾಗಿ ಓಡಿಸುವ ವಾಹನವನ್ನು ರದ್ದು ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಈ ಕ್ರಮ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಕರಾಳ ಆದೇಶವಾಗಿರುತ್ತದೆ. ಆದ್ದರಿಂದ ಮಾನ್ಯ ಸಚಿವರು ಈ ಕೂಡಲೇ ಓಡಿಸುತ್ತಿರುವ ವಾಹನವನ್ನು ಯಾವ ಕಾರಣಕ್ಕೂ ನಿಲ್ಲಿಸಕೂಡದೆಂದು ಕಟ್ಟುನಿಟ್ಟಾದ ಆದೇಶ ನೀಡಬೇಕೆಂದು ವಿನಂತಿಸುತ್ತೇನೆ.

SRI AZIZ SAIT : Speaker Sir, The Hon'ble Member Shri Anjanamurthy had come to me just about four days back and he requested. I agreed only on humanitarian grounds. The buses are not supposed to give it to Jindal High School or ITC. But somehow, that was given. Since the examinations are ahead, till the examinations are over, I am going to give these buses. Speaker Sir, there are nine schedules, departure and arrival only for Jindal High School and ITC School. ಅವರು ಇನ್‌ಸ್ಟಿಟ್ಯೂಶನ್ಸ್‌ಗೆ ಬರೆದಿದ್ದಾರೆ. ನಮ್ಮ ಸಮಾಜದಿಂದ ಏನಾದರೂ ಮಾಡಿ ಮಕ್ಕಳಿಗೆ ಶಾಲೆಗೆ ಕಳುಹಿಸಬೇಕು; ಅದಿಲ್ಲ. ಎಲ್ಲಕ್ಕೂ ಕೆಎಸ್‌ಆರ್‌ಟಿಸಿ ಫ್ರೀ ಬಸ್ ಬೇಕು ಅಂದರೆ ಹೇಗೆ? ಕೆಎಸ್‌ಆರ್‌ಟಿಸಿ ಲಾಸ್‌ನಲ್ಲಿ ಓಡುತ್ತಿದೆ. ಎಲ್ಲಾ ವಿಷಯಾನ ಇವರು ನನ್ನ ಹತ್ತಿರ ಬಂದು ತಿಳಿದುಕೊಂಡು ಈಗ 334ರ ಮೇರೆಗೆ ಪರೀಕ್ಷೆ ಆಗುವವರೆಗೆ ಬಸ್ ಕೊಡುತ್ತೇವೆ ಎಂದು ನಾನು ಒಪ್ಪಿದ್ದೇನೆ. ಪರೀಕ್ಷೆ ಮುಗಿದ ಮೇಲೆ ಬಸಸ್ ನಾನು ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬೇರೆ ಒಂದು ಮಾರ್ಗ ಇದೆ. ಜಿಂದಾಲ್ ಅವರಿಗೆ ನಾನು ರಿಕ್ವೆಸ್ಟ್ ಮಾಡಿದ್ದೇನೆ. ಕೆಎಸ್‌ಆರ್‌ಟಿಸಿಯಿಂದ ಯಾವ ಬಸ್ ಅನ್ನು ಸೇಲ್ ಮಾಡುತ್ತಿದ್ದೇವೆ ರನ್ನಿಂಗ್ ಕಂಡೀಷನ್‌ನಲ್ಲಿ ಇರುವುದು, ಅದನ್ನು ಯಾವುದೇ ವಿದ್ಯಾ ಸಂಸ್ಥೆಗಳು ಮುಂದೆ ಬಂದರೂ ನಾವು ಕನ್‌ಸೆಷನ್ ರೇಟ್‌ನಲ್ಲಿ ಕೊಡುತ್ತೇವೆ. ಅವನ್ನು ಇವರು ತೆಗೆದುಕೊಂಡು ಓಮ್ನಿ ಬಸ್ ಎಂದು ಮಾಡಿ ಶಾಲಾ ಮಕ್ಕಳನ್ನು ಕರೆ ತರಲಿ. ಅದಕ್ಕೆ ತೀರಾ ಕಡಿಮೆ ಟ್ಯಾಕ್ಸ್ ಇದೆ. ಇವತ್ತು ಬೇಕಾದಷ್ಟು ಶಾಲೆಗಳಲ್ಲಿ 3 ಸಾವಿರದಿಂದ 10 ಸಾವಿರದವರೆಗೆ ಡೊನೇಷನ್ ತೆಗೆದುಕೊಳ್ಳುತ್ತಾರೆ.

ಅವರಿಗೆ ಡೊನೇಷನ್ನೂ ಬೇಕು. ಕೆಎಸ್‌ಆರ್‌ಟಿಸಿ ಬಿಟ್ಟೀ ಬಸ್ ಕೂಡ ಬೇಕು ಅಂದರೆ ಇದು ಯಾವ ನಿಯಮ ಎಂದು ನನಗೆ ಅರ್ಥ ಆಗುತ್ತಾ ಇಲ್ಲ. ಈ ಮೂಲಕ ಸಾರ್ವಜನಿಕರಿಗೆ ಹೇಳುವುದು ಇಷ್ಟೆ. ಯಾವುದೇ ವಿದ್ಯಾ ಸಂಸ್ಥೆಗೆ ನಮ್ಮ ರನ್ನಿಂಗ್ ಕಂಡೀಷನ್‌ನಲ್ಲಿರುವ ಸ್ಕ್ರ್ಯಾಪ್ ಬಸಸ್‌ನ್ನು ತೀರಾ ಚೀಪ್ ರೇಟ್‌ಗೆ ಕೊಡುತ್ತೇವೆ. ಅವರು ಎಲ್ಲೋ ಕಲರ್ ಹಾಕಿ ಓಮ್ನಿ ಬಸ್ ಎಂದು ಓಡಿಸಿದರೆ ಟ್ರಾಕ್ಸೂ ಕಡಿಮೆ ಆಗುತ್ತದೆ. ಅದಕ್ಕೆ ಬರೀ ಒಬ್ಬ ಡ್ರೈವರ್ ಸಾಕು. ಮೇಂಟೇನ್ ಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳ ಹತ್ತಿರ ಹಣ ಕಲೆಕ್ಟ್ ಮಾಡುತ್ತಾರೆ. ಇಷ್ಟೂ ಮಾಡಲು ತಯಾರು ಇಲ್ಲವೇ? ಪ್ರತಿಯೊಂದಕ್ಕೂ ಕೆಎಸ್‌ಆರ್‌ಟಿಸಿ ಎಂದರೆ ಕೆಎಸ್‌ಆರ್‌ಟಿಸಿ ವೈಂಡ್‌ಅಪ್ ಮಾಡಬೇಕು ಇಲ್ಲವೇ ಒಂದು ದಿವಸ ಇದು ಸರ್ವನಾಶ ಆಗಬೇಕು.

3. ಮಂಗಳೂರು ಸಿಟಿ ಬಸ್ಸುಗಳ ವೇಗ ನಿಯಂತ್ರಿಸುವ ಬಗ್ಗೆ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಅಧ್ಯಕ್ಷರೇ ಮಂಗಳೂರಿನಲ್ಲಿ ಸಿಟಿ ಬಸ್ಸುಗಳ ಮೇಲಾಟ, ಮಿತಿಮೀರಿದ ವೇಗ, ಓವರ್‌ಲೋಡ್, ಓವರ್‌ಟೇಕ್ ಇದು ದಿನನಿತ್ಯದ ಸುದ್ದಿಯಾಗಿದೆ. ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನನಿತ್ಯ ಎಂಬಂತೆ ಅಪಘಾತಗಳು ಆಗುತ್ತಲೇ ಇವೆ. ಇದೀಗ ಮಂಗಳೂರಿನ ಉಲ್ಲಾಳ ಬಾಗಿನಲ್ಲಿ 13-3-92ರಂದು ಇಬ್ಬರು ಬಾಲಕರನ್ನು ಬಲಿ ತೆಗೆದುಕೊಂಡಿದೆ. ಬಾಲಕರ ತಂದೆ ವಿಶೇಷ ರೀತಿಯ ಪೆಟ್ಟಿಗೆ ಬಲಿಯಾಗಿದ್ದಾನೆ.

ಆದಕಾರಣ ಮಂಗಳೂರಿನಲ್ಲಿ ಸಿಟಿ ಬಸ್ಸುಗಳ ವೇಗವನ್ನು ತಡೆಗಟ್ಟಲು ಗವರ್ನರ್ ಅಳವಡಿಕೆ ಮಾಡಬೇಕು. ವೇಗಕ್ಕೂ, ಮೇಲಾಟಕ್ಕೂ ಓವರ್ ಲೋಡಿಗೂ ಸರಿಯಾದ ಮಿತಿ ಇರಬೇಕು. ಸೂಕ್ತ ತನಿಖೆಗಳು ಇರುವಂತಾಗಬೇಕು; ಒಂದು ವೇಳೆ ಮಂಗಳೂರಿನಲ್ಲಿ ಸಿಟಿ ಬಸ್ ರಾಷ್ಟ್ರೀಕರಣ ಮಾಡುವ ಯೋಚನೆ ಇದೆಯೇ? ಈ ಕುರಿತು ಸಾರಿಗೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಅಜೀಜ್ ಸೇಟ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ಸಾರಿಗೆ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ಗೃಹಮಂತ್ರಿಗಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷಿಣಿಯವರೇ ಈ ವಿಚಾರ ಮಾನ್ಯ ಗೃಹಮಂತ್ರಿಗಳಿಗೆ ಸಂಬಂಧಪಟ್ಟದ್ದು. ಆದ್ದರಿಂದ ಮಾನ್ಯ ಗೃಹಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಮಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಭವಿಸಿರುವ ಅಪಘಾತಗಳ ವಿವರ ಈ ಪ್ರಕಾರವಿದೆ :

ವರ್ಷ	ಅಪಘಾತಗಳ ಸಂಖ್ಯೆ	ಮರಣಾಂತ ಅಪಘಾತಗಳ ಸಂಖ್ಯೆ
1989	260	20
1990	215	17
1991	207	26
1992	47	6
(17-3-1992ರವರೆಗೆ)		

ದಿನಾಂಕ 1-5-1991ರಂದು ಮಂಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಯ ಕಛೇರಿಯಲ್ಲಿ ಒಟ್ಟು 42137 ವಾಹನಗಳನ್ನು ನೋಂದಣಿ ಮಾಡಲಾಗಿತ್ತು. ದಿನಾಂಕ 31-1-92ರಂದು ನೋಂದಣಿಯಾದ ವಾಹನಗಳ ಸಂಖ್ಯೆ 65195ಕ್ಕೆ ಏರಿದೆ. ಈ ಅಂಶಗಳನ್ನು ಗಮನಿಸಿದಾಗ ವಾಹನಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವುದು ಕಂಡುಬರುತ್ತದೆ. ಆದರೂ ಮೋಟಾರು ವಾಹನಗಳ ಅಪಘಾತಗಳ ಸಂಖ್ಯೆ ಅದೇ ಪ್ರಮಾಣದಲ್ಲಿ ಹೆಚ್ಚಿಲ್ಲ ಎಂಬುದು ಹಾಗೂ ಅಲ್ಪ ಪ್ರಮಾಣದಲ್ಲಿ ಕಡಿಮೆ ಆಗಿರುವುದು ಕಂಡುಬರುತ್ತದೆ.

ಮೋಟಾರು ವಾಹನಗಳ ಅಪಘಾತಗಳನ್ನು ತಡೆಯುವ ದೃಷ್ಟಿಯಿಂದ ಪೋಲೀಸ್ ಇಲಾಖೆಯು ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಮೋಟಾರು ವಾಹನಗಳ ಕಾಯಿದೆ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಜರಗಿಸುವುದು ಒಂದಾಗಿದೆ. 1990ನೇ ಸಾಲಿನಲ್ಲಿ 26281 ಅಪರಾಧಗಳನ್ನು ದಾಖಲಿ ಮಾಡಲಾಗಿದ್ದು. 1991ರಲ್ಲಿ 25592 ಅಪರಾಧಗಳನ್ನು ಹಾಗೂ 1992ರಲ್ಲಿ ಇಲ್ಲಿಯವರೆಗೆ 5591 ಅಪರಾಧಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ. ಅದೇ ಪ್ರಕಾರ 1990ರಲ್ಲಿ ಓವರ್‌ಲೋಡ್ ಮಾಡಿದ ಬಗ್ಗೆ 1078 ಕೇಸ್‌ಗಳನ್ನು (ಪ್ರಕರಣಗಳನ್ನು) 1991ರಲ್ಲಿ 1714 ಪ್ರಕರಣಗಳನ್ನು ಹಾಗೂ 1992ರಲ್ಲಿ ಇಲ್ಲಿಯವರೆಗೆ 755 ಪ್ರಕರಣಗಳನ್ನು ಹಾಕಲಾಗಿದೆ. ವೇಗಮಿತಿ ಮೀರಿ ಚಲಿಸುವ ವಾಹನ ಚಾಲಕರ ವಿರುದ್ಧ 1990ರಲ್ಲಿ 566, 1991ರಲ್ಲಿ 1739 ಹಾಗೂ 1992ರಲ್ಲಿ ಇಲ್ಲಿಯವರೆಗೆ 764 ಮೊಕದ್ದಮೆಗಳನ್ನು ಹೂಡಲಾಗಿದೆ. ಇದಲ್ಲದೆ, ಅತಿವೇಗದಿಂದ ಮತ್ತು ನಿರ್ಲಕ್ಷದಿಂದ ವಾಹನ ನಡೆಸುವ ಚಾಲಕರ ವಿರುದ್ಧ ಸಹ ಮೊಕದ್ದಮೆಗಳನ್ನು ಹಾಕಲಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ನಿಯಮಗಳನ್ನು ಉಲ್ಲಂಘನೆ ಮಾಡುವ ಚಾಲಕರ ವಿರುದ್ಧ ಪ್ರಕರಣವನ್ನು ನೋಂದಾಯಿಸಿರುವುದು ಕಂಡುಬರುತ್ತದೆ.

ದಿನಾಂಕ 13-3-1992ರಂದು ಬಲ್ಲಾಳ ಭಾಗ ಪ್ರದೇಶದಲ್ಲಿ ಆದ ನತದೃಷ್ಟ ಅಪಘಾತದ ನಂತರ ಟ್ರಾಫಿಕ್ ಸಿಬ್ಬಂದಿ ಅಲ್ಲದೆ ಪೋಲೀಸ್ ಇಲಾಖೆಯ ಇತರ ಸಿಬ್ಬಂದಿಗಳು ಕೂಡ ವಾಹನಗಳನ್ನು ತಪಾಸಣೆ ಮಾಡುವ ಕಾರ್ಯವನ್ನು ಅತ್ಯಂತ ತ್ವರಿತ ಗತಿಯಲ್ಲಿ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಇದೇ ರೀತಿ ವಾಹನಗಳ ತಪಾಸಣೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಮೋಟಾರು ವಾಹನಗಳ ಮಾಲೀಕರ ಸಂಘ. ವಾಹನ ಚಾಲಕರ ಸಂಘ. ಟ್ಯಾಕ್ಸಿ ಚಾಲಕರ ಸಂಘ. ಈ ಸಂಘಗಳೊಂದಿಗೆ ಜಿಲ್ಲಾ ಪೋಲೀಸ್ ಅಧಿಕಾರಿ ಅವರು ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಸರ್ವೆ ನಡೆಸಿದ್ದಾರೆ. ವಾಹನಗಳಲ್ಲಿ ಹೆಚ್ಚಿನ ಜನರನ್ನು ತುಂಬುವುದು. ಅತಿ ಹೆಚ್ಚಿನ ವೇಗದಲ್ಲಿ ಹಾಗೂ ನಿರ್ಲಕ್ಷ್ಯದಿಂದ ವಾಹನವನ್ನು ನಡೆಸುವುದರ ಬಗ್ಗೆ ಈ ಸಂಘಗಳಿಗೆ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ ವಾಹನ ಚಾಲಕರಿಗೆ ತರಬೇತಿ ನೀಡಲು ಏರ್ಪಾಡು ಮಾಡಲಾಗಿದೆ. ವಾಹನ ಚಾಲಕರಿಗೆ ಮೋಟಾರು ವಾಹನ ನಿಯಮಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತದೆ. ಸಾರ್ವಜನಿಕರಿಗೂ ಕೂಡ ಈ ವಿಚಾರದಲ್ಲಿ ತಿಳುವಳಿಕೆ ನೀಡಲಾಗುತ್ತಿದ್ದು ನಿಯಮಗಳ ಮೇರೆಗೆ ಮೀರದಂತೆ ವಾಹನಗಳಲ್ಲಿ ಪ್ರಯಾಣ ಮಾಡಬೇಕೆಂದು ಕೋರಲಾಗಿದೆ. ನಗರ ಪ್ರದೇಶಗಳಲ್ಲಿ 25 ಕಿ.ಮೀ. ನಿಂದ 40 ಕಿ.ಮೀ. ವೇಗದಲ್ಲಿ ಮಾತ್ರ ವಾಹನಗಳನ್ನು ನಡೆಸುವಂತೆ ನಿಬಂಧನೆಗಳನ್ನು ಹೇರಲಾಗಿದೆ. ಮಿತಿಮೀರಿದ ವೇಗದಲ್ಲಿ ಚಲಿಸುವ ವಾಹನಗಳನ್ನು ರಾಡಾರ್ ಗನ್ ಉಪಕರಣದ ಉಪಯೋಗ ಮಾಡಿಕೊಂಡು ಮೋಟಾರು ವಾಹನಗಳ ನಿಯಮಗಳನ್ನು ಉಲ್ಲಂಘನೆ ಮಾಡುವ ಚಾಲಕರ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೂ ವರದಿ ಕಳುಹಿಸಿಕೊಡಲಾಗುತ್ತಿದೆ.

ಇವುಗಳಲ್ಲದೆ. ರಸ್ತೆ ಕಾಮಗಾರಿ. ಮಾಡಲು. ರಸ್ತೆ ಉಬ್ಬುಗಳನ್ನು ಹಾಕುವ ಬಗ್ಗೆ. ಹಾಗೂ ಎಚ್ಚರಿಕಾ ಫಲಕಗಳನ್ನು ಹಾಕಲು ಮಂಗಳೂರು ನಗರ ಪುರಸಭೆಯನ್ನು ಕೇಳಿಕೊಳ್ಳಲಾಗಿದೆ. ಸ್ಪೀಡ್ ಗವರ್ನರ್‌ಗಳನ್ನು ವಾಹನಗಳಿಗೆ ಅಳವಡಿಸುವ ವಿಚಾರ ಪರಿಶೀಲನೆಯಲ್ಲಿದೆ.

4. ಪುತ್ತೂರು ತಾಲ್ಲೂಕು "ಕಡಬ" ವಿದ್ಯುತ್ ಸಬ್‌ಸ್ಟೇಷನ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಅಧ್ಯಕ್ಷರೇ. ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿ "ಕಡಬ" ವಿದ್ಯುತ್ ಸಬ್ ಸ್ಟೇಷನ್ ಮಂಜೂರಾಗಿ ಎಷ್ಟು ವರ್ಷ ಸಂದಿದೆ? ಸದ್ರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ? ಸದ್ರಿ ಕಾಮಗಾರಿಯನ್ನು ಮಂಜೂರು ಮಾಡಿ ಇಷ್ಟು ವರ್ಷಗಳಾದರೂ ಕೆಲಸ ಕೈಕೊಳ್ಳದೆ ಇರಲು ಕಾರಣವೇನು? ಈ ಕಡಬ ಸಬ್ ಸ್ಟೇಷನ್‌ನಿಂದ ಶ್ರೀ ಕುಕ್ಕೆಸುಬ್ರಹ್ಮಣ್ಯ ಪುಣ್ಯಕ್ಷೇತ್ರಕ್ಕೂ. ವಿದ್ಯುತ್ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಆದುದರಿಂದ ಈ ಕಾಮಗಾರಿಯನ್ನು ಯಾವಾಗ ಕೈಗೊಂಡು ಪ್ರಾರಂಭಿಸಲಾಗುವುದು. ಮತ್ತು ಕಾಮಗಾರಿಯನ್ನು ಪೂರೈಸಲು ಸರಕಾರ ಈಗಲಾದರೂ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ. ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಸೂಳ್ಯದಿಂದ 11 ಕೆ.ವಿ. ಲೈನಿನ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕಡಬದಲ್ಲಿ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಯೋಜಿಸಿದ್ದು. ಇದರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕೆಲಸವು ಐದಾರು ತಿಂಗಳುಗಳಲ್ಲಿ ಮುಗಿಯುವ ನಿರೀಕ್ಷೆಯಿದೆ. ಈ ವಿದ್ಯುತ್ ಉಪ ಕೇಂದ್ರವು ಮುಗಿದ ನಂತರ. ಕಡಬ ವಿದ್ಯುತ್ ಉಪ ಕೇಂದ್ರದಿಂದ ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದು. ಈ ಸಬ್ ಸ್ಟೇಷನ್ ಮಂಜೂರಾಗಿ ಸುಮಾರು ಎರಡೂವರೆ ವರ್ಷಗಳಾಗಿರುತ್ತದೆ. ಈ ಸಬ್‌ಸ್ಟೇಷನ್ ಅನ್ನು ಒಂದೂವರೆ ವರ್ಷದಲ್ಲಿ ಮಾಡಿಸಿಕೊಡುತ್ತೇನೆ.

5. ಮೂಡಬಿದ್ರೆಯಲ್ಲಿ ಏತನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ತಿಗೊಳಿಸುವ ಬಗ್ಗೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ನನ್ನ ಮೂಡುಬಿದ್ರೆ ಕ್ಷೇತ್ರದ ಏತ ನೀರಾವರಿ ಯೋಜನೆಯಂತೆ ಬಳಕುಂಜೆ. ಎಳಿಂಜೆ ಮತ್ತು ಮೂಡಬಿದ್ರಿಯ ಮಾರೂರು ಗ್ರಾಮಗಳಲ್ಲಿ ಮಂಜೂರಾತಿ ಒದಗಿದ್ದರು ಮೂಡಬಿದ್ರಿಯ ಫಿರ್ಕಾದ ಮಾರೂರು ಗ್ರಾಮದ ಸರ್ವೆ ಕಾರ್ಯವನ್ನು ಪೂರ್ತಿಗೊಳಿಸದೆ ಇಲ್ಲಿಗೆ ಈತನಕ ಸಂಬಂಧಿತ ಅಧಿಕಾರಿಗಳು ಬಾರದೆ ಕೆಲಸ ಬಹಳ ನಿಧಾನವಾಗಿರುತ್ತದೆ. ಹೀಗಾಗಿ ಈ ಕೆಲಸಗಳನ್ನು ಕೂಡಲೇ ತ್ವರಿತಗತಿಯಲ್ಲಿ ಮಾಡುವಂತೆ ನಾನು ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಮಾತ್ರವಲ್ಲದೇ ಈ ಕಾಮಗಾರಿಗಳ ಪ್ರಗತಿಯ ವಿವರ ತಿಳಿಯಲು ಬಯಸುತ್ತೇನೆ. ಈ ಕೆಲಸಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಏತ ನೀರಾವರಿ ನಿಗಮಗಳಿಂದ ಕೈಗೊಳ್ಳುವ ಏತ ನೀರಾವರಿ ಯೋಜನೆಗಳಿಗೆ ಯೋಜನಾ ವೆಚ್ಚದ ಶೇಕಡಾ 75ರಷ್ಟು ಹಣವನ್ನು ಆರ್ಥಿಕ ಸಂಸ್ಥೆಗಳಿಂದ ಸಾಲವಾಗಿ ಪಡೆಯಬೇಕಾಗಿದೆ. ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಮಾಡಬಿದ್ರಿ ಕ್ಷೇತ್ರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಏತ

ನೀರಾವರಿ ಯೋಜನೆಗಳಾದ ಬಳಕುಂಜೆ ಏತ ನೀರಾವರಿ ಯೋಜನೆಯ ಅಪ್ರೈಸಲ್ ವರದಿಯು ತಯಾರಾಗಿದ್ದು ಆರ್ಥಿಕ ನೆರವಿಗಾಗಿ ಏರಿಯಾ ಬ್ಯಾಂಕ್ ಮೂಲಕ ನಬಾರ್ಡ್‌ಗೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು ಹಾಗೂ ಎಳ್ಳಂಜೆ ಮತ್ತು ಮಾರಾರು (ಜಂಗರಗುಂಡಿ) ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದ ಸರ್ವೆ ಕಾರ್ಯಗಳು ಪೂರ್ತಿಯಾಗಿದ್ದು ಅಂದಾಜು ಮತ್ತು ನಕ್ಷೆಗಳು ಅಂತಿಮಗೊಳ್ಳುವ ಹಂತದಲ್ಲಿದೆ. ಅಂದಾಜುಗಳು ತಯಾರಾದ ಕೂಡಲೇ ಬ್ಯಾಂಕ್‌ಗಳ ಮೂಲಕ ನಬಾರ್ಡ್‌ಗೆ ಆರ್ಥಿಕ ನೆರವು ಪಡೆಯಲು ಕಳುಹಿಸಲಾಗುವುದು. ಈ ಯೋಜನೆಗಳ ಸರ್ವೆಕಾರ್ಯದಲ್ಲಿ ನಿಧಾನವಾಗಿರುವುದಿಲ್ಲ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ :

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)
1.	ಎಳ್ಳಂಜೆ, ಮಂಗಳೂರು ತಾಲ್ಲೂಕು	18.60	81
2.	ಬಳಕುಂಜೆ. ಮಂಗಳೂರು ತಾಲ್ಲೂಕು	26.57	142
3.	ಮೂರು (ಜಂಗರಗುಂಡಿ) ಕಾರ್ಕಳ ತಾಲ್ಲೂಕು	24.00	91

ಈ ಯೋಜನೆಗಳಿಗೆ ಆರ್ಥಿಕ ನೆರವು 1992-93ರಲ್ಲಿ ದೊರೆತಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಯೋಜನೆಗಳನ್ನು ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಹಾಸನ ಕ್ಷೇತ್ರದಲ್ಲಿ ನೀರಾವರಿ ಕಾಮಗಾರಿ ಕೆಲಸಗಳ ಬಗ್ಗೆ ಅಧಿಕಾರಿಗಳು ಅಸಡ್ಡೆ ತೋರುತ್ತಿರುವುದು.

† ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಕ್ಷೇತ್ರದಲ್ಲಿ ಗೊರೂರು ಡ್ಯಾಂ ಕಟ್ಟಿರುವುದರಿಂದ ಸುಮಾರು 3-4 ಸಾವಿರ ಎಕರೆ ಫಲವತ್ತಾದ ಜಮೀನು ಮುಳುಗಡೆಯಾಗಿದೆ. ಕಾಫಿ ತೋಟ, ಗದ್ದೆ, ಹೊಲ ಎಲ್ಲ ಮುಳುಗಡೆಯಾಗಿದೆ. ಆದರೂ ಹಾಸನ ಕ್ಷೇತ್ರಕ್ಕೆ ಹೇಮಾವತಿ ಪ್ರಾಜೆಕ್ಟ್‌ನಿಂದ ಯಾವ ನೀರಾವರಿ ಸೌಕರ್ಯವೂ ಇಲ್ಲ. ನಿರಂತರವಾಗಿ ಅದು ಕ್ಷಾಮದ ದವಡೆಗೆ ಸಿಕ್ಕಿರತಕ್ಕ ಪ್ರದೇಶ. ಸರ್ಕಾರದ ಹಣದಿಂದ ಹೊಳೇನರಸೀಪುರದ ಕೆಂಪುಸಮುದ್ರದ ಹತ್ತಿರದಲ್ಲಿ ಲಿಫ್ಟ್ ಇರಿಗೇಷನ್ ಸ್ಯಾಂಕ್ಷನ್ ಆಗಿ ಕಾರ್ಯಗತವಾಗುತ್ತಿದೆ. ಹಾಸನ ತಾಲ್ಲೂಕಿನಲ್ಲಿ ಕಾಂಟೂರು ಬಂಡ್ ಕೆಲಸ ಇದ್ದರೂ ಅಲ್ಲಿ ಮಾಡತಕ್ಕ ಕೆಲಸವನ್ನು ತಕ್ಷಣ ನಿಲ್ಲಿಸಿ ಹಾಸನದಿಂದ ಪುನಃ ಹೊಳೇನರಸೀಪುರಕ್ಕೆ ಹೋಗಿದ್ದಾರೆ. ಏಕೆಂದರೆ ಹೊಳೇನರಸೀಪುರ ಸಣ್ಣ ಸಂಸ್ಥಾನ ಇದ್ದ ಹಾಗೆ. ಅಲ್ಲಿ ದೊಡ್ಡ ನವಾಬ ಇರುವ ಹಾಗೆ. ದುಡ್ಡೆಲ್ಲ ಅವರದ್ದೇ ಇರುವ ಹಾಗೆ ಆ ರೀತಿ ವ್ಯವಸ್ಥೆ ನಡೆದಿದೆ ; ಚೋಟಾ ನವಾಬರದ್ದು. ಆಗ ನಾನು ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಿ ಹಾಸನ ತಾಲ್ಲೂಕ್ ಪಾಕಿಸ್ತಾನಕ್ಕೆ. ಚೈನಾಕ್ಕೆ ಸೇರಿಲ್ಲ. ಬಡಜನರು ಕೊಟ್ಟಿರತಕ್ಕ ದುಡ್ಡಿನಲ್ಲಿ ಕಟ್ಟಿರತಕ್ಕ ಪ್ರಾಜೆಕ್ಟ್ ....

ಚೇರ್ಮನ್ : ಸಂಕ್ಷಿಪ್ತವಾಗಿ ಹೇಳಿ. ಇಲಾಖೆ ಬೇಡಿಕೆ ಬರುತ್ತಿದೆ-ಆಗ ವಿವರವಾಗಿ ಮಾತನಾಡುವಿರಂತೆ.

ಶ್ರೀ ಕೆ.ಹೆಚ್. ಹನುಮೇಗೌಡ : ಈ ಶಾಸನ ಸಭೆಯಲ್ಲಿ ಮಾತನಾಡಬೇಡಿ ಎಂದರೆ ನಾನು ಸಭೆಯನ್ನೇ ಬಿಟ್ಟು ಹೋಗುತ್ತೇನೆ. ಇದರಿಂದ ನನ್ನ ಹಕ್ಕಿಗೆ ಚ್ಯುತಿ ಬಂದಿದೆ. ಜನ ಓಟು ಕೊಟ್ಟಿಲ್ಲವೇ ನನಗೆ.

ಚೇರ್ಮನ್: ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಸಂಕ್ಷಿಪ್ತವಾಗಿ ಹೇಳುವುದು ಇರಲಿ. ಹೇಳುವುದನ್ನು ನಾನು ಹೇಳಲೇಬೇಕು. ಬೇಕಾದರೆ ನಾಳೆಯಿಂದ ನೀವು ಮಾತನಾಡುವುದು ಬೇಡ ಎಂದರೆ ನಾನು ಹಾಗೇ ಕೂತಿರುತ್ತೇನೆ. ಇಷ್ಟು ಅನ್ಯಾಯ ಆಗಿರುವಾಗ ಒಂದು ಏರಿಯಾಕ್ಕೆ ದ್ರೋಹ ಆದಾಗ ನೀವು ಸಂಕ್ಷಿಪ್ತವಾಗಿ ಹೇಳು ಎಂದರೆ ಏನು? ಹಾಗಿದ್ದರೆ ಅವರು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಹೇಳುವುದಕ್ಕಾಗುತ್ತದಾ ನಾನು?

ಚೇರ್ಮನ್ : ನಿಮಗೆ ಉತ್ತರ ಕೊಡಬೇಕಲ್ಲ ಅವರು.

ಶ್ರೀ ಕೆ.ಎಚ್. ಹನುಮೇಗೌಡ : ಜನ ನನಗೆ ಓಟು ಕೊಟ್ಟಿದ್ದಾರೆ. ನನಗೆ ಮಾತನಾಡಲು ಹಕ್ಕಿದೆ. ಜನ ಕೊಟ್ಟಿರತಕ್ಕ ತೆರಿಗೆ ದುಡ್ಡಿನಲ್ಲಿ ಆ ಪ್ರಾಜೆಕ್ಟ್ ಆಗುತ್ತಾ ಇರುವುದು. ನಾನು ಹೇಳಿದಹಾಗೆ ಹೊಳೇನರಸೀಪುರದ ಚೋಟಾ ನವಾಬನದ್ದಲ್ಲ ಆ ದುಡ್ಡು. ಅವರ ತಾತನ ಮನೆಯದಲ್ಲ ದುಡ್ಡು. ಅದು ಜನ ಕೊಟ್ಟಿರತಕ್ಕ ದುಡ್ಡು. ಇಷ್ಟು ಅನ್ಯಾಯ ಆದಾಗ ಸಹಿಸಿಕೊಂಡು ಕುಳಿತುಕೊಳ್ಳಬೇಕಾ ನಾನು? ವೀರೇಂದ್ರಪಾಟೀಲರಿದ್ದಾಗ ನಾನು ಅವರ ಗಮನಕ್ಕೆ ತಂದು ಶಾಸನಸಭೆಯಲ್ಲಿ ಮಾತನಾಡಿದೆ. ಆಗ ವೀರೇಂದ್ರ ಪಾಟೀಲರು ನಿಜವೇನ್ರಿ ನೀವು ಹೇಳುವುದು ಅಂದರು. ಅವರ ಮನೆಗೆ ಹೋಗಿ ಒಂದು ರೆಪ್ರೆಸೆಂಟೇಷನ್ ಕೊಟ್ಟೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಿಮಗೇನಾಗಬೇಕು ಹೇಳಿ.

ಶ್ರೀ ಕೆ.ಎಚ್. ಹನುಮೇಗೌಡ : ನಿಮಗೆ ಅಷ್ಟೂ ತಾಳ್ಮೆ ಇಲ್ಲದಿದ್ದರೆ ಹೇಗೆ ? ಮಂತ್ರಿಯಾಗಿರುವವರಿಗೇ ಅಷ್ಟು ತಾಳ್ಮೆ ಇಲ್ಲದೇಹೋದರೆ ನಾವು ಏನು ಮಾಡಬೇಕು? ನಾವು ನಿಮ್ಮ ಗಮನಕ್ಕೆ ತರುವುದಾದರೂ ಹೇಗೆ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ. ಅವರು ಯಾವ ನಿಯಮದಲ್ಲಿ ಇದನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ. ತಾವು ಯಾವ ಪ್ರಕಾರ ಅವಕಾಶ ಕೊಟ್ಟಿದ್ದೀರೆಂಬುದು ನನಗೆ ಗೊತ್ತಿಲ್ಲ. ಜೀರೊ ಅವರ್‌ನಲ್ಲಿ ಕೇಳುತ್ತಿದ್ದಾರೆ. ಅವರು ಆ ಪಾಯಿಂಟ್‌ಗೆ ಸೀಮಿತವಾಗಿ ಮಾತನಾಡಿದರೆ ಒಳ್ಳೆಯದಾಗುತ್ತದೆ. ಹಿಂದಿನ ಇತಿಹಾಸವನ್ನೆಲ್ಲಾ ಹೇಳಿದರೆ ನಮ್ಮ ತಲೆಯೊಳಗೆ ಹೋಗುವುದಿಲ್ಲ. ಯಾವ ನವಾಬರೋ ಏನೋ ನನಗೆ ಗೊತ್ತಿಲ್ಲ. ಹೊಳೇನರಸೀಪುರದ ನವಾಬರು ಎಂದು ಹೇಳುತ್ತಿದ್ದಾರೆ. ಆ ನವಾಬರು ಯಾರು ಎಂದು ನಮಗೆ ಗೊತ್ತಿಲ್ಲ.

ಶ್ರೀ ಕೆ.ಎಚ್. ಹನುಮೇಗೌಡ : ಇದು ಹಳೇ ವಿಷಯವಾಗಿ ಫೈನಲ್ ಆಗಿದ್ದರೆ ನಾನೇತಕ್ಕೆ ಹೇಳುತ್ತಿದ್ದೆ ಇಲ್ಲಿ. ಹೇಳುವವರೆಗೆ ಸ್ವಲ್ಪ ದಯವಿಟ್ಟು ಮಾನ್ಯ ನೀರಾವರಿ ಸಚಿವರು ಕೇಳಬೇಕು. ಇಂಥಿಂಥ *ಲೋಫರ್ ಕೇಸ್‌ಗಳು ರಾಜಕಾರಣಿಗಳಿಂದ ಆಗುತ್ತಿವೆ ಎಂದು ಹೇಳುವಾಗ ಸ್ವಲ್ಪ ದಯವಿಟ್ಟು ನೀವು ಕೇಳಬೇಕು. ಸ್ವಾಮಿ. ಶ್ರೀಮಾನ್ ವೀರೇಂದ್ರಪಾಟೀಲರ ಗಮನಕ್ಕೆ ಇದನ್ನು ತಂದೆ. ಅವರು ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಮಾಡಿದರು. ಅವರು ನೋಡಿದ ಮೇಲೆ ಅನ್ಯಾಯವಾಗಿದೆ ಎಂದು ಹೇಳಿ ....

---

* ಈ ಪದವನ್ನು ಚೇರ್ಮನ್ ಅವರ ಆದೇಶದ ಪ್ರಕಾರ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕೆಲವೊಂದು ಶಬ್ದ ಕಡತಕ್ಕೆ ಹೋಗುತ್ತಿದೆ. *ಲೋಫರ್ ಎಂಬ ಶಬ್ದ ಹೋಗಿದೆ. ಅದು ಒಳ್ಳೆಯ ಭಾಷೆಯಲ್ಲ.

ಚೇರ್ಮನ್ : ಅದು ಕಡತದಿಂದ ತೆಗೆಯುತ್ತಾರೆ. ಅದು ಒಳ್ಳೆಯ ಭಾಷೆಯಲ್ಲ. ಅದನ್ನು ಕಡತದಿಂದ ತೆಗೆಯಿರಿ.

ಶ್ರೀ ಕೆ.ಹೆಚ್. ಹನುಮೇಗೌಡ : ಇದು ದೇವರು ಮೆಚ್ಚುವ ಒಳ್ಳೆಯ ಕೆಲಸವಾ?

ಚೇರ್ಮನ್ : ನಿಮಗೆ ಇನ್ನೂ ಒಳ್ಳೆಯ ಭಾಷೆ ಬರುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಜನರಿಗೆ ದ್ರೋಹ ಮಾಡುವುದು ಬಹಳ ಒಳ್ಳೆಯ ಕೆಲಸ, ದೇವರು ಮೆಚ್ಚುವ ಕೆಲಸ, ಧರ್ಮದ ಕೆಲಸ ಎಂದು ಹೇಳಲಾ :

ಚೇರ್ಮನ್ : *ಲೋಫರ್ ಎಂಬ ಪದ ಬೇಡ. ಇನ್ನು ಬೇರೆ ವಿಧದಲ್ಲಿ ಹೇಳಿ. ಬೇರೆ ಭಾಷೆಯಲ್ಲಿ ಹೇಳಿ ಪರ್ವಾಗಿಲ್ಲ ನಿಮಗೆ ಬರುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಇಂಗ್ಲೀಷಿನಲ್ಲಿ *ಲೋಫರ್ ಅಂದರೆ ಏನಂತೆ? ಅದರ ಅರ್ಥ ಕನ್ನಡದಲ್ಲಿ ಹೇಳಿ ನೋಡೋಣ. ನನಗೆ ಗೊತ್ತಿಲ್ಲ.

ಚೇರ್ಮನ್ : ಸಧ್ಯಕ್ಕೆ ಆ ಪದದ ಬಳಕೆ ಬೇಡ. ಬೇರೆಯದು ಹೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಏತಕ್ಕೆ ಬಳಸಬಾರದು ಸ್ವಾಮಿ ?. ಅದಕ್ಕಿಂತ ಕೆಟ್ಟ ಪದವಿದ್ದರೆ ಉಪಯೋಗಿಸಬಹುದು. ಈಗ ಆಗಿರುವ ಕೆಲಸಕ್ಕೆ.

ಚೇರ್ಮನ್ : ನಿಮಗೆ ಒಳ್ಳೆಯ ಪದ ಬರುತ್ತದೆ. ಅದನ್ನೇ ಹೇಳಿಬಿಡಿ ಪರವಾಗಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಹೋಗಲಿ ಬಿಡಿ. ಆ ಪದದ ಮೇಲೆ ವ್ಯಾಖ್ಯಾನ ಬೇಡ.

ಒಬ್ಬ ಮಾನ್ಯ ಸದಸ್ಯರು : ವ್ಯಾಖ್ಯಾನ ಅಲ್ಲ, ಅದನ್ನು ಕಡತದಿಂದ ತೆಗೆದುಹಾಕಬೇಕು.

ಚೇರ್ಮನ್ : ತೆಗೆದಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ತೆಗೆದುಕೊಳ್ಳಿ. ಯಾರು ಬೇಡ ಎನ್ನುತ್ತಾರೆ? ನಮಗೆ ಕೆಲಸ ಆಗಬೇಕು. ಏನು ಬೇಕಾದರೂ ಮಾಡಿಕೊಳ್ಳಿ. ವೀರೇಂದ್ರ ಪಾಟೀಲರು ಅನ್ಯಾಯವಾಗಿದೆ ಎಂದು ಹೇಳಿ ಹನುಮೇಗೌಡರೆ, ತೊಂದರೆಯಾಗಿದೆ. ಮಾಡಿಸಿಕೊಡುತ್ತೇನೆ ಎಂದು ಹೇಳಿದರು. ಇನ್‌ವೆಸ್ಟಿಗೇಷನ್ ಆಯಿತು. ಇದಾಗಿ ಒಂದೂಮುಕ್ಕಾಲು ವರ್ಷವಾಯಿತು. ಅಲ್ಲಿದ್ದಂಥ ಯಾರೊಬ್ಬ ಇಂಜಿನಿಯರ್‌ಗೆ ನಿನಗೆ ಚೆನ್ನಾಗಿ ಮೇಯುವ ಜಾಗಕ್ಕೆ ಹಾಕಿಕೊಡುತ್ತೇನೆ. ನೀನು ಇವನಿಗೆ ಏನಾದರೂ ಮಾಡಿ ಕೆಲಸ ಆಗದಹಾಗೆ ಮಾಡು ಎಂದು ಹೇಳಿದರು. ಇದಕ್ಕೇನಂತ ಹೇಳಬೇಕು? ಮಾನ್ಯ ಭಾರಿ ನೀರಾವರಿ ಸಚಿವರನ್ನು ಕೇಳುತ್ತೇನೆ ನಾನು. ಇವರು ಅಧಿಕಾರದಲ್ಲಿದ್ದೇವೆ ಎಂದು ಹೇಳಿ ಅಧಿಕಾರಿಗಳ ಮೇಲೆ ಈ ರೀತಿ ಮಿಸ್‌ಗೈಡ್ ಮಾಡಿ ಒಂದು ಏರಿಯಾಕ್ಕೆ ಆಗತಕ್ಕ ಡೆವಲಪ್‌ಮೆಂಟ್ ಕೆಲಸವನ್ನು ಹಾಳು ಮಾಡಿದರಲ್ಲ. ಇದನ್ನು ಯಾವ ಪದದಲ್ಲಿ ಕರೆಯಬೇಕು?

---

* ಈ ಪದವನ್ನು ಛೇರ್ಮನ್ ಅವರ ಆದೇಶದ ಪ್ರಕಾರ ಕಡತದಿಂದ ತೆಗೆದುಹಾಕಲಾಗಿದೆ.

ಛೇರ್ಮನ್ : ಏನಾಗಬೇಕು ಎಂಬುದನ್ನು ಹೇಳಿಬಿಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ಕೊನೆಗೆ ಬಂಗಾರಪ್ಪನವರು ಕಾನ್‌ಫರೆನ್ಸ್ ಹಾಲ್‌ನಲ್ಲಿ ಒಂದು ಮೀಟಿಂಗ್ ಕರೆದರು. ಆವತ್ತು ಹೇಳಿದೆ. ಸ್ವಾಮಿ. ಈ ರೀತಿ ಅನ್ಯಾಯವಾಗಿದೆ. ಯಾರೋ ಒಬ್ಬರು ಪ್ರಭಾವ ಇದ್ದವರು ಎಲ್ಲಾ ಅವರೇ ಮಾಡಿಕೊಂಡರೆ ಈ ದೇಶದ ಉಳಿದ ಜನರು ಏನು ಮಾಡುತ್ತಾರೆ? ನೀವು ಈ ರಾಜ್ಯದ ಮುಖ್ಯಮಂತ್ರಿಗಳು. ನಿಮಗೆ ಎಲ್ಲಾ ಭಾಗದ ಜನಗಳ ಬಗ್ಗೆ ಒಂದೇ ಅಭಿಪ್ರಾಯ ಇರಬೇಕು ಎಂದು ನಾನು ಬಹಳ ಕೇಳಿಕೊಂಡೆ. ಅನ್ಯಾಯವಾಗಿದೆ ಹನುಮೇಗೌಡರೆ. ಸರಿ ಮಾಡಿಕೊಡೋಣ ಬಿಡಿ ಎಂದು ಹೇಳಿ ಮಾಡಿಕೊಟ್ಟರು; ಇದಾದ ಮೇಲೆ ಹೊರಡಲೇ ಇಲ್ಲ ಫೈಲು. ನಾನು ಹೇಳಿ ಹೇಳಿ. ಕಾಗದ ಬರೆದು ಬರೆದು ಸಾಕಾಗಿ ಕೊನೆಗೆ ಐದಾರು ದಿವಸಗಳಲ್ಲಿ ಹೋಗಿ ಧರಣಿ ಹೂಡುತ್ತೇನೆ ಎಂದು ಹೇಳಿದೆ. ಆಮೇಲೆ ಅವರು ಆಗಿದೆಯಲ್ಲ ಹನುಮೇಗೌಡರೆ. ಅಪ್ರೂವ್ ಮಾಡಿದ್ದೇನೆ. ಮೂರು ಕಿಲೋಮೀಟರ್ ಚಾನಲ್ ವರ್ಕ್. ಎರಡು ಸಾವಿರ ಎಕರೆಗೆ ನೀರಾವರಿಯಾಗುತ್ತದೆ. 65 ಲಕ್ಷ ರೂಪಾಯಿಗೆ ಈಗ ಮಾಡುತ್ತಾರಲ್ಲ ಬಿಡಿ. ಏತಕ್ಕೆ ತಾಳ್ಮೆ ಕಳೆದುಕೊಳ್ಳುತ್ತೀರಿ ಎಂದು ಹೇಳಿದರು. ಹೋಗಲಿ ಬಿಡಿ ಸ್ವಾಮಿ. ಸದ್ಯ ಕೆಲಸ ಆಯಿತಲ್ಲ ಎಂದು ಅವರಿಗೂ ಥ್ಯಾಂಕ್ಸ್ ಹೇಳಿ ಬಂದೆ ಆಮೇಲೆ. ಮಾರನೆ ಬೆಳಿಗ್ಗೆ ಊರಿನಿಂದ ಫೋನ್ ಬಂತು ನಾನು ಹೇಳುತ್ತಾ ಇರುವುದು ಶುಕ್ರವಾರದ ಮಾತು. ಹದಿಮೂರೋ ಹನ್ನೆರಡೋ ತಾರೀಖು ಇರಬೇಕು. ಗುದ್ದಲಿಪೂಜೆ ಮಾಡಿಬಿಡೋಣ ಎಂದು ನಾನು ಚೀಫ್ ಇಂಜಿನಿಯರ್‌ಗೆ ಹೇಳಿದೆ. ಸ್ವಾಮಿ ಬರುತ್ತೀರಾ ಗುದ್ದಲಿ ಪೂಜೆ ಮಾಡುವುದಕ್ಕೆ. ಊರಿನವರೆಲ್ಲಾ ಕರೆಯುತ್ತಿದ್ದಾರೆ ಎಂದು ಹೇಳಿದೆ. ಹನುಮೇಗೌಡರೆ. ನಾನು ಡೆಲ್ಲಿಗೆ ಹೋಗಬೇಕಾಗಿದೆ ನೀವು ಹೋಗಿ. ನೀವು ಆ ಕ್ಷೇತ್ರದ ಎಂ.ಎಲ್.ಎ., ಪಾರ್ಟಿ ಎಂ.ಎಲ್.ಎ. ಸರ್ಕಾರದಿಂದ ಆಗತಕ್ಕ ಉತ್ತಮ ಕೆಲಸ. ನೀವೇ ಹೋಗಿ ಪೂಜೆ ಮಾಡಿ ಎಂದು ಹೇಳಿದರು. ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರನ್ನು ಬೇಕಾದರೆ ಕರೆದುಕೊಂಡು ಹೋಗಿ ಎಂದು ಹೇಳಿದರು. ನಾನು ಅವರನ್ನು ಕರೆದಾಗ, ಅವರು ಸಹ ನಾನು ಡೆಲ್ಲಿಗೆ ಹೋಗಬೇಕಾಗುತ್ತದೆ ಹನುಮೇಗೌಡರೇ ಎಂದರು. ನಾನು 14ನೇ ತಾರೀಖು ಶನಿವಾರ 4 ಗಂಟೆಗೆ ಬೆಂಗಳೂರಿನಿಂದ ಹಾಸನಕ್ಕೆ ಹೋದೆ. ಅಲ್ಲಿದ್ದವರಿಗೆ ಇವರು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದರು ಎಂದು ಕಾಣುತ್ತದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆ. ನಾನು ಇನಾಗ್ಯುರೇಷನ್ ಮಾಡುವುದು ಎಂದು ಕಲ್ಲನ್ನು ಕೆತ್ತಿಸಿ ತೆಗೆದುಕೊಂಡು ಬಂದು ಫಿಕ್ಸ್ ಮಾಡಿದ್ದರು. ಶಾಮಿಯಾನ ಹಾಕಿಸಿದ್ದರು. 700-800 ಜನ ಕುಳಿತುಕೊಳ್ಳುವಷ್ಟು ಶಾಮಿಯಾನ ಹಾಕಿದ್ದು 400-500 ಜನ ಕುಳಿತುಕೊಳ್ಳುವುದಕ್ಕೆ ಕುರ್ಚಿ ಸಹಾ ಹಾಕಿಸಿದ್ದರು. ಪಾಂಪ್ಲೆಟ್ಸ್ ಮಾಡಿ ಹಂಚಿದ್ದರು. ಎಲ್ಲಿಯವರೆಗೆ ಇದು ನಡೆದಿದ್ದು? 15ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಫಂಕ್ಷನ್ 14ನೇ ತಾರೀಖು ರಾತ್ರಿ 7 ಗಂಟೆಯವರೆಗೂ ಫಂಕ್ಷನ್ ಸ್ಟ್ಯಾಂಡ್ ಸ್ಟಿಲ್. ಆಮೇಲೆ ನಾನು ಅಲ್ಲಿಗೆ ಹೋದಾಗ ಏನು ಮಾಡಿದ್ದೀರಿ ಎಂದು ಕೇಳಿದೆ. ಎಲ್ಲಾ ಏರ್ಪಾಡು ಮಾಡಿದ್ದೇವೆ. ಬೆಳಿಗ್ಗೆ 11 ಗಂಟೆಗೆ ಬನ್ನಿ ಎಂದು ಹೇಳಿದರು. ಡಿ.ಸಿ. ಯವರು ಬರುತ್ತಾರೆ ಎಂದು ಹೇಳಿದರು. ಮುಖ್ಯ ಎಂಜಿನಿಯರ್‌ರವರು ಬಂದಿದ್ದರೆ ಚೆನ್ನಾಗಿತ್ತು, ಎಸ್.ಇ.ಯವರು ಬಂದಿದ್ರೆ ಚೆನ್ನಾಗಿತ್ತು. ಆದರೆ ಅವರಿಗೆ ಪುರುಸೊತ್ತು ಇಲ್ಲವಂತೆ ಎಂದು ಹೇಳಿಬಿಟ್ಟು ಬಂದೆ. ಆಮೇಲೆ ರಾತ್ರಿ 9 ಗಂಟೆಗೆ ಹಳ್ಳಿಯವರು ಓಡಿ ಬಂದರು. ಅವರು ಬಂದಾಗ ಏನಪ್ಪಾ ಎಂದೆ. ಫಂಕ್ಷನ್ ಕ್ಯಾನ್ಸಲ್ ಎಂದರು. ಯಾಕ್ರೋ ಎಂದು ಕೇಳಿದೆ. ಆ ಇಂಜಿನಿಯರ್ ಸಾಹೇಬರು ಬಂದಿದ್ದರು, ಏಕಾಏಕಿ ಬಂದು ಚೇರ್‌ಗಳನ್ನು ತುಂಬಿಕೊಂಡು, ಶಾಮಿಯಾನ ತೆಗೆದು. ಲೌಡ್‌ಸ್ಪೀಕರ್ ಎಲ್ಲವನ್ನೂ ತೆಗೆದುಕೊಂಡು ಹೊರಟುಹೋದರು ಎಂದು ಹೇಳಿದರು.

ಯಾಕಂತೆ ಎಂದು ಕೇಳಿದೆ. ನನಗೆ ಏನಪ್ಪ ಅನುಮಾನ ಎಂದರೆ, ಇದರಲ್ಲಿ ರಾಜಕೀಯ ಭಿನ್ನಾಭಿಪ್ರಾಯ ಇದೆ. ಆದರೂ ಈ ಮಟ್ಟಕ್ಕೆ ಹೋಗಬಾರದು ಎಂದು ತಿಳಿದು ಏನೋ ಇರಬಹುದು ಕಾರಣ ಎಂದು ವಿಚಾರಿಸುತ್ತೇನೆ ಎಂದು ಹೇಳಿ ಅಲ್ಲೇ ಕೂರಿಸಿಕೊಂಡು ಬೆಂಗಳೂರಿಗೆ ಫೋನ್ ಮಾಡಲು ಟ್ರೈ ಮಾಡಿದೆ. ಮುಖ್ಯಮಂತ್ರಿಯವರೂ ಊರಿನಲ್ಲಿ ಇರಲಿಲ್ಲ. ಅಲ್ಲಿಂದಲೂ ಯಾವ ಡೈರೆಕ್ಷನ್ ಇಲ್ಲ ಎಂದು ಗೊತ್ತಾಯಿತು. ಆಮೇಲೆ ನಾನು ಮಲ್ಲಾರಿಗೌಡ ಪಾಟೀಲರಿಗೆ ಸಂಪರ್ಕಿಸಿದೆ. ಅವರೂ ಕೂಡಾ ಊರಿನಲ್ಲಿ ಇರಲಿಲ್ಲ. ಅವರಿಂದಲೂ ಯಾವುದೇ ಸೂಚನೆ ಇರಲಿಲ್ಲ. ಆ ನಂತರ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣಪ್ಪನವರನ್ನು ಕೇಳಿದೆ. ಮುಖ್ಯಮಂತ್ರಿಗಳು ಅಥವಾ ಇಲಾಖಾ ಮಂತ್ರಿಗಳು ತಮಗೆ ಏನಾದರೂ ಹೇಳಿದ್ದಾರಾ ಎಂದು ಕೇಳಿದೆ. ಹನುಮೇಗೌಡರೇ, ನನಗೆ ಏನೂ ಗೊತ್ತಿಲ್ಲ. ಮುಖ್ಯಮಂತ್ರಿಗಳು, ಇಲಾಖಾ ಮಂತ್ರಿಗಳು ನನಗೆ ಏನೂ ಹೇಳಿಲ್ಲ. ಪ್ರೋಗ್ರಾಮ್ ಇದ್ದೇ ಇರುತ್ತೆ. ತಾವು ಪೂಜೆ ಮಾಡಿ ಎಂದು ಹೇಳಿದರು. ಬೇಜಾರು ಏಕೆ ಮಾಡಿಕೊಳ್ಳುತ್ತೀರಿ ಎಂದರು. ಆಮೇಲೆ ನಾನು ಚೀಫ್ ಇಂಜಿನಿಯರ್‌ಗೆ ಫೋನ್ ಮಾಡಿದೆ. ನನಗೆ ಬಿಪಿ ಇದ್ದರಿಂದ ಆ ರಾತ್ರಿ ನಾನು ಮಲಗುವುದಕ್ಕೇ ಅವಕಾಶ ಆಗಲಿಲ್ಲ. ನನಗೂ ಏನೂ ಸೂಚನೆ ಬಂದಿಲ್ಲವಲ್ಲ ಎಂದು ಚೀಫ್ ಇಂಜಿನಿಯರ್ ಹೇಳಿದರು. ಹಾಗೂ ಅವರೂ ಏನೂ ಹೇಳಿಲ್ಲ ಎಂದು ಹೇಳಿದರು. ಅಲ್ಲಾ ಸ್ವಾಮಿ, ನಿಮ್ಮ ಇಲಾಖೆಯಲ್ಲಿ ಯಾರೋ ಒಬ್ಬ ಚೋಟಾ ನವಾಬ್ ಹುಟ್ಟಿಕೊಂಡಿರುವ ಹಾಗೆ ಕಾಣುತ್ತದೆ ಎಂದು ಹೇಳಿದೆ. ಪರಿಸ್ಥಿತಿ ಬಗ್ಗೆ ನಾನು ಅವರಿಗೆ ಹೇಳಿದಾಗ ಅವರು ಹೇಳಿದರು. ನಾನು ಎಲ್ಲಾ ವಿಚಾರ ಮಾಡುತ್ತೇನೆ ಇನ್ನು ಅರ್ಧ ಗಂಟೆ ಬಿಟ್ಟು ಫೋನ್ ಮಾಡಿ ಎಂದು ಹೇಳಿದರು. ಮತ್ತೆ 10 ಗಂಟೆಯಿಂದ 12 ಗಂಟೆವರೆಗೆ ಟ್ರೈ ಮಾಡಿದರು. ಇವರು ಸ್ವಾಮಿ, ಬೀಗ ಹಾಕಿಕೊಂಡಿದ್ದೇ, ಇದ್ದವರು ನಾಲ್ಕು ಜನ ಪೀವನ್ಸ್‌ನ್ನೂ ಕರೆದುಕೊಂಡು ಇವನು ಬೇರೆ ಕಡೆ ಹೋಗಿದ್ದಾನೆ. ಯಾರು? ಈ ಅಸಿಸ್ಟೆಂಟ್ ಎಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಇನ್‌ಛಾರ್ಜ್ ಆಫ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್. ಇನ್-ಛಾರ್ಜ್ ಆಫ್ ಎಕ್ಸಿಕ್ಯೂಟಿವ್ ಇಂಜಿನಿಯರ್. ಅವನು ಎಕ್ಸಿಕ್ಯೂಟಿವ್ ಇಂಜಿನಿಯರ್ ಅಲ್ಲ. ಮೇಜರ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಇಲಾಖೆ ಡಿಮಾಂಡ್ಸ್ ಬಂದಾಗ ಈ ಕತೆಯನ್ನು ವಿವರವಾಗಿ ಬಿಚ್ಚುತ್ತೇನೆ. ಈಗ ಹೇಳುವುದಿಲ್ಲ. ಎಲ್ಲಾ ಹುಡುಕುತ್ತಿದ್ದರು. ಇಲ್ಲ ಎಂದು ಹೇಳಿದರು. ರಾತ್ರಿ ಎಲ್ಲಾ ನೋಡಿ ಬೆಳಿಗ್ಗೆ 7 ಗಂಟೆಗೆ ಒಬ್ಬರು ಅಸಿಸ್ಟೆಂಟ್ ಎಂಜಿನಿಯರ್ ಹಿಡಿದೆ. ಹಿಡಿದು ಅವನನ್ನು ಮನೇಲಿ ಕೂರಿಸಿಕೊಂಡು ಚೀಫ್ ಇಂಜಿನಿಯರ್‌ಗೆ ಫೋನ್ ತೆಗೆದುಕೊಂಡು ಕೊಟ್ಟಾಗ ಅವರು ಕೇಳಿದರು. ಏಕೆ ಕ್ಯಾನ್ಸಲ್ ಮಾಡಿದ್ದೀರಿ, ಕ್ಯಾನ್ಸಲ್ ಮಾಡುವುದಕ್ಕೆ ಕಾರಣ ಏನು ಎಂದೆಲ್ಲಾ ಕೇಳಿ, ಹೋಗ್ರಿ, ಫಂಕ್ಷನ್ ಅಟೆಂಡ್ ಮಾಡ್ರಿ. ನಾನು ಹೇಳಿದ್ದೇನೆ ಎಂದು ಹೇಳಿ ಅಂತ ಹೇಳಿದರು. ಆಗ ಅಸಿಸ್ಟೆಂಟ್ ಎಂಜಿನಿಯರ್ ಏನು ಹೇಳಿದ ಎಂದರೆ ಚೀಫ್ ಎಂಜಿನಿಯರ್ ಇಮ್ಮಿಡಿಯೆಟ್ ಸುಪೀರಿಯರ್ ಅಲ್ಲಾ ನಿನಗೆ, ನಾನು ಇಮ್ಮಿಡಿಯೆಟ್ ಸುಪೀರಿಯರ್. ನೀವು ಯಾರಾದ್ರೂ ಫಂಕ್ಷನ್‌ಗೆ ಹೋದರೆ ನಿಮ್ಮನ್ನು ಸಸ್ಪೆಂಡ್ ಮಾಡುತ್ತೇನೆ, ಡಿಸ್‌ಮಿಸ್ ಮಾಡುಸುತ್ತೇನೆ ಎಂದು ಯಾರೋ ಒಬ್ಬ ದೊಡ್ಡ ಮಂತ್ರಿ ಹೇಳಿಬಿಟ್ಟವನೆ. ನನಗೆ ಆಗಲೇ ಗೊತ್ತಾದ್ದು, ಈ ರಾಜ್ಯಕ್ಕೆ ಒಬ್ಬ ಸೂಪರ್ ಚೀಫ್ ಮಿನಿಸ್ಟರ್ ಇರಬೇಕು ಎಂದು. ಆಮೇಲೆ ನಾನು ಫೋನ್ ತೆಗೆದುಕೊಂಡು, ಏನು ಸ್ವಾಮಿ ಮುಖ್ಯಮಂತ್ರಿಗಳು ಹೇಳದೇ, ಸಂಬಂಧಪಟ್ಟ ಇರಿಗೇಷನ್ ಮಂತ್ರಿಗಳು ಹೇಳದೇ. ಇನ್ಯಾವೋನೋ ಬೇರೆಯವನು ಹೇಳಿದ ಎಂದು ಹೇಳಿ ಈ ಪ್ರೋಗ್ರಾಮ್ ಈ ರೀತಿ ಕ್ಯಾನ್ಸಲ್ ಮಾಡಿದರೆ ಚೆನ್ನಾಗಿರುವುದಿಲ್ಲ. ದೊಡ್ಡ ಹೋರಾಟ ಆಗುವವರೆಗೆ ನಾನು ಬಿಡುವುದಿಲ್ಲ ಎಂದು ಹೇಳಿದೆ. ಹೀಗೆ ಹೇಳಿದಮೇಲೆ ಹನುಮೇಗೌಡರೇ ನಾನು ಇನ್‌ಸ್ಟ್ರಕ್ಷನ್ಸ್ ಕೊಟ್ಟು ಕಳುಹಿಸುತ್ತೇನೆ ಬಿಡಿ ಎಂದು ಹೇಳಿದರು. ನಾನು ಸುಮ್ಮನಾದೆ. ಆಮೇಲೆ ಬೆಳಿಗ್ಗೆ

9 ಗಂಟೆಗೆ ಎಲ್ಲರೂ ಸೇರಿಕೊಂಡರು. ನಾನು ಹೋದರೂ ಇವರು ಪತ್ತೆ ಇಲ್ಲ. ಊರಿನವರು ಮಾತ್ರ ಕುರ್ಚಿ ಪರ್ಚಿ ತೆಗೆದುಕೊಂಡು ಹೋಗುವುದಕ್ಕೆ ಬಿಟ್ಟಿದ್ದರು. ಆಮೇಲೆ ಫಂಕ್ಷನ್ ಶುರು ಆಯಿತು. ಹಳ್ಳಿಯವರು ಎಲ್ಲರೂ ಬಹಳ ಗಲಾಟೆ ಮಾಡಿದರು. ನೀವು ಪಾರ್ಟಿ ಎಂಎಲ್ಎ ಅಲ್ಲವೇ, ಇದು ಸ್ಯಾಂಕ್ಷನ್ ಆಗಿಲ್ಲವೇ, ಇದು ನಿಮ್ಮ ಕ್ಷೇತ್ರ ಅಲ್ಲವೇ, ಇನ್ಯಾವೋನೋ ಬಂದು ಬೇಳೆಕಾಳು ಬೇಯಿಸಿಕೊಳ್ಳುವುದಕ್ಕೆ ಅವನಿಗೆ ಏನು ಹಕ್ಕಿದೆ ಇಲ್ಲಿ? ಎಂದೆಲ್ಲಾ ಕೇಳಿದರು.

ಚೇರ್ಮನ್ : ತಾವು ನೇರವಾಗಿ ವಿಷಯಕ್ಕೆ ಬನ್ನಿ ....

ಶ್ರೀ ಕೆ.ಹೆಚ್. ಹನುಮೇಗೌಡ : ಇದೇನು ಬೇರೆ ವಿಷಯಾನ? ನಾನು ಪಿಲಾಸಫಿ ಹೇಳುತ್ತಾ ಇದ್ದೇನೆಯೇ, ಇಲ್ಲ ಹಿಂದಿನ ಚರಿತ್ರೆಗೆ ಹೋಗಿದ್ದೇನೆಯೆ? ಭೂಗೋಳಕ್ಕೆ ಹೋಗಿದ್ದೇನೆಯೇ? ಅದೇ ಸಂಬಂಧ. ಅವರು ಹೇಳಿದ್ದನ್ನೆಲ್ಲ ಅಂದರೆ ಹಳ್ಳಿಯವರು ಹೇಳಿದ ಮಾತನ್ನು ಇಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೂ ಸಿಂಪಲ್ ಆಗಿ ಹೇಳುತ್ತಿದ್ದೇನೆ. ಗಲಾಟೆ ಮಾಡಿಯೆಂದು ಹೇಳಿದರು. ಸಂಬಂಧಪಟ್ಟವರು ಇಂಜನಿಯರ್ ಯಾರು ಕ್ಯಾನ್ಸಲ್ ಮಾಡಿದರು ಅವರ ಮೇಲೆ ಗಲಾಟೆ ಮಾಡಿಯೆಂದರು. ನಾನು ಅವರಿಗೆ ಸಮಾಧಾನ ಹೇಳಿ ನೋಡ್ರಪ್ಪ, ನಮಗೆ ಕೆಲಸವಾಗಬೇಕು. ನಾಳೆ ನಾಡಿದ್ದರಲ್ಲಿ ಕೆಲಸ ಶುರುವಾಗುತ್ತದೆ. ಅದು ಅಪ್ರೂವಲ್ ಆಗಿದೆ ಎಂದು ಹೇಳಿ ಅವರನ್ನು ಸಮಾಧಾನ ಮಾಡಿ ನಾನು ವಾಪಸ್ಸು ಬಂದೆ. ಸಂಬಂಧಪಟ್ಟ ಮಂತ್ರಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ನಾನು ಕಾಂಗ್ರೆಸ್ ಪಕ್ಷದ ಶಾಸಕ. ಅದೂ ಅಲ್ಲದೆ ನನ್ನದು ಬೇರೆ ಕ್ಷೇತ್ರನೂ ಅಲ್ಲ. ಬೇರೆ ಕ್ಷೇತ್ರವೇನಾದರೂ ಆಗಿದ್ದರೆ ಯಾರದೋ ಹೆಸರು ಇಲ್ಲಿ ಹಾಕಿಬಿಟ್ಟರೆ ಇವನಿಗೇನು ಇಲ್ಲಿ ಒಗ್ಗರಣೆಯೆಂದು ಹಳ್ಳಿಯ ಭಾಷೆಯಲ್ಲಿ ಹೇಳುತ್ತಾರೆ. ಆದರೆ ಅದು ನನ್ನ ಕ್ಷೇತ್ರ. ಜನ ನನಗೆ ಓಟು ಕೊಟ್ಟಿದ್ದಾರೆ. ನಾನು ಅಲ್ಲಿಂದ ಗೆದ್ದಿದ್ದೇನೆ. ಜನಗಳ ಹಿತದೃಷ್ಟಿಯಿಂದ ಕೆಲಸ ಮಾಡುವುದು ನನ್ನ ಧರ್ಮ. ಅದನ್ನು ನಾನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅದನ್ನು ತಪ್ಪಿಸುವ ಪ್ರಯತ್ನ ಯಾರದು? ಯಾವುದು ಆ ದುಷ್ಟ ಶಕ್ತಿ? ಆ ದುಷ್ಟ ಶಕ್ತಿ ಕೆಲಸ ಮಾಡಲು ಯಾರು ಅಧಿಕಾರ ಕೊಟ್ಟರು? ಹೀಗೆ ಮಾಡಿಕೊಂಡು ಹೋದರೆ...

ಚೇರ್ಮನ್ : ನೀರಾವರಿ ಮಂತ್ರಿಗಳು ಸಭೆಯಲ್ಲಿದ್ದಾರೆ; ಅವರೇನು ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಹೇಳುವುದನ್ನು ಹೇಳುತ್ತೇನೆ. ಮಂತ್ರಿಗಳನ್ನು ಮಧ್ಯದಲ್ಲಿ ಏತಕ್ಕೆ ಎಬ್ಬಿಸುತ್ತೀರಿ? ಅವರು ಈಗ ಉತ್ತರ ಹೇಳುವುದು ಬೇಡ. ನಾನು ಹೇಳುತ್ತಿರುವುದೇನೆಂದರೆ ಯಾರು ಈ ರೀತಿಯ ಆದೇಶ ಕೊಟ್ಟರು? ಈ ರೀತಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳೇನಾದರೂ ಆದೇಶ ಕೊಟ್ಟಿದ್ದಾರೆಯೇ? ಯಾರು ಕೊಟ್ಟಿದ್ದಾರೆ? ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ಜನ ಯೋಗ್ಯರಾದ ಉತ್ತಮರಾದ ವ್ಯಕ್ತಿಗಳಿದ್ದಾರೆ. ಈ ದೇಶದ ಅಭಿವೃದ್ಧಿಗೋಸ್ಕರ ಕೆಲಸ ಮಾಡುತ್ತಿರುವ ಇಂಜನಿಯರ್‌ಗಳು ಇದ್ದಾರೆ. ನನಗೆ ಅವರ ಬಗ್ಗೆ ಒಳ್ಳೆಯ ಮೆಚ್ಚುಗೆಯಿದೆ. ಆದರೆ ಇಷ್ಟರಮಟ್ಟಿಗೆ ಕೊಬ್ಬಿದ ಇಂಜನಿಯರ್‌ಗಳು ಇದ್ದರೆ ಈ ಇಲಾಖೆಗೆ ಗೌರವ ಬರುತ್ತದೆಯೇ?

ಚೇರ್ಮನ್ : ಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಕೆ.ಹೆಚ್. ಹನುಮೇಗೌಡ : ತಡಿರಿ ಸ್ವಾಮಿ. ನಾನು ಪೂರ್ತಿ ಹೇಳುತ್ತೇನೆ. ನೀವು ಸುಮ್ಮನೆ ಕೂರಬೇಕು ದಯವಿಟ್ಟು ಎರಡು ನಿಮಿಷ. ನಿಮಗೇ ಈ ತರಹ ಆಗಿದ್ದರೆ ಏನು ಮಾಡುತ್ತಾ ಇದ್ದಿರಿ? ನಿಮ್ಮ ಕ್ಷೇತ್ರದಲ್ಲಿ ಯಾರಾದರೂ ನಿಮ್ಮ ಪಕ್ಕದಲ್ಲಿರುವವರು ಈ ತರಹ ಮಾಡಿದ್ದರೆ ನೀವೇನು ಮಾಡುತ್ತಾ ಇದ್ದಿರಿ? ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರಾದ ಮಲ್ಲಾರಿಗೌಡ ಪಾಟೀಲರ ಕ್ಷೇತ್ರದಲ್ಲಿ ಇನ್ನೊಬ್ಬ ಮಂತ್ರಿ ಈ ತರಹ ಮಾಡಿದ್ದರೆ ಏನು ಮಾಡುತ್ತಾ ಇದ್ದರು? ಇದರಿಂದ ಹೊಟ್ಟೆ ಹೊರೆಯುತ್ತಿರಲಿಲ್ಲವೆ? ಈ ಫಂಕ್ಷನ್ ಕ್ಯಾನ್ಸಲ್ ಆಗಿದ್ದರೆ ನನ್ನ ಗತಿಯೇನು? ನನ್ನ ಮರ್ಯಾದೆ ಏನಾಗುತ್ತಿತ್ತು?

ಚೇರ್ಮನ್ : ಇದೆಲ್ಲಾ ಗೊತ್ತಿದೆ, ತಮಗೆ ಏನಾಗಬೇಕು ಅದನ್ನು ಹೇಳಿ. ಮಂತ್ರಿಗಳು ಇದ್ದಾರೆ. ಅವರು ಏನು ಹೇಳುತ್ತಾರೆ ಕೇಳೋಣ

ಶ್ರೀ ಕೆ.ಹೆಚ್. ಹನುಮೇಗೌಡ : ನನಗೆ ಏನೂ ಆಗಬೇಕಾಗಿಲ್ಲ. ಹೋಗಿರುವ ಮರ್ಯಾದೆ ಹೋಯಿತು? ಇದಕ್ಕೆ ಯಾರು ಕಾರಣರಿದ್ದಾರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಕೆಲಸ ಸ್ಯಾಂಕ್ಷನ್ ಆಗಿದೆ. ಅದನ್ನು ಮಾಡದೇ ಹೋದರೆ ಬಿಡುತ್ತೇನೆಯೇ? ಮಾಡೇಮಾಡಿಸುತ್ತೇನೆ. ನನಗೆ ನ್ಯಾಯ ಬೇಕಾಗಿದೆ. ನಾನೇನು ಕಳ್ಳತನ ಮಾಡಿದವನಲ್ಲ. ನಾನು ಇಂಜನಿಯರ್ ಇಲಾಖೆಯಲ್ಲಿ ಇಷ್ಟು ಪರ್ಸೆಂಟೇಜ್ ಕೊಡಬೇಕೆಂದು ಹೇಳಿ ತೆಗೆದುಕೊಂಡು ಹೊಟ್ಟೆ ಹೊರೆಯುವ ಎಂಎಲ್‌ಎ ಅಲ್ಲ. ನನ್ನ ಚಾರಿತ್ರ್ಯದಲ್ಲಿ ಶುದ್ಧವಾಗಿದ್ದೇನೆ. ನಾನೇನಾದರು ದರೋಡೆಕೋರ ಎಂಎಲ್‌ಎ ಆಗಿದ್ದಾನೆಯೇ? ನಾನೊಬ್ಬ ಸಾಧಾರಣ ಮನುಷ್ಯ. ನನ್ನ ಇತಿಮಿತಿಯೊಳಗೆ ದೇವರು ಮೆಚ್ಚುವ ಹಾಗೆ ನಡೆಯತಕ್ಕ ಒಬ್ಬ ಚುನಾಯಿತ ಪ್ರತಿನಿಧಿ. ಈ ರೀತಿ ನನಗೆ ಅವಮಾನ ಮಾಡಬೇಕಾದರೆ ಇದಕ್ಕೆ ಕಾರಣವೇನು? ಆ ಅಧಿಕಾರಿ ಈ ರೀತಿಯಾಗಿ ನಡೆದುಕೊಳ್ಳಬೇಕಾದರೆ ಆ ಹಿನ್ನೆಲೆಯಲ್ಲಿರತಕ್ಕ ದುಷ್ಟಶಕ್ತಿ, ಭ್ರಷ್ಟ ಶಕ್ತಿ ಯಾವುದು? ಇದನ್ನು ಯಾರೂ ಕೇಳುವವರು ಹೇಳುವವರು ಇಲ್ಲವೇ ಇಲ್ಲವೆ?

ಚೇರ್ಮನ್ : ಮಾನ್ಯ ಸದಸ್ಯರಾದ ಹನುಮೇಗೌಡರೆ, ತಾವು ಬೇಗ ಮುಗಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ : ತಡಿರಿ, ಸ್ವಲ್ಪ ಮುಗಿಸುತ್ತೇನೆ. ನನಗೆ ಒಳ್ಳೆ ಪಜೀತಿ ಆಯಿತಲ್ಲ.

ಚೇರ್ಮನ್ : ನನಗೆ ಬೇರೆ ಬಿಸಿನೆಸ್ ಇದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಇದೇನು ಬಿಸಿನೆಸ್ ಅಲ್ಲವಾ? ಇದು ನನ್ನ ಸ್ವಂತ ಮನೆದಾ? ಇದು ನನ್ನ ಹೆಂಡತಿ ಮಕ್ಕಳ ವ್ಯವಹಾರನಾ ಕೇಳುತ್ತಾ ಇದ್ದೇನೆಯೇ?

ಚೇರ್ಮನ್ : ಆಯಿತಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಒಬ್ಬ ಶಾಸಕನಾಗಿ ಕೇಳುತ್ತಾ ಇದ್ದೇನೆ. ನನ್ನ ಹಕ್ಕಿಗೆ ಚ್ಯುತಿ ಬಂದಿದೆ. ನನ್ನ ಕ್ಷೇತ್ರಕ್ಕೆ ಆಗಬೇಕಾಗಿರುವ ಕೆಲಸಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

ಚೇರ್ಮನ್ : ಇಲಾಖೆಯ ಮಂತ್ರಿಗಳು ಇದ್ದಾರೆ. ಅವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಕೆ.ಹೆಚ್. ಹನುಮೇಗೌಡ : ಇದರ ಬಗ್ಗೆ ವಿಚಾರಣೆಯಾಗಬೇಕು. ಇದರ ಬಗ್ಗೆ ವಿಚರಾಣೆಯಾಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾನು ತಪ್ಪು ಮಾಡಿದ್ದರೆ ರಾಜಿನಾಮೆಯನ್ನು ಕೊಡುತ್ತೇನೆ. ನಾನು ಇದರಲ್ಲಿ ತಪ್ಪು ಮಾಡಿದ್ದರೆ ನನ್ನನ್ನು ಶೂಟ್ ಮಾಡಿ ನನ್ನ ಹಣವನ್ನು ಯಾವುದಾದರೂ ಸರ್ಕಲ್‌ನಲ್ಲಿ ನೇತುಹಾಕಿ. ಹಣವನ್ನು ನನ್ನ ಸಂಬಂಧಿಕರಿಗೆ ಕೊಡುವುದು ಬೇಡ. ಆದರೆ, ಆ ದುರಹಂಕಾರಿ

ಅಧಿಕಾರಿ ಯಾರದೋ ಮಾತು ಕೇಳಿ ಈ ರೀತಿ ನನಗೆ ಅವಮಾನ ಮಾಡಿದ್ದರೆ ಅದರ ಹಿಂದಿರುವ ಶಕ್ತಿ ಯಾವುದು? ಅವನು ಏತಕ್ಕೋಸ್ಕರ ಹೀಗೆ ಮಾಡಿದ. ಅದರ ಬಗ್ಗೆ ವಿಚಾರಣೆಯಾಗಬೇಕು; ಅವನ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳದಿದ್ದರೆ ನಾನು ಈ ಸದನದಲ್ಲಿ ಅಮರಣಾಂತರ ಸತ್ಯಾಗ್ರಹ ಹೂಡುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರ ಸತ್ಯಾಗ್ರಹ ಯಾರ ಮೇಲೆ? ಮಂತ್ರಿಯ ಮೇಲೋ ಅಥವಾ ಅಧಿಕಾರಿಯ ಮೇಲೋ? ಮಾನ್ಯ ಸದಸ್ಯರು ಮಾತನಾಡಿದ್ದನ್ನು ನೋಡಿದರೆ ಅವರ ಮನಸ್ಸಿಗೆ ನೋವಾಗಿದೆ. ಇದು ಯಾವುದೇ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರಿಗೆ ಫೋನ್ ಮಾಡಿರಬಹುದು. ಮಾನ್ಯ ಮುಖ್ಯಮಂತ್ರಿಗಳಿಗೆ ಫೋನ್ ಮಾಡಿರಬಹುದು. ಮುಖ್ಯ ಇಂಜಿನಿಯರ್‌ರವರಿಗೆ ಫೋನ್ ಮಾಡಿರಬಹುದು. ಆದರೆ ನನ್ನ ಗಮನಕ್ಕೆ ಇದು ಬಂದಿಲ್ಲ. ಮಾನ್ಯ ಸದಸ್ಯರು ಹಿಂದೆ ಒಂದು ಸಾರಿ ನನ್ನನ್ನು ಕರೆದಿದ್ದರು. ಒಂದು ಸಣ್ಣ ಉದ್ಘಾಟನೆಯನ್ನು ಮಾಡಪ್ಪ ಎಂದು ಹೇಳಿದ್ದರು. ಬಹುತೇಕ ಅದೇ ಇರಬಹುದೆಂದು ನನ್ನ ಭಾವನೆ. ಅದು ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದರೆ ಖಂಡಿತವಾಗಿಯೂ ಅದನ್ನು ಮಾಡಿಸುವುದಕ್ಕೆ ಬದ್ಧನಾಗಿರುತ್ತೇನೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಡುತ್ತೇನೆ. ಯಾವ ಅಧಿಕಾರಿ ತಪ್ಪು ಮಾಡಿದ್ದಾನೆ. ಅವನನ್ನು ಕರೆಸಿ ಸರಿಯಾದ ಶಿಕ್ಷೆಯನ್ನು ವಿಧಿಸುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಸಮಾಧಾನದಿಂದಿರಬೇಕು. ಖಂಡಿತವಾಗಿಯೂ ನನ್ನ ಕೈಯಿಂದ ನ್ಯಾಯವನ್ನು ಅವರಿಗೆ ದೊರಕಿಸಿ ಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಆದರೆ ಯಾವ ಮಂತ್ರಿಗಳು ಏನು ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಅವರು ಹೇಳುವುದು ಬೇಡ. ನನಗೆ ಈ ವಿಚಾರ ಗೊತ್ತಿದೆ. ನಾನು ಖಂಡಿತವಾಗಿ ಸ್ಪಾಟ್‌ಗೆ ಹೋಗಿ ಯಾವ ಅಧಿಕಾರಿಯೇ ಆಗಲಿ, ತಪ್ಪು ಮಾಡಿದ್ದರೆ ತಕ್ಷಣ ಶಿಕ್ಷೆ ಕೊಡತಕ್ಕಂಥ ಕಾರ್ಯಕ್ರಮ ಕೈಗೊಳ್ಳುತ್ತೇನೆ. ಈ ದೃಷ್ಟಿಯಿಂದ ಅವರು ಸಮಾಧಾನವಾಗಿರಬೇಕು. ಅವರ ಕಾರ್ಯ ಕುಂಠಿತವಾಗದ ಹಾಗೆ ನಾನು ನೋಡಿಕೊಳ್ಳುತ್ತೇನೆ. ನಾನು ಮುಂದಿನ ವಾರ ಹೋಗಬೇಕಾದರೆ, ಅವರು ಇದ್ದರೆ ಅವರೂ ನನ್ನ ಜೊತೆ ಬಂದರೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಸಹಿಮಾಡಿಕೊಡುತ್ತೇನೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಕೆಲಸ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕಾಗಿ ಅಲ್ಲಿಯ ಜನತೆ ಪರವಾಗಿ ನಾನು ಶ್ರೀ ಬಂಗಾರಪ್ಪನವರಿಗೆ. ಮತ್ತು ಮಂತ್ರಿಯವರಿಗೆ ಥ್ಯಾಂಕ್ಸ್ ಹೇಳುತ್ತೇನೆ. ಆದರೆ ಹದ್ದುಮೀರಿ ಹೋಗತಕ್ಕಂಥ ಅಧಿಕಾರಿಗಳನ್ನು ಅವರು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬೇಕು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

ಅಭಿಯಾಚನೆ ಕ್ರಮಾಂಕ : 9-ಲೇಖನ ಸಾಮಗ್ರಿ, ಮುದ್ರಣ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 17.01.79.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ:

ಅಭಿಯಾಚನೆ ಕ್ರಮಾಂಕ : 10-ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 199.86.28.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25.00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 12-ಪ್ರಾಥಮಿಕ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 632.68.87.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 14-ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 360.76.82.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 35-ರಾಜ್ಯ ವಿಧಾನ ಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9.06.13.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 36-ನ್ಯಾಯ ಪರಿಪಾಲನೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) : ಸ್ವಾಮಿ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಲಾಪನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 41.81.82.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಪ್ರಸ್ತಾವನೆಗಳನ್ನು ಸೂಚಿಸಲಾಯಿತು

† ಶ್ರೀ ಎಸ್.ಎಂ. ಯಾಹ್ಯಾ (ಜಯಮಹಲ್) : ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಏನು ಈ ಬೇಡಿಕೆಗಳನ್ನು ನಮ್ಮ ಈ ಲೆಜಿಸ್ಲೇಚರ್‌ನ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು

ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಶಿಕ್ಷಣ ಇಲಾಖೆಯು ಬಹಳ ಪ್ರಾಮುಖ್ಯವಾದಂಥ ಇಲಾಖೆ. ಇದು ಬಹಳವಾಗಿ ಬೆಳೆದಂಥ ಒಂದು ಇಲಾಖೆ. It is a very Significance Department, it is a very important Department, it is also a very huge department. ಇದು ಹೀಗೆ ಬೆಳೆಯುತ್ತಾ ಬೆಳೆಯುತ್ತಾ ಯಾವ ಕಡೆಗೆ ಹೋಗುತ್ತದೆ ಎಂದು ಹೇಳುವುದು ಬಹಳ ಕಷ್ಟ. ಈ ಇಲಾಖೆ ಇಷ್ಟು ಬೆಳೆದರೂ ಸಹ ಕರ್ನಾಟಕದ ನಾಲ್ಕು ಕೋಟಿ ಜನಸಂಖ್ಯೆಯಲ್ಲಿ ಒಂದು-ಒಂದೂವರೆ ಕೋಟಿಯಷ್ಟು ವಿದ್ಯಾರ್ಥಿಗಳು ಮಾತ್ರ ನಮ್ಮ ಪ್ರೈಮರಿ, ಹೈಸ್ಕೂಲ್ ಮತ್ತು ಇತರ ವಿದ್ಯಾ ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ. ನಮ್ಮ ಜನಸಂಖ್ಯೆಯ ಮೂರರಲ್ಲಿ ಒಂದು ಅಂಶ ಈ ಎಲ್ಲ ಎಜ್ಯುಕೇಶನಲ್ ಇನ್ಸ್ಟಿಟ್ಯೂಶನ್‌ಗಳಲ್ಲಿ ಭಾಗವಹಿಸುತ್ತಿದ್ದಾರೆ. ಪ್ರೈಮರಿ ಒಂದನೇ ಕ್ಲಾಸ್‌ನಿಂದ 4ನೇ ಕ್ಲಾಸ್‌ವರೆಗೆ 47.95.000 ಬಾಲಕ, ಬಾಲಕಿಯವರು ಹಾಗೂ 5 ರಿಂದ 8ರವರೆಗೆ 21.74.000 ಬಾಲಕ ಬಾಲಕಿಯವರು ಕಲಿಯುತ್ತಿದ್ದಾರೆ. ಈ ರೀತಿಯಲ್ಲಿ ಬರೇ 1 ರಿಂದ 8ನೇ ದರ್ಜೆವರೆಗೆ 70 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅದೇ ರೀತಿಯಲ್ಲಿ ಹೈಸ್ಕೂಲ್‌ಗಳಲ್ಲಿ. ಪ್ರಿಯುನಿವರ್ಸಿಟಿಯಲ್ಲಿ ನಂತರದ ಕಾಲೇಜುಗಳಲ್ಲಿ ಮತ್ತು ಯೂನಿವರ್ಸಿಟಿಗಳಲ್ಲಿ ಒಂದು ಕೋಟಿ, ನಲವತ್ತು ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. It is more than one third of the population of the entire Karnataka State. ಅದೇ ರೀತಿಯಲ್ಲಿ ಶಿಕ್ಷಕರೂ ಸಹ ಲಕ್ಷಾಂತರ ಜನ ಇದ್ದಾರೆ. ಅಂತು ಈ ಡಿಪಾರ್ಟ್‌ಮೆಂಟ್ ಬಹಳಷ್ಟು ಬೆಳೆದುಕೊಂಡು ಹೋಗುತ್ತಾ ಇದೆ. ಇದಕ್ಕೆ. ಈ ಸಲದ ಎಜುಕೇಷನ್ ಬಜೆಟ್. is Rs. 1209.45 crores and comparing the service it renders to the one third of the population of Karnataka State-I think this allocation is meagre. ಆ ಕಾರಣದಿಂದ ಅಲೋಕೇಷನ್ ಬಗ್ಗೆ ಹೆಚ್ಚು ಹೇಳುವುದಕ್ಕೆ ನಾನು ಹೋಗದಿದ್ದರೂ. ಈ ಶಿಕ್ಷಣ ಪದ್ಧತಿಯಲ್ಲಿ. ಯಾವ ರೀತಿಯಲ್ಲಿ ನಾವು ಮುಂದೆ ಹೋಗಬೇಕೆಂದು ಹೇಳುವ. ಬಹಳ ಪ್ರಾಮುಖ್ಯವಾದ ಸ್ಟೇಜ್‌ನಲ್ಲಿ ನಾವಿದ್ದೇವೆ. ಯಾವ ದೇಶಕ್ಕೆ ಒಂದು ಎಜುಕೇಷನ್ ಸಿಸ್ಟಂ ಇರಲಿಲ್ಲವೋ. ಆಗ ನಮ್ಮ ದೇಶಕ್ಕೆ ಬ್ರಿಟೀಷರು ಬಂದು ಒಂದು ಎಜುಕೇಷನ್ ಸಿಸ್ಟಂ ಕೊಟ್ಟರು. Before the advent of British, there was ansolutely no systematic education policy. There were Patashalas of Persian, Arabic 'Madarasás'. So there was no system as a whole for the entire country. ಬ್ರಿಟೀಷರು ಬಂದು ಹಲವಾರು ಸ್ಕೂಲುಗಳನ್ನೂ. ಕಾಲೇಜುಗಳನ್ನೂ. ದೊಡ್ಡ ದೊಡ್ಡ ಯೂನಿವರ್ಸಿಟಿಗಳನ್ನು ಪ್ರಾರಂಭ ಮಾಡಿದರು. ಬನಾರಸ್ ಯೂನಿವರ್ಸಿಟಿಯಾಗಲ್. ಅಥವಾ ಅಲಿಗಡ ಮುಸ್ಲಿಂ ಯೂನಿವರ್ಸಿಟಿಯಾಗಲೀ. ಈ ರೀತಿ ಹಲವಾರು ದೊಡ್ಡ ದೊಡ್ಡ ಸಂಸ್ಥೆಗಳನ್ನು ಕಟ್ಟಿ. ಎಜುಕೇಷನ್ ಸಿಸ್ಟಂ ತಂದಾಗ. ಈ ದೇಶದಲ್ಲಿ ಐಕ್ಯತೆ ಬರುವುದಕ್ಕೆ. ಎಜುಕೇಷನ್ ಸಿಸ್ಟಂನಿಂದ ಸಾಧ್ಯವಾಯಿತು. ಅದೇ ಸಿಸ್ಟಂನಿಂದ ನಾವು ಸ್ವತಂತ್ರವಾಗಬೇಕು. ದೇಶದಲ್ಲಿರುವ ಜನರಿಗೆ ಹೆಚ್ಚು ಹೆಚ್ಚು ಅಧಿಕಾರ ಸಿಗಬೇಕು ಎಂದುಕೊಂಡಿದ್ದೆವು. ಈ ಒಂದು ಎಜುಕೇಷನ್ ಸಿಸ್ಟಂ ದೇಶಕ್ಕೆ ಒಂದು ಐಕ್ಯತೆಯನ್ನು ತಂದುಕೊಟ್ಟಿದೆ. ಆಮೇಲೆ ನಮ್ಮ ದೇಶ ಸ್ವತಂತ್ರವಾಯಿತು. ಸ್ವತಂತ್ರವಾದ ನಂತರದಲ್ಲಿ ಈ ಸಿಸ್ಟಂನಲ್ಲಿ ರಾಜಕೀಯ ಪರಿವರ್ತನೆಯಾಯಿತು.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು).

ಬ್ರಿಟೀಷರ ಕಾಲದಲ್ಲೂ ಈ ಒಂದು ರಾಜಕೀಯ ಪರಿವರ್ತನೆಯಾಗಿತ್ತು. ಸ್ವಾತಂತ್ರ್ಯ ಬಂದ ನಂತರ, ಪುನಃ ರಾಜಕೀಯ ಪರಿವರ್ತನೆಯಾಯಿತು. ರಾಜಕೀಯ ಪರಿವರ್ತನೆಯಾದ ನಂತರ, ಈ

ದೇಶಕ್ಕೆ ಯಾವ ರೀತಿಯಲ್ಲಿ ಎಜುಕೇಷನ್ ಸಿಸ್ಟಂ ಆಗಬೇಕು. ಯಾವ ರೀತಿಯ ವಿದ್ಯೆಯನ್ನು ನಮ್ಮ ದೇಶದವರಿಗ ಕೊಡಬೇಕೆಂದು ಪುನಃ ಆಲೋಚನೆ ಮಾಡಬೇಕಾಯಿತು. Education should be according to the needs of the society. ಈ ಸಮಾಜದ, ಇಡೀ ದೇಶದ ಅಭಿವೃದ್ಧಿಗಾಗಿ, ಈ ದೇಶಕ್ಕಾಗಿ ಯಾವ ರೀತಿಯ ವಿದ್ಯೆಯ ಉಪಯೋಗ ಇರಬೇಕೆಂದು ಯೋಚನೆ ಮಾಡಿ, ಇದರಲ್ಲಿ ಹಲವಾರು ಪರಿವರ್ತನೆಗಳನ್ನು ಸ್ವತಂತ್ರವಾದ ನಂತರ ಮಾಡಿದ್ದೇವೆ. ಈ ಪರಿವರ್ತನೆಯಿಂದ ಬೇಕಾದಷ್ಟು ವೋಕೇಷನಲ್ ಎಜುಕೇಷನ್ ಬರಲು ಸಾಧ್ಯವಾಯಿತು, ಪ್ರೊಫೆಷನಲ್ ಇಂಜಿನಿಯರಿಂಗ್ ಕಾಲೇಜುಗಳು ಬರುವುದಕ್ಕೆ ಸಾಧ್ಯವಾಯಿತು. ಈ ರೀತಿ ಸಮಾಜದಲ್ಲಿ ಪರಿವರ್ತನೆಯಾದ ನಂತರ, ಎಜುಕೇಷನ್ ಸಿಸ್ಟಂ ಪರಿವರ್ತನೆಯಾಗುವುದು ಬಹಳ ಮುಖ್ಯ ಮತ್ತು ಅದೇ ರೀತಿ ಆಗಬೇಕಾಗಿದೆ. ಮಾನ್ಯ ಮೊಯ್ಲಿಯವರು ಇನ್ನೊಂದು ಒಳ್ಳೆಯ ಸ್ಟೇಜ್‌ನಲ್ಲಿದ್ದಾರೆ, ಪರಿವರ್ತನೆ ಮಾಡುವಂಥ ದೊಡ್ಡ ಹೆಜ್ಜೆ ಅವರಿಂದಲೇ ಸಾಧ್ಯವಿದೆ. ಈ ಸಲದ ಪರಿವರ್ತನೆ ಎಕನಾಮಿಕ್ ಚೇಂಜಸ್. ಆರ್ಥಿಕವಾಗಿ ಈ ದೇಶದಲ್ಲಿ ಬಹಳಷ್ಟು ದೊಡ್ಡ ರೀತಿಯಲ್ಲಿ ಪರಿವರ್ತನೆಯಾಗುತ್ತಿದೆ. ಈ ಪರಿವರ್ತನೆಯ ಪ್ರಕಾರ ನಮ್ಮ ದೇಶದ ಎಜುಕೇಷನ್ ಸಿಸ್ಟಮ್ ಯಾವ ರೀತಿಯಲ್ಲಿ ಇರಬೇಕೆಂದು ಹೇಳುವುದು ನಮ್ಮ ದೇಶದ ಮುಂದೆ ಇರುವ ದೊಡ್ಡ ಸವಾಲು. ನಮ್ಮ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಬಹಳ ದೊಡ್ಡ ವೇಗದಲ್ಲಿ ಬದಲಾವಣೆಯಾಗುತ್ತಿದೆ. ಬದಲಾವಣೆಯಾಗುವ ಈ ಆರ್ಥಿಕ ಪರಿಸ್ಥಿತಿ ಪ್ರಕಾರ ದೇಶದಲ್ಲಿ ಯಾವ ರೀತಿಯಲ್ಲಿ ರೆಜಿಮೆಂಟೇಷನ್ ಇತ್ತೋ, ಯಾವ ರೀತಿ ಕಂಟ್ರೋಲ್ಡ್ ಎಕನಮಿ ಇತ್ತೋ, ಆ ಕಂಟ್ರೋಲ್ಡ್ ಎಕಾನಮಿಯನ್ನು ಲಿಬರಲೈಸ್ ಮಾಡಲಿಕ್ಕೆ ಇದು ಒಂದು ದೊಡ್ಡ ಪರಿವರ್ತನೆ. ಇಡೀ ಎಕಾನಮಿ. ಎಕಾನಮಿಕ್ ಸಿಸ್ಟಮ್ There is thorough change, there is tremendous liberalisation. ಕಾರ್ಖಾನೆಗಳನ್ನು ಮಾಡುವಾಗ್ಗೆ ಯಾವ ಒಂದು ಲೈಸೆನ್ಸ್ ರಾಜ್ ಇತ್ತೋ ಆ ಲೈಸೆನ್ಸ್ ರಾಜ್, ಇನ್‌ಸ್ಪೆಕ್ಟರ್ ರಾಜ್ ಈಗ ಹೋಗುತ್ತಿದೆ. ಹೋಗಿಬಿಟ್ಟಿದೆ. 10 ಕೋಟಿ ರೂಪಾಯಿಗಳ ಒಂದು ಇಂಡಸ್ಟ್ರಿ ಮಾಡಲಿಕ್ಕೆ ಯಾವುದೂ ಲೈಸೆನ್ಸ್ ಬೇಡ, 100 ಕೋಟಿ ರೂಪಾಯಿ ಇಂಡಸ್ಟ್ರಿ ಮಾಡುವುದಕ್ಕೆ ಯಾವುದೊಂದು ಲೈಸೆನ್ಸ್ ಬೇಡ, ಅಂತಹ ದೊಡ್ಡ ಪರಿವರ್ತನೆ ಆದಾಗ ನಮ್ಮ ಎಜುಕೇಷನ್ ಸಿಸ್ಟಮ್‌ನಲ್ಲಿ ನಾವು ಲಿಬರಲೈಸ್ ಮಾಡುವುದಕ್ಕೆ ಸಾಧ್ಯ ಇಲ್ಲವೋ? ಖಂಡಿತವಾಗಿ ಇದು ಆಗಬೇಕಾಗಿದೆ. ಲಿಬರಲೈಸ್ ಸೊಸೈಟಿಯಲ್ಲಿ ಯಾವ ಎಕಾನಮಿಕ್ ಲಿಬರಲೈಸೇಷನ್ ಈಗ ಆಗಿದೆ ಅದೇ ಪ್ರಕಾರವಾಗಿ ಈ ಎಜುಕೇಷನ್ ಅನ್ನು ಲಿಬರಲೈಸ್ ಮಾಡಲಿಲ್ಲ ಎಂದರೆ ಇದನ್ನು ಪುನಃ ರೆಜಿಮೆಂಟ್‌ಷನ್ ತೆಗೆದುಕೊಂಡು ಹೋಗಿ. ಪುನಃ ಇನ್‌ಸ್ಪೆಕ್ಟೊರೇಟ್ ಡೈರೆಕ್ಟೊರೇಟ್ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಾದರೆ ಖಂಡಿತವಾಗಿ ಈ ವಿದ್ಯಾಭ್ಯಾಸದಿಂದ ಬರುವ ಪೀಳಿಗೆಗೆ ಯಾವ ಉಪಕಾರ ಆಗುವುದಕ್ಕೂ ಸಾಧ್ಯ ಇಲ್ಲ. ಅದರ ಪ್ರಕಾರ ಈಗ ಪರಿವರ್ತನೆಯನ್ನು ದೊಡ್ಡ ವೇಗದಲ್ಲಿ ಮಾಡಬೇಕಾಗಿದೆ. ನಮ್ಮ ಸ್ನೇಹಿತರಾದ ಮಾನ್ಯ ಮೊಯಿಲಿಯವರಿಗ ಆ ಇಂಟಲೆಕ್ಚುಯಲ್ ಕೆಪಾಸಿಟಿ ಇದೆ ಎಂದು ನನಗೆ ಗೊತ್ತಿದೆ. ದೇಶದಲ್ಲಿ ಪರಿವರ್ತನೆ ಆಗಿರುವ ಪ್ರಕಾರ ಈ ಎಜುಕೇಷನ್ ಸಿಸ್ಟಮ್ ಪರಿವರ್ತನೆ ಆಗಬೇಕೆಂದು ಹೇಳಿ ಅವರಿಗೆ ಇಂಟಲೆಕ್ಚುಯಲ್ ಕೆಪ್ಯಾಸಿಟಿ ಇದೆ. ಪೊಲಿಟಿಕಲ್ ವಿಲ್ ಇದೆ, ಅವರು ಇದೊಂದು ದೊಡ್ಡ ಬದಲಾವಣೆಯ ಕಾಲದಲ್ಲಿ ಇದ್ದಾರೆ. ಅವರಿಂದ ಈ ಸಂಪೂರ್ಣ ಪರಿವರ್ತನೆ ರ್‍ಯಾಡಿಕಲ್ ಚೇಂಜ್ ಆಗಿಬಿಟ್ಟರೆ ಖಂಡಿತವಾಗಿ ಮಾನ್ಯ ಮೊಯಿಲಿಯವರನ್ನು ಬರೀ ನಾವು ಮಾತ್ರ ನೆನಪಿಸುವುದಿಲ್ಲ, ದೇಶದ ಇತರ ರಾಜ್ಯಗಳೂ ಸಹ ನಮ್ಮ ಒಂದು ಎಜುಕೇಶನ್ ಸಿಸ್ಟಮ್‌ನಲ್ಲಿ ಯಾವ ಒಂದು ಪರಿವರ್ತನೆ ಇದೆ. ಆ ಪರಿವರ್ತನೆಯನ್ನು ತೆಗೆದುಕೊಂಡು ಅವರೂ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಈಗ ನಾವು ನೋಡುತ್ತಿದ್ದೇವೆ. ಪರಿವರ್ತನೆ ಅಥವಾ ಲಿಬರಲೈಸೇಷನ್ ಬಗ್ಗೆ ನನ್ನ ಮನಸ್ಸಿನಲ್ಲಿ ಇರುವಂತಹ ವಿಚಾರ ಎಂದರೆ. ಒಂದು ಪ್ರೈಮರಿ

ಸ್ಕೂಲ್ ತೆಗೆಯುವುದಕ್ಕೆ ಯಾವ ರೀತಿ ಪರ್ಮಿಷನ್ ಬೇಕು. ಯಾವ ರೀತಿ ಇನ್‌ಸ್ಪೆಕ್ಟರ್ ಹೋಗಿ ಇನ್‌ಸ್ಪೆಕ್ಷನ್ ಮಾಡುತ್ತಾರೆ. ಯಾವ ರೀತಿ ಕರಪ್ಷನ್ ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಎಲ್ಲಾ ಆಫೀಸರ್‍ಸ್ ಸಹ ಕರಪ್ಟ್ ಎಂದು ನಾನು ಹೇಳುವುದಿಲ್ಲ. ಆದರೆ ಇದೆಲ್ಲಾ ನಡೆದುಕೊಂಡು ಹೋಗುತ್ತಿದೆ. ಒಂದು ಪ್ರೈಮರಿ ಸ್ಕೂಲ್ ಅನ್ನು ನಮ್ಮ ದೇಶದಲ್ಲಿ ಪ್ರಾರಂಭ ಮಾಡಬೇಕಾದರೆ ನಾವು ಯಾವ ರೀತಿ ಕಷ್ಟಪಡಬೇಕಾಗುತ್ತದೆ. ಹೈಸ್ಕೂಲ್ ಪ್ರಾರಂಭ ಮಾಡಬೇಕೆಂದರೆ 7-8 ವರ್ಷ ಓಡಾಡಿದರೂ ಒಂದು ಪರ್ಮಿಷನ್ ಸಿಗುವುದಿಲ್ಲ. ಈಗ ನೂರು ಕೋಟಿ ರೂಪಾಯಿಗಳ ಇಂಡಸ್ಟ್ರಿಯನ್ನು ಲೈಸೆನ್ಸ್ ಇಲ್ಲದೆ ಮಾಡಬಹುದು. ಆದರೆ ಈ ಒಂದು ವಿದ್ಯಾಭ್ಯಾಸದ ಸಿಸ್ಟಮ್‌ನಲ್ಲಿ ಎಷ್ಟು ರೆಜಿಮೆಂಟೇಷನ್‌ನಲ್ಲಿದ್ದೇವೆ; ಇದನ್ನು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಬರುವುದಿಲ್ಲವೇ? ಸಂಪೂರ್ಣವಾಗಿ ತೆಗೆದುಹಾಕಿದರೆ ಬಹಳಷ್ಟು ದೊಡ್ಡ ಅನುಕೂಲವಾಗುತ್ತದೆ. ಮೊದಲನೆಯದಾಗಿ ಈ ಸಿಸ್ಟಮ್ ಪ್ರಕಾರ ಯಾವ ರೀತಿಯಲ್ಲಿ ನಮ್ಮ ಪಾಪ್ಯುಲೇಷನ್ ಹೆಚ್ಚಾಗುತ್ತಾ ಹೋಗುತ್ತಿದೆ ಆ ಪಾಪ್ಯುಲೇಷನ್ ಪ್ರಕಾರ ನಮ್ಮ ಸ್ಕೂಲ್ಸ್ ಇಲ್ಲ. ಬಹಳಷ್ಟು ಕಡಿಮೆ ಇದೆ. ನಾನು ಬೆಂಗಳೂರಿನಲ್ಲಿ ಇರುತ್ತೇನೆ, ನನ್ನಲ್ಲಿಗೆ ಯಾರಾದರೂ ಬರುತ್ತಾರೆ. ಒಂದು ನರ್ಸರಿ ಸ್ಕೂಲ್‌ಗೆ ಸೀಟ್ ಕೊಡಿಸಿ. ಒಂದು ಪ್ರೈಮರಿ ಫಸ್ಟ್ ಕ್ಲಾಸ್‌ಗೆ ಇನ್‌ಫ್ಲುಯೆನ್ಸ್ ಮಾಡಿಕೊಡಿ ಎಂದು ಕೇಳುತ್ತಾರೆ. ನಾವು ಅವರಿಗೆ ಹೇಳಬೇಕಾಗಿದೆ, ಏನೆಂದರೆ, ನೀವು ಇಂಜಿನಿಯರಿಂಗ್ ಕಾಲೇಜ್ ಸೀಟ್ ಬೇಕಾದರೆ ಹೇಳಿ. ಕೊಡಿಸುತ್ತೇನೆ, ಅಥವಾ ಮೆಡಿಕಲ್ ಕಾಲೇಜ್‌ನಲ್ಲಿ ಸ್ವಲ್ಪ ಹಣ ಕೊಟ್ಟರೆ ಸೀಟ್ ಸಿಗುತ್ತದೆ. ಆದರೆ. ಪ್ರೈಮರಿ ಸ್ಕೂಲ್‌ಗೆ ಹಣ ಕೊಟ್ಟರೂ ಸೀಟ್ ಸಿಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎಂದು; ಇದರಿಂದ ಏನಾಗುತ್ತದೆ ಎಂದರೆ ಮೊದಲನೆಯದಾಗಿ ಕೆಲವು ಒಳ್ಳೊಳ್ಳೆಯ ಸ್ಕೂಲ್ಸ್ ಇವೆ. ಮತ್ತೆ ನಮ್ಮ ಸರಕಾರಿ ಸ್ಕೂಲ್ಸ್, ಕಾರ್ಪೊರೇಷನ್ ಸ್ಕೂಲ್ಸ್ ಮತ್ತು ಪ್ರೈವೇಟ್‌ನಲ್ಲಿ ಬಹಳ ಕಡೆ ಸ್ಕೂಲ್ಸ್ ಇವೆ.

ಈ ರೀತಿ ಇರುವುದರಿಂದ ತಂದೆ ತಾಯಿಗಳಿಗೆ ಅವರ ಮಕ್ಕಳನ್ನು ಎಷ್ಟೇ ಬಡವರಾಗಿದ್ದರೂ ಒಳ್ಳೆಯ ಸ್ಕೂಲ್‌ಗೆ ಹಾಕಬೇಕು ಎಂದು ಮುಂದೆಬಂದಿರತಕ್ಕಂಥಾದ್ದು ಒಳ್ಳೆಯದು. ಒಂದು ಭಾವನೆ ನಮ್ಮ ದೇಶದಲ್ಲಿ ಬಂದಿರುವುದು ಬಹಳ ಒಳ್ಳೆಯದು. ಎಲ್ಲಾ ಪೇರೆಂಟ್ಸ್ ಅವರು ಎಷ್ಟೇ ಬಡವರಾಗಿರಲಿ. ಅವರಿಗೆ ವಿದ್ಯಾಭ್ಯಾಸ ಇಲ್ಲದಿದ್ದರೂ ತಮ್ಮ ಮಗಳು, ಮಗ ಒಳ್ಳೆಯ ಸ್ಕೂಲ್‌ನಲ್ಲಿ ಓದಬೇಕು ಎನ್ನುವ ಒಳ್ಳೆಯ ಭಾವನೆ ಬಂದಿದೆ. ರೂಲ್ಸನ್ನು ಲಿಬರಲೈಸ್ ಮಾಡಿ ಸ್ಕೂಲ್ ತೆಗೆಯುತ್ತೇವೆ. ಹೈಸ್ಕೂಲ್‌ಗೆ ತೆಗೆಯುತ್ತೇವೆಂದು ಮುಂದೆ ಬಂದವರಿಗೆ ಪೂರ್ತಿಯಾಗಿ ಪರ್ಮಿಷನ್ ಕೊಟ್ಟು ಒಂದು ವರ್ಷದಲ್ಲಿ ಒಂದೂವರೆ ವರ್ಷದಲ್ಲಿ ರೂಮ್ಸ್ ಇಷ್ಟು ಇರಬೇಕು ಲ್ಯಾಬ್ಸ್ ಇರಬೇಕು. ಲೈಬ್ರರಿ ಇರಬೇಕು ಆಟದ ಮೈದಾನ ಇರಬೇಕೆಂದು ಷರತ್ತು ಹಾಕಿ ಕೊಟ್ಟುಬಿಟ್ಟರೆ ಒಳ್ಳೆಯದು. ಆದರಿಂದ ಏನಾಗುತ್ತಿದೆ ಅಂದರೆ ಬೇಕಾದಷ್ಟು ಜನರು ಮುಂದೆ ಬಂದು ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಾರೆ. ಕೆಲವರು ವ್ಯಾಪಾರಕ್ಕೋಸ್ಕರ ಮಾಡಬಹುದು. ಕೆಲವರು ವಿದ್ಯೆ ಒಂದು ಸರ್ವಿಸ್ ಮೋಟೀವ್, ಅಂತ ಇಟ್ಟುಕೊಂಡು ಪ್ರಾರಂಭ ಮಾಡುವವರು ಬಹಳಷ್ಟು ಜನರು ಇದ್ದಾರೆ. ಅವರು ಸಹ ಮುಂದೆ ಬಂದರೆ ಬೇಕಾದಷ್ಟು ಒಂದು ರೀತಿಯಲ್ಲಿ ಪೈಪೋಟಿ ಬರುವುದಕ್ಕೆ ಸಾಧ್ಯವಿದೆ. ಬೇಕಾದಷ್ಟು ಸಂಸ್ಥೆಗಳು ಬಂದುಬಿಟ್ಟರೆ ನಮ್ಮ ಮಕ್ಕಳಿಗೆ ಪ್ರವೇಶ ಸಿಕ್ಕಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಕ್ಯಾಪಿಟೇಶನ್ ಫೀ ಯಾವುದು ನರ್ಸರಿ ಕ್ಲಾಸಸ್‌ನಿಂದ ಇದೆ, ಅದು ಆದಷ್ಟೂ ಕಡಿಮೆ ಆಗಲಿಕ್ಕೆ ಸಾಧ್ಯ ಇದೆ. ಬಹಳಷ್ಟು ಮಟ್ಟಿಗೆ ಅದನ್ನು ತೆಗೆದುಹಾಕಬಹುದು. ಸರ್ಕಾರದ ಇಂಟರ್‌ಫಿಯರೆನ್ಸ್ ಇಲ್ಲದಿದ್ದರೆ ಒಳ್ಳೆ ಒಳ್ಳೆಯ ಸಂಸ್ಥೆಗಳು ಬರುತ್ತವೆ. ಅಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ವ್ಯವಸ್ಥೆ ಆಗಬೇಕು. ಒಂದು ವರ್ಷ ಅಥವಾ ಒಂದೂವರೆ ವರ್ಷದಲ್ಲಿ

ಬಿಲ್ಡಿಂಗ್ ಆಗಬೇಕು. ಆಟದ ಮೈದಾನ ಆಗಬೇಕು. ಲ್ಯಾಬ್ಸ್ ಆಗಬೇಕು ಲೈಬ್ರರಿ ಆಗಬೇಕು ಎಂಬ ಒಂದು ಕಂಡೀಷನ್ಸ್ ಮಾತ್ರ ಇರಬೇಕು. ಮತ್ತೆ ನಿಮ್ಮದೇ ಸಿಲಬಸ್ ಪ್ರಕಾರ ಕನ್ನಡವನ್ನು ಖಂಡಿತವಾಗಿ ಕಡ್ಡಾಯ ಮಾಡಿ 100 ಮಾರ್ಕ್ ಹಾಕಲೇಬೇಕು. ಅವರು ಇಂಗ್ಲೀಷ್ ಮೀಡಿಯಂ ಸ್ಕೂಲ್ ಆದರೂ ತೆಗೆಯಲಿ ಉರ್ದು ಮೀಡಿಯಂ ಸ್ಕೂಲ್ ಆದರೂ ತೆಗೆಯಲಿ. ಕನ್ನಡ ಮೀಡಿಯಂ ಸ್ಕೂಲ್ ಆದರೂ ಆಗಲಿ. ಕನ್ನಡವನ್ನು ಇಟ್ಟು ನೂರು ಅಂಕ ಹಾಕಿ ಕೊಟ್ಟುಬಿಟ್ಟರೆ ಯಾವ ತಪ್ಪೂ ಆಗಲಿಕ್ಕೆ ಸಾಧ್ಯವಿಲ್ಲ. ಈರಿತ ಆದಾಗ ಬೇಕಾದಷ್ಟು ಸ್ಕೂಲ್ಸ್ ಒಳ್ಳೆ ಒಳ್ಳೆಯ ಸಂಸ್ಥೆಗಳು ಮುಂದೆ ಬಂದು ಹಲವಾರು ವಿದ್ಯಾ ಸಂಸ್ಥೆಗಳು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಮುಖ್ಯವಾಗಿ ರೂಲ್ಸನ್ನು ಲಿಬರಲೈಸ್ ಮಾಡಬೇಕಾಗುತ್ತದೆ. ರೂಲ್ಸ್ ಲಿಬರಲೈಸ್ ಮಾಡಿದರೆ ನಮ್ಮ ಸೇವಿಂಗ್ಸ್ ಎಷ್ಟಾಗುತ್ತದೆ ಅಂತ ಹೇಳುವುದಕ್ಕೆ ಸಾಧ್ಯ ಇಲ್ಲ, ಆಗ ನೀವು ನೋಡಿ. ಈ ಪುಸ್ತಕದಲ್ಲಿ ಎಷ್ಟು ಡೈರೆಕ್ಟರೇಟ್ಸ್ ಇವೆ. ಬಹಳ ಜನರು ಮನೆಗೆ ಹೋಗಬೇಕಾಗುತ್ತದೆ. ನಾವು ಅವರನ್ನು ಮನೆಗೆ ಕಳುಹಿಸಬೇಕೆಂದು ಅಲ್ಲ. ಇದನ್ನು ಸುಧಾರಣೆ ಮಾಡಲಿಕ್ಕೆ ಹೋದರೆ ಎಲ್ಲರನ್ನೂ ನಾವು ಮನೆಗೆ ಕಳುಹಿಸಬೇಕೆಂದು ಅಲ್ಲ. ನಾನು ನೋಡಿದ್ದೇನೆ. 8 ಜನ ಡೈರೆಕ್ಟರ್ಸ್ ಆಮೇಲೆ 4 ಜಾಯಿಂಟ್ ಡೈರೆಕ್ಟರ್ಸ್ ಇದ್ದಾರೆ. ನಾನು ಬರೀ ಸ್ಕೂಲ್ಸ್‌ದು ಹೇಳುತ್ತಿದ್ದೇನೆ. ಆಮೇಲೆ 21 ಡೆಪ್ಯುಟಿ ಡೈರೆಕ್ಟರ್ಸ್ ಇದ್ದಾರೆ. 190 ಜನ ಅಸಿಸ್ಟೆಂಟ್ ಎಜುಕೇಶನಲ್ ಆಫೀಸರ್ಸ್ ಬ್ಲಾಕ್ ಲೆವಲ್‌ನಲ್ಲಿದ್ದಾರೆ. ಈ ಪ್ರಕಾರ ಒಂದು ದೊಡ್ಡ ಸೈನ್ಯ ಯಾವುದು ಇದೆ. ಈ ಸೈನ್ಯದ ಕೆಲಸ ರೂಲ್ಸ್ ಲಿಬರಲೈಸ್ ಆದ ಮೇಲೆ ಬಹಳಷ್ಟು ಕಡಿಮೆಯಾಗುತ್ತಾದೆ. ಜನರು ತೃಪ್ತಿಯಾಗುವುದಕ್ಕೆ ಸಾಧ್ಯವಾಗುತ್ತದೆ. ನಮಗೂ ಓದಿ ಓದಿ ಬರೆದು ಬರೆದು ಸಾಕಾಗಿದೆ. ಕಾನೂನು ಪ್ರಕಾರ ನಿಮ್ಮ ಸ್ಥಳದಲ್ಲಿ ನಾನಿದ್ದರೂ ಸಹ ಆಗಲಿ ನೋಡೋಣ. ಕಳುಹಿಸುತ್ತೇನೆ. ರಿಪೋರ್ಟ್ ಬರಬೇಕು ಎಂದು ಹೇಳುವುದು ಬಿಟ್ಟು ಬೇರೇನೂ ಮಾಡಲು ಸಾಧ್ಯವಿಲ್ಲ. ಆರ್.ಟಿ. ನಗರದಲ್ಲಿ ನಿಮ್ಮ ಮನೆ ಇದೆ. ನೋಡಿ, ಅಲ್ಲಿ ಕೆಲವು ಹೈಸ್ಕೂಲ್ಸ್ ಇವೆ. ಅದು ಒಂದು ರೂಮ್‌ನಲ್ಲಿ ನಡೆಯುತ್ತಿವೆ. ದೊಡ್ಡ ಬೋರ್ಡ್ ಹಾಕಿದ್ದಾರೆ. ಅಲ್ಲಿ ಎಲ್ಲಾ ಕ್ರಿಶ್ಚಿಯನ್ಸ್ ಮಿಷನ್ಸ್ ಸ್ಕೂಲ್ಸ್ ಹೆಸರುಗಳನ್ನು ಸಹ ಹಾಕಿದ್ದಾರೆ. ಅವರು ಎಲ್ಲಾ ಸೆಂಟ್ ಪಾಲ್‌ಯಿಂದ ಹಿಡಿದು ಸೆಂಟ್ ಎಗ್ಲೋಷಿಯಸ್ ಇಂದ ಹಿಡಿದು ಸೆಂಟ್ ಲಾಯಲ್ಲಾ ಇಂದ ಹಿಡಿದು ಎಲ್ಲಾ ಸೆಂಟ್ಸ್ ಹೆಸರುಗಳನ್ನು ಹಾಕಿ ಒಂದು ರೂಮ್‌ನಲ್ಲಿ ನಡೆಸುತ್ತಿದ್ದಾರೆ. ಹೈಸ್ಕೂಲ್ ಅಂತ ದೊಡ್ಡ ಬೋರ್ಡ್ ಹಾಕಿದ್ದಾರೆ. ಅದಕ್ಕೆ ನಮ್ಮ ಇನ್ಸ್‌ಪೆಕ್ಟರ್ಸ್ ಪ್ರತಿ ತಿಂಗಳು ರಿಪೋರ್ಟ್ ಕೊಡುತ್ತಾರೆ. ಬಹಳ ಚೆನ್ನಾಗಿ ಇದೆ, ಸ್ಕೂಲ್ ಅಂತ. ನನ್ನನ್ನು ಒಂದು ಸ್ಕೂಲ್ ಆನ್ಯುಯಲ್ ಗ್ಯಾದರಿಂಗ್‌ಗೆ ಕರೆದಿದ್ದರು. ಎರಡು ಮೂರು ಕಡೆ ಅವರು ಕರೆದ ಸ್ಕೂಲಿಗೆ ಕರೆದುಕೊಂಡು ಹೋಗುವುದಿಲ್ಲ. ಎಲ್ಲೋ ಒಂದು ಕಡೆ ಹಾಲ್‌ನಲ್ಲಿ ಸಮಾರಂಭ ಮಾಡುತ್ತಾರೆ ; ನಾನು ಒಂದು ಸಾರಿ ಒಬ್ಬರಿಗೆ ಹೇಳಿದೆ ನಾನು ಸ್ಕೂಲ್ ನೋಡಬೇಕು ಇಲ್ಲದಿದ್ದರೆ ನಾನು ಬರುವುದಿಲ್ಲ ಎಂದು ಹೇಳಿದೆ. ಆ ಸ್ಕೂಲ್‌ಗಳನ್ನು ನೋಡಿದರೆ ನಮ್ಮ ಕರಾವಳಿ ಪ್ರದೇಶದಲ್ಲಿ ಸಹ ಅಂತಹ ಪ್ರೈಮರಿ ಸ್ಕೂಲ್ಸ್ ಇರುವುದಿಲ್ಲ. ಬರೀ ಎರಡು ಚಿಕ್ಕಚಿಕ್ಕ ರೂಮ್ಸ್. ಶೀಟ್ ಹಾಕಿಕೊಂಡು ಅದು ಹೈಸ್ಕೂಲ್ ಅಂತ ಹೇಳಿಕೊಂಡು 60 ರೂಪಾಯಿ ಫೀಟು ತೆಗೆದುಕೊಳ್ಳುತ್ತಾರೆ. ಅಲ್ಲಿ ಸಹ ಕ್ಯಾಪಿಟೇಷನ್ ಫೀಜು ಇದೆ. ಜನಗಳಿಗೆ ಬೇರೆ ಕಡೆ ಜಾಗ ಸಿಗುವುದಿಲ್ಲ. ಅಲ್ಲೇ ಹತ್ತಿರ ಸ್ಕೂಲ್ ಇಲ್ಲ. ಒಳ್ಳೆಯ ಹೆಸರು ಹಾಕಿಕೊಂಡಿರುತ್ತಾರೆ. ಇನ್ಸ್‌ಪೆಕ್ಟರ್ಸ್ ಒಳ್ಳೆಯ ಸ್ಕೂಲ್ ಅಂತ ಹೇಳಿರುತ್ತಾರೆ. ನಿಮಗೂ ತಿಂಗಳ ರಿಪೋರ್ಟ್ ಕೊಡುತ್ತಾರೆ. ಈ ಕಾರಣದಿಂದಲೇ ವಿದ್ಯಾ ಮಟ್ಟ ಹೆಚ್ಚಾಗಲಿಕ್ಕೆ ಸಾಧ್ಯವಾಗಿಲ್ಲ. ಹೆಚ್ಚಾಗಿ ಸರ್ಕಾರಿ ಸ್ಕೂಲ್ಸ್ ಪ್ರಾರಂಭ ಆಗಲಿಲ್ಲ. ಆ ಕಾರಣದಿಂದ ಬೆಂಗಳೂರಿನಂಥ ಪ್ರದೇಶದಲ್ಲಿ ಜಾಸ್ತಿ ಡಿಮ್ಯಾಂಡ್ಸ್ ಇರುತ್ತದೆ. ಅದಕ್ಕಾಗಿ Preference of locality right ಅಲ್ಲಿ ಇದ್ದವರಿಗೆ ಲೋಕಲ್ ಸ್ಕೂಲ್‌ಗೆ ಹೋಗಲಿಕ್ಕೆ ರೈಟ್ಸ್ ಇರಬೇಕು. ರಾಜಮಹಲ್ ವಿಲಾಸ್‌ನಲ್ಲಿ

ಒಂದೆರಡು ಸ್ಕೂಲ್ಸ್ ಇವೆ. ಮೊಟ್ಟ ಮೊದಲನೆಯದಾಗಿ ಆ ಭಾಗದ ಮಕ್ಕಳಿಗೆಲ್ಲಾ ಪ್ರಯಾರಿಟಿ ಕೊಡಬೇಕು. ಅಡ್ಮಿಷನ್ ಕೊಡಬೇಕು. ಅದಿಲ್ಲದೆ ಎಲ್ಲಿಂದಲೋ ಜಯನಗರದಲ್ಲಿದ್ದವರು ಇಲ್ಲಿಗೆ ಬರುವುದು. ಜಯಮಹಲ್‌ನಿಂದ ಹುಡುಗರು ಆ ಕಡೆ ಹೋಗುವುದು ಏನಿದೆ. ಇದು ಹೋಗಬೇಕು. ಆ ಸಿಸ್ಟಮ್‌ನ್ನು ಲಿಬರಲೈಸ್ ಮಾಡಿಬಿಟ್ಟರೆ ಹಾಗೂ ಕಂಪ್ಲೀಟ್‌ಲಿ ನಿಮ್ಮ regimentation, rules, procedures ಅನ್ನು ತೆಗೆದುಹಾಕಿಬಿಟ್ಟರೆ ಕೋಟ್ಯಾಂತರ ರೂಪಾಯಿ ಸೇವಿಂಗ್ಸ್ ಮಾತ್ರ ಅಲ್ಲ. ಈ ಸಿಸ್ಟಮ್‌ನ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿದೆ. This is also an experience, because there are serious economic changes in the country. Let us also change this, according to the needs of the society. ಇದೊಂದು ಎಕ್ಸ್‌ಪಿರಿಮೆಂಟ್ ಮಾಡಿಬಿಟ್ಟರೆ. ಅದೂ ಕರ್ನಾಟಕದಿಂದಲೇ ಪ್ರಾರಂಭವಾಗಿಬಿಟ್ಟರೆ ಇತರ ಸ್ಟೇಟ್‌ನವರೂ ಸಹಾ ಅದನ್ನು ಫಾಲೋ ಮಾಡುತ್ತಾರೆ. ಏಕೆಂದರೆ ಮೊದಲನೇ ಸಲ ಮಾಡುವಾಗ ಬಹಳ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಲಿಬರಲೈಸೇಷನ್. ನಮ್ಮ ಎಜುಕೇಷನ್ ಸಿಸ್ಟಮ್‌ನಲ್ಲಿ ಆಗಬೇಕು. ಆದರಿಂದಾಗಿ ಬೇಕಾದಷ್ಟು ಸೇವೆ ಆಗಲಿಕ್ಕೆ ಸಾಧ್ಯ ಇದೆ. ಇಷ್ಟು ದೊಡ್ಡ ಡಿಪಾರ್ಟ್‌ಮೆಂಟಿನಲ್ಲಿ ಬೇಕಾದಷ್ಟು ಹೆಚ್ಚು ಹೆಚ್ಚು ಸ್ಟಾಫ್ ಇರುವುದರಿಂದ ಅದು ಕಮ್ಮಿ ಆಗಲಿಕ್ಕೆ ಸಾಧ್ಯವಿದೆ. ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಲ್ಲಿ ಉಳಿಸಲಿಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ. ನೀವು ಈ ರೀತಿ ಲಿಬರಲೈಸ್ ಮಾಡಿದ ಮೇಲೆ ಯಾರಿಗೆ ಸ್ಕೂಲ್ ನಡೆಸಲಿಕ್ಕೆ ಯೋಗ್ಯತೆ ಇದೆಯೋ ಅವರು ಮುಂದೆ ಬಂದು ಮಾಡುತ್ತಾರೆ. ಅದಕ್ಕೆ ಸರ್ಕಾರದಿಂದ ಏನೂ ಕೊಡಬಾರದು. ಗ್ರ್ಯಾಂಟ್ ಕೊಡುವ ಹಾಗಿಲ್ಲ. Except under Art. 30 of the Constitution of India, where the national minorities have the right to establish institutions. Only such schools or SC/ST institutions should be permitted. All other schools should not be given any grant. Let there be a proper competition. Best of the schools will come ಗ್ರ್ಯಾಂಟ್ ಇನ್ ಏಡ್ ಕೊಡದೇ ಇರುವುದರಿಂದ ಸಹಾ ಸರ್ಕಾರಕ್ಕೆ ಬೇಕಾದಷ್ಟು ಹಣ ಉಳಿಯುತ್ತದೆ. ಇಲ್ಲದಿದ್ದರೆ ಈಗ ಯಾವುದು ಕೊಡುತ್ತಿದ್ದೀರೋ ಅದು ಕೊಡಬೇಕಾಗುತ್ತದೆ. ನಾನು ಹೇಳಿದ ರೀತಿ ಮಾಡಿದರೆ ಇನ್ನು ಮುಂದೆ ಅದು ಕಮ್ಮಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರಿ ಸ್ಕೂಲ್ಸ್ ಎಲ್ಲೆಲ್ಲಿ ತೆರೆಯಬೇಕೆಂದರೆ ಎಲ್ಲೆಲ್ಲಿ ಹಳ್ಳಿಗಳಲ್ಲಿ ಯಾರು ಬರುವುದಿಲ್ಲವೋ ಅಥವಾ ಯಾವುದೋ ಒಂದು ಕ್ಷೇತ್ರದಲ್ಲಿ ಹೆಚ್ಚು ಸ್ಕೂಲ್‌ಗಳನ್ನು ತೆರೆಯುವುದಕ್ಕೆ ಪ್ರೈವೇಟ್ ಸಂಸ್ಥೆಯವರು ಮುಂದೆ ಬರದೇ ಇದ್ದಾಗ ಅಂಥಾ ಜಾಗದಲ್ಲಿ ಪ್ರೈಮರಿ ಸ್ಕೂಲ್ ಆಗಲೀ, ಹೈಸ್ಕೂಲ್ ಆಗಲೀ ಮಾಡಲಿಕ್ಕೆ ಸಾಧ್ಯವಿದೆ. compulsory education ಪ್ರಕಾರ ಸಹಾ ಸರ್ಕಾರದ ಮೇಲೆ ಈ ಜವಾಬ್ದಾರಿ ಇದೆ. 14 ವರ್ಷದವರೆಗಿನ ಮಕ್ಕಳಿಗೆ ಕಂಪಲ್ಸರಿಯಾಗಿ ಎಜುಕೇಷನ್ ಕೊಡುವುದು ಫಂಡಮೆಂಟಲ್ ಮತ್ತು ಸರ್ಕಾರದ ದೊಡ್ಡ ಜವಾಬ್ದಾರಿ. ಆದರಿಂದ ಈವರೆಗೆ ಅದೂ ಜಾರಿ ಮಾಡಲಿಕ್ಕೆ ಬರಲಿಲ್ಲ. ಹಿಂದೆ ಒಂದು ಡಿಸ್ಟ್ರಿಕ್ಟ್‌ನಲ್ಲಿ ಶೇಕಡ ಮೂರರಷ್ಟು ದಾಖಲು ಆಗಿರುವುದು ಸೌತ್ ಕೆನರಾದಲ್ಲೇ. ಅದು ಚೆನ್ನಾಗಿ ಆಗಿದೆ. ಹಾಗೆಯೇ ಇತರ 18 ಡಿಸ್ಟ್ರಿಕ್ಟ್‌ಗಳಲ್ಲಿ ಸಹಾ full literate ಆಗಬೇಕು. ಅದಕ್ಕಾಗಿ ಇಂಥ ದೊಡ್ಡ ಪರಿವರ್ತನೆಯನ್ನು ಮಾಡುವುದಕ್ಕೆ ಹೊರಡಬೇಕು. ನಿಮಗೆ ಸಂಪೂರ್ಣವಾದ ಬೆಂಬಲ ಸಹಾ ಇದರಲ್ಲಿ ಸಿಗುತ್ತದೆ. ಅದೇರೀತಿಯಲ್ಲಿ ಗ್ರ್ಯಾಂಟ್ ಇನ್ ಏಡ್‌ನಿಂದ ಸರ್ಕಾರಕ್ಕೆ ಬೇಕಾದಷ್ಟು ಹಣ ಉಳಿಯಲಿಕ್ಕೆ ಸಾಧ್ಯತೆ ಇದೆ. ಅನಂತರ. ಈ ಕಾರ್ಪೊರೇಷನ್ ಸ್ಕೂಲ್‌ಗಳು ಬೆಂಗಳೂರಿನಲ್ಲಿ ಇವೆ. ಬಾಕಿ ಕಡೆಯೂ ಇರಬಹುದು.

ಆದರಲ್ಲಿ ನನಗೆ ಆಶ್ಚರ್ಯವಾಗುತ್ತದೆ. ಅಲ್ಲಿ ಬಿಲ್ಡಿಂಗ್ಸ್ ಎಲ್ಲಾ ಚೆನ್ನಾಗಿದೆ. ಆದರೆ ಮಕ್ಕಳು ಯಾರೂ ಅಲ್ಲಿಗೆ ಹೋಗುವುದೇ ಇಲ್ಲ. ಕೆಲವು ಸಲ ಟೀಚರ್ಸ್ ಸಂಖ್ಯೆ ಹೆಚ್ಚಾಗುತ್ತದೆ ಮಕ್ಕಳ ಸಂಖ್ಯೆ ಕಮ್ಮಿಯಾಗುತ್ತದೆ. ಬಿಲ್ಡಿಂಗ್ಸ್ ಮಾತ್ರ ಬಹಳಷ್ಟು ಚೆನ್ನಾಗಿದೆ. ಅದನ್ನೂ ಏಕೆ ನಾವು ಒಳ್ಳೆಯ ವಿದ್ಯಾ ಸಂಸ್ಥೆಗೆ ಕೊಡಬಾರದು? ಕಾರ್ಪೊರೇಷನ್‌ನವರನ್ನು ಕೇಳಿದರೆ ಅದು ನಮಗೆ ಬರುವುದಿಲ್ಲ. ಈ ವಿದ್ಯೆ ಕೊಡುವುದು. ನಮ್ಮ ಪಾಲಿಸಿಯಲ್ಲೇ ಇಲ್ಲ. ನಮ್ಮ ಸಿಸ್ಟಮ್‌ನಲ್ಲಿ. ಕಾರ್ಪೊರೇಷನ್ ಆ್ಯಕ್ಟ್‌ನಲ್ಲೂ ಇಲ್ಲ. ಅದು ಸರ್ಕಾರದ್ದು ಎಂದು ಹೇಳುತ್ತಾರೆ. ಆದಕ್ಕಾಗಿ ಒಳ್ಳೆ ವಿದ್ಯಾ ಸಂಸ್ಥೆಗಳು ನಡೆಸುವುದಾದರೆ ಕೊಟ್ಟು ನೋಡಬೇಕಾಗುತ್ತದೆ. ಅದು ಒಂದು ರೀತಿಯ privatisation of Corporation Schools. ಎಂದು ಸಹ ಹೇಳಬಹುದು. ಈ ರೀತಿ ಒಳ್ಳೆಯ ವಿದ್ಯಾ ಸಂಸ್ಥೆಗಳಿಗೆ ಕಾರ್ಪೊರೇಷನ್ ಸ್ಕೂಲ್‌ಗಳನ್ನು ಕೊಟ್ಟು ಬಿಟ್ಟರೆ. ಒಳ್ಳೆಯದಾಗುತ್ತದೆ. ಈಗ ಆದರಿಂದ ಏನೂ ಪ್ರಯೋಜನ ಆಗುತ್ತಿಲ್ಲ. ಅಲ್ಲಿ ಟೀಚರ್ಸ್ ಇಲ್ಲ. ಇಕ್ಕಳು ಹೋಗುವುದಿಲ್ಲ. ಬಿಲ್ಡಿಂಗ್ಸ್ ಮಾತ್ರ ಚೆನ್ನಾಗಿವೆ. ಬಾಕಿ ವ್ಯವಸ್ಥೆಗಳು ಚೆನ್ನಾಗಿ ಇರಬಹುದು. ಆದ್ದರಿಂದ ಅಂಥ ಸ್ಕೂಲ್‌ಗಳನ್ನು ಸಹ ನಾವು ಸರಿ ಮಾಡಬೇಕಾಗಿದೆ. ಬೆಂಗಳೂರಿನಲ್ಲಿನ ಇಂತಹ ಸ್ಕೂಲ್‌ಗಳು ಏನಿವೆ ಅವುಗಳನ್ನು ನೋಡುವುದಕ್ಕೆ ಕೂಡ ಅಸಾಧ್ಯ. ಅದು ಸರ್ಕಾರಿ ಪ್ರೈಮರಿ ಸ್ಕೂಲ್‌ಗಳು ಇರಬಹುದು, ಉರ್ದು ಪ್ರೈಮರಿ ಸ್ಕೂಲ್‌ಗಳು ಇರಬಹುದು, ಯಾವುದೇ ಇಂಥ ಸ್ಕೂಲ್‌ಗಳಲ್ಲಿ ಆದರಲ್ಲಿಯೂ ಬೆಂಗಳೂರಿನಲ್ಲಿಯೂ ಕೂಡ ನೆಲದ ಮೇಲೆ ಕುಳಿತುಕೊಂಡು ಮಕ್ಕಳು ಓದುತ್ತಾರೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಾಗಿದ್ದರೆ ಇಂಥ ಸ್ಕೂಲ್‌ಗಳಿಂದ ನಾವು ಎಂಥ ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತವೆ ? How can we get very good students, good people, good citizens from this kind of schools? This is my apprehension and this has been coming true, because they are becoming more and more criminal. Unless we provide proper facilities to the young students, the atmosphere there would certainly have more effect on their minds. ಆದ್ದರಿಂದ ಅಂಥ ಮಕ್ಕಳೂ ಸಹ ಮೇಲೆ ಒಂದು ರಾಜ್ಯಕ್ಕಾಗಲೀ, ದೇಶಕ್ಕಾಗಲೀ ಸೇವೆ ಮಾಡಲಿಕ್ಕೆ ಅಷ್ಟು ಅರ್ಹರಾಗುವುದಕ್ಕೆ ಆದರಿಂದ ಸಾಧ್ಯವಾಗುವುದಿಲ್ಲ. ಈ ರೀತಿಯಾಗಿ ಹಲವಾರು ವಿಚಾರಗಳಿಂದ ನಾವು ಲಿಬರಲೈಸ್ ಮಾಡಿದರೆ, ಇಂಗ್ಲೀಷ್ ಮಿಡಿಯಂ ಕೊಡಬಹುದು. ಅದು, ಇದು ಎಂದು ಹೋದರೆ ಆಗುವುದಿಲ್ಲ. ಆದರೆ ಕನ್ನಡ 100ಕ್ಕೆ 100 ರಷ್ಟು ಕಡ್ಡಾಯ ಮಾಡಬೇಕು. ಕನ್ನಡ ನಮಗೆ ಬೇಕು ಇದು ನಮ್ಮ ರಾಜ್ಯದ ಭಾಷೆ. ಇದನ್ನು ಎಲ್ಲರೂ ಕಲಿಯಲೇ ಬೇಕು ಎಂದು ನಾನು ಹೇಳುತ್ತೇನೆ. ಯಾರೇ ಬೇಕಾದರೂ ಶಾಲೆಗಳನ್ನು ಪ್ರಾರಂಭ ಮಾಡಿದರೂ ಕೂಡ ಕನ್ನಡವನ್ನು ಮಾತ್ರ 100 ಪರ್‌ಸೆಂಟ್‌ನಷ್ಟು ಅಂಕಗಳನ್ನು ಪ್ರಥಮ ದರ್ಜೆಯಿಂದ ಮಾಡಬೇಕು. From I standard and not from III Standard, that is my thinking, Kannada should be compulsory language, at least for hunred marks. ಆ ರೀತಿಯ ಒಂದು ಹೊಸ ಪದ್ಧತಿಯನ್ನು ತೆಗೆದುಕೊಂಡರೆ ಯಾವುದೊಂದು ಲಾಂಗ್ವೇಜ್ ಫಾರ್ಮುಲಾ ಈಗಿದೆ. ಅದಕ್ಕೆ ಅನುಕೂಲವಾಗುತ್ತದೆ. ಈಗಿರುವ ಲಾಂಗ್ವೇಜ್ ಫಾರ್ಮುಲ ಬಹಳಷ್ಟು ಕನ್‌ಫ್ಯೂಸ್ ಆಗಿದೆ. ನಾನು ಕೂಡ ಅದನ್ನು ತಿಳಿಯಲಿಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೆ. ಅದರಲ್ಲಿ ಬಹಳಷ್ಟು ವೇರಿಯೇಷನ್ಸ್‌ನ್ನು ನಾನು ನೋಡುತ್ತಾ ಇದ್ದೇನೆ. ಅದಕ್ಕಾಗಿ ಈ ಲಾಂಗ್ವೇಜ್ ಫಾರ್ಮುಲಾವನ್ನು ಒಂದೇ ಒಂದು ಮಾಡಿಕೊಂಡು acceptable to all the linguistic minorities and other groups. ಅದನ್ನು ಮಾಡಿಕೊಂಡು ಹೋದರೆ ಒಳ್ಳೆಯದು ಎಂದು ಕಾಣುತ್ತದೆ. ಈಗ ಹಿಂದಿ

ಟೀಚರ್ಸ್ ಇಲ್ಲ ಎಂದು ಹೇಳಿ, ಮೊನ್ನೆ ಮೊನ್ನೆ ಪುನಃ ಲಾಂಗ್ವೇಜ್ ಫಾರ್ಮುಲಾದಲ್ಲಿ ಚೇಂಜ್ ಮಾಡಿದ್ದಾರೆ. ಈಗಿರುವ ನೀತಿಯ ಪ್ರಕಾರ ಕನ್ನಡ 150, ಇಂಗ್ಲೀಷ್ ಸೆಕೆಂಡ್ ಲಾಂಗ್ವೇಜ್ 100, ಹಿಂದಿ 100 ಅಂಕಗಳು ಎಂದು ಇತ್ತು. ಈಗ 50 ಮಾಡಿದ್ದಾರೆ. ಹೀಗೆ ಸಡನ್ ಆಗಿ ಪರೀಕ್ಷೆ ಹತ್ತಿರ ಬರುವಾಗ ಟೀಚರ್ಸ್ ಇಲ್ಲ ಎಂದು ಹೇಳಿ ಅದು ಕಂಪಲ್ಸರಿ ಇಲ್ಲ ಎಂದು ಅದನ್ನು ಕಡಿಮೆ ಮಾಡಿದರು. ಆದರಿಂದ ಸ್ವಲ್ಪ ತೊಂದರೆಯಾಗಿದೆ ಅದನ್ನು ವಿಚಾರ ಮಾಡುವಂಥ ಪ್ರಸಂಗ ಇದೆ. ಅದೇ ರೀತಿಯಲ್ಲಿ ಲಿಂಗ್ವಿಸ್ಟಿಕ್ ಮೈನಾರಿಟೀಸ್‌ಗೆ ಫಸ್ಟ್ ಲಾಂಗ್ವೇಜ್ 150, ಇಂಗ್ಲೀಷ್ 100, ಕನ್ನಡ 50..ಅಂಕಗಳು ಎಂದು ಮಾಡಿದ್ದಾರೆ. ಆದರೆ ಬರುವ ವರ್ಷದಿಂದ ಅದಕ್ಕೆ ಹೊಸ ಫಾರ್ಮುಲ ಎಂದು ಕಾಣುತ್ತದೆ; ಅದು ಯಾವುದು ಎಂದು ದಯಮಾಡಿ ತಾವುಗಳು ಹೇಳಬೇಕು. ಕನ್ನಡ 125, ಇಂಗ್ಲೀಷ್ 100, ಮತ್ತು ಹಿಂದಿ 100. ಲಿಂಗ್ವಿಸ್ಟಿಕ್ ಮೈನಾರಿಟೀಸ್‌ಗೆ, ಉರ್ದು, ತಮಿಳು ಆಗಲಿ 125, ಇಂಗ್ಲೀಷ್ 100. ಇನ್ನೊಂದು ಅವರಿಗೆ ಕನ್ನಡವೂ 100 ಆಗಬೇಕು. ನಂತರ ಅವರಿಗೆ ನ್ಯಾಶನಲ್ ಲಾಂಗ್ವೇಜ್ ಹಿಂದಿಯನ್ನು ಯಾವ ರೀತಿಯಲ್ಲಿ ಕಲಿಸಬೇಕೆಂದು ಯೋಚನೆ ಮಾಡುವಂಥ ಕಾಲ ಬಂದಿದೆ. ಅದನ್ನು ನಾನು ಈಗ ಹೇಳಲು ಹೋಗುವುದಿಲ್ಲ. ಒಂದು ವೇಳೆ ನೀವು ಕರೆದರೆ ನನಗೆ ತಿಳಿದಂಥ ಯಾವ ಒಂದು ಫಾರ್ಮುಲಾ ಇದೆ, ಎಕ್ಸೆಪ್ಟೆಬಲ್ ಆಗಿ, ಯಾಕೆಂದರೆ ನಾನು, ಕನ್ನಡವನ್ನು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಸ್ಕೂಲ್‌ಗಳಲ್ಲಿ ಮೊದಲನೇ ದರ್ಜೆಯಿಂದ ಮಾಡಿ ಉರ್ದು ಅಥವಾ ತಮಿಳಿಗೆ 150 ಮಾರ್ಕ್ಸ್ ಕೊಡಿ, ಆಮೇಲೆ ಕನ್ನಡಕ್ಕೆ 100 ಕೊಟ್ಟು, ಇಂಗ್ಲೀಷ್‌ಗೆ ಕೂಡ 100 ಕೊಟ್ಟು, ಎಂಟನೆ ದರ್ಜೆಯಿಂದ 10ನೇ ದರ್ಜೆಯ ತನಕ ಹಿಂದಿಯನ್ನು ಇಂಟ್ರೊಡ್ಯೂಸ್ ಮಾಡಿದರೆ ಈ ಲಿಂಗ್ವಿಸ್ಟಿಕ್ ಮೈನಾರಿಟೀಸ್‌ಗಳಿಗೆ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ಸಹ ಯೋಚನೆ ಮಾಡುತ್ತಾ ಇದ್ದೇನೆ. ಈ ರೀತಿಯಾಗಿ ಒಳ್ಳೆಯ ಒಂದು ಯೋಚನೆ ಮಾಡಿ ಲಾಂಗ್ವೇಜ್ ಫಾರ್ಮುಲವನ್ನು ಮಾಡಿ. ಲಿಬರಲೈಸ್ಡ್ ಪಾಲಿಸಿಯಲ್ಲಿ ಯಾರೇ ಬೇಕಾದರೂ ಮಾಡಲಿ, ಉರ್ದು ಸ್ಕೂಲು ಮಾಡುವವರು ಉರ್ದು ಸ್ಕೂಲ್ಸ್ ಮಾಡಲಿ, ಇಂಗ್ಲೀಷ್ ಮಿಡಿಯಂ ಸ್ಕೂಲ್ ಮಾಡುವವರು ಇಂಗ್ಲೀಷ್ ಮಿಡಿಯಂ ಸ್ಕೂಲ್ ಪ್ರಾರಂಭ ಮಾಡಲಿ ಅಂತೂ ಕನ್ನಡವನ್ನು ಮಾತ್ರ 100 ಮಾರ್ಕ್ಸ್ ಕಂಪಲ್‌ಸರಿ ಇರುವ ರೀತಿಯಲ್ಲಿ ಮಾಡಿದರೆ ಯಾರಿಗೂ ಒಂದು ತಕರಾರು ಬರಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾನು ಯೋಚನೆ ಮಾಡಿದ್ದೇನೆ. ಅದೇ ರೀತಿಯಲ್ಲಿ ಮೈನಾರಿಟೀಸ್ ಸಂಸ್ಥೆಗಳು ಯಾವುದಿವೆ, ಮೈನಾರಿಟೀಸ್ ಅಂದರೆ ಈಗ ಸಾವಿರಾರು ಉರ್ದು ಸ್ಕೂಲುಗಳಿವೆ. ಹಳೇ ಮೈಸೂರಿನಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಯಾರ ಮಾತೃಭಾಷೆ ಉರ್ದು ಇದೆಯೋ ಅಲ್ಲಿ ಉರ್ದು ಸ್ಕೂಲುಗಳಿರುವುದನ್ನು ಕಾಣುತ್ತೇವೆ. ಇಂತಹ ಸಾವಿರಾರು ಉರ್ದು ಸ್ಕೂಲುಗಳು ಹಿಂದಿನ ಮಹಾರಾಜರ ಕಾಲದಲ್ಲಿ ಪ್ರಾರಂಭವಾದುವು. 70-80 ವರ್ಷಗಳ ಹಿಂದೆ ಕಟ್ಟಿದ ಬಿಲ್ಡಿಂಗ್‌ಗಳು ಈಗ ಬಿದ್ದು ಹೋಗುತ್ತಿವೆ. ಅಲ್ಲಿ ಫರ್ನಿಚರ್ಸ್ ಇಲ್ಲ, ಟೀಚರ್ಸ್ ಇಲ್ಲ. ಅದಕ್ಕಾಗಿ ಮೈನಾರಿಟೀಸ್ ಭಾಷೆ ಸ್ಕೂಲುಗಳ ಬಗ್ಗೆ ಒಂದು ಸಬ್ ಪ್ಲಾನ್ ಹಾಕಬೇಕು. ಇಲ್ಲದಿದ್ದರೆ ನಿಮ್ಮ ಈಗಿನ ಅಲೋಕೇಷನ್‌ನಲ್ಲಿ ಮೈನಾರಿಟೀಸ್ ಸಂಸ್ಥೆಗಳಿಗೆ ಹಣ ಪ್ರತ್ಯೇಕವಾಗಿ ಒದಗಿಸಲು ಸಾಧ್ಯವಿಲ್ಲ. ಏಕೆಂದರೆ, ನಿಮ್ಮ ಯೋಜನಾ ಗಾತ್ರದ ಕೆಲಸ ಯಾವುದಿದೆ, it is a very vast work you have. Therefore, it is the minority institutions which are neglected all these years and therefore what you required to do is, if at all you are very serious to improve the Urdu Schools which are in thousands in Karnataka, you should have a sub-Plan. The allocation should be separate for the linguistic minority institutions. Then only you can

spare some money to them. Otherwise, in the ocean, everything will go to the other type of schools. Minorities do not get. Therefore, Urdu schools which are in old buildings, are collapsing and they cannot get teachers also, In no school, physical training and Kannada teachers are there. ವಿದ್ಯಾರ್ಥಿಗಳಿಗೆ ಫಿಸಿಕಲ್ ಟ್ರೈನಿಂಗ್ ಕೊಡುವಂತಹ ಟೀಚರ್ಸ್ ಉರ್ದು ಶಾಲೆಗಳಲ್ಲಿ ಇಲ್ಲ. ಕನ್ನಡ ಟೀಚರ್ಸ್ ಇಲ್ಲ. ನಾವು ಹೇಳಿ ಹೇಳಿ ಸಾಕಾಯ್ತು. ಇಂದು ಕನ್ನಡ ಟೀಚರ್ಸ್ ಸಿಗುತ್ತಿಲ್ಲ. ತರೀಕೆರೆಯಲ್ಲಿ 1881ರಲ್ಲಿ ಮುಸ್ಲಿಂ ಎಜುಕೇಷನ್ ಕಾನ್‌ಫರೆನ್ಸಾಯಿತು. more than 100 years back. The first Conference on Muslim Education was held. ಅಲ್ಲಿ ಉರ್ದು ಸ್ಕೂಲುಗಳಲ್ಲಿ ಕನ್ನಡ ಕಲಿಸೋಕೆ ಕನ್ನಡ ಟೀಚರ್ಸ್ ಬೇಕೂಂತ ನಿರ್ಣಯ ಮಾಡಿದರು. ಆದರೆ, ಈವರೆಗೆ ಅಲ್ಲಿಗೆ ಟೀಚರ್ಸ್ ಕೊಡಲಿಲ್ಲವೆಂದರೆ ಅವರು ಕನ್ನಡ ಹೇಗೆ ಕಲಿಯುತ್ತಾರೆ? ಕನ್ನಡ ಈಗಂತೂ ಬಹಳ ಪ್ರಾಮುಖ್ಯ. ಬಹಳ ಒಳ್ಳೆಯ ಸರಳ ಭಾಷೆ; ಈ ಬಗ್ಗೆ ನೀವು ಏನು ಹೇಳಿದಿರಿ ಅದು ಸಂಪೂರ್ಣವಾಗಿ ಒಪ್ಪುವ ಮಾತು. ಅಂತಹ ಕಡೆ ನಾವೇ ಅವರಿಗೆ ಅವಕಾಶ ಕೊಡದೆ ನಾಳೆ ಗೌವರ್ನಮೆಂಟ್ ಕೆಲಸಕ್ಕೆ ಸೇರಲು ನೀವು ಕನ್ನಡ ಪಾಸಾಗಬೇಕು; ಕನ್ನಡ ಬರದಿದ್ದರೆ ಸೇರಿಸೋಲ್ಲ ಎಂದರೆ ಅವರದೇನು ತಪ್ಪಿದೆ? ನಾವು ಅವರಿಗೆ ಕನ್ನಡ ಕಲಿಯಲು ಅವಕಾಶ ಕೊಡಲಿಲ್ಲ. ಆಮೇಲೆ ಅವರಿಗೆ ಸರ್ಕಾರಿ ನೌಕರಿ ಬೇಕಾದರೆ ಕನ್ನಡ ನಿಮಗೆ ಅಗತ್ಯವೆಂದು ಹೇಳ್ತೀವೆ. ಇದು ಬಹಳ ಕಾಂಟ್ರಾಡಿಕ್ಟರಿ. ಇದರಿಂದ ಅವರಿಗೆ ಅಸಮಾಧಾನವಾಗುತ್ತದೆ. ಮೈನಾರಿಟೀಸ್‌ಗೆ ಯಾವಾಗಲೂ ಒಂದು ರೀತಿಯ ಗಾಬರಿ ಇರುತ್ತದೆ. ಅವರು ಸಹ ಈ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೂ ಸಹ ಎಷ್ಟೋ ಮೇನ್‌ಸ್ಟ್ರೀಮ್‌ನಿಂದ ಹೋಗುತ್ತಿದ್ದಾರೆ. ಅವರಿಗೆ ತೀರಾ ಅನ್ಯಾಯವಾಗುವಾಗ ನಾವು ಅವರನ್ನು ಮೇನ್‌ಸ್ಟ್ರೀಮ್‌ನಿಂದ ಹೊರಗೆ ಹಾಕುವ ಪರಿಸ್ಥಿತಿಯಲ್ಲಿರುತ್ತೇವೆ. ಅದನ್ನು ಯಾವಾಗಲೂ ಮಾಡಬಾರದು. ಮೈನಾರಿಟೀಸ್‌ಗೆ ಅವರದೇ ಅದ ಪ್ರಾಬ್ಲಮ್ಸ್ ಇರುವಾಗ ನಾವು ಅವರಿಗೆ, ಅವರ ಶಾಲೆಗಳಿಗೆ ಒಂದು ಸಬ್ ಪ್ಲಾನ್ ಮಾಡಿಕೊಂಡು ಅವರಿಗೆ ಪ್ರತ್ಯೇಕ ಪ್ಲಾನ್ ಅಲೋಕೇಷನ್ ಮಾಡಿದರೆ ಟೀಚರ್ಸ್ ಬರ್‍ತಾರೆ. ಕಟ್ಟಡ ಆಗಲಿಕ್ಕೆ ಸಾಧ್ಯವಿದೆ. ಬೆಂಚ್‌ಗಳು ಸಿಗುತ್ತವೆ. ಹಣಕಾಸಿನ ತೊಂದರೆ ಇದೆಯೆಂದರೆ ಅಲ್ಲಿ ಇಂಪ್ರೂವ್ ಆಗಲಿಕ್ಕೆ ಸಾಧ್ಯವಿಲ್ಲ. ಈಗಿನ ಸ್ಥಿತಿಯಲ್ಲಿ ಮೈನಾರಿಟೀಸ್‌ಗೆ ಸಹಾಯ ಸಿಗೋದಿಲ್ಲ. My calculation, I have worked out also. Hardly we can. It is very difficult. ಈಗ ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಪ್ಲಾನ್ ಅಂತ ಮಾಡಿ ಅವರಿಗೆ ಹೇಗೆ ಪ್ರತ್ಯೇಕ ಅಲೋಕೇಷನ್ ಮಾಡಿಕೊಟ್ಟಿದ್ದೀರಿ, ಅದೇ ರೀತಿಯಲ್ಲಿ ಉರ್ದು ಮತ್ತಿತರ ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳು ತೀರಾ ಹಿಂದುಳಿದಿರುವ ಕಾರಣ ನೀವು ಸಪರೇಟ್ ಪ್ಲಾನ್ ಇಲ್ಲವೇ ಸಬ್-ಪ್ಲಾನ್ ಮಾಡಿದರೆ ಅದರಿಂದ ಈ ವಿದ್ಯಾ ಸಂಸ್ಥೆಗಳು ಅಭಿವೃದ್ಧಿಯಾಗುತ್ತವೆಂದು ನಾನೂ ಸಹ ಯೋಚನೆ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ನೀವು ಒಂದು ಡೈರೆಕ್ಟೋರೇಟನ್ನು ಮಾಡಿದಿರಿ. ಉರ್ದು ಅಂಡ್ ಮೈನಾರಿಟಿ. ಇದರಿಂದ ಏನಾಗುತ್ತದೆ, ಈ ಉರ್ದು ಇನ್ಸ್‌ಟಿಟ್ಯೂಷನ್ಸ್ ಬಹಳ ಇವೆ. ಈ ತರಹ ತಮಿಳು, ಮಳೆಯಾಳಂ ಮತ್ತು ಮರಾಠಿಗಿಂತ ಬಹಳಷ್ಟು, ನೀವು ಮಾಡಿದ್ದು ಒಳ್ಳೆಯದೇ. ಆದರೆ ಯಾರೇ ಇರಲಿ ಈ ಡೈರೆಕ್ಟರ್ ಜಾಗಕ್ಕೆ ಸ್ವಲ್ಪ ಉರ್ದು ಗೊತ್ತಿರುವವರನ್ನು ಹಾಕಬೇಕು. ಏಕೆಂದರೆ, ಸಮಸ್ಯೆಗಳು ಅವರಿಗೆ ತಿಳಿವಳಿಕೆ ಆಗಬೇಕಾಗಿದೆ. ಉರ್ದು ಡೈರೆಕ್ಟರ್ ಅನ್ನು ನೇಮಕ ಮಾಡಿದ್ದೇವೆ ಎಂದು ಹೇಳಿ ಯಾರನ್ನೋ ಹಾಕಿಬಿಟ್ಟರೆ ಅವನಿಗೆ ಆಸಕ್ತಿ ಇರುವುದಿಲ್ಲ. ಎಲ್ಲರಿಗೂ ಕೂಡ ಆಸಕ್ತಿ ಇರುವುದಿಲ್ಲ. ಒಳ್ಳೆಯ ಆಫೀಸರ್‌ಗಳು ಕೆಲವರು ಇರಬಹುದು. ಅವರಿಗೇ

ಬೇಸರ. ನನಗೆ ಏನೂ ಉರ್ದು ಗೊತ್ತಿಲ್ಲ, ನನ್ನನ್ನು ಡೈರೆಕ್ಟರ್ ಮಾಡಿದ್ದಾರೆ. ಉರ್ದು ಡೈರೆಕ್ಟರ್ ಎಂದು ಹೇಳಿದರೆ ಅವನು ಯಾವ ರೀತಿ ಆಸಕ್ತಿಯನ್ನು ತೆಗೆದುಕೊಳ್ಳುತ್ತಾನೆ. ಆದಕ್ಕಾಗಿ ಈ ರೀತಿ ನೀವು ಉರ್ದು ನೋಯಿಂಗ್ ಇದ್ದವರನ್ನು ಹಾಕಬೇಕು. ಬೇಕಾದಷ್ಟು ಒಳ್ಳೆಯ ಅಫೀಸರ್‌ಗಳು ಇದ್ದಾರೆ. ಅವರನ್ನು ಹಾಕಿದರೆ ಇದರಿಂದ ನೀವು ಯಾವುದು ಒಂದು ಡೈರೆಕ್ಟೊರೇಟನ್ನು ಮಾಡಿದ್ದೀರಿ ಮತ್ತು ಆ ಕಮ್ಯುನಿಟಿಗೆ ಕೂಡಾ ಅದರಿಂದ ತೃಪ್ತಿಯಾಗುತ್ತದೆ. There will be tremendous satisfaction also. The community will also feel very much grateful. ಆ ರೀತಿಯಲ್ಲಿ ನೀವು ಮಾಡಬೇಕು ಎಂದು ನಾನು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಆಮೇಲೆ ಉರ್ದು ವಿಚಾರದಲ್ಲಿ ಮಾತನಾಡುವುದಾದರೆ ನಮಗೆ ಎಲ್ಲರಿಗೂ ಗೊತ್ತಿರುವ ಹಾಗೆ ಬಹಳ ಸೊಗಸಾದ ಶಾಹೆರಿ ಜಬಾನ್ ಎಂದು ಹೇಳುತ್ತಾರೆ. ಯಾರು ಶಾಹೆಯಲ್ಲಿ ಅದಕ್ಕಿಂತ ಒಳ್ಳೆಯ ಪೊಯಿಟ್ರಿಯಲ್ಲಿ ಸುಲಭದಲ್ಲಿ ಮಾಡುವಂಥ ಲಾಂಗ್ವೇಜ್ ಯಾವುದೂ ಇಲ್ಲ. ಇಡೀ ಭಾರತದ ಸ್ವಾತಂತ್ರ್ಯಕ್ಕೂ ಬೇಕಾದಷ್ಟು ಉರ್ದುವಿನ ಇನ್‌ಕ್ವಿಲಾಬ್ ಜಿಂದಾಬಾದ್‌ನ ಒಂದು ಸ್ಲೋಗನ್‌ನಿಂದ ಇಡೀ ದೇಶದಲ್ಲೇ ಒಗ್ಗಟ್ಟಾಗುವುದಕ್ಕೆ ಸಾಧ್ಯವಾಯಿತು. ದೇಶದ ಎಲ್ಲಾ ಕಮ್ಯುನಿಟಿಗಳು ಒಗ್ಗಟ್ಟಾಗುವುದಕ್ಕೆ ಇನ್‌ಕ್ವಿಲಾಬ್ ಜಿಂದಾಬಾದ್‌ನ ಒಂದು ದೊಡ್ಡ ಸ್ಲೋಗನ್‌ನ ಕೆಳಗಡೆ ಎಲ್ಲರಿಗೂ ಬರಲಿಕ್ಕೆ ಸಾಧ್ಯವಾಯಿತು. ಅಂಥ ದೊಡ್ಡ ಭಾಷೆ ಕರ್ನಾಟಕದಲ್ಲಿ ನಾವು ಒಂದು ರೀತಿಯಲ್ಲಿ ಆ ಭಾಷೆಯಲ್ಲಿ ಮುಂದೆ ಬರುತ್ತಿದ್ದೇವೆ. ಆದರೆ ನಾವು ಮೊಟ್ಟಮೊದಲನೆಯದಾಗಿ ಈಗ ಉರ್ದು ಹಾಲ್ ಎಂದು ಹೇಳಿ The Urdu Hall will be a symbol for promoting Urdu in Karnataka. ಅದರಲ್ಲಿ ಕಾನ್‌ಫರೆನ್ಸ್. ಅದರಲ್ಲಿ ಸೆಮಿನಾರ್ ರೂಮ್ಸ್. ಕಾನ್‌ಫರೆನ್ಸ್ ಹಾಲ್, ಲೈಬ್ರರಿ. ರೀಸರ್ಚ್ ಫೆಸಿಲಿಟೀಸ್ ಮಾಡಿಕೊಟ್ಟರೆ this will be a novel thing.

SRI M. VEERAPPA MOILY: I don't understand the concept.

SRI S.M. YAHYA: It symbolises that we are promoting Urdu in the Hall. Hall means not just a hall. In India, there must be a Urdu University. I am coming to it. This is symbolic way to have infrastructure for an All India Urdu University, which the Government of India is also thinking, for which we may get a lot of money also. That is my idea. Suppose we start the infrastructure, you may call it Urdu Hall or by whatever name, this will be symbol to promote Urdu, with various seminar rooms, libraries, conference halls and other facilities for research. Thereby the Government of India if it decides to have a Urdu University, we can really rightly claim that the University may be established in Bangalore. This would be a great occasion a proud occasion for all of us. ಆ ಕಾರಣದಿಂದ ಆ ಒಂದು ಪ್ರಾಜೆಕ್ಟನ್ನು ನೀವು ಮಾಡಬೇಕು. ಅದಕ್ಕೆ ನಾನು ನಮ್ಮ ಮೇಯರ್‌ರವರಿಗೂ ಸಹಾ ಜಾಗ ಎಲ್ಲಿ ಬೇಕಾದರೂ ಕೊಡುತ್ತೇವೆ ಎಂದು ನಾನು ಅವರ ಹತ್ತಿರ ಮಾತನಾಡಿದ್ದೇನೆ. ಆಮೇಲೇ ಬೇಕಾದಷ್ಟು ಸಹಾಯ ಇದಕ್ಕೆ ಸಿಗುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಸಹಾ ಯೋಚನೆ ಮಾಡಿದ್ದೇನೆ.

ಅದೇ ರೀತಿ ನೀವು ಮೊನ್ನೆ ಉತ್ತರ ಕೊಡುವಾಗ ಸಹ ಹೇಳಿದ್ದೀರಿ. ಉರ್ದು ಟೀಚರ್ಸ್ ಅಪಾಯಿಂಟ್‌ಮೆಂಟ್ ಮಾಡುವಾಗ ಎಸ್‌ಸಿ : ಎಸ್‌ಟಿ ಯವರಿಗೇ ರಿಜರ್‌ವೇಷನ್ ಅನ್ನು ಡಿ-ರಿಸರ್‌ವೇಷನ್ ಮಾಡಬೇಕೆಂದು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿದ್ದೀರ, ಅಲ್ಲಿ ಆರ್ಡರ್ಸ್ ಆಗಿದೇ. ನಾವು ಎಸ್‌ಸಿ : ಎಸ್‌ಟಿ ಯವರಿಗೇ ಕೊಡಬಾರದು ಅಂತ ಇಲ್ಲ. ಉರ್ದು ಟೀಚರ್ಸ್ ಬಂದರೇ ಬಹಳ ಒಳ್ಳೆಯದು. ಆದರೆ ಯಾರೂ ಸಹ ಬರುವುದಿಲ್ಲ. ವರ್ಷವರ್ಷ ಆ ಪೋಸ್ಟ್‌ಗಳು ಖಾಲಿ ಇರುತ್ತವೆ. ಪ್ರತಿ ವರ್ಷವೂ 30-40 ಟೀಚರ್ಸ್ ಪೋಸ್ಟ್‌ಗಳು ಖಾಲಿ ಆದಂತೆ ಭರ್ತಿ ಮಾಡಬೇಕು. 3 ವರ್ಷದ ಮೇಲೆ ಆದರೆ 300-400-500 ಪೋಸ್ಟ್‌ಗಳು ಖಾಲಿ ಇರುತ್ತವೆ. ಆದ್ದರಿಂದ ಉರ್ದು ಸ್ಕೂಲ್‌ಗಳಲ್ಲಿ ಇದೊಂದು ದೊಡ್ಡ ಪ್ರಾಬ್ಲಮ್ ಆಗಿದೆ. ಇದರ ಬಗ್ಗೆ ಸರ್ಕಾರದವರು ಆದೇಶ ಹೊರಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದು ಎಲ್ಲಾ ಹಂತದಲ್ಲಿಯೂ ಆಗಬೇಕು. ಪ್ರೈಮರಿ ಸ್ಕೂಲ್, ಹೈಸ್ಕೂಲ್, ಪ್ರಿಯುನಿವರ್ಸಿಟಿ ಹಾಗೂ ಕಾಲೇಜ್‌ಗಳಲ್ಲಿಯೂ ಸಹ ಇದು ಜಾರಿ ಆಗಬೇಕು. ಯೂನಿವರ್ಸಿಟಿಯಲ್ಲಿ ಎರಡು ಪ್ರೊಫೆಸರ್ ಪೋಸ್ಟ್‌ಗಳು ಖಾಲಿ ಇದ್ದರೆ ಅದರಲ್ಲಿ ಒಂದು ಎಸ್.ಸಿ.ಗೇ ಎಂದು ಇರುತ್ತದೆ. ಇನ್ನೊಂದು ಜನರಲ್ ಅಂತ ಹೇಳುತ್ತಾರೆ. ಎಸ್.ಸಿ. ಯವರು ಸಿಗುವುದಿಲ್ಲವೆಂದರೆ ಆ ಪೋಸ್ಟ್ ಅಲ್ಲೇ ಖಾಲಿ ಇರುತ್ತದೆ. It is most difficult to get SC/ST people. There was a time when in Gulbarga, Bidar and Raichur Districts, people used to learn Urdu. Nowadays, the entire situation has changed. Therefore, we do not get SC/ST people. There should be permanent de-reservation as far as Urdu Teachers are concerned. ಆ ಮೇಲೆ ವಿದ್ಯಾ ಇಲಾಖೆಯಲ್ಲಿ ಟೀಚರ್ಸ್ ಟ್ರೈನಿಂಗ್ ಸಹ ಬಹಳ ವೀಕ್ ಆಗಿದೆ. ಟೀಚರ್ಸ್ ಟ್ರೈನಿಂಗ್ ಕೋರ್ಸ್ ಮಾಡಿ ಮುಗಿಸಿದ ಮೇಲೆ ರೀತಿಯಲ್ಲಿ ಕಮಿಟೆಡ್ ಆಗಿ ಟೀಚರ್ಸ್ ಸೇವೆ ಮಾಡಲಿಕ್ಕೆ ಮುಂದೆ ಬರಬೇಕೋ ಹಾಗೂ ಕಮಿಟೆಡ್ ಸೀನಿಯರ್ ಟೀಚರ್ಸ್ ಆಗಬೇಕೋ ಆ ರೀತಿ ತರಬೇತಿಯಾಗುತ್ತಿಲ್ಲ. ಅದಕ್ಕಾಗಿ ಬೇಕಾದಷ್ಟು ಬದಲಾವಣೆಗಳನ್ನು ಟೀಚರ್ಸ್ ಟ್ರೈನಿಂಗ್ ಕೋರ್ಸ್‌ನಲ್ಲಿ ಮಾಡಬೇಕಾಗಿದೆ. ಒಳ್ಳೆಯ ಟೀಚರ್ಸ್ ಅನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಿಯೂ ಜಾಬ್ ಸಿಗಲಿಲ್ಲವೆಂದಾಗ that is the last resort ಅಂತ ಹೇಳಿ ಟೀಚಿಂಗ್ ಲೈನ್‌ಗೆ ಬರುವುದು ಇಲ್ಲವೇ ಲೆಕ್ಚರರ್ಸ್ ಆಗುವರು ಈ ರೀತಿ ಆಗಬಾರದು. ಯಾರು ರಿಯಲಿ ಕಮಿಟೆಡ್ ಇದ್ದಾರೆ. ಆ ದರ್ಜೆಗೆ ಯಾರು ಬಂದಿದ್ದಾರೆ ಅಂತಹವರನ್ನು ಟೀಚರ್ಸ್ ಮಾಡಬೇಕೇ ಹೊರತು ಎಲ್ಲರನ್ನೂ ನಾವು ಅಪಾಯಿಂಟ್‌ಮೆಂಟ್ ಮಾಡುತ್ತಾಮಾಡುತ್ತಾ ಹೋದರೆ ಈ ವಿದ್ಯಾಭ್ಯಾಸದ ಪದ್ಧತಿಯೆ ಬಹಳ ಕೆಟ್ಟುಹೋಗುತ್ತದೆ. ಇದರಲ್ಲಿ ಏನು ಹಲವಾರು ಬದಲಾವಣೆಗಳನ್ನು ಮಾಡುವಂತಹ ಸಂದರ್ಭದಲ್ಲಿದ್ದೇವೆ. ಆ ಬದಲಾವಣೆಗಳನ್ನು ಕೂಡಲೇ ಮಾಡಿದರೆ ದೇಶಕ್ಕೂ ಒಳ್ಳೆಯದಾಗುತ್ತದೆ ಮತ್ತು ದೇಶದ ಅಭಿವೃದ್ಧಿಯೂ ಆಗುತ್ತದೆ. ಈ ದೇಶದಲ್ಲಿ ಆಗುತ್ತಿರುವ ಪ್ರಗತಿಗೆ ಅನುಗುಣವಾಗಿ ನಮ್ಮ ಪ್ರೋಗ್ರೆಸಿವ್ ಎಜ್ಯುಕೇಷನ್ ಪಾಲಿಸಿ ಆಗಬೇಕಾಗಿದೆ Education policy should be progressive ಯೂನಿವರ್ಸಿಟಿಯ ವಿಚಾರದಲ್ಲಿ ಹೇಳಬೇಕೆಂದರೆ ಇವತ್ತು ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳು ಮೂರು ಇದ್ದದ್ದು ಐದು ಆಗಿದೆ. ಯೂನಿವರ್ಸಿಟಿಗಳಲ್ಲಿ ಬಹಳಷ್ಟು ಸುಧಾರಣೆಗಳು ಆಗಬೇಕಾಗಿದೆ. ನಾವು ಸ್ವಾಯುತ್ತತೆ ಬಗ್ಗೆ ಹೇಳುತ್ತೇವೆ. ಸ್ವಾಯತ್ತತೆ ಎಂದರೆ ಸರಿಯಾಗಿ ಅವರಿಗೆ ಎಲ್ಲಾ ಅಧಿಕಾರವನ್ನು ಫ್ರೀಡಂ ಅನ್ನು ಕೊಟ್ಟು ಅವರಿಗೆ ಯೋಗ್ಯವಾದ ರೀಸರ್ಚ್ ಅನ್ನು ಮಾಡಲು ಮತ್ತು ದೊಡ್ಡ ಕೆಲಸಕ್ಕೆ ಎಷ್ಟು ಹಣಬೇಕೋ ಅಷ್ಟನ್ನು ಒದಗಿಸಿಕೊಡಬೇಕು. ಪರ್ಮಿಷನ್ ಕೊಡುತ್ತದೆಂದರೆ ಅದು ರಾಜಕೀಯ ಶಿಫಾರಸ್‌ನಿಂದ ಮೆಡಿಕಲ್ ಕಾಲೇಜಿಗೆ ಅನುಮತಿ

ಸಿಗಬೇಕು. ಇಂಜನಿಯರ್ಸ್ ಕಾಲೇಜಿಗೆ ಅನುಮತಿ ಸಿಗಬೇಕು, ಇನ್ನು ಯಾವುದೇ ಒಂದು ಕಾರ್ಯ ಆಗಬೇಕಾದರೆ ಅವರಿಗೆ ಸ್ವಾಯತ್ತತೆ ಕೊಟ್ಟುಬಿಡಬೇಕು. ಇಲ್ಲದಿದ್ದರೆ ನಾವೇ ಇಟ್ಟುಕೊಂಡರೆ ಕಡ್ಡಾಯವಾಗಿ ಕೆಲವು ನೀತಿಗಳನ್ನು ಇಟ್ಟುಕೊಂಡೇ ಮಾಡಬೇಕು. ಇವತ್ತು ಎಷ್ಟೋ ಇಂಜನಿಯರಿಂಗ್, ಮೆಡಿಕಲ್, ಡೆಂಟಲ್ ಕಾಲೇಜುಗಳು ಪ್ರಾರಂಭ ಆಗುತ್ತಿವೆ. ಅದಕ್ಕೆ ಯೂನಿವರ್ಸಿಟಿ ರೆಸ್ಪಾನ್ಸಿಬಿಲಿಟಿ ಇಲ್ಲ. ಸರ್ಕಾರಕ್ಕೆ ರೆಸ್ಪಾನ್ಸಿಬಿಲಿಟಿ ಇಲ್ಲ ಅಂದರೆ ಮತ್ತೆ ರೆಸ್ಪಾನ್ಸಿಬಿಲಿಟಿ ಯಾರು? ಈಗ ಯಾವ ರೀತಿಯಲ್ಲಿ ನಮಗೆ ಡಾಕ್ಟರ್ಸ್ ಸಿಕ್ಕುತ್ತಿದ್ದಾರೆ, ಇಂಜನಿಯರ್ಸ್ ಸಿಕ್ಕುತ್ತಿದ್ದಾರೆಂದರೆ ಬೆಂಗಳೂರು ಯೂನಿವರ್ಸಿಟಿ ಮೂಲಕ ಪಾಸಾದ ಇಂಜನಿಯರ್ಸ್ ನಮ್ಮಲ್ಲಿ ಅಪಾಯಿಂಟ್‌ಮೆಂಟ್ ಮಾಡಲಿಕ್ಕೆ ಯೋಗ್ಯರಲ್ಲ ಎಂದು ಜಾಹಿರಾತಿನಲ್ಲಿ ಹೇಳಿರುತ್ತಾರೆ. Bangalore University Engineers need not apply ಅಂತ ಹೇಳುವಷ್ಟು ಮಟ್ಟದಲ್ಲಿ ನಾವು ಯೂನಿವರ್ಸಿಟಿಯ ಮಟ್ಟವನ್ನು ತಂದಿದ್ದೇವೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ಇದರ ಗುಣಮಟ್ಟವನ್ನು ಸಾಕಷ್ಟು ಏರಿಸಬೇಕಾಗಿದೆ ಎಂದು ; ಅದೇ ರೀತಿಯಾಗಿ ಶಾಲೆಗಳ ವಿಚಾರ ಮಾತನಾಡುವಾಗ ಒಂದು ವಿಚಾರ ನನಗೆ ಮರೆತುಹೋಯಿತು. ಏನೆಂದರೆ ಈಗಲೂ ಸಹ ಮಿಡ್-ಡೇ ಮಿಲ್ಸ್‌ನಲ್ಲಿ ಬೇಕಾದಷ್ಟು ದುರುಪಯೋಗ ಆಗಿದೆ ಎಂಬುದನ್ನು ಸಹ ಒಪ್ಪುವಂತಹದ್ದು ಯ ದುರುಪಯೋಗ ಈಗ ಎಲ್ಲಾ ಕಡೆ ಆಗುತ್ತಿದೆ.

ಮಿಡ್-ಡೇ ಮಿಲ್ ಪ್ರೋಗ್ರಾಂನಲ್ಲಿ ದುರುಪಯೋಗವಾಗಿದೆಯೆಂದು ಈ ಸ್ಕೀಂ ಅನ್ನು ತೆಗೆದುಹಾಕಿದರೆ ಬಡ ಮಕ್ಕಳಿಗೆ ಬಹಳ ತೊಂದರೆಯುಂಟಾಗುತ್ತದೆ. ಈ ಯೋಜನೆಯಲ್ಲಿ ಏನಾದರೂ ಡಿಫಿಕಲ್ಟೀಸ್ ಇದ್ದರೆ ಉತ್ತಮಪಡಿಸಿಕೊಳ್ಳಬೇಕಾಗಿದೆ. 'ಅಕ್ಷಯ' ಯೋಜನೆಯಲ್ಲಿ ಒಂದು ಮಗುವಿಗೆ ಒಂದು ದಿವಸಕ್ಕೆ ಒಂದು ರೂಪಾಯಿ ಕೊಡುವ ಈ ಯೋಜನೆಯನ್ನು ನಾನು ಬೇಕು ಎಂದು ಹೇಳುವುದಿಲ್ಲ, ಬೇಡವೆಂತಲೂ ಹೇಳುವುದಿಲ್ಲ. ಏಕೆಂದರೆ, ನಾನು ಮಿಡ್-ಡೇ ಮಿಲ್ ಪ್ರೋಗ್ರಾಂ ಬಗ್ಗೆ ಮೊದಲೇ ಹೇಳಿದೆ. ಈ ಹೊಸ 'ಅಕ್ಷಯ' ಯೋಜನೆಯನ್ನು ಈಗ ನಾನು ಬೇಡವೆಂದು ಹೇಳುವುದಿಲ್ಲ. ಏಕೆಂದರೆ, it is also an experiment. ಒಂದು ರೂಪಾಯಿ ಕೊಟ್ಟರೆ ಮಕ್ಕಳು ಶಾಲೆಗೆ ಬರಬಹುದು ಮತ್ತು ಬಡ ಮಕ್ಕಳು ಓದದೆ ಶಾಲೆ ಬಿಡುವುದು ಕಡಿಮೆಯಾಗುತ್ತದೆ. ಈ ಉದ್ದೇಶವನ್ನಿಟ್ಟುಕೊಂಡು ಮಾಡಿರುವುದು ತಪ್ಪಾಗುವುದಿಲ್ಲ. ಆದರೆ, ಈ ಯೋಜನೆ ಪ್ರಕಾರ ಯಾವುದೆ ಮಕ್ಕಳಿರಲಿ, ಅವರಿಗೆ ದುಡ್ಡಿನ ಆಶೆ ತೋರಿಸಿ, ವಿದ್ಯೆ ಕಲಿಸುತ್ತೇವೆಂದರೆ ಅದು natural laws ಗೆ ವಿರುದ್ಧವಾಗುತ್ತದೆ. ದುಡ್ಡಿನ ಆಶೆಯಿಂದ ವಿದ್ಯೆ ಬರುತ್ತದೆಂದರೆ, we are going against the nature ಆ ಕಾರಣದಿಂದ ಈ ಯೋಜನೆಯನ್ನು ನೀವು ಮಾಡಿದ್ದೀರಿ. ನೀವು ಬೇಕಾದಷ್ಟು ಸಾವಿರಾರು, ಲಕ್ಷಾಂತರ ರೂಪಾಯಿಗಳ ಬ್ಯಾಂಕ್ ಅಕೌಂಟ್ಸ್ ಓಪನ್ ಮಾಡಬಹುದು, ಬ್ಯಾಂಕ್ ಸಿಬ್ಬಂದಿಗಳನ್ನು ಹೆಚ್ಚು ಮಾಡಬಹುದು. ನಾನು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಹೇಳುವುದಿಲ್ಲ, ಅದನ್ನು ನಿಮಗೇ ಬಿಟ್ಟುಬಿಡುತ್ತೇನೆ. ಈ ಮಿಡ್-ಡೇ ಮಿಲ್ ಪ್ರೋಗ್ರಾಂನಲ್ಲಿ ಒಂದು ರೂಪಾಯಿಯನ್ನು ಮಗುವಿನ ಹೆಸರಿನಲ್ಲಿ ಅದರ ತಂದೆಗೆ ಕೊಟ್ಟರೆ ಏನಾಗುತ್ತದೆಂದು ನಿಮಗೆ ಗೊತ್ತಿದೆ. ಅವನು ಆ ದುಡ್ಡನ್ನು ಎಣಿಸಿಕೊಂಡು ಸಾರಾಯಿ ಅಂಗಡಿಗೆ ಹೋಗುತ್ತಾನೆ, ಆ ದುಡ್ಡು ಮಕ್ಕಳಿಗೆ ಸಿಗುವುದು ಕಷ್ಟವಾಗುತ್ತದೆ. ಆದರೂ ನೀವು ಇದರ ಬಗ್ಗೆ ಒಂದು ಪ್ರಯೋಗ (ಎಕ್ಸ್‌ಪಿರಿಮೆಂಟ್) ಮಾಡುತ್ತಿದ್ದೀರಿ, ಇದು ಯಶಸ್ವಿಯಾದರೆ ಬಹಳ ಒಳ್ಳೆಯದು. ಇಲ್ಲದಿದ್ದರೆ, ಈ ಯೋಜನೆ ಸರಿಯಾಗಿ ಯಶಸ್ವಿಯಾಗಿಲ್ಲವೆಂದರೆ ಧೈರ್ಯದಿಂದ ಬೇರೆ ಯೋಜನೆಗೆ ಹೋಗಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಈ ಯೋಜನೆ ಬೇಡವೆಂದು ಹೇಳುವುದಿಲ್ಲ ಏಕೆಂದರೆ, ನೀವು ಪ್ರಾರಂಭಿಸಿದ ಈ ಯೋಜನೆಯಲ್ಲಿ ಕೆಲವು ತೊಂದರೆಗಳು ನಿಮಗೆ ಬರಬಹುದು. ಆ ಕೆಲವು

ತೊಂದರೆಗಳು ಸಿದ್ಧಾಂತದ ಮೂಖಾಂತರ on principle also, we will find that this may not be possible to attract, how many days, how many months you can attract by giving one rupee per day? It may be possible for one year. For 5-6 months, he will come and afterwards he will think as to what is the use of getting Rs. 21 or 22 per month. ಆ ಕಾರಣದಿಂದ ನಾನು ಮಿಡ್-ಡೇ ಮಿಾಲ್ ಅನ್ನು ಪ್ರಿಫರ್ ಮಾಡುವವನು. ಈ ಯೋಜನೆಯಲ್ಲಿರುವ ಡಿಫಿಕಲ್ಟೀಸ್ ಅನ್ನು ತೆಗೆದುಹಾಕಿ. ಖಾಯಂ ಆಗಿ ಮುಂದುವರೆಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾತನಾಡುವುದಕ್ಕೆ ಇನ್ನೂ ಹಲವಾರು ವಿಚಾರಗಳಿದ್ದರೂ. ನನ್ನ ಸ್ನೇಹಿತರು ಬೇಕಾದಷ್ಟು ಜನರು ಮಾತನಾಡುವವರಿದ್ದಾರೆ. ಇಂದು ಏನು ಒಂದು ಬೇಡಿಕೆ ಮಂಡನೆ ಮಾಡಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು. ಈಗ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಬದಲಾವಣೆಯಾಗುತ್ತಿದೆ. ನಾವು ಕರ್ನಾಟಕದ ಲೀಡರ್ ಆಗಿ ಆರ್ಥಿಕ ಪರಿಸ್ಥಿಯನ್ನು ಬದಲಾವಣೆ ಮಾಡುವ ಹಾಗೆಯೇ ನಮ್ಮ ವಿದ್ಯಾ ಕ್ಷೇತ್ರದಲ್ಲೂ ಬದಲಾವಣೆ ಮಾಡುವುದಕ್ಕೆ ನಮಗೆ ಪೊಲಿಟಿಕಲ್ ವಿಲ್ ಇದೆ. intellectual ಕ್ಯಾಪಾಸಿಟಿ ಇದೆ.

(ಶ್ರೀ ಜಿ.ಎಸ್. ಶಿವನಂಜಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಇದು ಕರ್ನಾಟಕದಿಂದ ಆಗಿದೆಯೆಂದು ತೋರಿಸಿಕೊಡುವಂಥ ಕೆಲಸವನ್ನು ವಿದ್ಯಾ ಮಂತ್ರಿಗಳಾದ ಶ್ರೀಮಾನ್ ಮೊಯಿಲಿಯವರು ಮಾಡಬೇಕು. ತಾವು ಬಹಳ ಆಸಕ್ತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮಾಡುವುದಕ್ಕೆ ಮುಂದೆ ಬರಬೇಕಾಗಿದೆ. ಇದರಲ್ಲಿ ಕೆಲವು ಕ್ರಿಟಿಸಿಜಮ್ ಬರಬಹುದು. ಹಾಗೆ ಬರುವುದು ಸ್ವಾಭಾವಿಕ. ಏನೇ ಬೆಳವಣಿಗೆಯಾದರೂ ಬೇಕಾದಷ್ಟು ಕ್ರಿಟಿಸಿಜಮ್ ಬರುತ್ತದೆ. ಅವೆಲ್ಲವನ್ನೂ ದಿಟ್ಟತನದಿಂದ ಎದುರಿಸಿ. ದೇಶದ ಹಿತ ಮತ್ತು ಕರ್ನಾಟಕದ ಹಿತ ಕಾಪಾಡುವುದಕ್ಕೆ ತಾವು ಮುಂದೆ ಬರಬೇಕೆಂದು ಹೇಳುತ್ತಾ. ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :- ಮಾನ್ಯ ಅಧ್ಯಕ್ಷರೇ. 1992-93ನೇ ಸಾಲಿಗೆ ಕಾನೂನು ಮಂತ್ರಿಗಳು ಮತ್ತು ಸಂಸದೀಯ ಹಾಗೂ ಶಿಕ್ಷಣ ಸಚಿವರು ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂಥ ಕೆಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತಾವ ಮಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ಮೊದಲು ವಂದಿಸುತ್ತ ನನಗೆ ಸಹಜವಾಗಿ ಆಸಕ್ತಿಯಿರತಕ್ಕ ಈ ಶಿಕ್ಷಣ ಇಲಾಖೆಯ ಬಗ್ಗೆ ಹಲವಾರು ವಿಚಾರಗಳನ್ನು ತಮ್ಮ ಮೂಲಕ ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಉಪಾಧ್ಯಾಯರೆಂದಕ್ಷಣ ನಮಗೆಲ್ಲ ಬಹಳ ಅನುಕಂಪ ಅಂದರೆ ಗುರುಗಳ ಸ್ಥಾನಕ್ಕೆ ನಮ್ಮಲ್ಲಿ ಬಹಳ ಪುರಾತನ ಕಾಲದಿಂದ ಬಹಳ ಗೌರವವನ್ನು ಕೊಟ್ಟಿರುವುದರಿಂದ, ಉಪಾಧ್ಯಾಯರ ಬಗ್ಗೆ ಇಡೀ ಸಮಾಜವು ಬಹಳಷ್ಟು ಅನುಕಂಪವನ್ನು ಹೊಂದಿದೆ. ಆದರೆ ಇದರ ದುರುಪಯೋಗ ಇಂದು ಸಾಕಷ್ಟು ಆಗುತ್ತಿದೆ. ಗ್ರಾಮಾಂತರ ಭಾಗಗಳಲ್ಲಿ ಕೆಲವರು ಶಿಕ್ಷಕರು ತಮ್ಮ ವೃತ್ತಿಯ ಬಗ್ಗೆ ಆಸಕ್ತಿಯನ್ನಿಟ್ಟುಕೊಳ್ಳದೆ ಇಲ್ಲಸಲ್ಲದ ರಾಜಕಾರಣದಲ್ಲಿ ಅವರುಗಳು ತೊಡಗಿದ್ದಾರೆ. ಇದಕ್ಕೆ ಏನಾದರು ತಾತ್ಕಾಲಿಕವಾದ ಪರಿಹಾರವೊಂದನ್ನು ಸೂಚನೆ ಮಾಡುವುದಾದರೆ ಒಂದೆ ಸ್ಥಳದಲ್ಲಿ ಕನಿಷ್ಠ 10 ವರ್ಷಗಳವರೆಗೆ ಇರತಕ್ಕ ಉಪಾಧ್ಯಾಯರನ್ನು ಬೇರೆ ತಾಲ್ಲೂಕಿಗೆ ಅಥವಾ ಜಿಲ್ಲೆಯ ಬೇರೆ ಕಡೆಗೆ ನಿರ್ದಾಕ್ಷಿಣ್ಯವಾಗಿ ವರ್ಗ ಮಾಡುವುದರಿಂದ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬಹುದು ಎನ್ನತಕ್ಕ ಸಲಹೆಯನ್ನು ತಮ್ಮ ಮೂಲಕ ಸನ್ಮಾನ್ಯ ಶಿಕ್ಷಣ ಸಚಿವ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಶಿಕ್ಷಣ ಸಚಿವ ಬಗ್ಗೆ ಒಂದೆರಡು ವಾಸ್ತವ ಅಂಶಗಳನ್ನು ಹೇಳುವುದಾದರೆ ಬಹುಶಃ

ಉತ್ಪ್ರೇಕ್ಷೆಯ ಮಾತಾಗುವುದಿಲ್ಲ. ಅವರು ಈ ಇಲಾಖೆಯ ಜವಾಬ್ದಾರಿಯನ್ನೊತ್ತು ಕೊಂಡಮೇಲೆ ಬಹಳ ಜಾಗರೂಕತೆಯಿಂದ. ಚುರುಕಾಗಿ ಬಹುಶಃ ಪಾದರಸದಂತೆ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅವರು ಬಹಳ ಸೂಕ್ಷ್ಮಮತಿಗಳು ಈ ಸಂಕೀರ್ಣತೆಯುಳ್ಳ ಇಲಾಖೆಯ ನಾನಾ ಸಮಸ್ಯೆಗಳನ್ನು, ನಾನಾ ಲೋಪದೋಷಗಳನ್ನು ಗುರುತಿಸಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಬಹಳ ಚುರುಕಾಗಿ ಕೆಲಸ ಮಾಡತಕ್ಕವರು. ಈ ನಿರ್ವಹಣೆಯ ಜಾರಿಯಲ್ಲಿ ಒಂದು ಒಳ್ಳೆಯ ಮರಗನ್ನು ಕೊಡತಕ್ಕಂಥ ಕೆಲಸವನ್ನು ಅವರು ಮಾಡಿರತಕ್ಕದೆಂದರೆ ಶಿಕ್ಷಕರ ನೇಮಕಾತಿಯಲ್ಲಿ ಭ್ರಷ್ಟಾಚಾರವನ್ನು ತಪ್ಪಿಸಿದಂಥದ್ದು. ಇದು ಒಂದು ಅತ್ಯುತ್ತಮವಾದ ಕಾರ್ಯವಾಗಿದೆ.

ಶಿಕ್ಷಣವನ್ನು ನೇಮಕ ಮಾಡುವಲ್ಲಿ ಒಂದು ನೇಮಕಾತಿ ಸಮಿತಿಯನ್ನು ಮಾಡಿ ಎಂದು ಹೇಳಿದವರಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ. ಆಗ ಅವರು ನಮ್ಮನ್ನೆಲ್ಲ ಕರೆದು ಕನ್ವಿನ್ಸ್ ಮಾಡಿ ನಾವು ಒಂದು ಆಧಾರವನ್ನು ಇಟ್ಟುಕೊಂಡು ಅದರ ನೇಮಕಾತಿಯನ್ನು ಮಾಡೋಣವೆಂದು, ನೇಮಕಾತಿಯ ಸಮಿತಿಯನ್ನು ಮಾಡುವುದರಿಂದ ಸುಮ್ಮನೆ ಇಲ್ಲದ ಸಲ್ಲದ ಅಪಾದನೆಗಳು ಬರಲು ಅವಕಾಶವಾಗುತ್ತದೆ. ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ, ನಮ್ಮ ಪಕ್ಷಕ್ಕೆ ಇದರಿಂದ ಕೆಟ್ಟ ಹೆಸರು ಬರುತ್ತದೆ. ಆದುದರಿಂದ ನೇಮಕಾತಿ ಸಮಿತಿಯನ್ನು ಮಾಡುವುದು ಬೇಡವೆಂದು ಹೇಳಿ, ಇದರಲ್ಲಿ ಹಣ ಮಾಡದ ರೀತಿಯಲ್ಲಿ ಆಯ್ಕೆಯನ್ನು ಸಮರ್ಪಕವಾಗಿ ಅವರು ನಿರ್ವಹಿಸಿದರು. ಈ ರೀತಿಯಾಗಿ ಇದುವರೆಗೂ ನೇಮಕಾತಿ ಹೊಂದಿದಂಥ ಶಿಕ್ಷಕರು ಮತ್ತು ಅವರ ಕುಟುಂಬದವು ಎಷ್ಟರ ಮಟ್ಟಿನ ಸಮಾಧಾನದ ನಿಟ್ಟುಸಿರನ್ನು ಬಿಡುತ್ತಿರಬೇಕು ನಮ್ಮ ಆಯ್ಕೆಯಲ್ಲಿ ಹಣದ ಕೆಲಸ ಆಗಿಲ್ಲ. ನಮಗಿದ್ದಂಥ ಅರ್ಹತೆಯಮೇಲೆ ನಮಗೆ ಕೆಲಸ ಸಿಕ್ಕಿತು ಎನ್ನುವ ಒಂದು ಸಮಾಧಾನವನ್ನು ಪಟ್ಟುಕೊಂಡು ಈ ರಂಗದಲ್ಲಿ ಅವು ಬಹುಶಃ ಉತ್ತಮವಾದ ಶಿಕ್ಷಕರಾಗಿ ಕೆಲಸ ಮಾಡುವುದಕ್ಕೆ ಅವಕಾವನ್ನು ಕಲ್ಪಿಸಿಕೊಟ್ಟರು ಸನ್ಮಾನ್ಯ ಶಿಕ್ಷಣ ಸಚಿವರಿಗೆ ಈ ಮೂಲಕ ಖಂಡಿತವಾಗಿ ನಾನು ತಮ್ಮ ಮೂಲಕ ಅಭಿನಂದಿಸುತ್ತೇನೆ.

ಇನ್ನು ಈ ಅಕ್ಷಯ ಯೋಜನೆಯ ಬಗ್ಗೆ ಸನ್ಮಾನ್ಯ ಸದಸ್ಯರಾದಂತಹ ಯಾಹ್ಯಾರವರು ಮಾತನಾಡಿದರು. ಅಕ್ಷಯ ಯೋಜನೆಯ ಈ ಕಾನ್‌ಸೆಪ್ಟ್‌ನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ನನ್ನ ತಾಲ್ಲೂಕು ಕೇಂದ್ರ ಸ್ಥಾನದಲ್ಲಿರತಕ್ಕಂತಹ ಪ್ರಾಥಮಿಕ ಶಾಲೆಗಳಿಗೆ ನಾನು ಇತ್ತೀಚೆಗೆ ಬೇಟಿ ಕೊಟ್ಟಾಗ ಒಂದೇ ಕೊಠಡಿಯಲ್ಲಿ 125 ಹುಡುಗರು ಕುಳಿತಿದ್ದರು. ನಾವು 50 ರಿಂದ 60 ಮಕ್ಕಳು ಕುಳಿತುಕೊಳ್ಳಬಹುದಾದ ಪ್ರಮಾಣಕ್ಕೆ ಕೊಠಡಿ ನಿರ್ಮಾಣ ಮಾಡುತ್ತೇನೆ. ಆದರೆ ಅಲ್ಲಿ ಕುಳಿತಂತಹ ಮಕ್ಕಳು 125. ಒಟ್ಟು ನಾಲ್ಕು ತರಗತಿಯ ಮಕ್ಕಳು ಒಂದೇ ಕೊಠಡಿಯಲ್ಲಿರುವುದರಿಂದ ಮಕ್ಕಳ ಗಲಾಟೆಯಿಂದ ಪಾಠ ಮಾಡುವುದಕ್ಕೆ ಆಗುವುದಿಲ್ಲ ಆ ಮಕ್ಕಳಿಗೆ ಕೂಡುವುದಕ್ಕೆ ಬೆಂಚ್ ಇಲ್ಲ. ಆ ತರಗತಿಯನ್ನು ಮೇಲ್ವಿಚಾರಣೆಯನ್ನು ಮಾಡುವುದಿಲ್ಲ. ಆ ಶಾಲೆಗಳ ಮೇಲಿರುವ ಚಾವಣಿ ಬೀಳುವ ಹಾಗಿದೆ. ಕಿಟಕಿಬಾಗಿಲುಗಳು ಮುರಿದು ಬೀಳುವ ಪರಿಸ್ಥಿತಿಯಲ್ಲಿದೆ. ಈ ಮಕ್ಕಳಿಗೆ ಸರಿಯಾದಂತಹ ವ್ಯವಸ್ಥೆ ಇಲ್ಲ. ಒಟ್ಟು ಏಳು ತರಗತಿಗಳಿದ್ದರೆ ಅಲ್ಲಿ ಮೂರು ಜನ ಇಲ್ಲವೇ ನಾಲ್ಕು ಜನ ಉಪಾಧ್ಯಾಯರು ಇರುತ್ತಾರೆ. ಒಂದೊಂದು ಕಡೆ ಕೇವಲ ಇಬ್ಬರು ಉಪಾಧ್ಯಾಯರು ಸಹ ಇರುತ್ತಾರೆ, ನಮ್ಮ ಊರಿನಲ್ಲಿ 220 ಜನ ಮಕ್ಕಳಿದ್ದಾರೆ. ಅವರಿಗೆ ಎರಡು ರೂಂಗಳು ಸಾಕಾಗುವುದಿಲ್ಲ, ಅದಕ್ಕೋಸ್ಕರ ಇನ್ನೊಂದು ರೂಂ ಕೊಡಬೇಕು. ಅನೇಕ ಸರ್ಕಾರಿ ಶಾಲೆಗಳಲ್ಲಿ ಇರಬೇಕಾದ ಕನಿಷ್ಟ ಬೋಧನ ಸಾಧನಗಳು ಇಲ್ಲದೇ ಇರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಅಕ್ಷಯ ಯೋಜನೆಯಲ್ಲಿ ನಾಲ್ಕನೇ ತರಗತಿಯವಿಗೆ 6400 ರೂ.ಗಳ ವಾರ್ಷಿಕ ವರಮಾನ ಇರತಕ್ಕಂತಹ ಕೆಳಮಟ್ಟದ ಮಕ್ಕಳಿಗೆ ಪ್ರತಿದಿನ ಒಂದು

ರೂಪಾಯಿ ಕೊಡತಕ್ಕಂತಹ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದಕ್ಕಾಗಿ 80 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಇದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಈ ಅಕ್ಷಯ ಯೋಜನೆಯಲ್ಲಿ ಈ ತರಹ ಸೌಲಭ್ಯವಿರುವುದರಿಂದ ಗ್ರಾಮಾಂತರದಲ್ಲಿ ಹೆಚ್ಚು ಮಕ್ಕಳನ್ನು ಪಡೆಯುತ್ತಾರೆ. ಅವರಿಗೆ ಹೆಚ್ಚು ಮಕ್ಕಳ ಅವಶ್ಯಕತೆ ಇರುತ್ತದೆ. ಏಕೆಂದರೆ ಪ್ರತಿದಿನ ಒಂದು ರೂಪಾಯಿ ಬರುತ್ತದೆ. ಇಂತಹ ಒಂದು ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಈಗ ನಮ್ಮಲ್ಲಿ ರತಕ್ಕಂತಹ ಪರಿಸ್ಥಿತಿಯಲ್ಲಿ "ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು" ಎಂದ ಹಾಗೆ ಆಗಿದೆ. ಇದಕ್ಕೆ ಬದಲು ಈ ಶಾಲೆಗಳಿಗೆ ಉಪಯುಕ್ತವಾದ ರೀತಿಯಲ್ಲಿ ಎಲ್ಲಿ ಕಟ್ಟಡಗಳ ಅವಶ್ಯಕತೆ ಇರುತ್ತದೋ ಅಲ್ಲಿ ಕೊಠಡಿಗಳನ್ನು ಒದಗಿಸಬೇಕು. ಎಲ್ಲಿ ಉಪಾಧ್ಯಾಯರುಗಳ ಕೊರತೆ ಇರುತ್ತದೋ ಅಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕು. ಬೋಧನ ಸಾಮಗ್ರಿಗಳು ಇಲ್ಲದ ಕಡೆ ಅಂತಹ ಸಾಮಗ್ರಿಗಳನ್ನು ಒದಗಿಸಬೇಕು. ಮಾನ್ಯ ಸಚಿವರಿಗೆ ಇದು ಗೊತ್ತಿದೆಯೋ ಏನೋ ಗೊತ್ತಿಲ್ಲ ; ಎಷ್ಟೋ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅಗತ್ಯವಾದ ಸಾಮಗ್ರಿಗಳು ಇಲ್ಲ. ವಿದ್ಯಾರ್ಥಿಗಳಿಗೆ ಕೂಡುವುದಕ್ಕೆ ಡೆಸ್ಕ್‌ಗಳಿಲ್ಲ. ಇಂತಹ ಪರಿಸ್ಥಿತಿ ಇರುವಾಗ ದಯವಿಟ್ಟು ಈ "ಅಕ್ಷಯ" ಯೋಜನೆಯನ್ನು ಈಗ ಮುಂದುವರಿಸಬೇಕೆ ಬೇಡವೇ ಎಂಬುದನ್ನು ಬಹಳ ತೀವ್ರವಾಗಿ ತಾವು ಗಮನಿಸಬೇಕೆಂದು ಈ ಮೂಲಕ ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಗೌರವ ಶಿಕ್ಷಕರ ಸಮಸ್ಯೆ ಬಗ್ಗೆ ಹೇಳಬೇಕೆಂದರೆ, ಕಳೆದ ನಾಲ್ಕು ವರ್ಷದಿಂದ ಕೆಲಸಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಗೌರವ ಶಿಕ್ಷಕರ ಅವಶ್ಯಕತೆ ಇದ್ದುದರಿಂದ ಅವರನ್ನು ಜಿಲ್ಲಾ ಪರಿಷತ್ತಿನ ವತಿಯಿಂದ ನೇಮಕ ಮಾಡಿಕೊಂಡರು. ಅವರಿಗೆ ಈಗ ನೀಡುತ್ತಿರುವ 300 ರೂಪಾಯಿ ಗೌರವ ಧನ ನಿಜವಾಗಲೂ ಗೌರವ ಶಿಕ್ಷಕರಿಗೆ ಬಸ್‌ನಲ್ಲಿ ಹೋಗಿಬರುವ ಛಾರ್ಜ್‌ಗೆ ಸಾಲುವುದಿಲ್ಲ. ಸನ್ಮಾನ್ಯ ಶಿಕ್ಷಣ ಸಚಿವರು ಶಿಕ್ಷಣ ಇಲಾಖೆಯಲ್ಲಿ ಇದ್ದಂತಹ ಗುತ್ತಿಗೆ ಶಿಕ್ಷಕರ ಸಮಸ್ಯೆಯನ್ನು ಪರಿಹಾರ ಮಾಡಿದ್ದಾರೆ. ತಾತ್ಕಾಲಿಕವಾಗಿ ನೇಮಕಗೊಂಡಿರುವ ಶಿಕ್ಷಕರ ಸಮಸ್ಯೆಯನ್ನು ಪರಿಹಾರ ಮಾಡಿದ್ದಾರೆ. ಈಗ ಈ ಗೌರವ ಶಿಕ್ಷಕರ ಸಮಸ್ಯೆಯನ್ನು ಸಹ ಬಗೆಹರಿಸಬೇಕದು ಕೇಳಿಕೊಳ್ಳುತ್ತೇನೆ. ಈಗೇನೋ ನಮ್ಮ ಸರ್ಕಾರ ಹೊಸ ನೇಮಕಾತಿಗಳನ್ನು ಮಾಡಿಕೊಳ್ಳಬೇಕಾಗಿದೆ. ಈ ನೇಮಕಾತಿಗಳಲ್ಲಿ ಇವರಿಗೆ ಹೆಚ್ಚಿನ ರೀತಿಯಲ್ಲಿ ಪ್ರಾತಿನಿತ್ಯ ಕೊಟ್ಟು ನೇಮಕಾತಿ ಮಾಡಿಕೊಳ್ಳಬೇಕು ಮತ್ತು ಉಳಿದಂತಹ ಗೌರವ ಶಿಕ್ಷಕರಿಗೆ ಕನಿಷ್ಟ ವೇತನವನ್ನು ಕೊಡಬೇಕು. ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟೋ ಜನ ಗೌರವ ಶಿಕ್ಷಕರು ವಿವಾಹವಾಗಿರುವುದಿಲ್ಲ. ಏಕೆಂದರೆ ಮುಂದೆ ನಮಗೆ ಒಳ್ಳೆಯ ಸಂಬಳ ಬಂದು ಒಳ್ಳೆಯ ಗಂಡನ್ನು ಮದುವೆಯಾಗಬಹುದೆಂಬ ಕಾರಣದಿಂದ ಇನ್ನೂ ಕೆಲವು ಹೆಣ್ಣು ಮಕ್ಕಳು ಮದುವೆಯಾಗಿದ್ದಾರೆ. ಅವರಿಗೆ ಈಗ ಮಕ್ಕಳು ಇರುವುದರಿಂದ ಸಂಸಾರವನ್ನು ಈ 300 ರೂಪಾಯಿ ಗೌರವಧನ ತೆಗೆದುಕೊಂಡು ಸಾಗಿಸುವುದಕ್ಕೆ ಆಗುವುದಿಲ್ಲ. ಅವರ ಜೀವನ ಬಹಳ ಕಷ್ಟವಾಗಿದೆ ; ತಿಂಗಳ ಕೊನೆಯಲ್ಲಿ ಅವರು ಮನೆಗೆ ಏನು ಕೊಡಬೇಕು? ಇದರ ಬಗ್ಗೆ ತಾವು ತೀವ್ರವಾಗಿ ಆಲೋಚನ ಮಾಡಬೇಕು. ಇದರ ಬಗ್ಗೆ ಖಂಡಿತವಾಗಿ ನಿರ್ದಿಷ್ಟವಾದ ಪರಿಹಾರವನ್ನು ಈ ಸದನದಲ್ಲಿ ತಾವು ಪ್ರಕಟ ಮಾಡುತ್ತೀರೆಂಬ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ.

ಇನ್ನು ಪರೀಕ್ಷಾ ಪದ್ಧತಿಯ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ನಡೆಸುತ್ತಿರುವಂಥ ಮಾಸ್ ಕಾಪಿಂಗ್ ಪದ್ಧತಿಯನ್ನು ಯಾವರೀತಿ ಹೋಗಲಾಡಿಬೇಕೆಂಬುದು ಒಂದು ಯಕ್ಷ ಪ್ರಶ್ನೆಯಾಗಿದೆ. ಈ ಸಮಾಜದಲ್ಲಿ ಉಳಿದಿದೆ. ಅನೇಕ ವಿದ್ಯಾರ್ಥಿಗಳಲ್ಲಿ ಕಾಪಿ ಮಾಡಿ ಪಾಸ್ ಆಗುವುದೇ ಒಂದು ಕಸುಬಾಗಿದೆ. ಇನ್ನು ಕೆಲವರು ಬೇರೆಯವ ಪರವಾಗಿ ಪರೀಕ್ಷೆಗೆ ಹೋಗಿ ಕುಳಿತು ಉತ್ತರ ಬರೆದು ಬಂದಿರುವಂಥ ಅನೇಕ ಪ್ರಕರಣವನ್ನು ಈಗಾಗಲೇ ಇಲಾಖೆಯವರು ಪತ್ತೆಹಚ್ಚಿದ್ದಾರೆ. ಇದರ ಬಗ್ಗೆ ತಾವೂ ಮತ್ತು ತಮ್ಮನ್ನು

ಬೆಂಬಲಿಸಿರತಕ್ಕ ಇಲಾಖೆಯ ಉನ್ನತಾಧಿಕಾರಿಗಳೂ ಕುಳಿತುಈ ಪರೀಕ್ಷಾ ಪದ್ಧತಿಯನ್ನು ಯಾವರೀತಿ ಸಾಧಾರಣೆ ಮಾಡಬೇಕು., ಏನು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಯೋಜನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಶಿಕ್ಷಣ ಇಲಾಖೆಯಲ್ಲಿರತಕ್ಕ ಡಿ.ಸಿ.ಎ.ಆರ್.ಟಿ ಬಹಳ ಉಪಯುಕ್ತ ಶಾಖೆಯಾಗಿದೆ, ಇದರ ಕಾರ್ಯ ಹೊರಗಡೆ ಗೊತ್ತಾಗುತ್ತಿಲ್ಲ. ಇದು ಏನು ಉಪಯುಕ್ತವಾಗ ಕೆಲಸವನ್ನು ಮಾಡುತ್ತಿದೆ ಎಂಬುದು ಸಹ ನಮ್ಮ ಗಮನಕ್ಕೆ ಬಂದಿಲ್ಲ. ಇದನ್ನು ಇನ್ನೂ ಹೆಚ್ಚು ಚುರುಕುಗೊಳಿಸಿ ಇದರಿಂದ ಉಪಾಧ್ಯಾಯರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಸುಧಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳ ಹೇಳುವುದಾದರೆ, ನಾನು ಹುಟ್ಟಿದ್ದು ಕನ್ನಡದ ಮನೆತನದಲ್ಲಿ, ನಾನು ಓದಿದ್ದೂ ಕನ್ನಡದಲ್ಲಿ. ಇವತ್ತು ಏನಾದರೊಂದು ವಿಚಾರವನ್ನು ನಾನು ತಿಳಿದುಕೊಳ್ಳಬೇಕಾದರೆ, ಅಥವಾ ಮಾತನಾಡಬೇಕಾದರೆ ಅದು ಕನ್ನಡದಲ್ಲೇ. ಆದರೆ ಇವತ್ತು ದೇಶದಲ್ಲಿರತಕ್ಕ ಈ ಎಲೇಕ್ಟ್ರಾನಿಕ್ಸ್ ಯುಗದಲ್ಲಿ, ಈ ಕಂಪ್ಯೂಟರ್ ಯುಗದಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಗಳು ಬೇಡ ಎನ್ನತಕ್ಕ ಕೂಗು ತೀರಾ ಅವಾಸ್ತವಿಕ ವಿಚಾರವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಯಾಹ್ಯಾವರು ಕನ್ನಡ ಕಲಿಕೆಯ ಬಗ್ಗೆ ಕಡ್ಡಾಯ ನಿಯಮವನ್ನು ಮಾಡಬೇಕು. ಅದು ಉರ್ದು ಶಾಲೆಯಾಗಿರಲಿ, ಇಂಗ್ಲೀಷ್ ಶಾಲೆಯಾಗಿರಲಿ, ತೆಲುಗು ಶಾಲೆಯಾಗಿರಲಿ, ತಮಿಳು ಶಾಲೆಯಾಗಿರಲಿ, ಮಲಯಾಳಂ ಶಾಲೆಯಾಗಿರಲಿ ಈ ನಾಡಿನಲ್ಲಿ ನಡೆಯುತ್ತಿರುವ ಯಾವುದೇ ಶಾಲೆ ಇಲಿ, ಅದರಲ್ಲಿ ಕನ್ನಡ ಭಾಷೆ ಕಲಿಯುವುದನ್ನು ಕಡ್ಡಾಯ ಮಾಡಿ ಬೇರೆ ಬೇರೆ ಭಾಷೆಗಳನ್ನು ಕಲಿಯುವ ವಿಚಾರದಲ್ಲಿ ಇಂಗ್ಲೀಷ್ ಮೀಡಿಯಂನ್ನು ಅನುಸರಿಸಿಕೊಂಡು ಹೋಗುತ್ತೇವೆಂದುಹೇಳಿದಾಗ ಇದಕ್ಕೆ ಒಂದು ವಾಸ್ತವಿಕ ದೃಷ್ಟಿಯನ್ನು ಪಡೆದು ವಸ್ತುನಿಷ್ಠಪರವಾಗಿ ಯೋಜನೆ ಮಾಡಿ ಈ ಅಧಿವೇಶನ ಮುಗಿಯುವುದರೊಳಗೆ ಈ ಬಗ್ಗೆ ಒಂದು ನಿರ್ದಿಷ್ಟ ಘೋಷಣೆಯನ್ನು ಮಾಡುತ್ತೀರೆಂದು ನಾನು ವಿಶ್ವಾಸಪೂರ್ವಕವಾಗಿ ನಿರೀಕ್ಷಣೆ ಮಾಡುತ್ತಿದ್ದೇನೆ. ನಾವು ವಾಸ್ತವಿಕ ನಿಲುವನ್ನು ತಳೆಯಬೇಕಾಗುತ್ತದೆ.ಈಗಾಗಲೇ ಸಾವಿರಾರು ಇಂಗ್ಲೀಷ್ ಮಾಧ್ಯಮ ಶಾಲೆಗಳು ನಡೆಯುತ್ತಿರುವಾಗ ಅವಶ್ಯಕತೆ ಇರತಕ್ಕ ಸ್ಥಳಗಳಲ್ಲಿ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿ ಕೊಡುವುದರಲ್ಲಿ ನಾವು ಬಿಗುಟು ನೀತಿಯನ್ನು ಅನುಸರಿಸುವುದು ಬೇಡ. ಯಾವುದೇ ಪೂರ್ವಗ್ರಹಪೀಡಿತರಾಗಬೇಕಾಗಿಲ್ಲ. ಇಂಗ್ಲೀಷ್ ಮಾಧ್ಯಮದ ಶಾಲೆಗಳು ಹೆಚ್ಚಿಗೆ ಆದರೆ ಕನ್ನಡ ಭಾಷೆಗೆ ಪೆಟ್ಟು ಬೀಳುತ್ತದೆ. ಕನ್ನಡದ ಅಧ್ಯಯನಕ್ಕೆ ಪೆಟ್ಟು ಬೀಳುತ್ತದೆಂಬ ಯೋಜನೆಯನ್ನು ಬಿಟ್ಟು ಒಂದು ವಾಸ್ತವ ದೃಷ್ಟಿಯನ್ನಿಟ್ಟು ಇಂಗ್ಲೀಷ್ ಮಾಧ್ಯಮದ ಶಾಲೆಗಳ ಬಗ್ಗೆ ಸರ್ಕಾರ ಧೋರಣೆ ಏನೆಂಬುದನ್ನು ಪ್ರಕಟಿಸುತ್ತೀರೆಂಬ ನಿರೀಕ್ಷೆಯಲ್ಲಿ ನಾನಿದ್ದೇನೆ.

ಇನ್ನು ಅನಧಿಕೃತ ಶಾಲೆಗಳ ಬಗ್ಗೆ ಒಂದೆರಡು ಶಾಲೆಗಳ ಬಗ್ಗೆ ಮಾತುಗಳನ್ನು ಹೇಳುವುದಾದರೆ,ಎಕ್ಸೈಸ್ ಇಲಾಖೆಯ ಒಂದು ಉದಾಹರಣೆಯನ್ನು ತೆಗೆದುಕೊಳ್ಳುತ್ತೇನೆ. ಯಾವುದೇ ಒಂದು ವೈನ್ ಸ್ಟೋರ್ಸ್ ಅಥವಾ ಬಾರ್‌ನ್ನು ತೆರೆಯಬೇಕಾದರೆ ಎಕ್ಸೈಸ್ ಇಲಾಖೇಯಿಂದ ಪೂರ್ವ ಪರವಾನಗಿ ಬೇಕು. ಪೂರ್ವ ಪರವಾನಗಿ ಇಲ್ಲದೆ ಯಾರಾದರೂ ವೈನ್ ಷಾಪ್. ಅಥವಾ ಬಾರ್‌ಗಳನ್ನು ತೆಗೆದರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ಅಲ್ಲಿರತಕ್ಕ ಮಾಲನ್ನು ವಶಪಡಿಸಿಕೊಂಡು ಆ ಅಂಗಡಿಯನ್ನು ಮುಚ್ಚಿಸಿ ಹಾಕುತ್ತಾರೆ.

(ಉಪಾಧ್ಯಕ್ಷಿಣಿಯವರು ಪೀಠವನ್ನು ಅಲಂಕರಿಸಿದರು)

ತಾವು ಶಿಕ್ಷಣ ಇಲಾಖೆಯಲ್ಲಿ ಸಹ ಏತಕ್ಕೆ ಈ ಕೆಲಸವನ್ನು ಮಾಡಬಾರದು. ಯಾರು ಎಷ್ಟು ಶಾಲೆಗಳನ್ನು ಬೇಕಾದರೂ ತೆರೆಯುವುದಕ್ಕೆ ಅವರಿಗೆ ಸ್ವೇಚ್ಛಾನುಸಾರ ಬಿಟ್ಟುಬಿಟ್ಟರೆ ನಾಳೆ ಅದರ ನಿಯಂತ್ರಣ, ಅವುಗಳ ಗುಣಮಟ್ಟವನ್ನು ಕಾಪಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಯಾರು ಶಾಲೆಯನ್ನು ತೆಗೆಯಬೇಕಾದರೂ ಅದು ಕನ್ನಡ ಮಾಧ್ಯಮ ಶಾಲೆಯಾಗಲಿ. ಅಥವಾ ಇಂಗ್ಲಿಷ್ ಮಾಧ್ಯಮ ಶಾಲೆಯಾಗಲಿ, ಸರ್ಕಾರವು ಪೂರ್ವಾನುಮತಿ ಕಡ್ಡಾಯವೆನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಜಾರಿಗೆ ತರಬೇಕು. ಈ ಮೂಲಕ ಅನಧಿಕೃತವಾಗಿ ಪ್ರಾರಂಭವಾಗುತ್ತಿರತಕ್ಕಂಥ ಶಾಲಗಳನ್ನು ತಾವು ನಿಯಂತ್ರಣ ಮಾಡಬಹುದೆಂದು ಸನ್ಮಾನ್ಯ ಸಭಾಧ್ಯಕ್ಷರಲ್ಲಿ ಮೂಲಕ ಪ್ರಾರ್ಥನೆ ಮಕಾಡಿಕೊಳ್ಳುತ್ತೇನೆ. ತಮ್ಮ ಇತರೆ ಕಾರ್ಯಕ್ರಮಗಳ ಬಗ್ಗೆ ನಾನು ಬಹಳಷ್ಟು ಮೆಚ್ಚುಗೆ ವ್ಯಕ್ತಪಡಿಸುತ್ತಾ ತಮ್ಮ ಇಲಾಖೆಯಲ್ಲಿ ಈ ಒಂದು ಕಿರುಹೊತ್ತಿಗೆ ತಂದಿರುವುದು ಏನಿದೆ. ಶಿಕ್ಷಣ ಹೊಸ ತಿರುವು 1991-92. ಇದರಲ್ಲಿ ಅನೇಕ ಸುಧಾರಣೆಗಳನ್ನು ತರಲಿಕ್ಕೆ ಹೊರಟಿದ್ದೀರಿ. ಇದರಲ್ಲಿ ವಿದ್ಯಾವಿಕಾಸ ಯೋಜನೆ ಮಾದರಿ ಶಾಲೆಗಳ ಸ್ಥಾಪನೆ, ಸೇವಾ ತರಬೇತ, ಕಲಿಕಾನ್ಯೂನತೆಗಳ ಪರಿಹಾರ ಮಾಡುವುದು. ಸಂಗೀತ ಶಿಕ್ಷಣ, ಪರೀಕ್ಷಾ ಸುಧಾರಣೆ, ಶಾಲಾ ಶುಲ್ಕ, ಅಲ್ಪ ಸಂಖ್ಯಾತರ ಶಾಲೆಗಳು, ಕ್ರೀಡಾನೀತಿ ಹಾಗೂ ಸುರೇಂದ್ರನಾಥ ಸಮಿತಿಯವರ ವರದಿಯನ್ನು ಜಾರಿಗೊಳಿಸತಕ್ಕಂಥ ಒಂದು ಉಪಯುಕ್ತವಾದ ಕಾರ್ಯಕ್ರಮಗಳನ್ನು ತಾವು ಕೈಗೊಂಡಿದ್ದೀರಿ. ಇದೆಲ್ಲವನ್ನೂ ತಾವು ಜಾರಿಗೆ ತಂದು ಈ ಶಿಕ್ಷಣ ಇಲಾಖೆಯಲ್ಲಿ ಒಂದು ಹೊಸ ಯುಗವನ್ನು ಪ್ರಾರಂಭ ಮಾಡಬೇಕು. ತಾವು ಪ್ರಾರಂಭ ಮಾಡಿದ ಮೇಲೆ ಅದನ್ನು ಅನುಷ್ಠಾನಕ್ಕೆ ತರಲು ಕ್ರಮ ತೆಗೆದುಕೊಳ್ಳುತ್ತೀರೆಂದು ತಿಳಿದು ಈ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರತಕ್ಕಂಥ ಸಹಾಯಕ ಶಿಕ್ಷಣ ಅಧಿಕಾರಿಗಳ ಒಂದು ಬಹುದಿನದ ಬೇಡಿಕೆ ಇದೆ. ಅವರು ಈಗಿರತಕ್ಕಂಥ ಹುದ್ದೆಯಿಂದ ಮುಂದಿನ ಹುದ್ದೆಗೆ ಬಡ್ತಿ ಕೊಡಬೇಕೆಂದು ಅವರ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಅದನ್ನು ಸಹಾನುಭೂತಿಯಿಂದ ಪರಿಹರಿಸಬೇಕು. ಆದರಿಂದ ಆರ್ಥಿಕ ಹೊರೆ ಅವರ ಪ್ರಕಾರ ಬರಲಾರದೆಂದು ಹೇಳುತ್ತಾರೆ. ಕೇವಲ ಒಂದೇ ಒಂದು ಇನ್‌ಕ್ರಿಮೆಂಟ್ ಕೊಟ್ಟರೆ ವಾರ್ಷಿಕವಾಗಿ 5 ಲಕ್ಷರೂಪಾಯಿ ಹೆಚ್ಚು ಖರ್ಚು ಬರುತ್ತದೆನ್ನುವ ಪರಿಶೀಲನೆ ಮಾಡಿ ಅದರ ಬೇಡಿಕೆಯನ್ನು ಶೀಘ್ರವಾಗಿ ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತೇನೆ.

ಇನ್ನು ಕಾಲೇಜ್ ಶಿಕ್ಷಣ, ವಿಶ್ವವಿದ್ಯಾನಿಲಯದ ಶಿಕ್ಷಣ ಮತ್ತು ಇನ್ನಿತರ ವಿಚಾರಗಳ ಬಗ್ಗೆ ಮಾತನಾಡುವುದನ್ನು ಬಹುಶಃ ಮುಂದೆ ಮಾತನಾಡತಕ್ಕಂಥ ಸಹಸದಸ್ಯರಿಗೆ ಬಿಟ್ಟು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸನ್ಮಾನ್ಯ ಅಧ್ಯಕ್ಷಿಣಿಯವರಿಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈ ಹಿಂದ್

SRI DERRICK F.B. FULLINFAW (Nominated):–Madam Deputy Speaker, I am speaking to-day on behalf of the educationally crippled Anglo India Community and also on behalf of the poor and middle class people of our society who are denied education in the existing English Medium Schools in Bangalore because of the shameful, evil and unethical practices of extracting donations for securing admissions practised in some of the English Medium educational institutions in our State. Madam, to-day we believe and we are living in a Socialistic Welfare State in which people are to be provided with equal opportunities in education, employment etc., subject to the restrictions laid down in the Constitution.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸಭಾಧ್ಯಕ್ಷಿಣಿಯವರೇ ಮಾನ್ಯ ರಾಮಲಿಂಗಾ ರೆಡ್ಡಿಯವರು ಮಾತನಾಡುತ್ತಾ ಈ ಇಂಗ್ಲಿಷ್ ಮಾಧ್ಯಮಶಾಲೆಗಳವರು ಬೆಂಗಳೂರಿನಲ್ಲಿ ಬಹಳವಾಗಿ ಕ್ಯಾಪಿಟೆಷನ್ ಫೀಸ್ ವಸೂಲು ಮಾಡಿ ಶೋಷಣೆ ಮಾಡುತ್ತಿದ್ದಾರೆಂದು ಹೇಳಿದರು. ನಿಜವಾಗಿ ಕ್ಯಾಪಿಟೆಷನ್ ಫೀಸ್ ವಸೂಲು ಮಾಡದೆ ಅನೇಕ ಜನ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಉದಾಹರಣೆಗೆ ಸೋಫಿಯಾ ಇಂಗ್ಲೀಷ್ ಮಾಧ್ಯಮಶಾಲೆ, ಇವು ಡೊನೇಷನ್ ವಸೂಲು ಮಾಡುವುದಿಲ್ಲ. ಕ್ಯಾಪಿಟೆಷನ್ ಫೀಸ್ ಮಸೂಲು ಮಾಡುವುದಿಲ್ಲ. ಆದರೆ ಮರುದಿವಸದ ಪತ್ರಿಕೆಗಳಲ್ಲಿ ಇವರು ಕೂಡ ಕ್ಯಾಪಿಟೇಷನ್ ಫೀಸ್ ವಸೂಲು ಮಾಡುತ್ತಾರೆಂದು ಬಂದಿದೆ. ಆದ್ದರಿಂದ ತಾವು ಹೇಳುವಾಗ ಸಾರಸಗಟಾಗಿ ಹೇಳದೆ ಸ್ವಲ್ಪ ವಿಚಾರ ಮಾಡಿ ಅಧ್ಯಯನ ಮಾಡಿ ಹೇಳಿದರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಕ್ಯಾಪಿಟೇಷನ್ ಪೀಸ್ ವಸೂಲು ಮಾಡದೆ ಬಹಳ ಚೆನ್ನಾಗಿ ನಡೆಸುತ್ತಿರತಕ್ಕಂಥ ಸಂಸ್ಥೆಗಳು ಬಹಳ ನೋವಾಗುತ್ತದೆ. ಮೆಜಾರಿಟಿ ಎಂದರೆ ಎಲ್ಲವನ್ನೂ ಹೋಲಿಸಬೇಡಿ. There are number of schools which do not take capitation fees. Of course, they restrict the admissions.

SRI. DERRICK F. B. FULLINFAW : These corrupt educational institutions which are extracting and extorting large and heavy donations ranging from Rs. 10000-30000/- for an admission into LKG or Ist Std, do not provided equal opportunities at all. They provide opportunities only to the rich, who could afford to pay these donations and the poor and middle-class of the society are denied the opportunity to avail of these educational facilities.

I strongly feel that in a socialistic welfare state of Karnataka where almost 70% of the population is below the poverty line, such Anglo-Indian Institutions which open their doors only to the rich should not be allowed to continue in this same arrogant and indifferent manner.

To-day, Education is absolutely essential for the survival of the poor and middle class sections of the society. The rich can exist with or without donation.

I, therefore, demand that this evil practice of donation in certain schools which is causing denial of educational facilities to the poor and middle-class sections of our society in our State should be eliminated once for all. What is even more shocking is that a good percentage of students in these schools hail from other States because they are able to pay the huge donations and denied whereas the poor and middle-class citizens of our State are denied education because they are unable to pay these huge donations.

Sir, the management of these institutions are nothing short of murderers. They have almost destroyed and murdered the children of the poor and middle classes educationally. should we as responsible representatives of the people be silent spectators to these injustices, crimes that are committed on the people of our State? What difference is there between the smugglers, anti-social elements and the Managements of these institutions? I, therefore, appeal to the Hon'ble Members of

this August House that let all of us put down with an iron hand this shameful and unethical practice of donation existing in some of the English Medium schools before it totally destroys the educational system in our State. I agree that somé of the privately managed English Medium Schools like Sophia, etc. do not take donations. I am happy that the Hon. Minister for Education has made some positive statements and has promised positive action in this matter and I can assure him that all the Hon.Members of this August House are one with him in this matter. If this is not stopped, I think, it will not be too long, a movement will start, agitations will start, to stop these evil practice which is causing lot of heart-burn to the poor people.

Sir, I would like to bring to your kind notice that the educational rights of the Anglo-Indian minority community have been fragrantly violated by the Anglo-Indian Schools who almost totally deny education and employment opportunities to the Anglo-Indian community. These institutions exist in the name of the Anglo-Indian community. They have been established with the primary and main aim of providing education to the Anglo-Indian community. They have enjoyed and misused the protection given to the minorities under the Constitution as Anglo-Indian Schools. Yet they deny education to these down-trodden and backward class minority communities. These Anglo-Indian schools have betrayed the community and in the process they have betrayed the trust-deeds and noble objectives of the founding Fathers of these schools, which were established almost a century ago to provide education in English to the downtrodden Anglo-Indian community whose mother-tongue was English, at the time when education in English was not available to the community. These Anglo-Indian Schools owe their existence entirely to the Anglo-Indian community.

The management of these Anglo-Indian Schools, without the awareness and concern of the Anglo-Indian community have usurped the administrative and proprietory rights of the premises of these schools excluded the Anglo-Indians from the management and discarded the philonthropic purpose for which these schools were founded by the founding fathers. Some of these institutions have secured exemption from Corporation taxes on the ground of being philanthropic institutions.

Sir, the minority rights exercised at present by these institutions under the constitution has led to the exploitations of very minorities which was intended to protect minorities, thereby reducing the specific protection of the minorities to an obsolete deception and mockery of the Constitution.

Further sir, the managements of these Anglo-Indian Schools do not have any Anglo-Indian on their Boards nor do they have any Anglo Indian Principal or Vice-Principal. Then Sir, practically there are no Anglo-Indian employees in these schools on the teaching staff, clerical or lower division employees. The qualified Anglo-Indians are denied employment opportunities even though it is their right to

be employed in these particular schools. Besides there are some Anglo-Indian Schools like the Bethany Home School run by non-Anglo-Indian communities. These schools are not set-up or administered by the Anglo-Indian community and as such they do not constitute Anglo-Indian schools under Article 29 and 30 of the Constitution for exploiting the Anglo-Indian community and are therefore, liable for action under Article 29 and 30 of the Constitution for exploiting the Anglo-Indian community. I demand that the state Government either derecognise these schools or ensure that their obligation to the community be fulfilled. This is a very serious matter. It is one of the biggest frauds committed on minorities in free India. Will the State Government nationalise these schools in the interest of the people? Till to-day the Government has played a role of silent spectator in the matter. It is a day-light robbery. Can you believe about 14 Anglo-Indian schools with property worth crores of rupees belonging to the Anglo-Indian community are to-day in the unlawful hands of a Non-Anglo-Indian Managements. The Anglo-Indian Community being a poor community is helpless. They have thus established a clear case of exploitation of the Anglo-Indian Community inviting the intervention of the State Government under Article 46 of the Constitution of the Indian to eradicate this social injustice and exploitation of this helpless community. Sir, Article 46 of the Constitution empowers the State Government to intervene and prevent this type of exploitation. I appeal to the Government to come to the rescue of the helpless Anglo-Indian Community and see that speedy justice and immediate relief is given to the Anglo-Indian Community. If the Government fails to act in this matter, the Anglo-Indian Community will soon be totally destroyed and the Government will have to share the blame for their down fall. I quote Article 46 which reads thus :

> "The State shall promote with special care the educational and economical interest of the weaker section of the people and protect them from social injustice and all forms of exploitation."

It is a clear case for the State Government to interfere. The State Government clearly has a responsibility under article 46 of the constitution and I therefore, call upon the State Govt. in this August House to fulfill its responsibility and exercise its power under Article 46 of the constitution and prevent the exploitation of this weaker section of the society, namely, Anglo-Indian community. In this connection, I appeal to the Government to set-up a higher power committee or panel to deal with this Anglo-Indian schools issue. I think, this committee could comprise of Educationists and Leaders inside the community and outside the community besides the members of this House and a few eminent jurists. I hope the Government will consider this appeal of mine seriously and take appropriate action. I demand a probe be ordered in the funds of these schools to ascertain whether they have been utilised properly.

There is a special committee constituted by the previous Janatha Government to oversee the educational facilities provided to Anglo-Indians in Karnataka. This committee did not meet even once inspite of my repeated requests. I request the Govt. to convene the meeting of this committee as early as possible so that the problems relating to our Anglo-Indian community could be discussed at this forum.

I thank the Hon.Minister for Education for having allowed last year the Anglo-Indian Community to take alternate English or higher English as second language instead of Hindi or Kannada for SSLC. I can assure you Sir that this measure will help the community a great deal and will prevent lot of dropouts. I also thank the Government for restoring a Medical seat for Anglo-Indian Community.

I thank the Chair for having given me the opportunity to speak.

† ಶ್ರೀ ಜಿ.ಎಸ್. ಆಚಾರ್ (ಬೈಂದೂರು) :- ಸನ್ಮಾನ್ಯ ಅಧ್ಯಕ್ಷರೇ ಶಿಕ್ಷಣ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸಿ ಮಾತನಾಡುವ ಒಂದು ಅವಕಾಶವನ್ನು ನನಗೆ ದೊರಕಿಸಿಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಬದುಕಿನಲ್ಲಿ ನಾನು ಶಿಕ್ಷಕ ಆಗಬೇಕೆಂದು ಹೇಳಿ ಶಿಕ್ಷಣದ ತರಬೇತಿಯನ್ನು ಪಡೆದೆ. ಕರ್ಮ ಧರ್ಮ ಸಂಯೋಗದಿಂದ ಶಿಕ್ಷಣ ರಂಗದಲ್ಲಿ ಕೆಲಸ ಮಾಡುವುದಕ್ಕೆ ಆಗದೇ ವಿಧಾನಸಭೆಯಲ್ಲಿ ಶಿಕ್ಷಣದ ಕುರಿತು ಮಾತನಾಡುವುದಕ್ಕೆ ಹೋದರೆ ಅನುಭವ ಇಲ್ಲದವ. ಇವನೇನು ಹೇಳುತ್ತಾನೆಂದು ಯಾರಾದರೂ ತಿಳಿದುಕೊಳ್ಳುತ್ತಾರೋ ಎಂದು ಒಂದು ಅಂಜಿಕೆ ಕೂಡಾ ಆಗುತ್ತದೆ. ಶಿಕ್ಷಣ. ಇದನ್ನು ಮಾನವ ಸಂಪನ್ಮೂಲ ಎಂದು ಈಗ ಕರೆಯುತ್ತೇನೆ. ಸ್ವಾತಂತ್ರೋತ್ತರ ಭಾರತದಲ್ಲಿ ಶಿಕ್ಷಣ ರಂಗ ಅನೇಕ ಸವಾಲುಗಳನ್ನು ಎದುರಿಸಿದೆ. ಅನೇಕ ರೀತಿಯ ಬದಲಾವಣೆಗಳು ಆಗಿವೆ. ಮೂಲಭೂತವಾಗಿ ನಮ್ಮ ಸಂವಿಧಾನವನ್ನು ರಚಿಸುವಾಗಲೇ ಸಂವಿದಾನದ 45ನೇ ವಿಭಾಗದಲ್ಲಿ ಸ್ವತಂತ್ರ ಭಾರತದ ಮೊದಲ 10 ವರ್ಷಗಳ ಒಳಗೆ ಎಲ್ಲಾ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ಕೊಡಬೇಕೆಂದು ಉಲ್ಲಖಿತ ಆಗುತ್ತು. ಸಂವಿಧಾನದ 29ನೇ ವಿಭಾಗದಲ್ಲಿ ಇಂತಹ ಜನ ಭಾಷೆಗಳ ಆಧಾರದಲ್ಲಿ ಸರ್ಕಾರ ಅಥವಾ ಅನುದಾನಿತ ಸಂಸ್ಥೆಗಳಲ್ಲಿ ಪ್ರವೇಶ ನಿರಾಕರಿಸಲ್ಪಡಬಾರದು. 46ನೇ ವಿಭಾಗದಲ್ಲಿ ಶಿಕ್ಷಣ ರಂಗದಲ್ಲಿ ದುರ್ಬಲ ವರ್ಗದವರ ಶೋಷಣೆ ತಪ್ಪಬೇಕೆನ್ನುವ ಸ್ಪಷ್ಟ ಉಲ್ಲೇಖ ಇದ್ದರೂ ಕೂಡಾ ಈಗ 4 ದಶಕಗಳ ಬಳಿಕವೂ ಶಿಕ್ಷಣ ರಂಗ ಮುಖ್ಯವಾಗಿ ಮೇಲಿನ ಪದರಿನಲ್ಲಿ ಪದವಿ ಅಥವಾ ಸ್ನಾತಕೋತ್ತರ, ತಾಂತ್ರಿಕ ಶಿಕ್ಷಣ ರಂಗದಲ್ಲಿ ಹಣ ಇದ್ದವರಿಗೆ ಸಿಗುವಂತಹ ಒಂದು ವ್ಯವಸ್ಥೆಯಾಗಿದೆಯೆಂದು ಹೇಳುವುದಕ್ಕೆ ನನಗೆ ಬಹಳ ಬೇಸರವಾಗುತ್ತದೆ. ನಾನು ಈಗಾಗಲೇ ಹೇಳಿದಹಾಗೆ ಶಿಕ್ಷಣ ರಂಗದಲ್ಲಿ ಮೂಲಭೂತವಾಗಿ ಒಳ್ಳೆಯದಾಗಬೇಕು. ಅದಕ್ಕಾಗಿ ಆಯೋಗಗಳು ರಚನೆಯಾದವು. 1948ರಲ್ಲಿ ರಾಧಾಕೃಷ್ಣನ್‌ರವರ ಆಯೋಗ ರಚನೆ ಆಯಿತು. ಅದಾದ ನಂತರ ಮೊದಲಿಯಾರ್‌ರವರ ಆಯೋಗ 1952ರಲ್ಲಿ ರಚನೆಯಾಯಿತು. 1965ರಲ್ಲಿ ಕೊಠರಿಯವ ಆಯೋಗ. 1985ರಲ್ಲಿ ಮತ್ತೊಂದು 1988ರಲ್ಲಿ ಮಗದೊಂದು ಹೀಗೆ ಅನೇಕ ಆಯೋಗಗಳು ರಚನೆಯಾಗಿ ಶಿಕ್ಷಣದ ಬಗ್ಗೆ ಅನೇಕ ವರದಿಗಳನ್ನು ಕೊಟ್ಟಿವೆ. ಹೀಗೆ ಪ್ರಯೋಗಗಳ ಮೇಲೆ ಪ್ರಯೋಗಗಳಾಗಿವೆ. ಆದರೆ ಪ್ರಮಾಣದ ದೃಷ್ಟಿಯಿಂದ ಎಷ್ಟಾಗಿದೆ ಮೌಲ್ಯದ ದೃಷ್ಟಿಯಿಂದ ಎಷ್ಟಾಗಿದೆ ಎನ್ನುವಂತಹದನ್ನು ಮೂಲಭೂತವಾಗಿ ನೋಡಬೇಕಾಗಿದೆ. ಶಿಕ್ಷಣ ರಂಗದಲ್ಲಿ ಎಲ್ಲಾ ಸಮಸ್ಯೆಗಳು ಇದ್ದುದರಿಂದ ಫ್ರೀ-ಪ್ರೈಮರಿಯಿಂದ ಹಿಡಿದು ಯೂನಿವರ್ಸಿಟಿಯವರೆಗೆ ಅನೇಕ ರೀತಿಯ ಬದಲಾವಣೆಗಳು ಆಗುವುದು ಅಗತ್ಯವಾಗುತ್ತದೆ. ಈ ಎಲ್ಲ ವರದಿಗಳನ್ನು ಕ್ರೋಢೀಕರಿಸಿ

ಬದಲಾವಣೆ ಮಾಡಬೇಕೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುವುದಕ್ಕೆ ಅಪೇಕ್ಷೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನಮ್ಮ ಜಿಲ್ಲೆಯವರೇ ಶಿಕ್ಷಣ ಸಚಿವರರಾದ ಕಾರಣ ನಮ್ಮ ಜಿಲ್ಲೆಯವರೇ ಮಾತನಾಡಿದರು. ನಮ್ಮ ಜಿಲ್ಲೆಯವರೇ ಉತ್ತರ ಹೇಳುತ್ತಾರೆಂದು ಯಾರೂ ತಿಳಿದುಕೊಳ್ಳಬಾರದು. ಶಿಕ್ಷಣ ರಂಗವನ್ನು ಕುರಿತು ಸೀರಿಯಸ್ಸಾಗಿ ಚಿಂತನೆ ಮಾಡಲಿಕ್ಕೆ ಪ್ರಪ್ರಥಮ ಬಾರಿಗೆ ನಮ್ಮ ಸಚಿವರು ಹೊರಟಿದ್ದಾರೆ. ಬಡತನ ಅಜ್ಞಾನ ಇರತಕ್ಕವರಿಗೆ ಇವೆಲ್ಲಾ ದೊಡ್ಡ ಶಿಕ್ಷಣ ಬೇಕಾಗಿಲ್ಲ. ಮಾನವನ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸವಾಗಬೇಕಾದರೆ ಪ್ರೈಮರಿ ಎಜುಕೇಶನ್‌ನಿಂದ ಹಿಡಿದು ಯೂನಿವರ್ಸಿಟಿ ಎಜುಕೇಷನ್‌ವರೆಗೆ ಕರೆಂಟ್ ಸಬ್ಜೆಕ್ಟ್‌ಗಳು ಏನಿವೆ ಅವು ಬದಲಾವಣೆಯಾಗಬೇಕು. ಮಾನವನ ಅಭಿವೃದ್ಧಿಗಾಗಿ ಕೇಂದ್ರದಿಂದ ಎಷ್ಟು ಹಣ ಬರುತ್ತಿದೆ ಎಂಬುದು ಸಂಪೂರ್ಣವಾಗಿ ನಮಗೆ ಗೊತ್ತಿಲ್ಲ. ನಾನು ಕೇಳಿಕೊಳ್ಳುವುದೇನೆಂದರೆ ಹೆಚ್ಚಿನ ನೆರವು ಕೇಂದ್ರದಿಂದ ನಮಗೆ ಬರಬೇಕು. ಮಾನವ ಸಂಪನ್ಮೂಲ ಎಂದು ಹೆಸರು ಕೊಟ್ಟವರು ಅವರು. ಆದಕ್ಕಾಗಿ ಸಂಪೂರ್ಣ ನೆರವು ಭಾರತ ಸರ್ಕಾರದಿಂದ ಬರಬೇಕು. ನಮ್ಮ ಸಂವಿಧಾನದ ಪ್ರಕಾರ ಎಲ್ಲರಿಗೂ ಶಿಕ್ಷಣ ಅಗತ್ಯವಾಗಿದೆ. ಆದ್ದರಿಂದ 14 ವರ್ಷಗಳವರೆಗೆ ಮಕ್ಕಳಿಗೆ ಕಲಿಸತಕ್ಕ ಪೂರ್ಣ ಜವಾಬ್ದಾರಿಯನ್ನು ಕೇಂದ್ರಸರ್ಕಾರದವರು ತೆಗೆದುಕೊಂಡು ಮಾಡಬೇಕಾಗುತ್ತದೆ. ಈಗ ಪ್ರಾಥಮಿಕ ಶಿಕ್ಷಣವನ್ನು ತೆಗೆದುಕೊಂಡು ನಾನು ಓದಿ ತಿಳಿದ ಪ್ರಕಾರ 25 ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಜಪಾನ್ ದೇಶದಲ್ಲಿದ್ದಾರೆ. ನಮ್ಮ ರಾಜ್ಯದಲ್ಲಿ 50 ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇದ್ದಾರೆ. 40 ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಕೇರಳದಲ್ಲಿದ್ದಾರೆ. ಇನ್ನೂ ಆರೇಳು ಸಾವಿರ ಶಿಕ್ಷಕರನ್ನು ನಾವು ನೇಮಕ ಮಾಡಿಕೊಳ್ಳಬೇಕಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಇದ್ದರೆ ಆ ಸಂಖ್ಯೆಗೆ ತಕ್ಕಂತೆ ಶಿಕ್ಷಕರನ್ನು ನೇಮಿಸಬೇಕಾಗಿದೆ. ಅದರ ಜೊತೆಗೆ ಹಿಂದಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು. ನನ್ನ ತಾಲ್ಲೂಕಿನಲ್ಲಿ 90 ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ಬೇಕಾದಷ್ಟು ಮಂದಿ ಶಿಕ್ಷಕರು ಇದ್ದಾರೆ. ಹಳ್ಳಿಗೆ ಯಾರೂ ಹೋಗುತ್ತಿಲ್ಲ. ವರ್ಗಾವಣೆಯ ವಿಚಾರದಲ್ಲಿ ಹೇಳುವುದಾದರೆ, ಹೆಣ್ಣುಮಕ್ಕಳು ಶಿಕ್ಷಕಿಯರಾಗಿದ್ದರೆ ಅವರಿಗೆ ಕೆಲವು ಸಮಸ್ಯೆಗಳು ಇರುತ್ತವೆ. ವರ್ಗಾವಣೆಯನ್ನು ಕುರಿತು ಒಂದು ನೀತಿಯನ್ನು ಪಾಲಿಸಬೇಕು. ಅದು ಅಗತ್ಯವಾಗಿದೆ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾದರೆ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿದೆ. ಹೆಚ್ಚು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಉಪಯೋಗವಿಲ್ಲ. ಹೊಸದಾಗಿ ನೇಮಕ ಮಾಡಿಕೊಳ್ಳಲಿಕ್ಕೆ ಸರ್ಕಾರದವರು ಮತ್ತು ಇಲಾಖೆಯವರು ಅನುಮತಿಯನ್ನು ಕೊಡುವುದಿಲ್ಲ. ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡುವ ವ್ಯವಸ್ಥೆಯಾಗಬೇಕು. ತರಬೇತಿ ಹೊಂದಿದವರಿಂದ ಹಣವನ್ನು ಸಂಗ್ರಹಿಸಿ ಪ್ರಾಥಮಿಕಶಾಲೆ ಮತ್ತು ಹೈಸ್ಕೂಲ್‌ಗಳವರೆಗೆ ನೇಮಕ ಮಾಡಿಕೊಳ್ಳುವ ಪದ್ಧತಿ ಬಂದಿದೆ. ಹೀಗಾದರೆ ಶಿಕ್ಷಣ ಉಳಿದಿತೆ? ಕಪ್ಪು ಹಲಗೆ ಯೋಜನೆಯ ಪ್ರಕಾರ ಅಡಿಷನಲ್ ಆಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕಾರ್ಯಕ್ರಮ ಪ್ರಾರಂಭವಾಯಿತು. ಹಿಂದೆ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ನಾನು ಇದನ್ನು ವಿಧಾನಸಭೆಯಲ್ಲಿ ಹೇಳಿದ್ದೇನೆ. ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳದೆ ಯಾರೂ ಈಗಾಗಲೆ ಶಿಕ್ಷಕರಾಗಿ ಅಪಾಯಿಂಟ್ ಆಗಿದ್ದಾರೆ ಅವರನ್ನೇ ಕಪ್ಪು ಹಲಗೆ ಯೋಜನೆಗೆ ಜಮಾ ಮಾಡಿಕೊಂಡರು. ಕೇಂದ್ರಸರ್ಕಾರದಿಂದ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಬರತಕ್ಕ ಹಣವನ್ನು ಆ ಶಿಕ್ಷಕರುಗಳಿಗೆ ಅಡ್ಜೆಸ್ಟ್ ಮಾಡಿಬಿಟ್ಟರು. ಆ ಯೋಜನೆಯ ಪ್ರಕಾರ ಹೊಸದಾಗಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ನಾನೊಂದು ಸೂಚನೆಯನ್ನು ಸರ್ಕಾರಕ್ಕೆ ಕೊಡುತ್ತೇನೆ. ಪ್ರಾಥಮಿಕ ಶಿಕ್ಷಣದ ಯಾವುದೇ ಶುಲ್ಕವನ್ನು ತೆಗೆದುಕೊಳ್ಳಬಾರದೆಂದು ನಿಯಮವಿದೆ.

ಆದರೆ ಯಾವುದೇ ಒಬ್ಬ ತಂದೆ ತನ್ನ ಮಗುವಿಗೆ ಒಂದು. ಎರಡು. ಐದನೇ ಕ್ಲಾಸ್‌ವರೆಗೆ ತಿಂಗಳಿಗೆ ಒಂದೊಂದು ರೂಪಾಯಿ ಕೊಡದೇ ಇರುವಷ್ಟು ಬಡತನ ಇಲ್ಲ. ಆದಕಾರಣ ಚಿಕ್ಕರೀತಿಯಲ್ಲೇ ಕಲೆಕ್ಷನ್ ಮಾಡಬೇಕು. ಇದಕ್ಕಿಂತ ಹೆಚ್ಚಿಗೆ ಶೋಷಣೆ ಮಾಡುವಂಥ ಒಂದು ಪದ್ಧತಿ ಇವತ್ತು ಜಾರಿಯಲ್ಲಿದೆ. ಅವರು ಪ್ರಿಪ್ರೈಮರಿ ಶಾಲೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿಗೆ ದುಡ್ಡು ಕೊಟ್ಟು ಮಕ್ಕಳನ್ನು ಸೇರಿಸುತ್ತಿದ್ದಾರೆ ಆದರೆ, ಒಳ್ಳೆಯ ಸೌಲಭ್ಯ ಕೊಡಬೇಕಾದರೆ. ಶಿಕ್ಷಕರನ್ನು ಕೊಡಬೇಕಾದರೆ ಶಾಲಾ ಅಭಿವೃದ್ಧಿ ಸಮಿತಿಗೆ ಪ್ರೀಮಿಯಂ ಅಂತ ಏಕೆ ತೆಗೆದುಕೊಳ್ಳಬಾರದು? ಶಾಲಾಭಿವೃದ್ಧಿಗೆ ಯಾವುದೇ ತಂದೆ ತಾಯಿ ತಮ್ಮ ಮಗುವಿಗೆ ಕನಿಷ್ಟ ಒಂದೆರಡು ರೂಪಾಯಿ ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿ ಇಲ್ಲ. ಆದರೆ ಇಷ್ಟೇ ಕೊಡಬೇಕೆಂದು ನಾವೇನಾದರೂ ನಿಗದಿ ಮಾಡಿದರೆ ನಮಗೆ ತೊಂದರೆಯಾಗುತ್ತದೆ. ಇನ್ನೊಂದು ಪಕ್ಷದವರು ಏನಾದರೂ ಹೇಳುತ್ತಾರೆ ಎನ್ನುವ ಕಾರಣದಿಂದ ನಮಗೂ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರೂ ಸಂಗ್ರಹ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಶಿಕ್ಷಣ ಸ್ಥಿತಿ ಇದೇ ರೀತಿ ಇರಬೇಕು ಎಂದರೆ ಅದು ಸಮಂಜಸ ಅಲ್ಲ. ರಜಾ ದಿನಗಳ ಕುರಿತು ಒಂದು ಮಾತನ್ನು ಹೇಳುತ್ತೇನೆ. ಶೈಕ್ಷಣಿಕ ರಂಗದಲ್ಲಿ ಬಹಳವಾಗಿ ಮುಂದುವರೆದ ರಾಜ್ಯ ಅಂದರೆ ಕೇರಳ. ಅಲ್ಲಿ ಮೂರು ರಜೆಗಳನ್ನು ಸಮಾನವಾಗಿ ಕೊಡುತ್ತಾರೆ. ನಮ್ಮಲ್ಲಿ ದಸರಾ ರಜೆ ಜಾಸ್ತಿ. ಈ ಕ್ರಿಸ್‌ಮಸ್ ರಜೆ ಟೋಕನ್ ಆಗಿ ಇರುವಂಥಾದ್ದು. ಮತ್ತು ಬೇಸಿಗೆ ರಜೆ ಮೊದಲು ಮೂರೂ ಸಮಾನವಾದ ರಜೆಗಳು ಇದ್ದವು. ಹೀಗಿದ್ದರೆ ಏನಾಗುತ್ತದೆ. ಎಂದರೆ ಮಕ್ಕಳಿಗೆ ಸುಸ್ತು ಆಗುವುದಿಲ್ಲ. ಅವರ ಚೇತನ ಕುಂಠಿತವಾಗುವುದಿಲ್ಲ. ತಂದೆತಾಯಿಗಳೊಟ್ಟಿಗೆ ಹೆಚ್ಚಿಗೆ ಕಾಲ ಕಳೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ತಿರುಗಿ ಪರಿಶೀಲನೆ ಮಾಡುವುದು ಅಗತ್ಯವೆಂದು ನಾನು ಹೇಳಬಯಸುತ್ತೇನೆ. ನಮ್ಮ ಕರ್ನಾಟಕರಾಜ್ಯವಾದಮೇಲೆ ಬೇರೆ ಬೇರೆ ಭಾಗಗಳಿಂದ ಬಂದಂಥ ಶಿಕ್ಷಕರು ಇದ್ದಾರೆ. ವೇತನಶ್ರೇಣಿಯ ಬಗ್ಗೆ ಮಾನ್ಯ ಸಚಿವರು ಅನೇಕ ರೀತಿಯ ಕಾಯಕ್ರಮಗಳನ್ನು ಕೈಗೊಂಡರೂ ಸಹ ಈ ಅಸಮತೋಲನ ಇದ್ದೇ ಇದೆ. ಜ್ಯೇಷ್ಠತಾ ಪಟ್ಟಿ ಸಂಪೂರ್ಣವಾಗಿಲ್ಲ ಎನ್ನುವ ದೂರು ಇದೆ. ಹಿಂದಿನ ತಾಲ್ಲೂಕು ಬೋರ್ಡ್ ಅಧ್ಯಾಪಕರ ಬಡ್ತಿಯಾಗಿಲ್ಲ. ಅವರ ವೇತನ ಫಿಕ್ಸೇಶನ್ ಆಗಿಲ್ಲ ಎನ್ನುವ ದೂರಿದೆ. ಸ್ಕೌಟ್ ಅಂಡ್ ಗೈಡ್ಸ್‌ನ ಕಾರ್ಯಕ್ರಮ ಇವತ್ತು ಅನೇಕ ಕಡೆಗಳಲ್ಲಿ ಇದೆ ಈ ಸ್ಕೌಟ್ ಅಂಡ್ ಗೈಡ್ಸ್ ಅಧ್ಯಾಪಕರು ಯಾವುದೇ ಸಂಭಾವನೆ ಪಡೆಯದೆ ಈ ಒಂದು ಶಿಸ್ತಿನ ಮೂವ್‌ಮೆಂಟ್‌ಗಾಗಿ ತಮ್ಮ ಜೀವನವನ್ನೇ ಧಾರೆ ಎರೆದಿದ್ದಾರೆ. ಅದಕ್ಕಾಗಿ ಹತ್ತು-ಹದಿನೈದು ವರ್ಷ ಸರ್ವೀಸ್ ಮಾಡಿದವರಿಗೆ ಒಂದು ಇಂಕ್ರಿಮೆಂಟ್ ಕೊಡುವಂತಾಗಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರೇ ಆದ ಮಾನ್ಯ ಸಚಿವರಿಗೆ ಗೊತ್ತಿರುವ ಹಾಗೆ ಈಗಾಗಲೇ ನಮ್ಮ ಜಿಲ್ಲೆ ಶೈಕ್ಷಣಿಕವಾಗಿ ಬಹಳ ದೊಡ್ಡ ಜಿಲ್ಲೆಯಾಗಿದೆ. ಆದ್ದರಿಂದ ಅದನ್ನು ಶೈಕ್ಷಣಿಕವಾಗಿ ಎರಡು ಜಿಲ್ಲೆಗಳನ್ನಾಗಿ ಮಾಡಬೇಕು. ಕುಂದಾಪುರ ತಾಲ್ಲೂಕಿನಲ್ಲಿ ಬೇರೆ ತಾಲ್ಲೂಕುಗಳಲ್ಲಿ ಇರುವ ಹಾಗೆ ಎರಡು ವಲಯಗಳನ್ನು ರಚಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಷ್ಟೆಲ್ಲ ಸಮಸ್ಯೆಗಳು ಇದ್ದರೂ ಕೂಡ ನಮ್ಮ ಶಿಕ್ಷಕರು ಪ್ರಶಂಸಾರ್ಹರು. ತಮ್ಮ ಬದುಕಿನ ಬಹುಮುಖ್ಯ ವರ್ಷಗಳನ್ನು ಅವರು ಮಕ್ಕಳ ಮನ ಅರಳಿಸುವುದಕ್ಕಾಗಿ ಕಳೆಯುತ್ತಿದ್ದಾರೆ. ತಾವು ಅರಿತು. ಕಲಿತು ಕಲಿಸುತ್ತಿದ್ದಾರೆ. ಅಧ್ಯಯನ ಮಾಡುತ್ತಾರೆ. ಅಧ್ಯಾಪನವನ್ನೂ ಮಾಡುತ್ತಾರೆ. ಗಂಧದ ಕೊರಡಿನಂತೆ ಅವರು ತಮ್ಮ ಬಾಳನ್ನು ಸವೆಸುತ್ತಿದ್ದಾರೆ. ಆದ್ದರಿಂದ ಶಿಕ್ಷಕರನ್ನು ನಾವು ವಿಶೇಷವಾಗಿ ಅಭಿನಂದಿಸಬೇಕು. ಅವರನ್ನು ನಮ್ಮ ಸಾಮಾಜಿಕ ಶಿಕ್ಷಣಕ್ಕಾಗಿ ಉಪಯೋಗಿಸಿಕೊಳ್ಳುತ್ತೇನೆ. ಗ್ರಾಮಗಳ ಅನೇಕ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವುದಕ್ಕೆ ಅವರನ್ನು ಉಪಯೋಗಿಸಿಕೊಳ್ಳುತ್ತೇನೆ. ಜನರ ಸೆನ್ಸಸ್. ದನಗಳ ಸೆನ್ಸಸ್. ಕುರಿಕೋಳಿ ಸೆನ್ಸಸ್. ಮತದಾನ ಪಟ್ಟಿ ತಯಾರಿ ಹೀಗೆ ಯಾವುದೇ ಬರಲಿ. ಅದನ್ನು ಮಾಡುವುದಕ್ಕೆ ಶಿಕ್ಷಕರಿಗೆ ವಹಿಸುತ್ತೇವೆ. ಅವರು ಹಾಗೆ ಹೋದಾಗ ಅವರಿಗೆ ಸಂಭಾವನೆ

ಕೊಡುವುದಕ್ಕೆ ನಾವು ಹಿಂದೆ ಬೀಳುತ್ತೇವೆ. ಇವತ್ತು ನನ್ನ ತಾಲ್ಲೂಕಿನಲ್ಲಿ ಅನೇಕ ಶಿಕ್ಷಕರು ಈ ವಿಚಾರ ಹೇಳುತ್ತಿದ್ದಾರೆ. ಅವರ ಅನೇಕ ಹಳೆಯ ಬಿಲ್‌ಗಳು ಪೆಂಡಿಂಗ್ ಇವೆ. ನಾವು ಬರೀ ಬಾಯಲ್ಲಿ ಗುರು ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರ ಎನ್ನತಕ್ಕಂಥ ವಿಚಾರಗಳನ್ನು ಹೇಳುತ್ತೇವೆ. ಆದರೆ ಅವರಿಗೆ ಕೊಡಬೇಕಾದ ಸಂಭಾವನೆಯನ್ನ ಕಾಲಕಾಲಕ್ಕೆ ಕೊಡುವುದಿಲ್ಲ. ಅದನ್ನು ಕೊಡುವ ಹಾಗೆ ಮಾಡಬೇಕು. ಇದರ ಜೊತೆಗೆ ಮಾನ್ಯ ಸಚಿವರು ಎಲ್ಲ ಕಡೆಗೆ ಗುರುಭವನ ಮಾಡುವ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದು ಆದಷ್ಟು ಬೇಗ ಆಗಬೇಕೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅನೇಕ ಸಮಿತಿಗಳಾಗಿವೆ ಎಂದು ನಾನು ಕೇಳಿದ್ದೇನೆ. ವೆಂಕಟಸ್ವಾಮಿ ಸಮಿತಿ, ಬಿ.ಕೆ ಭಟ್ಟಾಚಾರ್ಯ ಸಮಿತಿ, ಭರತ್ ಸಮಿತಿ, ನರಸಿಂಹಯ್ಯ ಸಮಿತಿ, ಎಜುಕೇಷನ್ ರಿಫಾರ್ಮ್ಸ್ ಮತ್ತು ತಾಂತ್ರಿಕ ಶಿಕ್ಷಣ ಬಗ್ಗೆ ಕೃಷ್ಣಮೂರ್ತಿ ಸಮಿತಿ-ಈ ವರದಿಗಳೆಲ್ಲದರ ಸಮಗ್ರವಾದ ಅಧ್ಯಯನ ಆಗಿ ಅದರ ಒಳ್ಳೆ ತಿರುಳುಗಳು ಅನುಷ್ಠಾನಕ್ಕೆ ಬರಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಬಹಳ ಸುಧೀರ್ಘವಾಗಿ ಮಾತನಾಡುವುದಕ್ಕೆ ನನಗೆ ಅವಕಾಶ ಇಲ್ಲವೆಂದು ಕಾಣುತ್ತದೆ. ಆದರೂ ಕೂಡ ಕೆಲವು ವಿಚಾರಗಳನ್ನು ಹೇಳದಿದ್ದರೆ ಸಮಂಜಸವಾಗುವುದಿಲ್ಲ. ಇವತ್ತು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಪರಿಸ್ಥಿತಿ ಬಹಳ ಶೋಚನೀಯವಾದುದು.

ಪರೀಕ್ಷೆಗಳ ಸಂದರ್ಭದಲ್ಲಿ ಮಾಲ್‌ಪ್ರಾಕ್ಟೀಸ್ ಮೇಲೆ ನಡೆದಂಥ ಹಲ್ಲೆಗಳು, ಜಾತೀಯ ಆಧಾರದ ಮೇಲೆ ಪ್ರಾಧ್ಯಾಪಕರ ಮೇಲೆ ನಡೆದಂಥ ಹಲ್ಲೆಗಳು, ಪ್ರಾಧ್ಯಾಪಕರ ಮೇಲೆ ಇರುವ ಕೀಳುಮಟ್ಟದ ರಾಜಕೀಯ, ಇವುಗಳನ್ನು ತಡೆಗಟ್ಟುವಂಥ ವ್ಯವಸ್ಥೆಯಾಗಬೇಕು. ನಾನು ಎಲ್ಲವನ್ನೂ ವಿವರವಾಗಿ ಹೇಳಬೇಕಾಗಿಲ್ಲ. ಈ ಎಲ್ಲಾ ವಿಷಯಗಳನ್ನೂ ತಾವು ಸಂಪೂರ್ಣವಾಗಿ ಅರಿತಿದ್ದೀರೆಂದು ತಿಳಿಯುತ್ತೇನೆ. ಹಾಗೆಯೇ ಮಂಗಳೂರು ವಿಶ್ವವಿದ್ಯಾನಿಲಯ ಆಗಿದೆ, ಇದಕ್ಕೆ ಇನ್ನೂ ಕಟ್ಟಡಗಳಾಗಬೇಕು. ಅನೇಕ ಕೋರ್ಸುಗಳ ಅಪ್ರೂವಲ್ ಆಗಬೇಕು. ಇದೊಂದು ವಿಭಿನ್ನತೆಯ ಕರಾವಳಿಯ ವಿಶ್ವವಿದ್ಯಾನಿಲಯ. ಇದನ್ನು ಬೇಗ ಮಾಡಬೇಕೆಂಬ ವಿಚಾದಲ್ಲಿ ಸ್ಥಳೀಯ ಕಲ್ಪನೆ ಇಟ್ಟುಕೊಂಡು ರೂಪಿಸಬೇಕೆಂದು ಹೇಳುತ್ತಿದ್ದೇನೆ. ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಆಗಿದೆ. ಕನ್ನಡದ ಸಮಗ್ರ ಏಳಿಗೆಗಾಗಿ, ಕನ್ನಡದ ಕಂಪನ್ನು ಬಹುತೇಕ ಮಾರ್ದನಿಸುವಂಥ ಹೊಸ ಆವಿಷ್ಕಾರವಾಗಲಿ ಎಂದು ನಾನು ಬಯಸುತ್ತೇನೆ. ಇನ್ನು ಅಂಚೆ ತೆರಪಿನ ಶಿಕ್ಷಣ ಒಳ್ಳೆಯ ಅಭಿವೃದ್ಧಿ ಪಥದಲ್ಲಿ ಸಾಗಬೇಕು. 900 ವಿವಿಧ ಕೋರ್ಸುಗಳಿವೆಯೆಂದು ಅಧ್ಯಯನ ಮಾಡಿ ತಿಳಿದಿದ್ದೇನೆ. ಹಂಪೆಯಲ್ಲಿ ವಿಶ್ವವಿದ್ಯಾನಿಲಯದ ಸಮಿತಿ ರಚನೆಯಾಗಿ, ಸಮಗ್ರ ಆಟನಾಮಸ್ ಯೂನಿವರ್ಸಿಟಿಯಾಗಿ ಮೂಡಿ ಬರಬೇಕು. ಅಂಚೆ ಶಿಕ್ಷಣ ಕುರಿತು ಸ್ವಯಂಪರಿ ಪೂರ್ಣ ಅಧ್ಯಯನ ಮಾಡುತ್ತಿದ್ದೀರಿ ; ಹಿಂದುಳಿದವು ಯಾರಿದ್ದಾರೆ, ಯಾರಿಗೆ ಕಾಲೇಜಿಗೆ ಹೋಗಿ ಓದುವುದಕ್ಕೆ ಸಾಧ್ಯವಾಗುವುದಿಲ್ಲ ಅಂತಹವರು ಈ ಅಂಚೆ ತೆರಪಿನ ಶಿಕ್ಷಣದ ಮೂಲಕ ಹೆಚ್ಚಿನ ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ವಿಚಾರವಾಗಿ ನಮ್ಮ ಜಿಲ್ಲೆಯನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ ಶೈಕ್ಷಣಿಕ ರಂಗದಲ್ಲಿ ಮುಖ್ಯವಾಗಿರತಕ್ಕ ಮಿಷಿನರಿ ಬಿಲ್ ಇಲ್ಲದೆ, ಅನೇಕ ಕಡೆ ಗ್ರಹಣ ಹಿಡಿದಿದೆ. ಈ ಖಾಸಗಿ ಶಿಕ್ಷಣ ಸಂಸ್ಥೆಗಳು ಎಂದಕೂಡಲೇ ಲೂಟಿ ಮಾಡುವವರು ಎಂದು ಹೇಳಬೇಕಾಗಿಲ್ಲ. ಹೀಗೆ ಶಾಸಕರು ವಿಧಾನಸಭೆಯಲ್ಲಿ ಹೇಳಿದಂಥ ಮಾತುಗಳು ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಮತ್ತು ಶಾಸಕರು ಹೇಳಿದಾಗ, ಅದು ಬೇಜವಾಬ್ದಾರಿಯ ಮಾತಾಗಿರುವುದಿಲ್ಲ. ಎಂತಹ ಶಾಲೆಗಳಿವೆ, ಎಂತಹ ಸಂಸ್ಥೆಗಳಿವೆ, ಇದರಲ್ಲಿ ನಾವು ಏನು ಕಲಿಯುತ್ತೇವೆ, ನಮ್ಮ ಭವಿಷ್ಯ ಏನು ಎಂಬುದನ್ನು ಯೋಜನೆ

ಮಾಡಬೇಕಾಗಿದೆ. ಯಾವುದಾದರೂ ವಿದ್ಯಾಸಂಸ್ಥೆಗಳು ತಪ್ಪು ಮಾಡಿದರೆ. ಉಗ್ರವಾದ ಕ್ರಮವನ್ನು ಕೈಗೊಳ್ಳಬೇಕು. ಇನ್ನು ಕ್ಯಾಪಿಟೇಷನ್ ವಿಚಾರ ಹೇಳುವುದಾದರೆ. ಎಲ್ಲಿ ಇನ್‌ಫ್ರಾಕ್ಚರ್ ಇಲ್ಲ. ಅಂತಾದ್ದಕ್ಕೆ ಕಡಿವಾಣ ಹಾಕಿ. ಫಲಪ್ರದವಾಗಿ. ಸರಿಯಾಗಿ ನಡೆಸುವುದಕ್ಕೆ ಒಂದು ಮಾರ್ಗದರ್ಶನವನ್ನು ಒಂದು ಮತ್ತು ಯಾರ್ಡ್‌ಸ್ಟಿಕ್ ಹಾಕಬೇಕು. ಈ ಶಿಕ್ಷಣ ಸಂಸ್ಥೆಗಳು ಸುಲಿಗೆ ಮಾಡುವಂತೆ. ಯಾವರೀತಿಯಾಗಿ ಬೆಳೆಸಬೇಕು. ಬೆಳೆಸುವ ವಿಧಾನ ಬೇಗ ಎಂಬುದನ್ನೂ ಯೋಜನೆ ಮಾಡಬೇಕಾಗಿದೆ. ಇವುಗಳಿಗೆ ಸಂಪೂರ್ಣ ಅನುದಾನ ಕೊಡುವುದಿಲ್ಲವೆಂದು ಹೇಳುವುದಾದರೂ. ಸ್ವಯಂ ಪರಿಪೂರ್ಣವಾಗಿ ಘೋಷಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಯಾವ ಹತ್ತಿರ ಹಣವಿರುತ್ತವೋ ಅಂಥವು ಸರಿಯಾಗಿ ಇವುಗಳನ್ನು ಘೋಷಿಸಿಕೊಂಡು ಬರುತ್ತಾರೆ. ಇಷ್ಟೆಲ್ಲಾ ಆದಮೇಲೆ. ಈ ಕಾಲೇಜುಗಳ ವಿಚಾರದಲ್ಲಿ ಹಾಗೂ ಶಾಲೆಗಳ ವಿಚಾರದಲ್ಲಿ ಮಾನ್ಯ ಶಿಕ್ಷಣ ಮಂತ್ರಿಗಳನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಕಳೆದ ಒಂದು ವರ್ಷದಿಂದ ಈ ಡಿ.ಎಲ್.ಆರ್.ಸಿ. ಮೂಲಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಲ್ಲಿ ಭ್ರಷ್ಟಾಚಾರ ನಿಂತಿದೆ. ಇದು ಯಾವುದೂ ಬರದೇ. ಬರೀ ಮೆರಿಟ್‌ನ ಆಧಾರದ ಮೇಲೆ ಶಿಕ್ಷಕರ ನೇಮಕದ ವ್ಯವಸ್ಥೆಯಾಗಿದೆ. ಮತ್ತು ಜೆಷ್ಠತಾ ಪಟ್ಟಿಯ ಪ್ರಕಾರ ಒಂದು ವರ್ಷದಲ್ಲಿ ಸುಮಾರು 7 ಸಾವಿರ ಬಡ್ತಿಗಳಾಗಿವೆ. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಂಥ ಪ್ರಸಂಗ ಇದ್ದ. ಈ ಕೆಲಸ ಇವತ್ತು ಆಗಿದೆ. ಹೊಸ ಕಾಲೇಜುಗಳಾಗಿವೆ. ಖಾಸಗಿ ಪದವಿಪೂರ್ವ ಕಾಲೇಜುಗಳು ಮೊದಲು ತುಂಬಾ ವಿಳಂಬವಾಗಿ ಅನುದಾನ ಪಡೆಯುತ್ತಿದ್ದವು. 3-4 ತಿಂಗಳು ಕಳೆದರೂ ಸರ್ಕಾರದವರಿಂದ ಧನಸಹಾಯ್ಯ ಬರದೇ ಇದ್ದ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪಿ.ಯು.ಸಿ. ಕಾಲೇಜುಗಳಿಂದ ನಮಗೆ ಪತ್ರ ಬರುತ್ತಿದ್ದವು. ಆದರೆ. ಈ ವರ್ಷ ಅಂತಹ ಪತ್ರಗಳು ಅವರಿಂದ ಯಾವುದೂ ಬಂದಿರುವುದಿಲ್ಲ. ಸಕಾಲದಲ್ಲಿ ಅನುದಾನ ಪಾವತಿಯಾಗುತ್ತಿದೆ ಎನ್ನು ವಿಚಾರವನ್ನು ಹೇಳಿದ್ದಾರೆ. ಪಿ.ಯು.ಸಿ. ಮತ್ತು ಕಾಲೇಜುಗಳಲ್ಲಿ ವೃತ್ತಿಪರ ಕೋರ್ಸುಗಳು. ಐ.ಟಿ.ಐ. ಜಾಬ್ ಓರಿಯಂಟೆಡ್ ಎಜುಕೇಷನ್ ಮುಂತಾದ ಕಾರ್ಯಕ್ರಮಗಳಾಗಬೇಕು. ಇದಕ್ಕಾಗಿ ಕೇಂದ್ರದ ನೆರವೂ ಇದೆ. ಈ ರೀತಿ ಬರತಕ್ಕ ಕೇಂದ್ರದ ನೆರವನ್ನು ತೆಗೆದುಕೊಂಡರು. ಈ ವೃತ್ತಿಪ ಕೋರ್ಸುಗಳನ್ನೂ ನಡೆಸಬೇಕಾಗುತ್ತದೆ.

ಯೋಗ್ಯಶಿಕ್ಷಣ ಎನ್ನವಂತಹ ಮಾತನ್ನು ಮಾನ್ಯ ಸಚಿವು ಅನೇಕ ಬಾರಿ ಹೇಳಿದ್ದಾರೆ. ಅದನ್ನು ತೀರಾ ಚಿಕ್ಕಮಕ್ಕಳಿಗೆ ಕೊಡುವುದು ಸರಿಯಲ್ಲ ಎಂಬುದು ಕೆಲವು ತಜ್ಞರ ಅಭಿಪ್ರಾಯ. ಅದು ಯಾವ ವರ್ಷದಿಂದ ಪ್ರಾರಂಭವಾಗಬೇಕೆಂದು ವಿಚಾರ ಮಾಡಿ. ಮಕ್ಕಳ ಆರೋಗ್ಯದ ಮೇಲೆ ಬೌದ್ಧಿಕ ಮತ್ತು ದೈಹಿಕ ಪರಿಣಾಮ ಆಗದ ರೀತಿಯಲ್ಲಿ ಜಾರಿಗೆ ತರಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಕಡತಯಜ್ಞ ಎಂಬ ಕಾರ್ಯಕ್ರಮ ಹಾಕಿ 40. 406 ಕಡತಗಳನ್ನು ವಿಲೇವಾರಿ ಮಾಡಲಾಗಿದೆ. ಬಹುಶಃ ಕರ್ನಾಟಕ ರಾಜ್ಯದ ಶಿಕ್ಷಣ ರಂಗದ ಇತಿಹಾಸದಲ್ಲಿ 40. 406 ಕಡತಗಳನ್ನು ಒಂದು ವರ್ಷದಲ್ಲಿ ಮುಗಿಸಬೇಕೆಂಬ ದೃಢಸಂಕಲ್ಪದಿಂದ ಮಾಡದಿದ್ದರೆ ಇದು ಆಗುತ್ತಿರಲಿಲ್ಲ. ಇದಕ್ಕಾಗಿ ವಿಶೇಷವಾಗಿ ಸಚಿವರನ್ನು. ಅದರ ಬಗ್ಗೆ ಸಮರ್ಪಕವಾಗಿ ಕೆಲಸ ಮಾಡಿದಂಥ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳನ್ನು ನಾನು ಅಭಿನಂದಿಸುತ್ತೇನೆ. ಅದೇ ರೀತಿ ಇನ್ನು ಒಂದು ವರ್ಷದ ಒಳಗಾಗಿ ಉಳಿದ ಎಲ್ಲಾ ಕಡತಗಳನ್ನು ಮುಗಿಸಿ ಶಿಕ್ಷ> ರಂಗದಲ್ಲಿ ಬಾಕಿ ಕಡತಗಳು ಇಲ್ಲ. ಇವತ್ತು ಬಂದಿದೆ ನಾಳೆಗೆ ಮಂಜೂರಾಗುತ್ತದೆ ಎನ್ನುವಂತಹ ಒಂದು ವ್ಯವಸ್ಥೆ ಆಗಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಹತ್ತು ವರ್ಷದಿಂದ ಗೆದ್ದಲು ಹಿಡಿದು ಹೋಗಿತ್ತು.

ಶ್ರೀ ಬಿ.ಎಸ್. ಆಚಾರ್ :- ಇನ್ನು ಇಂಗ್ಲಿಷ್ ಮಿಾಡಿಯಂ ಶಾಲೆಗಳ ವಿಚಾರದಲ್ಲಿ ಅನೇಕರು ಅನೇಕ ವಿಧವಾದ ಅಭಿಪ್ರಾಯಗಳನ್ನುಕೆಲವು ಪ್ರಿಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಿ ಅನೇಕ ವರ್ಷಗಳಾಗಿರುತ್ತದೆ. ನನ್ನ ಕ್ಷೇತ್ರದಲ್ಲಿ ಒಂದು ಮೈನಾರಿಟಿ ಸಂಸ್ಥೆ ಇದ್ದು. ಒಂದು ಪಟ್ಟಣದಲ್ಲಿ ಇನ್ನೊಂದು ತೀರಾ ಹಳ್ಳಿಗಾಡಿನಲ್ಲಿ ನಡೆಸುವಂಥಹದು ಎರಡೂ ಸಂಸ್ಥೆಗಳ ಮೂಲಕ ಅನೇಕ ವರ್ಷಗಳಿಂದ ಪ್ರಿಪ್ರೈಮರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರ ಹತ್ತಿರ ಬೇಕಾದಷ್ಟು ಫೆಸಿಲಿಟೀಸ್ ಇದೆ, ಕಟ್ಟಡ ಇದೆ. ವ್ಯಾನ್ಸ್ ಇದೆ. ಅವರು ಒಂದನೇ ಕ್ಲಾಸ್. ಎರಡನೇ ಕ್ಲಾಸ್ ಓಪನ್ ಮಾಡುವುದಕ್ಕೆ ಅರ್ಜಿ ಕಳುಹಿಸಿದ್ದಾರೆ. ಎರಡು ವರ್ಷದಿಂದ ಅದು ಪೆಂಡಿಂಗ್ ಇದೆ. ನಾವು ಭಾವನಾತ್ಮಕವಾಗಿ ನಾವೆಲ್ಲಾ ಕನ್ನಡ ಪ್ರಿಯರು. ಕನ್ನಡ ಬಗ್ಗೆ ನಾವು ಭಾವನಾತ್ಮಕವಾಗಿ ಮಾತನಾಡುತ್ತೇನೆ. ಇಂಗ್ಲಿಷ್ ವಿದ್ಯೆಯಿಂದ ಏನು ಪಡೆಯುತ್ತೇವೆ. ಎಷ್ಟು ಪಡೆಯುತ್ತೇವೆ ಮೂಲಭೂತವಾಗಿ ಎಷ್ಟು ಮೂಲಭೂತವಾಗಿ ಎಷ್ಟು ತಿಳಿಯಬೇಕು. ನಮ್ಮ ಜ್ಞಾನವನ್ನು ಅರಳಿಲು ಬೇಕಾದಂಥ ಶಿಕ್ಷಣಬೇಕು. ತೀರಾ ಶೋಷಣೆ ಮಾಡತಕ್ಕಂಥ ಸಂಸ್ಥೆಗಳಿಗೆ ತಾವು ಪರ್ಮಿಷನ್ ಕೊಡುವುದು ಬೇಡ. ಆದರೆ ಎಲ್ಲಿ ಬೇಡಿಕೆ ಬರುತ್ತದೆ. ಅಂತಹ ಕಡೆಗಳಲ್ಲಿ ಅಗತ್ಯ ಕಡತದಲ್ಲಿ ಹೋಲ್‌ಸೆಲ್ ಆಗಿ, ಔಟ್‌ರೈಟ್ ಆಗಿ ಬ್ಯಾನ್ ಮಾಡುವ ಬದಲು ಸಾಧನೆ ಮಾಡುವ ಸಂಸ್ಥೆಗಳಿಗೆ ಅವಕಾಶ ಕೊಡುವ ವ್ಯವಸ್ಥೆ ಆಗಬೇಕು. ಅದೇ ರೀತಿ ಕ್ಷೇತ್ರಕ್ಕೆ ಒಂದರಂತೆ ಕನ್ನಡ ಮಾಧ್ಯಮದ ಮಾದರಿ ಶಾಲಗಳನ್ನು ಈ ಸಲ ಆರಂಭ ಮಾಡುತ್ತಿದ್ದಾರೆ. ಇದು ಒಂದು ಹೊಸ ನಾಂದಿಯಾಗಲಿ ಎಂದು ಹಾರೈಸುತ್ತೇನೆ. ಶೈಕ್ಷಣಿಕ ಆವಶ್ಯಕತೆಗಳು ಸಾಮಗ್ರಿಗಳ ಬಗ್ಗೆ ಸೆಂಟ್ರಲ್ ಸ್ಕೀಮ್ ಬಂದಿದೆ. ಮ್ಯಾಕ್ರೋ ಪ್ಲಾನಿಂಗ್ ಎಂದು. ಅದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಕಾಲೋನಿನಲ್ಲಿ ಅಳವಡಿಸಲ್ಪಟ್ಟಿದೆ ಎಂದು ಕೇಳಿದ್ದೇನೆ. ಯಾರು ಇದನ್ನು ಸರ್ವೆ ಮಾಡಿದ್ದರು ಅವರು ಒಂದು ಮೊತ್ತಕ್ಕೆ ಸ್ಥೂಲವಾಗಿ ಒಂದು ರೂಪುರೇಷೆಯನ್ನು ತಯಾರು ಮಾಡಿದರು. ತಯಾರು ಮಾಡಿ ರಾಜ್ಯ ಸರಕಾರಕ್ಕೆ ಬಂದಾಗ ಅದು ಕಟ್ ಆಯಿತು. ಯೋರೋ ಕೇಂದ್ರದ ತಜ್ಞರು ಬಂದು ಹೇಳಿದರು ಎಂದು ಕಟ್ ಆಯಿತು? ಮತ್ತೆ ಕಟ್ ಆಗುವ ಸ್ಥಿತಿ ಇದೆ ಎಂದು ಕೇಳುತ್ತಿದ್ದೇನೆ. ಈ ರೀತಿ ಕಟ್ ಆಗುತ್ತಾ ಹೋದರೆ ಈ ಮ್ಯಾಕ್ರೋಪ್ಲಾನ್‌ಗೆ ಬೆಲೆ ಬರುವುದಿಲ್ಲ. ಸಮಗ್ರವಾಗಿ ತಾವು ಒಂದು ತಾಲೋಕನ್ನು ತೆಗೆದುಕೊಂಡು ಮುಂದೆ ಎಲ್ಲಾ ತಾಲೋಕುಗಳು ಏನು ಬರುತ್ತದೆ, ಅವುಗಳನ್ನು ಸಹ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾ, ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೇಳಿದರೆ ಮತ್ತೆ ದೊಡ್ಡದಾಗುತ್ತದೆ. ಆದುದರಿಂದ ಅದಕ್ಕೆ ಮೂಲಭೂತವಾಗಿ ಯಾವ ಅಭಿಪ್ರಾಯ ಕಲ್ಪನೆ ಇಟ್ಟುಕೊಂಡಿದ್ದೀರಿ ಅದು ಪೂರ್ತಿ ಆಗುವ ಹಾಗೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಡ್ರಾಪ್‌ಔಟ್ಸ್ ಪಡೆಯುವುದಕ್ಕೆ ಇರುವ ಅಕ್ಷಯ ಕಾರ್ಯಕ್ರಮದ ಯೋಜನೆ ಒಳ್ಳೆಯದು. ಆದರೆ ಈಗ ಮಾಡುತ್ತಾ ಇರತಕ್ಕಂಥ ನಿಯೋಜಿತ ರೀತಿಯ ಅನುಷ್ಠಾನ ಸಮರ್ಪಕವೋ ಅಲ್ಲವೋ ಎಂಬ ಬಗ್ಗೆ ನನ್ನ ಹತ್ತಿರ ಎರಡು ಅಭಿಪ್ರಾಯಗಳಿವೆ.ಅನೇಕ ನಮ್ಮ ಮಾನ್ಯ ಸದಸ್ಯರುಗಳು ಅದೇ ರೀತಿ ಹೇಳುತ್ತಿದ್ದಾರೆ.ನಾವು ಹೇಳುವುದುಂತಹದು ಈ ಹಣವನ್ನು ಅಧ್ಯಾಪಕರ ನೇಮಕಕ್ಕಾಗಿ ಅಥವಾ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಉಪಯೋಗಿಸಿ. ಎಲ್ಲಿ ಡ್ರಾಪ್‌ಔಟ್ಸ್ ಇಲ್ಲ. ಎಲ್ಲಿ ಹಾಜರಾತಿ ಉತ್ತಮವಾಗಿರುತ್ತದೆ. ಎಲ್ಲಿ ಹಾಜರಾತಿಯನ್ನು ಉತ್ತಮಗೊಳಿಸಬೇಕು. ಅದರ ಆಧಾರದ ಮೇಲೆ ಇದನ್ನು ಕೊಡಿರಿ. ಯಾವ ಕ್ಷೇತ್ರದಲ್ಲಿ ಯಾವ ಶಾಲೆಗಳಲ್ಲಿ ಪರ್‌ಸೆಂಟೇಜ್ ಆಫ್ ಅಟೆಂಡೆನ್ಸ್ ಬಹಳ ಹೈ-ಇರುತ್ತದೆ. ಪರ್ಸೆಂಟೇಜ್ ಆಫ್ ಡ್ರಾಪ್‌ಔಟ್ಸ್ ಬಹಳ ಕಡಿಮೆ ಇರುತ್ತೆ. ಅಂತಹ ಕಡೆ ಅಧ್ಯಾಪಕರ ನೇಮಕ, ಶಾಲಾ ಕಟ್ಟಡಗಳ ನಿರ್ಮಾಣ ಈ ರೀತಿ ಒಂದು ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಸುಮ್ಮನೆ ಒಂದು ರೂಪಾಯಿ ಎರಡು ರೂಪಾಯಿ ಬ್ಯಾಂಕಿನಲ್ಲಿಡುವುದರಿಂದ ಉಪಯೋಗವಾಗುವುದಿಲ್ಲ. ಆದರೆ ಇದರ

ಉದ್ದೇಶವೇನೋ ಬಹಳ ಒಳ್ಳೆಯದು. ನಾನು ಮಾನ್ಯ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಮಾಡಿದಂಥ ಉದ್ದೇಶವನ್ನು ದೂರುತ್ತಿಲ್ಲ. ಪ್ರಾಯೋಗಿಕವಾಗಿ ತರುವಾಗ ಅದು ಸದುಪಯೋಗವಾಗಬೇಕೆಂಬ ದೃಷ್ಟಿಯಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ.

ಇನ್ನು ನಮ್ಮ ಶಿಕ್ಷಣದ ರಂಗದ ಹೊಸ ತಿರುವು ಅಥವಾ ವಾರ್ಷಿಕ ವರದಿಯನ್ನು ನೋಡಿದರೆ ಶಾಲಾ ಸಂಕುಲ ಯೋಜನೆ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ವಿದ್ಯಾರ್ಥಿ ನಿಧಿ ವಿದ್ಯಾರ್ಥಿಗಳ ಕ್ರೀಡಾ ನಿಧಿ ಲೋಕ ಶಿಕ್ಷಣ ಗ್ರಾಮಾಂತರ ಪ್ರದೇಶದಲ್ಲಿ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ನಮ್ಮ ಜಿಲ್ಲೆಯಲ್ಲಿ ನೂರು ಪರ್ಸೆಂಟ್ ಅಚೀವ್‌ಮೆಂಟ್ ಆಗಿದೆ. ಜನ ಶಿಕ್ಷಣ ನಿಲಯ ಅಕ್ಷರ ಪ್ರಯೋಜನ ಸಂಪೂರ್ಣವಾಗಿ ಸಾಕ್ಷರತಾ ಕಾರ್ಯಕ್ರಮ ಶಿಕ್ಷಕರ ತಂತ್ರಜ್ಞರ ಮಾರ್ಗದರ್ಶನ ಮೌಲ್ಯಮಾಪನ ಕೇಂದ್ರ ಪುರಸ್ಕೃತ ಯೋಜನೆಗಳು ಇವೆಲ್ಲವುಗಳು ಇದ್ದು ಅದರ ಬಗ್ಗೆ ಸಮಗ್ರವಾಗಿ ಒಂದು ಪ್ರಯೋಜನ ನಮ್ಮ ರಾಜ್ಯಕ್ಕೆ ಸಿಗುವ ಹಾಗೆ ಆಗಬೇಕು. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಈಗಾಗಲೇ 4.84 ಕೋಟಿ ರೂಪಾಯಿಗಳು ಇದೆ. ಅದರ ಸಂಪೂರ್ಣ ಉಪಯೋಗ ನಮಗೆ ಸಿಗಬೇಕು. ಗ್ರಂಥಾಲಯ ಇಲಾಖೆಯಿಂದ ಪ್ರತಿ ಮಂಡಲ ಪಂಚಾಯತಿ ಮಟ್ಟದಲ್ಲಿ ಒಂದೊಂದು ಗ್ರಾಂಥಾಲಯ ಶಾಖೆ ಪ್ರಾರಂಭ ಆಗಬೇಕು. ನಮ್ಮ ರಾಜ್ಯದಲ್ಲಿ ಒಂದು ಗ್ರಾಂಥಾಲಯ ಪ್ರಾಧೀಕಾರ ಅಂತ ಇದೆ. ನನ್ನನ್ನು ವಿಧಾನಸಭೆಯಿಂದ ಅಲ್ಲಿಗೆ ಒಬ್ಬ ಸದಸ್ಯನನ್ನಾಗಿ ನಾಮಕರಣ ಮಾಡಿದರು. ಕಳೆದ ಒಂದು ವರ್ಷದಿಂದ ಆ ಗ್ರಂಥಾಲಯ ಪ್ರಾಧೀಕಾರದ ಸಭೆ ಆಗಲಿಲ್ಲ. ಆ ಗ್ರಂಥಾಲಯ ಪ್ರಾಧೀಕಾ ಅಂದರೆ ಏನು ಅಂತ ತಿಳಿದುಕೊಳ್ಳುವುದಕ್ಕೆ ನನಗೆ ಸಾಧ್ಯವಾಗಲಿಲ್ಲ. ನಾನು ಹೇಳಿವುದು ಸಭೆ ಆಗದಿದ್ದರೆ ಹೋಗಲಿ. ನಮ್ಮ ಹಳ್ಳಿಗಳಲ್ಲಿ ಗ್ರಂಥಾಲಯಗಳು ಆಗಬೇಕು. ನಮ್ಮ ಬೈಂದೂರು ಹಾಗೂ ಕುಂದಾಪುರದಲ್ಲಿ ಗ್ರಂಥಾಲಯದ ಕಟ್ಟಡಗಳು ಆಗಬೇಕು ಎಂದು ನಾವು ಕೇಳಿಕೊಂಡಿದ್ದೇವೆ. ಅದು ಆಗಲಿ ಎನ್ನುವ ಮಾತನ್ನು ಹೇಳಿ ಈ ಅದ್ಭುತ ಕಲ್ಪನೆಯ ಪ್ರಗತಿ ಶೀಲ ಮುನ್ನೋಟ ಆದರ್ಶಪೂರ್ಣ ಆಯವ್ಯಯಪತ್ರವನ್ನು ನಾನು ಬೆಂಬಲಿಸುತ್ತೇನೆ. ಆದರೆ ಅದಕ್ಕೆ ಇಟ್ಟಂತಹ ಹಣ ಸಾಲದು. ಹಣ ಹೆಚ್ಚಿಸಿಕೊಳ್ಳಬೇಕೆಂದು ಹೇಳಿ ನರ್ಸರಿ ಪ್ರೈಮರಿ ಸೆಕೆಂಡರಿ ವಿದ್ಯೆಯ ದಾರಿ ಪದವೀ ಸ್ನಾತಕೋತ್ತರ ತಾಂತ್ರಿಕತೆಯ ಮಾದರಿ ಹೊಸ ತಿರುವು ಸಚಿವರಾದ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ ಪಡೆಯಲಿ ಹಾಗೂ ನವೋ ನವೋನ್ಮೇಶ ಶಾಲಿ ಆಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ।। ಜಿ. ಪರಮೇಶ್ವರ್ (ಮಧುಗಿರಿ) :- ಮಾನ್ಯ ಅಧ್ಯಕ್ಷರೇ. ಏನು ನಮ್ಮ ವಿದ್ಯಾಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಇವತ್ತು ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ಸ್ವಾಗತಿಸುತ್ತಾ ನನಗೆ ತಿಳಿದ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. 1990ರಲ್ಲಿ 8ನೇ ಪ್ಲಾನ್ ಅಪ್ರೋಚ್ ಪೇಪರ್‌ನ್ನು ಪ್ರಜೆಂಟ್ ಮಾಡಿದ್ದಾರೆ. ಆ 8ನೇ ಪ್ಲಾನ್ ಅಪ್ರೋಚ್ ಸಬ್‌ಮಿಟ್ ಮಾಡುವಾಗ ನಮ್ಮ ಹಿಂದಿನ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಶ್ರೀಮಾನ್ ಡಿ.ಎಂ. ನಂಜುಂಡಪ್ಪನವರು ಒಂದು ಕಾಮೆಂಟ್ ಮಾಡಿದ್ದಾರೆ. ಅದೇನೆಂದರೆ.

"One could pose the question whether the whole approach should not have started with educationsince educationis the key to human resource development which is crucial for the the evaluation of an equitable and decentralised social order towards which the so-called social transformation should be heading." ಅವರು ಹೀಗೆ ಆ ಅಪ್ರೋಚ್ ಪೇಪರ್‌ನಲ್ಲಿ ನಾಲ್ಕಾರು ಮೆಜರ್

ಏರಿಯಾಸ್ ಕೆಟಗರೈಜ್ ಮಾಡಿದರು. ಆದರಲ್ಲಿ ವಿದ್ಯಾ ಕ್ಷೇತ್ರವನ್ನು ಏತಕ್ಕೆ ನೀವು ಮೊದಲು ತೆಗೆದುಕೊಂಡಿಲ್ಲ ಎನ್ನತಕ್ಕಂಥ ವಿಚಾರ. ಏಕೆಂದರೆ ಇವತ್ತು ಸಮಾಜವನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕಾದರೆ ಇವತ್ತು ಭಾರತ ಸಮಾಜ ನಮ್ಮ ಜನತೆ ನಮ್ಮ ಅಭಿವೃದ್ಧಿ ನಮ್ಮ ಎಲ್ಲಾ ಕಾರ್ಯಕ್ರಮಗಳು ಸಹ ಇವತ್ತು ಈ ಕ್ಷೇತ್ರದ ಮೇಲೆ ನಿಂತಿವೆ. ಆ ಕಾರಣಕ್ಕಾಗಿ ಇದನ್ನು ನೀವು ಮೊದಲನೆಯದಾಗಿ ತೆಗೆದುಕೊಳ್ಳಬೇಕಾಗಿತ್ತು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಇನ್ನು 1986ರಲ್ಲಿ ನಮಗೆ ಶಿಕ್ಷಣ ನೀತಿಯನ್ನು ದಿವಂಗತ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ರಾಜೀವ್‌ಗಾಂಧಿಯವರು ಕೊಟ್ಟರು. ಆದರಲ್ಲೂ ಸಹ ಒತ್ತಿ ಹೇಳಿದ್ದಾರೆ. ನಮ್ಮ ಸಂಸ್ಕೃತಿ ಏನಿದೆ ನಮ್ಮ ಪರಂಪರೆ ಏನಿದೆ ಅದನ್ನು ನಾವು ಹೆಚ್ಚಿನ ಮಟ್ಟದಲ್ಲಿ ನಮ್ಮ ಜನಗಳಿಗೆ ತಿಳುವಳಿಕೆ ಬರುವ ಹಾಗೆ ತಿಳಿಸಬೇಕಾಗುತ್ತದೆ. ಕಾರಣ ಏನು ಎಂದು ಅವರು ಆದರಲ್ಲಿ ಹೇಳಿದ್ದಾರೆ. 14 ವರ್ಷಗಳ ಒಳಗೆ ಇರತಕ್ಕಂಥ ಮಕ್ಕಳು ಏನಿದ್ದಾರೆ. ಅವರಿಗೆ ವ್ಯವಹಾರಿಕವಾಗಿ ತಿಳಿದುಕೊಳ್ಳತಕ್ಕಂಥ ಶಿಕ್ಷಣವನ್ನಾದರೂ ಕೊಡಬೇಕೆಂದು ಹೇಳಿದ್ದಾರೆ.

"Essence and role of education :

"Perceptions that contribute to the national cohesion, is scientific temper and independence of mind and spirit does furthering the goals of socialism, secularism and democracy enshrined in our constitution." ಇವತ್ತಿನ ದಿವಸ ಏನು ಈ ಸಭೆಯ ಮುಂದೆ ಆಯವ್ಯಯವನ್ನು ಇಟ್ಟಿದ್ದಾರೆ? ಇದರಲ್ಲಿ ವಿದ್ಯಾ ಕ್ಷೇತ್ರಕ್ಕೆ 4ನೇ ಸ್ಥಾನ ಸಿಕ್ಕಿದೆ. ಬಹುಶಃ ಕಳೆದ 2 ವರ್ಷದ ಆಯವ್ಯಯವನ್ನು ನೋಡಿದರೆ 90-91ರಲ್ಲಿ, 91-92ರ. ಹಾಗೂ 92-93ರ ಆಯವ್ಯಯವನ್ನು ನೋಡಿದರೆ. ಇವತ್ತು ನಾನು ವಿದ್ಯಾ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ 72.5 ಕೋಟಿ 90-91ರಲ್ಲಿ ಇಟ್ಟಿದ್ದರೆ 92-93ರಲ್ಲಿ 205 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಬಹುಶಃ ಏನು ಅವರ ಮನ್ಸಿನಲ್ಲಿ ಇಟ್ಟುಕೊಂಡಿದ್ದಾರೋ ಏನು ಕಾರ್ಯಕ್ರಮಗಳನ್ನು ರೂಪಿಸಿದ್ದಾರೋ ಅವೆಲ್ಲಕ್ಕೂ ಹಣ ಸಾಕಾಗದೇ ಇದ್ದರೂ ಸಹಾ ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಟ್ಟಿದ್ದಾರೆ. ಇವತ್ತಿನ ದಿವಸ ನಾನು ಒಂದು ಶಂಕೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. 1991-92ರಲ್ಲಿ ತುಮಕೂರು ಜಿಲ್ಲಾ ಪರಿಷಥ್ ವತಿಯಿಂದ ಏನು ಪ್ರೈಮರಿ ಎಜುಕೇಷನ್‌ಗೆ ಮತ್ತು ಸೆಕೆಂಡರಿ ಎಜುಕೇಷನ್‌ಗೆ ಆ್ಯನ್ಯೂಯಲ್ ಪ್ರೋಗ್ರಾಮ್‌ನಲ್ಲಿ ಪ್ರೈಮರಿ ಎಜುಕೇಷನ್‌ಗೆ 3 ಕೋಟಿ 27 ಲಕ್ಷ ರೂಪಾಯಿ ಇಟ್ಟಿದ್ದರು. ನಾನ್ ಪ್ಲಾನ್‌ನಲ್ಲಿ 23 ಕೋಟಿ 83 ಲಕ್ಷ ಇಟ್ಟಿದ್ದರು. ಆದರೆ ಸರ್ಕಾರದಿಂದ ಬಿಡುಗಡೆ ಆದ ಹಣ ಇದರಲ್ಲಿ 19 ಕೋಟಿ ನಾನ್ ಪ್ಲಾನ್‌ನಲ್ಲಿ 1 ಕೋಟಿ 89 ಲಕ್ಷ ಅದೇ ರೀತಿ ಸೆಕೆಂಡರಿ ಎಜುಕೇಷನ್‌ಗೆ 13 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಬಿಡುಗಡೆಯಾದದ್ದು ಬರೀ 9 ಕೋಟಿ ರೂಪಾಯಿಗಳು. ಆದರೆ ಇವತ್ತು ಹೆಚ್ಚಿನ ಹಣವನ್ನು ಈ ಆಯವ್ಯಯದಲ್ಲಿ ಇಟ್ಟಿದ್ದಾರೆಂದು ಬಹಳ ಸಂತೋಷದಿಂದ ಹೇಳುತ್ತೇನೆ. ಆದರೆ ಈ ಹಣ ಎಲ್ಲಿಗೆ ತಲುಪಿಸಬೇಕಾಗಿದೆಯೋ ಅಲ್ಲಿಗೆ ತಲುಪಿಸದಿದ್ದರೆ ಏನು ಪ್ರಯೋಜನವಾಗುವುದಿಲ್ಲ. ಇವತ್ತು 91-92ರ ಆಯವ್ಯಯದಲ್ಲಿ ಒಂದು ಜಿಲ್ಲೆಗೆ 6 ಕೋಟಿ ರೂಪಾಯಿಯನ್ನು ಕಡಿಮೆ ಮಾಡುವುದಾದರೆ ಅದನ್ನು ನೀವು ಆಯವ್ಯಯದಲ್ಲಿ ತೋರಿಸಿಲ್ಲ ಏಕೆ? ಇವತ್ತು ನಾವು ಬಹಳ ಆಸೆಯಿಂದ ನೋಡಿದ್ದೇವೆ. ಶಾಸಕರುಗಳಾಗಲೀ. ಮತ್ತು ವಿದ್ಯಾ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕದಾಗಲೀ ಅಥವಾ ವಿದ್ಯೆ ಕಲಿಯತಕ್ಕಂಥರಾಗಲೀ. ಹೆಚ್ಚು ಹಣವನ್ನು ವಿದ್ಯಾ ಕ್ಷೇತ್ರಕ್ಕೆ ಇಟ್ಟಿದ್ದಾರೆಂದು ಹಾಗೂ ಇನ್ನೂ ಅನೇಕ ಅಭಿವೃದ್ಧಿ ಕೆಲಸ ಆಗಬಹುದು ಎಂದು ತಿಳಿದುಕೊಂಡಿದ್ದರು.

ಆದರೆ ಆಯವ್ಯಯದಲ್ಲಿ ಇಟ್ಟಿರತಕ್ಕಂಥ ಹಣವನ್ನು ಬಿಡುಗಡೆ ಮಾಡದ ಕಡಿಮೆ ಮಾಡಿದ್ದೇ ಆದರೆ It will never serve the purpose. ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಏನೆಂದರೆ. ಏನು ಹಣವನ್ನು ಇಟ್ಟಿದ್ದೀರಿ ಇಷ್ಟು ಹಣವನ್ನು ಸಹ ಇವತ್ತಿನ ದಿವಸ ಈ ಕಾರ್ಯಕ್ರಮಕ್ಕೆ ಕೊಟ್ಟರೆ ಮಾತ್ರ ಏನು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ ಆ ಕಾರ್ಯಕ್ರಮಗಳು ಆಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ನಾನು ಈ ವರದಿಯನ್ನು ನೋಡಿದಾಗ 1ನೇ ತರಗತಿಯಿಂದ 4ನೇ ತರಗತಿಯವರೆಗೆ 90-91ರಲ್ಲಿ 48 ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ 91-92ರಲ್ಲಿ 42 ಲಕ್ಷಕ್ಕೆ ಇಳಿದಿದೆ. ಹೆಚ್ಚು ಆಗಬೇಕಾದುದು ಕಡಿಮೆಯಾಗಿದೆ. ಇದೇ ರೀತಿ ಬೇರೆ ಕ್ಲಾಸ್‌ಗಳಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಇವತ್ತು ಒಂದು ಒಳ್ಳೆಯ ಆಸೆಯಿಂದ ನಮ್ಮ ಮುಖ್ಯ ಮಂತ್ರಿಯವು "ಅಕ್ಷಯ" ಎಂಬ ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದರಲ್ಲಿ ಒಂದು ಹಿನ್ನೆಲೆ ಇದೆ. ಇವತ್ತು ಮೊದಲಿಗೆ ಮಾತನಾಡಿದಂತ ಎಲ್ಲಾ ಮಾನ್ಯ ಸದಸ್ಯರೂ ಅವರವರ ಅಭಿಪ್ರಾಯಗಳನ್ನು ಈ ಬಗ್ಗೆ ಹೇಳಿದ್ದಾರೆ. ಇವತ್ತಿನ ದಿವಸ ಯಾವುದಾದರು ರೀತಿಯಲ್ಲಿ ಏನು 14 ವರ್ಷದ ಕೆಳಗಿನ ಮಕ್ಕಳು ಶಾಲೆಗೆ ಬರಲೇಬೇಕು ; ಅವರು ವಿದ್ಯೆಯನ್ನು ಕಲಿಯಬೇಕು ಅನ್ನತಕ್ಕಂಥ ಒಂದು ರೀತಿಯಲ್ಲಿ ಶಾಲೆಗಳಿಗೆ ಬರುವ ಮಕ್ಕಳಿಗೆ ದಿನಕ್ಕೆ ಒಂದು ರೂಪಾಯಿ ಕೊಡಬೇಕೆನ್ನುವ ದೃಷ್ಟಿಯಿಂದ ಈ "ಅಕ್ಷಯ" ಕಾರ್ಯಕ್ರಮ ಮಾಡಿದ್ದಾರೆ. ಒಂದು ರೂಪಾಯಿ ಕೊಡುವ ಬದಲು ಊಟ ಹಾಕಿದ್ದರೆ ಇದು ಬಹಳ ಚೆನ್ನಾಗಿರತಕ್ಕಂಥ ಕಾರ್ಯಕ್ರಮ ಆಗುತ್ತಿತ್ತು. ಆದರೂ ಈ ಕಾಯಕ್ರಮವನ್ನು ಕಾರ್ಯಗತ ಮಾಡಬೇಕು. ಮೊನ್ನೆ ಇಲಾಖೆಯವರು ಹೇಳುತ್ತಿದ್ದರು. ಏನೆಂದರೆ. ಮಕ್ಕಳ ಹಾಜರಾತಿ ಸಂಖ್ಯೆ 20 ಪರ್‌ಸೆಂಟ್ ಜಾಸ್ತಿಯಾಗಿದೆ ಎಂದು. ಇದನ್ನು ಕಾದು ನೋಡಬೇಕಾಗಿದೆ. ಒಂದು ವರ್ಷ ಆಗಲಿ ಎರಡು ವರ್ಷ ಆಗಲಿ. 5 ವರ್ಷ ಆಗಲೀ. ಇದನ್ನು ಕಾದು ನೋಡಬೇಕಾಗಿದೆ.

ಈ ಕಾರ್ಯಕ್ರಮವು ಪ್ರಾರಂಭವಾಗಿ ನಾಲ್ಕಾರು ತಿಂಗಳ ಮಾತ್ರ ಆಗಿವೆ. ಇವೊತ್ತಿನ ದಿವಸ ಒಂದು ರೂಪಾಯಿಯನ್ನು ಕೊಡುತ್ತಾರೆ ಎಂಬ ಆಸೆಯಿಂದ ಮಕ್ಕಳು ಬಂದಿರಹುದು. ಆದರೆ ಕ್ರಮೇಣ ನಾಲ್ಕೈದು ವರ್ಷಗಳಲ್ಲಿ ನಮಗೆ ಇದು ಹೆಚ್ಚಿಗೆ ಉಪಯೋಗ ಆಗುವುದಾದರೆ, ಈ ಕಾರ್ಯಕ್ರಮವನ್ನು ನಡೆಸುವುದರಲ್ಲಿ ಏನೂ ತಪ್ಪಿಲ್ಲ. ಇದು ಒಳ್ಳೆಯ ಕಾರ್ಯಕ್ರಮ ಎಂದು ಹೇಳಿ. ನಾನು ಅಂದುಕೊಂಡಿದ್ದೇನೆ. ಇನ್ನು ಬಹಳಷ್ಟು ಹಣವನ್ನು ನಾವು ಈ ಅಡಲ್ಟ್ ಎಜುಕೇಷನ್‌ಗೆ ಖರ್ಚು ಮಾಡಿದ್ದೇವೆ. ನಾವು ಸಾಕ್ಷರತಾ ಯೋಜನೆಯನ್ನು ಜಾರಿ ಮಾಡಿದ್ದೇನೆ. 9 ಇಂದ 35 ವರ್ಷಗಳವರೆಗಿನವರಿಗೆ ವಿದ್ಯೆಯನ್ನು ಕೊಡಬಹುದು. ಮಂಗಳೂರು ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಮಾಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿಯೂ ಕೂಡ ಈ ಕಾರ್ಯಕ್ರಮವು ನಡೆಯುತ್ತಾ ಇದೆ. ಆದರೆ 35 ವರ್ಷಗಳ ಅವಧಿ ಆದನಂತರ ಇನ್ನೂ ಅವರಿಗೆ ಮಕ್ಕಳು ಹುಟ್ಟುತ್ತಿರುತ್ತವೆ. ಆದರೆ ನೀವು ಒಂದು ವರ್ಷಕ್ಕೆ ಮಾತ್ರ ನಾವು ಸಂಪೂರ್ಣ ಸಾಕ್ಷರತೆಯನ್ನು ಕೊಟ್ಟಿದ್ದೇವೆ. ಎಂದು ಹೇಳಿತಕ್ಕಂಥಾದ್ದು ಏನಿದೆ. ಅದು ಸರಿಯಲ್ಲ : ಇದು ಕಂಟಿನ್ಯೂಯಸ್‌ಪ್ರೋಸೆಸ್ ಆಗಿ ಇರಬೇಕು. ಏನು ಮಕ್ಕಳು ಶಾಲೆಗೆ ಸೇರುತ್ತಾರೆ, ಆ 14 ವರ್ಷದ ಮಕ್ಕಳನ್ನು ಶಾಲೆಗಳಿಗೆ ಸೇರಿಸತಕ್ಕಂಥ ಕಂಟಿನ್ಯೂಯಸ್ ಪ್ರೊಸೆಸ್‌ನ್ನು ನೀವು ಮಾಡದೆ. ಒಂದು ವರ್ಷದಲ್ಲಿ ನಾವು ಸಂಪೂರ್ಣ ಸಾಕ್ಷರತೆಯನ್ನು ಮಾಡಿದ್ದೇವೆ ಎಂದರ ಹೇಳಿಕೊಳ್ಳುವುದು ನಿಜಕ್ಕೂ ತಪ್ಪಾಗುತ್ತದೆ ಹಾಗೂ ತಪ್ಪುಕಲ್ಪನೆಯಾಗುತ್ತದೆ ಎನ್ನತಕ್ಕಂಥಾದ್ದು ನನ್ನ ಭಾವನೆ. ಇನ್ನು ಅಧ್ಯಾಪಕರ ರಿಕ್ರೂಟ್‌ಮೆಂಟ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕಾಗುತ್ತದೆ. ಕಳೆದ ಎಂಟು ವರ್ಷಗಳಲ್ಲಿ ಒಬ್ಬ ಉಪಾಧ್ಯಾಯರನ್ನೂ ಕೂಡ ರಿಕ್ರೂಟ್‌ಮೆಂಟ್ ಮಾಡಲಿಲ್ಲ. ಇವೊತ್ತಿನ ದಿವಸ ಅನೇಕ ಶಾಲೆಗಳಲ್ಲಿ. ಅದು ನನ್ನ ಕ್ಷೇತ್ರ

ಇರಬಹುದು. ಬೇರೆಯವರ ಕ್ಷೇತ್ರ ಇರಬಹುದು, ಯಾವದೇ ಜಿಲ್ಲೆಗಳಲ್ಲಿ ಯಾವುದೇ ತಾಲ್ಲೂಕಿನಲ್ಲಿಯ ಶಾಲೆಗಳು ಇರಬಹುದು, 200-300 ಜನ ವಿದ್ಯಾರ್ಥಿಗಳು ಇರತಕ್ಕಂಥ ಶಾಲೆಗಳು, ಅದು ಪ್ರೈಮರಿ ಸ್ಕೂಲ್ ಆಗಲಿ. ಮಿಡ್ಲ್‌ಸ್ಕೂಲ್ ಆಗಲಿ, ಅಲ್ಲಿ ಒಬ್ಬರು ಅಥವಾ ಇಬ್ಬರು ಶಿಕ್ಷಕರು ಇರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಕಳೆದ 8-10 ವರ್ಷಗಳಿಂದ ಒಬ್ಬ ಉಪಾಧ್ಯಾಯರನ್ನು ಸಹ ರಿಕ್ರೂಟ್ ಮಾಡಿದ್ದೇವೆ. ಆದರೆ ಇನ್ನೂ ಸಹ ಬಹಶಃ 25 ಸಾವಿರ ಶಿಕ್ಷಕರನ್ನು ನೇಮಕಾತಿ ಮಾಡಿದರೂ ಕೂಡ ನಮ್ಮ ಶಿಕ್ಷಕರ ಭವಣೆಯು ತಪ್ಪುವುದಿಲ್ಲ, ಯಾವ ಕ್ಷೇತ್ರಕ್ಕೆ ನಾವು ಉತ್ತೇಜನ ಕೊಟ್ಟು ಇಡೀ ಸಮಾಜವನ್ನು ಬದಲಾವಣೆ ಮಾಡಬೇಕೆಂದು ಈ ಕಾರ್ಯಕ್ರಮವನ್ನು ರೂಪಿಸಿಕೊಂಡು ಹೊರಟಿದ್ದೇವೋ ಈ ಒಂದು ಕಾರಣಕ್ಕಾಗಿಯಾದರೂ ನಾವು ಶಿಕ್ಷಕರನ್ನು ನೇಮಕ ಮಾಡಲೇ ಬೇಕಾಗುತ್ತದೆ. ನನ್ನದೇ ಕ್ಷೇತ್ರದಲ್ಲಿ ಅನೇಕ ಶಾಲೆಗಳಲ್ಲಿ 200-300 ಜನ ವಿದ್ಯಾರ್ಥಿಗಳು ಇರುವ ಕಡೆಗಳಲ್ಲಿ ಒಬ್ಬರು. ಇಬ್ಬರು ಶಿಕ್ಷಕರು ಇದ್ದಾರೆ. ನನ್ನ ಕ್ಷೇತ್ರದಲ್ಲಿ ಆಪರೇಷನ್ ಬ್ಲಾಕ್‌ಬೋರ್ಡ್ ಎಂಬ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಇದರ ಕೆಳಗೆ ಸಹ ಇನ್ನೂ ಅನೇಕ ಜನ ಶಿಕ್ಷಕರ ಕೊರತೆಯು ಇದೆ. 168 ಶಾಲೆಗಳನ್ನು ನಾವು ಕಟ್ಟಿದ್ದೇವೆ. ಆದರೆ 168 ಶಿಕ್ಷಕರ ನೇಮಕವಾಗದಿದ್ದರೆ ಆ ಶಾಲೆಗಳಲ್ಲಿ ಮಕ್ಕಳಿಗೆ ಪಾಠವನ್ನು ಹೇಳಿಕೊಡುವವರು ಯಾರು? ಇದೊಂದು ಕೇಂದ್ರ, ಸರಕಾರದ ಸ್ಕೀಂ ಆಗಿದ್ದು ಹಣ ಬಿಡುಗಡೆಯಾಗಿದ್ದು, ಇದು ರಾಜ್ಯ ಸರಕಾರದ್ದೇ ಇರಬಹುದು ಜಿಲ್ಲಾ ಪರಿಷತ್‌ನವರದ್ದೇ ಇರಬಹುದು. ಆದರೆ ಅದಕ್ಕೆ ಇನ್ನೂ ಸಹ ಯಾವುದೇ ರೀತಿಯ ಕಾರ್ಯಕ್ರಮವನ್ನು ರೂಪಿಸಿಕೊಂಡಿಲ್ಲದಿರುವುದು ಸರಿಯಲ್ಲ. ಈ ಬಗ್ಗೆ ಮಾನ್ಯ ಸಚಿವರು ಬಹಳ ಶೀಘ್ರವಾಗಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ರಿಕ್ರೂಟ್‌ಮೆಂಟ್‌ನಲ್ಲಿ ಒಂದು ದೊಡ್ಡ ತಪ್ಪು ಅಥವಾ ಅಪರಾಧವೇ ನಡೆಯುತ್ತಾ ಇದೆ ಎಂದರೆ ಅದು ತಪ್ಪಾಗಲಾರದು. ಪ್ರೈವೇಟ್ ಎಡೆಡ್ ಅಥವಾ ಅನ್-ಎಡೆಡ್ ಸಂಸ್ಥೆಗಳು ಬಹಳಷ್ಟಿವೆ. ನನಗನ್ನಿಸಿದ ಹಾಗೆ ಕರ್ನಾಟಕದಲ್ಲಿ ನೂರಕ್ಕೆ ಐವತ್ತು ಭಾಗದಷ್ಟು ಖಾಸಗಿ ವಿದ್ಯಾಸಂಸ್ಥೆಗಳು ಇವೆ. ಅವರು ಅವರವರಿಗೆ ತಿಳಿದ ರೀತಿಯಲ್ಲಿ ಸರಕಾರಕ್ಕೆ ಒತ್ತಾಗಿ ಕೆಲಸ ಮಾಡುತ್ತಾ ಇದ್ದಾರೆ ; ಸಮಾಜದಲ್ಲಿ ಅವರದ್ದೇ ಒಂದು ಕಾಂಟ್ರಿಬ್ಯೂಶನ್ ಇದೆ. ಅದರ ಬಗ್ಗೆ ನಾನು ಪ್ರಸ್ತಾವ ಮಾಡಲು ಹೋಗುವುದಿಲ್ಲ. ಆದರೆ ಈ ಶಾಲೆಗಳಲ್ಲಿ ಏನು ತಪ್ಪು ನಡೆಯುತ್ತಾ ಇದೆ? ನಮ್ಮದೇ ಆದ ಒಂದು ನೀತಿಯಿದೆ. ಯಾವುದೇ ಒಂದು ಶಾಲೆಯಲ್ಲಿ ಒಬ್ಬ ಉಪಾಧ್ಯಾಯನನ್ನು ನೇಮಿಸಬೇಕಾದರೆ ಒಂದು ರೋಸ್ಟರ್ ಸಿಸ್ಟಂನ್ನು ಮಾಡಿದ್ದಾರೆ. ಎಸ್‌ಸಿ, ಎಸ್‌ಟಿಯವರಿಗಾಗಲೀ, ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗಾಗಲೀ, ಅಥವಾ ಗ್ರೂಪ್ ಎಬಿಸಿಡಿ ಎಂದು ಮಾಡಿದ್ದಾರೆ. ಆದರೆ ಇವೊತ್ತು ಅನೇಕ ಖಾಸಗಿ ಎಡೆಡ್ ಅಥವಾ ಅನ್‌ಎಡೆಡ್ ಸಂಸ್ಥೆಗಳು ಈ ರೋಸ್ಟರ್ ಸಿಸ್ಟಂನ್ನು ಅನುಸರಿಸಿಲ್ಲ. ಆದರೂ ಕಳೆದ ಹತ್ತಾರು ವರ್ಷಗಳಿಂದ ಅವರನ್ನು ಯಾರೂ ಪ್ರಶ್ನೆ ಮಾಡಲಿಲ್ಲ. ಅವರಿಗೆ ಸರಕಾರದವು ಗ್ರಾಂಟ್ಸ್ ಕೊಡುತ್ತಾ ಇದ್ದಾರೆ. ಆದರೆ ಇವೊತ್ತಿನ ದಿವಸ ನೀವು ಅದಕ್ಕೆ ಒಂದು ಕಡಿವಾಣವನ್ನು ಹಾಕಲೇ ಬೇಕಾಗುತ್ತದೆ. ಸಾವಿರಾರು ಜನರಿಗೆ ನೀವು ಕೆಲಸ ಕೊಟ್ಟ ಹಾಗೆ ಆಗುತ್ತದೆ, ಅವರು ಮಾಡತಕ್ಕಂಥ ತಪ್ಪನ್ನು ನೀವು ಕಂಡುಹಿಡಿದ ಹಾಗೆ ಆಗುತ್ತದೆ. ಸರಕಾರಕ್ಕೆ ಒಂದಿಷ್ಟು ಹಣವಾದರೂ ಉಳಿಯುತ್ತದೆ. ಇಂಥ ಅನೇಕ ಶಾಲೆಗಳು ಇವೆ ; ಅದಕ್ಕಾಗಿ ಇದನ್ನು ಒಂದು ಪ್ರಾಮುಖ್ಯವಾದ ವಿಚಾರ ಎಂದು ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ತಾವುಗಳು ಸಪೋರ್ಟಿಂಗ್ ಸ್ಟಾಫ್ ಅಂದರೆ. ಅಟೆಂಡರ್ಸ್, ಕ್ಲರ್ಕ್ಸ್, ಪೀವನ್ಸ್ ಬೇಕಾಗುವುದಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ತಾವು ನಿರ್ದಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿ. ಒಂದು ವೇಳೆ ಸಿಂಗಲ್ ಟೀಚರ್ಸ್ ಶಾಲೆಗಳು, ಅಥವಾ ಇಬ್ಬರು ಉಪಾಧ್ಯಾರುಗಳು ಇರತಕ್ಕಂಥ ಶಾಲೆಗಳು ಏನಿವೆ, ಅವರಿಗೆ ಒಬ್ಬ ಕ್ಲರ್ಕ್‌ನ್ನು ಕೊಡುವುದಕ್ಕೆ ಬರುವುದಿಲ್ಲ ; ನಿಮ್ಮ ಏನೊಂದು ಪ್ರೊಸೀಜರ್ ಇದೆ, ಅದರ ಪ್ರಕಾರವೇ

ನಿರ್ಧಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿ. ಮಾನ್ಯ ಸದಸ್ಯರಾದ ಚೌವಾಣ್‌ರು ರಾತ್ರಿ ಹೊತ್ತಿನಲ್ಲಿ ಎಮ್ಮೆಗಳು ಕುರಿಗಳು ಶಾಲೆಗಳಲ್ಲಿ ಬಂದಿರುತ್ತವೆಂದು ಹೇಳಿದರು. ಅದನ್ನು ಶುದ್ಧಮಾಡುವವರು ಯಾರು ಎಂದು ಕೇಳಿದರು. ಶಿಕ್ಷಕರಿಗೂ ನೀವು ಅದೇ ಜವಾಬ್ದಾರಿಯನ್ನು ಕೊಡುವುದಾದರೆ, ನಮಗೆ ಅದು ತೊಂದರೆಯಿಲ್ಲ. ಆದರೆ ಆ ಕೆಲಸವನ್ನು ಅವರು ಮಾಡುವುದಕ್ಕೆ ಆಗುವುದಿಲ್ಲ. ಆ ಜವಾಬ್ದಾರಿಯನ್ನು ಕೂಡ ನಾವು ಅವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಆ ಕಾರಣಕ್ಕಾಗಿ ನಾನ್ ಟೀಚಿಂಗ್ ಸ್ಟಾಫ್‌ಗೆ ತಾವು ಏನು ಎಕಾನಮಿ ಮೆಜನರ್‌ನ್ನು ತಂದಿದ್ದೀರಿ. ಅದನ್ನು ದಯಮಾಡಿ ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ನಾವುಗಳು ಶಾಲೆಗಳಲ್ಲಿ ಓದುತ್ತಿರುವಾಗ ಯಾವ ಅಂಗಡಿಗಳಲ್ಲಿ ಬೇಕಾದರೂ ಪಠ್ಯಪುಸ್ತಕಗಳು ಇದ್ದುವು. ಇವೊತ್ತು ಸರಕಾರದವರೇ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಇಷ್ಟು ದೊಡ್ಡ ಜವಾಬ್ದಾರಿಯನ್ನು ನಾವು ವಹಿಸಿಕೊಂಡು, ಇಷ್ಟೊಂದು ಸಮಸ್ಯೆಗಳನ್ನು ಎದುರಿಸಿಕೊಂಡು. ಇದೂ ಒಂದು ದೊಡ್ಡ ಸಮಸ್ಯೆಯನ್ನು ನಾವು ಈ ವಿದ್ಯಾಕ್ಷೇತ್ರದಲ್ಲಿ ಎದುರಿಸಬೇಕಾಗಿದೆ. ಪರಿಣಾಮವಾಗಿ ಮಕ್ಕಳಿಗೆ ಪುಸ್ಕವು ಸರಿಯಾಗಿ ಸಿಗುತ್ತಾ ಇಲ್ಲ. ಪಟ್ಟಣಗಳಲ್ಲಿ ಸಿಗುತ್ತಿರಬಹುದು. ಅದರೆ ತಾಲ್ಲೂಕು ಮತ್ತು ಹೋಬಳಿಗಳಲ್ಲಿ. ಹಳ್ಳಿಗಳಲ್ಲಿ ನೀವು ನೋಡಿದರೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕಾದರೆ ಡಿಪಾರ್ಟ್‌ಮೆಂಟ್‌ನವರು ತಂದು ಸಪ್ಲೈ ಮಾಡಬೇಕಾದರೆ ಬಹುಶಃ ಡಿಸೆಂಬರ್ ತಿಂಗಳು ಆಗುತ್ತದೆ. ಹೀಗೆ ಡಿಸೆಂಬರ್‌ನಲ್ಲಿ ಪುಸ್ತಕಗಳನ್ನು ಕೊಟ್ಟಂಥ ಉದಾಹರಣೆಗಳನ್ನು ಬೇಕಾದರೆ ನಾನು ನಿಮಗೆ ಕೊಡುತ್ತೇನೆ. ಹೀಗಾದರೆ ನಾವು ಏನು ಮಾಡಿದ ಹಾಗೆ ಆಗುತ್ತದೆ ? ಆ ಕಾರಣಕ್ಕಾಗಿ ನಾನು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಏನು ಮೊದಲು ವ್ಯವಸ್ಥೆ ಇತ್ತಲ್ಲ ? ಯಾವ ಅಂಗಡಿಗಳಲ್ಲಿ ಬೇಕಾದರೂ ಕೊಂಡು ಕೊಳ್ಳಬಹುದಾಗಿತ್ತು. ಹಾಗೆ ಮಾಡಿ. ಅದಕ್ಕೆ ನೀವುಬೇಕಾದ ಯಾವುದೆ ಪ್ರೊಸೀಜರ್‌ನ್ನು ಮಾಡಿ. ನೀವೇ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಿ. ನಿಮ್ಮ ಪಠ್ಯಪುಸ್ತಕಗಳ ಡೈರೆಕ್ಟರ್ ಇದ್ದಾರೆ, ಅವರ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲಿ. ಆದರೆ ಪುಸ್ತಕಗಳೇ ಸಿಗದಿರತಕ್ಕಂಥ ವಿಚಾರಗಳು ಏನಿವೆ, ಅದರಿಂದ ನಿಜಕ್ಕೂ ಮಕ್ಕಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ.

ತಾವು ಕೊಟ್ಟ ಕರ್ನಾಟಕ ಎಟ್ ಆ ಗ್ಲಾನ್ಸ್ ಎಂಬ ಪುಸ್ತಕದಲ್ಲಿ ಪ್ರೌಢಶಿಕ್ಷಣ ಶಾಲೆಗಳು, 4,793 ಎಂದು ಇದೆ. ಆದರೆ ಈಗ ನಮಗೆ ಕೊಟ್ಟಿರುವ ರಿಪೋರ್ಟ್‌ನಲ್ಲಿ ನೋಡಿದರೆ, ಅದು ಕಡಿಮೆಯಾಗಿದೆ. ಇದ್ದಕ್ಕಿದ್ದ ಹಾಗೆ ಈ ಶಾಲೆಗಳು ಕಡಿಮೆಯಾಗಿ ಬಿಟ್ಟವಲ್ಲ ಎಂದು ನನಗೆ ಆಶ್ಚರ್ಯವಾಯಿತು. ಪದವಿಪೂರ್ವ ಕಾಲೇಜುಗಳು ಸಾವಿರದ ಮೂನ್ನೂರ ಇಪ್ಪತ್ತೆರಡು ಇವೆ, ಇಲ್ಲಿ 1991-92ಕ್ಕೆ ಬರೇ 982 ಆಗಿದೆ. ಕಳೆದ ಸಾಲು ಒಂದರಲ್ಲಿ ತಾವುಗಳು 131 ಪಿಯುಸಿ ಕಾಲೇಜುಗಳನ್ನು ಕೊಟ್ಟಿದ್ದೀರಿ. ಅಂದರೆ ಇಷ್ಟು ದೊಡ್ಡ ತಪ್ಪನ್ನು ಈ ಸದನಕ್ಕೆ ಕೊಟ್ಟಿದ್ದಾರೆ. ಅಂದರೆ, ಅದರ ಬಗ್ಗೆ ತಾವು ಒಂದು ಕ್ಲಾರಿಫಿಕೇಶನ್ ಕೊಡಬೇಕಾಗುತ್ತದೆ. ಬೇರೆ ರೀತಿಯಲ್ಲಿಯೂ ಶಿಕ್ಷಣ ಇಲಾಖೆಗೆ ಹಣವನ್ನು ಕೊಡುತ್ತಿದ್ದೇವೆ. ನಿರ್ಧಿಷ್ಟವಾದ ಗುರಿ ಇಲ್ಲದೆ ಕೊಡುತ್ತಾ ಇದ್ದೇವೆ. ಮಗೆ ದೊಡ್ಡ ಇಲಾಖೆಯು ಇದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಡಿಡಿಪಿಐಗಳು ಇದ್ದಾರೆ. ಅವರ ಕೈಕೆಳಗೆ ಬೇರೆ ಅಧಿಕಾರಿಗಳು ಇದ್ದಾರೆ. ಅವರುಗಳಿಗೆ ಒಂದು ಕಾರ್ಯಕ್ರಮವನ್ನು ಕೊಡಿ. ಜಿಲ್ಲೆಯಲ್ಲಿ ಯಾವ ತಾಲ್ಲೂಕಿಗೆ ಎಲ್ಲಿ ಶಾಲೆ ಬೇಕಾಗುತ್ತದೆ. ಇದನ್ನು ನೋಡಿ ಕೊಡಬೇಕು. ಇದನ್ನು ಮೊದಲು ಅಧಿಕಾರಿಗಳಿಗೆ ಕಷ್ಟವಾಗುವುದಿಲ್ಲ. ಹೀಗೆ ಕೊಡುವಾಗ ನಿಮ್ಮ ಕಾನೂನಿಗೆ ಅನುಸರಿಸಿ ಏನು ಮಾಡಬೇಕಾಗುತ್ತದೆ, ಜನಸಂಖ್ಯೆಯ ಆಧಾರದ ಮೇಲೆ ಅಥವಾ ಬೇರೆ ಯಾವುದೆ ಆಧಾರದ ಮೇಲೆ ಒಂದು ನಿರ್ಧಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿ ಒಂದು ಸೂಚನೆಯನ್ನು ಕೊಟ್ಟರೆ ಅದನ್ನು ಶಾಸಕರು ಕೂಡ ಪರಿಶೀಲಿಸಿ ನೋಡಬಹುದು. ಆದರೆ ತಾವು

ಡಿಪಾರ್ಟ್‌ಮೆಂಟಿನವರು ರೆಕಮೆಂಡ್ ಮಾಡಲಿಲ್ಲ ಎಂದು ಹೇಳಬಹುದು. ಇಲ್ಲಿ ಈ ರೀತಿ ಇದೆ ಎನ್ನತಕ್ಕಂಥ ಮಾತನ್ನು ತಾವು ಹೇಳಬಹುದು. ಅಗತ್ಯ ಇದ್ದರೆ ಅದನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಬಹಳ ಸುಲಭವಾಗುತ್ತದೆ. ಕರ್ನಾಟಕದಲ್ಲಿ ಈಗಾಗಲೇ 39 ರಿಂದ 40 ಸಾವಿರ ಪ್ರೈಮರಿ ಶಾಲೆಗಳು ಆಗಿವೆ. ಇದರ ಜೊತೆಗೆ 1322 ಜೂನಿಯರ್ ಕಾಲೇಜುಗಳು ಆಗಿವೆ. ಇನ್ನೂ ಹತ್ತು ಸಾವಿರ ಪ್ರೈಮರಿ ಶಾಲೆಗಳು ನಮಗೆ ಬೇಕಾಗುತ್ತದೆ.

ಉಪಾಧ್ಯಕ್ಷಿಣಿಯವರು : - ಜಾಗ್ರತೆ ಮುಗಿಸಿ.

ಡಾ।। ಜಿ. ಪರಮೇಶ್ವರ : - ಮೇಡಂ ನನಗೆ ಕಳೆದ ವರ್ಷದಲ್ಲಿ ಮೊಟ್ಟ ಮೊದಲನೆಯದಾಗಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ದಯವಿಟ್ಟು ನನಗೆ ಇನ್ನೂ ಸಮಯ ಕೊಡಬೇಕು.

ಉಪಾಧ್ಯಕ್ಷಿಣಿಯವರು : - ಕೊಟ್ಟಿದ್ದೇನೆ. ಈಗ 20 ನಿಮಿಷ ಆಗಿದೆ ತಮಗೆ.

ಡಾ।। ಜಿ. ಪರಮೇಶ್ವರ : - ಆ ಕಾರಣ ಒಂದು ನಿರ್ದಿಷ್ಟವಾದಂಥ ಆದೇಶವನ್ನು ಡಿಪಾರ್ಟ್‌ಮೆಂಟ್‌ನವರಿಗೆ ಕೊಡಿ. ಅವರು ನಿಯಮವನ್ನು ಮಾಡಲಿ. ಎಲ್ಲಿ ಶಾಲೆಗಳು ಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ಅಧಿಕಾರಿಗಳು ಸೂಚಿಸಿದರೇ ಅದರ ಮೇಲೆ ನೀವು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ನನ್ನ ಸಲಹೆ. ಇಲ್ಲದಿದ್ದರೆ ಏನಾಗುತ್ತದೇಂದರೇ, We will be just creating academic slums. ಆ ರೀತಿಯ ಒಂದು ಭಾವನೆ ನಮಗೆ ಬರಬಾರದು ಎಂದು ಹೇಳುತ್ತೇನೆ. ಇನ್ನು ಗ್ರಾಂಟ್ಸ್ ಬಗ್ಗೆ ತಾವು ಆದೇಶವನ್ನು ಹೊರಡಿಸಿದ್ದೀರಿ. ಈ ಬಗ್ಗೆ ನಿಮಗೆ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಖಾಸಗಿಯವರು ಶಿಕ್ಷಣ ಕ್ಷೇತ್ರದಲ್ಲಿ ಸೇವೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ ಮತ್ತು ಸರ್ಕಾರಕ್ಕೆ ಒಂದು ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಈ ಪ್ರೈವೇಟ್ ಇನ್ಸ್‌ಟಿಟ್ಯೂಷನ್ಸ್‌ಗಳು ಏನಿವೆ. ಇವುಗಳಿಂದ ಕೂಡ ಸರ್ಕಾರಕ್ಕೆ ಸಹಾಯವಾಗುತ್ತದೆ ಎನ್ನತಕ್ಕಂಥದ್ದನ್ನು ಮರೆಯಬಾರದು. ಇವತ್ತುತಾವು ಏನು ಈ ಸಂಸ್ಥೆಗಳಿಗೆ ಗ್ರಾಂಟನ್ನು ಕೊಡುವುದಿಲ್ಲ. ಎಂದು ಹೇಳಿ ಕಡ್ಡಾಯ ಮಾಡಿದ್ದೀರಿ. ಅದನ್ನು ನಾನು ಒಂದು ರೀತಿಯಲ್ಲಿ ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಇವರಿಗೆ ಒಂದು ದಾರಿಯನ್ನು ತೋರಿಸಿ. ಆ ಶಾಲೆಗಳನ್ನು ನಡೆಸತಕ್ಕಂಥ ದಾರಿಯನ್ನು ತೋರಿಸಿ. ಆರ್ಗ್ಯುಮೆಂಟ್ ಸೇಕ್, ಅವರು ಏತಕ್ಕೆ ಶಾಲೆಗಳನ್ನು ಮಾಡುವುದಕ್ಕೆ ಮುಂದೆ ಬರುತ್ತಾರೆಂದು ತಾವು ಹೇಳಬಹುದು. ಆದರೆ ನಮ್ಮದು ಒಂದು ಕರ್ತವ್ಯ ಇದೆ. ನಾವು ಶಿಕ್ಷಣವನ್ನು ಎಲ್ಲಾ ಮಕ್ಕಳಿಗೂ ಕೊಡಬೇಕು. ಆ ಕಾರಣಕ್ಕಾಗಿ ತಾವು ಅಲ್‌ಟರ್‌ನೇಟಿವ್ ಆಗಿ ಏನಾದರೂ ಒಂದು ಸಲಹೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಏನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇನ್ಸ್‌ಟಿಟ್ಯೂಷನ್‌ಗಳಿಗೆ ಗ್ರಾಂಟನ್ನು ಕೊಡುತ್ತಿದ್ದೀರಿ. ಈ ಬಗ್ಗೆ 1977 ರಲ್ಲಿ ಒಂದು ಆದೇಶವನ್ನು ಕರ್ನಾಟಕ ಸರ್ಕಾರ ಹೊರಡಿಸಿದೆ. Government Order date 6-6-1977.

" ...... Above sanction were granted for the payment of salary grant to the High schools run by the Scheduled Castes and Scheduled Tribes from the year of starting subject to certain conditions ......" ಎಂದು ಕೆಲವು ಕಂಡಿಶನ್ಸ್‌ನ್ನು ಹಾಕಿ ಈ ಆರ್ಡರ್ಸ್‌ನ್ನು ಹೊರಡಿಸಿದೆ. ಆದರೆ ಇವತ್ತಿನ ದಿವಸ ಅದರ ಬಗ್ಗೆ ಏನು ಶಾಲೆಗಳನ್ನು ನಡೆಸಿಕೊಂಡು ಬಂದಿದ್ದರೆ, ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮ್ಯಾನೇಜ್‌ಮೆಂಟ್‌ನವರು ಅವರಿಂದ ಏನಾದರೂ ಒಂದು ದೊಡ್ಡ ಅಪರಾಧವಾಗಿದ್ದರೆ, ಆ ಕಾರಣಕ್ಕಾಗಿ ನಾವು ನಿಲ್ಲಿಸುತ್ತಿದ್ದೇವೆ. ಎಂದು ಹೇಳಿದರೆ ನಾನು ಒಪ್ಪುತ್ತೇನೆ. ಅಂಥ ಶಾಲೆಗಳನ್ನು ನೀವು ಕಂಡುಹಿಡಿದು ಅವರ ಪರ್ಮಿಟ್‌ನನ್ನು ತೆಗೆದು ಹಾಕಿದರೆ ನಾನು

ಒಪ್ಪುತ್ತೇನೆ. ಆದರೆ ಏನು ಯಾವ ಜನಾಂಗ ತುಳಿತಕ್ಕೆ ಒಳಗಾಗಿ ವಿದ್ಯಾಕ್ಷೇತ್ರ ಅವರಿಗೆ ಸಿಕ್ಕಲ್ಲ. ಇವತ್ತು ಅವರಿಗೆ ಸಿಕ್ಕಿದೆ. ಅವರಿಗೆ ನೀವು ಏನಾದರೂ ಈ ಗ್ರ್ಯಾಂಟನ್ನು ನಿಲ್ಲಿಸಿದ್ರೆ ಆದರೆ ಬಹಳ ದೊಡ್ಡ ತಪ್ಪನ್ನು ಮಾಡಿದಂತಾಗುತ್ತದೆ. ಹಾಗೂ ಬಹಳ ಅನ್ಯಾಯವಾಗುತ್ತದೆ. ಒಂದು ವೇಳೆ ಯಾರಿಗಾದರೂ ಎಂಥದ್ದೋ ಒಂದು ಸಂಸ್ಥೆ ಚನ್ನಾಗಿ ನಡೆಯುತ್ತಿಲ್ಲ. ಅವರನ್ನೋ ತಪ್ಪು ಮಾಡುತ್ತಿದ್ದಾರೆಂದು ನಾವು ಒಂದು ಕಾಲ್ ಅಟೆನ್‌ಸನ್ ಹಾಕಿದಾಗ ತಾವು ಹೇಳಿದಿರಿ ಕೆಲವರು ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ಬೇರೆಯವರು ನಡೆಸುತ್ತಿದ್ದಾರೆ. ಅದು ತಮ್ಮ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಯಾರು ಗ್ರ್ಯಾಂಟ್ಸ್‌ಗೆ ಓಡಿ ಬರುತ್ತಾರೆ. ಅವರು ಒಂದು ಹಿಂದೆಯಿಂದ ಹೇಳಿ ಕೆಲಸವನ್ನು ಮಾಡಿಸಿ ಕೊಳ್ಳುತ್ತಾರೆ. ಅವರಿಗೆ ಗೊತ್ತಿರುತ್ತದೆ. ಅಂಥ ಇನ್ಸ್‌ಟಿಟ್ಯೂಷನ್‌ಗಳು ಏನಿದೆ. ಅವುಗಳನ್ನು ನೀವು ಕಂಡುಹಿಡಿದು ಪರ್ಮಿಷನನ್ನು ತೆಗೆದುಹಾಕಬಹುದು. ಆದರೆ ಯಾರು ಚೆನ್ನಾಗಿ ನಡೆಸುತ್ತಿದ್ದಾರೆ, ಯಾರು ನಿಜವಾಗಿಯೂ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಆಗಿರತಕ್ಕಂಥ ಆಡಳಿತ ಮಂಡಳಿ ಇರುತ್ತದೆ. ಅವರಿಗೆ ತಾವು ಗ್ರ್ಯಾಂಟ್ ಕೊಡಬೇಕಾಗುತ್ತದೆ. ಇದನ್ನು ತಪ್ಪಿಸಿದ್ರೆ ಆದರೆ ಬಹಳ ಒಂದು ದೊಡ್ಡ ಅಪರಾಧವನ್ನು ಮಾಡಿದಂತಾಗುತ್ತದೆ. ಎಂದು ನನ್ನ ಭಾವನೆ. ಮತ್ತೆ ನೀವು ಯೂನಿವರ್ಸಿಟಿಗಳಿಗೆ ಗ್ರ್ಯಾಂಟ್ಸ್‌ನ್ನು ಕೊಟ್ಟಿದ್ದೀರಿ: ಕಳೆದ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 40 ಲಕ್ಷ ರೂಪಾಯಿ. ಕರ್ನಾಟಕ ವಿಶ್ವ ವಿದ್ಯಾನಿಲಯಕ್ಕೆ 66 ಲಕ್ಷ ರೂಪಾಯಿ ಹೀಗ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸೇರಿ 598 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಡೇವಲಪ್‌ಮೆಂಟಲ್ ಗ್ರ್ಯಾಂಟ್ಸ್. ಒಂದು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕಾದರೆ ಯುನಿವರ್ಸಿಟಿ ಗ್ರ್ಯಾಂಟ್ ಕಮಿಷನರ್‌ರವರ ಪ್ರಕಾರ ಕನಿಷ್ಠ ಪಕ್ಷ 35 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ಇವತ್ತಿನ ದಿವಸ ಬರೀ 50 ಲಕ್ಷ ರೂಪಾಯಿಯನ್ನು ನಾಮಿನಲ್ ಆಗಿ ನಾವು ಒಂದು ವಿಶ್ವವಿದ್ಯಾಲಯಕ್ಕೆ ಕೊಡುವುದಾದರೆ ಅಂತಹ ವಿಶ್ವವಿದ್ಯಾನಿಲಯವನ್ನು ಇಟ್ಟುಕೊಂಡು ಏನಾಗಬೇಕು. We are just proliferating the educational system. That is all. ಇದನ್ನು ತಾವು ಮಾಡಬಾರದು. ವಿದ್ಯಾರ್ಥಿಗಳಿಗೆ ಎಂತಹ ಶಿಕ್ಷಣವನ್ನು ನಾವು ಕೊಡುತ್ತಿದ್ದೇವೆಂದರೆ ವಿಶ್ವವಿದ್ಯಾನಿಲಯಗಳ ಪೋಸ್ಟ್ ಗ್ರ್ಯಾಜ್ಯುಯೆಟ್ ಫ್ಯಾಕಲ್ಟಿಗೆ ಹೋದರೆ ಅಲ್ಲಿನ ಲೈಬ್ರರಿಯಲ್ಲಿ ಪುಸ್ತಕಗಳಿಲ್ಲ. ಇವತ್ತು ಅಲ್ಲಿನ ಪ್ರಯೋಗಶಾಲೆಗೆ ಹೋದರೆ ಸರಿಯಾದ ಎಕ್ವಿಪ್‌ಮೆಂಟ್ಸ್ ಇಲ್ಲ ಹಾಗೂ ಸರಿಯಾದ ಲೆಕ್ಚರರ್ಸ್ ಇಲ್ಲ. ಕ್ವಾಲಿಫೈಡ್ ಆದ ಗ್ರ್ಯಾಜ್ಯುಯೆಟ್ಸ್ ಟೀಚರ್ಸ್ ಇಲ್ಲ. ಇಂತಹ ವಿಶ್ವವಿದ್ಯಾನಿಲಯಗಳನ್ನು ನಮ್ಮ ಹೆಗ್ಗಳಿಕೆಗೋಸ್ಕರ ಪ್ರಾರಂಭ ಮಾಡಿದರೆ ತಪ್ಪಾಗುತ್ತದೆ. I don't certainly believe in proliferation of educational system. ಅದಕ್ಕಾಗಿ ಇವುಗಳಿಗೆ ಹಣವನ್ನು ಹೆಚ್ಚಿಗೆ ಕೊಡಿ. ಇಲ್ಲದೇ ಹೋದರೆ ಅವರು ಯೂನಿವರ್ಸಿಟಿಯನ್ನು ಇಟ್ಟುಕೊಂಡು ಪೋಸ್ಟ್ ಗ್ರ್ಯಾಜ್ಯುಯೆಟ್ ಸೆಂಟರ್ಸ್ ಅಥವಾ ಸಬ್ ಸೆಂಟರ್ಸ್ ಅನ್ನು ಮಾಡುತ್ತಾ ಹೋದರೆ The very purpose of starting an University is questionable. ಅದಕ್ಕಾಗಿ ಯಾವ ಕಾರಣಕ್ಕೋಸ್ಕರ ನಾವು ಇವುಗಳನ್ನು ಪ್ರಾರಂಭ ಮಾಡುತ್ತೇನೆ ಅನ್ನುವುದನ್ನು ಜನರಿಗೆ ಹೇಳಬೇಕಾಗುತ್ತದೆ. ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟಿಸ್ ಬಗ್ಗೆಸಹ ನಾನು ಆಗಲೇ ಹೇಳಿದ್ದೇನೆ. ನಮ್ಮಲ್ಲಿ ಕಪ್ಪುಹಲಗೆ ಯೋಜನೆ ಬಂದು ಎರಡು ವರ್ಷಗಳಾಯಿತು. ಇದರಲ್ಲಿ ಜಿಲ್ಲಾ ಪರಿಷತ್ತಿನವದ್ದು ತಪ್ಪಿದೆಯೋ ಅಥವಾ ಸರ್ಕಾರದವರದ್ದು ತಪ್ಪಿದೆಯೋ ಗೊತ್ತಿಲ್ಲ. ಏಕೆಂದರೆ ಇವತ್ತಿನವರೆಗೂ ಕೂಡ 168 ಶಾಲೆಗಳ ಕಟ್ಟಡದ ಕೆಲಸ ಮುಗಿದಿಲ್ಲ. ಇವತ್ತು ನಾವು ಯಾರಿಗೆ ಈ ಪ್ರಶ್ನೆಯನ್ನು ಹಾಕಬೇಕು ? ಕಳೆದ ವರ್ಷದಲ್ಲಿ ಮಾತ್ರ ನಮಗೆ ಹಣವನ್ನು ಕೊಟ್ಟಿದ್ದಾರೆ. ಇದರ ಹಣ ಸೆಂಟ್ರಲ್ ಗೌರ್ನಮೆಂಟ್ ಸ್ಕೀಮ್‌ನಿಂದ ಬಿಡುಗಡೆಯಾಗಿ ಇಲ್ಲಿಗೆ ಇಂದಿದೆ. ಇಲ್ಲಿಂದ ನಮಗೆ ಹಣ ಬಿಡುಗಡೆಯಾಗಬೇಕಾಗಿದೆ. ಹಮವಿಲ್ಲದ ಕೆಲಸ ಕಂಪ್ಲೀಟ್ ಆಗಿಲ್ಲ. ಇದು ನನ್ನ ಕ್ಷೇತ್ರಕ್ಕೆ ಮಾತ್ರ ಸಂಬಂಧಪಟ್ಟಿದ್ದು ಅಲ್ಲ.

ಪ್ರತಿಯೊಂದು ಕಡೆಯೂ ಏನು ಪ್ರಾಥಮಿಕ ಶಾಲೆಗಳು ಇವೆ ಅವುಗಳಿಗೆ ಹೆಚ್ಚು ಒತ್ತನ್ನು ಕೊಟ್ಟು ಅವುಗಳಿಗೆ ಕನಿಷ್ಟ ಪಕ್ಷ ಬಿಲ್ಡಿಂಗ್ ಕಟ್ಟಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸಂಸ್ಕೃತ ಶಾಲೆಗಳನ್ನು ಈಗ ಏನು ಪ್ರಾರಂಭ ಮಾಡಿದ್ದಾರೆ. ಈ ಬಗ್ಗೆ ನನಗೆ ತಿಳಿದಮಟ್ಟಿಗೆ ಷೆಡ್ಯೂಲ್ಡ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮ್ಯಾನೇಜ್‌ಮೆಂಟ್‌ನವರಿಗೆ ಈ ಈ ಸಂಸ್ಕೃತ ಶಾಲೆಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಟ್ಟಿಲ್ಲ. ಒಂದು ಕಾಲದಲ್ಲಿ ಅಸ್ಪೃಶ್ಯರು ಸಂಸ್ಕೃತವನ್ನು ಕೇಳಿಬಿಟ್ಟರೆ ಅವರ ಕಿವಿಗೆ ಸೀಸಾವನ್ನು ಕಾಯಿಸಿ ಉಯ್ಯುತ್ತಿದ್ದರು. ಅದು ನಮ್ಮ ಚರಿತ್ರೆಯಲ್ಲಿದೆ. ಇವತ್ತು ಅಷ್ಟು ಚೆನ್ನಾಗಿರತಕ್ಕ ಸಂಸ್ಕೃತದಲ್ಲಿ ಎಲ್ಲರೂ ಮಾತನಾಡುತ್ತಾರೆ. ಆ ಕಾರಣಕ್ಕಾಗಿ ಸಂಸ್ಕೃತ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ಯಾರೇ ಹಿಂದುಳಿದ ಜನಾಂಗದವರು ಪ್ರಾರಂಭ ಮಾಡುತ್ತೇವೆಂದರೆ ಅವರಿಗೆ ತಾವು ಪ್ರೋತ್ಸಾಹ ಕೊಡಬೆಕು ಅನ್ನತಕ್ಕ ಮಾತನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷಣಿಯವರು : - ತಾವು ಬೇಗ ಮುಗಿಸಿ.

ಡಾ।। ಜಿ. ಪರಮೇಶ್ವರ : - ಉಪಾಧ್ಯಕ್ಷಿಣಿಯವರೆ. ದಿನಾಂಕ : 20-6-90ರಲ್ಲಿ ಎಜ್ಯುಕೇಶನ್ ಡಿಪಾರ್ಟ್‌ಮೆಂಟಿಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಡ್ರಾಫ್ಟ್ ರೂಲ್ಸ್ ಮಾಡಿದ್ದಾರೆ. ಅನೇಕ ಮೀಟಿಂಗ್‌ಗು ಈ ಸಂಬಂಧದಲ್ಲಿ ಆಗಿವೆ. ಅನೆಕ ಜನರು ಕುಳಿತುಕೊಂಡು ಮಾತನಾಡಿದ್ದಾರೆ. ಕಳೆದ ಮೀಟಿಂಗ್ ಕೂಡ ದಿನಾಂಕ : 7-2-92ರಲ್ಲಿ ಆಗಿದೆ. ಆದರೆ ಇವತ್ತಿನವರೆಗೂ ಅದು ಫೈನಲೈಸ್ ಆಗಿಲ್ಲ. ಇದರಿಂದನಿರ್ಧಿಷ್ಟವಾದಂತಹ ನಿಯಮವನ್ನು ರೂಪಿಸಿಕೊಂಡು ಟೀಚರ್ಸ್ ಅನ್ನು ರಿಕ್ರೂಟ್‌ಮೆಂಟ್ ಮಾಡಲು ಸಾಧ್ಯವಾಗುತ್ತಿಲ್ಲ. ಈ ರೀತಿ ತಡ ಆಗುವುದು ಬೇಡ. ಒಂದು ನಿರ್ಧಿಷ್ಟವಾದಂತಹ ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಅನ್ನು ನೀವು ಜಾಗ್ರತೆ ಮಾಡಿ ಮುಗಿಸಬೇಕು. ಅದರ ಡ್ರಾಫ್ಟ್ ಸರ್ಕಾರದ ಕಮಿಟಿ ಮುಂದೆ ಇದೆ. ತಾವು ಆ ಕಮಿಟಿಯವರಿಗೆ ಜಾಗ್ರತೇ ಫೈನಲೈಸ್ ಮಾಡುವಂತೆ ನಿರ್ಧಿಷ್ಟವಾದ ಆದೇಶವನ್ನು ಕೊಡಬೇಕು ಅನ್ನತಕ್ಕ ಮಾತನ್ನು ತಮಗೆ ಹೇಳುತ್ತೇನೆ. ಇನ್ನು ವರ್ಗಾವಣೆಯ ಬಗ್ಗೆ ಏನಾದರೂ ಒಂದು ಕಾರ್ಯಕ್ರಮ ರೂಪಿಸಿರಿ. ನಾವು 5 ವರ್ಷವಾಗುವವರೆಗೂ ಯಾರನ್ನೂ ವರ್ಗಾವಣೆ ಮಾಡುವಿದಿಲ್ಲ ಅಥವಾ 5 ವರ್ಷ ಆದಮೇಲೆ ಕಡ್ಡಾಯವಾಗಿ ಟ್ರಾನ್ಸ್‌ಫರ್ ಆಗಲೆಬೆಕು ಎಂದಾದರೂ ಮಾಡಿ. ಈಗ 20 ವರ್ಷ 30 ವರ್ಷ ಒಂದೆ ಶಾಲೆಯಲ್ಲಿರುವವರು ಇದ್ದಾರೆ. ಅಲ್ಲೇ ಇದ್ದು ರಿಟೈರ್ಡ್ ಆಗಿರುವವರು ಇದ್ದಾರೆ. ಕೆಲಸಕ್ಕೆ ಸೇರಿದ್ದು ಅದೇ ಶಾಲೆ ಮತ್ತೆ ರಿಟೈರ್ಡ್ ಆಗಿದ್ದು ಅದೇ ಶಾಲೆ. ಇಂತಹ ಅನೇಕ ಉದಾರಹಣೆಗಳು ಇವೆ. ಈ ವಿಚಾರದಲ್ಲಿ ಏನಾದರೊಂದು ಪಾಲಿಸಿ ಮಾಡಿದರೆ ನಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಮತ್ತು ತಮಗೂ ಒಳ್ಳೆಯ ಕೀರ್ತಿ ಬರುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಇನ್ನು ತಾಲ್ಲೂಕ್ ಲೆವಲ್‌ನಲ್ಲಿ ಒಂದೊಂದು ತಾಲ್ಲೂಕ್‌ನಲ್ಲಿ 300-400 ಶಾಲೆಗಳು ಬರುತ್ತದೆ. ಅವುಗಳನ್ನು ನೋಡಿಕೊಳ್ಳಲು ಒಬ್ಬರು ಎ.ಇ.ಓ. ಇರುತ್ತಾರೆ. ಅವರಿಗೆ ವೆಹಿಕಲ್ ಅನ್ನು ಸಹ ಕೊಡದಿದ್ದರೆ ಅವರು ಯಾವರೀತಿ ಶಾಲೆಗಳ ತನಿಖೆಗೆ ಹೋಗಬೇಕು. ಸೈಕಲ್‌ನಲ್ಲಿ ಹೋಗಬೇಕೇ ? ಅಥವಾ ಬಸ್ಸಿನಲ್ಲಿ ಹೋಗಬೇಕೇ ? ಯಾವುದರಲ್ಲಿ ಹೋಗಬೇಕು. ನಾವು ಶಾಸಕರಾದವರು ಅವರಲ್ಲಿ ಏನಾದರೂ ಕೇಳಬೇಕು ಅಂದರೆ ಅವರು ನಮ್ಮ ಕೈಗೆ ಸಿಗುವುದಿಲ್ಲ. ಏಕೆಂದರೆ ಅವರು ಬಸ್ಸನ್ನು ಹಿಡಿದುಕೊಂಡೋ. ಸೈಕಲ್‌ನಲ್ಲೋ ಶಾಲೆಗಳ ತನಿಖೆಗೆ ಹೋಗಿರುತ್ತಾರೆ. ಈ ಕಾರಣದಿಂದ ಪ್ರತಿಯೊಬ್ಬ ಎ.ಇ.ಓ. ಗೂ ಕನಿಷ್ಠ ಪಕ್ಷ ಒಂದೊಂದು ಜೀಪನ್ನು ಒದಗಿಸಿ ಕೊಡಬೇಕೆನ್ನುವಂಥಮಾತನ್ನು ತಮಗೆ ಹೇಟುವುದಕ್ಕೆ ಇಷ್ಟಪಡುತ್ತೇನೆ. ಇನ್ನು liberalisation of

education ಬಗ್ಗೆ ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಶ್ರೀ ಎಸ್. ಎಂ. ಯಾಹ್ಯಾರವರು ಹೇಳಿದ್ದಾರೆ. ಇವೊತ್ತಿನ ದಿವಸ ನಮಗೆ ಅದು ಬಹಳ ಅಗತ್ಯವಾಗಿದೆ. ಏಕೆಂದರೆ ನಮ್ಮ ದೇಶದಲ್ಲಿ ಎಕನಾಮಿಕ್ ಗ್ರೋತ್ ಇದೆ. ಅದನ್ನು ನೋಡಿದಾಗ ಇವೊತ್ತು ನಾವೆಲ್ಲಾ ಟ್ರಾನ್ಸ್‌ಫರ್‌ಮೇಶನ್ ಸ್ಟೇಜ್‌ನಲ್ಲಿದ್ದೇವೆ. ಅವರು ಅದರ ಬಗ್ಗೆ ಚೆನ್ನಾಗಿ ಹೇಳಿದರು. ಇವೊತ್ತಿನ ದಿವಸ ತಮ್ಮ ಕೈಯಲ್ಲಿ ವಿದ್ಯಾ ಇಲಾಖೆ ಸಿಕ್ಕಿದೆ. ತಾವು ಬಹಳ ನುರಿತಂಥವರು. ತಾವೇ ಈ ಕೆಲಸ ಮಾಡಲಿಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ಮಾತನ್ನು ನಾನು ಖಂಡಿತ ಒಪ್ಪುತ್ತೇನೆ. ಏಕೆಂದರೆ, ತಮಗೆ ಈ ಕ್ಷೇತ್ರದಲ್ಲಿ ಒಂದು ದೃಷ್ಟಿಕೋನವಿದೆ. ಈ ವಿದ್ಯಾ ಕ್ಷೇತ್ರದಲ್ಲಿ ಜನರಿಗೆ ನಾನೇನಾದರೂ ಒಂದು ಒಳ್ಳೆಯ ಕೆಲಸ ಮಾಡಬೇಕನ್ನುವಂಥ ಒಂದು ದೃಷ್ಟಿಕೋನ ಇಟ್ಟುಕೊಂಡಿದ್ದೀರಿ. ತಾವು ಈ ಕೆಲಸ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಇಂಗ್ಲೀಷ್ ಸ್ಕೂಲ್‌ಗಳ ಬಗ್ಗೆ ನನ್ನದೇ ಆದ ಒಂದು ಅಭಿಪ್ರಾಯವಿದೆ. ಇಂಗ್ಲೀಷ್ ಸ್ಕೂಲ್‌ಗಳನ್ನು ಕೊಡಬೇಕಾಗಿದೆ. ಏಕೆಂದರೆ, ಇವೊತ್ತಿನ ದಿವಸ ಗ್ರಮಾಂತರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯನ್ನು ಕಲಿಯುವುದಕ್ಕೆ ಸಾಧ್ಯ ಆಗಿಲ್ಲ. ನಾನು 5 ನೇ ತರಗತಿಯಲ್ಲಿ ಇಂಗ್ಲೀಷ್ ಕಲಿತದ್ದು. ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬ ವಿದ್ಯಾರ್ಥಿ ಎಬಿಸಿಡಿ ಕಲಿಯಬೇಕಾದರೆ. ಅವನು 8 ನೇ ತರಗತಿಗೆ ಬರಬೇಕಾಗುತ್ತದೆ. ಅಂತಹ ಒಂದು ಸನ್ನಿವೇಶವನ್ನು ನೋಡಿದ್ದೇವೆ. ಆ ಕಾರಣಕ್ಕಾಗಿ ನೀವು ಒಂದು ವೇಳೆ ಇಂಗ್ಲೀಷ್ ಸ್ಕೂಲುಗಳನ್ನು ತೆರೆಯಲು ಅನುಮತಿ ಕೊಡುವುದಿಲ್ಲವೆಂದು ಕಾನೂನು ತರುವುದಾದರೆ ತನ್ನಿ. ನಂತರ ಪಟ್ಟಣದಲ್ಲಿಯೂ ಇಂಗ್ಲೀಷ್ ಸ್ಕೂಲುಗಳನ್ನು ಕೊಡಬೇಡಿ. ಈಗಾಗಲೇ ಬೇಕಾದಷ್ಟು ಇಂಗ್ಲೀಷ್ ಶಾಲೆಗಳಿವೆ. ಆದರೆ, ಹಳ್ಳಿಗಳಲ್ಲಿ ಇಂಗ್ಲೀಷ್ ಸ್ಕೂಲುಗಳನ್ನು ನೀವು ಕೊಡಲೇಬೇಕಾಗುತ್ತದೆ. ಅದರ ಜೊತೆಗೆ ನಮ್ಮ ಮಾತೃಭಾಷೆಯಾದ ಕನ್ನಡಕ್ಕೂ ಸಹ ಒತ್ತು ಕೊಟ್ಟು. ಕನ್ನಡವನ್ನು ಕಡ್ಡಾಯವಾಗಿ ಮಾಡಿ. ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಹಳ್ಳಿಗಾಡಿನಲ್ಲಿ ಕೊಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ತಮ್ಮ ಮಾತನ್ನು ಮುಗಿಸುತ್ತಿರುವುದರಿಂದ, ಒಂದು ವಿಷಯದ ಕುರಿತು ನಾನು ನಿಮ್ಮ ಗಮನಸೆಳೆಯುತ್ತೇನೆ. ಏನೆಂದರೆ. ಮೆಡಿಕಲ್ ಕಾಲೇಜುಗಳಲ್ಲಿ, ಇಂಜನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕ ತೆಗೆದುಕೊಂಡರೆ ಇಂತಿಷ್ಟು ರೂಪಾಯಿಗಳ ದಂಡ ಎಂದಿದೆ. ಅದರ ಬಗ್ಗೆ ತಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ।। ಜಿ. ಪರಮೇಶ್ವರ : ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿದ್ಯಾ ಮಂತ್ರಿಗಳು ಒಂದು ವಿಷಯವನ್ನು ಪ್ರಸ್ತಾಪ ಮಾಡಿ ಒಂದು ಮುಕ್ತ ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡುವ ಬಗ್ಗೆ ಕಾರ್ಯಕ್ರಮವಿದೆ ಎಂದು ಹೇಳಿದರು. ಆವೊತ್ತಿನ ದಿವಸ ಅದರ ಬಗ್ಗೆ ನಾನು ಒಂದು ಸಲಹೆ ಕೊಟ್ಟಿದ್ದೆ. ಇವೊತ್ತು ನಾವು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನ್ಮಶತಾಬ್ದಿಯನ್ನು ಆಚರಿಸುತ್ತಿದ್ದೇವೆ. ಆದುದರಿಂದ, ಈ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಇಡುವುದರ ಬಗ್ಗೆ ಇದುವರೆವಿಗೂ ನಿರ್ದಿಷ್ಟವಾದ ಯಾವುದೇ ಒಂದು ನಿರ್ಣಯ ಆಗಲಿಲ್ಲವೆಂದು ಕೇಳಿದ್ದೇನೆ. ಅದನ್ನು ಸಹ ಅಧ್ಯಕ್ಷರ ಮುಖಾಂತರ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ, ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಕ್ಯಾಪಿಟೇಷನ್ ಶುಲ್ಕದ ವಿಚಾರವಾಗಿ ಹೇಳಿದರು. ಇದರ ಬಗ್ಗೆ ನಾನು ಹೇಳಬೇಕಾಗುತ್ತದೆ. ಇವೊತ್ತಿನ ದಿವಸ ಕರ್ನಾಟಕಕ್ಕೆ ಒಂದು ಹೆಮ್ಮೆ ಇದೆ. ವಿದ್ಯಾ ಕ್ಷೇತ್ರದಲ್ಲಿ ಇಂಜನಿಯರಿಂಗ್ ಕಾಲೇಜುಗಳ ಬಗ್ಗೆ ಮತ್ತು ಮೆಡಿಕಲ್ ಕಾಲೇಜುಗಳ ಬಗ್ಗೆ ಎದೆ ತಟ್ಟಿಕೊಂಡು ಹೇಳುವಂಥ ಒಂದು ಸನ್ನಿವೇಶ ನಮಗೆ ಬಂದಿದೆ. ಇಡೀ ರಾಷ್ಟ್ರಕ್ಕೆ ನಾವು ಡಾಕ್ಟರುಗಳನ್ನು, ಇಂಜನಿಯರುಗಳನ್ನು ತಯಾರಿಸಿ ಕೊಡುತ್ತಿದ್ದೇವೆ. ದಕ್ಷಿಣ ಭಾರತದಲ್ಲಿ ಪ್ರತಿ ವರ್ಷ 26,000

ಇಂಜಿನಿಯರ್ಸ್ ಮತ್ತು ಹೇಚ್ಚು-ಕಡಿಮೆ 4,000 ಡಾಕ್ಟರುಗಳು ಪಾಸಾಗಿ ಹೊರಗಡೆ ಬರುತ್ತಿದ್ದಾರೆ. ಇಷ್ಟು ಒಳ್ಳೆಯ ವಿಚಾರ ನಮ್ಮ ಕರ್ನಾಟಕ್ಕೆ ಸೇರಿದೆಯೆಂದರೆ ಅದು ಕ್ಯಾಪಿಟೇಷನ್‌ಗೋಸ್ಕರವಲ್ಲ. ಕ್ಯಾಪಿಟೇಶನ್ ಶುಲ್ಕ ತೆಗೆದುಕೊಳ್ಳುವುದರ ಬಗ್ಗೆ ನೀವು ಕಡಿವಾಣ ಹಾಕುವುದಕ್ಕೆ 1984 ರಲ್ಲೇ anti-Capitation Bill ಅನ್ನು ತಂದಿದ್ದೀರಿ. ಅದನ್ನು ಎನ್‌ಫೋರ್ಸ್ ಮಾಡಿ ; ನಿಮ್ಮನ್ನು ಯಾರೂ ಕೇಳುವುದಿಲ್ಲ. ಆದರೆ, ಕಾಲೇಜುಗಳನ್ನು ನಡೆಸತಕ್ಕಂಥ ವಿಧಾನವನ್ನು ನೀವು ಹೇಳಿಕೊಡಬೇಕಾಗಿದೆ. ಇವೊತ್ತಿನ ದಿವಸ ಶುಲ್ಕವನ್ನು ಹೆಚ್ಚು ಮಾಡ ಬೇಕಾಗುತ್ತದೆ. ನೀವು ಕ್ಯಾಪಿಟೇಷನ್ ಅನ್ನು ಅಬಾಲಿಶ್ ಮಾಡಿ. ಕ್ಯಾಪಿಟೇಶನ್ ತೆಗೆದುಕೊಳ್ಳುವವರಿಗೆ ಶಿಕ್ಷೆ ಕೊಡಿಸಿರಿ. ಆದರೆ, ಕಾಲೇಜನ್ನು ನಡೆಸತಕ್ಕಂಥ ವಿಧಾನವನ್ನು ಸಹ ನೀವು ಕಂಡುಹಿಡಿದುಕೊಡಬೇಕಾಗುತ್ತದೆ. ಇಲ್ಲದೆ ಹೋದರೆ, 2000ದ ಇಸವಿ ವೇಳೆಗೆ ಪ್ರತಿಯೊಬ್ಬರಿಗೂ ಆರೋಗ್ಯ ಭಾಗ್ಯ ಕೊಡುತ್ತೇವೆಂದು ಏನು ಹೇಳಿದ್ದೇವೆ. ಆ ಬಗ್ಗೆ Statement ಕೊಟ್ಟಿದ್ದೇ ಕೊಟ್ಟಿದ್ದು. ಈಗ ಸದನದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಉಪಸ್ಥಿತರಿದ್ದಾರೆ. ಇವೊತ್ತಿನ ದಿಸವ ಹಳ್ಳಿಗಳಲ್ಲಿರುವ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ಕರ್ನಾಟಕದಲ್ಲಿ 18 ಮೆಡಿಕಲ್ ಕಾಲೇಜುಗಳಿದ್ದರೂ ಸಹ ಹಳ್ಳಿಗಳಲ್ಲಿ ಒಬ್ಬ ಡಾಕ್ಟರು ಇಲ್ಲ. ಆ ಕಾರಣಕ್ಕಾಗಿ ತಾವು ನಿರ್ದಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿದರೆ ಯಾರೂ ನಿಮಗೆ ಅಡ್ಡ ಬರುವುದಿಲ್ಲ. ಇಷ್ಟನ್ನು ಹೇಳುತ್ತಾ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಉಪಾಧ್ಯಕ್ಷಿಣಿಯವರು : - ಇನ್ನೂ 4-5 ಜನರಿದ್ದಾರೆ. ಎಲ್ಲರೂ 10 ನಿಮಿಷದಲ್ಲಿ ಮುಗಿಸಿದರೆ ಚರ್ಚೆಯನ್ನು ಬೇಗ ಮುಗಿಸಬಹುದು.

ಶ್ರೀ ಎಸ್. ಶಫಿ ಅಹಮದ್ (ತುಮಕೂರು) : - ಮಾನ್ಯ ಉಪಾಧ್ಯಕ್ಷಿಣಿಯವರೇ ನಮ್ಮ ಶಿಕ್ಷಣ ಮಂತ್ರಿಯವರು ಬಜೆಟಿನಲ್ಲಿ ಹೆಚ್ಚಿನ ಹಣವನ್ನು ಪಡೆದು ಕರ್ನಾಟಕ ರಾಜ್ಯದ ಜನತೆಗೆ ಹೆಚ್ಚಿನ ರೀತಿಯಲ್ಲಿ ನೆರವನ್ನು ಮಾಡಿಕೊಟ್ಟಿದ್ದಕ್ಕೆ ಪ್ರಥಮವಾಗಿ ಅವರನ್ನು ಅಭಿನಂದಿಸಿ, ಈ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡುತ್ತ ಇವತ್ತು ಕರ್ನಾಟಕ ರಾಜ್ಯದಲ್ಲಿ ತಾವು ಏನು ಒಂದು ಅಂಕಿಅಂಶಗಳನ್ನು ಕೊಟ್ಟಿದ್ದೀರಿ, ಅದರಂತೆ 1990-91ನೇ ಸಾಲಿನಲ್ಲಿ ಪ್ರೈಮರಿ ಎಜುಕೇಷನ್‌ಗೆ 40,758.35 ಪರ್‌ಸೆಂಟ್ ಮತ್ತು ಅದೇ 1991-92ನೇ ಸಾಲಿನಲ್ಲಿ ಅಂದರೆ ಈ ವರ್ಷದಲ್ಲಿ 47,754.84 ಪರ್ಸೆಂಟ್ ಎಂದು ಕೊಟ್ಟಿದ್ದೀರಿ. ತಮ್ಮ ಒಂದು ಬಜೆಟ್ ಅಂದಾಜಿನಲ್ಲಿ 60.590.74ನ್ನು ಪ್ರಾವಿಷನ್ ಮಾಡಿಕೊಟ್ಟಿದ್ದೀರಿ. ಇದರ ಬಗ್ಗೆ ಈಗ ತಾನೆ ನಮ್ಮ ಸ್ನೇಹಿತರಾದ ಡಾ।। ಪರಮೇಶ್ವರ್‌ರವರು ಮಾತನಾಡಿದ್ದಾರೆ. ಇವತ್ತು ತಾವು ಏನು ಹಣವನ್ನು ಪ್ರೈಮರಿ ಎಜುಕೇಶನ್‌ಗೆಂದು ಪಡೆದಿದ್ದೀರಿ ಅದು ನಿಜವಾಗಿಯೂ ಕೂಡ ಸಾಕಾಗುವುದಿಲ್ಲವೆಂದು ನನ್ನ ಒಂದು ಭಾವನೆ. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ. ಅಂದರೆ ಕೇರಳ ರಾಜ್ಯಕ್ಕೆ ಹೋಲಿಸಿ ನೋಡಿದರೆ ನಾವು ಇನ್ನೂ ಬಹಳ ಹಿಂದೆ ಇದ್ದೇವೆ. ಇವತ್ತು ತಾವು ಸಾಕ್ಷರತಾ ಆಂದೋಲನವನ್ನು ಹಂತಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ ನಡೆಸುತ್ತಿದ್ದೀರಿ. ಅದರಲ್ಲಿ ನಮ್ಮ ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆ ಮತ್ತು ಇತರೇ ಜಿಲ್ಲೆಗಳು ಸೇರಿವೆ. ಇನ್ನು ಹೆಚ್ಚು ಹಣವನ್ನು ಸೆಕೆಂಡರಿ ಎಜುಕೇಷನ್‌ಗೆ ಕೊಡಬೇಕು. ಇವತ್ತು ನಮ್ಮ ಕನಸು ಸಂಪೂರ್ಣವಾಗಿ ನನಸಾಗಬೇಕಾದರೆ, ಇದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಶಾಲೆಗಳನ್ನು ಕಟ್ಟಿ ಶಿಕ್ಷಕರನ್ನು ಒದಗಿಸಿದರೆ ಮಾತ್ರ ಈ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ತಾವು ಪ್ರತಿಯೊಂದು ಕಡೆ ಬ್ಲಾಕ್ ಬೋರ್ಡ್ ಆಪರೇಷನ್‌ನಲ್ಲಿ ಶಾಲಾ ಕಟ್ಟಡಗಳನ್ನು ಮಾಡುತ್ತಿದ್ದೀರಿ. ಆದರೆ ತಾವು ಕಟ್ಟಡಗಳನ್ನು

ಮಾಡಿದರೆ ಮಾತ್ರ ಸಾಕಾಗುವುದಿಲ್ಲ. ಅದರಲ್ಲಿ ಶಿಕ್ಷಕರು ಸಹ ಇರಬೇಕು. ಇವತ್ತು ಜಿಲ್ಲಾ ಪರಿಷತ್ತಿನ ವತಿಯಿಂದ ಸಿಂಗಲ್ ಟೀಚರ್‌ನ್ನು ಕೊಟ್ಟಿದ್ದೀರಿ. ಕಳೆದ 5 ವರ್ಷಗಳಿಂದ ಜಿಲ್ಲಾ ಪರಿಷತ್ತಿನ ವತಿಯಿಂದ ಯಾವ ರೀತಿ ಶಾಲೆಗಳು ನಡೆಯುತ್ತಿದೆ. ಅದರಲ್ಲಿ ಆಡಳಿತ ಯಾವ ರೀತಿ ನಡೆಯುತ್ತಿದೆ ಎಂಬುದೆಲ್ಲ ತಾವು ಪ್ರವಾಸಕ್ಕೆ ಹೋದಾಗ ತಮ್ಮ ಮಾಹಿತಿಗೆ ಬಂದಿದೆ. ಇಂಥ ಶಾಲೆಗಳನ್ನು ಜಿಲ್ಲಾ ಪರಿಷತ್ತಿನಿಂದ ವಾಪಸ್ ಪಡೆದು ನಿಮ್ಮ ಇಲಾಖೆಗೆ ಸೇರಿಸಿಕೊಂಡರೆ ಮಾತ್ರ ಅಲ್ಲಿನ ಸಮಸ್ಯೆ ಬಗೆಹರಿಯಲು ಸಾಧ್ಯವಾಗುತ್ತದೆ. ಜಿಲ್ಲಾ ಪರಿಷತ್ತಿನಲ್ಲಿಯೇ ಈ ಶಿಕ್ಷಣ ಇಲಾಖೆಯನ್ನು ಬಿಟ್ಟರೆ ಈ ಸಮಸ್ಯೆಯನ್ನು ಬಗೆಹರಿಯಲು ಸಾಧ್ಯವಾಗುವುದಿಲ್ಲ. ಇವತ್ತು ಮೈನಾರಿಟಿ ಸಂಸ್ಥೆಗಳಲ್ಲಿಯೂ ಸಹ ಸಿಂಗಲ್ ಟೀಚರ್ ಸ್ಕೂಲ್‌ಗಳಿವೆ. ಅಲ್ಲಿ ಹೆಚ್ಚಾಗಿ ಮೈನಾರಿಟಿ ವಿದ್ಯಾರ್ಥಿಗಳಿದ್ದರೂ ಕೂಡ ಶಿಕ್ಷಕರಿಲ್ಲ. ಅದರಲ್ಲಿಯೂ ಕೂಡ ನಮ್ಮ ಕನ್ನಡವನ್ನು ಕಲಿಯಬೇಕೆಂದು ಅಲ್ಲಿರುವರಿಗೆ ಆಶಯವಿದ್ದರೂ ಕೂಡ ಅವರಿಗೆ ಕನ್ನಡವನ್ನು ಕಲಿಯಲು ಅಸ್ಪದವಿಲ್ಲದಂತಾಗಿದೆ. ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು, ಕಳೆದ 10 ವರ್ಷಗಳಿಂದ ಸರ್ಕಾರ ಹೇಳಿಕೆಯನ್ನು ಕೊಡುತ್ತಾ ಬಂದಿದೆ. ನಾವು ಕನ್ನಡವನ್ನು ಕಲಿಯಲು ಎಷ್ಟೇ ಪ್ರಯತ್ನ ಪಟ್ಟರೂ ಸಹ ಇವತ್ತು ಅಲ್ಲಿ ಶಿಕ್ಷಕರಿರುವುದಿಲ್ಲ. ಆದಕಾರಣ ಇಂಥ ಒಂದು ಶಾಲೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅಂಥ ಮೈನಾರಿಟಿ ಸಂಸ್ಥೆಗಳನ್ನು multi-purpose ಶಾಲೆಗಳನ್ನಾಗಿ ಮಾಡಬೇಕು. ಇವತ್ತು ಉರ್ದು ಇರಬಹುದು. ತಮಿಳು ಇರಬಹುದು ಬೇರೆ ಯಾವುದೇ ಭಾಷೆ ಇರಬಹುದು ಅಲ್ಲಿರತಕ್ಕ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸಬೇಕಾದುದು ಬಹಳ ಸೂಕ್ತವಾದುದಾಗಿದೆ.

ನಂತರ 'ಅಕ್ಷಯ' ಯೋಜನೆಗೆ ನಮ್ಮ ಮುಖ್ಯಮಂತ್ರಿಗಳು ಏನು ಹಣವನ್ನು ಕೊಟ್ಟಿದ್ದಾರೆ ಅದು ಸಾಕಾಗುವುದಿಲ್ಲ. ಮೊನ್ನೆ ತಾನೆ ನಮ್ಮ ಜಿಲ್ಲಾ ಮಟ್ಟದ ಮೀಟಿಂಗ್‌ನಲ್ಲಿ ಇದರ ಬಗ್ಗೆ ಕೇಳಿದ್ದೆ. ಡೆಪ್ಯೂಟಿ ಕಮಿಷನರ್ ಹಾಗೂ ಡಿ.ಡಿ.ಪಿ.ಐ. ನವರಿಗೆ ಕೇಳಿದರೆ ನಮಗೆ ಹಣವನ್ನು ಒದಗಿಸಿಲ್ಲ. ಆದುದರಿಂದ ನಾವು ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಿಲ್ಲವೆಂದು ಹೇಳುತ್ತಾರೆ. ಇವತ್ತು ಮುಖ್ಯಮಂತ್ರಿಗಳು ಬ್ಯಾಂಕ್‌ಗಳಿಗೆ ಇದರ ಬಗ್ಗೆ ಆದೇಶವನ್ನು ಕೊಟ್ಟು, ಬ್ಯಾಂಕಿನ ಮುಖಾಂತರ ಈ ಕೆಲಸವನ್ನು ಮಾಡಿದರೆ ಬಹಳ ಸೂಕ್ತವಾಗುತ್ತದೆ. ಏಕೆಂದರೆ ಇದರಲ್ಲಿ ಮಿಸ್‌ಅಪ್ರೊಪ್ರಿಯೇಶನ್ ಆಗುವುದು ತಪ್ಪುತ್ತದೆ ಮತ್ತು ಆ ಮಕ್ಕಳ ತಾಯಂದಿರಿಗೆ ಇದರ ಹಣವನ್ನು ಸರಿಯಾಗಿ ಒದಗಿಸಲು ಸಾಧ್ಯವಾಗುತ್ತದೆ. ಇದು ಬಹಳ ಒಳ್ಳೆಯ ಕಾರ್ಯಕ್ರಮ ಆದರೆ ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು.

ಇದರಲ್ಲಿ ಬಹಳ ಹೆಚ್ಚಿನ ಒಂದು ಜವಾಬ್ದಾರಿ ಎಲ್ಲರಿಗೂ ಇದೆ. ಮತ್ತು ಇವತ್ತು ಮಿಡ್-ಡೇ ಮಿಲ್ ಸ್ಕೀಮ್ ಏನು ಇದೆ. ಅದು ಇನ್‌ಟೀರಿಯರ್ ವಿಲೇಜಸ್‌ನಲ್ಲಿ ಇವತ್ತು ಸಪ್ಲೈ ಆಗುತ್ತಿಲ್ಲ. ಇವತ್ತು ಕೇಂದ್ರ ಸರ್ಕಾರದವರೂ ಸಹ ಹೆಚ್ಚಿನ ಸೌಲಭ್ಯವನ್ನು ಇದರ ಬಗ್ಗೆ ಕೊಡುತ್ತಿದ್ದಾರೆ. ಆದರೆ ನಾವು ಯಾವುದೇ ಶಾಲೆಯಲ್ಲಿ ಕೇಳಿದರೂ ಮಿಡ್-ಡೇ ಮೀಲ್ ಸಿಗುತ್ತಿಲ್ಲವೆಂದು ಅದು ಇವತ್ತು ಮಕ್ಕಳಿಗೆ ತುರ್ತಾಗಿ ಬೇಕಾಗಿದೆ. ಇವತ್ತು ಆದಕ್ಕಾಗಿ 110 ಲಕ್ಷ ರೂಪಾಯಿಗಳನ್ನು ತಾವು ಪ್ರೊವೈಡ್ ಮಾಡಿದ್ದೀರಿ. ಇದಕ್ಕಾಗಿ ಜಿಲ್ಲಾ ಪರಿಷತ್ತಿನಿಂದ ಸಹ ಹಣವನ್ನು ಪಡೆದು 420-04 ಲಕ್ಷ ರೂಪಾಯಿಗಳ ಪ್ರೊವೈಡ್ ಮಾಡಿಕೊಂಡಿದ್ದೇವೆ. ಈ ಮಿಡ್-ಡೇ ಮೀಲ್ಸ್‌ನ್ನು ಹಿಂದಿನಿಂದಲೂ ಹೆಚ್ಚಿನ ರೀತಿಯಲ್ಲಿ ಪಾಪ್ಯುಲರೈಸ್ ಮಾಡಿಕೊಂಡು ಬಂದಿದ್ದೀರಿ. ಅದರಂತೆ ತಾವು ಮುಂದುವರೆಸುವುದು ಬಹಳ ಸೂಕ್ತವಿದೆ. ಇವತ್ತು ಸಂಸ್ಕೃತ ಸ್ಕೂಲ್‌ಗಳನ್ನು ಪ್ರೊವೈಡ್ ಮಾಡಿದ್ದೀರಿ. ಇದರ ಬಗ್ಗೆ ಪರಮೇಶ್ವರ್‌ವರು ಬಹಳ ಚೆನ್ನಾಗಿ ಹೇಳಿದ್ದಾರೆ. ಯಾವ ರೀತಿ ಈ ಸಂಸ್ಕೃತ ಸ್ಕೂಲ್ಸ್ ಪ್ರಾರಂಭ ಮಾಡಿದ್ದೀರಿ. ಅದೇ ರೀತಿಯಲ್ಲಿ ಅರೇಬಿಕ್ ಸ್ಕೂಲ್‌ಗಳಿಗೂ ಉತ್ತೇಜನ ಕೊಡಬೇಕು. ಅಲ್ಪಸಂಖ್ಯಾತರು ಎಲ್ಲಲ್ಲಿ ಇದ್ದಾರೆ. ಅವರಿಗೆಲ್ಲಾ ಅವರ

ಭಾಷೆಯಲ್ಲಿ ಕಲಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಎಲ್ಲಿ ಅರೇಬಿಕ್ ಸ್ಕೂಲ್‌ಗಳಿದ್ದವು. ಅಲ್ಲಿ ಮೌಲ್ವಿಗಳು, ಪಾಠ ಹೇಳುತ್ತಿದ್ದರು ಅವರಿಗೆ ಬೇಸಿಕ್ ಆಗಿ ರೆಮ್ಯಾನರೇಷನ್ ಕೊಡುತ್ತಿದ್ದರು. ಅದನ್ನು ಪುನಃ ಜಾರಿಗೆ ತರಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಫಿಸಿಕಲ್ ಎಜುಕೇಷನ್ ಬಗ್ಗೆ ತಾವು ಮೊನ್ನೆ ತಾನೇ ತಮ್ಮ ಉತ್ತರದಲ್ಲಿ ಹೇಳಿದಿರಿ. ಇವತ್ತು ಮಕ್ಕಳಿಗೆ ಈ ಸಿ.ಪಿ.ಎಡ್ ಮುಖಾಂತರವಾಗಿ ತಾವು ಕಂಪಲ್ಸರಿಯಾಗಿ ಪ್ರತಿಯೊಂದು ಶಾಲೆಗೂ ಕೂಡ ಟೀಚರ್ಸ್ ಕೊಡಬೇಕು. ಇವತ್ತು ಹೇಚ್ಚಿನ ರೀತಿಯಲ್ಲಿ ಸಿ.ಪಿ.ಎಡ್. ಶಾಲೆಗಳಿವೆ. ಆದರೆ ಇವತ್ತು ರಿಕ್ರೂಟ್‌ಮೆಂಟ್ ಇಲ್ಲದೆ ಅವರು ಸಹ ನಿರುದ್ಯೋಗಿಗಳಾಗಿದ್ದಾರೆ. ಇದನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಿದರೆ ಅದನ್ನು ಬಗೆಹರಿಸಿದಂತಾಗುತ್ತದೇ ಮತ್ತು ಅವರಿಗೆ ಮತ್ತೆ ಉದ್ಯೋಗದ ಅವಕಾಶ ಸಿಗುತ್ತದೆ. ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದೀರಿ. ಇವತ್ತು ಅದನ್ನೆಲ್ಲಾ ಅಳವಡಿಸಿಕೊಂಡು ಮಕ್ಕಳು ಹೆಚ್ಚಿನ ರೀತಿಯಲ್ಲಿ ಕರಾಟೆ ಕಲಿಯುತ್ತಿದ್ದಾರೆ. ಕರಾಟೆ ಕಲಿತರೆ ಆದರಿಂದ ಎಷ್ಟು ಒಳ್ಳೆಯದೋ ಅಥವಾ ಎಷ್ಟು ಕೆಟ್ಟದ್ದೋ ತಮಗೆ ಗೊತ್ತೇ ಇದೆ. ಅದ್ದರಿಂದ ಸಿ.ಪಿ.ಎಡ್ ಶಾಲೆಗಳ ಪಾಪುಲರೈಸ್ ಮಾಡಲು ತಾವು ಏನು ಹಣವನ್ನು ಮಂಜೂರು ಮಾಡಿದ್ದೀರಿ. ಅದನ್ನು ಬಿಡುಗಡೆ ಬಹಳ ಒಳ್ಳೆಯದು. ಇವತ್ತು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಹೇಳಬೇಕೆಂದರೆ ನಮ್ಮ ರಾಜ್ಯದಲ್ಲಿ ಪಾಲಿಟೆಕ್ನಿಕ್ಸ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿವೆ. ಅದರೆ ಅವು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಬೇಸಿಕ್ ಇನ್‌ಫ್ರಸ್ಟ್ರಕ್ಚರ್ಸ್ ಇಲ್ಲದೆ ಇಂಜಿನಿಯರಿಂಗ್ ಕಾಲೇಜಸ್ ಮತ್ತು ಡಿಪ್ಲೋಮ ತರಗತಿಗಳನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಇಂದು ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿದೆ. ಪಾಲಿಟೆನ್ನಿಕ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಎಲ್ಲೆಲ್ಲೂ ಸರಿಯಾದ ಬೇಸಿಕ್ ಇನ್‌ಫ್ರಸ್ಟ್ರಕ್ಚರ್ ಇಲ್ಲ. ಲ್ಯಾಬೋರೇಟರಿ ಫೆಸಿಲಿಟೀಸ್ ಮತ್ತು ಲೆಕ್ಚರರ್ಸ್ ಇಲ್ಲ. ತಾವು ಆರ್ಥಿಕ ಮಿತವ್ಯಯ ಜಾರಿಗೆ ತಂದಿರುವುದರಿಂದ ಲೆಕ್ಚರರ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅದನ್ನು ರದ್ದು ಮಾಡಿ ನೀವು ಲೆಕ್ಚರರ್ಸ್ ಪೋಸ್ಟಿಂಗ್ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯತನಕ ಈ ಸಮಸ್ಯೆ ಇರುತ್ತದೆ. ಇವತ್ತು ಕ್ವಾಂಟಿಟಿ ಎಜುಕೇಷನ್ ಮುಖ್ಯವಾದುವಲ್ಲ. ಕ್ವಾಲಿಟಿ ಎಜುಕೇಷನ್ ಬಹಳ ಮುಖ್ಯವಾದುದು. ಇವತ್ತು ಎಜುಕೇಶನ್ ಫೀಲ್ಡ್‌ನಲ್ಲಿ competition is not at the state level or national level. The competition is at international level. ಆದ್ದರಿಂದ ಇವತ್ತು ನಮ್ಮ ದೇಶದ ವಿದ್ಯಾರ್ಥಿಗಳು ಇಡೀ ವಿಶ್ವದಲ್ಲೇ ಬಹಳ ಪ್ರಸಿದ್ಧಿಯಾಗಿದ್ದಾರೆ. ಆದ್ದರಿಂದ ಇವತ್ತು ಈ ಒಂದು ಒಳ್ಳೆಯ ಡಾಕ್ಟರ್ಸ್‌ನ್ನು ಮತ್ತು ಒಳ್ಳೊಳೆಯ ಇಂಜಿನಿಯರ್‌ನನ್ನು ಪ್ರೊಡ್ಯೂಸ್ ಮಾಡಬೇಕಾದರೆ ಎಲ್ಲಿಯತನಕ ನಾವು ಒಳ್ಳೆಯ ಲೆಕ್ಚರರ್ಸ್ ಫೆಸಿಲಿಟಿಯನ್ನು ಕೊಡುವುದಿಲ್ಲವೋ ಅಲ್ಲಿಯತನಕ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವು ತಮ್ಮ ಬಜೆಟ್‌ನಲ್ಲಿ ಆಶ್ವಾಸನೆಯನ್ನು ಕೊಟ್ಟಿರುವಂತೆ ಈ ವರ್ಷದಲ್ಲಿ ಎಲ್ಲಾ ಕಾಲೇಜುಗಳಲ್ಲೂ ಫ್ಯಾಕಲ್ಟೀಸ್ ಲೆಕ್ಚರರ್ಸ್‌ನ್ನು ಪ್ರೊವೈಡ್ ಮಾಡಬೇಕು. ಇದ್ದಕ್ಕಾಗಿ ತಾವು ಸ್ವಲ್ಪ ಹಣವನ್ನು ಇಟ್ಟುಕೊಂಡಿದ್ದೀರಿ. ಅದು ಸಾಕಾಗುವುದಿಲ್ಲವೆಂದು ನನಗನಿಸುತ್ತದೆ. ಇವತ್ತು 53-35 ಲಕ್ಷ ರೂಪಾಯಿಗಳನ್ನು ಯೂನಿವರ್ಸಿಟಿಗೆ ಪ್ರೊವೈಡ್ ಮಾಡಿಕೊಂಡಿದ್ದೀರಿ. ಈ ಹಣ ಸಾಲುವುದಿಲ್ಲ. ಏಕೆಂದರೆ ನಾವು ಇಂದು ಯಾವುದೇ ಕಾಲೇಜಿಗೆ ಹೋದರೂ ಲೆಕ್ಚರರ್ಸ್ ಇಲ್ಲ ಎಂದು ವಿದ್ಯಾರ್ಥಿಗಳು ಯಾರು ಹೇಳುತ್ತಿದ್ದಾರೆ. ಅದುದರಿಂದ ಆದ್ಯತೆ ಮೇರೆಗೆ ಲೇಕ್ಚರರ್ಸ್‌ನ್ನು ರಿಕ್ರೂಟ್‌ಮೆಂಟ್ ಮಾಡಿದರೆ. ಕ್ವಾಲಿಟಿ ಆಫ್ ಎಜುಕೆಷನನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಎಕ್ಸಾಮಿನೇಷನ್‌ಬೋರ್ಡ್‌ನ ಬಗ್ಗೆ ಹೇಳುವುದಾದರೆ. ರಾಜ್ಯಗಳಲ್ಲಿ ವಿದ್ಯಾರ್ಥಿಗಳ ಪ್ರೊಪ್ರೋಷನ್ ಸುಮಾರು 25 ಪರ್ಸೆಂಟ್‌ಗಿಂತ ಹೆಚ್ಚಾಗಿದೆ. ಆದರೆ ನಮ್ಮ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ಸ್ ಹೆಚ್ಚಾಗಲಿಲ್ಲ. ಕಳೆದ ವರ್ಷ ತಾವು ಏನು ಪ್ರಾವಿಷನ್ ಮಾಡಿದ್ದೀರಿ ಅಷ್ಟೇ ಪ್ರೊವಿಷನನ್ನು ಈ ವರ್ಷವೂ ತಾವು ಮಾಡಿಕೊಂಡಿದ್ದೀರಿ. ಇದನ್ನು ಹೆಚ್ಚು ಮಾಡಬೇಕು. ಎಕ್ಸಾಮಿನೇಷನ್ ಬೋರ್ಡ್‌ನ್ನು ಇನ್ನೂ ಬಲಯುತವಾಗಿ ಮಾಡಬೇಕು. ಕ್ವಶ್ಚನ್‌ಪೇಪರ್ಸ್ ಲೀಕೇಜಸ್, ಮಾಲ್ ಪ್ರಾಕ್ಟೀಸಸ್‌ನ್ನು ಸಕ್ರಿಯವಾಗಿ ತಡೆಗಟ್ಟಬೇಕು. ಇದಕ್ಕಾಗಿ ನೀವು ಒಂದು ಸ್ಕ್ವ್ಯಾಡ್‌ನ್ನು ನೇಮಕ ಮಾಡ್ಡಿದ್ದೀರಿ. ಅವರು ಸರಿಯಾದ ರೀತಿಯಲ್ಲಿ ಸೂಪರ್‌ವೈಸ್ ಮಾಡಿದರೆ ನಾವು ಸರಿಯಾದ ರೀತಿಯಲ್ಲಿ ಮಕ್ಕಳಿಗೆ ಎಜುಕೇಷನನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಡೀ ನಮ್ಮ ದೇಶದಲ್ಲಿ ಒಂದೇ ಕಾಮನ್ ಎಜುಕೇಷನ್ ಸಿಸ್ಟಂನ್ನು ಜಾರಿಗೆ ತರಬೇಕೆಂದು ನಮ್ಮ ಮಾನ್ಯ ಪ್ರಧಾನಮಂತ್ರಿಗಳು ಹಿಂದೆ ವಿದ್ಯಾ ಮಂತ್ರಿಗಳಾಗಿದ್ದಾಗ ಒಂದು ಯೋಜನೆಯನ್ನು ಹಾಕಿಕೊಂಡಿದ್ದರು. ನಾವು ಅಳವಡಿಸಿಕೊಂಡು ಇಡೀ ರಾಜ್ಯಗಳಲ್ಲಿ ಒಂದು ಕಾಮನ್ ಸಿಸ್ಟಂನ್ನು ಜಾರಿಗೆ ತರಬೇಕಾಗಿದೆ. ಇವತ್ತು ತಾವು ನವೋದಯ ಶಾಲೆಗಳನ್ನು ಭೇಟಿ ಮಾಡಿದ್ದೀರಿ. ಅಲ್ಲಿಯ ಶಾಲೆಯ ಪರ್‌ಫಾರ್ಮೆನ್ಸ್‌ಗೂ ಸರ್ಕಾರೀ ಶಾಲೆಗಳ ಪರ್‌ಫಾರ್ಮೆನ್ಸ್‌ಗೂ ತಾವೇ ಹೋಲಿಸಿನೋಡಿ ತಮ್ಮ ಮೆಚ್ಚುಗೆಯನ್ನು ತೋರಿಸಿದ್ದೀರಿ. ಇವತ್ತು ರೆಸಿಡೆನ್ಷಿಯಲ್ ಸ್ಕೂಲುಗಳು ಬಹಳ ಮುಖ್ಯವಾದುವು. ಈ ಶಾಲೆಗಳು ಇದ್ದರೆ ಕನಿಷ್ಟಪಕ್ಷ 10-20 ಪರ್ಸೆಂಟ್ ಮಕ್ಕಳಿಗೆ ನಾವು ಒಳ್ಳೆಯ ವಿದ್ಯೆಕೊಡಲು ಅವಕಾಶ ಸಿಕ್ಕುತ್ತದೆ. ಪ್ರತಿಯೊಂದು ಗ್ರಾಮಗಳಲ್ಲೂ ರೆಸಿಡೆನ್ಷಿಯಲ್ ಶಾಲೆಗಳನ್ನು ಕೊಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳುತ್ತೀರೆಂದು ನಂಬಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ತಮ್ಮ ಅವಧಿಯಲ್ಲಿ ರೆಸಿಡೆನ್ಷಿಯಲ್ ಶಾಲೆಗಳನ್ನು ಮಂಜೂರು ಮಾಡಿಕೊಡಬೇಕು. ಇದರಿಂದ ನಮ್ಮ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಇಂಗ್ಲಿಷ್ ಶಾಲೆಗಳ ಬಗ್ಗೆ ಮಾನ್ಯ ಸದಸ್ಯರಾದ ಆಚಾರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಕನ್ನಡ ನಮ್ಮ ಮಾತೃಭಾಷೆ. ನಾವೆಲ್ಲರೂ ಕನ್ನಡದ ಅಭಿಮಾನಿಗಳು ಎಂದು ಹೇಳಿದ್ದಾರೆ. ಆದರೆ ಕಳೆದ 2 ವರ್ಷದಿಂದಲೂ ನಮ್ಮ ಪ್ರಶ್ನೆಗಳಿಗೆ ಉತ್ತರವನ್ನುಹೇಳುವಾಗಲೂ ಈ ವರ್ಷ ಅನುಮತಿಯನ್ನು ಕೊಡುತ್ತೇವೆ. ಮುಂದಿನ ವರ್ಷ ಅನುಮತಿಯನ್ನು ಕೊಡುತ್ತೇವೆಂದು ಹೇಳುತ್ತಾರೆ ಆದರೆ ಮೈನಾರಿಟೀಸ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಕಾನ್‌ಸ್ಟಿಟ್ಯೂಷನ್ ರೈಟ್ಸ್ ಏನು ಕೊಟ್ಟಿದ್ದಾರೆ ಅದರ ಪ್ರಕಾರ ಯಾರಾದರೂ ಕೋರ್ಟ್‌ಗೆ ಹೋದರೆ ಅವರಿಗೆ ಸ್ಟೇ ಸಿಕ್ಕುತ್ತದೆ. ಅವರು ಪರ್ಮಿಷನನ್ನು ತೆಗೆದುಕೊಂಡು ಶಾಲೆಗಳನ್ನು ಪ್ರಾರಂಭ ಮಾಡುತ್ತಾರೆ. ಆದರೆ ಆ ರೀತಿ ಆಗಬಾರದು. ಇದುವರಿಗೆ ಯಾರ್ಯಾರು ಅರ್ಜಿಗಳನ್ನು ಕೊಟ್ಟಿದ್ದಾರೆ. ಅದನ್ನು ಮಂಜೂರು ಮಾಡಿ ಮುಂದೆ ತಾವು ಅನುಮತಿಯನ್ನು ಕೊಡುವಾಗ ಕಡಿವಾಣವನ್ನು ಹಾಕಿ.

ಶ್ರೀ ಎಂ. ವೀರಪ್ಪ ಮೊಯ್ಲಿ : - ತಾವು ಈಲ್ಡ್ ಆಗುವುದಾದರೆ ಒಂದು ಮಾತನ್ನು ನಾನು ಹೇಳುತ್ತೇನೆ. ನಮ್ಮ ಚರ್ಚೆಯ ದಾಟಿ ಆಂಗ್ಲ ಮಾಧ್ಯಮದ ಬಗ್ಗೆ ಯಾವರೀತಿ ಹೋಗುತ್ತಿದೆ ಎಂದರೆ ಕನ್ನಡದ ಬಗ್ಗೆ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ನಮಗೆ ಅಭಿಮಾನವಿದೆ. ಯಾರಿಗೂ ಕನ್ನಡದ ಬಗ್ಗೆ ದುರಭಿಮಾನ ಇಲ್ಲ. ಕನ್ನಡ ಬೇಕೆಂದು ಹೇಳುವವರೂ ಕೂಡ ಆ ವಾದವನ್ನು ಮುಂದೆಮಾಡಿ ವಾದಮಾಡಿಲ್ಲ. ಪ್ರತಿಭಟನೆ ಮಾಡಿಲ್ಲ. ಇಲ್ಲಿ ಮೂಲಭೂತ ಪ್ರಶ್ನೆ ಎಂದರೆ ಮಾತೃಭಾಷೆಯಲ್ಲಿ ಕೊನೇ ಪಕ್ಷ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಅದರೂ ಮಾತೃಭಾಷೆಯಲ್ಲಿ ಅಭ್ಯಾಸ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಅದು ಒಂದು ಬುನಾದಿ ಆಗುತ್ತದೆಂಬ ಉದ್ದೇಶ ಇದೆ. ಇದನ್ನು ಎಲ್ಲ

ಶಿಕ್ಷಣ ತಜ್ಞರೂ ಒಪ್ಪಿಕೊಂಡಿದ್ದಾರೆ. ಎರಡನೆಯದಾಗಿ ಮೈನಾರಿಟೀಸ್ ಕಮಿಷನ್‌ನವರು ಕೂಡ ಮಾತೃ ಭಾಷೆಯಲ್ಲಿ 1 ನೇ ತರಗತಿಯಿಂದ 4ನೇ ತರಗತಿಯವರೆಗೆ ಶಿಕ್ಷಣ ಕೊಡಬೇಕೆಂದು ಒಪ್ಪಿಕೊಂಡಿದ್ದಾರೆ. ಕೇವಲ ಅವರು ಮಾತ್ರವಲ್ಲ. ಶ್ರೇಷ್ಠ ನ್ಯಾಯಲಯದವರೂ ಕೂಡ ಹೇಳಿದ್ದಾರೆ. ಆದುದರಿಂದ ಇಂಗ್ಲೀಷ್ ಮೀಡಿಯಂ ಶಾಲೆಗಳು ಬೇಕೆಂಬುದಕ್ಕೆ ವಿರೋಧವಿದೆ ಎಂದು ಅಲ್ಲ. ಆದರೆ 1 ರಿಂದ 4ನೇ ತರಗತಿಯವರೆಗೆ ಏನು ತಳಹದಿ ಬೀಳುತ್ತದೆ ಅದು ಬಹಳ ಮುಖ್ಯವಾದುದು. ಈ ತಳಹದಿ ಇಲ್ಲದಿದ್ದರೆ. ಉಸುಬಿನಮೇಲೆ ಕಟ್ಟಿದ ಸೌಧವಾಗುತ್ತದೆ. ಇದು ಶಿಕ್ಷಣ ತಜ್ಞರ ಚಿಂತನೆ. ಇದನ್ನು ನಾವು ಅರಿತು ಇಂಗ್ಲೀಷ್‌ಮೀಡಿಯಂ ಶಾಲೆಗಳನ್ನು ಎಲ್ಲಿ ಪ್ರಾರಂಭ ಮಾಡಬೇಕೇಂದು ಯೋಚನೇ ಮಾಡೋಣ. ಆಂಗ್ಲ ಮಾಧ್ಯಮ ಶಿಕ್ಷಣ ಬೇಡವೆಂದು ಯಾರೂ ಹೇಳುವುದಿಲ್ಲ. ಆದರೆ ಎಲ್ಲಿ, ಎಷ್ಟರಮಟ್ಟಿಗೆ. ಮತ್ತು ಎಷ್ಟು ಎಂದು ಅದರ ಇತಿಮಿತಿಯನ್ನು ಅರಿತು ಮಾಡಬೇಕೆಂದು ಹೇಳುತ್ತಾರೆಯೇ ಹೊರತು ದುರಭಿಮಾನದಿಂದ ಯಾರೂ ಹೇಳುತ್ತಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ : - ರಾಜಕೀಯ ಸೈದ್ಧಾಂತಿಕ ತಜ್ಞರೂ ಕೂಡ ಇದನ್ನೇ ಹೇಳುತ್ತಾರೆ.

ಶ್ರೀ ಎಸ್. ಶಫಿ ಅಹಮದ್ : - ಸನ್ಮಾನ್ಯ ಸಚಿವರು ಇದರ ಬಗ್ಗೆ ಹೇಳಿದ್ದಾರೆ. ಅದರ ತೀರ್ಮಾನ ತಮಗೆ ಬಿಟ್ಟಿದ್ದು. ಇದರ ಬಗ್ಗೆ ಸೂಕ್ತ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ಈ ಸಮಸ್ಯೆಯನ್ನು ಅತಿಶೀಘ್ರವಾಗಿ ಬಗೆಹರಿಸುವುದು ಸೂಕ್ತವೆಂದು ಹೇಳುತ್ತೇನೆ. ಇವತ್ತು ಪಾಲಿಟೆಕ್ನಿಕ್ಸ್ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ, ಇವತ್ತು ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜುಗಳಿಗೆ ಗ್ರಾಂಟನ್ನು ಕೊಡುತ್ತಿದ್ದೀರಿ. ಹೆಚ್ಚಿನ ಗ್ರಾಂಟ್ಸನ್ನು ಕೊಡುತ್ತಿದ್ದೀರಿ. ಅದೇ ರೀತಿಯಲ್ಲಿ ವಕೇಶನ್ ಕೋರ್ಸಸ್ ಪಾಲಿಟೆಕ್ನಿಕ್ಸ್, ಇದರ ಬಗ್ಗೆ ಸಹ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸರಿಯಾದ ರೀತಿಯಲ್ಲಿ ನಡೆಯುತ್ತಿರುವ ಪಾಲಿಟೆಕ್ನಿಕ್ಸ್ ವಕೇಶನ್ ಕೋರ್ಸಸ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸಹಾಯಧನ ಕೊಟ್ಟರೆ ಕ್ವಾಲಿಟಿ ಅಫ್ ಎಜ್ಯುಕೇಷನ್ ಕೊಡುವುದಕ್ಕೆ ಸಾಧ್ಯವಾಗುತ್ತದೇ. ಹಿಂದೆ ಇದರ ಬಗ್ಗೆ ತಮ್ಮ ಗಮನಕ್ಕೆ ತಂದಾಗ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅವತ್ತು ಪಾಲಿಟೆಕ್ನಿಕ್ಸ್‌ಗಳೇನಿವೆ. ಅವು ಎ.ಐ.ಸಿ.ಸಿ. ನಾರಮ್ಸ್ ಪ್ರಕಾರ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ಬರುತ್ತವೆ. ಇವು ಗ್ರಾಂಟ್-ಇನ್-ಏಡ್‌ನಲ್ಲಿ ಸೇರುತ್ತದೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆದರೆ ಇದರ ಬಗ್ಗೆ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಆದ್ದರಿಂದ ಅದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕೆಂದು ಹೇಳುತ್ತೇನೆ. ಇವತ್ತು ವಕೇಶನ್ ಕೋರ್ಸ್‌ಸ್ ಯಾರು ಯಾರಿಗೆ ಪರ್ಮಿಷನ್ ಕೊಟ್ಟಿದ್ದೀರಿ, ಅವರು ಜೂನಿಯರ್ ಕಾಲೇಜಿಗಳಿಗೆ ಪಾಲಿಟೆಕ್ನಿಕ್ ಅನ್ನು ಅಟ್ಯಾಚ್ ಮಾಡಿರುವ ರೀತಿಯಲ್ಲಿ ಐಟಿಐ.ಗೂ ಸಹ ಅಟಾಚ್ ಮಾಡಿಕೊಂಡರೆ ಬಹಳ ಒಳ್ಳೆಯದು. ಇವತ್ತು ಎರಡು ವರ್ಷದ ಕೋರ್ಸ್ ಏನಿದೆ ಅದರ ಬದಲು ಒಂದು ವರ್ಷದ ಕೋರ್ಸ್ ಪ್ರಾರಂಭ ಮಾಡಿ ವೆಲ್ಡರ್ಸ್ ಟರ್ನರ್ಸ್ ಅಂಥವರಿಗೂ ಸಹ ಹೆಚ್ಚಿನ ಸೌಲಭ್ಯ ಒದಗಿಸಿಕೊಟ್ಟರೆ ನಮ್ಮ ಗ್ರಾಮಾಂತರ ಪ್ರದೇಶಗಳಿಂದ ಬರುವವರಿಗೆ ಹೆಚ್ಚಿನ ಅವಕಾಶ ಸಿಗುತ್ತದೆ. ಈ ದಿಸೆಯಲ್ಲಿ ತಾವು ಅವಕಾಶವನ್ನು ಮಾಡಿಕೊಡಬೇಕು. ಇವತ್ತು ಟ್ರೈನಿಂಗ್ ಕ್ಯಾಂಡಿಡೇಟ್ಸ್ ಐ.ಟಿ.ಐ. ಅನ್ನು ಉರ್ದುವಿನಲ್ಲಿ ಕಲಿತಿರುವವರಿಗೆ ಇಂಗ್ಲೀಷ್ ಮೀಡಿಯಂನಲ್ಲಿ ಅವಕಾಶ ಮಾಡಿಕೊಡಿತ್ತಿದ್ದೀರಿ. ಆದರೆ ಇವತ್ತು ಏನಾಗಿದೆ ಎಂದರೆ ಶಾಲೆಗಳಲ್ಲಿ ಅವರು ಇಂಗ್ಲೀಷ್ ಮೀಡಿಯಂನಲ್ಲಿ ತರಬೇತಿ ಬಂದಿರುವುದರಿಂದ ಜನರಲ್ ಮೆರಿಟ್‌ನಲ್ಲಿ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರಿಗೆ ಹೆಚ್ಚಿನ ಕೋಟ ಸಿಸ್ಟಮ್ ಮಾಡಿ ಅಲ್ಲಿ ಅವಕಾಶವನ್ನು ಒದಗಿಸಿಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : - ಶ್ರೀಯುತ ಮನೋಹರ ಐನಾಪುರ್‌ರವರು.

ಶ್ರೀ ಮನೋಹರ್ ಐನಾಪುರ್ : - ಮಾನ್ಯ ಸಭಾಧ್ಯಕ್ಷಿಯವರೆ ಶಿಕ್ಷಣ ರಂಗಕ್ಕೆ ಹೊಸ ತಿರುವು 1991-92 ಎಂಬ..........

ಶ್ರೀ ಆರ್. ಎಲ್. ಶಿವರಾಮೇಗೌಡ : - ಮಾನ್ಯ ಅಧ್ಯಕ್ಷರೇ ನಾನು ಯಾವಾಗ ಮಾತನಾಡಲು ಎದ್ದಾಗ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೀರಿ. ಇದು ಬಹಳ ದೊಡ್ಡ ಇಲಾಖೆ. ಇದು ಬಹಳ ಪ್ರಗತಿ ಆಗಿದ್ದರೂ ಇನ್ನೂ ಪ್ರಗತಿ ಮಾಡಬೇಕಾಗಿದೆ. ಅದಕ್ಕೆ ಎಲ್ಲರೂ ಬೆಳಕು ಚೆಲ್ಲಬೇಕು. ಈಗ ವಿರೋಧ ಪಕ್ಷದಲ್ಲಿರುವವರು ಅಂದರೆ ನಾನು ಮತ್ತು ಮಾನ್ಯ ಕಮರುಲ್ ಇಸ್ಲಾಮ್‌ರವರು. ನಮಗಿಬ್ಬರಿಗೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೇ ? ನಾವು ಬರೆದುಕೊಡುವುದಾದರೆ, ನಮ್ಮನ್ನು ಕರೆದು ಅವಕಾಶ ಕೊಡಬೇಕು. ಎಲ್ಲದರಮೇಲೂ ನಮಗೆ ಮಾತನಾಡಲು ರೈಟ್ಸ್ ಇದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : - ನೀವು ಒಂದೊಂದು ಸಲ ಒಂದೊಂದು ತರಹ ಬಣ್ಣ ಹಾಕಿಕೊಳ್ಳುತ್ತೀರಿ.

ಶ್ರೀ ಎ. ಕೆ. ಅನಂತಕೃಷ್ಣ : - ಶಿವರಾಮೇಗೌಡರು ನನ್ನ ಆತ್ಮೀಯ ಸ್ನೇಹಿತರು. ಅವರು ಇನ್ನೂ ಬೆಳೆಯಬೇಕೆಂದು ನನಗೂ ಬಹಳ ಆಸೆ ಇದೆ. ಆದರೆ ಅವರು ಒಳ್ಳೆಯ ಪಾರ್ಲಿಮೆಂಟೇರಿಯನ್ ಆಗಬೇಕೆನ್ನುವುದರಲ್ಲಿ ಸ್ವಲ್ಪ ಎಡವಟ್ಟಾಗುತ್ತಾರೆ. ತಲೆಕೆಳಗಾಗುತ್ತಾರೆ. ನಮಗೂ ಯುವಕರ ವಿಷಯದಲ್ಲಿ ಬಹಳಷ್ಟು ಅಭಿಮಾನ ಇದೆ. ತಾವು ಕಾಂಗ್ರೆಸ್ ಪಾರ್ಟಿಯ ಸಹ ಸದಸ್ಯರೇ ಅಥವಾ ಕೇವಲ ಸದನದ ಹೊರಗಡೆ ಮಾತ್ರ ಕಾಂಗ್ರೆಸ್ ಪಾರ್ಟಿಯ ಸಹ ಸದಸ್ಯರೇ ಎಂಬುದನ್ನು ಹೇಳಿ. ಸದನದ ಒಳಗಡೆ ಕೂಡ ತಾವು ಕಾಂಗ್ರೆಸ್ ಪಕ್ಷದ ಸಹ ಸದಸ್ಯರಾಗಿದ್ದರೆ, ನೀವು ವಿರೋಧಪಕ್ಷದವರು ಎಂಬ ರೀತಿಯಲ್ಲಿ ಇಲ್ಲಿ ಎದ್ದು ನಿಂತುಕೊಂಡರೆ ನಮ್ಮ ರೆಕಾರ್ಡ್‌ನಲ್ಲಿ ಏನೆಂದು ಬರೆದುಕೊಳ್ಳಬೇಕು ? ದಯವಿಟ್ಟು ತಾವು ಮಾತನಾಡಲು ಸಮಯ ಕೇಳಿ, ತಮಗೆ ಹಕ್ಕಿದೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿ. ಒತ್ತಾಯ ಮಾಡಿ, ಅಧ್ಯಕ್ಷರು ಅವಕಾಶವನ್ನು ಕೊಟ್ಟರೆ ಖಂಡಿತವಾಗುಯೂ ಮಾತನಾಡಿ. ತಮಗೆ ಗಂಟಲಿದ್ರೆ ಗಂಟೆಗಟ್ಟಲೆ ಮಾತನಾಡಿ. ನಾನು ಬೇಡ ಎಂದು ಹೇಳುತ್ತಿಲ್ಲ. ಆದರೆ ಪಕ್ಷದ ವಿಷಯದಲ್ಲಿ, ರಾಜಕೀಯ ಸ್ಥಾನಮಾನದ ವಿಷಯದಲ್ಲಿ ಒಂದೊಂದು ಸಾರಿ ಒಂದೊಂದು ತರಹ ತಾವು ಮಾತನಾಡಿವುದನ್ನು ನೋಡಿದರೆ ಅಭಾಸವಾಗುತ್ತದೆ. ಇದರಿಂದ ಪಕ್ಷದ ವರಿಷ್ಠರಿಗೆ ತೊಂದರೆಯಾಗುತ್ತದೆ.

ಉಪಾಧ್ಯಕ್ಷಿಣಿಯವರು : - ಈ ವಿಷಯವನ್ನು ಇಲ್ಲಿಗೇ ಬಿಡೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ : - ಇಲ್ಲಿ ಎರಡನೇ ಮಾತಿಲ್ಲ. ಇಷ್ಟೊಂದು ಜನ ವಿರೂಧ ಪಕ್ಷದವರು ಇಲ್ಲದಿರುವಾಗ ನಮ್ಮನ್ನೇ ವಿರೋಧ ಪಕ್ಷದವರು ಎಂದು ಭಾವಿಸಿ ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎ. ಕೆ. ಅನಂತಕೃಷ್ಣ : - ಕಾಂಗ್ರೆಸ್ ಎಂದು ಏತಕ್ಕೆ ಬಯ್ಯುತ್ತೀರಿ ? ಅವಕಾಶ ಬೇಕಾದರೆ ಕೇಳಿ.

ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ) : - ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ಶಿಕ್ಷಣ ರಂಗಕ್ಕೆ ಹೊಸ ತಿರುವು 1991-92 ಎಂದು ಒಂದು ಪುಸ್ತಕ ಏನು ಕೊಟ್ಟಿದ್ದಾರೆ, ಅದನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಇದರಲ್ಲಿ ವಿಶೇಷವಾಗಿ ಪರೀಕ್ಷಾ ಸುಧಾರಣೆಯಲ್ಲಿ ಮತ್ತು ಕಪ್ಪು ಹಲಗೆ ಯೋಜನೆ ಹಾಗೂ ಶಾಲಾ ಕೊಠಡಿಗಳ ವಿಷಯದಲ್ಲಿ ಮತ್ತು ಇಲಾಖಾ ಪುನರ್‌ವಿಂಗಡಣಾ ವಿಷಯದಲ್ಲಿ ಹೇಳಿದ್ದಾರೆ. ಅಲ್ಲದೆ ಮಾದರಿ ಶಾಲೆಗಳ ಸ್ಥಾಪನೆ ಮಾಡುವ ನಿರ್ಧಾರವನ್ನು ತೆಗೆದು ಕೊಂಡಿದ್ದಾರೆ; ಇದು ಸ್ವಾಗತಾರ್ಹ. ಇದನ್ನು ಆದಷ್ಟು ರೂರಲ್ ಏರಿಯಾದಲ್ಲಿ ಮಾಡಿದರ ಒಳ್ಳೆಯದು ಮತ್ತು ಈ ಸೌಲಭ್ಯ ಹಳ್ಳಿಗಳ ವಿದ್ಯಾರ್ಥಿಗಳಿಗೆ. ಬಡರೈತರ ಮಕ್ಕಳಿಗೆ ಸಿಗುವಂತ ವ್ಯವಸ್ಥೆ ಮಾಡಬೆಕು. ಇಂಥ ಒಂದು ಒಳ್ಳೆಯ ಕಾರ್ಯವನ್ನು ಶಿಕ್ಷಣ ಸಚಿವರು ಮಾಡುತ್ತಿರುವುದು ಸ್ವಾಗತಾರ್ಹವಾದುದು. ಅದೇ ರೀತಿ ಪಠ್ಯಪುಸ್ತಕಗಳ ಬಗ್ಗೆ ನನ್ನ ಸ್ನೇಹಿತರಾದ ಶ್ರೀ ಪರಮೇಶ್ವರ ಅವರು ಹೇಳಿದರು. ಹಿಂದಿನವರ್ಷದವರೆಗೆ ನಮ್ಮ ಶಾಲಾ ಮಕ್ಕಳಿಗೆ ಡಿಸೆಂಬರ್ ತಿಂಗಳಾದರೂ ಪಠ್ಯಪುಸ್ತಕಗಳು ದೊರಕುತ್ತಿರಲಿಲ್ಲ. ಆಗ ಮಾನ್ಯ ಸಚಿವರು ಸುರೇಂದ್ರನಾಥ್ ಸಮಿತಿ ಮಾಡಿ ಅವರ ಸಲಹೆ ಪಡೆದು 1992-93ರ ಪಠ್ಯಪುಸ್ತಕಗಳನ್ನು ಖಾಸಗೀಕರಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿರುವುದು ಸ್ವಾಗತಾರ್ಹವಾದ ವಿಷಯ. ಇನ್ನು ಪ್ರಾಥಮಿಕ ಶಾಲೆಗಳ ಬಗ್ಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. 20-30 ವರ್ಷಗಳ ಹಿಂದೆ ಕೇರಿಗಳಲ್ಲಿ. ತಾಂಡಾಗಳಲ್ಲಿ. ಹಳ್ಳಿಗಳಲ್ಲಿ 1ರಿಂದ 4 ತರಗತಿಯವರೆಗೆ ಪ್ರಾಥಾಮಿಕ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ನೈಸರ್ಗಿಕ ಬೆಳವಣಿಗೆಯ ಆಧಾರದ ಮೇಲೆ ಈ ಶಾಲೆಗಳನ್ನು 5 ರಿಂದ 7ನೇ ತರಗತಿಯವರೆಗೆ ಮುಂದುವರಿಸಿಲ್ಲ. ಹೀಗಾಗಿ ಕಳೆದ 20-30 ವರ್ಷಗಳಿಂದ ಅವು ಅದೇ ಸ್ಥಿತಿಯಲ್ಲಿವೆ. ಒಬ್ಬನೇ ಶಿಕ್ಷಕ. 30 ವರ್ಷಗಳಾದರೂ ನಾಲ್ಕೇ ತರಗತಿಗಳು. ಅದಕ್ಕೆ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಇಂತಹ ಶಾಲೆಗಳು ಕೇರಿ. ತಾಂಡಾ. ಹಳ್ಳಿಗಳಲ್ಲಿ ಇರಬಹುದು ಜೊತೆಗೆ ನನ್ನ ಕ್ಷೇತ್ರದಲ್ಲಿ ವಸತಿ ಶಾಲೆಗಳು ಎಂದು ಏನಿವೆ. ಅಲ್ಲೆಲ್ಲಾ 5 ರಿಂದ 7ನೇ ತರಗತಿಯವರೆಗೆ ಮುಂದುವರಿಸಬೇಕೆಂದು ಮನವಿ ಮಾಡುತ್ತೇನೆ. ಸಿಂಗಲ್ ಟೀಚರ್ಸ್ ಶಾಲೆಗಳು ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಜಾಸ್ತಿ ಇವೆ. 1 ರಿಂದ 7ರವರೆಗೆ ತರಗತಿಗಲು ಇದ್ದರೂ ಒಬ್ಬರೆ ಶಿಕ್ಷಕರಿರುತ್ತಾರೆ. ಮಕ್ಕಳ ಸಂಖ್ಯೆ 200 ರಿಂದ 400 ರವರೆಗೆ ಇರುತ್ತದೆ. ಅವರು ಮಕ್ಕಳಿಗೆ ಪಾಠ ಮಾಡುವುದಿಲ್ಲ. ಮಕ್ಕಳನ್ನು ಗಲಾಟೆ ಮಾಡಬೇಡ ಸುಮ್ಮನೆ ಕೂರು ಎಂದರೆ ಹೇಗೆ ಕೂರುತ್ತಾರೆ? ಹೀಗೆ 300 ವಿದ್ಯಾರ್ಥಿಗಳನ್ನು ಕೂರಿಸುವುದು ಸಹ ಕಷ್ಟ. ಅದಕ್ಕಾಗಿ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಸಿಂಗಲ್ ಟೀಚರ್ಸ್ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಆಧಾರದ ಮೇಲೆ ಹೆಚ್ಚು ಶಿಕ್ಷಕರನ್ನು ನೇಮಕ ಮಾಡಬೇಕು. ಇನ್ನು ಬಹಳಷ್ಟು ಮಂದಿ ಮಾನ್ಯ ಸದಸ್ಯರು ವರ್ಗಾವರ್ಗಿ ಬಗ್ಗೆ ಸಲಹೆ ಕೊಟ್ಟಿದ್ದಾರೆ. Teachers, some of them are staying in one school for more then 25 years. Some school teachers are working from the date of appointment till retirement in one school. ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಕಡಿವಾಣ ಹಾಕಬೇಕು. 5 ವರ್ಷಗಳ ಕಾಲ ಒಂದು ಊರಿನಲ್ಲಿ ಇರಬಹುದು ಅಥವಾ ಒಂದು ಶಾಲೆಯಲ್ಲಿ ಪಾಠ ಮಾಡಬಹುದು 5 ವರ್ಷದ ನಂತರ ಕಡ್ಡಾಯವಾಗಿ ವರ್ಗ ಮಾಡಬೇಕು. ಇಲ್ಲದಿದ್ದರೆ ಊರಿನಲ್ಲಿ ರಾಜಕೀಯ ಮಾಡುತ್ತಾರೆ. ಅವರು ತಮ್ಮ ಹೊಲ ಅಭಿವೃದ್ಧಿ ಮಾಡಿ ಕೊಳ್ಳುತ್ತಾರೆಯೇ ಹೊರತು ಮಕ್ಕಳಿಗೆ ಪಾಠ ಮಾಡುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದೇ ವರ್ಷದಿಂದ ಇದನ್ನು ಪ್ರಾರಂಭಮಾಡಬೇಕು. ಸುಮಾರು 30 ವರ್ಷಗಳಿಂದ ನನ್ನ ಕ್ಷೇತ್ರದಲ್ಲಿ ಒಂದೇ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಅಂಜಟಗಿ ಎಂಬ ಒಂದು ಗ್ರಾಮ ಇದೆ. ಗಂಡ ಹೆಂಡತಿ ಇಬ್ಬರೂ ಒಂದೇ ಶಾಲೆಯಲ್ಲಿ ಅಪಾಯಿಂಟ್‌ಆಗಿದ್ದಾರೆ. ಇನ್ನೂ ಅಲ್ಲೇ ಕೆಲಸ ಮಾಡುತ್ತಿದ್ದಾರೆ. ಇನ್ನುಪರೀಕ್ಷಾ ಸುಧಾರಣೆ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ಕಡೆ ಉತ್ತರ

ಕರ್ನಾಟಕದಲ್ಲಿ ಹಾಗೂ ಇತ್ತ ಕಡೆಯೂ. ಮಾಸ್ ಕಾಪಿಯಿಂಗ್ ನಡೆಯುತ್ತಿದೆ. ನಮ್ಮ ಕಡೆ ತಂದೆ ತಾಯಿ, ಅಣ್ಣ ತಂಗಿ ಮಕ್ಕಳಿಗೋಸ್ಕರ ಬುತ್ತಿ ಕಟ್ಟಿಕೊಂಡು ಬರುತ್ತಾರೆ. ಏಕೆಂದರೆ ಮಕ್ಕಳು ಅಭ್ಯಾಸವನ್ನೇ ಮಾಡುವುದಿಲ್ಲ. ಏಕೆಂದರೆ ಕಾಪಿ ಮಾಡಿ ಪಾಸ್ ಆಗುತ್ತಾರೆ. ದುಡ್ಡು ಕೊಟ್ಟರೆ ಕೆಲಸ ಸಿಗುತ್ತದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮಾಸ್ ಕಾಪಿಯಿಂಗ್ ಹವ್ಯಾಸ ಎಲ್ಲ ಕಡೆ ಏನಿದೆ. ವಿಶೇಷವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷಾ ಸೆಂಟರ್ ಇರುವ ಕಡೆ ಜಾತ್ರೆ. ಪೋಲೀಸ್ ವ್ಯಾನ್‌ಗಳು ಎರಡು ಮೂರು ಇರುತ್ತವೆ. ತಂದೆ, ತಾಯಿ. ಅಣ್ಣ ತಂಗಿ.. ಗೆಳೆಯರೆಲ್ಲಾ ಕೂಡಿ ಕಾಪಿ ಮಾಡಿಸುತ್ತಾರೆ ; ಅದೇ ಮುಖ್ಯ ಕೆಲಸ. ಅವರು ಕಾಪಿ ಮಾಡಿ ಪಾಸಾಗುವುದು. ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ? ಇಲ್ಲದಿದ್ದರೆ ಪುಸ್ತಕ ಇಟ್ಟುಕೊಂಡು ಬರೆಯುವ ವ್ಯವಸ್ಥೆ ಮಾಡಿಬಿಡಲಿ. ಈಗ ಕಾಪಿ ಮಾಡುವ ಅವಶ್ಯಕತೆಯೇ ಹೋಗುತ್ತದೆ. ಅದಕ್ಕೋಸ್ಕರ ಮಾನ್ಯ ಸಚಿವರಲ್ಲಿ ಇದರ ಬಗ್ಗೆ ವಿಶೇಷವಾದ ಹೊಸ ಶಿಕ್ಷಣ ನೀತಿ ರೂಪಿಸಿದರೆ ಒಳ್ಳೆಯದೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಆದ್ದರಿಂದ ಕಾಪಿ ಸಮಸ್ಯೆ ಬಗೆಹರಿದುಹೋಗುತ್ತದೆ. ಈಗ ಗ್ರಾಂಟ್-ಇನ್-ಎಡ್ ವಿಷಯದಲ್ಲಿ ನಾನು ಮಾನ್ಯ ಸಚಿವರ ಗಮನ ಸೆಳೆಯುವುದೇನೆಂದರೆ. ಇತ್ತೀಚಿಗೆ 1991-92ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳನ್ನು, ಪ್ರೌಢ ಶಾಲೆಗಳನ್ನು ಹಾಗೂ ಸಂಯುಕ್ತ ಕಿರಿಯ ವಿದ್ಯಾಲಯಗಳನ್ನು ಸಚಿವರ ಆದೇಶದ ಮೇರೆಗೆ ಮಂಜೂರಾತಿ ನೀಡಲಾಯಿತು. ಶಾಶ್ವತ ಅನುದಾನರಹಿತ ಎಂಬ ಒಂದು ಆದೇಶವನ್ನು ಆ ಶಿಕ್ಷಣ ಸಂಸ್ಥೆಗಳಿಗೆ ಕೊಡಲಾಗಿದೆ. ಆದರೆ ಸರ್ಕಾರವೇ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಸ್ಥೆಗಳವರು ಮುಂದೆ ಬಂದು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಬಡಮಕ್ಕಳಿಗೆ ಪರಿಶಿಷ್ಟ ಜಾತಿ ಮಕ್ಕಳಿಗೆ ಇತರೆ ವೀಕರ್‌ಸೆಕ್ಷನ್ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಶಕ್ತಿ ಅವರಿಗೆ ಬರಲಿ ಎಂದು 1977ರಲ್ಲಿ ಒಂದು ಆದೇಶ ಹೊರಡಿಸಿದೆ. ಆ ಆದೇಶ ಸಂಖ್ಯೆ : ಇಡಿ 72 ಇಜಿಒ 83 ದಿನಾಂಕ 5-1-84 ಮತ್ತು ಇಡಿ 155 ಇಜಿಸಿ 74 ದಿನಾಂಕ 6-6-1977. ಈ ಸರ್ಕಾರಿ ಆದೇಶವನ್ನು ಆಗ ಹೊರಡಿಸಿತ್ತು. ಅದರ ಪ್ರಕಾರ ಎಸ್.ಸಿ.ಎಸ್.ಟಿ ಮ್ಯಾನೇಜ್‌ಮೆಂಟ್‌ನ ಶಿಕ್ಷಣ ಸಂಸ್ಥೆಗಳು ಪ್ರಥಮ ವರ್ಷದಲ್ಲೇ ಅನುದಾನಕ್ಕೆ ಅರ್ಹ ಎಂದು ಕೆಲವು ಕಂಡೀಷನ್‌ಗಳನ್ನು ಸೂಚಿಸಿದ್ದಾರೆ. 1991-92ನೇ ಸಾಲಿನಲ್ಲಿ ಈ ಹಳೇ ಆದೇಶ ಜಾರಿಯಲ್ಲಿದ್ದರೂ ಕೂಡ ಶಾಶ್ವತ ಅನುದಾನರಹಿತ ಎಂದು ಎಲ್ಲೆಲ್ಲಿ ಶಾಲೆಗಳಿಗೆ ಅರ್ಜಿ ಕೊಟ್ಟಿರುತ್ತಾರೆ ಅಲ್ಲಿ ಕೊಟ್ಟಿದ್ದಾರೆ. ಸರ್ಕಾರ ಈ ತರಹ ಕೊಡುವುದಕ್ಕಿಂತ ಮೊದಲು ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕಾಗಿತ್ತು. ಇಲ್ಲವೇ ಅನುದಾನ ಸಂಹಿತೆಯನ್ನು ತಿದ್ದುಪಡಿ ಮಾಡಬೇಕಾಗಿತ್ತು. ಅದಾವುದನ್ನೂ ಮಾಡಿಲ್ಲ. ಆದರೂ ಶಾಶ್ವತ ಅನುದಾನರಹಿತ ಎಂಬ ಪದ ಬಳಸಿ ಈ ಪರಿಶಿಷ್ಟ ಜಾತಿ ಸಂಸ್ಥೆಗಳಿಗೆ ಆದೇಶ ನೀಡಿದೆ. ಇದನ್ನು ಮಾನ್ಯ ಸಚಿವರು ಪುನರ್‌ಪರಿಶೀಲನೆ ಮಾಡಿ ಈ ಸಂಸ್ಥೆಗಳಿಗೆ ಪ್ರಥಮ ವರ್ಷದಿಂದಲೇ ಅನುದಾನ ಸಿಗುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಇವು ಶಾಶ್ವತ ಅನುದಾನರಹಿತ ಸಂಸ್ಥೆಗಳಾದರೆ ಇವರು ಯಾವರೀತಿ ಶಾಲೆಗಳನ್ನು ನಡೆಸಬೇಕು? ಅದು ಸಾಧ್ಯವಾಗುವುದಿಲ್ಲ. ಯಾವ ಕಾಲಕ್ಕೂ ಪರಿಶಿಷ್ಟ ಜಾತಿಯವರಿಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಖೊಟ್ಟಿ ಸಂಸ್ಥೆಗಳಿದ್ದರೆ ಅದನ್ನು ಬಂದ್ ಮಾಡಲಿ. ಅವರಿಗೆ ಆದೇಶ ಏನು ಕೊಟ್ಟಿರುತ್ತಾರೆ, ಪರವಾನಗಿ ಏನು ಆ ಶಾಲೆ ತೆರೆಯುವುದಕ್ಕೆ ಕೊಟ್ಟಿರುತ್ತಾರೆ. ಅದನ್ನು ವಾಪಸ್ಸು ಪಡೆದುಕೊಳ್ಳಲಿ. ಸರಿಯಾಗಿ ಇನ್‌ಸ್ಪೆಕ್ಷನ್ ಮಾಡಿ ಶಾಲೆ ಈ ತರಹ ಇರಬೇಕು. ಆಟದ ಮೈದಾನ ಇರಬೇಕು. ಲ್ಯಾಬೋರೇಟರಿ ಇರಬೇಕು. ಲೈಬ್ರರಿ ಇರಬೇಕು, ಸರಿಯಾದ ಕಟ್ಟಡ ಇರಬೇಕೆಂದು ಕಡ್ಡಾಯವಾಗಿ ಕಂಡೀಷನ್ಸ್ ಹಾಕಿ ಅದನ್ನು ಯಾರು ಪಾಲಿಸಿಲ್ಲವೋ ಆ ಶಾಲೆಯ ಅನುಮತಿಯನ್ನು ರದ್ದು ಮಾಡಿ. ಆದರೆ ಯಾರೋ ಒಬ್ಬರು ಖೋಟಾ ಸಂಸ್ಥೆ ನಡೆಸುತ್ತಾರೆಂದು ಎಲ್ಲರಿಗೂ ಅನುದಾನ ರದ್ದು ಮಾಡುವುದು.

ಪ್ರತಿಯೊಬ್ಬರಿಗೂ ಇದನ್ನು ಅನ್ಯಾಯ ಮಾಧ್ಯಮ ಆಗಬಾರದು ಎಂದು ಕಳಕಳಿಯಿಂದ ಕೇಳುತ್ತಿದ್ದೇನೆ. ಮೊನ್ನೆ ಶೂನ್ಯ ವೇಳೆಯಲ್ಲಿ ನಾವು ಈ ಬಗ್ಗೆ ಗಮನ ಸೆಳೆದಾಗ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ :

"ಈಗಾಗಲೇ ಆಯವ್ಯಯದ ಕೊರತೆಯಿಂದಾಗಿ ಕೆಲವು ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸದೇ ಇರುವುದರಿಂದ ಹಾಗೂ ಆಡಳಿತ ಮಂಡಲಿಯವರು ತಾವಾಗಿಯೇ ಸ್ವತಹ ಅನುದಾನ ರಹಿತವಾಗಿ ನಡೆಸುವುದಾಗಿ ಕೋರಿಕೆ ಬಂದದ್ದರಿಂದ ಶಾಸ್ವತ ಅನುದಾನ ರಹಿತವಾಗಿ ಮಂಜೂರಾತಿ ನೀಡಿದೆ" ಎಂದು ; ಇರಲಿ. ಪರ್ವಾಯಿಲ್ಲ. ಅದನ್ನು ಸ್ವಾಗತಿಸುತ್ತೇನೆ. ಹಾಗೂ ನಾನು ಹೇಳಿದ್ದನ್ನು ಸಹ ಮರು ಪರಿಶೀಲನೆ ಮಾಡಿ, ಪರಿಶಿಷ್ಟ ಜಾತಿ, ಪಂಗಡದ ಶಾಸಕರನ್ನು ಕರೆದು ಅವರ ಸಲಹೆ ಪಡೆದು ಈ ಸಂಸ್ಥೆಗಳಿಗೆ ಏನು ಅನ್ಯಾಯ ಆಗುತ್ತಿದೆಯೋ ಅದನ್ನು ಆಗದಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಕಾಲದಲ್ಲಿ ವೇತನ ಬಿಡುಗಡೆ ಮಾಡುವುದು ಸ್ವಲ್ಪ ತೊಂದರೆದಾಯಕವಾಗಿದೆ. ಯಾವ ರೀತಿ ಎಂದರೆ, ಜಮಖಂಡಿಯ ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕನಿಗೆ ಪ್ರೈವೇಟ್ ಮೇನೇಜ್‌ಮೆಂಟ್‌ನವರು 1 ವರ್ಷದಿಂದ ಸಂಬಳ ಕೊಟ್ಟಿಲ್ಲ. ಈ ಶಿಕ್ಷಕರ ಸಂಬಳವನ್ನು ಪೆಂಡಿಂಗ್ ಇಟ್ಟರೂ ಕೂಡಾ ಮಾನವೀಯತೆ ಆಧಾರದಮೇಲೆ ಇತರ ಶಿಕ್ಷಕರ ಸಂಬಳವನ್ನು ಬಿಡುಗಡೆ ಮಾಡಿದ್ದಾರೆ. ಅನುದಾನ ಸಂಹಿತೆಯಲ್ಲಿ ಒಂದು ರೂಲ್ ಇದೆ. ಅದು ಯಾವ ರೀತಿ ಇದೆ ಎಂದರೆ :

> "If the School Authorities are not in a position to pay the salary, held up the salary, the department can take up the job and release the salary to the particular employee whose salary has been made held up for the last several months."

ಅದಕ್ಕೋಸ್ಕರ ನಾನು ಮಾನ್ಯ ಸಚಿವರಲ್ಲಿ ಈ ವಿಷಯದ ಬಗ್ಗೆ ಸ್ವಲ್ಪ ಕಡ್ಡಾಯವಾದ ಒಂದು ಆದೇಶ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ವಿಶ್ವವಿದ್ಯಾನಿಲಯಗಳಲ್ಲಿ ರೋಸ್ಟರ್ ಯಾವ ರೀತಿ ಅನುಸರಿಸುತ್ತಿದ್ದಾರೆಂದು ನೋಡಬೇಕಾಗಿದೆ. ನಾನು ವಿಧಾನಮಂಡಲದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಸಮಿತಿಯ ಸದಸ್ಯನಾಗಿದ್ದೆ. ಆಗ ಯೂನಿವರ್ಸಿಟಿ ಅಥಾರಿಟೀಸ್ ಕರೆದು ಕೇಳಿದಾಗ ಈ ವಿಷಯ ಕಂಡುಬಂತು. ಕರ್ನಾಟಕ ಯೂನಿವರ್ಸಿಟಿ ಮತ್ತು ಅಗ್ರಿಕಲ್ಚರ್ ಯೂನಿವರ್ಸಿಟಿ ವಿಶೇಷವಾಗಿ ರೋಸ್ಟರ್ ಸಿಸ್ಟಮ್ ಪಾಲನೆ ಮಾಡಿಲ್ಲ. ಅಲ್ಲಿ ರಿಸರ್ವೇಶನ್ ಯಾವ ರೀತಿ ಇಡುತ್ತಾರೆಂದರೆ ಸಂಸ್ಕೃತ ಇಂಗ್ಲೀಷ್, ಲಿಟರೇಚರ್, ಫ್ರೆಂಚ್ ಮುಂತಾದ ವಿಷಯಗಳನ್ನು ಬೋಧಿಸುವ ಹುದ್ದೆಗಳನ್ನು ಎಸ್‌ಸಿ ಎಸ್‌ಟಿ ವರ್ಗದವರಿಗೆ ಮೀಸಲು ಇಡುತ್ತಾರೆ. ಸೋಶಿಯಾಲಜಿ, ಕನ್ನಡ, ಚರಿತ್ರೆ ಮುಂತಾದ ಬೋಧಕ ಹುದ್ದೆಗಳನ್ನು ಇತರ ವರ್ಗದವರಿಗೆ ಮೀಸಲು ಇಡುತ್ತಾರೆ. ಇಂತಹ ಬಿಕ್ಕಟ್ಟು ವಿಷಯಗಳ ಹುದ್ದೆಗಳನ್ನೇ ಪರಿಶಿಷ್ಟ ಜಾತಿಯವರಿಗೆ ಮೀಸಲು ಇಡುತ್ತಾರೆಂದರೆ ಅವರಿಗೆ ಅವಕಾಶ ಸಿಗಬಾರದು ಎನ್ನುವ ದೃಷ್ಟಿಯಿಂದ ಈ ವ್ಯವಸ್ಥೆ ಅಲ್ಲಿ ನಡೆದಿದೆ. ಈ ರೀತಿಯ ಮೀಸಲಾತಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಇದ್ದರೂ ವಿಶೇಷವಾಗಿ ಕರ್ನಾಟಕ ಮತ್ತು ಗುಲ್ಬರ್ಗಾ ಹಾಗೂ ಧಾರವಾಡದ ಯೂನಿವರ್ಸಿಟಿಗಳಲ್ಲಿ ಬಹಳವಾಗಿ ನಡೆದಿದೆ. ಅದಕ್ಕೋಸ್ಕರವಾಗಿ ವೈಸ್‌ಛಾನ್ಸಲರ್ ಅವರಿಗೆ ಯಾವ ರೀತಿ ಸರ್ಕಾರ ಶಿಕ್ಷೆ ಕೊಟ್ಟಿದೆ ಎಂಬುದನ್ನು ಇಲ್ಲಿ ಸ್ಮರಿಸುತ್ತೇನೆ. ಇನ್ನು ಮಾನ್ಯ ಶಿಕ್ಷಣ ಸಚಿವರು ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಆ ಬಗ್ಗೆ ನಾನು ಹರ್ಷಭರಿತನಾಗಿದ್ದೇನೆ. ಈ ಶಿಕ್ಷಕರ ಹುದ್ದೆಗಳನ್ನು ಮೊದಲು ಡಿಎಲ್‌ಆರ್‌ಸಿ ಮುಖಾಂತರ ಭರ್ತಿ ಮಾಡುವಾಗ ನಾನಾ ರೀತಿಯ ಟೀಕೆಗಳು ಬರುತ್ತಿದ್ದವು. ಮಾನ್ಯ ಸಚಿವರು ಈಗ ಡೈರೆಕ್ಟಾಗಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಮೂಲಕ

ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಯಾರು ತನ್ನ ಹೆಸರನ್ನು ಅಲ್ಲಿ ದಾಖಲು ಮಾಡಿರುತ್ತಾರೋ. ಅವರ ಅಂಕಗಳ ಆಧಾರದ ಮೇಲೆ ಅಥವಾ ಅವರ ವಯಸ್ಸಿನ ವಯೋಮಿತಿಯ ಆಧಾರದಮೇಲೆ ಡಿಡಿಪಿಐ ಅವರು ಡೈರೆಕ್ಟಾಗಿ ಅಪಾಯಿಂಟ್ ಮಾಡುತ್ತಿದ್ದಾರೆ. ಇಂತಹ ಒಂದು ಒಳ್ಳೆಯ ಕಾರ್ಯವನ್ನು ಮಾನ್ಯ ಸಚಿವರು ಮಾಡಿದ್ದಾರೆ. ಈ ಕಾರ್ಯವನ್ನು ನಮ್ಮ ಕ್ಷೇತ್ರದ. ನಮ್ಮ ಜಿಲ್ಲೆಯ ಜನ ಅಷ್ಟೇ ಅಲ್ಲ ರಾಜ್ಯದ ಎಲ್ಲಾ ಕಡೆಯ ಜನರು ಶ್ಲಾಘಿಸುತ್ತಿದ್ದಾರೆ.

ಇನ್ನು ಬಡ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಹೋಗುವ ಸಮಯದಲ್ಲಿ ಸಾಲಕ್ಕಾಗಿ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿದರೆ ಅವರಿಗೆ ಬ್ಯಾಂಕುಗಳು ಸಾಲವನ್ನು ಕೊಡುತ್ತಾ ಇದ್ದವು. ಇತ್ತೀಚೆಗೆ ಈ ಬ್ಯಾಂಕಿನವರು ಬಡ ವಿದ್ಯಾರ್ಥಿಗಳಿಗೆ ಎನ್‌ಕರೇಜ್ ಮಾಡುವ ವಿಚಾರವನ್ನು ಬಿಟ್ಟು ಬಿಟ್ಟಿದ್ದಾರೆ. ಅದಕ್ಕೋಸ್ಕರ ಸರ್ಕಾರ ಮುಂದೆ ಬಂದು ಇಂತಹ ವಿದ್ಯಾರ್ಥಿಗಳಿಗೆ ಎನ್‌ಕರೇಜ್‌ಮೆಂಟ್ ಕೊಡುವ ದೃಷ್ಟಿಯಿಂದ ಸರ್ಕಾರದ ಪರವಾಗಿ ಗ್ಯಾರಂಟಿಯನ್ನು ಕೊಟ್ಟು ಸಾಲ ಕೊಡಿಸಿಕೊಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾತನಾಡುವ ಇನ್ನೂ 7-8 ಜನ ಮಾನ್ಯ ಸದಸ್ಯರು ಇದ್ದಾರೆ. ತಾವು ಬೇಗ ಮುಗಿಸಬೇಕು.

ಶ್ರೀ ಮನೋಹರ ಐನಾಪುರ್ : ಆಯಿತು ಮುಗಿಸುತ್ತೇನೆ. ತಮ್ಮ ಶಿಕ್ಷಣ ರಂಗದ ಹೊಸ ತಿರುಡಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸಕಾಲದಲ್ಲಿ ವೇತನ ಬಿಡುಗಡೆ ಮಾಡಲಾಗುವುದೆಂದು ಹೇಳಿದ್ದೀರಿ. ಸುಮಾರು 23 ಕೋಟಿ ರೂಪಾಯಿಗಳ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಇನ್ನು ಮುಂದೆ ಎಲ್ಲ ಅನುದಾನ ಪಡೆಯುವ ಖಾಸಗಿ ಶಾಲೆಗಳ ಸಿಬ್ಬಂದಿಗೆ ಆಯವ್ಯಯದ ಅನುಬಂಧ(ಸಿ)ನಲ್ಲಿ ಬಳಪಡಿಸಿದೆ ಎಂದು ಹೇಳಿದ್ದೀರಿ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸ್ವಲ್ಪ ಖಾಸಗಿ ಪ್ರೌಢಶಾಲೆಗಳು ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಮೊದಮೊದಲು ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ವೇತನ ಬಿಡುಗಡೆಗಾಗಿ ಸತ್ಯಾಗ್ರಹವನ್ನು ಮಾಡಿದಾಗ ಹಣವನ್ನು ಬಿಡುಗಡೆ ಮಾಡುತ್ತಿದ್ದರು. ಇನ್ನು ಮುಂದೆ ಅದಕ್ಕೆ ಅವಕಾಶ ಕೊಡದೆ ಹಣವನ್ನು ಬೇಗ ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಹಾಗೂ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಸಂಬಳ ತೆಗೆದುಕೊಳ್ಳುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಟೌನ್ ವ್ಯಾಪ್ತಿಯಲ್ಲಿರತಕ್ಕ ಶಾಲೆಗಳಿಗೆ ಹೆಚ್ಚುವರಿ ಹಣವನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿರುವುದು ಬಹಳ ಶ್ಲಾಘನೀಯ. ಉಪಾಧ್ಯಾಯರುಗಳ ಹುದ್ದೆಗೆ ಆಯ್ಕೆ ಮಾಡುವಾಗ ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ 15 ಕೃಪಾಂಕಗಳನ್ನು ನೀಡಲು ತೀರ್ಮಾನ ಮಾಡಿರುವುದು ಬಹಳ ಉಪಯುಕ್ತವಾದ ತೀರ್ಮಾನ. ಇದರಿಂದಾಗಿ ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಅಭ್ಯರ್ಥಿಗಳು ಮತ್ತು ಸಾರ್ವಜನಿಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 15 ಅಂಕಗಳನ್ನು ನೀಡಲು ಮಾನ್ಯ ಸಚಿವರು ಏನು ತೀರ್ಮಾನ ಮಾಡಿದ್ದಾರೆ ಅದು ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಅಭ್ಯರ್ಥಿಗಳ ದೃಷ್ಟಿಯಿಂದ ಬಹಳ ಒಳ್ಳೆಯದು ತೀರ್ಮಾನವಾಗಿದೆ ಹಾಗೂ ಹಳ್ಳಿಗಾಡಿನಿಂದ ಬರತಕ್ಕ ಅಭ್ಯರ್ಥಿಗಳಿಗೆ ನೌಕರಿ ಸಿಗಲು ಅವಕಾಶವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಾಕ್ಷರತೆಯ ಬಗ್ಗೆ ಮಾನ್ಯ ಜಿ.ಎಸ್. ಆಚಾರ್‌ರವರು ಮತ್ತು ಡಾ|| ಪರಮೇಶ್ವರರವರು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆ ಸಂಪೂರ್ಣವಾಗಿ ಆಗಿದೆಯೆಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಸಾಕ್ಷರತೆಗೋಸ್ಕರ ಹೋದ ವರ್ಷ 3.7 ಕೋಟಿ ರೂಪಾಯಿ ಹಣವನ್ನು ವೆಚ್ಚ ಮಾಡಿದರು. ನಾನು ಈ ಸಾಕ್ಷರತೆ ಯೋಜನೆಯನ್ನು ಟೀಕೆ ಮಾಡುತ್ತಿಲ್ಲ. ನಾನು ಈ ವಿಚಾರವನ್ನು ಒಂದು ಸಲ ಮಾನ್ಯ ಸಚಿವರ ಗಮಕ್ಕೆ ತಂದಿದ್ದೇನೆ. ಸಾಕ್ಷರತೆ ಯೋಜನೆ ಇದು ಕೇಂದ್ರ ಸರ್ಕಾರದ ಯೋಜನೆ. ಹಳ್ಳಿಯಲ್ಲಿರುವ ಪ್ರತಿಯೊಬ್ಬರೂ ಅಕ್ಷರಸ್ಥರಾಗಬೇಕು ಎನ್ನುವ ವಿಚಾರ ಸರ್ಕಾರದ್ದು ಇದೆ. ಬಿಜಾಪುರ ಜಿಲ್ಲೆಯಲ್ಲಿ ಹೋದ ವರ್ಷ ಸಾಕ್ಷರತೆಯನ್ನು ಪ್ರಾರಂಭ ಮಾಡಿದ್ದಾರೆ. ಇದು ಕೇವಲ ಫಿಗರ್ಸ್ ಮಾತ್ರ ಇದೆ. ಹಳ್ಳಿಯಲ್ಲಿ ಎಷ್ಟು ಜನರು ಅಕ್ಷರಸ್ಥರು ಇದ್ದಾರೆಂದು ಫಿಗರ್ಸ್‌ನ್ನು ಕೊಟ್ಟರು. ಇದನ್ನು ಇನ್ನು ಎಫೆಕ್ಟಿವಾಗಿ ಬೇರೆ ವಿಧಾನಗಳಲ್ಲಿ ಮಾಡಬೇಕಾಗಿತ್ತು. ನನ್ನ ವಿಚಾರ ಇಷ್ಟೆ. ಸಾಕ್ಷರತೆಯನ್ನು ಮಾಡುವುದಕ್ಕೋಸ್ಕರ ಹಣ ವ್ಯಯ ಮಾಡುವುದಕ್ಕೆ ಬದಲಾಗಿ ಶಾಲಾ ಕಾಲೇಜುಗಳ ಕಟ್ಟಡಗಳನ್ನು ಶಿಕ್ಷಕರ ನೇಮಕಾತಿಯನ್ನು ಮಾಡುವ ಮುಖಾಂತರ, ಬಡ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಕೊಡುವ ಮುಖಾಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರ ಮತ್ತು ಬಡ ವರ್ಗಗಳಾದ ಮಕ್ಕಳಿಗೆ ವಿದ್ಯೆಯನ್ನು ಕೊಡುವ ಬಗ್ಗೆ ಒಂದು ಅಧ್ಯಕ್ಷತೆಯನ್ನು ನೀಡಿದರೆ ಸಾಕ್ಷರತೆಯನ್ನು ಹೆಚ್ಚಿಸಬಹುದೇ ಹೊರತಾಗಿ 35 ವರ್ಷ ಆದವರಿಗೆ ಸಾಕ್ಷರತೆ ಮಾಡುವುದು ಸರಿಯೇ ನಾನು ಕೆಲವು ಉದಾಹರಣೆ ಕೊಡುತ್ತೇನೆ. ವಯಸ್ಕರಿಗೆ ಕಲಿಸಲಿಕ್ಕೆ ಹೋದಾಗ ತಮ್ಮ ಮಕ್ಕಳು ಬಿಎ, ಬಿಎಡ್, ಬಿಎಸ್‌ಸಿ, ಎಂಎ ಕಲಿತು ಅವರಿಗೆ ಕೆಲಸವಿಲ್ಲ. ನಮಗೆ ಕಲಿಸಿ ಏನು ಮಾಡುತ್ತೀರಿ ಎಂದು ಹೆಣ್ಣುಮಕ್ಕಳು ಕೇಳುತ್ತಾರೆ. ಅವರು ಕೇಳುವುದರಲ್ಲಿ ಒಂದು ರೀತಿಯಿಂದ ನಿಜವಿದೆ. ಎಲ್ಲರನ್ನೂ ಸಾಕ್ಷರತರನ್ನಾಗಿ ಮಾಡುವುದು ಸರ್ಕಾರದ್ದು ವಿಚಾರ ಇದೆ. ಈ ಯೋಜನೆಯನ್ನು ಇನ್ನು ಒಳ್ಳೆಯ ರೀತಿಯಿಂದ ಮಾಡಬೇಕಾದರೆ ಸ್ವಲ್ಪ ಬೇರೆ ವಿಧಾನಗಳನ್ನು ಸರ್ಕಾರ ಅನುಸರಿಸಬೇಕೆಂದು ನಾನು ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಶಿಕ್ಷಣ ಸಚಿವರಿಗೆ ನಾನು ಕೊನೆಯದಾಗಿ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಏನೆಂದರೆ ಎಲ್ಲ ಸದಸ್ಯರು ನಮ್ಮ ಶಿಕ್ಷಣ ಸಚಿವರನ್ನು ಕೊಂಡಾಡಿದ್ದಾರೆ. ಅವರು ಒಂದು ಒಳ್ಳೆಯ ರೀತಿಯ ಶಿಕ್ಷಣವನ್ನು ರಾಜ್ಯದ ಜನತೆಗೆ ಕೊಡುವುದಕ್ಕೆ ಮುಂದಾಗಿದ್ದಾರೆ. ಯಾವ ರೀತಿಯ ಶಿಕ್ಷಣವನ್ನು ಜನರಿಗೆ ಕೊಟ್ಟರೆ ಒಳ್ಳೆಯದಾದೀತು ಎಂದು ಚಿಂತನೆ ಮಾಡಬೇಕಾಗಿದೆ. ಅದಕ್ಕೋಸ್ಕರ ಒಂದು ವಿಶೇಷವಾದ ಸಮಿತಿಯನ್ನು ಜರ್ನಲಿಸ್ಟ್ಸ್, ಎಜ್ಯುಕೇಶನಲಿಸ್ಟ್ಸ್‌ನ್ನು ಸೇರಿಸಿ ಮಾಡಿ ಯಾವ ರೀತಿ ಶಿಕ್ಷಣ ಕೊಟ್ಟರೆ ಒಳ್ಳೆಯದಾದೀತು ಎಂದು ವಿಚಾರ ಮಾಡಿದರೆ ಒಳ್ಳೆಯದೆಂದು ಹೇಳಿ ನನಗೆ ಈ ಶಿಕ್ಷಣ ಇಲಾಖೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

† SRI QUMARUL ISLAM (GULBARGA) :- Madam Deputy Speaker, about six Demands are before the House and some of them are very important. As far a the Education is concerned, there was a survey conducted throughout the country by a Committee and they have submitted the 5th Report on Education. If you go through that Report, we will find that the Karnataka has got maximum number of primary single Teacher schools comparing to all other States in the country. There is no even a single teacher school in Kerala but their literacy percentage is highest in the country. One of the reasons for drop-outs of the children is single Teacher

Schools. After the submission of that 5th Report on Education, The Government of India initiated so many schemes. In our State also, The Government has introduced the Akshaya Programme to reduce the drop-outs. As per that report, the rate of drop-outs in Karnataka is shown at 64%. However, your Departmental Report says that it has been reduced to 35%. the Government of India started Operation Black Board Scheme in 1986 as a National Policy in respect of Education to raise the percentage of literacy. The said OBB Scheme started in 1987. It was decided to be implemented in 4 phases. the purpose of starting this OBB Scheme was to provide additional class-rooms to the single teacher schools, to give teaching aids etc. I don't wish to go into details. however, I would like to know as to why the Urdu Minority Schools have not been included in the said scheme. In Karnataka, there are number of Urdu Medium Single teacher schools. As per the OBB Scheme, in these schools, Urdu Teachers have not been appointed. Only Kannada teachers were appointed in such schools. The Government stand is that they have appointed one Kannada teacher and if we appoint another teacher, it will become multi-teacher school and that is why we have not given additional teacher. As you all know, Kannada is not there in Ist and 2nd standard. Even it is not compulsory in 3rd and 4th standard. It is optional and there is no examination for Kannada. As per the government order or direction, the Kannada will be taught after the school hours and that too in two periods per week.

That means, there is no need of permanent Kannada teachers in the Urdu medium single teacher schools. A Kannada mobile or part time can be appointed there and if you give an additional teacher under the operation black board to the Urdu medium school, definitely, there will not be any drop outs there and the standards will go up. I think our Government in previous years to please the legislators, when we go and demand the Minister stating that I have got so many villages in my constituency and I want schools, naturally the schools have been sanctioned, So, single teacher schools are there. No doubt we can say, in almost all the important villages of the Constituency single teacher schools are there. But the schools are also one of the reasons for drop outs, because the boys will not have interest as there was no proper atmosphere for them to learn in these schools. Instead of giving four single teacher schools, if you give one full fledged school or atleast four teacher school, that will be better in the larger interest of the education and larger interest of the literacy. So, I want that the Urdu medium schools also be included under the Operation Black Board Schemes and additional teachers should be appointed in the Urdu Medium Schools. Sir on the floor of this house, when I put a question, you have replied that you will consider for a part-time Kannada teachers in the aided primary schools. Sir, after the Gokak report in Karnataka, the Government High Schools as well as aided high schools over and above the staffing pattern, a Kannada teacher was given and it is there in the grant-in-aid; It is for the development of the kannada and that was the need of the hour and that was the

demand of the hour and the Government has given. At the same time, in the primary schools, higher primary schools, Government schools have been given the kannada posts over and above the staffing pattern. Whereas aided schools were not given. Sir, you have replied in this house that part timer will be considered. I want there should be a regular teacher. It is in the interest of the Kannada and in the higher primary and the primary education where Kannada is a compulsory language and every minority wanted to learn Kannada. so, I request that the Kannada posts should also be given in the to the aided primary schools when it has been given to the Government primary schools. Here is the need and we want that the Kannada post are to be created over and above the staffing pattern. Sir, in the aided schools, you know, the management even if they give a good salary a Kannada teacher is not available. So a Kannada teacher, a good teacher, is available if the post is sanctioned. So, I request and demand that the Kannada post have to be created in the aided primary schools also over and above the staffing pattern. Sir, if we do not learn Kannada in the primary and in the higher primary schools, what is the use in having it in the high schools? Kannada Knowing is different from Kannada full fledged teachers because there is lot of work load is there. You can go through the demand sir and I think there is a perfect workload and it can be sanctioned.

Then as regards teaching aids are concerned i.e., globes and in the maps, Furniture and other things, as far as minority schools are concerned, I have visited some of the schools in my Constituency. When I want and entered into the Government schools of the Urdu medium I notice that they are having old maps. When I required, they say, from the last 18-20 years, no new maps have been supplied to them. Even the East Pakistan is still existing in the Urdu medium schools, Sir, There is no Bangla Desh. Pakistan was divided into Bangla desh but still the old map showing the west Pakistan, east Pakistan, is there. Ceylon was converted as Sri Lanka but still it is mentioned as Ceylon in those old maps. Likewise, our country consists of only 18 States as those old maps. Those old maps are there; The Operation Black Board Scheme is there. Teaching aids should be given and there is every justification as far as the Urdu medium schools are concerned for providing teaching aids to these schools. Sir, you have mentioned here in the report that the Directorate of Urdu and Minority Languages Schools which began functioning from 1987 has chalked out a programmes for improvement of the minority language institutions. Sir, actually the demand for the Urdu Diroctorate was to have a full- fledged Directorate so that it should have administrative powers and full supervision.

Here, an office was created and we say that this the directorate. It does not have any administrative or supervisory powers. We don't want such Urdu directorate. Sir, the Government has agreed , in principle. that there will be an Urdu Directorate and it was also assured in this house that it will be established soon. I have also mentioned many times and even in the last session also, I made a mention

in my speech on the motion of thanks to the Governor's Address regarding the Urdu Directorate. Sir, I want a full - fledged Urdu Directorate. As you know. in the Zilla Parishads, representation to the Urdu knowing community, is less. In our area there are so many other people belonging to the Urdu knowing community and in old Mysore area also, people belonging to Urdu knowing community are there.

Out of 886 Zilla Parishads members out of 20 Zilla Parishads, there were about 16 Muslim Zilla Parishad Members but only 13 were the Urdu knowing members. They do not have the representaive in the Zilla Prishads and the people or the representatives who are coming from the Urban areas.

Or the Corporation areas are not the ex-officio members. For example, I myself is an example. Sir, I am not an ex-officio member of the Zilla Parishad of the Gulbarga but I am an Ex-officio Member of Gulbarga as an M.L.A. So, the number of Urdu medium minority schools are existing in the District headquarters and in the urban areas, the representatives should look after the interest of the children studying in Urdu Medium Schools and out of 886 Zilla Parishad members only Urdu knowing community members are there, which means it is 1%. Sir, lot of injustice has been done and to what extant, you can imagine, Sir. Because when nobody is there in the Zilla Parishad meatings, the Urdu posts which were existing have been shifted to the kannada medium and I have got specific figures to show how many Urdu medium posts have been shifted to the other districts.

For example in Kolar district 23 Urdu posts were shifted to Kannada medium and in Coorg, Raichur and in Bidar also so many posts have been shifted. We have got the figures and all. Also Sir, one more tragedy with this minority language is, whatever teachers have been given for Kannada in Urdu schools, those teachers have also deputed to Kannada medium schools. Then you can just imagine what will be the fate of those students who are studying in the Urdu schools and other minority schools. Sir, if there is a full-fledged Linguistic or Urdu directorate with full administrative and supervising powers, Urdu knowing officers will be posted there. Here, what is happening is even in the administration the officer will not take much interest because he will not be Urdu knowing. He will not see the map whether it is a new map or old map and whatever books are there, whether those books are really available or not. So, there are so many reasons for which we are demanding Urdu directorate. Sir, last year also this matter was discussed and you have also assured in this regard the language formula which existing i.e. 625 marks with first language, 125 marks, second 100, 3rd 100, maths 100, science 100 and social studies 100. First language for minority is Urdu, second language is Kannada, third language is English, has now been changed from this year. A new formula has come which is now in existence i.e., first language 150 marks and the second language which is Kannada, 100 marks - we are demanding 100 marks for the kannada but English is only 50 marks. Sir, we oppose that but you have assured on the floor that

this formula is only for this year only. this will not be continued in the next year and certain reasons you have given i.e., Hindi teacher not available etc., all these things I can understand, Sir, but the difficulty is as you have rightly pointed out, I am also demanding for English medium but also I am accepting the international formula opinion as far as the teaching is concerned. In the beginning classes, teaching should be in the mother tongue but here Sir, from 5th standard, the English starts. Here in the southern region of the Karnataka, number of Urdu medium schools is very less and the boys and girls study up to 7th standard and then they join Kannada medium High School and in that Kannada Medium High School, there will be English medium section and they will switch over to the English medium whereas in the northern region of Karnataka - Hyderabad Karnataka - number of Urdu medium schools are there. so there is no difficulty for the boys studing there to go to the high school in their own mother tongue. Here, what happens, suppose this formula with 50 Marks for English is continued, then the standard of English will be very low. The boy will not cope up with the standard of the 8th in the high school i.e., the first year of the high school. So there is a need that there should be 100 Marks for 3rd language in minority schools in which English will be in the third language. Sir, this is a very vital point I wanted to bring it to your notice in this House. So this existing formula should not be continued as assured on the floor of the House last time.

Sir, you have mentioned about a model schools. I really appreciate that model school scheme and you have said that there will be minimum one Model School in each constituency. Sir, again I put forth a demand. At least 20 model Urdu Schools in addition to the 224 schools, should be opened in all the districts.

Sir, you have said that there will be Kannada Model Schools. You have taken a decision as far as my knowledge goes. Sir, at least one Kannada model school will be there in almost all the constituencies but at the same time at least in each district, in addition to these 224 model schools, at least 20 Urdu model schools to be created. This is my demand in this House.

Sir, Adult Education is also necessary to make the districts literate. It is there only in the Kannada medium. Kannada adult education is given because those who have not learnt other than their mother tongue one cannot speak other than mother tongue, he cannot learn the other language in the old age. So, I want that the adult education should also be given in the linguistic minority languages or the mother tongue of the adult who have not literate and who want to learn the language. Let them learn the language of their own mother tongue. Sir, there is a demand for Higher Education also and here there is one discrimination and done to the lectures of the linguistic. I am also an engineer and it is my duty to see that if the engineers are discriminated and if there is any injustice then I have to bring to the notice and I have to put the demand in this House. Sir, AICTE scale were given to the lectures of the Engineering Colleges. If the AICTE scale is there for other college lectures but the lecturers of the polytechnics......

SHRI M. VEERAPPA MOILY : They themselves denied it.

SHRI QUMARUL ISLAM : No. Sir. They are representing. A delegation has met.

SHRI M. VEERAPPA MOILY : It is their own fault. What happened is, when the AICTE wanted to introduce the AICTE scales both for the lectures in the engineering colleges and lecturers in the polytechnics, then the engineers opted for it, in the first instant, I am telling you. Polytechnic, they thought local State Scale is more attractive. Then the AICTE they opted out initially. Now because AICTE has given better scale now they want. They lost in the race. Of course there is a case for consideration but I am telling you sometimes employees must have a longer range of view. For immediate benefit they opt something and tomorrow they should not regret. That is what they are doing now.

SHRI QUMURUL ISLAM : I am very happy, Sir, that you have assured that it is under full consideration of the Government.

SHRI M. VEERAPPA MOILY : I said, a case for consideration is there.

SHRI QUMURUL ISLAM : It is under consideration. Even if some have done some mistake at some point, others should not be punished for it. It is really Sir, they are feeling that they are getting the salary is very very meagre compared to AICTE. So they are fully justified and I think the delegation will also meet, in the near, future, the Hon'ble Minister in this regard, comprising of some of the association Members of the polytechnics. sir, from the examination point of view there are number of polytechnics are there. Very few of the Government polytechnics are there and very big number of the private polytechnics are there. But so many private polytechnics having very good experienced lecturers and teachers, Sir, but they have not been made - some of them have been given examinership - but many of them have not been given - they are not made examiners for practicals and theory. They can be made examiners so that they should also feel and some responsibility is to be fixed on the teachers, who are working in private polytechnics, in the examinations. Sir, as far as the engineering colleges, to give the fresh engineering colleges the doors are open as far as the Government policy is there. Whenever Government feels, they may give colleges but at the same time, Sir, I just want in the State - private polytechnics who have been given permission 10-12 years back and they got the full infrastructure.

They have got land 20-25 acres. They have got beautiful building. They have got the staff. Everything they have got. Infrastructure is there. Sir, if the Government is giving one or two courses of the engineering to these polytechnics, having almost all the infrastructure for being converted into engineering college. While giving new engineering colleges, sir consider this point also. Sir, as far as the Universities are concerned, Gulbarga University is having the Urdu Chair but in the Karnataka

University, which is the older University, There is no Urdu chair. Then about Mangalore University, from where your goodself is also coming there is no Urdu chair and there is an Urdu chair in Bangalore University but that chair is not full - fledged. I want that the Karnataka University, And also the Mangalore University should have Urdu Chair and the Urdu chair of the Bangalore University should be made full-fledged one.

Sir, in the Bangalore University, there was a 3 year law course and those who complete 2 years, the Degree of BGL (Bachelor of General Law) used to be given to them. These BGL holders cannot practice, but for other purposes it was alright. Sir, there were so many Government servants who have completed actually the course, the third year also but they have not passed the examination of the third year. The intention was not to do the practice but just to complete the BGL degree. they have completed and in 1981-82 that scheme of BGL was abolished but there are few Government servants who have already completed the third year but now the University made a rule that after a lapse of 10 years those who have already not passed this, even thought they have completed, they have to appear as a fresh. Some few Government servants who are at the retiring age, they want to go to the courts just to do some practice after the retirement. If the Government amends the rule and if they consider this delay and if they are permitted to appear in to examination, Some few Government servants, who have completed their course, will be been fitted.

Sir, lastly because there is a demand of the administration of justice, so I think.....

SHRI M. VEERAPPA MOILY : Atleast you are doing justice.

SHRI QUMARUL ISLAM : I must do justice because no one of our friends spoke on that; So I am doing justice to putforth the demand and I expect the justice from the minister of Law. I am doing justice to speak on the demand of administration of justice and also I expect the justice that the Hon'ble Minister and this Government will do justice by creating a High Court Bench at Gulbarga in Hyderabad-Karnataka area.

SHRI M. VEERAPPA MOILY : Why not in Bidar?

SHRI QUMARUL ISLAM : Sir, Gulbarga is the heart of Hyderabad-Karnataka. Bidar is the border district, Sir. It is the heart of the Hyderabad-Karnataka you have to strengthen. If the heart beats nicely it will give blood to the whole body; So I doing justice by putting this demand to start a Bench of the High Court at Gulbarga. Even if there is a demand for the Hubli or Belgaum, Sir, we will not come in the way but at the same time we demand that there should be a Bench of the High Court at Gulberga.

With this, I conclude my speach, Sir.

† ಶ್ರೀಮತಿ ಮೋಟಮ್ಮ (ಮೂಡಿಗೆರೆ) :- ಮಾನ್ಯ ಅಧ್ಯಕ್ಷರೇ. ಈ ದಿವಸ ಮಾನ್ಯ ಶಿಕ್ಷಣ ಸಚಿವರು ಮತ್ತು ಕಾನೂನು ಸಚಿವರು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ, ಅವುಗಳನ್ನು ಬೆಂಬಲಿಸುತ್ತಾ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಶಿಕ್ಷಣ ಇಲಾಖೆಯು ಬಹಳ ವಿಶಾಲವಾದುದು. ಸಾಗರದಷ್ಟು ಆಳ ಮತ್ತು ಅಷ್ಟೇ ದೊಡ್ಡದಾದಂಥ ಇಲಾಖೆ. ಈ ಇಲಾಖೆ ಬಗ್ಗೆ ನಾವುಗಳು ಎಷ್ಟು ಸಲಹೆಗಳನ್ನು ಕೊಟ್ಟರೂ ಸಾಲದು. ಹಾಗೆಯೇ ಇದರಲ್ಲಿನ ಸಮಸ್ಯೆಗಳ ಬಗ್ಗೆ ಎಷ್ಟು ಮಾತನಾಡಿದರೂ ಸಾಲದು ಎಂದು ನನಗನ್ನಿಸುತ್ತದೆ. ಈ ಒಂದು ಇಲಾಖೆಯನ್ನು ಸನ್ಮಾನ್ಯ ವೀರಪ್ಪಮೊಯಿಲಿಯವರು ವಹಿಸಿಕೊಂಡ ಮೇಲೆ ಅವರು ಸಾಕಷ್ಟು ಪ್ರಗತಿಪರವಾದ ಕಾನೂನುಗಳನ್ನು ತಂದಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮೊದಲನೇಯದಾಗಿ ಹೊಸದಾಗಿ ಶಾಲೆಗಳನ್ನು ತೆರೆಯಲು ಅನುಮತಿ ಕೊಡಬಾರದು ಎನ್ನುವ ಒಂದು ತೀರ್ಮಾನವನ್ನು ಹಿಂದೆ ಮಾಡಿದ್ದರೂ ಇವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಸುಮಾರು 44 ಖಾಸಗಿ ಪ್ರಾಥಮಿಕ ಶಾಲೆಗಳನ್ನು 126 ಸರಕಾರಿ ಪ್ರೌಢಶಾಲೆಗಳನ್ನು 645 ಖಾಸಗಿ ಪ್ರೌಢಶಾಲೆಗಳನ್ನು 83 ಸರಕಾರಿ ಪದವಿ ಪೂರ್ವ ಕಾಲೇಜುಗಳನ್ನು ಹಾಗೂ 141 ಖಾಸಗಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಟ್ಟಿರುವುದಕ್ಕಾಗಿ ನಾನು ಇವರನ್ನು ಅಭಿನಂದಿಸ ಬೇಕಾಗುತ್ತದೆ. ಹಾಗೆಯೇ ಗ್ರಾಂಟ್-ಇನ್-ಎಡ್ ಯಾರಿಗೂ ಕೊಡುವುದಿಲ್ಲ ಎಂಬ ಒಂದು ನಿಯಮವನ್ನು ಸಹ ಹಾಕಿದ್ದರು. ಯಾರೂ ಗ್ರಾಂಟ್ಸ್ ಕೇಳುವುದಿಲ್ಲ ಅಂಥವರಿಗೆ ಮಾತ್ರ ಅನುಮತಿ ಕೊಡುತ್ತೇವೆ ಎಂದು ಹೇಳಿ ಸರಕಾರದ ಒಂದು ತೀರ್ಮಾನ ಕೂಡ ಆಗಿತ್ತು. ಆದರೂ ಆ ಒಂದು ತೀರ್ಮಾನವನ್ನು ಸಡಿಲಗೊಳಿಸಿ. 12 ಖಾಸಗಿ ಪ್ರೌಢಶಾಲೆಗಳಿಗೆ ಮತ್ತು 8 ಪದವಿಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ ಎಂದು ಹೇಳಿರುವುದು ನಮಗೆ ತುಂಬಾ ಆಶಾದಾಯಕವಾದ ವಿಚಾರವಾಗಿದೆ. ಆದರೆ ಹೊಸ ಶಾಲೆಗಳು ತುಂಬಾ ಸಿನ್ನಿಯರ್ ಆಗಿ ಯಾರೂ ಡೊನೇಷನ್ಸ್ ತೆಗೆದುಕೊಳ್ಳದೆ ಪೋಷಕರನ್ನು ಶೋಷಣೆ ಮಾಡದಂಥ ಉತ್ತಮ ಶಾಲೆಗಳಿಗೆ ಮಾತ್ರ ನೀವು ಗ್ರಾಂಟ್‌ನ್ನು ಕೊಟ್ಟಿದ್ದೇ ಆದರೆ ಅವರು ಇನ್ನಷ್ಟು ಸಿನ್ಸಿಯರ್ ಆಗಿ ಶಾಲೆಗಳನ್ನು ನಡೆಸಿಕೊಂಡು ಹೋಗುವ ಸಾಧ್ಯತೆಯಿದೆ. ಅಂಥ ಶಾಲೆಗಳನ್ನು ತಾವುಗಳು ಗುರುತಿಸಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಕಮಿಟಿಗಳನ್ನು ಮಾಡಿದ್ದೀರಿ. ಬೇರೆ ಬೇರೆ ಕಾನೂನುಗಳನ್ನು ತಿದ್ದುಪಡಿ ಮಾಡುವುದರ ಬಗ್ಗೆ ಸಹ ಸಾಕಷ್ಟು ಕಮಿಟಿಗಳನ್ನು ಮಾಡಿದ್ದೀರಿ. ಅದರ ಮೂಲಕ ಇಂಥ ಉತ್ತಮ ಶಾಲೆಗಳನ್ನು ಗುರುತಿಸಿ ಅವುಗಳನ್ನು ಗ್ರಾಂಟ್‌ಇನ್‌ಎಡ್ ಕೋಡ್‌ಗೆ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಸರಕಾರಿ ಪ್ರೌಢಶಾಲೆ ಮತ್ತು ಸರಕಾರಿ ಬಾಲಿಕಾ ಪ್ರೌಢಶಾಲೆ ಇದ್ದರೂ ಕೂಡ ನಮ್ಮಲ್ಲಿ ಒಂದೇ ಒಂದು ಸೈಂಟ್ ಮಾರ್ಥಾಸ್ ಕಾನ್ವೆಂಟ್ ಎನ್ನುವ ಶಾಲೆ ಇದೆ. ಇದು ಸರಕಾರಿ ಶಾಲೆಗಳಿಂದ ಉತ್ತಮವಾದ ಶಾಲೆ ಎಂದು ಅಲ್ಲಿನ ಪೋಷಕರೆಲ್ಲರೂ ಒಪ್ಪಿಕೊಂಡು ನೀವು ಹೈಸ್ಕೂಲ್ ಪ್ರಾರಂಭ ಮಾಡಿ ಎಂದು ಒತ್ತಾಯ ಮಾಡಿದ್ದಕ್ಕೆ ಅವು 1987ರಲ್ಲಿ ಈ ಹೈಸ್ಕೂಲ್‌ನ್ನು ಜಿಲ್ಲಾ ಪರಿಷತ್ತಿನವರ ಅನುಮತಿ ಮೇರೆಗೆ ಪ್ರಾರಂಭ ಮಾಡಿದರು.

ಆದರೆ ಇವತ್ತು ಅವರಿಗೆ ನೀವು ಗ್ರಾಂಟ್ಸ್ ಕೊಡುವುದಿಲ್ಲ ಶಾಶ್ವತವಾಗಿ ಅನುದಾನ ಇಲ್ಲವೇ ನೀವು ಶಾಲೆ ನಡೆಸಬೇಕೆಂದು ಸರ್ಕಾರದಿಂದ ಅವರಿಗೆ ಆದೇಶ ಹೋಗಿರುವುದರಿಂದ ಅವರು ಶಾಲೆಯನ್ನು ಮುಚ್ಚುತ್ತೇವೆ ಬೇರೆ ಕಡೆಗೆ ನಿಮ್ಮ ಮಕ್ಕಳನ್ನು ಸೇರಿಸುವ ವ್ಯವಸ್ಥೆ ಮಾಡಿ ಎಂದು ಎಲ್ಲಾ ಪೋಷಕರಿಗೂ ಈಗ ತಿಳುವಳಿಕೆ ನೋಟೀಸ್ ಕೊಟ್ಟಿದ್ದಾರೆ. ಈಗ ಆ ಪೋಷಕರೆಲ್ಲರೂ ನನ್ನ ಹತ್ತಿರ ಬಂದು ಒತ್ತಾಯ ಮಾಡುತ್ತಿದ್ದಾರೆ. ಏಕೆಂದರೆ ಈ ಸೇಂಟ್ ಮಾರ್ಥಸ್ ಕಾನ್ವೆಂಟ್‌ನ್ನು ಮತ್ತು ಹೈಸ್ಕೂಲ್‌ನ್ನು ಏನಾದರೂ ಮುಚ್ಚಿದರೆ ನಾವೆಲ್ಲರೂ ಗಲಾಟೆ ಮಾಡಬೇಕಾಗುತ್ತದೆ, ಮತ್ತು ವಿದ್ಯಾಮಂತ್ರಿಗಳ ಆಫೀಸ್‌ವರೆಗೆ

ಬರುತ್ತೇವೆ ಎನ್ನುವ ಒಂದು ಬೆದರಿಕೆಯನ್ನು ಸಹ ಹಾಕಿದ್ದಾರೆ. ಆದಕಾರಣ ದಯವಿಟ್ಟು ಆ ಶಾಲೆಯನ್ನು ಮುಚ್ಚುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಏಕೆಂದರೆ ಆ ಶಾಲೆ ಯಾವುದೇ ಒಂದು ಡೊನೇಷನ್ ಅಥವಾ ಫೀಸ್‌ನ ನೆಪದಲ್ಲಿ ಪೋಷಕರನ್ನು ಮತ್ತು ಮಕ್ಕಳನ್ನು ಶೋಷಣೆ ಮಾಡುತ್ತಿಲ್ಲ. ಅದೊಂದು ಉತ್ತಮವಾದಂತಹ ಶಾಲೆ. ಅದರ ರಿಪೋರ್ಟ್ ಸಹ ಇದೆ. ತಾವು ಮುಂದಿನ ಸಲ ಏನು ಹೊಸ ಶಾಲೆಗಳಿಗೆ ಈ ಅನುದಾನವನ್ನು ಕೊಡಬೇಕೆಂದು ಯೋಜನೆ ಮಾಡಿದ್ದೀರಿ. ಅದರಲ್ಲಿ ಈ ಶಾಲೆಯನ್ನು ಸೇರಿಸುತ್ತೀರಾ? ಸದ್ಯಕ್ಕೆ ಶಾಲೆಯನ್ನು ಕ್ಲೋಸ್ ಮಾಡುವುದಕ್ಕೆ ಆದೇಶ ನೀಡಬಾರದೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಹಾಗೆಯೇ ಖಾಸಗೀ ಶಾಲೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನೀವು ಕಡ್ಡಾಯ ಮಾಡಿರುವುದು ಬಹಳ ಮೆಚ್ಚಬೇಕಾದ ವಿಷಯ. ಆದರೆ ಈ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಇಲ್ಲಿ ಸರ್ಕಾರದ ಕಾನೂನು ಏನು ಇದೆ ಅದರಂತೆ ರೋಸ್ಟರ್ ನಿಯಮವನ್ನು ಅವರು ಪಾಲನೆ ಮಾಡುತ್ತಿಲ್ಲ. ಆದರೂ ಹೈ ಕೋರ್ಟ್‌ನಿಂದ ಆದೇಶ ಬಂದಮೇಲೆ ಖಾಸಗೀ ಶಾಲೆಗಳವರು ಸಹ ಈ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಎಸ್.ಸಿ. : ಎಸ್.ಟಿ.ಯವರಿಗೆ ಪ್ರಾತಿನಿಧ್ಯ ಕೊಡುವ ಸಲುವಾಗಿ ಕೆಲವು ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಇದಕ್ಕೆ ಇಂಟರ್‌ವ್ಯೂ ಮಾಡಿ ಸೆಲೆಕ್ಷನ್ ಮಾಡಿದ್ದರೂ. ನಂತರ ಕೋರ್ಟ್‌ಗೆ ಹೋದರು. ಇದರಿಂದಾಗಿ ಇದುವರೆಗೂ ಯಾವುದೇ ಖಾಸಗೀ ವಿದ್ಯಾಸಂಸ್ಥೆಗಳಲ್ಲಿ ಇಂಟರ್‌ವ್ಯೂಗೆ ಹೋದ ಅಭ್ಯರ್ಥಿಗಳಿಗೆ ಕೆಲಸ ಸಿಕ್ಕಿಲ್ಲ. ಕೋರ್ಟ್‌ನಿಂದ ಬಂದ ಆದೇಶ ಕ್ಲಿಯರ್ ಆಗಿದ್ದರೂ ಸಹ ಅವರಿಗೆ ಇನ್ನೂ ಪೋಸ್ಟಿಂಗ್ ಕೊಟ್ಟಿಲ್ಲ. ಅಂತಹ ಖಾಸಗೀ ವಿದ್ಯಾ ಸಂಸ್ಥೆಗಳ ಬಗ್ಗೆ ನಾವು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿರ್ಭಯವಾಗಿ ಅವರಿಗೆ ಗ್ರಾಂಟ್‌ನ್ನು ಸ್ಟಾಪ್ ಮಾಡಬೇಕಾಗುತ್ತದೆ. ಏಕೆಂದರೆ ಅಂತಹ ಖಾಸಗೀ ಶಾಲೆಗಳ ಬಗ್ಗೆ ಸರ್ಕಾರಕ್ಕೆ ಯಾವುದೇ ಅಬ್ಲಿಗೇಷನ್ ಇರುವುದಿಲ್ಲ ಅವರು ಇನ್ನೊಂದು ವಿಚಾರ ಏನು ಹೇಳುತ್ತಾರೆಂದರೆ, ರಿಸರ್ವೇಷನ್ ಮಾಡಿರುವ ಪೋಸ್ಟ್‌ಗಳಿಗೆ ನಮಗೆ ಕ್ಯಾಂಡಿಡೇಟ್ಸ್ ಸಿಗುವುದಿಲ್ಲವೆಂದು ಹೇಳುತ್ತಾರೆ. ಈಗ ಮಾತನಾಡುತ್ತಾ ಯಾಹ್ಯಾರವರು ಹೇಳುತ್ತಿದ್ದರು, ಉರ್ದು ಟೀಚರ್ ಪೋಸ್ಟ್‌ಗಳನ್ನು ಎಸ್.ಸಿ. / ಎಸ್.ಟಿ.ಗೆ ರಿಸರ್ವೇಷನ್ ಇಟ್ಟರೆ ಯಾವ ಎಸ್.ಸಿ : ಎಸ್.ಟಿ. ಅಭ್ಯರ್ಥಿಗಳು ಉರ್ದು ಪಾಸ್ ಮಾಡಿ ಆ ಹುದ್ದೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ? ಸಂಸ್ಕೃತ ಪೋಸ್ಟನ್ನು ರಿಸರ್ವೇಷನ್ ಮಾಡಿ ಅನ್ಯಾಯವಾಗಿ ಈ ರಿಸರ್ವೇಶನ್ ಕೋಟಾವನ್ನು ಫಿಲ್‌ಆಪ್ ಮಾಡುವುದಕ್ಕೆ ಅವು ಅಡೆತಡೆ ಮಾಡುತ್ತಿದ್ದಾರೆ. ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದು. ಹಾಗೆಯೇ ಎಸ್.ಸಿ : ಎಸ್.ಟಿ ಮ್ಯಾನೇಜ್‌ಮೆಂಟ್ ನಡೆಸುತ್ತಿರುವ ಇನ್‌ಸ್ಟಿಟ್ಯೂಷನ್‌ಗಳಿಗೂ ಸಹ 100 ಪರ್ಸೆಂಟ್ ಗ್ರ್ಯಾಂಟ್ಸ್‌ನ್ನು ಕೊಡಲೇಬೇಕಾಗುತ್ತದೆ. ನಿಮಗೆ ಗೊತ್ತಿರುವ ಹಾಗೆ ಈ ವರ್ಗದವರು ಆರ್ಥಿಕವಾಗಿ ಬಹಳ ದುರ್ಬಲವರ್ಗದವಾಗಿರುತ್ತಾರೆ. ಅವರು ಯಾವುದೇ ಬಿಸಿನೆಸ್ ಮಾಡುವುದಾಗಲಿ. ಕಾಂಟ್ರಾಕ್ಟ್ ಮಾಡುವುದರಾಗಲಿ ಮಾಡದೆ, ಆರ್ಥಿಕವಾಗಿ ದುರ್ಬಲರಾಗಿರುವುದಿಲ್ಲ ತಾವೇ ಹಣವನ್ನು ಹಾಕಿಕೊಂಡು ವಿದ್ಯಾಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸರ್ಕಾರ ಅವರಿಗೆ ಪ್ರೋತ್ಸಾಹ ಕೊಡಬೇಕು ಹಾಗೂ ಇಂತಹ ಎಸ್‌ಸಿ : ಎಸ್‌ಟಿ ಇನ್‌ಸ್ಟಿಟ್ಯೂಷನ್‌ಗಳಿಗೆ ಸಕಾರ ಗ್ರ್ಯಾಂಟ್ಸ್‌ನ್ನು ಕೊಡಬೇಕಾಗುತ್ತದೆ. ಹಾಗೆಯೇ ಉಪಾಧ್ಯಾಯರನ್ನು ಈ ನೇರ ನೇಮಕಾತಿ ಮಾಡಿ ಒಂದು ದೊಡ್ಡ ಸಾಧನೆ ಮಾಡಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ನಾನು ಹಿಂದಿನ ಸಾರಿ ಮಾತನಾಡಬೇಕಾದರೆ ಡೈರೆಕ್ಟ್ ಸೆಲೆಕ್ಷನ್ ಮಾಡಿ ಈ ಕಮಿಟಿಗಳನ್ನು ಮಾಡುವುದರಿಂದ ಅಭ್ಯರ್ಥಿಗಳಿಗೆ ಸಿಕ್ಕಾಪಟ್ಟೆ ತೊಂದರೆ ಆಗುತ್ತದೆಂದು ನಾನು ಹೇಳಿದ ಸಲಹೆಯನ್ನು ಪುರಸ್ಕಾರ ಮಾಡಿ ಇವತ್ತು ನೀವು ಡೈರೆಕ್ಟ್ ಆಗಿ ಸೆಲೆಕ್ಷನ್ ಮಾಡುತ್ತಿರುವುದರಿಂದ ಎಷ್ಟೋ ಮನೆಗಳು ಉಳಿದಿದವೆಯೆಂದರೆ ತಪ್ಪಾಗಲಾರದು. ಇಲ್ಲದಿದ್ದರೆ ಆ

ಸೆಲೆಕ್ಷನ್‌ಗೋಸ್ಕರ ಮನೆ ಮಾರಬೇಕಾಗಿತ್ತು, ಜಮೀನು ಮಾರಬೇಕಾಗಿತ್ತು. ಅವರ ಕಷ್ಟ ದೇವರಿಗೆ ಗೊತ್ತು. ಆದರೆ ಇದರಲ್ಲಿ ನ್ಯಾಯ ದೊರಕದೇ ಎಜ್‌ಬಾರ್ ಅವರಿಗೆ 50 ಪರ್ಸೆಂಟ್ ಇಟ್ಟಿರುವುದು ನಿಜವಾಗಲೂ ಅವರು ಜೀವನಪರ್ಯಾಂತ ಈ ಇಲಾಖೆಯನ್ನು ಹಾಗೂ ಮಾನ್ಯ ಮಂತ್ರಿಗಳನ್ನು ನೆನಸಿಕೊಳ್ಳಬೇಕಾಗುತ್ತದೆ. ಇವರಿಗೆ ಇವತ್ತು ಕೆಲಸ ಸಿಗುತ್ತದೆ ಎನ್ನುವ ಗ್ಯಾರಂಟಿಯೇ ಇರಲಿಲ್ಲ.

ಆಮೇಲೆ ಶಿಕ್ಷಕರ ಕೊರತೆ ಹೋಗಿದೆ ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ಇಷ್ಟೊಂದು ಟೀಚರ್ಸ್ ಅನ್ನು ಸೆಲೆಕ್ಷನ್ ಮಾಡುತ್ತೇವೆಂದು ಸರ್ಕಾರದವರು ಹೊರಟಿದ್ದರೂ ನಮಗೆ ಶಿಕ್ಷಕರ ಬರ ಇದೆ. ಯಾವಾಗ ನೋಡಿದರೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ನರಸಿಂಹರಾಜಪುರ ಹಾಗೂ ಕೊಪ್ಪಕ್ಕೆ ಶಿಕ್ಷಕರು ಬರುವುದೇ ಇಲ್ಲ. ಮಲೆನಾಡು ಸೌಂದರ್ಯವನ್ನು ಬಹಳ ಜನ ಮೆಚ್ಚುತ್ತಾರೆ. ಆದರೆ ಮಲೆನಾಡು ಪ್ರದೇಶಕ್ಕೆ ಶಿಕ್ಷಕರಾಗಲೀ ಡಾಕ್ಟರ್ಸ್ ಆಗಲಿ ಹಾಗೂ ಯಾವುದೇ ಆಫೀಸರ್ಸ್ ಆಗಲೀ ಬಂದಿರಲಿಕ್ಕೆ ಏಕೆ ಕೊರಗುತ್ತಾರೆ. ಏಕೆ ಆತಂಕಪಡುತ್ತಾರೆಂದು ನನಗೆ ಅರ್ಥವಾಗುವುದಿಲ್ಲ. ಯಾವಾಗ ನೋಡಿದರೂ ಕಾಲೇಜಿನಲ್ಲಿ ಲೆಕ್ಚರರ್ಸ್ ಪ್ರತಿ ಸಬ್ಜೆಕ್ಟ್‌ಗೂ ಇರುವುದಿಲ್ಲ. ಈಗ ನನ್ನ ಕ್ಷೇತ್ರವನ್ನೇ ತೆಗೆದುಕೊಂಡರೆ ಅಲ್ಲಿ 4-5 ಜೂನಿಯರ್ ಕಾಲೇಜುಗಳಿವೆ. ಎರಡು ಸಾರಿ ಅಲ್ಲಿಗೆ ಪ್ರಿನ್ಸಿಪಾಲ್‌ಲರುಗಳನ್ನು ವರ್ಗಮಾಡಿದರೂ ಸಹ ಒಬ್ಬರೂ ಹೋಗಿ ರಿಪೋರ್ಟ್ ಮಾಡಿಕೊಂಡಿಲ್ಲ. ಇದನ್ನು ನೀವು ಹೇಗೆ ನಿವಾರಣೆ ಮಾಡುತ್ತೀರಾ ಅನ್ನುವುದು ಬಹಳ ಮುಖ್ಯವಾದಂತಹ ವಿಷಯ ಇದಕ್ಕೆ ನನ್ನ ಸಲಹೆ ಏನೆಂದರೆ ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಗುಡ್ಡಗಾಡು ಅಲೋಯೆನ್ಸ್ ಕೊಡುವಂತೆ ಇಲ್ಲಿಯೂ ಏನಾದರೂ ಅಲೋಯೆನ್ಸ್ ಕೊಡಿ ; ಯಾರು ಹಳ್ಳಿಗಾಡಿನಲ್ಲಿ ಹಾಗೂ ಗುಡ್ಡಗಾಡಿನಲ್ಲಿ ಕೆಲಸ ಮಾಡುತ್ತಾರೆ ಅಂತಹವರಿಗೆ ಅಲೋಯೆನ್ಸ್ ಕೊಟ್ಟರೆ ಅವು ಏನಾದರೂ ಅಲ್ಲಿಗೆ ಹೋಗಿ ಕೆಲಸ ಮಾಡುತ್ತಾರೋ ಹೇಗೋ ಎಂದು ವಿಚಾರ ಮಾಡಬಹುದು. ಹಾಗೂ ಸಹ ಅವರು ಕೆಲಸವನ್ನು ಮಾಡದೆ ಇದ್ದರೆ ನೀವು ಅವರನ್ನು ಮನೆಗೆ ಕಳುಹಿಸುವುದು ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ. ಇಲ್ಲದಿದ್ದರೆ ಅವರಿಗೆ ಜಾಬ್ ಅಗತ್ಯವಿಲ್ಲ ಅಂತ ನನಗನ್ನಿಸುತ್ತದೆ. ಜಾಬ್ ಅಗತ್ಯವಿರುವವರು ಎಲ್ಲೆ ಬೇಕಾದರೂ ಕೆಲಸ ಮಾಡಲಿಕ್ಕೆ ತಯಾರಿರಬೇಕು. ಹಾಗಾಗಿ ಈ ಪರಿಸ್ಥಿತಿಯನ್ನು ತಾವು ತಡೆಗಟ್ಟುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಇದರ ಜೊತೆಗೆ ಶಾಲಾ ಕಟ್ಟಡಗಳ ಸ್ಥಿತಿ ಮಾತ್ರ ಹೇಳತೀರದು ; ನಾನು ಹಿಂದೆ ಮಾತನಾಡುವಾಗ ನಮ್ಮ ಜೂನಿಯರ್ ಕಾಲೇಜಿನಲ್ಲಿ ಕಿಟಕಿ ಇಲ್ಲ, ಬಾಗಿಲು ಇಲ್ಲ ಅಂತ ಹೇಳಿದ್ದೇನೆ. ಫ್ಲಡ್ ಡ್ಯಾಮೇಜ್ ವರ್ಕ್ಸ್‌ನಲ್ಲಿ ನಾನು 34 ಸಾವಿರ ರೂಪಾಯಿಗಳನ್ನು ಜಿಲ್ಲಾಧಿಕಾರಿಯವರಿಂದ ತೆಗೆದುಕೊಂಡು ಕಿಟಕಿ ಬಾಗಿಲುಗಳನ್ನೆಲ್ಲಾ ಹಾಕಿಸಿದ ನಂತರ ಅದಕ್ಕೆಲ್ಲಾ ಮೆಷ್ ಹಾಕಿಸಿಬಿಟ್ಟಿದ್ದೇನೆ. ಇನ್ನು ನಮ್ಮಲ್ಲಿನ ಪ್ರೈಮರಿ ಶಾಲೆಗಳನ್ನು ನೋಡಿದರೆ ನೀವು ನಿಜವಾಗಿಯೂ ಅಸಹ್ಯಪಡುತ್ತೀರಿ. ಅಷ್ಟೊಂದು ಹೇಸಿಗೆಯಾಗುತ್ತದೆ. ಅವು ಶಾಲೆಗಳಲ್ಲ ದನಗಳ ದೊಡ್ಡಿಗಳಾದರೂ ವಾಸಿ ; ನೆಲದ ಕಾಂಕ್ರೀಟ್ ಎಲ್ಲಾ ಕಿತ್ತುಹೋಗಿದೆ. ಗೋಡೆಗಳ ಕಾಂಕ್ರೀಟ್ ಸಹ ಕಿತ್ತುಹೋಗಿದೆ. ಬಾಗಿಲುಗಳಿಲ್ಲ ; ಕಿಟಕಿಗಳಿಲ್ಲ, ಜಿಲ್ಲಾಪರಿಷತ್ತಿನಿಂದ ಈ ಶಾಲೆಗಳಿಗೆ ರಿಪೇರಿಗೆ ಕೊಡುವ ಹಣ ಏನೇನು ಸಾಲದು. ಹೊಸ ಶಾಲೆಗಳನ್ನು ಕಟ್ಟುವವರ ಬದಲಾಗಿ ಇರುವ ಶಾಲೆಗಳನ್ನು ಸರಿಯಾಗಿ ರಿಪೇರಿ ಮಾಡಲಿಕ್ಕೆ ಹೆಚ್ಚು ಹಣವನ್ನು ಅದಕ್ಕೆ ಅಳವಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಳೆಬಂದರೆ ನಮ್ಮ ಮಲೆನಾಡಿನಲ್ಲಿ ಮಕ್ಕಳನ್ನು ಹೊರಗಡೆ ಕೂರಿಸಿಕೊಂಡು ಮಕ್ಕಳಿಗೆ ಪಾಠ ಹೇಳಿಕೊಳ್ಳುವದಕ್ಕಾಗವುದಿಲ್ಲ. ಬಯಲು ಸೀಮೆಯಲ್ಲಿಯಾದರೆ ಮರದ ಕೆಳಗಡೆ ಕೂರಿಸಿಕೊಂಡು ಪಾಠಹೇಳಿಕೊಡಬಹುದು. ನಮ್ಮಲ್ಲಿ 6 ತಿಂಗಳಕಾಲ ಮಳೆಗಾಲ ಇರುವುದರಿಂದ ವ್ಯವಸ್ಥಿತವಾಗಿ ಕಟ್ಟಡಗಳು ಇರಲೇಬೇಕು. ಅದರಲ್ಲೂ

ಚಿಕ್ಕಮಗಳೂರು ಬಿಟ್ಟು ಮಂಗಳೂರು ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳು ನಿಜವಾಗಿಯೂ ನೋಡಲಿಕ್ಕೆ ಬಹಳ ಸುಂದರವಾಗಿದೆ. ಹಾಗೂ ಚೆನ್ನಾಗಿವೆ. ಏಕೆ ಈ ತಾರತಮ್ಯ ಅಂತ ನನಗಂತೂ ಅರ್ಥವಾಗುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ :- ನೀವು ಮಂಗಳೂರು ಪೇಟೆಗೆ ಮಾತ್ರ ಹೋಗಿದ್ದೀರಿ. ಹಳ್ಳಿಗೆ ಹೋಗಿಲ್ಲ. ನಮ್ಮ ಕ್ಷೇತ್ರಗಳ ಕೆಲವು ಶಾಲೆಗಳ ಸ್ಥಿತಿ ಮಲೆನಾಡಿಗಿಂತಲೂ ಬಹಳ ಚಿಂತಾಜನಕವಾಗಿದೆ.

ಶ್ರೀಮತಿ ಮೋಟಮ್ಮ :- ನಮ್ಮಲ್ಲಿ ಶಿಕ್ಷಕರ ಸ್ಟ್ಯಾಂಡರ್ಡ್ ಸಹ ಬಹಳ ಕಡಿಮೆ ಎಂದು ನನಗನ್ನಿಸುತ್ತದೆ. ನಿಜವಾಗಿಯೂ ನಮ್ಮ ಮಂಗಳೂರು ಜಿಲ್ಲೆಯಲ್ಲಿ ಕೆಲಸ ಮಾಡುವಂತಹ ಶಿಕ್ಷಕರು ಬುದ್ಧಿವಂತರಾಗಿದ್ದಾರೆ ಹಾಗೂ ಸಿನ್ಸಿಯರ್ ಇದ್ದಾರೆ. ಏಕೆ ನೀವು ಅವರನ್ನು ನಿಮ್ಮ ಜಿಲ್ಲೆಯಲ್ಲಿಯೇ ಇಟ್ಟುಕೊಳ್ಳುತ್ತೀರಾ? ನಮ್ಮ ಜಿಲ್ಲೆಗೆ ಶಿವಮೊಗ್ಗ ಜಿಲ್ಲೆಗೆ ಹಾಗೂ ಹಾಸನ ಜಿಲ್ಲೆಗೆ ಅವರನ್ನು ಏತಕ್ಕೆ ವರ್ಗಾವಣೆ ಮಾಡಬಾರದು? ಅವು ಎಲ್ಲಿಗೆ ಹೋದರೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ನಾನು ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ. ಆದ್ದರಿಂದ ದಯಮಾಡಿ ಮಂಗಳೂರಿನಲ್ಲಿರುವ ಶಿಕ್ಷಕರುಗಳನ್ನು ನಮ್ಮ ಜಿಲ್ಲೆಗೆ ವರ್ಗಾವಣೆ ಮಾಡಿದರೆ ನಮ್ಮ ಶಾಲೆಗಳ ಪರಿಸ್ಥಿತಿ ಸ್ವಲ್ಪ ಉತ್ತಮವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇನ್ನು ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡಬೇಕು. ವಕೇಷನಲ್ ಕೋರ್ಸಸ್ ಅನ್ನು ಹೆಣ್ಣುಮಕ್ಕಳಿಗೆ ಸಪರೇಟಾಗಿ ಶುರುಮಾಡಬೇಕಾಗುತ್ತದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ಬಹಳ ಗಂಭೀರವಾಗಿ ನಾವೆಲ್ಲ ಯೋಜನೆ ಮಾಡಬೇಕಾಗಿದೆ. ಎಲ್ಲ ತಂದೆತಾಯಿಗಳಿಗೂ ತಮ್ಮ ಗಂಡುಮಕ್ಕಳು ಇಂಜಿನಿಯರ್ ಆಗಬೇಕು. ಡಾಕ್ಟರ್ ಆಗಬೇಕು, ಲಾಯರ್ ಆಗಬೇಕು, ಅವನು ಸಂಪಾದನೆ ಮಾಡಿ ನಮ್ಮನ್ನು ಸಾಕುತ್ತಾರೆ ಅನ್ನುವ ಭಾವನೆ ಇರುತ್ತದೆ. ಆದರೆ ಹೆಣ್ಣುಮಕ್ಕಳ ಬಗ್ಗೆ ಆ ಭಾವನೆಯನ್ನು ಯಾವ ತಂದೆತಾಯಿಗಳು ಹೆಚ್ಚಾಗಿ ಇಟ್ಟುಕೊಂಡಿರುವುದಿಲ್ಲ. ಏಕೆಂದರೆ ಹೆಣ್ಣುಮಕ್ಕಳಿಗೆ ಎಷ್ಟೇ ಓದಿಸಿದರೂ ಪ್ರಯೋಜನವಿಲ್ಲ. ಒಂದು ಒಳ್ಳೆಯ ಫ್ಯಾಮಿಲಿ ಸಿಕ್ಕಿಬಿಟ್ಟರೆ ಅವರಿಗೆ ಮದುವೆ ಮಾಡಕೊಟ್ಟುಬಿಡೋಣ. ಆ ಫ್ಯಾಮಿಲಿಯಲ್ಲಿ ಆರಾಮವಾಗಿರುತ್ತಾಳೆ ಅನ್ನುವ ಭಾವನೆ ಇರುತ್ತದೆ. ಆದರೆ ನಾಳೆ ಬದುಕಿನಲ್ಲಿ ತೊಂದರೆ ಬಂದರೆ ಆ ಹೆಣ್ಣುಮಗಳ ಪರಿಸ್ಥಿತಿ ಏನು? ಅವಳು ಹೇಗೆ ಜೀವನ ಮಾಡಬೇಕು ಅನ್ನುವುದನ್ನು ಯಾವ ತಂದೆತಾಯಿಗಳೂ ಯೋಜನೆ ಮಾಡುವುದಿಲ್ಲ. ಆದ್ದರಿಂದ ಇಂತಹ ವಕೇಷನಲ್ ಕೋರ್ಸ್‌ಗಳನ್ನು ಹೆಣ್ಣುಮಕ್ಕಳಿಗೋಸ್ಕರ ಪ್ರಾರಂಭ ಮಾಡಿದ್ದೆ ಆದರೆ, ಅವರು ಅದರಲ್ಲಿ ಟ್ರೈನಪ್ ಆದರೆ, ಅವರ ಬದುಕಿನಲ್ಲಿ ಮುಂದೆ ಗಂಡ ಬಿಡಬಹುದು, ಅಥವಾ ಗಂಡ ಸಾಯಬಹುದು, ಅಥವಾ ಅವರ ಫ್ಯಾಮಿಲಿಯಲ್ಲಿ ಏನೋ ಡಿಸ್‌ಪ್ಯೂಟ್ ಬಂದು ಅವರು ಹೊರಗೆ ಬರಬಹುದು. ಆಗ ತನ್ನ ಕಾಲಮೇಲೆ ತಾನೇ ಸ್ವತಃ ನಿಂತು ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅವಳಿಗೆ ತನ್ನ ಜೀವನದ ಬಗ್ಗೆ ಧೈರ್ಯ ಬರುತ್ತದೆ. ಇಂತಹ ಅವಕಾಶವನ್ನು ನೀವು ಹೆಣ್ಣುಮಕ್ಕಳಿಗೆ ಕಲ್ಪಿಸಿ ಕೊಡಬೇಕು. ಹಾಗೆಯೇ ಕಾಲೇಜ್ ಹಂತದವರೆಗೂ ನೀವು ಫ್ರೀ ಎಜ್ಯುಕೇಷನ್ ಕೊಡಬೇಕೆಂದು ನಾನು ಈ ಮೂಲಕ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ವರ್ಗಾವಣೆಯ ಬಗ್ಗೆ ಹೇಳಬೇಕಾಗುತ್ತದೆ. ಕಳೆದ 10-15 ವರ್ಷಗಳಿಂದ ಒಂದೇ ಕಡೆ ಇರುವಂತಹ ಶಿಕ್ಷಕರನ್ನು ನೀವು ಏತಕ್ಕೆ ವರ್ಗಾವಣೆ ಮಾಡಬಾರದು. ಮೂಡಿಗೆರೆಯಲ್ಲಿರುವವರನ್ನು ನೀವು ತೆಗೆದುಕೊಂಡು ಹೋಗಿ ಗುಲ್ಬರ್ಗಕ್ಕೆ ಹಾಕಿ, ಗುಲ್ಬರ್ಗದಲ್ಲಿರುವವರನ್ನು ಮೂಡಿಗೆರೆ ತಂದರೆ ಏನೂ ಆಗುವುದಿಲ್ಲ. ಆದರೆ ಅವರು ಬರುವುದಿಲ್ಲ. ನಿಮ್ಮ ಹತ್ತಿರನೇ ಬಂದು ಮತ್ತೆ ಬದಲಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಆದಕಾರಣ ಮೂಡಿಗೆರೆಯ ಒಂದು ಹಳ್ಳಿಯಲ್ಲಿ ಕಳೆದ 10 ವರ್ಷಗಳಿಂದಿರುವ ಶಿಕ್ಷಕರನ್ನು ತೆಗೆದು ಪಕ್ಕದ

ಹಳ್ಳಿಗೆ ಹಾಕಿ ; ಹಾಗೆಯೇ ಚಿಕ್ಕಮಗಳೂರಿನಲ್ಲಿರುವವರನ್ನು ಅದರ ಪಕ್ಕದಲ್ಲಿರುವ ಹಳ್ಳಿಗೆ ಹಾಕಿ. ಟೌನ್‌ನಲ್ಲಿರುವ ಶಿಕ್ಷಕರು ಕೊನೆಯವರೆಗೂ ಟೌನ್‌ನಲ್ಲೇ ಏತಕ್ಕೆ ಇರಬೇಕು. ಹಳ್ಳಿಯಲ್ಲಿರುವ ಶಿಕ್ಷಕರನ್ನು ಟೌನ್‌ಗೆ ಹಾಕಿ. ಟೌನ್‌ನಲ್ಲಿರುವವರನ್ನು ಹಳ್ಳಿಗೆ ಕಳುಹಿಸಿ. ಅದರಲ್ಲೂ ಹೆಣ್ಣು ಮಕ್ಕಳಿಗೆ ಟೌನ್‌ನಲ್ಲಿಯೇ ಕೆಲಸ ಕೊಡಿ. ಮತ್ತೆ ರೋಡ್ ಸೈಡ್‌ಗಳಲ್ಲಿರುವ ಹಳ್ಳಿಗಳಿಗೆ ಅವರು ಬಸ್ಸಿಗೆ ಹೋಗಿಬರಲಿಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ನೀವು ವರ್ಗಾವಣೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಗಂಡ ಹೆಂಡತಿ ಬೇರೆ ಬೇರೆ ಕೆಲಸ ಮಾಡುತ್ತಿದ್ದರೆ. ಅದಷ್ಟುಮಟ್ಟಿಗೆ ಅವರನ್ನು ಒಂದೇ ಊರಿಗೆ ಅಥವಾ ಒಂದೇ ತಾಲ್ಲೂಕಿಗೆ ವರ್ಗಾವಣೆ ಮಾಡಿಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ವಿದ್ಯಾಪೀಠ ಆಗಬೇಕೆಂದು ಕೇಳಿದ್ದೇನೆ. ಅದೇಕೋ ಗೊತ್ತಿಲ್ಲ. ಈ ಬಗ್ಗೆ ನಿಮ್ಮ ಇಲಾಖೆಯವರಿಗೆ ಗೊಂದಲ ಉಂಟಾಗಿಬಿಟ್ಟಿದೆ. ನಾನು ಒಂದು ಪ್ರಶ್ನೆ ಸಹ ಈ ಬಗ್ಗೆ ಹಾಕಿದ್ದೆ. ಮೂಡಿಗೆರೆ ತಾಲ್ಲೂಕಿನ ಚೆನ್ನಾಪುರ ಅಂಗಡಿಯ ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ಆ ಊರಿನವರು ಇದಕ್ಕಾಗಿ 20 ಎಕರೆ ಜಮೀನನ್ನು ರಿಜರ್ವ್ ಮಾಡಿ ಇಟ್ಟಿದ್ದಾರೆ. ಇಲ್ಲೊಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡಬೇಕೆಂದು ಬಹಳ ವರ್ಷದಿಂದಲೂ ಬೇಡಿಕೆ ಇದೆ. ಆ ಲ್ಯಾಂಡ್ ಹಾಗೆಯೇ ಇದೆ. ಬಗರ್‌ಹುಕುಂ ಸಾಗುವಳಿ ಜಾರಿಗೆ ಬಂದಮೇಲೆ ಎಲ್ಲರೂ ಅರ್ಧ ಎಕರೆ ಒತ್ತುವರಿ ಮಾಡಿಕೊಂಡು ಬೇಲಿ ಹಾಕಿಕೊಂಡಿದ್ದಾರೆ. ಹೀಗಾಗಿ ಅದನ್ನು ಮಂಡಲದವರು ಕಾಯುವುದಕ್ಕೂ ಆಗುವುದಿಲ್ಲ. ನನಗೂ ಆಗುವುದಿಲ್ಲ. ಒಟ್ಟಿನಲ್ಲಿ ಅವು ನನಗೆ ಒತ್ತಾಯ ಮಾಡುತ್ತಿದ್ದಾರೆ. ಆದುದರಿಂದ, ತಾವು ದಯಮಾಡಿ ಅಲ್ಲೊಂದು ವಿದ್ಯಾ ಪೀಠ ಸ್ಥಾಪನೆ ಮಾಡವುದಕ್ಕೆ ಈ ಜಮೀನನ್ನು ಉಪಯೋಗಿಸಿಕೊಳ್ಳಬೇಕು. ಅದಕ್ಕೆ ಸಂಬಂಧಪಟ್ಟ ದಾಖಲೆಗಳು ತಮ್ಮ ಹತ್ತಿರವಿರುವುದರಿಂದ ಅದಕ್ಕೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಾನೂನು ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಮೊನ್ನೆ ದಿವಸ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಲೋಕ್-ಅದಾಲತ್‌ನ್ನು ಸ್ಥಾಪಿಸಿ. ಪೆಂಡಿಂಗ್ ಇರತಕ್ಕಂಥ ಎಲ್ಲಾ ಕೇಸ್‌ಗಳನ್ನು ಡಿಸ್‌ಪೋಸ್ ಮಾಡುತ್ತೇವೆಂದು ಹೇಳಿದ್ದಾರೆ. ಇದು ಮೆಚ್ಚತಕ್ಕಂಥ ಸಂಗತಿಯಾಗಿದೆ. ನಾನು ಕಾನೂನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ ; ಏನೆಂದರೆ, ಇದರ ಜೊತೆಗೆ ಉಚಿತ ಕಾನೂನು ನೆರವು ಸಮಿತಿಯನ್ನು ಇನ್ನಷ್ಟು ಬಲಯುಪಡಿಸಿ ಹಣವನ್ನು ಅದಕ್ಕೆ ಒದಗಿಸಿ, ತಾಲ್ಲೂಕು ಮಟ್ಟದಲ್ಲಿ ಈ ಉಚಿತ ಕಾನೂನು ನೆರವು ಸಮಿತಿ ಸಾಕಷ್ಟು ಕೆಲಸ ಮಾಡುವುದಾದರೆ ಬಡವರು ಕೋರ್ಟಿಗೆ ಬರುವ ಸಂದರ್ಭ ಕಡಿಮೆಯಾಗುತ್ತದೆ. ಮತ್ತು ಅವು ಹಣಕ್ಕಾಗಿ ತೊಂದರೆ ಪಡುವುದು ಸ್ವಲ್ಪ ಕಡಿಮೆಯಾಗುತ್ತದೆ. ಆದುದರಿಂದ, ಈ ಸಮಿತಿಯನ್ನು ಬಲಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನ್ಯಾಯಾಂಗ ಇಲಾಖೆಯ ಬಗ್ಗೆ ಹೇಳುವುದಾದರೆ ನ್ಯಾಯ ದೊರಕಿಸಿಕೊಳ್ಳುವುದರಲ್ಲಿ ಹೆಣ್ಣು ಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ. ಏಕೆಂದರೆ ಹೆಣ್ಣು ಮಕ್ಕಳಿಗೆ ಇದರಲ್ಲಿ ಸ್ಥಾನ-ಮಾನಗಳು ಕಡಿಮೆ. ಈ ಇಲಾಖೆಯಲ್ಲಿ ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯವಿಲ್ಲ. ಕನಿಷ್ಠ ಪಕ್ಷ ಒಬ್ಬ ಮಹಿಳೆಯನ್ನು ಡಿಸ್ಟ್ರಿಕ್ ಜಡ್ಜ್ ಮಾಡಿ ಹೆಣ್ಣು ಮಕ್ಕಳಲ್ಲಿ ಪ್ರತಿಭಾವಂತರು ಇಲ್ಲವೇ? ನನಗೆ ಮೊನ್ನೆ ಅನ್ನಿಸಿತು ; ಸದನ ಸಮಿತಿ ಮುಂದೆ ಹಿಂದೂ ಸಕ್ಸೆಷನ್ ಆ್ಯಕ್ಟ್ ಬಗ್ಗೆ ವಕೀಲರಾದ ಹೇಮಲತಾ ಮಹಿಷಿಯವರು ಹೇಳಿದ ಮಾತು, ಅವರ ರೀತಿ-ನೀತಿಗಳು ಅವರು ಎಂತಹ ತೀಕ್ಷ್ಣ ಬುದ್ಧಿಯುಳ್ಳವರೆಂದು ತೋರಿಸುತ್ತದೆ. ಹಿಂದೂ ಸಕ್ಸೆಷನ್ ಆ್ಯಕ್ಟ್ ಬಗ್ಗೆ ಅವರು ಇತರರಿಗಿಂತ ಉತ್ತಮವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅಂತಹ ಪ್ರತಿಭಾವಂತ ಮಹಿಳೆಯರನ್ನು ಏತಕ್ಕೆ ಜಡ್ಜ್ ಮಾಡಬಾರದು ? ಹೆಣ್ಣು ಮಕ್ಕಳಲ್ಲಿ ಬುದ್ಧಿವಂತಿಕೆಗೆ ಕೊರತೆಯಿಲ್ಲ. ಆದುದರಿಂದ. ಒಬ್ಬ ಮಹಿಳೆಯನ್ನಾದರೂ ಡಿಸ್ಟ್ರಿಕ್ ಜಡ್ಜ್ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಸರ್ಕಾರಿ ಕಾನೂನು ಸಲಹೆಗಾರರನ್ನು ನೇಮಕ ಮಾಡುತ್ತೀರಿ. ಇವರು

ಏನು ಮಾಡುತ್ತಾರೆಂಬುದನ್ನು ತಾವು ಯೋಚನೆ ಮಾಡಬೇಕು. ಅವರು ಲೀಗಲ್ ಅಡ್ವೈಸರ್ ಆಗಬೇಕೆಂದು ಎಂ.ಎಲ್.ಎ. ಗಳ ತಲೇ ಮೇಲೆ ಕೂರುತ್ತಾರೆ. ಅವರು ನಮ್ಮನ್ನು ಕೆ.ಎಸ್.ಆರ್.ಟಿ.ಸಿ.ಗೆ ಹಾಕಿಸಿಕೊಂಡಿ. ಬಿ.ಡಿ.ಎ.ಗೆ ಹಾಕಿಸಿಕೊಡಿ ಮತ್ತು ಇನ್ನಿತರ ಸಂಸ್ಥೆಗೆ ಲೀಗಲ್ ಅಡ್ವೈಸರ್ ಆಗಿ ಹಾಕಿಸಿಕೊಡಿ ಎಂದು ಸಾಕಷ್ಟು ಮನವಿ ಮಾಡಿಕೊಳ್ಳುತ್ತಾರೆ. ಆದರೆ, ಅವರು ಸರ್ಕಾರದ ಪರವಾಗಿ ವಕಾಲತ್ತನ್ನು ವಹಿಸಬೇಕಾದರೆ ಅವ್ವೊತ್ತು ಕೋರ್ಟಿಗೆ ಹಾಜರಾಗುವುದಿಲ್ಲ. ಹೀಗಾಗಿ ಸಾಕಷ್ಟು ಗೌವರ್ನಮೆಂಟ್ ಕೇಸ್‌ಗಳು ಬಿಟ್ಟುಹೋಗಿವೆ. ಇದಕ್ಕೋಸ್ಕರ ಲೀಗಲ್ ಅಡ್ವೈಸರ್ ಬೇಕೆ? ಇವರು ಸರಿಯಾಗಿ ಕೆಲಸ ಮಾಡಬಾರದೆ? ಇವರು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವವರು ಯಾರು? ಅದರ ಬಗ್ಗೆ ತಾವು ವಿಚಾರ ಮಾಡಬೇಕು. ಅವರು ಸರಿಯಾಗಿ ಲೀಗಲ್ ಅಡ್ವೈಸರ್ ಆಗಿ. ಸರ್ಕಾರಿ ಕೇಸ್‌ಗಳಲ್ಲಿ ಭಾಗವಹಿಸಿ. ಸರ್ಕಾರದ ಕೇಸ್‌ಗಳನ್ನು ಗೆದ್ದು ಕೊಡಬೇಕೆಂದು ಆದೇಶ ಹೊರಡಿಸಬೇಕು. ಮತ್ತು ಅದರ ಬಗ್ಗೆ ಸ್ಟ್ರಿಕ್ಟ್ ಆಗಿ ಆ್ಯಕ್ಟ್ ಮಾಡಿದರೆ ಖಂಡಿತ ಕೆಲಸ ಮಾಡುತ್ತಾರೆ. ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳುತ್ತೀರೆಂದು ನಾನು ಭಾವಿಸಿದ್ದೇನೆ. ಅವು ಎಷ್ಟು ಗೌವರ್ನಮೆಂಟ್ ಕೇಸ್‌ಗಳಲ್ಲಿ ಅಪಿಯರ್ ಆಗಿದ್ದಾರೆ? ಎಷ್ಟು ಕೇಸ್‌ಗಳಲ್ಲಿ ವಿನ್ ಆಗಿದ್ದಾರೆ ಎಂಬುದನ್ನು ಸಹ ನೀವು ನೋಡಿ ಹೇಳಿ. ಹಾಗೆಯೇ ಏನು ಒಂದು ಆ್ಯಕ್ಟ್ ಅನ್ನು ಜಾರಿಗೆ ತರುತ್ತಿದ್ದೀರಿ, ಅದು ಆದಷ್ಟು ಬೇಗನೆ ಜಾರಿಗೆ ಬರಬೇಕು, ಮತ್ತು ಹೇಮಲತಾ ಮಹಿಷಿಯವರು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ಕಾನೂನಿನಲ್ಲಿ ಅಳವಡಿಸಬೇಕಾಗುತ್ತದೆ. ಇನ್ನು ಆಸ್ತಿ ಪಾಲು ಹೆಣ್ಣು ಮಕ್ಕಳಿಗೆ ಕೊಡುವ ವಿಚಾರದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರಿಗೆ ಹೊಟ್ಟೆ ಉರಿಯುತ್ತಿರಬಹುದು. ನಾವು ಹೆಣ್ಣುಮಕ್ಕಳಾದ ನಾವು ಬರೀ ಆಸ್ತಿಯನ್ನು ತೆಗೆದುಕೊಳ್ಳುವುದಿಲ್ಲ, ಅಪ್ಪ-ಅಮ್ಮ ಮಾಡಿದ ಸಾಲ ಇದ್ದರೂ ಸಹ ಅದನ್ನು ಹೆಣ್ಣು ಮಕ್ಕಳ ಮೇಲೆ ಹೊರಿಸಿ. ನಾವು ಆಸ್ತಿ ಪಾಲನ್ನು ತೆಗೆದುಕೊಂಡ ಹಾಗೆ ಸಾಲವನ್ನು ಸಹ ಹೊತ್ತುಕೊಳ್ಳುತ್ತೇನೆ. ಸಾಲವನ್ನು ತೀರಿಸುವುದಕ್ಕೂ ಸಹ ತಯಾರಾಗಿದ್ದೇವೆ. ಕುಟುಂಬದಲ್ಲಿ ಮೊದಲನೆಯ ಮಗುವಾಗಿ ಗಂಡು ಮಗು ಹುಟ್ಟಿದರೆ, ಅವನು ಆ ಕುಟುಂಬದ ಕರ್ತವ್ಯಗಳನ್ನು ಮಾಡುತ್ತಾನೆ. ತಂದೆ ಸತ್ತರೆ ಅವರಿಗೆ ಕರ್ಮ ಮಾಡುವುದು, ಇವೆಲ್ಲವುಗಳನ್ನು ಯಾರು ಮಾಡುತ್ತಾರೋ, ಅದೇ ರೀತಿ ಕುಟುಂಬದಲ್ಲಿ ಮೊದಲನೆಯ ಮಗುವಾಗಿ ಹೆಣ್ಣು ಮಗು ಹುಟ್ಟಿದರೆ ಆ ಕೆಲಸಗಳನ್ನು ಹೆಣ್ಣು ಮಗಳು ಸಹ ಮಾಡುವುದಕ್ಕೆ ತಯಾರಾಗಿರುವುದರಿಂದ ಇದರ ಬಗ್ಗೆ ಬೇಕಾದರೆ ಹಿಂದೂ ಸಕ್ಸೆಸ್ ಆ್ಯಕ್ಟ್‌ನಲ್ಲಿ ಅಳವಡಿಸಿ. ಆಸ್ತಿ ಪಾಲನ್ನು ತೆಗೆದುಕೊಂಡ ನಂತರ ಸಾಲ ಹೊರಿಸಿದರೆ. ನೀವು ನಮ್ಮನ್ನು ಗೌರಿ ಹಬ್ಬಕ್ಕೆ ಕಳುಹಿಸಿಕೊಟ್ಟು ಸೀರೆ, ರವಿಕೆ ಇತ್ಯಾದಿಗಳನ್ನು ಕೊಡುತ್ತೀರಾ? ಖಂಡಿತ ಕೊಡುವುದಿಲ್ಲ. ಅದಕ್ಕೋಸ್ಕರ. ಹೀಗಾಗಬಾರದೆಂದು ನಮ್ಮ ಮೇಲೆಯೇ ಅಪ್ಪ-ಅಮ್ಮಂದಿರ ಸಾಲದ ಹೊರೆ ಹೊರಿಸಬೇಕೆಂದು ನಾನು ಕೇಳುತ್ತಿದ್ದೇನೆ. ಅದಕ್ಕೆ ಹೆಣ್ಣು ಮಕ್ಕಳು ತಯಾರಾಗಿದ್ದಾರೆ. ಈ ವಿಷಯವನ್ನು ಇಷ್ಟಕ್ಕೆ ನಿಲ್ಲಿಸಿ ಇನ್ನು ಶಾಸಕರ ಭವನದ ಬಗ್ಗೆ ಹೇಳಬೇಕಾಗುತ್ತದೆ. ಈಗ ಎಲ್ಲರ ಬಗ್ಗೆ ಚಿಂತೆ ಮಾಡುತ್ತೇವೆ ; ಜನರ ಸಮಸ್ಯೆ ಕುರಿತು ಮಾತನಾಡುತ್ತೇವೆ. ಆದರೆ, ಶಾಸಕರ ಸಮಸ್ಯೆಗಳನ್ನು ಕೇಳುವವರು ಯಾರೂ ಇಲ್ಲವೇ ಎಂದೆನಿಸುತ್ತದೆ. ನಮಗೆ ಒಂದು ತರಹ ಆಶ್ಚರ್ಯವಾಗುತ್ತದೆ. ನಾವು ಸಹ 'ಮನುಷ್ಯ'ರೆಂದು ಜನರು ಅರ್ಥಮಾಡಿಕೊಳ್ಳುವುದಿಲ್ಲ. ವಿಧಾನಮಂಡದಲ್ಲಿರುವವರು ಸಹ ಅರ್ಥಮಾಡಕೊಳ್ಳುವುದಿಲ್ಲವೆಂದು ಕಾಣಿಸುತ್ತದೆ. ನಮ್ಮ ಸೌಕರ್ಯ-ಸವಲತ್ತುಗಳನ್ನು ನಮಗೆ ಸರಿಯಾಗಿ ಕೊಡಬೇಕಾಗುತ್ತದೆ. ಈಗ ಶಾಸಕರ ಭವನದ ಬಗ್ಗೆ ತೆಗೆದುಕೊಂಡರೆ ಅಲ್ಲಿರುವ ಕ್ಯಾಂಟಿನ್ ಸರಿಯಾಗಿಲ್ಲ. ಬೆಳಿಗ್ಗೆ ಯಾರೋ ಒಬ್ಬರು ಮಾನ್ಯ ಸದಸ್ಯರು ಕ್ಯಾಂಟಿನ್ ಕಂಡೀಷನ್ ಬಹಳ ವರ್ಸ್ಟ್ ಆಗಿದೆ, ಏನು ತಿನ್ನುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದರು. ಇದನ್ನು ಸರಿ ಮಾಡಬೇಕಾಗುತ್ತದೆ. ಹಾಗೆಯೇ ಈ ರೂಮ್ ಬಾಯ್‌ಗಳ

ವಿಚಾರದಲ್ಲಿ ನಮಗೆ ಒಂದು ದೊಡ್ಡ ತಲೆನೋವಾಗಿದೆ. ಏಕೆಂದರೆ. ಈಗ ಸಾಯಂಕಾಲ ಮೀಟಿಂಗ್ ಇದ್ದಾಗ ನಾವು (ಹೆಣ್ಣು ಮಕ್ಕಳು) ಬರುತ್ತೇವೆ ಅಥವಾ ಅಸೆಂಬ್ಲಿ ಸಮಯದಲ್ಲಿ ಇಲ್ಲಿರುತ್ತೇವೆ. ನಾವು 6-7 ಗಂಟೆಗೆ ವಾಪಸ್ ಹೋದರೆ ನಾವು (ಹೆಣ್ಣು ಮಕ್ಕಳು)ಗಳು ಹೆಚ್ಚು-ಕಡಿಮೆ ಒಂದೇ ಕಡೆ ಇದ್ದಾಗ ನಮ್ಮ ಒಬ್ಬ ರೂಮ್ ಬಾಯ್ ಸಹಾ ಇರುವುದಿಲ್ಲ. ಅವರು ಎಲ್ಲಿಗೆ ಹೋಗಿರುತ್ತಾರೋ ಗೊತ್ತಿಲ್ಲ. ಶ್ರೀ ಶಿವನಂಜಪ್ಪನವರು ಮತ್ತು ಶಿವರಾಮೇಗೌಡರು ಹೇಳುವಂತೆ ಅವರನ್ನು ಹೋಟೇಲಿಗೆ ಕಳುಹಿಸಿ. ಏನಾದರೂ ತೆಗೆದುಕೊಂಡು ಬಾ ಎಂದರೆ ಅವರು ಹೋಗುತ್ತಾರೋ ಏನೋ ನಮಗೆ ಕಾಫಿ-ಟೀ ಬೇಕೆಂದು ಅವರನ್ನು ಕಳಿಹಿಸಿದರೆ ಅವರು ಹೋಗುವುದಕ್ಕೆ ತಯಾರಿರುವುದಿಲ್ಲ ; ಏಕೆಂದರೆ ಅವರಿಗೆ ಅದರಲ್ಲಿ ಸ್ವಲ್ಪ ಅನುಕೂಲ ಸಿಗುತ್ತದೆ.

ಅದಕ್ಕಾಗಿ ನನ್ನ ಕೋರಿಕೆ ಏನೆಂದರೆ ಹಿಂದೆ ನಾನು ಮೊದಲಬಾರಿ ಶಾಸಕಿಯಾಗಿ ಬಂದಾಗ ನಮಗೆ ನೋಡಿಕೊಳ್ಳಲು ರಾತ್ರಿ ಹೊತ್ತು ರೂಮ್ ಬಾಯ್ ಇರಲಿಲ್ಲ. ಏನಾದರು ನಮಗೆ ಜ್ವರ ಬಂದರೆ, ತಲೆನೋವು ಬಂದರೆ ನಮಗೆ ಆರೋಗ್ಯ ಸರಿ ಇಲ್ಲದಿದ್ದರೆ ನಾವು ಯಾರಲ್ಲಿ ಹೇಳಿಕೊಳ್ಳಬೇಕು?

ಒಬ್ಬ ಮಾನ್ಯ ಸದಸ್ಯರು :- ರೂಮ್ ಬಾಯ್ ಅಲ್ಲ. ರೂಮ್ ಗರ್ಲ್ ಎಂದು ಆಗಬೇಕು.

ಶ್ರೀಮತಿ ಮೋಟಮ್ಮ :- ಇದನ್ನು ತಮಾಷೆಗೆ ಯಾರೂ ತೆಗೆದುಕೊಳ್ಳಬಾರದು. ನಾನು ಇದನ್ನು ಬಹಳ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ನಿಜವಾಗಿಯೂ ಕೂಡ ನಮಗೆ ತಾಪತ್ರೆಯವಿದೆ. ಇದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಆಮೇಲೆ ಅಧಿವೇಶನ ಸಮಯದಲ್ಲಿ ಹೆಣ್ಣುಮಕ್ಕಳ ಕಾರನ್ನು ಕೇಳಿದರೆ ಕಾರುಗಳ ಸಿಗುವುದಿಲ್ಲ. ನಾವು ಇದರ ಬಗ್ಗೆ ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಂಡಿದ್ದೇವೆ. 13-14 ಕಾರುಗಳು ಏನಿವೆ. ಇದರಲ್ಲಿ ಕಡೆಯ ಪಕ್ಷ ಹೆಣ್ಣುಮಕ್ಕಳಿಗೆ ಒಂದು ಕಾರನ್ನು ಒದಗಿಸಿಕೊಡಬೇಕಾಗುತ್ತದೆಂದು ಕೇಳಿದ್ದೇವೆ. ಅದಕ್ಕೆ ಅಧ್ಯಕ್ಷರು ನೀವೇ ಒಬ್ಬರು ಲೇಡಿ ಡ್ರೈವರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದರು. ನಾವು ಅದಕ್ಕೆ ಎಲ್ಲಿ ಜಾಹಿರಾತನ್ನು ಕೊಡಬೇಕು ; ಮುಂದೆ ಲೇಡಿ ಡ್ರೈವರ್ ಇರತಕ್ಕ ಕಾರನ್ನೇ ಬೇರೆಯವರು ಕೊಡಿ ಎಂದು ಕೇಳಿದರು. ಏನು ಮಾಡಬೇಕು ಎಂದು ಯಾರೋ ತಮಾಷೆ ಮಾಡಿದರು. ಆದುದರಿಂದ ಲೇಡಿ ಡ್ರೈವರ್ ಬೇಡ. ಇರತಕ್ಕ 15 ಕಾರುಗಳಲ್ಲಿ. ಒಂದು ಕಾರನ್ನು ಹೆಣ್ಣುಮಕ್ಕಳಿಗೆ ಒದಗಿಸಿಕೊಡಬೇಕೆಂದು ನಾನು ಕೋರಿಕೊಳ್ಳುತ್ತೇನೆ. ಇಲ್ಲದಿದ್ದರೆ ಗಂಡಸರು ಕಾರನ್ನು ತೆಗೆದುಕೊಂಡು ಹೋದರೆ. ಅಂದರೆ ಶಿವರಾಮೇಗೌಡರು ಕಾರನ್ನು ತೆಗೆದುಕೊಂಡ ಹೋದರೆ ಮೂರು ಗಂಟೆಯಾದ ಮೇಲೆ ಮಾನ್ಯ ಸೊರಕೆಯವರ ಹೆಸರಿನಲ್ಲಿ ಮತ್ತೆ ಕಾರನ್ನು ತೆಗೆದುಕೊಳ್ಳುತ್ತಾರೆ. ನಮಗೆ ಕಾರೇ ಸಿಗುವುದಿಲ್ಲ ; ಅದಕ್ಕಾಗಿ ಕಾಯಬೇಕಾಗುತ್ತದೆ. ಆದ್ದರಿಂದ ದಯಮಾಡಿ ನಮಗೆ ಬೇರೆ ಒಂದು ಕಾರನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಇನ್ನು, ಬಹಳ ವರ್ಷಗಳಿಂದ ಶಾಸಕರ ಭವನದಲ್ಲಿ ಈ ರೀತಿಯ ಅಧಿವೇಶನದ ಸಮಯದಲ್ಲಿ ಕೆಲವರನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಾರೆ.

ಒಬ್ಬ ಮಾನ್ಯ ಸದಸ್ಯರು :- ಲೇಡಿ ಶಾಸಕರಿಗೆ ಒಂದು ಕಾರು ಬೇಕು ಎಂದು ಕೇಳಿದ ಮೇಲೆ ಅದಕ್ಕೆ ಡ್ರೈವರ್‌ಸಹ ಲೇಡಿಯನ್ನೇ ಇಷ್ಟಪಡುತ್ತೀರಾ?

ಶ್ರೀಮತಿ ಮೋಟಮ್ಮ :- ಅದರಿಂದ ತಾಪತ್ರಯವಿದೆ. ಅದಕ್ಕಾಗಿ ಅದನ್ನು ಬೇಡವೆಂದು ಹೇಳಿದೆ. ಏಕೆಂದರೆ ನಿಮ್ಮಂತಹವರು ಲೇಡಿ ಡ್ರೈವರ್ ಇರತಕ್ಕ ಕಾರೇ ಬೇಕೆಂದು ಹೇಳಿದರೆ ಏನು ಮಾಡುವುದು?

ಆದ್ದರಿಂದ ಬಹಳ ಕಷ್ಟವಾಗುತ್ತದೆ ಅದು ಬೇಡವೆಂದು ತೀರ್ಮಾನ ಮಾಡಿದ್ದೇವೆ. ಇದರ ಜೊತೆಗೆ ಬಹಳ ವರ್ಷಗಳಿಂದ ಅಂದರೆ ಸುಮಾರು 1974ನೇ ಇಸವಿಯಿಂದ ಅಧಿವೇಶನದ ಸಮಯದಲ್ಲಿ ತಾತ್ಕಾಲಿಕವಾಗಿ ಕೆಲವರು ಕೆಲಸ ಮಾಡತಕ್ಕದ್ದು ಇಲ್ಲಿಯವರೆಗೂ ಕೂಡ ನಡೆಯುತ್ತಿದೆ. ಅಧಿವೇಶನ ಸಮಯದಲ್ಲಿ ತಾತ್ಕಾಲಿಕವಾಗಿ ನೇಮಕಾತಿಯನ್ನು ಮಾಡಿಕೊಳ್ಳುವಂಥ ಪದ್ಧತಿ ಈ ಒಂದು ವಿಧಾನ ಮಂಡಲದ ಕಾರ್ಯಾಲಯದಲ್ಲಿದೆ. ಈಗ ಅಲ್ಲಿ ಏನಾಗಿದೆ ಎಂದರೆ. ಹಿಂದೆ ತಾತ್ಕಾಲಿಕವಾಗಿ ಕೆಲಸ ಮಾಡಿದ ಒಂದಿಬ್ಬರ ಹೆಸರು ಬಿಟ್ಟು ಹೋಗಿದೆ. ಶ್ರೀಮಾನ್ ರಂಗನಾಥ್‌ರವರು ಅಧ್ಯಕ್ಷರಾಗಿದ್ದಾಗ ಅವರನ್ನು ಕನ್‌ಫರ್ಮ್ ಮಾಡಿಕೊಂಡು ಅವರಿಗೆ ಈಗ ಕನ್‌ಸಾಲಿಡೇಟ್ ಸಂಬಳವನ್ನು ಕೊಡುತ್ತಿದ್ದಾರೆ. 1974ನೇ ಇಸವಿಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡಿದಂಥ 2-3 ಜನರ ಹೆಸರು ಈಗ ಬಿಟ್ಟು ಹೋಗಿದೆ. ಅವರನ್ನು ನೀವು ಖಾಯಂ ಮಾಡಿಕೊಳ್ಳದಿದ್ದರೂ ಕೂಡ ಜನರಿಗೆ ಕನ್‌ಸಾಲಿಡೇಟ್ ಸಂಬಳವನ್ನು ಕೊಟ್ಟು ಅವರನ್ನು ಇಟ್ಟುಕೊಳ್ಳಬಹುದಲ್ಲವೇ? ಮತ್ತೆ ಇಂಥವರನ್ನು ನಮ್ಮಂಥ ಮಹಿಳಾ ಶಾಸಕಿಯರಿಗೆ ಮಹಿಳಾ ಸಹಾಯಕಿಯರನ್ನಾಗಿ ನೇಮಿಸಿಕೊಂಡು ರಾತ್ರಿ ಹೊತ್ತಿನಲ್ಲಿ ಒಬ್ಬರನ್ನು ಮತ್ತೆ ಹಗಲು ಹೊತ್ತಿನಲ್ಲಿ ಒಬ್ಬರನ್ನು ಕೊಟ್ಟರೆ ನಮಗೆ ಅನುಕೂಲವಾಗುತ್ತದೆ ಎಂಬ ನನ್ನ ಅನಿಸಿಕೆ. ಈ ಅಧಿವೇಶನದ ಸಮಯದಲ್ಲಿ ತಾತ್ಕಾಲಿಕವಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಸ್ವಲ್ಪ ತಾರತಮ್ಯ ನಡೆದಿದೆ. ನಾವೆಲ್ಲಾ ಹೆಣ್ಣುಮಕ್ಕಳು ಅದರ ಬಗ್ಗೆ ಪ್ರೊಟೆಸ್ಟ್ ಮಾಡಿದ್ದೇವೆ. ಅದನ್ನು ಕಾರ್ಯದರ್ಶಿಯವರ ಗಮನಕ್ಕೆ ಸಹ ತಂದಿದ್ದೇವೆ. ಹಾಗೂ ಅಧ್ಯಕ್ಷರ ಗಮನಕ್ಕೂ ತಂದಿದ್ದೇವೆ. ಬಹಳ ಹಿಂದಿನಿಂದಲೂ ಕೆಲಸ ಮಾಡಿರತಕ್ಕ ಹಾಗ ಪ್ರತಿ ವರ್ಷವೂ ಕೆಲಸ ಮಾಡಿರತಕ್ಕಂಥವರಿಗೆ ಇಲ್ಲಿ ಆದ್ಯತೆಯನ್ನು ಕೊಡಬೇಕು; ಆದರೆ ಅವರುಗಳಿದ್ದರೂ ಕೂಡ ಅವರನ್ನು ತೆಗೆದುಹಾಕಿ ಬೇರೆ ಹೊಸಬರನ್ನು ತೆಗೆದುಕೊಳ್ಳುವುದರಲ್ಲಿ ಅರ್ಥವೇನಿದೆ? ಇದರಲ್ಲಿ ಇಬ್ಬರಿಗೆ ಕೆಲಸ ಸಿಗದೆ ಅವರಿಬ್ಬರೂ ಕಣ್ಣೀರನ್ನು ಹಾಕಿಕೊಂಡು ಹೋದರು. ಅವರಲ್ಲಿ ಮುಸ್ಲಿಂ ಹೆಂಗಸು ಮತ್ತೊಬ್ಬರು ಸಹ ಹೆಂಗಸರೆ ? ಅವರಿಬ್ಬರೂ ಸಹ ವಿಧವೆಯರಾಗಿದ್ದಾರೆ. ಅವರು ಹೋದ ಸಾರಿಯೂ ಸಹ ಇಲ್ಲಿ ಕೆಲಸ ಮಾಡಿದ್ದರು. ಆದರೆ ಈ ಸಾರಿ ಅವರನ್ನು ಬಿಟ್ಟು ಯಾರೋ ಹೊಸಬರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದು ಸರಿಯಲ್ಲ ; ಅವರು ಬಹಳ ವರ್ಷಗಳಿಂದ ಕೆಲಸ ಮಾಡಿರುವುದರಿಂದ ಅವರಿಗೆ ಮತ್ತೆ ಅವಕಾಶ ಮಾಡಿಕೊಡಬೇಕು.

ಮತ್ತೆ ನಾವು ಬೆಳಗಿನಿಂದ ಸಂಜೆಯವರೆಗೆ ಸಮಸ್ಯೆಗಳ ಪರಿಹಾರದಲ್ಲಿರಬೇಕಾಗುತ್ತದೆ. ಅನೇಕ ಸಮಸ್ಯೆಗಳು ನಮ್ಮ ತಲೆಯಲ್ಲಿರುತ್ತದೆ. ಆದುದರಿಂದ ನಮಗೆ ಕಡೆಯಪಕ್ಷ ಒಂದು ಮನೋರಂಜನೆಗೆ ಏನಾದರೂ ಒಂದು ಗೇಮ್ಸ್ ಆಡಲು ಅವಕಾಶವನ್ನು ಮಾಡಿಕೊಡಬೇಕು. ಅಲ್ಲಿ ನಮಗೆ ಶಟಲ್‌ಬ್ಯಾಟ್‌ಮಿಟನ್ ಕೋರ್ಟೋ ಅಥವಾ ಟೇಬಲ್ ಟೆನ್ನೀಸ್ ಕೋರ್ಟೋ ಮಾಡಿಕೊಟ್ಟರೆ ಅನುಕೂಲವಾಗುತ್ತದೆಂದು ನನ್ನ ಅನಿಸಿಕೆ.

ಶ್ರೀ ಎಲ್.ಆರ್. ಶಿವರಾಮೇಗೌಡ :- ನೀವು ಶಾಸಕರ ಕ್ಲಬ್‌ಗೆ ಒತ್ತಾಯ ಮಾಡಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ :- ದಯಮಾಡಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮನಸ್ಸು ಮಾಡಿದರೆ ಏನಾದರು ಬದಲಾವಣೆಯನ್ನು ಮಾಡಲು ಸಾಧ್ಯವಿದೆ. ಶಾಸಕರಿಗೆ ಈ ಒಂದು ಸೌಲಭ್ಯವನ್ನು ಕಲ್ಪಿಸಿಕೊಡಲು ತಾವು ದಯಮಾಡಿ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಂಡು ಇದರ ಜೊತೆಗೆ ಏಕೆ ಖಾಯಂ ಆಗಿ ಒಬ್ಬ ಯೋಗ ಶಿಕ್ಷಕರನ್ನು ಶಾಸಕರ ಭವನದಲ್ಲಿ ಇಡಬಾರದೆಂದು ಕೇಳುತ್ತೇನೆ. ಏಕೆಂದರೆ ಅಲ್ಲಿಗೆ ಶಾಸಕರು ಬರುತ್ತಾರೆ. ಹೋಗುತ್ತಾರೆ. ಆದರೆ ಯಾರು ಅಲ್ಲಿರುತ್ತಾರೋ ಅವರಾದರು ಯೋಗವನ್ನು ಅಭ್ಯಾಸ ಮಾಡಲಿ ಬಿಡಿ ; ಅಧಿವೇಶನದ ಸಮಯದಲ್ಲಿ ರೆಗ್ಯುಲರ್ ಆಗಿ ಯೋಗ

ಶಾಲೆಯನ್ನು ನಡೆಸುವುದು ಒಳ್ಳೆಯದು. ಏಕೆಂದರೆ ಎಷ್ಟೋ ಜನರಿಗೆ ಅಧಿವೇಶನದ ಸಮಯದಲ್ಲಿ ಬಿ.ಪಿ. ಜಾಸ್ತಿಯಾಗಿರುತ್ತದೆ. ಇದರಿಂದ ಅವರು ಸ್ವಲ್ಪ ಕೂಲ್‌ಡೌನ್ ಆಗಲು ಸಾಧ್ಯವಾಗುತ್ತದೆ. ಕಡೆಯಪಕ್ಷ ಆರೋಗ್ಯವನ್ನು ಕಂಟ್ರೋಲ್ ಮಾಡುವುದಕ್ಕೆ ಯೋಗದಿಂದ ಸಾಧ್ಯವಾಗುತ್ತದೆಂದು ನನ್ನ ಅನಿಸಿಕೆ.

ಶ್ರೀ ಬಾಬುರಾವ್ ಚವಾಣ್ :- ಮಾನ್ಯ ಮೋಟಮ್ಮನವರ ಇನ್ನೊಂದು ಸಲಹೆಯನ್ನು ಮಾಡಬೇಕಾಗಿತ್ತು. ಆಲಮೋಸ್ಟ್ ಆಲ್ 80-90 ಪರ್‌ಸೆಂಟ್ ಬಿ.ಪಿ. ಇದ್ದಂಥ ಶಾಸಕರೇ ಬಹಳ ಇದ್ದಾರೆ. ಅವರಿಗೆ ಬಿ.ಪಿ. ಹೇಗೆ ಬರುತ್ತದೆ? ಹೇಗೆ ನಿವಾರಣೆ ಮಾಡಬೇಕು. ಇದರ ಬಗ್ಗೆ ಏನಾದರೂ ಸಲಹೆಗಳನ್ನು ಮಾಡಿದ್ದರೆ ಒಳ್ಳೆಯದಿತ್ತು.

ಚೇರ್ಮನ್ :- ನೆಕ್ಸ್ಟ್ ನೀವೇ ಮಾತನಾಡಬೇಕಾಗುತ್ತದೆ. ಆಗ ಮಾತನಾಡಿ.

ಶ್ರೀಮತಿ ಮೋಟಮ್ಮ :- ಇಷ್ಟನ್ನು ಹೇಳುತ್ತಾ ಇನ್ನೊಂದು ವಿಷಯ ಹೇಳುವುದನ್ನು ಮರೆತಿದ್ದೆ. ಪ್ರೀ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ವಿದ್ಯಾಮಂತ್ರಿಗಳಾಗಿದ್ದಾಗ ಈ ಬಗ್ಗೆ ಈ ಬಗ್ಗೆ ಪ್ರಯತ್ನ ನಡೆಸಿದ್ದರು. ಪ್ರೀ-ಪ್ರೈಮರಿ ಶಾಲೆಗಳನ್ನು ಎಲ್‌ಕೆಜಿ. ಯುಕೆಜಿ. ಎಂದು ಪ್ರಾರಂಭ ಮಾಡಿದರೆ ಮಕ್ಕಳು ಫಸ್ಟ್ ಸ್ಟಾಂಡರ್ಡ್‌ಗೆ ಬಂದಾಗ ಓದುವುದಕ್ಕೆ ಸುಲಭವಾಗುತ್ತದೆ. ಮತ್ತು ಟೀಚಿಂಗ್ ಮಾಡುವವರಿಗೂ ಅನುಕೂಲವಾಗುತ್ತದೆ. ಅದಕ್ಕಾಗಿ ನಮ್ಮ ಎಲ್ಲ ಶಾಲೆಗಳಲ್ಲಿಯೂ ಸರ್ಕಾರಿ ಮಟ್ಟದಲ್ಲಿ ಪ್ರೀ ಪ್ರೈಮರಿ ಶಾಲೆಗಳನ್ನು ಖಾಸಗಿಯವರಂತೆ ಪ್ರಾರ್ರಂಭ ಮಾಡಿದ್ದೇ ಆದರೆ ಮೂರು ವರ್ಷಗಳಿಂದ ಐದು ವರ್ಷದವರೆಗೆ ಆ ಮಗು ಅಕ್ಷರಗಳನ್ನು ಕಲಿತು ಮತ್ತು ಅಂಕೆಗಳನ್ನು ಕಲಿತಿದ್ದು ಆದರೆ ಒಂದನೇ ತರಗತಿಗೆ ಬಂದಾಗ ಅದಕ್ಕೆ ಓದುವುದಕ್ಕೆ ಮತ್ತು ಟೀಚರ್‌ಗೂ ಸಹಾ ಕಲಿಸುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಅದನ್ನು ಹೆಚ್ಚಿಗೆ ನೀವು ಪ್ರಾರಂಭ ಮಾಡಬೇಕು ಎಂದು ಹೇಳಿ ಈ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಉದಾರವಾಗಿ ಸಮಯ ಕೊಟ್ಟಂಥ ಅಧ್ಯಕ್ಷಕರಿಗೆ ಮತ್ತು ತಮಗೆಲ್ಲಾ ಕೂಡಾ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಾಬುರಾವ್ ಚವಾಣ್ (ಶಹಬಾದ್) :- ಮಾನ್ಯ ಅಧ್ಯಕ್ಷರೇ ಮಾನ್ಯ ಶಿಕ್ಷಣ ಮಂತ್ರಿಗಳಿಗೆ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಶಿಕ್ಷಣ ಮಂತ್ರಿಗಳು ಬಹಳ ನಿಪುಣರು ಬಹಳ ಚತುರರು. ಬಹುಶಃ ಶಿಕ್ಷಕರ ಬಗ್ಗೆ ಅವರ ಹತ್ತಿರ ಬಹಳ ಮಾಹಿತಿಗಳಿವೆ. ಅದರ ಜೊತೆಗೆ ನಾನು ಕೆಲವು ಪಾಯಿಂಟ್‌ಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಶಿಕ್ಷಕರು ದೇವರು. ಬಹುಶಃ ಈ ಸದನದಲ್ಲಿ ನಾವಿರಬೇಕಾದರೆ ನಾವೆಲ್ಲರೂ ಶಿಕ್ಷಕರ ಆಶೀರ್ವಾದದಿಂದ ಈ ಸ್ಥಾನಕ್ಕೆ ಬಂದಿದ್ದೇವೆ. ಆದರೆ ಕೆಲವು ಶಿಕ್ಷಕರು ಹಳ್ಳಿಗಳಲ್ಲಿ ರಾಜಕೀಯವನ್ನು ಮಾಡುತ್ತಿದ್ದಾರೆ. ಕೆಲವು ಶಿಕ್ಷಕರು 25-30 ವರ್ಷಗಳಿಂದ ಒಂದೇ ಕಡೆ ಇದ್ದು ರಾಜಕೀಯವನ್ನು ಮಾಡತಕ್ಕಂಥ ನಾಟಕ ಬೆಳೆದು ಬಂದಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಲಕ್ಷ್ಯಕೊಟ್ಟು ಸ್ವಲ್ಪ ಇದರ ಬಗ್ಗೆ ಕ್ರಮ ತೆಗೆದುಕೊಂಡು ಅಂಥ ಶಿಕ್ಷಕರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕು. ಯಾರು ಸರಿಯಾಗಿ ಪಾಠವನ್ನು ಮಕ್ಕಳಿಗೆ ಹೇಳುವುದಿಲ್ಲ. ಅಂಥವರ ಬಗ್ಗೆ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಂಡು ಅಂಥವರಿಗೆ ವರ್ಗಾವಣೆ ಮಾಡಬೇಕು. ಸರ್ಕಾರಿ ಶಾಲೆ ಮತ್ತು ಪ್ರೈವೇಟ್ ಶಾಲೆಯಲ್ಲಿ ಇರತಕ್ಕಂಥ ವ್ಯತ್ಯಾಸ ಎಂದರೆ ಅನುಪಾತದ ಪ್ರಕಾರ 50 ಮಕ್ಕಳಿಗೆ ಒಬ್ಬ ಶಿಕ್ಷಕರು ಇರಬೇಕು ಎಂದು ನಿಯಮ ಇದೆ. ಆದರೆ 50 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು ಎಂಬ ನಿಯಮವನ್ನು ಅನುದಾನ ಶಾಲೆಗಳಿಗೆ ತಾವು ಕಟ್ಟುನಿಟ್ಟಾಗಿ ಜಾರಿಗೆ ಕೊಡುತ್ತಿದ್ದೀರಿ. ಆದರೆ ಸರ್ಕಾರಿ ಶಾಲೆಯಲ್ಲಿ ಆ

ರೀತಿಯಲ್ಲಿ ಇಲ್ಲ. ಅಲ್ಲಿ ಶಿಕ್ಷಕರು ಒಬ್ಬರು ಇದ್ದಾರೆ 60 ಮಕ್ಕಳು ಇರುತ್ತಾರೆ. ಅಂಥ ಶಾಲೆಗಳು ಬಹಳಷ್ಟು ಇವೆ. ಅಂಥವುಗಳನ್ನು ಪರಿಶೀಲಿಸಿ ಅಂಥ ಶಿಕ್ಷಕರನ್ನು ಹಳ್ಳಿಗಳಿಗೆ ಹಾಕಿ ಸರ್ಕಾರಿ ಶಾಲೆಯಲ್ಲೂ ಕೂಡಾ 50 ಮಕ್ಕಳಿಗೆ ಒಬ್ಬರು ಶಿಕ್ಷಕರು ಬರುವ ಹಾಗೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಮಾಡುತ್ತೇನೆ. ಮತ್ತೆ ಗುಲ್ಬರ್ಗಾ ನಗರ ಮತ್ತು ಗುಲ್ಬರ್ಗ ತಾಲ್ಲೂಕು ಇವೆರಡರ ಮಧ್ಯೆ ಒಂದು ಎಇಓ ಆಫೀಸ್ ಇದೆ. ಆದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ರೂರಲ್‌ಗೆ ಒಂದು ಟೌನ್‌ಗೆ ಒಂದು ಎ.ಇ.ಓ. ಆಫೀಸ್‌ಗಳು ಇವೆ ಎಂದು ನನ್ನ ಗಮನಕ್ಕೆ ಬಂದಿದೆ. ಆದರೆ ಗುಲ್ಬರ್ಗ ನಗರದಲ್ಲಿ ಆ ರೀತಿ ಇಲ್ಲ. ಬಿಜಾಪುರದಲ್ಲಿ ಎರಡು ಆಫೀಸ್‌ಗಳು ಇವೆ. ಟೌನ್‌ಗೆ ಒಂದು, ರೂರಲ್‌ಗೆ ಒಂದು ಈ ರೀತಿ ಇರುವಂತೆ ನಮ್ಮ ಗುಲ್ಬರ್ಗ ಟೌನ್‌ಗೆ ಒಂದು ಎ.ಇ.ಓ. ಆಫೀಸ್ ಬೇಕು. ರೂರಲ್‌ಗೆ ಬೇರೆ ಟೌನ್‌ಗೆ ಬೇರೆ ಎ.ಇ.ಓ ಆಫೀಸ್ ಮಾಡಿದರೆ ಒಳ್ಳೆಯದು. ಏಕೆಂದರೆ ಅಲ್ಲಿ ಶಿಕ್ಷಕರ ಸಂಖ್ಯೆ ಜಾಸ್ತಿ. ಶಾಲೆಗಳ ಸಂಖ್ಯೆಯೂ ಜಾಸ್ತಿ. ಅದಕ್ಕಾಗಿ ಬೈಫರ್‌ಕೇಟ್ ಮಾಡಿ ಸೆಪರೇಟ್ ಆಗಿ ಎರಡು ಆಫೀಸ್‌ಗಳನ್ನು ಮಾಡಕೊಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹೈದರಾಬಾದ್-ಕರ್ನಾಟಕ ಭಾಗ ಶಿಕ್ಷಕರಲ್ಲಿ ಬಹಳ ಹಿಂದುಳಿದಂಥ ಭಾಗ. ಬಹುಶಃ ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ನಾನು ಎರಡು-ಮೂರು ಸಲ ಈ ವಿಷಯವನ್ನು ಪ್ರಸ್ತಾಪಮಾಡಿದ್ದೇನೆ. ಈ ಕಡೆ ಇರತಕ್ಕಂಥ ಮಕ್ಕಳಿಗೆ ಆ ಕಡೆ ಇರತಕ್ಕಂಥ ಮಕ್ಕಳು ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ. ಆದಾದರಿಂದ ಮಾನ್ಯ ಮಂತ್ರಿಗಳು ಹೈದರಾಬಾದ್-ಕರ್ನಾಟಕ ಭಾಗದಲ್ಲಿರತಕ್ಕಂಥ ಮಕ್ಕಳುಗಳಿಗೆ ಒಳ್ಳೆಯ ಶಿಕ್ಷಣ ಸಿಗುವ ಹ್ಯಾಗೆ ವ್ಯವಸ್ಥೆ ಮಾಡಬೇಕು. ಆ ಭಾಗದ ಮಕ್ಕಳು ಈ ಭಾಗದ ಮಕ್ಕಳೊಂದಿಗೆ ಕಾಂಪೀಟ್ ಮಾಡಬೇಕಾದರೆ ಅವರಿಗೆ ಒಳ್ಳೆಯ ಶಿಕ್ಷಣ ಬೇಕು. ಆ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕಾದರೆ ಆ ಮಕ್ಕಳಿಗೆ ಏನೇನು ಅನುಕೂಲಗಳು ಬೇಕೋ ಆ ರೀತಿ ಎಲ್ಲ ಅನುಕೂಲಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಆ ಮಕ್ಕಳಿಗೆ ಒಂದು ಒಳ್ಳೆಯ ಶಿಕ್ಷಣವನ್ನು ಕೊಡುವುದಕ್ಕೆ ಆಸ್ಪದವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

7.45 ಪಿ.ಎಂ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದರ ಜೊತೆಗೆ ಟಿ.ಸಿ.ಹೆಚ್. ಎಕ್ಸಾಮಿನೇಷನ್‌ಗೆ ಹೆಣ್ಣುಮಕ್ಕಳು ಕೂಡುವಾಗ ಥಿಯರಿ ಎಕ್ಸಾಮಿನೇಷನ್‌ಗೆ ಕೂಡುತ್ತಾರೆ. ಆದರೆ ಪ್ರಾಕ್ಟಿಕಲ್ ಎಕ್ಸಾಮಿನೇಷನ್‌ಗೆ ಕೂಡುವಾಗ ; ಯಾವ ಹೆಣ್ಣು ಮಕ್ಕಳಿಗೆ ಹೆರಿಗೆ ಸಂದರ್ಭ ಬಂದಿರುತ್ತದೆ. ಅಂಥವರು ಪರೀಕ್ಷೆಗೆ ಕೂಡುವುದಕ್ಕಾಗುವುದಿಲ್ಲ. ಅಂಥ ಸಂದರ್ಭದಲ್ಲಿ ತಾವು ರೂಲ್ಸ್‌ನ್ನು ಮಾಡಬೇಕು. ಈ ಪರೀಕ್ಷೆ ಲೋಕಲ್ ಪರೀಕ್ಷೆಯಾದ್ದರಿಂದ ಇದಕ್ಕೆ ರಿಲ್ಯಾಕ್ಸೇಷನ್ ಇನ್ನೊಂದು ಸಾಇ ಆ ಹೆಣ್ಣುಮಕ್ಕಳು ಪ್ರಾಕ್ಟಿಕಲ್ ಎಕ್ಸಾಮ್‌ಗೆ ಕೂತುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನನ್ನ ಸಲಹೆ. ಇಂಥ ಹೆಣ್ಣು ಮಕ್ಕಳಿಗೆ ಹೆರಿಗೆ ಆಗಾಗ ಅನ್ಯಾಯವಾಗಿ 1 ವರ್ಷ ಲಾಸ್ ಆಗುತ್ತದೆ. ಆದುವರಿಂದ ಇವರಿಗೆ ರೂಲ್ಸ್‌ನ್ನು ಮಾಡಿ ಮುಂದಿನ ಪರೀಕ್ಷೆಯಲ್ಲಿ ಕೂಡುವಂತೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಸ್.ಎಸ್.ಎಲ್.ಸಿ. ಬೋರ್ಡ್‌ನವರು ಪರೀಕ್ಷಾ ಕೇಂದ್ರಗಳನ್ನು ಬಹಳಷ್ಟು ಸಾರಿ ಬದಲಾವಣೆ ಮಾಡುತ್ತಾರೆ. ಈ ವರ್ಷ ಒಂದು ಕಡೆ ಎಕ್ಸಾಮಿನೇಷನ್ ಸೆಂಟರನ್ನು ಮಾಡಿದರೆ ಮುಂದಿನ ವರ್ಷ ಇನ್ನೊಂದು ಕಡೆ ಎಕ್ಸಾಮಿನೇಷನ್ ಸೆಂಟರನ್ನು ಮಾಡುತ್ತಾರೆ. ಇದನ್ನು ಸ್ಥಳೀಯ ಶಾಸಕರ ಗಮನಕ್ಕೂ ತರುವುದಿಲ್ಲ, ಮುನಿಸಿಪಾಲಿಟಿಯವರನ್ನೂ ಕೇಳುವುದಿಲ್ಲ. ಜಿಲ್ಲಾ ಮಟ್ಟದಲ್ಲಿರತಕ್ಕ ಶಿಕ್ಷಣಾಧಿಕಾರಿಗಳಾದ

ಎ.ಇ.ಓ. ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್, ಡಿ.ಡಿ.ಪಿ.ಐ ; ಮತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರೂ ಸೇರಿಕೊಂಡು ತಮ್ಮ ಮನಸ್ಸಿಗೆ ಬಂದಂತೆ ಈ ಸೆಂಟರ್‌ಗಳನ್ನು ಬದಲಾವಣೆ ಮಾಡುತ್ತಾರೆ. ಇದನ್ನು ಮಾಡಬಾರದು. ಸ್ಥಳೀಯ ಶಾಸಕರ ಗಮನಕ್ಕೆ ಅಥವಾ ಅಲ್ಲಿಯ ಮುನಿಸಿಪಾಲಿಟಿಯ ಅಧ್ಯಕ್ಷರ ಗಮನಕ್ಕೆ ತಂದು ಅನಂತರ ಅವರು ಬೇಕಾದರೆ ಬದಲಾವಣೆ ಮಾಡಿಕೊಳ್ಳಲಿ. ಏಕೆಂದರೆ ನಮ್ಮ ಶಹಬಾದ್ ಕ್ಷೇತ್ರದಲ್ಲಿ ಮೊದಲು ಇದ್ದಂಥ ಎಕ್ಸ್‌ಮಿನೇಷನ್ ಸೆಂಟರನ್ನು ತೆಗೆದುಹಾಕಿ ರೈಲ್ವೆ ಲೈನ್‌ನಿಂದ ಆಚೆಗೆ ಸುಮಾರು 5 ಕಿ.ಮೀ. ದೂರದ ಒಂದು ಜಾಗಕ್ಕೆ ಈ ಎಕ್ಸಾಮಿನೇಷನ್ ಸೆಂಟರನ್ನು ಬದಲಾವಣೆ ಮಾಡಿದ್ದಾರೆ. ಯಾರನ್ನೂ ಹೇಳದೆ, ಕೇಳದೆ ಬದಲಾವಣೆ ಮಾಡಿದ್ದಾರೆ. ಈ ರೀತಿ ಮಾಡಬಾರದು. ಇದರ ಬಗ್ಗೆ ಕಟ್ಟುನಿಟ್ಟಿನ ಒಂದು ನಿಯಮವನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ವಿಶೇಷವಾದ ಇನ್ನೊಂದು ವಿಚಾರ ಎಂದರೆ, ಪಿ.ಯು.ಸಿ. ಬೋರ್ಡ್‌ನಲ್ಲಿ ಕೆಲವು ನ್ಯೂನತೆಗಳಿರುವುದು ನನ್ನ ಗಮನಕ್ಕೆ ಬಂದಿವೆ. ಆ ಕಾರ್ಯಾಲಯದಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿವರ್ಗವನ್ನು ತಾವು ಮೊದಲು ಬೇರೆ ಕಡೆ ವರ್ಗಾವಣೆ ಮಾಡಬೇಕು ಏಕೆಂದರೆ ಅವರು ಅಲ್ಲಿ ಬಹಳ ವರ್ಷಗಳಿಂದ ಬೇರೂರಿ ಕೂತಿದ್ದಾರೆ. ಅವರು ಗ್ರಾಂಟ್-ಇನ್-ಏಡ್ ಕಾಲೇಜುಗಳಲ್ಲಿರತಕ್ಕ ಪ್ರಿನ್ಸಿಪಾಲ್ಸ್, ಲೆಕ್ಚರರ್‌ನ್ನು ಸೇರಿಸಿಕೊಂಡು ಫೈಲಗಳಲ್ಲಿರತಕ್ಕ ನಿರ್ಣಯಗಳ ಕಾಪಿಗಳನ್ನು ಕಿತ್ತು ಬೇರೆ ನಿರ್ಣಯಗಳನ್ನು ಅವರಲ್ಲಿ ಸೇರಿಸಿ ತಮಗೆ ಬೇಕಾದಂಥ ರೋಸ್ಟ್ಸ್, ತಮಗೆ ಬೇಕಾದಂಥ ನಿಯಮಗಳನ್ನು, ಅಪ್ರೂವಲ್ಸ್‌ನ್ನು, ಸೇರಿಸಿಕೊಂಡಿದ್ದಾರೆ. ಇಂಥಾದ್ದು ಆಗಬಾರದು. ನಾನು ತಮಗೆ ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಮಂತ್ರಿಗಳಿಗೆ ಅನಂತರ ದಾಖಲೆಗಳನ್ನು ಕೊಡುತ್ತೇನೆ. ಅಲ್ಲಿ ಗುಮಾಸ್ತರು ಏನು ಮಾಡುತ್ತಾರೆಂದರೆ ಫೈಲ್‌ನಲ್ಲಿರತಕ್ಕ ರೆಸಲ್ಯೂಷನ್ ಕಾಪಿಯನ್ನು ಕಿತ್ತುಹಾಕಿ ಬೇರೆ ಕಾಪಿಯನ್ನು ಮಾಡಿ ಅದಕ್ಕೆ ಪ್ರೆಸಿಡೆಂಟರ ಸಹಿ, ಸೆಕ್ರೆಟರಿಯವರ ಸಹಿಗಳನ್ನು ಹಾಕಿ ಫೈಲಿಗೆ ಸೇರಿಸುತ್ತಾರೆ. ಪಿ.ಯು.ಸಿ. ಬೋರ್ಡ್‌ಗಳಲ್ಲಿರತಕ್ಕ ಸಿಬ್ಬಂದಿವರ್ಗ ಬಹಳ ವರ್ಷಗಳಿಂದ ಅಲ್ಲೇ ಇರುವುದರಿಂದ ಈ ರೀತಿ ಆಗುತ್ತಿದೆ. ಆದುದರಿಂದ ಇವರನ್ನು ಬೇರೆ ಆಫೀಸುಗಳಿಗೆ ವರ್ಗಮಾಡಿ ಇಲ್ಲಿಗೆ ಬೇರೆ ಕಡೆಯಿಂದ ಸಿಬ್ಬಂದಿಯನ್ನು ತಂದು ಹಾಕಬೇಕೆಂದು ಸಲಹೆ ಕೊಡುತ್ತಿದ್ದೇನೆ.

ಇನ್ನು ಹರಿಜನಗಿರಿಜನರು ನಡೆಸುವ ವಿದ್ಯಾ ಸಂಸ್ಥೆಗಳಿಗೆ ಅನುದಾನ ಕೊಡುವಂಥ ನಿಯಮಗಳು ಸರಿಯಾಗಿಲ್ಲ. ಇದರಿಂದಾಗಿ ಹರಿಜನರು ಗಿರಿಜನರು ಈ ಸಂಸ್ಥೆಗಳನ್ನು ನಡೆಸುವುದು ಬಹಳ ಕಷ್ಟವಾಗಿದೆ. ಆರ್ಥಿಕ ಸಾಮಾಜಿಕ ಮತ್ತು ರಾಜಕೀಯವಾಗಿ ಹಿಂದುಳಿದ ಈ ಜನರು ವಿದ್ಯಾಭ್ಯಾಸದಲ್ಲಿ ಮುಂದೆ ಬರಬೇಕಾದರೆ ಸರ್ಕಾರದ ಸಹಾಯ ಬೇಕು. ಇವರ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ತಾವು ಸಹಾಯ ಮಾಡಬೇಕು. ಇವರಿಗೆ ಅನುದಾನವನ್ನು ಕೊಡಬೇಕಾದರೆ ಈ ಸಂಸ್ಥೆಯವು ಫೈಲನ್ನು ಎ.ಇ.ಓ.ಗೆ ಗ್ರ್ಯಾಂಟ್‌ಗೋಸ್ಕರ ಸಬ್ಮಿಟ್ ಮಾಡಬೇಕು. ಅಲ್ಲಿಂದ ಡಿ.ಡಿ.ಪಿ.ಐ.ಗೆ ಕಳಿಸಲು ರೆಕಮೆಂಡೇಷನ್ ಮಾಡಿಸಬೇಕು, ಮತ್ತೇ ಅಲ್ಲಿಂದ ಜೆ.ಡಿ.ಎ.ಗೆ ಕಳಿಸಲು ರೆಕಮೇಂಡೇಷನ್ ಮಾಡಿಸಬೇಕು. ಅಲ್ಲಿಂದ ಸಿ.ಪಿ.ಐ.ಗೆ ರೆಕಮೆಂಡೇಷನ್ ಮಾಡಿಸಿ ಕಳುಹಿಸಬೇಕು. ಅನಂತರ ಎಜುಕೇಷನ್ ಸೆಕ್ರೆಟರಿಯವರಿಗೆ ರೆಕಮೆಂಡೇಷನ್ ಮಾಡಿ ಕಳುಹಿಸಬೇಕು. ಇದೆಲ್ಲಾ ಆದಮೇಲೆ ಎಜುಕೇಷನ್ ಮಂತ್ರಿಗಳ ಟೇಬಲ್‌ಗೆ ಬರುವ ಹೊತ್ತಿಗೆ ಈ ಮಂತ್ರಿಗಳೇನಾದರೂ ಟೂರ್‌ನಲ್ಲಿದ್ದರೆ ಈ ಸಂಸ್ಥೆಗಳಿಗೆ ಕೊಡತಕ್ಕಂಥ ಅನುದಾನವನ್ನು ಕೊಡುವುದಿಲ್ಲ. ಇದಕ್ಕೆ ಏನಾದರೂ ಒಂದು ಕ್ವೆರಿ ಹಾಕಿ ಹಿಂದಕ್ಕೆ ಹಾಕಿದರೆ ಇವರು 2-3 ವರ್ಷಗಳ ಒದ್ದಾಡಬೇಕಾಗುತ್ತದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಹರಿಜನಗಿರಿಜನರ

ಸಂಸ್ಥೆಗಳಿಗೆ ಕೊಡತಕ್ಕ ಅನುದಾನ, ಪರ್ಮಿಷನ್, ಇನ್ನೂ ಮುಂತಾದವು ಏನಿವೆ ಅವುಗಳನ್ನೆಲ್ಲಾ ಎ.ಇ.ಓ. ಲೆವೆಲ್‌ನಲ್ಲೇ ತಕ್ಷಣವೇ ಆಗುವಂತೆ ವ್ಯವಸ್ಥೆ ಮಾಡಿಕೊಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಅವರಿಗೆ ಬೆಂಗಳೂರಿಗೆ ಓಡಾಡುಗವ ಶಕ್ತಿ ಇಲ್ಲ. ಆದುದರಿಂದ ಅವರಿಗೆ ನೇರವಾಗಿ ಅನುದಾನ ಸಿಕ್ಕುವಂಥ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಎಸ್‌ಸಿ / ಎಸ್‌ಟಿ ಮ್ಯಾನೇಜ್‌ಮೆಂಟ್‌ಗೆ ಪ್ರಾರಂಭದಿಂದಲೇ ಅನುದಾನವನ್ನು ಕೊಡಬಾರದೆಂದು ತಮ್ಮ ನಿಯಮಾವಳಿಯಲ್ಲಿ ಹೇಳಿದ್ದೀರಿ. ಅಗ್ರಿಮೆಂಟ್ ಬಾಂಡ್ ಬರೆಸಿಕೊಂಡಿದ್ದೀರಿ. ಅವರು ಆ ರೀತಿ ಬರೆದುಕೊಡಬೇಕು ; ಬರೆದು ಕೊಟ್ಟಿದ್ದಾರೆ ; ಇಲ್ಲವೆಂದಲ್ಲ. ಆದರೆ ಎಸ್.ಸಿ..ಎಸ್.ಟಿ. ಮ್ಯಾನೇಜ್‌ಮೆಂಟ್‌ಗೆ ಬೇರೆ ಒಂದು ಮ್ಯಾನೇಜ್‌ಮೆಂಟ್ ಅನ್ನು ಹೋಲಿಕೆ ಮಾಡಿ ನೋಡಿದಾಗ ಮಾನ್ಯ ಮಂತ್ರಿಗಳಿಗೆ ಗೊತ್ತಾಗುತ್ತದೆ. ಒಬ್ಬ ಅಶಕ್ತ ಮನುಷ್ಯ ಮತ್ತು ಬಲಿಷ್ಠ ಮನುಷ್ಯವನ್ನು ರನ್ನಿಂಗ್‌ನಲ್ಲಿ ಅಶಕ್ತ ಮನುಷ್ಯ ರನ್ನಿಂಗ್ ರೇಸ್‌ನಲ್ಲಿ ಓಡಿ ಕಾಂಪಿಟಿಷನ್ ಮಾಡುವುದಕ್ಕಾಗುವುದಿಲ್ಲ. ವೀಕ್ ಇರತಕ್ಕಂಥ ಮನುಷ್ಯನಿಗೆ ತಾವು ಟ್ಯಾಂಕ್ ಕೊಡಬೇಕು. ಅವಿಗೆ ವಿಟಮಿನ್ ಕೊಟ್ಟು ಸರಿಯಾದಂಥ ಬಲಿಷ್ಠ ಮನುಷ್ಯನನ್ನಾಗಿ ಮಾಡಿ ರನ್ನಿಂಗ್ ಲೆವಲ್‌ಗೆ ತರುವಂಥ ಒಂದು ಕರ್ತವ್ಯವನ್ನು ತಾವು ಮಾಡಬೇಕು. ಎಸ್.ಸಿ.ಎಸ್.ಟಿ. ಮ್ಯಾನೇಜ್‌ಮೆಂಟ್‌ಗೆ ಅನುದಾನವನ್ನು ಕೊಡದೆ ಪರವಾನಿಗೆಯನ್ನು ಕೊಟ್ಟರೆ ಅವರು ಯಾವರೀತಿ ನಡೆಸಬೇಕು. ಸನ್ಮಾನ್ಯ ಮಂತ್ರಿಗಳು ದೊಡ್ಡ ಮನುಷ್ಯಮಾಡಿ ಹರಿಜನ ಗಿರಿಜನ ಶಾಲೆಗೆ ಪ್ರಾರಂಭದಿಂದಲೇ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರಿ ಶಾಲೆಗೂ ಮತ್ತು ಖಾಸಗಿ ಶಾಲೆಗಳಿಗೂ ಇರುವ ವ್ಯತ್ಯಾಸವನ್ನು ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಅದರಲ್ಲೂ ಗುಲ್ಬರ್ಗಾ ಸಿಟಿಯಲ್ಲಿ ಪೇರೆಂಟ್ಸ್ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲಿಕ್ಕೆ ಬಹಳವಾಗಿ ಇಷ್ಟಪಡುತ್ತಾರೆಯೇ ಹೊರತು ಸರ್ಕಾರಿ ಶಾಲೆಗಳಿಗೆ ಸೇರಿಸಲು ಇಷ್ಟಪಡಿಸುವುದಿಲ್ಲ. ನಾನು ಈ ವಿಷಯವನ್ನು ಬಹಳ ದುಃಖದಿಂದ ಹೇಳುತ್ತೇನೆ. ಸರ್ಕಾರ ನಡೆಸುವುದು ನಾವು ; ಆದರೂ ಮಕ್ಕಳನ್ನು ಏತಕ್ಕೆ ಇಲ್ಲಿ ಸೇರಿಸಲು ಇಷ್ಟಪಡುತ್ತಿಲ್ಲವೆಂದರೆ ಸರ್ಕಾರಿ ಶಾಲೆಗಳಲ್ಲಿ ಮಾನ್ಯತೆಗಳು ಬಹಳಷ್ಟು ಇವೆ. ಅದೇ ಖಾಸಗಿ ಶಾಲೆಗಳಲ್ಲಿ ಎಲ್ಲ ಫೆಸಿಲಿಟೀಸ್ ಕೊಡುತ್ತಾರೆ. ಅವರು ಸಿಸ್ಟಮ್ಯಾಟಿಕ್ ಆಗಿ ಪ್ರೇಯರ್ ಮಾಡಿಸುತ್ತಾರೆ, ಸಿಸ್ಟಮ್ಯಾಟಿಕ್‌ಆಗಿ ಫರ್ನೀಚರ್ಸ್ ಕೊಡುತ್ತಾರೆ. ಸಿಸ್ಟಮೆಟೀಕ್‌ಆಗಿ ಲೆಸನ್ಸ್ ತೆಗೆದುಕೊಂಡು ಶಾಲೆಯನ್ನು ನಡೆಸುತ್ತೇವೆಂದು ಬಲವನ್ನು ತೋರಿಸಿ ಮಕ್ಕಳನ್ನು ಸೇರಿಸಿಕೊಳ್ಳುತ್ತಾರೆ. ಅದಕ್ಕೆ ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಸರ್ಕಾರವು ಕೂಡ ಸಿಸ್ಟಮ್ಯಾಟಿಕ್ ರೀತಿಯಲ್ಲಿ ನಡೆಸಿದರೆ ಪ್ರೈವೇಟ್ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಹೋಗುವುದಿಲ್ಲ. ಆದ್ದರಿಂದ ಸನ್ಮಾನ್ಯ ವೀರಪ್ಪಮೊಯಿಲಿಯವರು, ಸರ್ಕಾರಿ ಶಾಲೆಗಳನ್ನು ಅಷ್ಟೇ ಚೆನ್ನಾಗಿ ನಡೆಸಿ ಮಕ್ಕಳಿಗೆ ಒಳ್ಳೆಯ ವಿದ್ಯೆ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರಿ ಶಾಲೆಗಳನ್ನು ಚೆನ್ನಾಗಿಟ್ಟುಕೊಳ್ಳಲು ಒಳ್ಳೆಯ ಫರ್ನೀಚರ್‌ಗಳನ್ನು ಕೊಟ್ಟು ಅಲಂಕರಿಸಿ ಒಳ್ಳೆಯ ಶಿಕ್ಷಕರನ್ನು ಕೊಟ್ಟರೆ ಜನ ತಾವೇ ತಾವಾಗಿ ಅಡ್ಮಿಷನ್ ತೆಗೆದುಕೊಳ್ಳಲು ಬರುತ್ತಾರೆ. ಖಾಸಗಿಯವರ ಮೇಲೆ ದ್ವೇಷಪಡುವುದು ಬೇಡ. ಜನರು ಇವತ್ತಿನದಿವಸ ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗೆ ಹೋಗುವುದು ತಮ್ಮ ಮಕ್ಕಳು ಒಳ್ಳೆಯ ವಿದ್ಯಾವಂತರಾಗುತ್ತಾರೆನ್ನುವ ದೃಷ್ಟಿಯಿಂದಲೇ ಹೊರತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾವಂತರಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಲ್ಲ.

ಕೊನೆಯದಾಗಿ ಮಾನ್ಯ ಕಾನೂನು ಮಂತ್ರಿಗಳು ಇತ್ತಕಡೆ ನಾನು ಹೇಳುವುದನ್ನು ಗಮನಕ್ಕೊಟ್ಟು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಜನರಿಗೆ ಸರಿಯಾದ ಕಾನೂನು ನೆರವು ಸಿಗುತ್ತಿಲ್ಲ. ಏತಕ್ಕೆ

ಸಿಗುತ್ತಿಲ್ಲವೆಂದರೆ ಪಾಪ ಒಬ್ಬ ರೈತ ಇಲ್ಲವೇ ಒಬ್ಬ ಕೂಲಿಕಾರ್ಮಿಕ ಅರ್ಜಿಯನ್ನು ಕೋರ್ಟಿನಲ್ಲಿ ಸಲ್ಲಿಸಿದರೆ ಅವನ ಬಳಿ ಕೇಸ್ ನಡೆಸಲು ದುಡ್ಡಿರುವುದಿಲ್ಲ. ಇದರಿಂದಾಗಿ ಹತ್ತು ವರ್ಷಗಳಾದರೂ ಅವನು ಕೋರ್ಟಿನಲ್ಲಿ ಒದ್ದಾಡಬೇಕು. ಕೋರ್ಟಿಗೆ ಹೋದರೆ ಆ ಫೀಸನ್ನು ಕೊಡಬೇಕು. ಇಂಥ ಸಮಸ್ಯೆಗಳನ್ನು ಇಟ್ಟುಕೊಂಡು ಹೇಗೆ ಕೋರ್ಟಿಗೆ ತಿರುಗಾಡುತ್ತಾನೆ. ಕೋರ್ಟ್ ಎಂದರೆ ಜನ ಭಯಪಡುತ್ತಾರೆ. ಅದಕ್ಕಾಗಿ ಮಾನ್ಯ ಕಾನೂನು ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಬಡವರಿಗೆ. ದೀನದಲಿತರಿಗೆ. ಹರಿಜನರಿಗೆ ಫೈನಾನ್ಷಿಯಲ್ ವೀಕರ್ ಸೆಕ್ಷನ್‌ಗೆ ಸಹಾಯ ಮಾಡಿಕೊಡಬೇಕು. ಅಂಥ ಜನರು ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದರೆ ಅವರಿಗೆ ಕೆಲವೇ ದಿವಸಗಳಲ್ಲಿ ನ್ಯಾಯ ದೊರಕಿಸಿ ಕೊಡುವಂಥ ಒಂದು ಸೂಕ್ತವಾದ ಕಾನೂನನ್ನು ಜಾರಿಗೆ ತರಬೇಕು. ಹತ್ತತ್ತು ವರ್ಷ ಫೇಲ್‌ಗಳನ್ನು ಪೆಂಡಿಂಗ್ ಇಟ್ಟುಕೊಂಡರೆ ಪಾಪ ಅವನು ಅಷ್ಟರಲ್ಲಿ ಸತ್ತೇ ಹೋಗಿರುತ್ತಾನೆ. ಅವನಿಗೆ ನ್ಯಾಯ ಸಿಗುವುದಿಲ್ಲ. ಅದಕ್ಕಾಗಿ ಒಳ್ಳೆಯ ನ್ಯಾಯಾಲಯದ ಕಟ್ಟಡಗಳನ್ನು ಜಾಸ್ತಿ ಮಾಡಿ ಅದಕ್ಕೆ ಬೇಕಾದ ನ್ಯಾಯಾಧೀಶರುಗಳನ್ನು ಅಪಾಯಿಂಟ್ ಮಾಡಿಕೊಂಡು ಅತಿಶೀಘ್ರವಾಗಿ ಜನರಿಗೆ ನ್ಯಾಯ ಸಿಗುವಂತೆ ಮಾಡಬೇಕೆಂದು ಮಾನ್ಯ ಕಾನೂನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಒಂದು ವಿಷಯವನ್ನು ಹೇಳಲು ಇಷ್ಟಪಡುತ್ತೇನೆ. ನನ್ನ ಶಹಬಾದ್ ಮತಕ್ಷೇತ್ರದಲ್ಲಿ ಒಂದು ಹೆಚ್.ಎಂ.ಟಿ. ಫ್ಯಾಕ್ಟರಿ ಇದೆ. ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಆ ಒಂದು ಫ್ಯಾಕ್ಟರಿಯನ್ನು ಕಾನೂನುರೀತ್ಯ ಮುಚ್ಚಬೇಕೆಂದು ಆರ್ಡರ್ ಮಾಡಿದರು. ಸರ್ಕಾರಿ ನಿಯಮದ ಪ್ರಕಾರ ಪಲ್ಯೂಷನ್ ಬೋರ್ಡ್‌ನವರು ಫ್ಯಾಕ್ಟರಿ ಬಂದ್ ಮಾಡಬೇಕೆಂದು ಆರ್ಡರ್ ಮಾಡಿದಾಗ ಫ್ಯಾಕ್ಟರಿಯವು ನ್ಯಾಯಾಲಯಕ್ಕೆ ಹೋಗಿ, ಈ ಸರ್ಕಾರಿ ಆರ್ಡರ್‌ಗೆ ಸ್ಟೇ ಆರ್ಡರನ್ನು ತಂದು ನಡೆಸುತ್ತಾದ್ದಾರೆ. ಯಾವ ಆಧಾರದ ಮೇಲೆ ಕೋರ್ಟಿನವರು ಕೊಟ್ಟಿದ್ದಾರೋ ಗೊತ್ತಿಲ್ಲ. ಕಾನೂನು ಕಣ್ಣು ಮುಚ್ಚಿಕೊಂಡು ಕುಳಿತಿರ್ತಾ? ಅದಕ್ಕೇ ನಾನು ಹೇಳುತ್ತಿದ್ದೇನೆ. ಅಲ್ಲಿ ಜನರು ದೂಳು ತಿನ್ನುತ್ತಿದ್ದಾರೆ. ದೂಳಿನಿಂದ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಅವಿಗೆ ಲೈಸನ್ಸ್ ಕೊಡುವುದಿಲ್ಲ ಎಂದು ಹೇಳಬೇಕಿತ್ತು. ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪ ಸಾಹೇಬರು ಅವರಿಗೆ ಕ್ಲೋಸ್ ಮಾಡುವುದಕ್ಕೆ ನೋಟೀಸ್ ಕೊಡುತ್ತಾರೆ. ಆದರೆ ಕಾನೂನು ಮಂತ್ರಿಗಳ ಇಲಾಖೆಯಲ್ಲಿರುವ ಒಬ್ಬ ನ್ಯಾಯಾಧೀಶರು ಅದಕ್ಕೆ ಸ್ಟೇ-ಆರ್ಡರ್ ಕೊಡುತ್ತಾರೆ. ಇದರಿಂದ ನ್ಯಾಯ ಸಿಕ್ಕಂತಾಗಲಿಲ್ಲ. ನ್ಯಾಯಬದ್ಧರಾಗಿ ಸ್ಟೇ ಆರ್ಡರ್ ಕೊಡಬಾರದಾಗಿತ್ತು. ಅದಕ್ಕಾಗಿ ನಾನು ಕಳಕಳಿಯಿಂದ ಮನವಿ ಮಾಡಕೊಳ್ಳುತ್ತಿದ್ದೇನೆ.

ಚೇರ್ಮನ್ :- ಹದಿನೈದು ನಿಮಿಷವಾಯಿತು. ನೀವು ಇನ್ನೂ ಪೀಠಿಕೆಯಲ್ಲೇ ಸಮಯ ಹಾಳುಮಾಡುತ್ತಿದ್ದೀರಿ.

ಶ್ರೀ ಬಾಬುರಾವ್ ಚವಾಣ್ :- ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವ ಒಂದು ವಿಷಯ ಇದೆ. ವಿಧಾನಮಂಡಲದ ಕಾರ್ಯಾಲಯದಲ್ಲಿ ಎಸ್.ಟಿ ಎಂಪ್ಲಾಯಿಸ್‌ಗೆ ಪ್ರಮೋಶನ್‌ನಲ್ಲಿ ರೋಸ್ಟರ್ ಪಾಲನೆ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಚತುರರೂ, ಆಮೇಲೆ ಕಾನೂನು ಬಗ್ಗೆ ಚೆನ್ನಾಗಿ ಬಲ್ಲವರು. ಅದಕ್ಕಾಗಿ ನ್ಯಾಯವಾದಂಥ ರೀತಿಯಲ್ಲಿ ಪಾಲನೆ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತಾ, ಮಾನ್ಯ ಅಧ್ಯಕ್ಷಣಿಯವರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್ :- ಶಿವನಂಜಪ್ಪನವರು...

ಶ್ರೀ ಕರಿಯಣ್ಣ :- ಇದೇನಿದು? ತಾವು ಅಧ್ಯಕ್ಷರಾಗಿದ್ದಾಗ ಇವರನ್ನು ಕರೆಯುತ್ತೀರಿ. ಅವರು ಅಧ್ಯಕ್ಷರಿದ್ದಾಗ ನಿಮ್ಮನ್ನು ಕರೆಯುತ್ತಾರೆ.

ಚೇರ್ಮನ್ :- ದಯವಿಟ್ಟು ಕುಳಿತುಕೊಳ್ಳಿ. ಇಲ್ಲಿ ಅವರ ಹೆಸರು ಇದೆ. ಅದಕ್ಕಾಗಿ ನಾನು ಕಂಡಿದ್ದೇನೆ.

(ಗೊಂದಲ)

ಶ್ರೀ ಕರಿಯಣ್ಣ :- ಇಲ್ಲಿ ನಾವು ಮಾತನಾಡಿದರೆ ಹತ್ತು ನಿಮಿಷ ಆಯಿತು, ಹದಿನೈದು ನಿಮಿಷ ಆಯಿತು ಎನ್ನುತ್ತೀರಿ. ನೀವಾದರೆ ಹದಿನೈದು ನಿಮಿಷಗಳವರೆಗೆ ಮಾತನಾಡಬಹುದೇ?

ಚೇರ್ಮನ್ :- ಕರಿಯಣ್ಣನವರೇ, ಈ ತರದ ನೇರವಾಗಿ ಆಪಾದನೆ ಮಾಡಬೇಡಿ.

ಶ್ರೀ ಕರಿಯಣ್ಣ :- ನೀವು ಅಧ್ಯಕ್ಷರಾದರೆ ಶ್ರೀ ಶಿವನಂಜಪ್ಪನವರನ್ನು ಕರೆಯುತ್ತೀರಿ. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರೆ ಅವರು ನಿಮಗೆ ಅವಕಾಶ ಕೊಡುತ್ತಾರೆ. ಹೀಗೆ ನೀವು ನೀವೇ ಮಾತನಾಡಿದರೆ ನಾವೇನು ಮನೆಗೆ ಹೋಗೋಣವೇ?

(ಗೊಂದಲ)

(ಕೆಲವು ಸದಸ್ಯರಿಂದ ಶ್ರೀ ಕರಿಯಣ್ಣನವರ ಮಾತಿಗೆ ಪ್ರತಿಭಟನೆ)

Sri Qumarul Islam:- This is not good. The remark passed by the Hon.Member is not good in taste.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಇದು ಸರಿಯಾದಂಥ ವಾದ ಅಲ್ಲ. ಅಧ್ಯಕ್ಷ ಸ್ಥಾನದಲ್ಲಿ ಇದ್ದವರ ಮೇಲೆ ಈ ತರಹ ಆರೋಪ ಮಾಡುವುದು ಸದಸ್ಯರಿಗೆ ಭೂಷಣ ಅಲ್ಲ ಏನೇ ಇದ್ದರೂ ಅವರು ಕೆಳಗಡೆ ಬಂದಮೇಲೆ ಮಾತನಾಡಬಹುದು. ಆದರೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತವರ ಮೇಲೆ ಆರೋಪ ಮಾಡುವುದು ಸರಿಯಲ್ಲ. ಅವರು ಉಪಾಧ್ಯಕ್ಷರ ಮೇಲೂ ಚಾರ್ಜು ಮಾಡಿದರು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಇವಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ ಅಂತ. ಇದು ಸರಿಯಾದ ವಾದ ಅಲ್ಲ. ದಯವಿಟ್ಟು ಇದು ರೆಕಾರ್ಡ್‌ನಲ್ಲಿ ಹೋಗತಕ್ಕದ್ದು ಸರಿಯಲ್ಲ.

ಶ್ರೀ ಕರಿಯಣ್ಣ :- ನಾನೇನೂ ಇಲ್ಲವೆಂದು ಹೇಳುವುದಿಲ್ಲ. ಆದರೆ ತಾವೇ ಕುಳಿತುಕೊಂಡು ಗಮನಿಸುತ್ತಿದ್ದೀರಿ. ಇಷ್ಟು ಹೊತ್ತು ನಾವು ಕುಳಿತುಕೊಂಡಿರುವುದನ್ನು ಅವರು ನಾವೇನು ಮಾಡಬೇಕು? ಈ ತರಹ ಶಬ್ದಗಳನ್ನು ನಾವು ಹೇಳಲೇಬೇಕಾಗುತ್ತದೆ. ನಾನು ಹೇಳಿದ್ದು ತಪ್ಪಾಗಿದ್ದರೆ....

ಚೇರ್ಮನ್ :- ಸುಮ್ಮನೆ ಸಮಯ ಹಾಳಾಗುತ್ತಿದೆ. ಈ ಪಟ್ಟಿಯಲ್ಲಿ ಕರಿಯಣ್ಣನವರ ಹೆಸರು ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಸರ್ಕಾರದ ಮುಖ್ಯ ಸಚೇತಕರು ಇದ್ದಾರೆ. ಸಮಯಕ್ಕಾಗಿ ಮಾನ್ಯ ಸದಸ್ಯರು ಅವರನ್ನು ಕೇಳಿಕೊಳ್ಳಬೇಕು. ಅದು ಬಿಟ್ಟು ನೇರವಾಗಿ ಅಧ್ಯಕ್ಷ ಸ್ಥಾನದಲ್ಲಿದ್ದವರ ಮೇಲೆ ಈ ತರಹ ಅಪಾದನೆ ಹೊರಿಸುವುದು ಸರಿಯಲ್ಲ.

(ಗೊಂದಲ)

ಚೇರ್ಮನ್ :- ಪಟ್ಟಿಯಲ್ಲಿ ಕರಿಯಣ್ಣನವರ ಹೆಸರು ಅಲ್ಲ. ಕುನ್ನೂರು ಅವರ ಹೆಸರು ಸಹ ಇಲ್ಲ. ಶ್ರೀ ಶಿವನಂಜಪ್ಪನವರ ಹೆಸರು ಇದ್ದ ಕಾರಣ ಅವರನ್ನು ನಾನು ಕರೆದಿದ್ದಾನೆ.

ಶ್ರೀ ಕರಿಯಣ್ಣ :- ನಮಗೆ ಅವಕಾಶ ಸಿಗದೇ ಇದ್ದರೆ ಈ ರೀತಿ ಹೇಳಲೇಬೇಕಾಗುತ್ತದೆ.

ಚೇರ್ಮನ್ :- ಹೀಗೆ ನೇರವಾಗಿ ಚಾರ್ಜ್ ಮಾಡಿದರೆ ಹೇಗೆ? ನಿಮ್ಮ ಹೆಸರನ್ನು ನೀವು ಮುಂಚಿತವಾಗಿ ಕೊಡಬೇಕಿತ್ತು.

ಶ್ರೀ ಕರಿಯಣ್ಣ :- ನಾನು ಆಗಿನಿಂದ ಕಾಗದ ಬರೆದು ಕಳಿಸುತ್ತಲೇ ಇದ್ದೇನೆ. ನನಗೆ ಇನ್ನೂ ಅವಕಾಶ ಸಿಕ್ಕಿಲ್ಲ.

ಚೇರ್ಮನ್ :- ಈಗ ಚೀಟಿ ಕಳಿಸಿದರೆ ಹೇಗೆ ಸಾಧ್ಯ? ಕೊನೆಗಳಿಗೆಯಲ್ಲಿ ಚೀಟಿ ಕಳಿಸಿ ನಾನು ಅವಕಾಶ ಕೊಟ್ಟಿಲ್ಲವೆಂದು ಚಾರ್ಜ್ ಮಾಡಿದರೆ ಹೇಗೆ? ಕರಿಯಣ್ಣನವರು ಹೇಳಿದ ಬಗ್ಗೆ ನನಗೆ ಯಾವುದೇ ರೀತಿಯ ಬೇಸರ ಇಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :- ಮಾನ್ಯ ಅಧ್ಯಕ್ಷರೇ, ಕರಿಯಣ್ಣನವರ ಆಪಾದನೆ ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ಲಿಸ್ಟ್‌ನಲ್ಲಿ ಅವರ ಹೆಸರು ಇಲ್ಲ. ನನ್ನ ಹೆಸರು ಮೊದಲು ಇತ್ತು. ವಿಫ್ ಅವರು ಏನು ಹೆಸರುಗಳನ್ನು ಕೊಡುತ್ತಾರೆ, ಅದರ ಪ್ರಕಾರ ಅಧ್ಯಕ್ಷರು ಕರೆಯುತ್ತಾರೆ. ಅದು ಬಿಟ್ಟು ಹೆಸರನ್ನು ಅಧ್ಯಕ್ಷರಿಗೆ ಕಳಿಸಿಕೊಟ್ಟು ಸೇರಿಸುವುದಕ್ಕೆ ಆಗುವುದಿಲ್ಲ. ಇದನ್ನು ಶ್ರೀ ಕರಿಯಣ್ಣನವರು ಸ್ವಲ್ಪ ಅರ್ಥಮಾಡಿಕೊಂಡರೆ ಸರಿಯಾಗುತ್ತದೆ.

ಅಧ್ಯಕ್ಷರೇ, ಈಗ ನಾನು ಕಾನೂನು ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Justice at the door is the aim or this Government.

ಇದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಒಂದೊಂದು ಕೋರ್ಟ್‌ಗಳನ್ನು ಎಸ್ಟಾಬ್ಲಿಷ್ ಮಾಡಿದ್ದು ಆಗಿದೆ. ಎಸ್ಟಾಬ್ಲಿಷ್ ಮಾಡಿದಮೇಲೆ ಆ ಕೋರ್ಟಿನ ಗತಿ ಏನು ಎಂಬುದನ್ನು ನೋಡುತ್ತಿಲ್ಲ. ಹೊಸದಾಗಿ ಕೋರ್ಟ್‌ಗಳನ್ನು ಎಲ್ಲೆಲ್ಲಿ ನಾವು ಪ್ರಾರಂಭ ಮಾಡುತ್ತೇವೆ. ಅಲ್ಲಿ ಹೊಸ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಮತ್ತು ಅದರ ಜೊತೆಗೆ ಬಾರ್ ಅಸೋಸಿಯೇಷನ್ ಮತ್ತು ಲೈಬ್ರರಿಗಳನ್ನು ಕೊಡಬೇಕು. ಮತ್ತೆ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗಿಂತ ಕೆಳಗೆ ಇರುವ ಜಡ್ಜ್‌ಗಳ ಸಂಬಳ ಬಹಳ ಕಡಿಮೆ ಇದೆ. ಅವು ಡೆಪ್ಯುಟಿ ಕಮಿಷನರ್‌ಗಳನ್ನು ನೋಡುತ್ತಾರೆ, ಅವರ ವೈಭವ, ಅಸಿಸ್ಟೆಂಟ್ ಕಮಿಷನರ್ ನೋಡುತ್ತಾರೆ, ಅದರ ಹತ್ತಿರ ಇರುವ ಕಾರು, ಜೀಪು, ಅವರ ಬಂಗಲೆ ಇದೆಲ್ಲಾ ನೋಡಿದಾಗ ಜಡ್ಜ್‌ಗಳಿಗೂ ಕೂಡ ಮನುಷ್ಯರೇ ಆಗಿರುವುದರಿಂದ ಅವರಿಗೂ ಸ್ವಲ್ಪ ಆಸೆ ಬಂದರೂ ಬರಬಹುದು. ಈ ಆಸೆ ಬಾರದ ರೀತಿಯಲ್ಲೇ ಅವರಿಗೆ ಕೂಡ ಕೈತುಂಬಾ ಸಂಬಳ ಕೊಟ್ಟು ಅವರು ಈಗಿನ ಆಧುನಿಕ ಸಮಾಜದಲ್ಲಿ ಕೆಲಸ ಮಾಡುವ ರೀತಿಯಲ್ಲಿ ಅವರಿಗೆ ಪ್ರೋತ್ಸಾಹ ಕೊಡಬೇಕಾದ ಅವಶ್ಯಕತೆ ಬಹಳ ಇದೆ. ಮತ್ತು ಖಾಲಿ ಇರುವ ಮುನ್ಸಿಫ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕಾಗುತ್ತದೆ. ಏಕೆಂದರೆ ಅವರು ಅಂಕಿಅಂಶಗಳನ್ನು ನೋಡಿದರೆ ಪೆಂಡಿಂಗ್ ಕೇಸ್‌ಗಳನ್ನು ನೋಡಿದರೆ ಭಯವಾಗುತ್ತದೆ. ಇನ್ನು ಹತ್ತು ವರ್ಷವಾದರೂ ಇವುಗಳನ್ನು ಡಿಸ್‌ಪೋಸ್ ಮಾಡುತ್ತಾರೋ ಇಲ್ಲವೋ ಎಂದು ನನಗೆ ಅನ್ನಿಸುತ್ತದೆ. ಎಲ್ಲಾ ಕೋರ್ಟ್‌ನಲ್ಲೂ ಪೆಂಡಿಂಗ್ ಕೇಸ್‌ಗಳು ಬಹಳ ಇವೆ. ಕೂಡಲೇ ತ್ವರಿತವಾಗಿ ತೀರ್ಮಾನ ಮಾಡತಕ್ಕ ಒಂದು ಕಾರ್ಯವನ್ನು ನಮ್ಮ ಕಾನೂನು ಮಂತ್ರಿಗಳು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಮತ್ತೆ ಜನತಾ ನ್ಯಾಯಾಲಯಗಳಲ್ಲಿ ಅನೇಕ ಕೇಸ್‌ಗಳನ್ನು ಇತ್ಯರ್ಥ ಮಾಡಿದ್ದಾರೆ. ಕೋರ್ಟಿನಲ್ಲಿ ಹತ್ತು ವರ್ಷ ಇಪ್ಪತ್ತು ವರ್ಷವಾದರೂ ತೀರ್ಮಾನ ಆಗದಿರುವ ಕೇಸ್‌ಗಳು ಇಲ್ಲಿ ತೀರ್ಮಾನವಾಗಿವೆ.

ಆದ್ದರಿಂದ ಇದರ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿ ವಿಶೇಷ ಕಾರ್ಯಕ್ರಮ ಹಾಕಿಕೊಂಡು ಇದನ್ನು ಬೇಗ ಮಾಡತಕ್ಕ ವ್ಯವಸ್ಥೆ ಮಾಡಬೇಕು. ನೋಡರಿಗಳ ಸಂಖ್ಯೆ 64 ಇದ್ದುದನ್ನು 200 ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ನೋಟರಿಗಳನ್ನು ಅಪಾಯಿಂಟ್ ಮಾಡುವುದಕ್ಕೆ ಏನಾದರೂ ಮಾಡುವುದಕ್ಕೆ ಏನಾದರೂ ಕಾನೂನಿನಲ್ಲಿ ನಿಯಮ ಮಾಡಿದ್ದಾರಾ? ಅಥವಾ ಯಾವ ಅಧಾರದ ಮೇಲೆ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಉತ್ತರ ಕೊಡುವಾಗ ಹೇಳಬೇಕು. ಮತ್ತೇ ನನ್ನ ಕ್ಷೇತ್ರದಲ್ಲಿ ಮುನ್ಸಿಫ್ ಕೋರ್ಟ್‌ಗೆ ಜಮೀನು ಅಕ್ವೈರ್ ಮಾಡಿಕೊಟ್ಟು ಮೂರು ವರ್ಷ ಆಯಿತು. ಕಟ್ಟಡ ಕಟ್ಟಿಸಿಕೊಡಿ ಎಂದು ಇಲಾಖೆಯವರಿಗೆ ಬರೆಯುತ್ತಲೇ ಇದ್ದೇನೆ. ಆದರೂ ಅದು ಆಗುತ್ತಿಲ್ಲ ದಯಮಾಡಿ ಮಾನ್ಯ ಮಂತ್ರಿಗಳು ಗುಬ್ಬಿಯಲ್ಲಿ ಮುನ್ಸಿಫ್ ಕೋರ್ಟ್ ಕಟ್ಟಡ ಕಟ್ಟುವುದಕ್ಕೆ ಈ ವರ್ಷವೇ ಅನುದಾನ ತೆಗೆದುಕೊಂಡು ಕಟ್ಟಡ ಕಟ್ಟಿಸಿಕೊಡಬೇಕು. ಅದೇ ರೀತಿ ಅಲ್ಲಿ ಕೋರ್ಟ್ ಕಟ್ಟಡ ಕಟ್ಟಿದೆ. ಸುತ್ತಲೂ ಕಾಂಪೌಂಡ್ ಇಲ್ಲ ಅದಕ್ಕಾಗಿ ಅಲ್ಲಿಗೆ ಜನರು ಬರುವುದಕ್ಕೆ ಬದಲಾಗಿ ದನಗಳು ಬರುತ್ತಿವೆ. ಜನರು ತಮ್ಮ ಬಾಧೆಯನ್ನು ತೀರಿಸಿಕೊಳ್ಳುವುದಕ್ಕೆ ಆ ಕೌಂಪೌಂಡ್ ಒಳಗೆ ಬರಬೇಕಾಗಿದೆ. ಪರಿಸ್ಥಿತಿ ಹೀಗಿರುವದರಿಂದ ಕಾಂಪೌಂಡ್ ಕೆಲಸ ಸಹ ಬೇಗ ಆಗಬೇಕು. ಮತ್ತೆ ತುಮಕೂರಿನಲ್ಲಿ ಬಾರ್ ಅಸೋಸಿಯೇಷನ್ ಕಟ್ಟಡ ಕಟ್ಟಿ 100 ವರ್ಷಗಳಾಯಿತು. ಆಗ ಸುಮಾರು 50-60 ಜನ ಇದ್ದರು. ಈಗ ಸುಮಾರು 280 ಜನರಿಗೆ ಮೇಲ್ಪಟ್ಟಿದ್ದಾರೆ. ಅದರಲ್ಲಿ 60-70 ಜನ ಮಹಿಳೆಯರಿದ್ದಾರೆ. ಅದು ಯಾವುದಕ್ಕೂ ಸಾಲದಿರುವ ಕಟ್ಟಡವಾಗಿದೆ. ಮಾನ್ಯ ಮಂತ್ರಿಗಳು ತುಮಕೂರಿಗೆ ಬಂದಾಗ ಈ ಬಗ್ಗೆ ಅಡ್ವೋಕೇಟ್ಸ್ ಎಲ್ಲಾ ಸೇರಿ ರೆಪ್ರಸೆಂಟೇಷನ್ ಕೊಟ್ಟಿದ್ದರು. ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಂಡು ಮಾಡಿಕೊಡುತ್ತೇನೆ ಎಂದು ಹೇಳಿದರು. ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಮುನ್ಸಿಫ್ ಕೋರ್ಟ್‌ಗಳು ಎರಡು ಮೂರು ನಡೆಯುತ್ತಿದೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಡೆಪ್ಯುಟಿ ಕಮಿಷನರ್ ಕುದುರೆ ಲಾಯ ಮಾಡಿಕೊಂಡಿದ್ದರು. ಆ ಕುದುರೆ ಲಾಯದಲ್ಲಿ ಇನತ್ತು ಮುನ್ಸಿಫ್ ಕೋರ್ಟ್‌ಗಳು ನಡೆಯುತ್ತಿವೆ. ಕೂಡಲೇ ಅದನ್ನು ತಪ್ಪಿಸಿ ಹೊಸ ಕಟ್ಟಡವನ್ನು ಕಟ್ಟಿಸಬೇಕೆಂದೂ, ಅದರ ಬಗ್ಗೆ ಲಾ ಮಿನಿಸ್ಟರ್ ಹೆಚ್ಚಿನ ಕಾಳಜಿ ವಹಿಸಬೇಕೆಂದು ಹೇಳುತ್ತೇನೆ. ಇನ್ನು ವಿದ್ಯೆ ಇಲಾಖೆ ಬಗ್ಗೆ ಎರಡು ಮೂರು ವಿಚಾರಗಳನ್ನು ಹೇಳಬೇಕೆಂದು ಮಾಡಿದ್ದೇನೆ. ಮಾನ್ಯ ವಿದ್ಯಾ ಇಲಾಖೆ ಮಂತ್ರಿಗಳು ಇದನ್ನು ಬಹಳ ಆಳವಾಗಿ, ಗಾಢವಾಗಿ ಯೋಚನೆ ಮಾಡಿ ಶಿಕ್ಷಣ ರಂಗಕ್ಕೆ ಹೊಸ ತಿರುವು ಕೊಡುವುದರಲ್ಲಿ ತಮ್ಮ ನೈಪುಣ್ಯತೆಯನ್ನು ತೋರಿಸಿದ್ದಾರೆ. ಅವರನ್ನು ನಾವು ಮೆಚ್ಚಬೇಕಾಗಿದೆ. ಏಕೆಂದರೆ ಅವರು ಯಾವುದೂ ಬಿಟ್ಟಿಲ್ಲ. ಯೋಗ ಶಿಕ್ಷಣದ ಜೊತೆಗ ನನ್ನದು ಒಂದು ಸಲಹೆ ಇದೆ. ನೀತಿ ಬಗ್ಗೆ ಪುಸ್ತಕದಲ್ಲಾಗಲೀ ಎಜುಕೇಷನ್‌ನಲ್ಲಾಗಲೀ ಇಲ್ಲವೇ ಇಲ್ಲ. ನಾನು ಓದುವಾಗ ಮೊದಲನೇ ಪಾಠ ಏನಿತ್ತು ಎಂದರೆ "ವಿದ್ಯಾರ್ಥಿಗಳೇ ಗುರುಗಳು ಬರುತ್ತಿದ್ದಾರೆ. ಎದ್ದುನಿಲ್ಲು, ಕೈಮುಗಿ, ಕುಳಿತುಕೋ, ಪಾಠವನ್ನು ಓದು ಎಂದಿತ್ತು" ಎಲ್ಲಾ ಏನಾಗಿದೆಯೆಂದರೆ ಎಲ್ಲಾ ತಿರುವುಮುರುವು ಆಗಿದೆ. ಗುರುಗಳೇ. ವಿದ್ಯಾರ್ಥಿಗಳು ಬರುತ್ತಿದ್ದಾರೆ, ಎದ್ದುನಿಂತುಕೊಳ್ಳಿ, ಅವರು ಬಂದರೆ ಒಳಗೆ ಕರೆಯಿರಿ, ಕುಳಿತುಕೊಳ್ಳುತ್ತೇನೆ ಅಂದರೆ ಕೂರಿಸಿ ಇಲ್ಲವೇ ಕಿಟಕಿಯಲ್ಲಿ ಆಚೆ ಹೋಗುತ್ತೇನೆ ಎಂದರೆ ನೀವು ಹೇಳಿದಿರಲ್ಲ ಕಿಟಕಿ ಇಲ್ಲ ಎಂದು, ಅಂಥ ಸ್ಕೂಲ್‌ಗಳಿದ್ದರೆ ಆಚೆಗೆ ಹೋಗಿ ಈ ರೀತಿ ಹೇಳುವ ಪರಿಸ್ಥಿತಿ ಬಂದಿದೆ. 'ನೀತಿ' ಇಲ್ಲದ ವಿದ್ಯೆ ಬಹುಶಃ ಯಾವುದೇ ಉಪಯೋಗಕ್ಕೂ ಬರುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಹಿಂದೆ ನೀತಿ ಚಿಂತಾಮಣಿ ಎಂದು ಇತ್ತು. ಮಾರಲ್ ಕ್ಲಾಸಸ್ ಎಂದು ಇತ್ತು. ಇದನ್ನೆಲ್ಲಾ ತಪ್ಪಿಸಿ ಇವತ್ತಿನ ದಿವಸ ನಾಡಿನ ಯುವಕರನ್ನು ಎಲ್ಲಿಗೆ ಕೊಂಡೊಯುತ್ತಿದ್ದೇವೆ ಎಂದರೆ ಬಹುಶಃ ಇದೂ ಒಂದು ಪಂಜಾಬ್ ಆಗಬಹುದೇನೋ ಎಂದು ನನಗೆ ಅನ್ನಿಸುತ್ತದೆ.

ಯುವಕರಿಗೆ ಮಾರ್ಗದರ್ಶನ ಇವತ್ತಿನದಿವಸ ಇಲ್ಲ. ಈ ದೇಶದ ಸಂಪತ್ತು, ಈ ರಾಜ್ಯದ ಸಂಪತ್ತು ಅಂದರೆ, ನಾವು ಎಕ್ಸೈಸ್‌ನಲ್ಲಿ 500 ಅಥವಾ 600 ಕೋಟಿ ಮಾಡುತ್ತೇವೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಒಂದೂವರೆ ಅಥವಾ ಎರಡು ಸಾವಿರ ಕೋಟಿ ಮಾಡುತ್ತೇವೆ. ಹಾಗೂ ಇಷ್ಟು ಭತ್ತ, ರಾಗಿ ಬೆಳೆಯುತ್ತೇವೆಂದಲ್ಲ. ಈ ರಾಷ್ಟ್ರದ ಸಂಪತ್ತು ಯುವಕರ ಸಂಪತ್ತು. ಮುಂದಿನ ಆಗುಹೋಗುಗಳಿಗೆ ಯುವಕರು ಕಾರಣ. ಅದಕ್ಕಾಗಿ ಅವರಿಗೆ ಬೇಕಾಗಿರತಕ್ಕ ಶಿಕ್ಷಣವನ್ನು ನಾವು ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನೂರಕ್ಕೆ 75 ಜನ ರೈತರಿದ್ದಾರೆ. ರೈತರ ಮಕ್ಕಳಷ್ಟು ಸ್ಪಂದನ ಮಾಡತಕ್ಕ ವಿದ್ಯೆ ಬೇಕು. ಇವತ್ತಿನ ದಿವಸ ವಕೇಷನಲ್ ಕೋರ್ಸ್‌ನಲ್ಲಿ ಸಿಕಲ್ಚರ್ ಕೊಟ್ಟಿದ್ದೀರಿ. ಇದರ ಜೊತೆ ಡೈರಿ ಟೆಕ್ನಾಲಜಿಯನ್ನು ಹೈಸ್ಕೂಲಿನಲ್ಲಿ ಕೊಡಬೇಕಾಗುತ್ತದೆ. ಇವತ್ತು ಹಳ್ಳಿಯಲ್ಲಿ ಒಂದು ಪಂಪಸೆಟ್ಟು ಕೆಟ್ಟರೆ ಆತನೇ ರಿಪೇರಿ ಮಾಡುಕೊಳ್ಳುವ ವ್ಯವಸ್ಥೆ ಮಾಡಬೇಕಾಗುತ್ತದೆ. ಅದೇ ರೀತಿ ಟ್ರಾಕ್ಟರ್ ಕೆಟ್ಟರೆ ಅದನ್ನು ರಿಪೇರಿ ಮಾಡುವ ವ್ಯವಸ್ಥೆಯನ್ನು ಅವನೇ ಮಾಡುವ ವ್ಯವಸ್ಥೆ ಮಾಡಬೇಕಾಗುತ್ತದೆ. ಇವತ್ತು ಕೇವಲ ಎಂಜಿನಿಯರಿಂಗ್, ಕಂಪ್ಯೂಟರ್, ವೆಕೇಷನಲ್ ಕೋರ್ಸ್ ಜೊತೆಗೆ ರೈತರಿಗೆ ಬೇಕಾಗಿರತಕ್ಕ ಉಪಯೋಗವಾಗತಕ್ಕ ಶಿಕ್ಷಣವನ್ನು ಕೊಡತಕ್ಕ ಒಂದು ವ್ಯವಸ್ಥೆ ಆಗಬೇಕು ಎನ್ನತಕ್ಕ ವಿಚಾರವನ್ನು ಅವರ ಮುಂದೆ ಇಡುತ್ತಾ, ಈ ಮಕ್ಕಳ ಸಂಖ್ಯೆ ನೋಡಿದರೆ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಸುಮಾರು 70 ಲಕ್ಷ ವಿದ್ಯಾರ್ಥಿಗಳು ಇದ್ದಾರೆ. 1992-93ಕ್ಕೆ ಇದು 1 ಕೋಟಿ ಆಗಬಹುದು. ಏಕೆಂದರೆ ನಾವು ಅಕ್ಷಯ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಆದರೆ ಇವತ್ತು ಒಂದೇ ರೂಮಿನಲ್ಲಿ ಏಳು ತರಗತಿಗಳು. ಅದಕ್ಕೆ ಒಬ್ಬರೇ ಮೇಸ್ಟ್ರು. ಅವರು ಪಾಠ ಹೇಗೆ ಮಾಡಬೇಕು? ಪೂರ್ವಕ್ಕೆ ತಿರುಗುತ್ತಾನೆ. ಆಟ; ಊಟ ಹೇಳಿಕೊಡುತ್ತಾನೆ. ಪಶ್ಚಿಮಕ್ಕೆ ತಿರುಗಿ ಒಂದೊಂದು ಒಂದು ಎಂದು ಮಗ್ಗಿ ಹೇಳುತ್ತಾನೆ. ಆತ ಉತ್ತರಕ್ಕೆ ತಿರುಗುವುವಷ್ಟು ಹೊತ್ತಿಗೆ ಬೇಜಾರಾಗಿರುತ್ತದೆ. ಅತ್ತ ತಿರುಗಿ ಸುಮ್ಮನೆ ಕುಳಿತುಕೊಳ್ಳೋ ಎಂದು ಹೇಳಿ ಮತ್ತೆ ಹಿಂದಕ್ಕೆ ತಿರುಗಿ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುತ್ತಾನೆ. ಈ ವಿದ್ಯಾಭ್ಯಾಸವನ್ನು ಕೊಟ್ಟು ಇವರು ಕಾನ್ವೆಂಟ್‌ನಲ್ಲಿ ಓದತಕ್ಕ ಬೆಂಗಳೂರಿನಲ್ಲಿ ಇರುವ ಮಕ್ಕಳಿಗೆ ಸರಿಸಮಾನವಾಗಿ ಎಲ್ಲದರಲ್ಲೂ ಕಾಂಪಿಟಿಷನ್ ಕೊಟ್ಟು ಯಾರಿಗೆ ಮೆರಿಟ್ ಇದೆಯೋ ಅವರಿಗೆ ಕೆಲಸ ಕೊಡುತ್ತೀರಿ. ಇವತ್ತು ಹೈಯರ್ ಕ್ಲಾಸ್‌ಗೆ ಸೇರಿಸಬೇಕಾದರೆ ಎಂಜಿನಿಯರ್, ಎಂ.ಬಿ.ಬಿ.ಎಸ್. ಸೀಟ್ ಸಿಗಬೇಕಾದರೆ ನಾವು ಮೆರಿಟ್ ನೋಡುತ್ತಿದ್ದೇವೆ. Are we not doing injustice to village people? Is there any justification in it?

ಇದು ಡಿಸ್‌ಕ್ರಿಮಿನೇಷನ್ ಅಲ್ಲವೇ? ಏಕೆ ಈ ರೀತಿ ತಾರತಮ್ಯ ಆಗುತ್ತದೆ? ಹಳ್ಳಿಯ ಮಕ್ಕಳಿಗೆ 15 ನಂಬರ್ ಜಾಸ್ತಿ ಕೊಟ್ಟಿದ್ದೀರಿ. ನಿಜ, ಇದಕ್ಕೆ ನಾನು ಸರ್ಕಾರದವರು ಅಭಿನಂದಿಸುತ್ತೇನೆ. ಎಲ್ಲ ವಿಷಯಗಳಿಗೂ 15 ಅಂಕ ಕೊಟ್ಟಿದ್ದೀರಿ. ಆದರೆ ಸಂಪೂರ್ಣವಾದ ವಿದ್ಯೆ ಹಳ್ಳಿಯಲ್ಲಿ ಕಲಿಯಬೇಕಾದರೆ ಅವನಿಗೆ ಒಳ್ಳೆಯ ತಳಹದಿ ಇಲ್ಲದೇ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡುವವರ ಜೊತೆ ಕಾಂಪೀಟ್ ಹೇಗೆ ಮಾಡುತ್ತಾರೆ? ಇದನ್ನು ಗುರ್ತಿಸದೇ ಇದ್ದರೆ we are doing great injustice to village people.

100ಕ್ಕೆ 75 ಜನ ಜನರಿರುವ ರೈತರಿಗೆ ಈ ರೀತಿ ಅನ್ಯಾಯ ಮಾಡಿ ಕೇವಲ 25 ಜನರಿಗೆ ಈ ವಿದ್ಯಾಭ್ಯಾಸದ ಎಲ್ಲಾ ಸೌಕರ್ಯ ಕಲ್ಪಿಸಿಕೊಡುವುದಾದರೆ ಇದಕ್ಕೆ ಏನು ಹೇಳುವುದೋ ಗೊತ್ತಾಗುತ್ತಾ ಇಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಏನಾಗಿದೆ ಎಂದರೆ, ನೀವು ಇಲಾಖೆಯಲ್ಲಿ ಮುಟ್ಟದೇ ಇರುವ ವಿಷಯ ಯಾವುದೂ ಇಲ್ಲ ಆಡು ಮುಟ್ಟದ ಸೊಪ್ಪು ಇಲ್ಲ ಎನ್ನುವ ಗಾದೆಯಂತೆ ತಾವು ಎಲ್ಲಾ ಮಾಡಿದ್ದೀರಿ. ಆದರೆ ರೈತರ ಮಕ್ಕಳ ಬಗ್ಗೆ ಹಳ್ಳಿಗಾಡಿನ ಶಾಲೆಗಳ ಅಭಿವೃದ್ಧಿ ಮಾಡುವ

ಬಗ್ಗೆ ಜಾಸ್ತಿ ನಿಗವಹಿಸಬೇಕಾಗಿತ್ತು. ಆ ಬಗ್ಗೆ ತಮಗೆ ಕಾಳಜಿ ಇದೆ. ದಯಮಾಡಿ ಅದನ್ನು ಮಾಡಬೇಕು. ಜನತಾ ಸರ್ಕಾರದಲ್ಲಿ ಒಂದು ಅವಾಂತರ ಮಾಡಿದ್ದರು. ಏನೆಂದರೆ, 35 ಮಕ್ಕಳು ಸಿಕ್ಕಿದರೂ ಒಂದು ಶಾಲೆ ಕೊಡುತ್ತೇವೆ ಎಂದು ಹೇಳಿದರು. ಈ ಪ್ರಕಾರ ನಮ್ಮ ಕ್ಷೇತ್ರದಲ್ಲಿ 35 ಶಾಲೆಗಳಿಗೆ ಮಂಜೂರಾತಿ ಕೊಟ್ಟರು. ಅದರಲ್ಲಿ 15 ಪ್ರಾರಂಭ ಆದವು. ಇವುಗಳಲ್ಲಿ 8 ಶಾಲೆಗಳ ಬಾಗಿಲುಮುಚ್ಚಿದ್ದು ಇನ್ನು 7 ನಡೆಯುತ್ತಿವೆ. ಕಾರಣ, ಉಪಾಧ್ಯಾಯರ ಕೊರತೆ. ಹಳ್ಳಿಗಾಡಿನಲ್ಲಿ ಯಾವಯಾವ ಸೌಲಭ್ಯ ಕೊಡಬೇಕಾಗಿತ್ತೋ ಅದನ್ನು ಇದುವರೆಗೋ ಕೊಡುವುದಕ್ಕಾಗಿ. ಆದರೆ ಪಟ್ಟಣದಲ್ಲಿರುವ ಒಂದು ಶಾಲೆಯಲ್ಲಿ 8 ಜನ ಇರಬೇಕಾದ ಕಡೆ 10 ಜನ ಇದ್ದಾರೆ. ಅವರನ್ನು ಅಲ್ಲಿಂದ ಬೇರೆ ಕಡೆಗೆ ಹಾಕಿದರೂ ಅವರು ಹೋಗುತ್ತಾ ಇಲ್ಲ. ನಮ್ಮ ಗುಬ್ಬಿ ನಗರದಲ್ಲಿ ಇರುವ ಎಲ್ಲಾ ಶಾಲೆಗಳಲ್ಲೂ ಹೆಚ್ಚು ಉಪಾಧ್ಯಾಯರು ಇದ್ದಾರೆ. ಅವರನ್ನು ಪಕ್ಕದ ಹಳ್ಳಿಗೆ ಹಾಕಿ ಎಂದರೆ ಯಾರೂ ಇದರ ಬಗ್ಗೆ ವಿದ್ಯಾ ಯೋಚನೆ ಮಾಡುತ್ತಿಲ್ಲ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ವಿದ್ಯಾ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಮತ್ತು ಅವರು ತಮ್ಮ ವರದಿಯ ಕೊನೇ ವ್ಯಾಪಾರದಲ್ಲಿ ಈ ರೀತಿ ಬರೆದುಕೊಂಡಿದ್ದಾರೆ :-

> "ತಮಗೆಲ್ಲರಿಗೂ ತಿಳಿದಿರುವಂತೆ ಶಿಕ್ಷಣ ರಂಗ ಬೃಹದಾಕಾರವಾಗಿದ್ದು ಇದರ ಸಮಸ್ಯೆಗಳು ಹಾಗೂ ಬೇಡಿಕೆಗಳು ಅಪಾರ ಸಾಮಾಜಿಕ ಬದಲಾವಣೆಗೆ ಶಿಕ್ಷಣ ವ್ಯವಸ್ಥೆಯು ಸ್ಪಂದಿಸದೇ ಇದ್ದರೆ ಎಲ್ಲಾ ಪ್ರಯತ್ನಗಳೂ ವ್ಯರ್ಥ"

ಶಿಕ್ಷಣ ಇಲಾಖೆಯ ವಾರ್ಷಿಕ ವರದಿಯಲ್ಲಿ ಹೇಳಿರುವ ಈ ಮಾತು ಹಳ್ಳಿಗಾಡಿನ ಮಕ್ಕಳ ಬಗ್ಗೆ ನೀವು ಚಿಂತನೆ ಮಾಡಿದ್ದರೆ ಬಹುಶಃ ಸಮರ್ಪಕವಾಗುತ್ತದೆ. "ಈ ದಿಸೆಯಲ್ಲಿ ನಾವು ಆಶಿಸಿದಂತೆ ದಿನಕ್ಕೊಂದು ಸಮಸ್ಯೆಯು ಪಿಹಾರವಾಗದಿದ್ದರೂ ಶಿಕ್ಷಮದ ವಿವಿಧ ಹಂತಗಳಲ್ಲಿದ್ದ ಬಹತೇಕ ಮೂಲಭೂತ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳ ನಿವಾರಣೆಗಾಗಿ ಸಕ್ರಿಯ ಹಾಗೂ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಇದು ದೀರ್ಘ ಪಯಣದ ಮೊದಲ ಹಂತ. ಇನ್ನೂ ನಡೆಯಬೇಕಾದ ಹಾದಿ ಬಲುದೂರ." ಈ ಹಾದಿ ಬಲು ದೂರ ಇರುವುದನ್ನು ಆದಷ್ಟು ಬೇಗ ಕಡಿಮೆ ಮಾಡಿ ಇಲಾಖೆಗೆ ಕಾಯಕಲ್ಪ ಕೊಡತಕ್ಕ ಮನಸ್ಸು ನೀವು ಮಾಡಿದ್ದೀರಿ. ಅದಕ್ಕಾಗಿ ನಿಜವಾಗಿಯೂ ನೀವು ಅಭಿನಂದನಾರ್ಹರು ಅಂವರೆ ತಪ್ಪಾಗಲಾರದು. ಕೆಲವು ಹೊಸ ಯೋಜನೆಗಳನ್ನು ಜಾರಿ ಮಾಡಿದ್ದೀರಿ. ಮಾದರಿ ಶಾಲೆಗಳನ್ನು ಹೋಬಳಿ ಕೇಂದ್ರಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಕೊಡಬೇಕು ಎನ್ನುವ ಸೂಚನೆ ಇದ್ದ ಹಾಗೆ ಕಾಣುತ್ತದೆ. ಹಳ್ಳಿಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟದಲ್ಲಿ ಕೆಲವು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಆರಿಸಿ ಅಲ್ಲಿ ಓದಿಸತಕ್ಕ ವ್ಯವಸ್ಥೆಯನ್ನು ನೀವು ಮಾಡಿದರೆ ಬಹುಶಃ ಇದು ಫಲಪ್ರದವಾಗುತ್ತದೆಂದು ನಾನು ಭಾವಿಸುತ್ತೇನೆ. ಇನ್ನು ಟೌನ್‌ವ್ಯಾಪ್ತಿಯಲ್ಲಿ ಬರತಕ್ಕ ಕೆಲವು ಶಾಲೆಗಳಿಗೆ ಹೆಚ್ಚುವರಿ ಕಟ್ಟಡಗಳನ್ನು ಕೊಡಲು ವ್ಯವಸ್ಥೆ ಮಾಡಿದ್ದೀರಿ. ಅದಕ್ಕಾಗಿ ನಿಮಗೆ ಕರ್ನಾಟಕ ಜನತೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ 15 ಅಂಕಗಳನ್ನು ಹೆಚ್ಚುವರಿಯಾಗಿ ನೀವು ಏನು ಕೊಟ್ಟಿದ್ದೀರಿ. ನಿಜವಾಗಿಯೂ ಕೂಡ ಇದು ಮಾನವತೆಯ ಆಧಾರದ ಮೇಲೆ ಮನುಷ್ಯತ್ವದ ಆಧಾರದ ಮೇಲೆ ಆಗಬೇಕಾಗಿತ್ತು. ಇದರ ಜೊತೆಗೆ ಅವರಿಗೆ ಏನು ಶಿಕ್ಷಣ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೀರಿ ಅದಕ್ಕೆ ನಿಜವಾಗಿಯೂ ಕೂಡ ನಾವು ನಿಮಗೆ ಚಿರಋಣಿಯಾಗಿರುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಚೇರ್ಮನ್ :- ತಾವು ಬೇಗ ಮುಗಿಸಿಬಿಡಿ.

ಶ್ರೀ ಜಿ.ಎಸ್. ಶಿವನಂಜಪ್ಪ :- ಇನ್ನು ಅಕ್ಷಯ ಯೋಜನೆಯ ಬಗ್ಗೆ ಹೇಳದಿದ್ದರೆ ತಪ್ಪಾಗುತ್ತದೆ.

ಚೇರ್ಮನ್ :- ತಾವೇನು ಹೇಳಬೇಕೆಂದಿದ್ದೀರಿ ಅದನ್ನು ಹೇಳಲು ಮಾತನಾಡುವ ಮಾನ್ಯ ಕರಿಯಣ್ಣನವರಿಗೆ ಪಾಯಿಂಟ್ಸ್ ಕೊಡಿ.

ಶ್ರೀ ಜಿ.ಎಸ್. ಶಿವನಂಜಪ್ಪ :- ಆಯಿತು, ಪಾಯಿಂಟ್ಸ್ ಮಾತ್ರ ಹೇಳುತ್ತಾ ಇದ್ದೇನೆ. ಈ ಅಕ್ಷಯ ಯೋಜನೆ ಬಗ್ಗೆ ಹೇಳಬೇಕೆಂದರೆ, ನಾನು ಎರಡು ಮೂರು ಸ್ಕೂಲ್‌ಗಳಿಗೆ ಹೋಗಿದ್ದೆ. ಅಲ್ಲಿನ ಅಟೆಂಡೆನ್ಸ್‌ನಲ್ಲಿ 50 ಮಕ್ಕಳು ಎಂದು ಇತ್ತು. 50 ಮಕ್ಕಳು ಇದ್ದಾರೆಂದು ರಿಜಿಸ್ಟರ್‌ನಲ್ಲಿ ಅಟೆಂಡೆನ್ಸ್ ಹಾಕಿದ್ದರೂ ಸಹ ತಲೆ ಎಣಿಸಿದಾಗ 45 ಮಕ್ಕಳು ಇದ್ದರು. ಈ ರೀತಿಯಾಗಿ ಮಿಸ್ ಅಪ್ರೋಪ್ರಿಯೇಷನ್ ಮಾಡಿ ಸರ್ಕಾರದ ಹಣವನ್ನು ಯಾರಾದರೂ ಲಪಟಾಯಿಸುತ್ತಾರೆ ಎನ್ನತಕ್ಕ ಭಯವಿದೆ. ಅಟೆಂಡೆನ್ಸ್‌ನಲ್ಲಿ ಒಂದು ತರಹ ಹಾಸ್ಟೆಲ್‌ನಲ್ಲಿ ಒಂದು ತರಹ ಇದ್ದರೆ ಬಹಳ ಅನಾಹುತವಾಗುತ್ತದೆ. ಈ ರೀತಿ ಅನಾಹುತವಾಗುವುದಕ್ಕೆ ತಾವು ಅವಕಾಶ ಕೊಡಬಾರದು. ಎಷ್ಟೇ ಕಷ್ಟವಾದರೂ ಸಹ ಮುಂದಿನ ವರ್ಷದಲ್ಲಿ ಮಧ್ಯಾಹ್ನದ ಊಟ ಕೊಡತಕ್ಕ ವ್ಯವಸ್ಥೆಯನ್ನು ನೀವು ಮಾಡಬೇಕು. ಹಣ ಕೊಡುವುದರಿಂದ ಏನೂ ಉಪಯೋಗ ಆಗುವುದಿಲ್ಲ 12 ವರ್ಷದ ಒಬ್ಬ ಹುಡುಗ ಬಂದು ನಮ್ಮ ಹೊಲದಲ್ಲಿ ಕಳೆ ಕಿತ್ತಲೆ 14 ರಿಂದ 15 ರೂಪಾಯಿ ಕೂಲಿ ನಾವು ಕೊಡುತ್ತಾ ಇದ್ದೇವೆ. ಅವರ ತಂದೆತಾಯಿಗಳೇ ನೀವು ಕೊಡತಕ್ಕ ಒಂದು ರೂಪಾಯಿಗೋಸ್ಕರ ಶಾಲೆಗೆ ಕಳುಹಿಸುವುದಿಲ್ಲ. ಸ್ಕೂಲ್‌ನಲ್ಲಿ ಬರುವುದು ಬರಲಿ ಎನ್ನುವ ಒಂದು ಭಾವನೆಯಿಂದ ಅವನು ಅಲ್ಲಿ ಅಟೆಂಡೆನ್ಸ್ ಕೊಟ್ಟು ಮತ್ತೆ ಕೆಲಸಕ್ಕೆ ಕಳುಹಿಸತಕ್ಕ ವ್ಯವಸ್ಥೆಯಾಗುತ್ತಾ ಇದೆ. ಅದನ್ನು ತಪ್ಪಿಸಬೇಕಾಗುತ್ತದೆನ್ನುವ ವಿಚಾರವನ್ನು ನಿಮಗೆ ಹೇಳುತ್ತಾ. ಇನ್ನು ಯೂನಿವರ್ಸಿಟಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮಗಿಲ್ಲದ ರಾಜಕಾರಣ ಅಲ್ಲಿದೆ. ಅಲ್ಲಿ ಜಾತೀಯತೆ ಎಂಬುದು ತುಂಬಿ ತುಳುಕಾಡುತ್ತಿದೆ. ಯಾವುದೇ ಯೂನಿವರ್ಸಿಟಿ ತೆಗೆದುಕೊಳ್ಳಿ ಅಲ್ಲಿ ಪಾಲಿಟಿಕ್ಸ್ ಮತ್ತು ಜಾತಿವಾದ ಯಾರಾದರೂ ಒಬ್ಬ ಬೇರೆ ಜಾತಿಯವರು ಇದ್ದಾನೆಂದು ತಿಳಿದರೆ ಅವನನ್ನು ಕೊನೆಗಾಣಿಸುವ ತನಕ ಬಿಡುವುದಿಲ್ಲ. ಯೂನಿವರ್ಸಿಟಿಗಳಿಗೆ ನಾವು ಬೇಕಾದಷ್ಟು ಹಣವನ್ನು ಕೊಡುತ್ತಿದ್ದೇವೆ. ಈ ಕಾರಣದಿಂದ ನಾವು ಯೂನಿವರ್ಸಿಟಿ ಬಗ್ಗೆ ಮಂತ್ರಿಗಳಿಗೆ ದೂರು ಕೊಟ್ಟರೆ ಅದು ಸ್ವಾಯತ್ತತೆ ಇದೆ ಕೈಹಾಕುವುದಿಲ್ಲವೆಂದು ಹೇಳುತ್ತಾರೆ. ಅವರ ಮೇಲೆ ನಿಗಾ ಇಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲದಿದ್ದರೆ ನೀವು ಏತಕ್ಕೆ ಅವರಿಗೆ ಹಣವನ್ನು ಕೊಡಬೇಕು? ನಾವು ತಾನೂನು ಮಾಡುತ್ತೇವೆ. ಯೂನಿವರ್ಸಿಟಿ ಆಕ್ಟ್ ಮಾಡಿದ್ದೇವೆ.

ಚೇರ್ಮನ್ :- ತಾವು ಬೇಗ ಮುಗಿಸಿ. ಇಲ್ಲದಿದ್ದರೆ ನಮ್ಮ ಮೇಲೆ ಚಾರ್ಜು ಮಾಡಿ ಅವರಿಗೆ ನೀವು ಜಾಸ್ತಿ ಟೈಮ್ ಕೊಟ್ಟಿದಿಯೆಂದು ಹೇಳುತ್ತಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ :- ಒಂದು ಪಾಯಿಂಟ್ ಹೇಳಿ ಮುಗಿಸುತ್ತೇನೆ. ನಾವು ಯೂನಿವರ್ಸಿಟಿಗಳಿಗೆ ಬಹಳಷ್ಟು ಆಕ್ಟ್ ಮಾಡಿ ಕೊಟ್ಟಿದ್ದೇವೆ. ಆದರೆ ಅದಕ್ಕೆ ವಿರುದ್ಧವಾಗಿ ಅವರು ಬೈಲಾ ಪಾಸ್ ಮಾಡಿಕೊಳ್ಳುತ್ತಾರೆ. ಆ ಬೈಲಾವನ್ನು ನಾವು ಪ್ರಶ್ನೆ ಮಾಡುವಂತಿಲ್ಲ. ನಾವು ಕೇಳಿದರೆ ಅವು ಅಟಾನಮಸ್ ಬಾಡಿಗಳೆಂದು ನಮ್ಮ ಮಂತ್ರಿಗಳು ಹೇಳುತ್ತಾರೆ. ಅವು ಆಟಾನಮಸ್ ಬಾಡಿಯೆಂದೂ. ನಾವು ಅವುಗಳನ್ನು ಮುಟ್ಟುವ ಹಾಗೆ ಇಲ್ಲವೆಂದು ಹೇಳುತ್ತಾರೆ. ಕಾನೂನಿಗೆ ವಿರುದ್ಧವಾಗಿ ಅವರು ಬೈಲಾ ಮಾಡಿಕೊಂಡರೆ ಅದನ್ನು ಬದಲಾಯಿಸುವುದಕ್ಕೆ ನಮಗೆ ಪವರ್ಸ್ ಇಲ್ಲವೆ? ಅವರನ್ನು ನಿಯಂತ್ರಣ

ಮಾಡುವುದಕ್ಕೆ ಆಗುವುದಿಲ್ಲ? ಎಲ್ಲಿಯವರೆಗೆ ನೀವು ಅವರನ್ನು ನಿಯಂತ್ರಣ ಮಾಡುವುದಿಲ್ಲ. ಅಲ್ಲಿಯವರೆಗೆ ಈ ಯೂನಿವರ್ಸಿಟಿಗಳು ಸರಿಯಾಗುವುದಿಲ್ಲ. ಅವು ಪೊಲಿಟಿಕಲ್ ಬೇಸಸ್ ಆಗುತ್ತದೆ. ಜಾತೀಯ ಕೂಪಗಳಾಗಿವೆ. ದಯಮಾಡಿ ಅದರ ಬಗ್ಗೆ ಯೋಜನೆ ಮಾಡಿ ಅವುಗಳನ್ನು ಹದ್ದುಬಸ್ತಿನಲ್ಲಿ ತರತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್ :- ಮಾನ್ಯ ಸದಸ್ಯರುಗಳಾದ ಕರಿಯಣ್ಣನವರು, ಮಂಜುನಾಥ ಕುನ್ನೂರ್‌ರವರು, ವಿನಯಕುಮಾರ್ ಸೊರಕೆಯವರು ಏನು ಅಪಾದನೆಯನ್ನು ಮಾಡಿದ್ದಾರೆ. ಅದಕ್ಕೆ ನನ್ನ ವಿಷಾದ ವ್ಯಕ್ತಪಡಿಸುತ್ತೇನೆ. ದಯಮಾಡಿಸಿಮಾನ್ಯ ಸದಸ್ಯರು ಇನ್ನು ಮುಂದೆ ಈ ಪೀಠದಲ್ಲಿ ಕುಳಿತಿರುವವರ ಮೇಲೆ ಈ ರೀತಿಯ ಅಪಾದನೆ ಮಾಡಬಾರದೆಂದು ಅವರಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ಇಂದಿಗೆ ಈ ಸಭೆ ಮುಗಿದು ನಾಳೆ 11 ಗಂಟೆಗಳ ಮತ್ತೆ ಸಭೆ ಸೇರುತ್ತದೆ.

ಸದನವು 8 ಗಂಟೆ 15 ನಿಮಿಷಗಳಿಗೆ ಮುಕ್ತಾಯವಾಗಿ ಪುನಃ 19ನೇ ಮಾರ್ಚಿ ಮಾಹೆ 1992ರ ಗುರುವಾರದಂದು ಬೆಳಿಗ್ಗೆ 11 ಘಂಟೆಗೆ ಸೇರಲು ನಿಶ್ಚಯಿಸಿತು.

(† ಈ ಚಿಹ್ನೆಯನ್ನು ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

W. D. 145
Government Text Book Press, Mysore
680 copies 20-3-94

KSA LIBRARY, B'lore
B020646
328.32402 548 LAD,1992
JJ47